

ಪ್ರಧಾನ ಸಂಪಾದಕರು

ಡಾ. ಬಿ.ಎಸ್. ಪ್ರಣತಾರ್ತಿಹರನ್ ತಮ್ಮ ಪಿಎಚ್.ಡಿ. ಪದವಿಯನ್ನು (ಸಂಕೇತಿ ಒಂದು ಅಧ್ಯಯನ:1993) ಪಡೆದಮೇಲೆ ಸಂಕೇತಿ ಸಮುದಾಯದ ಬಗೆಗಿನ ಅಧ್ಯಯನವನ್ನು ಮುಂದುವರೆಸಿದರು. ತಾವು ಕಲೆಹಾಕಿದ ಅಪಾರ ಮಾಹಿತಿಯನ್ನು ವಿಂಗಡಿಸಿ, ಪರಿಷ್ಕರಿಸಿ, ವಿಮರ್ಶಿಸಿ ಪ್ರಕಟಿಸಿದರು. ಅವರು ಪಿಎಚ್.ಡಿ. ಅಧ್ಯಯನಕ್ಕಾಗಿ ಪ್ರಾರಂಭಿಸಿದಾಗ ಇದ್ದ ಒಂದೆರಡು ನೂರು ಪುಟಗಳ ಆಕರ ಮಾಹಿತಿಯನ್ನು ಈ ವರೆಗೆ 10 ಸಾವಿರ ಪುಟಗಳಿಗೆ ವಿಸ್ತರಿಸಿದ್ದಾರೆ. ಈ ಯೋಜನೆಯ 12 ಸಂಪುಟಗಳು ಪ್ರಕಟವಾಗಿವೆ, 8 ಸಂಪುಟಗಳು ಮುದ್ರಣಗೊಳ್ಳುತ್ತಿವೆ. 1983ರಲ್ಲಿ ಅವರು ಪ್ರಾರಂಭಿಸಿದ ಈ ಅಧ್ಯಯನವು ಇಂದಿಗೂ ಮುಂದು-ವರಿದಿದೆ. ಆಳವಾದ ಮತ್ತು ವಿಸ್ತಾರವಾದ ಅಧ್ಯಯನ, ಅನುಭವಗಳಿಗೆ ದಕ್ಕುವ ಕಾಣ್ಕೆಯಿಂದಾಗಿ (Vision) ಸಂಕೇತಿ ಅಧ್ಯಯನಕ್ಕೆ ವೈವಿಧ್ಯಪೂರ್ಣ ಆಯಾಮ ದೊರೆತಿದೆ.



Thanks Anima shree

Anima Anandkumar is currently a principal scientist at Amazon Web Services and a Bren professor at Caltech CMS department. Her research interests are in the areas of large-scale machine learning, non-convex optimization and high-dimensional statistics. In particular, she has been spearheading the development and analysis of tensor algorithms. She is the recipient of several awards such as the Alfred. P. Sloan Fellowship, Microsoft Faculty Fellowship, Google research award, ARO and AFOSR Young Investigator Awards, NSF Career Award, Early Career Excellence in Research Award at UCI, Best Thesis Award from the ACM Sigmetrics society, IBM Fran Allen PhD fellowship, and several best paper awards. She has been featured in a number of forums such as the yourstory, Quora ML session, Huffington post, Forbes, O'Reilly media, and so on. She received her B.Tech in Electrical Engineering from IIT Madras in 2004 and her PhD from Cornell University in 2009. She was a postdoctoral researcher at MIT from 2009 to 2010, an assistant professor at U.C. Irvine between 2010 and 2016, and a visiting researcher at Microsoft Research New England in 2012 and 2014.

ಸಂಕೇತಿ ಅಧ್ಯಯನ ಮಾಲೆ
ಪ್ರಧಾನ ಸಂಪಾದಕ
ಡಾ.ಬಿ.ಎಸ್. ಪ್ರಣತಾರ್ತಿಹರನ್



ಸಂಕೇತಿ: ಬೇಸಾಯದ ಬದುಕು

ಡಾ|| ವಿಜಯ್ ಅಂಗಡಿ

ಡಾ|| ಎಂ.ಎಸ್. ವಿಜಯಾ ಹರನ್

ಸಮುದಾಯ ಅಧ್ಯಯನ ಕೇಂದ್ರ ಚಾರಿಟಬಲ್ ಟ್ರಸ್ಟ್ (ರಿ.)
೩೦೫೯, ೪ನೇ 'ಎ' ಅಡ್ಡರಸ್ತೆ, ಗೋಕುಲಂ ಪಾರ್ಕ್ ರಸ್ತೆ
ಗೋಕುಲಂ, ಮೈಸೂರು - ೫೭೦ ೦೦೨

sanketi E-lib-9 Web: 6-6-2018

ಸಂಕೇತಿ ಅಧ್ಯಯನ

ಸಂಪುಟ - ೯

SANKETI : BESAYADA BADUKU

VIJAY ANGADI
Dr|| M.S.VIJAYA HARAN

Published by
Samudaya Adhyayana Kendra Charitable Trust (R.)
#3059, 4th 'A' Cross, Gokulam Park Road
Gokulam, Mysore - 570 002

Pages : xxxxl + 470
First Edition : 2010

Research Documentation
For Internal Free Circulation

ಸಂಕೇತಿ: ಬೇಸಾಯದ ಬದುಕು

ವಿಜಯ್ ಅಂಗಡಿ
ಡಾ|| ಎಂ.ಎಸ್. ವಿಜಯಾ ಹರನ್

ಪ್ರಕಾಶಕರು

ಸಮುದಾಯ ಅಧ್ಯಯನ ಕೇಂದ್ರ ಚಾರಿಟಬಲ್ ಟ್ರಸ್ಟ್ (ರಿ.)
೩೦೫೯, ೪ನೇ 'ಎ' ಅಡ್ಡರಸ್ತೆ, ಗೋಕುಲಂ ಪಾರ್ಕ್ ರಸ್ತೆ
ಗೋಕುಲಂ, ಮೈಸೂರು - ೫೭೦ ೦೦೨

ಪುಟಗಳು : xxxxl + 470

ಪ್ರಥಮಮುದ್ರಣ : ೨೦೧೦

ಸಂಶೋಧನ ದಾಖಲೀಕರಣ
ಖಾಸಗಿ ಉಚಿತ ವಿತರಣೆಗಾಗಿ

ಡಿ.ಟಿ.ಪಿ: **ಪ್ರಥಮ ಗ್ರಾಫಿಕ್ಸ್, ಬೆಂಗಳೂರು**
ಲಕ್ಷ್ಮೀ ಮುದ್ರಣಾಲಯ

ಅರ್ಪಣೆ

ಸಂಕೇತಿ ಬಾಗಾಯಿತು ಸಂಸ್ಕೃತಿಯನ್ನು

ಅನೂಚಾನವಾಗಿ ಉಳಿಸಿಕೊಂಡು ಬಂದಿರುವ

ರೈತ ಬಂಧುಗಳಿಗೆ

ಕೃತಜ್ಞತಾಪೂರ್ವಕ

ಸಂಕೇತಿ ಅಧ್ಯಯನ

ಸಾಧ್ವೀಮಣಿಯಾದ ಶ್ರೀನಾಚಾರಮ್ಮನ ನೇತೃತ್ವದಲ್ಲಿ ಸಂಕೇತಿ ಸಮುದಾಯದ ಮಹಾವಲಸೆ ಶಾಪತ್ತೂರಿನಿಂದ ಕರ್ನಾಟಕಕ್ಕೆ ನಡೆದುದು ೯೦೦ ವರ್ಷಗಳ ಹಿಂದೆ. ಅದರ ನೆನಪಿಗಾಗಿ ಶ್ರೀನಾಚಾರಮ್ಮ ನವಶತಮಾನೋತ್ಸವ ನಡೆಯುತ್ತಿದೆ. ಸಂಕೇತಿ ಸಮುದಾಯದ ಬಗೆಗೆ ಈವರೆಗೆ ಲಭ್ಯವಾಗಿರುವ ಅಪಾರ ಮಾಹಿತಿಯನ್ನು ಈ ಸಂದರ್ಭದಲ್ಲಿ ಪ್ರಕಟಿಸಲಾಗುತ್ತಿದೆ. ಈ ಸಂಪುಟ ಸರಣಿಯು ಸಂಶೋಧನೆ, ದಾಖಲೀಕರಣ, ಕ್ರೋಡೀಕರಣದ ಸ್ವರೂಪದ್ದಾಗಿದೆ. ಈ ಸರಣಿಯನ್ನು 'ಸಂಕೇತಿ ಅಧ್ಯಯನ' ಎಂದು ಕರೆಯಲಾಗಿದೆ. ಈ ಸಂಪುಟಕ್ಕೆ ಪ್ರಧಾನ ಆಸರೆಯಾಗಿ ನಿಂತ ಶ್ರೀಮತಿ ಬಿ.ವಿ. ಸೀತಾ ಶ್ರೀ ಬಿ.ಎನ್.ವಿ. ಸುಬ್ರಹ್ಮಣ್ಯ ಅವರಿಗೂ, ಪ್ರಕಟಣ ಸಮಿತಿಯ ಇತರ ಸದಸ್ಯರಿಗೂ, ಗ್ರಂಥಕರ್ತರಿಗೂ, ಸಂಬಂಧಿಸಿದ ಸಮಸ್ತರಿಗೂ ಸಮುದಾಯ ಅಧ್ಯಯನ ಕೇಂದ್ರವು ಆಭಾರಿಯಾಗಿದೆ.

ಜ್ಞಾನಗಂಗೆಗೆ ದಂಡೆಗಳಿಲ್ಲ, ಮೈಲಿಗೆಯಂತೂ ಇಲ್ಲವೇ ಇಲ್ಲ. ಅದನ್ನು ಹಿಡಿದಿಡಲು ಮಾತ್ರ ತೆರೆದ ಮನದ ಜಟಾಜೂಟಧರರು ಆಗಲೇಬೇಕು. ನಾವು ಪುನೀತರಾಗಲು ಇರುವ ಬೆಳಕಿನ ಮಾರ್ಗ ಅದು.

ನಮ್ಮನ್ನು ನಾವು ತಿಳಿದರೆ ವಿಕಾಸಶೀಲತೆಗೆ ಬಾಗಿಲು ತೆರೆದಂತೆ. ವಿಕಾಸವೆಂದರೆ ಮಾನವರಾಗುವುದು, ಉದಾತ್ತರಾಗುವುದು, ಆತ್ಮಗುಣಸಂಪನ್ನರಾಗುವುದು.

ನಿರ್ಗುಣಕ್ಕೆ ಅಚಲಶಾಂತಿ ಇದ್ದರೆ ಸಗುಣಕ್ಕೆ ವೈವಿಧ್ಯದ ಕಾಂತಿ ಉಂಟು. ಜಗತ್ತು ಸಂಜೀವನವೆನಿಸಿರುವುದು ಚೇತನಾಚೇತನದ ಈ ಬಹುಕಿರಣದಿಂದ. ಈ ಬಹುತ್ವದ ಗರ್ಭದಲ್ಲಿ ಏಕಾತ್ಮತೆಯ ಅಗ್ನಿಯು ಪ್ರಖರವಾದರೆ ಸಾರ್ಥಕ್ಯ.

'ಸಂಕೇತಿ' ಎಂಬುದು ಇಲ್ಲಿ ಅಧ್ಯಯನ ಘಟಕ. ಸಮಗ್ರತೆಯಲ್ಲಿ ಅದು ಮಾನವೀಯತೆಯ ಅನುಸಂಧಾನ. 'ಸಂಕೇತಿ ಅಧ್ಯಯನ'ದ ಸಂಪುಟ ಸರಣಿ ವಿವೇಕಾನುಸಂಧಾನದ ಮುಕ್ತಪಥವಾಗಿ ಬರುತ್ತಿದೆ. ಅದರ ನಡಿಗೆಯಲ್ಲಿ ವಾಸ್ತವದ ವಿವರವಿದೆ, ಅಂತರಂಗದಲ್ಲಿ ಆದರ್ಶದ ಹುಡುಕಾಟವಿದೆ.

ಒಂದು ಪುಟ್ಟ ಸಮುದಾಯದ ದೀರ್ಘಕಾಲೀನ ತುಡಿತಗಳನ್ನು ಮಾಧ್ಯಮವಾಗಿ ಮಾಡಿಕೊಂಡು ವಿಶ್ವಪಥವನ್ನು ಹುಡುಕಿಕೊಳ್ಳುವ ಸಾಧನವಾಗಿ ಈ ಸಂಪುಟಸರಣಿ ಪ್ರಕಾಶಗೊಳ್ಳುತ್ತಿದೆ.

* * * * *

ಬೇಸಾಯಗಾರ ಎಂದರೆ ಮೈಮುರಿದು ದುಡಿಯುವವನು ಎಂದೇ ಅರ್ಥ. ಅಂಥ ಬೇಸಾಯಗಾರನಿಗೆ ನಿಸರ್ಗಮಾತೆಯು ಆರೋಗ್ಯವನ್ನು ಕರುಣಿಸುತ್ತಾಳೆ. ಅದು ದೈಹಿಕ ಮತ್ತು ಮಾನಸಿಕ ಆರೋಗ್ಯವೆರಡೂ ಹೌದು. ಅದು ಕೇವಲ ಆರೋಗ್ಯವೇ ಅಲ್ಲ, ಸದೃಢ ಮೈಕಟ್ಟಿನಲ್ಲಿ ಶಕ್ತಿಶಾಲಿಯಾಗಿರುವ ಮನಸ್ಸು ಕೆಲಸ ಮಾಡುವ ಅವಸ್ಥೆ. ಅದರ ಜತೆಗೆ ಮೈಗೂಡಿ ಬರುವ ಇತರ ಲಕ್ಷಣಗಳೂ ಇರುತ್ತವೆ. ಸರಳತೆ, ವಿನಯಶೀಲತೆ, ಮೃದುತ್ವ, ಔದಾರ್ಯ, ಮಾನವೀಯ ಸ್ಪಂದನದ ಗುಣಗಳೆಲ್ಲ ಬೇಸಾಯಗಾರನಿಗೆ ಸಹಜವಾಗಿ ಸಿದ್ಧಿಸುವಂಥವು. ದೇಹವು ಒರಟಾಗಿ, ವರ್ತನೆಯು ಅನೇಕ ವೇಳೆ ನಾಗರಿಕತೆಯಿಂದ ದೂರವಾಗಿ, ಮಾತು ಗಟ್ಟಿಯಾಗಿ, ವರ್ತನೆಯು ನಯದೂರವಾಗಿ ಕಾಣುವ ಸಂದರ್ಭವುಂಟು; ಆದರೆ ಅವನಲ್ಲಿ ಶಾಂತಿ ಮನೆ ಮಾಡಿರುತ್ತದೆ, ಮನಸ್ಸು ನಿಷ್ಕಳಂಕವಾಗಿರುತ್ತದೆ, ಹೃದಯವು ವಿಶಾಲವಾಗಿರುತ್ತದೆ. ಅವನನ್ನು ಅರ್ಥಮಾಡಿಕೊಂಡವರಿಗೆ ಅವನ ಹೃದಯದಲ್ಲಿ ಬೆಳಗುತ್ತಿರುವ ನಂದಾದೀಪ ಕಾಣುತ್ತದೆ. ಹಾಗೆ ದುಡಿದವನ ದೇಹ ಮತ್ತು ಮನಸ್ಸಿನ ಕಷ್ಮಲಗಳೆಲ್ಲ ಬೆವರಿನ ರೂಪದಲ್ಲಿ ಹೊರಟುಹೋಗಿ ಅವನು ಸಹಜವಾದ ಅಧ್ಯಾತ್ಮದ ನೆಲೆಗೆ ಸಂದುಬಿಟ್ಟಿರುತ್ತಾನೆ. ಸಂಕೇತಿ ಸಮುದಾಯವು ಶತಮಾನಗಳಿಂದ ತುಂಡರಿಸದಂತೆ ಬೇಸಾಯವನ್ನು ಮಾಡಿಕೊಂಡುಬಂದಿದೆ. ಇವತ್ತಿಗೂ ಆ ಬೇಸಾಯದ ವಾಸನೆ ಮುಂದುವರಿದಿದೆ. ಸಂಕೇತಿ ಸಮುದಾಯವು ತನ್ನ ಇರಸರಿಕೆಗಳ ಬಗ್ಗೆ ಹೆಮ್ಮೆ ತಾಳಲು ಅದು ಸಾಕು.

ಸಂಕೇತಿಗಳದು ಬಾಗಾಯಿತಿನ ಆಶ್ರಮಧರ್ಮ. ದುಡಿಮೆಯ ಜತೆಜತೆಗೆ, ಅದರ ಭಾಗವಾಗಿ ಅವರು ವೇದಾಧ್ಯಯನ ಮಾಡಿದ್ದಾರೆ, ಶಾಸ್ತ್ರಾಧ್ಯಯನ ಮಾಡಿದ್ದಾರೆ, ಸಂಗೀತಾದಿ ಕಲೆಗಳನ್ನು ರೂಢಿಸಿಕೊಂಡಿದ್ದಾರೆ, ನಿರುಪ್ರದವಿಯಾದ ಮನೋರಂಜನೆಯ ಸಾಧನಗಳನ್ನು ರೂಢಿಸಿಕೊಂಡಿದ್ದಾರೆ. ಬೇಸಾಯದ ಬೆವರು ಅವರಿಗೆ ದಕ್ಕಿಸಿಕೊಟ್ಟ ಧೃತಿ, ಗುರಿಮುಟ್ಟಿಸುವ ಛಲ, ತೀವ್ರವಾಗಿ ತೊಡಗಿಸಿಕೊಳ್ಳುವ ಗುಣ, ಆಲಸ್ಯರಾಹಿತ್ಯ, ದೀರ್ಘಕ್ಷಮತ್ವ ಇವುಗಳಿಂದಾಗಿ ಅವರ ವೇದಘೋಷಕ್ಕೆ, ಸಂಗೀತಕ್ಕೆ ಒಂದು ವಿಶೇಷ ಶಕ್ತಿ ಬಂದಿದೆ, ಶಾಸ್ತ್ರಜ್ಞಾನಕ್ಕೆ ಖಚಿತತೆ ಬಂದಿದೆ. ಮುಖ್ಯವಾಗಿ ಸಾಮಾಜಿಕ ಜವಾಬ್ದಾರಿಗಳನ್ನು ಮುಂಚೂಣಿಯಲ್ಲಿ ನಿಂತು ನಿರ್ವಹಿಸುವ ಜಾಯಮಾನ ಬಂದಿದೆ.

ಗ್ರಾಮೀಣ ಪ್ರದೇಶಗಳಲ್ಲಿ ಬಾಗಾಯಿತುಬೇಸಾಯ ಮಾಡುತ್ತ ವೈದಿಕಜೀವನ ನಡೆಸುತ್ತ ಇರುವ ಸಂಕೇತಿಯು ಆದರ್ಶ ಸಂಕೇತಿ ಎನಿಸುತ್ತಾನೆ. ಅವನು ಅಲ್ಪತೃಪ್ತ. ಅದ್ವೈತದ ಅಧ್ಯಾತ್ಮಾನುಭವದಲ್ಲಿ ಕೃಷಿಸಹಜ ಗುಣದಿಂದಲೂ ಶಾಸ್ತ್ರಾಧ್ಯಯನದ ಬಲದಿಂದಲೂ ವೈದಿಕಾನುಷ್ಠಾನಗಳಿಂದಲೂ ಅವನು ನಿರಂತರವಾಗಿ ವಿಹರಿಸುತ್ತಿರುತ್ತಾನೆ. ಪಾರಮಾರ್ಥಿಕವಾದ ಪರಮ ಶ್ರೀಮಂತಿಕೆಯ ಅನುಭವದಲ್ಲಿ ಅವನಿರುತ್ತಾನೆ.

ಹೀಗೆ ಆದರ್ಶ ಬೇಸಾಯಗಾರರಾದ ಸಂಕೇತಿಗಳ ಸಂಖ್ಯೆ ಇಪ್ಪತ್ತನೆಯ ಶತಮಾನದ ಪ್ರಾರಂಭದಿಂದ ಕ್ಷೀಣಿಸುತ್ತಲೇ ಬಂದಿದೆ. ಸಮಕಾಲೀನವಾದ ಅನಿವಾರ್ಯ ಒತ್ತಡಗಳನ್ನು ಮೆಟ್ಟಿ ನಿಂತು ತಮ್ಮ ಸಹಜಧರ್ಮಕ್ಕೆ ಅಂಟಿಕೊಳ್ಳುವುದು ಸಂಕೇತಿಗಳ ರೀತಿ. ಆದರೆ ಯಂತ್ರಯುಗ, ನಗರೀಕರಣ, ಜಾಗತಿಕತೆ, ಸುತ್ತಣ ವಿದ್ಯಮಾನಗಳ ಆಕ್ರಮಣಶೀಲತೆ ಇವು ಇಪ್ಪತ್ತನೆಯ ಶತಮಾನದ ಮಧ್ಯಭಾಗದಿಂದ ಈಚೆಗೆ ವಿಪರೀತವಾಗುತ್ತ ನಡೆದಿವೆ. ಒಂದು ಜಾತಿ, ಒಂದು ಧರ್ಮ, ಒಂದು ದೇಶದ ಮಾತಲ್ಲ ಇದು, ಸಾರ್ವತ್ರಿಕವಾಗಿ ಎಲ್ಲೆಡೆ ಮಾನ್ಯತೆ ಬರುತ್ತಿರುವುದು ಆಧುನಿಕತೆಯ ಹೆಸರಿನ ವಿಕಾರಗಳಿಗೆ. ಈ ವಿಕಾರದ ವಿಜೃಂಭಣೆಗೆ ಈಗ ಎಗ್ಗಿಲ್ಲ. ಇಂಥ ಸನ್ನಿವೇಶದಲ್ಲಿ ಸಂಕೇತಿ ಸಮುದಾಯವು ಕೂಡ ಜಾಗತಿಕ ಮುಖ್ಯಪ್ರವಾಹದಲ್ಲಿ ಒಂದಾಗುತ್ತಿದೆ. 'ಪ್ರಗತಿ'ಯನ್ನೂ ಕಾಣುತ್ತಿದೆ. ಪಾರಂಪರಿಕವಾದ ಬಾಗಾಯಿತು ಧರ್ಮ ಮೊದಲಿನ ಗುಣಾತ್ಮಕತೆಯನ್ನು ಕಳೆದುಕೊಳ್ಳುತ್ತಿದೆ, ಬಾಗಾಯಿತು ಬೇಸಾಯಗಾರರ ಪ್ರಮಾಣವೂ ಕಡಮೆಯಾಗುತ್ತಿದೆ. ಬಾಗಾಯಿತು ಬೇಸಾಯದಲ್ಲಿಯೂ ಯಂತ್ರೋಪಕರಣಗಳ ಪ್ರವೇಶವಾಗಿದೆ. ಯಂತ್ರಗಳು ಪ್ರವೇಶಿಸಿ ಮಾನವನ ದೇಹಶ್ರಮವು ಹಿಂದೆ ಬಿದ್ದಿರುವುದು ಈಗಿನ ಸಾರ್ವತ್ರಿಕ ವಿದ್ಯಮಾನವಾಗಿದೆ. ದೈಹಿಕಪರಿಶ್ರಮ ಕಡಿಮೆಯಾಗಿ ದ್ರವ್ಯ ಸಂಪಾದನೆಯ ವಿವಿಧ ರೀತಿಯ ಮಾರ್ಗಗಳು ಹೆಚ್ಚಿ, ಭೋಗಸಾಧ್ಯತೆಗಳೂ ಹೆಚ್ಚಿರುವ ಸನ್ನಿವೇಶದ ಬದುಕಿನಲ್ಲಿ ಸಹಜವಾಗಿ ಇಣುಕಬಹುದಾದ ವಿಕೃತಿಗಳು, ದೌರ್ಬಲ್ಯಗಳು ಸಂಕೇತಿ ಸಮುದಾಯವನ್ನೂ ಪ್ರವೇಶಿಸಿವೆ. ಬಾಗಾಯಿತು ಧರ್ಮದ ಇಂಥ ಇಳಿಗಾಲದ ಹೊತ್ತಿನಲ್ಲಿ ಸಂಕೇತಿಗಳ ಬೇಸಾಯದ ಬದುಕಿನ ಅಧ್ಯಯನ ನಡೆದಿದೆ.

ಇಂಥ ವಿಷಮ ಸ್ಥಿತಿಯಲ್ಲಿಯೂ, ಪಾರಂಪರಿಕ ಬಾಗಾಯಿತು ಧರ್ಮದ ಅಳಿದುಳಿದ ಸೆಳೆಗಳನ್ನು ಹಿಡಿದು ಮೂಲರೂಪವನ್ನು ಕಟ್ಟಿಕೊಳ್ಳಲು ಸಾಧ್ಯವೇ ಎಂಬ ಆಲೋಚನೆಯಿಂದ ಸಮುದಾಯ ಅಧ್ಯಯನ ಕೇಂದ್ರವು ಸಂಕೇತಿ ಕೃಷಿ ಅಧ್ಯಯನದ ಈ ಯೋಜನೆಯನ್ನು ಕೈಗೆತ್ತಿಕೊಂಡಿದೆ. ಈ ಯೋಜನೆಯ ಭಾಗವಾಗಿ ಶ್ರೀ ಎನ್.ಕೇಶವಮೂರ್ತಿ ಅವರು ಸಿದ್ಧಪಡಿಸಿಕೊಟ್ಟ 'ಸಂಕೇತಿ ಕೃಷಿಯ ವಿಭಿನ್ನ ನೆಲೆಗಳು' ಎಂಬ ಸಂಶೋಧನ ಕೃತಿಯು ಸಂಕೇತಿ ಅಧ್ಯಯನ ಮಾಲೆಯ ಎಂಟನೆಯ ಸಂಪುಟವಾಗಿ ಪ್ರಕಟಗೊಂಡಿದೆ. ಇದೀಗ ಓದುಗರ ಕೈಲಿರುವುದು ಶ್ರೀ ವಿಜಯ್ ಅಂಗಡಿ ಮತ್ತು ಡಾ॥ಎಂ.ಎಸ್.ವಿಜಯಾ ಹರನ್ ಅವರು ಸಿದ್ಧಪಡಿಸಿಕೊಟ್ಟಿರುವ 'ಸಂಕೇತಿ: ಬೇಸಾಯದ ಬದುಕು'. ಇದು ಈ ಮಾಲೆಯ ಒಂಬತ್ತನೆಯ ಸಂಪುಟವಾಗಿ ಬಂದಿದೆ.

ಸಂಕೇತಿ ಕೃಷಿಯ ಬಗೆಗೆ ಅಧ್ಯಯನ ನಡೆಸುವ ಮೂಲಪ್ರೇರಣೆ ಕೊಟ್ಟುದು ಹಾಸನದ ಆಕಾಶವಾಣಿ ಕೇಂದ್ರ. ಅದು ೨೦೦೨ನೆಯ ಇಸವಿ. ದೂರದರ್ಶನದ ನೂರಾರು ವಾಹಿನಿಗಳ ಆಕರ್ಷಣೆಗಳ ನಡುವೆಯೂ ಹಾಸನದ ಬಾನುಲಿ ಕೇಂದ್ರವು ವಿಸ್ತಾರವಾದ ಶ್ರೋತೃವರ್ಗವನ್ನು ಹಿಡಿದಿಟ್ಟಿತ್ತು. ಆ ಕೇಂದ್ರದ ಜನಪ್ರಿಯತೆಗೆ ಅದು ಪ್ರಸಾರ ಮಾಡುತ್ತಿದ್ದ ಕಾರ್ಯಕ್ರಮಗಳ ಗುಣಮಟ್ಟ, ಜನಪರತೆ, ಶೈಕ್ಷಣಿಕ ಪ್ರಯೋಜಕತೆ ಮುಖ್ಯ ಕಾರಣವಾಗಿದ್ದವು. ಕೃಷಿ ಕಾರ್ಯಕ್ರಮಗಳಂತೂ ರೈತರ ಪಾಲಿಗೆ ವರದಾನದಂತೆ ಇದ್ದವು. ಹಾಸನಜಿಲ್ಲೆಯು ಸಂಕೇತಿ ರೈತರು ದಟ್ಟವಾಗಿ ನೆಲೆಸಿರುವ ಜಿಲ್ಲೆ. ಸಹಜವಾಗಿಯೇ ಹಾಸನದ ಬಾನುಲಿ ಕೇಂದ್ರದ ಕೃಷಿಕಾರ್ಯಕ್ರಮಗಳಲ್ಲಿ ಸಂಕೇತಿ ರೈತರು ಮತ್ತು ಅವರ ನೆಲೆಗಳ ಬಗೆಗಿನ ಮಾಹಿತಿಗಳೂ ಸೇರಿರುತ್ತಿದ್ದವು. ಸಂಕೇತಿ ರೈತರ ಕೃಷಿಜೀವನದ ಕ್ರಮಬದ್ಧ ಅಧ್ಯಯನವನ್ನೇಕೆ ನಡೆಸಬಾರದು ಎಂಬ ಚಿಂತನೆ ಮೂಡಿದ್ದು ಆಗ. ಆ ದಿನಗಳಲ್ಲಿ ಹಾಸನದ ಬಾನುಲಿ ಕೇಂದ್ರದ ಸಿಬ್ಬಂದಿ ವರ್ಗವು ಹೊಸ ಹುರುಪಿನಿಂದ ಕಾರ್ಯಕ್ರಮಗಳನ್ನು ತಯಾರಿಸಿ ಪ್ರಸಾರ ಮಾಡುತ್ತಿತ್ತು. ಅದರ ಆಗಿನ

ನಿರ್ದೇಶಕಿ ಡಾ||ಎಂ.ಎಸ್.ವಿಜಯಾ ಹರನ್ ಸ್ವತಃ ಕೆಲವು ಮಾರ್ಗದರ್ಶಕ ಕಾರ್ಯಕ್ರಮಗಳನ್ನು ನಿರ್ವಹಿಸುತ್ತಿದ್ದರು, ಅವುಗಳಲ್ಲಿ ಭಾಗವಹಿಸುತ್ತಲೂ ಇದ್ದರು. ಬಾನುಲಿಯ ಪ್ರಸ್ತುತತೆಯನ್ನು ಶ್ರೀ ವಿಜಯ್ ಅಂಗಡಿ ಮತ್ತು ಶ್ರೀ ಎನ್.ಕೇಶವಮೂರ್ತಿ ಎಂಬ ಕೃಷಿತಜ್ಞರು ತಮ್ಮ ಕಾರ್ಯಕ್ರಮಗಳ ಮೂಲಕ ಉತ್ತುಂಗಕ್ಕೆ ಏರಿಸಿದ್ದರು. ಈ ಮೂವರು ಪ್ರತಿಭಾವಂತರನ್ನೂ, ಸಂಕೇತಿ ಕೃಷಿ ಅಧ್ಯಯನ ಯೋಜನೆಯಲ್ಲಿ ಪಾಲ್ಗೊಳ್ಳುವಂತೆ ಸಮುದಾಯ ಅಧ್ಯಯನ ಕೇಂದ್ರವು ಪ್ರಾರ್ಥಿಸಿತು, ಆಹ್ವಾನಿಸಿತು. ಆ ಅಧಿಕಾರಿಗಳು ಪ್ರೀತಿಯಿಂದ ಒಪ್ಪಿ ತಮ್ಮನ್ನು ಈ ಕೆಲಸದಲ್ಲಿ ತೀವ್ರವಾಗಿ ತೊಡಗಿಸಿಕೊಂಡುದರ ಫಲ 'ಸಂಕೇತಿ ಕೃಷಿಯ ವಿಭಿನ್ನ ನೆಲೆಗಳು' ಮತ್ತು 'ಸಂಕೇತಿ: ಬೇಸಾಯದ ಬದುಕು' ಎಂಬ ಈ ಎರಡು ಸಂಶೋಧನ ಕೃತಿಗಳು.

'ಸಂಕೇತಿ: ಬೇಸಾಯದ ಬದುಕು' ಎಂಬ ಕೃತಿಯ ಮೊದಲ ಭಾಗವು ಶ್ರೀ ವಿಜಯ್ ಅಂಗಡಿ ಅವರು ೨೦೦೨-೨೦೦೩ ರ ಅವಧಿಯಲ್ಲಿ ಸಂಕೇತಿ ಕೃಷಿ ನೆಲೆಗಳಲ್ಲಿ ಕ್ಷೇತ್ರಕಾರ್ಯ ಮಾಡಿ ಸಿದ್ಧಪಡಿಸಿದ ಅಧ್ಯಯನ ವರದಿ. ಅದನ್ನು 'ಅವಲೋಕನ' ಎಂದು ಹೆಸರಿಸಲಾಗಿದೆ; ಅದು ಕೃಷಿ ತಜ್ಞನೊಬ್ಬನ ಸಾಹಸ. ವಿವಿಧ ಕಾಲಘಟ್ಟಗಳಲ್ಲಿ ಸಂಕೇತಿ ಬೇಸಾಯದ ಮಾಹಿತಿಯು ವಿವಿಧ ರೀತಿಯಲ್ಲಿ ಅಭಿವ್ಯಕ್ತವಾಗಿದೆ. ವಿವಿಧ ಮೂಲಗಳಿಂದ ಅವುಗಳ ಪ್ರಾತಿನಿಧಿಕವಾದ ಮತ್ತು ಸಾರಯುಕ್ತವಾದ ಮಾತುಗಳನ್ನು ಇಲ್ಲವೆ ಭಾಗಗಳು ಅಥವ ಲೇಖನಗಳನ್ನು ಅಥವ ಅಪ್ರಕಟಿತ ಟಿಪ್ಪಣಿಗಳನ್ನು ಯಥೋಚಿತವಾಗಿ ಸಂಗ್ರಹಿಸಿಕೊಡುವ ಶ್ರಮಪೂರ್ಣ ಕೆಲಸವನ್ನು ಡಾ.ವಿಜಯಾ ಹರನ್ ನೆರವೇರಿಸಿಕೊಟ್ಟಿದ್ದಾರೆ. ಅದನ್ನು ಈ ಕೃತಿಯ ಎರಡನೆಯ ಭಾಗದಲ್ಲಿ 'ಅನೂಚಾನ' ಎಂಬ ಹೆಸರಿನಲ್ಲಿ ಸೇರಿಸಲಾಗಿದೆ. ಈ ಇಬ್ಬರು ಅಧ್ಯಯನಕಾರರೂ ಕೇವಲ ಕೃಷಿಪ್ರೀತಿಯಿಂದ ಈ ಕೆಲಸವನ್ನು ನಿರ್ವಹಿಸಿಕೊಟ್ಟಿದ್ದಾರೆ. ಈ ಇಬ್ಬರು ಸಹೃದಯ ಬಂಧುಗಳಿಗೂ ಅವರ ಈ ಉಪಕಾರಕ್ಕಾಗಿ ಸಂಕೇತಿ ಸಮುದಾಯವು ಆಭಾರಿಯಾಗಿದೆ.

ಅವಲೋಕನ

ಶ್ರೀ ವಿಜಯ್ ಅಂಗಡಿ ತಮ್ಮ ಅಧ್ಯಯನದ ಅಂಗವಾಗಿ ಸಂಕೇತಿಗಳ ೧೭ ಕೃಷಿ ನೆಲೆಗಳಲ್ಲಿ ಕ್ಷೇತ್ರಕಾರ್ಯ ಮಾಡಿದ್ದಾರೆ. ಪ್ರತಿ ಹಳ್ಳಿಯಲ್ಲೂ ಅವರಿಗೆ ಮುಖ್ಯವಾಗಿ ಕಂಡ ಅಥವ ಒದಗಿ ಬಂದ ಹಲವರನ್ನು ಸಂದರ್ಶಿಸಿ ಮಾಹಿತಿ ಸಂಗ್ರಹ ಮಾಡಿದ್ದಾರೆ. ಅವರು ಮಾಹಿತಿ ಸಂಗ್ರಹಿಸಿರುವವರಲ್ಲಿ ಸಂಕೇತಿಯೇತರರೂ ಬ್ರಾಹ್ಮಣೇತರರೂ ಸೇರಿದ್ದಾರೆ. ಅವರ ಅಧ್ಯಯನವು ಹಾಸನಜಿಲ್ಲೆಯ ಕೃಷಿಗೆ ಸಂಬಂಧಿಸಿದಂತೆ ನಡೆದಿದೆ.

ಅಂಗಡಿ ಅವರು ಪ್ರತಿ ಗ್ರಾಮದಲ್ಲಿ ಸಂಕೇತಿ ಬೇಸಾಯದ ಸರ್ವೇಕ್ಷಣ ನಡೆಸುವಾಗಲೂ ಮೊದಲು ಸಮಗ್ರವಾಗಿ ಇಡೀ ಗ್ರಾಮವನ್ನೇ ವಿವಿಧ ಮಗ್ಗುಲುಗಳಿಂದ ಅಧ್ಯಯನ ಮಾಡಿದ್ದಾರೆ. ಅದರಲ್ಲಿ ಗ್ರಾಮದ ಭೌಗೋಳಿಕ ಸನ್ನಿವೇಶವನ್ನು ಕೊಡುವುದರ ಜತೆಗೆ ಗ್ರಾಮಜೀವನವನ್ನು ಪರಿಚಯಿಸುವ ಅನೇಕ ವಸ್ತುಸ್ಥಿತಿಗಳನ್ನು ನೀಡಿದ್ದಾರೆ. ಗ್ರಾಮದ ಸೌಲಭ್ಯಗಳು, ಹಬ್ಬ, ಆಚರಣೆಗಳು, ಬೆಳೆ, ನೀರುಣಿಸುವಿಕೆ, ಗೊಬ್ಬರ ಪೂರೈಕೆ, ಬದಲಾಗುತ್ತಿರುವ ಬದುಕು, ಗಣ್ಯರು, ದಾಖಲೆ ಇಳುವರಿ, ಏರಿದ ಗೊಬ್ಬರದ ಬೆಲೆ, ನಶಿಸಿದ ತೊಟ್ಟಿ ಮನೆಗಳು, ಸಾಮಾಜಿಕ ರಚನೆ, ರೀತಿನೀತಿ, ಐತಿಹ್ಯಗಳು ಇಂಥ ನಾನಾ ವಿಷಯಗಳು ಅದರಲ್ಲಿ ಸೇರಿವೆ. ಇಡೀ ಸಮಾಜವನ್ನೂ, ಜೀವನ ವಿಧಾನವನ್ನೂ, ಬೇಸಾಯದ ಆಗು ಹೋಗುಗಳನ್ನೂ ಜತೆಜತೆಗೇ ಸಮೀಕ್ಷಿಸಿರುವುದಕ್ಕೆ ಅದು ಸಾಕ್ಷಿ. ಬೇಸಾಯವು ಜೀವನದ ಅವಿಭಾಜ್ಯ ಅಂಗವೆಂಬುದನ್ನೇ ಅದು ಸೂಚಿಸುತ್ತದೆ. ಅನಂತರ ವಕ್ತೃವಿನ ಪೂರ್ವಿಕರು ಮತ್ತು ಕುಟುಂಬಜೀವನದ ಪರಿಚಯವಾಗುತ್ತದೆ. ಇಷ್ಟೆಲ್ಲ ವಿವರಗಳ ಮೂಲಕ ರೈತನನ್ನು ಓದುಗನಿಗೆ ಆತ್ಮೀಯನನ್ನಾಗಿಸಿದ ಮೇಲೆ ಆತನ ಜೊತೆಗೆ ಸಂದರ್ಶನ ನಡೆಯುತ್ತದೆ. ಆ ವಕ್ತೃಗಳ ಸಮೂಹದಲ್ಲಿ ಸೇರಿರುವ ಕೆಲವರು ಇಂಥವರು: "ಜಮೀನು ನೋಡಿಕೊಂಡು ಮನೆ ಬಳಿ ಬಂದಾಗ ಅಜ್ಜಿಯೊಬ್ಬರು ಹಪ್ಪಳ ಮಾಡುವುದರಲ್ಲಿ ತೊಡಗಿದ್ದರು. ಅವರ ಬಗ್ಗೆ ವಿಚಾರ ಕೇಳಿದೆ. ಹೆಸರು ನಾಗಲಕ್ಷ್ಮಿ, ೮೦ ಮೀರಿದೆ. ಕಣ್ಣು ಕಾಣುತ್ತಿಲ್ಲ, ಕಿವಿ ಕೇಳಿಸುತ್ತಿಲ್ಲ..."; "ಸುಮಾರು ೪೦ ದೇಶಗಳಿಗೆ ಭೇಟಿ ನೀಡಿ ಬಂದಿರುವ ರಮೇಶ್ ಹರವೆ ಅವರು ಸಾವಯವ ಕೃಷಿಯನ್ನು ಜನಪ್ರಿಯಗೊಳಿಸುವಲ್ಲಿ ಅಂತಾರಾಷ್ಟ್ರೀಯ ಮಟ್ಟದಲ್ಲಿ ಕೆಲಸ ಮಾಡುತ್ತಿದ್ದಾರೆ."

ಸಂಕೇತಿ ರೈತರು ಪ್ರಗತಿಪರರೂ ಸಾಹಸಿಗಳೂ ಆಗಿರುವುದರ ವಿವರಗಳು ಸ್ವಾರಸ್ಯಕರವಾಗಿಯೂ, ಸ್ಫೂರ್ತಿದಾಯಕವಾಗಿಯೂ , ಮಾರ್ಗದರ್ಶಕವಾಗಿಯೂ ಇರುವುದನ್ನು ಇಲ್ಲಿ ಕಾಣಬಹುದು. 'ಈ ಭೂಮಿಯಲ್ಲಿ ತೆಂಗು ಬೆಳೆಯುವುದಿಲ್ಲ'ವೆಂದು ಹಿರಿಯರು ಪರಂಪರಾಗತವಾಗಿ

ನಂಬಿದ್ದನ್ನು ಧಿಕ್ಕರಿಸಿ ತೆಂಗಿನ ತೋಟ ಮಾಡಿದ್ದು, ತರಕಾರಿಗೆ ಬೆಲೆ ಬಾರದಾಗ ಧೃತಿಗೆಡದೆ ಪರ್ಯಾಯ ಬೆಳೆ ಮಾಡಿದ್ದು, ತಮ್ಮ ಸುತ್ತಿಗೆ ಮೊದಲಿಗರಾಗಿ ಹಣ್ಣಿನ ತೋಟವನ್ನು ಬೆಳೆಸಿದ್ದು, ಅಣ್ಣತಮ್ಮಂದಿರು ಸೇರಿ ಎರಡು ತಿಂಗಳಲ್ಲಿ ಬಾವಿ ತೋಡಿದ್ದು- ಇಂಥ ವಿವರಗಳೆಲ್ಲ ಅದರಲ್ಲಿ ಸೇರಿವೆ.

'ಬರೀ ಆದಾಯದ ದೃಷ್ಟಿಯಲ್ಲಿ ಕಸಬನ್ನು ನೋಡಬಾರದು' ಎಂಬ ರೈತನ ಮಾತು ಬಹುಮುಖವಾದ ಸಕಾರಾತ್ಮಕ ಅರ್ಥಗಳನ್ನು ಹೊರಡಿಸುತ್ತದೆ. 'ಹಣದ ಆಸೆಗೆ ತಂಬಾಕನ್ನು ಹಾಕಿ ಅದನ್ನು ಹದ ಮಾಡಲು ದೇಶದ ಹಸಿರು ಸಂಪತ್ತು ನಾಶವಾಯ್ತು, ಕಾಡು ಲೂಟಿಯಾಯ್ತು. ನಮ್ಮ ಹೊಲಗಳಲ್ಲಿದ್ದ ಮರಗಳೆಲ್ಲಾ ಸರ್ವನಾಶವಾದವಲ್ಲಾ, ಮುಂದೆ ಏನೇನು ಆಗುತ್ತೋ ತಿಳಿಯದು.' ಇದು ತಂಬಾಕು ಬೆಳೆಗಾರನೊಬ್ಬನ ಆತ್ಮನಿರೀಕ್ಷೆ. ಇಂಥ ಸಾಮಾಜಿಕಪ್ರಜ್ಞೆ ನಗರವಾಸಿಗಳಲ್ಲೂ ವಿದ್ಯಾವಂತರಲ್ಲೂ ಸರ್ಕಾರಿ ಉದ್ಯೋಗಿಗಳಲ್ಲೂ ಎಷ್ಟರಮಟ್ಟಿಗೆ ಇದೆ ಎಂಬುದನ್ನು ನಾವೇ ಪರೀಕ್ಷಿಸಿಕೊಳ್ಳಬಹುದು. ಆ ಕಾರಣಕ್ಕಾಗಿ ಆ ರೈತರು ಸ್ವಯಂಪ್ರೇರಿತರಾಗಿ ತಂಬಾಕು ಹದ ಮಾಡಲು ಪರ್ಯಾಯ ಇಂಧನಗಳನ್ನು ಕಂಡುಕೊಂಡರು ಇಲ್ಲವೆ ಆ ಬೆಳೆಗೇ ಪರ್ಯಾಯಗಳನ್ನು ಕಂಡುಕೊಂಡರು ಎಂಬುದನ್ನೂ ಇಲ್ಲಿ ದಾಖಲಿಸಬೇಕು.

ವೀಳೆಬಳ್ಳಿ ಇಳಿಸಲು ಚಳಿಗಾಲವೇ ಸೂಕ್ತ, ಸೋನೆ ಇದ್ದಾಗ ಎಲೆ ಕೊಯ್ದರೆ ಹಂಬಿಗೆ ಹಾನಿ -ಸುಣ್ಣಕಲ್ಲು ಜಮೀನಿನಲ್ಲಿವೀಳೆ ಚೆನ್ನಾಗಿ ಬರುತ್ತದೆ - ಸ್ವಾತಿಮಳೆ ಬಂದು ಚಳಿ ಬಿದ್ರೆ ಅಡಿಕೆಯಲ್ಲಿ ಒಳ್ಳೆಯ ತೂಕ - ಇಂಥ ಕೃಷಿಸೂತ್ರಗಳು ಈ ಅಧ್ಯಯನದ ಫಲಶ್ರುತಿಯ ಕೆನೆಗಳು. ಸಂಕೇತಿ ಬೇಸಾಯದ ಬದುಕನ್ನು ಅವಲೋಕಿಸಿ ವಿಶ್ಲೇಷಿಸಿ ಅಂಗಡಿಯವರು ಅಲ್ಲಲ್ಲಿಯೇ ರೈತರಿಗೆ ಪರಿಣತ ಮಾರ್ಗದರ್ಶನವನ್ನೂ ಮಾಡಿದ್ದಾರೆ.

ವಿವಿಧ ಬೆಳೆಗಳ ಬೇಸಾಯದ ವಿವರಗಳು ಕೃಷಿಶಾಸ್ತ್ರದ ಭಾಗಗಳಾಗಿ ಬಂದಿವೆ. ಈ ವಿವರಗಳಲ್ಲಿ ಬೇಸಾಯಗಾರರ ವೈಯಕ್ತಿಕ ಚಿಂತನೆಗಳನ್ನೂ, ಸಾಧನೆಗಳನ್ನೂ ಕಾಣಬಹುದು. ಭೂಮಿಯ ಗುಣ, ಹವಾಮಾನ, ಮಾರುಕಟ್ಟೆ ಮೊದಲಾದ ಸನ್ನಿವೇಶಗಳಿಗೆ ಅನುಗುಣವಾಗಿ ಇರುವ ಪ್ರಾದೇಶಿಕ ವ್ಯತ್ಯಾಸಗಳೂ ಇವೆ. ಇವೆಲ್ಲವೂ ಕೃಷಿಶಾಸ್ತ್ರವನ್ನು ಪುಷ್ಟಿಗೊಳಿಸಿವೆ. ಗೋಪಾಲನೆಯ ವಿವರಗಳೂ ಇದರೊಂದಿಗೆ ಸೇರಿರುವುದು ಸಹಜವಾಗಿದೆ.

ಪ್ರತಿ ಗ್ರಾಮ ಮತ್ತು ವ್ಯಕ್ತಿಯ ಕೃಷಿವಿಧಾನದ ಪರಿಚಯ ಮಾಡಿಕೊಡುವಾಗಲೂ ಅಂಗಡಿ ಅವರು ಆಯಾ ಹೊತ್ತಿನ ಅನುಭವಗಳನ್ನು ಆಧರಿಸಿ ಬೇರೆ ಬೇರೆಯ ನಿರೂಪಣಾ ತಂತ್ರಗಳನ್ನು ಅನುಸರಿಸಿದ್ದಾರೆ. ವ್ಯಕ್ತಿಯ ನೇರ ಸಂದರ್ಶನವೂ ಅದರ ಭಾಗವಾಗಿ ಬಂದಿದೆ. ವ್ಯವಸಾಯ ವಿಧಾನಗಳಿಗೆ ಅವರು ಒತ್ತುನೀಡಿದ್ದಾರೆ. ಅದಕ್ಕೆ ಹೊಂದಿಕೊಂಡ ಬದುಕಿನ ಭಾವನಾತ್ಮಕ ನೆಲೆಗಳಿಗಿಂತ ಅಂಗಡಿ ಅವರಿಗೆ ಕೃಷಿಯ ತಾಂತ್ರಿಕತೆಯೇ ಮುಖ್ಯವಾಗಿರುವಂತೆ ತೋರುತ್ತದೆ. ಕ್ಷೇತ್ರಕಾರ್ಯಕಥನ ಮತ್ತು ಬೇಸಾಯದ ಅವಲೋಕನ ಎರಡೂ ಜತೆಜತೆಗೆ ಸಾಗುವ ಪರಿ ಇಲ್ಲಿಯದು. ಇದರಿಂದಾಗಿ ಓದುಗನು ತಾನೇ ಓಡಾಡಿದ ಅನುಭವವಾಗುತ್ತದೆ. ಆಕಾಶವಾಣಿಯ ಕೃಷಿಸಂಬಂಧಿತ ಕಾರ್ಯಕ್ರಮಗಳಿಗಿಂತ ಲಿಖಿತರೂಪದ ಈ ನಿರೂಪಣೆಯು ಭಿನ್ನವಾಗಿರಬೇಕಾದುದು ಸಹಜವೇ. ಅಂಗಡಿಯವರು ಈ ಹೊಸ ಮಾಧ್ಯಮವನ್ನು ಸಾರ್ಥಕಪಡಿಸಿಕೊಂಡು ರೈತರಿಗೆ ಇದು ಉಪಯುಕ್ತವಾಗುವಂತೆ ಮಾಡಿದ್ದಾರೆ. ಕೆಲವೊಮ್ಮೆ ವೀಕ್ಷಕ ವಿವರಣೆಯಂತೆ ಮುಂದುವರಿಯುವ ಈ ನಿರೂಪಣೆಯು ಕುತೂಹಲವನ್ನು ಕಾಯ್ದುಕೊಳ್ಳುತ್ತದೆ. ಜೀವನದ ಅತಿ ಸರಳ ಮತ್ತು ಸಾಮಾನ್ಯ ವಿವರಗಳೇ ಸೇರಿ ಒಂದು ಬದುಕಾಗುತ್ತದೆ ಎಂಬುದನ್ನು ಮರೆಯುವಂತಿಲ್ಲ.

ಸಂಕೇತಿ ಬೇಸಾಯವನ್ನು ಅಧ್ಯಯನ ಮಾಡಿರುವ ಎಲ್ಲರನ್ನೂ ಕಾಡಿರುವ ಪ್ರಶ್ನೆ ಎಂದರೆ 'ಸಂಕೇತಿಗಳ ಕೃಷಿ ಮುಂದುವರಿಯುತ್ತದೆಯೆ' ಎಂಬುದು. ಮಕ್ಕಳೆಲ್ಲ ಆಧುನಿಕ ಶಿಕ್ಷಣ ಪಡೆದು, ನೌಕರಿ ಹೊಂದಿ ಪಟ್ಟಣಗಳಿಗೆ ವಲಸೆ ಹೋಗುತ್ತಿರುವುದು ಅದಕ್ಕೆ ಒಂದು ಕಾರಣ. ಸಂಕೇತಿ ಬೇಸಾಯಗಾರರೆಲ್ಲರೂ ತಮ್ಮ ಕೃಷಿಯಲ್ಲಿ ತೊಡಗಿಕೊಂಡಿರುವ ರೀತಿಯು ಎಷ್ಟು ಗಾಢವಾಗಿದೆ ಎಂದರೆ, ವಾರಸುದಾರರೇ ಇಲ್ಲ ಎಂಬುದು ಖಚಿತವೇ ಆಗಿದ್ದರೂ ಅಷ್ಟರಮಟ್ಟಿಗೆ ಇವರು ಹೇಗೆ ತೊಡಗಿಸಿಕೊಂಡಿದ್ದಾರೆ ಎಂಬ ಬೆರಗು ಹುಟ್ಟುವುದು ಎರಡನೆಯ ಕಾರಣ. ಆದಾಯಕ್ಕೆ ಒತ್ತು ಕೊಡದ, ದುಡಿಮೆಯ ಮೇಲಿನ ಪ್ರೀತಿ ಮತ್ತು ಗಿಡಗಳೊಂದಿಗಿನ ಭಾವನಾತ್ಮಕ ಸಂಬಂಧದಿಂದಾಗಿಯೇ ಇಷ್ಟೊಂದು ತಾದಾತ್ಮ್ಯ ಸಾಧ್ಯವಾಗಿದೆ ಎಂದು ಅದಕ್ಕೆ ಒಂದು ಬಗೆಯ ಕಾರಣ ನೀಡಬಹುದು. ಇಷ್ಟರ ನಡುವೆ ಅಧ್ಯಯನಕಾರರೆಲ್ಲರಿಗೂ ಸಂಕೇತಿ ಬಾಗಾಯಿತು ಸಂಸ್ಕೃತಿ ಉಳಿಯಲು ಅರ್ಹವಾದುದೆಂದು ಅನಿಸಿರುವುದು ಗಮನಾರ್ಹ ಅಂಶವಾಗಿದೆ.

ಅನೂಚಾನ

ಈ ಭಾಗದ ಲೇಖನಗಳನ್ನು ಸಾಮಾನ್ಯವಾಗಿ ಕಾಲಾನುಕ್ರಮದ ರೀತಿಯಲ್ಲೇ ಜೋಡಿಸಲಾಗಿದೆ. ಸಂಕೇತಿಗಳಿಗೆ ಪಾರಂಪರಿಕವಾಗಿ ಬಂದ ಕೃಷಿಯ ನಂಟು ವಿವಿಧ ಘಟ್ಟಗಳಲ್ಲಿ ಹೇಗೆ ದಾಖಲಾಗಿದೆ ಎಂಬುದನ್ನು ಕಾಣಿಸುವುದು ಈ ಭಾಗದ ಉದ್ದೇಶವಾಗಿದೆ. ಈ ಮಾತಿಗೆ ಹೊರತಾದಂತೆ 'ನನ್ನ ಊರು' ಎಂಬ ಕವನವು ಈ ಭಾಗದ ಪ್ರಾರಂಭದಲ್ಲಿಯೇ (ಸಾರ್ಥಕವಾಗಿ) ಬಂದಿದೆ. ಮತ್ತೂರು ನಂದ ಅವರ ಈ ಕವನವು ಇತ್ತೀಚಿನದು. ಆದರೂ ಸಂಕೇತಿಗಳ ಕೃಷಿ ನೆಲೆಯನ್ನೇ ವಸ್ತುವಾಗಿಸಿಕೊಂಡು ಬರೆದ ಪದ್ಯ ಇದು. ಇದು ಬಾಗಾಯಿತು ಸಂಸ್ಕೃತಿಯ ಮುಗ್ಧರ ಸ್ನೇಹವನ್ನೂ ದುಡಿಮೆ ಮತ್ತು ಮೋಕ್ಷಗಳ ನಡುವಿನ ಕನಸಿನ ಸೇತುವೆಯನ್ನೂ ಮಧುರವಾಗಿ ಚಿತ್ರಿಸಿದೆ. ಸಂಕೇತಿ ಗ್ರಾಮಗಳ ಒಳವಿವರಗಳು ಮುಂದಿನ ಲೇಖನಗಳಲ್ಲಿ ವಿಸ್ತರಿಸಿಕೊಂಡಿವೆ.

ಎರಡನೆಯ ಪರಿಚ್ಛೇದದಲ್ಲಿ ಬಂದಿರುವ ಪ್ರಾರಂಭದ ವಾಕ್ಯಗುಚ್ಛವು ೧೮೬೧ರಷ್ಟು ಹಿಂದಿನ ದಾಖಲಾತಿ. ಅದು ಸಂಕೇತಿ ಸಮುದಾಯದ ಕಠಿಣ ದುಡಿಮೆ ಮತ್ತು ವೇದಾಧ್ಯಯನದ ಸಮನ್ವಯದ ಬಾಗಾಯಿತು ಸಂಸ್ಕೃತಿಯನ್ನು ಮುಕ್ತಕಂಠದಿಂದ ಶ್ಲಾಘಿಸಿದೆ. ಅದೊಂದೇ ವಾಕ್ಯಗುಚ್ಛವೇ ಸಂಕೇತಿಗಳ ಹಿರಿಮೆಯನ್ನೂ ಪರಂಪರೆಯನ್ನೂ ಅನನ್ಯತೆಯನ್ನೂ ಅನಂತ ಪರಿಭಾವನೆಗೆ ಒಳಪಡಿಸಬಹುದಾದಷ್ಟು ಶಕ್ತವಾಗಿದೆ. ಮಿಕ್ಕ ಸಮಸ್ತ ವಿವರಗಳೂ ಅದರ ವ್ಯಾಖ್ಯಾನವೆನ್ನಬಹುದು. ಶೆಂಕೋಟ್ಟೈನಿಂದ ಕೌಶಿಕದವರೆಗೆ ನಡೆದ ಅವರ ಮಹಾವಲಸೆಯ ದಾರಿಯಲ್ಲಿನ-ಹೆಮ್ಮಿಗೆ, ಕೌಶಿಕ, ಮತ್ತೂರು, ಎಡತೊರೆ, ಶೃಂಗೇರಿ - ಅದಾವ ನೆಲೆಯೇ ಇರಲಿ, ಅವರನ್ನು ಆಕರ್ಷಿಸಿದ್ದು ಬೇಸಾಯಕ್ಕೆ ಫಲವತ್ತಾದ ಭೂಮಿ ಮತ್ತು ಅದಕ್ಕೆ ಹೊಂದಿಕೊಂಡ ವೈದಿಕ ಅನುಷ್ಠಾನ ಸಾಧ್ಯತೆ. ಒಣ ಭೂಮಿಗಳನ್ನು ಹಸಿರುವನಗಳಾಗಿ ಪರಿವರ್ತಿಸುತ್ತ, ಕೆರೆಗಳನ್ನು ಕಟ್ಟಿಸುತ್ತ, ದೇವಸ್ಥಾನ ಛತ್ರ ಮಂಟಪಗಳನ್ನು ಕಟ್ಟಿಸುತ್ತಲೇ ಅವರು ಮುಂದೆ ಮುಂದೆ ನಡೆದರು.

ಮೈಸೂರು ಸಂಸ್ಥಾನದಲ್ಲಿ ಮಂತ್ರಿ ಪದವಿಯನ್ನಲಂಕರಿಸಿದ ತಿಪ್ಪಯ್ಯನವರು ಕಾರಂಜಿ ಕೆರೆಯನ್ನು ನಿರ್ಮಿಸಿದ್ದು, ಅದರ ಕೆಳಗೆ 'ತಿಪ್ಪಯ್ಯ-ತೋಟ'ಗಳನ್ನು ಬೆಳೆಸಿದ್ದು, ತಿಪ್ಪೂರಿನಿಂದ ಕಾವೇರಿ ಕಾಲುವೆಯನ್ನು ಮೈಸೂರಿಗೆ ಹರಿಸಿದ್ದು, ಕಟ್ಟೆಪುರದಕಟ್ಟೆ ಮತ್ತು ಲಕ್ಷ್ಮಣತೀರ್ಥ ಕಟ್ಟೆಯನ್ನು ಕಟ್ಟಿಸಿದ್ದು- ಇವೆಲ್ಲವೂ ಸಂಕೇತಿ ಸಮುದಾಯದ ಕೃಷಿಯ ನಂಟನ್ನೂ ಕೃಷಿಯ ಪ್ರೀತಿಯನ್ನೂ ವ್ಯಕ್ತಪಡಿಸುವ ಐತಿಹಾಸಿಕ ಅಂಶಗಳೇ ಆಗಿವೆ. ಅವರ ಮನೋಧರ್ಮದ ಮೂಲದಲ್ಲಿ ಬಾಗಾಯಿತು ಸಂಸ್ಕೃತಿಯೇ ಕೆಲಸ ಮಾಡಿದೆ.

ಮೂರನೆಯ ಪರಿಚ್ಛೇದವು, ಶ್ರೇಷ್ಠ ಕೃಷಿಕನೆಂಬ ಕಾರಣಕ್ಕೆ ಎರಡು ಬಾರಿ ರಾಜ್ಯಮಟ್ಟದ ಪ್ರಶಸ್ತಿ ಗಳಿಸಿದ ಎಚ್.ವಿ.ಕೃಷ್ಣರಾವ್ ಬಗೆಗಿನ ಮಾಹಿತಿ ಹೊಂದಿದೆ. ಅವರು ತೆಗೆದ ವಿಶೇಷ ಇಳುವರಿಗಾಗಿ ಜಪಾನ್ ಸರ್ಕಾರವು ಎರಡು ಟ್ರ್ಯಾಕ್ಟರುಗಳನ್ನು ಬಹುಮಾನವಾಗಿ ಕೊಟ್ಟಿತೆಂದರೆ ಯಾರಿಗೆ ತಾನೇ ಹೆಮ್ಮೆ ಎನಿಸದು?

ಸರ್ದಾರ್ ಕೆ.ಬಸವರಾಜೇ ಅರಸಿನವರು (ಕನ್ನಡ ಸಾಮ್ರಾಜ್ಯ, ಕೈಪಿಡಿ-೧ದಲ್ಲಿ) ಸಂಕೇತಿ ಕೃಷಿಯನ್ನು ಹತ್ತಿರದಿಂದ ಕಂಡು ಹೇಳಿರುವ 'ಇವರು ಬಹು ಕಷ್ಟಪಟ್ಟು ಲಾಲಸೆಯಿಂದ ವ್ಯವಸಾಯವನ್ನು ಮಾಡುತ್ತಾರೆ....' ಎಂಬ ಒಂದು ಮಾತೇ ಒಂದು ದೊಡ್ಡ ಪ್ರಶಸ್ತಿಪತ್ರದಂತಿದೆ.

ಐದನೆಯ ಪರಿಚ್ಛೇದದಲ್ಲಿ 'ಸಂಕೇತಿತ್ವ' ಎಂಬ ವಿಶೇಷ ಪದವೇ ರೂಪುಗೊಂಡಿದೆ; ಅದರ ವಿವರಣೆಯೂ ಸ್ವಾರಸ್ಯಕರವಾಗಿಯೂ, ಪ್ರೇರಕವಾಗಿಯೂ ಇದೆ. ಆ ಪರಿಚ್ಛೇದದಲ್ಲಿಯೇ ಬಂದಿರುವ 'ಸಂಕೇತಿ ಹವ್ಯಾಸಗಳು' ಎಂಬ ಭಾಗವು ಸಂಕೇತಿಗಳ ವಿವಿಧ ಹವ್ಯಾಸಗಳನ್ನು ಅನುಭವಗಮ್ಯವಾಗುವಂತೆ ಚಿತ್ರಿಸಿದೆ; ಅದು 'ಸಂಕೇತಿತ್ವ'ವನ್ನು ಇನ್ನೂ ವಿಶದವಾಗಿ ಪರಿಚಯಿಸುತ್ತದೆ.

'ಅವರವರ ಮಾತಿನಲಿ' ಎಂಬ ಆರನೆಯ ಪರಿಚ್ಛೇದವು ಅನುಭವಿಗಳಾದ ಸಂಕೇತಿಗಳ ಹೇಳಿಕೆಗಳ ಸಂಗ್ರಹ. ಕೃಷಿಯೊಂದಿಗೇ ನಡೆಯುತ್ತಿದ್ದ ಅಧ್ಯಯನ, ಸರಕುಗಳ ಚಿಲ್ಲರೆ ಮಾರಾಟದಿಂದ ಆಗುತ್ತಿದ್ದ ಜೀವನ, ಮೋಡ ಮತ್ತು ಮಳೆ, ಗೋಪಾಲನೆ, ಸಸ್ಯರೋಗಗಳು, ಜಾನಪದ ಆಚರಣೆಗಳು, ಹೊಸದಾಗಿ ತೋಟ ಏಳಿಸುವ ರೀತಿ, ಪೌರೋಹಿತ್ಯ, ಬಡತನ, ಮನೆಯ ಅಣಿ, ಕೃಷಿ ಪರಿಕರಗಳ ಸಜ್ಜಿಕೆ, ಬಾಗಾಯಿತಿನ ರೀತಿ ರಿವಾಜು, ಹೆಣ್ಣುಮಕ್ಕಳ ಬೇಸಾಯ, ಸಾಹಸಗುಣ ಇಂಥ ವ್ಯಾಪಕವಾದ ವಿಷಯಗಳನ್ನು ಕುರಿತ ಅನುಭವಸಾರವು ಇಲ್ಲಿ ದಾಖಲಾಗಿದೆ. ಇದೊಂದೇ ಭಾಗವೇ ಸಂಕೇತಿಗಳ ಕೃಷಿ ಜೀವನದ ಒಂದು ಚಿತ್ರ ಕಟ್ಟಿಕೊಡಲು ಸಮರ್ಥವಾಗಿದೆ.

ಏಳನೆಯ ಪರಿಚ್ಛೇದದಲ್ಲಿ ಸಂಕೇತಿ ಸಮುದಾಯಕ್ಕೆ ಅಡಕೆ ಬೇಸಾಯವು ಒಗ್ಗಿ ಬಂದಿರುವ ರೀತಿಯನ್ನೂ, ಕರ್ನಾಟಕದಲ್ಲಿ ಅವರು ಈ ಬೇಸಾಯವನ್ನು ಹೊಸದಾಗಿ ತೊಡಗಿಸಿದರೆಂಬ ವಿಷಯವನ್ನೂ ವಿವರಿಸಲಾಗಿದೆ. ಮುಖ್ಯವಾಗಿ ಪ್ರೊ.ಕೆ.ಎಸ್.ಕೃಷ್ಣಮೂರ್ತಿ ಅವರು ಸಂಕೇತಿಗಳ ಜೀವನವಿಧಾನವು ಕಾಲಕ್ರಮದಲ್ಲಿ ಬದಲಾಗಿ ಈಗ ನಗರದ ಯಾಂತ್ರಿಕ ಜೀವನಕ್ಕೆ ಅವರು ಒಗ್ಗಿಕೊಂಡಿರುವ ಸಂಗತಿಯನ್ನು ಎಳೆ ಎಳೆಯಾಗಿ ವಿವರಿಸಿದ್ದಾರೆ.

ಸಂಕೇತಿ ಕೃಷಿಯ ಬಗೆಗಿನ ದಾಖಲೆಗಳನ್ನು ಕ್ರೋಡೀಕರಿಸುವ ಸಮಯದಲ್ಲಿ ಯಾವುದೇ ಒಂದು ದೃಷ್ಟಿಕೋನ ಅಥವಾ ಪ್ರಸಂಗ ಅಥವಾ ವಸ್ತುವಿಗೆ ನಿರ್ದಿಷ್ಟಪಡಿಸಿಕೊಂಡು ವರ್ಗೀಕರಿಸುವುದು ಗೋಜಲಿನ ಕೆಲಸವಾಗಬಹುದು. ಹಾಗಾಗಿ ಎಂ.ಎಸ್.ವಿಜಯಾ ಹರನ್ ಅವರು ಆಯಾ ಕಾಲಘಟ್ಟದ ಪತ್ರಿಕೆ ಇಲ್ಲವೆ ಗ್ರಂಥಗಳನ್ನು ಆಧಾರವಾಗಿಟ್ಟುಕೊಂಡು ವಿಷಯಸಂಗ್ರಹ ಮಾಡಿರುವುದು ಸರಿಯಾದ ಕ್ರಮವಾಗಿದೆ. ಹಾಗೆ ಮಾಡಿದಾಗಲೂ ಆಯಾ ಪರಿಚ್ಛೇದವು ಪ್ರಸ್ತಾಪಿಸುವ ವಿಷಯಗಳಲ್ಲಿ ಒಂದು ಸಮಾನ ದಿಕ್ಕು ಇರುವುದನ್ನು ಗುರುತಿಸಬಹುದು.

ಎಂಟನೆಯ ಪರಿಚ್ಛೇದವು 'ಸಂಕೇತಿ ಸಂಪದ' ಎಂಬ ಕೃತಿಯಿಂದ ಆಯ್ದ ಭಾಗಗಳನ್ನು ಸಂಗ್ರಹಿಸಿದೆ. ಪ್ರೊ.ಕೆ.ಎಸ್.ಕೃಷ್ಣಮೂರ್ತಿ ಅವರ ಈ ಕೃತಿಯು ಸಂಕೇತಿಗಳ ಸಮಗ್ರ ಜೀವನದ ವಿವಿಧ ಮುಖ್ಯ ಮುಖಗಳನ್ನು ಬಹು ನವಿರಾಗಿ ಪರಿಚಯಿಸುತ್ತದೆ. ಸಂಕೇತಿ ಸಮುದಾಯದ ಅಂತರಂಗವನ್ನು ಕಣ್ಣಿಗೆ ಕಟ್ಟುವಂತೆಯೂ, ಜೀವಂತವಾಗಿಯೂ ಅಭಿವ್ಯಕ್ತಿಸಿರುವ ಬಹು ಅಪರೂಪದ ಕೃತಿ. ಎಂ.ಎಸ್.ವಿಜಯಾ ಹರನ್ ಅವರು ಅದರ ಸಾರಭೂತ ಭಾಗಗಳನ್ನು ಬಹು ಜಾಗರೂಕತೆಯಿಂದ ಇಲ್ಲಿ ಹೆಕ್ಕಿಕೊಟ್ಟಿದ್ದಾರೆ. ಊಟ ಮಾಡುವಾಗ ನಡೆಯುವ ಹರಟೆಯ ಲಹರಿ, ಕಷ್ಟಪಟ್ಟು ಬೆಳೆಯುವ ರೈತನಿಗೆ ಮಾರುಕಟ್ಟೆಯಲ್ಲಾಗುವ ಹತಾಶೆ, ಗುರು-ಶಿಷ್ಯರ ಅಪೂರ್ವ ಸಹಯೋಗ, ಪಂಚಾಯಿತಿಯ ಹದ, ಅಡಕೆಯ ರೇಖೆ, ಹಸು ತಪ್ಪಿಸಿಕೊಳ್ಳುವುದು- ಈ ಪ್ರಸಂಗಗಳು ಒಂದೊಂದು ವಿಶಿಷ್ಟ ಅನುಭವ ಪ್ರಪಂಚವನ್ನೇ ತೆರೆದಿಡುತ್ತವೆ.

ಪ್ರೊ.ಕೆ.ಎಸ್.ಕೃಷ್ಣಮೂರ್ತಿಯವರು ಬಾಗಾಯಿತು ಸಂಸ್ಕೃತಿಯು ಇನ್ನೂ ಉತ್ತುಂಗಾವಸ್ಥೆಯಲ್ಲಿದ್ದಾಗಲೇ ಹಳ್ಳಿಗಳಲ್ಲಿ ಬೆಳೆದವರು. ಮೇಲಾಗಿ ಅವರು ಸಂಕೇತಿ ಸಮುದಾಯದ ಈ ವಿಶಿಷ್ಟ ಜೀವನ ವಿಧಾನವನ್ನು ಗುರುತಿಸಿದ್ದಾರೆ, ಅದಕ್ಕೆ ಸಹಜವಾಗಿಯೇ ಮಾರುಹೋಗಿದ್ದಾರೆ. ಅದನ್ನು ಯಥಾರ್ಥವಾಗಿ ಸಾವಧಾನದಿಂದ ಸವಿವರವಾಗಿ ಮಂಡಿಸುವ ಶಕ್ತಿಯೂ ಅವರಿಗೆ ದಕ್ಕಿದೆ. 'ಕೌಶಿಕ' ಎಂಬ ಸ್ಮರಣ ಸಂಪುಟಕ್ಕಾಗಿ ೧೯೬೫ರಲ್ಲಿ ಅವರು ಬರೆದ ಲೇಖನದಲ್ಲಿ ಮೋಹಕವಾಗಿ ಅದು ಬಂದಿದೆ. 'ಸಂಕೇತಿಗಳು ಪರಿಸರಪ್ರೇಮಿಗಳು, ಆರಾಧಕರು, ಪ್ರಕೃತಿಯ ಸಹಚರರು' ಎಂಬ ಆ ಲೇಖನದ ಮುಕ್ತಾಯದ ಮಾತುಗಳು ಮನನೀಯವಾಗಿವೆ.

'ನೆನಪು ಸಿಹಿ' ಎಂಬ ಲೇಖನದಲ್ಲಿ ಆರ್.ಎಲ್.ಅನಂತರಾಮಯ್ಯನವರು ಇಲ್ಲಿಗೆ ಆರು ದಶಕಗಳ ಹಿಂದಿನ ಗ್ರಾಮೀಣ ಬದುಕಿನ ಚಿತ್ರವನ್ನು ಕಟ್ಟಿಕೊಟ್ಟಿದ್ದಾರೆ. ಕೇವಲ ನಗರದವರಲ್ಲ, ಗ್ರಾಮೀಣ ಶಾಂತಿಯನ್ನೂ ಹಸಿರು ಸಮೃದ್ಧಿಯನ್ನೂ ಅಷ್ಟಿಷ್ಟು ಮುಕ್ಕು ಮಾಡಿಕೊಂಡಿರುವ ಹಳ್ಳಿಗರೂ ಕಳೆದುಹೋದ ಆ ದಿನಗಳನ್ನು ನೆನೆದು ಮೂಕರಾಗಿ ಕೂರುವಂತೆ ಮಾಡುತ್ತದೆ ಈ ಲೇಖನ. ಸುಂತುಷ್ಟಿ ಎಂಬ ಕೃತಿಯಲ್ಲೇ ಸೇರಿರುವ ಡಾ||ಟಿ.ಎಸ್.ಶಂಕರನ್ ಅವರ 'ಭೂರಿಭೋಜನಗಳು ಮತ್ತು ಹಬ್ಬಗಳು' ಎಂಬ ಲೇಖನದಲ್ಲಿ ತಮಿಳುನಾಡಿನ ಹಳ್ಳಿಗಳಲ್ಲಿ ಹಿಂದೆ ನಡೆಯುತ್ತಿದ್ದ ಭೂರಿಭೋಜನಗಳು ಉಂಟುಮಾಡುತ್ತಿದ್ದ ಸಡಗರವನ್ನು ಚಿತ್ರಿಸಲಾಗಿದೆ. 'ಹೊನ್ನು ಹೊನ್ನು' ಎಂಬ ಲೇಖನದಲ್ಲಿ, ಬಲಿಪಾಡ್ಯಮಿಯಂದು ಪೂಜೆಗೆ ಬಳಸುವ ಹೊನ್ನಾವರಿಕೆ ಹೂವಿನಸುತ್ತ ಗ್ರಾಮೀಣ ಬಡಜನರು ಕಟ್ಟಿಕೊಳ್ಳುವ ಸುಂದರ ಕನಸಿನ ವಿಶಿಷ್ಟ ಚಿತ್ರಣವಿದೆ.

ಹನ್ನೊಂದನೆಯ ಪರಿಚ್ಛೇದದಲ್ಲಿ 'ನೆನಪು ಕೆದರಿದಾಗ' ಎಂಬ ಗ್ರಂಥದಿಂದ ಎರಡು ಪ್ರಸಂಗಗಳನ್ನು ಎತ್ತಿಕೊಡಲಾಗಿದೆ. ಕಥಾನಾಯಕನು ಮತ್ತೂರು ಗ್ರಾಮವನ್ನು ಪ್ರವೇಶಿಸುತ್ತಾನೆ. ಆ ಬೀದಿಯಲ್ಲಿನ ೧೨-೧೩ ವಯಸ್ಸಿನ ಹೆಣ್ಣುಮಗಳೊಬ್ಬಳು ಚಂಗನೆ ಮರವೊಂದನ್ನೇರಿಬಿಡುತ್ತಾಳೆ. ತನಗೆ ಬೇಕಾದ ಹೂಗಳನ್ನು ಕುಯ್ದುಕೊಂಡು ಇಳಿಯುತ್ತಾಳೆ. ಆತ ಆಕೆಯನ್ನು ವರಿಸಬೇಕೆಂದು ಅಲ್ಲಿಯೇ ನಿಶ್ಚಯಿಸಿಕೊಂಡುಬಿಡುತ್ತಾನೆ! ಹಾಗಿರುತ್ತದೆ ಆಕೆಯ ಚುರುಕು! ವಿವಾಹವಾದ ಮೇಲೆ ಒಂದು ದಿನ ಮಧ್ಯಾಹ್ನ ಕೊಟ್ಟಿಗೆಯಿಂದ ಹುಯಿಲೊಂದು ಕೇಳಿಬರುತ್ತದೆ. ಎತ್ತೊಂದು ಮನೆಯೊಡತಿಯನ್ನು ಕೋಡುಗಳಲ್ಲಿ ತಿವಿದು ಎತ್ತಿಬಿಟ್ಟಿರುತ್ತದೆ! ಬೇಸಾಯಗಾರರ ಬದುಕು ಇಂಥ ಹೆಜ್ಜೆಗಳ ಮೇಲೆಯೇ ಸಾಗುತ್ತದೆ!

"ಹೋರಾಟಗಾರನ ನೆನಪುಗಳು" ಎಂಬುದು 'ಸಂಸಕ್ತ' ಎಂಬ ಕೃತಿಯಲ್ಲಿ (೧೯೬೮) ಬಂದ ಲೇಖನ. ಅದರಲ್ಲಿರುವುದು ಸ್ವಾತಂತ್ರ್ಯ ಹೋರಾಟಕ್ಕಾಗಿ ರೈತನೊಬ್ಬ ತನ್ನ ಸಮಸ್ತವನ್ನೂ ಹಾಳುಮಾಡಿಕೊಂಡು ಮನೆಯವರನ್ನು ಬೀದಿಪಾಲು ಮಾಡಿದ ವೃತ್ತಾಂತ. ಈ ಕಥೆಯ ಮುಂದಿನ ಭಾಗವೂ

ಉದಾತ್ತವಾದುದು. ಸ್ವಾತಂತ್ರ್ಯಸೇನಾನಿಯು ಮೃತನಾಗುತ್ತಾನೆ, ದೇಶಕ್ಕಾಗಿ ಸಮಸ್ತ ಸಂಪತ್ತನ್ನೂ ಕೊನೆಗೆ ಪ್ರಾಣವನ್ನೂ ತೆತ್ತ ಆ ರೈತನ ಮನೆಯವರಿಗೆ ತೋಟಗಳನ್ನು ಊರ ಜನರು ಹಿಂದಿರುಗಿಸಿ ಆ ಸಂಸಾರವು ನೆಲೆ ನಿಲ್ಲುವಂತೆ ಮಾಡುತ್ತಾರೆ! ಇದು ಸಂಕೇತಿ ಕುಟುಂಬವೊಂದರ 'ಕಥೆ' ಅಲ್ಲ, 'ಚರಿತ್ರೆ'!

'ಸಂವಾದ' ಎಂಬುದು ಇತರರು ಸಂಕೇತಿ ಸಮುದಾಯದ ಬಗ್ಗೆ ಬರೆದಿರುವ ಲೇಖನಗಳ ಸಂಗ್ರಹ. ಕನ್ನಡದ ಮೇರುಕಥೆಗಾರ ಪೂಜ್ಯ ಮಾಸ್ತಿಯವರ ಲೇಖನವೂ ಇದರಲ್ಲಿ ಸೇರಿದೆ. ಸಾಂದರ್ಭಿಕ ಇಕ್ಕಟ್ಟಿಗೆ ಸಿಲುಕಿದ ಸಂಕೇತಿ ರೈತನೊಬ್ಬನ ಪ್ರಾಮಾಣಿಕತೆಯನ್ನು ಅದು ಗುರುತಿಸಿದೆ. ಸದಾನಂದ ಅವರ ಲೇಖನ 'ಸಂಸ್ಕೃತ ಗ್ರಾಮ ಮತ್ತೂರು' ಆ ಗ್ರಾಮದ ಪರಿಚಯವನ್ನು ಮಾಡಿಸುತ್ತದೆ. ''ಹಾಗೇ ಬನ್ನಿ. ಕಚ್ಚೆಪಂಚೆ ಉಟ್ಟು ಮೇಲ್ವಸ್ತ್ರ ಹೊದ್ದು ಶಿಖೆ ಬಿಟ್ಟವರು ಕೈಯಲ್ಲಿ ಗುದ್ದಲಿ, ಪಿಕಾಸಿ, ಕುಡುಗೋಲು ಹಿಡಿದು ಸಂಸ್ಕೃತದಲ್ಲಿ ಸಂಭಾಷಿಸುತ್ತ ತಮ್ಮ ತೋಟಕ್ಕೆ ಹಾದುಹೋಗುವುದನ್ನು ನೋಡಬಹುದು''. ಈಗಲೂ ಜೀವಂತವಾಗಿರುವ ಚಿತ್ರ ಇದು, ಪ್ರಾಚೀನ ಬಾಗಾಯಿತು ಸಂಸ್ಕೃತಿಯ ಅಪರೂಪದ ಮುಂದುವರಿಕೆ. ''ಸಂಕೇತಿಗಳು ಕಾಯಕಕ್ಕೆ ಹೆಚ್ಚು ಮಹತ್ವ ಕೊಡುತ್ತಾರೆ. ಕಷ್ಟಪಟ್ಟು ಕೆಲಸ ಮಾಡಿ ಊಟ ಮಾಡುವರು. ಕೆಲಸ ಮಾಡದೆ ಊಟ ಮಾಡುವುದು ಮಹಾಪಾಪವೆಂದು ಅವರು ಗ್ರಹಿಸುತ್ತಾರೆ'' ಇದು ಸಂಕೇತಿ ಬೇಸಾಯಗಾರರ ನಡುವೆಯೇ ಅತ್ಯಂತ ನಿಕಟವಾಗಿ ಅರ್ಧ ಶತಮಾನ ಕಾಲ ವಾಸಿಸಿದ ಡಾ.ಎ.ಜಿ.ಸುಬ್ಬರಾವ್ 'ಸಂಕೇತಿ ಸಮುದಾಯ-ನಾನು ಕಂಡಂತೆ' ಎಂಬ ಲೇಖನದಲ್ಲಿ ಒತ್ತುಕೊಟ್ಟು ಹೇಳಿರುವ ಮಾತು.

'ಸಂಕೇತ ಸಂಪದ' ಮತ್ತು 'ಸಂಕೇತಿ ಸಂಗಮ' ಎಂಬ ನಿಯತಕಾಲಿಕಗಳಲ್ಲಿ ಆಗಾಗ ಬಂದ ವೈವಿಧ್ಯಪೂರ್ಣ ಮಾಹಿತಿಯು ೧೪ನೆಯ ಪರಿಚ್ಛೇದದ ವಸ್ತುವಾಗಿದೆ. ಸಹಜವಾಗಿಯೇ ಕಾಲಕಾಲದ ಅಗತ್ಯಗಳನ್ನು ಪೂರೈಸುವ ಲೇಖನಗಳೇ ಇಂಥಲ್ಲಿ ಹೆಚ್ಚಾಗಿರುವುದು ಸಹಜ. ಅದೇ ಕಾರಣಕ್ಕಾಗಿಯೇ ಇಲ್ಲಿಸಂಕೇತಿಗಳ ಬೇಸಾಯದ ಬದುಕಿನ ವಿವಿಧ ಆಯಾಮಗಳನ್ನು ಪರಿಚಯಿಸುವ ಲೇಖನಗಳಿವೆ. 'ಎಂಗ್‍ಡ್ ಭಾಗ್ಯ' ಎಂಬ ಲೇಖನದಲ್ಲಿ ಗೋವಿನೊಂದಿಗಿನ ಭಾವನಾತ್ಮಕ ಸಂಬಂಧದ ಆಳ ಎಷ್ಟೆಂಬುದು ತಿಳಿಯುತ್ತದೆ. ಅದೊಂದು ಗದ್ಯಕಾವ್ಯದಂತೆಯೇ ಇದೆ. ನಿಸರ್ಗದ ಜತೆಗಿನ ಅಂಥದೇ ಸಂಬಂಧದ ಲೇಖನಗಳೂ ಇಲ್ಲಿವೆ. ಪ್ರಶಸ್ತಿ ಗಳಿಸಿದ ಕೃಷಿ ಪಂಡಿತರ ಪರಿಚಯವಿದೆ. ಮುಖ್ಯವಾಗಿ 'ಜಗುಲಿ'ಯಲ್ಲಿ ಸಂಕೇತಿ ಕೃಷಿಯ ಬಗೆಗಿನ ಚರ್ಚೆ ಕಾಣಿಸಿಕೊಂಡಿದೆ. ಇಂಥ ಎಲ್ಲ ಜಿಜ್ಞಾಸೆಗಳಿಗೆ ಮಾರ್ಗದರ್ಶಕವಾಗಬಹುದಾದ ಮಾತು 'ಪರಿಸರ ಹೊಂದಾಣಿಕೆ' ಎಂಬ ಲೇಖನದಲ್ಲಿದೆ. ''ಸಂಕೇತಿಗಳು ನಮ್ಮ ಹಿಂದಿನವರ ಉನ್ನತವಾದ ಬೌದ್ಧಿಕ ಶಕ್ತಿಯನ್ನೂ, ಹಿಡಿದ ಕೆಲಸವನ್ನು ಬಿಡದೆ ಮಾಡಿ ಪೂರೈಸುವ ಛಲವನ್ನೂ, ಹಿಂದಿನವರ ಸಂಸ್ಕೃತಿ-ಆಚಾರಗಳನ್ನೂ ಉಳಿಸಿಕೊಂಡು ಕೀರ್ತಿಶಾಲಿಗಳಾಗಿ ಸ್ವದೇಶ-ಪರದೇಶಗಳಲ್ಲಿ ಮೆರೆದಿದ್ದಾರೆ ನಿಜ. ಆದರೆ ಪರಿಸರ ಬದಲಾವಣೆಯಿಂದ ಹಿಂದಿನವರ ಆ ಸಮತೋಲಿತ ಜೀವನ, ದೈಹಿಕ ಸ್ವಾಸ್ಥ್ಯ ಇಂದಿನವರಲ್ಲಿ ಕಡಿಮೆಯಾಗಿದೆ ಎನ್ನಬಹುದು. ಪ್ರಕೃತಿ ಸಹಜವಾದ ಬೌದ್ಧಿಕ-ದೈಹಿಕ ಸಾಮರ್ಥ್ಯಗಳೆರಡನ್ನೂ ಸಮತೋಲವಾಗಿ ವೃದ್ಧಿಪಡಿಸಿಕೊಳ್ಳಲು ಏನು ಮಾಡಬೇಕು ಎಂಬ ಬಗ್ಗೆ ಸಂಶೋಧನೆ ನಡೆಸಬೇಕಾದ ಕಾಲಬಂದಿದೆ.'' ಪ್ರೊ.ಕೆ.ಎಸ್.ಕೃಷ್ಣಮೂರ್ತಿಯವರ ಈ ಮಾತು ಭವಿಷ್ಯವನ್ನು ರೂಪಿಸಿಕೊಳ್ಳಬೇಕಾದ ಮಕ್ಕಳ ಗಂಭೀರ ಗಣನೆಗೆ ಅರ್ಹವಾಗಿದೆ.

ಸ್ಕಾಟ್ಲೆಂಡಿನ ಎಡಿನ್‍ಬರೊ ವಿಶ್ವವಿದ್ಯಾಲಯದಲ್ಲಿ ನಡೆದ ಅಂತರರಾಷ್ಟ್ರೀಯ ಇತಿಹಾಸ ಸಮ್ಮೇಳನದಲ್ಲಿ ಡಾ||ಬಿ.ವಿ.ಸುಧಾಮಣಿ ಅವರು, 'ಕೃಷಿಕರಾಗಿ ಕರ್ನಾಟಕದ ಸಂಕೇತಿ ಬ್ರಾಹ್ಮಣರು' ಎಂಬ ಶೀರ್ಷಿಕೆಯ ಸಂಶೋಧನಪ್ರಬಂಧವನ್ನು ಮಂಡಿಸಿದರು. ಈ ಸಂಗತಿಯೇ ಸಂಕೇತಿ ಸಮುದಾಯದ ಕೃಷಿಯ ವೈಶಿಷ್ಟ್ಯಕ್ಕೆ ಒಂದು ಮನ್ನಣೆಯಂತಿದೆ. ಮುಖ್ಯವಾಗಿ, ಈ ಪ್ರಬಂಧದಲ್ಲಿ, ಬ್ರಾಹ್ಮಣರು ಕೃಷಿಕಾರ್ಯದಲ್ಲಿ ತೊಡಗಿಕೊಳ್ಳುವುದು ಅಧಾರ್ಮಿಕವೆಂದಿರುವುದಾದರೂ ಅವರು ಏಕಾಗಿ ಅದರಲ್ಲಿ ತೊಡಗಿಕೊಂಡರು ಎಂಬ ಪ್ರಶ್ನೆಯನ್ನು ಪ್ರಧಾನವಾಗಿ ಎತ್ತಿಕೊಂಡು ವಿಶ್ಲೇಷಿಸುವ ಯತ್ನ ಮಾಡಿದ್ದಾರೆ. ಅವರು ಮಂಡಿಸಿದ ಈ ಪ್ರಬಂಧವನ್ನೂ, ಅದಕ್ಕಾಗಿ ಅವರು ಮಾಡಿಕೊಂಡ ಕೆಲವು ಟಿಪ್ಪಣಿಗಳನ್ನೂ ೧೫ನೆಯ ಪರಿಚ್ಛೇದದಲ್ಲಿ ಸೇರಿಸಲಾಗಿದೆ.

ಮೈಸೂರು ಮಹಾರಾಜರ ಸಮ್ಮುಖದಲ್ಲಿ ಅರಮನೆಯ ಅಂಗಳದಲ್ಲಿ ಸಂಕೇತಿ ರೈತನೊಬ್ಬನು ಜಗಜಟ್ಟಿಯೊಬ್ಬನನ್ನು ಸೋಲಿಸಿದ ಘಟನೆಯು ಸಂಕೇತಿಗಳ ವಂಶಚರಿತ್ರೆಯ ಆಕರ್ಷಕ ಭಾಗ. ಹಾಸನಜಿಲ್ಲೆಯ ಗೆಜ್ಜಗನಹಳ್ಳಿ ಎಂಬ ಗ್ರಾಮದಲ್ಲಿ ಆತನ ವಂಶಜರು ಈಗಲೂ ಇದ್ದಾರೆ. ಜಗಜಟ್ಟಿಯನ್ನು ಸೋಲಿಸಿದ ಅವರ ತಾತ ಚನ್ನಪ್ಪಯ್ಯನವರಿಗೆ ಮಹಾರಾಜರಿಂದ ಬಹುಮಾನವಾಗಿ ಬಂದ ರಣಗತ್ತಿಯು ಈಗಲೂ ಅವರ ಮನೆಯಲ್ಲಿದೆ. ಈ ನೈಜ ಘಟನೆಯು ಜನಪದ ಕಥೆಯೊಂದರ ಸ್ವರೂಪ ಪಡೆದು ವ್ಯಾಪಕ ಪ್ರಚಾರ ಪಡೆದಿರುವುದು ಈ ಘಟನೆಯ ಮಹತ್ವವನ್ನೇ ಸಾರುತ್ತದೆ. 'ಭಲ್ಲೂಕಪುರದ ಅಪ್ಪಾಜಿಭಟ್ಟ' ಎಂಬ ಕಥಾರೂಪವು ಈ ಗ್ರಂಥದ ೧೬ನೆಯ ಪರಿಚ್ಛೇದವಾಗಿ ಬಂದಿದೆ: ಉತ್ತರ ಭಾರತದ ಜಟ್ಟಿಯೊಬ್ಬ ಬಂದು ಮೈಸೂರು

ಸಂಸ್ಥಾನದ ಉತ್ತಮೋತ್ತಮ ಜಟ್ಟಿಗಳನ್ನೆಲ್ಲ ಸೋಲಿಸಿದ. ಸಂಸ್ಥಾನಕ್ಕೇ ಅಪಮಾನವಾದ ಸಂದರ್ಭ ಅದು. ಪ್ರೇಕ್ಷಕರ ನಡುವಿನಿಂದ ರೈತನೊಬ್ಬ ಜಟ್ಟಿಯನ್ನು ಸೋಲಿಸುವುದಾಗಿ ಮುನ್ನುಗ್ಗಿ ಬಂದ. ಜನರು ಅವನನ್ನು ತಡೆದರು. ಮಹಾರಾಜರಿಗೆ ವಿಷಯ ತಿಳಿಯಿತು. ಒಬ್ಬ ಬ್ರಾಹ್ಮಣನು ಜಗಜಟ್ಟಿಯೊಬ್ಬನನ್ನು ಸೋಲಿಸಬಲ್ಲನೆ? ಅವರಿಗೂ ಅನುಮಾನ ಮೂಡಿ ನಿಂತಿತು. ಆಗ ಅವರ ಭಕ್ಷಿಯು ಉತ್ತೇಜಿಸಿ ಹೇಳಿದ ಮಾತು ಇದು, "ಒಳ್ಳೆಯ ಶಕ್ತನಾಗಿ ಕಾಣುತ್ತಾನೆ ಮಹಾಸ್ವಾಮಿ. ಇನ್ನೂ ಇಪ್ಪತ್ತೆಂಟು-ಮೂವತ್ತರ ಪ್ರಾಯ. ಅಲ್ಲದೆ ಆತ ಸಂಕೇತಿ ಬ್ರಾಹ್ಮಣ!"

'ಸಂಚರ' ಒಂದು ಕ್ಷೇತ್ರಕಾರ್ಯ ಕಥನ. ಬಿ.ಎಸ್.ಪ್ರಣತಾರ್ತಿಹರನ್ ಅವರು ತಮಿಳುನಾಡು ಮತ್ತು ಕೇರಳ ರಾಜ್ಯಗಳಲ್ಲಿ ಮಾಡಿದ ಕ್ಷೇತ್ರಕಾರ್ಯಗಳ ವಿವರಗಳು ಅದರಲ್ಲಿ ಸೇರಿವೆ. ನಮಗಿಲ್ಲಿ ಪ್ರಸ್ತುತವಾದ ಅದರ ಫಲಶ್ರುತಿ ಇದು: "ಕರ್ನಾಟಕದ ಸಂಕೇತಿಗಳ ಪಾರಂಪರಿಕವೂ ಪರಿಣತವೂ ಆದ ವ್ಯವಸಾಯ ಪದ್ಧತಿಗೆ ಹಿನ್ನೆಲೆ ಇರುವುದು (ಈಗಿನ) ಕೇರಳದ ಘಟ್ಟಸಾಲಿನಲ್ಲಿ; ಕೊಲ್ಲಂ-ತಿರುವನಂತಪುರಂ-ಶೆಂಕೋಟ್ಟೈ ತ್ರಿಕೋನದಲ್ಲಿ. ಕರ್ನಾಟಕದ ಸಂಕೇತಿಗಳ ಗಾಢವಾದ ಕೃಷಿಕತೆಯು ಕೇವಲ ಪಲ್ಲಟಗೊಂಡ ಜೀವನದ ಅನಿವಾರ್ಯ ಕೊಡುಗೆಯಲ್ಲ, ಅದಕ್ಕೆ ಪರಂಪರೆಯ ಬೇರು ಇದ್ದಲ್ಲದೆ ಅಂಥ ತನ್ಮಯತೆ, ನೈಪುಣ್ಯ ಸಾಧ್ಯವಾಗದು."

ಶ್ರೀವಲ್ಲಿ ಮಂಜುನಾಥ, ಪ್ರೊ.ಎಲ್ಎಮ್ಎಲ್ ಶಾಸ್ತ್ರಿ ಮತ್ತು ಪ್ರೊ.ಟಿ.ಎಸ್.ರಾಜಾಮಣಿ ಅವರು ಈ ಸಂಪುಟಕ್ಕಾಗಿಯೇ ಬರೆದು ಕಳಿಸಿದ ಲೇಖನಗಳನ್ನು ೧೮ನೆಯ ಪರಿಚ್ಛೇದದಲ್ಲಿ ಸೇರಿಸಲಾಗಿದೆ. ಶ್ರೀವಲ್ಲಿ ಅವರು ಸಂದರ್ಶಿಸಿಕೊಂಡಿರುವ ಆರ್.ಎನ್.ಸುಬ್ಬರಾಯರು ಕರ್ನಾಟಕ ಸರ್ಕಾರದ ಕೃಷಿ ವಿಭಾಗದಲ್ಲಿ ಡೆಪ್ಯುಟಿ ಡೈರೆಕ್ಟರಾಗಿ ಸೇವೆ ಸಲ್ಲಿಸಿ ನಿವೃತ್ತರಾದವರು, ಅನಂತರ ತಮ್ಮ ಹಳ್ಳಿ ರುದ್ರಪಟ್ಟಣದಲ್ಲಿ ಬಾಗಾಯಿತು ವ್ಯವಸಾಯದಲ್ಲಿ ತೊಡಗಿಕೊಂಡವರು. ಪ್ರೊ.ಎಲ್ಎಮ್ಎಲ್ ಶಾಸ್ತ್ರಿಯವರಾದರೋ ಬೇಸಾಯ ಮಾಡಲೆಂದು ನಿಂತು ಗದ್ದೆಯ ನಡುವೆಯೇ ಕೇಶಿರಾಜನನ್ನು ಉರು ಹೊಡೆದವರು, ಮುಂದೆ ಪ್ರಾಧ್ಯಾಪಕರಾದವರು, ತಮ್ಮ ಪೂರ್ವಿಕರು ಗಾಢವಾದ ಸಂಬಂಧವಿಟ್ಟುಕೊಂಡ ಕೃಷಿಯನ್ನು ತೀರ ಸುಲಭವಾಗಿ ಬಿಟ್ಟುಕೊಡುವ ನವಪೀಳಿಗೆಯ ಪ್ರತಿನಿಧಿಯಾದವರು. ಆದರೆ ಎಲ್ಎಮ್ಎಲ್ ಶಾಸ್ತ್ರಿಯವರ ಪ್ರಾಮಾಣಿಕ ನಿರೂಪಣೆಯು ಓದುಗರಿಗೆ ವಸ್ತುಸ್ಥಿತಿಯನ್ನು ಮುಕ್ಕಾಗದಂತೆ ತಲುಪಿಸಿದೆ. ಅದೇ ಸಹಜ ನಿರೂಪಣೆಯಿಂದಾಗಿಯೇ ಹಳೆಯ ತಲೆಮಾರಿನ ಕೃಷಿಯ ಸ್ವರೂಪಕ್ಕೆ ರಮ್ಯತೆ ಆವರಿಸಿದೆ. ಬಾಗಾಯಿತಿನ ಸಾಂಪ್ರದಾಯಿಕ ಬೆಳೆಗಳ ಕೃಷಿ ವಿಧಾನವನ್ನೂ ಪ್ರಯೋಜನಗಳನ್ನೂ ರಾಜಾಮಣಿಯವರು ವಿಸ್ತಾರವಾಗಿ ಕಟ್ಟಿಕೊಟ್ಟಿದ್ದಾರೆ. ಅಗ್ರಹಾರದ ಶ್ರೀಮತಿ ಬಿ.ಎಸ್. ಲಲಿತಾ ಚಂದ್ರಶೇಖರ್ ಅವರ ಲೇಖನವು ಬಹು ಪುಟ್ಟದಾದರೂ ಸಂಕೇತಿಗಳ ಪಾರಂಪರಿಕ ಕೃಷಿಧರ್ಮವನ್ನು ಪರಿಚಯಿಸಲು ಶಕ್ತವಾಗಿದೆ. ಎಲ್.ವಿ. ವಸಂತಕುಮಾರ್ ಅವರ ಲೇಖನದಲ್ಲಿ, ಕೃಷಿಯ ಬಗೆಗೆ ಇರುವ ತರೀಕೆರೆ ತಾಲ್ಲೂಕು ಲಿಂಗದಹಳ್ಳಿಯ ವಿಶಿಷ್ಟ ಸಂದರ್ಭವನ್ನು ಗುರುತಿಸಬಹುದು. ಸತ್ಯಮಾಧವ ಅವರ ಲೇಖನವಂತೂ ಸಂಕೇತಿ ರೈತನೊಬ್ಬನ ಆಧುನಿಕ-ಕ್ರಿಯಾಶೀಲತೆಯ ಅವತಾರವೇ ಆಗಿದೆ.

೧೯ನೆಯ ಪರಿಚ್ಛೇದವು ಬಿ.ಎಸ್.ಪ್ರಣತಾರ್ತಿಹರನ್ ಅವರು ನಡೆಸಿದ ಪ್ರಕೃತ ಕೃಷಿ ಅಧ್ಯಯನದ ವಿವರಗಳನ್ನೊಳಗೊಂಡಿದೆ. ಇಲ್ಲಿರುವುದು ತಮಿಳುನಾಡು ಮತ್ತು ಕೇರಳ ರಾಜ್ಯಗಳ ಸಂಕೇತಿ ನೆಲೆಗಳಲ್ಲಿ ಮಾಡಿದ ಕ್ಷೇತ್ರಕಾರ್ಯ ವರದಿ. ರೂಪ, ಸ್ವರೂಪ, ಸ್ವಭಾವ, ಆಚಾರವಿಚಾರ, ನಡೆವಳಿಕೆ, ವೃತ್ತಿ ಎಲ್ಲದರಲ್ಲೂ ಎಲ್ಲೆಡೆಯ ಸಂಕೇತಿಗಳೂ ತದ್ವತ್ತಾಗಿ ಒಂದೇ ಆಗಿದ್ದಾರೆ. ದಕ್ಷಿಣದ ಸಂಕೇತಿಗಳ ಬಾಗಾಯಿತು-ಸಂಸ್ಕೃತಿ ಕರ್ನಾಟಕಕ್ಕೆ ಸಮಾನವಾಗಿತ್ತು. ಅದು ನೇಗಿಲು ಹಿಡಿದು ಉಳುಮೆ ಮಾಡಿದ ಹೊಲದ ಬೇಸಾಯದ ವಿಷಯದಲ್ಲೂ ಸತ್ಯವಾದುದೇ. ಅನ್ಯ ಸಮುದಾಯದ ಜತೆಗಿನ ವಿವಾಹ ಮತ್ತು ನಗರೀಕರಣದ ವಿಷಯದಲ್ಲಿ ದಕ್ಷಿಣದ ಸಂಕೇತಿಗಳು ಕರ್ನಾಟಕದ ತಮ್ಮ ಬಂಧುಗಳಿಗಿಂತ ೪-೫ ದಶಕಗಳಷ್ಟು ಮುಂದಿದ್ದಾರೆ. ಪ್ರಕೃತ ಕ್ಷೇತ್ರಕಾರ್ಯದ ಅವಧಿಯಲ್ಲಿಯೇ ಗ್ರಾಮವಾಸ ಮತ್ತು ವ್ಯವಸಾಯದ ಕಟ್ಟಕಡೆಯ ಮೆಟ್ಟಿಲನ್ನು ಅಲ್ಲಿನವರು ಇಳಿಯಲು ಅಣಿಯಾಗಿದ್ದ ಅವಸ್ಥೆ ಕಂಡಿದೆ. ಕೀಳ್ಪುಲಿಯೂರ್‌ನ ಕೆ.ಪಿ.ಶಿವರಾಮನ್ ಅವರ ಜತೆಗಿನ ಸಂದರ್ಶನವು ಅವಶ್ಯವಾಗಿಯೂ ಕರ್ನಾಟಕದ ಸಂಕೇತಿಗಳಿಗೆ ತತ್ಸಮಾನ ಸಂಕೇತಿ ಪ್ರಪಂಚವೊಂದನ್ನು ತೆರೆದಿಡುತ್ತದೆ. ದರ್ಶನಂಕೋಪಿನ ಲಕ್ಷ್ಮಣನ್ ಹೇಳಿದ ಒಂದು ಮಾತನ್ನು ಅವಶ್ಯವಾಗಿ ಇಲ್ಲಿಯೇ ಉದ್ಧರಿಸಬೇಕು. ನಶ್ಯದ ಚಿಟಿಕೆ ಹಿಡಿದು, ತತ್ತ್ವಬೋಧದ ಆ ಪ್ರಸಿದ್ಧ ಭಂಗಿಯಲ್ಲಿ ಅವರು ಕೊಟ್ಟ ನಿರ್ಣಯ, "ಸಂಕೇತಿಗಳಿಗೆ ಎರಡೇ ವೃತ್ತಿ ಮಾರಾಯ! ಒಂದು ವ್ಯವಸಾಯ; ಇನ್ನೊಂದು ವೈದಿಕ ಸೇವೆ." "ಉಳುಮೆ?" ಎಂದು ಕೆದಕಿದರೆ ಚೌಕದಿಂದ ಮೂಗು ಸೀಟಿಕೊಂಡು, ಕಣ್ಣಿನಲ್ಲಿ ನೋವು ತುಂಬಿಕೊಂಡು ಹೇಳುತ್ತಾರೆ "ಅದನ್ನು ಬ್ರಾಹ್ಮಣರು ಮಾಡಬಾರದು ಮಾರಾಯ! ಗೋವಿಗೆ ಹೊಡೆಯಬೇಕಾಗುತ್ತೆ, ಅದು ಮಹಾಪಾಪ!" ಟಿ.ಎಸ್.ರಾಜಾಮಣಿ ಅವರ ಆತ್ಮಕಥೆಯ ಆಯ್ದ ಭಾಗಗಳು ದಕ್ಷಿಣದ ಬಾಗಾಯಿತು ಸಂಸ್ಕೃತಿಯ ಕಳೆದುಹೋದ ದೃಶ್ಯಗಳನ್ನು ಕಣ್ಣಿಗೆ ಕಟ್ಟಿಸುತ್ತವೆ. ಕರ್ನಾಟಕದ

ಸಂಕೇತಿಗಳ 'ಬಾಗಾಯ್ತು ಸಂಸ್ಕೃತಿಯ ಪರಿಣತ ಮುನ್ನಡೆ' ಎಂಬ ಭಾಗವು ಈ ವಿಭಾಗದ ತಾರ್ಕಿಕ ಕೊನೆಯಾಗಿ ಸಾರ್ಥಕವಾಗಿದೆ. ವಿಕಾಸಕ್ಕೆ ಮುಖ ಮಾಡಿದ ಗತಿಶೀಲತೆಯು ಬ್ರಾಹ್ಮಣರಿಗೆ ಸಾಮಾನ್ಯವಾದ ಗುಣ. ತೀವ್ರವಾಗಿ ತೊಡಗಿಸಿಕೊಂಡಂತೆ ಕಾಣುವಾಗಲೇ ಈ ಜಂಗಮತೆಯನ್ನು ಲೀಲಾಜಾಲವಾದ ಜೀವನವಿಧಾನವಾಗಿ ಮಾಡಿಕೊಳ್ಳುವುದರಲ್ಲಿ ಸಂಕೇತಿಗಳ ವಿಶಿಷ್ಟತೆ ಇದೆ. ಆ ಕಾರಣದಿಂದಲೇ, ಬಾಗಾಯಿತು ಸಂಸ್ಕೃತಿಯ ಬೇರುಗಳನ್ನು ಕಡಿದುಕೊಂಡರೆ ಆಧುನಿಕತೆಯ ಹೆಸರಿನಲ್ಲಿಯೇ ಅನೇಕ ರೀತಿಯಲ್ಲಿ ಹರಡುವ ವಿಷವನ್ನು ಜಯಿಸುವುದು ಸಾಧ್ಯವೆ ಎಂಬುದ್ನು ಸಂಕೇತಿಗಳೇ ಹೆಚ್ಚಾಗಿ ಪರಿಭಾವಿಸಬೇಕಾಗಿದೆ.

೨೧ನೆಯ ಪರಿಚ್ಛೇದದಲ್ಲಿ ಪ್ರಣತಾರ್ತಿಹರನ್ ಅವರು ಕರ್ನಾಟಕದ ಸಂಕೇತಿ ನೆಲೆಗಳಲ್ಲಿ ನಡೆಸಿದ ಕ್ಷೇತ್ರಕಾರ್ಯದ ಟಿಪ್ಪಣಿಗಳು ಸೇರಿವೆ. ಕರ್ನಾಟಕದ ಹಳ್ಳಿಗಳಲ್ಲಿರುವ ಪಾರಂಪರಿಕ ಬೇಸಾಯದ ಜೊತೆಗಿನ ಪಾರಂಪರಿಕ ಜೀವನವಿಧಾನದ ವೈಶಿಷ್ಟ್ಯಗಳೂ, ಆಗುತ್ತಿರುವ ಬದಲಾವಣೆಗಳ ಸ್ವರೂಪದ ಚಿತ್ರವೂ ಇಲ್ಲಿ ದಟ್ಟವಾಗಿ ದೊರೆಯುತ್ತವೆ. ಕರ್ನಾಟಕದ ನಗರಗಳಲ್ಲಿ ಮಾಡಿರುವ ಕ್ಷೇತ್ರಕಾರ್ಯ ವರದಿಯು, ಸಂಕೇತಿಗಳಿಗೆ ರಕ್ತಗತವಾಗಿ ಬಂದ ಬೇಸಾಯದ ಒಲುಮೆಯು ಆಧುನಿಕ ಅಗತ್ಯ ಮತ್ತು ನಿರೀಕ್ಷೆಗಳಿಗೆ ತಕ್ಕಂತೆ ಹೇಗೆ ವೈವಿಧ್ಯಪೂರ್ಣವಾಗಿ ಹೊಮ್ಮಿ ಕಾಣಿಸಿಕೊಂಡಿದೆ ಎಂಬುದರ ಪರಿಚಯ ಮಾಡಿಕೊಡುತ್ತದೆ. ೨೦೦೬ರಲ್ಲಿ ಅಮೆರಿಕ ಸಂಯುಕ್ತ ಸಂಸ್ಥಾನಗಳಲ್ಲಿ ಪ್ರಕಟವಾದ ಪುಸ್ತಕವೊಂದಕ್ಕಾಗಿ ಡಾ|| ಕೃಷ್ಣ ಸುಬ್ಬರಾವ್ ಬರೆದ ಲೇಖನದ ಕನ್ನಡ ರೂಪವನ್ನು ೨೨ನೆಯ ಪರಿಚ್ಛೇದದಲ್ಲಿ ಕೊಟ್ಟಿದೆ. ಅದರ ಮುಂದಿನ ಭಾಗದಲ್ಲಿ, ಹೊರದೇಶದ ಸೌಲಭ್ಯಗಳನ್ನು ಬಳಸಿಕೊಂಡು ಕೃಷಿ ಸಂಶೋಧನೆಯ ಅತ್ಯುನ್ನತ ನೆಲೆಯನ್ನು ತಲುಪಿರುವ ಶ್ರೇಷ್ಠ ಕೃಷಿ ವಿಜ್ಞಾನಿಯ ಜತೆಗೆ ನಡೆಸಿರುವ ಸಂದರ್ಶನವು ಈ ಕ್ಷೇತ್ರದ ಇತ್ತೀಚಿನ ಅಮೂಲ್ಯ ಮಾಹಿತಿಗಳನ್ನು ಒದಗಿಸಿದೆ.

ಈಗಾಗಲೇ ನಡೆದಿರುವ ಸಂಶೋಧನೆಯ ಫಲಶ್ರುತಿಗಳು ೨೪ನೆಯ ಪರಿಚ್ಛೇದದಲ್ಲಿ ಸಂಗ್ರಹವಾಗಿ ಕಾಣಿಸಿಕೊಂಡಿವೆ.

'ಸಂಕೇತಿ: ಒಂದು ಅಧ್ಯಯನ' ಎಂಬುದು ಸಂಕೇತಿ ಸಮುದಾಯದ ಬಗೆಗೆ ನಡೆದ ಸಮಗ್ರ ಸಂಶೋಧನೆ. ಅದರಲ್ಲಿ ಈ ಸಮುದಾಯದ ಕೃಷಿ ಸಂಬಂಧವಾಗಿ ಬಂದಿರುವ ಸೂತ್ರಪ್ರಾಯವಾದ ತೀರ್ಮಾನಗಳನ್ನು ಆಯ್ದು ಇಲ್ಲಿ ಸೇರಿಸಲಾಗಿದೆ.

'ಶತಮಾನದ ಪತ್ರಗಳು' ಎಂಬ ಕೃತಿಯಲ್ಲಿ ಸೇರಿರುವ ಸಂಕೇತಿ ಕೌಟುಂಬಿಕ ಪತ್ರಗಳು ಈ ಸಮುದಾಯದ ಬೇಸಾಯದ ಬದುಕಿನ ಅಂತರಂಗವನ್ನು ಮುಕ್ತವಾಗಿ ತೆರೆದಿಟ್ಟಿವೆ.

'ಸಂಕೇತಿ: ಅಭಿನಂದನ', 'ಸಂಕೇತಿ: ಇತಿವೃತ್ತಗಳು', ಮತ್ತು 'ಸಂಕೇತಿ: ಆತ್ಮಕಥೆಗಳು' ಎಂಬ ಗ್ರಂಥಗಳಲ್ಲಿ ವ್ಯಕ್ತಿಜೀವನದ ಪರಿಚಯಮಾಡಿಕೊಡುವಾಗ ಆನುಷಂಗಿಕವಾಗಿ ಅವರ ಕೃಷಿಕ್ಷೇತ್ರದ ಪರಿಚಯ ಭಾಗಗಳು ಬಂದಿವೆ. ಅವನ್ನು ಆರಿಸಿ ಕೊಡಲಾಗಿದೆ.

'ಸಂಕೇತಿ ಕೃಷಿಯ ವಿಭಿನ್ನ ನೆಲೆಗಳು' ಮತ್ತು 'ಸಂಕೇತಿ: ಬೇಸಾಯದ ಬದುಕು' ಎಂಬ ಗ್ರಂಥಗಳಲ್ಲಿ ಕೃಷಿಕರೂ ಅಧ್ಯಯನಕಾರರೂ ಆಡಿರುವ ಸಾರಭೂತ ಮಾತುಗಳನ್ನು ಸಂಗ್ರಹಿಸಲಾಗಿದೆ. ಆ ಓದು ಸಂಕೇತಿಕೃಷಿಯ ಸ್ವರೂಪ ಸಿದ್ಧಾಂತಗಳನ್ನು ಮಾತ್ರವಲ್ಲ, ಅದರಾಚೆಗಿನ ಬಾಳಿನ ಹದದ ದರ್ಶನವನ್ನೂ ಮಾಡಿಸುತ್ತದೆ.

ಸಂಕೇತಿ ಕೃಷಿಗೆ ಸಂಬಂಧಿಸಿದ ಮಾಹಿತಿಯು 'ಸಂಕೇತಿ ಕೃಷಿಯ ವಿಭಿನ್ನ ನೆಲೆಗಳು' ಮತ್ತು 'ಸಂಕೇತಿ: ಬೇಸಾಯದ ಬದುಕು' ಎಂಬ ಪ್ರತ್ಯೇಕ ಸಂಪುಟಗಳಲ್ಲಿ ಪ್ರಕಟಗೊಂಡಿರುವುದು ನಿಜವೆ. ಇವೆಲ್ಲವೂ ಒಂದು ಯೋಜಿತ ಕ್ರಮದಲ್ಲಿ ಎರಕಗೊಂಡಿರುವುದನ್ನು ಸಹೃದಯರು ಗಮನಿಸಬೇಕು. 'ಸಂಕೇತಿ ಕೃಷಿಯ ವಿಭಿನ್ನ ನೆಲೆಗಳು' ಎಂಬ ಕೃತಿಯು ಸಂಕೇತಿಗಳ ವ್ಯವಸಾಯದ ವಿವರಗಳನ್ನು ವಿಸ್ತಾರವಾಗಿಯೇ ಒಳಗೊಂಡಿದೆ. ಆದರೆ ಅದು ಈ ವಿವರಗಳಲ್ಲಿ ವಿರಮಿಸದೆ ಅಥವಾ ಪರಿತೃಪ್ತವಾಗದೆ ಭಾರತೀಯ ಸನಾತನ ಪರಂಪರೆಯ ಜೀವಿತವೊಂದರ ದರ್ಶನಮೀಮಾಂಸೆಯಾಗಿ ವಿಹರಿಸಿದೆ. 'ಅವಲೋಕನ' ಎಂಬ ಭಾಗವು ಈ ಜೀವಿತದ ಒಟ್ಟು ಸನ್ನಿವೇಶವನ್ನು ಹಿಡಿದುಕೊಡುತ್ತದೆ. ಆದರೆ ಚಿಕಿತ್ಸಕತೆಗೆ ಅದರ ಒತ್ತು ಇದೆ. 'ಅನೂಚಾನ' ಎಂಬ ಭಾಗವು ಸಂಕೀರ್ಣಸ್ವರೂಪದ್ದು. ಮುಖ್ಯವಾಗಿ ಅದರದು ಸಂಕೇತಿ ಕೃಷಿ ಜೀವನದ ಪ್ರಭಾವಲಯದ ಹಲವು ಸುತ್ತುಗಳನ್ನು ಕಟ್ಟಿಕೊಡುವ ಪ್ರಯತ್ನ. ೧೯ನೆಯ ಶತಮಾನದ ಆರನೇ ದಶಕವು ಕೃಷಿಯಲ್ಲಿ ದೈಹಿಕ ಶ್ರಮ, ಕಡುಬಡತನ, ಧಾರ್ಮಿಕತೆ, ಅಧ್ಯಾತ್ಮದ ಎತ್ತರ

ಇವುಗಳ ದೃಷ್ಟಿಯಿಂದ ಸ್ಥಿತ್ಯಂತರದ ಕಾಲ. ೨೦೦೨-೦೩ರಲ್ಲಿ - ಅಂದರೆ ಸುಮಾರು ನಾಲ್ಕು ದಶಕಗಳ ಕೃಷಿಸ್ಥಿತಿಯ ಸಂಕ್ರಮಣದ ನಂತರ - ನಡೆದ ಅಧ್ಯಯನವಿದು. ಪಾರಂಪರಿಕವಾಗಿ ಹಲವು ಶತಮಾನಗಳ ಕಾಲ ಅವಿಚ್ಛಿನ್ನವಾಗಿ ಹರಿದುಬಂದ ಸಂಕೇತಿ ಬಾಗಾಯಿತು ಸಂಸ್ಕೃತಿಯ ಬನಿಯು ವಿಸ್ಮೃತಿಗೆ ಸಂದುಹೋಗುತ್ತಿರುವ ಕಾಲದ ಅಧ್ಯಯನ. ಸ್ವಾತಂತ್ರ್ಯಪೂರ್ವದ ಈ ಬನಿಯ ಚಿತ್ರವನ್ನು ತುಸುವಾದರೂ ಕಟ್ಟಿಕೊಡಲು 'ಅನೂಚಾನ'ವು ವಿವಿಧ ಮೂಲಗಳಿಗೆ ಕೈಹಾಕಿದೆ. ಕೃಷಿಗೆ ನೇರವಾಗಿ ಸಂಬಂಧವಿಲ್ಲದಂತೆ ಕಾಣುವ, ಆದರೆ ಅದರ ಹೊಕ್ಕಳಬಳ್ಳಿಯ ಮೇಲೇ ನಿಂತ ವಿದ್ಯಮಾನಗಳನ್ನು ಹುಡುಕಿ ದಾಖಲಿಸಿದೆ. ಈ ವಿದ್ಯಮಾನಗಳು ಕೃಷಿ ಪ್ರಭಾವಳಿಯ ಬೇರೆ ಬೇರೆ ಸುತ್ತಿನವೂ ಆಗಿವೆ. ಅವೆಲ್ಲ ಸೇರಿ ಸಂಕೇತಿ ಕೃಷಿ ಪರಂಪರೆಯ ಸ್ವಾತಂತ್ರ್ಯಪೂರ್ವ ಸ್ಥಿತಿಯ ಚಿತ್ರ ಕೊಡಬಹುದೆಂಬುದು ಅದರ ನಿರೀಕ್ಷೆ.

ಹೀಗೆ ಎನ್. ಕೇಶವಮೂರ್ತಿ, ವಿಜಯ್ ಅಂಗಡಿ ಮತ್ತು ಡಾ|| ವಿಜಯಾ ಹರನ್ ಅವರು ಸಂಕೇತಿ ಕೃಷಿಯ ಅಧ್ಯಯನಕ್ಕೆ ಮೂರು ಸ್ಪಷ್ಟ ಆಯಾಮಗಳನ್ನು ಒದಗಿಸಿದ್ದಾರೆ. ಈ ಮೂರೂ ತಮ್ಮಷ್ಟಕ್ಕೇ ಯಶಸ್ವಿಯಾದ ಪ್ರಯತ್ನಗಳಾಗಿವೆ. ಮೂರೂ ಸೇರಿ ಸಂಕೇತಿ ಕೃಷಿಯ ಪಾರಂಪರಿಕತೆಯನ್ನು ಸಮಗ್ರವಾಗಿ ದರ್ಶನ ಮಾಡಿಸಲು ಪ್ರಾಮಾಣಿಕವಾಗಿ ಮತ್ತು ಶ್ರಮಪೂರ್ಣವಾಗಿ ದುಡಿದಿವೆ.

ಸಂಕೇತಿ ಸಮುದಾಯದ ಬೇಸಾಯಕ್ಕೆ ಸಂಬಂಧಿಸಿದಂತೆ ಸಂಶೋಧನೆ ನಡೆಯಬೇಕಾದ ಕ್ಷೇತ್ರಗಳು ಇದ್ದೇ ಇವೆ. ಅಡಕೆಯ ಬೇಸಾಯ ಇವರಿಗೆ ಯಾವಾಗ ಒಲಿಯಿತು? ತಮಿಳುನಾಡಿನಲ್ಲಿ ವೀಳೆಯ ಬೇಸಾಯವನ್ನು ಅಬ್ರಾಹ್ಮಣರಾದ ಮೂಪನಾರ್‌ಗಳು ಮಾತ್ರ ಮಾಡುತ್ತಾರೆ, ಅದು ಅವರ ಜಾತಿಯ ವೃತ್ತಿ; ಇತರ ಸಮುದಾಯಗಳ ನಡುವೆ, ಅದರಲ್ಲೂ ಬ್ರಾಹ್ಮಣರ ಒಂದು ಉಪಸಮುದಾಯಕ್ಕೆ ವೀಳೆಯ ಬೇಸಾಯವು ಅಡಕೆಗಿಂತಲೂ ಒಂದು ಕೈ ಹೆಚ್ಚು ಎನ್ನುವಂತೆ ಗೌರವಯುತವಾಗಿ ಅಂಟಿಬಂದಿದ್ದು ಹೇಗೆ, ಎಲ್ಲಿ, ಯಾವಾಗ? ಅಂಥ ಪರಮ ವೈದಿಕರ ನಡುವಿನಿಂದಲೇ ಗಣನೀಯ ಸಂಖ್ಯೆಯ ಸಂಕೇತಿ ರೈತರು ನೇಗಿಲು ಹಿಡಿದು ಹೊರಟು ಬ್ರಾಹ್ಮಣ್ಯವನ್ನೂ ಉಳಿಸಿಕೊಂಡದ್ದು ಹೇಗೆ? ಸಂಕೇತಿ ಸಮುದಾಯವು ಕಾಲಕಾಲದ ಅಗತ್ಯವನ್ನನುಸರಿಸಿದ ಗತಿಶೀಲತೆಯನ್ನು ಮಾತ್ರವೇ ನೆಚ್ಚಬೇಕೆ, ಅಥವಾ ಬಾಗಾಯಿತು ಸಂಸ್ಕೃತಿಯ ಬೇರುಗಳಿಂದಲೇ ಹೊಸ ಹೆಜ್ಜೆಗಳಿಗೆ ಕಸುವು ತುಂಬಿಕೊಳ್ಳುವುದು ಒಳಿತೆ? ಇವೆಲ್ಲವೂ ಇನ್ನೂ ಜೀವಂತ ಪ್ರಶ್ನೆಗಳಾಗಿಯೇ ಉಳಿದಿವೆ. ಈ ಎಲ್ಲ ಜಿಜ್ಞಾಸೆಗಳ ನಡುವೆಯೂ ನಾವು ಸದ್ಯಕ್ಕೆ ಈ ಸಮುದಾಯದ ಬಾಗಾಯಿತು ಸಂಸ್ಕೃತಿಯ ಸಾರ್ಥಕ್ಯದ ದೃಷ್ಟಿಯಿಂದ ಸಹೃದಯಿಗಳ ಈ ಮಾತುಗಳನ್ನು ಪರಿಭಾವಿಸಬೇಕು: "...ಹಲವಾರು ವರ್ಷಗಳು ಅವರ ಕೃಷಿಯ ಒಡನಾಟದಲ್ಲಿ ಇದ್ದ ನನಗೆ ಆ ಕುರಿತು ಅಪಾರ ಗೌರವ, ಆದರ, ಅಭಿಮಾನವಿದೆ. ಆ ವಿಚಾರದಲ್ಲಿ ಅವರುಗಳಿಗೆ ಇರುವ ಮಮತೆ, ಪ್ರೀತಿ, ಕೃಷಿ ಹಣ ಗಳಿಸುವ ಕಾರ್ಖಾನೆಯಲ್ಲ; ನೆಮ್ಮದಿಯ, ನಿರ್ಲಿಪ್ತತೆಯ, ತೃಪ್ತಿಯ ತಪೋಭೂಮಿ ಎನ್ನುವ ಅವರುಗಳ ಭಾವನೆಗಳಿಗೆ ಇದೋ ನನ್ನ ಸಾಷ್ಟಾಂಗ ನಮಸ್ಕಾರಗಳು."

ಈ ಸಂಪುಟಕ್ಕೆ ಮೌಲಿಕ ಮುನ್ನುಡಿಯನ್ನು ಬರೆದುಕೊಟ್ಟು ಉಪಕರಿಸಿರುವ ವಿದ್ವಾಂಸ ಡಾ|| ಬಿ. ಚನ್ನಕೇಶವ ಅವರಿಗೆ ಸಮುದಾಯ ಅಧ್ಯಯನ ಕೇಂದ್ರವು ಆಭಾರಿಯಾಗಿದೆ.

೨೭.೯.೨೦೧೦ | *ಪ್ರಣತಾರ್ತಿಹರನ್*
ಮೈಸೂರು | *ಪ್ರಧಾನ ಸಂಪಾದಕ*

ಮುನ್ನುಡಿ

ನ ಹಾಯನೈಃ ನ ಪಲಿತೈಃ ನ ವಿತ್ತೇನ ನ ಬಂಧುಭಿಃ |
ಋಷಯಶ್ಚಕ್ರಿರೇ ಧರ್ಮಂ ಯೋಽನೂಚಾನಸ್ಸನೋ ಮಹಾನ್ || ಮನು ೨.೧೫೪

ವಯಸ್ಸಿನಿಂದಾಗಲೀ, ಕೂದಲು ನರೆತದ್ದರಿಂದಾಗಲೀ, ಹಣದಿಂದಾಗಲೀ ಅಥವಾ ಬಂಧುಗಳಿಂದಾಗಲೀ ಯಾರೂ ದೊಡ್ಡವರಾಗುವುದಿಲ್ಲ. ಯಾರು ಸಾಂಗವೇದಾಧ್ಯಾಯಿಯೋ ಅವನೇ ದೊಡ್ಡವನು. ಇದೇ ಋಷಿಗಳಿಗೆ ಸಮ್ಮತವಾದ ಧರ್ಮ.

ಸಂಕೇತಿ ಅಧ್ಯಯನ ಮಾಲೆಯಲ್ಲಿ ಒಂಬತ್ತನೆಯ ಸಂಪುಟವಾಗಿ ಪ್ರಕಟವಾಗುತ್ತಿರುವ 'ಸಂಕೇತಿ : ಬೇಸಾಯದ ಬದುಕು' ಎಂಬ ಈ ಗ್ರಂಥ ಇದರ ಹಿಂದಿನ ಸಂಪುಟವಾದ 'ಸಂಕೇತಿಕೃಷಿಯ ವಿಭಿನ್ನನೆಲೆಗಳು' ಗ್ರಂಥದ ಮುಂದುವರಿದ ಭಾಗವಾಗಿ (sequel) ಕಾಣುತ್ತದೆ. ಉದ್ದೇಶ, ಗುಣ, ಗಾತ್ರ, ವಿಷಯ ಮುಂತಾದ ವಿಚಾರಗಳಲ್ಲಿ ಇದು ಹಿಂದಿನ ಗ್ರಂಥಕ್ಕೆ ಸದೃಶವಾಗಿದ್ದರೂ ಸ್ವರೂಪದಲ್ಲಿ ಅದಕ್ಕಿಂತ ಸ್ವಲ್ಪ ಭಿನ್ನವಾಗಿರುವುದು ಸಂಪಾದಕರು ಇದನ್ನು 'ಅವಲೋಕನ' ಮತ್ತು 'ಅನೂಚಾನ' ಎಂದು ಎರಡು ಭಾಗಗಳಾಗಿ ವಿಂಗಡಿಸಿರುವುದರಿಂದಲೇ ವ್ಯಕ್ತವಾಗುತ್ತದೆ.

ಪ್ರಥಮಭಾಗವಾದ 'ಅವಲೋಕನ'ವನ್ನು ಈ ಹಿಂದಿನ ಸಂಪುಟದ ಕರ್ತೃವಾದ ಶ್ರೀ ಕೇಶವಮೂರ್ತಿಯವರಂತೆಯೇ ಆಕಾಶವಾಣಿಯಲ್ಲಿ ಕೃಷಿತಜ್ಞರಾಗಿರುವ ಶ್ರೀ ವಿಜಯ್ ಅಂಗಡಿಯವರು ಬರೆದಿದ್ದಾರೆ. ಅಂಗಡಿಯವರೂ ಕೇಶವಮೂರ್ತಿಯವರಂತೆಯೇ ಹಳ್ಳಿಹಳ್ಳಿಗಳಿಗೆ ಹೋಗಿ ಸಂಕೇತಿಕೃಷಿಕರನ್ನು ಸಂದರ್ಶಿಸಿ ಕ್ಷೇತ್ರಸಮೀಕ್ಷೆಯನ್ನು ಮಾಡಿ ಪ್ರಶ್ನಾವಳಿಯ ಮೂಲಕ ವಿಷಯವನ್ನು ಖುದ್ದಾಗಿ ಸಂಗ್ರಹಿಸಿದ್ದಾರೆ. ಪ್ರಾಯಃ ಈ ಇಬ್ಬರು ಕೃಷಿವಿಜ್ಞಾನಿಗಳೂ ಪೂರ್ವನಿಶ್ಚಯದಂತೆ ಹಂಚಿಕೊಂಡು ಕೆಲಸವನ್ನು ಮಾಡಿರುವಂತೆ ಕಾಣುತ್ತದೆ. ಕೇಶವಮೂರ್ತಿಯವರು ಸಂದರ್ಶಿಸದಿದ್ದ ಕೆಲವು (ಸುಮಾರು ೧೭) ಗ್ರಾಮಗಳನ್ನು ಅಂಗಡಿಯವರು ಆಯ್ಕೆಮಾಡಿಕೊಂಡು ಅವರ ಕೆಲಸವನ್ನು ಮುಂದುವರಿಸಿರುವಂತೆ ಭಾಸವಾಗುತ್ತದೆ. ಕೆಲವು ಗ್ರಾಮಗಳು ಇವರ ಸಮೀಕ್ಷೆಯ ಅಳವಿಗೂ ಒಳಪಡದೆ ತಪ್ಪಿಹೋಗಿರುವುದು ಪ್ರಾಯಃ ಆಕಸ್ಮಿಕವಿರಬಹುದು ಅಥವಾ ಈ ಗ್ರಾಮಗಳಲ್ಲಿ ಈಗ ಸಂಕೇತಿಕೃಷಿಕರು ವಾಸಿಸುತ್ತಿಲ್ಲದೆಯೂ ಇರಬಹುದು.

ಅಂಗಡಿಯವರ ಶೈಲಿ ಮತ್ತು ವಿಷಯಪ್ರತಿಪಾದನರೀತಿ ಕೇಶವಮೂರ್ತಿಯವರಿಗಿಂತ ವಿಭಿನ್ನವಾಗಿದೆ. ಸಂಕೇತಿಗಳ ವ್ಯವಸಾಯ ಕ್ರಮದಲ್ಲಿ ಕಂಡುಬರುವ ಗುಣದೋಷಗಳನ್ನು, ಕುಂದುಕೊರತೆಗಳನ್ನು ಆಮೂಲಾಗ್ರ ಪರಿಶೀಲಿಸುವ ಅಂಗಡಿಯವರು ಒಬ್ಬ ನುರಿತ ಚಿಕಿತ್ಸಕನ ಹಾಗೆ ಅಗತ್ಯಕಂಡಲ್ಲಿ ಅಲ್ಲಲ್ಲಿಯೇ ಪರಿಹಾರಗಳನ್ನೂ ಸೂಚಿಸುತ್ತಾ ಹೋಗುತ್ತಾರೆ. ಅವರ ಇಂತಹ ಕಾರ್ಯೋಪಯೋಗಿ ಪರಿಶೀಲನಕ್ರಮದಿಂದಾಗಿ (practical approach) ಕೆಲವಾದರೂ ಕೃಷಿಕರಿಗೆ ಸಹಾಯವಾಗಿರುವ ಸಾಧ್ಯತೆಯಿದೆ. ಅವರು ಸಂಕೇತಿಗಳ ಕೃಷಿಜೀವನದ ಕಡೆಗೆ ಮಾತ್ರ ಗಮನ ಹರಿಸದೇ ಕೆಲವೊಮ್ಮೆ ಅವರ ಕೃಷೀತರ ಚಟುವಟಿಕೆಗಳ ಕಡೆಗೂ ಗಮನಹರಿಸುತ್ತಾರೆ. ನಾಲ್ಕೈದು ದಶಕಗಳಷ್ಟು ಹಿಂದಿನವರೆಗೂ ಬಹುತೇಕ ಸಂಕೇತಿಗಳ ಬದುಕು ಕೃಷಿಕೇಂದ್ರಿತವಾಗಿದ್ದುದರಿಂದ ಅವರು ಹೀಗೆ ಕೃಷಿಕರ ವೈಯಕ್ತಿಕ ಬದುಕಿನಕಡೆಗೂ ಇಣುಕುನೋಟವನ್ನು ಹರಿಸುವುದು ಸಹಜವೂ ಅಗತ್ಯವೂ ಆಗಿ ಕಾಣಿಸುತ್ತದೆಯೇ ಹೊರತು ಅತಿಕ್ರಮವೆನಿಸುವುದಿಲ್ಲ. ಇದರಿಂದ ನಮ್ಮ ಹಿಂದಿನತಲೆಮಾರಿನವರು ವ್ಯವಸಾಯವನ್ನೇ ನಂಬಿ ಅನುಭವಿಸಿದ ಕಷ್ಟಕಾರ್ಪಣ್ಯಗಳೇನು, ಅವರ ಬದುಕಿನ ಬವಣೆಗಳೇನು ಎಂಬುದನ್ನು ಮತ್ತು ಅವರ ಪರಿಶ್ರಮದಫಲವಾಗಿ ಇಂದಿನ ಕೃಷೀತರ ತಲೆಮಾರಿನವರು ಹೇಗೆ ನಗರಗಳಲ್ಲಿ ಸುಖವಾದ ಜೀವನವನ್ನು ನಡೆಸುತ್ತಿದ್ದಾರೆ ಎಂಬುದನ್ನೂ ತಿಳಿಯಲು ಸಹಾಯವಾಗುತ್ತದೆ. ಪ್ರತಿ ಸಂದರ್ಶನದ ಕೊನೆಯಲ್ಲಿ ಅಂಗಡಿಯವರು ಅದರ ಸಾರಾಂಶವನ್ನು ಸಂಗ್ರಹಿಸಿಕೊಡುವ ರೀತಿ ರಮ್ಯವೂ, ಪ್ರಯೋಜನಕಾರಿಯೂ ಆಗಿದೆ.

ಎರಡನೆಯ ಭಾಗವಾದ 'ಅನೂಚಾನ'ವನ್ನು ಡಾ. ವಿಜಯಾ ಹರನ್ ಬಹಳ ಪ್ರಬುದ್ಧವಾಗಿ ಮತ್ತು ಸಮರ್ಥವಾಗಿ ಸಂಪಾದಿಸಿಕೊಟ್ಟಿದ್ದಾರೆ. ಅನೂಚಾನವೆಂದರೆ ವೇದವೇದಾಂಗಗಳನ್ನು ತಿಳಿದವನು ಎಂದರ್ಥ. (ಅನೂಚಾನಃ ಪ್ರವಚನೇ ಸಾಂಗೇsಧೀತೀ - *ಅಮರಕೋಶ;* ಅನೂಚಾನೋ ವಿನೀತೇ ಸ್ಯಾತ್ ಸಾಂಗವೇದವಿಚಕ್ಷಣೇ - *ವಿಶ್ವಕೋಶ*) ಈ ವಾಚ್ಯಾರ್ಥಕ್ಕಿಂತ ಭಿನ್ನವಾಗಿ ಈ ಶಬ್ದವು ವೈದಿಕರು ಹಾಕಿಕೊಟ್ಟಮಾರ್ಗ, ವೈದಿಕರ ವಿಚಾರಗಳ ನಿರಂತರ ಪರಂಪರೆ, ವೈದಿಕರ ಅವಿಚ್ಛಿನ್ನವಾದ ಪ್ರಾಚೀನ ಸಂಪ್ರದಾಯ ಎಂಬ ವಾಚ್ಯಾಕ್ಷಿಪ್ತವಾದ ಅರ್ಥವನ್ನು ಹೊಂದಿ ಕಾಲಕ್ರಮದಲ್ಲಿ ಪರಂಪರೆ, ಪ್ರಾಚೀನಸಂಪ್ರದಾಯ, ಹಿಂದಿನಿಂದ ಬಂದ ಪದ್ಧತಿ ಎಂಬ ಅರ್ಥವನ್ನು ಹೊಂದಿರಬಹುದು (ಈ ಅರ್ಥ ಇನ್ನೂ ಕೋಶವನ್ನು ಸೇರಿಲ್ಲ). ಮುಖ್ಯಾರ್ಥವು ಇಲ್ಲಿ ಅಪ್ರಸ್ತುತವಾಗುವುದರಿಂದ ಪ್ರಾಯಃ ಮೇಲೆ ಹೇಳಿದ ಗೌಣಾರ್ಥದಲ್ಲಿ ಈ ಶಬ್ದವು ಪ್ರಯೋಗಿಸಲ್ಪಟ್ಟಿದೆಯೆಂದು ತಿಳಿಯಬಹುದಾಗಿದೆ. ಇಲ್ಲಿ 'ಅನೂಚೀನ' ಇದಕ್ಕಿಂತ ಸಮೀಚೀನಶಬ್ದವಾಗಿ ಕಾಣುತ್ತದೆ. ಈ ಭಾಗದಲ್ಲಿ ಕಾಣಬರುವ ಲೇಖನಗಳು ನೇರವಾಗಿ ಸಂಕೇತಿಕೃಷಿಗೆ ಸಂಬಂಧಪಡದೇ ಇರುವುದರಿಂದ ಗ್ರಂಥದ ಏಕರೂಪತೆಗೆ ಒಂದು ರೀತಿಯಲ್ಲಿ ಧಕ್ಕೆಯುಂಟಾಗಿರುವಂತೆ

ಅನಿಸುತ್ತದೆ. ಆದರೆ ಈ ಲೇಖನಗಳು ಪರೋಕ್ಷವಾಗಿಯಾದರೂ ಸಂಕೇತಿ (ಬೇಸಾಯ) ಬದುಕಿನೊಡನೆ ಸಂಬಂಧಹೊಂದಿವೆಯಾದ್ದರಿಂದ ಈ ಏಕರೂಪತೆಯ ಅಭಾವ ಅಂತಹ ಕೊರತೆಯಾಗಿ ಕಾಣಿಸುವುದಿಲ್ಲ. ಇದರಿಂದ ಗ್ರಂಥದ ಮೌಲ್ಯಕ್ಕೇನೂ ಚ್ಯುತಿ ಬಂದಿಲ್ಲ.

ಈ ಭಾಗದಲ್ಲಿ ಪ್ರಸ್ತಾವಿಸಲ್ಪಟ್ಟಿರುವ ವಿಷಯಗಳು ಎರಡು ಪ್ರಕಾರಗಳಾಗಿವೆ. ಕೃಷಿಗೆ ಸಂಬಂಧಿಸಿದಂತೆ ಬೇರೆಬೇರೆ ವ್ಯಕ್ತಿಗಳಿಂದ ಅಭಿವ್ಯಕ್ತವಾದ ಅಭಿಪ್ರಾಯರೂಪದಲ್ಲಿರುವ ಬಿಡಿಬಿಡಿ ವಾಕ್ಯಗಳ ಸಂಗ್ರಹ ಒಂದು ಪ್ರಕಾರವಾದರೆ ಬೇರೆಬೇರೆ ಕಾಲದಲ್ಲಿ ಪ್ರಕಟವಾದ ಗ್ರಂಥಗಳಲ್ಲಿ, ನಿಯತಕಾಲಿಕಗಳಲ್ಲಿ, ವಿದ್ವತ್ಪತ್ರಿಕೆಗಳಲ್ಲಿ, ಸಂಶೋಧನಪತ್ರಿಕೆಗಳಲ್ಲಿ, ದಿನಪತ್ರಿಕೆಗಳಲ್ಲಿ ಈಗಾಗಲೇ ಬೆಳಕುಕಂಡಿರುವ ಲೇಖನಗಳ, ವರದಿಗಳ, ವ್ಯಕ್ತಿಚಿತ್ರಗಳ, ಐತಿಹ್ಯಗಳ, ಇತಿವೃತ್ತಗಳ ಮತ್ತು ಸಂದರ್ಶನಗಳ ಸಂಗ್ರಹ ಎರಡನೆಯದು. ಇದರಲ್ಲಿ ಮಿತ್ರ ಹರನ್ ಕ್ಷೇತ್ರಕಾರ್ಯದೊಡನೆ ನಡೆಸಿರುವ ಕೆಲವು ಸಂದರ್ಶನಗಳೂ ಸೇರಿವೆ. ಹರನ್ ನಡೆಸಿರುವ ಸಂದರ್ಶನಗಳಲ್ಲಿ ತಮಿಳುನಾಡು ಮತ್ತು ಕೇರಳಗಳ ಸೀಮಾಪ್ರದೇಶದಲ್ಲಿ ವಾಸಿಸುತ್ತಿರುವ ಸಂಕೇತಿ ಅಯ್ಯರ್ ಕೆಲವರ ಸಚಿತ್ರಸಂದರ್ಶನ ಕುತೂಹಲಜನಕವಾಗಿರುವುದಷ್ಟೇ ಅಲ್ಲದೆ ಕರ್ಣಾಟಕದ ಸಂಕೇತಿಗಳ ಮೂಲನೆಲೆಯನ್ನು ಗುರ್ತಿಸಲು ಸಹಾಯವಾಗುವಂತಹ ಅಮೂಲ್ಯ ಸಂಶೋಧನೆಯೂ ಆಗಿದೆ. ಸಂಕೇತಿ ಅಧ್ಯಯನಕ್ಕೆ ಭದ್ರಬುನಾದಿಯನ್ನು ಹಾಕಿಕೊಟ್ಟ ಶ್ರೀ ಎಮ್. ಕೇಶವಯ್ಯ ಮತ್ತು ಸಂಕೇತಿ ಅಧ್ಯಯನದೊಂದುವಿಷಯದಲ್ಲಿ ಅಪಾರವಾದ ಆಸಕ್ತಿಯನ್ನು ಬೆಳಸಿಕೊಂಡು ಹಲವಾರು ಲೇಖನಗಳನ್ನು ಬರೆದಿರುವ ಪ್ರೊ. ಕೆ.ಎಸ್. ಕೃಷ್ಣಮೂರ್ತಿ ಇವರುಗಳ ಲೇಖನಗಳಿಂದಾಗಿ ಈ ಗ್ರಂಥದ ಗೌರವ ಹೆಚ್ಚಿದೆ. ಡಾ|| ಬಿ.ವಿ. ಸುಧಾಮಣಿ ಅವರು ಜಾಗತಿಕಮಟ್ಟದ ಇತಿಹಾಸಸಮ್ಮೇಲನದಲ್ಲಿ ಸಾದರಪಡಿಸಿದ "ಕರ್ಣಾಟಕದ ಬ್ರಾಹ್ಮಣಕೃಷಿಕರಾಗಿ ಸಂಕೇತಿಗಳು" ಎಂಬ ಸಂಶೋಧನಲೇಖನ ಮತ್ತು ಶ್ರೀ ಹರನ್ ಅವರು ಅಮೇರಿಕಾಕ್ಕೆ ಹೋಗಿದ್ದಾಗ ಕ್ಯಾಲಿಫೋರ್ನಿಯ ವಿಶ್ವವಿದ್ಯಾನಿಲಯದಲ್ಲಿ ಪ್ರಾಧ್ಯಾಪಕರಾಗಿರುವ ಪಿರಿಯಾಪಟ್ಟಣದವರಾದ ಖ್ಯಾತ ಕೃಷಿವಿಜ್ಞಾನಿ ಡಾ|| ಕೃಷ್ಣಸುಬ್ಬರಾವ್ ಅವರನ್ನು ಕಂಡು ನಡಸಿರುವ ಸಂದರ್ಶನ ಇವೆರಡು ವಿಶೇಷವಾಗಿ ಗಮನ ಸೆಳೆಯುತ್ತವೆ. ಇಲ್ಲಿ ಕಾಳಿದಾಸನ ಕುಮಾರಸಂಭವದ ಒಂದು ಮಾತು ನೆನಪಿಗೆ ಬರುತ್ತದೆ -'ನ ರತ್ನಮನ್ವಿಷ್ಯತಿ ಮೃಗ್ಯತೇ ಹಿ ತತ್' (ಕು.ಸಂ. ೫-೪೫) ರತ್ನವು ಹುಡುಕುವುದಿಲ್ಲ, ಹುಡುಕಲ್ಪಡುತ್ತದೆ. - ಗೌರಿಯನ್ನು ಪರೀಕ್ಷಿಸಲು ಜಟಿಲ (ಬ್ರಹ್ಮಚಾರಿ) ವೇಷಧಾರಿಯಾಗಿ ಅವಳ ಬಳಿಗೆ ಹೋಗುವ ಶಿವನ ಮಾತುಗಳಿವು. ಹೀಗೆ ಕೃಷ್ಣಸುಬ್ಬರಾವ್‌ರಂತಹ ಸಂಕೇತಿರತ್ನಗಳನ್ನು ಹುಡುಕಿಕೊಂಡುಹೋಗಿ ಪತ್ತೆಮಾಡುವುದರಲ್ಲಿ ಹರನ್ ಸಿದ್ಧಹಸ್ತರು.

ಬ್ರಾಹ್ಮಣಕೃಷಿಯ ಬಗ್ಗೆ ಒಂದಷ್ಟು ಗೊಂದಲಗಳೂ ತಪ್ಪುಗ್ರಹಿಕೆಗಳೂ ಇದ್ದಂತಿವೆ. ಆದ್ದರಿಂದ ಇಲ್ಲಿ ಅದರ ಬಗ್ಗೆ ಸ್ಮೃತಿಗಳಲ್ಲಿ ಕಂಡುಬರುವ ಕೆಲವು ವಿಚಾರಗಳನ್ನು ತಿಳಿಸಿದರೆ ಅಪ್ರಸ್ತುತವಾಗಲಾರದು. ಸಾಮಾನ್ಯವಾಗಿ ಸ್ಮೃತಿಕಾರರು ದ್ವಿಜರಿಗೆ (ಬ್ರಾಹ್ಮಣ, ಕ್ಷತ್ರಿಯ, ವೈಶ್ಯ) ಈ ಕೆಳಗಿನಂತೆ ವೃತ್ತಿಗಳನ್ನು ವಿಧಿಸುತ್ತಾರೆ -

ಅಧ್ಯಾಪನಮಧ್ಯಯನಂ ಯಜನಂ ಯಾಜನಂ ತಥಾ |
ದಾನಂ ಪ್ರತಿಗ್ರಹಶ್ಚೈವ ಷಟ್ಕರ್ಮಾಣ್ಯಗ್ರಜನ್ಮನಃ || ಮನು 10-75

ಅಧ್ಯಯನ-ಅಧ್ಯಾಪನ, ಯಜನ-ಯಾಜನ, ದಾನ-*ಪ್ರತಿಗ್ರಹ* ಇವು ಬ್ರಾಹ್ಮಣನು ಆಚರಿಸಬೇಕಾದ ಷಟ್ಕರ್ಮಗಳು. ಇವುಗಳಲ್ಲಿ ಅಧ್ಯಯನ, ಯಜನ ಮತ್ತು ದಾನ ಇವು ಮೂರು ತನ್ನ ಮತ್ತು ತನ್ನ ಕುಟುಂಬದ ಶ್ರೇಯಸ್ಸಿಗಾಗಿ ಹೇಳಿರುವ ಕರ್ಮಗಳಾಗಿದ್ದರೆ (ಆಮುಷ್ಮಿಕಧರ್ಮ) ಅಧ್ಯಾಪನ, ಯಾಜನ ಮತ್ತು ಪ್ರತಿಗ್ರಹ ಇವು ಮೂರು ಜೀವನವನ್ನು ಸಾಗಿಸಲು ಹೇಳಿರುವ ಕರ್ಮಗಳಾಗಿವೆ (ಐಹಿಕ ಧರ್ಮ).

ಷಣ್ಣಾಂತು ಕರ್ಮಣಾಮಸ್ಯ ತ್ರೀಣಿ ಕರ್ಮಾಣಿ ಜೀವಿಕಾ |
ಯಾಜನಾಧ್ಯಾಪನೇ ಚೈವ ವಿಶುದ್ಧಾಚ್ಚ ಪ್ರತಿಗ್ರಹಃ || ಮನು 10.76
'ಯಾಜನಾಧ್ಯಾಪನಪ್ರತಿಗ್ರಹೈರೇವ ಬ್ರಾಹ್ಮಣೋ ದ್ರವ್ಯಮಾರ್ಜಯೇತ್, ನ ಕೃಷಿವಾಣಿಜ್ಯಾದಿನಾ' -

ಹರದತ್ತ, *ಆಪ. ಧರ್ಮ* - 1.1

ಮೇಲೆ ಹೇಳಿರುವ ಷಟ್ಕರ್ಮಗಳಲ್ಲಿ ಅಧ್ಯಯನ, ಯಜನ, ದಾನ ಈ ಮೂರನ್ನು ಬ್ರಾಹ್ಮಣರಂತೆಯೇ ಕ್ಷತ್ರಿಯ ಮತ್ತು ವೈಶ್ಯರಿಗೂ ಶ್ರೇಯಸ್ಸಾಧಕ ಕರ್ಮಗಳೆಂದು ಹೇಳಲಾಗಿದೆ. ಆದರೆ ಇವರು ಬ್ರಾಹ್ಮಣನಂತೆ ಅಧ್ಯಾಪನ, ಯಾಜನ ಮತ್ತು ಪ್ರತಿಗ್ರಹಗಳನ್ನು ಮಾಡುವಂತಿಲ್ಲ. ಶಸ್ತ್ರಾಸ್ತ್ರಗಳನ್ನು ಹಿಡಿದು ಪ್ರಜಾರಕ್ಷಣೆ ಮಾಡುವುದನ್ನು ಕ್ಷತ್ರಿಯರಿಗೂ ಮತ್ತು ವಾಣಿಜ್ಯ, ಪಶುಪಾಲನ ಮತ್ತು ಕೃಷಿಗಳನ್ನು ವೈಶ್ಯರಿಗೂ ಜೀವನಾರ್ಥಕರ್ಮಗಳೆಂದು ಹೇಳಲಾಗಿದೆ.

ಶಸ್ತ್ರಾಸ್ತ್ರಭೃತ್ತ್ವಂ ಕ್ಷತ್ರಸ್ಯ ವಣಿಕ್ಪಶುಕೃಷಿರ್ವಿಶಃ |
ಆಜೀವನಾರ್ಥಂ, ಧರ್ಮಸ್ತು ದಾನಮಧ್ಯಯನಂ ಯಜಿಃ || ಮನು 10.79

ಪ್ರಧಾನಂ ಕ್ಷತ್ರಿಯೇ ಕರ್ಮ ಪ್ರಜಾನಾಂ ಪರಿಪಾಲನಮ್ |
ಕುಸೀದಕೃಷಿವಾಣಿಜ್ಯಪಾಶುಪಾಲ್ಯಂ ವಿಶಃ ಸ್ಮೃತಮ್ || ಯಾಜ್ಞ. 1.119
ಕುಸೀದಂ = ವೃದ್ಧ್ಯರ್ಥಂ ದ್ರವ್ಯಪ್ರಯೋಗಃ (ಬಡ್ಡಿಗೆ ಹಣವನ್ನು ಕೊಡುವುದು)

ಹೀಗೆ ಸ್ಮೃತಿಗಳು ಬ್ರಾಹ್ಮಣನಿಗೆ ಕ್ಷತ್ರಿಯಧರ್ಮವಾದ ಶಸ್ತ್ರಾಸ್ತ್ರ ಹಿಡಿಯುವುದನ್ನು ಮತ್ತು ವೈಶ್ಯಧರ್ಮವಾದ ಕುಸೀದ, ಕೃಷಿ, ವಾಣಿಜ್ಯ ಮತ್ತು ಪಶುಪಾಲನೆಗಳನ್ನು ಸಾಮಾನ್ಯವಾಗಿ ನಿಷೇಧಿಸಿದ್ದರೂ ಆತ್ಯಂತಿಕವಾಗಿ ನಿಷೇಧಿಸಿರುವುದು ಎಲ್ಲೂ ಕಂಡುಬರುವುದಿಲ್ಲ. ಏನಿದ್ದರೂ ಇವುಗಳ ನಿಷೇಧ ಆಂಶಿಕವಾಗಿ ಮಾತ್ರ. ಬ್ರಾಹ್ಮಣನಿಗೆ ಮುಖ್ಯವೃತ್ತಿಯಾಗಿ ಇವುಗಳನ್ನು ನಿಷೇಧಿಸಲಾಗಿದೆಯೇ ಹೊರತು ಆಪದ್ಧರ್ಮವಾಗಿ ಗೌಣವೃತ್ತಿಯನ್ನಾಗಿ ಆಶ್ರಯಿಸಲು ಕೆಲವೊಂದು ನಿಬಂಧನೆಗಳೊಡನೆ ಸ್ಮೃತಿಗಳಲ್ಲಿ ಅವಕಾಶಕಲ್ಪಿಸಿಕೊಡಲಾಗಿದೆ.

ವೇದಃ ಕೃಷಿವಿನಾಶಾಯ ಕೃಷಿರ್ವೇದವಿನಾಶಿನೀ |
ಶಕ್ತಿಮಾನುಭಯಂ ಕುರ್ಯಾದಶಕ್ತಸ್ತು ಕೃಷಿಂ ತ್ಯಜೇತ್ || ಬೌಧಾಯನ, *ಧರ್ಮಸೂತ್ರ*

ವೇದ (ಅಧ್ಯಯನ)ವು ಕೃಷಿಯನ್ನೇ ಹಾಳುಮಾಡುತ್ತದೆ, ಕೃಷಿಯು ವೇದವನ್ನು. ಶಕ್ತಿಯಿರುವವನು ಎರಡನ್ನೂ ಮಾಡಬಹುದು. ಶಕ್ತಿಯಿಲ್ಲದಿದ್ದಲ್ಲಿ ಕೃಷಿಯನ್ನು ಕೈಬಿಡಬೇಕು.

ಅಜೀವಂಸ್ತು ಯಥೋಕ್ತೇನ ಬ್ರಾಹ್ಮಣಃ ಸ್ವೇನ ಕರ್ಮಣಾ |
ಜೀವೇತ್ಕ್ಷತ್ರಿಯಧರ್ಮೇಣ ಸ ಹ್ಯಸ್ಯ ಪ್ರತ್ಯನಂತರಃ ||

ಉಭಾಭ್ಯಾಮಪ್ಯಜೀವಂಸ್ತು ಕಥಂ ಸ್ಯಾದಿತಿ ಚೇತ್ಭವೇತ್ |
ಕೃಷಿಗೋರಕ್ಷಾಮಾಸ್ಥಾಯ ಜೀವೇದ್ವೈಶ್ಯಸ್ಯ ಜೀವಿಕಾಮ್ || ಮನು 10.81-82

ಬ್ರಾಹ್ಮಣನು ಯಥೋಕ್ತವಾದ ಕರ್ಮಗಳಿಂದ ಜೀವಿಸಲು ಸಾಧ್ಯವಿಲ್ಲದಿದ್ದಲ್ಲಿ ತನಗೆ ಸಮೀಪವರ್ಣವಾದ ಕ್ಷತ್ರಿಯಧರ್ಮದಿಂದ ಜೀವಿಸಬಹುದು. ಅದೂ ಸಾಧ್ಯವಿಲ್ಲದಿದ್ದಲ್ಲಿ ವೈಶ್ಯಧರ್ಮವಾದ ಕೃಷಿ ಮತ್ತು ಪಶುಪಾಲನೆಗಳಿಂದ ಜೀವನ ಮಾಡಬಹುದು.

ಬ್ರಾಹ್ಮಣನಿಗೆ ಕ್ಷತ್ರಿಯಧರ್ಮವಾದ ಪ್ರಜಾರಕ್ಷಣೆ ಮತ್ತು ವೈಶ್ಯಧರ್ಮವಾದ ಕೃಷಿ, ಪಶುಪಾಲನೆಗಳನ್ನು ನಿಷೇಧಿಸಲು ಮುಖ್ಯಕಾರಣವೆಂದರೆ ಅವುಗಳೊಡನೆ ಸೇರಿರುವ ಪ್ರಾಣಿಹಿಂಸೆ. ಮನುವು ಇದನ್ನು ಸ್ಪಷ್ಟವಾದ ಮಾತುಗಳಲ್ಲಿಯೇ ವ್ಯಕ್ತಪಡಿಸುತ್ತಾನೆ-

ವೈಶ್ಯವೃತ್ತ್ಯಾಪಿ ಜೀವಂಸ್ತು ಬ್ರಾಹ್ಮಣಃ ಕ್ಷತ್ರಿಯೋಽಪಿ ವಾ |
ಹಿಂಸಾಪ್ರಾಯಾಂ ಪರಾಧೀನಾಂ ಕೃಷಿಂ ಯತ್ನೇನ ವರ್ಜಯೇತ್ ||

ಕೃಷಿಂ ಸಾಧ್ವಿತಿ ಮನ್ಯಂತೇ ಸಾ ವೃತ್ತಿಃ ಸದ್ವಿಗರ್ಹಿತಾ |
ಭೂಮಿಂ ಭೂಮಿಶಯಾಂಶ್ಚೈವ ಹಂತಿ ಕಾಷ್ಠಮಯೋಮುಖಮ್ || ಮನು 10.83-84

ವೈಶ್ಯವೃತ್ತಿ (ಕೃಷಿ, ಪಶುಪಾಲನೆ)ಯಿಂದ ಜೀವಿಸಬೇಕಾದ ಬ್ರಾಹ್ಮಣನಾಗಲೀ ಕ್ಷತ್ರಿಯನಾಗಲೀ ಹಿಂಸಾಬಾಹುಳ್ಯದಿಂದ ಕೂಡಿರುವ ಮತ್ತು ಅನ್ಯಾಶ್ರಯದಿಂದ ಮಾಡಬೇಕಾಗುವಂತಹ ಕೃಷಿಯನ್ನು (ಅಂದರೆ ಉಳುವುದು, ಗಾಡಿಗೆ ಎತ್ತುಕಟ್ಟುವುದು, ಅಗೆಯುವುದು ಇತ್ಯಾದಿ) ಪ್ರಯತ್ನಪೂರ್ವಕ ಬಿಡಬೇಕು. ಕೃಷಿಯನ್ನು ಸದ್ವೃತ್ತಿಯೆಂದು ತಿಳಿಯಲಾಗುತ್ತದೆ. ಆದರೆ ಅದು ಸಜ್ಜನರಿಂದ ನಿಂದಿತವಾದುದು. ಏಕೆಂದರೆ ನೇಗಿಲು (ಗುದ್ದಲಿ, ಹಾರೆ ಇತ್ಯಾದಿ) ಭೂಮಿಯನ್ನು ಮತ್ತು ಭೂಮಿಯೊಳಗೆ ಜೀವಿಸುವ ಪ್ರಾಣಿಗಳನ್ನು ಕೊಲ್ಲುತ್ತದೆ.

ಈ ಮಾತುಗಳಲ್ಲಿ ಮನುವು ಸ್ಪಷ್ಟವಾಗಿ ಪ್ರಾಣಿಹಿಂಸಾಸಹಿತವಾದ ಕೃಷಿಯನ್ನು ನಿಷೇಧಿಸಿ ಅದಿಲ್ಲದಿರುವ ಕೃಷಿಯನ್ನು ಬ್ರಾಹ್ಮಣಕ್ಷತ್ರಿಯರು ಮಾಡಬಹುದೆಂದು ಹೇಳುತ್ತಾನೆ. ಆದ್ದರಿಂದಲೇ ಪ್ರಾಯಃ ಸಂಕೇತಿಗಳು ಹೆಚ್ಚು ಹೊಲಗದ್ದೆಗಳ ಕೆಲಸವನ್ನು ತಾವು ಮಾಡದೆ ಆಳುಕಾಳುಗಳಿಂದ ಮಾಡಿಸುವುದಲ್ಲದೆ ಅಡಿಕೆ, ತೆಂಗು, ವಿಳ್ಳೇದೆಲೆ ಇತ್ಯಾದಿ ಹಿಂಸಾಲೇಪವಿಲ್ಲದಂತೆ ಬೆಳೆಯಬಹುದಾದ ತೋಟಗಾರಿಕೆಯನ್ನು ರೂಢಿಸಿಕೊಂಡರೆಂದು

ಕಾಣುತ್ತದೆ. ಬ್ರಾಹ್ಮಣಕೃಷಿಗೆ ನಿರ್ಬಂಧಗಳನ್ನು ಹಾಕಿರುವಂತೆಯೇ ಅವನ ವಾಣಿಜ್ಯಕ್ಕೂ ಕೆಲವೊಂದು ನಿರ್ಬಂಧಗಳನ್ನು ಹಾಕಲಾಗಿದೆ. ಬ್ರಾಹ್ಮಣನು ಮಾರಾಟಮಾಡಕೂಡದೆಂದು ಹೇಳಿರುವ ವಸ್ತುಗಳ ಪಟ್ಟಿ ಬಹಳ ದೊಡ್ಡದಿದೆ. ಅವುಗಳಲ್ಲಿ ಮುಖ್ಯವಾದ ಕೆಲವೆಂದರೆ - ರಸಗಳು, ಅನ್ನ, ಎಳ್ಳು, ಕಲ್ಲು, ಉಪ್ಪು, ಪಶುಗಳು, ಹತ್ತಿ, ರೇಷ್ಮೆ ಮತ್ತು ಉಣ್ಣೆಯ ವಸ್ತ್ರಗಳು, ಫಲಮೂಲಗಳು, ಔಷಧಗಳು, ನೀರು, ಶಸ್ತ್ರಗಳು, ವಿಷ, ಮಾಂಸ, ಮದ್ಯ, ಸುಗಂಧದ್ರವ್ಯಗಳು (ಕರ್ಪೂರ, ಊದಗಡ್ಡಿ ಇತ್ಯಾದಿ), ಜೇನು, ಹಾಲು, ಮೊಸರು, ತುಪ್ಪ, ಬೆಲ್ಲ, ದರ್ಭೆ, ಚಿನ್ನ ಬೆಳ್ಳಿ ಮುಂತಾದ ಆಭರಣಗಳು, ಲೋಹದ ಪಾತ್ರೆಗಳು ಇತ್ಯಾದಿ. ಇಷ್ಟೆಲ್ಲ ನಿರ್ಬಂಧಗಳಿಗೊಳಪಟ್ಟು ಬ್ರಾಹ್ಮಣನು ವಾಣಿಜ್ಯವನ್ನು ಮಾಡುವುದಾದರೂ ಹೇಗೆ? ಆದ್ದರಿಂದಲೇ ಅವರು ಅನೂಚೀನವಾಗಿ ಯಾಜನ, ಅಧ್ಯಾಪನ ಮತ್ತು ಪ್ರತಿಗ್ರಹಗಳನ್ನು ತಮ್ಮ ಮುಖ್ಯವೃತ್ತಿಯನ್ನಾಗಿ ಮತ್ತು ಹಿಂಸಾಪರಾಶ್ರಯಗಳಿಲ್ಲದ ಕೃಷಿಯನ್ನು ಆಪತ್ಕಾಲೀನ ವೃತ್ತಿಯನ್ನಾಗಿ ಮಾಡಿಕೊಂಡು ಜೀವಿಸುತ್ತಾ ಬಂದಿದ್ದಾರೆಂದು ಕಾಣುತ್ತದೆ.

ಇಲ್ಲಿ ಮತ್ತೊಂದು ವಿಚಾರವನ್ನು ನಾವು ಗಮನಿಸಬಹುದಾಗಿದೆ. ಬ್ರಾಹ್ಮಣ-ಕ್ಷತ್ರಿಯ-ವೈಶ್ಯ ವರ್ಣಗಳು ತಮತಮಗೆ ವಿಹಿತವಾದ ವೃತ್ತಿಯನ್ನು ಮಾತ್ರ ಮಾಡಬಹುದಿತ್ತು. ಆಪದ್ಧರ್ಮವಾಗಿ ಬೇರೆವರ್ಣಗಳ ವೃತ್ತಿಯನ್ನು ಮಾಡಬೇಕಾಗಿಬಂದರೂ ಅದನ್ನು ಅನುಲೋಮಕ್ರಮದಲ್ಲಿ ಮಾಡಬಹುದಿದ್ದಿತೇ ಹೊರತು ವಿಲೋಮಕ್ರಮದಲ್ಲಿ ಮಾಡುವಂತಿರಲಿಲ್ಲ. ಅಂದರೆ ಬ್ರಾಹ್ಮಣನು ಕ್ಷತ್ರಿಯರ ಮತ್ತು ವೈಶ್ಯರ, ಕ್ಷತ್ರಿಯನು ಕೇವಲ ವೈಶ್ಯರ ವೃತ್ತಿಯನ್ನು ಮಾಡಬಹುದಿತ್ತು. ವೈಶ್ಯನು ಕ್ಷತ್ರಿಯ-ಬ್ರಾಹ್ಮಣರ, ಕ್ಷತ್ರಿಯನು ಬ್ರಾಹ್ಮಣರ ವೃತ್ತಿಯನ್ನು ಮಾಡುವಂತಿರಲಿಲ್ಲ. ಆದರೆ ವೇದಗಳ ಕಾಲದಲ್ಲಿ ವಸ್ತುಸ್ಥಿತಿ ಇದಕ್ಕಿಂತ ಭಿನ್ನವಾಗಿದ್ದಂತೆ ಕಾಣುತ್ತದೆ. ಋಗ್ವೇದದ ಕಿತವಸೂಕ್ತದಲ್ಲಿ ಹೇಳುವ - *ಅಕ್ಷೈರ್ಮಾ ದೀವ್ಯಃ ಕೃಷಿಮಿತ್ಕೃಷಸ್ವ* 34.10-13 (ಜೂಜಾಡಬೇಡ, ಕೃಷಿಯನ್ನು ಮಾಡು) ಮತ್ತು ತೈತ್ತಿರೀಯೋಪನಿಷತ್ತಿನಲ್ಲಿ ಹೇಳುವ - *ಅನ್ನಂ ಬಹುಕುರ್ವೀತ, ತದ್ವ್ರತಮ್* 3.9 (ಆಹಾರವನ್ನು ಹೆಚ್ಚು ಬೆಳೆಯಬೇಕು. ಅದು ವ್ರತ) ಇಂತಹ ಆದೇಶದ ಮಾತುಗಳು ಕೇವಲ ಯಾವುದೋ ಒಂದು ನಿರ್ದಿಷ್ಟ ವರ್ಣವನ್ನು ಕುರಿತು ಹೇಳಿದಂತಿಲ್ಲ. ಪ್ರಾಚೀನ ಕಾಲದಿಂದಲೂ ಬ್ರಾಹ್ಮಣರು ಕೃಷಿಯನ್ನು ಮತ್ತು ಕ್ವಚಿತ್ತಾಗಿ ವಾಣಿಜ್ಯವನ್ನು ಮಾಡುತ್ತಾ ಬಂದಿದ್ದಾರೆಂಬುದಕ್ಕೆ ಪುರಾತನ ಸಂಸ್ಕೃತ ಸಾಹಿತ್ಯದಲ್ಲಿ ವಿಪುಲವಾಗಿ ಉದಾಹರಣೆ ದೊರೆಯುತ್ತವೆ. ಇದಿಷ್ಟೂ ವಿಚಾರಗಳು ಇಂದಿನ ಸಮಾಜದಲ್ಲಿ ಅಪ್ರಸ್ತುತವಾಗಿ ಕಾಣಬಹುದಾದರೂ ಕೇವಲ ವಿಷಯ ಕುತೂಹಲದಿಂದ (theoretical curiosity)ಹೇಳಲಾಗಿದೆಯೇ ಹೊರತು ಅನ್ಯಥಾ ಅಲ್ಲ.

ಒಂದು ಸುಸಜ್ಜಿತಸಂಸ್ಥೆ ಮಾಡಬಹುದಾದ ಕೆಲಸವನ್ನು ಮಿತ್ರ ಹರನ್ ಏಕಾಂಗಿಯಾಗಿ ಮಾಡುತ್ತಾ ಬಂದಿದ್ದಾರೆ. ಸಾಮಾನ್ಯವಾಗಿ ಲೇಖಕರಿಗೆ ಅವರ ಜೀವಿತಕಾಲದಲ್ಲಿ ಪ್ರೋತ್ಸಾಹ ದೊರೆಯುವುದು ಬಹುವಿರಳ. ಎಲ್ಲೋ ಅಲ್ಲೊಬ್ಬ ಇಲ್ಲೊಬ್ಬ ಪುಣ್ಯವಂತರಿಗೆ ಮಾತ್ರ ಅದು ಲಭ್ಯ. ಹರನ್ ಅಂತಹ ಪುಣ್ಯವಂತರಾಗಲಿ, ಅವರ ಪ್ರಯತ್ನಕ್ಕೆ ತಕ್ಕ ಪುರಸ್ಕಾರ ಅವರಿಗೆ ಲಭಿಸಲಿ ಎಂದು ಆಶಿಸುತ್ತೇನೆ.

ಡಾ|| ಬಿ. ಚನ್ನಕೇಶವ
ಸಂಸ್ಕೃತ ಪ್ರಾಧ್ಯಾಪಕರು (ವಿಶ್ರಾಂತ)

ವಿಶ್ವವಿದ್ಯಾನಿಲಯ ಸಂಜೆ ಕಾಲೇಜು
ಮೈಸೂರು ವಿಶ್ವವಿದ್ಯಾನಿಲಯ
ಮೈಸೂರು

ಕೃತಜ್ಞತೆಗಳು

- ಮೌಲಿಕ ಮುನ್ನುಡಿ ಬರೆದುಕೊಟ್ಟು ಉಪಕರಿಸಿರುವ ಡಾ|| ಬಿ. ಚನ್ನಕೇಶವ ಅವರಿಗೆ

- ಈ ಕೃತಿಯನ್ನು ಆಮೂಲಾಗ್ರವಾಗಿ ಅವಲೋಕಿಸಿ ಸೂಕ್ತ ಸಲಹೆ ನೀಡಿ, ಮಾರ್ಗದರ್ಶನ ಮಾಡಿ ಇದು ಹೆಚ್ಚು ಅರ್ಥಪೂರ್ಣವಾಗುವಂತೆ ಅಚ್ಚುಕಟ್ಟುಗೊಳಿಸಲು ನೆರವಾದ ಖ್ಯಾತ ವಿದ್ವಾಂಸರಾದ ಡಾ|| ಕೆ.ಅನಂತರಾಮು ಅವರಿಗೆ ಮತ್ತು ಶ್ರೀ ಎನ್.ಎಸ್. ಶಾರದಾ ಪ್ರಸಾದ್ ಅವರಿಗೆ

- ಈ ಅಧ್ಯಯನ ಕಾರ್ಯದಲ್ಲಿ ಸಹಕರಿಸಿರುವ ಎಲ್ಲ ರೈತ ಬಾಂಧವರಿಗೆ

- ಗ್ರಂಥದ ಬಗ್ಗೆ ಅಭಿಪ್ರಾಯಗಳನ್ನು ಬರೆದು ತಿಳಿಸಿರುವ ಸಹೃದಯ ಬಂಧುಗಳಿಗೆ

- ಕರಡು ತಿದ್ದಿ ಉಪಕರಿಸಿರುವ ಶ್ರೀ ಎನ್.ಎಸ್.ಶಾರದಾ ಪ್ರಸಾದ್, ವಿದ್ವಾನ್ ಡಾ||ಟಿ.ವಿ.ಸತ್ಯನಾರಾಯಣ, ಪ್ರೊ.ಎನ್.ನರಸಿಂಗರಾವ್, ಪೂಮಗಾಮೆ ಗೋಪಿ, ಎಂ.ವಿ.ಕೃಷ್ಣ ಅವರಿಗೆ

- ಈ ಪುಸ್ತಕದ ಪ್ರಕಟಣೆಗೆ ಉದಾರವಾಗಿ ಆರ್ಥಿಕ ನೆರವು ನೀಡಿ ಪ್ರೋತ್ಸಾಹಿಸಿರುವ ಶ್ರೀಮತಿ ಬಿ.ವಿ. ಸೀತಾ - ಶ್ರೀ ಬಿ.ಎನ್.ವಿ. ಸುಬ್ರಹ್ಮಣ್ಯ, ಬೆಂಗಳೂರು; ಶ್ರೀಮತಿ ಎಲ್.ಎಚ್. ವಿಶಾಲಾಕ್ಷಿ - ಶ್ರೀ ಎಲ್.ವಿ. ಹಿರಿಯಣ್ಣ (ಇಂದ: ಶ್ರೀಮತಿ ನಳಿನಿ - ಡಾ. ಎಲ್.ಎಚ್. ಮಂಜುನಾಥ, ಧರ್ಮಸ್ಥಳ); ಶ್ರೀಮತಿ ರಾಜೇಶ್ವರಿ - ಶ್ರೀ ಎಚ್.ಆರ್. ಕೇಶವಮೂರ್ತಿ, ಹೊಸಹಳ್ಳಿ; ಶ್ರೀಮತಿ ರಾಜಲಕ್ಷ್ಮೀ - ಪದ್ಮಶ್ರೀ ಡಾ|| ಮತ್ತೂರು ಕೃಷ್ಣಮೂರ್ತಿ, ಬೆಂಗಳೂರು; ಶ್ರೀಮತಿ ಎಂ.ಆರ್. ಪ್ರಭಾವತಿ - ಶ್ರೀ ಎಂ.ಕೆ. ಚನ್ನಕೇಶವ, ಮುದ್ದಾಪುರ; ಶ್ರೀಮತಿ ನಾಗರತ್ನಮ್ಮ - ಶ್ರೀ ಎಚ್.ಎಸ್. ರಾಮಕೃಷ್ಣಯ್ಯ, ಹಾನಗಲ್ (ಇಂದ: ಶ್ರೀಮತಿ ಎಂ.ಆರ್. ನಂದಿನಿ - ಶ್ರೀ ಎಚ್.ಆರ್. ನಾಗರಾಜ್, ಬೆಟ್ಟದಪುರ); ಶ್ರೀಮತಿ ಎಚ್.ಕೆ. ಜಯಲಕ್ಷ್ಮಮ್ಮ - ಶ್ರೀ ಎಂ.ಎಸ್. ಕೇಶವಮೂರ್ತಿ, ನವಿಲೆ; ಶ್ರೀಮತಿ ಪ್ರೇಮಲತಾ - ಶ್ರೀ ಎಂ.ಆರ್. ರಾಮಶೇಷ, ಮಾದಾಪುರ; ಶ್ರೀಮತಿ ವಾಣಿ - ಶ್ರೀ ಎಂ.ಸಿ. ಶಂಕರಶಾಸ್ತ್ರಿ, ಬೆಂಗಳೂರು; ಶ್ರೀಮತಿ ಕೆ.ಎನ್. ರೋಹಿಣಿ - ಶ್ರೀ ಸಿ.ಎಸ್. ಸುಬ್ರಹ್ಮಣ್ಯ, ಚಿಲ್ಕುಂದ; ಶ್ರೀಮತಿ ಎಂ.ಎಸ್. ಪ್ರಭಾವತಿ - ಶ್ರೀ ಪಿ.ಎಸ್. ಶ್ರೀನಿವಾಸಮೂರ್ತಿ, ಪಿರಿಯಾಪಟ್ಟಣ; ಶ್ರೀಮತಿ ಸಿ.ಎಸ್. ಮಂಜುಳ - ಶ್ರೀ ಬಿ.ವಿ. ನಾಗೇಶ್, ಬೆಂಗಳೂರು; ಶ್ರೀಮತಿ ಕೆ. ಶಾಂತಾ - ಶ್ರೀ ಕೇಶವ, ಬೆಂಗಳೂರು; ಶ್ರೀಮತಿ ಶರ್ವಾಣಿ ಹರನ್ - ಶ್ರೀ ಭಾನುಪ್ರಕಾಶ್, ಯು.ಎಸ್.ಎ.; ಶ್ರೀಮತಿ ಎಂ.ಎಸ್. ಶಶಿಕಲಾಮೂರ್ತಿ - ಶ್ರೀ ಸಿ.ಎನ್. ಕೇಶವಮೂರ್ತಿ, ಚಿಲ್ಕುಂದ; ಶ್ರೀಮತಿ ಐ.ಎಸ್. ಶಕುಂತಲಾ - ಶ್ರೀ ಸಿ.ಎನ್. ನರಸಿಂಹಮೂರ್ತಿ, ಪಿರಿಯಾಪಟ್ಟಣ; ಶ್ರೀಮತಿ ಸಿ.ಎಸ್. ಶ್ರೀಲಕ್ಷ್ಮಿ - ಶ್ರೀ ಸಿ.ಎನ್. ಗುರುನಾಥ, ಚಿಲ್ಕುಂದ (ಪರವಾಗಿ: ಶ್ರೀಮತಿ ಗೌರಮ್ಮ - ಶ್ರೀ ಸಿ.ಕೆ. ನಾಗಪ್ಪಯ್ಯ); ಶ್ರೀಮತಿ ಪ್ರಭಾವತಿ - ಶ್ರೀ ಭಾನುಪ್ರಕಾಶ್, ಮತ್ತೂರು (ಪರವಾಗಿ: ಶ್ರೀಮತಿ ಪ್ರಸನ್ನಲಕ್ಷ್ಮಿ - ವೇ||ಬ್ರ|| ಶ್ರೀ ಭಾಸ್ಕರ ಅವಧಾನಿ, ಮತ್ತೂರು); ಶ್ರೀಮತಿ ಸುಮಾ - ಡಾ|| ಎಲ್.ಎಸ್. ರಾಮಚಂದ್ರ, ಖರಗ್‌ಪುರ; ಶ್ರೀಮತಿ ಎ.ಆರ್. ಸುಕನ್ಯ - ಶ್ರೀ ಎಲ್.ವಿ. ವಸಂತಕುಮಾರ್, ಲಿಂಗದಹಳ್ಳಿ; ಶ್ರೀಮತಿ ಎಂ.ಸಿ. ಅನ್ನಪೂರ್ಣ - ಶ್ರೀ ಎಲ್.ಕೆ. ವಾಮನ, ಹುಬ್ಬಿ ಭಾರತ ದರ್ಶನ (ಇವರ ಪರವಾಗಿ: ಶ್ರೀಮತಿ ಲಲಿತಮ್ಮ ಕೌಶಿಕ್ - ಶ್ರೀ ಕೆ.ಎಸ್. ಕೌಶಿಕ್); ಶ್ರೀಮತಿ ನಾಗಮಣಿ - ಡಾ|| ಮಹಾಬಲೇಶ್ವರ, ಹೊಸಹಳ್ಳಿ; ಶ್ರೀಮತಿ ಬಿ.ಎಸ್. ವಿಜಯಾ ಕೃಷ್ಣಮೂರ್ತಿ - ಪ್ರೊ. ಎಚ್.ಆರ್. ಕೃಷ್ಣಮೂರ್ತಿ, ಹೊಸಹಳ್ಳಿ; ಶ್ರೀಮತಿ ಮೀರಾ - ಶ್ರೀ ಎಚ್.ಕೆ. ಸುಬ್ಬರಾಮಯ್ಯ, ಬೆಂಗಳೂರು

- ಅನೂಚಾನ ವಿಭಾಗದಲ್ಲಿ ಸೇರಿಸಲಾಗಿರುವ ಲೇಖನಗಳ ಮೂಲ ಲೇಖಕರಿಗೆ ಮತ್ತು ಮೂಲ ಪ್ರಕಾಶಕರಿಗೆ
- ಸಮುದಾಯ ಅಧ್ಯಯನ ಕೇಂದ್ರದ ಎಲ್ಲ ವಿದ್ವಾಂಸರು ಮತ್ತು ಪದಾಧಿಕಾರಿಗಳಿಗೆ
- ಈ ಗ್ರಂಥದ ಪ್ರಕಟಣ ಕಾರ್ಯದಲ್ಲಿ ವಿಶೇಷ ಆಸಕ್ತಿವಹಿಸಿ ನೆರವಾದ ಪ್ರೊ. ಎಲ್.ಎಮ್.ಎಲ್. ಶಾಸ್ತ್ರಿ, ಶಿವಮೊಗ್ಗ ಅವರಿಗೆ
- ಅಂದವಾಗಿ ಅಕ್ಷರವಿನ್ಯಾಸ ಮಾಡಿಕೊಟ್ಟ ಬೆಂಗಳೂರಿನ ಪ್ರಥಮ ಗ್ರಾಫಿಕ್ಸ್ ಅವರಿಗೆ
- ಅಂದವಾಗಿ ಮುದ್ರಿಸಿಕೊಟ್ಟಿರುವ ಬೆಂಗಳೂರಿನ ಲಕ್ಷ್ಮಿ ಮುದ್ರಣಾಲಯದ ಮಾಲೀಕರಾದ ಶ್ರೀ ಅಶೋಕ ಕುಮಾರ್, ಶ್ರೀ ಮಂಜುನಾಥ್ ಮತ್ತು ಸಿಬ್ಬಂದಿ ವರ್ಗದವರಿಗೆ

ಪರಿವಿಡಿ

ಅವಲೋಕನ : ಕಪ್ಪು-ಬಿಳುಪು ಚಿತ್ರಗಳು

ಬಣ್ಣದ ಚಿತ್ರಗಳು

ಭಾಗ ೨ - ಅನೂಚಾನ

ಕಪ್ಪು-ಬಿಳುಪು ಚಿತ್ರಗಳು

ಬಣ್ಣದ ಚಿತ್ರಗಳು


ಸಂಕೇತಿ: ಬೇಸಾಯದ ಬದುಕು

ಅವಲೋಕನ

(೧೨.೧೦.೨೦೦೨ ಮತ್ತು ೧೫.೧೧.೨೦೦೩ರ ನಡುವೆ ನಡೆಸಿದ ಕ್ಷೇತ್ರಕಾರ್ಯದ ವರದಿ)

ವಿಜಯ್ ಅಂಗಡಿ

ಸಂಕೇತಿಗಳ ಸಾಗುವಳಿ - ಸಂಕ್ಷಿಪ್ತ ಚಿತ್ರಣ



ನಮ್ಮ ಜನತೆಯ ಬೆನ್ನೆಲಬು ಆದ ಕೃಷಿರಂಗವು ಸಕಲ ಜೀವಿಗಳಿಗೆ ಆಸರೆ ನೀಡಿದ್ದು ಇತರೇ ಕಸಬುಗಳಿಗೆ ಪ್ರಾರಂಭಿಕ ಪರಿಕರಗಳನ್ನು ಒದಗಿಸುತ್ತದೆ. ಅದರಲ್ಲೂ ಈ ನಮ್ಮ ದೇಶದಲ್ಲಿ ಸಾವಿರಾರು ವರ್ಷಗಳಿಂದ ಬಹುತೇಕ ಜನ ಬೇಸಾಯಗಾರರಾಗಿಯೇ ಬೆಳೆದು ಬಂದಿದ್ದಾರೆ. ಈಚಿನ ದಿನಗಳಲ್ಲಿ ಆಧುನಿಕತೆಯು ಆವರಿಸಿದಂತೆ ಮೂಲ ಕಸುಬು-ಕೃಷಿಯನ್ನು ಕೆಲವರು ಮರೆಯುತ್ತಿದ್ದಾರೆ.

ಹಳ್ಳಿಗಳು-ಬೇಸಾಯ ಇವು ಪರಸ್ಪರ ಸಂಬಂಧಿ ವಿಚಾರಗಳು. ಬೇಸಾಯ ಮಾಡುವ ಬಹುತೇಕ ಜನರು ಗ್ರಾಮಗಳಲ್ಲೇ ತಂಗಿದ್ದಾರೆ. ಹಾಗೆಯೇ ಹಳ್ಳಿಗಳಲ್ಲಿರುವ ಹೆಚ್ಚು ಪಾಲು ಜನರು ಕೃಷಿಯನ್ನೇ ತಮ್ಮ ವೃತ್ತಿಯಾಗಿ ಸ್ವೀಕರಿಸಿದ್ದಾರೆ. ಎಲ್ಲಾ ಧರ್ಮಗಳಲ್ಲೂ, ಎಲ್ಲಾ ಜಾತಿಗಳಲ್ಲೂ ಬೇಸಾಯ ಮಾಡುವ ಜನರನ್ನು ನಾವು ಕಾಣಬಹುದು.

ಹಾಸನ ಆಕಾಶವಾಣಿಗೆ ನಿರ್ದೇಶಕರಾಗಿ ಆಗಮಿಸಿದ ಡಾ||ಎಂ.ಎಸ್.ವಿಜಯಾ ಮತ್ತು ಇವರ ಪತಿ ಡಾ||ಪ್ರಣತಾರ್ತಿಹರನ್ ಅವರ ಸ್ನೇಹ ಹತ್ತಿರವಾದಾಗ ನಮ್ಮ ಕೆಲಸಗಳನ್ನು ಕಂಡು ಬೆನ್ನು ತಟ್ಟುತ್ತಲೇ ಒಂದು ಜವಾಬ್ದಾರಿಯನ್ನೂ ವಹಿಸಿದರು. 'ಸಂಕೇತಿ ಬಳಗದ ಬೇಸಾಯ ಕ್ರಮಗಳ ಬಗ್ಗೆ ಮಾಹಿತಿ-ಅವರ ಚಿತ್ರಗಳನ್ನು ಸಂಗ್ರಹಿಸಿ ಕೊಡಿ, ಸಮಗ್ರವಾದ ಗ್ರಂಥವನ್ನು ಪ್ರಕಟಿಸೋಣ' ಎಂದಾಗ ತಡಮಾಡದೇ ಒಪ್ಪಿದೆವು, ಕೆಲಸವನ್ನೂ ಶುರು ಮಾಡಿದೆವು. ಸಂಕೇತಿಗಳ ಸುಳಿವು ಪಡೆದುಕೊಂಡು ಹಾಸನಜಿಲ್ಲೆಯ ನಾನಾ ಕಡೆ ಸಂಚರಿಸಿ ಒಬ್ಬೊಬ್ಬರೊಂದಿಗೆ ನಾಲ್ಕಾರು ಗಂಟೆಗಳ ಕಾಲ ಚರ್ಚಿಸಿ, ಅವರ ಜಮೀನು-ತೋಟ-ಮನೆಗಳ ದರ್ಶನ ಮಾಡಿಕೊಂಡು ಬರವಣಿಗೆಯನ್ನು ಸಿದ್ಧಪಡಿಸಿದ್ದೇವೆ. ಪ್ರತಿಯೊಬ್ಬರ ಅನುಭವಗಳು, ವಿಚಾರಗಳು ಭಿನ್ನ-ಭಿನ್ನವಾಗಿಯೇ ಕಂಡವು. ನೌಕರಿ, ಉದ್ಯೋಗ ಅರಸಿಕೊಂಡು ಹೋದ ಯುವಕರ ಕುಟುಂಬಗಳಲ್ಲಿ ವೃದ್ಧರು ಅನಿವಾರ್ಯವೆಂಬಂತೆ ಬೇಸಾಯದಲ್ಲಿ ಮುಂದುವರೆದಿದ್ದು, ಹೆಚ್ಚು ಓದದ ಯುವಕರು ಕೃಷಿಯಲ್ಲಿ ಕೈಮುಟ್ಟಿ ಕೆಲಸ ಮಾಡುತ್ತಿದ್ದಾರೆ. ಸ್ತ್ರೀಯರ ಭಾಗಿತ್ವ ಹೇಳಿಕೊಳ್ಳುವ ಮಟ್ಟದಲ್ಲಿ ಕಾಣಲಿಲ್ಲ.

ಬಹುತೇಕ ಸಂಕೇತಿ ಬಳಗವು ಉತ್ತಮವಾಗಿ ನೀರು ಲಭಿಸುವ ಜಾಗವನ್ನು ತಮ್ಮ ಬೇಸಾಯಕ್ಕಾಗಿ ಹುಡುಕಿಕೊಂಡಿದೆ. ಅದರಂತೆ ಆ ಭಾಗಗಳಲ್ಲಿ ಅಡಿಕೆ, ತೆಂಗು ಮತ್ತು ಭತ್ತವನ್ನು ಬೆಳೆಯಲಾಗುತ್ತಿದೆ. ರಾಸಾಯನಿಕ ಗೊಬ್ಬರಗಳನ್ನು ಅತಿಯಾಗಿ ಇವರು ಬಳಸುತ್ತಿಲ್ಲ. ನಾಟಿ ತಳಿಯ ಹಸುಗಳ ಸಾಕಾಣಿಕೆಯನ್ನು ಕೈಬಿಡದೇ ಸಿಂಧಿ ಹಸುಗಳತ್ತ ಗಮನಹರಿಸಿಲ್ಲ. ಅಡಿಕೆಯಲ್ಲಿ ಹನಿ ನೀರಾವರಿಯನ್ನು ಬಹುತೇಕ ಜನ ಅಳವಡಿಸಿಕೊಳ್ಳದೇ ಪೈಪ್‌ಗಳ ಮೂಲಕವೇ ಪ್ರತೀ ಮರಕ್ಕೆ ನೀರನ್ನು ಕೊಡುತ್ತಾರೆ.

ಕೃಷಿಯನ್ನೇ ತಮ್ಮ ಜೀವನೋಪಾಯಕ್ಕಾಗಿ ಆಯ್ಕೆ ಮಾಡಿಕೊಂಡ ಸಂಕೇತಿ ಜನಾಂಗವು ಈಗ ಕಷ್ಟಗಳನ್ನು ಎದುರಿಸುತ್ತಿದೆ. ಬೆಲೆಯ ಏರುಪೇರು, ಆಧುನಿಕತೆ, ಕೈಮುಟ್ಟಿ ಕೆಲಸ ಮಾಡುವ ಜನಗಳ ಕೊರತೆ, ನಿಸರ್ಗದ ವಿಕೋಪಗಳು, ಇತ್ಯಾದಿ ಅಂಶಗಳು ಕೃಷಿಯಲ್ಲಿ ತೃಪ್ತಿಯನ್ನು ಕಮ್ಮಿಗೊಳಿಸುತ್ತಿವೆ. ಕೃಷಿಯಿಂದಲೇ ಬೆಳೆದು ಬಂದ ಕುಟುಂಬಗಳು ಇಂದು ಪರ್ಯಾಯ ದಾರಿಗಳನ್ನು ಹುಡುಕಿಕೊಂಡು ಮೂಲ ಕಸುಬನ್ನು ಮರೆಯುತ್ತಿವೆ.

ಕೃಷಿಯಲ್ಲಿ ವೈವಿಧ್ಯತೆಯನ್ನು ತಂದುಕೊಳ್ಳದೇ ತಾಪತ್ರಯಗಳನ್ನು ಅನುಭವಿಸುತ್ತಿರುವ ಸಂಕೇತಿ ಬಳಗದ ಆರ್ಥಿಕ ಬೆಳವಣಿಗೆಗೆ ಅಡಚಣೆಗಳು ಕಾಣುತ್ತಿವೆ. ತಮ್ಮತನವನ್ನೇ ಅನುಸರಿಸಿಕೊಂಡು ಬರುತ್ತಿರುವ ಈ ರೈತರು ಹೊರ ಜಗತ್ತಿನ ಬೇಸಾಯದ ಬೆಳವಣಿಗೆಗೆ ತಮ್ಮನ್ನು ಪ್ರದರ್ಶಿಸಿಕೊಳ್ಳಬೇಕು. ತಿಳಿಯುವ, ಮಾರ್ಪಾಡು ಮಾಡಿಕೊಳ್ಳುವ ವಿಚಾರಗಳು ಹತ್ತಾರು ಇವೆ.

ಸಂಕೇತಿ ಬಳಗದ ಕೃಷಿಯ ಈ ಅಪರೂಪದ ಗ್ರಂಥವು ಜೋಪಾನವಾಗಿ ಸಂಗ್ರಹಿಸಿ ಆಗಾಗ್ಗೆ ಬಳಸಲು ಯೋಗ್ಯವಾದುದು ಎಂಬುದು ನಮ್ಮ ಭಾವನೆ. ಈ ಸಂದರ್ಭದಲ್ಲಿ ಪ್ರಕಟಣೆಗೆ ನಮ್ಮ ಸೇವೆಯನ್ನು ಬಳಸಿಕೊಂಡ ಡಾದ್ದುಪ್ರಣತಾರ್ತಿಹರನ್ ಮತ್ತು ಸಮುದಾಯ ಅಧ್ಯಯನ ಕೇಂದ್ರಕ್ಕೆ ನಾವು ಋಣಿಗಳಾಗಿದ್ದೇವೆ.

ವಿಜಯ್ ಅಂಗಡಿ

ಹಾಸನ
ದಿ.:೩೦.೯.೨೦೦೫

ಬಿ.ಎಸ್ಸಿ(ಕೃಷಿ), ಎಂ.ಎಸ್ಸಿ(ಕೃಷಿ)
ಕೃಷಿರಂಗ ವಿಭಾಗ
ಆಕಾಶವಾಣಿ, ಹಾಸನ

೧. ಅಗ್ರಹಾರ

ಅ) ಅಗ್ರಹಾರದ ಕೃಷಿಕರಿಗೆ ಜಲವೇ ಜೋಪಾನ!


ಕೃಷಿಗೆ ನೀರಿಲ್ಲದೆ ಭದ್ರತೆ ಇಲ್ಲ. ಅರಕಲಗೂಡು ತಾಲೂಕು ಅಗ್ರಹಾರ ಗ್ರಾಮದ ತೋಟಗಳಿಗೆ, ಗದ್ದೆಗಳಿಗೆ ಈಗ ನೀರಿನ ಕೊರತೆ ಇಲ್ಲದಿರುವುದು ಅಲ್ಲಿನ ರೈತರಿಗೆ ನೆಮ್ಮದಿಯ ವಿಚಾರ.



ನಿರಂತರ ನೀರು ಕೊಡುವ ಕೆರೆ, ಹಿನ್ನೆಲೆಗೆ ತೋಟಗಳ ಸಾಲು:ಅಗ್ರಹಾರ

ಅರಕಲಗೂಡಿನಿಂದ ಹದಿನಾಲ್ಕು ಕಿ.ಮೀ. ದೂರದಲ್ಲಿರುವ ಅಗ್ರಹಾರದಲ್ಲಿ ಸುಮಾರು ೨೫೦ ಕುಟುಂಬಗಳಿವೆ. ಇದರಲ್ಲಿ ಸಂಕೇತಿಗಳ ಸಂಖ್ಯೆ ೫೦. ಎಲ್ಲರೂ ಬೇಸಾಯ ಮಾಡುತ್ತಿದ್ದಾರೆ. ಇಬ್ಬರು ವ್ಯಾಪಾರ ಕೈಗೊಂಡಿದ್ದಾರೆ. ಅಡಿಕೆ, ತೆಂಗು, ತಂಬಾಕು, ಭತ್ತ ಇಲ್ಲಿಯ ರೈತರು ಬೆಳೆಯುವ ಪ್ರಮುಖ ಬೆಳೆಗಳು. ಊರಿನ ಬಳಿ ಎರಡು ಕೆರೆಗಳಿವೆ. ಒಂದು ದೊಡ್ಡಕೆರೆ, ಇನ್ನೊಂದು ಚಿಕ್ಕಕೆರೆ. ಇವುಗಳ ವಿಸ್ತೀರ್ಣ ಕ್ರಮವಾಗಿ ೧೨೦ ಎಕರೆ ಮತ್ತು ೪೦ ಎಕರೆ. ಗೊರೂರು ಜಲಾಶಯದ ಆರರಿಂದ ಹನ್ನೆರಡನೇ ತೂಬಿನ ಗದ್ದೆಗಳ ಬಸಿ ನೀರು ಈ ಕೆರೆಗಳನ್ನು ಸೇರುತ್ತದೆ. ಕೆರೆ ತುಂಬಿದಾಗ ನೀರು ರಾಮನಾಥಪುರದ ಹೊಳೆ ಮೂಲಕ ಕಾವೇರಿಯನ್ನು ಕೂಡುತ್ತದೆ. ಈಗ್ಗೆ ಹನ್ನೆರಡು ವರ್ಷಗಳಿಂದಲೂ ಕೆರೆಗಳು ತುಂಬಿವೆ. ಬೆಳೆಗಳಿಗೆ ನೀರಿನ ಕೊರತೆ ಕಾಣಿಸಿಲ್ಲ.

ಸೌಲಭ್ಯಗಳು: ಅಗ್ರಹಾರದಲ್ಲಿ ಸಂಕೇತಿಗಳ ಓಣಿಯೇ ಪ್ರತ್ಯೇಕವಾಗಿದೆ. ಹೆಂಚಿನ ಮನೆಗಳೇ ಇಲ್ಲಿ ಹೆಚ್ಚು. ಎರಡು ನೂರು ವರ್ಷ ಮೀರಿದ ಮಣ್ಣಿನ ಮನೆಗಳಲ್ಲಿ ಈಗಲೂ ವಾಸ ಮಾಡುವ ಕುಟುಂಬಗಳು ಇಲ್ಲಿವೆ. ಹತ್ತು ತೊಟ್ಟಿಮನೆಗಳಿವೆ. ಮನೆ ಬಳಕೆಗೆ ಇಲ್ಲಿ ಸುಮಾರು ೩೦ ತೆರೆದ ಬಾವಿಗಳಿವೆ. ಆಳ ೩೦ ಅಡಿ ಇರಬಹುದು. ಕುಡಿಯುವ ನೀರಿಗಾಗಿ ನಲ್ಲಿ ನೀರಿನ ಸರಬರಾಜು ಇದೆ. ಬಟ್ಟೆ ತೊಳೆಯಲು, ಜಾನುವಾರುಗಳಿಗೆ ಕುಡಿಯುವ ನೀರಿಗಾಗಿ ಕೆರೆಯ ನೀರು ಸದಾ ಸಿಗುತ್ತದೆ. ದೊಡ್ಡ ಕೆರೆಯಿಂದ ಚಿಕ್ಕ ಕೆರೆಗೆ ಸಂಪರ್ಕ ಇರುವುದು ಇಲ್ಲಿಯ ವಿಶೇಷ.



ಮನೆಯ ಬಳಿಯ ಬಾವಿಗಳೇ ಈಗಲೂ ಇಲ್ಲಿಯ ನೀರಿನ ಮೂಲ:ಅಗ್ರಹಾರ

ಹಬ್ಬ ಆಚರಣೆಗಳು: ಅಗ್ರಹಾರದ ಸಂಕೇತಿಗಳು ಗಣೇಶ, ದೀಪಾವಳಿ ಮತ್ತು ಯುಗಾದಿ ಹಬ್ಬಗಳನ್ನು ಭಕ್ತಿ ಗೌರವಗಳಿಂದ ಆಚರಿಸುತ್ತಾರೆ. ಮಾರ್ಚ್ ಏಪ್ರಿಲ್‌ನಲ್ಲಿ ರಾಮನವಮಿಯನ್ನು

ಜೋರಾಗಿ ಆಚರಣೆ ಮಾಡುವುದಿದೆ. ೧೯೪೨-೪೩ರಲ್ಲೇ ಕಟ್ಟಿಸಿದ ರಾಮಮಂದಿರ ಇಲ್ಲಿದೆ. ಈಶ್ವರ ದೇವಾಲಯ ಮತ್ತು ಗಣಪತಿ ದೇವಸ್ಥಾನಕ್ಕೆ ಹೆಚ್ಚು ನಡೆದುಕೊಳ್ಳುತ್ತಾರೆ. ಕಾರ್ತಿಕ ಮಾಸದಲ್ಲಿ ವಿಶೇಷ ಪೂಜೆ ಇರುತ್ತದೆ.

ವೈದ್ಯರಾದವರು: ಸಂಕೇತಿಗಳಲ್ಲಿ ಈಗ ಆಧುನಿಕ ವಿದ್ಯೆ ಸುಧಾರಿಸಿದೆ. ಅಗ್ರಹಾರದಲ್ಲಿ ಆರು ಜನ ವೈದ್ಯರಾಗಿದ್ದಾರೆ. ೨೫ಕ್ಕೂ ಹೆಚ್ಚು ಜನ ತಾಂತ್ರಿಕ ಪದವಿ ಪಡೆದುಕೊಂಡಿದ್ದಾರೆ. ರಾಷ್ಟ್ರೀಯ ಹೆದ್ದಾರಿ ವಿಭಾಗದಲ್ಲಿ ಅಧೀಕ್ಷಕ ಅಭಿಯಂತರರಾಗಿ ಶ್ರೀ ಕೇಶವಯ್ಯನವರು ಕೆಲಸ ಮಾಡಿ ನಿವೃತ್ತಿಯಾಗಿದ್ದಾರೆ. ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯಲ್ಲಿ ಮುಖ್ಯ ಅಭಿಯಂತರರಾಗಿ ಕೆಲಸ ಮಾಡಿದವರು ಶ್ರೀ ಸುಂದರೇಶನ್‌ರವರು. ಡಾ.ಬಾಲಕೃಷ್ಣ, ಡಾ.ಕೆ.ವಿ. ಕೃಷ್ಣ, ಡಾ.ಜಯಂತ್‌ಕುಮಾರ್, ಡಾ.ಗಣೇಶ್‌ಕುಮಾರ್, ಡಾ.ವಿದ್ಯಾರಾಣಿ ಮತ್ತು ಡಾ.ರಮ್ಯ ಅವರು ವೈದ್ಯರಾಗಿದ್ದಾರೆ. ಕೆ.ನಾಗರಾಜ್‌ರವರು ಪಶುವೈದ್ಯ; ಈಗ ಕಾನ್ಪುರದಲ್ಲಿ ಕಂಪನಿಯೊಂದರಲ್ಲಿ ಕೆಲಸ.

ಬೆಳೆ-ಬೇಸಾಯ: ಸಂಕೇತಿಗಳಿಗೆ ಒಟ್ಟು ೭೦ ರಿಂದ ೮೦ ಎಕರೆ ಅಡಿಕೆ ಇದೆ. ಸುಮಾರು ೨೫ ಎಕರೆಯಲ್ಲಿ ಭತ್ತವನ್ನು ಬೆಳೆಯುತ್ತಾರೆ. ಹೊಗೆಸೊಪ್ಪನ್ನು ೫೦ ಎಕರೆಯಲ್ಲಿ ಸಾಗುವಳಿ ಮಾಡುವುದುಂಟು. ತೆಂಗೂ ಇದೆ. ಇವರು ದನಕರುಗಳನ್ನು ಸಾಕಿಕೊಂಡಿದ್ದಾರೆ. ಆರೇಳು ಮನೆಗಳಲ್ಲಿಸಿಂಧಿ ಹಸುಗಳಿವೆ. ಹಾಲಿನ ಸಹಕಾರಿ ಸಂಘಕ್ಕೆ ಹಾಲನ್ನು ಕೊಡುತ್ತಾರೆ. ಎಮ್ಮೆಗಳೂ ಇವೆ. ಎತ್ತುಗಾಡಿಗಳನ್ನು ಇಟ್ಟುಕೊಂಡಿದ್ದಾರೆ. ಮೂರು ಮನೆಗಳಲ್ಲಿ ಟ್ರ್ಯಾಕ್ಟರ್ ಇದೆ. ತೋಟಗಳಿಗೆ ನೀರಿನ ಮೂಲ ಉತ್ತಮವಾಗಿರುವುದರಿಂದ ಕೇವಲ ನಾಲ್ಕೈದು ಕೊಳವೆ ಬಾವಿಗಳಿವೆ. ತೆರೆದ ಬಾವಿಗಳ ಸಂಖ್ಯೆಯೂ ಹೆಚ್ಚು ಇಲ್ಲ.

ಇಳಿಕೆಯತ್ತ ವಿಳ್ಳೇದೆಲೆ: ಗೊರೂರು ಜಲಾಶಯದ ನೀರು ಬರುವುದಕ್ಕಿಂತ ಮುಂಚೆ ಇಲ್ಲಿ ವಿಳ್ಳೇದೆಲೆ ಹಂಬು ಅಡಿಕೆ ತೋಟಗಳಲ್ಲಿ ಸಾಮಾನ್ಯವಾಗಿ ಕಾಣುತ್ತಿತ್ತು. ಆದರೆ ಈಗ ಜಮೀನುಗಳು ಶೀತವಾಗಿರುವುದರಿಂದ ವಿಳ್ಳೇದೆಲೆಯು ಉಳಿಯುತ್ತಿಲ್ಲ. ಅಡಿಕೆ ಮರಗಳೂ ಆಗಾಗ್ಗೆ ಸಾಯುತ್ತಿವೆ. ತೋಟಗಳಲ್ಲಿ ಹೊಸ ನಾಟಿ ನಿರಂತರವಾಗಿ ಇಲ್ಲಿ ಆಗುತ್ತಿದೆ. ಅಗ್ರಹಾರದ ಏಲಕ್ಕಿ (ಮರ) ಬಾಳೆಯು ೧೯೬೦ರವರೆಗೆ ಜನಪ್ರಿಯವಾಗಿತ್ತು. ರಟ್ಟೆ ಗಾತ್ರದಲ್ಲಿರುತ್ತಿದ್ದ ಈ ಜಾತಿಯ ಹಣ್ಣುಗಳನ್ನು ಜನ ಇಷ್ಟಪಟ್ಟು ತಿನ್ನುತ್ತಿದ್ದರು. ೧೯೬೬ರಿಂದ ಇದು ಕಮ್ಮಿಯಾಯಿತು. ಈಗ ಅಲ್ಲಲ್ಲಿ ಅಡಿಕೆ ತೋಟಗಳಲ್ಲಿ ಪಚ್ಚಬಾಳೆ, ಪುಟ್ಟಬಾಳೆ ಕಾಣಿಸುತ್ತಿದೆ. ತೆಂಗನ್ನು ಹೊರಸುತ್ತಿನಲ್ಲಿ ನಾಟಿ ಮಾಡಿಕೊಂಡು ಒಳಗೆ ಏಕಬೆಳೆಯಾಗಿ ಅಡಿಕೆಯನ್ನು ಇಲ್ಲಿ ಸಾಮಾನ್ಯವಾಗಿ ಬೆಳೆಸಿದ್ದಾರೆ. ಒಬ್ಬೊಬ್ಬರಿಗೆ ಹಿಡುವಳಿಯು ಅರ್ಧದಿಂದ ಮೂರು ಎಕರೆ ತೋಟ ಇದೆ.

ನೀರುಣಿಸುವಿಕೆ: ಅಗ್ರಹಾರದ ಸಂಕೇತಿಗಳ ಅಡಿಕೆ ಬೇಸಾಯದಲ್ಲಿ ಹೊಸ ತಳಿಗಳು ಪ್ರವೇಶವಾಗಿಲ್ಲ. ಇಂದಿಗೂ ನಾಡ (ಸ್ಥಳೀಯ) ತಳಿಯೇ ಇವರಿಗೆ ಹಿಡಿಸಿದೆ. ತಗ್ಗುಭಾಗಗಳಲ್ಲಿ ತೋಟಗಳಿವೆ. ಹೆಚ್ಚು ಪಾಲು ಕಪ್ಪುಮಣ್ಣು. ಕೆಲವು ಕಡೆ ಮಣ್ಣು ಕೆಂಪಾಗಿ ಇಲ್ಲವೇ ಮರಳುಮಿಶ್ರಿತವಾಗಿದೆ. ಬಹುಪಾಲು ಹಳೇ ತೋಟಗಳೇ. ಈಗ ಭತ್ತ ಬೆಳೆಯುವ ಗದ್ದೆಗಳಲ್ಲಿ ತೋಟ ಮಾಡುತ್ತಿರುವುದು ಕಾಣುತ್ತಿದೆ. ಸಾಲಿನಿಂದ ಸಾಲಿಗೆ ಎಂಟು ಅಡಿ ಮತ್ತು ಗಿಡದಿಂದ ಗಿಡಕ್ಕೆ ಆರು ಅಡಿ ಅಂತರವನ್ನು ಇಟ್ಟಿದ್ದಾರೆ. ಇಲ್ಲಿಯ ಕಾಯಿ (ಗೋಟು)ಗಳನ್ನು ಬಳಸಿಕೊಂಡು ಸಸಿ ಬೆಳೆಸಿ, ಮರ ಸಾಯುತ್ತಿರುವ ಕಡೆ ನೆಡುತ್ತಾರೆ. ನೀರಿನ ಕೊರತೆ ಇಲ್ಲದಿರುವುದರಿಂದ ಅಡಿಕೆಗೆ ಹನಿ ನೀರಾವರಿ ಇಲ್ಲವೇ ತುಂತುರು ನೀರಾವರಿ ಪದ್ಧತಿಯನ್ನು ಇಲ್ಲಿ ಅನುಸರಿಸುತ್ತಿಲ್ಲ. ಕಾಲುವೆಗಳಲ್ಲಿ ಬಿಟ್ಟುಕೊಂಡು ಪಂಪು ಮೂಲಕ ಕೊಳವೆಗಳಲ್ಲಿ ನೀರನ್ನು ಮರದ ಬುಡಕ್ಕೆ ಉಣಿಸಲಾಗುತ್ತದೆ. ಸೀಮೆಎಣ್ಣೆಯ ಪಂಪುಗಳನ್ನು ಇಲ್ಲಿ ನೀರೆತ್ತಲು ಬಳಸಲಾಗುತ್ತಿದೆ. ಇದಕ್ಕೂ ಮುಂಚೆ ಕೈಯಿಂದ ಹೊತ್ತೊಯ್ದು ನೀರನ್ನು ಕೊಡಲಾಗುತ್ತಿತ್ತು. ೧೯೫೨ರಲ್ಲಿ ಕ್ಷಾಮ ಬಂದಾಗ ಮತ್ತು ೧೯೬೧ರಲ್ಲೂ ತೋಟಗಳಿಗೆ ನೀರಿನ ಕೊರತೆ ಕಾಣಿಸಿ ಮರಗಳು ಒಣಗಿ ಹೋಗಿದ್ದುದೂ ಇದೆ. ಆಗ ೨೨-೨೩ ಅಡಿ ಆಳದ ತೆರೆದ ಬಾವಿಗಳಿಂದ ನೀರನ್ನು ಎತ್ತೊಯ್ದು ಕಷ್ಟಪಟ್ಟು ಮರಗಳನ್ನು ಉಳಿಸಿಕೊಂಡಿರುವುದೂ ಇದೆ.

ಗೊಬ್ಬರ ಪೂರೈಕೆ: ಅಡಿಕೆ ಮರದ ಬುಡದ ಬಳಿ ಗುಣಿ ಮಾಡಿ ಅಲ್ಲಿಯೇ ಗೊಬ್ಬರ ಮತ್ತು ನೀರನ್ನು ಇಲ್ಲಿನ ಕೃಷಿಕರು ಕೊಡುತ್ತಾರೆ. ಪ್ರತಿ ವರ್ಷವೂ ಒಂದೊಂದು ಮರಕ್ಕೆ ಒಂದೆರಡು ಕುಕ್ಕೆ ಕೆಬ್ಬೆ/ಹೊಸ ಮಣ್ಣು, ಕೆರೆ ಮಣ್ಣನ್ನು ಕೊಡುವುದಿದೆ. ದನದ ಗೊಬ್ಬರವನ್ನೂ ನೀಡುವುದುಂಟು. ಈಗೀಗ ರಾಸಾಯನಿಕ ಗೊಬ್ಬರ 'ಸುಫಲಾ'ವನ್ನು ಮರವೊಂದಕ್ಕೆ ೨೫೦-೫೦೦ ಗ್ರಾಂನಷ್ಟು ಪೂರೈಕೆ ಮಾಡುತ್ತಾರೆ. ಗಿಡಗಳನ್ನು ನಾಟಿ ಮಾಡಿ ಎಂಟರಿಂದ ಹತ್ತು ವರ್ಷಕ್ಕೆ ಇಳುವರಿ ಶುರುವಾಗುತ್ತದೆ, ಹನ್ನೆರಡನೇ ವರ್ಷದಿಂದ ಗಟ್ಟಿ ಇಳುವರಿ. ಎಕರೆಗೆ

೨೦ ರಿಂದ ೩೦ ಕ್ವಿಂಟಾಲ್ ಹಸಿ ಕಾಯಿ ಸಿಗುತ್ತದೆ. ೧೦,೦೦೦ ಕಾಯಿಗಳಿಗೆ ಸರಾಸರಿ ಎರಡೂಕಾಲು ಕ್ವಿಂಟಾಲ್ ಒಣಗಿದ ಅಡಿಕೆ ದೊರೆಯುತ್ತಿದೆ. ಹಸಿಯಾದ ಕಾಯಿಯನ್ನೇ ಮಾರಾಟ ಮಾಡುವುದಿದ್ದರೂ ಬೇಯಿಸಿಯೂ ತುಂಡಡಿಕೆ ಮಾಡಿ ಮಾರುಕಟ್ಟೆಗೆ ತೆಗೆದುಕೊಂಡು ಹೋಗುತ್ತಾರೆ. ಶಿವಮೊಗ್ಗ ಮತ್ತು ಸಾಗರ ಇಲ್ಲಿಯವರಿಗೆ ಮಾರಾಟ ಕೇಂದ್ರಗಳು.

ಸಾಯುತ್ತಿರುವ ಮರಗಳು: ಅಡಿಕೆಯಲ್ಲಿ ಅಣಬೆ ರೋಗದಿಂದ ಮರಗಳು ಸಾಯುತ್ತಿವೆ. 'ಹಿಂದಿನಿಂದಲೂ ಈ ರೋಗ ಇಲ್ಲಿದೆ. ತೋಟಗಳಲ್ಲಿ ವ್ಯವಸಾಯ ಹೆಚ್ಚಾದಂತೆ ರೋಗವು ಅಧಿಕವಾಗಿ ಕಾಣುತ್ತೆ. ಕಾಲುವೆಗಳಿದ್ದರೆ ರೋಗ ಹರಡುವುದು ಕಮ್ಮಿ. ಈಗೀಗ ಅಗೆತ, ಉಳುಮೆ ಇಲ್ಲಿ ಕಮ್ಮಿಯಾಗುತ್ತಿದೆ' ಎಂದು ಇಲ್ಲಿಯ ಶಂಕರಮೂರ್ತಿ ಹೇಳುತ್ತಾರೆ. 'ಮರಗಳಿಂದ ಉದುರುವ ಗರಿಗಳನ್ನು ಪಟ್ಟೆಯಿಂದ ಬೇರ್ಪಡಿಸಿ ಅಲ್ಲೇ ಬಿಡ್ತೀವಿ. ಕೆಲವೊಬ್ಬರು ನೂರಕ್ಕೆ ೩೦-೩೫ ರೂಪಾಯಿನಂತೆ ಮಾರ್‍ತಾರೆ. ಹಂಬು ಇದ್ದಾಗ ಬಿಡ್ತಿರಲಿಲ್ಲ. ಈಗ ಇಲ್ಲೇ ಬಿಡೋದ್ರಿಂದ ಕಳೆ ಬೆಳೆಯಲ್ಲ. ಮರಗಳಿಗೆ ಬೇವಿನ ಹಿಂಡಿಯನ್ನು ಈಗೀಗ ಬಳಸ್ತಾ ಇದೀವಿ' ಎಂದು ಅವರು ಹೇಳಿದರು. ಅಡಿಕೆಯು ಇಲ್ಲಿ ಡಿಸಂಬರ್ ತಿಂಗಳಲ್ಲಿ ಕಟಾವಿಗೆ ಬರುತ್ತದೆ.

ಗೊರೂರಿನ ಜಲಾಶಯದ ಆರರಿಂದ ಹನ್ನೆರಡನೇ ತೂಬಿನ ನೀರು ರೈತರ ಗದ್ದೆಗಳಿಗೆ ಬಂದು, ಅಲ್ಲಿಂದ ಬಸಿದ ನೀರು ಅಗ್ರಹಾರದ ಕೆರೆಗಳನ್ನು ಸೇರುತ್ತದೆ. ಇದರಿಂದ ಇಲ್ಲಿ ನೀರಾಶ್ರಯದ ಬೆಳೆಗಳನ್ನು ಮಾಡಲು ಅಡ್ಡಿ ಇಲ್ಲ. ಭತ್ತದಲ್ಲಿ ರಾಜಮುಡಿ, ಐ.ಆರ್.-64, ಐ.ಆರ್-20, ಇಂಟಾನ್, ಮಂಡ್ಯವಾಣಿ ತಳಿಗಳನ್ನು ಬೆಳೆಯಲಾಗುತ್ತಿದೆ. ಸಂಕೇತಿಗಳು ರಾಗಿಯನ್ನು ಬೆಳೀತಾರೆ, ಮನೆ ಬಳಕೆಗೆ ತರಕಾರಿಗಳನ್ನು ಬೆಳೆದುಕೊಳ್ಳುವುದಿದೆ. ಐದಾರು ಜನ ತಂಬಾಕನ್ನು ಸಾಗುವಳಿ ಮಾಡುತ್ತಾರೆ. ಸೊಪ್ಪು ಹದ ಮಾಡಲು ಬ್ಯಾರನ್ ಇವೆ. ಮಾರಾಟಕ್ಕೆ ತಂಬಾಕು ಮಂಡಳಿಯ ಹರಾಜು ಮಾರುಕಟ್ಟೆಯು ರಾಮನಾಥಪುರದಲ್ಲಿದೆ.


ಬದಲಾಗುತ್ತಿರುವ ಬದುಕು: ಅಗ್ರಹಾರದ ಸಂಕೇತಿಗಳ ಕೃಷಿ ಬದುಕು ಈಗೀಗ ಬದಲಾಗುತ್ತಿದೆ. ಹೆಚ್ಚು ವ್ಯಾಸಂಗ ಮಾಡಿರುವವರು ಊರಲ್ಲಿ ಉಳಿಯುತ್ತಿಲ್ಲ. ನೌಕರಿ ಮತ್ತು ಉದ್ಯೋಗವನ್ನು ಅರಸಿಕೊಂಡು ಹೋಗುವುದು ಸಹಜವಾಗಿದೆ. ಕೈಮುಟ್ಟಿ ಕೆಲಸ ಮಾಡುವ ಜನ ಕಮ್ಮಿಯಾಗುತ್ತಿದ್ದಾರೆ. ಹಾಗಾಗಿ ಈಚೆಗೆ ಕಾರ್ಮಿಕರ ಮೇಲೆ ಅವಲಂಬನೆಯೂ ಇದೆ. ಕೆಲಸ ಮಾಡಲು ಜನ ಸಿಗುತ್ತಾರೆ. ದಿನಗೂಲಿ ೫೦-೬೦ ರೂಪಾಯಿ ಇದೆ. ತೋಟಗಳಲ್ಲಿ ಅಗೆತ, ಕಾಲುವೆ ತೆಗೆಸುವ ಕೆಲಸಗಳನ್ನು ಗುತ್ತಿಗೆಗೆ ಕೊಡುವುದಿದೆ.

ಇಲ್ಲಿ ೧೯೫೦ರ ಬಳಿಕ ಬಾಲ್ಯ ವಿವಾಹಗಳು ನಡೆಯುತ್ತಿಲ್ಲ. ಅಂತರ್‌ಜಾತಿ, ಪ್ರೇಮ ಮತ್ತು ವಿಧವಾ ವಿವಾಹಗಳು ಅಲ್ಲಲ್ಲಿ ನಡೆಯುತ್ತಿವೆ. ಮದುವೆ ಆಗದ ಪ್ರಕರಣಗಳು ಗಂಡು ಹೆಣ್ಣು ಇಬ್ಬರಲ್ಲೂ ಇವೆ. ಮದುವೆ ಸಮಾರಂಭಗಳನ್ನು ಇಲ್ಲಿನ ಬ್ರಾಹ್ಮಣರ ಕಲ್ಯಾಣ ಮಂಟಪದಲ್ಲಿ ನೆರವೇರಿಸಲಾಗುತ್ತಿದೆ. ಇಲ್ಲಿನ ರೈತರೊಬ್ಬರೊಡನೆ ನಡೆಸಿದ ಸಂದರ್ಶನ ಹೀಗಿದೆ :

ಆ) ನಟೇಶರ ತೋಟದ ನೋಟ

ಬರೀ ಅಡಿಕೆಗೆ ಅಂಟಿಕೊಳ್ಳದೇ ಭಿನ್ನತೆ ಕಾಣಲು ಹೊರಟಿರುವ ಕೆ.ನಟೇಶ್‌ರವರು ಫಲ ಕಂಡಿದ್ದಾರೆ. ಇವರ ಹಣ್ಣಿನ ತೋಟವು ನಿಮ್ಮನ್ನು ಒಂದು ಕ್ಷಣ ನಿಲ್ಲಿಸಿ ತನ್ನತ್ತ ಸೆಳೆಯುತ್ತದೆ.

ಅಗ್ರಹಾರ ಗ್ರಾಮದ ಸಂಕೇತಿ ಜನಾಂಗದ ಕೃಷಿಕರು ಹೆಚ್ಚಾಗಿ ಅಡಿಕೆ ಮತ್ತು ಭತ್ತವನ್ನು ಬೆಳೆಯುತ್ತಿದ್ದಾರೆ. ಕೆಲವೊಬ್ಬರು ತಂಬಾಕು, ರಾಗಿಯನ್ನು ಮಾಡುತ್ತಾರೆ. ಬಾಳೆಯೂ ಇಲ್ಲಿದೆ. ತೆಂಗೂ ಇದೆ. ಇಲ್ಲಿಯ ಕೇಶವಮೂರ್ತಿ, ಶಂಕರಮೂರ್ತಿ, ಶ್ರೀನಿವಾಸಮೂರ್ತಿ, ಸುಂದರೇಶ್ ಮತ್ತು ಚಂದ್ರಶೇಖರ್ ಎಂಬುವವರು ಆಸಕ್ತಿಯಿಂದ ತಮ್ಮನ್ನು ಬೇಸಾಯದಲ್ಲಿ ತೊಡಗಿಸಿಕೊಂಡಿದ್ದಾರೆ. ಎಲ್ಲರಿಗಿಂತ ಭಿನ್ನವಾಗಿ ಕೆ.ನಟೇಶ್ ಎಂಬುವವರು ಇಲ್ಲಿ ತೋಟ ಮಾಡಿದ್ದಾರೆ. ಅದರಲ್ಲೂ ಇವರ ಹಣ್ಣಿನ ತೋಟ ನಿಮ್ಮ ಗಮನ ಸೆಳೆಯಬಲ್ಲದು. ಕೃಷಿ ವಿಶ್ವವಿದ್ಯಾಲಯ, ತೋಟಗಾರಿಕೆ ಇಲಾಖೆ, ನರ್ಸರಿಗಳು, ಹೀಗೆ ಸಂಬಂಧಿಸಿದ ಸಂಘ ಸಂಸ್ಥೆಗಳನ್ನು ಸಂಪರ್ಕಿಸಿ ತಮ್ಮ ಜಮೀನಿನಲ್ಲಿ ಭಿನ್ನವಾದ ಬೆಳೆಗಳನ್ನು ಬೆಳೆಸಿದ್ದಾರೆ. ಅವರ ಕೃಷಿಯು ನಡೆದು ಬಂದ ದಾರಿ, ನೋವು ನಲಿವುಗಳ ಬಗ್ಗೆ ಅವರೊಂದಿಗೆ ಮಾತನಾಡಿದ್ದೇವೆ.



ನಿಂಬೆಯತ್ತ ಕೆ.ನಟೇಶರ ನೋಟ:ಅಗ್ರಹಾರ

ಪ್ರಶ್ನೆ-ವಿಜಯ್ ಅಂಗಡಿ: ನಿಮಗೆ ವಯಸ್ಸು ಎಷ್ಟು? ಏನು ಓದಿದ್ದು? ತಂದೆ ತಾಯಿಗಳ ಹಿನ್ನೆಲೆ ಹೇಳಿ...


ಉತ್ತರ-ಕೆ.ನಟೇಶ್: ನನಗೀಗ ೬೫ ವರ್ಷ ವಯಸ್ಸು, ಎಲ್.ಎಸ್.ವರೆಗೆ ಓದಿದೆ. ನನ್ನ ತಂದೆ ಶ್ಯಾನಭೋಗ್ ಕೃಷ್ಣಪ್ಪನವರು. ಅವರಿಗೆ ಜಮೀನು ಇತ್ತಾದರೂ ಆಸಕ್ತಿಯಿಂದ ಮಾಡಿಸಲಿಲ್ಲ. ಈಗ ಅವರಿಲ್ಲ. ತಾಯಿ ರುಕ್ಮಿಣಿಯಮ್ಮ. ಅವರಿಗೆ ೮೬ ವರ್ಷ ವಯಸ್ಸು. ನಮ್ಮ ಜೊತೆ ಇದಾರೆ. ನಮ್ಮ ತಂದೆಗೆ ಒಂಭತ್ತು ಜನ ಮಕ್ಕಳು. ಐದು ಹೆಣ್ಣು, ನಾಲ್ಕು ಗಂಡು. ಹಿರಿಯರಾದ ನನ್ನ ಅಣ್ಣ ಕೆ. ನಾಗೇಂದ್ರನ್ ಮೈಸೂರು ಬ್ಯಾಂಕ್‌ನಲ್ಲಿ ಕೆಲಸ ಮಾಡಿ ನಿವೃತ್ತರಾದರು. ಉಳಿದವರೆಲ್ಲಾ ಬೇಸಾಯ ಮಾಡ್ತಾ ಇದೀವಿ.

ನಿಮ್ಮ ಪ್ರಾರಂಭಿಕ ದಿನಗಳ, ಕೆಲವು ವರ್ಷಗಳ ಹಿಂದಿನ ಬೇಸಾಯವನ್ನು ನೆನಪು ಮಾಡಿಕೊಳ್ಳಿ.

ನಾನು ೧೬ನೇ ವಯಸ್ಸಿನಲ್ಲಿ ಊರಿಗೆ ಬಂದೆ. ಆಗಿನಿಂದಲೇ ವ್ಯವಸಾಯದಲ್ಲಿ ತೊಡಗಿದ್ದೇನೆ. ಕೈಮುಟ್ಟಿ ಕೆಲಸ ಮಾಡಿದೀನಿ. ತೋಟ ಬೆಳೆಸುವಾಗ ರಾತ್ರಿ ೨.೩೦ಕ್ಕೇ ಎದ್ದು ಬೆಳುದಿಂಗಳ ಬೆಳಕಿನಲ್ಲಿ ಗಿಡಗಳಿಗೆ ಅಡ್ಡೆಯಲ್ಲಿ ನೀರು ತಗೊಂಡು ಹಾಕ್ತಿದ್ದಿವಿ. ದಿನವೂ ೩೦೦ ಕೊಡ ನೀರನ್ನು ಹೀಗೆಯೇ ಕೊಡ್ತಿದ್ದಿವಿ. ಬಿಸಿಲು ಬರೋದಕ್ಕಿಂತ ಮುಂಚೆ ಈ ಕೆಲಸ ಮುಗಿಸ್ತಿದ್ದಿವಿ. ಅಡಿಕೆ ಫಸಲಿಗೆ ಬರೋ ತನಕ ಹೀಗೆ ಮಾಡಿದಿವಿ. ಅಡಿಕೆ ಹೋದಂತೆಲ್ಲಾ ಮರುನಾಟಿ ಕೈಗೊಂಡಿದೀವಿ.

ನಿಮಗೆ ತೆಂಗಿನ ತೋಟ ಇರೋ ವಿಚಾರ ತಿಳಿಯಿತು. ಈ ಬಗ್ಗೆ ಅನುಭವಗಳೇನು?

ನೋಡಿ, ಅನೇಕರು ನಮ್ಮ ಭಾಗದಲ್ಲಿ ತೆಂಗು ಬರಲ್ಲಾ ಅಂತ ಹೇಳ್ತಿದ್ರು. ನೋಡೋಣ ಅಂತ ಧೈರ್ಯ ಮಾಡಿ ೧೯೬೧ರಲ್ಲಿ ಸಸಿ ಹಾಕಿದೆ. ೫೦೦ ಮರಗಳು ಫಲ ನೀಡುತ್ತಿವೆ. ನಿರೀಕ್ಷೆಗಿಂತ ಮರಗಳ ಬೆಳವಣಿಗೆ, ಇಳುವರಿ ನಮಗೆ ಹಿಡಿಸಿದೆ. ಕೆರೆಯ ಅಂಚಿನಲ್ಲೇ ತೆಂಗಿನ ತೋಟ ಇರೋದ್ರಿಂದ ನೀರಿನ ಕೊರತೆ ಕಾಣಿಸೋಲ್ಲ. ಒಂದು ಬೆಳೆ ಕೈಕೊಟ್ರೆ ಇನ್ನೊಂದು ನಮಗೆ ಸಹಾಯವಾಗುತ್ತೆ. ನುಸಿ ಕ್ರಿಮಿ ನಮ್ಮಲ್ಲೂ ಇದೆ. ಆದ್ರೂ ಲಾಭಕ್ಕೆ ಕೊರತೆ ಇಲ್ಲ. ಈಗ ನಾವು ಅಣ್ಣ ತಮ್ಮಗಳೆಲ್ಲಾ ಬೇರೆಯಾಗಿದೀವಿ. ನನಗೆ ಎರಡೂವರೆ ಎಕರೆ ಅಡಿಕೆ ತೋಟ ಇದೆ. ಮಾವು - ೨೫೦ ಇದೆ. ಸಪೋಟ, ಪೇರಲವನ್ನೂ ಹಾಕಿದೀನಿ.



ಅಡಿಕೆಯ ಗುಡ್ಡೆ : ಸಿಪ್ಪೆ ಸುಲಿಯಲು ಸಜ್ಜು : ಕೆ.ನಟೇಶ್:ಅಗ್ರಹಾರ

ಅರಕಲಗೂಡು ತಾಲೂಕು ತಂಬಾಕು ಬೆಳೆಗೆ ಹೆಸರುವಾಸಿ. ತಂಬಾಕು ಬೆಳೆಯಲ್ಲಿನ ನಿಮ್ಮ ಅನುಭವ ಏನು?

ನಮ್ಮಲ್ಲಿ ಈಗ್ಗೆ ೨೨ ವರ್ಷಗಳಿಂದ ತಂಬಾಕನ್ನು ಜನ ಬೆಳೀತಾ ಇದಾರೆ. ಆಗ ಐಟಿಸಿ (ಇಂಡಿಯನ್

ಟೊಬ್ಯಾಕೋ ಕಂಪನಿ)ಯವರು ಉತ್ತೇಜನ ನೀಡ್ತಾ ಇದ್ರು. ಅವರಿಗೆ ಬಹಳ ಕಾಳಜಿ ಇತ್ತು. ಬೆಳೆದ ತಂಬಾಕನ್ನು ಮುಕ್ತವಾಗಿ ಮಾರುತ್ತಿದ್ದೆವು. ಈಗಿನಂತೆ ಹರಾಜು ಮಾರುಕಟ್ಟೆ ಇರಲಿಲ್ಲ. ಖರೀದಿಯಲ್ಲಿ ಆಗ ಪೈಪೋಟಿ ಇತ್ತು. ಐಟಿಸಿ, ಗೋಲ್ಡನ್ ಕಂಪನಿ, ಮೈಸೂರ್ ಟೊಬ್ಯಾಕೋ, ಮಧ್ಯಲಕ್ಷ್ಮಿ, ಮುಂತಾದವರು ತಂಬಾಕನ್ನು ಖರೀದಿಸುತ್ತಿದ್ದರು. ಬೆಲೆ ಕಿ.ಗ್ರಾಂಗೆ ೫ ರೂಪಾಯಿ ಸಿಗ್ತಾ ಇದ್ರೂ ಅದೂ ಲಾಭ ಅನಿಸುತ್ತಿತ್ತು. ಈಗ ೪೦-೫೦ ರೂಪಾಯಿಯಾಗಿದ್ದರೂ ಖರ್ಚು ಕೈಮೀರಿದೆ.



ಅಡಿಕೆ : ಒಣಗಿಸಿದ ಮೇಲೆ ಮಾರಾಟಕ್ಕೆ ಮುನ್ನ ವಿಂಗಡಣೆ: ಕೆ.ನಟೇಶ್ ಅವರ ಪಹಿವಾಟು: ಅಗ್ರಹಾರ

ಖರ್ಚು ಆಗ ಎಷ್ಟು ಆಗ್ತಿತ್ತು, ವಿವರ ನೀಡ್ತೀರಾ?

ನೋಡಿ ಸ್ವಾಮಿ, ಸೌದೆಗೆ ಒಂದು ಗಾಡಿಗೆ ಐದು ರೂಪಾಯಿ ಇದ್ದದ್ದು ಈಗ ೫೦೦ ರೂಪಾಯಿಗೆ ಬಂದಿದೆ. ದಿನಗೂಲಿ ಎರಡು ರೂಪಾಯಿ ಇತ್ತು. ಈಗ ೭೫-೭೦ ರೂಪಾಯಿ. ರಾಸಾಯನಿಕ ಗೊಬ್ಬರದ ಬಳಕೆ ಬಹು ಕಮ್ಮಿ ಇತ್ತು. ಸೊಪ್ಪು ಹದ ಮಾಡ್ಲಿಕ್ಕೆ ಕಂಪನಿಯವರು ಕಲ್ಲಿದ್ದಲನ್ನು ಕೊಡ್ತಿದ್ದರು. ನೋಡಿ, ಖರ್ಚಿನಲ್ಲಿ ಗಣನೀಯ ಏರಿಕೆಯಾಗಿದ್ದರೂ ಬೆಲೆ ಆ ಮಟ್ಟದಲ್ಲಿ ಏರಿಲ್ಲ. ಇದಕ್ಕಿಂತ ಒಂದು ಸಂಗತಿಯನ್ನು ನಿಮ್ಗೆ ನೋವಿನಿಂದ ಹೇಳ್ಲಿಕ್ಕೆ ಬಯಸ್ತೀನಿ. ನಮ್ಮ ಕಡೆ ತಂಬಾಕು ಬೆಳೆಯುವ ಭಾಗಗಳಲ್ಲಿ ಎಲ್ಲೆಡೆ ಹುಣಿಸೆ ಮರಗಳಿದ್ದವು, ಅಗಾಧವಾಗಿ ಮಾವು, ಗೋಣಿ, ಬಸರಿ ಮರಗಳು ಬೆಳೆದಿದ್ದವು. ಹಣದ ಆಸೆಗೆ ತಂಬಾಕನ್ನು ಹಾಕಿ ಅದನ್ನು ಹದ ಮಾಡಲು ದೇಶದ ಹಸಿರು ಸಂಪತ್ತು ಹೇಳತೀರದಷ್ಟು ನಾಶವಾಯ್ತು. ೮-೧೦ ವರ್ಷಗಳಲ್ಲಿ ಕಾಡೂ ಲೂಟಿಯಾಯಿತು. ಮರಗಳನ್ನು ಜನ ಬೋಳಿಸಿದರು. ತಂಬಾಕಿನಿಂದ ಹಣ ಬಂದಿರಬಹುದು. ಆದ್ರೆ ನಮ್ಮ ಮರಗಳೆಲ್ಲಾ ಸರ್ವನಾಶವಾದವಲ್ಲಾ, ಮುಂದೆ ಏನೇನು ಆಗುತ್ತೋ ತಿಳಿಯದು.

ತಂಬಾಕು ಮಂಡಳಿಯು ಬರೋದಕ್ಕಿಂತ ಮುನ್ನ ಪರಿಸ್ಥಿತಿ ಹೇಗಿತ್ತು?



ಹೋಳಾಗಿ ಹೊಳಪಾಗಿರುವ ಅಡಿಕೆ:ಮಾರಾಟಕ್ಕೆ ಸಿದ್ಧ:ಅಗ್ರಹಾರ

ಆಗಲೂ ಕಟ್ಟುಪಾಡುಗಳು ಇದ್ದವು. ಲೈಸನ್ಸ್ ಕಡ್ಡಾಯವಾಗಿತ್ತು. ಒಂದು ಬ್ಯಾರನ್‌ಗೆ ನಿಗದಿತವಾದ ಸಸಿಗಳನ್ನು ಬೆಳೆಸಬೇಕೆಂಬ ನಿಯಮಾನೂ ಇತ್ತು.

ತಂಬಾಕನ್ನು ಹೇಗೆ ಬೆಳಸ್ತಾ ಇದ್ರಿ, ಬೆಳೆ ಹೇಗೆ ಬರ್ತಾ ಇತ್ತು?

ಸಸಿ ಬೆಳೆಸುವ ಮುನ್ನ ಪ್ರತಿ ಗುಣಿಗೆ ಒಂದು ಲೀಟರ್ ನೀರನ್ನು ಹಾಕ್ತಿದ್ದಿವಿ. ಸಗಣಿ ಗೊಬ್ಬರ ಹಾಕಿ ಬೆಳೀತಾ ಇದ್ದಿವಿ. ತಂಬಾಕಿನ ಎಲೆಯ ತೂಕ ಹೆಚ್ಚು ಇರುತ್ತಿತ್ತು. ಎಲೆ, ದಿಂಡು (ಗಿಡದ ಕಾಂಡ) ಒಣಗಿ ಹದವಾಗ್ಲಿಕ್ಕೆ ಐದಾರು ದಿನ ಬೇಕಾಗುತ್ತಿತ್ತು. ಈಗ ಮೂರೂವರೆ ದಿನವಾದ್ರೇ ಸಾಕು. ಇಳುವರಿ ಒಂದು ಬ್ಯಾರನ್‌ಗೆ ೧೫೦೦-೨೦೦೦ ಕಿ.ಗ್ರಾಂ. ಬಂದರೂ ದುಡ್ಡು ನಿಲ್ಲಲ್ಲ. ಬ್ಯಾಂಕ್ ಸಾಲ ಬೆಳೆಯುತ್ತಿದೆ.

ಮರಗಳು ಬಹಳ ಕಡೆ ಬೋಳಾಗಿರುವ ಈ ದಿನಗಳಲ್ಲಿ ಪರ್ಯಾಯ ಏನು ಕಾಣುತ್ತಿದೆ?

ತೆಂಗಿನ ಸಿಪ್ಪೆ, ಕಾಫಿ ಬೀಜದ ಸಿಪ್ಪೆ ನಮ್ಮ ಜಿಲ್ಲೆಯಲ್ಲೇ ಸಿಗೋದ್ರಿಂದ ಮರಗಳು ಸ್ವಲ್ಪ ಉಳಿದಿವೆ. ಒಂದು ಲಾರಿ ಲೋಡ್ ತೆಂಗಿನಸಿಪ್ಪೆಗೆ ಮೂರ್‍ನಾಲ್ಕು ಸಾವಿರ ರೂಪಾಯಿ ಆಗುತ್ತೆ. ಕಾಫಿ ಹೊಟ್ಟು ೧೦-೧೨ ಸಾವಿರ ಆಗುತ್ತೆ. ತೆಂಗಿನ ಕರಟವನ್ನು ಈಗ ಬಳಸ್ತಾರೆ. ಆದರೆ ಇದು ತುಂಬಾ ಶಾಖ ಕೋಡೋದ್ರಿಂದ ಸೌದೆ, ಸಿಪ್ಪೆಯನ್ನು ಜೊತೆಗೆ ಹಾಕ್ತಾರೆ.

ತೆಂಗಿನ ತೋಟ ಮಾಡ್ಲಿಕ್ಕೆ ನಿಮ್ಗೆ ಹುರುಪು ಎಲ್ಲಿಂದ ಸಿಕ್ಕಿತು?

ಅದಕ್ಕೆ ಒಂದು ಕಹಿ ಘಟನೆಯನ್ನು ನಿಮಗೆ ಹೇಳ್ಲೇಬೇಕು. ಒಂದ್ಸಾರಿ ಅರಕಲಗೂಡಿಗೆ ಬದನೆಕಾಯಿಯನ್ನು ತಗೊಂಡು ಹೋಗಿದ್ದೆ. ಒಂದು ಚೀಲಕ್ಕೆ ಎರಡೂವರೆ ರೂ. ಬೆಲೆ ಕಟ್ಟಿದ್ರು. ಬೇಸತ್ತು ಅಲ್ಲೇ ಬಿಸಾಕಿ ಬಂದೆ. ಇದಕ್ಕೆ ಪರ್ಯಾಯವನ್ನು ಯೋಚಿಸಿದೆ. ಆಗ ನನಗೆ ಹಿಡಿಸಿದ್ದು ತೆಂಗು.

ನಿಮ್ಮ ಹಣ್ಣಿನ ತೋಟವನ್ನು ನೋಡಿದ್ರೆ ಒಂದು ರೀತಿಯ ವಿಶೇಷತೆ ಇದೆ. ನಿಮ್ಮ ಪ್ರಯತ್ನ, ಕಂಡ ಯಶಸ್ಸನ್ನು ತಿಳಿಸಿ.

ಈಗ್ಗೆ ಒಂಬತ್ತು ವರ್ಷದ ಹಿಂದೆ ಒಂಬತ್ತು ಎಕರೆಯಲ್ಲಿ ಮಾವು, ಸೀಬೆ, ಸಪೋಟ, ನಿಂಬೆ, ಹಲಸು, ಮುಂತಾದ ಹಣ್ಣಿನ ಗಿಡಗಳನ್ನು ನೆಟ್ಟಿರುವೆ. ಈಗ ಫಸಲು ಶುರುವಾಗಿದೆ. ೨೫೦ ಮಾವಿನ ಗಿಡಗಳಿವೆ. ಮಲಗೋವಾ, ಸೈಂಧುರಾ, ತೋತಾಪುರಿ, ಮಲ್ಲಿಕಾ, ದೆಶರಿ, ಬಾದಾಮಿ, ನೀಲಂ ತಳಿಗಳನ್ನು ಹಾಕಿರುವೆ. ಅಂತರವನ್ನು ಗಿಡದಿಂದ ಗಿಡಕ್ಕೆ ೧೧ ಮೀಟರ್ ಇಟ್ಟಿರುವೆ. ಮಧ್ಯದಲ್ಲಿ ಸೀಬೆಯನ್ನು ನೆಟ್ಟಿರುವೆ. ಗಿಡ ಬೆಳೆಯುವವರೆಗೆ ಮಧ್ಯದ ಜಾಗದಲ್ಲಿ ರಾಗಿ, ಜೋಳ ಬೆಳೆದೆ. ಈಗಲೂ ಸ್ವಲ್ಪ ಬೆಳೆಯುತ್ತಿರುವೆ. ಮುಂದೆ ಆಗಲ್ಲ. ತೋಟದ ಅಂಚಿನಲ್ಲಿ ಹಲಸಿನ ಗಿಡಗಳನ್ನು ೪೦ ಮೀಟರ್‌ಗೊಂದರಂತೆ ಹಾಕಿರುವೆ. ಕಸಿ ಹಲಸು, ಅಂಟಿಲ್ಲದ ಹಲಸು, ರಾಜರ ಕಾಲದ ಒಳ್ಳೆಯ ತಳಿಗಳ ನೂರು ಸಸಿಗಳನ್ನು ನಾಟಿ ಮಾಡಿರುವೆ. ಹನ್ನೊಂದು ಮೀಟರ್ ಅಂತರದಲ್ಲಿ ಸಪೋಟವನ್ನು ಹಾಕಿರುವೆ. ನೂರು ಗಿಡ ಇವೆ. ಕಾಯಿ ಕೊಡುತ್ತಿವೆ. ಹುಣಿಸೆ ಗಿಡಗಳನ್ನು ಅಲ್ಲಲ್ಲಿ ಕೂಡಿಸಿರುವೆ.

ಹಣ್ಣಿನ ತೋಟ ಮಾಡುವಲ್ಲಿ ಎಷ್ಟು ಹಣ ಖರ್ಚಾಗಿದೆ? ಕೈಗೆ ಹಣ ಸಿಗುತ್ತದೆಯೇ?

ಇದು ಒಂದು ರೀತಿ ದೊಡ್ಡ ಸಾಹಸ ಸ್ವಾಮಿ. ಈ ತೋಟದ ಮೇಲೆ ೮-೧೦ ಲಕ್ಷ ರೂಪಾಯಿ ಸಾಲ ಇದೆ. ಪಕ್ಕದಲ್ಲಿದ್ದ ಸ್ವಲ್ಪ ಜಮೀನನ್ನೂ ಖರೀದಿಸಿರುವೆ. ಈಗ ಸ್ವಲ್ಪ ಹಣ ಕೈಸೇರುತ್ತಿದೆ. ಬಡ್ಡಿಯನ್ನು ತೀರಿಸುವುದು ಕಷ್ಟ ಇದೆ. ಆದರೂ ನನಗೆ ಭರವಸೆ ಇದೆ. ಯಶಸ್ಸು ಖಂಡಿತಾ ಇದೆ ಎಂದು ನಂಬಿದ್ದೇನೆ. ಹಣ್ಣನ್ನು ಗುತ್ತಿಗೆದಾರರು ತಗೊಂಡು ಹೋಗ್ತಾರೆ. ಇನ್ನೂ ಹಿಡಿತ ಸಿಗಬೇಕಾಗಿದೆ.

ಹಣ್ಣಿನ ತೋಟದಲ್ಲಿ ಕೈಗೊಳ್ಳುವ ಬೇಸಾಯ ಕ್ರಮಗಳೇನು?

ಇಲ್ಲಿಯ ಮಣ್ಣು ಚೆನ್ನಾಗಿದೆ. ಸಗಣಿ ಗೊಬ್ಬರ, ಹೊಸ ಮಣ್ಣು ಕೊಡ್ತೀನಿ. ಒಂದು ಮರಕ್ಕೆ ಒಂದು ಕಿ.ಗ್ರಾಂ. ಸುಫಲಾವನ್ನು ಬಳಸ್ತೀನಿ. ಯೂರಿಯಾ, ಸೂಪರ್ ಫಾಸ್ಪೇಟ್, ಮತ್ತು ಮುರೇಟ್ ಆಫ್ ಪೊಟ್ಯಾಷ್‌ನ್ನು ಬಳಸ್ತೀನಿ. ಮೂರ್‍ನಾಲ್ಕು ಕುಕ್ಕೆ ಸಗಣಿ ಗೊಬ್ಬರಾನೂ ಕೊಡ್ತೀನಿ. ಹೊಸ ಮಣ್ಣನ್ನು ಇಡೀ ಜಮೀನಿನಲ್ಲಿ ಹರಡಿಸಿ ಉಳುಮೆ ಮಾಡಿಸ್ತೀನಿ. ನೀರಿಗೆ ಬೋರ್‌ವೆಲ್ ಇದೆ. ಕೊಳವೆಗಳಿಂದ ನೀರನ್ನು ಕೊಡ್ತೀನಿ.

ಒಟ್ಟಾರೆ ಬೇಸಾಯ ನಿಮ್ಗೆ ಹೇಗೆ ಅನಿಸ್ತಾ ಇದೆ?

ನೋಡಿ, ಬರಿ ಆದಾಯದ ದೃಷ್ಟಿಯಲ್ಲಿ ಕಸಬನ್ನು ನೋಡಬಾರದು. ಪ್ರಯತ್ನ ಮಾಡುತ್ತಾ ಇರಬೇಕು. ತುಂಬಾ ನಿರೀಕ್ಷೇನೂ ಇರಬಾರದು. ಆಳುಗಳನ್ನು ವಿಶ್ವಾಸಕ್ಕೆ ತಗೊಂಡು ಹೋಗಬೇಕು. ಕೈಮುಟ್ಟಿ ಶ್ರದ್ಧೆಯಿಂದ ದುಡಿದಷ್ಟೂ ಏಳ್ಗೆ ಖಚಿತ.

ಮರೆಯದ ಮತ್ತಷ್ಟು ವಿವರಗಳು

ಅಗ್ರಹಾರದ ಕೆ.ನಟೇಶ್‌ರವರ ಜತೆ ಮಗ ಗಿರೀಶ್ ಕೈ ಜೋಡಿಸಿದ್ದಾರೆ. ಅವರೊಂದಿಗೆ ಸುಮಾರು ಐದಾರು ತಾಸುಗಳ ಕಾಲ ಅಲ್ಲಿಯ ಕೃಷಿ, ಅವರ ವೈಯಕ್ತಿಕ ಬೇಸಾಯದ ಬಗ್ಗೆ ಮಾತಾಡುತ್ತಾ ತೋಟ ಅಡ್ಡಾಡಿ ವಿಚಾರಗಳನ್ನು ಕಲೆ ಹಾಕಿದ್ದೇವೆ. ಸಮಯ ಸಾಕಾಗಲಿಲ್ಲ ಎಂಬ ಸಣ್ಣ ಕೊರಗು ನಮಗಾಯಿತು. ಗರಿಷ್ಠ ಪ್ರಮಾಣದಲ್ಲಿ ಅಗತ್ಯ ವಿಷಯಗಳನ್ನು ಸಂಗ್ರಹಿಸಿದ್ದೇನೆ. ನಟೇಶ್‌ರವರು ಹೇಳಿದ ಕೆಲವು ವಿವರಗಳು ಇಲ್ಲಿವೆ :

* ಮನೆ ಬಳಕೆಗೆ ಬೇಕಾದ ಹಾಲಿಗೆ ಇವರಲ್ಲಿ ನಾಲ್ಕು ಹಸುಗಳಿವೆ, ಎರಡು ಎಮ್ಮೆಗಳಿವೆ. ಹಾಲು ಹೆಚ್ಚಿಗೆ ದೊರೆತಾಗ ಡೈರಿಗೆ ಹಾಕುವುದಿದೆ.

* ಈ ಹಿಂದೆ ಇವರಲ್ಲಿ ಐದು ಜೋಡಿ ಎತ್ತುಗಳಿದ್ದವಂತೆ. ಹುರುಳಿ ಕಾಳನ್ನು ಬೇಯಿಸಿ ಎತ್ತುಗಳಿಗೆ ಕೊಡ್ತಾ ಇದ್ದರಂತೆ.

* ಹನ್ನೆರಡು ವರ್ಷಗಳ ಹಿಂದೆ ಖರೀದಿಸಿದ ಟ್ರ್ಯಾಕ್ಟರ್ ಇದೆ, ಬಳಕೆ ಆಗ್ತಾ ಇದೆ.

* 'ಮಾವಿಗೆ ಯಾವಾಗಲೂ ನೀರು ಬಿಡಬಾರದು. ಅಗತ್ಯವಾದಾಗ ಮಾತ್ರ ಕೊಡಿ' ಎಂಬುದು ಇವರ ಸಲಹೆ.

* ಅರಿಶಿನ, ಕಬ್ಬು, ಕೋಸು, ಈರುಳ್ಳಿಯಲ್ಲಿ ಬಹುದಿನ ಮುಂದುವರೆಯಲಿಲ್ಲ.

* ಬೆಲ್ಲಕ್ಕೆ ರಾಸಾಯನಿಕಗಳನ್ನು ಹಾಕಿ ಮಾಡಿದ್ರೆ ಬಾಳಿಕೆ ಬರೋಲ್ಲ.

* ಎಲ್ಲಾ ಹಣ್ಣಿನ ಬೆಳೆಗಳನ್ನೂ ಒಬ್ಬರಿಗೇ ಗುತ್ತಿಗೆ ಕೊಡುವುದು ಒಳ್ಳೆಯದು. ಇಲ್ಲದಿದ್ದರೆ ಹಿಡಿದವನೇ ಕಳ್ಳತನ ಮಾಡ್ತಾನೆ.

* ತೋಟದಲ್ಲಿ ಈಗಲೂ ಗಿಡ ನೆಡುವ ಆಸಕ್ತಿ ಇದೆ. ಉಪ್ಪಿನಕಾಯಿಗಾಗಿ ೧೦ ಜೀರಿಗೆ ಮಾವು ಗಿಡಗಳನ್ನು ಬೆಳೆಸಿದಾರೆ. ನುಗ್ಗೆ, ಪರಂಗಿ, ಎರಳೆಕಾಯಿ(ಕಂಚಿಕಾಯಿ) ಇವರ ತೋಟದಲ್ಲಿ ಬೆಳೆದಿವೆ.

ನಮಗನಿಸಿದ್ದು ಹೀಗೆ:

* ಹಣ್ಣಿನ ತೋಟದ ಅಂಚಿನಲ್ಲಿ ಗಿಡಮರಗಳು ಒತ್ತೊತ್ತಾಗಿ ಬೆಳೆಯುತ್ತಿವೆ. ಬಿಸಿಲು, ನೀರು, ಪೋಷಕಾಂಶಗಳು ಸರಿಯಾಗಿ ಸಿಗದೇ ಯಾವೂ ಸರಿಯಾಗಿ ಬರುವುದಿಲ್ಲ. ಅಗತ್ಯವಾದವುಗಳನ್ನು ಉಳಿಸಿಕೊಂಡು ಉಳಿದವುಗಳನ್ನು ಸ್ಥಳಾಂತರಿಸುವುದು ಇಲ್ಲವೇ ತೆಗೆದು ಹಾಕುವುದು ಸೂಕ್ತವಾದೀತು.

* ರಾಸಾಯನಿಕ ಗೊಬ್ಬರಗಳನ್ನು ತೆಂಗು, ಅಡಿಕೆ, ಮತ್ತು ಹಣ್ಣಿನ ಬೆಳೆಗಳಿಗೆ ಮಿತಗೊಳಿಸಿ ಇಲ್ಲವೇ ಪರ್ಯಾಯ ಪದಾರ್ಥಗಳನ್ನು ಬಳಸಿ ವರ್ಜಿಸುವುದು ಸುಸ್ಥಿರ ಕೃಷಿಗೆ ಪೂರಕವಾದೀತು.

* ತೆಂಗು ಮತ್ತು ಹಣ್ಣಿನ ಬೆಳೆಗಳಲ್ಲಿ ಸಿಗುವ ಬೆಳೆಯ ವ್ಯರ್ಥ ಪದಾರ್ಥವನ್ನು ಮರುಬಳಕೆ ಮಾಡುವ ಕ್ರಮವನ್ನು ಅನುಸರಿಸಿದರೆ ಉಪಯೋಗವಾದೀತು.

* ಮಳೆ ನೀರನ್ನು ಜಮೀನಿನಲ್ಲಿ ನಿಲ್ಲಿಸಿ ಇಂಗಿಸುವ ಕ್ರಮಗಳನ್ನು ಕೈಗೊಳ್ಳುವುದು ಇಂದಿನ ದಿನಗಳಲ್ಲಿ ಅಗತ್ಯವೆನಿಸುತ್ತದೆ.


ವಿಳಾಸ: ಶ್ರೀ ಕೆ. ನಟೇಶ್, ಅಗ್ರಹಾರ, ಅರಕಲಗೂಡು (ತಾ), ಹಾಸನ (ಜಿ) ದೂರವಾಣಿ: 08175-225436

ಸಂದರ್ಶನ : 1-12-2002

೨. ಮಗ್ಗೆ

ಅ) ಲವಲವಿಕೆಯು ಲಕ್ಷ್ಮೀನಾರಾಯಣರವರನ್ನು ಮೇಲೆತ್ತಿತು

ಅಜ್ಜನಿಗೆ ಪ್ರೀತಿಯ ಮಗುವಾಗಿದ್ದ ಇವರನ್ನು ತಾತ 'ಪುಟ್ಟಸಕ್ಕರೆ' ಎಂದೇ ಕರೆದರು. ಊರಲ್ಲೂ ಗೌರವಯುತವಾಗಿ ಬೆಳೆದ ಲಕ್ಷ್ಮೀನಾರಾಯಣರವರು ಗ್ರಾಮಾಭಿವೃದ್ಧಿಗೂ ಕಾಯಕ ಮಾಡಿದ್ದಾರೆ. ಮಕ್ಕಳೆಲ್ಲಾ ಅಮೇರಿಕದಲ್ಲಿ ವಾಸ. ಮಾಡಿದ ಜಮೀನಿಗೆ ಮುಂದಿನ ಒಡೆಯರ್‍ಯಾರು ಎಂಬುದು ಈಗ ಪ್ರಶ್ನೆ.



ತಮ್ಮ ತೋಟದ ಗುಡಿಸಿಲಲ್ಲಿ ಕೂತ ವೃದ್ಧ ರೈತ ಲಕ್ಷ್ಮೀನಾರಾಯಣ:ದೊಡ್ಡಮಗ್ಗೆ

ಯಜಮಾನರನ್ನು ಕಂಡು 'ನಮಸ್ಕಾರ ಸ್ವಾಮಿ, ನಾವು ಹಾಸನದಿಂದ ಬಂದಿದೀವಿ, ನಿಮ್ಮನ್ನ ಮಾತ್ನಾಡ್ಸಿ ಕೊಂಡು ಹೋಗೋಣಾಂತ ಬಂದಿದೀವಿ' ಅಂದಾಗ, 'ನಾನು ತೋಟಕ್ಕೆ ಹೊರಟಿದೀನಿ, ಬಾಳೆ ನೆಡಿಸ್ಬೇಕು, ಇನ್ನೊಂದು ದಿನ ಬನ್ನಿ' ಎಂದು ಲಕ್ಷ್ಮೀನಾರಾಯಣ ರವರು ಹೇಳಿದಾಗ 'ಅರೆ! ಇದ್ಯಾಕೋ ಕೆಲ್ಸ ಎಡವಟ್ಟಾಯಿತಲ್ಲಾ' ಎಂದು ಯೋಚಿಸಿ, ತಡಮಾಡದೇ ಪ್ರತಿಕ್ರಿಯಿಸಿದೆವು, 'ಹೀಗೆ ಮಾಡಿ, ನಿಮ್ಗೆ ತೊಂದ್ರೆ ಕೊಡಲ್ಲ, ತೋಟದಲ್ಲಿ ನಿಮ್ಮ ಕೆಲಸ ನೀವು ಮಾಡ್ತಾ ಇರ್ರಿ, ಆಗಾಗ್ಗೆ ನಿಮ್ಮನ್ನು ಮಾತ್ನಾಡ್ಸಿಸ್ತೀವಿ. ನೀವು ತಿಂಡಿ ತಿಂದು ಸಿದ್ಧರಾಗಿ, ಜೊತೇಲೇ ಹೋಗೋಣ' ಎಂದು ಮನವೊಲಿಸಿ 'ಒಂದು ೧೫ ನಿಮಿಷ ಆದ್ಮೇಲೆ ಬರ್ತೀವಿ' ಎಂದು ಊರನ್ನು ಸ್ವಲ್ಪ ನೋಡೋಣವೆಂದು ಹೊರಟೆವು.

ಒಬ್ಬರು ಅಡಿಕೆ ಹಾಕಿ ಒಣಗಿಸ್ತಾ ಇದ್ದರು. ಕೆಲವೊಬ್ಬರು ಆಚೀಚೆ ಓಡಾಡ್ತಾ ಇದ್ದರು. ಅದೊಂದು ವಿಶಾಲವಾದ ಓಣಿ. ಒಂದೇ ರೀತಿಯ ಮನೆಗಳು. ಚಾಪೆ ಮೇಲೆ ಅಡಿಕೆ ಹಾಕಿದ್ದ ವ್ಯಕ್ತಿಯ ಬಳಿ ಹೋಗಿ ಕುಶಲೋಪರಿ ಮಾತಾಡಿ ಪರಿಚಯಿಸಿಕೊಂಡೆವು. ಅಡಿಕೆ ಬೆಳೆಗಾರ ಸೀತಾರಾಂ ತಮ್ಮ ಮನೆಗೆ ಕರೆದೊಯ್ದು ಅಡಿಕೆ ಬೇಸಾಯದ ಅನುಭವಗಳನ್ನು ಹೇಳಿಕೊಂಡರು. ಇಲ್ಲೊಬ್ಬರು ಶ್ರೀನಿವಾಸ ಅನ್ನೋರು ಚೆನ್ನಾಗಿ ತೋಟ ಮಾಡ್ತಾರೆ ಎಂದು ಸೀತಾರಾಂ ಹೇಳಿದರು. ಸರಿ, ಲಕ್ಷ್ಮೀನಾರಾಯಣರವರು ತಿಂಡಿ ಸೇವಿಸಿಕೊಂಡು ಸಿದ್ಧರಾಗಿದ್ದರು. ಶ್ರೀನಿವಾಸರವರು ಜೊತೆ ಸೇರಿದರು. ದೊಡ್ಡಮಗ್ಗೆಯಿಂದ ಕೇವಲ ಎರಡು ಕಿ.ಮೀ. ದೂರದಲ್ಲಿರುವ ಅವರ ತೋಟಕ್ಕೆ ತಲುಪಿದೆವು. ಹೋಗುವ ದಾರಿಯಲ್ಲಿ ಚಿಕ್ಕಮಗ್ಗೆ ಗ್ರಾಮ ಕಾಣಿಸಿತು.

ಚಿಕ್ಕಮಗ್ಗೆ ದೊಡ್ಡಮಗ್ಗೆಗಿಂತ ಚಿಕ್ಕದೇ. ಇಲ್ಲಿಯ ಆಸುಪಾಸಿನ ಜಮೀನು ನಾಲಾ ನೀರಾವರಿಗೆ ಒಳಪಟ್ಟಿದೆ. ಅಲ್ಲೇ ಸಮೀಪದಲ್ಲಿ ಲಕ್ಷ್ಮೀನಾರಾಯಣರವರ ತೋಟ ಇದೆ. ತೋಟಕ್ಕೆ ಕಾಲಿಡುವ ಮುನ್ನವೇ ಅವರ ಕುಟುಂಬದ ಕುರಿತು ತುಸು ವಿಷಯಗಳನ್ನು ಕಲೆ ಹಾಕಿದ್ದಾಯಿತು. ಹಳೆಯ ಮಾವಿನ ಮರಗಳು ಹರಡಿಕೊಂಡು ಬೆಳೆದಿದ್ದವು. ಅಲ್ಲಿಯೇ ಪಕ್ಕದಲ್ಲಿ ಅಡಿಕೆ ತೋಟ ಕಾಣಿಸಿತು. ತೋಟದಲ್ಲೊಂದು ಸಣ್ಣ ಗುಡಿಸಲು, ಅದರಲ್ಲೊಂದು ಕಬ್ಬಿಣದ ಖುರ್ಚಿ. ಅದರಲ್ಲೇ ಕೂತುಕೊಳ್ಳಲು ಹೇಳಿ ನಾವು ಮಾತಿಗಿಳಿದೆವು.

ಯಜಮಾನ್ರೇ ನಿಮಗೆ ಎಷ್ಟು ವಯಸ್ಸು? ನೀವೇನು ಓದಿದ್ದು?

ನನ್ಗೀಗ ೭೭ ವರ್ಷ. ನಾನು ಹುಟ್ಟಿದ್ದು ೪.೧೦.೧೯೨೫ರಲ್ಲಿ. ಮೆಟ್ರಿಕ್ಯುಲೇಟ್ ಮುಗಿಸ್ದೆ. ನನ್ನ ಸೋದ್ರಮಾವ ಬೆಂಗಳೂರಿನಲ್ಲಿ ಹೆಡ್ ಮಾಸ್ಟರ್ ಆಗಿದ್ರು-ಎಸ್ಎಲ್ಎನ್ ಹೈಸ್ಕೂಲಿನಲ್ಲಿ. ಅಲ್ಲೇ ನಾನು ಓದಿದೆ. ಮೈಸೂರಿನಲ್ಲಿ ಶಾರದಾ ವಿಲಾಸ ಹೈಸ್ಕೂಲ್‌ನಲ್ಲಿ ಎಲ್ಎಸ್ ಮುಗಿಸ್ದೆ.

ನಿಮ್ಮ ಬಾಲ್ಯದ ನೆನಪುಗಳನ್ನು ಮಾಡ್ಕೋಬಹುದಾ?

(ಕಣ್ಣಿನಲ್ಲಿ ದುಃಖ ಉಮ್ಮಳಿಸಿ ಬಂದು) ನನ್ನ ತಾಯಿ ನಾನು ೮ ವರ್ಷ ಇರುವಾಗ ತೀರಿಕೊಂಡ್ರು. ನನ್ನಪ್ಪ ಎರಡ್ನೇ ಮದುವೆ ಮಾಡಿಕೊಂಡ್ರು. ತಂದೆಯ ಪೋಷಣೆ ಸರಿಯಾಗಿ ಸಿಗ್ಲಿಲ್ಲ. ಈ ತೋಟ ನನ್ನಪ್ಪಂದಲ್ಲ. ನನ್ನ ಹೆಂಡತಿಯ ತಮ್ಮಂದಿರದು. ೧೯೪೧ನೇ ಇಸ್ವಿ ಡಿಸೆಂಬರ್ ೨೯ ರಂದು ಎಲ್‌ಎಸ್ ಮುಗ್ಸಿ, ೧೯೪೨ನೇ ಏಪ್ರಿಲ್ ೧೨ರಂದು ದೊಡ್ಡಮಗ್ಗೆಗೆ ಬಂದೆ. ಆಗ ನನ್ನ ತಾತ (ತಾಯಿಯ ಅಪ್ಪ) ನಾರಾಯಣ ಅವಧಾನಿಗಳು ನನ್ನನ್ನು ಕರೆದು, 'ನನ್ನ ಮಗ ಬೆಂಗಳೂರಿನಲ್ಲಿ ಕೆಲಸದಲ್ಲಿ ಇದಾನೆ. ಇಲ್ಲಿ ಬರೋಕೆ ಅವ್ನಿಗೆ ಆಗಲ್ಲ. ನೀನೇ ಇಲ್ಗೆ ಹೊಂದಿಕೊಳ್ಳುವ ವ್ಯಕ್ತಿಯಂತ ನಾನು ನಿರ್ಧರಿಸಿದೀನಿ. ಈ ಮನೇಲಿ ದೀಪ ಹಚ್ಕಂಡು ಇರ್ಬೇಕು. ನನ್ನ ಮಗನ ಮಗಳನ್ನ ಕೊಡಬೇಕು ಅಂತ ಇದೀನಿ' ಎಂದು ಹೇಳಿದಾಗ ನಾನೂ ಒಪ್ಪಿಕೊಂಡೆ. ನನ್ಗೂ ಕೃಷಿ ಮೇಲೆ ಒಲವು ಇತ್ತು.

ತಂದೆ, ತಾಯಿ, ಅಣ್ಣ-ತಮ್ಮ, ಅಕ್ಕ-ತಂಗಿಯರ ಬಗ್ಗೆ ಹೇಳಿ.

ನನ್ನ ತಂದೆ ರಾಮಸ್ವಾಮಯ್ಯ, ತಾಯಿ ಸತ್ಯಭಾಮಮ್ಮ. ನನ್ನ ತಾಯಿಗೆ ನಾವಿಬ್ಬರು ಮಕ್ಕಳು. ತಮ್ಮನ ಹೆಸ್ರು ನಾಗರಾಜ. ನನ್ನ ಅಜ್ಜ ನಾರಾಯಣ ಅವಧಾನಿಗಳು ವೇದಪಂಡಿತರಾಗಿದ್ದರು. ಇವ್ರ ತಂದೆ ಕೃಷ್ಣಪ್ಪನವರೂ ವೈದಿಕ ವೃತ್ತಿ ಮಾಡ್ತಾ ಇದ್ರು. ನಾನಿರೋ ಮನೆ ೧೩೦ ವರ್ಷದ ಹಿಂದೆಯೇ ಕಟ್ಟಿದ್ದು.

ನಿಮ್ಮ ಸಂಸಾರದ ಬಗ್ಗೆ ಹೇಳಿ.

ನನ್ನ ಹೆಂಡ್ತಿ ಕೃಷ್ಣವೇಣಿ. ನಾನು ಮದ್ವೆ ಆದಾಗ ಆಕೆಗೆ ೧೪ ವರ್ಷ ವಯಸ್ಸು ಆಗಿತ್ತೇನೋ. ನನ್ಗೆ ೧೮ ಆಗಿತ್ತು. ೧೯ನೇ ವಯಸ್ಸಿನಲ್ಲಿ ಮೊದ್ಲ ಮಗ ಹುಟ್ಟಿದ. ನನ್ಗೆ ಮೂರು ಗಂಡು, ಮೂರು ಹೆಣ್ಣು ಮಕ್ಕಳು. ಎಲ್ರೂ ಮದುವೆ ಆಗಿದಾರೆ. ಎಲ್ರೂ ಅಮೇರಿಕದಲ್ಲಿದಾರೆ. ನನ್ನ ಗಂಡು ಮಕ್ಕಳ ಹೆಸ್ರು: ರಾಮಕುಮಾರ್ ಮಗ್ಗೆ, ಸುಬ್ಬು ಎಲ್.ಮಗ್ಗೆ, ಡಾ.ಸತೀಶ್ ಎಲ್ ಮಗ್ಗೆ. ಹೆಣ್ಣು ಮಕ್ಕಳು: ಉಮಾ ಶಂಕರ್ ಮಗ್ಗೆ, ಮಂಜುಳ ಡಾ.ಗಣೇಶಮೂರ್ತಿ, ಸೀತಾಲಕ್ಷ್ಮಿ ಡಾ.ವಸಂತ ಮಾಧವನ್.

ಈಗ ಬೇಸಾಯದ ವಿಚಾರಕ್ಕೆ ಬರೋಣ. ನಿಮ್ಗೆ ಎಷ್ಟು ಹಿಡುವಳಿ ಇತ್ತು, ಈ ಹಿಂದೆ ಏನು ಬೆಳೆ ಮಾಡ್ತಾ ಇದ್ರಿ? ನಿಮ್ಮ ಅನುಭವಗಳನ್ನು ನೆನಪು ಮಾಡಿಕೊಳ್ಳಿ.

ನನ್ನ ತಾತನದು ಒಟ್ಟು ೪೦ ಎಕರೆ ಜಮೀನು. ಇದರಲ್ಲಿ ಐದು ಎಕರೆ ಅಡಿಕೆ ತೋಟ ಇತ್ತು. ನಾನು ೫೦ ವರ್ಷ ಬೇಸಾಯ ಮಾಡಿದೀನಿ. ರಾಗಿ, ಹುರುಳಿ, ಮೆಣಸಿಗೆ, ತಂಬಾಕು, ಹರಳು, ತೊಗರಿ - ಇವು ಬೆಳೀತಾ ಇದ್ದ ಬೆಳೆಗಳು. ವರ್ಷಕ್ಕೆ ಒಂದೇ ಬೆಳೆ. ದನಗಳಿಗೆ ಹುರುಳಿ, ಮನುಷ್ಯರಿಗೆ ರಾಗಿ. ಎಕರೆಗೆ ರಾಗಿಯಲ್ಲಿ ಕೊನೇಪಕ್ಷ ಐದಾರು ಪಲ್ಲ ಸಿಗ್ತಿತ್ತು. ಹುರುಳಿಯಲ್ಲಿ ನಾಲ್ಕೈದು ಪಲ್ಲ. ಮುಂಗಾರಿನಲ್ಲಿ ರಾಗಿ, ಅದೂ ಗಿಡ್ಡರಾಗಿ ತಳಿ. ಹಿಂಗಾರಿನಲ್ಲಿ ಹುರುಳಿ, ಹುಚ್ಚೆಳ್ಳು, ಮೆಣಸಿಗೆ. ಹಡಿಗಾರು (ರಾಗಿ ಆದ ಮೇಲೆ ಉಳುಮೆ ಮಾಡೋದು) ಬಳಿಕ ಹಿಂಗಾರು ಬೆಳೆ. ರಾಸಾಯನಿಕ ಗೊಬ್ರ ಇರ್ಲಿಲ್ಲ. ೪೦ ದನ, ಎಮ್ಮೆ ಇದ್ದವು. ಐದು ಜೋಡಿ ಎತ್ತುಗಳು. ಹೈನಿಗೆ ಕೊರತೆ ಇರ್ಲಿಲ್ಲ. ಯಾವಾಗ್ಲೂ ೧೦ ಕರುಗಳು ಇರ್ತಿದ್ವು. ಕರಿಯೋದಕ್ಕೆ ಕಷ್ಟ ಆಗೋದು. ನಮ್ಮದು ೧೦೦-೧೨೦ ಬಂಡಿ ಸಗಣಿ ಗೊಬ್ರ ಆಗ್ತಿತ್ತು, ಖರೀದಿ ಮಾಡಿಯೂ ಹಾಕ್ತಿದ್ವಿವಿ. ತೋಟಕ್ಕೂ ದನದ ಗೊಬ್ಬರ ನೀಡ್ತಿದ್ವಿವಿ.

ತೋಟದಲ್ಲಿ ವಿಳ್ಳೆ, ಬಾಳೆ ಇತ್ತಾ?

ಅಯ್ಯೋ.... ಬೇಕಾದಷ್ಟು ವಿಳ್ಳೇದೆಲೆ ಹಂಬು ಇತ್ತು. ಕೆನಾಲ್ ನೀರು ಬಂದ ಮೇಲೆ ಎಲ್ಲಾ ಹೋಯ್ತು. ಶೀತಕ್ಕೆ ಅದು ತಡಕೊಳ್ಳಿಲ್ಲ. ಈಗ ದೇವ್ರ ಪೂಜೆಗೆ ವಾರಕ್ಕೊಂದು ಸಾರಿ ಒಂದು ಕಟ್ಟು ಎಲೆ ಕೊಂಡುಕೊಳ್ಳೋ ಸಂದರ್ಭ ಬಂದಿದೆ. ಮರಬಾಳೆ, ಇಲಾತಿಬಾಳೆ (ದೇವರಬಾಳೆ), ಬೂದುಬಾಳೆ ಇತ್ತು. ಈಗ ಪುಟ್ಟಬಾಳೆ ಇದೆ.

ಆಗ ಮಳೆ ಹೇಗೆ ಬರ್ತಾ ಇತ್ತು?

ನೋಡೀ.... ಸೋನೆ ಕಾಲದಲ್ಲಿ ಆಗ ತಿರುಗಾಡ್ಲಿಕ್ಕೆ ಆಗ್ತಾ ಇರ್ಲಿಲ್ಲ. ಎಲ್ಲರೂ ತಂಬಾಕಿಗೆ ಮರ-ಗಿಡ ಕಡಿದು ಹಾಳು ಮಾಡಿದ್ರು. ಈಗ ನೋಡಿದ್ರೆ ಕಣ್ಣಲ್ಲಿ ನೀರು ಬರುತ್ತೆ.

ಕೆಲಸಗಳಲ್ಲಿ ನಿಮ್ಮನ್ನು ಹೇಗೆ ತೊಡಗಿಸಿಕೊಳ್ತಾ ಇದ್ರಿ?

ನಾನು ದಿವಸಕ್ಕೆ ನಾಲ್ಕು ಟೈಮ್ ಬರೂವೆ. ಯಾವಾಗ ಬರ್ತೀನಿ ಅಂತ ಜನ್ರಿಗೆ ಗೊತ್ತಿರ್ಲಿಲ್ಲ. ಕಳ್ಳತನ ಹೆಚ್ಚು ಇತ್ತು. ನಾಲ್ಕು ಘಂಟೆಗೆ ಎದ್ದು ಬಂದಿರೋದೂ ಇದೆ. ಇಲ್ಲೀಗೆ ಬಂದಾಗ ಕೋಳಿ ಕೂಗ್ತಿತ್ತು.

ಆಗ್ಲೂ-ಈಗ್ಲೂ ಖರ್ಚು-ವೆಚ್ಚ ಆದಾಯದ ಬಗ್ಗೆ ಹೇಳಿ?

ಅಯ್ಯೋ.... ಆಗ ಒಂದು ಮಣ ಅಡಿಕೆಗೆ ೫-೮ ರೂ ಬೆಲೆ, ಧಾರಣೆ ಇರ್ಲಿಲ್ಲ. ಐದು ಎಕರೆ ಅಡಿಕೇನಾ ೧೦೫ ರೂಪಾಯಿಗೆ ಗುತ್ತಿಗೆ ಕೊಡ್ತಿದ್ವಿ. ೩೦೦ ರೂಪಾಯಿ ಭೂಮಿ ಕಂದಾಯ ಇತ್ತು. ಒಂದು ಖಂಡಗ ರಾಗಿ (೧೬೦ ಸೇರು) ೮ ರೂ, ೨೦ ಸೇರಿಗೆ ಒಂದು ರೂಪಾಯಿ. ಒಂದು ಖಂಡಗ ಭತ್ತಕ್ಕೆ ಆರು ರೂಪಾಯಿ, ಒಂದು ರೂಪಾಯಿಗೆ ೧೬ ಸೇರು. ವಿಳ್ಳೇದೆಲೆ ಬೆಳೇನಾ ೪೮ ರೂಪಾಯಿಗೆ ಗುತ್ತಿಗೆ ಕೊಟ್ಟಿದ್ದೀವಿ. ನಮ್ಮ ಜತೆ ದುಡೀತಿದ್ದ ಗಂಡಾಳಿಗೆ ಒಂದೂವರೆ ರೂಪಾಯಿ. ಹೆಣ್ಣಾಳಿಗೆ ಹನ್ನೆರಡಾಣೆ. ಈಗ ನೋಡಿ ದಿನಕ್ಕೆ ೪೦-೫೦ ರೂಪಾಯಿ. ಕೆಲ್ಸ ನೋಡಿದ್ರೆ ಶೇ.೨೫ ಇಲ್ಲ. ದುಡ್ಡಿಗೆ ಬೆಲೆ ಇಲ್ಲ. ಈಗ ಬೇಸಾಯ ಕಷ್ಟ. ಈಗ ಮಾಡೋದು ಆಗ ಕೆಲಸಾನೇ ಅಲ್ಲ. ಆಗ ಆಳುಗಳಿಗೆ ಒಂತರಹ ಭಯ, ವಿಶ್ವಾಸ-ನಂಬಿಕೆ, ದ್ರೋಹ ಮಾಡಬಾರ್ದು ಅಂತಿತ್ತು. ಈಗಿಲ್ಲ. ಆಗ ದುಡ್ಡು ಉಳೀತಾ ಇತ್ತು.

ಅಡಿಕೇನಾ ಹೇಗೆ ನಾಟಿ ಮಾಡಿದಿರಿ, ಕಟಾವು ಹೇಗೆ ಮಾಡ್ತಾ ಇದ್ರಿ?

ಗಿಡಗಳನ್ನು ಹನ್ನೆರಡು ಹೆಜ್ಜೆ (೯ ಅಡಿ) ಅಂತರದಲ್ಲಿ ನೆಟ್ಟಿದೀನಿ. ಇಲ್ಲೀದೇ ತಳಿ. ಹಿಂದೆಯೆಲ್ಲಾ ಒಂದು ದೊಡ್ಡ ಜಲ್ಲೆ ಇಟ್ಕೊಂಡು ಒಂದೇ ಕಾಯಿ ತಗೊಂಡು, ಹದ ಕೊಟ್ಟು ತೆಗೀಬೇಕಾಗಿತ್ತು. ಕಟಾವು ಮಾಡೋದ್ರಲ್ಲಿ ಶಿಸ್ತು ಇತ್ತು. ಆಗ್ಲೂ ಅಡಿಕೇನಾ ಬೇಯಿಸ್ತಾ ಇದ್ವಿ. ಶಿವಮೊಗ್ಗದ ಮಾರ್ಕೆಟ್ ಇತ್ತು. ಬೆಳ್ಳೂರು, ನಾಗಮಂಗಲ, ಅಜ್ಜಂಪುರ, ಹಾಸನದಿಂದ ವ್ಯಾಪಾರಸ್ಥರು ಬಂದು ತಗೊಂಡು ಹೋಗ್ತಾ ಇದ್ರು. ನಾವು ೮-೧೨ ಚೂರು ಮಾಡ್ತಿದ್ದಿವಿ. ಈ ಚೂರು ತುಮಕೂರು, ಹಾಸನಕ್ಕೆ ಹೋಗ್ತಿತ್ತು. ಎರಡು ಭಾಗ (ಹೋಳು/ಬಟ್ಟಲು ಅಡಿಕೆ) ಮಾಡಿದ್ದು ಶಿವಮೊಗ್ಗಕ್ಕೆ ಹೋಗ್ತಿತ್ತು. ಈಗ ಹೆಚ್ಚಾಗಿ ಉಂಡೆ. ನಾವು ಅಡಿಕೇನಾ ಮೂರು, ನಾಲ್ಕು ಸಾರಿ ಕೊಯ್ತಾ ಇದ್ದಿವಿ. ಈಗ ಒಂದೇ ಕೊಯ್ಲು.

ಅಡಿಕೆ ತುಡಿಕೆ ಬಗ್ಗೆ ಹೇಳಿ.

(ನಗುತ್ತಾ....) ಅಡಿಕೆ ಹಂಗಾಮು ಬಂದ್ರೆ ಹಬ್ಬದ ವಾತಾವರಣ. ನಮ್ಮಲ್ಲಿ ೧೦೦ ಜನ ಅಡಿಕೆ ತುಡಿಕೆಗೆ ಇದ್ರು. ೧೦ ಗಾಡಿ ಕಾಯಿ ಉಳೀತಿರಲಿಲ್ಲ. ಖುಷಿ ಆಗ್ತಿತ್ತು. ಸಿಪ್ಪೆ ಬಿಡಿಸ್ಲಿಕ್ಕೆ ಕತ್ತೀನ ಬಳಸ್ತಾ ಇದ್ದಿವಿ. ನೇರಳೆ, ಗಂಧ, ಬೇಲದ ಮರಗಳ ಚಕ್ಕೆ, ಅಡಿಕೆ, ವಿಳ್ಳೆದೆಲೆಯನ್ನು ಸುಣ್ಣ ಹಾಕಿ ಜಜ್ಜಿ, ಅರಗು, ಕಾಚು, ಅರಿಶಿನ - ಇದನ್ನೆಲ್ಲಾ ಹಾಕಿ ಬೇಯಿಸಿ ತೊಗರನ್ನು ತಯಾರಿಸ್ತಿದ್ದಿವಿ. ಅಡಿಕೇನ ಬೇಯಿಸಿದಾಗ ಸಿಗೋ ರಸದಲ್ಲಿ ತಿಳೀನ ತೆಗೆದು ತಳದಲ್ಲಿರೋದನ್ನು ಎಸೆದು ಮುಂದಿನ ವರ್ಷಕ್ಕೂ ಇಡಬಹುದು. ಇದು ಗಟ್ಟಿಯಾದ್ರೆ ಬೇಸಿಗೆಯಲ್ಲಿ ನೀರು ಹಾಕ್ತಾ ಇರ್ಬೇಕು, ಒಂದ್ಸಾರಿ ಕುದಿಸಿದ್ರೂ ನಡೆಯುತ್ತೆ. ಗಟ್ಟಿಯಾದಾಗ ಸಿಗೋ ಪುಡೀನ ಬಟ್ಟೆಯಲ್ಲಿ ಕಟ್ಟಿಟ್ಟು ಬಳಸಬಹುದು. ಚೂರಿಗೆ ಬೇಗ ಬಣ್ಣ ಬರುತ್ತೆ. ತಾಮ್ರದ ಹಂಡೆ ಬಾಳಿಕೆ ಬರುತ್ತೆ. ಸೌದೆನೇ ಬಳಸ್ತೀವಿ. ಒಣಗಿದ ಅಡಿಕೆ ಸಿಪ್ಪೆ, ತೆಂಗಿನ ಕಾಯಿ ಮಟ್ಟೆಯೂ ಒಳ್ಳೆಯದು. ಸರಿಯಾಗಿ ಬೇಯಿಸಿ, ಒಣಗಿಸಿದ್ರೆ ಒಂದು ವರ್ಷ ಇಟ್ಟು ಮಾರಬಹುದು. ಇಲ್ಲದಿದ್ರೆ ಬಣ್ಣ ಹೋಗುತ್ತೆ, ಕುಟ್ಟೆ ಹೊಡೆಯುತ್ತೆ. ಚೂರು ಅಡಿಕೇನ ಮೂರು ದಿನ, ಹೋಳು ಅಡಿಕೇನ ನಾಲ್ಕು ದಿನ, ಉಂಡಡಿಕೇನ ೮-೧೦ ದಿನ ಬಿಸಿಲಿನಲ್ಲಿ ಒಣಗಿಸಬೇಕು. ಪಸಿ ಇರಬಾರ್ದು.

ಅಡಿಕೇನ ಹೇಗೆ ಬೆಳೆಸಿದ್ರಿ, ಈಗ ಹೇಗೆ ಪೋಷಣೆ ಮಾಡ್ತಾ ಇದೀರಿ?

ಹಿಂದೆ ಬೋರ್‌ವೆಲ್‌ಗಳು ಇರ್ಲಿಲ್ಲ. ಕೈಏತ, ಕಪಿಲೆ(ಎತ್ತುಗಳಿಂದ ನೀರು ಎತ್ತೋದು) ಇದ್ದವು. ೧೯೬೦ರ ಬಳಿಕ ಮೇಲ್ದಂಡೆ ನಾಲೆಯ ನೀರು ಬಂತು. ನಾಲಾ ನೀರು ಗದ್ದೆಗೆ, ತೋಟಕ್ಕೆ ಬೋರ್ ಇದೆ. ೧೮ ವರ್ಷ ಆಯ್ತು ಕೊರೆಸಿ. ಆಳ ೧೮೦ ಅಡಿ ಇದೆ. ರಿಗ್ ಬೋರ್. ೧೯೫೫ರಲ್ಲಿಕರೆಂಟ್ ತಗೊಂಡೆ.

ಅಡಿಕೆಗೆ ಏನು ಕೊಡ್ತೀರಿ? ಬೆಳೆ ಈಗ ಹೇಗಿದೆ?

ಐದು ಎಕರೆ ಜಮೀನಿನಲ್ಲಿ ಕಾಲು ಭಾಗ ಹೋಗಿದೆ. ಗಾಳಿಗೆ ಬಿದ್ದು, ಅಣಬೆ ರೋಗ, ಕೊಳವೆ ರೋಗಕ್ಕೆ ತುತ್ತಾಗಿ ಮರ ಹೋಗಿದಾವೆ.

ಈಗ ಒಂದು ಎಕರೆಗೆ ೪೦೦ ಮರ ಇರ್ಬೇಕು. ತೋಟದಲ್ಲಿ ಈ ಹಿಂದೆ ತೆಗೆದಿದ್ದ ಭಾವಿಗಳು ಇದಾವೆ. ಅವನ್ನ ಮುಚ್ಬೇಕು. ಹೊಸ ಮಣ್ಣು, ಸಗಣಿ ಗೊಬ್ಬರ ಕೊಡ್ತೀವಿ. ಆದರೆ ಇದು ಸಾಲದು. ಸಗಣಿ ಗೊಬ್ಬರಾನೂ ಈಗ ಸರಿ ಇಲ್ಲ. ಬರೀ ಮಣ್ಣೇ ಇರುತ್ತೆ. ಹೆಸರಿಗೆ ಸಗಣಿಗೊಬ್ಬರ, ಅದರ ಜೊತೆ ಕರೀಮಣ್ಣನ್ನ ಬೆರೆಸಿ ತರ್ತಾರೆ. ಸುಫಲಾ ಎನ್ನುವ ರಾಸಾಯನಿಕ ಗೊಬ್ಬರಾನ ಬಳಸ್ತೀವಿ. ಈಗ ದನಕರುಗಳಿಲ್ಲ. ಮನೆ ಬಳಕೆಗೆ ಹಾಲನ್ನು ತಗೊಂತೀವಿ. ನೀರನ್ನು ಪೈಪ್ ಮೂಲಕ ಕೊಡ್ತೀವಿ. ಈಗ ಮುತುವರ್ಜಿ ಕಮ್ಮಿ. 'ಕೊಳೆ ಇಲ್ಲದ ಮನೆ' ಎಂಬ ಹಾಗೆ ತೋಟ ಪಾಳು ಬಿದ್ದಿರಬಾರದು ಎಂದು ಮಾಡ್ಕೊಂಡು ಹೋಗ್ತಾ ಇದೀನಿ.

ಕೊನೆಗೆ ಒಂದು ಪ್ರಶ್ನೆ, ತಪ್ಪು ತಿಳಿಯಬೇಡಿ, ಇಷ್ಟೆಲ್ಲಾ ದುಡಿದು ಮುಂದೆ ಬಂದ ನೀವು ಈ ಜಮೀನು, ಈ ತೋಟದ ಬಗ್ಗೆ ಏನು ಯೋಚನೆ ಮಾಡಿದೀರಿ?

ನೋಡೀ.... ನಿಮ್ಮ ಪ್ರಶ್ನೆ ಅರ್ಥವಾಯ್ತು. ನಾನು ಕಷ್ಟಪಟ್ಟು ಈ ಜಮೀನನ್ನು ಉಳಿಸಿಕೊಂಡಿದೀನಿ. ಇನ್ನು ನನಗೆ ನೋಡೋ ಶಕ್ತಿ ಕಮ್ಮಿ ಆಯ್ತು. ಮಕ್ಕಳು ಇಲ್ಗೆ ಬಂದು ನೆಲೆಸುವ ಸಂದರ್ಭ ಕಾಣುತ್ತಿಲ್ಲ. ನಾನಾಗೇ ತೋಟ ಕೊಡ್ಲಿಕ್ಕೆ ಹೋದ್ರೆ ಬೆಲೆ ಬರಲ್ಲ. ಬೇರೆಯವರು ಆಸೆ ಪಟ್ಟಾಗ ಮಾತ್ರ ಮೌಲ್ಯ ಸಿಗುತ್ತೆ. ಒಳ್ಳೆ ಬೆಲೆ ಬಂದ್ರೆ ಕೊಡೋಣ ಅಂತ ನಿರ್ಧರಿಸಿದೀನಿ.

ಶಾಲೆಯ ಸ್ಥಾಪನೆ

ದೊಡ್ಡಮಗ್ಗೆಯಲ್ಲಿ ಪ್ರೌಢಶಾಲೆಯನ್ನು ಹುಟ್ಟುಹಾಕುವಲ್ಲಿ ಶ್ರೀಲಕ್ಷ್ಮೀನಾರಾಯಣರವರು ಶ್ರಮಪಟ್ಟಿದ್ದಾರೆ. 'ಗಂಡು ಹುಡ್ಗರಿಂದ ಹೆಣ್ಣು ಮಕ್ಕಳಿಗೆ ಆಗೋ ತೊಂದ್ರೆ ತಪ್ಪಿಸಲಿಕ್ಕೆ' ಈ ಶಾಲೆಯನ್ನು ಶುರು ಮಾಡಿದೆ ಎನ್ನುವ ಇವರು ೧೯೬೭ರಲ್ಲಿ ಈ ಕೆಲಸವನ್ನು ಕೈಗೆತ್ತಿಕೊಂಡರು. 'ನನಗೆ ಊರಲ್ಲಿ ಒಳ್ಳೆ ಮರ್ಯಾದೆ ಇತ್ತು, ರಾಜಕೀಯವಾಗಿ ಕೆಲಸ ಮಾಡ್ಲಿಲ್ಲ, ನನ್ಗೆ ಬೇಕಾಗಿರಲಿಲ್ಲ. ಆದ್ರೆ ಅವ್ರ ಹಿಂದೆಯೇ ಸ್ಟ್ರಾಂಗ್ ಆಗಿ ಕೆಲ್ಸ ಮಾಡ್ತಿದ್ದೆ' ಎನ್ನುವ ಲಕ್ಷ್ಮೀನಾರಾಯಣರವರು ಊರಿನವರನ್ನು ಶಾಲೆಯ ನಿರ್ಮಾಣ ಕೆಲಸದಲ್ಲಿ ತೊಡಗಿಸಿದರು. 'ಮೂವತ್ತು ರೂಪಾಯಿ ಕಡ್ಲೆಪುರಿ, ಪಾನಕ ಕೊಟ್ಟು ಮನೆಗೊಂದು ಆಳು, ಹಾರೆ, ಗುದ್ಲಿ ಪಡೆದು ಪಾಯ ತೆಗೆಸಿದ್ದು. ವಿವಿಧ ಇಲಾಖೆಗಳಿಂದ ನೆರವು ಸಿಕ್ಕಿತು. ಆಗ ಸಿಮೆಂಟ್ ಒಂದು ಚೀಲಕ್ಕೆ ಎಂಟು ರೂಪಾಯಿ ಇತ್ತು. ನಮ್ಮೂರಿನ ಹನುಮಂತೇಗೌಡ್ರು ಮತ್ತು ಜವರೇಗೌಡ್ರು ನಾಲ್ಕು ಚಿಲ್ರೆ ಎಕರೆ ಜಾಗಾನ ದಾನವಾಗಿ ಕೊಟ್ರು. ಅವ್ರಿಗೆ ಕೆರೆ ಹತ್ರ ಜಮೀನನ್ನು ಮಾಡಿಕೊಟ್ಟೆವು' ಎಂದು ನೆನಪು ಮಾಡಿಕೊಳ್ಳುತ್ತಾರೆ.

'ಶ್ರೀಲಕ್ಷ್ಮೀನಾರಾಯಣ ಸ್ವಾಮಿ ಎಜುಕೇಶನ್ ಸೊಸೈಟಿ ಹೈಸ್ಕೂಲ್'ನ ಅಧ್ಯಕ್ಷರಾಗಿ ೨೫ ವರ್ಷಗಳ ಕಾಲ ಶ್ರೀಲಕ್ಷ್ಮೀನಾರಾಯಣರವರು ದುಡಿದರು. ಆಮೇಲೆ ಸರ್ಕಾರಕ್ಕೆ ಬಿಟ್ಟುಕೊಟ್ರು. ಮೂವರು ಭಾವಂದಿರ ಹೆಸರಿನಲ್ಲಿ ಮೂರು ಕೋಣೆಗಳನ್ನು ಕಟ್ಟಿಸಿದ್ದಾರೆ. ೮, ೯ ಮತ್ತು ೧೦ನೇ ತರಗತಿಯಲ್ಲಿ ಓದುತ್ತಿರುವ ಕೆಲವು ಬಡ ಮಕ್ಕಳಿಗೆ ಠೇವಣಿಯಿಂದ ಬರುತ್ತಿರುವ ೨೫೦೦ ರೂಪಾಯಿ ಬಡ್ಡಿ ಹಣವನ್ನು ವಿನಿಯೋಗಿಸುತ್ತಿದ್ದಾರೆ. ಸಾರ್ವಜನಿಕರ ಖರ್ಚಿನಲ್ಲಿ ಈಗ್ಗೆ ೨೦ ವರ್ಷಗಳ ಹಿಂದೆಯೇ ಇಲ್ಲಿ ರಂಗಮಂದಿರವನ್ನು ಕಟ್ಟಿಸಿದರು.

ಮಕ್ಕಳನ್ನು ನೋಡಲು ಆಗಾಗ್ಗೆ ಅಮೇರಿಕ ದೇಶಕ್ಕೆ ಹೋಗಿ ಬರುವ ಇವರು ಅಲ್ಲಿನ ಕೃಷಿಕರ ಬದುಕನ್ನು ಕಂಡು ತಮ್ಮ ಅನಿಸಿಕೆಗಳನ್ನು ಹಂಚಿಕೊಂಡರು. 'ನಮ್ಮಲ್ಲಂತೆ ತುಂಡು ಜಮೀನು ಇಲ್ಲ. ಎಲ್ರದೂ ದೊಡ್ಡ ಹಿಡುವಳಿ. ಎಲ್ಲದೂ ಯಾಂತ್ರೀಕರಣ. ಒಬ್ಬೊಬ್ಬ ೨೦೦-೩೦೦ ಹಸು ಸಾಕ್ತಾನೆ. ಋತು ಸಂಬಂಧಿ ಹುಲ್ಲನ್ನ ಬೆಳಸ್ತಾನೆ. ನೀರಿಗಾಗಿ ಹೊಂಡ ಇರ್ತಾವೆ. ಶೀತ-ಉಷ್ಣವನ್ನು ದನ ಕಟ್ಟೋ ಕೊಟ್ಟಿಗೆಯಲ್ಲಿ ನಿಯಂತ್ರಿಸ್ತಾರೆ. ಹಾಲು ಕರೀಲಿಕ್ಕೂ ಮೆಶಿನ್. ಆತನೇ ಮಾರ್ತಾನೆ. ಮಧ್ಯವರ್ತಿಗಳ ಹಾವಳಿ ಇಲ್ಲ. ಜಮೀನಿನಲ್ಲೇ ಅಂಗಡಿ ಇರುತ್ತೆ. ಸರ್ಕಾರವೂ ಇವ್ರಿಗೆ ಬೆಂಬಲ ಕೊಟ್ಟಿದೆ' ಎನ್ನುತ್ತಾರೆ. ಆದರೆ ಅಲ್ಲಿರುವ ರೆಡ್ ಇಂಡಿಯನ್ ಜನ ಮಾತ್ರ ಯಂತ್ರಗಳನ್ನು ಬಳಸಲ್ಲ, ಕುದುರೆಗಳಿಂದ ಬೇಸಾಯ ಮಾಡ್ತಾರೆ, ವಿದ್ಯುತ್ತನ್ನೂ ಬಳಸಲ್ಲವಂತೆ.

ಶ್ರೀಲಕ್ಷ್ಮೀನಾರಾಯಣ ಹೇಳುತ್ತಾರೆ

* ವಿಳ್ಳೇದೆಲೆ ತೋಟ ಈಗ ಇದ್ದಿದ್ರೆ ಒಂದು ಕೊಯ್ಲಿಗೆ ಎರಡು ಲಕ್ಷ ರೂಪಾಯಿ ಸಿಗ್ತಿತ್ತು.
* ಒಂದು ಖಂಡಗಾ -೧೬೦ ಸೇರು, ಒಂದು ಕೊಳಗ - ೮ ಸೇರು, ೨೦ ಕೊಳಗ-ಒಂದು ಖಂಡಗಾ

* ಸ್ವಾತಿ ಮಳೆ ಬಂದು ಚಳಿ ಬಿದ್ರೆ ಅಡಿಕೆಯಲ್ಲಿ ಒಳ್ಳೆಯ ತೂಕ.
* ನನ್ಗೆ ಆಸೆಗಳು ಕಮ್ಮಿ, ಕಾರು ಇಟ್ಕೊಂಡಿಲ್ಲ. ಜಮೀನಿಗೆ, ತೋಟಕ್ಕೆ ನಡಕೊಂಡೇ ಬರ್ತ್ತೀನಿ.
* ಗೊರೂರು, ರುದ್ರಪಟ್ಟಣದಲ್ಲಿ ಪೂರ್ವಿಕರ ಗದ್ದೆ ಜಮೀನು ಇತ್ತು. ಆಗ ರತ್ನಚೂಡಿ, ಪುಟ್ಟಭತ್ತ, ಬಂಗಾರಸಣ್ಣ ತಳಿ ಇದ್ದವು. ಆ ಜಮೀನು ಮಾತ್ರ ಗುತ್ತಿಗೆ ಕೊಡ್ತಾ ಇದ್ರು. ಬೆಳೆದವರು ಎಕರೆಗೆ ಎಂಟು ಖಂಡುಗಾ ಕೊಡಬೇಕಾಗಿತ್ತು.
* ತೆಂಗು ೧೦೦ ಮರ ಇವೆ.
* ಮಾವು ೩೦ ಇವೆ. ತಳಿ ರಸಪುರಿ, ಬಾದಾಮಿ. ೮೦ ವರ್ಷದ ಮರಗಳು.
* ಒಂದು ಹೇರು -೨೪೦ ಸೇರು, ೬೦ ಸೇರು- ಒಂದು ಕೊಟ್ನ, ಒಂದೂವರೆ ಖಂಡಗಾ-೧ ಹೇರು.
* ಮಾಗಿ ಕಾಲಕ್ಕೆ ತಲೆನೋವು ಬರುತ್ತೆ, ಮುಸುಕು ಹಾಕಿಕೊಳ್ಳಿ.
* ದನಕರುಗಳನ್ನು ಮೇಯ್ಸಲಿಕ್ಕಾಗಿಯೇ ೨೦ ಎಕರೆ ಬಿಟ್ಟುಕೊಳ್ತಿದ್ವಿ.

ಆರೋಗ್ಯ, ಪತ್ನಿ

ಶ್ರೀಲಕ್ಷ್ಮೀನಾರಾಯಣರವರಿಗೆ ಈಗ ೭೭ ವರ್ಷ ವಯಸ್ಸು. ೩೦ ವರ್ಷದಿಂದ ಸಕ್ಕರೆ ಕಾಯಿಲೆ ಇದೆ. ಹತೋಟಿಯಲ್ಲಿದೆ. 'ನನ್ನ ಮಗನ ಸಲಹೆ ಪಾಲಿಸ್ತೀನಿ, ಶಿಸ್ತಾಗಿ ವರ್ತಿಸ್ತೀನಿ. ಸಕ್ಕರೆ ಕಾಯಿಲೆ ನನ್ನ ತಂದೆಗೆ ಇರಲಿಲ್ಲ. ಆದ್ರೆ ಅಮ್ಮನ ತಂದೆಗೆ ಇತ್ತು. ಭಾವಂದಿರಿಗೆ ಇಲ್ಲ. ಹೆಣ್ಣಿನ ಸಂತತಿಯ ಮೂಲಕ ಬಂತು' ಎನ್ನುತ್ತಾರೆ. ಪತ್ನಿ ೯ನೇ ತರಗತಿ ಓದಿದವರು. ಬೇಗ ಮದುವೆ ಆಯಿತು. ೧೫ನೇ ವಯಸ್ಸಿನಲ್ಲೇ ಹಿರೀಮಗ ಹುಟ್ಟಿದರು. ಆಗ ಲಕ್ಷ್ಮೀನಾರಾಯಣರವರಿಗೆ ೧೯ ವರ್ಷ ವಯಸ್ಸು. ಪತ್ನಿಗೆ ಈಗ ೭೪ ವರ್ಷ ವಯಸ್ಸು. 'ತಾಳ್ಮೆ, ವಿವೇಕ, ಸೌಜನ್ಯ ಇದೆ. ಕುಟುಂಬವನ್ನು ಬೆಳೆಸಲು ಶ್ರಮ ತಗೊಂಡಿದಾರೆ. ಈಗಲೂ ಅಡುಗೆ ಮಾಡ್ತಾರೆ' ಎಂದು ಲಕ್ಷ್ಮೀನಾರಾಯಣರವರು ನುಡಿದರು. ಇವರದು ತೊಟ್ಟಿಮನೆ, ಮಣ್ಣಿನದು. ತೋಟಕ್ಕೆ ದುಡೀಲಿಕ್ಕೆ ಜನರಿಗೆ ಕೊರತೆ ಇಲ್ಲ. 'ಆದರೆ ಕಟ್ಟುನಿಟ್ಟಾಗಿ ಕೆಲ್ಸ ಮಾಡ್ಸೋಹಾಗಿಲ್ಲ'. ಇಂಗ್ಲಿಷ್‌ನಲ್ಲಿ ಸರಾಗವಾಗಿ ಮಾತನಾಡುವ ಪುಟ್ಟಸಕ್ಕರೆಯವರು ಈಗ ಓದೋದನ್ನು, ಬರಿಯೋದನ್ನು ನಿಲ್ಲಿಸಿದ್ದಾರೆ. ಕಣ್ಣಿನ ತೊಂದರೆ ಇದಕ್ಕೆ ಕಾರಣವಾಗಿದೆ.

ಭಾವಂದಿರ ಬೆಳವಣಿಗೆ

ಶ್ರೀಯುತ ಲಕ್ಷ್ಮೀನಾರಾಯಣರವರ ಭಾವಂದಿರು ಅಮೇರಿಕದಲ್ಲಿ ಇದ್ದಾರೆ. ಮೂವರೂ ಇಂಜಿನಿಯರ್ ಆಗಿದ್ದಾರೆ. ಅವರು ಅಲ್ಲಿಗೆ ಹೋಗಿ ೪೦ ವರ್ಷ ಆಯ್ತು. ತಾಂಡವ ಎಸ್ ಮಗ್ಗೆ, ನಟೇಶ್ ಎಸ್. ಮಗ್ಗೆ ಮತ್ತು ಶಂಕರ್ ಎಸ್ ಮಗ್ಗೆ ಇವರ ಭಾವಂದಿರು. 'ಇವರಿಂದಲೇ ನನ್ನ ಮಕ್ಕಳು ಉದ್ಧಾರವಾದ್ರು' ಎಂದು ಲಕ್ಷ್ಮೀನಾರಾಯಣರವರು ನೆನೆಯುತ್ತಾರೆ. ಇವರ ಮಾವ ಎಂ.ಎನ್.ಸುಬ್ರಹ್ಮಣ್ಯಂ, ಎಂ.ಎ., ಬಿ.ಟಿ., ಎಲ್.ಎಲ್.ಬಿ. ಮಾಡಿದವರು. ಮುಖ್ಯ ಶಿಕ್ಷಕರಾಗಿ ಬೆಂಗಳೂರಿನಲ್ಲಿ ಕೆಲಸ ಮಾಡುತ್ತಿದ್ದ ಅವರು ೪೧ನೇ ವಯಸ್ಸಿನಲ್ಲಿ ತೀರಿಕೊಂಡರು. ಆಗ ಲಕ್ಷ್ಮೀನಾರಾಯಣರವರಿಗೆ ಜವಾಬ್ದಾರಿ ಹೆಚ್ಚಾಯಿತು. 'ಮಾವನ ಮೂವರು ಮಕ್ಕಳ ವಿದ್ಯಾಭ್ಯಾಸವನ್ನೂ ನೋಡಿಕೊಂಡೆ. ನನಗಿಂತ ಅವರೆಲ್ಲಾ ವಯಸ್ಸಿನಲ್ಲಿ ಚಿಕ್ಕವರು. ಅದರಿಂದಲೇ ದೊಡ್ಡವನಾಗಿ ಬೆಳೆದೆ. ಈಗಲೂ ಮರ್ಯಾದೆ ಇದೆ' ಎಂದು ಲಕ್ಷ್ಮೀನಾರಾಯಣರವರು ನುಡಿಯುತ್ತಾರೆ. ಬೆಂಗಳೂರಿನಲ್ಲಿ ತಾಂತ್ರಿಕ ಶಿಕ್ಷಣ ಓದುತ್ತಿದ್ದಾಗ ಇವರ ಭಾವಂದಿರು ಸೈಕಲ್‌ನಲ್ಲಿ ಕಾಲೇಜಿಗೆ ಹೋಗಿ ಬರುತ್ತಿದ್ದರಂತೆ. ಕಿರಿಯ ಭಾವಮೈದುನರಾದ ಶಂಕರ್ ಎಸ್. ಮಗ್ಗೆ ರವರಿಗೆ ಇವರು ತಮ್ಮ ಹಿರಿಮಗಳನ್ನು ಕೊಟ್ಟು ಮದುವೆ ಮಾಡಿದ್ದಾರೆ. ಅಮೇರಿಕಕ್ಕೆ ಮೊದಲು ನಟೇಶ್ ಹೋದರು. ನಂತರ ಅಣ್ಣ ತಮ್ಮಂದಿರನ್ನು ಕರೆಸಿಕೊಂಡರು.

ಆ) ಶ್ರೀನಿವಾಸರಿಗೆ ಸಣ್ಣ ಹಿಡುವಳಿಯಲ್ಲೂ ನೆಮ್ಮದಿ

ನಾಲ್ಕು ಎಕರೆ ಹಿಡುವಳಿಯಲ್ಲಿ ಚೊಕ್ಕಟವಾಗಿ, ತೃಪ್ತಿಯಾಗಿ ಜೀವನ ಮಾಡುತ್ತಿರುವ ಬಿ.ಎಸ್. ಶ್ರೀನಿವಾಸರ ಜಮೀನಿನಲ್ಲಿ ಹುಣಿಸೆ ಮರಗಳೂ ಇವೆ.

ಬಿ.ಎಸ್.ಶ್ರೀನಿವಾಸ ಅವರ ಕೃಷಿ ಬದುಕು ನೋಡಲು ಎರಡು ಗಂಟೆಗೆ ತೋಟ ಪ್ರವೇಶ ಮಾಡಿದೆವು. ಸಣ್ಣ ಹಿಡುವಳಿಯಲ್ಲಿ ಸಂತೃಪ್ತಿಯ ಮುಖದಿಂದ ಶ್ರೀನಿವಾಸರವರು ತೋಟವನ್ನೂ, ಹುಣಿಸೆಮರ ಗಳನ್ನೂ, ಭತ್ತದ ಪೈರನ್ನೂ ತೋರಿಸಿದರು. ಅಲ್ಲೇ ಹಳ್ಳಿಕಾರ್ ಹಸುಗಳು ಮೇಯುತ್ತಿದ್ದವು. ವಿಚಾರ ಸಂಗ್ರಹಿಸಲು ಮರದ ನೆರಳಿನಲ್ಲಿ ಹುಲ್ಲಿನ ಮೇಲೆ ಕೂತೆವು.



ಹಳ್ಳಿಕಾರ್ ಹಸು-ಆನಂದದ ಬದುಕು: ಬಿ.ಎಸ್.ಶ್ರೀನಿವಾಸ:ದೊಡ್ಡಮಗ್ಗೆ

ನಿಮ್ಮ ತಂದೆ, ತಾಯಿ, ಅಣ್ಣ ತಮ್ಮಂದಿರ ಬಗ್ಗೆ ಹೇಳಿ.

ನನ್ನ ತಂದೆ ಬಿ.ಎಸ್.ಸುಬ್ಬರಾಯರು, ತಾಯಿ ಪಾರ್ವತಮ್ಮ. ನನ್ನ ತಂದೆಗೆ ಐದು ಜನ ಮಕ್ಕಳು. ಮೂರು ಹೆಣ್ಣು, ಎರಡು ಗಂಡು. ನನ್ನ ತಮ್ಮ ಹಾಸನದ ಎನ್.ಡಿ.ಆರ್.ಕೆ. ಕಾಲೇಜಿನಲ್ಲಿ ಉಪನ್ಯಾಸಕ. ಆತನ ಹೆಸರು ಬಿ.ಎಸ್.ಮಂಜುನಾಥ. ನನ್ನ ಹೆಂಡತಿ ನಾಗರತ್ನ. ನಮಗೆ ಮಕ್ಕಳು ಆಗಿಲ್ಲ.

ಏನು ನಿಮ್ಮ ಹಿಡುವಳಿ? ಹಿಂದೆ ಏನು ಬೆಳೀತಾ ಇದ್ರಿ? ಈಗ ಏನೇನು ಬೆಳೀತಾ ಇದೀರಿ?

ಇದೆಲ್ಲಾ ಜಮೀನೂ ತಂದೆಯಿಂದ ಬಂದದ್ದು. ಮುಕ್ಕಾಲು ಎಕ್ರೆ ತೋಟ, ಒಂದು ಎಕ್ರೆ ಖುಷ್ಕಿ. ಈಗ ತೋಟ ಒಂದೂವರೆ ಎಕ್ರೆ ಆಗಿದೆ. ತಮ್ಮನ ತೋಟವನ್ನು ಖರೀದಿಸಿದೆ. ಒಟ್ಟು ನನ್ಗೆ ಇರೋದು ನಾಲ್ಕು ಎಕರೆ ಹಿಡುವಳಿ. ಇದೆಲ್ಲಾ ಹಳೇ ತೋಟ. ಸುತ್ತೂ ತೆಂಗು ಇದೆ. ಭತ್ತ, ಕಿರಾಣಿಯನ್ನು ಬೇಸಿಗೆಯಲ್ಲಿ ಬೆಳೀತೀನಿ.



ತೋಟದಲ್ಲೂ ದನಕರು ಕಟ್ಟಲು ಇರುವ ಗುಡಿಸಲು:ದೊಡ್ಡಮಗ್ಗೆ

ಏನು ನಿಮ್ಮ ವಿದ್ಯಾಭ್ಯಾಸ? ತಂದೆ-ತಾಯಿ ಇದಾರಾ?

ನಾನು ಓದಿದ್ದು ಎಸ್‌ಎಸ್‌ಎಲ್‌ಸಿ, ಅಪ್ಪ-ಅಮ್ಮ ಇಲ್ಲ.

ಭತ್ತ ಬೆಳೀತೀರಲ್ಲಾ, ಅದರ ಬಗ್ಗೆ ವಿಚಾರ ಹೇಳಿ.

ನಾನು ಬೆಳಿಯೋದು ರಾಜಮುಡಿ, ರಾಜಭೋಗ ಭತ್ತ. ಇವೆರಡೂ ಹೆಚ್ಚುಕಮ್ಮಿ ಒಂದೇ ಅವಧಿಯ ತಳಿಗಳು. ರಾಜಭೋಗದಲ್ಲಿ ಅಕ್ಕಿ ದಪ್ಪ, ಬೀಜಾನೂ ದಪ್ಪ; ಅಕ್ಕಿ ಉದ್ದವಾಗಿರುತ್ತೆ. ಈ ತಳಿಗಳಿಗೆ ಬೆಂಕಿ ರೋಗ ಬರಲ್ಲ. ಕೀಟಗಳೂ ಕಮ್ಮಿ. ಈ ಸಾರಿ ಬೋರ್ ನೀರು ಕೊಟ್ಟು ಬೆಳೆಸಿದೆ. ಆದ್ರೆ ಮಳೆ ಒಂದೆರಡು ಸಾರಿ ಬಂದ ಮೇಲೇನೇ ಒಳ್ಳೆ



ಖಾರವಿಲ್ಲದ ಈ ವಿಳ್ಳೇದೆಲೆ:ದೊಡ್ಡಮಗ್ಗೆ

ಬೆಳವಣಿಗೆ ಕಾಣಿಸ್ತು. ಹೈಬ್ರಿಡ್ ಅಥವಾ ಆಧುನಿಕ ತಳಿಗಳನ್ನು ನಾನು ಒಂದೆರಡು ಸಾರಿ ಬಳಸ್ದೆ. ಬೆಳೆ ಕೈಕೊಟ್ಟಿತು. ಒಂದು ಎಕರೆಗೆ ಒಂದು ಗಾಡಿ ಹುಲ್ಲೂ ಸಿಗಲಿಲ್ಲ. ಎರಡೇ ಮೂಟೆ ಭತ್ತ ಸಿಕ್ತು. ರಾಜಮುಡೀದು ಹಾಗಲ್ಲ. ಇಳುವರಿಯಂತೂ ಖಚಿತ. ಎಕ್ರೆಗೆ ೧೫-೨೦ ಚೀಲ ಭತ್ತ, ನಾಲ್ಕು ಗಾಡಿ ಹುಲ್ಲು ದೊರೆಯುತ್ತೆ. ಈ ಸಾರಿ ಸುತ್ತಮುತ್ತು ಭತ್ತ ಇಲ್ಲದ್ದಕ್ಕೆ ಹಕ್ಕಿ ಕಾಟ ಹೆಚ್ಚಾಯ್ತು. ಹಾಲುಗಟ್ಟುವಾಗಲೇ ಕಾಟ ಹೆಚ್ಚು. ಆಳು ಇಟ್ಟು ಕಾಯಿಸೋದಕ್ಕಿಂತ ಹಾಗೇ ಹಕ್ಕಿ ತಿಂದು ಬಿಟ್ಟದ್ದನ್ನು ಬಳಸ್ತೀವಿ. ಅವುಗಳಿಗೂ ಆಹಾರ ಬೇಕಲ್ವಾ?

ಯಾವಾಗ ನಾಟಿ ಮಾಡ್ತೀರಿ, ಹೇಗೆ ನಾಟಿ ಮಾಡ್ತೀರಿ?

ಭತ್ತದ ಬೀಜಾನಾ ನೀರಲ್ಲಿ ನೆನೆಸಿ ಹುಲ್ಲು ಬೀಜ ತೆಗೆದು ಪಟ ಮಾಡಿ ಚೆಲ್ತೀವಿ. ಗೊಬ್ಬರ, ಮಣ್ಣು ಹಾಕಿ ಬೆಳಿಸ್ತೀವಿ. ಗೌರಿ ಹಬ್ಬ ಇನ್ನೂ ೧೫ ದಿನ ಇದೇ ಅನ್ನುವಾಗ ೨೫-೩೦ ದಿನದ ಸಸೀನ ನೆಡ್ತೀವಿ. ಬೆಳೆ ಸಂಕ್ರಾಂತಿಗೆ ಕಟಾವಿಗೆ ಬರುತ್ತೆ. ಸುಮಾರು ಐದೂವರೆಯಿಂದ ಆರು ತಿಂಗಳ ಬೆಳೆ. ಮನೆ ಬಳಕೆಗೆಂದೇ ಇದನ್ನ ಬೆಳೆಯೋದು, ತಮ್ಮನಿಗೂ ಕೊಡ್ತೀನಿ.

ಇಲ್ಲೆಲ್ಲಾ ಹಸುಗಳು ಮೇಯ್ತಾ ಇದಾವಲ್ಲಾ, ಇದರ ಬಗ್ಗೆ ಹೇಳಿ?

ಇವೆಲ್ಲಾ ಹಳ್ಳಿಕಾರ್ ಹಸುಗಳು. ಭತ್ತ ಮಾಡ್ಲಿಕ್ಕೆ ಉಳುಮೆಗಾಗಿ ಇವನ್ನ ಬಳಸ್ತೀನಿ. ಗೊಬ್ಬರಾನೂ ಸಿಗುತ್ತೆ, ಹಾಲೂ ದೊರೆಯುತ್ತೆ. ಇವನ್ನ ಸಾಕೋದು ಸುಲಭ.

ಅಡಿಕೆ ಬಗ್ಗೆ ಹೇಳಿ

ಒಂದೂವರೆ ಎಕರೆ ವಿಸ್ತೀರ್ಣದಲ್ಲಿ ಅಡಿಕೆ ಇದೆ. ೬೦೦ ಮರ ಇವೆ. ಹಳೇ ತೋಟ. ೮-೧೦ ಕ್ವಿಂಟಾಲ್ ಬೇಯಿಸಿದ ಅಡಿಕೆ ಸಿಗುತ್ತೆ. ನೀರಿಗಾಗಿ ತೆರೆದ ಭಾವಿ, ಕೊಳವೆ ಭಾವಿ ಇವೆ. ಪಕ್ಕದಲ್ಲಿರುವ ಕೆರೆಯಲ್ಲಿ ಮೂರು ವರ್ಷದಿಂದ ನೀರಿಲ್ಲ. ಕೆರೆಯಲ್ಲಿ ನೀರು ಇದ್ರೆ ತೋಟ ತಂಪಾಗಿರುತ್ತೆ. ಇಲ್ಲದಿದ್ರೆ ಎಟ್ಟೆ ಬರುತ್ತೆ, ಫಸಲು ಕಮ್ಮಿಯಾಗುತ್ತೆ, ಅದರಿಂದಲೇ ಬೋರ್ ಕೊರೆಸ್ದೆ. ೧೩೦ ಅಡಿ ಆಳ ಅಷ್ಟೆ, ಆದ್ರೂ ಕರೆಂಟಿನ ಸಮಸ್ಯೆ. ಕೊಳವೆ ಹಿಡಿದು ನೀರು ಉಣಿಸ್ತೀನಿ. ಎರಡು ಮರಗಳ ಮಧ್ಯ ಗುಂಡಿ ತೆಗೆದು ಗೊಬ್ಬರ, ಮಣ್ಣು ಕೊಟ್ಟು ನೀರು ಕೊಡ್ತೀನಿ.



ಹುಣಸೆಯಲ್ಲಿ ಹುಬ್ಬೇರಿಸುವಷ್ಟು ಫಸಲು:ದೊಡ್ಡಮಗ್ಗೆ

ಅಡಿಕೆಗೆ ಗೊಬ್ಬರದ ಪೂರೈಕೆ ಹೇಗೆ?

ಅಡಿಕೆ ಬೆಳೆಯೋರೆಲ್ಲ ಸುಫಲಾ ರಾಸಾಯನಿಕ

ಗೊಬ್ರಾನ ಬಳಸ್ತಾರೆ. ಆದ್ರೆ ನಾನು ಹಾಕಲ್ಲ. ಯಾಕೇಂದ್ರೆ, ಒಂದು ಸಾರಿ ಈ ಗೊಬ್ರಾನ ಹಾಕಿದ್ರೆ, ಹಾಕ್ತಾನೇ ಇರ್ಬೇಕು. ಇಲ್ಲದಿದ್ರೆ ಬೆಳೆ ಡೌನ್. ಅದಕ್ಕೆ ನಾನು ಸಗಣಿಗೊಬ್ಬರ, ಹೊಂಗೆ ಹಿಂಡಿ, ಬೇವಿನ ಹಿಂಡಿ, ಮೀನಿನ ಗೊಬ್ಬರ ಹಾಕ್ತೀನಿ. ಹಿಂಡಿ ಗೊಬ್ಬರಗಳನ್ನು ೧೦ ಕ್ವಿಂಟಾಲ್‌ನಷ್ಟು ಬಳಸ್ತೀನಿ. ವಾರಕ್ಕೆ, ೧೫ ದಿನಕ್ಕೊಮ್ಮೆ ತೋಟಕ್ಕೆ ನೀರು ಕೊಡ್ತೀನಿ.



ಸುಟ್ಟು ಭಸ್ಮವಾಗುತ್ತಿರುವ ತ್ಯಾಜ್ಯ:ದೊಡ್ಡಮಗ್ಗೆ

ಅಡಿಕೆಯಲ್ಲಿ ಈ ಹಿಂದೆ ಏನಾದ್ರೂ ಬೆಳೆ ಇದ್ವಾ?

ಹೌದು, ಬಾಳೆ ಇತ್ತು, ವಿಳ್ಯೆ ಇತ್ತು. ಆದ್ರೆ ಎಟ್ಟೆ ಬಂದು ಹಂಬು ಹೋಯ್ತು. ಜನ ಎಲೇನ ಕಿತ್ತು ಕಿತ್ತು ಹಾಳು ಮಾಡಿದ್ರು. ಬಾಳೆಗೆ ಖಾಯಿಲೆ ಬಂತು. ಅಂಬಾಡಿ ಎಲೆ ಇದ್ರೆ ಜನ ಮುಟ್ಟಲ್ಲ. ತೋಟದಲ್ಲಿ ಬಾಳೇನ ಹೆಚ್ಚು ಬೆಳೀಲಿಕ್ಕೆ ಆಗಲ್ಲ.

ಅಡಿಕೆಗೆ ಅಣಬೆ ರೋಗ ನಿಮ್ಮಲ್ಲಿ ಹೇಗಿದೆ?

ನನ್ನ ತೋಟದಲ್ಲೂ ಅಣಬೆ ರೋಗ ಇದೆ. ವರ್ಷಕ್ಕೆ ೪-೫ ಮರ ಹೋಗುತ್ತೆ. ಮರ ತೆಗೆದು, ಅಲ್ಲಿರೋ ಮಣ್ಣನ್ನು ಹೊರಗೆ ಹಾಕ್ತೀನಿ. ರೋಗ ಹೆಚ್ಗೆ ಇಲ್ಲ. ೩೦ ತೆಂಗಿನ ಮರ ಫಲ ನೀಡ್ತಾ ಇವೆ.

ನಿಮ್ಮ ತೋಟದಲ್ಲಿ ಹುಣಿಸೆ ಮರಗಳು ಇರೋದು ವಿಶೇಷ ಅನ್ನಿಸ್ತಾ ಇದೆ. ಇವುಗಳಿಂದ ನಿಮಗೆ ಅನುಕೂಲ ಇದೆಯಾ?

ಎಂಟು ಹುಣಿಸೆ ಮರ ಇವೆ. ಬೀಜ, ಸಿಪ್ಪೆ ತೆಗೆದು ವರ್ಷಕ್ಕೆ ೮-೧೦ ಕ್ವಿಂಟಾಲ್ ಹಣ್ಣು ಸಿಗುತ್ತೆ. ಬೀಜಾನೂ ಮಾರ್ತೀವಿ. ಹೋದ ವರ್ಷ, ಈ ವರ್ಷ ಬೆಲೆ ಕಮ್ಮಿ ಇರೋದ್ರಿಂದ ಹೇಳಿಕೊಳ್ಳುವ ಲಾಭ ಇಲ್ಲ. ಆದ್ರೆ ಇದಕ್ಕೆ ನೀರು ಕೊಡೋ ಅಗತ್ಯ ಇಲ್ಲ. ಗೊಬ್ಬರ ಕೊಡ್ಬೇಕು ಅನ್ನೋ ಹಾಗಿಲ್ಲ. ಇದರಿಂದ ಹೊರೆಯೇನೂ ಇಲ್ಲ. ಆಳು - ಕಾಳು ಖರ್ಚು ಹೆಚ್ಚಾಗಿರೋದ್ರಿಂದ ಹಣ್ಣಿನ ಬೆಲೆ ಸುಧಾರಣೆ ಆಗ್ಬೇಕು.

ಹುಣಿಸೆ ಮರಗಳು ಫೆಬ್ರವರಿಯಲ್ಲಿ ಎಲೆ ಉದುರಿಸಿ ತಕ್ಷಣ ಚಿಗುರುತ್ತೆ. ಬೇಸಿಗೆಯಲ್ಲಿ ಒಳ್ಳೆಯ ನೆರಳು. ಜನವರಿಯಲ್ಲಿ ಹಣ್ಣು ಸಿಗುತ್ತೆ. ಹಣ್ಣು ಕೆಡವಲಿಕ್ಕೆ ಆಳಿಗೆ ೧೦೦ ರೂ, ಹಣ್ಣು ಬಿಡ್ಸಲಿಕ್ಕೆ (ಬೀಜ, ಸಿಪ್ಪೆ, ನಾರು) ಹೆಣ್ಣಾಳಿಗೆ ೨೫-೩೦ ರೂಪಾಯಿ ಕೊಡ್ಬೇಕು.

ನಾವು ಕಂಡದ್ದು, ನಮಗನಿಸಿದ್ದು:

* ಶ್ರೀನಿವಾಸರವರ ತೋಟದಲ್ಲಿ ಕೆಲವು ಬೇರೆ ಮರಗಳೂ ಬೆಳೆದಿವೆ. ಹೊಂಗೆ, ಚುಜ್ಜಲು, ಸೊಡ್ಲಿ ಮುಳ್ಳಿನ ಮರ, ಸೌದೆ ಮರಗಳು ಇವೆ.
* ಗೋವುಗಳಿಗೆ ಹುಲ್ಲಿನ ಕೊರತೆ ಇದ್ದಾಗ ತೋಟದಲ್ಲೇ ಹುಲ್ಲಾಕಿ ಮೇಯಿಸಲು ಬಣವೆಯನ್ನು ಹಾಕಿಕೊಂಡಿದ್ದಾರೆ. ಮನೆಯಲ್ಲೂ ಹುಲ್ಲನ್ನು ಶೇಖರಿಸಿಕೊಂಡಿದ್ದಾರೆ.
* ಬದುಕು ಸರಳವಾಗಿದೆ, ಕಸುಬಿನಲ್ಲಿ ತೃಪ್ತಿ ಇದೆ.
* ತೋಟದಲ್ಲಿ ಸಿಗುವ ತ್ಯಾಜ್ಯವನ್ನು ಸುಡದೇ ಬಳಸಿದರೆ ಅದರಿಂದಲೂ ಬೆಳೆಗೆ ಸತ್ವಾಂಶಗಳು ಲಭಿಸುತ್ತವೆ.
* ಅಲ್ಲಲ್ಲಿ ಇರುವ ಮುಳ್ಳು ಕಳ್ಳಿ ಗಿಡಗಳನ್ನು ತೆಗೆದು (ದನಕರುಗಳು ಇರೋದ್ರಿಂದ) ಮೇವು ಕೊಡುವ ಬಹುವಾರ್ಷಿಕ ಮರಗಳನ್ನು (ಉದಾ: ಹಾಲವಾಣ, ನುಗ್ಗೆ, ಸುಬಾಬುಲ್, ಗ್ಲಿರಿಸೀಡಿಯಾ, ಅಗಸೆ, ಇತ್ಯಾದಿ) ಬೆಳೆಯುವುದು ಹೆಚ್ಚು ಸೂಕ್ತವಾದೀತು.

* ಭತ್ತ ಮಾಡುವ ಜಮೀನಿಗೆ ನಾಟಿ ಮಾಡುವ ಮುನ್ನ ಹಸಿರೆಲೆ ಗೊಬ್ಬರಗಳನ್ನು ಕೆಸರಿನೊಂದಿಗೆ ಬೆರಸುವುದರಿಂದ ಮಣ್ಣು ಬಹುದಿನ ಸತ್ವವನ್ನು ಇಟ್ಟುಕೊಂಡಿರುತ್ತದೆ.

* ಹಸುಗಳ ಗಂಜಲವನ್ನು (ಗೋಮೂತ್ರ) ಹತ್ತು ಪಟ್ಟು ನೀರಿನೊಂದಿಗೆ ಭತ್ತಕ್ಕೆ ಸಿಂಪಡಿಸುವುದರಿಂದ ಮತ್ತಷ್ಟು ಉತ್ತಮ ಪರಿಣಾಮಗಳನ್ನು ಕಾಣಬಹುದು.

* ಹುಣಿಸೆ ಮರಗಳ ಅಡಿಯಲ್ಲಿರುವ ಮಣ್ಣನ್ನು ತೆಳುವಾಗಿ ಕೆರೆದುಕೊಂಡು ಅಡಿಕೆಗೆ ಹಾಕುವುದರ ಮೂಲಕ ಉಪಯೋಗ ಕಾಣಬಹುದು.

ಶ್ರೀ ಬಿ.ಎಸ್. ಶ್ರೀನಿವಾಸ ಅವರ ದೂರವಾಣಿ: 08175-252527 ಸಂದರ್ಶನ : 12-12-2002

೩. ನಿಲುವಾಗಿಲಿನಲ್ಲಿ ನಿರಂತರ ಕೃಷಿ

ಕಡಿಮೆ ವಿದ್ಯಾಭ್ಯಾಸವು ನಿಲುವಾಗಿಲು ಗ್ರಾಮದ ನಾಗರಾಜ ಅವರ ಪುತ್ರರಾದ ಲಕ್ಷ್ಮೀಶ ಮತ್ತು ಫಣೀಶ, ಹಾಗೂ ರಘುನಾಥ್‌ರವರು ಕೃಷಿಯಲ್ಲಿ ನಿರಂತರವಾಗಿ ಕೆಲಸ ಮಾಡಲು ಸಹಾಯವಾಯಿತು ಎನ್ನಬಹುದು.



ಎಂ.ಎಸ್.ನಾಗರಾಜ್:ಕುಟುಂಬವರ್ಗದೊಂದಿಗೆ:ನಿಲುವಾಗಿಲು

ದೊಡ್ಡಮಗ್ಗೆಯಿಂದ ಅರಕಲಗೂಡು ತಾಲೂಕು ನಿಲುವಾಗಿಲು ಗ್ರಾಮಕ್ಕೆ ಹೋಗುವ ಮುನ್ನವೇ ಮೂರ್‍ನಾಲ್ಕು ಮನೆಗಳು ಬಲಕ್ಕೆ ಕಾಣಸಿಗುತ್ತವೆ. ಅಲ್ಲೇ ಆರು ಜನ ಸಂಕೇತಿಗಳು ಕೃಷಿಯನ್ನು ನೆಚ್ಚಿಕೊಂಡು ಜೀವನ ಮಾಡುತ್ತಿದ್ದಾರೆ. ಇವರ ಬದುಕು-ಬವಣೆಯನ್ನು ತಿಳಿಯಲು ೧೩.೧೨.೦೨ ರಂದು ಮುಂಜಾನೆಯೇ ಹೋಗಿದ್ದಾಯಿತು. ಎಳೆಯ ಬಿಸಿಲು ಇದ್ದ ಆ ಸಂದರ್ಭದಲ್ಲಿ ಅಲ್ಲಿನ ಜನರ ಕೃಷಿ ಜೀವನವನ್ನು ಎಳೆಎಳೆಯಾಗಿ ಬಿಡಿಸಿ ತಿಳಿಯಲು ಅನುಕೂಲವಾಯಿತೇನೋ ಅನ್ನಿಸಿತು. ಹಿರಿಯರಾದ ಎಂ.ಎಸ್.ನಾಗರಾಜ, ಇವರ ಮಕ್ಕಳಾದ ಲಕ್ಷ್ಮೀಶ, ಫಣೀಶ, ಅಣ್ಣನ ಮಗ ರಘುನಾಥ ಬೆಳಗಿನ ಕೆಲಸಗಳನ್ನು ಮುಗಿಸಿದ್ದರು. ಶಾಲೆಗೆ ಮಕ್ಕಳನ್ನು ಕಳುಹಿಸಲು ವಾಹನಕ್ಕಾಗಿ ಕಾಯುತ್ತಿದ್ದರು. 'ತಿಂಡಿ ಮಾಡಿ' ಎಂದ ನಾಗರಾಜರ ಮಾತಿಗೆ 'ಆಗಿದೆ, ಸ್ವಲ್ಪ ಸಮಯದ ಬಳಿಕ ನೋಡೋಣ' ಎಂದು ಪ್ರತಿಕ್ರಿಯಿಸಿ ನಮ್ಮ ಕೆಲಸ ಶುರು ಮಾಡಿದೆವು. 'ಮನೆಯ ಮುಂದೆ ಬಾವಿ, ಅಲ್ಲಿಯೇ ದನದ ಕೊಟ್ಟಿಗೆ, ಅನಿಲ ಘಟಕ, ತಂಬಾಕು ಹದ ಮಾಡುವ ಮನೆ, ಪಕ್ಕದಲ್ಲೇ ತೋಟ ಇವೆಲ್ಲವನ್ನೂ ಒಂದೊಂದಾಗಿ ನೋಡೋಣ, ತೊಂದರೆ ಇಲ್ಲ ತಾನೆ?' ಎಂದಾಗ 'ಏನೂ ಸಮಸ್ಯೆ ಇಲ್ಲ, ನೀವು ಬಂದಿರೋದೇ ದೊಡ್ಡದು' ಎಂದು ನಾಗರಾಜ್‌ರವರು ಮುಗುಳ್ನಕ್ಕರು.

ದನ ಕಟ್ಟುವ ಕೊಟ್ಟಿಗೆ ಹೇಗಿದೆ ಎಂದು ಒಳಹೊಕ್ಕೆವು. ಅದೊಂದು ಹಳೆಯ ಮನೆ. ಹುಲ್ಲು ಹಾಕುವ ಸಲುವಾಗಿ ಗೊಂತು ಇದೆ. ಹೆಂಚಿನ ಕೊಟ್ಟಿಗೆ ಇದು. ಕೃಷಿ ಉಪಕರಣಗಳನ್ನು ಇಡಲು ಜಾಗವನ್ನು ಮಾಡಿಕೊಂಡಿದ್ದಾರೆ. ಜಲ್ಲಿ ದಮ್ಮಸ್ ಮಾಡಿ ಕಾಂಕ್ರೀಟ್ ಹಾಕಿದಾರೆ. ಕೊಟ್ಟಿಗೆಯನ್ನು ಕಟ್ಟಿ ४೦ ವರ್ಷವಾಗಿದ್ದರೂ ಹಾಳಾಗಿಲ್ಲ. ದನಕರುಗಳ ಗಂಜಲವು ಒಂದೆಡೆ ಸಂಗ್ರಹವಾಗಲು ಸಿಮೆಂಟಿನ ಗುಂಡಿ ಇದೆ.

ಅನಿಲ ಘಟಕಕ್ಕೆ ಈ ಗಂಜಲವನ್ನು ಹಾಕುತ್ತಾರೆ.

ಈ ಮುಂಚೆ ದೊಡ್ಡಮಗ್ಗೆಯಲ್ಲಿ ವಾಸವಾಗಿದ್ದ ಎಂ.ಎಸ್.ನಾಗರಾಜ ಮತ್ತು ಇವರ ಅಣ್ಣ ಕೇಶವಮೂರ್ತಿ ನಿಲುವಾಗಿಲು ಸಮೀಪದ ಜಮೀನಿಗೆ ಬಂದು ಮನೆ ಕಟ್ಟಿದ್ದು ೧೯೫೮ರಲ್ಲಿ. ಜಮೀನಿಗೆ ಹೊಂದಿಕೊಂಡಂತೆ ಮನೆ ಇದ್ದರೆ ಒಳ್ಳೆಯದೆಂದು ನಿರ್ಧರಿಸಿ ಈಗಿರುವ ಜಾಗಕ್ಕೆ ಬಂದು ಕೃಷಿಯ ಕೆಲಸಗಳಲ್ಲಿ ತೊಡಗಿದ್ದಾರೆ. ನಾಗರಾಜರವರ ಅಣ್ಣ ಕೇಶವಮೂರ್ತಿ ತೀರಿಕೊಂಡು ೧೬ ವರ್ಷವಾಯ್ತು. ಈಗ ಅವರ ಮಗ ರಘುನಾಥ ವೃತ್ತಿಯಲ್ಲಿ ಮುಂದುವರೆದಿದ್ದಾರೆ. ಇನ್ನೊಬ್ಬ ಮಗ ಕುಮಾರ್ ಇಂಜಿನಿಯರಿಂಗ್ ಓದಿದ್ದಾರೆ. ಇಷ್ಟು ವಿಷಯ ಸಂಗ್ರಹವು ಸಾಕಾಗುತ್ತಾ? ವಿವರವಾಗಿ ವಿಚಾರಗಳನ್ನು ಕಲೆ ಹಾಕುವ ಮುನ್ನ ಒಮ್ಮೆ ಇವರ ತೋಟ ನೋಡೋಣವೆಂದು ಹೆಜ್ಜೆ ಹಾಕಿದೆವು.

ಭತ್ತದ ಕಟಾವು ಇನ್ನೂ ಆಗಿರಲಿಲ್ಲ. 'ಇದು ಯಾವ ತಳಿ, ಹೇಗೆ ಬೆಳೀತೀರಿ?' ಎಂದು ಕೇಳಿದಾಗ ಜೊತೆಗಿದ್ದ ನಾಗರಾಜರವರು 'ಇದು ರಾಜಮುಡಿ ಸ್ವಾಮಿ. ಬಹಳ ವರ್ಷದಿಂದ ಇದನ್ನೇ ಬೆಳೀತಾ ಇದೀವಿ. ಒಂದು ಎಕರೆಗೆ ೨೦ ಮೂಟೆ ಭತ್ತ ಸಿಗುತ್ತೆ. ದನಗಳಿಗೆ ಹೇರಳ ಹುಲ್ಲು ಆಗುತ್ತೆ. ಊಟಕ್ಕೂ ಅಕ್ಕಿ ಚೆನ್ನಾಗಿರುತ್ತೆ. ಬೇರೆ ಭತ್ತಕ್ಕಿಂತ ಕ್ವಿಂಟಾಲ್‌ಗೆ ೨೦೦ ರೂಪಾಯಿ ಹೆಚ್ಗೆ ದೊರೆಯುತ್ತೆ' ಎಂದರು. 'ಹಾಗಾದರೆ ಒಟ್ಲು ಪಾತಿ ಹೇಗೆ ಮಾಡ್ಕೋತೀರಿ? ಯಾವಾಗ ನಾಟಿ ಮಾಡ್ತೀರಿ?' ಎಂದು ಮರುಪ್ರಶ್ನೆ ಹಾಕಿದೆವು. 'ನಮ್ಮಲ್ಲಿ ಜುಲೈ ೨೫ಕ್ಕೆ ನಾಲಾ ನೀರು ಬಿಡೋದ್ರಿಂದ ಒಟ್ಲು ಪಾತೀನ ಜೂನ್ ೨೦ಕ್ಕೆ ಮಾಡ್ಕೋತೀವಿ. ನೀರು ಬಿಡೋದನ್ನ ನೋಡ್ಕೊಂಡು ಸಸಿ ಮಡಿ ತಯಾರಿಸ್ತೀವಿ. ಆಗಸ್ಟ್‌ವರೆಗೂ ಸಸೀನ ನೆಡಬಹುದು, ಸಸಿ ಬಲಿತ್ರೂ ಏನೂ ತೊಂದ್ರೆ ಆಗಲ್ಲ. ಆದ್ರೆ ಕೊರೆ(ಚಳಿ) ಬಿದ್ರೆ ಹೊಡೆ ಸರಿಯಾಗಿ ಬರಲ್ಲ' ಎಂದು ನಾಗರಾಜ ನುಡಿದರು. ಇದಕ್ಕೆ ಪೂರಕವಾಗಿ ಮಗ ಲಕ್ಷ್ಮೀಶ 'ಒಟ್ಲು ಪಾತಿ ಮಾಡೋ ಜಾಗಾನ ಮುಂಚಿನಿಂದ್ಲೇ ಹುಡಿ ಮಾಡ್ಕೊಂಡು ಒಂದು ಮೀಟರ್ ಅಗಲದ ೧೫ ಮೀಟರ್ ಉದ್ದದ ೫ ಪಟಗಳನ್ನು ಒಂದು ಎಕರೆಗೆ ಮಾಡ್ಕೊಂತೀವಿ. ಒಂದೊಂದು ಪಟಕ್ಕೆ ಎಂಟು ಸೇರು ಬೀಜ ಚೆಲ್ತೀವಿ. ತಿಂಗಳೊಳಗೆ ಸಸಿಗಳನ್ನು ನೆಡ್ತೀವಿ. ಸಗಣಿಗೊಬ್ಬರ, ಸರ್ಕಾರಿ ಗೊಬ್ಬರಾನಾ (ಒಂದು ಪಟಕ್ಕೆ ಅರ್ಧ ಕಿ.ಗ್ರಾಂ.) ಹಾಕ್ತೀವಿ' ಎಂದರು. ಪ್ರಶ್ನೋತ್ತರ ಮುಂದುವರೆಯಿತು.

ನಾಗರಾಜ್‌ರವರೆ! ಸಸಿ ನೆಡೋದಕ್ಕಿಂತ ಮುಂಚೆ ಸೊಪ್ಪು ತುಳಿಯಲ್ವಾ?

ಮುಂಚೆ ಮಾಡ್ತಾ ಇದ್ವಿ. ಹೊಂಗೆ, ಗ್ಲಿರಿಸೀಡಿಯಾ, ತಪಸೆ ಸೊಪ್ಪನ್ನು ಒಂದು ದಿವಸ ಮುಂಚೆ ಹಾಕಿ, ತುಳ್ಕೊಂಡು ಸಸಿ ನೆಡ್ತಿದ್ವಿ. ತಗ್ಗುಗಳಾಗಿದ್ದು ಮಣ್ಣು ಮೆತ್ತಗಿದ್ದರೆ ಮಾಡಬಹುದು. ಆದ್ರೆ ನಾಲಾ ನೀರಾವರಿ ಬಂದ ಮೇಲೆ ಖುಷ್ಕಿಯೆಲ್ಲಾ ನೀರಾವರಿ ಆಯ್ತು. ಇದು ಕಲ್ಲು ಜರಗಲು ಜಮೀನು. ಇಂತದ್ದಕ್ಕೆ ಸೊಪ್ಪು ತುಳಿಯೋಕೆ ಆಗಲ್ಲ. ಗದ್ದೆಗಳೆಲ್ಲಾ ತೋಟವಾದ್ವು. ಹೊಲಾವರಿಯಲ್ಲಿ ಒಂದೇ ಬೆಳೆ ಭತ್ತ ಮಾಡ್ಕೋಂತೀವಿ. ಸಗಣಿ ಗೊಬ್ಬರ, ಒಂದು ಕ್ವಿಂಟಾಲ್ ರಾಸಾಯನಿಕ ಹಾಕಿ ಬೆಳೀತೀವಿ.

ರಾಜಮುಡಿ ನಿಮ್ಮಲ್ಲಿ ಹೇಗೆ ಬೆಳೆಯುತ್ತೆ ಹೇಳಿ?

ಸ್ವಾಮಿ, ನಾವು ೧೦ ವರುಷದಿಂದ ಇದನ್ನೇ ಬೆಳ್ಕೊಂಡು ಬಂದಿದೀವಿ. ನಮ್ದೇ ಬೀಜ. ಕಟಾವು ಆಗೋದಕ್ಕಿಂತ ಮುಂಚೆ ಬೆರಕೆ ತಗೀತೀವಿ. ಐದಾರು ಚೀಲ ಬೀಜಾನ ಬಿತ್ತನೆಗಾಗಿ ಇಟ್ಕೋಳ್ತೀವಿ. ಮೂಟೆ ಕಟ್ಟಿ ಇಡ್ತೀವಿ. ಹುಳ ಹತ್ತಲ್ಲ. ಬೀಜದ ಜೊತೆ ಔಷಧಿ ಇಡಲ್ಲ. ಪಟಕ್ಕೆ ಹಾಕುವಾಗ ಉಪ್ಪುನೀರಿನಲ್ಲಿ ಸ್ವಲ್ಪ ಹೊತ್ತು ನೆನಸಿ, ಶುದ್ಧ ನೀರಿನಲ್ಲಿ ತೊಳೆದು ಹಾಕ್ತೀವಿ. ಹಕ್ಕಿ ಕಾಟ ಇರುತ್ತೆ. ಹತ್ತು ದಿನ ಕಾಯ್ತೀವಿ. ಆದ್ರೂ ತಿನ್ನುತ್ತವೆ. ಈ ಸಲುವಾಗಿ ಹೆಚ್ಚು ಬೀಜ ಹಾಕ್ತೀವಿ.



ಹೊಸ ತೋಟ:ಬಿಸಿಲಿನಿಂದ ರಕ್ಷಣೆ:ನಿಲುವಾಗಿಲು

ರಾಜಮುಡಿಗೆ ರೋಗ ಕೀಟ ಇಲ್ಲವೇ ಇಲ್ಲ.



ಅಡಿಕೆ ತೋಟದಲ್ಲೇ ಬೆಳೆದ ಬೂದುಗುಂಬಳ:ನಿಲುವಾಗಿಲು

ಬಂದ್ರೂ ಬಹಳ ಕಮ್ಮಿ. ನಾವಂತೂ ಔಷಧೀನ ಸಿಂಪರಣೆ ಮಾಡಿಯೇ ಇಲ್ಲ. ಐದೂವರೆಯಿಂದ ಆರು ತಿಂಗಳ ಬೆಳೆ. ಒಂದು ಎಕರೆಗೆ ನಾಲ್ಕು ಗಾಡಿ ಹುಲ್ಲು ಸಿಗುತ್ತೆ. ತೆನೆ ಬಲಿತ ಮೇಲೆ ಕೊಯ್ದು ನಾಲ್ಕು ದಿವಸ ಗದ್ದೆಯಲ್ಲೇ ಬಿಡ್ತೀವಿ. ನಂತರ ಕಂತೆ ಕಟ್ಟಿ ಕಣಕ್ಕೆ ತಗೊಂಡು ಬರ್ತೀವಿ. ಕಣದಲ್ಲಿ ಒಂದು ವಾರದಿಂದ ಹದಿನೈದು ದಿನಗಳವರೆಗೆ ಗುಡ್ಡೆ ಹಾಕ್ತೀವಿ. ಆಮೇಲೆ ಕೈಯಿಂದ ಬಡೀತೀವಿ. ಹುಲ್ಲಿನಲ್ಲಿ ಸ್ವಲ್ಪ ಕಾಳು ಉಳಿದಿರುತ್ತೆ. ಎಮ್ಮೆ-ಎತ್ತು-ಹಸು ಕಟ್ಟಿ ಓಡಾಡಿಸಿ ತುಳಿಸ್ತೀವಿ. ತುಳಿಸುವಾಗ ದನ ಕರುಗಳು ಗಂಜಲ ಹುಯ್ಯುತ್ತವೆ, ಸಗಣಿ ಹಾಕುತ್ತವೆ. ಸಗಣೀನ ನೋಡಿ ನೋಡಿ ತೆಗೀತೀವಿ. ಬಡಿದ ಕಾಳು, ತುಳಿಸಿದ ಕಾಳು ಎಲ್ಲವನ್ನೂ ಸೇರಿಸಿ ಒಂದೆರಡು ದಿನ ಒಣಗಿಸ್ತೀವಿ, ಮೂಟೆಗೆ ಹಾಕಿ ಇಡ್ತೀವಿ.

* * * * *

ಗದ್ದೆಯ ಬದುವಿನಲ್ಲಿ ಕುಟುಂಬದವರನ್ನೆಲ್ಲಾ ನಿಲ್ಲಿಸಿ ಫೋಟೋ ತೆಗೆಯುವುದು ಹೆಚ್ಚು ಸೂಕ್ತವೆಂದು, ಕರೆದು ಪೂರೈಸಿದ್ದು ಆಯಿತು. ಮುಂದೆ ಸಾಗಿದಾಗ ಇನ್ನೂ ಫಲ ಕೊಡದ ಅಡಿಕೆ ತೋಟ, ಅಲ್ಲಲ್ಲಿ ಬೆಳೆದ ಬೂದುಗುಂಬಳ ಕಾಣಿಸಿತು. ತುಸು ಹೊತ್ತು ನಿಂತು ಕಣ್ಣಾಡಿಸಿದೆವು. ಅಡಿಕೆಯ ಗಿಡಗಳಿಗೆ ಬಿಸಿಲಿನ ಹೊಡೆತ ಆಗಬಾರದೆಂದು ಎಲ್ಲದಕ್ಕೂ ತೆಂಗಿನ ಸೋಗೆಯನ್ನು ಕಟ್ಟಲಾಗಿತ್ತು. ಬೂದುಗುಂಬಳದ ಕಟಾವು ಮುಕ್ಕಾಲು ಭಾಗ ಮುಗಿದಿತ್ತು. 'ತೋಟದಲ್ಲಿ ಬೂದುಗುಂಬಳ ಅಷ್ಟೊಂದು ಸರಿಯಾಗಿ ಬರಲ್ಲ. ಕಾಲು ಭಾಗ ಕಾಯಿ ಕರಗಿ ಹೋಯಿತು' ಎಂದು ಅಲ್ಲೇ ಹಾಳಾಗಿದ್ದ ಕಾಯಿಗಳನ್ನು ಹಿಡಿದು ತೋರಿಸಿದರು ನಾಗರಾಜರವರ ಮಗ ಲಕ್ಷ್ಮೀಶ. ತೋಟದಲ್ಲಿ ಹಿಂಗಾರಿನ ಉಳುಮೆ ನಡೆದಿತ್ತು. ನಾಗರಾಜರವರು ಅದನ್ನು ಗಮನಿಸುತ್ತಿದ್ದರು. ಹೊಸ ತೋಟದ ತಂತಿ ಬೇಲಿ ದಾಟಿ ಹಳೆಯ ತೋಟದತ್ತ ಸಾಗಿದೆವು. ಅಲ್ಲೊಂದು ಹುಣಿಸೆಮರವನ್ನು ಕಡಿಯಲಾಗಿತ್ತು. 'ಈ ಮರಾನ ಏಕೆ ಕಡಿದ್ರಿ?' ಎಂದೆವು. 'ನಾಲಾ ನೀರಾವರಿ ಬಂದ ಮೇಲೆ ಹುಣಿಸೆ ಸರಿಯಾಗಿ ಫಲ ಕೊಡುತ್ತಿಲ್ಲ. ಹಣ್ಣು ಆಗೋದಕ್ಕಿಂತ ಮುಂಚೆಯೇ ಹುಳು ಹತ್ತುತ್ತೆ. ಹಲಸಿನ ಮರಗಳು ಇರೋದೇ ಇಲ್ಲ' ಎಂದು ರಘುನಾಥ ಪ್ರತಿಯಾಗಿ ಉತ್ತರಿಸಿದರು.



ಗಾಳಿಬಿಟ್ಟು ನೀರು ಎತ್ತುವ ಪಂಪು:ನಿಲುವಾಗಿಲು

ವಿಶಾಲವಾದ ಅಡಿಕೆ ತೋಟ, ಹಳೆಯದು. ಅಲ್ಲಲ್ಲಿ ತೆರೆದ ಬಾವಿಗಳು. ತೋಟದ ಮಧ್ಯದಲ್ಲಿ ಕೆರೆಗೆ ನೀರು ಹೋಗುವ ಕಾಲುವೆ, ರೋಗಕ್ಕೆ ತುತ್ತಾದ ಅಡಿಕೆ ಮರಗಳು, ಕಳೆ ತುಂಬಿ ಕಳಾಹೀನವಾದ ಕೆರೆ, ಹಳೆಯ ತೋಟದಲ್ಲಿ ಹೊಸದಾಗಿ ನೆಟ್ಟು ಬೆಳೆಸಿದ ಗಿಡಗಳು, ಹೀಗೆ ಕೆಲವು ವಿಚಾರಗಳು ಕಣ್ಣಿಗೆ ಬಿದ್ದವು. ತೋಟದಲ್ಲಿ ಕೆಲಸ ಮಾಡಿಸುತ್ತಿದ್ದ ನಾಗರಾಜ ರವರ ಮಗ ಫಣೀಶರನ್ನು ಮಾತನಾಡಿಸಿ ನಾಲ್ಕಾರು ಫೋಟೋ ತೆಗೆದು ಮನೆಯತ್ತ ತೆರಳಿದೆವು. ದಾರಿಯಲ್ಲೇ ರಘುನಾಥರ ತೋಟ. ಶುಂಠಿ

ಹಾಕಿದ್ದರು, ಕಿತ್ತಿರಲಿಲ್ಲ. ತಂಬಾಕು ಮಾರಾಟವಾಗಿತ್ತು. ನೀಲಗಿರಿ ಮರಗಳನ್ನು ಅಲ್ಲಲ್ಲಿ ಕಡಿಯಲಾಗಿತ್ತು. ತೆಂಗಿನ ಮರಗಳು ರಸ ಸೋರುವ ರೋಗಕ್ಕೆ ತುತ್ತಾಗಿ ಮಂಕಾಗಿದ್ದವು. ಮುಂದೆ ಸಾಗಿದಾಗ ತಂಬಾಕು ಹದ ಮಾಡುವ ಮನೆ, ಪಕ್ಕದಲ್ಲಿ ಸಗಣಿ ಅನಿಲ ಘಟಕ. ಹಾಗೇ ನೋಡುತ್ತಾ ಮೇಲೆ ಬಂದಾಗ ನೀರೆತ್ತುವ ಏರ್ ಕಂಪ್ರೆಶನ್ ಇಂಜಿನ್ ಗಮನ ಸೆಳೆಯಿತು. ಪ್ರಶ್ನೆಗಿಳಿದೆವು:



'ನಮ್ಮದೇ ಟ್ಯಾಂಕು, ನಮ್ಮದೇ ನೀರಿನ ಸೌಲಭ್ಯ':ನಿಲುವಾಗಿಲು

ಏನು ಈ ಇಂಜಿನ್ನಿನ ವಿಶೇಷ?

(ರಘುನಾಥ ಆಸಕ್ತಿಯಿಂದ ವಿಚಾರ ಹೇಳಹೊರಟರು) ಈ ಪಂಪು ಕೂಡಿಸಿ ೨೦ ವರ್ಷ ಆಯ್ತು. ಐದು ಹೆಚ್‌ಪಿ ಇಂಜಿನ್. ಎಲ್‌ಜಿ ಕಂಪನೀದು. ಕೊಯಮತ್ತೂರಿನಿಂದ ತಂದದ್ದು. ಈ ಬೋರು ೧೧೦ ಅಡಿ ಆಳ ಇದೆ. ೮೦ ಅಡಿ ಪೈಪು ಬಿಟ್ಟಿದೀವಿ. ಒಂದೂವರೆ ಇಂಚು ದಪ್ಪ ಇದೆ. ಗಾಳಿ ಪೈಪು ಒಂದುಇಂಚಿನದು. ನೀರು ಕಮ್ಮಿ ಇದ್ದಿದ್ದರಿಂದ ಈ ಪಂಪನ್ನು ನಮ್ಮ ತಂದೆ ಕೂಡಿಸಿದ್ರು. ಒಂದ್ಸಾರಿನೂ ಕೆಟ್ಟಿಲ್ಲ, ಒಮ್ಮೆಯೂ ಸುಟ್ಟಿಲ್ಲ. ಮನೆ ಬಳಕೆಗೆ ೧೫ ಅಡಿ ಎತ್ತರ ಕಲ್ಲು ಕಟ್ಟಿ ೫೦೦ ಲೀಟರ್ ಟ್ಯಾಂಕನ್ನು ಇಟ್ಟು ಅದರಲ್ಲಿ ನೀರು ತುಂಬಿಸ್ತೀವಿ. ಕೆಳಗೊಂದು ತೊಟ್ಟಿ ಇದೆ. ಅಲ್ಲಿಯೂ ತುಂಬಿ ಹೆಚ್ಚಾದ ನೀರು ಎರಡು ಇಂಚು ಕೊಳವೆಯಲ್ಲಿ ತೋಟಕ್ಕೆ ಹೋಗುತ್ತೆ. ಸುಮಾರು ೫೦೦ ಅಡಿ ಉದ್ದದವರೆಗೆ ಜಿ.ಐ. ಪೈಪ್‌ಗಳನ್ನು ಹಾಕಿದೀವಿ. ಕರೆಂಟಿಂದು ತೊಂದ್ರೆ ಇದ್ದಾಗ ತೆರೆದ ಭಾವಿ ನೀರು ಬಳಸ್ತೀವಿ. ಇಲ್ಲಿರೋ ಭಾವಿ ನೀರು ರುಚಿಯಾಗಿದೆ. ಚೆನ್ನಾಗಿ ಬೇಳೆ ಬೇಯುತ್ತೆ.

ಒಳ್ಳೆ ಪಂಪನ್ನು ಕೂಡಿಸಿದಿರಿ. ಬದಲಾವಣೆ ಮಾಡೋ ಯೋಚನೆ ಇದಿಯಾ?

ನೀರು ಹೆಚ್ಚು ಎಳೆಯಲ್ಲ, ಸದ್ದು ಮಾಡುತ್ತೆ, ಸಬ್‌ಮರ್ಸಿಬಲ್ ಪಂಪು ಹಾಕಿಸ್ಬೇಕು ಅಂತ ಯೋಚನೆ ಮಾಡ್ತಿದೀನಿ.

ಅಲ್ಲ, ನಿಮ್ಮ ಮನೆಗೆ ಎಷ್ಟು ನೀರು ಬೇಕು? ಅಬ್ಬಾಬ್ಬಾ ಅಂದ್ರೆ ಅರ್ಧ ತಾಸು ಚಾಲು ಮಾಡ್ಕೋಬಹುದು ಅಲ್ವಾ? ಈಗ ಇರೋ ಪಂಪು ಕೊಟ್ಟು ಇನ್ನಷ್ಟು ದುಡ್ಡು ಹಾಕಿ ಹೊಸ ಯಂತ್ರ ತಂದ್ರೆ ಮುಂದಿನ ಆಗುಹೋಗುಗಳನ್ನು ಗಮನಿಸಿ.

ನೀವು ಹೇಳೋದು ಸರೀನೇ, ಒಂದು ಹೋಗಿ ಇನ್ನೊಂದು ಆಗ್ಬಾರದು. ಹೊಸದ್ನ ತಂದ್ರೆ ಈ ಸಮಸ್ಯೆ ಬಿಟ್ಟು ಇನ್ನೊಂದು ಸಮಸ್ಯೆ ಕಾಣುತ್ತೆ, ಯೋಚಿಸ್ತೀನಿ.



ಇದು ನೀಲಗಿರಿ, ಏನಿಲ್ಲದೇ ನೋಟುಗಳನ್ನು ಎಣಿಸಬಹುದು:ನಿಲುವಾಗಿಲು

ನಿಮ್ಮ ತೋಟದ ಅಂಚಿನಲ್ಲಿ, ದಾರಿ ಬದಿಯಲ್ಲಿ ನೀಲಗಿರಿ ಮರ ಕಂಡವು, ಅವುಗಳಿಂದ ಎಷ್ಟು ವರಮಾನ ಸಿಕ್ಕಿದೆ? ಏನಂತೀರಿ?

ತೋಟದ ಬದೀನಲ್ಲಿ ಅಲ್ಲಲ್ಲಿ ಇರ್ಲಿ ಅಂತ ನೀಲಗಿರಿ ಸಸೀನ ಅರಣ್ಯ ಇಲಾಖೆಯಿಂದ ತಂದು ಹಾಕಿ ೧೦ ವರ್ಷ ಮೀರಿರಬೇಕು. ನೂರು ಮರ ಇರ್ಬೇಕು. ೭೦-೮೦ ಮರ ಕೊಟ್ಟಿದೀನಿ. ಒಂದು ಲಕ್ಷ ರೂಪಾಯಿ


ತಂಬಾಕು ಹದ ಮಾಡಲು ಬ್ಯಾರನ್-ಮಣ್ಣಿನಿಂದ ಕಟ್ಟಿದ್ದು:ನಿಲುವಾಗಿಲು

ಹಣ ಸಿಕ್ಕಿದೆ. ನೀಲಗಿರಿಗೆ ಏನೇನೂ ಕಾಳಜಿ ಇಲ್ಲ. ಒಂದು ರೀತಿ ಅಡಿಕೆಗಿಂತ ಲಾಭ ಅನ್ನಿಸುತ್ತೆ.

ತಂಬಾಕು ಮಾಡಿದೆ ಅಂತ ಹೇಳಿದ್ರಿ, ಹೇಗಾಯಿತು ಈ ಸಾರಿ ಬೆಳೆ?
ಮಾರ್ಕೆಟ್ ತೊಂದ್ರೆ, ಬೆಳಿಯೋ ತೊಂದ್ರೆ ನೋಡ್ಕೊಂಡು ತಂಬಾಕು ಬೆಳಿಯೋದನ್ನ ನಿಲ್ಲಿಸಿದ್ದೆ. ಈ ವರ್ಷ ನೋಡೋಣವಂತ ಹಾಕಿದೆ. ಪರವಾಗಿಲ್ಲ. ಬೆಲೆ ಉತ್ತಮವಾಗಿ ಸಿಕ್ಕಿತು. ಕೆಜಿಗೆ ೫೦-೬೦ ರೂ. ಎಕರೆಗೆ ೨೦-೨೫ ಸಾವಿರ ರೂಪಾಯಿ ಉಳಿಯುತ್ತೆ.

ಶುಂಠಿ ಹಾಕಿದೀರಲ್ಲಾ? ಅದರ ಬಗ್ಗೆ ಹೇಳಿ
ತೆಂಗಿನ ಮಧ್ಯದಲ್ಲಿ ಶುಂಠಿ ಹಾಕಿದೀನಿ. ಒಂದು ಎಕರೆಗೆ ೧೭,೫೦೦ರೂ ಖರ್ಚು ಬಂದಿದೆ. ಆದಾಯ ೬೦-೬೫ ಸಾವಿರ ರೂಪಾಯಿ ಬರ್ಬೇಕು.

ಗೋಬರ್ ಗ್ಯಾಸ್ ಹೇಗೆ ಕೆಲ್ಸ ಮಾಡುತ್ತೆ?
ತೊಂದ್ರೆ ಇಲ್ಲ, ಒಮ್ಮೆ ಡ್ರಂ ಬದಲಿಸಿದೀನಿ. ಮಾಡಿಸಿ ೨೫-೩೦ ವರ್ಷ ಆಯ್ತು. ಒಳ್ಳೆ ಗ್ಯಾಸ್ ಬರ್ತಾ ಇದೆ.

ತೋಟವನ್ನು ನೋಡಿಕೊಂಡು ಮನೆಯತ್ತ ತೆರಳುವಾಗ ಕಣ್ಣಿಗೆ ಬಿದ್ದ ತೆಂಗಿನ ಮರಗಳು ರಸ ಸೋರುವ ರೋಗಕ್ಕೆ ತುತ್ತಾಗಿ ಮಂಕಾಗಿದ್ದವು. ನೀರಿನ ಕೊರತೆಯಿಂದಲೋ ಸರಿಯಾಗಿ ಗೊಬ್ಬರ ಕೊಡದ ಕಾರಣದಿಂದಲೋ ಹೆಚ್ಚು ಮರಗಳು ರೋಗಕ್ಕೆ ತುತ್ತಾಗಿದ್ದವು. ಕೆಲವೇ ವರ್ಷಗಳಲ್ಲಿ ಈ ಮರಗಳು ಸಾಯುವುದಂತೂ ಖಚಿತ, ಸರಿಯಾಗಿ ನೋಡಿಕೊಳ್ಳಿ ಎಂದು ಸಲಹೆ ನೀಡುತ್ತಾ ಮುಂದೆ ಬಂದಾಗ ನಾಗರಾಜರವರು ಮನೆಯ ಹತ್ತಿರ ಬಂದಿದ್ದರು. ಅವರ ಹಸು, ಎಮ್ಮೆಗಳ ಬಗ್ಗೆ ವಿಚಾರಿಸೋಣವೆಂದು ಪ್ರಶ್ನೆ ಕೇಳಿದೆ.

ನಾಗರಾಜರವರೇ, ಎಷ್ಟು ದನಕರುಗಳನ್ನು ಸಾಕಿದೀರಿ, ಹೇಗೆ ಸಾಕ್ತೀರಿ ಹೇಳಿ?
ಹತ್ತು ದನಕರುಗಳನ್ನು ಸಾಕಿದೀವಿ. ಹಳ್ಳಿಕಾರ್ ಹಸು ಇದೆ. ಎರಡು ಎಮ್ಮೆ ಇವೆ. ಕೋಣ, ಎತ್ತು ಇಟ್ಕೊಂಡಿದೀವಿ. ದನಕರುಗಳಿಗೆ ಪಾಲೀಶ್ ತೌಡು ನೀಡ್ತೀವಿ. ಜೋಳದ ಹಸಿರು ದಂಟು ಕೊಡ್ತೀವಿ. ರಾಗಿ ಹುಲ್ಲನ್ನು ಬೆಳೆದೋ/ ಖರೀದಿ ಮಾಡೋ ತಿನ್ನಿಸ್ತೀವಿ. ಪಶು ಆಹಾರ ಕೊಡಲ್ಲ. ಎಮ್ಮೆ ಎರಡು ಲೀಟರ್ ಹಾಲು ಕೊಡುತ್ತೆ. ಈ ಮುಂಚೆ ಹಸುಗಳೇ ಹೆಚ್ಚೆ ಇದ್ವು. ನಾವು ಸಿಂಧಿ ಹಸು ಸಾಕಿಲ್ಲ, ಅದರ ಹಾಲು ನಮ್ಗೆ ಇಷ್ಟವಾಗಲ್ಲ, ಏನೋ ಒಂದು ರೀತಿಯ ವಾಸನೆ. ಎಮ್ಮೆ ಹಾಲು ಗಟ್ಟಿಯಾಗಿರೋದ್ರಿಂದ ಕಾಫಿ ಚೆನ್ನಾಗಿ ಆಗುತ್ತೆ.


ರಸ ಸೋರುವ ರೋಗಕ್ಕೆ ಬಲಿಯಾಗುತ್ತಿರುವ ತೆಂಗು:ನಿಲುವಾಗಿಲು




ಹಳೆಯಮರ ಹೋಗುವ ಮುನ್ನ ಅಡಿಕೆ ಸಸಿ ನಾಟಿ:ನಿಲುವಾಗಿಲು

ಇಷ್ಟೆಲ್ಲಾ ನೋಡಿದ್ರೆ, ನೀವು ಕಷ್ಟಪಟ್ಟು ಬೆಳೆದು ಅಭಿವೃದ್ಧಿ ಆಗಿದೀರಿ ಅಂತ ಕಾಣಿಸುತ್ತೆ. ನಿಮ್ಮ ಹಿಂದಿನ ಅನುಭವಗಳನ್ನು ನೆನಪು ಮಾಡ್ಕೊಬಹುದಾ?

ಬಹಳ ಬಡತನ ಇತ್ತು ಸ್ವಾಮಿ. ರಾಗೀನೇ ಊಟ. ನನ್ನ ತಂದೇನೂ ಕಷ್ಟಪಟ್ರು. ಒಬ್ರೇ ಬಂಡಿ ದಬ್ಬಿ ಕೊಂಡು ಹೋಗ್ತಿದ್ರು. ಎರಡೂವರೆ ಎಕ್ರೆ ಹಿಡುವಳಿ ಇದ್ದದ್ದು ಈಗ ೨೩ ಎಕರೆಗೆ ತಲುಪಿದೆ. ಜಮೀನು ಆಗ ಕಮ್ಮಿ ಬೆಲೆಯಲ್ಲಿತ್ತು. ಅಡಿಕೆ, ವಿಳ್ಳೇದೆಲೇನೇ ನಮ್ಮ ಜೀವನಾನ ಬದಲಾಯಿಸಿದ್ದು. ಶೇಂಗಾ ಬೆಳೆದ್ವಿ, ರೇಷ್ಮೇನೂ ಹಾಕಿದ್ವಿ. ಖಾಯಿಲೆ ಕಾಟ ದಿಂದಾಗಿ ತೆಗೆದು ಬಿಟ್ಟು ಅಡಿಕೆ ಹಾಕಿದೀವಿ. ತರಕಾರೀನೂ ಬೆಳೆದೆ. ಬದನೆ, ಕೋಸು, ಟೊಮೇಟೋ, ಮೂಲಂಗಿ, ಬೀನ್ಸ್ ಹಾಕ್ತಾ ಇದ್ದೆ. ಸೀಐಲ್ಯಾಂಡ್ ಹತ್ತೀನೂ ಬೆಳೆದೆ. ರಾಮನಾಥಪುರದಲ್ಲಿ ಹತ್ತಿ ಮಾರ್ಕೆಟ್ ಇತ್ತು. ಈಗ ಅಲ್ಲಿ ಬಸ್ ಡಿಪೋ ಆಗಿದೆ. ಕಬ್ಬು ಹಾಕಿದ್ದೆ. ಆಗೆಲ್ಲಾ ರಾತ್ರಿಯೆಲ್ಲಾ ಕೆಲ್ಸ ಮಾಡ್ತಿದ್ದಿವಿ, ತಿಂಗಳ ಬೆಳಕಿನಲ್ಲಿ. ನೀರ್ನ ಕೈಯಲ್ಲಿ ಎತ್ತಿ ಉಣಿಸ್ತಿದ್ದಿವಿ. ಆಮೇಲೆ ಏತಾ, ಈಗ ಬೋರು, ಪಂಪು.

ಇಷ್ಟೆಲ್ಲಾ ಮಾಡಿದ್ರೂ ಈಗ ನೆಮ್ಮದಿ ಇಲ್ಲ. ಈಗ ಬೆಳೆ ಜಾಸ್ತಿ ಬರ್ತಾ ಇದೆ. ದುಡ್ಡು ಉಳೀತಾ ಇಲ್ಲ. ಖರ್ಚು ಹೆಚ್ಚಾಯಿತು, ಪರ ಊರುಗಳಿಗೆ, ದೂರದ ಊರುಗಳಿಗೆ ಓಡಾಡೋದು ಸಹ ಜಾಸ್ತಿ ಆಯ್ತು.



ಬಾವಿಗೆ ಪಿಳ್ಳೆಯ ನೀರು:ನಿಲುವಾಗಿಲು

ಅಡಿಕೆ ಬಗ್ಗೆ ಹೇಳಿ

ಅಡಿಕೆ ಎರಡು ಎಕ್ರೆ ಇಳುವರಿ ಕೊಡ್ತಾ ಇದೆ. ಭೂಮಿ ಯಾವಾಗ್ಲೂ ಶೀತವಾಗಿರುತ್ತೆ. ಈ ಮೊದ್ಲು ಇದಕ್ಕಿಂತ ಶೀತ ಇರ್ತಿತ್ತು. ಅಣಬೆ ರೋಗಕ್ಕೆ ಒಂದೊಂದು ಸಾಲು ಮರ ಬಲಿಯಾಗ್ತಿತ್ತು. ಅಡಿಕೆ ಈ ಸ್ಥಳದ್ದೇ. ಬಾಳೆ ಇತ್ತು, ತೆಗೆದಿದೀವಿ. ಅಣಬೆ ರೋಗ ನಮ್ಮ ತಂದೆ ಕಾಲದಿಂದ್ಲೂ ಇದೆ.

ಅಡಿಕೆಗೆ ರಾಸಾಯನಿಕ ಗೊಬ್ಬರ ಕೊಡ್ತೀವಿ. ಸುಫಲಾ ಮತ್ತು ೧೭:೧೭:೧೭ ಗೊಬ್ಬರಾನಾ ಒಂದೊಂದು ಮರಕ್ಕೆ ಕಾಲು ಕಾಲು ಕೆ.ಜಿ. ಮಾಡಿ ಎರಡು ಕಡೆ ಹಾಕ್ತೀವಿ. ಈ ಸಲ ಹಾಕಲೇ ಇಲ್ಲ. ಬೆಲೆ ಕಮ್ಮಿಯಾದ್ರೆ ಖರ್ಚು ಸಿಗಲ್ಲ. ಅಡಿಕೇನ ಮುಂಚೆ ಬೇಯಿಸ್ತಾ ಇದ್ವಿ. ಈಗ ಎಡಿಯೋರು ಹತ್ತಿರದಲ್ಲಿ ಇಲ್ದೇ ಇರೋದ್ರಿಂದ ಹಸೀದನ್ನೇ ಕೊಡ್ತೀವಿ. ಈ ಸಾರಿ ೭೫೦ ರೂಪಾಯಿ ಬೆಲೆ ಸಿಕ್ಕಿತು. ನಮ್ಮಲ್ಲಿ ನವಂಬರ್‌ನಲ್ಲಿ ೯೦ ಪಾಲು ಕಟಾವು ಆಗುತ್ತೆ. ಉಳಿದದ್ದು ಡಿಸೆಂಬರ್‌ನಲ್ಲಿ ಮುಗಿಯುತ್ತೆ.

ತೆಂಗು ಇದೆಯಲ್ಲಾ, ಅದರ ಬಗ್ಗೆ ಹೇಳಿ.

ನೂರು ತೆಂಗಿನ ಮರಗಳಿವೆ. ನುಸಿ ಕ್ರಿಮಿ ಇದೆ. ಇಳುವರಿ ವರ್ಷಕ್ಕೆ ೫೦೦೦ ಕಾಯಿ ಸಿಗುತ್ತೆ. ಇದೂ ಸ್ಥಳದ ತಳಿ. ೨೫ ವರ್ಷದ ಮರಗಳು. ೩೦ ಅಡಿಗೊಂದರಂತೆ ಹಾಕ್ಕೊಂಡಿದೀವಿ.



ಇದು ಅಣಬೆ:ಹರಡುವ ಗುಣ ಇದಕ್ಕಿದೆ:ನಿಲುವಾಗಿಲು



ಬಲಿಯಾದದ್ದು ಆಯಿತು, ಬದಲಿಗೆ ಗಿಡ ನಾಟಿ:ನಿಲುವಾಗಿಲು



ಅಡಿಕೆಗೆ ತಟ್ಟಿದ ರೋಗ:ನಿಲುವಾಗಿಲು



26) ತಟ್ಟೆಯಾಗಲು ತೆರಳುತ್ತಿರುವ ಅಡಿಕೆ ಪಟ್ಟೆ:ನಿಲುವಾಗಿಲು

ಮನೆಯ ಒಳಗಡೆ ಇದ್ದ ಬೂದುಗುಂಬಳ ಕಾಯಿಗಳನ್ನು ಗಮನಿಸಿ ಗಡಿಯಾರ ನೋಡಿಕೊಂಡಾಗ ೧೨.೩೦ ದಾಟಿತ್ತು. ಸುಮಾರಾಗಿ ಐದು ತಾಸುಗಳ ಕಾಲ ವಿಚಾರ ವಿನಿಮಯ ಮಾಡಿದ ಬಳಿಕ ತಿಂಡಿ ತಿನ್ನಲು ಒತ್ತಾಯಿಸಿದಾಗ ದೋಸೆಯೊಂದಿಗೆ ಚಟ್ನಿ ಪುಡಿ ತಿಂದು ನಮಸ್ಕರಿಸಿ ವಾಪಸಾದೆವು.

ಕಂಡದ್ದು, ಕೇಳಿದ್ದು:

* ತೋಟದಲ್ಲಿರುವ ಎರಡೂ ಬಾವಿಗಳನ್ನು ನಾಗರಾಜ ಮತ್ತು ಕೇಶವಮೂರ್ತಿ (ಅಣ್ಣ-ತಮ್ಮಂದಿರು) ಸೇರಿಕೊಂಡು ಎರಡು ತಿಂಗಳ ಕಾಲ ತೆಗೆದರಂತೆ.
* ಎತ್ತಿನ ಗಾಡಿಯ ಬದಲಿಗೆ ಟೈರುಗಾಡಿ ಬಂದಿದೆ, ಗದ್ದೆ ಕೆಲಸಾನ ಈಗಲೂ ನೇಗಿಲಿನಿಂದ ಮಾಡ್ತಾರೆ. ಎಲ್ಲರೂ ಕೈಮುಟ್ಟಿ ಕೆಲಸ ಮಾಡಿಕೊಂಡು ಹೋಗ್ತಾರೆ.
* ಅಡಿಕೆಯ ಪಟ್ಟೆಗಳನ್ನು ೩೦ ಪೈಸೆಗೊಂದರಂತೆ ಮಾರ್ತಾರೆ. ಎಕರೆಗೆ ೭೦೦-೮೦೦ ಸಿಗಬಹುದು.
* ನಾಗರಾಜ್‌ರವರಿಗೆ ಎರಡು ಗಂಡು, ನಾಲ್ಕು ಹೆಣ್ಣು ಮಕ್ಕಳು. ಎಲ್ಲರದೂ ಮದುವೆ ಆಗಿದೆ. ಗಂಡು ಮಕ್ಕಳಿಗೆ ಭಾಗ ಮಾಡಿಕೊಟ್ಟಿದ್ದಾರೆ.
* ಗಂಡು ಮಕ್ಕಳು ಹೆಚ್ಚು ಓದಲಿಲ್ಲ. ಕೃಷಿ ಕಸುಬಿನಲ್ಲಿ ಉಳಿದುಕೊಂಡಿದ್ದಾರೆ.
* ತೋಟದಲ್ಲಿಯ ಬಾವಿಯಲ್ಲಿ ಬೇಸಿಗೆಯಲ್ಲೂ ನೀರು ಇರುತ್ತೆ. ಮಳೆಗಾಲದಲ್ಲಿ ತುಂಬಿರುತ್ತೆ.
* ದೇವರ ಪೂಜೆಗೆ ರಾಮನಾಥಪುರ, ದೊಡ್ಡಮಗ್ಗೆಗೆ ಹೋಗಬೇಕು
* ಮಕ್ಕಳು ವಿದ್ಯಾಭ್ಯಾಸಕ್ಕೆ ೧೧ ಕಿ.ಮೀ. ದೂರದ ಅರಕಲಗೂಡಿಗೆ ಹೋಗುತ್ತಾರೆ
* ಇತರರಂತೆ ಗೌರಿ, ದೀಪಾವಳಿ, ಸಂಕ್ರಾಂತಿ, ರಾಮನವಮಿ ಹಬ್ಬಗಳನ್ನು ಆಚರಿಸುತ್ತಾರೆ.



27)ನಾನೇ ಬೆಳೆದ ಶುಂಠಿ: ರಘುನಾಥ್:ನಿಲುವಾಗಿಲು

ವಿಳಾಸ: ಶ್ರೀ ಎಂ.ಎಸ್.ನಾಗರಾಜ್ / ಶ್ರೀ ರಘುನಾಥ್, ನಿಲುವಾಗಿಲು, ದೊಡ್ಡಮಗ್ಗೆ ಮಾರ್ಗ, ಅರಕಲಗೂಡು ತಾಲ್ಲೂಕು

ದೂರವಾಣಿ: ನಾಗರಾಜ- 252509(08175) / ರಘುನಾಥ್- 2552571 (08175)

ಸಂದರ್ಶನ : 13-12-2002

೪. ಕಷ್ಟದಿಂದ ಕಾಸು ಗಳಿಸಿದ ನವಿಲೆ ಕೇಶವಮೂರ್ತಿ

ನವಿಲೆಯಲ್ಲಿ ಎಂ.ಎಸ್.ಕೇಶವಮೂರ್ತಿಯವರು ಮುಸುಕಿನ ಜೋಳ ಮತ್ತು ತಂಬಾಕಿನಿಂದ ತಮ್ಮ ಅಭಿವೃದ್ಧಿ ಕಂಡರು. ಇವರ ಮೂವರು ಮಕ್ಕಳನ್ನು ಭೂಮಿತಾಯಿ ದೂರ ಕಳುಹಿಸಿಲ್ಲ.

ಅರಕಲಗೂಡು ತಾಲೂಕು ಮಲ್ಲರಾಜಪಟ್ಟಣದ ವೆಂಕಟೇಶ್‌ರವರ ಮನೆಯಲ್ಲಿ ನಾನು ಉಪ್ಪಿಟ್ಟು ತಿನ್ನುವಾಗ ಸಮಯ ೧೧.೩೦ ಮೀರಿತ್ತು. ತಿಂಡಿ ಸೇವಿಸುತ್ತಾ 'ಇಲ್ಲಿ ಕಷ್ಟಪಟ್ಟು ದುಡಿದು ಬೆಳವಣಿಗೆಯಾಗಿರುವ ವ್ಯಕ್ತಿಗಳು ಸಿಗಬಹುದಾ?' ಎಂದಾಗ, 'ಹೌದು, ಇಲ್ಲೊಬ್ಬರು ಕೇಶವಮೂರ್ತಿ ಅಂತ ಇದಾರೆ. ಕಟ್ಟೆಪುರಕ್ಕೆ ಹೋಗುವ ದಾರಿಯಲ್ಲಿ ಕೀರನಕಟ್ಟೆ ಊರು ಸಿಗುತ್ತೆ. ಅಲ್ಲೇ ಎಡಕ್ಕೆ ಮನೆ ಸಿಗುತ್ತೆ' ಎಂದು ವೆಂಕಟೇಶ್ ಪ್ರತಿಕ್ರಿಯಿಸಿದರು. ನವಿಲೆಯ ಅವರ ಮನೆಯನ್ನು ತಲುಪಿದಾಗ ಸಮಯ ೧೧ ಮೀರಿತ್ತು. ಗ್ರಾಮಸ್ಥರೊಂದಿಗೆ ಮಾತನಾಡುತ್ತಾ ಕುಳಿತಿದ್ದ ಕೇಶವಮೂರ್ತಿಯವರು 'ಕಾಫಿ ಕುಡೀತೀರೋ, ಟೀ ಬೇಕೋ' ಎಂದರು.

ಗ್ರಾಮಸ್ಥರು ಬಹಳ ಹೊತ್ತು ಇರಲಿಲ್ಲ. ಅವರು ಆ ಕಡೆ ಹೊರಟಾಗ 'ನಾವಿನ್ನು ತೋಟಕ್ಕೆ ಹೋಗೋಣವೇ?' ಎಂದೆವು. 'ನಡೀರಿ, ಹೋಗೋಣ' ಎಂದರು ಕೇಶವಮೂರ್ತಿಗಳು. ಮನೆಯ ಪಕ್ಕದಲ್ಲೇ ಜಮೀನು. ದೂರದ ದಾರಿಯಲ್ಲಿ ಸಾಗಬೇಕಾಗಿಲ್ಲ. ಹೆಜ್ಜೆ ಹಾಕುತ್ತಾ ವಿಷಯ ಕೆದಕುತ್ತಾ ಸಾಗಿದೆವು.

ನಿಮ್ಗೆ ಎಷ್ಟು ವಯಸ್ಸು ಇರಬಹುದು?
ಈಗ ನನ್ಗೆ ೬೭. ನಾನು ಈ ಜಾಗಕ್ಕೆ ಬಂದದ್ದು ೧೯೬೨ರಲ್ಲಿ. ಮೂಲ ಊರು ನಂದು ಮಾದಾಪುರ. ನಾವು ಏಳು ಜನ ಅಣ್ಣತಮ್ಮಂದಿರು. ಮೂವರು ಓದಿದ್ರು, ನೌಕರಿಯಲ್ಲಿ ಸೇರಿಕೊಂಡ್ರು, ಇನ್ನುಳಿದ ನಾಲ್ಕು ಜನ ಬೇಸಾಯ ಮಾಡ್ತಾ ಇದೀವಿ.

ಯಾಕೆ ಇಲ್ಲಿಗೆ ಬಂದ್ರಿ?
ನನ್ನ ತಂದೆಗೆ ಪಿತ್ರಾರ್ಜಿತ ಜಮೀನು ಒಂದೂವರೆ ಎಕರೆ ಬಾಗಾಯಿತು, ಒಂದು ಎಕರೆ ಗದ್ದೆ ಬಂತು. ಇಷ್ಟರಲ್ಲಿ ಎಲ್ರೂ ಜೀವನ ಮಾಡೋದು ಕಷ್ಟ ಅಲ್ವೇ? ಆ ಸಲುವಾಗಿ ಈ ಕಡೆ ಬಂದೆ. ಆಗ ಇನ್ನೂ ಒಟ್ಟಿಗೆ ಇದ್ವಿ. ಆಗ ಅಡಿಕೆ ವ್ಯಾಪಾರ ಮಾಡ್ತಾ ಇದ್ದೆ. ಅದರಿಂದ ಸಿಕ್ಕ ಹಣ, ಅಲ್ದೇ ಪಂಪ್‌ಸೆಟ್ ಇಟ್ಟು ಬೇರೆಯವರ ಜಮೀನಿನಲ್ಲಿ ನೂರಾರು ಖಂಡುಗಾ ಭತ್ತ ಬೆಳೀತಾ ಇದ್ವಿ, ಈ ಹಣ - ಈ ಕಡೆ ತಂದು ಜಮೀನು ಖರೀದಿ ಮಾಡಿದೆ.

ಆಗೆಲ್ಲಾ ಏನು ಬೆಲೆ ಇತ್ತು ಜಮೀನಿಂದು?
ಇಲ್ಲಿ ೧೦,೦೦೦ ರೂಪಾಯಿಗೆ ೨೦ ಎಕ್ರೆ ಜಮೀನು ಕೊಂಡುಕೊಂಡೆ. ಇದೆಲ್ಲಾ ಖುಷ್ಕಿ.


ನವಿಲೆಯ ತೆಂಗಿನ ತೋಟ

ನೀವು ಹೇಗೆ ಜೀವನ ಶುರು ಮಾಡ್ಕೊಂಡ್ರಿ ಹೇಳಿ?
ಇದು ಬೇಚರಾಕ್ ಗ್ರಾಮ. ಯಾವ ಮನೇನೂ ಇರ್ಲಿಲ್ಲ. ಹುಲ್ಲು ಗುಡಿಸ್ಲು ಹಾಕ್ಕೊಂಡು, ಜಮೀನು ಹತ್ರಾನೇ ಒಂದು ವರ್ಷ ಇದ್ದೆ. ಮೊದ್ಲು ಅಡಿಕೆ ಹಾಕಿದೆ. ಮಾದಾಪುರದಿಂದ ಸಸೀನ ತಂದೆ. ಆದ್ರೆ ಮೂರನೇ ವರ್ಷದಲ್ಲಿ ಎಟ್ಟೆ ಬಂದು, ನೀರು ಇಲ್ಲದಲೇ ಗಿಡ ಹೋಗಿ ಬಿಟ್ಟವು. ೧೫೦೦ ಗಿಡ ಪೂರ್ಣ ಹೋಗಿಬಿಟ್ಟವು. ಮತ್ತೆ ೮೦ರ ನಂತರ ಅಲ್ಲಿ ಅಡಿಕೆ ನೆಟ್ಟೆ. ಬಾಗಾಯಿತು ಜಮೀನಿನಲ್ಲಿ ಸೋತು ಯೋಚನೆ ಮಾಡ್ತಾ ಇರುವಾಗ ಖುಷ್ಕಿ



ಸುಣ್ಣ ಬೇಯಿಸ್ಲಿಕ್ಕೆ ತಗೊಂಡು ಹೋಗ್ತೀನಿ ಸ್ವಾಮಿ:ನವಿಲೆ

ಕಡೆ ಹೋಗೋಣ ಎಂದು ನಿರ್ಧರಿಸಿದೆ. ಆ ಸಂದರ್ಭಕ್ಕೆ ಅರಕಲಗೂಡಿನ ಬಿಡಿಓ ನನ್ನ ಜಮೀನಿನ ಹತ್ರ ಬಂದು (ಸುಮಾರು ೬೫-೬೬ರ ಸಮಯ) 'ಹೈಬ್ರಿಡ್ ಮುಸುಕಿನ ಜೋಳಾನಾ, ಗೊಬ್ಬರಾನಾ ಪುಕ್ಕಟೆ ಕೊಡ್ತೀನಿ, ಹಾಕಿ ನೋಡಿ' ಎಂದಾಗ ಮರುದಿನವೇ ಗಾಡಿ ಹೊಡಕೊಂಡು ಹೋಗಿ ತಗಂಡು ಬಂದೆ.

ಎಷ್ಟು ಎಕರೆಗೆ ಹಾಕಿದ್ರಿ? ಇಳುವರಿ ಏನು ಬಂತು? ಹಣ ಎಷ್ಟು ಸಿಕ್ಕಿತು?

ಐದು ಎಕರೆಗೆ ಮುಸುಕಿನ ಜೋಳ ಹಾಕಿದೆ. ಆಗ ಬಹಳ ಕ್ಷಾಮ. ಹಸಿ ಕಾಳನ್ನೇ ತಗೊಂಡು ಹೋಗಿ ಬೇಯಿಸ್ಕೊಂಡು ತಿನ್ತಿದ್ರು. ಮುಂಗಾರು ಬೆಳೆ ಚೆನ್ನಾಗಿ ಬಂತು. ಒಂದು ಎಕರೆಗೆ ೨೦ ಪಲ್ಲದಂತೆ ಒಟ್ಟು ೧೦೦ ಪಲ್ಲ ಕಾಳು ಸಿಕ್ತು. ಕೊಡಗಿನಿಂದ ಜನ ಬಂದು ಹಸಿ ಕಾಳನ್ನೇ ಇನ್ನೂ ಒಣಗೋದಕ್ಕಿಂತ ಮುಂಚೆ ತಗೊಂಡು ಹೋದ್ರು. ಪಲ್ಲಕ್ಕೆ ೮೦ ರೂಪಾಯಿ ಬೆಲೆ ಸಿಕ್ಕಿತು. ಐದು ಎಕ್ರೆಗೆ ೧೫೦೦ ರೂಪಾಯಿ ಖರ್ಚಾಗಿತ್ತೋ ಏನೋ, ಒಳ್ಳೆ ಲಾಭ ಸಿಕ್ತು. ಎರಡು ತಿಂಗಳು ಇಡೀ ರಾತ್ರಿ ಕಾದು ಹಂದಿ ಕಾಟ ತಪ್ಪಿಸಿ ಬೆಳೆದೆ. ಇಲ್ಲೆಲ್ಲಾ ಅಷ್ಟೊಂದು ಹಂದಿಗಳು ಇದ್ದವು. ಮುಸುಕಿನ ಜೋಳದಿಂದ ಬಂದ ಹಣಾನ ಸಾಲ ತೀರಿಸಲಿಕ್ಕೆ ಬಳಸಿದೆ. ಕಟ್ಟೇಪುರದ ಸೊಸೈಟಿಗೆ ಹಣ ಕಟ್ಟಿದೆ. ಮೂರು ವರ್ಷ ಮುಸುಕಿನ ಜೋಳ ಬೆಳೆದೆ. ವರಲಕ್ಷ್ಮಿ ಹತ್ತಿ ಹಾಕಿ ಎಕ್ರೆಗೆ ಆರು ಕ್ವಿಂಟಾಲ್ ಅರಳೆ ಬೆಳೆದಿದ್ದೆ.

ಯಾವಾಗ ಇಲ್ಲಿ ಮನೆ ಕಟ್ಟಿದ್ರಿ?

೧೯೭೧ರಲ್ಲಿ ನಾಡಹೆಂಚಿನ ಮನೆ ಕಟ್ಟಿದೆ. ಮೊದ್ಲು ಭಾವಿ ತೋಡಿಯೇ ಮನೆ ಕಟ್ಲಿಕ್ಕೆ ಶುರು ಮಾಡಿದೆ. ೩೦ ಅಡಿ ಆಳ ಇದೆ ಭಾವಿ. ಯಾವಾಗ್ಲೂ ೧೦-೧೫ ಅಡಿ ನೀರು ಇರುತ್ತೆ. ಇಲ್ಲಿ ಇರೋ ಹದಿನೈದು ಒಕ್ಕಲಿಗೂ ಇದೇ ಭಾವಿ ನೀರು ಕೊಡುತ್ತೆ. ಒಳ್ಳೆ ನೀರು. ಇದುವರೆಗೂ ಬತ್ತಿಲ್ಲ.



ಪರ್ಯಾಯ ಬೆಳೆ ತೇಗ:ಹಿರಿಯಮಗನೊಂದಿಗೆ ಎಂ.ಎಸ್.ಕೇಶವಮೂರ್ತಿಯವರು:ನವಿಲೆ

ಕೇಶವಮೂರ್ತಿಯವರು ತಮ್ಮ ಮೊದಲ ತೋಟ ತೋರಿಸಿದರು. 'ಈಗ ಹಾರಂಗಿ ನಾಲೆ ಬಂದ ಮೇಲೆ ನೀರಿಗೆ ತೊಂದ್ರೆ ಇಲ್ಲ. ಈ ನಾಲೆ ಬರೋದಕ್ಕಿಂತ ಮುಂಚೆ ಬೋರ್ ಹಾಕ್ಸಿದ್ದೆ. ಸ್ಪ್ರಿಂಕ್ಲರ್ ಮಾಡಿ ಕಡಲೆಕಾಯಿ, ಹತ್ತಿ, ರಾಗಿ ಬೆಳೀತಾ ಇದ್ದೆ' ಎಂದಾಗ ಪ್ರಶ್ನೆಗಳು ಮುಂದುವರೆದವು.

ಕೇಶವಮೂರ್ತಿಯವರೇ, ನೀವು ಏನು ಓದಿದ್ದು?

ನಾನು ಓದಿದ್ದು ಐದನೇ ಕ್ಲಾಸ್. ಅದ್ಯಾಕೋ ನಮ್ಮಪ್ಪ ಓದಿಸ್ಲಿಕ್ಕೆ ಆಸಕ್ತಿ ತೋರಲಿಲ್ಲ. ಕೆಲಸ ಕಾರ್ಯಗಳಿಗೋಸ್ಕರ ಬಿಡ್ತಾ ಇರ್ಲಿಲ್ಲ. ನಾನು ಮೂರ್ನೆಯೋನು.



ಬತ್ತ ಬೆಳೆಯೋಕೆ ನೀರಿನ ಅಭಾವ ಇಲ್ಲಿಲ್ಲ:ಅರಿಯ ಗುಡ್ಡೆಯ ಮುಂದೆ ಮಗನೊಂದಿಗೆ
ಎಂ.ಎಸ್.ಕೇಶವಮೂರ್ತಿಯವರು:ನವಿಲೆ

ಮಕ್ಕಳು ಎಷ್ಟು ಜನ, ಅವರ ವಿದ್ಯಾಭ್ಯಾಸ ಹೇಗೆ?

ನನ್ಗೆ ಒಟ್ಟು ಐದು ಜನ ಮಕ್ಕಳು. ಇಬ್ರು ಹೆಣ್ಣು ಮಕ್ಕಳು, ಮೂರು ಗಂಡು. ಎಲ್ರದ್ದೂ ಮದ್ವೆ ಆಗಿದೆ. ಗಂಡು ಮಕ್ಕಳು ಇಬ್ರು ನಾನು ಓದಿಸ್ಬೇಕು ಅಂದ್ರೂ ಹೆಚ್ಗೆ ಓದ್ಲಿಲ್ಲ. ಎರಡನೇ ಮಗ ಎಂ.ಎಸ್ಸಿ.ಮಾಡ್ಕೊಂಡ. ಆದ್ರೆ ಆತನಿಗೆ ನೌಕರಿ-ಗೀಕರಿ ಸಿಗ್ಲಿಲ್ಲ.

ಒಟ್ಟು ಹಿಡುವಳಿ ಎಷ್ಟು?

೩೫ ಎಕರೆ. ತೆಂಗು-೧೫ ಎಕರೆಯಲ್ಲಿ ಇದೆ, ಅಡಿಕೆ -೧೦ ಎಕ್ರೆಯಲ್ಲಿ ಇದೆ. ಭತ್ತ -೧೦ ಎಕರೆ ಮಾಡ್ತೀವಿ.

ನೀರಾವರಿಗೆ ಏನು ಮಾಡ್ಕೊಂಡಿದೀರಿ?

ಎರಡು ಭಾವಿ ಇವೆ. ಒಂದು ೧೫ ಅಡಿ ಆಳ, ಇನ್ನೊಂದು ೨೫ ಅಡಿ ಆಳ ಇದೆ. ಹದಿನೈದು ಅಡಿ ಆಳದ್ದು ಅಗಲವಾಗಿದೆ, ೨೫ ಅಡಿ ಆಳದ್ದು ಕಲ್ಲುಕಟ್ಟಡ ಆಗಿ ದುಂಡಗೆ ಇದೆ. ಇದುವರೆಗೆ ನೀರಿಂದು ತೊಂದ್ರೆ ಆಗಿಲ್ಲ. ಒಂದೇ ಪಂಪುಸೆಟ್ ಇದೆ - ಹತ್ತು ಹೆಚ್.ಪಿ.ದು.

ಹಾರಂಗಿ ನೀರು ಸಿಗುತ್ತಾ ನಿಮ್ಗೆ?

ಹೌದು, ಆರು ತಿಂಗಳು ಮುಂಗಾರಿನಲ್ಲಿ ಭತ್ತ ಬೆಳೀಲಿಕ್ಕೆ ಸಿಗುತ್ತೆ.

ಯಾವ ಭತ್ತ ಹಾಕ್ತೀರಿ? ಏನು ಇಳುವರಿ?

ರಾಜಮುಡೀನೇ ಜಾಸ್ತಿ. ಎಕರೆಗೆ ೨೦ ಚೀಲ ಬರುತ್ತೆ. ಈಗೆಲ್ಲಾ ಕಮ್ಮಿ ಆಗಿದೆ.

ಯಾಕೆ ಸುಧಾರಿತ ತಳಿಗಳನ್ನು ಬೆಳೆದಿಲ್ಲ?

ಎಲ್ಲದನ್ನೂ ಹಾಕಿದೀವಿ, ರೋಗ-ಕೀಟ ಇದಕ್ಕೆ ಕಮ್ಮಿ, ಹುಲ್ಲು ಹೆಚ್ಗೆ ಸಿಗುತ್ತೆ, ಬೆಲೇನೂ ಸಿಗುತ್ತೆ.

ದನಕರುಗಳು ಎಷ್ಟು ಇವೆ?

ಒಟ್ಟು ೧೫ ರಾಸು ಇದೆ, ಮೂರು ಜನ್ರಿಂದ.

ಮೂವರು ಗಂಡು ಮಕ್ಕಳೂ ಒಟ್ಟಿಗೆ ಇದಾರಾ?

ಮೂವರಿಗೂ ಮೂರು ಮನೇನ ಮಾಡಿದೀನಿ, ಮೂರು ಭಾಗ ಜಮೀನು ಮಾಡಿ ಹಂಚಿದೀನಿ. ಮೂವರಿಗೂ ತೆಂಗು, ಅಡಿಕೆ, ಗದ್ದೆ ಬರೋ ರೀತಿ ಕೊಟ್ಟಿದೀನಿ. ನನ್ಗೆ ಇಟ್ಕೊಂಡಿಲ್ಲ. ರಾಮನಾಥಪುರದಲ್ಲಿ ಹತ್ತು ಮಳಿಗೆ ಇವೆ. ತಂಬಾಕು ಬೆಳೆಯ ದುಡ್ಡಿನಿಂದ ಕಟ್ಟಿಸಿದೆ. ಬಾಡಿಗೆ ತಿಂಗಳಿಗೆ ೮,೦೦೦ ರೂಪಾಯಿ ಬರುತ್ತೆ.

ತಂಬಾಕು ಯಾವಾಗ್ಲಿನಿಂದ ಬೆಳೀತಾ ಇದೀರಿ?

೧೯೭೦ರಲ್ಲಿ ನಾನು ಶುರು ಮಾಡಿದೆ. ಇಷ್ಟೇ ಕೆ.ಜಿ. ತಗೊಂಡು ಹೋಗ್ತೀನಿ ಅಂತ ಬರೀಬೇಕಾಗಿತ್ತು. ಎಲ್ಲೂ ಮಾರೋಹಾಗಿಲ್ಲ. ಲೈಸನ್ಸ್ ಬೇಕಾಗಿತ್ತು. ವರ್ಷ ಮೂರ್‍ನಾಲ್ಕು ಸಾವಿರ ಕೆ.ಜಿ. ಬೆಳೀತಾ ಇದ್ದೆ. ನಂದು ಮೂರು ಬ್ಯಾರನ್ ಇದ್ದವು. ಹತ್ತಾರು ವರ್ಷ MTC (ಮೈಸೂರು ಟೊಬ್ಯಾಕೋ ಕಂಪನಿ) ಮತ್ತು ITC ಎರಡೇ ಇದ್ದವು. ಆಗ ಬೆಲೆ ಕಿ.ಗ್ರಾಂ.ಗೆ ಮೂರು ರೂಪಾಯಿ. ನಾಲ್ಕು ಎಕರೆಗೆ ಮೊದ್ಲ ವರ್ಷ ೧೮೪೧ ಕಿ.ಗ್ರಾಂ. ಎಲೆ ಬಂತು, ದುಡ್ಡು ೫೫೮೨ ರೂಪಾಯಿ.

ಇದ್ರಲ್ಲಿ ಎಷ್ಟು ಉಳೀತಾ ಇತ್ತು?
ಸಾಧಾರಣ ಅರ್ಧ ಭಾಗ ಉಳೀತಾ ಇತ್ತು. ಖರ್ಚು ಕಮ್ಮಿ ಇತ್ತು. ಸೌದೆ ಆರಾಮಾಗಿ ಸಿಕ್ಕೋದು. ಆಳುಕಾಳು ಖರ್ಚು ಕಮ್ಮಿ.

ತಂಬಾಕು ಬೆಳೆ ಯಾಕೆ ನಿಮ್ಮಲ್ಲಿ ಕಮ್ಮಿಯಾಯ್ತು?
ಇಲ್ಲಿಯವರೆಗೂ ಬೆಳೆದ್ವಿ. ನೀರಾವರಿ ಆಗಿದ್ರಿಂದ ಕಮ್ಮಿ ಆಯ್ತು. ನೀರಾವರೀದು ಬೆಲೆ ಕಮ್ಮಿ, ಇಷ್ಟಪಡಲ್ಲ. ಘಾಟು ಕಮ್ಮಿ. ಈಗ ನನ್ನ ಎರಡನೇ ಮಗ ಸ್ವಲ್ಪ ಬೆಳೀತಾ ಇದಾನೆ.

ತಂಬಾಕು ನಿಮ್ಮನ್ನು ಬೆಳೆಸಿತಾ?
ನಮ್ಗೆ ಹಣದಲ್ಲಿ ಅನುಕೂಲ ಆಯ್ತು. ಬ್ಯಾಂಕಿನೋರು ಸಾಲ ಕೊಟ್ರು. ಬೆಳವಣಿಗೆ ಆಗ್ಲಿಕ್ಕೆ ಸಾಧ್ಯ ಆಯ್ತು.

ನಿಮ್ಮ ತೋಟದಲ್ಲಿ ವಿಳ್ಳೇದೆಲೆ ಕಾಣಿಸ್ತಾ ಇಲ್ಲ. ಯಾಕೆ ನಿಮ್ಗೆ ಇಷ್ಟ ಇಲ್ವಾ?
ಅದನ್ನು ಬೆಳೆಸಬೇಕಾದ್ರೆ ಸದಾ ಒಬ್ರು ಕೆಲಸ ಮಾಡ್ಬೇಕು. ಮೊದ್ಲು ಸ್ವಲ್ಪ ಹಾಕಿದ್ವೆ. ಆದ್ರೆ ಅದನ್ನು ಹೆಚ್ಗೆ ಮಾಡ್ಲಿಲ್ಲ. ಆದ್ರೆ ಮಾದಾಪುರದಲ್ಲಿ ನಮ್ಗೆ ವಿಳ್ಳೇದೆಲೆ ಉಪಕಾರಕ್ಕೆ ಬರ್ತಿತ್ತು. ನಾವೇ ಸಂತೆಗೆ ತಗೊಂಡು ಹೋಗ್ತಿದ್ವಿ.

ತೋಟದಲ್ಲಿ ಬಾಳೆ ಇದೆ. ಆ ಬಗ್ಗೆ ಹೇಳಿ.
ಮೊದ್ಲು ಕಾಡುಬಾಳೆ, ಮರಬಾಳೆ ಹೆಚ್ಚಾಗಿ ಇತ್ತು. 'ಕಟ್ಟೆ' ಬಂದು ಹೋಯ್ತು. ಈಗ ಪುಟ್ಟಬಾಳೆ ಇದೆ. ಪರವಾಗಿಲ್ಲ.

ಕಾಡುಬಾಳೆ, ಮರಬಾಳೆಯ ವಿಶೇಷ ಗುಣ ಏನು?
ಇದು ಹೆಚ್ಚು ಶೀತಾನಾ ಇಷ್ಟಪಡುತ್ತೆ. ಒಂದೊಂದು ಗೊನೆಯಲ್ಲಿ ೧೦೦-೧೫೦ ಕಾಯಿ. ಎತ್ತರವಾಗಿ ಬೆಳೆಯುತ್ತೆ, ಬೀಳಲ್ಲ. ಹಣ್ಣು ಹೆಚ್ಚು ಸಿಹಿಯಾಗಿರುತ್ತೆ. ಹಣ್ಣು ಬಾಳಿಕೆ ಬರುತ್ತೆ. ಬೆಲೆಯಲ್ಲಿ ಪುಟ್ಟಬಾಳೇನೇ ಒಳ್ಳೆಯದು.

ಬಾಳೇನ ಎಲ್ಲಿ ಮಾರ್ತೀರಿ?
ಇಲ್ಲೇ ರಾಮನಾಥಪುರದಲ್ಲಿ ಹೋಗುತ್ತೆ.

ಅಡಿಕೆ ತಳಿ, ಇಳುವರಿ ಹೇಗಿದೆ?
ನಮ್ಮಲ್ಲಿ 'ಮಂಗಳಾ'ನೂ ಇದೆ. ಅದಕ್ಕಿಂತ ನಾಟಿ ತಳೀನೇ ಒಳ್ಳೆಯದು. ಮಂಗಳಾನ ಗೋಟು ಮಾಡ್ಲಿಕ್ಕೆ ಮಾತ್ರ ಬಳಸಬಹುದು. ಚೂರು ಮಾಡಿದ್ರೆ ಬೆಲೆ ಸಿಗಲ್ಲ. ಅದಕ್ಕೆ ನಾಟಿ ತಳಿಯೇ ನಮ್ಮಲ್ಲಿ ಹೆಚ್ಚು ಇದೆ. ಮಂಗಳಾದಲ್ಲಿ ಹಸ ಬರಲ್ಲ, ಒರಟು.

ಅಡಿಕೇನ ಹೇಗೆ ಮಾರಾಟ ಮಾಡ್ತೀರಿ?
ನಮ್ಮ ಸ್ವಂತದ್ದನ್ನು ನಾವು ಬೇಯಿಸಿ ಮಾರ್ತೀವಿ. ಬಲಿತಿದ್ದನ್ನು ಗೋಟು ಮಾಡಿ ಮಾರ್ತೀವಿ. ಮಾರ್ಕೆಟ್ ಇರೋದೆ ಹೋಳು ಅಡಿಕೆಗೆ. ಅದ್ರಿಂದ ನಾವು ಹೋಳು ಮಾಡಿ ಮಾರಾಟಕ್ಕೆ ತಗೊಂಡು ಹೋಗ್ತೀವಿ. ಹಳೆಯ ತೊಗರು ಇಟ್ಕೊಂಡಿರ್ತೀವಿ. ಬೇಯಿಸುವಾಗ ಮೊದ್ಲು ಬಳಸಿದ್ರೆ ಒಳ್ಳೆ ಬಣ್ಣ ಬರುತ್ತೆ. ಇಲ್ಲದಿದ್ರೆ ಮೊದಲು ಎರಡು ಸಾರೀದೂ ಸರಿಯಾಗಿ ಬಣ್ಣ ಬರಲ್ಲ.

ಎಲ್ಲಿಗೆ ತಗೊಂಡು ಹೋಗ್ತೀರಿ?
ಶಿವಮೊಗ್ಗಕ್ಕೆ.


ಪುಟ್ಟಬಾಳೆ ದೊಡ್ಡದಾಗಿದೆಯಲ್ಲವೆ?:
ಎಂ.ಎಸ್.ಕೇಶವಮೂರ್ತಿಯವರು:ನವಿಲೆ

ಅಡಿಕೆ, ತೆಂಗು, ಬಾಳೆಗೆ ನೀರು ಹೇಗೆ ಕೊಡ್ತೀರಿ?
ನೀರು ಹಾಯಿಸ್ತಾ ಇರೋದೇ...

ಬೆಳೆಗಳಿಗೆ ಗೊಬ್ಬರ?
ದನದ ಗೊಬ್ಬರ, ಸುಫಲಾ ಹಾಕ್ತೀವಿ. ಬೇವಿನ ಹಿಂಡಿ, ಇತ್ಯಾದಿಗಳನ್ನು ಹಾಕೇ ಇಲ್ಲ. ಹೊಸ ಮಣ್ಣನ್ನು ವರ್ಷಕ್ಕೊಮ್ಮೆ ಕೊಡ್ತೀವಿ. ಕೆಬ್ಬೆ ಮಣ್ಣು, ನಮ್ಮ ಜಮೀನುಗಳಿಗೆ ಒಳ್ಳೆಯದು.

ಅಡಿಕೆಗೆ ಅಣಬೆ ರೋಗ ಹೇಗಿದೆ?
ಆಕಸ್ಮಿಕ, ಬಹಳ ಕಮ್ಮಿ.


ಹೇರಳವಾಗಿ ಕೆಲಸ ಮಾಡಿರುವ ಟ್ರ್ಯಾಕ್ಟರ್ ಈಗ ಹಳೆಯದಾಗಿದೆ:ಚಾಲಿಸಲು ಸಿದ್ಧರಾದ ಹಿರಿಯಮಗನ ಜತೆ ಎಂ.ಎಸ್.ಕೇಶವಮೂರ್ತಿಯವರು:ನವಿಲೆ

ತೆಂಗಿನ ಇಳುವರಿ ಹೇಗಿದೆ?
ನುಸಿ ಬಂದ ಮೇಲೆ ಬಹಳ ಕಮ್ಮಿಯಾಗಿದೆ. ಒಟ್ಟು ೭೦೦ ಮರದಿಂದ ೧೫,೦೦೦ ಕಾಯಿ ಬರ್ತಿತ್ತು. ಈಗ ೪,೦೦೦ ಕಾಯಿ ಒಳಗೆ. ಅದೂ ಸಣ್ಣ ಗಾತ್ರದ್ದು. ಇಂಥ ಕಾಯನ್ನೇ ನೋಡಿದ್ದಿಲ್ಲ.

ಇಲ್ಲಿ ತೇಗದ ಗಿಡಗಳು ಕಾಣಿಸ್ತಾ ಇದಾವೆ. ಏನು ನಿಮ್ಮ ಈ ಹೊಸ ಪ್ರಯತ್ನ?
ಒಂದು ಸಾವಿರ ಸಸಿ ಹಾಕಿದ್ದೀವಿ. ಅರ್ಧ ಹೋಗಿದೆ. ಶೀತ ಆಗಿದ್ದರಿಂದ ಹೀಗಾಯ್ತು. ಮುಂದೆ ಯಾವತ್ತೋ ಒಂದು ದಿವ್ಸ ಒಳ್ಳೆ ಆದಾಯ ಸಿಗಬಹುದು ಅಂತ ಹಾಕಿದೀವಿ. ಗಿಡದಿಂದ ಗಿಡಕ್ಕೆ ಆರೂವರೆ ಅಡಿ ಇಟ್ಟಿದೀವಿ. ಮುಂದೆ ಮಧ್ಯದವು ತೆಗೀಬೇಕು. ಹಾಕಿ ಮೂರು ವರ್ಷ ಆಯ್ತು. ಎರಡು ಎಕ್ರೆಯಲ್ಲಿ ಗಿಡ ಇವೆ.

ಎಷ್ಟು ವರ್ಷ ನೀವು ಕೈಮುಟ್ಟಿ ದುಡಿದ್ರಿ?
ನಾನು ಹದಿನಾರು ವರ್ಷದಿಂದ ದುಡಿದಿದೀನಿ. ಈಗ ನಾಲ್ಕು ವರ್ಷದಿಂದ ಶ್ರಮ ಬಿಟ್ಟಿದೀನಿ.


ಅಡುಗೆ ಮಾಡಲು ಆಸರೆ-ಈ ಸಗಣಿ ಅನಿಲಯಂತ್ರ:ನವಿಲೆ

(ಒಂದು ಸುತ್ತು ತೋಟವನ್ನೆಲ್ಲಾ ನೋಡಿಕೊಂಡು ಮನೆ ಹತ್ತಿರ ಬರುತ್ತಿದ್ದಾಗ ಹಳೆಯ ಟ್ರ್ಯಾಕ್ಟರ್‌ವೊಂದು ಗಮನಕ್ಕೆ ಬಂತು.)

ಎತ್ತಿನಗಾಡಿ, ಎತ್ತು ಇದೆಯಾ?
ಇದೆ, ಟ್ರ್ಯಾಕ್ಟರ್ ಇದೆ. ೧೯೭೬ರಲ್ಲಿ ಟ್ರ್ಯಾಕ್ಟರನ್ನು ತಗೊಂಡಿವಿ. ಚನ್ನಾಗಿ ದುಡಿದಿದೆ. ಆಗ ೧,೨೦,೦೦೦ ರೂಪಾಯಿ ಬಿತ್ತು(ಟ್ರೈಲರ್, ಕಲ್ಟಿವೇಟರ್ ಎಲ್ಲಾ ಸೇರಿ). ಏಳೆಂಟು ವರ್ಷ ಬಾಡಿಗೆ ಹೊಡೆದ್ವಿ.

ನಿಮಗೆ ಟ್ರ್ಯಾಕ್ಟರ್ ಹೇಗೆ ಬಳಕೆಯಾಗಿದೆ?
ಉಳುಮೆಗೆ, ಹೇರ್ಲಿಕ್ಕೆ, ಮಟ್ಟ ಮಾಡ್ಲಿಕ್ಕೆ ಬಳಸಿದೀವಿ.



ಪೇಟೆಯವರಿಗಿಂತ ಇವರೇನೂ ಕಮ್ಮಿ ಇಲ್ಲ: ಎಂ.ಎಸ್.ಕೇಶವಮೂರ್ತಿ:ನವಿಲೆ

(ಮುಂದೆ ಸಾಗಿದಂತೆ ಮನೆಯ ಬಳಿಯೇ ಅನಿಲ ಘಟಕ ಕಂಡಿತು.)

ಇದನ್ನು ಯಾವಾಗ ಮಾಡಿಸಿದ್ರಿ?
೨೫ ವರ್ಷ ಆಯ್ತು. ಒಂದ್ಸಾರಿ ಡ್ರಮ್ ಬದಲಾವಣೆ ಮಾಡಿಸಿದೀನಿ. ಗ್ಯಾಸ್ ಚೆನ್ನಾಗಿ ಬರುತ್ತೆ. ಅಡುಗೆ ಪೂರ್ಣ ಇದರಿಂದಲೇ ಮಾಡ್ತೀವಿ. ಈಗ ಫೈಬರ್ ಡ್ರಮ್ ಹಾಕಿಸಿದೀವಿ. ಮತ್ತೊಂದು ದೀನಬಂಧು ಮಾದರಿಯದ್ದು ಇದೆ.

ಆಗ ಇದಕ್ಕೆ ಎಷ್ಟು ಖರ್ಚಾಗಿತ್ತು?
ಆಗ ಸಾಲ ೫,೦೦೦ ರೂಪಾಯಿ ಕೊಟ್ಟಿದ್ದರು, ೧,೨೫೦ ರೂ ಸಬ್ಸಿಡಿ ಇತ್ತು.

(ಮನೆಯ ಒಳಗಡೆ ಬಂದು ಕೂತಾಗ ಈ ಊರಿನ ಹುಟ್ಟು, ಬೆಳವಣಿಗೆಯ ನೆನಪಾಯಿತು)

ಇದು ದಾಖ್ಲೆ ಗ್ರಾಮಾನಾ? ಇಲ್ಲಿರೋ ಕುಟುಂಬಗಳು?
ಇದು ರೆವಿನ್ಯೂ ದಾಖ್ಲೆ ಗ್ರಾಮ. ಬೇಚರಾಕ್ ಆಗಿ ನೂರಾರು ವರ್ಷವಾಯ್ತೇನೋ? ಇಲ್ಲಿ ಏಳೂರಮ್ಮ ದೇವಸ್ಥಾನ ಇದೆ. ಏಳುಗ್ರಾಮಗಳಿಗೆ ಗ್ರಾಮದೇವತೆ. ಮಾವನೂರು, ಬಂಗಾರಹಳ್ಳಿ, ಎಡೆಯೂರು ಮತ್ತು ನವಿಲೆ- ಇಷ್ಟೂ ಬೇಚರಾಕ್. ಎಲ್ಲವೂ ಒಂದೇ ಕಡೆ ಇವೆ. ಇಲ್ಲಿ ಈಗ ೧೫ ಕುಟುಂಬ ಇವೆ. ಸಂಕೇತಿಗಳ ಸಂಖ್ಯೆ ೪. ನನ್ನ ಮಕ್ಕಳು ಮೂವರು, ಅಳಿಯ ಒಬ್ಬ. ಉಳಿದವರೆಲ್ಲಾ ಒಕ್ಕಲಿಗರೇ. ಉಪಕಸಬಾಗಿ ಇಬ್ಬರು ಸುಣ್ಣ ಮಾಡ್ತಾರೆ. ನಾನೇ ಎಂಟು ಮನೆ ಕಟ್ಟಿ ವಾಸಕ್ಕೆ ಕೊಟ್ಟೆ. ಮಾರಾಟಕ್ಕೆ ಅಂತಾ ಅಲ್ಲ.

ಇಲ್ಲಿಯ ದೇವಸ್ಥಾನಗಳು, ಆಚರಣೆಗಳು?
ಏಳೂರಮ್ಮ ಮೊದ್ಲಿನಿಂದಲೂ ಇದೆ. ಈಗ ರಾಮಮಂದಿರ ನಾವು ಮಾಡ್ಕೊಂಡಿದೀವಿ. ಮಾಮೂಲಿ ಎಲ್ಲಾ ಹಬ್ಬಗಳನ್ನೂ ಆಚರಿಸ್ತೀವಿ.

ಆರೋಗ್ಯ ಹೇಗಿದೆ ಕೇಶವಮೂರ್ತಿಯವರೇ?
ಚೆನ್ನಾಗಿದೆ. ಯಾವ ರೋಗಾನೂ ಇಲ್ಲ. ನನ್ನ ಪತ್ನಿ ಈಚೆಗೆ ತೀರಿಕೊಂಡರು.

ನಿಮ್ಮ ಬೆಳವಣಿಗೆಯಲ್ಲಿ ನಿಮ್ಮ ಪತ್ನಿಯ ಪಾತ್ರ ಏನು?
ನನ್ನ ಹೆಂಡ್ತಿ ಜಯಲಕ್ಷ್ಮಿ. ಇಲ್ಲಿ ಒಂದೇ ಒಕ್ಕಲು ಇದ್ದಾಗಲೂ ನನ್ನ ಜೊತೆ ಬಂದು ಇದ್ದು ವ್ಯವಹಾರ, ಮನೆಕೆಲಸ, ಮಕ್ಕಳಪಾಲನೆ ನೋಡಿಕೊಂಡ್ರು. ಅವ್ರ ಸಹಕಾರ ಇಲ್ಲದಿದ್ದರೆ ಹೀಗೆ ಬೆಳವಣಿಗೆ ಆಗ್ತಿರಲಿಲ್ಲ.

ಮನುಷ್ಯ ತನ್ನನ್ನು ಸಂಪೂರ್ಣವಾಗಿ ತೊಡಗಿಸಿಕೊಂಡ್ರೆ ಅಭಿವೃದ್ಧಿ ಆಗ್ಲಿಕ್ಕೆ ಸಾಧ್ಯ ಇದೆ



ಪಾಳುಬಿದ್ದಿದ್ದ ಗುಡಿಗೆ ಕಾಯಕಲ್ಪ ನೀಡಿದ್ದಾರೆ ಎಂ.ಎಸ್.ಕೇಶವಮೂರ್ತಿ:ನವಿಲೆ



ಏಳೂರಮ್ಮನ ಗುಡಿಗೆ ಎಂ.ಎಸ್.ಕೇಶವಮೂರ್ತಿ ಕಾಯಕಲ್ಪ ನೀಡಿದ್ದು 2002ರಲ್ಲಿ:ನವಿಲೆ

ಅಂತ ಹೇಳ್ತೀರಾ ಅಲ್ವಾ?

ಖಂಡಿತಾ. ನಾನು ಇಷ್ಟೆಲ್ಲಾ ಮಾಡಿರೋದು ಬೇಸಾಯ ದಿಂದಲೇ ಹೊರತು ಬೇರೆ ಯಾವುದ್ರಿಂದಲೂ ಅಲ್ಲ.

ಮಕ್ಕಳ ಹೆಸರು ಹೇಳಿ.

ಹಿರಿಯ ಮಗ ಶಂಕರ್, ಮಧ್ಯದ ಮಗ ದತ್ತಾತ್ರಿ, ಕಿರಿಯವ ಶಶಿಧರ್.

ಅಣ್ಣ ತಮ್ಮಂದಿರು?

ನನ್ನ ಅಣ್ಣ ಸುಬ್ರಹ್ಮಣ್ಯ ಅವಧಾನಿ. ಇನ್ನೊಬ್ಬರು ಅಣ್ಣ ರಾಮಸ್ವಾಮಿ ಈಗ ಇಲ್ಲ. ತಮ್ಮಂದಿರಾದ ವೆಂಕಟೇಶಮೂರ್ತಿ, ಸತ್ಯನಾರಾಯಣ ಬೇಸಾಯ ಮಾಡ್ತಾ ಇದಾರೆ. ಪ್ರಸನ್ನಮೂರ್ತಿ ಅಮೇರಿಕಾದಲ್ಲಿ ಇದಾರೆ. ಫಣೀಶ್‌ಮೂರ್ತಿ ಒರಿಸ್ಸಾದಲ್ಲಿ ಇದಾರೆ.

ನಾವು ಕಂಡದ್ದು, ನಮಗನಿಸಿದ್ದು :

* ನವಿಲೆಯ ಎಂ.ಎಸ್.ಕೇಶವಮೂರ್ತಿಯವರು ಮೂರು ಮಕ್ಕಳಿಗೆ ವಿಭಾಗ ಮಾಡಿಕೊಟ್ಟಿದ್ದರೂ ಅನ್ಯೋನ್ಯವಾಗಿ ಜೀವನ ಮಾಡುತ್ತಿರುವುದು ಕಂಡುಬಂತು. ಇಲ್ಲಿಯೇ ಅವರ ಅಳಿಯ ವಾಸವಾಗಿದ್ದಾರೆ.
* ಮನೆಯ ಬಳಿ ಇರುವ ತೆಂಗಿನ ತೋಟಕ್ಕೆ ಪೋಷಣೆ ಸಾಲದು ಎಂಬುದು ನಮ್ಮ ಅನಿಸಿಕೆ. ತೆಂಗಿಗೆ ಕನಿಷ್ಠ ಆರೇಳು ದಿನಕ್ಕೊಮ್ಮೆಯಾದರೂ ನೀರನ್ನು ಕೊಟ್ಟು ಗೊಬ್ಬರವನ್ನು ನೀಡಿದರೆ ಫಸಲು ಉತ್ತಮವಾಗುವುದು. ಮಳೆಯ ನೀರನ್ನು ಸಂರಕ್ಷಿಸಲು ಕ್ರಮ ಕೈಗೊಂಡರೆ ಸೂಕ್ತವಾದೀತು. ಮರಗಳಿಂದ ಉದುರುವ ಗರಿಗಳನ್ನು ಅಲ್ಲೇ ಉಳಿಸಿ ಮಣ್ಣಿಗೆ ಸೇರಿಸುವ ಪ್ರಯತ್ನ ಮಾಡುವುದು ಒಳಿತು.
* ತೆಂಗಿನ ತೋಟದಲ್ಲಿ ಭತ್ತವನ್ನು ಬೆಳೆಯಬಹುದಾದರೂ ಉಳುಮೆ ಮಾಡುವಾಗ ಮರಗಳ ಕಾಂಡಕ್ಕೆ ಪೆಟ್ಟಾಗಬಹುದು. ಮೂರ್‍ನಾಲ್ಕು ತಿಂಗಳು ಸತತವಾಗಿ ನೀರು ಕೊಡುವುದು, ಭತ್ತದ ಕಟಾವಿನ ಬಳಿಕ ಬಹುದಿನ ನೀರನ್ನು ಪೂರೈಕೆ ಮಾಡದೇ ಇರುವುದು ತೆಂಗಿಗೆ ಸೂಕ್ತವಲ್ಲ.
* ತೇಗದ ಗಿಡಗಳಿಗೂ ಆಗಾಗ್ಗೆ ಗೊಬ್ಬರ ಮತ್ತು ನೀರಿನ ಪೂರೈಕೆಯಾದಲ್ಲಿ ಉತ್ತಮ ಬೆಳವಣಿಗೆಯನ್ನು ಕಾಣಬಹುದು.
* ತೋಟದಲ್ಲಿ ಸಾಧ್ಯವಿರುವ ಕಡೆ ಜಾನುವಾರುಗಳಿಗೆ ಹಸಿರು ಮೇವು ಕೊಡುವ ಹಾಲವಾಣ, ನುಗ್ಗೆ, ಅಗಸೆ, ಸುಬಾಬುಲ್, ಇತ್ಯಾದಿ ಮರಗಿಡಗಳನ್ನು ಬೆಳೆಸಿಕೊಳ್ಳುವುದು ಉಪಯುಕ್ತವಾದೀತು.

ವಿಳಾಸ: ಶ್ರೀ ಎಂ.ಎಸ್.ಕೇಶವಮೂರ್ತಿ, ನವಿಲೆಗ್ರಾಮ, ಕಟ್ಟೇಪುರ (ಅಂ.), ಅರಕಲಗೂಡು(ತಾ)

ದೂರವಾಣಿ : 08175- 291200 ಸಂದರ್ಶನ : 22-01-2003

೫. ಮಾದಾಪುರದಲ್ಲಿ ಮುಪ್ಪುಕಾಣದ ಬೇಸಾಯ

ಅಡಿಕೆಯು ಇಲ್ಲಿ ಪ್ರಮುಖವಾದ ಬೆಳೆಯಾದರೂ ಭತ್ತ, ತಂಬಾಕು ಮತ್ತು ಶುಂಠಿಯನ್ನು ಕೈಬಿಟ್ಟಿಲ್ಲ. ಆಸಕ್ತಿ ಇಲ್ಲಿ ಕುಂದಿಲ್ಲ. ಶೇಷಮೂರ್ತಿಯವರ ಬದುಕು ಮಾದರಿ ಅನ್ನಿಸುತ್ತದೆ.

ಅಂದು 2003ನೇ ಇಸವಿಯ ಫೆಬ್ರವರಿ ತಿಂಗಳ ಆರನೇ ತಾರೀಖು. ಅರಕಲಗೂಡು ತಾಲೂಕು ಕಟ್ಟೇಪುರಕ್ಕೆ ತಲುಪಿದಾಗ ಗಂಟೆ ಬೆಳಗ್ಗೆ ಹತ್ತೂವರೆ ಆಗಿತ್ತು. ಕಟ್ಟೇಪುರ ಜಲಾಶಯದ ಪಕ್ಕದಲ್ಲೇ ಸಾಗುತ್ತಾ ಮಾದಾಪುರದತ್ತ ತೆರಳಿದೆವು. ಊರು ತಲುಪಿದಾಗ ಅಂಗಡಿ ರಾಮಶೇಷರಿಗಾಗಿ ಕೇಳಿದೆವು. ಅಂಗಡಿಯತ್ತ ಹೋದ ನಮಗೆ ಸಿಕ್ಕವರು ಅವರ ಪತ್ನಿ.



ಎಲೆಹಂಬು ಇಳಿಸಲು ಗುಂಡಿ ತೋಡುತ್ತಿರುವ ಸುಂದರೇಶ್:ಮಾದಾಪುರ

ಆಮೇಲೆ, ಸುಂದರೇಶ್ ಅವರ ಮನೆಯೊಳಗೆ ಕಾಲಿಟ್ಟು ಪರಿಚಯಿಸಿಕೊಂಡು, ಬಂದ ಉದ್ದೇಶವನ್ನು ಹೇಳಿದಾಗ, ಮನೆಯೊಡತಿ 'ಓ ಹರನ್, ನನ್ನ ಕ್ಲಾಸ್‌ಮೇಟ್, ಹೇಗಿದಾರೆ, ಅವ್ರ ಶ್ರೀಮತಿ ಚೆನ್ನಾಗಿದಾರಾ' ಎಂಬಿತ್ಯಾದಿ ಮಾತುಗಳನ್ನು ಆಡಿ 'ತಿಂಡಿ ತಿನ್ನಿ, ಕಾಫಿ ಕುಡೀರಿ' ಎಂದರು.

'ಅಮ್ಮಾ, ನಿಮ್ಮ ಹೆಸ್ರು ಏನು?' ಎಂದು ಅವರನ್ನು ಕೇಳಿದೆ. 'ನನ್ನ ಹೆಸರು ನಾಗವೇಣಿ. ನಾನು ಹರನ್ ಬಾಲ್ಯದಿಂದಲೂ ಸ್ನೇಹಿತರು. ನಮ್ಮ ಯಜಮಾನ್ರು ಸುಂದರೇಶ್' ಎಂದು ಹೇಳುತ್ತಾ ತಟ್ಟೆಯಲ್ಲಿ ಲಾಡು, ಚಕ್ಕುಲಿ, ಹಾಲನ್ನು ಹಿಡಿದು ತಂದರು. 'ಸಂಕೋಚ ಪಟ್ಕೋಬೇಡಿ' ಎನ್ನುತ್ತಾ ಮಕ್ಕಳ ಬಗ್ಗೆ, ಅತ್ತೆ ಮಾವನ ಬಗ್ಗೆ, ಭಾವಂದಿರ ಬಗ್ಗೆ ಆಗಾಗ್ಗೆ ನಾನು ಕೇಳಿದ ಪ್ರಶ್ನೆಗಳಿಗೆ ಉತ್ತರಿಸ್ತಾ ಇದ್ದರು.

ಲಘು ಉಪಾಹಾರ ತಿಂದು ಹಾಲು ಕುಡಿದು ತೋಟದ ದಾರಿ ಕೇಳಿ ಹೊರಟೆವು. ಅಡಿಕೆ ತೋಟಗಳ ಸಾಲುಗಳಲ್ಲಿ ಸುಂದರೇಶ್ ಎಲ್ಲಿರಬಹುದು ಎಂಬುದು ತುಸು ಕಾಲ ಗೊಂದಲವಾಯಿತು. ನಾಗವೇಣಿಯವರು 'ತೋಟದ ಬಳಿ ಸೈಕಲ್ಲೊಂದು ಇರುತ್ತೆ' ಎಂದು ಹೇಳಿದ್ದುದು ನೆನಪಾಯ್ತು. ಸರಿ ಇದೇ ಇರಬೇಕೆಂದು ಸೈಕಲ್ ಬಳಿ ಚಪ್ಪಲಿ ಬಿಟ್ಟು ಆಕಡೆ ಈಕಡೆ ಹುಡುಕುತ್ತಾ ಹೆಜ್ಜೆ ಹಾಕಿದೆವು. ಕೆಂಪು ಬನಿಯನ್, ಬಿಳಿ ಪಂಚೆ ಹಾಕಿಕೊಂಡ ವ್ಯಕ್ತಿಯೊಬ್ಬರು ಏಣಿ ಹತ್ತಿ ವಿಳ್ಯೇದೆಲೆ ಹಂಬನ್ನು ಇಳಿಸುತ್ತಿದ್ದರು. ಇವರೇ ಇರಬೇಕೆಂದು ಮನಸ್ಸಿನಲ್ಲಿ ಅನ್ನಿಸಿತು. 'ನಮಸ್ಕಾರ ಸ್ವಾಮಿ' ಎಂದು ಪರಿಚಯಿಸಿಕೊಂಡು ಬಂದ ಉದ್ದೇಶವನ್ನು ವಿವರಿಸಿದೆ. 'ಸಂತೋಷ, ಬನ್ನಿ' ಎಂದು ಮುಗುಳ್ನಕ್ಕು 'ಯಾವ ಊರು ನಿಮ್ದು, ಹೇಗೆ ಬಂದ್ರಿ, ತಿಂಡಿ ತಿಂದ್ರಾ?' ಎಂದೆಲ್ಲಾ ವಿಚಾರಿಸುತ್ತಲೇ ಕೆಲಸ ಮಾಡುತ್ತಿದ್ದರು. 'ನಿಮಗೆ ತೊಂದ್ರೆ ಕೊಡಲ್ಲ. ನಿಮ್ಮ ಕೆಲ್ಸ ಮಾಡ್ತಾ ಇರಿ, ನಮಗೆ ಬೇಕಾದ್ದನ್ನು ಕೇಳ್ತಿರ್‍ತೀವಿ' ಎಂದವರಿಗೆ ತಿಳಿಸಿ 'ಇದ್ಯಾವ ಎಲೆ? ರುಚಿ ಹೇಗಿರುತ್ತೆ? ಅಡಿಕೆ ಇಟ್ಕೊಂಡಿದೀರಾ?' ಎಂದು ಪ್ರಶ್ನಿಸಿದಿವಿ. 'ಇದೆ, ಬನ್ನಿ, ತಗೊಳ್ಳಿ ಈ ಹಸಿ ಅಡಿಕೇನಾ, ಹೆಚ್ಚು ತಿನ್ಬೇಡಿ, ತಲೆ ತಿರುಗಬಹುದು. ಈ ಎಲೆಗೆ ಸುಣ್ಣವಿದ್ದರೇನೇ ರುಚಿ' ಎಂದು ಹೇಳುತ್ತಿರುವಾಗಲೇ ಚಿಗುರೆಲೆಯನ್ನು ಕಿತ್ತದ್ದಾಗಿತ್ತು. 'ಸುಣ್ಣವಿಲ್ಲದಿದ್ರೂ ತೊಂದ್ರೆ ಇಲ್ಲ' ಎಂದು ಅವರಿಗೆ ತಿಳಿಸುತ್ತಾ ಅಡಿಕೆಯೊಂದಿಗೆ ಜಗಿಯಲು ಶುರು ಮಾಡಿದೆವು.


ಜೊತೆಯಲ್ಲಿ ತಗೊಂಡು ಹೋಗಿದ್ದ ದಿನಪತ್ರಿಕೆಗಳನ್ನು ಹಾಸಿಕೊಂಡು ವಿಚಾರಗಳನ್ನು ಕಲೆ ಹಾಕುತ್ತಾ ಹೋದೆವು.

ವಿಳ್ಳೇದೆಲೆ ಉಳ್ಸಿಕೊಂಡಿದೀರಿ?
ಹೌದು, ಸ್ವಲ್ಪ ಹೋಗಿದೆ, ಶೀತವಾದ್ರೆ ಇರಲ್ಲ.

ನೀವೇ ಎಲ್ಲಾ ಕೆಲ್ಸ ಮಾಡ್ತಾ ಇದೀರಿ?
ನಮ್ಮ ಹುಡ್ಗ ಎಲ್ಲೋ ಹೋಗಿದಾನೆ. ನಾವು ಮಾಡ್ಬೇಕು (ಎನ್ನುತ್ತಲೇ ಹಂಬನ್ನು ಇಳಿಸಿ ಗುಣಿಯಲ್ಲಿ ಸುರುಳಿ ಸುತ್ತಿ ಮಣ್ಣು ಹಾಕುವ ಕೆಲಸ ಮಾಡ್ತಾ ಇದ್ರು.)

ಎಂತ ವೀಳ್ಯೆ ಇದು?
ಇದು ಖಾರವಿಲ್ಲದ್ದು, ಇದಕ್ಕೆ ಹೆಸ್ರು ಕೊಟ್ಟಿಲ್ಲ.

ಎಷ್ಟು ವರ್ಷಕ್ಕೊಮ್ಮೆ ಬಳ್ಳಿ ಇಳಿಸ್ತೀರಿ?
ಎರಡು ವರ್ಷಕ್ಕೊಮ್ಮೆ (ಎನ್ನುತ್ತಾ ಅಡಿಕೆ ಪಟ್ಟೆಗಳನ್ನು ಸಿಗಿಯುತ್ತಾ ಬಳ್ಳಿಯನ್ನು ಅಡಿಕೆ ಕಾಂಡಕ್ಕೆ ಕಟ್ತಾ ಇದ್ದರು)


ಹಂಬಿಗೆ ಕಟ್ಟುಹಾಕುತ್ತಿರುವ ಸುಂದರೇಶ್:ಮಾದಾಪುರ

ವ್ಯಾಪಾರಾನಾ ಯಾವಾಗ ಬೇಕಾದ್ರೂ ಶುರು ಮಾಡ್ಕೋಬಹುದು. ಬೇರೆ ಉದ್ಯೋಗಾನೂ ಅಷ್ಟೇ. ಆದ್ರೆ ಬೇಸಾಯ ಹಾಗಲ್ಲ. 'ನೋಡಿ, ಈ ತೋಟ ಬೆಳೀಬೇಕಾದ್ರೆ ಎಷ್ಟೊಂದು ಸಮಯ ಬೇಕು' ಎಂಬ ಮಾತು.

ಮಾದಾಪುರವು ರಾಮನಾಥಪುರದಿಂದ ಎಷ್ಟು ದೂರವಾಗುತ್ತೆ?
ಹತ್ತು ಕಿ.ಮೀ. ಕಟ್ಟೇಪುರ ಆದ ಮೇಲೆ ಸಿಗುತ್ತೆ.

ಮಾದಾಪುರದಲ್ಲಿ ಸಂಕೇತಿಗಳು ಎಷ್ಟು ಜನ ಬೇಸಾಯ ಮಾಡ್ತಾರೆ?
ಎಂಟು ಜನ.

ಯಾರ್‍ಯಾರು ಹೇಳಿ
ಅನಂತರಾಮು ಅವಧಾನಿ, ಸುಬ್ರಹ್ಮಣ್ಯ ಅವಧಾನಿ, ವೆಂಕಟೇಶಮೂರ್ತಿ, ಶೇಷಮೂರ್ತಿ, ಸತ್ಯನಾರಾಯಣ, ನಾಗರಾಜ, ನಾನು ಮತ್ತು ನನ್ನ ತಮ್ಮ ರಾಮಶೇಷ.

ಏನು ಮುಖ್ಯವಾದ ಬೆಳೆ ಇಲ್ಲಿಯವರದ್ದು?
ಅಡಿಕೆ, ತೆಂಗು ವಿಳ್ಳೇದೆಲೆ, ಭತ್ತ, ಸ್ವಲ್ಪ ಬಾಳೆ ಬೆಳೀತಾರೆ.

ನೀರಿಗೆ ಏನು ಆಸರೆ?
ಹಾರಂಗಿ ಜಲಾಶಯದ ನೀರು ಸಿಗುತ್ತೆ. ಹೇಳಿಕೊಳ್ಳುವ ನೀರಿನ ತೊಂದ್ರೆ ಇಲ್ಲ.

ಎಷ್ಟು ಎಕರೆ ಅಡಿಕೆ ಇರಬಹುದು?
ಹದಿನಾಲ್ಕು ಎಕರೆ ಬರುತ್ತೆ (ಎಲ್ಲರದ್ದೂ ಸೇರಿ).

ದನಕರುಗಳನ್ನು ಸಾಕಿಕೊಂಡಿದೀರಾ?
ಐದು ಜನ ಸಾಕಿದಾರೆ, ಇಬ್ರು ಇಲ್ಲ.

ಏನೇನು ದನಕರುಗಳು ಇವೆ?
ಎತ್ತು, ಎಮ್ಮೆ, ನಾಟಿ ಹಸು.

ದನಕರುಗಳನ್ನ ಇಬ್ರು ಯಾಕೆ ಸಾಕಿಲ್ಲ?
ಅಯ್ಯೋ ಸ್ವಾಮಿ, ಅದೆಲ್ಲಿಯ ಸಹವಾಸ? ಇದು ಅಡಿಕೆ ಇದೆ ನೋಡಿ, ನಾವು ದುಡಿದಾಗ ದುಡಿಸಿಕೊಳ್ಳುತ್ತೆ.

ಎಲ್ಲಾರೂ ಹಾಕಿರೋದು ನಾಡ ತಳಿ ಅಡಿಕೇನಾ? ಎಷ್ಟು ವಯಸ್ಸಿನ ಮರ ಇರಬಹುದು?
ಹೌದು, ಎಲ್ಲರದ್ದೂ ನಾಡ ತಳಿ. ೭೦-೮೦ ವರ್ಷದ ಮರಗಳೂ ಇವೆ.

ಅಡಿಕೆಗೆ ನೀರು ಹೇಗೆ ಕೊಡ್ತೀರಿ?
ಪೈಪಿನಲ್ಲಿ ಹಿಡಿದು ಹಾಯಿಸ್ತಾರೆ, ಕೆಲವೊಬ್ಬರು ನೆಲದಲ್ಲಿ ಹಾಯಿಸ್ತಾರೆ.

ಏನು ಗೊಬ್ಬರ ಕೊಡ್ತೀರಿ?
ದನಗಳ ಗೊಬ್ಬರ ಮರಕ್ಕೆ ಒಂದೆರಡು ಮಂಕರಿ, ಸುಫಲಾ-ಸೀಮೆಗೊಬ್ಬರಾನಾ ಮರಕ್ಕೆ 400 ಗ್ರಾಂ ಕೊಡ್ತೀವಿ-ವರ್ಷದಲ್ಲಿ ಒಂದು ಸಾರಿ.

ಬಾಳೆಯ ಗತಿ ಏನು?
ರೋಗ ಬಂದು ಹೋಯ್ತು. 'ಅರಿಶಿನ-ಖಾಯಿಲೆ' ಅದು. ಬಾಳೆ ಚೆನ್ನಾಗಿತ್ತು.

ವಿಳ್ಯೇದೆಲೆ ತೋಟಗಳಲ್ಲಿ ಹೇಗಿದೆ?
ಬಹುತೇಕ ಹೋಗಿದೆ. ಶೀತ ಒಂದು ಕಾರಣ, ಕಾಳಜಿ ಇಲ್ಲದ್ದು ಎರಡನೆಯದು.

ಸುಂದರೇಶರವರೇ ನಿಮ್ಮಲ್ಲಿ ಎಷ್ಟು ಇದೆ ಹಂಬು?
ಕಮ್ಮಿ, ಚೆನ್ನಾಗಿ ಇರ್ಬೇಕಾಗಿತ್ತು.


ಏಕೆ ಹೀಗಾಯಿತು, ಹಾರಂಗಿ ನೀರು ಬರೋದಕ್ಕಿಂತ ಮುಂಚೆ ಹೇಗಿತ್ತು?
ತುಂಬಾ ಚೆನ್ನಾಗಿತ್ತು. ನಿಗಾ ಕಮ್ಮಿಯಾಗಿ, ಶೀತ ಹೆಚ್ಚಿಗೆ ಆಗಿ ನಶಿಸಿ ಹೋಯಿತು.


ಆಗ ಅಡಿಕೆಯಿಂದ ವರಮಾನ ಹೆಚ್ಗೆ ಸಿಕ್ತಿತ್ತೋ, ವಿಳ್ಯೇದೆಲೆಯಿಂದ ಹೆಚ್ಗೆ ಸಿಕ್ತಿತ್ತೋ?
ಎರಡರಿಂದಲೂ ಒಳ್ಳೆ ಹಣ ಸಿಕ್ತಿತ್ತು. ಈಗ ಅಡಿಕೆ ಬಿಟ್ರೆ ವಿಳ್ಯೇದೆಲೆ ಇಲ್ಲವೇ ಇಲ್ಲ. ಬಾಳೇನೂ ಖಾಲಿಯಾಯ್ತು.

ತೆಂಗಿಗೆ ನುಸಿಕ್ರಿಮಿ ಹಾವಳಿ ಇಲ್ಲಿ ಹೇಗಿದೆ?
ನೋಡಿ ಸಾರ್, ಆ ಮರಾನಾ, ಕಾಯಿನೇ ಇಲ್ಲ. ಮುಕ್ಕಾಲು ಭಾಗ ಇಳುವರಿ ಕುಗ್ಗಿಹೋಯ್ತು.

ಇದಕ್ಕೆ ನಿವಾರಣೆಗಾಗಿ ಏನು ಮಾಡಿದ್ರಿ?
ಇಲ್ಲ, ಯಾವುದನ್ನೂ ಮಾಡಿಲ್ಲ. ಹಾಗೇ ಬಿಟ್ಬಿದೀವಿ.


ವಿಚಾರ ಚರ್ಚೆ ಮಾಡುತ್ತಾ ಬರೆಯುತ್ತಾ ನಮ್ಮ ಕೆಲಸ ಸಾಗಿತ್ತು; ಸುಂದರೇಶ ಅವರು ಹುಡುಗನೊಬ್ಬನನ್ನು ಕರೆದು ಎಳೆನೀರನ್ನು ಕೆಡವಿಸಿ ಕೊಚ್ಚಿಕೊಟ್ಟರು. ಬಳ್ಳಿ ಇಳಿಸಿದ ಬುಡಗಳಿಗೆ ನೀರು ಕೊಟ್ಟರು. ಸಮಯ ಮಧ್ಯಾಹ್ನ ಒಂದೂವರೆ ದಾಟಿತ್ತು. 'ಊಟಕ್ಕೆ ಹೋಗಿ ಬರೋಣ' ಎಂದರು ಸುಂದರೇಶ್.


ಹಂಬುಳ್ಳ ಅಡಿಕೆ ಪಾತಿಗೆ ನೀರು: ಸುಂದರೇಶ್:ಮಾದಾಪುರ



ಮುದ್ದಾಗಿ ಸಾಕಿದ ಎತ್ತಿನೊಂದಿಗೆ ತಾಂಡವೇಶ್:ಮಾದಾಪುರ

ಊಟ ಮುಗಿಸಿದಾಗ ಎರಡೂವರೆ ಗಂಟೆ. ಅಲ್ಲೇ ಇದ್ದ ತಾಂಡವೇಶ್ (ಸುಬ್ಬಕೃಷ್ಣಮೂರ್ತಿ) ಅವರ ಮನೆಗೆ ತೆರಳಿ ಮಾತಿಗಿಳಿದೆವು. ೪೭ ವಯಸ್ಸಿನ ತಾಂಡವೇಶ್ ಹಿರಿಯರು, ಉಳಿದ ಮೂವರು ತಮ್ಮಂದಿರು ಬೆಂಗಳೂರಿನಲ್ಲಿದ್ದಾರೆ. ಒಟ್ಟು ಮೂರು ಎಕರೆ ಅಡಿಕೆ, ಗದ್ದೆ ಆರು ಎಕರೆ ಇದೆ. ತಂಬಾಕು ಬೆಳೀತಾರೆ. 'ರಾಜಮುಡಿ ತಳಿಯ ಭತ್ತ ಇಲ್ಲಿ ಪ್ರಚಲಿತ. ತಂದೆಯವರು ಹಾಕಿದ ಅಡಿಕೆ; ಅಡಿಕೆಯಲ್ಲಿ ಪುಟ್ಟಬಾಳೆ ಇದೆ. ವೀಳ್ಯೆ ಕಮ್ಮಿ. ಅಡಿಕೆಯಲ್ಲಿ ಮರ ಹಳೇದಾಯಿತು, ಹೊಸ ಗಿಡ ನೆಟ್ಟಿದೀವಿ. ಇಳುವರಿ ಕಮ್ಮಿ. ೨೦೦ ಕ್ವಿಂಟಾಲ್ ಮೂರು ಎಕರೆಯಿಂದ ಬರ್‍ತಾ ಇತ್ತು. ಈಗ ೧೫೦ ಕ್ವಿಂಟಾಲ್‌ಗೆ ಬಂದಿದೆ' ಎಂದರು. ಹಸೀ ಅಡಿಕೇನೇ ಇವರು ಮಾರ್‍ತಾರೆ. ಮನೆ ಬಳಕೆಗೆ ಆಗುವಷ್ಟು ತೆಂಗು ಸಿಗುತ್ತೆ. ೧೫ ದನಕರುಗಳಿವೆ. ತೋಟಕ್ಕೆ ಗೊಬ್ಬರ ತಕ್ಕಷ್ಟು ಸಿಗುತ್ತೆ. 'ನಮ್ಮಲ್ಲಿ ಅಡಿಕೆಗೆ ಅಣಬೆ ರೋಗ ಕಮ್ಮಿ. ಅಣಬೆ ರೋಗಕ್ಕೆ ತುತ್ತಾದ ಮರದ ಬುಡದ ಬಳಿ ಬೇರುಗಳನ್ನು ಮೂರು ಅಡಿ ಆಳದವರೆಗೆ ಬಗೆದು ತೆಗೀತೀವಿ, ಬೇರನ್ನು ಸುಡ್ತೀವಿ. ರೋಗ ಹರಡೋದು ಕಮ್ಮಿಯಾಗುತ್ತೆ' ಎಂದವರು ಹೇಳುತ್ತಾರೆ. ಇವರಿಗೆ ನೀರಿನ ಕೊರತೆ ಇಲ್ಲ. ಮನೆಯ ಸಗಣಿ ಗೊಬ್ಬರದ ಜೊತೆಗೆ ನೂರು ಗಾಡಿ ಗೊಬ್ಬರವನ್ನು ಖರೀದಿಸ್ತಾರೆ. ಒಂದು ಗಾಡಿಗೆ ೧೫೦ ರೂ ಬೆಲೆ ಇದೆ. ಹಸುಗಳು ಎರಡು, ಎಮ್ಮೆ ಎಂಟು ಇವೆ. ಹಾಲು ತುಪ್ಪಕ್ಕೆ ಅಭಾವ ಇಲ್ಲ. ಮೇಯಿಸ್ಕೊಂಡು ಬರ್‍ಲಿಕ್ಕೆ ಒಬ್ಬ ಆಳು ಇದಾನೆ. ಮೇಯಿಸ್ಲಿಕ್ಕೆ ಎರಡು ಎಕರೆ ಖಾಲಿ ಜಮೀನು ಇದೆ. ಅಣ್ಣ ತಮ್ಮಂದಿರಲ್ಲಿ ಅನ್ಯೋನ್ಯತೆ ಇದೆ.



ಹೋಮಿಯೋಪತಿಯಲ್ಲಿ ನಿಪುಣ ಎಂ.ಕೆ.ಶೇಷಮೂರ್ತಿ:ಮಾದಾಪುರ

ತಾಂಡವೇಶರ ವಿಚಾರ ಪಡೆದ ಬಳಿಕ ಶೇಷಮೂರ್ತಿಯವರ ಬಳಿ ಹೋದೆವು. ಮನೆಯ ಪಡಸಾಲೆಯಲ್ಲಿ ಕೂತಾಗ ತೈಲಚಿತ್ರಗಳು ಕಣ್ಣಿಗೆ ಬಿದ್ದವು. ಅಟ್ಟದ ಮೇಲಿದ್ದ ಶೇಷಮೂರ್ತಿಯವರು ಕೆಳಗಿಳಿದು ಬಂದರು. ಬಿಡಿಸಿದ ಚಿತ್ರಗಳ ವಿವರ ಹೇಳಿದರು. ಶಿವಾಜಿ, ಅಯ್ಯಪ್ಪಸ್ವಾಮಿ, ರಾಣಾಪ್ರತಾಪಸಿಂಹ, ಅನಂತಪದ್ಮನಾಭ, ಪರಶುರಾಮ, ರಾಘವೇಂದ್ರಸ್ವಾಮಿ, ಈಶ್ವರಲಿಂಗ, ಮುಂತಾದ ಚಿತ್ರಗಳನ್ನು ಪರಿಚಯಿಸಿದರು. ಬಾಲ್ಯದಿಂದಲೂ ಕಲೆಯನ್ನು ರೂಢಿಸಿಕೊಂಡಿರುವ ಎಂ.ಕೆ. ಶೇಷಮೂರ್ತಿಯವರು ಹೋಮಿಯೋಪತಿಯ ವಿಚಾರದಲ್ಲೂ ಅನುಭವಿಗಳು. ೫೦ ಮಾವು, ೧೫೦ ತೆಂಗು, ಅಡಿಕೆಯನ್ನು ಎರಡು ಎಕರೆ ಬಾಗಾಯಿತು ಜಮೀನಿನಲ್ಲಿ ನೆಟ್ಟಿದ್ದಾರೆ. ಬಾದಾಮಿ, ರಸಪುರಿ, ನೀಲಂ, ಮಲ್ಗೋವ, ಜೀರಿಗೆ ಮಿಡಿ- ಇವು ಇವರಲ್ಲಿ ನೆಟ್ಟಿರುವ ಮಾವಿನ ತಳಿಗಳು. ೨೩ ಅಡಿಗೊಂದರಂತೆ ಸುತ್ತಲೂ ತೆಂಗು ಹಾಕಿ, ಒಳಗಡೆ ೪೦ ಅಡಿ ಜಾಗ ಬಿಟ್ಟು ಪುನಃ ೨೩ ಅಡಿಗೊಂದರಂತೆ ತೆಂಗನ್ನು ಹಾಕಿ ಮಧ್ಯದಲ್ಲಿ ಮಾವು ನೆಟ್ಟಿದ್ದಾರೆ. ಅಂಚಿನಲ್ಲಿರುವ ತೆಂಗಿನ ಸಾಲಿನ ಪಕ್ಕದಲ್ಲಿ ಅಡಿಕೆಯನ್ನು ೯ ಅಡಿಗೊಂದರಂತೆ ಬೆಳೆಸಿದ್ದಾರೆ.

ವಿವಿಧ ತೆರನಾದ ಕಾಯಿಲೆಗಳಿಗೆ ಹಳ್ಳಿ ಜನರಿಗೆ ಹೋಮಿಯೋಪತಿ ಔಷಧಿಯನ್ನು



ಹಪ್ಪಳ ಸಂಡಿಗೆಯನ್ನು ನಿರಾತಂಕವಾಗಿ ಒಣಗಿಸಲು ಎಂ.ಕೆ.ಶೇಷಮೂರ್ತಿ ರೂಪಿಸಿದ ಈ ತಂತಿಯ ಜಾಲ:ಮಾದಾಪುರ

ನೀಡುವ ಶೇಷಮೂರ್ತಿಯವರು ಇದರ ಮೇಲೆ ಅವಲಂಬನೆಯಾಗಿಲ್ಲ. 'ಕೃಷಿಯೇ ನಮಗೆ ಜೀವನ ಪಾಡು' ಎಂದು ಅವರು ನುಡಿಯುತ್ತಾರೆ. ಅಡಿಕೆಗೆ ಬೆಲೆ ಕಮ್ಮಿಯಾಗಿದ್ದು ಆರ್ಥಿಕ ಪರಿಸ್ಥಿತಿಯು ಹದಗೆಡದಂತೆ ಮನೆಯಲ್ಲಿ ಇವರ ಶ್ರೀಮತಿಯವರಾದ ರಾಮಲಕ್ಷ್ಮಿಯವರು ಹಪ್ಪಳ, ಸಂಡಿಗೆ, ಫೇಣಿ ಮಾಡ್ತಾರೆ. ಇದನ್ನು ಮೈಸೂರಿನಲ್ಲಿ ಮಾರಾಟ ಮಾಡ್ತಾರೆ. ಇದನ್ನು ಶುರು ಮಾಡಿಕೊಂಡು ಒಂದು ವರ್ಷ ಆಯ್ತು. ಸ್ಥಳೀಯವಾಗಿ ನಡೆಯುವ ಮದುವೆ ಸಮಾರಂಭಗಳಿಗೂ ಇವರ ಪದಾರ್ಥಗಳು ಬಳಕೆಯಾಗ್ತವೆ. ಶೇ.೩೦ರಷ್ಟು ಲಾಭ ಇದರಲ್ಲಿ ಇವರಿಗೆ ಸಿಗುತ್ತೆ. ಅಡಿಕೆಯಲ್ಲೂ ಪುಡಿ ಅಡಿಕೆ ಮಾಡಿ ಚೀಟಿಗಳಲ್ಲಿ ಮಾರಾಟ ಮಾಡಿರುವ ಇವರು 'ಹಳ್ಳಿ ಮಟ್ಟದಲ್ಲಿ ಕೆಲವೊಮ್ಮೆ ಕೆಲಸಕ್ಕೆ ಜನ ಸಿಗಲ್ಲ. ದೊಡ್ಡ ಪ್ರಮಾಣದಲ್ಲಿ ಮಾಡಿದ್ರೆ ಒಳ್ಳೆ ದುಡ್ಡು ಸಿಗುತ್ತೆ' ಎಂದು ಹೇಳಿದರು. ತೊಂದರೆಗಳಿಂದ ಅಡಿಕೆ ಚೀಟಿ ವ್ಯಾಪಾರವನ್ನು ನಿಲ್ಲಿಸಿದಾರೆ.

ಅಕ್ಕಿಯಿಂದ ಹಪ್ಪಳ, ಸಂಡಿಗೆ, ಫೇಣಿಯನ್ನು ಮಾಡುವ ಇವರು ಬಿಸಿಲು ಇರುವ ದಿನಗಳಲ್ಲಿ ಹೆಚ್ಚು ಮಾಡಿಕೊಳ್ಳುತ್ತಾರೆ. ತಯಾರಿಸಿದ ಹಸಿ ಹಪ್ಪಳ, ಸಂಡಿಗೆ, ಫೇಣಿಯನ್ನು ಕಾಗೆ, ಅಳಿಲು, ಬೆಕ್ಕು, ನಾಯಿ ತಿನ್ನದಂತೆ ಚಪ್ಪರ ಹಾಕಿ, ಕಾಲುಗಳಿಗೆ ಹಾಳಾದ ಮೀನಿನ ಬಲೆಯನ್ನು ಕಟ್ಟಿ, ಮೇಲೆ ದಾರದಿಂದ ಸುತ್ತುಹಾಕಿ ನಿರ್ಬಂಧಿಸಿದ್ದಾರೆ. ಇದು ಪರಿಣಾಮ ಕೊಟ್ಟಿದೆ. ಹೀಗೆ ಮಾಡಿಕೊಳ್ಳಲು ಇವರಿಗೆ ತಗುಲಿರುವ ವೆಚ್ಚ ೫೦ ರೂಪಾಯಿಯನ್ನು ಮೀರಿಲ್ಲ. ಇದರಿಂದ, ಕಾಯುವ ಕೆಲಸದಿಂದ ಮುಕ್ತಿ ಸಿಕ್ಕಿದೆ, ಹಣವೂ ಉಳಿದಿದೆ.



ಈ ಚಿತ್ರಗಳನ್ನೆಲ್ಲ ಬಿಡಿಸಿರುವವರು ಎಂ.ಕೆ.ಶೇಷಮೂರ್ತಿ: ಮಾದಾಪುರ

ಅಡಿಕೆ ೨೪ ಗುಂಟೆ ಇದೆ. ಹಳೆಯದು, ೩೦ ವರ್ಷ ದಾಟಿದೆ. ೪೦ ಕ್ವಿಂಟಾಲ್ ಹಸಿ ಅಡಿಕೆ ಸಿಗುತ್ತದೆ. ಉಂಡೆ, ಬಟ್ಟಲು ಅಡಿಕೆಯಾಗಿ ಬೇಯಿಸಿ ಮಾರಾಟ ಮಾಡ್ತಾರೆ. ಶಿವಮೊಗ್ಗ ಇವರಿಗೆ ಮಾರುಕಟ್ಟೆ. ಬೇಯಿಸಿದ ಅಡಿಕೆಗೆ ಹಸೀದಕ್ಕಿಂತ ೫-೬ ಸಾವಿರ ರೂಪಾಯಿ ಹಣ ಹೆಚ್ಚುವರಿಯಾಗಿ ಸಿಗುತ್ತೆ. ಮನೆಗೆ ಬೇಕಾಗುವಷ್ಟು ಬಾಳೆ ಇದೆ. ಅಂಚಿನಲ್ಲಿ ತೆಂಗು ಇದೆ. 'ಅಡಿಕೆಯಷ್ಟೇ ವೀಳ್ಯೆದೆಲೆಯದೂ ದುಡ್ಡು ಆಗ್ತಿತ್ತು. ಹಾರಂಗಿ ನೀರು ಬಂದ ಮೇಲೆ ಅದು ಹೋಯ್ತು' ಎಂದು ಶೇಷಮೂರ್ತಿ ಹೇಳುತ್ತಾರೆ.

ಅಡಿಕೆ ಸಸಿಗಳನ್ನು ಬೆಳೆಸಿ ಮಾರಾಟ ಮಾಡುವ ಅಭ್ಯಾಸವೂ ಶೇಷಮೂರ್ತಿಯವರಿಗೆ ಇದೆ. ಮೂಲ ಬೆಳೆಯಲ್ಲಿ ಸಿಗುತ್ತಿದ್ದ ದುಡ್ಡು ನರ್ಸರಿಯಲ್ಲಿ ಲಭಿಸುತ್ತಿತ್ತು. ಈಗ ಬೆಲೆ ಇಳಿದಿದ್ದರಿಂದ ಸಸಿಗಳಿಗೆ ಬೇಡಿಕೆ ಇಲ್ಲವಾಗಿದೆ. ಇವರ ತೋಟದ ಗೋಟನ್ನು ತಂದು ಚೀಲಗಳಲ್ಲಿ, ಗೆಪ್ಪೆಯಾಗಿ ಕೊಡುತ್ತಿದ್ದರು. ಶೇಷಮೂರ್ತಿಯವರು ಒಂದೇ ಒಂದು ಹಸುವನ್ನು ಹಾಲಿಗಾಗಿ ಇಟ್ಟುಕೊಂಡಿದಾರೆ. ಹಿಂದೆ ಇವರಲ್ಲಿ ೨೦ಕ್ಕೂ ಹೆಚ್ಚು ರಾಸುಗಳಿದ್ದವು.




ಅಡಿಕೆಗೆ ಬಣ್ಣ ಕಟ್ಟುವ ಸಾಮಗ್ರಿ:ವರ್ಷವಿಟ್ಟರೂ ಇದು ಕೆಡದು:ಮಾದಾಪುರ

'ನಮ್ಮೂರಲ್ಲಿ ರಾಸುಗಳು ಬಹಳ ಇದ್ದವು. ಈಗ ೧೦ ಭಾಗ ಇಲ್ಲ. ಗೋಮಾಳ ಕಮ್ಮಿಯಾಯಿತು, ಒತ್ತುವರಿ ಮಾಡಿಕೊಂಡರು. ದರಕಾಸ್ತು ಮಾಡಿಕೊಂಡು, ಉತ್ತುಕೊಂಡು ಬೆಳೆ ಮಾಡಿಕೊಂಡರು' ಎಂದು ಶೇಷಮೂರ್ತಿ ಹೇಳುತ್ತಾರೆ. ಮಗ ಸುಬ್ರಹ್ಮಣ್ಯ ವಕೀಲರಾಗಿದ್ದಾರೆ, ಅವರಿಗೆ ಬೇಸಾಯದ ಬಗ್ಗೆ ಆಸಕ್ತಿ ಇಲ್ಲ.

ಮಾದಾಪುರದ ಸಂಕೇತಿಗಳ ಮನೆಗಳು ಹೆಚ್ಚಾಗಿ ಮಣ್ಣಿನಿಂದ ರಚನೆಯಾಗಿವೆ. ಎಲ್ಲವೂ ಹಳೆಯವು. ವಾಸದ ಮನೆಗೆ ಹೊಂದಿಕೊಂಡಂತೆ ದನ ಕಟ್ಟುವ ಕೊಟ್ಟಿಗೆಯೂ ಇದೆ. ಏಳು ಜನರಲ್ಲಿ ನಾಲ್ಕು ಜನರು ಸಗಣಿ ಅನಿಲ ಯಂತ್ರವನ್ನು ಮಾಡಿಸಿಕೊಂಡಿದ್ದಾರೆ. ಎಲ್ಲರ ಮನೆಯಲ್ಲೂ ದ್ವಿಚಕ್ರ ವಾಹನಗಳಿವೆ, ಸೈಕಲ್‌ಗಳನ್ನು ಇಟ್ಟುಕೊಂಡಿದ್ದಾರೆ. ಪಟ್ಟಣಗಳಿಗೆ ಹೋಗಿ ಬರಲು ಪೆಟ್ರೋಲ್ ಕುಡಿಯುವ ದ್ವಿಚಕ್ರ ವಾಹನಗಳನ್ನು ಬಳಸುವ ಇವರು ತೋಟಗಳಿಗೆ ಹೋಗಿ ಬರ್ಲಿಕ್ಕೂ, ಹುಲ್ಲು, ಅಡಿಕೆ ಮಟ್ಟೆ ಇತ್ಯಾದಿ ತರ್ಲಿಕ್ಕೂ ಸೈಕಲ್ಲನ್ನು ಬಳಸುತ್ತಾರೆ. ಇವರಿಗೆ ಇದು ಜನಪ್ರಿಯ ವಾಹನವಾಗಿದೆ.

ಶೇಷಮೂರ್ತಿಯವರ ಬದುಕಿನ ಬಗ್ಗೆ ಕೆದುಕುತ್ತಾಹೋದಂತೆಲ್ಲಾ ದಾರಿ ದೊಡ್ಡದೆಂದು ಅನಿಸಿತು. ಅಷ್ಟರಲ್ಲಿ ಎಂ.ಎನ್.ನಾಗರಾಜ್ ಅಲ್ಲಿಗೆ ಬಂದರು. ನವಿಲೆ ಕೇಶವಮೂರ್ತಿಯವರ ಚಿಕ್ಕಪ್ಪನವರ ಮಗ ಇವರು. ಓದಿದ್ದು ಏಳನೇ ತರಗತಿ. ಒಬ್ಬನೇ ಮಗ. ಹಿಡುವಳಿ ೧೨ ಎಕರೆ. ಅಡಿಕೆ ತೋಟ ಮೂರು ಎಕರೆ, ಗದ್ದೆ ಮೂರೂವರೆ ಎಕರೆ, ಉಳಿದದ್ದು ತೆಂಗು. ತೆಂಗು ಈಗ ಫಸಲಿಗೆ ಬಂದಿದೆ. ಅಡಿಕೆ ಎರಡು ಎಕರೆ ಹಳೆಯದಿದೆ, ಹೊಸದು ಒಂದು ಎಕರೆ. ಹಳೆ ಅಡಿಕೆಯಿಂದ ೧೨ ಕ್ವಿಂಟಾಲ್ ಬೇಯಿಸಿದ್ದು ಸಿಕ್ತಾ ಇದೆ. ವೀಳ್ಯ, ಬಾಳೆಯು ತೋಟದಲ್ಲಿ ಇದ್ದದ್ದು ಹೋಗಿದೆ. ಒಂದು ಜೊತೆ ಎತ್ತು, ಐದು ಎಮ್ಮೆ, ಮೂರು ಹಸು ಇವೆ. ಗೋಬರ್ ಗ್ಯಾಸ್ ಇದೆ. ಭತ್ತದಲ್ಲಿ ರಾಜಮುಡಿ ತಳಿಯನ್ನು ಬೆಳೀತಾರೆ. ತೆಂಗು ಇಲ್ಲೇ ಬೆಳೆದ ಮರಗಳಿಂದ ಆಯ್ದದ್ದು. ಕೆರೆಯ ನೀರೇ ಆಸರೆ. ಬೋರ್‌ವೆಲ್ ಹಾಕಿಸಿಲ್ಲ.



ಪರ್ಯಾಯಬೆಳೆಗಳತ್ತ ಗಮನಹರಿಸಿರುವ ಎಂ.ಎನ್.ನಾಗರಾಜ್ : ಮಾದಾಪುರ

ಸಗಣಿ ಅನಿಲಯಂತ್ರ ಇವರಲ್ಲಿಯದು ದೀನಬಂಧು ಮಾದರಿ. ಇಲ್ಲಿ ಡ್ರಂ ಇಲ್ಲ. ಮಾಡಿಸಿ ಮೂರು ವರ್ಷವಾಯ್ತು. ಅಡುಗೆ ಮಾಡ್ಲಿಕ್ಕೆ ಬಳಕೆಯಾಗುತ್ತೆ. ಸದ್ಯವಂತೂ ತೊಂದ್ರೆ ಇಲ್ಲ. ತಂದೆಯವರಾದ ನಾರಾಯಣ ಅವಧಾನಿಯವರು ನಾಗರಾಜ್ ಒಂಬತ್ತು ವರ್ಷ ವಯಸ್ಸಿನವರಿದ್ದಾಗ ತೀರಿಕೊಂಡರು. ನಾರಾಯಣ ಅವಧಾನಿಗಳು ಯಜುರ್ವೇದ ಪಂಡಿತರಾಗಿದ್ದರು. ನಾಲ್ಕು ಜನ ಶಿಷ್ಯರಿಗೆ ಕಲಿಸಿ ಹೋದರು. ಎಳೆ ವಯಸ್ಸಿನಲ್ಲಿ ತಂದೆ ತೀರಿಕೊಂಡಿದ್ದರಿಂದ ಮನೆಯ ಕೆಲಸಗಳತ್ತ ಅನಿವಾರ್ಯವಾಗಿ ನಾಗರಾಜರವರು ಗಮನ ಕೊಡಬೇಕಾಯಿತು. 'ಆಗ ಬರೇ ಕಾಡೇ. ತೋಟದಲ್ಲೇ ವೇದಾಧ್ಯಯನ


ಆಧುನಿಕ ಉಪಕರಣ ಟಿಲ್ಲರ್ ಮಾದಾಪುರದಲ್ಲಿ ಬಳಕೆಯಲ್ಲಿದೆ


ನಡೆಯುತ್ತಿತ್ತು. ತೋಟದ ಕೆಲಸದ ಬಗ್ಗೆ ನನಗೆ ತಿಳುವಳಿಕೆ ಕೊಡ್ತಾ ಇದ್ದರು' ಎನ್ನುವ ನಾಗರಾಜರವರು ವೇದ ಪಠಣದಲ್ಲೂ ತಕ್ಕಷ್ಟು ತಮ್ಮನ್ನು ತೊಡಗಿಸಿಕೊಂಡಿದ್ದಾರೆ.

ನಾಗಾಗರಾಜ್‌ರವರು ಹೊಗೆಸೊಪ್ಪನ್ನು ೧೯೮೨ ರಿಂದ ಬೆಳೆಯುತ್ತಿದ್ದಾರೆ. ನಾಲ್ಕು ವರ್ಷ ಸತತವಾಗಿ ಬೆಳೆದು ಖರ್ಚುವೆಚ್ಚ ಹೆಚ್ಚಾಗಿದ್ದ ರಿಂದ ಎಂಟು ವರ್ಷ ಸುಮ್ಮನಿದ್ದು ಈಗ ಪುನಃ ಬೆಳೆಯಲಿಕ್ಕೆ ಹೊರಟಿದ್ದಾರೆ. ಎರಡೂವರೆ ಎಕರೆಯಲ್ಲಿ ಈ ಸಾರಿ ಹೊಗೆಸೊಪ್ಪು ಹಾಕಿ ಸರಾಸರಿ ೫೦ ರೂ. ಬೆಲೆ ಪಡೆದುಕೊಂಡು ಖರ್ಚು ತೆಗೆದು ೧೮೦೦ ಕಿ.ಗ್ರಾಂ.ಗೆ ೨೫,೦೦೦ ರೂಪಾಯಿ ನಿವ್ವಳ ಲಾಭ ಗಳಿಸಿಕೊಂಡಿದ್ದಾರೆ. ಮೂವರು ಸಂಕೇತಿಗಳು ಹೊಗೆಸೊಪ್ಪನ್ನು ಬೆಳೆಯುತ್ತಿದ್ದಾರೆ. ಶುಂಠಿಯನ್ನು ನಾಗರಾಜ್ ಬೆಳೆಯುತ್ತಿದ್ದಾರೆ. ಅಡಿಕೆಯ ಇಳಿದ ಬೆಲೆಯನ್ನು ಸರಿದೂಗಿಸಿಕೊಳ್ಳಲು ತಂಬಾಕು, ಶುಂಠಿ ಅನುಕೂಲಕ್ಕೆ ಬಂದಿವೆ. ಕಳೆದ ವರ್ಷ ಒಂದು ಎಕರೆಗೆ ಶುಂಠಿ ಹಾಕಿ ೨೫,೦೦೦ ರೂಪಾಯಿ ನಿವ್ವಳ ಲಾಭ ದೊರೆತಿದೆ. ಖರ್ಚು ೩೫,೦೦೦ ರೂಪಾಯಿವರೆಗೂ ಬಂದಿದೆ. ಶುಂಠಿಯನ್ನು ಇಲ್ಲೇ ಜನ ಬಂದು ತೆಗೆದುಕೊಂಡು ಹೋಗುತ್ತಾರೆ.

ಇಲ್ಲಿನ ವೆಂಕಟೇಶಮೂರ್ತಿಯವರು ಅಡಿಕೆ (ಮೂರು ಎಕರೆ) ತೆಂಗು, ಭತ್ತ (ಎರಡು ಎಕರೆ) ಮತ್ತು ವಿಳ್ಳೇದೆಲೆಯನ್ನು ಬೆಳೆಯುತ್ತಾರೆ. ಸುಮಾರು ಆರು ಎಕರೆ ಹಿಡುವಳಿ ಇವರಿಗೆ ಬರುತ್ತದೆ. ಟಿಲ್ಲರ್‌ನ್ನು ಖರೀದಿ ಮಾಡಿ ಆರು ವರ್ಷವಾಯ್ತು. ಎತ್ತು ಗಾಡಿ ಇವರಿಗಿಲ್ಲ. ಗೊಬ್ಬರ, ಮಣ್ಣು ಹೇರ್ಲಿಕ್ಕೆ ಗದ್ದೆ ಸಮಯದಲ್ಲಿ ಅನುಕೂಲ ಆಗಿದೆ. ಬೇರೆಯವರ ಜಮೀನಿನಲ್ಲಿ ಬಾಡಿಗೆಗೆ ಬಳಸ್ತಾರೆ. ಸಾಲ ಮಾಡಿ ತೆಗೆದುಕೊಂಡ ಇವರು ಸಹಾಯಧನ ಪಡೆದಿದ್ದಾರೆ. ಟಿಲ್ಲರ್ ಅನ್ನು ಓಡಿಸಲು ವೆಂಕಟೇಶಮೂರ್ತಿಯವರು ಪಳಗಿರದಿದ್ದರೂ ಆ ಸಲುವಾಗಿ ಹುಡುಗನನ್ನು ಇಟ್ಟುಕೊಂಡಿದ್ದಾರೆ. ಈ ವಿಚಾರಗಳನ್ನು ನಾಗರಾಜ್ ತಿಳಿಸಿದರು. ಮೂರ್ತಿಗಳು ಊರಲ್ಲಿ ಇರಲಿಲ್ಲ.

ಸುಬ್ರಹ್ಮಣ್ಯ ಅವಧಾನಿಗಳು ವೇದ ಪಂಡಿತರು. ಮಕ್ಕಳು ನಾಲ್ಕು ಜನ ಗಂಡು, ಒಂದು ಹೆಣ್ಣು. ಇದರಲ್ಲಿ ರಘುನಾಥ್ ಬೇಸಾಯದ ಕೆಲಸ ನೋಡಿಕೊಂಡು ಹೋಗ್ತಾರೆ. ಎಂ.ಎಸ್ಸಿ. ಮಾಡಿಕೊಂಡು ತಂದೆಗೆ ಆಸರೆಯಾಗಿ, ಜಮೀನಿನ ಉಸ್ತುವಾರಿಯನ್ನು ಇಟ್ಟುಕೊಂಡು ನಾಟಕಗಳಲ್ಲಿ ಅಭಿನಯಿಸಲು ತರಬೇತಿಯನ್ನು ನೀಡುತ್ತಿದ್ದಾರೆ. ಉಳಿದ ಮೂವರು ಹೊರಗಡೆಯಲ್ಲಿ ನೌಕರಿ ಮಾಡುತ್ತಿದ್ದಾರೆ. ರಘುನಾಥ್ ಅಡಿಕೆಯಲ್ಲಿ ವೆನಿಲ್ಲಾ ಹಾಕಿದ್ದಾರೆ. ಭತ್ತ ಬೆಳೆಯುತ್ತಾರೆ.

ಸತ್ಯನಾರಾಯಣ - ಸುಬ್ರಹ್ಮಣ್ಯ ಅವಧಾನಿಯವರ ತಮ್ಮ. ಅಡಿಕೆ ಮುಖ್ಯ ಬೆಳೆ. ಭತ್ತವನ್ನು ಬೆಳೆಯುತ್ತಾರೆ.


ವೇ||ಬ್ರ||ಶ್ರೀ ಸುಬ್ರಹ್ಮಣ್ಯ ಅವಧಾನಿಯವರು : ಮುಪ್ಪಿನಲ್ಲೂ ನಗುಮುಖ:ಮಾದಾಪುರ

ವಿಷಯ ಸಂಗ್ರಹಣೆ ಬಹುತೇಕ ಮುಗಿದಿತ್ತು. ಸಂಜೆಯಾಗಿ ಸಮಯ ಏಳು ಮೀರಿತ್ತು. ಶೇಷಮೂರ್ತಿಯವರು ಕಾಫಿ ಮಾಡಿಕೊಂಡು ತಂದಿಟ್ಟರು. ನಾಗರಾಜ್ ತಮ್ಮ ಆರೋಗ್ಯದ ಸಮಸ್ಯೆಯು ಬಗೆಹರಿದದ್ದನ್ನು ವಿವರಿಸಲು ಶುರು ಮಾಡಿದರು. 'ಸಿರೋಸಿಸ್ ಬಂದು ಜೀವನವೇ ಭಾರ ಅನಿಸಿತು. ನಿದ್ದೆ ಮಾಡ್ಲಿಕ್ಕೇ ಆಗ್ತಿರ್‍ಲಿಲ್ಲ. ನೋವು, ಒರೆಸಿಕೊಂಡರೆ ರಕ್ತ. ಇದೆಂಥ ಕಾಯಿಲೆಯಪ್ಪ ಎಂದು ಬಹುದಿನ ತಗೊಂಡ ಔಷಧಿಗಳೆಲ್ಲಾ ಪ್ರಯೋಜನಕ್ಕೆ ಬಾರದಿದ್ದಾಗ, ಇನ್ನು ಮುಂದೆ ಯಾವ್ದೂ ಬೇಡ ಎಂದು ನಿರ್ಧರಿಸಿ ಅಣ್ಣಾರ (ಶೇಷಮೂರ್ತಿ) ಔಷಧಿಯನ್ನು ತಗೊಳ್ಳಲು ಶುರು ಮಾಡಿದೆ. ಕೆಲವೇ ದಿನಗಳಲ್ಲಿ ನನ್ನ ರೋಗ ವಾಸಿಯಾಯ್ತು. ಮಾತ್ರೆ, ಹಸಿರು ಗಿಡ ಒಳ್ಳೆ ಕೆಲ್ಸ ಮಾಡಿದವು' ಎಂದಾಗ ಶೇಷಮೂರ್ತಿಯವರು ಮತ್ತಷ್ಟು ವಿಚಾರಗಳನ್ನು ಹೇಳತೊಡಗಿದರು. 'ಕಾಲು ಕೊಳೆತು ತೆಗೆಯಬೇಕು ಎನ್ನುವ ಸಂದರ್ಭದಲ್ಲಿ ನಾನು ಕೊಟ್ಟ ಉಪಚಾರವು ಅನುಕೂಲವಾಯ್ತು. ಕುಶಾಲನಗರದ ಇಂಜಿನಿಯರೊಬ್ಬರ ಮಗಳಿಗೆ ಕಾಲಲ್ಲಿ ರಸ ಸೋರ್‍ಲಿಕ್ಕೆ ಶುರುವಾಗಿ ಆಕೆ ಸಣಕಲಾಗಿ ನಿದ್ದೆ ಮಾಡದೇ ಹತಾಶಳಾಗಿದ್ದಳು. ನನ್ನ ಹತ್ರ ಬಂದಾಗ ಪರಿಸ್ಥಿತಿ ನೋಡಿಕೊಂಡು ಮಾತ್ರೆ ಕೊಟ್ಟೆ. ಕೆಲವೇ ದಿನಗಳಲ್ಲಿ ವಾಸಿ ಆಯ್ತು' ಎಂದ ಶೇಷಮೂರ್ತಿಯವರು 'ನಾನು ಚಿಕಿತ್ಸೆ ಕೊಡ್ತೀನಿ' ಎಂದು ಹೇಳಿಕೊಂಡು ಅಡ್ಡಾಡಲ್ಲವಂತೆ. ಹಾಗೆಯೇ ಮಾತ್ರೆಗಳಿಗೆ, ಮಾತ್ರೆ ತರ್‍ಲಿಕ್ಕೆ ಎಷ್ಟು ಖರ್ಚು ತಗುಲುತ್ತೋ ಅಷ್ಟನ್ನು ಮಾತ್ರ ತಗೊಳ್ತಾರೆ. ಬಡವರಿಗೆ ಕಾಸು ತಗೊಳ್ಳದೇ ಮಾತ್ರೆ ಕೊಟ್ಟಿರುವುದೂ ಇದೆ.

ಮಾತು ಮೊಟಕುಗೊಳಿಸಿ ಊರತ್ತ ನಮ್ಮ ಪ್ರಯಾಣ ಬೆಳೆಸಲು ಸಮಯ ನೋಡಿದಾಗ ರಾತ್ರಿ ಎಂಟು ಆಗಿತ್ತು. ಸುಂದರೇಶ್ ಮತ್ತು ಅವರ ಪತ್ನಿ ನಾಗವೇಣಿಯವರಿಗೆ ವಂದಿಸಿ ಹೊರಟುಬಂದೆವು.

ಮಾದಾಪುರದ ಶೇಷಮೂರ್ತಿಯವರ ದೂರವಾಣಿ ಸಂಖ್ಯೆ 289372, ನಾಗರಾಜ್ ಅವರದು 9741705503, ಸುಂದರೇಶ್‌ರವರದು 289050. ಹೊರಗಡೆಯಿಂದ ಸಂಪರ್ಕಿಸುವವರು 08175 ಸಂಖ್ಯೆಯನ್ನು ಸೇರಿಸಿಕೊಳ್ಳಿ.

ನಾವು ಕಂಡದ್ದು, ನಮಗನಿಸಿದ್ದು:

ಇಲ್ಲಿಯ ಜನಗಳಲ್ಲಿ ಕೃಷಿಯಲ್ಲಿ ಆಸಕ್ತಿ ಇದೆ. ಆದರೆ ಮಕ್ಕಳಿಗೆ ಬೇಸಾಯ ಹಿಡಿಸುತ್ತಿಲ್ಲ. ಜಮೀನು ಹಂಚಿಕೆ / ಪಾಲು ಮಾಡಿಕೊಳ್ಳುವ ವಿಚಾರದಲ್ಲಿ ಭಿನ್ನಾಭಿಪ್ರಾಯಗಳಿವೆ. ಹಾರಂಗಿ ಜಲಾಶಯದ ನೀರು ಇಲ್ಲಿನ ತೋಟಗಳಿಗೆ ಹರಿಯುತ್ತಿದ್ದು ಶೀತವಾಗಿರುವುದರಿಂದ ವಿಳ್ಳೇದೆಲೆ ಮತ್ತು ಬಾಳೆ ದೂರವಾಗುತ್ತಿವೆ. ಕೈತುಂಬ ಹಣವನ್ನು ಕೊಡುತ್ತಿದ್ದ ಈ ಬೆಳೆಗಳು ತೋಟಗಳಲ್ಲಿ ಖಾಲಿಯಾಗುತ್ತಿವೆ. ಶೀತದಿಂದಾಗಿ ಅಡಿಕೆಯು ಅಣಬೆ ರೋಗಕ್ಕೆ ತುತ್ತಾಗುತ್ತಿದೆ. ಔಷಧಿಗಳ ಬಳಕೆಯೂ ಫಲ ನೀಡಿಲ್ಲ. ದನಕರುಗಳ ಸಾಕಾಣಿಕೆಯು ಕಮ್ಮಿಯಾಗಿದ್ದು ತೋಟಗಳಿಗೆ ತಕ್ಕಷ್ಟು ಗೊಬ್ಬರವನ್ನು ಪೂರೈಸಲು ಆಗುತ್ತಿಲ್ಲ. ರಾಸಾಯನಿಕ ಗೊಬ್ಬರವನ್ನು ಅದರಲ್ಲೂ ಸುಫಲಾವನ್ನು ಅಡಿಕೆಗೆ ಹಾಕುತ್ತಿದ್ದಾರೆ.

ಶೇಷಮೂರ್ತಿಯವರು ತಮ್ಮ ೨೪ ಗುಂಟೆ ಅಡಿಕೆ ತೋಟದಿಂದ ೪೦ ಕ್ವಿಂಟಾಲ್ ಹಸಿ ಅಡಿಕೆಯನ್ನು ಪಡೆಯುತ್ತಿದ್ದು ಇದುವರೆಗೆ ರಾಸಾಯನಿಕ ಗೊಬ್ಬರವನ್ನು ಅವರು ಬಳಸಿಲ್ಲ. ಇಳುವರಿಯೂ ಉತ್ತಮವಾಗಿದ್ದು, ಸಾಯುವ ಮರಗಳು ಬಹು ಕಮ್ಮಿ ಎಂದು ಅವರು ಹೇಳುತ್ತಾರೆ. ಮರಗಳಿಂದ ಉದುರುವ ಗರಿಗಳನ್ನು ಅಲ್ಲೇ ಕೊಳೆಯುವಂತೆ ಮಾಡುವ ಇವರು ವರ್ಷಕ್ಕೆ ಎರಡು ಬಾರಿ ಉತ್ತಮ ಪ್ರಮಾಣದಲ್ಲಿ ಬಳಸಿ ಮಣ್ಣನ್ನು ಅಗೆತ ಮಾಡಿ ಮುಚ್ಚಿಸುತ್ತಾರೆ. ಪ್ರತಿಯೊಂದು ಮರದ ಬಳಿ ಗುಣಿ ತೆಗೆದು ಹಾಕದೇ ಈ ಕೆಲಸ ಮಾಡುತ್ತಾರೆ.


ನಾಗರಾಜ್‌ರವರು ತಂಬಾಕು ಬೆಳೆಯುವುದನ್ನು ಏಳೆಂಟು ವರ್ಷಗಳ ಕಾಲ ಕೈಬಿಟ್ಟಿದ್ದರು. ಈಗ ಅಡಿಕೆಗೂ ಬೆಲೆ ಹೋದದ್ದನ್ನು ಗಮನಿಸಿ ತಂಬಾಕು, ಶುಂಠಿಯನ್ನು ಸಾಗುವಳಿ ಮಾಡಿ ಹಣ ಗಳಿಸಿದ್ದಾರೆ. ಬರೀ ಒಂದೇ ಬೆಳೆಯ ಮೇಲೆ ಅವಲಂಬಿಸುವುದು ಯೋಗ್ಯವಲ್ಲ ಎಂಬುದು ಇದರಿಂದ ಅರ್ಥವಾಗುತ್ತದೆ.

ಬಸಿಗಾಲುವೆಗಳನ್ನು ಕೊಟ್ಟುಕೊಂಡು ಬೆಳೆಯನ್ನು ಸಮರ್ಪಕವಾದ ರೀತಿಯಲ್ಲಿ ಪೋಷಣೆ ಮಾಡುವುದು ಕ್ಷೇಮಕರ ಎಂಬುದು ಶೇಷಮೂರ್ತಿಯವರ ಅನುಭವದಿಂದ ವ್ಯಕ್ತವಾಗುತ್ತದೆ. ವಿಳ್ಳೇದೆಲೆಯು ಹೋಗಿರುವುದು ಬರೀ ಶೀತದಿಂದ ಎನ್ನುವುದಕ್ಕಿಂತ ಪೋಷಣೆಯೂ ಕಮ್ಮಿಯಾಯಿತು ಎಂದು ಬೆಳೆದು ಕಳೆದುಕೊಂಡವರು ಒಪ್ಪುತ್ತಾರೆ. ಅಡಿಕೆ ತೋಟಗಳಲ್ಲಿ ಹಾಕಿರುವ ತೆಂಗು ಇಕ್ಕಟ್ಟಿನಲ್ಲಿ ಬೆಳೆದಿದೆ. ಸರಿಯಾದ ಬಿಸಿಲು, ನೀರು, ಸತ್ವ ಸಿಗುವಂತೆ ಮಾಡುವುದು ಒಳ್ಳೆಯದಾದೀತು.

ಸಂದರ್ಶನ : 06-02-2003

೬. ವಿಳ್ಳೇದೆಲೆ ಉಳಿವು - ನಮ್ಮ ಗೆಲವು: ಮಲ್ಲರಾಜಪಟ್ಟಣದ ಮಾದರಿ

ಮಲ್ಲರಾಜಪಟ್ಟಣದ ವೆಂಕಟೇಶ್‌ರವರ ಅಡಿಕೆ ತೋಟದಲ್ಲಿ ವಿಳ್ಳೇದೆಲೆ ಅಳಿದು ಹೋಗಿಲ್ಲ. ಅಡಿಕೆ, ಬಾಳೆ, ಭತ್ತ, ವೀಳ್ಯೆ ಬೆಳೆಯುತ್ತಿರುವ ಅವರ ಅನುಭವಗಳು ಇತರರಿಗೆ ಮಾದರಿ ಎನಿಸುತ್ತವೆ.



ವಿಳ್ಳೇದೆಲೆ ಉಳಿಸಿಕೊಂಡಿರುವ ವೆಂಕಟೇಶ್ (ವೆಂಕಟನಾರಾಯಣ):ಮಲ್ಲರಾಜಪಟ್ಟಣ

ಮಲ್ಲರಾಜಪಟ್ಟಣವು ರಾಮನಾಥಪುರದ ಸೇತುವೆಯ ಪಕ್ಕದಲ್ಲಿದೆ. ಹೊಳೆಯ ನೀರು ಈ ಊರಿನ ದಡಕ್ಕೆ ತಟ್ಟಿ ಹೋಗುತ್ತದೆ. ವೆಂಕಟನಾರಾಯಣರವರ (ವೆಂಕಟೇಶ್) ಮನೆ ಹುಡುಕಿಕೊಂಡು ಹೋಗಿ ಸ್ಥಳ ತಲುಪಿದಾಗ ಅಲ್ಲಿ ಅವರು ಇರಲಿಲ್ಲ. ಅವರ ಪತ್ನಿ ಕೆಲಸದಲ್ಲಿ ನಿರತರಾಗಿದ್ದರು. ಪಕ್ಕದ ಮನೆಯವರು ಗದ್ದೆಯ ದಾರಿಯನ್ನು ತೋರಿಸಿದರು. ತಡ ಮಾಡದೇ ಹೊರಟೆವು.

ಕಟ್ಟೇಪುರದ ನಾಲೆ ಹರಿದುಕೊಂಡು ಹೋಗುವ ದಾರಿಯಲ್ಲೇ ತುಸು ದೂರ ಕ್ರಮಿಸಿ ಭತ್ತದ ಕಣ ಎಲ್ಲಿದೆ ಎಂದು ಕಣ್ಣಾಡಿಸಿದೆವು. ಎರಡು ಕಡೆ ಕೆಲಸ ಸಾಗಿತ್ತು. ಸರಿ, ನೋಡೋಣವೆಂದು ಒಂದು ಕಡೆ ನಿಂತು, 'ಸ್ವಾಮಿ, ಇಲ್ಲಿ ವೆಂಕಟನಾರಾಯಣ ಎಲ್ಲಿದ್ದಾರೆ?' ಎಂದೆವು. ಹೆಗಲ ಮೇಲೆ ಶಾಲು ಹಾಕಿಕೊಂಡ ವ್ಯಕ್ತಿ, 'ನಾನೇ, ಹೇಳಿ' ಎಂದರು. 'ಸ್ವಾಮಿ, ನಮಸ್ಕಾರ. ನಿಮ್ಮನ್ನು ಕಂಡು, ನಿಮ್ಮ ಕೃಷಿ ಅನುಭವಗಳನ್ನು ಪಡೆದುಕೊಂಡು ಹೋಗೋಣಾಂತ ಬಂದಿದೀವಿ. ನಿಮ್ಗೆ ತೊಂದ್ರೆ ಆಗಲ್ವಾ?' ಎಂದೆವು. 'ಇಲ್ಲಾ, ಬನ್ನಿ' ಎಂದ ವೆಂಕಟನಾರಾಯಣರವರು ಮಾತು ಶುರು ಮಾಡಿದರು. 'ಏನು ನಿಮ್ಮ ಹೆಸರು, ಏನು ನಿಮ್ಮ ಕೆಲಸ' ಎಂದಾಗ ನಾವು ಪರಿಚಯಿಸಿಕೊಂಡು ಮಾತಿಗಿಳಿದೆವು.

'ಬೆಳಗ್ಗೆ ಐದು ಘಂಟೆಗೇ ಇಲ್ಲಿಗೆ ಬಂದೆ. ಭತ್ತ ಬಡೀಲಿಕ್ಕೆ ಜನ ಕರೆದುಕೊಂಡು ಕೆಲಸ ಮಾಡಿಸ್ತಾ ಇದೀನಿ' ಎಂದವರು ಹೇಳಿದರು. ಒಂಬತ್ತು ಜನ ಹುಲ್ಲನ್ನು ಬಡಿಯುತ್ತಿದ್ದರು.


ಇದು ಯಾವ ತಳಿ? ಈ ವರ್ಷ ಬೆಳೆ ಹೇಗಿದೆ?

ನಾವೆಲ್ಲ ರಾಜಮುಡಿ ತಳೀನೇ ಬೆಳೀತಾ ಇದೀವಿ. ಕಟ್ಟೇಪುರ ನಾಲೆ ನೀರು ಸಿಕ್ತು. ಬೆಳೆ ಪರವಾಗಿಲ್ಲ.

ಜೊಳ್ಳು ಇದೆಯಾ?

ಸ್ವಲ್ಪ ಇರುತ್ತೆ.

ಹೆಚ್ಚು ವಿಚಾರ ಪಡೆಯುವ ಮುನ್ನ, ಬಿಸಿಲು ಬಲಿಯುವ ಹೊತ್ತಿಗೆ ತೋಟ ನೋಡಿಕೊಂಡು ಬರೋಣ ಎಂದು ಯೋಚಿಸಿ ವೆಂಕಟನಾರಾಯಣ ಅವರನ್ನು ಕರೆದುಕೊಂಡು ಹೊರಟೆವು. ಭತ್ತದ ಜಮೀನಿನ ಪಕ್ಕದಲ್ಲಿ, ತುಸು ದೂರದಲ್ಲೇ ತೋಟ ಕಾಣಿಸಿತು. ನಾಲೆಯ ನೀರು ಹರಿಯುತ್ತಿತ್ತು. ತೋಟ ಪ್ರವೇಶಿಸಿದ ನಮಗೆ ಎಲ್ಲೆಡೆ ವಿಳ್ಳೇದೆಲೆ ಹಂಬು ಕಾಣಿಸಿತು. ಕಾರ್ಮಿಕನೊಬ್ಬ ಹಂಬು ಇಳಿಸುವ ಕೆಲಸ ಮಾಡುತ್ತಿದ್ದ. ಸನಿಹದಲ್ಲೊಂದು ಬಾವಿ; ನೀರಿಗೆ ಕೊರತೆ ಇಲ್ಲ. ಅಲ್ಲಲ್ಲಿ ನೀರುಣಿಸಲು ತೆಗೆದಿದ್ದ ಸಣ್ಣ ಹೊಂಡಗಳಲ್ಲಿ ಪಾಚಿ ಬೆಳೆದಿತ್ತು. ನಾಲೆ ಬಂದ ಮೇಲೆ ಇವುಗಳ ಉಪಯೋಗ ನಿಂತಿದೆ ಎಂದು ತಿಳಿಯಿತು. ತೋಟದ ಅಂಚಿಗೆ ಹೋದಾಗ ಸುತ್ತಲೂ ಎತ್ತರವಾಗಿ ಬೆಳೆದ ಮರಗಳು ರಕ್ಷಕರಂತೆ ಕೆಲಸ ಮಾಡುತ್ತಿವೆ ಎಂದೆನಿಸಿತು. ಅಲ್ಲೇ ಇದ್ದ ಎತ್ತರದ ತೆಂಗಿನ ಮರವನ್ನೇರಿ ಆಳು ಮೂರ್‍ನಾಲ್ಕು ಎಳೆನೀರು ಕೆಡವಿದ. ಕತ್ತರಿಸಿ ಕುಡಿದಾಗ ತಂಪನೆಯ ಸಿಹಿ ನೀರು. ಇದಾದ ಬಳಿಕ ಪಕ್ಕದಲ್ಲಿ ಹೊಸ ತೋಟ. ಪುಟ್ಟಬಾಳೆಯು ದೊಡ್ಡದಾಗಿ ಬೆಳೆದಿತ್ತು. ಅಡಿಕೆ ಸಸಿಗಳು ಆರೋಗ್ಯವಾಗಿದ್ದವು. ಅದನ್ನೆಲ್ಲಾ ಗಮನಿಸಿಕೊಂಡು ಏರಿ ಮೇಲೆ ವಾಪಸಾಗುವಾಗ ಮುಳ್ಳಿನ ಗಿಡಗಳು ಕಂಡವು. ಕಾರೆ,



ಹಂಬು ಇಳಿಸುವ ಕ್ರಮ ಇದು:ಮಲ್ಲರಾಜಪಟ್ಟಣ

ಬಾರೆ, ಕಾಡುಸೊಂಡೆ, ನಾಡುಸುಂಡೆ (ಸೊಂಡೆ), ಸೊಡ್ಲಿ ಮುಳ್ಳು, ಕಾಡುಮೆಣಸಿಗೆ - ಇತ್ಯಾದಿಗಳು ಪರಿಚಯವಾದವು. 'ನಾಡುಸುಂಡೆ ಕಾಯೀನಾ ಇಲ್ಲಿ ಬಳಸ್ತೀವಿ. ಬೀಜ ತೆಗೆದು ಕಾಯಿಯ ಸಿಪ್ಪೇನ ಪಲ್ಲೆ ಮಾಡ್ಲಿಕ್ಕೆ ಉಪಯೋಗಿಸ್ತೀವಿ' ಎಂದು ವೆಂಕಟನಾರಾಯಣ ಹೇಳಿದರು.

ವಿಚಾರಗಳನ್ನು ಕಲೆ ಹಾಕಲು ಒಂದೆಡೆ ಕೂತರೆ ಒಳ್ಳೆಯದೆಂದು ಭತ್ತದ ಹುಲ್ಲು ಬಡಿಯುವ ಜಾಗದ ಹತ್ತಿರ ಬಂದು ಬಣವೆಯ ನೆರಳನ್ನೇ ಆಶ್ರಯವಾಗಿ ಪಡೆದುಕೊಂಡು ಕೂತೆವು. ಮನೆಗೆ ಹೋದರೆ ಇಲ್ಲಿಯ ಕೆಲಸಕ್ಕೆ (ಕಣ ಮಾಡುವ ಕೆಲಸಕ್ಕೆ) ತೊಂದರೆ ಆಗಬಹುದೆಂದು ಯೋಚಿಸಿ ಗದ್ದೆಯಲ್ಲೇ ಕೂತು ಪ್ರಶ್ನೆ ಶುರು ಮಾಡಿದೆವು.

ನಿಮ್ಮ ತಂದೆ ತಾಯಿ, ಕುಟುಂಬದ ಬಗ್ಗೆ ಹೇಳಿ

ನನ್ನ ತಂದೆ ಆರ್.ವಿ.ಸುಬ್ಬಣ್ಣ, ಅಮ್ಮ ಸಾವಿತ್ರಮ್ಮ, ಪತ್ನಿ ವಿಜಯಲಕ್ಷ್ಮಿ. ನನಗೆ ಮೂವರು ಸಹೋದರರು. ಇಬ್ರು ಸಹೋದರಿಯರು ಇದಾರೆ. ನನ್ನಣ್ಣ ನಾಗರಾಜು, ತಮ್ಮ ಶ್ರೀನಿವಾಸಯ್ಯ ಇಬ್ಬರಿಗೂ ತೋಟ ಇದೆ.

ಊರಲ್ಲಿ ಎಷ್ಟು ಕುಟುಂಬ ಇದೆ?

ಸುಮಾರು ನೂರು. ಪ್ರಧಾನವಾಗಿ ಬೆಸ್ತರು/ನಾಯಕರು ಕೃಷಿ ಮಾಡಿಕೊಂಡು ಜೀವನ ಮಾಡ್ತಾ ಇದಾರೆ. ಸಂಕೇತಿಗಳದು ಐದೇ ಮನೆ.

ನೀವು ಏನು ಓದಿದ್ರಿ?

ಎಸ್‌ಎಸ್‌ಎಲ್‌ಸಿ ತನಕ ಓದಿದೆ. ರಾಮನಾಥಪುರದಲ್ಲಿ ವಿದ್ಯಾಭ್ಯಾಸ ಆಯ್ತು. ಓದಿನಲ್ಲಿ ನನ್ಗೆ ಆಸಕ್ತಿಯೂ ಇರ್ಲಿಲ್ಲ. ಪ್ರೋತ್ಸಾಹವೂ ಕಮ್ಮಿ ಇತ್ತು. ನನ್ನ ಅಣ್ಣತಮ್ಮಂದಿರೂ ಹೆಚ್ಚು ಓದ್ಲಿಲ್ಲ.

ನಿಮ್ಗೆ ಹಿಡುವಳಿ ಎಷ್ಟು ಇದೆ?

ನನ್ಗೆ ನಾಲ್ಕೂವರೆ ಎಕರೆ ತೋಟ, ಒಂದು ಎಕರೆ ಗದ್ದೆ ಇದೆ. ಅಡಿಕೆ, ತೆಂಗು, ವೀಳ್ಯೆ ಭತ್ತ ಬೆಳಿತೀನಿ.

ನೀರಿಗಾಗಿ ಏನು ವ್ಯವಸ್ಥೆ ಮಾಡಿಕೊಂಡಿದೀರಿ?


ಕಟ್ಟೇಪುರ ನಾಲೆ (ಉತ್ತರ ನಾಲ ಕೊಳವಾಯಿ) ಯಲ್ಲಿ ಜುಲೈ ೧೮ ರಿಂದ ನೀರು ಬಿಡ್ತಾರೆ. ಜನವರಿ ನಂತರ ನಿಲ್ಲಿಸ್ತಾರೆ. ನಾಲೆಯ ನೀರು ಇಲ್ಲದಿದ್ದಾಗ ಭಾವಿ ನೀರು ಬಳಸ್ತೀವಿ. ಹದಿನೈದು ವರ್ಷದ ಹಿಂದೆ ತೆಗೆದ ಭಾವಿ ಇದೆ. ಮೊದಲೆಲ್ಲಾ ಸಣ್ಣ ಭಾವಿಗಳಿದ್ದವು, ಕೈಯಿಂದ ಎತ್ತಿ ಮರಗಳಿಗೆ ನೀರು ಹಾಕ್ತಾ ಇದ್ವಿ. ಈಗೆಲ್ಲಾ ನೀರೆತ್ತಲಿಕ್ಕೆ ಪಂಪುಗಳು ಬಂದ್ವು.



ಮೊಗರು ಎಲೆಯ ಹಂಬು:ಮಲ್ಲರಾಜಪಟ್ಟಣ

ನಿಮ್ಮಲ್ಲಿ ವಿಳ್ಳೇದೆಲೆ ಹಂಬು ಉತ್ತಮವಾಗಿಯೇ ಇದೆ. ಏನಿದರ ಗುಟ್ಟು? ಬಹಳ ಕಡೆ ಅಡಿಕೆ ತೋಟದಲ್ಲಿ ವಿಳ್ಳೇದೆಲೆಯೇ ಇಲ್ಲ. ನೀವು ಉಳಿಸ್ಕೊಂಡು ಬಂದಿದೀರಿ. ಈ ಬಗ್ಗೆ ವಿಚಾರ ತಿಳಿಸಿ.

ನಮ್ಮ ತೋಟದಲ್ಲಿ ಅಡಿಕೆ ಪ್ರಾಯಕ್ಕೆ ಬಂದಾಗ್ಲಿಂದ ಇದೆ. ನಾಟಿ ತಳಿ, ತುಂಬಾ ಹಳೆಯದು. ಆಗಾಗ್ಗೆ ಸ್ಥಳ ಬದಲಾವಣೆಯಾಗುತ್ತೆ. ವೀಳ್ಯೆಗೆ ಶೀತ ಆಗಲ್ಲ. ಜೋಪಾನವಾಗಿ ಕಾಪಾಡಿಕೊಂಡ್ರೆ ಬಹಳ ದಿನ ಉಳಿಯುತ್ತೆ. ನಾವು ವರ್ಷದಲ್ಲಿ ಒಂದ್ಸಾರಿ ಬಳ್ಳಿ ಇಳಿಸ್ತೀವಿ. ಡಿಸೆಂಬರ್ ಜನವರಿಯಲ್ಲಿ ಬಳ್ಳಿ ಬತ್ತಿರುತ್ತೆ. ನೀರಿನಂಶ ಕಮ್ಮಿ ಇರುತ್ತೆ. ಆಗ ಇಳಿಸಿದ್ರೆ ಬಳ್ಳಿ ಮುರಿಯಲ್ಲ. ಮಳೆಗಾಲದಲ್ಲಿ ರಸ ತುಂಬಿದ ಬಳ್ಳಿ ಮುರಿದು ಬಿಡುತ್ತೆ. ಇನ್ನೂ ಬೇಸಿಗೆಯಲ್ಲಿ ಎಲೆಯ ಮೊಗ್ಗು ಮೂಡೋದ್ರಿಂದ ಪೆಟ್ಟಾಗುತ್ತೆ. ಆದ್ದರಿಂದ ಚಳಿಗಾಲವೇ ಸೂಕ್ತ.



ಅಡಿಕೆಗೆ ಅಂಟಿಕೊಂಡ ವಿಳ್ಳೇದೆಲೆ:ಮಲ್ಲರಾಜಪಟ್ಟಣ

ಎಲೆ ಕೊಯ್ಲಿನಲ್ಲಿ ಪದ್ಧತಿಗಳು ಏನಾದ್ರೂ ಇದೆಯಾ?

ಹೌದು. ಚಿಗುರು ಬಿಟ್ಟು ಹಿಂದಿನ ಎಲೆಯನ್ನು ಕೊಯ್ಯೋ ಪದ್ಧತಿಯನ್ನು ಒಣಗುಯ್ಲು ಅಂತೀವಿ. ಇಲ್ಲಿ ಚಿಗುರು ಎಲೆಯನ್ನು ಮುಟ್ಟಲ್ಲ. ಅದರ ಹಿಂದಿರುವ ಎಲೆಯನ್ನು ಕತ್ತರಿಸ್ತೀವಿ. ಇನ್ನೊಂದು ಮುರುಗುಯ್ಲು. ಇಲ್ಲಿ ಪೂರ್ತಿ ಕುಯ್ತೀವಿ. ಆದ್ರೆ ಚಳಿಗಾಲದಲ್ಲಿ ಎಲೆ ಕೊಡಲ್ಲ. ವರ್ಷಕ್ಕೆ ನಾಲ್ಕೈದು ಕುಯ್ಲು ಆಗುತ್ತೆ. ಸೋನೆ ಇದ್ದಾಗ ಎಲೆ ಕೊಯ್ಯೋದಿಲ್ಲ. ಹಂಬಿಗೆ ಹಾನಿ ಆಗಬಹುದೆಂದು ನಂಬಿಕೆ ಇದೆ.

ಹೊಸದಾಗಿ ವೀಳ್ಳೇದೆಲೆ ಬೆಳೆ ಮಾಡೋರು ಎಂತಹ ಬಳ್ಳೀನ ಉಪಯೋಗಿಸ್ತಾರೆ?

ಬೀಜಕ್ಕೆ, ಬಳ್ಳಿ ಉದ್ದವಾಗಿರುವ ಕಡೆ ಕೊಯ್ತೀವಿ. ಅದನ್ನ ಹಾಗೇ ನಾಟಿ ಮಾಡ್ತಾರೆ. ಕತ್ತರಿಸಿದ ಹಂಬನ್ನು ಯಾವ ಕಾಲದಲ್ಲಾದರೂ ಹಾಕಬಹುದು. ಆದರೆ ಬೇಸಿಗೆ ಸೂಕ್ತವಲ್ಲ.

ನಿಮ್ಮಲ್ಲಿ ಎಷ್ಟು ವೀಳ್ಯೆದೆಲೆ ಹಂಬು ಇದೆ?

ನನ್ನಲ್ಲಿ ೮೦೦ ಹಂಬು ಇದೆ. ೨೦ ಪಿಂಡಿ ಎಲೆ ಸಿಗುತ್ತೆ.

ಒಂದು ಪಿಂಡಿಯಲ್ಲಿ ಎಷ್ಟು ಎಲೆ ಇರುತ್ತವೆ?

ಒಂದು ಪಿಂಡಿಯಲ್ಲಿ ೧೨,೦೦೦ ಎಲೆ ಇರ್ತವೆ. ನೂರು ಎಲೆಯ ೧೨೦ ಕಟ್ಟು ಎಲೇನ ಜೋಡಿಸ್ತಾರೆ.

ಎಲೆ ಮಾರಾಟ ಹೇಗೆ, ಹಂಬು ಕಟ್ಟೋ ಕೆಲ್ಸ ಯಾರು ಮಾಡ್ತಾರೆ?

ನಾವೇ ತಗೊಂಡು ಹೋಗಿ ಮಾರಲ್ಲ. ಗುತ್ತಿಗೆ ಕೊಡ್ತೀವಿ. ನುರಿತವರು ಬಂದು ಎಲೆ ಕುಯ್ದು, ಅವ್ರೇ ಜೋಡಿಸಿಕೊಳ್ತಾರೆ. ಹಂಬು ಕಟ್ಲಿಕ್ಕೆ ಅನುಭವ ಬೇಕು.

ಎಲೇನ ಹೇಗೆ ಕುಯ್ತಾರೆ? ಹೇಗೆ ಜೋಡಿಸ್ತಾರೆ? ಪಿಂಡೀನ ಹೇಗೆ ಕಟ್ತಾರೆ ಹೇಳಿ?

ಕಬ್ಬಿಣದ ಉಗುರು ಇರುತ್ತೆ. ಹೆಬ್ಬೆಟ್ಟಿಗೆ ಹಾಕ್ಕೊಂಡು ಎಲೇನ ಜಿವುಟ್ತಾರೆ. ತೆಂಗಿನ ಗರಿಯ ಕುಕ್ಕೇನ ಎಲೆ ತುಂಬ್ಲಿಕ್ಕೆ ಬಳಸ್ತಾರೆ. ಕೆಳಗೆ ತಂದು ಸುರೀತಾರೆ. ಒಂದಿಬ್ಬರು ಹೆಣ್ಣು ಮಕ್ಕಳು ಜೋಡಿಸ್ತಾರೆ. ಪಿಂಡಿ ಕಟ್ಲಿಕ್ಕೆ ಅಡಿಕೆ ಪಟ್ಟೆ ಮೇಲೆ, ಕೆಳಗೆ, ಹಾಕ್ತಾರೆ. ಸುತ್ತಲೂ ಬಾಳೆ ತರಗು ಹಾಕಿ ಬಿಗಿಯಾಗಿ ಬಾಳೆ ಎಲೆ ಅಥವಾ ಅಡಿಕೆ ಪಟ್ಟೆಯಿಂದ ಕಟ್ತಾರೆ. ನೀರಲ್ಲಿ ನೆನೆಸಿ, ಆಮೇಲೆ ನೀರು ಬಸಿದುಕೊಂಡು ತಗೊಂಡು ಹೋಗ್ತಾರೆ. ಹಳ್ಳಿ ಸಂತೆಗಳಲ್ಲೇ ವೀಳ್ಳೇದೆಲೆ ಮಾರಾಟವಾಗುತ್ತೆ. ಡಿಸೆಂಬರ್‌ನಿಂದ ಫೆಬ್ರುವರಿವರೆಗೆ (ಚಳಿಗಾಲದಲ್ಲಿ) ಎಲೆಗೆ ಬೆಲೆ ಇರುತ್ತೆ.

ಎಲೆ ಕೊಯ್ಲಿಕ್ಕೆ ಎಂತಹ ಏಣಿಗಳನ್ನು ಬಳಸ್ತೀರಿ?

ನಮ್ಮಲ್ಲಿ ಚಾಚೇಣಿ ಮತ್ತು ಕಾಲೇಣಿಗಳನ್ನು ಬಳಸ್ತೀವಿ. ಚಾಚೇಣಿಯಲ್ಲಿ ೧೦-೧೨ ಸ್ಟೆಪ್ಸ್ ಇರುತ್ತೆ. ಆದ್ರೆ ಒಬ್ರೇ ಇದನ್ನು ಬಳಸಿಕೊಂಡು ಎಲೆ ಕೊಯ್ಯಬಹುದು. ಆದ್ರೆ ಕಾಲೇಣೀಗೆ ಇಬ್ರು ಬೇಕು. ಇಲ್ಲೀನೂ ೧೦-೧೨ ಸ್ಟೆಪ್ಸ್ ಇವೆ.

ವಿಳ್ಯೇದೆಲೆ ಬೆಳೆಗೆ ಏನು ಗೊಬ್ರ ಕೊಡ್ತೀರಿ? ಹೇಗೆ ಕೊಡ್ತೀರಿ?

ವರ್ಷದಲ್ಲಿ ಎರಡು ಸಾರಿ (ಜೂನ್ ಮತ್ತು ಡಿಸಂಬರ್‌ನಲ್ಲಿ) ದನದ ಗೊಬ್ಬರಾನ ಒಂದೊಂದಕ್ಕೆ ಎರಡು ಕುಕ್ಕೆ ಕೊಡ್ತೀವಿ. ಅಡಿಕೆಗೂ ಇದೇ ಅನ್ವಯವಾಗುತ್ತೆ. ರಾಸಾಯನಿಕ ಗೊಬ್ಬರ ಹಾಕಲ್ಲ. ವರ್ಷವೂ ಬಳ್ಳಿ ಇಳಿಸುವ ಜಾಗಾನ ಬದಲಾಯಿಸ್ತೀವಿ. ಹೊಸಮಣ್ಣನ್ನು ಹಾಕ್ತೀವಿ. ನಾಲೆ ನಿಲ್ಲಿಸಿದಾಗ ಅಲ್ಲಿ ಸಿಗೋ ಗೋಡುಮಣ್ಣನ್ನು ಹಾಕ್ತೀವಿ. ಗೊಬ್ಬರ ಹಾಕಿ ಒಂದೇ ಸಾರಿ ತಗ್ಗನ್ನು ಮುಚ್ಚೋದಿಲ್ಲ. ಮಳೆ ಬಂದಹಾಗೆಲ್ಲಾ ಅದು ಮುಚ್ಚಿಕೊಳ್ಳುತ್ತೆ.

ವಿಳ್ಯೇದೆಲೆಗೆ ಏನು ಆಗೋದಿಲ್ಲ ಹೇಳಿ?

ವೀಳ್ಯೆಗೆ ಶೀತ ಆಗಬಾರದು. ಹೆಚ್ಚಿಗೆ ನೀರು ಕೊಡಬಾರದು. ವರ್ಷವೂ ಕಸಿ ಮಾಡ್ತಾ ಇದ್ರೆ ಉಳಿಯುತ್ತೆ. ನೀರು ನಿಲ್ಲದ, ಶೀತವಾಗದ ಜಮೀನುಗಳು ಇದಕ್ಕೆ ಒಳ್ಳೆಯದು. ಹಿಂದೆಲ್ಲಾ ಹಂಬು ಬಹಳ ದಪ್ಪ ಇರ್ತಿತ್ತು. ಈಗ ಸಣಕಲು.

ಏನು ದುಡ್ಡು ಕಾಣ್ತೀರಿ ವೆಂಕಟೇಶ್‌ರವರೇ?

ವರ್ಷಕ್ಕೆ ೨೫,೦೦೦ ರೂಪಾಯಿ ಸಿಗುತ್ತೆ. ಸ್ವಂತವಾಗಿ ಕೆಲ್ಸ ಮಾಡಿದ್ರೆ ಚೆನ್ನಾಗಿ ಉಳಿಯುತ್ತೆ. ಆಳುಗಳ ಮೇಲೆ ಅವಲಂಬನೆಯಾದಷ್ಟೂ ಬರೋದು ಕಮ್ಮಿಯಾಗುತ್ತೆ.

ವಿಳ್ಯೇದೆಲೆ ಬೆಳೆಗೆ ಕೀಟ, ರೋಗದ ಬಾಧೆ ಇಲ್ಲಿ ಇದೆಯಾ?

ಹೇಳಿಕೊಳ್ಳುವ ಮಟ್ಟದಲ್ಲಿ ಕೀಟ ರೋಗಗಳು ಹಾನಿ ಮಾಡಲ್ಲ. ಬೂದಿರೋಗ ಸ್ವಲ್ಪ ಕಾಣಿಸುತ್ತೆ.

ವಿಳ್ಯೆ ತೋಟಕ್ಕೆ ಪ್ರವೇಶಿಸುವಾಗ ಏನಾದರೂ ಕಟ್ಟುಪಾಡುಗಳನ್ನು ಇಟ್ಕೊಂಡಿದೀರಾ?

ಹಿಂದಿನಿಂದಲೂ ಕೆಲವೊಂದನ್ನು ಆಚರಣೆ ಮಾಡಿಕೊಂಡು ಬಂದಿದೀವಿ. ಬರೀ ಉಗುರಿನಲ್ಲಿ ಎಲೇನ ಕೊಯ್ಯಬಾರದು. ಹೆಂಗಸರು ಮುಟ್ಟಾದರೆ ಅಲ್ಲಿಗೆ ಹೋಗಬಾರದು. ಚಪ್ಪಲಿ ಹಾಕ್ಕೊಂಡು ಪ್ರವೇಶ ಮಾಡೋದಿಲ್ಲ.

ವಿಳ್ಯೇದೆಲೆಗೆ ನೀರನ್ನು ಹೇಗೆ ಕೊಡ್ತೀರಿ, ಯಾವಾಗ ಕೊಡ್ತೀರಿ?

ಮಳೆಗಾಲದಲ್ಲಿ, ನಾಲಾ ನೀರು ಇದ್ದಾಗ ತೊಂದ್ರೆ ಇಲ್ಲ. ಗುಣಿಗೆ ನೀರು ಕೊಡ್ತೀವಿ. ಬೇಸಿಗೆಯಲ್ಲಿ ವಾರಕ್ಕೊಮ್ಮೆ ಉಣಿಸ್ತೀವಿ. ಇಪ್ಪತ್ತು ಅಡಿ ಆಳದ ಬಾವಿ ಇದೆ. ೩ ಹೆಚ್‌ಪಿ ಪಂಪು ಇದೆ. ಕರೆಂಟಿಂದೇ ತೊಂದ್ರೆ.

ಅಡಿಕೆಯಲ್ಲಿ ಇಳುವರಿ, ವರಮಾನ ಹೇಗಿದೆ?

ಒಟ್ಟು ೬೦ ಕ್ವಿಂಟಾಲ್ ಹಸಿ ಅಡಿಕೆ ಸಿಗುತ್ತೆ. ಈ ವರ್ಷ ೮೫೦ ರೂಗೆ ಕ್ವಿಂಟಾಲ್‌ನಂತೆ ಕೊಟ್ಟೆ. ಆದಾಯದಲ್ಲಿ ಶೇ.ಐವತ್ತು ಖರ್ಚು.



ಅಡಿಕೆಯೊಂದಿಗೆ ಬಾಳೆ:ಸೂಕ್ತ ಸಂಯೋಜನೆ:ಮಲ್ಲರಾಜಪಟ್ಟಣ

ಅಡಿಕೆ ತೋಟದ ಸುತ್ತಲೂ ಏನೇನು ಮರ ಇದಾವೆ?
ಹೊಂಗೆ, ಹಲಸು, ತೆಂಗು, ಕಾಡುಜಾತಿ ಮರಗಳಿವೆ. ಈಗ ಕೆಲವರು ಅಕೇಶಿಯಾ ಹಾಕಿದಾರೆ.

ವೆಂಕಟೇಶ್ ಅವರು ಹೊಸದಾಗಿ ಅಡಿಕೆ, ಬಾಳೆಯನ್ನು ಹಳೆಯ ತೋಟದ ಪಕ್ಕದಲ್ಲಿ ಬೆಳೆಯುತ್ತಿದ್ದಾರೆ. ಹದಿನಾರು ಅಡಿ ಅಂತರದಲ್ಲಿ ಬಾಳೆಯನ್ನು ನೆಟ್ಟಿದ್ದಾರೆ. ಟ್ರ್ಯಾಕ್ಟರ್ ಹೋಗಿ ಬರ್‍ಲಿಕ್ಕೆ, ಗೊಬ್ಬರ ಸಾಗಿಸ್ಲಿಕ್ಕೆ, ಕಳೆ ಹತೋಟಿಗೆ ಇವರು ಈ ಅಂತರದಲ್ಲಿ ಗಿಡಗಳನ್ನು ನಾಟಿ ಮಾಡಿದ್ದಾರೆ. ಹೊಸತೋಟಕ್ಕೆ ಹೋದಾಗ ಈ ವಿಚಾರ ಕುರಿತು ಗಿಡ ತೋರಿಸಿ ಹೇಳುತ್ತಿದ್ದರು.

ನಿಮ್ಮಲ್ಲಿ ಅಡಿಕೆ ಮರಗಳಿಗೆ ಅಣಬೆ ರೋಗ ಇದೆಯಾ?
ಇದೆ. ವರ್ಷಕ್ಕೆ ಐದಾರು ಮರ ಹೋಗ್ತವೆ.

ಅಂದ ಹಾಗೆ ನಿಮ್ಮಲ್ಲಿ ದನಕರುಗಳು ಎಷ್ಟಿವೆ?
ನನ್ನಲ್ಲಿ ಮೂರು ಎಮ್ಮೆ, ಎರಡು ಎತ್ತು, ಮೂರು ನಾಟಿ ಹಸು ಇವೆ.

ಮೇಯಿಸಲಿಕ್ಕೆ ಏನು ವ್ಯವಸ್ಥೆ ಮಾಡಿಕೊಂಡಿದೀರಿ?
ಮೇವಿಗೆ ಜೋಳ ಬೆಳಕೊಳ್ತೀವಿ. ರಸ್ತೆ ಅಕ್ಕಪಕ್ಕದಲ್ಲಿ ಮೇಯಿಸ್ತೀವಿ. ಮನೆಗೆ ಹಾಲು, ಅನಿಲ ಸಿಗುತ್ತೆ. ತಕ್ಕಷ್ಟು ಸಗಣಿ ಗೊಬ್ಬರ ದೊರೆಯುತ್ತೆ.

ಇಲ್ಲೆಲ್ಲಾ ಸಗಣಿ ಗೊಬ್ಬರಕ್ಕೆ ಏನಿದೆ ಬೆಲೆ?
ಒಂದು ಬಂಡಿಗೆ ೧೦೦ ರೂಪಾಯಿ, ಒಂದು ಟ್ರ್ಯಾಕ್ಟರ್ ಲೋಡ್‌ಗೆ ೫೦೦-೫೫೦ ರೂಪಾಯಿ ಇದೆ.

ಭತ್ತ ಬೆಳೀತೀರಲ್ಲ, ಆ ಬಗ್ಗೆ ಹೇಳಿ?
ನಾನು ಬೆಳಿಯೋದು ರಾಜಮುಡಿ ತಳಿ. ಮುಂಗಾರು ಬೆಳೆ. ಎಕರೆಗೆ ೧೮-೨೦ ಕ್ವಿಂಟಾಲ್ ಭತ್ತ ಸಿಗುತ್ತೆ. ಆರು ತಿಂಗಳ ಬೆಳೆ. ಬಿತ್ತನೆ ಬೀಜ ನಮ್ದೇ. ಸಸಿ ಮಡಿ ಮಾಡ್ಕೊಂಡು ನೆಡ್ತೀವಿ. ಒಂದು ಎಕರಗೆ ೨೫ ಬಳ್ಳ (೩೫ ಕಿ.ಗ್ರಾಂ) ಬೀಜವನ್ನು ಬಳಸ್ತೀವಿ.

ಒಂದು ಬಳ್ಳ ಅಂದ್ರೆ ಏನು?
ಒಂದು ಬಳ್ಳ ಅಂದ್ರೆ ಒಂದೂವರೆ ಕಿ.ಗ್ರಾಂ.

ಭತ್ತಕ್ಕೆ ಗೊಬ್ಬರ ಪೂರೈಕೆ ಹೇಗೆ?
ಒಂದು ಎಕರೆಗೆ ೧೦ ಗಾಡಿ ಸಗಣಿಗೊಬ್ಬರ ಹಾಕ್ತೀವಿ. ಒಂದು ಕ್ವಿಂಟಾಲ್ ೧೭:೧೭:೧೭ ಮತ್ತು ೨೦:೨೦:೦:೧೫ ರಾಸಾಯನಿಕ ಗೊಬ್ಬರವನ್ನು ನೀಡ್ತೀವಿ. ನಾಟಿ ಮಾಡಿ ಒಂದೂವರೆ ತಿಂಗಳಾದ ಬಳಿಕ ೧೫-೨೦ ಕಿ.ಗ್ರಾಂ. ಯೂರಿಯಾವನ್ನು ಮೇಲುಗೊಬ್ಬರವಾಗಿ ನೀಡ್ತೀವಿ.

ಭತ್ತದ ಕಣ ಹೇಗೆ ಮಾಡ್ತೀರಿ?
ಜಮೀನಿನಲ್ಲೇ ಕಣ ಮಾಡ್ತೀವಿ. ಕಟಾವು ಮಾಡಿ ಐದು ದಿನಗಳ ಕಾಲ ಜಮೀನಿನಲ್ಲೇ ಬಿಡ್ತೀವಿ. ಬಣವೆ ಹಾಕಿ ೧೫ ದಿನಕ್ಕೆ ಭತ್ತ ಹೊಡೀತೀವಿ. ತಂಪು ಹೊತ್ನಲ್ಲಿ ಭತ್ತ ಉದ್ರಿಸೋದು ಸುಲಭ. ಹುಲ್ಲು ಪುಡಿಯಾಗಲ್ಲ. ಕೆಲಸಾನೂ ಸಾಗುತ್ತೆ. ಮೊದಲು ಜನ ಕೈಯಿಂದ ಎತ್ತಿ ಹೊಡೀತಾರೆ, ಆಮೇಲೆ ಅಲ್ಪಸ್ವಲ್ಪ ಉಳಿದದ್ದನ್ನು ಬೇರೆ ಮಾಡ್ಲಿಕ್ಕೆ ದನಗಳನ್ನು ತುಳಿಸ್ತೀವಿ.

ನಿಮ್ಮಲ್ಲಿ ಜೊಳ್ಳು ಭತ್ತ ಎಷ್ಟು ಸಿಗುತ್ತೆ?
ಜೊಳ್ಳು ಬಹಳ ಕಮ್ಮಿ. ಹೆಚ್ಚೆಂದರೆ ಒಂದು ಚೀಲ ಸಿಗುತ್ತೆ.

ಮನೆ ಬಳಕೆಗೆ ಸಾಕಾಗುತ್ತಾ ಭತ್ತ?
ಹಳೇ ಭತ್ತವನ್ನು ಏಪ್ರಿಲ್ ಕೊನೆಯವರೆಗೆ ಇಟ್ಟುಕೊಂಡಿರ್ತೀವಿ. ಮೂರು ತಿಂಗಳ ಬಳಿಕವೇ ಹೊಸ ಭತ್ತವನ್ನು ಬಳಸ್ತೀವಿ. ನಾವು ಬೆಳೆದದ್ದು ಮನೆ ಬಳಕೆಗೆ ಸಾಕಾಗುತ್ತೆ.

ಕಟ್ಟೇಪುರ ನಾಲೆ ಆಶ್ರಯದಲ್ಲಿ ಜನ ಎಂತಹ ಭತ್ತಾನ ಬೆಳೀತಾರೆ?
ಬಹುತೇಕ ಜನ ರಾಜಮುಡಿ ಭತ್ತವನ್ನು ಬೆಳೀತಾರೆ.

ಈ ಭತ್ತಕ್ಕೆ ರೋಗ ಕೀಟಗಳು ಕಾಣಿಸ್ತಿವೆಯಾ?
ಇದಕ್ಕೆ ಕೀಟ ರೋಗಗಳು ಕಮ್ಮಿ. ಯಾವುದೇ ಔಷಧಿ ಹೊಡೆದಿಲ್ಲ.

'ಬನ್ನಿ, ಮನೆಗೆ ಹೋಗಿ ತಿಂಡಿ ತಿನ್ನೋಣ' ಎಂದು ವೆಂಕಟೇಶ್ ಅವರು ಹೇಳಿದಾಗಲೇ ಗಡಿಯಾರವನ್ನ ನೋಡಿಕೊಂಡೆವು. 'ನಾವು ತಿಂದುಕೊಂಡು ಬಂದಿದೀವಿ' ಎಂದಾಗ 'ನಂದೂ ಆಗಿಲ್ಲ, ನನ್ನ ಜೊತೆ ಸ್ವಲ್ಪ ತಗೊಳ್ಳಿ' ಎಂದು ನಗುತ್ತಾ ಹೇಳಿದಾಗ, 'ನಡ್ರೀ ಹೋಗೋಣ' ಎಂದು ಹೊರಟೆವು.

ಮನೆಗೆ ಪ್ರವೇಶ ಮಾಡಿದಾಗ ಪತ್ನಿ, ಮಗಳು ಪರಿಚಯವಾದರು. ವೆಂಕಟೇಶ್‌ರವರು ಸ್ನಾನ, ಪೂಜೆ ಮಾಡಲು ಸಜ್ಜಾಗುತ್ತಿದ್ದನ್ನು ಗಮನಿಸಿ ಮನೆಯ ವಿಶೇಷವನ್ನು ನೋಡಲು ಮನಸ್ಸು ವಾಲಿತು. ಮನೆ ಹಳೆಯದು. ಹಿತ್ತಲಲ್ಲಿ ಸಗಣಿ ಅನಿಲ ಘಟಕ, ಅಲ್ಲೇ ದನಕರುಗಳನ್ನು ಕಟ್ಟಲಿಕ್ಕೆ ಜಾಗ. ಹಿರಿಯರ ಫೋಟೋಗಳನ್ನು ಪಡಸಾಲೆಯಲ್ಲಿ ಹಾಕಲಾಗಿತ್ತು. ಸರಿ, ಇರುವ ಸಮಯದಲ್ಲಿ ಇನ್ನೇನು ವಿಚಾರಗಳನ್ನು ಪಡೆಯಬಹುದೆಂದು ಯೋಚಿಸಿದೆ. ಅಷ್ಟೊತ್ತಿಗೆ ವೆಂಕಟೇಶ್‌ರವರ ಪತ್ನಿ ಉಪ್ಪಿಟ್ಟನ್ನು ತಂದಿಟ್ಟರು, 'ತಗೊಳ್ಳಿ' ಎಂದರು.

ಸ್ನಾನ ಮುಗಿಸಿಕೊಂಡು ಪೂಜೆ ಮುಗಿಸಿ ತಿಂಡಿಗೆ ಕೂತಾಗ ಮತ್ತಷ್ಟು ವಿವರಗಳನ್ನು ಕಲೆ ಹಾಕಬೇಕೆಂದು ಹೊಳೆಯಿತು.

ವೆಂಕಟೇಶ್‌ರವರೇ ನಿಮ್ಗೆ ಎಷ್ಟು ಮಕ್ಕಳು? ಏನು ಮಾಡ್ತಾರೆ?
ನನ್ಗೆ ಇಬ್ರು ಮಕ್ಕಳು. ಮಗಳ ಮದುವೆ ಆಗಿ, ಮಗು ಆಗಿದೆ. ಮಗ ಸುಬ್ರಹ್ಮಣ್ಯ ಡಿಪ್ಲೋಮಾ ಮಾಡಿಕೊಂಡು ಕಂಪ್ಯೂಟರ್ ಬಿ.ಇ. ಮಾಡ್ತಾ ಇದಾನೆ.

ಮಗನಿಗೆ ಕೃಷಿಯಲ್ಲಿ ವಿಶೇಷ ಆಸಕ್ತಿ ಇದೆಯಾ?
ಇಲ್ಲಾ, ಹೇಳಿಕೊಳ್ಳುವ ಆಸಕ್ತಿ ಕಾಣುತ್ತಿಲ್ಲ. ಮಕ್ಕಳು ನಮ್ಮ ಕಸುಬಿನ ಬಗ್ಗೆ ಆಸಕ್ತಿ ಇಟ್ಕೊಂಡ್ರೆ ಒಳ್ಳೆಯದು. ಇಲ್ಲದಿದ್ರೆ ಕಷ್ಟ.

ಬೇಸಾಯ ಅನ್ನೋದು ಹೇಗೆ ಅನ್ನಿಸುತ್ತೆ?
ಜವಾಬ್ದಾರಿಯಿಂದ, ಮುತುವರ್ಜಿಯಿಂದ ಕೆಲಸ ಮಾಡಿದ್ರೆ ಬೇಸಾಯದಲ್ಲಿ ಮರ್ಯಾದೆಯಿಂದ ಇರಬಹುದು. ಭೋಗ ಜೀವನ ಮಾಡಕ್ಕೆ ಆಗಲ್ಲ.


ಬಿಸಿಲು ಗಾಳಿಯಿಂದ ಅಡಿಕೆಯನ್ನು ರಕ್ಷಿಸಲು ನೆಟ್ಟ ತಡೆಮರಗಳು:ಮಲ್ಲರಾಜಪಟ್ಟಣ

ತಂಬಾಕನ್ನ ನೀವು ಬೆಳೀತಾ ಇಲ್ಲ ಅನ್ನಿಸುತ್ತೆ. ಯಾಕೆ?
ತಂಬಾಕನ್ನ ೧೪ ವರ್ಷದಿಂದ ಬೆಳೀತಾ ಇಲ್ಲ. ಮಾರುಕಟ್ಟೆ ವ್ಯವಸ್ಥೆ ಸರಿ ಇಲ್ಲ. ಹಣದ ಬಟವಾಡೆಯಲ್ಲಿ ತೊಂದ್ರೆ ಇದೆ. ಗದ್ದೆ ಕೆಲಸ ಮತ್ತು ತಂಬಾಕಿನ ಕೆಲಸಗಳು ಏಕಕಾಲಕ್ಕೆ ಬರ್ತವೆ. ಆದ್ರೆ ತೋಟದ ಕೆಲ್ಸ ಹಾಗಲ್ಲ. ಕೆಲ್ಸ ಮುಂದೂಡಿದ್ರೂ ನಡೆಯುತ್ತೆ.

ಅಡಿಕೇನ ಇಲ್ಲಿ ಬೇಯಿಸಿ ಕೊಡ್ತೀರಾ?
ಇಲ್ಲ. ಅಡಿಕೆ ಎಡಿಯೋರು ಇಲ್ಲಿಲ್ಲ. ನುರಿತ

ಜನಗಳು ಈ ಊರಲ್ಲಿ ಇಲ್ಲ. ಮೊದಲಿನಿಂದಲೂ ಹಸಿ ಅಡಿಕೇನ ಕೊಟ್ಟು ಬಿಡ್ತೀವಿ.

ಸಗಣಿ ಅನಿಲ ಘಟಕ ಮಾಡಿಕೊಂಡು ಎಷ್ಟು ವರ್ಷವಾಯ್ತು? ಹೇಗಿದೆ?
ಇದನ್ನು ಮಾಡಿಕೊಂಡು ೨೦ ವರ್ಷ ಮೇಲಾಯಿತು. ಒಂದು ಸಾರಿ ವೆಲ್ಡ್ ಮಾಡಿಸಿದೀನಿ. ಡ್ರಂ ಯಾವಾಗ್ಲೂ ಮೇಲೆ ಎದ್ದಿರಬೇಕು. ಸಗಣೀನ ಸರಿಯಾಗಿ ಹಾಕ್ತಾ ಇದ್ರೆ ಅನಿಲ ಚೆನ್ನಾಗಿ ಬರುತ್ತೆ. ಬಾಳಿಕೆ ಬರುತ್ತೆ.

ಇಲ್ಲಿ ನಿಮ್ಮ ಆಚರಣೆಗಳು ಏನೇನು?
ಮಾಮೂಲಿ ಜನರಂತೆ ನಾವೂ ಗಣಪತಿ, ದೀಪಾವಳಿ ಹಬ್ಬಗಳನ್ನು ಆಚರಣೆ ಮಾಡ್ತಾ ಇದೀವಿ. ಇಲ್ಲಿ ಆಂಜನೇಯ ದೇವಸ್ಥಾನ ಇದೆ. ಶನಿವಾರ ಭಜನೆ ಮಾಡ್ತೀವಿ.

ಈ ಊರಲ್ಲಿ ತೊಟ್ಟಿ ಮನೆಗಳು ಇದಾವಾ?
ಇಲ್ಲ.

ಇತರೇ ಉಪಜಾತಿಗಳೊಂದಿಗೆ ಈಗೀಗ ಸಂಬಂಧ ಹೇಗಿದೆ?
ನಮ್ಮಲ್ಲಿ ಭಿನ್ನಾಭಿಪ್ರಾಯಗಳು ಕಮ್ಮಿ.

ಮುಗಿಸುವ ಮುನ್ನ: ಮಲ್ಲರಾಜಪಟ್ಟಣದಲ್ಲಿ ಕೇವಲ ಐದು ಸಂಕೇತಿ ಕುಟುಂಬಗಳಿದ್ದರೂ ಕ್ರಿಯಾತ್ಮಕವಾಗಿ ಬೇಸಾಯದಲ್ಲಿ ತೊಡಗಿರುವವರು ವೆಂಕಟೇಶ್ ಮಾತ್ರ. ಆಸಕ್ತಿ ಮೆಚ್ಚುವಂತಹುದು. ಆದರೆ ಮುಂದಿನ ದಾರಿ ಸ್ಪಷ್ಟವಾಗಿಲ್ಲ. ತಾಂತ್ರಿಕ ಪದವಿ ಮಾಡಿದ ಮಗ ಕೃಷಿಯತ್ತ ಎಷ್ಟು ಒಲವು ತೋರಿಸುತ್ತಾರೋ ಗೊತ್ತಿಲ್ಲ.

ದೂರವಾಣಿ ಸಂಖ್ಯೆ: 225640 ಸಂದರ್ಶನ : 06-01-2003



ವೆಂಕಟೇಶ್ ಅವರ ಹೊಸತೋಟ:ಮಲ್ಲರಾಜಪಟ್ಟಣ

೭. ಬಸವಾಪಟ್ಟಣ: ಬೆಳೆದು ಬಳಲುತ್ತಿರುವ ಬೇಸಾಯಸ್ಥರು

ಬಸವಾಪಟ್ಟಣದ ಅಡಿಕೆ ತೋಟಗಳಲ್ಲಿಯ ವಿಳ್ಳೇದೆಲೆಯು ಬೇಸಾಯಗಾರರ ಬದುಕಿಗೆ ಆಸರೆ ನೀಡಿದೆ. ತೆಂಗಿನ ನುಸಿ ಕ್ರಿಮಿಯು ತಲೆನೋವು ತಂದಿದೆ. ದನಕರುಗಳಿಲ್ಲದ ಬೇಸಾಯಗಾರರೇ ಇಲ್ಲಿ ಹೆಚ್ಚು.

ಕೇಶವಮೂರ್ತಿ ಅವರ ಪತ್ನಿ ವೆಂಕಟಲಕ್ಷ್ಮಿ ಅವರೂ, ಜಯಶ್ರೀ ಅವರೂ ನರಸಿಂಹ ಜಯಂತಿಯ ಆಚರಣೆಯ ಸಿದ್ಧತೆಯಲ್ಲಿದ್ದರು. 'ಕೇಶವಮೂರ್ತಿಗಳೇ, ತೋಟಕ್ಕೆ ಹೋಗಿ ಬರೋಣವೇ' ಎಂದಾಗ ಮೆದುವಾಗಿ ಪ್ರತಿಕ್ರಿಯಿಸಿದ ಅವರು, 'ನಾನಿನ್ನೂ ಸ್ನಾನ ಮಾಡಿಲ್ಲ. ಪೂಜೆ ಮಾಡ್ಬೇಕು' ಎಂದರು. 'ಹಾಗಾದರೆ ನಾಗೇಂದ್ರರವರು ಇದಾರಲ್ಲ, ಅವ್ರನ್ನ ಮಾತಾಡಿಸ್ತೀನಿ. ನೀವು ನಿಮ್ಮ ಕೆಲಸ ಮುಂದುವರೆಸಿ' ಎಂದು ಬರವಣಿಗೆ ಸಾಮಾಗ್ರಿ, ಕ್ಯಾಮೆರಾ, ಇತ್ಯಾದಿಗಳನ್ನು ತರಲು ಹೊರಟೆ. ನಾಗೇಂದ್ರರವರ ಮನೆಯ ಮುಂಭಾಗದ ಮಂಚದ ಮೇಲೆ ನಮ್ಮ ಮಾತುಕತೆ ಶುರುವಾಯಿತು.

ನಾಗೇಂದ್ರರವರೇ, ಇಲ್ಲಿ ಎಷ್ಟು ಕುಟುಂಬಗಳಿವೆ? ಸಂಕೇತಿಗಳು ಎಷ್ಟು?
ಸುಮಾರು ಒಂದು ಸಾವಿರ ಒಕ್ಕಲು ಇರಬಹುದು. ಜನಸಂಖ್ಯೆ ೫೦೦೦ ಇದೆ. ಇದರಲ್ಲಿ ಸಂಕೇತಿಗಳು ೬೦ ಕುಟುಂಬ. ೧೮೦ ಜನ ಆಗಬಹುದು. ಜೊತೆಗೆ ಬಬ್ಬೂರುಕಮ್ಮೆ, ಹೊಯ್ಸಳಕರ್ನಾಟಕರೂ ಇದಾರೆ. ಇವ್ರು ೪೦ ಜನ ಆಗಬಹುದು. ನಾವೆಲ್ಲಾ ಒಂದಾಗಿ ಕೂಡಿಕೊಂಡು ಹಬ್ಬಹರಿದಿನಗಳನ್ನು ಆಚರಿಸ್ತೀವಿ. ಅನ್ಯೋನ್ಯತೆ ಇದೆ. ಉಳಿದಂತೆ ದೇವಾಂಗ ಶೆಟ್ಟಿ (ನೇಕಾರರು), ಬಣಜಿಗ ಶೆಟ್ಟರು (ಲಿಂಗಾಯಿತರು), ಉಪ್ಪಾರರು, ಕುಂಬಾರರು, ಮುಸಲ್ಮಾನರು, ಹರಿಜನರು, ಎರಡ್ಮೂರು ಕುಟುಂಬ ಒಕ್ಕಲಿಗರು, ಒಂದು ಕುಟುಂಬ ಕ್ರಿಶ್ಚಿಯನ್‌ರು ಇದಾರೆ.

ಇದು ಗ್ರಾಮಪಂಚಾಯಿತಿಯ ಕೇಂದ್ರಸ್ಥಾನವೇ?
ಹೌದು. ನಾನು ಗ್ರಾಮ ಪಂಚಾಯಿತಿಯ ಸದಸ್ಯ.


ನೀವು ಎಷ್ಟು ವರ್ಷದಿಂದ ಗ್ರಾಮ ಪಂಚಾಯಿತಿ ರಾಜಕೀಯದಲ್ಲಿ ಇದೀರಿ?
ಇದೇ ಪ್ರಥಮ.

ಹೇಗೆ ನಿಮ್ಮ ರಾಜಕೀಯ ಪ್ರವೇಶ?
ತುರ್ತು ಪರಿಸ್ಥಿತಿಯಲ್ಲಿ ನಾವು ಕೆಲಸ ಮಾಡಿದೀವಿ, ಮೊದ್ಲಿಂದ ರಾಜಕೀಯದಲ್ಲಿ ಆಸಕ್ತಿ ಇತ್ತು. ಜೊತೆಗೆ ಇಲ್ಲಿ ಒಂದೊಂದು ಜನಾಂಗಕ್ಕೆ ಒಂದೊಂದು ಸ್ಥಾನವನ್ನು ಹಂಚ್ತಾರೆ.

ನಿಮ್ಗೆ ಈಗ ವಯಸ್ಸು ಎಷ್ಟು? ಏನು ಓದಿದ್ದು?
೪೭ ವರ್ಷ ವಯಸ್ಸು. ಬಿ.ಕಾಂ., ನಾನು ಓದಿದ್ದು.

ನೌಕರಿಗೆ ಹೋಗ್ಲಿಲ್ಲವಾ?
ಆ ಟೈಂಗೆ ನೌಕರಿ ಸಿಕ್ತಿತ್ತೇನೋ. ಆದ್ರೆ ನನ್ನ ತಂದೆ ಅಡಿಕೆ ವ್ಯಾಪಾರ ಮಾಡ್ತಾ ಇದ್ರು. ಅದ್ರಲ್ಲಿ ತೊಡಗಿಸಿಕೊಂಡೆ.

ಈ ಊರಿನ ಚಿತ್ರಣ ಕೊಡಿ.
ಈ ಊರಲ್ಲಿ ಪ್ರಣತಾರ್ತಿಹರೇಶ್ವರ, ಅದರ ಮಗ್ಲಲ್ಲೇ ಶಾಂತೇಶ್ವರ, ಅಕ್ಕಮಹಾದೇವಿ, ಅದರ ಮಗ್ಲಲ್ಲಿ ಷಡ್ಭಾವರಹಿತೇಶ್ವರ, ಲಕ್ಷ್ಮೀಕಾಂತಸ್ವಾಮಿ, ವೀರಭದ್ರೇಶ್ವರ, ಗಣಪತಿ, ಆಂಜನೇಯ, ಕಾಲುವೆ ಅಮ್ಮ (ಗ್ರಾಮದೇವತೆ),


ದ್ರಾಕ್ಷಿಯಂತಿರುವ ಕೆಂಡಸಂಪಿಗೆಯ ಕಾಯಿ:ಬಸವಾಪಟ್ಟಣ



ತೋಟದ ಸುತ್ತಮುತ್ತ ಇರುವ ಹುಣಸೆ:ಬಸವಾಪಟ್ಟಣ

ಮಕ್ಕಿಯಮ್ಮ - ದೇವಸ್ಥಾನಗಳಿದಾವೆ. ಒಂದು ದೇವಸ್ಥಾನ ಸಂಕೀರ್ಣ ಇದೆ. ಅಲ್ಲಿ ಗಣಪತಿ, ಶ್ರೀನಿವಾಸ, ರಾಘವೇಂದ್ರ, ಪಾರ್ವತಿ, ಈಶ್ವರ - ಈ ದೇವರುಗಳನ್ನು ಒಂದೆಡೆ ಇಟ್ಟು ಎಲ್ಲಾ ಜನಾಂಗದವರೂ ಪೂಜೆ ಮಾಡ್ತೀವಿ.

ಇಲ್ಲಿ ಎಲ್ಲಾ ಜನಾಂಗದವರೂ ಸೇರಿಕೊಂಡು ಆಚರಣೆ ಮಾಡೋ ಉತ್ಸವ ಅಥವಾ ಆಚರಣೆ ಏನಾದ್ರೂ ಇದೆಯಾ?

ಹೌದು. ಎಲ್ಲಾ ಜನ ಸೇರಿಕೊಂಡು ಲಕ್ಷ್ಮೀಕಾಂತ ಸ್ವಾಮಿ ರಥೋತ್ಸವವನ್ನು ಫೆಬ್ರವರಿ ಎರಡನೇ ವಾರದಂದು (ಮಾಘ ಶುದ್ಧ ಸಪ್ತಮಿ) ಆಚರಿಸ್ತೀವಿ.

ಏನು ಇದರ ವಿಶೇಷ?

ಅವತ್ತು ಏಳು ಕಡೆ ರಥಗಳನ್ನು ನಡೆಸೋದ್ರಿಂದ ಆ ದಿನಕ್ಕೆ 'ರಥಸಪ್ತಮಿ' ಅಂತೀವಿ. ಬೆಳಿಗ್ಗೆ ರಥ ಎಳಿಯೋದು. ಮುಂಜಾನೆ ಆರೂವರೆಗೆ ಸೂರ್ಯ ಮಂಡಲೋತ್ಸವ ಇರುತ್ತೆ. ಇದಾದ ಮೇಲೆ ಉತ್ಸವಮೂರ್ತಿಯನ್ನು ಕೂರಿಸಿಕೊಂಡು ಊರ ಸುತ್ತ ಪ್ರದಕ್ಷಿಣೆ ಬರ್ತೀವಿ. ಆ ಸಮಯದಲ್ಲಿ ವೇದಘೋಷ ನಡೆಯುತ್ತೆ. ಮೂರ್ತಿಯನ್ನು ರಥದಲ್ಲಿ ತಂದು ಇಡ್ತೀವಿ. ಅಭಿಜಿನ್ ಮುಹೂರ್ತದಲ್ಲಿ ರಥವನ್ನು ಎಳೆಯಲಾಗುತ್ತೆ. ಸುತ್ತಮುತ್ತಲಿನ ಹಳ್ಳಿಗರು ಇದ್ರಲ್ಲಿ ಭಾಗವಹಿಸ್ತಾರೆ. ಈಗ ಹೊಸ ತೇರನ್ನ ಶ್ರೀನಿವಾಸ ಅಯ್ಯಂಗಾರ್ ಅವರ ದಾನದಿಂದ ಮಾಡಿಸಲಾಗಿದೆ. ಪಂಚಾಯಿತಿ ವತಿಯಿಂದ, ರಥ ನಿಲ್ಲಿಸ್ಲಿಕ್ಕೆ ಕೊಠಡಿ ಕಟ್ಟಿಸಿ ಕೊಟ್ಟಿದೀವಿ.

ಊರಿನ ಬೆಳವಣಿಗೆ, ಬದಲಾವಣೆ ಬಗ್ಗೆ ಹೇಳಿ.

ಇಲ್ಲಿ ನೇಕಾರರು ಬಹಳ ಜನ ಇದ್ದರು. ದೇವಾಂಗಶೆಟ್ಟರು ಈ ಕಸಬನ್ನು ಮಾಡ್ತಾ ಇದ್ದರು. ಸೀರೆ, ಪಂಚೆ, ರೇಷ್ಮೆ ಸೀರೆಗಳನ್ನು ನೇಯ್ತಾ ಇದ್ದರು. ನೇಕಾರರ ಸೊಸೈಟಿ ಇತ್ತು. ರಾಜ್ಯದ ನೇಕಾರರ ಒಕ್ಕೂಟಕ್ಕೆ ಇಲ್ಲಿನ ವೆಂಕಟಸ್ವಾಮಿ ಶೆಟ್ಟಿ ಅನ್ನೋರೇ ಅಧ್ಯಕ್ಷರಾಗಿ ಎರಡು ವರ್ಷ ಇದ್ದರು. ಸುಮಾರು ನೂರು ಒಕ್ಕಲು ಜನ ಈ ಕಸಬನ್ನು ಮಾಡ್ತಾ ಇದ್ದರು. ಆದ್ರೆ ಈಗ ವೃತ್ತಿ ಅವನತಿ ಆಯ್ತು.

ನೇಕಾರರು, ನೇಕಾರ ವೃತ್ತಿ ಯಾಕೆ ಕಮ್ಮಿ ಆಯ್ತು?

ಪವರ್‌ಲೂಮ್ ಬಂದ ಮೇಲೆ ನೇಕಾರರ ಬದುಕಿಗೆ ಪೆಟ್ಟು ತಗುಲಿತು. ಪ್ರತಿ ಮನೆಯಲ್ಲೂ ನೇಯ್ಗೆ ಕೆಲಸ ನಡೀತಾ ಇತ್ತು. ಸುಮಾರು ೩೦ ವರ್ಷಗಳಿಂದ ಈ ವೃತ್ತಿಯು ಬದಲಾಯಿತು. ಇಲ್ಲೀನೂ ಪವರ್‌ಲೂಮ್ ಬಂತು. ನೂಲು ಸಾಕಷ್ಟು ಸಿಗದೇ ಅದೂ ಫಲ ಕಾಣಲಿಲ್ಲ. ಸೊಸೈಟಿಯೂ ಮುಚ್ಚಿ ಹೋಯ್ತು. ಸರ್ಕಾರದಿಂದಲೂ ಸಹಾಯ ಸಿಗಲಿಲ್ಲ.

ಇಲ್ಲಿಂದ ಪಂಚೆ, ಸೀರೆ ಎಲ್ಲಿ ಮಾರಾಟ ಆಗ್ತಾ ಇತ್ತು?

ನೇಕಾರರು ಹೆಚ್ಚು ಜನ ಅವಿದ್ಯಾವಂತರಾಗಿದ್ದುದರಿಂದ ಮಾರಾಟದಲ್ಲಿ ಸರಿಯಾದ ದಾರಿ ಕಾಣಲಿಲ್ಲ. ಬೆಂಗಳೂರಿಗೆ ಸ್ವಲ್ಪ ಪದಾರ್ಥ ಹೋಗ್ತಾ ಇತ್ತು. ಮೇಲುಕೋಟೆ, ಕಿಕ್ಕೇರಿಗೆ ಕಳಿಸ್ತಾ ಇದ್ದರು. ಅಲ್ಲಿಯ ಜನ ನೂಲು ಕೊಟ್ಟು ಪಂಚೆ ಸೀರೆ ಖರೀದಿಸುತ್ತಿದ್ದರು.

ಈಗ ನೇಕಾರರ ಬದುಕು ಹೇಗೆ ಸಾಗಿದೆ?

ಈಗ ಜನ ವಿದ್ಯಾವಂತರಾಗಿದ್ದಾರೆ, ಜಮೀನಿನ ಕೆಲಸ ಮಾಡ್ತಾ ಇದಾರೆ; ರಾಜಕೀಯಕ್ಕೂ ಕಾಲಿಟ್ಟಿದಾರೆ; ನೌಕರಿಗಳಿಗೂ ಹೋಗಿದಾರೆ; ಇಬ್ಬರು ಅಮೇರಿಕಾದಲ್ಲಿ ಇದಾರೆ: ಒಬ್ಬ ವಿಜ್ಞಾನಿ, ಇನ್ನೊಬ್ಬ ಇಂಜಿನಿಯರ್. ಉಳಿದ ಕುಟುಂಬಗಳಲ್ಲಿ ವೃತ್ತಿ ಬದಲಾಗಿದೆ. ಸಂತೇ ವ್ಯಾಪಾರಕ್ಕೆ ಕೆಲವ್ರು ಕೈ ಹಾಕಿದಾರೆ. ಇಲ್ಲೇ ಊರಲ್ಲಿ ಕಿರಾಣಿ ಅಂಗಡಿ, ಕಬ್ಬಿಣದ ಅಂಗಡಿ, ಔಷಧಿ ಅಂಗಡಿಗಳನ್ನು ಕೆಲವರು ಇಟ್ಕೊಂಡಿದಾರೆ. ಇನ್ನೂ ಕೆಲವರು, ಅದರಲ್ಲೂ ಹೆಂಗಸರು ಊಟದೆಲೆಯನ್ನು (ಪತ್ರಾವಳಿ) ಕಟ್ತಾರೆ. ಮುತ್ತುಗದ ಎಲೆಯನ್ನ ಇದಕ್ಕೆ ಬಳಸ್ತಾರೆ. ಮೈಸೂರು,

ಮಂಡ್ಯ, ಬೆಂಗಳೂರು ಕಡೆಗೆ ಕಳಿಸ್ತಾರೆ. ಇವ್ರನ್ನ ನೋಡಿಕೊಂಡು ಕೆಲವು ಮುಸಲ್ಮಾನರೂ ಮಾಡ್ತಾ ಇದಾರೆ. ಎರಡ್ಮೂರು ಜನ ಬೇಸಾಯದಲ್ಲಿ ಮುಂದೆ ಬಂದಿದಾರೆ.

ಇನ್ನು ಸಂಕೇತಿಗಳ ಬೇಸಾಯದ ಬದುಕಿಗೆ ಬರೋಣ. ಹಿಂದಿನ ದಿನಗಳ ಸನ್ನಿವೇಶಗಳನ್ನು ನೆನಪು ಮಾಡಿಕೊಳ್ಳಿ.

ಇಡೀ ಅರಕಲಗೂಡು ತಾಲೂಕಿನಲ್ಲಿ ಅಡಿಕೆ ಸಂಸ್ಕರಣೆಯಲ್ಲಿ ಈ ಊರೇ ಹೆಸರು ಪಡೆದಿತ್ತು. ಇದೇ ಒಂದು ರೀತಿಯಲ್ಲಿ ಕೇಂದ್ರಸ್ಥಾನವಾದಂತಿತ್ತು. ಎಲ್ಲಾ ಊರುಗಳಿಂದ ಹಸಿ ಅಡಿಕೆಯನ್ನು ಕೊಂಡು, ಬೇಯಿಸಿ, ಒಣಗಿಸಿ ಇಲ್ಲಿಯ ಸಂಕೇತಿಗಳು ಮಾರಾಟ ಮಾಡ್ತಾ ಇದ್ದರು. ಇಲ್ಲಿ ಎಲ್ರೂ ಅಡಿಕೆ ತೋಟ, ವೀಳ್ಯೆದೆಲೆಯಲ್ಲಿ ತೆಕ್ಕೆ ಬಿಡೋದು (ಹಂಬು ಇಳಿಸೋದು), ಗೊಬ್ಬರ ಹಾಕೋದು, ನೀರು ಕೊಡೋದು (ಏತ, ಕಪಿಲೆ, ಇತ್ಯಾದಿ) ಮುಂತಾದ ಕೆಲಸಗಳನ್ನೆಲ್ಲಾ ಸ್ವಂತಾಗಿ ಮಾಡ್ತಾ ಇದ್ದರು. ನನ್ನ ತಂದೆ ೭೦ ವರ್ಷಗಳ ಕಾಲ ಅಡಿಕೆ ವ್ಯಾಪಾರ ಮಾಡಿದ್ರು. ಇವರ ಏಳು ಜನ ಅಣ್ಣತಮ್ಮಂದಿರೂ ಇದೇ ಕಸಬು ಮಾಡಿದರು. ಈಗ್ಲೂ ಎರಡು ಕುಟುಂಬಗಳು ಅಡಿಕೆ ವ್ಯಾಪಾರ ಮಾಡ್ತಾರೆ. ಲಿಂಗಾಯತರಲ್ಲೂ ಅಡಿಕೆ ವ್ಯಾಪಾರ ಮಾಡ್ತಾ ಇದ್ದರು. ನನ್ನ ತಂದೆ ಬಿ.ಎಸ್.ನಾಗಪ್ಪ ಮತ್ತು ಅವರ ಅಣ್ಣ ಬಿ.ಎಸ್.ಕೇಶವಯ್ಯ, ತಮ್ಮಂದಿರಾದ ಬಿ.ಎಸ್.ಶ್ರೀನಿವಾಸಯ್ಯ, ಬಿ.ಎಸ್.ಕೃಷ್ಣಪ್ಪ, ಬಿ.ಎಸ್.ರಾಮಯ್ಯ, ಬಿ.ಎಸ್.ನಾರಾಯಣಪ್ಪ, ಬಿ.ಎಸ್.ನಂಜುಂಡಯ್ಯ - ಇವರೆಲ್ಲಾ ಅಡಿಕೆ ವ್ಯಾಪಾರ ಮಾಡಿದರು, ನೋವು-ನಲಿವು ಅನುಭವಿಸಿದರು. ಬಿ.ಎಸ್.ನಂಜುಂಡಯ್ಯನವರು (ಕೊನೆಯವರು) ವ್ಯಾಪಾರದಲ್ಲಿ ತುಂಬಾ ನಷ್ಟ ಅನುಭವಿಸಿ ಊರೇ ಬಿಟ್ಟು ಹೊರಟು ಹೋದರು.

ಅಡಿಕೆ ವ್ಯಾಪಾರದ ಹಿಂದಿನ ದಿನಗಳು ಹೇಗಿದ್ದವು ಹೇಳಿ?

ಇಲ್ಲೆಲ್ಲಾ ಬೇಯಿಸಿ, ಒಣಗಿಸಿ ಬಟ್ಟಲು, ಚಾತ್ರ (೪ ಭಾಗ ಮಾಡಿದ್ದು) ಮತ್ತು ಚಾಲಿಯನ್ನು ನೇರವಾಗಿ ಮಾರುಕಟ್ಟೆಗೆ ತಗೊಂಡು ಹೋಗ್ತಿರ್ಲಿಲ್ಲ. ಇಲ್ಲೇ ವ್ಯಾಪಾರಸ್ಥರಿಗೆ ಕೊಡ್ತಾ ಇದ್ದರು. ಮತ್ತೆ ಬೀರೂರು, ಕಡೂರು, ಅರಸೀಕೆರೆಗಳಿಂದ ಖರೀದಿದಾರರು ಇಲ್ಲಿಗೆ ಬಂದು ಮಾಲನ್ನ ತಗೊಂಡು ಹೋಗ್ತಾ ಇದ್ದರು. ಇನ್ನೊಂದು ವಿಚಾರ ಏನೆಂದ್ರೆ, ತಮಿಳುನಾಡು ಗಡಿಗೆ ಬರೋ ಚಾಮರಾಜನಗರದವರು ಇಲ್ಲಿಗೆ ಬಂದು ಠಿಕಾಣಿ ಹೂಡಿ (ಗುಡಿಸ್ಲು ಕಟ್ಟಿಕೊಂಡು, ಮನೆ ಬಾಡಿಗೆ ತಗೊಂಡು) ಇಲ್ಲಿ, ಸುತ್ತಮುತ್ತಲಿನ ಅಡಿಕೆಯನ್ನು ಖರೀದಿ ಮಾಡ್ಕೊಂಡು ಲವಂಗದ ಚೂರು (೧೬ ಹೋಳು) ಮಾಡಿ ತಮಿಳುನಾಡಿಗೆ ಕಳಿಸ್ತಾ ಇದ್ರು. ಈ ಲವಂಗದ ಚೂರು ಮಾಡ್ಲಿಕ್ಕೆ ಎಳೇ ಅಡಿಕೇನ ತಗೊಳ್ತಾ ಇದ್ದರು. ಹೆಚ್ಚು ಬೆಲೇನೂ ಕೊಡ್ತಿದ್ದರು. ಅದು ಇಲ್ಲಿನ ವ್ಯಾಪಾರಿಗಳಿಗೆ ತೊಂದ್ರೆ ಆಯ್ತು. ನಷ್ಟಾನೂ ಅನುಭವಿಸಿದ್ವಿ.



ತೋಟಗಳಲ್ಲಿ ಅಲ್ಲಲ್ಲಿ ಬೆಳೆಸಿರುವ ಸುವರ್ಣಗೆಡ್ಡೆ :ಬಸವಾಪಟ್ಟಣ

ಏನದು ಲವಂಗದ ಚೂರು ಅಡಿಕೆ? ಏನದರ ವಿಶೇಷ?

ಎಳೆ ಅಡಿಕೇನ ತಮಿಳುನಾಡಿನವರು ೧೬ ಚೂರು ಮಾಡಿ, ಬಿಸಿನೀರಲ್ಲಿ ಬೇಯಿಸಿ, ಒಣಗಿಸಿ, ಆಮೇಲೆ ಬಣ್ಣ ಕಟ್ತಿದ್ದರು. ಈ ಅಡಿಕೇನ ತಿಂದ್ರೆ ಬೆವ್ರು ಬರ್ತದೆ, ದೇಹ ಬಿಸಿ ಆಗ್ತದೆ ಅಂತ ಈಗ್ಲೂ ಬಳಸ್ತಾ ಇದಾರೆ. ಬೆಸ್ತರು ಇದನ್ನು ಹೆಚ್ಗೆ ಬಳಸ್ತಾರೆ. ಆದ್ರೆ ನಮ್ಮ ಅಡಿಕೆಗೆ ಬೆಲೆ ಹೆಚ್ಚಾಗಿದ್ದರಿಂದ ಈಗ ಅವ್ರು ಬರ್ತಾ ಇಲ್ಲ. ಅಸ್ಸಾಂ ಕಡೆಯಿಂದ ಸುಲಭದ ಬೆಲೆಗೆ ಸಿಗೋ ಭಾಗಗಳಿಂದ ತರಿಸ್ತಾರೆ.

ಈಗ ಹೇಗಿದೆ ಇಲ್ಲಿನ ಅಡಿಕೆ ವ್ಯಾಪಾರ?

ಈಗ ಮೂವರೇ ಸಂಕೇತಿಗಳು ಅಡಿಕೆ ವ್ಯಾಪಾರ ಮಾಡ್ತಾ ಇದಾರೆ. ಲಿಂಗಾಯತರಲ್ಲಿ ಒಬ್ಬರಾದ ಟಿ.ಸಿ.ಶಿವಣ್ಣ ಅನ್ನೋರು ದೊಡ್ಡ ವ್ಯಾಪಾರಿಯಾಗಿದ್ದರು. ಶಿವಣ್ಣನವರು ಈಗ ತೀರಿಕೊಂಡು ಎರಡು ತಿಂಗಳಾಯ್ತು. ಸಂಕೇತಿಗಳಲ್ಲಿ ಬಿ.ಹೆಚ್.ನಾಗಭೂಷಣ, ಬಿ.ಎನ್. ರಾಮಕೃಷ್ಣ, ಬಿ.ಎನ್.ರಾಮಚಂದ್ರ ರವರು ಇತರೇ ಕೆಲಸಗಳೊಂದಿಗೆ ಬಿಡುವು ಮಾಡಿಕೊಂಡು ಅಡಿಕೆ ವ್ಯಾಪಾರದಲ್ಲಿ ತೊಡಗಿದ್ದಾರೆ. ಇವರು ಹಸಿ ಅಡಿಕೇನ

ಖರೀದಿ ಮಾಡ್ಕೊಂಡು ಸಂಸ್ಕರಿಸಿ ಶಿವಮೊಗ್ಗ ಮಾರ್ಕೆಟ್ಟಿಗೆ ಹೋಗಿ ಕೊಟ್ಟು ಬರ್‍ತಾರೆ.

ನಾಗೇಂದ್ರರವರೇ, ನಿಮ್ಮ ವಿಚಾರ ಹೇಳಿ, ನಿಮಗೆ ಎಷ್ಟು ಜಮೀನು ಇದೆ? ಏನು ಬೆಳೆ ಮಾಡ್ತೀರಿ?

ನನ್ಗೆ ಎರಡು ಎಕರೆ ಅಡಿಕೆ ಇದೆ. ನಾಲ್ಕು ಎಕರೆಯಲ್ಲಿ ತೆಂಗು ಇದೆ. ಎರಡು ಎಕರೆ ಖುಷ್ಕಿ ಇದೆ. ಒಂದು ಹೊಗೆಸೊಪ್ಪಿನ ಬ್ಯಾರನ್ ಇದೆ. ೭೭ರಿಂದ ಹೊಗೆಸೊಪ್ಪನ್ನು ಬೆಳೀತಾ ಇದೀನಿ.



ಬೂದಿರೋಗ:ವಿಳ್ಳೇದೆಲೆಗೆ ಕಂಟಕ:ಬಸವಾಪಟ್ಟಣ

ನೀವು ಎಷ್ಟು ಜನ ಅಣ್ಣತಮ್ಮಂದಿರು?

ನಾವು ನಾಲ್ಕು ಜನ ಅಣ್ಣ ತಮ್ಮಂದಿರು. ನನಗಿಂತ ಇಬ್ಬರು ಹಿರಿಯರು ಇದಾರೆ, ಒಬ್ಬ ಕಿರಿಯವನು.

ಅವ್ರೆಲ್ಲಾ ಏನು ಮಾಡ್ತಾರೆ? ಒಟ್ಟಿಗೆ ಇದೀರಾ?

ನನ್ನ ಅಣ್ಣಂದಿರು ಈ ಮೊದ್ಲು ಅಡಿಕೆ ವ್ಯಾಪಾರ ಮಾಡ್ತಾ ಇದ್ರು. ಈಗ ಕೈಬಿಟ್ಟಿದಾರೆ. ನಾನೂ, ನನ್ನ ತಮ್ಮನೂ ಅಷ್ಟೆ. ಇಬ್ಬರು ಅಣ್ಣಂದಿರು ವಿಭಾಗವಾಗಿದಾರೆ. ತಮ್ಮ ನನ್ನ ಜೊತೆ ಇದಾನೆ.

ಅಡಿಕೆ ತೋಟ ಎಷ್ಟು ವರ್ಷದ್ದು?

ತುಂಬಾ ಹಳೇದು. ನಮ್ಮ ತಂದೆಯವರು ಹಾಕಿದ್ದು, ಬೆಳೆಸಿದ್ದು.

ಅಡಿಕೆಯೊಂದಿಗೆ ಏನು ಬೆಳೆ ಇತ್ತು? ಈಗ ಹೇಗಿದೆ?

ಅಡಿಕೆ ಜೊತೇಲಿ ಬಾಳೆ, ವಿಳ್ಳೇದೆಲೆ ಮತ್ತು ತೆಂಗು ಇಟ್ಕೊಂಡು ಬಂದಿವಿ. ಆದ್ರೆ ಬಾಳೆ ಮತ್ತು ವೀಳ್ಯೆದೆಲೆ ಈಗಿಲ್ಲ.

ಬಾಳೆಯಲ್ಲಿ ಏನೇನು ತಳಿ ಬೆಳಿದಿರಿ? ಬಾಳೆ, ವಿಳ್ಳೇದೆಲೆ ಹೋಗ್ಲಿಕ್ಕೆ ಕಾರಣ ಏನು?



ಚಿಗುರುವ ಹಾಲವಾಣದ ಗೂಟಗಳ ಮಧ್ಯೆ ಪೇರಿಸಿರುವ ಅಡಿಕೆಗರಿ:ಬಸವಾಪಟ್ಟಣ

ಬಾಳೆಯಲ್ಲಿ ಮರಬಾಳೆ, ರಸಬಾಳೆ, ರಾಜಬಾಳೆ, ಪುಟ್ಟಬಾಳೆ, ಬೂದುಬಾಳೆ, ಚಂದ್ರಬಾಳೆ ಮತ್ತು ಆನೆಬಾಳೆ ಇದ್ದವು. ಪನಾಮ ರೋಗ (ಕಟ್ಟೆ) ಬಂದು ಬಾಳೆ ಹೋಯ್ತು. ಈಗ್ಗೆ ೩೦ ವರ್ಷಗಳ ಹಿಂದೆ ಪಚ್ಚಬಾಳೆಯ ಆಸ್ಟ್ರೇಲಿಯನ್ ಕ್ಯಾವಂಡಿಷ್ ತಳಿಯನ್ನು ನನ್ನ ಅಣ್ಣ ಹಾಕಿದ್ರು. ಆ ತಳಿಯಿಂದ ರೋಗ ಹರಡಿ ಇಲ್ಲಿ ಬಾಳೆ ಹಾಳಾಯಿತು. ವೀಳ್ಯೇದೆಲೆ ನಮ್ಮ ತೋಟದಲ್ಲಿ ಬಹಳ ಚೆನ್ನಾಗಿತ್ತು. ನಾಲೆ ನೀರಾವರಿ ಬರೋದಕ್ಕಿಂತ ಮುಂಚಿತವಾಗಿಯೇ ನಮ್ಮಲ್ಲಿ ಬೆಳೆ ಹೋಯಿತು. ಮುಖ್ಯಮಂತ್ರಿಗಳಾಗಿದ್ದ ನಿಜಲಿಂಗಪ್ಪನವರು, ಶಿಕ್ಷಣ ಮಂತ್ರಿ ಶ್ರೀಮಾಲಿಯವರು ಇಲ್ಲಿಗೆ ೧೯೬೨ ರಲ್ಲಿ ಪ್ರೌಢಶಾಲೆ ಉದ್ಘಾಟನಾ



ಸಗಣಿಗೊಬ್ಬರಕ್ಕೆ ಈ ರೀತಿಯ ಸುರಕ್ಷಣೆಯ ಹೊದಿಕೆ: ವೆಂಕಟೇಶ್ ಅವರ ತೋಟ:ಬಸವಾಪಟ್ಟಣ

ಸಮಾರಂಭಕ್ಕೆ ಬಂದಿದ್ದಾಗ 'ತೋಟ ನೋಡ್ಲಿಕ್ಕೆ ಅವರೊಂದಿಗೆ ಜನ ತೋಟಕ್ಕೆ ಚಪ್ಪಲಿ ಬೂಟು ಹಾಕ್ಕೊಂಡು ಪ್ರವೇಶ ಮಾಡಿದ್ದರಿಂದ ಬೆಳೆ ಹೋಯಿತು' ಎಂದು ಜನ ಹೇಳ್ತಾ ಇದ್ದರು. ಗಡ್ಡೆರೋಗ ಬಂದು ಬೆಳೆ ನಾಶವಾಯಿತು.

ಇಲ್ಲೆಲ್ಲಾ ವೀಳ್ಯೆದೆಲೆ ಹೇಗಿದೆ?

೭೦ ಭಾಗ ತೋಟಗಳಲ್ಲಿ ಇಲ್ಲ. ೩೦ ಭಾಗ ಇದೆ. ಆದ್ರೂ ಆರೋಗ್ಯಕರವಾಗಿ ಬೆಳೆದಿಲ್ಲ. ಆದಾಯವೂ ಕಮ್ಮಿ.

ಯಾಕೆ ಹೀಗಾಯಿತು?

ಒಂದು, ಶೀತವಾಯ್ತು. ಇನ್ನೊಂದು ಮೊದ್ಲೆಲ್ಲಾ ನಾವೇ ಕೈಮುಟ್ಟಿ ಸೂಕ್ಷ್ಮವಾಗಿ ಕೆಲಸ ಮಾಡ್ತಾ ಇದ್ದಿವಿ. ಈಗ ಕಾರ್ಮಿಕರ ಮೇಲೆ ಅವಲಂಬನೆ. ಜೊತೆಗೆ ಕಾಳಜಿ ಕಮ್ಮಿಯಾಯಿತು. ಬೆಲೆಯ ಇಳಿಕೆಯೂ ಆಸಕ್ತಿಯನ್ನು ಕಮ್ಮಿ ಮಾಡಿತು.

(ಸಮಯ ೧೧ ಗಂಟೆ ಆಗಿತ್ತು. ಕೇಶವಮೂರ್ತಿಯವರ ಮಗ ರವಿಕುಮಾರ್ ರಾಮನಾಥಪುರಕ್ಕೆ ಹೋಗಿದ್ದವರು ನಮ್ಮ ಬಳಿ ಬಂದು ಕುಳಿತು ಪರಿಚಯಿಸಿಕೊಂಡರು. ನಾಗೇಂದ್ರರವರೊಂದಿಗೆ ಚರ್ಚಿಸುವಾಗ ಆಗಾಗ್ಗೆ ವಿಷಯ ಪ್ರವೇಶ ಮಾಡುತ್ತಿದ್ದರು.)

ನಾಗೇಂದ್ರರವರೆ, ತೆಂಗು ಎಂತಹ ತಳಿ, ಹೇಗಿದೆ ಇಳುವರಿ?

ನಾಟಿ ತಳಿ. ನುಸಿ ಕ್ರಿಮಿ ಬರೋದಕ್ಕಿಂತ ಮುಂಚೆ ಎಕರೆಗೆ (೪೦-೫೦ ಮರ) ೩೦೦೦-೪೦೦೦ ಕಾಯಿ ಸಿಕ್ತಾ ಇತ್ತು. ಈಗ ಇಳುವರಿ ಬಹಳ ಕಮ್ಮಿ ಆಗಿದೆ.

ನುಸಿ ಕ್ರಿಮಿ ಹಾನಿ ಹೇಗಿದೆ?

ಅಯ್ಯೋ, ಹಿಂದೆಲ್ಲಾ ತೆಂಗಿನ ರಾಶಿ ನೋಡೋದೇ ಖುಷಿ ಆಗ್ತಿತ್ತು. ಈಗ ಚಟರಾ-ಪಟರಾ, ಇಳುವರಿಯೂ ಕುಗ್ಗಿದೆ. ಎಲ್ಲಾ ತೋಟಗಳಲ್ಲೂ ಈ ಕ್ರಿಮಿಯ ಹಾನಿ ಇದೆ. ಇದಲ್ಲದೇ ಕಪ್ಪು ತಲೆ ಹುಳು, ಅಣಬೆ ರೋಗ, ರಸ ಸೋರುವ ರೋಗಾನೂ ಈಗೀಗ ಕಾಣಿಸಿಕೊಂಡಿದೆ.

ಏಕೆ ಹೀಗಾಗಿರಬಹುದು? ಮೊದ್ಲೆಲ್ಲಾ ಆರೋಗ್ಯವಾಗಿದ್ದ ತೆಂಗು ಈಗ ಕ್ರಿಮಿ ಖಾಯಿಲೆಗಳಿಂದ ನರಳ್ತಾ ಇದೆ ಏಕೆ?

ಮೊದ್ಲು ರಾಸಾಯನಿಕ ಗೊಬ್ಬರ ಹಾಕ್ತಿರ್ಲಿಲ್ಲ. ಹೊಸಮಣ್ಣು, ಕೆರೆಗೋಡು ಹಾಕ್ತಾ ಇದ್ದಿವಿ. ಈಗ ಕಾಲ ಬದಲಾಯಿತು. ಅಡಿಕೆಗೂ ಅಣಬೆ ರೋಗ ಕಾಡ್ತಾ ಇದೆ. ಇದುವರೆಗೂ ಈ ರೋಗಕ್ಕೆ



ಕಾಂಕ್ರೀಟ್ ಮನೆಗಳಾದ ಬಳಿಕ ಅಡಿಕೆ ಸೋಗೆಗೆ ಈಗ ಬೇಡಿಕೆ ಕಮ್ಮಿ:ಬಸವಾಪಟ್ಟಣ

ಔಷಧೀನೇ ಸಿಗಲಿಲ್ಲ. ಒಳ್ಳೆ ಫಲ ಕೊಡುತ್ತಿದ್ದ ಮರ ಸತ್ತು ಹೋಗ್ತಾ ಇದಾವೆ. ಮನುಷ್ಯನಿಗೆ ಕ್ಯಾನ್ಸರ್ ಇದ್ದಂಗೆ.


ಹಳೆಯ ಬಾವಿಗಳಲ್ಲಿ ಈಗ ಗರಿಗಳ ಗುಡ್ಡೆ:ಬಸವಾಪಟ್ಟಣ

ತೆಂಗಿನಲ್ಲಿ ಹಸಿಕಾಯಿ ಮಾರಾಟ ಇದೆಯಾ? ಕೊಬ್ಬರಿ ಮಾಡ್ತೀರಾ?
ನಮ್ಮಲ್ಲಿ ಕೊಬ್ಬರಿ ಮಾಡೋ ಅಭ್ಯಾಸ ಇಲ್ಲ. ಕಾಯೀನೇ ಕೊಡ್ತೀವಿ. ಮನೆ ಹತ್ತಿರಕ್ಕೆ ವ್ಯಾಪಾರಸ್ಥರು ಬಂದು ತಗೊಂಡು ಹೋಗ್ತಾರೆ. ಸ್ಥಳೀಯರು, ತಮಿಳುನಾಡಿನವರು ಖರೀದಿಸ್ತಾರೆ.

ಸಂಕೇತಿಗಳಲ್ಲಿ ತಂಬಾಕನ್ನು ಎಷ್ಟು ಜನ ಬೆಳೆಸ್ತಾರೆ?
ಇಲ್ಲಿ ಇಬ್ಬರು-ಮೂವರು ಬೆಳೀತಾರೆ.

ಮೊದಲಿನಿಂದಲೂ ಇಬ್ರು-ಮೂವರೇ ಬೆಳೀತಾ ಇದಾರಾ? ಅಥವಾ ಜನ ಬೆಳಿಯೋದು ಕಮ್ಮಿ ಮಾಡಿದ್ರ?
ಇಲ್ಲ, ಮೊದ್ಲಿನಿಂದಲೂ ಇಷ್ಟೇ ಜನ ಬೆಳೀತಾ ಇದಾರೆ.

ಏಕೆ ಹೆಚ್ಚಿಗೆ ಆಗ್ಲಿಲ್ಲ?
ತಂಬಾಕು, ಅವಲಂಬನೆಯ ಕೃಷಿ. ಅವಲಂಬನೆಯನ್ನು ಸಂಕೇತಿಗಳು ಇಷ್ಟಪಡಲ್ಲ. ಜೊತೆಗೆ ಸಮಯಕ್ಕೆ ತಕ್ಕಂತೆ ಕೆಲಸ ಮಾಡ್ಬೇಕು, ಲಾಭಾನೂ ಕಮ್ಮಿ, ನಷ್ಟಾನೂ ಆಗೋದಿದೆ. ಆದ್ರೆ ತೋಟದ್ದು ಹಾಗಲ್ಲ.

ಬಾಳೆಯನ್ನು ಪ್ರತ್ಯೇಕವಾಗಿ ಇಲ್ಲಿಯ ಜನ ಬೆಳೀತಾ ಇಲ್ವಾ?
ಇಲ್ಲ. ನನ್ನಣ್ಣ ಪಚ್ಚಬಾಳೆ ಹಾಕಿ ಕೈಸುಟ್ಟುಕೊಂಡ ಬಳಿಕ ಜನ ಹಿಂಜರೀತಾರೆ. ಆದ್ರೆ ತೋಟಗಳಲ್ಲಿ ಅಲ್ಪಸ್ವಲ್ಪ ಇಟ್ಕೊಂಡಿದಾರೆ. ಹಿಂದೆ, ಒಂದ್ಸಾರಿ ಹಾಕಿದ್ರೆ ಹತ್ತಿಪ್ಪತ್ತು ಬೆಳೆ ತಗೊಳ್ತಾ ಇದ್ವಿ. ಈಗ ಎರಡ್ಮೂರು ಬೆಳೆ ತಗೊಳ್ಳೋದೂ ಕಷ್ಟ ಇದೆ.

ಇತರೇ ಬೆಳೆಗಳ ಸಾಗುವಳಿ ಹೇಗಿದೆ?
ಡಾ.ನಾಗರಾಜರಾವ್ ಅವರು ಅಡಿಕೆಗೆ ಕಾಳುಮೆಣಸು ಹಬ್ಬಿಸಿದಾರೆ. ಇವ್ರೇ ಸಪೋಟ, ನಿಂಬೆ ಹಾಕಿದಾರೆ. ತರಕಾರಿಗಳನ್ನು ಬೆಳೀತಾ ಇಲ್ಲ. ಹೈನುಗಾರಿಕೆ, ಕುರಿ-ಕೋಳಿ ಸಾಕಾಣಿಕೆ ಇಲ್ಲ.


ಗಂಟೆ ೧೨ ಆಗಿತ್ತು. ಕೇಶವಮೂರ್ತಿಯವರ ಮಗ ರವಿಕುಮಾರ್ ಅವರು ತಿಂಡಿ ಸೇವನೆಗೆ ಸನ್ನೆ ಮಾಡುತ್ತಿದ್ದರು. ಅಷ್ಟೊತ್ತಿಗೆ ಗ್ರಾಮ ಪಂಚಾಯಿತಿ ಕೆಲಸದ ಬಗ್ಗೆ ನಾಗೇಂದ್ರ ಅವರೊಂದಿಗೆ ಇಬ್ಬರು ಸದಸ್ಯರು ಚರ್ಚಿಸಲು ಮಾತಿಗಿಳಿದರು. 'ಸರಿ, ತಿಂಡಿ ತಿಂದು ಬರ್ತೀವಿ. ನಿಮ್ಮ ಕೆಲಸ ಮಾಡಿಕೊಳ್ಳಿ' ಎಂದು ನಾಗೇಂದ್ರರವರಿಗೆ ತಿಳಿಸಿ ಹೊರಟೆ. ಕಾಗದ, ಪೆನ್ನುಗಳನ್ನು ಒಂದೆಡೆ ಇಟ್ಟು ಇನ್ನೇನು ಹೊರಡಲು ಸಜ್ಜಾಗುತ್ತಿದ್ದಾಗ ವ್ಯಕ್ತಿಯೊಬ್ಬ ಕೋಲು ಹಿಡಿದುಕೊಂಡು 'ದನ ಬಿಡಿ, ದನ ಬಿಡಿ' ಎಂದು ಲವಲವಿಕೆಯಿಂದ ಹೋಗುತ್ತಿದ್ದ. ರವಿಕುಮಾರ್‌ರವರನ್ನು 'ಯಾರಿವರು?' ಎಂದೆ. 'ನಮ್ಮ ಎಮ್ಮೆ ಹಸುಗಳನ್ನು ಕಾಯ್ಲಿಕ್ಕೆ ಈತ ಬರ್ತಾನೆ' ಎಂದರು. ಆ ಕುರಿತು ಸ್ವಲ್ಪ ವಿಚಾರ ಪಡೆಯೋಣವೆಂದು ಹೋಗುತ್ತಿದ್ದ ಎಮ್ಮೆಗಳನ್ನು ಅಡ್ಡಗಟ್ಟಿ ನಿಲ್ಲಿಸಿ, ಆತನನ್ನೂ ನಿಲ್ಲಲು ಹೇಳಿದೆ. 'ಏನಪ್ಪ ನಿನ್ನ ಹೆಸರು?' ಎಂದೆ. 'ನನ್ನ ಹೆಸರು ಎಮ್ಮೆ ರಾಜ ಸ್ವಾಮಿ' ಎಂದು ಉತ್ತರಿಸಿದ. 'ಎಷ್ಟು ವರ್ಷದಿಂದ ದನ ಕಾಯ್ತಾ ಇದೀಯಾ? ಏನು ಕೊಡ್ತಾರೆ?' ಎಂದು ಪ್ರಶ್ನೆ ಹಾಕಿದೆ. 'ನಾನು ಸಣ್ಣವನಿದ್ದಾಗಲಿಂದ ದನ ಕಾಯ್ತಾ ಇದೀನಿ. ನನ್ಗೆ ೪೫ ವರ್ಷ ವಯಸ್ಸು ಇರಬಹುದು. ಒಂದು ಎಮ್ಮೆಗೆ ವಾರಕ್ಕೆ ೧೦ ರೂಪಾಯಿ ಕೊಡ್ತಾರೆ. ಬೆಳಗ್ಗೆ ೧೧.೩೦-೧೨ಕ್ಕೆ ಹೋಗಿ ೫ ಗಂಟೆಗೆ ವಾಪಸು ಬರ್ತೀನಿ. ಊರಲ್ಲಿ ಐವತ್ತು ಎಮ್ಮೆ



ಬಿದಿರಿನ ಬಾಗಿಲು ಭದ್ರವಾಗಿಯೂ ಇರುತ್ತದೆ: ಬಿ.ಕೆ.ರಾಮಚಂದ್ರ:ಬಸವಾಪಟ್ಟಣ

ಹಸುಗಳನ್ನು ಒಡಕೊಂಡು ಹೋಗ್ತೀನಿ' ಎಂದ. ರವಿಕುಮಾರ್ ಮಾತು ಮುಂದುವರೆಸಿದರು. 'ಮಳೆಗಾಲದಲ್ಲಿ ಬೇಗ ದನಕರುಗಳು ಮನೆಗೆ ಬಂದು ಬಿಡ್ತವೆ' ಎಂದರು. ನಾಗೇಂದ್ರರವರು 'ಅಯ್ಯೋ, ಈ ಸರ್ಕಾರದ ಯೋಜನೆಗಳು, ಇರೋ ಗೋಮಾಳವನ್ನು ತಿಂದು ಬಿಸಾಕಿದವು, ನಮ್ಮೂರಿನ ೫೦೦ ಎಕರೆ ಗೋಮಾಳ ಈಗ ಇಲ್ಲ. ೬೦ ಮನೆಗಳಿರುವ ಈ ಸಂಕೇತಿ ಜನರಲ್ಲಿ ಈಗ ದನಕರುಗಳನ್ನು ಸಾಕಿರೋರು ಆರೇಳು ಜನ' ಎಂದು ಚಿತ್ರಣವನ್ನು ಮುಂದಿಟ್ಟರು. 'ಹಾರಂಗಿ ಜಲಾಶಯದ ನಾಲೆ ಬಂದ ಮೇಲೆ ಮೇಯ್ಸಿಲಿಕ್ಕೆ ಜಾಗದ ಕೊರತೆ ಅತಿಯಾಗಿದೆ' ಎಂದು ನಾಗೇಂದ್ರ ಅವರು ಮಾತು ಸೇರಿಸಿದರು. ಸಂಕೇತಿಗಳಲ್ಲಿ ಕೇಶವಮೂರ್ತಿ, ಆದಿಶೇಷ ಅವಧಾನಿ, ಕೇಶವ ನಾರಾಯಣ, ಸೋಮಸುಂದರ - ಇವರು ಹೈನುಗಾರಿಕೆ ಶುರು ಮಾಡಿ ಈಗ ಎರಡ್ಮೂರು ಎಮ್ಮೆ ಹಸುಗಳನ್ನು ಇಟ್ಟುಕೊಂಡಿದ್ದಾರೆ ಎಂದು ನಾಗೇಂದ್ರ ನುಡಿದರು. ತಿಂಡಿ ತಿನ್ನೋಣವೆಂದು ಹೊರಡುವಾಗ ನಾಗೇಂದ್ರರವರು ಮಾತು ಮುಂದುವರಿಸುವ ಲಕ್ಷಣ ಕಾಣುತ್ತಿತ್ತು. 'ಸರಿ, ಹೇಳಿ, ಏನೋ ಹೇಳ್ತಾ ಇರೋ ಹಾಗೆ ಕಾಣುತ್ತೆ' ಅಂದೆ.

'ಅದೇ, ನೇಕಾರರ ಬಗ್ಗೆ ಹೇಳ್ತಾ ಇದ್ನಲ್ಲಾ. ನಾನು ಮತ್ತು ರಾಮಚಂದ್ರ ಇಬ್ಬರೂ ಸೇರಿಕೊಂಡು ರೇಷ್ಮೆ ನೂಲು ಬಿಚ್ಚುವ ಘಟಕವನ್ನು ಶುರು ಮಾಡಿಕೊಂಡಿವಿ. ಸ್ವಂತ ಉದ್ಯೋಗ ಯೋಜನೆಯಡಿ ಸಾಲವನ್ನೂ ಪಡೆದ್ವಿ. ಆದ್ರೆ ನಮ್ಮೂರಲ್ಲಿ ಯಾರೂ ನೂಲು ಬಿಚ್ಚೋ ಕೆಲಸವನ್ನು ಕಲೀಲಿಲ್ಲ. ರೋಗಗಳು ಬರ್ತವೆ ಅಂತ ಮುಂದೆ ಬರಲಿಲ್ಲ. ಕೊಳ್ಳೇಗಾಲದಿಂದ ಜನರನ್ನು ಕರಕೊಂಡು ಬಂದಿವಿ. ಅವ್ರೂ ಕದ್ದು ಹೋದರು. ಜೊತೆಗೆ ಮಾರುಕಟ್ಟೆಯಲ್ಲಿ ನಮ್ಮ ನೂಲಿಗೆ 'ಹೊಸ ಪ್ರದೇಶ' ಎಂದು ಒಂದು ಕಿ.ಗ್ರಾಂಗೆ ೧೦೦-೧೫೦ ರೂಪಾಯಿ ಬೆಲೆ ಕಮ್ಮಿ ಮಾಡ್ತಾ ಇದ್ದರು. ಒಂದು ವರ್ಷ ಕಷ್ಟಪಟ್ಟು ಮಾಡಿದಿವಿ, ೪೦,೦೦೦-೫೦,೦೦೦ ರೂಪಾಯಿ ನಷ್ಟ ಆಯ್ತು, ಕೈಬಿಟ್ಟಿವಿ' ಎಂದರು. ಮಾತು ಮುಗಿಸಿಕೊಂಡು 'ತಿಂಡಿ ಸೇವನೆಯ ಬಳಿಕ ಮತ್ತೆ ಮುಂದುವರೆಸೋಣ' ಎಂದು ಹೊರಟೆ.



೨೨ ಅಡಿ ಆಳ, ೧೪ ಅಡಿ ಅಗಲ, ೧೪ ಅಡಿ ಉದ್ದ ಚಪ್ಪಡಿ ಬಾವಿ: ಬಿ.ಕೆ.ರಾಮಚಂದ್ರ ಅವರ ತೋಟ:ಬಸವಾಪಟ್ಟಣ

ಕೇಶವಮೂರ್ತಿಯವರು ಪೂಜೆಗೆ ಹೋಗಿದ್ದವರು ಬಂದಿರಲಿಲ್ಲ. ತಿಂಡಿ ತಿನ್ನುತ್ತಿರುವಾಗಲೇ ಬದುಕಿನ ಬಗ್ಗೆ ವಿಚಾರಗಳನ್ನು ಕೆದಕುತ್ತಿದ್ದೆ. ರವಿಕುಮಾರ್ ಅವರು, 'ನಾನು ನನ್ನ ತಂದೆಗೆ ಒಬ್ಬನೇ ಮಗ. ಇಬ್ಬರು ಅಕ್ಕಂದಿರು. ಮೂವರಿಗೂ ಮದುವೆ ಆಗಿದೆ. ಇವನು ನನ್ನ ಮಗ ಪ್ರಜ್ವಲ' ಎಂದು ಮಗನನ್ನು ಪರಿಚಯಿಸಿದರು. 'ಅಡಿಕೆಗೆ ಮೊದಲು ಬೆಲೆ ಬಂದು ಅನಂತರ ಕಡಿಮೆ ಆಗಿದ್ದರಿಂದ ನಮಗೆಲ್ಲಾ ಸಾಲ ಹೆಚ್ಚಾಯಿತು. ಇದೇ ಬೆಲೆ ಮೊದ್ಲಿಂದ ಇದ್ದಿದ್ರೆ ಹೀಗಾಗ್ತಿರ್ಲಿಲ್ಲ' ಎಂಬ ಮಾತೂ ಕೇಳಿ ಬಂತು.



ಮಾಡಿದ್ದು ಬಿ.ಕಾಂ., ಆದರೂ ಭೂಮಿ ಕಾಯಕಕ್ಕೆ ಪ್ರೀತಿಯಿಂದ ಇಳಿದ ಬಿ.ಕೆ.ರಾಮಚಂದ್ರ

ತಿಂಡಿ ತಿಂದು ತೋಟಗಳ ಕಡೆ ಹೋಗಿ ಬರೋಣ ಎಂದು ಕ್ಯಾಮರಾ ಮತ್ತು ಟಿಪ್ಪಣಿ ಪುಸ್ತಕ ಹಿಡಿದು ಹೊರಟೆವು. ಆದರೆ ಸಂಕೇತಿಗಳ ತೋಟ ತುಸು ದೂರದಲ್ಲಿದ್ದವು ಎಂದು ಅಲ್ಲಿಗೆ ಹೋದಾಗ ಗೊತ್ತಾಯಿತು. ಬಿ.ಕೆ. ರಾಮಚಂದ್ರ ಅವರು ತೋಟದ ಪ್ರವೇಶದಲ್ಲೇ ನಿಂತಿದ್ದರು. ಪರಿಚಯಿಸಿ ಕೊಂಡು ಮಾತಿಗಿಳಿದೆವು. 'ಅಯ್ಯೋ, ಹಳ್ಳಿ ಜೀವನಕ್ಕೆ ಬರಬಾರದು' ಎನ್ನುತ್ತಲೇ ಮಾತು ಶುರು ಮಾಡಿದ ರಾಮಚಂದ್ರ ಅವರು, 'ನಮ್ಮದು ಇನ್ನೇನು ಕೆಲ್ಸ ಸ್ವಾಮಿ? ಮನೆ ಬಿಟ್ರೆ ತೋಟ, ತೋಟ ಬಿಟ್ರೆ ಮನೆ. ಆದ್ರೆ ನೋಡಿ. ಇತ್ತೀಚೆಗೆ ಹುಣಿಸೆ ಮರ ದಿಂದ ಬಿದ್ದು ಪೆಟ್ಟಾಗಿ ಬೆಂಗಳೂರಿನ ಅಪೋಲೋ ಆಸ್ಪತ್ರೆ ಸೇರಿ ಗುಣವಾಗಿ ಬಂದೆ. ನಾನಿಲ್ಲದೇ ಹೋದ್ರೆ ಏನೇನೋ ವ್ಯತ್ಯಾಸ ಆಗುತ್ತೆ. ಈಗ ನಾನಿಲ್ಲದಿದ್ದಾಗ ಏನು ಕೆಲಸವಾಗಲಿಲ್ಲವೋ ಅದನ್ನ ಮಾಡ್ತಾ, ಮಾಡಿಸ್ತಾ ಇದೀನಿ' ಎಂದರು.

ಎರಡೂವರೆ ಎಕರೆ ತೆಂಗು, ಎರಡು ಎಕರೆ ಅಡಿಕೆ ಇಟ್ಟುಕೊಂಡಿರುವ ರಾಮಚಂದ್ರ ಅವರದು ಆಸಕ್ತಿದಾಯಕ ಕೃಷಿ ಬದುಕು ಎನಿಸಿತು. ತೋಟದ ಪ್ರವೇಶಕ್ಕೆ ಬಿದಿರಿನ ಗೇಟನ್ನು ಮಾಡಿಸಿಕೊಂಡಿದ್ದಾರೆ. 'ಬಣ್ಣ ಬಳಿದು ಇಟ್ಟುಕೊಂಡ್ರೆ ಐದಾರು ವರ್ಷ ಬಾಳಿಕೆ ಬರುತ್ತೆ. ಖರ್ಚು ೩೦೦-೩೫೦ ರೂಪಾಯಿ. ಕಬ್ಬಿಣದ ಗೇಟ್‌ಗೆ ಕಂಬ ಬೇಕು, ದುಡ್ಡು ಹೆಚ್ಚು ತಗುಲುತ್ತೆ. ಇಲ್ಲಿ ಹಾಗಲ್ಲ. ಗೂಟಕ್ಕೆ ಬೂರಗದ್ದೋ, ಹಾಲವಾಣದ್ದೋ ಗೂಟವನ್ನು ನೆಟ್ಟು ಚಿಗುರುವ ತನಕ ನೀರೆರದರೆ ಸಾಕು' ಎನ್ನುವ ಅವರು ತಡ್ಲು (ರಾಡು/ ಬಾಗಿಲು) ಅನ್ನು ಬಿದಿರಿನ ಮುಳ್ಳುಗಳನ್ನು ಜೋಡಿಸಿ ಅಡಿಕೆ ಪಟ್ಟೆಗಳನ್ನು ಹಾಕಿ ಕಟ್ಟಿಕೊಂಡಿದ್ದಾರೆ. ಗೇಟನ್ನು ದಾಟಿ ಮುಂದೆ ಸಾಗಿದಾಗ ಒಂದು ಚೊಕ್ಕಟವಾದ ಬಾವಿ ಕಾಣಿಸಿತು. 'ನೋಡಿ, ಇದು ಚಪ್ಪಡಿ ಭಾವಿ. ಒಂದ್ನೂರೂ ಸಿಮೆಂಟ್ ಬಳಸಿಲ್ಲ. ಮೊದ್ಲು ದೊಡ್ಡ ಭಾವಿ ಇತ್ತು. ಮಣ್ಣು ಕುಸೀತಿತ್ತು. ಆ ಸಮಸ್ಯೆಗೆ ಚಪ್ಪಡಿ ಕಲ್ಲುಗಳನ್ನು ಬಳಸಿ ಕಲ್ಲು ಕಟ್ಟಡ ಮಾಡಿದಿವಿ' ಎಂದು ಹೇಳುತ್ತಿದ್ದಾಗ ಹೇಗೆ ಫೋಟೋ ತೆಗಿಯೋದು ಎಂದು ಯೋಚಿಸುತ್ತಿದ್ದೆ. ರವಿಕುಮಾರ್ 'ಪಂಪ್‌ಹೌಸ್‌ನ ಮೇಲೆ ಹತ್ತಿ' ಎಂದು ಸಲಹೆ ನೀಡಿದರು. ಸರಿ, ಹೆಗಲಿಗೆ ಕ್ಯಾಮೆರಾ ಬ್ಯಾಗ್ ಹಾಕಿಕೊಂಡು ಏಣಿಯನ್ನು ಹತ್ತಿ ಬಾವಿಯ ಚಿತ್ರವನ್ನು ತೆಗೆಯಲು ಸಿದ್ಧನಾಗುವಾಗ ತಲೆಯ ಮೇಲೆ ಸ್ವಲ್ಪವೇ ಎತ್ತರದಲ್ಲಿ ವಿದ್ಯುತ್ ತಂತಿಗಳು ಹಾಯ್ದುಹೋಗಿರುವುದು ಕಂಡು ಬಂತು. ಎಚ್ಚರಿಕೆಯಿಂದ ಬಾವಿಯ ಚಿತ್ರವನ್ನು ತೆಗೆದೆ. ಚಿತ್ರ ತೆಗಿಯುವಾಗ ಅಲ್ಲಿದ್ದ ಸಂಪಿಗೆ ಮರದತ್ತ ಗಮನ ಹೋಯಿತು. ಇಲ್ಲಿ ಎಷ್ಟು ಸಂಪಿಗೆ ಮರಗಳಿದಾವೆ? ಎಂದೆ. 'ನಮ್ಮಲ್ಲಿ ಎರಡ್ನೂರು ಇರ್ಬೇಕು. ಇದು ಕೆಂಡಸಂಪಿಗೆ ಮರ' ಎಂದರು ರಾಮಚಂದ್ರ. ಪಂಪ್‌ಹೌಸ್‌ನಿಂದ ಇಳಿದು ಬಾವಿ ದಾಟಿ ಮುಂದೆ ಸಾಗುವಾಗ ಮಾವು,



ತೋಟಕ್ಕೆ ಬಿದಿರಿನ ಬಾಗಿಲು:ಸ್ಥಳೀಯ, ಸ್ವಾವಲಂಬಿತ:ಬಸವಾಪಟ್ಟಣ

ಹಲಸು, ಹುಣಸೆ ಕಾಣುತ್ತಿದ್ದವು. 'ಇಲ್ಲೆಲ್ಲಾ ತೋಟಗಳ ಸುತ್ತ ಹುಣಿಸೆ ಮರಗಳು ಇವೆ. ಏಣಿ, ತದ್ಲು, ರಾಡು (ಗೇಟಿಗೆ) ಮಾಡ್ಲಿಕ್ಕೆ ಬಿದಿರನ್ನು ಬೆಳೆಸಿಕೊಂಡಿದೀವಿ' ಎಂಬ ಮಾತುಗಳು ಕೇಳಿಬಂದವು.

ಬಸವಾಪಟ್ಟಣದ ತೋಟಗಳಲ್ಲಿ ಹೇರಳ ಸಂಖ್ಯೆಯಲ್ಲಿ ಬಾವಲಿಗಳು ಮನೆ ಮಾಡಿಕೊಂಡಿವೆ. ಅತ್ತಿ, ಆಲ, ಕಾಫಿ ಮುಂತಾದ ಹಣ್ಣುಗಳನ್ನು ಇವು ತಿನ್ನುತ್ತವೆ. ಹಣ್ಣಾದ ಅಡಿಕೆ ಕಾಯಿಗಳನ್ನು ತಿಂದು ಚೀಪಿ ಬಿಸಾಕುವುದಿದೆ. ರಾಮಚಂದ್ರರ ತೋಟದಲ್ಲಿ ಗ್ಲಿರಿಸೀಡಿಯಾ ಗಿಡಗಳು ಗಟ್ಟಿಯಾಗಿ ಬೆಳೆದಿರುವುದನ್ನು ಕಂಡು 'ಇಲ್ಲಿ ಇವಕ್ಕೆ ಏನಂತಾರೆ, ಯಾವಾಗ ಇಲ್ಲಿಗೆ ಬಂತು?' ಎಂದೆ. 'ಅಯ್ಯೋ! ಈ ಗೊಬ್ಬರದ ಗಿಡವನ್ನು ೩೦ ವರ್ಷಗಳಿಂದ ನಾವು ಕಾಣ್ತಾ ಇದೀವಿ. ಇದನ್ನ ಗೊಬ್ಬರ ಮಾಡ್ಲಿಕ್ಕೆ, ಬೇಲಿಯ ಭದ್ರತೆಗೆ, ಮಣ್ಣಿನ ಕೊರೆತ ತಪ್ಪಿಸ್ಲಿಕ್ಕೆ ಬಳಸ್ತೀವಿ' ಎಂದು ರಾಮಚಂದ್ರ ಹೇಳಿದರು. 'ನಮ್ಮಲ್ಲಿ ರಸಪುರಿ ಮಾವು ಇದೆ. ಹಳೆಯ ಮರಗಳು. ಸ್ವಲ್ಪ ಬಾದಾಮಿ, ಮಲಗೋವ ಇದೆ. ಹಲಸಿನ ಮರಗಳೂ ಇವೆ. ಹಣ್ಣಿನ ರುಚಿಯೂ ಚೆನ್ನಾಗಿದೆ. ಹೊಂಗೆಯ ಮರಗಳೂ ತೋಟದ ಅಂಚಿನಲ್ಲಿವೆ.'

ಹಾಲವಾಣದ ಗೂಟಗಳನ್ನು ನಾಲ್ಕು ಕಡೆ ಇಟ್ಟು ಅಡಿಕೆಯ ಉದುರಿದ ಗರಿಗಳನ್ನು ಒಟ್ಟುಹಾಕಿದ್ದನ್ನು ಗಮನಿಸಿ 'ಯಾವುದಕ್ಕೆ ಇದನ್ನ ಬಳಸ್ತೀರಿ?' ಎಂದೆ. 'ಉದುರಿದ ಅಡಿಕೆ ಗರಿಯ ಪಟ್ಟೆಯನ್ನು ಊಟಕ್ಕೆ, ಹಂಬು ಕಟ್ಲಿಕ್ಕೆ ಉಪಯೋಗಿಸ್ತೀವಿ. ಗರಿಯನ್ನು ಹಿಂದೆ ಗುಡಿಸಲು, ಚಪ್ಪರಕ್ಕೆ ಬಳಸುತ್ತಿದ್ದರು. ಈಗ ಜನತಾ ಮನೆಗಳು ಬಂದ ಮೇಲೆ ಬೇಡಿಕೆ ಕಮ್ಮಿಯಾಗಿದೆ. ಅದಕ್ಕೇ ನಾವು ಗುಂಡಿಯಲ್ಲಿ ಹಾಕಿ ಕರಗಿಸ್ತೀವಿ, ಗೊಬ್ಬರವಾಗುತ್ತೆ' ಎಂದವರು ಉತ್ತರಿಸಿದರು. ಅಡಿಕೆ ತೋಟವನ್ನು ಪ್ರವೇಶಿಸಿ ಅಲ್ಲಿಯ ಚಿತ್ರಣವನ್ನು ಆಸಕ್ತಿಯಿಂದ ಗಮನಿಸಿ ಚರ್ಚಿಸಲು ಮನಸ್ಸು ಮುಂದಾಯಿತು. 'ನಾವು ತೋಟವನ್ನು ದೇವರಂತೆ ಕಾಣ್ತೀವಿ. ಚಪ್ಪಲಿಯನ್ನು ಹಾಕಿಕೊಂಡು ಒಳಗೆ ಹೋಗಲ್ಲ' ಎಂದು ರಾಮಚಂದ್ರ ಅವರು ವಿಚಾರಗಳನ್ನು ಹೇಳುತ್ತಾ ಹೊರಟರು. ಅಲ್ಲಿಯ ಪಿಳ್ಳೆ (ಟ್ರೆಂಚ್/ಕಾಲುವೆ)ಯನ್ನು ತೋರಿಸುತ್ತಾ 'ಇದನ್ನ ವರ್ಷಕ್ಕೆ ಎರಡ್ಮೂರು ಸಾರಿ ಸೋಸ್ತೀವಿ. ಮಳೆ ಹೆಚ್ಗೆ ಬರುವಾಗ ನೀರು ಹರಿದುಕೊಂಡು ಹೊರಹೋಗುತ್ತೆ. ತೋಟಕ್ಕೆ ಶೀತ ಆಗಲ್ಲ' ಎಂದರು.

ನಿಲ್ಲದ ಅಣಬೆ ರೋಗ: ಬಸವಾಪಟ್ಟಣದಲ್ಲಿಯ ಅಡಿಕೆ ತೋಟಗಳಲ್ಲೂ ಅಣಬೆ ರೋಗ ಇದೆ. ಪಕ್ಕದ ಕೇರಳಾಪುರಕ್ಕಿಂತ ಇಲ್ಲಿ ಕಮ್ಮಿ. ವರ್ಷಕ್ಕೆ ಒಬ್ಬೊಬ್ಬರು ೧೫-೨೦ ಮರಗಳನ್ನು ಕಳೆದುಕೊಳ್ಳುತ್ತಾರೆ. ನಿವಾರಣೆಗೆ ಇದುವರೆಗೆ ಔಷಧಿ ಸಿಕ್ಕಿಲ್ಲ. ಏನೇನೋ ಪ್ರಯತ್ನ ಮಾಡಿದರೂ ಮರಗಳು ಹೋಗುತ್ತವೆ. ಈಚೆಗೆ ಕೆಲವರು ತೆಗೆದ ಮರದ ಬುಡವನ್ನು ಜಜ್ಜಿ ಸೀಮೆಎಣ್ಣೆಯನ್ನು ಎರಡ್ಮೂರು ಸಾರಿ ಸುರಿಯುತ್ತಿದ್ದಾರೆ. ಇದರಿಂದಲಾದರೂ ನಿಯಂತ್ರಣಕ್ಕೆ ಬರಬಹುದು ಎಂಬ ಆಶಯವನ್ನು ಇಟ್ಟುಕೊಂಡಿದ್ದಾರೆ. ಅಣಬೆ ಬಂದ ಮರದ ಬಳಿ ಉಪ್ಪು ಹಾಕಿ ಮುಚ್ಚಿದರೆ ರೋಗಾಣು ಹರಡುವುದಿಲ್ಲ ಎಂದು ಹೇಳುವುದಿದೆ. ರೋಗಪೀಡಿತ ಮರಕ್ಕೆ ಸೀಮೆಎಣ್ಣೆಯ ಉಪಚಾರ ಫಲ ನೀಡಿದೆ ಎಂದು ರವಿಕುಮಾರ್ ತಮ್ಮ ಅನುಭವಗಳನ್ನು ಹೇಳಿಕೊಂಡರು. 'ಅಣಬೆ ಬೆಳೆಯುವುದನ್ನು ಗಮನಿಸಿ ಆ ಭಾಗವನ್ನು ಕೆತ್ತಿ ಮೂರ್‍ನಾಲ್ಕು ಸಾರಿ ಸೀಮೆಎಣ್ಣೆ ಹಾಕಿದರೆ ಮರ ಉಳಿಯುತ್ತೆ, ಫಸಲಿಗೆ ತೊಂದರೆ ಇಲ್ಲ' ಎಂದು ಅವರು ಹೇಳುತ್ತಾರೆ.



ಹಂಬಿನ ತಕ್ಕೆ ಗುಣಿಗೆ ಗೊಬ್ಬರ ಹಾಕಿರುವುದು:ಬಸವಾಪಟ್ಟಣ

ರಾಮಚಂದ್ರರವರು ವೀಳ್ಯೇದೆಲೆ ಹಂಬು ತೋರಿಸುತ್ತಾ 'ಇದಕ್ಕೂ ರೋಗ. ಬೂದಿ ಬಂದ್ರೆ ಮಾರಾಟ ಆಗಲ್ಲ' ಎಂದು ರೋಗಪೀಡಿತ ಎಲೆಗಳನ್ನು ತೋರಿಸಿದರು. ತೋಟದಲ್ಲಿದ್ದ ಸುವರ್ಣ ಗಡ್ಡೆಯ ಸಸಿಗಳನ್ನು ತೋರಿಸುತ್ತಾ, 'ವಿಶೇಷವಾಗಿ ಸಾವಿನ ಸಂದರ್ಭದಲ್ಲಿ, ತಿಥಿಯ ದಿನಗಳಲ್ಲಿ ಇದನ್ನು ನಾವು ಬಳಸ್ತೀವಿ. ಬಾಳೆಯ ಹೂವು, ದಿಂಡನ್ನೂ ಅಡುಗೆಗೆ ಉಪಯೋಗಿಸ್ತೀವಿ' ಎಂದು ಅವರು ಹೇಳುತ್ತಿದ್ದರು. 'ಗರ್ಭಪಾತಕ್ಕೆ ಹಿಂದಿನ ದಿನಗಳಲ್ಲಿ ಕಳಲೆ ಪಲ್ಲೆಯನ್ನು ತಿನ್ನಿಸುತ್ತಿದ್ದರು.

ಕಳಲೆಯು ದೇಹವನ್ನು ಶಾಖವಾಗಿ ಇಡುತ್ತೆ' ಎಂದು ಪ್ರತಿಕ್ರಿಯಿಸಿದರು. 'ವೀಳ್ಯೇದೆಲೆ ಬಳ್ಳಿಗೆ ತಾಯಿಗುಣಿ, ತೆಕ್ಕೆಗುಣಿ ಮಾಡ್ತೀವಿ. ಎರಡು ವರ್ಷಕ್ಕೊಮ್ಮೆ ತೆಕ್ಕೆ ಬಿಡ್ತೀವಿ. ತೆಕ್ಕೆಗುಣಿಗೆ ಗೊಬ್ಬರ ನೀರು ಕೊಡ್ತೀವಿ. ಕೆಲವೊಮ್ಮೆ ತಾಯಿಗುಣೀಗೂ ನೀಡ್ತೀವಿ' ಎಂದು ರಾಮಚಂದ್ರ ಹೇಳಿದರು.


ಗೆಡ್ಡೆ ರೋಗಕ್ಕೆ ತುತ್ತಾದ ವಿಳ್ಯೇದೆಲೆ ಹಂಬು :ಬಸವಾಪಟ್ಟಣ


ಹಾರಂಗಿ ಜಲಾಶಯದಿಂದ, ಕೆರೆಗಳಿಂದ ಮಳೆಯ ನೀರು ಹರಿದಾಡುವಾಗ ಪಿಳ್ಳೆಯನ್ನು ದಾಟಲು ರಾಮಚಂದ್ರ ಅವರು ಮಾಡಿಕೊಂಡಿರುವ ಪದ್ಧತಿ ಮಾದರಿ ಅನಿಸುತ್ತದೆ. 'ಬೂರಗ ಮರದ ದಪ್ಪ ತುಂಡುಗಳನ್ನು ಪಿಳ್ಳೆಗೆ ಅಡ್ಡಲಾಗಿ ಇಟ್ಟು, ಮೇಲೆ ಮಣ್ಣು ಹಾಕಿ, ಚಿಗುರುವವರೆಗೆ ನೀರು ಕೊಟ್ಟರೆ ಸದಾ ಹಸಿರಾಗಿರ್ತವೆ, ಹಾಳಾಗಲ್ಲ. ಭಾರವನ್ನೂ ತಡೆದುಕೊಳ್ತವೆ. ತೀರಾ ಉದ್ದನೆಯ ತುಂಡುಗಳನ್ನು ಬಳಸುವುದು ಬೇಡ' ಎಂದು ಅಭಿಪ್ರಾಯಪಡುತ್ತಾರೆ. ತೋಟದಲ್ಲಿ ಮುಂದೆ ಸಾಗುತ್ತಾ ನಡೆದಾಗ ಆಳುಗಳು ಹಂಬನ್ನು ಕಟ್ಟುತ್ತಿದ್ದರು. 'ನೋಡಿ, ಇವ್ರು ಸಣ್ಣವರಿದ್ದಾಗಲಿಂದ ನಮ್ಮಲ್ಲಿ ದುಡೀತಾ ಇದಾರೆ. ಕುಡಿಯೋದು ಬಹಳ ಇಷ್ಟ' ಎಂದು ಹೇಳುತ್ತಿದ್ದಾಗ ನಾಗೇಂದ್ರ ಅವರು ಮಾತು ಸೇರಿಸಿದರು. 'ಬಸವಾಪಟ್ಟಣದಲ್ಲಿ ಒಂದು ಸಾರಿ ಸಮೀಕ್ಷೆ ಮಾಡಿದಿವಿ. ಇಲ್ಲಿ ಮೂರು ಸಾರಾಯಿ ಅಂಗಡಿಗಳು ಇದಾವೆ, ಎರಡು ಬಾರ್‌ಗಳಿದಾವೆ. ಕುಡಿಯೋ ಜನ ದಿನಕ್ಕೆ ೧೨,೦೦೦ ರೂಪಾಯಿ ಹಣವನ್ನು ಖರ್ಚು ಮಾಡ್ತಾರೆ. ಅಂಗಡಿ ಇಟ್ಟ ಐದು ಜನ ಉದ್ಧಾರ ವಾದ್ರೆ ೫೦೦ಕ್ಕೂ ಹೆಚ್ಚು ಜನ ಹಾಳಾಗ್ತಾರೆ' ಎಂದು ವಿವರಗಳನ್ನು ನೀಡಿದರು.


ಬದುಕಿಗೆ ಬಿದಿರು ಇಲ್ಲಿ ಆಸರೆ:ಬಸವಾಪಟ್ಟಣ

ಸಸಿ ಬೆಳೆಸುವ ಯೋಜಿತ ಕ್ರಮ: ಅಡಿಕೆ ತೋಟದಲ್ಲಿ ೧೭ ಮೆಟ್ಟಲಿನ ಏಣಿಗಳಿದ್ದವು. ಒಂದೊಂದು ಮೆಟ್ಟಿಲು (ಹಂತ) ದೂರ ಒಂದು ಮೊಳ ಎರಡು ಇಂಚು ಇದೆ. ಕಾಲು ಮಡಚಿಕೊಂಡು ಬಳ್ಳಿ ಕಟ್ಲಿಕ್ಕೆ ಜಾಗ ಬೇಕು ಎಂಬ ಅಂಶ ವ್ಯಕ್ತವಾಯಿತು. ನೀರನ್ನು ಇಲ್ಲಿಯೂ ಇತರೇ ಕಡೆಗಳಂತೆ ಕೊಳವೆಗಳಲ್ಲಿ ಕೈಯಿಂದ ಉಣಿಸುತ್ತಿರುವುದು ಕಂಡು ಬಂತು. ಅಣಬೆ ರೋಗದಿಂದ ಮರಗಳು ಸಾಯುತ್ತಿರುವುದರಿಂದ ಆಗಾಗ್ಗೆ ಹೊಸದಾಗಿ ಸಸಿಗಳನ್ನು ನೆಡಲು ಪ್ರತಿಯೊಬ್ಬರೂ ತೋಟಗಳಲ್ಲಿ ಬೆಳೆಸಿಕೊಳ್ಳುತ್ತಾರೆ. ಈ ಕುರಿತು ರಾಮಚಂದ್ರ ಹೀಗೆ ನುಡಿಯುತ್ತಾರೆ: 'ಸಸಿಗಳನ್ನು ಬೆಳೆಸುವಾಗ ಮರಕ್ಕೆ ೩೫ ವರ್ಷ ದಾಟಿರಬೇಕು. ಮಧ್ಯದ ಗೊನೆಯನ್ನು ಆಯ್ದುಕೊಳ್ಳಬೇಕು. ಮಧ್ಯಮಗಾತ್ರದ, ಉದ್ದನೆಯ ಅಡಿಕೆ ಕಾಯಿಗಳನ್ನು ಆರಿಸಿಕೊಳ್ಳಬೇಕು. ಕಾಯಿಗಳು ಹಣ್ಣಾಗಿರಬೇಕು. ಇಳಿಸುವಾಗ ಗೋಣಿಯಲ್ಲಿ ತಟ್ಟು ಹೊಡೆಯಬೇಕು. ಕಾಯಿಗಳನ್ನು ೧೫-೨೦ ದಿನಗಳ ಕಾಲ ಕರಗಿಸಿ ಮಣ್ಣು ತುಂಬಿದ ಚೀಲಗಳಿಗೆ ನೆಡಬೇಕು. ಬಚ್ಚಲಲ್ಲಿ ಇಟ್ಟರೆ ಸಿಪ್ಪೆ ಕರಗಿ ಮೊಳಕೆ ಮೂಡುತ್ತೆ. ಕೆಲವೊಬ್ಬರು "ಒಡ್‌ನಾಟಿ" ಮಾಡ್ತಾರೆ. ಇಲ್ಲಿ ಕಾಯಿಗಳನ್ನು ಒತ್ತೊತ್ತಾಗಿ ಮಣ್ಣಿಗೆ ಸುರಿದು ಮೊಳಕೆ ಮಾಡಿಸ್ತಾರೆ, ಆಮೇಲೆ ನೆಡ್ತಾರೆ.' ರಾಮಚಂದ್ರರವರ ತಂದೆ ಹೆಚ್.ಎಸ್.ಕೃಷ್ಣಮೂರ್ತಿಯವರು ಅಡಿಕೆ ಸಸಿ ಬೆಳೆಸಿ ಮಾರಾಟ ಮಾಡಿ ಬೆಳೆದವರು.

ಕೆರೆಯ ಗೋಡಿನ ಬಳಕೆ ಬಗ್ಗೆ ಬಸವಾಪಟ್ಟಣದ ಸಂಕೇತಿ ಕೃಷಿಕರಲ್ಲಿ ಒಂದು ಸಂಪ್ರದಾಯ ನಡೆದುಕೊಂಡು ಬಂದಿದೆ. ಗೋಡು ಹೇರಿಕೊಂಡು ಬಂದ ತಕ್ಷಣ ಅದನ್ನು ತೋಟಕ್ಕೆ ಹಾಕುವುದಿಲ್ಲ. ಎರಡು ವರ್ಷ ಬಿಸಿಲಲ್ಲಿ ಒಣಗಿಸಿ, ಅದನ್ನು ಅರಳಿಸಿ ಹಾಕುತ್ತಾರೆ. ಆಗ ತಾನೇ ತಂದ ಗೋಡು ಮಣ್ಣು ಅಡಿಕೆಯ ಅಣಬೆ ರೋಗವನ್ನು ಹೆಚ್ಚಿಸುತ್ತದೆ ಎಂಬುದು ಇಲ್ಲಿಯ ಜನರ ನಂಬಿಕೆ.

ರಾಮಚಂದ್ರರವರ ತೋಟ ನೋಡಿ ಮುಗಿಸಿಕೊಂಡು ರವಿಕುಮಾರ್‌ರವರ ತೋಟ ನೋಡಲು ಹೊರಟೆವು. ತೋಟದ ಪ್ರವೇಶದ ಮೊದಲ ಭಾಗದಲ್ಲಿ ವೀಳ್ಯೇದೆಲೆ ಕಮ್ಮಿ ಇತ್ತು. 'ತೋಟದಲ್ಲಿ ಎರಡು ದಿನ ನೀರು ಹರಿದುಕೊಂಡು ಹೋಯಿತು. ಹಂಬು ಹೋಗಿಬಿಡ್ತು' ಎಂದು ರವಿಕುಮಾರ್ ಹೇಳಿದರು. 'ವೀಳ್ಯೆದೆಲೆಯನ್ನು ಚೆನ್ನಾಗಿ ನೋಡಿಕೊಂಡ್ರೆ ಈಗಿನ ಅಡಿಕೆ ಬೆಲೆಯಲ್ಲಿ ಎರಡು ಪಟ್ಟು ದುಡ್ಡು ಮಾಡಬಹುದು' ಎಂದವರು ತಿಳಿಸಿದರು. ತೋಟದಲ್ಲಿ ಒಳಗೆ ಪ್ರವೇಶ ಮಾಡಿದಂತೆ ವೀಳ್ಯೇದೆಲೆ ಉತ್ತಮವಾಗಿ ಕಾಣಿಸಿತು. ಒಂದೂಮುಕ್ಕಾಲು ಎಕರೆಗೆ ೪೦ ಹೇರು (ಒಂದು ಹೇರು = ೨ ಪಿಂಡಿ; ಒಂದು ಪಿಂಡಿ = ೧೨೦ ಕಟ್ಟು = ೧೨,೦೦೦ ಎಲೆ) ಎಲೆ ಸಿಗುತ್ತೆ. ವ್ಯಾಪಾರಸ್ಥರೇ ಬಂದು ತಗೊಂಡು ಹೋಗ್ತಾರೆ. ಸದ್ಯ ಒಂದು ಹೇರು ೫೦೦ ರೂಪಾಯಿ ಬೆಲೆ ಇದೆ. ಗರಿಷ್ಠ ೬೦೦ ರೂಪಾಯಿ ಸಿಗುತ್ತೆ.


ವಿಳ್ಯೇದೆಲೆಯಲ್ಲಿ ಏಳಿಗೆ ಕಂಡ ವೆಂಕಟೇಶ್:ಬಸವಾಪಟ್ಟಣ

ಇಲ್ಲಿ ಯಾರ ತೋಟದಲ್ಲಿ ವಿಳ್ಯೇ ಉತ್ತಮವಾಗಿದೆ?
ಬಸವಾಪಟ್ಟಣದ ಸಮೀಪದ ಕರ್ಲುಕಟ್ಟೆ ಆಗ್ರದಲ್ಲಿರುವ ಬಿ.ಎಸ್.ಕೃಷ್ಣಪ್ಪನವರ ತೋಟದಲ್ಲಿ ಒಳ್ಳೆ ಇಳುವರಿ ಸಿಗ್ತಾ ಇದೆ. ಇದನ್ನ ಬಿ.ಕೆ. ಕೇಶವಮೂರ್ತಿಯವರು ನೋಡಿಕೊಳ್ತಾ ಇದಾರೆ. ಇವರ ಒಂದು ಎಕರೆ ತೋಟದಿಂದ ೧೦೦ ಹೇರು ಎಲೆ ಸಿಗುತ್ತೆ.

ಏನು ಇಷ್ಟೊಂದು ಇಳುವರಿ? ಏನಿದರ ರಹಸ್ಯ?
ಅದು ಸುಣ್ಣಕಲ್ಲು ಜಮೀನು. ಇಂತದ್ದರಲ್ಲಿ ವೀಳ್ಯೆ ಚೆನ್ನಾಗಿ ಬರುತ್ತೆ.

ಅಡಿಕೆ, ವೀಳ್ಯೆಗೆ ಏನು ಗೊಬ್ಬರ ಕೊಡ್ತಾರೆ?
ದನದ ಗೊಬ್ಬರಾನೇ ಮುಖ್ಯವಾಗಿ ಕೊಡ್ತೀವಿ. ಕೆಲವೇ ಜನ ರಾಸಾಯನಿಕ ಗೊಬ್ಬರ ನೀಡ್ತಾರೆ.

ದನಕರುಗಳನ್ನು ಇಲ್ಲಿ ಹೆಚ್ಚು ಜನ ಸಾಕಿಲ್ಲ. ಸಗಣಿ ಗೊಬ್ಬರಕ್ಕೆ ಹೇಗೆ ವ್ಯವಸ್ಥೆ ಮಾಡಿಕೊಂಡಿದೀರಿ?
ಎಲ್ಲಾ ಖರೀದಿ ಮಾಡ್ತೀವಿ. ಗದ್ದೆ ಮಾಡೋರು ದನದ ಗೊಬ್ಬರ ಬಳಸಲ್ಲ. ಅವ್ರಿಂದ ಖರೀದಿಸ್ತೀವಿ. ಅಕ್ಕಪಕ್ಕದ ಊರುಗಳಿಂದ ಗೊಬ್ಬರವನ್ನು ಪೂರೈಸೋ ಜನ ಇದಾರೆ. ಲಾರಿ ಲೋಡಿಗೆ ೩೦೦೦ ರೂಪಾಯಿ, ಟ್ರ್ಯಾಕ್ಟರ್ ಲೋಡಿಗೆ ೭೫೦ ರೂಪಾಯಿ, ಗಾಡಿಗೆ ೨೦೦ ರೂಪಾಯಿ. ಕುರಿಗೊಬ್ಬರಾನೂ ಹಾಕ್ತೀವಿ. ಕೋಳಿ ಗೊಬ್ಬರ ಬಳಸಲ್ಲ.

ಮಾತಾಡುತ್ತಾ ನಡೆದು ನಾಗೇಂದ್ರರವರು ಮತ್ತೊಂದು ತೋಟಕ್ಕೆ ಕರೆದೊಯ್ದರು. 'ಇವರು ವೆಂಕಟೇಶ್ ಅನ್ನೋರು' ಎಂದು ಪರಿಚಯಿಸಿದಾಗ ನಮಸ್ಕರಿಸಿ, 'ಏನು ಯಜಮಾನ್ರೆ, ಇಲ್ಲಿ ಗುಡ್ಡೆಯನ್ನು ಗರಿಗಳಿಂದ ಮುಚ್ಚಿದೀರಿ. ಏನು ವಿಶೇಷ?' ಎಂದೆ. 'ನಾವು ಸಗಣಿ ಗೊಬ್ಬರವನ್ನು ಜನವರಿಯಲ್ಲಿ ಖರೀದಿ ಮಾಡಿ ಹಸಿರು ಸೊಪ್ಪು ಹೊದಿಸಿ ಮೇಲೆ ಮಣ್ಣನ್ನು ಹಾಕಿ ಗರಿಗಳಿಂದ ಹೊದಿಸ್ತೀವಿ. ಮೇ-ಜೂನ್‌ನಲ್ಲಿ ತೋಟಕ್ಕೆ ಹಾಕ್ತೀವಿ. ತೆಕ್ಕೆಗುಣಿಗೆ ಒಂದೊಂದು ಮಂಕರಿ ಗೊಬ್ಬರ ಹಾಕ್ತೀವಿ. ಕೆಲವೊಮ್ಮೆ ಎರಡನೇ ಸಾರಿ ಹಾಕೋದೂ ಇದೆ. ರಾಸಾಯನಿಕ ಗೊಬ್ಬರ ಸುಫಲಾವನ್ನೂ ನೀಡ್ತೀನಿ' ಎಂದರು. ಬಾಯಿ ತುಂಬಾ ತಾಂಬೂಲ ಹಾಕಿಕೊಂಡಿದ್ದ ವೆಂಕಟೇಶರವರು ತಂಬಾಕನ್ನು ಮೆಲ್ಲುತ್ತಾರೆ. ತೋಟದಲ್ಲಿ ಉತ್ತಮವಾಗಿ ವೀಳ್ಯೆದೆಲೆಯನ್ನು ಇಟ್ಟುಕೊಂಡಿರುವ ಇವರ ಕೃಷಿ ಕ್ರಮಗಳಲ್ಲಿ ಅಚ್ಚುಕಟ್ಟುತನ ಎದ್ದು ಕಾಣುತ್ತಿತ್ತು. ತೋಟದಲ್ಲಿ ಹಾಕಿಸಿದ್ದ ಕಾಫಿಯು ಇವರಲ್ಲಿ ಬಹಳ ವರ್ಷ ಉಳಿಯಲಿಲ್ಲ. ಕಾಳುಮೆಣಸೂ ಸ್ವಲ್ಪ ಇದೆ. ಆದರೆ ವಿಳ್ಯೇದೆಲೆಯೇ ಇವರಿಗೆ ಪ್ರಿಯ ಬೆಳೆಯಾಗಿದೆ.



ಮಣ್ಣು ಕೊಚ್ಚಿರುವ ಕಡೆ ಗುಣಿಗಳಿಗೆ ಪಟ್ಟಿಹಾಕುವ ಕ್ರಮ:ಬಸವಾಪಟ್ಟಣ

ವೆಂಕಟೇಶ್‌ರವರ ತೋಟದ ಎದುರಿನಲ್ಲೇ ಡಾ. ಬಿ.ಎಸ್.ನಾಗರಾಜರಾವ್ ಅವರ ತೋಟದ ದರ್ಶನಕ್ಕೆ ಪ್ರವೇಶ ಮಾಡಿದಾಗ ತೆಂಗಿನೊಂದಿಗೆ ಸಪೋಟ ಗಮನ ಸೆಳೆಯಿತು. ವಿಚಾರ ಪಡೆಯಲು ವೈದ್ಯರು ಇರಲಿಲ್ಲ. ಕೆಲಸಗಾರನೊಬ್ಬ ಕಂಡ. ಮಾತಾಡಿಸಿದರೆ, 'ಆತನಿಗೆ ಕೇಳಲ್ಲ, ಮಾತು ಬರಲ್ಲ' ಎಂದು ರವಿಕುಮಾರ್ ಪ್ರತಿಕ್ರಿಯಿಸಿದರು. ಡಾ.ನಾಗರಾಜರಾವ್ ಅವರಿಗೆ ಅಪ್ಪ ಮಾಡಿದ ಮೂರೂವರೆ ಎಕರೆ ಅಡಿಕೆ ತೋಟ ಇದೆ. ಒಳ್ಳೆಯ ಉತ್ಪಾದನೆಯನ್ನು ಪಡೆಯುತ್ತಿದ್ದಾರೆ.

ಬಸವಾಪಟ್ಟಣದಿಂದ ವಿವಿಧ ಕಾರಣಗಳಿಗೆ ಹೊರಹೋದ ಪುರುಷ ಸ್ತ್ರೀಯರ ಸಂಖ್ಯೆ ೬೦೦ನ್ನು ದಾಟುತ್ತದೆ. ಕೃಷಿಯಲ್ಲಿ ಅವಲಂಬಿತ ಕುಟುಂಬಗಳು ಈಗ್ಗೆ ೩೦ ವರ್ಷಗಳ ಅವಧಿಯಲ್ಲಿ ಇಳಿದಿವೆ. ಸುಮಾರು ೧೫ ಕುಟುಂಬಗಳು ಕೃಷಿಯನ್ನು ಕೈಬಿಟ್ಟಿವೆ. ಕೃಷಿ ಮತ್ತು ಹೈನುಗಾರಿಕೆ ಪದವೀಧರರು ಯಾರೂ ಕಾಣುತ್ತಿಲ್ಲ. ಇಂಜಿನಿಯರಿಂಗ್ ಪದವೀಧರರು ಸುಮಾರು ೨೦ ಜನ ಮತ್ತು ವೈದ್ಯಕೀಯ ಪದವಿ ಮಾಡಿರುವ ೨೦ ಜನ ಕಾಣಸಿಗುತ್ತಾರೆ. ಇತರೇ ಪದವಿ ಮಾಡಿಕೊಂಡು ಸರ್ಕಾರಿ ಕೆಲಸದಲ್ಲಿರುವವರ ಸಂಖ್ಯೆ ಐವತ್ತನ್ನು ಮೀರುತ್ತದೆ. ಹೊರದೇಶದಲ್ಲಿರುವವರ ಸಂಖ್ಯೆ ೩೫ನ್ನು ದಾಟುತ್ತದೆ.

ಕೃಷಿಯಲ್ಲಿ ಸಂಕೇತಿ ಸ್ತ್ರೀಯರು ಕ್ರಿಯಾತ್ಮಕವಾಗಿ ತೊಡಗಿಸಿಕೊಂಡಿರುವವರ ಸಂಖ್ಯೆ ತೀರಾ ತೀರಾ ಕಮ್ಮಿ. ಇದಕ್ಕೆ ಕಾರಣಗಳು ಹತ್ತಾರು. ಸ್ತ್ರೀಯರಲ್ಲೂ ಕೃಷಿಯಲ್ಲಿ ಆಸಕ್ತಿ ಇಲ್ಲವೆನ್ನಬಹುದು. ಮನೆಯ ಕೆಲಸದ ಜೊತೆಗೆ ದೂರದ ತೋಟಗಳು, ಒರಟು ಸ್ವಭಾವದ ಕಾರ್ಮಿಕರು, ಗೌರವದ ಪ್ರಶ್ನೆ, ಇತ್ಯಾದಿಗಳನ್ನು ಇಲ್ಲಿ ಗುರುತಿಸಬಹುದು.

ಬಸವಾಪಟ್ಟಣವು ರಾಮನಾಥಪುರದಿಂದ ಐದು ಕಿ.ಮೀ. ದೂರದಲ್ಲಿದೆ. ಇಲ್ಲಿಂದ ಮುಂದೆ ಎಂಟು ಕಿ.ಮೀ. ದೂರದಲ್ಲಿ ಕೇರಳಾಪುರ ಇದೆ. ಭತ್ತ ಬೆಳೆಯುವ ಸಂಕೇತಿ ಕೃಷಿಕರ ಸಂಖ್ಯೆ ಕಮ್ಮಿಯಾಗಿದೆ. ಶೇ.೬೦ ಜನ ಮನೆಬಳಕೆಗೆ, ಮಾರಾಟಕ್ಕೆ ಬೆಳೆಯುತ್ತಾರೆ.

ಬೆಳಗ್ಗೆ ಒಂಬತ್ತರಿಂದ ರಾತ್ರಿ ಒಂಬತ್ತೂವರೆಗೆ ಬಸವಾಪಟ್ಟಣದಲ್ಲಿ ನಾವು ಕಳೆದ ಸಮಯದಲ್ಲಿ ಹತ್ತಾರು ಉಲ್ಲೇಖ ಮಾಡುವ ವಿಚಾರಗಳು ಗಮನಕ್ಕೆ ಬಂದವು. ಸಂಜೆಯಿಂದ ಸೊಳ್ಳೆಗಳು ರಕ್ತ ಹೀರುತ್ತಿದ್ದುದ್ದನ್ನು ಅಷ್ಟಾಗಿ ಪರಿಗಣಿಸದೇ ಅವುಗಳಿಗೆ ರಕ್ತದ ಋಣ ಇದೆ ಎಂದು ಹಿಡಿದ ಕೆಲಸವನ್ನು ಮುಗಿಸಿದಾಗ ದೊಡ್ಡ ನೆಮ್ಮದಿ. ಆತಿಥ್ಯ ಮಾಡಿ, ವಿಚಾರ ಪೂರೈಸಿ, ತೋಟ ಅಡ್ಡಾಡಿಸಿದ ನಾಗೇಂದ್ರ ಮತ್ತು ರವಿಕುಮಾರ್ ರವರಿಗೆ ನಾನು ಋಣಿ.



ತೆಂಗಿನೊಂದಿಗೆ ಹಾಕಿರುವ ಸಪೋಟ:ಡಾ.ಬಿ.ಎಸ್.ನಾಗರಾಜರಾವ್ ಅವರ ತೋಟ:ಬಸವಾಪಟ್ಟಣ



ಗೊಬ್ಬರ ಹಾಕಲು ಬಳಸುವ ರಬ್ಬರ್ ಟೈರಿನ ಮಂಕರಿಗಳು:ಬಸವಾಪಟ್ಟಣ

ಮುಗಿಸುವ ಮುನ್ನ:

ಬಸವಾಪಟ್ಟಣದಲ್ಲಿ ಬೇಸಾಯಸ್ಥರ ಬದುಕು ಈಚಿನ ದಿನಗಳಲ್ಲಿ ಬದಲಾಗಿದೆ. ಜೀವನ ಕ್ರಮಗಳು ಮಾರ್ಪಾಡಾಗಿವೆ. ಕಷ್ಟದ ದಿನಗಳು ಈಗಿನ ಯುವಕರಿಗೆ ಬೇಡವಾಗಿವೆ. ಬೆಳವಣಿಗೆಯ ಹಾದಿಯಲ್ಲಿ ಆರ್ಥಿಕ ತೊಂದರೆಗಳು ಎದುರಾಗುತ್ತಿವೆ. ಆಧುನಿಕತೆಯ ಸೋಂಕಿನಲ್ಲಿ ಗೌರವಕ್ಕಾಗಿ ನಾಜೂಕನ್ನು ಆಮಂತ್ರಿಸಿಕೊಂಡಿದ್ದಾರೆ. ವಿದ್ಯಾಭ್ಯಾಸ ಕಲಿತ ಜನ ಕೈಮುಟ್ಟಿ ಕೆಲಸ ಮಾಡುತ್ತಿಲ್ಲ. ವಿದ್ಯುತ್, ಗೊಬ್ಬರ, ಮಾರಾಟ ಇತ್ಯಾದಿಗಳಿಗೆಲ್ಲಾ ಅವಲಂಬನೆ. ಕೆಲಸಗಳು ಕಾರ್ಮಿಕರಿಲ್ಲದೇ ನಡೆಯುವಂತಿಲ್ಲ. ಈ ಕಾರಣಗಳಿಂದ ತೊಂದರೆಗಳು ಎದುರಾಗುತ್ತಿವೆ. ಹಣಕಾಸಿನ ಮುಗ್ಗಟ್ಟು ಕಾಡುತ್ತಿದೆ. ಆದರೆ ಅನ್ಯಮಾರ್ಗವಿಲ್ಲದೇ ಬೇಸಾಯದಲ್ಲಿ ಮುಂದುವರೆಯುವ ಅನಿವಾರ್ಯತೆ ಇಲ್ಲಿಯ ಜನರಿಗಿದೆ.

* ಕೃಷಿ ಪುಸ್ತಕ, ಕೃಷಿ ಪತ್ರಿಕೆ, ಮಾಧ್ಯಮದಲ್ಲಿ ಪ್ರಸಾರವಾಗುವ ಕೃಷಿ ವಿಚಾರಗಳನ್ನು ತಿಳಿದು ಬೇಸಾಯದಲ್ಲಿ ಬದಲಾಗುವ ಮಾರ್ಗವು ಇಲ್ಲಿ ಕಾಣಲಿಲ್ಲ. ರಾಜಕೀಯ, ಧರ್ಮ, ಸಿನಿಮಾ, ಇತ್ಯಾದಿಗಳ ಆಗುಹೋಗುಗಳ ಬಗ್ಗೆ ಆಸಕ್ತಿ ಇದೆ. ಟಿ.ವಿ. ಧಾರಾವಾಹಿಗಳಿಗೆ ಮಹಿಳೆಯರು, ಪುರುಷರು ಒಂದು ರೀತಿ ದಾಸರಾಗಿದ್ದಾರೆ.

* ಅರುವತ್ತು ವರ್ಷ ದಾಟಿದ ಕೃಷಿಕರು ಬೆಳೆದು ಬಂದ ಮಾರ್ಗ, ಅವರ ಸರಳ ಜೀವನ ಕ್ರಮಗಳು, ಆಗಿನ ದುಡಿಮೆಯ ದಿನಗಳು ಇವೆಲ್ಲಾ ಇಂದಿನ ಯುವಕರಿಗೆ ಮಾದರಿಯಾಗುತ್ತಿಲ್ಲ.

* ಆಚರಣೆ, ಸಭೆ-ಸಮಾರಂಭಗಳಲ್ಲಿ ಇತರೇ ಉಪಜಾತಿಯ ಜನಗಳೊಂದಿಗೆ ಬೆರೆಯುವುದು, ಮತ್ತು ಆಂತರಿಕವಾಗಿ ಸಾಮರಸ್ಯದಿಂದ ಇರುವುದು ಶುಭ ಲಕ್ಷಣವೇ!

* ತೋಟಗಳಲ್ಲಿ ಎರೆಹುಳುಗಳು ಹೆಚ್ಚಾದರೆ ಎಲೆ ಬಳ್ಳಿ ಹಂಬು ಹಾಳಾಗುತ್ತದೆ ಎಂಬುದಕ್ಕೆ ಕೊಡುವ ಕಾರಣಗಳು ಒಂದು ರೀತಿಯಲ್ಲಿ ಸರಿ ಎನಿಸುತ್ತದೆ. ಬಳ್ಳಿಯ ಬುಡದಲ್ಲಿ ಎರೆಹುಳುಗಳು ಅಡ್ಡಾಡಿ ಸಡಿಲಗೊಳಿಸಿ ಬೇರು ಹಾಳು ಮಾಡುತ್ತವೆ, ಬಳ್ಳಿ ಬಹಳ ದಿನ ಬಾಳಿಕೆ ಬರುವುದಿಲ್ಲ ಎಂಬುದನ್ನು ಒಪ್ಪಬೇಕು.



75) ಸಂತೆಗೆ ಹೊರಟ ವಿಳ್ಳೇದೆಲೆ ಪಿಂಡಿಗಳು:ಬಸವಾಪಟ್ಟಣ

* ಕಾಂಪೋಸ್ಟ್ ಗೊಬ್ಬರದ ತಯಾರಿಕೆ ಕುರಿತು ಆಸಕ್ತಿ, ತೊಡಗಿಸಿಕೊಳ್ಳುವಿಕೆ ಸಾಲದು ಎನಿಸಿತು. ಸಸ್ಯ-ತ್ಯಾಜ್ಯದ ಸಮರ್ಥ ಸದ್ಬಳಕೆಯಲ್ಲಿ ಸರಿಯಾದ ಜ್ಞಾನ ಇಲ್ಲವೆನ್ನಿಸಿತು. ತೆಂಗಿನ ಗರಿ, ಅಡಿಕೆಯ ಗರಿ, ಹುಣಿಸೆ



ಸಂಕೇತಿ ಹೆಂಗಸರು ಹೆಣೆದ ಚಾಪೆ:ಬಸವಾಪಟ್ಟಣ

ಮರದಡಿ ಇರುವ ಕಸಕಡ್ಡಿ, ಹೊಂಗೆ ಮರದ ತರಗು ಹಾಗೂ ಅದರ ಕಾಯಿ, ಇತ್ಯಾದಿಗಳನ್ನು ಸರಿಯಾಗಿ ಕರಗಿಸಿ ಗೊಬ್ಬರ ಮಾಡಿಕೊಳ್ಳುವಲ್ಲಿ ಗಮನ ಕೊಟ್ಟಿಲ್ಲ.

* ದನಕರುಗಳ ಸಾಕಾಣಿಕೆಯನ್ನು ನಿರ್ಲಕ್ಷ್ಯ ಮಾಡಿರುವುದರಿಂದ ಮುಂದಿನ ದಿನಗಳಲ್ಲಿ ಹೈನು ಪದಾರ್ಥಗಳು ಹಾಗೂ ಗೊಬ್ಬರಕ್ಕೆ ಅತಿಯಾದ ಅವಲಂಬನೆ ಸಹಜವಾಗಿ ಆಗಲಿದೆ.

* ತೆಂಗಿನಲ್ಲಿ ಸಪೋಟ ಹಾಕಿರುವುದರಿಂದ ಸದ್ಯಕ್ಕೆ ತೊಂದರೆ ಕಾಣಿಸದಿದ್ದರೂ ಬರುವ ವರ್ಷಗಳಲ್ಲಿ ಸಪೋಟದ ಉತ್ಪಾದನೆಗೆ ಅಡ್ಡಿ ಆಗಲಿದೆ. ತೆಂಗು ಮತ್ತು ಸಪೋಟದ ಪೋಷಣೆ ಕ್ರಮಗಳು ಸಾಲವು. ತೆಂಗು + ಸಪೋಟ ಹಾಕಿರುವ ಕಡೆ ಮಳೆ ನೀರಿನ ಸಂರಕ್ಷಣೆಯ ಜೊತೆಗೆ ಮರಗಳ ಬುಡದಲ್ಲಿ ತನುವು ನಿಲ್ಲಲು ಹೊದಿಕೆ ಕೊಡುವುದು ಒಳ್ಳೆಯದಾದೀತು.

* ಕೃಷಿಯಲ್ಲಿ ಮಹಿಳೆಯರೂ ತಕ್ಕಷ್ಟು ಪಾಲ್ಗೊಂಡರೆ ಇರುವ/ಬರುವ ಸಮಸ್ಯೆಗಳನ್ನು ತಗ್ಗಿಸಲು ಕೆಲಸ ಮಾಡಿದಂತಾಗುತ್ತದೆ.

ದೂರವಾಣಿ ಸಂಖ್ಯೆ:ಬಿ.ಎನ್.ನಾಗೇಂದ್ರ : 234654 ಮತ್ತು ಬಿ.ಕೆ.ಕೇಶವಮೂರ್ತಿ: 234107

ಸಂದರ್ಶನ :14-05-2003



ಜಾನಪದ ಸಂಗ್ರಹಕ್ಕೆ ತೆರಳಲಿರುವ ಪೂರ್ವಸಾಮಗ್ರಿ:ಬಸವಾಪಟ್ಟಣ

೮) ಮತ್ತಷ್ಟು ಮಾಹಿತಿ



ಕಟ್ಟಿಗೆಯ ಸೇರು, ಬಳ್ಳ:ಈಗ ಬಳಕೆಯಲ್ಲಿ ಇಲ್ಲ:ಬಸವಾಪಟ್ಟಣ


ಹಾಸನ ಜಿಲ್ಲೆಯಲ್ಲಿ ಬಸವಾಪಟ್ಟಣದಲ್ಲಿ ಸಂಕೇತಿ ಕುಟುಂಬಗಳು ಗರಿಷ್ಠ ಸಂಖ್ಯೆಯಲ್ಲಿವೆ. ರಾಜ್ಯದಲ್ಲಿ ಮತ್ತೂರು ಬಿಟ್ಟರೆ ಬಸವಾಪಟ್ಟಣವೇ ಎರಡನೇ ಸ್ಥಾನವನ್ನು ಪಡೆಯುತ್ತದೆ ಎಂದು ಹೇಳಲಾಗುತ್ತಿದೆ. ಕೃಷಿಯಲ್ಲಿ ಮುಂದುವರೆಯುತ್ತಿರುವ ಕುಟುಂಬಗಳು ಈಗ್ಗೆ ೩೦ ವರ್ಷಗಳಲ್ಲಿ ಕಮ್ಮಿಯಾಗಿವೆ. ಇಲ್ಲೇ ಹುಟ್ಟಿ, ಬೆಳೆದು, ಪ್ರೌಢಶಾಲೆಯವರೆಗೆ ವ್ಯಾಸಂಗ ಮಾಡಿ ಉನ್ನತ ವ್ಯಾಸಂಗ ಗಳಿಸಿದ ಡಾ.ಪ್ರಣತಾರ್ತಿ ಹರನ್ ಅವರೊಂದಿಗೆ ಮತ್ತೊಮ್ಮೆ ೧೫.೫.೦೩ ರಂದು ಬಸವಾಪಟ್ಟಣದ ಮತ್ತಷ್ಟು ವಿಚಾರಗಳನ್ನು ಪಡೆಯಲು ಹೊರಟೆ. ರಾಮಮಂದಿರದ ಎದುರಿನ ಮನೆಯಲ್ಲಿ ೮೩ ವರ್ಷ ವಯಸ್ಸಿನ ಹೆಚ್.ಎಸ್. ಕೃಷ್ಣಮೂರ್ತಿ ಅವರನ್ನು ಮಾತಾಡಿಸಲು ಹೋದೆವು. ನೀಳದೇಹದ ಕೃಷ್ಣಮೂರ್ತಿಯವರು ಸುಮಾರು ಹತ್ತು ವರ್ಷಗಳಿಂದ ಅಸ್ತಮಾದಿಂದ ನರಳುತ್ತಿದ್ದಾರೆ ಎಂದು ಕೇಳಿ ಬಂತು. ದೇಹವು ಸಣಕಲಾಗಿ ಕಾಣಿಸುತ್ತಿತ್ತು. ಆದರೆ ಗಟ್ಟಿ ಅನುಭವಗಳು ಒಂದೊಂದಾಗಿ ಹೊರಬರುತ್ತಿದ್ದವು.

'ವೀಳ್ಯೇದೆಲೆಯನ್ನು ನಾವೇ ಹೊಳೇನರಸೀಪುರಕ್ಕೆ ಮಾರಾಟ ಮಾಡಲಿಕ್ಕೆ ತಗೊಂಡು ಹೋಗ್ತಿದ್ದಿವಿ. ಅಡಿಕೆಗಿಂತ ವೀಳ್ಯೆಯಲ್ಲಿ ಒಳ್ಳೆ ದುಡ್ಡು ಮಾಡಿದಿವಿ. ಅಡಿಕೆಯದು ವರ್ಷಕ್ಕೊಮ್ಮೆ ದುಡ್ಡು ಬರುತ್ತೆ. ಆದ್ರೆ ವೀಳ್ಯೆದೆಲೆಯಿಂದ ಮೂರು ತಿಂಗಳಿಗೊಮ್ಮೆ ಸಿಗುತ್ತೆ. ನಮ್ಮ ಕಾಲದಲ್ಲಿ ಮೂವತ್ತು ರೂಪಾಯಿಗೆ ಒಂದು ಹೇರು. ಅಡಿಕೆಯದು ಮಣಕ್ಕೆ ೩೦-೪೦ ರೂಪಾಯಿ ಇತ್ತು. ಈಗ ಕ್ವಿಂಟಾಲ್ ಲೆಕ್ಕ. ಒಂದು ಕ್ವಿಂಟಾಲ್‌ಗೆ ೧೨ ಮಣ. ಈಗ ನಮ್ಮ ಸುತ್ತಮುತ್ತ ನೀರಿನ ಒತ್ತಡ ಹೆಚ್ಚಾಗಿದ್ದರಿಂದ ಶೀತಾಂಶ ಇದೆ. ಇದರಿಂದ ಬಳ್ಳಿ ಉಳೀತಾ ಇಲ್ಲ. ನಮ್ಮ ಕಾಲದಲ್ಲಿ ಕೈಯಿಂದ ನೀರು ಹಾಕಿ ಬೆಳಿಸ್ತಾ ಇದ್ದಿವಿ. ಒಂದೊಂದು ಬಳ್ಳಿ ೧೮ ಹಂತ (೨೭ ಅಡಿ) ದವರೆಗೆ ಬೆಳೀತಾ ಇತ್ತು' ಎಂದು ಕೃಷ್ಣಮೂರ್ತಿಯವರು ಪ್ರತಿಕ್ರಿಯಿಸಿದರು.

ಬಳಪದ ಬಳಕೆ: ಹೆಚ್.ಎಸ್.ಕೃಷ್ಣಮೂರ್ತಿಯವರ ಮನೆಯ ಪಕ್ಕದಲ್ಲಿ ಹೆಚ್.ಎನ್.ನಾಗಪ್ಪನವರ ಮನೆ ಇದೆ. ಇವರಿಗೂ ವಯಸ್ಸು ೮೩ ವರ್ಷ. ಆದರೆ ಕೃಷ್ಣಮೂರ್ತಿಯವರಂತೆ ಕೃಶವಾಗಿ ಕಾಣಲಿಲ್ಲ. ಕೈಯಲ್ಲಿ, ಕಾಲಲ್ಲಿ ಆರಾರು ಬೆರಳುಗಳು ಎದ್ದು ಕಾಣುತ್ತಿದ್ದವು. 'ನನ್ನ ಮಕ್ಕಳು, ಮೊಮ್ಮಕ್ಕಳಿಗೂ ಆರಾರು ಬೆರಳುಗಳಿವೆ' ಎಂದು ಹೇಳಿದ ನಾಗಪ್ಪನವರು ಹಿಂದಿನ ದಿನಗಳ ನೆನಪುಗಳನ್ನು ಮಾಡಿಕೊಂಡರು. 'ಬಳಪದ ಕಲ್ಲಿನ ಬಾನಿ, ಕಲ್ಲುಬಾಂಡಲಿ, ಕಲ್ಲುಮಡಕೆ, ಗೇರು ಕುಕ್ಕೆ ಬಗ್ಗೆ ಹೇಳುವಂತೆ ಕೇಳಿಕೊಂಡಿವಿ. ನಾವು ಸಣ್ಣವರಿದ್ದಾಗ




ಬುಟ್ಟಿಗಳು:ಬಸವಾಪಟ್ಟಣ



ಜರಸಿ:ಬಸವಾಪಟ್ಟಣ

ಬಳಪದ ಕಲ್ಲಿನ ಮಡಕೆ, ಬಾಂಡಲಿಗಳನ್ನು ಬಳಸಿ ಅಡುಗೆ ಮಾಡ್ತಾ ಇದ್ದರು. ರುಚಿಯಾಗಿರ್‍ತಿತ್ತು. ಬೇಗ ಅಡುಗೆ ಕೆಡ್ತಿರ್‍ಲಿಲ್ಲ. ಪಡ್ಡು ಮಾಡ್ಲಿಕ್ಕೆ ಬಳಪದ ಕಲ್ಲನ್ನು ಬಳಸ್ತಾ ಇದ್ದರು. ಬಳಪದ ಈ ಸಾಮಾಗ್ರಿ ಗಳು ಬಿಸಿಯಾಗೋದೂ ತಡ, ತಣ್ಣಾಗಾಗೋದೂ ತಡ. ಅಡುಗೆಯಾದ ಮೇಲೆ ಮಸಿ ಅಂಟಲ್ಲ. ತಿಕ್ಕಕ್ಕೆ ಹುಣಿಸೆಹಣ್ಣು ಬೇಕಾಗಿಲ್ಲ. ಜುಂಗಿನಿಂದ ಉಜ್ಜಿದರೆ ಸಾಕು' ಎಂದು ನಾಗಪ್ಪನವರು ಹೇಳಿದರು. ಗೇರುಕುಕ್ಕೆ ಈಗಲೂ ಬಸವಾಪಟ್ಟಣದ ಮನೆಗಳಲ್ಲಿ ಬಳಕೆಯಲ್ಲಿರುವುದು ಕಾಣುತ್ತದೆ. 'ಬಿದಿರಿನ ಕುಕ್ಕೆಗೆ ಗೇರೆಣ್ಣೆಯನ್ನು ಬಳಪದ ಕಲ್ಲಿನ ನುಣುಪಾದ ಪುಡಿಯೊಂದಿಗೆ ಬೆರಸಿ ಕೈಗೆ ಕೈಎಣ್ಣೆಯನ್ನು ಹಚ್ಚಿ ಕೊಂಡು ಒಳ-ಹೊರಭಾಗಕ್ಕೆ ಮೆತ್ತಿ ಮೃದು ಕಲ್ಲಿನಿಂದ ಕುಕ್ಕೆಯ ಸಂದುಗಳಲ್ಲಿ ಅದು ಸೇರುವಂತೆ ಒತ್ತುತ್ತೀವಿ. ನಮ್ಮ ತಾತನ ಕಾಲದ್ದು ಈಗಲೂ ನಮ್ಮಲ್ಲಿ ಬಳಕೆಯಲ್ಲಿದೆ ನೋಡಿ' ಎಂದು ನಾಗಪ್ಪ ಮತ್ತು ಅವರ ಮಗ ತೋರಿಸಿದರು. ಮನೆಯಲ್ಲಿದ್ದ, ಕಟ್ಟಿಗೆಯಿಂದ ತಯಾರಿಸಿದ್ದ ಸೇರು ಮತ್ತು ಬಳ್ಳಗಳನ್ನು ತೋರಿಸಿ 'ಇವುಗಳನ್ನು ಪೀಪಿ ಮರದಿಂದ ತಯಾರಿಸ್ತಾರೆ. ಒಂದೇ ಕಟ್ಟಿಗೆಯಲ್ಲಿ ಕೊರೆದು ತಯಾರಿಸ್ತಾರೆ' ಎಂದರು. ಗೇರುಕುಕ್ಕೆಯನ್ನು ತಣ್ಣೀರು ಹಾಕಲಿಕ್ಕೆ ಬಳಸ್ತಾರೆ, ಬಿಸಿ ನೀರು ಹಾಕಿದ್ರೆ ಹಾಳಾಗುತ್ತೆ, ಎಣ್ಣೆ ಅಂಶ ಬಿಸಿ ನೀರಿನೊಂದಿಗೆ ಬೆರೆತು, ಕುಕ್ಕೆಯ ಬಾಳಿಕೆ ಕಮ್ಮಿಯಾಗುತ್ತೆ ಎಂಬುದು ಇವರ ಅನುಭವ.

ಕಾಫಿಪ್ರಿಯರು!: ಬಸವಾಪಟ್ಟಣದಲ್ಲಿ ಕೆಲವರು ಕಾಫಿ ಗಿಡಗಳನ್ನು ತೋಟದಲ್ಲಿ ಹಾಕಿ ಪ್ರಯೋಗ ಮಾಡಿದರು. ಬೆಲೆ ಇಳಿದ ಮೇಲೆ ಇದರ ಬಗ್ಗೆ ಆಸಕ್ತಿಯು ಕಮ್ಮಿಯಾಯಿತು. ಹಾಕಿದವರು ಸಸಿಗಳನ್ನು ಉಳಿಸಿಕೊಳ್ಳಲಿಲ್ಲ. ಇಲ್ಲಿಯ ಸಂಕೇತಿಗಳಿಗೆ ಕಾಫಿ ಬಹು ಪ್ರಿಯ. ದಿನಕ್ಕೆ ಏನಿಲ್ಲವೆಂದರೂ ಐದರಿಂದ ಹತ್ತು ಸಾರಿ ಕಾಫಿಯನ್ನು ಕುಡಿಯುವುದಿದೆ. ಬೆಳಿಗ್ಗೆ ಆರಕ್ಕೆ ಶುರುವಾದದ್ದು ರಾತ್ರಿ ೮.೩೦ರವರೆಗೆ ಇರುತ್ತದೆ. ಚಿಕೋರಿ ಬೆರೆಸಿದ, ಚಿಕೋರಿ ಇಲ್ಲದ ಕಾಫಿಯನ್ನು ಜನ ಕುಡಿಯುತ್ತಾರೆ. ಒಂದೊಂದು ಮನೆಯಲ್ಲಿ ವಾರಕ್ಕೆ ೨೫೦-೫೦೦ ಗ್ರಾಂ ಕಾಫಿ ಪುಡಿ ಬಳಕೆಯಾಗುತ್ತದೆ. ಫಿಲ್ಟರ್‌ಗಳನ್ನು ಬಳಸುವುದಿದೆ. ಕೆಲವೊಬ್ಬರು ಈಗಲೂ ಕಾಫಿ ಪುಡಿ ಸೋಸಲು ಬಟ್ಟೆ ಬಳಸುತ್ತಾರೆ. 'ನಮಗೆ ಊಟ ತಿಂಡಿಗಿಂತ ಕಾಫಿ ಬೇಕೇ ಬೇಕು. ಊಟ-ತಿಂಡಿ ಇಲ್ದೇ ಮೂರ್‍ನಾಲ್ಕು ಗಂಟೆ ಕಳೀಬಹುದು. ಆದ್ರೆ ಕಾಫಿ ಇಲ್ಲದಿದ್ರೆ ನಿತ್ರಾಣವಾದಂಗೆ ಆಗುತ್ತೆ. ದಿನಕ್ಕೆ ನಾವು ಎಷ್ಟು ಕಾಫಿ ಸೇವನೆ ಮಾಡ್ತಾ ಇದ್ರೂ ಏನೂ ತೊಂದ್ರೆ ಕಾಣಿಸಿಲ್ಲ. ನಮ್ಮಪ್ಪ ಕಾಫಿ, ತಂಬಾಕಿನೊಂದಿಗೆ ತಾಂಬೂಲವನ್ನೂ ಸಣ್ಣವರಿದ್ದಾಗಲಿಂದಲೂ ಸೇವಿಸ್ತಾ ಇದ್ದರು. ಅವರಿಗೆ ಏನೇನೂ ಆಗ್ಲಿಲ್ಲ, ೮೮ನೇ ವಯಸ್ಸಿನಲ್ಲಿ ತೀರಿಕೊಂಡರು' ಎಂದು ಬಿ.ಎನ್.ನಾಗೇಂದ್ರ ಹೇಳುತ್ತಾರೆ. ಊಟ, ತಿಂಡಿಯಾದ ಮೇಲೆ ಇಲ್ಲಿಯ ಜನರಿಗೆ ಕಾಫಿ ಸೇವನೆ ಮಾಡದಿದ್ದರೆ ಸಮಾಧಾನವೇ ಆಗಲ್ಲ.



ಬಹುಕಾಲ ಬಾಳುವ ಗೇರುಕುಕ್ಕೆ:ಬಸವಾಪಟ್ಟಣ

ನಿವೃತ್ತ ಶಿಕ್ಷಕರಾದ ವೆಂಕಟಸುಬ್ಬಯ್ಯನವರ ಮನೆಗೆ ಹೋದಾಗ ಅವರು



ರಸಗೊಬ್ಬರದ ವ್ಯಾಪಾರವನ್ನು ೧೯೭೬ರಿಂದ ಹಳ್ಳಿಗೆ ತಂದ ಬಿ.ಕೆ.ರಾಮಚಂದ್ರ:ಬಸವಾಪಟ್ಟಣ

ತಾಂಬೂಲವನ್ನು ಮೆಲ್ಲುತ್ತಿದ್ದರು. ಪತ್ನಿ, ಮಕ್ಕಳು ಮನೆಯಲ್ಲಿದ್ದರು. ೧೯೯೬ರಲ್ಲಿ ನಿವೃತ್ತರಾದ ವೆಂಕಟಸುಬ್ಬಯ್ಯನವರು ಒಂದೇ ಜಾಗದಲ್ಲಿ ೩೫ ವರ್ಷಗಳ ಕಾಲ ಶಿಕ್ಷಕ ವೃತ್ತಿ ಮಾಡಿದವರು. 'ನಾನು ದಿನಕ್ಕೆ ೧೦ ಸಾರಿ ತಾಂಬೂಲ ಹಾಕ್ತೀನಿ. ನಶ್ಯಾನೂ ಹಾಕ್ತೀನಿ. ಒಂದು ತಿಂಗಳಿಗೆ ನನಗೇ ಒಂದು ಕಿ.ಗ್ರಾಂ. ಅಡಿಕೆ ಬೇಕು, ಮೂರು ಕಟ್ಟು ಎಲೆ ಬೇಕು. ತಂಬಾಕು ಹಾಕಿಕೊಳ್ತೀನಿ. ತಾಂಬೂಲವನ್ನು ನುಂಗಲ್ಲ, ಉಗೀತೀನಿ' ಎನ್ನುವ ಇವರಿಗೆ ತೋಟ ಇಲ್ಲ, ಜಮೀನು ಮಾಡಿಲ್ಲ. ಆದರೂ ಹಿತ್ತಲಲ್ಲಿ ಹಾಲವಾಣ ಮರಗಳಿಗೆ ಆರೇಳು ವೀಳ್ಯೆದೆಲೆ ಹಂಬನ್ನು ಹಬ್ಬಿಸಿದ್ದಾರೆ. ಕರಿಬೇವು, ತೆಂಗು, ಕನಕಾಂಬರ, ದಾಸವಾಳ ಇತ್ಯಾದಿ ಗಿಡಮರಗಳನ್ನು ಬೆಳೆಸಿದ್ದಾರೆ. ಮಾವಿನ ಹಣ್ಣಿನ ರಸವನ್ನು ಸೇವಿಸಿ ಮುಂದೆ ನಡೆದು ಬಿ.ಕೆ. ರಾಮಚಂದ್ರರವರ ಮನೆ ತಲುಪಿದೆವು. ರಾಸಾಯನಿಕ ಗೊಬ್ಬರ, ಔಷಧಿ, ಬೀಜ, ಕಬ್ಬಿಣದ ವ್ಯಾಪಾರವನ್ನು ಮಾಡುತ್ತಿರುವ ಇವರು ೧೯೭೬ರಿಂದ ಈ ವೃತ್ತಿಯನ್ನು ನಡೆಸಿಕೊಂಡು ಬಂದಿದ್ದಾರೆ. ಅವರ ಏಕಮಾತ್ರ ಪುತ್ರ ರಾಜೀವ್ ಅವರನ್ನೂ, ಸೊಸೆಯನ್ನೂ ಪರಿಚಯಿಸಿಕೊಂಡು ವಿವರಗಳಿಗಾಗಿ ಚರ್ಚೆ ಶುರು ಮಾಡಿದೆವು.

ಭತ್ತದಲ್ಲಿ ದಾಖಲೆ ಇಳುವರಿ: 'ನನ್ನದು ಎರಡು ಎಕರೆ ವೀಳ್ಯೆ ಇದೆ. ಭತ್ತದ ಗದ್ದೆಯೂ ಇದೆ. ನಾವೆಲ್ಲಾ ಕೈಮುಟ್ಟಿ ಮಾಡಿದವರು. ಒಂದೇ ದಿನದಲ್ಲಿ ನಾನು ಮತ್ತು ನನ್ನ ತಮ್ಮ ಎರಡು ಎಕರೆ ವೀಳ್ಯೆ ತೋಟಕ್ಕೆ ಏತದಿಂದ ನೀರು ಕೊಟ್ಟಿವಿ. ಆಳುಗಳ ಮೇಲೆ ಅವಲಂಬನೆ ಆಗ್ತಿರ್ಲಿಲ್ಲ' ಎನ್ನುವ ರಾಮಚಂದ್ರ ಅವರು ವೀಳ್ಯೇದೆಲೆಯಲ್ಲಿ ಲಕ್ಷಾಂತರ ರೂಪಾಯಿ ಹಣವನ್ನು ವರ್ಷವೂ ಪಡೆದಿದ್ದಾರೆ. ಅವರು ಹೇಳುವಂತೆ 'ತೆಕ್ಕೆ ಬಿಟ್ಟಿರುವ ವರ್ಷದಲ್ಲಿ ಅಡಿಕೆ ಮತ್ತು ವೀಳ್ಯೆದೆಲೆಯಲ್ಲೂ ಇಳುವರಿ ಕಮ್ಮಿಯಾಗುತ್ತೆ. ಎರಡನೇ ವರ್ಷದಲ್ಲಿ ಒಳ್ಳೆ ಉತ್ಪನ್ನ ಸಿಗುತ್ತೆ. ರಾಸಾಯನಿಕ ಗೊಬ್ಬರ ಇಲ್ದೇ ನಮ್ಮಪ್ಪನ ಕಾಲದಲ್ಲಿ ಸಗಣಿಗೊಬ್ಬರ ಹಾಕಿ ಒಂದು ಎಕರೆ ನಾಲ್ಕು ಗುಂಟೆ ವಿಸ್ತೀರ್ಣದಲ್ಲಿ ೧೯೭೨ರಲ್ಲಿ ರಾಜಮುಡಿ ತಳಿಯಲ್ಲಿ ೨೫ ಖಂಡುಗ (೧ ಖಂಡುಗ = ೧೬೦ ಸೇರು), ಅಂದ್ರೆ ೩೩ ಕ್ವಿಂಟಾಲ್ ಭತ್ತವನ್ನು ಪಡೆದಿವಿ. ಇದೇ ರೀತಿ ಇಳುವರಿ ೧೯೮೦ರವರೆಗೆ ಬಂತು. ಹುಲ್ಲು ೧೦ ಗಾಡಿ ಸಿಗುತ್ತಿತ್ತು. ಈಗ ಸಗಣಿಗೊಬ್ಬರ ಇಲ್ದೇ ಬರೀ ರಾಸಾಯನಿಕ ಗೊಬ್ಬರ ಹಾಕಿ ಭತ್ತ ಬೆಳೀತಾರೆ. ಇಳುವರಿ ಕಮ್ಮಿಯಾಗಿದೆ. ಮನುಷ್ಯರಿಗೆ ಶಕ್ತಿ ಕುಗ್ಗಿದೆ. ಐವತ್ತು ಕೆಜಿ ಮೂಟೇನ ಎತ್ಲಿಕ್ಕೆ ಜನಕ್ಕೆ ಆಗಲ್ಲ. ಭತ್ತದಲ್ಲಿ ಇಳುವರಿ ೨೦ ಕ್ವಿಂಟಾಲ್ ಮೀರಲ್ಲ' ಎನ್ನುತ್ತಾರೆ.

ಏರಿದ ಗೊಬ್ಬರದ ಬೆಲೆ: ಅಡಿಕೆ ತುಡಿಕೆಯಿಂದ ಗೊಬ್ಬರ ವ್ಯಾಪಾರಕ್ಕೆ ಪರಿವರ್ತನೆಯಾದ ರಾಮಚಂದ್ರರವರು 'ನನ್ನ ಕಸಬಿನಲ್ಲಿ ಬದಲಾವಣೆ ಇರಲಿ ಎಂದು ತಮ್ಮಂದಿರಿಗೆ ಅಡಿಕೆ ವ್ಯಾಪಾರ ಬಿಟ್ಟೆ. ನಮ್ಮಪ್ಪ ಸಮ್ಮತಿ ತೋರಿಸಿದರು. ನಾನು ೧೯೭೬ರಲ್ಲಿ ಗೊಬ್ಬರ ವ್ಯಾಪಾರಕ್ಕೆ ಕೈಹಾಕಿದಾಗ ಅಪ್ಪನಿಂದ ೫೦ ರೂಪಾಯಿ ತಗೊಂಡೆ, ಸ್ವಾಭಿಮಾನದಿಂದ ಹೋಗೋಣವೆಂದು ಮನೆಯಿಂದ ದುಡ್ಡು ತಗೊಳ್ಳಿಲ್ಲ. ೯,೦೦೦ ರೂಪಾಯಿ ಸಾಲ ಮಾಡಿದೆ. ಆಗ ೧೦ ರೂಪಾಯಿಗೆ ಲೈಸೆನ್ಸ್ ಕೊಟ್ರು. ಕಸಬಿನಲ್ಲಿ ನೋವು ನಲಿವು ಇದೆ. ನಮ್ಮದು ಅಡಿಕೆ ವ್ಯಾಪಾರ ೧೯೮೮ರಲ್ಲಿ ನಿಂತು ಹೋಯಿತು. ಅಡಿಕೆ ತುಡಿಕೆ ಇರುವಾಗ ನೂರು ಜನ ಕೆಲ್ಸ ಮಾಡ್ತಾ ಇದ್ದರು. ನಮ್ಮಪ್ಪ ಎಲ್ಲದನ್ನೂ ನಿಭಾಯಿಸ್ತಾ ಇದ್ದರು' ಎನ್ನುವ ರಾಮಚಂದ್ರ ಅವರು 'ಹಿಂದೆ ಜನ ಜ್ಞಾನದಾಹಿಗಳಾಗಿದ್ದರು. ಈಗ ಹಣದಾಹ ಹೆಚ್ಚಾಗಿದೆ. ಇದರಿಂದಲೇ ನಾವು ನೆಮ್ಮದಿಯಾಗಿಲ್ಲ' ಎನ್ನುತ್ತಾರೆ. '೧೯೭೬ರಲ್ಲಿ ಯೂರಿಯಾ ಒಂದು ಚೀಲಕ್ಕೆ ೫೦ ರೂಪಾಯಿ ಇತ್ತು. ಈಗ ೨೫೧ ರೂಪಾಯಿ ಆಗಿದೆ. ೧೯೮೦ರಲ್ಲಿ ಡಿಎಪಿ ೫೦ ಕೆಜಿಗೆ ಸುಮಾರು ೧೬೫ ರೂಪಾಯಿ ಇತ್ತು. ಈಗ ಇದರ ಬೆಲೆ ೪೮೬ ರೂಪಾಯಿ. ಇದರಂತೆ ೧೭:೧೭:೧೭ ರ ಬೆಲೆ ೭೦ರೂಪಾಯಿ ಇದ್ದದ್ದು ೪೨೧ ರೂಪಾಯಿ ಆಗಿದೆ, ೧೯:೧೯:೧೯ರ ಧಾರಣೆ ೭೭ ರೂಪಾಯಿ ಇದ್ದದ್ದು ಇಂದು ೪೩೧ ರೂಪಾಯಿಗೆ ಬಂದಿದೆ ಎಂದು ವಿವರಣೆ ನೀಡುತ್ತಾರೆ. ೨೦೦೨ರ ಮುಂಗಾರು ಮಳೆ ಕಮ್ಮಿಯಾಗಿದ್ದರಿಂದ ಗೊಬ್ಬರದ ಮಾರಾಟದಲ್ಲಿ ಇಳಿಕೆಯಾಯಿತು ಎಂದೂ ಅವರು ಉಲ್ಲೇಖಿಸುತ್ತಾರೆ.

ಜನಸಂಘದಲ್ಲಿ ಸಕ್ರಿಯವಾಗಿ ಕೆಲಸ ಮಾಡಿ ರಾಜಕೀಯಕ್ಕೂ ಪ್ರವೇಶ ಮಾಡಿದ ರಾಮಚಂದ್ರರವರು ಈಗ ರಾಜಕೀಯ ಬೇಡವೆಂದು

ಸಲಾಮು ಹೊಡೆದಿದ್ದಾರೆ. ಮಗ ರಾಜೀವ್ ಬಿ.ಬಿ.ಎಂ. ಮಾಡಿದ್ದಾರೆ. ಸೊಸೆ ಕೌಶಿಕದವರು. ರಾಮಚಂದ್ರರವರಿಗೆ ೩೦ ವರ್ಷ ವಯಸ್ಸಾಗಿದ್ದಾಗ ಪತ್ನಿ ತೀರಿಕೊಂಡರು. ಮಗ ರಾಜೀವ್ ಆಗ ಒಂದು ತಿಂಗಳ ಮಗು. ಅಜ್ಜಿ ಮಗುವನ್ನು ಬೆಳೆಸಿದರು. ತಮ್ಮದೇ ಆದರ್ಶಗಳನ್ನು ಮೈಗೂಡಿಸಿಕೊಂಡಿರುವ ಇವರು ಮತ್ತೊಮ್ಮೆ ಮದುವೆಯಾಗಲಿಲ್ಲ. ಮನೆಗೆ ಸೌರಶಕ್ತಿಯ ದೀಪಗಳನ್ನು ಹಾಕಿಸಿದ್ದಾರೆ. ಖರ್ಚು ೩೫,೦೦೦ ರೂಪಾಯಿ ಮೀರಿದೆ, ಏಳು ದೀಪಗಳು. ಸಗಣಿ ಅನಿಲ ಘಟಕ ಇವರದು ಬಳಕೆಯಾಗದೇ ನಿಂತಿದೆ. ಉರುವಲಿಗೆ ತೆಂಗಿನ ಸಿಪ್ಪೆ, ಅಡಿಕೆಯ ಪಟ್ಟೆಗಳನ್ನು ಸುರಕ್ಷಿತವಾಗಿ ಶೇಖರಿಸಿಟ್ಟಿದ್ದಾರೆ. ಮನೆಯ ಬಾಗಿಲಲ್ಲಿ ನೇತಾಕಿದ್ದ ಲೋಳೆಸರವನ್ನು ಕಂಡು ಪ್ರಶ್ನಿಸಿದೆ, 'ಇದನ್ನು ಗುಂಗುರು ಹುಳು ಹಿಡಿಯಲಿಕ್ಕೆ ಬಳಸ್ತೀವಿ. ಉಪ್ಪಿನಕಾಯಿ ಜಾಡಿ ಮೇಲೇನೂ ಇದನ್ನು ಕಟ್ತಾರೆ. ಉಪ್ಪಿನಕಾಯಿಗೆ ಗುಂಗುರು ಬಂದು ಹಾಳಾಗಬಾರದು ಅಂತ ಬಳಸ್ತಾರೆ. ದನಕರುಗಳಿಗೆ ಇದನ್ನು ಕಟ್ತಾರೆ' ಎಂದರು.

ಸರೋಜಮ್ಮನವರ ಸ್ವಾವಲಂಬಿತನ: ಸಂಜೆ ಐದು ಗಂಟೆ ಆಗಿತ್ತು. ಹಾಸನದತ್ತ ತುಸುದೂರ ಸಾಗಿಯಾಗಿತ್ತು. ದಾರಿಯಲ್ಲಿ ಬಸವಾಪಟ್ಟಣದ ಸರೋಜಮ್ಮನವರ ನೆನಪು ಬಂತು. ಹೊರಟವರು ವಾಪಸಾಗಿ ಅವರ ಮನೆ ತಲುಪಿದೆವು. ಹಾಸಿಗೆಯಲ್ಲಿ ಮಲಗಿದ್ದವರನ್ನು ಹರನ್ ಅವರು ಎಬ್ಬಿಸಿದರು. ಲವಲವಿಕೆಯಿಂದ ಎದ್ದು ಬಂದ ಅವರನ್ನು 'ತಾಯಿ, ನಿಮ್ಮ ಹೆಸರು ಏನು?' ಎಂದೆ. 'ನನ್ನ ಹೆಸರು ಭಾಗ್ಯಲಕ್ಷ್ಮಿ, ಇಲ್ಲಿ ಸರೋಜಮ್ಮ ಅಂತಾರೆ' ಅಂದರು. ಮಾವ ಕಟ್ಟಿಸಿದ ಮನೆಯಲ್ಲಿ ಈಗ್ಗೆ ೧೪ ವರ್ಷದಿಂದ ಏಕಾಂಗಿಯಾಗಿ ನೆಮ್ಮದಿಯ ಜೀವನ ಮಾಡುತ್ತಿರುವ ಇವರಿಗೆ ಒಂಬತ್ತು ಜನ ಮಕ್ಕಳಿದ್ದಾರೆ. ಇವರಲ್ಲಿ ಏಳು ಗಂಡು, ಎರಡು ಹೆಣ್ಣು. ಎಲ್ಲರದೂ ಮದುವೆಯಾಗಿದೆ. ಸರೋಜಮ್ಮನವರ ಪತಿ ಬಿ.ಎಸ್.ನಾಗಪ್ಪ ಅವರು ತೀರಿಕೊಂಡು ಹದಿನಾಲ್ಕು ವರ್ಷವಾಯ್ತು. ಈಗ ಇವರಿಗೆ ೭೧ ವರ್ಷ ವಯಸ್ಸು. ಮನೆ ಕೆಲಸ, ಅಡುಗೆ ಎಲ್ಲವನ್ನೂ ಇವರೊಬ್ಬರೇ ಮಾಡಿಕೊಳ್ಳುತ್ತಾರೆ. ಶಾಲೆ ಮೆಟ್ಟಿಲನ್ನು ಹತ್ತದ ಇವರು ಸರಾಗವಾಗಿ ಮಾತನಾಡುತ್ತಾರೆ. ನಿರಾಳವಾಗಿ ಓದುತ್ತಾರೆ. 'ನನ್ನ ತಾತ ಹೆಣ್ಣುಮಕ್ಕಳನ್ನ ಶಾಲೆಗೆ ಕಳಿಸ್ಲಿಲ್ಲ. ನನ್ನ ತಾಯಿ ಮನೆಯಲ್ಲೇ ವಿದ್ಯಾಭ್ಯಾಸ ನೀಡಿದರು. ಕದ್ದು ಸಂಗೀತ ಕಲಿತೆ. ನಾನು ಬರೀತೀನಿ. ರಾಮಾಯಣ, ಗುರುಚರಿತ್ರೆಗಳನ್ನು ಓದುತ್ತೇನೆ' ಎಂದು ದಪ್ಪನೆಯ ಗ್ರಂಥಗಳನ್ನು ತಂದು ತೋರಿಸಿದರು. 'ನನಗೆ ಒಂಭತ್ತು ವರ್ಷಕ್ಕೆ ಮದುವೆಯಾಯ್ತು. ನನ್ನ ಗಂಡನ ಜೊತೆ ತುಂಬಾ ಅನ್ಯೋನ್ಯವಾಗಿ ಬದುಕಿದೆ. ಅತ್ತೆ ಬಯ್ದರೂ ಮರು ಮಾತಾಡ್ತಿರ್ಲಿಲ್ಲ. ಹೆಣ್ಣು ಮಕ್ಕಳಿಗೆ ಕಿರುವಯಸ್ಸಿನಲ್ಲಿ ಮದುವೆ ಮಾಡಿದ್ರೆ ಹೊಂದಾಣಿಕೆ ಚೆನ್ನಾಗಿ ಇರುತ್ತೆ. ಈಗಿನ ಕಾಲದಲ್ಲಿ ನೋಡಿ, ಬರೀ ಗಂಡಸರ ಹಣಕ್ಕೆ ಹೆಂಗಸ್ರು ಬೆಲೆ ಕೊಡ್ತಾರೆ. ನಾನು ತವರುಮನೆಯಲ್ಲಿ ಒಂದೇ ತಿಂಗಳು ಬಾಣಂತಿ ಕೆಲ್ಸ ಮಾಡ್ಸಿಕೊಂಡು ಗಂಡನ ಮನೆಗೆ ಬಂದುಬಿಡ್ತಿದ್ದೆ. ನನ್ನದು ಸ್ವಾವಲಂಬನೆ ಜೀವನ. ಯಾರ ಮೇಲೇನೂ ಅವಲಂಬನೆ ಆಗಬಾರದು ಅಂತ ಮೊದ್ಲಿನಿಂದಲೂ ನಿರ್ಧಾರ ಮಾಡಿಕೊಂಡಿದೀನಿ' ಎಂದು ತಮ್ಮ ಅಂತರಾಳದ ವಿಚಾರಗಳನ್ನು ಸುಲಲಿತವಾಗಿ ಹೇಳುತ್ತಿದ್ದರು.



ದಿಟ್ಟಮಹಿಳೆ ದೀಕ್ಷಿತೆ ಸರೋಜಮ್ಮ:ಬಸವಾಪಟ್ಟಣ

ಏನೂ ತೊಂದ್ರೆ ಇಲ್ಲ : ೭೧ನೇ ವಯಸ್ಸಿನಲ್ಲೂ ಅವರ ಮುಖದಲ್ಲಿದ್ದ ಕಳೆಯನ್ನು ಕಂಡು ಬದುಕಿನ ಬಗ್ಗೆ ಮತ್ತಷ್ಟು ಕೆದಕುತ್ತಾ ಹೊರಟೆವು. 'ಆರೋಗ್ಯ ಕೆಡಲ್ಲವಾ? ಏನಾದ್ರೂ ತೊಂದ್ರೆಯಾದ್ರೆ ಏನು ಮಾಡ್ತೀರಿ?' ಎಂದೆ. 'ಇದುವರೆಗೂ ಅಂತಹ ತೊಂದ್ರೆ ಕಾಣಿಸಿಲ್ಲ. ನನ್ಗೆ ಆಸ್ಪತ್ರೆ ಇಷ್ಟ ಇಲ್ಲ, ಆಸ್ಪತ್ರೆಗೆ ಹೋಗಲ್ಲ. ಏನಿದ್ರೂ ಮನೆಯಲ್ಲೇ ಸರಿಪಡಿಸಿಕೊಳ್ತೀನಿ. ದಿನಕ್ಕೆ ಒಮ್ಮೆ ಮಾತ್ರ ನಾನು ತಿಂಡಿ ಅಥವಾ ಊಟ ಮಾಡ್ತೀನಿ. ಮೂರ್‍ನಾಲ್ಕು ಸಾರಿ ಕಾಫಿ ಕುಡೀತೀನಿ. ನಾನೇ ಕಸ ಹೊಡಕೊಳ್ತೀನಿ, ಬಟ್ಟೆ ಒಗೀತೀನಿ. ಐದು ಘಂಟೆಗೆ ಎದ್ದು ಹನ್ನೆರಡು ಘಂಟೆಯವರೆಗೆ ಮನೆ ಕೆಲ್ಸಗಳನ್ನು ಮಾಡಿಕೊಳ್ತೀನಿ. ಬೇಸರವೇ ಇಲ್ಲ. ಕಷ್ಟ ಬಂದಾಗ ಕೊರಗಲಿಲ್ಲ, ಸುಖ ಬಂದಾಗ ಹಿಗ್ಗಲಿಲ್ಲ. ನನ್ನ ಹಣ ನನಗೆ ಸಾಕು. ನನ್ಗೆ ಎಷ್ಟು ದುಡ್ಡು ಬೇಕು? ಎಷ್ಟು ಆಹಾರ ಬೇಕು?' ಎಂದು ಪ್ರಶ್ನಿಸುತ್ತಾರೆ. ಎರಡು ಎಕರೆ ಅಡಿಕೆ ತೋಟ ಇದೆ. 'ಆದರೆ ಕೆಲವು ಕಾರಣಗಳಿಂದ ತೋಟಕ್ಕೆ ಹೋಗದೇ ಹನ್ನೊಂದು ವರ್ಷವಾಯ್ತು. ನನ್ನ ಮಗ ಕೃಷ್ಣ ಆಗಾಗ್ಗೆ ಬರ್ತಾನೆ. ಆಳು ಇಟ್ಟು ಮಾಡಿಸ್ತಾನೆ' ಎಂದು ಸರೋಜಮ್ಮ ಹೇಳಿದರು.

೮. ರಾಮನಾಥಪುರ

ಅ) ರಾಮನಾಥಪುರದಲ್ಲಿ ಮಬ್ಬಾಗುತ್ತಿರುವ ಸೊಬಗು; ಸುಸ್ಥಿತಿಗೆ ಸೋಲು

ರಾಮನಾಥಪುರದ ವಿ.ಎನ್.ಸಾಲಿಗ್ರಾಮರವರು ಇಲ್ಲಿ ಜನಪ್ರಿಯ ವ್ಯಕ್ತಿಯಾಗಿದ್ದವರು. ಬೇಸಾಯದಲ್ಲೂ ಬಹು ಆಸಕ್ತಿ ತಳೆದಿದ್ದವರು. ವೃದ್ಧರಾದ ಅವರ ಪತ್ನಿ ಸೀತಮ್ಮನವರಿಗೆ ಈಗ ಬೇಸಾಯ ಭಾರವಾಗಿ ಕಾಣುತ್ತಿದೆ.

ಶನಿವಾರ, ೨೪.೫.೦೩ರಂದು ರಾಮನಾಥಪುರ ತಲುಪಿದಾಗ ಎಂಟು ಗಂಟೆ ಮೂವತ್ತು ನಿಮಿಷ ಆಗಿತ್ತು. ಸೀತಮ್ಮನವರು ಮನೆಯಲ್ಲಿದ್ದರು. ಕೆಲವು ಸಾಮಾಗ್ರಿಗಳನ್ನು ಇಟ್ಟುಕೊಂಡು ವ್ಯಾನ್ ಹತ್ತಿದ ಅವರನ್ನು ವಿವರಗಳಿಗಾಗಿ ಮಾತನಾಡಿಸತೊಡಗಿದೆ. 'ನನ್ನ ಯಜಮಾನ್ರು ತೀರಿಕೊಂಡು ೧೦ ವರ್ಷ ಆಯ್ತು. ಮನೆಯಲ್ಲಿ ಕರೆಂಟ್ ಗ್ರೌಂಡ್ ಆಗಿತ್ತು. ಅಡುಗೆ ಮನೆಯಲ್ಲಿ ಕರೆಂಟು ಸ್ಟೌವ್ ಹಾಕಿದ್ದೆ. ಗ್ರೌಂಡ್ ಆಗಿ ಬಚ್ಚಲು ಮನೆಯಲ್ಲಿದ್ದ ಅವರಿಗೆ ಅಪಾಯ ಆಯ್ತು. ಆ ಸಂದರ್ಭದಲ್ಲಿ ನಾಯಿ ಬೊಗಳಿತು. ಏನಂತ ನೋಡ್ಲಿಕ್ಕೆ ಸ್ಟೌವ್ ಆರಿಸಿ ಹೊರಟುಹೋದ್ರೆ ಅವ್ರು ಬಿದ್ದಿದ್ರು. ಒಂದು ವರ್ಷ ಅಲ್ಲಿಲ್ಲಿ ಆಸ್ಪತ್ರೆಯಲ್ಲಿ ತೋರಿಸಿದೆ. ಕೊನೆಗೂ ಅವ್ರು ತೀರಿಕೊಂಡಾಗ ಅವ್ರಿಗೆ ೭೨ ವರ್ಷ ವಯಸ್ಸಾಗಿತ್ತು. ತಾಲೂಕು ಬೋರ್ಡ್ ಪ್ರೆಸಿಡೆಂಟ್ ಆಗಿದ್ರೂ ಬೇಸಾಯದಲ್ಲಿ ಬಹಳ ಆಸಕ್ತಿ ಇತ್ತು. ಭತ್ತ, ರಾಗಿ, ಜೋಳ, ತಂಬಾಕು, ಆಲೂಗೆಡ್ಡೆ, ಸೊಂಬಾರಸೊಪ್ಪು ಬೆಳೆಗಳನ್ನು ಬೆಳೀತಾ ಇದ್ದರು' ಎಂದು ಮಾತು ಮುಂದುವರೆಸಿದರು.

ಅಮ್ಮಾ ನಿಮ್ಮ ತವರುಮನೆ ಯಾವುದು?

ನನ್ನದು ರುದ್ರಪಟ್ಟಣ, ಅವರದು ರಾಗಿಮರೂರು. ಜಮೀನು ಕೆಲಸ, ರಾಜಕೀಯ ಇತ್ಯಾದಿ ಕಾರಣಗಳಿಗೆ ರಾಮನಾಥಪುರದಲ್ಲಿ ಮನೆ ಮಾಡಿದ್ರು. ತೋಟಕ್ಕೆ ಬಸ್‌ನಲ್ಲಿ ಹೋಗಿ ಬಂದು ಕೆಲಸ ಮಾಡಿಸ್ತಾ ಇದ್ರು. ಪೆಟ್ರೋಲ್ ಖರ್ಚು ಅಂತ ಸ್ಕೂಟರ್ ಇದ್ರೂ ಬಳಸ್ತಿರ್ಲಿಲ್ಲ.



ದಿಟ್ಟ ವ್ಯವಸಾಯಗಾರ್ತಿ
ಸೀತಮ್ಮನವರು:ರಾಗಿಮರೂರು:(ವಾಸ:ರಾಮನಾಥಪುರ)

ಈಗ ಎಷ್ಟು ಜಮೀನು ಇದೆ? ಹಿಂದೆ ಎಷ್ಟು ಇತ್ತು?

ನಲವತ್ತು ಎಕರೆ ಇತ್ತು. ಈಗ ಎಂಟು ಎಕರೆ ೩೫ ಗುಂಟೆ ಇದೆ. ನಾನೂರು ತೆಂಗಿನ ಮರ ಇವೆ. ಅಡಿಕೆ ಮೂರೂ ಮುಕ್ಕಾಲು ಎಕರೆಯಲ್ಲಿ ಇದೆ.

ನೀರಿಂದು ಏನು ವ್ಯವಸ್ಥೆ ಮಾಡಿಕೊಂಡಿದೀರಿ?

ಒಂದು ಭಾವಿ ಇದೆ. ಬೋರ್‌ವೆಲ್ ಹಾಕಿಸಿದೀವಿ. ಭಾವೀನ ೧೯೫೮ರಲ್ಲೇ ತೆಗೆಸಿದ್ದು. ಬೋರ್‌ವೆಲ್‌ನಲ್ಲಿ ೪೦ ಅಡಿಗೆ ನೀರು ಸಿಕ್ಕಿದೆ. ಅದನ್ನ ೧೯೭೮ರಲ್ಲಿ ಕೊರೆಸಿದ್ದು. ತೋಟದಲ್ಲಿ ಪೈಪ್‌ಲೈನ್ ಇದೆ. ಪೈಪ್ ಮೂಲಕ ಮರಗಳಿಗೆ ನೀರು ಉಣಿಸ್ತೀವಿ.

ನಿಮ್ಗೆ ವಯಸ್ಸು ಎಷ್ಟಿದೆ? ಮಕ್ಕಳು ಏನು ಮಾಡ್ತಾರೆ?

ನನ್ಗೆ ಈಗ ೭೨ ವರ್ಷ ವಯಸ್ಸು. ಮಕ್ಕಳು ಇಲ್ಲ. ಸಮಾಜವನ್ನೇ ಮಕ್ಕಳಂತೆ ನೋಡಿಕೊಂಡು ಬಂದಿವಿ. ದತ್ತು ಮಕ್ಕಳನ್ನೂ ತಗೊಂಡಿಲ್ಲ.

ನೀವು ಏನು ಓದಿದ್ದು? ಯಜಮಾನ್ರು ಏನು ವಿದ್ಯಾಭ್ಯಾಸ ಮಾಡಿದ್ರು?

ನಾನು ಎಸ್‌ಎಸ್‌ಎಲ್‌ಸಿ ಕಟ್ಟಿಲ್ಲ, ಆಗ ಹೊರಗಡೆಗೆ ದೊಡ್ಡವರು ಕಳಿಸ್ತಿರ್ಲಿಲ್ಲ. ಅವ್ರು ಪಿಯುಸಿ ತನಕ ಓದಿದ್ರು. ಒಳ್ಳೆ ಚಾತುರ್ಯ ಇತ್ತು.

ಈಗ ನಿಮಗೂ ವಯಸ್ಸು ಆಗಿದೆ, ಯಜಮಾನ್ರು ಬೇರೆ ಇಲ್ಲ. ತೋಟಾನ ಹೇಗೆ ನೋಡಿಕೊಂಡು ಹೋಗ್ತೀರಿ?

ಅವ್ರು ತೀರಿಕೊಂಡ ಮೇಲೆ ನಾನು ಬರೀ ತೋಟಾನ ನೋಡಿಕೊಂಡು ಹೋಗ್ತಾ

ಇದೀನಿ. ಬೇರೆ ಬೆಳೆ ಮಾಡ್ತಾ ಇಲ್ಲ. ಇಬ್ಬರು ಜನ ಇದಾರೆ. ಒಟ್ಟಿಗೆ ವರ್ಷಕ್ಕೆ ೨೫,೦೦೦ ರೂಪಾಯಿ ಕೊಡ್ತೀನಿ. ಬೀಡಿ, ಬೆಂಕಿಪೆಟ್ಟಿಗೆ, ಬಟ್ಟೆ, ಇತ್ಯಾದಿ ಸೇರಿದ್ರೆ ೪೦,೦೦೦ ರೂ ಆಗುತ್ತೆ. ಒಂದು ತಿಂಗಳ ಕಾಲ ಅಡಿಕೆ ಕಾಪ್ಪಿಗೆ ನಾಲ್ಕು ಜನಕ್ಕೆ ದಿನಾ ೨೫ ರೂಪಾಯಿ ಕೊಡ್ತೀನಿ. ಇವ್ರೇ ಉಳ್ತಾರೆ, ನೀರು ಕೊಡ್ತಾರೆ. ಗೊಬ್ರ ಹಾಕ್ಲಿಕ್ಕೆ ಹೆಣ್ಣಾಳು, ಗಂಡಾಳು ಬರ್ತಾರೆ. ಆಳುಗಳ ಮೇಲೆ ಅವಲಂಬನೆ ಆಗಿ ಕೆಲಸ ಮಾಡಿಸೋದು ದುಬಾರಿ.

ತೋಟದಲ್ಲಿ ಏನೇನು ಗಿಡಮರಗಳು ಇದಾವೆ?

ತೋಟದಲ್ಲಿ ಹುಣಿಸೆ, ಆಲ, ಬಾಗೆ, ಹಲಸು, ಅತ್ತಿ, ಬಿಲ್ವಾರ, ಕಸಿ ಮಾವು, ಬೈನೆ, ಸೀಗೆ, ಹೊಂಗೆ, ಗ್ಲಿರಿಸೀಡಿಯಾ, ಇತ್ಯಾದಿ ಮರಗಿಡಗಳಿವೆ.

ತೆಂಗು ಅಡಿಕೆಗೆ ಏನು ಗೊಬ್ಬರ ಕೊಡ್ತೀರಿ?

ಸಗಣಿ ಗೊಬ್ಬರವನ್ನೇ ಹೆಚ್ಚು ಕೊಡ್ತೀವಿ. ವರ್ಷಕ್ಕೆ ೩೦,೦೦೦ ರೂಪಾಯಿ ಸಗಣಿ ಗೊಬ್ಬರಾನ ಖರೀದಿ ಮಾಡ್ತೀನಿ. ತೋಟದಲ್ಲಿ ಆರೇಳು ಹಳ್ಳಿಕಾರ್ ಹಸುಗಳಿದಾವೆ. ಇವುಗಳಿಂದಲೂ ಸಗಣಿ ಗೊಬ್ಬರ ಸಿಗುತ್ತೆ. ಸೋನೆಮಳೆ ಇದ್ದಾಗ ಸ್ವಲ್ಪ ಸುಫಲಾ ರಾಸಾಯನಿಕ ಗೊಬ್ಬರವನ್ನು ಕೊಡ್ತೀವಿ. ಮಳೆ ಇಲ್ಲದಿದ್ರೆ ಕೊಡಲ್ಲ. ತೆಂಗಿಗೆ ರಾಸಾಯನಿಕ ಗೊಬ್ಬರ, ಔಷಧಿ ಎಂತದ್ದೂ ಕೊಟ್ಟಿಲ್ಲ. ಒಂದ್ಸಾರಿ ಅಭ್ಯಾಸ ಮಾಡಿಸ್ಬಿಟ್ಟರೆ ಅದನ್ನು ಹಾಗೇ ಮುಂದುವರೆಸಬೇಕು. ನಾನು ಮಣ್ಣು ಹಾಕಿಸಲ್ಲ.



ಒಂದೇ ಕಡೆ ಇರುವ ಆರು ಬೈನೆ:ರಾಗಿಮರೂರು: ಸೀತಮ್ಮನವರ ತೋಟ

ತೆಂಗಿನಲ್ಲಿ ಇಳುವರಿ ಹೇಗಿದೆ? ತೆಂಗಿಗೆ ನುಸಿ ಕ್ರಿಮಿ ಹಾವಳಿ ಇದೆಯಾ?

ಮೊದ್ಲು ಚೆನ್ನಾಗಿತ್ತು. ಈಗ ವರ್ಷಕ್ಕೆ ೧೭,೦೦೦ ಕಾಯಿ ಸಿಗುತ್ತೆ. ನುಸಿ ರೋಗ ಬಂದ ಮೇಲೆ ಇಳುವರಿ ಕಮ್ಮಿಯಾಯಿತು.

ನುಸಿ ಕ್ರಿಮಿ ಹತೋಟಿಗೆ ಔಷಧಿ ಬಳಸ್ಲಿಲ್ಲವಾ?

ಇಲ್ಲ. ಇಲಾಖೆಯವರೂ ಹೇಳಿದ್ರು, ತೋಟಕ್ಕೇ ಬಂದು ಹೇಳಿದ್ರು. ಆದ್ರೆ ನಾವು ಕೊಡ್ಲಿಲ್ಲ. ಈಗ ರೋಗ ಕಮ್ಮಿ ಆಗ್ತಾ ಇದೆ.

ಅಡಿಕೆ ತೋಟ ಹೇಗಿದೆ? ವೀಳ್ಯೆ ಇತ್ತಾ? ಇಳುವರಿ ಏನು ಸಿಗ್ತಾ ಇದೆ?

ಅಡಿಕೆ ತೋಟ ಬಹಳ ಚೆನ್ನಾಗಿತ್ತು. ಇದನ್ನ ವೀಳ್ಯೆ ಹಂಬಿನ ತೋಟವೆಂದೇ ಕರೀತಿದ್ದರು. ಈಗ ವೀಳ್ಯೆದೆಲೆ ಇಲ್ಲ. ಜನ, ಆಳುಗಳು ಹಾಳು ಮಾಡಿದ್ರು. ಅಡಿಕೆಯಲ್ಲಿ ಒಟ್ಟು ೨೦೦ ಚೀಲ ಹಸಿ ಅಡಿಕೆ ಸಿಗುತ್ತೆ.

ದನಕರುಗಳ ಬಗ್ಗೆ ಹೇಳಿ.

ನಾವು ಐವತ್ತು ವರ್ಷಗಳಿಂದ ಕೊಂಡ್ಹಾಲು ಕುಡಿದೇ ಇಲ್ಲ. ಸಿಂಧಿ ಹಸೂನ ಸಾಕೇ ಇಲ್ಲ. ನಾಟಿ ಹಸುಗಳೇ ನಮಗೆ ಚೆನ್ನ, ಅವುಗಳ ಹಾಲೇ ನಮ್ಗೆ ಹಿತ. ಯಾವಾಗ್ಲೂ ನಮ್ಮಲ್ಲಿ ಕರಾವು ಇರುತ್ತೆ. ಕರುಗಳಿಗೆ ಹೆಚ್ಚು ಹಾಲು ಬಿಟ್ಟು ಮನೆ ಬಳಕೆಗೆ ಬೇಕಾದಷ್ಟು ಹಾಲನ್ನು ಹಿಂಡಿಕೊಳ್ತೀವಿ. ಒಂದು ದಿನಕ್ಕೆ ಮೂರೂವರೆ ಲೀಟರ್ ಹಾಲು ತರ್ತೀನಿ.

ಮೇವಿಗೆ ಏನು ಮಾಡಿಕೊಂಡಿದೀರಿ?

ಮೂರು ತಿಂಗಳಿಗೊಮ್ಮೆ ಜೋಳ ಬೆಳೀತೀವಿ. ವರ್ಷಕ್ಕೆ ೧೦ ಗಾಡಿ ಹುಲ್ಲು ತಗೊಂತೀನಿ. ಬೆಳಿಗ್ಗೆ, ಸಂಜೆ ಪಾಲೀಶ್ ತೌಡು ಕೊಡ್ತೀನಿ. ವಾರಕ್ಕೆ ೭೦ ಕಿ.ಗ್ರಾಂ. ಬೇಕು. ಮೂರು ತಿಂಗಳು ಆದ ಮೇಲೆ ಕರುವಿಗೂ ಕೊಡ್ತೀನಿ. ನಮ್ಮವು ಹಿಂಡಿ ತಿನ್ನಲ್ಲ. ಬೆಳಿಗ್ಗೆ ಸಂಜೆ ಪಚ್ಚಬಾಳೆ ಕೊಡ್ತೀನಿ. ಎಲ್ಲವಕ್ಕೂ ಒಂದೊಂದು ಹಣ್ಣು ನೀಡ್ತೀನಿ. ಅವು ಮುಸುರೆ ಕುಡಿಯೋಲ್ಲ. ರಾಗಿ ಹುಲ್ಲು ತಿನ್ನಲ್ಲ.



ಮೈತುಂಬ ಮುಳ್ಳು ಇರುವ ಸೀಗೆ ಮೆಳೆಯ ಕುಡಿ:ರಾಗಿಮರೂರು: ಸೀತಮ್ಮನವರ ತೋಟ

ಉಳುಮೆಗೆ ಹಸುಗಳನ್ನು ಬಳಸ್ತೀರಾ?
ಕಡಸುಗಳನ್ನು ಮಾತ್ರ ಉಳುಮೆಗೆ ಬಳಸ್ತೀವಿ. ಗರ್ಭ ಧರಿಸಿದ್ರೆ ಕಟ್ಟಲ್ಲ. ನಮ್ಮ ಮನೆಯಲ್ಲಿ ಹುಟ್ಟಿದ್ದನ್ನು ಉಳುಮೆಗೆ ಉಪಯೋಗಿಸಲ್ಲ. ಕೊಂಡ್ಕೊಂಡು ಬಂದದ್ದನ್ನು ಬಳಸ್ತೀವಿ.

ದನಕರುಗಳ ಸ್ವಚ್ಛತೆ ಬಗ್ಗೆ ಹೇಳಿ?
ವಾರಕ್ಕೊಮ್ಮೆ ಹಸುಗಳಿಗೆ ಸ್ನಾನ ಮಾಡಿಸ್ತೀನಿ, ಕರುಗಳಿಗೆ ಬಿಸಿ ನೀರು ಹಾಕಿ ತೊಳೀತೀನಿ. ನಮ್ಮ ಹಸುಗಳು ಕೆರೆ ನೀರು ಕುಡಿಯಲ್ಲ. ಬಕೇಟ್, ಬಾಂಡಲಿಯಲ್ಲಿಟ್ಟರೂ ಮುಟ್ಟಲ್ಲ. ಏನಿದ್ರೂ ನೀರಿನ ತೊಟ್ಟಿಯಲ್ಲಿ ಎಲ್ಲವೂ ಬಂದು ಕುಡಿಯುತ್ತವೆ.

ಒಂದೊಂದು ಹಸು ಎಷ್ಟು ಹಾಲು ಕೊಡುತ್ತೆ?

ಸಿಂಧಿ ಹಸುವಿನ ಹಾಲನ್ನು ನೀವು ಕುಡಿಯೋದಿಲ್ವ?
ನಮ್ಮಲ್ಲಿ ಒಂದು ೧೨ ವರ್ಷದ ಹಸು ಇದೆ. ಒಪ್ಪೊತ್ತಿಗೆ ಮೂರೂವರೆ-ನಾಲ್ಕು ಲೀಟರ್ ಹಾಲು ಕೊಡುತ್ತೆ. ಅದ್ಯಾಕೋ ನಮ್ಗೆ ಸಿಂಧಿ ಹಸುವಿನ ಹಾಲು ಒಗ್ಗಲ್ಲ. ಅದನ್ನ ಕುಡಿಯೋದೇ ಇಲ್ಲ.

ತೋಟದಲ್ಲಿರೋ ಬಾವಿಗೆ ಸುತ್ತ ಗಿಡಗಳಿದಾವೆ. ಏನು ಇದರ ವಿಶೇಷ?
ಭಾವಿ ದೊಡ್ಡದು. ದನಕರುಗಳು ಬಿದ್ದಾವು ಅಂತ ಸುತ್ತ ಗಿಡಗಳನ್ನು ಹಾಕಿಸಿದೀನಿ.

ತೋಟದ ಸುತ್ತ ಬೇಲಿ ಇದೆಯಾ?
ಇದೆ. ಮುಳ್ಳುತಂತಿ ಬೇಲೀನ ಹಾಕಿಸಿದೀನಿ.

ತೆಂಗಿನ ತೋಟದಲ್ಲಿ ಉದುರೋ ಗರಿಗಳನ್ನು ಏನು ಮಾಡ್ತೀರಿ?
ಮಟ್ಟೆ ಸಮೇತ ಗರಿಗಳನ್ನು ತಂಬಾಕು ಸೊಪ್ಪು ಬೇಯಿಸ್ಲಿಕ್ಕೆ ವರ್ಷಕ್ಕೆ ೩,೦೦೦ ರೂಪಾಯಿಗೆ ಮಾರಾಟ ಮಾಡ್ತೀನಿ.

ಮುಂದಿನ ದಿನಗಳ ಬದುಕನ್ನು ಹೇಗೆ ರೂಪಿಸಿಕೊಂಡಿದೀರಿ?
ನನ್ನ ಯಜಮಾನ್ರು ಸಮಾಜಕ್ಕೆ ದುಡಿದ್ರು. ನನ್ಗೂ ವಯಸ್ಸು ಆಯ್ತು. ಆಳುಕಾಳು ಇಟ್ಕೊಂಡು ಮಾಡಿಸೋದು ಕಷ್ಟದ ಮಾತು. ಇರೋ ಆಸ್ತೀನ ಮಾರಾಟ ಮಾಡಬೇಕಂತ ನಿರ್ಧಾರ ಮಾಡಿದೀನಿ. ಮೂರು ವರ್ಷದಿಂದ ಖರ್ಚೇ ಹೆಚ್ಚುತ್ತಿದೆ. ಕೈಗೆ ದುಡ್ಡು ಸಿಕ್ತಾ ಇಲ್ಲ. ಡಬಲ್ ಬ್ಯಾರನ್, ದನದ ಕೊಟ್ಟಿಗೆ, ಎರಡು ಪಂಪ್ ಹೌಸ್, ತೆಂಗು, ಅಡಿಕೆ - ಎಲ್ಲದ್ದನ್ನೂ ಸೇರಿ ೩೦ ಲಕ್ಷ ರೂಪಾಯಿ ಬೆಲೆ ಕಟ್ಟಿದೀನಿ. ಜನ ಬಂದು ಹೋಗ್ತಾ ಇದಾರೆ. ಯಜಮಾನ್ರು ಕಟ್ಟಿಸಿದ ಈ ಮನೇಲೇ ಇರಬೇಕು ಅಂತ ನಿಶ್ಚಯಿಸಿದೀನಿ.



ತೋಟದ ಹುಣಿಸೆಮರ;ಮಾರಾಟಕ್ಕಿರುವ ಸೋಗೆ:ರಾಗಿಮರೂರು: ಸೀತಮ್ಮನವರ ತೋಟ



ತೆಂಗಿಗೆ ಆದ ಉಳುಮೆಯ ಪೆಟ್ಟು: ಸೀತಮ್ಮನವರ ತೋಟ : ರಾಗಿಮರೂರು

ಈ ಇಳಿವಯಸ್ಸಿನಲ್ಲೂ ಲವಲವಿಕೆಯಿಂದ ಜಮೀನು, ದನಕರು, ನಾಯಿ, ಬೆಕ್ಕುಗಳ ಬಗ್ಗೆ ಮಮತೆ ಗೌರವ ಇಟ್ಟುಕೊಂಡಿದ್ದಾರೆ. ತೋಟಕ್ಕೆ (ತೆಂಗು, ಅಡಿಕೆ) ಡಿಸಂಬರ್‌ನಲ್ಲೇ ಸಗಣಿ ಗೊಬ್ಬರವನ್ನು ಹಾಕುತ್ತಾರೆ. ಇದರಿಂದ ಉತ್ತಮ ಬೆಳೆ ಬರಲು ಅನುಕೂಲವಾಗುತ್ತೆ ಎಂದವರು ನುಡಿಯುತ್ತಾರೆ. ಬೆಳಗ್ಗೆ ಎಂಟಕ್ಕೆ ಹೋಗಿ ಹತ್ತೂವರೆಗೆ ಬಂದವರು ತಾವೇ ಅಡುಗೆ ಮಾಡಿಕೊಂಡು, ಮನೆ ಕೆಲಸಗಳನ್ನು ಮುಗಿಸಿಕೊಂಡು ಸಂಜೆ ನಾಲ್ಕು ಗಂಟೆಗೆ ಹೋಗಿ ಐದೂವರೆಗೆ ವಾಪಸಾಗುತ್ತಾರೆ. ಕೆಲವೊಮ್ಮೆ ಕೆಲಸಗಳು ಹೆಚ್ಚು ಇದ್ದಾಗ ಹೆಚ್ಚು ಕಾಲ ತೋಟದಲ್ಲಿ ಕಳೆಯುವುದಿದೆ. 'ಅಡಿಕೆ ಮತ್ತು ತೆಂಗಿಗೆ ಬೆಲೆ ಇದ್ದಾಗ ದುಡ್ಡು ಉಳಿಯುತ್ತಿತ್ತು, ಜೊತೆಗೆ ಈಗ ವಯಸ್ಸೂ ಆಯ್ತು. ಈ ಹತ್ತು ವರ್ಷದಲ್ಲಿ ೧೮ ಲಕ್ಷ ರೂಪಾಯಿ ಖರ್ಚಾಗಿದೆ. ತಿಂಗಳಿಗೆ ವ್ಯಾನ್‌ನ ಪೆಟ್ರೋಲ್ ೩,೦೦೦ ರೂಪಾಯಿ, ಡ್ರೈವರ್‌ಗೆ ೨,೦೦೦ ರೂಪಾಯಿ, ಆಳುಗಳಿಗೆ ವರ್ಷಕ್ಕೆ ಹತ್ತತ್ರ ೪೦,೦೦೦ ರೂಪಾಯಿ, ಗೊಬ್ಬರ ಗೋಡಿಗೆ ೫೦,೦೦೦ ರೂಪಾಯಿ, ಅಡಿಕೆ ತೆಂಗಿನಕಾಯಿ ಮಾರಾಟಕ್ಕೆ ಬೇರೆಯವರ ಮೇಲೆ ಅವಲಂಬನೆ, ಹೀಗೆ ಖರ್ಚು-ಹೊರೆ ಏರುತ್ತಿರುವುದರಿಂದ ಈ ನಿರ್ಧಾರಕ್ಕೆ ಬಂದಿದೀನಿ' ಎಂದು ಹೇಳುತ್ತಾರೆ.

ಮುಗಿಸುವ ಮುನ್ನ:

ರಾಮನಾಥಪುರದಲ್ಲಿ ರಾರಾಜಿಸಿ ಬೆಳೆದ ವಿ.ಎನ್.ಸಾಲಿಗ್ರಾಮ ಅವರು ಈಗ ಇಲ್ಲ. ಪತ್ನಿ ಸೀತಮ್ಮನವರು ಈಗ್ಗೆ ಹತ್ತು ವರುಷಗಳಿಂದ ತೋಟದ ಉಳಿವಿಗೆ ಗಮನ ಹರಿಸಿದರು. ಖರ್ಚು, ವಯಸ್ಸು ಅವರಿಗೆ ಏರುತ್ತಿದ್ದು ಬರುವ ಹಣ ಸಾಕಾಗುತ್ತಿಲ್ಲ. ನಿರ್ವಹಣೆಯೂ ಕಷ್ಟವಾಗಿದೆ.

ತೆಂಗು ಮತ್ತು ಅಡಿಕೆಯಲ್ಲಿ ಪಾಲನೆ ಕ್ರಮಗಳು ಸಾಲದು ಎಂಬಂಶ ವ್ಯಕ್ತವಾಯಿತು. ಗರಿಗಳನ್ನು ಮಾರುವುದಕ್ಕಿಂತ ಅಲ್ಲಿಯೇ ಪುನರ್ಬಳಕೆ ಮಾಡುವುದು ಸೂಕ್ತವಾದೀತು. ತೆಂಗಿನ ಬುಡಕ್ಕೆ ನೀರು ಕೊಡುತ್ತಿದ್ದು, ತುಸು ದೂರದಲ್ಲಿ (೩-೪ ಅಡಿ) ನೀರನ್ನು ಒದಗಿಸಿದರೆ ಉತ್ತಮವಾದೀತು.

ಸಂದರ್ಶನ : 24-05-2003

ಆ) ಕುಂಟಿದ ಕಸುಬು - ಕುಂದಿದ ಆನಂದ

ಸೀತಮ್ಮನವರ ಬದುಕು, ಕೃಷಿ ಕುರಿತು ವಿವರಗಳನ್ನು ಸಂಗ್ರಹಿಸಿ ಕೊನೆ ಹಂತಕ್ಕೆ ಬಂದಾಗ ಸಮಯ ಮಧ್ಯಾಹ್ನ ಒಂದೂವರೆ ಗಂಟೆ ಆಗಿತ್ತು. ಶುದ್ಧ ಕೃಷಿ ಅನುಸರಿಸುತ್ತಿರುವ ಸಿ.ಕೃಷ್ಣ ಅವರು ಮೂರ್ನಾಲ್ಕು ವರ್ಷಗಳಿಂದ ಪರಿಚಯವಾಗಿದ್ದವರು. ತಾಂತ್ರಿಕ ಪದವಿ ಮಾಡಿಕೊಂಡು ಖಾಸಗಿ ಕಂಪನಿಗಳಲ್ಲಿ ಕೆಲಸ ಮಾಡಿ ಈಗ ಅರ್ಧ ಎಕರೆ ತೋಟವನ್ನು ಶುದ್ಧ ಕೃಷಿ ವಿಧಾನದಲ್ಲಿ ನೋಡಿಕೊಳ್ಳುತ್ತಿದ್ದಾರೆ. ಊಟದ ಸಮಯವಾಗಿದ್ದರಿಂದ ಕೃಷ್ಣರವರ ಮನೆಗೆ ಹೋಗಿ, ಮನೆಯ ಹಿಂದೆ ತೆಂಗು, ಮೆಣಸು, ಶುಂಠಿ, ಕರಿಬೇವು- ಇತ್ಯಾದಿಗಳನ್ನು ವಿಷ ಹಾಕದೇ ಬೆಳೆದಿದ್ದನ್ನು ಗಮನಿಸಿ, ಅವರೇ ಮಾಡಿದ ಅಡುಗೆಯನ್ನು ಸೇವಿಸಿ ತೋಟ ನೋಡಿಕೊಂಡು ಬಂದೆ. ತೋಟಕ್ಕೆ ಅಗೆತ ಇಲ್ಲ. ರಾಸಾಯನಿಕ

ಗೊಬ್ಬರ ಹಾಕುವುದಿಲ್ಲ. ಪಿಳ್ಳೆಗಳಲ್ಲಿ ಕಸಕಡ್ಡಿ - ಸಗಣಿಗೊಬ್ಬರ-ಖರೀದಿಸಿದ ಸಾವಯವ ಗೊಬ್ಬರವನ್ನು ತುಂಬುತ್ತಾರೆ. ಅರ್ಧ ಎಕರೆಗೆ ೩೫ ಕ್ವಿಂಟಾಲ್ ಹಸಿ ಅಡಿಕೆ ಅವರಿಗೆ ಸಿಗುತ್ತದೆ. ಕೈಮುಟ್ಟಿ ಕೆಲಸ ಮಾಡುವ ಇವರಿಗೆ ಖರ್ಚು ತೆಗೆದು ತುಸು ಹಣ ಉಳಿಯುತ್ತದೆ. ತೋಟ ನೋಡಿಕೊಂಡು ಆಸುಪಾಸಿನಲ್ಲಿ ಮಳೆಯ ಕೊರತೆಯಿಂದ ಸೊರಗಿದ ತಂಬಾಕನ್ನು ಗಮನಿಸಿ ರಾಮನಾಥಪುರದ ಸೊಸೈಟಿಯಲ್ಲಿ ಕೆಲಸ ಮಾಡುತ್ತಿರುವ ವೆಂಕಟೇಶ್ ಅವರನ್ನು ಭೇಟಿಯಾಗೋಣ ಎಂದು ಹೊರಟೆವು. 'ನನ್ನದು, ವಿಶ್ವನಾಥ ಅನ್ನೋರದು ಸ್ವಲ್ಪ ಜಮೀನು ಇದೆ' ಎಂದ ವೆಂಕಟೇಶ್ ಅವರನ್ನು 'ಜಮೀನು/ತೋಟ ನೋಡಲು ಹೋಗೋಣವೇ' ಎಂದೆ.

ಊರ ಹತ್ತಿರವೇ ಒಂದು ಎಕರೆ ತೋಟ ಮಾಡಿರುವ ಎಸ್.ಎಸ್. ವಿಶ್ವನಾಥ ಅವರು ತೋಟದಲ್ಲಿ ಕುಳಿತಿದ್ದರು. ಹಸಿ ಅಡಿಕೆಯನ್ನು ಸಣ್ಣದಾಗಿ ಕತ್ತರಿಸಿ ಸುಣ್ಣ ಬೆರೆಸಿ ತಂಬಾಕಿನೊಂದಿಗೆ ತಾಂಬೂಲ ಹಾಕಿಕೊಳ್ಳುತ್ತಿದ್ದರು. ಅರ್ಧ ಎಕರೆ ಅಡಿಕೆ ಇಳುವರಿ ನೀಡುತ್ತಿದೆ. ಇನ್ನೂ ಅರ್ಧ ಎಕರೆಯಿಂದ ಫಲ ಸಿಗಬೇಕಾಗಿದೆ. ಎಸ್ಎಸ್ಎಲ್ಸಿಯವರೆಗೆ ಓದಿರುವ ಇವರಿಗೆ ಈಗ ವಯಸ್ಸು ೫೦ ವರ್ಷ. ಇವರ ಮೂಲ ಊರು ಸೋಮನಹಳ್ಳಿ. ಅಲ್ಲಿ ಇವರ ಅಣ್ಣ ತಮ್ಮಂದಿರು ಮತ್ತು ತಂದೆ ಇದ್ದಾರೆ. 'ದಿನಕ್ಕೆ ಏನಿಲ್ಲವೆಂದರೂ ೨೫ ಸಾರಿ ತಾಂಬೂಲ ಹಾಕ್ತೀನಿ. ಈ ತರಹ ೨೫ ವರ್ಷಗಳಿಂದ ಹಾಕ್ಕೊಂಡು ಬಂದಿದೀನಿ' ಎನ್ನುವ ಇವರು ಬೇಕರಿ, ಹೋಟೆಲ್ ಇಟ್ಟು ನಷ್ಟ ಅನುಭವಿಸಿದ್ದಾರೆ. ಬೇಕರಿಯಲ್ಲಿ ೨೦ ವರ್ಷಗಳ ಕಾಲ ಬದುಕು ನಡೆಸಿ ಒಂದು ಎಕರೆ ಗದ್ದೆಯನ್ನು ಖರೀದಿಸಿ ಅದರಲ್ಲೇ ಈಗ ಅಡಿಕೆ ಬೆಳೆಸಿದ್ದಾರೆ. 'ಅಡಿಕೆಗೆ ಬೆಲೆ ಬಂದಾಗ, ನಾನೇ ಸೊಸಿ ಬೆಳೆಸಿ ನಾಟಿ ಮಾಡಿ ಬೆಳೆಸ್ದೆ. ಈಗ ಇರೋ ಬೆಲೆ ಸಾಕಾಗಲ್ಲ. ತೋಟ ಮಾಡಿ ಇಕ್ಕಟ್ಟಿಗೆ ಸಿಕ್ಕಿಹಾಕಿಕೊಂಡಿದೀನಿ' ಎನ್ನುತ್ತಾರೆ. ಎಂಟು ವರ್ಷದ ಅಡಿಕೆಯು ಮೂರು ವರ್ಷದಿಂದ ಇವರ ಕಪ್ಪುಮಣ್ಣಿನಲ್ಲಿ ಅರ್ಧ ಎಕರೆ ವಿಸ್ತೀರ್ಣದಲ್ಲಿ ಇಳುವರಿ ಕೊಡುತ್ತಿದೆ. ನೀರಿಗೆ ಬಾವಿ/ಬೋರ್‌ವೆಲ್ ಇಲ್ಲ. ಮಾಡಿಸಿಕೊಳ್ಳಲು ಹಣದ ತೊಂದರೆ. ಅರ್ಧ ಎಕರೆಯಿಂದ ೨೦ ಕ್ವಿಂಟಾಲ್ ಇಳುವರಿ ಸಿಗುತ್ತಿದೆ. ಮಳೆಗಾಲದ ಸೋನೆ ಸಂದರ್ಭದಲ್ಲಿ ಒಂದೊಂದು ಮರಕ್ಕೆ ಒಂದು ಮಂಕರಿ ಸಗಣಿಗೊಬ್ಬರ ಮತ್ತು ಕೆಮ್ಮಣ್ಣನ್ನು ಕೊಡುತ್ತಾರೆ. ಮೂವರು ಹೆಣ್ಣು ಮಕ್ಕಳು ಇವರಿಗಿದ್ದಾರೆ. ಅಡಿಕೆ ತೋಟದ ಕೆಲಸಗಳ ಬಿಡುವಿನಲ್ಲಿ ವಿಶ್ವನಾಥ ಅವರು ಅಡುಗೆ ಕೆಲಸಕ್ಕೆ ಹೋಗುತ್ತಾರೆ. 'ಒಂದು ರೀತಿ ನನಗೆ ಅಡುಗೆ ಕೆಲಸವೇ ಮುಖ್ಯವಾಗಿದೆ. ಅಡಿಕೆಯದು ಉಪಕಸುಬು' ಎಂದವರು ನುಡಿಯುತ್ತಾರೆ.

'ಅಡಿಕೆಗೆ ಬೆಲೆ ಇದ್ದಾಗ ವ್ಯಾಪಾರಸ್ಥರು ಮುಂಚಿತವಾಗಿ ದುಡ್ಡು ಕೊಡ್ತಿದ್ರು. ಈಗ ಅದೂ ಕಷ್ಟ ಇದೆ' ಎನ್ನುತ್ತಿರುವಾಗ ಅಲ್ಲಿದ್ದ ಕೃಷ್ಣ 'ಈ ಹಿಂದೆ ಇದೇ ಬೆಲೆ ಇತ್ತು. ಹಸಿ ಅಡಿಕೆಗೆ ಕ್ವಿಂಟಾಲ್‌ಗೆ ೧೪೫೦ರೂಪಾಯಿ ಬಂದ ಮೇಲೆ ಜೀವನ ಬದಲಾಯಿತು. ಈಗ ಇರುವ ಬೆಲೆಯಲ್ಲಿ ನಿಭಾಯಿಸಲು ಕಷ್ಟಪಡುತ್ತಿದ್ದೇವೆ' ಎಂದು ಮಾತು ಜೋಡಿಸಿದರು. ಮನೆಯ ಖರ್ಚು, ಮಕ್ಕಳ ವಿದ್ಯಾಭ್ಯಾಸ, ಆಳುಗಳ ಮೇಲೆ ಅವಲಂಬನೆ, ಏಕಬೆಳೆಪದ್ಧತಿ, ಇತ್ಯಾದಿಗಳು ಈಗ ಅಡಿಕೆ ಬೆಳೆಗಾರರ ತೊಂದರೆಗಳಿಗೆ ಕಾರಣವಾಗಿವೆ ಎಂಬುದು ಅಲ್ಲಿ ಮಾತಾಡುತ್ತಿರುವಾಗ ತಿಳಿಯಿತು. 'ಅಡುಗೆ ಕೆಲಸ ಇದೆ, ನಾನಿನ್ನು ಹೊರಡಲಾ' ಎಂದು ವಿಶ್ವನಾಥ ಅವರು ಹೇಳಿದಾಗ 'ಆಯ್ತು' ಎಂದು ವೆಂಕಟೇಶ್ ಅವರಿಂದ ವಿಚಾರ ಪಡೆಯಲು ಮುಂದಾದೆ.

ಎಸ್. ವೆಂಕಟೇಶ್‌ರವರೂ ಸೋಮನಹಳ್ಳಿಯವರು. ಈಗ ಇವರ ತಂದೆ ತಾಯಿ ಇಲ್ಲ. ತಾತನಿಗೆ ದತ್ತುಮಗನಾಗಿ ಬಂದು ಇಲ್ಲೇ ನೆಲೆಸಿರುವ ಇವರು ರಾಮನಾಥಪುರದ ಪ್ರಸನ್ನ ಶ್ರೀಸುಬ್ರಹ್ಮಣ್ಯ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಬ್ಯಾಂಕ್‌ನಲ್ಲಿ ಲೆಕ್ಕಾಧಿಕಾರಿ(ಅಕೌಂಟೆಂಟ್) ಆಗಿ ಕೆಲಸ ಮಾಡುತ್ತಿದ್ದಾರೆ. ಬಿ.ಎ., ಬಿ.ಎಡ್. ಓದಿ ೨೭ ವರ್ಷದಿಂದ ಇಲ್ಲೇ ನೌಕರಿಯಲ್ಲಿದ್ದಾರೆ. ಇವರ ತಂದೆ ಸುಬ್ರಹ್ಮಣ್ಯ ಘನಪಾಠಿಗಳು ಕೃಷಿ ಕೆಲಸ ಮಾಡುತ್ತಲೇ ತೋಟದಲ್ಲಿ/ಮನೆಯಲ್ಲಿ ವೇದ ಹೇಳಿಕೊಡುತ್ತಿದ್ದರಂತೆ. ಎಸ್.ವೆಂಕಟೇಶ್‌ರವರಿಗೆ ಐದೂವರೆ ಎಕರೆ ಜಮೀನು ಇದೆ. ಆರು ವರ್ಷದ ಹಿಂದೆ ಹಾಕಿದ ಅಡಿಕೆಯು ನೀರಿನ ಕೊರತೆ, ಪಾಲನೆಯಲ್ಲಾದ ದೋಷದಿಂದ ಸರಿಯಾಗಿ ಬೆಳೆದಿಲ್ಲ. ೨೪೦ ಅಡಿ ಆಳದವರೆಗೆ ಕೊರೆಸಿದ ಕೊಳವೆ ಬಾವಿಯಿಂದ ನೀರು ಸಿಗದೇ ತೆರೆದ ಬಾವಿಯನ್ನು ತೋಡಿಸಿಕೊಂಡು ನೀರುಣಿಸುತ್ತಿದ್ದಾರೆ. ರಾಜಮುಡಿ ಭತ್ತವನ್ನು ಬೆಳೆಯುತ್ತಾರೆ. ಎಕರೆಗೆ ಇಳುವರಿ ೧೨ ಖಂಡುಗ ಇದೆ. ಇವರ **ದೂರವಾಣಿ ಸಂಖ್ಯೆ : 225736.**

ಸಂದರ್ಶನ : 24-05-2003

೯. ಸರಗೂರು: ಸೊಬಗಿನ ಕೃಷಿ - ಸಹಬಾಳ್ವೆಯ ಬದುಕು

ಅಡಿಕೆಯೊಂದಿಗೆ ವಿಭಿನ್ನ ಬೆಳೆಗಳ ಸಂಯೋಜನೆ ಹಾಗೂ ಪರಿಸರಪ್ರಿಯ ಕೃಷಿ ವಿಧಾನಗಳು ಸರಗೂರಿನ ಕೃಷಿಕರಲ್ಲಿ ಕಂಡು ಬಂದ ವಿಶೇಷಗಳು.

ಕಾವೇರಿ ನದಿ ದಂಡೆಯ ಸರಗೂರು, ಅರಕಲಗೂಡು ತಾಲೂಕಿನ ಕೊಣನೂರಿಗೆ ಸಮೀಪವಿದೆ. ಕೊಣನೂರಿನಿಂದ ಕುಶಾಲನಗರಕ್ಕೆ ಹೋಗುವ ದಾರಿಯಲ್ಲಿ ಎರಡು ಕಿ.ಮೀ. ಸಾಗಿ ಎಡಕ್ಕೆ ಸಿಗುವ ರಸ್ತೆಯಲ್ಲಿ ಅರ್ಧ ಕಿ.ಮೀ. ಸಾಗಿದರೆ ಈ ಗ್ರಾಮ ಸಿಗುತ್ತದೆ. ಇಲ್ಲಿ ಒಟ್ಟು ೨೮೦ ಕುಟುಂಬಗಳಿವೆ. ಮುಖ್ಯವಾಗಿ ಇಲ್ಲಿ ಸಂಕೇತಿಗಳಲ್ಲದೆ ಒಕ್ಕಲಿಗರು, ಮಡಿವಾಳರು, ಅಕ್ಕಸಾಲಿ, ಹರಿಜನರು ವಾಸವಾಗಿದ್ದಾರೆ. ಊರಿಗೆ ಸದ್ಯವಂತೂ ಎರಡು ಬಸ್‌ಗಳು ಬಂದು ಹೋಗುತ್ತವೆ. ಶಾಲೆ ಇಲ್ಲಿ ಏಳನೆ ತರಗತಿಯವರೆಗೆ ಇದೆ. ಅಂಗನವಾಡಿ ಕೇಂದ್ರ ಇದೆ. ಪ್ರಾಥಮಿಕ ಆರೋಗ್ಯ ಕೇಂದ್ರ, ಬಸವೇಶ್ವರ ಸಮುದಾಯ ಭವನ, ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಬ್ಯಾಂಕ್, ಎರಡು ಸ್ತ್ರೀ ಶಕ್ತಿ ಸಂಘಗಳು ಇಲ್ಲಿವೆ.

ಸರಗೂರಿನಲ್ಲಿ ಭವಾನಿ ಸೌಭರೇಶ್ವರ ದೇವಸ್ಥಾನ, ಬಸವೇಶ್ವರ ದೇವಸ್ಥಾನ, ಊರಿನ ನಾಲ್ಕು ದಿಕ್ಕುಗಳಲ್ಲಿ ಗ್ರಾಮ ದೇವತೆಗಳ ಗುಡಿ ಇವೆ. ನಾಲ್ಕು ವರ್ಷಕ್ಕೊಮ್ಮೆ ಲಕ್ಷ್ಮೀದೇವಿ ಹಬ್ಬದ ಅಂಗವಾಗಿ ಸೌಭರೇಶ್ವರ ಮತ್ತು ಬಸವೇಶ್ವರ ಉತ್ಸವಗಳು ನಡೆಯುತ್ತವೆ. ಉತ್ಸವ ಸಂಜೆ ಶುರುವಾಗಿ ಬೆಳಿಗ್ಗೆ ಮುಕ್ತಾಯವಾಗುತ್ತದೆ. ಶಿಥಿಲವಾಗಿದ್ದ ಭವಾನಿ ಸೌಭರೇಶ್ವರ ದೇವಸ್ಥಾನವನ್ನು ಸರ್ಕಾರದ ನೆರವಿನಿಂದ ಜೀರ್ಣೋದ್ಧಾರ ಮಾಡಲಾಗಿದೆ. ಬಸವೇಶ್ವರ ದೇವಸ್ಥಾನವೂ ಜೀರ್ಣೋದ್ಧಾರ ಆಗಿದೆ. ಸರಗೂರಿನಲ್ಲಿ ಯುಗಾದಿ, ಗಣಪತಿ ಹಬ್ಬ, ಗೌರಿ ಹಬ್ಬ, ದೀಪಾವಳಿ ಇತ್ಯಾದಿ ಹಬ್ಬಗಳನ್ನು ಆಚರಿಸಲಾಗುತ್ತಿದೆ. ಊರಲ್ಲಿ ಸಾಮರಸ್ಯ, ಸಹಬಾಳ್ವೆ ಉತ್ತಮವಾಗಿದೆ.

ಸರಗೂರಿನ ಗ್ರಾಮಸ್ಥರ ಮುಖ್ಯ ಕಸಬು ಬೇಸಾಯ. ಹಸು, ಎಮ್ಮೆ ಸಾಕಣೆ ಇಲ್ಲಿದೆ. ನಾಡ ದನಕ್ಕೆ ಕೃತಕ ಗರ್ಭಧಾರಣೆ ಮಾಡಿಸಿ ಮಿಶ್ರ ತಳಿ ಹಸುಗಳನ್ನು ಪಡೆದು ಇಲ್ಲಿಯ ಜನ ಸಾಕುತ್ತಿದ್ದಾರೆ. ಹಾಲು ಉತ್ಪಾದಕರ ಸಹಕಾರಿ ಸಂಘ ಸ್ಥಾಪನೆಯಾಗಿ ೨೦ ವರ್ಷಗಳು ಕಳೆದಿವೆ. ದಿನಕ್ಕೆ ೫೦ ಲೀಟರ್ ಹಾಲು ಸಂಗ್ರಹವಾಗುತ್ತಿದೆ. ಆಡು, ಕುರಿ ಸಾಕಣೆಯು ಸಣ್ಣ ಪ್ರಮಾಣದಲ್ಲಿ ನಡೆದಿದೆ. ನಾಟಿ ಕೋಳಿ ಸಾಕಣೆಯೂ ಇದೆ. ಅರಸಿಕಟ್ಟೆಯ ಅರಸಿಕಟ್ಟೆಯಮ್ಮನಿಗೆ ಹರಕೆ ಹೊತ್ತುಕೊಂಡು ಅಲ್ಲಿ ಹಂದಿ, ಕೋಳಿ, ಕುರಿ ಕಡಿಯುವ ಸಲುವಾಗಿ ಇಲ್ಲಿಯ ಜನ ಸಾಕುತ್ತಾರೆ. ಕನಿಷ್ಠವೆಂದರೂ ಎರಡು ಎಕರೆ ಹಿಡುವಳಿ, ಗರಿಷ್ಠ ಹದಿನೆಂಟು ಎಕರೆ ಹಿಡುವಳಿ ಇಲ್ಲಿ ಕಾಣುತ್ತದೆ. ಜಮೀನು ಇಲ್ಲದ ೨೦ ಕುಟುಂಬಗಳೂ ಇಲ್ಲಿವೆ. ಇಲ್ಲಿಯ ಜನ ಮೆಕ್ಕೆಜೋಳ ಮತ್ತು ತಂಬಾಕನ್ನು ಮುಖ್ಯವಾಗಿ ಬೆಳೆಯುತ್ತಾರೆ. ಉಳಿದಂತೆ ರಾಗಿ, ಹುರುಳಿ, ಹರಳು, ಆಲೂಗೆಡ್ಡೆ, ಶುಂಠಿ, ಭತ್ತ, ಅಡಿಕೆ, ತೆಂಗು ಇತ್ಯಾದಿ ಬೆಳೆಗಳನ್ನು ಸಾಗುವಳಿ ಮಾಡುತ್ತಾರೆ. ಕಮ್ಮಿ ಹಿಡುವಳಿ ಇಟ್ಟುಕೊಂಡು ಕೆಲಸವಿಲ್ಲದ ಸಂದರ್ಭದಲ್ಲಿ ಕಾಫಿ ತೋಟಗಳಿಗೆ ಕೆಲಸಕ್ಕೆ ಹೋಗುವುದಿದೆ. ಕೃಷಿಗೆ ಪೂರಕವಾಗುವಂತೆ ಸಾಮಗ್ರಿಗಳನ್ನು ತಯಾರಿಸುವ, ದುರಸ್ತಿ ಮಾಡುವ ಕುಟುಂಬಗಳೂ ಇಲ್ಲಿವೆ. ಕಬ್ಬಿಣದ ಮತ್ತು ಕಟ್ಟಿಗೆ ಕೆಲಸ ಮಾಡುವ ಎರಡು ಕುಟುಂಬಗಳು ಇಲ್ಲಿ ಕಂಡು ಬರುತ್ತವೆ.

ಸರಗೂರಿನಲ್ಲಿ ಉಳುಮೆಗೆ, ಸಾಗುವಳಿಗೆ ಈಗಲೂ ಎತ್ತು ಮತ್ತು ಹಸುಗಳನ್ನು ಬಳಸುತ್ತಾರೆ. ಎಮ್ಮೆ/ಕೋಣಗಳ ಬಳಕೆ ಇಲ್ಲಿಲ್ಲ. ಟ್ರ್ಯಾಕ್ಟರ್ ಈ ಊರಲ್ಲಿ ನಾಲ್ಕು ಇವೆ. ಟಿಲ್ಲರ್ ಯಂತ್ರಗಳ ಬಳಕೆ ಇಲ್ಲ. ನಾಡಹಸುಗಳ ಸಾಕಾಣಿಕೆ ಹೆಚ್ಚು ಇದೆ. ಜರ್ಸಿ ತಳಿ ಕಾಲಿಟ್ಟಿದೆ. ಡೈರಿ ವತಿಯಿಂದ ಪಶು ವೈದ್ಯರು ವಾರಕ್ಕೊಮ್ಮೆ ಬರುತ್ತಾರೆ.

ದಿನಾಂಕ ೨೯.೫.೦೩ ರಂದು ಸರಗೂರಿಗೆ ಭೇಟಿ ನೀಡಿ ಎಸ್.ಆರ್.ಕೃಷ್ಣಮೂರ್ತಿಯವರ ಮನೆಗೆ ಪ್ರವೇಶ ಮಾಡಿದಾಗ ಈ ಮೊದಲೇ ಬರುವ ವಿಚಾರ ತಿಳಿಸಿದ್ದರಿಂದ ಕೃಷ್ಣಮೂರ್ತಿಯವರು ಇತರರನ್ನೂ ಆಮಂತ್ರಿಸಿದ್ದರು. ಅಣ್ಣನಾದ ಎಸ್.ಆರ್.ವೆಂಕಟರಾಮಯ್ಯ, ಇವರ ಮಗ ಎಸ್.ವಿ.ರಾಮಕೃಷ್ಣ, ತಮ್ಮನಾದ ಎಸ್.ಆರ್.ಶ್ರೀನಿವಾಸಮೂರ್ತಿ ಆಗಮಿಸಿದ್ದರು. ಊರಿನ ಗೋವಿಂದೇಗೌಡ ಕೆಲವು ವಿವರಗಳನ್ನು ನೀಡಿದರು. ಕೃಷ್ಣಮೂರ್ತಿಯವರ ಪತ್ನಿ ಗಾಯತ್ರಿಯವರು ಸ್ವಂತ ಬೆಳೆದ ಮಾವಿನ ಹಣ್ಣುಗಳನ್ನು ತಂದು ಕೊಟ್ಟರು. ಸೇವನೆಯ ಬಳಿಕ ಮಾತಿಗಿಳಿದೆವು.

ಈ ಊರಲ್ಲಿ ಸಂಕೇತಿಗಳು ಬಂದು ಎಷ್ಟು ವರ್ಷ ಆಗಿರಬಹುದು?
ಸುಮಾರು ೨೦೦ ವರ್ಷ ಆಗಿರಬಹುದೇನೋ.

ಎಷ್ಟು ಜನ ಇದೀರಿ? ಯಾರ್‍ಯಾರು ಏನೇನು ಮಾಡ್ತಾರೆ?
ಹತ್ತು ಜನ ಸಂಕೇತಿಗಳು ಇದಾರೆ. ಎಲ್ಲೂ ರಕ್ತ ಸಂಬಂಧಿಗಳೇ. ಎಲ್ಲೂ ವ್ಯವಸಾಯ ಮಾಡ್ತಾರೆ.

ಉನ್ನತ ವ್ಯಾಸಂಗ ಮಾಡಿರೋರು ಎಷ್ಟು ಜನ ಇದಾರೆ?
ಬಿ.ಇ., ವೈದ್ಯಕೀಯ, ಪಿಎಚ್.ಡಿ., ಕೃಷಿಯಲ್ಲಿ ಪಿಎಚ್.ಡಿ, ಮಾಡಿರೋರೂ ಇದಾರೆ.

ಈಗ್ಗೆ ೨೫ ವರ್ಷಗಳಿಂದ ಈ ಊರಲ್ಲಿ ವಾಸವಾಗಿರುವ ಕುಟುಂಬಗಳಲ್ಲಿ ಇಳಿಕೆ ಇದೆಯಾ?
ಇಲ್ಲ. ಮಕ್ಕಳು ಉನ್ನತ ವ್ಯಾಸಂಗ ಮಾಡಿಕೊಂಡು ಹೊರಗಡೆ ಹೋಗಿದಾರೆ.

ಸಂಕೇತಿಗಳು ಯಾವ ಬೆಳೆಯನ್ನು ಹಿಂದೆ ಬೆಳೀತಾ ಇದ್ರು? ಈಗ ಯಾವ ಬೆಳೆ ಮಾಡ್ತಾ ಇದಾರೆ?
ಈ ಮುಂಚೆ ಅಡಿಕೆ ಮತ್ತು ವೀಳ್ಯೇದೆಲೆ ಬೆಳೀತಾ ಇದ್ವಿ. ರಾಗಿ, ಹುರುಳಿ ಮಾಡ್ತಾ ಇದ್ವಿ. ಈಗ ನಾಲೆ ಬಂದ ಮೇಲೆ ಭತ್ತ, ತೆಂಗು, ಮಾವು, ಸಪೋಟ ಬೆಳೀತಾ ಇದೀವಿ.

ಇಲ್ಲಿಗೆ ಯಾವ ನಾಲೆ ನೀರು ಬರುತ್ತೆ?
ಹಾರಂಗಿ ಜಲಾಶಯದ ನೀರು. ಹೆಚ್ಚಾಗಿ ಒಂದೇ ಬೆಳೆಗೆ ನೀರು ಕೊಡ್ತಾರೆ. ಜುಲೈನಿಂದ ಡಿಸಂಬರ್‌ನವರೆಗೆ ನೀರು ಸಿಗುತ್ತೆ. ಜಲಾಶಯದಲ್ಲಿ ನೀರು ಇದ್ರೆ ಬೇಸಿಗೆಯಲ್ಲಿ ದನಕರು ಕುಡಿಯಲಿಕ್ಕೆ ಹದಿನೈದು ದಿನಕ್ಕೊಮ್ಮೆ ನೀರು ಕೊಡ್ತಾರೆ.

ನಾಲೆ ನೀರು ಬಂದ ಮೇಲೆ ಏನು ಬದಲಾವಣೆ ಆಗಿದಾವೆ?
ನಾಲೆ ನೀರು ಬಂದ ಮೇಲೆ ಆರ್ಥಿಕ ಪರಿಸ್ಥಿತಿ ಸುಧಾರಿಸಿದೆ. ಜನರಲ್ಲಿ ಕಳ್ಳತನದ ಪ್ರವೃತ್ತಿ ಕಮ್ಮಿಯಾಗಿದೆ. ನೀರಾವರಿ ಆದ ಮೇಲೆ ದನಕರುಗಳ ಸಾಕಾಣಿಕೆ ಕಡಿಮೆಯಾಯಿತು. ಮರಗಿಡಗಳು ಇಲ್ಲವಾದವು. ಬರೀ ಭತ್ತ ಬಿಟ್ರೆ ಉಳಿದ ಬೆಳೆಗಳ ಪ್ರದೇಶ ಕುಗ್ಗಿತು. ಬೇಳೆಕಾಳು, ಎಣ್ಣೆಕಾಳು, ಇತರೇ ದವಸ ಧಾನ್ಯಗಳ ಸಾಗುವಳಿ ಬಹು ಮಟ್ಟಿಗೆ ಕುಂಠಿತವಾಯಿತು. ನೀರಿನ ಬಳಕೆಯಿಂದ ಮಣ್ಣಿನ ಫಲವತ್ತತೆ ಕ್ಷೀಣಿಸಿದೆ.

ಸರಗೂರಿನಲ್ಲಿರುವ ಸಂಕೇತಿಗಳ ಕೃಷಿಯ ವಿಶೇಷ ಏನು?
ಇಲ್ಲಿ ಅಡಿಕೇನೇ ಪ್ರಧಾನ ಬೆಳೆ. ವೀಳ್ಯೇದೆಲೆಯೂ ಪೂರಕವಾಗಿತ್ತು. ತೆಂಗು, ಬಾಳೆ, ನಿಂಬೆ ಇವು ಉಪ ಬೆಳೆಯಾಗಿ ಇದ್ದವು. ಇದರಿಂದ ಜೀವನ ಚನ್ನಾಗಿತ್ತು. ಮಕ್ಕಳ ಭವಿಷ್ಯದ ದೃಷ್ಟಿಯಿಂದ ಇಲ್ಲೇ ಇರಬೇಕಾದ ಅನಿವಾರ್ಯತೆ ಇದೆ. ಬೇಸಾಯ ಮಾಡುತ್ತಿರುವ ಇಲ್ಲಿನ ಸಂಕೇತಿಗಳು ಕನಿಷ್ಠವೆಂದರೂ ಎಸ್‌ಎಸ್‌ಎಲ್‌ಸಿವರೆಗೆ ಓದಿದವರು. ಪದವಿ ಮಾಡಿಕೊಂಡು ನಾನು ಇಲ್ಲೇ ಬೇಸಾಯ ಮಾಡಿಕೊಂಡು ಇದೀನಿ.

ವಿಳ್ಯೇದೆಲೆ ಪರಿಸ್ಥಿತಿ ಹೇಗಿದೆ?
ಒಂದು ಎಕರೆ ಮೇಲ್ಪಟ್ಟು ಇರುವ ತೋಟಗಳಲ್ಲಿ ವಿಳ್ಯೇದೆಲೆ ಬಹಳ ಕಡಿಮೆ.

ಯಾಕೆ ಕೃಷ್ಣಮೂರ್ತಿಯವರೇ, ತೋಟಗಳಲ್ಲಿ ವಿಳ್ಯೇದೆಲೆ ಕಮ್ಮಿಯಾಯಿತು?
ಅಡಿಕೆ ಕುಯ್ಲು ಸಂದರ್ಭದಲ್ಲಿ ಬಳ್ಳಿಗೆ ಪೆಟ್ಟು ಆಯ್ತು. ವೀಳ್ಯೇದೆಲೆಯನ್ನು ಮುರಿದು ಹಾಳು ಮಾಡಿದ ಪ್ರಸಂಗಗಳೂ ಇವೆ. ಓಡಾಡೋ ಜನ ಕೈಯಿಂದ ಎಲೆ ಕಿತ್ತು ತೊಂದ್ರೆ ಕೊಟ್ರು. ನುರಿತ ಕೆಲಸಗಾರರು ಕಮ್ಮಿಯಾದರು.

ಹತ್ತು ಜನರಲ್ಲಿ ಎಷ್ಟು ಜನ ವಿಳ್ಯೇ ಉಳಿಸಿಕೊಂಡಿದಾರೆ?
ಐದು ಜನ.

ಸಮಯ ೧೨ ಗಂಟೆ ಮೀರಿತ್ತು. ತೋಟಗಳನ್ನು ಕಣ್ಣಾರೆ ಕಂಡು ಬದಲಾವಣೆ, ಬೆಳವಣಿಗೆಯನ್ನು ನೋಡಿಕೊಂಡು ಬರೋಣವೆಂದು ಹೊರಟೆವು. ಹೆಗಲ ಮೇಲೆ ಗೋಣಿಚೀಲ, ಬಲಗೈಯಲ್ಲೊಂದು ಬಿದಿರಿನ ಕೋಲು, ಎಡಗೈಯಲ್ಲೊಂದು ಸ್ಟೀಲ್ ಕ್ಯಾರಿಯರ್ ಇಟ್ಟುಕೊಂಡು




ಅಡಿಕೆಯ ತೋಟದಲ್ಲಿ ಕಾಫಿಗೆ ಹಬ್ಬಿರುವ ವೆನಿಲ್ಲಾ: ಎಸ್.ಆರ್.ಶ್ರೀನಿವಾಸಮೂರ್ತಿಯವರ ತೋಟ:ಸರಗೂರು

ಸಾದಾ ಉಡುಪಿನಲ್ಲಿ ಹೊರಟ ವ್ಯಕ್ತಿಯೊಬ್ಬರನ್ನು ಗಮನಿಸಿ 'ಇವರ್‍ಯಾರು?' ಎಂದೆ. ಕೃಷ್ಣಮೂರ್ತಿಯವರ ತಮ್ಮ ಶ್ರೀನಿವಾಸಮೂರ್ತಿ ಅವರು, 'ಇವರು ವೆಂಕಟೇಶಮೂರ್ತಿ. ವೈದಿಕರು. ಮೂರು ಹೆಣ್ಣು ಮಕ್ಕಳ ಮದುವೆಯನ್ನು ೧೮ ಗುಂಟೆ ತೋಟದಿಂದ ಮಾಡಿದಾರೆ. ಬಹಳ ಕಷ್ಟಜೀವಿ' ಎಂದರು. ತೋಟಕ್ಕೆ ಹೊರಟಿದ್ದ ಅವರನ್ನು ಆಮೇಲೆ ಮಾತನಾಡಿಸೋಣ ಎಂದು ಸ್ವಲ್ಪ ಹೊತ್ತು ಮಾತನಾಡಿಸಿ ಮುಂದೆ ಹೊರಟೆವು. ಊರಿನಿಂದ ಸುಮಾರು ಮೂರು ಕಿ.ಮೀ. ದೂರದಲ್ಲಿ ಇರುವ ತೋಟಗಳನ್ನು ತೋರಿಸಲು ಕೃಷ್ಣಮೂರ್ತಿಯವರು, ಶ್ರೀನಿವಾಸಮೂರ್ತಿ, ಎಸ್.ವಿ.ರಾಮಕೃಷ್ಣ ಅವರೊಡನೆ ಕರೆದೊಯ್ದರು. ತೋಟಕ್ಕೆ ತಲುಪುವ ಮುನ್ನ, ನಾಲೆ ಬಂದ ಬಳಿಕ ಆಗಿರುವ ಬದಲಾವಣೆಗಳ ಬಗ್ಗೆ ವಿಚಾರಗಳು ಪ್ರಸ್ತಾಪವಾಗುತ್ತಿದ್ದವು. ಈ ಪ್ರದೇಶದಲ್ಲಿ ಹಲಸು, ಬೇಲ, ನೇರಳೆ, ಹುಣಿಸೆ, ಹೊನ್ನೆ, ಮುಂತಾದವು ಹೇರಳವಾಗಿ ಬೆಳೆದಿದ್ದವು. ನಾಲೆ ಬಂದ ಬಳಿಕ ಇವೆಲ್ಲಾ ಖಾಲಿಯಾದವು. ಹಲಸಿನಲ್ಲಿ ವಿಶೇಷವಾದ ತಳಿಗಳಿದ್ದವು. ಕೆಂದ್ಹಲಸು: ಬೀಜ ಸಣ್ಣ, ತೊಳೆ ದಪ್ಪ (ಕಲ್ಯಾಣ ಬಾಳೆ ಗಾತ್ರ), ಹಣ್ಣು ಮೂರಡಿ ದಪ್ಪ, ತೂಕ ೩೦-೪೦ ಕಿ.ಗ್ರಾಂ., ಇಬ್ಬರು ಅಡ್ಡೆ ಹಾಕಿಕೊಂಡು ತಗೊಂಡು ಹೋಗ್ತಾ ಇದ್ವಿ. ಈಗ ಮರವಿದ್ದರೂ ಆ ಗುಣ ಇಲ್ಲ. ಈಚೂರು ಹಲಸು: ಬಿಸ್ಕತ್ ಬಣ್ಣದ ತೊಳೆ, ನಾಲ್ಕೈದು ಅಡಿ ದಪ್ಪ. ತೂಕ ೫೦ ಕಿ.ಗ್ರಾಂ. ಮೀರುತ್ತಿತ್ತು. ಒಳ್ಳೆ ರುಚಿ, ಒಂದು ವಾರ ಇಟ್ಟರೂ ಕೆಡುತ್ತಿರಲಿಲ್ಲ. ೧೯೮೧ ರಲ್ಲೇ ಮರ ಹೋಯ್ತು. ಇನ್ನೊಂದು ರೀತಿಯ ಹಲಸು: ಉದ್ದನೆಯ ಹಣ್ಣಿನದು. ಜೇನುತುಪ್ಪದಂತಹ ರಸವನ್ನು ತೊಳೆಯಲ್ಲಿ ಇಟ್ಟುಕೊಂಡಿದ್ದ ಈ ಹಲಸೂ ಈಗ ಇಲ್ಲ. ಆಗ ಕಸಿ ವಿಧಾನಗಳ ಬಗ್ಗೆ ತಿಳುವಳಿಕೆ ಇರಲಿಲ್ಲ. ಇವುಗಳನ್ನು ಉಳಿಸಿಕೊಳ್ಳಲು ಆಗಲಿಲ್ಲ.



ಬದುವಿನಲ್ಲಿ ತೇಗ:ಅದಕ್ಕೆ ಕಾಳುಮೆಣಸು:ಸರಗೂರು

ತೋಟದ ಜಾಗ ತಲುಪಿದಾಗ ಮೊದಲು ಸಿಕ್ಕಿದ್ದು ಶ್ರೀನಿವಾಸಮೂರ್ತಿಯವರ ತೋಟ. ಪ್ರವೇಶ ಮಾಡುವ ಮುನ್ನ ನೀರು ಹರಿಯುವ ಕಾಲುವೆ ತೋರಿಸಿದ ಕೃಷ್ಣಮೂರ್ತಿಯವರು 'ಇದು ಮೊಸಳೆಗುಂಡಿ ಹಳ್ಳ. ಹಂಡ್ರಂಗಿ ಮತ್ತು ಬೊಮ್ಮನಹಳ್ಳಿ ಕೆರೆಗಳ ಬಸಿ ನೀರು ಇಲ್ಲಿ ಹರಿದುಕೊಂಡು ಹೋಗುತ್ತೆ. ಸದಾ ಹರಿಯುತ್ತಿದ್ದರೆ ತೋಟಗಳಿಗೆ ತನುವು. ಈಗ ಎರಡು ಬೇಸಿಗೆಯಿಂದ ನೀರು ಹರಿಯುತ್ತಿಲ್ಲ' ಎಂದರು. ಶ್ರೀನಿವಾಸಮೂರ್ತಿಯವರ ತೋಟದೊಳಗೆ ಕಾಲಿಟ್ಟಾಗ ಎಲ್ಲೆಡೆ ಅಡಿಕೆಯ ಗರಿ ಹಾಗೆಯೇ ಉಳಿದಿತ್ತು. 'ಎಷ್ಟು ವರ್ಷ ದಿಂದ ಹೀಗೆ ಬಿಟ್ಟಿದ್ದೀರಿ?' ಎಂದೆ. 'ನಾಲ್ಕು ವರ್ಷದಿಂದ ಗರಿ ಎತ್ತಿಲ್ಲ, ಅಗೆತ ಮಾಡಿಸಿಲ್ಲ. ಮಣ್ಣಿನ ತೇವ ಸಂರಕ್ಷಣೆಗೆ ಇದು ಅನುಕೂಲ' ಎಂದರು ಶ್ರೀನಿವಾಸಮೂರ್ತಿ. ತೋಟದಲ್ಲಿ ಕಾಫಿ ಗಿಡ, ಏಲಕ್ಕಿ, ವೆನಿಲ್ಲಾ ಅಲ್ಲಲ್ಲಿ ಕಾಣುತ್ತಿತ್ತು. ಅಡಿಕೆ ಆರೋಗ್ಯವಾಗಿ ಬೆಳೆದಿತ್ತು. ಪ್ರಶ್ನೆ ಕೇಳಿದೆ, 'ಯಾವಾಗ ಕಾಫಿ ಹಾಕಿದಿರಿ? ಗಿಡ ಉದ್ದವಾಗಿ ಬೆಳೆದಿದ್ದಾವೆ.'



ಅಡಿಕೆಯಲ್ಲಿ ಕಿತ್ತಲೆ:ಹೊಸ ಸಂಯೋಜನೆ:ಸರಗೂರು

'ಐದು ವರ್ಷ ಆಯ್ತು. ವೆನಿಲ್ಲಾಗೆ ಆಸರೆಯಾಗಿ ಹಾಕಿದಿವಿ.'

ಕಾಫಿ ಎಲ್ಲ ರೋಬಸ್ಟಾ ಅನಿಸುತ್ತೆ?
ಹೌದು...

ಇಲ್ಲಿ ತೇಗದ ಗಿಡಗಳಿಗೆ ಕಾಳುಮೆಣಸು ಹಾಕಿದೀರಿ, ಹೇಗನ್ನಿಸುತ್ತೆ?
ತೇಗದ ಗಿಡ ಹಾಕಿ ಹತ್ತು ವರ್ಷ ಆಯ್ತು. ಇವಕ್ಕೆ, ನೋಡೋಣ ಅಂತ ಕಾಳು ಮೆಣಸನ್ನು ಹಾಕಿದಿವಿ. ಚೆನ್ನಾಗಿ ಬೆಳೆದಿದೆ. ಆದರೆ ಬೇಸಿಗೆಯಲ್ಲಿ ನೀರು ಬೇಕು.

ಪಕ್ಕದಲ್ಲೇ ಕೃಷ್ಣಮೂರ್ತಿಯವರ ತೋಟ. ಹುರುಪಿನ ವ್ಯಕ್ತಿತ್ವದ ಕೃಷ್ಣಮೂರ್ತಿಯವರು ತೋಟದಲ್ಲಿ ಭಿನ್ನತೆಯನ್ನು ಮಾಡಿದ್ದಾರೆ. ಅಡಿಕೆಯನ್ನು ಒಂಬತ್ತು ಚದರ ಅಡಿ ಅಂತರದಲ್ಲಿ ನೆಟ್ಟಿರುವ ಇವರು ಕಿತ್ತಳೆ, ಮೂಸಂಬಿ, ನಿಂಬೆ, ಹೆರಳೆಕಾಯಿ, ಚಕೋತ, ಸೀಬೆ, ವೆನಿಲಾ, ತೇಗ ಇತ್ಯಾದಿಗಳನ್ನು ಜೊತೆ ಜೊತೆಗೆ ಬೆಳೆದಿದ್ದಾರೆ. ವಿಚಾರ ಪಡೆಯಲು ಪ್ರಶ್ನಿಸಿದೆ.

ಅಡಿಕೆಯಲ್ಲಿ ಕಿತ್ತಳೆ, ಮೂಸಂಬಿ, ನಿಂಬೆ, ಇತ್ಯಾದಿಗಳನ್ನು ಬೆಳೆಯುವ ಆಲೋಚನೆ ಹೇಗೆ ಬಂತು? ಏನು ಅನುಕೂಲವಾಗಿದೆ?
ಬಹು ಮಹಡಿ ಬೆಳೆ ಪದ್ಧತಿ ಮಾಡೋದು ಒಳ್ಳೆಯದೆಂದು ತಿಳಿದುಕೊಂಡು ಇವನ್ನು ಹಾಕಿದೆ. ಹದಿಮೂರು ಸಾಲು ಕಿತ್ತಳೆ, ಹದಿನಾಲ್ಕು ಸಾಲು ನಿಂಬೆ, ಹದಿನಾಲ್ಕು ಸಾಲು ಮೂಸಂಬಿ, ಒಂದೊಂದು ಸಾಲು ಹೆರಳೆ, ಚಕೋತ; ಹದಿಮೂರು ಸಾಲು ಸೀಬೆಯನ್ನು ಹಾಕಿದೀನಿ. ಒಂದೇ ಸಾಲಿನಲ್ಲಿ ಈ ಗಿಡಗಳನ್ನು ನೆಟ್ಟಿರುವೆ. ದಾರಿಯನ್ನೂ ಬಿಟ್ಟಿರುವೆ. ಇವನ್ನೆಲ್ಲಾ ೧೯೯೮ರಲ್ಲಿ ನಾಟಿ ಮಾಡಿರುವೆ. ಇಳುವರಿ ಶುರುವಾಗಿದೆ. ಮಾರುಕಟ್ಟೆ ನೋಡಬೇಕು.

ಇಲ್ಲಿ ಮೂಸಂಬಿ ಹೇಗೆ ಬರುತ್ತೆ ಅಂತ ಅನಿಸುತ್ತೆ?
ನೀವೇ ನೋಡ್ತಾ ಇದೀರಲ್ಲ. ಬೆಳೆ ಉತ್ತಮವಾಗಿ ಬಂದಿದೆ. ಎರಡು ವರ್ಷ ಹಣ್ಣು ಹುಳಿಯಾಗಿ ಕಾಣಿಸಿತು. ಈ ವರ್ಷ ಚೆನ್ನಾಗಿದೆ.

ಕಿತ್ತಳೆ, ನಿಂಬೆ, ಮೂಸಂಬಿ ಸಸಿಗಳನ್ನು ಎಲ್ಲಿಂದ ತಂದ್ರಿ?
ಮೂಸಂಬಿ ಗಿಡಗಳನ್ನ ಹೈದರಾಬಾದ್‌ನಿಂದ ಲಾಲ್‌ಬಾಗ್‌ನವರು ತರಿಸಿ ಕೊಟ್ಟರು. ಕಿತ್ತಳೆ ಸಸಿಗಳನ್ನು ಚಟ್ಟಳ್ಳಿ ಫಾರಂನಿಂದ, ನಿಂಬೆ ಗಿಡಗಳನ್ನು ಬೈಚನಹಳ್ಳಿ ಫಾರಂನಿಂದ ತಂದೆ.

ವೆನಿಲ್ಲಾ ಇಲ್ಲಿ ಯಾವಾಗ ಹಾಕಿದ್ರಿ? ವಿಚಾರ ಹೇಗೆ ಗೊತ್ತಾಯಿತು?
೧೯೯೭ರಲ್ಲಿ ಹಾಕಿದೆ. ತೀರ್ಥಹಳ್ಳಿಯ ಪುರುಷೋತ್ತಮರಾವ್ ಅವರಿಂದ ವಿಚಾರ ತಿಳೀತು.



ಮೂಸಂಬಿ:ಅಡಿಕೆ ತೋಟಗಳಲ್ಲಿ ಹೊಸ ಪರಿಚಯ:ಸರಗೂರು


ಅಡಿಕೆ ತೋಟದಲ್ಲೂ ಉತ್ತಮ ನಿಂಬೆ ಬರುತ್ತದೆ ಎನ್ನುತ್ತಾರೆ ಎಸ್.ಆರ್.ಕೃಷ್ಣಮೂರ್ತಿ:ಸರಗೂರು

ವೆನಿಲಾ ಇಲ್ಲಿ ಹೇಗೆ ಬರ್ತಾ ಇದೆ?
ಚನ್ನಾಗಿಯೇ ಬರ್ತಾ ಇದೆ. ಹೋದ ಸಾರಿಯಿಂದ ಇಳುವರಿ ಶುರುವಾಗಿದೆ. ಏಳು ಕಿ.ಗ್ರಾಂ. ಸಂಸ್ಕರಣೆ ಮಾಡಿದ ಕೋಡು ಸಿಕ್ತು.

ಹೇಗೆ ಮಾರಾಟ ಮಾಡಿದ್ರಿ? ಹಣ ಎಷ್ಟು ಸಿಕ್ತು?
ನಾನು ವೆನಿಲ್ಲಾ ಅಭಿವೃದ್ಧಿ ಟ್ರಸ್ಟ್ ಹಿರಿಯಡ್ಕದ ಸದಸ್ಯ. ಅದರ ಮೂಲಕ ಮಾರ್ತೀನಿ. ಏಳು ಕಿ.ಗ್ರಾಂನಿಂದ ೫೨,೫೦೦ ರೂಪಾಯಿ ಸಿಕ್ತು.

ಇಲ್ಲೆಲ್ಲಾ ಎಷ್ಟು ಜನ ವೆನಿಲ್ಲಾ ಹಾಕಿದಾರೆ? ಎಷ್ಟು ಇರಬಹುದು?
ಮೂರೇ ಜನ ಹಾಕಿರೋದು. ಸುಮಾರು ೧೦೦೦ ಇರಬಹುದು.

ಯಾವ್ಯಾವುದಕ್ಕೆ ವೆನಿಲ್ಲಾವನ್ನು ಹಬ್ಬಿಸಿದಿರಿ?
ಕಾಫಿ ಗಿಡ, ಗ್ಲಿರಿಸೀಡಿಯಾ, ಅಡಿಕೆ, ಕಿತ್ತಳೆ, ಸೀಬೆ ಹೀಗೆ ಎಲ್ಲವಕ್ಕೂ ಹಬ್ಬಿಸಿದೀವಿ.

ಸರಗೂರಿನ ಸಂಕೇತಿ ಕೃಷಿಕರಲ್ಲಿ ಶುದ್ಧ ಕೃಷಿ ವಿಧಾನಗಳ ಬಗ್ಗೆ ಒಲವು ಇದೆ. ರಾಸಾಯನಿಕ ಗೊಬ್ಬರ, ವಿಷ ಪದಾರ್ಥಗಳನ್ನು ತೋಟಗಳಲ್ಲಿ ಬಳಸಲು ಮನಸ್ಸು ಮಾಡುವುದಿಲ್ಲ. ಪರಿಸರ ಪ್ರಿಯ ವಿಧಾನಗಳಿಗೆ ಹೆಚ್ಚು ಮಹತ್ವ ನೀಡುತ್ತಾರೆ. ಖಾಸಗಿ ಸಂಸ್ಥೆಗಳಿಂದ ಸಿದ್ಧಪಡಿಸಿದ ಗೊಬ್ಬರವನ್ನು ಸ್ವಲ್ಪ ಪ್ರಮಾಣದಲ್ಲಿ ಬಳಸುವ ಇವರು ಸಗಣಿ ಗೊಬ್ಬರವನ್ನು ಸೊಪ್ಪುಗಳೊಂದಿಗೆ ಬೆರಸಿ ಎರೆಹುಳು ಗೊಬ್ಬರ ತಯಾರಿಸಲು ಮುಂದಾಗಿದ್ದಾರೆ. ಹತ್ತು ಸಂಕೇತಿ ಕುಟುಂಬಗಳಲ್ಲಿ ಜಾನುವಾರು ಸಾಕಾಣಿಕೆ ಈ ಹಿಂದೆ ಇತ್ತು. ಈಗ ಒಬ್ಬರೇ ಸಾಕ್ತಾ ಇದಾರೆ. 'ನಮ್ಮಲ್ಲೇ ೨೦ ದನಕರುಗಳು ಇದ್ದವು. ಜಾಗ ಕಮ್ಮಿಯಾಗಿದ್ದರಿಂದ ಕೈಬಿಟ್ವಿ. ಈಗ ಮತ್ತೊಮ್ಮೆ ತಂದು ಸಾಕ್ಲಿಕ್ಕೆ ಯೋಜನೆ ಮಾಡಿದೀವಿ' ಎನ್ನುತ್ತಾರೆ ಕೃಷ್ಣಮೂರ್ತಿ.

ತೋಟಗಳಲ್ಲಿ ಲಭ್ಯವಾಗುವ ಸಾವಯವ ತ್ಯಾಜ್ಯವನ್ನು ಇಲ್ಲಿಯ ಜನ ಸುಡಲ್ಲ. ಉಳುಮೆ, ಅಗತೆಯನ್ನು ನಿಲ್ಲಿಸಿದ್ದಾರೆ. ಪರ್ಯಾಯ ಬೆಳೆಗಳತ್ತ ಯೋಚಿಸಿದ್ದಾರೆ. ಕಳೆ - ಕಸವನ್ನು ಸದ್ಬಳಕೆ ಮಾಡಿಕೊಳ್ಳುತ್ತಿದ್ದಾರೆ. ತೆಂಗಿನ ಮಧ್ಯದಲ್ಲಿ ಸಪೋಟವನ್ನು ಹಾಕಲಾಗಿದೆ. ಹಸುವಿನ ಗಂಜಲದ ಬಳಕೆ ಇವರ ಮನಸ್ಸಿಗೆ ಹಿಡಿಸಿದೆ. ಒಂದು ಭಾಗ ಗಂಜಲದೊಂದಿಗೆ ಹತ್ತು ಪಟ್ಟು ನೀರನ್ನು ಸೇರಿಸಿಕೊಂಡು ಭತ್ತ, ಶುಂಠಿ ಬೆಳೆಗೆ ಸಿಂಪಡಿಸುತ್ತಾರೆ. ಪಂಚಗವ್ಯದ ದ್ರಾವಣವನ್ನು ಬಳಸಿದ್ದಾರೆ. '೧೫ ಲೀಟರ್ ಗಂಜಲ, ೧೮ ಕಿ.ಗ್ರಾಂ. ಸಗಣಿ, ಐದು ಲೀಟರ್ ಹಾಲು, ಐದು ಲೀಟರ್ ಮೊಸರು, ಎರಡು


ಅಡಿಕೆ ತೋಟದಲ್ಲಿ ಸೀಬೆ ಬೆಳೆ:ಸರಗೂರು



ತೆಂಗಿನೊಂದಿಗೆ ಸೇರಿಸಿರುವ ಸಪೋಟ:ಸರಗೂರು


ಕಿ.ಗ್ರಾಂ ತುಪ್ಪವನ್ನು ಒಂದು ಡ್ರಂನಲ್ಲಿ ಹಾಕಿ ಕಲಸಿ, ಒಂದು ವಾರ ಬಿಟ್ಟು ಎಲ್ಲಾ ಗಿಡಗಳಿಗೆ ಬುಡಕ್ಕೆ ಹಾಕ್ತೀವಿ. ಇದನ್ನು ಸಾವಯವ ಗೊಬ್ಬರದ ಜೊತೆ ಸೇರಿಸ್ತೀವಿ. ಸಿಂಪರಣೆಗೂ ಬಳಸ್ತೀವಿ' ಎನ್ನುತ್ತಾರೆ ಇವರು.

ಸರಗೂರಿನ ಸಂಕೇತಿ ಕೃಷಿಕರ ಅಡಿಕೆ ತೋಟಗಳಲ್ಲಿ ಕೆಲವೆಡೆ ಮಾತ್ರ ವೀಳ್ಯೆದೆಲೆ ಉಳಿದಿದೆ. ಐವರು ವೀಳ್ಯೆಯನ್ನು ಉಳಿಸಿಕೊಂಡು ಬೆಳೆಸಿಕೊಂಡು ಬಂದಿದ್ದಾರೆ. ಎಸ್.ವಿ.ಸತ್ಯನಾರಾಯಣ, ಎಸ್.ವಿ.ವೆಂಕಟೇಶ್‌ಮೂರ್ತಿ, ಎಸ್.ವಿ.ಸೂರ್ಯ ನಾರಾಯಣ, ಎಸ್.ಆರ್.ಕೃಷ್ಣಮೂರ್ತಿ, ಎಸ್.ವಿ.ರಾಮಚಂದ್ರ ಮತ್ತು ಎಸ್.ವಿ. ಕೇಶವ ಮೂರ್ತಿಯವರ ತೋಟದಲ್ಲಿ ವೀಳ್ಯೆ ಇದೆ. ಅಂಬಾಡಿ ಎಲೆ ಇಲ್ಲಿಯ ತೋಟಗಳಲ್ಲಿ ವಿರಳ. ಇದ್ದ ಬಳ್ಳಿಗಳನ್ನು ಬೆಲೆ ಸಿಗುತ್ತಿಲ್ಲ ಎಂಬ ನೆಪದಲ್ಲಿ ಉಳಿಸಿಕೊಳ್ಳುತ್ತಿಲ್ಲ. ಅಡಿಕೆಯಂತೆ / ಅಡಿಕೆಗಿಂತ ವೀಳ್ಯೇದೆಲೆಯು ಒಳ್ಳೆಯ ಕಾಸು ಕೊಟ್ಟಿರುವುದಿದೆ. ನೀರಿನ ಕೊರತೆಯಿಂದ ಈ ಸಾರಿ ಬಳ್ಳಿಗಳು ಒಣಗುತ್ತಿವೆ. 'ನಾನು ೨೫ ವರ್ಷಗಳಿಂದ ಈ ರೀತಿಯ ನೀರಿನ ಕೊರತೆಯನ್ನು ಕಂಡಿರಲಿಲ್ಲ. ನಾಲ್ಕು ವರ್ಷದಿಂದ ಅಡಿಕೆ ಸೊರಗುತ್ತಿದೆ. ಭಾವಿಗಳಲ್ಲಿ ನೀರು ಬತ್ತಿ ಹೋಗಿದೆ. ಇರುವ ನೀರು ಸಾಕಾಗುತ್ತಿಲ್ಲ' ಎಂದು ಎಸ್.ವಿ.ರಾಮಕೃಷ್ಣ ನುಡಿದರು. ತಗ್ಗಿನಲ್ಲಿರುವ ಅಡಿಕೆಗೂ ಈ ಬಾರಿ ನೀರಿನ ಕೊರತೆ ಕಾಡುತ್ತಿದೆ.

ಇಲ್ಲಿ ತೆಂಗು ಹಾಕಿ ೧೮ ವರ್ಷ ಆಯ್ತು. ೧೯೯೨ರಲ್ಲಿ ಸಪೋಟ, ಮಾವು ಹಾಕಿದ್ದಾರೆ. ತೆಂಗಿನಲ್ಲಿ ನುಸಿ ಕ್ರಿಮಿಯು ಕಾಣಿಸಿಕೊಂಡು ಇಳುವರಿಯನ್ನು ಕಮ್ಮಿಗೊಳಿಸಿದೆ. ಪಾಲನೆ-ಪೋಷಣೆಯಲ್ಲಿ ಕೃಷಿಕರು ಸುಸ್ತಾಗಿದ್ದಾರೆ. ಮೂವತ್ತು ಅಡಿಗೊಂದರಂತೆ ಹಾಕಿರುವ ತೆಂಗಿಗೆ ನೀರಿನ ಕೊರತೆ ಇದೆ. ಹತ್ತು ಜನ ಸಂಕೇತಿಗಳಲ್ಲಿ ಕೃಷ್ಣಮೂರ್ತಿಯವರು ಮಾತ್ರ ಕೊಳವೆ ಬಾವಿ ಕೊರೆಸಿದ್ದು ಇನ್ನುಳಿದವರು ತೋಟದಲ್ಲೇ ನಿರ್ಮಿಸಿದ ಬಾವಿಯನ್ನು ಸೋಸಿಕೊಂಡು ಬೆಳೆಗೆ ನೀರುಣಿಸುತ್ತಾರೆ. ಹನಿ ನೀರಾವರಿ ಪದ್ಧತಿ ಇಲ್ಲಿ ಪರಿಚಯಗೊಂಡಿದೆ. ಆದರೂ ಮರದ ಬುಡಕ್ಕೆ ನೀರುಣಿಸುವ ಕ್ರಮ ಈಗಲೂ ಚಾಲ್ತಿಯಲ್ಲಿದೆ. ೭೦ ವರ್ಷ ವಯಸ್ಸಿನ ವೆಂಕಟೇಶಮೂರ್ತಿಯವರು ತಮಗಿರುವ ೧೮ ಗುಂಟೆ ತೋಟದಲ್ಲಿ ವೀಳ್ಯೇದೆಲೆ ಉಳಿಸಿಕೊಂಡಿದಾರೆ. ತೋಟದಲ್ಲಿರುವ ಬಾವಿಯಿಂದ ನೀರೆತ್ತಿಕೊಂಡು ಬೆಳೆಗೆ ಉಣಿಸಿದವರು ಅವರು. ವಾರ ವಾರವೂ ಸುಮಾರು ೬೦ ಕಟ್ಟು ಎಲೆಯನ್ನು ಕತ್ತರಿಸಿಕೊಂಡು, ತಾವೇ ಜೋಡಿಸಿಕೊಂಡು, ಕೊಣನೂರಿನ ಗುರುವಾರದ ಸಂತೆಯಲ್ಲಿ ತಾವೇ ಮಾರಾಟ ಮಾಡಿಕೊಂಡು ಬರುತ್ತಾರೆ. ಅಡಿಕೆಯಲ್ಲಿ ೨೦ ಕ್ವಿಂಟಾಲ್ ಹಸಿ ಅಡಿಕೆ ಸಿಗ್ತಾ ಇದೆ. ಎಲ್ಲಾ ಕೆಲಸಗಳನ್ನೂ ಸ್ವಂತವಾಗಿ ಮಾಡುತ್ತಾರೆ. ಹಸಿ ಅಡಿಕೆಯನ್ನು ಮಾರಾಟ ಮಾಡುತ್ತಾರೆ.



ಎಲೆ ಕೊಯ್ಯಲು ಹೆಬ್ಬೆರಳಿಗೆ ಕಬ್ಬಿಣದ ಉಗುರು:ಸರಗೂರು



ಎಲೆಯ ತೊಟ್ಟನ್ನು ದೊಡ್ಡದಾಗಿ ಕತ್ತರಿಸಿದರೆ ಚಿಗುರೆಲೆ ಬರುವುದಕ್ಕೆ ಅಡ್ಡಿಯಾಗುತ್ತದೆ ಎನ್ನುತ್ತಾರೆ ಎಸ್.ವಿ.ಸತ್ಯನಾರಾಯಣ:ಸರಗೂರು

ಸರಗೂರಿನ ಸಂಕೇತಿ ಕೃಷಿಕರಲ್ಲಿ ಎಂಟು ಜನರಿಗೆ ಗದ್ದೆ ಜಮೀನು ಇದೆ. ಬೆಳೆಯುವ ತಳಿ ರಾಜಮುಡಿ. ಇಬ್ಬರದು ತಂಬಾಕು ಲೈಸನ್ಸ್ ಇದೆ. ೧೯೭೬ರಿಂದ ತಂಬಾಕು ಬೆಳೆದವರು. ಭತ್ತದಲ್ಲಿ ಇಲ್ಲಿ ಎಕರೆಗೆ ೧೫ ಕ್ವಿಂಟಾಲ್ ಇಳುವರಿ ಸಿಗುತ್ತಿದೆ. ಭತ್ತವನ್ನೂ ಶುದ್ಧವಾಗಿ ಬೆಳೆಯುವ ನಿಟ್ಟಿನಲ್ಲಿ ಕಾರ್ಯಪ್ರವೃತ್ತರಾಗಿದ್ದಾರೆ. ಶುಂಠಿಯನ್ನೂ ಒಂದಿಬ್ಬರು ಸಾಗುವಳಿ ಮಾಡುತ್ತಿದ್ದಾರೆ. ಇಲ್ಲಿಯೂ ರಾಸಾಯನಿಕ ಬಳಸದೇ ಬೆಳೆ ಮಾಡಲು ಒಲವು ಮೂಡಿದೆ. ತೋಟಗಳಲ್ಲಿ ಬಹುತೇಕ ಕಡೆ ಸುವರ್ಣಗಡ್ಡೆ ಗಿಡಗಳು ಕಾಣಸಿಗುತ್ತವೆ. ಕೃಷ್ಣಮೂರ್ತಿಯವರ ತೋಟದಲ್ಲಂತೂ ಹೇರಳವಾಗಿ ಈ ಗಿಡಗಳು ಇವೆ. 'ಈಗ್ಗೆ ನಾಲ್ಕು ವರ್ಷದ ಹಿಂದೆ ಮೂರು ಕ್ವಿಂಟಾಲ್ ಆಗಿತ್ತು. ಎರಡು ರೂಪಾಯಿಗೆ ಕಿ.ಗ್ರಾಂನಂತೆ ಮಾರಾಟ ಮಾಡಿದೆ. ಬೇಡಿಕೆ ಇದ್ದಾಗ ಮಾರ್ತೀನಿ. ಇಲ್ಲದಿದ್ರೆ ತೋಟದಲ್ಲಿ ಹಾಗೇ ಬಿಡ್ತೀನಿ. ಸುವರ್ಣಗೆಡ್ಡೆಯಿಂದ ಅಡಿಕೆಯಲ್ಲಿನ ಅಣಬೆ ರೋಗ ಪರಿಣಾಮಕಾರಿಯಾಗಿ ಹತೋಟಿಗೆ ಬಂದಿದೆ. ಅಡಿಕೆಯ ಇಳುವರಿಗೆ ಅಡ್ಡಿಯಾಗಿಲ್ಲ' ಎನ್ನುತ್ತಾರೆ ಕೃಷ್ಣಮೂರ್ತಿ. ಸುವರ್ಣಗಡ್ಡೆಯು ಆಗಾಗ್ಗೆ ಕಳಿತು ಗೊಬ್ಬರವಾಗುತ್ತದೆ, ಔಷಧಿಯ ಗುಣವನ್ನು ಮಣ್ಣಿಗೆ ನೀಡುತ್ತದೆ. ಒಂದೇ ರೀತಿಯ ಮಣ್ಣು, ಅದೇ ಉಪಚಾರ ಇರುವ ತೋಟಗಳಲ್ಲಿ ಸುವರ್ಣಗಡ್ಡೆ ಇರುವುದು, ಇಲ್ಲದಿರುವುದನ್ನು ಗಮನಿಸಿದರೆ ಇದರ ಪರಿಣಾಮ ಕಾಣುತ್ತದೆ ಎಂದವರು ಹೇಳುತ್ತಾರೆ. ನೆಲಸಂಪಿಗೆಯೂ ಕೃಷ್ಣಮೂರ್ತಿಯವರ ತೋಟದಲ್ಲಿ ಹುಲುಸಾಗಿ ಬೆಳೆದಿದೆ. ಬೇಸಿಗೆಯಲ್ಲಿ (ಯುಗಾದಿ ಸಂದರ್ಭದಲ್ಲಿ) ಎಲೆ ಇಲ್ಲದೇ ಬರೀ ಹೂವು ಕಾಣುತ್ತದೆ. ಸುಮಾರು ೧೫ ದಿನಗಳ ಕಾಲ ಗಡ್ಡೆಗಳಿಂದ ಹೂವು ಮೂಡುತ್ತದೆ. ಹೂವಿನದು ವಿಪರೀತ ಪರಿಮಳ; ಪೂಜೆಗೆ, ಮುಡಿದುಕೊಳ್ಳಿಕ್ಕೆ ಬಳಸ್ತಾರೆ. ಬೇಗ ಬಾಡುವ ಗುಣ ಇದೆ. ಸುವರ್ಣಗಡ್ಡೆಯನ್ನು ತರಕಾರಿಯಾಗಿ ಅಗತ್ಯವಿರುವಾಗಲೆಲ್ಲಾ ಬಳಸುತ್ತಾರೆ. ನಿತ್ಯ ತರಕಾರಿಯಾಗಿಯೂ, ತಿಥಿಗಳಲ್ಲಿ, ಶುಭ-ಅಶುಭ ಸಂದರ್ಭದಲ್ಲೂ ಬಳಸ್ತಾರೆ. ಇಲ್ಲಿ ಮದುವೆ ಮುಂಜಿಗಳಲ್ಲಿ ಬಳಸುವುದು ರೂಢಿಯಿಲ್ಲ.

ಸರಗೂರಿಗೆ ಮೊದಲು ಬಂದವರು ಗಂಗಾಧರ ಶಾಸ್ತ್ರಿ ಮತ್ತು ಶ್ರೀನಿವಾಸ ಶಾಸ್ತ್ರಿ. ಇವರ ಸಂತಾನವೇ ಈಗ ವೃದ್ಧಿಯಾಗಿದೆ. ಶ್ರೀನಿವಾಸಶಾಸ್ತ್ರಿಯವರ ಬಳಗವೇ ಇಲ್ಲಿ ಕಂಡು ಬರುತ್ತದೆ. ಇಲ್ಲಿರುವ ಕುಟುಂಬ ಗಳಲ್ಲಿ ಸಾಮರಸ್ಯ ಉತ್ತಮವಾಗಿದೆ. ಆರ್ಥಿಕವಾಗಿ ಸುಧಾರಣೆಗೊಂಡಿದ್ದಾರೆ. ವ್ಯಾಪಾರಕ್ಕೆ (ಅಡಿಕೆ ತುಡಿಕೆ) ಕೈ ಹಾಕಿ ಸೋತ ಶ್ರೀನಿವಾಸಮೂರ್ತಿ ಹೇಳುತ್ತಾರೆ, 'ಅದ್ಯಾಕೋ ನಮಗೆ ಒಗ್ಗಲಿಲ್ಲ' ಎನ್ನು ತ್ತಾರೆ. ಅಡಿಕೆಗೆ ಬೆಲೆ ಬಂದಾಗ ಸಮತೋಲನ ತಪ್ಪಿ ಸಾಲ ಹೆಚ್ಚು ಮಾಡಿಕೊಂಡಿರುವ ನಿದರ್ಶನ ಗಳೂ ಇವೆ. ತೋಟದ ಕೆಲಸಗಳಲ್ಲಿ ಎಲ್ಲರೂ ಕೈ ಮುಟ್ಟಿ ತೊಡಗುತ್ತಾರೆ. ಆಳುಗಳ ಮೇಲೆ



ಆರೋಗ್ಯವಾಗಿ ಬೆಳೆದ ಕಾಫಿ, ಮನೆ ಬಳಕೆಗೂ ಉಪಯುಕ್ತ: ಎಸ್.ವಿ.ಸತ್ಯನಾರಾಯಣ:ಸರಗೂರು



ರೋಗಪೀಡಿತ ಬಾಳೆ:ಶೀತಕ್ಕೆ ಬಲಿ:ಸರಗೂರು

ಅವಲಂಬನೆ ತೀರಾ ಕಮ್ಮಿ ಇದೆ. ತೋಟ ಕಾಯಲು ಗೂರ್ಖಾಗಳನ್ನು ಇಲ್ಲಿ ಐದು ವರ್ಷ ಇಟ್ಟು ಸಂಕೇತಿ ಕೃಷಿಕರು ವರ್ಷ ವರ್ಷವೂ ೧೫-೨೦ ಸಾವಿರ ರೂಪಾಯಿ ಈ ಸಲುವಾಗಿ ಖರ್ಚು ಮಾಡುತ್ತಿದ್ದರು. ಅದರಿಂದಾಗುವ ಅನಾನುಕೂಲ, ಅವರಿಗೆ ಆಗುವ ಖರ್ಚು, ಇಳಿದ ಬೆಲೆ, ಇತ್ಯಾದಿಗಳನ್ನು ಗಮನಿಸಿ ಈಗ ಅವರನ್ನು ನೇಮಿಸುತ್ತಿಲ್ಲ. ಇದರ ಬದಲಿಗೆ ಹಂಗಾಮಿನಲ್ಲಿ (ಸೆಪ್ಟಂಬರ್, ಅಕ್ಟೋಬರ್, ನವಂಬರ್) ತೋಟದಲ್ಲಿ ಕೆಲಸ ಮಾಡೋರನ್ನ ಮಲಗಿಸ್ತಾರೆ. ಸಿಗದಿದ್ರೆ ಇವರೇ ವಾಸ್ತವ್ಯ ಹೂಡ್ತಾರೆ.

ಸರಗೂರಿನಲ್ಲಿ ಐದು ಜನ ಅಡಿಕೆ ತುಡಿಕೆಯನ್ನು ಮಾಡುತ್ತಾರೆ. ಹಣ್ಣಾಗಿರದ ಹಸಿರು ಅಡಿಕೆಯನ್ನು ಕೆಡಿವಿಸಿ, ಸಿಪ್ಪೆ ಸುಲಿದು, ಎರಡು ಹೋಳು ಮಾಡಿ ಬಣ್ಣ ಕಟ್ಟಿ ಬೇಯಿಸುತ್ತಾರೆ. ಇದನ್ನು ಐದು ದಿನ ಒಣಗಿಸುತ್ತಾರೆ. ಹೋಳು ಮಾಡದಿದ್ದನ್ನು ಬೇಯಿಸಿ ಎಂಟು ದಿನ ಒಣಗಿಸುತ್ತಾರೆ. ಹಣ್ಣಡಿಕೆಯನ್ನು ಹಾಗೆಯೇ ಒಣಗಿಸಿ (೨೦-೪೦ ದಿನ) ಸಿಪ್ಪೆ ಸಮೇತ/ಸಿಪ್ಪೆ ಬಿಚ್ಚಿ ಮಾರಾಟ ಮಾಡುತ್ತಾರೆ. ಅಡಿಕೆ ಸಿಪ್ಪೆ ಸುಲಿಯಲು ಇಲ್ಲಿ ಜನ ಸಿಗುತ್ತಾರೆ. ಹೋಳನ್ನು ಶಿವಮೊಗ್ಗದಲ್ಲಿ, ಉಂಡೆಯನ್ನು ಸಾಗರ/ಭೀಮಸಮುದ್ರದಲ್ಲಿ ಮಾರುತ್ತಾರೆ. ಸಿಪ್ಪೆಗೋಟು/ಚಾಲಿಯನ್ನು ಸಾಗರಕ್ಕೆ ಲಾರಿಯಲ್ಲಿ ತೆಗೆದುಕೊಂಡು ಹೋಗಿ ಮಾರಾಟ ಮಾಡಿ ಬರುತ್ತಾರೆ. ಎಕರೆಗೆ ಇಲ್ಲಿ ಹಸಿ ಅಡಿಕೆಯ ಇಳುವರಿ ೬೦ ಕ್ವಿಂಟಾಲ್ ಸಿಗುತ್ತದೆ. ಇದರಿಂದ ಆರು ಕ್ವಿಂಟಾಲ್ ಒಣ ಅಡಿಕೆ ಲಭಿಸುತ್ತೆ. ಸರಿಸುಮಾರು ೧೨,೦೦೦ ರೂಪಾಯಿ ಖರ್ಚು ತಗುಲುತ್ತೆ. ಇದರಲ್ಲಿ ಅಡಿಕೆ ಕುಯ್ಲಿನಿಂದ ಹಿಡಿದು ಸಾಗಾಣಿಕೆಯವರೆಗಿನ ವೆಚ್ಚ ಸೇರಿದೆ. ಒಟ್ಟು ಖರ್ಚು ಎಕರೆಗೆ ೨೫,೦೦೦ ರೂಪಾಯಿ ಆಗುತ್ತದೆ. ಸದ್ಯದ ಬೆಲೆ (ಸಂಸ್ಕರಿಸಿದ ಅಡಿಕೆಗೆ - ೭೫೦೦-೮೫೦೦ ರೂ/ಕ್ವಿಂಟಾಲ್‌ಗೆ)ಯಲ್ಲಿ ಕೈಗೆ ಸ್ವಲ್ಪ ಉಳಿಯುವುದಿದೆ. ಗಂಡಾಳಿಗೆ ದಿನಕ್ಕೆ ೪೦-೬೦ರೂಪಾಯಿ, ಹೆಣ್ಣಾಳಿಗೆ ೨೫-೩೦ ರೂಪಾಯಿ ದಿನಗೂಲಿ ಇದೆ. ಗೊಬ್ಬರ ಹಾಕೋದು, ಅಡಿಕೆ ಕೆಡವಿಸೋದು, ಕಳೆ ಕೀಳೋದು, ಅಡಿಕೆ ತರೋದು, ಇತ್ಯಾದಿ ಕೆಲಸಗಳಿಗೆ ಕಾರ್ಮಿಕರನ್ನು ಅವಲಂಬಿಸುವುದಿದೆ.



ಅಡಿಕೆ ತೋಟಗಳಲ್ಲಿ ಹುಲುಸಾಗಿ ಬೆಳೆದ ಏಲಕ್ಕಿ:ಸರಗೂರು

ಸಂಕೇತಿ ಕೃಷಿಕರು ಸರಗೂರಿನಲ್ಲಿ ನಾಡಹಂಚಿನ ಮನೆಯಲ್ಲೇ ಇಂದಿಗೂ ವಾಸವಾಗಿದ್ದಾರೆ. ಮಣ್ಣಿನ ಗೋಡೆಗಳೇ ಹೆಚ್ಚು. ಕೆಲವೆಡೆ ಇಟ್ಟಿಗೆ ಬಳಸಿರುವುದಿದೆ. ಸರಗೂರಿನಿಂದ ಮೂರೂವರೆ ಕಿ.ಮೀ. ದೂರದಲ್ಲಿ ತೋಟ ಇರೋದರಿಂದ ಸಂಕೇತಿ ಕುಟುಂಬಗಳ ಸ್ತ್ರೀಯರು ಕೃಷಿ ಕೆಲಸಗಳಲ್ಲಿ ತೊಡಗಿರುವುದು ಕಾಣುತ್ತಿಲ್ಲ. ಮನೆಯಲ್ಲಿ ವೀಳ್ಯೇದೆಲೆಯನ್ನು ಜೋಡಿಸೋದು, ಬಿದ್ದ ಅಡಿಕೆಯನ್ನು ಸಿಪ್ಪೆ ಸುಲಿದು ಒಣಗಿಸುವುದು, ಅಡಿಕೆ ಪಟ್ಟೆಯನ್ನು ಸುಲಿಯುವುದು, ಇತ್ಯಾದಿ ಕೆಲಸಗಳನ್ನು ಮಹಿಳೆಯರು ಮಾಡುವುದಿದೆ. ತೋಟದಲ್ಲಿ ಶ್ರಮದ ಕೆಲಸದಲ್ಲಿ ತೊಡಗಿರುವವರು ಇಲ್ಲ ಎನ್ನಬಹುದು. ಮದುವೆಗಳು ಈ ಹಿಂದೆ ಊರಲ್ಲೇ ನಡೆಯುತ್ತಿದ್ದವು. ಈಗೀಗ ಕೊಣನೂರಿನ



ದೊಡ್ಡ ಗಾತ್ರ, ತುಂಬುರುಚಿಯ ತೊಳೆಗಳ ಹಲಸು: ಎಸ್.ವಿ.ಸತ್ಯನಾರಾಯಣ ಅವರ ತೋಟ:ಸರಗೂರು

ಕಲ್ಯಾಣ ಮಂದಿರದಲ್ಲಿ ಮಾಡುತ್ತಿದ್ದಾರೆ. ಇತರೇ ಉಪಜಾತಿಗಳೊಂದಿಗೆ ಸಂಬಂಧಗಳೂ ನಡೆಯುತ್ತಿವೆ. ಅಂತರ್ಜಾತಿ ವಿವಾಹಗಳು ನಡೆದಿಲ್ಲ. ಸುಮಾರು ೧೫ ಜನ ಉನ್ನತ ವ್ಯಾಸಂಗ ಮಾಡಿಕೊಂಡು ಹೊರಸ್ಥಳಗಳಲ್ಲಿ ಕೆಲಸ ಮಾಡುತ್ತಿದ್ದಾರೆ. ಮೂವರು ಹೊರದೇಶದಲ್ಲಿದ್ದಾರೆ.

ಮತ್ತಷ್ಟು ವಿವರಗಳು: ಎಸ್.ವಿ. ವೆಂಕಟೇಶಮೂರ್ತಿಯವರು ತಮಗಿರುವ ಅರ್ಧ ಎಕರೆ ತೋಟದಲ್ಲಿ ಸುಖದ ದಾರಿಯನ್ನು ತುಳಿದವರು. ತಾವೇ ಬಹುತೇಕ ಕೆಲಸಗಳನ್ನು ಮಾಡಿಕೊಂಡವರು. ನಾಲ್ಕು ಮಕ್ಕಳನ್ನು ಇದರಲ್ಲೇ ಬೆಳೆಸಿ ಮದುವೆ ಮಾಡಿದವರು. ಸಾಲಗಾರರಾಗದೇ ಬೆಳೆದು ಬಂದವರು.

ಎಸ್.ವಿ.ಸತ್ಯನಾರಾಯಣ ಅವರಿಗೆ ಒಂದೂಕಾಲು ಎಕರೆ ಅಡಿಕೆ ತೋಟ, ಮೂರು ಎಕರೆ ಗದ್ದೆ ಇದೆ. ಅಡಿಕೆಯೊಂದಿಗೆ ವೀಳ್ಯೇದೆಲೆ ಹಾಕಿದ್ದಾರೆ. ಕಾಫಿ, ಏಲಕ್ಕಿ, ಸ್ವಲ್ಪ ಬಾಳೆ, ಸುವರ್ಣಗೆಡ್ಡೆ ಕಾಣುತ್ತದೆ. ಮನೆ ಬಳಕೆಗೆ ಅಡ್ಡಿ ಇಲ್ಲ. ಒಂದು ಕೊಯ್ಲಿಗೆ ೨೦ ಪಿಂಡಿ ಎಲೆ ಸಿಗುತ್ತದೆ. ವರ್ಷಕ್ಕೆ ೬೦ ಪಿಂಡಿ ಎಲೆ ದೊರೆಯುತ್ತದೆ. ಖರ್ಚು ತೆಗೆದು ಒಂದು ಪಿಂಡಿಗೆ ೨೫೦ ರೂಪಾಯಿ ಉಳಿಯುತ್ತದೆ. ಎಕರೆಗೆ ೧೫,೦೦೦ ರೂ ಹಣ ದೊರೆಯುತ್ತದೆ. ಎಲೆ ಕೊಯ್ಯಲು ಕಾರ್ಮಿಕರಿಗೆ ದಿನಕ್ಕೆ ೧೦೦ ರೂಪಾಯಿ ದಿನಗೂಲಿ ಇದೆ. ಸತ್ಯನಾರಾಯಣರವರ ತೋಟದಲ್ಲಿ ನೀರಿಗೆ ಒಂದು ಸಣ್ಣ ಬಾವಿ ಇದೆ. ಬಸಿ ನೀರೇ ಇದಕ್ಕೆ ಆಸರೆ. ಆದರೆ ವ್ು ಳಿ ಯು ಅಭಾವದಿಂದ ಈ ವರ್ಷ ತೊಂದರೆಯಾಗಿದ್ದು ವಿಳ್ಯೆಯ ಉಳಿವಿಗೆ ಪೆಟ್ಟಾಗುತ್ತಿದೆ. ಕೆಲವು ಕಡೆ ಬಳ್ಳಿಗಳು ಒಣಗು ತ್ತಿವೆ. ಸುಮಾರು ೨೦ ವರ್ಷಗಳಿಂದ ೫,೦೦೦ ರೂಪಾಯಿಗೆ ಆಗ ಖರೀದಿಸಿದ ಸೀಮೆಎಣ್ಣೆ ಪಂಪಿನಿಂದ ನೀರೆತ್ತಿ ಕೊಳವೆ ಮೂಲಕ ನೀರುಣಿಸುತ್ತಾರೆ. ನೀರಿದ್ರೆ ಎರಡು ಅಶ್ವಶಕ್ತಿಯ ಈ ಪಂಪಿನಿಂದ ಒಂದೇ ದಿನಕ್ಕೆ ಇಡೀ ತೋಟಕ್ಕೆ ನೀರುಣಿಸುತ್ತಾರೆ. ಒಂದು ಗಂಟೆಗೆ ಒಂದು ಲೀಟರ್ ಸೀಮೆಎಣ್ಣೆ ಈ ಪಂಪ್‌ಗೆ ಬೇಕು. ವರ್ಷಕ್ಕೆ ಎರಡ್ಮೂರು ಸಾರಿ ರಿಪೇರಿ ಮಾಡಿಸ್ತಾರೆ. 'ವಿದ್ಯುತ್‌ಗೆ ಹೋಲಿಸಿದರೆ ಖರ್ಚು ಹೆಚ್ಚು. ಆದ್ರೆ ವಿದ್ಯುತ್ ಸಂಪರ್ಕ, ಎದುರಾಗುವ ತೊಂದರೆ/ಅಡಚಣೆಗಳಿಗಿಂತ ಇದೇ ಸರಿ ಅನ್ನಿಸುತ್ತೆ' ಎಂದು ಅವರು ನುಡಿಯುತ್ತಾರೆ. ಇವರ ತೋಟದಲ್ಲಿ ವಿಶೇಷ ತಳಿಯ ಹಲಸು ಇದೆ. ಒಂದೊಂದು ಹಣ್ಣಿನಲ್ಲಿ ೧೦೦-೩೦೦ ತೊಳೆಗಳು ಇರುತ್ತವೆ. ಐದು ತೊಳೆ ಅರ್ಧ ಕಿ.ಗ್ರಾಂ ತೂಗುತ್ತೆ. ಹತ್ತು ಕಿ.ಗ್ರಾಂ.ವರೆಗೆ ಹಣ್ಣಿನ ತೂಕ ಇರುತ್ತೆ. ಅರುವತ್ತು ವರ್ಷ ವಯಸ್ಸಿನ ಈ ಮರ ಜೂನ್-ಜುಲೈನಲ್ಲಿ ಹಣ್ಣುಗಳನ್ನು ನೀಡುತ್ತದೆ. 'ಈ ಮೊದ್ಲು ಈ ಮರದಲ್ಲಿ ನೂರಾರು ಹಣ್ಣುಗಳು ಇರ್ತಿದ್ದವು. ಈಗ ಶೀತವಾಗಿರುವುದರಿಂದಲೂ ಅಕ್ಕಪಕ್ಕದಲ್ಲಿ ಅಡಿಕೆ ಮತ್ತು ಇತರೇ ಮರಗಳಿರುವುದರಿಂದಲೂ ಕಾಯಿ ಕಮ್ಮಿ' ಎಂದು ಸತ್ಯನಾರಾಯಣ ಹೇಳುತ್ತಾರೆ.



ಬೆಲೆ ಇಲ್ಲದ ಸಂಕಟ, ತರಿದಿಕ್ಕಿದ ಅಂಬಾಡಿಹಂಬು:ಸರಗೂರು



ತುರಿಚಂಗಿ ಗಿಡ, ಸುಲಭ ಗೊಬ್ಬರ:ಸರಗೂರು

ಎಸ್.ಆರ್.ಕೃಷ್ಣಮೂರ್ತಿಯವರು ಅಡಿಕೆಯಲ್ಲಿ ಹೊಸ ಬೆಳೆ ಪಚೋಲಿಯನ್ನು ಹಾಕಿ ಅದರಿಂದ ಅನುಕೂಲವನ್ನು ಪಡೆಯಲಿಲ್ಲ. 'ಪಚೋಲಿಗೆ ಶೀತ ಆಗಲ್ಲ. ಅದು ನೀರಿನ ಕೊರತೆಯನ್ನು ಸಹಿಸಿಕೊಳ್ಳಲ್ಲ. ನಮ್ಮ ಪ್ರದೇಶಕ್ಕೆ ಇದು ಸೂಕ್ತ ಬೆಳೆಯಲ್ಲ' ಎಂದು ಅವರು ಪ್ರತಿಕ್ರಿಯಿಸುತ್ತಾರೆ. ತೋಟದಲ್ಲಿ ಸಾಲುಗಳ ಮಧ್ಯ ಮಣ್ಣಿನ ಗುಡ್ಡೆಯನ್ನು ಅಲ್ಲಲ್ಲಿ ಹಾಗೆಯೇ ಬಿಟ್ಟು ಮಳೆಯ ನೀರು ನಿಂತು ಇಂಗುವಂತೆ ಮಾಡುತ್ತಾರೆ.' ಈ ಸಾರಿ ನೀರಿನ ಲಭ್ಯತೆ ಕಮ್ಮಿ ಇರುವುದರಿಂದ ಗಿಣಿ, ಅಳಿಲುಗಳು ಎಳೆ ಅಡಿಕೆಯನ್ನು ಕಿತ್ತು, ಚೀಪಿ ಹಾಳು ಮಾಡುತ್ತಿವೆ. ಹಣ್ಣಡಿಕೆಯನ್ನು ಬಾವಲಿಗಳು ಇಲ್ಲಿ ತಿನ್ನುತ್ತಿವೆ' ಎಂಬುದು ಇಲ್ಲಿಯ ಕೃಷಿಕರು ಹೇಳಿದ ಮಾತು.

ಇತರೇ ವಿಚಾರಗಳು:

* ಪುಸ್ತಕ, ಪತ್ರಿಕೆಗಳಲ್ಲಿ ಪ್ರಕಟವಾಗುವ ಕೃಷಿ ಕುರಿತ ಬರಹಗಳನ್ನು ಕೃಷಿಕರು ಗಮನಿಸುತ್ತಾರೆ.

* ನಾಲೆ ಬರುವುದಕ್ಕಿಂತ ಮುಂಚೆ ನವಿಲು, ಸಾರಂಗಗಳು ಇದ್ದವು. ಈಗ ಬಹಳ ಕಮ್ಮಿಯಾಗಿವೆ. ಬಹಳಷ್ಟು ಗೋಮಾಳ ಒತ್ತುವರಿಯಾಯಿತು. ಗುಳ್ಳೆನರಿಗಳ ಕಾಟ ಇಲ್ಲಿದೆ. ಅವು ಹನಿ ನೀರಾವರಿ ಕೊಳವೆಗಳನ್ನು ಕಡಿದು ಹಾಳು ಮಾಡುತ್ತಿರುತ್ತವೆ.

* ಮನೆ ಬಳಕೆಗೆ ತರಕಾರಿಗಳನ್ನು ಬೆಳೆಯುತ್ತಿಲ್ಲ.

* ಹೊರಗಡೆ ಹೋಗಿರುವ ವಿದ್ಯಾವಂತ ಮಕ್ಕಳಲ್ಲಿ ಕೃಷಿ ಬಗ್ಗೆ ಆಸಕ್ತಿ ಬಹಳ ಕಮ್ಮಿ.

* ಯುಗಾದಿಯಾಗಿ ಒಂಬತ್ತು ದಿನಗಳಲ್ಲಿ ಇಲ್ಲಿ ಶ್ರೀರಾಮ ಪಟ್ಟಾಭಿಷೇಕ, ವಸಂತೋತ್ಸವ, ಹನುಮೋತ್ಸವ ನಡೆಯುತ್ತವೆ.

ಮುಗಿಸುವ ಮುನ್ನ:



ತೋಟದೆಲ್ಲೆಡೆ ಸುವರ್ಣಗೆಡ್ಡೆ:ಅಣಬೆರೋಗದ ಹತೋಟಿಗೆ ಸಹಾಯಕ:
ಎಸ್.ಆರ್.ಕೃಷ್ಣಮೂರ್ತಿಯವರ ತೋಟ:ಸರಗೂರು

ಸರಗೂರಿನ ಸಂಕೇತಿ ಕೃಷಿಕರಲ್ಲಿ ಆಸಕ್ತಿ ಇದೆ. ಭಿನ್ನತೆಯ ಹಾದಿಯಲ್ಲಿ ಸಾಗಬೇಕೆಂಬ ಒಲವು ಇದೆ. ಪರಿಸರಪ್ರಿಯ ಕೃಷಿ ಪದ್ಧತಿಗಳೂ, ಬಹುಬೆಳೆ ಸಂಯೋಜನೆ ಮಾಡಿರುವುದೂ ಉತ್ತಮವಾಗಿ ಕಾಣಿಸಿತು. ಕೃಷಿಗೆ ಪೂರಕವಾಗಿರುವ ಜಾನುವಾರು ಸಾಕಾಣಿಕೆಯನ್ನು ಕೈಬಿಟ್ಟಿರುವುದಕ್ಕೆ ಕಾರಣಗಳಿದ್ದರೂ ಕನಿಷ್ಠ ಪ್ರಮಾಣದಲ್ಲಾದರೂ ಇಟ್ಟುಕೊಳ್ಳಬಹುದಿತ್ತು. ಹಾಗೆಯೇ ನಿತ್ಯದ ಬಳಕೆಗೆ ಬೇಕಾಗಿರುವ ತರಕಾರಿಗಳಿಗೆ ಕೋಣನೂರಿನ ಸಂತೆಗೆ ಹೋಗುವುದಕ್ಕಿಂತ ಜಮೀನಿನಲ್ಲೇ ಬೆಳೆದುಕೊಂಡು ಬಳಸುವುದು ಒಳ್ಳೆಯದಾದೀತು. ಮಳೆ ನೀರಿನ ಸಂರಕ್ಷಣೆಗೆ ಕ್ರಮಗಳು ಆಗಬೇಕು

ಅನ್ನಿಸಿತು. ಹಸಿ ಅಡಿಕೆಯನ್ನು ಮಾರಾಟ ಮಾಡುವುದಕ್ಕಿಂತ ಸಂಸ್ಕರಿಸುವ ಪದ್ಧತಿಯನ್ನು ಅಳವಡಿಸಿಕೊಂಡರೆ ಸಿಗುವ ಹಣ ಹೆಚ್ಚಾಗಬಹುದು. ತೆಂಗಿನ ಬೆಳೆಗೆ ಕೊಟ್ಟಿರುವ ಕಾಳಜಿ ಸಾಕಾಗಲಿಲ್ಲ ಎನ್ನಿಸಿತು. ಊರಿನಿಂದ ತೋಟಗಳಿಗೆ ಮೂರು ಕಿ.ಮೀ.ಗೂ ಹೆಚ್ಚು ದೂರ ಆಗುವುದರಿಂದ ಕೆಲಸಗಳಿಗೆ ಹೆಚ್ಚು ನಿಗಾ ಕೊಡುವುದು ಆಗುತ್ತಿಲ್ಲ. ತೋಟಗಳಲ್ಲೇ ವಾಸ ಮಾಡುವುದು ಬೆಳವಣಿಗೆಗೆ ಪೂರಕವಾಗಬಲ್ಲದು. ಮಕ್ಕಳನ್ನೂ ಕೃಷಿಯಲ್ಲಿ ತೊಡಗಿಸುವ ಹಾಗೂ, ಅವರಿಗೆ ಆಸಕ್ತಿ ಬರುವಂತೆ ಮಾಡುವ ಹಾಗೂ ಕಾರ್ಯ ಆಗಬೇಕು.

ದೂರವಾಣಿ ಸಂಖ್ಯೆಗಳು: ಎಸ್.ಆರ್.ಕೃಷ್ಣಮೂರ್ತಿ : 9845815906, ಎಸ್.ಆರ್. ಶ್ರೀನಿವಾಸಮೂರ್ತಿ : 9845291659
ಎಸ್.ವಿ.ಸತ್ಯನಾರಾಯಣ : 226287, ಎಸ್.ವಿ. ವೆಂಕಟೇಶಮೂರ್ತಿ : 9972069504

ಸಂದರ್ಶನ : 29-05-2003



ಮಣ್ಣಿಗೆ ಅಡಿಕೆ ಗರಿಗಳ ಹೊದಿಕೆ:ಸರಗೂರು



ರಾಮಕೃಷ್ಣ ಅವರ ತೋಟದಲ್ಲಿ ವೆನಿಲ್ಲ ಕೂಡ ಇದೆ:ಸರಗೂರು



ಹೇರಳ ಪರಿಮಳದ ನೆಲಸಂಪಿಗೆ:ಸರಗೂರು

೧೦. ಕಟ್ಟೇಪುರದಲ್ಲಿ ಕಳೆಗುಂದುತ್ತಿರುವ ಬೇಸಾಯ

ಮಹಾರಾಜರ ಕಾಲದಲ್ಲಿ ಕಟ್ಟೇಪುರಕ್ಕೆ ಬಂದ ಸಂಕೇತಿಗಳು ಈಗ ಸಂಖ್ಯೆಯಲ್ಲಿ ಕಡಿಮೆಯಾಗಿದ್ದು ಕೃಷಿಯಲ್ಲಿ ಅವರ ಆಸಕ್ತಿ ಕುಂದಿದೆ.

ಅರಕಲಗೂಡು ತಾಲೂಕು ಕಟ್ಟೇಪುರ ಗ್ರಾಮವು ರಾಮನಾಥಪುರದಿಂದ ಆರು ಕಿ.ಮೀ.ದೂರದಲ್ಲಿದೆ. ಮಲ್ಲರಾಜಪಟ್ಟಣ, ಕೀರನಕಟ್ಟೆ ಮಾರ್ಗವಾಗಿ ಸಾಗಿದರೆ ಈ ಊರು ಸಿಗುತ್ತದೆ. ಕಟ್ಟೇಪುರ ಡ್ಯಾಂನ ದಡದಲ್ಲೇ ಈ ಊರು ಇದೆ. ತಲಕಾವೇರಿಯಿಂದ ಹರಿದು ಬರುವ ನೀರಿಗೆ ಮೊದಲಿಗೆ ಹಾಕಿದ ಈ ಊರಿನ ಕಟ್ಟೆ ಕುರಿತು ವಿವರಗಳನ್ನು ಇಲ್ಲಿ ಹೇಳಬೇಕೆನಿಸುತ್ತದೆ. ಮೊದಲು ಜಂಗಮರು ಆನೆದಪ್ಪದ ಕಲ್ಲುಗಳನ್ನು ಬೆಟ್ಟದಪುರ ಗುಡ್ಡದಿಂದ ಕೋಣನಗಾಡಿಯಲ್ಲಿ ತಂದು ಈ ಕಟ್ಟೆಯನ್ನು ನಿರ್ಮಿಸಿದರು ಎಂದು ಹೇಳಲಾಗುತ್ತಿದೆ. ನಂತರದ ದಿನಗಳಲ್ಲಿ ಮಣ್ಣು ಕೊಚ್ಚಣೆಯಾಗಿ ತೊಂದರೆ ಕಾಣಿಸಿದ್ದರಿಂದ ಕೆರೆಯ ಕೋಡಿಯಂತಿರುವ 'ಒಡವು' ನಿರ್ಮಾಣವಾಯಿತು. ಕ್ಯಾಪ್ಟನ್ ದಾಸ್ ಸಾಹೇಬ್ ಎಂಬ ಯುರೋಪಿಯನ್ ವ್ಯಕ್ತಿ ಮರದ ದಿಮ್ಮಿಗಳನ್ನು ಬಳಸಿ ಮರಳಿನ ನೆರವಿನಿಂದ ನೀರನ್ನು ನಿಲ್ಲಿಸಲು ಶ್ರಮಪಟ್ಟಿದ್ದನ್ನು ಇಲ್ಲಿನ ಜನ ನೆನಪಿಸಿಕೊಳ್ಳುತ್ತಾರೆ. ನೀರಿನ ಪ್ರವಾಹದಲ್ಲಿ ಇಲ್ಲೇ ಈತ ಮೃತಪಟ್ಟನೆಂದು ಹೇಳಲಾಗುತ್ತಿದೆ. ಇದಾದ ಬಳಿಕ ಕಲ್ಲಿನಿಂದ ಒಡವು ನಿರ್ಮಾಣವಾಯಿತು.

ಕಾವೇರಿ ನದಿ: ಹರಿಯುವ ಬಗೆ: ಕಟ್ಟೇಪುರ ಡ್ಯಾಂ ಅನ್ನು 'ಕೃಷ್ಣರಾಜ ಅಣೆಕಟ್ಟು' ಎಂದು ಕರೆಯಲಾಗುತ್ತಿದೆ. ಕಟ್ಟೆಯು ಅಂಕುಡೊಂಕಾಗಿಯೇ ಇದೆ. ನೀರಿನ ಒತ್ತಡದ ಹರಿವನ್ನು ತಡೆದುಕೊಳ್ಳಲು ಇದು ಸಹಾಯಕ ಎಂದು ಹೇಳಲಾಗುತ್ತಿದೆ. ಹಾರಂಗಿ ಜಲಾಶಯ ನಿರ್ಮಾಣವಾದ ಬಳಿಕ ನೀರಿನ ಸಂಗ್ರಹಣೆಯನ್ನು ಹೆಚ್ಚಿಸಲೂ ಜೊತೆಗೆ ನೀರಿನ ಹರಿವನ್ನು ನಿಧಾನವಾಗಿಸಲೂ ೧೯೮೩ರ ಸುಮಾರಿಗೆ ಮೂರಡಿ ಎತ್ತರಿಸಲಾಗಿದೆ. ನೀರಿನ ರಭಸದಿಂದ ಕೊಚ್ಚಣೆ ತಡೆಯಲು ಕಪ್ಪುಕಲ್ಲುಗಳನ್ನು ಜೋಡಿಸಲಾಗಿದೆ. ಇಲ್ಲಿ ಕಾವೇರಿ ನದಿಯು ಪೂರ್ವದಿಂದ ಪಶ್ಚಿಮಕ್ಕೆ ಹರಿಯುವುದು ವಿಶೇಷವಾಗಿದೆ. ಕಟ್ಟೇಪುರ ಜಲಾಶಯದ ಹಿನ್ನೀರು ಕುಶಾಲನಗರದವರೆಗೆ ಕಾಣುತ್ತದೆ. ಸಾಮಾನ್ಯವಾಗಿ ಜೂನ್‌ನಿಂದ ನವಂಬರ್‌ವರೆಗೆ ನೀರಿನ ಹರಿವು ಕಾಣುತ್ತದೆ. ಇದುವರೆಗೂ ಬತ್ತಿರುವ ಸಂದರ್ಭಗಳು ಕಂಡಿಲ್ಲ. ಈ ಡ್ಯಾಂನಿಂದ ನೀರು ಕೊಣನೂರು, ರಾಮನಾಥಪುರ, ಬಸವಾಪಟ್ಟಣ, ಕೇರಳಾಪುರ, ಚುಂಚನಕಟ್ಟೆ, ಕೆ.ಆರ್.ನಗರದಿಂದ ಕೆ.ಆರ್.ಸಾಗರ ತಲುಪುತ್ತದೆ. ಈ ನೀರನ್ನು ಬಳಸಿಕೊಂಡು ಭತ್ತವನ್ನು ಈ ಭಾಗದ ಜನ ಬೆಳೆಯುತ್ತಾರೆ. ಒಂದೇ ಬೆಳೆಗೆ ನೀರು ಲಭ್ಯವಾಗುತ್ತದೆ. ಅಡಿಕೆ ತೋಟಗಳಿಗೆ ನೀರನ್ನು ಬಳಸುತ್ತಾರೆ. ಪ್ರವಾಹ ಬಂದಾಗ ಇಲ್ಲಿನ ಜನ ಕಾವೇರಿಗೆ ಪೂಜೆ ಮಾಡುವುದಿದೆ.

ಕಟ್ಟೆಯನ್ನು ನೆಚ್ಚಿಕೊಂಡವರು: ಕಟ್ಟೇಪುರ ಜಲಾಶಯದಲ್ಲಿ ದ್ವೀಪ ಇದೆ. ಇಲ್ಲಿಯ ಜನ ಅದನ್ನು ಗೊಂದಿ ಎನ್ನುತ್ತಾರೆ. ಕಟ್ಟೆಗೆ ಇದು ಸಮೀಪವಿದೆ. ಪಕ್ಷಿಧಾಮ ಮಾಡುವ ಸಲುವಾಗಿ ಇದನ್ನು ಇಟ್ಟುಕೊಳ್ಳಲಾಗಿದೆ. ಎನ್.ಎಸ್. ಹಿರಣ್ಣಯ್ಯ ಎಂಬುವವರು ಇದಕ್ಕೆ ಒಲವು ತೋರಿಸಿದ್ದರು. ಆದರೆ ಅದು ಸಂಪೂರ್ಣ ರೂಪ ತಾಳಲಿಲ್ಲ. ಸುಮಾರು ೨೦ ಎಕರೆಯ 'ಗೊಂದಿ' ಪ್ರದೇಶದಲ್ಲಿ ಸ್ವಾಭಾವಿಕವಾಗಿ ಬೆಳೆದ ಗಿಡಮರಗಳು ಇದ್ದವು. ಈಗ ಬಿದಿರು ಕಾಣುತ್ತದೆ. ದನಕರು, ಮೇಕೆ-ಕುರಿಗಳನ್ನು ಕೂಡಿ ಹಾಕಿ ಸಾಕಲಾಗುತ್ತಿದೆ. ನೀರಿನ ಒಳಹರಿವು ಹೆಚ್ಚಾಗಿದ್ದಾಗ ಜಾನುವಾರುಗಳನ್ನು ಮೇಯಿಸಲು ಆಗಲ್ಲ. ಗೋಮಾಳದಂತೆ ಗೊಂದಿ ನೆರವಾಗುತ್ತದೆ. ಬಹು ದಿನ ದನಕರುಗಳು ಇಲ್ಲೇ ಇರುವುದಿದೆ. ಜಲಾಶಯದಲ್ಲಿ ಹೆಚ್ಚು ಪಾಲು ಮರಳು ತಳಭಾಗದಲ್ಲಿದೆ. ಸುಮಾರು ೨೦ ಕುಟುಂಬಗಳು ಮರಳಿನ ವ್ಯಾಪಾರದಲ್ಲಿ ತೊಡಗಿವೆ. ನೂರಾರು ಜನ ಮರಳಿನ ಸಂಗ್ರಹಣೆ ಮಾಡುತ್ತಾರೆ. ನೀರಿದ್ದಾಗಲೂ ಹರಿಗೋಲು ಬಳಸಿ ಮರಳನ್ನು ಕಲೆ ಹಾಕುತ್ತಾರೆ. ಇಡೀ ದಿನ ನೀರಲ್ಲಿ ಮುಳುಗಿ ಮರಳನ್ನು ತೆಗೆಯುವ ಕೆಲಸ ಕೆಲವರಿಗೆ ಕರಗತವಾಗಿದೆ. ಒಂದು ಟ್ರ್ಯಾಕ್ಟರ್ ಲೋಡ್ ಮರಳಿಗೆ ೩೦೦ ರೂಪಾಯಿ ಬೆಲೆ ಇದೆ. ಮಳೆಗಾಲದಲ್ಲಿ ಬೆಲೆ ಹೆಚ್ಚಾಗುತ್ತದೆ. ದಿನವಹಿ ನೂರು ಟ್ರ್ಯಾಕ್ಟರ್ ಲೋಡ್ ಮರಳು ಇತರೆಡೆ ಹೋಗುತ್ತದೆ.

ಕಟ್ಟೇಪುರ ಡ್ಯಾಂನಲ್ಲಿ ಮೀನು ಹಿಡಿಯುವ ಕುಟುಂಬಗಳೂ ಇವೆ. ಸುಮಾರು ೨೦ ಕುಟುಂಬಗಳು ಈ ಉದ್ಯೋಗವನ್ನು ಅವಲಂಬಿಸಿದ್ದಾರೆ. 'ಛಡೀ ಬೇಟೆ' (ಗಾಳಕ್ಕೆ ಎರೆಹುಳು ಸಿಕ್ಕಿಸಿ ಮೀನು ಹಿಡಿಯುವುದು) ಮಾಡುವವರೂ ಇಲ್ಲಿದ್ದಾರೆ. ಪ್ರವಾಹದ ಸಂದರ್ಭದಲ್ಲಿ ಮೊಸಳೆಗಳು ಕಾಣುವುದಿದೆ. ಊರಿನ ದನಕರುಗಳಿಗೆ ನಿರಂತರ ನೀರಿಗಾಗಿ ಈ ಡ್ಯಾಂ ಸಹಾಯಕ. ಊರಿನ ಜನರಿಗೂ ತೊಂದರೆ ಇಲ್ಲ. ಬೋರ್‌ವೆಲ್ ಇದ್ದರೂ ಈಗಲೂ ಡ್ಯಾಂನ ನೀರನ್ನು ತಂದು ಜನ ಸೇವಿಸುತ್ತಾರೆ. ಮೂತ್ರ-ಮಲ ವಿಸರ್ಜನೆಗೆ ಕಟ್ಟೆ ಕಡೆಗೆ ಬಹುತೇಕ ಜನ ಹೋಗುತ್ತಾರೆ. ಬಟ್ಟೆ ತೊಳೆಯುವುದು, ದನಕರುಗಳನ್ನು ಶುಚಿಗೊಳಿಸುವುದು ಹಾಗೂ ಜನ ಸ್ನಾನ ಮಾಡುವುದು ಕಾಣುತ್ತದೆ.



ಶ್ರೀ ನಾರಾಯಣರಾವ್:ಹೃದಯವು ವಿಶಾಲ, ಜಮೀನು ಹೇರಳ:ಕಟ್ಟೇಪುರ

ದಿನಾಂಕ ೩.೬.೦೩ರಂದು ಕಟ್ಟೇಪುರಕ್ಕೆ ಹೋಗಿ ಅಲ್ಲಿನ ಸಂಕೇತಿಗಳ ಕೃಷಿ ಬಗ್ಗೆ ವಿಚಾರ ಪಡೆಯಲು ಬೆಳಿಗ್ಗೆ ೧೦ ಗಂಟೆಗೆ ನಾರಾಯಣ ರಾವ್ ಅವರ ಮನೆಗೆ ಹೋದಾಗ ಅವರು ಉಪಸ್ಥಿತರಿದ್ದರು. ಕಟ್ಟೇಪುರದ ಡ್ಯಾಂನ್ನು ನೋಡಿಕೊಂಡು ಬರೋಣವೆಂದು ಜೊತೆಯಲ್ಲಿ ಕರೆದುಕೊಂಡು ಹೊರಟೆವು. ಕಟ್ಟೆಯ ಚಿತ್ರಣವನ್ನು ಗಮನಿಸಿ ವಾಪಸ್ಸಾಗುತ್ತಿದ್ದಾಗ ಊರಿನ ಬಗ್ಗೆ ವಿಚಾರಿಸಿದೆ.

ಊರಲ್ಲಿ ದೇವಸ್ಥಾನಗಳು, ಆಚರಣೆಗಳು ಯಾವ್ಯಾವುವು?

ಮೀನಾಕ್ಷಿ ಸೋಮಸುಂದರೇಶ್ವರ, ಸೀತಾ ರಾಮಾಂಜನೇಯ, ಗ್ರಾಮದೇವತೆ ಏಳೂರಮ್ಮ, ವೀರಭದ್ರೇಶ್ವರ, ಮಾರಮ್ಮ, ಚನ್ನಕೇಶವ ದೇವಸ್ಥಾನಗಳಿವೆ. ಗ್ರಾಮದೇವತೆಯ ಉತ್ಸವ, ಮೀನಾಕ್ಷಿ ಸೋಮಸುಂದರೇಶ್ವರ ಸ್ವಾಮಿಯ, ಸೀತಾರಾಮಾಂಜನೇಯ ದೇವರ ನಿತ್ಯಪೂಜೆ ನಡೆಯುತ್ತದೆ. ಎಲ್ಲಾ ಹಬ್ಬಗಳನ್ನೂ ಆಚರಣೆ ಮಾಡುತ್ತಾರೆ.

ಊರಲ್ಲಿ ಇರುವ ಜನ, ಜಾತಿ ಬಗ್ಗೆ ಹೇಳಿ?

ಸುಮಾರು ೫೦೦ ಕುಟುಂಬಗಳು ಇರಬಹುದು: ಒಕ್ಕಲಿಗರು, ಹರಿಜನರು, ಮುಸಲ್ಮಾನರು, ಆಚಾರಿಗಳು, ಬೆಸ್ತರು, ಸಂಕೇತಿಗಳು -ಇಲ್ಲಿ ಇದಾರೆ.

ಇಲ್ಲಿಯ ಜನ ಬೆಳೆಯುವ ಬೆಳೆಗಳು?

ಭತ್ತ ಪ್ರಮುಖವಾದ ಬೆಳೆ. ರಾಗಿ, ಜೋಳ, ಹುರುಳಿ, ಆಲೂಗೆಡ್ಡೆಯನ್ನು ಬೆಳೀತಾರೆ. ಹೊಗೆಸೊಪ್ಪು, ಶುಂಠಿ, ಅಡಿಕೆ - ಇವು ಹಣದ ಬೆಳೆಗಳು. ಕಬ್ಬು ಹಾಕಿಲ್ಲ. ಸ್ವಲ್ಪ ಮಟ್ಟಿಗೆ ಸಿಂಧಿ ಹಸುಗಳ ಸಾಕಾಣಿಕೆ ಇದೆ. ಮೇಕೆ, ಕುರಿ, ಕೋಳಿಗಳನ್ನು ಜನ ಸಾಕಿದಾರೆ.

ಇಲ್ಲಿಗೆ ಬಂದು ಹೋಗ್ಲಿಕ್ಕೆ ಸಂಚಾರಿ ಸೌಲಭ್ಯ ಹೇಗಿದೆ?

ಇಲ್ಲಿಂದ ರಾಮನಾಥಪುರ, ಬೆಂಗಳೂರು, ಮೈಸೂರಿಗೆ ಹೋಗ್ಲಿಕ್ಕೆ ತಕ್ಕಷ್ಟು ಬಸ್‌ಗಳಿವೆ.

ಊರಲ್ಲಿರುವ ಸಂಘ-ಸಂಸ್ಥೆಗಳು?

ಪ್ರೌಢಶಾಲೆ ಇದೆ, ಆದರೆ ಸ್ವಂತ ಕಟ್ಟಡ ಇಲ್ಲ. ಪ್ರಾಥಮಿಕ ಆರೋಗ್ಯ ಘಟಕ, ಗ್ರಂಥಾಲಯ, ಅಂಗನವಾಡಿ ಕೇಂದ್ರ, ಉರ್ದು ಶಾಲೆ, ಗ್ರಾಮ ಪಂಚಾಯಿತಿ, ಯುವಕರ ಸಂಘಗಳು, ಹಾಲಿನ ಸಹಕಾರಿ ಸಂಘ, ಕಾವೇರಿ ಗ್ರಾಮೀಣ ಬ್ಯಾಂಕ್, ನ್ಯಾಯಬೆಲೆ ಅಂಗಡಿ, ಸಮುದಾಯ ಭವನ ಇವೆ.

ಗ್ರಾಮದಲ್ಲಿ ಸೌಹಾರ್ದ ಹೇಗಿದೆ?

ಉತ್ತಮವಾಗಿದೆ.

ಜಾನುವಾರುಗಳ ಸಾಕಾಣಿಕೆ ಹೇಗಿದೆ?

ಹಿಂದಿಗಿಂತ ಕಮ್ಮಿಯಾಗಿದೆ. ನಾಲಾ ನೀರಾವರಿ ಹೆಚ್ಚಿಗೆ ಆಗಿರುವುದರಿಂದಲೂ, ಗೋಮಾಳ ಕಡಿಮೆಯಾಗಿರುವುದರಿಂದಲೂ ದನಕರುಗಳು ಹೆಚ್ಚು ಇಲ್ಲ.



ಒಂದೆಡೆ ಸೇರಿರುವ ಸಂಕೇತಿ ಕೃಷಿಕರು:ಕಟ್ಟೇಪುರ

ಊರಲ್ಲಿ ಎಷ್ಟು ಟ್ರ್ಯಾಕ್ಟರ್‌ಗಳಿವೆ?
ಸುಮಾರು ಹತ್ತು ಇವೆ.

ಕಟ್ಟೇಪುರದ ಸಂಕೇತಿಗಳ ಕೃಷಿ ಬದುಕಿನ ಬಗ್ಗೆ ವಿವರ ಕಲೆ ಹಾಕಲು ನಾರಾಯಣರಾವ್ ಅವರು ತಮ್ಮ ಬಳಗವನ್ನು ಮನೆಯ ಬಳಿ ಆಮಂತ್ರಿಸಿದರು. ಕೃಷ್ಣಮೂರ್ತಿ, ಕೆ.ಆರ್.ನಟರಾಜ್, ಸುಬ್ರಾಯ ಅವಧಾನಿಗಳು, ಆರ್.ಎಸ್.ರಾಮಚಂದ್ರ, ಕೆ.ರಾಮು, ಕೆ.ಗುರುಪ್ರಕಾಶ್ ಬಂದಿದ್ದರು. ಈ ಕುರಿತು ಪ್ರಶ್ನೆ ಹಾಕಿದೆ.

ನಾರಾಯಣರಾವ್‌ರವರೇ, ಹಿಂದಿನ ದಿನಗಳ ಸಂಕೇತಿಗಳ ಬದುಕನ್ನು ನೆನಪು ಮಾಡಿಕೊಳ್ಳಿ.
(ನಾರಾಯಣರಾವ್‌ರವರು ಕೃಷ್ಣಮೂರ್ತಿಯವರ ಕಡೆ ಕೈ ಮಾಡಿ 'ನೀವೇ ಹೇಳಿ' ಎಂದರು)

ಮುಮ್ಮಡಿ ಕೃಷ್ಣರಾಜ ಒಡೆಯರ ಪಾಲಕರಾದ ಬಕ್ಷಿ ತಿಪ್ಪಯ್ಯನವರು ಇಲ್ಲಿಯ ಮೀನಾಕ್ಷಿ ಸೋಮಸುಂದರೇಶ್ವರ ದೇವಸ್ಥಾನವನ್ನು ಕಟ್ಟಿಸಿದರು ಎಂದು ಹೇಳ್ತಾರೆ. ಇದಕ್ಕೆ ಬೇಕಾಗುವ ಪೂಜೆ ಕೈಂಕರ್ಯಗಳಿಗೆ ಜನರನ್ನು ಹುಡುಕಿ ವಸತಿಗೃಹಗಳನ್ನು ನಿರ್ಮಿಸಿ ಅಗತ್ಯವಾದ ದತ್ತಿಗಳನ್ನು ಕೊಟ್ಟರು. ಸುಮಾರು ೩೦೦ ವರ್ಷಗಳ ಹಿಂದೆ ಈ ಊರಿಗೆ ಸಂಕೇತಿಗಳನ್ನು ಕರೆತಂದರು. ಆಗ ಎಂಟು ಕುಟುಂಬ ಇದ್ದವು. ನಾನು ಸಣ್ಣವನಿದ್ದಾಗ ಸುಮಾರು ೨೮ ಕುಟುಂಬಗಳಿದ್ದವು. ವೇದ ಪರಿಣತರು ಇಲ್ಲಿದ್ದರು. ರಾಮಸೋಮಶಾಸ್ತ್ರಿ, ವೆಂಕಟಸುಬ್ಬಾಶಾಸ್ತ್ರಿ, ಶ್ರೀನಿವಾಸಶಾಸ್ತ್ರಿ, ಸುಬ್ರಹ್ಮಣ್ಯ ಅವಧಾನಿಗಳು, ಕೆ.ಜಿ.ಶಾಸ್ತ್ರಿ, ಗಂಗಾಧರ ಶಾಸ್ತ್ರಿ - ಇವರು ವೇದ ಪಾಠಗಳನ್ನು ಹೇಳಿಕೊಡುತ್ತಿದ್ದರು. ಒಡೆಯರ ಕಾಲದಲ್ಲಿ ಸಂಕೇತಿಗಳಿಗೆ ಜಮೀನು ನೀಡಲಾಗಿತ್ತು. ಪೂಜೆಯ ಜೊತೆಗೆ ಭೂಮಿಯ ಕೆಲಸ ಮಾಡಿಕೊಂಡು ಜೀವನ ಮಾಡ್ತಾ ಇದ್ದರು.

ಈಗ ಎಷ್ಟು ಕುಟುಂಬಗಳಿವೆ? ಬೇಸಾಯ ಮಾಡುವವರು ಎಷ್ಟು?
ಇಲ್ಲಿ ಏಳು ಸಂಕೇತಿ ಕುಟುಂಬಗಳಿವೆ. ಎಲ್ಲರೂ ವ್ಯವಸಾಯ ಮಾಡೋರೇ.

ಈ ಊರಲ್ಲಿ ಕುಟುಂಬಗಳು ಕಮ್ಮಿಯಾಗಿದ್ದರ ಹಿನ್ನೆಲೆ ಏನು?
ವಿದ್ಯಾವಂತರು ಹೆಚ್ಚಾದರು, ನೌಕರಿಗಳು ಸಿಕ್ಕವು, ಊರು ಬಿಟ್ಟರು. ಜಮೀನು ಮಾರಾಟ ಮಾಡಿ ಹೋದ್ರು.

(ನಾರಾಯಣರಾವ್ ಮಾತಾಡುವಾಗ ಮಧ್ಯ ಪ್ರವೇಶ ಮಾಡಿದರು)

ನೋಡಿ, ನಾವು ಹೆಚ್ಚು ಓದ್ಲಿಲ್ಲ. ಅನಿವಾರ್ಯವಾಗಿ ಇಲ್ಲಿ ಇದೀವಿ.

ಮೊದ್ಲು ಇಲ್ಲಿ ಅಡಿಕೆ ಇತ್ತಾ?
ಇತ್ತು. ಮೂರು ತಲೆಯ ಮರಗಳು ಇವೆ.



ನೋವಿದ್ದರೂ ನಲಿವು? : ಕೆ.ಆರ್.ನಟರಾಜ್:ಕಟ್ಟೇಪುರ

ಯಾಕೆ, ಸಂಕೇತಿಗಳು ಅಡಿಕೆಯನ್ನ ಇಷ್ಟೊಂದು ನೆಚ್ಚಿಕೊಂಡು ಬಂದ್ರು?

ನಾವು ಮೂಲತಃ ಕೇರಳದವರು. ಅಲ್ಲಿ ತೋಟ ಮಾಡಿದ ಅನುಭವ. ಜೊತೆಗೆ ಅದರ ಬಗ್ಗೆ ನಮಗೆ ಒಲವು ಇತ್ತು. ಸಂಕೇತಿಗಳಲ್ಲಿ ಉಳುಮೆ ಮಾಡಬಾರದು, ದನಕರುಗಳಿಗೆ ಹಿಂಸೆ ಕೊಡಬಾರದು ಎಂಬ ಪರಿಕಲ್ಪನೆ ಇತ್ತು. ಅದಕ್ಕಾಗಿ ತೋಟ ಮಾಡಿದಿವಿ. ತಾಂಬೂಲ ಹಾಕೋದು ಸಂಕೇತಿಗಳಲ್ಲಿ ಸಾಮಾನ್ಯ. ವೀಳ್ಯೇದೆಲೆ, ಅಡಿಕೆ ಬೇಕಲ್ವಾ? ಈ ಸಲುವಾಗಿಯೂ ಅಡಿಕೆ, ವೀಳ್ಯ ಅಗತ್ಯವಿತ್ತು.

ಹಿಂದಿನ ದಿನಗಳಲ್ಲಿಯ ಸಂಕೇತಿಗಳ ಕೃಷಿ ಬಗ್ಗೆ ನೆನಪು ಮಾಡಿಕೊಳ್ಳಿ.

ವೇದ ಅಧ್ಯಯನಗಳಲ್ಲಿ ಹೆಚ್ಚು ತೊಡಗುತ್ತಿದ್ದರು. ಮಡಿ ಮೈಲಿಗೆ ಇತ್ತು. ತೋಟಾನ ಸ್ವಂತಕ್ಕೆ ಇಟ್ಕೊಂಡು ರೈತರಿಗೆ ಉಳಿದ ಜಮೀನನ್ನು ಮಾಡ್ಲಿಕ್ಕೆ ಕೊಡ್ತಿದ್ದರು. ವೇದಾಧ್ಯಯನ ಹೊಟ್ಟೆ ತುಂಬಿಸ್ತಿರಲಿಲ್ಲ. ತೋಟದಲ್ಲೇ ವೇದಾಧ್ಯಯನ ನಡೀತಿತ್ತು.


ಇಲ್ಲಿಯ ಸಂಕೇತಿಗಳದು ಈಗ ಹಿಡುವಳಿ ಹೇಗಿದೆ?

೨೮ ಎಕರೆ ಇರೋರು ಒಬ್ಬರು (ನಾರಾಯಣರಾವ್), ಉಳಿದವರದು ಕಮ್ಮಿ ಆಗಿದೆ.

ಮೊದ್ಲು ಬರೀ ಅಡಿಕೆ ಇತ್ತಾ? ಇತರೇ ಬೆಳೆಗಳೇನಾದ್ರೂ ಇದ್ವಾ?

ಇಲ್ಲ, ಅಡಿಕೆ ಜೊತೆಗೆ ಬಾಳೆ, ವೀಳ್ಯೆ, ಹಲಸು, ಹುಣಸೆ, ಮಾವು, ಸೀಗೆ, ನಿಂಬೆ, ಇತ್ಯಾದಿಗಳು ಇದ್ದವು. ಈಗ ಕಮ್ಮಿಯಾದವು. ಹಲಸಿನ ಹಣ್ಣಿನ ಕಳ್ಳತನದಿಂದ ಮರಗಳನ್ನು ತೋಟದಲ್ಲಿ ಉಳಿಸಿಕೊಳ್ಳುತ್ತಿಲ್ಲ. ನಾಲಾ ನೀರು ಬಂದ ಮೇಲೆ ಮರ ಕಮ್ಮಿ ಆದವು. ಹಣ್ಣಿನ ಕಳ್ಳತನ ಹೆಚ್ಚಾಯಿತು.


ಸಮಯ ಮಧ್ಯಾಹ್ನ ಒಂದು ಗಂಟೆ ಆಗಿತ್ತು. ತೋಟ/ಜಮೀನುಗಳನ್ನು ನೋಡಿಕೊಂಡು ಬರಲು ಹೊರಟೆವು. ಕಟ್ಟೇಪುರ ಅಣೆಕಟ್ಟೆಯ ಪಕ್ಕದಲ್ಲಿ ಮಾದಾಪುರಕ್ಕೆ ಹೋಗುವ ದಾರಿಯಲ್ಲಿ ತುಸು ದೂರ ನಡೆದಾಗ ಕುರಿಗಳ ಹಿಂಡು ಎದುರಾಯಿತು. ದಡೂತಿ ನಾಯಿಗೆ ಕೊರಳಲ್ಲಿ ತಂತಿ ಜೋಡಿಸಿ ಕಟ್ಟಿದ್ದ ಪಟ್ಟಿಯನ್ನು ಗಮನಿಸಿ ಕುರಿ ಕಾಯುವ ಜನರನ್ನು ಮಾತಾಡಿಸಿದೆ. 'ಎಲ್ಲಿಯವರು ನೀವು? ಎಷ್ಟು ಕುರಿ ಸಾಕಿದೀರಿ? ಇಲ್ಲಿ ಜನ ಏನು ಕೊಡ್ತಾರೆ?' ಎಂದೆ. 'ನಾವು ಚಿತ್ರದುರ್ಗ ಜಿಲ್ಲೆ ಹಿರಿಯೂರು ತಾಲೂಕಿನಿಂದ ಬಂದಿದೀವಿ. ಐದು ಗುಂಪಿನಲ್ಲಿ ಇದೀವಿ. ಮೂರು ಸಾವಿರ ಕುರಿ ಸಾಕಿದೀವಿ. ಹದಿನೈದು ವರ್ಷದಿಂದ ಇಲ್ಲಿಗೆ ಬರ್ತಿದೀವಿ. ಕುರಿಗಳಿಗೆ ನೀರು, ಮೇವು ನಮ್ಮ ಕಡೆ ಬೇಸಿಗೆಯಲ್ಲಿ ಸಿಗಲ್ಲ. ಇಲ್ಲೇ ನಾಲ್ಕೈದು ತಿಂಗಳು ಉಳೀತೀವಿ. ೩೦೦೦ ಕುರಿಗಳಿಗೆ ದಿನಕ್ಕೆ ರಾತ್ರಿ ಹೊತ್ತು ಮಂದೆ ಮಲಗಿಸಿದ್ರೆ ೧೦ ಕೆ.ಜಿ ಅಕ್ಕಿ, ೧೦ ಕೆ.ಜಿ ರಾಗಿ, ೧೦೦ ರೂಪಾಯಿ ದುಡ್ಡು ಕೊಡ್ತಾರೆ' ಎಂದು ಆ ವ್ಯಕ್ತಿ ಹೇಳಿದ. ಮುಂದೆ ಸಾಗಿದಾಗ ನಟರಾಜ್, ಸುಬ್ರಾಯ ಅವಧಾನಿಯವರ ತೋಟಕ್ಕೆ ಕಾಲಿಟ್ಟೆವು. ಹುಲುಸಾಗಿ ಬೆಳೆದ ಪುಟ್ಟಬಾಳೆ, ಪಕ್ಕದಲ್ಲಿ ಹಳೆಯ ಅಡಿಕೆ-ತೆಂಗು, ಹುಣಸೆ-ಹಲಸು ಕಾಣುತ್ತಿತ್ತು. ನಟರಾಜ್ ಪದವೀಧರ. ನೌಕರಿ ಸಿಗದೇ ಕೃಷಿಯಲ್ಲೇ ಉಳಿದವರು. ಈಗಿನ ಇಳಿದ ಬೆಲೆಯಲ್ಲಿ ನಿರಾಶರಾದವರು. ಪಿತ್ರಾರ್ಜಿತ ಜಮೀನು ಇದೆ; ಪಕ್ಕದಲ್ಲೇ ಸುಬ್ರಾಯ ಅವಧಾನಿಯವರದು. ಇವರಿಗೆ ೬೩ ವರ್ಷ ವಯಸ್ಸು. ಒಂದೂಕಾಲು ಎಕರೆ ತೋಟ, ಒಂದೂವರೆ ಎಕರೆ ಗದ್ದೆ. ಅಡಿಕೆ ಹಳೆಯದು. ಹೊಸ ಗಿಡಗಳೂ ನಾಟಿಯಾಗಿವೆ. ದನಕರುಗಳಿಲ್ಲ. ಮೂವರು ಹೆಣ್ಣು ಮಕ್ಕಳು. ತೋಟದಿಂದ ಬಂದದ್ದನ್ನು ಬಳಸಿ ಬೆಳೆದವರು.


ಪಂಪ್‌ಸೆಟ್ ರೀವೈಂಡಿಂಗ್‌ನಲ್ಲಿ ಪರಿಣತ: ಕೃಷ್ಣಮೂರ್ತಿ, ಕಟ್ಟೇಪುರ

ಕೃಷ್ಣಮೂರ್ತಿ, ರಾಮು, ಮಂಜಯ್ಯ - ಸಹೋದರರು. ಮಂಜಯ್ಯನವರು ಬೆಂಗಳೂರಿನಲ್ಲಿದ್ದಾರೆ. ಕೃಷ್ಣಮೂರ್ತಿಯವರು ಬಿ.ಎಸ್ಸಿ., ಓದಿದವರು.

ನೌಕರಿಗೆ ಹೋಗಲಿಲ್ಲ. ಆರು ಗಂಡು ಮಕ್ಕಳು. ನಾಲ್ಕು ಜನ ನೌಕರಿಯಲ್ಲಿದ್ದಾರೆ. ಇಬ್ಬರು ಇಲ್ಲಿದ್ದಾರೆ. ತೋಟ, ತರಿ ಜಮೀನು ನೋಡಿಕೊಂಡು ಹೋಗುತ್ತಿದ್ದಾರೆ. ರಾಮು ಎಂ.ಎಸ್ಸಿ. ಓದಿದವರು. ಬಾಹ್ಯಾಕಾಶ ಇಲಾಖೆಯಲ್ಲಿ ನೌಕರಿ ಮಾಡಿದವರು. ನಿವೃತ್ತಿಯಾಗಿ ಈಗ ವಿಶ್ರಾಂತಿ ಜೀವನ. ಪಿತ್ರಾರ್ಜಿತ ಜಮೀನನ್ನು ನೋಡಿಕೊಂಡು ಹೋಗುತ್ತಿದ್ದಾರೆ. ಮೂವರು ಗಂಡುಮಕ್ಕಳು. ಮೂವರೂ ನೌಕರಿಯಲ್ಲಿದ್ದಾರೆ. ರಾಮುರವರ ತೋಟದಲ್ಲಿರುವ ಬಾವಿ ೧೫ ಅಡಿ ಆಳ ಇದೆ. ತೋಟಕ್ಕೆ ನೀರಿಗೆ ಬರವಿಲ್ಲ. ಶುಂಠಿ ಬೆಳೆಯುತ್ತಾರೆ. ಅಲ್ಲಲ್ಲಿ ಮಾವಿನ ಮರ ಇವೆ. ರಾಮಚಂದ್ರರವರು ಹೈಸ್ಕೂಲ್ ಮೆಟ್ಟಿಲು ಹತ್ತಿದವರು. ಇವರ ತಮ್ಮ ಗುರುಪ್ರಕಾಶ್ ಬಿ.ಎ. ಓದಿದವರು. ಇಬ್ಬರೂ ಬೇಸಾಯ ಮಾಡ್ತಾರೆ. ಸ್ವಂತಾಗಿ ಹೆಚ್ಚು ಕೆಲಸ ಮಾಡುತ್ತಾರೆ. ತಂದೆ-ತಾಯಿ ಇನ್ನುಳಿದ ನಾಲ್ಕು ಜನ ಸಹೋದರರು ಬೆಂಗಳೂರಿನಲ್ಲಿ ವಾಸ.

ಕೆ.ನಾರಾಯಣರಾವ್‌ರವರ ತಂದೆ ಅನಂತಸುಬ್ಬರಾವ್. ತಾಯಿ ಇಲ್ಲ, ತಂದೆಯೂ ಇಲ್ಲ. ಇವರ ತಾತ ಕೂಲಿಮಠ ನಡೆಸಿದವರು. ತಂದೆ ಶಿಕ್ಷಕರಾಗಿದ್ದವರು. ನಾರಾಯಣರಾವ್ ಅವರ ಅಣ್ಣ ಕೇಶವಮೂರ್ತಿಯವರು ಬೆಂಗಳೂರಿನಲ್ಲಿ ರಸಾಯನ ಶಾಸ್ತ್ರ ತಜ್ಞರಾಗಿದ್ದರು. ಸರ್ಕಾರಿ ನೌಕರರ ಸಂಘದ ಅಧ್ಯಕ್ಷರಾಗಿದ್ದರು. ಇವರ ಮಕ್ಕಳು (ಮೂರು ಗಂಡು, ಒಂದು ಹೆಣ್ಣು) ಬೆಂಗಳೂರಿನಲ್ಲಿದ್ದಾರೆ. ತಮ್ಮ ಕೃಷ್ಣಮೂರ್ತಿಯವರು ಎಂ.ಟೆಕ್., ಪಿಎಚ್.ಡಿ., ಮಾಡಿಕೊಂಡು, ನಾಲ್ಕಾರು ಸಾರಿ ವಿದೇಶಕ್ಕೆ ಹೋಗಿ ಬಂದವರು. ಹಾಸನ ಮಲ್ನಾಡ್ ತಾಂತ್ರಿಕ ಮಹಾವಿದ್ಯಾಲಯದಲ್ಲಿ ಪ್ರಾಂಶುಪಾಲರಾದವರು. ಇಬ್ಬರು ಮಕ್ಕಳು. ಮಗ ವೈದ್ಯ. ಮಗಳು ಎಂ.ಟೆಕ್ ಮಾಡಿದ್ದಾರೆ. ಆಗಾಗ್ಗೆ ಕೃಷ್ಣಮೂರ್ತಿಯವರು ಕಟ್ಟೇಪುರಕ್ಕೆ ಬಂದು ಹೋಗುತ್ತಾರೆ. ನಾರಾಯಣರಾವ್‌ರವರಿಗೆ ೬೨ ವರ್ಷ ವಯಸ್ಸು. ಹೆಚ್ಚು ಓದಲಿಲ್ಲ. ಇಬ್ಬರು ಗಂಡುಮಕ್ಕಳು. ಹಿರಿಯ ಮಗ ನಾಗರಾಜ ಮನೆ ಹಾಗೂ ಬೇಸಾಯದ ಜವಾಬ್ದಾರಿ ತೆಗೆದುಕೊಂಡಿದ್ದಾರೆ. ಕಿರಿಯ ಮಗ ಮಂಜುನಾಥ ಶಿಕ್ಷಕ. ಇಬ್ಬರಿಗೂ ಮದುವೆಯಾಗಿದೆ.


ಸರಳ, ಸಜ್ಜನರಾಗಿರುವ ವೇ||ಬ್ರ||ಶ್ರೀ ಸುಬ್ರಾಯ ಅವಧಾನಿಗಳು:ಕಟ್ಟೇಪುರ

ನಾರಾಯಣರಾವ್‌ರವರಿಗೆ ಒಟ್ಟು ೨೮ ಎಕರೆ ಜಮೀನು ಇದೆ. ೨೨ ಎಕರೆ ತರಿ ಜಮೀನು. ಐದು ಎಕರೆ ಬಾಗಾಯಿತು. ಭತ್ತ, ಅಡಿಕೆ, ತೆಂಗು, ಬಾಳೆ, ವೀಳ್ಯೇದೆಲೆ ಬೆಳೆಯುತ್ತಾರೆ. ಎಂದೂ ತಂಬಾಕು ಬೆಳೆದಿಲ್ಲ. ಮೊದಲಿನಿಂದಲೂ ಅಡಿಕೆ ವ್ಯಾಪಾರ ಮಾಡುತ್ತಾ ಬಂದವರು. ಆರು ದನಕರುಗಳಿವೆ. ಒಂದು ಟ್ರ್ಯಾಕ್ಟರ್, ಮೂರು ಬೈಕ್ ಇವೆ. ಎತ್ತಿನಗಾಡಿ ಇದೆ, ಆದರೆ ಬಳಸುತ್ತಿಲ್ಲ. ಅಡಿಕೆ ವ್ಯಾಪಾರದಲ್ಲಿ ಶ್ರೀಮಂತರಾಗಿ ಬೆಳೆದಿದ್ದಾರೆ. ಹಸಿ ಅಡಿಕೆ ಖರೀದಿಸಿ, ಬೇಯಿಸಿ ಮಾರುತ್ತಾರೆ. ಶಿವಮೊಗ್ಗ ಸಾಗರಕ್ಕೆ ತಗೊಂಡು ಹೋಗ್ತಾರೆ. ತೋಟಕ್ಕೆ ನೀರಿನ ಕೊರತೆ ಇಲ್ಲ. ತೆರೆದ ಬಾವಿಗಳ ನೀರನ್ನು ಉಣಿಸುತ್ತಾರೆ. ಕೊಳವೆ ಬಾವಿಗಳನ್ನು ಕೊರೆಸಿಯೇ ಇಲ್ಲ. ಪಿತ್ರಾರ್ಜಿತ ಜಮೀನಿಗಿಂತ ಸ್ವಯಾರ್ಜಿತದ್ದೇ ಹೆಚ್ಚು. ಜಮೀನು ಹೆಚ್ಚಾಗಿದ್ದುದರಿಂದ ನಿರ್ವಹಣೆ ಕಷ್ಟವಾಗಿದೆ.

ಹಾರಂಗಿ ನೀರಿನಿಂದ ಭತ್ತ ಬೆಳೆಯುತ್ತಾರೆ. ಎಕರೆಗೆ ೧೫ ಕ್ವಿಂಟಾಲ್ ಭತ್ತ ಸಿಗುತ್ತದೆ. ಹುಲ್ಲು ಎರಡು ಟ್ರ್ಯಾಕ್ಟರ್ ಲೋಡ್ ಸಿಗುತ್ತೆ. ಭತ್ತಕ್ಕೆ ಮುನ್ನ ತಡ್ಡಿ ಹಾಕುವುದಿದೆ. ರಾಸಾಯನಿಕ ಗೊಬ್ಬರದ ಬಳಕೆ ಇದೆ. ಭತ್ತಕ್ಕೆ ತಕ್ಕಷ್ಟು ಸಾವಯವ ಗೊಬ್ಬರವನ್ನು ಹಾಕುತ್ತಿಲ್ಲ. ಅಡಿಕೆಯಲ್ಲಿ ಇಳುವರಿ ಎರಡು ಲಕ್ಷ ಸಂಖ್ಯೆ. ಚೆನ್ನಾಗಿ ಮಾಡಿದ್ರೆ ಮೂರು ಲಕ್ಷ ಸಿಗುತ್ತದೆ. ತೋಟದಲ್ಲಿ ಸ್ವಲ್ಪ ವೀಳ್ಯೆ ಇದೆ. ಕೀರನಕಟ್ಟೆ ಬಳಿ ಬಾಳೆ ಇದೆ. ಪುಟ್ಟಬಾಳೆಯೇ ಹೆಚ್ಚು. ಬೂದುಬಾಳೆ, ಪಚ್ಚಬಾಳೆ, ಮರಬಾಳೆಯೂ ಇದೆ. ನಾಟಿ ಮಾವಿನ ಮರಗಳು ಅಲ್ಲಲ್ಲಿ ಇವೆ.

ತೋಟದ ಆಸುಪಾಸಿನಲ್ಲಿ ಹುಣಿಸೆ, ಬಿದಿರು, ಮಾವು ಅಲ್ಲಲ್ಲಿ ಕಾಣುತ್ತವೆ. ದನಕರುಗಳನ್ನು ಬಿಟ್ಟು ಸಾಕುತ್ತಾರೆ. ಬೂಸ, ಹಿಂಡಿ ಹಾಕುವುದಿದೆ. ಪಾಲಿಶ್ ತೌಡು, ರಾಗಿ ಅಂಬಲಿ, ಕಲ್ಗಚ್ಚನ್ನು ಕೊಡುತ್ತಾರೆ. ಮನೆಯಲ್ಲಿರುವ ಸ್ತ್ರೀಯರು ಸಹಕರಿಸುತ್ತಾರೆ. 'ತೆಂಗಿಗೆ ನುಸಿ ಬಂತು, ಅಡಿಕೆಗೆ ಬೆಲೆ ಹೋಯ್ತು, ಆಳು ಕಾಳು ಕೂಲಿ ಕಮ್ಮಿಯಾಗ್ಲಿಲ್ಲ. ಜೀವನ ಮಟ್ಟ ಹೆಚ್ಚಾಯ್ತು. ಇದರಿಂದ ತೋಟ ಮಾಡಿರೋರು ತೊಂದ್ರೆಗೆ ಸಿಕ್ಕಿಕೊಂಡಿದಾರೆ' ಎಂದು ನಾರಾಯಣರಾವ್ ಹೇಳುತ್ತಾರೆ.

೧೨ ವರ್ಷದ ಹಿಂದೆ ಟ್ರ್ಯಾಕ್ಟರ್‌ನ್ನು ಇವರು ತೆಗೆದುಕೊಂಡರು. 'ಸಾಮಾನ್ಯ ಜನಕ್ಕೆ ಕಷ್ಟ. ಆಗಾಗ್ಗೆ ರಿಪೇರಿಗೆ ಬರುತ್ತೆ. ಸಾಲದ ಭಾರ ಹೆಚ್ಚುತ್ತೆ. ಅನುಕೂಲಕ್ಕಿಂತ ಅನಾನುಕೂಲವೇ ಹೆಚ್ಚು' ಎಂದು ನಾರಾಯಣರಾವ್ ಹೇಳುತ್ತಾರೆ.

ಅಡಿಕೆಗೆ ಇಳಿದ ಬೆಲೆಯಿಂದ ಅನೇಕ ಸಂಕೇತಿಗಳು ಸಂಕಷ್ಟದಲ್ಲಿದ್ದಾರೆ ಎಂದು ಉಲ್ಲೇಖಿಸುತ್ತಾ ನಾರಾಯಣರಾವ್ ಅವರು 'ಬೆಲೆ ಏರದಿದ್ದರೆ ನಾವು ಅದೇ ರೀತಿ ಸಾಗ್ತಾ ಇದ್ದಿವಿ. ಧಾರಣೆ ಬಂದ ಮೇಲೆ ಜೀವನ ಕ್ರಮ ಏರಿತು. ಈಗ ಇಕ್ಕಟ್ಟು' ಎನ್ನುತ್ತಾರೆ. ತಂದೆ ತಾಯಿಗಳು ಮಕ್ಕಳನ್ನು ಬೆಳೆಸಿದ ರೀತಿಯನ್ನು ಸ್ಮರಿಸುತ್ತಾ ಅವರು 'ನನ್ನ ತಂದೆಗೆ ತಿಂಗಳಿಗೆ ಎಂಟು ರೂ ಸಂಬಳ, ತಾಯಿ ಸಾವಿತ್ರಮ್ಮ ಇಸ್ತ್ರಿ ಎಲೆ ಕಟ್ಟುತ್ತಿದ್ದರು. ದಿನಕ್ಕೆ ೫೦೦ ಎಲೆ ಕಟ್ತಿದ್ರು. ನನ್ನ ತಂದೆ ಚಪ್ಪಲೀನೇ ಹಾಕ್ಲಿಲ್ಲ. ತಂದೆ-ತಾಯಿ ಕನ್ನಡಕ ಬಳಸ್ಲಿಲ್ಲ. ಅವರಿಬ್ಬರದೂ ಒಂದು ರೀತಿಯಲ್ಲಿ ಇಚ್ಛಾಮರಣ. ಜೀವನದಲ್ಲಿ ಏರುಪೇರು ಕಾಣಲಿಲ್ಲ' ಎಂದು ಮಾತಾಡಿದರು. ನಾರಾಯಣರಾವ್‌ರವರ ಪತ್ನಿ ಸುವರ್ಣಮ್ಮನವರು ಕೆ.ಆರ್.ನಗರದವರು. ಅವರದು ಕೃಷಿ ಕುಟುಂಬವಲ್ಲ. ಆದರೆ ಇಲ್ಲಿ ಚೆನ್ನಾಗಿ ಹೊಂದಿಕೊಂಡಿದ್ದಾರೆ. ಮನೆ ಬೆಳಗಲು ಸ್ಫೂರ್ತಿದಾಯಕವಾಗಿದ್ದಾರೆ.

ಬಿಟ್ಟುಹೋದ ವಿಚಾರಗಳು:

* ಇಲ್ಲಿನ ಕೆ.ಕೃಷ್ಣಮೂರ್ತಿಯವರು ಜೀವನದಲ್ಲಿ ನೊಂದ ವ್ಯಕ್ತಿ. ಮೋಟಾರ್ ರಿವೈಂಡಿಂಗ್ ಕೆಲಸದಲ್ಲಿ ೩೦ ವರ್ಷಗಳ ಕಾಲ ದುಡಿದವರು. ಹಗಲು ರಾತ್ರಿ ಇದರಲ್ಲಿ ತೊಡಗಿದವರು. ಹಣಕ್ಕಾಗಿ ಇದನ್ನು ಮಾಡಲಿಲ್ಲ. ಆದರೆ ಜೀವನೋಪಾಯಕ್ಕೆ ಈ ಕಸಬು ನೆರವಾಯಿತು.

* ಇಲ್ಲಿನ ಸುಬ್ರಾಯ ಅವಧಾನಿಗಳು ೧೬ ವರ್ಷದ ಕಾಲ ಇವರ ಚಿಕ್ಕಪ್ಪ ನಾರಾಯಣ ಅವಧಾನಿಗಳು ಮತ್ತು ಅಜ್ಜ ಸುಬ್ರಹ್ಮಣ್ಯ ಅವಧಾನಿಗಳ ಬಳಿ ವೇದ ಅಧ್ಯಯನ ಮಾಡಿದವರು.

* ಸುಬ್ರಾಯ ಅವಧಾನಿಗಳ ತಂದೆ ರಾಮಸ್ವಾಮಿ ಶಾಸ್ತ್ರಿಗಳು ಶ್ಯಾನುಭೋಗರಾಗಿ ೩೫ ವರ್ಷಗಳ ಕಾಲ ಕೆಲಸ ಮಾಡಿ ಬೆಳ್ಳಿ ಪದಕ ಪಡೆದುಕೊಂಡವರು. ಸ್ಥಳೀಯ ಸಮಸ್ಯೆಗಳನ್ನು ಪರಿಹರಿಸುವಲ್ಲಿ ನಿರ್ಣಾಯಕ ಪಾತ್ರ ವಹಿಸಿದವರು.

* ಸಗಣಿ ಅನಿಲ ಘಟಕಗಳನ್ನು ಐದು ಜನ ಇಟ್ಟುಕೊಂಡಿದ್ದಾರೆ.

ಮುಗಿಸುವ ಮುನ್ನ:

ಕಟ್ಟೇಪುರದಲ್ಲಿ ಸಂಕೇತಿಗಳ ಕೃಷಿ ಕಮ್ಮಿಯಾಗುತ್ತಿದೆ. ಮಾದರಿಯ ಕ್ರಮಗಳು ಕಾಣಲಿಲ್ಲ. ಬೆಳೆ ವೈವಿಧ್ಯತೆಯನ್ನು ಅಳವಡಿಸಿಲ್ಲ. ದನಕರುಗಳ ಸಾಕಾಣಿಕೆಗೆ, ತ್ಯಾಜ್ಯಗಳ ಸದ್ಬಳಕೆಗೆ ಒಲವು ಇಲ್ಲ. ಕೈಮುಟ್ಟಿ ಕೆಲಸ ಮಾಡುವ ಜನ ಕಮ್ಮಿಯಾಗಿದ್ದಾರೆ. ನೀರಾವರಿ ಬಂದ ಮೇಲೆ ಇಲ್ಲಿಯೂ ಮರಗಿಡಗಳು ಕಾಣೆಯಾಗಿವೆ. ಭತ್ತದಲ್ಲಿ ಮಣ್ಣಿನ ಫಲವತ್ತತೆಗೆ ಪೂರಕವಾದ ಕೆಲಸಗಳು ಆಗುತ್ತಿಲ್ಲ.

ದೂರವಾಣಿ ಸಂಖ್ಯೆಗಳು: ನಾರಾಯಣರಾವ್ : 226510; ಸುಬ್ರಾಯ ಅವಧಾನಿ: 226547


ಸಂದರ್ಶನ : 03-06-2003

೧೧. ರುದ್ರಪಟ್ಟಣ: ರುದ್ರರ ಕೊರತೆ - ವೃತ್ತಿಯೇ ವಗರು!

ನಶಿಸಿದ ಇಲ್ಲಿಯ ತೊಟ್ಟಿಮನೆ, ಕುಗ್ಗಿದ ಸಂಕೇತಿಗಳ ಜನಸಂಖ್ಯೆ, ವಿದ್ಯಾವಂತರಾಗಿ ನೌಕರಿ ಸೇರಿದವರಲ್ಲಿ ಕೃಷಿ ಬಗೆಗಿನ ನಿರಾಸಕ್ತಿ - ಇವೆಲ್ಲಾ ರುದ್ರಪಟ್ಟಣದಲ್ಲಿ ಕಾಣುತ್ತಿರುವ ಸಂಗತಿಗಳು.

ರುದ್ರಪಟ್ಟಣವು ರಾಮನಾಥಪುರದಿಂದ ಹತ್ತು ಕಿ.ಮೀ.ದೂರದಲ್ಲಿರುವ ದೊಡ್ಡಗ್ರಾಮ. ಗ್ರಾಮ ಪಂಚಾಯಿತಿಯ ಕೇಂದ್ರಸ್ಥಾನ ಹೊಂದಿರುವ ಈ ಊರಲ್ಲಿಸುಮಾರು ೨೦ ಸಂಕೇತಿ ಕುಟುಂಬಗಳಿವೆ. ಒಕ್ಕಲಿಗ ಜನಾಂಗದವರೇ ಇಲ್ಲಿ ಹೆಚ್ಚಾಗಿ ವಾಸಿಸುತ್ತಾರೆ. ಸಂಕೇತಿಗಳಲ್ಲದೆ ಮುಸಲ್ಮಾನರು, ಹರಿಜನರು, ಅಗಸರು, ಗಾಣಿಗ ಶೆಟ್ಟರು, ಇತ್ಯಾದಿ ಜನಾಂಗದವರು ಇಲ್ಲಿ ವಾಸವಾಗಿದ್ದಾರೆ. ಈ ಗ್ರಾಮದಲ್ಲಿ ಪ್ರಸನ್ನ ರಾಮೇಶ್ವರ, ಆಂಜನೇಯ, ಮೈಲಾರೇಶ್ವರ ಮತ್ತು ಚನ್ನಕೇಶವ ದೇವಸ್ಥಾನಗಳಿವೆ. ದೊಡ್ಡಮ್ಮ, ಚೌಡಮ್ಮ ದೇವತೆಗಳ ಗುಡಿಗಳೂ ಇವೆ. ರಾಮೋತ್ಸವ, ಚನ್ನಕೇಶವೋತ್ಸವ, ಶಿವಲಿಂಗ ಅಭಿಷೇಕ ನಡೆಯುತ್ತವೆ. ಪ್ರೌಢಶಾಲೆ, ಅಂಗನವಾಡಿ ಕೇಂದ್ರ, ಪ್ರಾಥಮಿಕ ಆರೋಗ್ಯ ಕೇಂದ್ರ, ಪಶು ಆಸ್ಪತ್ರೆ, ಕರ್ನಾಟಕ ಬ್ಯಾಂಕ್, ವ್ಯವಸಾಯ ಸೇವಾ ಸಹಕಾರಿ ಬ್ಯಾಂಕ್, ಯುವಕ ಸಂಘಗಳು- ಇತ್ಯಾದಿ ಸಂಘ ಸಂಸ್ಥೆಗಳಿವೆ. ಒಟ್ಟು ಎಂಟು ಬಸ್‌ಗಳು ರಾಮನಾಥಪುರದಿಂದ ಬಂದು ಹೋಗುತ್ತವೆ.

ಶ್ರೇಷ್ಠರನ್ನು ನೀಡಿದ ಗ್ರಾಮವಿದು: ಈ ಭಾಗದಲ್ಲಿ ಬೆಳೆಯುವ ಪ್ರಮುಖ ಬೆಳೆಗಳೆಂದರೆ: ಭತ್ತ, ಶುಂಠಿ, ತಡ್ಡಿ, ಅಡಿಕೆ, ತೆಂಗು ಮತ್ತು ವಿಳ್ಳೇದೆಲೆ. ತಂಬಾಕು ಇಲ್ಲಿ ಕಮ್ಮಿ. ಕಟ್ಟೇಪುರ ಮತ್ತು ಹಾರಂಗಿ ನಾಲೆಯ ನೀರು ಇಲ್ಲಿಗೆ ಬರುತ್ತದೆ. ಈಗ್ಗೆ ೨೫ ವರ್ಷಗಳ ಹಿಂದೆ ಈ ಊರಲ್ಲಿ ಸಂಕೇತಿಗಳ ಸಂಖ್ಯೆ ಸುಮಾರು ೮೦ ಕುಟುಂಬ ಇತ್ತು. ಈಗ ೨೦ಕ್ಕೆ ಬಂದಿದೆ. ವಿದ್ಯಾಭ್ಯಾಸ ಮಾಡಿಕೊಂಡು ಹೊರಹೋಗಿರುವ ಜನರೇ ಹೆಚ್ಚು. 'ಉಳುವವನೇ ಒಡೆಯ' ಕಾನೂನು ಬಂದ ಮೇಲೆ ಊರು ಬಿಟ್ಟವರೂ ಇದ್ದಾರೆ. ಬೆಂಗಳೂರು, ಮೈಸೂರು, ಅಮೇರಿಕಗಳಲ್ಲಿ ವಿದ್ಯಾವಂತರು ಕೆಲಸಕ್ಕೆ ಸೇರಿದ್ದಾರೆ. ಉನ್ನತ ಕೃಷಿ ವ್ಯಾಸಂಗ ಮಾಡಿಕೊಂಡಿರುವ ಆರ್.ವಿ. ಪಂಡರೀನಾಥ್ ಬೆಂಗಳೂರಿನಲ್ಲಿ, ಆರ್.ಎಸ್.ಸುಬ್ಬರಾಯ ಅವರೂ ಆರ್.ಹೆಚ್.ಬಾಲಸುಬ್ರಹ್ಮಣ್ಯ ಎನ್ನುವವರೂ ಮುಂಬೈಯಲ್ಲಿ ಕೃಷಿ ಇಲಾಖೆಯಲ್ಲಿ ಕೆಲಸ ಮಾಡಿ ನಿವೃತ್ತರಾದವರು. ಖ್ಯಾತ ಸಂಗೀತಗಾರ ಆರ್.ಕೆ. ಶ್ರೀಕಂಠನ್ ಅವರು ಈ ಊರಿನವರೇ. ಆರ್.ಎನ್.ತ್ಯಾಗರಾಜನ್ ಮತ್ತು ತಾರಾನಾಥನ್ (ರುದ್ರಪಟ್ಟಣ ಸಹೋದರರು) ಇಲ್ಲೇ ಹುಟ್ಟಿದವರು. ಆರ್.ಕೆ. ಅನಂತಪದ್ಮನಾಭ - ಸಂಗೀತ ವಿದ್ವಾಂಸರು, ಆರ್.ಆರ್.ಕೇಶವಮೂರ್ತಿ - ಪಿಟೀಲು ವಾದಕರು, ಆರ್.ಕೆ.ವೆಂಕಟರಾಮಾ ಶಾಸ್ತ್ರಿ- ಸಂಗೀತಗಾರರು, ಆರ್.ಕೆ.ಸೂರ್ಯನಾರಾಯಣ -ವೀಣಾವಾದಕರು, ಇವರೆಲ್ಲಾ ಈ ಊರಿನ ಮೂಲದವರು. ಇಲ್ಲಿಯ ಆರ್. ವೈದ್ಯನಾಥನ್ ಮುಂಬೈ ಹೈಕೋರ್ಟ್‌ನಲ್ಲಿ ನ್ಯಾಯಾಧೀಶರಾಗಿದ್ದವರು. ಇಲ್ಲಿಯವರೇ ಆದ ಎಸ್.ಕೃಷ್ಣಪ್ಪನವರು ಮೂರು ಸಾರಿ ಹಾಸನ ನಗರಸಭೆಯ ಅಧ್ಯಕ್ಷರಾಗಿದ್ದರು.



ಅಂಗಡಿಯೇ ಜೀವನಕ್ಕೆ ಆಧಾರ:
ಬಿ.ಎಸ್.ನಾಗರಾಜರಾವ್:ರುದ್ರಪಟ್ಟಣ

ರುದ್ರಪಟ್ಟಣ ಗ್ರಾಮದ ಸಂಕೇತಿಗಳು ಮುಖ್ಯವಾಗಿ ಅಡಿಕೆ, ಭತ್ತ, ತೆಂಗು ಬೆಳೆಯುತ್ತಾರೆ. ದನಕರುಗಳನ್ನು ಸಾಕಿರುವ ಕುಟುಂಬಗಳು ಸುಮಾರು ಹತ್ತು ಇರಬಹುದು. ಸಗಣಿ ಅನಿಲ ಘಟಕಗಳನ್ನು ಇಟ್ಟುಕೊಂಡಿದ್ದಾರೆ.

ರುದ್ರಪಟ್ಟಣಕ್ಕೆ ದಿನಾಂಕ ೭.೬.೨೦೦೩ ರಂದು ನಾವು ಭೇಟಿ ನೀಡಿ ಸಿ.ಎಸ್.ಸುಬ್ರಾಯರವರ ಮನೆ ಹುಡುಕಿ ಹೊರಟೆವು. ರಾಮಮಂದಿರದ ಸಮೀಪ ಇವರ ಮನೆ ಇದೆ. ಮನೆಯಲ್ಲಿದ್ದ ಸುಬ್ರಾಯರವರಿಗೆ ಪರಿಚಯಿಸಿಕೊಂಡು, ಬಂದ ವಿಚಾರವನ್ನು ಹೇಳಿದೆವು. ೭೪ ವರ್ಷದ ಸುಬ್ರಾಯ ಅವರಿಗೆ ಆರು



ಅಡುಗೆ ಪ್ರವೀಣ : ಆರ್.ರವಿ:ರುದ್ರಪಟ್ಟಣ

ಜನ ಹೆಣ್ಣು ಮಕ್ಕಳು, ಎಲ್ಲರದೂ ಮದುವೆಯಾಗಿದೆ. ಪತ್ನಿ ತೀರಿಕೊಂಡು ಏಳು ವರ್ಷ ಆಯ್ತು. ಮನೆಯಲ್ಲಿ ಇವರೊಬ್ಬರೇ. ಇವರೇ ಅಡುಗೆ ಮಾಡಿಕೊಳ್ಳುತ್ತಾರೆ. ಒಂದೂಕಾಲು ಎಕರೆ ಗದ್ದೆ, ಒಂದೂವರೆ ಎಕರೆ ಬಾಗಾಯಿತು ಇದೆ. 'ಅಡಿಕೆಗೆ ಅಣಬೆ ರೋಗ. ರಾಜಮುಡಿ ಭತ್ತ ೨೫-೩೦ ಚೀಲ ಸಿಗುತ್ತೆ. ಅಡಿಕೆ ೫೦-೬೦ ಮಣ ಬರುತ್ತೆ. ಆಳು ಇದಾನೆ. ನಾನು ಎಲೇಚಾಗನಹಳ್ಳಿಯಿಂದ ಇಲ್ಲಿಗೆ ಬಂದೆ. ಈ ಸಾರಿಯಷ್ಟು ನೀರಿನ ಕೊರತೆ ಈ ೩೦ ವರ್ಷದಲ್ಲಿ ನಾನು ನೋಡ್ಲಿಲ್ಲ' ಎನ್ನುತ್ತಾರೆ ಸುಬ್ರಾಯರು. ಇನ್ನುಳಿದ ಸಂಕೇತಿ ಕೃಷಿಕರನ್ನು ಕಾಣಲು ಹೊರಟಾಗ ಅಂಗಡಿ ಇಟ್ಟುಕೊಂಡಿರುವ ವಿಶ್ವನಾಥ್ ಎದುರುಗಡೆ ಮನೆಯ ಕೃಷ್ಣಮೂರ್ತಿಯವರ ಮನೆಗೆ ಕರೆದೊಯ್ದರು. ಅಲ್ಲಿಗೆ ಆರ್.ರವಿ, ಆರ್.ಎನ್.ಸುಬ್ರಹ್ಮಣ್ಯ, ಹೆಚ್.ಎನ್.ಕೃಷ್ಣಮೂರ್ತಿ, ಆರ್.ವಿ.ಮಂಜುನಾಥ್ ಬಂದರು.

ಆರ್.ರವಿ ಅಡುಗೆ ಮಾಡುವುದರಲ್ಲಿ ಪರಿಣತರು. ಎಲ್ಲಾ ಸಮಾರಂಭಗಳಿಗೆ ಹೋಗುತ್ತಾರೆ. ಎಂಟು ವರ್ಷದಿಂದ ಈ ವೃತ್ತಿ. 'ಓದು ಹಿಡಿಸ್ಲಿಲ್ಲ. ಜಮೀನು ಇರ್ಲಿಲ್ಲ. ಇದರಿಂದ ಈ ವೃತ್ತಿಗೆ ಹೋದೆ' ಎನ್ನುತ್ತಾರೆ ರವಿ. ಇವರ ತಂದೆ ಎಸ್.ರಾಮಸ್ವಾಮಿ ಹಿಂದಿ ಪಂಡಿತರು. ಇವರಿಗೆ ರವಿ ಒಬ್ಬನೇ ಮಗ. ಅಡುಗೆ ವೃತ್ತಿಯಿಂದ ಜೀವನಕ್ಕೆ ತೊಂದರೆ ಇಲ್ಲ. ಆರ್.ಆರ್.ಕೃಷ್ಣಮೂರ್ತಿಯವರು ನಿವೃತ್ತ ಮುಖ್ಯೋಪಾಧ್ಯಾಯರು. ಒಂದು ಎಕರೆ ತೋಟ, ಒಂದು ಎಕರೆ ಗದ್ದೆ ಇವರಿಗಿದೆ. ನಾಲ್ಕು ಹೆಣ್ಣು, ಒಂದು ಗಂಡು. ಊಟಿಯಲ್ಲಿ ಮಗ ಹಿಂದೂಸ್ಥಾನ್ ಲಿವರ್ಸ್‌ನಲ್ಲಿ ಕೆಲಸ ಮಾಡುತ್ತಿದ್ದಾರೆ. ಅಡಿಕೆಯನ್ನು ತಂದೆಯವರು ಹಾಕಿದ್ದು. ಸ್ವಲ್ಪ ವೀಳ್ಯೆದೆಲೆ ಇದೆ. ಹಾರಂಗಿ ನೀರು. ಇವರಲ್ಲಿ ಅಣಬೆ ರೋಗ ಇಲ್ಲ. ಅಡಿಕೆಯಲ್ಲಿ ಇಳುವರಿ ೪೨ ಕ್ವಿಂಟಾಲ್ ಸಿಗುತ್ತದೆ. ನಾಡ ಗೊಬ್ಬರವನ್ನೇ ಬಳಸುತ್ತಾರೆ. ಸೀಮೆಗೊಬ್ಬರದ ಬಳಕೆ ಇಲ್ಲ.


ವೀಳ್ಯೇದೆಲೆ ವ್ಯಾಪಾರ: ರುದ್ರಪಟ್ಟಣದಲ್ಲಿ ಈಗೀಗ ವೀಳ್ಯೆದೆಲೆ ವಿಸ್ತೀರ್ಣ ಹೆಚ್ಚಾಗುತ್ತಿದೆ. 'ಅಡಿಕೆ ಬೆಲೆ ಮಂಕಾದ ಮೇಲೆ ವೀಳ್ಯೇದೆಲೆಗೆ ಪ್ರಾಮುಖ್ಯ ಬಂತು' ಎನ್ನುತ್ತಾರೆ ಸುಬ್ರಹ್ಮಣ್ಯ. 'ಅಡಿಕೆ ಮತ್ತು ವೀಳ್ಯೇದೆಲೆ - ಎರಡೂ ಬೆಲೆಯಲ್ಲಿ ತದ್ವಿರುದ್ಧ ಬೆಳವಣಿಗೆ ಕಾಣುತ್ತದೆ' ಎಂಬುದು ಮಂಜುನಾಥರ ಅನುಭವ. ವೀಳ್ಯೆದೆಲೆ ವ್ಯಾಪಾರದಲ್ಲಿ ಐದು ವರ್ಷದಿಂದ ತೊಡಗಿರುವ ಇವರಿಗೂ ತೋಟ ಇದೆ. ಅಡಿಕೆ, ವೀಳ್ಯೇದೆಲೆ ಮತ್ತು ಬಾಳೆ ಇದೆ. 'ನನ್ನ ಅಜ್ಜನ ಕಾಲದಿಂದ್ಲೂ ವೀಳ್ಯೆದೆಲೆ ವ್ಯಾಪಾರ ಮಾಡ್ತಾ ಬಂದಿದೀವಿ. ನನ್ನ ತಂದೆ ಆರ್.ವೆಂಕಟೇಶಯ್ಯನವರು ತೀರಿಕೊಂಡು ಹತ್ತು ತಿಂಗಳಾಯ್ತು. ಈಗ ನಾನು ವೀಳ್ಯೇದೆಲೆ ವ್ಯಾಪಾರ ಮಾಡ್ತಾ ಐದು ವರ್ಷ ಆಯ್ತು. ಐದಾರು ಹಳ್ಳಿಗಳಲ್ಲಿ ಸುತ್ತಾಡಿ ಕೆಲವೆಡೆ ತೋಟಾನ ಗುತ್ತಿಗೆಗೆ ವ್ಯಾಪಾರ ಮಾಡಿಕೊಂಡಿವಿ. ಪಿರಿಯಾಪಟ್ಟಣ, ಹುಣಸೂರಿಗೆ ತಗೊಂಡು ಹೋಗ್ತೀವಿ. ದಿವಸಾ ಐದಾರು ಪಿಂಡಿ ಎಲೇನ ಪಿರಿಯಾಪಟ್ಟಣಕ್ಕೆ ಕಳಿಸ್ತೀವಿ. ಹುಣಸೂರು, ಕೆ.ಆರ್.ನಗರ, ಬೆಟ್ಟದಪುರ ಮತ್ತು ಕೊಣನೂರು ಸಂತೆಗೆ ಹೋಗಿ ಮಾರಾಟ ಮಾಡ್ತೀವಿ. ಈ ವ್ಯಾಪಾರದಲ್ಲಿ ನಷ್ಟ ಆಗಿಲ್ಲ. ಸಂಸಾರ ನಿರ್ವಹಿಸಬಹುದು. ಅಕ್ಟೋಬರ್‌ನಿಂದ ಮಾರ್ಚ್‌ವರೆಗೆ ಒಳ್ಳೆ ಬೆಲೆ ಇರುತ್ತೆ. ಆದರೆ ಮಾಲು ಕಡಿಮೆ ಇರುತ್ತೆ. ಆಷಾಢದಿಂದ ಎರಡೂವರೆ ತಿಂಗಳ ಕಾಲ ಬೆಲೆ ಕಮ್ಮಿ' ಎಂದು ಅವರು ಹೇಳುತ್ತಾರೆ.

ನಶಿಸಿದ ತೊಟ್ಟಿಮನೆ: ರುದ್ರಪಟ್ಟಣದಲ್ಲಿ ಹದಿನಾರು ಕಂಬದ ತೊಟ್ಟಿಮನೆ ಇದೆ. ಇಲ್ಲಿ ಎಂಟು ಕುಟುಂಬಗಳು ವಾಸವಾಗಿರುತ್ತಿದ್ದವು. ಸುಮಾರು ೪೫ ಜನ ಇಲ್ಲಿದ್ದರು. ಈ ತೊಟ್ಟಿ ಮನೆಯನ್ನು ಸಂಗೀತ ಮತ್ತು ವೇದಪಠಣಕ್ಕೆ ಉಪಯೋಗಿಸುತ್ತಿದ್ದರು. ಆದರೆ ಈಗ ಛತ್ರವಾಗಿ ಪರಿವರ್ತನೆಯಾಗಿದೆ. ಇಲ್ಲಿ ವಾಸಿಸುತ್ತಿದ್ದ ಕುಟುಂಬಗಳು ಈಗಿಲ್ಲ. ಶಿಥಿಲವಾಗುತ್ತಿದ್ದ ತೊಟ್ಟಿ ಮನೆಗೆ ಸಿಮೆಂಟ್ ಕಂಬಗಳಿಂದ ಆಧಾರ ಕೊಡಲಾಗಿದೆ. ಒಕ್ಕಲಿಗ ಜನಾಂಗದವರು ಸಮಿತಿಯೊಂದನ್ನು ಮಾಡಿಕೊಂಡು ಇದರ ನಿರ್ವಹಣೆ ಮಾಡಿಕೊಂಡು ಹೋಗುತ್ತಿದ್ದಾರೆ.

ಇನ್ನೊಂದು ತೊಟ್ಟಿ ಮನೆಯೂ ಇಲ್ಲಿದೆ. ಇನ್ನೆರಡು ತೊಟ್ಟಿಮನೆಗಳು ಬಳಕೆಯಾಗುತ್ತಿಲ್ಲ. ಇಲ್ಲಿನ ಕಾವೇರಮ್ಮ, ವೆಂಕಮ್ಮ, ಮತ್ತು ಸುಬ್ಬಮ್ಮ - ಮೂವರೂ ಅಡುಗೆ ಮಾಡಲು ಹೆಸರುವಾಸಿಯಾಗಿದ್ದರು. ಈಗ ಇವರ್‍ಯಾರೂ ಇಲ್ಲ. ಕೈಮುಟ್ಟಿ ಕೆಲಸ ಮಾಡುವ ಸಂಕೇತಿ ಕೃಷಿಕರು ಈಗ ಬಹು ಕಮ್ಮಿಯಾಗಿದ್ದಾರೆ. ಕಾರ್ಮಿಕರ ಮೇಲೆ ಅವಲಂಬನೆ ಹೆಚ್ಚಾಗಿದೆ. ತೋಟಗಳಿಗೆ ನೀರಿನ ಕೊರತೆ ಇದುವರೆಗೂ ಕಾಣಿಸಿರಲಿಲ್ಲ. ಮಳೆಯ ಅಭಾವದಿಂದ ಹಿಂದೆಂದೂ ಕಂಡರಿಯದ ನೀರಿನ ಕೊರತೆ ಎದುರಾಗಿದೆ.

ಸಗಣಿಗೊಬ್ಬರವೇ ಹಿತ: ಹೆಚ್.ಎನ್.ಸೀತಾರಾಮಯ್ಯನವರು ಹಾನಗಲ್‌ನಿಂದ ಇಲ್ಲಿಗೆ ಬಂದವರು. ಸುಮಾರು ೨೫ ವರ್ಷಗಳಾದವು. ಇಬ್ಬರು ಸಹೋದರರು ಹಾನಗಲ್‌ನಲ್ಲಿ ತೋಟ ನೋಡಿಕೊಂಡು ಹೋಗುತ್ತಿದ್ದಾರೆ. ಎಸ್.ಎಸ್.ಎಲ್.ಸಿ. ಯವರೆಗೆ ಓದಿರುವ ಸೀತಾರಾಮಯ್ಯನವರು ಕೃಷಿಯಲ್ಲಿ ನಿರಂತರವಾಗಿ ಆಸಕ್ತಿ ಇಟ್ಟುಕೊಂಡು ಏರುತ್ತಾ ಬಂದವರು. ರಾಮಣ್ಣ ಎಂದೇ ಕರೆಯಲ್ಪಡುವ ಇವರ ತೋಟವನ್ನೂ ಬದುಕನ್ನೂ ಕಣ್ಣಾರೆ ಕಾಣಲು ತೋಟಕ್ಕೆ ಹೋದಾಗ ಕೆರೆಯ ನೀರನ್ನು ಉಣಿಸುತ್ತಿದ್ದರು. 'ನೋಡಿ, ಇಷ್ಟು ವರ್ಷದವರೆಗೆ ನೀರಿನ ಅಭಾವವೇ ಇರ್‍ಲಿಲ್ಲ. ಸದಾ ನೀರು ಹರೀತಿತ್ತು. ಈಗ ತೊಂದ್ರೆ ಆಗಿದೆ. ಕಟ್ಟೆಯಲ್ಲಿ ತಗ್ಗು ತೆಗೆದು ಸಿಗೋ ನೀರನ್ನು ಉಣಿಸಿ ತೋಟ ಉಳಿಸಿಕೊಳ್ತಾ ಇದೀವಿ. ಬೇಜಾವಾಬ್ದಾರಿ ಮಾಡಿ ತೋಟ ಹಾಳು ಮಾಡಿಕೊಂಡ್ರೆ ಬಹಳ ಕಷ್ಟ. ಬೆಲೆ ಬಂದಾಗ ಒಂದೇ ಸಾರಿ ಏಳಿಸ್ಲಿಕ್ಕೆ ಆಗುತ್ತಾ?' ಎಂದು ಪ್ರತಿಕ್ರಿಯಿಸಿದರು. ರಾಮಣ್ಣನವರು ತೋಟಕ್ಕೆ ರಾಸಾಯನಿಕ ಗೊಬ್ಬರವನ್ನೇ ಹಾಕಲ್ಲ. ಎರಡು ಎಕರೆ ಅಡಿಕೆ ತೋಟಕ್ಕೆ ವರ್ಷಕ್ಕೆ ೭೦ ಗಾಡಿ (ಟೈರ್ ಗಾಡಿ) ಸಗಣಿಗೊಬ್ಬರವನ್ನು ಖರೀದಿ ಮಾಡುತ್ತಾರೆ. ದನಕರುಗಳನ್ನು ಸಾಕಿಲ್ಲ. 'ಕುರಿ-ಮೇಕೆ ಇಟ್ಕೊಂಡಿರೋರಿಗೆ ಮುಂಚಿತವಾಗಿ ಹಣ ಕೊಟ್ಟಿರ್ತೀವಿ. ಅಡಿಕೆ, ವೀಳ್ಯೆಗೆ ಸಗಣಿಗೊಬ್ಬರ ಬಹಳ ಒಳ್ಳೆಯದು. ವರ್ಷಕ್ಕೆ ಒಂದೊಂದಕ್ಕೆ ಒಂದು ಮಂಕರಿ (೧೫-೨೦ ಕಿ.ಗ್ರಾಂ.) ಹಾಕ್ತೀವಿ. ಎಲೆ ಬಾಳಿಕೆ ಬರುತ್ತೆ. ಬೆಳೆಗೆ ರೋಗ ಬರಲ್ಲ' ಎಂದು ಅವರು ಹೇಳುತ್ತಾರೆ.

ಮಾರ್ಗದರ್ಶಿ ಅನುಭವ: ಸೀತಾರಾಮಯ್ಯನವರು ಎಕರೆಗೆ ೩-೫ ಲಕ್ಷ ಅಡಿಕೆ ಕಾಯಿಗಳನ್ನು ಪಡೆಯುತ್ತಾರೆ. ಒಂದು ಕ್ವಿಂಟಾಲ್‌ಗೆ ೫,೦೦೦-೫೨೫೦ ಕಾಯಿಗಳು ತೂಗುತ್ತವೆ. ವೀಳ್ಯೆದೆಲೆಯು ಎಕರೆಗೆ ೩೦-೩೫ ಪಿಂಡಿ ದೊರೆಯುತ್ತೆ. ಎಲ್ಲವನ್ನೂ ಗುತ್ತಿಗೆ ಕೊಡ್ತಾರೆ. 'ವೀಳ್ಯೇ ದಷ್ಟಪುಷ್ಟವಾಗಿ ಬೆಳೆದ್ರೆ ಅಡಿಕೆಯಲ್ಲಿ ೧೫ ಭಾಗ ಕಮ್ಮಿಯಾಗುತ್ತೆ. ಹಾಗೇನೇ ಬಾಳೆ ಹಾಕಿದ್ರೆ ವೀಳ್ಯೆ ಸರಿಯಾಗಿ ಬೆಳೆಯೋಲ್ಲ. ಅಣಬೆ ರೋಗ ಅಲ್ಪಸ್ವಲ್ಪ ಕಾಣಿಸುತ್ತೆ. ಮರ ಹೋಗೋದಕ್ಕಿಂತ ಮುಂಚೆ (೩೦-೩೫ ವರ್ಷದ ಬಳಿಕ) ಹೊಸದಾಗಿ ಎಡೆದಾಯಿ ಸಸಿಗಳನ್ನು ನೆಡ್ತೀವಿ' ಎಂದು ರಾಮಣ್ಣ ವಿವರಿಸಿದರು. ಅರುವತ್ತು ವರ್ಷ ವಯಸ್ಸಿನ ಇವರ ತೋಟ ಮತ್ತು ಬದುಕು ಇತರರಿಗೆ ಮಾರ್ಗದರ್ಶನದಂತಿದೆ.



ಅಡಿಕೆಗೆ ಬಂದಿರುವ ಅಣಬೆರೋಗವನ್ನು ತೋರಿಸುತ್ತಿರುವ ಹೆಚ್.ಎನ್.ಸೀತಾರಾಮಯ್ಯ:ರುದ್ರಪಟ್ಟಣ

ವಿಶ್ವನಾಥ್ ಸುಮಾರು ಇಪ್ಪತ್ತು ವರ್ಷಗಳಿಂದ ಅಂಗಡಿ ವ್ಯಾಪಾರದಲ್ಲಿ ತೊಡಗಿದವರು. ಬಿ.ಕಾಂ. ಪದವೀಧರರಾದ ಇವರು ಅನಿವಾರ್ಯವಾಗಿ ವ್ಯಾಪಾರಕ್ಕೆ ಬರಬೇಕಾಯಿತು. ಇವರ ತಂದೆ ಹಿರಣ್ಣಯ್ಯನವರಿಗೆ ಐದು ಗಂಡು ಮತ್ತು ಮೂರು ಹೆಣ್ಣು ಮಕ್ಕಳಾಗಿದ್ದರು. ಹಿಡುವಳಿ ಕಮ್ಮಿ ಇದ್ದಿದ್ದರಿಂದ ಇದಕ್ಕೆ ಕೈ ಹಾಕಿದರು. ಬಿ.ಎಸ್.ನಾಗರಾಜರಾವ್ ಹೆಚ್ಚು ಓದಲಿಲ್ಲ. ತಾತನಿಂದ ಬಳುವಳಿಯಾಗಿ ಕಿರಾಣಿ ಅಂಗಡಿ ವ್ಯಾಪಾರ ಇವರಿಗೆ ಬಂದಿದೆ. ಇವರ ತಂದೆ ಬಿ.ಎನ್.ಶ್ರೀನಿವಾಸರಾವ್‌ರವರು ಕಿರಾಣಿ ಅಂಗಡಿಯ ವ್ಯಾಪಾರದ ಮೇಲೆ ಬದುಕು ನೂಕಿದರು. ಕಿರಾಣಿ ಅಂಗಡಿ ಮತ್ತು ಎರಡು ಎಕರೆ ಗದ್ದೆಯಿಂದ ಅಣ್ಣತಮ್ಮಂದಿರನ್ನು ಓದಿಸಿದರು, ಉದ್ಯೋಗ ಸಿಗಲು ಅನುಕೂಲವಾಯ್ತು. ಇತ್ತೀಚಿನ ದಿನಗಳಲ್ಲಿ ಸಮರ್ಪಕವಾಗಿ ಮಳೆ ಬಾರದೇ ಬೆಳೆಗಳು ವಿಫಲವಾಗುತ್ತಿರುವುದರಿಂದ ಹಳ್ಳಿ ಜನರಲ್ಲಿ ಹಣದ ಕೊರತೆ ಕಾಣುತ್ತಿದೆ.


ಅಂಗಡಿಗಳಲ್ಲಿ ವ್ಯಾಪಾರ ಕುಗ್ಗಿದೆ. ಪದಾರ್ಥಗಳನ್ನು ದುಡ್ಡು ಕೊಟ್ಟು ಖರೀದಿಸದೇ ಸಾಲವಾಗಿ ಪಡೆದುಕೊಂಡು ಬೇಗ ಕೊಡದೆ, ತಲೆ ಮರೆಸಿಕೊಂಡು ಅಡ್ಡಾಡುವ ಪ್ರಸಂಗಗಳೂ ಇವೆ.

ಮುಗಿಸುವ ಮುನ್ನ:

* ಇತರೆಡೆ ಇದ್ದಂತೆ ವಿದ್ಯಾವಂತರಾದ ಸಂಕೇತಿ ಯುವಕರಿಗೆ ಬೇಸಾಯದಲ್ಲಿ ಆಸಕ್ತಿ ಇಲ್ಲ. ಜಮೀನು-ಊರು-ಮನೆಯ ನಂಟನ್ನು ಇಟ್ಟುಕೊಂಡವರು, ಹೆಚ್ಚು ಓದದೇ ಅನ್ಯದಾರಿ ಕಾಣದೇ ಬೇಸಾಯದಲ್ಲಿ ಮುಂದುವರೆದವರು ರುದ್ರಪಟ್ಟಣದಲ್ಲಿ ಕಾಣಸಿಗುತ್ತಾರೆ.
* ಬೆಳೆ ವೈವಿಧ್ಯತೆ, ಸುಸ್ಥಿರ ತಂತ್ರಗಳು ಅಪರೂಪ ಎನಿಸಿವೆ.
* ಇಳಿದ ಧಾರಣೆ, ಏರಿದ ಜೀವನ ಕ್ರಮಗಳು ಆತಂಕವನ್ನು ಹುಟ್ಟಿಸಿವೆ.
* ಸಂಕೇತಿಗಳ ಕುಟುಂಬಗಳು ರುದ್ರಪಟ್ಟಣದಲ್ಲಿ ಗಣನೀಯವಾಗಿ ಕಮ್ಮಿಯಾಗಿವೆ.

ದೂರವಾಣಿ ಸಂಖ್ಯೆ: ಇಲ್ಲಿನ ನಿವೃತ್ತ ಶಿಕ್ಷಕರಾಗಿರುವ ಆರ್.ಆರ್.ಕೃಷ್ಣಮೂರ್ತಿ : 225238

ಸಂದರ್ಶನ : 07-06-2003



ಕೃಷ್ಣಮೂರ್ತಿ:ನಿವೃತ್ತ ಶಿಕ್ಷಕ ಮತ್ತು ಕೃಷಿಕ:ರುದ್ರಪಟ್ಟಣ

೧೨. ಆನಂದೂರು : ಕೃಷಿಯಲ್ಲಿ ಆನಂದ ಇಲ್ಲ

ಇಲ್ಲಿ ಆನಂದವಾಗಿರುವ ಜನರಿಲ್ಲ. ಅಂದವಾಗಿರುವ ತೋಟಗಳಿಲ್ಲ. ಜೀವನದಿಯ ನೀರು ಕಳಂಕವಾಗಿ ಪರಿಣಮಿಸಿದೆ.

ಹಾಸನದಿಂದ ರಾಮನಾಥಪುರ ತಲುಪಿ ಅಲ್ಲಿಂದ ಗಂಗೂರು ಹ್ಯಾಂಡ್ ಪೋಸ್ಟ್‌ನಿಂದ ಹನ್ಯಾಳು ಗ್ರಾಮದ ಮಾರ್ಗವಾಗಿ ಮೂರು ಕಿ.ಮೀ. ಮುಂದೆ ಸಾಗಿದರೆ ಆನಂದೂರು ಸಿಗುತ್ತದೆ. ಹಿಂದೆ ಇಲ್ಲಿ ಆನೆಗಳನ್ನು ಜೈನರು ಕಟ್ಟುತ್ತಿದ್ದರಂತೆ. ಆನೆ ಕಟ್ಟುವ, ಆನೆ ಇದ್ದ ಊರು ಎಂದೇ ಪ್ರಚಾರ ಪಡೆದ ಈ ಊರಿಗೆ ಬರುಬರುತ್ತಾ 'ಆನಂದೂರು' ಎಂಬ ಹೆಸರು ಪ್ರಚಲಿತವಾಯಿತು. ಊರಲ್ಲಿ ಸುಮಾರು ೩೦೦ ಕುಟುಂಬ ಇವೆ. ರುದ್ರಪಟ್ಟಣದ ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಒಳಪಡುತ್ತದೆ. ಹೆಚ್ಚಾಗಿ ಕುರುಬ ಮತ್ತು ಹರಿಜನ ಜನಾಂಗದವರು ಇಲ್ಲಿ ವಾಸವಾಗಿದ್ದಾರೆ. ಇನ್ನುಳಿದಂತೆ ಬ್ರಾಹ್ಮಣರು, ದೇವಾಂಗ ಶೆಟ್ಟರು, ಆಚಾರ್‌ರು, ಮಡಿವಾಳ ಶೆಟ್ಟರು, ಕ್ಷೌರಿಕರು, ಒಕ್ಕಲಿಗರು - ಇವರೆಲ್ಲಾ ಒಂದು ರೀತಿಯಲ್ಲಿ ಇಲ್ಲಿ ಅಲ್ಪಸಂಖ್ಯಾತರು. ಮುಸಲ್ಮಾನರು, ಕ್ರಿಶ್ಚಿಯನ್‌ರು ಇಲ್ಲಿಲ್ಲ.

ಆನಂದೂರಿನಲ್ಲಿ ಪ್ರಾಥಮಿಕ ಶಾಲೆ, ಅಂಗನವಾಡಿ ಕೇಂದ್ರ, ನ್ಯಾಯಬೆಲೆ ಅಂಗಡಿ - ಇಲ್ಲಿವೆ. ರಾಮಮಂದಿರ, ತೊಡಕಿನ ಕಲ್ಲಮ್ಮನ ದೇವಸ್ಥಾನ, ಲಕ್ಷ್ಮೀದೇವಮ್ಮನ ದೇವಸ್ಥಾನ, ಈಶ್ವರ ದೇವಸ್ಥಾನ - ಈ ಊರಿನಲ್ಲಿವೆ. ಗ್ರಾಮದೇವತೆ ಲಕ್ಷ್ಮೀದೇವಮ್ಮನ ಉತ್ಸವವು ಯುಗಾದಿ ಹಬ್ಬದ ದಿನದಂದು, ಲಕ್ಷದೀಪೋತ್ಸವ (ಕಾರ್ತೀಕ ಅಮಾವಾಸ್ಯೆಯ ದಿನ) ಸಂದರ್ಭದಲ್ಲಿ ಜರುಗುತ್ತೆ. ದೀಪಾವಳಿ ಬಲಿಪಾಡ್ಯಮಿ ದಿವಸ ತೊಡಕಿನ ಕಲ್ಲಮ್ಮನ ಜಾತ್ರೆಯನ್ನು ಆಚರಿಸಲಾಗುತ್ತದೆ. ಹೊರಗಡೆಯ ಜನರೂ ಬಂದು ಹೋಗುತ್ತಾರೆ. ಇಲ್ಲಿ ಭತ್ತ ಪ್ರಮುಖವಾದ ಬೆಳೆ. ಉಳಿದಂತೆ ತಡ್ನಿ, ಹಲ್ಲುಜೋಳಗಳನ್ನು ಹಾಕುತ್ತಾರೆ. ತಂಬಾಕು ಬಹು ಕಮ್ಮಿ. ಭತ್ತದಲ್ಲಿ ಎಲ್ಲಾ ತರಹದ ತಳಿಗಳನ್ನು (ಬಾಂಗ್ಲಾರೈಸ್, ಐಆರ್-20, ಐಆರ್-64, ರಾಜಮುಡಿ, ಇತ್ಯಾದಿ) ಬೆಳೆಯುತ್ತಾರೆ. ಸಿಂಧಿ ಹಸುಗಳ ಸಾಕಾಣಿಕೆ ಕಮ್ಮಿ. ಹಳ್ಳಿಕಾರ್ ಹಸುಗಳು ಮತ್ತು ಎಮ್ಮೆಗಳೇ ಇಲ್ಲಿ ಹೆಚ್ಚು. ಸ್ವಲ್ಪ ಪ್ರಮಾಣದಲ್ಲಿ ಕುರಿ, ಕೋಳಿ, ಆಡುಗಳನ್ನು ಸಾಕಿದ್ದಾರೆ.

ರಾಮನಾಥಪುರ ಕಡೆಯಿಂದ ಐದು ಬಸ್‌ಗಳು ಬಂದು ಹೋಗುತ್ತವೆ. ಕಟ್ಟೇಪುರ ಮತ್ತು ಹಾರಂಗಿ ಜಲಾಶಯದ ನಾಲಾ ನೀರು ಇಲ್ಲಿಯ ಜಮೀನುಗಳಿಗೆ ಹರಿಯುತ್ತದೆ. ನಾಲಾ ನೀರು ಬಂದ ಮೇಲೆ ಬೆಳೆ ವೈವಿಧ್ಯ ಇಲ್ಲವಾಗಿದೆ. ಭತ್ತಕ್ಕೆ ರೋಗ ಕೀಟಗಳು ಸಹಜವಾಗಿವೆ. ಜೀವನದಿಯ ನೀರು ಇಲ್ಲಿಯ ಜನರ ಮೈ-ಕೆರೆತವನ್ನು ಉಂಟು ಮಾಡಿದೆ. ಶುಚಿ ನೀರಿನ ಲಭ್ಯತೆಯ ಕೊರತೆ ಇಲ್ಲಿದೆ. 'ಹೊಳೆಯ (ಕಾವೇರಿ) ನೀರನ್ನು ಕುಡಿಯುಂತಿಲ್ಲ. ಹರಿವು ಇಲ್ಲ. ಹೊಲಸು ತುಂಬಿದೆ, ಸ್ನಾನ ಮಾಡಿದ್ರೆ ಮೈ ಕೆರೆತ' ಎಂದು ಕೆ. ಕೃಷ್ಣಮೂರ್ತಿ ಹೇಳುತ್ತಾರೆ. ಈ ಊರಿನ ಐದಾರು ಜನ ಅಡಿಕೆಯನ್ನು ಬೆಳೆದಿದ್ದಾರೆ. ಈಗೀಗ ಕೆಲವರು ಹಾಕಿದ್ದಾರೆ. ಹಳೆಯ ತೋಟಗಳಿವೆ. ತೋಟಗಳಲ್ಲಿ ಬಾಳೆ ಕಮ್ಮಿ, ವೀಳ್ಯೆಯೂ ಬಹು ಕಡಿಮೆ. ಇತರೇ ಬೆಳೆಗಳ ಸಂಯೋಜನೆ ಕಾಣುತ್ತಿಲ್ಲ. ಹರಿಯುವ ನೀರನ್ನು ಬಳಸಲು ವಿದ್ಯುತ್ ಚಾಲಿತ ಪಂಪುಗಳನ್ನು ಜನ ಇಟ್ಟುಕೊಂಡಿದ್ದಾರೆ. ಕೊಳವೆ ಬಾವಿ ಕೊರೆಸಿದವರು ಇಲ್ಲ. ಆರ್ಥಿಕವಾಗಿ ಸಾಮರ್ಥ್ಯ ಇಲ್ಲದಿರುವುದೂ ಇದಕ್ಕೆ ಕಾರಣ. ಜೊತೆಗೆ ನಾಲಾ ನೀರಿನ ಲಭ್ಯತೆ. ನೀರಿನ ಕೊರತೆ ಮತ್ತು ವಿದ್ಯುತ್‌ನ ಅಭಾವವು ಈಗ್ಗೆ ಎರಡ್ಮೂರು ವರ್ಷಗಳಿಂದ ಈ ಹಿಂದೆ ಎಂದೂ ಕಾಣದ ರೀತಿಯಲ್ಲಿ ಕಾಡುತ್ತಿದೆ.



ಕೆ.ಕೃಷ್ಣಮೂರ್ತಿ ತಮ್ಮ ತೋಟದ ಬಾಗಿಲಲ್ಲಿ:ಆನಂದೂರು

ಊರಲ್ಲಿ ಸಾಮರಸ್ಯ ಇದೆ. ಸಂಕೇತಿಗಳ ಕುಟುಂಬದಲ್ಲಿ ಉನ್ನತ ವ್ಯಾಸಂಗ ಮಾಡಿರುವವರು ಇಲ್ಲಿದ್ದಾರೆ. ಆರು ಸಂಕೇತಿ ಕುಟುಂಬಗಳು

ಇಲ್ಲಿವೆ. ಹನ್ನೊಂದು ಜನ ಹೊರಗಡೆ ಉದ್ಯೋಗದಲ್ಲಿದ್ದಾರೆ. ಆರು ಕುಟುಂಬಗಳಿಂದ ಅಡಿಕೆ ಪ್ರದೇಶ ಐದು ಎಕರೆ ಇದೆ. ಹಿಡುವಳಿಯು ಒಬ್ಬೊಬ್ಬರಿಗೆ ಬಹು ಕಮ್ಮಿ. ಮನೆಯ ಖರ್ಚಿಗೆ ತೆಂಗು ಬೆಳೆದಿದೆ. ನುಸಿ ಕ್ರಿಮಿ ಇಲ್ಲಿಯೂ ತೆಂಗಿಗೆ ಕಾಡಿದೆ. ಹುಣಿಸೆ ಮರಗಳು ಅಲ್ಲಲ್ಲಿ ಇವೆ. ತೋಟಕ್ಕೆ ನೀರುಣಿಸಲು ತೋಟದಲ್ಲೇ ತೆರೆದ ಬಾವಿಗಳಿವೆ. ಸೀಮೆಎಣ್ಣೆ ಪಂಪಿನಿಂದ ನೀರನ್ನು ಉಣಿಸಲಾಗುತ್ತಿದೆ. ಎರಡು ಅಶ್ವಶಕ್ತಿಯ ಪಂಪ್ ಇಲ್ಲಿ ಬಳಕೆಯಾಗಿವೆ. ಒಂದೊಂದರ ವೆಚ್ಚ ೧೨-೧೩ ಸಾವಿರ ಆಗುತ್ತದೆ. ಹೆಚ್ಚು ಓದದ ಜನ ಬೇಸಾಯದಲ್ಲಿ ತೊಡಗಿದ್ದಾರೆ.

ಆನಂದೂರಿನಲ್ಲಿ ಸಂಕೇತಿಗಳ ಸಂಖ್ಯೆ ಏರುಪೇರಾಗಿಲ್ಲ. ಓದಿದವರು ಹೊರಗಡೆ ಹೋಗಿದ್ದಾರೆಯೇ ಹೊರತು ಅವರ ಹಿರಿಯರು ಇಲ್ಲೇ ಇದ್ದಾರೆ. ಇಳಿದ ಬೆಲೆ, ಕಮ್ಮಿಯಾದ ಮಳೆ, ಏರಿದ ಜೀವನ ಖರ್ಚು - ಇವೆಲ್ಲಾ ಜನರನ್ನು ಆತಂಕಕ್ಕೆ ದೂಡಿವೆ. ದನಕರುಗಳ ಸಾಕಾಣಿಕೆಯೂ ಸಂಕೇತಿಗಳಲ್ಲಿ ಈಗೀಗ ಕಮ್ಮಿಯಾಗಿದ್ದು ತೋಟಗಳಲ್ಲಿ ಭಿನ್ನತೆ ಕಾಣುತ್ತಿಲ್ಲ. ಅಡಿಕೆಯಲ್ಲಿ ೫೦ ಗುಂಟೆಗೆ ೭೦ ಕ್ವಿಂಟಾಲ್ ಹಸಿ ಅಡಿಕೆ ಪಡೆದದ್ದೂ ಇದೆ. ಆದರೆ ಇದೇ ಇಳುವರಿ ಮುಂದುವರೆಯಲಿಲ್ಲ. 'ಮಳೆಯು ಉತ್ತಮವಾಗಿ ಬರುತ್ತಿದ್ದರೆ ತೋಟ ಚನ್ನಾಗಿರುತ್ತದೆ. ಇಳುವರಿ ಉತ್ತಮವಾಗಿರುತ್ತದೆ' ಎಂದು ಕೃಷ್ಣಮೂರ್ತಿ ಹೇಳುತ್ತಾರೆ. ಆನಂದೂರಿನ ಸಂಕೇತಿಗಳಲ್ಲಿ ಸುವರ್ಣಗಡ್ಡೆಯನ್ನು ಇಷ್ಟಪಟ್ಟು ಬೆಳೆದು ತಿನ್ನುವವರು ಕಮ್ಮಿ. ತಾಂಬೂಲ, ನಶ್ಯ ಹಾಕುವ ಅಭ್ಯಾಸವೂ ಇಲ್ಲಿಯ ಸಂಕೇತಿಗಳಲ್ಲಿ ಕಂಡುಬರುತ್ತದೆ.

ದಿನಾಂಕ ೭.೬.೦೩ರಂದು ಆನಂದೂರಿಗೆ ಹೋದಾಗ ಅಲ್ಲಿನ ತಮ್ಮಣ್ಣಗೌಡ, ಚಿಕ್ಕೇಗೌಡ, ಲಕ್ಕೇಗೌಡ, ಅಂಗಡಿ ಅಣ್ಣಯ್ಯ, ಮುಂತಾದವರು ಕೂಡ ವಿವರಗಳನ್ನು ನೀಡಲು ನಮ್ಮೊಂದಿಗೆ ಇದ್ದರು.

ದೂರವಾಣಿ ಸಂಖ್ಯೆ: ಕೆ.ಕೃಷ್ಣಮೂರ್ತಿ: 231124

ಸಂದರ್ಶನ : 07-06-2003



ನನಗೆ ಈಗಲೂ ಸೈಕಲ್ ಇಷ್ಟ ಎನ್ನುತ್ತಾರೆ ಎ.ಆರ್.ಸುಬ್ರಹ್ಮಣ್ಯಂ:ಆನಂದೂರು


೧೩. ಕಲ್ಯಾಣಕ್ಕೆ ಕಷ್ಟಪಡುತ್ತಿರುವ ಕಟ್ಟೇಹೊಸಹಳ್ಳಿಯ ಕೃಷಿಕರು

ಮಲೇರಿಯಾ ಬಂದು ಇತರರು ಊರು ಬಿಟ್ಟಾಗ ಸಂಕೇತಿಗಳು ಹೊಳೆಯ ನೀರನ್ನು ನೆಚ್ಚಿಕೊಂಡು, ಇದ್ದಲ್ಲಿಯೇ ವಾಸ ಮಾಡಿದ್ದಾರೆ. ಬೆಳೆ ವೈವಿಧ್ಯವನ್ನು ಬೆಳೆಸಿಕೊಳ್ಳದೆ ಇವರು ಕೃಷಿಯಲ್ಲೂ ಆರ್ಥಿಕವಾಗಿ ಮುಂದೆ ಬಂದಿಲ್ಲ.

ಹೊಳೆನರಸೀಪುರದಿಂದ ಎಂಟು ಕಿ.ಮೀ.ದೂರದಲ್ಲಿರುವ ಕಟ್ಟೇಹೊಸಹಳ್ಳಿಗೆ ತಲುಪಲು ಚನ್ನರಾಯಪಟ್ಟಣ ಇಲ್ಲವೇ ಹೊಳೆನರಸೀಪುರದಿಂದ ಹೋಗಬಹುದು. ದಿನಾಂಕ ೨೧.೧೦.೦೩ರಂದು ಹಾಸನದಿಂದ ಹೊರಟ ನಾವು ಚನ್ನರಾಯಪಟ್ಟಣದಿಂದ ಹೊಳೆನರಸೀಪುರಕ್ಕೆ ಹೋಗುವ ದಾರಿಯಲ್ಲಿ ಅಗ್ರಹಾರ ಗೇಟ್‌ನ ಎಡಕ್ಕೆ ತಿರುಗಿ ಸಾಗಿದೆವು. ಮಾರಶೆಟ್ಟಿಹಳ್ಳಿಗೆ ತಲುಪಿ ಕಟ್ಟೆಹೊಸಹಳ್ಳಿಯ ದಾರಿಯನ್ನು ಕೇಳಿದಾಗ 'ನಾಲೆ ಪಕ್ಕದ ಏರಿಯಲ್ಲಿ ಹೋಗಿ' ಎಂದು ಅಲ್ಲಿದ್ದ ವ್ಯಕ್ತಿ ತಿಳಿಸಿದರು. ಮಣ್ಣು ರಸ್ತೆಯಲ್ಲಿ ಸಾಗಿ ಕಣ್ಣಿಗೆ ಹಸಿರು ಕುಕ್ಕಿಸುವ ಭತ್ತದ ಗದ್ದೆಗಳ ಮಧ್ಯದಲ್ಲಿ ಕಣ್ಣಾಡಿಸುತ್ತಾ ಮುಂದೆ ನಡೆದೆವು. 'ಸಂಕೇತಿಗಳ ಮನೆಗಳು ಅಲ್ಲಿವೆ' ಎಂದು ಅಲ್ಲಿದ್ದ ಮಹಿಳೆಯು ಹೇಳಿದಾಗ ಮತ್ತೂ ತುಸು ದಾರಿ ಕ್ರಮಿಸಿದೆವು. ಎದುರಿಗೆ ಸಿಕ್ಕ ರವಿಕುಮಾರ್ ತಾಂಬೂಲ ಮೆಲ್ಲುತ್ತಿದ್ದರು. ಅಷ್ಟೊತ್ತಿಗೆ ಅಲ್ಲಿಯ ಮೂವರು ಪುರುಷರು ಬಂದು ಸೇರಿದರು.

'ಬನ್ನಿ, ನಿಮ್ಮ ಜಮೀನುಗಳನ್ನು ನೋಡಿಕೊಂಡು ಬರೋಣ' ಎಂದು ಅಲ್ಲಿದ್ದ ರಾಮಚಂದ್ರ ಮತ್ತು ರವಿಕುಮಾರ್ ಅವರನ್ನು ಕರೆದುಕೊಂಡು ಹೊರಟೆ. ಊರ ಬಳಿಯೇ ಇದ್ದ ಅಡಿಕೆ ಗಿಡ ನಾಟಿ ಮಾಡಿರುವ ಜಮೀನನ್ನು ಅವರು ತೋರಿಸಿದರು. 'ಇದು ಮಂಜುನಾಥರ ತೋಟ, ಅಡಿಕೆ ಜೊತೆಗೆ ಬಾಳೆ ಹಾಕಿದಾರೆ' ಎಂದರು ರಾಮಚಂದ್ರ. ಮಳೆಯ ಕೊರತೆಯಿಂದ ಬಳಲಿದ್ದ ಅಡಿಕೆ ಗಿಡಗಳಿರುವ ಜಮೀನನ್ನು ಕಂಡು 'ಇದು ಯಾರದ್ದು?' ಎಂದೆ. 'ನಂದೇ ಇದು' ಎಂದ ರವಿಕುಮಾರ್ ಅವರು, 'ಹೊಳೆಯಿಂದ ಕಷ್ಟಪಟ್ಟು ನೀರು ಹೊಡಿದಿವಿ' ಎಂದರು. ಜಮೀನಿನಲ್ಲಿ ಮಣ್ಣಿನ ಫಲವತ್ತತೆ ಹೆಚ್ಚಾಗಲು ತಡ್ಡಿ ಮತ್ತು ಅಪ್‌ಸೆಣಬನ್ನು ಹಾಕಿರುವುದನ್ನು ತೋರಿಸಿದರು. 'ಇಲ್ಲಿ ರಾಣಿ, ರಾಜಮುಡಿ ತಳಿಗಳನ್ನು ಬೆಳೀತೀವಿ' ಎಂದ ಅವರನ್ನು 'ಹೊಳೆ ಹತ್ತಿರ ಹೋಗಿ ಬರೋಣ, ಬನ್ನಿ' ಎಂದು ವಿನಂತಿಸಿದೆ.

ಗದ್ದೆಗಳ ಬದುಗಳ ಮೇಲೆ ಬರಿಗಾಲಲ್ಲಿ ಹೆಜ್ಜೆ ಹಾಕುತ್ತಾ ಹೋಗುತ್ತಿರುವಾಗ ಮಾತು ಮುಂದುವರೆಸಿದ್ದೆ. 'ನೀವೆಲ್ಲಾ ಜಮೀನಿನಲ್ಲಿ ಕೆಲಸ ಮಾಡುವಾಗ ಬರಿಗಾಲಲ್ಲೆ ಇರಬೇಕಲ್ವಾ?' ಎಂದೆ. 'ಹೌದು, ಇಲ್ಲದಿದ್ದರೆ ಸರಿಹೋಗಲ್ಲ, ಚಪ್ಪಲಿ ಹಾಳಾಗ್ತವೆ' ಎಂದರು ರಾಮಚಂದ್ರ. ಹೊಳೆಯ ಬಳಿ ಬಂದಾಗ ಆಗ ತಾನೆ ಚಿಗುರೊಡೆದು, ಮೊಗ್ಗುಗಳನ್ನು ಧರಿಸಿದ್ದ ಹಿಪ್ಪೆ ಮರವನ್ನು ಕಂಡೆವು. ಅಲ್ಲೇ ಹೊಳೆಯ ಸಾಲಿನಲ್ಲಿ ಪೌಸೆ ಮರಗಳಿರುವುದು ಕಂಡು ಬಂತು. ಬೇವು, ಹುಣಿಸೆ ಮರಗಳು ಆರೋಗ್ಯವಾಗಿ ಬೆಳೆದಿರುವುದು ಕಾಣಿಸಿತು. 'ಇಲ್ಲಿನ ಮಹಿಳೆಯರೆಲ್ಲಾ ಬಟ್ಟೆ ಒಗೀಲಿಕ್ಕೆ ಇಲ್ಲಿಗೇ ಬರ್ತಾರೆ. ಸ್ವಲ್ಪ ವಯಸ್ಸಾದ ಹಿರಿಯರು ದಿನಾಲೂ ಇಲ್ಲೇ ಸ್ನಾನ ಮಾಡ್ತಾರೆ. ನಮಗೆ ನೀರಿನ ತೊಂದರೆ ಕಮ್ಮಿ' ಎಂದು ರಾಮಚಂದ್ರರವರು ಹೇಳುತ್ತಿದ್ದಂತೆ 'ಸ್ವಲ್ಪ ಮುಂದೆ ಹೋಗೋಣ ನಡೀರಿ' ಎಂದೆ. ಅಲ್ಲಿಗೆ ಹೋಗೋದು ಕಷ್ಟ, ಕಾಲು ಜಾರುತ್ತೆ' ಎಂದು ರಾಮಚಂದ್ರರವರು ಹೇಳಿದಾಗ, 'ಪರವಾಗಿಲ್ಲ ನಡ್ರಿ, ಅಭ್ಯಾಸ ಇದೆ' ಎಂದೆ.


ಸ್ನಾನಕ್ಕೂ ನದಿ, ಬಟ್ಟೆ ಒಗೆಯಲೂ ನದಿ:ಕಟ್ಟೆಹೊಸಹಳ್ಳಿ

ಹೊಳೆಯ ಆಸುಪಾಸಿನಲ್ಲಿ ಏನೇನಿದೆ ಎಂದು ಕಣ್ಣಾಡಿಸುತ್ತಾ ಹೆಜ್ಜೆ ಇಟ್ಟು ನೀರ ಬಳಿ ಸೇರಿದೆವು. ಶೀತದಲ್ಲಿ ಬೆಳೆಯುವ ಸುಂದರವಾದ ಲಿಲ್ಲಿ ಹೂವು ನಮ್ಮನ್ನು ಸ್ವಾಗತಿಸುವಂತೆ ಅರಳಿ ನಿಂತಿತ್ತು. ನೀರ ಹಕ್ಕಿಗಳು ಹಾರಾಡುತ್ತಿದ್ದವು. ಕಲ್ಲ ಮೇಲೆ



ಶೀತದಲ್ಲಿ ಬೆಳೆಯುವ ಲಿಲ್ಲಿ:ಕಟ್ಟೇಹೊಸಹಳ್ಳಿ

ಧುಮ್ಮಿಕ್ಕಿ ಹರಿಯುತ್ತಿದ್ದ ನೀರು ಸದ್ದು ಮಾಡುತ್ತಿತ್ತು. ತನ್ನದೇ ಆದ ಸೊಬಗನ್ನು ಸೃಷ್ಟಿ ಮಾಡಿತ್ತು. 'ಈ ನೀರು ಗೊರೂರು ಡ್ಯಾಂನಿಂದ ಹರಿದು ಬರುತ್ತೆ, ಮುಂದೆ ಕಾವೇರಿಗೆ ಸೇರುತ್ತೆ' ಎಂದರು ರಾಮಚಂದ್ರ. ಮೂರ್‍ನಾಲ್ಕು ಫೋಟೋಗಳನ್ನು ಕ್ಲಿಕ್ಕಿಸಿಕೊಂಡು ಹೊರಡುತ್ತಿದ್ದಾಗ ಹುಲುಸಾಗಿ ಬೆಳೆದ ಲಿಲ್ಲಿ ಗಿಡದಲ್ಲಿ ಆಕರ್ಷಣೀಯವಾದ ವರ್ಣರಂಜಿತವಾದ ಹುಳುಗಳು ಎಲೆ, ಹೂವುಗಳನ್ನು ತಿನ್ನುತ್ತಿದ್ದವು. ಬಾಯಿ ಭಾಗ -ಹಿಂಭಾಗ ಒಂದೇ ರೀತಿಯ ಬಣ್ಣದಲ್ಲಿತ್ತು. ವಿರಳ ರೋಮಗಳು, ಪಟ್ಟೆಗಳನ್ನು ಇಟ್ಟುಕೊಂಡಿದ್ದ ಈ ಹುಳು ಮೂರ್‍ನಾಲ್ಕು ಇಂಚು ಉದ್ದವಾಗಿತ್ತು, ಸುಂದರವಾಗಿದ್ದರೂ ಸುಂದರ ಹೂವನ್ನು ತಿನ್ನುತ್ತದೆಯಲ್ಲಾ ಎಂದು ಮರುಕ ಹುಟ್ಟಿಸಿತು.

'ನಡೀರಿ, ಹೋಗೋಣ' ಎಂದು ರಾಮಚಂದ್ರರವರ ಜೊತೆಗೆ ಹೊರಟಾಗ ಅಲ್ಲಿ ಕಟ್ಟಿದ್ದ ಮಣಕ (ಎಮ್ಮೆ) ಹೆದರಿ ಓಡಿತು. ಮುಂದೆ ಸಾಗಿತು. ಹಿರಿಯರೊಬ್ಬರು ಹಸುಗಳನ್ನು ಹಿಡಿದುಕೊಂಡು ಮೇಯಿಸಲು ಕಟ್ಟುತ್ತಿದ್ದರು. 'ಇವರು ನನ್ನ ಚಿಕ್ಕಪ್ಪ. ಹೆಸರು ಆನಂದರಾಮ್' ಎಂದು ರಾಮಚಂದ್ರರವರು ಹೇಳಿದಾಗ ಪರಿಚಯಿಸಿಕೊಂಡು 'ನಿಮ್ಮ ವಯಸ್ಸು, ವೃತ್ತಿ ಏನು ಯಜಮಾನ್ರೆ?' ಎಂದೆ. 'ಅಯ್ಯೋ ನಾವು ಮರಿತಮ್ಮನಹಳ್ಳಿಯಿಂದ ಇಲ್ಲಿಗೆ ಬಂದಿವಿ. ಇಲ್ಲೇ ೪೦ ವರ್ಷ ಆಯ್ತು. ಜಮೀನಿನ ವ್ಯಾಜ್ಯದಿಂದ, ಕಲಹದಿಂದ ಊರು ಬಿಟ್ವೆ. ಇಲ್ಲೊಬ್ಬರು ಸಾಹುಕಾರ್ರು ಇದ್ದರು. ಅವರ ಜಮೀನನ್ನು ವಾರಕ್ಕೆ ತಗೊಂಡು ಮಾಡ್ತಾ ಇದೀನಿ' ಎಂದರು ಆನಂದರಾಮ್. 'ಹಾಸನದಲ್ಲಿ ಗುಂಡೂರಾವ್ ಅನ್ನೋರು ಇದಾರೆ. ಅವ್ರುದು ನಾಲ್ಕೂವರೆ ಎಕರೆ ಜಮೀನು ಇದೆ. ಕಬ್ಬು, ಭತ್ತ ಬೆಳೀತೀನಿ. ನನ್ಗೆ ಮೂವರು ಗಂಡು ಮಕ್ಕಳು. ಎಲ್ರೂ ಬೆಂಗಳೂರಿನಲ್ಲಿ ಇದಾರೆ. ಇಬ್ಬರು ಕೆಲಸ ಮಾಡ್ತಾ ಇದಾರೆ. ಇನ್ನೊಬ್ಬ ಓದ್ತಾ ಇದಾನೆ. ಅಗತ್ಯವಿದ್ದಾಗ ಆಳುಗಳನ್ನು ಕರಕೊಳ್ತೀವಿ. ಗಂಡಾಳಿಗೆ ದಿನಕ್ಕೆ ೫೦ ರೂಪಾಯಿ, ಹೆಣ್ಣಾಳಿಗೆ ೪೦ ರೂಪಾಯಿ ಕೊಡ್ತೀವಿ' ಎಂದರು.

ರಾಮಚಂದ್ರರವರ ಜೊತೆಗೆ ಹೊಳೆಯಿಂದ ಮೇಲೆ ಬರ್‍ತಾ ಸುತ್ತಲಿನ ಪರಿಸರವನ್ನು ಗಮನಿಸ್ತಾ ನಡೆದೆ. ಊರಲ್ಲಿರುವ ರಾಮಮಂದಿರ, ಆಂಜನೇಯ ದೇವಸ್ಥಾನವನ್ನು ತೋರಿಸಿ, 'ಇಷ್ಟೇ ನಮ್ಮೂರು' ಎಂದರು. ಅಲ್ಲೇ ಚಂದ್ರಶೇಖರ್ ಎಂಬುವವರು ಉಳುಮೆ ಮಾಡುತ್ತಿದ್ದರು. ರಾಮಚಂದ್ರರವರ ಮನೆಗೆ ಹೋಗುವ ಮುನ್ನ ಅಲ್ಲಿದ್ದ ಜನರನ್ನು ಗಮನಿಸಿ ಮಾತನಾಡಿಸಿದೆ. ಸಾವಿತ್ರಮ್ಮನವರು ತರಕಾರಿ ಹೆಚ್ತಾ ಇದ್ರು. ಕೈಕಾಲು, ಮುಖ ತೊಳೆದುಕೊಂಡು ಮನೆ ಒಳಗೆ ಕೂತು ರಾಮಚಂದ್ರರವರ ತಂದೆ ಸುಬ್ಬರಾಯ ಅವರನ್ನು ಊರು, ಇಲ್ಲಿನ ಬೆಳವಣಿಗೆ, ಕೃಷಿ ಕುರಿತು ವಿಷಯ ಸಂಗ್ರಹಿಸಲು ಮಾತನಾಡಿಸಿದೆ.



ಸುಂದರ ಲಿಲ್ಲಿಗೆ ಈ ಸುಂದರನ ಕಾಟ:ಕಟ್ಟೇಹೊಸಹಳ್ಳಿ

ಈ ಊರಲ್ಲಿ ಇಷ್ಟೇನಾ ಮನೆಗಳಿರುವುದು?

ಇಲ್ಲ, ಈ ಹಿಂದೆ (ಮೂವತ್ತು ವರ್ಷಗಳ ಹಿಂದೆ) ಇಲ್ಲಿ ಮಲೇರಿಯಾ ಕಾಣಿಸಿಕೊಂಡಿತ್ತು. ಜನ ಊರು ಸರಿ ಇಲ್ಲ ಎಂದು ಜಮೀನಿನ ಹತ್ತಿರ ಹೋಗಿ ಮನೆ ಮಾಡಿದ್ರು. ನಮ್ಮನ್ನೂ ಕರೆದ್ರು. ಕುಡೀಲಿಕ್ಕೆ ನೀರಿನ ತೊಂದರೆ ಆಗುತ್ತೆ ಅಂತ ನಾವು ಹೋಗ್ಲಿಲ್ಲ. ಹಿಂದೆ ೫೦-೬೦ ಮನೆ ಇದ್ದವು. ಇಲ್ಲಿ ಸಂಕೇತಿಗಳ ಎಂಟು ಮನೆ ಬಿಟ್ರೆ ಉಳಿದ ಜನಾಂಗದವರು ಇಬ್ಬರು ಇದಾರೆ.

ಈ ಊರಿಗೆ ನಿಮ್ಮ ಜನಾಂಗದವರು ಬಂದು ಎಷ್ಟು ವರ್ಷ ಆಗಿರಬಹುದು?

ಹಿಂದೆ ಮಲ್ಲಸಮುದ್ರದಿಂದ ಜನ ಇಲ್ಲಿಗೆ ಬಂದ್ರು. ಶ್ರೀರಾಮದೇವರ ಕಟ್ಟೆ ನಿರ್ಮಾಣವಾದ ಮೇಲೆ ಇಲ್ಲಿಗೆ ಬಂದ್ರು. ಈ ಕಟ್ಟೆಯನ್ನು ೧೮೭೨ರಲ್ಲಿ ಕಟ್ಟಿಸಿದಾರೆ. ಈಗ್ಲೂ ಮಲ್ಲಸಮುದ್ರದ ಹತ್ತಿರ ಬಾಗಾಯ್ತು (ತೋಟ) ಇದಾವೆ. ನೀರಿಗೆ ತೊಂದ್ರೆ ಆಯ್ತು. ಅಲ್ಲಿಂದ ಮೂರು ಕುಟುಂಬ ಇಲ್ಗೆ ಬಂತು. ಉಳಿದ ಕುಟುಂಬಗಳು ಕೆ.ಆರ್.ಪೇಟೆ (ತಾ) ತೇಗನಹಳ್ಳಿಗೆ ಹೋದವು.

ನೀವು ಇಲ್ಲಿಗೆ ಯಾವಾಗ ಬಂದ್ರಿ?

ನಾನು ಬಂದು ಇಲ್ಲಿಗೆ ೬೬ ವರ್ಷವಾಯ್ತು. ನನ್ನ ತಾತ (ಅಪ್ಪನ ಅಪ್ಪ) ಇಲ್ಲಿ ಇದ್ದರು. ಮರಿತಮ್ಮನಹಳ್ಳಿಯಲ್ಲಿದ್ದ ಜಮೀನನ್ನು ಮಾರಾಟ ಮಾಡಿ ಬಂದೆ. ಇಬ್ಬರು ತಮ್ಮಂದಿರು ಅಲ್ಲಿದಾರೆ.

ಅಡಿಕೆ ತೋಟ ಎಷ್ಟು ಹಳೇದು ಇರಬಹುದು?

ಸುಮಾರು ೧೫೦-೨೦೦ ವರ್ಷದ ಮರಗಳು.

ಎಷ್ಟು ಜನಗಳು ತೋಟ ಮಾಡಿದಾರೆ? ಹೇಗಿದೆ ತೋಟಗಳ ಪರಿಸ್ಥಿತಿ?

ಆರು ಮನೆಯವರಿಗೆ ಇದೆ. ನಮ್ಮದು ಎರಡೂವರೆ ಎಕರೆ, ಬಾಕಿ ಅರ್ಧ-ಒಂದೂವರೆ ತನಕ ಇದೆ. ಅಡಿಕೆ ಜೊತೆಗೆ ತೆಂಗೂನೂ ಇದೆ. ಅಲ್ಲಲ್ಲಿ ಬಾಳೆ ಇದೆ. ಕಾಫಿ, ಕಾಳುಮೆಣಸು ಏನೂ ಇಲ್ಲ.

ನೀರಾವರಿ ಹೇಗೆ?

ನಾಲೆಯಲ್ಲಿ ನೀರಿದ್ದರೆ ಸಿಗುತ್ತೆ. ಈ ಎರಡು ವರ್ಷ ನೀರೇ ಇಲ್ಲ. ಸಾಕಷ್ಟು ಅಡಿಕೆ ಮರಗಳು ಹೋಗಿಬಿಟ್ಟವು.

ಈ ತರಹ ಮಳೆ ಕೊರತೇನ ಹಿಂದೆ ನೋಡಿದ್ರಾ?

ಕೊರತೆ ಇತ್ತು, ಒಂದೊಂದು ವರ್ಷ ಇರ್‍ತಿತ್ತು. ಆದ್ರೆ ಇಷ್ಟೊಂದು ಕ್ಷಾಮ ನೋಡ್ಲಿಲ್ಲ.



ತಮ್ಮ ಅನಿಲ ಘಟಕದ ಪಕ್ಕ ನಿಂತ ಶಶಿಕಲಾ:ಕಟ್ಟೇಹೊಸಹಳ್ಳಿ

ಅಡಿಕೆಗೆ ನೀರನ್ನು ಹೇಗೆ ಕೊಡ್ತೀರಿ?

ಬಿಂದಿಗೆಯಲ್ಲೂ ಕೊಡ್ತೀವಿ, ಪೈಪ್‌ನಿಂದಲೂ ಉಣಿಸ್ತೀವಿ.

ಎಲ್ರೂ ದನಕರುಗಳನ್ನು ಸಾಕಿದಾರ? ಈ ಹಿಂದಿನ ಪರಿಸ್ಥಿತಿ ಹೇಗಿತ್ತು?


ಎಲ್ರೂ ಸಾಕಿದಾರೆ. ಮೇವಿನ ಕೊರತೆಯಿಂದ ಸಾಕೋದು ಕಮ್ಮಿಯಾಗಿದೆ. ಎಮ್ಮೆ, ಹಸುಗಳನ್ನು ಸಾಕಿದಾರೆ.

ರಾಮಚಂದ್ರರವರು ದನಗಳಿಗೆ ಹುಲ್ಲು ತಗೊಂಡು ಬರ್‍ಲಿಕ್ಕೆ ಹೋಗಿದ್ದವರು ಬಂದು ಕೂತುಕೊಂಡರು.

ಅಡಿಕೆ ಬೆಳೆ ಬಗ್ಗೆ ಮತ್ತಷ್ಟು ವಿಚಾರಗಳನ್ನು ಕೇಳ್ತಾ ಹೋದೆ. 'ನಾನು ೧೫ ವರ್ಷಗಳ ಹಿಂದೆ ಹಸೀದನ್ನು ಕೊಡ್ತಾ ಇರ್ಲಿಲ್ಲ. ಆಗ ಎಡೀಲಿಕ್ಕೆ ಜನ ಸಿಗ್ತಾ ಇದ್ರು. ಈಗ ಇಲ್ಲ. ಹಸೀದನ್ನೇ ಕೊಡ್ತೀನಿ. ಹಳ್ಳಿಮೈಸೂರು, ಬಸವಾಪಟ್ಟಣ ಕಡೆಯವರು ಬಂದು ತಗೊಂಡು ಹೋಗ್ತಾರೆ. ಇಳುವರಿಯು ಮಳೆ ಸರಿಯಾಗಿ ಬರದೇ ಹೋದ್ರೆ ಬಹಳ ಕಡಿಮೆ ಆಗುತ್ತೆ. ಮೂರು ವರ್ಷದ ಹಿಂದೆ ನಮಗೆ (ಎರಡೂವರೆ ಎಕರೆ - ೭೦ ತೆಂಗಿನ ಮರಗಳು ಇವೆ) ಇರುವ ಅಡಿಕೆ ತೋಟದಿಂದ ೩೫ ಕ್ವಿಂಟಾಲ್ ಇಳುವರಿ ಬಂದಿತ್ತು. ಹೋದ ವರ್ಷ ೧೦ ಕ್ವಿಂಟಾಲ್ ಆಯಿತು. ಈ ವರ್ಷ ೧೫ ಕ್ವಿಂಟಾಲ್ ಆಗುತ್ತೆ' ಎಂದು ಸುಬ್ಬರಾಯರು ಪ್ರತಿಕ್ರಿಯಿಸಿದರು. ಭತ್ತದಲ್ಲಿ ಎಕರೆಗೆ ೧೫-೨೫ ಕ್ವಿಂಟಾಲ್ ಇಳುವರಿ ಸಿಗುತ್ತೆ. ಅಡಿಕೆ ತೋಟಗಳಲ್ಲಿ ವೀಳ್ಯೇದೆಲೆಯನ್ನು ಹಾಕಿಲ್ಲ. ಈಗ ಒಬ್ಬರು ಮಂಜುನಾಥ ಅಂತ, ಅವರು ಹಾಕಿದ್ದಾರೆ. ಹಿಂದಿನಿಂದಲೂ ವೀಳ್ಯೇದೆಲೆಗೆ ವಿಶೇಷವಾದ ಆಸಕ್ತಿಯನ್ನು ನಾವು ಕೊಟ್ಟಿಲ್ಲ. ಐದಾರು ವರ್ಷಗಳ ಹಿಂದೆ ರೇಷ್ಮೆ ಇತ್ತು. ಶೀತದಿಂದ ಹುಳುಗಳು ಸಾಯ್ತಾ ಇದ್ದವು, ನಷ್ಟ ಆಯ್ತು. ಕೈಬಿಟ್ಟೆವಿ. ನಮ್ಮಲ್ಲಿ ಶುಂಠಿ ಬೆಳೀತಾ ಇಲ್ಲ. ಯಾರೂ ಇಲ್ಲಿ ಟ್ರ್ಯಾಕ್ಟರ್ ಇಟ್ಕೊಂಡಿಲ್ಲ' ಎಂದು ರಾಮಚಂದ್ರ ಹೇಳಿದರು. 'ಕೆಸರು ಮಡಿ ಮಾಡ್ಲಿಕ್ಕೆ ಎತ್ತುಗಳನ್ನೇ ಬಳಸ್ತೀವಿ' ಎಂದ ಅವರು 'ಇಲ್ಲಿಗೆ ಬಸ್ ಬರಲ್ಲ. ಅಗ್ರಹಾರ ಗೇಟ್ ಮೂರು ಕಿ.ಮೀ. ಮೂಡಲಹಿಪ್ಪೆ ಎರಡು ಕಿ.ಮೀ. ದೂರವಾಗುತ್ತೆ, ನಡೆದುಕೊಂಡೇ ಹೋಗಿ ಬರ್ತೀವಿ. ವಾಹನಗಳನ್ನು ಇಟ್ಟುಕೊಂಡಿಲ್ಲ' ಎಂದರು.

ಇಲ್ಲಿನ ಎಂಟು ಕುಟುಂಬಗಳಲ್ಲಿ ಪದವಿ ಮಾಡಿಕೊಂಡಿರುವವರ ಸಂಖ್ಯೆ ಏಳು ಇದೆ. ಆರು ಜನ ಖಾಸಗಿ/ಸರ್ಕಾರಿ ವಲಯದಲ್ಲಿ ಕೆಲಸದಲ್ಲಿದ್ದಾರೆ. ಉನ್ನತ ಹುದ್ದೆಯಲ್ಲಿರುವವರು ಇಲ್ಲ. ಇಲ್ಲಿ ಹುಟ್ಟಿ ಬೆಳೆದ ನಾಲ್ಕೈದು ಜನ ಹೆಣ್ಣುಮಕ್ಕಳು ಹೊರಗಡೆ ಸರ್ಕಾರಿ ನೌಕರಿಯಲ್ಲಿದ್ದಾರೆ. ಕಟ್ಟೇಹೊಸಹಳ್ಳಿಯಲ್ಲಿ ಶಾಲೆಯೇ ಇಲ್ಲ. ಪಕ್ಕದ ಮಲ್ಲಸಮುದ್ರವು ಒಂದೂವರೆ ಕಿ.ಮೀ. ದೂರ ಇದೆ. ಅಲ್ಲಿ ಏಳನೇ ತರಗತಿವರೆಗೆ, ಅಗ್ರಹಾರ ಗೇಟ್/ಮೂಡಲ ಹಿಪ್ಪೆಯಲ್ಲಿ ಎಸ್‌ಎಸ್‌ಎಲ್‌ಸಿಯವರೆಗೆ ಶಾಲೆ ಇದೆ. ಇತ್ತೀಚಿನ ದಿನಗಳಲ್ಲಿ ಇಲ್ಲಿನ ಜನ ಊರಿನ ರಾಮಮಂದಿರದಲ್ಲೇ ಮದುವೆಗಳನ್ನು ಮಾಡುತ್ತಾರೆ. ಈ ಸಲುವಾಗಿ ಪಾತ್ರೆ, ಸಾಮಗ್ರಿಗಳನ್ನು ಇಡಲಾಗಿದೆ. ಅಂತರ್ಜಾತಿ ವಿವಾಹ, ಪ್ರೇಮವಿವಾಹಗಳು ಇಲ್ಲಿ ಆಗಿಲ್ಲ. ಪ್ರತೀ ಶನಿವಾರ ರಾಮಮಂದಿರದಲ್ಲಿ ಮಂಗಳಾರತಿ, ಭಜನೆ ನಡೆಯುತ್ತದೆ. ಚೈತ್ರ ಮಾಸದಲ್ಲಿ (ಯುಗಾದಿ ಆದ ಮೇಲೆ) ಒಂಬತ್ತು ದಿನಗಳ ಕಾಲ ಪೂಜೆ, ಹೋಮ, ಪಾರಾಯಣ, ಪಟ್ಟಾಭಿಷೇಕ ನಡೆಯುತ್ತದೆ. ದಿನವೂ ಆಂಜನೇಯ ದೇವರ ಪೂಜೆ ನಡೆಯುತ್ತದೆ.

ಆಸ್ಪತ್ರೆಗಳಿಂದ ದೂರವಿರುವ ಈ ಹಳ್ಳಿಯಲ್ಲಿ ಸಣ್ಣಪುಟ್ಟ ತೊಂದರೆಗಳಿಗೆ ಔಷಧಿ ಕೊಡುವ ಗಿಡಮೂಲಿಕೆ ಪರಿಣಿತರು ಇಲ್ಲ. ಏನೇ ಆದರೂ ಹೊಳೆನರಸೀಪುರದ ಆಸ್ಪತ್ರೆಗೇ ಹೋಗಬೇಕು. ಕೃಷಿಗಾಗಿ ಎಲ್ಲಾ ಕುಟುಂಬಗಳೂ ಅಗ್ರಹಾರ ಗೇಟ್‌ನ ಮೈಸೂರು ಬ್ಯಾಂಕಿನಿಂದ ಸಾಲ ಪಡೆಯುತ್ತಿದ್ದಾರೆ. ಸಂಕೇತಿ ಕೃಷಿಕರ ಆರ್ಥಿಕ ಪರಿಸ್ಥಿತಿ ಹೇಳಿಕೊಳ್ಳುವ ಮಟ್ಟದಲ್ಲಿ ಬೆಳವಣಿಗೆಯಾಗಿಲ್ಲ, ಬದಲಾಗಿಲ್ಲ. ಮಳೆಯ ಕೊರತೆ, ಬೆಲೆಯ ಏರುಪೇರು, ಇತರೇ ಅಡೆತಡೆಗಳಿಂದ ಆರ್ಥಿಕವಾಗಿ ಸುಧಾರಣೆಗಳು ಸಾಲವು ಎಂಬಂತೆ ಇಲ್ಲಿ ಕಾಣುತ್ತಿದೆ. ಮದುವೆಗಳಲ್ಲಿ ವರದಕ್ಷಿಣೆ ಪದ್ಧತಿ ಇಲ್ಲಿಯೂ ಕಾಣುತ್ತಿಲ್ಲ. ಇತರೇ ಖರ್ಚು ವೆಚ್ಚಗಳು ಅವರವರ ಆರ್ಥಿಕ ಪರಿಸ್ಥಿತಿಯನ್ನು ಅವಲಂಬಿಸಿವೆ. ಏನಿಲ್ಲವೆಂದರೂ ಒಂದು ಮದುವೆಗೆ ಒಂದು ಲಕ್ಷ ರೂಪಾಯಿ ಖರ್ಚು ತಗುಲುತ್ತದೆ.



ಬೆಳೆಗೆ ಗೊಬ್ಬರವಾಯಿತು, ಅಡುಗೆಗೆ ಅನಿಲವಾಯಿತು:ಕಟ್ಟೇಹೊಸಹಳ್ಳಿ

ಇಲ್ಲಿ ಸಗಣಿ ಅನಿಲ ಘಟಕಗಳು ಎರಡು ಸುಸ್ಥಿತಿಯಲ್ಲಿವೆ. ಒಂದು ಹಾಳಾಗಿದೆ.

ಹೊಳೆನರಸೀಪುರದಿಂದ ಅನಿಲ ಸಿಲಿಂಡರ್‌ಗಳನ್ನು ತಂದು ನಿತ್ಯದ ಅಡುಗೆಗೆ ಅನಿಲವನ್ನು ಬಳಸಲಾಗುತ್ತಿದೆ. ನೀರು ಕಾಯಿಸಲು, ಹಬ್ಬಗಳಲ್ಲಿ, ವೈದಿಕ ದಿನದ ಸಂದರ್ಭಗಳಲ್ಲಿ ಕಟ್ಟಿಗೆಯನ್ನು ಉರುವಲುವಾಗಿ ಬಳಸುತ್ತಾರೆ. ನಿತ್ಯದ ಆಹಾರದಲ್ಲಿ ಅಕ್ಕಿಯ ಬಳಕೆ ಹೆಚ್ಚು ಇದೆ. ಊರಿಗೆ ಬಸ್ ಸಂಪರ್ಕವಿಲ್ಲದಿದ್ದರೂ ಆರು ಮನೆಗಳಲ್ಲಿ ದೂರವಾಣಿ ಸೌಲಭ್ಯ ಇದೆ: ರಾಮಚಂದ್ರ ಅವರದು ೨೫೮೦೭೧, ಮಂಜುನಾಥ ಅವರದು ೨೫೮೦೫೬. 'ಅವಿಭಕ್ತ ಕುಟುಂಬ ವ್ಯವಸ್ಥೆಯತ್ತ ಈಗಿನ ಪೀಳಿಗೆಯಲ್ಲಿ ಒಲವು ಇಲ್ಲ' ಎನ್ನುವ ಸುಬ್ಬರಾಯ ಅವರು 'ಇಲ್ಲಿ ಕಟ್ಟಿರುವ ಮನೆಗಳೆಲ್ಲಾ ಮಣ್ಣಿನ ಮನೆಗಳು. ಸುಮಾರು ನೂರು ವರ್ಷ ಆಗಿರಬಹುದು' ಎನ್ನುತ್ತಾರೆ.

ಸಂದರ್ಶನ : 21-10-2003

೧೪. ಹಿರೇಹಳ್ಳಿಕೊಪ್ಪಲಿನಲ್ಲಿ ಕುಗ್ಗಿಹೋದ ಕೃಷಿ ಬದುಕು

ಕೇವಲ ಮೂರು ಕುಟುಂಬಗಳಿರುವ ಹಿರೇಹಳ್ಳಿಕೊಪ್ಪಲು ಗ್ರಾಮದಲ್ಲಿ ಸಂಕೇತಿಗಳ ಬದುಕು ದುಸ್ತರವಾಗಿದೆ. ಪಕ್ವವಾದ ಪರ್ಯಾಯ ದಾರಿಗಳು ಕಂಡಿಲ್ಲ.

ದಿನಾಂಕ ೧೫, ನವಂಬರ್ ೨೦೦೩. ಬೆಳಗ್ಗೆ ಎಂಟರ ಸಮಯ. ಕಟ್ಟೆಹೊಸಹಳ್ಳಿಯ ರಾಮಚಂದ್ರ, ಮಂಜುನಾಥ್‌ರವರ ಮನೆಗೆ ಸಂಪರ್ಕಿಸಲು ದೂರವಾಣಿ ಸಂಖ್ಯೆಗಳನ್ನು ಒತ್ತಿದೆ. ಎರಡು ಮನೆಗಳಿಗೂ ಸಂಪರ್ಕ ಸಿಗಲಿಲ್ಲ. ಪೂರಿಪಲ್ಲೆ ಗ್ರಾಮದ ಸಂಕೇತಿ ಕೃಷಿಕರ ಬಗ್ಗೆ ತಿಳಿಯೋಣ, ಅಲ್ಲಿಯವರಿಗೆ ಭೇಟಿ ನೀಡುವ ವಿಚಾರ ಹೇಳೋಣ ಎಂದು ಪ್ರಯತ್ನ ಪಟ್ಟದ್ದು ಫಲ ಕಾಣಲಿಲ್ಲ. ಸರಿ, ಯಾರಾದರೂ ಸಿಗುತ್ತಾರೆ ಎಂದುಕೊಂಡು ಆ ಊರತ್ತ ಹೊರಟೆ. ಹೊಳೆನರಸೀಪುರದಿಂದ ಏಳು ಕಿ.ಮೀ. ದೂರದಲ್ಲಿರುವ ಈ ಊರು ಅರಕಲಗೂಡಿಗೆ ಹೋಗುವ ದಾರಿಯಲ್ಲಿದೆ. ಊರು ಹುಡುಕುತ್ತಾ ಹೋಗಿ, ಅನುಮಾನಗೊಂಡು ಹಿರೇಹಳ್ಳಿಕೊಪ್ಪಲು ಎಂಬಲ್ಲಿ ಕೇಳಿದಿವಿ. 'ಇದೇ ಊರು' ಎಂಬ ಉತ್ತರ ಬಂತು.

ರಸ್ತೆ ಪಕ್ಕದಲ್ಲಿಯೇ ಈ ಊರಲ್ಲಿ ಸಂಕೇತಿಗಳ ಮೂರು ಮನೆಗಳಿವೆ. 'ನಾವು ಮೊದಲು ಭೇಟಿಯಾದ ಮನೆಯ ಉಷಾ, ನಾರಾಯಣ ಅವರ ಮಗಳು. ಬಿ.ಎ.ಮಾಡಿದಾರೆ. ಆಕೆಗೆ ಸೋಮನಹಳ್ಳಿಗೆ ಮದುವೆ ನಿಶ್ಚಯವಾಗಿದೆ' ಎಂದ ನಾರಾಯಣ ಅವರು 'ನೋಡಿ ಇಷ್ಟೊಂದು ಅಡಿಕೆ, ತೆಂಗಿನ ಮರಗಳು ಹೋಗಿಬಿಟ್ಟವು. ಭಾವಿ ಬತ್ತಿತು. ಜನ ಬೋರ್‌ವೆಲ್ ಕೊರೆಸಿದ್ದು, ಮಳೆ ಕಮ್ಮಿಯಾದದ್ದು ಬೆಳೆ ಹಾಳಾಗಲು ಕಾರಣವಾಯಿತು' ಎಂದರು.

ಸುಮಾರು ೫೦ ವರ್ಷದ ಅಡಿಕೆ ಮತ್ತು ತೆಂಗಿನ ಮರಗಳು ಸೊರಗಿ ನೆಲಕ್ಕೆ ಉರುಳಿದ್ದನ್ನು ಕಣ್ಣಾರೆ ಕಂಡೆ. ಬಿಸಿಲು ನೆಲಕ್ಕೆ ಬೀಳದಂತಿದ್ದ ತೋಟ ಈಗ ಬಟ್ಟ ಬಯಲಾಯಿತು. ಅಲ್ಲಲ್ಲಿ ಮಾವು, ಹುಣಿಸೆ, ಹಿಪ್ಪೆ, ಮುಗಳಿ ಮರ, ಇತ್ಯಾದಿಗಳು ಬೆಳೆದಿದ್ದವು. ಕಪ್ಪು ಜಮೀನು. ನಾಲ್ಕು ವರ್ಷಗಳಿಂದ ಏನೂ ಬೆಳೆ ಇಲ್ಲ. ಬೆಳೆ, ಜಮೀನು ನೋಡಿಕೊಂಡು ಮನೆಯ ಬಳಿ ಬಂದು ಏನಿದು 'ಪೂರಿಪಲ್ಲೆ' ಎಂದಾಗ, 'ಇದನ್ನು ಹಿಂದೆ ಪೂರಿಪಳ್ಳಿ ಎಂದು ಕರಿಯುತ್ತಿದ್ದರು. ಸರ್ಕಾರಿ ದಾಖಲೆಗಳಲ್ಲಿ ಹಿರೇಹಳ್ಳಿ ಕೊಪ್ಪಲು ಎಂದೇ ಇದೆ. "ಹಿರೇಪಳ್ಳಿ" ಎಂಬುದು ಜನರಿಗೆ "ಪೂರಿಪಳ್ಳಿ" ಎಂದು ಕಂಡಿತು, ಜನ ಪೂರಿಪಲ್ಲೆ ಎಂದರು. ಬಸ್‌ನವರೂ ಇದನ್ನೇ ಕರೆದರು' ಎಂದು ನಾರಾಯಣ ಹೇಳಿದರು. ಈ ಹಳ್ಳಿಗೆ ಸಂಕೇತಿಗಳು ಬಂದು ನೂರಾರು ವರ್ಷಗಳಾಗಿವೆ. ದುದ್ದ ಸಮೀಪದ ಕೃಷ್ಣಾಪುರ ಇಲ್ಲಿಯವರ ಮೂಲ. ಮೂರು ಕುಟುಂಬಗಳಿಗೆ ಒಂಬತ್ತು ಎಕರೆ ಜಮೀನು ಇದೆ. ಅಡಿಕೆ ಹೋಗಿ ಈಗ ಆದಾಯದ ಮೂಲಕ್ಕೆ ತೊಂದರೆ ಆಗಿದೆ. ಹಾಕಿಕೊಳ್ಳಲಿಕ್ಕೂ ಅಡಿಕೆ ಸಿಗದಂತಾಗಿದೆ. ನಾಲೆ ನೀರು ಇಲ್ಲಿಗೆ ಬಂದಿಲ್ಲ. ಮಳೆ ಕಡಿಮೆಯಾಗಿದ್ದು, ಬೋರ್‌ಗಳು ಹೆಚ್ಚಾಗಿದ್ದರಿಂದ ಈಗ್ಗೆ ೧೦ ವರ್ಷಗಳಿಂದ ತೋಟಗಳಿಗೆ ಪೆಟ್ಟಾಗಿದೆ.

ನಾರಾಯಣರವರ ತಮ್ಮ ನರಸಿಂಹಮೂರ್ತಿಯವರು ಅಂಕವಳ್ಳಿಯಲ್ಲಿ ಶಿಕ್ಷಕರು. ಅಣ್ಣ ರಾಮನಾಥಯ್ಯನವರ ಮಗ ವೆಂಕಟೇಶ ಎಂಬುವವರು ಇಲ್ಲೇ ಇದ್ದಾರೆ. 'ಮೊದಲು ಊರಲ್ಲೇ ಇದ್ವಿ. ಜನರ ಆಹಾರ ವಿಹಾರ ನಮಗೆ ಹಿಡಿಸಲಿಲ್ಲ. ಅದಕ್ಕೇ ಈ ಕಡೆ ಬಂದು ಹತ್ತು ವರ್ಷ ಆಯ್ತು' ಎನ್ನುವ ನಾರಾಯಣ ಅವರು 'ಎಲ್ಲರೂ ಎಮ್ಮೆ, ಹೋರಿ, ಹಸು ಸಾಕಿದೀವಿ. ರಾಗಿ, ಹುರುಳಿ, ಜೋಳ ಮುಂತಾದವುಗಳನ್ನು ಬೆಳೀತೀವಿ. ಆಲೂಗೆಡ್ಡೆ ನಾವು ಹಾಕಿಲ್ಲ' ಎನ್ನುತ್ತಾರೆ.

ಆರ್ಥಿಕ ಪರಿಸ್ಥಿತಿಯು ಹಿಂದಿಗಿಂತ ಈಗೇನೂ ಸುಧಾರಣೆಯಾದ ಚಿಹ್ನೆಗಳನ್ನು ಕಂಡಿಲ್ಲ. ನಾರಾಯಣರವರ ತಂದೆ ವೆಂಕಟಸುಬ್ಬಯ್ಯನವರು. ನಾರಾಯಣರವರಿಗೆ ನಾಲ್ಕು ಜನ ಮಕ್ಕಳು. ಎರಡು ಹೆಣ್ಣು, ಎರಡು ಗಂಡು. ಎಲ್ಲರದೂ ಮದುವೆ ಆಗಬೇಕಾಗಿದೆ. ಹಿರಿ ಮಗ ಅಡುಗೆ ಮಾಡುವ ಕಸುಬನ್ನು ಇಟ್ಟುಕೊಂಡಿದ್ದಾರೆ. ಇನ್ನೊಬ್ಬರಿಗೆ ಬೆಂಗಳೂರಿನಲ್ಲಿ ಖಾಸಗಿ ಉದ್ಯೋಗ. ಜಮೀನು ಕೆಲಸಗಳನ್ನು ಹೆಚ್ಚು ಪಾಲು ಕಾರ್ಮಿಕರ ಮೇಲೆ ಅವಲಂಬನೆಯಾಗದೇ ಮಾಡಿಕೊಂಡು ಹೋಗುತ್ತಾರೆ. ಅಂತರ್ಜಲವು ಇವರಿಗೆ ಸಿಕ್ಕಿಲ್ಲ. ೨೦೦ ಅಡಿ ಆಳದವರೆಗೆ ಬೋರ್ ಕೊರೆಸಿ ಕೈಬಿಟ್ಟಿದ್ದಾರೆ. ೧೯೯೫ರಲ್ಲಿ ದೀನಬಂಧು ಮಾದರಿಯ ಎರಡು ಸಗಣಿ ಅನಿಲ ಘಟಕಗಳನ್ನು ನಿರ್ಮಿಸಿದ್ದರೂ ವಿಫಲವಾಗಿವೆ.

ಜಮೀನು ನೋಡಿಕೊಂಡು ಮನೆ ಬಳಿ ಬಂದಾಗ ಅಜ್ಜಿಯೊಬ್ಬರು ಹಪ್ಪಳ ಮಾಡುವುದರಲ್ಲಿ ತೊಡಗಿದ್ದರು. ಅವರ ಬಗ್ಗೆ ವಿಚಾರ ಕೇಳಿದೆ. ಹೆಸರು ನಾಗಲಕ್ಷ್ಮಿ, ೮೦ ಮೀರಿದೆ. ಕಣ್ಣು ಕಾಣುತ್ತಿಲ್ಲ, ಕಿವಿ ಕೇಳಿಸುತ್ತಿಲ್ಲ. ಪತಿ ಕೇಶವಮೂರ್ತಿ ತೀರಿಕೊಂಡು ಹನ್ನೆರಡು ವರ್ಷವಾಯ್ತು. ಈಗ ನಾರಾಯಣರವರ ಮನೆಯೇ ಈ ಅಜ್ಜಿಗೆ ಆಶ್ರಯ. ಊಟ, ನಿದ್ರೆಗೆ ತೊಂದರೆ ಇಲ್ಲ.

ಮುಗಿಸುವ ಮುನ್ನ: ಇಲ್ಲಿನ ಸಂಕೇತಿಗಳು ಈಗಲೂ ಮಣ್ಣಿನ ಮನೆಯಲ್ಲಿ ವಾಸವಾಗಿದ್ದು ಕೃಷಿಯಲ್ಲಿ ವೈವಿಧ್ಯ, ಸುಸ್ಥಿರ ಕ್ರಮಗಳತ್ತ ಸಾಗಲು ಪ್ರಯತ್ನ ಪಟ್ಟಿಲ್ಲ. ಪರ್ಯಾಯ ದಾರಿಗಳು ಮಸುಕಾಗಿಯೇ ಮುಂದುವರೆದಿವೆ.

ಸಂದರ್ಶನ : 15-11-2003




ಜೀವ ಕಳೆದುಕೊಳ್ಳುತ್ತಿರುವ ಅಡಿಕೆ, ತೆಂಗು : ಹಿರೇಹಳ್ಳಿಕೊಪ್ಪಲು

೧೫. ಹಂದ್ರಾಳು ಗ್ರಾಮದ ಆರು ಜನ ಆರಂಭಸ್ಥರು

ಬೇಲೂರು ತಾಲೂಕು ಹಂದ್ರಾಳು ಗ್ರಾಮದ ಯುವಕರಿಬ್ಬರ ಕೃಷಿಯನ್ನು ಕಂಡು ಸಂತೋಷಗೊಂಡೆ. ಸಣ್ಣ ಹಿಡುವಳಿಯಲ್ಲಿ ತೃಪ್ತಿದಾಯಕ ಬದುಕನ್ನು ಸಾಗಿಸುತ್ತಿರುವ ಮಹೇಶ್ ಮತ್ತು ಫಣೀಶ್ ಅವರು ಕೈ ಮುಟ್ಟಿ ಕೆಲಸ ಮಾಡುತ್ತಾರೆ.

ಹಾಸನ ಆಕಾಶವಾಣಿಯ ಕೃಷಿ ಕಾರ್ಯಕ್ರಮಗಳನ್ನು ಆಲಿಸುವ ಮಹೇಶ್‌ಭಾರದ್ವಾಜ್ ಮತ್ತು ಫಣೀಶ್ ಅವರ ಕೃಷಿ ಬದುಕನ್ನು ಕಾಣಲು ೪.೧.೨೦೦೩ರಂದು ಅವರ ಊರಿಗೆ ಹೋಗಿದ್ದೆ. ಬೇಲೂರು ತಾಲೂಕು ಹಂದ್ರಾಳು ಎಂಬುದು ಇವರ ಊರು. ಹಗರೆ ನಂತರ ಮಲ್ಲಿಕಾರ್ಜುನಪುರದ ಬಳಿಕ ಸಿಗುವ ಶಿವಯೋಗಿಪುರದ ಬಳಿಯೇ ಆ ಊರು ಇದೆ. ಅಲ್ಲಿಗೆ ಬಸ್‌ಗಳು ಸಂಚರಿಸುತ್ತಿಲ್ಲ. ಊರಲ್ಲಿ ೨೦೦ ಕುಟುಂಬಗಳಿವೆ. ಎಲ್ಲರೂ ದನಕರುಗಳನ್ನು ಸಾಕಿದ್ದಾರೆ. ನಾಟಿ ತಳಿಯೇ ಹೆಚ್ಚು, ಮೂರು ಜನ ಸಗಣಿ ಅನಿಲ ಘಟಕಗಳನ್ನು ಮಾಡಿಸಿಕೊಂಡಿದ್ದಾರೆ. ಸಗಣಿಯನ್ನು ಬೆರಣಿ ತಟ್ಟಿ ಅಡುಗೆ ತಯಾರಿಸಲು ಬಳಸುವವರೇ ಹೆಚ್ಚು.

ಈ ಊರಿನ ಬಳಿ ಕೆರೆ ಇದೆ. ಇಲ್ಲಿಗೆ ಸುತ್ತಮುತ್ತಲ ೪೮ ಕೆರೆಗಳಿಂದ ನೀರು ಬಂದು ಸೇರುತ್ತದೆ ಎನ್ನಲಾಗಿದೆ. ಈ ನೀರನ್ನು ಬಳಸಿಕೊಂಡು ಇಲ್ಲಿಯ ಜನ ತೋಟ ಮಾಡಿದ್ದಾರೆ.



ಮಹೇಶ್ ಭಾರದ್ವಾಜ್, ಹಂದ್ರಾಳು

ಹಂದ್ರಾಳು ಗ್ರಾಮದಲ್ಲಿ ಆರು ಸಂಕೇತಿ ಕುಟುಂಬಗಳಿವೆ. ಹೆಚ್.ಎನ್.ಕೇಶವ ಮೂರ್ತಿ, ಹೆಚ್.ಆರ್.ಸುಬ್ಬರಾಯ, ಹೆಚ್.ಕೆ.ವಸಂತಕುಮಾರ್, ಎ.ಅನಂತನಾರಾಯಣ, ಹೆಚ್.ಆರ್.ಕೇಶವಮೂರ್ತಿ ಮತ್ತು ಕೇಶವಪ್ರಸಾದ್-ಇವರು ಅಡಿಕೆಯನ್ನು ಹಾಕಿಸಿದ್ದಾರೆ. ಹಂದ್ರಾಳು ಗ್ರಾಮದಲ್ಲಿ ಭಾಸ್ಕರೇಶ್ವರ ಮತ್ತು ಲಕ್ಷ್ಮೀನಾರಾಯಣ ದೇವಸ್ಥಾನಗಳಿವೆ. ಇವು ಸಂಕೇತಿ ಕುಟುಂಬಗಳ ಬಳಿಯೇ ಇವೆ.

ಮಹೇಶ್ ಭಾರದ್ವಾಜ್-ಯುವ ರೈತ. ವ್ಯಾಸಂಗ-ಬಿ.ಎ.ವರೆಗೆ ಆಗಿದೆ. ಎತ್ತರದ ವ್ಯಕ್ತಿ. ಎರಡು ಎಕರೆ ಜಮೀನು ಇದೆ. ಒಂದೂವರೆ ಎಕರೆಯಲ್ಲಿ ಅಡಿಕೆ, ಅರ್ಧ ಎಕರೆ ಖಾಲಿ ಜಮೀನು-ಇವರ ಸಾಗುವಳಿ ಪ್ರದೇಶ. ಒಂದೂವರೆ ಎಕರೆಯಲ್ಲಿ ತೆಂಗು, ಅಡಿಕೆ, ವೆನಿಲ್ಲಾ, ವೀಳ್ಯೇದೆಲೆ, ಬಾಳೆ, ಕಾಳುಮೆಣಸು, ಅರಿಶಿನವನ್ನು ಬೆಳೆಯುತ್ತಿದ್ದಾರೆ. ಅರ್ಧ ಎಕರೆಯ ಖಾಲಿ ಜಮೀನಿನಲ್ಲಿ ದನಕರುಗಳಿಗೆ ಮೇವು, ಮಾವು, ನೀಲಗಿರಿ ಇವೆ. ಇವರ ತೋಟದಲ್ಲಿ ತೆರೆದ ಕೊಳವೆ ಬಾವಿ ಇದೆ. ಕೊಳವೆಯನ್ನು ಹಿಡಿದು ನೀರುಣಿಸುತ್ತಾರೆ. ಬಾವಿಯಿಂದ ತುಸು ದೂರದಲ್ಲಿ ಕೆರೆ ಇದೆ. ಬಾವಿಯಿಂದ ನೀರೆತ್ತಲು ಸೀಮೆಎಣ್ಣೆಯಿಂದ ಚಲಿಸುವ ಎರಡು ಅಶ್ವಶಕ್ತಿಯ ಪಂಪನ್ನು ಇಟ್ಟುಕೊಂಡಿದ್ದಾರೆ.

ನಾಲ್ಕು ವರ್ಷಗಳಿಂದ ರಾಸಾಯನಿಕಗಳನ್ನು ಬಳಸದೇ ಬೆಳೆಗಳನ್ನು ಪೋಷಿಸುತ್ತಿರುವ ಇವರು ಈಗ ಎರೆಹುಳುಗಳನ್ನು ಸಾಕಿ ಗೊಬ್ಬರ ಮಾಡಿಕೊಳ್ಳುತ್ತಿದ್ದಾರೆ. ವರ್ಷಕ್ಕೆ ಐದು ಟನ್‌ಗೂ ಹೆಚ್ಚು ಗೊಬ್ಬರ ಸಿಗುತ್ತದೆ. ತೋಟದಲ್ಲಿ ಅಗೆತ ಮಾಡುತ್ತಿಲ್ಲ. ಆಳುಕಾಳುಗಳ ಮೇಲೆ ಅವಲಂಬನೆಯಾಗದೇ ಸ್ವಂತ ಪರಿಶ್ರಮದಲ್ಲಿ ಕೃಷಿ ಮಾಡಿಕೊಂಡು ಹೋಗುತ್ತಿರುವ ಮಹೇಶ್ ವಾರ್ಷಿಕ ೫೫-೬೫ ಕ್ವಿಂಟಾಲ್ ಹಸಿ ಅಡಿಕೆಯನ್ನು ಪಡೆಯುತ್ತಾರೆ. ತೆಂಗಿನಲ್ಲೂ ಉತ್ತಮ ಇಳುವರಿ ಇದೆ.

ಫಣೀಶ್ ಸಹ ಆಸಕ್ತಿಯಿಂದ ಕೃಷಿಯಲ್ಲಿ ತೊಡಗಿಸಿಕೊಂಡಿದ್ದಾರೆ. ಇವರೂ ಅಡಿಕೆ, ತೆಂಗು, ಶುಂಠಿ, ಭತ್ತ, ಇತ್ಯಾದಿಗಳನ್ನು ತಮಗಿರುವ ಸ್ವಲ್ಪ ಜಮೀನಿನಲ್ಲಿ ಬೆಳೆಯುತ್ತಿದ್ದಾರೆ.

ಮಹೇಶ್ ಭಾರದ್ವಾಜ್ ಅವರ ದೂರವಾಣಿ ಸಂಖ್ಯೆ : 958177-258419, ಫಣೀಶ್ : 958172-258409, 258410

೧೬. ಕಾರೇ ಬೋರೆ ಕಾವಲಿನ ಚನ್ನಕೇಶವಮೂರ್ತಿ

ಹಾಸನ(ತಾ) ದುದ್ದ ಗ್ರಾಮದ ಬಳಿ ಇರುವ ಕಾರೇ ಬೋರೆ ಕಾವಲು ಹೆಚ್.ಆರ್.ಚನ್ನಕೇಶವಮೂರ್ತಿ ಅವರು ಇರುವ ಸ್ಥಳ. ದುದ್ದದಿಂದ ಇಲ್ಲಿಗೆ ದೂರ ಒಂದೂವರೆ ಕಿ.ಮೀ. ಮೂಲ ಹಂದ್ರಾಳು ಗ್ರಾಮದವರಾದ ಇವರು ಇಲ್ಲಿಗೆ ಬಂದದ್ದು ೧೩ ವರ್ಷಗಳ ಹಿಂದೆ. ಎಸ್‌ಎಸ್‌ಎಲ್‌ಸಿಯವರೆಗೆ ಓದಿ ಕೃಷಿಯಲ್ಲಿ ತೊಡಗಿಸಿಕೊಂಡ ಚನ್ನಕೇಶವಮೂರ್ತಿ ಅವರು ಮೂರು ಮಕ್ಕಳ ತಂದೆ. ಮೂವರೂ ಬೇಸಾಯ ಮಾಡುತ್ತಿದ್ದಾರೆ. ಕೇಶವಪ್ರಸಾದ್ ಹಂದ್ರಾಳಿನಲ್ಲಿ ವಾಸ. ರಾಮಚಂದ್ರ ಮತ್ತು ಸತೀಶ್ ಇಲ್ಲಿದ್ದಾರೆ. ಇವರಿಗಿರುವ ಜಮೀನು ೧೮ ಎಕರೆ. ಆಲೂಗೆಡ್ಡೆ, ಜೋಳ, ತೆಂಗು, ಮಾವು, ಬಾಳೆ ಇತ್ಯಾದಿ ಬೆಳೆಗಳನ್ನು ಸಾಗುವಳಿ ಮಾಡುತ್ತಿದ್ದಾರೆ.

ಸುಮಾರು ೩೦೦ ಅಡಿ ಆಳದವರೆಗೆ ಕೊರೆಸಿರುವ ಕೊಳವೆ ಬಾವಿಯಲ್ಲಿ ಈಗ ನೀರು ಕಮ್ಮಿಯಾಗಿದ್ದು, ತೆಂಗಿಗೆ ತೊಂದರೆಯಾಗಿದೆ. ಅಂತರ್ಜಲದ ವೃದ್ಧಿಗಾಗಿ ಕೊಳವೆ ಬಾವಿಯ ಬಳಿ 'ಜಲ ಮರು ಪೂರಣ' ಕೆಲಸವನ್ನು ಕೈಗೊಂಡಿದ್ದಾರೆ.

ಕೈಮುಟ್ಟಿ ಕೆಲಸ ಮಾಡುವ ಮಕ್ಕಳು ಐದು ಸಿಂಧಿ ಹಸುಗಳನ್ನು ಸಾಕಿದ್ದಾರೆ. ಇವೆಲ್ಲಾ ಮನೆಯಲ್ಲೇ ಹುಟ್ಟಿದವು. ಒಂದೊಂದೂ ಸರಾಸರಿ ಎಂಟು ಲೀಟರ್ ಹಾಲನ್ನು ನೀಡುತ್ತಿವೆ. ಹತ್ತಿರದಲ್ಲೇ ಹಾಲು ಹಾಕಲು ಡೈರಿ ಇದೆ. ಹಸುಗಳಿಗೆ ಮುಸುಕಿನ ಜೋಳ, ನೇಪಿಯರ್ ಹುಲ್ಲನ್ನು ಬೆಳೆಯುತ್ತಾರೆ. ಅನಿವಾರ್ಯ/ಅಗತ್ಯವಿದ್ದಾಗ ಒಣಹುಲ್ಲನ್ನು ನೀಡುತ್ತಾರೆ. ಬೂಸ, ಹಿಂಡಿ, ಪಶು ಆಹಾರವನ್ನು ಕೊಡುತ್ತಾರೆ. ಹಸುಗಳನ್ನು ಕಟ್ಟಿ ಸಾಕುವ ಇವರಿಗೆ ಹೈನುಗಾರಿಕೆ ತೃಪ್ತಿ ತಂದಿದೆ.

ದೂರವಾಣಿ ಸಂಖ್ಯೆ: 958172-223924



ಎಚ್.ಆರ್.ಚನ್ನಕೇಶವಮೂರ್ತಿ ತಮ್ಮ ಮಗನೊಂದಿಗೆ:ಕಾರೇಬೋರೆಕಾವಲ್

೧೭. ಹರವೆ ಅವರ ಸಲಹೆ

ಬೆಂಗಳೂರಿನ ಫಲದಾ ಕೃಷಿ ಸಂಶೋಧನಾ ಪ್ರತಿಷ್ಠಾನದಲ್ಲಿ ಕಾರ್ಪೊರೇಟರ್ ಸಲಹೆಗಾರರಾಗಿ ಕೆಲಸ ಮಾಡುತ್ತಿರುವ ೫೭ ವರ್ಷ ವಯಸ್ಸಿನ ರಮೇಶ್ ಹರವೆ ಅವರು ಮೈಸೂರು ಜಿಲ್ಲೆ ಹುಣಸೂರು ತಾಲೂಕಿನ ಹರವೆ ಗ್ರಾಮದವರು. ಮೆಕಾನಿಕಲ್ ವಿಷಯದಲ್ಲಿ ಬಿ.ಇ. ಮುಗಿಸಿಕೊಂಡು ೧೯೯೮ರವರೆಗೆ ಬರೋಡದಲ್ಲಿ ವಿದ್ಯುಚ್ಛಕ್ತಿ ಉಪಕರಣಗಳ ತಯಾರಿಕೆಯಲ್ಲಿ ತಮ್ಮನ್ನುತೊಡಗಿಸಿಕೊಂಡ ಇವರು ಈಗ ಕೃಷಿ ಕ್ಷೇತ್ರದ ಸಂಸ್ಥೆಯಲ್ಲಿ ಸಲಹೆಗಾರರಾಗಿದ್ದಾರೆ. ಸುಮಾರು ೪೦ ದೇಶಗಳಿಗೆ ಭೇಟಿ ನೀಡಿ ಬಂದಿರುವ ರಮೇಶ್ ಹರವೆ ಅವರು ಸಾವಯವ ಕೃಷಿಯನ್ನು ಜನಪ್ರಿಯಗೊಳಿಸುವಲ್ಲಿ ಅಂತಾರಾಷ್ಟ್ರೀಯ ಮಟ್ಟದಲ್ಲಿ ಕೆಲಸ ಮಾಡುತ್ತಿದ್ದಾರೆ.

ದೂರವಾಣಿ: 9580-26515144



ರಮೇಶ್ ಹರವೆ, ಬೆಂಗಳೂರು

ಅನೂಚಾನ

ಸಂಪಾದಕರು

ಡಾ||ಎಂ.ಎಸ್.ವಿಜಯಾ ಹರನ್

ಇದೊಂದು ಬೆರಗು



ಮೈಸೂರಿನ ಸಮುದಾಯ ಅಧ್ಯಯನ ಕೇಂದ್ರವು ಭಾರತದ ವಿವಿಧ ಸಂಸ್ಕೃತಿ ಘಟಕಗಳ ಬಗೆಗೆ ಅಧ್ಯಯನ ನಡೆಸುತ್ತಿರುವ ವಿಷಯವು ನನಗೆ ತಿಳಿದಿತ್ತು. ಅದು ಹೊರತರುತ್ತಲಿದ್ದ 'ಸಂಕೇತಿ ಅಧ್ಯಯನ ಮಾಲೆ'ಯ ಸಂಪುಟಗಳು ಅದರ ಮಹತ್ವಾಕಾಂಕ್ಷೆಯ ಸೂಚಕವೂ ಆಗಿದ್ದವು. ಆ ಮಾಲೆಯಲ್ಲಿ ಸಂಕೇತಿ ಸಮುದಾಯದ ಕೃಷಿಸಂಸ್ಕೃತಿಯ ಬಗೆಗೇ ಒಂದು ಸಂಪುಟ ಬರಲಿತ್ತು. ಆ ಸಂಪುಟವನ್ನು ಹಾಸನದ ಆಕಾಶವಾಣಿ ಕೇಂದ್ರದ ಕೃಷಿತಜ್ಞರೇ ಸಿದ್ಧಪಡಿಸಿಕೊಡಬೇಕೆಂಬ ಕೋರಿಕೆ ಬಂದಾಗ ಸಹಜವಾಗಿಯೇ ಸಂತೋಷವಾಯಿತು. ಹಾಸನದ ಬಾನುಲಿ ನಿಲಯಕ್ಕೂ, ನಿರ್ದಿಷ್ಟವಾಗಿ ಅದರ ಕೃಷಿ ವಿಭಾಗಕ್ಕೂ ಸಂದ ಗೌರವ ಅದು ಎಂದು ನಾವು ಭಾವಿಸಿದೆವು. ಕೃಷಿತಜ್ಞರಾದ ಶ್ರೀ ವಿಜಯ್ ಅಂಗಡಿ ಮತ್ತು ಶ್ರೀ ಎನ್.ಕೇಶವಮೂರ್ತಿ ತಾವು ಕ್ಷೇತ್ರಕಾರ್ಯ ನಡೆಸಬೇಕಾದ ಸಂಕೇತಿ ನೆಲೆಗಳನ್ನು ಗುರುತಿಸಿಕೊಂಡರು. ಈವರೆಗೆ ದಾಖಲಾದ ಸಾಹಿತ್ಯದಲ್ಲಿ ಸಂಕೇತಿ ಸಮುದಾಯದ ಕೃಷಿಜೀವನವನ್ನು ಕುರಿತ ಮಾಹಿತಿ ಹೇಗಿದೆ ಎಂಬ ಕುತೂಹಲ ನನಗುಂಟಾಯಿತು. ದೀರ್ಘಕಾಲದಿಂದ ವೈವಿಧ್ಯಪೂರ್ಣವಾಗಿ ದಾಖಲಾಗಿರುವ ಮಾಹಿತಿಯನ್ನು ಕಂಡಾಗ ಬೆರಗಾದೆ. ಈ ಸಮುದಾಯವು ಕೃಷಿಯನ್ನು ತನ್ನ ಜೀವನದ ಅತಿಶಯವಾದ ಆಧಾರವಾಗಿ ಮಾಡಿಕೊಂಡಿದ್ದುದಕ್ಕಾಗಿ ಮಾತ್ರವಲ್ಲ, ವೈದಿಕತೆ ಮತ್ತು ಕೃಷಿಯನ್ನು ಅದು ಸಮನ್ವಯ ಮಾಡಿಕೊಂಡಿರುವ ರೀತಿಯನ್ನು ಕಂಡೂ ಆ ಬೆರಗು ಉಂಟಾಗಿತ್ತು. ಈ ಸಮನ್ವಯದಿಂದಾಗಿ ಈ ಸಮುದಾಯವು ಹೊಂದಿದ ದೈಹಿಕ ದೃಢತೆ ಮತ್ತು ಮಾನಸಿಕ ಮುಕ್ತತೆ ಅವರ ಬಗೆಗೆ ಗೌರವವನ್ನೂ ಮೂಡಿಸಿತು. ಕಾಲಕಾಲಕ್ಕೆ ಬಂದ ಗ್ರಂಥಗಳಲ್ಲಿ ವಿವಿಧ ರೀತಿಯಲ್ಲಿ ದಾಖಲಾದ ಸಂಕೇತಿ ಬೇಸಾಯದ ಬದುಕಿನ ಮುಖಗಳನ್ನು ಒಂದೆಡೆ ತಂದರೆ ಅದು ಆ ಜೀವನ ಶೈಲಿಯ ಸಹಜವ್ಯಾಖ್ಯಾನವಾಗಬಹುದೆನಿಸಿತು. ಹಾಗೆ ಮಾಡಿದಮೇಲೆ ಆ ಓದು ಹೊಸಹೊಳಹುಗಳನ್ನು ಕೊಡುವುದನ್ನೂ ಸ್ಫೂರ್ತಿದಾಯಕವಾಗಿರುವುದನ್ನೂ ನಾನೇ ಅನುಭವಿಸಿದೆ. ಒಟ್ಟಾಗಿ 'ಅನೂಚಾನ' ಎಂಬ ಈ ಭಾಗವು ಒಂದು ರೂಪಕವೇ ಆಗಿದೆ ಎನಿಸಿತು. ಈವರೆಗೆ ಬಂದ ಪುಸ್ತಕಗಳು, ನಿಯತಕಾಲಿಕಗಳು ಮತ್ತು ಸ್ಮರಣ ಸಂಚಿಕೆಗಳಲ್ಲಿ ಸಂಕೇತಿ ಸಮುದಾಯದ ಕೃಷಿಗೆ ಸಂಬಂಧಿಸಿದಂತೆ ಇರುವ ನೇರವಾದ ಮತ್ತು ಪರೋಕ್ಷವಾದ ಭಾಗಗಳನ್ನು ಇಲ್ಲಿ ಸೇರಿಸಿದ್ದೇನೆ. ಕೆಲವು ಲೇಖನಗಳನ್ನು ಪೂರ್ಣವಾಗಿಯೇ ತಂದಿದ್ದೇನೆ. ಈ ಭಾಗದಲ್ಲಿರುವ ಎಲ್ಲ ಲೇಖನಗಳೂ ಪ್ರಕಟವಾಗಿರಲಿಲ್ಲ, ಅನೇಕ ಲೇಖಕರು ಮತ್ತು ಸಂಶೋಧಕರ ಬಳಿ ಇದ್ದ ಅಪ್ರಕಟಿತ ಲೇಖನಗಳನ್ನೂ ಟಿಪ್ಪಣಿಗಳನ್ನೂ ಇಲ್ಲಿ ಸೇರಿಸಿದ್ದೇನೆ. ಮುಖ್ಯವಾಗಿ ಈ ಪುಸ್ತಕಕ್ಕಾಗಿಯೇ ಕೆ ಲವರು ಹೊಸದಾಗಿ ಲೇಖನಗಳನ್ನು ಕೊಟ್ಟಿದ್ದಾರೆ. ಡಾ||ಬಿ.ಎಸ್.ಪ್ರಣತಾರ್ತಿಹರನ್ ಅವರು ಈ ಪುಸ್ತಕಕ್ಕಾಗಿಯೇ ಕ್ಷೇತ್ರಕಾರ್ಯಮಾಡಿ ಸಿದ್ಧಪಡಿಸಿದ ಲೇಖನಗಳು ಇಲ್ಲಿ ಹೆಚ್ಚಾಗಿಯೇ ಇವೆ. ಆ ಪೈಕಿ ತಮಿಳುನಾಡು ಮತ್ತು ಕೇರಳಭಾಗಗಳಿಗೆ ಸಂಬಂಧಿಸಿದ ಲೇಖನಗಳು ವಿಶೇಷ ಆಸಕ್ತಿಯ ಭಾಗಗಳು. ವ್ಯವಸಾಯವು ಅತಿಯಾಗಿ ಕ್ಷೀಣಿಸಿರುವ ಆ ಪ್ರಾಂತದ ವ್ಯವಸಾಯದ ಪೂರ್ವೇತಿಹಾಸವನ್ನೂ ಪಳೆಯುಳಿಕೆಗಳನ್ನೂ ಹೆಕ್ಕಿ ಅಲ್ಲಿನ ವ್ಯವಸಾಯದ ಸ್ವರೂಪವನ್ನು ಕಟ್ಟಿಕೊಡುವ ಶ್ರಮಪೂರ್ಣ ಕೆಲಸವನ್ನು ಅವರು ಮಾಡಿದ್ದಾರೆ. ಜೀವಂತವಾಗಿರುವ ಕೃಷಿಸಂಸ್ಕೃತಿಯನ್ನು ಚಿತ್ರಿಸುವ ಕೆಲಸಕ್ಕಿಂತ ಅಳಿದುಳಿದ ಛಾಯೆಗಳನ್ನು ಹುಡುಕಿ, ಬೆನ್ನುಹತ್ತಿ ಅದರ ಮೂಲಸ್ವರೂಪವನ್ನು ಕಟ್ಟಿಕೊಡುವುದು ಹೆಚ್ಚು ಶ್ರಮ ಮತ್ತು ಶ್ರದ್ಧೆಯನ್ನು ಬೇಡುತ್ತದೆ. ಅದನ್ನು ಹರನ್ ಯಶಸ್ವಿಯಾಗಿ ಸಾಧಿಸಿದ್ದಾರೆ. ಮುಖ್ಯವಾಗಿ 'ಅನೂಚಾನ' ಎಂಬ ಈ ಭಾಗದಲ್ಲಿ ಹೊಸ ಸೇರ್ಪಡೆಗಳೇ ಹೆಚ್ಚು ಎಂಬುದರ ಕಡೆಗೆ ಓದುಗರ ಗಮನ ಸೆಳೆಯಬಯಸುತ್ತೇನೆ. ಒಟ್ಟಂದದಲ್ಲಿ ಈ ಭಾಗವು ಹಲವು ಮೂಲಗಳಿಂದ ತಂದ ಮಾಹಿತಿಯ ಕೇವಲ ಕ್ರೋಡೀಕರಣದಂತೆ ಕಂಡರೂ ಸಂಕೇತಿ ಕೃಷಿಗೆ ಸಂಬಂಧಿಸಿದಂತೆ ಬೇರೆ ಬೇರೆ ಕಾಲದ, ಬೇರೆ ಬೇರೆ ಆಯಾಮದ ಚಿತ್ರವನ್ನು ಕಟ್ಟಿಕೊಡುತ್ತಿರುವ ದೃಷ್ಟಿಯಿಂದ ಮಹತ್ತ್ವದ್ದಾಗಿದೆ. ಓದುಗರಿಗೆ ಈ ಭಾಗವು ಇಷ್ಟವಾಗಬಹುದೆಂದು ಭಾವಿಸಿದ್ದೇನೆ. ಈ ಕೆಲಸದಲ್ಲಿ ಡಾ||ಬಿ.ಎಸ್.ಪ್ರಣತಾರ್ತಿಹರನ್ ಅವರ ಮಾರ್ಗದರ್ಶನ ಮತ್ತು ನೆರವು ನನಗೆ ದೊರೆತಿದೆ. ತಮ್ಮ ಪುಸ್ತಕಮಾಲೆಗೆ ಈ ಕೆಲಸ ಮಾಡಿಕೊಡುವ ಅವಕಾಶ ಕಲ್ಪಿಸಿಕೊಟ್ಟುದಕ್ಕಾಗಿ ಸಮುದಾಯ ಅಧ್ಯಯನ ಕೇಂದ್ರಕ್ಕೆ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ.

ಡಾ||ಎಂ.ಎಸ್.ವಿಜಯಾ ಹರನ್
ನಿರ್ದೇಶಕಿ
ಆಕಾಶವಾಣಿ, ಮೈಸೂರು


೧೫.೦೮.೨೦೦೯
ಮೈಸೂರು

೧. ನನ್ನ ಊರು

ಸಂಕೇತ ಸಂಪದ, ಜೂನ್ ೧೯೯೯, ಪು.೨೪, *ಮತ್ತೂರು ನಂದ, ಲಂಡನ್*

(ಈ ಕವನವು ಸಂಕೇತಿಗಳ ಹಳ್ಳಿಯ ಸನ್ನಿವೇಶವನ್ನು ಮಾತ್ರವಲ್ಲ, ಅವರ ಬಾಳಿನ ಹದವನ್ನೂ ಚಿತ್ರಿಸುತ್ತದೆ)

ಯಾವೂರ ದಾರಿಯಲಿ ತಂಪೆರೆವ ಮರಗಳೋ
ಯಾವ ಮಾರ್ಗದಿ ಶ್ರಮದ ಪರಿಹಾರವೋ
ಯಾವ ಗುಡ್ಡವ ಬಳಸಿ ಹಾದಿ ಹರಿದಿದೆ ಸುತ್ತಿ
ಆ ಊರೆ ನನ್ನೂರು ನಾ ಬೆಳೆದ ಊರು



ಸಂಕೇತಿಗಳ ಒಂದು ಹಳ್ಳಿ

ತೆಂಗು ಅಡಿಕೆಯ ತೋಟ ಸಸ್ಯಶ್ಯಾಮಲೆಯಾಟ
ಕಣ್ಮನವ ಸೆಳೆಯುವುದೊ ಸುತ್ತಮುತ್ತ
ಯಾವಲ್ಲಿ ಹಳತುಗಳು ಹೊಸತರೊಳು ಸಂಗಮಿಸಿ
ಬದುಕನನುಗೊಳಿಸಿಹುದೊ ಆ ಪುಟ್ಟ ಊರು

ಹೊಲದ ಹೊನಲಿನಸಿರಿಗೆ ಮೈಯಬೆವರಿನ ದುಡಿತ
ಮನೆಯ ದೀಪಕೆ ಸ್ನೇಹ ತೈಲಧಾರೆ
ಅತಿಥಿ ಅಭ್ಯಾಗತರ ಆಗಮನವೇ ಭಾಗ್ಯ
ಎನುವ ಮುಗುದರ ಊರು ಸುಂದರೂರು

ಕಪಟವರಿಯದ ಸಾಧು ಸಭ್ಯ ಜನಗಳ ಸೀಮೆ
ನಗರವಾಸನೆಯಿದ್ದು ಇರದ ಊರು
ಹಬ್ಬಗಳ ಹಸಿರಿನಲಿ ಮದುವೆ ದಿಬ್ಬಣಗಳಲಿ
ಹೊಸತೊಂದು ಲೋಕವನೆ ಸೃಜಿಸುವೂರು

ಮೌನದಲಿ ಹರಿದಿರುವ ಪುಟ್ಟೊಂದು ನದಿಯಿಹುದು
ಕನಸಿನೂರಿಗೆ ದೋಣಿ ಇಲ್ಲಿಂದಲೇ
ಇದು ಕಡೆಯ ದಾಟಂತೆ ಮತ್ತೆ ಇತ್ತಿಲ್ಲಂತೆ
ಕರೆ ಬಂತು ಇದೊ ನೇರ ಅಲ್ಲಿಂದಲೇ

೨. Life of Nacharamma: History of Her Migration

Sree Panchacharya Electric Press, Mysore, 1936 **M. Keshaviah**

(Oldest research work on the Sanketi Community. The author studied law and worked as Amildar in Karnataka)

Mysore Census Report, 1891 *(Vedas and gardens)*

". . . The Sanketis are proverbially a hardy, intensely conservative and industrious Brahman community. They are referred to as models for simultaneously securing the two-fold object of preserving the study of the Vedas, while securing a worldly competence by *cultivating their gardens*; and, short of actually ploughing the land, they are pre-eminently the only fraction of the Brahman brotherhood who *turn their hands to the best advantage.*"(P.6)

Rao Bahadur L.K. Ananthakrishna Iyer *(They are gardeners)*

. . . They have been chiefly agriculturists and gardeners, hardworking and self-supporting. Recently, however, there have been eminent Government servants among them. . . . (P.7)

Vijayanagar's measures to Revive Dharma *(Gardening and tending of cattle)*



ಕುಟ್ರಾಲಂ ದಾರಿಯಲ್ಲಿ ಶೆಂಕೋಟ್ಟೈ ತೋಟ

. . . It was at some such time - soon after the establishment of the Empire that Sanketi Vaidika Brahmins, - who were till then confined to their original Dravidian home in the South (Madura District) but had kept themselves strictly aloof from other Dravidians there and had maintained their own sacrificial fires and *lived by gardening and tending of cattle*, held a big conference in their village on the bank of the holy river Papanashini to consider the Imperial message from the Vijayanagar court which had been sent all over the country purporting to offer all help and protection in the shape of money, lands and houses to all pious and learned Brahmanas who would go and settle down in that country to help in the revival of Dharma by maintaining sacrificial fires or teaching Vedas or Vedangas or other Sastras to their several pupils. (P.18)

Hemmige halt *(Fertility of the soil attracted)*

. . . After resuming their journey at Sivasamudram, Nacharamma and her followers proceeded along the bank of the Cauvery, availing themselves, as they did throughout their routes, of the hospitality of villages in Chattrams temples and topes till they came down to Hemmige Agrahara a village situated on the right bank of the river in T. Narasipur Taluk where in view of the sacredness of the place (being Paschimavahini) and the *fertility of the soil*, a few Sanketi families seem to have settled down for good, while the main bulk of the party moved on and on. (P.47)

Reach Kowsika *(Big tank and fertile land halted them)*

. . . The Journey was steadily pushed on by the main body till at last they came to Kowsika, now a Railway Station some four miles to the south of Hassan, where Nacharamma, Heroine the guiding spirit of the whole enterprise, and her followers settled down with their families on account of its many claims to serve as a suitable Brahmana Agrahara; it was reputed to be the place where the sage Kowsika or Viswamitra performed the Sacrifice for which it enjoyed its own sanctity besides being called after his name. Sri Keshava Swami's temple, *a fine big tank quite close to the village, fertile lands* and the secluded situation of the village in close proximity to the river Hemavati (within 8 miles) on one side, and the Hassan town on the other might have considerably influenced her decision in favour of Kowsika being the new Home of Sankethis - her followers. (P.48)

Breaking up to other parts *(Remigration in search of new fields and pastures)*

As time advanced and the population increased among the settlers, need was felt for *other fields and pastures new*. One batch moved on from here towards Shimoga and settled down in Mathur and Hosahalli on the opposite banks of the sacred river Tunga. At different times and in different groups went others, some to Sringeri, some to Basavapatna, yet some to Yedatore and Ramanathapura and so on, all the said villages being found most convenient for their daily 'ಅನುಷ್ಠಾನ' viz, bath and prayers, Vedic and Sastraic studies *and agricultural pursuits.* (Pp.48-49)

Both men and women were blessed with *wonderful physique, pluck and courage*. (P.51)

. . . So Vedas continued to be their inheritance, their ancestral property, their cherished possession which no unfriendly chance or uncongenial company would hope to deprive them of. *Farming with special reference to gardening continued to be their vocation. With the spade in their hand* and the Vedic chant in their throats their garden became so many hermitages where no intruder or burglar would dare to enter. Here they spent their day delighted with their occupation and the fruits of their own labour. Due to their frugal habits they neither wasted nor wanted. . . . (P.55)

How they lived *(They caused a good rainfall and good harvest)*

Geeta being the book of life they regulated all their actions in its abounding light they had supreme faith in the efficacy of ಯಜ್ಞ. So every Shroutriya household amongst them had a sacrificial fire. Every householder regularly performed Homa or Oupasana with his wife, the guardian angel of the sacrificial fire. In many cases Mahayagas or special sacrifices met with their due share, and so

wherever they settled, *timely rainfall and good harvest became the order of the day. Thus their adopted country flowed with milk and honey.*

Their Public Works *(Drylands into smiling gardens)*

Among Sanketis besides teaching Vedas and Sastras there were ardent votaries to arts and crafts. Wherever they settled *dry lands were converted to smiling gardens*. Wherever they felt the scarcity of water *they built new tanks*; Temples, Chatrams and Mantapams and topes that they founded have still been the land-marks of their social service. As regards the physical strength, power of endurance many marvellous anecdotes are still fresh in our minds, and to make even a passing reference to some of them is to encroach upon the limited space at our disposal. (Pp.59-60)

Extracts from the Athenaeum and Daily News *(Tippiah's garden)*

March 4th, 1885.

. . . Tippiah, son of Timmappiah II, was presented in 1792 with a Jaghir by the famous Tipu Sultan, in consideration of valuable services rendered. After the fall of Seringapatam (1799), and the installation of His late Highness Krishnaraja Wodiyar, this Tippiah was appointed Killadar of Maisur, in which capacity he did many good works, chief among which may be mentioned the *construction of the "Karanjee Tank"*, which supplied the Fort and town of Maisur with good drinking water. For this, Dewan Purniah presented Tippiah with the whole of the land below the said Tank, *the place being known as "Tippiah's Garden."* Tippiah was for some time specially entrusted with the charge of the (then) Maharaja's education; and, a few years after the great Purniah became regent, was appointed "Bakshi of the Cuttay Cutcherry" or head of the Engineering Department. It was during Tippiah's conduct in this capacity that a *large channel was excavated from Tippur to Maisur*, whereby water from the Cauvery was brought within two miles of the latter city. This was in 1807-8: and again in 1811 (the Maharaja having meanwhile assumed charge of affairs), Tippaiah constructed *a large Anakat called 'Krishna Raj Kattay'* in the Airaculcode Taluk. both this anakat and another *("Lutchman Teertha Cuttay")* are still in existence; and, in addition to being works of great public utility, are a considerable source of revenue to the Maisur Government. The next post to which Tippiah was appointed was that of "Anche-Amrut-Mahal Bakshi" (i.e., Head of the Postal and Cattle Departments): and while thus employed he completed several important public works: e.g. the conversion of the ancient village of Arakotara (the birth-place of the grandfather of the present Maharaja of Maisur) into the present town of Chamarajanagar: the tower of the Pagoda on the Chamundi Hill, the temple of the god Prasanna Krishnaswamy at Maisur: and the palace at Mailkotta. In fact almost *every public work of any importance executed in the Maisur State* from the fall of Seringapatam in 1799 to the assumption of the territory by a British Commission in 1831 was owing to the genius and industry of Tippiah, for whom the late Maharaja had the highest regard - a feeling which was fully shared in by so distinguished a British Officer as Mr. Thomas Munro, the most famous, perhaps, of the Governors of Madras. . . . (Pp.61-62)

ಅ) ಶ್ರೀನಾಚಾರಮ್ಮನ ಜೀವನಚರಿತ್ರೆ

(ಆಕೆಯ ಪ್ರವಾಸ)

ಶ್ರೀನಿವಾಸ್ ಎಲೆಕ್ಟ್ರಿಕ್ ಪ್ರೆಸ್, ಮೈಸೂರು, ೧೯೩೮ ***ಎಂ. ಕೇಶವಯ್ಯ***

(ಸಂಕೇತಿ ಸಮುದಾಯದ ಬಗೆಗೆ ನಡೆದ ಮೊದಲ ಸಂಶೋಧನೆ ಇದು. ಮುಕ್ಕಾಲು ಶತಮಾನದ ಹಿಂದೆ ಇದ್ದ ದಟ್ಟವಾದ ಮತ್ತು ಬಹುಪಾಲು ಅಸ್ಖಲಿತವಾದ ಮೌಖಿಕಪರಂಪರೆ ಇದಕ್ಕೆ ಆಧಾರ. ಸಂಕೇತಿಗಳ ಎಲ್ಲ ನೆಲೆಗಳಲ್ಲಿ ನಡೆದ ಕ್ಷೇತ್ರಕಾರ್ಯ ಮತ್ತು ಮೌಲಿಕ ದಾಖಲೆಗಳ ಶೋಧದ ಫಲ ಇದು. ಲೇಖಕರಾದ ಎಂ. ಕೇಶವಯ್ಯನವರು ಕಾನೂನು ಪದವೀಧರ; ಕರ್ನಾಟಕದಲ್ಲಿ ಅಮಲ್ದಾರರಾಗಿ ಸೇವೆಸಲ್ಲಿಸಿದವರು.

ಮೊದಲು ಬರೆದ Life of Nacharamma: History of her Migration ಎಂಬ ಪುಸ್ತಕದ ಕನ್ನಡ ರೂಪವನ್ನು 'ಶ್ರೀ ನಾಚಾರಮ್ಮನ ಜೀವನ ಚರಿತ್ರೆ' ಎಂಬ ಹೆಸರಿನಲ್ಲಿ ಅವರೇ ಸಿದ್ಧಪಡಿಸಿದರು.)

Castes and Tribes of S.India : E. Thurston *(ಸಂಕೇತಿ ಗುಣಸ್ವಭಾವ)*

... ಸಂಕೇತಿಗಳು ಶಕ್ತರೂ, ಆಚಾರಶೀಲರೂ, ಸತತೋದ್ಯಮಿಗಳೂ ಆದ ಬ್ರಾಹ್ಮಣರು. ಜ್ಞಾನಕ್ಕಾಗಿ ವೇದಶಾಸ್ತ್ರಗಳ ಅಭ್ಯಾಸವನ್ನೂ ಐಹಿಕ ಸುಖಕ್ಕಾಗಿ ಭೂವ್ಯವಸಾಯವನ್ನೂ ಮಾಡುವುದರಿಂದ ಇವರು ಆದರ್ಶಪ್ರಾಯರಾಗಿದ್ದಾರೆ.(ಪು.೩)

ರಾವ್ ಬಹದ್ದೂರ್ ಅನಂತಕೃಷ್ಣಯ್ಯರ್ *(ಶೆಂಕೋಟ್ಟೈನಲ್ಲಿಯೇ ಇದ್ದ ಬಾಗಾಯ್ತು ಸಂಸ್ಕೃತಿ)*

... ಮುಖ್ಯವಾಗಿ ಇವರು ತೋಟದ ವ್ಯವಸಾಯಗಾರರು, ಶ್ರಮಜೀವಿಗಳು. ಇತ್ತೀಚೆಗೆ ಇವರಲ್ಲಿ ಸುಪ್ರಸಿದ್ಧರಾದ ಸರ್ಕಾರಿ ನೌಕರರಿರುವರು... (ಪು.೩)



ಕುಟುಂಬದ ಮಂದಿಯೆಲ್ಲಾ ಸೇರಿ ಹುಣಿಸೇಹಣ್ಣನ್ನು ರೇಖೆ ಮಾಡುತ್ತಿರುವುದು:ಬಸವಾಪಟ್ಟಣ

ವಿಜಯನಗರ ಚಕ್ರಾಧಿಪತ್ಯದ ಸ್ಥಾಪನೆಯಾದ ಸ್ವಲ್ಪ ಕಾಲದಲ್ಲಿಯೇ ವೈದಿಕರಾದ ಸಂಕೇತಿಗಳು ಒಂದು ಸಭೆ ನಡೆಯಿಸಿ ಕೆಲವು ನಿರ್ಣಯಗಳನ್ನು ಮಾಡಿದರು. ಆಗ ಅವರು ಮಧುರಾ ಡಿಸ್ಟ್ರಿಕ್ಟಿನ ನಿವಾಸಿಗಳಾಗಿದ್ದ ಬ್ರಾಹ್ಮಣರ ಕರ್ತವ್ಯವಾದ ವೇದಶಾಸ್ತ್ರಾಧ್ಯಯನವನ್ನು ಮಾಡುತ್ತಲೂ, ಯಜ್ಞಗಳನ್ನು ಮಾಡುತ್ತಲೂ *ಜೀವಿಕೆಗಾಗಿ ಭೂವ್ಯವಸಾಯವನ್ನು ಮಾಡುತ್ತಲೂ ಇದ್ದರು.* ಪವಿತ್ರವಾದ ಪಾಪನಾಶಿನೀ ನದಿಯ ದಡದಲ್ಲಿ ಈ ಸಭೆ ನಡೆಯಿತು. ವಿಜಯನಗರ ಸಂಸ್ಥಾನದಿಂದ ಬಂದ ಆಹ್ವಾನಪತ್ರಿಕೆಯನ್ನು ಪರಿಶೀಲಿಸುವುದೇ ಈ ಸಭೆಯ ಮುಖ್ಯೋದ್ದೇಶವಾಗಿತ್ತು... (ಪು.೯)

ಹೆಮ್ಮಿಗೆ *(ಸಂಕೇತಿಗಳು ಹೆಮ್ಮಿಗೆಯಲ್ಲಿ ನಿಲ್ಲಲು ಭೂಮಿಯ ಫಲವತ್ತತೆ ಕಾರಣ)*

ನಾಚಾರಮ್ಮನೂ ಆಕೆಯ ಅನುಯಾಯಿಗಳೂ ಶಿವಸಮುದ್ರದಿಂದ ಕಾವೇರಿನದಿಯ ದಡವನ್ನೇ ಅನುಸರಿಸಿ ಪ್ರಯಾಣವನ್ನು ಮುಂದುವರಿಸುತ್ತಾ

ಹೆಮ್ಮಿಗೆಯೆಂಬ ಊರನ್ನು ಸೇರಿದರು. ಹೆಮ್ಮಿಗೆಯು ಒಂದು ಸಣ್ಣ ಅಗ್ರಹಾರ; ಕಾವೇರೀ ನದಿಯ ಬಲದಡದಲ್ಲಿದೆ. ತಿರುಮಕೂಡಲು ನರಸೀಪುರದ ತಾಲ್ಲೂಕಿನಲ್ಲಿ ಈಗಲೂ ಈ ಅಗ್ರಹಾರವಿದೆ. ಅಲ್ಲಿ *ಭೂಮಿಯು ಫಲವತ್ತಾಗಿದ್ದುದರಿಂದಲೂ* ಕಾವೇರಿಯು ಪಶ್ಚಿಮವಾಹಿನಿಯಾದುದರಿಂದಲೂ ಕೆಲವರು ಅಲ್ಲೇ ನೆಲಸಿದರು. . . . (ಪು.೨೭)

ಕೌಶಿಕ *(ದೊಡ್ಡ ಕೆರೆಯ ಅಚ್ಚುಕಟ್ಟು ಕೊಟ್ಟ ಬಾಗಾಯ್ತಿನ ಕನಸು)*

... ಆ ಸ್ಥಳವನ್ನವರು ಯೋಗ್ಯವಾದುದೆಂದು ಚುನಾಯಿಸಲು ಅನೇಕ ಕಾರಣಗಳಿದ್ದವು. ಅದೊಂದು ಸಮೃದ್ಧವಾದ ಬ್ರಾಹ್ಮಣರ ಅಗ್ರಹಾರವಾಗಿದ್ದಿತು. ವಿಶ್ವಾಮಿತ್ರ ಋಷಿಯು ತಪಸ್ಸು ಮಾಡಿ ಪವಿತ್ರವಾದುದೆಂದು ಪುರಾಣಪ್ರಸಿದ್ಧವಾಗಿತ್ತು. ಶ್ರೀ ಕೇಶವಸ್ವಾಮಿಯ ಪುರಾತನ ದೇವಾಲಯ; *ದೊಡ್ಡದಾದ ಕೆರೆ; ಫಲವತ್ತಾದ ನೀರಾವರಿ ಪ್ರದೇಶ,* ಹೇಮಾವತೀ ನದಿಗೆ ಸಮೀಪವಾದ ಊರು...(ಪು.೨೮)

ತೃಣಜಲ ಸಮೃದ್ಧಿ *(ವ್ಯವಸಾಯ ಮತ್ತು ಸ್ವಾತಂತ್ರ್ಯ)*

... ಈ ಸಂದರ್ಭದಲ್ಲಿ ನಾವು ಜ್ಞಾಪಕದಲ್ಲಿಡಬೇಕಾದ ಮುಖ್ಯವಾದ ಅಂಶವೇನೆಂದರೆ, ಸಂಕೇತಿಗಳು ನೆಲಸಿದ ಮೇಲೆ ಹೇಳಿದ ಗ್ರಾಮಗಳು ಪಟ್ಟಣಗಳಿಗೆ ದೂರವಾಗಿದ್ದು *ತೃಣಜಲ ಸಮೃದ್ಧವಾಗಿದ್ದವು.* ಅಲ್ಲೆಲ್ಲಾ ಇವರು ವೇದಶಾಸ್ತ್ರಾಭ್ಯಾಸ, ಕರ್ಮಾನುಷ್ಠಾನಗಳನ್ನು ಮಾಡುತ್ತಾ, *ವ್ಯವಸಾಯವನ್ನೇ ವೃತ್ತಿಯನ್ನಾಗಿಟ್ಟುಕೊಂಡು ಸ್ವತಂತ್ರವಾಗಿ ಜೀವನ ಮಾಡುತ್ತಿದ್ದರು.* (ಪು.೨೮)

ಸಾಹಸಿಗಳು *(ಬಾಗಾಯ್ತಿನ ಜತೆಗೂಡಿದ ಆಶ್ರಮಸಂಸ್ಕೃತಿ)*

... ಈ ಪಂಗಡದಲ್ಲಿ ಸ್ತ್ರೀ ಪುರುಷರೆಲ್ಲಾ *ದೃಢಾಂಗರೂ ಸಾಹಸಿಗಳೂ* ಆಗಿದ್ದರು. ಅವರ ದೇಹದಾರ್ಢ್ಯದ ವಿಷಯವಾಗಿ ಎಷ್ಟೋ ಕಥೆಗಳಿವೆ... ... ವ್ಯವಸಾಯ ಅವರ ಜೀವನಕ್ಕೆ ಮುಖ್ಯ ವೃತ್ತಿಯಾಗಿತ್ತು. ಬಾಯಿನಲ್ಲಿ ವೇದಮಂತ್ರಗಳನ್ನು ಉಚ್ಚರಿಸುತ್ತಾ ಕೈಯಲ್ಲಿ ಉಪಕರಣಗಳನ್ನು ಹಿಡಿದು ಕೆಲಸ ಮಾಡುತ್ತಿದ್ದ ಇವರ ತೋಟಗಳೊಂದೊಂದೂ *ಋಷ್ಯಾಶ್ರಮಗಳಂತೆ*ಕಂಗೊಳಿಸುತ್ತಿದ್ದುವು... (ಪು.೩೦, ೩೨)

ಸಮಾಜಸೇವೆ *(ಅವರು ನಿಂತಕಡೆ ಬೇಸಾಯದ ಬಾಗಿಲು ತೆರೆಯುತ್ತದೆ)*

ಸಂಕೇತಿಗಳು ವೇದಶಾಸ್ತ್ರಗಳಲ್ಲಿ ಅದ್ವಿತೀಯ ಪಂಡಿತರಾಗಿದ್ದುದು ಮಾತ್ರವಲ್ಲದೆ ಇತರ ಕಲೆಗಳನ್ನೂ ಚೆನ್ನಾಗಿ ಅರಿತವರಾಗಿದ್ದರು. ಅವರು ವಾಸ ಮಾಡುವುದಕ್ಕೆ ಮೊದಲು ಬೆಂಗಾಡಾಗಿದ್ದ ಪ್ರದೇಶವೆಲ್ಲಾ ಕೆಲವು ಕಾಲದೊಳಗಾಗಿ *ರಮ್ಯವಾದ ಕ್ಷೇತ್ರಗಳಾದುವು.* ಅವರು ನೆಲೆಸಿದ ಎಡೆಯಲ್ಲಿ ನೀರಿಗೆ ತೊಂದರೆ ಇದ್ದರೆ ಕೂಡಲೇ *ಕೆರೆ ಕೊಳಗಳನ್ನು ಕಟ್ಟಿಸಿರುತ್ತಾರೆ.* ಅವರು ನಿರ್ಮಿಸಿರುವ ದೇವಾಲಯಗಳು, ಸತ್ರಗಳು, ಮಂಟಪಗಳು ಇವೆಲ್ಲಾ ಅವರು ಮಾಡಿರುವ ಸಮಾಜಸೇವೆಗೆ ನಿದರ್ಶನಗಳಾಗಿವೆ. ಅವರಿಗಿದ್ದ *ದೇಹಶಕ್ತಿಯನ್ನೂ, ಸಹನಾಗುಣವನ್ನೂ* ಕೇಳಿದರೆ ನಮಗದು ಕಥೆಯಾಗಿ ಕಾಣುವುದು. ಜನರಲ್ಲಿ ಹರಡಿರುವ ಈ ಕಥೆಗಳನ್ನು ಸಂಗ್ರಹಿಸಿದರೆ ಒಂದು ದೊಡ್ಡ ಪುಸ್ತಕವೇ ಆಗುವುದು. (ಪು.೩೪)

ಆಪದ್ಧರ್ಮ *(ಕೃಷಿಯು ಸನಾತನ ಮಾರ್ಗ)*

ನಾವು ಅನುಸರಿಸಬೇಕಾದ ಆದರ್ಶಭೂತವಾದ ಜೀವನಮಾರ್ಗವೆಂದರೆ ಸನಾತನ ಧರ್ಮಮಾರ್ಗ. ಆದರೂ ನಮಗೆ ಹಾಕಿರುವ ಮೇಲ್ಪಂಕ್ತಿಯನ್ನು ಬದಲಾಯಿಸಲು ನಮಗೆ ಸ್ವಲ್ಪ ಅವಕಾಶವುಂಟು. ಧರ್ಮಶಾಸ್ತ್ರಗಳೇ 'ಆಪದ್ಧರ್ಮ'ವೆಂಬ ಹೆಸರಿನಲ್ಲಿ ನಮಗೆ ಎಷ್ಟೋ ರಿಯಾಯಿತಿಗಳನ್ನು ಕೊಟ್ಟಿವೆ. ಆಪದ್ಧರ್ಮಗಳೆಂದರೆ ಒಟ್ಟಿನಲ್ಲಿ ಕಷ್ಟಕಾಲದಲ್ಲಿ ಪರಧರ್ಮವನ್ನಾದರೂ ಆಶ್ರಯಿಸುವುದು. ನಮ್ಮ ಪ್ರಕೃತ ಕಷ್ಟದೆಶೆಯಲ್ಲಿ ಭೂವ್ಯವಸಾಯವನ್ನು ಬಿಟ್ಟು ಬೇರೆ ಮಾರ್ಗಗಳನ್ನು ಅವಲಂಬಿಸುವುದರಲ್ಲಿ ಆಕ್ಷೇಪಣೆ ಏನೂ ಇಲ್ಲ. ಸ್ತ್ರೀ ಪುರುಷರೇ ಆದಿಯಾಗಿ ಪ್ರತಿಯೊಬ್ಬರೂ ತಮ್ಮ ತಮ್ಮ *ಅಭಿರುಚಿ, ಬುದ್ಧಿಶಕ್ತಿಗಳಿಗೆ ಅನುಸಾರವಾಗಿ ಬೇರೆ ಬೇರೆ ಜೀವನೋಪಾಯ ಮಾರ್ಗಗಳನ್ನು ಅವಲಂಬಿಸಿ* ಆತ್ಮೋನ್ನತಿಯನ್ನು ಪಡೆಯುವುದರ ಮೂಲಕ ಸಾಮಾಜಿಕ ಮತ್ತು ಧಾರ್ಮಿಕ ಉನ್ನತಿಗಳಿಗೆ ಸಹಾಯವಾಗಿರಲೆಂದು ಪ್ರಾರ್ಥಿಸುತ್ತೇನೆ.(ಪು.೫೦)

೩. ರಾಜ್ಯಪ್ರಶಸ್ತಿ

೧೩ನೇ ರಾಜ್ಯೋತ್ಸವ ಪ್ರಶಸ್ತಿ ಪ್ರದಾನ ಸಮಾರಂಭ, ೧೯೬೯

(ಮಹಾಕೃಷಿಕ ಶ್ರೀ ಎಚ್.ವಿ. ಕೃಷ್ಣರಾವ್: ಕೃಷಿ ಸಾಧನೆಗಾಗಿ ಸರ್ಕಾರದಿಂದ ಬಹುಮಾನವಾಗಿ ಬಂದ ಟ್ರ್ಯಾಕ್ಟರುಗಳನ್ನು ಊರಿಗೆ ದಾನ ಮಾಡಿದರು!)

"ಸಾರ್ವಜನಿಕ ಕ್ಷೇತ್ರದಲ್ಲಿ ವಿಶಿಷ್ಟ ಸೇವೆ ಸಲ್ಲಿಸುವ ಮಹನೀಯರಿಗೆ ರಾಜ್ಯ ಮನ್ನಣೆ ನೀಡಿ ಸೇವಾಪ್ರಶಸ್ತಿಯನ್ನು ಕೊಟ್ಟು ಗೌರವಿಸುವ ಸಂಪ್ರದಾಯ ಮೊದಲಿಂದ ಬಂದಿದೆ. ನಮ್ಮ ರಾಜ್ಯದಲ್ಲಿ ಸಾಮಾನ್ಯವಾಗಿ ಇಂಥ ಪ್ರಶಸ್ತಿಯನ್ನು ದಸರಾ ಸಂದರ್ಭದಲ್ಲಿ ಕೊಡಲಾಗುತ್ತಿತ್ತು. ಇತ್ತೀಚೆಗೆ ಆ ಪ್ರಶಸ್ತಿಗಳನ್ನು ರಾಜ್ಯೋತ್ಸವ ಸಂದರ್ಭದಲ್ಲಿ ನೀಡಬೇಕೆಂದು ಸರ್ಕಾರವು ನಿರ್ಧರಿಸಿತು. ಅಂತೆಯೇ ನಾಡಿನ ಕೃಷಿ, ಶಿಕ್ಷಣ, ಕಲೆ, ತತ್ತ್ವಶಾಸ್ತ್ರ, ಪತ್ರಿಕೋದ್ಯಮ ಮೊದಲಾದ ನಾನಾ ಕ್ಷೇತ್ರಗಳಲ್ಲಿ ವಿಶಿಷ್ಟ ಸೇವೆ ಸಲ್ಲಿಸಿರುವ ೧೧ ಜನ ಮಹನೀಯರಿಗೆ ಈ ಸಲದ (೧೯೬೯) ರಾಜ್ಯ ಪ್ರಶಸ್ತಿಗಳನ್ನು ನೀಡಲಾಗುತ್ತಿದೆ. ಸಾಮಾಜಿಕ ಕ್ಷೇತ್ರದಲ್ಲಿ ಇಂತಹ ಮನ-ಮನ್ನಣೆಗಳು ಅಪೇಕ್ಷಣೀಯ. ದುಡಿಮೆಗೆ ಕೊಡುವ ಗೌರವ ಈ ಸಂಪ್ರದಾಯ."

ಶ್ರೀ ಹೆಚ್.ವಿ. ಕೃಷ್ಣರಾವ್: ಶಿವಮೊಗ್ಗ ಜಿಲ್ಲೆಯ ಹೊಸಹಳ್ಳಿ ಜನ್ಮಗ್ರಾಮ. ತಂದೆಯೂ ಪ್ರಗತಿಪರ ರೈತ. ಮಾಧ್ಯಮಿಕ ಶಾಲೆಯವರೆಗೆ ಶಿಕ್ಷಣ. ಚಿಕ್ಕಂದಿನಲ್ಲೇ ವ್ಯವಸಾಯದಲ್ಲಿ ಆಸಕ್ತಿ.



ಬತ್ತದಗದ್ದೆ, ಕಬ್ಬಿನಗದ್ದೆ; ಅದರ ಆಚೆಗೆ ಅಡಿಕೆ ತೋಟ:ಮತ್ತೂರು-ಹೊಸಹಳ್ಳಿ

ಕೃಷಿ ಇಲಾಖಾ ವಿಸ್ತರಣಾ ಸೇವೆಯ ಪೂರ್ಣ ಪ್ರಯೋಜನ. ವೈಜ್ಞಾನಿಕ ಕೃಷಿ ಪದ್ಧತಿಯಿಂದ ನಿರೀಕ್ಷೆ ಮೀರಿದ ಬತ್ತದ ಉತ್ಪಾದನೆ. ೧೯೬೬-೬೭ರಲ್ಲಿ ಅಧಿಕ ಇಳುವರಿ ಬೆಳೆದು ಕೃಷಿ ಆರಂಭ. ಪ್ರಸ್ತುತ ೬೦ ಎಕರೆ ವಿಸ್ತೀರ್ಣದಲ್ಲಿ ಅಧಿಕ ಇಳುವರಿ ತಳಿಯ ಕೃಷಿ-IR-8 ತಳಿಯ ಜೊತೆಗೆ ಜಯ, ಪದ್ಮ, ಪಿಆರ್.-5 ತಳಿಗಳ ಬಳಕೆ.

೧೯೬೭-೬೮ರಲ್ಲಿ IR-8 ಬತ್ತದ ಅಧಿಕ ಇಳುವರಿ. ಜಿಲ್ಲಾ ಮಟ್ಟದ ಸ್ಪರ್ಧೆಯಲ್ಲಿ ಪ್ರಥಮ ಬಹುಮಾನ. ಮಾರನೆ ವರ್ಷ ೪೦ಎಕರೆಗಳಿಗೆ IR-8 ಬತ್ತದ ಕೃಷಿಯ ವಿಸ್ತರಣೆ. ೧೯೬೮-೬೯ ಮುಂಗಾರಿನಲ್ಲಿ ಮತ್ತೆ ರಾಜ್ಯಮಟ್ಟದ ಪ್ರಥಮ ಸ್ಥಾನ. ಬತ್ತದ ಜೊತೆಗೆ ಕಬ್ಬಿನ ಕೃಷಿ ಮತ್ತು ತೋಟಗಾರಿಕೆ. ಸುತ್ತಮುತ್ತಣ ರೈತರಿಗೆ ಮಾರ್ಗದರ್ಶನ.

ಆಧುನಿಕ ಪ್ರಗತಿಪರ ಜೀವನ "ನನ್ನಲ್ಲಿರುವ ಟ್ರಾಕ್ಟರ್, ಟೆಲಿಫೋನ್, ರೇಡಿಯೋ, ಕಾರ್ - ಎಲ್ಲ ನನ್ನ ನೆಲ ಕೊಟ್ಟ ಫಲ" ಎನ್ನುವ ಅಭಿಮಾನ. ಮುಂದೆ ಕೇವಲ ಅಧಿಕ ಇಳುವರಿ ತಳಿಗಳನ್ನೇ ಬೆಳೆಯಬೇಕೆಂಬ ನಿರ್ಧಾರ. ನಾಲ್ಕು ಮಕ್ಕಳ ತಂದೆ. ಮಕ್ಕಳೂ ಕೃಷಿಯನ್ನೇ ಅವಲಂಬಿಸುವರೆಂಬ ನಂಬಿಕೆ.

ಹೈಬ್ರಿಡ್ ಬೆಳೆ ಬೆಳೆದು ವಿಶೇಷ ಇಳುವರಿ ತೆಗೆದಾಗ, ಜಪಾನ್ ಸರ್ಕಾರದಿಂದ ೨ ಟ್ರಾಕ್ಟರ್‌ಗಳ ಬಹುಮಾನ. ಸಾರ್ವಜನಿಕರಿಗೆ ಅದರ ಲಾಭ ಸಿಗಲೆಂಬ ಉದ್ದೇಶದಿಂದ ಅದನ್ನು ಪಂಚಾಯಿತಿಗೆ ಸಮರ್ಪಿಸಿದರು.

ಅವರ ಹೆಂಡತಿ ಮತ್ತೂರಿನವರು. ಅವರ ಮುತ್ತಜ್ಜಿ ಕಾಶಿಯಾತ್ರೆಯಿಂದ ಗಂಡನ ಜೊತೆ ಹಿಂದಿರುಗುವಾಗ ಪತಿ ಮರಣ ಹೊಂದಿದರು; 'ಹೀಗೆ ಊರಿಗೆ ಮುಖ ತೋರಿಸಲಾರೆ' ಎಂದು ರಾಜನಲ್ಲಿ ನಿವೇದಿಸಿ ಸಹಗಮನ ಮಾಡಿದರು.

(ಆಧಾರ: ಪ್ರಶಸ್ತಿಪತ್ರ ಮತ್ತು ಸಂದರ್ಶನ)

೪. ಕನ್ನಡ ಸಾಮ್ರಾಜ್ಯ (ಕೈಪಿಡಿ - ೧)

ಧಾತ್ರಿ ಪವರ್ ಪ್ರೆಸ್, ಚದುರಂಗ ಇಂಡಸ್ಟ್ರೀಸ್,
ಮೈಸೂರು, ೧೯೭೨, ಪು: ೧೩, ೧೪

ಲೇಖಕರು ಮತ್ತು ಪ್ರಕಾಶಕರು:
ಸರ್ದಾರ್ ಕೆ.ಬಸವರಾಜೇ ಅರಸಿನವರು

(ಬಾಳೆಯಪಟ್ಟೆಯ ಕಚ್ಚೆ ಕಟ್ಟಿಕೊಂಡು ತೋಟಗಳಲ್ಲಿ ಬಹುಶ್ರದ್ಧೆಯಿಂದ ಕೆಲಸಮಾಡುತ್ತಾರೆ !)

ಚಿಲ್ಕುಂದ: ಇದು ನಮ್ಮ ಊರಿಗೆ ಪಶ್ಚಿಮದಲ್ಲಿ ಮೂರು ಮೈಲು ದೂರದಲ್ಲಿದೆ. ಇಲ್ಲಿ ಹಿಂದೆ ಅರಸು ಮನೆತನಗಳಿದ್ದವು. ಈ ಗ್ರಾಮವು ತುಂಬಾ ಅಭಿವೃದ್ಧಿ ಸ್ಥಿತಿಯಲ್ಲಿದೆ. ಇಲ್ಲೆಲ್ಲಾ ಬಾಗಾಯ್ತು ವ್ಯವಸಾಯ ಹೆಚ್ಚು. ತೆಂಗು, ಬಾಳೆ, ಅಡಿಕೆ, ವೀಳೆಯದೆಲೆಯ ತೋಟಗಳೇ ಎಲ್ಲೆಲ್ಲೂ ಇವೆ. ಇದು ಪಾಳೆಯಗಾರರಿದ್ದ ಸ್ಥಳ. ಇದರ ಕೋಟೆಯು ಈಗ ಶಿಥಿಲವಾಗಿದೆ. ಇಲ್ಲಿ ಸಂಕೇತಿ ಬ್ರಾಹ್ಮಣರು ಇದಾರೆ. ಇವರೆಲ್ಲಾ ತೋಟಗಾರರು; ಇವರು ಸಂಗೀತದಲ್ಲಿ ಚತುರರು. ಇವರಲ್ಲಿ ಬೆಟ್ಟದಪುರದವರು, ಕೌಶಿಕದವರು ಎಂದು ಎರಡು ಶಾಖೆಗಳು; ಒಟ್ಟು ಏಳನೂರು ಮನೆಗಳಿವೆ; ಬಹು ಕಷ್ಟಪಟ್ಟು ಲಾಲಸೆಯಿಂದ ವ್ಯವಸಾಯವನ್ನು ಮಾಡುತ್ತಾರೆ; ತೋಟದ ಅಗತೆಯನ್ನು ಸ್ವತಃ ಮಾಡುತ್ತಾರೆ. ಬಾಳೆಪಟ್ಟೆಯ ಕಚ್ಚೆ ಕಟ್ಟಿಕೊಂಡು ಬಹು ಶ್ರದ್ಧೆಯಿಂದ ಕೆಲಸ ಮಾಡುತ್ತಾರೆ. ಚಿಲ್ಕುಂದದ ಆಗ್ರ ಅಂದರೆ ದೊಡ್ಡ ತೋಟಗಳು ಇವರುಗಳದೇ ಹೆಚ್ಚು. ಇವರನ್ನು ಈ ಕಾರಣದಿಂದ "ಗೊದಮಟ್ಟೆ ಹಾರುವ" ರೆಂದೂ ಕರೆಯುವ ವಾಡಿಕೆಯಿದೆ. ಇವರ ನಡೆ ನುಡಿ ಸ್ವಲ್ಪ ಒರಟು ಸ್ವಭಾವದ್ದೆಂದೂ ತೋರುವುದಾದರೂ, ಸ್ವಭಾವವಾಗಿ ಇವರೆಲ್ಲಾ ವೇದಾಧ್ಯಯನಸಂಪನ್ನರು, ವ್ಯಾಕರಣೇತ್ಯಾದಿ ಶಾಸ್ತ್ರಗಳಲ್ಲೂ ನಿಪುಣರು, ನಿಷ್ಠಾವಂತರು ಮತ್ತು ಆಧುನಿಕ ಲೌಕಿಕ ವಿದ್ಯೆಯಲ್ಲಿ ಅತಿ ಬುದ್ಧಿವಂತರು, ಸಾತ್ವಿಕರು. ಈಚೆಗೆ ಬಹುಜನ ವಿದ್ಯಾವಂತರಾಗಿ ದೇಶವಿದೇಶಗಳಿಗೆ ಹೋಗಿ ಬಂದು ದೊಡ್ಡ ದೊಡ್ಡ ಕೆಲಸಗಳಲ್ಲಿದ್ದಾರೆ. ಅರ್ಥಶಾಸ್ತ್ರವನ್ನು (ಕೌಟಿಲ್ಯನ) ಬರೆದಿರುವ ಲೇಟ್ ಡಾ|| ಶಾಮಾಶಾಸ್ತ್ರಿಗಳು ಸಂಕೇತಿಗಳು, ನಮ್ಮ ಜೊತೆಯಲ್ಲಿ ಓದಿದ ಶ್ರೀ ಬಿ.ಎಸ್. ಗಂಗಾಧರಯ್ಯ, ಶ್ರೀ ಬಿ.ಎಸ್.ವಿಶ್ವೇಶ್ವರಯ್ಯ, ಇವರೂ ಸಂಕೇತಿಗಳೆ. ಇವರಿಬ್ಬರೂ ವೀಣೆ ನುಡಿಸುವುದರಲ್ಲಿ ಬಹು ಚತುರರು. ಇಲ್ಲಿ ದೊಡ್ಡ ದೊಡ್ಡ ಕೆರೆಗಳಿವೆ; ಆಯಕಟ್ಟಿನಲ್ಲಿ ಬತ್ತದಬೆಳೆ ಮತ್ತು ಕಬ್ಬು ಆಗುತ್ತವೆ. ದನಕರುಗಳಿಗೆ ನೀರು ಮತ್ತು ಮೇವಿನ ಆಸರೆಯೂ ಇವೆ - ಇದೆಲ್ಲಾ ಬಹು ಫಲವತ್ತಾದ ಪ್ರದೇಶ ಮತ್ತು ಮಲೆನಾಡಿನ ಹೆಬ್ಬಾಗಿಲಾಗಿದೆ. . . .



ಹಾಸನ ಜಿಲ್ಲೆಯ ಹಳ್ಳಿ: ಒಂದು ಸಂಕೇತಿ ಬೀದಿ

೫. 'ಸ್ಮರಣ ಸಂಚಿಕೆ': ಬೆಟ್ಟದಪುರ ಸಂಕೇತಿ ಸಂಘ ವಿದ್ಯಾರ್ಥಿನಿಲಯ

('ಸಂಕೇತಿತನ'ಕ್ಕೆ ವ್ಯಾಖ್ಯೆಯಂತೆ ಇರುವ ಭಾಗಗಳನ್ನು ಇಲ್ಲಿ ಕ್ರೋಢೀಕರಿಸಲಾಗಿದೆ.)

ಅ. ಸಂಕೇತಿ ಜನಾಂಗ

ಪ್ರ: ಬೆಟ್ಟದಪುರ ಸಂಕೇತಿ ಸಂಘ (ರಿ),
೧೯೭೯, ಮೈಸೂರು, ಪು:೭-೯,

ಎಚ್.ಎನ್. ಕೇಶವಮೂರ್ತಿ



ತಮಗೆ ಬೇಕಾದ ವಿಭೂತಿಯನ್ನು ವಿಧಿವತ್ತಾಗಿ ತಯಾರು ಮಾಡಿಕೊಳ್ಳುತ್ತಾರೆ

(ಅಪ್ಪಟ ಸಂಕೇತಿ ವ್ಯಕ್ತಿತ್ವದ ದರ್ಶನ ಈ ಭಾಗದಲ್ಲಿದೆ)

ವೈಶಿಷ್ಟ್ಯದ ಸಂರಕ್ಷಣೆ

"ಸಂಕೇತಿ" ಎಂಬ ಉಚ್ಚಾರ ನಮ್ಮ ಕಿವಿಗೆ ಬಿದ್ದ ಕೂಡಲೇ ನಮ್ಮ ಕಣ್ಣುಗಳ ಮುಂದೆ ಒಂದು "ವ್ಯಕ್ತಿತ್ವ" ನಿಲ್ಲುತ್ತದೆ. ಈ *ಅಪ್ಪಟ ಸಂಕೇತಿ ವ್ಯಕ್ತಿತ್ವವನ್ನು* ಈಗಲೂ ನಾವು ಗ್ರಾಮಾಂತರ ಪ್ರದೇಶಗಳಲ್ಲಿ ಕಾಣಬಹುದು. ಒಮ್ಮೆ ನಾನು ನನ್ನ ವೃತ್ತಿಯ ಕಾರ್ಯನಿರ್ವಹಣೆಗಾಗಿ ಹಾಸನಕ್ಕೆ ಪ್ರಥಮ ಬಾರಿ ಪ್ರವಾಸ ಹೊರಟಿದ್ದೆ. ಮೈಸೂರಿನಿಂದ ಹೊರಡುವಾಗ ಇನ್ನೂ ಸೂರ್ಯೋದಯವಾಗದ ಕಾರಣ ಬಸ್ಸು ಎರಡು ತಾಸುಗಳ ದೂರ ಹೋಗುವಷ್ಟರಲ್ಲಿ ನನಗೆ ನಿದ್ರೆ ಬಂದಿತ್ತು. ಇನ್ನೂ ಸ್ವಲ್ಪ ದೂರ ಕ್ರಮಿಸಿದ ನಂತರ ಬಸ್ಸು ಒಂದು ನಿಲ್ದಾಣದಲ್ಲಿ ನಿಂತಾಗ ಎಚ್ಚರವಾಯ್ತು-ಸ್ವಾಭಾವಿಕವಾಗಿಯೇ ಕಿಟಕಿಯಿಂದ ಹೊರಗೆ ನೋಡಿದಾಗ ಅದು ಒಂದು ಗ್ರಾಮವಾಗಿತ್ತು; ಜನಗಳು ತಮ್ಮ ಪ್ರಾತಃಕಾಲದ ಸಂಭ್ರಮದಲ್ಲಿದ್ದರು. ಅದರಲ್ಲಿ ೨-೩ ವ್ಯಕ್ತಿಗಳು ನನ್ನ ಕಣ್ಣುಗಳನ್ನು ಸೆಳೆದರು. ನಾನು ಸ್ವಗತವಾಗಿಯೇ "ಇವರು ಸಂಕೇತಿಗಳಿರಬೇಕು" ಅಂದುಕೊಳ್ಳುವಷ್ಟರಲ್ಲಿಯೇ ಅವರಲ್ಲಿ ಒಬ್ಬರು "ತೋಟತಕ್ಕಿ ಪೋಯ್ಟ್ವಂದ್ಯಾಡೋ?" (ತೋಟಕ್ಕೆ ಹೋಗಿ ಬಂದೆಯೇನೋ) ಎಂದು ಎದಿರ್ಗೊಂಡ ಒಬ್ಬ ಹುಡುಗನನ್ನು ನನಗೆ ಕೇಳಿಸುವಷ್ಟು ಜೋರಾಗಿ ಕೇಳಿದರು. ಅವರ ಆ ಸಂಕೇತಿತ್ವ ಅರ್ಥಾತ್ ವ್ಯಕ್ತಿತ್ವ ಸ್ಪಷ್ಟವಾಗಿ ಕಾಣಿಸುತ್ತಿತ್ತು. ವ್ಯಕ್ತಿತ್ವ ಎಂದರೆ *ವೇಷಭೂಷಣಗಳನ್ನೊಳಗೊಂಡ ಅವರ ನಿಲುವು* ಕೂಡ ಎಂದು ಬೇರೆ ಹೇಳಬೇಕಾದ್ದಿಲ್ಲ. ಪ್ರಾಚೀನ ಕಾಲದಲ್ಲಿ ನಮ್ಮವರು ಬಹಳ ಮಡಿವಂತರಾಗಿದ್ದರು. ತ್ರಿಕಾಲಸಂಧ್ಯಾವಂದನೆ, ಹೋಮ, ಔಪಾಸನ ಇತ್ಯಾದಿಗಳನ್ನು ಮಾಡಿಕೊಂಡು ಅಗ್ನಿಯನ್ನು ಕಾಪಾಡಿಕೊಂಡು ಬರುತ್ತಿದ್ದರು. ಶಿರವೇಷ ಪದವೇಷಗಳಿಲ್ಲದೆ ಕೇವಲ ಪಂಚೆ ಮತ್ತು ಉತ್ತರೀಯ ಶಿಖಾ ಇರುತ್ತಿತ್ತು. ಶೂನ್ಯಫಾಲರಾಗದೆ, ವಿಭೂತಿಯೋ, ಗಂಧಾಕ್ಷತೆಯೋ ಹಣೆಯಲ್ಲಿ ರಾರಾಜಿಸುತ್ತಿರುತ್ತಿತ್ತು. ಮಡಿಯನ್ನು ಎಷ್ಟು ಕಟ್ಟುನಿಟ್ಟಾಗಿ ಪಾಲಿಸುತ್ತಿದ್ದರು ಎಂದರೆ ದಕ್ಷಿಣದೇಶದಿಂದ ಮೈಸೂರಿಗೆ ವಲಸೆ ಬರುವಾಗ ಸುಮಾರು ಐದುನೂರು ಮೈಲಿಗಳು ಮನೆದೇವರಾದ ಶ್ರೀ ಲಕ್ಷ್ಮೀನೃಸಿಂಹ ಸಾಲಗ್ರಾಮ ಸಂಪುಟಗಳನ್ನು ಮಡಿಯಲ್ಲೇ, ಕಾಲ್ನಡಿಗೆಯಲ್ಲೇ ಒಬ್ಬರೇ ತಂದರೆಂದು ಹೇಳಲಾಗಿದೆ. *ಅಷ್ಟು ಕಠೋರ ನಿಷ್ಠೆ, ಆಚರಣೆ*ಯಲ್ಲಿ ಅವರಿಗಿತ್ತು.

ಶಂಕರಾಚಾರ್ಯರು ತಮ್ಮ ಶ್ಲೋಕ ಪಂಚಕದಲ್ಲಿ ಹೇಳಿರುವಂತೆ

> "ವೇದೋನಿತ್ಯಮಧೀಯತಾಂ
> ತದುದಿತಂ ಕರ್ಮಸ್ವನುಷ್ಠೀಯತಾಂ|

ವೇದೋಕ್ತ ಕರ್ಮಾನುಷ್ಠಾನದಲ್ಲಿದ್ದುಕೊಂಡು ತೋಟ ತುಡಿಕೆ ಕೃಷಿಯಲ್ಲಿ ಜೀವನ ಮಾಡುತ್ತಿದ್ದರು. . . . . .

. . . ನಮಗೆ ತಿಳಿದಿರುವಂತೆ ನಮ್ಮ ಪೂರ್ವಜರು ಐಹಿಕ, ಆಮುಷ್ಮಿಕಗಳೆರಡರಲ್ಲಿಯೂ ಸಾಧನರೂಪವಾದ ಕೃಷಿ ಮತ್ತು ವೇದಾಧ್ಯಯನಗಳಲ್ಲಿ ತೊಡಗಿರುತ್ತಿದ್ದರು. ಅವರು ಕೊಂಡುಕೊಳ್ಳಲೇ ಬೇಕಾಗಿದ್ದ ಜೀವನಾವಶ್ಯಕ ವಸ್ತುಗಳು ಎಂದರೆ ಕೇವಲ ಎರಡೇ ಆಗಿದ್ದುವಂತೆ. ಒಂದು ಉಪ್ಪು, ಇನ್ನೊಂದು ವಸ್ತ್ರ. ಈ ಅಶನವಸನಗಳಲ್ಲಿ ಬೇಕಾಗಿದ್ದ ವಸ್ತುಗಳಲ್ಲಿ ಉಪ್ಪು, ವಸ್ತ್ರ ಎರಡನ್ನು ಮಾತ್ರ ಕೊಂಡುಕೊಳ್ಳುತ್ತಿದ್ದರೆಂದರೆ ಅವರು ಎಂಥ *ಸ್ವಾವಲಂಬಿಗಳಾಗಿರುತ್ತಿದ್ದರು*! "Waste not, want not." ಎಂಬ ತತ್ವ ಪಾಲಿಸುತ್ತಿದ್ದಿರಬೇಕು. ಇಂದಿಗೂ ಈ ಆಧುನಿಕ ಕಾಲದಲ್ಲಿಯೂ ನಮ್ಮ ಸಂಕೇತಿ ಮಿತ್ರರೊಬ್ಬರು ಬೆಂಗಳೂರಿನಲ್ಲಿರುವ ತಮ್ಮ ಮನೆಯ ಹೊರಾಂಗಣದಲ್ಲಿ ಒಂದು ಅಡಿಕೆ ಮರ, ಅದಕ್ಕೆ ಹಬ್ಬಿರುವಂತೆ ಒಂದು ವಿಳ್ಳೆದೆಲೆ ಬಳ್ಳಿ, ಒಂದು ತೆಂಗಿನಮರ, ಒಂದು ನಿಂಬೆ ಗಿಡ, ಒಂದು ಬಾಳೆಗಿಡ ಇತ್ಯಾದಿ ವಿಶಿಷ್ಟವನ್ನೂ ಬೆಳೆದು ಪರಿಪೂರ್ಣ ಕೃಷಿಕರಾಗಿದ್ದಾರೆ. ಇವನ್ನು ಕೇಳಿದರೆ ಒಂದು ಹೆಮ್ಮೆಯ ವಿಷಯವೆನ್ನಿಸುತ್ತದೆ. ಈ *ಸ್ವಾವಲಂಬನೆಯಿಂದಾಗಿ ವ್ಯಕ್ತಿತ್ವವೇ ಮೇಲ್ಮಟ್ಟಕ್ಕೆ ಏರುತ್ತದೆ* ಎಂದು ಪ್ರತ್ಯೇಕ ಹೇಳಬೇಕಾದ್ದಿಲ್ಲ. ಹೀಗಾಗಿ ನಮ್ಮ ಪೂರ್ವಜರು ಜೀವನಮೌಲ್ಯಗಳನ್ನರಿತು ಈ ಎಲ್ಲ ಸದ್ಗುಣ ಸಮೂಹವನ್ನೂ ತಮ್ಮ ಜೀವನದಲ್ಲಿ ಅಳವಡಿಸಿಕೊಂಡು ರೂಢಿಸಿಕೊಂಡು ಬಂದು ಅವುಗಳಿಗೆ ಒಂದು ವಿಶಿಷ್ಟ ಸ್ಥಾನವನ್ನು ಕಲ್ಪಿಸಿಕೊಟ್ಟು ನಮ್ಮ ಇಂದಿನ ಪೀಳಿಗೆ ಹೆಮ್ಮೆಪಡುವಂತೆ ಜೀವನಾದರ್ಶಗಳ ನಿಧಿಯನ್ನು ಕೊಟ್ಟಿದ್ದಾರೆ.

ಆದರೆ ನಾವಾದರೋ ಆತ್ಮವಿಸ್ಮೃತರಾಗಿದ್ದೇವೆ. ಈ ಜೀವನಾದರ್ಶಗಳ ವೈಶಿಷ್ಟ್ಯಗಳನ್ನು ಮರೆತಿದ್ದೇವೆ ಎನ್ನುವ ಬದಲು ನಿರ್ಲಕ್ಷಿಸಿ ಕಡೆಗಣಿಸಿದ್ದೇವೆ ಎನ್ನಬಹುದು.

ಆ) ಸಂಕೇತಿ ಹವ್ಯಾಸಗಳು - ಸಮೀಕ್ಷೆ

ಪು: ೧೦-೧೧ *ಆರ್. ಕೆ. ಶ್ರೀನಿವಾಸಯ್ಯ*

(ಕೃಷಿಗೆ ಹೊಂದಿಕೊಂಡ ಜೀವನವ್ಯಾಪಾರ)

ಮೈಸೂರಿನ ಸುಪ್ರಸಿದ್ಧ ವೃದ್ಧ ಪಿತಾಮಹ ವೆಂಕಟಕೃಷ್ಣಯ್ಯನವರು ಸಂಕೇತಿಗಳ ವಿಷಯದಲ್ಲಿ ಬಹಳ ಗೌರವವನ್ನಿಟ್ಟಿದ್ದರು. ಸಂಕೇತಿಗಳು *ಕಷ್ಟಪಟ್ಟು ಕೆಲಸ ಮಾಡುವವರು*, ಸತ್ಯವಂತರು, ಸಾತ್ವಿಕರು, ನಂಬಿಕೆಗೆ ಅರ್ಹರು, ತೃಪ್ತರು, ಎಂಬುದು ಅವರ ಅಭಿಪ್ರಾಯ. 'ನೀನು *ಗೊದಮೊಟ್ಟೆಯೇನೋ?*' ಎಂದು ಸಂಕೇತಿಗಳನ್ನು ಪ್ರಶ್ನಿಸುತ್ತಿದ್ದರು. ಅವರ ಅಭಿಪ್ರಾಯ: 'ಸಂಕೇತಿಗಳೆಲ್ಲ ತೋಟಗಾರರು. ಎಲ್ಲರಿಗೂ ತೆಂಗಿನತೋಟವಿದೆ. ಕೋಪ ಬಂದಾಗ ಅದರ ಗೊದಮೊಟ್ಟೆಯನ್ನೇ ಆಯುಧವನ್ನಾಗಿ ಮಾಡಿಕೊಂಡು ಎದುರಿಸಿದವರನ್ನು ಹೊಡೆಯುತ್ತಿದ್ದರು' ಎಂಬುದಾಗಿ. ಸಂಕೇತಿಗಳಿಗೆ ಅನಾಥಾಲಯದ ಎಲ್ಲಾ ಜವಾಬ್ದಾರಿ ಕೆಲಸಗಳನ್ನು ವಹಿಸಿ, ತಮ್ಮ ಪತ್ರಿಕೋದ್ಯಮ ಕೆಲಸದಲ್ಲೂ ಅವರು ಪಾಲ್ಗೊಳ್ಳಲು ಅವಕಾಶವನ್ನು ಕಲ್ಪಿಸಿಕೊಟ್ಟು ಸಹಾಯ ಮಾಡಿದ ಮಹಾವ್ಯಕ್ತಿ.


ಕಾಯಿ ಒಟ್ಟಿದ ಅಟ್ಟ

ಸಂಕೇತಿಗಳು ಅನೇಕ ರೀತಿಯ ಹವ್ಯಾಸಗಳನ್ನಿಟ್ಟು ಕೊಂಡಿದ್ದರು. ತಮ್ಮ ನಿತ್ಯಕರ್ಮಗಳಾದ ನಂತರ ವೃಥಾ ಕಾಲಕಳೆಯುತ್ತಿರಲಿಲ್ಲ. ವಿರಾಮವಾದಾಗಲೆಲ್ಲಾ ಸೊಗಸಾದ *ಜನಿವಾರಗಳನ್ನು ತಯಾರಿಸುತ್ತಿದ್ದರು.* ಕೈಯಿಂದಲೇ ಮಾಡಿದ ಸಣ್ಣ ಎಳೆಯ ಜನಿವಾರ ಗಳನ್ನು ಮಾಡುವುದರಲ್ಲಿ ರುದ್ರಪಟ್ಟಣದಲ್ಲಿದ್ದ ಜೋಂಮಾಯನವರೂ, ಗಂಗಾಧರಮಾಯನವರೂ ಪ್ರಸಿದ್ಧರು. ಜಗಲಿ ಮೇಲೆ ಮಂದಲಿಗೆ ಮೇಲೆ ಕುಳಿತು ಈ ಪವಿತ್ರ ಕೆಲಸವನ್ನು ಮಾಡುತ್ತಿದ್ದುದನ್ನು ನಾನೇ ನೋಡಿದ್ದೇನೆ. . . . . . .

. . . . . ದೇಹದಾರ್ಢ್ಯಕ್ಕೆ ಹೆಸರುವಾಸಿಯಾದ ಸಂಕೇತಿಗಳು ಸಾಹಸಿಗಳು. ಗರಡಿ ಸಾಧನೆ ಮಾಡಿ ಕುಸ್ತಿ ಪಂದ್ಯಗಳಲ್ಲಿ ಜಯಗಳಿಸಿದವರನೇಕರಿದ್ದಾರೆ. ನಾ ಕಂಡಂತೆ ಮೈಸೂರಿನಲ್ಲಿ ನನ್ನ ಸ್ನೇಹಿತರೇ ಅನೇಕರು ಸಂಜೆ ವೇಳೆ ಗರಡಿಗೆ ಹೋಗಿ ಅಂಗಸಾಧನೆ ಮಾಡುತ್ತಿದ್ದರು. ನಮಗಿಂತ ಹಿರಿಯರ ಕಾಲದಲ್ಲಿ ಸಾಲಿಗ್ರಾಮದ ಕೋಟೆ ಮಲ್ಲಪ್ಪನವರನ್ನೂ ಈ ಸಂದರ್ಭದಲ್ಲಿ ಸ್ಮರಿಸಬೇಕಾದ್ದು ನ್ಯಾಯವಾಗಿದೆ. ಅವರು ಅದೇ ಕಾಲದಲ್ಲಿ ಮೈಸೂರು ಸರ್ಕಾರದ ಹಿರಿಯ ಅಧಿಕಾರಿಗಳಾದ *ನವರತ್ನ ರಾಮರಾಯರನ್ನು ಕುಸ್ತಿಯಲ್ಲಿ* ಸೋಲಿಸಿದ್ದರೆಂದು ಹೇಳುತ್ತಾರೆ. ಅವರಿಬ್ಬರೂ ಕಡೆಯವರೆಗೂ ಒಳ್ಳೆಯ ಸ್ನೇಹಿತರಾಗಿದ್ದರು.

ಊಟೋಪಚಾರ

ಸಂಕೇತಿಗಳು ಬಂದ *ಅತಿಥಿಗಳಿಗೆ ಉಪಚಾರ* ಮಾಡುವುದರಲ್ಲಿ ಪ್ರಸಿದ್ಧರು. ಹಿಂದೆ ಸಂಕೇತಿಗಳ ಮನೆಗೆ ಊಟಕ್ಕೆ ಬರಲು ಹೆದರುತ್ತಿದ್ದರಂತೆ. ಹಿಂದಿನ ಸಂಕೇತಿ ಹೆಂಗಸರು ಬಡಿಸುತ್ತಿದ್ದ ವೈಖರಿಯನ್ನು ನಾನು ಕೇಳಿದ್ದೇನೆ. ಇಡ್ಲಿಯನ್ನು ಬಡಿಸಿದರೆ ಅರ್ಧಡರ್ಜ಼ ಅಂದರೆ ಕಡಿಮೆ. ಅವರ ಇಡ್ಲಿ ಸುತ್ತಳತೆ ಈಗಿನ ಇಡ್ಲಿಗೆ ಹೋಲಿಸುವಂತಿರಲಿಲ್ಲ. ಸುತ್ತಳತೆ ಒಂದಡಿಗೂ ಹೆಚ್ಚಾಗಿರುತ್ತಿತ್ತೆನ್ನಬಹುದು. ಅಂಬೊಡೆಯನ್ನು ಮೊರದಲ್ಲಿ ತಂದು ಕೈಯಲ್ಲಿ ಎಲೆಗೆ ತಳ್ಳುತ್ತಿದ್ದರಂತೆ! ಒಬ್ಬಟ್ಟಿನ ಆಕಾರವೂ ದೊಡ್ಡದಾಗಿರುತ್ತಿತ್ತು. ಅದನ್ನು ಬಡಿಸುವಾಗಲೂ ಮೊದಲನೇ ಸಲವೇ ನಾಲ್ಕಾರು ಜೊತೆಗಳನ್ನು ಹಾಕುತ್ತಿದ್ದರಂತೆ! ಹುಳಿಯನ್ನವನ್ನು ಎರಡು ಕೈಗಳಿಂದಲೂ ಬಡಿಸುತ್ತಿದ್ದುದನ್ನು ನಾನೇ ನೋಡಿದ್ದೇನೆ. ಈಗಿನವರಿಗೆ ಇದೆಲ್ಲಾ ಕಥೆಯಂತಿದೆ. ಈಗ ಬಡಿಸಲು ಬಂದರೆ (ಅಡಿಗೆಯವರು ಅವರ ಸಹಾಯಕರು) "ಒಂದು ಮಾತ್ರ ಹಾಕಿ" ಅನ್ನುವುದು ಸಾಮಾನ್ಯವಾಗಿ ಹೋಗಿದೆ. ಆಗ ನಮ್ಮವರೇ ಅಡುಗೆ ಮಾಡುತ್ತಿದ್ದರು. ಊಟ ಮಾಡುವವರ ಮಾತನ್ನು ಕೇಳಿ ಬಡಿಸುತ್ತಿರಲಿಲ್ಲ. ಅವರು *ಬಡಿಸಿದಷ್ಟು ತಿನ್ನಲೇಬೇಕಾಗಿದ್ದ ಕಾಲ.* ಏನನ್ನೂ ಚೆಲ್ಲಬಾರದೆಂದು ಹೆದರಿಸುತ್ತಿದ್ದರು. *ಅಷ್ಟೇ ಕಷ್ಟಪಟ್ಟು ತೋಟಗದ್ದೆಗಳಲ್ಲಿ ಕೆಲಸ* ಮಾಡುತ್ತಿದ್ದರಾದ್ದರಿಂದ ಅವರಿಗೆ ಎಷ್ಟು ತಿಂದರೂ ಜೀರ್ಣಿಸಿಕೊಳ್ಳುವ ಶಕ್ತಿಯಿತ್ತು. ಈಗಲೂ ಕೆಲವರು ಸಂಕೇತಿಗಳ ಮನೆಗೆ ಊಟಕ್ಕೆ ಬರಲು ಹೆದರುತ್ತಾರೆ. ನಾವೂ ಮಾರ್ಪಾಡಾಗಿರುವುದು ಅವರಿಗೆ ತಿಳಿಯದು. . . . ಸಮಯ ಬಿದ್ದರೆ *ಸ್ತ್ರೀಯರು ತೋಟಕ್ಕೂ ಹೋಗಿ* ತೆಂಗಿನಕಾಯಿ ಮೊದಲಾದವುಗಳನ್ನು ತರುತ್ತಿದ್ದರು. ಮನೆಯಲ್ಲಿ *ಎಲ್ಲರೂ ದನಕರುಗಳನ್ನು ಕಟ್ಟಿದ್ದರು.* ಅವುಗಳ ಸೇವೆ, ಮನೆಗೆಲಸ, ಅಡುಗೆ ಎಲ್ಲವನ್ನೂ ಮನೆಯವರೇ ಯಾರ ಸಹಾಯವೂ ಇಲ್ಲದೆ ಮಾಡಿಕೊಳ್ಳುತ್ತಿದ್ದರು. ಇದು ಹೆಮ್ಮೆಯ ವಿಷಯ.

೬. ಅವರವರ ಮಾತಿನಲಿ

(ಡಾ. ಬಿ.ಎಸ್. ಪ್ರಣತಾರ್ತಿಹರನ್ ಸಂಕೇತಿ ಸಮುದಾಯದ ಬಗೆಗಿನ ತಮ್ಮ ಸಂಶೋಧನೆಯನ್ನು ೧೯೮೩ರಲ್ಲಿ ಪ್ರಾರಂಭಿಸಿದರು. ತಮ್ಮ ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಮಾಡಿಕೊಂಡ ಟಿಪ್ಪಣಿಗಳ ಆಯ್ದ ಭಾಗಗಳನ್ನು ಇಲ್ಲಿ ಒದಗಿಸಿದ್ದಾರೆ. ಬೇರೆ ಬೇರೆ ಸಂದರ್ಭಗಳಲ್ಲಿ ಕಂಡು ಕೇಳಿದ ಬಿಡಿಮಾಹಿತಿ ಇಲ್ಲಿದೆ. ಇವೆಲ್ಲ ಅಯಾಚಿತವಾಗಿ ಹೊರಟ ಉದ್ಗಾರಗಳು, ಪ್ರತಿಕ್ರಿಯೆಗಳು, ವಿಶ್ಲೇಷಣೆಗಳು ಅಥವಾ ಲೋಕಾಭಿರಾಮದ ಸಂಭಾಷಣೆಗಳು. ಇಂಥ ಸಹಜವಾದ ಮತ್ತು ಅಪ್ರಜ್ಞಾಪೂರ್ವಕವಾಗಿ ಹೊಮ್ಮಿದ ಮಾತುಗಳಲ್ಲಿ ಎಷ್ಟು ಮೌಲಿಕ ಮಾಹಿತಿ ತುಂಬಿದೆ ಎಂಬುದನ್ನು ಗಮನಿಸಬಹುದು.)

ನಮ್ಮ ಗುರುಗಳಾದ ಚಾಹಳ್ಳಿ ವೇ||ಬ್ರ||ಶ್ರೀ ಕೇಶವಶಾಸ್ತ್ರಿಗಳು *ವೇದಾಂತಪಾಠ ಕಲಿತದ್ದೇ ಹಾಗೆ* - ತೋಟಕ್ಕೆ ಹೋಗುವಾಗ ಗುರುಗಳು ಪಾಠ ಹೇಳುತ್ತಾ ಹೋಗುತ್ತಿದ್ದರು, ಶಿಷ್ಯರು ಹಿಂದಿನಿಂದ ಕೇಳಿ ಕಲಿಯುತ್ತಾ ಹೋಗುತ್ತಿದ್ದರು.

-ವ್ಯಾಕರಣ ವಿದ್ವಾನ್ ಸುಬ್ಬರಾಯಶಾಸ್ತ್ರಿ, ಬಸವಾಪಟ್ಟಣ
(ಅದು ೧೫೦ ವರ್ಷಗಳ ಹಿಂದಿನ ಚಿತ್ರ)

ತಮ್ಮ ಸರಕುಗಳನ್ನು ಸಂತೆಗಳಲ್ಲಿ ಚಿಲ್ಲರೆಯಾಗಿ ಮಾರಿಯೇ ಜೀವನ ಮಾಡೋರು. ಬಾಳೆಹಣ್ಣು, ವೀಳೇದೆಲೆ, ಅಡಿಕೆ ಗೋಟು, ತೆಂಗಿನಕಾಯಿ- ಇವನ್ನು *ಸಂತೇಲಿ ಮಾರದೆ ಇದ್ದೋರೇ ಇರಲಿಲ್ಲ*. ಹೀಗೆ ಮಾರಿ ಬಂದ ದುಡ್ಡಲ್ಲಿ ಸಂತೆ ಸಾಮಾನು ತೊಗೊಂಡು ಬರೋರು. ಜತೆಗೆ ಒಂದು ಸೇರು ಹುರಿಗಡಲೆ, ಒಂದಚ್ಚು ಬೆಲ್ಲ ತೊಗೊಂಡು ಬಾಯಿಗೆ ಹಾಕಿಕೊಂಡು ಸಂಜೆ ಹತ್ತಾರು ಮೈಲಿ ದೂರದ ತಮ್ಮ ಊರಿಗೆ ನಡೆದು ಹೋಗುತ್ತಿದ್ದರು. ಅಥವಾ ಸೌತೆಕಾಯಿ ತಿನ್ನುತ್ತಿದ್ದರು. ಸಂಜೆ ಮನೆಗೆ ಬಂದು ಸ್ನಾನ ಮಾಡಿ ಸಂಧ್ಯಾವಂದನೆ ಮಾಡೋರು.

******



ಗೊನೆಯಿಂದ ಅಡಿಕೆ ಬಿಡಿಸುತ್ತಿರುವ ರೈತ

ಮಳೆ ನಮ್ಮಲ್ಲಿ ಬೀಳದೆ ಮುಂದಕ್ಕೆ ಹೋದಾಗ 'ಹಂಗಾಮಿ ಆಯ್ತು' ಅನ್ನುತ್ತೇವೆ. ಮಳೆಗಾಲದಲ್ಲಿ ಆಕಾಶ ನೋಡಕ್ಕೆ ಶುರು. ಪೂರ್ವ ಅಥವಾ ಈಶಾನ್ಯದಲ್ಲಿ ಮೋಡ ಇದ್ದರೆ ಮಳೆ ಬರುತ್ತೆ ಅಂತ. ಮೋಡ, ಮಿಂಚು, ಧಗೆ ನೋಡಿಯೇ ಮಳೆ ಬರೋದನ್ನ ಅಂದಾಜು ಮಾಡುತೀವಿ. ಮಿಂಚಿಕೊಂಡು ಏಳುತ್ತಿದ್ದರೆ ಖಂಡಿತ ಮಳೆ; ಗಾಳಿ ಮೇಲು ಮಟ್ಟದಲ್ಲಿ ಬೀಸುತ್ತೆ. ನೆಲಕಚ್ಚಿ ಬೀಸಿದರೆ 'ನೆಲತ ಅಮುಕಾಂಡಿರಂದ್ ಹತ್ತ ನೆಲತ ಗುಡಿಸೀನಪ್ಡಿ' (ನೆಲವನ್ನು ಅಮುಕುತ್ತಿರುತ್ತದೆ ತೀರಾ ನೆಲವನ್ನು ಗುಡಿಸಿದ ಹಾಗೆ). ಆಗ ಗ್ಯಾರಂಟಿ ಮಳೆ. ಮಳೆ ಬೀಳುತ್ತಿರೋ 'ಜೋಲ' ನೋಡಿ, 'ಇಂಥ ಕಡೆ, ಇಷ್ಟು ದೂರದಲ್ಲಿ ಮಳೆ ಆಗುತ್ತಿದೆ' ಅಂತ ಹೇಳಬಹುದು. 'ಬುರುಡೆಖಾತ್' (ಬಹಳ ಗಾಳಿ) ಇದ್ದರೆ 'ಮಳೇಯ ವರ ಒಟ್ಟರದಿಲ್ಲ' (ಮಳೆ ಬರಲು ಬಿಡುವುದಿಲ್ಲ). ಮಳೆ ಸ್ವಲ್ಪ ಬಿದ್ದಮೇಲೆ ಜೋರು ಗಾಳಿ ಬಂದರೆ ಮಳೆ ಹೊರಟುಹೋಗುತ್ತೆ.

******

ಹಸುಗಳಿಗೆ ಗಂಗೆ, ಗೋದಾವರಿ, ಕಪಿಲೆ ಅಂತೆಲ್ಲ ಹೆಸರಿಡುತೀವಿ. ಕೊಳ್ಳುವಾಗ ಸುಳಿ ನೋಡುತೀವಿ. ಸಿಡುಗಾಲು ಇರಬಾರದು. 'ಅಳೂಮಾಲ್' (ಎಳೆ ಮಾಲು) ಅಂತ ೨-೪ ಹಲ್ಲಿನ ಹಸು ತರುತೀವಿ.

ಪಶುಪಾಲನೆಗೆ ಸಂಬಂಧಿಸಿದ ಹಾಗೆ *ಬ್ರಾಹ್ಮಣೇತರರ ಪದಗಳನ್ನೇ ಬಹಳ ಬಳಸ್ತೀವಿ.* ಅವರ ಜತೆ ವ್ಯವಹಾರ ಮಾಡುವಾಗ ಅವರ ಭಾಷೆಯಲ್ಲೇ ವ್ಯವಹಾರ ಮಾಡಬೇಕಾಯಿತು. ನಮ್ಮ ಪದಗಳು ಮರೆತವು. ಬಹಳ ಬಳಕೆಯವು ಮಾತ್ರ ಉಳಿದುಕೊಂಡವು.

******

ಮೋಡದ ಬಣ್ಣ ನೋಡಿ ಮಳೆ ಬರುತ್ತೋ ಇಲ್ಲವೋ ಅಂತ ಹೇಳಬಹುದು. ಪಂಚಾಂಗ ನೋಡಿ, ಮಳೆ ಯಾವ ಲಗ್ನದಲ್ಲಿ ಹುಟ್ಟುತ್ತೆ ಅಂತ ತಿಳಿಕೊಳ್ಳತೀವಿ. 'ಆದ್ರಿ ಮಳೆ ಗುಡುಗಿದರೆ ಆರು ಮಳೆ ಹುಯ್ತದೆ'; ಹುಸೇನ್ ಮಳೆ (ಪುಷ್ಯ) - ಯಾವ ಮಳೆ ಹುಸಿದರೂ ಇದು ಹುಸಿಯಲ್ಲ ಅಂತ 'ಹುಸೇನ್ ಮಳೆ'; 'ಮಖೆ ಹೂದರೆ ಮೊಗೆ, ಹೋದರೆ ಹೊಗೆ' - ಅದು ಹುಯ್ದರೆ ಎಲ್ಲಿ ನಿಂತರೆ ಅಲ್ಲೇ ನೀರು ತುಂಬಿಕೊಳ್ಳಬಹುದು, ಇಲ್ಲದಿದ್ದರೆ ಬರೀ ಹೊಗೆ ಹೊಗೆಯಾಗಿ ಹೋಗುತ್ತೆ. ಕಾಮನಬಿಲ್ಲು ಪಶ್ಚಿಮದಿಕ್ಕಿನಲ್ಲಿ ಬಂದರೆ ಮಳೆ ಬರುತ್ತೆ; ಪೂರ್ವದಲ್ಲಿ ಬಂದರೆ ಮಳೆ ಹೋಗುತ್ತೆ ಅನ್ನುವುದು ನಂಬಿಕೆ. ಮಳೆ ಬಾರದಾಗ ರುದ್ರಾಭಿಷೇಕ (ಸೋಮಸೂತ್ರ ಕಟ್ಟುವುದು) ಮಾಡುತ್ತೇವೆ. ಮಳೆ ಬಂದಾಗ (ರಥೋತ್ಸವದ ಅಂಗವಾಗಿ) ತೆಪ್ಪೋತ್ಸವ ನಡೆಯುತ್ತೆ.

(ವಾಸು: ಸೋಮನಹಳ್ಳಿಯಿಂದ ಬಸವಾಪಟ್ಟಣಕ್ಕೆ ವಲಸೆ ಬಂದವರು)

- ಬತ್ತ ಬಡಿದ ಮೇಲೆ *ರಾಶಿಪೂಜೆ ಮಾಡಿ ಮಲ್ಲಯ್ಯಂಗೆ ಕೈ ಮುಗಿಯೋದು.* ಬ್ರಾಹ್ಮಣೇತರರೂ ಅಲ್ಲಿಗೇ ಕೈ ಮುಗಿಯೋದು.

- ಹಿಂದೆ ರೋಗವೇ ಇರಲಿಲ್ಲ; ರಾಸಾಯನಿಕ ಗೊಬ್ಬರ ಹಾಕಿದ ಮೇಲೆ ಎಲ್ಲ ಶುರು ಆಯಿತು.

- ಬೂದುಗುಂಬಳ ಹಬ್ಬಿಸಿದರೆ ಮಡಿಕೆ ಸಿಕ್ಕಿಸುತೀವಿ.

- ಅಣಬೆರೋಗ ಇತ್ಯಾದಿ ಬರುತ್ತೆ, ಹೋಗುತ್ತೆ; ಈವರೆಗೆ ಅದಕ್ಕೆ ಯಾರೂ ಔಷಧಿ ಕಂಡಿಲ್ಲ. ಬಾಳೆಗೂ ಅಷ್ಟೆ, ಈಗಲೇ ರೋಗ ಬಂದಿರೋದು.

- 'ನೊಜೆಹಡ್ಲ' ತೋಟ ಮಾಡಲು ತೋಟದ ಸುತ್ತಲೂ ದೊಡ್ಡದಾಗಿ ಒಂದು ಕಾಲುವೆ ತೆಗಿಯೋದು; ಕಾಲುವೆ ಮಣ್ಣು ಸುತ್ತಲೂ 'ಓರ್‌ಹೋಡರದ್' (ಒಟ್ಟುಹಾಕುವುದು); ಆ ಮಣ್ಣಿನ ಮೇಲೆ ಬೇಲಿ ಏಳಿಸೋದು; ಬೇಲಿ ಬಂದೂಬಸ್ತ್ ಆದ ಮೇಲೆ ಒಳಗೆ ಗುಂಡಿ ತೆಗೆದು ಬಾಳೆ ಕಂದು ನೆಡೋದು; ಅದರ ನೆರಳಾದ ಮೇಲೆ ಅಡಿಕೆ ಸಸಿ ನೆಡೋದು. ಜೊತೆಗೇ 'ಪಾರಿವಾಣತ್ತೆ ಕದಬ ನೆಟ್ಟ್‌ಕಂಡ್ ವೆತ್ಲೆ ಅಳತರದ್' (ಪಾರಿವಾಣದ ತೀನು ನೆಟ್ಟುಕೊಂಡು ವೀಳೇದೆಲೆ ಏಳಿಸೋದು); ಕೆಲವೇಳೆ 'ವಾಳ್ಳೇಯೇ ಕವ್ತ್‌ಕಂಡಿರ್ನ್ಲು' (ಬಾಳೇನೇ ಕವಿದುಕೊಂಡಿರೋದು); ತೋಟದ ಸುತ್ತ ಬೇಲಿ ಅಂಚಲ್ಲಿ 'ತಳಲ ಊರರದ್ ಉಂಡು' (ತಳಲು ಊರುವುದು ಉಂಟು); ತೆಂಗಿನ ಮಕ್ಕಿ ತೋಟದ ಮುಂದೆ, ಹಿಂದೆ; 'ಕಸಿ ಮಾಮರು, ಪಿಲ್ಲಾಗಿಡು' (ಕಸಿ ಮಾವಿನಮರ, ಹಲಸಿನಗಿಡ) ಅಂಥದ್ದು ಹಾಕೋದು. ಯಾವ ಪೂಜೇನೂ ಇಲ್ಲ.

- ಇದು ಸ್ಥಿರವಾದದ್ದು. *ಆದ್ದರಿಂದ ಮೊದಲು ತೋಟ ಸಿದ್ಧಮಾಡಿ ಇಟ್ಟುಕೊಳ್ಳುತ್ತಿದ್ದರು. ಆಮೇಲೆ ವೈದಿಕ ವೃತ್ತಿ ಇದ್ದರೆ ಹೋಗೋರು* ಅಷ್ಟೆ. ಅಲ್ಲದೆ ಎಲ್ಲರೂ ಪುರೋಹಿತರಲ್ಲ. ವೈದಿಕರು ಬಹಳ ಜನ ಆದ್ದರಿಂದ ಆದಾಯ ನಗಣ್ಯವಾಗಿರುತ್ತಿತ್ತು.

- ಮತ್ತೂರು ರಾಮಭದ್ರಶಾಸ್ತ್ರಿಗಳು ಬೆಂಗಳೂರಲ್ಲಿ ಮಂಗಳಗೌರಿ ಪೂಜೆ ಮಾಡಿಸಿದರು. ಅವರಿಗೆ ಕರ್ತೃ ೫೦ ರೂಪಾಯಿ 'ವೆತ್ಲ್‌ಪಾಕ್' (ಎಲೆ ಅಡಿಕೆ) ಕೊಟ್ಟರು. 'ಅತ್ಥಾದ್ ಇದ್?' (ಏನಿದು?) ೫ ರೂ. ಕೊಟ್ಟರೆ ಸಾಕು. ಇನ್ನೊಂದು ಸಾರಿ ಹೀಗೆ ಕೊಟ್ಟರೆ ನಾನು ಬರೋದಿಲ್ಲ ಎಂದು ಹಣ ವಾಪಸು ಮಾಡಿದರು. ಹೀಗೆ ನಗರಗಳಲ್ಲಿ . . . ಅಂದರೆ ಜನರ ಆದಾಯದ ದೃಷ್ಟಿಯಿಂದ ವ್ಯವಸಾಯಕ್ಕೇ ಮೊದಲ ಸ್ಥಾನ.

- ವ್ಯವಸಾಯ ಮಾಡಬಾರದು ಅಂತ ಇಲ್ಲ. *ನಿತ್ಯಕರ್ಮಕ್ಕೆ ಲೋಪ ಇಲ್ಲದ ಹಾಗೆ ಮಾಡಿದರೆ ಯಾಕಾಗಲ್ಲ?* ವೇದಾಧ್ಯಯನವೇ ಮುಖ್ಯ ವೃತ್ತಿ. ಅದರ ಜೊತೇಲಿ ಇದೂ ಆಗುತ್ತೆ ಅಷ್ಟೆ.

- ಗುರು, ಶಿಷ್ಯ ಇಬ್ಬರೂ ತೋಟದಲ್ಲಿ ಒಟ್ಟಿಗೆ 'ಅಗತೆ' ಮಾಡುತ್ತಿರೋರು. ಒಬ್ಬರು ವೇದ ಹೇಳಿಕೊಡೋರು, ಇನ್ನೊಬ್ಬರು ಹೇಳಿಸಿಕೊಳ್ಳೋರು. ಮೈಸೂರಿನ ಪ್ರಸಿದ್ಧ ದ್ರಾವಿಡ ವಿದ್ವಾಂಸ ಅಯ್ಯಾಘನಪಾಠಿಗಳು ಇದನ್ನು *'ವಾಳಾಗಡ್ಡೆ ಅಧ್ಯಯನ'* ಎನ್ನುತ್ತಿದ್ದರು. ಸಂಕೇತಿಗಳ ಅಧ್ಯಯನ ಕ್ರಮವನ್ನು ಹೊಗಳಲೂ ಹೀಗೆ ಹೇಳುತ್ತಿದ್ದರು, ತಿರಸ್ಕಾರವಾಗಿಯೂ ಹೇಳುತ್ತಿದ್ದರು.

ಕೃಷ್ಣಪ್ಪ, ಶಾನುಭೋಗರು, ಅಗ್ರಹಾರ

- ಭರಣಿ (ಮಳೆ) ಬಂದೇ ಬರುತ್ತೆ. ಮೃಗಶಿರೆ ಮಳೇಗೆ ಮಿಕ್ಕರಾಗಿ (ನೆಡದೇ ಇರೋ ರಾಗೀನ ನೆಡೆಸೇ ನೆಡೆಸುತ್ತೆ), ಆಶ್ಲೇಷ ಮಳೆ ಹುರುಳೀಕಾಳು ಬಿತ್ತಿಸುತ್ತೆ; ಉತ್ತರೆ, ಹಸ್ತ, ಚಿತ್ತ: ಕೆರೆಕಟ್ಟೆಗೆ ನೀರು ಗ್ಯಾರಂಟಿ; ವಿಶಾಖೆ ಮಳೆ 'ಪನಿಚೇ ಪನಿಯಂದ್' (ಹನಿತೇ ಹನಿಯುತ್ತೆ). ಗಿಡದ ಹುಳು ಸಾಯುತ್ತೆ; ಅನುರಾಧ ಮಳೇಂದ ಮುಂದಕ್ಕೆ ಅನುಮಾನ; ಅಶ್ವಿನಿ, ರೇವತಿ ಎಲ್ಲಾ ಅನುಮಾನ'

- ಸೋನೆ ಮಲಸೀಮೇಗೆ ಗ್ಯಾರಂಟಿ; ಪೂರ್ವಕ್ಕೆ ಇಲ್ಲ. ಪಡವಲ ಸೋನೆ ಪಶ್ಚಿಮ ಮಲೆನಾಡಿಗೆ, ಮೂಡಲಸೋನೆ ಬಯಲುಸೀಮೆಗೆ - ಮಂಡ್ಯದವರೆಗೆ. ನಮಗೆ ಪಡುವಲ ಸೋನೇನೇ. ಮೂಡಲ ಸೋನೇನೂ ಕೆಲವೊಮ್ಮೆ ಆಗುತ್ತೆ. ಹೀಗೆ, ಎರಡು ಮಳೆಗೂ ಈಡಾಗೋ ಉತ್ತಮ 'ಪಳ್ಳವಶಿ' (ಹಳ್ಳಹಸಿ) ಜಾಗ ಆರಿಸಿಕೊಂಡಿದಾರೆ.

- ಕೆರೆ, ನದಿ ತುಂಬಿದಾಗ ಎಲ್ಲ ಹೋಗಿ ಗಂಗೆ ಪೂಜೆ ಮಾಡಿ 'ಮೊರತಜೊತೆ ಉಡಡ' (ಮೊರಬಾಗಿನ ಬಿಡುತ್ತಾರೆ).

ನಾರಾಯಣಪ್ಪ (ಗಿಣಿ ಮಾವಯ್ಯ, ಮರಿತಮ್ಮನಹಳ್ಳಿ), ಹಾಸನ



ಹಳ್ಳಿಯ ಹೆಣ್ಣುಮಕ್ಕಳ ನಾಲ್ಕು ತಲೆಮಾರು : ಕರ್ನಾಟಕ

ಹಿಂದೆ ಹಿಂಗಾರು ಮುಂಗಾರು *ಎರಡು ಮಳೆಯೂ ಚೆನ್ನಾಗಿ ಆಗುತ್ತಿದ್ದುದರಿಂದ ಈ ಊರನ್ನು ಆರಿಸಿದರು.* ಆದರೆ ಈಗ ಇದು ಬರದ ಜಾಗ. ಹೇಮಾವತಿ, ಕಾವೇರಿ ಎರಡೂ ಹತ್ತು ಮೈಲಿ ದೂರದಲ್ಲಿದೆ. ತುಂಬಾ ಎತ್ತರದ ಊರು.

ರಾಮಚಂದ್ರ, ಹಳ್ಳಿಮೈಸೂರು

ಅಡಿಕೆಗೆ ಚಿಲಕುಂದ ಕ್ಷೇತ್ರ. ಒಳ್ಳೆಯ ತೂಕ ಬರುತ್ತೆ. ವೀಳೆ ಕೂಡ ಪಶ್ಚಿಮದ ಗಾಳಿಯಿಂದ ಚೆನ್ನಾಗಿ ಬರುತ್ತೆ.

ಅನಂತಕೃಷ್ಣ, ಬೆಟ್ಟದಪುರ

ಎರಡು ಬೆಟ್ಟದ ಮಧ್ಯೆ *ತೋಟ ಮಾಡಲು ಅನುಕೂಲವಾದ ಜಾಗ ಇತ್ತು*. ಹೊಳೆ ಇಲ್ಲದಿದ್ದರೂ ಬ್ರಾಹ್ಮಣರಿಗೆ ಅಗತ್ಯವಾದ ಕದಳಿಪಂಚಕವನ್ನು ಬೆಳೆಯಲು ಅದು ಯೋಗ್ಯವಾದ ಜಾಗವಾಗಿತ್ತು. ಹೊರಕೋಟೆ ಮತ್ತು ಒಳಕೋಟೆ ಗಳಲ್ಲಿ ನೆಲೆಸಿದರು.

ಅನಂತರಾಮಯ್ಯ, ಬೆಟ್ಟದಪುರ

- ಉತ್ತರೆ, ಹಸ್ತ, ಚಿತ್ತ ಉತ್ತಮೋತ್ತಮವಾದ ಗಂಡು ಮಳೆಗಳು. ಬಂದೇ ಬರುತ್ತೆ. ಕೆರೆಕಟ್ಟೆ ಕೋಡಿ ಗ್ಯಾರಂಟಿ. ಮುಂಗಾರು: ಅಶ್ವಿನಿ, ಭರಣಿ ಗ್ಯಾರಂಟಿ.
- ಕಾಮನಬಿಲ್ಲು ಸೂರ್‍ಯಂಗೆ ಅಭಿಮುಖವಾಗಿ ಬಂದರೆ ಮಳೆ ಬರುತ್ತೆ ಅಂತ. ಮಳೆ ಬಾರದಾಗ ಒಡ್ಡಿದರೆ ಬರುತ್ತೆ, ಮಳೆ ಬರುವಾಗ ಒಡ್ಡಿದರೆ 'ವರರಮಳ ಪೋಚು' (ಬರುವ ಮಳೆ ಹೋಯಿತು) ಅಂತ.

ಚಂದ್ರಶೇಖರ, ಅಗ್ರಹಾರ

ತೋಟಕ್ಕೆ ಹೋದರೆ ಬಾಗಿಲಲ್ಲಿ ನಿಂತು, 'ಯಾರಾದರೂ ಇದ್ದರೆ ಹೊರಟು ಹೋಗೀಪ್ಪಾ' ಎಂದು ಕೂಗುತ್ತಿದ್ದರು ಅಥವಾ ಚಪ್ಪಾಳೆ ತಟ್ಟುತ್ತಿದ್ದರು. ಕಳ್ಳರು ಯಾರಾದರೂ ಇದ್ದರೆ ಹೋಗಲಿ ಎನ್ನುವುದು ಉದ್ದೇಶ. ಉದಾಹರಣೆಗೆ ಸೋಮಯಾಜಿಗಳು.

ವೇ||ಬ್ರ|| ಶ್ರೀ (ಗೋವಿಂದ) ಕೇಶವ ಉಪಾಧ್ಯಾಯ, ಬಸವಾಪಟ್ಟಣ

- ಮಳೆಗಾಲ ಶುರುವಾದಾಗ ಕಪ್ಪುಗಳನ್ನು ಹೆರೆದು (ಪಿಳ್ಳೆ ಸೋಸಿ), ನೀರು ನಿಂತು ತೋಟ ಚೌಳಾಗುವುದನ್ನು ತಡೆಗಟ್ಟಬೇಕು. ಮಳೆ ಕಡಮೆಯಾದಾಗ ಕಳೆ ತೆಗೆದು ಸುತ್ತಲಿನ ಬೇಲಿಯನ್ನು ಭದ್ರ ಮಾಡಬೇಕು.

- ಹಿಂದೆ ಸಂಕೇತಿಗಳು ಬಹಳ *ಉಪಾಯದಿಂದ (ಬಡತನದಲ್ಲೂ) ಜೀವನ*ಮಾಡುತ್ತಿದ್ದರು. ಚೀಲವನ್ನು ಕೊಳ್ಳಲೂ ಹಣವಿರುತ್ತಿರಲಿಲ್ಲ. ಆದ್ದರಿಂದ ಈಚಲು ಚಾಪೆಯಲ್ಲೇ ಪೆಟ್ಟೆಕಟ್ಟಿ ಅಡಿಕೆ ತುಂಬುತ್ತಿದ್ದರು. ಬೇರೆ ಸಂಗ್ರಹ ಸಾಮಗ್ರಿಗಳಿಂದಾಗಿ ಅಡಿಕೆಯ ಬಣ್ಣ ಹೋಗುವಂತೆ ಇದರಲ್ಲಿ ಹೋಗುತ್ತಿರಲಿಲ್ಲ. ಒಂದು ಚಾಪೆಯ ಪೆಟ್ಟೆಯಲ್ಲಿ ೨೫-೩೦ ಮಣ ಅಡಿಕೆ ತುಂಬಿಡುತ್ತಿದ್ದರು.

- 'ಪಾಯಿಂದುಳ್ಳೆ ಮೂಡೆ ಕಟ್ಟರದ್: ತಗರಿಕಾಳ್ ಮೂಡ, ಹುರಳಿಕಾಳ್ ಮೂಡ' (ಚಾಪೆಯಲ್ಲಿ ಪೆಟ್ಟೆ ಕಟ್ಟುವುದು: ತಗರಿಕಾಳು ಪೆಟ್ಟೆ, ಹುರುಳಿಕಾಳು ಪೆಟ್ಟೆ) ಕೆಡೋದಿಲ್ಲ. ಬಳಸುವಾಗ ಮೊಳೆ ಕಟ್ಕೋದು. ಮನೆ ಮೂರು ಸುತ್ತಲೂ ಗುಡಾಣಗಳು: ಮೆಣಸಿನಪುಡಿ ಇತ್ಯಾದಿಗಳದ್ದು.

ಅಮ್ಮಕ್ಕಯ್ಯ, *ಬಸವಾಪಟ್ಟಣ*

ಬೆಂಗಳೂರಿನಲ್ಲಿರುವ, ಹರವೆಯ ಶ್ರೀ ಎಚ್.ವಿ. ಸೂರ್ಯನಾರಾಯಣರಾವ್ ಅವರು *ನೂತನ ಮಾದರಿಯ ಎತ್ತಿನಬಂಡಿಯನ್ನು* ವಿನ್ಯಾಸಗೊಳಿಸಿದ್ದಾರೆ. ಇದರ ಉದ್ಘಾಟನೆಯನ್ನು ಮತ್ತು ಪ್ರದರ್ಶನವನ್ನು ಕರ್ನಾಟಕ ವಿಧಾನಪರಿಷತ್ತಿನ ಸಭಾಧ್ಯಕ್ಷಿಣಿ ಶ್ರೀಮತಿ ಬಸವರಾಜೇಶ್ವರಿಯವರ ಅಧ್ಯಕ್ಷತೆಯಲ್ಲಿ ೪.೭.೮೧ರಂದು ಬೆಂಗಳೂರಿನಲ್ಲಿ ನೆರವೇರಿಸಲಾಯ್ತು.

ಎಂ. ನರಸಿಂಹನ್, ಬೆಂಗಳೂರು

... ಆಗ ಮಹಾರಾಜರು ಅವರ ವೃತ್ತಿಯ ಬಗ್ಗೆ ವಿಚಾರಿಸಿದರು. ತೋಟದ ವ್ಯವಸಾಯವನ್ನೇ ಆರಿಸಲು ವಿಶೇಷವೇನೆಂದು ಮಹಾರಾಜರು ಪ್ರಶ್ನಿಸಿದಾಗ *ನೇಗಿಲು ಮೂಲಕ ಪ್ರಾಣಿಗಳಿಗೆ ಹಿಂಸೆ* ಕೊಡುವ ಉಳುಮೆ ಮಾಡಿ ಧಾನ್ಯವನ್ನು ಬೆಳೆಯುವುದು ಶಾಸ್ತ್ರನಿಷಿದ್ಧವಾದುದರಿಂದ ಅಡಿಕೆ, ತೆಂಗು, ವೀಳೆಯದೆಲೆ *ತೋಟಗಳನ್ನು ಸ್ವಂತ ದುಡಿತದಿಂದ ಮಾಡಿ* ಅದರಲ್ಲಿ ಬಂದ ಉತ್ಪತ್ತಿಯಿಂದ ಜೀವನವನ್ನು ಮಾಡಿಕೊಂಡು ವೇದಶಾಸ್ತ್ರಾಭ್ಯಾಸ ನಿರತರಾಗಿ ಆದರ್ಶಪ್ರಾಯರಾಗಿ ಬದುಕುವುದೇ ಉದ್ದೇಶವಾಗಿದ್ದುದರಿಂದಲೂ ಆರ್ಷೇಯವಾಗಿ ಈ ವೃತ್ತಿ ತಮಗೆ ಬಂದುದರಿಂದಲೂ ಸಂಕೇತಿ ಜನಾಂಗವು ಇದನ್ನೇ ರೂಢಿಸಿಕೊಂಡಿತೆಂದು ತಿಳಿಸಿದರು...

ನೆನಪಿನ ಚಿತ್ರಶಾಲೆ-೩, ***ಪ್ರೊ. ಕೆ.ಎಸ್. ಕೃಷ್ಣಮೂರ್ತಿ, ಮೈಸೂರು***
ಸಂಕೇತಿ ಸತ್ಯಕಾಮ, ಮಾರ್ಚ್-ಏಪ್ರಿಲ್ ೧೯೭೬

ಅವರ ದೈಹಿಕ ಶ್ರಮಕ್ಕೆ ಸಾಟಿ ಇಲ್ಲ. ಅವರ ಮುಂದೆ ಯಾರೂ (ವ್ಯವಸಾಯ) ಮಾಡಕ್ಕಾಗಲ್ಲ ಬಿಡಿ. ವ್ಯವಸಾಯ ಮತ್ತು ವೈದಿಕತೆಯ ಅವರ ಸಮನ್ವಯ ನನಗೆ ಇಷ್ಟ. ಅವರ ಜೀವನರಸಿಕತೆಯೂ ದೊಡ್ಡದು.

- ಮುಖ್ಯಮಂತ್ರಿಗಳಾಗಿದ್ದ ಶ್ರೀ ಡಿ. ದೇವರಾಜ ಅರಸು, ಹಾಸನದಲ್ಲಿ ಮಾಡಿದ ಸಾರ್ವಜನಿಕ ಭಾಷಣದಲ್ಲಿ

- *ತೋಟದಲ್ಲಿ ಕಡಮೆ ಜಾಗದಲ್ಲಿ ಹೆಚ್ಚು ಲಾಭ* ಪಡೆಯುವಂತೆ ಬೆಳೆ ತೆಗೆಯುವ technique ಸಂಕೇತಿಗಳಿಗೆ ಗೊತ್ತಿತ್ತು. ಕಾಫಿ ತೋಟವನ್ನೇ ಹೋಲಿಸಿ. ಅಡಕೆ ತೋಟದ್ದೇ ಹೆಚ್ಚು ಆದಾಯ. ಹೆಚ್ಚು ತೊಂದರೆ ಇಲ್ಲ. ನಮಗೇನೂ ಲಕ್ಷುರಿ ಬೇಡ. ಬದುಕೋಕೆ ಅರ್ಧ ಎಕರೆ ತೋಟ ಸಾಕು. ಒಂದು ಎಕರೆ ತೋಟ ಅಂದರೆ ೧೦ ಎಕರೆ ಗದ್ದೆಗೆ ಸಮ.

- ಎಕರೆಗೆ ೪ ಲಕ್ಷ ಅಡಿಕೆ ಬೀಳುತ್ತೆ. ಮತ್ತೂರಲ್ಲಿ ಎಕರೆಗೆ ೩೨ ಕ್ವಿಂಟಾಲ್ ಆಗುತ್ತೆ.

- ವೀಳೆ ಒಂದು ಸರೀಗೆ ೧೦ ಹೇರು ಕುಯ್ಯಬಹುದು. ಆ ಥರ ೩ ಕುಯಿಲು ಮಾಡಬಹುದು; ೧ ಮುರುಗುಯ್ಲು ೨ ಒಡಗುಯ್ಲು. ಮುರುಗುಯ್ಲು ಅತ್ಯುತ್ತಮ. ಒಡಗುಯ್ಲಿಗೆ rate ಹೆಚ್ಚು ಇರುತ್ತೆ; ಉತ್ಪಾದನೆ ಕಡಮೆ.

- ಅಡಕೆ ಪಟ್ಟೆ ಊಟಕ್ಕೆ ಅತ್ಯುತ್ತಮ; infection ಆಗೋಲ್ಲ.

- ತೋಟದ ಸುತ್ತಾ ೧೦-೧೫ ತೆಂಗಿನ ಗಿಡ ಇರುತ್ತೆ. ೨೫-೩೦ ಮರ ಹಾಕಲೂ ಸಾಧ್ಯ.

- ೪ ಅಡಿಕೆ ಮಧ್ಯೆ ಒಂದು ಬಾಳೆಗಿಡದಂತೆ ಹಾಕುತಾರೆ. ಪ್ರತಿ ಬಾಳೇಲೂ ೨೦-೨೫ ಬೊಡ್ಡೆ ಇರುತ್ತೆ; ತಿಂಗಳಿಗೆ ೨ ಗೊನೆ ಸಿಗುತ್ತೆ. ಹಂಬಿದ್ದರೆ ಅದನ್ನು ಕಮ್ಮಿ ಮಾಡಬೇಕು.

- ಹಣ್ಣಿನ ಗಿಡಗಳೂ - ಕಿತ್ತಲೆ, ಪರಂಗಿ, ನಿಂಬೆ, ಚೊಕೋತ, ಇತ್ಯಾದಿ ಇರುತ್ತವೆ. ಅದು ಮಾರಾಟಕ್ಕಲ್ಲ, ಮಕ್ಕಳ ಕುಶಿಗೆ. ತೋಟದಿಂದ ಮನೆಗೆ ಬಂದಾಗ ಮಕ್ಕಳು 'ಅಣ್ಣ ಬಂದರು' ಅಂತ ಓಡಿ ಬರುತ್ತವೆ.

- ಅಡಿಕೆಯನ್ನು ಜೂನ್, ಜುಲೈನಲ್ಲಿ ನೆಡುವುದು ಅತ್ಯುತ್ತಮ... ಅದು ಕುಯ್ಲಿಗೆ ಬಂದಾಗಲೂ late ಮಾಡಬಹುದು. ಒಂದು ವರ್ಷ

ವ್ಯವಸಾಯ ಕೈಬಿಟ್ಟರೂ ಫಸಲು ಕಡಮೆ ಆದೀತು ಅಷ್ಟೆ, ಬೆಳೆಗೆ ಅಪಾಯವಿಲ್ಲ (ಗದ್ದೆಗೆ ಹಾಗಲ್ಲ). ಆದ್ದರಿಂದ *ತೋಟ 'ಕರವರ ಎರ್ಮ' (ಕರಾವಿನ ಎಮ್ಮೆ).*

- *ಅಡಿಕೆ ಮರಕ್ಕೆ ತೂಕ (ನೀರು) ಹಾಕುವ ವ್ಯಾಯಾಮ ಒಂದೇ ಸಾಕು.* ಅದು ಸೂರ್ಯನಮಸ್ಕಾರ ಮಾಡಿದ್ದಕ್ಕೆ ಸಮ. ಸರ್ವಾಂಗಕ್ಕೂ ಅದು ಒಳ್ಳೆಯದು.

- ಅಡಿಕೆ, ತೆಂಗು ಸತ್ತರೆ ಮನೆ ಕಟ್ಟಕ್ಕೆ ಆಗುತ್ತೆ; ಕಂಬ, ತೊಲೆ, ಥಾವಣಿಗೆ ಬಳಸಬಹುದು. ತೆಂಗಿನ ಜುಂಗಿನಿಂದ ಹಗ್ಗ, ಕದಬೆಯಿಂದ ಹಾಸಿಗೆ, ಅಡಿಕೆ ಸಿಪ್ಪೆಯಿಂದ ಉರವಲು; ಮರಗಳ ನೆರಳು, ಶುದ್ಧಗಾಳಿ; ವೀಳೆ ಜಗಿಯುವುದರಿಂದ ಮೈ ಬೆಚ್ಚಗಿರುವುದು. ಇನ್ನೊಬ್ಬರ ಹಂಗಿಲ್ಲ.

- ತೆಂಗು ತೇಲಿಸಿ ನೆಡು, ಅಡಿಕೆ ಆಳಕ್ಕೆ ನೆಡು, ಬಾಳೆ ಬಗದು ನೆಡು.

- (ಹಾಸನ ಜಿಲ್ಲೆ) ಬರಗೂರು ಮತ್ತು ಮಗ್ಗೆಯ (ಅಡಕೆ) ಚೂರು ಪ್ರಸಿದ್ಧವಾದ್ದು.

- ಮತ್ತೂರಲ್ಲಿ ಹಿಂದೆ ಗೋಟು ಮಾಡುತ್ತಿರಲಿಲ್ಲ. ಚಪ್ಪರ ಹಾಕಿ ಡಬ್ಬೆಗಳ ಮೇಲೆ ಬಿದಿರುತಟ್ಟೆ ಹರಡಿ ಅಡಕೆ ಹರವುತ್ತಿದ್ದರು. ಮಳೆ ಬಂದರೆ ನೀರು ಕೆಳಕ್ಕೆ ಹೋಗೋದು, ಗಾಳಿ ಮೇಲಕ್ಕೆ ಬೀಸೋದು. ಹರವಿದ ಅಡಿಕೇನ ಮೇಲಿಂದಲೇ ಮಹಡಿಗೆ ತೊಗೊಳ್ಳೋರು. ಅದಕ್ಕಾಗೇ ಮನೆ ಎತ್ತರಿಸಿದಾರೆ. ಮಧ್ಯದೇಶದಲ್ಲಿ ಅಲ್ಲಿಯಷ್ಟು ಮಳೆ ಇಲ್ಲ. ಅಲ್ಲಿ ಕೇವಲ ಬಟ್ಟಲಡಿಕೆ ಆದರೆ, ಇಲ್ಲಿ ಚಾತರ, ಚೂರು, ಬಟ್ಟಲು, ಉಂಡೆ, (ಈಚೆಗೆ) ಗೋಟು - ಎಲ್ಲಾ ಆಗುತ್ತೆ.

- ಹಿಂದೆ ಕೂಲಿ ಇಲ್ಲ, ಮುಯ್ಯಿ. ಎಲ್ಲರೂ 'ಕತ್ತಿಮಣೆ ಮೇಲೆ ಉಕ್ಕಾಕಣು' (ಕತ್ತಿಮಣೆ ಮೇಲೆ ಕೂರಬೇಕು). ಹಾಗಾಗಿ ಒಬ್ಬರಾದ ಮೇಲೆ ಒಬ್ಬರು (ನೋಡಿಕೊಂಡು) ಅಡಕೆ ಕೆಡವಿಸೋರು. ಬೆಳಿಗ್ಗೆ ಅಡಿಕೆ ಬಿಡಿಸೋದು, ಸಂಜೆ ಬೇಯಿಸೋದು, ರಾತ್ರಿ ಕತ್ತರಿಸೋದು, ಕಣದಲ್ಲಿ ಹರಡೋದು. ಗಂಡಸರು, ಹೆಂಗಸರು ಮಕ್ಕಳೆಲ್ಲಾ ಅವರವರ ಮನೆ ಬುಟ್ಟಿ ಕತ್ತಿ ತಂದು ಹಾಡು ಹೇಳಿಕೊಂಡು ಕೆಲಸ ಮಾಡಿ ಹೋಗೋರು. ಅಷ್ಟೂ ದಿವಸ ಅಡುಗೆ ಎಂದರೆ ಉಪ್ಪಿನಕಾಯಿರಸ ಅಥವಾ ಮೊಸರನ್ನದ ಊಟ ಅಷ್ಟೆ. ಇದರಲ್ಲಿ prestige ಪ್ರಶ್ನೆಯೇ ಇರಲಿಲ್ಲ. *ವಿದ್ಯಾವಂತರೂ- ಶಾಸ್ತ್ರಿಗಳೂ ಅವಧಾನಿಗಳೂ- ಹೀಗೇ ಮಾಡುತ್ತಿದ್ದರು.*

- ಬೈನೇ ಮರದ ದೋಣಿಯನ್ನೂ ಬಾನಿಯನ್ನೂ ಮಾಡಿಕೊಂಡು ಏತ ಎತ್ತುತ್ತಿದ್ದರು. ಏತ, ತೂಕ, ಜಲ್ಲೆ - ಎಲ್ಲವನ್ನೂ ತಾವೇ ಕಟ್ಟುತ್ತಿದ್ದರು. ಒಬ್ಬರು ನೀರು ಎತ್ತೋರು, ೩ ಜನ ನೀರು ಹಾಕೋರು. ಹಿಂದೆ ಬಹಳ ಬಳಕೆಯಲ್ಲಿದ್ದುದು ಕಪಿಲೆ ಏತ. ಅದಕ್ಕೆ ಎತ್ತುಗಳನ್ನು ಕಟ್ಟೋರು, ಕಲ್ಲುರಾಟೆ ಬಳಸೋರು. *೭೦ ವರ್ಷದ ಮುದುಕರೂ ಇದನ್ನೆಲ್ಲ ಮಾಡೋರು.* ನೀರು ಚೆನ್ನಾಗಿ ಇರುವಾಗ 'ತೂಕ' ಹಾಕೋರು. ನೀರು ಕಡಮೆ ಆದಾಗ ಏತ, ಕಪಿಲೆ ಬಳಸೋರು.

- ಅಡಿಕೆ ಮರ ೫೦-೬೦-೭೦ ವರ್ಷ ಇರುತ್ತೆ. *೨೫* ವರ್ಷ ಆದಾಗ 'ಎಡದಾಯು ಕಟ್ಟರದ್' (ಎಡದಾಯ ಕಟ್ಟುವುದು).

- ಅಡಿಕೆಗೆ ಬರುವ ಅಣಬೆ ರೋಗದಲ್ಲಿ ಬೊಡ್ಡೇಲಿ ಗೆಡ್ಡೆ ಆಗುತ್ತೆ. ತಲೇಲಿ ಗರಿ ಬಗ್ಗಿ ಕೆಂಪಾಗಿ ಒಣಗಿ ಹೋಗುತ್ತೆ. ಮೂರು ತಿಂಗಳಲ್ಲಿ ಸಾಯುತ್ತೆ. ಬುಡಕ್ಕೆ ಬೆಂಕಿ ಹಾಕಿ ಸುಟ್ಟರೆ ಹರಡೋದು ಸ್ವಲ್ಪ ನಿಲ್ಲಬಹುದು.

  ಹಿಡ್ಲಮುಂಡಿ ರೋಗದಲ್ಲಿ ಗರಿ ಸಣ್ಣನಾಗುತ್ತ ಬಂದು ಪರಕೆ ಹಾಗೆ ಆಗುತ್ತೆ. ವರ್ಷಗಟ್ಟಲೇಲಿ ಸಾಯುತ್ತೆ. ಬುಡದಲ್ಲಿ ತೂತು ಮಾಡಿದರೆ ಕೆನ್ನೀರು ಹರಿಯುತ್ತೆ. ಅಳಿಲು ಎಲೆಕಾಯಿಯ ಕಣ್ಣು ತಿಂದು ಎಸೆಯುತ್ತೆ. ಕಪಿ ತಿನ್ನದಿದ್ದರೂ ಕಾಯಿ ಕಿತ್ತು ಬಾಳೆ ಮೇಲೆ ಹಾಕಿ ಶಬ್ದ ನೋಡುತ್ತೆ. *ನಮ್ಮವರು ಅದಕ್ಕೆ ಹಿಂಸೆ ಮಾಡಿಸುತ್ತಿರಲಿಲ್ಲ*, ಹೆಚ್ಚೆಂದರೆ ಹಿಡಿಸಿ ಕಾಡಿಗೆ ಕಳಿಸೋರು.

- ಗೌರಿ ಕಳೆದ ಮೇಲೆ ಫಸಲು ಶುರು. ಹಸಿರು ಆದರೆ ಸೆಪ್ಟೆಂಬರ್ ಕೊನೆಯಿಂದ ಡಿಸೆಂಬರ್‌ವರೆಗೆ. ಗೋಟು ಆದರೆ ನವಂಬರ್‌ನಿಂದ ಫೆಬ್ರವರಿ ಕೊನೇವರೆಗೆ. ಫಸಲು ಬಂದ ಹಾಗೆ ಎರಡಕ್ಕೊ ಮೂರು ಕೊಯ್ಲು.

- ಮರ ಏರಿದ ಮೇಲೆ ಜಲ್ಲೆಯಿಂದ ಗೊನೆ ಕತ್ತರಿಸಬೇಕು. *ಮರದಿಂದ ಮರಕ್ಕೆ ಹಾರಿ ಸಂಜೆವರೆಗೆ ಕೊಯ್ಲು ಮಾಡೋದು.* ಜಲ್ಲೆಯಿಂದ ಇನ್ನೊಂದು ಮರ ಎಳೆದು ಅದನ್ನು ಬಲಗೈಲಿ ತಬ್ಬಿ ಹಾರೋದು. ಪ್ರತಿ ಗೊನೆಯ ಹದ ನೋಡುವ ಒಬ್ಬರು ಕೆಳಗಿರುತ್ತಾರೆ. ಅವರು 'ಪದುಕುಡರವ್ನು' (ಹದ ಕೊಡುವವರು) - ಹಂಬು ಇರುವ ಕಡೆ ಅಡಿಕೆಯನ್ನು ದೊಡ್ಡ ಕಾಲೇಣಿಗಳ ಮೇಲಿಂದ ಜೋಪಾನವಾಗಿ ಕೆಡವಬೇಕು. ಅಮಾವಾಸ್ಯೆ ಬಿಟ್ಟು, ಬಿಸಿಲಿರುವ ಎಲ್ಲ ದಿನವೂ ಮರ ಹತ್ತುತ್ತಾರೆ.

- ಚೂರಿಗೆ ೨ ಬಿಸಿಲು, ಬಟ್ಟಲಿಗೆ ೪-೫ ಬಿಸಿಲು, ಚಾತರಕ್ಕೆ ೩ ಬಿಸಿಲು ಬೇಕು.

- ಗೊನೆಯಿಂದ ಅಡಿಕೆ ಬಿಡಿಸುವುದಕ್ಕೆ 'ಬಿಡಿವಿ ಪಣ್ಣರದ್' (ಬಿಡಿವಿ ಮಾಡುವುದು) ಎಂದು ಹೆಸರು.

ಕೆ.ಶ್ರೀನಿವಾಸ, ಅಗ್ರಹಾರ

ತಂಗ ಪಣ್ಣರದೇ ವಿನಃ ಇನ್ನೊತ್ತರಕ್ಕ್
ಕೂಲಿ ಕುಡತೇ ಗೊತ್ತಿಲ್ಲ
'ಯಾತು ಅಡತ ನಾರ್ ಶರೀರು';
ಖಾಯಿಲೆ ಬರೋ ಹಾಗೇ ಇಲ್ಲ.
(ತಾವು ಮಾಡುವುದೇ ಹೊರತು ಇನ್ನೊಬ್ಬರಿಗೆ ಕೂಲಿ ಕೊಟ್ಟೇ ಗೊತ್ತಿಲ್ಲ. *ಏತ ಎತ್ತಿದ ನಾರು ಶರೀರ*)

-ಎಂ.ವಿ.ನಾರಾಯಣಮೂರ್ತಿ, ಮತ್ತೂರು

ಲಿಂಗದಹಳ್ಳೀಲಿ *ಹೆಂಗಸರೂ ತೋಟಕ್ಕೆ* ನೀರು ಹಾಕಲು ಹೋಗೋರು. ಕಾಡಿಂದ ಮುತ್ತುಗದ ಎಲೆ ತಂದು ಹೊಲಿಯೋರು

- ಲಿಂಗದಹಳ್ಳಿ ಗೋಪಾಲ್

ಶ್ರೀಮತಿ ಸಾವಿತ್ರಮ್ಮನವರ ತಂದೆ ವೆಂಕಟರಮಣಾವಧಾನಿಗಳು ಮತ್ತು ತಾಯಿ ಮಹಾಲಕ್ಷ್ಮಮ್ಮ. ತಂದೆ ಸಂಸ್ಕೃತ ವಿದ್ವಾಂಸರು. ಪೌರೋಹಿತ್ಯ ವೃತ್ತಿಯಿಂದ ಬದುಕುವವರಾಗಿದ್ದರೂ ಸ್ವಪ್ರಯತ್ನದಿಂದ ಒಳ್ಳೆಯ ಅಡಿಕೆ ತೋಟವನ್ನು ಬೆಳೆಸಿದವರು. ಅವರ ನಿರಂತರ ಚಟುವಟಿಕೆಯಿಂದಿರುವ ಗುಣ ಹಾಗೂ ಬೇರೆಯವರ ಕಷ್ಟಕ್ಕೆ ಮರುಗುವ ಸೌಮನಸ್ಯ ಹಾಗೂ ದಾನಗುಣ ಮಕ್ಕಳೆಲ್ಲರಲ್ಲಿ ಹರಿದು ಬಂದಿದೆ . . .

ಪ್ರೊ.ಎಲ್.ಎಂ.ಎಲ್.ಶಾಸ್ತ್ರೀ, ಶಿವಮೊಗ್ಗ

. . . ಮದುವೆ-ಮುಂಜಿ ಮುಂತಾದ ಸಮಾರಂಭಗಳಿಗೆ ಭಕ್ಷ್ಯ-ಭೋಜ್ಯಗಳನ್ನು ತಯಾರು ಮಾಡುವುದರಿಂದ ಹಿಡಿದು, ಅಡುಗೆ ಪದಾರ್ಥಗಳನ್ನು ಸಿದ್ಧಪಡಿಸಿ, ಅಡುಗೆ ಮಾಡುವುದು, ಬಡಿಸುವುದು, ಕಡೆಗೆ ಅವುಗಳನ್ನೆಲ್ಲಾ ಶುಚಿ ಮಾಡುವವರೆಗೂ ಸಹ ಎಲ್ಲಾ ಕೆಲಸಗಳನ್ನೂ ಶ್ರಮದಾನದಿಂದಲೇ ನಿಭಾಯಿಸುತ್ತಿದ್ದರೆಂದರೆ, *ಈಗಿನ ಸಹಕಾರ-ಚಳವಳಿ* ಎಂದು ಯಾವುದನ್ನು ಕರೆಯುತ್ತಾರೆಯೋ, ಅಂತಹ ಮನೋಧರ್ಮವನ್ನು ಹಿಂದೆಯೇ ಬೆಳೆಸಿಕೊಂಡು ಅಳವಡಿಸಿಕೊಂಡಿದ್ದರು ಎಂದು ತಿಳಿದುಬರುತ್ತದೆ.

- ಆರ್.ಕೆ. ಕೇಶವಮೂರ್ತಿ (ಸುಂದರ)

. . . 'ಸಂಕೇತಿ'ಗಳು ಬ್ರಾಹ್ಮಣ ಸಮುದಾಯದ ಒಂದು ಉಪಸಮುದಾಯ. ಹಿಂದಿನಿಂದಲೂ ಸಾಂಸ್ಕೃತಿಕ ಅನನ್ಯತೆಯ ಕಾರಣದಿಂದ ತಮ್ಮ ವೈಶಿಷ್ಟ್ಯವನ್ನು ಉಳಿಸಿಕೊಂಡು ಬಂದಿದ್ದಾರೆ. ಕಷ್ಟಸಹಿಷ್ಣುತೆಯಲ್ಲಿ, ಬುದ್ಧಿವಂತಿಕೆಯಲ್ಲಿ, *ಹೆಣ್ಣುಮಕ್ಕಳೇ ಬೇಸಾಯ ಮಾಡುವುದರಲ್ಲಿ,* ವಿದ್ವತ್ತಿನಲ್ಲಿ, ಸಂಗೀತದಲ್ಲಿ, ಸಾಮಾಜಿಕ ಸ್ತರದಲ್ಲಿ ತುಂಬ ಆದರಣೀಯರಾಗಿದ್ದಾರೆ...

ಜಾಯಿಂಟ್ ಸೆಕ್ರೆಟರಿ, ಕಾಫಿಬೋರ್ಡ್, ಬೆಂಗಳೂರು ***ಕೆ.ವಿ. ಸುಬ್ಬರಾವ್***

ಹಿಂದೆ, ನರಸಿಂಹ ಮಾವಯ್ಯನವರ ತೋಟದಲ್ಲಿ ಒಂದು ಮಾವಿನಮರ ಕೊಂಡಿದ್ದರು, ಅಗ್ರಹಾರದ ಚಂದ್ರಶೇಖರ ಅವರ ಮನೆಯವರು. ಎರಡು ಜನ ತಬ್ಬಿದರೂ ಹಿಡಿಸದಂಥ ದೊಡ್ಡ ಮರ ಅದು; ಸುತ್ತುಗಟ್ಟಲ್ಲ. ಅದನ್ನು ಕುಯ್ಯಿಸಿತ್ತು. ಅದಕ್ಕಾಗಿ ನಾಲೆ ಹೊಡಿಸಿತ್ತು. ಕೆಳಗಿನಿಂದ ಹಲಗೆ ತುಂಡುಗಳನ್ನು ಮೇಲಕ್ಕೆ ಎಳೆದುಕೊಳ್ಳುತ್ತಿದ್ದೆವು. ಆರು ಅಡಿಯ ದಪ್ಪ ಹಲಗೆ ಒಂದು ಇತ್ತು. ಕೆ.ಚಂದ್ರಶೇಖರ್ ಮೇಲೆ ನಿಂತಿದ್ದರು, ಹಾರೆ ಕೊಟ್ಟುಕೊಂಡು. ಹಾಗಿರೋವಾಗ ಹೇಗೋ ಮಿಸ್ ಆಗಿ ಹಲಗೆಗೂ ಹಾರೆಗೂ ಮಧ್ಯೆ ಅವರ ಹೆಬ್ಬೆಟ್ಟು ಸಿಕ್ಕಿಹಾಕಿಕೊಂಡುಬಿಟ್ಟಿತ್ತು. ಹೆಬ್ಬೆಟ್ಟು ಒಡೆದುಹೋಗಿದೆ. ಅವರ ಸಾಹಸಕ್ಕೂ ಸಮಯಪ್ರಜ್ಞೆಗೂ ಕೊಡಬೇಕು. ಕೆಳಗೆ ನಾಲೆಯಲ್ಲಿ ಆರು ಜನ ಎತ್ತಿ ಕೊಡುತ್ತಿದ್ದರು. 'ನಾನೇನಾದರೂ ಈಗ "ಹೋ" ಅಂದುಬಿಟ್ಟರೆ ಎಲ್ಲರೂ ಕೈಬಿಟ್ಟುಬಿಡುತ್ತಾರೆ, ಹಲಗೆ ಕೆಳಕ್ಕೆ ಹೊರಟುಹೋಗುತ್ತೆ, ಕೆಳಗಿರುವ ಆರೂ ಜನ ಸತ್ತುಹೋಗುತ್ತಾರೆ' ಎಂದುಕೊಂಡು, ಮನಸ್ಸನ್ನು ಕಲ್ಲು ಮಾಡಿಕೊಂಡು ಹಲಗೆಯನ್ನು ಮೇಲಕ್ಕೆ ಎಳೆಯುವವರೀಗೂನೆ ಸಂಯಮದಿಂದಿದ್ದರು. ತುಂಡು ಮೇಲಕ್ಕೆ ಸಾಗಿದ ಮೇಲೆ ಅಲ್ಲೆಲ್ಲಾ ರಕ್ತ ಚೆಲ್ಲಿದ್ದು ನೋಡಿ "ಇದೇನು ರಕ್ತ!" ಅಂತ ಎಲ್ಲರೂ ಬೆರಗಾದರು. "ಹೀಗೇ, ಒಂದು ಚೂರು... ಬೆರಳು ಸಿಕ್ಕಿಕೊಂಡಿತ್ತು" ಅಂದರು ಚಂದ್ರಶೇಖರ. ನೋಡಿದರೆ *ಕಾಲಿನ ಹೆಬ್ಬೆಟ್ಟು ಇಡಿಯಾಗಿ ಜಜ್ಜಿ ಹೋಗಿತ್ತು.* ಅವತ್ತು ಅವರು ಆ ಗಟ್ಟಿ ಮನಸ್ಸು ಮಾಡಿದ್ದರಿಂದ ನಾವೆಲ್ಲಾ ಕೆಳಗಿದ್ದವರು ಆರು ಜನ ಬದುಕಿ ಉಳಿದೆವು, ಇಲ್ಲದಿದ್ದರೆ ಅವತ್ತೇ ನಾವೆಲ್ಲಾ ಯಾತ್ರೆ ಮಾಡಿಯಾಗಿರೋದು.

. . . . .

ಒಂದು ಸಾರಿ ನಮ್ಮ ತೋಟದಲ್ಲಿ ಅತ್ತಿಮರದಲ್ಲಿ ಪೊಟರೆ ಜೇನು ಕಟ್ಟಿತ್ತು. ಹುಡುಗರೆಲ್ಲಾ ಮಾತಾಡಿಕೊಂಡರು, 'ಜೇನು ಅಳಿಸಲು



ಬಲ ತುದಿಯಲ್ಲಿ ಚಂದ್ರಶೇಖರ (ಅಗ್ರಹಾರ)

ಹೋಗೋಣ, ಶಂಕರನ ತೋಟದಲ್ಲಿ ಭಾರೀ ಪೊಟರೆಜೇನು ಕಟ್ಟಿದೆ' ಅಂತ. 'ಹೂ' ಅಂತ ಎಲ್ಲಾ ಹೋಗಿದಾರೆ, ಅಳಿಸಕ್ಕೆ. ಎಲ್ಲರೂ ತೆಂಗಿನಕಾಯಿ, ಬೆಲ್ಲ ಎಲ್ಲಾ ತೊಗೊಂಡು ಹೋಗಿ 'ಇವತ್ತು ಸಮಾರಾಧನೆ ಮಾಡಿಬಿಡೋಣ' ಅಂತ ಹೊರಟಿದಾರೆ. ಅದೇನೂ ಸ್ವಲ್ಪ ಜನವಲ್ಲ, ಇಪ್ಪತ್ತು-ಇಪ್ಪತ್ತೈದು ಜನ ಹೋಗಿದಾರೆ. ಎಲ್ಲಾ ಹೋದರು. ಚಂದ್ರಶೇಖರ ಆ ಭಾರೀ ಮರದ ಮೇಲಕ್ಕೆ ಹತ್ತಿದರು. ಸೊಂಟಕ್ಕೆ ಬಕೆಟ್ಟು ಕಟ್ಟಿಕೊಂಡಿದ್ದರು. ಕೈಯನ್ನು ಪೊಟರೆಗೆ ಹಾಕಿ ಜೇನಿನ ಹಟ್ಟಿಯನ್ನು ತೆಗೆ ತೆಗೆದು ಬಕೆಟ್ಟಿಗೆ ತುಂಬಿಕೊಳ್ಳುತ್ತಿದ್ದರು. ಇನ್ನೊಂದು ಸಾರಿ ಕೈ ಹಾಕಿದಾಗ ಅದೇನೋ ಮೆದುವಾಗಿ ಕೈಗೆ ಸಿಕ್ಕಿದ ಅನುಭವವಾಯಿತು. ಅದನ್ನು ಎಳೆದುಕೊಂಡು ನೋಡಿದರೆ ಸರಿಯಾದ ನಾಗರಸರ್ಪ. ಇವರು ಅದರ ತಲೆಯನ್ನೇ ಹಿಡಿದುಕೊಂಡು ಬಿಟ್ಟಿದಾರೆ. ಎಂಥವರಿಗಾದರೂ ಎದೆಗೆಡುವ ಸಂದರ್ಭ. ಮರದ ತುದಿಯಲ್ಲಿ ಬೇರೆ ಇದಾರೆ. ಆದರೆ ಧೃತಿಗೆಡಲಿಲ್ಲ. 'ಹಾವು ಹಿಡಕೊಂಡಿದೀನಿ, ಕುಯ್ಗತ್ತಿ ತನ್ನಿರಯ್ಯಾ' ಎಂದು ಕೆಳಗಿದ್ದವರಿಗೆ ಕೂಗಿದರು. ಕುಯ್ಗತ್ತಿ ತೊಗೊಂಡು ಮರ ಹತ್ತಿ ಹಾವಿನ ಹತ್ತಿರಕ್ಕೆ ಹೋಗೋರು ಯಾರು ಅಲ್ಲಿ? ಎಲ್ಲರಿಗೂ ಹೆದರಿಕೆ, ಹೋಗಕ್ಕೆ. ಚಂದ್ರಶೇಖರ ಸುಮಾರು ಇಪ್ಪತ್ತೈದು ಅಡಿ ಎತ್ತರದಲ್ಲಿದ್ದರು. ಜನರೆಲ್ಲಾ ಒಂದು ಕುಯ್ಗತ್ತಿಯನ್ನು ಹಗ್ಗಕ್ಕೆ ಕಟ್ಟಿ ಅದು ಹೇಗೋ ಮೇಲಕ್ಕೆ ಎಸೆದರು. ಅದನ್ನು ಎಡಗೈಲಿ ತೊಗೊಂಡು *ಆ ಹಾವನ್ನು ಪೀಸ್ ಪೀಸ್ ಮಾಡಿ ತೆಗೆದು ಹಾಕಿದರು* ಅವರು. ಹೀಗೇ ಸಾಹಸಗಳಿವೆ ಅವರದ್ದು ತುಂಬಾ.

. . . . .

ಹೀಗೇ ಒಂದು ಸಲ ಈಜು ಹೊಡೀತಿದ್ದೆವು, ನಮ್ಮೂರ ಕೆರೆಯಲ್ಲಿ. ತೂಬಿನ ಮೇಲಿಂದ ಎಲ್ಲರೂ ನೆಗೆಯುವುದು, ಈಜುವುದು ಹೀಗೆ ಮಾಡುತ್ತಿದ್ದೆವು. ಇವರು ಇನ್ನೂ ಆಗ ಏಳು ವರ್ಷದ ಹುಡುಗ. ಎಲ್ಲಾ ಆಯಿತು, ಯಾರೋ ತಿಕ್ಕಲು ಮಾಡಿಬಿಟ್ಟಿದಾರೆ, 'ಅಯ್ಯೋ, ನಿನಗೆಲ್ಲಾಗುತ್ತೆ ನೆಗೆಯಕ್ಕೆ!' ಅಂತ. ಎಲ್ಲಾರೂ ಬಟ್ಟೆಹಾಕಿಕೊಂಡು ಮೇಲಕ್ಕೆ ಹತ್ತಿಯಾಗಿದೆ, ಮನೆಗೆ ಹೋಗಕ್ಕೆ ಸಿದ್ಧವಾಗಿದಾರೆ. ಈ ಚಂದ್ರಶೇಖರ ಹೋಗಿ *ತೂಬಿನ ಮೇಲಿಂದ ಕೆಳಕ್ಕೆ ನೆಗೆದುಬಿಟ್ಟ*. ಈಜು ಬರಲ್ಲ. ಇವನು ಮುಳುಗು ಹೊಡೆಯುತ್ತಿದ್ದಾನೆ ಗೊಳಕಾ ಗೊಳಕಾ ಗೊಳಕನೆ. ಬರೀ ತಲೆ ಕಾಣುತ್ತೆ. ಯಾರೋ ಈಜಾಟ ಆಡುತ್ತಿದಾರೆ ಅಂತಲೇ ಎಲ್ಲರ ಭಾವನೆ, ಇವನು ನೆಗೆದದ್ದು ಯಾರಿಗೂ ಗೊತ್ತೇ ಇಲ್ಲ. ಆಗ ಒಬ್ಬ ಹುಡುಗ ಕೂಗಿಕೊಂಡ, ಗುಂಡಣ್ಣ (ಚಂದ್ರಶೇಖರ) ನೆಗೆದುಬಿಟ್ಟಿದಾನೆ ಕೆಳಕ್ಕೆ ಅಂತ. ಆಗ ನಮ್ಮ ರಾಮಣ್ಣ ಇನ್ನೂ ಮೈ ಒರೆಸಿಕೋತಾ ನಿಂತಿದ್ದರು. ಹೋಗಿ ನೆಗೆದುಬಿಟ್ಟು ತಲೆ ಹಿಡಕೊಂಡು ಎಳಕೊಂಡು ಬಂದು ಬದುಕಿಸಿದರು. ಹೀಗೆ, ಒಂದೊಂದು ಸರಿ ಹುಚ್ಚುತನದ ಧೈರ್ಯದ ಹುಡುಗ, ಚಂದ್ರಶೇಖರ.

ಶಂಕರಮೂರ್ತಿ, ಅಗ್ರಹಾರ ಅವರು ಕೆ.ಚಂದ್ರಶೇಖರ, ಅಗ್ರಹಾರ ಅವರನ್ನು ಕುರಿತು

೭. 'ಸಂಕೇತಿ ಸೌರಭ', ಸುವರ್ಣಮಹೋತ್ಸವ ಸ್ಮರಣ ಸಂಚಿಕೆ, (೧೯೪೪-೧೯೯೪)

ಅ) ಬದಲಾಗುತ್ತಿರುವ ಸಂಕೇತಿ ಸಮಾಜ

ಪ್ರ: ಕೌಶಿಕ ಸಂಕೇತಿ ಸಂಘ, ಜಯನಗರ, ಮೈಸೂರು, ಪು.೧೨-೧೭ ***ಪ್ರೊ.ಕೆ.ಎಸ್. ಕೃಷ್ಣಮೂರ್ತಿ***

(ಸಂಕೇತಿಗಳ ಗ್ರಾಮೀಣ ಬದುಕಿನ ವಿಹಂಗಮ ನೋಟ ಇಲ್ಲಿದೆ)

. . . ಅಂದಿನ ಮೈಸೂರು ರಾಜ್ಯದ ಈ ಭಾಗಗಳಿಗೆ ವಲಸೆ ಬಂದ ಸಂಕೇತಿಗಳು ತಮಿಳುನಾಡಿನಿಂದ ಮೈಸೂರು ರಾಜ್ಯಕ್ಕೆ ಬಂದು ನೆಲಸಿರುವ ಬ್ರಾಹ್ಮಣ ಪಂಗಡಗಳಲ್ಲೆಲ್ಲ ಪ್ರಾಚೀನರು ಎಂದು ತೋರುತ್ತದೆ. ಸಂಕೇತಿಗಳು ತಮ್ಮ *ಮೂಲನೆಲೆಯಲ್ಲಿ ಅಡಿಕೆ, ವೀಳೆಯದೆಲೆಯ* ತೋಟಗಳ ವ್ಯವಸಾಯವನ್ನು ಅವಲಂಬಿಸಿದ್ದಿರಬೇಕು. ಆದ್ದರಿಂದಲೇ ಇವರು ಕನ್ನಡ ನಾಡಿಗೆ ವಲಸೆ ಬಂದ ಮೇಲೂ ತಮ್ಮ ತೋಟದ ವ್ಯವಸಾಯವನ್ನೇ ತಮ್ಮ ಮುಖ್ಯ ಕಸುಬನ್ನಾಗಿ ಆರಿಸಿಕೊಂಡರು. ವೇದ ಶಾಸ್ತ್ರಾಧ್ಯಯನ ಹಾಗೂ ಧರ್ಮದ ಆಚರಣೆಯಲ್ಲಿ ನಿಷ್ಠರಾಗಿದ್ದುಕೊಂಡು *ಸ್ವತಂತ್ರ ಜೀವನವನ್ನು* ಇಲ್ಲಿಯೂ ಮುಂದುವರೆಸಿದರು.. . .

. . . ಜೀವನಕ್ಕಾಗಿ ಅಡಕೆ ತೋಟಗಳನ್ನು ಏಳಿಸಿ, ಅಡಕೆ ಮರಗಳಿಗೆ ವೀಳೆಯದೆಲೆಯ ಹಂಬುಗಳನ್ನು ಹಬ್ಬಿಸಿ ಅವುಗಳಿಂದ ಬರುವ ಉತ್ಪನ್ನವನ್ನು ಪಡೆದುಕೊಳ್ಳುತ್ತಿದ್ದರು. ಅಡಕೆ-ವೀಳೆಯದೆಲೆಗಳಿಗೆ ಪೂರಕವಾಗಿ ಬಾಳೆ-ತೆಂಗುಗಳನ್ನೂ, ಮಕ್ಕಿಯಲ್ಲಿ ಒಂದೆರಡು ಮಾವಿನ

ಮರಗಳನ್ನೂ ಬೆಳೆಸುತ್ತಿದ್ದರು. *ಅಡಕೆ ತೋಟದ ವ್ಯವಸಾಯ ಕಷ್ಟಕರವಾದದ್ದು*. ಮಳೆ ಆಗುವ ಕಾಲವನ್ನು ಬಿಟ್ಟರೆ ಉಳಿದ ಎಲ್ಲ ಕಾಲಗಳಲ್ಲಿಯೂ ವಾರಕ್ಕೆರಡು ಮೂರು ಬಾರಿ ವೀಳೆಯದೆಲೆ ಹಂಬುಗಳಿಗೆ ನೀರುಣಿಕೆ ಅಗತ್ಯ. ಬೆಳಗಿನ ಜಾವಕ್ಕೆ ಎದ್ದು ತೋಟಕ್ಕೆ ಹೋಗಿ, ಐವತ್ತು ತೂಕ - ನೂರು ತೂಕ ಹೀಗೆಲ್ಲ ನೀರನ್ನು ಬಾವಿಯಿಂದ ಎತ್ತಿ ತಂದು ಪಾತಿಗಳಿಗೆ ನೀರುಣಿಸು ತ್ತಿದ್ದರು, ಬಾವಿಯಿಂದ ನೀರನ್ನು ಎರಡು ಹರವಿ ಗಳಲ್ಲಿ ತುಂಬಿಕೊಂಡು, ಒಂದೊಂದು ಕೈಯಲ್ಲಿ ಒಂದೊಂದು ಹರವಿಯನ್ನು ಹಿಡಿದುಕೊಂಡು, ಬಾವಿಯ ಮೆಟ್ಟಿಲುಗಳನ್ನೇರಿ ಮೇಲಕ್ಕೆ ತಂದು ಪಾತಿಗಳಿಗೆ ನೀರು ಹಾಕುವ ಕೆಲಸ ಎಷ್ಟು ಕಷ್ಟಸಾಧ್ಯ ಎಂಬುದು ಆ ಕೆಲಸ ಮಾಡಿದವರಿಗೆ, ಅದನ್ನು ನೋಡಿದವರಿಗೆ ತಿಳಿಯುವುದು.

ದುಡಿಯುವ ದೃಢಕಾಯನಾದ ಸಂಕೇತಿ ಬೆಳಗಿನ ಜಾವಕ್ಕೆ ತೋಟಕ್ಕೆ ಹೋಗಿ ಪಾತಿಗಳಿಗೆ ನೀರೆರೆದ ಅನಂತರ ಬಾಳೆಗೊನೆ ಬಲಿತಿದ್ದರೆ ಅದನ್ನು ಕತ್ತರಿಸಿ, ಗೊನೆಯನ್ನು ತೆಗೆದಿಟ್ಟುಕೊಂಡು, ಮನೆಯಲ್ಲಿ ಪೂಜೆಗೆ ಬೇಕಾದ ಹೂವು-ತುಳಸಿಗಳನ್ನು ಸಂಗ್ರಹಿಸಿ ತೆಂಗಿನಗರಿ, ಅಡಕೆಸೋಗೆ ಮೊದಲಾದುವುಗಳನ್ನು *ಕಂತೆ ಕಟ್ಟಿ, ಮನೆಗೆ ಹೊತ್ತು ತರುವನು*. ಅನಂತರ ನದಿಗೋ, ಕೆರೆಗೋ ಹೋಗಿ ಸ್ನಾನ ಮಾಡಿ, ಮನೆಗೆ ಬಂದು ಜಪ-ತಪಗಳನ್ನು ಮುಗಿಸಿ ದೇವರಪೂಜೆ ಆದ ಮೇಲೆ, ಭೋಜನ ಮಾಡುವನು. ಈಗಿನಂತೆ ಕಾಫಿ-ತಿಂಡಿಗಳ ಅಭ್ಯಾಸ ಅಂದು ಇರಲಿಲ್ಲ. ಯುವಕರು, ಮಕ್ಕಳು ಆದರೆ ನಿನ್ನೆ ಮಾಡಿದ ಅನ್ನ-ಸಾರಿದ್ದರೆ ಅದನ್ನೂ ಗಟ್ಟಿಕೆನೆ ಮೊಸರಿನಲ್ಲಿ ಊಟಮಾಡಿ ಅನಂತರ ಪುನಃ ಕೆಲಸಕ್ಕೆ ಹೋಗುತ್ತಿದ್ದರು. ಹಿತ್ತಲಿನಿಂದ *ಗೊಬ್ಬರವನ್ನು ತೋಟಕ್ಕೆ ಹೊತ್ತುಕೊಂಡು ಹೋಗಿ ಹಾಕುವುದು*, ಕೊಟ್ಟಿಗೆಯನ್ನು ಶುದ್ಧಗೊಳಿಸಿ ದನಗಳನ್ನು ಮೇಯಲು ಅಟ್ಟುವುದು ಇವೇ ಮೊದಲಾದ ಕೆಲಸಗಳನ್ನು ಮಾಡುವರು. ತೋಟದಲ್ಲಿ ಕಳೆ ಕೀಳುವುದು, ತೆಂಗಿನಕಾಯಿ ಕೀಳುವುದು ಇತ್ಯಾದಿ ಸಣ್ಣಪುಟ್ಟ ಕೆಲಸಗಳನ್ನು ಮಾಡುವರು. *ಸಂತೆಗೆ ಹೋಗಬೇಕಾದರೆ* ಏಣಿಯ ಮೇಲೆ ಹತ್ತಿ ನಿಂತು ವೀಳೆಯದೆಲೆಯನ್ನು ಕೊಯ್ದು ಮನೆಗೆ ತರುವರು. ಸಂಜೆ ಏನಾದರೂ ಕೆಲಸವಿದ್ದರೆ, ಆಳು-ಕಾಳುಗಳಿಗೆ ಹೇಳಬೇಕಾದರೆ ಆ ಕೆಲಸಗಳನ್ನು ಮಾಡಿ ಮುಗಿಸುವರು. ಸಂಜೆ ಅಥವಾ ರಾತ್ರಿ ವೀಳೆಯದೆಲೆಯ ಕವಳಿಗೆ ಹಿಡಿಯುವ ಕೆಲಸವಿದ್ದರೆ ಮನೆಯವರೆಲ್ಲ ಸೇರಿ ಆ ಕೆಲಸವನ್ನು ಮಾಡುವರು. ಹಿರಿಯರು ಮಧ್ಯಾಹ್ನದ ಮೇಲೆ ಹೆಚ್ಚಿನ ಶ್ರಮವಹಿಸುವ ಕೆಲಸವಿರದಿದ್ದರೆ ಮನೆಯಲ್ಲಿ ತಕಲಿ (ಕದಿರು) ಹಿಡಿದು *ಜನಿವಾರ ಮಾಡುವುದು*, ದೊನ್ನೆಕಟ್ಟುವುದು, *ಅಡಕೆಪಟ್ಟೆಯ ನಾರುತೆಗೆದು ಕಟ್ಟು ಕಟ್ಟುವುದು* ಮೊದಲಾದ ಕೆಲಸಗಳನ್ನು ಮಾಡುವರು. ವೇದಾಧ್ಯಯನಸಂಪನ್ನರು, ಶಾಸ್ತ್ರಜ್ಞರು ಯಾವುದಾದರೂ ಓಲೆಯಗರಿಯ ಪುಸ್ತಕವನ್ನು ಅವಲೋಕಿಸುವರು. ವೇದವಿದರು ಶಿಷ್ಯರಿಗೆ ಪಾಠ ಹೇಳಿಕೊಡುವರು.

ಹೀಗೆ ಸಂಕೇತಿ ಗಂಡಸರದು ಸಾಮಾನ್ಯ ದಿನಚರಿ ಇದ್ದರೂ, ತೋಟದ ವ್ಯವಸಾಯವು ಕಾಲಕಾಲಕ್ಕೆ ಶ್ರಮಸಾಧ್ಯವಾದ ದುಡಿಮೆಯನ್ನು ಬಯಸುತ್ತದೆ. ಪ್ರತಿ ಮೂರುನಾಲ್ಕು ವರ್ಷಗಳಿಗೊಮ್ಮೆ ವೀಳೆಯದೆಲೆ ಹಂಬನ್ನು ತುದಿಯಲ್ಲಿ ಹಗ್ಗಕಟ್ಟಿ, ನಿಧಾನವಾಗಿ ಕೆಳಗಿಳಿಸಿ ಹಂಬಿನಬುಡದ ಭಾಗವನ್ನು ಸುರುಳಿಯಾಗಿ ಮಾಡಿ, *ಹೊಸ ಪಾತಿಯೊಳಕ್ಕೆ ಇಳಿಸಿ ಗೊಬ್ಬರ ಹಾಕಬೇಕು*. ಇಲ್ಲದಿದ್ದರೆ ವೀಳೆಯದೆಲೆ ಹಂಬಿಗೆ ಹೊಸ ಬೇರು ಇಳಿದು, ಹೊಸ ಚೇತನ ಬಂದು, ಸೊಂಪಾದ ಎಲೆಗಳನ್ನು ಕೊಡುವುದಿಲ್ಲ. ಅಲ್ಲದೆ ವರ್ಷಕ್ಕೆ ಎರಡು ಸಲ ಅಥವಾ ಕನಿಷ್ಠ ಒಂದು ಬಾರಿಯಾದರೂ *ತೋಟದ ಅಗತೆ* ಆಗಬೇಕು. ಅಡಕೆ ಕೊಯ್ಲಿನ ಸಮಯದಲ್ಲಿ ಅಡಕೆ ಮರಕ್ಕೆ ಹತ್ತಿ, ಅಡಕೆ ಕಾಯಿಗೊನೆಗಳನ್ನು ಜಲ್ಲೆಯಿಂದ ಕಿತ್ತು ಕೆಳಕ್ಕೆ ಬೀಳಿಸಬೇಕು. ಒಂದು ಮರಕ್ಕೆ ಹತ್ತಿದ ಮೇಲೆ ಸುತ್ತಮುತ್ತಲಿನ ಮರಗಳ ಅಡಕೆ ಗೊನೆಗಳನ್ನು ಕಿತ್ತ ಮೇಲೆ ಮರದಿಂದ ಮರಕ್ಕೆ ನೆಗೆಯುತ್ತಾ ಹೋಗಿ, ಉಳಿದ ಮರಗಳ ಅಡಿಕೆಗೊನೆಗಳನ್ನು ಕೀಳಬೇಕು. ಒಂದು ಸಲ ಮರ ಹತ್ತಿದ ಮೇಲೆ ಪುನಃ ಕೆಳಗಿಳಿಯುವುದು ಒಂದೇ ಸಲ. *ಇದರಷ್ಟು ಕಸುವಿನ ಕಷ್ಟದ ಕೆಲಸ ಬೇರೊಂದಿಲ್ಲ*. ಇದನ್ನೆಲ್ಲ ಸಂಕೇತಿಗಳೇ ಮಾಡಬಲ್ಲರು. ಅಡಕೆ ಸುಗ್ಗಿಯಲ್ಲಿ ಅಡಕೆಯನ್ನು ಸುಲಿದು, ಬೇಯಿಸಿ, ಕತ್ತರಿಸಿ, ಒಣಗಿಸಿ ಮಾರಾಟಕ್ಕೆ ಸಿದ್ಧಪಡಿಸುವುದೂ ಕೂಡ ಸಂಕೇತಿಗಳಿಗೆ ಪಳಗಿದ ಕೆಲಸ.

ಕ್ರಮೇಣ ತೋಟದ ವ್ಯವಸಾಯವೊಂದೇ ಸಾಕಾಗದೆ ಹೋದುದರಿಂದ ಮುಖ್ಯ ಆಹಾರವಾದ ಅಕ್ಕಿಗಾಗಿ ಬತ್ತವನ್ನು ಗದ್ದೆಗಳಲ್ಲಿ ಬೆಳೆಯಲಾರಂಭಿಸಿದರು. ನೇಗಿಲಿನಿಂದ ಉಳುವುದು, ಪ್ರಾಣಿಗಳ ಮೂಲಕ ಆಗುವ ಕೆಲಸಗಳನ್ನು ಆಳುಗಳಿಂದ ಮಾಡಿಸಿಕೊಳ್ಳುತ್ತಿದ್ದರು. ವ್ಯವಸಾಯಕ್ಕೆ ನೆರವಾಗುವ ಎತ್ತುಗಾಡಿಗಳನ್ನು ಇಟ್ಟುಕೊಳ್ಳುವುದೂ ಸಂಕೇತಿಗಳಲ್ಲಿ ಬಹಳ ಅಪರೂಪವಾಗಿತ್ತು. ಇದ್ದರೂ ಆಳುಗಳಿಂದ ಆ ಕೆಲಸ ಮಾಡಿಸುತ್ತಿದ್ದರು. *ವ್ಯವಸಾಯಕ್ಕೆ ಪ್ರಾಣಿಗಳನ್ನು ಉಪಯೋಗಿಸದೆ, ಕೈಕಾಲುಗಳನ್ನು ಬಳಸಿ ಸ್ವಂತ ಶ್ರಮದಿಂದ ಬಾಳಬೇಕು* ಎಂಬುದು ಸಂಕೇತಿಗಳ ಧ್ಯೇಯವಾಗಿತ್ತು. ಸ್ವಾವಲಂಬನೆ ಇವರ ಜೀವನದ ಗುರಿ.

ಸಂಕೇತಿಗಳ ದಿನಚರಿಯಲ್ಲಿ, ಅವರ ಕೆಲಸಕಾರ್ಯಗಳಲ್ಲಿ, ದುಡಿಮೆಯಲ್ಲಿ ಗಂಡಸರದು ಒಂದು ಭಾಗವಾದರೆ ಹೆಂಗಸರದು ಇನ್ನೊಂದು ಭಾಗ. *ಮನೆಯೊಳಗಿನ ಕೆಲಸವೆಲ್ಲ ಹೆಂಗಸರದು*. ಬೆಳಗ್ಗೆ ಎದ್ದು ಬಾಗಿಲು ಸಾರಿಸಿ, ರಂಗೋಲಿ ಹಾಕಿದ ಮೇಲೆ, ಮನೆಯನ್ನು ಸಾರಿಸಿ-

ಗುಡಿಸಿ, ದನದ ಕೊಟ್ಟಿಗೆಯನ್ನು ಶುದ್ಧಗೊಳಿಸಿ ಹಾಲುಕರೆಯುವರು. ಅನಂತರ ಹಾಲುಕಾಸಿ ಮಕ್ಕಳ ಯೋಗಕ್ಷೇಮವನ್ನು ನೋಡಿಕೊಂಡು, ಹೊಳೆಗೋ-ಕೆರೆಗೋ ಹೋಗುವರು. ಬಟ್ಟೆಗಳನ್ನು ಒಗೆದು, ಪಾತ್ರೆಗಳನ್ನು ಬೆಳಗಿಕೊಂಡು, ಸ್ನಾನಮಾಡಿ, ಕುಕ್ಕೆಯಲ್ಲಿ ಒಗೆದ ಬಟ್ಟೆ ಪಾತ್ರೆಗಳನ್ನು ಇಟ್ಟುಕೊಂಡು; ಅದರ ಜೊತೆಗೆ ಒಂದು ಕೊಡ ನೀರನ್ನು ತೆಗೆದುಕೊಂಡು ಮನೆಗೆ ಬರುವರು. ಅನಂತರ ಗೌರಿ ಪೂಜೆ, ಅಡುಗೆ, ಎಲ್ಲರಿಗೂ ಊಟ ಆದ ಮೇಲೆ ಮನೆಯ ಯಜಮಾನಿ ಊಟ ಮಾಡುವಳು. ಆಳುಕಾಳುಗಳನ್ನು ನೋಡಿಕೊಳ್ಳುವುದು, ಮನೆಗೆ ಬಂದವರ ಯೋಗಕ್ಷೇಮ ವಿಚಾರಿಸುವುದು, ವೀಳೆಯದೆಲೆ ತಂದಿದ್ದರೆ ಕವಳಿಗೆ ಜೋಡಿಸುವುದು ಮೊದಲಾದ ಕೆಲಸಗಳನ್ನು ಮಾಡುವರು. ಮನೆಯ ಮಡಿ-ಮೈಲಿಗೆ, ಆಚಾರ-ವ್ಯವಹಾರಗಳು ಹೆಂಗಸರ ಜವಾಬುದಾರಿ. ಮುಟ್ಟು-ಚಟ್ಟು, ಮಡಿ-ಮೈಲಿಗೆ, ಮುಸುರೆ ಮೊದಲಾದುವುಗಳ ಎಲ್ಲೆಗಳ ಇತಿಮಿತಿಗಳು ಅವರಿಗೇ ಗೊತ್ತು. ಕೆಲವು ಸಂಕೇತಿ ಹೆಂಗಸರು ಅತಿ ಮಡಿ ಮಾಡುತ್ತಿದ್ದುದೂ ಉಂಟು. ಹೊಳೆಯಿಂದಲೋ, ಕೆರೆಯಿಂದಲೋ ಸ್ನಾನಮಾಡಿ ಬರುವಾಗ ಚೊಂಬಿನಲ್ಲಿ ನೀರನ್ನು ಇಟ್ಟುಕೊಂಡಿದ್ದು, ತಾವು ಹೆಜ್ಜೆಯಿಡುವ ಸ್ಥಳಗಳಿಗೆ ನೀರನ್ನು ಚಿಮುಕಿಸಿಕೊಂಡು ನಡೆದುಕೊಂಡು ಬಂದು ಮನೆಸೇರುತ್ತಿದ್ದವರನ್ನು ಆಗಿನ ಕಾಲದಲ್ಲಿ ಕಾಣಬಹುದಾಗಿದ್ದಿತು. ಗ್ರಹಣ, ಆಶೌಚ ಮೊದಲಾದುವುಗಳಾದಾಗ ಮನೆಯನ್ನೇ ಶುಚಿಗೊಳಿಸುವುದು, ಮನೆಯ ಪಾತ್ರೆ-ಪಡಗಗಳನ್ನೆಲ್ಲ ತೊಳೆಯುವುದು, ಬಟ್ಟೆ-ಬರೆಗಳನ್ನೆಲ್ಲ ಒಗೆಯುವುದು ಮೊದಲಾದ ಹೆಚ್ಚಿನ ಶ್ರಮದ ಕೆಲಸಗಳೂ ಹೆಂಗಸರ ಪಾಲಿಗೇ ಬೀಳುತ್ತಿದ್ದುವು.

ಸಂಕೇತಿ ಸಮಾಜದಲ್ಲಿ *ವಿಧವೆಯರ ಜೀವನ ಅತ್ಯಂತ ಕಷ್ಟಕರವಾದುದಾಗಿತ್ತು*. ದುಡಿಮೆಯೇ ಅವರ ಸ್ವತ್ತು. ಮನೆಯವರಿಗೆಲ್ಲ ದುಡಿಯಬೇಕು. ಆದರೂ ಶುಭಸಮಾರಂಭಗಳಲ್ಲಿ ಪಾಲ್ಗೊಳ್ಳುವುದು ಅವರಿಗೆ ನಿಷಿದ್ಧ. ಮಕ್ಕಳಿದ್ದರೆ ಒಂದು ಸಮಾಧಾನ, ಸಂಸಾರದಲ್ಲಿ ಆಸಕ್ತಿ, ಮಕ್ಕಳ ಪ್ರೀತಿಯಲ್ಲಿ, ಅವರ ಸಂಸಾರದ ಸುಖದಲ್ಲಿ ಪಾಲು. ಅದಿಲ್ಲದವರ ಜೀವನ ಒಂದು ಜೀವನವೇ? ಕೆಲವು ವಿಧವೆಯರು ಇತರರ ಮನೆಯ ಹಾಗೂ ಊರೊಟ್ಟಿನ ಕೆಲಸಕಾರ್ಯ ಸಮಾರಂಭಗಳಲ್ಲಿ ಕೆಲಸಮಾಡಿಕೊಡುತ್ತ, *ಪರೋಪಕಾರವೇ ಜೀವನದಗುರಿ* ಎಂಬಂತೆ ಬಾಳುತ್ತ ಇಹಜೀವನದಲ್ಲಿ ಸಾರ್ಥಕತೆಯನ್ನು ಕಂಡುಕೊಳ್ಳುತ್ತಿದ್ದರು.

ಸಂಕೇತಿಗಳ *ಸಾಂಘಿಕ ಜೀವನದ ಸಾರ ಒಗ್ಗಟ್ಟು, ಪರಸ್ಪರ ಸಹಕಾರ* ಇವುಗಳೇ ಆಗಿದ್ದವು. ಒಂದು ಹಳ್ಳಿಯ ಸಂಕೇತಿಗಳ ಯಾರ ಮನೆಯಲ್ಲಿ ಮದುವೆ-ಮುಂಜಿ ಮೊದಲಾದ ಸಮಾರಂಭಗಳಾದರೂ, ಎಲ್ಲರೂ ಸಹಕರಿಸಿ ಯಶಸ್ವಿಯಾಗುವಂತೆ ಮಾಡುತ್ತಿದ್ದರು. ಈ ಒಬ್ಬೊಬ್ಬರೂ ಒಂದೊಂದು ಕೆಲಸಗಳನ್ನು ಹಂಚಿಕೊಂಡು ಮಾಡುತ್ತಿದ್ದರು. ಈ ಊರೊಟ್ಟಿನ ಕೆಲಸಗಳಲ್ಲಿ ಹೆಂಗಸರದೂ ಸಮಪಾಲು. ಅಡುಗೆ ಮಾಡುವುದು, ಹಪ್ಪಳ ಕರಿಯುವುದು, ಒಬ್ಬಟ್ಟು ತಟ್ಟುವುದು, ತರಕಾರಿ ಹೆಚ್ಚುವುದು, ತೆಂಗಿನಕಾಯಿ ತುರಿಯುವುದು ಇತ್ಯಾದಿ ಕೆಲಸಗಳನ್ನೆಲ್ಲ ಅವರು ವಹಿಸಿಕೊಳ್ಳುತ್ತಿದ್ದರು. ಅಲ್ಲದೆ ಮದುವೆ-ಮುಂಜಿ ಮೊದಲಾದ ಸಮಾರಂಭಗಳಲ್ಲಿ ಮದುವೆಯ ಶಾಸ್ತ್ರಗಳಲ್ಲೆಲ್ಲ ಹೆಂಗಸರ ಪಾತ್ರ ಹೆಚ್ಚು. ಹಿರಿಯ ಹೆಂಗಸರು ಸಂಪ್ರದಾಯಗಳು ಸರಿಯಾಗಿ ಆಚರಿಸಲ್ಪಡುವಂತೆ ನೋಡಿಕೊಳ್ಳುತ್ತಿದ್ದರು. ಆರತಿ, ಉರುಟಣೆ, ಗೋಧಿನ ಕಲ್ಲಿಡುವುದು, ಪಾಡಿಬಿಡುವುದು ಇತ್ಯಾದಿ ಹಲವು ಹನ್ನೊಂದು ಆಚರಣೆಗಳು ಹೆಂಗಸರ ಸ್ವತ್ತು. ಮದುವೆ-ಮುಂಜಿ ಮೊದಲಾದುವು ಹಾಗೂ ರಾಮೋತ್ಸವ, ವಸಂತೋತ್ಸವ, ಗಣಪತಿ ಮಂಗಳಾರತಿ, ವ್ಯಾಸಪೂಜೆ, ಗೌರೀಪೂಜೆ, ಗಣಪತಿ ಪೂಜೆ ಇವುಗಳಲ್ಲೆಲ್ಲ ಸಂಕೇತಿಗಳು ಭಾಗವಹಿಸಿ ಆನಂದಿಸುತ್ತಿದ್ದರು. ದುಡಿಮೆಯ ಅವರ ಬಾಳಿನಲ್ಲಿ ಇವು ಅವರ ಸುಖದ ಅಮೃತಗಳಿಗೆಗಳಾಗಿರುತ್ತಿದ್ದವು.

ಸಂಕೇತಿ ಕುಟುಂಬಗಳು ವಿಸ್ತಾರವಾಗುತ್ತಬಂದಂತೆ ಜೀವನನಿರ್ವಹಣೆಗೆ ಸಾಕಾದಷ್ಟು ಜಮೀನು ದೊರೆಯದೆ ಹೋಯಿತು. ಪಿತ್ರಾರ್ಜಿತ ಆಸ್ತಿ ಹೆಚ್ಚಾಗಿ ಹರಿದು ಹಂಚಿಹೋಗಲಾರಂಭಿಸಿತು. ಆಗ *ಜೀವನಕ್ಕಾಗಿ ಹೊಸಕ್ಷೇತ್ರಗಳನ್ನು,* ಅನ್ಯಮಾರ್ಗಗಳನ್ನು ಹುಡುಕಬೇಕಾಯಿತು. ಹೀಗಾಗಿ ಸಂಕೇತಿಗಳು ತಮ್ಮ ಮಕ್ಕಳನ್ನು ಇಂಜಿನೀಯರಿಂಗ್, ವೈದ್ಯಕೀಯ, ಬಿ.ಎ., ಎಂ.ಎ., ಮೊದಲಾದ ವಿದ್ಯಾಭ್ಯಾಸಗಳಿಗೆ ಕಳುಹಿಸಲಾರಂಭಿಸಿದರು.

ಹಳ್ಳಿಗಳನ್ನು ಬಿಟ್ಟು ಪಟ್ಟಣಗಳನ್ನು ಸೇರಿದ ಮೇಲೆ ಅದೇ ಅವರ ಹುಟ್ಟೂರಾಗುತ್ತದೆ. ಇನ್ನೂ ಹಳ್ಳಿಗಳಲ್ಲಿ ನೆಂಟರು-ಇಷ್ಟರು ಇರುವಾಗ ಮದುವೆ-ಮುಂಜಿ ಮೊದಲಾದ ಸಮಾರಂಭಗಳಿಗೆ ಹಳ್ಳಿಗಳಿಗೆ ಬಂದು ಸಮಾರಂಭಗಳಲ್ಲಿ ಪಾಲ್ಗೊಂಡು ತಮ್ಮ ಹಿರಿಯರ ಮನೆ-ತೋಟ-ಗದ್ದೆ-ಹೊಲಗಳನ್ನು ನೋಡಿ ಹಳ್ಳಿಯ ಸರಳಜೀವನದ ಸೊಗಸನ್ನು ಮೆಲುಕು ಹಾಕಿ ಆನಂದಿಸುವುದನ್ನು ಕಾಣಬಹುದು. ಪಟ್ಟಣಗಳನ್ನು ಸೇರಿದವರಲ್ಲಿ *ಹಳ್ಳಿಗಳ ಮುಗ್ಧ ನೈಜ ವಾತಾವರಣ ಮಾಯವಾಗಿ, ಪಟ್ಟಣದ ಕೃತಕ, ಯಾಂತ್ರಿಕ ತೋರಿಕೆಯ ಜೀವನವನ್ನು ಕಾಣಬಹುದು.* ಇನ್ನೂ ಹಳ್ಳಿಗಳಲ್ಲಿಯೇ ಇದ್ದು, ಪಾರಂಪರಿಕವಾದ ತೋಟ-ತುಡಿಕೆಗಳ ವ್ಯವಸಾಯದಿಂದ ಜೀವಿಸುತ್ತಿರುವವರಲ್ಲಿ, ಹಿಂದಿನ ಸಂಕೇತಿಗಳ



ಹಂಬು ಹಬ್ಬಿದ ಅಡಿಕೆ ತೋಟ

ಜೀವನದ ಪರಂಪರೆ ಇನ್ನೂ ಬಹುಮಟ್ಟಿಗೆ ಉಳಿದುಕೊಂಡು ಬಂದಿದೆ. ಆಧುನಿಕ ಯುಗದ ಪ್ರಭಾವದಿಂದ ಅವರ ಜೀವನದಲ್ಲೂ ಹಲವು ವ್ಯತ್ಯಾಸಗಳಾಗಿಲ್ಲವೆಂದಲ್ಲ. ಕಾಫಿ-ತಿಂಡಿಗಳು ಎಲ್ಲ ಸಂಕೇತಿ ಮನೆಗಳನ್ನೂ ಪ್ರವೇಶಿಸಿದೆ. ಹಿಂದಿನವರಷ್ಟು ಕಷ್ಟಪಟ್ಟು ದುಡಿಯುವ ಪ್ರವೃತ್ತಿ ಕಡಿಮೆಯಾದಂತೆನಿಸುತ್ತದೆ. ರೇಡಿಯೋ, ದೂರದರ್ಶನ, ವರ್ತಮಾನ ಪತ್ರಿಕೆಗಳು ಸಂಕೇತಿಗಳ ಮನೆಯನ್ನು ಪ್ರವೇಶಿಸಿ ಅವರ ವಿಚಾರಶೀಲತೆಯನ್ನು ವಿಸ್ತರಿಸಿದೆ. ಅವರು ಇಂದು ತಾವು ಜಾಗತಿಕ ಪ್ರಪಂಚದ ಒಂದು ಭಾಗವೆಂದು ಅರಿತುಕೊಳ್ಳತೊಡಗಿದ್ದಾರೆ. ಅಲ್ಲದೆ ಈಗ ಹಳ್ಳಿಯಲ್ಲಿರುವ ಸಂಕೇತಿಗಳಲ್ಲಿ ಶಿಕ್ಷಣದ ಮಟ್ಟ ಹಿಂದಿಗಿಂತಲೂ ಉತ್ತಮವಾಗಿದೆ. ವೈಜ್ಞಾನಿಕ ವಿಚಾರಗಳ ಕಡೆಗೆ, ಕೃಷಿ ಪದ್ಧತಿಯ ಕಡೆಗೆ ಅವರು ಆಕರ್ಷಿತರಾಗಿದ್ದಾರೆ.

ಆ) ಸಂಕೇತಿಗಳು: ಕರ್ನಾಟಕಕ್ಕೆ ವಲಸೆ ಮತ್ತು ಕಾಲ

ಪು.೨೬ ***ಕೆ.ಎಸ್. ಕೇಶವಮೂರ್ತಿ***

(ಅಡಕೆ ಬೇಸಾಯದ ಪರಿಣತಿಯೊಂದಿಗೇ ಸಂಕೇತಿಗಳು ಕರ್ನಾಟಕಕ್ಕೆ ಬಂದು ಇಲ್ಲಿ ಹೊಸ ಕೃಷಿ ಸಂಸ್ಕೃತಿಯನ್ನು ಹರಡಿದರು)

. . . ಸಂಕೇತಿಗಳು ಮೊದಲು ಬಂದು ನೆಲೆಸಿದ ಹಾಸನ ಜಿಲ್ಲೆಯ ಊರುಗಳಲ್ಲಿ ಮೊದಲಿನಿಂದ ಅಡಿಕೆ ವ್ಯವಸಾಯ ಇದ್ದ ಬಗ್ಗೆ ತಿಳಿದುಬರುವುದಿಲ್ಲ. ಎದ್ದು ಕಾಣುವ ವಿಶೇಷ ಅಂಶ ಎಂದರೆ ಸಂಕೇತಿಗಳು ವಾಸವಾಗಿರುವ ಎಲ್ಲಾ ಊರುಗಳಲ್ಲಿ ಇರುವ ಎಲ್ಲಾ ಅಡಿಕೆ ತೋಟಗಳೂ ಸಂಕೇತಿಗಳದ್ದೆ. ಇವುಗಳನ್ನು ಏಳಿಸಿದವರು ಸಂಕೇತಿಗಳೇ. ಇತ್ತೀಚಿನ ವರ್ಷಗಳಲ್ಲಿ ಮಾತ್ರ ಕೆಲವು ಹಸ್ತಾಂತರಗಳಾಗಿವೆ. ಸಂಕೇತಿಗಳನ್ನು ಬಿಟ್ಟು ಬೇರೆ ಜನಾಂಗದವರು ಬೆಳೆಸಿ, ವ್ಯವಸಾಯ ಮಾಡುತ್ತಿದ್ದ ಅಡಕೆ ತೋಟಗಳನ್ನು ಇತ್ತೀಚಿನವರೆಗೂ ಎಲ್ಲೂ ಕಾಣುತ್ತಿರಲಿಲ್ಲ. ಇದ್ದರೂ ಅಪರೂಪಕ್ಕೆ ಬೆರಳೆಣಿಸುವಷ್ಟು. ಅದೂ ಸಂಕೇತಿಗಳನ್ನು ನೋಡಿ ಮಾಡಿದ್ದೇ ಇರಬೇಕು. ಅಡಿಕೆ ತೋಟದಲ್ಲಿ ವಿಳ್ಳೆದೆಲೆ, ಬಾಳೆ ಏಳಿಸುವುದೂ ಒಂದು *ಪರಿಣತ ವ್ಯವಸಾಯದ ಕ್ರಮ.* ಆದುದರಿಂದ ಸಂಕೇತಿಗಳಿಗೆ ಅಡಿಕೆ ತೋಟಗಳನ್ನು ಏಳಿಸುವ ವ್ಯವಸಾಯ *ಪರಿಣತಿ ಮೊದಲೇ ಇದ್ದು,* ಅವರು ಈ ವ್ಯವಸಾಯಕ್ಕೆ ಅನುಕೂಲತೆಗಳು ದೊರಕಿದ ಊರುಗಳಿಗೆ ವಲಸೆ ಬಂದು ನಿಂತು, ತೋಟಗಳನ್ನು ಬೆಳೆಸಿದರು ಎಂದು ನಂಬಬೇಕಾಗಿದೆ. ಇಲ್ಲಿಗೆ ಬಂದನಂತರ ಸ್ಥಳೀಯರನ್ನು ನೋಡಿಕೊಂಡು ಅಡಿಕೆ ವ್ಯವಸಾಯ ಕಲಿಯಲಿಲ್ಲ.

ಪಶ್ಚಿಮ ಘಟ್ಟಗಳ ಕೆಳಪ್ರದೇಶಗಳಲ್ಲಿ ತೋಟಗಳಲ್ಲಿ ಮೆಣಸನ್ನು ಬೆಳೆಯುತ್ತಾರೆ. ವಿಳ್ಳೆಯದೆಲೆ ವ್ಯವಸಾಯ ಇದಕ್ಕೆ ಸರಿಸಮಾನವಾದದ್ದು. ಇದನ್ನು ನೋಡಿದಾಗ ಸಂಕೇತಿಗಳು *ಮೊದಲು ಅಡಿಕೆ ವ್ಯವಸಾಯ ರೂಢಿಯಲ್ಲಿದ್ದ ಪ್ರದೇಶದಲ್ಲಿ ನೆಲೆಸಿದ್ದು,* ಅಲ್ಲಿ ಈ ವ್ಯವಸಾಯದಲ್ಲಿ ಪರಿಣತಿ ಪಡೆದಿದ್ದು ಅನಂತರ ಮೈಸೂರು ಪ್ರಾಂತ್ಯದ ಹಳ್ಳಿಗಳಿಗೆ ಬಂದು ನೆಲೆಸಿ ಅಲ್ಲೂ ಅಡಿಕೆ ತೋಟಗಳನ್ನು ಬೆಳೆಸಿದರು ಎಂದು ನಂಬಬೇಕಾಗುತ್ತದೆ.

೮. ಸಂಕೇತಿ ಸಂಪದ

ಪ್ರೊ. ಕೆ.ಎಸ್. ಕೃಷ್ಣಮೂರ್ತಿ (೧೯೯೪)

(ಸಂಕೇತಿ ಸಮುದಾಯದ ದೈನಂದಿನ ಬದುಕನ್ನು ಕರಾರುವಾಕ್ಕಾಗಿ, ಆಕರ್ಷಕವಾಗಿ, ಕಣ್ಣಿಗೆ ಕಟ್ಟುವಂತೆ ಚಿತ್ರಿಸಿರುವ ಕೃತಿ 'ಸಂಕೇತಿ ಸಂಪದ'. ಕೃಷಿಗೆ ಹೊಂದಿಕೊಂಡ ವಿವರಗಳ ಆಯ್ದ ಭಾಗ ಇಲ್ಲಿದೆ)

ಲೇಖಕರ ಮಾತು

(ತೋಟಗಾರಿಕೆ ಮತ್ತು ಸ್ವತಂತ್ರ ಪ್ರವೃತ್ತಿ)

ಸಂಕೇತಿಗಳು ದೃಢಕಾಯರೂ, ದಯಾಧರ್ಮಪರರೂ, ಪರಸ್ಪರ ಸಹಕಾರ ಮನೋಭಾವವುಳ್ಳವರೂ, ಸ್ವಾತಂತ್ರ್ಯಪ್ರಿಯರೂ ಆಗಿದ್ದರು. ಆದುದರಿಂದ ಇವರು ತಮ್ಮ ಜೀವಿಕೆಗಾಗಿ ಯಾರನ್ನೂ ಆಶ್ರಯಿಸಲಿಲ್ಲ. ಯಾರ ಎದುರಿಗೂ ಕೈ ನೀಡಲಿಲ್ಲ. ನೀರಿನ ವಸತಿ ಇರುವ, ಸ್ನಾನ ಜಪತಪಾದಿಗಳಿಗೆ ಅನುಕೂಲವಾಗಿ ನದಿ, ಕೆರೆ ಮೊದಲಾದವುಗಳು ಇರುವ ಊರು ಅಥವಾ ಹಳ್ಳಿಗಳಲ್ಲಿ ನೆಲಸಿದರು. ಅಡಕೆ ಸಸಿಗಳನ್ನು ನೆಟ್ಟು, ವೀಳೆಯದೆಲೆ ಹಂಬುಗಳನ್ನು ಹಬ್ಬಿಸಿ ಅಭಿವೃದ್ಧಿಪಡಿಸಿ *ಆ ತೋಟಗಳ ಉತ್ಪನ್ನದಿಂದ ಜೀವಿಸಿದರು.* ಇದೇ ಕಾರಣ ಇರಬೇಕು ಇವರಲ್ಲಿ *ಸ್ವತಂತ್ರ ಪ್ರವೃತ್ತಿ* ಬೆಳೆದು ಬಂದುದಕ್ಕೆ . . .

(ಪು.iii - iv)

ಸಮಾರಾಧನೆ

(ಊಟ ಎಂದರೆ ಕೃಷಿಯ ವಿಚಾರಸಂಕಿರಣ)

ಊಟ ಮಾಡುವಾಗ ಜನ ಹರ್ಷದಿಂದ ಆನಂದದಿಂದ ಮಾತುಗಳನ್ನಾಡುತ್ತ ಒಂದೊಂದು ತುತ್ತನ್ನೂ ಬಾಯಿಗೆ ಹಾಕಿಕೊಂಡು ಅಗಿಯುತ್ತ ಸವಿಯುತ್ತ *ಭೋಜನದ ಸುಖ*ವನ್ನು ಅನುಭವಿಸುತ್ತಾರೆ. ಆಗ ಕುಶಲವಾರ್ತೆಗಳೂ ವ್ಯವಹಾರದ ಮಾತುಗಳೂ ನಡೆಯುತ್ತವೆ.

'ಆ ತಿಮ್ಮಯ್ಯ ಹಾಕಿದ ಬಾಳೆಸಸಿಯ ಎಲೆಗಳೆಲ್ಲ ಮುರುಟಿಕೊಂಡು ಹೋಗಿವೆಯಲ್ಲ ಯಾಕೆ' ಎಂದು ಸತ್ಯನಾರಾಯಣ ಮಾತೆತ್ತಿದ. 'ಅವನೆಲ್ಲೋ ಒಬ್ಬ ಗುಗ್ಗು. *ಆ ನೆಲದಲ್ಲಿ ಬಾಳೆ ಬೆಳೆಯುತ್ತದೆಯೇ?* ನಮ್ಮನ್ನು ಯಾರನ್ನಾದರೂ ಕೇಳಿದ್ದರೆ ಹೇಳ್ತಾ ಇದ್ದೆವು ಆ ನೆಲ ಬಾಳೆ ವ್ಯವಸಾಯಕ್ಕೆ ಸರಿಯಿಲ್ಲ ಎಂದು. ಬೃಹಸ್ಪತಿ ನಮ್ಮನ್ನು ಕೇಳೋದೇನು ಅಂತ ಬೀಗಿಕೊಂಡು ಹೋದ, ತಾನೇನೋ ಮಹಾಘನಾಂದಾರಿ ವ್ಯವಸಾಯಗಾರ ಅಂತ.' ಕಾಲುವೆ ನಾರಣಪ್ಪ ಹೇಳಿದ. 'ಅಲ್ಲ, ಅದೊಂದು ತರ ಖಾಯಿಲೆ ಬಾಳೆಗಿಡಕ್ಕೆ ಬರೋದು ಅಂತಾರಲ್ಲ. ವ್ಯವಸಾಯದ ಇಲಾಖೆಯವರು ಅದಕ್ಕೆ ಯಾವುದೋ ಔಷಧಿ ಸಿಂಪಡಿಸುತ್ತಾರಂತಲ್ಲ' ಎಂದ ಸತ್ಯನಾರಾಯಣ. 'ಔಷಧಿ ಸಿಂಪಡಿಸಿ ಬೆಳೆಯನ್ನು ಬದುಕಿಸುವ ವ್ಯವಸಾಯ ವಿಜ್ಞಾನ ನೋಡಿದರೆ ಎಲ್ಲರೂ ಉದ್ಧಾರವಾದ ಹಾಗೇ. ನಮ್ಮ ಹಿಂದಿನವರಿಗೆ ಏನೂ ಗೊತ್ತೇ ಇರಲಿಲ್ಲ ಅನ್ನು! ಅವರೆಲ್ಲ ಕ್ರಿಮಿನಾಶಕಾನೇ ನಂಬಿಕೊಡಿದ್ದರಾ! ನಮ್ಮ ಕೃಷ್ಣಾಪುರದ ಸುಬ್ರಹ್ಮಣ್ಯ ಎಷ್ಟು ಸೊಗಸಾಗಿ ಬಾಳೆ ವ್ಯವಸಾಯ ಮಾಡಿದ್ದಾನೆ. ನೋಡುವುದಕ್ಕೇ ಒಂದು ಆನಂದ. ಚೆನ್ನಾಗಿ ಸಂಪಾದನೆಯಾಗಿ ಆದಾಯವೂ ಬಂತು' ತಮ್ಮಯ್ಯ ಉತ್ತರಿಸಿದ.

(ಪು.೩೧-೩೨)

****

ಮತ್ತೊಂದು ಕಡೆಯಲ್ಲಿ

'ಏನು ವೆಂಕಟೇಶ, ಈ ಸಲ ಶನಿವಾರಸಂತೇಲಿ ವೀಳೆಯದೆಲೆ ಹೇಗೆ ಹೋಯಿತು? ಏನೋ ತುಂಬ ನಷ್ಟವಾಯಿತು ಅಂತ ಕೇಳಿದೆನಲ್ಲ!' ತೋಟದ ಮನೆ ಅಪ್ಪಯ್ಯ ಪ್ರಶ್ನಿಸಿದ.



ಕೊಯ್ದು ತಂದ ವೀಳೆಯನ್ನು ಸಂತೆಗೆ ಅಣಿಗೊಳಿಸುವ ಮನೆಮಂದಿ

'ಏನೂ ತಿಳೀದ ಹಾಗೆ ಕೇಳ್ತೀಯಲ್ಲ. ಕತ್ತು ಮುರಿಯೋಹಾಗೆ ಎಲೆಪಿಂಡಿ ಹೊತ್ತುಕೊಂಡು ನಾವು ಹೋಗೋದು. ಅಲ್ಲಿ ನೋಡಿದರೆ ಮೂರುಕಾಸಿಗೆ ಕಟ್ಟು ಕೊಡ್ತೀಯಾ ಸ್ವಾಮೀ ಅಂತ ಆ ಬಸವನಹಳ್ಳಿ ಬಸವೇಗೌಡ ಕೇಳ್ತಾನೆ ನೋಡು. ಮೈಮುರಿದು ವ್ಯವಸಾಯ ಮಾಡಿ ಹಂಬಿಗೆ ನೀರು ಹಾಕಿ ಬೆಳೆಸೋದು, ಇಲ್ಲಿ ನೋಡಿದರೆ ಕಾಸಿಗೊಂದು ಕೊಸರಿಗೆರಡು ಅಂತ ಕೇಳೋದು' ವೆಂಕಟೇಶ ಕತ್ತನ್ನು ಮುಟ್ಟಿ ನೋಡಿಕೊಳ್ಳುತ್ತ ಹೊಟ್ಟೆ ಉರಿಯುತ್ತ ಹೇಳಿದ.

'ಕಳೆದ ಮಂಗಳವಾರದ ಸಂತೇಲಿ ಚಿನ್ನಸೋಮಿ ಎಲೆ ವ್ಯಾಪಾರವಾಗದೆ ವಾಪಸ್ಸು ತಂದು ಏನು ಮಾಡೋದು ಅಂತ *ಎಲೆ ಸರಮಾಡಿ ನಾಯಿಗಳ ಕತ್ತಿಗೆ ಹಾಕಿ ಬರಲಿಲ್ಲ ವೇ?* ಮುಖ್ಯವಾಗಿ ಬೆವರು ಸುರಿಸಿ ದುಡಿಯೋದೇ ತಪ್ಪು ಅನ್ನಿಸಿಬಿಟ್ಟಿದೆ' ಫಾಲಚಂದ್ರ ಹೇಳಿದ.

(ಪು. ೩೩)

ಗುರುಶಿಷ್ಯ ಪರಂಪರೆ

(ಕಲಿಕೆ ಮತ್ತು ಕಾಯಕದ ಸಂಗಮ)

ಬೆಳಗಿನ ಜಾವ ಮಂದ ಮಂದವಾಗಿ ಮಾರುತನು ಸುಳಿಯುತ್ತಿದ್ದಾನೆ. ತಂಪಾದ ವಾತಾವರಣ. ಮರಗಳ ಮೇಲಿನ ಹಕ್ಕಿಗಳು ರೆಕ್ಕೆ ಒದರುತ್ತ ಚಡಪಡ ಶಬ್ದ ಮಾಡುತ್ತಿವೆ. ಪ್ರಶಸ್ತವಾದ ಆ ಪ್ರಶಾಂತತೆಯ ನಡುವೆ ದೂರದಿಂದ ವೇದಮಂತ್ರಗಳ ಉಲಿ ಅಲೆಅಲೆಯಾಗಿ ಹರಿದು ಬರುತ್ತಿದೆ. ಓ ಅದೇ? *ಅವಧಾನಿಗಳು ತೋಟಕ್ಕೆ ಹೋಗುತ್ತಿದ್ದಾರೆ.* ಇಬ್ಬರು ಶಿಷ್ಯರು ಅವರನ್ನು ಹಿಂಬಾಲಿಸಿದ್ದಾರೆ. 'ತೋಟಕ್ಕೆ ಹೋಗುವುದಕ್ಕೂ ಮಂತ್ರ ಹೇಳಬೇಕೇನು? ಇದಾವ ಶಾಸ್ತ್ರ!' 'ಇದು ಶಾಸ್ತ್ರದ ವಿಚಾರವಲ್ಲ ಕಂಡ್ರೀ. ಸ್ವಲ್ಪ ಗಮನಿಸಿ ಕೇಳಿ ನೋಡಿ, ವಿಚಾರ ಗೊತ್ತಾಗುತ್ತದೆ.' 'ಹೌದು, ಶಿಷ್ಯರು ಮಾತ್ರ ಹೇಳುತ್ತಿದ್ದಾರೆ. ಇದು ವೇದಮಂತ್ರ ಎಂದಿರಲ್ಲವೇ. ನಿಜ, ಶಿಷ್ಯರು ವೇದಮಂತ್ರವನ್ನು ಉಚ್ಚರಿಸುತ್ತ ನಡೆಯುತ್ತಿದ್ದಾರೆ, ಗುರುಗಳು ಆಲಿಸುತ್ತ ಮುಂದೆ ಮುಂದೆ ಹೋಗುತ್ತಿದ್ದಾರೆ. ಶಿಷ್ಯರು ಏನಾದರೂ ತಪ್ಪು ಹೇಳಿದರೆ ಅಲ್ಲಿಯೇ ತಿದ್ದುತ್ತಾರೆ.' 'ಹೌದ್ರೀ, ಈ ಶಾಂತ ವಾತಾವರಣದಲ್ಲಿ ಮಂತ್ರಗಳ ನಾದ ಕಿವಿಗಳಿಗೆ ಎಷ್ಟು ಇಂಪಾಗಿದೆ! ಕಿವಿಗಳಿಗೆ ಇಂಪು, ಮೆದುಳಿಗೆ ತಂಪು. ಪ್ರಕೃತಿಯ ಮಡಿಲಲ್ಲಿ ವೇದೋಪಾಸನೆ, ಇದುವೆ ನಾದೋಪಾಸನೆ.'

ತೋಟದಲ್ಲಿ ಗುರುಗಳೊಡನೆ ವೀಳೆಯದೆಲೆ ಹಂಬಿಗೆ ನೀರು ಹಾಕುವುದು, ಅಗೆಯುವುದು, ಅಡಕೆ ಸೋಗೆ ಆಯ್ದು ಗುಡ್ಡೆ ಹಾಕುವುದು - ಮೊದಲಾದ ಬೆಳಗಿನ ತೋಟದ *ಕೆಲಸಗಳನ್ನು ಗುರುಶಿಷ್ಯರು ಕೂಡಿಯೇ ಮಾಡಿ* ಬಾಳೆಯಗೊನೆ, ಅಡಕೆಪಟ್ಟೆ, ಬಾಳೆಯದಿಂಡು, ಬಾಳೆ ಎಲೆ ಮೊದಲಾದುವುಗಳ ಜತೆಗೆ ತುಳಸಿ, ಪತ್ರೆ, ಹೂವು, ಸಮಿತ್ತುಗಳನ್ನು ಸೇರಿಸಿ ಹೊರೆ ಕಟ್ಟಿಕೊಂಡು ತಲೆಯ ಮೇಲೆ ಹೊತ್ತುಕೊಂಡು ಮನೆಯ ಹಾದಿ ಹಿಡಿದಿದ್ದಾರೆ. 'ಗುರುಗಳ ತಲೆಯ ಮೇಲೂ ಒಂದು ದೊಡ್ಡ ಹೊರೆಯಿದೆ ಹೌದೇ, ಗುರುಗಳೂ ದುಡಿಯುತ್ತಾರೆಯೇ, ತಲೆಯ ಮೇಲೆ ಹೊರೆ ಹೊರುತ್ತಾರೆಯೇ? ಶಿಷ್ಯರಿಂದ ದುಡಿಸಿಕೊಳ್ಳಬಾರದೆ?' 'ಛೆ, ಹಾಗೆ ಹೇಳಬೇಡಿ; ದುಡಿಮೆಯಲ್ಲೂ ದೇಹಶ್ರಮದಲ್ಲೂ ಅವರದೇ ಮೇಲುಗೈ.'

. . . . . *ಬೇರೆ ಊರಿಗೆ ಹೋದಾಗ* ಮಧ್ಯೆ ಪುರಸತ್ತು ಸಿಕ್ಕಿದಾಗ ಆ ಊರಿನ ಯುವಕರೊಡನೆ ಅವರ ತೋಟಗಳಿಗೆ ಹೋಗಿ ಅಲ್ಲಿಯ

ಫಸಲು ಹೇಗಿದೆ, ವ್ಯವಸಾಯ ಹೇಗೆ ನಡೆದಿದೆ ಎಂಬುದನ್ನು ಅರಿತುಕೊಳ್ಳುವರು. ತಮ್ಮ ಊರಿನ ತೋಟದ ನೆಲಗುಣ ಎಂಥದು, ನೀರಿನ ವಸತಿ ಹೇಗಿದೆ, ಅಡಕೆ ಬಾಳೆ ತೆಂಗು ವೀಳೆಯದೆಲೆ ಬೆಳೆ ಹೇಗಿದೆ, ಈ ಊರಿನಲ್ಲಿ ಹೇಗಿದೆ, ಯಾವ ಯಾವ ನೆಲದ ಕುಂದುಕೊರತೆಗಳೇನು, ಹೇಗೆ ವ್ಯವಸಾಯವನ್ನು ಅಭಿವೃದ್ಧಿಪಡಿಸಿಕೊಳ್ಳಬಹುದು ಎಂಬುದನ್ನೆಲ್ಲ ತಿಳಿಯಲು ಅತ್ಯುತ್ತಮವಾದ ಅವಕಾಶ ಇಲ್ಲಿ ದೊರಕುತ್ತದೆ. ವಿದ್ಯಾಭ್ಯಾಸವೆಂದರೆ ಕೇವಲ ವೇದಾಧ್ಯಯನವೋ ಶಾಸ್ತ್ರಾಧ್ಯಯನವೋ ಅಲ್ಲ, ಜೀವನೋಪಾಯಕ್ಕೆ ಅಗತ್ಯವಾದ ಜ್ಞಾನವೂ ಅಗತ್ಯ. ಅಧ್ಯಯನ, ಜೀವಿಕೆ, ಸಂಪ್ರದಾಯಾನುಸಾರವಾಗಿ ಬದುಕುವಿಕೆ ಇವೆಲ್ಲವೂ ಒಬ್ಬನನ್ನು ಪರಿಪೂರ್ಣ ವ್ಯಕ್ತಿಯನ್ನಾಗಿ ಮಾಡಿ ಜೀವನದಲ್ಲಿ ಸಾರ್ಥಕತೆಯನ್ನು ದೊರಕಿಸಿಕೊಡುತ್ತದೆ. ಇಂಥ *ಸರ್ವಾಂಗೀಣ ಕಲಿಕೆಯೇ ನಿಜವಾದ ವಿದ್ಯಾಭ್ಯಾಸ.*

. . . . . ಡಾ. ಎಂ.ಎಚ್.ಕೃಷ್ಣ ಅವರು ತಿಳಿಸಿದ್ದ ಪ್ರಕಾರ, - ಹೊಯ್ಸಳ ರಾಜರ ಕಾಲದಲ್ಲಿ ಕೆಲವು ವೇದಶಾಸ್ತ್ರ ಮೊದಲಾದವುಗಳಲ್ಲಿ ನಿಷ್ಣಾತರಾದ ವಿದ್ವಾಂಸರನ್ನು ತಮಿಳುನಾಡಿನಿಂದ ಕರೆಸಿಕೊಂಡರಂತೆ. ಇದಕ್ಕೆ ಶಾಸನಾಧಾರವೂ ಇದೆಯೆಂದು ಡಾ. ಕೃಷ್ಣ ತಿಳಿಸಿದ್ದರು. ಅವರೇ ಸಂಕೇತಿಗಳು. ಹೀಗೆ ವಲಸೆ ಬಂದವರು ತಮ್ಮ ವಿದ್ಯೆಯನ್ನೂ ಆಚಾರವನ್ನೂ ಕಾಪಾಡಿಕೊಂಡರು. ಅಂತೆಯೇ ತಮ್ಮ ಪೂರ್ವಜರ *ಕಸುಬಾದ ಅಡಕೆ ತೋಟದ ವ್ಯವಸಾಯವನ್ನೂ ಉಳಿಸಿಕೊಂಡರು.* ಸ್ವಂತ ದುಡಿಮೆಯಿಂದ ಬಾಳಲು ಕಲಿತರೇ ವಿನಹ ಇತರರ ಎದುರಿಗೆ ಕೈ ಒಡ್ಡಲಿಲ್ಲ. ಎತ್ತು, ನೇಗಿಲು ಮೊದಲಾದುವುಗಳನ್ನು ಉಪಯೋಗಿಸುವುದರ ಮೂಲಕ ಪ್ರಾಣಿಗಳಿಗೆ ಹಿಂಸೆ ಕೊಡಬಾರದೆಂಬ ಉದ್ದೇಶದಿಂದ, ಸ್ವಂತ ದುಡಿಮೆಯಿಂದ, ಕೈಕೆಲಸದಿಂದ ತೋಟದ ವ್ಯವಸಾಯವನ್ನು ಮಾಡುವ ಮೂಲಕ ಜೀವನೋಪಾಯವನ್ನು ಕಲ್ಪಿಸಿಕೊಂಡರು. 'ಪೆರರೀವುದೇಂ, ಪೆರರ ಮಾಡುವುದೇಂ, ಪೆರರಿಂದವಪ್ಪುದೇಂ' ಎಂಬ ಆದಿಕವಿ ಪಂಪನ ವಾಕ್ಯಕ್ಕೆ ಮಾದರಿಯಾಗಿದ್ದರು. ಈ ರೀತಿಯ ಬಾಳಿಗೆ ಸಿದ್ಧರಾಗಬೇಕಾದ ತಮ್ಮ ಯುವಕರಿಗೆ ಎಂಥ ವಿದ್ಯೆಯನ್ನು ಕೊಡಬೇಕೋ ಅದಕ್ಕೆ ತಕ್ಕ ರೀತಿಯಲ್ಲಿ *ಗುರುಕುಲ ಮಾದರಿಯಲ್ಲಿ* ತಮ್ಮ ತರುಣ ಜನಾಂಗಕ್ಕೆ ವಿದ್ಯಾಭ್ಯಾಸ ಕೊಡುತ್ತಿದ್ದರು.

(ಪು: ೬೯-೭೪)

ಸಭೆ-ಸಹಕಾರ *(ಊರೊಟ್ಟಿನ ಸಭೆಯಲ್ಲಿ ಕೃಷಿಯ ಮಾತೇ)*

ರಾತ್ರಿ ಎಲ್ಲರೂ ಊಟವಾದ ಮೇಲೆ ಮನೆಯ ಅಳಿದುಳಿದ ಕೆಲಸಗಳನ್ನು ಚಿಕ್ಕವರಿಗೆ ಹೇಳುತ್ತ ಎಲೆ ಅಡಿಕೆ ಜಗಿಯುತ್ತ, ಹೊಗೆಸೊಪ್ಪಿನ ಅಭ್ಯಾಸವಿರುವವರು ಹೊಗೆಸೊಪ್ಪನ್ನು ದವಡೆಯಲ್ಲಿಟ್ಟುಕೊಂಡು ಒಬ್ಬೊಬ್ಬರಾಗಿ ಸೋಮರಾಯರ ಮನೆಗೆ ಬಂದು ತೊಟ್ಟಿಯ ಮೇಲು ಹಜಾರದಲ್ಲಿ ಕುಳಿತುಕೊಳ್ಳಲಾರಂಭಿಸಿದ್ದಾರೆ. 'ಅಯ್ಯು, *ಹಸುಗಳಿಗೆ ಹುಲ್ಲು ಹಾಕಿ* ಅವುಗಳನ್ನು ಸರಿಯಾಗಿ ಕಟ್ಟಿಹಾಕಿದೆಯೋ ಇಲ್ಲವೋ ನೋಡು. ಮರೆತುಬಿಡಬೇಡ. ಅವುಗಳನ್ನು ಉಪವಾಸ ಕೆಡವಬೇಡ' ಎಂದು ಒಬ್ಬರು ಕೂಗಿ ಹೇಳಿಬರುತ್ತಿದ್ದಾರೆ. 'ಪುಟ್ಟು, ಹೋಗಿ ಆ ಕರಿಗೌಡರ ಕೈಲಿ *ಅಡಕೆ ಹಣ ವಸೂಲು ಮಾಡಿಕೊಂಡು ಬಾ ಹೋಗು.* ನಾನು ಸಭೆಗೆ ಹೋಗ್ತಾ ಇದ್ದೀನಿ. ಅವನು ನಿನ್ನೆಯೇ "ಬನ್ನಿ ಸ್ವಾಮಿ ಹಣ ಕೊಡುತ್ತೇನೆ" ಎಂದಿದ್ದ' ಎಂದು ಇನ್ನೊಬ್ಬರು ಹೇಳುತ್ತಿದ್ದಾರೆ. 'ಲೋ, ಹೊರಗಡೆ ಒಣಗಿ ಹಾಕಿರುವ *ಅಡಕೆ ಪಟ್ಟೆಯನ್ನು ಒಳಕ್ಕೆ ತೆಗೆದುಕೊಂಡು ಹೋಗಿರೋ.* ಏನಪ್ಪ ಮರೆತೇಬಿಡ್ತೀರಿ' ಎಂದು ಮಗದೊಬ್ಬರು. ಅಂತೂ ಎಲ್ಲರೂ ನಿಧಾನವಾಗಿ ಬಂದು ಸೋಮರಾಯರ ಮನೆಯಲ್ಲಿ ಸೇರಿದ್ದಾರೆ.

****

'ನಮ್ಮ ತೋಟಕ್ಕೆ ಮರಿಯಣ್ಣನ ಮನೆ ದನ ನುಗ್ಗಿ ವೀಳೆಯದೆಲೆ ಹಂಬನ್ನೆಲ್ಲ ಹಾಳುಮಾಡಿದೆ. ಇದಕ್ಕೆ ಏನು ಪರಿಹಾರ ಯಜಮಾನರೇ? ನನಗೆ ನೂರು ರೂಪಾಯಿ ಮೇಲೆ ನಷ್ಟವಾಗಿದೆ?' ಎಂದ ಚಿನ್ನಸ್ವಾಮಿ. ಅದಕ್ಕೆ ಮರಿಯಣ್ಣ, 'ನಿನ್ನ ಯಾರು ಬೇಲಿ ಹಾಕಿ ನಿನ್ನ ಆಸ್ತೀನ ಬಂದೂ ಬಸ್ತು ಮಾಡಿಕೋಬೇಡ' ಎಂದು ಹೇಳಿದರು. 'ಬೇಲಿಯಲ್ಲಿ ಜಾಗ ಸಿಕ್ಕಿದರೆ ದನಗಳು ನುಗ್ಗುತ್ತವೆ. ಅದಕ್ಕೆ ಯಾರೇನು ಮಾಡೋದಕ್ಕೆ ಆಗುತ್ತದೆ. ನಿನ್ನ ತೋಟದ ಬೇಲಿ ಕಾಯೋದಕ್ಕೆ ಯಾರನ್ನಾದರೂ ಇಪ್ಪತ್ತು ನಾಲ್ಕು ಗಂಟೆ ಕುಕ್ಕುರು ಹಾಕಿರು. ಅವತ್ತು ಹಳ್ಳಿ ದನ ನಮ್ಮ ತೋಟಕ್ಕೂ ನುಗ್ತಾ ಇತ್ತು. ನನ್ನ ಮಗ ನೋಡಿ ಓಡಿಸಿಬಿಟ್ಟು ಬಂದ. ಯಾರನ್ನ ಹೋಗಿ ಪರಿಹಾರ ಕೇಳಲಿ ನಾನು, ಹೇಳಿ' ಎಂದ ಮರಿಯಣ್ಣ. 'ನೋಡಿ, ಅವನ ನಾಲಗೆ ಎಷ್ಟು ಉದ್ದವಾಯಿತು. *ಅವನ ಹಸುಗಳನ್ನು ಕಾಯೋ ಭಾರ ಅವನದೋ ನನ್ನದೋ.* ಕಂಡಕಂಡವರ ತೋಟಕ್ಕೆ ಹಸುಗಳನ್ನು ನುಗ್ಗಿಸಿಬಿಟ್ಟು ಕೂತ್ಕೊಂಡರೆ ಯಾರು ಕೇಳ್ತಾರೆ?' ಎಂದ ಚಿನ್ನಸ್ವಾಮಿ. 'ನನ್ನ ನಷ್ಟ ಕಟ್ಟಿಕೊಡಲಿ. ಇಲ್ಲದೆ ಇದ್ರೆ

ನಾನು ನನ್ನ ಹಸುಗಳನ್ನು ಅವನ ತೋಟಕ್ಕೆ ನುಗ್ಗಿಸದೇ ಇದ್ರೆ ಆಯ್ತಲ್ಲ' ಎಂದು ಖಡಾಖಂಡಿತವೋ ಎನ್ನುವಂತೆ ಹೇಳಿದ. ಮಾತು ವಿರಸಕ್ಕೆ ತಿರುಗುತ್ತಿರುವುದನ್ನು ನೋಡಿದ ಯಜಮಾನರು, 'ನೋಡಿ, ಮಾತು ಮನೆ ಕೆಡಿಸಿತು ಎನ್ನುವಂತೆ ಸುಮ್ಮನೆ ಜಗಳ ಆಡಬೇಡಿ. ಅಕ್ಕಪಕ್ಕದ ತೋಟದವರು ಸಾಮರಸ್ಯದಿಂದ ಇರಬೇಕು. ಇಂಥ ಸಣ್ಣವಿಷಯಾನೆಲ್ಲ ಹತ್ತು ಜನಗಳ ಮುಂದೆ ತರಲೇಬಾರದು. ನಾನೊಂದು ಮಾತು ಹೇಳ್ತೀನಿ ಕೇಳಿ. ಚಿನ್ನಸ್ವಾಮಿ ಬೇಲಿಯನ್ನು ಬಂದೋಬಸ್ತಾಗಿ ಕಟ್ಟಲು ಮರಿಯಣ್ಣ ಸಹಾಯ ಮಾಡಲಿ. ಇಬ್ಬರ ತೋಟದ ನಡುವಿನ ಬೇಲಿಯಾದ್ದರಿಂದ ಇಬ್ಬರೂ ಸಹಕರಿಸಬೇಕು. ಈ ಸಲಕ್ಕೆ ನಷ್ಟ ಕಟ್ಟಿಕೊಡುವ ಮಾತನ್ನಾಡಬೇಡ ಚಿನ್ನಸ್ವಾಮಿ. ಇನ್ನೊಂದು ಸಲ ಹೀಗಾದರೆ ನಾವು ನೋಡಿ ವಿಚಾರ ಮಾಡಿ ತೀರ್ಮಾನ ಕೊಡುತ್ತೇವೆ' ಎಂದರು ಯಜಮಾನರು. 'ಯಜಮಾನರ ಮಾತಿಗೆ ಒಪ್ಪಿಕೊಂಡುಬಿಡೀಪ್ಪ' ಎಂದು ಇತರರು ದನಿಗೂಡಿಸಿದರು. ಅಲ್ಲಿಗೆ ಆ ಪ್ರಕರಣ ಮುಗಿಯಿತು.

(ಪು. ೮೩-೮೬)

ಅಡಕೆ ರೇಖೆ

(ಅಡಿಕೆಕೊಯ್ಲು ಒಂದು ಕಲೆ, ಒಂದು ಸಾಹಸ. ಅದಕ್ಕೆ ಬೇಕಾದ ತ್ರಾಣ, ಸಾಧನೆ ಸಂಕೇತಿಗಳಿಗೆ ಸಿದ್ಧಿಸಿದೆ)

. . . ಅಡಕೆ ಮರಕ್ಕೆ ಹತ್ತಿ *ಅಡಕೆಯನ್ನು ಕುಯ್ಯುವುದೂ ಒಂದು ಕಲೆ.* ಮರಹತ್ತಿ ಅಡಕೆ ಕುಯ್ಯಲು ದೇಹದಲ್ಲಿ ತ್ರಾಣವೂ ಇರಬೇಕು ಯುಕ್ತಿಯೂ ಇರಬೇಕು. ಹರಿತವಾದ ಕುಡುಗೋಲನ್ನು ತುದಿಗೆ ಕಟ್ಟಿದ ಜಲ್ಲೆಯನ್ನು ತೆಗೆದುಕೊಂಡು ಒಂದು ಮರಕ್ಕೆ ಹತ್ತಿ ಜಲ್ಲೆಯಿಂದ ಅಡಿಕೆ ಗೊನೆಗಳನ್ನು ಎಳೆದು ಕತ್ತರಿಸಿ ಮಧ್ಯೆ ನೆಲದ ಮೇಲೆ ಒಂದೇ ಜಾಗಕ್ಕೆ ಬೀಳುವಂತೆ ಬೀಳಿಸಬೇಕು. ಇಲ್ಲದೆ ಇದ್ದರೆ ವೀಳೆಯದೆಲೆ ಹಂಬುಗಳ ಮೇಲೆ ಅಡಕೆ ಗೊನೆಗಳು ಬಿದ್ದು ವೀಳೆಯದೆಲೆಯು ನಷ್ಟವಾಗುವುದು. ಒಂದು ಮರವನ್ನು ಹತ್ತಿದ ಮೇಲೆ ಕೆಳಕ್ಕೆ ಇಳಿದು ಪುನಃ ಇನ್ನೊಂದು ಮರವನ್ನು ಹತ್ತುವುದು ಅತ್ಯಂತ ಶ್ರಮದ ಕೆಲಸ ಹಾಗೂ ಸಮಯ ಹಾಳು ಮತ್ತು ದೇಹಕ್ಕೆ ಹೆಚ್ಚಿನ ತ್ರಾಸ. ಅಡಕೆ ಮರಕ್ಕೆ ವೀಳೆಯದೆಲೆ ಹಂಬುಗಳನ್ನು ಬೆಳೆಸಿರುವುದರಿಂದ ಕೆಳಗಿನಿಂದ ಮರವನ್ನು ಹತ್ತುವುದಕ್ಕೂ ಆಗುವುದಿಲ್ಲ. ಮೇಲಿನಿಂದ ಕೆಳಕ್ಕೆ ಇಳಿಯಲೂ ಆಗುವುದಿಲ್ಲ. ಇಪ್ಪತ್ತು ಮೂವತ್ತು ಹಂತಗಳ ಎತ್ತರವಾದ ಕಾಲೇಣಿಗಳ ಮೇಲೆ ಏರಿ ಹೋಗಿ ಅಡಕೆ ಮರದ ಮೇಲುಗಡೆಗೆ ಹತ್ತಬೇಕು. ಅಡಕೆ ಮರದ ತೊಂಡೆಯವರೆಗೆ ಮರವನ್ನು ಏರಲು ಆಗುವುದಿಲ್ಲ. ಎತ್ತರವಾದ ಅಡಕೆಮರಗಳು ತುಂಬ ತೂಗಾಡುತ್ತವೆ. ಅಲ್ಲದೆ ತೊಂಡೆಯ ಹತ್ತಿರ ಭಾರ ಹೆಚ್ಚಾದರೆ ಮರದ ತುದಿ ಮುರಿಯಲೂಬಹುದು. ಅಡಕೆ ಮರದ ಮೇಲೆ ಕುಳಿತುಕೊಳ್ಳುವ ಹಾಗೆ ಒಂದು *ಕೂರುಮಣೆಯ ಸಾಧನವನ್ನು ಏರ್ಪಡಿಸಿಕೊಂಡಿದ್ದಾರೆ.* ಹೆಚ್ಚು ಅಗಲವಿಲ್ಲದ ಸುಮಾರು ಮೂರು ಅಡಿ ಉದ್ದವಾದ ಮರದ ದಪ್ಪಮಣೆಯೊಂದಕ್ಕೆ ಮಧ್ಯದಲ್ಲಿ ರಂಧ್ರಮಾಡಿ ಅದಕ್ಕೆ ಎರಡು ಜೋಡಿಯ ಬಿಗಿಯಾದ ಹಗ್ಗವನ್ನು ಕಟ್ಟಿರುತ್ತಾರೆ. ಮಣೆಯ ಅಡಿಗೆ ಹಗ್ಗದ ದೊಡ್ಡ ಗಂಟನ್ನು ಬಿಗಿಯಾಗಿ ಹಾಕಿರುತ್ತಾರೆ. ಹಗ್ಗವನ್ನು ಅಡಕೆ ಮರಕ್ಕೆ ಸುತ್ತಿ ಹಗ್ಗದ ಮಧ್ಯದಲ್ಲಿ ಮಣೆಯನ್ನು ತೂರಿಸಿ ಕೆಳಕ್ಕೆ ಬಿಟ್ಟು ಎಳೆದರೆ ಅದು ಕುಣಿಕೆಯಂತಾಗಿ ಮರದ ಗಿಣ್ಣಿನ ಮೇಲೆ ಬಿಗಿಯಾಗಿ ಜಾರದೆ ಮರಕ್ಕೆ ಸುತ್ತಿಕೊಂಡಿರುತ್ತದೆ. ಕಾಲನ್ನು ಹಗ್ಗದ ಎರಡೂ ಕಡೆ ಇಳಿಬಿಟ್ಟುಕೊಂಡು ಮಣೆಯ ಮೇಲೆ ಕುಳಿತರೆ ಮನುಷ್ಯನ ಭಾರಕ್ಕೆ ಹಗ್ಗ ಬಿಗಿಯಾಗಿ ಕೂತಿರುತ್ತದೆ. ಕುಯ್ಯುವವನು ಮರದ ಕಾಂಡವನ್ನು ಎರಡು ಕಾಲುಗಳಿಂದಲೂ ಬಿಗಿಯಾಗಿ ಹಿಡಿದಿರುತ್ತಾನೆ. ಆಗ ಅಡಕೆ ಕುಯ್ಯುವವನಿಗೆ ಎರಡು ಕೈಗಳೂ ಬಿಡುವಾಗಿರುತ್ತವೆ. ಅಗತ್ಯವಾದರೆ ಮರವನ್ನು ಒಂದು ಕೈಯಲ್ಲಿ ಹಿಡಿದಿರುತ್ತಾನೆ. ಇನ್ನೊಂದು ಕೈಯಲ್ಲಿ ಜಲ್ಲೆಯನ್ನು ಹಿಡಿದುಕೊಂಡು ಗೊನೆಗಳನ್ನು ಕಿತ್ತು ಕಿತ್ತು ಒಂದು ಮಧ್ಯಜಾಗಕ್ಕೆ ಬೀಳುವಂತೆ ಗುರಿಯಿಂದ ಸೆಳೆದು ಬೀಳಿಸುತ್ತಾನೆ. ತಾನು ಹತ್ತಿರುವ ಮರ ಹಾಗೂ ಸುತ್ತಲಿನ ಮರಗಳ ಅಡಕೆ ಗೊನೆಗಳನ್ನು ಕುಯ್ದ ಬಳಿಕ *ಜಲ್ಲೆಯ ಸಹಾಯದಿಂದ ಒಂದು ಹತ್ತಿರದ ಮರವನ್ನು ಎಳೆದುಕೊಂಡು ತನ್ನ ಮರದಿಂದ ಆ ಮರಕ್ಕೆ ಜಿಗಿಯುತ್ತಾನೆ.* ಕೂರುಮಣೆಯನ್ನು ಮೊದಲೇ ಬಿಚ್ಚಿಕೊಂಡು ಹೆಗಲಿಗೆ ನೇತು ಹಾಕಿಕೊಂಡಿರುತ್ತಾನೆ. ಒಂದು ಮರದಿಂದ ಇನ್ನೊಂದು ಮರಕ್ಕೆ *ಕೋತಿಯಂತೆ ಜಿಗಿಯುತ್ತ* ಅಡಕೆ ಕುಯ್ಯಲು ಅನುಕೂಲವಾದ ಮರಕ್ಕೆ ಹೋಗುತ್ತಾನೆ. ಅಲ್ಲಿಂದ ಸುತ್ತಮುತ್ತಲಿನ ಮರಗಳ ಅಡಕೆಕಾಯಿಯ ಗೊನೆಗಳನ್ನು ಕಿತ್ತು ಬೀಳಿಸುತ್ತಾನೆ. ಕೂರುಮಣೆಯನ್ನು ಹೆಗಲಿಗೆ ಹಾಕಿಕೊಂಡು ಜಲ್ಲೆಯಿಂದ ಮರವನ್ನು ಹಿಡಿದೆಳೆದು ಇನ್ನೊಂದು ಮರಕ್ಕೆ ಜಿಗಿದುಕೊಂಡು ಹೋಗುವ ದೃಶ್ಯವು ರೋಮಾಂಚನವನ್ನುಂಟುಮಾಡುತ್ತದೆ. ಬೆಳಗ್ಗೆ ಬೇಗ ಮರ ಹತ್ತಿದರೆ ಮಧ್ಯಾಹ್ನಕ್ಕೆಲ್ಲ ಕೆಳಗಿಳಿಯಬೇಕು. ಅಷ್ಟು ಹೊತ್ತು ಮರದ ಮೇಲೆ ಕಸರತ್ತು ಮಾಡುತ್ತ ಕೆಲಸ ಮಾಡುವುದು ಸಾಮಾನ್ಯವೇ! ಮರವನ್ನು ಹತ್ತುವುದಕ್ಕೆ *ಮೊದಲು ಹೊಟ್ಟೆಗೆ ದಿಂಡಾಗುವಂತೆ ಆಹಾರವನ್ನು ತೆಗೆದುಕೊಂಡಿರಬೇಕು.* ಇಲ್ಲದೆ ಇದ್ದರೆ ಅಷ್ಟು ಹೊತ್ತು ಮರದ ಮೇಲೆ ಉಳಿದು

ಕೆಲಸಮಾಡಲು ತ್ರಾಣವಾದರೂ ಎಲ್ಲಿರುತ್ತದೆ? ನಮ್ಮ ಹಳ್ಳಿಯ ಕಡೆಯ ಅಗಲವಾದ ಇಡ್ಲಿಗಳು ಎಂಟು ಹತ್ತಾದರೂ ಬೇಕು. ಅದಕ್ಕೆ ಚೆನ್ನಾಗಿ ತುಪ್ಪ ಮೊಸರು ಆಗಲೇಬೇಕು. ಉಪ್ಪಿಟ್ಟಾದರೆ ಅರ್ಧ ಸೇರಿನದಾದರೂ ಆಗಬೇಕು. ನನಗೆ ತಿಳಿದ ಒಬ್ಬರು ಒಂದು ಪಾವಿಗೂ ಹೆಚ್ಚಿನಷ್ಟು ರವೆಯನ್ನು ತುಪ್ಪದಲ್ಲಿ ಚೆನ್ನಾಗಿ ಕಲೆಸಿ ಅದಕ್ಕೆ ರುಚಿಗೆ ಸಕ್ಕರೆ ಹಾಕಿಕೊಂಡು ತಿಂದು ಮರ ಹತ್ತುತ್ತಿದ್ದರು. ರವೆ ತುಪ್ಪ ಸಕ್ಕರೆ *ಮೂರೂ ಚೆನ್ನಾಗಿ ಶಕ್ತಿ*ಯನ್ನು *ಕೊಡುತ್ತ*ವೆ ಎಂಬುದು ಅವರ ಅನುಭವ. ನಾನು ಪೂನ ಬೊಂಬಾಯಿಯಂಥ ದೂರದ ಊರಿನಲ್ಲಿದ್ದಾಗ ಕೆಲಸಕ್ಕೆ ಹೋಗುವ ಮೊದಲು ಹೋಟಲಿಗೆ ಹೋಗಲು ಆಗದೆ ಇದ್ದರೆ ಆಗ ಸ್ವಲ್ಪ ರವೆಗೆ ತುಪ್ಪ ಸಕ್ಕರೆ ಹಾಕಿ ಅದಕ್ಕೆ ಒಂದೆರಡು ಬಾಳೆಹಣ್ಣುಗಳನ್ನು ಕತ್ತರಿಸಿ ಹಾಕಿ ಕಲಸಿಕೊಂಡು ತಿನ್ನುತ್ತಿದ್ದೆ. ಅದು ನನಗೆ ಸಂಜೆಯವರೆಗೂ ಶಕ್ತಿಯನ್ನು ಕೊಡುತ್ತಿದ್ದಿತೆಂಬುದನ್ನು ಅನುಭವದಿಂದ ಬಲ್ಲೆ.

(ಪು.೧೦೬-೧೦೭)

(ಕತ್ತಿಮಣೆಯ ಮೇಲೆ ಕೂತರೂ ಹಸುಗಳದೇ ಮಾತು)

. . . ಹರಟೆ, ತಮಾಷೆ, ಜೀವನದ ಕಷ್ಟಸುಖಗಳು, ಸುತ್ತಮುತ್ತಲಿನ ವಿಷಯಗಳು, ಮದುವೆ-ಮುಂಜಿ ಮೊದಲಾದ ಸಮಾರಂಭದ ವೈಭವಗಳು, ಕೊರತೆಗಳು, ಪಕ್ಕದ ಮನೆಯವರೋ, ಇನ್ನೊಬ್ಬರೋ ಮಾಡಿಸಿಕೊಂಡ ಒಡವೆ - ಹೀಗೆ ಒಂದು ಪ್ರಪಂಚದ ವಿಸ್ತಾರವಿರುತ್ತದೆ ಅಲ್ಲಿ. ಅತ್ತ ಕಿವಿಗೊಟ್ಟು ನೋಡಿ, ಆ ವಾರ್ತಾಲಾಪದ ಒಂದೆರಡು ತುಣುಕುಗಳನ್ನು ಸವಿಯಬಹುದಲ್ಲವೇ?

'ಅಲ್ಲ ಕಣೆ, ಅಷ್ಟು ಚೆನ್ನಾಗಿದ್ದ *ಗಂಗೆ ಹಸು ದಿನಕ್ಕೆ ಎರಡು ಸೇರು ಕೊಡ್ತಾ ಇತ್ತು*. ಪಾಪ ಅದು ಓಡಿಹೋಯಿತಲ್ಲ. ನಿನಗೆ ತುಂಬ ಬೇಜಾರಾಗಿರಬಹುದು' ಎಂದು ನಂಜಮ್ಮ ಸೀತೆಯನ್ನು ಪ್ರಶ್ನಿಸುವರು.

'ಹೌದು ನಂಜಮ್ಮತ್ತೆ. ನೋಡಿ, ಅದರ ಹಾಲು ಎಂದರೆ ಅಮೃತ ನಮ್ಮ ಮನೆಯವರಿಗೆಲ್ಲ. ಆ ಹಾಲು ಎಂದರೆ ನಮ್ಮ ಮಕ್ಕಳಿಗೆ ಪಂಚಪ್ರಾಣ. ಬೇರೆ ಹಾಲು ಬೇಡವೇ ಬೇಡ, ಗಂಗೆಯ ಹಾಲೇ ಬೇಕು ಎಂದು ಹಟ ಮಾಡುತ್ತವೆ. ಏನು ಮಾಡಲಿ ಹೇಳಿ. ಎಂಥ ಸಾಧುಪ್ರಾಣಿ ಅಂತ ನಮ್ಮ ಗಂಗೆ! ಯಾರು ಬಂದರೂ ತಂಟೆ ಮಾಡುತ್ತಿರಲಿಲ್ಲ. ಒಂದು ಹಾಯುತ್ತಿರಲಿಲ್ಲ, ಒಂದು ಒದೆಯುತ್ತಿರಲಿಲ್ಲ. ಹಾಲು ಕರೆಯುವಾಗ ಸುಮ್ಮನೆ ನಿಂತುಕೊಂಡು ಸ್ವರಬಿಡುತ್ತಿತ್ತು. ಅಂಥ ಹಸು ಇನ್ನೆಲ್ಲಿ ಹೇಳಿ?'

'ಅಯ್ಯೋ ಪಾಪ, *ಹಸು ಕಳಕೊಂಡ ಸಂಕಟ ನಿಮಗೆ ಹೇಳತೀರದು*. ಅದನ್ನು ಹುಡುಕಿಸಲಿಲ್ವೆ?'

'ಹುಡುಕದೆ ಉಂಟೆ? ನಮ್ಮ ಯಜಮಾನರೂ ಪಕ್ಕದ ಮನೆ ಶೀನಿಯೂ ಸುತ್ತಮುತ್ತಲಿನ ಹಳ್ಳಿಗಳನ್ನೆಲ್ಲಾ ಜಾಲಾಡಿಬಿಟ್ಟರು. ಎಲ್ಲಾ ಸಂತೆಗಳನ್ನೂ ಶೋಧಿಸಿಬಿಟ್ಟರು. ಶನಿವಾರಸಂತೆಗೂ ಹೋಗಿಬಂದರು. ಸಿಗಲಿಲ್ಲ ನೋಡಿ!'

'ಆ ಬೂದನೂರು ಕೆಂಪ ಸಿಕ್ಕಿದ ಹಸುಗಳನ್ನು ಹಿಂದುಗಡೆ ಕೊಟ್ಟಿಗೆಯಲ್ಲಿ ಕಟ್ಟಿ ಹಾಕಿದ್ದು, ಗುಟ್ಟಾಗಿ ಸಂತೆಗೆ ಹೊಡೆದುಕೊಂಡು ಹೋಗಿ ಮಾರಿಬಿಡುತ್ತಾನಂತಲ್ಲ, ಅಲ್ಲಿ ನೋಡಲಿಲ್ಲವೇ!'

'ಅಲ್ಲಿಯೂ ನೋಡಿದರು, ಹರದನಹಳ್ಳಿ ರಂಗಯ್ಯನ ಕೊಟ್ಟಿಗೇನೂ ನೋಡಿಬಂದರು. ದೊಡ್ಡಕೊಪ್ಪಲು, ಕಾಳೇನಹಳ್ಳಿ, ಬಿದರಕ್ಕ, ಮಿರ್ಲೆ ಎಲ್ಲಾ ಕಡೆಗೂ ಹೋಗಿಬಂದರು. ನಮ್ಮ ದುರದೃಷ್ಟ, ಎಲ್ಲೂ ಸಿಗಲಿಲ್ಲ. *ನಮ್ಮ ಪ್ರಾಪ್ತಿ ಗಂಗೇದು ಅಷ್ಟೇನೇ* ಅಂತ ವಿಧಿ ನಿಯಾಮಕವೇನೋ.'

'ಕಳೆದ ಸಲ ನಮ್ಮ ಕಿಟ್ಟು ಮುಂಜಿಯಲ್ಲಿ ಕೊಟ್ಟಿದ್ದೀರಲ್ಲ ತುಪ್ಪ, ಅದು ಗಂಗೆಯದೇ ಎಂದು ಹೇಳಿದ್ದಿರಲ್ಲ ಅದರ ಘಮ ಏನು, ಅದೇನು ರುಚಿ ಇನ್ನೂ ಜ್ಞಾಪಿಸಿಕೊಳ್ಳುವ ಹಾಗಾಗ್ತಿದೆ.'

'ತುಪ್ಪ ಏನು, ಅದರ ಹಾಲಿನ ಮೊಸರು ಕೂಡ ಗಟ್ಟಿಯಾಗಿ ಹೆಪ್ಪಾಗುತ್ತಿತ್ತು. ನಮ್ಮ ಹುಡುಗರು ಅದರ ಗರಣೆ ಮೊಸರನ್ನೇ ಕೇಳ್ತಾ ಇದ್ದರು.'

(ಪು.೧೧೧-೧೧೨)

೯. 'ಕೌಶಿಕ ', ಕಲ್ಯಾಣಮಂದಿರದ ಉದ್ಘಾಟನೆ ಸ್ಮರಣ ಸಂಪುಟ

ಪ್ರಕೃತಿಪುತ್ರರು - ವೃಕ್ಷಮಿತ್ರರು

ಪ್ರ: ೧೯೯೫, ಪು: ೧೫, ೧೬,

ಪ್ರೊ. ಕೆ. ಎಸ್. ಕೃಷ್ಣಮೂರ್ತಿ

(ಐಹಿಕ-ಆಮುಷ್ಮಿಕದ ಸಂಗಮ: ಜೀವನದ ಸೊಗಸು)

. . . *ಧರ್ಮಾನುಸಾರವಾಗಿ ಬಾಳಬೇಕಾದರೆ,* ಐಹಿಕ ಜೀವನಧಾರಣೆಗೆ ಅಗತ್ಯವಾದ ವೃತ್ತಿಯೊಂದು ಬೇಕು. ಸಂಕೇತಿಗಳು *ಸ್ವತಂತ್ರವಾಗಿ* ಬದುಕನ್ನು ನಡೆಸಲು ಆರಿಸಿಕೊಂಡ ವೃತ್ತಿ *ತೋಟಗಾರಿಕೆ.* ಸ್ವತಂತ್ರ ವೃತ್ತಿ ಇಲ್ಲದಿದ್ದರೆ ಧರ್ಮಾಚರಣೆ ಸುಸೂತ್ರವಾಗಿ ನಡೆಯಲಾರದು. ಆದುದರಿಂದ ಸಂಕೇತಿಗಳು *ಐಹಿಕ-ಆಮುಷ್ಮಿಕ ಎರಡೂ ಧರ್ಮಗಳನ್ನು ಸಮತೂಕದಿಂದಲೇ ಆಚರಿಸಿದರು.* ತಮ್ಮ ಜೀವನವನ್ನು ಕರ್ಮ ಜಡತ್ವಕ್ಕೂ ಅರ್ಪಿಸಲಿಲ್ಲ; ಜೀವನನಿಷ್ಠೆಯನ್ನೂ ತ್ಯಜಿಸಲಿಲ್ಲ.

ತೋಟದ ವ್ಯವಸಾಯ ಶ್ರಮಸಾಧ್ಯವೂ, ಕಷ್ಟಕರವೂ ಆದುದು. ಆದರೂ ಈ ವೃತ್ತಿಯಲ್ಲಿ ಸಂಕೇತಿಗಳು ನುರಿತವರಾಗಿದ್ದರು. ತಾವು ವಲಸೆ ಬಂದ ತಮಿಳುನಾಡಿನಲ್ಲಿಯೇ ಈ ವ್ಯವಸಾಯವನ್ನು ಅವಲಂಬಿಸಿದ್ದು; ಮೈಸೂರು ಸಂಸ್ಥಾನಕ್ಕೆ ಬಂದ ಮೇಲೂ ಅದನ್ನೇ ತಮ್ಮ ಮುಖ್ಯ ಕಸುಬನ್ನಾಗಿ ಆರಿಸಿಕೊಂಡರು ಎಂದು ತೋರುತ್ತದೆ. ಅಡಿಕೆ, ವೀಳೆಯದೆಲೆ, ಬಾಳೆ, ತೆಂಗಿನ ಬೆಳೆಗಳ ವ್ಯವಸಾಯವನ್ನು ಸಮರ್ಪಕವಾಗಿ ಮಾಡುತ್ತಿದ್ದರು. *ತೋಟಗಳೆಂದರೆ ಸಂಕೇತಿಗಳಿಗೆ ಬಂಧುವಿದ್ದಂತೆ, ತಂದೆಯಿದ್ದಂತೆ, ತಾಯಿಯಿದ್ದಂತೆ,* ಜೀವನಾಶ್ರಯವಾದ ತೋಟದ ವೃಕ್ಷಗಳಲ್ಲಿ ಅವರಿಗೆ ಅನುಪಮ ಪ್ರೀತಿ. ತಮ್ಮ ಕಂದಮ್ಮಗಳಂತೆ ಅವುಗಳನ್ನು ನೋಡಿಕೊಳ್ಳುತ್ತಿದ್ದರು. ಸಂಕೇತಿಗಳನ್ನು *ವೃಕ್ಷಮಿತ್ರರೆಂದೂ* ಹೇಳಬಹುದು. ಎತ್ತರವಾಗಿ ನೆಟ್ಟಗೆ ತಲೆಯೆತ್ತಿನಿಂತ ಅಡಿಕೆ ಮರಗಳ ಸುತ್ತ ಹಬ್ಬಿದ ವೀಳೆಯದೆಲೆ ಬಳ್ಳಿಗಳು ಸಮೃದ್ಧವಾಗಿ ಹೊಂಬಣ್ಣದಿಂದ ಹೊಳೆಯುತ್ತಿರುವುದನ್ನು ನೋಡುತ್ತಾ ನಿಂತರೆ, ನಮಗೆ ಬೇರೆ ಯಾವುದೋ ಒಂದು *ಸುಖೀಸಾಮ್ರಾಜ್ಯದಲ್ಲಿ ಮುಳುಗಿದಂತೆ* ಎಂಬುದರಲ್ಲಿ ಉತ್ಪ್ರೇಕ್ಷೆಯಿಲ್ಲ. ಅಡಕೆಯ ಮರಗಳು ಶಿರದಲ್ಲಿ ಹಸುರಿನ ಹಾಗೂ ಕೆಂಪು ಅಡಕೆ ಕಾಯಿಗಳ ಗೊಂಚಲನ್ನು ಹೊತ್ತು ನಿಂತುಕೊಂಡು ತಲೆದೂಗುತ್ತಿದ್ದರೆ 'ನೋಡಿ, ನಮ್ಮ ಫಲಗಳಿಂದ ನಿಮಗೆ ಸಂತೃಪ್ತಿಯಾಗಿಲ್ಲವೇ? ಗೊಬ್ಬರ ಹಾಕಿ ನೀರುಣಿಸಿ ಸಾಕಿದ್ದಕ್ಕೆ ನಾವು ಅನ್ಯಾಯ ಮಾಡುತ್ತಿಲ್ಲವಲ್ಲ?' ಎಂದು ಪ್ರಶ್ನಿಸುವಂತೆ ಕಾಣುತ್ತವೆ. ಹೊಂಬಣ್ಣದಿಂದ ಮಿರುಗುತ್ತಿರುವ ವೀಳೆಯದೆಲೆಗಳನ್ನು ನೋಡಿದೊಡನೆ ಯಾವ ರಸಿಕನಿಗಾದರೂ ಸುಖವಾದ ತೃಪ್ತಿಯನ್ನೀಯುವ ತಾಂಬೂಲದ ನೆನಪು ಉಕ್ಕಿ ಬಂದು ಬಾಯಲ್ಲಿ ನೀರೂರುತ್ತದೆ; ಸುಗಂಧಿತ ಕರ್ಪೂರ ವೀಳ್ಯವನ್ನು ಮೆದ್ದಂತಾಗುತ್ತದೆ. ಕಳೆ ಒಂದಿಷ್ಟೂ ಇಲ್ಲದಂತೆ ಸ್ವಚ್ಛವಾಗಿಟ್ಟ ತೋಟದ ನೆಲ, ಸಾಲು ಸಾಲಾಗಿ ಬೆಳಸಿದ ಅಡಕೆ ಮರಗಳು, ಅವುಗಳನ್ನು ಬಳಸಿದ ವೀಳೆಯದೆಲೆ ಬಳ್ಳಿಗಳ ಬುಡದಲ್ಲಿ ಸುಂದರವಾಗಿ ವರ್ತುಲಾಕಾರವಾಗಿ ರೂಪಿಸಿದ ಪಾತಿಗಳು - ಇವುಗಳನ್ನು ನೋಡಿದಾಗ ಭೂಲೋಕದ ನಂದನವನದ ಐಸಿರಿಯೇ ಧರೆಗಿಳಿದು ಬಂದಂತೆ ತೋರುತ್ತದೆ. ತೋಟದಲ್ಲಿ ಅಲ್ಲಲ್ಲಿ ಬೆಳೆಸಿರುವ ಹೂವಿನ ಗಿಡಗಳಿಂದ ಬರುವ ಸುಗಂಧ, ಬಾಳೆಯ ಗಿಡಗಳ ನಿರ್ದಿಷ್ಟ ಕಂಪು, ಮಂದಮಾರುತ, ತಂಪಾದ ನೆರಳು - ಇವು ತೋಟಗಳಲ್ಲಿ *ಸುಖವನ್ನು ಕೊಡತಕ್ಕ ಅಂಶಗಳು* ನಿಜ, ಆದರೆ ಇವುಗಳೆಲ್ಲದರ ಹಿಂದೆ ತೋಟದ ಕೃಷಿಯಲ್ಲಿ ತೊಡಗಿದವನ *ಶ್ರಮವನ್ನು ಮರೆಯಲು ಸಾಧ್ಯವೇ!* ಜೀವನಕ್ಕೆ ಆಧಾರವಾದ ವೃಕ್ಷಗಳ, ಲತೆಗಳ ಕೃಷಿಯ ಈ ವೃತ್ತಿ ಸಂಕೇತಿಗಳನ್ನು *ಪರಿಸರ ಪ್ರೇಮಿಗಳನ್ನಾಗಿಯೂ, ಪ್ರಕೃತಿಯ ವರಪುತ್ರರನ್ನಾಗಿಯೂ* ಮಾಡಿದ್ದಿತೆಂದರೆ ಆಶ್ಚರ್ಯವಿಲ್ಲ. ಈ ಸ್ವತಂತ್ರ ವೃತ್ತಿ ಸಂಕೇತಿಗಳಿಗೆ ಒಂದು ಧರ್ಮಾಚರಣೆಯೇ ಆಗಿತ್ತು. ಐಹಿಕಾಮುಷ್ಮಿಕಗಳೆರಡಕ್ಕೂ ಸಮಾನ ಒತ್ತು ಕೊಟ್ಟ ಸಂಕೇತಿಗಳ ತೋಟದ ಕೃಷಿ ಹಾಗೂ ಅವರ ವೃಕ್ಷಪ್ರೇಮ ಮೋಕ್ಷಪ್ರದವಾಗಿಯೇ ಇತ್ತೆಂದೂ ಭಾವಿಸಬಹುದಲ್ಲವೇ! ಆದರೆ ಬದಲಾಗುತ್ತಿರುವ ಇಂದಿನ ಸಾಮಾಜಿಕ ಪರಿಸ್ಥಿತಿಗೆ ಅನುಗುಣವಾಗಿ ಸಂಕೇತಿಗಳು ತಮ್ಮ ಪರಂಪರಾನುಗತವಾದ ಕೃಷಿಯನ್ನು ಬಿಟ್ಟು *ಅನ್ಯಕ್ಷೇತ್ರಗಳಿಗೆ* ಪ್ರವೇಶಿಸಿದ್ದಾರೆ. *ಹಿಂದಿನ ಸಂಕೇತಿಗಳ ಜೀವನದ ಆ ಸೊಗಸು ಅವರಿಗೆ ಕನಸಿನ ಮಾತೇ ಸರಿ.*

ಜನಸಂಖ್ಯೆ ನಾಗಾಲೋಟದಿಂದ ವೃದ್ಧಿಸುತ್ತಿರುವ ಈ ಸಂದರ್ಭದಲ್ಲಿ ಮನುಷ್ಯನ ಆವಶ್ಯಕತೆಯನ್ನು ಪೂರೈಸಲು ಭವಿಷ್ಯವನ್ನೇ ಚಿಂತಿಸದೆ ವನಸಿರಿಯನ್ನು ಕಡಿದು ವಸುಂಧರೆಯನ್ನು ನಿರಾಭರಣೆಯನ್ನಾಗಿ ಮಾಡಿರುವುದೂ, ಇನ್ನೂ ಮಾಡುತ್ತಿರುವುದೂ ಶೋಚನೀಯ ಸಂಗತಿ. ವಿಜ್ಞಾನಿಗಳು ಅರಣ್ಯಗಳ ಹಾಗೂ ಮರಗಳ ನಾಶದಿಂದ ನಾಡಿಗೆ ಆಗುವ ನಷ್ಟವನ್ನು ಎತ್ತಿತೋರಿಸಿ ಕಾಡನ್ನು ಬೆಳಸುವಂತೆ, ಪರಿಸರವನ್ನು

ರಕ್ಷಿಸುವಂತೆ ಕಳಕಳಿಯ ಎಚ್ಚರಿಕೆಯನ್ನು ಇತ್ತಿರುವರು. ಸಂಕೇತಿಗಳು ಕಾರ್ಯಾಕಾರಣದಿಂದ ಜೀವನ ನಿರ್ವಹಣೆಗೆ ಆರಿಸಿಕೊಂಡ *ತೋಟಗಳ ಕೃಷಿ ಭೂಮಿಯ ವನಸಿರಿಯನ್ನು ಹೆಚ್ಚಿಸಿ ರಕ್ಷಿಸುವುದೇ ಆಗಿಲ್ಲವೇ!*

ದೂರದಿಂದಲೇ ಅಲ್ಲಲ್ಲಿ ಹಸುರಾಗಿ ತಲೆಯೆತ್ತಿ ನಿಂತಿರುವ ತೋಟಗಳು *ಭೂದೇವಿಯ ಆಭರಣದಂತೆ* ಕಂಗೊಳಿಸುವುವಲ್ಲವೇ! ಮಾನವನ ಉಳಿವಿಗೂ ಏಳಿಗೆಗೂ ಕಾರಣವಾದ ವೃಕ್ಷಸಂಪತ್ತನ್ನು ನಮ್ಮ ಹಿರಿಯರು *ಬಹುಜತನ (ಜವಾಬ್ದಾರಿ) ಯಿಂದ ರಕ್ಷಿಸಿಕೊಂಡು ಬಂದಿದ್ದಾರೆ.*

ಸಸ್ಯಸಂಪದ ಮಾನವನಿಗೆ ಹಲವು ರೀತಿಯಲ್ಲಿ ಉಪಕಾರಿ; ಅವನ ಉಪಜೀವನಕ್ಕೆ ಸಹಕಾರಿ. ಭೂಮಿತಾಯಿ ತನ್ನ ಒಡಲಿನಲ್ಲಿ ಹೆತ್ತೂ ಹೊತ್ತೂ ವೃಕ್ಷಗಳನ್ನು ಬೆಳೆಸಿ ಸಂಪದ್ಯುಕ್ತವನ್ನಾಗಿ ಮಾಡುವುದು ಮಾನವನ ಉಪಯೋಗಕ್ಕಾಗಿಯೇ. ವೃಕ್ಷಾದಿಗಳ ಉತ್ಪನ್ನದಿಂದ ಆತನು ಹೊಟ್ಟೆ ತುಂಬಿಸಿಕೊಳ್ಳುವನು. *ಈ ಮಾತುಗಳು ಸಂಕೇತಿಗಳಿಗೆ ಪೂರ್ಣವಾಗಿ ಅನ್ವಯಿಸುತ್ತದೆ.* ಸಂಕೇತಿಗಳು ತೋಟಗಳನ್ನು ಬೆಳೆಸಿ-ಬಳಸಿ ಕೃತಕಾರ್ಯರಾಗಿದ್ದಾರೆ. ವೀಳೆಯದೆಲೆ, ಅಡಕೆ, ಬಾಳೆ, ತೆಂಗು ಒಂದೊಂದೂ ಅವರಿಗೆ ಉಪಕಾರಿ; ಜೀವನಕ್ಕೆ ಸಹಕಾರಿ. ಹೀಗೆ ವೃಕ್ಷಸಂಪತ್ತಿನಿಂದ ಜೀವನ ನಡೆಸಿದ, ನಡೆಸುವ *ಸಂಕೇತಿಗಳು ಪರಿಸರ ಪ್ರೇಮಿಗಳು, ಆರಾಧಕರು, ಪ್ರಕೃತಿಯ ಸಹಚರರು.*



ತೋಟಗಳ ಆಗ್ರ: ಭೂದೇವಿಯ ಆಭರಣ; ಗೋವಿನೊಡನೆ ಮನೆಗೆ ಮರಳುವ ವೈದಿಕ

೧೦. 'ಸಂತುಷ್ಟಿ': ಸಂ: ಡಾ||ಬಿ.ಎಸ್.ಪ್ರಣತಾರ್ತಿ ಹರನ್, ಸಮುದಾಯ ಅಧ್ಯಯನ ಕೇಂದ್ರ, ಮೈಸೂರು

(ಗ್ರಾಮೀಣ ಬದುಕಿನ ಸೊಗಸನ್ನು ಚಿತ್ರಿಸುವ ಲೇಖನಗಳ ಆಯ್ದ ಭಾಗಗಳನ್ನು ಇಲ್ಲಿ ಕ್ರೋಡೀಕರಿಸಲಾಗಿದೆ)

ಅ) ನೆನಪು ಸಿಹಿ

ಪ್ರ: ೧೯೯೭, ಪು: ೨೪-೨೭ — *ಆರ್.ಎಲ್. ಅನಂತರಾಮಯ್ಯ*

(ಹಳ್ಳಿಯು ಸುಂದರ, ತೋಟವು ಸ್ವಯಂಪೂರ್ಣ, ತಿನ್ನಲು ಹಣ್ಣು ಧಾರಾಳ, ಕಾಯಕದ್ದೇ ಸಂಭ್ರಮ)

ನೆನಪುಗಳು ಎಂದೂ ಸಿಹಿ. ಅವಕ್ಕೆ ಅಳಿವಿಲ್ಲ. ಕಾಲನ ಪೆಟ್ಟಿಗೆ ಅವು ಸಿಕ್ಕುವುದಿಲ್ಲ. ಎಷ್ಟೇ ವರ್ಷಗಳುರುಳಿದರೂ ಮನಸ್ಸಿಗೆ ಮುದತರುವ ನೆನಪುಗಳು ಬದುಕಿನ ಇಳಿಗಾಲದಲ್ಲಿ ಆಸರೆಯಾಗುತ್ತವೆ. ದೈನಂದಿನ ಹೋರಾಟದಲ್ಲಿ ಬೆಂದು ಬಸವಳಿದ ಚೇತನಕ್ಕೆ, ನೆನಪುಗಳು ಹೊಸ ಉಲ್ಲಾಸವನ್ನು ತರುತ್ತವೆ.

ನನ್ನ ಪ್ರೀತಿಯ ರುದ್ರಪಟ್ಟಣ ಸುಂದರವಾದ ಹಳ್ಳಿ. ಹಳ್ಳಿ ಎಂದರೆ ಈಗ ಅಲ್ಲಿಯವರಿಗೆ ಕೋಪ ಬರಬಹುದು. ಆಸ್ಪತ್ರೆ ಇದೆ, ಪದವಿಪೂರ್ವ ಕಾಲೇಜಿದೆ, ಬ್ಯಾಂಕಿದೆ, ಇದನ್ನು ಹಳ್ಳಿ ಎನ್ನಬಹುದೆ? ಅವರು ಏನೇ ಹೇಳಲಿ, ನಾನು ಇಂದಿಗೆ ಐವತ್ತು ವರ್ಷಗಳ ಹಿಂದಿನ ರುದ್ರಪಟ್ಟಣವನ್ನು ನೋಡಿದವನು, ಅಲ್ಲಿ ಬದುಕಿನ ಕೆಲ ಭಾಗವನ್ನು ಕಳೆದವನು. *ನಮ್ಮ ಗ್ರಾಮೀಣ ಸಂಸ್ಕೃತಿಯ ಸೊಗಡು* ಅಲ್ಲಿ ನನ್ನ ಅನುಭವಕ್ಕೆ ಬಂದಿದೆ.

ರುದ್ರಪಟ್ಟಣ ಬೆಲ್ಲದ ಅಚ್ಚಿನ ಹಾಗಿರುವ ಹಳ್ಳಿ. ಮುಖ್ಯವಾದ ನಾಲ್ಕು ರಸ್ತೆಗಳು ಚೌಕಾಕಾರದಲ್ಲಿ; ಅವುಗಳ ಹೊರವಲಯದ ಉತ್ತರ, ಪೂರ್ವ ಮತ್ತು ದಕ್ಷಿಣಗಳಲ್ಲಿ ಹಾದ ಇನ್ನೊಂದು ರಸ್ತೆ. ಊರಿನಿಂದ ಹೊರಹೋಗಲು ಪಶ್ಚಿಮದಲ್ಲಿ ರಸ್ತೆ. ಮತ್ತಿಗೋಡು - ಅಡ್ಡರಸ್ತೆ, ರಾಮನಾಥಪುರ, ಕೊಣನೂರು ಇತ್ಯಾದಿಗಳಿಗೆ ಹೋಗಬೇಕಾದರೆ ಒಂದು ದಾರಿ. ಊರಿನ ಪೂರ್ವದಿಕ್ಕಿನಲ್ಲಿ ವಿಶಾಲವಾದ ಪಾತ್ರದಲ್ಲಿ ಹರಿಯುವ ಕಾವೇರಿ. ದಡದಲ್ಲಿ ಬಂಡೆಗಳಿದ್ದರೂ ಜೂನ್-ಜುಲೈ ತಿಂಗಳ ಪ್ರವಾಹ ಸಮಯದಲ್ಲಿ ಅವೆಲ್ಲ ನೀರಿನಿಂದ ಮುಚ್ಚಿ ಹೋಗಿ ಅದೊಂದು ರುದ್ರ ಸುಂದರ ದೃಶ್ಯವನ್ನು ನೀಡುತ್ತದೆ. ರುದ್ರಪಟ್ಟಣದಿಂದ ಉತ್ತರಕ್ಕೆ ನದಿಗೆ ಹಾಕಿರುವ ಕಟ್ಟೆಯ ಮೇಲೆ ನಡೆದು ಬಸವಾಪಟ್ಟಣ ಸೇರಬಹುದು. ನದಿಯ ಆ ಕಡೆ ಬಸವಾಪಟ್ಟಣ, ಈ ಕಡೆ ರುದ್ರಪಟ್ಟಣ. ಇನ್ನು ಪೂರ್ವದಲ್ಲಿ ಹರಿಗೋಲಿನಲ್ಲಿ ಕುಳಿತು ನದಿದಾಟಿ ಹೋದರೆ ಕೇರಳಾಪುರ-ಸುಪ್ರಸಿದ್ಧ ಸಂಸ್ಕೃತ ವಿದ್ವಾಂಸ ಡಾ.ಕೇರಳಾಪುರ ಕೃಷ್ಣಮೂರ್ತಿಯವರ ಊರು. ಪಶ್ಚಿಮಕ್ಕೆ ನಡೆದು ಹೋದರೆ ಹನ್ಯಾಳು.



ತಾಯಿ ಕಾವೇರಿಯ ಮಡಿಲು

ಊರಿನ ಸುತ್ತಲೂ ಮೂರೂ ಕಡೆ ಬತ್ತದ ಗದ್ದೆಗಳು ಕಾವೇರಿಯ ನೀರು ಕುಡಿದು ಸೊಂಪಾಗಿ ಬೆಳೆಯುತ್ತವೆ. ಉತ್ತರಕ್ಕೆ ಗದ್ದೆಗಳನ್ನು ದಾಟಿ ತೋಟಗಳು. ಈ ತೋಟಗಳು ಯಾವುದೇ ಒಂದು ಫಲದ ತೋಟಗಳಲ್ಲ; ಬಹುಫಸಲಿನ ಅಂದರೆ, ಅಡಕೆ, ಬಾಳೆ, ತೆಂಗಿನ ಮರಗಳು, ವೀಳೆಯದೆಲೆ ತುಂಬಿದ ತೋಟಗಳು. ಅಲ್ಲೇ ಬೇಲಿಯಲ್ಲಿ ಒಂದೋ ಎರಡೋ ಹುಣಿಸೆ ಮರಗಳು ಹಾಗೂ ಸೀಗೆಮೆಳೆಗಳು. *ಈ ತೋಟಗಳು ಎಷ್ಟು ಸ್ವಯಂಪೂರ್ಣವೆಂಬುದನ್ನು ಅಲ್ಲಿ ಹೋಗಿಯೇ ನೋಡಬೇಕು.* ಸದಾ ತಂಪಾದ ತೋಟ, ಮಧ್ಯೆ

ಬಾವಿ - ನೀರನ್ನು ಕೈಯಿಂದ ಹೊತ್ತು ಗಿಡಗಳಿಗೆ ಹಾಕಬೇಕು, ಅಂತಹ ತೆರೆದ ಬಾವಿಗಳು. ಅಲ್ಲಲ್ಲೇ ಕಿತ್ತಳೆ, ಚಕ್ಕೋತ, ಸೀನಿಂಬೆ ಗಿಡಗಳು. ಬಾಳೆಯ ತರಗು ದೊನ್ನೆಗೆ, ತೆಂಗಿನ ಸೋಗೆ, ಗೊದಮಟ್ಟೆ ಒಲೆಗೆ, ಮನೆಗೆ ಬೇಕಾದಷ್ಟು ತೆಂಗಿನಕಾಯಿ, ಧಾರಾಳವಾಗಿ ವಿಳ್ಯೇದೆಲೆ. ಬಾಳೆಹಣ್ಣು ಕೊಂಡುಕೊಂಡದ್ದು, ನಾನು ನೋಡಿಯೇ ಇಲ್ಲ. ನನ್ನ ಸೋದರಮಾವ ಬಲಿತ ಮರಬಾಳೆಗೊನೆಗಳನ್ನು ತಂದು, ಅಡೆಹಾಕಿ, ತೆಗೆದು *ಸೂರಿಗೆ ಕಟ್ಟುತ್ತಿದ್ದರು*. ಹೋಗಾ-ಬರಾ ಹಣ್ಣು ಬಿಡಿಸಿ ತಿಂದಿದ್ದೇ ತಿಂದದ್ದು. ಈಗ ಆ ಹಣ್ಣು ಸಿಕ್ಕುವುದಿಲ್ಲ. ಸಿಕ್ಕಿದರೂ ಎರಡು ರೂಪಾಯಿಗೆ ಒಂದು! *ನಮ್ಮ ಮಕ್ಕಳಿಗೆ ಗೊನೆಯಿಂದ ಧಾರಾಳವಾಗಿ ಕಿತ್ತು ತಿನ್ನುವ ಕಲ್ಪನೆ ಬರುವುದು ಹೇಗೆ?* ಮರಬಾಳೆ (ಕಾಡುಬಾಳೆ) ರಟ್ಟೆ ಗಾತ್ರದ ಹಣ್ಣುಗಳಿರುವ ಒಂದು ಚಿಪ್ಪು ಇಡಲು ಸಾಮಾನ್ಯ ಅಳತೆಯ ಒಂದು ತಟ್ಟೆ ಸಾಲುವುದಿಲ್ಲ. ಹಳದಿಬಣ್ಣದಿಂದ ಕಣ್ಸೆಳೆಯುತ್ತಾ ಮಧುರ ಪರಿಮಳದಿಂದ ಆಕರ್ಷಿಸುವ ಆ ಮರಬಾಳೆಯ ಎದುರಿಗೆ ಈಗಿನ ಪಚ್ಚಬಾಳೆಯನ್ನು ನೀವಳಿಸಿ ಎಸೆಯಬೇಕು. ತೋಟದಲ್ಲಿ ಹೂವಿನ ಗಿಡಗಳೂ ಇರುತ್ತಿದ್ದವು - ಬೆಟ್ಟದಾವರೆ, ಮಲ್ಲಿಗೆಬೀಳು, ಪಚ್ಚೆತೆನೆ, ಮರುಗ, ದವನ ಇತ್ಯಾದಿ. ಅಪರೂಪಕ್ಕೆ ಒಂದು ಸಂಪಿಗೆ ಮರ, ಪಾದರಿ ಇರುವುದೂ ಉಂಟು.

ಜನ ತುಂಬ ಶ್ರಮಜೀವಿಗಳು. ಮೊದಲೇ ಹೇಳಿಬಿಟ್ಟಿದ್ದೇನೆ, ನನ್ನ ನೆನಪಿಗೆ ಬರುವುದು ಐವತ್ತು ವರ್ಷಗಳ ಹಿಂದಿನ ರುದ್ರಪಟ್ಟಣ. ಬ್ರಾಹ್ಮಣರಾಗಲಿ ಇತರರಾಗಲಿ, ಹೊಲ, ಗದ್ದೆ, ತೋಟಗಳ ಕೆಲಸ ವರ್ಷವಿಡೀ ಇರುತ್ತಿತ್ತು; ಪ್ರತಿಯೊಬ್ಬರೂ ದುಡಿಯಬೇಕಾಗಿತ್ತು. ನಾಗರಿಕತೆಯ ಚಂಡಮಾರುತವು ಇನ್ನೂ ಬೀಸಿರದ ಕಾಲವದು. ಇನ್ನೂ ನಮ್ಮೂರಿಗೆ ವಿದ್ಯುತ್ ಬಂದಿರಲಿಲ್ಲ. ಸೀಮೆಎಣ್ಣೆ ಬುಡ್ಡಿ ದೀಪಗಳೇ ಸಾಮಾನ್ಯ. ಸ್ವಲ್ಪ ಉತ್ತಮ ಮಟ್ಟದ್ದೆಂದರೆ ಲಾಟೀನುಗಳು, ಗೋಡೆ ಲ್ಯಾಂಪುಗಳು. ಅವುಗಳ ಚಿಮಣಿಗಳನ್ನು ಪ್ರತಿದಿನ ವಿಭೂತಿ ಹಾಕಿ ಉಜ್ಜಿ ಶುದ್ಧಪಡಿಸುವುದೇ ಒಂದು ಕೆಲಸವಾಗುತ್ತಿತ್ತು. ಇನ್ನೂ ಕುಕ್ಕರ್ ಆಗಲೀ, ಮಿಕ್ಸರ್ ಆಗಲೀ ಬಂದಿರಲಿಲ್ಲವಾದ್ದರಿಂದ ಸೌದೆ ಉರಿಸಿ ಅಡುಗೆ ಮಾಡುವುದು, ಕುಟ್ಟುವುದು, ಬೀಸುವುದು, ರುಬ್ಬುವುದು ಇವೆಲ್ಲ ಇಡೀ ದಿನವನ್ನು ನುಂಗುತ್ತಿದ್ದ ಕೆಲಸಗಳು. ಸಾಲದ್ದಕ್ಕೆ ಹೆಣ್ಣುಮಕ್ಕಳು, ತಾಯಂದಿರು, ಪಾತ್ರೆ-ಪಡಗಗಳನ್ನು, ಬಟ್ಟೆಗಳನ್ನು ಹೊತ್ತುಕೊಂಡು ಹೊಳೆಗೆ ಹೋಗಿ ಅಲ್ಲಿ ತೊಳೆದುಕೊಂಡು, ಒಗೆದುಕೊಂಡು ಬರುವರು. ಕುಡಿಯಲು ಥಳಥಳ ಹೊಳೆಯುವ ಹಿತ್ತಾಳೆ ಬಿಂದಿಗೆಯಲ್ಲಿ ನೀರು ಹೊತ್ತು ತರುವರು. . .

ಗಂಡಸರಿಗೆ ಬೆಳಗಿನ ಜಾವವೇ ಗದ್ದೆಗೋ-ತೋಟಕ್ಕೋ ಹೋಗುವ ಕೆಲಸ. ಗದ್ದೆಯಲ್ಲಿ ಫಸಲಿನ ಸಮಯದಲ್ಲಿ ನೀರು ಬಿಡಬೇಕು, ಬದುಗಳನ್ನು ಕೆತ್ತಿ ಸುಸ್ಥಿತಿಯಲ್ಲಿಡಬೇಕು. ಯಾರೂ ಅಕ್ರಮಿಸಿಕೊಂಡಿಲ್ಲವೆ ಎಂದು ಗಮನಿಸಬೇಕು. ಬೇಸಿಗೆಯಲ್ಲಿ ಸೊಪ್ಪುತಂದು ಹರಡಬೇಕು (ಗೊಬ್ಬರಕ್ಕೆ). ಉಳಬೇಕು, ಶಕ್ತಿಯಿಲ್ಲದವರು ರೈತರನ್ನು ನೇಮಿಸಿಕೊಂಡು ಉಳುಮೆ ಮಾಡಿಸಬೇಕು. ತೋಟಕ್ಕೆ ಹೋದರೆ ಒಂದು ಸುತ್ತು ಹಾಕಿ ಬೇಲಿಗಳೆಲ್ಲ ಸುರಕ್ಷಿತವಾಗಿವೆ ಎಂದು ದೃಢಪಡಿಸಿಕೊಳ್ಳುವುದು, ಹತ್ತಿಪ್ಪತ್ತು ಜೋಡಿ ನೀರು ಹೊತ್ತು, ವೀಳೆಯದೆಲೆಯ ಪಾತಿಗಳಿಗೆ ಎರೆಯುವುದು, ಬಿದ್ದಿರುವ ತೆಂಗಿನ ಅಡಿಕೆಯ ಸೋಗೆಗಳನ್ನು ಒಟ್ಟುಗೂಡಿಸುವುದು, ಪೂಜೆಗೆ ಹೂವು, ತುಳಸಿ ಬಿಡಿಸಿಕೊಳ್ಳುವುದು, ಅಗತ್ಯವಿದ್ದರೆ ಬಾಳೆಗೊನೆ ಕಡಿದು ಹೊರೆಕಟ್ಟಿಕೊಳ್ಳುವುದು ಇತ್ಯಾದಿ ಬಗೆ ಬಗೆಯ ಕೆಲಸಗಳು. ವಾರದ ಸಂತೆ ಸಮೀಪದ ಕೊಣನೂರಿನಲ್ಲೋ, ಹಳಗನಹಳ್ಳಿಯಲ್ಲೋ ನಡೆಯುತ್ತದೆ. ಅಲ್ಲಿಗೆ ವೀಳೆಯದೆಲೆ ಕೊಯ್ದು ಕವಳಿಗೆಗಳಾಗಿ ಜೋಡಿಸಿ, ಪಿಂಡಿಕಟ್ಟಿ ಹೊತ್ತುಕೊಂಡು ಹೋಗುವರು. ಸಂಜೆಯವರೆಗೆ ಅಲ್ಲಿ ಮಾರಾಟಮಾಡಿ, ಬಂದ ಹಣದಲ್ಲಿ ಮನೆಗೆ ಬೇಕಾದ ಅಗತ್ಯವಸ್ತುಗಳನ್ನು ಕೊಂಡು ತರುವರು. ನಮಗೆ, ಮಕ್ಕಳಿಗೆ, ಅವತ್ತು ಬಹಳ ಸಂತೋಷ. ಸಂತೆಯಿಂದ ಹುರಿಗಡಲೆಯನ್ನೋ, ಖರ್ಜೂರವನ್ನೋ, ಕಡಲೆಪುರಿಯನ್ನೋ ತರುವರು. ಅದಕ್ಕಾಗಿ ಕಾತರದಿಂದ ಸಂಭ್ರಮದಿಂದ ಕಾಯುತ್ತಿದ್ದೆವು...

ಆ. ಭೂರಿಭೋಜನಗಳು ಮತ್ತು ಹಬ್ಬಗಳು

(ತಮಿಳುನಾಡಿನ ಹಳ್ಳಿಯೊಂದರ ಅನುಭವ)

ಅನುವಾದ: ಡಾ. ಬಿ.ಎಸ್.ಪ್ರಣತಾರ್ತಿಹರನ್ ***-ಡಾ. ಟಿ.ಎಸ್.ಶಂಕರನ್***

ಸಂತುಷ್ಟಿ, ಪು: ೪೫-೫೭

(ಮೈ ಮುರಿದು ದುಡಿಯುವವರಿಗೆ ಇದ್ದ ಮನೋರಂಜನೆಯೆಂದರೆ ಹಬ್ಬ-ಸಮಾರಂಭ-ಭೂರಿಭೋಜನ)

ಮೊದಲಿಗೆ, ಈ ಲೇಖನಕ್ಕೆ "ಭೂರಿಭೋಜನಗಳು ಮತ್ತು ಹಬ್ಬಗಳು" ಎಂಬ ತಲೆಬರಹವನ್ನು ಕೊಟ್ಟಿರುವೆನಾದರೂ, ವಾಸ್ತವವಾಗಿ ಭೂರಿಭೋಜನಗಳು ನಮ್ಮೆಲ್ಲ ಹಬ್ಬಗಳ ಅವಿಭಾಜ್ಯ ಅಂಗವಾಗಿಯೇ ಇರುತ್ತವೆಂಬುದನ್ನು ಒಪ್ಪಿಕೊಳ್ಳುತ್ತೇನೆ. ಇದು ಎಷ್ಟರಮಟ್ಟಿಗೆ ಹೀಗಿದೆಯೆಂದರೆ, ಹಬ್ಬಗಳ ಆಚರಣೆಯ ಹಿಂದಿನ ಧಾರ್ಮಿಕವೂ, ಪವಿತ್ರವೂ ಆದ ಉದ್ದೇಶಗಳಲ್ಲಿ ನಂಬಿಕೆ ಇಲ್ಲದವರು, ಪ್ರಧಾನವಾಗಿ ಜಮೀನ್ದಾರರೂ, ಕೃಷಿಕರೂ ಆಗಿದ್ದ ನಮ್ಮ ಹಿರಿಯರು ಬಗೆ ಬಗೆಯ *ಖಾದ್ಯಗಳಿಗಾಗಿಯೇ ಈ ಹಬ್ಬಗಳನ್ನು ಹುಟ್ಟುಹಾಕಿದ್ದಾರೆ* ಎಂದು ಠಕ್ಕಿನ ಟೀಕೆ ಮಾಡುವುದೂ ಸಾಧ್ಯವಾಗಿಬಿಟ್ಟಿದೆ.

ಅದು ಹೇಗಾದರೂ ಇರಲಿ, ಎಲ್ಲ ಧರ್ಮಗಳಲ್ಲೂ ಇಂದು ಭೂರಿಭೋಜನವು ಹಬ್ಬಗಳ ಭಾಗವಾಗಿಯೇ ಇರುವುದು ವಸ್ತುಸ್ಥಿತಿಯಾಗಿದೆ. ಬೇರೆ ಧರ್ಮದಲ್ಲಿ ಉಪವಾಸದ ಆಚರಣೆಯನ್ನು ಕೂಡ ಭೂರಿಭೋಜನದ ಮೂಲಕವೇ ಮುರಿಯುವುದನ್ನು ಕಾಣುತ್ತೇವೆ.

ನಾನು ಬಾಲಕನಾಗಿದ್ದಾಗ, ನನ್ನ ಹಳ್ಳಿಯಲ್ಲಿ ನೇರವಾಗಿ ಯಾವುದೇ ಹಬ್ಬಕ್ಕೆ ಸಂಬಂಧಪಡದ, ಯಾವುದೋ ಸಮಾರಂಭದ ಭಾಗವಾದ ಹಲವಾರು ಭೋಜನಕೂಟಗಳಲ್ಲಿ ಭಾಗವಹಿಸಿದ್ದೆ. ಹಾಗೆಂದು ಮೇಲಿನ ಶೀರ್ಷಿಕೆಯಲ್ಲಿ ಭೂರಿಭೋಜನ ಎಂದು ನಾನು ಉಲ್ಲೇಖ ಮಾಡಿರುವುದು ಆ ವಿಶಾಲಾರ್ಥದಲ್ಲಲ್ಲ. ಹೇಗಾದರೂ, ಆ ಬಗೆಗೆ ಹೆಚ್ಚಿನದನ್ನು ಮುಂದೆ ನೋಡೋಣ.

. . . ಸಂತರ್ಪಣೆಗಳ ವಿಷಯಕ್ಕೆ ಬಂದರೆ, ಎಲತ್ತೂರಿನಲ್ಲಿ ಸ್ವಗ್ರಾಮ ಮತ್ತು *ನೆರೆಯ ಅಗ್ರಹಾರಗಳ ಎಲ್ಲರನ್ನೂ ಆಹ್ವಾನಿಸುತ್ತಿದ್ದುದು* ನನಗೆ ಜ್ಞಾಪಕವಿದೆ. ನಂತರ ಹುಡುಗರ ಒಂದು ವಿಶೇಷ ಗುಂಪು ಒಟ್ಟಿಗೆ ಆಹ್ವಾನವನ್ನು ಹಾಡುತ್ತ ಹೋಗುವುದು:

"ವಂದ ವಿರ್‌ಂದ್, ಪೋನ ವಿರ್‌ಂದ್
.... ಪಣ್ಣೈಯಾರ್ ಆತ್‌ಕ್ಕ್ ಎಲ್ಲಾರುಂ
ಸಾಪ್ಪಿಡ ವಾಂಗೋ"

(ಸಂತರ್ಪಣೆ ಬರುತ್ತೆ, ಹೋಗುತ್ತೆ. ಆದರೆ ಈಗ ದಯವಿಟ್ಟು ಶ್ರೀ.................... ಜಮೀನುದಾರರ ಮನೆಗೆ ಪಂಕ್ತಿ ಭೋಜನಕ್ಕೆ ದಯಮಾಡಿಸಿ.)

ಈ ಸಂತರ್ಪಣೆಗಳು ಸಾಮಾನ್ಯವಾಗಿ, ಮಹಾಭೋಜನಗಳೇ. ಪಂಚಭಕ್ಷ್ಯಪರಮಾನ್ನ ಅನ್ನುತ್ತಾರಲ್ಲಾ, ಅದು! ಎಂದಿಗೂ ಮರೆಯಲಾಗದಂಥದು! ಭೋಜನದ ನಂತರ ಬ್ರಾಹ್ಮಣರಿಗೆ ದಾನಗಳೂ ಇರತಕ್ಕವು. ಅಂಥ ಸಂತರ್ಪಣೆಗಳ ಮಹಾವೈಭವವನ್ನು ಕುರಿತು ನಮ್ಮೂರಿನಲ್ಲಿ ಪ್ರತಿಯೊಬ್ಬರೂ *ವಾರಗಟ್ಟಲೆ ಮೆಲುಕು ಹಾಕುವರು* ಮತ್ತು ವಿವಾಹ ಭೋಜನ ಏರ್ಪಾಡಾದಾಗಲೆಲ್ಲಾ ಅದರ ಮಾತೇ!

ಆಹಾ! ನಮ್ಮ ಹಳ್ಳಿಯಲ್ಲಿ ಕಳೆದ *ಆ ದಿನಗಳು ಅದೆಂಥ ಸೊಗಸಿನವು*! ಅದೆಂಥ ಅದ್ಭುತ ಹಬ್ಬಗಳು! ನಾವು ಇನ್ನೂ ಬಾಲಕರೂ, ಮುಗ್ಧರೂ ಆಗಿದ್ದ ಆ ದಿನಗಳಲ್ಲಿ ಘಟಿಸಿದ ಅತ್ಯುತ್ತಮ ಸಂಗತಿಗಳು ಅವಿಸ್ಮರಣೀಯವಾದುವೇ ಸರಿ !

೬. ಹೊನ್ನು ಹೊನ್ನು

ಸಂತುಷ್ಟಿ, ಪು: ೬೩-೭೫

ಡಾ|| ಬಿ.ಎಸ್.ಪ್ರಣತಾರ್ತಿಹರನ್

(ದೀಪಾವಳಿಯ ಹಬ್ಬದಲ್ಲಿ ಪಾಡ್ಯದ ಸಂಜೆ ಬಲೀಂದ್ರನ ಪೂಜೆ ನಡೆಯುತ್ತದೆ. ಆಗ ಬಲೀಂದ್ರನದೇ ರಾಜ್ಯ. ಅವನು ಆಗ ತುಸುವೇ ಕಾಲ ಆಳಿ ಹೊರಟುಹೋಗುತ್ತಾನೆ. ಅಷ್ಟರಲ್ಲಿ ಸಂಪತ್ತು ಉಕ್ಕುವಂತೆ ಮಾಡುತ್ತಾನೆ ಎಂಬುದು ನಂಬಿಕೆ. ಅವನ ಪೂಜೆಯ ಅಂಗವಾಗಿ ಸಂಕೇತಿಗಳು ಮನೆಯಲ್ಲೆಲ್ಲ 'ಹೊನ್ನು' ತೋಳೆಯುತ್ತಾರೆ. ಹೊನ್ನಾವರಿಕೆ ಎಂಬುದು ಹೊಂಬಣ್ಣದ ಹೂ. ಅದನ್ನೇ 'ಹೊನ್ನು ಹೊನ್ನು' ಎಂದು ಹೇಳುತ್ತ ಮನೆಗೆಲ್ಲ ತೋಳೆಯುವುದು. ಆ ಹೂವು ಬೆಳಗಿನ ಹೊತ್ತಿಗೆ ಚಿನ್ನವಾಗಿರುತ್ತೆಂಬುದು ನಂಬಿಕೆ. ವಾಸ್ತವವಾಗಿ ಅದು ಚಿನ್ನವಾಗುವುದಿಲ್ಲ. ಬೆಳಿಗ್ಗೆ ಅದನ್ನು ಪರಕೆಗೆ ಬದಲು ಕೈನಿಂದಲೇ ಗುಡಿಸಿ ನಿರ್ಲಿಪ್ತತೆಯಿಂದ ಹೊರಗೆ ಹಾಕುತ್ತಾರೆ. ವೃದ್ಧರ ದುಡಿಮೆ ಎಂದಿನಂತೆ ಮುಂದುವರಿಯುತ್ತದೆ. ಬಡತನದ ನಡುವೆ ಕಟ್ಟಿಕೊಂಡ ಶ್ರೀಮಂತಿಕೆಯ ಕನಸು - ಹೊನ್ನಾವರಿಕೆ ಸಂಗ್ರಹಿಸುವ ಸಂಭ್ರಮ - ಅದು ಹೊನ್ನಾಗದಿದ್ದರೂ ಜೀವಂತವಾಗಿ ಮುಂದುವರಿಯುವ ಆಶಾಭಾವ - ಬಡತನದ ನಡುವೆಯೇ ಮುಂದುವರಿಯುವ ಶ್ರದ್ಧಾಪೂರ್ಣ ದುಡಿಮೆ - ಇದು 'ಹೊನ್ನು ಹೊನ್ನು' ಕಥೆಯ ವಸ್ತು. ಅದರ ಆಯ್ದ ಭಾಗ ಇಲ್ಲಿದೆ.)

. . . ಹೊನ್ನ ಆವರಿಕೆ ಹೂವಿನ ಹಾಸಿನ ಮೇಲೇ ಹಾಸಿಗೆಯಲ್ಲಿ ಮಲಗಿರುವ ಸುದರ್ಶನನ ಕಣ್ಣ ಮುಂದೆ ವಿಸ್ಮಯದ ಅಲೆಗಳು ನಿರಂತರವಾಗಿ ಏರಿಳಿಯುತ್ತವೆ. ಅಮ್ಮ ಈಗ ಎಪ್ಪತ್ತರ ಮುದುಕಿ; ನಲವತ್ತು ವರ್ಷಗಳ ಹಿಂದೆ ಇದ್ದ ಹಾಗೇ ಅನ್ನಿಸುತ್ತೆ. ಇಲ್ಲದಿದ್ದರೆ *ಹತ್ತಾಳುದ್ದದ ಬಾವಿಯಿಂದ ನೀರು ಸೇದಿ*, ಹಿತ್ತಲ ತೆಂಗಿನ ಗಿಡಗಳಿಗೆಲ್ಲಾ, ಹೊತ್ತು ನೀರು ಹೊಯ್ಯುವುದು ಅವಳಿಂದ ಸಾಧ್ಯವಾಗುತ್ತಿರಲಿಲ್ಲ. ವಿಶಾಲವಾದ ಹಿತ್ತಲಿನ ಹುಲ್ಲು, ಕಳೆಯನ್ನೆಲ್ಲಾ ಗುದ್ದಲಿಯಲ್ಲಿ ಕೆತ್ತಿ ಚೊಕ್ಕಟವಾಗಿಡುವ ಶ್ರದ್ಧೆ ಉಳಿಯುತ್ತಿರಲಿಲ್ಲ. . . . . .



ಇಂಥ ಮನೆಗಳಲ್ಲೇ ಸರ್ಪ-ಸಹಜೀವನ

ಹೊನ್ನಾವರಿಕೆ ತರುವ ಕೆಲಸ ಮಕ್ಕಳ ಪಾಲಿಗೆ ಬಂದು ಹತ್ತಾರು ವರ್ಷಗಳಾಗಿವೆ. ಮೊದಲೆಲ್ಲಾ ಅಪ್ಪನೇ ತರುತ್ತಿದ್ದರು. ಉಷಃಕಾಲಕ್ಕೆ ಎದ್ದು ಕಂಚವಾನಕಟ್ಟೆಯ ಮೂಲಕ ಹಾದುಹೋಗಿ, ತೋಟದಲ್ಲಿ ಬಿದ್ದ ತೆಂಗಿನಕಾಯಿ ಆರಿಸುವುದು, ಸೋಗೆ ಕಟ್ಟಿಕೊಳ್ಳುವುದು ಅವರ ನಿತ್ಯದ ಕೆಲಸ. . . . ತೋಟದಿಂದ ಬರುವಾಗಲೇ, ಒಂದು ಅಡಿಕೆ ಪಟ್ಟೆಯಲ್ಲಿ ಆವರಿಕೆ ಹೂ ತುಂಬಿಕೊಂಡು ಕಟ್ಟಿಕೊಳ್ಳುವರು. ಅದನ್ನೂ, ಕುಡುಗೋಲನ್ನೂ, ಕಂಕುಳಲ್ಲಿ ಇರಕಿಕೊಂಡು *ತಲೆಯ ಮೇಲೆ ಸೋಗೆ ಹೊತ್ತು ಬಂದುಬಿಡುವರು.* ಮಕ್ಕಳು ಹಾಸಿಗೆಯಿಂದ ಎದ್ದು ಕಣ್ಣು ಬಿಡುವಷ್ಟರಲ್ಲಿ 'ಆವರಿಕೆ' ಕಣ್ಣಮುಂದಿರುವುದು. ಹೂ ಕೊಯ್ದು ತರಲೋ, ಬಾಳೆ ಸೀಳು ತರಲೋ ಅಮ್ಮ ಮಕ್ಕಳನ್ನು ಕರೆಯುತ್ತಿರುವಳು. . . .

ಎಷ್ಟೋ ವರ್ಷಗಳು ಹೀಗೆ ನಡೆದ ನಂತರ ಆವರಿಕೆ ತರುವ ಕೆಲಸಕ್ಕೆ ದೀಕ್ಷೆ ಕೊಟ್ಟಾಗ ಅಪ್ಪ ಹೇಳಿದ್ದರು, "ತೋಟಕ್ಕೆ ಹೋಗುವ ದಾರಿಯಲ್ಲೇ ಆವರಿಕೆ ಸಿಗುತ್ತೆ. ಇನ್ನೂ ಬೇಕೂಂದರೆ ತೋಟದ ಮುಂದೆ ಹೊಲದಲ್ಲಿ ಯಥೇಚ್ಛವಾಗಿ ಸಿಗುತ್ತೆ." ಸುದರ್ಶನನೂ, ಹಿರಿಯಣ್ಣನೂ ಸೇರಿ ದೊಡ್ಡದೊಂದು ಬಿದಿರುಬುಟ್ಟಿಯನ್ನು ಹೊತ್ತು, ತೋಟದವರೆಗೆ ಉತ್ಸಾಹದಿಂದ ನಡೆದಿದ್ದರು. ದಾರಿಯಲ್ಲಿ ಯಾವ ಗಿಡ ಸಿಕ್ಕರೂ ನೋಡುವುದು, ಯಾವ ಹೂ ಸಿಕ್ಕರೂ ಪರೀಕ್ಷಿಸುವುದು. ನಡುವೆ ಯಾವುದೋ ಗಿಡದ ಹತ್ತಿರ ಓಡಿ ಸುದರ್ಶನ ಕೂಗುವನು,

"ಅಣ್ಣಾ! ಇಲ್ಲಿ ಬಾ, ಆವರಿಕೆ ಬೇಕಾದಷ್ಟಿದೆ!"

ಹಿಂದೆಯೇ ದಾಪುಗಾಲು ಹಾಕಿ ಓಡಿಬಂದ ಹಿರಿಯಣ್ಣ ಅದನ್ನು ನೋಡಿ, "ಥೂ! ನಿನಗೆ ಆವರಿಕೆ ಅಂದರೆ ಏನು ಅಂತಾನೇ ತಿಳಿದಿಲ್ಲ. ನೀನೇನು ಹುಡುಕುತ್ತಿ? ಸುಮ್ಮನೆ ಮನೆಗೆ ಹೋಗು."

"ಊಂ, ನನಗೂ ಗೊತ್ತು, ನಿನಗೊಬ್ಬನಿಗೇ ಅಲ್ಲ. ನಾನು ಇದನ್ನೇ ಕುಯ್ಯುತೀನಿ."

ಕೈಮೇಲೆ ಫಟ್ಟನೆ ಏಟು ಬೀಳುವುದು. . . . .

. . . . ಸುದರ್ಶನನ ಕಣ್ಣುಗಳು ನಿದ್ದೆಯನ್ನುಗುಳಿ ಅಟ್ಟದ ದಬ್ಬೆಗಳನ್ನಳೆಯುತ್ತಿವೆ. ಇದು ಹೀಗೆಯೇ ವರ್ಷವರ್ಷವೂ ನಡೆದು ಬರುತ್ತಿದೆ. ಅರ್ಧ ಶತಮಾನದ ನೆನಪು ಅವನಿಗಿದೆ. ಮನೆ ಇದ್ದ ಹಾಗೇ ಇದೆ. *ಅದೇ ನೂರು ವರ್ಷ ಹಳೆಯ ಸೊಟ್ಟಾದ ಮಣ್ಣಿನ ಗೋಡೆ.* ಉಪ್ಪು ಮಣ್ಣು ಉದುರಿ ಗೋಡೆ ದುರ್ಬಲವಾಗುತ್ತಿದೆ. ಮನೆಯ ಹಿಂದೆ ಪಂಚಾಯಿತಿಯವರು ಚರಂಡಿ ಕಟ್ಟಿಸಿದ ಮೇಲೆ ನೀರು ನಿಂತು ಸೊಳ್ಳೆ ಹೆಚ್ಚಿದೆ. ನೆಲ, ಗೋಡೆಗೆ ತೇವ ಏರುತ್ತಿದೆ. ಚಾವಣಿಯ ಅಡಿಕೆ ದಬ್ಬೆಗಳು ಬಾಗಿ ಅಲ್ಲಲ್ಲಿ ಕುಸಿದಿವೆ. ಹಳೆಯ ನಾಡ ಹೆಂಚುಗಳು ಅಲ್ಲಲ್ಲಿ ಒಡೆದು, ಮಳೆಗಾಲದಲ್ಲಿ ಮಲಗಲು ಒಳಗೆ ಜಾಗ ಸಿಗದಂತಾಗಿದೆ. *ಗುಡಿಸಿದಷ್ಟೂ ಧೂಳು ಹುಟ್ಟಿಕೊಳ್ಳುವ ಮಣ್ಣು ನೆಲವನ್ನು* ಸಾರಿಸಿ ಸಾರಿಸಿ ಚಂದಗೊಳಿಸಲು ಅಮ್ಮ ಹೆಣಗುತ್ತಲೇ ಇರುತ್ತಾಳೆ. ಹೆಗ್ಗಣದ ಗೂಡುಗಳಿಗೆ ಕಲ್ಲು ಇಡುಕಿ ಮೆತ್ತಿ ಅವಳು ನೋಡಿಕೊಳ್ಳದಿದ್ದರೆ ಅವು ಮನುಷ್ಯರನ್ನೇ ಗೂಡೊಳಗೆ ಎಳೆದುಕೊಳ್ಳದೆ ಬಿಡುತ್ತಿರಲಿಲ್ಲವೆನಿಸುತ್ತದೆ. ಆಗಲೂ ಹಾಗೆಯೇ ಇತ್ತು, ಈಗಲೂ ಹಾಗೆಯೇ - ಅಪ್ಪ ಬಸ್ ಛಾರ್ಜಿಗೆ ನಾಕಾಣೆ ಇಲ್ಲದೆ ನಡೆದುಹೋಗುವುದು ನಡೆದೇ ಇದೆ. ಅಮ್ಮನ ಮೈಮೇಲೆ ಒಂದು ಸೀರೆ, ಕೊಡಿಯ ಮೇಲೆ ಒಂದು ಸೀರೆ; ಇನ್ನೊಂದು ಹಬ್ಬಹರಿದಿನಕ್ಕೆಂದು ಮೀಸಲಾಗಿ, ಪೆಟ್ಟಿಗೆಯಲ್ಲಿದೆ. ಅದೆಷ್ಟು ದಿನ ಕಷ್ಟಪಟ್ಟು ಮಕ್ಕಳಿಗೆ ಅರೆಹೊಟ್ಟೆಯಾದರೂ ಕಳ್ಪಿಸಿ ತಾನು ಉಪವಾಸ ಮಲಗಿದಳೋ ಅವಳು....

ಅಟ್ಟದ ಸೂರಿನಲ್ಲಿ ಸರಸರ ಧಡಧಡನೆ ಹರಿದಾಡುವ ಶಬ್ದ ರಾತ್ರಿಯ ಮೌನವನ್ನು ಭೀಕರವಾಗಿ ಕಲಕುತ್ತದೆ. ಅಟ್ಟದಲ್ಲಿ ತುಂಬಿದ, ಕೆಲಸಕ್ಕೆ ಬಾರದ ಹಾಳುಮೂಳುಗಳ ಸಂದಿಯಲ್ಲಿ *ಹೆಗ್ಗಣಗಳನ್ನು ಬೇಟೆಯಾಡಲು ಹೆಣಗುತ್ತಿರುವ ಸರ್ಪಗಳ ಸದ್ದು* ಅದು. ಅಟ್ಟಾಡಿಸುವ ಆ ಶಬ್ದಗಳ ಜೋಗುಳದಲ್ಲಿ ನಿದ್ದೆ ಹತ್ತುತ್ತದೆ. ನಿದ್ದೆ ಹತ್ತಿದವರನ್ನೇನೂ ಆ ಶಬ್ದವು ಕಲಕಿ ಎಬ್ಬಿಸುವುದಿಲ್ಲ. ಅಪ್ಪ, ಮಲಗುವ ಮುನ್ನ, "ಓಹೋ! ನಾಗರಾಜ ಊಟಕ್ಕೆ ಹೊರಟಿದಾನೆ" ಎಂದು ಉದ್ಗರಿಸಿಯೇ ಗೊರಕೆಗೆ ತೊಡಗುವರಲ್ಲ! . . .

ಪಟಾಕಿಗಳು ಎಲ್ಲೆಂದರಲ್ಲಿ ಸಿಡಿದು ಹಕ್ಕಿಗಳನ್ನು ಹುಚ್ಚಾಬಟ್ಟೆ ಹಾರಿಸಿಯೇ ಬೆಳಕು ಹರಿಯುವ ದಿನಗಳು ಅವು. ಉಷಃಕಾಲಕ್ಕೇ ಮೊಸರು ಕಡೆಯುವ ಅಮ್ಮ, ಉದಯರಾಗವನ್ನು ಹಾಡುತ್ತಾ, ಮನೆಯಲ್ಲಿ ಕೃಷ್ಣನ ನೆನಪಿನ ಗಾಳಿ ಸುಳಿಸುತ್ತಾಳೆ. ಹಸುಗಳನ್ನು ಹೊರಗೆ ಕಟ್ಟಿಹಾಕಿ, ಕೊಟ್ಟಿಗೆಯ ಸಗಣಿಯನ್ನೆತ್ತಿ ತಿಪ್ಪೆಗೆ ಹಾಕುವ ಹೊತ್ತಿಗೆ, ಹಕ್ಕಿಗಳ ಕಲರವ ಕೂಡಿಬರುತ್ತಿರುತ್ತದೆ. ಸುದರ್ಶನ ಅಮ್ಮನ ಹಾಡಿಗೆ ಕಿವಿ ತೆರೆದು ಮೆಲ್ಲಗೆ ಕಣ್ಣು ಬಿಡುತ್ತಾನೆ. ಅಮ್ಮ, ಮೂಲೆಮೂಲೆಯಲ್ಲಿ ಚೆಲ್ಲಾಡಿದ ಹೊನ್ನಾವರಿಕೆಯ ಹೂಗಳನ್ನು ಕೈಯಿಂದಲೇ ಗುಡ್ಡೆಮಾಡಿ ಮೊರದಲ್ಲಿ ತುಂಬಿಕೊಳ್ಳುತ್ತಿದ್ದಾಳೆ. ಹೊನ್ನಾರಿಕೆಯ ಹೂಗಳನ್ನಾಯ್ದು ತರಲು ಮಕ್ಕಳನ್ನು ಓಡಿಸುವಾಗ ಇದ್ದ ಶ್ರದ್ಧೆಯಿಂದಲೇ, ಆ ಹೂಗಳನ್ನು ಈಗ ತಿಪ್ಪೆಗೆ ಸುರಿದು ಬರಲೂ ಹೊರಟಿದ್ದಾಳೆ ಅಮ್ಮ. ಅದೇ ಶ್ರದ್ಧೆ, ಅದೇ ತೃಪ್ತಸ್ಮಿತದ ತುಳುಕು!

೧೧. 'ನೆನಪು ಕೆದರಿದಾಗ' (ಯೋಧನೊಬ್ಬನ ಬದುಕಿನ ನೆನಪುಗಳು)

ಭಾರತೀ ಪ್ರಕಾಶನ, ೧೯೯೮ — ಇಂಗ್ಲಿಷ್ ಮೂಲ: *ಮೇಜರ್ ಹೆಚ್.ಸಿ. ವೇಣುಗೋಪಾಲ್*

ಅನುವಾದ: *ಆರ್.ಎಲ್.ಅನಂತರಾಮಯ್ಯ*

(ಸ್ವಾತಂತ್ರ್ಯ ಹೋರಾಟದ ಸವಾಲುಗಳನ್ನು ಎದುರಿಸಿದ್ದು, ಅನಂತರ ಅವರೇ ಸ್ವತಂತ್ರ ಭಾರತದಲ್ಲಿ ಸೇನಾಧಿಕಾರಿಯಾಗಿ ಮಾಡಿದ ಸಮಾಜಸೇವೆ ಈ ಗ್ರಂಥದ ವಸ್ತು. ಆತನ ಖಾಸಗಿ ಜೀವನಕ್ಕೆ ಹೊಂದಿಕೊಂಡ ಎರಡು ಘಟನೆಗಳನ್ನು ಇಲ್ಲಿ ಕೊಟ್ಟಿದೆ. ಸಹಜವಾಗಿಯೇ ಇವು ಗ್ರಾಮೀಣ ಕೃಷಿಕರ ಬದುಕಿಗೆ ಹೊಂದಿಕೊಂಡ ಘಟನೆಗಳಾಗಿವೆ.)

ಅ) ವಯಸ್ಕರ ಶಿಕ್ಷಣ ಮತ್ತೂರಿಗೆ ಬಂತು

ಪು. ೪೦-೪೧ — *(ಆ 'ಹಳ್ಳಿಯ ಹುಡುಗಿ' ಮರ ಹತ್ತಿದ್ದು ಅವರಲ್ಲಿ ಸಂಚಲನವನ್ನುಂಟುಮಾಡಿತು)*

. . . ಒಂದು ದಿನ ಅವರ ಮಗ ದೊರೆ ತೋಟಕ್ಕೆ ತನ್ನೊಂದಿಗೆ ಬರಬೇಕೆಂದೂ ಎಳನೀರು ಕುಡಿಯಬೇಕೆಂದೂ ಆಹ್ವಾನಿಸಿದನು. ಆಗ ತಾನೆ ಹೊಳೆಯಲ್ಲಿ ಈಜಿಕೊಂಡು ಬಂದು ಹಸಿದಿದ್ದ ನಾನು ಸಂತೋಷವಾಗಿ ಒಪ್ಪಿಕೊಂಡೆ. ತೋಟವು ತುಂಬಾ ದೂರವೇನಿರಲಿಲ್ಲ.

ಕೆಲವು ನಿಮಿಷ ನಡೆದಿರಬಹುದು. ಅಷ್ಟರಲ್ಲಿ ೧೨ ಅಥವಾ ೧೩ ವಯಸ್ಸಿನ ಚುರುಕಾದ *ಹುಡುಗಿಯೊಬ್ಬಳು ಮರ ಹತ್ತುತ್ತಿದ್ದುದನ್ನು* ನೋಡಿದೆ. ಮರ ಹತ್ತಿದ ಅವಳು ಕೆಲವು ಹೂವುಗಳನ್ನು ಬಿಡಿಸಿಕೊಂಡಳು. ಆಕೆಯ ಚುರುಕನ್ನು ನೋಡಿ ನನಗೆ ಆಶ್ಚರ್ಯವಾಯಿತು. ದೊರೆ ಅವಳ ಕುಟುಂಬದ ಹಿನ್ನೆಲೆಯ ಬಗೆಗೆ ಹೇಳಿದ. ಆ ಹುಡುಗಿಯ ತಂದೆ ಒಬ್ಬ ಶ್ರೇಷ್ಠ ವೇದವಿದ್ವಾಂಸರು. ಹಳ್ಳಿಯ ಅನೇಕರಿಗೆ ಅವರು ಗುರುವಾಗಿದ್ದರು. . . .

ಈ ಹುಡುಗಿಯೇ ನನಗೆ ಉತ್ತಮ ಪತ್ನಿಯಾಗುತ್ತಾಳೆ ಎಂದು ನಾನು ಅಲ್ಲೇ ನಿರ್ಧರಿಸಿದೆ. ದೊರೆಗೆ ಇದನ್ನು ತಿಳಿಸಿ, ನನಗೆ ವರದಕ್ಷಿಣೆಯ ಆವಶ್ಯಕತೆ ಇಲ್ಲ ಎಂದೂ ಹೇಳಿದೆ.

"ನೀನು ಈ ಕುಟುಂಬಕ್ಕೆ ತುಂಬಾ ದೊಡ್ಡ ಸೇವೆ ಮಾಡಿದ ಹಾಗಾಗುತ್ತದೆ" ಎಂದು ದೊರೆ ಹೇಳಿದ.

ಆ ವೇಳೆಗೆ ನಾವು ತೋಟವನ್ನು ತಲುಪಿದ್ದೆವು. ಎತ್ತರವಾದ ತೆಂಗು ಮತ್ತು ಅಡಕೆಯ ಮರಗಳು ತುಂಬಿದ್ದುವು. . . . ನೀರು ಮತ್ತು ತಿರುಳು ತುಂಬಾ ರುಚಿಯಾಗಿದ್ದುವು. *ನಾನು ಎಷ್ಟು ಎಳನೀರುಗಳನ್ನು ಕುಡಿದೆನೋ ತಿಳಿಯದು.* ತೃಪ್ತನಾಗಿ ದೊರೆಯೊಂದಿಗೆ ಮನೆಗೆ ಹಿಂದಿರುಗಿದೆ.

ಅಂದು ಸಂಜೆ ನನ್ನ ಬಂಧು ಗೋಪಾಲರಾಯ ಹಾಗೂ ಆ ಸಲದ ಪ್ರವಾಸದಲ್ಲಿ ಪರಿಚಯವಾದ ಒಬ್ಬರು ಮಿತ್ರರೊಂದಿಗೆ ಮಾತನಾಡುತ್ತ ಕುಳಿತಿದ್ದೆ. ಸ್ವಲ್ಪ ಸುತ್ತಾಡಿ ಆಮೇಲೆ ದೇವಾಲಯದ ವರಾಂಡಾದಲ್ಲಿ ಕುಳಿತುಕೊಂಡಿದ್ದೆವು. ಕತ್ತಲಾಗುತ್ತಿತ್ತು. ನಮ್ಮ ಬೆನ್ನ ಹಿಂದೆ ನದಿ ಹರಿಯುವ ಸದ್ದು ಕೇಳಿಸುತ್ತಿತ್ತು. ಸಂಧ್ಯಾವಂದನೆ ಮಾಡುತ್ತ ನಡುನಡುವೆ ಮಾತನಾಡುತ್ತಿದ್ದ ಬ್ರಹ್ಮಚಾರಿಗಳ ಧ್ವನಿ ಆಗೀಗ ಕಿವಿಗೆ ಕೇಳುತ್ತಿದ್ದಿತು.

ದೇವಾಲಯದ ಎದುರಿಗೆ ಹಳ್ಳಿಯ ಮುಖ್ಯರಸ್ತೆ. ಅದರ ಎರಡೂ ಪಕ್ಕಗಳಲ್ಲಿ ಸಾಲುಸಾಲಾಗಿ ಮನೆಗಳು, ಒಂದೊಂದರ ಮುಂದೂ ಚಿಕ್ಕ ವರಾಂಡಾ ಇತ್ತು. ಪ್ರತಿಯೊಂದು ಮನೆಯ ವರಾಂಡಾ ಅದರ ಎರಡೂ ಬದಿಯ ಮನೆಗಳವರೆಗೆ ಹರಡಿಕೊಂಡದ್ದು ಒಂದೇ ಉದ್ದವಾದ ನಡವೆಯಂತಾಗುತ್ತಿತ್ತು. ಅದರ ಒಂದು ಪಕ್ಕ ರಸ್ತೆ, ಇನ್ನೊಂದು ಪಕ್ಕ ಮನೆಗಳ ತಲೆಬಾಗಿಲುಗಳು. *ರಸ್ತೆಯ ಈ ತುದಿಯ ಮನೆಯ ವರಾಂಡಾದಿಂದ ಆ ತುದಿಯವರೆಗೆ ರಸ್ತೆಗೆ ಕಾಲಿಡದೆಯೇ ನಡೆದು ಹೋಗಬಹುದಾಗಿತ್ತು.*

ಬಲಗಡೆ ಮೂರನೆಯ ಬಾಗಿಲಿನಿಂದ ಒಬ್ಬ ಹುಡುಗಿ ಹೊರಕ್ಕೆ ಬಂದಳು. ಅವಳೇ ನಾನು ಅಂದು ಮಧ್ಯಾಹ್ನ ನೋಡಿದವಳು. . . .

ಆ) ಎತ್ತು ಮತ್ತು ನನ್ನ ಅತ್ತೆ

ಪು.೨೪-೨೫ *(ಕೆರಳಿದ ಎತ್ತು ಒಡತಿಯನ್ನು ಕೋಡಿನಿಂದ ತಿವಿದು ಮೇಲೆತ್ತಿದ ಪ್ರಸಂಗ)*



ದನಗಳ ಜಾತ್ರೆ : ಎತ್ತು ಕಟ್ಟುವವರದೇ ಒಂದು ಪ್ರಪಂಚ

ಈ ಸ್ವಾರಸ್ಯವಾದ ಘಟನೆ ನೆನಪಿನಲ್ಲುಳಿದಿದೆ. ನಾನು ಓ.ಟಿ.ಎಸ್. ಸೇರುವುದಕ್ಕೆ ಕೆಲ ಸಮಯ ಮುಂಚೆ ನಾನು ಸಾವಿತ್ರಿಯನ್ನು ನೋಡಲು ಮತ್ತೂರಿಗೆ ಹೋಗಿದ್ದೆ.

ಮನೆಯ ಮುಂಭಾಗದ ಕೊಠಡಿಯಲ್ಲಿ ಒಂದು ಚಾಪೆಯ ಮೇಲೆ ಮಲಗಿಕೊಂಡಿದ್ದೆ. ಈ ಕೊಠಡಿ ಆ ಹಳ್ಳಿಯ ಗ್ರಂಥಾಲಯವೂ ಆಗಿತ್ತು. ಮಧ್ಯಾಹ್ನ ಸುಮಾರು ನಾಲ್ಕು ಗಂಟೆಯಿರಬಹುದು. ಆಚೀಚೆ ಮನೆಯ ಹೆಂಗಸರೂ ನನ್ನ ಅತ್ತೆಯವರೂ ಮನೆಯ ಮುಂದಿನ ವರಾಂಡಾದಲ್ಲಿ ಹರಟೆ ಹೊಡೆಯುತ್ತಾ ಕುಳಿತಿದ್ದರು.

ಆ ದಿನಗಳಲ್ಲಿ ಹಳ್ಳಿಯ ಪ್ರತಿಯೊಂದು ಮನೆಯಲ್ಲೂ ದನಕರುಗಳಿರುತ್ತಿದ್ದವು. ಮನೆಗೆ ತಾಗಿದಂತೆಯೇ ಅವುಗಳನ್ನು ಕಟ್ಟಿರುತ್ತಿದ್ದರು. ನನ್ನ ಅತ್ತೆಯ ಮನೆಯಲ್ಲಿ ತಗಡು ಹೊದಿಸಿದ, ಬೇಲಿ ಕಟ್ಟಿದ, ಒಂದು ಆವರಣದಲ್ಲಿ ಕಟ್ಟಿರುತ್ತಿದ್ದರು. ಅದು ರಸ್ತೆಗೂ - ವರಾಂಡಕ್ಕೂ ನಡುವೆ ಇತ್ತು. ಆಗ ನನ್ನ ಭಾವಮೈದುನ ಗೋಕರ್ಣ ಕೃಷಿಕನಾಗಿದ್ದ, *ಕೆಲವು ಎತ್ತುಗಳನ್ನು ಕಟ್ಟಿಕೊಂಡಿದ್ದ*. ಅವು ಬಲಕ್ಕೂ, ದಿಢೀರನೆ ಕೆರಳುವುದಕ್ಕೂ ಹೆಸರಾಗಿದ್ದುವು. ಅವುಗಳನ್ನು ಹತೋಟಿಯಲ್ಲಿಟ್ಟುಕೊಳ್ಳಲು ಅವನಿಗೆ ಮಾತ್ರವೇ ಸಾಧ್ಯವಾಗುತ್ತಿತ್ತು.

ಮಾತನಾಡುತ್ತ ಕುಳಿತಿದ್ದ ನನ್ನ ಅತ್ತೆ ಎತ್ತುಗಳಿಗೆ ಮೇವು ಹಾಕಿಲ್ಲವೆಂಬುದನ್ನು ಗಮನಿಸಿದರು. ಒಳಗೆ ಹೋಗಿ ಒಂದು ತಬ್ಬು ಹುಲ್ಲು ತಂದು ಎತ್ತುಗಳನ್ನು ಕಟ್ಟಿದ್ದ ಷೆಡ್ಡಿಗೆ ಹೋದರು, ಅವುಗಳನ್ನು ಸರಿಯಾಗಿ ಕಟ್ಟಿದೆ ಎಂದು ಭಾವಿಸಿ ಸೀದಾ ಒಳಗೆ ಹೋದರು. ಆದರೆ ಒಂದು ಎತ್ತಿನ ಕಟ್ಟು ಕಳಚಿಕೊಂಡಿದ್ದಿರಬೇಕು. ಆಕೆ ಒಳಗೆ ಹೋದೊಡನೆ ನುಗ್ಗಿ ಬಂದು, *ಚೂಪಾದ ಕೊಂಬಿನಿಂದ ಅವರ ಹೊಟ್ಟೆಗೆ ತಿವಿದು ನೆಲದಿಂದ ಮೇಲಕ್ಕೆ ಎತ್ತಿತು*. ನೋವು ತಡೆಯಲಾರದೆ ಅತ್ತೆ ಕಿಟಾರನೆ ಕಿರುಚಿದರು.

ದಿಢೀರನೆ ಬಂದ ಈ ಹುಯ್ಯಲನ್ನು ಕೇಳಿ ಎದ್ದೆ. ಏನಾಯಿತೋ ನೋಡಲು ಓಡಿದೆ. ಜನರು ನೆರೆದು ಬಾಯಿಬಡಿದುಕೊಳ್ಳುತ್ತಿದ್ದರು. ಯಾರಿಗೂ ಒಳಗೆ ಹೋಗಲು ಧೈರ್ಯವಾಗಲಿಲ್ಲ. ಇನ್ನೂ ಅತ್ತೆಯವರು ಎತ್ತಿನ ಕೊಂಬಿಗೆ ಸಿಕ್ಕಿಕೊಂಡಿದ್ದರು. ನಾನು ಏನನ್ನಾದರೂ ಮಾಡಲೇಬೇಕಾಗಿತ್ತು.

ಒಳಕ್ಕೆ ಹಾರಿದವನೇ ಎತ್ತಿನ ಮೂಗುದಾರವನ್ನು ಹಿಡಿದು ತಿರುಚಿದೆ. ಅದರ ತಲೆಯನ್ನು ಒಂದು ಪಕ್ಕಕ್ಕೆ ಬಲವಾಗಿ ಎಳೆದೆ. ಸದ್ಯ ಅದರಿಂದ ಅತ್ತೆಯವರು ಕೆಳಕ್ಕೆ ಬಿದ್ದರು. ಬಲವಾಗಿ ಒಂದೆರಡು ಪೆಟ್ಟು ಕೊಟ್ಟು ಎತ್ತನ್ನು ಕಟ್ಟಿಹಾಕಿದೆ. ಅಷ್ಟು ಹೊತ್ತಿಗೆ ಗೋಕರ್ಣನೂ ಬಂದನು. ಕೋಲಿನಿಂದ ಚೆನ್ನಾಗಿ ನಾಲ್ಕು ಪೆಟ್ಟು ಬಡಿದನು. ಎತ್ತು ತಣ್ಣಗಾಯಿತು. ಬಾಲದಿಂದ ನೊಣಗಳನ್ನು ಹಾರಿಸಿಕೊಂಡು ಸುಮ್ಮನೆ ನಿಂತುಕೊಂಡಿತು.

ತಕ್ಷಣವೇ ಅತ್ತೆಯವರನ್ನು ಆಸ್ಪತ್ರೆಗೆ ಸಾಗಿಸಿದೆವು. ದೇವರ ದಯೆಯಿಂದ ಕೆಲವು ದಿನಗಳ ಚಿಕಿತ್ಸೆಯ ನಂತರ ಚೇತರಿಸಿಕೊಂಡರು.

೧೨. 'ಸಂಸಕ್ತ': ಸುವರ್ಣ ಸ್ವಾತಂತ್ರ್ಯ ವಿಶೇಷ ಸಂಚಿಕೆ

ಸಂ. ಡಾ|| ಪ್ರಣತಾರ್ತಿಹರನ್, ಸಮುದಾಯ ಅಧ್ಯಯನ ಕೇಂದ್ರ, ಮೈಸೂರು,

ಹೋರಾಟಗಾರನ ನೆನಪುಗಳು

ಪ್ರ: ೧೯೯೮, ಪು.೭೮-೯೭ *-ಅಂಡೇಕುಳಿ ಎಸ್. ಮಂಜಯ್ಯ ರಾಮದಾಸ*

(ತೀರ್ಥಹಳ್ಳಿ ತಾಲ್ಲೂಕಿನ ಅಂಡೇಕುಳಿ ಮಂಜಯ್ಯನವರಿಗೆ ದೇಶಪ್ರೇಮದ ಹುಚ್ಚು ಹತ್ತಿತು. ಸ್ವಾತಂತ್ರ್ಯ ಚಳವಳಿಯಲ್ಲಿ ಧುಮುಕಿದರು, ಮತ್ತೆ ಮತ್ತೆ ಜೈಲು ಸೇರಿದರು. ಜಮೀನೆಲ್ಲವನ್ನೂ ಈ ಕಾರಣದಿಂದಾಗಿ ಕಳೆದುಕೊಂಡರು, ಪ್ರಾಣವನ್ನೂ ತೆತ್ತರು. ಆದರೆ ಧರ್ಮಿಷ್ಠರಾದ ಜನರು ಮಂಜಯ್ಯನವರು ದೇಶಕ್ಕಾಗಿ ಮಾಡಿದ ತ್ಯಾಗವನ್ನು ಗುರುತಿಸಿದರು, ಅವರ ಮಕ್ಕಳಿಗೆ ಜಮೀನು ಹಿಂದಿರುಗಿಸಿದರು..... ಹೆಂಗಸರೇ ಜಮೀನು ರೂಢಿಸಿದ ಕಥೆಯೂ ಇಲ್ಲಿದೆ.)

. . . ಆ ವೇಳೆಗೆ ನಮ್ಮದಾಗಿ ಉಳಿದಿದ್ದ ಜಮೀನೆಂದರೆ ಎರಡು ಎಕರೆ ತೋಟ ಮತ್ತು ಹತ್ತು ಎಕರೆ ತರಿ ಮಾತ್ರ. ಇನ್ನೂ ನಮಗಿದ್ದ ಎರಡು ಎಕರೆ ತೋಟ ಮತ್ತು ಆರು ಎಕರೆ ತರಿ ಭೂಮಿಯನ್ನು ದೇವಂಗಿ ತಿಮ್ಮಣ್ಣಗೌಡರಿಗೆ ಖರೀದಿಗೆ ಕೊಟ್ಟುದಾಗಿತ್ತು. ಆದರೂ ಅದನ್ನು ನಾವೇ *ಗೇಣಿಗೆ ಸಾಗುವಳಿ* ಮಾಡುತ್ತಿದ್ದೆವು. ತೋಟ ಒಳ್ಳೆಯ ಸ್ಥಿತಿಯಲ್ಲಿರಲಿಲ್ಲ. ನೂರು ಮಣ ಅಡಿಕೆಯೇನೋ ಆಗುತ್ತಿತ್ತು; ದರವೂ ಬಹಳ ಕಡಿಮೆ ಇತ್ತು. ಮಣಕ್ಕೆ ಆಗ ಇದ್ದ ಬೆಲೆ ಕೇವಲ ಆರು ರೂಪಾಯಿ. ೧೦೦ ಮಣ ಅಡಿಕೆಯಲ್ಲಿ ೩೦ ಮಣವನ್ನು ಗೇಣಿಗೇ ಕೊಡಬೇಕಾಗಿತ್ತು. ಉಳಿದ ಜಮೀನಿನ ಮೇಲೆ ಶಿವಮೊಗ್ಗ ಅಡಿಕೆ ಮಂಡಿಯ ರಾಮಶಾಸ್ತ್ರಿಗಳ ಹತ್ತಿರ *ಮೂರು ಸಾವಿರ ರೂಪಾಯಿ ಸಾಲ* ಎತ್ತಿಯಾಗಿತ್ತು. ನಮಗೆ ಬಡ್ಡಿ ತೀರಿಸುವ ಯೋಗ್ಯತೆಯೂ ಇಲ್ಲದೆ ಹೋಗಿತ್ತು. ಹೀಗೆ ನಾವು ವಸೂಲು ಕೊಡದ್ದರಿಂದ ಅವರು ದಾವ ಹೂಡಿದ್ದರು. ಡಿಕ್ರಿಯೂ ಆಯಿತು. ಜಮೀನು ಸ್ವಾಧೀನಪಡಿಸಿಕೊಳ್ಳುವುದಕ್ಕೆ ಬಂದೇಬಿಟ್ಟರು. ನಾವು ಊರ ಹತ್ತು ಸಮಸ್ತರನ್ನು ಸೇರಿಸಿ ನಮ್ಮ ಗೋಳು ತೋಡಿಕೊಂಡೆವು. ರಾಮಶಾಸ್ತ್ರಿಗಳಿಗೂ ಕರುಣೆ ಬಂತು. ಒಂದು ಎಕರೆ ತೋಟ ಮತ್ತು ಎಂಟು ಎಕರೆ ತರಿ ಭೂಮಿಯನ್ನು ಮಾತ್ರ ವಶಪಡಿಸಿಕೊಂಡರು. *ನಮಗಾಗಿ ಒಂದು ಎಕರೆ ತೋಟ ಮತ್ತು ಎರಡು ಎಕರೆ ತರಿ ಭೂಮಿಯನ್ನು ಉಳಿಸಿಕೊಟ್ಟರು.* ವಾಸದ ಮನೆಯೂ ನಮಗೇ ಉಳಿಯಿತು.

ಹೀಗಾಗಿ ಬರುವ ಅಲ್ಪ ಸ್ವಲ್ಪ ಉತ್ಪತ್ತಿಯಲ್ಲೂ ಖೋತಾ ಆಯಿತು. *ಮನೆಯಲ್ಲಿ ಹದಿನೈದು ಮಂದಿ ಇದ್ದೆವು.* ಅಜ್ಜಿ, ತಾಯಿ, ಸುಬ್ರಾಯರು ಮತ್ತು ಅವರ ಮಗ ವಿಶ್ವೇಶ್ವರ, ನಮ್ಮ ಮಾವ ಗೋಪಾಲಕೃಷ್ಣಯ್ಯ ಮತ್ತು ಅವರ ಹೆಂಡತಿ, ನನ್ನ ಎಂಟು ಸೋದರ ಸೋದರಿಯರು - ಎಲ್ಲ ಸೇರಿ ಮನೆ ತುಂಬಿತ್ತು. ಜೀವನ ನಡೆಸುವುದು ಬಹಳ ಕಷ್ಟವಾಗಿತ್ತು. . . .

ಹಿಂದೆ, ಅಂದರೆ ನಮ್ಮ ಅಜ್ಜಿ ಮನೆಯ ಆಡಳಿತ ನಡೆಸುತ್ತಿದ್ದಾಗ ನಮ್ಮ ತಂದೆ ಮೂರು ವರುಷದ ಮಗು. ಅಜ್ಜನವರು ಗತಿಸಿಹೋಗಿದ್ದರು. *ಮನೆಗೆ ಆಧಾರವಾಗಿ ನಿಂತಿದ್ದವರು ಅಜ್ಜಿ ಮತ್ತು ಅವರ ಸೋದರತ್ತೆ ರಂಗಮ್ಮ ಇಬ್ಬರೇ.* ಅವರಿಬ್ಬರೇ ಮನೆಯ ಎಲ್ಲ ಕೆಲಸಕಾರ್ಯಗಳನ್ನೂ ನಿಭಾಯಿಸಿಕೊಂಡು ಹೋಗುತ್ತಿದ್ದರು. ತೀರಾ ಕೈಲಾಗದ ಕೆಲಸಗಳಿಗೆ ಮಾತ್ರ ಆಳುಗಳನ್ನು ನೇಮಿಸಿಕೊಳ್ಳುತ್ತಿದ್ದರು. ಅಂತೂ ಜಮೀನನ್ನು *ಉತ್ಕೃಷ್ಟ ಸ್ಥಿತಿಯಲ್ಲಿ ಇಟ್ಟಿದ್ದರು.* ವರ್ಷದಲ್ಲಾದ ಅಡಿಕೆ ಫಸಲನ್ನು ರೇಖೆ ಮಾಡಿ ದೇವಂಗಿಯ ರಾಮಣ್ಣಗೌಡರ ಮನೆಗೆ ಕಳಿಸಿಬಿಡುತ್ತಿದ್ದರು. ಅವರು ಅದನ್ನು ಶಿವಮೊಗ್ಗಗೆ ಕಳಿಸಿ ಮಾರಾಟ ಮಾಡುತ್ತಿದ್ದರು. ಮಾರಾಟ ಮಾಡಿ ಬಂದ ಹಣವನ್ನು ತೆಗೆದುಕೊಂಡು ಹೋಗುವಂತೆ ಅಂಡೇಕುಳಿಗೆ ಹೇಳಿಕಳಿಸುತ್ತಿದ್ದರು. ಮನೆಗೆಲಸದ ಭಾರ ಹೊತ್ತ ಈ ಹೆಂಗಸರು ಹೋಗುವುದೆಲ್ಲಿ? ಕೊನೆಗೆ, ವರ್ಷದ ಕೊನೆಯಲ್ಲಿ ರಾಮಣ್ಣಗೌಡರೇ ಬಂದು ಹಣದ ಗಂಟು ಕೊಟ್ಟು ಹೋಗುತ್ತಿದ್ದರು.

ಆಗ ಯಾವ ಜಮೀನೂ ಮಾರಾಟವಾಗಿ ಹೋಗಿರಲಿಲ್ಲ; ಸಾಲಕ್ಕೆ ಆಧಾರವಾಗಿರಲಿಲ್ಲ; ಪಾಳೂ ಬಿದ್ದಿರಲಿಲ್ಲ. ಜೀವನಕ್ಕಾಗಿ ಅಡಿಕೆಯ ಹಣವನ್ನೇ ನೆಚ್ಚಿಕೊಳ್ಳಬೇಕಾಗಿರಲಿಲ್ಲ. ಆರ್ಥಿಕವಾಗಿ ಸುಸ್ಥಿತಿ ಇತ್ತು. ಆದ್ದರಿಂದ ಅಜ್ಜಿ ಆ *ಬೆಳ್ಳಿ ರೂಪಾಯಿಗಳನ್ನು ತಂಬಿಗೆಗಳಲ್ಲಿ ತುಂಬಿ ನೆಲದ ಆಳದಲ್ಲಿ ಹೂತು ಜೋಪಾನಗೊಳಿಸುತ್ತಿದ್ದರು.* ದಂಡಿನವರ ಹೆದರಿಕೆ ಇದ್ದ ಕಾಲವಾದ್ದರಿಂದ ಹೀಗೆ ಮಾಡುತ್ತಿದ್ದರು. ಯಾರಾದರೂ ತೀರಾ ನಂಬಿಕಸ್ಥರು ಬಂದು ಸಾಲ ಕೇಳಿದರೆ ಮಾತ್ರ ನೆಲದಿಂದ ತೆಗೆದು ಶೇ. ೧೨ ರೂಪಾಯಿ ಬಡ್ಡಿಯಂತೆ ಕೊಡುತ್ತಿದ್ದರು.

ಬೆಳ್ಳಿ ರೂಪಾಯಿಗಳನ್ನೇ ವಾಪಸು ತಂದುಕೊಡಬೇಕೆಂದು ಷರತ್ತು ವಿಧಿಸದೆ ಇರುತ್ತಿರಲಿಲ್ಲ.

ನಮ್ಮ ತಂದೆಗೆ ವಯಸ್ಸಾಗುತ್ತಾ ಬಂದಂತೆಲ್ಲಾ ಅಜ್ಜಿಯು ಅವರಿಗೆ ಆಡಳಿತವನ್ನು ವಹಿಸುತ್ತಾ ಬಂದರು. ಇಪ್ಪತ್ತಕ್ಕೆ ಯಜಮಾನಿಕೆ ಬರಬಾರದು ಎಂಬುದು ಒಂದು ಗಾದೆ. ನಮ್ಮ ತಂದೆಯವರು ಎಲ್ಲ ಹಣವನ್ನೂ ಕರಗಿಸುತ್ತಾ ಬಂದುದೇ ಒಂದು ದೊಡ್ಡ ಕಥೆ. ಅಜ್ಜಿ ಮಾತ್ರ ಬಹು ಪ್ರಾಮಾಣಿಕತೆಯಿಂದ, ಹಣ ತೀರಿ ತೀರಿದ ಹಾಗೆ ಒಂದೊಂದೇ ತಂಬಿಗೆ ಕಿತ್ತು ಕಿತ್ತು ಕೊಡುತ್ತಾ ಬಂದರು. ಜೊತೆಗೆ ಲಿಂಗದಹಳ್ಳಿ, ತೆಂಗಿನಕೆರೆ ಮುಂತಾದ ಕಡೆ ಇದ್ದ ನಮ್ಮ ಜಮೀನುಗಳೆಲ್ಲಾ ಒಂದೊಂದಾಗಿ ಕೈ ಬಿಡುತ್ತ ಬಂದವು. *ಆದರೆ ನಮ್ಮ ಸಂಪತ್ತು ಕರಗಿದ್ದು ಮಾತ್ರ ದೇಶಕ್ಕಾಗಿ. ಆದರಿಂದಲೇ ನಮ್ಮ ತಂದೆ ಗೌರವಾನ್ವಿತರಾದರು. ನಮಗೂ ಈಗ ಅದನ್ನು ನೆನೆದು ಹೆಮ್ಮೆ ಎನಿಸುತ್ತದೆ.*

ಸಾಲ ಮಾಡಲು ತೊಡಗಿದ್ದು ಮಾತ್ರ ನಮ್ಮ ಮನೆಗಾಗಿಯೇ. ನಮಗೆ ಆಗ ಇದ್ದುದು ಒಂದು ಸೋಗೆ ಗುಡಿಸಲು ಮಾತ್ರ. ಅದಕ್ಕೆ ಹಂಚು ಹೊದಿಸಬೇಕಾದ ಅಗತ್ಯವಿತ್ತು. ಆ ಕೆಲಸವನ್ನು ಐದು ಸಾವಿರ ರೂಪಾಯಿಗೆ ಗುತ್ತಿಗೆ ಕೊಟ್ಟರು. ಹಣ ಸಾಲದಾಗ ದೇವಂಗಿ ರಾಮಣ್ಣಗೌಡರ ತಮ್ಮ ತಿಮ್ಮಣ್ಣಗೌಡರ ಹತ್ತಿರ ನಾಲ್ಕು ಸಾವಿರ ರೂಪಾಯಿ ಸಾಲ ತಂದರು. ಈ ಸಾಲವನ್ನು ತೀರಿಸುವುದೇನೂ ಕಷ್ಟದ ಮಾತಾಗಿರಲಿಲ್ಲ. ಆದರೆ ಮುಂದೆ ನಮ್ಮ *ತಂದೆಯವರ ಮನಸ್ಸನ್ನು ದೇಶದ ವಿಚಾರವು ಆಕ್ರಮಿಸುತ್ತ ಬಂತು. ಮನೆಯನ್ನು ಮರೆತರು.*

೧೯೨೭ನೇ ಇಸವಿ ನಮ್ಮ ತಂದೆಯವರ ಜೀವನದಲ್ಲಿ ಮಹತ್ವದ ವರ್ಷ. ಗಾಂಧೀಜಿ ಮತ್ತು ರಾಜಗೋಪಾಲಾಚಾರಿಯವರು ತೀರ್ಥಹಳ್ಳಿಗೆ ಬಂದಿದ್ದರು. ಅವರಿಂದ ನಮ್ಮ ತಂದೆ ಪೂರ್ತಾ ಪ್ರಭಾವಿತರಾದರು.

ಒಟ್ಟಿನಲ್ಲಿ ನಮ್ಮ ತಂದೆಯವರ ಧಮನಿಗಳಲ್ಲಿ *ದೇಶಭಕ್ತಿಯ ರಕ್ತ ಹರಿಯತೊಡಗಿತ್ತು.* ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬಂದ ಹೊರತು ನಮಗೆ ಮುಕ್ತಿ ಇಲ್ಲ, ಅದಕ್ಕಾಗಿ ಎಷ್ಟೇ ಕಷ್ಟ-ನಷ್ಟ ಅನುಭವಿಸಬೇಕಾಗಿ ಬಂದರೂ ಸರಿ, ಅದನ್ನು ಸಾಧಿಸಿಯೇ ತೀರಬೇಕು ಎಂದು ಪಣತೊಟ್ಟರು.

. . . ನಾನಾ ಜನರು ಪ್ರೀತಿಯಿಂದಲೇ ಅವರ ಮೇಲೆ ಒತ್ತಡಗಳನ್ನು ತಂದರು. ದೇವಂಗಿ ತಿಮ್ಮಣ್ಣಗೌಡರು ಕೇವಲ ಸೋದರಪ್ರೇಮದಿಂದ ಇದ್ದವರು. ಹೀಗೆ ಸ್ವಾತಂತ್ರ್ಯಚಳವಳಿಗೆ ಕಾಲಿಟ್ಟರೆ ತಮ್ಮ ಅವರ ಸಂಬಂಧ ಕೆಡುವುದೆಂದು ಹೇಳಿದರು. ನಮ್ಮ ತಂದೆ ಆ ಮಾತು ಕೇಳಲಿಲ್ಲ. ಆಗ ಗೌಡರು ತಮ್ಮ ಸಾಲ ತೀರಿಸಬೇಕೆಂದು ಹಠ ತೊಟ್ಟರು. ಅದಕ್ಕೂ ಜಗ್ಗದೆ, ಹುಲುಗಾರು ಜಮೀನು ಮಾರಿ ಅವರ ಸಾಲ ತೀರಿಸಿಬಿಟ್ಟರು. ಹೀಗೆ ಒಂದೊಂದೇ ಜಮೀನು ಕೈಬಿಡಲು ಆರಂಭವಾಯಿತು.

. . . ೧೯೪೩ರಿಂದಲೇ ನಾನು ಜಮೀನು ವ್ಯವಸಾಯ ಮಾಡಿಸಲು ಗಮನ ಕೊಟ್ಟಿದ್ದೆನಲ್ಲ. ಆದರೆ ನಮ್ಮ ಬಳಿ ಆಗ ಉಳಿದಿದ್ದು ಬರೀ ಒಂದು ಎಕರೆ ತೋಟ, ಒಂದೂವರೆ ಎಕರೆ ತರಿ ಅಷ್ಟೇ. ಇದರಿಂದ ಬರುವ ವರಮಾನ ಮೂರು ತಿಂಗಳಿಗೂ ಸಾಲುತ್ತಿರಲಿಲ್ಲ. ಅದೊಂದು ಯೋಚನೆಯೇ ಆಗಿತ್ತು. ಆಗ ನಮಗೆಲ್ಲರಿಗೂ ಹಿರಿಯ ಅಣ್ಣನಂತೆಯೂ, ದಾರಿದೀಪದಂತೆಯೂ ಇದ್ದ ಬಸವಾನಿರಾಮಶರ್ಮರೊಡನೆ ಸಮಾಲೋಚನೆ ನಡೆಸಿದೆ. ಇಬ್ಬರೂ ದೇವಂಗಿ ತಿಮ್ಮಣ್ಣಗೌಡರ ಮನೆಗೆ ಹೋದೆವು. ನಮ್ಮ ಪರಿಸ್ಥಿತಿಯನ್ನೆಲ್ಲಾ ಅವರಿಗೆ ವಿವರಿಸಿದೆವು. ಅವರು ತುಂಬಾ ಕನಿಕರಪಟ್ಟು ನಮ್ಮ ಬಗ್ಗೆ ಸಹಾನುಭೂತಿ ತೋರಿಸಿದರು. *"ಮಂಜಯ್ಯನವರು ಜಮೀನು ಕಳೆದದ್ದು ದುಶ್ಚಟಗಳಿಗಾಗಿ ಅಲ್ಲ. ದೇಶಕ್ಕಾಗಿ ಎಲ್ಲವನ್ನೂ ತ್ಯಾಗ ಮಾಡಿದರು"* ಎಂದು ಮನತುಂಬಿ ಮಾತನಾಡಿದರು. ಅವರು ಐದು ಸಾವಿರದ ಐದುನೂರು ರೂಪಾಯಿಗಳಿಗೆ ವಶಪಡಿಸಿಕೊಂಡಿದ್ದ ಜಮೀನನ್ನೆಲ್ಲಾ ಕೇವಲ ನಾಲ್ಕು ಸಾವಿರ ರೂಪಾಯಿಗಳಿಗೆ ವಾಪಸು ಕೊಡಲು ಒಪ್ಪಿದರು. ಆದರೆ ಅಷ್ಟು ಹಣವನ್ನಾದರೂ ಅವರಿಗೆ ಕೊಡುವುದಕ್ಕೆ ನಮ್ಮ ಬಳಿ ಏನೂ ಇರಲಿಲ್ಲ. ಅದೇ ಜಮೀನನ್ನು ಡೀಡು ಮಾಡಿಕೊಂಡು ತೀರ್ಥಹಳ್ಳಿಯ ತಿಪ್ಪಾಜೋಯಿಸರು ಆ ಹಣವನ್ನೆಲ್ಲಾ ತೀರಿಸಿದರು. *ತಿಮ್ಮಣ್ಣಗೌಡರು ಮನಃಪೂರ್ವಕವಾಗಿ ನಮಗೆ ಆ ಜಮೀನು ಹಿಂತಿರುಗಿಸಿದ್ದರು.* ಅವರ ಸದಾಶಯವು ಮತ್ತೂ ಫಲ ಕೊಟ್ಟಿತು. ಅದೇ ಸಮಯದಲ್ಲಿ ರಾಮಶಾಸ್ತ್ರಿಗಳು ತೀರ್ಥಹಳ್ಳಿಗೆ ಬಂದಿದ್ದರು. 'ಮಂಜಯ್ಯನವರ ದೇಶ ಸೇವೆಯನ್ನು ನೆನೆದು' ತಿಮ್ಮಣ್ಣಗೌಡರು ಅವರ ಜಮೀನನ್ನು ನಮಗೆ ವಾಪಸ್ಸು ಕೊಟ್ಟದ್ದು ಅವರಿಗೆ ತಿಳಿಯಿತು. ಮಂಜಯ್ಯನವರ ವಿಚಾರದಲ್ಲಿ ಅಪಾರ ಅಭಿಮಾನವಿದ್ದವರು ಅವರು. ಒಂದು ಕ್ಷಣವೂ ಯೋಚಿಸದೆ *'ನಿನ್ನ ಜಮೀನನ್ನು ನೀನೇ ವಾಪಸ್ ತೆಗೆದುಕೋ'* ಎಂದುಬಿಟ್ಟರು. ಪುಣ್ಯವು ಮರಿಗೆ ಮರಿ ಇಟ್ಟಿತ್ತು.

ಹೀಗೆ ಜಮೀನು ದೊರೆತಾಗ ನಿಯತ್ತಿನಿಂದ ದುಡಿದು ಅದನ್ನು ರೂಢಿಸಿದೆ. ಉತ್ಪತ್ತಿ ಬಂದು ಮನೆಯ ಕಡೆ ಸ್ಥಿತಿಗತಿ ಸುಧಾರಿಸುತ್ತಾ ಬಂತು. ಅದರಿಂದ ತಮ್ಮಂದಿರು ತಮ್ಮ ಓದು ಮುಂದುವರಿಸಲಿ ಎಂದು ಯೋಚಿಸಿದೆ.. . . ಅನಂತದಾಸ ಮಾತ್ರ ಇಂಟರ್ ಮುಗಿಸಿದ. ಉಪಾಧ್ಯಾಯರ ತರಬೇತಿಯನ್ನೂ ಪಡೆದ. ಅಗ್ರಿಕಲ್ಚರ್ ಕಾಲೇಜನ್ನೂ ಸೇರಿದ್ದ.

. . . ನಮ್ಮ ತಾಯಿಯವರ ಅನಾರೋಗ್ಯದ ಕಾರಣದಿಂದ ಮನೆಗೆಲಸಗಳನ್ನು ಮಾಡಿಕೊಂಡು ಹೋಗುವುದು ಅವರಿಂದ ಸಾಧ್ಯವಾಗುತ್ತಿರಲಿಲ್ಲ. *ಮಲೆನಾಡಿನಲ್ಲಂತೂ ಹೆಂಗಸರಿಗೆ ಮನೆಗೆಲಸ ವಿಪರೀತವಾಗಿರುತ್ತದೆ.* ಬಾವಿ ನೀರು ಸೇದಿ, ದಿಬ್ಬ ಏರಿ ನೀರು ತರಬೇಕು; ದನಕರುಗಳಿಗೆ ತಿಂಡಿ ಮಾಡಿ ಹಾಕಬೇಕು; ಸಗಣಿ ಎತ್ತಬೇಕು; ಶಾಲೆಗೆ ಹೋಗುವ ಮಕ್ಕಳಿಗಾಗಿ ಕಾಲಕ್ಕೆ ಸರಿಯಾಗಿ ಊಟ-ತಿಂಡಿ ಸಿದ್ಧಪಡಿಸಬೇಕು... ಹೀಗೆ ಅವರ ಕೆಲಸದ ಹೊರೆ ದೊಡ್ಡದೇ ಆಗಿರುತ್ತದೆ. ಅಷ್ಟನ್ನೂ ನಮ್ಮ ತಾಯಿ ಕಷ್ಟಪಟ್ಟು ನಿಭಾಯಿಸುತ್ತಿದ್ದರು.

. . . ೧೯೬೫ರ ವೇಳೆಗೆ ಜಮೀನು ತಕ್ಕಮಟ್ಟಿಗೆ ಸುಸ್ಥಿತಿಗೆ ಬಂತು. ತುಂಬಾ ಕಲ್ಲುಮಿಶ್ರಿತ ಮಣ್ಣಿನ ನೆಲವಾದ್ದರಿಂದ ಅಡಿಕೆ ಮರದಲ್ಲಿ ಹರಳು ನಿಲ್ಲುತ್ತಿರಲಿಲ್ಲ. ತುಂಗಾನದಿಯಿಂದ ನೀರು ಹರಿಸುವ ಏರ್ಪಾಡು ಮಾಡಿದೆ. ಅದಕ್ಕಾಗಿ ಪಂಪು ಹಾಕಿಸಿದೆ. ಪೈಪು ಎರಡು ಗುಡ್ಡಗಳನ್ನು ಹತ್ತಿ ಇಳಿದು ನಮ್ಮ ತೋಟವನ್ನು ಮುಟ್ಟಿತ್ತು. ಅದರಿಂದಾಗಿ *೪೦ ಮಣ ಅಡಿಕೆ ಆಗುವ ಜಾಗದಲ್ಲಿ ೨೦೦ ಮಣ ಆಗುವ ಹಾಗಾಯಿತು.* ಅಂಡೇಕುಳಿ ಗದ್ದೆಯ ಪಕ್ಕ ಸುಮಾರು ೧೦ ಎಕರೆ ಖುಷ್ಕಿ ಜಮೀನಿತ್ತು. ಅದರಲ್ಲಿ ಬಿದಿರು ಬೆಳೆದು ನಿಂತಿತ್ತು. ಅದನ್ನೆಲ್ಲಾ ಕಡಿದು ಗದ್ದೆ ಆಗುವಂತೆ ಮಾಡಿದೆವು. ಪಂಪಿನ ನೀರಿನಿಂದಲೇ ೪-೫ ಎಕರೆ ಗದ್ದೆಯಲ್ಲಿ ಬೆಳೆ ಮಾಡಿದೆವು. ವರ್ಷಕ್ಕೆ ೬೦-೭೦ ಪಲ್ಲ ಬತ್ತ ಬರುವ ಹಾಗಾಯಿತು. ಕೆಲವು ದಿನ *ಜೇನು ಇಲಾಖೆಯಲ್ಲಿ ಇನ್‌ಸ್ಪೆಕ್ಟರಾಗಿದ್ದ ಕೃಷ್ಣದಾಸ ಆ ಕೆಲಸ ಬಿಟ್ಟು, ಬಂದು ವ್ಯವಸಾಯದಲ್ಲಿ ನನಗೆ ನೆರವಾಗಿ ನಿಂತ.* ನಮ್ಮ ತಾಯಿಗೂ ಕೃಷ್ಣದಾಸನ ಬಗೆಗೆ ವಿಶೇಷವಾದ ಒಲವಿತ್ತು. "ಅವನ ವಿದ್ಯೆಯೂ ಕಡಿಮೆ, ಸಂಬಳವೂ ಕಡಿಮೆ. ಎಲ್ಲ ಮಕ್ಕಳೂ ಒಂದೊಂದು ಕೆಲಸದಲ್ಲಿದ್ದಾರೆ. *ಕೃಷ್ಣನಿಗೆ ವ್ಯವಸಾಯದಲ್ಲಿ ಅನುಕೂಲ ಮಾಡಿಕೊಡಬೇಕು. ಅವನ ಜೊತೆ ಜಗಳ ಮಾಡಬಾರದು" ಎಂದು ನಮ್ಮ ತಾಯಿ ಭಾಷೆ ತೆಗೆದುಕೊಂಡಿದ್ದರು. . . . . .*



ಹುಣಿಸೇಹಣ್ಣು ಹರವಿ ಕೂತ ಒಬ್ಬ ತಾಯಿ

೧೩.'ಸಂವಾದ' : ಇತರರು ಕಂಡ ಸಂಕೇತಿಗಳು

ಸಂ:ಡಾ.ಪ್ರಣತಾರ್ತಿ ಹರನ್, ಸಮುದಾಯ ಅಧ್ಯಯನ ಕೇಂದ್ರ, ಮೈಸೂರು


(ಸಂಕೇತಿ ಸಮುದಾಯದ ವಿದ್ಯಮಾನಗಳನ್ನು ಸಂಕೇತಿಯೇತರ ಗಣ್ಯರು ತಾವು ಕಂಡಂತೆ ಅನೇಕ ಲೇಖನಗಳಲ್ಲಿ ದಾಖಲಿಸಿದ್ದಾರೆ. ಅಂಥ ಲೇಖನಗಳ ಸಂಗ್ರಹವೇ 'ಸಂವಾದ'. ಕೃಷಿ ಜೀವನಕ್ಕೆ ಹೊಂದಿಕೊಂಡ ಕೆಲಭಾಗಗಳನ್ನು ಇಲ್ಲಿ ಕೊಟ್ಟಿದೆ.)

ಅ) ಸಂಕೇತಿ ಸಮುದಾಯ - ನಾನು ಕಂಡಂತೆ

ಪ್ರ: ೧೯೯೮, ಪು.೪-೧೦ — *- ಡಾ. ಎ.ಜಿ. ಸುಬ್ಬರಾವ್*

(ಕಠಿಣ ದುಡಿಮೆ, ದೃಢಕಾಯ, ಪುಷ್ಕಳ ಭೋಜನ, ಗೋಸೇವೆ, ಬಡತನವಿರಲಿ ಸಿರಿತನವಿರಲಿ ನಿರಾಡಂಬರದ ಸರಳ ಜೀವನ, ನೆಮ್ಮದಿ - ಇವು ಸಂಕೇತಿಗಳ ಬದುಕಿನ ರೀತಿ)

. . . ಸಂಕೇತಿಗಳು *ಕಾಯಕಕ್ಕೆ ಹೆಚ್ಚು ಮಹತ್ವ ಕೊಡುತ್ತಾರೆ.* ಕಷ್ಟಪಟ್ಟು ಕೆಲಸಮಾಡಿ ಊಟ ಮಾಡುವರು. ಸರ್ಕಾರಿ ಸಂಬಳ ತಿನ್ನುವ ಸರ್ಕಾರಿ ನೌಕರ ನಿತ್ಯ ಸಮಯಕ್ಕೆ ಸರಿಯಾಗಿ ಕಛೇರಿಗೆ ಹೋಗಬಹುದು, ಬಿಡಬಹುದು. ಆದರೆ ಸಂಕೇತಿ ಜನ ತಮಗೆ ಅನ್ನಕೊಡುವ ಭೂಮಿ ತಾಯಿಯನ್ನು ಎಂದೂ ನಿರ್ಲಕ್ಷಿಸುವುದಿಲ್ಲ. ಬೆಳಗಿನ ತಮ್ಮ ನಿತ್ಯಕರ್ಮಗಳನ್ನು ಮುಗಿಸಿಕೊಂಡು ತೋಟಕ್ಕೆ ಹೋದರೆ ಮಧ್ಯಾಹ್ನದವರೆಗೆ ಸ್ವಲ್ಪವೂ ಸೋಮಾರಿತನ ತೋರದೆ ದುಡಿಯುತ್ತಾರೆ. *ಕೆಲಸ ಮಾಡದೆ ಊಟ ಮಾಡುವುದು ಮಹಾಪಾಪವೆಂದು* ಅವರು ಗ್ರಹಿಸುತ್ತಾರೆ. ಬೇರೆ ಸಮುದಾಯದವರಂತೆ ದಿನಕ್ಕೆ ಹತ್ತು ಸಾರಿ ಕಾಫೀ ಕುಡಿದು ಜೀರ್ಣಶಕ್ತಿ ಹಾಳು ಮಾಡಿಕೊಂಡು ಒಂದು ಪಾವಕ್ಕಿ ಅನ್ನವನ್ನು ನಾಲ್ಕು ಜನ ಉಣ್ಣುವಂತೆ ಇವರಿಲ್ಲ. ಕಷ್ಟಪಟ್ಟು ಕೆಲಸ ಮಾಡುವುದರಿಂದ ಚೆನ್ನಾಗಿ ಹಸಿವಾಗುತ್ತದೆ. ಇತರರಿಗಿಂತ ಚೆನ್ನಾಗಿ ಊಟ ಮಾಡುತ್ತಾರೆ. ಇದೇ ಅವರು *ಇತರರಿಗಿಂತ ಆರೋಗ್ಯವಂತರಾಗಿ, ದೃಢಕಾಯರಾಗಿ, ದೀರ್ಘಾಯುಗಳಾಗಿರುವುದರ ಗುಟ್ಟು.* ವೃಥಾಕಾಲಯಾಪನೆ ಮಾಡುತ್ತಾ, ಅವರಿವರನ್ನು ಟೀಕೆ ಮಾಡುತ್ತ, ಕತ್ತೆ ಮೇಲೆ ಕುದುರೆ, ಕುದುರೆ ಮೇಲೆ ಕತ್ತೆ ಹತ್ತಿಸಿ ಕಿತಾಪತಿ ಮಾಡುತ್ತ ಜೀವನ ದೂಡುವುದನ್ನು ಇವರು ಕಲಿತಿಲ್ಲ. ಚೆನ್ನಾಗಿ ಊಟ ಮಾಡುವುದೇ ಒಂದು ದೋಷವೆಂದು ಗ್ರಹಿಸುವುದು ಸಂಕುಚಿತ ಬುದ್ಧಿಯನ್ನು ತೋರಿಸುತ್ತದೆ ಅಷ್ಟೆ.



ಹಗ್ಗ ಹೊಸೆಯುತ್ತಿರುವ ಪುರೋಹಿತ-ರೈತ

ಸಂಕೇತಿ ಜನಾಂಗದ ಹೆಚ್ಚು ಜನರ ಜೀವನಾಧಾರ ಕೃಷಿ. ಅದರಲ್ಲೂ ಬಾಗಾಯಿತು ಕೃಷಿ. ನಾನು ಒಬ್ಬ ಹಳೆತಲೆಮಾರಿನವರನ್ನು "ನೀವು ಏಕೆ ಬಾಗಾಯಿತು ಕೃಷಿಗೆ ಹೆಚ್ಚು ಮಹತ್ವ ಕೊಡುತ್ತೀರಿ?" ಎಂದು ಕೇಳಿದೆ. ಅವರು, "ನಾವು ಗೋವಿಗೆ ಮಾತೃಸ್ಥಾನ ಕೊಟ್ಟಿದ್ದೇವೆ. ಹೊಲ, ಗದ್ದೆಗಳಲ್ಲಿ ಕೃಷಿ ಮಾಡಬೇಕಾದರೆ, ನಮ್ಮ ಗೋಮಾತೆಯ ವಂಶವಾದ ಎತ್ತು, ಕರುಗಳು ಅನಿವಾರ್ಯ. ಉಳುವುದಕ್ಕೆ, ಹೇರುಹೊರುವುದಕ್ಕೆ, ಬಾವಿಯಿಂದ ನೀರು ಏರುವುದಕ್ಕೆ (ಮೇಟಿ ಹೊಡೆಯುವುದು) ಅವುಗಳನ್ನು ದುಡಿಸಿಕೊಳ್ಳುವುದು ಅನಿವಾರ್ಯ. ಗೋವಂಶಕ್ಕೆ ಹಿಂಸೆ ಕೊಡುತ್ತ ಗೋವನ್ನು ಬಾಯಿಯಲ್ಲಿ 'ತಾಯಿ' ಎಂದು ಹೇಳುವುದರಲ್ಲಿ ಅರ್ಥವಿಲ್ಲ. ತೋಟದ ಕೆಲಸವಾದರೆ ನಾವೇ

ಮಾಡಿಕೊಳ್ಳುತ್ತೇವೆ - ತೋಟವನ್ನು ಅಗೆಯುತ್ತೇವೆ, ನೀರು ಹಾಕುತ್ತೇವೆ, ಗೊಬ್ಬರ ಹಾಕುತ್ತೇವೆ, ಕಳೆಕೀಳುತ್ತೇವೆ, ಅಡಿಕೆ ಕೀಳುತ್ತೇವೆ. ನಮ್ಮ ದಿನನಿತ್ಯಕ್ಕೆ ಬೇಕಾದ ಹೂವು, ಹಣ್ಣು, ಕಾಯಿ, ವೀಳೆದೆಲೆ, ಅಡಿಕೆ, ಬಾಳೆಎಲೆ, ತರಕಾರಿ, ಒಲೆಗೆ ಉರವಲು ಎಲ್ಲ ದೊರೆಯುತ್ತದೆ. *ಒಂದು ತೋಟವಿದ್ದರೆ ನಾವು ಯಾವುದಕ್ಕೂ ಪರಾವಲಂಬಿಯಾಗಬೇಕಾಗಿಲ್ಲ.* ಪ್ರಕೃತಿಗೆ ಮೈಯ್ಯೊಡ್ಡಿ ನಿತ್ಯ ದುಡಿಯುವುದರಿಂದ ಸುಲಭವಾಗಿ ನಮಗೆ *ರೋಗ ನಿರೋಧಶಕ್ತಿ ಬರುತ್ತದೆ.* ಸುಲಭವಾಗಿ ರೋಗಗಳಿಗೆ ನಾವು ಬಲಿಯಾಗುವುದಿಲ್ಲ. ಇನ್ನೊಬ್ಬರ ಹಂಗಿನಲ್ಲಿ ನಾವು ಬಾಳಬೇಕಾಗಿಲ್ಲ. ಮನೆಯಲ್ಲಿ ಒಂದೆರಡು ಹಸುಗಳನ್ನು ಸಾಕಿಕೊಂಡರೆ ಅವಕ್ಕೆ ಮೇವು ಸಹ ಧಂಡಿಯಾಗಿ ದೊರೆಯುತ್ತದೆ. ಮನೆಯವರಿಗೆ ಹಾಲು, ಮೊಸರು ದೊರೆಯುತ್ತದೆ. *ಗೋಸೇವೆ ಮಾಡಿದ ಪುಣ್ಯವೂ ಬರುತ್ತದೆ.* ನಮ್ಮ ತೋಟಕ್ಕೆ ಉತ್ತಮ ಗೊಬ್ಬರ ಸಹ ಸಿಕ್ಕುತ್ತದೆ" ಎಂದು ಹೇಳಿದರು. ಸಂಕೇತಿಗಳು ಕೃಷಿಗೆ ಪ್ರಾಧಾನ್ಯ ಕೊಡುವುದರಿಂದ ಇವರು ಕೇವಲ ದೈಹಿಕ ಶ್ರಮ ಪಡುವವರೇ ವಿನಃ ಮಿದುಳಿಗೆ ಕೆಲಸ ಕೊಡುವವರಲ್ಲವೆಂಬ ಕಲ್ಪನೆ ನನಗೆ ಬಂದಿತ್ತು. ಈ ಭಾವನೆ ಕೇವಲ ನಿರಾಧಾರವಾದುದೆಂಬ ಅಂಶ ನಾನು ಅವರೊಡನಾಡಿದನಂತರ ವೇದ್ಯವಾಯಿತು. . . .

ಹೆಚ್ಚಿನ ಸಂಕೇತಿಗಳು ಸ್ಥಿತಿವಂತರೇನೂ ಅಲ್ಲ. ತೋಟದಲ್ಲಿ ಬೆಳೆದ ತೆಂಗು, ಅಡಿಕೆ, ಬಾಳೆಹಣ್ಣು, ವೀಳೆದೆಲೆಗಳನ್ನು ಮಾರಿ ತಮ್ಮ ಜೀವನ ಸಾಗಿಸುವವರೇ ಹೆಚ್ಚು. ಇತ್ತೀಚಿನ ದಿನಗಳಲ್ಲಿ ಬಹಳಷ್ಟು ಯುವಕರು ತಮ್ಮ ವ್ಯವಸಾಯವನ್ನು ತೊರೆದು ಪಟ್ಟಣಗಳಿಗೆ ಹೋಗಿ ನೌಕರಿ ಮಾಡುತ್ತಾ ಜೀವನ ಸಾಗಿಸುತ್ತಿದ್ದಾರೆ. ಅಡಿಕೆ, ವೀಳೆದೆಲೆಗಳಿಗೆ ಒಳ್ಳೆ ಬೆಲೆ ಬಂದು ಅನೇಕರು ಲಕ್ಷಾಧಿಪತಿಗಳಾಗಿದ್ದಾರೆ. ಹಾಗಾದರೂ *ಅವರಲ್ಲಿ ಬಹಿರಾಡಂಬರವಿಲ್ಲ. ಸರಳ ಜೀವನವನ್ನೇ ನಡೆಸುತ್ತಾ ನಿಗರ್ವಿಗಳಾಗಿರುತ್ತಾರೆ.*

. . . ಉಳುವವನಿಗೇ ಜಮೀನೆಂದು ಸರ್ಕಾರ ಬ್ರಾಹ್ಮಣರ ಜಮೀನನ್ನೆಲ್ಲಾ ಕಿತ್ತುಕೊಂಡಿತು. ಬ್ರಾಹ್ಮಣರು ಮುಂದುವರಿದ ಜನಾಂಗವೆಂದು ಸರ್ಕಾರಿ ಕೆಲಸಗಳನ್ನು ಕೊಡುವುದನ್ನು ನಿಲ್ಲಿಸಿದರು. ಹೀಗಾಗಿ ಬ್ರಾಹ್ಮಣರೆಲ್ಲಾ ಜೀವನೋಪಾಯಕ್ಕೆ ಕಷ್ಟವಾಗಿ ಕಂಗಾಲಾಗಿರುವಾಗ ಬಾಗಾಯ್ತನ್ನೇ ನಂಬಿಕೊಂಡು ನಿರಹಂಕಾರಿಗಳಾಗಿ ಕೃಷಿ ಮಾಡುತ್ತಾ ಬಂದಿರುವ ಸಂಕೇತಿ ಜನವೀಗ ಆರ್ಥಿಕವಾಗಿಯೂ ಮುಂದುವರಿದು *ನೆಮ್ಮದಿಯ ಜೀವನ ನಡೆಸುತ್ತಾ ಬಂದಿದ್ದಾರೆ.* ಭೂಮಿತಾಯಿಯನ್ನು ನಂಬಿದರೆ ಆಕೆ ಎಂದಿಗೂ ಕೆಡುಕು ಮಾಡುವುದಿಲ್ಲವೆನ್ನುವುದಕ್ಕೆ ಉದಾಹರಣೆಯಾಗಿ ಮುಂದುವರಿಯುತ್ತಿದ್ದಾರೆ. . . .

ಆ) ಒಂದು ತಕರಾರ್ ತಖ್ತೆ

ಪು. ೩೩-೩೫ *ಡಾ|| ಮಾಸ್ತಿ ವೆಂಕಟೇಶ ಅಯ್ಯಂಗಾರ್*

(ತೋಟ ಬೆಳೆಸಿದ ಶಾಸ್ತ್ರಿಗಳಿಗೆ ಅನ್ಯಾಯವಾಗಿದೆ ಎಂಬುದನ್ನು ಪತ್ತೆ ಮಾಡಿ, ನ್ಯಾಯ ದೊರಕಿಸಿಕೊಟ್ಟರು - ಪೂಜ್ಯ ಮಾಸ್ತಿಯವರು)
ಬೆಟ್ಟದಪುರದಲ್ಲಿ ನನ್ನ ಗಮನಕ್ಕೆ ಬಂದ ಒಂದು ಸಂಗತಿಯನ್ನು ಇಲ್ಲಿ ಹೇಳಬೇಕು. ಆಗ ನಾನು ಅಲ್ಲಿ ಜಮಾಬಂದಿ ನಡೆಸುತ್ತಿದ್ದೆ. ಬೆಳಗ್ಗೆ ಸ್ಥಳಗಳನ್ನು ನೋಡುವುದು, ಸಂಜೆ ಲೆಕ್ಕಗಳನ್ನು ನೋಡುವುದು, ತಕರಾರು ತಖ್ತೆಗಳ ವಿಚಾರಣೆ ನಡೆಸಿ ನಿರ್ಣಯ ಮಾಡುವುದು. ಒಂದು ದಿನ ಬೆಳಗ್ಗೆ ನಾನು ಸ್ಥಳವನ್ನು ನೋಡಲು ಹೋಗುತ್ತಿದ್ದಾಗ ಎದುರಿಗೆ ಒಬ್ಬ ಶಾಸ್ತ್ರಿ ಬರುತ್ತಿದ್ದರು. ಒಂದು ಹಸುವನ್ನು ಹಿಡಿದು ಬರುತ್ತಿದ್ದಾರೆ. ಕಂಕುಳಲ್ಲಿ ಹುಲ್ಲಿನ ಒಂದು ಕಟ್ಟು ಇದೆ. ನನ್ನನ್ನು ನೋಡಿ ಅವರು ಒಂದು ಬದಿಗೆ ನಿಂತರು. ನಾನು ಶಾಸ್ತ್ರಿಗಳಿಗೆ "ನಮಸ್ಕಾರ. ಗೋಗ್ರಾಸ ಎಂತ ಕಾಣುತ್ತೆ," ಎಂದೆನು. ಅವರು, "ಹೌದು, ಸ್ವಾಮಿ" ಎಂದರು. ನಾನು ಮುಂದುವರಿದೆನು. ಸಂಜೆ ನನ್ನೆದುರಿಗೆ ಈ ಮನುಷ್ಯ ಬಂದು ನಿಂತರು. ಇವರ ಮೇಲೆ ಒಂದು ತಕರಾರು ತಖ್ತೆ. ಕೆರೆಯ ನೀರಿಗೆ ಪಕ್ಕದಲ್ಲೆ ಇರುವ ಗದ್ದೆಯ ಮೇಲೆ ಇವರದೊಂದು ಅಡಕೆಯ ತೋಟ. ಅದರಲ್ಲಿ ಒಂದು ಕೊನೆಯ *ತ್ರಿಕೋನಾಕಾರದ ಸ್ವಲ್ಪ ನೆಲವನ್ನು ಇವರು ಒತ್ತುವರಿಮಾಡಿದ್ದಾರೆ ಎಂದು ಇವರ ಮೇಲೆ ಆಪಾದನೆ.* ಈ ಆಪಾದನೆಗೆ ಆಧಾರ ಸರ್ವೆ ಇಲಾಖೆಯ ಜನ ಕೆಲವು ತಿಂಗಳ ಹಿಂದೆ ಇಲ್ಲಿ ರೀಸರ್ವೆ ನಡೆಸಿದಾಗ ಒತ್ತುವರಿ ಆಗಿದೆ ಎಂದು ಗುರುತು ಹಾಕಿಕೊಟ್ಟಿದ್ದ ಒಂದು ಪಟ್ಟಿ. ಸರ್ವೆ ಇಲಾಖೆಯೇ ಒತ್ತುವರಿ ಆಗಿದೆ ಎಂದು ಹೇಳಿದ ಮೇಲೆ ರೆವಿನ್ಯೂ ಇಲಾಖೆ ಮತ್ತೆ ನೋಡಬೇಕಾದದ್ದೇನಿದೆ? ಪಟ್ಟಿಯಲ್ಲಿ ಗುರುತಿಸಿದ್ದ ಒಂದೊಂದು ಒತ್ತುವರಿಗೂ ಒಂದು ತಕರಾರು ತಖ್ತೆ ಬಿದ್ದಿತ್ತು. ಅವುಗಳಲ್ಲಿ ಈ ಶಾಸ್ತ್ರಿಗಳದೂ ಒಂದು. ಮಿಕ್ಕ

ಒತ್ತುವರಿಗಳನ್ನು ಕುರಿತು ಸಂಬಂಧಿಸಿದ ಜನ ಯಾರೂ ಬಂದು ತಾವು ಒತ್ತುವರಿ ಮಾಡಲಿಲ್ಲ ಎಂದು ಹೇಳಲಿಲ್ಲ. ಈ ಶಾಸ್ತ್ರಿಗಳು ಮಾತ್ರ, "ನಾನು ಒತ್ತುವರಿ ಮಾಡಿಲ್ಲ. ತೋಟ ಎಷ್ಟೋ ವರ್ಷದ್ದು. ಒತ್ತುವರಿ ಆಗಿದೆ ಎಂಬ ಈ ಮೂಲೆ ನೆಲ ಎಂದಿನಿಂದಲೂ ತೋಟದ ಒಂದು ಭಾಗ. ಅದರಲ್ಲಿ ಎಷ್ಟೋ ವರ್ಷದ ಮರ ಇದೆ. ಇದು ಬಯಲಿನ ನೆಲ ಅಲ್ಲ. ಕೆರೆಯ ನೀರು ಆತುಕೊಂಡ ಮೇಡಿನ ನೆಲ. ಮೊದಲಲ್ಲಿ ತೋಟವನ್ನು ಮಾಡಿದವರು ಮಿಕ್ಕ ಕಡೆ ಅಂಚಿನವರೆಗೂ ಮರಗಳನ್ನು ಹಾಕಿದ್ದಾರೆ. ಅವರು ಈ ಮೂಲೆಯಷ್ಟನ್ನು ಮಾತ್ರ ಬರಿದಾಗಿ ಬಿಡುತ್ತಿರಲಿಲ್ಲ. ಸ್ವಾಮಿ ಬಂದು ಸ್ಥಳವನ್ನು ನೋಡಬೇಕು," ಎಂದರು. "ಸರ್ವೆ ಇಲಾಖೆಯ ಜನ ಒತ್ತುವರಿ ಆಗಿದೆ ಅಂತ ಹೇಳಿದ್ದಾರಲ್ಲ," ಎಂದದ್ದಕ್ಕೆ "ಏನೊ ಹೆಚ್ಚು ಕಡಿಮೆ ಆಗಿದೆ ಸ್ವಾಮಿ, ಸ್ಥಳ ನೋಡೋಣಾಗಲಿ," ಎಂದಷ್ಟೇ ಇವರ ಉತ್ತರ.

ಒಳ್ಳೆಯದು ಎಂದು, "ನಾಳೆ ಸ್ಥಳ ನೋಡುತ್ತೇನೆ," ಎಂದು ಅವರಿಗೆ ಹೇಳಿ ಮರುದಿನ ನಾನು ತೋಟಕ್ಕೆ ಹೋದೆನು. *ಶಾಸ್ತ್ರಿಗಳ ಮಾತೆಲ್ಲ ದಿಟ.* ಈ ಮೂಲೆಯಲ್ಲಿ ಇರುವ ಮರ, ಇದರಾಚೆ ಇರುವ ಮರ, ಒಂದೇ ಎತ್ತರದ ಜೊತೆಯ ಮರಗಳು. ತೋಟ ಮಾಡಿದವರು ಈ ಮೂಲೆಯಷ್ಟನ್ನು ಬಿಟ್ಟು ತೋಟ ಮಾಡಿದ್ದಾರೆ ಎನ್ನುವುದಕ್ಕೆ ಕಾರಣ ಕಾಣಲಿಲ್ಲ. ಹಿಂದಿನ ಅಳತೆಯಲ್ಲಿ ಈ ಮೂಲೆಯ ನೆಲ ಸೇರಲಿಲ್ಲ ಎಂದಲ್ಲವೆ ಸರ್ವೆ ಇಲಾಖೆ ಹೇಳಿರುವುದು? ಹಿಂದಿನ ಸಲದ ಟಿಪ್ಪಣಿಯನ್ನು ತರಿಸಿ ಅವರ ಈ ಮಾತು ಸರಿಯೇ ಎಂದು ನೋಡಬೇಕು. ಹೀಗೆಂದು ನಾನು ವಿಷಯದ ನಿರ್ಧಾರವನ್ನು ಮುಂದಕ್ಕೆ ಹಾಕಿದೆನು. ಸರ್ವೆ ಇಲಾಖೆಗೆ, "ನೀವು ಕೊಟ್ಟ ಒಂದು ತಕರಾರು ತಖ್ತೆಯ ಪರಿಶೀಲನೆಗಾಗಿ ಹಿಂದಿನ ಸಲದ ಟಿಪ್ಪಣಿ ಬೇಕಾಗಿದೆ, ಅದನ್ನು ಕಳುಹಿಸಿರಿ" ಎಂದು ಬರೆದೆನು.

ತಿಂಗಳ ದಿನದಲ್ಲಿ ಟಿಪ್ಪಣಿಯ ಪ್ರತಿ ಬಂದಿತು. ಅದರ ಪ್ರಕಾರ ಈ ಮೂಲೆಯ ನೆಲ ತೋಟದ ಒಂದು ಭಾಗ. ಹಿಂದಿನ ಬಾರಿ "ಎ" ಮೂಲೆಯಿಂದ "ಬಿ" ಮೂಲೆಗೆ ಒಂದು ಗೆರೆ. "ಬಿ" ಮೂಲೆಯಿಂದ "ಸಿ" ಮೂಲೆಗೆ ಒಂದೇ ಗೆರೆ ಬಿದ್ದಿದೆ. "ಬಿ" ಮೂಲೆ ಕೈ ಬಿಟ್ಟೇ ಹೋಗಿದೆ.

ಶಾಸ್ತ್ರಿಗಳ ಮಾತೇ ಸರಿ. ತಕರಾರು ತಖ್ತೆಗೆ ಕಾರಣ ಇಲ್ಲ ಎಂದು ನಾನು ಅದನ್ನು ತೆಗೆದುಹಾಕಿದೆನು. ಮೂಲೆಯ ನೆಲ ಎಂದಿನಿಂದಲೂ ತೋಟದ ಒಂದು ಭಾಗ ಎಂದು ತೀರ್ಮಾನಿಸಿದೆನು. ಆಮೇಲೆ ಅಮಲ್ದಾರರೊಂದಿಗೆ ಈ ಮಾತನ್ನಾಡಿದಾಗ ಅವರು, "ನಾನು ಆಮೇಲೆ ವಿಚಾರಿಸಿದೆ, ಸ್ವಾಮಿ. ಸರ್ವೆ ಅಳತೆಗಾರರಿಗೆ ಊರಿನ ಜನ ಎಲ್ಲ ಸೇರಿ ಸಂಭಾವನೆ ಕೊಟ್ಟಾಗ *ಶಾಸ್ತ್ರಿಗಳು ನನಗೆ ಇದಕ್ಕೆಲ್ಲ ಕಾಸಿಲ್ಲಪ್ಪ, ನನ್ನ ಕೇಳಬೇಡಿ, ಅಂದರಂತೆ.* ಅದಕ್ಕಾಗಿ ಆ ಜನ ಬೇಕು ಎಂತ ಹೀಗೆ ಮಾಡಿರಬೇಕು ಎಂತ ತಿಳಿಯಿತು," ಎಂದರು. ದಿಟವಾಗಿ ನಾನು ಈ ವಿಷಯವನ್ನೆತ್ತಿಕೊಂಡು ಸರ್ವೆ ಇಲಾಖೆಯಲ್ಲಿ ದೂರು ಹೇಳಬೇಕು. ಆದರೆ ಈ ವಿವರಕ್ಕೆಲ್ಲ ಸಾಕ್ಷ್ಯ ಒದಗುವುದು ಕಷ್ಟ. ನಮ್ಮ ಜನ ಇಂಥ ವೇಳೆ ಸಂಗತಿಯನ್ನು ಸರಳವಾಗಿ ಹೇಳುವುದಿಲ್ಲ. ನಾನು ಏಕೆ ಯಾವನದೊ ಮನೆ ಹಾಳುಮಾಡಲಿ ಎಂದುಕೊಳ್ಳುತ್ತ ಶಾಸ್ತ್ರಿಗಳು ಕೂಡ ಮಾತು ಮರೆಸಿದ್ದರು. "ತಕರಾರು ಇಲ್ಲ ಎಂದ ಮೇಲೆ ಅವರು ಕಾಸು ಕೇಳಿದರು ಅಂತ ಹೇಳಿ ಆಗಬೇಕಾದದ್ದೇನು", ಎಂದು ಈಗ ಯೋಚಿಸಿದರೆ ಆಶ್ಚರ್ಯವಿಲ್ಲ. ಎಂತೂ ಇದಕ್ಕಾಗಿ ನಾನು ಬೆಟ್ಟದಪುರಕ್ಕೆ ಹೋಗುವುದು ಸಾಧ್ಯವಿಲ್ಲ, ಮುಂದಿನ ಬಾರಿ ಹೋದಾಗ ನೋಡಬಹುದು, ಎಂದದ್ದಾಯಿತು.

ಮತ್ತೆ ನಾನು ಬೆಟ್ಟದಪುರಕ್ಕೆ ಹೋಗಲಿಲ್ಲ. ವಿಷಯ ಅಲ್ಲಿಗೇ ಮುಗಿಯಿತು.

ಇ) ಸಂಸ್ಕೃತ ಗ್ರಾಮ ಮತ್ತೂರು

ಪು. ೪೭ ***ಸದಾನಂದ***

(ವೈದಿಕತೆ ಮತ್ತು ಕೃಷಿಕತೆಯ ಸಮನ್ವಯದ ಚಿತ್ರ ಇಲ್ಲಿದೆ)

ಮುಂಜಾನೆಯ ಹಕ್ಕಿಗಳ ಕಲರವ ಆಲಿಸುತ್ತಾ ದಟ್ಟ ಹಸಿರಿನ ಅಡಿಕೆ ತೋಟಗಳ ನಡುವೆ ಹಾಯ್ದು ಊರಿನ ಪ್ರವೇಶದ್ವಾರದ ಹತ್ತಿರ ಬಂದರೆ, ಕಚ್ಚೆ ಪಂಚೆ ಉಟ್ಟು ಮೇಲ್ವಸ್ತ್ರ ಹೊದೆದು ಶಿಖೆ ಬಿಟ್ಟ ಚಿಣ್ಣರು ಗುಂಪುಗುಂಪಾಗಿ ಸಂಸ್ಕೃತದಲ್ಲಿ ಸಂಭಾಷಿಸುತ್ತಾ ಸಂಸ್ಕೃತ ಶಾಲೆಯತ್ತ ಹೆಜ್ಜೆ ಹಾಕುವುದನ್ನು ನೀವು ನೋಡುತ್ತೀರಿ.



ತೋಟಕ್ಕೆ ಹೊರಟ ವೈದಿಕ ರೈತ

ಹಾಗೇ ಬನ್ನಿ. ಕಚ್ಚೆ ಪಂಚೆ ಉಟ್ಟು ಮೇಲ್ವಸ್ತ್ರ ಹೊದ್ದು *ಶಿಖೆ ಬಿಟ್ಟವರು ಕೈಯಲ್ಲಿ ಗುದ್ದಲಿ, ಪಿಕಾಸಿ,* ಕುಡುಗೋಲು ಹಿಡಿದು ಸಂಸ್ಕೃತದಲ್ಲಿ ಸಂಭಾಷಿಸುತ್ತಾ ತಮ್ಮ ತೋಟಕ್ಕೆ ಹಾದುಹೋಗುವುದನ್ನು ನೋಡಬಹುದು. ಅತ್ತಿತ್ತ ಕಣ್ಣಾಡಿಸುತ್ತಾ ಊರಿನೊಳಕ್ಕೆ ಬನ್ನಿ. ಊರಿನ ಮನೆಗಳ ಮುಂದೆಲ್ಲಾ ಅಡಿಕೆ ಚಪ್ಪರಗಳು. ಮನೆಯ ವಿಶಾಲವಾದ ಆವರಣದಲ್ಲಿ ಪಂಚೆ ಉಟ್ಟು, ಮೇಲ್ವಸ್ತ್ರ ಹೊದೆದು ಶಿಖೆ ಬಿಟ್ಟವರೇ *ಅಡಿಕೆ ಬೇಯಿಸುತ್ತಲೋ, ಅಡಿಕೆ ಹರವುತ್ತಲೋ,* ಏನನ್ನೋ ಗುಣಗುಣಿಸುತ್ತಿರುವುದು ನಿಮ್ಮ ಕಿವಿಗೆ ಬೀಳುತ್ತದೆ. ನಿಮಗದು ಅರ್ಥವಾಗದಿದ್ದರೂ ಮಂಜುಳವಾದ ಲಯಬದ್ಧ ಗಾನದಂತೆ ಇಂಪಾಗಿ ನಿಮ್ಮ ಕಿವಿದುಂಬುತ್ತದೆ. ಅದು ಹಿರಿಯರೊಬ್ಬರು ಹೇಳಿಕೊಟ್ಟ ವೇದದ ಶ್ಲೋಕಗಳನ್ನು ಉಳಿದವರು ಪುನರುಚ್ಚರಿಸುತ್ತಿರುವ ಶಬ್ದ...

ಈ) ಮತ್ತೂರು ಕೆರೆಯ ಪುನರುಜ್ಜೀವನ

ಪು.೫೮-೬೦

ಇಂಗ್ಲಿಷ್ ಮೂಲ -*ವಿ.ನಾಗರಾಜು*

ಡೆಕ್ಕನ್ ಹೆರಾಲ್ಡ್ ೨೨.೧೦.೯೪

(ಮನೆಗೊಬ್ಬ ಸ್ವಯಂಸೇವಕ; ಮೂರನೇ ಒಂದರಷ್ಟು ಮಿತವೆಚ್ಚ)

ಮತ್ತೂರು, ಸಂಕೇತಿ ಬ್ರಾಹ್ಮಣರೇ ಬಹುಪಾಲು ವಾಸಿಸುವ, ಶಿವಮೊಗ್ಗ ಜಿಲ್ಲೆಯ ಒಂದು ಹಳ್ಳಿ. . . .

ಮತ್ತೂರಿನಲ್ಲಿ ೧೯೪ ಎಕರೆ ಹರಹು ಹೊಂದಿದ ದೊಡ್ಡ ಕೆರೆಯೊಂದು ಇದೆ. ಕಳೆದ ಮೂರುವರ್ಷಕ್ಕೂ ಹೆಚ್ಚು ಕಾಲ ಈ ಕೆರೆಯನ್ನು ಆವರಿಸಿ ನೀರು ಇಂಗಿಸಿದ ಜೊಂಡು ಅಲ್ಲಿನ ಜನರಲ್ಲಿ ತೀವ್ರ ಆತಂಕವನ್ನುಂಟುಮಾಡಿತ್ತು. ಈ ಸಮಸ್ಯೆ ಆರು ವರ್ಷಗಳ ಹಿಂದೆಯೇ ಕಾಣಿಸಿಕೊಂಡಿದ್ದರೂ ಅದು ಗಂಭೀರ ಸ್ವರೂಪ ತಾಳಿದ್ದು ಕಳೆದ ಮೂರು ವರ್ಷಗಳಲ್ಲಿ. . . .

ಜೊಂಡಿನ ಸಮಸ್ಯೆ ಕೈಮೀರುವ ಸೂಚನೆ ಕಂಡಾಗ, ಮೂರು ವರ್ಷದ ಹಿಂದೆ ಗ್ರಾಮಸ್ಥರು ಒಗ್ಗೂಡಿ ಈ ಬಗೆಗೆ ಏನಾದರೂ ಮಾಡಬೇಕೆಂದು ನಿರ್ಧರಿಸಿದರು. *ಮನೆಗೊಬ್ಬ ಸ್ವಯಂಸೇವಕರಂತೆ* ಸೇರಿ ಕೂಲಿಗಳ ಸಹಾಯದಿಂದ ಜೊಂಡು ನಿರ್ಮೂಲನಕ್ಕೆ ತೊಡಗಿದರು. ಹನ್ನೆರಡು ಸಾವಿರ ರೂಪಾಯಿ ಅದಕ್ಕಾಗಿ ವೆಚ್ಚವಾಯಿತು. ಗಣನೀಯ ಯಶಸ್ಸೂ ಸಿಕ್ಕಿತು. ಆದರೆ ಸಮಸ್ಯೆ ನಿಃಶೇಷವಾಗದೆ ಹೋಯಿತು.

ಮರುವರ್ಷ ಜೊಂಡು ಸೇಡು ತೀರಿಸಿಕೊಳ್ಳುವಂತೆ ಮತ್ತೆ ಕಾಣಿಸಿಕೊಂಡಿತು. . . . ಸ್ವಾವಲಂಬನೆಯ ಮನೋಧರ್ಮವು ಶ್ಲಾಘ್ಯವೇ ಸರಿ. ಮತ್ತೆ ಗ್ರಾಮಸ್ಥರು ಬಹುಪಾಲು ಜೊಂಡನ್ನು ನಿರ್ಮೂಲ ಮಾಡಿದ್ದಾರೆ; ಅದೂ, ಅಧಿಕಾರಿಗಳು ಕೋರಿಕೆ ಸಲ್ಲಿಸಿದ್ದ ೯.೨ ಲಕ್ಷ ರೂಪಾಯಿಗಳ *ಮೂರನೇ ಒಂದರಷ್ಟು ಮಿತವೆಚ್ಚದಲ್ಲಿ!*

ಉ) ಕರ್ನಾಟಕ ಶಾಸ್ತ್ರೀಯ ಸಂಗೀತದಲ್ಲಿ ಸಂಕೇತಿ ಸಮುದಾಯದ ಸ್ಥಾನ

ಪು.೬೫


- ಕೆ. ರಾಘವೇಂದ್ರ ರಾವ್

ಶ್ರುತಿ: ಅಕ್ಟೋಬರ್, ೧೯೯೫

(ಕೃಷಿಗೆ ಹೊಂದಿಕೊಂಡ ಗುಣವಿಶೇಷಗಳು)

ಈ ಸಮುದಾಯದ ಗುಣಲಕ್ಷಣಗಳು

ಕರ್ನಾಟಕಕ್ಕೆ ವಲಸೆ ಬಂದ ಈ ಸಮುದಾಯದ ಸದಸ್ಯರು ವ್ಯವಸಾಯವನ್ನವಲಂಬಿಸಿದರು. ಅವರು ಅಡಿಕೆ, ತೆಂಗು, ವೀಳೆದೆಲೆಗಳ ತೋಟಗಳನ್ನು ಬೆಳೆಸಿದರು; ವೇದಾಧ್ಯಯನ ಮತ್ತು ಸಂಸ್ಕೃತ ಕಲಿಕೆಗೆ ಗಮನವನ್ನು ಕೇಂದ್ರೀಕರಿಸಿದರು. *ತೀವ್ರವಾದ ಸ್ವತಂತ್ರ ಧೋರಣೆಯುಳ್ಳ ಇವರು ಯಾವುದೇ ಆಸ್ಥಾನದಲ್ಲಿ ಸೇವೆ ಸಲ್ಲಿಸಲಿಲ್ಲ. ಕಠಿಣ ದುಡಿಮೆ, ಋಜುತ್ವ, ಗುರಿಸಾಧನೆಯ ಛಲ ಮತ್ತು ತಮ್ಮ ಸಾಧನೆಯ ಬಗೆಗಿನ ಸ್ವಾಭಿಮಾನಕ್ಕಾಗಿ ಅವರು ಪ್ರಖ್ಯಾತರಾದರು.* ಪುಷ್ಕಳ ಭೋಜನ, ತಾಂಬೂಲ ಚರ್ವಣ, ಪಗಡೆಯ ವ್ಯಾಮೋಹ, ಇಸ್ಪೀಟು (ವಿಶೇಷವಾಗಿ ಬ್ರಿಡ್ಜ್ ಆಟವನ್ನು ಹೋಲುವ ಇಪ್ಪತ್ತೆಂಟರ ಆಟ, ಅದು ಜಾಗೃತಿ ಮತ್ತು ಶೀಘ್ರ ಲೆಕ್ಕಾಚಾರ ಸಾಮರ್ಥ್ಯ ಬೇಡುವಂಥ ಆಟ) ಆಟಕ್ಕೆ ಹೇಗೋ ಹಾಗೇ ಸಂಸ್ಕೃತ ವಿದ್ವತ್ತು, ಪಾಕ ಕೌಶಲ್ಯ ಮಾತ್ರವಲ್ಲದೆ ಲಲಿತಕಲೆಯಾದ ಶಾಸ್ತ್ರೀಯ ಸಂಗೀತಕ್ಕೂ ಹೆಸರಾದರು.



ಬ್ರಹ್ಮಚಾರಿಗಳ ಒಂದು ಗೋಷ್ಠಿ


ಊ) ಭೂ ಬಾಣ

ಪು.೧೨೨-೧೨೩ — *- ಪ್ರಜಾವಾಣಿ: 29-9-76*

(ದುಡಿದು, ಉಂಡು, ನಶ್ಯ ಉಜ್ಜುತ್ತ ಸಮಾಚಾರದ ಮಥನ)

. . . ಹಾಸನ ಜಿಲ್ಲೆಯ ರುದ್ರಪಟ್ಣ, ಮೊಸಳೆ, ಕೌಶಿಕ (ಎಂಥಾ ಬ್ಯೂಟಿಫುಲ್ ಸಂಕೇತಗಳು ಊರ ಹೆಸರುಗಳಿಗೆ!) ಮುಂತಾದ ಸಣ್ಣ ಸಣ್ಣ ಊರುಗಳಲ್ಲಿ ಬಹುಸಂಖ್ಯಾತರಾಗಿರುವ *ಸಂಕೇತಿಗಳು ದಿನವಹೀ ಮೈ ಮುರಿಯ ಹೊಲ-ಗದ್ದೆ ತೋಟಗಳಲ್ಲಿ ದುಡಿದು, ದಣಿದು, ಮೈ ಬಿರಿಯ ಭರ್ಜರಿ ಊಟ ಹೊಡೆದು* ಸಂಜೆ ಜಗಲಿ ಮೇಲೆ ಉಂಡೆ ನಶ್ಯ ಉಜ್ಜುತ್ತಾ ಕೂತು, ದಿನದ ಪೇಪರಿನ ಸಮಾಚಾರಾನ ಮಥನ ಮಾಡಹತ್ತಿದರೆಂದರೆ, ಅದರ ಮಜವೇ ಬೇರೆ!.... ಒಂದು ಸ್ಯಾಂಪಲ್ಲಿಗೆ "ವ್ಯಂಕ್ಯಂಗ್ಡೊ" (ತಕ್ಕಳ್ಳಪ್ಪ) "ಓದಯ್ಯಾ ಸಮಾಚಾರು ಇಂಡೇನು?" (ಏನಯ್ಯಾ ಸಮಾಚಾರ ಇವತ್ತು?)

"ಭಾರಿರಾಂದ್ಕಣಯ್ಯಾ ಇಂಡೇನೂ! ಮಂತ್ರಿಮಂಡ್ಳಮೆ ಉರುಳಿಪೋಹಂದಂಗೋ, ಅಪ್ಡಿ ಅನ್‌ಡಿಟ್ಟ್ ಪ್ರಜಾವಾಣಿ ಪೇಪರ್‌ಲ್ಲೆ ಅರನ್‌ಜ್ ರಾಂಡಾ! ಮುಖ್ಯಮಂತ್ರಿ ಅರಸೇ ಚೊಲ್ಲಿರಾಣಾ!" (ಭಾರಿ ಇದೆ ಕಣಯ್ಯ ಇವತ್ತು! ಮಂತ್ರಿ ಮಂಡಲವೇ ಉರುಳಿಹೋಗುತ್ತಂತೆ, ಹಾಗಂತ ಹೇಳಿ ಪ್ರಜಾವಾಣಿ ಪೇಪರಲ್ಲಿ ಹಾಕಿದಾರೆ! ಮುಖ್ಯಮಂತ್ರಿ ಅರಸೇ ಹೇಳಿದಾರೆ!) ....



ಏನಯ್ಯಾ ಸಮಾಚಾರ ಇವತ್ತು?

೧೪. ಸಂಕೇತ ಸಂಪದ, ಸಂಕೇತಿ ಸಂಗಮ

ಸಂಪಾದಕ : ರಾಜಾರಾಮ ಮೂರ್ತಿ

('ಸಂಕೇತ ಸಂಪದ' ಮತ್ತು 'ಸಂಕೇತಿ ಸಂಗಮು' ಎಂಬ ಮಾಸ ಪತ್ರಿಕೆಗಳಲ್ಲಿ ಬಂದ ಸಾವಿರಾರು ಲೇಖನಗಳ ಪೈಕಿ ಸಂಕೇತಿಗಳ ಕೃಷಿ ಮತ್ತು ಅದಕ್ಕೆ ಹೊಂದಿಕೊಂಡ ಬದುಕಿನ ದರ್ಶನ ಮಾಡಿಸುವ ಸಾಲುಗಳನ್ನು ಇಲ್ಲಿ ಜೋಡಿಸಲಾಗಿದೆ. 'ಸಂಕೇತ ಸಂಪದ'ವೇ ಕಾಲಕ್ರಮದಲ್ಲಿ 'ಸಂಕೇತಿ ಸಂಗಮು' ಎಂಬ ಹೊಸ ಹೆಸರು ಹೊತ್ತು ಮುಂದುವರಿಯುತ್ತಿದೆ.)

ಅ) ನಮ್ಮ ಸಂಸ್ಕೃತಿಯ ಉದ್ಧಾರಕ್ಕೆ ಸಂಸ್ಕೃತದ ಜ್ಞಾನ ಅಗತ್ಯ

ಸಂಕೇತ ಸಂಪದ, ಜುಲೈ ೯೮ — ***-ಪ್ರೊ. ವಿಕೆಡಿ,***

ಸಂದರ್ಶಕರು: ಸುಬ್ಬಣ್ಣ

ಸಂದರ್ಶನ

(ತೋಟಗಾರಿಕೆ ಇಹಕ್ಕೆ, ಸಂಗೀತ-ವೇದ ಪರಕ್ಕೆ)

ಸುಬ್ಬಣ್ಣ: ನಿಮ್ಮ ದೃಷ್ಟಿಯಲ್ಲಿ ಹಾಗೂ ಅನುಭವದಲ್ಲಿ ನಮ್ಮ ಸಂಕೇತಿಗಳ ವೈಶಿಷ್ಟ್ಯಗಳು ಹಾಗೂ ಹೆಸರಿಸಬಹುದಾದಂತಹ ದೌರ್ಬಲ್ಯಗಳಾವುವು?

ಪ್ರೊ.ವಿ.ಕೆ.ಡಿ: ನಮ್ಮ ಸಂಕೇತಿಗಳ *ಪ್ರಮುಖ ವೃತ್ತಿ ತೋಟಗಾರಿಕೆಯೇ ಆಗಿತ್ತು*. ವಿದ್ಯಾಭ್ಯಾಸವೆಂದರೆ *ವೇದ-ಸಂಸ್ಕೃತ* ಕಲಿಯುವುದೆಂದಿತ್ತು. ವೇದಘೋಷವಂತೂ ನಮ್ಮ ಸಂಕೇತಿಗಳ ಉಸಿರೆಂದೇ ಹೇಳಬೇಕು. *ಸಂಗೀತ ಸಂಕೇತಿಗಳ ಪ್ರವೃತ್ತಿ*. ಹಾಗಾಗಿ ಸಂಕೇತಿಗಳ ವೈಶಿಷ್ಟ್ಯಗಳೆಂದರೆ ವೇದ, ಸಂಗೀತ ಮತ್ತು ಸಂಸ್ಕೃತ ಎನ್ನಬಹುದು. ತೋಟಗಾರಿಕೆ ಇಹಕ್ಕೆ, ಸಂಗೀತ-ವೇದ ಪರಕ್ಕೆ. ನಮ್ಮವರ ದೌರ್ಬಲ್ಯಗಳು ಎಂದರೆ ನಶ್ಯ ಹಾಕುವುದು, ಇಸ್ಪೀಟು ಆಡುವುದು ಇತ್ಯಾದಿ.

ಆ) ಎಂಗ್'ಡ್ ಭಾಗ್ಯ

ಸಂಕೇತ ಸಂಪದ, ನವೆಂಬರ್ ೯೮ - ನಾಗರತ್ನ ಶಂಕರಮೂರ್ತಿ, ಅಗ್ರಹಾರ,



ಲೇ ಕಪಿಲೆ, ಬಾರೇಮ್ಮಾ

ಎಂಗ್'ಡ್ 'ಭಾಗ್ಯ'ವೇ ಎಂಗ್'ಡ್ ಹಾತೇ ಭಾಗ್ಯ ಆಯಿಂದ್. ಅಂದ್ 'ಭಾಗ್ಯ' ಒರುನಾ ಚತ್ತ್ ಬೆಟ್ಟಾಪ್ಪೋಲೆ ಕೊಟ್ಟ್ಯಾಯ್ ಭರ್ತಿ ತುಂಕಿಂಡ್ದ್. ಅಂದ್ ದೃಶ್ಯ್ತಾ ನೆನಪಿಚ್ಕ್ಕಂಡಾಕ ಇಪ್ಪದೂ ಹೊಟ್ಟೆ ಯರಿಯಂದ್.

ನಾ ಕನ್ನಾಲು ಆಯ್ಟ್, ವಂದ್ ಪುದ್ನಿ. ಎಂದ್ ಮಾಮ್'ನಾರೂ, ಮಾಮ್ಯಾರೂ "ಡೇ ಕಪಿಲೇ, ವಾಡೇ, ವಾಮ್ಮಾ, ವಾ ಎಂದ್ ಕಂದಾ" ಅಂಟ್ ಕೂಹೀನ್ನಾ. ಅಂದ್ಯೋ ಪಶ್ಕ್ಲಾ ಅಳಿಯಾಂಡ್ ರಾಡಾಳೋದೋ ಅಂಡ್ದ್ಯಾಂಡಿಂದೆ. ಅಪ್ಪೋ, ಒರ್

ಪುಟಾಣಿ ಮುದ್ದಾನ್ ಕಂಡ್ ಓಡೀವಂದ್. ಎಂದ್ ಮಾಮ್ನಾ ಅತ್ತಾ ಮುದ್ದಾಡಿ, ಅತ್ತ್ಂದ್ ಒಡ್ಂಬ್ಯಲ್ಲಾ ನೇವರ್‍ಸಿ ವಾರ್ಚ್ಯೊಲ್ಲ್ಚ್ಯಾ. "ಓಡೇ! ಅಂಗ್ ಓಡೀ ಪೋಯುಟ್ಟೀಂದಾ, ಉಟ್ಟುಟಾಕ್ ರಸ್ತೇಕೇ ಓಡೀ ಉಡರ್‍ರ್‍ನೋ? ಉಂಕಿನ್ನೂ ಅಂಗೆಲ್ಲಾ ಪೊಹಕ್ಕಾಲ್ಲಾ ಕಡೇ. ಚಪ್ಲೂ ಪಟ್ಕ್ಂಡ್ ಫೋವಾಣಾ ಅಪ್ಪಿ, ಅಮ್ಮಾ!" ಅಂಡ. ಅದೂ ಅವ್ವಾಳ್ಳೂ ಇನ್ನೂ ಹೆಂಬಾಪೋ ವಾರ್ಥೊಲ್ಕಿಂಡೇ ಇಂದಾ. ಕೆಲ್ವ್ ಕೋಳ್ಳೂ, ಕೆಲವ್‌ಕಾಣ್ಣೂ. ಇನ್ನ್ ಕೆಲ್ವ್ ಸಂಭಾಷಣೇಯ ಭಾವಿಚ್ಕಣಮ್ನಾ ಇಂದ್. ಅದ್ ಕೋಳಕ್ಕೂ ಇಲ್ಲಾ, ಕಾಣಕ್ಕೂ ಇಲ್ಲಾ.

ಅಪ್ಪೊ ಹಾತ್ ಭರ್ತಿ ಪೊಶ್ಕಾ ಕಂಡ್ವಾ ಇಂದ್ದೀನಾ. ಕೊಟ್ಟಾಯುಳ್ಳ್ ಜಾಗೂ ಪೋರಾದೇ ಹಾತುಳ್ಳೇ ಕಂಡಾ ಕಟ್ಟ್‌ಕ್ಯೊಣ್ಣ. ತೊಟ್ಟಿ ಚುತ್ತಾ ನಾಲ್ ಕಂಭ್‌ತ್‌ಕ್ಕೂ ಸಣ್ಣಿಕಂಡ್ವೀಳಾ ಕಟ್ಕಿಂಡ್ ಇವ್ವಾಳೂ ಅಂಗೇ ತುಂಕ್ಯಾಂಡಿಂದಾ.

ಎಂಗ್‌ಡ್ ಹಾತುಳ್ಳೆ ಅಪ್ಪೊ ಇಂದ್ವಾ ನಾಲ್ ಪೇರ್ ಅತ್ಥನ್‌ಯೇ. ನಿತ್ಯೂ ಪೊಶ್ಕಾ ಅಟ್ಟಿತ್ತ್ ಶೇರ್ ಪಾಲಾ ಕವ್ರೂಣ್ಣ. ರಸ ಪದಾರ್ಥತ ಬ್ರಾಹ್ಮಣ ಮಾರಕ್ವಾದ್ ಅಂಟ್ ಚೊಲ್ಲಿ, ಅತ್ತ ಕಾಚಿ, ವಣ್ಣೆ ವಾಂಗಿ, ನಯ್ಯಾಣ್ಣ ಫೆರೀ ಜಾಡಿಹೀಳುಳ್ಳೆ ಹೆಪ್ಪೀವಚ್ಚಿರ್‍ರ್ಣ್ಣ. ತಿಂಡೀಕುಕ್ಕಾಕ್‌ಂಡಾಕ, ಒರೊರ್ ದೋಸೇಕೂ ಹಾಪೇಲ್ ತೋಡಿ ನಯ್ಯಣ್ಣ ಇಟ್ಕ್ಂಡಿರರ್‍ದ್ದೇಯೆ. ಗೋಕುಲಾಷ್ಟಮಿ ವಂದಾಕ ಸಕ್‌ಲತ್ಯೂ ನ್ಣಯ್ಯುಳ್ಳೇ ಕರ್‌ಂಜ್ ಡಬ್ಬಾಂಗ್ಳ್ಳ್ ಹೆಪ್ಪೀವಯ್ಯೊಣ್ಣ, ಮಾಸ್‌ಗಟ್ಲೆ ಸಾಪ್ಡೂಣ್ಣ.

ಎಂದ್ ಮಾಮ್ಯಾ ಅಂತೂ ಅದ್ ಓದರಿ ನೋಹೀ ಪಣ್ಣೂಮ್ನೋ! ಎನ್ಯೂ ಅಳಚ್‌ಕಂಡ್ ಹಾತ್‌ಹಾತ್‌ಕ್ಕೂ ಪೋಯ್ಟ್ ನೆತ್ತೀಕಿಟ್ಟ್ ವರ್ರೂಣ್ಣ. ಮಾಮ್‌ನ್ನಾ ತೋಟೂ ಬಳ್‌ಸ್‌ಕಿಂಡ್ ವರ್ರೂಣ್ಣ, ತಂಗ್ಯಾಚ್, ತಂಗ್ಡ ಜಪ್‌ಮ್ನಾಚ್ ಅಂಟ್ ಇರ್ರೂಣ್ಣ, ವೇದಜ್ಞ, ಮುಖ್ಯ್‌ಮ್ನಾ ಸಾತ್ವಿಕಮ್ನಾನ ವ್ಯಕ್ತಿ, ಸಾಧು.

ಇಪ್ಪಿ ಇಕ್ಕಚ್ಚೆ ಕಪಿಲೇಕ್ ರಂಡ್ ಕಂಡ್‌ಹಾ ಪರ್‌ಂದ್ದೀನ್ನಾ. ಒಂಡು ಗಂಗೆ, ಒಂಡು ಭವಾನಿ. ಭವಾನಿ ಕಂಡ್ಯೇ ಪೋಟಿಲ್ಲ. ಗಂಗೇಕ್ ಮೂಡ್ ಕಂಡ್ವು ಪರ್‌ಂದ್ದೀನಾ. ಅತ್ತುಳ್ಳ್ ರಂಡ್ ಪೋರ್‌ಕಂಡ್‌ಹ, ಒಂಡು ಪೊಣ್ಣಾಕಂಡ್. ಇಂದ್ ಪೊಶ್‌ಕ್‌ಳೆಲ್ಲಾ ಒರೊರ್ಕ ಕಂಡಾ ಪೋಟ್ಪೋದೂ, ಮೂಡ್ ಮೂಡರ್ ವರ್ಷು ಪಾಲಾ ಕುಡಾಂಡಿಂದ್ದೀನಾ, ಒರೊರ್ ಕಾಲೇಕ್ ರಂಡ್-ಮೂಡ್ ಶೇರ್ ಪಾಲಾ ಕುಡ್ಡುಣ್ಣ.

ಇಂದ್ ಗಂಗೇಂದ್ ಪೋತೀಯೇ 'ಭಾಗ್ಯ'. ಅತ್ತ್‌ಕ್ಕೂ ರಂಡ್ ಪೊಣ್ಣಾಕಂಡ್ವು ಇಂದ್ದೀನ. ಅದ್ ಮೂಡಾವಾರಿ ಗರ್ಭ್‌ಮಾಚ್. ಓದ್, ಆನೆಪೋಲಿರ್ರೂಣ್ಣ. ಕಣ್ಣಸ್‌ರ್‌ಮಹಂದ್ ಅಂಟ್ ಚೊಲ್ಲಿ ನ್ಣಂಗ ಅತ್ತ ಅಕ್ಬಡೇಕೇ ಉಡಕ್ಕಿಲ್ಲ. ಕಿಟ್‌ಕಿಹೀಳ್‌ಕ್ಕೆಲ್ಲ ಗೋಣೀಚೀಲ್‌ತ ಮರೆ ಪಣ್ಣೀಂದ. ಮಾಮ್‌ನಾರೂ ಮಾಮ್‌ಯಾರೂ ಅತ್ತ ಉಟ್ಟೇ ಇರಕ್ಕಿಲ್ಲ. ಇಂದ್ವಾರಿ ಪೋರ್ ಕಂಡ್ ಪರ್‌ಂದಾಕ ಜೋಡಿಪಣ್ಣ್‌ಲ್ಲಾ ಅಂಟ್ ಕನ್‌ಸ್ ಕಟ್ಟೀಂದಾ.

ಹಾತುಳ್ಳ್ ಉಪನಯನಮ್ನಾಚ್. ಹೆಂಬಾ ಸ್ನಾ ನಿಂಡೂಟಿಂದ್. ಇಘಾಳ್ಳ್‌ಕ್, ಅನ್ಯಾಯ್‌ಮ್ನಾ ಇತ್ಥನ್ ಸಾಮ್ಮೂ ದಂಡ್‌ಮಹಂದೇ ಅಣ್ಣಿಚ್ಚ್‌ದ್. ಬಕೆಟ್ಟುಳ್ಳ್ ಕಳ್‌ನ್ನೀರಾ ಕಾಟೀನಾ, ಕುಕ್ಕಿ ಭರ್ತಿ ಸಾತ್ಯೂ ಮುಂತೀಕ್ ವಚ್ಚಾ. ಹೆಂಬೀನ್ ಗರ್ಭ್‌ತ್ತೆ ಪೊಶು, ಅತ್ತಾ ಸಾಪ್‌ಟ್ಟ್ ಹೊಟ್ಟಾ ಊದೀ ಚತ್ತೇ ಪೋಚು. ಕೊಟ್ಟಾಯ್ ಭರ್ತಿ ಅದೇ ತುಂಕಿಂಡಿಂದ್. ವಾಶ್‌ಲ್ ಪುಡೀಮ್ನಾಟಾದೇ ವಂಕಿಂಡ್ ಪೋಭೀನ. ಅರ್ತ್‌ಫಿಯಾ ವಂದ್, ಅತ್ತ್ಂದ್ ಹೊಟ್ಟೇಲೆ ಪೋರ್ ಕಂಡೇ ಇಂದ್ ಅಂಟ್ ಚೊಲ್ಲೀತ್ತೀನ್ನಾ.

ಮಾಮ್‌ನಾರೂ ಮಾಮ್‌ಯಾರೂ ಕೊಟ್ಟಾಯುಳ್ಳೇ ಅಳ್‌ಂಧ್‌ಂಡ್ ದಿನ್‌ಮೆಲ್ಲಾ ಉಕ್ಕಾಕ್‌ಂಡಿಂದಾ. ಅಘಾಳ್ಳ್ ಪೇಚಾಡರ್ರಾ ಪಾರಕ್ಕಾಕ್ಕಿಲ್ಲ. ಊರ್‌ತ್ತೇವಾಳ್ಳೆಲ್ಲಾ ವಂದ್ ಸಮಾಧಾನ್ನೂ ಪಣ್ಣ್‌ನಾಲೂ ದುಃಖ ಶಮನಮಾಚಿಲ್ಲ. "ಕೈಯಾರೇ ಕೊಂದುಟಾಮಂಡೋಡೇ," ಅಂಟ್ ವರ್ಷ್‌ಗಟ್ಲೆ ಅಳ್‌ಂದ.

ಅಂಗಣ್ಣು ಮುಂತೀಕ್ ಅಘಾಳ್ಳ್‌ಕ್ಕ್ ಅಂದ್ ವಿಷಯ್‌ತುಳ್ಳೆ ವಿರಕ್ತಿ ವಂದ್‌ಪೋಚು. ಅಂತ್‌ರಂಗ್‌ತುಳ್ಳೇ ಚಮ್‌ಂಜ್ ಪೋಹಾಂಡಿಂದಾ. ಎಂಗ್‌ಡೆ ಹಾತೆ ಭಾಗ್ಯ್‌ಮ್ನೋ ಪೋನಪ್ಪಿ ನಂಗ್‌ಳೆಲ್ಲಾ ಸೂತಕ್‌ತ ಅನುಭವಿಚ್ಚು.

ಕನ್ನಡ ರೂಪ

ನಮ್ಮ ಭಾಗ್ಯ

- ಅನುವಾದ: ಸಂಪಾದಕಿ

(ಪಶುಪಾಲನೆಯು ಕೇವಲ ಕೃಷಿಯ ಭಾಗವಲ್ಲ, ಕೃಷಿಕರ ಬದುಕಿನ ಜೀವಾಳ: ಭಾಗ್ಯ ಎಂಬುದು ಆ ಗೃಹಸ್ಥರ ಮನೆಯ ಹಸು. ಹಸುಕರುಗಳು ಅವರ ಪ್ರಾಣದ ಪ್ರಾಣದಂತಿದ್ದುವು. ಆಗ ಭಾಗ್ಯಂಗೆ ಪೂರ್ಣಗರ್ಭ. ಈ ಸಲ ಹೋರಿಗರು ಹುಟ್ಟುವುದೆಂಬ ಕನಸು ಕೊಟ್ಟಿತ್ತು ಅದು. ಪ್ರೀತಿಯಿಂದ ತಿನ್ನಿಸಿದ ಅನ್ನ ಅದರ ಪ್ರಾಣಕ್ಕೇ ಮುಳುವಾಯಿತು, ಗೃಹಸ್ಥರು ಕಂಗಾಲಾದರು. ಮನೆಯ ಭಾಗ್ಯವೇ ಹೋಗಿ ಸೂತಕ ಆವರಿಸಿತು. ಆ ಕುರಿತ ಒಬ್ಬ ಗೃಹಿಣಿಯ ರೋದನವು ಒಂದು ಚರಮಗೀತೆಯೇ ಆಗಿದೆ)

ನಮ್ಮ 'ಭಾಗ್ಯ'ಳೇ ನಮ್ಮ ಮನೆಯ ಭಾಗ್ಯವಾಗಿದ್ದಳು. ಆ 'ಭಾಗ್ಯ' ಒಂದು ದಿನ ಸತ್ತು ಬೆಟ್ಟದ ಹಾಗೆ ಕೊಟ್ಟಿಗೆ ಭರ್ತಿ ಮಲಗಿಕೊಂಡಳು. ಆ ದೃಶ್ಯವನ್ನು ನೆನಪಿಸಿಕೊಂಡರೆ ಈಗಲೂ ಹೊಟ್ಟೆ ಉರಿಯುತ್ತೆ.

ನಾನು ಮದುವೆಯಾಗಿ ಬಂದ ಹೊಸತು. ನನ್ನ ಅತ್ತೆಯೂ ಮಾವನೂ 'ಲೇ ಕಪಿಲೇ, ಬಾರೇ, ಬಾಮ್ಮಾ, ಬಾ ನನ್ನ ಕಂದಾ' ಎಂದು ಕೂಗಿದರು. ಯಾವುದೋ ಮಗುವನ್ನು ಕರೆಯುತ್ತಿದ್ದಾರೇನೋ ಎಂದುಕೊಂಡಿದ್ದೆ. ಆಗ ಒಂದು *ಪುಟಾಣಿಯಾದ ಮುದ್ದಾದ ಕರು ಓಡಿ* ಬಂತು. ನನ್ನ ಮಾವನವರು ಅದನ್ನು ಮುದ್ದಾಡಿ, ಅದರ ಮೈಯನ್ನೆಲ್ಲಾ ನೇವರಿಸಿ, ಮಾತಾಡಿಸಿದರು. 'ಏನೇ, ಎಲ್ಲಿ ಓಡಿಹೋಗಿಬಿಟ್ಟಿದ್ದೇ, ಬಿಟ್ಟುಬಿಟ್ಟರೆ ರಸ್ತೆಗೆ ಓಡಿಬಿಡೋದೇ? ನಿಂಗಿನ್ನೂ ಅಲ್ಲೆಲ್ಲಾ ಹೋಗಕ್ಕೆ ಆಗಲ್ಲ ಕಣಮ್ಮಾ. ಚಪಲಾ ಮಾಡಿಕೊಂಡು ಹಾಗೆ ಹೋಗಬೇಡ, ಅಮ್ಮಾ' ಅಂದರು. ಅದೂ ಅವರೂ ಇನ್ನೂ ತುಂಬಾ ಹೊತ್ತು ಮಾತಾಡಿಕೊಂಡೇ ಇದ್ದರು. ಕೆಲವು ಕೇಳಿಸೋದು, ಕೆಲವು ಕಾಣಿಸೋದು. ಇನ್ನು ಕೆಲವು ಸಂಭಾಷಣೇನ ಭಾವಿಸಿಕೊಳ್ಳಬೇಕಾಗಿತ್ತು. ಅದು ಕೇಳುತ್ತಲೂ ಇರಲಿಲ್ಲ, ಕಾಣುತ್ತಲೂ ಇರಲಿಲ್ಲ.

ಆಗ ಮನೆಯ ಭರ್ತಿ ಹಸು ಕರುಗಳು ಇದ್ದವು. ಕೊಟ್ಟಿಗೆಯಲ್ಲಿ ಜಾಗ ಸಾಲದೆ ಮನೆಯ ಒಳಗೇ ಕರುವನ್ನು ಕಟ್ಟಿಹಾಕಿಕೊಳ್ಳುತ್ತಿದ್ದೆವು. ತೊಟ್ಟಿಯ ಸುತ್ತಣ ನಾಲ್ಕು ಕಂಬಗಳಿಗೂ ನಾಲ್ಕು ಪುಟ್ಟ *ಕರುಗಳನ್ನು ಕಟ್ಟಿಕೊಂಡು ಇವರೂ ಅಲ್ಲೇ ಮಲಗಿಕೊಳ್ಳುತ್ತಿದ್ದರು.*

ಆಗ ನಮ್ಮ ಮನೇಲಿ ಇದ್ದವರು ನಾಕು ಜನ ಅಷ್ಟೆ. ನಿತ್ಯವೂ ಹಸುಗಳು ಎಂಟು-ಹತ್ತು ಸೇರು ಹಾಲು ಕರೆಯೋವು. ರಸ ಪದಾರ್ಥಗಳನ್ನು ಬ್ರಾಹ್ಮಣರು ಮಾರಬಾರದು ಅಂತ ಹೇಳಿ ಅದನ್ನು ಕಾಯಿಸಿ ಬೆಣ್ಣೆ ತೆಗೆದು, *ತುಪ್ಪವನ್ನು ದೊಡ್ಡ ಜಾಡಿಯಲ್ಲಿ ತುಂಬಿಟ್ಟಿರೋರು.* ತಿಂಡಿಗೆ ಕೂತರೆ ಒಂದೊಂದು ದೋಸೇಗೂ ಸೌಟಿನಲ್ಲಿ ತೋಡಿ ತುಪ್ಪ ಬಡಿಸುತ್ತಿರುವುದೇನೇ. ಗೋಕುಲಾಷ್ಟಮಿ ಬಂದರೆ ಸಕಲವನ್ನೂ ತುಪ್ಪದಲ್ಲೇ ಕರಿದು ಡಬ್ಬಗಳಲ್ಲಿ ತುಂಬಿಡುತ್ತಿದ್ದರು. ತಿಂಗಳುಗಟ್ಟಲೆ ತಿನ್ನುತ್ತಿದ್ದೆವು.

ನನ್ನ ಅತ್ತೆಯವರಂತೂ ಅದೆಷ್ಟು ವ್ರತ ಮಾಡೋರೋ! ನನ್ನೂ ಕರಕೊಂಡು ಮನೆಮನೆಗೂ ಹೋಗಿ ಹಣೆಗಿಟ್ಟು ಬರೋರು. ಮಾವನವರು ತೋಟ ಬಳಸಿಕೊಂಡು ಬರೋರು. ತಾವಾಯಿತು, ತಮ್ಮ ಜಪವಾಯಿತು ಅಂತ ಇರೋರು. ವೇದಜ್ಞರು, ಮುಖ್ಯವಾಗಿ ಸಾತ್ವಿಕ ವ್ಯಕ್ತಿ, ಸಾಧು.

ಹೀಗಿರುವಾಗ *ಕಪಿಲೆಗೆ ಎರಡು ಕರುಗಳು ಹುಟ್ಟಿದವು. ಒಂದು ಗಂಗೆ, ಒಂದು ಭವಾ*ನಿ. ಭವಾನಿ ಕರುವನ್ನೇ ಹಾಕಲಿಲ್ಲ. ಗಂಗೆಗೆ ಮೂರು ಕರುಗಳು ಹುಟ್ಟಿದವು. ಅವುಗಳಲ್ಲಿ ಎರಡು ಹೋರಿಗರುಗಳು, ಒಂದು ಹೆಣ್ಣುಗರು. ಈ ಹಸುಗಳೆಲ್ಲಾ ಒಂದೊಂದು ಸಾರಿ ಕರು ಹಾಕಿದಾಗಲೂ ಮೂರು-ಮೂರೂವರೆ ವರ್ಷ ಹಾಲು ಕೊಡೋವು. ಒಂದೊಂದು ಸಾರಿಗೆ ಎರಡು-ಮೂರು ಸೇರು ಹಾಲು ಕೊಡೋವು.

ಈ ಗಂಗೆಯ ಮೊಮ್ಮಗಳೇ ಭಾಗ್ಯ. ಅದಕ್ಕೂ ಎರಡು ಹೆಣ್ಣು ಕರುಗಳಿದ್ದವು. ಅದು *ಮೂರನೆಯ ಸಲ ಗಬ್ಬ*ವಾಯಿತು. ಏನು, ಆನೆ ಹಾಗಿರೋದು. ಕಣ್ಣುಸರ ಆಗುತ್ತೆ ಅಂತ ಹೇಳಿ ನಾವು ಅದನ್ನು ಆಚೆಗೆ ಬಿಡುತ್ತಿರಲಿಲ್ಲ. ಕಿಟಕಿಗಳಿಗೆಲ್ಲ ಗೋಣಿಚೀಲ ಮರೆ ಮಾಡಿದ್ದರು. ಅತ್ತೆಯವರೂ ಮಾವನವರೂ ಅದನ್ನು ಬಿಟ್ಟೇ ಇರುತ್ತಿರಲಿಲ್ಲ. ಈ ಸಾರಿ *ಹೋರಿಗರು ಹುಟ್ಟಿದರೆ ಜೋಡಿ ಕಟ್ಟಬಹುದು ಅಂತ ಕನಸು* ಕಟ್ಟಿದ್ದರು.

ಮನೇಲಿ ಉಪನಯನ ಆಯಿತು. ತುಂಬಾ ಅನ್ನ ಮಿಕ್ಕಿಬಿಟ್ಟಿತ್ತು. ಇವರಿಗೆ, ಅನ್ಯಾಯವಾಗಿ ಇಷ್ಟು ಅನ್ನವೂ ದಂಡವಾಗುತ್ತಲ್ಲಾ ಅನ್ನಿಸಿತು. ಬಕೆಟ್ಟಲ್ಲಿ ಕಲಗಚ್ಚು ತೋರಿಸಿದರು, ಕುಕ್ಕಿ ಭರ್ತಿ ಅನ್ನಾನೂ ಮುಂದಕ್ಕಿಟ್ಟರು. ತುಂಬು ಗರ್ಭದ ಹಸು. ಅದನ್ನು ತಿಂದು ಹೊಟ್ಟೆ ಊದಿ *ಸತ್ತೇಹೋಯಿತು.* ಕೊಟ್ಟಿಗೆ ಭರ್ತಿ ಅದೇ ಮಲಗಿಕೊಂಡಿತು. ಬಾಗಿಲು ಹಿಡಿಸಲಾರದೆ ತೊಗೊಂಡು ಹೋದರು. ಕುಯ್ದವರು ಬಂದು

ಅದರ ಹೊಟ್ಟೇಲಿ ಹೋರಿಗರುವೇ ಇತ್ತು ಅಂತ ಹೇಳಿದರು.

ಅತ್ತೆಯವರೂ ಮಾವನವರೂ ಕೊಟ್ಟಿಗೆಯಲ್ಲೇ ದಿನವೆಲ್ಲಾ ಅತ್ತುಕೊಂಡು ಕೂತಿದ್ದರು. ಅವರು ಗೋಳಾಡುವುದನ್ನು ನೋಡಕ್ಕೆ ಆಗ್ತಿರಲಿಲ್ಲ. ಊರಿನವರೆಲ್ಲಾ ಬಂದು ಸಮಾಧಾನ ಮಾಡಿದರೂ ದುಃಖ ಶಮನವಾಗಲಿಲ್ಲ. *ಕಯ್ಯಾರೇ ಕೊಂದುಬಿಟ್ಟೆವಲ್ಲೇ ಎಂದು ವರ್ಷಗಟ್ಟಲೆ ಅತ್ತರು.*

ಅಲ್ಲಿಂದ ಮುಂದಕ್ಕೆ ಅವರಿಗೆ ಆ ವಿಷಯದಲ್ಲಿ ವಿರಕ್ತಿ ಬಂದುಹೋಯಿತು. *ಅಂತರಂಗದಲ್ಲೇ ಬೆಂದುಹೋಗುತ್ತಿದ್ದರು. ನಮ್ಮ ಮನೆಯ ಭಾಗ್ಯವೇ ಹೋದ ಹಾಗೆ ನಾವೆಲ್ಲಾ ಸೂತಕ ಅನುಭವಿಸಿದೆವು.*

ಇ) ಪರಿಸರ ಪ್ರೇಮ

ಸಂಕೇತ ಸಂಪದ- ನವೆಂಬರ್ ೯೮, ಪು.೧೨-೧೩ **-ರಾಮದಾಸ್, ಬಸವಾನಿ**

(ನಿಸರ್ಗದ ಜತೆ ಒಂದಾಗಿ ಬೆರೆಯುವುದೊಂದೇ ಪೂರ್ಣತೆಯ ಮಾರ್ಗ ಎನ್ನುತ್ತದೆ ಈ ಲೇಖನ)

ನಾವು ನಮ್ಮ ಜೀವನದಲ್ಲಿ ನಮ್ಮ ಮನೆಯವರು, ಬಂಧುಗಳು, ಗೆಳೆಯರು ಮತ್ತು ಇನ್ನಿತರರನ್ನು ಪ್ರೀತಿಸುವಂತೆಯೇ, ನಮ್ಮ ಸುತ್ತಮುತ್ತಲಿರುವ *ಗಿಡಮರಗಳನ್ನೂ ಪ್ರೀತಿಸಬೇಕು,* ನಮ್ಮ ಸುತ್ತಮುತ್ತಲಿರುವ ಗಿಡಮರಗಳು ಕೇವಲ ನಮ್ಮ ಭೋಗಕ್ಕಾಗಿ ಅಲ್ಲ ಎಂಬ ಜ್ಞಾನ ಈಗ, ಅವು ವಿನಾಶದ ಅಂಚಿಗೆ ಬಂದ ಮೇಲೆ ನಮಗೆ ಉಂಟಾಗುತ್ತಿದೆ.

ಒಂದಾನೊಂದು ಕಾಲದಲ್ಲಿ "ದಂಡಕಾರಣ್ಯ" ಎನ್ನಿಸಿಕೊಂಡ ಈ ಪ್ರದೇಶ ಇಂದು ಯಾವ ರೀತಿ ಇದೆ? ಭೀಮನಕಟ್ಟೆ-ಭೀಮ ಗದೆಯನ್ನು ನದಿಗೆ ಬಿಸುಟು ಕಟ್ಟೆಯನ್ನೇ ನಿರ್ಮಿಸಿದ ಎಂಬುದು, ಕೊಳಾವರ-ಮಾರೀಚವಧೆ ಆದಾಗ ಅವನ ಕುತ್ತಿಗೆ ಅಲ್ಲಿ ಬಿತ್ತೆಂಬುದು, ಮೃಗವಧೆ - ಇಲ್ಲಿ ಮಾಯಾಮೃಗದ ವಧೆಯಾಯಿತು ಇತ್ಯಾದಿ ಈ ಕಡೆ ಎಲ್ಲಾ ಭಾಗಗಳಲ್ಲಿಯೂ ಒಂದೊಂದು ಇತಿಹಾಸವಿದೆ. ಇಷ್ಟೆಲ್ಲಾ ಇದ್ದಮೇಲೆ ಇದು *ದಂಡಕಾರಣ್ಯವೇ ಹೌದು* ಎಂದು ನಾವೆಲ್ಲರೂ ನಂಬಬಹುದು. ಈ ದಂಡಕಾರಣ್ಯದಲ್ಲಿ ದಟ್ಟವಾದ ಅರಣ್ಯ, ವನ್ಯಮೃಗಗಳು, ಕಾಡಿನ ಮಧ್ಯೆ ಸರೋವರಗಳು, ಇದರ ತಪ್ಪಲಿನಲ್ಲಿ ಋಷಿಮುನಿಗಳು ತಪಸ್ಸು ಮಾಡುತ್ತಿದ್ದುದು, ಈ ಕಾಡಿನಲ್ಲಿಯೇ ಬಿಟ್ಟ ಹಣ್ಣು, ಹಂಪಲು, ಗಡ್ಡೆಗೆಣಸುಗಳನ್ನು ತಿಂದು ಅವರು ಬದುಕಿದ ಪರಿ, ಇದನ್ನೆಲ್ಲ ನೆನಸಿಕೊಂಡಾಗ ರೋಮಾಂಚನವಾಗುತ್ತದೆ. ಈ ಮುನಿಗಳು, *ಕಾಡುಪ್ರಾಣಿಗಳ ಒಡನಾಡಿಗಳಾಗಿ, ಅವುಗಳ ಭಾಷೆಯನ್ನೂ ಕಲಿತು ಅವುಗಳೊಡನೆ ವ್ಯವಹರಿಸುತ್ತಿದ್ದರೆಂಬುದನ್ನು* ಈಗ ಊಹಿಸಲೂ ಅಸಾಧ್ಯ. . . .



ಒಂದು ಕಾಲದಲ್ಲಿ ಇದೂ ದಂಡಕಾರಣ್ಯ:ಬಸವಾನಿ

ಅಂತೆಯೇ ನಾವು, ನಾವು ಬೆಳೆದಂತೆ ಈ *ಗಿಡಮರಗಳನ್ನೂ ಬೆಳೆಸುತ್ತೇವೆಂದು ಪಣತೊಡಬೇಕು.* ಪ್ರತಿಯೊಬ್ಬರೂ ತಮಗಿರುವ ಜಾಗದಲ್ಲಿ ಒಂದೆರಡು ಗಿಡಗಳನ್ನಾದರೂ ಬೆಳೆಸಬೇಕು. ಹೆಚ್ಚು ಜಾಗ ಇಲ್ಲದವರೂ ಸಹ ಮನೆಯ ಹಿಂದುಗಡೆ ತರಕಾರಿ, ಮುಂದುಗಡೆ ಹೂವಿನ ತೋಟ ಮಾಡಬಹುದು. ಸ್ವಲ್ಪ ಸ್ಥಳ ಇರುವವರು, ಸೀಮೆಬದನೆ, ತೊಂಡೆಚಪ್ಪರ, ಅವರೆಕಾಯಿಚಪ್ಪರ, ಇತ್ಯಾದಿಗಳನ್ನು ಬೆಳೆಸಿಕೊಂಡರೆ ವರ್ಷವಿಡೀ ತರಕಾರಿ ಹುಡುಕಬೇಕಾಗಿಲ್ಲ. ಒಂದೆರಡೆಕರೆ ಜಮೀನಿರುವವರು, ಹಲಸು, ಮಾವು, ನೆಲ್ಲಿ, ನೇರಲೆ ಇತ್ಯಾದಿ ಗಿಡಗಳನ್ನು ಬೆಳೆಸಬಹುದು

(ಈಗಂತೂ ಅರಣ್ಯ ಇಲಾಖೆಯವರು ಈ ಮೇಲ್ಕಂಡ ಗಿಡಗಳನ್ನು ಬೆಳೆಸಿ, ಜನರಿಗೆ ಹಂಚುತ್ತಿದ್ದಾರೆ) ಇದರಿಂದ ನಮ್ಮ ಆರೋಗ್ಯವನ್ನು ಕಾಪಾಡಿಕೊಳ್ಳುವುದಲ್ಲದೆ, ಅನಾವಶ್ಯಕವಾಗಿ ವರ್ಷಕ್ಕೆ ಸಾವಿರಾರು ರೂಪಾಯಿಗಳನ್ನು *ಖಾಹಿಲೆಗೆಂದು ಖರ್ಚು ಮಾಡುವುದು ಉಳಿಯುತ್ತದೆ.* ಪ್ರತಿದಿನ *ಒಂದೆರಡು ಗಂಟೆ ಕೆಲಸ ಮಾಡುವುದರಿಂದ* ನಮ್ಮ ಆರೋಗ್ಯ ಉತ್ತಮವಾಗುತ್ತದೆ. ಅಲ್ಲದೆ ನಮ್ಮೂರಿನ ಪರಿಸರ ಹಿಂದಿನಂತೆ ಒಳ್ಳೆಯದಾಗಿ ನಾವು ಸಹ ಪಕ್ಷಿಗಳು, ಮೃಗಗಳನ್ನು ನೋಡಬಹುದು. ಈ ರೀತಿ ನಾವು ಮಾಡುತ್ತಾ ಹೋದಂತೆ ನಮಗೂ ಈ ಪ್ರಾಣಿ ಪಕ್ಷಿಗಳ ಮೇಲೆ ಅಭಿಮಾನ ಮೂಡುತ್ತದೆ. ನಾವು ಇವುಗಳ ಮೇಲೆ *ಪ್ರೀತಿ ತೋರಿದಾಗ ಅವೂ ನಮಗೆ ಸಮೀಪವಾಗುತ್ತವೆ*- ಹುಲಿಗಳಿಗೂ ಹೆದರಬೇಕಾಗಿಲ್ಲ.

ಈ) ಪ್ರಕೃತಿ ಮತ್ತು ನಾನು

ಸಂಕೇತ ಸಂಪದ- ಏಪ್ರಿಲ್ ೧೯೯೯, ಪು.೧೨, ೧೩ — ***- ಮಾಲಿನಿ ಭಾಸ್ಕರ್, ಮೈಸೂರು***

(ಸುಖ, ಪ್ರೀತಿ, ಆನಂದ, ತತ್ತ್ವ ಎಲ್ಲ ಇರುವುದೂ ನಿಸರ್ಗದಲ್ಲಿ. ಅದರಿಂದ ದೂರವಾದಾಗ ಉಂಟಾಗುವ ಅನಾಥಪ್ರಜ್ಞೆಗೆ ಮದ್ದು ಮತ್ತೆ ನಿಸರ್ಗವೇ)

ಪ್ರಕೃತಿಯ ಬಗ್ಗೆ ಯೋಚಿಸುವಾಗ ನನ್ನ ಮತ್ತು ಪ್ರಕೃತಿಯ ನಡುವಿನ ಸಂಬಂಧ ಪ್ರಾರಂಭವಾದದ್ದು ಎಂದು? ಹೇಗೆ? ಎಂದು ತಿಳಿಯದಿದ್ದರೂ ಸಂಬಂಧ ಗಹನವಾದದ್ದು ಯಾವಾಗ ಎಂಬ ಅರಿವು ಮಾತ್ರ ಸ್ಪಷ್ಟ.

ನಾನು ಮತ್ತೂರಿನ ಸುಂದರ ಮಡಿಲಲ್ಲಿ ಬೆಳೆಯುವಾಗಲೇ ನನಗೆ ಪ್ರಕೃತಿಯ ಬಗ್ಗೆ *ಕುತೂಹಲ, ಆಸಕ್ತಿ, ಪ್ರೀತಿ ಶುರುವಾದದ್ದು* ಇರಬೇಕು. ಆದರೆ ಆ ಸಂಬಂಧದ ಬಗೆಯಾಗಲೀ ನನಗೆ ಅನಿರ್ವಚನೀಯ ಆನಂದ ಕೊಡುವುದು ಯಾವುದು ಎಂಬ ಬಗೆಯಾಗಲೀ ಗೊತ್ತಿರಲಿಲ್ಲ.

ನಾನಾ ಬಗೆಯ ಹಸಿರಿಂದ ರಂಜಿಸುವ ತೋಟ, ಗುಬ್ಬಚ್ಚಿ - ಮೈನಾ ಹಕ್ಕಿಗಳ ಜೊತೆಗೆ ಹೆಸರೇ ಗೊತ್ತಿಲ್ಲದ ಕೆಲವು ಪಕ್ಷಿಗಳ ಬಣ್ಣ ಚಲುವು, ಕೂಗು, ಸುಂದರ ತುಂಗೆ, ತುಂಗೆಯ ಎದುರು ದಡದಲ್ಲಿ ಕಾಣುವ ಗಿಡಮರಗಳು, ಜತೆಗೆ ಕಂಡೂ ಕಾಣದಂತಿರುವ ಹೊಸಹಳ್ಳಿ, ಶಿವಾಲಯದ ಘಂಟಾನಾದ, ಮಂತ್ರಗಳ ನಿನಾದ, ನಮ್ಮನೆಯ ಅಂಗಳದಲ್ಲಿ ಕುಳಿತು ಓದುವಾಗ ಪಕ್ಕದ ಮನೆ ಹಿತ್ತಲಿನ ಸಂಪಿಗೆಯ ಮರ, ಹೀಗೆ ಬಾಲ್ಯದಲ್ಲಿ *ಆನಂದ ಕೊಟ್ಟ ಪರಿಚಿತರು* ಬಹಳ.

ಬೆಳದಿಂಗಳಲ್ಲಿ ಹೊಳೆಯೂಟ, ತುಂಬೆ ಹೂವನ್ನು ಶಿವರಾತ್ರಿಯ ದಿನ ಪ್ರಾತಃಕಾಲ ಕೀಳುವ ಸೊಗಸು, ಗುಡ್ಡೆಮರಳಿ, ಒಂದೇ ಎರಡೇ ಮನದಲ್ಲಿ ಕುಳಿತು ಈಗಲೂ ಮುದಕೊಡುವುದು. ಆ *ರಮ್ಯವಾದ ವಾತಾವರಣದಲ್ಲಿ ಹುಟ್ಟಿ ಬೆಳೆಯಲು ಪುಣ್ಯ ಬೇಕು* ಎಂದು, ಮುಂದೆ ಮದ್ರಾಸಿನಂತಹ ಕಾಂಕ್ರಿಟ್ ಜಂಗಲ್‌ನಲ್ಲಿ ಇರಬೇಕಾದರೆ ಅಂದುಕೊಂಡಿದ್ದು- ನಾನು ನಿಮಿಷದಲ್ಲಿ ಉಸಿರಾಡಿದ್ದಕ್ಕಿಂತ ಜಾಸ್ತಿ.

. . . ಮುಂದೆ, ಮದುವೆಯಾಗಿ ದೊಡ್ಡ ಪಟ್ಟಣಗಳಲ್ಲಿ ಇರುವಾಗ, *ಅನಾಥಪ್ರಜ್ಞೆಯಿಂದ ಒದ್ದಾಡಿದ್ದು,* ಪ್ರಕೃತಿಯ ಮಡಿಲು ಬಿಟ್ಟು ಬಂದಿದ್ದಕ್ಕೇ ಇರಬೇಕು. ಊರಿನ ಆಗಸದಲ್ಲೂ ಪರಿಚಿತಭಾವಿ ಕಾಣುವಾಗ ಇಲ್ಲಿ ಆಕಾಶ, ಚಂದ್ರ, ನಕ್ಷತ್ರಗಳನ್ನು ನೋಡಿದರೆ ಕಂಗಾಲಾಗುವಂತಾಯಿತು. ಚೆನ್ನಾಗಿ ಸಮಯ ಜಾರಬೇಕು, ಆನಂದಪಡಬೇಕೆಂದು ಇರೋ ರೆಸ್ಟೋರೆಂಟ್‌ಗೆಲ್ಲಾ ಹೋಗಾಯ್ತು, ಚೆನ್ನಾಗಿದೆ ಎಂದ ಸಿನಿಮಾಗೆಲ್ಲ ಹೋಗಾಯ್ತು. ಛೇ - ಒಂದರಂತೆ ಮತ್ತೊಂದು ಎಂದು ಗೊಣಗಿಕೊಂಡು ಬಂದಾಯ್ತು. ದಿನ ಬೆಳಗಾದರೆ ಷಾಪಿಂಗ್ ಆದರೂ ಏನೋ ಕೊರತೆ. . . . . .

. . . ಆದರೆ ಪ್ರಕೃತಿಯನ್ನು ಆನಂದಿಸಲು ದೂರವೇ ಹೋಗಬೇಕೇನು? ಪ್ರಕೃತಿಯ ಕೆಲವು ರೂಪಗಳನ್ನು ನೋಡಲು ಹಣ ಖರ್ಚು ಮಾಡಬೇಕು. ಆದರೆ ಆಕಾಶ, ನಕ್ಷತ್ರ, ಚಂದ್ರ, ಸೂರ್ಯ, ಗಿಡ-ಮರಗಳು, ಮುಗ್ಧವಾದ ಪಕ್ಷಿಗಳು, ಪಶುಗಳು ಎಲ್ಲವನ್ನೂ ನೋಡುವಾಗ, ತಂಗಾಳಿ, ಬೆಳುದಿಂಗಳು, ಮಳೆಯ ಸ್ಪರ್ಶ, ಸೂರ್ಯನ ಪ್ರಥಮ ಸ್ಪರ್ಶ ಇವೆಲ್ಲವನ್ನೂ ಅನುಭವಿಸುವಾಗ *ಭಗವಂತ ಅತ್ಯುತ್ತಮ ಸುಖವನ್ನು ಹಾಗೇ ಕೊಟ್ಟಿದ್ದಾ*ನಲ್ಲಾ ಎನ್ನಿಸುತ್ತದೆ.

ಮನಸ್ಸಿನ ದುಗುಡವನ್ನು ಕೆಲವೊಮ್ಮೆ ಯಾರೂ ಅರ್ಥ ಮಾಡಿಕೊಳ್ಳದಾದಾಗ, ನಕ್ಷತ್ರಗಳ ಜತೆ, ಹಾರಾಡುವ ಹಕ್ಕಿಗಳ ಜತೆ ಮಾತಾಡಿದಾಗ ಆಗುವ *ಸಮಾಧಾನ ಅನುಭವೈಕವೇದ್ಯ.* ತೋಟದ ಮೇಲಿಂದ ಬೀಸುವಗಾಳಿ, ಹಾರುವ ಹಕ್ಕಿ, ಮುಗಿಲಿನ ನಕ್ಷತ್ರ ಒಂದೊಂದೂ ಒಂದೊಂದು ರೀತಿಯ *ಸಂದೇಶ ಬೀರುತ್ತದೆ. . . . . .*

ಉ) ಪರಿಸರ ಹೊಂದಾಣಿಕೆ

ಸಂಕೇತಿ ಸಂಗಮ, ಆಗಸ್ಟ್ ೨೦೦೦, ಪು.೧೯-೨೧ ***- ಪ್ರೊ.ಕೆ.ಎಸ್. ಕೃಷ್ಣಮೂರ್ತಿ, ಮೈಸೂರು***

(ಅಗಾಧವಾದ ಬೌದ್ಧಿಕ ಶಕ್ತಿ ಮತ್ತು ದೈಹಿಕ ಶಕ್ತಿಯ ಸಮತೋಲನವು ಸಂಕೇತಿಗಳಿಗೆ ಬಾಗಾಯ್ತಿನ ಆಶ್ರಮಧರ್ಮದಿಂದಲೇ ಬಂದದ್ದು. ಅದಕ್ಕೆ ಪರ್ಯಾಯ ಉಂಟೆ? ಲೇಖಕರನ್ನು ಈ ಪ್ರಶ್ನೆ ಕಾಡಿದೆ.)

ಸಂಕೇತಿಗಳು ತಮ್ಮ ಬದುಕಿನಲ್ಲಿ ಎರಡು ವಿಷಯಗಳಿಗೆ ಪ್ರಾಮುಖ್ಯವನ್ನು ಕೊಟ್ಟಿದ್ದರು: (೧) *ವೇದ-ಶಾಸ್ತ್ರಗಳ* ಅಧ್ಯಯನ ಮತ್ತು ಅನುಷ್ಠಾನ (೨) ಜೀವನಾಧಾರವಾದ *ತೋಟದ ವ್ಯವಸಾಯ.* ವೇದಶಾಸ್ತ್ರಗಳ ಅಧ್ಯಯನ *ಸಂಕೇತಿಗಳ ಬದುಕನ್ನು ಶ್ರೀಮಂತಗೊಳಿಸಿತ್ತು.* ಅವರ ವೃತ್ತಿಯಾದ ತೋಟದ ವ್ಯವಸಾಯದಿಂದ, ಅವರ *ದೈಹಿಕ ಬೆಳವಣಿಗೆ* ಸುಸ್ಥಿತಿಯಲ್ಲಿದ್ದಿತು. ಸಂಕೇತಿಗಳು ಅತ್ಯಂತ ಕ್ಲಿಷ್ಟಕರವಾದ ಜೀವನವನ್ನು ನಡೆಸುತ್ತಿದ್ದರು. ಪ್ರಕೃತಿಯ ಗಾಳಿ, ಮಳೆ, ಬಿಸಿಲುಗಳಿಗೆ ಮೈಯೊಡ್ಡಿ ತಮ್ಮ ದೇಹವನ್ನು ಪಳಗಿಸಿಕೊಂಡಿದ್ದರು. ಅವರ ಆಹಾರವೂ ಅತ್ಯಂತ ಸರಳ ಹಾಗೂ ಪುಷ್ಟಿದಾಯಕವಾಗಿದ್ದಿತು. ಮನೆಯಲ್ಲಿ ಕೊಟ್ಟಣ ಕುಟ್ಟಿದ ಅಕ್ಕಿಯ ಅನ್ನದ ರುಚಿಯನ್ನು ಮೆದ್ದವರೇ ಬಲ್ಲರು. ಮನೆಯಲ್ಲಿ ಸಾಕಿದ ಹಸು, ಎಮ್ಮೆ ಮೊದಲಾದವುಗಳಿಂದ ದೊರೆಯುತ್ತಿದ್ದ - ಹಾಲು, ಮೊಸರು, ತುಪ್ಪಗಳು ಅತ್ಯಂತ ಪುಷ್ಟಿದಾಯಕವಾಗಿದ್ದವು. ಸ್ಥಳೀಯವಾಗಿ ದೊರಕುವ ಹಲಸಿಕಾಯಿ, ಬಾಳೆಕಾಯಿ, ಬಾಳೆದಿಂಡು, ಕೆಸವೆದಂಟು (ಚೋಂಬು), ಕುಂಬಳಕಾಯಿ ಮತ್ತು ಹಿತ್ತಲಲ್ಲಿ ಬಿಟ್ಟ ಪಡುವಲ, ಹೀರೆ, ಹಾಗಲಕಾಯಿ ಮುಂತಾದ ತರಕಾರಿಗಳು ದೇಹಕ್ಕೆ ಉತ್ತಮ ಪೋಷಕಾಂಶಗಳನ್ನು ಒದಗಿಸುತ್ತಿದ್ದುವು.

ಸಂಕೇತಿ ಸ್ತ್ರೀಯರು ಕೂಡ ಆರೋಗ್ಯವಂತರಾಗಿರುತ್ತಿದ್ದರು. ಹಿಂದೆ ಹಳ್ಳಿಗಳಲ್ಲಿ ಸ್ಥೂಲ ಶರೀರದ ಸ್ತ್ರೀಯರು ಅಷ್ಟಾಗಿ ಕಂಡುಬರುತ್ತಿರಲಿಲ್ಲ. ಅವರದು ತೆಳುವಾದ ಮೈಕಟ್ಟು - ಬಾವಿಯಿಂದ ನೀರು ಸೇದುವುದು, ನದಿಗೋ - ಕೆರೆಗೋ ಹೋಗಿ ಬಟ್ಟೆ ಒಗೆದು, ಪಾತ್ರೆಗಳನ್ನು ತೊಳೆದು, ಕುಕ್ಕೆಯಲ್ಲಿ ಇಟ್ಟು ತಲೆಯ ಮೇಲೆ ಹೊತ್ತುಕೊಂಡು, ಕಂಕುಳಲ್ಲಿ ನೀರುತುಂಬಿದ ಕೊಡವನ್ನು ಇರುಕಿಕೊಂಡು ಮನೆಗೆ ಬರುವುದನ್ನು ಅಂದು ಸಾಮಾನ್ಯವಾಗಿ ಕಾಣಬಹುದಾಗಿದ್ದಿತು. ಮೈಬಗ್ಗಿಸಿ ಸಗಣಿಯಿಂದ ಮನೆಯ ನೆಲವನ್ನು ಸಾರಿಸುವುದು, ಏತದ ಮೇಲೆ ನಿಂತು ಬತ್ತವನ್ನು ಕುಟ್ಟಿ ಅಕ್ಕಿ ಮಾಡುವುದು ಮೊದಲಾದ, ದೇಹಕ್ಕೆ ವ್ಯಾಯಾಮವನ್ನು ಒದಗಿಸುವ ಕೆಲಸಗಳನ್ನೂ ಮಾಡುತ್ತಿದ್ದರು. ಆದುದರಿಂದ ಅವರ ದೇಹದಲ್ಲಿ *ಲವಲವಿಕೆಯೂ, ಪಟುತ್ವವೂ ಇದ್ದು, ಅವರಲ್ಲಿ ಆರೋಗ್ಯಕರ ವರ್ಚಸ್ಸನ್ನು ಕಾಣಬಹುದಾಗಿತ್ತು.*



ಕಾವೇರಿಯ ಮಡಿಲು

ಸಂಕೇತಿಗಳು ನಮ್ಮ ಹಿಂದಿನವರ ಉನ್ನತವಾದ *ಬೌದ್ಧಿಕ ಶಕ್ತಿಯನ್ನೂ*, ಹಿಡಿದ ಕೆಲಸವನ್ನು ಬಿಡದೆ ಮಾಡಿ ಪೂರೈಸುವ *ಛಲವನ್ನೂ*, ಹಿಂದಿನವರ *ಸಂಸ್ಕೃತಿ-ಆಚಾರಗಳನ್ನೂ* ಉಳಿಸಿಕೊಂಡು ಕೀರ್ತಿಶಾಲಿಗಳಾಗಿ ಸ್ವದೇಶ-ಪರದೇಶಗಳಲ್ಲಿ ಮೆರೆದಿದ್ದಾರೆ, ನಿಜ. ಆದರೆ ಪರಿಸರ ಬದಲಾವಣೆಯಿಂದ ಹಿಂದಿನವರ ಆ ಸಮತೋಲಿತ ಜೀವನ, ದೈಹಿಕ ಸ್ವಾಸ್ಥ್ಯ *ಇಂದಿನವರಲ್ಲಿ ಕಡಿಮೆಯಾಗಿದೆ* ಎನ್ನಬಹುದು. ಪ್ರಕೃತಿಸಹಜವಾದ ಬೌದ್ಧಿಕ-ದೈಹಿಕ ಸಾಮರ್ಥ್ಯಗಳೆರಡನ್ನೂ ಸಮತೋಲವಾಗಿ ವೃದ್ಧಿಪಡಿಸಿಕೊಳ್ಳಲು ಏನು ಮಾಡಬೇಕು ಎಂಬ ಬಗ್ಗೆ ಸಂಶೋಧನೆ ನಡೆಸಬೇಕಾದ ಕಾಲ ಸಮೀಪವಾಗಿದೆ.

೫) ಕೃಷಿ ಋಷಿ ಹೊಸಹಳ್ಳಿ ಕೃಷ್ಣರಾವ್

ಸಂಕೇತಿ ಸಂಗಮ, ಜನವರಿ ೨೦೦೧, ಪು.೫೧ - ೫೨

- ಶ್ರೀಧರ್ ಹೆಚ್.ಆರ್., ಹೊಸಹಳ್ಳಿ

(ಕೃಷ್ಣರಾವ್ ವ್ಯವಸಾಯವನ್ನು ತಪಸ್ಸಿನಂತೆ ಮಾಡಿ 'ಕೃಷಿಋಷಿ' ಎನಿಸಿದರು. ಮಗನಿಗೆ ಶಿಕ್ಷಣ ಕೊಡಿಸಿ ಆತನೂ ಕೃಷಿಯನ್ನು ಪ್ರೀತಿಸಿ ಅದೇ ವೃತ್ತಿಗೇ ಬರುವಂತೆ ಮಾಡಿರುವುದರಲ್ಲಿ ಅವರ ಪ್ರಾಮಾಣಿಕತೆ ಮತ್ತು ಶ್ರದ್ಧೆ ಕಾಣುತ್ತದೆ. ಬಾಗಾಯ್ತಿನ ಆಶ್ರಮಧರ್ಮವನ್ನು ಇನ್ನೂ ಉಳಿಸಿಕೊಂಡವರ ಪ್ರತಿನಿಧಿ ಅವರು.)

ಸುಮಾರು ೧೦ ವರ್ಷಗಳ ಹಿಂದಿನ ಮಾತು. ಹೊಸಹಳ್ಳಿ ಗೆಳೆಯರ ಬಳಗದ ಆಶ್ರಯದಲ್ಲಿ 'ರಂಗಪ್ರಯೋಗ'ಗಳನ್ನು ಕುರಿತಂತೆ ಉಪನ್ಯಾಸ ನೀಡಲು ಖ್ಯಾತ ನಾಟಕಕಾರ ಶ್ರೀ ಬಿ.ವಿ.ಕಾರಂತರು ಆಗಮಿಸಿದ್ದರು. ಕಾರಂತರ ಜತೆಯಲ್ಲಿ ಶಿವಮೊಗ್ಗದ ಖ್ಯಾತ ವೈದ್ಯ ಡಾ.ಅಶೋಕ್ ಪೈ ಕೂಡ ಇದ್ದರು. ಉಪನ್ಯಾಸ ಮುಗಿದ ನಂತರ ಅತಿಥಿಗಳನ್ನು ಬಂಧುಗಳೊಬ್ಬರ ಮನೆಗೆ ಕರೆದುಕೊಂಡು ಹೋದೆವು. ಮನೆಯ ಹಿರಿಯರಿಗೆ ಡಾ.ಅಶೋಕ್ ಪೈ, ಕಾರಂತರನ್ನು ಪರಿಚಯಿಸಿದರು. ತತ್‌ಕ್ಷಣ ಆ ಹಿರಿಯರು ಕೇಳಿದರು "ಇತ್ತೀಚೆಗೆ ಪತ್ರಿಕೆಗಳಲ್ಲಿ ಬಹಳ ಸುದ್ದಿಯಾಯಿತಲ್ಲ - ವಿಭಾ ಕಾರಂತ ಪ್ರಕರಣ ಎಂದು - ಅದೇ ಕಾರಂತರೆ ಇವರು?" ಈ ಮಾತನ್ನು ಕೇಳಿ ಜತೆಯಲ್ಲಿ ಹೋಗಿದ್ದ ನಮಗೆಲ್ಲ ಬಹಳ ಮುಜುಗರವಾಯಿತು, ಅತಿಥಿಗಳನ್ನು ಅವಮಾನಿಸಿದಂತಾಯಿತಲ್ಲ ಎಂದು. ಮರುಕ್ಷಣ ಹಿರಿಯರ ಬಾಯಿಂದ ಮತ್ತೊಂದು ಮಾತು ಬಂತು "ಯಾವುದೇ ಕ್ಷೇತ್ರದಲ್ಲೂ ಉತ್ತಮ ಸಾಧನೆ ಮಾಡಿ ಎತ್ತರ ತಲುಪಿದರೆ, ಆ ವ್ಯಕ್ತಿಯ ಅಭ್ಯುದಯ ಸಹಿಸಲಾರದೆ ಕೆಲವರು ಅವರ ಹೆಸರಿಗೆ ಕಳಂಕ ತರುವ ಇಂತಹ ಪ್ರಕರಣಗಳನ್ನು ಸೃಷ್ಟಿಸುತ್ತಾರೆ. ಅದಕ್ಕಾಗಿ ಎದೆಗುಂದಬಾರದು." ಈ ಮಾತು ಅವರ ಮೊದಲ ಮಾತಿನಿಂದಾದ ಮುಜುಗರ, ಅವಮಾನ ಗಳನ್ನು ದೂರಮಾಡಿತು. ಒಂದೇ ಮಾತಿನಿಂದ ಎಲ್ಲರ ಮನದಲ್ಲಿ ಸಮಾಧಾನ, ಸಂತಸ ತುಂಬಿದ ಹಿರಿಯರು ಬೇರಾರೂ ಅಲ್ಲ - ತಮ್ಮ ಕುಶಾಗ್ರ ಮತಿಗೆ, ಪ್ರಸಂಗಾವಧಾನತೆಗೆ ಹೆಸರಾದ ಹೊಸಹಳ್ಳಿ ಕೃಷ್ಣರಾವ್.



ಅಡಿಕೆ ಎಡೆಯುವುದು ಸಂಕೇತಿ ಸ್ತ್ರೀಯರ ಬದುಕಿನ ಅವಿಭಾಜ್ಯ ಅಂಗ

ಶ್ರೀ ಕೃಷ್ಣರಾವ್‌ರವರ ತಾಯಿ ಶ್ರೀಮತಿ ಸೀತಮ್ಮ. ತಂದೆ ಹರಕೆರೆ ಶ್ರೀ ವೆಂಕಟರಮಣಯ್ಯನವರು, ಆ ಕಾಲದ ಖ್ಯಾತ ವಕೀಲ ಶ್ರೀ ಗರುಡಾಚಾರಿಗಳ ಗರಡಿಯಲ್ಲಿ ಪಳಗಿದವರು, ಕಾನೂನುಸಂಬಂಧೀ ವಿಷಯಗಳಲ್ಲಿ ಬಹಳ ತಿಳಿದವರಾಗಿದ್ದರು. ಇವರ ಅಜ್ಜ ಹರಕೆರೆ ವೆಂಕಟೇಶ ಅವಧಾನಿಗಳು ಶೃಂಗೇರಿ ಮಠದ ಪಾರುಪತ್ಯದಾರರಾಗಿದ್ದರು. ದೊಡ್ಡಪ್ಪ ಶ್ರೀ ರಾಮಸ್ವಾಮಯ್ಯನವರು ಪ್ರಖ್ಯಾತ ಜ್ಯೋತಿಷಿ, ಅವರ ಬಾಯಲ್ಲಿ ಬಂದದ್ದು ಸುಳ್ಳಾಗದು ಎಂಬಷ್ಟು ಜನಪ್ರಿಯರು. ಬಾಲ್ಯದಲ್ಲೇ ತಾಯಿಯನ್ನು ಕಳೆದುಕೊಂಡ ಇವರು ಚಿಕ್ಕಮ್ಮ ಶ್ರೀಮತಿ ಸಾವಿತ್ರಮ್ಮ ತೋರಿದ ಮಾತೃವಾತ್ಸಲ್ಯವನ್ನು ಸದಾ ಸ್ಮರಿಸುತ್ತಾರೆ.

೧೯೨೭ರಲ್ಲಿ ಜನಿಸಿದ ಶ್ರೀ ಕೃಷ್ಣರಾವ್ ಕಡುಬಡತನದಲ್ಲೇ ಬಾಲ್ಯವನ್ನು ಕಳೆದರು. ಪ್ರೈಮರಿ ವಿದ್ಯಾಭ್ಯಾಸವನ್ನು ಮತ್ತೂರಿನಲ್ಲಿ ಪಡೆದ ಇವರು ಆರ್ಥಿಕ ಸಂಕಷ್ಟಗಳಿಂದಾಗಿ ಓದು ಮುಂದುವರೆಸಲು ಸಾಧ್ಯವಾಗಲಿಲ್ಲ. ಶಿಷ್ಯಾಭಿಮಾನದಿಂದ ಗುರುಗಳಾದ ಶೇಷಭಟ್ಟರು ಮನೆಗೇ ಬಂದು ಪಾಠ ಹೇಳುತ್ತಿದ್ದರು. ದೊಡ್ಡಪ್ಪ ಜಾತಕ ನೋಡಿ "ಇವನ ಜಾತಕ ಬಹಳ ಚೆನ್ನಾಗಿದೆ, ಇವನು ವ್ಯಾಪಾರ ಆರಂಭಿಸಲಿ, ಒಳ್ಳೆಯದಾಗುತ್ತದೆ" ಎಂದು ಹೇಳಿದರಂತೆ. ಅವರ ಮಾತಿನಂತೆ ೧೫ನೇ ವಯಸ್ಸಿಗೇ ಅಡಿಕೆ ವ್ಯಾಪಾರ ಆರಂಭಿಸಿದರಂತೆ. ಬಹಳ ಕಷ್ಟಪಟ್ಟು ವ್ಯಾಪಾರದಲ್ಲಿ ದಿನದಿಂದ ದಿನಕ್ಕೆ ಅಭ್ಯುದಯವನ್ನು ಕಂಡ ಶ್ರೀ ಕೃಷ್ಣರಾಯರು ಅಲ್ಲಿಂದ ಮುಟ್ಟಿದ್ದೆಲ್ಲ ಚಿನ್ನವಾಗುತ್ತ ಸಾಗಿತು. ವ್ಯಾಪಾರದ ನಂತರ ಇವರು ಆಯ್ದುಕೊಂಡ ಕ್ಷೇತ್ರ ಕೃಷಿ. ಕೃಷಿಯೋಗ್ಯ ಜಮೀನನ್ನು ಕೊಂಡು, ವ್ಯವಸಾಯವನ್ನು *ಒಂದು ತಪಸ್ಸಿನಂತೆ ಕೈಗೊಂಡರು.*

ಆಧುನಿಕ ಸಲಕರಣೆಗಳು ಹಾಗೂ ವಿಧಾನಗಳನ್ನು ಬಳಸಿ *ಕೃಷಿಪಂಡಿತರೂ ಅಚ್ಚರಿಪಡುವಂತಹ ಯಶ ಸಾಧಿಸಿದರು.* ಅವರ ಸಾಧನೆಗಳನ್ನು ಗುರುತಿಸಿ ಅಂದಿನ ಮೈಸೂರು ಸರ್ಕಾರ ೧೯೬೯ರಲ್ಲಿ *'ಕೃಷಿಋಷಿ'* ಎಂಬ ಬಿರುದನ್ನಿತ್ತಿತು. ಮುಖ್ಯಮಂತ್ರಿಗಳಾಗಿದ್ದ ಶ್ರೀ ವೀರೇಂದ್ರ ಪಾಟೀಲರೇ ಸ್ವತಃ ಶಾಲು ಹೊದಿಸಿ, ಪ್ರಶಸ್ತಿಪತ್ರ ನೀಡಿ ಸನ್ಮಾನಿಸಿದ್ದರು.

ಅವರ ಈ ಎಲ್ಲ ಸಂಕಷ್ಟ - ಸಾಧನೆ -ಸಂತಸಗಳಲ್ಲಿ ಜತೆಗಿರುವವರು ಹಿರಿಯ ಸೋದರ ಶ್ರೀ ಹೆಚ್.ವಿ.ಕೇಶವರಾವ್. ಈ ಸೋದರರ ನಡುವಿನ ಬಾಂಧವ್ಯ ರಾಮ-ಲಕ್ಷ್ಮಣರನ್ನು ನೆನಪಿಗೆ ತರುವಂತಹದ್ದು. *ಒಬ್ಬರುಂಡರೆ ಮತ್ತೊಬ್ಬರ ಹೊಟ್ಟೆ ತುಂಬುವಷ್ಟು ಅನ್ಯೋನ್ಯತೆ!* ಕಣ್ಣೆರಡಾದರೂ ದೃಷ್ಟಿ ಒಂದೇ ಎಂಬುವಂತಹ ಸಮಾನಚಿತ್ತ. ವ್ಯಾಪಾರ-ವ್ಯವಹಾರ-ವ್ಯವಸಾಯ ಇವುಗಳಲ್ಲಿ ಹೇಗೋ ಹಾಗೇ ವೈಯಕ್ತಿಕ ಬದುಕಿನ ರೀತಿ-ನೀತಿಗಳಲ್ಲೂ ಒಂದಿಷ್ಟೂ ವ್ಯತ್ಯಾಸ ಇಲ್ಲದ ಸಮಾನರು. ಪ್ರತಿನಿತ್ಯ ಬೆಳಗಿನ ಜಾವಕ್ಕೆ ಎದ್ದು ದೇವರ ಪೂಜೆಯಲ್ಲಿ ತೊಡಗುವ ಇವರು, ಪ್ರತಿ ಶುಕ್ರವಾರ ಸಂಜೆ ತಮ್ಮ ಆರಾಧ್ಯದೈವ ಶ್ರೀ ರಾಜರಾಜೇಶ್ವರಿಗೆ ವಿಶೇಷ ಪೂಜೆ ಸಲ್ಲಿಸುತ್ತಾರೆ. ತಮ್ಮೆಲ್ಲ ವ್ಯವಹಾರಗಳ ನಡುವೆಯೂ ವೇದಾಧ್ಯಯನ ಸಂಪನ್ನರಾಗಿದ್ದಾರೆ. ಅತ್ಯಾಶ್ಚರ್ಯವೆಂದರೆ, ಸೋದರರಿಬ್ಬರೂ ತಮ್ಮ ತಮ್ಮ ಮನೆಗಳಲ್ಲಿ ಪ್ರತ್ಯೇಕವಾಗಿ ಪೂಜೆ-ಔಪಾಸನ ಮಾಡುತ್ತಿದ್ದರೂ, ಅವೆಲ್ಲವೂ ಏಕಕಾಲಕ್ಕೆ ನಡೆಯುತ್ತಿರುತ್ತವೆ. ಒಂದೆಡೆ ಮಂಗಳಾರತಿ ಆಯಿತೆಂದರೆ ಇನ್ನೊಂದು ಕಡೆಯೂ ಮಂಗಳಾರತಿ ಆಗಿದೆಯೆಂದು ನೋಡದೆಯೇ ಹೇಳಬಹುದು! *ಮನೆಗಳೆರಡಾದರೂ ಮನ ಒಂದೇ!!*

ಶಾಸ್ತ್ರೀಯವಾಗಿ ಅರ್ಥಶಾಸ್ತ್ರವನ್ನು ಅಭ್ಯಾಸ ಮಾಡಿಲ್ಲವಾದರೂ ಶ್ರೀ ಕೃಷ್ಣರಾಯರು ಅದನ್ನು ಅರಗಿಸಿಕೊಂಡಿದ್ದಾರೆ. ಅವರ ನೆನಪಿನ ಶಕ್ತಿ ಅಗಾಧ. ೪೦-೫೦ ವರ್ಷ ಹಳೆಯ ಘಟನೆಗಳನ್ನೂ ದಿನಾಂಕ, ವಾರಗಳ ಸಹಿತ ನೆನಪು ಮಾಡಿಕೊಳ್ಳುತ್ತಾರೆ. ಗಣಕಶಕ್ತಿಯೂ ಅಷ್ಟೇ ದೊಡ್ಡದು. ಸಾಮಾನ್ಯರು ಕ್ಯಾಲ್ಕ್ಯುಲೇಟರ್ ಉಪಯೋಗಿಸಿ ಮಾಡಬಹುದಾದ ಲೆಕ್ಕಗಳನ್ನೂ ಮನದಲ್ಲೇ ತ್ವರಿತವಾಗಿ ಮಾಡಿಬಿಡುತ್ತಾರೆ. ಕಾನೂನಿನ ವಿಷಯದಲ್ಲಿ ಇವರಿಗಿರುವ ಜ್ಞಾನ, ಸರ್ಕಾರಿ ಕಛೇರಿಗಳ ಕೆಲಸ ಕಾರ್ಯದಲ್ಲಿ ಇರುವ ಅನುಭವ ಅಪರಿಮಿತ. *ದೂರದೃಷ್ಟಿ ಹಾಗೂ ವ್ಯಾಪಕವಾದ ಜ್ಞಾನ ಅವರ ಇಂದಿನ ಸುಸ್ಥಿತಿಗೆ ಕಾರಣ* ಎಂದರೆ ಅತಿಶಯೋಕ್ತಿಯಲ್ಲ.

ಕೃಷ್ಣರಾಯರ ದೈವಭಕ್ತಿ ಅಪಾರವಾದುದು, ಕರ್ಮನಿಷ್ಠೆ ಅನುಪಮವಾದುದು. ಎಲ್ಲವೂ ವೈದಿಕ ವಿಧಿ-ವಿಧಾನಗಳಿಂದ ನಡೆಯಬೇಕು, *ಶ್ರದ್ಧೆಯಿಂದ ಕೂಡಿರಬೇಕು* ಎಂಬ ನಿಲುವು ಅವರದು. ಇವೆಲ್ಲದರ ಜತೆಗೆ ಅವರೊಬ್ಬ *ಕಲಾಪೋಷಕರು.* ಮನೆಯಲ್ಲಿ ಯಾವುದೇ ಸಮಾರಂಭ ನಡೆಯಲಿ - ಅದು ಚಿಕ್ಕದಿರಲಿ ಅಥವಾ ದೊಡ್ಡದಿರಲಿ - ಅದರೊಂದಿಗೆ ಸಂಗೀತ ಮತ್ತು ಗಮಕದ ಕಾರ್ಯಕ್ರಮಗಳು ನಡೆಯಲೇಬೇಕು. ದೊಡ್ಡ ವಿದ್ವಾಂಸರಿಂದ ಮೊದಲುಗೊಂಡು, ಕಿರಿಯ ಕಲಾವಿದರವರೆಗೆ ಎಲ್ಲರಿಗೂ ಅವಕಾಶ ನೀಡಿ ಪ್ರೋತ್ಸಾಹಿಸುತ್ತಾರೆ.

ಹೊಸಹಳ್ಳಿಯ ಶ್ರೀ ಚನ್ನಕೇಶವ ದೇವಾಲಯದ ಜೀರ್ಣೋದ್ಧಾರ, ಕೌ.ಸಂ.ಸಂಘದ ಶಿವಮೊಗ್ಗದ ವಿದ್ಯಾರ್ಥಿನಿಲಯಗಳನ್ನೂ ಒಳಗೊಂಡಂತೆ ಹಲವಾರು ಸದುದ್ದೇಶದ ಯೋಜನೆಗಳಿಗೆ ಧನಸಹಾಯ ಮಾಡಿ ಕೊಡುಗೈ ದಾನಿ ಎಂಬ ಹೆಸರಿಗೂ ಪಾತ್ರರಾಗಿದ್ದಾರೆ.

೧೯೪೨ರಲ್ಲಿ ಮತ್ತೂರಿನ ಶ್ರೀ ಕೇಶವಶ್ರೌತಿ ಹಾಗೂ ಶ್ರೀಮತಿ ಮೂಕಾಂಬಿಕಾ ಇವರ ಪುತ್ರಿ ಶ್ರೀಮತಿ ರತ್ನಮ್ಮನವರನ್ನು ವರಿಸಿದ ಕೃಷ್ಣರಾವ್ 'ಅವರ ಕಾಲುಗುಣದಿಂದ ಎಲ್ಲ ಒಳಿತನ್ನೂ ಕಂಡೆ' ಎನ್ನುತ್ತಾರೆ. ದಂಪತಿಗಳಿಗೆ ಮೂವರು ಗಂಡು ಮಕ್ಕಳು ಹಾಗೂ ಒಬ್ಬ ಮಗಳು. *ಹಿರಿಯಮಗ ವೆಂಕಟರಮಣ ಪದವೀಧರರಾಗಿದ್ದು ಕೃಷಿಕರಾಗಿದ್ದಾರೆ,* ದ್ವಿತೀಯ ಪುತ್ರ ಕೇಶವಮೂರ್ತಿ ವೃತ್ತಿಯಲ್ಲಿ ಇಂಜಿನಿಯರ್ ಆಗಿ ಲೋಕೋಪಯೋಗಿ ಇಲಾಖೆಯಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಕಿರಿಯ ಪುತ್ರ ರಾಮಸ್ವಾಮಿ ಶಿವಮೊಗ್ಗ ಕಮಲಾ ನೆಹರು ಮಹಿಳಾ ಕಾಲೇಜಿನಲ್ಲಿ ರಾಜ್ಯಶಾಸ್ತ್ರದ ಉಪನ್ಯಾಸಕರಾಗಿದ್ದಾರೆ. ಪುತ್ರಿ ಶ್ರೀಮತಿ ಲತಾ ವೆಂಕಟಕೃಷ್ಣ ಪತಿಯೊಂದಿಗೆ ಹೊಸಹಳ್ಳಿಯಲ್ಲಿ ನೆಲೆಸಿದ್ದಾರೆ. ತಮ್ಮ ಇಂದಿನ ಸುಸ್ಥಿತಿಗೆ ಬಹುಪಾಲು ಕಾರಣಕರ್ತರು - ಕೂಡಲಿ ಸಾಹುಕಾರರು ಎಂದೇ ಖ್ಯಾತರಾದ ಶ್ರೀ ಅನಂತ ಅವಧಾನಿಗಳು ಹಾಗೂ ಅವರ ಪುತ್ರ ಶ್ರೀ ರಾಮನಾರಾಯಣ ಅವಧಾನಿಗಳು ಎಂದು ಕೃಷ್ಣರಾಯರು ಅದೆಷ್ಟು ಬಾರಿ ನೆನಪಿನ ಕೃತಜ್ಞತೆ ಸಲ್ಲಿಸುತ್ತಾರೋ ಲೆಕ್ಕವಿಡುವುದು ಕಷ್ಟ! ತಮ್ಮ ಕಷ್ಟ ಕಾಲದಲ್ಲಿ ಸಹಾಯ ನೀಡಿದ ಮೈಸೂರು ಧುಂಡಿ ಫಾರ್ಮಸಿಯ ಡಾ.ಕೇಶವರಾವ್-ಸುಬ್ಬರಾವ್ ಹಾಗೂ ಹೊಸಹಳ್ಳಿಯ ಶ್ರೀ ವಿಶ್ವನಾಥ ಶಾಸ್ತ್ರಿಗಳನ್ನು ಅವರು ಕೃತಜ್ಞತೆಯಿಂದ ಸ್ಮರಿಸುತ್ತಾರೆ.

"ನಮ್ಮ ಅಣ್ಣ ಕೇಶವರಾಯರು ಧರ್ಮರಾಯನಂತೆ ಸ್ವಭಾವತಃ ಸಹನಶೀಲರು ಹಾಗೂ ಮಿತಭಾಷಿಗಳು. ಜತೆಗೆ ಉದಾರ ಹೃದಯಿಗಳೂ ಹೌದು. ಹಾಗಾಗಿಯೇ ಈ ಎಲ್ಲ ಯಶಸ್ಸಿನ ಹಿಂದೆ ಅವರ ಪ್ರಯತ್ನ ಹಾಗೂ ಶ್ರಮ ಇದ್ದರೂ ಕೀರ್ತಿಯನ್ನು ಮಾತ್ರ ತಮ್ಮನಾದ ನನಗೇ ಬಿಟ್ಟು ತಾವು ಎಲೆಮರೆಯ ಕಾಯಿಯಂತೆ ಇದ್ದಾರೆ" ಎಂದು ವಿನಮ್ರರಾಗಿ ಹೇಳುತ್ತಾರೆ.

ಇಂತಹ ಅಪರೂಪದ ಸಹೋದರರಿಗೆ ಹಾಗೂ ಅವರ ಕುಟುಂಬವರ್ಗಕ್ಕೆ ಸರ್ವಶಕ್ತನಾದ ಭಗವಂತನು ಸನ್ಮಂಗಳವನ್ನು ಉಂಟುಮಾಡಲಿ ಎಂದು ಪತ್ರಿಕೆ ಹಾರೈಸುತ್ತದೆ.

೫) ಒಂದು ಕಥನಕವನ

ಸಂಕೇತಿ ಸಂಗಮ, ಜನವರಿ ೨೦೦೧, ಪು.೨೧ **- ಜಯಕೃಷ್ಣ ಸಂಕೇತಿ, ಶಹಬಾಬಾದ್**

ಇದ್ ಒರ್ ಪಳ್ಳೀಲ್ ನಡಂಜ್ ಕಥ
ಕೋದಂಡಂದೆ ಒರ್ ಎಕ್ರೆ ಗದ್ದೇಯ
ನಂಜುಂಡೊ ಕೊಂಡ್ಗಂಡಿಂದ ವ್ಯಥ
ಕೋದಂಡಂದೆ ಗದ್ದೇಯ ನಂಜುಂಡೊ ಕೊಂಡ್ಗರ್ತಕ್ಕ್
ನಂಜುಂಡನಕ್ಕ್ ಕೋದಂಡೊ ತನ್ ಗದ್ದೆ ಮಾರರ್ತಕ್ಕ್
ರೆಂಡಪೇರೊ ತೆತ್ತೀನ ತಲಾ ಇನ್ನೂರೈವತ್ತ್
ಇದ್ ಪಟೇಲ್ ಸಣ್ರಾಮೂಂದೆ ಕರಾಮತ್ತ್
ಲಾಯರಕ್ ಐನೂರೈನೂರ್, ಸ್ಟಾಂಪಕ್ ಮುನ್ನೂರ್
ಬಸ್ಸು, ದೋಸ, ಕಾಫಿ, ಅದ್ ಇದ್ ಇನ್ನೂರ್
ರೈಟರಂಗ್ಳಕ್ ಇನ್ನೂರು, ಜವಾನಾಳಕ್ಕ್ ನೂರು
ಇಂದ್ ಮಾಮೂಲಲ್ಲಾದೆ ತರಲೆ ಚಿಲ್ಲರೇಂಗ ಐನೂರು
ಕಡೇಲೆ ಪಟೇಲಂದೆ ವಿಶ್ವಾಸ್ತಕ್ಕ್ ಇನ್ನೂರಿನ್ನೂರು
ಅಂತೂ, ಒಟ್ ಖರ್ಚ್ ಮೂಡಾಯಿರ್ತ್ ಇನ್ನೂರು
ಅಂದ್ ಲೆಕ್ಕೊ ವಾಣ, ಖರ್ಚೆಲ್ಲ ಕಳಂಜ್ ಮೇಲೆ
ಕೋದಂಡನಕ್ ಶಿಕ್ಕಿಂದ್ ರೆಂಡಾಯಿರ್ತ್ನೂರು
ನಾಲಾಯ್ರೋಂಟ್ ವ್ಯಾಪಾರು ಆಯಿಂದ್ ಗದ್ದೇಕ್
ಆರಾಯ್ರೊ ರೊಕ್ಕೊ ನಂಜುಂಡನಕ್ಕ್ ಚೊಕ್ಕೊ
ಖರ್ಚೆಲ್ಲ ಕೂಡಿ-ಕಳಂಜ್ ಕೆದಕ್ವಾಣ್ಣೊ ಲೆಕ್ಕೊ
ಮುಂತೀಕ್ ಕೋಳಂಗೊ ನಂಜುಂಡಂದ್ ದುಕ್ಕೊ|
ಗದ್ದೇಯ ಗೇಣೀಕ್ ಪುಡಿಚಿಂದ್ ತಿಮ್ಮೊ ಅದೇ ರಾತ್ರಿ
ಪಟೇಲ್ ಸಣ್ರಾಮು ಹಾತಕ್ಕ್ ವಂದದ್ ಸವಾರಿ
ಪಟೇಲ್ ಸಣ್ರಾಮೂಂದೆ ನೆರಳಿಂದಾಕ್ ದಾರಕ್ ಭಯೊ?
ಉಳರವಂದೇ ಗದ್ದ ಅಂಟ್ ತಿಮ್ಮಕ್ ಕುಡ್ತ ಅಭಯೊ
ಸರಿ ಪುನಃ ವರಾಣ್ಮಾಚ್ ಪಟೇಲಂದೆ ಹಾತಕ್ಕ್
ಕೋದಂಡೊ, ನಂಜುಂಡೊ, ತಿಮ್ಮೊ, ಪಂಚಾಯ್ತೀಕ್
ಗುಟ್ಟುಳ್ಳೆ ಚೊಲ್ಲಿನ ಪಟೇಲೊ ಟೆನೆನ್ಸಿ ವಿಚಾರೊ
ನಂಜುಂಡೊ ವಾಯ ಮುಚ್ಚಿಂಡ್ ತೆತ್ತ್‌ದ್ ಆಯ್ರೊ
ಕೋದಂಡೊ ಅಳಂದ್ಹಂಡ್ ಕುಡ್ತ್‌ದ್ ನಾನೂರೊ ಐನೂರೊ
ಅಂದ್ಯೊ ಸ್ಟಾಂಪ್-ಕಾಗತ್ತಕ್ಕ್ ತಿಮ್ಮೊ ಒತ್ತೀತ್ ಫೆರಿ ವಿರ್ಲ
ಪಟೇಲೊ ಚೊಲ್ಲೀನ ಇನ್ ಮೂಡ್ ಪಾರ್ಟೀಕೂ
ಯೋಚ್ನೆ ಇಲ್ಲ
ಸಣ್ರಾಮೂಂದೆ ತೀರ್ಮಾನೊ ಅಂಡಾಕ್
ಮುಡಂಜೂಡಿಯೆ ಎಲ್ಲ.

ಒಂದು ಕಥನ ಕವನ

(ಕನ್ನಡ ರೂಪ)

-ಅನುವಾದ : ಸಂಪಾದಕಿ

(ರೈತರನ್ನು ಶೋಷಿಸುವ ವ್ಯವಸ್ಥೆಯ ಒಂದು ಮುಖವನ್ನು ಕವಿ ಚೆನ್ನಾಗಿ ಅನಾವರಣಗೊಳಿಸಿದ್ದಾರೆ.)

ಇದು ಒಂದು ಹಳ್ಳೀಲಿ ನಡೆದ ಕಥೆ
ಕೋದಂಡನ ಒಂದು ಎಕ್ರೆ ಗದ್ದೇನ
ನಂಜುಂಡ ಕೊಂಡ್ಕೊಂಡ ವ್ಯಥೆ
ಕೋದಂಡನ ಗದ್ದೇನ ನಂಜುಂಡ ಕೊಂಡ್ಕೊಳೋಕೆ
ನಂಜುಂಡಂಗೆ ಕೋದಂಡ ತನ್ನ ಗದ್ದೆ ಮಾರೋಕೆ
ಇಬ್ಬರೂ ತೆತ್ತರು ತಲಾ ಇನ್ನೂರೈವತ್ತು
ಇದು ಪಟೇಲ ಸಣ್ರಾಮನ ಕರಾಮತ್ತು
ಲಾಯರಿಗೆ ಐನೂರೈನೂರು, ಸ್ಟಾಂಪಿಗೆ ಮುನ್ನೂರು
ಬಸ್ಸು, ದೋಸೆ, ಕಾಫಿ, ಅದು ಇದಕ್ಕೆ ಇನ್ನೂರು
ರೈಟರ್‌ಗಳ್ಗೆ ಇನ್ನೂರು ಜವಾನರಿಗೆ ನೂರು
ಈ ಮಾಮೂಲಲ್ಲದೆ ತರಲೆ ಚಿಲ್ಲರೆಗಳು ಐನೂರು
ಕೊನೇಲಿ ಪಟೇಲನ ವಿಶ್ವಾಸಕ್ಕೆ ಇನ್ನೂರಿನ್ನೂರು
ಅಂತೂ ಒಟ್ಟುಖರ್ಚು ಮೂರು ಸಾವಿರದಿನ್ನೂರು
ಆ ಲೆಕ್ಕ ಬೇಡ, ಖರ್ಚೆಲ್ಲ ಕಳೆದ ಮೇಲೆ
ಕೋದಂಡಂಗೆ ಸಿಕ್ಕಿದ್ದು ಎರಡು ಸಾವಿರದ ನೂರು
ನಾಕ್ಸಾವ್ರ ಅಂತ ವ್ಯಾಪಾರ್‍ವಾಗಿದ್ದ ಗದ್ದೇಗೆ
ಆರ್ಸಾವ್ರ ರೊಕ್ಕ ನಂಜುಂಡಂಗೆ ಚೊಕ್ಕ
ಖರ್ಚೆಲ್ಲ ಕೂಡಿ ಕಳ್ದು ಕೆದಕಬೇಡಿ ಲೆಕ್ಕ
ಮುಂದಕ್ಕೇಳಿ ನಂಜುಂಡನ ದುಃಖ
ಗದ್ದೇನ ಗೇಣೀಗೆ ಹಿಡಿದಿದ್ದ ತಿಮ್ಮ ಅದೇ ರಾತ್ರಿ
ಪಟೇಲ ಸಣ್ರಾಮೂ ಮನೇಗೆ ಬಂದ ಸವಾರಿ
ಪಟೇಲ ಸಣ್ರಾಮನ ನೆರಳಿತ್ತೂಂದ್ರೆ ಯಾರಿಗೆ ಭಯ?
ಉಳುವನದೇ ಗದ್ದೆ ಅಂತ ತಿಮ್ಮನಿಗೆ ಕೊಟ್ಟ ಅಭಯ
ಸರಿ ಮತ್ತೆ ಬರಬೇಕಾಯ್ತು ಪಟೇಲನ ಮನೇಗೆ
ಕೋದಂಡ, ನಂಜುಂಡ, ತಿಮ್ಮ, ಪಂಚಾಯ್ತೀಗೆ
ಗುಟ್ಟಲ್ಲಿ ಹೇಳಿದರು ಪಟೇಲ್ರು ಟೆನೆನ್ಸಿ ವಿಚಾರ
ನಂಜುಂಡ ಬಾಯ್ಮುಚ್ಕೊಂಡು ತೆತ್ತ ಸಾವಿರ
ಕೋದಂಡ ಅತ್ಕೊಂಡು ಕೊಟ್ಟ ನಾನೂರೋ ಐನೂರೋ
ಯಾವ್ದೋ ಸ್ಟಾಂಪ್ ಕಾಗ್ದಕ್ಕೆ ತಿಮ್ಮ ಒತ್ತಿದ ದೊಡ್ಡ ಬೆರ್‍ಳು
ಪಟೇಲ ಹೇಳಿದ ಇನ್ನು ಮೂರು ಪಾರ್ಟೀಗೂ
ಯೋಚ್ನೆ ಇಲ್ಲ
ಸಣ್ರಾಮ್ನ ತೀರ್ಮಾನ ಅಂದ್ರೆ
ಮುಗಿದ್ಹಾಗೇ ಎಲ್ಲಾ.

೫೦) 'ಕೃಷಿಪಂಡಿತ' ಹೆಚ್.ಕೆ. ನಾಗರಾಜ್

ಸಂಕೇತಿ ಸಂಗಮ, ಡಿಸೆಂಬರ್ ೨೦೦೧, ಪು.೧೦-೧೨ **ಬೀ.ಚಿ. ಜಗನ್ನಾಥ ಜೋಯಿಸ್**

(ನಾಗರಾಜ್ ಅವರ ಪತ್ನಿ ಸಂಧ್ಯಾ ಉತ್ತರ ಪ್ರದೇಶದಲ್ಲಿ ಹುಟ್ಟಿದವರು, ಪದವೀಧರೆ; ಸಂಕೇತಿ ಕೃಷಿಯಲ್ಲಿ ಪರಿಣತಿ ಸಾಧಿಸಿ ಪತಿಗೆ ಬೆನ್ನೆಲುಬಾಗಿದ್ದಾರೆ. ನಗರಗಳಲ್ಲಿ ಓದುವ ಮಕ್ಕಳು ರಜೆಯಲ್ಲಿ ಬಂದು ಹಳ್ಳಿಯಲ್ಲಿ ಕೃಷಿಯಲ್ಲಿ ತೊಡಗುತ್ತಾರೆ. 'ವಿದ್ಯಾವಂತರಾಗಿ ಹಳ್ಳಿಗೆ ಮರಳಿ ಅಲ್ಲಿನ ಏಳಿಗೆಯನ್ನು ಸಾಧಿಸಬೇಕು' ಎಂಬ ತತ್ತ್ವಕ್ಕೆ ಮಾದರಿಯಾಗಿದೆ ನಾಗರಾಜ್ ಅವರ ಬದುಕು.)

'ಕೃಷಿಪಂಡಿತ' ಎಂಬ ಬಿರುದನ್ನು ಪಡೆದ ಶ್ರೀ ಹೆಚ್.ಕೆ. ನಾಗರಾಜ್‌ರವರು ಹೋಚಿಹಳ್ಳಿ (ಓಚನಹಳ್ಳಿ/ಓದಿಸುವಹಳ್ಳಿ)ಗೆ ಸೇರಿದವರು. ಶ್ರೀಯುತರು ಸಂಕೇತಿ ಮಂಡಳಿಯಲ್ಲೇ ಖ್ಯಾತನಾಮರೂ ಹಾಗೂ ಉದಾರಿಗಳೂ ಆದ ಶ್ರೀ ಹೆಚ್.ಆರ್. ಕೇಶವಮೂರ್ತಿ ಮತ್ತು ಶ್ರೀಮತಿ ಲಲಿತಮ್ಮ ದಂಪತಿಗಳ ಸುಪುತ್ರರು. ಬಾಲ್ಯದ ವಿದ್ಯಾಭ್ಯಾಸವನ್ನು ಹಳ್ಳಿಯಲ್ಲಿಯೇ ಪ್ರಾರಂಭಿಸಿ ನಂತರ ಅರಸೀಕೆರೆ, ಮೈಸೂರಿನಲ್ಲಿ ಮುಂದುವರಿಸಿ ಪದವಿಯನ್ನು ಶಿವಮೊಗ್ಗೆಯ ಸಹ್ಯಾದ್ರಿ ಕಾಲೇಜಿನಲ್ಲಿ ಮುಗಿಸಿದರು.

ಖುಷ್ಕಿ ಭೂಮಿಯಲ್ಲಿ ಕೃಷಿ ಸಾಧನೆ ಮಾಡಿ ಮೂರು ವರ್ಷಗಳ ಹಿಂದೆ ಕರ್ನಾಟಕ ಸರ್ಕಾರದಿಂದ '*ಕೃಷಿ ಪಂಡಿತ*' ಪ್ರಶಸ್ತಿ ಪುರಸ್ಕೃತರಾಗಿರುವ ಇವರು, ಕಡೂರು *ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಅಧ್ಯಕ್ಷರೂ* ಆಗಿದ್ದಾರೆ. ಒಂದು ಎಕರೆ ಪ್ರದೇಶದಲ್ಲಿ ಅತ್ಯಧಿಕ ರಾಗಿಧಾನ್ಯ ಬೆಳೆಸಿ, *ಒಂದು ಲಕ್ಷ ರೂ.ಗಳ ಪ್ರಥಮ ಬಹುಮಾನ*ಗಳಿಸಿದ್ದಾರೆ. ಇವರು ಸರ್ಕಾರದ ವತಿಯಿಂದ - ಭಾರತ ದೇಶದ ಮಾರುಕಟ್ಟೆಗಳ ವೀಕ್ಷಣೆ, ವ್ಯಾಪಾರ ವ್ಯವಸ್ಥೆಗಳ ಅಧ್ಯಯನಕ್ಕಾಗಿ ಎರಡು ಬಾರಿ ವಿಮಾನದಲ್ಲಿ *ದೇಶದಾದ್ಯಂತ ಸಂಚರಿಸಿ ಕೂಲಂಕಷ ಅಧ್ಯಯನ ನಡೆಸಿದ್ದಾರೆ.*

ನಾಗರಾಜ್‌ರ ಪತ್ನಿ ಸಂಧ್ಯಾ ಉತ್ತರ ಪ್ರದೇಶದ ಜಬ್ಬಲ್‌ಪುರದಲ್ಲಿ Divisional Commissioner ಆಗಿದ್ದ ರಾಮನಾಥಪುರದ ಶ್ರೀ ಆರ್.ಎಸ್. ಕೇಶವಯ್ಯ ಹಾಗೂ ಮಣಿಯಮ್ಮ ಅವರ ಪುತ್ರಿ. ದಂಪತಿಗಳಿಗೆ ಇಬ್ಬರು ಮಕ್ಕಳು. ಹಿರಿಯ ಮಗ ಕೇಶವಪ್ರಶಾಂತ ಬೆಂಗಳೂರಿನ High Courtನಲ್ಲಿ Advocate ಆಗಿದ್ದರೆ, ಕಿರಿಯವ ಪ್ರದೀಪಕುಮಾರ, B.A.ಮುಗಿಸಿ ಮುಂದಿನ ವಿದ್ಯಾಭ್ಯಾಸದ ಸಿದ್ಧತೆಯಲ್ಲಿದ್ದಾನೆ. ಶ್ರೀಯುತರೊಂದಿಗೆ ನಡೆಸಿದ ಸಂದರ್ಶನದ ಆಯ್ದಭಾಗ ಇಲ್ಲಿದೆ:

* **ಸಂದರ್ಶಕ:** ನಾಗರಾಜ್ ಅವರೆ, ಪತ್ರಿಕೆಯ ಪರವಾಗಿ ಅಭಿನಂದನೆಗಳು. ನೀವು ಬಿ.ಎಸ್ಸಿ. ಪದವಿ ಪಡೆದು ಉದ್ಯೋಗ/ಉನ್ನತ ವ್ಯಾಸಂಗಕ್ಕೆ ಅವಕಾಶ ಇದ್ದರೂ ಕೃಷಿಕ್ಷೇತ್ರವನ್ನೇ ಆರಿಸಿಕೊಂಡದ್ದೇಕೆ?

ನಾಗರಾಜ್: ಪರಂಪರೆಯಿಂದ ನಾವು ಕೃಷಿಕರು. ಸಾಕಷ್ಟು ಜಮೀನು ಇತ್ತು. ಕೃಷಿ ಕ್ಷೇತ್ರದಲ್ಲೇ ಸಾಧನೆ ಮಾಡಬೇಕೆಂಬ ಬಯಕೆ ಮತ್ತು *ಹಳ್ಳಿಗಳ ಉದ್ಧಾರದಿಂದ ನಾಡಿನ ಉದ್ಧಾರ ಸಾಧ್ಯ* ಎಂಬ ಮಾತಿನ ಮೇಲಿನ ನಂಬಿಕೆ ಊರಲ್ಲೇ ಉಳಿಯುವಂತೆ ಮಾಡಿತು. ಕೃಷಿ ಹೆಚ್ಚು ಮಳೆಯನ್ನು ಅವಲಂಬಿಸಿದೆ. ಮಳೆ ಇಲ್ಲದಾಗ ರೈತನ ಸ್ಥಿತಿ ಬಹಳ ದುಸ್ತರವಾಗುತ್ತದೆ. ಕೃಷಿಯೊಂದೇ ಸಾಲದೆಂದರಿತು *ಕ್ಷೀರಾಭಿವೃದ್ಧಿ ಯೋಜನೆ, ಕೋಳಿ ಸಾಕಣೆ* ಕೂಡ ನಡೆಸಿದ್ದೇನೆ.

*** ನೀವು ರಾಜಕೀಯವಾಗಿ ಬೆಳೆದದ್ದು ಹೇಗೆ?**

ನನ್ನ ಅಣ್ಣ ಶ್ರೀ ರಾಮಚಂದ್ರ (ಮುತ್ತಣ್ಣ) ಅವರು ೧೯೫೮ ರಿಂದ ೧೯೯೦ರವರೆಗೆ *ಗ್ರಾಮಪಂಚಾಯ್ತಿಯಲ್ಲಿ ಅವಿರೋಧವಾಗಿ ಆಯ್ಕೆಯಾಗಿ* ಕೆಲಸ ನಿರ್ವಹಿಸಿದ್ದು, ಅವರ ಕಾರ್ಯವೈಖರಿ ನನ್ನ ಮೇಲೆ ಪ್ರಭಾವ ಬೀರಿ ೧೯೮೦ರಲ್ಲಿ ರಾಜಕೀಯರಂಗ ಪ್ರವೇಶಕ್ಕೆ ಕಾರಣವಾಯ್ತು. *೧೯೮೩ ರಿಂದ ೧೯೯೫ ರವರೆಗೆ ಕಡೂರಿನ ಪಿ.ಎಲ್.ಆರ್.ಡಿ. ಬ್ಯಾಂಕ್‌ನಲ್ಲಿ ಸದಸ್ಯನಾಗಿ,* ಅಲ್ಲೇ ೧೯೯೭ರವರೆಗೆ *ಅಧ್ಯಕ್ಷನಾದೆ.* ೧೯೯೮ರಲ್ಲಿ ಎ.ಪಿ.ಎಂ.ಸಿ.ಗೆ ಅಧ್ಯಕ್ಷನಾದನಂತರ '*ಕರ್ನಾಟಕ ರಾಜ್ಯ ಮಾರಾಟ ಮಹಾಮಂಡಳಿ*, ಬೆಂಗಳೂರು'ಗೆ ಚಿಕ್ಕಮಗಳೂರು ಜಿಲ್ಲೆಯಿಂದ ಆಯ್ಕೆಯಾಗಿ, ಪ್ರಸ್ತುತ ನಿರ್ದೇಶಕನಾಗಿ ಸೇವೆ ಸಲ್ಲಿಸುತ್ತಿದ್ದೇನೆ.

*** ವ್ಯವಸಾಯ-ರಾಜಕೀಯ- ಮನೆ ಈ ಮೂರನ್ನೂ ಹೇಗೆ ನಿಭಾಯಿಸುತ್ತೀರಿ? ರಾಜಕೀಯಕ್ಕಿಳಿದ ಮೇಲೆ ನಿಮ್ಮಿಂದ ಊರಿಗಾದ ಪ್ರಯೋಜನಗಳೇನು?**

ಸಾಧನೆಯ ಹಾದಿಯಲ್ಲಿ ಅಡೆ-ತಡೆಗಳು ಇದ್ದೇ ಇರುತ್ತವೆ. ಅದರಲ್ಲೂ ಮೂರು ಕ್ಷೇತ್ರಗಳಲ್ಲಿ ಒಟ್ಟಿಗೆ ದುಡಿಯಬೇಕಾದರೆ ಮುಖ್ಯವಾಗಿ ಗಮನಹರಿಸಬೇಕಾದುದು ಸಮಯಕ್ಕೆ. ಅಗತ್ಯ ಸಮಯದಲ್ಲಿ ಆಯಾಕ್ಷೇತ್ರಕ್ಕೆ ಚ್ಯುತಿ ಬರದಂತೆ ನನ್ನನ್ನು ತೊಡಗಿಸಿಕೊಂಡಿದ್ದೇನೆ. ಜತೆಗೆ ನಮ್ಮ ಮನೆಯವರ ಸಹಕಾರವೂ ಇದೆ.

ರಾಜಕೀಯಕ್ಕಿಳಿದ ಮೇಲೆ ಊರಿಗೆ ರಸ್ತೆ, ವಿದ್ಯುತ್, ಫೋನು, ಪಶುಆಸ್ಪತ್ರೆ ಮತ್ತು ಪ್ರೌಢಶಾಲೆಗಳಿಗಾಗಿ ಪ್ರಯತ್ನಿಸಿ ಅದರಲ್ಲಿ ಯಶಸ್ಸು ಕಂಡಿದ್ದೇನೆ. ಇಲ್ಲಿನ ರೈತರ, ಸುಮಾರು *೫೫೦೦ ವ್ಯಾಜ್ಯಗಳಿಗೆ ಪಂಚಾಯ್ತಿನಲ್ಲೇ ತೀರ್ಮಾನ ನೀಡಿದ್ದೇನೆ.* ಇದಕ್ಕಾಗಿ ಅನೇಕ ಮಂತ್ರಿಗಳ ಶ್ಲಾಘನೆ ಕೂಡ ದೊರಕಿದೆ.

ಇಲ್ಲಿ ಸಂಕೇತಿ ಕುಟುಂಬವಿರುವುದು ಕೇವಲ ಎಂಟು, ಇತರರೇ ಹೆಚ್ಚು. ಹಾಗಾಗಿ ಅವರೊಂದಿಗೆ ಇರಬೇಕಾದ ನಾವು ಒಗ್ಗಟ್ಟಿನಿಂದ ಇರಬೇಕಾದುದು ಅವಶ್ಯವೆಂದರಿತಿದ್ದೇವೆ. ಊರಿಗೆ ದೊರೆತ ಎಲ್ಲ ಸೌಲಭ್ಯಗಳೊಂದಿಗೆ ನಾವೆಲ್ಲರೂ ಸುಧಾರಿತ ಜೀವನ ನಡೆಸುತ್ತಿದ್ದೇವೆ.

*** ಈ ವರ್ಷದ ಬರಪರಿಸ್ಥಿತಿಯಲ್ಲಿ ರೈತರಿಗೇನಾದರೂ ನಿಮ್ಮಿಂದ ಸಹಾಯವಾಗಿದೆಯೆ?**

ಮಳೆ ಇಲ್ಲದೆ, ಈ ವರ್ಷದ ಬೆಳೆಯೆಲ್ಲ ನಾಶವಾಗಿ ರೈತರೆಲ್ಲ ಕಂಗಾಲಾಗಿದ್ದಾರೆ. ಮುಂದಿನ ವರ್ಷ ಇನ್ನೂ ದುಃಸ್ಥಿತಿ ಬರಬಹುದು. ಈ ಪರಿಸ್ಥಿತಿಯನ್ನರಿತು, ರಾಗಿಗೆ ಈ ಕ್ಷೇತ್ರದಲ್ಲಿ *ಪ್ರೋತ್ಸಾಹದರ ೪೪೫ ರೂ. ಕೊಡಿಸುವಲ್ಲಿ ಯಶಸ್ವಿಯಾಗಿದ್ದೇನೆ* (ಬೇರೆ ಕಡೆ ೩೦೦ ರೂ. ಇದೆ) ಮತ್ತು *ಕೊಬ್ಬರಿಗೂ ಪ್ರೋತ್ಸಾಹಧನ* ಕೊಡಿಸುವಲ್ಲಿ ರೈತರ ಪರವಾಗಿ ಶ್ರಮಿಸಿದ್ದೇನೆ. *ಬರಪರಿಹಾರ*ಕ್ಕಾಗಿ ಸರ್ಕಾರದಿಂದ ಮೇವು ಈಗಾಗಲೇ ಬಂದಿದೆ, ಅದನ್ನು ವಿತರಿಸಬೇಕು. ಇಷ್ಟಲ್ಲದೆ ರೈತರಿಗೆ ಕಷ್ಟವಾಗಬಾರದೆಂದು ಲಕ್ಷಾಂತರ ರೂ.ಯೋಜನೆಯ *ಕೋಳಿಸಾಕಣೆ* ಮತ್ತು *ಇಟ್ಟಿಗೆ ಕಾರ್ಖಾನೆ* ಪ್ರಾರಂಭಿಸಿ ಸುಮಾರು *೫೦ ಜನ ರೈತರಿಗೆ ಉದ್ಯೋಗ* ದೊರಕಿಸಿಕೊಟ್ಟಿದ್ದೇನೆ.

ವ್ಯವಸಾಯಕ್ಷೇತ್ರದಲ್ಲಿ ನಿಮ್ಮ ಈ ಸಾಧನೆ ಹೇಗೆ ಸಾಧ್ಯವಾಯ್ತು? ತಮ್ಮ ಮುಂದಿನ ಗುರಿ ಏನು?

ಮೊದಲಿನಿಂದಲೂ ನನಗೆ ಈ ಕ್ಷೇತ್ರದಲ್ಲಿ ಏನಾದರೂ ಸಾಧಿಸಬೇಕೆಂಬ ಛಲ ಇತ್ತು. ಎಲ್ಲರ ಸಹಕಾರ, ಪ್ರೋತ್ಸಾಹಗಳಿಂದ ಖುಷ್ಕಿ ಭೂಮಿಯಲ್ಲಿ ರಾಗಿ ಬೆಳೆಗಾಗಿ *೨ ಬಾರಿ ತಾಲ್ಲೂಕು ಮಟ್ಟದಲ್ಲಿ, ೨ ಬಾರಿ ಜಿಲ್ಲಾ ಮಟ್ಟದಲ್ಲಿ ಪ್ರಶಸ್ತಿ ಪಡೆದಿದ್ದೇನೆ. ೧೯೯೬ರಲ್ಲಿ ರಾಜ್ಯಮಟ್ಟದಲ್ಲಿ ಪ್ರಥಮ ಬಹುಮಾನ* ಪಡೆದದ್ದು ಅತ್ಯಂತ ಹರ್ಷತಂದಿದೆ. ಇಷ್ಟೇ ಅಲ್ಲದೆ ಕಲ್ಲಂಗಡಿ ಹಣ್ಣಿನ ಹೆಚ್ಚಿನ ಇಳುವರಿ ಹಾಗೂ ಒಂದು ಹಣ್ಣಿನ ತೂಕಕ್ಕಾಗಿ (೩೬ ಕೆ.ಜಿ.) *ಪ್ರೋತ್ಸಾಹ ಬಹುಮಾನ* ಬಂದಿದ್ದು ತೋಟಗಾರಿಕೆ ಇಲಾಖೆ ಮತ್ತು 'ನಾಮಧಾರಿ ಸೀಡ್ಸ್, ಬೆಂಗಳೂರು' ಇವರು ನಮ್ಮಲ್ಲಿಗೆ ಬಂದು *ಕ್ಷೇತ್ರೋತ್ಸವ* ನಡೆಸಿದ್ದಾರೆ.

ಮುಂದೆ ರಾಗಿ ಬೆಳೆಯಲ್ಲಿ ರಾಷ್ಟ್ರಮಟ್ಟದಲ್ಲಿ ಸ್ಪರ್ಧಿಸಿ, ಜಯಗಳಿಸುವ ಉದ್ದೇಶ ಇದೆ. ಅದಕ್ಕೆ ದೈವಕೃಪೆಯನ್ನು ಬೇಡುವೆ.

ನಿಮ್ಮ ಯಶಸ್ಸಿನ ಹಿಂದೆ ಮನೆಯವರ ಪಾಲು?

ನನ್ನ ಪತ್ನಿ ಸಂಧ್ಯಾಳ ಸಹಕಾರ ಇಲ್ಲದೆ ಇದ್ದಿದ್ದರೆ ಈ ಮಟ್ಟದ ಸಾಧನೆ ಸಾಧ್ಯವಾಗುತ್ತಿರಲಿಲ್ಲ. ಅವಳು ಉತ್ತರ ಪ್ರದೇಶದಲ್ಲಿ ಹುಟ್ಟಿ, ಬೆಳೆದು, ಪದವೀಧರೆಯಾಗಿ ನನ್ನ ಕೈಹಿಡಿದು, ಏನೂ ಸವಲತ್ತುಗಳಿಲ್ಲದಿದ್ದ ಈ ಗ್ರಾಮಕ್ಕೆ ಬಂದು, ಕನ್ನಡ ಕಲಿತು ನನ್ನ *ಯಶಸ್ಸಿನ ಹೋರಾಟದ ಹಿಂದೆ ಸ್ಫೂರ್ತಿ, ಮಾರ್ಗದರ್ಶಿಯಾಗಿ ನಿಂತಿದ್ದಾಳೆ. ನನ್ನ ಗೈರುಹಾಜರಿಯಲ್ಲಿ ವ್ಯವಸಾಯಕ್ಷೇತ್ರವನ್ನು ನಿಭಾಯಿಸುವ ಪರಿಣತಿಯನ್ನೂ ಹೊಂದಿದ್ದಾಳೆ. ನಮ್ಮ ಮಕ್ಕಳು ತಮ್ಮ ವಿದ್ಯಾಭ್ಯಾಸದ ಬಿಡುವಿನ ವೇಳೆ ಹಳ್ಳಿಗೆ ಬಂದು ವ್ಯವಸಾಯದಲ್ಲಿ ಸಹಕರಿಸುತ್ತಾರೆ.*

*** ನಮ್ಮ ಜನಾಂಗದ ರೈತರಿಗೆ ನಿಮ್ಮ ಸಲಹೆ ಏನು? ಪತ್ರಿಕೆಯ ಬಗ್ಗೆ ನಿಮಗೆ ಏನನ್ನಿಸುತ್ತದೆ?**

ಕೃಷಿ ಮಳೆಯನ್ನೇ ಅವಲಂಬಿಸಿದೆ. ಹಾಗಾಗಿ ರೈತರು ಕೃಷಿಯೊಂದನ್ನೇ ಅವಲಂಬಿಸದೆ *ಉಪ-ಕಸುಬುಗಳನ್ನು* ರೂಢಿಸಿಕೊಳ್ಳಬೇಕು. ಕೃಷಿಕರು ತಮ್ಮ ಕೆಲಸದ ಬಗ್ಗೆ *ಕೀಳರಿಮೆ ಇಲ್ಲದೆ* ಉನ್ನತ ಗುರಿ ಹೊಂದಿದ್ದರೆ ಸಾಧನೆಯ ಶಿಖರ ಏರುವುದು ಸುಲಭ.

ಇಂದು ವಿದ್ಯಾವಂತ ತರುಣರು ವಿದ್ಯಾಭ್ಯಾಸ ಮುಗಿದೊಡನೆ ತಾವು ಹುಟ್ಟಿದ ಊರನ್ನೇ ಮರೆತು ವಿದೇಶದ, ಪಟ್ಟಣದ ವ್ಯಾಮೋಹಕ್ಕೆ ಬಲಿಯಾಗುತ್ತಿದ್ದಾರೆ. *ಜಮೀನು ಇದ್ದು ವಿದ್ಯಾವಂತರಾಗಿರುವ ಯುವಕರು ತಾವು ಹುಟ್ಟಿ ಬೆಳೆದ ಹಳ್ಳಿಯಲ್ಲೇ ಇದ್ದು, ಸಮಾಜದ ಏಳಿಗೆಗೆ ಶ್ರಮಿಸಬೇಕೆಂದು ಹೇಳುವ ಶ್ರೀಯುತರ ಜೀವನ ಮಾದರಿಯಾಗಿದೆ.*

ಎ) ಗದ್ದೆ ಮನೆ

ಸಂಕೇತಿ ಸಂಗಮ - ಮಾರ್ಚ್ ೨೦೦೨ ***ಬೀ.ಟಿ. ಜಗನ್ನಾಥ ಜೋಯಿಸ್***

(ಬರಡು ಭೂಮಿಯನ್ನು ನಂದನವನವಾಗಿಸುವುದು; ವಿದ್ಯಾವಂತರೂ, ಸರ್ಕಾರದ ಉನ್ನತ ಅಧಿಕಾರಿಗಳಾಗಿದ್ದವರೂ ತಮ್ಮ ತೋಟದಲ್ಲಿ ಮಣ್ಣುಮುಟ್ಟಿ ದುಡಿಯುವುದು; ಹೊಸ ಕನಸುಕಟ್ಟಿ ಗುರಿಸಾಧಿಸುವವರೆಗೆ ಛಲದಿಂದ ಹೋರಾಡುವುದು - ಇವಕ್ಕೆಲ್ಲ ಈಗ 'ಗದ್ದೆಮನೆ' ಎಂಬ ಶಬ್ದವು ಪ್ರತಿಮೆಯಾಗಿ ನಿಂತಿದೆ.)

ಗಿರಿ ಶಿಖರ, ಝರಿ ನೀರು, ಸ್ವಚ್ಛಂದ ಆಕಾಶ .... ಎಂದು ಕವಿಗಳು ಹಾಡಿ ಹೊಗಳುವಂತಹ ಸುಂದರ ಗುಡ್ಡಗಳನ್ನು ಹೊಂದಿರುವ ಲಿಂಗದಹಳ್ಳಿ ಮೊದಲಿನಿಂದಲೂ ಒಂದಿಲ್ಲೊಂದು ವಿಚಾರದಲ್ಲಿ ತನ್ನ ಹಿರಿಮೆ ಸಾರುತ್ತ ಬಂದಿದೆ.

ವೇ.ಬ್ರ.ಶ್ರೀ ಎಲ್.ವಿ. ಕೃಷ್ಣಮೂರ್ತಿ ಅವರು ಲಿಂಗದಹಳ್ಳಿಯ ಊರ ಪುರೋಹಿತ ಕುಟುಂಬದಿಂದ ಬಂದವರು. ಶೃಂಗೇರಿ ಇತರೆಡೆ ವೇದಾಧ್ಯಯನ ಮುಗಿಸಿ, ವಾಲ್ಮೀಕಿ ರಾಮಾಯಣವನ್ನು ಕಂಠಪಾಠಮಾಡಿದ್ದು, ಪಾರಾಯಣ-ಪ್ರವಚನಗಳಲ್ಲಿ ಸಿದ್ಧಹಸ್ತರು. ಮಕ್ಕಳಿಗೆ ಪುರಾಣಕಥೆ ಹೇಳುವಲ್ಲಿ ಇವರಿಗೆ ಅತೀವ ಆಸಕ್ತಿ. *ಈಗಿನ ಇಳಿವಯಸ್ಸಿನಲ್ಲೂ ಅವರಿಗಿರುವ ಉತ್ಸಾಹ, ಕ್ರಿಯಾಶೀಲತೆ*ನಮ್ಮಂಥವರಿಗೆ ಮಾರ್ಗದರ್ಶಿ. ಪಂಡಿತರಾದ ಇವರ ಒಲವು ಕೃಷಿಯತ್ತ ಎಳೆದದ್ದು ಆಶ್ಚರ್ಯವೇ ಸರಿ. ಸುಮಾರು ೬೦-೭೦ ವರ್ಷದ ಹಿಂದೆ ಒಣಭೂಮಿಯನ್ನೇ ಹೆಚ್ಚಾಗಿ ಹೊಂದಿದ್ದ ಲಿಂಗದಹಳ್ಳಿಯ *ಕಲ್ಲು ನೆಲದಲ್ಲಿ ಹಠ ತೊಟ್ಟು ಅಡಿಕೆ ತೋಟ ಎಬ್ಬಿಸಿದ ನಿಜವಾದ ಕೃಷಿಕರು.* ೧೯೬೦ರ ಸುಮಾರಿನಲ್ಲಿ ಗ್ರಾಮಕ್ಕೆ ಸೇರಿದ ಉಳುಮೆಮಾಡದ ಇನಾಂ ಜಮೀನುಗಳು ಸರ್ಕಾರದ ವಶವಾಗುವ ವಿಚಾರವಿದ್ದ ಸಮಯದಲ್ಲಿ ಹೊಸಹಳ್ಳಿ ಸಮೀಪದಲ್ಲಿ ೫೦ ಎಕರೆ ಕಾಡು ಭೂಮಿಯನ್ನು ಸೋದರರೊಂದಿಗೆ ಸೇರಿ ಖರೀದಿಸಿ, ಹೊಸಹಳ್ಳಿ ದೇವಸ್ಥಾನದಲ್ಲಿ ಉಳಿದುಕೊಂಡು, ಕಾಡನ್ನು ಹಸನುಗೊಳಿಸಿ ಸುತ್ತಮುತ್ತಲ ಗುಡಿಸಲುವಾಸಿಗಳ ಕಿರುಕುಳಗಳನ್ನೆದುರಿಸಿ ಗದ್ದೆ ಮಾಡಿದ ಸಾಹಸಿಗರು. ಜತೆಗೆ ಊರಲ್ಲಿ ಆಡಿಕೊಂಡಿದ್ದ ಇವರ ಮಗ ಶ್ರೀಕಂಠ, ತಮ್ಮ ಆಟ-ಓದು-ಭವಿಷ್ಯ ಯಾವುದನ್ನೂ ಲೆಕ್ಕಿಸದೇ ಹೊಸಹಳ್ಳಿ ಸಮೀಪದ ತಮ್ಮ ಜಮೀನಿಗೆ ಬಂದು, ಗುಡಿಸಲು ಕಟ್ಟಿಕೊಂಡು ಭೂತಾಯಿ ಸೇವೆ ಮಾಡತೊಡಗಿದರು. *ಹಠ, ಛಲ, ದುಡಿಮೆಗಳಲ್ಲಿ ತಂದೆಯ ಗುಣವನ್ನು ಇವರಲ್ಲೂ ಕಾಣಬಹುದು.* ಇದೇ ಸಮಯದಲ್ಲಿ ಶ್ರೀ ಕೃಷ್ಣಮೂರ್ತಿಗಳ ತಮ್ಮ ಶ್ರೀ ಎಲ್.ವಿ.ಸುಬ್ರಹ್ಮಣ್ಯರವರು, *ಖ್ಯಾತ ಇಂಜಿನಿಯರ್* ಆಗಿದ್ದರೂ ತಮ್ಮ ಕೆಲಸದಿಂದ ಸ್ವಯಂ ನಿವೃತ್ತಿಹೊಂದಿ, ಹೊಸಹಳ್ಳಿ ಸಮೀಪದ ತಮ್ಮ ಜಮೀನಿನಲ್ಲಿ ನೆಲೆಸಿ *ವಿಶೇಷ ರೀತಿಯಲ್ಲಿ ಕೃಷಿ ಅಭಿವೃದ್ಧಿ* ಮಾಡುವಲ್ಲಿ ಯಶಸ್ವಿಯಾಗಿದ್ದಾರೆ. ಹೀಗೆ ಮೂಡಿಬಂದ ಅಲ್ಲಿಯ ಮೂರೂ ಮನೆಗಳಿಗೆ 'ಗದ್ದೆಮನೆ' ಎಂಬ ಖ್ಯಾತಿ ಬಂದಿದೆ.



ತೋಟದ ದಾರಿಯಲ್ಲಿ

ಏ) ಜಗುಲಿ

ಸಂಕೇತಿ ಸಂಗಮ - ಆಗಸ್ಟ್, ೨೦೦೨ *-ಶ್ರೀಲತಾ ಎಸ್., ಶಾಂತಿನಗರ, ಹಾಸನ*

ನಿರ್ವಹಣೆ - ಸಿರೀಶ್ ಎಂ.ಎಸ್.

ವಿಷಯ : 'ಇಂಥ ಸಂಕೇತಿಗಳೇನು ಮಾಡಬೇಕು'?

(ಆಧುನಿಕ ಶಿಕ್ಷಣ, ನೌಕರಿ ಮತ್ತು ನಗರೀಕರಣಕ್ಕೆ ಸಂಕೇತಿ ಸಮುದಾಯವು ಬ್ರಾಹ್ಮಣರ ಇತರ ಪಂಗಡಗಳಿಗಿಂತ ನಿಧಾನವಾಗಿ ಒಲಿಯಿತು. ಆದರೆ ಈಗ ಅದು ಹೊಸಮಾರ್ಗದಲ್ಲಿ ಎಷ್ಟು ತೀವ್ರವಾಗಿ ತೊಡಗಿಸಿಕೊಂಡಿದೆಯೆಂದರೆ ತನ್ನ ಬಾಗಾಯ್ತು ಮೂಲದ ಆಶ್ರಮಧರ್ಮಕ್ಕೆ ಹೇಸುವಷ್ಟು. ಲೇಖಕಿ ಈ ದುರಂತಕ್ಕೆ ಬೆರಳುಮಾಡಿದ್ದಾರೆ.)

ಬಹಳಷ್ಟು ಗ್ರಾಮಸ್ಥರೂ ಸಹ (ಜಮೀನು ಉಳ್ಳ) ತಮ್ಮ ಮಗ ಓದಿ ಪಟ್ಟಣದಲ್ಲಿ ನೆಲೆಸಬೇಕೆಂದು ಆಶಿಸುತ್ತಾರೆ. ಹಳ್ಳಿಯಲ್ಲಿ ಉಳಿಯುವವರು ಏನಕ್ಕೂ ಬೇಡದವರು ಎಂದೇ ಅವರ ಭಾವನೆ. ವಿದ್ಯಾಭ್ಯಾಸದಲ್ಲಿ ಒಲವಿಲ್ಲದ ಮಕ್ಕಳಿಗೆ ಬೇಸಾಯದಲ್ಲೇ ಒಲವು ಮೂಡಿಸಿದರೆ ಸ್ವಾವಲಂಬಿಗಳೂ, ಆತ್ಮಸ್ಥೈರ್ಯವುಳ್ಳವರೂ ಆಗುತ್ತಾರೆ.

ಎಸ್.ಎಸ್.ಎಲ್.ಸಿ. ಫೇಲಾದ ಕೂಡಲೆ, "ನೀನು ದಡ್ಡ, ನಿನ್ನಿಂದ ನಮಗೆ ನೆರೆಹೊರೆಯಲ್ಲಿ ತಲೆ ಎತ್ತಿಕೊಂಡು ತಿರುಗುವಂತೆಯೇ ಇಲ್ಲ" ಎಂದು ಮೂದಲಿಸುವ ತಂದೆ ತಾಯಿಯರೇ ಜಾಸ್ತಿ. ಹಾಗೆ ಮಾಡದೆ ಪರೀಕ್ಷೆಯಲ್ಲಿ ಫೇಲಾದರೇನಾಯಿತು, ನೀನು ಅಪ್ರಯೋಜಕನಲ್ಲ ಎಂಬ ಆತ್ಮವಿಶ್ವಾಸ ಮೂಡಿಸಬೇಕು.

ಮುಖ್ಯವಾಗಿ ಶೈಕ್ಷಣಿಕ ಪದವಿ ಪ್ರಾಪ್ತಿಯೊಂದೇ ಗುರಿಯಲ್ಲ ಎಂಬ ಸತ್ಯವನ್ನು ಪೋಷಕರು ಮನಗಾಣಬೇಕು.

ಐ) ಮರೆಯಲಾಗದ ಮತ್ತೂರು!

ಸಂಕೇತಿ ಸಂಗಮ, ಮಾರ್ಚ್ ೨೦೦೩ *- ಮಿತ್ರವಿಂದಾ ಸುಬ್ರಹ್ಮಣ್ಯ, ಬೆಂಗಳೂರು*

(ಸಂಕೇತಿಗಳ ಈ ಕೃಷಿ ಅಧ್ಯಯನವು ನಡೆದಿರುವುದು 'ದುಡಿಮೆ'ಯ ಅವಸಾನ ಕಾಲದಲ್ಲಿ. 'ಅನೂಚಾನ್' ಎಂಬ ಈ ಭಾಗವು ಶೇಕಡ ೧೦೦ರಷ್ಟು ದುಡಿಮೆ ಇದ್ದ ಕಾಲದ ಕೆಲವಾದರೂ ಸುಳುಹುಗಳನ್ನು ಕೊಡಬಹುದೆಂದು ಆಶಿಸಿದ್ದೇವೆ.)

. . . ಊರಿನ ಸುತ್ತ ಹಸಿರು ಸುರಿಯವ ಅಡಿಕೆ ತೆಂಗಿನ ತೋಟಗಳ *ಪ್ರಕೃತಿ ವೈಭವ.*

. . . ಇಲ್ಲಿಯ ಪ್ರತಿಯೊಂದು ಮನೆಯೂ ವ್ಯವಸಾಯ ತೋಟಗಾರಿಕೆಯಲ್ಲಿ ತೊಡಗಿಕೊಂಡಿರುವ ಕುಟುಂಬಗಳು. ಪ್ರತಿ ಮನೆಯ ಜಗುಲಿ ಅಂಗಳಗಳಲ್ಲೂ ತೆಂಗು, ಅಡಿಕೆಯ ಲಕ್ಷ್ಮಿ ನಾಟ್ಯವಾಡುತ್ತಿದ್ದಾಳೆ. ಮತ್ತೂರಿನ ಒಬ್ಬ ಗಣ್ಯವ್ಯಕ್ತಿ ಎನಿಸಿದ ಶ್ರೀಯುತ ಮಾರ್ಕಂಡೇಯ ಅವಧಾನಿಗಳು ಹೇಳಿದ ಮಾತು: ಅವರ ತಂದೆಯವರ ಕಾಲದಲ್ಲಿ *ನೂರಕ್ಕೆ ನೂರು ತಾವೇ ಸ್ವಂತ ವ್ಯವಸಾಯ ಮಾಡುತ್ತಿದ್ದರೆಂದು,* ಅನಂತರ ತಮ್ಮ ಕಾಲಕ್ಕೆ ಶೇಕಡ ೫೦-೭೦ಕ್ಕೆ ಬಂದು, ಈಗ ಶೇಕಡ ೨೦ರಷ್ಟು ಮಾತ್ರ ಸ್ವಂತದ್ದಾಗಿ, ಮಿಕ್ಕದ್ದು ಕೂಲಿಗಳ ಮೂಲಕ ನಡೆಸುತ್ತಿದ್ದಾರೆಂದು.

೬) ಎಲೆಮರೆಯ ಕಾಯಿ ಸರಗೂರು ಶ್ರೀನಿವಾಸ್

ಸಂಕೇತಿ ಸಂಗಮ, ಆಗಸ್ಟ್, ೨೦೦೩ — ***- ಅನಿತಾ ಮಂಜುನಾಥ್, ಬೆಂಗಳೂರು***

[ಜಂಗಮತೆಯೇ ಸಂಕೇತಿ ಸಮುದಾಯದ ಮೂಲಭೂತವಾದ ಮತ್ತು ಗಾಢವಾದ ಲಕ್ಷಣ. ಆದರೆ, ಪ್ರಾಯಶಃ ಮೊದಲಬಾರಿಗೆ ಸಂಕೇತಿಗಳು ಬಾಗಾಯ್ತು ಸಂಸ್ಕೃತಿಯಿಂದ ಬಿಡಿಸಿಕೊಂಡು ಹೊಸ ಕ್ಷೇತ್ರಗಳಿಗೆ ಕ್ರಮಿಸಿದ್ದಾರೆ. ಇದರಿಂದ, ಎಲ್ಲ ಸಾಧನೆಗಳ ತಾಯಿಯಂತಿರುವ (ಬಾಗಾಯ್ತು ಧರ್ಮದ) ಮೂಲದ್ರವ್ಯವೇ ನಷ್ಟವಾಗುತ್ತಿದೆ. ಅನಿತಾ ಮಂಜುನಾಥ್ ಅವರ ಒಳಗಣ್ಣಿಗೆ ಇದು ಕಂಡಿದೆ.]

ಸಂಕೇತಿಗಳಿಗೆ ಕೃಷಿ *ಪರಂಪರಾಗತವಾಗಿ ಬಂದ ವೃತ್ತಿ*. ಆದರೆ ಅನೇಕರು *ಆಧುನಿಕ ಜಗತ್ತಿನ ವ್ಯಾಮೋಹಗಳಲ್ಲಿ ಸಿಲುಕಿ* ಪಟ್ಟಣಗಳತ್ತ ಸರಿದುಹೋಗಿದ್ದಾರೆ. ಈ ಸಂದರ್ಭದಲ್ಲಿ ಕೃಷಿ ವೃತ್ತಿಯನ್ನು ಆಶ್ರಯಿಸಿ ನಿಷ್ಠೆಯಿಂದ ನಡೆಸಿಕೊಂಡು ಬರುತ್ತಿರುವವರ ಸಂಖ್ಯೆ ದಿನದಿಂದ ದಿನಕ್ಕೆ ಕಡಿಮೆಯಾಗುತ್ತಿದೆ. ಅಂತಹ ಅಪರೂಪದ ಸಂಕೇತಿಗಳ ಸಾಲಿಗೆ ಸೇರಿದವರು ಸರಗೂರು ಶ್ರೀನಿವಾಸ್! ಇವರು 'ವೆನಿಲಾ' ಬೆಳೆಯನ್ನು ಬೆಳೆದು *ಅರಕಲಗೂಡು ತಾಲ್ಲೂಕಿಗೇ ಮೊದಲನೆಯವರಾಗಿದ್ದಾರೆ.*

ಹತ್ತು ತಿಂಗಳಿಗೊಮ್ಮೆ ಬೀನ್ಸ್ ಕೊಡುವಂತಹ ಈ ವೆನಿಲಾ ಒಮ್ಮೆ ಹಾಕಿದರೆ ೧೫ ವರ್ಷ ಫಲ ಕೊಡುವಂತಹುದು. ಆದರೆ ಆರೈಕೆ ಅಷ್ಟು ಸುಲಭವಲ್ಲ. ಕಾಫಿ, ಅಡಿಕೆ ಮುಂತಾದ ಯಾವುದೇ ಮರಕ್ಕೆ ಬಳ್ಳಿಯಂತೆ ಹಬ್ಬಿಸಿ ಹೂವಾಗುವ ಸಮಯದಲ್ಲಿ ಬೆಳಗ್ಗೆ ೬ರಿಂದ ಮಧ್ಯಾಹ್ನ ೧ರೊಳಗೆ 'ಪಾಲಿನೇಷನ್' ಮಾಡಬೇಕು. ಬೆಳೆದ ಬೀನ್ಸ್‌ನ್ನು ೬೫ ಡಿಗ್ರಿ ಸೆಂಟಿಗ್ರೇಡ್‌ನ ಬಿಸಿ ನೀರಿನಲ್ಲಿ ಅದ್ದಿ ನಂತರ ೨೪ ಗಂಟೆ ಉಲ್ಲನ್ ಬಟ್ಟೆಯಲ್ಲಿ ಸುತ್ತಿಡಬೇಕು. ಹೀಗೆ ಮಾಡಿ ೬-೯ ದಿನಗಳ ನಂತರ ಬೀನ್ಸ್‌ನ್ನು ಮಾರಬಹುದು. ಪ್ರಸ್ತುತ ೧೦೦ ಪರ್‌ಸೆಂಟ್ ನಷ್ಟು ವೆನಿಲಾ ವಿದೇಶಕ್ಕೆ ರಫ್ತಾಗುತ್ತಿದೆ. *ಕೃಷಿಯನ್ನೂ ಬೇರೆ ವೃತ್ತಿಗಳಂತೆ ಆಸಕ್ತಿ ಶ್ರದ್ಧೆಗಳಿಂದ ಶ್ರಮವಹಿಸಿ ಮಾಡಿದರೆ ಫಲಪ್ರದವೆಂದು ಶ್ರೀ ಶ್ರೀನಿವಾಸ್ ತೋರಿಸಿಕೊಟ್ಟಿದ್ದಾರೆ.*

೭) ಖಾದಿ ಪ್ರೇಮಿ ರು.ಗ.ಲಕ್ಷ್ಮೀನಾರಾಯಣ

ಸಂಕೇತಿ ಸಂಗಮ, ಜುಲೈ ೨೦೦೪, ಪು.೧೪ — ***-ರು.ಸೂ.ಭಾಸ್ಕರ ಅವಧಾನಿ, ಬೆಂಗಳೂರು***

(ಕೇವಲ ಐವತ್ತು ವರ್ಷಗಳ ಹಿಂದೆ ಸಂಕೇತಿ ಕೃಷಿ ಅಧ್ಯಯನವು ನಡೆದಿದ್ದರೆ ಕೃಷಿ-ಪಶುಪಾಲನೆ-ಧರ್ಮ-ಅನುಷ್ಠಾನ-ಮಾನವೀಯ ಉನ್ನತಿಕೆ-ನೀತಿ-ಪ್ರೀತಿ-ಸಮರಸ-ಭ್ರಾತೃತ್ವ ಇಂಥವೆಲ್ಲ ಉಂಟುಮಾಡಿದ ರಸಪಾಕವೇ ಮೌಲ್ಯವಾಗಿದ್ದ ಕೃಷಿ ಸಂಸ್ಕೃತಿಯೊಂದರ ಪರಿಚಯವು ದಟ್ಟವಾಗಿ ಆಗುತ್ತಿತ್ತು. ರು.ಗ.ಲ. ಅವರು ಗೋವಿಗೆ ನಡೆಸಿದ ಸಂಸ್ಕಾರದ ನಿದರ್ಶನದಿಂದಾಗಿ 'ಅನೂಚಾನ' ಎಂಬ ಈ ಭಾಗದ ಉದ್ದೇಶವು ಫಲಿಸಿದೆಯೆಂದು ಭಾವಿಸುತ್ತೇವೆ. 'ಅನೂಚಾನ'ವು ಮಸುಕಾಗದ ಸಂಕೇತಿ ಕೃಷಿ ಪರಂಪರೆಯ ಹೊಳಹುಗಳಿಗಾಗಿ ಹುಡುಕಿದೆ.)

ರು.ಗ.ಲಕ್ಷ್ಮೀನಾರಾಯಣರಾಯರು ಮೈಸೂರಿನಲ್ಲಿದ್ದಾಗ ಅವರ ಬಳಿ ಇದ್ದ ಒಂದು ಹಸು, ೪ ಸೇರು ಹಾಲು ಕೊಡುತ್ತಿತ್ತು. ಹಸು ನೋಡಲು ಬಹಳ ಚಂದವಾಗಿತ್ತು. ಒಂದು ದಿನ ಒಬ್ಬ ಆಗಂತುಕ ಈ ಹಸುವನ್ನು ನೋಡಿ 'ಒಂದು ಸಾವಿರ ರುಪಾಯಿಗಳಿಗೆ ನನಗೆ ಕ್ರಯಕ್ಕೆ ಕೊಡಿ' ಎಂದು ಕೇಳಿದನಂತೆ. ರು.ಗ.ಲರವರು ಅದನ್ನು ತಿರಸ್ಕರಿಸಿದ್ದರಿಂದ ಕುಪಿತನಾದ ಆತ ಹಸುವಿಗೆ ವಿಷ ಹಾಕಿದ್ದರಿಂದ ಹಸು ಪ್ರಾಣಬಿಟ್ಟಿತಂತೆ. ಸತ್ತ ಹಸುವಿಗೆ *ಕರ್ಮಾನುಸಾರ ಸಂಸ್ಕಾರ* ನಡೆಸಿ ಹಲವಾರು ವರ್ಷಗಳವರೆಗೆ ಹಸುವಿಗೆ *ತಿಥಿ ನಡೆಸುತ್ತಿದ್ದರು* ಹೃದಯವಂತ ಲಕ್ಷ್ಮೀನಾರಾಯಣರಾಯರು!

೧೫. ಡಾ||ಬಿ.ವಿ. ಸುಧಾಮಣಿ ಅವರ ಟಿಪ್ಪಣಿಗಳು, ಲೇಖನಗಳು

(ಸಂದರ್ಶನದ ಸಂದರ್ಭ : ಕ್ರಿ.ಶ. ೨೦೦೦ದಲ್ಲಿ ಸ್ಕಾಟ್ಲೆಂಡಿನ ಎಡಿನ್‌ಬರೋ ವಿಶ್ವವಿದ್ಯಾಲಯದಲ್ಲಿ ನಡೆದ ೧೯ನೇ ಜಾಗತಿಕ ಇತಿಹಾಸ ಸಮ್ಮೇಳನಕ್ಕಾಗಿ "ಕೃಷಿಕರಾಗಿ ಕರ್ನಾಟಕದ ಸಂಕೇತಿ ಬ್ರಾಹ್ಮಣರು" ಎಂಬ ಲೇಖನ ತಯಾರಿಸುವ ಸಲುವಾಗಿ ಈ ಸಂದರ್ಶನಗಳನ್ನು ಮಾಡಿಕೊಳ್ಳಲಾಯಿತು. ಮೊದಲಬಾರಿಗೆ ಇವು ಇಲ್ಲಿ ಪ್ರಕಟವಾಗುತ್ತಿವೆ.)

ಅ) ಹಾನಗಲ್ ಕೃಷ್ಣಮೂರ್ತಿ

ವಯಸ್ಸು: ೮೦ ವರ್ಷಗಳು, ಸಂದರ್ಶಿಸಿದ ದಿನಾಂಕ: ೧೩.೧೧.೯೯

ವ್ಯಕ್ತಿ ಪರಿಚಯ: ಶ್ರೀ ಕೃಷ್ಣಮೂರ್ತಿಯವರ ಮಾತಾಪಿತೃಗಳು ಮೂಲತಃ (ಅರಕಲಗೂಡು ತಾಲೂಕು, ಹಾಸನ ಜಿಲ್ಲೆ) ಹಾನಗಲ್ಲಿನವರು. ಇವರು ದಾಯಾದಿಗಳ ಕಲಹದಿಂದಾಗಿ ಬೇಸತ್ತು, ಬಸವಾಪಟ್ಟಣ ಗ್ರಾಮಕ್ಕೆ ತಮ್ಮ ವಾಸ್ತವ್ಯ ಬದಲಾಯಿಸಿದರು. ಇದಕ್ಕೆ ಇವರ ಧರ್ಮಪತ್ನಿ ಸೀತಾಲಕ್ಷ್ಮಿಯವರ ಬೆಂಬಲವೂ ದೊರಕಿತು. ಸೀತಾಲಕ್ಷ್ಮಿಯವರ ತವರೂರು ಬಸವಾಪಟ್ಟಣವಾಗಿದ್ದರಿಂದ, ಶ್ರೀ ಕೃಷ್ಣಮೂರ್ತಿರವರಿಗೆ ಅತ್ತೆ-ಮಾವಂದಿರ ಸಹಕಾರವೂ ದೊರೆತು ಕೃಷಿಗೆ ಪರೋಕ್ಷವಾಗಿ ಸಹಾಯವಾಯಿತು. ಕಾವೇರಿ ತೀರದಲ್ಲಿರುವ ಬಸವಾಪಟ್ಟಣ ಸಂಕೇತಿಗಳ ಪ್ರಮುಖ ಸ್ಥಳಗಳಲ್ಲಿ ಒಂದಾಗಿದ್ದುದೂ ಗಮನಾರ್ಹ. ಅವರೊಂದಿಗಿನ ಸಂದರ್ಶನದ ಅಂಶಗಳನ್ನು ಯಥಾವತ್ತಾಗಿರಿಸುವ ಪ್ರಯತ್ನ ಇದಾಗಿದೆ.

ಪ್ರಶ್ನೆ: ಮಾವಯ್ಯ, ನಿಮ್ಮ ಎಷ್ಟನೇ ವಯಸ್ಸಿನಿಂದ ನೀವು ಕೃಷಿಯಲ್ಲಿ ನಿಮ್ಮನ್ನು ತೊಡಗಿಸಿಕೊಂಡಿದ್ದೀರಿ?

ಉತ್ತರ: ನನ್ನ *೧೨ನೇ ವಯಸ್ಸಿನಿಂದಲೂ ತೋಟದ ಕೃಷಿಯಲ್ಲಿ* ತೊಡಗಿದ್ದೇನೆ.

ಪ್ರಶ್ನೆ: ಕರ್ನಾಟಕದ ಸಂಕೇತಿಗಳು ತೋಟದ ಕೃಷಿಯನ್ನೇ ಜೀವನಾಧಾರವನ್ನಾಗಿ ಆಯ್ಕೆ ಮಾಡಿಕೊಳ್ಳಲು ಕಾರಣ ಏನಿರಬಹುದು?

ಉತ್ತರ: ತೋಟದ ಕೃಷಿ *ಸಾತ್ವಿಕ ಮಾರ್ಗ* ಹಾಗೂ *ಸ್ವತಂತ್ರ ಜೀವನಕ್ಕೆ* ಸರಿಯಾದ ಮಾರ್ಗವಾಗಿತ್ತು. ಮೂಲತಃ ಸಂಕೇತಿಗಳು ಶಂಕೋಟೆಯಿಂದ ಬಂದವರಾದ್ದರಿಂದ ಅವರು ವಲಸೆ ಬಂದಾಗ ಜೀವನೋಪಾಯಕ್ಕಾಗಿ ವ್ಯವಸಾಯ ಮುಂದುವರಿಸುವ ಅನಿವಾರ್ಯತೆ ಇತ್ತು. ಅಧ್ಯಯನ ಬ್ರಾಹ್ಮಣ ವೃತ್ತಿ-ಕರ್ಮಮಾರ್ಗ, ಬೇಸಾಯ-ಜೀವನ ವೃತ್ತಿ. ಶಂಕೋಟೆಯಲ್ಲಿದ್ದ ನಮ್ಮ ಪೂರ್ವಿಕರು ಕೃಷಿಯಲ್ಲಿ ತೊಡಗಿದ್ದರು. ಅವರು ಕರ್ನಾಟಕಕ್ಕೆ ವಲಸೆ ಬಂದಾಗ ತಮ್ಮ *ಮೂಲಸ್ಥಾನದ ವೃತ್ತಿಯನ್ನೇ* ಮುಂದುವರಿಸಿದರು.

ಪ್ರಶ್ನೆ: ಅಧ್ಯಯನ-ಅಧ್ಯಾಪನ ಬ್ರಾಹ್ಮಣರ ಕರ್ಮಮಾರ್ಗ ಅಂದಿರಲ್ಲ. ತೋಟದ ಕೃಷಿಯಿಂದ ಇದಕ್ಕೆ ಅಡ್ಡಿ ಆಗಲಿಲ್ಲವೆ?

ಉತ್ತರ: ಇಲ್ಲ. ಸಂಕೇತಿಗಳು ತೋಟದ ಕೃಷಿ ಆಯ್ಕೆ ಮಾಡಿಕೊಳ್ಳುವಲ್ಲಿ ಇದೂ ಮುಖ್ಯ ಕಾರಣ. ತೋಟದ ವ್ಯವಸಾಯ ಮಾಡುತ್ತಾ ಮಾಡುತ್ತಾ ಅಧ್ಯಯನ - ಅಧ್ಯಾಪನ ಮುಂದುವರಿಸಲು ಅವಕಾಶವಾಯಿತು. *ಬ್ರಾಹ್ಮಣವೃತ್ತಿಗೆ ತೊಂದರೆ ಇಲ್ಲದ ಅಧ್ಯಯನ* ಕ್ಷೇತ್ರ ಇದಾಗಿತ್ತು.

ಪ್ರಶ್ನೆ: ನೀವು ಹಾನಗಲ್ಲಿನಿಂದ ಬಸವಾಪಟ್ಟಣಕ್ಕೆ ಬಂದಾಗ ತೋಟ ಹೊಸದಾಗಿ ಮಾಡಿದಿರೋ? ಅಥವಾ ಉತ್ಪತ್ತಿ ಬರುತ್ತಿದ್ದ ತೋಟವನ್ನು ಕ್ರಯಕ್ಕೆ ಪಡೆದಿರೋ?

ಉತ್ತರ: ಇಲ್ಲ. ನಾನು ಕ್ರಯಕ್ಕೆ ಪಡೆದಾಗ ಅದು ಕಾಡು ಬೆಳೆದಿದ್ದ ಜಮೀನಾಗಿತ್ತು. ಒಬ್ಬ ಪಟೇಲರಿಂದ ಎರಡೂಕಾಲು ಎಕರೆ ಭೂಮಿ ಕೊಂಡು ಅದನ್ನು ನನ್ನ ಪರಿಶ್ರಮದಿಂದ ಈ ಮಟ್ಟಕ್ಕೆ ತಂದಿದ್ದೇನೆ.

ಪ್ರ: ಅದು ಕಾಡು ಬೆಳೆದಿದ್ದ ಪಾಳು ಜಮೀನು ಅಂದ್ರಲ್ಲಾ ಹಾಗಾದ್ರೆ ತೋಟ ಮಾಡುವಾಗ ನೀರಿಗೆ ಏನು ವ್ಯವಸ್ಥೆ ಮಾಡಿದ್ರಿ?

ಉ: ಹಾಂ! (ನಿಟ್ಟುಸಿರುಬಿಟ್ಟು) ಬಹಳ ತ್ರಾಸಪಟ್ಟೆ. ಜಮೀನಿನ ಮಧ್ಯಭಾಗದಲ್ಲಿ *ಭಾವಿ ತೋಡಿದೆ.* ಜಮೀನು ವಿಸ್ತಾರವಾಗಿದ್ದರಿಂದ ಎರಡು ಭಾವಿ ತೋಡಿದೆ. ಮಣ್ಣಿನ ಗಡಿಗೆಗಳಲ್ಲಿ ಭಾವಿಯಿಂದ ತೂಕ ನೀರು ಹಾಕುತ್ತಿದ್ದೆ (ಎರಡೂ ಕೈಗಳಲ್ಲಿ ಒಂದೇ ಸಮವಾದ ಗಡಿಗೆಗಳಲ್ಲಿ ನೀರು ಹಿಡಿಯುವುದು). ಏತದ ಉಪಯೋಗ ಬಳಕೆಗೆ ಬಂದಾಗ (ಅರ್ಧ ಅಡಿ ಆಳ ಅರ್ಧ ಅಡಿ ಅಗಲದ) ಹರಕಣಿ ತೋಡಿ ಅದಕ್ಕೆ ಏತದಿಂದ ನೀರು ಹಾಯಿಸಿ ಸುಮಾರು ೫೦ ಗಜದ ಅಳತೆಯಲ್ಲಿ ಗುಂಡಿ ತೋಡಿ



ಮಹಾಕೃಷಿಕ ಹಾನಗಲ್ ಕೃಷ್ಣಮೂರ್ತಿಯವರು:ಬಸವಾಪಟ್ಟಣ

ಸುಮಾರು ೨೫ ಗಜದ ಸುತ್ತ ಎಲೆ ಹಂಬಿನ ಕುಣಿಗಳಿಗೆ ನೀರು ಹಾಕುತ್ತಿದ್ದೆ. ಪ್ರತೀ ಕುಣಿಗೆ ಸಾಮಾನ್ಯವಾಗಿ ಒಂದು ತೂಕ ನೀರು ಹಾಕಲಾಗುತ್ತಿತ್ತು. ಮಕ್ಕಳ ಕಾಲಕ್ಕೆ ಈಗ ಸಾಕಷ್ಟು ಸುಧಾರಿಸಿದೆ. ಪಂಪ್‌ಸೆಟ್ ಇತ್ಯಾದಿ ಸೌಲಭ್ಯ ಇದೆ, ಗಡಿಗೆಗಳಲ್ಲಿ ನೀರು ಹಾಕುವವರೇ ಇಲ್ಲ.

ಪ್ರ: ಅಡಕೆ ಸಸಿಯನ್ನು ಹೊಸ ತೋಟ ಮಾಡುವಾಗ ಹೇಗೆ ಬೆಳೆಸಿದಿರಿ? ಅದಕ್ಕೆ ಸಂಬಂಧಪಟ್ಟಂತೆ ನಿಮ್ಮ ಅನುಭವ ಏನು?

ಉ: ಭೂಮಿಯನ್ನು ಸಮತಟ್ಟು ಮಾಡಿ ಉತ್ತಮ ಗೋಟುಗಳನ್ನು ತಂದು ಮೂರು/ನಾಲ್ಕು ಅಡಿಗೆ ಒಂದರಂತೆ ಮಣ್ಣೊಳಕ್ಕೆ ಹಾಕಬೇಕು. ಎರಡು ವರ್ಷಗಳು ಸ್ವಲ್ಪವೇ ಗೊಬ್ಬರ ಹಾಗೂ ನೀರು ಹಾಕಿ ಅಡಕೆ ಒಗ್ಗನ್ನು ಕಾಪಾಡಬೇಕು. ನಂತರ ಎಂಟು-ಒಂಭತ್ತು ಅಡಿ ಆಳ ಗುಂಡಿಮಾಡಿ ಸುಮಾರು ಒಂದೂವರೆ ಮೊಳದಷ್ಟು ದೂರಕ್ಕೆ ಒಂದೊಂದೇ ಅಡಿಕೆ ಸಸಿಯನ್ನು ಹಾಕಬೇಕು. ಒಂದೂವರೆ ಅಡಿ ಆಳ ಎರಡು ಅಡಿ ಅಗಲದ ಗುಂಡಿಗೆ ಅಡಕೆ ಮರದ ದಸಿ ತಯಾರಿಸಿ ನೆಡಬೇಕು. (ಒಣಗಿದ ಅಡಕೆ ಮರದ ದಬ್ಬೆಯನ್ನು ಚೂಪು ಮಾಡಿಕೊಂಡು ನಾಲ್ಕು ಕಡೆ ಗುಂಡಿಗೆ ನೆಟ್ಟು ನಂತರ ಸ್ವಲ್ಪ ಗೊಬ್ಬರ ಪುಡಿ ಮಣ್ಣು ಬೆರೆಸಿ ಒಗ್ಗುಹಾಕಿದ ಸಸಿ) ವಾರಕ್ಕೊಮ್ಮೆ ಅಥವಾ ಎರಡು ಬಾರಿ ಸ್ವಲ್ಪ ನೀರು ಬಿಡುತ್ತಿರಬೇಕು. ವರ್ಷಕ್ಕೊಮ್ಮೆ ಗುದ್ದಲಿ ಮುಖಾಂತರ ಸೊಸಿ ಸುತ್ತ ಅಗತೆ ಮಾಡಬೇಕು. ಎರಡು ವರ್ಷಕ್ಕೊಮ್ಮೆ ಸೊಸಿ ಸುತ್ತ ಗುಂಡಿಮಾಡಿ ಮಣ್ಣನ್ನು ಮೇಲೆ ಕೆಳಗೆ ಮಾಡಿ ಅದರ ಸಾರ ಹೆಚ್ಚಿಸಬೇಕು. ಸುಮಾರು ೭-೮ ವರ್ಷದಲ್ಲಿ ಸೊಸಿ ಫಸಲಿಗೆ ಬರುತ್ತದೆ. ಹತ್ತು ವರ್ಷ ಕಳೆದ ಮೇಲೆ ವಿಳ್ಳೇದೆಲೆ ಹಂಬನ್ನು ನೆಡುವುದು ಸೂಕ್ತ.

ಪ್ರ: ವಿಳ್ಳೇದೆಲೆ ಹಂಬು ಬೆಳೆಸಲು ಪ್ರಮುಖ ಕಾರಣ ಏನು?

ಉ: ಇದು *ಮೂರು ತಿಂಗಳಿಗೊಮ್ಮೆ ಮಾರಾಟಕ್ಕೆ* ಲಭ್ಯವಿರುತ್ತದೆ. ಆದ್ದರಿಂದ ಮನೆ *ಖರ್ಚಿಗೆ* ಹಂಬೇ ಆಧಾರವಾಗಿತ್ತು. ಎಲೆ ಹಂಬಿಗೆ ನೀರು, ಗೊಬ್ಬರ ಹಾಕುತ್ತಿದ್ದುದರಿಂದ ಅಡಕೆ ಫಸಲೂ ಹೆಚ್ಚುತ್ತಿತ್ತು.

ಪ್ರ: ನಿಮ್ಮ ಜೊತೆ ನಿಮ್ಮ ಪತ್ನಿ ತೋಟಕ್ಕೆ ಬರ್‍ತಿದ್ರಾ? ಅವರೂ ಕೃಷಿಯಲ್ಲಿ ಸಹಾಯ ಮಾಡಿದ್ದುಂಟಾ?

ಉ: *ಖಂಡಿತಾ*. ಈಕೆ ಕಳೆಕೀಳುವುದು, ಹುಣಿಸೆಹಣ್ಣು ಆಯಿಸುವುದು, ಗಡಿಗೆಯಿಂದ ಎಲೆ ಹಂಬಿಗೆ ನೀರು ಹಾಕುವುದು, ಎಲೆ ಪಟ್ಟಿ ಹಿಡಿದು ಸಂತೆಗೆ ಪಿಂಡಿ ಕಟ್ಟಲು ಸಹಕರಿಸುವುದು, ಮುಯ್ಯಿಗೆ ಅಡಿಕೆ ಎಡೆಯುವುದು, ನಮ್ಮನೆ ಅಡಿಕೆಯನ್ನೂ ರೇಕೆ ಮಾಡಲೂ ಸಂಪೂರ್ಣ ಸಹಕರಿಸಿದ್ದಾರೆ. ತೋಟಕ್ಕೇ ಬಿಸಿಲಿನಲ್ಲಿ ಊಟ ಹೊತ್ತು ತಂದಿದ್ದೂ ಇದೆ.

ಪ್ರ: ಎಲೆ ಹಂಬು, ಅಡಿಕೆ ಮರ ತುಂಬಾ ಗಾಳಿ ಬಂದಾಗ ಹಾಳಾಗದೇ ಇದ್ದ ಹಾಗೆ ತಡೆಯಲು ಏನು ಕ್ರಮ ತೊಗೊಂಡಿದ್ರಿ?

ಉ: ಹೌದು ಹೌದು. ಗಾಳಿ ತಡೆಯಲು ಮಕ್ಕಿ ಮೇಲೆ ಹುಣಿಸೆ, ಮಾವು, ತೆಂಗು, ಹಲಸು ಇತ್ಯಾದಿ ಗಿಡ ಬೆಳೆಸಿದೆ. ಇದರಿಂದ ಫಲವೂ ದೊರಕುತ್ತಿತ್ತು, ಒಣಗಿದ ಕೊಂಬೆಗಳು ಸೌದೆಗೂ ಆಗ್ತಿತ್ತು. ತೋಟಕ್ಕೆ ಗಾಳಿಯಿಂದ ರಕ್ಷಣೆಯೂ ಸಿಗುತ್ತಿತ್ತು. ಆದರೆ ಈ ಹುಣಿಸೆ, ಮಾವು, ಹಲಸು ಮರಗಳನ್ನು ತೋಟದ ಮಧ್ಯದಲ್ಲಿ ಬೆಳೆಸಿದ್ರೆ ಮಣ್ಣಿನ ಸಾರವನ್ನೆಲ್ಲಾ ಹೀರಿಬಿಡುತ್ತದೆ. ಅದಕ್ಕೇ *ಅದನ್ನು ಮಕ್ಕಿ ಮೇಲೆ ಬೆಳೆಸುವುದೇ ಸೂಕ್ತ*.

ಪ್ರ: ಬಾಳೆ ಬೆಳೆದಿದ್ರಾ?

ಉ: ಓಹೋ.... ಅಡಕೆ ಸಸಿ ನೆಟ್ಟು ಅದು ಫಸಲಿಗೆ ಬರುವವರೆವಿಗೆ ಬಾಳೆ ಹಾಕುತ್ತಿದ್ದೆವು. ಇದು ಬೇಗ ಫಸಲು ಕೊಡ್ತಿತ್ತು. ಹಾಂ! ಇದರ ನಾರು ಎಲೆ ಹಂಬು ಕಟ್ಟಲು ಬಹಳ ಅನುಕೂಲವಾಗ್ತಿತ್ತು. ಈಗಿನ ಹಾಗೆ ಆಗ ಹೊಚ್ಚಲ್ಲಿ ಹಂಬು ಕಟ್ತಾ ಇರ್ಲಿಲ್ಲ. ಬಾಳೆನಾರನ್ನು ಭಾವಿಯಲ್ಲಿ ನೆನಸಿ ಕಟ್ತಾ ಇದ್ವಿ. ನಂತರ ಅಡಕೆ ಬಂದಾಗ ಅದರ ಪಟ್ಟೆ ನಾರನ್ನೂ ಹಂಬು ಕಟ್ಟಲು ಉಪಯೋಗಿಸ್ತುತ್ತಿದ್ವಿ.

ಪ್ರ: ಮಕ್ಕಿ ಮೇಲೆ ಬಿದಿರು ಏನಾದ್ರೂ ಹಾಕಿದ್ರುಂಟಾ?

ಉ: ಬಿದಿರು ಹಾಕಿದ್ವಿ. ಇದು ಸ್ವಾಭಾವಿಕ ಬೇಲೀನೂ ಆಗ್ತಿತ್ತು. ಜೊತೆಗೆ ಏಣಿ ಮಾಡಲೂ ಅನುಕೂಲವಾಗಿತ್ತು.

ಪ್ರ: ಏತದ ಬಾವಿ ಬಗ್ಗೆ ಏನಾದ್ರೂ ಹೇಳ್ತೀರ.

ಉ: ಮೊದಲು ಏತದ ಪರಿಚಯ ಇರ್ಲಿಲ್ಲ. ಆಗ ತೋಟದಲ್ಲೇ ೨-೩ ಭಾವಿ ತೋಡಿ ಅದರಿಂದಲೇ ಗಡಿಗೆಗಳಲ್ಲಿ ತುಂಬಿಕೊಂಡು ನೀರು ಹಾಕ್ತಿದ್ವಿ. ಏತ ಬಳಕೆಗೆ ಬಂದ ಮೇಲೆ ಅನುಕೂಲ ಆಯ್ತು.

ಪ್ರ: ನೀವು ತೋಟಕ್ಕೆ ಬೇಕಾದ ಗೊಬ್ಬರ ಹೇಗೆ ಪಡೆಯುತ್ತಿದ್ದಿರಿ?

ಉ: ಈಗಿನ ಹಾಗೆ ರಾಸಾಯನಿಕ ಗೊಬ್ಬರದ ಉಪಯೋಗ ಗೊತ್ತಿರಲಿಲ್ಲ. ಮನೆಯಲ್ಲಿ ಹಸುಗಳು ಇರ್ತಿದ್ವು. ಪೂಜೆಗೆ ಹಾಗೂ ಮಕ್ಕಳಿಗೆ, ಮನೆ ಉಪಯೋಗಕ್ಕೆ ಹಾಲು, ಮೊಸರು, ಬೆಣ್ಣೆ ಸಿಕ್ತಿತ್ತು. *ಗೋಪೂಜೆ* ಬಹಳ ಶ್ರೇಷ್ಠವಾಗಿತ್ತು. ಪ್ರತೀದಿನ ಗೋಪೂಜೆ ಮಾಡ್ತಿದ್ವಿ. ಜೊತೆಗೆ ಮಣ್ಣಿನ ನೆಲದ ಮನೆಗಳಾದ್ದರಿಂದ ಸಗಣಿಯಿಂದ ಮನೆ ಸಾರಿಸಿದರೆ ಧೂಳು ಕಡಿಮೆಯಾಗ್ತಿತ್ತು. ಜೊತೆಗೆ ಇರುವೆ, ನೊಣ ಕಡಿಮೆ ಆಗ್ತಿತ್ತು, ಅಲ್ಲದೆ ಅದರ ಮೇಲೆ ರಂಗೋಲಿ ಬಿಡಿಸಿದರೆ ಮನೆ ಹಬ್ಬದ ವಾತಾವರಣದಿಂದ ಕೂಡಿರುತ್ತಿತ್ತು. ಇದೆಲ್ಲದಕ್ಕಿಂತ ಹಸುವಿನ ಸಗಣಿಯನ್ನು ಸ್ವಲ್ಪ ದೂರದ ಹಿತ್ತಲಿನಲ್ಲಿ ಮಾಡಿದ್ದ ತಿಪ್ಪೆ(ಕುಪ್ಪೆ)ಗೆ ಹಾಕಿ, ಗಂಜಲ, ಒಣಗಿದ ಎಲೆ ಹಾಕಿ ಆರು ತಿಂಗಳಿಂದ ಒಂದು ವರ್ಷದವರೆಗೆ ಬಿಡಲಾಗುತ್ತಿತ್ತು. ಅದು ಕರಗಿದ ನಂತರ ದಿನಾ ತೋಟಕ್ಕೆ ಹೋಗುವಾಗಲೆಲ್ಲ ಸಗಣಿಯನ್ನು ಮಂಕರಿಯಲ್ಲಿ ತುಂಬಿಕೊಂಡು ಹೋಗಿ ೩-೪ ಗುಣಿಗಳಿಗೆ ಹಾಕುತ್ತಿದ್ದೆವು. ನಾವು ಆಗ ಕೂಲಿಗಳನ್ನು ನೇಮಿಸಿದ್ದಿಲ್ಲ. *ಎಲ್ಲಾ ಕೆಲಸಾನೂ ನಾವೇ ಮಾಡ್ಕೋತಿದ್ವಿ.* ಇದಕ್ಕೆಲ್ಲಾ ಮನೆಯಲ್ಲಿ ಎಲ್ಲರ ಸಹಾಯ ಇರ್ತಿತ್ತು. ಇದರ ಜೊತೆಗೆ ಮನೇಲಿ ಬೆಳಿಗ್ಗೆ ಸಂಜೆ ಪೂಜೆ ಮಾಡ್ತಿದ್ದೆ (ಇಂದಿನವರೆವಿಗೂ). ಈಗ ವಯಸ್ಸಾಯ್ತು. ಪೂಜೆ ಮಾಡಿಕೊಂಡು, ಅಡಕೆ ಪಟ್ಟೆ ಎಡೆದು ಅಟ್ಟದ ಮೇಲೆ ಜೋಡಿಸಿಡ್ತೀನಿ, ತೋಟಾನ ನಮ್ಮ ರಾಮಗಿಣಿ ನೋಡ್ಕೋತಾನೆ(ಅವರ ದ್ವಿತೀಯ ಪುತ್ರ ಬಿ.ಕೆ.ರಾಮಚಂದ್ರ)

ಆ) ಗೌರಮ್ಮ

ಪಿರಿಯಾಪಟ್ಟಣದ ಹಿರಿಯಣ್ಣನವರ ಧರ್ಮಪತ್ನಿ, ೭೭ ವರ್ಷಗಳು, ಸಂದರ್ಶಿಸಿದ ದಿನಾಂಕ: ೧೯.೦೫.೦೩

ಶ್ರೀಮತಿ ಗೌರಮ್ಮನವರು ಪಿರಿಯಾಪಟ್ಟಣದ ಸುಬ್ರಾಯ ಹಾಗೂ ಭಾಗೀರಥಿರವರ ಹಿರಿಯ ಮಗಳು. ಅದೇ ಊರಿನ ಹಿರಿಯಣ್ಣನವರ ಧರ್ಮಪತ್ನಿ. ಈಕೆ *ಹುಟ್ಟಿದ ಹಾಗೂ ಸೇರಿದ ಕುಟುಂಬಗಳೆರಡೂ ಕೃಷಿಯನ್ನು ಮುಖ್ಯವೃತ್ತಿಯನ್ನಾಗಿ ಅವಲಂಬಿಸಿದ್ದವು.* ಹಾಗಾಗಿ ಬಾಲ್ಯದಿಂದಲೂ ಕೃಷಿಯ ವಾತಾವರಣದಲ್ಲಿ ಬೆಳೆದು ಬಂದ ಶ್ರೀಮತಿ ಗೌರಮ್ಮನವರು ಆ ಬಗ್ಗೆ ನನ್ನೊಡನೆ ತಮ್ಮ ಕೆಲವು ಅನುಭವದ ಮಾತುಗಳನ್ನಾಡಿದ್ದಾರೆ. ಅದನ್ನು ಯಥಾವತ್ತಾಗಿ ಇಲ್ಲಿ ನೀಡಲಾಗಿದೆ.

ಪ್ರ: ಬಾಲ್ಯದಿಂದಲೂ ನೀವು ಕೃಷಿಯ ಬಗ್ಗೆ ಸಾಕಷ್ಟು ತಿಳಿದಿದ್ದೀರಿ ಎಂಬುದು ನನ್ನ ಅಭಿಪ್ರಾಯ. ಇದಕ್ಕೆ ನೀವೇನು ಹೇಳುತ್ತೀರಿ?

ಉ: ಹೌದು, ನನ್ನ ತಂದೆಯವರು ತೋಟದ ಕೆಲಸ ಮಾಡ್ತಿದ್ರು. ಹನ್ನೊಂದು ವರ್ಷಕ್ಕೇ ಮದುವೆ ಆಯಿತು. ನನ್ನ ಪತಿ ಕೂಡ

ಕೃಷಿಯನ್ನೇ ಜೀವನಾಧಾರ ಮಾಡಿಕೊಂಡಿದ್ದರು. ಹಾಗಾಗಿ ಕೃಷಿ ಬಗ್ಗೆ ಸ್ವಲ್ಪ ಗೊತ್ತಿದೆ.

ಪ್ರ: ನೀವು ನಿಮ್ಮ ತಂದೆ ಮನೆಯಲ್ಲಾಗಲೀ, ಪತಿಯವರ ಮನೆಯಲ್ಲಾಗಲೀ ಕೃಷಿ ಕೆಲಸದಲ್ಲಿ ಸಹಕಾರ ನೀಡಿದ್ದುಂಟಾ?


ಉ: ಮದುವೆಗೆ ಮುಂಚೆ ಹೇಳಿಕೊಳ್ಳುವಂತಹ ಕೆಲಸ ಮಾಡಿಲ್ಲ. ಮದುವೆಯಾದ ನಂತರ ಹುಡುಗತನದಲ್ಲಿ ನನ್ನ ಪತಿಯವರು ತೋಟದ ಕೆಲಸದಲ್ಲಿ ತೊಡಗಿರುತ್ತಿದ್ದಾಗ ಅನೇಕ ಬಾರಿ ಊಟ ತೆಗೆದುಕೊಂಡು ಹೋಗುತ್ತಿದ್ದೆ.

ಪ್ರ: ನಿಮ್ಮ ಪತಿಯವರು ತೋಟದಲ್ಲಿ ಏನೇನು ಕೆಲಸ ಮಾಡುತ್ತಿದ್ದರು?

ಉ: ಅವರು . . . ವಿಳ್ಯೇದೆಲೆ ಹಂಬಿಗೆ ಕುಡಗಟ್ಟು ಹಾಕುತ್ತಿದ್ದರು, ತೆಕ್ಕೆ ಬಿಡುತ್ತಿದ್ದರು, ಗೊಬ್ಬರ ಹಾಕುತ್ತಿದ್ದರು, ಅಗತೆ ಮಾಡ್ತಿದ್ರು, ಬಾವಿಯಿಂದ ಗಡಿಗೆಗಳಲ್ಲಿ ನೀರು ಹಾಕುತ್ತಿದ್ದರು, ಅಡಕೆ ಕುಯ್ಲು ಮಾಡ್ತಿದ್ರು.

ಪ್ರ: ನಿಮ್ಮ ತೋಟದ ಎಲೆಯನ್ನು, ಹೇಗೆ ಮಾರಾಟ ಮಾಡ್ತಿದ್ರಿ?

ಉ: ನನ್ನ ಪತಿಯವರು ಹುಣಸೂರು, ಗೋಣಿಕೊಪ್ಪ ಹಾಗೂ ಪಿರಿಯಾಪಟ್ಟಣ *ಸಂತೆಗಳಿಗೆ* (ವಿಳ್ಯೇದೆಲೆ) ತೆಗೆದುಕೊಂಡು ಹೋಗಿ ಮಾರಾಟ ಮಾಡ್ತಿದ್ರು.



ಜೀವನಬುತ್ತಿ

ಪ್ರ: ವಿಳ್ಯೇದೆಲೆಯನ್ನು ಹೇಗೆ ತೆಗೆದುಕೊಂಡು ಹೋಗ್ತಿದ್ರು?

ಉ: ಸಂತೆಯ ಹಿಂದಿನ ದಿನ ೧೮-೨೧ ಹಂತದ ಏಣಿ ಮೇಲೆ ಹತ್ತಿ, ಎಲೆ ಉಗುರಿನಿಂದ ವಿಳ್ಯೇದೆಲೆ ಕುಯ್ಲು ಮಾಡಿ ತರ್ತಿದ್ರು. ನಾನು, ಅವರು ಇಬ್ಬರೂ ಕೂತು ಸಂಜೆಯೆಲ್ಲಾ ಎಲೆ ಪಟ್ಟಿ ಹಿಡಿಯುತ್ತಿದ್ದೆವು. ಎಲೆ ಪಿಂಡಿ ಮಾಡಿಕೊಂಡು, *ಒಂದು ಕವಳಿಗೆಗೆ ಇಷ್ಟು ಅಂತ ಮಾರಿ, ಬಂದ ಹಣದಲ್ಲಿ ದಿನಸಿ ತರ್ತಿದ್ರು.*

ಪ್ರ: ಇದಲ್ಲದೆ ತೋಟದ ಇನ್ನಾವ ಕೆಲಸ ಮಾಡ್ತಿದ್ರು?

ಉ: ಕಳೆ ಕೀಳ್ತಿದ್ರು, ಹುಣಿಸೆಹಣ್ಣಿನ ಮರಕ್ಕೆ ಹತ್ತಿ ತಾವೇ ಅದನ್ನು ಕೀಳ್ತಿದ್ರು. ತೆಂಗಿನ ಮರಕ್ಕೂ ತಾವೇ ಹತ್ತಿ ಕಾಯಿ ಕೀಳ್ತಿದ್ರು.

ಪ್ರ: ಏತದ ಬಾವಿ ಇತ್ತಾ? ಹೇಗೆ?

ಉ: ಏತದಭಾವಿ ಇರ್ಲಿಲ್ಲ. ಭಾವಿಯಿಂದಲೇ ತೂಕ ಹಿಡಿದು ನೀರು ಹಾಕ್ತಿದ್ರು.

ಪ್ರ: ತೋಟದಲ್ಲಿ ನೀವು ಇನ್ನೇನು ಕೆಲಸ ಮಾಡ್ತಿದ್ರಿ?

ಉ: ನಾನು ಹೆಚ್ಚಿಗೆ ಏನೂ ಮಾಡಿಲ್ಲ. ಒಮ್ಮೊಮ್ಮೆ ಅಡಿಕೆ ಆಯಿಸುತ್ತಿದ್ದೆ, ಹುಣಿಸೆಹಣ್ಣು ಚಚ್ಚಿದ್ದೇನೆ ಅಷ್ಟೆ.

ಇ) ಅಂತಾರಾಷ್ಟ್ರೀಯ ಇತಿಹಾಸ ಸಮ್ಮೇಳನ - ಒಂದು ಅನುಭವ

ಸಂಕೇತಿ ಸಂಗಮ - ಮಾರ್ಚ್ ೨೦೦೧ ***ಡಾ|| ಬಿ.ವಿ. ಸುಧಾಮಣಿ, ರೀಡರ್ (ಇತಿಹಾಸ)***

(ಹಾಸನ ಜಿಲ್ಲೆಯ ಹಳ್ಳಿಯೊಂದರಲ್ಲಿ ರೈತರೊಬ್ಬರ ಮಗಳಾಗಿ ಹುಟ್ಟಿದ ಸುಧಾಮಣಿ ಡಾಕ್ಟರೇಟ್ ಪಡೆದರು, ಸಂಶೋಧನೆಯನ್ನು ಮುಂದುವರಿಸಿದರು, ಬ್ರಿಟನ್‌ವರೆಗೆ ಹೋದರು. ಅಲ್ಲಿ ಸಂಶೋಧಕರ ಮೇಳದಲ್ಲಿ ಸಂಕೇತಿ ಸಮುದಾಯ ಮತ್ತು ಅವರ ಕೃಷಿಯ ಬಗೆಗೇ ಪ್ರಬಂಧವನ್ನು ಮಂಡಿಸಿದರು. ಇವೆಲ್ಲವೂ ಅನೇಕ ದೃಷ್ಟಿಯಿಂದ ಮಹತ್ತ್ವದ ಅಂಶಗಳು. ಅಲ್ಲಿ ಒಪ್ಪಿಸಿದ ಆ ಪ್ರಬಂಧವನ್ನು ಇದರೊಂದಿಗೆ ಕೊಡಲಾಗಿದೆ.)

ಕ್ರಿ.ಶ.೧೯೯೯ರ ಆಗಸ್ಟ್ ತಿಂಗಳಲ್ಲಿ ಮೈಸೂರಿನ ಮಾನಸಗಂಗೋತ್ರಿಯ ಇತಿಹಾಸ ಪ್ರವಾಚಕರೊಬ್ಬರು ಕ್ರಿ.ಶ.೨೦೦೦ ಸೆಪ್ಟೆಂಬರ್‌ನಲ್ಲಿ ನಡೆಯಲಿರುವ ಅಂತಾರಾಷ್ಟ್ರೀಯ ಸಮ್ಮೇಳನಕ್ಕೆ ತಮ್ಮ ಶಿಷ್ಯವೃಂದದಲ್ಲಿ ಕೆಲವರಿಗೆ ಅವಕಾಶ ಒದಗಿಸಲು ನಿಶ್ಚಯಿಸಿದರು. ಆ ವೇಳೆಗಾಗಲೇ ಕರ್ನಾಟಕದ ಸಂಕೇತಿ ಜನಾಂಗದ ಇತಿಹಾಸ ಮತ್ತು ಸಾಂಸ್ಕೃತಿಕ ಪರಂಪರೆ ಕುರಿತು ಐತಿಹಾಸಿಕ ದೃಷ್ಟಿಯಿಂದ, ಆಧಾರಗಳ ಮುಖೇನ ಸಂಶೋಧನೆ ಮಾಡುವತ್ತ ನನಗೆ ಒಲವು ಉಂಟಾಗಿ ಆ ಬಗ್ಗೆ ಸಂಶೋಧನೆ ಆರಂಭಿಸಿದ್ದೆ. ಇದೇ ವಿಷಯಕ್ಕೆ ಸಂಬಂಧಿಸಿದಂತೆ ವಿಷಯ ಒಂದನ್ನು ಆಯ್ಕೆ ಮಾಡಿಕೊಳ್ಳಲು ಯೋಚಿಸಿ ಅಂತಿಮವಾಗಿ 'Sanketis as Brahmin Peasants of Karnataka' ಎಂಬ ವಿಷಯದ ಬಗ್ಗೆ ಲೇಖನ ಮಂಡಿಸಲು ತೀರ್ಮಾನಿಸಿದೆ. ನಂತರ ಈ ಬಗ್ಗೆ ಒಂದು ಸಂಕ್ಷಿಪ್ತ ವಿವರಣೆಯನ್ನು ಸ್ಕಾಟ್ಲೆಂಡಿನ ಎಡಿನ್‌ಬ್ರೋ ವಿಶ್ವವಿದ್ಯಾನಿಲಯಕ್ಕೆ ಕಳುಹಿಸಿದಾಗ ಆ ಲೇಖನಕ್ಕೆ ಸಂಘಟನಕಾರರ ಮನ್ನಣೆ ದೊರೆತು, ಅಲ್ಲಿಂದ ಸಮ್ಮೇಳನದಲ್ಲಿ ಲೇಖನ ಮಂಡಿಸಲು ಆಹ್ವಾನ ಬಂದಿತು. ಪ್ರಬುದ್ಧವಾದ ಸಂಶೋಧನಾ ಲೇಖನ ತಯಾರಿಕೆಗಾಗಿ ಧರ್ಮಶಾಸ್ತ್ರ ಕೃತಿಗಳು, ಶಾಸನಗಳು ಇತರ ಆಧಾರಗ್ರಂಥಗಳ ಅಧ್ಯಯನ ಕಾರ್ಯ ನಿರಂತರವಾಗಿ ಮುಂದುವರೆಯಿತು. ಇದರ ಜತೆಗೆ *ತಮಿಳುನಾಡು, ಕೇರಳಗಳಲ್ಲಿ ಪ್ರವಾಸ ಕೈಗೊಂಡು* ನಮ್ಮ ಪೂರ್ವಿಕರು ತೊರೆದು ಬಂದ ಸ್ಥಳಗಳಲ್ಲೇ ಇನ್ನೂ ನೆಲೆಸಿರುವ ಸಂಕೇತಿ ಬ್ರಾಹ್ಮಣರ ವ್ಯವಸಾಯದ ಪರಿಯನ್ನು ಅರಿಯಲು ಯತ್ನಿಸಲಾಯಿತು. ಆಯ್ದ ಸ್ಥಳಗಳಿಗೆ ಭೇಟಿ ನೀಡುವುದರ ಜತೆಗೆ ಸಂದರ್ಶನದ ಮೂಲಕವೂ ವಿಷಯ ಸಂಗ್ರಹಣೆ ಮಾಡಲಾಯಿತು. ಈ ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಡಾ||ಪ್ರಣತಾರ್ತಿಹರನ್, ರೀಡರ್, ಸರ್ಕಾರಿ ಬಾಲಕರ ಕಾಲೇಜು, ಮಂಡ್ಯ ಇವರ ಸಹಕಾರ ಲಭಿಸಿದ್ದು ನನ್ನ ಸೌಭಾಗ್ಯ. ಸ್ವತಃ ರೈತ ಕುಟುಂಬದಲ್ಲೇ ಹುಟ್ಟಿ ಬೆಳೆದ ನಾನು ಅದರ ಬಗ್ಗೆ ಹೆಚ್ಚು ಹೆಚ್ಚು ಅರಿಯಲು ಕರ್ನಾಟಕದ ಅನೇಕ ಸಂಕೇತಿ ರೈತರನ್ನು ಸಂದರ್ಶಿಸಿ ವಿಷಯ ಸಂಗ್ರಹಿಸಿದೆ. ಅಂತಿಮವಾಗಿ ನನ್ನ ಸಂಶೋಧನಾ ಲೇಖನ ಒಂದು ರೂಪ ಪಡೆಯಲು ಒಂದು ವರ್ಷ ಬೇಕಾಯಿತು.



ಸಂಕೇತಿಕೃಷಿಯ ಬಗೆಗೆ ಮಾಹಿತಿ ಕೊಟ್ಟ ವೆಂಕಟೇಶ್ವರ ಅಯ್ಯರ್ ದಂಪತಿ:ತಿರುವನಂತಪುರ

ಈ) Sanketis as Brahmin-Peasants of Karnataka

- Dr|| B.V. Sudhamani, M.A., B.Ed., Ph.D., Mysore

(A paper presented during the 16th World History Conference held at the University of Edinburg, Scotland in September 2000)

Throughout Indian History Brahmins constituted a microscopic minority. But it was not the number that mattered. It was their power and influence on the society in general that mattered most. They were the originators of both orthodox and heterodox movements in India. Besides, they conserved and propagated the cultural ideas of non-Brahmin intellectuals of the land. All Brahmins were not Pundits or priests. Due to necessity of livelihood and also due to lack of proper inclination and scholarship many Brahmins sought different avenues for employment. Many sects arose among the Brahmins with their unifying and dividing characteristics. In this paper an attempt has been made to understand under what circumstances the Sanketis, a Brahmin sect of Southern Karnataka have been engaging in agriculture since 11th century. The following questions have been raised in the paper.

1. How did Sanketis get their name as "Sanketis"?
2. What was the origin of the Sanketis?
3. What were the factors responsible for their migration to Karnataka?
4. Why did they select agriculture when orthodoxy prevents Brahmins from being agriculturists?

An effort has been made to find answers to these questions in the present paper.

A number of theories have been advanced to explain the meaning of the word "Sanketi." Among them mention may be made of symbolic origin theory, Group Contact theory, Corporate origin theory, Vedic knowledge origin theory, Music achievement origin theory and Geographical origin theory. According to Symbolic origin theory, 'the groups of farmers who shared the Sanketa or Code word, became Sanketis.'[1] The group contact theory suggests that the Sanketi is derived from Sanketam which means "certain terms to be subscribed and acted by all of them, that is, that they should hold together under all circumstances, and never go back to their homes in TamilNadu".[2]

The corporate origin theory derives the word "Sanketi" from Sanketams.[3] Sanketam was the name of original Sanketi Brahmin settlements in TamilNadu, which included a temple, over which they exercised control. Broadly it was similar to Agrahara or Brahmadeya settlements. According to Vedic knowledge origin theory the word is derived from Sankhyarthi which means a Brahmin scholar well-versed in Vedangas particularly numerology, logic, astrology apart from affiliation to Samhitas.[4] Similarly Music achievement origin theory tries to derive the term from Sangeetam or Music in which the community in general had expertise. This is true even to this day. Geographical origin theory believes that their original home was Sankotai in TamilNadu and Sanketa denotes the group, which migrated from that place.[5] The word 'Sankai - Adi' means people from Sankotai which gradually got changed to 'Sankyadi' later to 'Sankyadi', later to 'Sankayeti', 'Sankeeti' and finally to 'Sanketi.'

All the theories agree that they migrated from TamilNadu but the places suggested are Sankotai,[6] Madurai[7] and Kanchi.[8] The existing evidence suggests that Sanketi Brahmins migrated to Southern Karnataka in about 1075 AD.[9]

The reason for migration, as per a strong oral tradition among all the Sanketi groups, is that Nacharamma, the illiterate wife of a poor Brahmin named Aryasharma drank a potion, prepared for her son to make him learned and because of that became learned herself. Jealous Brahmin scholars who could not tolerate a woman becoming their equal, after being defeated by her in scholarly argument, asked her to prepare a grand meal for them and serve them herself. They secretly smeared her saree with some slippery material and while serving ghee (butter oil) she realised the trick and tied the two slipping ends of her saree into a knot on her left shoulder. She cursed them saying that the life span of the people of that place will be shortened, they will be issueless, impoverished and always quarrelling. When the culprits implored her forgiveness she said it was beyond her power to take back the curse but they can get some remedy by leaving that place and following her to a new place where she promised to take them. As a result a batch of 700 families followed her to Karnataka and after 12 years another batch of 300 followed suit.[10] Sanketi women used to wear their sarees in Nacharamma Style on festive occasions. In those days of blind belief in curses, migrating of 1000 families because of a curse may not be improbable.

The probable routes taken by Sanketis are Sankotai --Madurai --Trichinopoly --Erode -- Shivanasamudram --Hemmige --Srirangapattanam --Edatore --Kowshika. They must have closely adhered to the river route through the fertile valleys, pursuing their march from Tirunelveli to Kowshika. As this was the usual trade route, we may assume that the Sanketis had known this route and must have taken it.

In the early 11th Century portion of Southern Karnataka bordering on TamilNadu was part of the Chola Empire, which fact probably facilitated the migration of this distinct group of Brahmins to Cauvery basin area. The places of their new settlements were found most convenient for their daily *anushthana* (religious performances viz., bath and prayers, Vedic and Sastric studies) and agricultural pursuits.

From the beginning *even in their original home Sanketis were engaged in agriculture* and they continued to do so even after the migration.[12] Now the question arises as to whether any Brahmin group engaged in agriculture was in tune with the injunctions of smrithis? In this connection we may note a few opinions of the Smriti writers. **Manu** allows a Brahmin in distress to take up agriculture, but prohibits him from touching or using the plough. Other Smriti writers also approve this with some specific conditions.[13] Harita declares 'the ploughshare (agriculture) carries with it destruction of life, therefore it is not for Brahmins; but if he were to follow it in distress he should pursue it only till his object (of tiding over distress) is accomplished'.[14] Similarly **Parasara** allows a Brahmin to engage in agriculture, but lays down certain restrictions that is the proper number of oxen to be yoked to the plough is eight, six being middling, four are yoked only by the cruel and by those who sacrifice the lives of their oxen, he should not yoke an ox that is hungry, thirsty or tired, he should make the oxen work only for half the day and then bathe them in water, he should offer the **five mahayajnas** and other sacrifices with corn raised by himself engaging in agriculture, the

sin of ploughing the earth for a day with an iron - tipped ploughshare is equal to that incurred by a fisherman fishing for a year: he should give 1/6 of the corn to the King, offer 1/21 to gods and 1/30 to Brahmanas and then he may not be smeared with sin.[15] Similarly, **Bodhayana** says "the study of the Veda tends to the destruction of agriculture and devotion to agriculture tends to the loss of the study of the Veda. One who has the capacity to look after both may resort to both, but he who is unable to look after both should give up agriculture."[16]

However, all the Smriti writers *prohibit a Brahmin from ploughing the land* as it injures the living things contained in the earth and is also injurious to cattle population engaged in agricultural operations. That is why Sanketi Brahmanas though peasants, do not deviate from the Sastric injunction. They have *specialised in raising gardens* which do not involve the using of a plough.

The question that arises is that inspite of their knowledge of the Vedas, Vedangas as well as Music how did they come to practice agriculture as independent peasants raising coconut, arecanut, betel leaf and fruit gardens in Southern Karnataka as we know that the Sanketi Brahmins were involved in agriculture before they migrated to Karnataka. After they migrated to Karnataka they continued growing same crops even in Karnataka, on a plantation basis, as it was a profession with which they were familiar. That profession did not violate Manu's injunction as it did not involve dependence on hired labour, plough and oxen. Also local Brahmins who have amassed wealth from generations due to brahmadeyas and other sources could afford to observe strictly the religious rule that a Brahmin should not be engaged in *agriculture except when he is in distress*. Whereas Sanketis who had come as landless immigrants seeking livelihood were forced to violate that rule and took shelter under *exemptions of Smriti writers*. During the later generations also their basic independent nature and hard work came in the way of extending their hand before a donor as per tradition. Probably, they were subtly discriminated against, as they were engaged in agriculture. Probably, many distinguished donors did not find them fit for brahmadeya grants as they were engaged in an agricultural profession. This might have been a strong reason for the Sanketis not having brahmadeya grants in plenty.



ತೋಟವೇ ನಮ್ಮ ಜೀವ

An important characteristic of the Sanketis is that they own land and grow crops like coconut, arecanut, betel leaf and banana but they do not grow crops like paddy, wheat or Ragi (local grain). This was, probably, because these crops required large-scale labour, and the use of oxen for ploughing and other purposes. Probably, there was another reason also. As these Sanketis continued their Vedic learning and practices in addition to agriculture they required more time

than a full time agriculturist to look after *both the professions*. As Sanketis were going to nearby places as priests or were engaged in religious rites like sacrifices they were not in a position to pay full attention to agriculture. Growing grain requires full time attention to agriculture whereas garden crops could afford to be neglected for a week or two when the Sanketi Brahmins were engaged in their religious activities. Also, gardening afforded them *leisure to teach Vedic vidyas* to their students while in gardens. Particularly certain portions of the Aranyakas were required to be taught outside the residential places only and gardens provide ideal places for such teaching activities. The teacher and the student together could be engaged in *teaching and gardening activities simultaneously*. Thus we see that the Sanketis remained growers of arecanut and coconut, but still being vigorously engaged in Vedic learning. Even to this day there are many legends, current among the Sanketis, which say that the Sanketis refused to accept danas given by local ruling elite.

By way of conclusion it may be pointed out that the Sanketi Brahmin peasants of Southern Karnataka remained throughout the Premodern period as *independent peasants*. They neither leased lands from others nor they leased theirs to others. They were unlike other Brahmana intermediaries living in **Agrahara Brahmadeya settlements**. They never acted as landed intermediaries in the agrarian system of the origin. The interesting point is, along with their agricultural profession they continue to preserve the Vedic knowledge and Music tradition. Till recently they were mostly rooted in rural areas. The modern circumstance affected them as it affected the other sections. The State neither patronised them nor did they seek the patronage of the state as in the case of other sections of Brahmins of the area. They were paying land revenue to the State like any other shudra peasants in the area. They never claimed sarvamanya privileges.

Notes and References:

1. Keshava Murthy, C.N. and Krishna Murthy, K.N. "Sanketi language" *Silver Jubilee Souvenir,* (Mysore 1977).

2. Nanjundaiah H.V. Ananthakrishna Iyer, L.K. *The Mysore Tribes and Castes*, Vol.2, (Mysore: 1928) P. 315.

3. Rajaram Murthy (Ed) "Sanketigalu Yaru?" by Keshava Murthy. K.S. Vol.1, 2-3, Shimoga, 1978, Pp.15-17.

4. Ramachandra C.S. "Sanketi language and Community" *Manavika Karnataka,* Vol.16, Mysore University, 1985, PP.13-14. Keshava Murthy C.N. "Sanketi language" *Souvenier,* Kowshika Sanketi Sangha, Jayanagara, Mysore - 1977.

5. The field study undertaken in connection with the preparation of this paper supported this view. This was also supported by Dr. B.S.P. Haran, Reader in Kannada, Government Boys College, Mandya, Karnataka, whose subject for his doctoral thesis was the *'Sanketis - A study'.*

6. B.S.P.Haran, *'Sanketis - A Study',* (Unpublished Thesis) Mysore University, 1993, P.58. Published: 2003.

7. Lindsey A.W.C., *Mysore General Census Report,* Part-104, Sub-division 25, 1871, P.56.

8. Thurston Edgar, *Caste and Tribes of Southern India,* Vol.I, (Madras - 1909) P.343.

9. "Sanketi Brahmanara Valaseya Kala", Dr. B.V. Sudhamani, *Itihasa Darshana,* M.G. Nagaraj (Ed), Bangalore, 2001, P.266.

10. As per the oral tradition which was confirmed when the field work was undertaken in Karnataka.

11. This is confirmed by the fieldwork.

12. Ganganatha Jah (Ed), *Manu-Smrithi* (Calcutta: 1939), Vol.2, Chapter-10, Verses: 83, 84, P.354.
Vishya Vrityapi Jeevamstu Brahmanaha Kshatriyopiva |
Himsaprayam Paradheenam Krishim Yatnena Varjayet ||
Krishim Sadhviti Manyante Sa vrittihi Sadhvigarhita |
Bhumim Bhumishayamshyaiva Hanti Kastamayo Mukham ||
ವೈಶ್ಯವೃತ್ತ್ಯಾಪಿ ಜೀವಂಸ್ತು ಬ್ರಾಹ್ಮಣಃ ಕ್ಷತ್ರಿಯೋಽಪಿ ವಾ |
ಹಿಂಸಾಪ್ರಾಯಾಂ ಪರಾಧೀನಾಂ ಕೃಷಿಂ ಯತ್ನೇನ ವರ್ಜಯೇತ್ ||
ಕೃಷಿಂ ಸಾಧ್ವಿತಿ ಮನ್ಯಂತೇ ಸಾ ವೃತ್ತಿಃ ಸದ್ವಿಗರ್ಹಿತಾ |
ಭೂಮಿಂ ಭೂಮಿಶಯಾಂಶ್ಚೈವ ಹಂತಿ ಕಾಷ್ಠಮಯೋ ಮುಖಮ್ ಮನು *10.83-84*

13 Ganganatha Jah : Editor : *Manusmrithi;* Calcutta, 1939, Vol.2, Ch.10, Verses:83-84, P-354.

14. *Sahasunam langalam tadbrahmane na vidyate |*
Apadhyacharitvadhyadi Kuryadhyathartham ||
ಸಹಸೂನಂ ಲಾಂಗಲಂ ತದ್ಬ್ರಾಹ್ಮಣೇ ನ ವಿದ್ಯತೇ |
ಆಪದ್ಯಾಚರಿತ್ವಾದ್ಯದಿ ಕುರ್ಯಾದ್ಯಥಾರ್ಥಮ್ |
Kane, P.V. *History of Dharmashastra,* Vol.II, Part.1, (Poona: 1974), P.126.
Dogar, N N *Grihastharatnakara,* Delhi, 1994, PP.20-24.

15. Kane P.V. *History of Dharmashastra,* Vol.2, Part-1, Page 126.

16. Srinivasacharya (Ed) *Baudhayana Dharma Sutra with commentary of Govinda Swamin,* Govt. of Mysore, 1907, PP 195-196.
Vedaha Krishivinashaya Krishirvedavinashinee |
Shakthimanubhayam Kuryadashaktastu Krishim tyajet. ||
ವೇದಃ ಕೃಷಿವಿನಾಶಾಯ ಕೃಷಿರ್ವೇದವಿನಾಶಿನೀ |
ಶಕ್ತಿಮಾನುಭಯಂ ಕುರ್ಯಾದಶಕ್ತಸ್ತು ಕೃಷಿಂ ತ್ಯಜೇತ್ || *ಬೌಧಾಯನ ಧರ್ಮಸೂತ್ರ*

೧೬. 'ಕಥಾವಸ್ತುವಾಗಿ ಸಂಕೇತಿಗಳು'

ಸಂಪಾದಕ : ಡಾ.ಪ್ರಣತಾರ್ತಿಹರನ್, ೨೦೦೦
ಸಮುದಾಯ ಅಧ್ಯಯನ ಕೇಂದ್ರ, ಮೈಸೂರು.

ಭಲ್ಲೂಕಪುರದ ಅಪ್ಪಾಜಿಭಟ್ಟ

ಪು.೨೦-೩೨

- ನಿಜಘಟನೆಯು ಐತಿಹ್ಯವಾಗಿ, ಐತಿಹ್ಯವು ಜನಪದ ಕಥೆಯಾಗಿ ರೂಪು ತಳೆದ ಭಾಗ ;
ನಿರೂಪಣೆ: ಮತಿಘಟ್ಟ, ಕೃಷ್ಣ ಮೂರ್ತಿ

(ಸಂಕೇತಿ ಸಮುದಾಯದಲ್ಲಿ ನಡೆದ ಘಟನೆಗಳು ಸಣ್ಣ ಕಥೆಗಳಿಗೆ ಹೇಗೆ ವಸ್ತುವಾಗಿವೆ ಎಂಬುದು ಕುತೂಹಲದ ಸಂಗತಿ. ಅದರ ಅಧ್ಯಯನದ ಭಾಗವಾಗಿ ಬಂದುದು 'ಕಥಾವಸ್ತುವಾಗಿ ಸಂಕೇತಿಗಳು' ಎಂಬ ಈ ಕೃತಿ. ಪ್ರಸ್ತುತ ಕಥೆಯ ನಿಜ ನಾಯಕನು ನೆಲೆಸಿದ್ದುದು ಹಾಸನ ಜಿಲ್ಲೆಯ ಗೆಜ್ಜಗನಹಳ್ಳಿಯಲ್ಲಿ. ಆತನ ವಂಶಜರು ಈಗಲೂ ಅಲ್ಲಿ ಇದ್ದಾರೆ. ಈ ಘಟನೆಯ ಸಂಬಂಧದಲ್ಲಿ ಮಹಾರಾಜರಿಂದ ಬಳುವಳಿಯಾಗಿ ಬಂದ ರಣಗತ್ತಿಯೂ ಅವರ ಬಳಿ ಇದೆ. ಆದರೆ ಇದು ನಾಡಿನ ನಾನಾ ಭಾಗಗಳಲ್ಲಿ ಪಾಠಾಂತರದೊಂದಿಗೆ ಬಹಳ ಪ್ರಚಾರದಲ್ಲಿದೆ. ಅಂಥ ಪಾಠಾಂತರಗಳಲ್ಲಿ ಇದೂ ಒಂದು.)

ಮುಮ್ಮಡಿ ಕೃಷ್ಣರಾಜ ಒಡೆಯರ ಕಾಲ. ಮೈಸೂರು ಪಟ್ಟಣಕ್ಕೆ ಸುಮಾರು ಎಂಟು ಹತ್ತು ಮೈಲಿ ದೂರದಲ್ಲಿ ಭಲ್ಲೂಕಪುರ ಎನ್ನುವ ಒಂದು ಅಗ್ರಹಾರವಿತ್ತು. ಆ ಅಗ್ರಹಾರದಲ್ಲಿ ಅಪ್ಪಾಜಿಭಟ್ಟ ಎನ್ನುವ ಒಬ್ಬ ಸಂಕೇತಿ ಬ್ರಾಹ್ಮಣನಿದ್ದ. ಅವನಿಗೆ ಸುಮಾರು ಇಪ್ಪತ್ತೈದು ವರ್ಷದ ಪ್ರಾಯ. ಆರಡಿ ಎತ್ತರದ ಆಜಾನುಬಾಹು. ಅವನ ಎದೆ ಸಲಗನ ಹಣೆ ಇದ್ದ ಹಾಗಿತ್ತು. *ನೋಡುವುದಕ್ಕೆ ಭೀಮ ಕಂಡ ಹಾಗೆ ಕಾಣುತ್ತಿದ್ದ.*

ಅವನಿಗೆ ಕೆರೆಯ ಹಿಂದೆ ಅಡಿಕೆ ತೆಂಗು ಬಾಳೆ ಇರುವ ಮೂರು ಎಕರೆ ತೋಟ ಇತ್ತು. ಮೊದಲ ಕೋಳಿ ಕೂಗುವ ಹೊತ್ತಿಗೆ ಸರಿಯಾಗಿ ಎದ್ದು, ತೋಟಕ್ಕೆ ಹೋಗಿ ಬಾಳೆಗೆ ಅಗತೆ ಮಾಡುತ್ತಿದ್ದ. ಅವನು ಅಗತೆ ಮಾಡುವ ಗುದ್ದಲಿ ಅವನಿಗೆ ತಕ್ಕ ಹಾಗೆಯೇ ಇತ್ತು. ಒಂದು ಧಡಿಯ ತೂಗುವ ಕಂಠಕ್ಕೆ ಎರಡು ಅಂಗೈ ದಪ್ಪದ ಸುಮಾರು ಒಂದೂವರೆ ಅಡಿಯಷ್ಟು ಅಗಲದ ತಾಳು; ಅದಕ್ಕೆ ಒತ್ತೋಳಿಗೂ ಹೆಚ್ಚು ಉದ್ದವಾದ ರೆಪ್ಪೆ ಕಟ್ಟಿತ್ತು. ಅದಕ್ಕೆ ತಕ್ಕ ಜಾಲಿಯ ಕಾವು. ಕಚ್ಚೆ ಬಿಗಿದು, ಗುದ್ದಲಿ ಹಿಡಿದು ಅಪ್ಪಾಜಿಭಟ್ಟ ಅಗತೆ ಮಾಡುವುದಕ್ಕೆ ನಿಂತ ಅಂದರೆ ನೆಲವೇ ತಲ್ಲಣಿಸಿಹೋಗುತ್ತಿತ್ತು. ಗುದ್ದಲಿಯನ್ನೆತ್ತಿ ಅದೆಂಥ ಒಣ ನೆಲವಾಗಿರಲಿ, ಏಟು ಹಾಕಿದ ಅಂದರೆ, ಕಾವಿನವರೆಗೂ ಗುದ್ದಲಿ ನೆಲದಲ್ಲಿ ನಾಟಿಬಿಡುತ್ತಿತ್ತು. ಅದನ್ನ ಮೀಟಿದ ಅಂದರೆ ಸಾಕು, ಅರ್ಧ ಚದರ ಗಜದ ದಪ್ಪದ ಮಣ್ಣು ಹೆಂಟೆ ಕಿತ್ತುಬರುತ್ತಿತ್ತು.

ಹೀಗೆ ಬೆಳಕು ಹರಿಯುವವರೆಗೆ ಅವನು ಅಗತೆ ಮಾಡುವನು. ಒಂದೇ ಸಮನೆ ಎರಡು ದಿನ ಅವನು ಒಂದೇ ಗುದ್ದಲಿಯಲ್ಲಿ ಅಗತೆ ಮಾಡುತ್ತಿರಲಿಲ್ಲ. *ಗುದ್ದಲಿಗೆ ಆಯಾಸ ಆಗಬಾರದೆಂದು, ಒಂದು ದಿನ ಅಗತೆ ಮಾಡಿದ ಗುದ್ದಲಿಗೆ ಎರಡು ದಿನ ಬಿಡುವು ಕೊಡುತ್ತಿದ್ದ.*

ಪ್ರತಿದಿನ ಹೀಗೆ ತೋಟದಲ್ಲಿ ಅಗತೆ ಮಾಡುವುದು, ಗೊಬ್ಬರ ಗೋಡು ಹೊತ್ತು ಹಾಕುವುದು ಮೊದಲಾದ ಕೆಲಸಗಳನ್ನು ಮಾಡಿ, ಸೂರ್ಯೋದಯಕ್ಕೆ ಸರಿಯಾಗಿ ತೋಟದಲ್ಲಿದ್ದ ಪುಷ್ಕರಣಿಯಲ್ಲಿ ಮಿಂದು ಸಂಧ್ಯಾವಂದನೆ ಮಾಡುವನು. ಅಷ್ಟರಲ್ಲಿ ಅವನ ಹೆಂಡತಿ ಒಂದು *ಹದಿನೈದು ಇಪ್ಪತ್ತು ರೊಟ್ಟಿ*, ಒಂದು ಸೇರು ಉದ್ದು ಹಾಕಿ ತಿರುವಿದ ಒಂದು ದೊಡ್ಡ ಮುದ್ದೆ ಚಟ್ನಿಯನ್ನು ಮತ್ತು ಒಂದು ಸೇರಿನಷ್ಟು ಹುಚ್ಚೆಳ್ಳನ್ನು ತೆಗೆದುಕೊಂಡು ಬರುವಳು. ಸುಲಿದ ಒಂದು ದೊಡ್ಡ ಅಡಿಕೆಯ ಹಾಳೆಯಲ್ಲಿ ರೊಟ್ಟಿಗಳನ್ನು ಇಟ್ಟು, ಚಟ್ನಿ ಹಾಕಿ ಅದರ ಮೇಲೆ *ಒಂದು ಸೇರು ಹುಚ್ಚೆಳ್ಳನ್ನೂ ಕೈಲೇ ಹಿಂಡಿ ಎಣ್ಣೆ ಸುರಿಯುವಳು.* ಅವರ ಮನೆಯಲ್ಲಿದ್ದ ಕರಾವಿನ ಎಮ್ಮೆಹಸುಗಳೂ ಅಷ್ಟೆ; ಕೊಡ ಕೊಡ ಹಾಲು ಕೊಡುತ್ತಿದ್ದವು. ತೋಟದ ಕೆಲಸ ಮುಗಿಸಿ, ತಿಂಡಿ ತಿಂದು, ಒಂದು ಹಸುವನ್ನೋ ಎಮ್ಮೆಯನ್ನೋ ಹಿಂಡಿ, ಅದು ಕೊಟ್ಟಷ್ಟು ನೊರೆ ಹಾಲನ್ನೂ ಕುಡಿದುಬಿಡುತ್ತಿದ್ದನು. ಬೆಳಗ್ಗೆ ಇಷ್ಟು ತಿಂಡಿ ತಿಂದು, ಮಧ್ಯಾಹ್ನ ಹೊತ್ತು ಮಾಲುವ ಹೊತ್ತಿಗೆ ಮನೆಗೆ ಬಂದು ಊಟ ಮಾಡುವನು. ಮೂರು ಸೇರು ಅಕ್ಕಿಯ ಅನ್ನ, ಅದಕ್ಕೆ ತಕ್ಕ ಸಾರು, ಹುಳಿ, ಪಲ್ಯ, ಕೋಸಂಬರಿ, ಉಪ್ಪು, ಉಪ್ಪಿನಕಾಯಿ,

ಮೊಸರು - ಇಷ್ಟಾದರೆ ಆಯಿತು ಅವನ ಊಟ! ಮಧ್ಯಾಹ್ನ ಊಟ ಮುಗಿಸಿ ಸ್ವಲ್ಪ ವಿಶ್ರಾಂತಿ ತೆಗೆದುಕೊಂಡು, ತೋಟಕ್ಕೆ ಹೋಗಿ ಸಣ್ಣಪುಟ್ಟ ಕೆಲಸ ಮಾಡಿಕೊಂಡು ಕತ್ತಲಾದ ಮೇಲೆ ಮನೆಗೆ ಬರುವನು. ರಾತ್ರಿಯ ಊಟಕ್ಕೆ ಒಂದು ಸೇರು ಅಕ್ಕಿಯ ಲವಾಜಮೆ, ಅರ್ಧಗೊನೆ ರಸಬಾಳೆ ಹಣ್ಣು ಆದರೆ ಸಾಕು.

ಅಪ್ಪಾಜಿಭಟ್ಟ ತಪ್ಪದೆ ವಾರಕ್ಕೊಂದು ದಿನ ಮೈಸೂರು ಪೇಟೆಗೆ ಬಾಳೆಕಾಯಿ, ತೆಂಗಿನಕಾಯಿ ಹೊತ್ತುಕೊಂಡು ಹೋಗಿ ಮಾರಾಟ ಮಾಡಿ, ಅಲ್ಲಿಂದ ಮನೆಗೆ ಬೇಕಾದ ಸಾಮಾನುಗಳನ್ನು ಕೊಂಡು ತರುವನು. *ಅರ್ಧ ಗಾಡಿ ತುಂಬುವಷ್ಟು ಹೊರೆಯನ್ನು, ತಲೆಯ ಮೇಲೇ ಹೊತ್ತುಕೊಂಡು* ಬೆಳಗಿನ ಜಾವ ಊರು ಬಿಟ್ಟು ಹೊರಟ ಅಂದರೆ, ಬೆಳಕು ಹರಿಯುವಷ್ಟರಲ್ಲಿ ಮೈಸೂರಿಗೆ ಹೋಗಿ ಸೇರುತ್ತಿದ್ದನು. ಅಲ್ಲಿ ತನ್ನ ವ್ಯಾಪಾರ ಮುಗಿಸಿಕೊಂಡು ಮನೆಗೆ ಮಧ್ಯಾಹ್ನದ ಊಟದ ಹೊತ್ತಿಗೆ ವಾಪಸು ಬರುವನು. . . . . .

ಒಂದು ದಿನ ಅವನು ಹಾಗೆ ಮೈಸೂರಿಗೆ ಹೋಗಿದ್ದಾಗ

ಉತ್ತರದೇಶದ ಜಟ್ಟಿ ವಿಜಯೋನ್ಮತ್ತನಾಗಿ "ಮತ್ತೆ ಯಾರು ಬರುತ್ತೀರಿ, ಬನ್ನಿ" ಎನ್ನುವಂತೆ ಬೀಗಿ ಅಖಾಡದಲ್ಲೇ ನಿಂತಿದ್ದ.

ಮಹಾರಾಜರಿಗೆ ಗೆದ್ದ ಜಟ್ಟಿಯ ಬಗ್ಗೆ ಮೆಚ್ಚಿಕೆಯಾದರೂ, ತಮ್ಮ ಆಸ್ಥಾನದ ಕೀರ್ತಿ ಮಸುಕಾಯಿತಲ್ಲ ಎಂದು ನೋವೂ ಆಯಿತು.

ಆಗ, ಕುಸ್ತಿ ನೋಡುತ್ತಿದ್ದ ಜನರ ಗುಂಪಿನಲ್ಲಿ ಗದ್ದಲ ಮೊದಲಾಯಿತು. ಅಖಾಡದತ್ತ ನುಗ್ಗುತ್ತಿದ್ದ ಮನುಷ್ಯನೊಬ್ಬನನ್ನು ಹಲವರು ಬಲವಂತವಾಗಿ ತಡೆಯುತ್ತಿದ್ದುದು ಮಹಾರಾಜರ ದೃಷ್ಟಿಗೆ ಬಿತ್ತು. ಆ ಗದ್ದಲ ಏನೆಂದು ವಿಚಾರಿಸಿಕೊಂಡು ಬಂದ ಭಕ್ಷಿಗಳು,

"ಮಹಾಸ್ವಾಮಿ, ಅಲ್ಲೊಬ್ಬ ಬ್ರಾಹ್ಮಣನಿದಾನೆ! 'ಅಪ್ಪಣೆಯಾದರೆ *ಈ ಜಟ್ಟಿಯನ್ನು ಕ್ಷಣಮಾತ್ರದಲ್ಲಿ ಸೋಲಿಸುತ್ತೇನೆ*' ಎನ್ನುತ್ತಾನೆ" ಎಂದು ಅರಿಕೆ ಮಾಡಿದರು.

"ಆತ ಯಾರು?" ಎಂದು ಕೇಳಿದರು ಮಹಾರಾಜರು.

"ಭಲ್ಲೂಕಪುರವಂತೆ. ಹೆಸರು ಅಪ್ಪಾಜಿಭಟ್ಟ" ಎಂದರು ಭಕ್ಷಿಗಳು.

ಮಹಾರಾಜರು ಮಂದಹಾಸ ಬೀರಿ "ಆ ಬ್ರಾಹ್ಮಣನ ಕೈಕಾಲು ಊನವಾಗುವುದಕ್ಕೇಕೆ ನಾವು ಕಾರಣವಾಗಬೇಕು?" ಎಂದರು.

"*ಒಳ್ಳೆ ಶಕ್ತನಾಗಿ ಕಾಣುತ್ತಾನೆ ಮಹಾಸ್ವಾಮಿ. ಇನ್ನೂ ಇಪ್ಪತ್ತೆಂಟು ಮೂವತ್ತರ ಪ್ರಾಯ. ಅಲ್ಲದೆ, ಆತ ಸಂಕೇತಿ ಬ್ರಾಹ್ಮಣ*" ಎಂದರು ಭಕ್ಷಿಗಳು.

"ಹಾಗಿದ್ದರೆ ಆತನನ್ನು ಕರೆಸಿ, ನೋಡೋಣ" ಎಂದರು ಮಹಾರಾಜರು.

ಅಪ್ಪಾಜಿ ಭಟ್ಟ - ಉತ್ತರದ ಜಟ್ಟಿಯ ಮುಂದೆ ಬಂದು ನಿಂತನು.

"ನೀನೇನು ಜಟ್ಟಿಯೋ?" ಎಂದನು ಜಟ್ಟಿ.

"ಕುಸ್ತಿ ಮಾಡಿ ನೋಡು, ನಿನಗೇ ತಿಳಿಯುತ್ತದೆ" ಎಂದನು ಭಟ್ಟ.

"ವರಸೆಗಳು ಗೊತ್ತೋ? ಪಟ್ಟುಗಳನ್ನು ಬಲ್ಲೆಯೊ?"

"ಈಗ ಅದರ ಚರ್ಚೆಯಾಕೆ? ಇಗೋ, ನಾನಿಲ್ಲಿ ನಿಂತುಕೊಳ್ಳುತ್ತೇನೆ. ನಿನಗೆ ಬೇಕಾದ ಪಟ್ಟುಹಾಕಿ ನನ್ನನ್ನು ನಿಂತ ಜಾಗದಿಂದ ಕದಲಿಸಿಬಿಟ್ಟರೆ ನೀನು ಗೆದ್ದ ಹಾಗೆ, ಇಲ್ಲದಿದ್ದರೆ ಸೋತ ಹಾಗೆ" ಎಂದು ಅಬ್ಬರಿಸಿ, ಅಪ್ಪಾಜಿಭಟ್ಟ ಎರಡು ಕೈಗಳನ್ನೂ ಸೊಂಟದ ಮೇಲೆ ಇಟ್ಟುಕೊಂಡು, ಹೆಜ್ಜೆಗಳ ಮಧ್ಯೆ ಸುಮಾರು ಎರಡು ಅಡಿ ಅಂತರವಿರುವಂತೆ ನಿಂತುಕೊಂಡ.

ಅಪ್ಪಾಜಿಭಟ್ಟನ ಆಳ್ತನವನ್ನು ಕಂಡು ಉತ್ತರದ ಜಟ್ಟಿ ಬೆರಗಾದರೂ ಅವನ ಜನಿವಾರವನ್ನೂ, ತಲೆಯ ಮೇಲಿನ ಪಿಳ್ಳಿಜುಟ್ಟನ್ನೂ ಕಂಡು "ಇವನೊಬ್ಬ ಹಾರುವ ಪುಳಿಚಾರು; ತಿಂದು ಊದಿದ್ದಾನೆ. ಮುಟ್ಟಿದರೆ ಸಾಕು, ಮುದುರಿಕೊಳ್ಳುತ್ತಾನೆ" ಎಂದುಕೊಂಡು, ಅಲಕ್ಷ್ಯದಿಂದ ಬಂದು ಅಪ್ಪಾಜಿಭಟ್ಟನನ್ನು ಮುಷ್ಟಿಯಿಂದ ಗುದ್ದಿದ ಕೂಡಲೇ, ಕಲ್ಲುಬಂಡೆಗೆ ಕೈ ಹೊಡೆದ ಅನುಭವವಾಗಿ ತಿರಸ್ಕಾರದ ಜಾಗದಲ್ಲಿ ಭಯ ಮೂಡಿಬಂತು.

ನೆಲದಾಳದಿಂದ ಮೇಲಕ್ಕೆ ಎದ್ದ ಕೋಡು ಕಲ್ಲಿನಂತೆ ನಿಂತಿದ್ದ ಅಪ್ಪಾಜಿಭಟ್ಟ. ಅವನನ್ನು ನಿಂತಜಾಗದಿಂದ ಕದಲಿಸಲು ಆ ಜಟ್ಟಿ ಸರ್ವಸಾಹಸ ಮಾಡಿದ. ತಿವಿದ, ಗುದ್ದಿದ, ನೂಕಿದ, ಅಮುಕಿದ, ಜೋತುಬಿದ್ದ, ಕಾಲಿಗೆ ತೊಡರಿದ. ಏನೇನು ಮಾಡಿದರೂ ಅಪ್ಪಾಜಿಭಟ್ಟನನ್ನು ಅಲುಗಾಡಿಸಲೂ ಅವನಿಗೆ ಸಾಧ್ಯವಾಗಲಿಲ್ಲ. ಸ್ವಲ್ಪ ಹೊತ್ತಿನಲ್ಲೇ ಅವನ ಮುಖ ಮಂಕಾಯಿತು. ಹಣೆಯ ಮೇಲೆ ಬೆವರು ಹನಿಗಳು ಮೂಡಿದವು. ಕಡೆಗೆ, ಅವನು ಅಪ್ಪಾಜಿಭಟ್ಟನನ್ನು ಎತ್ತಿಹಾಕಲು ಅವನ ಕಾಲುಗಳ ನಡುವೆ ನುಗ್ಗಿದನು. ಆಗ, ಅಪ್ಪಾಜಿಭಟ್ಟನ ಮೊಣಕಾಲುಗಳೆರಡೂ ತುಸು ಅಲುಗಾಡಿದಂತಾಗಿ, ಇದ್ದಕ್ಕಿದ್ದಂತೆಯೇ ಬಿಗಿದವು. ಕತ್ತರಿಯಲ್ಲಿ ಸಿಕ್ಕಿದ ಹೆಗ್ಗಣದಂತೆ ಜಟ್ಟಿ ಥಟ್ಟನೆ ಅವನ ಕಾಲುಗಳ ಮಧ್ಯೆ ಸಿಕ್ಕಿಕೊಂಡು ವಿಲಿವಿಲಿ ಒದ್ದಾಡಿದನು. ಅವನ ಬಾಯಿ ಮೂಗುಗಳಿಂದ ರಕ್ತ ಇಳಿಯಿತು. ಅರ್ಧನಿಮಿಷ ಹೀಗೆ ಹಿಡಿದಿದ್ದು, ಅಪ್ಪಾಜಿಭಟ್ಟ ಸಡಿಲಬಿಟ್ಟ ಕೂಡಲೇ *ಜಟ್ಟಿ ಮೂರ್ಛೆಹೋಗಿ ನೆಲದ ಮೇಲೆ ಬಿದ್ದುಬಿಟ್ಟನು!*

"*ಶಾಪಾದಪಿ ಶರಾದಪಿ ಎನ್ನುವ ಮಾತಿನ ಸಾರ್ಥಕತೆಯನ್ನಿಂದು ಕಣ್ಣಾರ ಕಂಡೆವು. ನಿಮ್ಮಿಂದ ಸಂಸ್ಥಾನದ ಗೌರವ ಉಳಿಯಿತು*" ಎಂದು ಮಹಾರಾಜರು ಅಪ್ಪಾಜಿಭಟ್ಟನನ್ನು ಹೊಗಳಿದರು. . . . . .

೧೭. 'ಸಂಚರ' : ಬಿ.ಎಸ್.ಪ್ರಣತಾರ್ತಿಹರನ್

(ಕ್ಷೇತ್ರಕಾರ್ಯ ಕಥನ)

ಸಮುದಾಯ ಅಧ್ಯಯನ ಕೇಂದ್ರ, ಮೈಸೂರು ೨೦೦೧

(ಇದು ಡಾ|| ಬಿ.ಎಸ್. ಪ್ರಣತಾರ್ತಿಹರನ್ ಅವರು ಮೈಸೂರು ವಿಶ್ವವಿದ್ಯಾನಿಲಯದ ಡಾಕ್ಟರೇಟ್ ಪದವಿಗಾಗಿ ಸಿದ್ಧಪಡಿಸಿದ ಸಂಪ್ರಬಂಧದ ಸಂಬಂಧದಲ್ಲಿ ತಮಿಳುನಾಡು ಮತ್ತು ಕೇರಳ ರಾಜ್ಯಗಳಲ್ಲಿ ನಡೆಸಿದ ಕ್ಷೇತ್ರಕಾರ್ಯದ ವರದಿ. ಕೃಷಿಗೆ ಸಂಬಂಧಿಸಿದ ಭಾಗಗಳನ್ನು ಇಲ್ಲಿ ಆಯ್ದುಕೊಡಲಾಗಿದೆ.)

ದರ್ಶನಂಕೋಪು

(ಕನ್ಯಾಕುಮಾರಿ ಜಿಲ್ಲೆಯಿಂದ ತೊಡಗಿ ತಿರುನೆಲ್‌ವೇಲಿ ಜಿಲ್ಲೆಯನ್ನು ಹಾದು ಶೆಂಕೋಟ್ಟೈ-ಕೊಲ್ಲಂ ಮಾರ್ಗದಲ್ಲಿ ಕಾಣುವ ದೃಶ್ಯ)

. . . ಭಗವತೀಶ್ವರನ್ನರ ತೋಟವನ್ನು ನೋಡುವುದು ನನ್ನ ಆಸಕ್ತಿಗಳಲ್ಲೊಂದಾಗಿತ್ತು. ಆದರೆ ಬಾಳೆಯ ತೋಟ ಇದ್ದುದು ಗದ್ದೆಯ ಒಂದು ಭಾಗದ ಬೆಳೆಯಾಗಿ; ಬಾಳೆಗಿಡಗಳ ನಡುವೆ ತರಕಾರಿ ಗಿಡಗಳು, ಮುಖ್ಯವಾಗಿ ಸೌತೆ; ಸುತ್ತ ಬೇಲಿ. ಉತ್ತರಕ್ಕೆ ಹೋದಂತೆ ಶಾಪತ್ತೂರು ಭಾಗದಲ್ಲಿ ಒಂದಷ್ಟು ತೆಂಗಿನ ಗಿಡಗಳೂ ಅದರೊಂದಿಗಿರುತ್ತವೆ. ಮತ್ತೂ ಉತ್ತರದ ಶೆಂಕೋಟ್ಟೈ ಭಾಗದಲ್ಲಿ ಅಷ್ಟಿಷ್ಟು ಅಡಿಕೆಯೂ ಸೇರುತ್ತದೆ. ಇನ್ನೂ ಒಳಗೆ (ಈಗಿನ) *ಕೇರಳದ ಹಳ್ಳಿಗಳಿಗೆ ಕಾಲಿಟ್ಟಾಗ ಅಡಿಕೆ ಪ್ರಧಾನವಾಗುತ್ತದೆ.* ಕರ್ನಾಟಕದಲ್ಲಿ ಅಡಿಕೆ ತೋಟಗಳೇ ಪ್ರಧಾನವಾದುವು; ಬಾಳೆ, ಎಲೆ, ತೆಂಗು ಕೂಡ ಮುಖ್ಯವಾದುವೇ. ಶೆಂಕೋಟ್ಟೈ ಪ್ರಾಂತದಿಂದಾದ ಸಂಕೇತಿಗಳ ವಲಸೆಯ ಮಾರ್ಗವನ್ನು ಗುರುತಿಸಲು ಇದು ಸಹಾಯಕವಾದ ಅಂಶವಾಯಿತು.(ಪು.೫೭)

ಗುಟ್ಟುಕೀಲುಗಳು

(ಸಂಕೇತಿಗಳು ತಮ್ಮ ಮೂಲಸ್ಥಾನವಾದ ಕೇರಳದ ತೋಟಗಳ ಮಾದರಿಗಳನ್ನು, ತಾವು ವಲಸೆ ಬಂದು ನೆಲೆಸಿದ ಕರ್ನಾಟಕದ ಹಳ್ಳಿಗಳಲ್ಲಿ ಸುಧಾರಿಸಿ ನಿರ್ಮಾಣ ಮಾಡಿದ್ದಾರೆ.)

. . . ಕೇರಳದ ಉದ್ದಕ್ಕೂ ಗದ್ದೆಯ ಬಯಲುಗಳು, ಹಿನ್ನೆಲೆಗೆ ಬಾಳೆ, ಅಡಿಕೆ, ತೆಂಗಿನ ತೋಟಗಳು, ಕಾಡುಗಳ ರಮಣೀಯ ನೋಟ -

ಕರ್ನಾಟಕದ ಸಂಕೇತಿ ನೆಲೆಗಳಾದ ಮತ್ತೂರು, ಬಸವಾಪಟ್ಟಣ, ಕುಪ್ಪಳ್ಳಿ, ಚಿಲಕುಂದ ಅಲ್ಲಿನ ನೆನಪು ಕಾಡುವ ಹಾಗೆ . . . (ಪು.೧೦೨)

ಮನೆಯ ಮೀನಾಕ್ಷಿ

(ತಕ್ಕಲೈ ಗ್ರಾಮವು ನಾಗರಕೋಯಿಲ್-ತಿರುವನಂತಪುರಂ ಮಾರ್ಗದಲ್ಲಿದೆ.)

(ಈಗಿನ) ಕನ್ಯಾಕುಮಾರಿ ಜಿಲ್ಲೆಯ ತಕ್ಕಲೈನಲ್ಲಿದ್ದ (ಕೃಷ್ಣಯ್ಯರ್) ಅವರ ತಂದೆ ಶೇಷಯ್ಯರ್ ವ್ಯವಸಾಯ ಮಾಡುತ್ತಿದ್ದರು. ಪಕ್ಕದ ಪುಲಿಯಾರ್ ಕುರುಚಿಯಲ್ಲೂ ಸಂಕೇತಿಗಳಿದ್ದರು. *ಬತ್ತ ಬೆಳೆಯುವುದಿತ್ತು; ಅಡಿಕೆ ಇಲ್ಲ*. ಆಳುಗಳ ನೆರವಿನಿಂದ ವ್ಯವಸಾಯ ಮಾಡುತ್ತಿದ್ದರು.

. . . ಕೃಷ್ಣಯ್ಯರರ ಪತ್ನಿ ತಿರುನೆಲ್‌ವೇಲಿ ಜಿಲ್ಲೆಯ ನಾಂಗುನೇರಿ ತಾಲ್ಲೂಕು ಕಲಕ್ಕಾಡ್‌ನವರು. ಅಲ್ಲೂ ಆಳುಗಳ ನೆರವಿನಿಂದ *ಬತ್ತ* ಬೆಳೆಯುತ್ತಿದ್ದುದುಂಟು. ಪರ್ಯಾಯವಾಗಿ *'ಬಾಳೆ* ಬೆಳೆ ತೆಗೆಯುವುದು ಅಲ್ಲಿನ ರೂಢಿ. *ಪಶುಪಾಲನೆ* ಜೊತೆಜೊತೆಗೆ ಇತ್ತು. (ಪು.೧೧೪)

* * * * *

(ಸಂಕೇತಿ ಕೃಷಿಕರ ಧೃತಿಗೆ ಇದೊಂದು ಉದಾಹರಣೆ)

ಮತ್ತೆ ನನ್ನ ನೆನಪು ಕೆದರಿತು. ನಾನೂ ಹಳ್ಳಿಯಲ್ಲಿ ಅಡಿಕೆ ಗಿಡಗಳಿಗೆ ತೂಕದಲ್ಲಿ ನೀರು ಹಾಕಿದ್ದವನು, ಕೊರೆಯುವ ಚಳಿಯಲ್ಲಿ ಗದ್ದೆ ಕಾದವನು, ಗೊಬ್ಬರ ಹೇರಿದವನು, ಅಜ್ಜಿಯ ಮನೆಗೆ ಹೋದಾಗ ಹೊಲ ಉತ್ತವನು, ಗಾಡಿ ಹೊಡೆದವನು, ಕೊಯ್ಲು ಮಾಡಿದವನು, ಮೇಲಾಗಿ ವರ್ಷಗಟ್ಟಲೆ ಸಾಮು ಮಾಡಿದವನು. ಬಸ್ಕಿ, ಸೂರ್ಯನಮಸ್ಕಾರ ಮಾಡುತ್ತಿದ್ದ ಆ ದಿನಗಳ ಅಂಗಸಾಧನೆಯ ವೈಭವ ಕಣ್ಣ ಮುಂದೆ ನಿಲ್ಲುತ್ತಿತ್ತು. ಶವರ್‌ಬಾತ್‌ನ ನೀರು ತಲೆಯಿಂದ ಪಾದದವರೆಗೆ ಇಳಿಯುತ್ತಿದ್ದ ಹಾಗೆ ನನ್ನ ಕಣ್ಣ ಮುಂದೆ ಹಿರಗನಹಳ್ಳಿಯ ಆ ನನ್ನ ಬಂಧು ನಿಂತಿದ್ದರು. ಆಜಾನುಬಾಹು, ಎಪ್ಪತ್ತೈದು ವರ್ಷಗಳ ಕಾಲ ತೋಟ, ಗದ್ದೆಗಳಲ್ಲಿ ದುಡಿದ ಗಟ್ಟಿ ಶರೀರ. ವ್ಯವಸಾಯ, ಪಶುಪಾಲನೆಗಳ ಜೊತೆಗೆ ಪುರೋಹಿತವೃತ್ತಿಯನ್ನೂ ಇಟ್ಟುಕೊಂಡಿದ್ದವರು. ಅಡಿಕೆಗೆ ಧಾರಣೆ ಬರುವವರೆಗೆ ಇತರರ ಹಾಗೆ ಬಡತನದ ಬವಣೆಯನ್ನು ಅನುಭವಿಸಿದವರು.

ಒಂದು ರಾತ್ರಿ ವಿಪರೀತ ಎದೆನೋವು ಕಾಡಿತು. ಅದೊಂದು ಕುಗ್ರಾಮ. ಆ ಹೊತ್ತಿನಲ್ಲಿ ವೈದ್ಯರು ಬರುವ ಅವಕಾಶವಿರಲಿಲ್ಲ. ಬೆಳಿಗ್ಗೆ ಎದ್ದು ಸ್ನಾನಾಹ್ನಿಕಗಳನ್ನು ಮುಗಿಸಿ ಜುಟ್ಟು ನೀವಿ ಕಟ್ಟಿ 'ಶಿವಾ' ಎಂದು ಹಾಸನಕ್ಕೆ ಹೊರಟರು. ವೈದ್ಯರನ್ನು ಕಂಡರು.

ವೈದ್ಯರು ಪರೀಕ್ಷೆ ಮಾಡಿ ಹೇಳಿದರು, "ಅಡ್ಮಿಟ್ ಆಗಿ." ಇವರು, "ಅಯ್ಯೋ! ನಾನು ಒಬ್ಬನೇ ಬಂದಿದೀನಿ. ಯಾವ ಸಿದ್ಧತೇನೂ ಮಾಡಿಕೊಂಡಿಲ್ಲ. ಯಾರನ್ನಾದರೂ ಕರಕೊಂಡು ಬರುತೀನಿ" ಎಂದರು.

"ಎಲ್ಲಿಂದ ಬಂದಿದ್ದೀರಿ?"

"ಹಿರಗನಹಳ್ಳಿಯಿಂದ."

"ಅದು ಇಲ್ಲಿಗೆ ಎಷ್ಟು ದೂರ?"

"ಹದಿನೆಂಟು ಮೈಲಿ ಇದೆ."

"ಹ್ಯಾಗೆ ಬಂದಿರಿ?"

"ನಮ್ಮೂರಿಂದ ಕಟ್ಟಾಯಕ್ಕೆ ನಡಕೊಂಡು ಬಂದೆ...."

"ಅದು ಎಷ್ಟು ದೂರ ಆಗುತ್ತೆ?"

"ಮೂರು ಮೈಲು..."

"ಹ್ಞೂ!"

"ಆಮೇಲೆ ಬಸ್ಸು ಹತ್ತಿ ಬಂದೆ."

"ಬಸ್ಸ್ಟ್ಯಾಂಡಿನಿಂದ ಹ್ಯಾಗೆ ಬಂದಿರಿ?"

"ಇದೇನು ಹೀಗೆ ಕೇಳುತ್ತೀರಿ? ಇನ್ನು ಹ್ಯಾಗೆ ಬರುತ್ತಾರೆ? ನಡಕೊಂಡು ಬಂದೆ?"

ವೈದ್ಯರು ಪರಿಸ್ಥಿತಿ ಎಷ್ಟು ಗಂಭೀರವಾಗಿದೆ ಎಂಬುದನ್ನು ತಿಳಿಸಲು ಹೇಳಿದರು, "ನಿಮಗೆ ಹಾರ್ಟ್ ಅಟ್ಯಾಕ್ ಆಗಿದೆ. ವಿಶ್ರಾಂತಿ ಅತಿ ಮುಖ್ಯ. ತಕ್ಷಣ ಔಷಧೋಪಚಾರವೂ ಆಗಬೇಕು. ಬಲು ಅಪಾಯ."

"ಆಗಲಿ, ನಾಳೆ ಬರುತ್ತೇನೆ" ಇವರ ಉತ್ತರ.

ಹಾರ್ಟ್ ಅಟ್ಯಾಕ್ ಅಂದರೇನು ಅನ್ನುವುದನ್ನು ವಿವರಿಸಿ ಹೇಳಿದ್ದರೆ ಅವರು ತುಸು ಅಂಜುತ್ತಿದ್ದರೇನೋ! ಆಸ್ಪತ್ರೆಯಿಂದ ಹೊರಟು ನಡೆದುಕೊಂಡೇ ಬಸ್‌ಸ್ಟ್ಯಾಂಡಿಗೆ ಬಂದರು. ಬಸ್ಸು ಹತ್ತಿ ಕಟ್ಟಾಯ ಸೇರಿದರು. ಮತ್ತೆ ಮೂರು ಮೈಲು ನಡೆದು ಊರು ತಲುಪಿದರು. "ಹಾರ್ಟ್ ಅಟ್ಯಾಕಂತೆ, ಆಸ್ಪತ್ರೇಲಿ ಮಲಗಬೇಕಂತೆ" ಆತಂಕದಿಂದ ಎದುರಾದ ಮನೆಮಂದಿಗೆ ಇವರು ಕೊಟ್ಟ ಸುದ್ದಿ. ಎಲ್ಲರೂ ಹೆದರಿದರು, ಹಾರ್ಟ್ ಅಟ್ಯಾಕ್ ಎಂದಲ್ಲ; ಪಾಪ ಅವರಿಗೆ ಅದು ಗೊತ್ತಿಲ್ಲದ ರೋಗ. ಅವರು ಆತಂಕಗೊಂಡಿದ್ದು 'ಆಸ್ಪತ್ರೇಲಿ ಮಲಗಬೇಕು' ಅನ್ನುವ ಸುದ್ದಿಗೆ.

ನಾನೇನೂ ಆ ಬಂಧುವಿನ ಜೊತೆ ಹೋಲಿಸಿಕೊಳ್ಳುವ ಹಾಗಿರಲಿಲ್ಲ. ಬಾಲ್ಯದಲ್ಲಿ ಎಲ್ಲೋ ಕೆಲವು ವರ್ಷ ತೋಟ ಗದ್ದೆ ಎಂದು ಓಡಾಡಿದ ನಾನೆಲ್ಲಿ, *ಎಪ್ಪತ್ತೈದು ವರ್ಷ ಅದಕ್ಕಾಗಿಯೇ ಜೀವ ತೇದ ಅವರೆಲ್ಲಿ*? ಆದರೂ, 'ವಡ್ಡರು' ಅನ್ನಿಸಿಕೊಳ್ಳುವುದಕ್ಕೆ ಸಾಕಾದಷ್ಟು ಸಾಮ್ಯ ಇತ್ತೆನಿಸುತ್ತದೆ. ಎದೆನೋವನ್ನು ಉಪೇಕ್ಷಿಸಿ ಯಾವ ವಿವೇಕಿ ಹೀಗೆ ಪ್ರವಾಸ ಹೊರಡುತ್ತಾನೆ?

(ಪು.೧೧೬ - ೧೧೭)

ಸಂಜೆಯ ಸದುಪಯೋಗ

(ಶೆಂಕೋಟ್ಟೈ-ಕರ್ನಾಟಕ: ಸಂಕೇತಿ ನೆಲೆಗಳ ಭೌಗೋಳಿಕ ಸಾಮ್ಯ)

. . . ಶೆಂಕೋಟ್ಟೈನಿಂದ ಕನ್ಯಾಕುಮಾರಿ, ಅಲ್ಲಿಂದ ತಿರುವನಂತಪುರಂ, ಅಲ್ಲಿಂದ ಕೊಲ್ಲಂ, ಅಲ್ಲಿಂದ ಶೆಂಕೋಟ್ಟೈಗೆ ಗೆರೆ ಎಳೆದರೆ ಇರುವ ಭೂಭಾಗವೇ ಸಂಕೇತಿಗಳ ವಿಸ್ತೃತವಾದ ಎರಡನೆ ಹಂತದ ಆವಾಸಸ್ಥಾನ. ಅದೆಲ್ಲ ಹಸುರುಮಯ, ಫಲವತ್ತಾದ ಪ್ರದೇಶ. ಕರ್ನಾಟಕದಲ್ಲಿಯೂ ಹೀಗೆಯೇ ತನುವಾದ *ಘಟ್ಟದ ತಗ್ಗು, ನದೀತೀರವನ್ನು ಆರಿಸಿರುವ* ಸಂಕೇತಿಗಳ ರೀತಿಯನ್ನು ಸುಧಾಮಣಿ ಅವರು ಅನುಭವಕ್ಕೆ ತಂದುಕೊಳ್ಳುತ್ತಿದ್ದರು . . .

(ಪು.೧೨೦)

(ಉತ್ತಮಿಕೆಗಾಗಿ ಜಂಗಮತೆ ಸಾಮಾನ್ಯಗುಣ)

. . . ಇಬ್ಬರೂ ಬಡತನದ ಮಡಿಲಿಂದ ಪಟ್ಟಣದ ಉತ್ತಮಿಕೆಯನ್ನು ಹಾರಯಿಸಿ ಹಾರಿದವರೇ. ವ್ಯತ್ಯಾಸವಿಷ್ಟೆ, ದಕ್ಷಿಣದ ಸಂಕೇತಿಗಳು ಬಡತನ ಮತ್ತು ಅದಕ್ಕೆ ಕಾರಣವೆಂದು ಅವರು ಭಾವಿಸಿದ *ನಾಚಾರುಶಾಪದಿಂದ ಬಿಡುಗಡೆ*ಗೊಳ್ಳಲು ಹೊಸ ಕನಸುಗಳಿಗಾಗಿ ಹಾರಿದರು. ಕರ್ನಾಟಕದ ಸಂಕೇತಿಗಳು ಮೊದಮೊದಲು ಆರ್ಥಿಕ ಕಾರಣಗಳಿಗಾಗಿಯೇ ಹಾಗೆ ಮಾಡಿದರು. ಆದರೆ ಅಮೆರಿಕೆಯವರೆಗಿನ ಓಟವೇ ಗುರಿಯಾಗಿರುವ ಈ ಹೊತ್ತು, ಏರಿದ ಅಡಿಕೆ ಧಾರಣೆಯೂ ಅವರನ್ನು *ಹಳ್ಳಿಗಳಲ್ಲಿ ಹಿಡಿದಿಟ್ಟುಕೊಳ್ಳಲು* ಸಾಧ್ಯವಾಗಿಲ್ಲ.

(ಪು.೧೨೨)

ವಿಜ್ಞಾನಿಯೊಡನೆ ವಸ್ತುವಿಹಾರ

(ಕನ್ಯಾಕುಮಾರಿ ಜಿಲ್ಲೆಯ ಶುಚೀಂದ್ರಂನಲ್ಲಿ ನೆಲೆಸಿರುವ ನಿವೃತ್ತ ವಿಜ್ಞಾನಿ ಶ್ರೀ ಕೃಷ್ಣಸ್ವಾಮಿ ಅವರೊಡನೆ ಸಂದರ್ಶನ ನಡೆದಾಗ: ಅಡಿಕೆ ಪ್ರದೇಶಗಳಿಂದ ದೂರವಾದ ದಕ್ಷಿಣದ ಹೊಸ ನೆಲೆಗಳು ಮತ್ತು ಕರ್ನಾಟಕದ ಹೊಸ ನೆಲೆಗಳ ತುಲನೆ)

. . . ಸುಧಾಮಣಿಯವರು ತಮಗೆ ಬೇಕಾದ ವಿಷಯವನ್ನು ಪ್ರಸ್ತಾಪಿಸಿದರು. ಕರ್ನಾಟಕದ ಸಂಕೇತಿಗಳು ಅಡಿಕೆ ಬೆಳೆಯ ವಿಶೇಷ ತಜ್ಞರು,

ತೋಟಗಾರಿಕೆಯಲ್ಲಿ ನಿಪುಣರು, ಅಲ್ಲಿ ಕೆರೆಗಳನ್ನೂ ಅಗ್ರಗಳನ್ನೂ ನಿರ್ಮಿಸಿದವರು. ದಕ್ಷಿಣದ ಸಂಕೇತಿಗಳಲ್ಲಿ ಅದು ಕಾಣುವುದಿಲ್ಲವಲ್ಲ ಎಂಬ ಶಂಕೆ ಅವರನ್ನು ಕಾಡುತ್ತಿತ್ತು. ವಾಸ್ತವವಾಗಿ ಶೆಂಕೋಟ್ಟೈ ಸಂಕೇತಿಗಳು ತಿರುವನಂತಪುರ ಮತ್ತು ಕೊಲ್ಲಂನೊಡನೆ ಸಂಪರ್ಕ ಇಟ್ಟುಕೊಂಡಿದ್ದರು. ಈ ತ್ರಿಕೋನದಲ್ಲೇ ಅವರ ಪಾರಂಪರಿಕ ನೆಲೆಗಳಿದ್ದವು. ಅಲ್ಲಿ *ಅಡಿಕೆ ವ್ಯವಸಾಯ ಹಂಬೂ ಸೇರಿದಂತೆ ವಿಶೇಷವಾಗಿತ್ತು.* ಶೆಂಕೋಟ್ಟೈ, ಶಾಪತ್ತೂರುಗಳೇ ಆ ಕಾಲಕ್ಕೆ ಸಂಕೇತಿ ಮೂಲಪ್ರದೇಶದ ಅಂಚಿಗೆ ಇದ್ದುವು. ಆದರೆ ಚರಿತ್ರೆಯಲ್ಲಿ ಶೆಂಕೋಟ್ಟೈ ಖ್ಯಾತವಾದುದು. ಅದು ಮುಖ್ಯ ಆಡಳಿತ ಕೇಂದ್ರವೂ ಆಗಿತ್ತು. ಎಲ್ಲ ಸಂಕೇತಿಗಳೂ ಅದರೊಂದಿಗೆ ತಮ್ಮನ್ನು ಗುರುತಿಸಿಕೊಳ್ಳುತ್ತಿದ್ದರು. ಹಾಗೆಂದು, ಶೆಂಕೋಟ್ಟೈ ಊರಿನೊಂದಿಗೆ ಎಂದು ತಿಳಿಯಬಾರದು. ಘಟ್ಟದಲ್ಲಿದ್ದ ಸಂಕೇತಿ ನೆಲೆಗಳೂ ಸೇರಿದ ಈ ಭಾಗ 'ಶೆಂಕೋಟ್ಟೈ' ಪ್ರದೇಶವಾಗಿ ಗಣನೆಗೆ ಇತ್ತು. ಕನ್ಯಾಕುಮಾರಿಯವರೆಗಿನ ವಿಸ್ತರಣವು ದೇವಸ್ಥಾನಗಳ ಬೆಳವಣಿಗೆಗೆ ಹೊಂದಿಕೊಂಡ ವಲಸೆಯಿಂದಾದುದು. ಅದೂ ಫಲವತ್ತಾದುದೇ. ವ್ಯವಸಾಯ ಮುಂದುವರಿಸಿದ್ದರು. ಆದರೆ *ಅಡಿಕೆ ಬೆಳೆ ಈ ವಿಸ್ತರಣದಲ್ಲಿಲ್ಲ*. ಕರ್ನಾಟಕದ ಸಂಕೇತಿಗಳು ಮಹಾವಲಸೆ ಹೊರಟನಂತರದ ವಿಸ್ತರಣ ಇದು. ಅದರ ಮುಂದಿನ ಹಂತವು ತಿರುನೆಲ್‌ವೇಲಿ ಕೇಂದ್ರವನ್ನು ಒಳಗೊಂಡಿತು. ಅದರ ನಂತರ ಮದರಾಸು, ಮುಂಬಯಿ, ದೆಹಲಿ, ಇತ್ಯಾದಿ: ಈಗ ಅಮೆರಿಕ ಮೊದಲಾದ ವಿದೇಶಗಳು. ನನ್ನ ಈ ವಿವರಣೆಯನ್ನು ಸುಧಾಮಣಿ ಪರೀಕ್ಷೆಗೆ ಒಳಪಡಿಸುತ್ತಿದ್ದರು.

ಕೃಷ್ಣಸ್ವಾಮಿಯವರು ಹೇಳಿದರು, "ಇಲ್ಲಿನ ಸಂಕೇತಿಗಳು ಭೂಮಾಲಿಕರಾಗಿದ್ದರು, *ಸ್ವತಃ ವ್ಯವಸಾಯ ಮಾಡುತ್ತಿರಲಿಲ್ಲ.* ಹೀಗೆ ಭೂಮಿ ಕಾಣಿ ಇದ್ದವರ ಸಂಖ್ಯೆಯೂ ಕಡಿಮೆ. ಏಕೆಂದರೆ ವಿದ್ಯಾಭ್ಯಾಸ ಮಾಡಿ ಸರ್ಕಾರಿ ಕೆಲಸಗಳಿಗೆ ಹೋದರು; ಬಹುಪಾಲು ಅಧ್ಯಾಪಕ ವೃತ್ತಿಗೆ ಹೋದರು. ಅನೇಕರು ಪುರೋಹಿತರು, ವೇದವಿದ್ವಾಂಸರು. ಅಡಿಕೆ ಬೆಳೆದ ನೆನಪು ನಾಲ್ಕುನೂರು ವರ್ಷಗಳ ಇಲ್ಲಿನ ಚರಿತ್ರೆಯಲ್ಲಿ ಕಂಡಿಲ್ಲ. ಬತ್ತ, ಜೋಳ ಇತ್ಯಾದಿ ಉಂಟು, *ಅಡಿಕೆ ಮತ್ತು ವೀಳೆ ಇಲ್ಲವೇ ಇಲ್ಲ.*" ಅವರು ಹೇಳುತ್ತಿದ್ದುದು, ಶಾಪತ್ತೂರು ಘಟನೆಯ ನಂತರದ ದಕ್ಷಿಣದ ಸಂಕೇತಿಗಳ ವಿದ್ಯಮಾನ. ಈ ಪ್ರಕರಣವನ್ನನುಸರಿಸಿ ಆದ ಸಂಕೇತಿಗಳ ಮಹಾವಲಸೆಯನಂತರ ಅಡಿಕೆ ಬೆಳೆಯುತ್ತಿದ್ದ ದಕ್ಷಿಣದ ಸಂಕೇತಿ ನೆಲೆಗಳು ಖಾಲಿಯಾದುವು. ದಕ್ಷಿಣದ ಸಂಕೇತಿಗಳು ಅಲ್ಲಿಂದ ಮುಂದೆ ಪ್ರವರ್ಧಮಾನಕ್ಕೆ ಬಂದ ಭವ್ಯ ದೇವಾಲಯಗಳನ್ನಾಶ್ರಯಿಸಿ ಚದುರಿಕೊಂಡರು. ಮುಂದೆ ರಾಜಾಶ್ರಯದ ನೌಕರಿ. ವ್ಯವಸಾಯ ಅವರಿಗೆ ಪ್ರಧಾನವಾಗಲಿಲ್ಲ. ಅಲ್ಲದೆ, ಕರ್ನಾಟಕಕ್ಕೆ ವಲಸೆ ಹೊರಟ ಸಂಕೇತಿಗಳಂತೆ ಅವರ ಬದುಕು ಬಿರುಗಾಳಿಗೆ ಸಿಕ್ಕಿದ ನೌಕೆಯಾಗಿರಲಿಲ್ಲ. ಸ್ವತಃ ವ್ಯವಸಾಯಕ್ಕೆ ಇಳಿಯಬೇಕಾದ ಅಗತ್ಯವೂ ಇರಲಿಲ್ಲ. ಘಟ್ಟಗಳಲ್ಲಿದ್ದು ಅಡಿಕೆ ವ್ಯವಸಾಯ ಮುಂದುವರಿಸಬೇಕಾದ ಅನಿವಾರ್ಯವೂ ಇರಲಿಲ್ಲ. ಆ ಕಾಲದ ಪಟ್ಟಣಪ್ರದೇಶಗಳ *ಭವ್ಯ ದೇವಾಲಯಗಳನ್ನಾಶ್ರಯಿಸಿದ ಬದುಕು ಹೆಚ್ಚು ಸುಲಭವೂ ಆಕರ್ಷಕವೂ ಆಗಿತ್ತು.* ಅದಕ್ಕಿಂತ ಹೆಚ್ಚಾಗಿ ತಮ್ಮ ಪಾರಂಪರಿಕ ನೆಲೆಗಳಿಂದ ದೂರವಾಗಿ ಶಾಪದೂರವಾಗುವ ಒತ್ತಡವೂ ಅವರಿಗಿತ್ತು. ಹೀಗೆ ದೂರಕ್ಕೆ ಚದುರಿಕೊಳ್ಳುವ ಅವಕಾಶವಿಲ್ಲದವರು ಮಾತ್ರ ಶೆಂಕೋಟ್ಟೈ, ಕಾರಡೈಕುರುಚಿ ಕೇಂದ್ರಗಳ ಸುತ್ತ ಇದ್ದ ತಮ್ಮ ನೆಲೆಗಳಲ್ಲಿ ಮುಂದುವರಿದರು. ಅವು ಅಡಿಕೆ ಬೆಳೆಯುವ ಜಾಗಗಳಾಗಿರಲಿಲ್ಲ. ಕರ್ನಾಟಕಕ್ಕೆ ಬಂದ ಸಂಕೇತಿಗಳಿಗೆ ಬದುಕು ಪಲ್ಲಟವಾಗಿತ್ತು. ಹೊಸ ಜಾಗದಲ್ಲಿ ತಮಗೆ ತಿಳಿದಿದ್ದ ವ್ಯವಸಾಯವನ್ನೇ ಅವಲಂಬಿಸಬೇಕಾಗಿತ್ತು. ಸ್ವತಃ ದುಡಿಯುವುದು ಅನಿವಾರ್ಯವಾಗಿತ್ತು. ತಾವಿದ್ದ ಎಡೆಗಳಲ್ಲಿ *ಹೊಸದಾಗಿ ಕೆರೆ ಕಟ್ಟಿ ಅಗ್ರ ಬೆಳೆಸಿದರು.* ಅವರು ಬಂದ ಕಾಲದಲ್ಲಿ ಕಡೂರು ಅಡಿಕೆ ವಹಿವಾಟಿನ ಮುಖ್ಯ ಕೇಂದ್ರವಾಗಿತ್ತು. ಅದು ಅಡಿಕೆ ವ್ಯವಸಾಯವನ್ನು ಮುಂದುವರಿಸಲು ಉತ್ತೇಜಕವಾಗಿತ್ತು. ಅಂದಿನಿಂದ ಇಂದಿನವರೆಗೆ ಆ ವ್ಯವಸಾಯದಲ್ಲಿ ಅವರು ತಮ್ಮ ನೈಪುಣ್ಯವನ್ನು ಮೆರೆಯುತ್ತಲೇ ಬಂದಿದ್ದಾರೆ. ನನ್ನ ಈ ವಿವರಣೆ ಸುಧಾಮಣಿಯವರಿಗೆ ಒಪ್ಪಿತವಾದಂತೆ ಕಂಡಿತು. ಏಕೆಂದರೆ *ಕರ್ನಾಟಕದ ಸಂಕೇತಿಗಳ ತೋಟದ ನಂಟು ಎಷ್ಟು ಭದ್ರವಾದುದು* ಎಂಬುದು ಸ್ವತಃ ಕೃಷಿಕರ ಮನೆಯಿಂದ ಬಂದ ಅವರಿಗೆ ತಿಳಿದಿತ್ತು. ಇತ್ತೀಚಿನ ಅಲ್ಲಿನ ಕ್ಷೇತ್ರಕಾರ್ಯದಿಂದ ಅವರಿಗೆ ಅದು ಹೆಚ್ಚು ಅನುಭವಕ್ಕೆ ಬಂದಿತ್ತು.

ವಾಸ್ತವವಾಗಿ ನಗರವಲಸೆ ಮೊದಲು ಪ್ರಾರಂಭವಾದದ್ದು ದಕ್ಷಿಣದ ಸಂಕೇತಿಗಳಲ್ಲಿ, ಅದೂ ನಾಲ್ಕಾರು ಶತಮಾನಗಳ ಹಿಂದೆ; ಅವೂ ಆದುದು ಹತ್ತಿರದ ಪಟ್ಟಣಗಳಿಗೆ. ಅವುಗಳಲ್ಲಿ ಶುಚೀಂದ್ರಂ, ತ್ರಿವೇಂದ್ರಂ, ನಾಗರಕೋಯಿಲ್, ಕನ್ಯಾಕುಮಾರಿಯಂಥವು ಸೇರಿದ್ದುವು. ಅಂತೂ *ವ್ಯವಸಾಯದೂರವಾದ ಬದುಕಿಗೆ* ಅವರೆಲ್ಲ ಒಗ್ಗಿಕೊಳ್ಳತೊಡಗಿದರು. ಕ್ರಮೇಣ ವೈದಿಕತೆಯಿಂದಲೂ ದೂರವಾಗತೊಡಗಿದ ಮೊದಲಿಗರೂ ಅವರೇ. ರಾಜಾಶ್ರಯದ ನೌಕರಿ, ಸರ್ಕಾರಿ ನೌಕರಿಗಳಲ್ಲಿ ತೊಡಗಿಕೊಂಡ ಇತಿಹಾಸವೇ ಹತ್ತಿರ ಎರಡು ಶತಮಾನಗಳಾಗುತ್ತದೆ. ಜೊತೆ ಜೊತೆಗೆ ವ್ಯಾಪಾರವೃತ್ತಿಗೂ ಇಳಿದಿದ್ದಾರೆ. ಅಡುಗೆ ಮಾಡುವುದು ಮೊದಲಾದ ವೃತ್ತಿಗೆ ಹೋಗಿದ್ದಾರೆ. ಅದೆಲ್ಲ, ದಕ್ಷಿಣದ ಅಲ್ಪಜನಸಂಖ್ಯೆಗೆ ಹೋಲಿಸಿದರೆ ದೊಡ್ಡ ಪ್ರಮಾಣದಲ್ಲೇ ನಡೆದಿದೆ. ಹಾಗಾಗಿ *ಒಂಬತ್ತು ಶತಮಾನಗಳ ಹಿಂದೆ ದಕ್ಷಿಣದ ಸಂಕೇತಿಗಳು*

ಅವಲಂಬಿಸಿದ್ದ ವೃತ್ತಿಯ ನೈಜಸ್ವರೂಪ ಈಗ ಅಲ್ಲಿ ದೊರೆಯುವುದಿಲ್ಲ, ಕರ್ನಾಟಕದಲ್ಲಿ ದೊರೆಯುತ್ತದೆ. ಕರ್ನಾಟಕದಲ್ಲಿ ಒಂದು ಲಕ್ಷಣವಾಗಿ ಮೊದಲ ಪಟ್ಟಣ ವಲಸೆ ಆದುದರ ಇತಿಹಾಸ ನೂರು ನೂರಿಪ್ಪತ್ತೈದು ವರ್ಷಗಳಿಗಿಂತ ಹಿಂದಕ್ಕೆ ಹೋಗುವುದಿಲ್ಲ. ಅದೂ ಮೊದಲು ಆದುದು ಬೆಟ್ಟಪುರದ ಸಂಕೇತಿಗಳಲ್ಲಿ. ಆದರೆ ಇಂದಿಗೂ ತೋಟಗಾರಿಕೆಯ *ಪರಂಪರೆಯ ನಿಚ್ಚಳ ಲಕ್ಷಣ ಅಲ್ಲಿ* ಕಾಣುತ್ತದೆ.

(ಪು.೧೨೫-೧೨೭)

ಕಣ್ಣನ್‌ಶಾಸ್ತ್ರಿಗಳು

(ತಿರುನೆಲ್‌ವೇಲಿಯಲ್ಲಿ ನೆಲೆಸಿದ್ದವರು ಕಣ್ಣನ್‌ಶಾಸ್ತ್ರಿಗಳು. ಅವರು ನಿವೃತ್ತ ಅಧ್ಯಾಪಕರು. ಸಂಕೇತಿಗಳು ಸ್ವತಂತ್ರವಾಗಿ ವ್ಯವಸಾಯ ಮಾಡಿದವರಲ್ಲವೆಂದು ಅವರು ಬಲವಾಗಿ ವಾದಿಸಿದರು. ಆದರೆ ಅವರ ನೆರೆಮನೆಯಲ್ಲಿಯೇ ಇದ್ದ ಮಹದೇವನ್ ಸ್ವತಃ ಕೃಷಿಕರು. ಶೆಂಕೋಟ್ಟೈ-ಕೊಲ್ಲಂ ಮಾರ್ಗದ ಸಂಕೇತಿಗಳ ನೆಲೆಗಳ ಬಗೆಗೆ ಅವರು ಕೊಟ್ಟ ಮಾಹಿತಿ ವಿಶೇಷವಾಗಿತ್ತು. ಅವರು ಶೆಂಕೋಟ್ಟೈ ಪಕ್ಕದ ಎಲತ್ತೂರಿನವರು.)



ಮಹದೇವನ್ ಮತ್ತು ಅವರ ಪತ್ನಿ ಭವಾನಿ (ಮೂಲ: ಎಲತ್ತೂರು)

. . . ನಾವು ಹೆಚ್ಚು ಹೊತ್ತು ಮೌನವಾಗಿ ಕೂರುವ ಹಾಗಿರಲಿಲ್ಲ. ಈ ಸಂಜೆಯೇ ತೆಂಕಾಸಿಗೆ ಪ್ರಯಾಣ ಮಾಡಬೇಕಾಗಿತ್ತು. ಹಾಗಾಗಿ ಡಾ||ಸುಧಾಮಣಿ ನೇರವಾಗಿ ತಮ್ಮ ಪ್ರಶ್ನೆಗಳನ್ನು ಮುಂದಿರಿಸಿದರು.

ಮಹದೇವನ್ *ಬತ್ತ ಬೆಳೆಯುತ್ತಿದ್ದ ರೈತ.* ಮೊದಲ ಬೆಳೆ ಈರುಳ್ಳಿ, ನಂತರ ಮೆಣಸಿನಕಾಯಿ, ಏಪ್ರಿಲ್‌ನಲ್ಲಿ ಪಚ್ಚಬಾಳೆ ಅವರ ಹೊಲದ ಬೆಳೆಗಳು. ಮರಗೆಣಸೂ ಬೆಳೆಯುವುದಿತ್ತು. ಅಯ್‌ಕುಡಿಯ ಸುತ್ತ ವೀಳೆದೆಲೆ ಹಂಬು ಇತ್ತು. ಅದು ಅಲ್ಲಿನ ವಿಶೇಷವೂ ಹೌದು. ಕೇರಳ ಭಾಗದಲ್ಲಿ ಅಡಿಕೆ ಬೆಳೆಯುವುದಿತ್ತು. ಕೇರಳದ ಅಡಿಕೆಯು ರುಚಿಗೂ ಖ್ಯಾತವಾಗಿತ್ತು. *ವ್ಯವಸಾಯವನ್ನು ಬಡವರು ಸ್ವಂತವಾಗಿ ಮಾಡುತ್ತಿದ್ದರು,* ಶ್ರೀಮಂತರು ಆಳುಗಳನ್ನಿಟ್ಟು ಮಾಡಿಸುತ್ತಿದ್ದರು. ಜಮೀನಿದ್ದವರ ಸಂಖ್ಯೆ ಈಚೆಗೆ ಕಡಿಮೆಯಾಗಿತ್ತು. *ಗ್ರಾಮಾಂತರದಲ್ಲಿ ಈಗಲೂ ನೂರೈವತ್ತು ಸಂಕೇತಿ ಕುಟುಂಬಗಳಿರುವುದಾಗಿ* ಮಹದೇವನ್ ತಿಳಿಸಿದರು.

ಮಹದೇವನ್ ಅವರು ಒಂದು ಮುಖ್ಯ ಮಾಹಿತಿಕೊಟ್ಟರು. ಅದೆಂದರೆ ಕೊಲ್ಲಂನಿಂದ *ಶೆಂಕೋಟ್ಟೈವರೆಗಿದ್ದ ಸಂಕೇತಿ ನೆಲೆಗಳಲ್ಲಿ ಅಡಿಕೆ ಬೆಳೆ ವಿಶೇಷವಾಗಿತ್ತು. ತೆಕ್‌ಮೇಡ್, ತೇರ್‌ಮಲೈ* ಅಂಥ ಕೆಲವು ಸಂಕೇತಿ ನೆಲೆಗಳು. ಈಗ ಅ



ಮಹದೇವನ್ ಅವರ ಮನೆಯ ಅಡುಗೆಮನೆಯ ಭಾಗ: ತಿರುನೆಲ್‌ವೇಲಿ

ಭಾಗದಲ್ಲಿ ಯಾವ ಸಂಕೇತಿ ನೆಲೆಗಳೂ ಉಳಿದಿರಲಿಲ್ಲ. ಇದು ನಾನು ಈಗಾಗಲೇ ಡಾ||ಸುಧಾಮಣಿಯವರಿಗೆ ನೀಡಿದ್ದ ವಿವರಣೆಯನ್ನು ಪೋಷಿಸಿತ್ತು. ವಾಸ್ತವವಾಗಿ ನಾನು ಅಮೆರಿಕೆಯ ನಿಯೋಗದೊಂದಿಗೆ ಮಾಡಿದ್ದ ಹಿಂದಿನ ಪ್ರವಾಸದಲ್ಲಿ ಕಾರಿನಲ್ಲಿ ಕೂತು ಕೊಲ್ಲಂನಿಂದ ಶೆಂಕೋಟ್ಟೈಗೆ ಬಂದಿದ್ದೆವು. ದಾರಿಯಲ್ಲಿ ಹಲವು ಸಂಕೇತಿಗಳ ಪೂರ್ವನೆಲೆಗಳನ್ನು ಸಂದರ್ಶಿಸಿದ್ದೆವು. ಆಗಲೂ ಶೆಂಕೋಟ್ಟೈನಲ್ಲಿದ್ದ ಅಣ್ಣಾವಿ ರಾಮನ್ ಸೇರಿದಂತೆ ಹಲವು ವಕ್ತೃಗಳಿಂದ ಆ *ಅಡಿಕೆ ಪ್ರಾಂತದ ಸಂಕೇತಿನೆಲೆಗಳ ಬಗೆಗೆ ಹೆಚ್ಚಿನ ಮಾಹಿತಿ* ಪಡೆದಿದ್ದೆವು. ಆ ಬಲದಿಂದ ಸುಧಾಮಣಿಯವರಿಗೆ ಆ ಮಾಹಿತಿ ನೀಡುವುದು ನನಗೆ ಸಾಧ್ಯವಾಗಿತ್ತು.

(ಪು.೧೩೪)

ತೆಂಕಾಸಿಯ ತೋಟಗಳು

(ತೆಂಕಾಸಿಯು ತಿರುನೆಲ್‌ವೇಲಿ ಜಿಲ್ಲೆಯ ಶೆಂಕೋಟ್ಟೈ ಪಕ್ಕದ ಊರು. ಅಲ್ಲಿಂದ ಕೊಲ್ಲಂ ಮಾರ್ಗವಾಗಿ ಕ್ರಮಿಸಬಹುದು. ತೆಂಕಾಸಿಯಲ್ಲಿಯೇ ಅಡಕೆ ತೋಟಗಳ ಸನ್ನಿವೇಶವೈಭವವು ಅನುಭವಕ್ಕೆ ಬಂದಿತ್ತು)

ಕಣ್ಣನ್ ಶಾಸ್ತ್ರಿಗಳು ಮುಖ್ಯವಾಗಿ ಅಡಿಕೆ ಮತ್ತು ವೀಳೆ ಎಲೆಗಳ ಬೇಸಾಯದ ವಿಷಯದಲ್ಲಿ ಹಾಗೂ ಸಾಮಾನ್ಯವಾಗಿ ವ್ಯವಸಾಯದ ವಿಷಯದಲ್ಲಿ ಆಡಿದ ಮಾತುಗಳು ನಮಗೆ ಮುಖ್ಯವೇ ಆಗಿದ್ದುವು. ಕರ್ನಾಟಕದ ಸಂಕೇತಿಗಳ ಪಾರಂಪರಿಕವೂ ಪರಿಣತವೂ ಆದ ವ್ಯವಸಾಯ ಪದ್ಧತಿಗೆ *ಹಿನ್ನೆಲೆ ಇರುವುದು (ಈಗಿನ) ಕೇರಳದ ಘಟ್ಟಸಾಲಿನಲ್ಲಿ*; ಕೊಲ್ಲಂ-ತಿರುವನಂತಪುರ-ಶೆಂಕೋಟ್ಟೈ ತ್ರಿಕೋನದಲ್ಲಿ. ಕರ್ನಾಟಕದ ಸಂಕೇತಿಗಳ ಗಾಢವಾದ ಕೃಷಿಕತೆಯು ಕೇವಲ ಪಲ್ಲಟಗೊಂಡ ಜೀವನದ ಅನಿವಾರ್ಯ ಕೊಡುಗೆಯಲ್ಲ, *ಅದಕ್ಕೆ ಪರಂಪರೆಯ ಬೇರು ಇದ್ದಲ್ಲದೆ ಅಂಥ ತನ್ಮಯತೆ, ನೈಪುಣ್ಯ ಸಾಧ್ಯವಾಗದು . . .*

(ಪು.೧೩೬)

. . . ತೆಂಕಾಸಿ ಹತ್ತಿರವಾದಂತೆ ಘಟ್ಟಸಾಲೂ ಅದರ ತಪ್ಪಲಿನ ಹಸಿರೂ ಕಾಣತೊಡಗಿತ್ತು. ತೆಂಕಾಸಿಯಲ್ಲಿ ನಮ್ಮ ಆಟೋದವನು ಪ್ರಾಯಶಃ ತನಗೆ ಮಾಮೂಲಾದ ಒಂದು ವಸತಿಗೃಹಕ್ಕೆ ಒಯ್ದ. ನಮಗೆ ಸಿಕ್ಕಿದ್ದು ಮೂರನೆಯ ಮಹಡಿಯ ಒಂದು ಕೋಣೆ; ಘಟ್ಟಸಾಲಿಗೆ ಅಭಿಮುಖವಾದದ್ದು. ಘಟ್ಟಸಾಲಿಗೂ ನಮಗೂ ನಡುವೆ ತೋಟಗಳ ಆಗ್ರಗಳಿದ್ದುವು. *ತಮಿಳುನಾಡಿಗೆ ಕಾಲಿಟ್ಟ ಮೇಲೆ ಇದು ನಮ್ಮ ತನದ ಮೊದಲ ನೋಟವಾಗಿತ್ತು*. ಮುಸ್ಸಂಜೆ ಕಾಲಿಡಲು ಹವಣಿಸುತ್ತಿತ್ತು. ನಾವು ಇನ್ನೂ ಕೋಣೆಯೊಳಗೆ ಸಾಮಾನುಗಳನ್ನು ಪೂರ್ತಿ ಒಯ್ದಿರಲಿಲ್ಲ. ತಡಮಾಡಿದರೆ ಕತ್ತಲು ಆವರಿಸಿಬಿಡುವುದಿತ್ತು. "ಸುಧಾಮಣಿ! ಬೇಗ ಕ್ಯಾಮರಾ ತೊಗೊಳ್ಳಿ, ಈ ತೋಟಗಳ ಛಾಯಾಚಿತ್ರ ತೊಗೊಳ್ಳಿ, ಘಟ್ಟ ಸಾಲಿನ ಹಿನ್ನೆಲೆಯೂ ಇರಲಿ. ಈ ಇನ್ನೊಂದು ದಿಕ್ಕಿನಲ್ಲಿ ಗದ್ದೆಸಾಲಿನ ಹಿನ್ನೆಲೆಗೆ ತೋಟಗಳ ಚಿತ್ರ ತೆಗೆಯಿರಿ" ಎಂದು ಕೂಗಿಕೊಂಡೆ. ವೆಂಕಟೇಶ್ ಅದಾಗಲೇ ಕ್ಯಾಮರಾವನ್ನು ಸುಧಾಮಣಿಯವರ ಕೈಗೆ ಕೊಟ್ಟಾಗಿತ್ತು. ಅವರು ಬರಗೆಟ್ಟವರ ಹಾಗೆ ಹಲವು ಚಿತ್ರಗಳನ್ನು ತೆಗೆದೂ ಆಗಿತ್ತು. ಮತ್ತೆ ನಾಲ್ಕನೆಯ ಅಂತಸ್ತನ್ನು ಏರಿ ಮೇಲ್ಚಾವಣಿಯ ಮೇಲೆ ನಿಂತು ಇನ್ನಷ್ಟು ಚಿತ್ರ ತೆಗೆದೆವು. ಕತ್ತಲು ಕವಿಯುವವರೆಗೆ ಆ ದೃಶ್ಯವನ್ನೇ ನೋಡುತ್ತ ಕೂತೆವು. ಕುರುಕಲುಗಳ ಪೊಟ್ಟಣಗಳು ಖಾಲಿಯಾಗುತ್ತಿದ್ದುವು. ಘಟ್ಟದ ಮೇಲೆ ಮೋಡ ಕವಿಯತೊಡಗಿತ್ತು. ಮಳೆಗಾಳಿ ತಂಪಾಗಿ ಬೀಸುತ್ತಿತ್ತು. ಇನ್ನೊಂದು ಬದಿಗೆ ಮಹೋನ್ನತವಾದ ದೇವಸ್ಥಾನದ ಗೋಪುರ. ನಾವು ನಮ್ಮ ಊರು, ಅಲ್ಲಿನ ಗದ್ದೆ, ತೋಟ, ದೇವಸ್ಥಾನಗಳನ್ನು ನೆನೆದೆವು. *ವ್ಯವಸಾಯದ ವಿಷಯದಲ್ಲಿ ಮೊದಲ ಬಾರಿಗೆ ನಮ್ಮೂರಿನ ನೆನಪು, ಅನುಭವ ಕನ್ನಡಿಗೊಂಡ ಸಮಯ.*

(ಪು.೧೩೭-೧೩೮)

೧೮. ಆಹ್ವಾನಿತ ಲೇಖನಗಳು

('ಸಂಕೇತಿ ಅಧ್ಯಯನ ಮಾಲೆ'ಯ ಸಂಪುಟಗಳಿಗಾಗಿ ಸಂಕೇತಿ ಕೃಷಿಯ ಸಂಬಂಧದಲ್ಲಿ ಮಾಡಲಾಗಿರುವ ಅಧ್ಯಯನವು ವ್ಯಾಪಕವಾದುದು. ಆದರೆ ಈ ಕ್ಷೇತ್ರವೇ ಬಹು ವಿಸ್ತಾರವಾದುದು. ಸಂಕೇತಿ ಕೃಷಿಗೆ ಸಂಬಂಧಿಸಿದಂತೆ ನಮ್ಮ ಅಧ್ಯಯನದ ಸಂದರ್ಭದಲ್ಲಿ ಬಿಟ್ಟುಹೋಗಿರಬಹುದಾದ ವಿಶಿಷ್ಟ ಮಾಹಿತಿ ಯಾವುದಾದರೂ ಮೂಲಗಳಲ್ಲಿ ಇದ್ದರೆ ಅದೂ ಬಂದು ಸೇರಲಿ ಎಂಬ ಉದ್ದೇಶದಿಂದ ಲೇಖನಗಳನ್ನು ಆಹ್ವಾನಿಸಲಾಗಿತ್ತು. ಇಲ್ಲಿನ ಲೇಖನಗಳಲ್ಲಿ - ಸಂಕೇತಿಗಳು ಅಲ್ಪತೃಪ್ತರು, ಹಣದ ಬೆನ್ನು ಹತ್ತಿದವರಾಗಿರಲಿಲ್ಲ ಎಂಬ ಸಂಗತಿ; ತಮ್ಮ ರಾಸುಗಳ ಜತೆ ಅವರು ಇಟ್ಟುಕೊಂಡ ಭಾವನಾತ್ಮಕ ಸಂಬಂಧದ ಸ್ವರೂಪ; ಕೊಲ್ಲಂ-ತಿರುವನಂತಪುರಂ-ತಿರುನೆಲ್‌ವೇಲಿ ಅವರ ಮೂಲ ಆವಾಸ, ಕರ್ನಾಟಕದ ಸಂಕೇತಿಗಳು ಬಳಸುವುದು 'ಕಳಿಪಾಕ್' ಎಂಬ ಮಲಯಾಳಂ ಪದವನ್ನು, ಕೊಟ್ಟೈಪಾಕ್ ಎಂಬ ತಮಿಳುಪದವನ್ನಲ್ಲ ಎಂಬ ಅಂಶ; ಸಂಕೇತಿಗಳು ಅಡಿಕೆಗೆ ಒಲಿದ ರೀತಿ, ಹಂಬಿನ ತೋಟಕ್ಕೆ ಸಂಬಂಧಿಸಿದಂತೆ ಇರುವ ವಿಧಿ-ನಿಷೇಧಗಳಲ್ಲಿ ದಕ್ಷಿಣ ಮತ್ತು ಕರ್ನಾಟಕದ ಸಾಮ್ಯ - ಇಂಥ ಸಂಗತಿಗಳು ವಿಶೇಷವಾಗಿ ಗಮನ ಸೆಳೆಯುತ್ತವೆ. ಈ ಲೇಖನಗಳೆಲ್ಲ ಮೊದಲಬಾರಿ ಇಲ್ಲಿ ಬೆಳಕು ಕಾಣುತ್ತಿವೆ.)

ಅ) ಕೃಷಿ ಬೆಳವಣಿಗೆ

ಶ್ರೀವಲ್ಲಿ ಮಂಜುನಾಥ, ಬೆಂಗಳೂರು

ಮಾದಾಪುರದ ನಾಗಪ್ಪ ಮತ್ತು ಅಗ್ರಹಾರದ ಸುಬ್ಬಲಕ್ಷ್ಮಮ್ಮನವರ ಸುಪುತ್ರರಾದ ಶ್ರೀಮಾನ್ ಆರ್.ಎನ್. ಸುಬ್ಬರಾಯರವರು ಪ್ರಸ್ತುತ ಹಾಸನದಲ್ಲಿ ನಿವೃತ್ತ ಜೀವನ ನಡೆಸುತ್ತಿದ್ದಾರೆ. ಇವರ ವಿದ್ಯಾಭ್ಯಾಸ ಮೈಸೂರಿನಲ್ಲಾಯಿತು. ಬಿ.ಎಸ್‌ಸಿ. (ಕೃಷಿ) ಮಾಡಿರುವ ಇವರು ಕೃಷಿ ವಿಸ್ತರಣಾಧಿಕಾರಿಯಾಗಿ, ಕೃಷಿತಜ್ಞರಾಗಿ, ಕರ್ನಾಟಕ ಸರ್ಕಾರದ *ಕೃಷಿ ವಿಭಾಗದಲ್ಲಿ ಡೆಪ್ಯುಟಿ ಡೈರೆಕ್ಟರ್*ಆಗಿ ಸೇವೆ ಸಲ್ಲಿಸಿ ಈಗ ನಿವೃತ್ತರಾಗಿ ಹಾಸನದಲ್ಲಿ ನೆಲೆಸಿದ್ದಾರೆ.

ಇವರು ಈ ಮೊದಲು ರೈತರಿಗೆ ಬೇಸಾಯದ ಬಗ್ಗೆ ಮಾಹಿತಿ ನೀಡುತ್ತಿದ್ದರು. ಅರಕಲಗೂಡಿನಲ್ಲಿ ರೈತಮಹಿಳೆಯರಿಗೆ ಕೃಷಿಯ ಬಗ್ಗೆ ಹೆಚ್ಚಿನ *ತರಬೇತಿಯನ್ನೂ ನೀಡಿದ್ದಾರೆ.* ಈಗ ಇವರು ತಮ್ಮ ಹೆಚ್ಚಿನ ಸಮಯವನ್ನು ರುದ್ರಪಟ್ಟಣದಲ್ಲಿರುವ ತಮ್ಮ ತೋಟದ ಅಭಿವೃದ್ಧಿಗೆ ಮೀಸಲಿಟ್ಟಿದ್ದಾರೆ. ಮೊದಲಿನಿಂದಲೂ ಹಳ್ಳಿಯಲ್ಲಿ ನಮ್ಮ ಜನಾಂಗದವರ ಕೃಷಿ ಜೀವನವನ್ನು ಹತ್ತಿರದಿಂದ ನೋಡಿದ ಇವರ ಪ್ರಕಾರ, ಸಂಕೇತಿಗಳು ಹಳ್ಳಿಗಳಲ್ಲಿ *ತೋಟವನ್ನು ಹೊಂದಿದ್ದವರೇ ಹೆಚ್ಚು*. ಹೊಲ-ಗದ್ದೆಗಳಲ್ಲಿ ಅಷ್ಟು ಆಸಕ್ತಿ ಇಲ್ಲ. ಇದ್ದರೂ ನೇಗಿಲು ಹಿಡಿದು, ಉತ್ತು-ಬಿತ್ತು, ಬೆಳೆದಿದ್ದು ಕಡಿಮೆಯೆಂದೇ ಹೇಳಬೇಕು. ವಿಶೇಷವಾಗಿ ಇವರು ಬೆಳೆಯುತ್ತಿದ್ದುದು ಅಡಿಕೆ, ವಿಳ್ಳೇದೆಲೆ, ತೆಂಗು, ಬಾಳೆ ಮೊದಲಾದವು. ಅಡಿಕೆ, ವಿಳ್ಳೇದೆಲೆಯನ್ನು ಮಾರಿ ಜೀವನ ನಿರ್ವಹಣೆ ಮಾಡುತ್ತಿದ್ದರು. ನೀರಾವರಿಗೆ ಈಗಿನಂತೆ ವಿದ್ಯುತ್ತಿನ, ಮೋಟಾರಿನ ಸೌಲಭ್ಯವಿಲ್ಲದಿದ್ದರಿಂದ,ಸ್ವಭಾವತಃ ಕಷ್ಟಜೀವಿಗಳಾದ ಇವರು ಭಾವಿಗಳಿಂದ ನೀರೆತ್ತಿ ತೋಟಗಳಿಗೆ ನೀರು ಹಾಯಿಸುತ್ತಿದ್ದರು. ತೋಟದ ಜೊತೆಜೊತೆಗೆ *ವೇದಾಧ್ಯಯನವನ್ನೂ, ಸಂಗೀತಾಭ್ಯಾಸವನ್ನೂ* ಮಾಡುತ್ತಿದ್ದರು.

ಸಂಕೇತಿಗಳು ಹಸುಗಳನ್ನು ಸಾಕುತ್ತಿದ್ದುದು ತಮ್ಮ ದಿನನಿತ್ಯದ ಆವಶ್ಯಕತೆಗಾಗಿಯೇ ಹೊರತು ಎಂದಿಗೂ ಹಾಲು, ಮೊಸರುಗಳನ್ನು ಮಾರಾಟ ಮಾಡುತ್ತಿರಲಿಲ್ಲ. ಕೇಳಿದವರಿಗೆ ಉದಾರವಾಗಿಯೇ ನೀಡುತ್ತಿದ್ದರು. ಇವರು *ಅಲ್ಪತೃಪ್ತರು, ಎಂದೂ ಹಣದ ಬೆನ್ನ ಹತ್ತಿದವರಲ್ಲ*.

ನಮ್ಮ ಪೂರ್ವಜರು 'ಕದರಿ' ಎಂಬ ಸಾಧನದ ಸಹಾಯದಿಂದ, ಹತ್ತಿಯಿಂದ ನೂಲಿನ ಎಳೆಗಳನ್ನು ತೆಗೆದು, ಅದರಿಂದ *ಜನಿವಾರವನ್ನು* ಹೊಸೆದು ಬಳಸುತ್ತಿದ್ದರು, ಮತ್ತು ಮುತ್ತುಗದ ಎಲೆಯಿಂದ *ದೊನ್ನೆ, ಊಟದ ಎಲೆ* ತಯಾರಿಸಿ ಮನೆಗಳಲ್ಲಿ ಉಪಯೋಗಿಸುತ್ತಿದ್ದರು. ನಂತರದ ದಿನಗಳಲ್ಲಿ ಅದನ್ನು ಮಾರಾಟ ಮಾಡುತ್ತಿದ್ದರು. ಇತ್ತೀಚೆಗೆ ಆಧುನೀಕರಣದಿಂದಾಗಿ ಯಂತ್ರಗಳ ಸಹಾಯದಿಂದ, ಅಡಕೆ ಹಾಳೆಯಲ್ಲಿ ತಟ್ಟೆ, ದೊನ್ನೆ ಮುಂತಾದವುಗಳನ್ನು ತಯಾರಿಸಿ ಮಾರಾಟ ಮಾಡುತ್ತಿದ್ದಾರೆ.

ಆದರೆ ಇತ್ತೀಚೆಗೆ ಊರಿನ ಒಳ ಜಗಳ, ರಾಜಕೀಯ ಇವುಗಳಿಂದಾಗಿ ಹೆಚ್ಚಿನವರು *ಹಳ್ಳಿಗಳನ್ನು ತೊರೆದು ಪಟ್ಟಣಗಳಿಗೆ ವಲಸೆ ಹೋಗಿದ್ದಾರೆ.* ಮಕ್ಕಳ ಹೆಚ್ಚಿನ ವಿದ್ಯಾಭ್ಯಾಸಗಳಿಗಾಗಿಯೂ ಹೊರ ಹೋದವರಿದ್ದಾರೆ. ನಮ್ಮವರೇ ಅನೇಕರು ವೈದ್ಯಕೀಯ ಕ್ಷೇತ್ರದಲ್ಲಿಯೂ, ತಾಂತ್ರಿಕ ಕ್ಷೇತ್ರದಲ್ಲಿಯೂ ಉನ್ನತ ವ್ಯಾಸಂಗ ಮಾಡಿ ದೇಶ-ವಿದೇಶಗಳಲ್ಲಿ ಅತ್ಯುನ್ನತ ಹುದ್ದೆಗಳಲ್ಲಿದ್ದಾರೆ. ಈ ಎಲ್ಲ ಕಾರಣಗಳಿಂದ ಈಗ ನಮ್ಮ ಜನಾಂಗದವರು ಹಳ್ಳಿಗಳನ್ನು ತೊರೆದು ಪಟ್ಟಣಗಳಿಗೆ ಹೋಗುತ್ತಿದ್ದಾರೆ.

ನಮ್ಮವರು ಸಂಘಜೀವಿಗಳು, ಅಲ್ಪತೃಪ್ತರು, ಹಣಕ್ಕೆ ಎಂದೂ ಹೆಚ್ಚಿನ ಮಹತ್ವ ನೀಡಿದವರಲ್ಲ. *ಮಾನವೀಯತೆ ನಮ್ಮ ಹಿರಿಯರ ಹಿರಿಗುಣ.* ಇದನ್ನೆಲ್ಲಾ ಮರೆಯದೆ ನಮ್ಮ ಜೀವನದಲ್ಲೂ ಅಳವಡಿಸಿಕೊಳ್ಳಲು ಪ್ರಯತ್ನಿಸೋಣವೇ?

ಆ) ಅರ್ರೈತನ ಕೃಷಿಕಾನುಭವ

-ಪ್ರೊ.ಎಲ್.ಎಂ.ಎಲ್.ಶಾಸ್ತ್ರಿ, ಲಿಂಗದಹಳ್ಳಿ, ಶಿವಮೊಗ್ಗ

ನಾನು ೧೯೫೩ರಲ್ಲಿ ಎಸ್‌ಎಸ್‌ಎಲ್‌ಸಿ ಮುಗಿಸಿದೆ. ಆಪ್ಷನಲ್ ಆಗಿ ಕಾಮರ್ಸ್ ತಗೊಂಡಿದ್ದೆ. ಬಿ.ಕಾಂ., ಮಾಡಿ ಒಂದು ಬ್ಯಾಂಕಿನಲ್ಲಿ ಗುಮಾಸ್ತನಾಗಬೇಕೆಂಬುದು ನನ್ನ ಏಕೈಕ ಹಿರಿಯಾಸೆ. ಈ ಅಪೇಕ್ಷೆ ಪೂರೈಸಿಕೊಳ್ಳಲು ಮೊದಲ ಮೆಟ್ಟಿಲು ಏರಿದ್ದಾಗಿತ್ತು. ಆದರೆ ನನಗೆ ಇಂಟರ್ ಓದಲು ಅನುಮತಿ ಸಿಗಲಿಲ್ಲ. ನನ್ನಣ್ಣ ಡಿಪ್ಲೋಮಾಗೆ ಸೇರಿದ್ದ. *ಇಬ್ಬರನ್ನು ಓದಿಸುವ ಸಾಮರ್ಥ್ಯ ತಮಗಿಲ್ಲ ಅಂತ ನನ್ನ ತಂದೆ,* ನನ್ನ ಕೋರಿಕೆಯನ್ನು ತಿರಸ್ಕರಿಸಿದರು. ನನ್ನ ಜೊತೆಯವರೆಲ್ಲ ಕಾಲೇಜಿಗೆ ಸೇರಿದರು. ನಾನು ಮಾತ್ರ ನನ್ನ ಹಳ್ಳಿಮನೆ ಸೇರಿದೆ. ರೈತನ ಪಟ್ಟ ಸಿಗಲಿಲ್ಲ. ಆದರೆ ಮಾಡಿದ್ದು ಅದೇ ಕೆಲಸ - ಒಂದು ವರ್ಷ ಮಾತ್ರ. ಆದರೆ ಪಡೆದ ಅನುಭವ ಒಂದು ಜೀವನಕ್ಕೆ ಸಾಕು.

ನಮ್ಮ ಮನೆಯಲ್ಲಿ ಸುಮಾರು *೫೦ ಹಸುಗಳು, ಹತ್ತು-ಹನ್ನೆರಡು ಕರುಗಳು* ಇದ್ದವು. ಇವುಗಳನ್ನ ದನಕಾಯುವವರ ಸುಪರ್ದಿಗೆ ಕೊಡಲು ಹಿಂಡಿಗೆ ಹೊಡೆಯುವುದು, ಸಂಜೆ ಲೆಕ್ಕ ತಪ್ಪದಂತೆ ಒಳ ಕೂಡಿಕೊಳ್ಳುವುದು ಬಲು ಕಷ್ಟದ, ಕಡ್ಡಾಯವಾದ, ನಿಯತವಾದ ಕೆಲಸ. ಹಸುಗಳು ಹಿಂಡಿಗೆ ಹೋದ ನಂತರ ಕೊಟ್ಟಿಗೆಯಲ್ಲಿನ ಸುಮಾರು ೩೦ ತಟ್ಟಿ ಸಗಣಿಯನ್ನು ಎತ್ತಿ ಹಾಕಿ ಶುದ್ಧಿಗೊಳಿಸುವುದೂ ಕಷ್ಟದ ಕೆಲಸವೇ. ಇದಕ್ಕೆಲ್ಲಾ ಆಳುಗಳಿರಲಿಲ್ಲ. ನನಗಂತೂ ಮುಟ್ಟಲೂ ಮುಜುಗರ. ಹೇಗೆ ಎತ್ತಿ ಹಾಕುತ್ತಿದ್ದೆನೋ ಭಗವಂತನಿಗೇ ಗೊತ್ತು. ಹುಳುಗಳಿದ್ದರಂತೂ ಬೇಡ ಗೋಳು. ಜೊತೆಗೆ ಅಮಧುರ ಕಟು ವಾಸನೆ. ಬೇಡದ ನೆನಪು. ನನ್ನ ತಂದೆಗೆ ಈ ಎಲ್ಲ ಹಸುಗಳನ್ನ *ಮಾತನಾಡಿಸುವ ಅಭ್ಯಾಸವಿತ್ತು.* ಅವರು ಹೆಸರು ಹಿಡಿದು ಕರೆದೊಡನೆ ಅವರ ಬಳಿ ಬಂದು, ಅವರು ಕೆರೆಯುತ್ತ, ಉಣ್ಣೆಗಳನ್ನು ಹಿಡಿದು ತೆಗೆಯುತ್ತ, ಮುದ್ದಿನ ಮಾತುಗಳನ್ನಾಡುತ್ತಿದ್ದರೆ ಬಲು ಪ್ರೀತಿಯಿಂದ ತಲೆದೂಗಿ ಸ್ವೀಕರಿಸುತ್ತಿದ್ದವು. ಆರು ತಿಂಗಳು, ವರ್ಷಕ್ಕೊಮ್ಮೆ ಉಪ್ಪು ನೆಕ್ಕಲು, ಹತ್ತು ಹನ್ನೆರಡು ಮೈಲುದೂರದ ಕರಲಿಗೆ ಊರಿನ ದನಗಳ ಜೊತೆ ಹೋದಾಗ ತಂದೆಗೆ *ವಿರಹಾನುಭವ.* ಈ ಎರಡು ದಿನ ದನಗಳಿಲ್ಲದ ಕೊಟ್ಟಿಗೆಯಲ್ಲಿ ತಿರುಗಾಡುವ *ತಂದೆಯವರ ಮೂಕ ಸಂಕಟ* ಇಂದಿಗೂ (೫೦ ವರ್ಷ ಆಯಿತು) ನನ್ನ ಕಣ್ಣಿಗೆ ಕಟ್ಟಿದೆ. ಇಷ್ಟು ಹಸುಗಳು ನಮ್ಮ ಮನೆಯಲ್ಲಿದ್ದರೂ (ಆ ವರ್ಷ) ಎಮ್ಮೆಗಳಿರಲಿಲ್ಲ. ಕಾರಣ ಹಿಂದಿನ ವರ್ಷ ನಮ್ಮ ಗಬ್ಬದ ಎಮ್ಮೆ ಒಂದನ್ನ (ಅಂದೇ ಕರು ಹಾಕುವ ನಿರೀಕ್ಷೆಯಲ್ಲಿದ್ದೆವು) ಹುಲಿ ಹಿಡಿದು, ಕೊಂದು, ಅರ್ಧ ತಿಂದು ಹೋಗಿತ್ತು - ಅದೂ ನಮ್ಮ ಮನೆ ಸಮೀಪ, ಊರೊಳಗೇ, ಊರೊಳಗಿನ ಕೆರೆ ದಂಡೆಯಲ್ಲಿ! ಈ ದೃಶ್ಯ ಕಂಡ ತಂದೆಯವರ ವೇದನೆ ಅವರ್ಣ್ಯ. ಏಕೆಂದರೆ *ಅವರಿಗೆ ರಾಸುಗಳ ಮೇಲಿದ್ದ ಪ್ರೀತಿ ನಮ್ಮ ಮೇಲಿದ್ದುದಕ್ಕಿಂತ ಒಂದು ತೂಕ ಜಾಸ್ತಿ.* ಅಂದೇ ಕೊನೆ. ಮನೆಯಲ್ಲಿದ್ದ ಉಳಿದ ಒಂಬತ್ತು ಎಮ್ಮೆಗಳನ್ನೂ ಕರುಸಹಿತ ದಾನ ಮಾಡಿದರು. ಮತ್ತೆಂದೂ ಎಮ್ಮೆ ಕಟ್ಟಲಿಲ್ಲ. ಇಂದೂ ನಮ್ಮ ಮನೆಯಲ್ಲಿ ಹತ್ತಾರು ಹಸುಗಳಿವೆ. ಆದರೆ ಎಮ್ಮೆ ಇಲ್ಲ.

ಇನ್ನು ಸ್ವಂತದ ವಿಚಾರಕ್ಕೆ ಬರುತ್ತೇನೆ. ನಮಗೆ ಸ್ವಲ್ಪ *ಅಡಿಕೆ ತೋಟ,* ಬತ್ತ ಬೆಳೆಯುವ ಎರಡು ಗದ್ದೆಗಳಿದ್ದುವು. ಒಂದು ಗದ್ದೆ ಸುಮಾರು ಆರು ಕಿ.ಮೀ. ದೂರವಿದ್ದು ನಾನೆಂದೂ ಆ ಗದ್ದೆಗೆ ಹೋದುದಿಲ್ಲ. ನಮ್ಮ ತಂದೆ ಮುಂಜಾನೆ ನಾಲ್ಕು ಘಂಟೆಗೆ ಹೋಗಿ ನೀರು ಕಟ್ಟಿ ಬರುತ್ತಿದ್ದರು. (ನನ್ನ ಅಮ್ಮ ಮೃತರಾಗಿ ಎರಡು ವರ್ಷ ಆಗಿತ್ತು. ಆದ್ದರಿಂದ) ಆರು ಘಂಟೆಯೊಳಗೆ ವಾಪಸ್ ಬಂದು ನಮ್ಮ ಆರು ಮಕ್ಕಳಿಗೆ ಆಹಾರ ಪಾನೀಯದ ವ್ಯವಸ್ಥೆ ಮಾಡಿ ಹತ್ತು ಘಂಟೆಗೆ ಶಾಲೆಗೆ ಹೋಗುತ್ತಿದ್ದರು (ಅಧ್ಯಾಪಕರಾಗಿದ್ದರು). ಸಂಜೆ ಪುನಃ ತೋಟ ಗದ್ದೆಗಳ ಭೇಟಿ ಮುಗಿಸಿ ಎಂಟಕ್ಕೆ ಕೊಟ್ಟಿಗೆ ಕೆಲಸ ಮುಗಿಸಿ ಅಡುಗೆ ಮನೆ ಕೆಲಸ ನೋಡಿಕೊಳ್ಳುತ್ತಿದ್ದರು. ಒಂಬತ್ತರ ನಂತರ *ನಾಟಕ ಕಲಿಸುವುದು* ಇತ್ಯಾದಿ ಸಾಂಸ್ಕೃತಿಕ ಕಾರ್ಯಕ್ರಮಗಳು,

ಹಾಗೂ ನನಗೆ (ಸುಮಾರಾಗಿ ಎಲ್ಲ) ಹಳಗನ್ನಡ ಕಾವ್ಯಗಳ ಪಾಠ. ಅವರು ಸುಮಾರು ೧೯೫೯ನೆಯ ಇಸವಿಯಲ್ಲಿ ಕನ್ನಡ ಪಂಡಿತರಾದರು. ೫೯, ೬೦ರ ಎರಡು ವರ್ಷ (ಅಂದರೆ ಸುಮಾರು ಅರುವತ್ತಮೂರು ವರ್ಷಗಳ ಹಿಂದೆ) ವೀರಭದ್ರ ದೇವಾಲಯದ ಅಂಗಳದಲ್ಲಿ ಕುಮಾರವ್ಯಾಸ *ಭಾರತದ ವಾಚನ ವ್ಯಾಖ್ಯಾನ* ಕಾರ್ಯಕ್ರಮ ನಡೆಸುತ್ತಿದ್ದರು ಎಂದು ಹಳಬರು ನೆನೆಸಿಕೊಳ್ಳುತ್ತಾರೆ. ನಮ್ಮ ಸುತ್ತ ಮುತ್ತಲ ಪ್ರಾಂತಕ್ಕೆ ಇದೇ ಮೊದಲ ಪ್ರಯತ್ನ. ನಮ್ಮ ಇನ್ನೊಂದು ಗದ್ದೆ ಊರಿಗೆ ಹತ್ತಿರದ್ದು. ಸು.ಎರಡು ಕಿ.ಮೀ.ದೂರದ್ದು. ಇದರ ಉಸ್ತುವಾರಿ ನನ್ನದು. ನನ್ನ ರೈತಕಾರ್ಯದ ಪ್ರೊಬೆಷನರಿ ಪೀರಿಯಡ್ದು. ಈ ಗದ್ದೆಯಲ್ಲಿ ಭತ್ತ ನಾಟಿ ಮಾಡಿದ್ದೆವು. ಕಳೆ ತೆಗೆಸುವ, ನೀರು ಕುಡಿಸುವ ಕಾರ್ಯ ನಿರಂತರ ನಡೆಯಿತು. ನನ್ನ ಜೊತೆಯವರು ಮಾಡದ ಕೆಲಸ ನಾನು ಮಾಡಿ ಅನುಭವ ಪಡೆಯುತ್ತಿರುವ ಹುಮ್ಮಸ್ಸು.

ನನ್ನ ದುರದೃಷ್ಟಕ್ಕೆ ಇನ್ನೆಂದೂ ಮರೆಯಲಾಗದಂತಹ ವಿಶಿಷ್ಟಾನುಭವವಾಯಿತು. ಇಡೀ ಮುಷ್ಣಿಂಕೆರೆ ಬಯಲಿನಲ್ಲಿ ಎಲ್ಲರೂ ದಬ್ಬಣಸಾಲೆ ಎಂಬ ದಪ್ಪಕ್ಕಿಯ ಜಾತಿ ಭತ್ತವನ್ನು ಹಾಕಿದ್ದರು. ನಾನು ಸುಮ್ಮನಿರದೆ, ಯಾರೂ ಮಾಡದ್ದನ್ನು ಮಾಡಬೇಕೆಂಬ ಹುಮ್ಮಸ್ಸಿನಲ್ಲಿ ಆಲೂರು ಸಣ್ಣ ಜಾತಿಯ ಭತ್ತ ನಾಟಿ ಮಾಡಿಸಿದ್ದೆ. ಪರಿಣಾಮ ಗದ್ದೆ ಬಯಲು ಪೂರ್ಣ ಬಯಲಾದರೂ ನಮ್ಮ ಗದ್ದೆಯಲ್ಲಿ ಕುಯಲು ಇರಲಿ, ಇನ್ನೂ ಹಾಲುದುಂಬಿರಲಿಲ್ಲ. ನಮ್ಮದು ಕೊನೆ ಗದ್ದೆಯಾಗಿದ್ದು ಕಂಚೇನಹಳ್ಳಿಯವರ ಜಮೀನಿನ ಪಕ್ಕದ ಕಾಡಿನಿಂದ *ಕಾಡುಹಂದಿಗಳು* ದಾಳಿಯಿಡತೊಡಗಿದವು! ಎಲ್ಲ ಗದ್ದೆಗಳಲ್ಲಿ ಕಟಾವು ಆಗಿದ್ದುದರಿಂದ ಹಂದಿಗಳಿಗೆ, ಪಾಪ, ನಮ್ಮದೊಂದೇ ಗದ್ದೆ, ಹಸಿದ ಹೊಟ್ಟೆಗೆ. ಮಂಚಿಗೆ ಕಟ್ಟಿ ಐದಾರು ವಾರ ಗದ್ದೆಯಲ್ಲಿ ರಾತ್ರಿ ಕಳೆದದ್ದು, ನಿದ್ದೆಗೆಟ್ಟು ಹಂದಿಗಳನ್ನು ಓಡಿಸಿದ್ದು ಅಪೂರ್ವ ಅನುಭವ. ಆಗ ಯಮಯಾತನೆಯಾದರೂ ಈಗ ನೆನೆಸಿಕೊಂಡು ಹೇಳುವಾಗ ನಿಜವಾಗಿ ಮಜಾ ಅನ್ನಿಸುತ್ತಿದೆ, ನೋವೇ ಇಲ್ಲ!

ಭತ್ತ ಕೊಯ್ಯುವ ಕೆಲಸಕ್ಕೆ ಕೂಲಿ ಕೊಡಲು ಹಣವಿರಲಿಲ್ಲ. ಆದ್ದರಿಂದ *ಪರಸ್ಪರ ಸಹಕಾರ ತತ್ವದ ಹಿನ್ನೆಲೆಯಲ್ಲಿ* ಕೊಯ್ಲು ಮುಗಿಸಿದೆವು. ಗೆಳೆಯರ ಸಹಾಯದಿಂದ ನಾವೇ ಕೊಯ್ದು ಸಾಲಾಗಿ ಅರಿ ಜೋಡಿಸಿ, ನಂತರ ಸಿವುಡು ಕಟ್ಟಿ, ಒಂದೆಡೆ ಒಯ್ದು, ಬಲ್ಲವರಿಂದ ಬಣವೆ ಒಟ್ಟಿಸಿದೆವು. ಇದೆಲ್ಲ ಕಷ್ಟದ, ಆದರೆ ಸ್ವತಃ ಅನುಭವಿಸಿ ತಿಳಿಯಬೇಕಾದ ಜ್ಞಾನ. ನಾಕೆಂಟು ದಿನದಲ್ಲಿ ಬಣವೆ ಸಮೀಪದ ಮಡಿಯ ಒಂದು ಮೂಲೆಯನ್ನು ಸೆಗಣಿಯಲ್ಲಿ ಸಾರಿಸಿ *ಕಣ ಸಿದ್ಧ ಮಾಡಿ ಒಕ್ಕಲು ಮಾಡಿದೆವು.* ರಾತ್ರಿಯಲ್ಲಿ ಐದು ಜೊತೆ ಎತ್ತುಗಳ ಕಾಲಿನಲ್ಲಿ ತುಳಿಸುವುದು, ಕಾಳಿಲ್ಲದ ಹುಲ್ಲನ್ನು ಸಿವುಡುಗಟ್ಟುವುದು. ಇಡೀ ರಾತ್ರಿ ಆಡುತ್ತ, ಹಾಡುತ್ತ ಕಳೆಯುವುದು. ಅಲ್ಲೇ ಊಟ, ಉಪಾಹಾರ ಮಾಡುವುದು. ನನ್ನ ತಂದೆ ಕೂಡ ಆಳುಗಳ ಎದುರಿನಲ್ಲಿ ಊಟ ಮಾಡಿದ್ದು ನನಗೆ ಆಗ ಸೋಜಿಗದ ಸಂಗತಿಯಾಗಿತ್ತು. ಇದೆಲ್ಲಕ್ಕಿಂತ ಆಗಿನ ಕೊರೆಯುವ ಚಳಿಯ (ಆಗಿನ ನನ್ನ ಅಂದಾಜು - ೧೦ ಡಿಗ್ರಿ ತಾಪಮಾನ!) ಅನುಭವ ನೆನೆದರೆ ಈಗಲೂ ನನಗೆ ನಡುಕ ಬರುವುದು. ಆದರೆ ಬೆಳಗಿನ ಜಾವ ಮೂರಕ್ಕೆ ಕೆಲಸ ಮುಗಿಸಿ ಮಲಗುವಾಗ, ಕೆಳಗೆ ಮೇಲೆಲ್ಲ ಹರಡಿಕೊಂಡ *ಹುಲ್ಲಿನ ರಾಶಿಯ ನಡುವೆ ಸುರುಟಿಕೊಂಡಾಗ* ನಾಲ್ಕೆಂಟೇ ನಿಮಿಷದಲ್ಲಿ ಬಿರು ಬೇಸಗೆಯ ಅನುಭವ! ಹುಲ್ಲಿನಿಂದ ಕೈ ಅಥವಾ ಪಾದ ಹೊರಹೋದರೆ ತಕ್ಷಣ ಎಚ್ಚರ, ಐಸ್ ತುಳಿದಂತೆ ಅನುಭವ. ಹೊರಗಿನ ಥಂಡಿ, ಒಳಗಿನ ಬಿಸಿ - ಎರಡೂ ಸೇರಿ, ಮಾತಿನಲ್ಲಿ ಹೇಳಲಾಗದ ಅಪೂರ್ವವಾದ ಹಿತವೂ, ಸಮಶೀತೋಷ್ಣವೂ, ಆದ ಸುಖಕರ ಅನುಭವ.

ಈ ಎಲ್ಲ ಅನುಭವಗಳೂ ನನ್ನನ್ನು ರೈತನನ್ನಾಗಿಸಲು ಮೆಟ್ಟಿಲಾಗಿದ್ದವು ಎಂಬುದೀಗ ಸೋಜಿಗದ ಸಂಗತಿ! ಕಡೆಯ ಎರಡು ತಿಂಗಳು ನಾನು ಗದ್ದೆಯಲ್ಲಿ ಕಳೆದದ್ದೇ ಹೆಚ್ಚು. ದಿನಕ್ಕೆ ಐದು ಸೂತ್ರಗಳಂತೆ *ಕೇಶಿರಾಜನ ಶಬ್ದ ಮಣಿದರ್ಪಣದ ವ್ಯಾಕರಣ ಸೂತ್ರ ಪದ್ಯ*ಗಳನ್ನು ಕಂಠಪಾಠಮಾಡಿದೆ, ಮತ್ತು ಆ ಸೂತ್ರಗಳ ಅರ್ಥ, ವೃತ್ತಿ, ವ್ಯಾಖ್ಯಾನಗಳನ್ನು ಕೂಡ ಆಸಕ್ತಿಯಿಂದ ಓದಿ ಹೃದ್ಗತ ಮಾಡಿಕೊಂಡೆ. ಆ ಕಾಲಕ್ಕೆ ಅ.ನ.ಕೃ. ಅವರ ಕಾದಂಬರಿಗಳನ್ನು ಓದುವುದು ನನಗೆ ಖಯಾಲಿಯ ವಿಷಯವಾದರೆ, ಪ್ರಬುದ್ಧಕರ್ಣಾಟಕದ ಹಳೆಯ ಸಂಚಿಕೆಗಳನ್ನು ನಮ್ಮೂರ ಮಾಧ್ಯಮಿಕ ಶಾಲೆಯಿಂದ ತಂದು ಓದುವುದು ಹವ್ಯಾಸ. ಇವೆರಡರ ನಡುವೆ ಕೇಶವನಿಗೂ ಜಾಗ ಸಿಕ್ಕಿತ್ತು. ಇದರ ಪರಿಣಾಮ - *ಕನ್ನಡ ಪಂಡಿತ ತರಗತಿಗೆ ನಡೆದ ಪ್ರವೇಶ ಪರೀಕ್ಷೆಯಲ್ಲಿ ಪ್ರಥಮ ರ್‍ಯಾಂಕ್* ಸಿಕ್ಕಿದ್ದು. ಪ್ರವೇಶ ಪಡೆದು (ಮೈಸೂರಿನಲ್ಲಿ) ೧೯೬೭ರ ವರೆಗೆ ಅಧ್ಯಯನ ಮಾಡಿ ಕನ್ನಡ ಪಂಡಿತನಾದೆ ಮತ್ತು ಮೈಸೂರಿನ ಚಾಮರಾಜೇಂದ್ರ ಸಂಸ್ಕೃತ ಪಾಠಶಾಲೆಯಲ್ಲಿ - ಈ ನಾಲ್ಕು ವರ್ಷ ಅಧಿಕೃತ ವಿದ್ಯಾರ್ಥಿಯಾಗಿ ಸೇರಿ ಸಾಕಷ್ಟು ಸಾಂಪ್ರದಾಯಿಕ ಶಿಕ್ಷಣವನ್ನೂ ಪಡೆದೆ. ಮುಂದೆ ಹದಿಮೂರು ವರ್ಷಗಳ ಕಾಲ ಹೈಸ್ಕೂಲುಗಳಲ್ಲಿ ಕನ್ನಡ ಪಂಡಿತನಾಗಿ ಕೆಲಸಮಾಡುವಾಗ ರೈತತನದ ಸೋಂಕು ಪೂರ್ಣ ಅಳಿಯಿತು. ಕಾಲೇಜಿನಲ್ಲಿ ಮುಂದೆ ೨೭ ವರ್ಷ ಕೆಲಸ ಮಾಡುವಾಗ್ಗೆ ಮೇಲಿನ ಅನುಭವಗಳು ಗತಜನ್ಮದ ಅನುಭವದ ಪಳೆಯುಳಿಕೆಯಂತೆಯೇ ಭಾಸ.

(೨೬.೦೬.೦೩ ರಂದು ಸಿದ್ಧ ಪಡಿಸಿದ ಲೇಖನ)

೯) ಸೊಸೆಯಂದಿರು ನೇಗಿಲು ಎಳೆದರು

ಲಲಿತಾ ಚಂದ್ರಶೇಖರ್, *ಅಗ್ರಹಾರ, ಹಾಸನ ಜಿಲ್ಲೆ*

ಈ ಕೃಷಿ ಸಂಪುಟಗಳಿಗೆ ತಾಯಿಯಂತಿರುವ ಒಂದು ಸಣ್ಣ ಪ್ರಸಂಗವೊಂದನ್ನು ಇಲ್ಲಿ ಹೇಳಬೇಕು. ಹಾಸನಜಿಲ್ಲೆಯ ಆ ಕುಗ್ರಾಮವು ನನ್ನ ತಾಯಿಯ ತವರುಮನೆ (ಅಜ್ಜಿಯ ಮನೆ). ನಮ್ಮದು ಅಲ್ಲಿಂದ ೩೫ ಮೈಲು ದೂರದ ಊರು. ಇದ್ದಕ್ಕಿದ್ದಂತೆ ಒಂದು ದಿನ ನಮ್ಮ ಊರಿನಲ್ಲಿ ಭಯಂಕರ ಸುದ್ದಿಯೊಂದು ಹಬ್ಬಿತ್ತು. ಅದು ನಮ್ಮ ಅಜ್ಜಿಯ ಮನೆಗೆ ಸಂಬಂಧಿಸಿದ ಸುದ್ದಿ, "ಅಯ್ಯೋ! ಆ ಮನೆಯಲ್ಲಿ ಎತ್ತುಗಳ ಬದಲು ಸೊಸೆಯಂದಿರನ್ನೇ ಕಟ್ಟಿಕೊಂಡು ನೇಗಿಲು ಹೂಡುತ್ತಾರಂತೆ, ಹಯ್ಯೋ ಜನವೆ, ಎಲ್ಲಾದರೂ ಉಂಟೆ?" ಇಂಥ ಸುದ್ದಿಗಳು ಬೀಜವಿಲ್ಲದೆ ಹುಟ್ಟಿಕೊಳ್ಳುತ್ತವೆ, ಬೆಂಕಿಯಿಲ್ಲದೆ ಉರಿಯುತ್ತವೆ, ಗಾಳಿಯಿಲ್ಲದೆ ಹರಡಿಕೊಳ್ಳುತ್ತವೆ.

ನನಗೆ ಆಶ್ಚರ್ಯವಾಯಿತು, ಆಘಾತವಾಯಿತು, ಅವಮಾನವೆಂದೂ ಎನಿಸಿತು. ತತ್‌ಕ್ಷಣ ಅಜ್ಜಿಯ ಮನೆಗೆ ಹೋದೆ. ನನ್ನ ಬಾಲ್ಯದಿಂದಲೂ ಶಾಲೆಯ ರಜಾದಿನಗಳಲ್ಲಿ ಅಲ್ಲಿಗೆ ಹೋಗುತ್ತಿದ್ದೆ. ಮಜಬೂತಾದ ಎತ್ತುಗಳಿದ್ದುವು ಅಲ್ಲಿ. ಅವರೇಕೆ ಹೀಗೆ ಮಾಡಬೇಕು!

ಆ ಮನೆಯ ಸೊಸೆ – ನನ್ನ ಸೋದರತ್ತೆ - ಅವರನ್ನು ಪ್ರತ್ಯೇಕವಾಗಿ ಕರೆದು ವಿಚಾರಿಸಿದೆ, 'ಇದೇನು ಹೀಗೆ ನಡೆಯುತ್ತಿದೆ? ಕಿವಿಗಳು ಕೊರೆದು ಹೋಗುತ್ತಿವೆ.' ನನ್ನ ಮುಖ ಹಿಂಡಿತ್ತು, ಉದ್ವಿಗ್ನಳಾಗಿದ್ದೆ.

ಆಕೆ ಸಣ್ಣಗೆ ತಣ್ಣಗೆ ಪ್ರಸನ್ನವಾಗಿ ನಕ್ಕರು. ಅದೊಂದು ಹೂನಗೆ.

ಆ ಮನೆಯಲ್ಲಿ ಆಗ ಎರಡು ಜೊತೆ ಎತ್ತುಗಳಿದ್ದವು. ಆ ದಿನ: ಒಂದು ಗಾಡಿ ಸಂತೆಗೆ ಹೋಗಿತ್ತು. ಇನ್ನೊಂದು ಜೊತೆ ಎತ್ತಿನ ಪೈಕಿ ಒಂದರ ಹಲ್ಲೆ ಕಿತ್ತುಬಂದಿತ್ತು, ತುಸು ಗಾಯವಾಗಿತ್ತು. ಅದಕ್ಕೆ ನಡೆಯುವುದು ಕಷ್ಟವಾಗುತ್ತಿತ್ತು. ಆ ಸಮಯಕ್ಕೆ ಸರಿಯಾಗಿ ಮಳೆ ಬಂದಿತ್ತು. ಒಳ್ಳೆಯ ಬೆರಗು. ಅಗೆಹಾಕಿ ಮುಗಿಸಲೇಬೇಕಾಗಿತ್ತು. ಅಗೆ ಹಾಕಬೇಕಾಗಿದ್ದುದು ಒಂದು ತುಂಡು ನೆಲದಲ್ಲಿ. ಅದನ್ನಾಗಲೇ ಎತ್ತುಗಳನ್ನು ಹೂಡಿ ಎರಡು ಬಾರಿ ಚೆನ್ನಾಗಿ ಉತ್ತು ಹದಮಾಡಿಕೊಂಡಾಗಿತ್ತು. ಈಗ ಉಳಿದಿದ್ದುದು ಕೆರೆಯುವ ಕೆಲಸ. ಆ ಮನೆಯ ಇಬ್ಬರು ಸೊಸೆಯಂದಿರೂ ನೇಗಿಲು ಎಳೆದರು!

ನಾನು ಕುತೂಹಲದಿಂದ ಕೇಳುತ್ತಿದ್ದೆ. ನನ್ನ ಮುಖದಲ್ಲಿ ಆತಂಕ ತುಂಬಿತ್ತು. ವಿಚಲಿತಳಾಗಿದ್ದೆ. ಆಕೆಯ ಹೂನಗು ಮಾತ್ರ ಹಾಗೆಯೇ ಇತ್ತು, 'ಇಷ್ಟೇ ಕಣಮ್ಮ' ಎಂದು ಹೇಳಿ ಮುಗಿಸಿದ ಮೇಲೂ ಅದೇ ಪ್ರಸನ್ನತೆ. ಆಕೆ ಅದನ್ನು ಹೇಳುವಾಗ ಎಡ ಸೊಂಟದ ಮೇಲೆ ಕೈ ಇಟ್ಟುಕೊಂಡು, ತುಸು ಹಿಂದಕ್ಕೆ ವಾಲಿದ್ದರು; ದೇವರ ಪೂಜೆಗೆಂದು ಕೊಯ್ದ ಹೂ ತುಂಬಿದ ತಟ್ಟೆ ಬಲಗೈಲಿ ಇತ್ತು. ಇಷ್ಟಕ್ಕೇ ಇಲ್ಲೀತನಕ ಓಡಿ ಬಂದುಬಿಟ್ಟೆಯಾ? ಎಂಬಂತಿದ್ದ ಭಂಗಿ. ಆಕೆ ಸುದ್ದಿಕೋರರ ಮೇಲೆ ಕಿಡಿಕಾರಿ ಶಾಪ ಹಾಕುತ್ತಾರೆಂದು ಭಾವಿಸಿದ್ದೆ. ಮನೆ ಒಡೆಯುವವರು ನೆರೆಮನೆಯ ಸೊಸೆಯಂದಿರ ಮೇಲೆ ಅನುಕಂಪ ಸೂಸುವುದುಂಟು. ಅಂಥ ಸೊಸೆಯಂದಿರು ಅಂಥವೇಳೆ ಕೃತಜ್ಞತೆಯಿಂದ ಬಾಗುವುದುಂಟು. ಅಕಾರಣವಾಗಿ ಅಳುವುದುಂಟು. ಈ ಸೊಸೆ ಅವಿಚಲಿತರಾಗಿ ಹೂನಗೆ ಚೆಲ್ಲುತ್ತಿದ್ದರು. ಅವರ ಆ ನಗೆಯಲ್ಲಿ ಶಾಂತಿ ಇತ್ತು, ಸಮಾಧಾನವಿತ್ತು, ಹೆಮ್ಮೆ ಇತ್ತು, ನಿರ್ಲಿಪ್ತತೆ ಇತ್ತು, ಸಹಜತೆ ಇತ್ತು. ಅದೆಲ್ಲವನ್ನೂ ಒಳಗೊಂಡರೂ ಅದನ್ನೆಲ್ಲ ಮೀರಿದ ಹೂವಿನ ಕೋಮಲ ಎಸಳಿನಂತಿತ್ತು ಅವರ ಮುಗುಳುವದನ. ಆಕೆಗೆ ಅಂಥ ಸಂಗತಿಗಳೆಲ್ಲ ಬದುಕಿನ ಸಹಜ ಭಾಗಗಳು ಮಾತ್ರ.

ಆಕೆ ಉಟ್ಟ ಹತ್ತಿಯ ಸೀರೆಯು ಹಳ್ಳಿಯ ಮುಗ್ಧ ರೈತರ ಸಾಮಾನ್ಯತೆಯ ಪ್ರತೀಕವಾಗಿತ್ತು. ಆದರೆ ಆಕೆಯ ಪ್ರತಿಕ್ರಿಯೆಯ ಉನ್ನತಿಕೆಯು ಜಗತ್ತಿನ ಅತಿ ದೊಡ್ಡ ಚಕ್ರಾಧಿಪತಿಯ ಸಂಪತ್ತನ್ನೂ ಮೀರಿಸಿತ್ತು. ಹಳ್ಳಿಯಲ್ಲಿ ಮಣ್ಣಿನಲ್ಲಾಡುವ ಮುಗ್ಧ ರೈತರಿಗೆ ಬಹು ಸಹಜವಾಗಿ ಸಿದ್ಧಿಸುವ ಸಂಪತ್ತು ಅದು. ಜಗತ್ತಿನ ರೈತಕೋಟಿಯ ಆ ಸಂಪತ್ತಿಗೆ – ಆ ತಿಳಿಮನಕ್ಕೆ, ಆ ಮನಃಪಾಕದ ಔನ್ನತ್ಯಕ್ಕೆ – ಕೋಟಿ ಕೋಟಿ ಪ್ರಣಾಮಗಳು.

ಈ) ಅನೇಕ ಯೋಜನೆಗಳೊಡನೆ

ಸತ್ಯಮಾಧವ, ಲಿಂಗದಹಳ್ಳಿ

ನಮ್ಮದು ಲಿಂಗದಹಳ್ಳಿ. ಹಿಂದೆ ೨೦ ಸಂಕೇತಿ ಮನೆಗಳಿದ್ದ ಊರು. ಈಗ ೩೦ ಮನೆಗಳಿವೆಯಾದರೂ ಹೆಚ್ಚಿನ ಹುಡುಗರು ಪಟ್ಟಣ, ಅಮೆರಿಕಾ ಸೇರಿದ್ದಾರೆ. ಹೀಗಾಗಿ, ಸಾಮಾನ್ಯವಾಗಿ ೭೦ ಜನರಿರುವ ಬೀದಿ, ವಿಶೇಷ ಸಂದರ್ಭಗಳಲ್ಲಿ ೨೦೦ಕ್ಕೆ ಮೀರುತ್ತದೆ. ಊರು ಸ್ವಲ್ಪ ದೊಡ್ಡದೇ ! ಲಿಂಗಾಯಿತರು, ಮುಸ್ಲಿಮರು, ಕುರುಬರು ಇತ್ಯಾದಿ ಸೇರಿಸಿದರೆ ೫೦೦ ಮನೆಗೆ ಹೆಚ್ಚಿವೆ.

ಸಂಕೇತಿಗಳಿಗೆ ಅಡಿಕೆ, ತೆಂಗು, ಬಾಳೆ ಮುಖ್ಯ ಬೆಳೆಗಳು. ಭತ್ತ ಕೂಡ ಮುಖ್ಯ ಬೆಳೆಯಾಗಿತ್ತಾದರೂ ಇತ್ತೀಚೆಗೆ ಅಡಿಕೆಯು ಭತ್ತವನ್ನು ನುಂಗುತ್ತಿದೆ !

ನಮ್ಮ ಅಜ್ಜ ನಂಜುಂಡಯ್ಯನವರು ಕೆಲಸನಿಷ್ಠೆಗೆ ಮಾದರಿಯಾಗಿದ್ದವರು. ಬಾವಿ, ಬೋರುಗಳಿಲ್ಲದ ಕಾಲದಲ್ಲಿ ಕಾಡುನೆಲ ಹದ ಮಾಡಿ, ಮೂರೂವರೆ ಎಕರೆ ತೆಂಗು ಅಭಿವೃದ್ಧಿಪಡಿಸಿದ ಹೆಮ್ಮೆ ಅವರದ್ದು ! ಆ ಕಾಲಕ್ಕೆ ನಮ್ಮ ತೋಟದ ಕಾಯಿಯೆಂದರೆ, ಸುತ್ತಮುತ್ತ ಹೆಸರುವಾಸಿ ! ನಮ್ಮ ಚಿಕ್ಕಪ್ಪ ಪುಟ್ಟಣ್ಣ (ವೆಂಕಟನರಸಿಂಹ ಭಟ್ಟ), ಆ ನೆಲದಲ್ಲೇ ಅಡಿಕೆ ಅಭಿವೃದ್ಧಿಪಡಿಸಿ, ಆರ್ಥಿಕವಾಗಿ ನೆಲೆನಿಲ್ಲಲು ಸಹಕಾರಿಯಾದರು. ನಮ್ಮ ತಂದೆ ಮಾಸ್ತರಾಗಿದ್ದು ಅಪ್ಪಣ್ಣ ಮಾಸ್ತರೆಂದೇ (ವೆಂಕಟರಮಣ) ಗುರುತಿಸಲ್ಪಟ್ಟಿದ್ದರು. ಸುತ್ತಮುತ್ತಲಿನ ಹಳ್ಳಿಗಳಲ್ಲಿ ಮಾಸ್ತರಾಗಿ ಸೇವೆ ಸಲ್ಲಿಸಿ, ನಂತರ ಸುಮಾರು ೨೬ ವರುಷ ಕೃಷಿಯಲ್ಲೇ ತಲ್ಲೀನರಾದರು. ನಾವು ಕೊಂಡ ೧೦ ಎಕರೆ ಜಮೀನಿನಲ್ಲಿ ಅಡಿಕೆ, ತೆಂಗು, ಭತ್ತ, ರಾಗಿ, ಬಾಳೆ, ಮೆಣಸಿನಕಾಯಿ ಹೀಗೆ ಗೊತ್ತಿದ್ದ ಬೆಳೆಗಳನ್ನೆಲ್ಲಾ ಮನಸಾರೆ ಕೃಷಿಮಾಡಿ ಅನುಭವಿಸಿದರು. ಅವರ ಕಾಲಾನಂತರ ನಮ್ಮ ಹಿರಿಯಣ್ಣ (ರಮೇಶ) ಊರಿನ ಕೃಷಿ ನೋಡುತ್ತಿದ್ದಾನೆ. ಕೃಷಿ ಪದವೀಧರನಾದ ನಾನು ಬೆಂಗಳೂರಿನಿಂದ ಊರಿಗೆ ಹೋದಾಗ ಮತ್ತು ಹೋಗಲಾಗದಿದ್ದಾಗ ಫೋನಿನ ಮೂಲಕ ಸಲಹೆ, ಸೂಚನೆ ಕೊಡುವ ಮೂಲಕ ಇ-ಕೃಷಿಕನಾಗಿದ್ದೇನೆ !

ನಾನು ಕೃಷಿ ಕಾಲೇಜು ಸೇರಿದ್ದು ಹೀಗೆ !

ನಮ್ಮಣ್ಣ ಸೂರಿ ಕೆಲಸವೊಂದನ್ನು ಹಿಡಿದು ಬೆಂಗಳೂರಿನ ಜಯನಗರದಲ್ಲಿ ರೂಮು ಮಾಡಿದ್ದ. ನಮ್ಮ ಇನ್ನೊಬ್ಬ ಅಣ್ಣ ಅನಂತ ಬಿ.ಎಸ್ಸಿ. ನಾನು ಪಿಯುಸಿ ಓದಲು ಅಲ್ಲಿದ್ದೆ. ರಸ್ತೆಯಲ್ಲಿ ಹಸಿರು ಬಸ್ಸು (ಇದು ಹೆಬ್ಬಾಳ ವ್ಯವಸಾಯ ಕಾಲೇಜಿನ ಬಸ್ಸು) ಹೋದಾಗಲೆಲ್ಲಾ, "ನೀನೂ ಮುಂದಿನ ವರುಷ ಆ ಬಸ್ಸಿನಲ್ಲಿ ಹೋಗಬೇಕು, ನೋಡು" ಎಂದು ತಾಲೀಮು ಮಾಡುತ್ತಿದ್ದರು ! ಹೀಗೆ, ನನಗೆ ತಿಳಿಯದಂತೆಯೇ ನನ್ನ ವಿದ್ಯಾಭ್ಯಾಸಕ್ಷೇತ್ರ ಕೃಷಿಯಾಯಿತು !

ಹಿಂದಿನ ವರುಷವಷ್ಟೆ (1972) ಹೊಸದಾಗಿ ಪ್ರಾರಂಭವಾದ ತೋಟಗಾರಿಕೆ ಪದವಿಗೆ ಸೀಟು ಸಿಕ್ಕು, ನಾಲ್ಕು ವರುಷದ ಕೋರ್ಸನ್ನು ಉತ್ತಮ ಮಟ್ಟದಲ್ಲಿಯೇ ಮುಗಿಸಿದೆ. ನಂತರ ಸ್ನಾತಕೋತ್ತರ ಪದವಿಗೆ ಅಲ್ಲಿಯೇ ಸೇರಿದೆ. ತೋಟಗಾರಿಕೆ ಕ್ಷೇತ್ರದಲ್ಲಿ, ಫಲಶಾಸ್ತ್ರ (ಪೊಮಾಲಜಿ), ತರಕಾರಿ ಶಾಸ್ತ್ರ (ಓಲೆರಿಕಲ್ಚರ್), ಪುಷ್ಪಶಾಸ್ತ್ರ (ಫ್ಲಾರಿಕಲ್ಚರ್), ಪ್ಲಾಂಟೇಷನ್ ಬೆಳೆಶಾಸ್ತ್ರ (ಪ್ಲಾಂಟೇಷನ್ ಕ್ರಾಪ್ ಸೈನ್ಸ್) ಮತ್ತು ಫಲ-ತರಕಾರಿ ಜೋಪಾನ ಸಂಗ್ರಹ ಶಾಸ್ತ್ರ (ಫ್ರೂಟ್ ಅಂಡ್ ವೆಜಿಟಬಲ್ ಪ್ರಿಸರ್ವೇಶನ್ ಸೈನ್ಸ್) ಎಂಬ ಐದು ವಿಶೇಷ ಕ್ಷೇತ್ರಗಳಿವೆ. ನಾನು ಫಲಶಾಸ್ತ್ರ ಆಯ್ದುಕೊಂಡೆ. ನಾವು ಹೆಚ್ಚೂಕಡಿಮೆ ಪಿಎಚ್ಡಿ ಮಾದರಿಯಲ್ಲಿ ಸಂಶೋಧನೆ ಮಾಡಿ ಥೀಸಿಸ್ ಮಂಡಿಸಬೇಕಾಗುತ್ತದೆ. ನಾನು ದ್ರಾಕ್ಷಿಯ ಮೇಲೆ ಸಂಶೋಧನೆ ಮಾಡುವುದೆಂದು ನಿರ್ಧರಿಸಿದೆ. "ದ್ರಾಕ್ಷಿಯ ಗುಣಮಟ್ಟದ ಮೇಲೆ, ಪ್ರೂನಿಂಗ್ ಮಾಡುವ ಸಮಯ ಮತ್ತು ಕೊಯಿಲು ಮಾಡುವ ಸಮಯದ ಪರಿಣಾಮ" ಎಂಬ ವಿಷಯದ ಮೇಲಿನ ಎರಡು ವರುಷದ ಸಂಶೋಧನೆಗಾಗಿ ಶಾ ವ್ಯಾಲೇಸ್ ಕಂಪನಿಯಿಂದ ಫೆಲೋಷಿಪ್ ಸಹ ಸಿಕ್ಕಿತು ! ವೈನ್ ತಯಾರಿಕೆಗೆ ಬಳ್ಳಿಗಳನ್ನು ಯಾವಾಗ ಪ್ರೂನ್ ಮಾಡುವುದು ಅತ್ಯುತ್ತಮ ಮತ್ತು ಹಣ್ಣಿನ ಯಾವ ಸ್ತರದಲ್ಲಿ ಕೊಯಿಲು ಮಾಡಿದರೆ ಒಳ್ಳೆಯದೆಂಬ ಅಂಶ ಈ ಸಂಶೋಧನೆಯಿಂದ ತಿಳಿದುಬಂದಿದೆ.

ವೃತ್ತಿಜೀವನ

೧೯೮೦ರಲ್ಲಿ ನನ್ನ ಸ್ನಾತಕೋತ್ತರ ಪದವಿ ಮುಗಿಯುವುದರೊಳಗೇ ತೋಟಗಾರಿಕೆ ಅಧಿಕಾರಿಯಾಗಿ ಚಿಕ್ಕಮಗಳೂರಿನಲ್ಲಿ ಕೆಲಸ ಸಿಕ್ಕಿತು. ಇಲ್ಲಿ ತೆಂಗು ಅಭಿವೃದ್ಧಿಗೆ ಭೂ ಅಭಿವೃದ್ಧಿ ಬ್ಯಾಂಕಿಗೆ ಸಲಹೆ ಕೊಡುವುದು, ರೈತರ ಅರ್ಜಿಗಳನ್ನು ಶಿಫಾರಸು ಮಾಡುವುದು, ರೈತರಿಗೆ ತೋಟಗಾರಿಕೆ ಬೆಳೆಗಳಲ್ಲಿ ಸಲಹೆ ನೀಡುವುದು ನನ್ನ ಮುಖ್ಯ ಕಾರ್ಯಗಳಾಗಿದ್ದವು. ಮುಂದಿನ ಆರು ತಿಂಗಳಲ್ಲಿ ಇಂಡಿಯನ್ ಓವರ್ಸೀಸ್ ಬ್ಯಾಂಕಿನಲ್ಲಿ ವ್ಯವಸಾಯ ಅಧಿಕಾರಿಯಾಗಿ ಕೆಲಸ ಸಿಕ್ಕಿದ್ದರಿಂದ ಬನ್ನೂರಿಗೆ ವರ್ಗಾಯಿಸಲ್ಪಟ್ಟೆ. ಇದು ವ್ಯವಸಾಯಕ್ಷೇತ್ರದಲ್ಲಿ ಆ ಬ್ಯಾಂಕಿನಲ್ಲಿ ರಾಜ್ಯಕ್ಕೇ ದೊಡ್ಡ ಶಾಖೆಯಾಗಿದ್ದು, ಒಂದೇ ಶಾಖೆಯಲ್ಲಿ ನಾಲ್ಕು ವ್ಯವಸಾಯ ಅಧಿಕಾರಿಗಳಿದ್ದರು ! ತೊಂಬತ್ತಕ್ಕೂ ಹೆಚ್ಚು ಹಳ್ಳಿಗಳ ರೈತರೂ ಮತ್ತು ನಾಲ್ಕು ವ್ಯವಸಾಯ ಸಹಕಾರಿ ಬ್ಯಾಂಕುಗಳೂ ಈ ಶಾಖೆಯ ವ್ಯಾಪ್ತಿಯಲ್ಲಿದ್ದವು ! ಕಬ್ಬು, ಭತ್ತ ಮುಖ್ಯ ಬೆಳೆಗಳು. ಈ ಬೆಳೆಗಳಿಗೆ, ಹಸು, ಎಮ್ಮೆ, ಕುರಿ, ಆಡು, ಕೋಳಿ, ಕೃಷಿ, ಟಿಲ್ಲರ್, ಟ್ರ್ಯಾಕ್ಟರ್‌ಗಳಿಗೆ, ವ್ಯವಸಾಯ ಸಂಘಗಳಿಗೆ ಸಾಲ ನೀಡುವುದು, ವಸೂಲಾತಿ ನೋಡಿಕೊಳ್ಳುವುದು ಮತ್ತು ಬೇಕಾದ ತಾಂತ್ರಿಕ ಸಲಹೆ ನೀಡುವುದು ಮುಖ್ಯ ಕಾರ್ಯಗಳಾಗಿದ್ದವು.

ಮುಂದಿನ ಹಂತದಲ್ಲಿ ಕವಲಂದೆ (ನಂಜನಗೂಡು ತಾಲ್ಲೂಕು), ಭದ್ರಾವತಿ, ಶಿವಮೊಗ್ಗ ಶಾಖೆಗಳಲ್ಲಿ ವ್ಯವಸಾಯ ಅಧಿಕಾರಿಯಾಗಿ ಕಾರ್ಯ ನಿರ್ವಹಿಸಿದೆ. ಈ ಸಂದರ್ಭದಲ್ಲಿ

* ಶಿವಮೊಗ್ಗ ಶಾಖೆಯ ಒಂದು ಹಳ್ಳಿ (ಮಲ್ಲಿಗೇನಹಳ್ಳಿ) ಸಂಪೂರ್ಣ ಸುಸ್ತಿರಹಿತವೆನಿಸಿಕೊಂಡಿದ್ದು
* ಭದ್ರಾವತಿ ಶಾಖೆಯಲ್ಲಿ ಒಂದೇ ವರುಷ ೧೦೦ ಗೋಬರ್ ಗ್ಯಾಸ್ ಘಟಕಗಳಿಗೆ ಸಾಲ ನೀಡಿದ್ದು ಸ್ತುತ್ಯರ್ಹವೆನಿಸಿವೆ.

ಕೃಷಿ ಕ್ಷೇತ್ರಕ್ಕೆ ಹೆಚ್ಚಿನ ಸೇವೆ

ಅಕಾಡೆಮಿ ಫಾರ್ ಡೆವೆಲಪ್‌ಮೆಂಟ್ ಇನಿಷಿಯೇಟಿವ್ಸ್, ಟ್ರೈನಿಂಗ್ ಮತ್ತು ಇನ್ಫರ್ಮೇಷನ್ (ಅದಿತಿ)ಯೊಂದಿಗೆ

ಮುಂದೆ ೨೦೦೧ರಲ್ಲಿ ಸೇಲಮ್ಮಿನಲ್ಲಿ ಕೆಲಸ ಮಾಡುವ ವೇಳೆ ಬ್ಯಾಂಕುಗಳಲ್ಲಿ "ಸ್ವಯಿಚ್ಛಾ ನಿವೃತ್ತಿ ಯೋಜನೆ" ಜಾರಿಗೆ ಬಂದಾಗ ನಾನೂ ಅದರ ಲಾಭ ಪಡೆದು ಬ್ಯಾಂಕಿನಿಂದ ಹೊರ ಬಂದೆ. ಉರುಳುಚಕ್ರದ ಸೇವೆ ಬಿಟ್ಟು ಏನಾದರೂ ಸಾಧಿಸುವ ಹಂಬಲವಿತ್ತು. ಕೃಷಿ ವಿಶ್ವವಿದ್ಯಾಲಯದಲ್ಲಿ ಸಂಶೋಧನಾ ನಿರ್ದೇಶಕರಾಗಿದ್ದು ಕೃಷಿಕ್ಷೇತ್ರದಲ್ಲಿ ಪ್ರಸಿದ್ಧಿಪಡೆದಿದ್ದ ಡಾ. ಸಿಂಗ್ರಾಚಾರ್‌ರವರು ಅಧ್ಯಕ್ಷರಾಗಿದ್ದ "ಅದಿತಿ" ಸ್ವಯಂ ಸೇವಾ ಸಂಸ್ಥೆಯಲ್ಲಿ ಕಾರ್ಯದರ್ಶಿಯಾಗಿದ್ದ ಸ್ನೇಹಿತ ಸುಬ್ರಮಣ್ಯರ ಆಹ್ವಾನದ ಮೇರೆಗೆ ಸೇರಿಕೊಂಡೆ. ನನ್ನನ್ನು ಅಲ್ಲಿ ಜಂಟಿಕಾರ್ಯದರ್ಶಿಯಾಗಿ ನಿಯೋಜಿಸಲಾಯಿತು. ಇದು ೧೦-೧೨ ಕೃಷಿತಂತ್ರಜ್ಞರು ಸೇರಿ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿಗಾಗಿ ಸ್ಥಾಪಿಸಿದ ಸಂಸ್ಥೆ. ಇಲ್ಲಿ ನಾವೆಲ್ಲಾ ಸೇರಿ ಮಾಡಿದ ಒಂದೆರಡು ಪ್ರಯೋಗಗಳು ಹಲವು ಕಾರಣಕ್ಕೆ ಸ್ತುತ್ಯರ್ಹ!

೧. ಕೃಷಿ ಅಂಕುರ

ಗ್ರಾಮೀಣ ಮಕ್ಕಳು ಕೆಲವು ಕಾರಣಕ್ಕಾಗಿ ಹಳ್ಳಿಯನ್ನೂ, ಕೃಷಿಯನ್ನೂ ತ್ಯಜಿಸಿ, ಪಟ್ಟಣ ಸೇರುತ್ತಿರುವುದು ಸಾಮಾನ್ಯ. ಹೀಗೇ ಮುಂದುವರೆದರೆ, ಮುಂದೆ ಕೃಷಿಯ ಗತಿಯೇನು? ಕಂಪ್ಯೂಟರ್ ತಿನ್ನಬರುವುದೇನು? ಎಂದು ನಾವಿಂದು ಚಿಂತಿಸಲೇ ಬೇಕಿದೆ. ಈ ದಿಶೆಯಲ್ಲಿ ಕೃಷಿಯಲ್ಲಿ ಮಾಧ್ಯಮಿಕ ಶಾಲಾ ಮಕ್ಕಳಲ್ಲಿ ಕುತೂಹಲ ಹೆಚ್ಚಿಸಲೋಸುಗ ಹಮ್ಮಿಕೊಂಡ ವಿನೂತನ ಕಾರ್ಯಕ್ರಮ, ಕೃಷಿ **ಅಂಕುರ.**

ಕೃಷಿಯ ಪದವಿ ಮಟ್ಟದಲ್ಲಿ ಕಲಿಸುವ ಮಣ್ಣು, ನೀರು, ಮಳೆ, ಬೆಳೆ, ಕೊಯ್ಲೋತ್ತರ ವಿಚಾರಗಳನ್ನು ಸರಳ ಕನ್ನಡದಲ್ಲಿ, ಹಾಡು, ನಾಟಕ, ಜಾನಪದ, ಪ್ರಯೋಗ, ಪ್ರಾತ್ಯಕ್ಷಿಕೆಗಳೊಂದಿಗೆ ಮಕ್ಕಳಿಗೆ ಕಲಿಸುವ ಪ್ರಯತ್ನವಿದು. ಪ್ರತಿ ಶನಿವಾರ ಶಾಲೆ ಮುಗಿದೊಡನೆ, ಹಳ್ಳಿಯವರು ಸ್ವಯಂಸ್ಫೂರ್ತಿಯಿಂದ ತಯಾರಿಸಿ ನೀಡಿದ ಉಪಾಹಾರ ನೀಡಿ, ನಂತರ ಸುಮಾರು ಮೂರು ಗಂಟೆಗಳ ತರಗತಿ. ಕುಣಿಗಲ್ಲು

ತಾಲ್ಲೂಕಿನ ಹೇರೂರಿನಲ್ಲಿ ಮೂರು ವರುಷ ಯಶಸ್ವಿಯಾಗಿ ನಡೆಯಿತು. ಕೃಷಿ ವಿದ್ಯಾಲಯದ ನಿವೃತ್ತ ಕುಲಪತಿಗಳಾದ ದ್ವಾರಕಾನಾಥ್, ಬಿಸಲಯ್ಯ ಇನ್ನಿತರ ಗಣ್ಯರು ಭೇಟಿ ನೀಡಿ, "ಇದೊಂದು ವಿನೂತನ ಕಾರ್ಯಕ್ರಮ. ಪ್ರತಿ ಶಾಲೆಯಲ್ಲೂ ನಡೆಯುವಂತಾದರೆ, ಮುಂದೆ ಕೃಷಿಯಲ್ಲಿ ಆಸಕ್ತರು ಉಳಿದಾರು !" ಎಂದು ಈ ಯೋಜನೆಗೆ ಯಶಸ್ಸು ಹರಸಿದ್ದರು !

೨. ಸೆರಿ ಬಿಸಿನೆಸ್ ಮ್ಯಾನುಯಲ್‌ಗಳು

ಸಂಸ್ಥೆಯ ಕೆಲವು ಕಾರ್ಯಕ್ರಮಗಳನ್ನು ಗಮನಿಸಿದ್ದ ಬೆಂಗಳೂರಿನಲ್ಲಿರುವ ಕೇಂದ್ರ ರೇಷ್ಮೆ ಮಂಡಳಿಯು, ಸ್ವಿಸ್ ಡೆವೆಲಪ್‌ಮೆಂಟ್ ಕಾರ್ಪೋರೇಷನ್‌ನ ಸಹಾಯದಡಿಯಲ್ಲಿ ರೇಷ್ಮೆ ಕೃಷಿಗೆ ಮತ್ತು ರೇಷ್ಮೆ ಸಂಬಂಧಿತ ವ್ಯವಹಾರ-ಕೈಗಾರಿಕೆಗಳಿಗೆ ಅನುಕೂಲವಾಗುವಂತೆ ಎರಡು ಕೈಪಿಡಿ (ಮ್ಯಾನುಯಲ್)ಗಳನ್ನು ತಯಾರಿಸುವ ಕೆಲಸವನ್ನು ಅದಿತಿ ಸಂಸ್ಥೆಗೆ ವಹಿಸಿಕೊಟ್ಟಿತು. ಇದು ಒಂದು ಬೃಹತ್ ಕಾರ್ಯವಾಗಿತ್ತು. ಇಲ್ಲಿದ್ದ ಕೆಲಸ, ಸವಾಲುಗಳೆಂದರೆ:

* ಇದಕ್ಕೆ ಬೇಕಾದ ವಿಷಯಗಳನ್ನು ಈಗಾಗಲೇ ಇರುವ ಪುಸ್ತಕಗಳಿಂದ, ಮ್ಯಾಗಜೈನುಗಳಿಂದ ಮತ್ತು ಅಂತರ್ಜಾಲದಿಂದ ಸಂಗ್ರಹಿಸುವುದು.

* ಒಂದು ಗೊತ್ತಾದ ಕ್ಷೇತ್ರದಲ್ಲಿ ಇರುವ ತಜ್ಞರನ್ನು, ರೈತರನ್ನು ಗುರುತಿಸಿ, ಅವರಿಂದ ಮಾಹಿತಿ ಸಂಗ್ರಹಿಸುವುದು.

* ವಿಷಯಗಳನ್ನು ಕ್ರೋಡೀಕರಿಸುವುದು

* ತಪ್ಪು ಒಪ್ಪುಗಳನ್ನು ಗುರುತಿಸಿ ತಿಳಿದವರಿಂದ ಸರಿಯಾದುದನ್ನು ದೃಢೀಕರಿಸಿಕೊಳ್ಳುವುದು.

* ಭಾರತದಾದ್ಯಂತ ಸಂಬಂಧಿಸಿದ ಕ್ಷೇತ್ರಗಳಿಗೆ, ಪ್ರಯೋಗಾಲಯಗಳಿಗೆ ಭೇಟಿ ನೀಡಿ ಮಾಹಿತಿ, ಫೋಟೋ ಸಂಗ್ರಹಿಸುವುದು.

* ಎಲ್ಲಾ ಮಾಹಿತಿಯನ್ನೂ ಉಪಯೋಗಿಗಳಿಗೆ (ಯೂಸರ್‌ಗಳಿಗೆ) ಅನುಕೂಲವಾದ ಭಾಷೆಯಲ್ಲಿ ಮತ್ತು ರೂಪದಲ್ಲಿ ಸಚಿತ್ರವಾಗಿ ಪ್ರಸ್ತುತಪಡಿಸುವುದು.

* ಈ ಎರಡೂ ಪುಸ್ತಕಗಳು ಪ್ರಕಟಗೊಂಡಿವೆ. ಒಂದೊಂದು ಪುಸ್ತಕಗಳೂ 600 ಪುಟಕ್ಕೆ ಮೀರಿವೆ. ಈ ಕಾರ್ಯದಲ್ಲಿ ಹಲವರ ಕೊಡುಗೆಯಿದೆ. ಆದರೆ, ಸಂಗ್ರಹ ಮತ್ತು ರೂಪಕೊಡುವ ಕಾರ್ಯವನ್ನು ಪ್ರಮುಖವಾಗಿ ನಿರ್ವಹಿಸಿದವರೆಂದರೆ ಸುಬ್ರಮಣ್ಯ ಮತ್ತು ನಾನು. ಈ ಪುಸ್ತಕಗಳು ರೇಷ್ಮೆ ಕ್ಷೇತ್ರದಲ್ಲಿರುವ ಪುಸ್ತಕಗಳಲ್ಲಿ ವಿಶ್ವದರ್ಜೆಯ ಪುಸ್ತಕಗಳಾಗಿವೆಯೆಂಬ ಖ್ಯಾತಿ ಪಡೆದಿವೆ! ಆದರೆ, ಆರ್ಥಿಕವಾಗಿ ಇದು ಸಾಕಷ್ಟು ಪೆಟ್ಟು ಕೊಟ್ಟಿದ್ದರಿಂದ ಮತ್ತು ರೇಷ್ಮೆ ಉದ್ಯಮ ಒಂದು ಹಿಂಸಾತ್ಮಕ ಪ್ರಕ್ರಿಯೆಯೆನಿಸಿದ್ದರಿಂದ (ಒಂದು ಸೀರೆ ತಯಾರಾಗಲು ಲಕ್ಷಾಂತರ ರೇಷ್ಮೆ ಹುಳುಗಳನ್ನು ಸಜೀವ ಬೇಯಿಸಬೇಕಾಗುತ್ತದೆ !) ಬೇರೆ ದಾರಿ ಹುಡುಕುವುದು ಅನಿವಾರ್ಯವಾಯಿತು.

ಇನಿಷಿಯೇಟಿವ್ ಫಾರ್ ಡೆವೆಲಪ್‌ಮೆಂಟ್ ಫೌಂಡೇಶನ್ (ಐಡಿಎಫ್) ನೊಂದಿಗೆ

ಕೃಷಿ ವಿಜ್ಞಾನದಲ್ಲಿ ಸ್ನಾತಕೋತ್ತರ ಪದವಿ ಪಡೆದು, ಬ್ಯಾಂಕುಗಳಲ್ಲಿ ಕೃಷಿ ಕ್ಷೇತ್ರದಲ್ಲಿ ಮತ್ತು ತರಬೇತಿಯಲ್ಲಿ ಎರಡು ದಶಕಗಳಿಗೂ ಮೀರಿ ಕೆಲಸಮಾಡಿದ ಹಲವು ಅಧಿಕಾರಿಗಳು ಸೇರಿ, ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿಗಾಗಿ ಸೂಕ್ತ ಸಂಸ್ಥೆಯೊಂದನ್ನು ಸ್ಥಾಪಿಸಬೇಕೆಂಬ ಹೆಬ್ಬಯಕೆಯಿಂದ, ೨೦೦೧ರಲ್ಲಿ ಹುಟ್ಟುಹಾಕಿದ ಸರ್ಕಾರೇತರ ಸಂಸ್ಥೆಯಿದು. ಸಿಂಡಿಕೇಟ್ ಬ್ಯಾಂಕಿನ ಅಧ್ಯಕ್ಷ ಮತ್ತು ಕಾರ್ಯನಿರ್ವಾಹಕ ನಿರ್ದೇಶಕರಾಗಿದ್ದ ಶ್ರೀ ತಿಂಗಳಾಯರವರು ಈ ಸಂಸ್ಥೆಯ ಅಧ್ಯಕ್ಷರು. ಇದೇ ಬ್ಯಾಂಕಿನಲ್ಲಿದ್ದು ರುಡ್‌ಸೆಟ್ ಸಂಸ್ಥೆಗಳ ಕೇಂದ್ರಕಛೇರಿಯಲ್ಲಿ ಕಾರ್ಯನಿರ್ವಾಹಕ ನಿರ್ದೇಶಕರಾಗಿದ್ದ ಸಾಲಿಮಠ್‌ರವರು ಇದರ ಮ್ಯಾನೇಜಿಂಗ್ ಟ್ರಸ್ಟಿಗಳಾಗಿದ್ದಾರೆ. ನಾನು ೨೦೦೫ರ ಫೆಬ್ರವರಿಯಿಂದ ಈ ಸಂಸ್ಥೆಯಲ್ಲಿ ಯೋಜನಾ ಕಾರ್ಯನಿರ್ವಾಹಕನಾಗಿ ಕಾರ್ಯ ನಿರ್ವಹಿಸುತ್ತಿದ್ದೇನೆ. ಇದು ಸಹ ಕೃಷಿ ಮತ್ತು ಗ್ರಾಮೀಣ ಕ್ಷೇತ್ರಗಳಲ್ಲಿ ಈ ಎಂಟು ವರುಷಗಳಲ್ಲಿ ತನ್ನದೇ ಆದ ಛಾಪು ಮೂಡಿಸಿದ್ದು, ನಾವು ಸೇರಿ ಮಾಡಿದ ಹಲವು ಕೆಲಸಗಳಲ್ಲಿ ಈ ಲೇಖನದ

ದೃಷ್ಟಿಯಿಂದ ಗಮನಸೆಳೆಯುವ ಕೆಲವು ಕಾರ್ಯಕ್ರಮಗಳಿವು:

೧. ಸುಜಲ ಜಲಾನಯನ ಯೋಜನೆಯಡಿ ಆದಾಯ ಉತ್ಪನ್ನ ಚಟುವಟಿಕೆಗಳಿಗೆ ಪರಿಣತ ಸಂಸ್ಥೆ

ಕರ್ನಾಟಕ ಸರ್ಕಾರವು ವಿಶ್ವಬ್ಯಾಂಕಿನ ನೆರವಿನೊಡನೆ ಮತ್ತು ಕೇಂದ್ರಸರ್ಕಾರದ ಸಹಾಯದೊಡನೆ 'ಸುಜಲ ಜಲಾನಯನ ಯೋಜನೆ'ಯನ್ನು ಅನುಷ್ಠಾನಗೊಳಿಸಿತು. ಇದೊಂದು ಸುಮಾರು ೫೫೦ ಕೋಟಿ ವೆಚ್ಚದ ಬೃಹತ್ ಯೋಜನೆಯಾಗಿದ್ದು ಆರು ಜಿಲ್ಲೆಗಳಲ್ಲಿ ೨೦೦೨ರಿಂದ ೨೦೦೮ರವರೆಗೆ ಅನುಷ್ಠಾನಗೊಂಡಿತು. ರೈತರ ಮತ್ತು ರೈತರದ್ದಲ್ಲದ ಸಾಮಾನ್ಯ ಜಮೀನುಗಳಲ್ಲಿ ನೀರು ಮತ್ತು ಮಣ್ಣನ್ನು ಸಂರಕ್ಷಿಸುವ ವಿವಿಧ ಕ್ರಮಗಳನ್ನು ಅನುಸರಿಸುವುದು ಮತ್ತು ಉತ್ತಮ ಮರಗಿಡಗಳನ್ನು ಬೆಳೆಸುವುದು ಮುಖ್ಯ ಕಾರ್ಯಕ್ರಮ. ಈ ಕಾರ್ಯಕ್ರಮಗಳು ಮುಖ್ಯವಾಗಿ ಜಮೀನಿರುವವರಿಗೆ ಅನುಕೂಲ ಮಾಡಿಕೊಡುವುವು. ಆದರೆ, ಈ ಪ್ರದೇಶಗಳಲ್ಲಿರುವ ಜಮೀನಿಲ್ಲದ ಬಡ ಜನರಿಗೆ ಅನುಕೂಲವಾಗುವಂತೆ ಆದಾಯ ಉತ್ಪನ್ನ ಚಟುವಟಿಕೆಗಳನ್ನು ಅಳವಡಿಸಿಕೊಳ್ಳಲಾಯಿತು. ಇದರಡಿಯಲ್ಲಿ ಜಮೀನುರಹಿತ ಮತ್ತು ಕಡಿಮೆ ಜಮೀನಿರುವ ಮನೆಯ ಹೆಣ್ಣುಮಕ್ಕಳನ್ನು ಸ್ವಸಹಾಯಸಂಘಗಳಾಗಿ ಸಂಘಟಿಸಿ, ಅವರಿಗೆ ಸಂಘ ಕಟ್ಟುವ, ಬೆಳೆಸುವ ಮತ್ತು ಉಳಿಸಿಕೊಳ್ಳುವ ಬಗ್ಗೆ ಹಲವು ತರಬೇತಿ ನೀಡಿ ಸಂಘಗಳನ್ನು ಬಲಪಡಿಸಲಾಯಿತು.

* ಆದಾಯ ಉತ್ಪನ್ನ ಕಾರ್ಯಕ್ರಮಗಳ ಬಗ್ಗೆ ಅರಿವು ಮೂಡಿಸುವುದು
* ಬೇಕಾದವರಿಗೆ ಕೌಶಲ ತರಬೇತಿ ನೀಡುವುದು
* ವೃತ್ತಿ ಪ್ರಾರಂಭಿಸಲು ಬೇಕಾಗುವ ಹಣಕ್ಕೆ ಯೋಜನಾ ವತಿಯಿಂದ ಮತ್ತು ಬೇಕಾದಲ್ಲಿ ಬ್ಯಾಂಕಿನಿಂದ ವ್ಯವಸ್ಥೆ ಮಾಡುವುದು
* ವೃತ್ತಿ ನಡೆಸುವಾಗ ಬರುವ ತೊಂದರೆ, ಸವಾಲುಗಳನ್ನು ಎದುರಿಸುವ ಮಾರ್ಗದರ್ಶನ ನೀಡುವುದು
* ಮಾರುಕಟ್ಟೆ ಪಡೆಯಲು ಸಹಾಯ

– ಇವುಗಳನ್ನು ಒದಗಿಸಲು ಪ್ರತಿ ಉಪಜಲಾನಯನಕ್ಕೆ ಒಂದೊಂದು ಪರಿಣತ ಸಂಸ್ಥೆಯನ್ನು ನೇಮಿಸಲಾಯಿತು.

ಈ ಯೋಜನೆಯು ಒಟ್ಟು ಮೂರು ಹಂತಗಳಲ್ಲಿ ಅನುಷ್ಠಾನಗೊಂಡು ಪ್ರತಿ ಹಂತದಲ್ಲೂ ನಮ್ಮ ಸಂಸ್ಥೆ ಕೆಲಸ ಮಾಡಿದ್ದು ವಿಶೇಷ. ಒಟ್ಟು ೩೨ ಉಪಜಲಾನಯನಗಳಲ್ಲಿ ಕೆಲಸ ಮಾಡಿ ಸುಮಾರು ೨೦,೦೦೦ ಮಹಿಳಾಸದಸ್ಯರಿಗೆ ಯೋಜನೆಯಡಿಯಲ್ಲಿ ಮೇಲೆ ತಿಳಿಸಿದ ಸೇವೆಯನ್ನು ಒದಗಿಸಿದೆ ! ಅಲ್ಲದೆ ಉಳಿದ ಹಲವು ಸಂಸ್ಥೆಗಳಿಗೆ ಮತ್ತು ಇಲಾಖಾ ಸಿಬ್ಬಂದಿಗಳಿಗೆ ಸಹ ಹಲವು ತರಬೇತಿಗಳನ್ನು ನಮ್ಮ ಸಂಸ್ಥೆ ನೀಡಿದೆ.

೨. "ವ್ಯವಸಾಯ ಉದ್ಯಮ" ಕಾರ್ಯಕ್ರಮಗಳ ರಾಜ್ಯವ್ಯಾಪಿ ಸರ್ವೇಕ್ಷಣ

ರಾಜ್ಯ ವ್ಯವಸಾಯ ಇಲಾಖೆಯು ಡ್ಯಾನಿಡಾ ಯೋಜನೆಯಡಿ ಮಹಿಳಾ ಸ್ವಸಹಾಯ ಸಂಘಗಳ ಮೂಲಕ ವಿವಿಧ ವ್ಯವಸಾಯ ಉದ್ಯಮಗಳ ಸ್ಥಾಪನೆಗೆ ರಾಜ್ಯವ್ಯಾಪಿ ಸಹಾಯ ಮಾಡಿದ್ದು, ಯೋಜನೆ ಹೇಗೆ ಅನುಷ್ಠಾನಗೊಂಡಿದೆಯೆಂದು ದಾಖಲಿಸಲು ಒಂದು ಸರ್ವೇಕ್ಷಣ ನಡೆಸಲು ನಮ್ಮ ಸಂಸ್ಥೆಯ ಸೇವೆಯನ್ನು ಎರವಲು ಪಡೆದಿತ್ತು. ಈ ಕಾರ್ಯ ನೆರವೇರಿಸಿದ ಟೀಮಿನ ಮೇಲುಸ್ತುವಾರಿಯನ್ನು ತೀರ್ಥಹಳ್ಳಿಯವರಾದ ಶ್ರೀಕಾಂತ ಶೆಣಯ್ ವಹಿಸಿದ್ದರು. ನಾನೂ ಈ ಪಡೆಯ ಸದಸ್ಯನಾಗಿದ್ದು, ಬಳ್ಳಾರಿ, ತುಮಕೂರು ಮತ್ತಿತರ ಕೆಲವು ಜಿಲ್ಲೆಗಳ ಕೆಲಸದಲ್ಲಿ ಭಾಗಿಯಾಗಿದ್ದೆ.

೩. ಔಷಧಿ ಸಸ್ಯಗಳ ಸರ್ವೇಕ್ಷಣ ಯೋಜನೆ

ರಾಜ್ಯ ಅರಣ್ಯ ಇಲಾಖೆಯು ರಾಜ್ಯದಲ್ಲಿ ಔಷಧಿ ಸಸ್ಯಗಳ ಅಭಿವೃದ್ಧಿಗೆ ಇಂಬುಕೊಡಲು ಒಂದು ಔಷಧಿ ಸಸ್ಯಗಳ ನರ್ಸರಿ

ಪ್ರಾರಂಭಿಸುವ ಯೋಜನೆ ಹಾಕಿಕೊಂಡಿತ್ತು. ಈ ನರ್ಸರಿಯನ್ನು ಎಲ್ಲಿ ಪ್ರಾರಂಭಿಸಬಹುದು, ಮೊದಲಿಗೆ ಯಾವ ಸಸ್ಯಗಳಿಗೆ ಒತ್ತು ಕೊಡಬೇಕಿದೆ ಮತ್ತು ಈ ಕೇಂದ್ರದಲ್ಲಿ ಏನೇನು ಲ್ಯಾಬೋರೇಟರಿ ಉಪಕರಣ ಮತ್ತು ವ್ಯವಸ್ಥೆಯಿರಬೇಕೆಂಬ ಬಗ್ಗೆ ಒಂದು ಅಧ್ಯಯನ ಮಾಡಲು ನಮ್ಮ ಸಂಸ್ಥೆಯ ಸೇವೆ ಪಡೆದಿತ್ತು. ಈ ಯೋಜನೆಯ ಕಾರ್ಯವನ್ನು ನಾನು, ಕೆಂಪೇಗೌಡ ಮತ್ತು ರಮೇಶ್ ಎನ್ನುವವರು ಮುಖ್ಯವಾಗಿ ನೆರವೇರಿಸಿದೆವು. ಇದಕ್ಕಾಗಿ, ಕೇರಳ ಮತ್ತು ತಮಿಳುನಾಡಿನ ಕೆಲವು ಸಂಶೋಧನಕೇಂದ್ರಗಳಿಗೆ ಭೇಟಿಯಿತ್ತು, ಅಲ್ಲಿರುವ ವ್ಯವಸ್ಥೆಗಳ ಬಗ್ಗೆ ಅಧ್ಯಯನ ಮಾಡಿದ್ದು ಒಳ್ಳೆಯ ಅನುಭವವಾಗಿತ್ತು ! ಮಾಡುರೀತಿ (ಮೆಥಡಾಲಜಿ)ಗಳನ್ನು ರೂಪಿಸುವಲ್ಲಿ ಸಾಲಿಮಠ್ ಮತ್ತು ಶೆಣಯ್ ಸಹಾಯ ನೀಡಿದ್ದರು. ರಾಜ್ಯದಾದ್ಯಂತ ಔಷಧಿ ಸಸ್ಯಗಳ ಬಗ್ಗೆ ಒಂದು ಸರ್ವೇಕ್ಷಣ ನಡೆಯಬೇಕಿದ್ದರಿಂದ ಸಂಸ್ಥೆಯ ಹಲವರು ಭಾಗಿಯಾಗಿದ್ದರು. ನಾನು ಈ ಯೋಜನೆಯ ಟೀಂ ಲೀಡರ್ ಆಗಿದ್ದು ನಾಲ್ಕು ಪುಟಗಳಲ್ಲಿ ಈ ಅಧ್ಯಯನದ ರಿಪೋರ್ಟ್ ಹೊರಬಂದಿತು. ನಂತರ, ಇಲಾಖೆಯು ಧಾರವಾಡಜಿಲ್ಲೆಯಲ್ಲಿ ನರ್ಸರಿಯನ್ನು ಸ್ಥಾಪಿಸಿದೆ.

೩. ಸುಜೀವನವೆಂಬ ಜೀವನದಾರಿ

ಹಲವು ಸರಕಾರಗಳು ಬಂದು ಹೋದರೂ, ರೈತರೇ ನಮ್ಮ ಧಣಿಗಳೆಂದೋ, ನಾನು ರೈತನ ಮಗನೇ ಎಂದೋ ಹೇಳುತ್ತಾ ಕಾಲತಳ್ಳಿದರೂ, ಕೆಲವು ಕಾರ್ಯಕ್ರಮಗಳನ್ನು ರೈತರ ಹಿತದೃಷ್ಟಿಯಿಂದ ಜಾರಿಗೆ ತಂದರೂ ರೈತರ ಕಷ್ಟ ವರುಷದಿಂದ ವರುಷಕ್ಕೆ ಇಮ್ಮಡಿಸುತ್ತಲೇ ಇದೆ. **ಮನುಷ್ಯ ಎಷ್ಟು ತಾಂತ್ರಿಕವಾಗಿ ಮುಂದುವರೆದರೂ 'ನೆಲದ ಮೇಲಣ ಅರ್ಧ ಅಡಿ ಮಣ್ಣು' ಮತ್ತು 'ಮಳೆಯಾಗುತ್ತಿದೆ'** ಎಂಬೆರಡು **ವ್ಯವಸ್ಥೆಯಿಂದಲೇ ಬದುಕಿರುವುದು ಸಾಧ್ಯವಾಗಿದೆ** ಎಂಬ ಹೇಳಿಕೆ ಸೂರ್ಯ ಚಂದ್ರರಷ್ಟೇ ಸತ್ಯವಾಗಿದ್ದರೂ, ಬೆಳೆ ಬೆಳೆಯುವ ರೈತನ ಈ ಸ್ಥಿತಿಗೆ ಏನು ಕಾರಣ? ಮತ್ತು ಮಾಡಬೇಕೇನನ್ನು? ಎಂದು ಎಲ್ಲರೂ ಯೋಚಿಸಲೇಬೇಕಿದೆ. ಈ ದಿಶೆಯಲ್ಲಿ ನಮ್ಮ ಸಂಸ್ಥೆ ರೈತರು ಹೊರಗಿನಿಂದ ಬರುವ ವಸ್ತುಗಳ ಮೇಲೆ ಹೆಚ್ಚು ಅವಲಂಬನೆಯಾಗದೇ, **ಕಡಿಮೆ ಹೊರವಸ್ತು ಅವಲಂಬಿತ ಸುಸ್ಥಿರ ವ್ಯವಸಾಯ (ಲೀಸಾ)** ಕ್ರಮವನ್ನು ರೈತರಿಗೆ ತಲುಪಿಸುವ ಜೊತೆ ಜೊತೆಗೇ ಸುಲಭವಾಗಿ ಮತ್ತು ಸಕಾಲದಲ್ಲಿ ರೈತರ ಮನೆ ಬಳಿಯೇ ಅವರಿಗೆ ಕೃಷಿಸಾಲ ಮತ್ತು ತೀರುವಳಿಸೌಲಭ್ಯ ಹಾಗೂ ಉಳಿತಾಯ ಬ್ಯಾಂಕ್ ಸೇವೆ ಪಡೆವ ಸೌಲಭ್ಯ ಒದಗಿಸುವ ವಿನೂತನ ಕಾರ್ಯಕ್ರಮ ಜಾರಿಗೊಳಿಸುತ್ತಿದ್ದು, ಪ್ರಾರಂಭಿಕ ಯಶವನ್ನು ಸಹ ಕಂಡಿದೆ. ಈ ಯೋಜನೆಗೆ ಮುಖ್ಯವಾಗಿ ಶ್ರೀಕಾಂತ ಶೆಣಯ್‌ರವರು ಮಾರ್ಗದರ್ಶನ ನೀಡುತ್ತಿದ್ದು, ಕೆಂಪೇಗೌಡರು ಅನುಷ್ಠಾನದಲ್ಲಿ ತಮ್ಮನ್ನೇ ಸಮರ್ಪಿಸಿಕೊಂಡಿದ್ದಾರೆ. ಕ್ಷೇತ್ರಮಟ್ಟದಲ್ಲಿ ಉತ್ತೇಜಿತಗೊಂಡ ೭೦ಕ್ಕೂ ಹೆಚ್ಚಿನ ದೊಡ್ಡದೊಂದು ಪಡೆಯೇ ಸಮರೋತ್ಸಾಹದಿಂದ ದುಡಿಯುತ್ತಿದೆ ! ಕೃಷಿಕರನ್ನು ಉತ್ತೇಜಿಸುವ ಹಲವು ಕವಿತೆಗಳು ಹೊರಬಂದಿದ್ದು / ಸಂಗ್ರಹವಾಗಿದ್ದು, ಈ ಜಾಗೃತಿಯಲ್ಲಿ ಕವಿತೆಗಳು ಬಲಪ್ರದವಾದ ಉಪಕರಣವಾಗಿ ಬಳಕೆಯಾಗಿರುವುದು ವಿಶೇಷ! ತಂತ್ರಜ್ಞಾನದಲ್ಲಿ ಎಎಮ್‌ಇ (ಅಗ್ರಿಕಲ್ಚರ್, ಮ್ಯಾನ್ ಅಂಡ್ ಎಕಾಲಜಿ) ಮತ್ತು ಬ್ಯಾಂಕಿಂಗ್ ಸೇವೆಯಲ್ಲಿ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಪ್ರಮುಖ ಭಾಗಿಗಳಾಗಿದ್ದಾರೆ.

೪. ಮರ-ವ್ಯವಸಾಯಾಧಾರಿತ "ವಾಡಿ"ಯೆಂಬ ಜೀವನಶೈಲಿಯಲ್ಲೊಂದು ಪ್ರಯೋಗ

ಗುಜರಾತ್ ಮತ್ತು ಮಹಾರಾಷ್ಟ್ರದ ಗುಡ್ಡಗಾಡು ಜನಾಂಗದಲ್ಲಿ 'ವಾಡಿ' ಪದ್ಧತಿಯ ಜೀವನ ಶೈಲಿ ಪ್ರಚಲಿತವಿದೆ. ಈ ಜನ ತಮ್ಮ ಉದರಪೋಷಣೆಗೆ ಕಾಳಿನಬೆಳೆ ಬೆಳೆದರೂ ತಮ್ಮ ಗುಡಿಸಲಿನ ಸುತ್ತ ಸ್ವಲ್ಪ ಪ್ರದೇಶದಲ್ಲಿ ಮರಾಧಾರಿತ ಕೃಷಿ ಮಾಡುತ್ತಾರೆ ಮತ್ತು ಪಶು ಸಾಕಣೆಗೆ ಬೇಕಾದ ಹುಲ್ಲನ್ನೂ ಬೆಳೆದುಕೊಳ್ಳುತ್ತಾರೆ. ಮುಖ್ಯಬೆಳೆ ನಷ್ಟವಾದರೂ ಹಣ್ಣಿನಮರ ಮತ್ತು ಪಶುಸಂಗೋಪನೆ ಅವರ ರಕ್ಷಣೆಗೆ ನಿಲ್ಲುತ್ತವೆ. ಈ ಪ್ರದೇಶವನ್ನು ಅವರು 'ವಾಡಿ' ಎಂದು ಕರೆಯುವುದರಿಂದ ಅದೊಂದು ಜೀವನಶೈಲಿಯಾಗಿ ರೂಪುಗೊಂಡಿದೆ. ಈ ಶೈಲಿಯನ್ನು ಬೇರೆ ರಾಜ್ಯಗಳ ಗಿರಿಜನ ಅಭಿವೃದ್ಧಿಗೆ ಕೇಂದ್ರಸರಕಾರ ಮತ್ತು ನಬಾರ್ಡ್ ಯೋಜನೆಗಳ ಮೂಲಕ ಜಾರಿಗೊಳಿಸಲಾಗುತ್ತಿದೆ. ನಬಾರ್ಡ್ ಸಹಯೋಗದಲ್ಲಿ ನಮ್ಮ ಸಂಸ್ಥೆಯು ಎರಡು ಕೋಟಿಗೆ ಮೀರಿದ ಈ ಯೋಜನೆಯನ್ನು ಆರು ವರುಷಗಳ ಅವಧಿಯಲ್ಲಿ ಅನುಷ್ಠಾನಗೊಳಿಸುತ್ತಿದ್ದು, ಅನುಷ್ಠಾನದ ಉಸ್ತುವಾರಿಯನ್ನು ನಾನು ನಿರ್ವಹಿಸುತ್ತಿದ್ದೇನೆ. ಸುಮಾರು ೮೦೦ ಎಕರೆಗಳಲ್ಲಿ ಕೃಷಿ ಬದು, ಕೃಷಿ ಹೊಂಡ ನಿರ್ಮಾಣ, ಸುಮಾರು ೩೦೦೦೦ ಮಾವು, ಸಪೋಟ ಗಿಡಗಳು, ಮೂರು ಲಕ್ಷ ವನ್ಯ ಸಸಿ ನೆಡೆಸುವ ಈ ಯೋಜನೆ, ಈ ಗಿರಿಜನ ಕೃಷಿಕರ ಜೀವನದಲ್ಲಿ ಸುಸ್ಥಿರತೆ ತರುವ ಬೃಹದಂಬಲ ಹೊಂದಿದೆ !

ಉ) ಕೃಷಿಯ ಕೃಷಿ

ಎಲ್.ವಿ. ವಸಂತಕುಮಾರ್, ಲಿಂಗದಹಳ್ಳಿ

ಲಿಂಗದಹಳ್ಳಿ ಗ್ರಾಮವಿರುವುದು ಯಾವುದೇ ನದಿ ಅಥವಾ ಹಳ್ಳದ ಮೇಲ್ದಂಡೆಯಲ್ಲಲ್ಲ. ಇಲ್ಲಿ ನೀರಿಗೆ ಮುಖ್ಯ ಆಧಾರ ಕೆರೆಗಳೇ ! ಹಾಗಿದ್ದರೂ ಸಂಕೇತಿಗಳು ಇಲ್ಲಿ ನೆಲೆ ನಿಲ್ಲಲು ನಿರ್ಧರಿಸಿದ್ದೇಕೋ ತಿಳಿಯದಾಗಿದೆ. ಮನೆನಾಡಿನಿಂದ (ಬಸವಾನಿ)ವಲಸೆ ಬಂದ ಜನಕ್ಕೆ ಅಲ್ಲಿನ ಅತಿಯಾದ ಮಳೆ, ಖಾಯಿಲೆಗಳು ಇಲ್ಲಿ ಇಲ್ಲ ಅನ್ನುವುದೇ ಮುಖ್ಯ ಆಕರ್ಷಣೆಯಾಯಿತೇನೋ. ಹೀಗೆ ವಲಸೆ ಬಂದವರೆಲ್ಲರ ಮುಖ್ಯ ಕಸುಬು ವ್ಯವಸಾಯವಾಗಿತ್ತು.

ನನ್ನ ತಂದೆ ವೆಂಕಟರಾಮಯ್ಯನವರು ಊರಿನ ಶ್ಯಾನುಭೋಗರಾಗಿದ್ದರು. ಗ್ರಾಮದ ಮುಖ್ಯಸ್ಥರೂ ಆಗಿದ್ದರು. ಗ್ರಾಮದ ಆಗುಹೋಗುಗಳೆಲ್ಲ ಅವರ ಸುಪರ್ದಿಯಲ್ಲಿ ನಡೆಯುತ್ತಿತ್ತು. ಅವರು ಪ್ರೀತಿಯಿಂದ ಬೆಳೆಸಿದ ಮಾವಿನ ತೋಪನ್ನು ಊರಿಗೆ ದಾನ ಮಾಡಿದ್ದಲ್ಲದೆ ಅಲ್ಲಿ ಒಂದು ಗ್ರಾಮಪಂಚಾಯ್ತಿ ಭವನವನ್ನು ಕಟ್ಟಿಸಿ ಗ್ರಾಮ ಪಂಚಾಯಿತಿಗೆ ದಾನ ಕೊಟ್ಟಿದ್ದು ಇಂದಿಗೂ ಅದೇ ಬಳಕೆಯಲ್ಲಿದೆ. ಇದೇ ಗ್ರಾಮಪಂಚಾಯಿತಿಯ ಜಮೀನಿನಲ್ಲಿ ಟೊಮೆಟೋ ಮುಂತಾದ ಕಾಯಿಪಲ್ಲೆಯನ್ನು ಹೇರಳವಾಗಿ ಬೆಳೆಯುತ್ತಿದ್ದರು. ಅವರು ಸುಮಾರು ೫೦೦ ಎಕರೆ ಜಮೀನು ಮಾಡಿದ್ದರು. ಅದರ ಉಸ್ತುವಾರಿಯಲ್ಲಿ ಶ್ರೀಮಂತಿಕೆ ಜೊತೆಗೆ ಕಡು ಬಡತನವನ್ನೂ ಅನುಭವಿಸಿದ್ದರು ! ಕಾಶ್ಮೀರದಿಂದ ನೇರವಾಗಿ ಸೇಬಿನಹಣ್ಣನ್ನು ಮನೆಗೆ ತರಿಸುತ್ತಿದ್ದರು. ಸುಮಾರು ಆರು ಎಕರೆ ಅಡಿಕೆ ತೋಟವನ್ನವರು ಬೆಳೆಸಿದರು. ಊರಿನ ಶಾಲೆಗೆ ಮೂರು ಎಕರೆ ಜಮೀನನ್ನು ದಾನವಾಗಿ ನೀಡಿದ್ದರು.

ನಾವೆಲ್ಲಾ ಚಿಕ್ಕವರಾದ್ದರಿಂದ ಕೆಲಕಾಲ ಜಮೀನು ನೋಡುವರಿಲ್ಲದೆ ಬಹಳಷ್ಟು ಹಾಳಾಯಿತು. ಹಿರಿಯಣ್ಣ ಇಂಟರ್ ಓದುತ್ತಿದ್ದವರು ಓದು ಬಿಟ್ಟು ಇಲ್ಲಿ ನೆಲೆ ನಿಂತರಾದರೂ ೧೬ರ ಕಿರಿಯ ವಯಸ್ಸಿನಲ್ಲಿ ಎಲ್ಲವನ್ನೂ ನಿಭಾಯಿಸಲಾಗಲಿಲ್ಲ. ಅನೇಕರ ಮೋಸದಿಂದ ಸು. ೩೦೦ ಎಕರೆಯಷ್ಟು ಜಮೀನು ಕಳೆದುಕೊಳ್ಳಬೇಕಾಯಿತು. ಸಂಸಾರ ನಿರ್ವಹಣೆಗಾಗಿ ಸುಮಾರು ೧೦೦ ಎಕರೆಯಷ್ಟು ಜಮೀನನ್ನು ಮಾರಬೇಕಾಯಿತು. ನಾವು ಪಟ್ಟಕ್ಕೆ ಬರುವ ಹೊತ್ತಿಗೆ ಕೇವಲ ೧೦೦ ಎಕರೆಯಷ್ಟು ಮಾತ್ರ ಉಳಿದಿದ್ದು ಅರಸೊತ್ತಿಗೆಯಿಲ್ಲದ ರಾಜ್ಯಭಾರದ ಅಸುಖ ಪ್ರಾಪ್ತವಾಯಿತು.

ನಾವು ಮೂವರು ಸೋದರರು. ಹಿರಿಯರಾದ ರಾಮಚಂದ್ರ ಅವರಿಗೆ ರಾಜಕೀಯವೇ ಬದುಕು, ಉಸಿರು ಆಗಿತ್ತು. ಕೃಷಿ ಅವರಿಗೆ ಎಂದೂ ನಂತರದ ವಿಷಯವಾಗಿತ್ತು. ಉಳಿದ ನಮ್ಮಿಬ್ಬರಿಗೆ ಓದುವ ಕಾಲಕ್ಕೆ ಕೂಡ ಓದು ಕೆಲಸಕ್ಕಾಗಿ, ಜೀವನಕ್ಕಾಗಿ ಎಂಬ ಭಾವ ಎಂದೂ ಸುಳಿಯಲಿಲ್ಲ. ಹುಟ್ಟಿನಿಂದ ಕೃಷಿಕರಾದ ನಮಗೆ ನೂರಾರು ಎಕರೆ ಜಮೀನಿದ್ದುದರಿಂದ ಓದಿನ ನಂತರವೂ ಅನ್ಯವೃತ್ತಿ ಸಹಜವಾಗಿ ಕಲ್ಪನೆಗೆ ಬರುವಂಥದಾಗಿರಲಿಲ್ಲ. ಒಂದು ವಿಶೇಷ ಸಂಗತಿಯೆಂದರೆ ನಾವಿಬ್ಬರೂ ನಮ್ಮ ಪೂರ್ವಿಕರಂತೆ ಕೇವಲ ಯಜಮಾನಿಕೆ ಮಾಡುವವರಾಗಿರಲಿಲ್ಲ. ಕೃಷಿ ನಮಗೆ ಜೀವವಾಗಿತ್ತು, ಉಸಿರಾಗಿತ್ತು ! ಹೊಲಗದ್ದೆಗಳ ಭೇಟಿ ತಪ್ಪಿದ ದಿನವೆಂಬುದಿರಲಿಲ್ಲ.

ನಾವು ಮೂವರು ಸೋದರರು ಆಸ್ತಿಯನ್ನು ಹಂಚಿಕೊಂಡು ವ್ಯವಸಾಯ ಮುಂದುವರೆಸಿದೆವು. ನಾವು ವ್ಯವಸಾಯ ಮಾಡಲು ನಿರ್ಧರಿಸಿದ್ದು, ಅದನ್ನು ನಿರ್ವಹಿಸಿದ್ದು ಆಧುನಿಕವಾದ ರೀತಿಯಲ್ಲಿ. ಹಿರಿಯಣ್ಣ ಮೊದಲಬಾರಿಗೆ ನಮ್ಮೂರಿನಲ್ಲಿ ಸೀಮೆ ಗೊಬ್ಬರ ಬಳಸಿದವರು. ಬಳಸುವ ಕ್ರಮವನ್ನು ಇತರರಿಗೆ ಕಲಿಸಿಕೊಟ್ಟವರು. ಇದೆಲ್ಲಾ ೧೯೫೦ರ ಆಸುಪಾಸಿನಲ್ಲಿ.

ನಮ್ಮಣ್ಣ ಸತ್ಯನಾರಾಯಣ B.Sc., Ag. ಪದವೀಧರ. ನಾನು B.Com.ಗಾಗಿ ಅಧ್ಯಯನ ಮಾಡಿದವನು. ನಮ್ಮಿಬ್ಬರಲ್ಲಿ ವಯಸ್ಸಿನ ಅಂತರ ಕಡಿಮೆಯಿದ್ದು ಸ್ನೇಹಿತರಂತೆ ಜೊತೆಯಾಗಿ ಊರಲ್ಲಿ ಕೃಷಿಯಲ್ಲಿ ತೊಡಗಿಸಿಕೊಂಡೆವು. ನೇರ ಅನುಭವ ನಮಗಿರಲಿಲ್ಲವಾದರೂ, ಕಂಡು ಕಲಿತದ್ದು ಸಾಕಷ್ಟಿತ್ತು. ಜೊತೆಗೆ ಅಣ್ಣನಿಗೆ ತಾಂತ್ರಿಕ ಜ್ಞಾನ ಸಾಕಷ್ಟಿತ್ತು. ಊರ ಶಾನುಭೋಗಿಕೆ ನಮ್ಮ ಮನೆಯವರದಾದ್ದರಿಂದ ಇಡೀ ಊರಿನ ಕೃಷಿಕರ ನೇರ ಒಡನಾಟ ನಮಗಿತ್ತು. ಆದ್ದರಿಂದ ನಮ್ಮ 'ಆರಂಬ'ವು ಆರಂಭ ಶೂರತ್ವವಾಗಿರಲಿಲ್ಲ. ಯೋಜನಾಬದ್ಧವಾಗಿ ರೂಪಿಸಿ ನಡೆದ ದೃಢ ಗತಿಯಾಗಿತ್ತು.

ಇಂದು ನಮ್ಮೂರಿನಲ್ಲಿ ೨೦ಕ್ಕೂ ಹೆಚ್ಚು ಟ್ರ್ಯಾಕ್ಟರುಗಳಿವೆ. ಆದರೆ ಮೊದಲು ತಂದು ಬಳಸಿದವರು ನಾವು. ಹಣ್ಣಿನ ತೋಟವೊಂದನ್ನು ಮೊದಲು ಬೆಳೆಸಿದವರು ನಾವು. ಮಾವು, ಪೇರಳೆ, ನಿಂಬೆ, ಮೂಸುಂಬೆ, ಬೀಜರಹಿತ ದಾಳಿಂಬೆ, ಸಪೋಟ ಇತ್ಯಾದಿ ಹಣ್ಣಿನ ಮರಗಳನ್ನು ಬೆಳೆದೆವು. ಅರ್ಧ ಮಲೆನಾಡಾದ ನಮ್ಮೂರಿನಲ್ಲಿ ಬಾಗಾಯ್ತಿನಂತೆ ಖುಷ್ಕಿ ಜಮೀನೂ ಇದೆ. ಬೇಳೆ ಕಾಳು ಬೆಳೆಯುವುದಿದೆ. ಮೂರು ವಿಧವಾದ ಭೂಮಿಯಲ್ಲೂ ನಮ್ಮ ಕೃಷಿ ಆದರ್ಶವಾಗಿತ್ತು. ನೀರಿಗಾಗಿ (ಮೊದಲು) ಸಾಕಷ್ಟು ಅನುಕೂಲಗಳನ್ನು ಮಾಡಿಕೊಂಡು ಮುಂದಿನ ಹೆಜ್ಜೆಯನ್ನು ಇಟ್ಟಿದ್ದೇವೆ. ಇಂದು ನಮ್ಮೂರಲ್ಲಿ ೨೦೦ಕ್ಕೂ ಮಿಕ್ಕಿ ಬೋರ್‌ವೆಲ್‌ಗಳಿವೆ. ಆದರೆ ಮೊದಲಿಗೆ, ಏಕಕಾಲಕ್ಕೆ ನಾಲ್ಕು ಬೋರ್‌ಗಳನ್ನು ತೆಗೆಸಿದ್ದಲ್ಲದೆ ತೋಟದಲ್ಲಿ ಕಲ್ಲು ಕಟ್ಟಡದ ದೊಡ್ಡ ತೆರೆದ ಬಾವಿಯನ್ನು ತೋಡಿಸಿದವರೂ ನಾವೇ. ನಮ್ಮ ಭತ್ತದ ಗದ್ದೆಯಲ್ಲಿ ಬಿ.ಡಿ.ಓ.ರವರು ಕ್ಷೇತ್ರೋತ್ಸವ ಮಾಡಿ ಒಳ್ಳೆಯ ಬೆಳೆಗಾಗಿ ನಮ್ಮನ್ನು ಸನ್ಮಾನಿಸಿದ್ದುಂಟು. ಆ ತರಹ ಸ್ಪರ್ಧಾಮನೋಭಾವವನ್ನೂ ನಾವು ಕಲಿಸಿಕೊಟ್ಟೆವು ! ಸಾಕಷ್ಟು ಸಾಲಗಾರರಾಗಿದ್ದೆವು ಮತ್ತು ಸಕಾಲದಲ್ಲಿ ತೀರಿಸಿದೆವು ಕೂಡ.

ಊರೊಳಗೆ ನಮ್ಮ ಮನೆ ಸಾಕಷ್ಟು ದೊಡ್ಡದಾಗಿದೆ. ಸುಮಾರು ೮೦ ಚದರದಷ್ಟಿದೆ. ಆದರೂ ಊರ ಹೊರಗೆ ಮನೆ ಕಟ್ಟಿಸಿ ವಾಸವಾಗಿದ್ದೇವೆ. ಊರೊಳಗಿನ ಬ್ರಾಹ್ಮಣರ ಬೀದಿಯು ಹಿಗ್ಗಲಾರದಷ್ಟು ಟೈಟ್ ಆದ್ದರಿಂದ ಹೊರಬರಲು ನಿರ್ಧರಿಸಿದೆವು. ಎಲ್ಲ ಮನೆಯವರಿಗೂ ಒಂದೊಂದು ಸೈಟನ್ನು (ಸುಮಾರಾಗಿ) ನಾವೇ ಮಾರಿದೆವು. ಬಸವಾನಿ ರಾಮಶರ್ಮರ ನೇತೃತ್ವದಲ್ಲಿ NES ನಿಂದ ಸಾಲ ಪಡೆದು ಸುಮಾರು ೩೦ ಮನೆಗಳನ್ನು ಕಟ್ಟಿಸಿ ಒಂದು ಹೊಸ ಲೇಔಟ್ ನಿರ್ಮಾಣ ಮಾಡಿದೆವು.


ನಾವು ಮೂವರಲ್ಲಿ ಈಗ ನಾನೊಬ್ಬನೇ ಇದ್ದೇನೆ. ಒಬ್ಬ ಮಗ ಅಮೆರಿಕೆಯಲ್ಲಿದ್ದಾನೆ. ಹಳ್ಳಿಗೆ ಬರುವ ನಿರೀಕ್ಷೆ ಇಲ್ಲ. ಆದ್ದರಿಂದ (೭೦ರ ಗಡಿ ದಾಟಿದ ಮೇಲೆ) ಕೆಲಸ ಕಡಿಮೆ ಮಾಡಿಕೊಂಡಿದ್ದೇನೆ. ಉತ್ಸಾಹ ತಗ್ಗಿಲ್ಲ. ಆದರೆ ದೇಹಶಕ್ತಿ ಮುನ್ನಿನಂತಿಲ್ಲ.

ಊ) SANKETIS AND AGRICULTURE

Prof. T.S. Rajamani, Kollam, Tirunelveli (Now residing in Bengaluru)
(Social Sector Analyst & Soft skills Trainer)

[ಪ್ರೊ. ಟಿ.ಎಸ್. ರಾಜಾಮಣಿ ಅವರು ಬಾಲ್ಯದ ದಿನಗಳನ್ನು ಕೊಲ್ಲಂ (ಕೇರಳ) ಮತ್ತು ತಿರುನೆಲ್‌ವೇಲಿಯಲ್ಲಿ (ತಮಿಳುನಾಡು) ಕಳೆದರು. ಅವರ ಬಂಧುಗಳು ಅನೇಕರು ವ್ಯವಸಾಯ ಮಾಡುತ್ತ ಇದ್ದರು, ಈಗಲೂ ಕೆಲವರು ಅದನ್ನು ಮುಂದುವರಿಸಿದ್ದಾರೆ. ತಿರುನೆಲ್‌ವೇಲಿಯ ಶ್ರೀನಾಚಾರಮ್ಮ (ಸರಸ್ವತಿ) ದೇವಾಲಯವನ್ನು ಕಟ್ಟಿಸಿದವರು ಅವರ ಹಿರಿಯರು. ಅವರ ತಂದೆಯವರು ತಮ್ಮ ನಡುವಯಸ್ಸಿನಲ್ಲಿ ಬೆಂಗಳೂರಿಗೆ ವಲಸೆ ಬಂದು ವ್ಯಾಪಾರವೃತ್ತಿ ಹಿಡಿದರು. ಆಗ ರಾಜಾಮಣಿಯವರು ಕೆಲಕಾಲ ಮೈಸೂರಿನ ಕೌಶಿಕ ಸಂಕೇತಿ ವಿದ್ಯಾರ್ಥಿನಿಲಯದಲ್ಲಿದ್ದುಕೊಂಡು ಕಾಲೇಜು ಶಿಕ್ಷಣವನ್ನು ಮುಂದುವರಿಸಿದರು. ಅವರೂ ಬೆಂಗಳೂರಿನಲ್ಲಿಯೇ ನೌಕರಿಗೆ ಸೇರಿದರು. ಅವರೀಗ ದಕ್ಷಿಣದ ಸಂಕೇತಿಗಳ ಆತ್ಮಕಥಾ ಸಂಪುಟವೊಂದನ್ನು 'ಸಂಕೇತಿ ಅಧ್ಯಯನ ಮಾಲೆ'ಗಾಗಿ ಸಂಪಾದಿಸುತ್ತಿದ್ದಾರೆ. ಅವರಿಗೆ ಕರ್ನಾಟಕ, ತಮಿಳುನಾಡು ಮತ್ತು ಕೇರಳದಲ್ಲಿ ನೆಲೆಸಿರುವ ಸಂಕೇತಿಗಳ ಪರಿಚಯ ಇರುವುದು ಗಮನಾರ್ಹ.]

During the period of Sultanates and Moghul followed by the British rule, hardly a few Brahmins were able to find places as pundits in the Durbars. They could, therefore, settle down happily. They chanted the Vedas and performed sacrifices to bring good to the world. All other castes respected and treated them with affection.



Prof.T.S.Rajamani

Brahmins form only a small percentage of the population. Without any support from any other ruler Brahmins were forcefully driven to the situations where they had to work hard to make their both ends meet.

For having migrated to the south, a small group of Brahmins was drastically on the look for an environment favourable to grow food grains, vegetables, fruits and roots sufficient to meet its daily requirements of living. *It chose Shenkottai down south of the country because of the fertility of land and rivers* or small tributaries flowing around the places ensuring copious supply of water.

This small group of Brahmins came to be known as Sanketis, because of its settlement in the place called Shenkottai. Comparatively, Sanketis are a smaller group of the total Brahmin population in terms of number.

While a few remained in these places around Shenkottai, as the population got multiplied, some sizeable number after a few years moved further for increasing their comforts with regard to food, clothing and shelter. Thus, the places in and around the districts of *Kollam, Thiruvananthapuram, Tirunelveli* and a few other nearby hamlets, identified as congenial for settling down there.

Brahmins ceased to receive gifts from rulers after the inception of British rule. (Brahmins acquiring the habit of accumulating money is a recent phenomenon.)

The chosen environment enabled to get all the things desired – *the land for raising food crop, rearing cows* and bulls and building houses.

Each community has its own duties, customs and food habits. Tambrass also points out that "the entire sects and subsects of South Indian Brahmin population are totally vegetarians unlike certain Brahmins of other parts of India."

It is believed that the agriculture was highly productive and capable of generating sufficient to support themselves and a few others around their settlements. As the cash in flow was literally 'nil', the community *did not hesitate to engage in agriculture*. Sanketis are '*hard working*' Brahmins and clever too. (As the number grew larger, some moved further to Palghat and came to be known as 'Palghat iyers' as written by T.N. Seshan in his article in Tamil weekly 'Ananda Vikatan', after his retirement.)

The vast backyard of every house was utilized for growing green leafy vegetables, such as collard greens, spinach, dark green and red leaf lettuce; red and green Peppers, sweet potatoes, tomatoes, curry leaf and the like. Besides, lands were used for growing *coconut, betel leaves,* curry leaf trees and the like. They were getting down into the fields to maintain these crops. The necessity for survival warranted them to demonstrate their mite in agriculture and horticulture.

Details about some of these crops are separately available in different chapters for the interested readers.

Broad mind, kind heart, love and affection got the Sanketis name and fame. They are known for *kind and courteous behaviour.*

Art has been helpful in enabling the community into totality. 'If you want to see an animal, look at those men who have no aesthetic sense' said some one. We have exponents in the field of music, literature and fine arts among SANKETIS.

Note: It is my personal opinion formed after *interacting with several senior Sanketis* in Tamilnadu and Kerala over a period of time.

ARECANUT

Arecanut plays an important role in the social, cultural and economic activities of the people. If you like the taste, you may chew betel nut alone. But its stimulating effect is minimized without lime. Add a bit of nutmeg or cloves to the betel/lime mixture to improve the taste, if you want to.

Introduction

Betel chewing is avidly pursued in India. It is an old tradition enjoyed by both genders. It was a popular pastime in some parts of Kerala. 'Batladike' in Kannada, *'Kalipak' in Malayalam* or 'Kottai-pakku' in Tamil are over 150 trade types, differing in maturity, processing conditions and varying in their taste characteristics as per market conditions prevailing at different centres of the country. Today, chewing betel nut is an important and popular cultural activity in many Asian countries. It is not known where Areca catechu originated. It may have come from the Philippines or an area near there (but not certain).

This easily grown palm has the potential for being a profitable crop for farmers as well as backyard gardeners. *The habit is formed among the Brahmin communities living in Kerala and Tamilnadu as 'status symbol'.*

SANKETI Brahmins found the cultivation easy and profitable too. Learnt the techniques from the elders. A few saplings of betel tree were planted in their backyard. As years passed, being *viable economically*, they began to grow *large numbers* of trees in separate gardens intercropped with banana and pepper creeper.

History

There is archaeological evidence to the practice of using betel nuts as drug thousands of years ago in South-east Asia.

The Spirit Cave site in Thailand yielded circumstantial evidence for the practice of betel chewing in prehistoric times. (Traditional consumption of a combination of Areca catechu, Piper betel, and edible lime.)

Betel is one of the earliest known psychoactive substances to have been in vogue in the world. In PALl, a story dating from about 500 BC describes a princess giving betel to her lover as a gift.

Areca catechu is mentioned in Sanskrit under the name guvaka, and in Chinese texts dating from 150 BCE it was called pinlang (a Malayan name).

In Persia there were 30,000 shops that sold betel nut in the capital town during the reign of Khosrau II (King of Persia from 590 to 628). Arabs and Persians who visited India in 8th and 9th centuries found the habit deeply rooted.

Ali al-Masudi, an Arab historian who travelled through India in A.D. 916, described the chewing of betel nut as a national custom. People, it appears, who did not use betel nut were socially isolated!

What is Betel Nut?

Betel Nut is a name given to the seed of the Areca catechu tree. Areca catechu is the botanical name of a species of palm tree that grows in parts of the tropical Pacific, Asia, and Africa. More commonly known as betel palm or betel nut tree, it can grow to a height of 65-90 feet.

Betel nut (Areca catechu) is a slender, single-trunked palm. The "nut" (actually the seed endosperm) is chewed as a stimulant masticator by 5% of the world's population, making it more popular than chewing gum but not as popular as tobacco. Use of betel nut is often culturally or socially ritualized, and there are elaborate ceremonies attending its use in various Asian and Pacific cultures. At the same time, betel chewing is stigmatized by Western cultures that find the red saliva and blackened teeth resulting from regular use (not to mention the spitting out of the copious red saliva) to be aesthetically disgusting.

Flowers are unisexual, with both male (=staminate) and female (=pistillate) flowers borne in the same inflorescence. **Leaves** are longest near middle of frond encircling trunk and forming a green crown shaft.

CULTIVATION

The betel palm is cultivated primarily for betel nuts. It can be grown in a variety of soil types using pre-germinated seeds. The palms bear fruit when they are 10-15 years of age. A productive betel palm can provide fruits for 45-75 years. Usually only the ripe fruits are harvested. Areca catechu can be infected by various fungi. The saplings need to grow in the shade because they may be killed by strong sun. Intercropping with banana is often practised to provide shade in the initial stages up to 4-5 years. Betel nut palm is only propagated by seed. The planting is to be done during May-June in well-drained soils and during August-September in clayey soils.

Wild Areca catechu trees can be found growing in Malabar, a region in India between the Western Ghats and Arabian Sea.

Irrigation of the palms is done during hot and dry periods at regular intervals of 3-5 days depending upon the soil type. Where there is shortage of water, drip irrigation may be adopted. Application of organic mulch to the garden helps conservation of soil moisture.

How to Use Betel Nuts?

Betel nuts are legal in most countries. Betel nut chewing is culturally important in many Asian and Pacific societies. Betel nut is a preferred stimulant today due to urban migrations of people from dissimilar rural backgrounds and cultural practices.

When chewed, the stimulant effect can be felt almost immediately and it lasts a good 3-5 hours. To make your own betel nut mixture, take an amount of betel nut (1/4 nut is good to start with but use as much or little as you desire) and break into small pieces or powder it. You can break them up into any size for comfortable chewing. Roasted betel nuts are easiest to break into smaller pieces (sometimes into a powder) and mixed with edible lime to aid in the absorption of their active ingredients, arecaine and arecoline, the primary active ingredients in betel nut. Edible lime is needed to increase the amount of active ingredients that your body absorbs. Without lime you will feel very little of the possible effect of the betel nut.

Rather than being chewed, the mixture is put between the cheek and tongue and left there, sometimes overnight; but chewed occasionally. However, any saliva the mouth produces is swallowed. When finished, spit out the remaining mixture, rather than swallow it. They have a spicy taste and large amounts of saliva are usually produced when chewing betel nut. It has also an appetite suppressing effect. Swallowing of betel nut in large quantity directly may upset your stomach.

Tobacco chewers in India often mix betel nut with tobacco and it is commonly referred to as 'paan'. Overuse of betel nuts can cause a feeling of intoxication, convulsions, diarrhoea, dizziness, or vomiting. Long term betel nut chewers (after years of daily use) will eventually develop a distinctive red stain of the mouth, teeth, and gums.

By-Products and their uses

The **tough leaf-base** is used in hats, inner soles for slippers, and is an excellent paper pulp source. **Husks** are used for insulating wool, boards, and for manufacturing furfural (a solvent). In the Philippines the husk is used to make toothbrushes. The fibrous fruit husks stripped from the seed have many uses, including as a home fuel source.

The **trunks,** either split or whole, are used for rafters and for wattle in house construction; they are used in constructing elaborate crematory and temporary structures. Culled trees are used

for crude construction; the fallen fronds are used in making alcohol.

Leaf sheaths are used as plates, bags, and for wrapping, packing, and as hats and sandals.

Tannins are a by-product of boiling the nuts during processing and the extract makes black and red dyes.

Leaf vegetable: The terminal bud (palm cabbage or palm heart) is edible, although bitter. In Java it is eaten as lalab or made into pickles. In the Philippines the cabbage is eaten raw as salad, or cooked. The tender shoots are eaten after cooking in syrup.

The **inflorescences** and **flowers** are used ceremonially in diverse cultures. In the Philippines the flowers are sometimes added to salads.

The fragrant flowers are used in weddings and funerals in some SE Asian countries.

Betel quid

The term 'quid' should be defined as 'a substance, or mixture of substances, placed in the mouth usually containing at least one of the two basic ingredients, tobacco or areca nut, in raw or any manufactured or processed form synonymous with **'pan'** or **'paan'**. It is a combination of fresh or dried seed of betel nut, a fresh leaf of betel pepper **(Piper betel),** a dab of slaked lime and various flavorings (cutch, cardamom, clove, tobacco). Eight closely related alkaloids are responsible for the stimulant effect; the alkaloid levels are highest in the unripe fruit and this that may be the reason why some cultures prefer the unripe nuts for consumption: they give a better buzz. Generally contains betel leaf, areca nut and slaked lime, and may contain tobacco. Other substances, particularly spices, including cardamom, saffron, cloves, aniseed, turmeric, mustard or sweeteners, are added according to local preferences. In addition, some of the main ingredients (tobacco, areca nut) can be used by themselves or in various combinations without the use of betel leaf. Numerous commercially produced mixtures containing some or all of these ingredients are also available in various parts of the world. When chewed for the stimulant effect betel quid is never swallowed and the copious saliva resulting is spat out.

Cultural operations

Keep the garden free of weeds and break up surface crust by light forking or digging after cessation of monsoon during October-November. In slopes, prevent soil erosion by terracing. Sow seeds of green manure-cum-cover crops in April-May with the onset of pre-monsoon rains. Cut and apply them to the palms in September-October.

Benefits of inter-planting

Intercropping in general makes better use of the land and light by producing an income-generating crop before the palms begin bearing. Intercropping with banana provides shade essential for

establishment of young areca palms after they are transplanted from nursery beds to the field. It improves soil chemistry and soil fertility. When betel pepper is grown together with betel nut palm, the two main ingredients of quid (betel nut and betel pepper leaf) are readily available for consumption or sale. In home gardens intercropping with fruit trees provides a variety of useful products for consumption.

Mixed cropping

Crops such as elephant foot yam, pineapple, pepper, betel vine, banana, guinea grass, cocoa, ginger and cardamom can be grown in arecanut gardens.

India is the largest producer and consumer of areca nut and it continues to dominate world in area under cultivation and production and productivity. The national policy on arecanut is not to increase any more area since we have achieved self-sufficiency. Though arecanut is not an export-oriented crop, the internal demand is very high. About 8 million people are depending upon this crop for their livelihood. However, efforts are to minimise the cultivation cost for unit area so that net return for the farmer is increased.



Areca Garden: Kollam

CHEWING



Tamboolam

There is archaeological evidence that the betel leaves have been chewed along with the areca nut since very ancient times. It is not known when these two different stimulant substances were first put together. In most countries, the mixture of both has a ceremonial and highly symbolical value.

Display of the items usually included in a chewing session. The leaves are folded in different ways according to the country and generally feature some calcium hydroxide

daubed inside. Slices of the dry areca nut are on the upper left hand and slices of the tender areca nut on the upper right. The pouch on the lower right contains tobacco, a relatively recent introduction.

For chewing, a small piece of the areca palm's fruit is wrapped in a leaf of the betel pepper, along with a pellet of lime to cause salivation and release the stimulating alkaloid. Chewing results in a heavy flow of brick-red saliva, which may temporarily dye the mouth, lips, and gums orange-brown. Betel nuts yield an alkaloid that veterinarians use as a warming agent.

Leaf of the creeper **Piper betel,** which is chewed in some parts of the world for its stimulating effect, due to the presence of the alkaloids arecoline and guvacoline. The leaves are chewed with the nuts of the areca palm (called pinang in Malaysia), **Arecha catechu,** which is therefore often called the betel palm, and the nut is called betel nut. The Indian delicacy **pan** is based on betel leaf and areca nut, together with aromatic spices and herbs.

Betel made from slices of betel palm seeds (called betel nuts) smeared onto a betel pepper leaf together with other aromatic flavorings and lime paste and rolled up. The betel palm **(Areca catechu)** and the betel pepper (**Piper betel** of the pepper family) are native to and widely cultivated in S Asia, where betel has been chewed since ancient times and is an article of considerable commerce. Betel contains alkaloids that increase the heart rate and induce a sense of euphoria. Habitual chewing stains the teeth and is linked to oral cancer. The high rate of oral cancer in South Asia is thought to be due to the chewing of betel preparations; the inclusion of tobacco may worsen the risk, but there is also evidence that the areca nut, alone or as part of a betel quid, may cause cancer even without tobacco. The addition of tobacco leaf to the chewing mixture is a relatively recent one, introduced during colonial times a few centuries ago.

Effects on hard tissues

Many betel-quid products in different parts of the world are not actually chewed; rather, they are placed in the mouth or applied to the oral cavity and remain in contact with the oral mucosa. The main effects of areca on the hard tissues are on the teeth. The habitual chewing of areca nut may result in severe tooth wear. The loss of enamel exposes the underlying dentine which, as it is softer than enamel, wears away at an increased rate. The exposure of dentine may also result in dentinal sensitivity. Areca nut contains a number of psychoactive alkaloids, one of which is arecoline, and affects the parasympathetic nervous system in intolerant users, inducing salivation and sweating. Areca-nut chewing has been shown to cause a significant elevation in plasma concentration of adrenaline and non adrenaline. Areca nut is one of the most widely used psychoactive substances with several hundred million users worldwide, predominantly in southern Asia.

Medicinal

The nuts, husks, young shoots, buds, leaves, and roots are used in various medicinal preparations.

Betel nut, taken internally, is a powerful stimulus to intestinal peristalsis. The Indian pan (pronounced pon) is a common after-dinner treat, acting against post-meal lethargy and as a digestive.

Fallen fronds, bracts, inflorescences could be used for **fuel;** culled trees could be used as firewood.

BELIEFS

The whole *inflorescences are used in religious rituals* and are displayed on the front of vehicles during pilgrimages to bring good luck. The trunks are used to construct crematory and temporary ceremonial structures in several Asian countries

Betel nuts are also used as an 'offering' in Hinduism. The practice of offering 'pan' by grooms to brides prevails as a social custom. The betel and areca nut are praised as an ideal combination and symbolic of the ideal married couple bound together in love. *Traditionally both parents exchange "Tambulam" (betel leaves and nuts)* for expressing the acceptance of giving/taking of the bride in marriage. Exchanging or offering of betel leaves and areca nuts (among other things) is considered auspicious. In a marriage, before the 'first night', the 'sesha homam' is performed late evening after the social event **'nalangu'**. *The bride's brother offers* **"Tambulam"** ('the NUT only makes the tambulam complete) to the groom. This is perhaps the first betel to the groom, for *bachelors are not supposed to taste 'tambulam'.*

VETTRILAI

Among the garden crops, VETTRILAI-betel leaf cultivation is considered to be important for it is a *money-crop*. In Kerala it is called 'vettrila', in Kannada 'viledele', in Telugu 'tamal pakku' and 'pan' in the north.

There are references to this unique crop in our epics - the Ramayana and the Mahabharatha; and in the Yajurveda.

Even today, Brahmins in Tanjavur, Kumbakonam and other parts around these towns carry a *box made of copper that contains betel leaves, areca nuts and lime* (Chunnambu). Some carry 'tobacco' in addition to these items and chew them often - as and when they feel like - as they are addicted. The rich Brahmins - then the landlords, used silver boxes instead of the common copper boxes and having them in their possession was considered a prestige.

As arecanut is grown *abundantly several parts of Kerala,* several persons belonging to the Brahmin community use 'murukkan' -a combination of betel leaf, nut and chunnambu.

In fact, this edible leaf has achieved an esteemed position in the human society right from the dawn of civilization. It is *considered sacred* in our country by the major communities of India. Leaves are traditionally used for chewing in their natural raw condition along with many other

ingredients like sliced areca nut, slaked lime (chunnambu).

It is consumed as *'tambula'* after food especially at functions like marriage and the like where heavy food must have been consumed. It is a good digestive item and has medicinal properties too. Hence is considered as a herbal plant.

Occasions like marriage and after any auspicious event, betel leaves and betel nuts are offered to every visitor - be it male or female, although *widows* do not enjoy this privilege. Betel leaf possesses medicinal and nutritive values. It is traditionally known to be useful for the treatment of various diseases like bad breath, boils and abscesses, conjunctivitis, constipation, headache, itches, ringworm, swelling of gum, rheumatism, cuts, injuries etc. as folk medicine while the root is known for its female contraceptive effects. Betel leaves are used with coriander, aniseed, clove, cardamom, sweetener, coconut scrapings, ashes of diamond, pearl, gold and silver (Ayurvedic preparations), jelly, pepper mint, flavoring agent, fruit pulp and so on.

Further, the leaves are very nutritive and contain substantial amount of vitamins and minerals. Six leaves with a little bit of slaked lime is said to be comparable to about 300 ml of cow milk particularly for the vitamin and mineral nutrition.

A strange belief (superstition) prevails among all the Brahmins that while asking for the inevitable 'chunnambu' to complete the 'tambulam', it is asked as *'moonavadhu'* (third item after the leaf and nut). Similarly, while giving the item to the consumer, chunnambu *should not be given into the hand.* It must be kept down. And for giving, either piece of paper or a leaf has to be used. Or else, the box in which it is kept for use has to be offered for the purpose and shall be returned to the owner after the use.

Many people *impose restrictions* for taking leaves from tree. Normally on any *Friday plant is not touched* for taking leaves. Leaves are not taken during *evening* hours. Ladies on *periods* do not touch the plant. It is generally observed many a time, if we violate such restrictions the plant gets dried up. No body is ready to take risks.

The plant normally yields for 5-10 years and gets dried up.

The leaves have to be used after thoroughly washing for pesticides and other webs underneath.

With all these factors attributed to this unique crop, it is called the 'green gold of India".

BANANA

A fruit that grows in all the seasons, Banana is liked by all, irrespective of age. It is digestive and does possess laxative power. Along with the 'tambula' banana also finds a place. Banana is offered to the deities as 'nivedhyam'.

Growth Habit: Bananas are fast-growing plants and are extremely decorative, ranking next to palm trees for the tropical feeling they lend to the landscape.

Bananas come in a variety of sizes and colors when ripe, including yellow, purple, and red. Bananas can be eaten raw, though some varieties are generally cooked first. Depending upon cultivar and ripeness, the flesh can vary in taste from starchy to sweet, and texture from firm to mushy. Unripe or green bananas and plantains are used as an ingredient in various dishes, such as in curries and stews, and are the staple starch of many tropical populations. Banana sap is extremely sticky and can be used as a practical adhesive. Sap can be obtained from the pseudo-stem, from the fruit peelings, or from the fruit flesh. Both the flavor and texture of "tree ripened" bananas is generally regarded as superior to any type of green-picked fruit

Location: Bananas require as much warmth as can be given them. Additional warmth can be given by planting next to a building. Planting next to cement or asphalt walks or driveways also helps. Wind protection is advisable, not for leaf protection as much as for protection of the plant after the banana stalk has appeared. During these last few months propping should be done to keep the plant from tipping or being blown over.

Soil: Bananas will grow in most soils, but to thrive, they should be planted in a rich, well-drained soil. The best possible location would be above an abandoned compost heap. The banana is not tolerant of salty soils.

Irrigation: The large leaves of bananas use a great deal of water. Regular deep watering is an absolute necessity during warm weather. Spread a thick layer of mulch on the soil to help conserve moisture and protect the shallow roots. Container grown plants should be closely watched to see that they do not dry out. An occasional deep watering to leach the soil is also helpful. To keep the plants that are above ground producing, protection against low temperatures is very important. Wrap trunk or cover with blanket if the plants are small and low temperatures are predicted.

As the banana plants are normally tall and fairly sturdy, they are often mistaken for trees, but their main or upright stem is actually a pseudo-stem. For some species this pseudostem can reach a height of 2-8 m, with leaves of up to 3.5 m in length. Each pseudostem can produce a bunch of green bananas, which when ripened often turn yellow or sometimes red. After bearing fruit, the pseudostem dies and is replaced by another.

Bananas are a valuable source of vitamin B6, vitamin C and Potassium.

Although the wild species have fruits with numerous large, hard seeds, virtually all culinary bananas have seedless fruits. Bananas are classified either as dessert bananas (meaning they are yellow and fully ripe when eaten) or as green cooking bananas.

The banana plant is a pseudostem that grows to 6 to 7.6 metres (20 to 25 ft) tall, growing from

a corm. Leaves are spirally arranged and may grow 2.7 metres (8.9 ft) long and 60 cm (2.0 ft) wide. The banana plant is the largest of all herbaceous flowering plants. The large leaves grow whole, but are easily torn by the wind, resulting in the familiar frond look.

Pests and Diseases: Bananas have few troublesome pests or diseases outside the tropics. Root rot from cold wet soil is by far the biggest killer of banana plants in our latitudes. Gophers topple them, and snails and earwigs will crawl up to where they can get continuous water, but these pests do not bother the plant.

Foliage: The large oblong or elliptic leaf blades are extensions of the sheaths of the pseudo-stem and are joined to them by fleshy, deeply grooved, short petioles. The leaves unfurl, as the plant grows, at the rate of one per week in warm weather, and extend upward and outward, becoming as much as 9 feet long and 2 feet wide. They may be entirely green, green with maroon splotches, or green on the upper side and red purple beneath. The leaf veins run from the mid-rib straight to the outer edge of the leaf. Even when the wind shreds the leaf, the veins are still able to function. Approximately 44 leaves will appear before the inflorescence. The leaves of the banana plant are large, flexible, and waterproof. They are used in many ways, including as umbrellas and to wrap food for cooking or storage. Banana leaves are also used to serve food in India and other Asian countries. Banana leaves are often used as ecologically friendly disposable food containers or as "plates". Steamed with dishes it imparts a subtle sweet flavor. It is often also seen used as a wrapping for grilling food and as such it contains the juices and prevents the food from getting burned whilst at the same time giving off a subtle flavor.

Flowers: The banana inflorescence shooting out from the heart in the tip of the stem, is at first a large, long-oval, tapering, purple-clad bud. As it opens, the slim, nectar-rich, tubular, toothed, white flowers appear. They are clustered in whorled double rows along the floral stalk, each cluster covered by a thick, waxy, hood like bract, purple outside and deep red within. The flowers occupying the first 5 - 15 rows are female. As the rachis of the inflorescence continues to elongate, sterile flowers with abortive male and female parts appear, followed by normal staminate ones with abortive ovaries. The two latter flower types eventually drop in most edible bananas.

Fruit Harvest: Stalks of bananas are usually formed in the late summer and then winter over. In March they begin "plumping up" and may ripen in April. Occasionally, a stalk will form in early summer and ripen before cold weather appears. The fruit can be harvested by cutting the stalk when the bananas are plump but green. For tree-ripened fruit, cut one hand at a time as it ripens. Once harvested the stalk should be hung in a cool, shady place. Since ethylene helps initiate and stimulate ripening, and mature fruit gives off this gas in small amounts, ripening can be hastened by covering the bunch with a plastic bag. Plantains are starchy types that are cooked before eating.

Culinary usage

The flower of the banana plant (also known as banana blossom or banana heart) is used in Telugu, Tamil, Bengali, and Malayali cuisine, either served raw or steamed with dips or cooked in soups and curries. Banana flowers can be eaten in much the same way where one scrapes off the fleshy part of the petals and eats the whole of the heart.

The tender core of the banana plant's **trunk** is also used in Telugu, Bengali and Kerala cooking. The juice extract prepared from the tender core is used to treat kidney stones and high blood pressure.

Banana **fruits** fried with batter is a popular dessert. Banana fritters can be served with ice cream as well. Bananas are also eaten deep fried, baked in their skin in a split bamboo, or steamed in glutinous rice wrapped in a banana leaf. Bananas have also been used in the making of jam. Plantain bananas are used in various stews and curries or cooked, baked or mashed in much the same way as potatoes. Banana pancakes are popular amongst backpackers and other travellers. Banana chips are a snack produced from dehydrated or fried banana or plantain slices, which have a dark brown color and an intense banana taste. Unlike other fruits, it is difficult to extract juice from bananas because when compressed a banana simply turns to pulp.

COCONUT

The coconut palm is a versatile plant with a variety of uses. Every part of it is useful to mankind in one form or the other. It supplies food, drink and shelter and also raw materials for a number of industries. Coconut is frequently used in various ceremonies like wedding, dedication of buildings and sacrificial occasions. Manure dehusked nut possesses three distinct raw materials i.e., wet meat or kernel(50%), water(17%) and shell (33%) by weight approximately.

The Kernel or endosperm of the matured coconut is an important food in all the coconut growing countries. Apart from being used for culinary purposes, the milk or cream obtained by squeezing the grated kernel goes into preparations of commercial importance.

Coconut water of tender coconuts (seven months old) makes a popular refreshing drink. The tender coconut water is recommended in cases of gastroenteritis, diarrhoea and vomiting against dehydration. It is also urinary antiseptic and eliminates poisons through kidneys in case of mineral poisoning. It has a caloric value of 17.4 per 100 gm of water. By consuming tender coconut before eating food, it is believed that increases the appetite of the consumer.

Coconut shell as it is used for antiques, i.e., preparation of various attractive articles. It is also used for making activated charcoal. The shell flour of 300 mesh made of coconut shell has a variety of uses in the organic industries.

Apart from the Kernel, coconut water and shell, the trunk of mature palm is used for houses

in coconut growing areas and woven into baskets.

Climate: The coconut palm is essentially a tropical crop which grows best in warm humid climate. It does not tolerate extremes of temperature and fails to come up well in places where long dry spell and severe cold conditions prevail. In well-drained soil, a high precipitation of 2000 to 3000 mm can be of better advantage. If the precipitations are comparatively well distributed, even a low rainfall of 1000 mm is sufficient for commercial yields.

Season: Planting can be done June-July in upland areas and October-November in low lying and heavy rainfall areas.

Soil: Coastal sandy, loam and alluvial soils of Godavari delta are most suitable. Coconut can also be grown in laterite soils without hard pan up to a depth of 2 meters and red sandyloam soils with a pH ranging from 5.2 to 8.0

Coconut in India has a sacred value. It is offered as 'nivedhyam' after poojas. People vow to make such offerings especially to Lord Ganesha. Elephants are fond of this nut and sometimes their heads are used for break opening of coconuts, if offered. Full coconut as plucked from tree is also offered to elephants as they use their trunks to peel them off.

Each tender coconut contains:

Water	95.5%
Protein	0.1%
Fat	0.1%
Mineral matter	0.4%
Carbohydrates	4.0%
Calcium	0.02%
Phosphorus	0.01%
Iron	0.05% mg/100g

CURRY LEAF

CURRY LEAF tree is a small deciduous tree. Most Indian cuisine cannot do without the subtle flavoring of this highly aromatic leafy spice.

Normally the plants go to above 10'. It can be grown in gardens even with out using manure. When the plants are about 5' we can take bottom leaves. The cultivation of plant keeps away snakes by its smell. Though seeds are coming in Curry leaves plant, most propagation is by stem. Sometimes automatic growing of curry plants in our garden may be due to seeds distributed by birds

Curry leaves are extensively used in South India to provide a flavoring for curries, vegetable

soups (rasam), pickles, butter milk preparations, chutneys and curry powder blends and nowadays the main applications are thin lentil or vegetable curries and stuffing for Samosas.

The use of curry leaves as flavoring for vegetables is described in early Tamil literature dating back to the 1st to 4th centuries AD. Its use is also mentioned a few centuries later in Kannada literature.

The word 'curry' originates from the Tamil 'kari' for spiced sauces. An alternative name for curry leaf throughout India is kari-pattha. Kerala and Tamilnadu it is called as Kariveppila.

Their formation somewhat resemble the leaves of the Neem tree; therefore they are also referred to as Kari Bevu, translated to Black Neem, in the Kannada language and Karivepaku in Telugu again translating to the same meaning. In Tamil and Malayalam it is known as Karuveppilai, ilai-meaning leaves. Other names include Kari Patta (Hindi)

Curry leaf grows profusely throughout mainland. Soil is one of the most important factors in successful landscaping and gardening. Sand or clay soils can be improved with applications of organic matter (compost, peat moss, or dried manure), during the spring. Because of their soft texture, they are not always removed before serving. Its leaves are highly aromatic and are used as herb.

Sarcastically persons are addressed as "kariveppila "in Tamil and Malayalam in case they are thrown away after *extracting for the users best advantage and finally discarding* with least regards to their contributions.

೧೯. ದಕ್ಷಿಣದ ಕೇಂದ್ರಗಳು

(ಪ್ರಕೃತ ಕ್ಷೇತ್ರಕಾರ್ಯ ವರದಿ)

(ಕ್ಷೇತ್ರಕಾರ್ಯ ಏಪ್ರಿಲ್, ೨೦೦೩)

-ಡಾ||ಬಿ.ಎಸ್.ಪ್ರಣತಾರ್ತಿಹರನ್

(ಶ್ರೀ ಎನ್. ಕೇಶವಮೂರ್ತಿ ಮತ್ತು ಶ್ರೀ ವಿಜಯ್ ಅಂಗಡಿ ಅವರು ಕರ್ನಾಟಕದ ಸಂಕೇತಿ ನೆಲೆಗಳಲ್ಲಿ ಕ್ಷೇತ್ರಕಾರ್ಯ ಮಾಡಿ ಸಂಕೇತಿ ಕೃಷಿಯ ಬಗೆಗಿನ ತಮ್ಮ ಸಂಶೋಧನ ವರದಿಯನ್ನು ಸಿದ್ಧಪಡಿಸಿದರು. ತಮಿಳುನಾಡು ಮತ್ತು ಕೇರಳದ ಸಂಕೇತಿಗಳು ವ್ಯವಸಾಯವನ್ನು ರೂಢಿಸಿಕೊಂಡಿದ್ದ ರೀತಿಯ ಬಗೆಗೆ ಈ ಗ್ರಂಥಕ್ಕಾಗಿ ಡಾ|| ಬಿ.ಎಸ್. ಪ್ರಣತಾರ್ತಿಹರನ್ ತಮ್ಮ ಕ್ಷೇತ್ರಕಾರ್ಯ ನಡೆಸಿದರು. ಆ ಸಂಬಂಧದ ಸಂಶೋಧನ ವರದಿ ಇಲ್ಲಿದೆ. ತಮಿಳುನಾಡು ಮತ್ತು ಕೇರಳದಲ್ಲಿ ಈಗ ಸಂಕೇತಿ ಕೃಷಿಯು ಕಣ್ಮರೆಯಾಗುವ ಕೊನೆಯ ಹಂತದಲ್ಲಿದೆ. ಅಂಥ ನಿರಾಶಾದಾಯಕ ಸ್ಥಿತಿಯ ನಡುವೆಯೇ ಹೆಣಗಾಡಿ, ಒಟ್ಟು ಜೀವನದ ಚಿತ್ರವನ್ನು ಕಟ್ಟಿ, ಅದರ ಪ್ರಭೆಯಲ್ಲಿಯೇ ಅವರ ಕೃಷಿಯನಂಟನ್ನು ಹಿಡಿದಿಡುವ ಸಾಹಸವನ್ನು ಲೇಖಕರು ಈ ಭಾಗದಲ್ಲಿ ಮಾಡಿದ್ದಾರೆ. ಕರ್ನಾಟಕದ ಸಂಕೇತಿಗಳು, ತಮ್ಮ ಕೇರಳದ ಪೂರ್ವನೆಲೆಗಳ ತೋಟಗಾರಿಕೆಯನ್ನು ಎಷ್ಟು ಸುಸಜ್ಜಿತವಾಗಿ ಸುಧಾರಿಸಿ ಇಲ್ಲಿಗೆ ಒಂದು ಹೊಸ ತೋಟಗಾರಿಕೆ ಸಂಸ್ಕೃತಿಯನ್ನು ಕಾಣಿಕೆಯಾಗಿ ನೀಡಿದ್ದಾರೆ ಎಂಬುದು ಅವರ ಈ ಭಾಗದ ಲೇಖನಗಳ ತಾರ್ಕಿಕ ಶೃಂಗರವಾಗಿದೆ.)

ತಮಿಳುನಾಡು ಮತ್ತು ಕೇರಳಕ್ಕೆ ಮಾಡಿದ ಮೊದಲ ಅಧ್ಯಯನ ಪ್ರವಾಸಕ್ಕೂ ೨೦೦೩ನೆಯ ಇಸವಿ ಏಪ್ರಿಲ್ ಕೊನೆಯ ವಾರದಲ್ಲಿ ಮಾಡಿದ ಅಧ್ಯಯನ-ಪ್ರವಾಸಕ್ಕೂ ನಡುವೆ ೧೨ ವರ್ಷಗಳು ಸಂದು ಹೋಗಿವೆ. ದಕ್ಷಿಣದ ಸಂಕೇತಿಗಳು ವಿಪರೀತ ಧಾವಂತದಿಂದ ಈ ಅವಧಿಯಲ್ಲಿ ಹಳ್ಳಿಗಳನ್ನು ತೊರೆದಿದ್ದಾರೆ. ಈಗ *ಬೆರಳೆಣಿಕೆಯ ಹಳ್ಳಿಗಳಲ್ಲಿ* ಮಾತ್ರ ಸಂಕೇತಿಗಳು ಉಳಿದುಕೊಂಡಿದ್ದಾರೆ. ಪ್ರತಿ ಹಳ್ಳಿಯಲ್ಲಿ ಈಗ ಇರುವ *ಸಂಕೇತಿ ಮನೆಗಳ ಸಂಖ್ಯೆ ೨-೩ಕ್ಕೆ ಇಳಿದಿದೆ.* ಈಗಲೂ ೧೦-೧೨ ಸಂಕೇತಿ ಮನೆಗಳಿರುವ ಶೆಂಕೋಟ್ಟೈ ಒಂದು ತಾಲ್ಲೂಕು ಕೇಂದ್ರ. ಅದನ್ನು ಹಳ್ಳಿಗಳ ಗುಂಪಿನಲ್ಲಿ ಪರಿಗಣಿಸುವುದಾದರೆ ಅದೇ ಈಗ ಉಳಿದಿರುವ ಅತಿದೊಡ್ಡ ಗ್ರಾಮಾಂತರ ಸಂಕೇತಿ ಕೇಂದ್ರ, ಅದನ್ನು ಬಿಟ್ಟರೆ ೧೦ ಮನೆ ಇರುವ ಎರಚ್ಚಕೊಳಂ.

ಸಂಕೇತಿಗಳ ಹಳ್ಳಿಯ ಜೀವನವನ್ನೂ ಕೃಷಿಗೆ ಸಂಬಂಧಿಸಿದ ದುಡಿಮೆಯ ಸ್ವರೂಪವನ್ನೂ ಅಧ್ಯಯನ ಮಾಡಲೆಂದೇ ಮಾಡಿದ ನಾಲ್ಕನೆಯ ಪ್ರವಾಸ ಇದು. ಈ ಪ್ರವಾಸದ ಸಂದರ್ಭದಲ್ಲಿ ದೊರೆತ ಮಾಹಿತಿಯನ್ನು ಇಲ್ಲಿ ಕೊಟ್ಟಿದೆ. ಈ ಮಾಹಿತಿಯು ಕೃಷಿಯ ಬಗೆಗೆ ಹೆಚ್ಚಿನ ವಿವರವನ್ನೇನೂ ಕೊಡುವುದಿಲ್ಲ. ಆದರೆ ಒಟ್ಟಾರೆಯಾಗಿ ಅಲ್ಲಿನ *ಗ್ರಾಮೀಣ ಬದುಕಿನ ಬಗೆಗೆ* ಒಂದು ಬೆಳಕಿಂಡಿಯಾಗಬಹುದು.

ಅ) ಎಲತ್ತೂರು

(ಸ್ವತಂತ್ರವಾಗಿ ವ್ಯವಸಾಯ ಮಾಡುತ್ತಿದ್ದವರು ಮತ್ತು ಉಳುಮೆ ಮಾಡುತ್ತಿದ್ದ ಸಂಕೇತಿಗಳ ಉಲ್ಲೇಖ ಗಮನಾರ್ಹವಾದುದು.)

ಈ ಪ್ರವಾಸದಲ್ಲಿ ಎಲತ್ತೂರಿಗೇ ಮೊದಲು ಹೋದುದಕ್ಕೆ ವಿಶೇಷವಾದ ಕಾರಣವೇನಿಲ್ಲ. ಆದರೆ ಶೆಂಕೋಟ್ಟೈ ಕೇಂದ್ರಿತ ಹಳ್ಳಿಗಳನ್ನೇ ಮೊದಲು ಸಂದರ್ಶಿಸಿದುದಕ್ಕೆ ಒಂದು ಮುಖ್ಯ ಕಾರಣ ನೀಡ ಬಹುದು. ಕಳೆದ ಬಾರಿ, ಡಾ||ಬಿ.ವಿ.ಸುಧಾಮಣಿ ಅವರು ಸಂಕೇತಿಗಳ ಕೃಷಿಜೀವನಕ್ಕೆ ಸಂಬಂಧಿಸಿ ದಂತೆಯೇ ಇಂಗ್ಲೆಂಡಿನಲ್ಲಿ ಮಂಡಿಸಿದ ಪ್ರಬಂಧದ ಸಂಬಂಧದಲ್ಲಿ ಸಂದರ್ಶನಗಳನ್ನು ನಡೆಸಲಾಗಿತ್ತು. ಅದು ತಿರುವನಂತಪುರಂ ನಗರದಿಂದ ಪ್ರಾರಂಭ ವಾಗಿತ್ತು. ನೇರವಾಗಿ ಸಂಕೇತಿಗಳು ವ್ಯವಸಾಯದಲ್ಲಿ ತೊಡಗಿಕೊಂಡ ಹಳ್ಳಿಗಳ ಬಗೆಗೆ ಪರೋಕ್ಷವಾಗಿ ಮಾಹಿತಿ ಸಂಗ್ರಹಿಸಲಾಗಿತ್ತು. ಹಳ್ಳಿಗಳನ್ನು ತೊರೆದ ಹಿರಿಯರು ಈಗ ನಗರಗಳಲ್ಲೇ ಇರುವುದರಿಂದ ಅದೂ ಮುಖ್ಯವಾದುದೇ. ಈ ಬಾರಿ ತೆಂಕಾಸಿಯಲ್ಲೇ ವಸತಿ ಮಾಡಿದ್ದೆ. ಇನ್ನೂ *ಅಳಿದುಳಿದಿರುವ ವ್ಯವಸಾಯದ ನೇರ ಪರಿಚಯದ* ಮೂಲಕ ವಿಷಯವನ್ನು ಪ್ರವೇಶಿಸಿದೆ. ಹಳ್ಳಿಗಳ ಚಿತ್ರಣವೂ ಅದರ ಭಾಗವಾಗಿತ್ತು.



ಎಲತ್ತೂರು: ದನಗಳ ಕೊಟ್ಟಿಗೆಯ ಹೊರನೋಟ

ಎಲತ್ತೂರನ್ನು ೧೨ ವರ್ಷಗಳ ಹಿಂದೆ ಲಕ್ಷ್ಮಣನ್ ಜೊತೆಯಲ್ಲಿ ಪ್ರವೇಶಿಸಿದ್ದು ಕೆರೆಯ ಅಂಗಳದ ಮೂಲಕ. ಆಗಲೂ ಬೇಸಗೆಯಲ್ಲೇ ಹೋಗಿದ್ದೆವು. ಆದರೆ ಕೆರೆಯಲ್ಲಿ ನೀರಿತ್ತು. ಒಂದು ಮಗ್ಗುಲಿನ ನೀರು ಮಾತ್ರ ಇಳಿದುಹೋಗಿತ್ತು. ಒಣಗಿದ ಆ ಪಾತ್ರದಲ್ಲಿ ಕಾಣುತ್ತಿದ್ದ ಕಾಲುನಡಗೆಯ ಜಾಡನ್ನು ಅನುಸರಿಸಿ ನಡೆದು ಹೋಗಿದ್ದೆವು. ಹಾಗೆ ಹೋದಾಗ ಕೆರೆಯ ಕಡೆಯಿಂದ ಸಿಕ್ಕಿದ ಮೊದಲನೆಯ ಮನೆಯೇ ಮಹದೇವನ್ ಅವರದು. *ಅದು ವ್ಯವಸಾಯ ಪರಂಪರೆಯ ಕುರುಹು ಬಹಳವಾಗಿಯೇ ಇದ್ದ* ಕಾಲ. ಈಗ ಕೆರೆ ಪೂರ್ತಿ ಒಣಗಿದೆ. ಮಹದೇವನ್ ತಿರುನೆಲ್‌ವೇಲಿಯ ಸರಸ್ವತೀ (ನಾಚಾರಮ್ಮ ನವರ) ದೇವಾಲಯದ ಉಸ್ತುವಾರಿಗಾಗಿ ಅಲ್ಲೇ ನೆಲೆಸಿದ್ದಾರೆ. ಅವರ ಸಂಸಾರವೂ ಅವರ ಜತೆಗೇ ನಡೆದಿದೆ. ಅವರಿಗೆ ಮಕ್ಕಳಿಲ್ಲ. ಎಲತ್ತೂರಿನ ಅವರ ಮನೆಗೆ ಈಗ ಬೀಗ ಹಾಕಿದೆ.

ಲಕ್ಷ್ಮಣನ್‌ಗೆ ಆ ಊರಿನ ಪರಿಚಯವಿತ್ತು. ಕೀಳ್‌ಗ್ರಾಮಂ ವಡಮರು ವಾಸಿಸುತ್ತಿದ್ದ ಅಗ್ರಹಾರ. ಮೇಲ್‌ಗ್ರಾಮಂ ಸಂಕೇತಿಗಳ ಅಗ್ರಹಾರ. ಲಕ್ಷ್ಮಣನ್ ನೇರವಾಗಿ ಮೇಲ್‌ಗ್ರಾಮಂಗೇ ನನ್ನನ್ನು ಕರೆದುಕೊಂಡು ಹೋಗಿದ್ದರು. ಆದರೆ ಈಗ ಬಂದಿದ್ದವರು ಫೋಟೋ ಸ್ಟುಡಿಯೋದ ಸುಬ್ಬಯ್ಯ. ಕಾರಿನಲ್ಲಿ ಹೋಗಿದ್ದೆವು. ಅವರು ಮೊದಲು ಅವರಿಗೆ ಪರಿಚಯವಿದ್ದ ಕೀಳ್‌ಗ್ರಾಮಂಗೆ ನಮ್ಮನ್ನು ಕರೆದೊಯ್ದರು. ಹೇಗೂ ಕಾರಿತ್ತು. ಮೇಲ್‌ಗ್ರಾಮಂನ ಬ್ರಾಹ್ಮಣೇತರರ ಬೀದಿಯ ಮೂಲಕ ಬಳಸಿಕೊಂಡು ಸಂಕೇತಿ ಅಗ್ರಹಾರವನ್ನು ಪ್ರವೇಶಿಸಿದೆವು. ಮಹದೇವನ್ ಅವರ ಮನೆಯ ಪಕ್ಕದಲ್ಲೇ ಇದ್ದ ವಿ. ನಾರಾಯಣ ಅವರ ಮನೆಗೆ ಹೋದೆವು.

ನಾವು ನೋಡಿದ ದಕ್ಷಿಣದ ಹಳ್ಳಿಗಳ ಮನೆಗಳೆಲ್ಲ *ಮತ್ತೂರಿನ ಮನೆಗಳ ಸಂರಚನೆಯವೇ* ಆಗಿದ್ದವು. ಆದರೆ ಒಪ್ಪ ಓರಣವಿಲ್ಲದ ಮನೆಯ ಅಣಿಯನ್ನು ಹೇಳಲು ಎಲತ್ತೂರು ಮತ್ತು ಎರಚ್ಚಕೊಳಂನ ಕೆಲವು ಮನೆಗಳನ್ನು ಉದಾಹರಿಸಬಹುದು. *ಈಗ ವ್ಯವಸಾಯದ ಸೋಂಕು ತೀರಾ ಇಳಿಮುಖವಾಗಿದೆ.* ಆದರೂ ಹಲವು ಮನೆಗಳ ಓರಣ 'ಅಂದವಿಲ್ಲ, ಅಡಕವಿಲ್ಲ' ಎಂಬ ಹಾಗೆ ಇದೆ. ಉಳಿದಂತೆ ಎಲ್ಲವೂ ಚೊಕ್ಕಟವಾದ, ಅಚ್ಚುಕಟ್ಟಾದ ಓರಣದ ಮನೆಗಳೇ ಆಗಿವೆ ಎಂಬುದನ್ನು ಇಲ್ಲಿ ಹೇಳಬೇಕು.



ಎಲತ್ತೂರಿನ ಮೇಲ್‌ಗ್ರಾಮಂ : 'ಅಭಿನವ ಕಾಳಿದಾಸ' ರಾಮಸ್ವಾಮಿಶಾಸ್ತ್ರಿಗಳು ವಾಸಿಸಿದ ಸಂಕೇತಿಬೀದಿ

ನಾವು ಪ್ರವೇಶಿಸಿದ ಈ ಮೊದಲ ಮನೆ ಅಂತಿಂಥದಾಗಿರಲಿಲ್ಲ. ನಾನು *'ಸಂಕೇತಿ ಜಾತಿ'* ಎಂಬ ಯಾವ ಪುಸ್ತಕಕ್ಕಾಗಿ ಹುಡುಕುತ್ತಿದ್ದೆನೋ ಅದರ ಕರ್ತೃ ಇ.ವಿ. ನಾರಾಯಣ ಭಾಗವತರ್



ಶ್ರೀಧರನ್ ಅವರ ಮನೆಯ ಹೊರನೋಟ: ಎಲತ್ತೂರು

ಬದುಕಿ ಬಾಳಿದ್ದ ಮನೆ ಅದಾಗಿತ್ತು. ಆ ಪುಸ್ತಕ ಆ ಮನೆಯಲ್ಲಿ ಸಿಕ್ಕುವುದಿರಲಿ, ಅದರ ಬಗೆಗೆ ಆ ಮನೆಯ ಯಾರೂ ಕೇಳಿಯೇ ಇರಲಿಲ್ಲ. ಇ.ವಿ. ಅವರು ಬರೆದ ಇತರ ಎಲ್ಲ ಪುಸ್ತಕಗಳ ಮಾಹಿತಿಯೂ ಅವರ ಬಳಿ ಇತ್ತು, ಆದರೆ 'ಸಂಕೇತಿ ಜಾತಿ' ಎಂಬ ಪುಸ್ತಕದ ಬಗೆಗೆ ಮಾತ್ರ ಮಾಹಿತಿ ಇರಲಿಲ್ಲ. ಇದರಿಂದ ಒಂದು ಕಡೆ ತೀವ್ರ ನಿರಾಸೆ ಯಾದರೆ ಇನ್ನೊಂದು ಕಡೆ ಆ ಪುಸ್ತಕದ ಅಸ್ತಿತ್ವದ ಬಗೆಗೇ ಅನುಮಾನ ಬಂತು. ಇ.ವಿ. ಅವರ ಸೊಗಸಾದ ಫೋಟೊ ಅವರ ಮನೆಯಲ್ಲಿತ್ತು. ಅದರ ಛಾಯಾಚಿತ್ರ ತೆಗೆದುಕೊಂಡೆವು.


ಹರಿತಸ ಗೋತ್ರದ ಇ.ವಿ. ನಾರಾಯಣ ಭಾಗವತರ್ ಅವರ ಮಗ ರಾಮಚಂದ್ರ ಭಾಗವತರೂ ದೊಡ್ಡ ವಿದ್ವಾಂಸರು. ಎನ್. ಗೋಮತಿ ಇ.ವಿ. ಅವರ ಪತ್ನಿ.

ಇ.ವಿ. ಅವರ ಹಿರಿಮೆಯ ಬಗೆಗೂ, ಅವರು ಬರೆದ ಪುಸ್ತಕಗಳು ಮದರಾಸಿನಲ್ಲಿರುವ ಅವರ ವಂಶಜರ ಮನೆಯಲ್ಲಿ ಸಿಕ್ಕುವ ಬಗೆಗೂ, ವಿ. ನಾರಾಯಣ ಹೇಳುತ್ತಿದ್ದರು. ಆಗಲೇ ಅವರು ರಾಮಸ್ವಾಮಿ ಶಾಸ್ತ್ರಿ ಎಂಬ ಇನ್ನೊಬ್ಬ ಖ್ಯಾತ ವಿದ್ವಾಂಸರ ಬಗೆಗೂ ಹೇಳಿದರು. ಅವರೂ ಎಲತ್ತೂರಿನವರೇ. ತಿರುವಾಂಕೂರು ಸಂಸ್ಥಾನದ ಆಸ್ಥಾನ ಕವಿ. ಸಂಸ್ಕೃತ ವಿದ್ವಾಂಸರಾಗಿದ್ದ ಅವರು ಮಹಾರಾಜ ಆಯಿಲ್ಯಂ ತಿರುನಾಳ್ ಹಾಗೂ ವಿಶಾಖಂ ತಿರುನಾಳ್ ಅವರ ಆಶ್ರಯದಲ್ಲಿದ್ದರು. ಗಮಕ ಸಂವರ್ಧಿನಿ ಅಂಬಾಳ್ ಕುರಿತು ಶ್ಲೋಕಗಳನ್ನು ಕಟ್ಟಿದ ಖ್ಯಾತಿ ಅವರದಾಗಿತ್ತು. ಅವರಿಗೆ 'ಅಭಿನವ ಕಾಳಿದಾಸ' ಎಂಬ ಬಿರುದು ಇದ್ದ ಬಗೆಗೂ ಹೇಳಿದರು. ಅವರೂ ಹರಿತಸ ಗೋತ್ರದವರೇ. ಎದುರು ಮನೆಯಲ್ಲೇ ಅವರು ಹಿಂದೆ ವಾಸಿಸುತ್ತಿದ್ದರು. ಆದರೆ ಈಗ ಅದು ಅನ್ಯರೊಬ್ಬರಿಗೆ ಸೇರಿದೆ. ಆತ ಆ ಮನೆಯನ್ನು ಒಡೆದು ಹೊಸರೀತಿ ಯಲ್ಲಿ ಕಟ್ಟಿಕೊಂಡಿದ್ದಾರೆ.




ಮನೆಗಳ ಮಹಡಿಗಳು:ಎಲತ್ತೂರು

ನಾವು ಈಗ ಮಾತನಾಡುತ್ತಿದ್ದ ವಿ. ನಾರಾಯಣ ಅವರು ಕೌಶಿಕ ಗೋತ್ರದವರು; ಯಜುರ್ವೇದ ಮತ್ತು ಆಪಸ್ತಂಬ ಸೂತ್ರವನ್ನು ಅನುಸರಿಸುವವರು.



ವಿದ್ವಾಂಸ ಇ.ವಿ.ನಾರಾಯಣ ಭಾಗವತರ್: ಎಲತ್ತೂರು



ಮನೆಗಳ ಹಿನ್ನೆಲೆಯಲ್ಲಿ ತೋಟ ಮತ್ತು ಬೆಟ್ಟಸಾಲು:ಎಲತ್ತೂರು

ಯಜ್ಞನಾರಾಯಣ ಅಯ್ಯರ್ (ಮೊರಪ್ಪನಾಡು) + ಸುಬ್ಬಲಕ್ಷ್ಮಿ
(ರಾಮಸುಬ್ರಹ್ಮಣ್ಯ ಅಯ್ಯರ್)

ರಂಗಸ್ವಾಮಿ ಅಯ್ಯರ್ + ಲಕ್ಷ್ಮಿ

ವರದ ಅಯ್ಯರ್ + ಗೋಮತಿ

- ರಂಗಸ್ವಾಮಿ ಅಯ್ಯರ್
- ವಿ.ಕೃಷ್ಣಅಯ್ಯರ್ (ಎರಚ್ಚಕೊಳಂ)
- ವಿ.ನಾರಾಯಣ ಅಯ್ಯರ್ +ಗೋಮತಿ ಎಕ್ಸಿಕ್ಯುಟಿವ್ ಆಫೀಸರ್ ಟೌನ್ ಪಂಚಾಯತ್(ನಿವೃತ್ತ) (ಸಂತಾನವಿಲ್ಲ)
- ವಿ.ಗೋಮತಿ (ಮದರಾಸು)
- ವಿ.ಶಂಕರನ್ ಪ್ರಾಥಮಿಕ ಶಾಲಾ ಶಿಕ್ಷಕ (ನಿವೃತ್ತ) (ಶಾಂಬವರ್‌ವಡಹರೈ)
- ಸೀತಾರಾಮ (ಮದರಾಸು) 'ಇಮೇಜ್' ಆರ್ಟ್ಸ್‌ನ ನೌಕರ(ನಿವೃತ್ತ)



ವಿ.ನಾರಾಯಣ ಅಯ್ಯರ್ ಮತ್ತು ಅವರ ಪತ್ನಿ ಗೋಮತಿ: ಸಂದರ್ಶನ:ಬಿ.ಎಸ್.ಪ್ರಣತಾರ್ತಿಹರನ್:ಎಲತ್ತೂರು

ಕೇವಲ ಆರು ದಶಕಗಳ ಹಿಂದೆ ಮೇಲ್‌ಗ್ರಾಮಂ ಒಂದರಲ್ಲೇ *೫೦ ಸಂಕೇತಿ ಕುಟುಂಬಗಳಿದ್ದವು.* 'ಅಭಿನವ ಕಾಳಿದಾಸ' ರಾಮಸ್ವಾಮಿಶಾಸ್ತ್ರಿಗಳ ಬಗೆಗೆ ತಿರುವಾಂಕೂರಿನ ವಿಶಾಖಂ ತಿರುನಾಳ್ ಮಹಾರಾಜರಿಗೆ ಅಪಾರ ಗೌರವವಿತ್ತು. ಅಲ್ಲಿನ ತೆಪ್ಪಕೊಳಂ ಮತ್ತು ದೇವಸ್ಥಾನ, ರಾಮಸ್ವಾಮಿ ಶಾಸ್ತ್ರಿಗಳಿಗಾಗಿ ಮಹಾರಾಜರು ಕಟ್ಟಿಸಿಕೊಟ್ಟುದು. ಇದು, ರಾಜಧಾನಿ ಒಂದನ್ನು ಬಿಟ್ಟರೆ ಉಳಿದೆಲ್ಲವೂ ಗ್ರಾಮೀಣ ಪ್ರದೇಶಗಳೇ ಆಗಿರುತ್ತಿದ್ದ ಸ್ಥಿತಿಯನ್ನೂ ಸೂಚಿಸುತ್ತದೆ. *ಗ್ರಾಮದಲ್ಲಿ ವ್ಯವಸಾಯಕೇಂದ್ರಿತ ಬದುಕಿಗೆ ಅಂಟಿಕೊಂಡೇ, ಉಳಿದ ರಾಜಕಾರ್ಯಗಳಲ್ಲಿ ತೊಡಗಿಕೊಳ್ಳುತ್ತಿದ್ದ ಕರ್ನಾಟಕದ ಸಂಕೇತಿಗಳ ಇತಿಹಾಸಕ್ಕೆ ಇದು ಸಂವಾದಿಯಾಗಿದೆ.* ಅವರ ಮಗ ಇ.ಆರ್.ನಾರಾಯಣ್ ಮದರಾಸಿಗೆ ವಲಸೆ ಹೋದುದು ನಗರವಲಸೆಯ ಯುಗದ ಲಕ್ಷಣ. ಕಳೆದ ಮೂರು ದಶಕಗಳಲ್ಲಿ ಬೆಂಗಳೂರು, ಮದರಾಸು, ತಿರುವನಂತಪುರಂ, ತಿರುನೆಲ್‌ವೇಲಿಗೆ ಇಲ್ಲಿಂದ ವಲಸೆಗಳು ನಡೆದಿವೆ. ಈಗ ಎರಡು ಮನೆಗಳು ಮಾತ್ರ 'ಸಂಕೇತಿ' ಎಂದು ಕರೆಸಿಕೊಳ್ಳಲು ಉಳಿದುಕೊಂಡಿವೆ.


ಅರ್ಧ ಶತಮಾನದ ಹಿಂದೆ ಮೇಲ್‌ಗ್ರಾಮಂ ಸಂಕೇತಿಗಳಿಂದಲೇ ತುಂಬಿದ್ದಾಗ *ಎಲ್ಲರೂ ಭೂಮಿ ಕಾಣಿ ಹೊಂದಿದ್ದರು.* ಪೆರಿಯಕೊಳಂ ಅಚ್ಚುಕಟ್ಟಿನಲ್ಲಿ ಅವರ ಜಮೀನಿತ್ತು. ನೈನಾರ್ ಅಡವಿಯು ನೀರಿನ ದೊಡ್ಡ ಮೂಲವಾಗಿತ್ತು. ಹನುಮಾನ್ ನದಿ ತುಂಬಿರುತ್ತಿತ್ತು. *ಬತ್ತ*



ಗೋಮತಿ ಅವರ ಮನೆಯ ಬಡವೈಭವ: ಎಲತ್ತೂರು

ಅವರ ಮುಖ್ಯ ಬೆಳೆ. ಈರುಳ್ಳಿ ಉಪ ಮುಖ್ಯ ಬೆಳೆ. ಇತರ ತರಕಾರಿಗಳನ್ನೂ ಬೆಳೆಯುತ್ತಿದ್ದರು. *ತೆಂಗು, ಬಾಳೆಗಳು* ತೋಟದ ಬೆಳೆಗಳು. *ವೀಳೆ ಬೆಳೆಯುತ್ತಿರಲಿಲ್ಲ* (ಅದನ್ನು ಮೂಪನಾರ್‌ಗಳು ಮಾತ್ರ ಬೆಳೆಯುತ್ತಾರೆ. ಸಂಕೇತಿಗಳು ಬೆಳೆಯುವುದಿಲ್ಲ.) ನಾರಾಯಣ ಅಯ್ಯರ್ ಅವರಿಗೆ ಮೌಖಿಕ ಪರಂಪರೆಯಿಂದ ತಿಳಿದಂತೆ *೧೫೦ ವರ್ಷಗಳ ಹಿಂದೆ ಮೊರಪ್ಪನಾಡಿನಲ್ಲಿದ್ದ ಅವರ ಪೂರ್ವಿಕರು ಸ್ವತಃ ಉಳುಮೆ ಮಾಡಿ ಬೇಸಾಯ ಮಾಡುತ್ತಿದ್ದರು.* ಇತ್ತೀಚಿನದು ಕೂಲಿಗಳ ನೆರವಿನಿಂದ ಮಾಡುವ ವ್ಯವಸಾಯ. ಮೊರಪ್ಪನಾಡಿನ ಸಂಕೇತಿಗಳ ಜಮೀನು, ತೆರಿಗೆ ಕಟ್ಟಲಾರದೆಯೋ, ವಿವಾಹ ಮೊದಲಾದ ವೆಚ್ಚಕ್ಕಾಗಿಯೋ, ಕೈಬಿಟ್ಟುಹೋದಾಗ ಅವರೆಲ್ಲ ತಿರುವನಂತಪುರಕ್ಕೆ ವಲಸೆಹೋದ ಇತಿಹಾಸ ಅವರ ನೆನಪಿನಲ್ಲಿದೆ. "ತಿರುವನಂತಪುರಂನ ಶ್ರೀ ಪದ್ಮನಾಭಸ್ವಾಮಿಯವರ ದೇವಾಲಯದಲ್ಲಿ ಬಡವರಿಗೆ ಎರಡು ಸಲ ಊಟ ನೀಡುವ ಪದ್ಧತಿ ಇತ್ತು. ಹಾಗಾಗಿ ಮೊರಪ್ಪನಾಡಿನಲ್ಲಿ ದಿವಾಳಿಗಳಾದ ಸಂಕೇತಿಗಳು ಅಲ್ಲಿಗೆ ಹೋಗಿ ನೆಲೆಸಿದರು" ಎಂಬ ಅವರ ಮಾತಿನಿಂದ, ಈಗ ತಿರುವನಂತಪುರದಲ್ಲಿ ನೆಲೆಸಿರುವ ಅನೇಕ ಸಂಕೇತಿಗಳ ಪೂರ್ವಿಕರು ಎಂಥ ಹೀನಸ್ಥಿತಿಯಿಂದ ತಮ್ಮ ಬದುಕನ್ನು ಕಟ್ಟಿಕೊಂಡು ತಲೆ ಎತ್ತಿದರು ಎಂಬುದು ತಿಳಿಯುತ್ತದೆ. ತಿರುವನಂತಪುರಂನಿಂದ ಕೆಲವರು (೧೫೦ ವರ್ಷಗಳ ಹಿಂದೆ) ಎಲತ್ತೂರಿಗೆ ಬಂದು ತಮ್ಮ ಬದುಕು ಹುಡುಕಿಕೊಂಡರಂತೆ.

ಹಾಲಿಗಾಗಿ ಹಸುಗಳನ್ನೂ, ಗಾಡಿಗಾಗಿ ಎತ್ತನ್ನೂ, ಸಾಕುವ ಕ್ರಮ ಇತ್ತೀಚಿನವರೆಗೂ ಇತ್ತು. ಬೋರೆಗಳು ಹಾಳಾದವು ಎಂಬುದೊಂದೇ ಹಸುಗಳನ್ನು ಕಡಿಮೆ ಮಾಡುವುದಕ್ಕೆ ಇದ್ದ ಕಾರಣವಲ್ಲ. ನಗರವಲಸೆಗಳೊಂದಿಗೆ ಹಳ್ಳಿ-ನಗರಗಳ ನಡುವೆ ಹಂಚಿಹೋದ ಕುಟುಂಬಗಳು ನಿಯತವಾಗಿ ಹಳ್ಳಿಯಲ್ಲಿ ಉಳಿಯಲಾರದೆಯೂ ಕೊಟ್ಟಿಗೆಗಳನ್ನು ಖಾಲಿ ಮಾಡಿದವು. ವಿಭಕ್ತ ಕುಟುಂಬಗಳಾದುದು ಅದಕ್ಕಿದ್ದ ಮತ್ತೊಂದು ಕಾರಣ. ವಿ.ನಾರಾಯಣ ಅಯ್ಯರ್ ಕೂಡ ಒಂಟೆತ್ತಿನ ಗಾಡಿ ಇಟ್ಟಿದ್ದರು. ಶಾಲಾ ಮಕ್ಕಳನ್ನು ಶಾಲೆಗೆ ಒಯ್ಯಲೆಂದೇ ಅವರು ಆ ಗಾಡಿ ಇಟ್ಟಿದ್ದರು ಮತ್ತು ಅವರೇ ಗಾಡಿ ಹೊಡೆಯುತ್ತಿದ್ದರು.



ಮೇವಿಗೆ ಹೊರಟ ಗೋವೃಂದ:ಎಲತ್ತೂರು

ಮೊರಪ್ಪನಾಡು ಈಗ ತೂತ್ತುಕುಡಿ ಜಿಲ್ಲೆಗೆ ಸೇರಿದೆ. ಈಗ ಅಲ್ಲಿ ಸಂಕೇತಿಗಳು ಉಳಿದಿಲ್ಲ. ಆದರೆ ಅವರು ಆಗ ಪೂಜಿಸುತ್ತಿದ್ದ ಪ್ರಖ್ಯಾತ ಶಿವಾಲಯ ಅಲ್ಲಿದೆ. ಆದರೆ ಅವರೆಲ್ಲರ **ಕುಲದೈವ ತರವೈಶಾಸ್ತಾ** ಎಂಬುದನ್ನು ಗಮನಿಸಬೇಕು. ತರವೈ ಒಂದು ಅಗ್ರಹಾರವಾಗಿತ್ತು.

ನಾರಾಯಣ ಅಯ್ಯರ್ ಅವರ ಮನೆಯಲ್ಲಿ ಸಿಕ್ಕಿದ ಇನ್ನೊಂದು ಅಪರೂಪದ ಛಾಯಾಚಿತ್ರ



ಇ.ವಿ.ನಾರಾಯಣ ಭಾಗವತರ ಗುರು ರಾಜಗೋಪಾಲ ಅಯ್ಯರ್ : ಪೆಚಿಪರಿ ಅಣೆಕಟ್ಟು ಕಟ್ಟಿಸಿದವರು

ರಾಜಗೋಪಾಲ ಅಯ್ಯರ್ ಅವರದು. ಅವರು ನಾರಾಯಣ ಭಾಗವತರ ಗುರುವಾಗಿದ್ದವರು, *ಪೆಚಿಪರಿ ಅಣೆಕಟ್ಟು ಕಟ್ಟಿಸಿದವರು.* ಅದು ಸಂಕೇತಿಗಳು ಹೆಮ್ಮೆಪಡಬಹುದಾದ ಸಂಗತಿಯೇ.

೭೬ರ ಇಳಿವಯಸ್ಸಿನಲ್ಲಿದ್ದ ವಿ. ನಾರಾಯಣ ಅಯ್ಯರ್ ಅವರ ಒಂದು ಕಣ್ಣಿನ ದೃಷ್ಟಿ ಮಂದವಾಗಿತ್ತು. ಸಂತಾನವಿಲ್ಲದ ಆ ವೃದ್ಧದಂಪತಿಗಳು ಕೊನೆಯ ಪ್ರಯಾಣಕ್ಕೆ ಸಿದ್ಧರಾದವರಂತೆ ನಿರ್ಲಿಪ್ತರಾಗಿದ್ದರು. ಇಡೀ ಬೀದಿ ಹಿಂದೆ ಸಂಕೇತಿಗಳನ್ನು ತುಂಬಿಕೊಂಡಿತ್ತು, ಈಗ ಅಲ್ಲಿ ಬೇರೆಯವರಿದ್ದಾರೆ. ಒಂದು ಸಾಂಸ್ಕೃತಿಕ ಶೈಲಿಯೇ ಬದಲಾಗಿ ಹೋಗಿದೆ. ಅಲ್ಲಿಂದ ಅವರ ಪಕ್ಕದ ಮನೆಯ ಶ್ರೀಧರನ್ ಅವರನ್ನು ಕಾಣಲು ಹೋದಾಗ ವಿ.ನಾರಾಯಣ್ ಕೂಡ ನಮ್ಮ ಜತೆ ಬಂದು ನೆರವಾದರು, ಅಭಿನವ ಕಾಳಿದಾಸರ ಮನೆಯ ಮಹಡಿ ಏರಿ ಆ ಬೀದಿಯ ವಿವಿಧ ಮಗ್ಗುಲುಗಳ ಛಾಯಾಚಿತ್ರ ತೆಗೆದುಕೊಳ್ಳಲೂ ಅವರೇ ಸಹಕಾರ ನೀಡಿದರು. 'ಸಂಕೇತಿ' ಎಂಬ ಬಗೆಗಿನ ಪ್ರೀತಿ ಮಾತ್ರ ಅವರಲ್ಲಿ ಕ್ರಿಯಾಶೀಲವಾಗಿಯೇ ಇತ್ತು.

****

ಎಲತ್ತೂರಿನ ಶ್ರೀಧರನ್ ಒಬ್ಬ ಮಾಜಿ ಯೋಧ. ಕೇರಳ ರಾಜ್ಯದಲ್ಲಿ ಪ್ರಖ್ಯಾತವಾಗಿದ್ದ ಜ್ಯೋತಿಷಿಗಳ ವಂಶದಲ್ಲಿ ಆತ ಹುಟ್ಟಿದ್ದರು.

ಶಂಕರ ಲಿಂಗಮ್+ ವಳ್ಳಿ ಅಮ್ಮಾಳ್
ಜ್ಯೋತಿಷಿ

ಶಂಕರ ಕೃಷ್ಣನ್+ ಸುಶೀಲ
ಜ್ಯೋತಿಷಿ

ಸುಂದರಕುಮಾರ್ (ಆಕಾಶವಾಣಿ)	ಶ್ರೀಧರನ್ (ಮಾಜಿಯೋಧ)	ಕೃಷ್ಣಮೂರ್ತಿ (ಟಿ.ವಿ.ಎಸ್.ಕಂಪನಿ)
+	+	+
ವಿಜಯಲಕ್ಷ್ಮಿ (ಸಂಗೀತಶಿಕ್ಷಕಿ) ವಾಸ: ಪಾಲಯಂಕೋಟ್ಟೈ	ಜಯಂತಿ ಟಿ.ಎಸ್. (ಪ್ರಾಥಮಿಕ ಆರೋಗ್ಯಕೇಂದ್ರ)	ಪದ್ಮಾವತಿ (ಆರ್ಟ್ ಅಂಡ್ ಕಲ್ಚರ್, ಮದರಾಸು)
ಶಂಕರ್ ಸೌಂದರ್ಯ	**ಶಂಕರ್** (ಪಿಯುಸಿ ವಿದ್ಯಾರ್ಥಿ) ವಾಸ: ಎಲತ್ತೂರು	ಲೋಗಾ ಗೋಮತಿ



ಮಾಜಿಯೋಧ ಶ್ರೀಧರನ್-ಟಿ.ಎಸ್.ಜಯಂತಿ ತಮ್ಮ ಕುಟುಂಬವರ್ಗದೊಂದಿಗೆ:ಎಲತ್ತೂರು

ಶ್ರೀಧರನ್ ಅವರ ತಂದೆ ಶಂಕರಕೃಷ್ಣನ್ ಮತ್ತು ಅಜ್ಜ ಶಂಕರಲಿಂಗವ್ ಇಬ್ಬರೂ ಖ್ಯಾತ ಜ್ಯೋತಿಷಿಗಳಾಗಿದ್ದವರು. ಅವರಿಗಿದ್ದ ಜಮೀನೆಲ್ಲ ಶಂಕರಕೃಷ್ಣನ್ ಅವರ ಕಾಲದಲ್ಲೇ ಕಳೆದುಹೋಯಿತು. ಆಗ ಹೆಚ್ಚಾಗಿ *ಬತ್ತ*ವನ್ನೇ ಬೆಳೆಯುತ್ತಿದ್ದರು. ತಂದೆಯ ಕಾಲದಲ್ಲಿ ಗದ್ದೆಗಳನ್ನು ಗುತ್ತಿಗೆಗೆ ಕೊಡುತ್ತಿದ್ದ ನೆನಪು ಶ್ರೀಧರನ್ ಅವರಿಗೆ ಇದೆ. ಇತ್ತೀಚಿನವರೆಗೂ ೩-೪ *ಹಸುಗಳೂ* ಅವರಲ್ಲಿದ್ದವು. "ಈಗಿಗಿಂತ ಆಗಲೇ ಆರ್ಥಿಕ ಸ್ಥಿತಿ ಉತ್ತಮವಾಗಿತ್ತು" ಎನ್ನುವ ಶ್ರೀಧರನ್ ಮತ್ತು ಜಯಂತಿ ಉದ್ಯೋಗಸ್ಥ ದಂಪತಿಗಳು ಎಂಬುದನ್ನು ಗಮನಿಸಬೇಕು.

ಶ್ರೀಧರನ್ ಅವರ ತಾಯಿ ಸುಶೀಲ ಪಾಪಾನ್‌ಕೊಳಂನಿಂದ ಬಂದವರು. ಅದು ಸಂಕೇತಿಗಳ ಪಾರಂಪರಿಕ ನೆಲೆಗಳಲ್ಲಿ ಒಂದು. ಶಂಕರಸುಬ್ಬಯ್ಯರ್ ಮತ್ತು ಸೀತಾಲಕ್ಷ್ಮಿ ದಂಪತಿಗೆ ಜನಿಸಿದ ಸುಶೀಲ ಕೈಹಿಡಿದದ್ದು ಕೇರಳದ ಖ್ಯಾತ ಜ್ಯೋತಿಷಿ ಶಂಕರ ಕೃಷ್ಣನ್ ಅವರನ್ನು, ಅವರೊಡನೆ ಬಾಳಿದ್ದು ಎಲತ್ತೂರಿನಲ್ಲಿ. ಆದರೆ *ಪಾಪಾನ್‌ಕೊಳಂನ ಅವರ ತವರುಮನೆ ವ್ಯವಸಾಯವನ್ನು ನೆಚ್ಚಿತ್ತು*. ಶಂಕರಸುಬ್ಬಯ್ಯರ್ *ಸ್ವಂತವಾಗಿ ವ್ಯವಸಾಯ* ಮಾಡುತ್ತಿದ್ದುದರ ಬಗೆಗೆ ೭೫ ವರ್ಷದ ಸುಶೀಲ ಹೇಳುತ್ತಾರೆ. ಅವರ ತಂದೆ ಗಾಡಿ ಇಟ್ಟಿದ್ದರು, ಸ್ವಂತ ಉಳುಮೆ ಮಾಡುತ್ತಿದ್ದರು. ಹೊಲದಲ್ಲಿ ಉದ್ದು, ಜೋಳ, ರಾಗಿ ಬೆಳೆಯುತ್ತಿದ್ದರು. ಡಜನ್‌ಗಟ್ಟಲೆ *ಹಸುಗಳನ್ನು ಸಾಕಿದ್ದರು*. ಅವನ್ನು ಮೇಯಿಸಿಕೊಂಡುಬರಲು ಎರಡು ಆಳುಗಳನ್ನಿಟ್ಟುಕೊಂಡಿದ್ದರು.



ಶ್ರೀಧರನ್ ಅವರ ತಾಯಿ ಸುಶೀಲ-ಶಂಕರಕೃಷ್ಣನ್ ತಮ್ಮ 'ದೇವರಮನೆ'ಯಲ್ಲಿ: ಎಲತ್ತೂರು

ಶ್ರೀಧರನ್ ಅವರ ಮನೆತನದ ಕುಲದೈವ ಶಂಕರನ್ ಕೋಯಿಲ್‌ನ ಗೋಮತಿ. ಮಾಜಿಯೋಧರಾದರೂ ಮಂತ್ರಗಳನ್ನು ಕಲಿತಿದ್ದಾರೆ, ನಿತ್ಯಪೂಜೆ ಮಾಡುತ್ತಾರೆ.

ಆ) ಅಯ್‌ಕುಡಿ

(ವೀಳೆಯ ವ್ಯವಸಾಯವನ್ನು ಬ್ರಾಹ್ಮಣೇತರರಾದ ಒಂದು ಜಾತಿಯವರು ಮಾತ್ರ ಮಾಡುತ್ತಾರೆ ಎಂಬುದು, ಸಂಕೇತಿಗಳು ಕರ್ನಾಟಕಕ್ಕೆ ಬರುವ ಮುಂಚೆಯೇ ವೀಳೆಯ ವ್ಯವಸಾಯ ಕಲಿತಿದ್ದರೆ ಎಂಬ ಬಗೆಗೆ ಶಂಕೆ ಮೂಡಿಸುತ್ತದೆ. ಆದರೆ ಇದು ಶೆಂಕೋಟ್ಟೈನಿಂದ ಪೂರ್ವಕ್ಕಿರುವ ಬಯಲಿಗೆ ಸಂಬಂಧಿಸಿದ ಮಾತು. ಶೆಂಕೋಟ್ಟೈನಿಂದ ಪಶ್ಚಿಮಕ್ಕೆ ಹೋದಂತೆಲ್ಲ ತೋಟದ ವ್ಯವಸಾಯದ ಚಿತ್ರ ಬದಲುತ್ತದೆ)

೧೯೯೧ರಲ್ಲಿ ನಾನು ಮೊದಲು ಭೇಟಿಯಾಗಿದ್ದ ರಾಮಸುಬ್ರಹ್ಮಣ್ಯಂ ಅವರ ಕುಟುಂಬ ಈಗಲೂ **ಅಯ್‌ಕುಡಿ**ಯಲ್ಲಿಯೇ ತನ್ನ ಮನೆಯನ್ನು ಉಳಿಸಿಕೊಂಡಿತ್ತು. ಆದರೆ ಅವರ ವಾಸ್ತವ್ಯ ಮಾತ್ರ ಅಲ್ಲಿ ನಿರಂತರವಾಗಿ ಇರುತ್ತಿರಲಿಲ್ಲ. ಅವರು ತಿರುವನಂತಪುರದಲ್ಲಿದ್ದ ಮಕ್ಕಳ ಮನೆಯಲ್ಲಿ ಕೆಲ ಕಾಲ, **ಅಯ್‌ಕುಡಿ**ಯಲ್ಲಿ ಕೆಲಕಾಲ ವಾಸಿಸುತ್ತಿದ್ದರು. ಅವರ ಎದುರು



ಅಯ್‌ಕುಡಿಯ ಮೇಲ್‌ಗ್ರಾಮಂನ ಒಂದು ಬೀದಿ

ಮನೆಯವರು ಹೇಳುವಂತೆ 'ಆರು ತಿಂಗಳು ಇಲ್ಲಿ, ಆರು ತಿಂಗಳು ಅಲ್ಲಿ'. ಪ್ರಾಯಶಃ ಅವರು ಪ್ರತಿ ಬೇಸಿಗೆಯಲ್ಲೂ ತಿರುವನಂತಪುರಕ್ಕೆ ಹೋಗುತ್ತಿದ್ದಿರಬೇಕು. ಏಕೆಂದರೆ ನಾನು ಅಲ್ಲಿಗೆ ಭೇಟಿಕೊಟ್ಟುದೆಲ್ಲಾ ಬೇಸಗೆಯಲ್ಲೇ. ಅವರು ಒಮ್ಮೆಯೂ ಸಿಗಲಿಲ್ಲ, ಈ ಬಾರಿಯೂ ಸಿಗಲಿಲ್ಲ.

ಈಗ **ಅಯ್‌ಕುಡಿ**ಯಲ್ಲಿ ಉಳಿದುಕೊಂಡಿದ್ದುದೇ ಎರಡು ಕುಟುಂಬ. ಆ ಎರಡು ಸಂಕೇತಿ ಕುಟುಂಬಗಳೂ ಆಗಾಗ ಮಕ್ಕಳ ಮನೆಗೆ ಬೇರೆ ಊರುಗಳಿಗೆ ಹೊರಟುಹೋಗುತ್ತಿದ್ದವು. ಅದು ನಗರವಲಸೆಗಳ ಸ್ಥಿತ್ಯಂತರಸ್ಥಿತಿ. ಕರ್ನಾಟಕದ ಎಲ್ಲ ಹಳ್ಳಿಗಳಲ್ಲೂ ಇಂಥ ಸ್ಥಿತ್ಯಂತರ ಕುಟುಂಬಗಳನ್ನು ಈಗ ಕಾಣಬಹುದು. ಈ ನಗರೀಕರಣ ಪ್ರವೃತ್ತಿಯಿಂದ *ಸಂಕೇತಿಗಳ ವಿಶಿಷ್ಟವಾದ ವ್ಯವಸಾಯ ಪರಂಪರೆಯೂ, ಅಗ್ರಹಾರ-ಜೀವನದ ವಿಶಿಷ್ಟ ಸಾಂಸ್ಕೃತಿಕ ಪರಂಪರೆಯೂ ನಾಶವಾಗುತ್ತಿದೆ* ಎಂಬ ಖೇದ ಉಂಟಾಗುತ್ತದೆ. ಸಂಕೇತಿಗಳ ಮೂಲದ್ರವ್ಯ ಇರುವುದು ಈ ಚಲನಶೀಲತೆಯಲ್ಲಿ, ವಿಕಾಸಕ್ಕೆ ಮುಖಮಾಡಿದ ಗತಿಶೀಲತೆಯಲ್ಲಿ. ಇದು ಬ್ರಾಹ್ಮಣರಿಗೆ ವಿಶಿಷ್ಟವಾದ ಸಾಮಾನ್ಯಗುಣ. ತೀವ್ರವಾಗಿ ತೊಡಗಿಸಿಕೊಂಡಂತೆ ಕಾಣುವಾಗಲೇ ಈ ಜಂಗಮತೆಯನ್ನು ಲೀಲಾಜಾಲವಾದ ಜೀವನ ವಿಧಾನವಾಗಿ ಮಾಡಿಕೊಳ್ಳುವುದರಲ್ಲಿ ಸಂಕೇತಿಗಳ ವಿಶಿಷ್ಟತೆ ಇದೆ.

ಹಿಂದೊಮ್ಮೆ ಇದೇ **ಅಯ್‌ಕುಡಿ**ಯಲ್ಲಿಯೇ ವಾದ್ಯಮಾರ್ ಕುಟುಂಬವೊಂದು ನಾಚಾರಮ್ಮನ ಪ್ರಸಂಗವನ್ನು ನೆನಪಿಸಿಕೊಂಡು ಸಂಕೇತಿಗಳ ಬವಣೆಗಾಗಿ ಕನಿಕರಪಟ್ಟಿತ್ತು. ಸಂಕೇತಿಗಳ ಬಗೆಗಿನ ಮಾಹಿತಿಗಾಗಿ ಸಂಕೇತಿಗಳನ್ನಷ್ಟೇ ಅವಲಂಬಿಸುವುದು ಪೂರ್ಣವಾಗುವಂತಿರಲಿಲ್ಲ. ಆದ್ದರಿಂದ ಎದುರು ಮನೆಗೆ ಹೋದೆ. ಅದು ಎ.ಆರ್.ಸುಬ್ರಹ್ಮಣ್ಯ ಅಯ್ಯರ್ ಎಂಬ ವಾದ್ಯಮಾರ್ ಗೃಹಸ್ಥರ ಮನೆ.

ಅಯ್‌ಕುಡಿಯಲ್ಲಿ ಕೀಳ್‌ಗ್ರಾಮಂ, ಮೇಲ್‌ಗ್ರಾಮಂ ಮತ್ತು ವರದಯನ್ ಗ್ರಾಮಂ ಎಂಬ ಮೂರು ಬ್ರಾಹ್ಮಣ ಅಗ್ರಹಾರಗಳಿವೆ. ವಾದ್ಯಮಾನ್ ಅವರ ೩೦ ಕುಟುಂಬಗಳೂ, ವಡಮರ ೨೫ ಕುಟುಂಬಗಳೂ ಈಗಲೂ ಅಲ್ಲಿ ಇದ್ದವು. ಬ್ರಾಹ್ಮಣರಲ್ಲದೇ ಮೊದಲಿಯಾರ್, ಪಿಳ್ಳೆಮಾರ್, ತೆಲುಗುಚೆಟ್ಟಿಯಾರ್, ತೇವರ್, ಮೂಪನಾರ್, ಪರಯನ್, ಪಳ್ಳನ್ ಎಲ್ಲರೂ ಆ ಊರಿನಲ್ಲಿದ್ದರು.



ಅಯ್‌ಕುಡಿಯ ತೋಟ

ವಾದ್ಯಮಾನ್ ಮತ್ತು ವಡಮ ಎಲ್ಲರಿಗೂ ಈಗಲೂ ಸ್ವಂತ ಹಿಡುವಳಿ ಇತ್ತು. ಅವರೆಲ್ಲರೂ ಜಮೀನಿನಲ್ಲಿ ಸ್ವಂತವಾಗಿಯೂ ದುಡಿಯುತ್ತಿದ್ದರು, ಆಳುಗಳ ನೆರವನ್ನೂ ಪಡೆಯುತ್ತಿದ್ದರು. ಬತ್ತ, ತೆಂಗು, ಬಾಳೆ ಮತ್ತು ಕೊಂಚ ಕಬ್ಬು ಬೆಳೆಯುತ್ತಿದ್ದರು. ಪ್ರಧಾನವಾಗಿ ವ್ಯವಸಾಯ ಮಾಡುತ್ತಿದ್ದುದು ಮೂಪನಾರ್‌ಗಳು. **ಅಯ್‌ಕುಡಿ**

ವೀಳೆ ಎಲೆಗೆ ಪ್ರಖ್ಯಾತವಾದುದೇ ಅವರಿಂದ. ಅಲ್ಲಿಯೂ *ಸಂಕೇತಿಗಳೂ ಸೇರಿದಂತೆ ಯಾವ ಬ್ರಾಹ್ಮಣರೂ ವೀಳೆ ಬೆಳೆಯುವ ಸುದ್ದಿಗೆ ಹೋಗುತ್ತಿರಲಿಲ್ಲ.* ಪರಯನ್, ಪಳ್ಳನ್ ಜನರು ದಿನಗೂಲಿ ನೌಕರರಾಗಿದ್ದರು. ಅಲ್ಲಿದ್ದ ಕೆರೆಯೂ, ಹನುಮಾನ್ ನದಿಯೂ ಅವರಿಗೆ ನೀರಾವರಿಯ ಮೂಲಗಳಾಗಿದ್ದವು.



ಅಯ್‌ಕುಡಿ ತೋಟಗಳ ಇನ್ನೊಂದು ನೋಟ

ಎ.ಆರ್.ಸುಬ್ರಹ್ಮಣ್ಯ ಅಯ್ಯರ್ ಅವರು ಅಲ್ಲಿನ ವಿದ್ಯುಚ್ಛಕ್ತಿ ಇಲಾಖೆಯಲ್ಲಿ ದುಡಿಯುತ್ತಿದ್ದವರು. ಲೆಕ್ಕಪತ್ರ ವಿಭಾಗದಲ್ಲಿದ್ದ ಅವರು, ಈಗ ನಿವೃತ್ತರಾಗಿದ್ದಾರೆ. ಬ್ರಾಹ್ಮಣಸಂಘದ ಅಧ್ಯಕ್ಷರಾಗಿದ್ದಾರೆ. ಬ್ರಾಹ್ಮಣರಿಗೆ ಉದ್ಯೋಗ ದೊರೆಯುತ್ತಿಲ್ಲ ಎಂಬ ಬಗೆಗೆ ಅವರ ಆಕ್ಷೇಪವಿತ್ತು. ಹೀಗೆ ನೌಕರಿ ದೊರೆಯದುದರಿಂದಲೇ ಪೌರೋಹಿತ್ಯ ಮತ್ತು ದೇವಸ್ಥಾನಗಳಲ್ಲಿ ಪೂಜೆ ಮಾಡುವ ಕೈಂಕರ್ಯಕ್ಕೆ ಅವರು ಸೇರಿದ್ದಾರೆ ಎಂಬ ವಿವರಣೆ ಅವರದು. ದೇವಸ್ಥಾನಗಳಲ್ಲಿ ಪೂಜೆ ಮಾಡಲೂ ಇತರರು ಬರುತ್ತಿರುವುದರಿಂದ ಆ ಅವಕಾಶ ದಿಂದಲೂ ಬ್ರಾಹ್ಮಣರು ವಂಚಿತರಾಗುತ್ತಿದ್ದಾರೆ ಎಂದು ಅವರು ಆತಂಕಗೊಂಡಿದ್ದರು.

೧೫ ವರ್ಷಗಳ ಹಿಂದೆ ಇದ್ದ ಸಂಕೇತಿಗಳ ೧೦ ಕುಟುಂಬ ಈಗ ಎರಡಕ್ಕೆ ಇಳಿದ ಬಗೆಗೆ ಅವರು ಹೇಳುತ್ತಿದ್ದರು. ಅಲ್ಲಿದ್ದ ಯಾವ ಸಂಕೇತಿ ಕುಟುಂಬಕ್ಕೂ *ಈಗ ಸ್ವಂತವಾದ ಭೂಮಿಕಾಣಿ ಇರಲಿಲ್ಲ.* ಅವರೆಲ್ಲ ದೇವಸ್ಥಾನಗಳನ್ನವಲಂಬಿಸಿಯೇ ಜೀವನ ಮಾಡುತ್ತಿದ್ದರು. ಮುರುಗನ್ ದೇವಸ್ಥಾನ ಮತ್ತು ಕೋಮಲವಲ್ಲಿ ದೇವಸ್ಥಾನಗಳಂತೂ ಸಂಕೇತಿಗಳವೇ ಆಗಿದ್ದವು. *ದೇವಸ್ಥಾನದ ಜಮೀನನ್ನು ಗುತ್ತಿಗೆಗೆ ಕೊಡುತ್ತಿದ್ದರು.* ದೇವಸ್ಥಾನದ ಕೈಂಕರ್ಯವಲ್ಲದೆ, ಪೌರೋಹಿತ್ಯವೆಲ್ಲ ಸಂಕೇತಿಗಳದೇ ಆಗಿತ್ತು. ಬ್ರಾಹ್ಮಣರ ಮನೆಗಳ ಪೂಜಾದಿ ಸಂಸ್ಕಾರಗಳಿಗೆಲ್ಲ ಅವರು ಹೋಗುತ್ತಿದ್ದರು. ಮಧ್ಯಮ ವರ್ಗದ ಆರ್ಥಿಕತೆ ಅವರದಾಗಿತ್ತು. ಅವರನ್ನು ಬಿಟ್ಟರೆ ಶಾಲಾ ಅಧ್ಯಾಪಕರಾದವರೂ, ಪೋಸ್ಟ್‌ಮಾಸ್ತರಾದವರೂ ಅಲ್ಲಿದ್ದರು.



ಶಾಂಬವರ್ ವಡಹರೈ ದಿಕ್ಕಿಗೆ ಇರುವ ಅಯ್‌ಕುಡಿಯ ಹೊಲಗದ್ದೆಗಳು

ಅವರು ಕೊಟ್ಟ ಮಹತ್ವದ ಮಾಹಿತಿಯಂತೆ *ಶೆಂಕೋಟೈನಿಂದ ೨೦ ಕಿ.ಮೀ. ಪಶ್ಚಿಮಕ್ಕೆ ಘಟ್ಟದಲ್ಲಿ ಅಡಕೆ ಬೆಳೆ ಪ್ರಾರಂಭವಾಗುತ್ತಿತ್ತು. ಅಡಕೆ ಮರಗಳಿಗೆ ವೀಳೆ ಹಬ್ಬಿಸುವ* ಕ್ರಮವೂ ಅಲ್ಲಿತ್ತು. ಕೊಲ್ಲಂ (Quilon) ಜಿಲ್ಲೆಯ ಹಲವು ಘಟ್ಟ ಗ್ರಾಮಗಳು *ಸಂಕೇತಿಗಳ ಪಾರಂಪರಿಕ ನೆಲೆಗಳಾಗಿದ್ದವು* ಎಂಬುದನ್ನು ಇಲ್ಲಿ ನೆನೆಯಬಹುದು. ಕೊಟ್ಟಾರಕ್ಕರ, ಅರಿಯನ್‌ಕಾವು, ಕೊಳತ್ತುಪುಜ ಅವುಗಳಲ್ಲಿ ಕೆಲವು. *ಅಡಿಕೆ, ತೆಂಗು, ವೀಳೆ ಅಲ್ಲಿನ ತೋಟಗಳ ಬೆಳೆಗಳೂ ಹೌದು.* ಕಾಲಡಿಯಲ್ಲಿ ಪಾರಂಪರಿಕವಾಗಿ ಸಂಕೇತಿಗಳು ನೆಲೆಸಿದ್ದರು ಮತ್ತು ಆದಿಶಂಕರರು ಶೃಂಗೇರಿಯಲ್ಲಿ



ಬಾಳೆಯ ತೋಟ : ಅಯ್‌ಕುಡಿ

ಮಠವನ್ನು ಸ್ಥಾಪಿಸಿದಾಗ ಅಗತ್ಯ ವೈದಿಕ ವಿಧಿಗಳನ್ನು ನಡೆಸಲು ಕಾಲಡಿಯಿಂದ ಸಂಕೇತಿಗಳನ್ನು ಕರೆದುಕೊಂಡುಹೋಗಿದ್ದರು ಎಂಬ ಸಂಗತಿ ಸಂಕೇತಿಯೇತರರಲ್ಲೂ ಇಷ್ಟುಮಟ್ಟಿಗೆ ಪ್ರಚಾರದಲ್ಲಿರುವುದನ್ನು ಇಲ್ಲಿಯೇ ಅಗತ್ಯವಾಗಿ ಗಮನಿಸಬಹುದು. ೧.೧೧.೧೯೫೬ರಲ್ಲಿ ಭಾಷಾವಾರು ಪ್ರಾಂತಗಳು ರಚನೆಯಾಗುವ ಮೊದಲು ಶೆಂಕೋಟ್ಟೈ ತಾಲ್ಲೂಕು ಕೊಲ್ಲಂ ಜಿಲ್ಲೆಗೇ ಸೇರಿತ್ತು.

ಶೆಂಕೋಟ್ಟೈ ಈಗ ತಮಿಳುನಾಡಿಗೆ ಸೇರಿದೆ ಎಂಬುದು ಸೃಷ್ಟಿಸುವ ಭ್ರಮಾತ್ಮಕ ದೃಷ್ಟಿಯಿಂದಾಗಿ, ಕೆಲವು ಸತ್ಯಗಳು ಹಿನ್ನೆಲೆಗೆ ಸರಿಯುವ ಅಪಾಯವಿದೆ. ಭೌಗೋಳಿಕವಾಗಿ ಅದು ಕೇರಳದೊಂದಿಗೆ ಹೊಂದಿಕೊಂಡಿದೆ. ತಿರುವನಂತಪುರಂ ಅರಸರ ಆಳ್ವಿಕೆಯಿಂದಾಗಿ ಆ ಪ್ರಾಂತದ ಸಾಂಸ್ಕೃತಿಕ ಮತ್ತು ವ್ಯಾವಹಾರಿಕ ಸಂಪರ್ಕವು ಆ ರಾಜಧಾನಿಯೊಂದಿಗಿತ್ತು. ಸಂಕೇತಿಗಳು ವೈದಿಕ ಸೇವೆಗಾಗಿ ಘಟ್ಟದ ಕೆಳಗಿನ ವಿಸ್ತಾರದಲ್ಲಿ, ತಮ್ಮ ನೆಲೆಗಳನ್ನು ಹೊಂದಿದ್ದರೂ ಅವರ ಕೃಷಿ ಬದುಕಿನ ಬೇರುಗಳು ಘಟ್ಟಗಳಲ್ಲಿದ್ದವು. *ಅಡಕೆ ಕೃಷಿಯ ಆ ಪಾರಂಪರಿಕ ಅರಿವು ಮತ್ತು ಅನುಭವವು* ಕರ್ನಾಟಕದಲ್ಲಿ ಬದುಕಿಗಾಗಿ ನಡೆದ ಹೋರಾಟದ ಸಂದರ್ಭದಲ್ಲಿ ನೆರವಿಗೆ ಬಂತು. ಆದರೆ ಮಣ್ಣಿನ ಗುಣ, ನೀರಾವರಿ, ಮಳೆ ಹವಾಮಾನದ ಲಕ್ಷಣವನ್ನನುಸರಿಸಿ ಸಂಕೇತಿಗಳು, ಕರ್ನಾಟಕದ ಘಟ್ಟದ ಪೂರ್ವ ತಗ್ಗಿನ ಹರಹಿನಲ್ಲಿ ತಮ್ಮ ತೋಟಗಳನ್ನು ನೆಲೆಗೊಳಿಸಿದರು. (ಈ ಬಗೆಗಿನ ಅನುಭವಿಕ ವಿಶ್ಲೇಷಣೆಯನ್ನು ಹಾಸನ ಜಿಲ್ಲೆಯ ಅಗ್ರಹಾರದ ಪ್ರಗತಿಪರ ರೈತ ಶ್ರೀ ಶ್ರೀನಿವಾಸ ಅವರ ಸಂದರ್ಶನದಲ್ಲಿ ಕಾಣಬಹುದು. ಪುಟ ಸಂಖ್ಯೆ ೨೭೯.)

ಸುಬ್ರಹ್ಮಣ್ಯ ಅಯ್ಯರ್ ಅವರೊಡನೆ ಸಂದರ್ಶನ ಮುಗಿಸಿಕೊಂಡು, ಅವರ ವಿಶಾಲವಾದ ಮನೆಯಿಂದ ಹೊರಬರುವ ವೇಳೆಗೆ, ನಡುವಯಸ್ಸಿನ ಐದಾರು ಗೃಹಸ್ಥರು ಎಲ್ಲರೂ ಸಂಕೇತಿಯೇತರ ಬ್ರಾಹ್ಮಣರು ನಮ್ಮ ಕಡೆಗೆ ಬಂದರು. ಅವರೆಲ್ಲ ತಮ್ಮ ತಮ್ಮ ಮನೆಗಳ ಮುಂದೆ ಲೋಕಾಭಿರಾಮವಾಗಿ ನಿಂತಿದ್ದವರು. ಅವರಿಗೆ ನನ್ನ ಅಥವ ನನ್ನ ಕಾರ್ಯಕ್ರಮದ ಮಾಹಿತಿ ಏನೂ ಇರಲಿಲ್ಲ. ಅವರು ಕೊಟ್ಟ ಕೆಲ ಪ್ರಚೋದಕ ಮಾಹಿತಿಗಳನ್ನು ಸಂಗ್ರಹಿಸಿ ಇಲ್ಲಿ ಹೇಳಬಹುದು:



ಹತ್ತಿಯ ಹೊಲ : ಅಯ್‌ಕುಡಿ

ಅ) ನನ್ನ ಮುಖ ನೋಡಿ 'ನೀವು ಸಂಕೇತಿಗಳಲ್ಲವೆ?' ಎಂದು ಕೇಳಿದರು. ವಡಮ, ಬೃಹಚ್ಚರಣ, ವಾದ್ಯಯಾರ್, ಸಂಕೇತಿ ಎಲ್ಲರನ್ನೂ 'ಇವರಿವರು ಇಂಥ ಪಂಗಡದವರು' ಎಂದು ಶೇ. ೯೦ರಷ್ಟು ಕರಾರುವಾಕ್ಕಾಗಿ ಹೇಳಬಹುದು ಎಂದು ಒಕ್ಕೊರ



ಹುಲ್ಲಿನ ಮೆದೆಯ ಹಿನ್ನೆಲೆಗೆ ಗದ್ದೆ, ತೋಟಸಾಲು : ಅಯ್‌ಕುಡಿ

ಲಿನಿಂದ ದೃಢವಾಗಿ ಸಾರಿದರು. ಮುಂದೆ ತೆಂಕಾಸಿಯ ಲೆಕ್ಕ ಪರಿಶೋಧಕ ಶಿವರಾಮನ್ ಅವರ ಬಳಿ 'ಇದು ಸಾಧ್ಯವೆ?' ಎಂದಾಗ "your sharp nose and complexion.." ಎಂದು ಹೇಳಿದರೂ ಹಾಗೆ ಶೇ.೭೦ರಷ್ಟು ಕರಾರುವಾಕ್ಕಾಗಿ ಮಾತ್ರ ಹೇಳಬಹುದು ಎಂದರು. ಕರ್ನಾಟಕದಲ್ಲೂ ನಮ್ಮ ಹಳ್ಳಿಗಳಲ್ಲಿ ಸಂಕೇತಿ, ಮಾಧ್ವ, ಬಬ್ಬೂರುಕಮ್ಮೆ, ಹೊಯ್ಸಳಕರ್ನಾಟಕರನ್ನು ಹೀಗೆ ಒಂದು ಹಂತದವರೆಗೆ ಗುರುತಿಸುವುದು ಸಾಧ್ಯ. ಅಮಿಶ್ರಿತ ವಂಶಪರಂಪರೆಗೆ ಇಂಥ ಲಕ್ಷಣಗಳ ಜಾಡು ಇರುತ್ತದೆ. ಶಿವರಾಮನ್ ಅವರೂ ಸೇರಿದಂತೆ ಹಲವು ಸಂಕೇತಿಗಳು ಕರ್ನಾಟಕದ ಸಂಕೇತಿಗಳ ಭೌತಿಕ ಮತ್ತು ಬೌದ್ಧಿಕ ಲಕ್ಷಣಗಳೊಡನೆ ಎಷ್ಟು ತದ್ರೂಪ ಹೊಂದಿದ್ದಾರೆ ಎಂಬುದನ್ನು ಕಂಡವರು ಬೆರಗಾಗದೆ ಇರುವುದು ಸಾಧ್ಯವಿಲ್ಲ. ೯೦೦ ವರ್ಷಗಳ ಅನಂತರವೂ ದಕ್ಷಿಣದ ತುದಿಯ ಸಂಕೇತಿಗಳು ಮತ್ತು ಕರ್ನಾಟಕದ ಸಂಕೇತಿಗಳ ನಡುವೆ ಹಲವು ಸಂಗತಿಗಳಲ್ಲಿ ಇರುವ ಸಾಮ್ಯವು ಅಧ್ಯಯನಯೋಗ್ಯ ಮಾತ್ರವಲ್ಲ, ಅನುಭವ ಯೋಗ್ಯವೂ ಆಗಿದೆ. ಈಗಲೂ ಕೆಲವಾದರೂ ಅಮಿಶ್ರಿತ ಸಂಕೇತಿ ಮನೆತನಗಳ ಮಾದರಿ ಅಲ್ಲಿದೆ.

ಆ) "ಪೌರೋಹಿತ್ಯ ಮಾಡಿಸುವುದರಲ್ಲಿ ಸಂಕೇತಿಗಳು ನಂಬರ್ ಒನ್. ಆ ವಿಷಯದಲ್ಲಿ ಅವರನ್ನು ಸರಿಗಟ್ಟುವವರು ಯಾರೂ ಇಲ್ಲ" ಎಂಬುದು ಅವರ ಇನ್ನೊಂದು ಸರ್ವಾನುಮತದ ನಿರ್ಣಯವಾಗಿತ್ತು. ತೆಂಕಾಸಿಯ ಶಿವರಾಮನ್ "ಕೇವಲ ಪ್ರಯೋಗಗಳನ್ನಲ್ಲದೆ, ಪೂರ್ಣವೇದಾಧ್ಯಯನ ಹಾಗೂ ಶಾಸ್ತ್ರ ಗ್ರಂಥಗಳ ಅಧ್ಯಯನ ಮಾಡಿದ ವ್ಯಾಪ್ತವಾದ ತಿಳಿವಳಿಕೆಯಿಂದ ಅದು ಸಾಧ್ಯವಾಗಿದೆ" ಎಂದು ವಿಶ್ಲೇಷಿಸಿದರು. ಕರ್ನಾಟಕದಲ್ಲಿನ ಸಂಕೇತಿ ಪುರೋಹಿತರ ದಕ್ಷತೆ, ದೃಢತೆ ಮತ್ತು ಪಕ್ವತೆಯನ್ನು ನೋಡಿದವರಿಗೆ ಈ 'ಸಂಗತಿ' ಬೆರಗು ಹುಟ್ಟಿಸದಿದ್ದರೂ ಈ 'ಸಾಮ್ಯ'ವು ಬೆರಗು ಹುಟ್ಟಿಸದೆ ಇರುವುದಿಲ್ಲ.



ಜೋಳದ ಹೊಲ : ಅಯ್‌ಕುಡಿ

ಇ) ಬ್ರಾಹ್ಮಣ ಉಪಪಂಗಡಗಳ ಸ್ವಭಾವವನ್ನು ಅವರು ವಿಶ್ಲೇಷಿಸಿದ್ದು ಹೀಗೆ:

ವಾದ್ಯಮನ್: ಲೌಕಿಕರು

ವಡಮನ್ : ಕಠಿಣ ಮತ್ತು ಅಭೇದ್ಯ (ಅವರು ಬಳಸಿದ ಪದ Adamant)

ಸಂಕೇತಿ: ಮೃದುಸ್ವಭಾವ (Soft nature)

ಕರ್ನಾಟಕದಲ್ಲಿ ಸಂಕೇತಿಗಳು ಒರಟರು ಎಂದು ಖ್ಯಾತರಾಗಿದ್ದಾರೆ. ಆದರೆ ಅದು ದುಡಿಮೆ ಮತ್ತು ಕಾರ್ಯಕ್ಷಮತೆಗೆ ಸಂಬಂಧಿಸಿದ ಪ್ರಚಲಿತವಾದ ಮಾತು. ತಮ್ಮದೇ ತೋಟದೊಳಕ್ಕೆ ಹೋಗುವ ಮುನ್ನ ಚಪ್ಪಾಳೆ ತಟ್ಟಿ "ಒಳಗೆ ಯಾರಾದರೂ

ಇದ್ದೀರಾಪ್ಪಾ?" ಎಂದು ಕೂಗುತ್ತಿದ್ದವರು ಕರ್ನಾಟಕದ ಸಂಕೇತಿಗಳು. ಕಳ್ಳರಿದ್ದರೆ ಹೊರಟುಹೋಗಲಿ ಎಂದು ಹೀಗೆ ಮಾಡುತ್ತಿದ್ದರು. ಅಂಥ ಆಂತರಿಕ ಹದದಿಂದಾಗಿ ಅವರು ಮೃದುಸ್ವಭಾವದವರು ಎನಿಸಿದ್ದಾರೆ.

೫೦ ವರ್ಷದ ಹಿಂದೆ ಮೇಲ್‌ಗ್ರಾಮಂನ ಆ ಬೀದಿಯಲ್ಲಿ ಸಂಕೇತಿಗಳೇ ಪೂರ್ಣವಾಗಿ ಇದ್ದರು ಎಂಬುದೂ ಅವರ ಮಾಹಿತಿಯ ಒಂದು ಭಾಗವಾಗಿತ್ತು. ಇದು, ಆಗಿದ್ದ ಸಂಕೇತಿಗಳು ಅಲ್ಲಿನ *ಭೂಮಿ ಕಾಣಿಯ ಒಡೆಯರಾಗಿದ್ದರು ಎಂಬ ಸೂಚನೆಯನ್ನು ಕೊಡುವಂಥದಾಗಿತ್ತು.*

ಇ) ಶಾಂಬವರ್ ವಡಹರ್ರೈ



ಶಾಂಬವರ್ ವಡಹರ್ರೈ : ಸನ್ನಿಧಿ ವೀತಿ

(ಶಾಂಬವರ್‌ವಡಹರ್ರೈನಲ್ಲಿ ಸಂಕೇತಿಗಳು ಸ್ವತಂತ್ರವಾಗಿ ವ್ಯವಸಾಯ ಮಾಡುತ್ತಿದ್ದ ಸುಳುಹು ಕೂಡ ದೂರವಾಗಿ ಹೋಗಿದೆ. ಈಗಿರುವುದು ಗುತ್ತಿಗೆ ನೀಡುವ ಪದ್ಧತಿ. ಮೊರಪ್ಪನಾಡಿನಲ್ಲಿ ಸಂಕೇತಿಗಳು ಸ್ವತಂತ್ರವಾಗಿ ವ್ಯವಸಾಯ ಮಾಡುತ್ತಿದ್ದುದರ ನೆನಪು ಶಾಂಬವರ್‌ವಡಹರ್ರೈನ ವಕ್ಷಗಳಲ್ಲಿದೆ.)

'ಜಾಂಬವಾನ್' ವಡಹರ್ರೈ ಎಂಬುದು ನಿಜವಾದ ಹೆಸರಂತೆ. ಜಾಂಬವನಿಗೂ ಈ ಊರಿಗೂ ಸಂಬಂಧವನ್ನು ಕಲ್ಪಿಸುವ ಬೇರೆ ಕುರುಹುಗಳು ನಮಗೆ ದೊರೆಯಲಿಲ್ಲ. ಎಲತ್ತೂರಿನ ವಿ. ನಾರಾಯಣ್ ಮಾತ್ರ "ನಾರ್ತ್ ಸ್ಟ್ರೀಟಿನ ವಿ. ಶಂಕರನ್ ಅವರನ್ನೂ ಸೌತ್ ಸ್ಟ್ರೀಟಿನ ಕಣ್ಣನ್ ವಾದ್ಯಾರನ್ನೂ ನೋಡಿ" ಎಂದು ಹೇಳಿ ಕಳಿಸಿದ್ದರು.

ಕಣ್ಣನ್ ವಾದ್ಯಾರ್ ಪೊದೆಯಾದ ಗಡ್ಡವನ್ನು ಬೆಳೆಸಿ ಶ್ರೀರಾಮನಾಮದ ಹಳದಿ ಶಲ್ಯವೊಂದನ್ನು ಹೊದ್ದು ನಮಗೆ ದರ್ಶನಕೊಟ್ಟರು.

ಯಜುರ್ವೇದ, ಆಪಸ್ತಂಬ ಸೂತ್ರವನ್ನು ಪಾಲಿಸುವ ನೈಧ್ರುವ ಕಾಶ್ಯಪ ಗೋತ್ರದ ಕಣ್ಣನ್‌ಗೆ ಅಂಬಾಸಮುದ್ರಂ ಬಳಿಯ 'ಊರ್‌ಕಾಡ್ ಶಾಸ್ತಾ' ಮನೆದೇವರು. ಅವರು ಸಂಕೇತಿಗಳಲ್ಲಿ ನೈಧ್ರುವಕಾಶ್ಯಪ ಗೋತ್ರಕ್ಕೆ ಸೇರಿದ ಒಂದು ಪಟ್ಟಿ ತಯಾರಿಸಿದ್ದರಂತೆ. ಅವರ ಆ ಪಟ್ಟಿಯಲ್ಲಿ ೩೦೦ ಕುಟುಂಬಗಳು ಸೇರಿದ್ದುವಂತೆ. ಆ ಪಟ್ಟಿ ಇದ್ದ ಡೈರಿಯನ್ನು ಎಲ್ಲೋ ಕಳೆದುಕೊಂಡಿದ್ದರು. ಆ ಗೋತ್ರಕ್ಕೆ ಸೇರಿದವರು ಬಡವರು ಎಂಬ ಕಾರಣದಿಂದ ಕಣ್ಣನ್ ಅವರಿಂದ ಸಂಭಾವನೆ ಸ್ವೀಕರಿಸುತ್ತಿಲ್ಲ.



ಎಸ್.ಕಣ್ಣನ್ ವಾದ್ಯಾರ್ ಅವರೊಂದಿಗೆ ಸಂದರ್ಶನ:ಶಾಂಬವರ್ ವಡಹರ್ರೈ

ಈಗ ಶಾಂಬವರ್ ವಡಹರ್ರೈನಲ್ಲಿರುವವರು

ಹೆಚ್ಚಾಗಿ ವಡಮರು. ೧೯೮೫ರಲ್ಲಿ ಈ ಊರಿನಲ್ಲಿ *ಸಂಕೇತಿಗಳ ೧೦ ಕುಟುಂಬಗಳಿದ್ದವು.* ಅವರಲ್ಲಿ ಗಣೇಶವಾದ್ಯಾರ್ ಮುಖ್ಯರು. ಸುತ್ತಮುತ್ತ ತುಂಬ ಖ್ಯಾತರಾದ ಪುರೋಹಿತರಾಗಿದ್ದವರು ಅವರು. ಅವರ ಮಕ್ಕಳೆಲ್ಲ ಈಗ ನಾಗರಕೋಯಿಲ್‌ನಲ್ಲಿ ಇರುತ್ತಿದ್ದರು.

ಸಂಕೇತಿಗಳೆಲ್ಲರೂ ದೇವಸ್ಥಾನದ ಪೂಜೆಯನ್ನೇ ಅವಲಂಬಿಸಿದ್ದರು. ಅವರಿಗೆ ಸ್ವಂತವಾದ ಭೂಮಿ ಕಾಣಿ ಇರಲಿಲ್ಲ. ದೇವಸ್ಥಾನದ ತಮ್ಮ ಪಾಲಿನ ಜಮೀನನ್ನು *ಗುತ್ತಿಗೆಗೆ ಕೊಡುತ್ತಿದ್ದರು.* ಅಲ್ಲಿ ಬೆಳೆಯುತ್ತಿದ್ದುದು *ಬತ್ತ,* ಮೆಣಸಿನಕಾಯಿ ಮತ್ತು ಹತ್ತಿ. ಬಹಳ ಜಮೀನು ಇದ್ದವರು *ಬಾಳೆಯನ್ನೂ* ಬೆಳೆಯುತ್ತಿದ್ದರು. ಬಾವಿಯ ಅನುಕೂಲವಿದ್ದ ಕಡೆ ಕಬ್ಬು ಕೂಡ ಬೆಳೆಯುತ್ತಿದ್ದರು. ಎಲ್ಲ ಜಮೀನಿಗೂ ಕೆರೆ ಮತ್ತು ಹನುಮಾನ್ ನದಿಯ ನೀರು ಆಸರೆಯಾಗಿದೆ. ಅಣೆಕಟ್ಟು ನಿರ್ಮಿಸಿರುವುದರಿಂದ ಹನುಮಾನ್ ನದಿ ಕಳೆದ ೨೫ ವರ್ಷದಿಂದ ಒಣಗಿದೆ.

ಸುಬ್ರಹ್ಮಣ್ಯ ಅಯ್ಯರ್ + ಲಕ್ಷ್ಮಿ
(ಪುರೋಹಿತ, ಜ್ಯೋತಿಷಿ)
|
ಕೃಷ್ಣ ಅಯ್ಯರ್ + ಅನಂತಲಕ್ಷ್ಮಿ
(ಶಾಲಾಮಾಸ್ತರು)
|
ಕೆ. ಸುಬ್ಬಯ್ಯ ವಾದ್ಯಾರ್ + ಗೋಮತಿ
(ಪುರೋಹಿತರು)
|
ಎಸ್. ಕಣ್ಣನ್ (೪೮) + ಮಂಜುಳ (ಚಂಗಲ್‌ಪೇಟೆ, ವಡಮ)
(ಪುರೋಹಿತರು)
(ಸಂತಾನವಿಲ್ಲ)



ತಮ್ಮ ಮನೆಯ ಜಗುಲಿಯಲ್ಲಿ ಕೂತ ಎಸ್.ಕಣ್ಣನ್ ವಾದ್ಯಾರ್. ಜತೆಗೆ ಪತ್ನಿ ಮಂಜುಳ, ತಾಯಿ ಗೋಮತಿ:ಶಾಂಬವರ್ ವಡಹರೈ

ಕಣ್ಣನ್ ವಾದ್ಯಾರ ತಂದೆ ಸುಬ್ಬಯ್ಯ ವಾದ್ಯಾರ್ ಎಲತ್ತೂರ್ ಬಿಟ್ಟು ಶಾಂಬವರ್ ವಡಹರೈ ಸೇರಿದರು. ಬಿ.ಕಾಂ., ಪದವೀಧರರಾದ ಕಣ್ಣನ್ ೭ನೆ ವರ್ಷದಿಂದಲೇ ಪೌರೋಹಿತ್ಯದಲ್ಲಿ ನುರಿತರು. ಮದರಾಸಿನ ಕಂಪನಿಯೊಂದರಲ್ಲಿ ನೌಕರಿ ಮಾಡುತ್ತಿದ್ದರು. ತಂದೆಯವರ ಹಠಾತ್ ನಿಧನದಿಂದಾಗಿ ಊರು ಸೇರಿದರು. ಈ ಹೊತ್ತು ಪೌರೋಹಿತ್ಯದಲ್ಲಿ ಅವರಿಗೆ ೨೦ ವರ್ಷದ ಅನುಭವವಿದೆ.

ಕಣ್ಣನ್ ವಾದ್ಯಾರ್ ಅಪ್ಪನಿಂದಲೇ ಮಂತ್ರಗಳನ್ನು ಕಲಿತು, ಪೂರ್ವಾಪರ ಪ್ರಯೋಗಗಳ ತರಪೇತಿಯನ್ನೂ ಅವರಿಂದಲೇ ಪಡೆದರು. ತಿರುನೆಲ್‌ವೇಲಿ ಜಿಲ್ಲೆಯಲ್ಲಿ ಪೂರ್ವಾಪರ ಎರಡನ್ನೂ ಒಬ್ಬರೇ ಮಾಡಿಸುವ ರೂಢಿ ಇದೆ. ಅದೇ ಪದ್ಧತಿಯೇ ಕರ್ನಾಟಕದ ಸಂಕೇತಿಗಳಲ್ಲಿಯೂ ಉಳಿದು ಕೊಂಡಿದೆ ಎಂಬುದನ್ನು ಗಮನಿಸಬಹುದು. ಪಿಳ್ಳೆಯಾರ್ ಕೋವಿಲ್‌ನಲ್ಲಿ ಪೂಜೆ ಮಾಡುವ ಕಣ್ಣನ್ ವಾದ್ಯಾರ್ ರುದ್ರಭೂಮಿಗೆ ಹೋದ ದಿನ ದೇವಸ್ಥಾನಕ್ಕೆ ಹೋಗುವುದಿಲ್ಲ.



ಜಮೀನಿನ ಒಂದು ದೃಶ್ಯ:ಶಾಂಬವರ್ ವಡಹರೈ

ಅಲ್ಲಿನ ಬ್ರಾಹ್ಮಣ ಉಪಪಂಗಡಗಳೆಲ್ಲವೂ ಬಳಸುವ 'ಪ್ರಯೋಗ' ಒಂದೇ, ಸಂಪ್ರದಾಯದಲ್ಲಿ ಭಿನ್ನತೆ ಇದೆ. ಕಣ್ಣನ್ ವಾದ್ಯಾರ ತಂದೆ ಸುಬ್ಬಯ್ಯ ವಾದ್ಯಾರ್ ಕೂಡ ಪೌರೋಹಿತ್ಯ ಮಾಡಿಸುತ್ತಿದ್ದರು. ಶಾಂಬವರ್ ವಡಹರೈನಲ್ಲಿ ಎಲ್ಲ ಉಪಪಂಗಡಗಳ ೧೫ ಪುರೋಹಿತರಿದ್ದರು. ಎಲ್ಲ ಪುರೋಹಿತರೂ ಎಲ್ಲ ಉಪಪಂಗಡಗಳಿಗೂ ಪೌರೋಹಿತ್ಯ ಮಾಡಿಸುತ್ತಿದ್ದರು.

ದಕ್ಷಿಣದ ಸಂಕೇತಿಗಳಲ್ಲಿ ಕೌಶಿಕ ಮತ್ತು ನೈಧ್ರುವ ಕಾಶ್ಯಪ ಗೋತ್ರದವರು ಬಹುಸಂಖ್ಯಾತರು. ಭಾರದ್ವಾಜ, ಸಂಕೃತಿ, ಕೌಂಡಿನ್ಯ, ಹರಿತಸ ಗೋತ್ರಗಳೂ ಇವೆ.

ಕಣ್ಣನ್ ವಾದ್ಯಾರ್ ಕೂಡ ತಮ್ಮ (ದೇವಸ್ಥಾನದ) *ಗದ್ದೆಯನ್ನು ಗುತ್ತಿಗೆಗೆ ಕೊಟ್ಟಿದ್ದರು.* ಹಸುಗಳನ್ನೂ ಸಾಕಿರಲಿಲ್ಲ. ಮೂರು-ನಾಲ್ಕು ತಿಂಗಳಿಂದ ದೇವಸ್ಥಾನದ ಸಂಬಳ ಬಂದಿರಲಿಲ್ಲ. ಕೆಳ ಮಧ್ಯಮಸ್ತರದ ಜೀವನ ಸಾಗಿಸುತ್ತಿದ್ದ ಅವರು 'ತೃಪ್ತನಾಗಿ ಬಾಳುತ್ತಿದ್ದೇನೆ' ಎಂದರು.

ಅವರು ಕೊಟ್ಟ ಇತರ ಮಾಹಿತಿ:

ಅ) ಸಂಕೇತಿಗಳ ವಿಶೇಷ ಎಂದರೆ ಕರ್ನಾಟಕ ಶಾಸ್ತ್ರೀಯ ಸಂಗೀತ ಮತ್ತು ವೇದ (ಈಗ ಅಲ್ಲಿರುವ ಸಂಗೀತ ಕಲಾವಿದರಲ್ಲಿ ಬಹುಮಂದಿ ಸಂಕೇತಿಗಳೇ ಆಗಿದ್ದಾರೆ)

ಆ) ಅಯ್‌ಕುಡಿಗೆ ಬೇರೆ ಬೇರೆ ಊರುಗಳಿಂದ ಬಂದು ಹರಕೆ ಸಲ್ಲಿಸಿ ಹೋಗುತ್ತಾರೆ, ಸಂಸ್ಕಾರಗಳನ್ನೂ ನಡೆಸುತ್ತಾರೆ

ಇ) ಸಂಕೇತಿ ಇಲ್ಲದ ಊರಿಲ್ಲ

ಈ) 'ಸಾಂಕೇತಿ' ಎಂಬುದು ಸರಿಯಾದ ಉಚ್ಚಾರ

ಉ) ಆಳ್ವಾರ್ ಕುರುಚಿಯ ಒಂದು ಅಗ್ರಹಾರ ಪೂರಾ ಸಂಕೇತಿಗಳೇ ಇದ್ದರು

ಊ) ಜೀವನಕ್ಕಾಗಿ ಸಂಕೇತಿಗಳು ಅವಲಂಬಿಸಿದ್ದುದು ಪೌರೋಹಿತ್ಯವನ್ನು ಮಾತ್ರ (ದೇವಸ್ಥಾನ ಸೇವೆಯೂ ಸೇರಿ)

ಋ) ಶಾಂಬವರ್ ವಡಹರೈನಲ್ಲಿದ್ದ ಸಂಕೇತಿಗಳೆಲ್ಲ ಈಗ ತಿರುನೆಲ್‌ವೇಲಿ, ಮದರಾಸು, ಮುಂಬಯಿ, ತಿರುವನಂತಪುರಂಗೆ ವಲಸೆ ಹೋಗಿದ್ದಾರೆ.

ಅವರದಲ್ಲದೆ ಶಾಂಬವರ್ ವಡಹರೈನಲ್ಲಿ ಇದ್ದ ಇನ್ನೊಂದು ಮನೆ ವಿ.ಶಂಕರನ್ ಅವರದು. ವಿಚಿತ್ರ ಸಂಯೋಗವೆಂದರೆ ಅವರೂ ಎಲತ್ತೂರಿನಿಂದ ಬಂದವರೇ. ಅವರ ಅಣ್ಣ ಎಲತ್ತೂರು ವಿ. ನಾರಾಯಣ್ ಅವರಂತೆಯೇ ಶಂಕರನ್ ಅವರಿಗೂ ಇದ್ದ ಕಣ್ಣಿನ ದೋಷ ಎದ್ದು ಕಾಣುತ್ತಿತ್ತು. ಶಂಕರನ್ ನಿವೃತ್ತ ಅಧ್ಯಾಪಕರು, ಅವರಿಗಂತೂ *ಜಮೀನು ಇರಲೇ* ಇಲ್ಲ. "ಹಿಂದೂ ಪತ್ರಿಕೆಯಲ್ಲಿ ಸಂಕೇತಿಗಳ ಬಗ್ಗೆ ನಾಲ್ಕು ಪುಟಗಳ ಲೇಖನ ಬಂದಿತ್ತು. ಅದು ಸಂಕೇತಿಗಳಿಗೆ ಎಷ್ಟು ಅಭಿಮಾನದ ಸಂಗತಿ!" ಎಂದು ಅವರು ಹಲವು ಬಾರಿ ಹೇಳಿದರು. ಅವರು ಕೊಟ್ಟ ಮಾಹಿತಿ:

ಅ) ಸಂಕೇತಿಗಳ ಜೀವನವು ಪೌರೋಹಿತ್ಯದಿಂದಲೇ ನಡೆಯುತ್ತಿತ್ತು (ಅದರಲ್ಲಿ ದೇವಸ್ಥಾನದ ಸೇವೆಯೂ ಸೇರಿತ್ತು)

ಆ) ಶೇ.೫೦ರಿಂದ ಶೇ.೧೦೦ರಷ್ಟು ಸಂಕೇತಿಗಳು ತಮ್ಮನ್ನು ವಡಮರೊಂದಿಗೆ ಗುರುತಿಸಿಕೊಳ್ಳುತ್ತಾರೆ.

ಇ) ಪೌರೋಹಿತ್ಯದಲ್ಲಿ ಸಂಕೇತಿಗಳು 'ನಂಬರ್ ಒನ್' ಎಂಬ ಪ್ರಶಸ್ತಿ ಎಲ್ಲ ಕಡೆಯೂ ಕೇಳಿ ಬರುತ್ತದೆ.

ಈ) ಸಂಕೇತಿಗಳು ಮೃದು ಸ್ವಭಾವದವರು (Soft Nature) (unassuming personality ಎಂಬುದು ಸಂಕೇತಿಗಳ ಎದ್ದು ಕಾಣುವ ಗುಣ. ಅದು ಎಲ್ಲೆಡೆಯಲ್ಲೂ ಹೀಗೆಯೇ. ಸಂಕೇತಿಯೇತರರನ್ನು ಸಂದರ್ಶಿಸಲು ಹೋದಾಗ ಅದು ಇನ್ನೂ ಸ್ಪಷ್ಟವಾಗುತ್ತಿತ್ತು.)

ಉ) ಕೋಮಲವಲ್ಲಿ, ಶ್ರೀವೈಕುಂಠಂ, ತಿರುನೆಲ್‌ವೇಲಿ, ತಿರುವನಂತಪುರಂ, ಶೆಂಕೋಟ್ಟೈಗೆ ಸಂಕೇತಿ ಭಕ್ತರು ದರ್ಶನಾರ್ಥ ಹೋಗುತ್ತಾರೆ.

ಊ) ಬಹುಪಾಲು ಸಂಕೇತಿ ಕುಟುಂಬಗಳು ಬಡತನದ ರೇಖೆಯ ಕೆಳಗೆ ಇವೆ (ಈಗಲೂ ಅರ್ಧ ಡಜನ್ ಮಕ್ಕಳಾಗುವುದಿದೆ. ಅವುಗಳಲ್ಲಿ ಹೆಣ್ಣುಮಕ್ಕಳೇ ಹೆಚ್ಚು) "ನಮಗೂ ಕಷ್ಟ ಇತ್ತು. ಸರಿಯಾದ ಮಾರ್ಗದರ್ಶನ ಇರಲಿಲ್ಲ. ಕಷ್ಟದಿಂದ ಸಂಸಾರವನ್ನು ಮೇಲೆ ತಂದೆ."

ಕರ್ನಾಟಕದ ಹಳ್ಳಿಗಳಲ್ಲಿ 'ಅಷ್ಟಗ್ರಾಮ' ಎಂದು ಯಾವ ಒಕ್ಕೂಟದ ಗುರುತೂ ಈಗ ಇಲ್ಲ. ಆದರೆ ವಿವಾಹ, ರಾಮೋತ್ಸವ ಮೊದಲಾದ ವೇಳೆ ಸುತ್ತಣ ಹಳ್ಳಿಗಳವರು ಕಲೆಯುತ್ತಾರೆ. ಅಕ್ಕಪಕ್ಕದ ಹಳ್ಳಿಗಳ ಸುದ್ದಿ ಜನರಿಗೆ ತಿಳಿದಿರುತ್ತದೆ. ಬಹಳ ಕಡಮೆ ಸಂಖ್ಯೆಯ ಸಂಕೇತಿ ಮನೆಗಳಿರುವುದರಿಂದ ದಕ್ಷಿಣದಲ್ಲಿ ಅಂಥ ವ್ಯವಸ್ಥೆ ಇಲ್ಲ. ಪಕ್ಕದ ಹಳ್ಳಿಯ ಸಂಗತಿಗಳೇ ಜನರಿಗೆ ತಿಳಿದಿರುವುದಿಲ್ಲ.

ಶಂಕರನ್ ಅವರದು ಕೌಶಿಕ ಗೋತ್ರ, ಆಪಸ್ತಂಬ ಸೂತ್ರ, ಯಜುರ್ವೇದ. ಅವರ ಕುಲದೈವ ಮೊರಪ್ಪನಾಡಿನ ಧರ್ಮಶಾಸ್ತಾ. (ತಿರುನೆಲ್‌ವೇಲಿಗೆ ಸಮೀಪವಿರುವ ಮೊರಪ್ಪನಾಡು ಈಗ ತೂತ್ತುಕುಡಿ ಜಿಲ್ಲೆಯಲ್ಲಿದೆ.) *ಶಂಕರನ್ ಅವರ ತಂದೆಯವರು ಮೊರಪ್ಪನಾಡಿನಲ್ಲಿ ಯೇ ನೆಲೆಸಿದ್ದರು; ಸ್ವತಂತ್ರವಾಗಿ ವ್ಯವಸಾಯ ಮಾಡುತ್ತಿದ್ದರು.* (ಶಂಕರನ್ ಮೊರಪ್ಪನಾಡಿನಲ್ಲಿ ಎಂದೂ ನೆಲೆಸಿರಲಿಲ್ಲ.) ಪೂರ್ವದಲ್ಲಿ ಮೊರಪ್ಪನಾಡು ಒಂದು ಸಣ್ಣ ಹಳ್ಳಿಯಾಗಿತ್ತು. *ಅಲ್ಲಿದ್ದವರು ಸಂಕೇತಿ ಕೃಷಿಕರು ಮಾತ್ರ.* ಆದರೆ ಸಂಕೇತಿಗಳು *ಉಳುಮೆ ಮಾಡಿದ್ದನ್ನು ಅವರು ಎಂದೂ ಕಂಡಿಲ್ಲ.*

ಗೋವಿಂದಭಗವತ್ಪಾದರು ಸಂಕೇತಿ ಸಮುದಾಯಕ್ಕೆ ಸೇರಿದವರು ಎಂದು ಹೇಳಿದರೂ, ಅವರಲ್ಲಿ ಆ ಬಗೆಗೆ ಖಚಿತ ಮಾಹಿತಿ ಇಲ್ಲ. ಆದರೆ ಶೃಂಗೇರಿಯಲ್ಲಿ ಶಂಕರರು ಮಠವನ್ನು ಸ್ಥಾಪಿಸುವಾಗ ಅಗತ್ಯವಿದ್ದ ವೈದಿಕ ವಿಧಿವಿಧಾನಗಳನ್ನು ನೆರವೇರಿಸಲು ಕೇರಳದಿಂದ ಸಂಕೇತಿಗಳನ್ನು ಒಯ್ದಿದ್ದರು ಎಂಬ ಬಗೆಗೆ ಖಚಿತ ಮೌಖಿಕ ಪರಂಪರೆ ಇರುವುದನ್ನು ಶ್ರೀಯುತರು ಉಲ್ಲೇಖಿಸುತ್ತಾರೆ.



ವಿ.ಶಂಕರನ್ ಅವರ ಸಂದರ್ಶನ:ಶಾಂಬವರ್ ವಡಹರೈ

ಈ) ಕಡೇನಲ್ಲೂರು ಕೃಷ್ಣಾಪುರಂ



ಕಡೇನಲ್ಲೂರು ಕೃಷ್ಣಾಪುರಂನ ಒಂದು ಬೀದಿ

(ಪೂರ್ಣವಾಗಿ ಸಂಕೇತಿಗಳಿಂದಲೇ ತುಂಬಿದ್ದ ಅಗ್ರಹಾರ. ಅಲ್ಲಿನ ಗದ್ದೆ ಬಯಲಿನಲ್ಲಿ ಈಗಲೂ ಒಬ್ಬರ ಗದ್ದೆಗಳು ಉಳಿದುಕೊಂಡಿವೆ. ಅದಷ್ಟೇ ಅಲ್ಲಿನ ಸಂಕೇತಿಗಳ ವ್ಯವಸಾಯದ ಕುರುಹಾಗಿ ಉಳಿದಿರುವುದು.)

ಈಗ ಕಡೇನಲ್ಲೂರಿನ ಒಂದು ವಿಸ್ತರಣದಂತೆಯೇ ಆಗಿಹೋಗಿರುವ ಕೃಷ್ಣಾಪುರಂನಲ್ಲಿ ಇತ್ತೀಚಿನವರೆಗೂ ಸಂಕೇತಿಗಳಿದ್ದರು. ಪೂರ್ವದಲ್ಲಿ ಆ ಅಗ್ರಹಾರವು *ಪೂರ್ಣವಾಗಿ ಸಂಕೇತಿಗಳಿಂದಲೇ* ತುಂಬಿತ್ತು. ೧೯೯೦ರಲ್ಲಿ ಇದ್ದ ನಾಲ್ಕು ಕುಟುಂಬಗಳೂ ೨೦೦೩ರ ಹೊತ್ತಿಗೆ ಊರು ತೊರೆದು ಪಟ್ಟಣ ಸೇರಿದ್ದವು. ಅಲ್ಲಿದ್ದ ಸಂಕೇತಿಗಳು ಹೊಂದಿದ್ದ *ಗದ್ದೆ-ಬಯಲು* ಎದ್ದು ಕಾಣುವಷ್ಟು ಆಕರ್ಷಕವಾಗಿತ್ತು; ನೀರಿನ ಆಸರೆ ಉಳಿದೆಡೆಗಿಂತ ಹೆಚ್ಚು ತೃಪ್ತಿಕರವಾಗಿತ್ತು.

ರಾಮಸುಬ್ರಹ್ಮಣ್ಯ ಅಯ್ಯರ್ ಅವರು ಅಲ್ಲಿದ್ದ ಸಂಸ್ಕೃತ ವಿದ್ವಾಂಸ ಮತ್ತು ಜ್ಯೋತಿಷಿ. ಅವರಿಗೆ ಆ ಗದ್ದೆ ಬಯಲಿನಲ್ಲಿ ಇನ್ನೂ *ಜಮೀನು ಉಳಿದಿತ್ತು*. ಅಲ್ಲಿದ್ದ ಇನ್ನೊಬ್ಬ ಖ್ಯಾತ ಸಂಸ್ಕೃತ ವಿದ್ವಾಂಸರೆಂದರೆ ಭಗವತೀಶ್ವರ ಶಾಸ್ತ್ರಿಗಳು.



ಕಡೇನಲ್ಲೂರು ಕೃಷ್ಣಾಪುರಂ:ಬೀದಿಯ ಇನ್ನೊಂದು ದೃಶ್ಯ



ಪೆರುಮಾಳ್ ದೇವಸ್ಥಾನ:ಕಡೇನಲ್ಲೂರು ಕೃಷ್ಣಾಪುರಂ



ಗದ್ದೆ ಬಯಲಿನ ದೃಶ್ಯ:ಕಡೇನಲ್ಲೂರು ಕೃಷ್ಣಾಪುರಂ




ಕಲಾವಿದ ಭಗವತೀ ಪ್ರಸಾದ್ ತಾವೇ ಬಿಡಿಸಿಕೊಂಡ ಚಿತ್ರ:ಶೆಂಕೋಟ್ಟೈ

ಉ) ಶೆಂಕೋಟ್ಟೈ

(ಸ್ವತಂತ್ರವಾಗಿ ವ್ಯವಸಾಯವನ್ನೂ ಪಶುಪಾಲನೆಯನ್ನೂ ಮಾಡುತ್ತಿದ್ದುದರ ನೆನಪಿರುವ ಒಬ್ಬ ವೃದ್ಧೆ ಈ ಊರಿನಲ್ಲಿದ್ದಾರೆ.)

ಈಗ ಶೆಂಕೋಟ್ಟೈನಲ್ಲಿ ೧೦ ಸಂಕೇತಿ ಮನೆಗಳಿವೆ. ಹಿಂದೆ ರಿವರ್‌ಸ್ಟ್ರೀಟ್ ಪೂರಾ ಇದ್ದುದು ಸಂಕೇತಿ ಮನೆಗಳೇ. ಆದಿವರಾಹ ಅಯ್ಯರ್ ಇಲ್ಲಿನ ಮುನಿಸಿಪಲ್ ಕೌನ್ಸಿಲರ್ ಆಗಿದ್ದರು. ೧೯೯೧ರಲ್ಲಿ ಮತ್ತು ೧೯೯೪ರಲ್ಲಿ ನನ್ನ ಭೇಟಿಯ ವೇಳೆಗೆ ಇದ್ದ ಖ್ಯಾತ ವಕೀಲ ರಾಮಸ್ವಾಮಿ ಅಯ್ಯರ್ ಅವರು ಕೊನೆಯ ದಿನಗಳಲ್ಲಿ ಬೆಂಗಳೂರಿನಲ್ಲಿ ತಮ್ಮ ಮಗನ ಮನೆಯಲ್ಲಿ ನೆಲೆಸಿದ್ದರು ಮತ್ತು ಅಲ್ಲಿಯೇ ನಿಧನರಾದರು; ಖ್ಯಾತ ಪುರೋಹಿತ ಅಣ್ಣಾವಿ ರಾಮನ್ ಸರ್ಕಾರಿ ನೌಕರಿಯಿಂದ ನಿವೃತ್ತರಾಗಿ ಹತ್ತು ವರ್ಷ ಕಳೆಯುವಷ್ಟರಲ್ಲಿ ನಿಧನರಾದರು; ಖ್ಯಾತ ಕಲಾವಿದ ಭಗವತೀಪ್ರಸಾದ್ ೧೯೯೮ರಲ್ಲಿ ತಮ್ಮ ೭೮ನೆಯ ವಯಸ್ಸಿನಲ್ಲಿ ನಿಧನರಾದರು. ಈಗ ಉಳಿದುಕೊಂಡ ೧೦ ಮನೆಗಳಲ್ಲಿದ್ದವರೂ ನಿವೃತ್ತರಾದ ವೃದ್ಧರಷ್ಟೇ. ಅವರ ಮಕ್ಕಳೆಲ್ಲ ದೂರದ ಊರುಗಳಲ್ಲಿ ನೌಕರಿಯಲ್ಲಿದ್ದರು - ಅಂದರೆ *ಮುಂದಿನ ಕೆಲವೇ ವರ್ಷಗಳಲ್ಲಿ ದಕ್ಷಿಣದ ಯಾವ ಹಳ್ಳಿಯಲ್ಲೂ ಸಂಕೇತಿಗಳು ಉಳಿದಿರುವುದಿಲ್ಲ* ಎಂಬುದರ ಸೂಚನೆ ಅದು. ಮಿಶ್ರಕುಟುಂಬಗಳ ವಿಚಾರದಲ್ಲೂ ನಗರೀಕರಣದ ವಿಚಾರದಲ್ಲೂ ದಕ್ಷಿಣದ ಸಂಕೇತಿಗಳು ಕರ್ನಾಟಕಕ್ಕಿಂತ ಮೂರು ದಶಕದಷ್ಟು ಮುಂದೆ ಇದ್ದಾರೆ.

ಭಗವತೀ ಪ್ರಸಾದರ ಮನೆ ಈ ಮೊದಲು ಅವರೇ ಬರೆದ ಕಲಾಕೃತಿಗಳಿಂದ ಶೋಭಿಸುತ್ತಿತ್ತು. ಅವರಿಲ್ಲದ ಮನೆಯಲ್ಲಿ ಈಗ ಆ ಲಕ್ಷಣ ಇರಲಿಲ್ಲ. ಎಲ್ಲ ಬೋಳುಬೋಳು. ವೃದ್ಧೆಯಾದ ಕೃಷ್ಣಮ್ಮಾಳ್ ಅವರ ಜತೆಗಿರಲು, ಅವರ ಮಗ ಕೃಷ್ಣಪ್ರಸಾದ್ ಯಾವುದೋ ಊರಿನಲ್ಲಿದ್ದ ನೌಕರಿ ಬಿಟ್ಟು ಶೆಂಕೋಟ್ಟೈಗೆ ಬಂದು ನೆಲಸಿದ್ದಾರೆ. ಮಗಳು ಗೋಮತಿ (ಕಣ್ಣಮ್ಮ) ವಿವಾಹವಾಗಿ ಮದರಾಸಿನಲ್ಲಿ ಸಂಸಾರ ಮಾಡಿಕೊಂಡಿದ್ದಾರೆ.




ಭಗವತೀಪ್ರಸಾದರ ಮನೆಯೊಳಗಣ ಒಂದು ನೋಟ:ಕೃಷ್ಣಮ್ಮಾಳ್ ಭಗವತೀ ಪ್ರಸಾದ್ ಸಂದರ್ಶನ:ಶೆಂಕೋಟ್ಟೈ

ಭಗವತೀಪ್ರಸಾದ್ + ಕೃಷ್ಣಮ್ಮಾಳ್ (ತೆಂಕಾಸಿಯ ವಕೀಲ ಶಂಕರನಾರಾಯಣ ಅವರ ೫ನೆಯ ಮಗಳು)
(೧೯೨೦-೧೯೯೮)

ಗೋಮತಿ (ಕಣ್ಣಮ್ಮ)
(ಮದರಾಸು)

ಕೃಷ್ಣಪ್ರಸಾದ್
ಅವಿವಾಹಿತ, ಶೆಂಕೋಟ್ಟೈ



ಕೃಷ್ಣಮ್ಮಾಳ್-ಭಗವತೀಪ್ರಸಾದ್ ಮತ್ತು ಅವರ ಮಗ ಕೃಷ್ಣಪ್ರಸಾದ್: ಶೆಂಕೋಟ್ಟೈ

ಭಗವತೀ ಪ್ರಸಾದ್ ಅವರದು ಋಗ್ವೇದ, ಆಶ್ವಲಾಯನ ಸೂತ್ರ, ನೈಧ್ರುವ ಕಾಶ್ಯಪ ಗೋತ್ರ. ಅವರ ಕುಲದೈವ ಶೆಂಕೋಟ್ಟೈನ ಶಾಸ್ತಾ. ಭಗವತೀ ಪ್ರಸಾದರ ತಂದೆ ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿದ್ದವರು, ಭಗವತೀ ಪ್ರಸಾದರು ಶಾಲೆಯಲ್ಲಿ ಕಲಾ ಶಿಕ್ಷಕರಾಗಿದ್ದವರು. ಹೀಗಾಗಿ ವ್ಯವಸಾಯದ ಜತೆಗೆ ಅವರ ಮನೆ ತೀವ್ರವಾಗಿ ಒಂದಾಗಿರಲಿಲ್ಲ. ಕೃಷ್ಣಮ್ಮಾಳ್ ಅವರ ತಂದೆಯೂ ವಕೀಲರಾದುದರಿಂದ, ತವರಿನಲ್ಲೂ ಅದೇ ಸ್ಥಿತಿ ಇತ್ತು. ಆದರೆ ೭೮ ವರ್ಷದ ಕೃಷ್ಣಮ್ಮಾಳ್‌ಗೆ ಇತರ ಸಂಕೇತಿ ಮನೆಗಳು *ವ್ಯವಸಾಯ ಮಾಡುತ್ತಿದ್ದುದರ ನೆನಪಿದೆ.*

ಇತ್ತೀಚೆಗೆ *ಗುತ್ತಿಗೆ ಕೊಡುವ* ಪರಿಪಾಠ ಬೆಳೆಯಿತಾದರೂ, ಹಿಂದೆ *ಸ್ವತಂತ್ರವಾಗಿ ವ್ಯವಸಾಯದಲ್ಲಿ* ತೊಡಗಿಕೊಂಡಿದ್ದುದರ ಬಗೆಗೆ ಅವರು ಹೇಳು ತ್ತಾರೆ. ಪ್ರತಿ ಮನೆಯಲ್ಲೂ *ಬಹಳ ದನಕರುಗಳು* ಇದ್ದುದನ್ನೂ ಅವರು ನೆನೆಯುತ್ತಾರೆ. ಭಗವತೀ ಪ್ರಸಾದರ ಮನೆಯಲ್ಲೂ ದನಕರುಗಳಿದ್ದುದೂ, ೧೯೪೨ರಲ್ಲಿ ಅವರು ವಿವಾಹವಾಗಿ ಬಂದಾಗ ವರ್ಗಾವಣೆಯ ಕಾರಣದಿಂದಾಗಿ ಅವನ್ನು ಮಾರಿದುದೂ ಅವರಿಗೆ ತಿಳಿದಿದೆ. ವ್ಯವಸಾಯಕ್ಕೆ ಸಂಬಂಧಿಸಿದ ಹಾಡುಗಳಾಗಲಿ ಆಚರಣೆಗಳಾಗಲಿ ಯಾವುದೇ ಸಂಕೇತಿ ಕೃಷಿಕನ ಮನೆಯಲ್ಲಿದ್ದುದು ಅವರಿಗೆ ನೆನಪಿಲ್ಲ. ಆದರೆ ಎಲ್ಲರ ಮನೆಗಳಲ್ಲೂ ಹಾಡು ಹೇಳುತ್ತಿದ್ದುದನ್ನು ಅವರು ತಿಳಿಸಿದರು.



ಸಂಕೇತಿಗೃಹಸ್ಥರೊಬ್ಬರ ಕೊಟ್ಟಿಗೆ: ಶೆಂಕೋಟ್ಟೈ



ಭಗವತೀಪ್ರಸಾದರ ಮನೆಯ ಮುಂಭಾಗ:ಶೆಂಕೋಟ್ಟೈ



ನೀರಿನ ಆಸರೆಯ ಹಿನ್ನೆಲೆಯಲ್ಲಿ ಶೆಂಕೋಟ್ಟೈ

ಊ) ಎರಚ್ಚಕೊಳಂ

(ಇಲ್ಲಿನ ಹಿರಿಯರಿಗೆ ಉಸ್ತುವಾರಿ-ವ್ಯವಸಾಯದ ನೆನಪಾದರೂ ಇದೆ. ಆದರೆ ಅವಕಾಶ ಸಿಕ್ಕರೆ ಕಿರಿಯರು ಊರು ತೊರೆಯಲು ಸಿದ್ಧರಾಗಿದ್ದಾರೆ.)

ಎರಚ್ಚಕೊಳಂನ ಪೆರುಮಾಳ್ ದೇವಾಲಯದ ಸನ್ನಿಧಿವೀಥಿಯಲ್ಲಿರುವ ೨೦ ಬ್ರಾಹ್ಮಣರ ಮನೆಗಳಲ್ಲಿ ಈಗಲೂ ೧೦ ಸಂಕೇತಿಗಳದೇ ಆಗಿವೆ. ಊರಿನಲ್ಲಿ ಮೈಕ್‌ಸೆಟ್ ಇಟ್ಟುಕೊಂಡು ಜೀವನ ಮಾಡುತ್ತಿರುವ ೫೦ ವರ್ಷದ ಹರಿಹರನ್, ಹಳ್ಳಿಯಲ್ಲೇ ಇದ್ದುಕೊಂಡು ವೃತ್ತಿ ಬದಲಿಸಿದವರ ಪ್ರತಿನಿಧಿ.

ಸುಬ್ರಹ್ಮಣ್ಯ ಅಯ್ಯರ್ + ಪಾರ್ವತಿ ಅಮ್ಮಾಳ್
(ವೇದಜ್ಞ)

ಹರಿಹರ ಅಯ್ಯರ್ + ಪೊನ್ನಮ್ಮಾಳ್
(ದೇವಸ್ಥಾನದಲ್ಲಿ ಪಾರಾಯಣ ಸೇವೆ)

ಸುಬ್ರಹ್ಮಣ್ಯ ಅಯ್ಯರ್ (೮೦) + ಗೋಮತಿ ಅಮ್ಮಾಳ್
(ಪೆರುಮಾಳ್ ದೇವಾಲಯದಲ್ಲಿ ಸಹಸ್ರನಾಮ ಪಾರಾಯಣ
ಮತ್ತು ಶಾಸ್ತಾ ದೇವಾಲಯದಲ್ಲಿ ಪೂಜೆ)

ರುಕ್ಮಿಣಿ(೫೪) | ಹರಿಹರನ್(೫೦) | ಮುತ್ತುಲಕ್ಷ್ಮಿ(೪೫) | ಪಾರ್ವತಿ(೪೩)

ಹರಿಹರನ್(೫೦)
(ಎಸ್.ಎಸ್.ಎಲ್.ಸಿ.)
+ ಮೀನಾಕ್ಷಿ
(ಶಾಲೆಯಲ್ಲಿ ಸಂಗೀತ ಶಿಕ್ಷಕಿ)

ಸುಬ್ರಹ್ಮಣ್ಯಂ
(ಇಂಗ್ಲಿಷ್ ಮೀಡಿಯಂನಲ್ಲಿ ಕಲಿಯುತ್ತಿರುವ ಶಾಲಾ ವಿದ್ಯಾರ್ಥಿ)

ಪೆರುಮಾಳ್ ದೇವಾಲಯದ ದೈವವು ಅಳಹಿಯಮನ್ನಾರ್, ಶ್ರೀದೇವಿ, ಭೂದೇವಿ. ಅಲ್ಲಿ ದೇವಸ್ಥಾನದ ಸೇವೆಯಲ್ಲಿದ್ದರೂ, ಅವರ ಕುಲದೈವ ಪೆರುಮೊಯ್ಲಿ ಶಾಸ್ತಾ. ಕೌಶಿಕ ಗೋತ್ರದ ಅವರು ಯಜುರ್ವೇದ ಮತ್ತು ಆಪಸ್ತಂಬ ಸೂತ್ರದ ಪಾಲನೆ ಮಾಡತಕ್ಕವರು.

ಪೆರುಮಾಳ್ ದೇವಾಲಯದಿಂದ ಅಲ್ಲಿ ಸೇವೆ ಮಾಡುವ *ಪ್ರತಿಯೊಬ್ಬರಿಗೂ ಎರಡು ಎಕರೆ ಜಮೀನಿದೆ. 'ಹಿಂದೆ ಸ್ವಂತವಾಗಿ ವ್ಯವಸಾಯ* ಮಾಡುತ್ತಿದ್ದೆವು' ಎಂದು ೮೦ ವರ್ಷದ ಸುಬ್ರಹ್ಮಣ್ಯ ಅಯ್ಯರ್ ಅವರು ಹೇಳುವುದೂ *ಉಸ್ತುವಾರಿಯ ಬಗೆಗೆ ಮಾತ್ರ*. ಆಗ ೧೦ *ಹಸುಗಳನ್ನೂ ಗಾಡಿ, ಎತ್ತನ್ನೂ ಇಟ್ಟುಕೊಂಡಿದ್ದವರು* ಈಗ ಒಂದನ್ನೂ ಇಟ್ಟುಕೊಂಡಿಲ್ಲ. ಜಾಗವಿಲ್ಲ ಎನ್ನುವುದು ಕಾರಣ. 'ಹಸುಗಳು ಮೇಯುತ್ತಿದ್ದ ಜಾಗದಲ್ಲೆಲ್ಲಾ ಈಗ ಊರು ಬಂದಿದೆ' ಎಂಬುದು ಅವರ ಅಳಲು. ಈಗಲಂತೂ ಜಮೀನನ್ನು *ಗುತ್ತಿಗೆಗೆ ಕೊಟ್ಟಿದ್ದಾರೆ*. ಬತ್ತ ಮತ್ತು ಬಾಳೆ ಅಲ್ಲಿನ ಸಾಮಾನ್ಯ ಬೆಳೆ ಆದರೂ ಇವರು ಬಾಳೆ ಬೆಳೆಯುತ್ತಿಲ್ಲ. ಕೆರೆಯು ಈಗಲೂ ನೀರಿನಿಂದ ತುಂಬಿದೆ.

ಉಳಿದ ಮನೆಗಳಲ್ಲೂ ಹೊಸ ಪೀಳಿಗೆಯವರು ಸಾಮಾನ್ಯವಾಗಿ ಮದರಾಸು, ಮುಂಬಯಿ ಮೊದಲಾದ ಊರುಗಳಲ್ಲಿ ಕೆಲಸಕ್ಕೆ ಹೋಗಿದ್ದಾರೆ. ಊರಿನಲ್ಲಿ ವೃದ್ಧರು ಉಳಿದುಕೊಂಡಿದ್ದಾರೆ. ಮಕ್ಕಳು ರಜೆಯಲ್ಲಿ ಬಂದು ನೋಡಿಕೊಂಡು ಹೋಗುತ್ತಾರೆ. ಇದು ಕರ್ನಾಟಕದ್ದೇ ಸ್ಥಿತಿ.

ಈ ಊರಿನ ಬಹಳ ಹಿಂದಿನ ಹೆಸರು ಚತುರ್ವೇದಿ ಮಂಗಳಂ. ಘನಪಾಠಿಗಳೂ, ಶಾಸ್ತ್ರಿಗಳೂ ಇಲ್ಲಿ ಇರುತ್ತಿದ್ದರು. ಸಂಕೇತಿಗಳೇ ಪೂರ್ತಿ ಇದ್ದ ಈ ಊರಿನಲ್ಲಿ ಬರಬರುತ್ತ ಭಟ್ಟರ್‌ಗಳೂ ವಡಮರೂ ಸೇರಿದರು.

ಹರಿಹರನ್ ಅವರದು ಅನೇಕ ವೃತ್ತಿ. ಎರಚ್ಚಕೊಳಂನ ಬಸ್‌ಸ್ಟಾಂಡಿನಲ್ಲಿ ಅವರ ಅಂಗಡಿ ಇದೆ. 'ಶ್ರೀ ಅಯ್ಯಪ್ಪಸೌಂಡ್ಸ್' ಎಂಬುದು ಅವರ ಮೈಕ್‌ಸೆಟ್ ಅಂಗಡಿಯ ಹೆಸರು. ಪೆರುಮಾಳ್ ದೇವಾಲಯದ ಟ್ರಸ್ಟಿಗಳಲ್ಲಿ ಅವರೂ ಒಬ್ಬರು, ಅಲ್ಲಿನ ಲೆಕ್ಕ ಪತ್ರಗಳನ್ನೂ ಅವರೇ ನೋಡಿಕೊಳ್ಳುತ್ತಾರೆ. ದೇವಸ್ಥಾನದ ಪೂಜಾ ಸೇವೆಯ ಜತೆಗೆ ಒಂದು ಲಾರಿ ಆಫೀಸಿನಲ್ಲೂ ಲೆಕ್ಕ ಬರೆಯುತ್ತಾರೆ. ಸುಂದರಂಫೈನಾನ್ಸ್‌ನವರಿಗೂ ಲೆಕ್ಕ ಬರೆದುಕೊಡುತ್ತಾರೆ. ಹೀಗೆ ಹಲವು ಕಸಬುಗಳಿಗೆ ಏಕಕಾಲದಲ್ಲಿ ಕೈಚಾಚುವುದಾಗಲಿ, ಹಲವು ವಿಷಯಗಳಲ್ಲಿ ಪರಿಶ್ರಮ ಹೊಂದಿರುವುದಾಗಲಿ, ಹಲವು ಹವ್ಯಾಸಗಳನ್ನು ಹೊಂದಿರುವುದಾಗಲಿ ಕರ್ನಾಟಕದ ಸಂಕೇತಿಗಳ ಜೀವನಕ್ರಮದಲ್ಲಿ ಹೊಸದಲ್ಲ.

ವೃದ್ಧರಾದ ಸುಬ್ರಹ್ಮಣ್ಯ ಅಯ್ಯರ್ ಅವರೂ ಅದೇ ದೇವಾಲಯದಲ್ಲಿ *೨೫* ವರ್ಷ ಟ್ರಸ್ಟಿಯಾಗಿ ಇದ್ದವರು. ಅವರು ಹೇಳುವುದು,

1) ನಾಗರಕೋಯಿಲ್ ಬಳಿಯ ವಡೀಶ್ವರಂನಲ್ಲಿ ಪೂರಾ ಸಂಕೇತಿಗಳಿದ್ದರು, ಈಗ ಇಲ್ಲ;
2) ಕಾಂಚಿ ಶಂಕರಮಠದಲ್ಲಿ ಹಲವು ಸಂಕೇತಿ ಪಂಡಿತರು ಸೇವೆಯಲ್ಲಿದ್ದಾರೆ;
3) ಸಂಪ್ರದಾಯದ ಹಾಡು ಹೇಳುವವರು ಪ್ರತಿ ಮನೆಯಲ್ಲೂ ಇದ್ದರು, ಶಾಸ್ತ್ರೀಯ ಸಂಗೀತ ತಿಳಿದಿತ್ತು, ಭಜನೆ ಮಾಡುವ ಮಂಡಲಿ ಇತ್ತು.

"ಬೇರೆ ದಾರಿ ಇಲ್ಲ, ಇಲ್ಲಿ ಉಳಕೊಂಡಿದೀನಿ. ಇಲ್ಲ ದಿದ್ದರೆ ನಾನೂ ಪಟ್ಟಣಕ್ಕೆ ಹೋಗಿರುತ್ತಿದ್ದೆ" - ಇದು ಹರಿಹರನ್ ಅವರ ಮಾತು. ಕರ್ನಾಟಕದ ಎಲ್ಲ ಹಳ್ಳಿಗಳಲ್ಲೂ ಇದೇ ಮಾತು ಆಡುವವರು ಈಗ ಇದ್ದೇ ಇದ್ದಾರೆ.

ಹರಿಹರನ್ ಅವರೇ ಸೂಚಿಸಿದಂತೆ ಎದುರು ಮನೆಯ ಶಂಕರ ಸುಬ್ರಹ್ಮಣಿಯನ್ (೬೭) ಅವರನ್ನೂ, ಅವರ ಪತ್ನಿ ಪಿ.ರುಕ್ಮಿಣಿ (೬೦) ಅವರನ್ನೂ ನಾನು ಕಂಡಾಗ ಆ ಸಂಜೆ ದೇವಸ್ಥಾನದ ಧ್ವನಿಮುದ್ರಿತ ಸಹಸ್ರನಾಮ ಕೇಳುತ್ತ ಕೂತಿದ್ದರು. ಅವರ ಮಗ ನಾರಾಯಣ ಮದರಾಸಿನಲ್ಲಿ ಟಿ.ವಿ.ಎಸ್. ಕಂಪನಿಯಲ್ಲಿ ಉದ್ಯೋಗದಲ್ಲಿದ್ದರು. ಆ ಮನೆಯ ಹಿರಿಯರು ಹೇಳಿದ ಒಂದೆರಡು ಸಂಗತಿಗಳು:

1) ಸಂಕೇತಿಗಳು *ನೆಲ ಉತ್ತು ವ್ಯವಸಾಯ ಮಾಡಿದುದನ್ನು ನಾನು ನೋಡಿಲ್ಲ.*
2) ಎರಚ್ಚಕೊಳಂನ ಆ ೧೦ ಮನೆಯಲ್ಲಿ ಯಾರಿಗೂ ಪೆರುಮಾಳ್ ಕುಲದೈವವಲ್ಲ. ಶಂಕೋಟ್ಟೈನಲ್ಲಿರುವ ಒಂದು ಕುಟುಂಬಕ್ಕೆ ಅದು ಮನೆದೇವರು.
3) ಹಿಂದೆ ಗದ್ದೆಗಳಲ್ಲಿ *ಕೇವಲ ಬತ್ತ* ಬೆಳೆಯುತ್ತಿದ್ದರು ಮತ್ತು *ಕೇವಲ ಉಸ್ತುವಾರಿ* ನಡೆಸಿ ವ್ಯವಸಾಯ ಮಾಡುತ್ತಿದ್ದರು.
4) ಅವರ ಮನೆಯಲ್ಲೇ ಹಿಂದೆ *೩ ಜೋಡಿ ಎತ್ತು* ಇತ್ತು, ೪ ಟ್ರಾಕ್ಟರ್ ಇತ್ತು.
5) *ಜನಿವಾರ* ಮಾಡುವವರು ಹಲವರು ಅವರ ಊರಿನಲ್ಲಿದ್ದರು.
6) ಇತರ ಪಂಗಡಗಳ ಪುರೋಹಿತರೇ ಈಗ ಅವರ ಮನೆಗಳಿಗೆ ಬರುತ್ತಿದ್ದಾರೆ.

ಯಜ್ಞನಾರಾಯಣ ಅಯ್ಯರ್
|
ಕೃಷ್ಣಸುಬ್ರಹ್ಮಣ್ಯ ಅಯ್ಯರ್ + ಸೀತಾಲಕ್ಷ್ಮಿ
|
ಯಜ್ಞನಾರಾಯಣ ಅಯ್ಯರ್ + ದೇವನಾಯಕಿ
|
ಶಂಕರಸುಬ್ರಹ್ಮಣ್ಯ ಅಯ್ಯರ್ + ರುಕ್ಮಿಣಿ

ಯಜುರ್ವೇದ, ಆಪಸ್ತಂಬ ಸೂತ್ರ, ಕೌಶಿಕ ಗೋತ್ರದ ಅವರ ಮನೆದೇವರು ಅಂಬಾ ತಾಲೂಕು ಮೇಲೆಶವಲ್‌ನ ನವನೀತಕೃಷ್ಣ.

೫೮) ದರ್ಶನಂಕೋಪು

(ಉಳುಮೆ ಒಂದನ್ನು ಬಿಟ್ಟು, ಸ್ವತಂತ್ರವಾಗಿ ದುಡಿದು ವ್ಯವಸಾಯ ಮಾಡುವವರು ಇನ್ನೂ ಇಲ್ಲಿ ಉಳಿದುಕೊಂಡಿದ್ದಾರೆ. ಅಡಕೆಯನ್ನೂ ಬೆಳೆದಿದ್ದಾರೆ. 'ಸಂಕೇತಿಗಳಿಗೆ ಎರಡೇ ವೃತ್ತಿ: ಒಂದು ವ್ಯವಸಾಯ; ಎರಡು, ವೈದಿಕ ಸೇವೆ' ಎಂಬ ಮಾತು ನಿರ್ಣಾಯಕವಾದುದು.)

ನನ್ನ ಹಳೆಯ ಗೆಳೆಯ ಲಕ್ಷ್ಮಣನ್ ಅವರ ಹೆಂಡತಿ ಮತ್ತು ಮಗ ಬೇಸಗೆ ರಜಾ ಕಳೆಯಲು ತಿರುವನಂತಪುರಕ್ಕೆ ಹೋಗಿದ್ದರು. ಅದು ಲಕ್ಷ್ಮಣನ್ ಅವರ ಅತ್ತೆಯವರ ಊರು. ತಾಯಿ ಅಲಮೇಲು ಅವರು ಗತಿಸಿ ಒಂದು ವರ್ಷವಾಗಿತ್ತು. ಕಳೆದ ಬಾರಿ ತಮ್ಮ ಗದ್ದೆ-ತೋಟದಲ್ಲಿ ಸುತ್ತಾಡಿಸಿದ್ದ ಲಕ್ಷ್ಮಣನ್ ಅವರ ಅಣ್ಣ ಭಗವತೀಶ್ವರನ್ ಪೇಟೆಗೆ ಹೋಗಿದ್ದರು. ನನ್ನ ಮುಖ ನೋಡುತ್ತಲೇ 'ವಾಂಗೋ! ವಾಂಗೋ!' ಎಂದು ಓಡಿ ಬಂದ ಲಕ್ಷ್ಮಣನ್ ಅವರ ಮೂಗಿನ ನಶ್ಯದ ಘಾಟು ಬಾಗಿಲಿನವರೆಗೆ, ಮೊದಲೇ ಬೀಸಿ ಬಂದಿತ್ತು.

ದರ್ಶನಂಕೋಪಿನ ಧರ್ಮರಾಜ ಅಯ್ಯರ್ ಅವರ ಮೊದಲ ಹೆಂಡತಿ ತಿರುಪತಿಗೆ ಹೋಗಿದ್ದಾಗ ಬಾಲ್ಯದಲ್ಲೇ ಗತಿಸಿದ್ದರು, ಎರಡನೆಯ ಹೆಂಡತಿ ಕಾಲರಾದಿಂದ ಗತಿಸಿದ್ದರು. ಲಕ್ಷ್ಮಣನ್ ಅವರ ತಾಯಿ ಅಲಮೇಲು ಅವರು ಧರ್ಮರಾಜ ಅಯ್ಯರ್ ಅವರ ಮೂರನೆಯ ಹೆಂಡತಿ. ಅಲಮೇಲು ಅವರು ತಿರುವನಂತಪುರದ ಭಗವತೀಶ್ವರನ್ ಮತ್ತು ಮೀನಾಕ್ಷಿ ಅವರ ಮಗಳು. ಹಿಂದೆಯೇ ಅವರು ಶುಚೀಂದ್ರಂ ಬಳಿಯ 'ಪರಕ್' ಗ್ರಾಮಕ್ಕೆ ಬಂದು ನೆಲೆಸಿದ್ದರು. ಅದು ಮಹಾರಾಜರ ಕಾಲ. ವಿಲೇಜ್ ಆಫೀಸರ್ ಆಗಿ ಅಲ್ಲಿ ಕೆಲಸ ಮಾಡುತ್ತಿದ್ದರು.

ಧರ್ಮರಾಜ ಅಯ್ಯರ್ ಅವರು *ಕೇವಲ ಬತ್ತ* ಬೆಳೆಯುತ್ತಿದ್ದರು. *ಸ್ವಂತವಾಗಿಯೂ ದುಡಿಯುತ್ತ*, ಆಳುಗಳ ನೆರವೂ ಪಡೆಯುತ್ತಿದ್ದರು. *ಉಳುಮೆಯ ಕಸಬೂ* ಮೂಲತಃ ಮೊರಪ್ಪನಾಡಿನವರಾದ ಅವರಿಗೆ ತಿಳಿದಿತ್ತು, ಆದರೆ ಉಳುತ್ತಿರಲಿಲ್ಲ. *ಎತ್ತುಗಾಡಿ* ಇಟ್ಟಿದ್ದರು. ೫೦ ಹಸು ಇತ್ತು, ಅದಕ್ಕಾಗಿ ಬೇರೆ ಕೊಟ್ಟಿಗೆ ಇತ್ತು. ಅವರೇ ಬೆಳೆಯುತ್ತಿದ್ದ ಹುಲ್ಲು-ದನಗಳಿಗೆ ಸಾಕಾಗುತ್ತಿತ್ತು.

ಧರ್ಮರಾಜ ಅಯ್ಯರ್

ಶಂಕರ ಸುಬ್ರಹ್ಮಣ್ಯ ಅಯ್ಯರ್ + ಗೋಮತಿ ಅಮ್ಮ

ಧರ್ಮರಾಜ ಅಯ್ಯರ್ + ಅಲಮೇಲು

- ಶಂಕರಸುಬ್ರಹ್ಮಣಿಯನ್ (ಹೋಟೆಲ್ ಮ್ಯಾನೇಜರ್ ನಾಗರಕೋಯಿಲ್)
- ಭಗವತೀಶ್ವರನ್ (ಅವಿವಾಹಿತರು)
- ಗೋಮತಿ + ರಾಜಾಮಣಿ (ಬೆಂಗಳೂರು)
- ಮೀನಾಕ್ಷಿ
- ಪದ್ಮ
- ರಾಮನ್ (ಅವಳಿ)
- ಲಕ್ಷ್ಮಣನ್ + (ಅವಳಿ) ಚೆಲ್ಲಮ್ಮಾಳ್ (ರುಕ್ಮಿಣಿ) (ಚೋಳವಡಮ)
  - ಶಿವಪ್ರಸಾದ್ (೧೨) (ಕೂಗುವ ಹೆಸರು **ಧರ್ಮರಾಜನ್**)

ಲಕ್ಷ್ಮಣನ್ ಕೂಡ ಈಗಲೂ ಕೇವಲ ಬತ್ತ ಬೆಳೆಯುತ್ತಿದ್ದಾರೆ. ಎಲ್ಲರ ಹಾಗೆ ಅವರೂ ಗೊಬ್ಬರವನ್ನೂ, ಕೂಲಿಯನ್ನೂ ಕೊಟ್ಟು ಸ್ವಂತ ವ್ಯವಸಾಯ ಮಾಡಿಸುತ್ತಿದ್ದಾರೆ. ಬಾಳೆ, ತರಕಾರಿ, ಅಡಕೆ ತೋಟ, ಒಂದೂ ಇರಲಿಲ್ಲ. ತೆಂಗು ಇದೆ. 'ತಿಪ್ಪೆ ಇದೆಯೆ?' ಎಂದು ಕೇಳಿದ್ದಕ್ಕೆ 'ಆಗ ಇತ್ತು, ಈಗ ಇಲ್ಲ. ಈಗ ಎಲ್ಲಾ ಟ್ರಾಕ್ಟರ್ ಕೆಲಸ. *ಆ ವ್ಯವಸಾಯ ಹೋಯಿತು. ಈಗ ಎತ್ತು ಮತ್ತು ಹಸುಗಳು ಯಾರಿಗೂ ಬೇಡ'*

ಎಂದು ದೇಶದ ಸಾರ್ವತ್ರಿಕ ಸ್ವರೂಪದ ಬಗೆಗೇ ಹೇಳಿದರು. *೧೬ ಗುಂಟೆ ಜಮೀನಿದ್ದ ಲಕ್ಷ್ಮಣನ್* ಕಳೆ ಕೀಳುವುದು ಮೊದಲಾದ ಕೆಲಸಗಳನ್ನೆಲ್ಲ ತಾವೇ ಮಾಡಿಕೊಳ್ಳುತ್ತಾರೆ. *ಖಾಸಗಿಯಾದ* ಕ್ಷೇತ್ರಪಾಲ ದೇವಸ್ಥಾನದಲ್ಲಿ ಪೂಜೆಯನ್ನೂ ಮಾಡುವ ಲಕ್ಷ್ಮಣನ್‌ಗೆ ತಿಂಗಳಿಗೆ ೫೦೦ ರೂ. ಸಂಭಾವನೆ ದೊರೆಯುತ್ತಿದೆ. ದಿನಕ್ಕೆ ಎರಡು ಬಾರಿ ಪೂಜೆ ಮಾಡುತ್ತಾರೆ. ದೇವಸ್ಥಾನದಲ್ಲಿ ವಿಶೇಷ ಕಟ್ಟಳೆಗಳಿಲ್ಲ. ಅಂಥ ವಿಶೇಷ ಕಟ್ಟಳೆಗಳ ಆಗಮಿಕ ದೇವಾಲಯಗಳಲ್ಲಿ ಸಂಕೇತಿ ಅರ್ಚಕರು ಇರುವುದಿಲ್ಲ.

ಈಗ ದರ್ಶನಂಕೋಪಿನಲ್ಲಿ ಉಳಿದುಕೊಂಡಿರುವುದು ಸಂಕೇತಿಗಳ ನಾಲ್ಕು ಮನೆ ಮಾತ್ರ. ಅಲ್ಲಿನ ಪ್ರಸಿದ್ಧ ವೈದ್ಯ ಮಹದೇವ ಅಯ್ಯರ್ ಅವರಿಗೆ *ಭೂಮಿ ಕಾಣಿ ಚೆನ್ನಾಗಿಯೇ* ಇದೆ. ಗುತ್ತಿಗೆಗೆ ಕೊಟ್ಟಿಲ್ಲ, *ಸ್ವಂತ ವ್ಯವಸಾಯವೇ* ಮಾಡಿಸುತ್ತಾರೆ. *ಅಡಿಕೆ, ತೆಂಗು ಇರುವ* ಅವರ *ತೋಟ ಹೊಳೆಯ ದಡ*ದಲ್ಲಿದೆ. ಕನ್ಯಾಕುಮಾರಿ ಜಿಲ್ಲೆಯಲ್ಲೇ ವೀಳೆ ಎಲೆ ಬಹುಕಡಮೆ. ಅಲ್ಲಿನ ಕೃಷಿ ವಿಶ್ವವಿದ್ಯಾಲಯದ ನಿವೃತ್ತ ಪ್ರೊಫೆಸರ್ ಸ್ವಯಂಭುಲಿಂಗಮ್ ಹೇಳುವಂತೆ 'ವೀಳೆಯನ್ನು ಅಲ್ಲೂ ಬೆಳೆಯಬಹುದು. ಅದಕ್ಕೆ ತೇವ ಆರದಂತೆ ನೋಡಿಕೊಳ್ಳುವ ಮುತುವರ್ಜಿ ಬೇಕು. ಜನ ಸೋಮಾರಿಗಳು.'

ಅಲ್ಲಿ ಹರಿಯುವುದು 'ದಂತನದಿ'. (ಬೆಟ್ಟದ ಮೇಲಿನ ಕಾಡೆಲ್ಲಾ ಕಡಿದು ಹಾಕಿದ್ದಾರೆ. ಮಳೆ ಕಡಿಮೆಯಾಗಿದೆ. ನೀರಿನ ಒರತೆಯೂ ಇಲ್ಲ. ಮಳೆಗಾಲದ ನೀರೆಷ್ಟೋ ಅಷ್ಟೆ. ಈಗ ಘಟ್ಟದ ಮೇಲೆ ರಬ್ಬರ್ ಊರಿದ್ದಾರೆ.) ಹಿಂದೆ ಶುಚೀಂದ್ರಂನಲ್ಲಿ ಪೂಜೆಗೆ ನೀರೇ ಇರದೆ ಹೋಯಿತಂತೆ. ಆಗ ಘಟ್ಟದಿಂದ ಶುಚೀಂದ್ರಂವರೆಗೆ ದಂತದಲ್ಲಿ ಗೀಳಿಕೊಂಡು ಆ ಪಾತಳಿಯಲ್ಲಿ ನೀರು ಒಯ್ದರು. ಹಾಗಾಗಿ ಅದಕ್ಕೆ 'ದಂತನದಿ' ಎಂದು ಹೆಸರು ಬಂತು.

ಯಾರೂ ಬಾಳೆ ಬೇಸಾಯವನ್ನು ಮಾಡುವುದಿಲ್ಲ. *ಹೆಚ್ಚು ಭೂಮಿ ಇರುವವರು ಗುತ್ತಿಗೆಗೆ ಕೊಡುತ್ತಾರೆ.* ಗುತ್ತಿಗೆ ಪಡೆದವರು ಒಂದು ವರ್ಷದ ಬತ್ತದ ಹಣ ಕೊಡುತ್ತಾರೆ.

ಬತ್ತದ್ದು ಎರಡು ಬೆಳೆ. ಎರಡು ಬೆಳೆ ನಡುವೆ ಬೇರೆ ಧಾನ್ಯ ಹಾಗೂ *ತರಕಾರಿ* ಬೆಳೆಯುವುದುಂಟು. ಲಕ್ಷ್ಮಣನ್ *ಉದ್ದು ಬೆಳೆದಿದ್ದಾರೆ.* ತರಕಾರಿಯ ಕಾವಲು ಮಾಡುವುದು ಕಷ್ಟ; ಹಾಗಾಗಿ ಅದನ್ನು ಬೆಳೆದಿಲ್ಲ. ಈಗ ಋತುಗಳೇ ಬದಲಾಗಿ ಹೋಗಿವೆ. ಮಳೆ ಅಕಾಲದಲ್ಲಿ ಆಗುತ್ತದೆ; ಉದ್ದಿನ ಬೆಳೆ ಹಾಳಾಗುತ್ತದೆ. ಆ ಆತಂಕದಲ್ಲೇ ಲಕ್ಷ್ಮಣನ್ ತಮ್ಮ ಉದ್ದಿನ ಬೆಳೆಯ ಮೇಲೆ ಕೈ ಆಡಿಸುತ್ತಿದ್ದರು.

ಲಕ್ಷ್ಮಣನ್ ನೀಡಿದ ಇತರ ಮಾಹಿತಿಗಳು:

1) ತಮಿಳುನಾಡು, ಕೇರಳ ಮತ್ತು ಕರ್ನಾಟಕದ ಸಂಕೇತಿಗಳ ಮುಖಚಹರೆಯಲ್ಲಿ ಸೂಕ್ಷ್ಮವಾದ ವ್ಯತ್ಯಾಸವಿದೆ.

2) ಕೀಳ್‌ಪುಲಿಯೂರ್‌ನಲ್ಲಿ ಎರಡು ಬೆಳೆಗಳ ನಡುವೆ *ಸೊಪ್ಪು* ಬೆಳೆದುಕೊಳ್ಳುತ್ತಾರೆ.

3) ದರ್ಶನಂಕೋಪಿನಲ್ಲಿ ಸಂಕೇತಿಗಳನ್ನು ಬಿಟ್ಟರೆ ವಡಮರೂ, ಮುಕ್ಕಾಣಿಯಾನ್‌ರೂ ಇದ್ದಾರೆ. ಒಟ್ಟಾಗಿ ಇರುವುದೇ ಬ್ರಾಹ್ಮಣರ ಆರು ಮನೆ.

4) ತಂದೆಯವರ ಕಾಲದಲ್ಲಿ ನಮ್ಮ ಆರ್ಥಿಕ ಸ್ಥಿತಿ ಇದಕ್ಕಿಂತ ಉತ್ತಮವಾಗಿತ್ತು. ಮನೆ ವಿಭಾಗವಾದ ಮೇಲೆ ಕಷ್ಟ ಗೊತ್ತಾಗುತ್ತಿದೆ. ದೇವಸ್ಥಾನದ ಸೇವೆಯಿಂದಲೂ ತೆಗೆದರೆ ಜೀವನ ನಿಭಾಯಿಸುವುದು ಹೇಗೆ ಎಂಬ ಆತಂಕ ಕಾಡುತ್ತಿದೆ.

ಅಪ್ಪ ಸತ್ತದ್ದರಿಂದ ೮ನೆಯ ತರಗತಿಗೇ ವಿದ್ಯಾಭ್ಯಾಸ ನಿಲ್ಲಿಸಿ ಊರಿಗೆ ಬಂದ ಲಕ್ಷ್ಮಣನ್‌ಗೆ ಕಲ್ಪನೆಯಲ್ಲಾಗಲಿ, ಸಂಕೇತಿ ಪರಂಪರೆಯ ಬಗೆಗಿನ ಅರಿವಿನಲ್ಲಾಗಲಿ, ಬಡತನವಿಲ್ಲ. "ಸಂಕೇತಿಗಳ ಎಲ್ಲ ನೆಲೆಗಳು ಹಾಗೂ ಕುಲದೈವಗಳ ಪರಿಚಯ ಮಾಡಿಕೊಡುವ ಪುಸ್ತಕ ತನ್ನಿ" ಎನ್ನುತ್ತಾರೆ ಅವರು. ಕೊನೆಯದಾಗಿ ನಶ್ಯದ ಚಿಟಿಕೆ ಹಿಡಿದು, ತತ್ತ್ವಬೋಧದ ಆ ಪ್ರಸಿದ್ಧ ಭಂಗಿಯಲ್ಲಿ ಅವರು ಕೊಟ್ಟ ನಿರ್ಣಯ, *"ಸಂಕೇತಿಗಳಿಗೆ ಎರಡೇ ವೃತ್ತಿ ಮಾರಾಯ! ಒಂದು ವ್ಯವಸಾಯ; ಇನ್ನೊಂದು ವೈದಿಕ ಸೇವೆ."* "ಉಳುಮೆ?" ಎಂದು ಕೆದಕಿದರೆ ಚೌಕದಿಂದ ಮೂಗು ಸೀಟಿಕೊಂಡು, ಕಣ್ಣಿನಲ್ಲಿ ನೋವು ತುಂಬಿಕೊಂಡು ಹೇಳುತ್ತಾರೆ, *"ಅದನ್ನು ಬ್ರಾಹ್ಮಣರು ಮಾಡಬಾರದು ಮಾರಾಯ!* ಗೋವಿಗೆ ಹೊಡೆಯಬೇಕಾಗುತ್ತೆ, ಅದು ಮಹಾಪಾಪ!" ಅವರ ದೃಢವಾದ ದನಿ ಮತ್ತು ಮಾತಿಗೆ ಕೊಟ್ಟ ಒತ್ತು - ಅದು ಹಾಗೆಯೇ ಸರಿ. ಸಂಕೇತಿಗಳು ಉಳುವುದಿಲ್ಲ. *ಪಾಪಕ್ಕೂ, ಪರಾವಲಂಬನೆಗೂ ಅವಕಾಶವಿಲ್ಲದ ತೋಟವೇ ಅವರ ಆಶ್ರಯ.* ಆದರೂ ಮೊರಪ್ಪನಾಡು, ಹಾಸನಸೀಮೆ,

ಲಿಂಗದಹಳ್ಳಿಯಲ್ಲಿ ಸಂಕೇತಿಗಳು ಹೊಲದ ಬೇಸಾಯ ಮಾಡಿದ್ದಾರೆ, ಸ್ವಂತಕ್ಕೆ ಉಳುಮೆ ಮಾಡಿದ್ದಾರೆ. ಅದು ಪರಿಸ್ಥಿತಿಯು ಹೇರಿದ ಒತ್ತಡದ ಫಲವಾಗಿದೆ. ಅದೇ ಕಾಲಕ್ಕೆ ಸನ್ನಿವೇಶದ *ಎಂಥ ಸವಾಲನ್ನೂ ಸಂಕೇತಿ ಸಮುದಾಯ ಹೇಗಾದರೂ ಎದುರಿಸುತ್ತದೆ* ಎಂಬುದಕ್ಕೂ ಅದು ಸಾಕ್ಷಿಯಾಗಿದೆ. ಅದು ಧರ್ಮದೊಂದಿಗೆ ಮಾಡಿಕೊಂಡ ರಾಜಿಯೂ ಹೌದು.

ಋೂ) ತೆಂಕಾಸಿ

೦.೧) ನೆಲ್ಲಿಯಪ್ಪನ್

('ನಮಗೂ ಜಮೀನಿತ್ತು, ನಾವೂ ಭತ್ತ ಬೆಳೆಯುತ್ತಿದ್ದೆವು' ಎಂದು ತಮ್ಮ ದೂರ-ಇತಿಹಾಸವನ್ನು ಹೇಳುವ ನಗರವಾಸಿಗಳ ಪ್ರತಿನಿಧಿ ನೆಲ್ಲಿಯಪ್ಪನ್.)

ತೆಂಕಾಸಿಯಲ್ಲಿರುವ ನೆಲ್ಲಿಯಪ್ಪನ್ ಅವರು ಸಂಕೇತಿ ಕೃಷಿ ಜೀವನದ ಬಗೆಗೆ ವಿಸ್ತಾರವಾದ ಮಾಹಿತಿ ಒದಗಿಸುತ್ತಾರೆಂಬ ಆಶ್ವಾಸನೆಯು ಹಲವು ಮೂಲಗಳಿಂದ ಬಂದಿತ್ತು. ತಿರುನೆಲ್‌ವೇಲಿಯಲ್ಲಿ ವಕೀಲಿ ಮಾಡುತ್ತಿದ್ದ ತಂದೆ ಎನ್.ಸುಬ್ಬರಾಮ್ ಅವರ ಆಶ್ರಯದಲ್ಲಿ ಬೆಳೆದ ನೆಲ್ಲಿಯಪ್ಪನ್ ಬಳಿ ಕೃಷಿಯ ಬಗೆಗೆ ನೇರವಾದ ಯಾವ ಮಾಹಿತಿ ಇದ್ದೀತು ಎಂಬುದು ತುಸು ಕುತೂಹಲವನ್ನೂ, ತುಸು ಅನುಮಾನವನ್ನೂ ಮೂಡಿಸಿತ್ತು.

ಟಿ.ಎಸ್. ಸುಬ್ರಮಣಿ ಅಯ್ಯರ್, ತಿರುನೆಲ್‌ವೇಲಿ

ಟಿ.ಎಸ್. ನೆಲ್ಲಿಯಪ್ಪ ಅಯ್ಯರ್ + ಸುಬ್ಬಲಕ್ಷ್ಮಿ
(ಅವರಿಗೆ ಮೂವರು ಪತ್ನಿಯರು)

ಎನ್.ಸುಬ್ಬರಾಮ್ ಎಂ.ಎ., ಬಿ.ಎಲ್.
+ಸಾವಿತ್ರಿ ಅಮ್ಮಾಳ್
(ಸುಬ್ಬ**ರಾಮ್** ಅವರು ತಮಿಳು ಮತ್ತು
ಇಂಗ್ಲಿಷ್ ಭಾಷೆ ಎರಡರಲ್ಲೂ ಎಂ.ಎ., ಪದವಿ
ಪಡೆದಿದ್ದರು. ಮೊದಲ ಸ್ಥಾನ ಗಳಿಸಿ ಮೆಡಲ್ ಪಡೆದಿದ್ದರು)

ಬೃಗತಲಂಬಾಳ್
ತಿರುನೆಲ್‌ವೇಲಿ
ಪಿ.ರಂಗನಾಥನ್, ಅಧ್ಯಾಪಕ (ನಿವೃತ್ತ)

ನೆಲ್ಲಿಯಪ್ಪನ್ + ಆರ್. ವಲ್ಲಿ
(ಜ.೧೯೪೦) (ವಡಮ)
(ಇತರ ಬ್ರಾಹ್ಮಣ ಪಂಗಡಗಳ ಜತೆ
ವಿವಾಹವಾಗುವ ಪದ್ಧತಿಯ ಪ್ರಾರಂಭ ೧೯೬೦ರಲ್ಲಿ)

ಟಿ.ಎಸ್. ರಾಮಸ್ವಾಮಿ
ಕೋರತ್ತೂರ್
ಮದರಾಸು

ಎನ್. **ರಾಮ**ಚಂದರ್ ಎಂ.ಸಿ.ಎ.,
(Ramsandar) (೨೫)
ಮದರಾಸು

ಸಾವಿತ್ರಿಮೀನಾ
ಅಂತಿಮ ಬಿ.ಇ.
(ಕ್ಯಾಂಪಸ್ ಸೆಲೆಕ್ಷನ್ ಆಗಿದೆ)

ನೆಲ್ಲಿಯಪ್ಪನ್‌ರವರ ವಂಶವೃಕ್ಷ

ಈಗಿನ ಕನ್ಯಾಕುಮಾರಿ ಜಿಲ್ಲೆಗೆ ಸೇರಿದ *ತಾಲಕ್ಕುಡಿಯಲ್ಲಿ ಅವರಿಗೆ ಜಮೀನು ಇತ್ತು*. ನೆಲ್ಲಿಯಪ್ಪನ್ ಅವರು ಕಿರಿಯ ವಯಸ್ಸಿನಲ್ಲಿ ಅಲ್ಲಿ ಇದ್ದರು. *ಬತ್ತ* ಬೆಳೆಯುತ್ತಿದ್ದರು. ಪ್ರತಿವರ್ಷ ಕೇವಲ ಬತ್ತ ಬೆಳೆಯುವುದೇ ಆಗ ರೂಢಿಯಾಗಿತ್ತು. ಮುಂದೆ ನೆಲ್ಲಿಯಪ್ಪನ್ ಅವರು ಪಟ್ಟಣದಲ್ಲೇ ಬೆಳೆದರು, ಹಳ್ಳಿಗೆ ಹೋಗಲಿಲ್ಲ. ವಿವಾಹ ಇತ್ಯಾದಿ ಸಮಾರಂಭಗಳಿಗೆ ಎಲ್ಲೆಡೆಯ ಸಂಕೇತಿಗಳೂ ಹೋಗುತ್ತಿದ್ದರು. ಆದರೆ ಅವರು ಜಮೀನಿನ ಸಂಪರ್ಕ ಹೊಂದಲಿಲ್ಲ.

ಕೌಶಿಕ ಗೋತ್ರ, ಯಜುರ್ವೇದ, ಆಪಸ್ತಂಬ ಸೂತ್ರದ ಅವರಿಗೆ ಅಯ್‌ಕುಡಿ ಬಾಲಸುಬ್ರಹ್ಮಣ್ಯಸ್ವಾಮಿ ಮನೆದೇವರು. ತಮಿಳುನಾಡಿನ ವಿದ್ಯುಚ್ಛಕ್ತಿ ಮಂಡಲಿಯಲ್ಲಿ ೩೨ ವರ್ಷ ಜೂನಿಯರ್ ಅಸಿಸ್ಟೆಂಟ್ ಆಗಿ ಸೇವೆ ಸಲ್ಲಿಸಿ ನಿವೃತ್ತರಾಗಿದ್ದಾರೆ. ತಿರುನೆಲ್‌ವೇಲಿ, ತೆಂಕಾಸಿ, ಕಡೇನಲ್ಲೂರ್‌ಗಳಲ್ಲಿ ಸೇವೆ ಸಲ್ಲಿಸಿದ್ದರೂ ಸಂಕೇತಿಗಳ ಕೃಷಿಗೆ ಸಂಬಂಧಿಸಿದ ಮಾಹಿತಿ ಅವರ ಬಳಿ ಇಲ್ಲ. ಅವರು ಇದ್ದುದೆಲ್ಲ ನಗರಗಳಲ್ಲಿ ಎಂಬುದೂ ಅದಕ್ಕೆ ಕಾರಣವಿರಬೇಕು.

ಅವರು ಕೊಟ್ಟ ಮಾಹಿತಿ:

1) ಶೆಂಕೋಟ್ಟೈನ ರಿವರ್ ಸ್ಟ್ರೀಟ್ ತುಂಬ ಸಂಕೇತಿಗಳೇ ಇದ್ದರು.

2) PAMPOLI ತಿರುನೆಲ್‌ವೇಲಿ ಜಿಲ್ಲೆ; ತಿರುಮಲೈ ಕೋಯಿಲ್ (ಶೆಂಕೋಟ್ಟೈ ಹತ್ತಿರ) ಕೊಲ್ಲಂ ರಸ್ತೆಯಲ್ಲಿ ಸಂಕೇತಿಗಳು ಇದ್ದರು.

   ಅವರೆಡೂ ಹಳ್ಳಿಗಳು. ಸಂಕೇತಿಗಳಿಗೆ ಅಲ್ಲಿ *ಜಮೀನು* ಇತ್ತು.


ಕಾಲಡೈಕುರಿಚಿಯಲ್ಲಿ ನಾನು ಭೇಟಿಯಾದ ಮುಖ್ಯರಲ್ಲಿ ಸೇತುರಾಮನ್ ಒಬ್ಬರು. ಆತ ಪ್ರಸಿದ್ಧ ವಿದ್ವಾಂಸ ಕೆ.ಎ. ನೀಲಕಂಠಶಾಸ್ತ್ರಿ ಅವರ ಮೊಮ್ಮಗ. ಆ ಊರಿನಲ್ಲಿ ಬ್ರಾಹ್ಮಣರು ವಾಸಿಸುತ್ತಿದ್ದ ೧೮ ಬೀದಿಗಳಿದ್ದುವು. ವಡಮ, ಬೃಹಚ್ಚರಣ, ತೆಲುಗು ಬ್ರಾಹ್ಮಣರೆಲ್ಲ ಅಲ್ಲಿದ್ದರು. ಸೇತುರಾಮನ್ ಸಂಕೇತಿಗಳ ಹೆಸರೇ ಕೇಳಿರಲಿಲ್ಲ. ಆದರೆ ಕಾಲಡೈಕುರಿಚಿಯಲ್ಲಿ ಸಂಕೇತಿಗಳಿದ್ದರು. ಅವರಿಗೆ ಜಮೀನೂ ಇತ್ತು. ಅಂಬಾಸಮುದ್ರಂ ಮತ್ತು ಕಾಲಡೈಕುರಿಚಿ ಎರಡು ಕಡೆಯೂ ಬತ್ತ ಮಾತ್ರ ಬೆಳೆಯುತ್ತಿದ್ದರು. ಇತರರಂತೆ ಸಂಕೇತಿಗಳೂ *ಗುತ್ತಿಗೆಗೆ ಜಮೀನು ಕೊಡುತ್ತಿರುವ* ವಿಷಯ ಇತರ ಮೂಲಗಳಿಂದ ದೊರೆಯಿತು. ಆ ಎರಡು ಊರುಗಳಲ್ಲೂ ಈಗ ನಿವೃತ್ತ ನೌಕರರಾದ ಸಂಕೇತಿಗಳೇ ಇರುತ್ತಿದ್ದುದರಿಂದ ವ್ಯವಸಾಯದ ಬಗೆಗೆ ಹೆಚ್ಚಿನ ಮಾಹಿತಿಯನ್ನೇನೂ ಅಲ್ಲಿ ನಿರೀಕ್ಷಿಸುವಂತಿರಲಿಲ್ಲ. ಆದರೆ ಕಾಲಡೈಕುರಿಚಿಯ *'ಕನ್ನಾಡಿಯಾನ್ ಕಾಲವಾಯ್'* ಸಂಕೇತಿಗಳ ಕೃಷಿ ನೆಂಟಿನ ಬಗೆಗೆ ಇತಿಹಾಸವನ್ನು ತಿಳಿಸಿತು. ಆ ಕಾಲುವೆ ತೋಡಿಸಿದಾತ ಒಬ್ಬ ಸಂಕೇತಿ, ಕನ್ನಡನಾಡಿನಿಂದ ಹೋದವರು. ಅದರಿಂದಾಗಿ ಅದರ ಹೆಸರು **ಕನ್ನಾಡಿಯಾನ್ ಕಾಲವಾಯ್** ಎಂದೇ ಆಯಿತು. ಅದನ್ನು ತೋಡಿಸಿದ್ದು ಆಧುನಿಕ ಸನ್ನಿವೇಶದಲ್ಲಲ್ಲ ಎಂಬುದನ್ನು ಗಮನಿಸಬೇಕು. ಕರ್ನಾಟಕಕ್ಕೆ ವಲಸೆ ಹೋದ ಸಂಕೇತಿಗಳು ಹೋದೆಡೆಯಲ್ಲೆಲ್ಲಾ ಕೆರೆಕಟ್ಟೆಗಳನ್ನೂ ಛತ್ರಗಳನ್ನೂ ಕಟ್ಟಿಸಿದರು, ಬಹಳಷ್ಟು ನೀರಾವರಿ ಯೋಜನೆಗಳು ಬಕ್ಷಿ ತಿಪ್ಪಯ್ಯನವರಿಂದ ಆದವು. ಇದೆಲ್ಲ ಆಕಸ್ಮಿಕ ಹೋಲಿಕೆಯಲ್ಲ.

೧.೨) ಕೀಳ್‌ಪುಲಿಯೂರ್ ಕೆ.ಪಿ. ಶಿವರಾಮನ್

(ಪ್ರಗತಿಪರ ವ್ಯವಸಾಯಗಾರರಾದ ಕೆ.ಪಿ. ಶಿವರಾಮನ್ 'ಸಂಕೇತಿಗಳ ಬೇರುಗಳು ಹಳ್ಳಿಗಳಲ್ಲಿವೆ' ಎನ್ನುತ್ತಾರೆ. ಬಾಗಾಯ್ತಿನ ಆಶ್ರಮಧರ್ಮದ ಕಾಣ್ಕೆ ಅವರ ಮಾತುಗಳಲ್ಲಿದೆ. ವ್ಯವಸಾಯದ ಪ್ರೀತಿಯ ಬಂಧ ಅವರನ್ನು ಕಾಡುವುದು ಅದಕ್ಕಾಗಿ. ಎಲ್ಲ ಸಂಕೇತಿಗಳೂ ಕೈಯಾರೆ ದುಡಿಯುತ್ತಿದ್ದರೆಂಬ ಅವರ ನೆನಪು ಮೇಲಿನ ಎಲ್ಲ ಮಾತುಗಳಿಗೆ ಮಾತೃಸ್ಥಾನದಲ್ಲಿರುವ ಮಾಹಿತಿ. ಇಂಥ ಪ್ರೀತಿಯಿಂದಲೇ ಕೃಷಿಯಲ್ಲಿ ಅನೇಕ ಮೊದಲ ಹೆಜ್ಜೆಗಳನ್ನಿಟ್ಟ ಸಾಹಸಿ ಶಿವರಾಮನ್. ಬಹುವ್ಯಾಪ್ತಿ, ಶ್ರದ್ಧೆ, ಛಲ, ಜೀವನೋತ್ಸಾಹ ಇವುಗಳಿಂದ ಕೂಡಿದ ವ್ಯಕ್ತಿತ್ವ ಅವರದು. ದಕ್ಷಿಣದ ಸಂಕೇತಿಗಳ ಕೃಷಿಪರಂಪರೆಯು ಕರ್ನಾಟಕದ ಸಂಕೇತಿಗಳದಕ್ಕೆ ಸಂವಾದಿಯಾದುದು ಎಂದು ನಿರ್ಣಾಯಕವಾಗಿ ಹೇಳಲು ಅವರೊಬ್ಬರ ನಿದರ್ಶನ ಸಾಕು.)

ಕರ್ನಾಟಕದ ಸಂಕೇತಿಗಳ *ಭವ್ಯ ಕೃಷಿ ಪರಂಪರೆಗೆ ಸಂವಾದಿಯಾದ* ಚಿತ್ರವನ್ನು ದಕ್ಷಿಣದಲ್ಲಿ ಕಾಣಲು ಸಾಧ್ಯವಾದುದು ಕೀಳ್‌ಪುಲಿಯೂರ್‌ನ

ಕೆ.ಪಿ. ಶಿವರಾಮನ್ ಅವರಲ್ಲಿ. ಕರ್ನಾಟಕದಲ್ಲಿಯೂ ಕಳೆದ ಕೇವಲ ೩-೪ ದಶಕಗಳಲ್ಲಿ ದುಡಿಮೆಯ ಚಿತ್ರವೇ ಬದಲಾಗಿ ಹೋಗಿದೆ. ಒಕ್ಕಲಿಗರೂ ಸೋತು ಬೆರಗಾಗಿ ಕೂರುವಂತೆ ಸಂಕೇತಿಗಳು ದುಡಿಯುತ್ತಿದ್ದ ಕಾಲ ಕೇವಲ ನಾಲ್ಕು ದಶಕಗಳ ಹಿಂದೆ ಇತ್ತು. ಆ ಕಠಿಣ ದುಡಿಮೆ ಕೇವಲ ಕೃಷಿಗೆ ಸೀಮಿತವಾಗಿರಲಿಲ್ಲ. ಮನೆ ಕಟ್ಟಿಕೊಳ್ಳುವುದು, ಮರದ ಕೆಲಸ, ಕಲ್ಲಿನ ಕೆಲಸ, ಹಗ್ಗ ಹೊಸೆಯುವುದು, ಬಾವಿ ತೋಡುವುದು.... ಹೀಗೆ ವಿಸ್ತರಿಸಿಕೊಂಡಿತ್ತು. ನೀರೆತ್ತುವ ಮೋಟರು, ವಿದ್ಯುಚ್ಛಕ್ತಿ, ಆಟೋಮೊಬೈಲ್‌ಗಳು, ಬೋರ್‌ವೆಲ್‌ಗಳು ಹಳ್ಳಿಗಳನ್ನು ಪ್ರವೇಶಿಸಿದ ಮೇಲೆ, ಕಳೆದ ಮೂರು ದಶಕಗಳಲ್ಲಿ ದೈಹಿಕ ಶ್ರಮ ಕಡಿಮೆಯಾಗುತ್ತ ಬಂದಿದೆ. ಆರ್ಥಿಕ ಸುಧಾರಣೆ ಆದಂತೆ ಆಳುಕಾಳುಗಳ



ಕೆ.ಪಿ.ಶಿವರಾಮನ್
ಅವರೊಂದಿಗೆ
ಬಿ.ಎಸ್.ಪ್ರಣತಾರ್ತಿಹರನ್:
ಕೀಳ್‌ಪುಲಿಯೂರ್



ಕೀಳ್‌ಪುಲಿಯೂರ್:
ಒಂದು ಬದಿಯ ನೋಟ

ನೆರವೂ ಪಡೆಯತೊಡಗಿದ್ದಾರೆ. ಈ ಎರಡನೆಯ ಹಂತದ *(ದೈಹಿಕ ಶ್ರಮದ ಇಳಿಕೆಯ) ಸಂದರ್ಭದ ವ್ಯವಸಾಯದ ಪ್ರತಿನಿಧಿಯಾಗಿ* ಶಿವರಾಮನ್ ಸಿಕ್ಕರು. ಜತೆಗೆ ಕರ್ನಾಟಕದ ರೈತರ ಕೃಷಿ-ಸಾಹಸಮತ್ತು ಕೃಷಿ-ಮನೋಧರ್ಮದ ಪರಂಪರೆಯ ಜೀವಂತ ವಾರಸುದಾರರಾಗಿಯೂ ಅವರು ಕಂಡರು. ದೈಹಿಕ ಲಕ್ಷಣ, ದನಿ, ಮಾತಿನ ವರಸೆ, ಧೋರಣೆ, ಲೋಕ ಸಮ್ಮುಖತೆ ಎಲ್ಲದರಲ್ಲಿಯೂ ಅವರು ಕರ್ನಾಟಕದ ಸಂಕೇತಿಗಳ ಪಡಿಯಚ್ಚಿನಂತೆ ಇರುವುದು ಸಹಜವೇ; ೯೦೦ ವರ್ಷಗಳ ಅಗಲಿಕೆಯ ಬಳಿಕವೂ ಅಂಥ ಗಾಢ ಸಾಮ್ಯ ಅಲ್ಲಿ ಕಾಣಸಿಗುತ್ತದೆ ಎಂಬುದು ವಿಸ್ಮಯವನ್ನು ಮೂಡಿಸುತ್ತದೆ.

ಚಿದಂಬರ ಶಾಸ್ತ್ರಿ (ಶಾಸ್ತ್ರ ಮತ್ತು ವೇದ ವಿದ್ವಾಂಸ)

|

ಯಜ್ಞರಾಮ ಶಾಸ್ತ್ರಿ + ನಾರಾಯಣಿ
(ಯಜ್ಞಮಾಡಿದವರು) (ತರ್ಕ, ವ್ಯಾಕರಣ ಶಾಸ್ತ್ರದಲ್ಲಿ ಪಾರಂಗತರು)

|

ಚಿದಂಬರ ಶಾಸ್ತ್ರಿ + ದೇವನಾಯಕಿ
(ವೇದ ಮತ್ತು ಸಂಸ್ಕೃತ ವಿದ್ವಾಂಸ)

|

ಪಿಚ್ಚುಮಣಿ ಬಿ.ಎ., ಬಿ.ಎಲ್.,
ವಕೀಲ
ತಮಿಳು ಮತ್ತು ಇಂಗ್ಲಿಷ್ ವಿದ್ವಾಂಸ
ಚಿನ್ನದಪದಕ ವಿಜೇತ
ಸ್ವಾತಂತ್ರ್ಯ ಹೋರಾಟಗಾರ
(೧೯೧೬-೧೯೯೧)

\+

ಪೊನ್ನಮ್ಮಾಳ್
ಕೀಳ್‌ಕಾಡ್, ಕಾಯಂಕೊಳಂಜಿಲ್ಲೆ.
ಅವರ ಪೂರ್ವಿಕರು ಕೀಳ್‌ಕಾಡ್‌ಗೆ
ವಲಸೆ ಹೋದುದು ಅಯ್‌ಕುಡಿಯಿಂದ.
ಕೀಳ್‌ಕಾಡ್ ಒಂದು ಪಾರಂಪರಿಕ ನೆಲೆ
(೧೯೨೬-೧೯೯೮)

|

ಚಿದಂಬರಂ
ಚಾರ್ಟರ್ಡ್ ಅಕೌಂಟೆಂಟ್
(೧೯೪೧-೧೯೯೫)
+ಸೀತಾ
|
ಸುಧಾಕರ
ಚಾರ್ಟರ್ಡ್ ಅಕೌಂಟೆಂಟ್

ಕೆ.ಪಿ. ಶಿವರಾಮನ್
(ಜ: ೧೯೫೦)

ಕೆ.ಪಿ.ಶಿವರಾಮನ್‌ರವರ ವಂಶವೃಕ್ಷ

ಈ ವಂಶದಲ್ಲಿ ಉದ್ದಕ್ಕೂ ಒಬ್ಬನೇ ಗಂಡು ಮಗ ಇರುವುದನ್ನು ಗಮನಿಸಬಹುದು. ಪಿಚ್ಚುಮಣಿ ಅವರ ಕಾಲಕ್ಕೆ ಇಬ್ಬರು ಗಂಡುಮಕ್ಕಳಾಗಿದ್ದಾರೆ. ವಿದ್ಯೆ ಮತ್ತು ಕಸಬಿನಲ್ಲೂ ಕಾಲಕ್ಕೆ ತಕ್ಕಂತೆ ಬದಲಾವಣೆಯಾಗಿದೆ. ಸಂತಾನ ನಿಯಂತ್ರಣ ಕ್ರಮ ಇಲ್ಲದ ಕಾಲದಲ್ಲೂ ವಂಶ ದೊಡ್ಡದಾಗಿ ಬೆಳೆದಿಲ್ಲ. **ಕರ್ನಾಟಕದ ಸಂಕೇತಿಗಳಂತೆಯೇ ಅಜ್ಜಂದಿರ ಹೆಸರನ್ನು ಮೊಮ್ಮಕ್ಕಳಿಗೆ ಇಟ್ಟಿದ್ದಾರೆ.**

ಕೆ.ಪಿ. ಶಿವರಾಮನ್ ಅವರ ತಂದೆ ಶ್ರೀ ಪಿಚ್ಚುಮಣಿ ಅವರು ೧೯೪೨ರಲ್ಲಿ ತೆಂಕಾಸಿಯ ಟೌನ್ ಸೆಕ್ರೆಟರಿ ಆಗಿದ್ದರು. ಮದ್ಯಪಾನ ನಿಷೇಧ ಚಳವಳಿಯಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದರು. ತಮಿಳುನಾಡು ಪೂರ್ಣವಾಗಿ ಒಳಗೊಳ್ಳುವಂತೆ ವೃತ್ತಪತ್ರಿಕೆ ಪ್ರಾರಂಭಿಸುವ ಸಿದ್ಧತೆಯಲ್ಲಿದ್ದರು. ಜೈಲು ಸೇರಿದ್ದರಿಂದ ಆಗಲಿಲ್ಲ.

ಅವರನ್ನು ತೀವ್ರಗಾಮಿಯಾಗಿಸಿದ ಹಿನ್ನೆಲೆಯೂ ದೊಡ್ಡದು. ೧೯೧೧ರಲ್ಲಿ ತಿರುನೆಲ್‌ವೇಲಿಯಲ್ಲಿ ಆ್ಯಷ್ ಮರ್ಡರ್ ಕೇಸ್ ದೊಡ್ಡದಾಗಿ ನಡೆಯಿತು. ವಿ.ವಿ. ಸುಬ್ರಹ್ಮಣ್ಯ ಅಯ್ಯರ್ ಮೊದಲಾದವರು ಅದರಲ್ಲಿ ತೊಡಗಿಕೊಂಡಿದ್ದರು. *ಭಾರತಮಾತಾ ಚಳವಳಿಯ* ಆ ಸಂದರ್ಭದಲ್ಲಿ ವಾಂಚಿನಾಥನ್ ಆ್ಯಷ್ ಮೇಲೆ ಗುಂಡು ಹಾರಿಸಿದ್ದರು. ಆ ಪ್ರಭಾವಗಳ ಮುನ್ನಡೆಯಾಗಿ ಪಿಚ್ಚುಮಣಿ ಸ್ವಾತಂತ್ರ್ಯ ಸಂಗ್ರಾಮದ ಮುಂಚೂಣಿಯಲ್ಲಿ ನಿಂತರು.

ವಾಗೇಶು ಅಯ್ಯರ್ ಅವರು ಬಾಲಭಾರತಿ ಪ್ರಕಾಶನದ ಪ್ರಯತ್ನ ನಡೆಸಿದ್ದರು. ಅದು ಸಫಲವಾಗಲಿಲ್ಲ. ಪಿಚ್ಚುಮಣಿ ಆ ಯತ್ನಕ್ಕೆ ಜೀವ ಕೊಟ್ಟರು. **ನವಯುಗ ಪಬ್ಲಿಷಿಂಗ್ ಹೌಸ್** ಸ್ಥಾಪಿಸಿದರು. ಬ್ರಿಟಿಷ್ ಸರಕಾರ ಅದನ್ನು ಬಗ್ಗುಬಡಿಯಿತು.

ಸುಬ್ರಹ್ಮಣ್ಯ ಭಾರತಿ ಅವರ ಬಗೆಗೆ ಬರೆದವರನ್ನೂ, ಅವರ ಜತೆ ಇರುವವರನ್ನೂ ಬಂಧಿಸುವ ದಾಂಧಲೆ ನಡೆದಿತ್ತು. ಪಿಚ್ಚುಮಣಿ ಅವೆರಡನ್ನೂ ಮಾಡಿದವರು. ಬಂಧಿತರಾದರು.

ಸ್ವಾತಂತ್ರ್ಯ ಬಂದನಂತರ ಮಾಸಾಶನ ಕೊಡಲು ಸರ್ಕಾರ ಮುಂದೆ ಬಂತು. "ನನ್ನ ಕರ್ತವ್ಯ ನಾನು ಮಾಡಿದೆ. ಮಾಸಾಶನ ಬೇಡ" ಎಂದು ಪಿಚ್ಚುಮಣಿ ಅದನ್ನು ನಿರಾಕರಿಸಿದರು. *ಅಸ್ಪೃಶ್ಯತಾ ವಿರೋಧೀ ಚಳವಳಿ*ಯನ್ನು ಮುಂದುವರಿಸಿದರು.

ಪಿಚ್ಚುಮಣಿ ಸ್ವಾತಂತ್ರ್ಯಹೋರಾಟದ ಅಂಗವಾಗಿ ನೂರಾರು ಲೇಖನಗಳನ್ನು ಬರೆದು ಪ್ರಚುರಪಡಿಸುತ್ತಿದ್ದರು. ತಮಿಳು ಮತ್ತು ಇಂಗ್ಲಿಷ್ ವಿದ್ವಾಂಸರಾದ ಅವರಿಗೆ ಸುಬ್ರಹ್ಮಣ್ಯ ಭಾರತಿ ಅವರ ಮಾರ್ಗದರ್ಶನ ಮತ್ತು ಸ್ಫೂರ್ತಿ ಇದ್ದವು. ಆದರೆ ಆ ಯಾವ ಲೇಖನವನ್ನೂ ಸಂಗ್ರಹಿಸಿ ಇಡಲಿಲ್ಲ. ಶಿವರಾಮನ್ ಅಂಥ ಪ್ರಯತ್ನ ಮಾಡಿದರು. ಆದರೆ ಪಿಚ್ಚುಮಣಿ 'nonsense' ಎಂದು ಹೇಳಿ ಆ ಯತ್ನವನ್ನು ತಪ್ಪಿಸಿದರು. ಅವರು ಬರೆದಿದ್ದ ಲೇಖನಗಳು ಆ ಕಾಲಕ್ಕೆ ಪರಿಣಾಮಕಾರಿಯಾಗಿದ್ದವು, ಸಕಾಲಿಕವಾಗಿದ್ದವು. ಸ್ವಾತಂತ್ರ್ಯಬಂದ ನಂತರ ಅದಕ್ಕೆ ಜಾಗವಿಲ್ಲ ಎಂಬುದು ಅವರ ನಿಲುವಾಗಿತ್ತು.

ಪಿಚ್ಚುಮಣಿ ಅವರ ಮಾರ್ಗದಲ್ಲೇ ಮುಂದುವರಿದ ಶಿವರಾಮನ್, ಸುಬ್ರಹ್ಮಣ್ಯ ಭಾರತಿ ಅವರ ಬಗೆಗೆ ಒಂದು ಲೇಖನ ಬರೆದು ತೃಪ್ತಿಪಟ್ಟುಕೊಂಡರು. ಆದರೆ ಪಿಚ್ಚುಮಣಿ ಅವರ ಲೇಖನವನ್ನು ಜೋಡಿಸಿ ಪ್ರಕಟಿಸಲು ಸಮಯವಿಲ್ಲದಷ್ಟು ಕೆಲಸಗಳಲ್ಲಿ ತೊಡಗಿಕೊಂಡರು. ಹಾಗಾಗಿ ಪಿಚ್ಚುಮಣಿ ಅವರ ನಿಧನದ ನಂತರವೂ ಅವು ಪುಸ್ತಕ ರೂಪ ಕಾಣಲಿಲ್ಲ.

ಕೆ.ಪಿ.ಶಿವರಾಮನ್: ಸಂದರ್ಶನ

* **ಶಿವರಾಮನ್ ಅವರೆ, ನೀವೇಕೆ ತಮಿಳುನಾಡಿನ ಸಂಕೇತಿಗಳ ಸಂಘಟನೆಗೆ ಯತ್ನ ಮಾಡಿಲ್ಲ?**

\- ಇಲ್ಲಿ ಸಂಕೇತಿಗಳ ೩೦೦ ಕುಟುಂಬಗಳಿವೆ. ಎಲ್ಲರೂ ದೂರ ದೂರ ಚದುರಿದ್ದಾರೆ. ಅವರೆಲ್ಲ ಒಂದೇ ಕಡೆ ಸೇರುವಂತೆ ಮಾಡಲಾಗುತ್ತಿಲ್ಲ. ಎಲ್ಲಿ ಸೇರುವುದು, ಯಾವಾಗ ಸೇರುವುದು ಎಂಬುದು ನಿರ್ಧರಿಸಲಾಗದ ತೊಡಕಾಗಿದೆ.

* **ಹಳ್ಳಿಯ ನಮ್ಮ ಬೇರುಗಳು?**

\- ಅದು ಅಪರಿಹಾರ್ಯವಾದುದು. ವ್ಯವಸಾಯ ನಮ್ಮ ಅನೂಚಾನ ಜೀವನದ ಭಾಗ. ನಮ್ಮ *ಬೇರುಗಳು ಹಳ್ಳಿಗಳಲ್ಲಿವೆ.*

* **ನಿಮ್ಮ ಬೇರು?**

\- *ಕೀಳ್‌ಕಾಡ್*ನಮ್ಮ ಪೂರ್ವಿಕರ ಊರು. ಅದು ಸಂಕೇತಿಗಳ ಪಾರಂಪರಿಕ ನೆಲೆ. ಅದು ಕೇರಳದಲ್ಲಿದ್ದು ನಮಗೆ ೬೦೦ ಎಕರೆಯಷ್ಟು ಜಮೀನಿತ್ತು. ಅದನ್ನೆಲ್ಲಾ *ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ಸಮರ್ಪಿಸಿದೆವು.* ಈಗ ಆ ಸಂಬಂಧವಿಲ್ಲ.

* **ಈಗ?**

\- ಕೀಳ್‌ಪುಲಿಯೂರ್‌ಗೆ ಬಂದು ನೆಲಸಿದ್ದು ನಮ್ಮ ಮುತ್ತಜ್ಜ. ಅವರಿಗೆ ಇಲ್ಲಿ ೧೫೦ ಎಕರೆ ಜಮೀನಿತ್ತು. ನಮ್ಮ ಕಾಲಕ್ಕೆ ೨೫ ಎಕರೆ ಉಳಿಯಿತು. ನಾನು ಅದನ್ನು ರೂಢಿಸಿದೆ. ಪ್ರಗತಿಪರ ವ್ಯವಸಾಯ ಮಾಡಿದೆ, ವೈಜ್ಞಾನಿಕ ವಿಧಿವಿಧಾನಗಳನ್ನು ಬಳಸಿದೆ... ಕೊನೆಗೆ ಮಾರಬೇಕಾಯಿತು (ವಿಷಾದದಿಂದ)

* **ಅದನ್ನೇಕೆ ಮಾರಿದಿರಿ?**

\- ನನ್ನ ಸೋದರ ಮದರಾಸಿನಲ್ಲಿ ನೆಲೆಸಬಯಸಿದರು. ಅಲ್ಲಿ ಹೋಗಿ ಮೃತರೂ ಆಗಿಬಿಟ್ಟರು. ಮಾರಬೇಕೆಂಬ ಒತ್ತಡ ಬಂತು. ನಾನು ಅವಿವಾಹಿತ. ಕೌಟುಂಬಿಕ ಹೋರಾಟವನ್ನಾದರೂ ಮಾಡಿ ಜಮೀನು ಉಳಿಸಿಕೊಳ್ಳುವ ಆಸಕ್ತಿ ಉಳಿಯಲಿಲ್ಲ. ಯಾರಿಗಾಗಿ ಮಾಡಲಿ? *ಆದರೆ ವ್ಯವಸಾಯದ ಪ್ರೀತಿಯ ಬಂಧ ಆಗಾಗ ನನ್ನನ್ನು ಈಗಲೂ ಕಾಡುತ್ತಿರುತ್ತದೆ.*

* **ಮಣ್ಣು ಮುಟ್ಟಿ ದುಡಿದ ಅನುಭವ ಇದೆಯೇ? ಕರ್ನಾಟಕದ ಸಂಕೇತಿಗಳು ಹಾಗೆ ದುಡಿಯುತ್ತಾರೆ.**

\- ಅದು *ಮುತ್ತಜ್ಜನ ಕಾಲದಲ್ಲಿತ್ತು. ಎಲ್ಲ ಸಂಕೇತಿ ನೆಲೆಗಳಲ್ಲೂ ಕೈಯಾರೆ ದುಡಿಯುವ ಪರಂಪರೆ* ಇತ್ತು. ವೈದಿಕ ವೃತ್ತಿ ಮಾಡುವವರನ್ನು ಹೊರತುಪಡಿಸಿದರೆ ಆ ದುಡಿಮೆ ಅನಿವಾರ್ಯವೂ ಆಗಿತ್ತು.

* **ಆಗಿನ ಆರ್ಥಿಕ ಪರಿಸ್ಥಿತಿ?**

\- ಎಲ್ಲೆಡೆಯೂ ಸಾಮಾನ್ಯವಾಗಿ ಬಡತನವೇ ಇತ್ತು. ಆದರೆ ನಮ್ಮ ಮನೆಯ ಆರ್ಥಿಕ ಸ್ಥಿತಿ ಚೆನ್ನಾಗಿತ್ತು. ಕೀಳ್‌ಪುಲಿಯೂರಿನ ದೊಡ್ಡ ಶ್ರೀಮಂತರೇ ನಾವಾಗಿದ್ದೆವು. ೧೯೧೭ರಲ್ಲಿಯೇ ನಾವು ಆದಾಯತೆರಿಗೆ ಸಲ್ಲಿಸುತ್ತಿದ್ದೆವು. ೧೯೧೫ರಲ್ಲಿ ಆದಾಯ ತೆರಿಗೆ ಜಾರಿಗೆ ಬಂದಿತ್ತು. ... ಆಗ ನಮ್ಮ ಮನೆಯ ಆದಾಯವು ವಾರ್ಷಿಕ ೩೫೦೦ ರೂ ಇತ್ತು. (ಇವತ್ತಿನ ಬೆಲೆಯಲ್ಲಿ ಅದರ ಮೌಲ್ಯ ೭ ಲಕ್ಷ) (ಆ ಕಡತಗಳನ್ನೂ ಶಿವರಾಮನ್ ಜೋಪಾನವಾಗಿ ಇಟ್ಟಿದ್ದರು.) ೧೯೨೪ರಲ್ಲಿ ಅಜ್ಜ ಕೂಡ ಆದಾಯ ತೆರಿಗೆ ಸಲ್ಲಿಸುವುದನ್ನು ಮುಂದುವರಿಸಿದ್ದರು.


* **ನಿಮ್ಮ ಕೃಷಿ ಹೇಗೆ ಸಾಗಿತು?**

\- *ತೋಟ, ಗದ್ದೆ, ಹೊಲ* - ಮೂರೂ ಇತ್ತು. ಕುತ್ರಾಲಂ ನದಿಯ ನೀರು ಗದ್ದೆಗೆ ಸಾಕು. ನೋಡಿ, ಈ ಕೆರೆ ಪೂರ್ಣವಾಗಿ ಈಗಲೂ ತುಂಬಿದೆ. ಅದರ ನೀರು ನೇರವಾಗಿ ನಮ್ಮ ಗದ್ದೆಗೇ ಹರಿದುಬರುತ್ತದೆ. ಬತ್ತ ಎರಡು ಬೆಳೆ, ನಡುವೆ ಮೆಣಸಿನಕಾಯಿ ಅಥವ ಈರುಳ್ಳಿ. ನಾನೇ ನಿಂತು ವ್ಯವಸಾಯ ಮಾಡುತ್ತಿದ್ದೆ. ೨೫ ಎಕರೆ ಜಮೀನು ಮಾಡುವಾಗ ಕೂಲಿ ಆಳುಗಳನ್ನು ಅವಲಂಬಿಸದೆ ವಿಧಿ ಇರಲಿಲ್ಲ. ಅಲ್ಲದೆ ನಾನು ಇತರ ವೃತ್ತಿಗಳಲ್ಲೂ ತೊಡಗಿಕೊಂಡಿರುತ್ತಿದ್ದೆ.

* **ಕೆರೆಯ ತೂಬಿನಿಂದ ನಿಮ್ಮ ಗದ್ದೆಗೇ ನೇರವಾಗಿ ನೀರು ಹರಿದುಬರುತ್ತಿದೆ...**

\- ಹೌದು. ಅದನ್ನು ಇಡೀ ಬೌಂಡರಿಗೆ ಸಮವಾಗಿ ಹರಡಲು ಅಲ್ಲಲ್ಲಿ ಕಟ್ಟಿರುವ ಕಲ್ಲಿನ ಅಣೆಗಳನ್ನು ನೋಡಿ.

* **ಅಷ್ಟಿದ್ದೂ ಬಾವಿ ಏಕೆ ತೋಡಿಸಿದಿರಿ?**



ಕೆರೆಯ ದಡದಲ್ಲಿ ಕೆ.ಪಿ.ಶಿವರಾಮನ್ ಅವರೊಂದಿಗೆ :ಕೀಳ್‌ಪುಲಿಯೂರ್



ಬಾವಿಯ ದಡದಲ್ಲಿ ಅಡಿಕೆ ಮರ ಹಿಡಿದು ನಿಂತ ಕೆ.ಪಿ.ಶಿವರಾಮನ್:ಕೀಳ್‌ಪುಲಿಯೂರ್

- ಇಡೀ *೨೫ ಎಕರೆ ಬೌಂಡರಿ*ಯನ್ನು ತೋಟ ಮತ್ತು ಗದ್ದೆಯಾಗಿ ಪರಿವರ್ತಿಸಿದೆ. ಅಗತ್ಯವಾದಾಗ ಅಗತ್ಯವಾದಷ್ಟು ನೀರನ್ನು ಉಚಿತವರಿತು ಹಾಯಿಸಲು ಅದು ಬೇಕಾಯಿತು. ಯಾವಾಗಲೂ ನೀರಿನ ಆಸರೆ ತಪ್ಪದಂತೆ ನೋಡಿಕೊಳ್ಳಲೂ ಅದನ್ನು ಯೋಜಿಸಿದೆ. ಹೀಗೆ *ಒಂದು ತೆರೆದ ಬಾವಿಯನ್ನು ಜಮೀನಿನಲ್ಲಿ ತೋಡಿಸಿದ ಮೊದಲಿಗ* ನಾನು. ಅದೂ 30' x 40' ಅಳತೆಯ ಅಚ್ಚುಕಟ್ಟಾದ ಬಾವಿ. ೧೯೬೦ರಲ್ಲಿ ಅದನ್ನು ತೋಡಿಸಿದೆ.

* **ಮಿಷನ್ ಕೂಡ ಇರಿಸಿದ್ದೀರಿ.**


- ಅದರದೂ ಒಂದು ಕಥೆಯೇ. ನನ್ನ ಬಾವಿಗಾಗಿಯೇ ಒಂದು ಟ್ರಾನ್ಸ್‌ಫಾರ್ಮರ್ ನೆಡಿಸಿದೆ. ಇಲ್ಲಿಗೆ ವಿದ್ಯುಚ್ಛಕ್ತಿ ಸರಬರಾಜು ಮಾಡಲು ನಲವತ್ತೆಂಟು ಕಂಬಗಳನ್ನು ನೆಡಿಸಿ ತಂತಿ ಎಳೆಸಿದೆ. *ಈ ಥರದ ಕಲ್ಪನೆಯೂ ಯಾರಿಗೂ ಇರಲಿಲ್ಲ*, ಮಾಡಿಸುವುದೂ ಸಾಧ್ಯವಿರಲಿಲ್ಲ. ನನ್ನ ರಾಜಕೀಯ ಪ್ರಭಾವವನ್ನೆಲ್ಲ ಬಳಸಿ ಅದನ್ನು ಸಾಧ್ಯವಾಗಿಸಿದೆ.

* **ಇಷ್ಟು ಮಾಡಿ ಕೃಷಿಯಲ್ಲಿ ಹೊಸತೇನು ಪ್ರಯೋಗ ಮಾಡಿದಿರಿ?**

- *ತೆಂಗು, ಅಡಕೆಯ ತೋಟ* ಒಂದು ಕಡೆಗೆ ಇದೆ. ಗದ್ದೆಯಲ್ಲಿ ಪರ್ಯಾಯ ಬೆಳೆಯೂ ಸೇರಿದಂತೆ ಒಟ್ಟು *ಮೂರು ಬೆಳೆ ತೆಗೆಯಲು ಪ್ರಾರಂಭಿಸಿದ ಮೊದಲಿಗ ನಾನೇ.* ಪರ್ಯಾಯ ಬೆಳೆಯಾಗಿ ಸೊಪ್ಪು ಬೆಳೆಯುತ್ತಿದ್ದ ಜಾಗದಲ್ಲಿ, ಮೆಣಸಿನಕಾಯಿ ಬೆಳೆಯಲು ಪ್ರಾರಂಭಿಸಿದ್ದೂ ನಾನೇ. *ಹೊಸ ಮಾವಿನ ತಳಿ*ಗಳನ್ನು ತಂದು ಮಾವಿನ ತೋಟ ಮಾಡಿದೆ. ಮಾವು ಮತ್ತು ಹಲಸು ಈ ಸುತ್ತಣ ತೋಟಗಳಲ್ಲಿ ಸಾಮಾನ್ಯ ಬೆಳೆ. ಆದರೆ ಸಾಂಪ್ರದಾಯಿಕ ತಳಿಯ ಬದಲು ಹೊಸ ತಳಿಗಳನ್ನು ರೂಢಿಗೆ ತಂದದ್ದು ನಾನೇ *ಮೊದಲು.* ಅದಕ್ಕಿಂತ ಮುಖ್ಯವಾಗಿ *ಕಿತ್ತಲೆ ಬೇಸಾಯ* ಮಾಡಿ ಅದರದೇ ಒಂದು ಎಸ್ಟೇಟ್ ಮಾಡಿದ್ದು ನನ್ನ ಬಹಳ ದೊಡ್ಡ ಪ್ರಯೋಗ.

* **ಕಿತ್ತಲೆ ತೋಟ ಕಾಣುತ್ತಿಲ್ಲ.....**

- ಅದನ್ನು ಇಲ್ಲಿ ಬೆಳೆಸಿದ್ದು ಎಷ್ಟು ಕಷ್ಟವೋ ಉಳಿಸುವುದೂ ಅಷ್ಟೇ ಸೂಕ್ಷ್ಮವಾದ ಕೆಲಸ. ನೀರು, ನೆರಳು, ಗೊಬ್ಬರದ ಹದವನ್ನು ಸರಿಯಾಗಿ ಕಾಪಾಡಿಕೊಂಡು ನಾನು ಅದನ್ನು ಪೋಷಿಸಿದ್ದೆ... ಆದರೆ ಅದನ್ನು ಕೊಂಡವರು ಅಷ್ಟು ಗಮನ ಕೊಡದೆ ಎಲ್ಲ ಹಾಳಾಗಿದೆ. ಉಳಿದುದೆಲ್ಲವನ್ನೂ ಅನುಕರಿಸಿದ ಇತರ ರೈತರು ಯಾರೂ ಕಿತ್ತಲೆ ತೋಟ ಮಾಡಲಾರದೆ ಹೋದರು.



ತಮ್ಮ ಜಮೀನಿಗಾಗಿಯೇ ತಂತಿ ಎಳೆಸಿ ಟ್ರಾನ್ಸ್‌ಫಾರ್ಮರ್ ಸ್ಥಾಪಿಸಿದ ಮೊದಲಿಗ ಕೆ.ಪಿ.ಶಿವರಾಮನ್:ಕೀಳ್‌ಪುಲಿಯೂರ್

ನಾನು ತಂತಿ ಎಳೆಸಿದ ಮೇಲೆ ೨೦

ರೈತರು ಬಾವಿ ತೆಗೆಸಿಕೊಂಡರು!

* **'ಬೇರೆ ಕಸುಬು' ಎಂದು ಹೇಳುತ್ತಿದ್ದಿರಿ.**

- ನಾನು *ಜನತಾದಳದಲ್ಲಿದ್ದೆ*, ಆಲ್ ಇಂಡಿಯಾ ಕೌನ್ಸಿಲ್ ಮೆಂಬರ್ ಆಗಿ ಚುನಾಯಿತನಾಗಿದ್ದೆ. ಶ್ರೀ ಎಚ್.ಡಿ. ದೇವೇಗೌಡರು ಪ್ರಧಾನಿ ಆಗಿದ್ದರು. ಶರದ್‌ಯಾದವ್ ಅವರು ಅಧ್ಯಕ್ಷರಾಗಿ ದ್ದರು. ತಮಿಳುನಾಡಿನಲ್ಲಿ ಪ್ರತಿ ಲೋಕಸಭಾ ಕ್ಷೇತ್ರದಿಂದ ಒಬ್ಬ ಪ್ರತಿನಿಧಿ ಆಯ್ಕೆ ಯಾಗಿದ್ದರು. ಹಾಗೆ ಆಯ್ಕೆಯಾದ ತಮಿಳುನಾಡಿನ ೪೦ ಪ್ರತಿನಿಧಿಗಳಲ್ಲಿ ನಾನೂ ಒಬ್ಬನಾಗಿದ್ದೆ.

* **'ಜನತಾದಳದಲ್ಲಿದ್ದೆ' ಎಂದಿರಿ. ಈಗ?**

- *ಬಿ.ಜೆ.ಪಿ.*ಯಲ್ಲಿದ್ದೇನೆ. ಜನತಾದಳ ಒಡೆದ ಮೇಲೆ ಈ ಕಡೆ ಬಂದೆ. ಶರದ್‌ಯಾದವೇ ಬಿಟ್ಟರು, ವಡಿವೇಲುವೇ ಬಿಟ್ಟರು.... ನಾನೀಗ ಬಿಜೆಪಿಯ ತೆಂಕಾಸಿಪಟ್ಟಣ ಶಾಖೆಯ *ಖಜಾಂಚಿಯಾಗಿದ್ದೇನೆ*. *ತಿರುನೆಲ್‌ವೇಲಿ ಜಿಲ್ಲೆಯ ಬೌದ್ಧಿಕ ಸಮಿತಿಯ ಸದಸ್ಯ*ನಾಗಿದ್ದೇನೆ.

* **ಇದಕ್ಕೆಲ್ಲ ಜಾತಿ-ಮತ ಅಡ್ಡಿ ಬಂದಿಲ್ಲವೆ?**

- ತಮಿಳುನಾಡಿನ ಜನತಾದಳ ಅಂದರೆ ಹಳೆ ಕಾಂಗ್ರೆಸ್‌ನ ಮುಂದುವರಿಕೆ. ಅದಕ್ಕೊಂದು ಪಾರಂಪರಿಕ ನೆಲೆ ಇದೆ. ತ್ರಿಚಿಯಿಂದ ವೆಂಕಟೇಶ ದೀಕ್ಷಿತರು ಶಾಸಕರಾಗಿ ಆಯ್ಕೆ ಆದದ್ದೇ ಅದರ ಜಾತ್ಯತೀತ ಸನ್ನಿವೇಶಕ್ಕೆ ಸಾಕ್ಷಿ. ಬಿಜೆಪಿಗೂ ಒಂದು ತಾತ್ವಿಕ ನೆಲೆಗಟ್ಟಿದೆ. ನನಗೆ ಮುಸಲ್ಮಾನ ಸ್ನೇಹಿತರ ದೊಡ್ಡ ಬಳಗವೇ ಇದೆ. *ನಾವು ಎಷ್ಟು ನಿಷ್ಪಕ್ಷಪಾತವಾಗಿದ್ದೇವೆ ಅನ್ನುವುದು ಮುಖ್ಯ.*

* **ಇತರ ಚಟುವಟಿಕೆ?**

- ಕುತ್ರಾಲಂ *ರೋಟರಿ ವಿಭಾಗದ ಅಧ್ಯಕ್ಷನಾಗಿಯೂ,* ಕಾರ್ಯದರ್ಶಿಯಾಗಿಯೂ ಸೇವೆ ಸಲ್ಲಿಸಿದ್ದೇನೆ.

* **ಇದೆಲ್ಲದರಿಂದ ಕೃಷಿಕರಿಗೆ ಏನು ಸೇವೆ ಸಲ್ಲಿಸಿದ್ದೀರಿ?**

- *'ಪುಲಿಯೂರು ಕಾಲುವೆ ನೀರಾವರಿ ಮಂಡಳಿ'* ಮೂರು ಹಳ್ಳಿಗಳ ರೈತರನ್ನೊಳಗೊಂಡಿರುತ್ತದೆ. ನಾನು ಅದಕ್ಕೆ ಅಧ್ಯಕ್ಷನಾಗಿದ್ದೆ. ರೈತಜೀವನದ ಮತ್ತು ಹಳ್ಳಿಯ ನೆಲೆಗಟ್ಟಿನ ಬಲದಿಂದ ಒಂದು ಹಿಡಿತವಿತ್ತು. ವಿಲೇಜ್ ಕಮಿಟಿಗೂ ಅಧ್ಯಕ್ಷ ಆಗಿದ್ದೆ. ರೈತರೊಂದಿಗೆ ಸಂಪರ್ಕ ಇತ್ತು, ಗೌರವವೂ ಇತ್ತು. ಜಮೀನು ಮಾರಿದ ಮೇಲೆ ಕೇವಲ ಸಲಹಾಕಾರನಾಗಿದ್ದೇನೆ. *ವ್ಯವಸಾಯ ಬಿಟ್ಟರೆ ಹಳ್ಳಿಯ ಜೀವನದ ಬೇರು ಕಳೆದುಕೊಂಡ ಹಾಗೆ.* ರೈತ ಜೀವನದ ಸ್ಪಂದನ ಇರುವುದಿಲ್ಲ. ನಿತ್ಯವೂ ೩೦-೪೦ ರೈತರು ಕೆಲಸಕ್ಕೆ ಬರುವಾಗ, ನಮ್ಮ ಸಂಪರ್ಕ ಸಾಧ್ಯತೆ ಮತ್ತು ಸ್ಥಾನಮಾನ ಹೇಗಿರುತ್ತೆ, ಜಮೀನೇ ಇಲ್ಲದಾಗ ಹೇಗಿರುತ್ತೆ ಹೇಳಿ. ಆಮೇಲೆ ಪೂರ್ಣವಾಗಿ ನನ್ನ ಚಾರ್ಟರ್ಡ್ ಅಕೌಂಟೆಂಟ್ ವೃತ್ತಿಯಲ್ಲಿ ತೊಡಗಿಸಿಕೊಂಡೆ.

* **ನೀವು ಚಾರ್ಟರ್ಡ್ ಅಕೌಂಟೆಂಟ್ ಆಗಿದ್ದುದು ವ್ಯವಸಾಯಕ್ಕೆ ತೊಡಕಾಗಿರಲಿಲ್ಲವೆ?**

- ನಾನು ಚಾರ್ಟರ್ಡ್ ಅಕೌಂಟೆಂಟ್ ಆದದ್ದು ೧೯೭೭ರಲ್ಲಿ. ಹಾಗೂ ರೈತನಾಗಿದ್ದೆ. ಅಳ್ವಾರ್ ಕುರಿಚಿಯ ಕಾಲೇಜಿನಲ್ಲಿ ಕಾಮರ್ಸ್ ಮತ್ತು ಆಡಿಟಿಂಗ್ ಪಾಠ ಹೇಳಿಕೊಡುತ್ತ ಎಂಟು ವರ್ಷ ಒಪ್ಪೊತ್ತಿನ ಅಧ್ಯಾಪಕನಾಗಿ ಕೆಲಸ ಮಾಡಿದೆ. ಕುತ್ರಾಲಂ ಕಾಲೇಜಿನಲ್ಲಿ ಆದಾಯ ತೆರಿಗೆ ಕುರಿತು ಬಿ.ಕಾಂ. ಮತ್ತು ಎಂ.ಕಾಂ. ತರಗತಿಗಳಿಗೆ ಪಾಠ ಹೇಳುತ್ತಿದ್ದೆ.

* **ಇದಕ್ಕೆಲ್ಲ ಸಿದ್ಧತೆ?**

- ಜತೆಗೆ ಬಿ.ಎಸ್‌ಸಿ.ಗೆ ಪ್ರಾಣಿಶಾಸ್ತ್ರವನ್ನೂ ಹೇಳಿಕೊಡುತ್ತಿದ್ದೆ. ಇವೆಲ್ಲ ಪೂರ್ಣವಾಗಿ ಬೇರೆ ಶಿಸ್ತುಗಳಿಗೆ ಸೇರಿದವು ಎಂಬುದು ನಿಜ. ಇದನ್ನು ಯಶಸ್ವಿಯಾಗಿ ನಿರ್ವಹಿಸುವುದನ್ನೇ *'ಛಲ'* ಎನ್ನುವುದು. *ಅದು ವಂಶದ ಗುಣ.*

ನಮ್ಮ ತಂದೆ ವಕೀಲಿ ಮಾಡಿಕೊಂಡೂ, ವ್ಯವಸಾಯ ಮಾಡುತ್ತಿದ್ದರು. *ವಕೀಲಿ ಬಿಟ್ಟಮೇಲೆ ಪೂರ್ಣವಾಗಿ ವ್ಯವಸಾಯದಲ್ಲೇ* ತೊಡಗಿಕೊಂಡರು. *ಈ ಕಡೆಯಲ್ಲಿ ಕಿತ್ತಲೆ ಬೆಳೆಯ ಕನಸೂ ಇಲ್ಲದಾಗ ಆ ಕನಸು ಬಿತ್ತಿದವರು ನಮ್ಮ ತಂದೆಯವರು.*

ಇಲ್ಲಿ *ಕಳೆ ತೆಗೆಯಲು ರಾಸಾಯನಿಕ ಬಳಸಿದ ಮೊದಲಿಗ* ನಾನು. ನನ್ನ ಪ್ರಯೋಗಗಳನ್ನು ಗಮನಿಸಿ ಆಕಾಶವಾಣಿಯ ಕೃಷಿರಂಗ ವಿಭಾಗದವರು ರೇಡಿಯೋ ಭಾಷಣ ಮಾಡಲು ಕರೆಯುತ್ತಿದ್ದರು. *ಪ್ರಾತ್ಯಕ್ಷಿಕೆಗಾಗಿ* ನನ್ನನ್ನು ಹಲವೆಡೆ ಆಹ್ವಾನಿಸುತ್ತಿದ್ದರು. ಕೃಷಿಗೆ ಸಂಬಂಧಿಸಿದಂತೆ ಯಾವುದೇ ಹೊಸತು ಬಂದರೂ ಇಲಾಖೆಯವರು ಅದರ ಪ್ರದರ್ಶನ ನೀಡುವಾಗ ಮೊದಲು ನನ್ನನ್ನು ಆಹ್ವಾನಿಸುತ್ತಿದ್ದರು.

ಸರ್ಕಾರಕ್ಕೆ ಬತ್ತದ ಬೀಜವನ್ನು ನನ್ನ ಜಮೀನಿನಿಂದ ಒದಗಿಸುತ್ತಿದ್ದೆ. ಕರಾರುವಾಕ್ಕಾಗಿ *ವೈಜ್ಞಾನಿಕ ಪದ್ಧತಿಯ ವ್ಯವಸಾಯ* ಮಾಡುತ್ತಿದ್ದುದರಿಂದ ಇಡೀ ಬೆಳೆಯನ್ನು ಬೀಜಕ್ಕಾಗಿ ಸರ್ಕಾರಿ ಡಿಪೋಗೆ ಒಯ್ಯುತ್ತಿದ್ದರು.

೧೯೮೧ರಲ್ಲಿ ದಾಖಲೆ ಪ್ರಮಾಣದ ಇಳುವರಿ ತೆಗೆದೆ.

* **ಯಾವುದಾದರೂ ಪ್ರಶಸ್ತಿ, ಬಹುಮಾನ?**

\- (ನಕ್ಕು) *ನಮ್ಮ ಕೆಲಸವೇ ನಮಗೆ ಬಹುಮಾನ!* ಆಡಿಟಿಂಗ್‌ನಲ್ಲೂ ದೊಡ್ಡ ಸಂಸ್ಥೆಗಳ ಆಡಿಟ್ ಮಾತ್ರ ಮಾಡುತ್ತೇನೆ. ರೈತ, ಆಡಿಟರ್, ಸಾರ್ವಜನಿಕ ಸೇವಕ, ಉಪನ್ಯಾಸಕ - ಇವೆಲ್ಲ ಒಟ್ಟಿಗೆ ನಿರ್ವಹಿಸುತ್ತೇನೆ ಮತ್ತು ಯಶಸ್ವಿಯಾಗಿ ನಿರ್ವಹಿಸುತ್ತೇನೆ ಅನ್ನುವುದಕ್ಕಿಂತ ಇನ್ನು ಯಾವ ಬಹುಮಾನ ಬೇಕು?

* **ಈ ಪರಂಪರೆಗೆ ವಾರಸುದಾರರು?**

\- ನನ್ನ ಅಣ್ಣನ ಮಗ! ಆತ ಪಿಯುಸಿಯನ್ನು ತೆಂಕಾಸಿಯಲ್ಲೇ ಓದಿದ. ಮೊದಲ ರ್‍ಯಾಂಕ್ ಬಂದ. ಕೊಯಂಬತ್ತೂರಿನ ಘನತೆವೆತ್ತ PES ಕಾಲೇಜಿನಲ್ಲಿ ಎಂಜಿನಿಯರಿಂಗ್‌ಗೆ ಸೀಟು ಸಿಕ್ಕಿತು. ಆರು ತಿಂಗಳು ಅಲ್ಲಿ ಓದಿದ. ಆದರೆ ಚಾರ್ಟರ್ಡ್ ಅಕೌಂಟೆಂಟ್ ಆಗುವ ಗೀಳು ಹತ್ತಿ ಈ ಕಡೆ ಬಂದ. ಈಗ ನನ್ನ ಜತೆ ಪ್ರಾಕ್ಟೀಸ್ ಮಾಡುತ್ತಿದ್ದಾನೆ. ಅವನ ಸಹಪಾಠಿಗಳಾಗಿದ್ದವರೆಲ್ಲ ಈಗ ಸ್ಟೇಟ್ಸ್‌ನಲ್ಲಿದ್ದಾರೆ!

ನಾನೂ ಅಷ್ಟೆ. ಬಿ.ಎಸ್‌ಸಿ. ಆದ ನಂತರ Marine Biologyಗೆ ಸೇರಿದ್ದೆ, ಮೀನಿನ ವಾಸನೆ ತಡೆಯಲಾರದೆ ಬಿಟ್ಟು ಬಂದೆ.

* **ಈ ಹಿನ್ನೆಲೆಯಲ್ಲಿ ಸಂಕೇತಿಗಳ ಸ್ವಭಾವದ ಪಟ್ಟಿ ಮಾಡಿ!**

\- ಸ್ವತಂತ್ರ ಮನೋಭಾವ (Independent Spirit)
ಎದೆಗಾರಿಕೆ (Challenging nature)
ಹಣಕ್ಕಲ್ಲ, ಮೌಲ್ಯಕ್ಕೆ ತುಡಿತ (More for values, not for money)
ಆಧ್ಯಾತ್ಮಿಕ ಪ್ರವೃತ್ತಿ (Spiritual)
ತಮ್ಮದೇ ತತ್ತ್ವಬದ್ಧತೆಗಾಗಿ, ಮತ್ತಾವುದಕ್ಕೋ ಅಲ್ಲ(Their own principle, not for any)
[ಇಲ್ಲಿನ ಇಂಗ್ಲಿಷ್ ಪದಗಳು ಅವರೇ ಬಳಸಿದಂಥವು.]
ಆದ್ದರಿಂದಲೇ ಬೌದ್ಧಿಕ (Intellectual)
ವೃತ್ತಿಪರ (Professional)
ವ್ಯವಹಾರವಲ್ಲ (No business)
ತತ್ತ್ವಕ್ಕೆಬದ್ಧ (Principled, can't be purchased)
ಉದಾ: ನೌಕರಿ ಬಿಡುತ್ತಾರೆಯೇ ಹೊರತು ತತ್ತ್ವಕ್ಕೆ ರಾಜಿ ಮಾಡಿಕೊಳ್ಳುವುದಿಲ್ಲ.
ಹಾಗಾಗಿ ಗೌರವಿಸಲ್ಪಡುತ್ತಾರೆ. ಅತಿ ಎನ್ನುವಷ್ಟು ಆತ್ಮಾಭಿಮಾನ. ಅದೂ drawback ಆಗಿದೆ
Commercial ಆಗಿ ಮೇಲೆ ಬರಲ್ಲ, intellectual ಆಗಿ ಮೇಲೆ ಬರ್ತಾರೆ
ದಯೆ, ದಾನಗುಣ ಅತಿ ಎನಿಸುವಷ್ಟು.

ಬಾಲ್ಯದಿಂದಲೂ ನೋಡಿದ್ದೇನೆ: ಮನೆಯಲ್ಲಿ ಯಾರಾದರೂ ಅತಿಥಿಗಳು ಊಟಕ್ಕೆ ಇದ್ದೇ ಇರೋರು. ಹಾಗೆಯೇ ಕಷ್ಟದಲ್ಲಿದ್ದವರಿಗೆ ತಂದೆ ಕೊಡುತ್ತಲೇ ಇರೋರು. ಅದು ಯಾವುದೇ ಜಾತಿಯ ಜನ ಇರಲಿ, ಅಡುಗೆಗೆಂದು ನೀರು ಕುದಿಯಲು ಇಟ್ಟುಬಿಡೋದು;

ಅಕ್ಕಿ ಇಲ್ಲ ಅಂದರೆ ಪಿಚ್ಚುಮಣಿ ಅವರ ಮನೆಯಲ್ಲಿ ತರಬಹುದು ಅನ್ನುವುದು ಜನರ ವಿಶ್ವಾಸ.

ನನ್ನ ಬಳಿ ಈಗ ಒಂದು ಎಕರೆ ಜಮೀನು ಉಳಿದುಕೊಂಡಿದೆ. *ಅಲೆಮಾರಿಗಳಿಗೆ ಮನೆ ಕಟ್ಟಿಸಿಕೊಡಲು* ಅದನ್ನು ಬಳಸಿಕೊಳ್ಳಿ ಎಂದು ಸರ್ಕಾರಕ್ಕೆ ಕೇಳಿದೇನೆ.

* **ಅಂತೂ, ಜನಪರ ಕಾಳಜಿ ನಿಮ್ಮದು?**

\- *ಸ್ವಾತಂತ್ರ್ಯ ಹೋರಾಟಗಾರರ ಜಿಲ್ಲಾ ಸಮಿತಿ*ಗೆ ಕಾರ್ಯನಿರ್ವಾಹಕ ಸದಸ್ಯನಾಗಿದ್ದೇನೆ. ಸ್ವಾತಂತ್ರ್ಯ ಹೋರಾಟಗಾರರು ಈಗ ಕೆಲವರೇ ಉಳಿದುಕೊಂಡಿದ್ದಾರೆ. ಆದರೆ ಗತಿಸಿದವರ ಮಕ್ಕಳೂ, ಹಿತೈಷಿಗಳೂ ಅದಕ್ಕೆ ಸದಸ್ಯರಾಗಬಹುದಾಗಿದೆ. ಜನಪರ ಹೋರಾಟಕ್ಕೆ ಅದು ವೇದಿಕೆ.

* **ಎಲತ್ತೂರಿನಲ್ಲಿ ಕೆಲವರು ಅಸಂಕೇತಿಗಳು 'ಸಂಕೇತಿಗಳನ್ನು ಯಾರ ನಡುವೆಯೂ ಗುರುತಿಸುವುದು ಸಾಧ್ಯ' ಅಂದರು!**

\- Sharp nose with complexion - Special feature of a Sanketi ಹಾಗೆ ಶೇ.೬೦ರ ಮಟ್ಟಿಗೆ ಗುರುತಿಸಬಹುದು!

* **ವಿದ್ವಾಂಸರು, ಮೃದುಸ್ವಭಾವದವರು, ಅಧ್ಯಯನಶೀಲರು, ಪೌರೋಹಿತ್ಯ ಮಾಡಿಸುವುದರಲ್ಲಿ ಸಾಟಿ ಇಲ್ಲದವರು ಎಂದೆಲ್ಲ ಹೇಳಿದರು!**

\- ಹೌದು. ಪೂರ್ಣವಾಗಿ ವೇದಾಧ್ಯಯನ, ಶಾಸ್ತ್ರಾಧ್ಯಯನ ಮಾಡಿ ಅರ್ಥಗ್ರಹಿಸಿರುವುದರಿಂದ ಸಂಕೇತಿ ಪುರೋಹಿತರ ಆತ್ಮವಿಶ್ವಾಸ ದೊಡ್ಡದಾಗಿರುತ್ತದೆ. ಆಂಡಿವಾದ್ಯಾರನ್ನೇ ನೋಡಿ. He was an authority. ಶೃಂಗೇರಿ, ಕಾಂಚಿ ಸ್ವಾಮಿಗಳು ಅವರ ಮನೆಗೆ ಬರೋರು. ಯಾವ ಪ್ರಶ್ನೆಗೂ on the spot ಪರಿಹಾರ ಕೊಡುತ್ತಿದ್ದರು. Scholar, performer ಎರಡೂ ಆಗಿ ಅವರು ಗಟ್ಟಿಗರಾಗಿದ್ದರು.

* **ಇಲ್ಲೇಕೆ ನೀವು ಕಬ್ಬು ಬೆಳೆಯುವುದಿಲ್ಲ?**

\- ಅದಕ್ಕೆ ಇಲ್ಲಿನ ಹವೆ ಸರಿ ಇಲ್ಲ. ಎರಡು ಮಾನ್‌ಸೂನ್ ಇದೆ. ಅದರಿಂದಾಗಿ flowering ಆಗಿ flop ಆಗುತ್ತೆ. ನಡುಬೆಳೆಯಾಗಿ ಮೆಣಸಿನಕಾಯಿ ಬೆಳೆಯುತ್ತಿದ್ದೆ. ರಾಗಿ, ಜೋಳ ಬೆಳೆಯುತ್ತಿರಲಿಲ್ಲ, ಏಕೆಂದರೆ ಆ ಹೊಲದ ಜಾಗದಲ್ಲಿ ಮಾವಿನತೋಪು ಬೆಳೆಸಿದ್ದೆ.

* **ಮಾರ್ಕೆಟಿಂಗ್ ಹೇಗೆ ಮಾಡುತ್ತಿದ್ದಿರಿ?**

\- ಜಮೀನು ಹತ್ತಿರದಲ್ಲೇ ಬಂದು ಎಲ್ಲ ಕೊಂಡುಕೊಂಡು ಹೋಗೋರು. ನಾನು ಯಾವತ್ತೂ ಮಾರ್ಕೆಟ್ಟಿಗೆ ಒಯ್ಯಲೇ ಇಲ್ಲ.

* **ನೀವು ಇಷ್ಟು ಉಪವೃತ್ತಿಗಳನ್ನು ಮಾಡುತ್ತಾ, ಜಮೀನಿಗೆ ನ್ಯಾಯ ಸಲ್ಲಿಸಿದೆ ಅನ್ನುತ್ತೀರಾ?**

\- Give me 200 acres anywhere in India. I can manage even not going there. ಯಾವ ವೃತ್ತಿ ಮಾಡುವ ಮೊದಲೂ ನಾನು intense study ಮಾಡುತ್ತೇನೆ, full study ಮಾಡುತ್ತೇನೆ. ಯಾವುದನ್ನೂ ಅರ್ಧಕ್ಕೆ ಬಿಡುವುದಿಲ್ಲ.

* **ಕೀಳ್‌ಪುಲಿಯೂರ್‌ನ ಇತರ ಸಂಕೇತಿಗಳ ವಿಷಯ ಹೇಳಿ.**

\- ನಮ್ಮ ಗದ್ದೆ ಬಯಲಿನ *೧೦೦೦ ಎಕರೆಯಲ್ಲಿ ೩೦೦ ಎಕರೆ ಸಂಕೇತಿಗಳದೇ ಆಗಿತ್ತು.* ಒಟ್ಟು ಮೂರು ಸಂಕೇತಿ ಮನೆಗಳು ಇದ್ದವು. ಸಹಜವಾಗಿಯೇ ಅಷ್ಟು ವಿಸ್ತಾರವಾದ ಭೂಮಿಕಾಣಿಯ ವ್ಯವಸಾಯಕ್ಕೆ ಎಲ್ಲರೂ ಆಳುಗಳನ್ನು ಅವಲಂಬಿಸಿದ್ದರು. ಯಾರೂ ಗುತ್ತಿಗೆಗೆ ಕೊಟ್ಟಿರಲಿಲ್ಲ. *ಎಲ್ಲರೂ ಸ್ವಂತ ವ್ಯವಸಾಯವೇ ಮಾಡುತ್ತಿದ್ದರು.* ಯಾರೂ ತಾವೇ ನಿಂತು ದುಡಿಯುತ್ತಿರಲಿಲ್ಲ, *ಉಸ್ತುವಾರಿ* ಮಾಡುತ್ತಿದ್ದರು.

* **ದನ, ಕರು?**

\- ನಮ್ಮಲ್ಲಿ ದನಕರು ತುಂಬಾ ಇತ್ತು. ಚೆನ್ನಾಗಿ ನೋಡಿಕೊಳ್ಳುತ್ತಿದ್ದೆವು. ಈಗ, ಕಟುಕರಿಗೆ ದನ ಮಾರುವ ಪ್ರವೃತ್ತಿ ಬೆಳೆಯುತ್ತಿದೆ. *'ಗೋಸಂರಕ್ಷಣ ಸಮಿತಿ'*ಯ ಕೆಲಸದಲ್ಲಿ ನಾನೂ ಭಾಗಿಯಾಗಿದ್ದೇನೆ. ಭಾರತೀಯ ಗೋವಂಶ ರಕ್ಷಣ ಮತ್ತು ಸಂವರ್ಧನ

ಪರಿಷತ್ ಈ ಭಾಗದಲ್ಲಿ ಕೆಲಸ ಮಾಡಲು ನನಗೆ ಕರೆ ಕೊಟ್ಟಿದೆ. ಅದೊಂದು ದೊಡ್ಡ ಕೆಲಸ. ನಾನು ವ್ಯವಸಾಯ ಮಾಡುತ್ತಿದ್ದ ಕಾಲದಲ್ಲಿ ಬೇಕಾದರೆ ಕಟುಕರ ಕಡೆಗೆ ಸಾಗುತ್ತಿದ್ದ ದನಗಳನ್ನು ತಡೆದು ನಾನೇ ಸಾಕುತ್ತಿದ್ದೆ. ನಾನೇ ಬೇಕಾದರೆ ಗೋಶಾಲೆ ಕಟ್ಟುತ್ತಿದ್ದೆ; ಈಗ ತಡೆದು ಎಲ್ಲಿಗೆ ಕಳಿಸಲಿ? ಆದರೂ ಜನಜಾಗೃತಿಗೆ ಯತ್ನಿಸುತ್ತಿದ್ದೇನೆ.

* **ನಿಮಗೆ ಜವಾಬ್ದಾರಿಗಳು ಹೆಚ್ಚಾಯಿತು ಅನಿಸುವುದಿಲ್ಲವೆ?**

- ಇಲ್ಲಿನ ಕೋ ಆಪರೇಟಿವ್ ಹೌಸಿಂಗ್ ಸೊಸೈಟಿ ನನ್ನನ್ನು ನಿರ್ದೇಶಕನನ್ನಾಗಿ ಚುನಾಯಿಸಿದೆ! *ಆಡಿಟ್ ಅಬ್ಜಕ್ಷನ್ ಇಲ್ಲದ ಸೊಸೈಟಿ ಇದೊಂದೇ.*

* **Time management ಹೇಗೆ?**

- ನಾನು ವ್ಯವಸಾಯ ಮಾಡುತ್ತಿದ್ದಾಗ ಜಾವಾ ಮೋಟರ್ ಸೈಕಲ್ ಇಟ್ಟುಕೊಂಡಿದ್ದೆ. ವ್ಯವಸಾಯಗಾರನಾಗಿ ಮೋಟರ್ ಸೈಕಲ್ ಇಟ್ಟುಕೊಂಡವರಲ್ಲಿಯೂ ನಾನೇ ಮೊದಲಿಗ. ಈ ಕಡೆ ಕಾಲೇಜು, ಆ ಕಡೆ ಚಾರ್ಟರ್ಡ್ ಅಕೌಂಟೆಂಟ್ ಆಫೀಸು - ಇವೆರಡು ಬಿಟ್ಟರೆ *ಮಿಕ್ಕ ಸಮಯವೆಲ್ಲ ನನ್ನ ಎಸ್ಟೇಟಿನಲ್ಲೇ ಇರುತ್ತಿದ್ದೆ.* ಬಾವಿಯ ದಡದಲ್ಲಿ ಸೊಗಸಾದ (ಮಿಷನ್) ಮನೆಯನ್ನೇ ಕಟ್ಟಿಸಿದೇನೆ ನೋಡಿ. *ಈ ಜಗುಲಿಯಲ್ಲಿ ಕೂತು ತೋಟದ ಹಿನ್ನೆಲೆಯಲ್ಲಿರುವ ಘಟ್ಟಗಳನ್ನು ನೋಡುತ್ತ ಕೂತರೆ ಇನ್ನೇನೂ ಬೇಕಾಗುವುದಿಲ್ಲ.*

ವ್ಯವಸಾಯ ಮಾಡುವಾಗ ಸುಮ್ಮನೆ ಎಸ್ಟೇಟಿನ ಬೌಂಡರಿ ಒಂದು ಸಾರಿ ಗಸ್ತು ಹೊಡೆದರೆ ಸಾಕು, *ವ್ಯಾಯಾಮ ಆಗುತ್ತಿತ್ತು.* ಆದರೆ ಜಮೀನು ಮಾರಿದ ಕೂಡಲೆ ನನ್ನ ಮೋಟರ್ ಸೈಕಲ್ಲೂ ಕೊಟ್ಟುಬಿಟ್ಟೆ. ಈಗ ಸೈಕಲ್ ಇಟ್ಟುಕೊಂಡಿದ್ದೇನೆ. ಮನೆಯಿಂದ ಕಚೇರಿಗೆ ಎಂಟು ಕಿ.ಮೀ. ಆಗುತ್ತದೆ. ದಿನಕ್ಕೆ ಕನಿಷ್ಠ ೧೬ ಕಿ.ಮೀ. ಸೈಕಲ್ ಹೊಡೆಯುತ್ತೇನೆ, ಆರೋಗ್ಯವಾಗಿದ್ದೇನೆ. ದೂರ ಹೋಗಬೇಕಾದರೆ ಟ್ಯಾಕ್ಸಿಯಲ್ಲಿ ಹೋಗುತ್ತೇನೆ.

* **ಈ ಬಾರಿ ಶಾಸಕರಾಗುವ ವಿಶ್ವಾಸವಿದೆಯೆ?**

- ಕಳೆದ ಚುನಾವಣೆಯಲ್ಲೇ ಸಾಧ್ಯವಿತ್ತು. ನನ್ನ ಸೇವೆ, ನನಗಿರುವ ಜನಬೆಂಬಲ, ಇತರರಿಗಿರುವ ಜನ ಬೆಂಬಲ ಎಲ್ಲವನ್ನೂ ಕ್ರೋಡೀಕರಿಸಿ ಒಂದು ವರದಿ ಸಿದ್ಧಪಡಿಸಿದ್ದೆ. ನಾನು ಎಷ್ಟು ಅಂತರದಲ್ಲಿ ಗೆಲ್ಲಬಹುದೆಂಬ ಅಂಕಿ ಅಂಶವನ್ನೂ ನೀಡಿದ್ದೆ. ಎಲ್ಲವನ್ನೂ ಸಿ.ಐ.ಡಿ. ಮಾಹಿತಿಯ ಆಧಾರದಿಂದ ಅಂದಾಜು ಮಾಡಿದ್ದೆ. ನನಗೆ ಟಿಕೆಟ್ ಕೊಡಲಿಲ್ಲ. ಆದರೆ ಫಲಿತಾಂಶದ ವಿವರ ನನ್ನ ಅಂದಾಜಿನ ತೀರಾ ಹತ್ತಿರದಲ್ಲಿತ್ತು. ಕುಟ್ರಾಲಂನ ಸ್ವಾಮೀಜಿ ನನ್ನ ಹೆಸರು ಶಿಫಾರಸು ಮಾಡಿದ್ದರೂ, ನನಗೆ ಟಿಕೆಟ್ ಸಿಕ್ಕದೇ ಹೋಗಿತ್ತು. ಬಿಜೆಪಿ ಆ ಕ್ಷೇತ್ರದಲ್ಲಿ ಸೋತುಹೋಯಿತು.



ಕೆ.ಪಿ.ಶಿವರಾಮನ್ ಮನೆಯ ಹಿತ್ತಿಲು: ಕೀಳ್‌ಪುಲಿಯೂರ್

* **ಜನಸೇವೆಗೆ ಶಾಸಕರೇ ಆಗಬೇಕು ಎನ್ನುತ್ತೀರಾ?**

- ಹಾಗೇನಿಲ್ಲ. ಹೆಚ್ಚು ಅಧಿಕಾರ ಎಂದರೆ ಜನಸೇವೆಗೆ ಹೆಚ್ಚು ಅವಕಾಶ ಎಂದು ಅರ್ಥ. ನಾನು ಶಾಸಕ ಅಲ್ಲದಿದ್ದರೂ ಮಧುರೈನಲ್ಲಿ *ಪಾಸ್‌ಪೋರ್ಟ್ ಆಫೀಸ್ ತೆರೆಯಬೇಕೆಂದು ಸತತ ಪ್ರಯತ್ನ ಮಾಡಿದ್ದೆ.* ಒಂದು ಕೌಂಟರ್ ಆಫೀಸ್ ತೆರೆದರು. ನಮ್ಮ ಕೆಲಸ ನಾವು ನಿರಂತರವಾಗಿ ಮಾಡುತ್ತಿರಬೇಕು. ಒಂದು ದಿನ ಫಲ ದೊರೆತೇ ದೊರೆಯುತ್ತದೆ.

ಶಿವರಾಮನ್ **ಗ್ರಾಮ ಮುಖ್ಯರಾಗಿ** ಆಳುತ್ತಿದ್ದಾಗ ಕೆರೆಯ ಸೆತ್ತೆ ತೆಗೆಸಿ ಶುದ್ಧವಾಗಿ ಇಟ್ಟಿದ್ದರು. ಈಗ ಸೆತ್ತೆ ತುಂಬಿದೆ. ವ್ಯವಸಾಯ ಮಾಡಲು ಟ್ರಾಕ್ಟರ್ ತಂದ ಮೊದಲ ಮಹನೀಯರು ಅವರು. ಅವರಿಗೇ ನೆನಪಿರುವಂತೆ ಕೀಳ್‌ಪುಲಿಯೂರ್‌ನ ಅವರ ಮನೆ ೧೫೦ ವರ್ಷಗಳಷ್ಟು ಹಳೆಯದಾಗಿತ್ತು. ಒಳಗೆ ಕೂತರೆ ಹವಾನಿಯಂತ್ರಣದಂತೆ ತಂಪಾಗಿಡುವ ರಚನೆ ಅದರದು. ಒಳ್ಳೆಯ ನಾಟಾಗಳನ್ನು ಬಳಸಿ ಮನೆ ಕಟ್ಟಲಾಗಿತ್ತು. ಮಹಡಿಯಲ್ಲಿ ಬತ್ತ ತುಂಬಲು *ವಿಶೇಷವಾಗಿ ನಿರ್ಮಿಸಿದ ಒಂದು ದೊಡ್ಡ ಕಣಜವಿತ್ತು.* ಅದೂ ತುಂಬಿ ಹೆಚ್ಚಾದ ಬತ್ತವನ್ನು ಮಹಡಿಯಲ್ಲಿ ಸುಮ್ಮನೆ ಒಟ್ಟಲಾಗುತ್ತಿತ್ತು. ಆದರೆ ಸಿಮೆಂಟ್ ನೆಲವಾದರೆ ಬತ್ತ ಹುಳಿತು ಹೋಗುತ್ತದೆ ಎಂಬುದನ್ನು ಕಂಡುಕೊಂಡು ಸಿಮೆಂಟ್ ನೆಲವನ್ನು ಒಡೆಸಿ ಮಣ್ಣಿನಿಂದ ಮಾಡಿ ಸಗಣಿಯಲ್ಲಿ ಸಾರಿಸಿ ಇಟ್ಟಿದ್ದರು. ಮಹಡಿ ಮೆಟ್ಟಿಲಿನ ತಳಕ್ಕೆ ಒಂದು ಕೋಣೆ ಇತ್ತು. ಅದು ಸ್ಟೋರ್‌ರೂಮಾಗಿ ಬಳಕೆಯಾಗುತ್ತಿತ್ತು. ಬತ್ತದ ಸಂಗ್ರಹ ತೀರಾ ಹೆಚ್ಚಾದಾಗ ಅದರಲ್ಲೂ ಬತ್ತ ತುಂಬುತ್ತಿದ್ದರು. ಆ ಕೋಣೆಯ ಬಾಗಿಲು ಭದ್ರಪಡಿಸಿದರೆ ಅದು ಕಣಜವಾಗಿ ಮಾರ್ಪಡುತ್ತಿತ್ತು. ಚಾವಣಿಯಲ್ಲಿ ಅದಕ್ಕೊಂದು ಬಾಗಿಲಿತ್ತು. ಮಹಡಿಯಲ್ಲಿ ಸುರಿದ ಬತ್ತದ ರಾಶಿ ದೊಡ್ಡದಾದಾಗ ಆ ಬಾಗಿಲು ತೆಗೆದರೆ ಅದು ಕಣಜದೊಳಕ್ಕೆ ತುಂಬಿಕೊಳ್ಳುತ್ತಿತ್ತು.

ಅವರ ಹಿತ್ತಿಲೂ ಕರ್ನಾಟಕದ ಸಂಕೇತಿಗಳ ಹಿತ್ತಲಂತೆಯೇ ಒಂದು *ಕಿರುತೋಟ*ವಾಗಿತ್ತು. ತೆಂಗಿನ ಮರಗಳಲ್ಲದೆ ನುಗ್ಗೆ, ಮಾವು, ಹಲಸಿನ ಮರಗಳೂ ಹೂವಿನ ಗಿಡಗಳೂ ಅಲ್ಲಿದ್ದವು. ಸಂಪಿನ ಮೂಲಕ ಮನೆಗೆಲ್ಲಾ ನಲ್ಲಿಯ ವ್ಯವಸ್ಥೆಯನ್ನು ಇತ್ತೀಚೆಗೆ ಮಾಡಿಕೊಂಡಿದ್ದರೂ, ಹಳೆಯ ಬಾವಿಯು ಹಿತ್ತಿಲಲ್ಲಿ ಇನ್ನೂ ಜೀವಂತವಾಗಿ ಉಳಿದುಕೊಂಡಿತ್ತು. *ಹಿತ್ತಿಲನ್ನು ಉತ್ತು ಕೀರೆಸೊಪ್ಪು ಬೆಳೆಸುತ್ತಿದ್ದರು.* ಹಿತ್ತಿಲ ಹಿಂದಿನ ಬೇಲಿಯನ್ನು ಸರಿಸಿದರೆ ನೀರು ತುಂಬಿ ಹರಿಯುವ ಕಾಲುವೆ ಕಂಡಿತು. ಶಿವರಾಮನ್ ಮತ್ತು ಅವರ ಮನೆ ಕರ್ನಾಟಕದ ವ್ಯವಸಾಯಕ್ಕೆ ಸಂವಾದಿಯಾದ '*ಒಂದು ಹಂತ*'ದ ಚಿತ್ರವನ್ನು ಯಶಸ್ವಿಯಾಗಿ ಕಟ್ಟಿಕೊಟ್ಟಿತ್ತು.

ಎ) ಕೊಲ್ಲಂ ಮೂಲದ ಟಿ.ಎಸ್.ರಾಜಾಮಣಿಯವರ ಆತ್ಮಕಥೆಯಿಂದ

(ನಿರೂಪಣೆ: ಡಾ.ಬಿ.ಎಸ್. ಪ್ರಣತಾರ್ತಿಹರನ್)

(ಶ್ರೀ ಕೆ.ಪಿ. ಶಿವರಾಮನ್ ಅವರ ಬಗೆಗೆ ಹೇಳಿದ ಮಾತು ಸರ್ವಥಾ ಸಮರ್ಪಕವಾಗಿದೆ ಎಂಬುದನ್ನು ಸಮರ್ಥಿಸುವಂತೆ ಶ್ರೀ ಟಿ.ಎಸ್. ರಾಜಾಮಣಿಯವರ ಅನುಭವಗಳಿವೆ. ಕೇರಳ ಮತ್ತು ತಮಿಳುನಾಡಿನ ಎರಡೂ ಎಡೆಯ ಸಂಕೇತಿಗಳ ಬದುಕು ಅವರಿಗೆ ಪರಿಚಿತವಾದುದು. ಅವರ ಆತ್ಮಕಥೆಯಿಂದ ಉದ್ಧರಿಸಿರುವ ಒಂದೊಂದು ಮಾತೂ ಕರ್ನಾಟಕದ ಸಂಕೇತಿಗಳ ಕೃಷಿಸ್ವಭಾವದ ಪಡಿಯಚ್ಚಿನಂತಿದೆ. ರಾಜಾಮಣಿಯವರು ಸದ್ಯ ಬೆಂಗಳೂರಿನಲ್ಲಿ ನೆಲೆಸಿದ್ದಾರೆ. ಅವರ ಆತ್ಮಕಥೆಯನ್ನು ಡಾ|| ಹರನ್ ಸಂದರ್ಶನಗಳ ಮೂಲಕ ಕಟ್ಟಿದ್ದಾರೆ. ಕೃಷಿಗೆ ಸಂಬಂಧಿಸಿದ ಭಾಗಗಳನ್ನು ಆಯ್ದುಕೊಟ್ಟಿದ್ದಾರೆ. ರಾಜಾಮಣಿಯವರ ಆ ಅನುಭವವು ಕೇರಳ ಮತ್ತು ತಮಿಳುನಾಡು ಮೂಲದ್ದು ಎಂಬುದನ್ನು ಗಮನಿಸಬೇಕು.)



ತಿರುನೆಲ್‌ವೇಲಿಯ ರಾಮಸ್ವಾಮಿ ಅಯ್ಯರ್ ಅವರ ಜತೆ ಸಂಭಾಷಿಸುತ್ತಿರುವ ಟಿ.ಎಸ್.ರಾಜಾಮಣಿ

ಸಂಕೇತಿಗಳಲ್ಲಿ ಶೇ.೬೦ ಜನ ಬಡವರು, ಶೇ.೪೦ ಜನ ಮಧ್ಯಮ ವರ್ಗದವರು. ಬೇಕಾದರೆ ಶೇ.೨ ರಷ್ಟು ಜನ ಶ್ರೀಮಂತರು ಅನ್ನಬಹುದು. ಶ್ರೀಮಂತರದು ದೊಡ್ಡಮನೆ, ಕಲ್ಲು ಅಥವಾ ಸಿಮೆಂಟ್ ಬಳಸಿದ ಮನೆ. ಬಡವರದ್ದು ಮಣ್ಣಿನದು. ಬಡವರ ಮಕ್ಕಳು ೮-೯ರ ಹೊತ್ತಿಗೇ ಶಾಲೆ

ಬಿಟ್ಟು, ಪಟ್ಟಣದ ಅಂಗಡಿ, ಹೋಟೆಲು, ಸಿನಿಮಾ ಟೆಂಟ್‌ಗಳಲ್ಲಿ ದುಡಿಯಲು ಹೋಗುತ್ತಿದ್ದರು. *ಪೂರ್ವಿಕರೆಲ್ಲಾ ಇದ್ದುದು ಗ್ರಾಮಗಳಲ್ಲೇ.*

......

೧೦ ಎಕರೆ ಮೇಲೆ ಜಮೀನು ಇದ್ದವರು ಸ್ವತಃ ಕೆಲಸ ಮಾಡುತ್ತಿರಲಿಲ್ಲ. ಅವರಿಗೆ ಸಿಗುತ್ತಿದ್ದ ಬಿಡುವಿನ ವೇಳೆಯನ್ನು ನಾಟಕ ಆಡುವುದಕ್ಕೆ ವಿನಿಯೋಗಿಸುತ್ತಿದ್ದರು. ಎತ್ತಿನಗಾಡಿ ಅಥವ ಕುದುರೆ ಇಟ್ಟಿರುತ್ತಿದ್ದರು. ಊರಿಂದೂರಿಗೆ ನಾಟಕ, ಸಿನಿಮಾ ನೋಡಲು ೮-೧೦ ಮೈಲು ಆದರೂ ಸರಿ, ಅವುಗಳಲ್ಲಿ ಹೋಗೋರು.

******



ಸಂಕೇತಿಗಳೇ ಕಟ್ಟಿಸಿದ ದೇವಸ್ಥಾನ : ತಿರುನೆಲ್‌ವೇಲಿ

ಹಸು, ಎತ್ತು, ಕುದುರೆ ಅಲ್ಲದೆ ನಾಯಿ, ಅಪರೂಪಕ್ಕೆ ಗಿಣಿ, ತೀರ ಅಪರೂಪಕ್ಕೆ ಕೋತಿ ಸಾಕಿದವರೂ ಇದ್ದರು.

******

೬೦ ವರ್ಷದ ಹಿಂದೆ ನೋಡಿದರೆ, ಎಲ್ಲ ಗಂಡಸರೂ *ಎಣ್ಣೆಗೆಂಪು ಬಣ್ಣಕ್ಕೆ ಇರುತ್ತಿದ್ದರು. ಏಕೆಂದರೆ ಆಗ ತೋಟ ಅಥವಾ ಹೊಲದ ಕೆಲಸ ಹೆಚ್ಚಾಗಿ ಮಾಡುತ್ತಿದ್ದರು.*

******

ಮನೆ ಹಿತ್ತಲಲ್ಲಿ ಕರಿಬೇವು, ದಾಳಿಂಬೆ ಇತ್ಯಾದಿ ಇರುತ್ತವೆ. ಅತಿಥಿಗಳು ಬಂದಾಗ ಹಲಸು ತಿನ್ನಿಸೋದು ವಿಶೇಷ. ಅವರು ತಂಗಿದ ೩-೪ ದಿನಗಳಲ್ಲಿ ಒಂದು ದಿನ ಅದು ಉಂಟೇ ಉಂಟು. "ನೋಡು, ತಂದಿ ದೀನಿ, ಇಲ್ಲಿರಿಸಿದೀನಿ, ನಾಳೆ ಹಣ್ಣಾಗುತ್ತೆ, ತಿಂದು ಕೊಂಡೇ ಹೋಗಬೇಕು" ಅನ್ನೋರು. ಅತಿಥಿಗಳನ್ನು ಕಳಿಸುವಾಗ ಏನಿಲ್ಲಾ ಅಂದರೂ, *ತಾವು ತೋಟದಲ್ಲಿ ಬೆಳೆದ ಬಾಳೆಹಣ್ಣು ತುಂಬಿ ಕಳಿಸೋರು.*

******



ಸಂಕೇತಿ ದೇವಸ್ಥಾನದ ಮುಂಭಾಗದ ದೃಶ್ಯ : ತಿರುನೆಲ್‌ವೇಲಿ

ಸಂಕೇತಿಗಳ ತೋಟದಲ್ಲಿ ಅಡಿಕೆಯ ಜತೆಗೆ ವೀಳೆದೆಲೆಯೂ ಇರೋದು. ಕೇರಳದಲ್ಲಿ ತೋಟಗಳಲ್ಲಿ ಮೆಣಸೂ ಬೆಳೆಯೋರು. ತಾವೇ ಬೆಳೆಯೋರು ಅಭಿಮಾನದಿಂದ ತಮ್ಮ ಫಸಲನ್ನು ಬಳಸುತ್ತಾರೆ. ಸಂಕೇತಿಗಳು ಅಡಿಕೆಯ ಗೋಟನ್ನು ಬಳಸುತ್ತಿದ್ದುದು ಹಾಗೆ. (ಬ್ರಾಹ್ಮಣೇತರರೇ ಗೋಟನ್ನು ಹೆಚ್ಚಾಗಿ ಬಳಸೋದು.)

******

ಎಲತ್ತೂರಿನಲ್ಲಿ ಹೊಲ ಜಾಸ್ತಿ; ಶೆಂಕೋಟ್ಟೈ, ಶಾಂಬವರ್ ವಗರೈ, ಪುಲಿಯೂರ್, ಅಯ್‌ಕುಡಿ, ತೆಂಕಾಸಿಯಲ್ಲಿ ಹೊರ ತೋಟ ಹೆಚ್ಚು.



ಸಂಕೇತಿ ಅರ್ಚಕ: ತಿರುನೆಲ್‌ವೇಲಿ

ತಿರುನೆಲ್‌ವೇಲಿಯಲ್ಲಿ ಹೊರತೋಟ ಕಾಣೆ. ಪಟ್ಟಣವಾದ್ದರಿಂದ ಹಿತ್ತಲೂ ಕಡಮೆ ಇತ್ತು. ನೆಂಟರ ಮನೆಗೆ ಹೋದಾಗ ಒಂದೇ ವಯಸ್ಸಿನ ಹುಡುಗರು ಸೇರೋರು, ಆಟ, ಹರಟೆ ಹೊಡೆಯುತ್ತಾ ತೋಟಗಳಿಗೆ ಹೋಗೋರು. ಕಕ್ಕಸಿಗೂ ಹೋಗುತ್ತಿದ್ದುದು ತೋಟಕ್ಕೇ. ಹೊರಗಿನ ತೋಟದಲ್ಲಿ ಸಹಾಯಕ್ಕೆ ಆಳುಗಳು ಇರುತ್ತಿದ್ದರು. ಅಲ್ಲೂ ಸಂಕೇತಿಗಳು ಆಳುಗಳನ್ನು ನೆಚ್ಚಿಕೊಂಡಿರಲಿಲ್ಲ. *'ನೀ ಮಾಡದಿದ್ದರೆ ನಾ ಮಾಡ್ತೀನಿ' ಅನ್ನುವ ಧೋರಣೆ ಅವರದು.*

ಮನೆತೋಟದಲ್ಲಿ ಪಾತಿ, ನೀರು, ಗೊಬ್ಬರ ಎಲ್ಲಾ ತಾವೇ ನಿಭಾಯಿಸುತ್ತಾರೆ. ಬೇರೆಯವರನ್ನು ಅಲ್ಲಿಗೆ ಸೇರಿಸಲ್ಲ. ತೋಟಗಾರರಿಗೆ *ವಿರಾಮ ಸಿಕ್ಕಾಗ ಕೃಷಿ ವಿಷಯವಾಗೇ ಹರಟುತ್ತಿದ್ದರು.* ವ್ಯವಸಾಯ ಮಾಡುವ ರೀತಿ, ಮಾರುಕಟ್ಟೆ, ಬೆಲೆ ಇತ್ಯಾದಿ ವಿಚಾರ ವಿನಿಮಯ ಆಗ ನಡೆಯುತ್ತಿತ್ತು. ಹಾಗಾಗಿ ಕಲಿಕೆ, ಮಾರ್ಗದರ್ಶನ, ಸುಧಾರಣೆ ಎಲ್ಲಾ ಆಗುತ್ತಿತ್ತು.

******

ಹೀಗೆ ವ್ಯವಸಾಯ ಮಾಡುವ ಸಂಕೇತಿಗಳ ಮಾತೂ ಜೋರು. *ಗಟ್ಟಿಯಾಗಿ ಮಾತಾಡೋರು.* ಇತರ ಸಮುದಾಯಗಳ ಜನರೊಂದಿಗೆ ಕೂಡ ವ್ಯವಸಾಯದ



ತಿರುನೆಲ್‌ವೇಲಿ ಜಿಲ್ಲೆಯ ಸಂಕೇತಿ ಗೃಹಸ್ಥರು

ವಿಷಯದಲ್ಲಿ ಹರಟೆ ಹೊಡೆಯೋರು. *ಒರಟು ಮಾತು, ಕೋಪ, ಆರ್ಭಟ* ಅವರ ಇನ್ನೊಂದು ಲಕ್ಷಣ. ತೋಟಗಾರರಾದ ಅವರು ತಾವು ದೊಡ್ಡವರು, *ಓದಿದವರು ಕೆಲಸಕ್ಕೆ ಬಾರದವರು,* ತಾವೇ ಶ್ರೇಷ್ಠರು ಎನ್ನುವ ಭಾವನೆ ಹೊಂದಿದಂತೆ ಕಾಣುತ್ತಿತ್ತು.



ಸಂಕೇತಿಗಳ ಸಮಾರಂಭವೊಂದರ ದೃಶ್ಯ: ತಿರುನೆಲ್‌ವೇಲಿ

******

ಮನೆತೋಟದಲ್ಲಿ ಹೆಂಗಸರ ಪಾತ್ರ ದೊಡ್ಡದಾಗಿರುತ್ತಿತ್ತು. ಪಾತಿ ಮಾಡುವುದು, ನೀರು ಹಾಕುವುದು ಮೊದಲಾದ ಕೆಲಸ ಅವರು ಮಾಡುತ್ತಿದ್ದರು. ಹಸುಗಳ ಹಾಲು ಕರೆಯುವುದು, ಸಗಣಿ ಎತ್ತಿ ತಿಪ್ಪೆಗೆ ಹಾಕುವುದು ಮೊದಲಾದವನ್ನು ಹೆಂಗಸರೇ ಮಾಡುತ್ತಿದ್ದರು. ದನ ಮೇಯಿಸಿಕೊಂಡು ಬರಲು ಮಾತ್ರ ಆಳುಗಳು ಇರುತ್ತಿದ್ದರು.

****



ಸಂಕೇತಿಗಳ ಸಮಾರಂಭವೊಂದರ ದೃಶ್ಯ :
ತಿರುನೆಲ್‌ವೇಲಿ



ಸಂಕೇತಿಗಳ ಸಮಾರಂಭವೊಂದರ ದೃಶ್ಯ:
ತಿರುನೆಲ್‌ವೇಲಿ



ಸಂಕೇತಿ ಗೃಹಿಣಿಯರು: ತಿರುನೆಲ್‌ವೇಲಿ

ಏ) ಸಂಕೇತಿ ಕೃಷಿಯ ಪೂರ್ವಸ್ಥಿತಿ ಮತ್ತು ಪರಿಣತ ಮುನ್ನಡೆ

(ಕ್ಷೇತ್ರಕಾರ್ಯ: 20-25 ಮಾರ್ಚ್, 2010)

ಪೂರ್ವ ವಾಸನೆಗಾಗಿ ಹುಡುಕಾಟ

ಸಂಖ್ಯೆಯನ್ನೇ ಮುಖ್ಯವೆಂದು ಪರಿಗಣಿಸಿ ಹೇಗೆ ಹೇಗೆ ಯೋಚಿಸಿದರೂ ಸಂಕೇತಿ ಸಮುದಾಯವು ಬಹು ನಗಣ್ಯವಾದುದು. ಸುಮಾರು ೨೫೦೦೦ ಜನಸಂಖ್ಯೆ ಎಂಬುದು ಜಗತ್ತಿನ ೬೦೦ ಕೋಟಿ ಜನಸಂಖ್ಯೆಯ ಮಧ್ಯೆ ಏನೂ ಅಲ್ಲ. ಈ ೨೫೦೦೦ ಜನರೂ ಈಗ ಜಗತ್ತಿನ ಮೂಲೆಮೂಲೆಯಲ್ಲಿ ಚದುರಿ ಚಲ್ಲಾಪಿಲ್ಲಿಯಾಗಿ ಹೋಗಿದ್ದಾರೆ. ಈ ಚದುರಾಟ ನಡೆದಿರುವುದು ಹೊಟ್ಟೆಪಾಡಿಗಾಗಿ. ಹೊಟ್ಟೆಗಾಗಿ ನಡೆದಿರುವ ಇಂಥ ಅಲೆದಾಟವು ಮನುಕುಲದ ಕಥೆ; ಭಾರತದಲ್ಲಿ ಯಜ್ಞಯಾಗಗಳಿಗೆಂದು ಅತ್ತಿಂದಿತ್ತ ಹರಿದಾಡಿದ ಬ್ರಾಹ್ಮಣರ ಕಥೆ; ಹೊಸ ಸಾಧ್ಯತೆಗಳ ಗಾಲಿಯಮೇಲೇ ಕೂತು ಜೀವನ ಸಾಗಿಸುವ ಸಂಕೇತಿಗಳ ವಿಶೇಷ ಕಥೆ. ವ್ಯವಸಾಯ - ಇನ್ನೂ ನಿರ್ದಿಷ್ಟವಾದ ತೋಟಗಾರಿಕೆಯ ಜೀವನ ವ್ಯವಸ್ಥೆಯ ಅಡಿಯಲ್ಲಿಯೇ ಜಂಗಮತೆಯನ್ನು ಬೇಕಾಬಿಟ್ಟಿಯಾಗಿ ಪ್ರದರ್ಶಿಸಿರುವ ಸಮುದಾಯವಿದು. ಆಯಾ ಕಾಲ ಸನ್ನಿವೇಶಗಳ ಅತಿಶ್ರೇಷ್ಠತೆಯ ಸವಾಲುಗಳನ್ನು ಲೀಲಾಜಾಲವಾಗಿ ಎದುರುಹಾಕಿಕೊಳ್ಳುವ ಈ ಸಮುದಾಯವು ವಿಜ್ಞಾನ ತಂತ್ರಜ್ಞಾನಗಳ ಅನೇಕ ವಲಯಗಳ ಮುಂಚೂಣಿಯಲ್ಲಿದೆ. ಇಂಥ ಸ್ಥಿತಿಗತಿಗಳಲ್ಲಿ ಆಧುನಿಕತೆಯ ಮಧ್ಯೆ ಎಲ್ಲರೂ ಮೈಮರೆತಿರುವ ಈ ಹೊತ್ತಿನಲ್ಲಿ ತೋಟಗಾರಿಕೆಗೂ ಸಂಕೇತಿಗಳಿಗೂ ಇರುವ ವಿಶಿಷ್ಟ ಸಂಬಂಧದ ಬಗೆಗೆ ಇಷ್ಟು ತಲೆಕೆಡಿಸಿಕೊಳ್ಳುವುದು ಕೆಲವರಿಗೆ ಸೋಜಿಗವಾಗಿ ಕಾಣಬಹುದು, ಕೆಲವರಿಗೆ ಅರ್ಥಹೀನವಾಗಿ ಕಾಣಬಹುದು.

'ಸಂಕೇತಿ: ಬೇಸಾಯದ ಬದುಕು' ಎಂಬ ಸಂಪುಟವು 'ಸಂಕೇತಿ ಕೃಷಿಯ ವಿಭಿನ್ನ ನೆಲೆಗಳು' ಎಂಬ ಸಂಪುಟದ ಮುಂದುವರಿಕೆಯಾಗಿ ಬಂದಿದೆ. ಸಾವಿರ ಪುಟಗಳಲ್ಲಿ ಸಂಕೇತಿ ಬೇಸಾಯದ ವಿಶಿಷ್ಟ ನೆಲೆಯ ಶೋಧವಾದ ಮೇಲೂ ಈ ಸಂಬಂಧದಲ್ಲಿ ಹೇಳಬೇಕಾದುದೆಲ್ಲವನ್ನೂ ಹೇಳಿಯಾಗಿದೆ ಎನ್ನುವಂತಿಲ್ಲ. ಈ ಒಂಬತ್ತನೆಯ ಸಂಪುಟದಲ್ಲಿಯೇ ಸೇರಬೇಕಾದ ಭಾಗವೊಂದು ತನ್ನ ಅವಕಾಶಕ್ಕಾಗಿ ಎಡೆಬಿಡದೆ ಕಾಡುತ್ತಿತ್ತು. ಅದನ್ನು ಪೂರೈಸುವುದಕ್ಕಾಗಿ ಸಂಕೇತಿ ಕೃಷಿ ಸಂಪುಟಗಳಿಗೆ ಸಂಬಂಧಿಸಿದ ಕೊನೆಯ ಕ್ಷೇತ್ರಕಾರ್ಯವನ್ನು ಕೈಗೊಳ್ಳಲಾಯಿತು (೨೦೧೦ರ ಮಾರ್ಚ್ ೨೦ ರಿಂದ ೨೫ರ ವರೆಗೆ). ಕರ್ನಾಟಕದ ಸಂಕೇತಿಗಳ ಪೂರ್ವಸ್ಥಾನದಲ್ಲಿ ವೀಳೆಯ ವ್ಯವಸಾಯ ಹೇಗಿತ್ತು, ಅಡಕೆ ಬೆಳೆ ವಿವರ ಎಂಥದಿತ್ತು? ಇದು ಅನ್ವೇಶಣೆಯ ವಸ್ತು. ಈ ಹುಡುಕಾಟಕ್ಕಾಗಿಯೇ ಕ್ಷೇತ್ರಕಾರ್ಯ ನಡೆಯಿತು.

ಕ್ಷೇತ್ರದ ಆಯ್ಕೆ

ತಮಿಳುನಾಡು ಮತ್ತು ಕೇರಳದ ಸಂಕೇತಿಗಳು ಅನೇಕ ದಶಕಗಳ ಹಿಂದಿನಿಂದಲೇ ಹಳ್ಳಿಗಳನ್ನು ಧಾವಂತದಿಂದ ತೊರೆದಿದ್ದಾರೆ. ವ್ಯವಸಾಯವನ್ನು ಕೈಬಿಟ್ಟಿದ್ದಾರೆ. ಪಟ್ಟಣಗಳನ್ನು ಸೇರಿದ್ದಾರೆ. ಹಲವು ಕಡೆಗಳಿಗೆ ಚದುರಿಹೋಗಿದ್ದಾರೆ. ಈಗ ಅಲ್ಲಿ ಕರ್ನಾಟಕದ ಸಂಕೇತಿಗಳ ವ್ಯವಸಾಯದ ಲಕ್ಷಣ ಮತ್ತು ಗಾಢತೆಗೆ ಸಂವಾದಿಯಾದ ಯಾವ ನಿದರ್ಶನವೂ ಕಾರ್ಯಶೀಲವಾಗಿ ಉಳಿದಿಲ್ಲ.

ಅವರ ವ್ಯವಸಾಯದ - ಮುಖ್ಯವಾಗಿ ವೀಳೆ ಮತ್ತು ಅಡಿಕೆಯ – ಪೂರ್ವವಾಸನೆಯ ಕ್ಷೇತ್ರಗಳನ್ನಾದರೂ ಹೋಲಿಕೆಗಾಗಿ ಈಗ ಹುಡುಕಬೇಕಾಗಿದೆ.

ಶಂಕೋಟ್ಟೈ-ಕೊಲ್ಲಂ-ತಿರುವನಂತಪುರಂ-ಕನ್ಯಾಕುಮಾರಿ-ನಾಗರಕೋಯಿಲ್-ತಿರುನೆಲ್‌ವೇಲಿ-ಶಾಪತ್ತೂರು (ಆಳ್ವಾರ್ ಕುರುಚಿ)-ಶೆಂಕೋಟ್ಟೈ - ಈ ನೆಲೆಗಳನ್ನು ಸೇರಿಸುವಂತೆ ಎಳೆದ ರೇಖೆಯು ಅಲ್ಲಿನ ಸಂಕೇತಿಗಳ ನಿಕಟಪೂರ್ವ ಆವಾಸಸ್ಥಾನದ ಗಡಿಯನ್ನು ಚಿತ್ರಿಸುತ್ತದೆ. ಆದರೆ

ತಿರುನೆಲ್‌ವೇಲಿ-ಶೆಂಕೋಟ್ಟೈ ನಡುವೆ ಇರುವ ಶಾಪತ್ತೂರು ಸಂಕೇತಿ ಸಮುದಾಯದ ಕರಾಳ ಅಧ್ಯಾಯವೊಂದಕ್ಕೆ ಸಂಬಂಧಿಸಿದ ಐತಿಹಾಸಿಕ ಸ್ಥಳ. ತಳ್ಳಿಹಾಕಲಾಗದ ಹಲವು ಸಾಕ್ಷ್ಯಗಳು ಶಾಪತ್ತೂರು ಮತ್ತು ಅದಕ್ಕೆ ಹೊಂದಿಕೊಂಡಂತೆ ನಾಚಾರಮ್ಮನವರ ಬಗೆಗೆ ಇವೆ. ಆ ಊರು ಸಂಕೇತಿಗಳ ಮುಖ್ಯ ಕೇಂದ್ರಸ್ಥಾನವಾಗಿತ್ತೆಂಬ ಸೂಚನೆಯೂ ಅದರ ಬಗೆಗಿನ ಐತಿಹ್ಯದಲ್ಲಿ ಅಡಗಿದೆ. 'ಸಂಕೇತಿ' ಎಂಬ ಹೆಸರು 'ಶೆಂಕೋಟ್ಟೈ' (ಪ್ರಾಂತ)ದಿಂದಲೇ ನಿಷ್ಪನ್ನವಾಗಿದೆ. ತಿರುವಾಂಕೂರು ಪ್ರಾಂತದೊಂದಿಗೆ ಸಂಕೇತಿಗಳಿಗೆ ಇದ್ದ ಸಂಬಂಧದ ದೊಡ್ಡ ಐತಿಹಾಸಿಕ ದಾಖಲೆಯೇ ಇದೆ. ಶಂಕೋಟ್ಟೈ ಪಶ್ಚಿಮಕ್ಕೆ 'ಕೊಲ್ಲಂ' ನಗರದ ದಾರಿಯಲ್ಲಿದ್ದ ನಿಕಟಪೂರ್ವ ಸಂಕೇತಿ ನೆಲೆಗಳ ಸ್ಮರಣೆಯೂ ಅಲ್ಲಿನ ಜನರಿಗಿದೆ. ಆ ನೆಲೆಗಳನ್ನು ತೊರೆದು ಹೆಚ್ಚು ಕಾಲವೂ ಆಗಿಲ್ಲ. ಇದೆಲ್ಲದರಿಂದಾಗಿ, ಶೆಂಕೋಟ್ಟೈ-ಕೊಲ್ಲಂ-ತಿರುವನಂತಪುರಂ-ಶಾಪತ್ತೂರು - ಶೆಂಕೋಟ್ಟೈ ನಡುವಿನ ಪ್ರದೇಶವು ಸಂಕೇತಿಗಳ ಭೂತಪೂರ್ವ ಆಡುಂಬೊಲವಾಗಿತ್ತೆಂಬ ಹಿರಿಯ ವಕ್ತೃಗಳ ಹೇಳಿಕೆಗಳಿಗೆ ಬಲ ಬಂದಿದೆ. ಈ ಕಾರಣದಿಂದಾಗಿ ಪ್ರಕೃತ ಅಧ್ಯಯನಕ್ಕಾಗಿ ಶೆಂಕೋಟ್ಟೈ ಸನಿಹದ ಕೆಲವು ನೆಲೆಗಳನ್ನು ಆರಿಸಿಕೊಳ್ಳಲಾಯಿತು. ಅವುಗಳಲ್ಲಿ ಒಂದು ಶೆಂಕೋಟ್ಟೈನಿಂದ ಪೂರ್ವಕ್ಕೆ ೧೨ ಕಿ.ಮೀ. ದೂರದಲ್ಲಿರುವ ಅಯ್‌ಕುಡಿಗ್ರಾಮ. ಅದು ಎಲೆ ತೋಟಗಳಿಗೆ ಪ್ರಸಿದ್ಧವಾದ ಕೇಂದ್ರ. ಶೆಂಕೋಟ್ಟೈ ಪಶ್ಚಿಮಕ್ಕೆ ಕೊಲ್ಲಂದಾರಿಯಲ್ಲಿನ ವಿವಿಧ ತೋಟಗಳನ್ನು ಅಡಿಕೆ ಬೇಸಾಯ ಮತ್ತು ಬಾಗಾಯ್ತಿನ ಸ್ವರೂಪದ ಅಧ್ಯಯನಕ್ಕಾಗಿ ಆರಿಸಿಕೊಳ್ಳಲಾಯಿತು.

ಇದು ಈ ಹಿಂದಿನ ವಿಸ್ತಾರವಾದ ಅಧ್ಯಯನಗಳಿಂದಲೂ ಕಂಡುಕೊಂಡ ಸತ್ಯ. ಈವರೆಗಿನ ಯಾವ ಅಧ್ಯಯನ ಪ್ರವಾಸವನ್ನೂ ಒಂದೇ ದಿಕ್ಕುದೆಸೆಯಿಂದ ಮಾಡಲಾಗಿಲ್ಲ. ಮಧುರೈ-ತಿರುನೆಲ್‌ವೇಲಿ-ನಾಗರಕೋಯಿಲ್-ಕನ್ಯಾಕುಮಾರಿ; ಕನ್ಯಾಕುಮಾರಿ-ತಿರುವನಂತಪುರಂ; ತಿರುವನಂತಪುರಂ-ಕೊಲ್ಲಂ-ಶೆಂಕೋಟ್ಟೈ; ಮಧುರೈ-ತೆಂಕಾಸಿ-ಶೆಂಕೋಟ್ಟೈ; ತಿರುನೆಲ್‌ವೇಲಿ-ಶಾಪತ್ತೂರ್-ತೆಂಕಾಸಿ; ತಿರುನೆಲ್‌ವೇಲಿ-ತೆಂಕಾಸಿ ಹೀಗೆ ವಿವಿಧ ಮಾರ್ಗಗಳಲ್ಲಿ ಸಾರ್ವತ್ರಿಕ ಅವಲೋಕನದ ನಡುವೆಯೂ ಸಂಕೇತಿಗಳ ಪೂರ್ವನೆಲೆಗಳನ್ನು ಪರಿಶೀಲಿಸಲಾಗಿದೆ. ತಮಿಳುನಾಡಿನ ಮತ್ತು ಕೇರಳದ ಇತರ ಎಡೆಗಳನ್ನು ಅವಲೋಕಿಸಲಾಗಿದೆ. ಕೃಷಿ ವಿಶ್ವವಿದ್ಯಾಲಯಗಳನ್ನು ಸಂದರ್ಶಿಸಲಾಗಿದೆ. ಈ ಬಾರಿಯ ಪ್ರವಾಸವು ಮೈಸೂರು-ತೂತ್ತುಕುಡಿ-ತಿರುನೆಲ್‌ವೇಲಿ-ನಾಗರಕೋಯಿಲ್-ಕನ್ಯಾಕುಮಾರಿ-ಶಾಪತ್ತೂರು-ತೆಂಕಾಸಿ -ಅಯ್‌ಕುಡಿ-ಎಲತ್ತೂರು-ಶೆಂಕೋಟ್ಟೈ-ಮಣಿಯಾಚ್ಚಿ ಈ ಮಾರ್ಗದಲ್ಲಿ ನಡೆಯಿತು. ಕೊನೆಗೂ ಸಂದರ್ಶನಯೋಗ್ಯವಾಗಿ ಕಂಡವು ಮೇಲೆ ಹೇಳಿದ ಶೆಂಕೋಟ್ಟೈ ಸಮೀಪದ ಕೆಲವು ಮಾದರಿ ಕ್ಷೇತ್ರಗಳು.

ವೀಳೆಯ ಬೇಸಾಯ

ಸಂದರ್ಶನ : ಅಯ್‌ಕುಡಿ ರಾಮಕೃಷ್ಣನ್ (48, ಮೂಪನಾರ್)

ಕಾಡಿದ ಕಣ್ಣನ್

ಏನನ್ನು ಕೇಳುವುದಕ್ಕೂ ಮೊದಲು ರಾಮಕೃಷ್ಣನ್ ಅವರನ್ನು ನಾನು ಕೇಳಿದ ಪ್ರಶ್ನೆಯೆಂದರೆ ವೀಳೆಯ ಬೇಸಾಯವನ್ನು ಮೂಪನಾರ್‌ಗಳು ಮಾತ್ರವೇ ಮಾಡುತ್ತಾರೆಯೆ? ಎಂಬುದು. ಆತ ಕೊಟ್ಟ ಉತ್ತರವು ನಿರ್ದಿಷ್ಟವಾಗಿಯೇ ಇದೆ - 'ಹೌದು. ಮೂಪನಾರ್‌ಗಳು ವೀಳೆಯ ವ್ಯವಸಾಯ ಮಾಡುತ್ತಾರೆ. ಅವರೇ ಮಾಡಬೇಕೆಂದೇನಿಲ್ಲ, ಬೇರೆಯವರೂ ಮಾಡಬಹುದು. ಇಲ್ಲಿ ಬೇರೆ ಯಾರೂ ಮಾಡುವುದಿಲ್ಲ.'

ಇದರಲ್ಲಿ ಸಂದಿಗ್ಧತೆ ಇಲ್ಲ. ಈವರೆಗಿನ ಭಾರತದ ಜಾತಿಪದ್ಧತಿಯು ವೃತ್ತಿಗೆ ಹೊಂದಿಕೊಂಡೇ ಇದೆ. 'ಮಡಿಕೆಯನ್ನು ಬೇರೆಯವರು ಮಾಡಬಾರದೆಂದೇನೂ ಇಲ್ಲ. ಕುಂಬಾರರು ಮಾಡುತ್ತಾರೆ ಅಷ್ಟೆ' ಎಂದ ಹಾಗೆ.

ಇಂಥ ಪ್ರಶ್ನೆಯೊಂದಿಗೇ ಸಂದರ್ಶನವನ್ನು ಪ್ರಾರಂಭಿಸುವುದಕ್ಕೆ ಕಾರಣವಿದೆ. ತಿರುನಲ್‌ವೇಲಿಯ ಕಣ್ಣನ್‌ಶಾಸ್ತ್ರಿಗಳು (ಸಂಕೇತಿ) ಬಹು ಉಗ್ರವಾಗಿಯೇ 'ಸಂಕೇತಿಗಳು ವೀಳೆಯನ್ನು ಬೆಳೆಯುವುದಿಲ್ಲ. ಯಾವ ಬ್ರಾಹ್ಮಣರೂ ಆ ಕೆಲಸ ಮಾಡುವುದಿಲ್ಲ. ಅದೇನಿದ್ದರೂ ಮೂಪನಾರ್ ಎಂಬ ಜಾತಿಯ ಜನರು ಮಾತ್ರವೇ ಮಾಡುವಂಥದು' ಎಂದು ವಾದಿಸಿದ್ದರು. ನಿಜವಾಗಿ ನನ್ನ ಪ್ರಶ್ನೆಯನ್ನು ಅವರು ಪ್ರತಿಭಟಿಸಿದ್ದರು.

೧೯೯೨ರಲ್ಲಿ ಮೊದಲ ಬಾರಿ ದಕ್ಷಿಣದ ಪ್ರವಾಸ ಮಾಡಿದಾಗಿನ ಸಂದರ್ಭಕ್ಕೂ ೨೦೧೦ರಲ್ಲಿ ಪ್ರವಾಸ ಮಾಡುತ್ತಿರುವ ಸಂದರ್ಭಕ್ಕೂ ನಡುವೆ ಕಳೆದಿರುವ ವರ್ಷಗಳು ಕೇವಲ ೧೮. ಆದರೆ ದಕ್ಷಿಣದ ಕೆಲ ಸಂಕೇತಿಗಳ ಮನೋಭಾವ ಮತ್ತು ಪ್ರತಿಕ್ರಿಯೆಯ ರೀತಿಯಲ್ಲಿ ಅಗಾಧವಾದ ವ್ಯತ್ಯಾಸ ಕಂಡಿದೆ. ಸಂಕೇತಿಗಳಿಗೆ ನಾಚಾರಮ್ಮನಿಂದ ಶಾಪ ಬಂದಿತೆಂಬ ಪ್ರಸಂಗವನ್ನೂ, ಸಂಕೇತಿಗಳು (ಉಳುಮೆ ಸಹಿತವಾಗಿ) ವ್ಯವಸಾಯ ಮಾಡುತ್ತಿದ್ದರೆಂಬ ಸಂಗತಿಯನ್ನೂ, ನಾಚಾರಮ್ಮನ ಶಾಪಪರಿಹಾರಕ್ಕಾಗಿಯೇ ಕೆಲವು ದೇವಸ್ಥಾನಗಳನ್ನು ಸಂಕೇತಿಗಳು ಕಟ್ಟಿಸಿದರೆಂಬ ಸಂಗತಿಯನ್ನೂ ಅವರು ಖಂಡತುಂಡವಾಗಿ ವಿರೋಧಿಸುತ್ತಾರೆ. ಇಂಥ ಪ್ರವೃತ್ತಿಯನ್ನು ಬೆಳೆಸಿಕೊಂಡ 'ಪ್ರಜ್ಞಾವಂತರ' ಸಂಖ್ಯೆ ಬಹು ಅಲ್ಪ. ಅವರೆಲ್ಲರೂ ಶಿಕ್ಷಿತರು, ನಗರವಾಸಿಗಳು. ಕಣ್ಣನ್‌ಶಾಸ್ತ್ರಿಗಳು ಕೂಡ ಅಧ್ಯಾಪಕರಾಗಿ ಸೇವೆಸಲ್ಲಿಸಿ ನಿವೃತ್ತರಾಗಿರುವಂಥವರು. ಈಗ ಪೌರೋಹಿತ್ಯ ನಡೆಸುತ್ತಿರುವಂಥವರು. ಈ ರೀತಿಯ ವಿರೋಧೀಪ್ರವೃತ್ತಿ ಬೆಳೆಯುವುದಕ್ಕೆ ಕಾರಣವಿದೆ. ಕರ್ನಾಟಕದ ಸಂಕೇತಿಗಳನ್ನು ಕಾಡಿರುವ ಒಂದೇ ಕುತೂಹಲವೆಂದರೆ ನಾಚಾರಮ್ಮನ ಶಾಪಪ್ರಸಂಗ. ಯಾರೇ ದಕ್ಷಿಣದ ಸಂಕೇತಿ ಸಿಕ್ಕಿದರೂ ಇದನ್ನೇ ಕೆದಕುತ್ತಾರೆ. ಮೊದಲೇ ಕೀಳರಿಮೆಯಿಂದ ನಲುಗುತ್ತಿರುವ ದಕ್ಷಿಣದ ಸಂಕೇತಿಗಳನ್ನು ಇದು ಕೆರಳಿಸಿದೆ. ಈವರೆಗಿನ ೧೮ ವರ್ಷಗಳಲ್ಲಿ ದಕ್ಷಿಣದಲ್ಲಿ ಮತ್ತೆ ಮತ್ತೆ ನಡೆಸಿರುವ ವಿಸ್ತಾರವಾದ ಕ್ಷೇತ್ರಕಾರ್ಯವು ನಾಚಾರಮ್ಮನ ಪ್ರಸಂಗದ ಬಗೆಗಿನ ನಿಖರ ಮಾಹಿತಿ ಒದಗಿಸಿದೆ. ಸಂಕೇತಿಗಳು ಸ್ವತಃ ನೆಲ ಉತ್ತು ವ್ಯವಸಾಯ ಮಾಡಿದ ಇತಿಹಾಸವನ್ನೂ ಶ್ರುತಪಡಿಸಿದೆ. ಲಿಖಿತ ದಾಖಲೆಗಳನ್ನೂ ಕೂಡ ತಿದ್ದಿ ಪುನರ್ಮುದ್ರಿಸಿ ನಿಜ ಸಂಗತಿಗಳಿಗೆ ತಪ್ಪು ತಿರುವು ಕೊಟ್ಟ ಪ್ರಸಂಗಗಳನ್ನು ಪತ್ತೆಹಚ್ಚಲಾಗಿದೆ. ಸಂಕೇತಿಗಳು ಮಣ್ಣುಮುಟ್ಟಿ ವ್ಯವಸಾಯ ಮಾಡುತ್ತಿರುವ ಜನಾಂಗ. ಅದರಲ್ಲಿ ಹೆಮ್ಮೆಪಡಬೇಕಾದ ಅಂಶವಿದೆ. ನಾಚಬೇಕಾದ ವಿಷಯ ಅದಲ್ಲ.

ಮೂಪನಾರ್

ಕರ್ನಾಟಕದಲ್ಲಿ ಸಂಕೇತಿಗಳ ತೋಟಗಳನ್ನು 'ಎಲೆತೋಟ' ಎಂದೂ ಕರೆಯುತ್ತಾರೆ. ವೀಳೆಯ ವ್ಯಾಪಾರ ಮಾಡುವವರಿಗೆ ಅದೇ ಪ್ರಧಾನವಾಗಿ ಕಾಣುವುದರಿಂದಾಗಿ ಅವರು ಹಾಗೆ ಕರೆಯುತ್ತಾರೆ. ಅಡಿಕೆ ವ್ಯಾಪಾರವನ್ನೇ ಪ್ರಧಾನವೃತ್ತಿಯಾಗಿ ಉಳ್ಳವರು ಅದನ್ನೇ 'ಅಡಿಕೆ ತೋಟ' ಎಂದು ಕರೆಯುತ್ತಾರೆ. ಇದು ಸಹಜವಾಗಿದೆ. ಅಂದರೆ ಸಂಕೇತಿಗಳ ತೋಟಗಳು ಕರ್ನಾಟಕದಲ್ಲಿ 'ಎಲೆತೋಟ' ಮತ್ತು 'ಅಡಿಕೆ ತೋಟ'ಗಳಾಗಿ ಏಕಕಾಲಕ್ಕೆ ಮೆರೆದಿವೆ. ಇದರಲ್ಲಿ ದೊಡ್ಡ ವಿಶೇಷವಿದೆ. ಹೇಗೂ ಅದನ್ನು ನಾವು ಮುಂದಿನ ಪುಟಗಳಲ್ಲಿ ನೋಡಲಿದ್ದೇವೆ. ಸದ್ಯಕ್ಕೆ ನಮಗೆ ಮೊದಲ ವಿಸ್ಮಯವಾಗಿ ಎದುರು ನಿಲ್ಲುವ ವಿಷಯವೆಂದರೆ ಮೂಪನಾರ್‌ಗಳ ವೃತ್ತಿಯನ್ನು ಸಂಕೇತಿಗಳು ಯಾವಾಗ ತಮ್ಮದಾಗಿಸಿಕೊಂಡರು ಎಂಬುದು. ಎರಡನೆಯ ವಿಸ್ಮಯವೆಂದರೆ ವೃತ್ತಿಶೀಲರಾದ ಎಲೆ ತೋಟಗಾರರನ್ನು ಮೀರಿಸಿದ ಪರಿಣತಿಯನ್ನು ಇವರು ಅದೆಷ್ಟು ಚೆನ್ನಾಗಿ ಸಾಧಿಸಿದ್ದಾರೆಂಬುದು. ಹೇಗೂ ಅದು ಕೂಡ ಮುಂದಿನ ಪುಟಗಳಲ್ಲೇ ನಿಚ್ಚಳಗೊಳ್ಳಲಿದೆ. ಮುರುಗನ್ ದೇವರು ಯುದ್ಧಕ್ಕೆ ಹೋದಾಗ ಅವನಿಗೆ ಬೆಂಬಲವಾಗಿ ನಿಂತವರು ಮೂಪನಾರ್‌ಗಳಂತೆ. ಆದ್ದರಿಂದಲೇ ಅವರು 'ಸೇನೈತ್ತಲೈವರ್ ಮೂಪನಾರ್' ಎನಿಸಿದ್ದಾರೆ. ಅಯ್‌ಕುಡಿ ಗ್ರಾಮದಲ್ಲಿ ಮೂಪನಾರ್‌ಗಳ ೧೦೦೦ ಮನೆ ಇದೆ. ಅವರ ಜನಸಂಖ್ಯೆ ೪೦೦೦. ಅವರಲ್ಲಿ ಶೇ. ೭೫ರಷ್ಟು ಜನರಿಗೆ ಎಲೆತೋಟಗಳಿವೆ. ಶೇ. ೨೫ರಷ್ಟು ಜನರು ಕೂಲಿ ಕೆಲಸ ಮಾಡುತ್ತಾರೆ. ವ್ಯವಸಾಯೇತರ ಕಸಬುಗಳನ್ನೂ ಮಾಡುತ್ತಾರೆ. ಇತರ ಸಮುದಾಯದವರು ಎಲೆ ಬೇಸಾಯದ ಕ್ಷೇತ್ರವನ್ನು ಪ್ರವೇಶಿಸಿಲ್ಲ.

ಅಯ್‌ಕುಡಿಯ ತಿರುಪತಿ ಮೂಪನಾರ್ ಅವರ ಮಗ ಸುಡಲೈ ಮುತ್ತು ಮೂಪನಾರ್ (೮೩). ಈ ಮುತ್ತು ಮೂಪನಾರ್‌ಗೆ ನಾಲ್ಕು ಹೆಣ್ಣು, ಮೂವರು ಗಂಡುಮಕ್ಕಳು. ಕೊನೆಯ ಮಗ ರಾಮಕೃಷ್ಣನ್ (೪೮).

ಅವರು ವೀಳೆ ಬೇಸಾಯ ಮಾಡುವ ಕ್ರಮ ಇದು: ವೀಳೆ ಬೇಸಾಯಕ್ಕಾಗಿ ಹೊಲವನ್ನೇ ಆರಿಸಿಕೊಂಡಿದ್ದಾರೆ. ನಾವು ನೋಡಿದ ಹೊಲಕ್ಕೆ ನೀರಿನ ಆಸರೆಯಾಗಿದ್ದುದು ಪಂಪ್ ಬಾವಿ. ಗದ್ದೆಯ ಬಯಲಿನಲ್ಲಿ ತೋಟಮಾಡಿದವರೂ ಉಂಟು. ಮುಖ್ಯವಾಗಿ ನೀರಿನ ಹತೋಟಿಯು ಗಮನಿಸಬೇಕಾದ ಅಂಶ.

ಯಾವುದೇ ಜಮೀನಿನಲ್ಲಿ ಮೊದಲ ಬಾರಿ ತೋಟ ಮಾಡುವಾಗ ಮಣ್ಣನ್ನು ಪರೀಕ್ಷೆ ಮಾಡುತ್ತಾರೆ. ಅದು ವೈಜ್ಞಾನಿಕವಾದ ಮಣ್ಣಿನ ಪರೀಕ್ಷೆಯಲ್ಲ. ಮೊದಲು ಇಡೀ ಎಕರೆಗೆ ಹಂಬು ಊರಿ ಅದು ಚೆನ್ನಾಗಿ ಬೆಳೆಯುತ್ತದೆಯೆ ಎಂದು ನೋಡುತ್ತಾರೆ. ವೈಜ್ಞಾನಿಕವಾದ



ವೀಳೆಯ ತೋಟದ ಸುತ್ತ ತೆಂಗಿನ ಸೋಗೆಯ ತಡಿಕೆ ಕಟ್ಟಿ ಮರೆ ಮಾಡಿರುವುದು

ಮಣ್ಣಿನ ಪರೀಕ್ಷೆಯ ಕ್ರಮವನ್ನು ಅವರು ಇತ್ತೀಚಿನವರೆಗೂ ಅನುಸರಿಸಿಲ್ಲ.

ಎಲೆ ತೋಟಕ್ಕಾಗಿ ಆರಿಸಿದ ಜಮೀನನ್ನು ಎತ್ತುಗಳನ್ನು ಹೂಡಿ ಉಳುತ್ತಾರೆ. ಇತ್ತೀಚೆಗೆ ಟ್ರ್ಯಾಕ್ಟರ್‌ಗಳನ್ನು ಬಳಸುತ್ತಿದ್ದಾರೆ.

ಒಂದು ಎಕರೆ ಎಲೆತೋಟವನ್ನು ರೂಢಿಸುವುದಕ್ಕೆ ಪ್ರಾರಂಭಿಕ ವೆಚ್ಚ ಈ ದಿನಗಳಲ್ಲಿ ಎರಡು ಲಕ್ಷ ರೂಪಾಯಿಗಳಾಗುತ್ತವೆ. ಅದು ದಕ್ಕಿದರೆ ಉಂಟು, ಇಲ್ಲದಿದ್ದರೆ ಇಲ್ಲ. ಅದನ್ನು ಸಿದ್ಧಪಡಿಸಲು ತಗಲುವ ವೆಚ್ಚ ಮತ್ತು ಲಾಭದ ಅನಿಶ್ಚಿತತೆ ರೈತನಿಗೆ ಒಂದು ಸವಾಲು. ಅದರಿಂದಾಗಿ ಮೂರೋ ನಾಲ್ಕೋ ಐದೋ ಕುಟುಂಬಗಳು ಒಟ್ಟಾಗಿ ಸೇರಿ ಒಂದು ಎಕರೆ ಎಲೆ ತೋಟವನ್ನು ನಿರ್ವಹಿಸುತ್ತಾರೆ.

ಸುಮಾರು ನಾಲ್ಕು ಅಡಿಗೆ ಒಂದು ಸಾಲಿನಂತೆ ಅಗಸೆ ಗಿಡಗಳನ್ನು ಮೊದಲು ಬೆಳೆಸುತ್ತಾರೆ. ಈ ಗಿಡಗಳು ಒಂದರ ಪಕ್ಕ ಒಂದು ಒತ್ತಾಗಿಯೇ ಇರುತ್ತವೆ. ಇವು ಆರರಿಂದ ಹನ್ನೆರಡು ಅಡಿ ಎತ್ತರಕ್ಕೆ ಬೆಳೆಯುತ್ತವೆ. ಇದು, ಇದರ ಆಸರೆಯಲ್ಲಿ ಬೆಳೆಯುವ ವೀಳೆ ಹಂಬಿಗೆ ನೆರಳನ್ನು ಒದಗಿಸುತ್ತದೆ. ಅಗಸೆ ಸೊಪ್ಪನ್ನು ಜನರು ತರಕಾರಿಯಾಗಿ ಬಳಸುತ್ತಾರೆ, ದನಗಳಿಗೆ ಆಹಾರವಾಗಿಯೂ ಬಳಸುತ್ತಾರೆ. ಗೊಬ್ಬರಕ್ಕಾಗಿಯೂ ಬಳಸುತ್ತಾರೆ. ಅಗಸೆ ಮತ್ತು ನುಗ್ಗೆಸೊಪ್ಪು ಬೆರೆಸಿ ಗುಂಡಿಗೆ ಹಾಕಿ ಮೂರು ತಿಂಗಳು ಕೊಳೆಸಿ ಗೊಬ್ಬರ ಮಾಡಿಕೊಂಡು ತೋಟಕ್ಕೆ ಬಳಸಿಕೊಳ್ಳುತ್ತಾರೆ.



ಅಗಸೆಸೊಪ್ಪು ಹೊತ್ತು ನಡೆವ ರೈತ

ಅಗಸೆಯ ಎರಡು ಸಾಲುಗಳ ನಡುವೆ ನೀರಿನ ಪಿಳ್ಳೆ ಇರುತ್ತದೆ. ತೋಟದ ಹೊರ ಸುತ್ತಿನಲ್ಲಿಯೂ ಒಂದು ಪಿಳ್ಳೆ ಇರುತ್ತದೆ.

ಅಗಸೆಗಿಡವು ಆರು ಅಡಿಗಳಷ್ಟು ಬೆಳೆಯುವುದರೊಳಗೆ ಅದರ ಬುಡದಲ್ಲಿ ವಿಳ್ಳೇ ಬಳ್ಳಿಯನ್ನು ನಾಟಿ ಮಾಡುತ್ತಾರೆ. ನಾಟಿಗಾಗಿ ತಂದ ಬಳ್ಳಿಯಲ್ಲಿ ಸುಮಾರು ಐದು ಗಿಣ್ಣು ಇರುತ್ತದೆ. ಎರಡು ಗಿಣ್ಣನ್ನು ನೆಲದಲ್ಲಿ ಹೂಳುತ್ತಾರೆ. ಮೂರು ಗಿಣ್ಣು ಮೇಲೆ ಇರುತ್ತದೆ. ಈ ಬಳ್ಳಿಯು ಬೆಳೆದಂತೆಲ್ಲ ಅದನ್ನು ಅಗಸೆಗೆ ಸುತ್ತಿ ಹಬ್ಬಿಸುವುದಿಲ್ಲ. ಬದಲಿಗೆ ಬಾಳೆ ಅಥವ ತೆಂಗಿನ ಗರಿಯ ನಾರಿನಿಂದ ಅಗಸೆಗಿಡಕ್ಕೆ ಕಟ್ಟುತ್ತಾರೆ. ಬಳ್ಳಿ ಸುಮಾರು ಆರು ಅಡಿಗಳಷ್ಟು ಬೆಳೆಯುತ್ತದೆ. ಸಾಲಾಗಿ ಬೆಳೆದ ಅಗಸೆಗಿಡಗಳ ತುದಿಗಳನ್ನು ಸೇರಿಸಿ ಬಂಬಿಗೆ ಕಟ್ಟುತ್ತಾರೆ. ಅಗಸೆಗಿಡಗಳು ಎಳೆಯವಾಗಿದ್ದು ಬಂಬಿನ ಭಾರವನ್ನು ತಡೆದುಕೊಳ್ಳಲಾರವು. ಅದನ್ನು ಬೆಂಬಲಿಸಲು ಆ ಬಂಬಿಗೆ ಅಲ್ಲಲ್ಲಿ ಕವೆ ಕೋಲುಗಳ ಆಧಾರ ಕೊಡುತ್ತಾರೆ. ವೀಳೆ ಹಂಬು ಒಂದು ವರ್ಷ ಬೆಳೆದಾಗ ಸಗಣಿಗೊಬ್ಬರ



ಅಗಸೆ ಗಿಡದ ಸಾಲು; ಅದಕ್ಕೆ ಹಬ್ಬಿಸಿದ ವೀಳೆ.
ಬುಡದಲ್ಲಿ ನೀರಿನ ಪಿಳ್ಳೆ

ಕೊಡುತ್ತಾರೆ. ನಾಲ್ಕು ದಿನಕ್ಕೆ ಒಮ್ಮೆ ನೀರು ಎರಚುತ್ತಾರೆ. ಪಿಳ್ಳೆಗಳಿಂದ ಬಾಚಿ ಮೊರದಲ್ಲಿ ನೀರು ಎರಚುತ್ತಾರೆ. ಇದರಿಂದಾಗಿ ಅಗಸೆ ಗಿಡದ ಬುಡಕ್ಕೆ ಎರಡು ಪಕ್ಕದಿಂದಲೂ ನೀರು ಮೊಗೆದಂತಾಗುತ್ತದೆ. ಮೂರು ವಾರಕ್ಕೆ ೫-೫ ಬಾರಿ ಹೀಗೆ ನೀರು ಹಾಯಿಸಿದರೆ ಸಾಮಾನ್ಯವಾಗಿ ಸಾಕಾಗುತ್ತದಂತೆ. ಒಂದು ವರ್ಷ ಬೆಳೆದ ಹಂಬು ಆರು ಅಡಿಗಿಂತ ತುಸು ಹೆಚ್ಚು ಹಬ್ಬಿರುತ್ತದೆ. ಆಗ ಬುಡದಿಂದ ಮೂರು ಅಡಿಬಿಟ್ಟು ಕತ್ತರಿಸುತ್ತಾರೆ. ಕತ್ತರಿಸಿದ ಹಂಬನ್ನು ಎಲೆಯೊಡನೆ ಬೇರೆ ಗುಳಿಗೆ ಹೂಳುತ್ತಾರೆ. ಹೀಗೆ ನೆಟ್ಟ ಹಂಬು ಬೇಗ ಬೆಳೆಯುತ್ತದೆ.

ಹಂಬು ಬೆಳೆದಂತೆ 'ತೆಕ್ಕೆಬಿಡುವ ಪದ್ಧತಿ' ಇಲ್ಲಿ ಇಲ್ಲ. ಅಡಿಕೆ ಮರ ಬೆಳೆಯದಿರುವುದರಿಂದ ಅದಕ್ಕೆ ಹಬ್ಬಿಸುವ ಪದ್ಧತಿಯೂ ಇಲ್ಲ.

'ಅಯ್‌ಕುಡಿ ವೆತ್ತಿಲೈ' ಪ್ರಸಿದ್ಧವಾದುದು. ಅದರ ರುಚಿ ಸಿಹಿ. ಪುಟ್ಟ ಏಣಿಗಳನ್ನಿಟ್ಟುಕೊಂಡು ಎಲೆ ಕುಯ್ಯುತ್ತಾರೆ.

ವೀಳೆದೆಲೆಯನ್ನು ತೂಕ ಮಾಡಿ ನಾಲ್ಕು ಗ್ರಾಂನ ಕಟ್ಟುಗಳನ್ನು ಮಾಡುತ್ತಾರೆ. ಬಾಳೆ ನಾರು ಮತ್ತು ತೆಂಗಿನ ನಾರನ್ನು ಅದಕ್ಕಾಗಿ ಬಳಸುತ್ತಾರೆ
ಕಟ್ಟುಗಳನ್ನು



ಅಗಸೆ ಸಸಿಗಳಿಗೆ ವೀಳೆ ಹಬ್ಬಿಸುತ್ತಾರೆ. ಅಗಸೆಗಿಡಗಳ ತಲೆ ಸೇರಿಸಿ ಬಂಬು ಬಿಗಿಯುತ್ತಾರೆ. ಅವುಗಳಿಗೆ ಕವೆಗೋಲಿನ ಆಧಾರ ಕೊಡುತ್ತಾರೆ.

ಕೂಡಿಸಿ ೪೦೦ ಗ್ರಾಂನ ದೊಡ್ಡದೊಂದು ಕಟ್ಟು ಮಾಡುತ್ತಾರೆ.

ನಿಯತವಾಗಿ ತಾಂಬೂಲ ಮೆಲ್ಲುವವರ ಸಂಖ್ಯೆ ತಮಿಳುನಾಡಿನಲ್ಲಿ ದೊಡ್ಡದಾಗಿಯೇ ಇದೆ.

ಮೊದಲ ವರ್ಷ ಲಾಭ ಬರದಿದ್ದರೂ ಒಂದು ವರ್ಷದ ನಂತರ ಪ್ರತಿ ವರ್ಷವೂ ಎಕರೆಗೆ ಮೂರು ಲಕ್ಷ ರೂಪಾಯಿ ಲಾಭ ದೊರೆಯುತ್ತದೆ. ಇದರಿಂದ ಆಗ ಒಂದು ಎಕರೆ ಎಲೆ ತೋಟದಲ್ಲಿ ಮೂರು-ನಾಲ್ಕು ಕುಟುಂಬಗಳ ಜೀವನ ಸಾಗುತ್ತದೆ.

ಗಮನಿಸಬೇಕಾದುದೆಂದರೆ ಮೂರು ವರ್ಷವಾಗುತ್ತಲೇ ಎಲ್ಲವನ್ನೂ ಕಿತ್ತೆಸೆದು ಎಲೆತೋಟವನ್ನು ಮೊದಲಿನಿಂದ ಬೆಳೆಸುತ್ತಾರೆ.

ಬಾಳೆಗೆ ನೆರಳು ಇರಬಾರದು ಎಂಬ ಕಾರಣಕ್ಕೆ ಅದರದೇ ಪ್ರತ್ಯೇಕವಾದ ಬೆಳೆ ತೆಗೆಯುತ್ತಾರೆ.

ಹೋಲಿಕೆ

ಹದಿನೆಂಟು ವರ್ಷಗಳ ಹಿಂದೆ ನಡೆದ ನನ್ನ ಮೊದಲ ಅಧ್ಯಯನ



ಅಗಸೆ ಗಿಡಕ್ಕೆ ವೀಳೆಯ ಹಂಬನ್ನು ಕಟ್ಟಿರುವುದು. ಮೊಗರಾದ ಎಲೆ

ಪ್ರವಾಸದ ವೇಳೆ ನನ್ನ ಮುಂದೆ ಒಂದು ಗುಮ್ಮ ನಿಂತಿತ್ತು. ಎಲೆ ತೋಟಗಳ ಬೇಲಿಗೆ ತೆಂಗಿನ ಗರಿಗಳ ತಡಿಕೆ ಕಟ್ಟಿ ಮರೆ ಮಾಡಿರುತ್ತಾರೆ. ಹೀಗೆ ಮುಚ್ಚುವುದು ಖಾಸಗಿತ್ವಕ್ಕೆ ಮುದ್ರೆಯೊತ್ತುವ ಹೆಜ್ಜೆ. ಹಾಗಾಗಿ ಅಂಥ ತೋಟಗಳ ಒಳಕ್ಕೆ ಪ್ರವೇಶಿಸುವ ಮುನ್ನ ಎರಡು ಬಾರಿ ಯೋಚಿಸಬೇಕಾಗುತ್ತದೆ. ಅಲ್ಲದೆ, ನನ್ನ ಜತೆಗೆ ಇದ್ದ ತಮಿಳುನಾಡಿನ ಮಿತ್ರರು 'ಮೂಪನಾರ್‌ಗಳು ತಮ್ಮ ಎಲೆ ತೋಟದೊಳಕ್ಕೆ ಯಾರನ್ನೂ ಬಿಡುವುದಿಲ್ಲ' ಎಂದು ಎಚ್ಚರಿಸಿದ್ದರು. ನಾವು ಕೂಡ ಕರ್ನಾಟಕದಲ್ಲಿ ಬೆಳೆಸಿರುವ ಹಂಬಿನ ತೋಟಗಳ ಪ್ರವೇಶಕ್ಕೆ ಕೆಲವು ಕಟ್ಟುಪಾಡುಗಳನ್ನು ವಿಧಿಸಿರುವಂಥವರೇ. ಆದರೆ ೨೦೧೦ರ ಈ ಹೊತ್ತು ಎಲ್ಲವೂ ಸುಗಮವಾಗಿದೆ. ಮೂಪನಾರ್‌ಗಳು ಪ್ರೀತಿಯಿಂದ ಸಹಕರಿಸಿದ್ದಾರೆ. ತಮ್ಮ ತೋಟದಲ್ಲಿ ಸುತ್ತಾಡಲು ಅವಕಾಶಮಾಡಿಕೊಟ್ಟಿದ್ದಾರೆ, ಮಾಹಿತಿ ನೀಡಿದ್ದಾರೆ, ಛಾಯಾಚಿತ್ರಕ್ಕೆ ತೆರೆದುಕೊಂಡಿದ್ದಾರೆ.

ನಾನೀಗ ಹೇಳಲಿರುವುದನ್ನು ಯಾರೂ ಸಂಕೇತಿಗಳ ಪರವಾದ ಪಕ್ಷಪಾತದ ಮಾತು ಎಂದು ಎಣಿಸುವುದಿಲ್ಲವೆಂಬ ಧೈರ್ಯವಿದೆ. ಮೊದಲನೆಯದಾಗಿ ಮೂಪನಾರ್‌ಗಳ 'ಎಲೆತೋಟ'ವು 'ತೋಟ'ವೇ ಅಲ್ಲ. ಅದೊಂದು ಹೊಲ. ಜೋಳದ ಹೊಲ ಇಲ್ಲವೆ ಕಬ್ಬಿನ ಗದ್ದೆಯ ಸ್ವರೂಪದ್ದು. ಆ ಬೆಳೆ ಮೂರು ವರ್ಷ ಇರುತ್ತದೆಂಬುದೊಂದೇ ಅಂಶದಿಂದ ಅದಕ್ಕೆ 'ತೋಟ' ಎಂಬ ಹೆಸರು ಬಂದಿರಬಹುದು.

ಮೂಪನಾರ್‌ಗಳು ಅದಕ್ಕಾಗಿ ಪಡುವ ಶ್ರಮವೇನೂ ಕಡಿಮೆಯದಲ್ಲ. ಬೇಲಿಯ (ಗಾಳಿ) ತಡೆ ಮತ್ತು ನೆರಳು ಸಾಲುವುದಿಲ್ಲವೆಂಬುದಕ್ಕಾಗಿ ಮತ್ತೆ ಮತ್ತೆ ತೆಂಗಿನ ಗರಿಯ ತಡಿಕೆ ಕಟ್ಟಬೇಕು. ಬೊಂಬುಗಳನ್ನು ಹೊತ್ತುತಂದು ಇಡೀ ತೋಟದ ಎಲ್ಲ ಅಗಸೆ ಸಾಲುಗಳ ತುದಿಗೂ ಕಟ್ಟಬೇಕು. ಮತ್ತೆ ಮತ್ತೆ ಬೊಂಬು ಹೊಂದಿಸಬೇಕು. ಮೂರು ವರ್ಷ ಕಳೆಯಲು ಗತಿಯಿಲ್ಲ, ಗಿಡದ ಜತೆಗಿನ ಸಂಬಂಧವನ್ನು ಕಡಿದುಕೊಂಡು ಎಲ್ಲವನ್ನೂ ಮತ್ತೆ ಹೊಸದಾಗಿ ಪ್ರಾರಂಭಿಸಬೇಕು.

ಒಂದು ಎಕರೆ ಎಲೆತೋಟವು ಮೂರು-ನಾಲ್ಕು ಕುಟುಂಬಗಳನ್ನು ಸಾಕುತ್ತದೆ. ಅಂದರೆ ಮೂರು ನಾಲ್ಕು ಕುಟುಂಬಗಳು ಸೇರಿ ಒಂದು ಎಕರೆ ತೋಟವನ್ನು ನಿರ್ವಹಿಸುತ್ತಾರೆ. ಅಷ್ಟು ಶ್ರಮ ಅದರ ಹಿಂದಿದೆ. ನಿರಂತರ ಶ್ರಮ ಅದು. ಬೆಳೆ ಮಾಡಿದ ಮೊದಲ ವರ್ಷ ಹೇಳಿಕೊಳ್ಳುವಂಥ ಇಳುವರಿಯೂ ಇರುವುದಿಲ್ಲ. ಲಾಭವೂ ಇರುವುದಿಲ್ಲ.



ಕಟಾವಾದ ತೋಟ – ಎಳೆ ಅಗಸೆಗಿಡಗಳಿಗೆ ಹಬ್ಬಿದ ವೀಳೆಯ ತೋಟ – ಎತ್ತರಕ್ಕೆ ಬೆಳೆದ ಅಗಸೆ ಗಿಡಗಳ ವೀಳೆಯ ತೋಟ



ಬಾಳೆಯದೇ ಪ್ರತ್ಯೇಕ ತೋಟ

ಕರ್ನಾಟಕದ್ದು ನಿರಂತರವಾಗಿ ಹಸಿರಾಗಿ ಸೊಂಪಾಗಿ ಕಂಗೊಳಿಸುವ ತೋಟ. ಅಡಿಕೆ ಮತ್ತು ಅದಕ್ಕೆ ಹಬ್ಬಿದ ಹಂಬು ಎರಡೂ ಜೀವರಕ್ಷಕ ಬೆಳೆಗಳು. 'ತೆಕ್ಕೆಬಿಡುವ ಕ್ರಮ'ವು ತೋಟದ ನಿರಂತರತೆಯ ಸಂಕೇತವೂ ಹೌದು. ವಾಸ್ತವವೂ ಹೌದು. ಒಂದೇ ಕುಟುಂಬವು ಇಡೀ ಒಂದು ಎಕರೆ ತೋಟದ ನಿರ್ವಹಣೆ ಮಾಡುತ್ತದೆ. ಮೂಪನಾರ್‌ಗಳ 'ಎಲೆ' ತೋಟಗಳ ಲಾಭಕ್ಕಿಂತ ಸಂಕೇತಿಗಳ ಮಿಶ್ರತೋಟಗಳಲ್ಲಿನ ವಿಳ್ಳೇದೆಲೆಯ ಇಳುವರಿ ಮತ್ತು ಲಾಭ ಕಡಿಮೆಯದಲ್ಲ. ಎರಡು ಕಾಲುಗಳ ಆಧಾರದ ಮೇಲೆ ನಿಲ್ಲುವ ೨೫-೩೦ ಅಡಿಯ ಏಣಿಗಳ ಅಪಾಯದ ನಿರ್ವಹಣೆ; ಹಂಬಿನ 'ತೆಕ್ಕೆ ಬಿಡುವ' ನಾಜೂಕಿನ ಕೆಲಸ; ಎಲೆ ಹಂಬಿಗೆ ಧಕ್ಕೆಯಾಗದಂತೆ ಅಡಿಕೆ ಕೊಯ್ಲು ಮಾಡುವ ನೈಪುಣ್ಯ ಇವುಗಳ ಹೊಂದಾಣಿಕೆಯೊಂದಿಗೆ ಸಂಕೇತಿಗಳು ಮೂಪನಾರ್‌ಗಳ 'ಎಲೆತೋಟ'ವನ್ನು ತಮ್ಮ ಅಡಿಕೆ ತೋಟದಲ್ಲಿ ಲಾಭದಾಯಕವಾಗಿ ಅಂತರ್ಗತಗೊಳಿಸಿಕೊಂಡಿದ್ದಾರೆ.

ಅಡಿಕೆ ಬೇಸಾಯ

ಸಂದರ್ಶನ : ರಾಜಾ (40, ಚೆಟ್ಟಿ)

ಮಾದರಿಗಾಗಿ ಹುಡುಕಾಟ

ಶೆಂಕೋಟ್ಟೈ ಗ್ರಾಮದ ಅಂಚಿನಲ್ಲಿರುವ ನಿತ್ಯಕಲ್ಯಾಣಿ ಅಮ್ಮನವರ ದೇವಸ್ಥಾನಕ್ಕೆ ಹೊಂದಿಕೊಂಡಂತೆಯೇ ಅಡಿಕೆ ತೋಟವಿದೆ. ತೆಂಗಿನ ತೋಟ, ಬಾಳೆತೋಟ, ವೀಳ್ಯೆ ತೋಟಗಳಂತೆ ಈ ಅಡಿಕೆಯ ತೋಟ ಕೇವಲ ಅಡಿಕೆ ಮರಗಳಿಂದ ಕೂಡಿದ್ದು. ಶೆಂಕೋಟ್ಟೈ ಪಶ್ಚಿಮಕ್ಕೆ ಪಯಣಿಸಿ, ಘಟ್ಟವನ್ನಿಳಿದು ಕೇರಳದ ಕರಾವಳಿಯನ್ನು ಪ್ರವೇಶಿಸಿದರೂ ಇಂಥ ಅಡಿಕೆ ತೋಟಗಳು ಕಾಣುತ್ತವೆ. ಬಹಳ ಒತ್ತಾಗಿ ನೆಟ್ಟ ಅಡಿಕೆ ಸಸಿಗಳ ತೋಟಗಳು ಇವು. ಅಡಿಕೆಗೆ ದರ ಏರಿದಾಗ ಕರ್ನಾಟಕದಲ್ಲಿಯೂ ಇಂಥ ತೋಟಗಳು ತಲೆ ಎತ್ತಿವೆ. ಕೇರಳದಲ್ಲಿ ಮಳೆಯ ಅನುಕೂಲವನ್ನು ನೋಡಿಕೊಂಡು ಇಂಥ (ಕೇವಲ) ಅಡಿಕೆಯ ತೋಟಗಳನ್ನು ಎಬ್ಬಿಸಿದ್ದಾರೆ. ಕರ್ನಾಟಕದಲ್ಲಿ ಈಗ ಕೊಳವೆ ಬಾವಿಗಳನ್ನಾಧರಿಸಿ ಇಂಥ ತೋಟಗಳು ಎಲ್ಲೆಂದರಲ್ಲಿ ತಲೆ ಎತ್ತಿವೆ. ಸಂಕೇತಿಗಳ ಸಾಂಪ್ರದಾಯಿಕ ತೋಟಗಳಿಗೂ ಇವಕ್ಕೂ ಅರ್ಥಾರ್ಥ ಸಂಬಂಧವಿಲ್ಲ. ಕೇವಲ ಮಿಶ್ರಬೆಳೆಯ ಕಾರಣದಿಂದಾಗಿ ಅಲ್ಲ, ತೋಟವನ್ನು ಬೆಳೆಸಲು ಆರಿಸಿಕೊಂಡ ಜಮೀನಿನ ನೀರಾವರಿ ಸನ್ನಿವೇಶದಲ್ಲಿಯೇ ಆ ಮೂಲಭೂತ ವ್ಯತ್ಯಾಸವಿದೆ.

ಈ ಕಾರಣದಿಂದಲೇ ಕರ್ನಾಟಕದ ಸಂಕೇತಿಗಳ ಅಡಿಕೆ ತೋಟಗಳ ಮಾದರಿಗೆ ಸಂವಾದಿಯಾದ ತೋಟಗಳನ್ನು ಹುಡುಕಿಕೊಂಡು ಶೆಂಕೋಟ್ಟೈ ಪಶ್ಚಿಮಕ್ಕೆ ಕೊಲ್ಲಂ ದಾರಿಯಲ್ಲಿ ಪಯಣಿಸಿದೆವು. ಅಂಥ ತೋಟಗಳನ್ನು ಹುಡುಕಿಕೊಂಡು ಬಹುದೂರವೇನೂ ಹೋಗಬೇಕಾಗಿ ಬರಲಿಲ್ಲ. ಶೆಂಕೋಟ್ಟೈನಿಂದ ಮೂರು–ನಾಲ್ಕು ಮೈಲು ಪಯಣಿಸುವಷ್ಟರಲ್ಲಿ ಘಟ್ಟವೂ ಏರುತ್ತ ಹೋಗುತ್ತದೆ. ಅಂಥ ತೋಟಗಳೂ ಕಾಣುತ್ತ ಹೋಗುತ್ತವೆ. ಕೇವಲ ೧೦ ಮೈಲು ಸಾಗುವಷ್ಟರಲ್ಲಿ ಕೇರಳದ ಗಡಿ. ಈ ಗಡಿಗಳ ಮಾತು ಇತ್ತೀಚಿನದು, ಸಂಕೇತಿ ಬಾಗಾಯ್ತಿನ ಐತಿಹಾಸಿಕತೆಗೆ ಸಂಬಂಧಿಸಿದ್ದಲ್ಲ.



ತೋಟದ ಮನೆ : (ಸಂಕೇತಿಗಳ ಪಾರಂಪರಿಕ ಪೂರ್ವನೆಲೆ) ರಾಜಾ (ಆಳು) ತನ್ನ ಕುಟುಂಬದೊಂದಿಗೆ

ಮಾದರಿ ತೋಟ

ಚೆನ್ನಾಗಿ ಬೆಳೆದ ದೊಡ್ಡದೊಂದು ತೋಟವನ್ನು 'ಮಾದರಿ'ಯಾಗಿ ಆರಿಸಿಕೊಂಡೆವು. ಕೇರಳದ ನಗರವೊಂದರಲ್ಲಿ ಮಾಲಿಕನಿದ್ದ. ಆಳು 'ರಾಜಾ' ಅದನ್ನು ನೋಡಿಕೊಳ್ಳುತ್ತಿದ್ದ ರಾಜಾ (೪೦) ತನ್ನ ಹೆಂಡತಿ ಪಟ್ಟಮ್ಮಾಳ್ (೩೫) ಮತ್ತು ಇಬ್ಬರು ಪುಟ್ಟ ಮಕ್ಕಳೊಂದಿಗೆ ತೋಟದ ಮನೆಯಲ್ಲೇ ಇರುತ್ತಿದ್ದ. ಮಕ್ಕಳು ಶೆಂಕೋಟ್ಟೈನ ಶಾಲೆಗೆ ಹೋಗಿಬರಲು ಶಾಲೆಯ ವಾಹನ ಸೌಕರ್ಯವಿತ್ತು. ಉದ್ದಕ್ಕೂ ನನ್ನ ಜತೆಗೆ ಶ್ರೀ ರಾಜಾಮಣಿ ಮತ್ತು ಅವರ ಮಗ ಶ್ರೀ ಶೇಖರ್ ಇದ್ದರು. ಅವರಿಗೆ ತಮಿಳು ಮತ್ತು ಮಲೆಯಾಳಂ ತಿಳಿದಿತ್ತು. ಅಲ್ಲದೆ ರಾಜಾಮಣಿಯವರು ಹುಟ್ಟಿದ್ದು ಮತ್ತು ಬಾಲ್ಯವನ್ನು ಕಳೆದದ್ದು ಕೊಲ್ಲಂನಲ್ಲಿ, ಅನಂತರ ತಿರುನೆಲ್‌ವೇಲಿಯಲ್ಲಿ.

ಅದು ಏಳು ಎಕರೆ ವಿಸ್ತಾರಕ್ಕೆ ಹರಡಿಕೊಂಡಿದ್ದ ತೋಟ. ಘಟ್ಟದ ಮೇಲೆ ಇದ್ದುದರಿಂದ ಸಹಜವಾಗಿಯೇ ಏರಿಳಿತಗಳು ಇದ್ದವು. ಅದರಲ್ಲಿ ೮೦ ಮಾವು, ೬೦೦ ತೆಂಗು, ೨೦೦ ಅಡಿಕೆ, ೨೦ ಸೀಬೆ, ೮೦ ಹೆರಳೆ, ೧೫ ಹಲಸು, ೫೦ ತೇಗ, ೫೦ ಕಾಳುಮೆಣಸಿನ ಹಂಬು ಇದ್ದವು. ದೂದಿಹತ್ತಿ ಮೊದಲಾದ ಮರಗಳೂ ಇದ್ದವು. ಈ ವಿವರದಿಂದಲೇ ತಿಳಿಯುವಂತೆ ಹೊರಗಿನಿಂದ ಒಟ್ಟಾಗಿ ನೋಡುವವರಿಗೆ ಅದೊಂದು ಕಾಡಿನಂತೆ ತೋರುತ್ತಿತ್ತು. ಕರ್ನಾಟಕದ ಸಾಂಪ್ರದಾಯಿಕ ಸಂಕೇತಿ ತೋಟಗಳಲ್ಲಿಯೂ ಹಲಸು, ಸೀಬೆ, ಮೂಸಂಬಿ, ಕಿತ್ತಲೆ, ಹೆರಳೆ ಗಿಡಗಳು ಇರುತ್ತವೆ. ಅಡಿಕೆ, ವೀಳ್ಯೆ, ಬಾಳೆ, ತೆಂಗು ಲೆಕ್ಕಾಚಾರವಾಗಿ ಶಿಸ್ತಿನಿಂದ ಅಣಿಗೊಂಡ ತೋಟದ ಗೌಣಭಾಗ ಅವುಗಳದು. ಅಲ್ಲದೆ ಅವು ಸಮತಟ್ಟಾದ ತೋಟಗಳು. ಕೇರಳದ ಈ ತೋಟದಲ್ಲಿಯೂ ಹೆಚ್ಚಿನ ನೀರು ಹರಿದು ಕೊನೆಗೊಂದು ಹಳ್ಳದಲ್ಲಿ ಶೇಖರವಾಗಿತ್ತು. ಅಗತ್ಯಬಿದ್ದರೆ ಅದರ ನೀರನ್ನು ಎತ್ತಿಕೊಳ್ಳಲು ಅವಕಾಶವಿತ್ತು. ಇದಕ್ಕೆ ಬದಲಾಗಿ ಕರ್ನಾಟಕದ ಸಂಕೇತಿ ತೋಟಗಳಲ್ಲಿದ್ದುದು ಪಿಳ್ಳೆಗಳು ಮತ್ತು ತೆರೆದ ಬಾವಿಗಳು.



ತೆಂಗಿನ ಒಗ್ಗು

ಬೆಳೆಗಳ ವಿವರ

"ನಾವು ತೆಂಗಿಗೆ ಪ್ರಾಧಾನ್ಯ ಕೊಡುತ್ತೇವೆ. ಇದರಿಂದ ಎರಡು ತಿಂಗಳಿಗೊಮ್ಮೆ ವರಮಾನ ಬರುತ್ತದೆ. ಅದರ ನಂತರದ ಸ್ಥಾನ ಮಾವಿನದು. ಅದು ಪ್ರತಿ ವರ್ಷ ಕಷ್ಟವಿಲ್ಲದೆ ವರಮಾನ ಕೊಡುತ್ತದೆ. ಅಡಿಕೆಗೆ ಪ್ರಾಧಾನ್ಯವಿಲ್ಲ" ಎಂದರು ರಾಜಾ.

ಆ ತೋಟದಿಂದ ಕೊಲ್ಲಂ ೯೦ ಕಿ.ಮೀ. ದೂರದಲ್ಲಿತ್ತು. ಬೆಟ್ಟದ ಶಿಖರಗಳು ಒಂದೇ ಕಿ.ಮೀ. ಅಂತರದಲ್ಲಿ ಪ್ರಾರಂಭವಾಗಲಿದ್ದವು. ಆ

ತೋಟದ ಕೊಳವೆ ಬಾವಿಯಲ್ಲಿ ೨೦೦ ಅಡಿಗೆ ನೀರು ಸಿಕ್ಕಿತ್ತು.

"ನೀವು ಬೇಸಗೆಯಲ್ಲಿ ಬಂದಿದ್ದೀರಿ. ಬೇರೆ ಹೊತ್ತಾಗಿದ್ದರೆ ತೋಟ ನಳನಳಿಸುತ್ತಿರುತ್ತಿತ್ತು" ಎಂದಳು ಪಟ್ಟಮ್ಮಾಳ್. ಘಟ್ಟಪ್ರದೇಶವಾದ್ದರಿಂದ ತೋಟವು ಸೊರಗಿದಂತೇನೂ ಕಾಣಲಿಲ್ಲ. ಅಲ್ಲೊಂದು ಬದಿಯಲ್ಲಿ ತೆಂಗಿನ ಸಸಿಗಳ ಒಗ್ಗು ಕಾಣಿಸಿತು. ಅದನ್ನು ಕಂಡಾಗ ಮಾತ್ರ ಪಟ್ಟಮ್ಮಾಳ್ ಹೇಳಿದ ಮಾತಿನ ಯಥಾರ್ಥತೆ ತಿಳಿಯಿತು. ಕರ್ನಾಟಕದ ಸಂಕೇತಿ ತೋಟಗಳಲ್ಲಿ ಬೇಸಿಗೆಯಲ್ಲೂ ಇರುವ 'ತನು'ವು ಇಲ್ಲಿ ಕಾಣಲಿಲ್ಲ. ತೆಂಗಿನ ಸಸಿ ನೆಡಲು 2' x 2½'; ಅಡಿಕೆ ಸಸಿ ನೆಡಲು 1' x 1½' ಗುಂಡಿ ತೆಗೆಯುತ್ತಾರೆ. ಗೊಬ್ಬರ ಹಾಕಿ ಹದಮಾಡುತ್ತಾರೆ. ಡಿ.ಡಿ.ಟಿ. ಪೌಡರಿನ ನೀರಿನಲ್ಲಿ ಸಸಿಯನ್ನು ಅದ್ದಿ ನಾಟಿ ಮಾಡುತ್ತಾರೆ. ಅಡಿಕೆ ಗಿಡವು ೧೦ ವರ್ಷಕ್ಕೆ ಫಸಲಿಗೆ ಬಂದರೆ ತೆಂಗಿನ ಗಿಡವು ಆರು ವರ್ಷಕ್ಕೆ ಫಲ ಕೊಡುತ್ತದೆ. ಅಡಿಕೆಯನ್ನು ರೇಟೆ ಮಾಡುವ ಬದಲು ಗುತ್ತಿಗೆಗೆ ಕೊಡುವವರೇ ಹೆಚ್ಚು. ಈ ದಿನಗಳಲ್ಲಿ ಅವರಿಗೆ ೨೦೦ ಮರಕ್ಕೆ ಏಳೆಂಟು ಸಾವಿರ ರೂಪಾಯಿ ವರಮಾನ ದೊರೆಯುತ್ತದೆ.

ಈ ತೋಟಗಳಲ್ಲಿ ಕಾಫಿ ಇಲ್ಲ. ಘಟ್ಟವನ್ನು ಏರಿದಂತೆಲ್ಲ ಲವಂಗ ಮತ್ತು ಮೆಣಸು ಜಾಸ್ತಿ ಬೆಳೆಯುತ್ತಾರೆ. ಇಲ್ಲಿ ವೀಳ್ಯೆ ಇಲ್ಲ. ಉದ್ದಕ್ಕೂ ತೆಂಗಿಗೆ ಮೊದಲ ಸ್ಥಾನ ಮತ್ತು ಅಡಿಕೆಗೆ ಎರಡನೆಯ ಸ್ಥಾನ. ಇಲ್ಲಿಂದ ೭೦ ಕಿ.ಮೀ. ಪಶ್ಚಿಮಕ್ಕಿರುವ ಆರ್ಯಂಗಾವ್‌ನಲ್ಲಿ ವೀಳ್ಯೆ ಇದೆ. ಅಲ್ಲಿ ವೀಳೆಯನ್ನೇ ಬೇರೆಯಾಗಿ ಕೃಷಿ ಮಾಡುತ್ತಾರೆ. ಅಲ್ಲಿಯೂ ಬೇರೆಯವರನ್ನು ತೋಟದೊಳಕ್ಕೆ ಬಿಟ್ಟುಕೊಳ್ಳದ ನಿಯಮವಿದೆ. ತೋಟಗಾರರು ಸ್ವತಃ ನಿರ್ವಹಿಸುತ್ತಾರೆ. ಘಟ್ಟದಲ್ಲಿ ಕೇವಲ ಅಡಿಕೆಯದೇ ತೋಟವಿಲ್ಲ. ಒಂದು ಅಡಿಕೆ ಮರವನ್ನೇರಿ ಮರದಿಂದ ಮರಕ್ಕೆ ಹಾರಿ ಕೊಯ್ಲು ಮಾಡುವ ಪರಿಪಾಠ ಅಲ್ಲಿಯೂ ಇದೆ.

ಕೊಲ್ಲಂವರೆಗೂ ಅಥವಾ ಅದರ ಆಚೆಗೂ ಇರುವ ಸ್ವಲ್ಪ ತೋಟಗಳೂ ತದ್ವತ್ತಾಗಿ ಇದೇ ಮಾದರಿಯವಲ್ಲ. ಕೇರಳದಲ್ಲಿ ನೀರು ಹೆಚ್ಚಾಗಿ ದೊರೆಯುವಲ್ಲಿ (ಕೇವಲ) ಅಡಿಕೆ ತೋಟ ಮತ್ತು (ಕೇವಲ) ವೀಳ್ಯೆ ತೋಟಗಳಿವೆ. ಅಂಥ ತೋಟಗಳಲ್ಲಿ ಮರಗಳ ನಡುವಿನ ಅಂತರ ಕಡಿಮೆ. ಕೇರಳದಲ್ಲಿ ಅಡಿಕೆ ಮತ್ತು ವೀಳ್ಯೆಯನ್ನು ಹೆಚ್ಚಾಗಿ ಬಳಸುತ್ತಾರೆ. ಶೆಂಕೋಟ್ಟೈನಿಂದ ಕೊಲ್ಲಂ ದಾರಿಯಲ್ಲಿ ೩೦ ಕಿ.ಮೀ ದೂರದಲ್ಲಿರುವ ತೆನ್‌ಮಲೈ ಕೂಡ (ಕೇವಲ) ಅಡಿಕೆ ಬೆಳೆಯುವ ತೋಟಗಳಿಂದ ಕೂಡಿದ ಪ್ರದೇಶವಾಗಿದೆ. ಸಣ್ಣ ಹಿಡುವಳಿ ಇರುವಾಗಲೂ, ಮನೆಯ ಮುಂದೆ ಮತ್ತು ಹಿಂದೆ ಕೇವಲ ಅಡಿಕೆ ಮರದ ತೋಟಗಳನ್ನು ಬೆಳೆಸಿರುವುದುಂಟು. ಇಂಥ ಸಣ್ಣ ಹಿಡುವಳಿಗಳಲ್ಲೂ ಅಡಿಕೆಯೂ ಸೇರಿದ ಮಿಶ್ರ ಬೆಳೆಯ ತೋಟಗಳನ್ನು ಬೆಳೆಸಿರುವುದುಂಟು.

ಹೋಲಿಕೆ

ಕರ್ನಾಟಕದಲ್ಲಿ ಸಂಕೇತಿಗಳು ಅಡಿಕೆ ಬೆಳೆಯನ್ನೂ ಅದಕ್ಕೆ ಹೊಂದಿಕೊಂಡಂತೆ ವೀಳೆಯ ಹಂಬನ್ನೂ ರೂಢಿಸಿರುವ ರೀತಿಯು ಅವರ ಪೂರ್ವಾನುಭವದ ಮುನ್ನಡೆಯಾಗಿದೆ. ಅಡಿಕೆಯು ಅವರ ಆಶ್ರಮಸದೃಶ ಜೀವನದ ಹದಕ್ಕೆ ಒದಗಿಬಂದ ಆರ್ಥಿಕ ಮುಖ. ತಮ್ಮ ತೋಟಗಳಲ್ಲಿ ಅದಕ್ಕೆ ಮೊದಲಸ್ಥಾನವನ್ನೇ ಕೊಟ್ಟಿದ್ದಾರೆ. ವೀಳೆಯು ಅವರ ಬಾಗಾಯ್ತನ್ನು ಇನ್ನಷ್ಟು ಪುಷ್ಟಿಗೊಳಿಸಿದೆ. ಆರ್ಥಿಕ ಸ್ಥಿರತೆಯನ್ನು ತಂದಿದೆ. ಅವರ ತೋಟಗಳಲ್ಲಿ ಅಡಿಕೆಗೆ ಸಮಾನವಾದ ಸ್ಥಾನ.



ಕೆಸವಿನ ದಂಟಿನ ಬೆಳೆಗೆ ಪ್ರತ್ಯೇಕ ಮುತುವರ್ಜಿ

ಇವೆರಡೂ ಆರ್ಥಿಕ ಬೆಳೆಗಳನ್ನು ಸಂಯೋಜಿಸಿರುವ ಅವರ ತಾಂತ್ರಿಕತೆಯು ಅನುಪಮವಾಗಿದೆ. ವೀಳ್ಯೆಯ ಕೃಷಿಯನ್ನು ಅವರು ಮುಕ್ತವಾಗಿ ಸ್ವೀಕರಿಸಿದ್ದಾರೆ. ಶ್ರಮವನ್ನು ತಪ್ಪಿಸಿಕೊಳ್ಳುವ ಸಲುವಾಗಿ ತೆಂಗಿಗೆ ಮೊದಲ ಸ್ಥಾನ ಕೊಟ್ಟಿಲ್ಲ. ತಮ್ಮ ಶ್ರಮವನ್ನು ಯುಕ್ತವಾಗಿ ತೊಡಗಿಸಿ ಎರಡು ಆರ್ಥಿಕ ಬೆಳೆಗಳನ್ನು ಸಮತೋಲದಿಂದ ಸಾಧಿಸಿದ್ದಾರೆ. ಆದರೆ ಬಾಗಾಯ್ತಿನ ಅಶ್ರಮಧರ್ಮದ ಅಧೀನದಲ್ಲಿ ಅವನ್ನು ಇರಿಸಿಕೊಂಡು ವೈದಿಕತೆಯನ್ನೂ ಸಾಧಿಸಿದ್ದಾರೆ. ತೆಂಗನ್ನೇನೂ ಉಪೇಕ್ಷಿಸಿಲ್ಲ. ಈ ಮೂರರ ನಡುವೆ ಬಾಳೆಗೂ ಸ್ಥಾನ ಕಲ್ಪಿಸಿದ್ದಾರೆ. ನೆಲದ ತನುವನ್ನು ಕಾಪಾಡಿಕೊಂಡಿದ್ದಾರೆ. ಯಾವ ಬೆಳೆಗಳನ್ನು ತಮಿಳುನಾಡು ಮತ್ತು ಕೇರಳದಲ್ಲಿ ಬೇರೆ ಬೇರೆಯಾಗಿ ಬೆಳೆದರೋ ಅವನ್ನೆಲ್ಲ ಉಚಿತವರಿತು ಬೆರೆಸಿ ಜಾಣ್ಮೆಯಿಂದ ನಿರ್ವಹಿಸಿದ್ದಾರೆ. ತಮ್ಮ ಶ್ರಮಕ್ಕೆ ನೈಪುಣ್ಯವನ್ನು ಬೆರೆಸಿ ಎಲ್ಲ ಬೆಳೆಗಳ ಪ್ರಯೋಜನವನ್ನೂ ಪಡೆದಿದ್ದಾರೆ. ಕಡಿಮೆ ನೆಲ, ಯೋಜಿತ ಬೆಳೆ, ಹಿಂಜರಿಯದ ದೈಹಿಕ ಶ್ರಮ, ವೇದಶಾಸ್ತ್ರಾಧ್ಯಯನ ಮತ್ತು ಅನುಷ್ಠಾನ, ದೈಹಿಕ ದೃಢತೆ, ಮಾನಸಿಕ ಸಮತೆ ಇವನ್ನೆಲ್ಲ ಸಂಕೇತಿಗಳು ಕರ್ನಾಟಕದ ತಮ್ಮ ಬಾಗಾಯ್ತಿನ ವಿಶಿಷ್ಟ ಸಂರಚನೆಯ ಮೂಲಕವೇ ಸಾಧಿಸಿದ್ದಾರೆ.

೨೦. ಕರ್ನಾಟಕದ ಹಳ್ಳಿಗಳು
(ಪ್ರಕೃತ ಕ್ಷೇತ್ರಕಾರ್ಯ ವರದಿ)
(ಕ್ಷೇತ್ರಕಾರ್ಯ ಮೇ-ಜೂನ್ ೨೦೦೩)

- ಡಾ|| ಬಿ.ಎಸ್. ಪ್ರಣತಾರ್ತಿಹರನ್

(ಈ ಗ್ರಂಥದ ಸಿದ್ಧತೆಗಾಗಿ ಡಾ. ಹರನ್ ಕ್ಷೇತ್ರಕಾರ್ಯ ಮಾಡುತ್ತಿದ್ದಾಗ ಕೆಲವು ಹಳ್ಳಿಗಳಲ್ಲಿ ಅಯಾಚಿತವಾಗಿ ಹೆಚ್ಚಿನ ಮಾಹಿತಿ ದೊರೆಯಿತು. ಎನ್. ಕೇಶವಮೂರ್ತಿ ಮತ್ತು ವಿಜಯ್ ಅಂಗಡಿ ಅವರ ಅಧ್ಯಯನದ ಸಂದರ್ಭದಲ್ಲಿ ಇನ್ನೂ ಕೆಲವು ಹಳ್ಳಿಗಳು ಕಾರಣಾಂತರದಿಂದ ಬಿಟ್ಟುಹೋಗಿದ್ದವು. ಆ ಭಾಗಗಳು ಇಲ್ಲಿ ಸೇರಿವೆ.)

ಅ) ಬಸವಾಪಟ್ಟಣ

ಬಸವಾಪಟ್ಟಣ ಗ್ರಾಮದಲ್ಲಿ ಶ್ರೀ ವಿಜಯ್ ಅಂಗಡಿ ಎರಡು ಬಾರಿ ಕ್ಷೇತ್ರಕಾರ್ಯ ಮಾಡಿದ್ದಾರೆ ಮತ್ತು ಆ ವಿವರಗಳು 'ಅವಲೋಕನ' ಎಂಬ ಭಾಗದಲ್ಲಿ ದಾಖಲಾಗಿವೆ. ಇಲ್ಲಿ ಹರನ್ ಅವರ ಕ್ಷೇತ್ರಕಾರ್ಯದಲ್ಲಿ ದೊರೆತ ವಿಶೇಷ ಅನುಭವ, ವಿಶ್ಲೇಷಣೆ, ಹೋಲಿಕೆ, ಆತ್ಮಾವಲೋಕನ, ಕೃಷಿ ಜೀವನಕ್ಕೆ ಹೊಂದಿಕೊಂಡ ಕಸುಬುಗಳ ವೈವಿಧ್ಯ, ಕಠಿಣ ದುಡಿಮೆ, ಆಚಾರ, ನಂಬಿಕೆ, ಅಡಕೆ ಉದ್ದಿಮೆಯ ಪರಿಣತ ಮಾಹಿತಿ ಇಂಥವನ್ನು ಆರಿಸಿ ಜೋಡಿಸಲಾಗಿದೆ.

೦.೧) ಮುಳಗುಂದ ಸುಬ್ಬರಾವ್ (೬೮), ಧಾರವಾಡ ಜಿಲ್ಲೆ

೧೯೫೭ರಲ್ಲಿ ಬಸವಾಪಟ್ಟಣಕ್ಕೆ ಬಂದು ನೆಲೆಸಿದ ಹೋಟೆಲ್ ಉದ್ಯಮಿ, ಸಂಕೇತೀತರ ಸ್ಮಾರ್ತ ಬ್ರಾಹ್ಮಣ

ಸಂಕೇತಿಗಳು *ಶ್ರಮಜೀವಿಗಳು,* ಆರೋಗ್ಯವಂತರು; ಧಾರ್ಮಿಕ ಪರಂಪರೆಯ ಬಗೆಗೆ ಅವರಿಗೆ ಆಸ್ಥೆ ಹೆಚ್ಚು. ಬಿಡುವಿದ್ದಾಗ ಹರಟೆಮಲ್ಲರು, ಪ್ರಪಂಚದ ಯಾವುದೇ ವಿಷಯದ ಬಗೆಗೆ ಅವರು ಹರಟೆ ಕೊಚ್ಚಬಲ್ಲರು. ಪ್ರಚಲಿತ ವಿದ್ಯಮಾನಗಳ ಬಗೆಗೆ ಹೆಚ್ಚು ತಿಳಿದುಕೊಂಡ ಅವರು ಮಾತನಾಡದ ವಿಷಯವಿಲ್ಲ. ಅಧಿಕಾರಿಗಳಿಂದ ಆದಷ್ಟು ದೂರ ಇರುವ ಜನ. *ಶ್ರದ್ಧೆಯಿಂದ ಕೃಷಿ ಮಾಡತಕ್ಕವರು. ೪೪ ಗುಂಟೆ ಗದ್ದೆಯಲ್ಲಿ ೪೦ ಮೂಟೆ ಬತ್ತ* ಈ ಸುತ್ತಿನ ಯಾವ ಒಕ್ಕಲಿಗನೂ ಬೆಳೆದಿರಲಿಲ್ಲ, ವಠಾರದ ಕೃಷ್ಣಪ್ಪನವರು ಬೆಳೆಯುತ್ತಿದ್ದರು....

೦.೨) ಬಿ.ಎನ್. ನಾಗೇಂದ್ರ (೫೦), ಬಸವಾಪಟ್ಟಣ

ಪ್ರಗತಿಪರ ರೈತ

('ಮರದಮೇಲೆ ಪ್ರೀತಿ ಇದ್ದರೆ ಮಾತ್ರ ತೋಟಗಾರಿಕೆ, ಹಣಕ್ಕಾಗಿ ಅಲ್ಲ' ಇದು ಬಾಗಾಯ್ತು ಧರ್ಮದ ಮೂಲಭೂತ ತತ್ತ್ವಗಳಲ್ಲಿ ಒಂದು.)

ಕೃಷಿಯ ಬಗ್ಗೆ ಇವರ ಅನಿಸಿಕೆಗಳು

ಅ) ಕಟ್ಟೆ ಹೊಸಹಳ್ಳಿ ನರಸಿಂಹಮೂರ್ತಿಯವರು (೮೦) ಗೊನೆಗಾರಿಕೆ ಮಾಡುತ್ತಿದ್ದರು. ಅವರಿಗೆ ಹೈನುಗಾರಿಕೆಯ ಖಯಾಸ್ಸು. ಯಾವಾಗಲೂ ಮನೆಯಲ್ಲಿ ಒಂದು ಜೋಡಿ ಎತ್ತು ಇರಲೇಬೇಕು ಎಂಬುದು ಅವರ ಬಯಕೆ. ಮಗ ಆ ಎತ್ತುಗಳನ್ನು ಮಾರಿದ್ದರಿಂದ ಕ್ರುದ್ಧರಾದ ಅವರು ಆಸ್ತಿಯನ್ನು ಮಕ್ಕಳಿಗೆ ಹಿಸ್ಸೆ ಮಾಡಿಕೊಟ್ಟರು, *೧೮ ಸಾವಿರ ರೂಪಾಯಿಗೆ ಹೊಸ ಜೋಡಿ ತಂದ ಮೇಲೇ ಅವರು ನಿರಾಳವಾಗಿ ಮಲಗಿದ್ದು.* ಮಕ್ಕಳಿಗೆ ಹಿಸ್ಸೆ ಮಾಡಿಕೊಟ್ಟರೂ, ತಾವೂ ಆಸ್ತಿ ಉಳಿಸಿಕೊಂಡರು, ಏಕೆಂದರೆ *ಈಗಲೂ ಸ್ವತಂತ್ರವಾಗಿ ದುಡಿಯಬೇಕೆಂಬ ಹಂಬಲ* ಅವರದು.

ಆ) *ಅಡಿಕೆ ಸಸಿಗಳನ್ನು ಬೆಳೆಸಿ ಮಾರುವುದು ಸಂಕೇತಿಗಳ ಕೃಷಿ ಉದ್ಯಮದ ಒಂದು ಮುಖ್ಯ ಭಾಗ.* ಹಾನಗಲ್ಲು ಕೃಷ್ಣಮೂರ್ತಿಗಳು ಮೇಲೆ ಬಂದದ್ದೇ ಹಾಗೆ. ಈಗ ಪ್ಲಾಸ್ಟಿಕ್ ಚೀಲದಲ್ಲಿ ಬೆಳೆಸುವ ನರ್ಸರಿಗಳು ಬಂದಿವೆ. ಸಾಂಪ್ರದಾಯಿಕವಾಗಿ ಸಸಿ ಬೆಳೆಸುವವರಿಗೆ ನರ್ಸರಿಗಳ ದಿಢೀರ್ ವಿಧಾನದ ಜತೆ ಸ್ಪರ್ಧೆ ಮಾಡುವುದು ಆಗುವುದಿಲ್ಲ. ಆದ್ದರಿಂದ ಆ ಉಪವೃತ್ತಿ ಕಡಮೆಯಾಯಿತು.

ಇ) ಹುಣಿಸೆ ಫಸಲನ್ನು ಮಾರುವಾಗ *ಹಣ್ಣನ್ನು ರೇಖೆ ಮಾಡಿದ ಕೂಲಿ ಹುಟ್ಟುವುದಿಲ್ಲ.* ರೇಖೆ ಮಾಡುವ ಖರ್ಚು ಒಂದು ಕೆಜಿಗೆ ಏಳು ರೂ. ಬೀಳುತ್ತದೆ. ಮೈಸೂರಿನ ರೆಗ್ಯುಲೇಟೆಡ್-ಮಾರ್ಕೆಟ್‌ಗೆ ಒಂದು ಕ್ವಿಂಟಾಲ್ ಹಣ್ಣು ಹಾಕಿಸಲು ೮೦ ರೂ. ತಗಲುತ್ತದೆ. ಈ ಉಪದ್ರವ ಏಕೆ ಎಂದು ಹೋದವರುಷ ಹಣ್ಣು ಕೆಡವಲೇ ಇಲ್ಲ.

ಪ್ರತಿವರ್ಷ *ತಾವೇ ಹಣ್ಣು ಕೆಡವುವುದು ಸಂಕೇತಿಗಳ ರೂಢಿ.* ಇಲ್ಲದಿದ್ದರೆ ಗಿಟ್ಟುವುದಿಲ್ಲ. ಸೊಗಸಾಗಿ ಮರಹತ್ತುವ ಅಭ್ಯಾಸ ಉಳ್ಳ ಬಿ.ಕೆ. ರಾಮಚಂದ್ರ ಈ ವರ್ಷ ಮರದಿಂದ ಬಿದ್ದು ಕಾಲು ಮುರಿದುಕೊಂಡರು. ಅವರ ತೋಟದಲ್ಲಂತೂ ಗಾಳಿ ಮರಕ್ಕೆ ೧೬ ಹುಣಿಸೆವೃಕ್ಷ ಬೆಳಸಿದಾರೆ.

ಈ) ಬಸವಾಪಟ್ಟಣದಲ್ಲಿ ಈಗ ನೆಲೆಸಿರುವ ಸಂಕೇತಿಗಳ ೪೦ ಒಕ್ಕಲಿಗೂ ತೋಟ ಇದೆ.

ಉ) ರೈತರ ಜೀವನಕ್ಕೆ Time table ಇಲ್ಲ ಸ್ವಾಮಿ. ಏಕೆಂದರೆ ಅವನ ಆದಾಯದಲ್ಲಿ ನಿಖರತೆ ಇಲ್ಲ. ಉದಾಹರಣೆಗೆ ತೆಂಗಿಗೆ ನುಸಿರೋಗ ಬಂದರೆ ಅಥವಾ ಅಡಕೆಗೆ ಬೆಲೆ ಕುಸಿದರೆ ರೈತನ ವರಮಾನವೇ ಅಸ್ತವ್ಯಸ್ತವಾಗುತ್ತದೆ. ಒಳ್ಳೆಯ ಗಾಳಿ ಕುಡಿಯುತ್ತಿದ್ದೇವೆ ಅನ್ನುವುದು ಮಾತ್ರ ನಿಜ.

ಊ) ಅಡಿಕೆಗೆ ಒಳ್ಳೆ ಬೆಲೆ ಬಂದಾಗ ಜೀವನಮಟ್ಟವೂ ಏರಿತು. ಸುತ್ತಣ ಮನೆಯವರೆಲ್ಲ ಫ್ರಿಜ್ ತಂದರು. ನಮ್ಮ ಮನೆಯಲ್ಲೂ ಒತ್ತಡ ಹೆಚ್ಚಿತು. ಆದರೆ, ಅಡಿಕೆ ಬೆಲೆ ಹೀಗೇ ಇರುತ್ತದೆ ಎಂಬ ಧೈರ್ಯ ನನಗಿರಲಿಲ್ಲ. ಬೆಲೆ ಕುಸಿದಂತೆ ಜೀವನಮಟ್ಟವನ್ನು ಸರಿಪಡಿಸಿಕೊಳ್ಳುವುದು ಕಷ್ಟದ ಮಾತು. ಸದ್ಯ, *ಸಾಲ ಇಲ್ಲದಂತೆ ಬದುಕಿದರೆ ಮರ್ಯಾದೆ ಎಂಬುದು ನನ್ನ ನಿಲುವು.* ಈಗ ಸ್ಕೂಟರ್ ಇರುವುದೇ ಹೆಚ್ಚು ಎನಿಸುತ್ತಿದೆ. ಹಿಂದೆ ಒಂದು ಲಕ್ಷ ಅಡಿಕೆ ೪೦ ಸಾವಿರ ರೂಪಾಯಿಗೆ ಮಾರಿದ್ದೆವು, ಇವತ್ತು ಬೆಲೆ ೧೮ ಸಾವಿರಕ್ಕೆ ಇಳಿದಿದೆ. ನೀವೇ ಹೇಳಿ...

ಋ) ಇಲ್ಲಿ ನಾವು ಕೆಲವರು ಸೇರಿ ಹಸಿ ಅಡಿಕೆ ಮಾರಲು ಸಿಂಡಿಕೇಟ್ ಮಾಡಿಕೊಂಡಿದೇವೆ. ಎಲ್ಲರೂ ಒಬ್ಬನಿಗೇ ಮಾರುವುದರಿಂದ ಕೊಳ್ಳುವವನನ್ನು ಉತ್ತೇಜಿಸಿದಂತಾಗುತ್ತದೆ. *"ನೀವೇ ಕೆಡವಿಕೊಳ್ಳಿ, ಮಾರಿ, ಅನಂತರವೇ ಹಣ ಕೊಡಿ"* ಎಂಬುದು ಸಿಂಡಿಕೇಟ್ ಮಾರ್ಗದ ಸೂತ್ರ.

ಎ) ಆಸ್ಟ್ರೇಲಿಯದಿಂದ ಹಿಂದಿರುಗಿದ ಬಂಧುವೊಬ್ಬರು ತೋಟಕೊಳ್ಳಬೇಕು ಎಂದು ಆಸೆ ಮಾಡಿದರು. ಕೆಲವು ತೋಟಗಳನ್ನೂ ನೋಡಿದರು. ಅವರ ಬಂಡವಾಳ ಮತ್ತು ಪ್ರತಿಫಲದ ಬಗ್ಗೆ ಒಂದು ಚಿತ್ರ ಕೊಟ್ಟೆ. ೪% ಕೂಡ ವರ್ಕ್‌ಔಟ್ ಆಗಲಿಲ್ಲ. *ಇದು ಹಣಕ್ಕಾಗಿ ಮಾಡುವ ಕಸುಬಲ್ಲ; ಮರದ ಮೇಲೆ ಪ್ರೀತಿ ಇದ್ದರೆ ಮಾತ್ರ ಮಾಡಬಹುದಾದ ಬಾಳು.*

ಏ) ನಮ್ಮ ತಂದೆ *ಕದಬೆ ತಯಾರಿಸಿ ಹಗ್ಗ ಹೊಸೆಯುತ್ತಿದ್ದರು.* ಕೊಟ್ಟಿಗೆಯಲ್ಲಿ ಯಾವುದಾದರೂ ದನದ ಹಗ್ಗ ಹಾಳಾಗಿದ್ದು ಕಂಡರೆ ಸಾಕು. ಹೊಸಹಗ್ಗ ಹೊಸೆದು ಸಿದ್ಧಪಡಿಸಿದ ಹೊರತು ಮುಂದಕ್ಕೆ ಹೆಜ್ಜೆ ಹಾಕುತ್ತಿರಲಿಲ್ಲ. ಅದು ಅಪರಾಹ್ನ ಎರಡು ಘಂಟೆಯಾದರೂ ಸರಿ, ಮೊದಲು ಹಗ್ಗ ಹೊಸೆದು ಆಮೇಲೇ ಬಾಯಿಗೆ ನೀರು ಬಿಡುತ್ತಿದ್ದರು.

ಐ) ಅಡಿಕೆ ಪಟ್ಟೆಯನ್ನು ಒಟ್ಟಿ ಉರುವಲಿಗೆ ಬಳಸುವುದೇ ಮಲೆನಾಡಿನ ರೂಢಿ. ನನಗೆ ತಿಳಿದಂತೆ ಪಟ್ಟೆ ಸುಲಿದು *ಊಟಕ್ಕೆ ಬಳಸುವ ರೂಢಿ ಇರುವುದು ಸಂಕೇತಿಗಳಲ್ಲಿ ಮಾತ್ರ.*

ಔ) ಸಾಹುಕಾರ ಚಿನ್ನಪ್ಪನವರು ಬಹಳ ಕಷ್ಟಪಟ್ಟು ಮೂರು ಅಂತಸ್ತಿನ ದೊಡ್ಡ ಮನೆ ಕಟ್ಟಿಸಿದರು. ಆ ಕಾಲಕ್ಕೆ ದೊಡ್ಡ ದೊಡ್ಡ ಲಾಂಬಿಗಳನ್ನು ತರಿಸಿದ್ದು, ಕೇರಳದಿಂದ ಮರತರನ್ನು ಕರೆಸಿ ವರ್ಷಗಟ್ಟಲೆ ಇಟ್ಟುಕೊಂಡುದು, ಮಹಡಿಗಳನ್ನು ಕಟ್ಟಿಸಿದ್ದು, ಮಂಗಳೂರು ಹಂಚು ಹೊದಿಸಿದ್ದು ಒಂದು ಕ್ರಾಂತಿಕಾರಕ ಹೊಸ ಹೆಜ್ಜೆಯಾಗಿತ್ತು. ಗೋಡೆ, ನೆಲ, ಮರದ ಸಾಮಾನುಗಳೆಲ್ಲ ಏಓನ್ ಆಗಿ ನಿರ್ಮಾಣವಾದವು. ಆದರೆ ಚಿನ್ನಪ್ಪನವರು ಹಾಸಿಗೆ ಹಿಡಿದಾಗ ಮಗನಿಗೆ ಹೇಳುತ್ತಿದ್ದರು, "ನಿನ್ನ ಮಕ್ಕಳು ಯಾರೂ ಇಲ್ಲಿನ ಮನೆ, ಜಮೀನಿಗೆ ಅಂಟಿಕೊಂಡು ಕೂರುವುದು ಬೇಡ. *ಎಲ್ಲರೂ ಪಟ್ಟಣಗಳಿಗೆ ಹೋಗಿ ಚೆನ್ನಾಗಿ ಓದಲಿ.*" ಅದನ್ನು ಅವರು ಮತ್ತೆ ಮತ್ತೆ ಹೇಳುತ್ತಿದ್ದರು. ಚಿನ್ನಪ್ಪನವರ ಮೊಮ್ಮಕ್ಕಳೆಲ್ಲ ಶಾಲಾ ದಿನಗಳಲ್ಲೇ ಪಟ್ಟಣ ಸೇರಿದರು, ಚೆನ್ನಾಗಿ ಓದಿ ಉನ್ನತ ನೌಕರಿ ಪಡೆದರು. ಆದರೆ ಅಷ್ಟು ಅದ್ಭುತವಾಗಿ ಮನೆ ಕಟ್ಟಿಸುವಾಗ ಅವರಿಗಿದ್ದ *ಕನಸು ಎಂಥದು,* ಮೊಮ್ಮಕ್ಕಳು ಅಲ್ಲಿಗೆ ಅಂಟಿಕೊಳ್ಳುವುದು ಬೇಡ ಎನ್ನುವಾಗ ಇದ್ದ *ನಿರ್ಮೋಹ ಎಂಥದು-ಅರ್ಥವಾಗುವುದಿಲ್ಲ.*

೦.೩) ಬಿ.ಕೆ. ರಾಮಚಂದ್ರ (೫೦)

(ರಾಮಗಿಣಿ)

ಪ್ರಗತಿಪರ ರೈತ, ಪದವೀಧರ, ಬಸವಾಪಟ್ಟಣ

(ಬಹುಮಾನ, ಪ್ರಶಸ್ತಿಗಳ ಮಾನದಂಡವನ್ನು ಮೀರಿದ ಹಿರಿಯರ ಬೇಸಾಯದ ಮಾದರಿಯ ಹೊಳಹುಗಳು 'ಅನೂಚಾನ' ವಿಭಾಗದಲ್ಲಿ ಅಲ್ಲಲ್ಲಿ ಬಂದಿವೆ.)

'ಕೃಷಿ'ಯ ಬಗ್ಗೆ ಇವರ ಅನುಭವಗಳು :

ಅ) ನಗರಗಳಿಗೆ ಸಮೀಪದಲ್ಲಿ ಫಾರಮ್ ಹೌಸ್ ಇದ್ದರೆ ವ್ಯಾಪಾರಿಗಳು ಮಾಲುಕೊಳ್ಳಲು ಹುಡುಕಿಕೊಂಡು ಬರುತ್ತಾರೆ. *ತರಕಾರಿಯನ್ನು ಹಳ್ಳಿಯಲ್ಲಿ ಬೆಳೆದರೆ ಮಾರ್ಕೆಟಿಂಗ್ ಕಷ್ಟ.* ಲಾರಿ ಬಾಡಿಗೆಯೂ ಗಿಟ್ಟಲ್ಲ. "ಮಾಲು ನೀವೇ ಇಟ್ಟುಕೊಳ್ಳಿ, ನಮಗೆ ದುಡ್ಡು ಬೇಡ, ಲಾರಿ ಬಾಡಿಗೆ ಕೊಟ್ಟುಬಿಡಿ" ಅಂತ ತಲೆಮರೆಸಿಕೊಂಡು ಬರುವ ರೈತರಿಗೆ ಲೆಕ್ಕವಿಲ್ಲ.

ಉದಾ: ಪಕ್ಕದ ಅಗ್ರಹಾರದವರು ಕೋಸು ಬೆಳೆದರು, ಲಾರಿಯಲ್ಲಿ ತುಂಬಿಕೊಂಡು ಮಂಗಳೂರು ಮಾರುಕಟ್ಟೆಗೆ ಹೊಡೆದರು. ಲಾರಿ ಬಾಡಿಗೆ ಹುಟ್ಟಲಿಲ್ಲ, ಕೈಯಿಂದ ತೆತ್ತರು.

ಆ) ಕಂಪನಿಗಳು ಬೆಳೆ ತೆಗೆಯಲು ಪ್ರೋತ್ಸಾಹಿಸುವ ಹಾಗೆ *ಮಾರ್ಕೆಟಿಂಗ್ ವ್ಯವಸ್ಥೆ ಮಾಡುವುದಿಲ್ಲ.* ತಾಳೆ ಬೆಳೆ, ಹೊಗೆಸೊಪ್ಪಿಗೆ ಆದದ್ದು ಹೀಗೇ. ಒಬ್ಬನೇ ಫ್ಯಾಕ್ಟರಿ ಇಟ್ಟಿದ್ದರೆ 'ತಾಳೆ' ಬೆಳೆದವನು ಅವನು ಕೇಳಿದ ಬೆಲೆಗೆ ಕೊಡಬೇಕು ತಾನೆ?

'ವೆನಿಲಾ' ಬೆಳೆದರೆ ಅದಕ್ಕೆ ಆರ್ಟಿಫಿಷಿಯಲ್ ಪಾಲಿನೇಷನ್ ಮಾಡಬೇಕು. ಬೆಳೆ ಐದು ಅಡಿಯ ಒಳಗೆ ಇರಬೇಕು. ಕದಿಯಲು ಸುಲಭ. ಕಟಾವು ಬಂದಾಗ ೨೪ ಘಂಟೆ ಕಾವಲು ಮಾಡಬೇಕು. ಒಬ್ಬಂಟಿಯಾದರೆ ಅದು ಸಾಧ್ಯವಿಲ್ಲ.

ಇ) ಒಂದಕ್ಕೆ ಬೆಲೆ ಬಂತು ಅಂದರೆ ಸಾಕು, *ಡಿಮಾಂಡ್ ನೋಡಿಕೊಳ್ಳದೆ ಎಲ್ಲ ರೈತರೂ ಅದನ್ನೇ ಬೆಳೆದುಬಿಡುತ್ತಾರೆ.* ನಮ್ಮೂರಲ್ಲಿ ಎಲ್ಲರೂ, ಹೀಗೇ ಶುಂಠಿ ಬೆಳೆದು ನಷ್ಟ ಮಾಡಿಕೊಂಡರು. ಕೇರಳಾಪುರದಲ್ಲಿ ನಮ್ಮ ಬಂಧು ಒಬ್ಬರು ೧೫-೨೦ ಸಾವಿರ ಕಳಕೊಂಡರು. ಅಡಕೇದು ಆಗಿರೋದೂ ಹೀಗೇ. ಈಗ ಎಲ್ಲೆಂದರೆ ಅಲ್ಲಿ ಅಡಕೆ ಬೆಳೆಯುತ್ತಿದಾರೆ. ಹಿಂದೆ ಹಳ್ಳ-ಹಸಿ ಇರೋ ಕಡೆಗೆ ಅದು ಸೀಮಿತವಾಗಿತ್ತು.

ಇಷ್ಟು ಅನಿಶ್ಚಿತತೆಯಲ್ಲಿ ಮಕ್ಕಳಿಗೆ ಇನ್‌ಷ್ಯೂರೆನ್ಸ್ ಮಾಡಿಸೋದು ಹೇಗೆ ಹೇಳಿ?

೬೦ ವರ್ಷ ದುಡಿದ ರೈತರಿಗೆ ಪಿಂಚಣಿ ಇದೆಯೆ? ಪದವೀಧರರಾದವರು ವ್ಯವಸಾಯಕ್ಕೆ ಬಂದರೆ ವಿಶೇಷ ಪ್ರೋತ್ಸಾಹ ಇದೆಯೆ?

ಉ) ಹಿಂದೆ ಜಮೀನು ಮಾಡೋದು ಅಂದರೆ ಹೀಗೆ: ತೊಗೊಳ್ಳೋದು ಯಾವುದೋ ಪಾಳು ಜಮೀನು; ಕಾರೆಗುತ್ತಲು, ಉಣ್ಣೆಮೆಳೆ, ಈಚಲುಕಾಡು, ಹುತ್ತ ಬೆಳೆದ ಬೋರೆ. ಅದೆಲ್ಲ ಸವರಿ ಎದೆಯಾಳುದ್ದ ಮಣ್ಣು ಮೀಟೋದು, ಭಾವಿ ತೋಡೋದು.

ಬೆಳಗ್ಗೆ ನಾಲ್ಕು ಘಂಟೆಗೆ ಅಗತೆ ಮಾಡಲು ಶುರು. ಅಲ್ಲೇ ಸ್ನಾನ, ಸಂಧ್ಯಾವಂದನೆ. ಭಾವಿಯಿಂದ ೧೦-೧೨-೧೫ ಅಡಿ ಆಳದಿಂದ ಎರಡು ಹರವಿಗಳಲ್ಲಿ ನೀರು ತುಂಬಿ ತಂದು, ಗಿಡಗಳಿಗೆ ಹಾಕುವುದು, ಹಂಬಿಗೆ ತೆಕ್ಕೆ ಬಿಡುವುದು. ಅಪರಾಹ್ನ ಎರಡು ಘಂಟೆಯವರೆಗೂ ಹೀಗೆ ದುಡಿಮೆ. ಆಮೇಲೆ ಸ್ನಾನ, ಜಪ. ಊಟ ಮಾಡಿ ಕೈ ಆರಿರುವುದಿಲ್ಲ, ಮತ್ತೆ ಜಮೀನಿಗೆ. ಹೀಗೆ *ಅವಿಶ್ರಾಂತ ದುಡಿಮೆ ಮಾಡಿ ಹಲವರು ಕೊನೆಗಾಲದಲ್ಲಿ ಬಸವಳಿದ ನಿದರ್ಶನ ಇದೆ.*

ಬಿಡುವು ಅಂದರೆ ಹೀಗೆ: ಹೊಳೆ ದಡದಲ್ಲಿ ಸ್ನಾನ ಜಪಕ್ಕೆ ಅನುಕೂಲವಾಗುವ ಹಾಗೆ ಮಂಟಪ ಕಟ್ಟುವುದು, ಬಟ್ಟೆ ಒಗೆಯಲು ಕಲ್ಲು ಜೋಡಿಸಿ ಘಟ್ಟ ಕಟ್ಟುವುದು, ಶ್ಮಶಾನಘಟ್ಟ ಸರಿಪಡಿಸುವುದು. ಹೊಳೆನರಸೀಪುರ, ಗೊರೂರು, ಚುಂಚನಕಟ್ಟೆ ಸಂತೆಗೆ ವೀಳೆ ಪಿಂಡಿಯನ್ನೂ ತೆಂಗಿನ ಗುತ್ತಿಯನ್ನೂ ಹೊತ್ತು ನಡೆದುಕೊಂಡು ಹೋಗಿ ಮಾರಿ ಬರುವುದು. ನಡೆಯಲು ಚಪ್ಪಲಿ ಇಲ್ಲ. ನಾಲ್ಕು ಘಂಟೆಗೆ ಎದ್ದು ನಡೆಯುವುದು, ದಾರಿಯಲ್ಲಿ ನದೀ ತೀರದಲ್ಲಿ ಸ್ನಾನ-ಜಪ ಮುಗಿಸಿ, ಬುತ್ತಿ ಬಿಚ್ಚುವುದು. ಹೀಗೆ *ಹೊರೆ ಹೊತ್ತು ಹೊತ್ತು ಮೊಳೆ ಸವೆತದಿಂದ ನರಳಿದವರೂ ಉಂಟು.*

ಇಷ್ಟು ಮಾಡಿದ ಮೇಲೂ - ಮಂಚ ಕುರ್ಚಿ ಇದ್ದರೆ, ಸಮಾರಂಭದಲ್ಲಿ ಎರಡು ಸಿಹಿಯ ಊಟ ಮಾಡಿಸಿದರೆ, ಎಂಟು ದಿನದ ವಿವಾಹ ಮಾಡಿದರೆ - ಪರಮಭೋಗ ಅಂತ ಲೆಕ್ಕ. *ಮನೋರಂಜನೆ ಅಂದರೆ ಸಂತರ್ಪಣೆ ಸಮಯದ ಹರಟೆ, ಅಷ್ಟೆ.*

. . . ಹಾನಗಲ್ಲಿನ ಒಬ್ಬರು ಸೈಕಲ್ ಕೊಂಡುದು ನೂರು ವರ್ಷದ ಹಿಂದಿನ ಪರಮಸಾಧನೆ. ಅವರಿಗೆ 'ಸೈಕಲ್ ಮಾವಯ್ಯ' ಎಂದೇ ಹೆಸರಾಯಿತು.

ಊ) ಅಮೆರಿಕದಿಂದ ಒಂದು ಲಕ್ಷ ರೂಪಾಯಿ ದೇಣಿಗೆ ಬಂದರೆ ಸಂಕೇತಿ ಸಂಘ ಸನ್ಮಾನಿಸುತ್ತದೆ. ವೇದಾಧ್ಯಯನ ಮಾಡಿದವರನ್ನು, ಸಾಹಸದ ಕೃಷಿ ಮಾಡಿದವರನ್ನು ಸಂಘ ಗುರುತಿಸುವುದಿಲ್ಲ. ಇವತ್ತು ಲಕ್ಷ ರೂಪಾಯಿ ಕೊಡುತ್ತಿರುವವರಿಂದಲೇ ಅಲ್ಲ, ಹಿಂದೆ ೮ ಆಣೆ, ರೂಪಾಯಿ ಕೊಟ್ಟ ಹಳ್ಳಿಗರಿಂದಲೇ ಸಂಘ ಬೆಳೆಯಿತು ಎಂಬುದನ್ನು ಸಂಘದವರು ಮರೆತಿದ್ದಾರೆ.

ನಮ್ಮೂರಿನ ಸುಬ್ಬರಾಯಸ್ವಾಮಿಗಳು ಹಿಂದೆ ಬಾಳೆ ಕಂದುಗಳನ್ನು ಕಡಿದುಕೊಂಡು, ಎರಡು ಮೈಲು ದೂರದ ತೋಟದಿಂದ ಹೊತ್ತು ತಂದು ಅಡಿಕೆ ಬೆಣೆಗಳನ್ನು ಮಾಡಿ ತೆಪ್ಪ ಕಟ್ಟುತ್ತಿದ್ದರು. ಆ ತೆಪ್ಪದ ಮೇಲೆ ಉತ್ಸವಮೂರ್ತಿಯನ್ನು ಕೂರಿಸಿ ತೆಪ್ಪೋತ್ಸವ ಮಾಡಲಾಗುತ್ತಿತ್ತು. ಅದೊಂದೇ ಸಾಕು....

ಸುಬ್ಬರಾಯ ಸ್ವಾಮಿಗಳು, ಹಾನಗಲ್ ಕೃಷ್ಣಮೂರ್ತಿ ಅವರು, (ಪಿಗ್ಮಿ) ವೆಂಕಟೇಶ್ ಅವರು, ನಾಗಪ್ಪನವರು, ಗುಂಡಪ್ಪನವರು - ಇವರೆಲ್ಲ *ತೋಟದ ಭಾವಿಗಳನ್ನಷ್ಟೇ ಅಲ್ಲ, ಊರಿನ ಭಾವಿಗಳನ್ನೂ ಕಲ್ಲು ಇಡಿದು ಸ್ವತಃ ತೋಡಿದರು,* ಸನ್ಮಾನ ಮಾಡಲು ಅದು ಸಾಕು . . .

೦.೪) ಮಹಾಕೃಷಿಕ ಹಾನಗಲ್ ಕೃಷ್ಣಮೂರ್ತಿ (೮೪)

ವ್ಯವಸಾಯಗಾರರು, ಬಸವಾಪಟ್ಟಣ

(ಪೂರ್ಣವಾಗಿ ಸ್ವಯಂ ದುಡಿಮೆಯಿಂದಲೇ ಬಾಳಿದ ಕೃಷಿಕರ ಪ್ರತಿನಿಧಿ ಇವರು. ಬಡತನದ ಸವಾಲು, ಅಸ್ತಿತ್ವವನ್ನು ಸ್ಥಾಪಿಸಿಕೊಳ್ಳಬೇಕಾದ ಒತ್ತಡ, ಗುರಿಯ ಸ್ಪಷ್ಟ ಅರಿವು, ಅದನ್ನು ಸಾಧಿಸುವ ಹಠ, ಶ್ರದ್ಧೆ ಇವೆಲ್ಲ ದೈತ್ಯಾಕಾರದಲ್ಲಿದ್ದ ತಲೆಮಾರು ಅದು. ನಾಲ್ಕು ದಶಕಗಳ ಹಿಂದೆ ಅಂಥ ಜೀವನವೇ ಇದ್ದುದು.)

ವಿದ್ವಾನ್ ಸುಬ್ಬರಾಯಶಾಸ್ತ್ರಿಗಳ ಮನೆ ಮುಂದಿನ ಭಾವಿಯನ್ನು ಐದು ಅಡಿ ಇಳಿಸಿದೆ; ಆಮೇಲೆ ಶಾಶ್ವತ ಜಲಕಣ್ಣು ಬಂತು. ಆ ಮನೆಯ ಹಿಂದೆ ವೆಂಡರ್ ನರಸಿಂಹಯ್ಯನವರ ಭಾವಿಯನ್ನು ವಡ್ಡರು ಡೈನಮೈಟ್ ಸಿಡಿಸಿ ಬಗೆಯುತ್ತಿದ್ದರು. ನಾನು ಈ ಭಾವಿಯನ್ನು ಕೇವಲ *ಸುತ್ತಿಗೆ ಚಾಣಾ ಬಳಸಿ* ಇಡಿದು ಹಾಕಿದೆ.

ಹಾನಗಲ್ಲಿನಿಂದ ಬಂದಾಗ ಬರಗಾಲ ಇತ್ತು. ಪಾಳು ನೆಲ ಕೊಂಡು ದುಡ್ಡು ದಂಡ ಮಾಡಿದೆ ಅಂತ ಎಲ್ಲ ಹೆದರಿಸಿದರು. ಧೈರ್ಯದಿಂದ ಬೇಸಾಯ ಮಾಡಿದೆ. ಕುಪ್ಪಳ್ಳಿಯಿಂದ ಐವತ್ತು ಬಾಳೆ ಕಂದು ತಂದು ಊರಿದೆ. ತರಕಾರಿ ಬೆಳೆದು ಮಾರಿದೆ. ಮೊದಲು ಸಂತೆಗೆ ಹೊತ್ತು ಮಾರುತ್ತಿದ್ದವನು ಮುಂದೆ, ಗಾಡಿ ಎತ್ತು ಇಟ್ಟೆ, ಸಂತೆಗೆ ಬಾಳೆಗೊನೆ ಒಯ್ದೆ. ದಿನಕ್ಕೆ ೭-೮ ಬಾಳೆ ಗೊನೆ ಬಿಡುತ್ತಿತ್ತು. ರಾತ್ರಿ ಕಾವಲೂ ಮಾಡಿದೆ.

೧೫-೨೦ ಅಡಿಯಲ್ಲಿ ನೀರು ಸಿಕ್ಕುವವರೆಗೆ ಗಡಿಗೆಗಳಲ್ಲಿ ಹೊತ್ತು ನೀರು ಹಾಕಿದೆ. ಇನ್ನೂ ಕೆಳಗೆ ಹೋದಾಗ ಯಾತ ಇಟ್ಟೆ. ಭಾವಿ ಇಡಿದು ತೋಡಿದೆ. ಎರಡು ಭಾವಿಗೆ ಏತ ಹಾಕಿದೆ. ಒಂದರ ನೀರು ಖಾಲಿ ಆದಾಗ ಇನ್ನೊಂದು ಭಾವಿಯಲ್ಲಿ ಯಾತ ಹೊಡೆಯುತ್ತಿದ್ದೆ. ಎರಡು ವರ್ಷದ ಕ್ಷಾಮಕಾಲದಲ್ಲೂ ಈ ಮೂರು ಭಾವಿ ತೋಟವನ್ನು ಉಳಿಸಿದವು.

ಹೆಂಗಸರು ತೋಟಕ್ಕೇ ಬುತ್ತಿ ಹೊತ್ತು ತರುತ್ತಿದ್ದರು, ನನಗೂ ನೆರವಾಗುತ್ತಿದ್ದರು.

ಪೇಟೆಯಲ್ಲಿ ಅಣ್ಣಾಜಪ್ಪ ಎಂಬ ಹಿತೈಷಿ ಇದ್ದರು. ಊರಿಗೆ ವಿದ್ಯುಚ್ಛಕ್ತಿ ಬಂತು. ಅವರ ಒತ್ತಾಯ ಮತ್ತು ಸಹಾಯದಿಂದ ಕರಂಟ್‌ಲೈನ್ ಎಳೆಸಿದೆ. ಮೆಷಿನ್ ಭಾವಿ ಮಾಡಿದೆ. ೧೪ ಅಡಿ ಆಳ, ೧೪ ಅಡಿ ಚೌಕದ ಭಾವಿ ಕಟ್ಟಿದೆ (ಮುಂದೆ ಚಪ್ಪಡಿಗಳಿಂದಲೇ ದಡ ಕಟ್ಟಲಾಯಿತು). ಅಮ್ಮಯ್ಯಮ್ಮ ಎಂಬ ಬಂಧು ಒಬ್ಬರು ಪ್ರೋತ್ಸಾಹಿಸಿ (ಆ ಕಾಲಕ್ಕೆ) ಐದು ಸಾವಿರ ರೂ. ಸಾಲ ಕೊಟ್ಟರು. ಪೈಪ್‌ಲೈನ್‌ಗಳನ್ನು ಜೋಡಿಸಿದೆ, ಟ್ಯೂಬುಕಟ್ಟಿ ಮರಗಳಿಗೆ ನೀರು ಹಾಯಿಸಿದೆ.

ತೆಂಗು ಅಡಕೆ ಹಂಬು ಸೊಗಸಾಗಿತ್ತು. ನನ್ನ ಕಷ್ಟಕ್ಕೆ ಫಲ ಸಿಕ್ಕಿತ್ತು. ಸುಬ್ಬರಾಯಶಾಸ್ತ್ರಿಗಳು ತಮ್ಮ ತೋಟಕ್ಕೆ ಅದೇ ದಾರಿಯಲ್ಲಿ ತಿರುಗಾಡುತ್ತಿದ್ದರು. "ಓದಪ್ಪಾ! ಬಂಗಾರು ಪಣ್ಣೀವುಟ್ಟೇಯೆ! ಉಣ್ಣೀಕಾಡ್ ಭಯಂಕರಮಾ ಇಂದೆ, ಅಪ್ಪಿವಾಂಗೀನಾ!" (ಏನಪ್ಪಾ! ಬಂಗಾರ ಮಾಡಿಬಿಟ್ಟೆಯಲ್ಲ! ಉಣ್ಣೀ ಕಾಡು ಭಯಂಕರವಾಗಿತ್ತಲ್ಲ, ಹೇಗೆ ತೆಗೆದೆ?) ಎಂದು ಮೆಚ್ಚುಗೆ ಸೂಚಿಸುತ್ತಿದ್ದರು. *ಅಂಥ ಮಾತು ಪ್ರಶಸ್ತಿಯ ಹಾಗೆ ಕಂಡು ಉತ್ತೇಜಿತನಾಗುತ್ತಿದ್ದೆ.*

ಐದು ಹೆಣ್ಣು ಮಕ್ಕಳಿಗೆ ಲಗ್ನ ಮಾಡಿದೆ, ಗಂಡುಮಕ್ಕಳಿಗೆ ವಿದ್ಯಾಭ್ಯಾಸ ಮಾಡಿಸಿದೆ.

ಹೆಣ್ಣು ಮಕ್ಕಳ ನೆರವಿನಿಂದಲೇ ಈ ಮನೆಯ ಗೋಡೆ ಕಟ್ಟಿದೆ. ಅಗ್ರಹಾರದ ಮುತ್ತುವೂ ನೆರವಾದರು. ನನ್ನ ಪತ್ನಿಯಂತೂ ಮಂತ್ರಿಯಾಗಿ, ಸಹಾಯಕಳಾಗಿ, ಗೃಹಿಣಿಯಾಗಿ ದುಡಿದಳು, ಸಹಕರಿಸಿದಳು. ಆಕೆಯ ನೆರವು, ಉತ್ತೇಜನ ನನಗೆ ಉತ್ಸಾಹ ಕೊಟ್ಟಿತು. ವ್ಯವಸಾಯಕ್ಕೆ ಪೂರ್ತಿ ಗಮನ ಕೊಟ್ಟೆ.

ತೋಟದಲ್ಲಿ ೧೮ ಹಂತ ವೀಳೆದೆಲೆ ಬೆಳಸಿದೆ (ಒಂದು ಮೊಳದ ಮೇಲೆ ಎರಡು ಇಂಚು ಇದ್ದರೆ ಒಂದು ಹಂತ). ೩೦ ಅಡಿವರೆಗೆ ಬೆಳೆ ಇತ್ತು. ಆರ್ಥಿಕ ಸಂಕಷ್ಟ ಒದಗಿದಾಗ *ಆರು ಬಾರಿ ಕಟಾವು ಮಾಡಿದ್ದೂ ಉಂಟು.* ಎಕರೆಗೆ ೩೦ ಹೇರು ಎಲೆ ಬೆಳೆಯುತ್ತಿದ್ದೆ. ಹಾಗೆ ಎರಡು ಎಕರೇಲಿ ಹಂಬು ಇಟ್ಟಿದ್ದೆ. (ನಾನು ಸೋತಾಗ *ಆಳುಗಳು ೧೮ ಹಂತ ಹತ್ತಲಾರದೆ ಹೋದರು, ೧೫ ಹಂತಕ್ಕೆ ಇಳಿಸಿದೆ*) ಕೆಲವು ವೇಳೆ *ಅಡಕೆಗಿಂತ ಎಲೆಯಲ್ಲಿ ಹೆಚ್ಚು ದುಡ್ಡು ಬರುತ್ತಿತ್ತು.* ಒಮ್ಮೆ ಅಡಕೇಲಿ ಒಂದು ಲಕ್ಷ ಬಂತು, ವೀಳೆದೆಲೆಯಲ್ಲಿ ಒಂದೂವರೆ ಲಕ್ಷ ಬಂತು. ಹಂಬಿಗೋಸ್ಕರ ಬಾಳೆ ಕಮ್ಮಿ ಮಾಡಿದ್ದೂ ಉಂಟು. ಬಾಳೆಯು ಸಾರವನ್ನು ಹೀರುತ್ತೆ ಅಂತ ಹಾಗೆ ಮಾಡಿದೆ. (ಇತ್ತೀಚೆಗೆ ಮೈಸೂರಿನಲ್ಲಿ ಮನೆ ಕಟ್ಟಿಸಿದೆವು. ಆಗ ವೀಳೆ ಹಂಬು ನಮ್ಮ ನೆರವಿಗೆ ಬಂದದ್ದು ಮರೆಯುವಂತಿಲ್ಲ.) ಸುತ್ತ ಅನೇಕ ತೋಟಗಳಲ್ಲಿ ಶೀತದಿಂದ ಹಂಬು ಕೊಳೆಯಿತು. ನೀರಾವರಿಯಿಂದಾದ ಈ ತೊಂದರೆ ನನ್ನ ತೋಟಕ್ಕೆ ಪ್ರವೇಶಿಸದ ಹಾಗೆ ನಿಯಂತ್ರಿಸಿದ್ದೇನೆ.

ಹಾನಗಲ್ಲಿನಲ್ಲಿದ್ದಾಗ *ಎಲೆ ಪಿಂಡಿ ಹೊತ್ತು ಹೊಳೆನರಸೀಪುರದ ಸಂತೆಗೆ* ಹೋಗುತ್ತಿದ್ದೆ. ಬಸವಾಪಟ್ಟಣಕ್ಕೆ ಬಂದಾಗ ನನಗೆ ೨೪ ವರ್ಷ ವಯಸ್ಸು.

ಗೊತ್ತಾದ ಒಂದು ಭಾವಿಯಲ್ಲಿ ಕದಬೆ ಕರುಗು ಹಾಕುತ್ತಿದ್ದೆವು. *ಹಗ್ಗ ಯಾವತ್ತೂ ಅಂಗಡಿಯಲ್ಲಿ ಕೊಳ್ಳಲಿಲ್ಲ.* ದನಗಳಿಗೆ, ಹಂಬು ಇಳಿಸುವುದಕ್ಕೆ, ಭಾವಿಯಿಂದ ನೀರು ಸೇದುವುದಕ್ಕೆ ನಾನೇ ಹಗ್ಗ ಹೊಸೆದು ಸಿದ್ಧಪಡಿಸುತ್ತಿದ್ದೆ. ಈಚಲು ಕಡ್ಡಿ ತಂದು ಒಡೆದು, ರೇಖೆ ಮಾಡಿ, ನನ್ನ ಕೆಲಸದ ಅಗತ್ಯಗಳಿಗೆ ತಕ್ಕ ಹಾಗೆ *ಮಂಕರಿ ಹೆಣೆಯುತ್ತಿದ್ದೆ.* (ಹಾನಗಲ್ಲಿನಲ್ಲಿದ್ದಾಗ ಛತ್ರಿಕೊಳ್ಳುವ ಶಕ್ತಿ ಇರಲಿಲ್ಲ. ಕೆರೆಯಿಂದ ಹೊಡಿಕೆ ತಂದು *ಗೊರಗು ಹೆಣೆಯುತ್ತಿದ್ದೆವು.*) ಹೊಲದ ಬೇಸಾಯ ಕೂಡ ಸ್ವಂತವಾಗಿ ಮಾಡುತ್ತಿದ್ದೆ. ನೊಜೆಹುಲ್ಲು ತಂದು ಹೆಣೆದು ಹುರುಳಿಕಾಳು ಕಟ್ಟಿ ಇಡುತ್ತಿದ್ದೆವು. ತರಗು ತಂದು ನೆನೆಸಿ, ಜೋಡಿಸಿ ಮನೆ ಉಪಯೋಗಕ್ಕಾಗಿ *ದೊನ್ನೆ ಕಟ್ಟುತ್ತಿದ್ದುದುಂಟು.*

ಈಗ ಆಸ್ತ್ಮಾ ಬಂದಿದೆ. ಕಳೆದ ೨೫ ವರ್ಷದಿಂದ ಅದು ಇದೆ. ಖಾಲಿ ಹೊಟ್ಟೇಲಿ ದುಡಿಮೆ ಮಾಡಿದ್ದರಿಂದ ಬಂತು ಅಂತ ಕೆಲವರು ಹೇಳುತ್ತಾರೆ. ಭಾವಿಯಲ್ಲಿ ಶೀತದಲ್ಲಿ ಕೆಲಸ ಮಾಡಿದ್ದರಿಂದ ಬಂತು ಅಂತ ಮತ್ತೆ ಕೆಲವರು ಹೇಳುತ್ತಾರೆ. ನಮ್ಮ ತಂದೆಯವರಿಗೂ ಇದು ಇತ್ತು. ನಿದ್ದೆ ಚೆನ್ನಾಗಿ ಬರುತ್ತೆ. ಮೊದಲಿನಷ್ಟು ಊಟ ಸೇರುವುದಿಲ್ಲ, ಸುಸ್ತು. ಮಕ್ಕಳು ಚೆನ್ನಾಗಿ ನೋಡಿಕೊಳ್ಳುತ್ತಿದ್ದಾರೆ. ಮಾತ್ರೆ ನುಂಗುತ್ತೇನೆ. ಪಂಪೂ ತಂದು ಇಟ್ಟಿದಾರೆ. . . . .

೦.೫) ಸೀತಮ್ಮ ಹಾನಗಲ್ ಕೃಷ್ಣಮೂರ್ತಿ (೭೪)

ಬಸವಾಪಟ್ಟಣ

(ಕೃಷಿ ಎಂದರೆ ಹಳ್ಳಿಯ ಬದುಕು, ಕೃಷಿ ಎಂದರೆ ಅದಕ್ಕೆ ಹೊಂದಿಕೊಂಡ ಹತ್ತಾರು ಉಪಕಸುಬುಗಳ ಪರಿಶ್ರಮ)

ಅ) ನಮ್ಮ ತಂದೆ ಚಿನ್ನಪ್ಪನವರ (ಕೇಶವನಾರಣಪ್ಪ) ಮನೆಯಲ್ಲಿ *ಚಾಪೆ ಹೆಣೆಯುವ ಮಗ್ಗ ಹಾಕಿದ್ದರು.* ಚೇಣಿ ತಂದು ಚಾಪೆ ಹೆಣೆಯುತ್ತಿದ್ದೆವು. 'ಚೇಣಿ-ಮಂದಲಿಂಗ್ಯ' (ಚೇಣಿ ಮಂದಲಿಗೆ) ಅಂತ ಅದಕ್ಕೆ ಹೆಸರು. ನಮ್ಮ ಮನೆಯಲ್ಲಿ ಎಲ್ಲರೂ ಚಾಪೆ ನೇಯುತ್ತಿದ್ದೆವು, ನಾನೂ ನೇಯುತ್ತಿದ್ದೆ. ೧೦ ಮಾರಿನ ಚೇಣಿ ಚಾಪೆಗಳು (ಆಗ ಹೆಣೆದುವು) ಈಗಲೂ ಆ ಮನೆಯಲ್ಲಿವೆ.

ಆ) ನಮ್ಮ ತೋಟವನ್ನು ಆಗಲೂ ಕ್ಲೀನಾಗಿ ಇಟ್ಟಿರುತ್ತಿದ್ದೆವು. ಸೆತ್ತೆ, ಕೂಳೆ, ಕಳೆ ಒಂದೂ ಇರುತ್ತಿರಲಿಲ್ಲ. ಪಾತಿಗಳನ್ನು ಚಿತ್ರ ಕೊರೆದ ಹಾಗೆ ನೀಟಾಗಿ ಕೆತ್ತಿರುತ್ತಿತ್ತು. ಪಿಳ್ಳೆಗಳೂ ಯದ್ವಾತದ್ವಾ ಅಲ್ಲ. ಪಾತಿಗೆ ಹಾಕಿದ ನೀರೂ ಆ ಪಾತಿಯಲ್ಲಿ ಮಾತ್ರ ತುಂಬಿರುತ್ತಿತ್ತು, ಬೇಕಾಬಿಟ್ಟಿ ಹರಿಸುತ್ತಿರಲಿಲ್ಲ.

ಮನೆಯನ್ನೂ ಹಾಗೇ ಚೊಕ್ಕಟವಾಗಿ ಸಾರಿಸಿ ಇರಿಸುತ್ತಿದ್ದೆವು. ಈಚೆಗೆ ಸಿಮೆಂಟ್ ನೆಲ ಆದಮೇಲಂತೂ ಚೆನ್ನಾಗಿ ಒರಸಿ ಹೊಳೆಯುವ ಹಾಗೆ ಮಾಡಿ ಇಡುತ್ತಿದ್ದೆವು. ಮೇಲು ಬೀದಿಯ ವಿದ್ವಾನ್ ಸುಬ್ಬರಾಯಶಾಸ್ತ್ರಿಗಳು ಯಾವಾಗಾದರೂ ಈ ಕಡೆ ಬಂದರೆ ಬಾಗಿಲಲ್ಲೇ ನಿಂತು 'ಅಣ್ಣನ ಅಳಿಯಮ್ಮ' ಎಂದು ಮಕ್ಕಳಿಗೆ ಹೇಳುತ್ತಿದ್ದರು. ಒಳಗೆ ಬನ್ನಿ ಅಂದರೆ "ಕನ್ನಾಡಿಪೋಲೆ ರಾಂದಮ್ಮ; ನಳಲ್ ಕಾಣಂದ್. ಧೂಳ್‌ಹಾಂದ್; ವಾಣಾ." (ಕನ್ನಡಿ ಹಾಗೆ ಇದೆಯಮ್ಮ, ನೆಳಲು ಕಾಣುತ್ತೆ. ಧೂಳಾಗುತ್ತೆ, ಬೇಡಾ) ಎಂದು ಹೊರಗೇ ನಿಲ್ಲುತ್ತಿದ್ದರು. ಈಗ ಏನೂ ಆಗಲ್ಲ, ಸೋತುಹೋದೆ.

(ಆದರೂ ಮನೆಯನ್ನು ಚೊಕ್ಕಟವಾಗೇ ಇಟ್ಟಿದ್ದರು)

೦.೬) ಹೆಚ್.ಎನ್. ನಾಗಪ್ಪ (೮೪)

ಹಿರಿಯ ವ್ಯವಸಾಯಗಾರರು, ಬಸವಾಪಟ್ಟಣ

(ಬೆಳ್ಳಿ ಮುಸುಕು ಹಾಕಿದ ಒಂದು ರುದ್ರಾಕ್ಷಿ ಅವರ ಕತ್ತಿನ ಸರದಲ್ಲಿ ಸೇರಿತ್ತು)

(ವೇಷಭೂಷಣ, ನಂಬಿಕೆ, ಜೀವನ ಪರಿಕರಗಳೆಲ್ಲ ಸೇರಿಯೇ ಕೃಷಿಕರ ಒಟ್ಟು ಪರಿಚಯ ಮಾಡಿಸುತ್ತವೆ.)

ಅವರು ಕೊಟ್ಟ ಮಾಹಿತಿ :

ಅ) ರುದ್ರಾಕ್ಷಿ ಈಶ್ವರಾಂಶ. ನಮ್ಮ ಹಿರಿಯರು ರುದ್ರಾಕ್ಷಿ ಧರಿಸುತ್ತಿದ್ದುದಕ್ಕೆ ನಿದರ್ಶನಗಳಿವೆ. ಯಜ್ಞೇಶ್ವರಾವಧಾನಿಗಳು ರುದ್ರಾಕ್ಷಿಗೆ ಚಿನ್ನದ ಮುಸುಕು ಹಾಕಿಸಿ ಕಿವಿಗೆ (ತಟ್ಟಿನ ಜಾಗದಲ್ಲಿ) ಧರಿಸುತ್ತಿದ್ದರು.

ನಮ್ಮ ತಂದೆಯವರ ಬಳಿ ೨ ರುದ್ರಾಕ್ಷಿಗಳು ಕೂಡಿಕೊಂಡ ಒಂದು ಇತ್ತು. ಅದಕ್ಕೆ ಚಿನ್ನದ ಮುಸುಕು ಹಾಕಿಸಿ ಧರಿಸುತ್ತಿದ್ದರು. ಅವರ ನಂತರ ಅದನ್ನು ನನ್ನ ಅಣ್ಣ ಚಿನ್ನಪ್ಪನವರು ಕತ್ತಿನಲ್ಲಿ ಧರಿಸುತ್ತಿದ್ದರು.

ದೇಹದ ಮೇಲೆ ರುದ್ರಾಕ್ಷಿ ಇದ್ದರೆ ಒಳ್ಳೆಯದೆಂಬ ನಂಬಿಕೆ ಇದೆ. ಮರಣಕಾಲದಲ್ಲಿ ರುದ್ರಾಕ್ಷಿ ಕಟ್ಟುತ್ತಾರೆ.

ಆಗ ಕೆಲವರು ೧೦-೧೫ ರುದ್ರಾಕ್ಷಿಗಳಿರುವ ಸರವನ್ನೇ ಕತ್ತಿನಲ್ಲಿ ಧರಿಸುತ್ತಿದ್ದುದೂ ಉಂಟು. ಈಗ ಅದು ಕಡಮೆ.

ನನಗೆ ತಿಳಿದಂತೆ ವಠಾರದ ರಾಮಯ್ಯನವರು ಒಂಟಿ ರುದ್ರಾಕ್ಷಿಯನ್ನು ಕತ್ತಿನಲ್ಲಿ ಧರಿಸುತ್ತಿದ್ದಾರೆ. ಬ್ರಹ್ಮಯಜ್ಞ ಮಾಡಿದಾಗ ಪಿತೃದೇವತೆಗಳಿಗೆ ಸೇರುತ್ತೆ ಎಂಬ ಕಾರಣಕ್ಕೆ ವಠಾರದ ಗುಂಡಪ್ಪನವರು ಒಂಟಿ ರುದ್ರಾಕ್ಷಿಯನ್ನು ಜನಿವಾರದಲ್ಲಿ ಧರಿಸುತ್ತಿದ್ದರು.

ಇದನ್ನು ಧರಿಸಿದವರು ಶುಚಿಯಾಗಿರಬೇಕು. ಮೈಲಿಗೆ ತಗುಲಬಾರದು. ಬಾಲ್ಯದಲ್ಲಿ ಆ ಕಾರಣದಿಂದಲೇ ಧರಿಸುವುದಿಲ್ಲ. ಅಶುಚಿಯ ಸಂದರ್ಭದಲ್ಲೂ ಮಲಗುವಾಗಲೂ ಅದನ್ನು ತೆಗೆದಿಟ್ಟು ಬೆಳಗ್ಗೆ ಸ್ನಾನಾನಂತರ ಧರಿಸುವ ಕ್ರಮ ಉಂಟು.

ನಿಮಗೆ ಒಂದು ಕತೆ ಗೊತ್ತಿರಬೇಕು. ಒಬ್ಬಳು ಸೂಳೆ ಕೋಳಿಗೆ ರುದ್ರಾಕ್ಷಿ ಕಟ್ಟಿದಳಂತೆ. ಶಿವನು ಬೇಕೆಂತಲೇ ಕೋಳೀನ ಅಗ್ನಿಪ್ರವೇಶ ಮಾಡಿಸಿದ. ಅದು ಭಸ್ಮವಾದದ್ದು ಕಂಡು ಸೂಳೆ ಅಳತೊಡಗಿದಳು. ಈಶ್ವರ ಪ್ರತ್ಯಕ್ಷವಾಗಿ, 'ಅದನ್ನು ನಾನೇ ಮಾಡಿದೆ. ಹೆದರಬೇಡ, ಕೋಳಿ ಸತ್ತಿಲ್ಲ' ಎಂದು ತೋರಿಸಿದ. ಅವಳ ತಪ್ಪನ್ನು ತಿದ್ದಿದ. ಸೂಳೆಗೆ ವರ ಕೊಟ್ಟ.

ಆ) ಸುಬ್ರಹ್ಮಣ್ಯ ಅನ್ನುವುದು ನನ್ನ ಹೆಸರು. ಕೂಗುವುದು ನಾಗಪ್ಪ ಅಂತ. ನಾನು ಇದುವರೆಗೆ ಸಹಿ ಮಾಡಿರುವುದೆಲ್ಲ ನಾಗಪ್ಪ ಅಂತಲೆ. ನಾನು ತೊಟ್ಟಿಲು ಮಗುವಾಗಿದ್ದಾಗ ಒಮ್ಮೆ *ಸರ್ಪವೊಂದು ತೊಟ್ಟಿಲಿಗೆ ಸುತ್ತಿಕೊಂಡಿತು.* ಅಮ್ಮ "ನೋಡಿ, ನಾಗಪ್ಪ ಬಂದಿದಾನೆ" ಅಂತ ಕೂಗಿ ಅಪ್ಪನಿಗೆ ಹೇಳಿದರು. ಅಪ್ಪ ಬಂದು, "ನಿನ್ನ ಹೆಸರೇ ಇಡತೀನಿ, ಹೋಗಪ್ಪ" ಅಂದರು. ಸರ್ಪ ಹೊರಟುಹೋಯಿತು. 'ನಾಗಪ್ಪ' ಅಂತ ನನ್ನ ಕರೆದರು.

ಒಂದು ಸಾರಿ ಮೂಟೆಗೆ ಒರಗಿಕೊಂಡು ಮಲಗಿದ್ದೆ. ಅದರೊಳಗಿದ್ದ ಸರ್ಪ ನನ್ನ ಕೈಗೇ ಸುತ್ತಿಕೊಂಡಿತು. ಒದರಿದೆ, ದೂರಬಿತ್ತು. ಇದುವರೆಗೆ ಸರ್ಪದಿಂದ ನನಗೆ ಯಾವ ತೊಂದರೆಯೂ ಆದುದಿಲ್ಲ.

ಇ) ಬಳಪದ ಕಲ್ಲಿನ ಪಾತ್ರೆಗಳನ್ನು 'ಕಲ್ಲು' ಅಂತಲೇ ಕರೆಯುತ್ತಿದ್ದರು. ಅದು ಮಡಿಗೆ ಅನುಕೂಲ. ಅದರಲ್ಲೇ ಸಾರು ಮಾಡುತ್ತಿದ್ದರು. ಅಗತ್ಯ ಬಿದ್ದಾಗ (ಮಡಿಗಾಗಿ) ೧೦ ಕೊಡ ಹಿಡಿಯುವ ಅಂಡೆಗಳಲ್ಲಿ ಸಾರು ಮಾಡುತ್ತಿದ್ದರು. ಅದರ ಜೊತೆಗೆ ತಾಮ್ರ ಮತ್ತು ಹಿತ್ತಾಳೆ ಪಾತ್ರೆಗಳಿರುತ್ತಿದ್ದವು. ಈಗ ಕಂಚು ಮಾರಿ (ಒಡಗಂಚಿಗೆ ಹಾಕಿ) ಒಂದಿಷ್ಟು ಸ್ಟೀಲು ಪಾತ್ರೆ ತಂದು ತುಂಬಿಕೊಂಡಿದಾರೆ.

೦.೭) ಬಿ.ಕೆ. ರಾಮಚಂದ್ರ (೫೬)

ಕೃಷಿಕರು, ವಹಿವಾಟುದಾರರು, ಬಸವಾಪಟ್ಟಣ

(ಹಂಬಿನ ತೋಟಕ್ಕೆ ಸಂಬಂಧಿಸಿದ ನಂಬಿಕೆಗಳು 'ಶಂಕೋಟ್ಟೈ ಪ್ರದೇಶ'ಕ್ಕೆ ಸಂವಾದಿಯಾಗಿವೆ)

ಅವರೊಡನೆ ನಡೆಸಿದ ಸಂದರ್ಶನದಿಂದ ಆಯ್ದ ಮಾಹಿತಿ :

ಅ) ನಮ್ಮ ದೊಡ್ಡಪ್ಪನವರ ತೋಟದಲ್ಲಿ ಒಳ್ಳೆಯ ಹಂಬು ಇತ್ತು. ಈ ಸುತ್ತಕ್ಕೇ ಉತ್ತಮವಾಗಿ ಆ ತೋಟ ಇಟ್ಟಿದ್ದರು. ನಮ್ಮೂರಿನ ಪ್ರೌಢಶಾಲೆಯ ನೂತನ ಕಟ್ಟಡದ ಉದ್ಘಾಟನೆಗಾಗಿ ಕರ್ನಾಟಕದ ಸಚಿವರಾಗಿದ್ದ ಶ್ರೀ ಎ.ಜಿ. ರಾಮಚಂದ್ರರಾಯರೂ ಕೇಂದ್ರ ಸಚಿವರಾಗಿದ್ದ ಶ್ರೀ ಕೆ.ಎನ್. ಶ್ರೀಮಾಲಿ ಅವರೂ ಬಂದಿದ್ದರು. ಅವರಿಬ್ಬರಿಗೂ ಇಂಥ ಒಳ್ಳೆಯ ತೋಟ ನೋಡಬೇಕೆಂಬ ಆಸೆಯಾಯಿತು. ಸಂಕೇತಿಗಳು ಒಳ್ಳೆಯ ಕೃಷಿಕರು ಎಂದು ಕೇಳಿದ್ದ ರಾಮಚಂದ್ರರಾಯರಿಗಂತೂ ಆ ಬಗೆಗೆ ಹೆಚ್ಚಿನ ಆಸಕ್ತಿ ಇತ್ತು. ಶ್ರೀಮಾಲಿ ಅವರ ಪತ್ನಿಯವರೂ ಜತೆಗಿದ್ದರು. ಆ ಮೂವರ ಜತೆಗೆ ಪೋಲಿಸರೂ ಸಾರ್ವಜನಿಕ ಗಣ್ಯರೂ ಇದ್ದೇ ಇದ್ದರು. ಅವರೆಲ್ಲರೂ ತೋಟವನ್ನು ಸುತ್ತಿದರು, ನೋಡಿದರು, 'ಭೇಷ್' ಎಂದರು.

ಆ ಎಲ್ಲರೂ ಆ ಹಂಬಿನ ತೋಟವನ್ನು ಸುತ್ತಿದ್ದು ಬೂಟುಕಾಲಿನಲ್ಲಿ. ಅವರು ಭೇಟಿ ಕೊಟ್ಟ ಎರಡು ತಿಂಗಳಲ್ಲಿ ಹಂಬೆಲ್ಲ ಬಾಡಿಹೋಯಿತು. *ಬೂಟು ಕಾಲಿನಲ್ಲಿ ವೀಳೆ ಹಂಬು ಇರುವ ತೋಟದಲ್ಲಿ ನಡೆದಾಡಬಾರದು ಎಂಬುದು ಒಂದು ನಂಬಿಕೆ.* ವೀಳೆ ಲಕ್ಷ್ಮಿ. ಹಾಗೆ ತುಳಿದಾಡಿದರೆ ಹೊರಟು ಹೋಗುತ್ತಾಳೆ. *ಸಂಜೆ ಎಲೆ ಕುಯ್ಯ ಬಾರದು* ಎಂಬ ನಂಬಿಕೆಗೂ ಅದೇ ಕಾರಣ ಕೊಡಲಾಗುತ್ತಿದೆ.

ಆದರೆ ಇವನ್ನೆಲ್ಲ ನಾನು ನಂಬುವುದಿಲ್ಲ. ಯಾವ ಕಾರಣದಿಂದಲೋ ಹಂಬು ಒಣಗಿರಬೇಕು.

ಆ) ನಮ್ಮ ತಾಯಿಯವರೊಂದಿಗೆ ಕೂತು ನಾವೆಲ್ಲ *ಎಲೆ ಕವಳಿಗೆ ಹಿಡಿಯುತ್ತಿದ್ದೆವು.* ಅಡಿಕೆ-ತುಡಿಕೆ ನಮ್ಮ ಪ್ರಧಾನವಾದ ವ್ಯವಹಾರವಾಗಿತ್ತು. ಆದರೆ ಅದು ಪ್ರಬಲ ಆರ್ಥಿಕಮೂಲವಾಗಿರಲಿಲ್ಲ. ಉಳಿದ ಇಂಥ ಕೆಲಸಗಳು ಇದ್ದೇ ಇರುತ್ತಿದ್ದವು.

ಇ) ತೋಟಕ್ಕೆ ನೀರು ಹಾಕದೆ ಬಹಳ ದಿನವಾಗಿತ್ತು. ಅವತ್ತು ಹಾಕಲೇಬೇಕಿತ್ತು. ನನ್ನ ತಮ್ಮನ ಜೊತೆ ಸೇರಿ ಕೆಲಸ ಮಾಡಬೇಕಿದ್ದ ಆಳು ಬರಲಿಲ್ಲ. ಎರಡು ಎಕರೆ ಜಮೀನಿಗೆ ನೀರು ಹಾಯಿಸಬೇಕು; ದೊಡ್ಡ ಕೆಲಸ. ನಾವಿಬ್ಬರೂ ಅಣ್ಣತಮ್ಮಂದಿರು 'ಇವತ್ತು ಒಂದೇ ದಿನದಲ್ಲಿ ಇಡೀ ತೋಟಕ್ಕೆ ನೀರು ಹಾಕಬೇಕು' ಎಂದು ಸಂಕಲ್ಪ ಮಾಡಿದೆವು. ಕಪಿಲೆ ನೀರನ್ನು ಎತ್ತಿಕೊಡಲು ಒಬ್ಬ ಆಳು ಇದ್ದ. *ಗಡಿಗೇಲಿ ಎತ್ತಿ ಇಡೀ ಎರಡು ಎಕರೆ ತೋಟಕ್ಕೆ ಸಂಜೆ ಎಂಟರ ಒಳಗೆ ನೀರು ಹಾಕಿ ಮುಗಿಸಿದೆವು.* ಆಳುಗಳನ್ನೇ ನಂಬಿದವನು ಕೃಷಿಕನಾಗಲಾರ.

ಈ) ಇವತ್ತು ನೀರೆತ್ತಲು ಯಂತ್ರ ಬಂದಿದೆ, ನೀರು ಸಾಗಿಸಲು ಪೈಪು ಇದೆ. ಆ ಪೈಪು ಹಿಡಿದುಕೊಂಡು ನೀರು ಹಾಯಿಸುವುದೇ ಕಷ್ಟದ ಕೆಲಸ ಎಂಬ ಮಟ್ಟಿಗೆ ಮನುಷ್ಯ ಒಗ್ಗಿಬಿಟ್ಟಿದ್ದಾನೆ. ಅನೇಕ ಸಂಕೇತಿ ರೈತರು ಸ್ವಂತ ದುಡಿಯುವಾಗ ಜೊತೆಗೆ ಕೆಲಸ ಮಾಡಲು ಆಳುಗಳನ್ನು ಕರೆದರೆ ಅವರು ಬರುವುದಿಲ್ಲ. *ಏಕೆಂದರೆ ಆ ಮಟ್ಟಕ್ಕೆ ಅವರು ದುಡಿಯಲಾರರು.*

ಉ) ೨೪ ಗುಂಟೆ ಜಮೀನಿದ್ದರೆ ಸ್ವಂತ ದುಡಿಮೆ ಒಂದರಿಂದಲೇ ತೋಟದ ಸಾಗುವಳಿ ನಿಭಾಯಿಸಬಹುದು. ೨-೩ ಎಕರೆ ಇಟ್ಟವರು ಆಳುಗಳನ್ನೂ ಕರೆಯಲೇಬೇಕಾಗುತ್ತದೆ.

೦.೮) ನಾಗಭೂಷಣ

(ಕೇರಳದ ಕಾಕರು ಅಡಿಕೆತುಡಿಕೆಯ ಕಾಲದಲ್ಲಿ ಹಾಸನಜಿಲ್ಲೆಯ ಬಸವಾಪಟ್ಟಣದವರೆಗೆ ಬರುತ್ತಾರೆ! ಇಲ್ಲೇ ಉಳಿದು ದುಡಿಯುತ್ತಾರೆ, ತುಡಿಕೆಯ ವಿಧಾನಗಳ ವಿನಿಮಯದ ಮಾಧ್ಯಮವಾಗಿದ್ದಾರೆ. ಇದು ಕಳೆದ ಐದಾರು ದಶಕಗಳಲ್ಲಿ ಕಂಡ ವಿದ್ಯಮಾನ)

ನುರಿತ ಉದ್ಯಮಿಯ ಅಡಿಕೆ ತುಡಿಕೆ ಅನುಭವದ ನಿರೂಪಣೆ :

ಮುಂಗಡ

ಬೇಸಿಗೆಯ ಕಾಲದಲ್ಲಿ ಮದುವೆ ಮುಂತಾದುವು ನಡೆಯುವಾಗ ತೋಟಗಾರರು ತೋಟವನ್ನು ತೋರಿಸಿ ಹಣ ಪಡೆಯುತ್ತಾರೆ. ತುಡಿಕೆಯವರು ತೋಟದ ಅಡಿಕೆ ಫಸಲನ್ನು ಅಂದಾಜು ಮಾಡಿ ಮುಂಗಡ ಕೊಡುತ್ತಾರೆ. ಆಗಲೇ ಅಡಿಕೆಯ ಬೆಲೆಯೂ ನಿರ್ಧಾರವಾಗುತ್ತದೆ. ಶೇಕಡ ೫೦ರಷ್ಟು ಮುಂಗಡ ಕೊಟ್ಟಿದ್ದರೆ ಅಡಿಕೆ ಬೆಲೆಯು ನಿರ್ಧಾರವಾಗುವುದು ಒಂದು ರೀತಿಯಾದರೆ, ಪೂರಾ ಹಣ ಸಂದಾಯ ಮಾಡಿದಾಗ ಮತ್ತೊಂದು ರೀತಿಯ ಬೆಲೆ ನಿರ್ಧಾರವಾಗುತ್ತದೆ. ಹಣದ ಬಡ್ಡಿ, ಕಮಿಷನ್‌ಗಳನ್ನು ಆಗ ಲೆಕ್ಕಕ್ಕೆ ತೆಗೆದುಕೊಳ್ಳುತ್ತಾರೆ.

ಜೂನ್, ಜುಲೈ, ಆಗಸ್ಟ್ ತಿಂಗಳುಗಳಲ್ಲಿ season ಬಂದಾಗ ಸರಳ ಮುಂಗಡ ಕೊಟ್ಟು ಕೆಲವು ತೋಟಗಳನ್ನು ಹಿಡಿಯುತ್ತಾರೆ.

ಹುಂಡಿ (Lump sum): ಇಡೀ ತೋಟದ ಅಡಿಕೆಗೆ ಒಟ್ಟಿಗೆ ಬೆಲೆ ಅಂದಾಜು ಮಾಡಿ ಕರಾರು ಮಾಡಿಕೊಳ್ಳುವುದಕ್ಕೆ ಹುಂಡಿ ಎಂದು ಹೆಸರು.

ಎಣಿಕೆ (Counting): ಸಾವಿರಕ್ಕೆ ಇಷ್ಟು ಎಂದು ಕರಾರು ಮಾಡಿಕೊಳ್ಳುವುದು. ಮೊದಲು ಡಬ್ಬದಲ್ಲಿ ಅಳೆದು ಎಣಿಸಿ ಒಂದು ಅಂದಾಜು ಮಾಡಿಕೊಳ್ಳುತ್ತಾರೆ. ಮುಂದೆ ಡಬ್ಬದಲ್ಲಿ ತುಂಬಿ ಅಳೆದು ಗುಣಿಸಿಕೊಳ್ಳುತ್ತಾರೆ. ಪ್ರತಿ ೧೦೦೦ಕ್ಕೆ ಸೋಡಿಯಾಗಿ ೫೦ ಅಡಿಕೆ ಕಳೆಯುತ್ತಾರೆ.

ಕೊಯ್ಲು (Harvesting): ಸೆಪ್ಟೆಂಬರ್ ತಿಂಗಳಿನಲ್ಲಿ ಕೊಯ್ಲಿಗೆ ಪ್ರಾರಂಭವಾಗುತ್ತದೆ. ಈ ಕೊಯ್ಲು ಆದ ಮೇಲೆ ಗೊನೆ ಬಡಿದು ಅಳೆದು ಬಾಕಿ ಹಣ (ಕೊಡಬೇಕಿದ್ದರೆ) ಪಾವತಿ ಮಾಡಿ ಬರುತ್ತಾರೆ.

ಕೊಯ್ಲುದಾರರೂ ಆಳುಗಳೂ ಹೋಗಿ ಕೊಯ್ಲು ಮಾಡುತ್ತಾರೆ. ಸುಮಾರು ೩೦ ಮೂಟೆಯಿಂದ ೫೦ ಮೂಟೆವರೆಗೆ ಬೀಳುವ ಒಂದು ಎಕರೆ ಫಸಲನ್ನು ಒಂದು ದಿನದಲ್ಲಿ ಒಬ್ಬ ಕೊಯ್ಲುದಾರ ಕೆಡವುತ್ತಾನೆ.

ಕೊಯ್ಯುವಾಗ ಪಕ್ವವಾಗಿ ಬಲಿತದ್ದು ಮಾತ್ರ ಕೊಯ್ದು ಎಳಸನ್ನು ಮರುಕೊಯ್ಲಿಗಾಗಿ ಬಿಡುತ್ತಾರೆ. ಅದಕ್ಕಾಗಿ ಒಂದು ಅಡಿಕೆ ಕೊಯ್ದು ಬೀಳಿಸಿದ್ದನ್ನು ಅನುಭವಸ್ಥನು ಕೆಳಗೆ ಕತ್ತರಿಸಿ ನೋಡಿ ಕೆಡವಬಹುದೆ ಎಂಬುದನ್ನು ನಿರ್ಧರಿಸುತ್ತಾನೆ.

ಕೊಯ್ಲುದಾರನು ಗುದಿ ಕಟ್ಟಿಕೊಂಡು ಮರವನ್ನು ಹತ್ತಿ ಅದರ ಸುತ್ತಮುತ್ತಣ ೫-೬ ಮರಗಳ ಫಸಲನ್ನು ಜಲ್ಲೆಯ ಸಹಾಯದಿಂದ ಕೊಯ್ದು ಕೆಡವಿ ಇಳಿದು ಮುಂದಿನ ಮರ ಹತ್ತುತ್ತಾನೆ. ಅಥವ ಒಂದು ಮರ ಹತ್ತಿದ ಮೇಲೆ ಮರದಿಂದ ಮರಕ್ಕೆ ಹಾರಿ ಇಡೀ ತೋಟವನ್ನು ಕೊಯ್ಲು ಮಾಡಿದ ನಂತರವೇ ಇಳಿಯುತ್ತಾನೆ. ಮರ ಹತ್ತಿದ ಮೇಲೆ ಕೆಳಗಿನವರು ಜಲ್ಲೆಯನ್ನು ಅವನ ಕೈಗೆ ಕೊಡಬೇಕಾಗುತ್ತದೆ.

ಹಿಂದೆ ಸಂಕೇತಿಗಳು ಮಾತ್ರ ಈ ಸುತ್ತಿನಲ್ಲಿ ಅಡಿಕೆ ಕೊಯ್ಲು ಮಾಡುತ್ತಿದ್ದರು. ಇತರರು ಈಚೀಚೆಗೆ ಕಲಿತರು.

ರೇಖೆ: ಅಡಿಕೆಯನ್ನು ಕೆಡವಿ ಸುಲಿದು ಬೇಯಿಸಿ ಒಣಗಿಸಿ ವಿಂಗಡಿಸಿ ಮಾರಾಟಕ್ಕೆ ಸಿದ್ಧಮಾಡುವವರೆಗಿನ ಕೆಲಸಕ್ಕೆ 'ರೇಖೆ ಪಣ್ಣರದ್' (ರೇಖೆ ಮಾಡುವುದು) ಎನ್ನುತ್ತಾರೆ.

ಅಡಿಕೆ ರಾಶಿ

ಹಣ್ಣುಗೋಟು

ಬೆಟ್ಟ್ ಅಡಿಕೆ
(ಗಟ್ಟಿ ಅಡಿಕೆ, ಬೆಟ್ಟೆ ಹೋಳು)

ಹಸು
ಶುದ್ಧ ಕಳಿಗೆ ಆಗುವುದು

ನಯಬೆಟ್ಟೆ
ಕತ್ತಿಗೆ ಸಿಗುತ್ತದೆ

ಗೊರಬಲು ಅಡಿಕೆ = ಚಾತರ
ಹಸಿರಾಗಿರುತ್ತದೆ. ಆದರೆ
ಕತ್ತಿ ಬಾಯಿಗೆ ಸಿಗಲ್ಲ. ಕಣ್ಣು ಕಡೇಂದ ಬಿಡಿಸಿಬೆಟ್ಟ,
ಸರಕ್ ೨ ವಿಧ ಮಾಡುತ್ತಾರೆ

ಹಣ್ಣು ಗೋಟು
ತಳಿಲು

ಸಣ್ಣ ಹುಣುಬಲು
ಒಳ್ಳೆ ಬೆಲೆ
ಬಿಡಿಸಿದ ಮೇಲೆ

ಹಸುರುಗೋಟು
ಗೊರಬಲಿಗೆ ಬರುತ್ತದೆ. ಹಿಂದುಗಡೆಯಿಂದ
ಬಿಡಿಸಿ ೧೦೦೦ಕ್ಕೆ ಕೂಲಿ ನಿಗದಿ

ಹಸರು ಹುಣುಬಲು
ಮುಂದಿಂದಲೇ ಬಿಡಿಸುವರು
ಬೆಟ್ಟೆ ಜೊತೆಗೆ ಸೇರಿಸುವರು

ಮಂಡಿ (ಸಂಕೇತ): S = ಸರಕು B = ಬೆಟ್ಟ G = ಗೊರಬಲು SG = ಸರಕು+ಗರಬಲು = ಸಗಟು

ಪಾಕಾ ಉರಿಯರದ್ (ಅಡಿಕೆ ಎಡೆಯುವುದು): ತೋಟದಲ್ಲಿ ಕೊಯ್ಲು ಮಾಡಿದ ಅಡಿಕೆಯನ್ನು ಗಾಡಿಗಳಲ್ಲಿ, ಇತ್ತೀಚೆಗೆ ಟೆಂಪೊ, ಲಾರಿಗಳಲ್ಲಿ ಸಾಗಿಸಿಕೊಂಡು ಬಂದು ತುಡಿಕೆ ಮನೆಯಲ್ಲಿ ದಂಡೆ ಹಾಕುತ್ತಾರೆ. ಹಗಲು ತೋಟದ ಕೊಯ್ಲಾದರೆ ರಾತ್ರಿ ಹೊತ್ತಿಗೆ ಮನೆಯಲ್ಲಿ ದಂಡೆ ಹಾಕಿರುತ್ತಾರೆ.

ಹೆಂಗಸರು ಮುಂಜಾನೆ ಐದು ಘಂಟೆಯಿಂದ ಆರು ಘಂಟೆ ಹೊತ್ತಿಗೆ ಬಂದು ಅಡಿಕೆ ಸುಲಿಯುತ್ತಾರೆ. ಅದಕ್ಕಾಗಿ ಹರಿತವಾದ ಕತ್ತಿ, ಮಸೆಗೋಲು ಸಿದ್ಧಮಾಡಿಕೊಂಡಿರುತ್ತಾರೆ. ಸಂಜೆಯವರೆಗೂ ಅವಿರತವಾಗಿ ಸುಲಿದು ರಾತ್ರಿ ಚಾಪೆಯ ಮೇಲೆ ಅದನ್ನೆಲ್ಲಾ ಅರ್ಧಕ್ಕೆ ಉತ್ತರಿಸಿ ಹಾಕುತ್ತಾರೆ. ಅಳತೆ ಮಾಡಿ ತಕ್ಕ ಕೂಲಿಯನ್ನೂ ಪಡೆಯುತ್ತಾರೆ.

ಹೀಗೆ ಅಡಿಕೆ ಸುಲಿಯುವವರು ಕತ್ತಿಯ ಬಾಯಿಗೆ ಸಿಗದ (ಬಿಡಿಸಲಾಗದ) ಅಡಿಕೆಯನ್ನೆಲ್ಲಾ ಒಂದು ಕುಕ್ಕೆಗೆ ತುಂಬಿ 'ಹಸು' ಅಡಿಕೆಯನ್ನು ಮಾತ್ರ ಬಿಡಿಸಿ ಸಂಜೆ ಕಳಿಹೋಳು ಮಾಡುತ್ತಾರೆ.

ಹಸಿ ಅಡಿಕೆ, ಗೋಟು, ಚಾತರ, ಬಟ್ಟಲು ಹೀಗೆ ಅಡಿಕೆ ಸುಲಿದ, ಉತ್ತರಿಸಿದ ಕೆಲಸಕ್ಕೆ ಬೇರೆ ಬೇರೆ ಮೊತ್ತದ ಕೂಲಿ ನಿಗದಿಯಾಗಿರುತ್ತದೆ.

ಇತ್ತೀಚಿನವರೆಗೂ ಸಂಕೇತಿಗಳೇ ಈ ಎಲ್ಲ ಕೆಲಸ ಮಾಡಿಕೊಳ್ಳುತ್ತಿದ್ದರು. ಎಲ್ಲರ ಮನೆಯಲ್ಲೂ ಬೆಳೆ ಆಗುತ್ತಿತ್ತು. ಆಗ ಮುಯ್ಯಿ ಪದ್ಧತಿ ಇತ್ತು. ಇತ್ತೀಚೆಗೆ ಇತರರೂ ಅದಕ್ಕಾಗಿ ಬರುತ್ತಾರೆ.

ಬೇಯಿಸುವುದು: ಸೌದೆ ಉಳಿತಾಯವಾಗಲೆಂದೂ, ಅಗಾಧ ಪ್ರಮಾಣದ ಅಡಿಕೆಯನ್ನು ಬೇಗ ಬೇಯಿಸಿ ಮುಗಿಸುವುದಕ್ಕಾಗಿಯೂ ಒಂದೇ ಒಲೆಯ ಮೇಲೆ ಎರಡು ಹಂಡೆಗಳನ್ನು ಹೂಡಿರುತ್ತಾರೆ.

ಮತ್ತೊಂದು ಕಡೆ ಗಂಧ, ನೇರಿಳೆ, ಬೇಲದ ಚಕ್ಕೆಗಳ ರಸಕ್ಕೆ ಕೆಲವು ಇತರ ಪದಾರ್ಥಗಳನ್ನು ಸೇರಿಸಿ ಕಾಯಿಸಿ ಕುದಿಸಿ 'ತೊಗರು' (ಬಣ್ಣ) ತಯಾರಿಸಿ ಇಟ್ಟುಕೊಂಡಿರುತ್ತಾರೆ. ಹಿಂದಿನಿಂದಲೂ ಇದು ಪದ್ಧತಿಯಲ್ಲಿದೆ.

ಉತ್ತರಿಸಿದ ಅಡಿಕೆಯನ್ನೂ ತೊಗರನ್ನೂ ಬೆರಸಿ ಹಂಡೆಯಲ್ಲಿ ಕುದಿಸುತ್ತಾರೆ. ಕಣ್ಣು ಬಿಡುವವರೆಗೆ, ತೊಗರನ್ನು ಎತ್ತಿದರೆ ನೂಲು ಬೀಳುವವರೆಗೆ ಕುದಿಸುತ್ತಾರೆ. ಅದೇ 'ಹದ'. ದೊಡ್ಡ ಜಾಲರಿ ಸೌಟುಗಳನ್ನು ಹಂಡೆಯಿಂದ ಅಡಿಕೆ ತೋಡಿ ತೊಗರು ಸೋರಿಸುತ್ತಾರೆ. ಅಡಿಕೆಯನ್ನು ಹಂಡೆಯಿಂದ ಎತ್ತಿದ ತಕ್ಷಣ ಬಿಸಿಲಿಗೆ ಹಾಕಿ ಒಣಗಿಸಬೇಕು. ಅದಕ್ಕಾಗಿ ದೊಡ್ಡ ಬಯಲಿನಲ್ಲಿ ಈಚಲು ಚಾಪೆಗಳನ್ನು ಹಾಕಿ ಸಿದ್ಧ ಮಾಡಿರುತ್ತಾರೆ. ಚೆನ್ನಾಗಿ ಬಿಸಿಲಿದ್ದರೆ ಅಂಟು ಹಿಡಿಸಿ ಅಡಿಕೆಗೆ ಹೊಳಪು ಬರುತ್ತದೆ. ಬಿಸಿಲಿಲ್ಲದಿದ್ದರೆ ಅಡಿಕೆಯ ಬಣ್ಣ ಮಂಕಾಗುತ್ತದೆ.

ಹೀಗೆ ನಾಲ್ಕು ಒಳ್ಳೆಯ ಬಿಸಿಲಿನಲ್ಲಿ ಅದು ಒಣಗಬೇಕು. ಮಾಳದಿಂದ ತುಂಬಿ ಒಳಕ್ಕೂ ಮತ್ತೆ ಒಯ್ದು ಮಾಳಕ್ಕೂ ಸಾಗಿಸಿ ಚಾಪೆಗಳ ಮೇಲೆ ಹರವಬೇಕು. ಮೋಡ ಮುಸುಕುತ್ತಿದ್ದರೆ ಹೆಚ್ಚು ದಿನ ಹೀಗೆ ಮಾಡಬೇಕಾಗುತ್ತದೆ.

೧೯೫೬ರಲ್ಲಿ ಮೊದಲ ಬಾರಿಗೆ ಕೇರಳದ ಕಾಕರ ಸಂಪರ್ಕದಿಂದಾಗಿ *ಬೇರಿನ್‌ಗಳು* ಬಸವಾಪಟ್ಟಣಕ್ಕೆ ಬಂದುವು. ನಾಲ್ಕು ಗೋಡೆಗಳ ನಡುವಿನ ನೆಲದಲ್ಲಿ ಒಂದು ಅಡಿ ಗುಂಡಿ ತೆಗೆದು ಕೆಂಡ ಮಾಡಿರುತ್ತದೆ. (ಉರಿಯಬಾರದು; ಕೇವಲ ಕೆಂಡವಾಗಬೇಕು). ಒಂದು ಗೋಡೆಯಲ್ಲಿ ಕೆಂಡ ಊಡಲು ಬಾಗಿಲಿರುತ್ತದೆ. ಗೋಡೆಗಳ ಮೇಲೆ ಎರಡು ಅಡಿಗೆ ಒಂದರಂತೆ ಬಿಟ್ಟೆಗಳನ್ನು ಜೋಡಿಸಿರುತ್ತದೆ. ಅದರ ಮೇಲೆ ಅರ್ಧ ಇಂಚಿಗೆ ಒಂದರಂತೆ ಅಡಿಕೆ ಡಬ್ಬೆಗಳನ್ನು ಹಾಸಿರುತ್ತದೆ. ಅದರ ಮೇಲೆ ವಾಟೆ ಬಿದಿರು ತಟ್ಟಿ ಹಾಸಿರುತ್ತದೆ. ಅದು ಶಾಖವನ್ನು ಅಡಿಕೆಗೆ ವರ್ಗಾಯಿಸುತ್ತದೆ. ಬೇರೆ ಬಿದಿರಾದರೆ ಹೊತ್ತಿಕೊಂಡು ಉರಿಯುತ್ತದೆ. ಸೋನೆ, ಮೋಡ ಮುಸುಕಿದ ವಾತಾವರಣದಲ್ಲಿ ಅನಿವಾರ್ಯವಾದಾಗ ಅಡಿಕೆಯನ್ನು ಈ ಬೇರಿನ್‌ಗಳಲ್ಲೇ ಬೇಯಿಸುತ್ತಾರೆ. ಅಡಿಕೆ ತುಸು ಕಪ್ಪು ಬರುತ್ತದೆ.

೪ ದಿನ ಒಣಗಿಸುವ ಹೊತ್ತಿಗೆ ಅಡಿಕೆ 'ಒಣಪುಡಿ' ಆಗಿರುತ್ತದೆ.

Grading: ಒಣಗಿದ ಅಡಿಕೆಯನ್ನು ಒಂದೆಡೆ ರಾಶಿ ಹಾಕಿ ಗ್ರೇಡಿಂಗ್ ಮಾಡಿಸುತ್ತಾರೆ. ಹಾಗೆ ಮಾಡುವವರಿಗೆ ಮೂಟೆಗೆ ಇಷ್ಟೆಂದು ಕೂಲಿ ನಿಗದಿಯಾಗುತ್ತದೆ.

೧) ಸಿಪ್ಪೆ, ಕಸ ಅಂಟಿರುವ ಅಡಿಕೆ

೨) ಬೆಟ್ಟೆ (ಗಟ್ಟಿ)

೩) ಕಳಿಪಾಕ್ (ಹಸು, ಸರಕ್, ಕಳಿ)

- ಹೀಗೆ ಮೂರು ರೀತಿಯಾಗಿ ಅಡಿಕೆಯನ್ನು ವಿಭಾಗ ಮಾಡಿರುತ್ತಾರೆ. ಈಗ ಅಡಿಕೆ ಮಾರಾಟಕ್ಕೆ ಸಿದ್ಧವಾಗುತ್ತದೆ.

ಗೊರಬಲು: ಗೊರಬಲು ಗೋಟನ್ನು ಹಿಂದುಗಡೆಯಿಂದ ಸುಲಿಯುತ್ತಾರೆ. ಸುಮಾರು ೪೦ ವರ್ಷಗಳ ಹಿಂದೆ ಕೇವಲ ಚಾತರವನ್ನೇ ಮಾಡಿಸುತ್ತಿದ್ದುದು. ಹೀಗೆ ಸುಲಿದ ಗೊರಬಲನ್ನು ನಾಲ್ಕು ಭಾಗ ಮಾಡಿ ಉತ್ತರಿಸಿದ್ದು ಚಾತರ. ಹಿಂದೆ ಎಳೆಯಕಾಯಿ ಕೆಡವಿಸಲೇಬಾರದೆಂಬ ಕಟ್ಟೆಚ್ಚರ ವಹಿಸುತ್ತಿದ್ದರು. ತಲೆ ಹಾಗೆ ಗಟ್ಟಿ ಇರಬೇಕು ಕಾಯಿ ಎನ್ನುತ್ತಿದ್ದರು.

ಬಟ್ಟಲು ಅಡಿಕೆ ಇತ್ತೀಚೆಗೆ ಶುರುವಾಗಿದೆ.

ಗೋಟು: ಹಣ್ಣಾದ ಗೋಟನ್ನು ೪೦ ದಿನ ಒಳ್ಳೆ ಬಿಸಿಲಿಗೆ ಕೊಟ್ಟು ಒಣಗಿಸುತ್ತಾರೆ. ಅಷ್ಟು ಹೊತ್ತಿಗೆ ಕೊಬ್ಬರಿಯ ರೀತಿ ಅದು ಒಣಗುತ್ತದೆ. ಇದರಲ್ಲಿ ಎರಡು ವಿಧ ಮಾಡುತ್ತಾರೆ.

1) ಸಿಪ್ಪೆ ಅಂಟಿರುವ ಬಿಳಿಗೋಟು. ಅದು ಬೆಂಡಾಗಿರುತ್ತದೆ. ಕೊಬ್ಬರಿಯಂತೆ ಅಳ್ಳಾಡದಿದ್ದಾಗಲೇ ಗೋಟು ಕೆಟ್ಟಿರುವುದರ ಅರಿವಾಗುತ್ತದೆ. ಬೆಲೆ ಇಲ್ಲ.

2) ಚೆನ್ನಾಗಿ ತಳಿಲಾಗಿ ಅಳ್ಳಾಡುವುದು 'ಚಾಲಿ' ಅಡಿಕೆ. ಬೆಲೆ ಹೆಚ್ಚು.

ಸಣ್ಣ ಹುಣುಬಲು: ಅದಕ್ಕೆ ಲಿಂಡಿ ಎಂದು ಹೆಸರು. ಅಡಿಕೆ ಸುಲಿಯುವವರು ಇವು ಸಣ್ಣಗಿರುವುದರಿಂದ ಕೂಲಿಗೆ ಮೋಸವೆಂದು ಗೋಟಿನ ಜೊತೆ ಬೆರೆಸಿರುತ್ತಾರೆ. ಇದಕ್ಕೂ ಒಳ್ಳೆಯ ಬೆಲೆ ಉಂಟು.

ಉರುವಲು: ಹಿಂದೆ ಗೊದಮಟ್ಟೆಗಳನ್ನೇ ಬಳಸಿ ಅಡಿಕೆ ಬೇಯಿಸುತ್ತಿದ್ದರು. ಮುಂದೆ ಮರ ಕೊಯ್ಯಿಸಿ ಇಟ್ಟುಕೊಳ್ಳುವುದೂ ನಡೆಯಿತು. ಈಗ ಮರವನ್ನೇ ಪ್ರಧಾನವಾಗಿ ಬಳಸುತ್ತಾರೆ. ಇತ್ತೀಚೆಗೆ ಜಳ್ಳು, ಅಡಿಕೆ ಸಿಪ್ಪೆಗಳ ಒಲೆಗಳನ್ನು ಮಾಡಿಸಿ ಅವನ್ನೂ ಬಳಸುತ್ತಿದ್ದಾರೆ.

ಅಡಿಕೆ ಸಿಪ್ಪೆ: ಹಿಂದೆ ಅಡಿಕೆ ಸಿಪ್ಪೆಯನ್ನು ತಿಪ್ಪೆಗೆ ಸುರಿಯುತ್ತಿದ್ದರು. ಮುಂದೆ ಅದನ್ನು ತೋಟವಿಲ್ಲದವರು ಉರುವಲಾಗಿ ಬಳಸತೊಡಗಿದರು. ಈಗ ಮೂಟೆಗೆ ಐದು ರೂ.ನಂತೆ ಒಣಸಿಪ್ಪೆ ಮಾರಾಟವಾಗುತ್ತಿದೆ.

ಮಾರುಕಟ್ಟೆ: ಶಿವಮೊಗ್ಗ ಮಂಡಿಗೆ ಈ ಸರಕನ್ನು ಲಾರಿಗಳಲ್ಲಿ ಸಾಗಿಸಲಾಗುತ್ತದೆ. ಮಂಡಿಯವನು ಅದನ್ನು ತೂಗಿ ಬಿಲ್ ಕೊಡುತ್ತಾನೆ. ಅಲ್ಲಿಗೆ ವ್ಯಾಪಾರಕ್ಕೆ ಬಿಟ್ಟ ಹಾಗೆ ಆಯಿತು. ಮಂಡಿಯವರು, ಮಾರುವವನ ಇಚ್ಛೆಯಂತೆ, ಸೂಚಿಸಿದ ದಿನ ಮಾರುತ್ತಾರೆ. ಮತ್ತೆ ಕೂಗಿ ಅದರಂತೆ ಹಣ ಪಾವತಿ ಮಾಡುತ್ತಾರೆ, ಕೊಂಡವನು ಮಂಡಿಯವನಿಗೆ ಹಣ ಕೊಡುವ ಮುಂಚೆಯೇ ಮಂಡಿಯವನು ಈ ಸಂದಾಯ ಮಾಡುವುದರಿಂದಾಗಿಯೂ ದಳ್ಳಾಳಿ ಹಣ ಪಡೆಯುತ್ತಾನೆ.

ಮಾರುವವನು ಮಂಡಿಯಲ್ಲಿ ಬಿಟ್ಟ ಮೇಲೆ ಮಾರುಕಟ್ಟೆಯಲ್ಲಿ ಒಳ್ಳೆಯ ಬೆಲೆ ಬರುವವರೆಗೆ ಕಾಯಲಾಗದೆ ಅಥವಾ ತಿಳಿವಳಿಕೆ ಇಲ್ಲದೆ ಆತುರದಲ್ಲಿ ಮಾರಿ ನಷ್ಟ ಅನುಭವಿಸುತ್ತಿದ್ದುದೂ ಉಂಟು. ಹಳ್ಳಿಗಳ ಕೆಲ ಧನಿಕರು ತುಡುಕೆದಾರರಿಗೆ ಮೊದಲೇ ಹಣ ಸಾಲ ಕೊಟ್ಟು ದುರ್ಲಾಭ ಪಡೆಯುತ್ತಿದ್ದುದೂ ಉಂಟು. ಕೊನೆಯ ಪಕ್ಷ ಆರು ವರ್ಷದಿಂದೀಚೆಗೆ grams reporter (S.M. Edn., MR Edn. etc) ಪ್ರಯೋಜನ ಪಡೆಯುವ ಮಟ್ಟಿಗೆ *ಸಂಕೇತಿ ರೈತ ಪ್ರಬುದ್ಧನಾಗಿದ್ದಾನೆ.*

ಆ. ಹಾಸನ


(ಹಳ್ಳಿಯಲ್ಲಿ ಹುಟ್ಟಿ ಬೆಳೆದು, ಕೃಷಿ ಸಂಸ್ಕಾರವನ್ನೂ ಪಡೆದು, ಶಿಕ್ಷಿತರಾಗಿ ಪಟ್ಟಣದಲ್ಲಿ ನೆಲೆಗೊಂಡು, ಸರ್ಕಾರಿನೌಕರಿ ಮಾಡುವವರ ಪ್ರತಿನಿಧಿಗಳಾಗಿ ಹಾಸನದ ಇಬ್ಬರು ಗೃಹಸ್ಥರನ್ನು ಸಂದರ್ಶಿಸಲಾಯಿತು. ಇಬ್ಬರೂ ಐವತ್ತು ವರ್ಷದ ಗಡಿಯವರು, ಇಬ್ಬರೂ ೨೦ನೆಯ ಶತಮಾನದ ಆರನೆಯ ದಶಕದ ಹಳ್ಳಿಯ ನೆನಪು ಹೊತ್ತವರು.)

೦.೧) ಲಕ್ಷ್ಮೀಶ ಎಚ್.ಎಂ. (೫೩, ಹಳ್ಳಿಮೈಸೂರು)

'ಅಮೃತವರ್ಷಿಣಿ', ಮೊದಲ ಮುಖ್ಯರಸ್ತೆ, ಶಾಂತಿನಗರ, ಹಾಸನ. ದೂ.:೨೫೩೩೪೪

೧೯೫೫-೬೫ರ ಅವಧಿಯಲ್ಲಿ ಹಳ್ಳಿಮೈಸೂರಿನಲ್ಲಿ ೪೦-೪೨ ಸಂಕೇತಿ ಕುಟುಂಬಗಳಿದ್ದವು. ಕಮ್ಮೆ-ಕರ್ನಾಟಕರ ನಾಲ್ಕು-ಐದು ಕುಟುಂಬಗಳಿದ್ದವು. ಎಲ್ಲರಿಗೂ ತೋಟವಿತ್ತು. ಎಲ್ಲರ ಮನೆಯಲ್ಲೂ ಮೂರು-ನಾಲ್ಕರಿಂದ ಹಿಡಿದು ೮-೧೦ ಮಕ್ಕಳಿರುತ್ತಿದ್ದವು. ಸಂತರ್ಪಣೆ ಮಾಡುವವರು ಯೋಚಿಸಬೇಕಾಗುತ್ತಿತ್ತು. ಊಟಕ್ಕೆ ೨೦೦-೨೫೦ ಎಲೆ ಆಗುತ್ತಿತ್ತು. ಆಗೆಲ್ಲಾ ಮೂರು ದಿನದ ವಿವಾಹ; ಬೀಗರ ಔತಣವೂ ಸೇರಿ ನಾಲ್ಕು ದಿನ. ಊರಿನಲ್ಲಿ ಬಡತನ ಬೇರೆ. ಹಾಗಾಗಿ 'ಮನೆಗೊಬ್ಬರನ್ನು ಕರೆಯುವ' ರೂಢಿ ಇಟ್ಟುಕೊಂಡಿದ್ದರು. ಈಗ ಜನರು ಕಡಮೆ; ಅಂಥ ಬಡತನ ಇಲ್ಲ.' ಊರಿಯೆಲ್ಲಾ' (ಎಲ್ಲರ ಮನೆಯಲ್ಲಿ ಎಲ್ಲರನ್ನೂ) ಕರೆಯುವ ರೂಢಿ ಇಟ್ಟುಕೊಂಡಿದಾರೆ.

ಲಕ್ಷ್ಮೀಶ ಅವರ ವಂಶವೃಕ್ಷ



ಲಕ್ಷ್ಮೀಶ ಅವರು ತಮ್ಮ ಪೂರ್ವಿಕರ ಬಗೆಗೆ ಹೇಳಿದ್ದು:

ನಮ್ಮ ಮುತ್ತಜ್ಜ ನಾಟಂಪಳ್ಳಿಗೆ ದತ್ತುವಾಗಿ ಹೋಗಿದ್ದರು. ಅವರ ಜಮೀನೆಲ್ಲಾ ಅಲ್ಲೇ ಇತ್ತು. ಸ್ವಾತಂತ್ರ್ಯ ಬಂದ ಕಾಲಕ್ಕೆ ನಮ್ಮ ವಂಶದಲ್ಲಿ ಕುಪ್ಪಳ್ಳಿ ಗೌರಮ್ಮ ಎಂಬುವವರು ಬಾಲವಿಧವೆಯಾಗಿ ನರ್ಸ್ ಆಗಿ ಸೇವೆ ಸಲ್ಲಿಸಿದರು. ನಮ್ಮ ಅಜ್ಜ ಕೇಶವಯ್ಯನವರಿಗೆ ಬಹಳ ಕಾಲ ಮಕ್ಕಳಾಗಿರಲಿಲ್ಲ, ಧರ್ಮಸ್ಥಳದ ಮಂಜುನಾಥಸ್ವಾಮಿಗೆ ಹರಸಿಕೊಂಡರು, ಮಗುವಾಯಿತು; 'ಮಂಜುನಾಥ' ಎಂದೇ ಹೆಸರಿಟ್ಟರು. (ನಮ್ಮ ಅಜ್ಜ ಬೇಗ ಸತ್ತುದರಿಂದ ನಮ್ಮ ತಂದೆಯವರನ್ನು ಸೋಮನಹಳ್ಳಿಯ ಸೋದರತ್ತೆಯವರೇ ಸಾಕಿದರು.) ನಮ್ಮ ತಂದೆ ಮಂಜುನಾಥಯ್ಯನವರಿಗೆ ಒಂದು ಎಕರೆ ತೋಟ ಇತ್ತು. ನಾಟಂಪಳ್ಳಿಯ ನಮ್ಮ ವಂಶದ ಜಮೀನನ್ನು ಬಂಧುಗಳು ನೋಡಿಕೊಳ್ಳುತ್ತಿದ್ದರು, ವರ್ಷಕ್ಕೆ ಎರಡು ಗಾಡಿ ಬತ್ತ ಕಳಿಸಿಕೊಡುತ್ತಿದ್ದರು. ನಮ್ಮ ತಾಯಿ ಸರಸ್ವತಮ್ಮನವರು ಅಗ್ರಹಾರದಲ್ಲಿ ಈಶ್ವರ ದೇವಸ್ಥಾನ ಕಟ್ಟಿಸಿದ ಶ್ರೀನಿವಾಸಯ್ಯ ಅವರ ಮಗಳು. ನಮ್ಮ ಬಡತನ ತೀವ್ರವಾಗಿತ್ತು. ನಮ್ಮ ತಂದೆಗೆ ಐದು ಗಂಡು, ಮೂರು ಹೆಣ್ಣು ಮಕ್ಕಳು. ಎಲ್ಲರನ್ನೂ ಓದಿಸಿದರು. ಬಡತನದ ಕಾರಣಕ್ಕಾಗಿಯೇ ನಮ್ಮ ಮನೆಯಲ್ಲಿ ಎರಡು ಮದುವೆ 'ಕೊಟ್ಟು-ತಂದು' ಆಯಿತು. ಬೇರೆ ಬೇರೆ ಮಕ್ಕಳ ಉಪನಯನ, ವಿವಾಹ, ಚೌಲಗಳನ್ನು ಕೂಡಿಸಿಯೇ ಮಾಡುವುದು ಎಲ್ಲರಲ್ಲೂ ರೂಢಿಯಲ್ಲಿತ್ತು.

ನಿಮಗಿದ್ದ ಜೀವನಾಧಾರ?

ನಮಗೆ ಒಂದು ಎಕರೆ ತೋಟವಿತ್ತು; ಊಟಕ್ಕೆ ೧೦ ಜನ ಇದ್ದೆವು. ನಾವು ಚೆನ್ನಾಗಿ ಊಟ ಮಾಡುತ್ತಿದ್ದುದು ಹಬ್ಬ ಹರಿದಿನಗಳಲ್ಲಿ. ಅಂಥದರಲ್ಲಿ ಎಲ್ಲ ತೋಟದಲ್ಲೂ ಕಳ್ಳತನ ಬೇರೆ ಆಗುತ್ತಿತ್ತು. 'ಚಡ್ಡಿ ಕಳ್ಳ' ಎಂಬುವವನು ಕುಖ್ಯಾತನಾದ ಕಳ್ಳನಾಗಿದ್ದ.

ನೀವು ಜಮೀನಿನಲ್ಲಿ ಕೆಲಸ ಮಾಡಿದ್ದುಂಟ?

ನಾನು ೧೨ ವರ್ಷದವನಾಗಿದ್ದಾಗಲೇ ತೋಟದಲ್ಲಿ ಕೆಲಸ ಮಾಡಲು ಹೋಗುತ್ತಿದ್ದೆ. ಬೆಳಗ್ಗೆ ಹೋಗಿ ಹಂಬಿಗೆ ನೀರು ಹಾಕುತ್ತಿದ್ದೆ. ಅಡಿಕೆ

ಎಡೆಯುವುದು ಚೆನ್ನಾಗಿ ಬರುತ್ತಿತ್ತು. ಎಸ್.ಎಸ್.ಎಲ್.ಸಿ. ಆಗಿ ನಗರಕ್ಕೆ ಓದಲು ಹೋಗುವವರೆಗೂ ಅದನ್ನು ಮಾಡುತ್ತಿದ್ದೆ. ಏಕೆಂದರೆ ೨-೩ ತಿಂಗಳ ಆ ದುಡಿಮೆಯಿಂದ ಮನೆಗೆ ಹೆಚ್ಚಿನ ಗಳಿಕೆ ಆಗುತ್ತಿತ್ತು (ಅಕ್ಟೋಬರ್-ನವಂಬರ್-ಡಿಸೆಂಬರ್) ತಂದೆಯವರು ವೀಳೆದೆಲೆ ಬಿಡಿಸೋರು. ನಾವು ಮಕ್ಕಳು ಹಳ್ಳಿಮೈಸೂರು, ದೊಡ್ಡಳ್ಳಿ ಸಂತೆಗಳಿಗೆ ನಡೆದುಕೊಂಡು ಹೋಗಿ ಅದನ್ನು ಮಾರಿ ಬರುತ್ತಿದ್ದೆವು. ಹೊಳೆನರಸೀಪುರದ ಸಂತೆಗೆ ಹೋದುದೂ ಉಂಟು. ತೆಕ್ಕೆ ಬಿಡೋದು, ಅಗತೆ ಮಾಡೋದು ಇಂಥ ಕೆಲಸಗಳಲ್ಲಿ ಅಪ್ಪನಿಗೆ ನೆರವಾಗುತ್ತಿದ್ದೆವು. ನಮ್ಮ ತಾಯಿ ರಾತ್ರಿ ಅಡಕೆ ಹೋಳು ಮಾಡಲು ತುಡಿಕೆಗೆ ಹೋಗುತ್ತಿದ್ದರು. ಆಗಲೇ ನಾವೆಲ್ಲ ಓದಿಕೊಳ್ಳುತ್ತಿದ್ದೆವು. ಅಮ್ಮ ಮನೆಗೆ ಬಂದ ಮೇಲೆ ತಂದೆಯವರ ಜತೆ ತೋಟಕ್ಕೆ 'ಕಾವಲು' ಮಾಡಲು ಹೋಗುತ್ತಿದ್ದೆವು. ಆದರೂ ಉದ್ದಕ್ಕೂ ಇಡೀ ತರಗತಿಗೆ ನಾನೇ ಫಸ್ಟ್ ಬರುತ್ತಿದ್ದೆ.

ಹಸು ಸಾಕಿದ್ದಿರಾ?

ಹಾಲಿಗಾಗಿ ೨-೩ ಹಸು, ಒಂದು ಎಮ್ಮೆ ಯಾವಾಗಲೂ ಇರುತ್ತಿತ್ತು. ಮೇಯಿಸಲು ೨ ಕಿ.ಮೀ. ದೂರದ ಮಲ್ಲಿಗನಹಳ್ಳಿಗೆ ಅಟ್ಟಿ ಬರುತ್ತಿದ್ದೆವು. ನನಗೆ ಬ್ಯಾಡ್ಮಿಂಟನ್ ಹುಚ್ಚು. ಬೆಳಗ್ಗೆ ಒಮ್ಮೆ ದನಗಳನ್ನು ಅಟ್ಟಿ ಬಂದವನು, ಶಾಲೆಯಿಂದ ನೇರವಾಗಿ ಹಳ್ಳಿಗೆ ಹೋಗಿ ವಾಪಸು ಅಟ್ಟಿಕೊಂಡು ಬರುತ್ತಿದ್ದೆ.

ಆಗೆಲ್ಲ ಕ್ಲಬ್ ಸ್ಪೆಷಲ್ ಬ್ಯಾಟ್‌ಗೆ ೪-೫ ರೂ. ಆಗೋದು. ತಿಂಗಳುಗಟ್ಟಲೆ ಹೋರಾಟ ಮಾಡಿದ ಮೇಲೆ ಒಂದು ಬ್ಯಾಟು ತೆಕ್ಕೊಟ್ಟಿದ್ದರು. ಅಂಥ ಬಡತನ (ಕಾಲೇಜಿನಲ್ಲೂ ಬಾಲ್‌ಬ್ಯಾಡ್‌ಮಿಂಟನ್ ಟೀಮಿನ ಕ್ಯಾಪ್ಟನ್ ಆಗಿದ್ದೆ. ಅಂತರ ಕಾಲೇಜು ಪಂದ್ಯಾವಳಿಗಳಲ್ಲಿ ಭಾಗವಹಿಸುತ್ತಿದ್ದೆ).

ನಿಮ್ಮೂರಿನ ಬಗ್ಗೆ ಹೇಳಿ?

ತೋಟದಲ್ಲಿ ಬೆಳೆಯುತ್ತಿದ್ದುದು ತೆಂಗು, ಬಾಳೆ, ವೀಳೆ. ಆಗ ವೀಳೆಎಲೆಗೆ ಅಂಥ ಬೆಲೆ ಇರಲಿಲ್ಲ. ಸಂತೆಗೆ ಹೋಗಿ ಬಂದ ಖರ್ಚೂ ಹುಟ್ಟುತ್ತಿರಲಿಲ್ಲ. ನಮ್ಮೂರಲ್ಲಿ ೬೦ ಬ್ರಾಹ್ಮಣರ ಪೈಕಿ ಹಣವಿದ್ದವರು ಇಬ್ಬರು ಮಾತ್ರ. ಉಳಿದವರೆಲ್ಲ ಬಡತನದ ರೇಖೆಗಿಂತ ಕೆಳಗಿದ್ದವರೇ. ಆದರೂ ಸುತ್ತಮುತ್ತ ಎಲ್ಲ ಗ್ರಾಮಕ್ಕಿಂತ ನಮ್ಮೂರಲ್ಲಿ ರಾಮೋತ್ಸವ ಚೆನ್ನಾಗಿ ನಡೆಯುತ್ತಿತ್ತು. ಮೊದಲು ಕರಂಟ್ ಬಂದದ್ದು ನಮ್ಮೂರಿಗೆ, ಮೊದಲು ಹೈಸ್ಕೂಲು ಬಂದದ್ದು ನಮ್ಮೂರಿಗೆ. ಹಾಗಾಗಿ ನಮ್ಮಲ್ಲಿ ವಿಜೃಂಭಣೆ ಹೆಚ್ಚು. ಸೋಮನಹಳ್ಳಿಯವರು ನಮಗಿಂತ ಬಡತನದಲ್ಲಿದ್ದರು, ನಮಗಿಂತ ಕಷ್ಟಪಡುತ್ತಿದ್ದರು.

ನೀವೀಗ ದೂರವಾಣಿ ಕೇಂದ್ರದಲ್ಲಿದ್ದೀರಿ?

'ಸ್ಕಾಲರ್‌ಷಿಪ್ ತೊಗೊ, ಓದು, ಇಲ್ಲದಿದ್ದರೆ ಸೀದಾ ಊರಿಗೆ ಬಾ' ಎಂದು ಹೇಳಿಯೇ ಅಪ್ಪ ಕಾಲೇಜಿಗೆ ಸೇರಿಸಿದ್ದರು. ಸ್ಕಾಲರ್‌ಷಿಪ್ ತೊಗೊಂಡೇ, ಓದಿದೆ. ಪ್ರಾಥಮಿಕ ಶಿಕ್ಷಣ ಚೆನ್ನಾಗಿದ್ದುದರಿಂದ ಅದು ಸಾಧ್ಯವಾಯಿತು. ಬಿ.ಇ. ಅಥವ ಎಂ.ಎಸ್‌ಸಿ. ಓದುವ ಆಸೆ ಇತ್ತು. ತಮ್ಮಂದಿರೆಲ್ಲ ಓದಬೇಕಾಗಿತ್ತು. ಅಂಚೆ ತಂತಿ ಇಲಾಖೆಗೆ ಕೆಲಸಕ್ಕೆ ಸೇರಿದೆ. ಇಲಾಖೆಯ ಪರೀಕ್ಷೆಗಳನ್ನು ಮಾಡಿಕೊಂಡು ಗುಮಾಸ್ತನ ಹುದ್ದೆಯಿಂದ ಸಬ್‌ಡಿವಿಷನಲ್ ಎಂಜಿನಿಯರ್ ಹುದ್ದೆಯವರೆಗೆ ಬಂದಿದ್ದೇನೆ. ಈಗ ಸಕಲೇಶಪುರ ತಾಲ್ಲೂಕಿನ ದೂರವಾಣಿಯ ಪೂರ್ಣ ಜವಾಬ್ದಾರಿ ನನ್ನ ಮೇಲಿದೆ.

ನಿಮ್ಮ ತಂದೆ-ತಾಯಿ ಸಂಸಾರವನ್ನು ಹೇಗೆ ನಿಭಾಯಿಸಿದರು?

ತಂದೆಯವರೂ ಎಲ್.ಎಸ್. ಓದಿದ್ದರು. ಪ್ರಾಥಮಿಕ ಶಾಲಾ ಉಪಾಧ್ಯಾಯನ ಕೆಲಸ ಸಿಕ್ಕಿತ್ತು. ಒಬ್ಬನೇ ಮಗ, ಅವರ ತಂದೆ ಸತ್ತಿದ್ದರು, ತೋಟದ ಮೇಲಿನ ಆಸೆಯೂ ಇತ್ತು. ಕೆಲಸಕ್ಕೆ ಹೋಗಲಿಲ್ಲ. (ಅವರಿಗೆ ೧೬ ವರ್ಷ ಆಗುವವರೆಗೂ ಸೋಮನಹಳ್ಳಿಯ ಅತ್ತೆ ನಿತ್ಯವೂ ಹಳ್ಳಿಮೈಸೂರಿಗೆ ನಡೆದು ಬರುತ್ತಿದ್ದರು, ತೋಟದಲ್ಲಿ ದುಡಿದು ಸಂಜೆ ಹಿಂದಿರುಗುತ್ತಿದ್ದರು.)

ನಮ್ಮ ತಾಯಿಗೆ ವಿವಾಹವಾದಾಗ ೧೧ ವರ್ಷವಂತೆ. ೧೬ ವರ್ಷದಲ್ಲಿ ನಾವು ೮ ಮಕ್ಕಳು ಹುಟ್ಟಿದೆವಂತೆ. ಅಷ್ಟರ ನಡುವೆ ಅಮ್ಮ 'ವಿಲೇಜ್ ಪಂಚಾಯತ್ ಮೆಂಬರ್' ಆಗಿದ್ದರು. 'ಈ ಕಳ್ಳತನಗಳ ಮಧ್ಯೆ ಮುಂದೆ ಜೀವನ ಕಷ್ಟವಾದೀತು' ಎಂದು ಹೇಳಿ ನಮ್ಮ ಶಿಕ್ಷಣದ ಬಗೆಗೆ ಹೆಚ್ಚು ಕಾಳಜಿ ವಹಿಸಿದ್ದರು. ೧೯೬೪ರಲ್ಲಿ ಅಕ್ಕನಿಗೆ ವಿವಾಹ ಮಾಡಿದಾಗ ಜಿಲೇಬಿ ಮಾಡಿಸಿದ್ದರು. ಕಷ್ಟವಿದ್ದರೂ ಕರ್ತವ್ಯದ ಚ್ಯುತಿ

ಮಾಡುತ್ತಿರಲಿಲ್ಲ. ಜಿಲೇಬಿ ಎಂದರೆ ಆಗ ವೈಭೋಗ! ವರನ ಕಡೆಯವರು ಬಸವಾಪಟ್ಟಣದಿಂದ ೧೦ ಗಾಡೀಲಿ ಬಂದಿದ್ದರು. ಅವರು ಬಂದು ಇಳಿದರೂ ನಮ್ಮಲ್ಲಿ ಇನ್ನೂ 'ಊರಬಟ್ಟು' ಬೀರುವುದೇ ಮುಗಿದಿರಲಿಲ್ಲವಂತೆ. ಹಿರಿಯ ಕೆಲ ಮುತ್ತೈದೆಯರಿಗೆ ಆ ಕೆಲಸ ವಹಿಸಿ ಬೀಗರನ್ನು ಎದುರುಗೊಳ್ಳಲು ಓಡಿದರಂತೆ.

ಸೀಗೆಕಾಯಿ ಕುಯ್ಯಲು ಹತ್ತಿದ್ದ ಅಪ್ಪ ಸೀಗೆಮಳೆಯಿಂದ ಬಿದ್ದರು, ನಿಶ್ಯಕ್ತರಾದರು. ತೋಟ ಪಾಳುಬೀಳೋಕ್ಕೆ ಶುರು ಆಯಿತು. ನಾವೆಲ್ಲ ಓದಕ್ಕೆ ಹೊರಗೆ ಹೋಗಿದ್ದೆವು. ನಾವು ಒಂದನ್ನೂ ಕೂಲಿಕೊಟ್ಟು ಮಾಡಿಸಿದವರಲ್ಲ, ಹಾಗೆ ಮಾಡಿಸಲೂ ಆಗುತ್ತಿರಲಿಲ್ಲ. ಮಾರಿದೆವು.

ಯುಗಾದಿ, ದೀಪಾವಳಿ ಅಥವಾ ಗೌರಿಗೆ ಹೊಸಬಟ್ಟೆ ಕೊಡಿಸೋರು. ಅದೆಲ್ಲಾ ಹತ್ತಿಬಟ್ಟೆ. (೧೯೬೬ರಲ್ಲಿ ಮೊದಲ ಬಾರಿಗೆ ಟೆರಿಕಾಟ್ ಬಟ್ಟೆ ಹಾಕಿಕೊಂಡೆ.) ಇಷ್ಟು ಕಷ್ಟದ ನಡುವೆಯೂ, ನಮ್ಮೂರಿಗೆ ಓದಲು ಬಂದಿದ್ದ ಇಬ್ಬರು ಹುಡುಗರಿಗೆ ನಮ್ಮ ಮನೆಯಲ್ಲಿ ವಾರಾನ್ನ ಕೊಟ್ಟಿದ್ದೆವು. ಹಾಲು ಹೆಚ್ಚು ಬೇಕಾದರೆ ಕೊಳ್ಳಲು ಹಣ ಇರುತ್ತಿರಲಿಲ್ಲ. ಹಿಂದಲಹಳ್ಳಿಗೆ ಹೋಗಿ ಮಜ್ಜಿಗೆ ತರುತ್ತಿದ್ದೆವು.

ಸ್ವಾತಂತ್ರ್ಯ ಹೋರಾಟದ ಕಾವು ನಿಮ್ಮೂರಿಗೂ ಮುಟ್ಟಿತ್ತು ಎಂದು ಕೇಳಿದ್ದೇನೆ.
ಇಷ್ಟರ ನಡುವೆ ತಂದೆ ದೊನ್ನೆ ಕಟ್ಟುತ್ತಿದ್ದರು. ನಮ್ಮೂರಲ್ಲಿ ಖಾದಿ ಗ್ರಾಮೋದ್ಯೋಗ ಶುರು ಆಯಿತು, ಚರಕ ಬಂತು. ಕೇಂದ್ರಕ್ಕೆ ಹೋಗಲು ಆಗದವರಿಗೆ ಮನೆಮನೆಗೆ ಒಂದೊಂದು ಚರಕ ಕೊಟ್ಟರು. ಅವರೇ ಹತ್ತಿಯನ್ನೂ ಒದಗಿಸುತ್ತಿದ್ದರು. ಮನೆ ಮಂದಿಯೆಲ್ಲಾ ದಾರ ತೆಗೆದು ಕೊಡುತ್ತಿದ್ದೆವು. ಅಮ್ಮನಿಗೆ ಆಸ್ತಮಾ ಇತ್ತು. ಹತ್ತಿ ಕೆಲಸ ಅವರಿಗೆ ಒಳ್ಳೆಯದಕ್ಕೇ ಆಯಿತು. ಅಮ್ಮ ಎಲೆಯನ್ನೂ ಹಚ್ಚುತ್ತಿದ್ದರು. ನಾವೆಲ್ಲಾ ಮಕ್ಕಳು ತೋಟದ ಸುತ್ತ ತಿರುಗಿ ಮುತ್ತುಗದ ಎಲೆ ಕುಯ್ದುಕೊಂಡು ಬರುತ್ತಿದ್ದೆವು. ದಬ್ಬಳದಲ್ಲಿ ಚುಚ್ಚಿ ಪೋಣಿಸಿ ಒಣಗಿಸಿ ಕೊಡುತ್ತಿದ್ದೆವು.

ನಿಮ್ಮ ಮನೆಯ ಸ್ಥಿತಿಗತಿಗಳ ಬಗ್ಗೆ ಹೇಳುತ್ತಿದ್ದಿರಿ . . .
ನಮ್ಮೂರಲ್ಲಿ ಮೇಲಾಗ್ರ, ಕೀಳಾಗ್ರ ಎಂದು ಎರಡು ಇತ್ತು. ಬ್ರಾಹ್ಮಣರು ಹೊಲ ಮಾಡುತ್ತಿರಲಿಲ್ಲ, ಇತರರು ತೋಟ ಮಾಡುತ್ತಿರಲಿಲ್ಲ. ೧೯೬೭-೬೮ರಲ್ಲಿ ಎಟ್ಟೆ (ಬರಗಾಲ) ಬಂದು ಎರಡು ವರ್ಷ ಕಾಡಿತು. ಅಡಕೆ ಫಸಲೂ ಕಡಮೆ ಆಯಿತು, ಬೆಲೆಯೂ ಕುಸಿಯಿತು. ಆಗ ವಿದೇಶಗಳಿಂದ ಬರುತ್ತಿದ್ದ ಯಾವುದೋ ಹಿಟ್ಟನ್ನು ಎಲ್ಲರೂ ತಿನ್ನುತ್ತಿದ್ದರು. ಆಗಲೇ ಭಾವಿ ಇಂಗಿ ಏತ ಇಟ್ಟುದು.

ನಮ್ಮ ಮನೆಯಲ್ಲಿ ಎಲ್ಲರೂ ತೆಂಗಿನಮರ, ಅಡಕೆಮರ ಹತ್ತುತ್ತಿದ್ದೆವು. ಹಾಲಿಗೋಸ್ಕರ ಹಸು ಸಾಕುತ್ತಿದ್ದೆವು. ಅದರಿಂದ ತೋಟಕ್ಕೆ ಗೊಬ್ಬರವೂ ಆಗುತ್ತಿತ್ತು. ಊರಿನ ನೂರಾರು ದನಗಳನ್ನು ಒಬ್ಬ ಮೇಯಲು ಅಟ್ಟಿಕೊಂಡು ಹೋಗುತ್ತಿದ್ದ. 'ದನ ಬಿಡೋ ಹೊತ್ತು', 'ದನ ಬರೋ ಹೊತ್ತು' ಎಂಬುದು ಎರಡು ಮುಖ್ಯ ಕಾಲಗಣನೆಯಾಗಿತ್ತು.

ಲಕ್ಷ್ಮೀಶ ಅವರು ಹೇಳಿದ ಹೆಚ್ಚಿನ ಸಂಗತಿಗಳು . . .

1) ನಮ್ಮೂರಲ್ಲಿ ರಾಮಾವಧಾನಿ, ಕೃಷ್ಣಾವಧಾನಿ ಎಂಬ ಇಬ್ಬರು ವಿದ್ವಾಂಸರಿದ್ದರು. ಕೃಷ್ಣಾವಧಾನಿಗಳು ಹಾಸನದ ಶಂಕರಮಠಕ್ಕೆ ಹೋದರು. ರಾಮಾವಧಾನಿಗಳು ಅಪರಕರ್ಮ ಮಾಡಿಸುವುದರಲ್ಲಿ ಗಟ್ಟಿಗರು. ಅವರ ಶಿಷ್ಯ ಕೇಶವಮೂರ್ತಿ ಅವಧಾನಿಗಳೂ ಅದನ್ನು ಕಲಿತರು.

2) ಸುಂದರೇಶ ಘನಪಾಠಿಗಳು ೧೯೬೧-೬೨ರಲ್ಲಿ ಊರು ಬಿಟ್ಟರು. ಊರಲ್ಲಿ ಕಷ್ಟವಿತ್ತು, ಮಕ್ಕಳಿಗೆ ವಿದ್ಯಾಭ್ಯಾಸ ಆಗಬೇಕಿತ್ತು. ಮೈಸೂರಿನ ಸಂಸ್ಕೃತ ಪಾಠಶಾಲೆಯಲ್ಲಿ ಪ್ರಾಧ್ಯಾಪಕರಾಗಿ ಸೇರಿದರು.

3) ಹಿರಿಯಣ್ಣ ಎಂಬುವವರು *ಹೋರಿಗಳನ್ನು ತುಂಬ ಚೆನ್ನಾಗಿ ಸಾಕುತ್ತಿದ್ದರು.* ಹಾಗೆ ಮುತುವರ್ಜಿ ಮಾಡಿ ಸಾಕಿದವರು ಆ ಸುತ್ತಲಲ್ಲಿ ಮತ್ತೆ ಯಾರೂ ಇರಲಿಲ್ಲ.

4) ವೆಂಕಟೇಶ್ವರಾವಧಾನಿಗಳು 'ಘೇರೀ ಸಾವಕಾರ' ಎನಿಸಿದ್ದರು. ಅವರಷ್ಟು ತೋಟ ಬೇರೆ ಯಾರಿಗೂ ಇರಲಿಲ್ಲ. ಅವರು ಪಂಚಾಯಿತಿ ಅಧ್ಯಕ್ಷರಾಗಿದ್ದರು.

5) ರಾಮಾವಧಾನಿಗಳ ಮಕ್ಕಳು ಜವಳಿ ಅಂಗಡಿ ಇಟ್ಟು ಶ್ರೀಮಂತರಾದರು.

6) 'ಕರ್ಮ ಮಾಡಲು ಗಂಡು ಮಕ್ಕಳು ಬೇಕೇ ಬೇಕು' ಎಂಬ ನಿರೀಕ್ಷೆಯಲ್ಲಿ ಹಿಂದೆ ಅನೇಕ ಮಕ್ಕಳು ಹುಟ್ಟುತ್ತಿದ್ದರು. ಈಗ ಆ 'ಕರ್ಮ'ಕ್ಕಾಗಲಿ ಗಂಡುಮಕ್ಕಳಿಗಾಗಲಿ ಯಾರೂ ತಲೆಕೆಡಿಸಿಕೊಳ್ಳುವುದಿಲ್ಲ.

7) *ಪುಟ್ಟ ಹಿಡುವಳಿ* ಮತ್ತು ಅದರಿಂದ ಬರುವ ಅಲ್ಪ ಆದಾಯದಲ್ಲಿ ಬದುಕಲು ಸಾಧ್ಯವೇ ಇಲ್ಲದೆ ಹಲವು ಕುಟುಂಬಗಳು ಊರು ಬಿಟ್ಟು ಪಟ್ಟಣ ಸೇರಿ ಉದ್ಧಾರವಾದುವು. ಈಗ ಕೇವಲ ೧೫ ಮನೆಗಳು ಉಳಿದುಕೊಂಡಿವೆ.

8) ರಾಮೋತ್ಸವದ ಹಿಂದಿನ ಜರ್ಬು ಈಗ ಇಲ್ಲ. ಈಗ ಹಣ ಇದೆ; ಆಗ ಹುಮ್ಮಸ್ಸು, ಅಭಿಮಾನ ಇತ್ತು.

9) ಖಾಜಿ ಕೃಷ್ಣಪ್ಪ (ಖಾಜಿ ನ್ಯಾಯ ಮಾಡುತ್ತಿದ್ದುದರಿಂದ ಆ ಹೆಸರು) ಅವರ ಮಗ ಶ್ರೀನಿವಾಸಮೂರ್ತಿಯವರೂ ಅಡಕೆ-ತುಡಿಕೆ ಮಾಡುತ್ತಿದ್ದರು. ಅಲ್ಲಿ ಅಡಕೆ ಎಡೆಯಲು ಬ್ರಾಹ್ಮಣೇತರರು ಬರುತ್ತಿದ್ದರು. ಮಹಲಿಂಗಯ್ಯ ಎಂಬ ಲಿಂಗಾಯಿತರು ಮಾಡುವ ಇನ್ನೊಂದು ತುಡಿಕೆ ಇತ್ತು. ಬ್ರಾಹ್ಮಣರೆಲ್ಲರೂ *ಅಡಕೆ ಎಡೆಯಲು* ಅಲ್ಲಿಗೆ ಹೋಗುತ್ತಿದ್ದರು.

10) ಹಿಂದೆ ತೋಟಗಳನ್ನು *ಗುತ್ತಿಗೆಗೆ* ಕೊಡುತ್ತಿದ್ದರು. ೧೯೬೫ರಿಂದ ಈಚೆಗೆ *ಎಣಿಕೆ* ಪ್ರಾರಂಭವಾಯಿತು.

11) ಅಡಕೆ ಎಡೆದು ಕತ್ತರಿಸಿದರೆ ಕೊಳಗಕ್ಕೆ ೬ *ಆಣೆ ಕೂಲಿ* ಸಿಗುತ್ತಿತ್ತು. ಮಕ್ಕಳು (ಶಾಲೆಯ ಸಮಯ ಬಿಟ್ಟು) ದಿನಕ್ಕೆ ೨-೩ ಕೊಳಗ ರೇಖೆ ಮಾಡುತ್ತಿದ್ದರು.

12) ಹಿಂದಲಹಳ್ಳಿಯ ಕುಂಬಾರರು ಮಾಡಿಕೊಡುತ್ತಿದ್ದ ಮಣ್ಣಿನ ಗಣಪನಿಗೇ ನಾವು ಪೂಜೆ ಸಲ್ಲಿಸುತ್ತಿದ್ದೆವು.

13) ೧೯೭೦ ರವರೆಗೆ *ಎಲ್ಲ ಸಂಕೇತಿಗಳೂ ಬಡವರಾಗಿದ್ದರು.* ಕ್ರಮಕ್ರಮವಾಗಿ ಮಕ್ಕಳು ಓದಿ ನೌಕರಿ ಹಿಡಿದು ಪಟ್ಟಣಗಳಿಗೆ ಹೋದ ಮೇಲೇ ಅವರು ಹಣ ಕಂಡರು. ಕೂಲಿಗೆ ಜನರನ್ನು ಕರೆಯತೊಡಗಿದ್ದು ಆಮೇಲೆ.

14) ೧೯೬೦ಕ್ಕೆ ಹಿಂದೆ ಆಧುನಿಕ ವಿದ್ಯಾಭ್ಯಾಸ ಮಾಡಿದವರ ಸಂಖ್ಯೆ ಕಡಿಮೆ ಇತ್ತು. ೧೯೭೨-೮೦ರ ಹೊತ್ತಿಗೆ ನೌಕರಿಯುಗ ಆರಂಭವಾಯಿತು. ೧೯೮೫ರ ಹೊತ್ತಿಗೆ ವಿದೇಶೀ ನೌಕರಿ, ಸ್ವಯಂ ಉದ್ಯೋಗ ಆರಂಭ ಆಯಿತು. *ಹಿಂದೆ ತೋಟವೊಂದೇ ಆಧಾರವಾಗಿತ್ತು.*

15) *ಹಳ್ಳಿಯ ಜೀವನ ಪಟ್ಟಣಕ್ಕಿಂತ ಕಠಿಣ*; ಮನೋರಂಜನೆಯ ಅವಕಾಶ ಪಟ್ಟಣದಲ್ಲಿ ಹೆಚ್ಚು; ಅಡಕೆ ಬೆಲೆಯೂ ಈಗ ಮತ್ತೆ ಇಳಿಯುತ್ತಿದೆ. ಹಾಗಾಗಿ ಹೆಣ್ಣುಮಕ್ಕಳು ಹಳ್ಳಿಗೆ (ವಿವಾಹವಾಗಿ) ಹೋಗಲು ಇಷ್ಟಪಡುವುದಿಲ್ಲ.

೦.೨) ಪಿ.ಕೆ. ಶ್ರೀನಿವಾಸ (ಪೂಮಗಾಮೆ) ಹಾಸನ

ಸಬ್‌ಡಿವಿಜನಲ್ ಇಂಜಿನಿಯರ್, ಟೆಲಿಫೋನ್ಸ್, ಶಾಂತಿನಗರ

ಸಂಕೇತಿಗಳದು ಸ್ವತಂತ್ರ ಜೀವನದ ಮನೋಧರ್ಮ ಎನ್ನುತ್ತಾರಲ್ಲ ಶ್ರೀನಿವಾಸ ಅವರೆ . . .

ಸುಮಾರು ಐವತ್ತು ವರ್ಷಗಳ ಹಿಂದೆ ಆಂಗ್ಲ ವಿದ್ಯಾಭ್ಯಾಸ ಸಾರ್ವಜನಿಕವಾಗಿ ಅಷ್ಟು ಜನಪ್ರಿಯವಾಗಿರಲಿಲ್ಲ. ನಮ್ಮವರು ಜುಟ್ಟು ಜನಿವಾರ, ಪಂಚೆಗಳಿಂದಲೇ ಶೋಭಿಸುವವರಾಗಿದ್ದರು. ತುಂಡರಿಸಿದ ಬಟ್ಟೆಯನ್ನು ಉಡದವರೂ, ಮಡಿವಂತರೂ ಆಗಿದ್ದರು. ರಾಜಾಶ್ರಯವನ್ನು ಹಂಬಲಿಸದೆ, ಸ್ವತಂತ್ರ ಜೀವನವನ್ನು ನಡೆಸುವುದರಲ್ಲೇ ತೃಪ್ತಿ, ಆನಂದವನ್ನು ಕಂಡುಕೊಂಡವರು. ಸಾಮಾನ್ಯವಾಗಿ

ಅಧ್ಯಾಪಕ ವೃತ್ತಿಯನ್ನು ಬಿಟ್ಟು ಬೇರೆ ವೃತ್ತಿಗಾಗಿ ಮುನ್ನುಗ್ಗಿದವರಲ್ಲ. ಹಾಗಾಗಿ ಪಿತ್ರಾರ್ಜಿತವಾಗಿ ಬಂದ ಆಸ್ತಿಯ ಅಭಿವೃದ್ಧಿಯೇ ಅವರಿಗೆ ಸಹಜವಾದ ವೃತ್ತಿಯಾಗಿತ್ತು.

ಸಾಮಾನ್ಯವಾಗಿ ಇರುವ ಕೃಷಿ-ದಿನಚರಿ?

ನಮ್ಮವರು ಬೆಳಿಗ್ಗೆ ಮುಖಮಾರ್ಜನದ ನಂತರ ತೋಟದ ಕಡೆಗೆ ಹೊರಡುತ್ತಿದ್ದರು. ಸಾಮಾನ್ಯವಾಗಿ ಎಲ್ಲರ ತೋಟಗಳೂ ಒಂದೇ ಕಡೆ ಇರುತ್ತಿದ್ದವು. ಆದರೂ ಯಾರೂ, ಯಾರಿಗೂ ಕಾಯದೆ ತಮ್ಮ-ತಮ್ಮ ಕುಡುಗೋಲು ಎತ್ತಿಕೊಂಡು ದುಡುದುಡು ಹೊರಟರೆ ವಾಪಸ್ಸು ಬರುವುದು ಹನ್ನೊಂದು ಘಂಟೆಯಾಗುತ್ತಿತ್ತು. ತಮ್ಮ ತೋಟಕ್ಕೆ ಬೇಕಾದ ಗಡಿಭದ್ರತೆ, ನೀರಿನ ವ್ಯವಸ್ಥೆ ಮಾಡುವುದು, ಕಾಲಾನುಕಾಲಕ್ಕೆ ಅಗತ್ಯವಾದ ಅಗೆತ, ಗೊಬ್ಬರ ಹಾಕುವುದು ಇತ್ಯಾದಿ ಅಸಂಖ್ಯ ಕೆಲಸಗಳು ಪ್ರತಿದಿನವೂ ಇದ್ದೇ ಇರುತ್ತಿದ್ದವು. ಬಿದ್ದುಹೋದ ಮರಗಳ ಜಾಗದಲ್ಲಿ ಹೊಸ ಸಸಿಗಳನ್ನು ನೆಡುವುದು, ಬಾಳೆಎಲೆ ಕೊಯ್ಯುವುದು, ಬಲಿತ ಬಾಳೆಗೊನೆಯನ್ನು ಮನೆಗೆ ತರುವುದು, ಮರದಿಂದ ಬಿದ್ದ ಅಡಿಕೆ, ಗೋಟುಗಳನ್ನು ಆರಿಸಿ ತರುವುದು ಇತ್ಯಾದಿ ಕೆಲಸಗಳನ್ನು ಸ್ವಯಂ ತಾವೇ ಮಾಡುತ್ತಿದ್ದರು. ವಾಪಸ್ಸು ಬರುವಾಗ ಖಾಲಿಕೈನಲ್ಲಿ ಬಂದುದೇ ಇಲ್ಲ. ತಲೆಯ ಮೇಲೆ ಸೋಗೆಗರಿ, ಅಡಿಕೆ ಪಟ್ಟೆಗಳು, ಕೈಯಲ್ಲಿ ಬಾಳೆಗೊನೆ, ಬಾಳೆಎಲೆ ಕಟ್ಟು ಇತ್ಯಾದಿಗಳು ಯಾವಾಗಲೂ ಇರುತ್ತಿದ್ದವು. ಅವರು ಧರಿಸುತ್ತಿದ್ದ ಪಂಚೆ, ಅಂಗವಸ್ತ್ರಗಳೂ ಅವರ ಕಾಯಕವನ್ನೇ ಪ್ರದರ್ಶಿಸುತ್ತಿದ್ದವೋ ಎನ್ನುವಂತಿತ್ತು. ಆಗಿನ ಕಾಲದ ಅವರ ವರಮಾನವೂ ಅವತ್ತಿಗವತ್ತಿಗೆ ಸಾಕಾಗುವಷ್ಟಿತ್ತು. ಕೈತುಂಬಾ ದುಡ್ಡು ಕಂಡವರೇ ಅಲ್ಲ. ಮನೆಯ ರಿಪೇರಿಯಾಗಲೀ, ಮಾವಿನ ಫಸಲು ಇಳಿಸುವುದಾಗಲೀ, ಪರಸ್ಪರ ಸಹಾಯದಿಂದ ಮಿತವ್ಯಯದಿಂದ ಮಾಡುವಂತಹವರಾಗಿದ್ದರು.

ಬರೀ ತೋಟವೆ?

ಮೊದಲೇ ಹೇಳಿದಂತೆ ನಮ್ಮವರಿಗೆ ಅಡಿಕೆ ತೋಟ ಬೆಳೆಸುವುದೇ ಪ್ರಧಾನ ಕೃಷಿಯಾಗಿತ್ತು. ಇದರ ಜತೆ ಹೊಲಗದ್ದೆಗಳೂ ಇದ್ದವು. ಹೊಲಗದ್ದೆಗಳ ವ್ಯವಸಾಯಕ್ಕೆ ಆಳುಕಾಳುಗಳು ತುಂಬಾ ಜನರು ಬೇಕಾಗುತ್ತಿತ್ತು. ಪ್ರತಿದಿನವೂ ಅವರ ದಿನಗೂಲಿಯನ್ನು ಬಟವಾಡೆ ಮಾಡಬೇಕಾಗುತ್ತಿತ್ತು. ಎಷ್ಟೋ ಜನ ಮುಂಗಡ ಹಣ ಪಡೆದು ಕೆಲಸಕ್ಕೆ ಬರದೆ ಸತಾಯಿಸುತ್ತಲೂ ಇದ್ದರು. ಕೆಲಸಕ್ಕೆ ಬಂದವರಲ್ಲಿಯೂ ಬಹುಮಂದಿ ಮೈಗಳ್ಳರು. ಅಂತಹವರಿಂದ ಕೆಲಸ ತೆಗೆದುಕೊಳ್ಳುವುದೂ ಕಷ್ಟದಾಯಕವಾಗಿತ್ತು. ಅಂತಹದರಲ್ಲಿಯೂ ಮೊದಮೊದಲು ಭತ್ತದ ವ್ಯವಸಾಯವನ್ನು ಮಾಡುತ್ತಿದ್ದರು. ಅದರಲ್ಲಿ ಲಾಭಾಂಶ ಕಡಿಮೆಯಾಗುತ್ತಿದ್ದಂತೆ, ಕಬ್ಬಿನ ಬೆಳೆಯನ್ನು ಮೈಗೂಡಿಸಿಕೊಂಡು, ಅದರಲ್ಲಿಯೂ ಪರಿಜ್ಞಾನ ಪಡೆದರು. ಅಡಿಕೆಗೆ ಬೆಲೆ ಏರಿದಂತೆ, ತಮ್ಮ ಗದ್ದೆಗಳನ್ನು ಅಡಿಕೆ ತೋಟವನ್ನಾಗಿ ಪರಿವರ್ತಿಸಿದರು. ತೋಟದಲ್ಲಿ ಅಡಿಕೆ ಮರಗಳೇ ಪ್ರಧಾನವಾಗಿದ್ದರೂ, ನಾಲ್ಕಾರು ತೆಂಗಿನ ಮರಗಳೂ, ಸೀಬೆಹಣ್ಣು, ಹಲಸಿನ ಮರಗಳೂ, ಮಾವಿನಮರಗಳೂ, ಒಂದೊಂದು ನಿಂಬೆಹಣ್ಣಿನ ಗಿಡವೂ, ಯಥೇಚ್ಛವಾಗಿ ಬಾಳೆಮರಗಳೂ ಬೆಳೆಸಲ್ಪಟ್ಟವು. ರಜಾದಿನಗಳಲ್ಲಿ ತಮ್ಮ ಜತೆಯಲ್ಲಿ ಮಕ್ಕಳನ್ನೂ ಕರೆದುಕೊಂಡು ಹೋಗುತ್ತಿದ್ದರು. ಗೋಟು ಆರಿಸುವುದು, ತೆಕ್ಕೆ ಬಿಡುವಾಗ ಬಾಳೆಎಲೆ ಕೈಯಲ್ಲಿ ಹಿಡಿದುಕೊಂಡು ದೊಡ್ಡವರಿಗೆ ಸಹಾಯ ಮಾಡುವುದು ಮಕ್ಕಳು ಮಾಡುವಂತಹ ಕೆಲಸವಾಗಿತ್ತು. ತೋಟದಲ್ಲಿ ಕೆಲಸ ಮಾಡುವಾಗ ಮೈಯನ್ನೆಲ್ಲಾ ಮುತ್ತುತ್ತಿದ್ದ ಆ ಭಯಂಕರ ಸೊಳ್ಳೆಗಳಿಂದ ತಪ್ಪಿಸಿಕೊಳ್ಳುವುದಂತೂ ಅಸಾಧ್ಯವೇ. ಆ ಜೇಡಿಮಣ್ಣಿನಲ್ಲಿ ಓಡಾಡುವಾಗ ಕಾಲುಜಾರಿ ಬಿದ್ದ ಪ್ರಸಂಗಗಳನ್ನು ಎಷ್ಟು ಹೇಳಿದರೂ ತೀರದು. ಕೆಲಸ ಮುಗಿದ ನಂತರ ತೆಂಗಿನಮರದಿಂದ ಕೆಡವಿದ ಕೆಂದೆಳನೀರನ್ನು ಹೊಟ್ಟೆತುಂಬಾ ಕುಡಿದು, ಮಕ್ಕಳು ತೃಪ್ತರಾಗುತ್ತಿದ್ದರು. ಸೀಬೆಹಣ್ಣು, ಹಲಸಿನಹಣ್ಣು, ಮಾವಿನಹಣ್ಣು ನೇರಳೇಹಣ್ಣು ಇತ್ಯಾದಿ ಆಯಾ ಕಾಲದಲ್ಲಿ ದೊರೆಯುವ ಹಣ್ಣುಗಳೂ ಪ್ರಮುಖ ಆಕರ್ಷಣೆಯಾಗಿದ್ದವು.

ಕೃಷಿಯನ್ನು ಎಲ್ಲರೂ ನಿಭಾಯಿಸಬಹುದೆ?

ಕೃಷಿಕರ ಜೀವನಸಮಸ್ಯೆಯನ್ನು ಎಷ್ಟು ಹೇಳಿದರೂ ತೀರದು. ಅವರು ಮೆದುವಾಗಿದ್ದರಂತೂ ಅವರ ಜಮೀನನ್ನು ಅಕ್ಕಪಕ್ಕದವರು ಇಂಚು, ಇಂಚಾಗಿ ಕಬಳಿಸಿ ಬಿಡುತ್ತಾರೆ. ಫಸಲು ಕೈಗೆ ಸಿಗುವುದೇ ಇಲ್ಲ. ಅದಕ್ಕಾಗಿ ತಕ್ಕ ಧಾರ್ಷ್ಟ್ಯವಿರಬೇಕು. ಕಾಲಕಾಲಕ್ಕೆ ಸರಿಯಾಗಿ ನೀರಿನ ವ್ಯವಸ್ಥೆಯಾಗಬೇಕು. ಕಳೆ ತೆಗೆಯುವುದು, ಕ್ರಿಮಿನಾಶಕಗಳನ್ನು ಸಿಂಪಡಿಸುವುದು, ಗೊಬ್ಬರ ಹಾಕುವುದು ಇತ್ಯಾದಿಗಳಿಗೆ ಅಗತ್ಯ ಆಳುಕಾಳುಗಳು, ಹಣ ಇರಲೇಬೇಕು. ಎಲ್ಲವೂ ಸರಿಯಾಗಿ ವ್ಯವಸ್ಥೆಯಾದ ಮೇಲೆ ಫಸಲಿನ ಮುಖ ನೋಡಬಹುದು.

ಅಡಕೆ ತುಡಿಕೆಯ ಅನುಭವ ನಿಮಗೂ ಇದೆಯೇ?

ಈಗ ಸಾಮಾನ್ಯವಾಗಿ ಅಡಿಕೆ ಹಣ್ಣಾಗುವ ತನಕ ಮರದಲ್ಲಿಯೇ ಬಿಟ್ಟು, ನಂತರ ಕೆಡವಿ, ಬಿಸಲಿಗೆ ಒಣ ಹಾಕುವರು. ಪೂರ್ತಿ ಒಣಗಿದ ನಂತರ ಚೀಲದಲ್ಲಿ ಅದನ್ನು ಹತ್ತಿರದ ಮಾರ್ಕೆಟ್‌ಗೆ ಒಯ್ಯುವರು. ಆದರೆ ಹಿಂದೆ ಅಡಿಕೆಯನ್ನು ಮನೆಗೆ ತಂದು, ಗೊನೆಯಿಂದ ಬಿಡಿಸಿದ ಮೇಲೆ, ಹತ್ತಾರು ಹೆಂಗಸರು ಈಳಿಗೆಯ ಮಣೆಯಲ್ಲಿ ಅದನ್ನು ಸುಲಿದು ಚೂರು ಮಾಡುವುದಾಗಲೀ, ಅರ್ಧಕ್ಕೆ ಹೆಚ್ಚುವುದಾಗಲೀ ಮಾಡುತ್ತಿದ್ದರು. ಅದನ್ನು ಹಂಡೆಯಲ್ಲಿ ಬೇಯಿಸಿದ ನಂತರ, ಒಣಗಿಸುವುದಕ್ಕಾಗಿಯೇ ಊರ ತುಂಬಾ ಚಪ್ಪರ ಹಾಕುತ್ತಿದ್ದರು. ಮಳೆರಾಯನಿಂದ ರಕ್ಷಿಸಿಕೊಂಡು, ಅಡಿಕೆ ಪೂರ್ತಿ ಒಣಗಿದ ನಂತರ, ಕೆಲಸಮಯ ಉತ್ತಮ ಧಾರಣೆಗಾಗಿ ಕಾಯುತ್ತಿದ್ದರು. ಎಷ್ಟು ಲೆಕ್ಕಾಚಾರ ಹಾಕಿದರೂ ಅವರವರ ನಸೀಬಿಗೆ ತಕ್ಕಂತೆ ಅದರ ಫಲ ಅನುಭವಿಸುತ್ತಿದ್ದರು. ಆ ಕಾಲದಷ್ಟು ಕಷ್ಟ ಈಗಿಲ್ಲ ಎಂದೇ ಹೇಳಬಹುದು.

ಸಂಕೇತಿ ಸಂಸ್ಕೃತಿಗೆ ಕೃಷಿಕರ ಕಾಣಿಕೆ?

ಯಾವುದೇ ಧರ್ಮದ, ಜನಾಂಗದ ಸಂಸ್ಕೃತಿಯು ಜೀವಂತವಾಗಿರುವುದು ಹಳ್ಳಿಗಳಲ್ಲೇ ಅಲ್ಲವೇ? ಈಗಲೂ ಕೃಷಿಯನ್ನೇ ಜೀವನಾಧಾರವಾಗಿಟ್ಟುಕೊಂಡು ಹಳ್ಳಿಗಳಲ್ಲೇ ನೆಲೆಸಿರುವ ನಮ್ಮ ಸಂಕೇತಿ ಬಂಧು-ಬಾಂಧವರಿಂದಲೇ ನಮ್ಮೀ ಜನಾಂಗದ ಭಾಷೆ, ಆಚಾರ, ವಿಚಾರಗಳಲ್ಲಿ ನಮ್ಮತನವು ಸುಮಾರು ೮೦೦ ವರ್ಷಗಳಿಂದಲೂ ಉಳಿದುಕೊಂಡು ಬಂದಿದೆ. ಇದಕ್ಕಾಗಿ ನಮ್ಮ 'ಸಂಕೇತಿ ಕೃಷಿಕ'ರಿಗೆ ನಾವು ಚಿರಋಣಿಯಾಗಿರಲೇಬೇಕು.

೩. ಅಗ್ರಹಾರ
ಕೆ.ಶ್ರೀನಿವಾಸ

(ಸಂಕೇತಿಗಳು ಸಾಂಪ್ರದಾಯಿಕವಾಗಿ ಬೆಳೆಸುವುದು ಹಂಬು ಮತ್ತು ಅಡಕೆ ತೋಟವನ್ನು. ಹೊಲಗದ್ದೆಗಳಲ್ಲಿನ ಹೊಸಪ್ರಯೋಗಗಳು ವೇಗ ಪಡೆದುಕೊಂಡದ್ದು ನಾಲ್ಕೈದು ದಶಕಗಳ ಹಿಂದೆ. ಅದನ್ನು 'ಪ್ರಯೋಗಯುಗ' ಅಥವಾ 'ಸ್ಥಿತ್ಯಂತರ ಯುಗ' ಎನ್ನಬಹುದು. ಈ ಬದಲಾವಣೆಯ ಮುಂಚೂಣಿಯಲ್ಲಿದ್ದ ರೈತರು ಶ್ರೀನಿವಾಸ ಮತ್ತು ಅವರ ಸೋದರರು. 'ಹೊಸ ಹೊಸ ಪರಿಸರವನ್ನು ಹುಡುಕಿ ಉತ್ತಮಪಡಿಸಿಕೊಳ್ಳುವುದು' ಸಂಕೇತಿಗಳ ಗುಣ ಎಂದು ಅವರು ಹೇಳುತ್ತಾರೆ. ಇದು ಸಂಕೇತಿಗಳ ಮೂಲ ಮನೋಧರ್ಮ.)

* **ನೀವು traditional ವ್ಯವಸಾಯವನ್ನು ಪ್ರಾರಂಭ ಮಾಡಿ ರೂಢಿಸಿಕೊಂಡಿರಿ. ಕೊನೆಗೆ ಆಧುನಿಕ ಪ್ರಯೋಗಗಳನ್ನೂ ಮಾಡಿದಿರಿ. ಅದಕ್ಕೆ ಪ್ರೇರಣೆ ಏನು? ಯಾವಾಗಿನಿಂದ?**

\- ಪ್ರೇರಣೆ ಎಂದರೆ, ಮೊದಲು Diesel Motor ಹಾಕಿದೆ. ಆಗ ನನಗೆ ಕೆಲಸಗಳನ್ನು ಸುಲಭವಾಗಿ ಬೇಗ ಮಾಡಬಹುದು ಎನಿಸಿತು. ಅದರ ಮೇಲೆಯೇ Electric Motor ಹಾಕಿದೆ. ಇದರಿಂದ ಬೇಕಾದ ಅನುಕೂಲ ಆಯಿತು. ಇದರಿಂದ ೧೯೭೦ರಲ್ಲಿ tobacco, commercial crop ಶುರು ಮಾಡಿದೆ. ಆಗ ೧೯೭೦ರಲ್ಲಿ ದುಡ್ಡು ಹೆಚ್ಚು ಬಂತು. *ಆರ್ಥಿಕ ಪರಿಸ್ಥಿತಿ ಸುಧಾರಿಸಿತು.* ಹೀಗೆ ಒಂದಕ್ಕೆ ಒಂದು ಪೂರಕವಾಯಿತು. ಇದನ್ನು ಸುಮಾರು ೧೯೮೩ರವರೆಗೆ ಮಾಡಿದೆ.

* **ಇದನ್ನು ಮೊದಲು ಮಾಡಿದವರಾರು?**

\- *ನಾನೇ ಶುರುಮಾಡಿದೆ.* ಆಮೇಲೆ ಬೇರೆಯವರು ಮಾಡಿದರು. ಅವರೆಲ್ಲ ಶುರು ಮಾಡುವುದರೊಳಗೆ ನಾನು ಆರ್ಥಿಕವಾಗಿ ಮೇಲೇರಿದ್ದೆ. ಅವರಿಗೆಲ್ಲ ನನ್ನಷ್ಟು ಯಶಸ್ಸು ಸಿಗಲಿಲ್ಲ. ಆಗ ಸರ್ಕಾರದ ಸಾಲ-ಸೌಲಭ್ಯಗಳೂ ಚೆನ್ನಾಗಿದ್ದವು. ಸಾಲ ತೆಗೆದುಕೊಂಡು prompt ಆಗಿ ತೀರಿಸುತ್ತಿದ್ದೆ. ನಾನು *ಪ್ರಯೋಗ ಮಾಡಲು ಯೋಚಿಸಿದೆ.* ಯಾವುದಕ್ಕೆ ಬಂಡವಾಳ ಹಾಕಿದರೂ, ಸೋತರೂ, ಚೇತರಿಸಿಕೊಳ್ಳಬಹುದು ಎನ್ನುವ ಸ್ಥಿತಿಗೆ ಬಂದಿದ್ದೆ. ಟೈರ್‌ಗಾಡಿ ತೆಗೆದುಕೊಳ್ಳಲು ಸಹ ಬಹಳ ಯೋಚನೆ ಮಾಡಿದೆ. ೧೯೮೪-೮೫ರಲ್ಲಿ transportationಗಾಗಿ ಟೈರ್‌ಗಾಡಿ ತೆಗೆದುಕೊಂಡೆ. ಇದರಲ್ಲಿ ಬೇಗ ಕೆಲಸ ಆಗುತ್ತದೆ. ಅದುವರೆವಿಗೂ ನನ್ನ ಹತ್ತಿರ ಮೂರು ಗಾಡಿ ಇತ್ತು. *First ಟೈರ್‌ಗಾಡಿ ಹಾಕಿಸಿದ್ದು, pump ಹಾಕಿಸಿದ್ದು, ನಾನೇ.* ಎಲ್ಲರೂ ನನ್ನನ್ನು ಬೇಕಾದಷ್ಟು ಹಾಸ್ಯ

ಮಾಡಿ comments ಮಾಡಿದರು, ಆದರೆ ನನಗೆ ಅದರ ಅನುಕೂಲ ಗೊತ್ತಿತ್ತು. ಈಗ ಒಂದು ಮರದಗಾಡಿ ಬೇಕು ಎಂದರೂ ಇಲ್ಲ. ಟೈರ್‌ಗಾಡಿ maintenance ಸುಲಭ. ಮರದಗಾಡಿ maintenance ಬಹಳ ಕಷ್ಟ. Height ಕಮ್ಮಿ. ಆದ್ದರಿಂದ ಕೆಲಸದ ವೇಗ ಸಹ ಬಹಳ improve ಆಯಿತು. ಆಗಿನ ಟೈರ್‌ಗಾಡಿಗಳಿಗೆ break system ಇರಲಿಲ್ಲ. ಈಗ ಇದೆ. ಆದರೆ ನಾನೇ break adjust ಮಾಡಿದ್ದೆ. Control ಮಾಡಲು ಕಷ್ಟ ಆಗುತ್ತಿತ್ತು. ಯಾವುದೇ implementation ಮಾಡಿದರೂ ಅದರ ಉಪಯೋಗ ತಿಳಿದುಕೊಳ್ಳಬೇಕು. ಈಗಿನ tractor ಬಹಳ ಚೆನ್ನಾಗಿದೆ.

* **Tobacco ಆದ ಮೇಲೆ ಏನು ಮಾಡಿದಿರಿ?**

\- ಮಧ್ಯದಲ್ಲಿ Tobacco rate ಬಿದ್ದುಹೋಯಿತು. ಇಲ್ಲದಿದ್ದರೆ ಬಿಡುತ್ತಿರಲಿಲ್ಲ. ಅದನ್ನು ಕೈಬಿಟ್ಟೆ. ಅಷ್ಟರಲ್ಲಿ ತೋಟ ತೆಗೆದುಕೊಂಡಿದ್ದೆ. ಅದರೆಡೆಗೆ ಗಮನ ಕೊಟ್ಟೆ. ಅದಕ್ಕೆ ಗೊಬ್ಬರ, ಅದೂ ಇದು ಎಂದು ಮಾಡಿದೆ. *ಈಗಿನ ಪ್ರಪಂಚದಲ್ಲಿ ನಾವು ಯಂತ್ರಕ್ಕೆ ತಲೆಬಾಗಲೇಬೇಕು.* Tobacco ಬಿಟ್ಟ ಮೇಲೆ, ಕೋಸು, ಬದನೆ, ಕಬ್ಬು ಬೆಳೆದೆ. ಆದರೆ, ಅದರಲ್ಲಿ ಅಷ್ಟು ಲಾಭ ಆಗಲಿಲ್ಲ. ಬೆಳೆ ಏನೋ ಬೆಳೆಯಿತು. ಆದರೆ, marketing ಮಾಡಲು ಕಷ್ಟ ಆಯಿತು. ಏಕೆಂದರೆ, ಸರಿಯಾದ ಬೆಲೆ ಸಿಗಲಿಲ್ಲ. ಇಲ್ಲಿ ಯಾರೂ ತೆಗೆದುಕೊಳ್ಳಲಿಲ್ಲ, ಮಂಗಳೂರಿಗೆ ತೆಗೆದುಕೊಂಡು ಹೋಗಬೇಕು, ಅದನ್ನು ನಾವೇ ತೆಗೆದುಕೊಂಡು ಹೋಗಬೇಕು. Harvest ಬಂದ ಮೇಲೆ ಯಾರೂ ಕೇಳಲಿಲ್ಲ. ಕೇಜಿಗೆ ೧೦-೧೮ ರೂ ಇದ್ದರೂ ಕೇವಲ ನನಗೆ ಏಳು-ಎಂಟು ಬಂತು. ಅಲ್ಲದೆ 'ಕೈಮೇಲೆ ದುಡ್ಡಿಲ್ಲ, ಮಾರಿದ ಮೇಲೆ ದುಡ್ಡು ಕಳುಹಿಸುತ್ತೇವೆ' ಎಂದು ಕೊಳ್ಳುವವರು ಹೇಳುತ್ತಾರೆ. ಅಲ್ಲಿನ moistureಗೆ ಅದು ಕೊಳೆತು ಹೋಗುತ್ತಿತ್ತು. ಹೀಗಾಗಿ ನಮಗೆ ಬಹಳ loss ಆಗುತ್ತಿತ್ತು. ಕೆಲವನ್ನು ಬೆಂಗಳೂರಿಗೆ ತೆಗೆದುಕೊಂಡು ಹೋಗಬೇಕು. ಅಲ್ಲಿ ಹೋದರೆ ಅಲ್ಲಿ rate ಕಮ್ಮಿ. ಸಂಜೆಗೆ ದುಡ್ಡು ಸಿಗುತ್ತಿತ್ತು. ಕೇಜಿಗೆ ೧೫ ರಿಂದ ಆರು-ಎಂಟು ರೂಪಾಯಿ ಆಗುತ್ತಿತ್ತು. Transportation ರೂ.೪೦೦ ರಿಂದ ೪೫೦ ಇತ್ತು. ಕಬ್ಬಿನಲ್ಲಿ agreement ಮಾಡಿಕೊಂಡಿದ್ದೆ, Supply ಮಾಡಿದೆ. contractor ಪಾಪರ್ ಆದ. courtಗೆ ಹತ್ತಿದೆ. ಆಗಿದ್ದ amount ನಲ್ಲಿ ೫೦% ಅಂತ decide ಆಗಿ ಬಂತು. ಇನ್ನು ಆಲೆಮನೆ ಹಾಕಿಸಿದೆ. ಅದಕ್ಕೂ rate ಇಲ್ಲ. ಆಗ ಪಿಂಡಿಗೆ ಐದು ರೂ. ಕೊಡ್ತೀನಿ ಅಂದರೂ ತೆಗೆದುಕೊಳ್ಳುತ್ತಿರಲಿಲ್ಲ. ಈಗ ಪಿಂಡಿಗೆ ೭೫ ರೂ ಇದೆ. ಇದು ನಮಗೆ ಸರಿಯಲ್ಲ ಎಂದು ಯೋಚಿಸಿದೆ. ಅದಕ್ಕೆ ತೆಂಗಿನಕಾಯಿ ತೋಟ ಖರೀದಿಸಿದೆ. Tobacco profit ಅನ್ನು ಇದಕ್ಕೆ ಹಾಕಿದೆ. Sharma ಎನ್ನುವ Sugar-cane specialist ಇದ್ದರು. ತೆಂಗಿನ yield ಕಮ್ಮಿ ಇತ್ತು. ಕೃಷಿ ಮಾಹಿತಿ ಕೇಳಿದೆ. 'ಇದರಲ್ಲಿ ಏನೋ deficiency ಇದೆ. ಅದಕ್ಕೆ yield ಇಲ್ಲ' ಎಂದು ಮಾಹಿತಿ ಇತ್ತರು. 'ಮಣ್ಣು ಕೆತ್ತಿಸಿ ನೋಡಿ' ಎಂದರು. ಎಲ್ಲವನ್ನೂ ಹೇಳಿಕೊಟ್ಟರು. ಅದನ್ನು ಐದು ವರ್ಷ ಮಾಡಬೇಕು. ಏಕೆಂದರೆ, ಒಂದು ಆರೋಗ್ಯವಾದ ತೆಂಗಿನಗಿಡದಲ್ಲಿ ೩೦ ರಿಂದ ೪೦ ಗರಿ ಇರಬೇಕು. ಒಂದು ವರ್ಷಕ್ಕೆ ೭ ಮಟ್ಟೆ ಬೀಳುತ್ತದೆ. ಪೂರ್ತಿ ಆಹಾರ ಗಿಡ ತಿಂದ ಮೇಲೆ, ಹಳೇ ಮಟ್ಟೆ ಬಿದ್ದು ಹೊಸಗರಿ ಹುಟ್ಟಬೇಕು. ಅವರು ಹೇಳಿದ್ದೆಲ್ಲ ಮಾಡಿದೆ. Yield ಚೆನ್ನಾಗಿ ಬಂತು. ಅಷ್ಟು ಹೊತ್ತಿಗೆ ಕಳೆದ ದುಡ್ಡು ಬಂದಿತ್ತು. ಹೇಮಾವತಿ ಕನೆಕ್ಷನ್ ಸಿಕ್ಕಿದ್ದರಿಂದ waterbelt ಚೆನ್ನಾಗಿದೆ. ಮುಂಚೆ ಹೀಗಿರಲಿಲ್ಲ.

* **ನಿಮ್ಮ ಹಳ್ಳಿಯ ಸುತ್ತ-ಮುತ್ತಾ ಈ ರೀತಿಯ ಪ್ರಯೋಗ ನೀವೇ ಮೊದಲು ಮಾಡಿದವರಾ?**

\- ಹೌದು. ಆದರೆ ಈಗ ಸುಮಾರು ತೋಟಗಳು ಇವೆ. ಆಗ Govt. Farm ಶುರು ಆಗಿರಲಿಲ್ಲ. ೩೫-೩೬ ವರ್ಷ ಆಗಿರಬೇಕು. ನಮಗೆ ಒಂದು ಸಸಿಗೆ ೬೦ ಪೈಸೆ ಆಗುತ್ತಿತ್ತು. ಆಗ ಬಸ್ಸು ಅನುಕೂಲ ಇಷ್ಟು ಇರಲಿಲ್ಲ. ತಂದು ಎರಡು ಮೂರು ದಿನದಲ್ಲಿ ಗಿಡ ನೆಡುತ್ತಿದ್ದೆ. ನಾವು ತರಕಾರಿಗಳನ್ನು ಮಾರಲು marketಗೆ ಹೋಗುತ್ತಿದ್ದಿವಿ. Hopcoms ಇರಲಿಲ್ಲ. ಆಗ marketing ಅನುಕೂಲ ಇರಲಿಲ್ಲ - Regulated Market ಸಹ ಅಷ್ಟು ವ್ಯವಸ್ಥಿತವಾಗಿರಲಿಲ್ಲ. ಯಾರೂ ವ್ಯವಸ್ಥಿತವಾಗಿ ಮಾಡ್ತಿರಲಿಲ್ಲ. ಆಗ ಈಗಿನ ತರಹ ಕೃಷಿಯೂ ವ್ಯವಸ್ಥಿತವಿರಲಿಲ್ಲ.

* **ಈಗ ಅಡಿಕೆ ಬೆಳೆಯುವವರ ಆರ್ಥಿಕ ಸ್ಥಿತಿ ಹೇಗೆ?**

\- ಈಗ ಏಳೆಂಟು ವರ್ಷದಿಂದ ಎಲ್ಲವೂ ಸುಧಾರಿಸಿದೆ. ಒಟ್ಟಿನಲ್ಲಿ ಎಲ್ಲರಿಗೂ ಆರ್ಥಿಕ ಸುಧಾರಣೆ ಬಂದಿದೆ.

ನನ್ನ ಅಭಿಪ್ರಾಯದಲ್ಲಿ ಜನಸಂಖ್ಯೆಗೆ ತಕ್ಕ ಹಾಗೆ ಜಮೀನು ಬೆಳೆಯುತ್ತಿಲ್ಲ. *ನಾವು industry ಸಹ ಅಭಿವೃದ್ಧಿಗೆ ತರಬೇಕು.* ನಮ್ಮಲ್ಲಿಯೂ ಬುದ್ಧಿವಂತರಿದ್ದಾರೆ. ನಮ್ಮ ಜನಾಂಗದವರೂ ಸಹ ವ್ಯವಸಾಯಕ್ಕೆ ಬದಲಾಗಿ industry ಸಹ ಮಾಡಬೇಕು. ಸಾಮಾನ್ಯವಾಗಿ ಪಟ್ಟಣದಲ್ಲಿ ಹತ್ತಾರು ವರ್ಷ ಇದ್ದವರು, ಅಲ್ಲಿಗೇ ಹೊಂದಿಕೊಂಡು ಬಿಡುತ್ತಾರೆ. ಇತ್ತಲಾಗಿ ತಂದೆ-ತಾಯಿಗೆ ವಯಸ್ಸಾಗಿರುತ್ತದೆ. ಹೆಂಡತಿಯ opinion ಸಹ ಬೇಕು.

* **ನಿಮ್ಮ ಪೂರ್ವಿಕರು?**

- ನನ್ನ ತಾತ ಕೇಶವಯ್ಯ ನಿಮಗೇ ಗೊತ್ತಲ್ಲಾ ಅವ್ರು! ಅವರಿಗೆ ಜೋತಿಷ್ಯ ಚೆನ್ನಾಗಿ ಗೊತ್ತಿತ್ತು. ಅವರ ಮನೆಯಲ್ಲಿ ಮದುವೆ ನಡೆಯುತ್ತಿತ್ತು. ಅಲ್ಲಿಗೆ ಒಬ್ಬ ಬುಡಬುಡಿಕೆಯವನು ಬಂದು 'ಹಾಗಾಗುತ್ತೆ ಹೀಗಾಗುತ್ತೆ' ಎಂದು ಹೇಳಿದ. ಆಗ ನಮ್ಮ ತಂದೆಯವರು 'ಹೋಗೋ! ನಿನಗೆ, ನಿನಗಾಗುವುದೇ ಗೊತ್ತಿಲ್ಲ, ಬೇರೆಯವರ ವಿಷಯ ಹೇಳುವುದಕ್ಕೆ ಬರುತ್ತಾನೆ. ನಿನಗೆ ಈಗ ಹೋಗು, ಹುಚ್ಚುನಾಯಿ ಕಡಿಯುತ್ತದೆ' ಎಂದರು. ಅದು ಹಾಗೆಯೇ ಆಯಿತು. ಆಗ ಅವನು ಪಶ್ಚಾತ್ತಾಪ ಪಟ್ಟು ಕ್ಷಮೆ ಕೇಳಿದನು ಎಂದು ನಮ್ಮ ಚಿಕ್ಕಪ್ಪ ಹೇಳುತ್ತಿದ್ದರು.

* **ನಿಮ್ಮ ಗೋತ್ರ?**

- ಹರಿತ್ಸ ಗೋತ್ರ, ಯಜುರ್ವೇದ.

ನಮ್ಮ ಅಜ್ಜಿ ಕಾಲದಲ್ಲಿ (ಬೇಗ ಮುಂಜಿ ೧೪-೧೫ ವರ್ಷಕ್ಕೆ) ಮಾಡುತ್ತಿದ್ದರು. ಮಧ್ಯದಲ್ಲಿ ಅದು ಇರಲಿಲ್ಲ. ಈಗ ಏಳು-ಎಂಟು ವರ್ಷಗಳಿಂದ ಮತ್ತೆ ಅದು ಶುರುವಾಗಿದೆ.

* **ಈಗಿನ ಯುವಪೀಳಿಗೆ ಎಷ್ಟು ಜನ education ಮುಗಿಸಿ ಪಟ್ಟಣ ಸೇರಿದ್ದಾರೆ? ಎಷ್ಟು ಜನ ಊರಿನಲ್ಲಿದ್ದಾರೆ?**

- ಪ್ರಾಯಶಃ ಶತಪ್ರತಿಶತ ಹೊರಗಿದ್ದಾರೆ. *ನಮ್ಮ ಜನಾಂಗದವರು ಹಿಂದಿನಿಂದಲೂ, ಹೊಸ ಹೊಸ ಪರಿಸರ ಹುಡುಕಿ, ಅದನ್ನು ಉತ್ತಮಪಡಿಸಿಕೊಂಡು ಜೀವನ ನಡೆಸುತ್ತಿದ್ದಾರೆ.*

ಈ. ಮಲ್ಲಾಪುರ

೦.೧) ಸುಬ್ರಹ್ಮಣ್ಯ (ಸುಬ್ಬರಾಯ)

(ಇವರು ಕಾಡಿನಲ್ಲಿ ಊರು ಕಟ್ಟಿದರು)

ಮಲ್ಲಾಪುರ ಎಂಬ ಗ್ರಾಮ ಸ್ಥಾಪನೆ ಆದದ್ದು ೧೯೨೭-೨೮ರಲ್ಲಿ. ಅದನ್ನು ಸ್ಥಾಪಿಸಿದವರು ಮುದಲಾಪುರ ಮೂಲದವರಾದ ನಿತುಂದಿಲ ಗೋತ್ರದ ರಾಮೇಶ್ವರಯ್ಯನವರು. ಹಾಸನದಿಂದ ಹಳೇಬೀಡಿನ ಮಾರ್ಗವಾಗಿ ಸಾಗಿ ಅಡುಗೂರು ಕಳೆದ ಮೇಲೆ ಕೆರೆ ದಾಟಿ ಎಡಕ್ಕೆ ತಿರುಗಿ ನಾಲ್ಕು ಕಿ.ಮೀ. ದಾಟಿದರೆ ಮಲ್ಲಾಪುರ ಸಿಗುತ್ತದೆ.



ಸುಬ್ರಹ್ಮಣ್ಯ (ಸುಬ್ಬರಾಯ)-ಪಾರ್ವತಮ್ಮ ದಂಪತಿ ಮಲ್ಲಾಪುರ



ಸುಬ್ಬರಾಯರು ಮತ್ತು ಕುಟುಂಬದವರು ತೋಡಿದ ನೆಲ ಬಾವಿ (ಬೋರ್‌ವೆಲ್ ಬಂದ ಮೇಲೆ) ಪಾಳು ಬಿದ್ದು ಈಗ ಕುಂಬಳದ ಬಳ್ಳಿ ಹಬ್ಬಿದೆ

ಕೇಶವ + ನಂಜಮ್ಮ
(ಕೃಷಿ)

ಸುಬ್ರಹ್ಮಣ್ಯ + ಸುಬ್ಬಮ್ಮ
(ಕೃಷಿ)

ಸೂರ್ಯನಾರಾಯಣ (ಕೃಷಿ)
ರಾಮೇಶ್ವರಯ್ಯ + ಸಾವಿತ್ರಮ್ಮ (ಉಪಾಧ್ಯಾಯ)

ಕೇಶವಮೂರ್ತಿ
ಸುಬ್ರಹ್ಮಣ್ಯ (ಸುಬ್ಬರಾಯ: ಜ.೧೯೧೬) + ಪಾರ್ವತಮ್ಮ (ಕೃಷಿ)
ನಂಜುಂಡಯ್ಯ (ಆನಂದ)

ರಂಗನಾಥ (ಪೌತಿ) — ಬಿ.ಎಸ್‌ಸಿ. ಮಾಡಿದ ಒಬ್ಬ ಮಗ ಕೃಷಿಕ, ಇನ್ನೊಬ್ಬ ಮಗ ನೌಕರಿಗೆ
ನಾಗೇಶ (ಕೃಷಿ) — ಮಗ ಮೈಸೂರಿನಲ್ಲಿ ನೌಕರಿ
ಸತ್ಯನಾರಾಯಣ (ಪೌತಿ)
ರಾಮೇಶ್ವರಯ್ಯ — ಒಬ್ಬ ಮಗ ಜರ್ಮನಿಯಲ್ಲಿ, ಮತ್ತೊಬ್ಬ ಮಗ ಹಾಸನದಲ್ಲಿ ನೌಕರಿ
ಭಾಗ್ಯಲಕ್ಷ್ಮಿ
ಸರೋಜಮ್ಮ
ಕೇಶವಮೂರ್ತಿ ನೌಕರಿ

ಸುಬ್ರಹ್ಮಣ್ಯ ಅವರ ವಂಶವೃಕ್ಷ



ಸುಬ್ಬರಾಯರ ಕುಟುಂಬವರ್ಗದವರೇ ಸೇರಿ ಕಟ್ಟಿಕೊಂಡ ಮನೆಗಳು:ಮಲ್ಲಾಪುರ

ಮುದಲಾಪುರದಲ್ಲಿದ್ದ ಕಾಲದಲ್ಲಿ ಪ್ಲೇಗು ಬಂದು ಸುಬ್ರಹ್ಮಣ್ಯ, ಸುಬ್ಬಮ್ಮ ಹಾಗೂ ಇವರಿಬ್ಬರ ಮಗ ಸೂರ್ಯನಾರಾಯಣ, ಮತ್ತು ಅವರ ಪತ್ನಿ ಒಟ್ಟಿಗೆ ಮೃತರಾದರು. ಇದರಿಂದಾಗಿ ಸುಬ್ರಹ್ಮಣ್ಯ ಅವರ ಇನ್ನೊಬ್ಬ ಮಗ ರಾಮೇಶ್ವರಯ್ಯನವರು ಹೋಚೇಹಳ್ಳಿಗೆ ವಲಸೆ ಹೋದರು, ಅಧ್ಯಾಪಕರಾಗಿ ೧೮ ವರ್ಷ ಸೇವೆ ಸಲ್ಲಿಸಿದರು, ರಾಜೀನಾಮೆ ಕೊಟ್ಟರು.

ಆಗ ಅಲ್ಲಿ ಸುತ್ತಲೂ ಬೇಚಿರಾಕ್ ಗ್ರಾಮಗಳಿದ್ದುವು. ಜಮೀನು ಪಾಳು ಬಿದ್ದಿತ್ತು. ಕಾಡು ಬೆಳೆದಿತ್ತು. ಹುಲಿ, ಚಿರತೆ, ಕಾಡುಕಿರುಬ, ಮುಳ್ಳು ಹಂದಿ ಇಂಥ ಪ್ರಾಣಿಗಳು ವಿಪರೀತ ಇದ್ದವು.

ಹರಿಬಿಹಳ್ಳಿ ಶಾನುಭೋಗರಾಗಿದ್ದವರು ರಾಮೇಶ್ವರಯ್ಯ ನವರ ಶಿಷ್ಯರು. ಮಲ್ಲಾಪುರಕ್ಕೆ ೪ ಮೈಲು ದೂರದ ಘಟ್ಟಹಳ್ಳಿಯಲ್ಲಿ ರಾಮೇಶ್ವರಯ್ಯನವರು ೧೦ ವರ್ಷ ಅಧ್ಯಾಪಕರಾಗಿ ಸೇವೆ ಸಲ್ಲಿಸಿದ್ದರು. ಶಾನುಭೋಗರ ದೆಸೆಯಿಂದ ಮಲ್ಲಾಪುರದಲ್ಲಿ ೧೫ ಎಕರೆ ಜಮೀನು ಸಿಕ್ಕಿತ್ತು.

ಅದನ್ನು ರೂಢಿಸಿದ್ದು ಹೇಗೆ ಎಂಬ ಪ್ರಶ್ನೆಗೆ ಸುಬ್ರಹ್ಮಣ್ಯ (ಸುಬ್ಬರಾಯ) ಅವರು ಕೊಟ್ಟ ಮಾಹಿತಿ ಇಲ್ಲಿದೆ.
ಆ ಕಾಲಕ್ಕೆ ವಿಪರೀತ ಈಚಲು ಕಾಡು. ಮೂರು ತಿಂಗಳು ಎಡೆಬಿಡದೆ ಮಳೆ ಸುರಿಯುತ್ತಿತ್ತು. ಕೆರೆ ಒಣಗಿದ್ದು ಕಂಡೇ ಇರಲಿಲ್ಲ.

ಉತ್ತು ಹದ ಮಾಡಿದರು

ರಾಮೇಶ್ವರಯ್ಯನವರು ಮಲ್ಲಾಪುರ ಎಂಬಲ್ಲಿ ತಳ ಊರಿದಾಗ ಅವರ ಮಗ ಸುಬ್ಬರಾಯರಿಗೆ ೧೨ ವರ್ಷ. ಅವರೊಬ್ಬರೇ ತಮ್ಮ ಜಮೀನಿನಲ್ಲಿ *ಸ್ವತಃ ಉಳುಮೆ* ಮಾಡಿದರು. ಸುತ್ತಣ ಊರುಗಳಲ್ಲಿ ತೆಂಗಿನಮರ ಹತ್ತಿ ಕಾಯಿ ಕಿತ್ತುಕೊಡುತ್ತಿದ್ದರು. *ಮರಕ್ಕೆ ಒಂದು ಕಾಯಿ* ಸಿಗುತ್ತಿತ್ತು. ಹಾಗೆ ದೊರೆತ ತಳಲು ಹೂಳಿ ಗಿಡ ಏಳಿಸಿದರು. ಮತ್ತೂ ೧೫ ಎಕರೆ ವಿಸ್ತರಿಸಿದರು. *ತೋಟ, ಹೊಲ, ಗದ್ದೆ* ಮೂರೂ ವ್ಯವಸಾಯ ಮಾಡಿದರು. ೧೯೪೬ರಲ್ಲಿ ರಾಮೇಶ್ವರಯ್ಯನವರು ಗತಿಸುವ ಹೊತ್ತಿಗೆ ತೋಟವೂ ಫಸಲಿಗೆ ಬಂದಿತ್ತು.

ಬಾವಿ ತೋಡಿದರು

ಸುಬ್ಬರಾಯರ ಮನೆಯ ಮಗ್ಗುಲಿಗೆ ಒಂದು ಪಾಳು ನೆಲಬಾವಿ ಇತ್ತು. ಸುಮಾರು ೨೦೦ ಅಡಿ ಸುತ್ತಳತೆಯ, ೪೦-೫೦ ಅಡಿ ಆಳದ ಬಾವಿ ಅದು. *ಅದನ್ನು ತೆಗೆದವರು ಸುಬ್ಬರಾಯರು ಮತ್ತು ಅವರ ಕುಟುಂಬದವರು.* ಜನಸಂಖ್ಯೆ ಹೆಚ್ಚಿದ ಮೇಲೂ ಇಡೀ ಊರಿಗೆ ಅದರಿಂದ ನೀರು ದೊರೆಯುತ್ತಿತ್ತು. ಅದರಿಂದ ನೀರು ಎತ್ತಿ ತಮ್ಮ ಜಮೀನಿಗೆ ಹಾಯಿಸುತ್ತಿದ್ದರು. ಬೋರ್‌ವೆಲ್ ಯುಗ ಬಂದ ಮೇಲೆ ಆ ಬಾವಿ ಪಾಳು ಬಿತ್ತು. ಕುಂಬಳದ ಬಳ್ಳಿಗಳು ಹಬ್ಬಿ ಹರಡಿಕೊಂಡವು.



ಪಾರ್ವತಮ್ಮ-ಸುಬ್ಬರಾಯ ದಂಪತಿ ತಮ್ಮ ಕುಟುಂಬವರ್ಗದೊಂದಿಗೆ:ಮಲ್ಲಾಪುರ



ಸೌತೆ ಬೀಜ ಸಿದ್ಧ ಮಾಡುತ್ತಿರುವ ಸುಬ್ಬರಾಯರು:ಮಲ್ಲಾಪುರ

ಆಲೆ ಹೂಡಿದರು

ಬತ್ತ, ರಾಗಿ, ಕಬ್ಬು, ತರಕಾರಿ- ಗದ್ದೆ ಮತ್ತು ಹೊಲದ ಬೆಳೆಗಳು. ತೋಟದಲ್ಲಿ ಅಡಿಕೆ, ಬಾಳೆ, ತೆಂಗು ಬೆಳೆದರು. ಒಟ್ಟು ಮನೆ. ಆಲೆ ಹೂಡುತ್ತಿದ್ದರು. ೫೦೦-೬೦೦ ಚೀಲ ಬೆಲ್ಲ ತಯಾರಿಸುತ್ತಿದ್ದರು. ತರಕಾರಿಗೆ ಒಂದು ಗಾಡಿಗೆ ಐದು ರೂ. ಕೂಡ ದೊರಕದಾಗ ಕಬ್ಬನ್ನೇ ಹೆಚ್ಚು ಬೆಳೆದರು.

ಮನೆಯವರೇ ಸೇರಿ ಒಂದು ಮನೆ ಕಟ್ಟಿಕೊಂಡರು. ಹಾಗೆ ಕಟ್ಟಿದ್ದು ೧೯೪೫ರಲ್ಲಿ. *ಮಣ್ಣು, ಮರದ ಕೆಲಸ ಕೂಡ ತಾವೇ ಸ್ವತಃ ಮಾಡಿಕೊಂಡರು.* ಮುಖ್ಯವಾಗಿ ಅಡಿಕೆ ಮತ್ತು ತೆಂಗು ಬೆಳೆಸಿದ್ದರು.

ಹುಲಿ ಬಂದಿತ್ತು

ಅದಕ್ಕೂ ಮೊದಲು ಅವರು ವಾಸಿಸುತ್ತಿದ್ದುದು ಸೋಗೆ ಗುಡಿಸಿಲಿನಲ್ಲಿ. ಹಾಗಿರುವಾಗ, ಕೊಟ್ಟಿಗೆಯಲ್ಲಿ ದನಗಳು ಸೋಗೆ ಕಿತ್ತು ಕಿತ್ತು ಒಂದೆಡೆ ಕಿಂಡಿಯಾಗಿತ್ತು. ರಾತ್ರಿ *ಹುಲಿಯೊಂದು* ಮೂತಿ ತೂರಿಸಿ ಒಂದು ಕರುವನ್ನು ಎಳೆದುಕೊಳ್ಳುತ್ತಿತ್ತು. ಕರು ಕಂಗಾಲಾಗಿ ಕೂಗ ಹತ್ತಿತು. ರಾಮೇಶ್ವರಯ್ಯನವರ ಹೆಂಡತಿ ವೃದ್ಧ ಸಾವಿತ್ರಮ್ಮನವರು 'ಇದೇನಿದೂ, ಕರು ಹೀಗೆ ಅರಚುತ್ತಿದೆ' ಎಂದು ಬುಡ್ಡಿದೀಪ ಹತ್ತಿಸಿದರು. ಕರುವನ್ನು ಏನೋ ಹೊರಕ್ಕೆ ಎಳೆಯುತ್ತಿತ್ತು. ಇವರು ಈ ಕಡೆಯಿಂದ ಎಳೆದರು, ಹುಲಿ ಆ ಕಡೆಯಿಂದ ಎಳೆಯುತ್ತಿತ್ತು. ಅದು ಹುಲಿ ಎಂಬುದು ಸಾವಿತ್ರಮ್ಮನವರಿಗೆ ತಿಳಿಯದು. ಬಹಳ ಹೊತ್ತು ಎಳೆದಾಟ ನಡೆದ ಮೇಲೆ ಹುಲಿ ಬಿಟ್ಟು ಹೋಯಿತು. ಪ್ರಾಯಃ ಸೂರಿನ ದಬ್ಬೆ ಅಡ್ಡ ಬಂದಿತ್ತು. ದೀಪದ ಬೆಂಕಿಗೂ ಹೆದರಿರಬೇಕು. ಕರುವಿಗೆ ಗಾಯವಾಗಿತ್ತು. ಔಷಧಿ ಮಾಡಿ ಉಳಿಸಿಕೊಂಡರು.

ಕಂಡ ಅಭಿವೃದ್ಧಿ

ಸುಬ್ಬರಾಯರ ಮಕ್ಕಳ ಕಾಲಕ್ಕೆ ೧೦೦೦ ತೆಂಗು ಎದ್ದಿದೆ, ಮೂರು ಎಕರೆ ಅಡಿಕೆ ತೋಟ ಬಂದಿದೆ. ಹಿಂದೆ ಬದನೆ, ಬೀನ್ಸ್ ಮಾತ್ರ ಬೆಳೆಯುತ್ತಿದ್ದರೆ ಈಗ ಮುಸಕಿನ ಜೋಳ, ಕೋಸು, ಆಲುಗೆಡ್ಡೆ ಕೂಡ ಬೆಳೆಯುತ್ತಿದ್ದಾರೆ. ಟ್ರಾಕ್ಟರ್ ತಂದಿದ್ದಾರೆ.

ಈಗ ರಸ್ತೆ ಆಗಿದೆ, ಕರೆಂಟ್ ಬಂದಿದೆ. ಆದರೆ ೧೦ ವರ್ಷದಿಂದೀಚೆಗೆ ಮಳೆ ಕಡಮೆಯಾಗಿದೆ, ಮೂರು ತಿಂಗಳಲ್ಲಿ ಕೆರೆ ಒಣಗಿ ಹೋಗುತ್ತದೆ. ಇವರೂ ಬೋರ್‌ವೆಲ್ ತೆಗೆಸಿದ್ದಾರೆ.

ಹಿಂದೆ ರಸ್ತೆ ಇರದಾಗ ಕಷ್ಟ ಇತ್ತು. ತರಕಾರಿ ಸೋನೆಯ ಹೊತ್ತಿಗೆ ಬರುತ್ತಿತ್ತು. ಮೂಟೆಗಳನ್ನು ಬಹಳ ದೂರ ಹೊತ್ತು ದಿಬ್ಬಕ್ಕೆ ಸಾಗಿಸಬೇಕಿತ್ತು. ಗಾಡಿ ರಸ್ತೆಯೂ ಸರಿ ಇರಲಿಲ್ಲ. ಹಾಸನಕ್ಕೆ ಹೋಗುವ ಹೊತ್ತಿಗೇ ಸಂಜೆ ಆಗುತ್ತಿತ್ತು.



ದುಡಿದು ದುಡಿದು ನವೆದ ನಾಗೇಶ್:ಮಲ್ಲಾಪುರ

ಶಿಕ್ಷಣವೂ ಕಠಿಣವಾಗಿತ್ತು. ಮೂರು ಮೈಲು ದೂರದ ಹಗರೆಗೆ ನಡೆದು ಶಾಲೆಗೆ ಹೋಗುತ್ತಿದ್ದರು. ಹೆಚ್ಚಿನ ಓದಿಗಾಗಿ ಆರು ಮೈಲು ದೂರದ ಹಳೇಬೀಡಿಗೆ ಸೈಕಲ್ ತುಳಿಯುತ್ತಿದ್ದರು. ಇನ್ನೂ ಮುಂದಕ್ಕೆ ನಗರಗಳಲ್ಲಿ ಕೋಣೆ ಹಿಡಿದು ಓದಬೇಕಿತ್ತು.

ಈಗ ಕುಟುಂಬ ಬೆಳೆದಿದೆ. ಆದರೆ ಅನೇಕರು ನಗರಗಳಲ್ಲಿ ನೌಕರಿ ಮಾಡಲು ಹೋಗಿದ್ದಾರೆ. ಹಳ್ಳಿಯಲ್ಲಿರುವವರೇ ಎಲ್ಲ ಜಮೀನಿನ ವ್ಯವಸಾಯ ವನ್ನೂ ಮಾಡುತ್ತಾರೆ. ಯಾವ ಜಮೀನೂ ಕಳೆದಿಲ್ಲ.

ಊರು ಬೆಳೆಯಿತು

ಈಗ ಊರು ಬೆಳೆದಿದೆ. ವಡ್ಡರು, ಲಿಂಗಾಯಿತರು, ಒಕ್ಕಲಿಗರು ಸೇರಿ ೧೦೦ ಮನೆ ಇದೆ. ಸಂಕೇತಿ ಗಳದೇ ನಾಲ್ಕು ಮನೆ ಆಗಿದೆ. ಸುಬ್ಬರಾಯರ ಮಕ್ಕಳದೇ ಅದರಲ್ಲಿ ಮೂರು ಮನೆ. ಈಗೀಗ ಕಳ್ಳತನ ಆರಂಭವಾಗಿದೆ. ಆ ಸಮಸ್ಯೆ ಊರಿನ ಎಲ್ಲರಿಗೂ ಇದೆ. ಇತರರೊಡನೆ ಸಂಬಂಧ ಸೌಹಾರ್ದವಾಗಿದೆ.

ಜನ ಶಿಕಾರಿ ಮಾಡಿರುವುದರಿಂದ ಕಾಡುಪ್ರಾಣಿಗಳು ಈಗ ಇಲ್ಲ. ಜೋಳದ ಕಾಲದಲ್ಲಿ ಕಾಡುಹಂದಿ ಬರುತ್ತದೆ. ಹಿಂದೆ ಒಬ್ಬೊಬ್ಬರ ಮನೆಯಲ್ಲೂ ನೂರು ರಾಸುಗಳಿರುತ್ತಿದ್ದವು. ಸುಬ್ಬರಾಯರೇ ೪ ಜೋಡಿ ಎತ್ತು ಇಟ್ಟಿದ್ದರು. ೩೫ ಎಮ್ಮೆ ೨೫ ದನ ಕಟ್ಟಿದ್ದರು.

ಈಗ ಜನಸಂಖ್ಯೆ ಹೆಚ್ಚಿದೆ, ಗುಡ್ಡಗಳ ತುದಿಯವರೆಗೂ ಉತ್ತಿದ್ದಾರೆ. ಮೇಯಲು ಜಾಗವಿಲ್ಲ. ರಾಸುಗಳು ಕಾಡಿಗೆ ಮೇಯಲು ಹೋಗುತ್ತಿದ್ದವು. ಈಗ ಅದೂ ಇಲ್ಲ. ಈಗ ಕೆಲವರು ಒಂದೆರಡು ಸಿಂಧಿ ಹಸು ಕಟ್ಟಿದ್ದಾರೆ.

ಇತ್ತೀಚೆಗೆ ಅಂದರೆ ೧೯೭೦ರ ಹೊತ್ತಿಗೆ ಹೊಸ ಮನೆ ಕಟ್ಟಿಕೊಂಡಿದ್ದಾರೆ. ನಾಟಾಗಳನ್ನೂ ಬಳಸಿದ್ದಾರೆ. ಜೀವನಮಟ್ಟ ಸುಧಾರಿಸಿದೆ.

ಸಮಸ್ಯೆಗಳೂ ಉಂಟು

ಆದರೆ ಸಮಸ್ಯೆಗಳು ಇದ್ದೇ ಇರುತ್ತವೆ. ಹಿತ್ತಲಲ್ಲಿ ಕೊಳೆತ ಸೌತೆಯ ಗುಡ್ಡೆ ಬಿದ್ದಿತ್ತು. ಅವನ್ನು ಬೀಜಕ್ಕೆ ಬಳಸಿಕೊಳ್ಳುತ್ತಿದ್ದರು. "ಒಂದು ಪ್ಯಾಕೆಟ್‌ಗೆ (ಗೊಬ್ಬರದ ಚೀಲ) ಹಬ್ಬದ ವೇಳೆ ೧೩೦ ರೂ ಸಿಗುತ್ತೆ. ಉಳಿದಂತೆ ೨೫ ರೂ. ಕೊಟ್ಟರೆ ಹೊಟ್ಟೆ ಉರಿಯಲ್ಲವೆ?" ಎಂದರು. ಹಾಗಾಗಿ ಅದನ್ನು ಕೊಳೆಯಲು ಬಿಟ್ಟಿದ್ದರು.

ಮನೆಯ ಹಿರಿಯ ಮಗ ನಾಗೇಶ್‌ಗೆ ಆರ್ಥ್ರೈಟಿಸ್ ಆಗಿ ಹಾಸಿಗೆ ಹಿಡಿದಿದ್ದರು. ಕಾಲಿನ ಆಣಿಗೆ ಚಿಕಿತ್ಸೆ ಮಾಡಿಕೊಂಡ ಮೇಲೆ ಕಾಲಿನಿಂದ ಉಳಿದ ಕಡೆಗೂ ಈ ಕೀಲುನೋವು ಹರಡಿತು ಎಂದು ಅವರು ಭಾವಿಸಿದ್ದರು. ಎಲ್ಲ ನಗರಗಳ ಬಹು ವೈದ್ಯರ ಚಿಕಿತ್ಸೆ ನಡೆದಿತ್ತು. ಗುಣ ಕಂಡಿರಲಿಲ್ಲ. ದುಡಿಯಲಾಗದೆ ಮಲಗಿರಬೇಕಾದ ಸ್ಥಿತಿಗಾಗಿ ಮರುಗುತ್ತಿದ್ದರು. ರೇಡಿಯೊ ಅವರ ಶಿಕ್ಷಣ ಮತ್ತು ಮನೋರಂಜನೆಯ ಮುಖ್ಯ ಭಾಗವಾಗಿತ್ತು.

೦.೨) ಗಣೇಶಮೂರ್ತಿ

ಸುಬ್ಬರಾಯರ ನಿತುಂದಿಲ ಗೋತ್ರದ ಕುಟುಂಬದ ಜೊತೆಗೆ ಈ ಊರಲ್ಲಿರುವ ಸಂಕೇತಿಗಳ ಇನ್ನೊಂದೇ ಕುಟುಂಬ ವಾಧೂಲಸ ಗೋತ್ರದ ಗಣೇಶಮೂರ್ತಿ ಅವರದ್ದು.

ಗಣೇಶಮೂರ್ತಿಯವರ ವಂಶವೃಕ್ಷ

ಸುಬ್ರಹ್ಮಣ್ಯ (ಕೃಷ್ಣಾಪುರ)

ಸುಬ್ಬಾವಧಾನಿ + ಪಾರ್ವತಮ್ಮ

ಕೆ. ರಾಮಚಂದ್ರಯ್ಯ + ರಮಾಮಣಿ

ಜಯಲಕ್ಷ್ಮಿ | ಸರಸ್ವತಿ | ಲಕ್ಷ್ಮೀದೇವಿ | ನಾಗಲಕ್ಷ್ಮಿ | ಗಣೇಶಮೂರ್ತಿ + ಪದ್ಮಾವತಿ(ಕಟ್ಟೆ ಹೊಸಹಳ್ಳಿ)

ಎಂ.ಜಿ.ಫಣೀಂದ್ರ | ವಿನಯ್ | ಅಂಬಿಕಾ

ಕೃಷ್ಣಾಪುರದಿಂದ ಬಂದ ರಾಮಚಂದ್ರಯ್ಯನವರು

ಕೆ. ರಾಮಚಂದ್ರಯ್ಯನವರ ಕುಟುಂಬವನ್ನು ಸುಬ್ಬರಾಯರೇ ಇಲ್ಲಿಗೆ ಕರೆಸಿಕೊಂಡರು - ೧೯೫೦ರಲ್ಲಿ. ಕೃಷ್ಣಾಪುರದಲ್ಲಿ ಏನೋ ಗಲಾಟೆ ನಡೆದದ್ದರಿಂದ ರಾಮಚಂದ್ರಯನವರಿಗೂ ಇಂಥ ವಲಸೆಯ ಅಗತ್ಯ ಕಂಡಿತ್ತು.

ರಾಮಚಂದ್ರಯ್ಯನವರು ತಮಗೆ ದೊರೆತ ೪ ಎಕರೆ ಜಮೀನಿನಲ್ಲಿದ್ದ ೩೦೦೦ *ಈಚಲು ಬೊಡ್ಡೆಗಳನ್ನು ತಾವೇ ಕಿತ್ತರು,* ನೆಲಕ್ಕೆ ಅಲ್ಲಲ್ಲೇ ಹೂಳಿದರು. ಇದೊಂದು ಅಪರೂಪದ ನಿದರ್ಶನ. *ಬಾಳೆಯದಿಂಡು, ಹುರುಳಿ ತಿಂದುಕೊಂಡು ದುಡಿದವರು* ಅವರು.

ಪ್ರಯೋಗಶೀಲತೆ

ಅವರ ಮಗ ಗಣೇಶಮೂರ್ತಿ ತೆಂಗು-ಅಡಿಕೆ-ಬಾಳೆ ಇಷ್ಟಕ್ಕೇ ತಮ್ಮ ಕೃಷಿಯನ್ನು ಸೀಮಿತಗೊಳಿಸಿಕೊಂಡಿರುವುದಕ್ಕೆ ಜನಬಲದ ಕೊರತೆ ಕಾರಣ. ಉಳಿದಂತೆ *೧೦೦ ಕಾಫಿ ಗಿಡ* ಹಾಕುವ ಮೂಲಕ *ಪ್ರಯೋಗಶೀಲತೆ* ಮೆರೆದಿದ್ದಾರೆ.

ತೆಂಗಿನ ರೋಗಕ್ಕೂ ಇವರು ಚಿಕಿತ್ಸೆ ನಡೆಸಿಲ್ಲ. "ಅದು ೫ ವರ್ಷ ಇರುತ್ತೆ - ಚಿಕಿತ್ಸೆ ಮಾಡಿದರೂ ಅಷ್ಟೆ, ಮಾಡದಿದ್ದರೂ ಅಷ್ಟೆ" ಎಂಬುದು ಅವರ ಸಿದ್ಧಾಂತ. ಈ ವರ್ಷ ಮಳೆ ಬಂದದ್ದರಿಂದ ಶೇ.೨೦ರಷ್ಟು ರೋಗ ಹೋಗಿದೆ ಎನ್ನುತ್ತಾರೆ. ಅಡಿಕೆಯನ್ನು ತೂಕದ ಲೆಕ್ಕದಲ್ಲಿ



ಗಣೇಶಮೂರ್ತಿ ಅವರ ಮನೆಯ ಮಗ್ಗುಲು:ಮಲ್ಲಾಪುರ



ಪದ್ಮಾವತಿ-ಗಣೇಶಮೂರ್ತಿ ದಂಪತಿ ತಮ್ಮ ಮಗ ವಿನಯ್‌ನೊಂದಿಗೆ ತಮ್ಮ ತೋಟದಲ್ಲಿ:ಮಲ್ಲಾಪುರ

ಗುತ್ತಿಗೆ ಕೊಡುತ್ತಾರೆ. ಅಡಿಕೆ ಮತ್ತು ತೆಂಗಿನ ಬೇರು ತುಂಬಾ ಹೆಣೆದುಕೊಂಡಿರುವುದರಿಂದ ಇಲ್ಲಿ *ವೀಳೆ ಬರುವುದಿಲ್ಲ* ಎಂಬ ವಿವರಣೆ ಅವರ ಪತ್ನಿಯವರದ್ದು. ಹಿಂದೆ ನೆಲಬಾವಿಯಿಂದಲೇ ತೂಕ ಹಾಕುತ್ತಿದ್ದವರು *ಈಗ ಬೋರ್* ತೆಗೆಸಿ ಸ್ಪ್ರಿಂಕ್ಲರ್ ಬಳಸುತ್ತಿದ್ದಾರೆ. ೬೦-೭೦ ತೆಂಗು, ೨೦೦೦ ಅಡಕೆ ಹೊಂದಿರುವ ಅವರಿಗೆ ತೃಪ್ತಿ ಇದೆ. ಸರಾಸರಿ ದಿನಕ್ಕೆ ಒಂದು ಬಾಳೆಗೊನೆ ಕೊಯ್ಯುತ್ತಾರೆ. ಮಗ ವಿನಯ್ ಕಾಲೇಜಿನಲ್ಲಿ ಕಲಿಯುತ್ತಿರುವ ಹುಡುಗ; *ವ್ಯವಸಾಯದಲ್ಲಿ ಪ್ರೀತಿ* ಬೆಳೆಸಿಕೊಂಡಿದ್ದಾನೆ. ಅದು ಸಂಕೇತಿ ಸಮುದಾಯದ ಕೃಷಿ ಪರಂಪರೆಗೂ ಒಂದು *ಆಶಾಕಿರಣದ ಸಂಕೇತ.*

ಉ) ಹಿರಿಗನಹಳ್ಳಿ



ಕೊಟ್ಟಿಗೆಯ ಮೇಲೆ ಹಬ್ಬಿದ ಕುಂಬಳ:ಹಿರಿಗನಹಳ್ಳಿ

ಕಟ್ಟಾಯದಿಂದ ರಾಯರಕೊಪ್ಪಲಿಗೆ ಹೋಗುವ ಮಾರ್ಗದಲ್ಲಿ ೫ ಕಿ.ಮೀ. ಕ್ರಮಿಸಿದರೆ ಸಿಗುವ ಪುಟ್ಟಹಳ್ಳಿ ಹಿರಿಗನಹಳ್ಳಿ. 'ಒಳ್ಳೆಯ ಫಲವತ್ತಾದ ಮಣ್ಣಿನ ಜಾಗ ಆದ್ದರಿಂದ ಹಿರಿಗನಹಳ್ಳಿ ಅಂದರೆ ಹಿರಿದಾದ ಹೆಸರಾಯಿತು' ಎಂದು ಕೆಲ ವಕ್ತೃಗಳು ಕೊಡುವ ವಿವರಣೆ ಸ್ಥಳನಾಮಗಳ ವ್ಯುತ್ಪತ್ತಿಯ ದೃಷ್ಟಿಯಿಂದ ಸರಿಹೊಂದದು. ಹಿರಿಯವನು, ಹಿರಿಯಮಗ, ದೊಡ್ಡ ಮನುಷ್ಯ ಎಂಬ ಅರ್ಥ ಈ ಸ್ಥಳನಾಮದ ಮೂಲದಲ್ಲಿರಬಹುದು. ಆದರೆ ಮಲೆನಾಡಿನ ತಪ್ಪಲಿನಲ್ಲಿರುವ ಇಲ್ಲಿನ ಮಣ್ಣು ಫಲವತ್ತಾಗಿರುವುದು ಸಹಜವಾದ ಸಂಗತಿ.

ಈಗ ಅರಣ್ಯ ಬೆಳೆದಿದೆ

ಇಲ್ಲಿನ ಅರಣ್ಯ ಪರಿಸರ ಮೂರು ದಶಕದ ಹಿಂದೆ ಬೋಳಾಗಿದ್ದುದು ಈಗ ಸೊಂಪಾಗಿದೆ; ಅರಣ್ಯದ ಅನುಭವ ಕೊಡುತ್ತದೆ. ಶ್ರೀರಂಗನಾಥನ ಬೆಟ್ಟವೂ ಈಗ ಗಿಡಮರಗಳಿಂದ ತುಂಬಿದೆ. ಈ ವರ್ಷದ ಮಳೆಯಿಂದಾಗಿ ಎಲ್ಲೆಲ್ಲೂ ಹಸುರು ಮುಕ್ಕಳಿಸುತ್ತಿದೆ. ಈಗ ಇಷ್ಟು ಸೊಂಪಾಗಿ ಮರಗಳು ಬೆಳೆದಿರುವುದಕ್ಕೂ ಒಂದು ಸಹಜ ಕಾರಣವಿದೆ. ಜನರು ಗೋಬರ್ ಅನಿಲವನ್ನೂ ಅನಿಲದ ಸಿಲಿಂಡರುಗಳನ್ನೂ ಬಳಸಲು ಪ್ರಾರಂಭಿಸಿದ ಮೇಲೆ ಮರ ಕಡಿಯುವುದು ನಿಂತಿದೆ. ಇದೊಂದು ಒಳ್ಳೆಯ ಬೆಳವಣಿಗೆ.

ಈಗಿನ ಸೌಲಭ್ಯ

ಗೊರೂರು ಅಣೆಕಟ್ಟೆಯಿಂದಾಗಿ ಹಿನ್ನೀರು ಹರಡಿದ್ದರಿಂದ ಮೊದಲಿನ ರಸ್ತೆ ಮುಳುಗಡೆಯಾಗಿದೆ. ರಾಯರಕೊಪ್ಪಲಿಗೆ ಈಗ ಹೋಗುವ ರಸ್ತೆ ಹಿರಿಗನಹಳ್ಳಿಯ ಪಕ್ಕದಲ್ಲೇ ಸಾಗುವುದರಿಂದ ಆ ಊರಿಗೆ ಒಂದು ರಸ್ತೆ ದೊರೆತಂತಾಗಿದೆ, ಬಸ್ಸುಗಳು ಬರುತ್ತಿವೆ. ಮಕ್ಕಳ ಶಿಕ್ಷಣಕ್ಕೂ ಅನುಕೂಲ ವಾಗಿದೆ. ಆದರೆ, ಸುಮಾರು ಎರಡು ಶತಮಾನಗಳ ಹಿಂದೆ ಸಂಕೇತಿಗಳು ದಟ್ಟ ಅರಣ್ಯದ ಈ ಭಾಗದಲ್ಲಿ ಒಂದು ನೆಲೆಯನ್ನು ಕಲ್ಪಿಸಿಕೊಂಡು ಸಾಕಾರಗೊಳಿಸಿ ಜೀವನಹೋರಾಟ ಮಾಡಿದಾಗ ವಿಪರೀತ ಮಳೆ, ಚಳಿಯಿಂದಾಗಿ ಹೊಟ್ಟೆಗೆ ಗಡ್ಡೆರೋಗ ಬಂದು ಸಾಯುತ್ತಿದ್ದರು.

ಒಳಊರು

ನೇರ್ಲಿಗೆಯಿಂದ ಕಟ್ಟಾಯ, ಮುದ್ದನಹಳ್ಳಿ, ಹಿರಿಗನಹಳ್ಳಿಯ ಹೊರ ಊರು, ಒಳ ಊರು - ಹೀಗೆ ಈ ಜನರ ವಲಸೆ ನಡೆದಿದೆ. ಇಲ್ಲಿನ ಆಯಾಸ್ಯರು ಬಂದುದು ಆನೆಗೊಂದಿಯಿಂದ ಎಂಬುದು ಹಿರಿಯ ವಕ್ತೃ ಅನಂತಪದ್ಮನಾಭಯ್ಯ ಅವರ ಖಚಿತ ಮಾಹಿತಿಯಾಗಿತ್ತು.

ಚೌಡುವಳ್ಳಿ ಕ್ರಾಸ್‌ನಲ್ಲಿ ತಿರುಗಿ ಹಿರಿಗನಹಳ್ಳಿಯತ್ತ ಚಲಿಸುವಾಗ ನಾವು ದಾರಿಯನ್ನು ವಿಚಾರಿಸಿದ್ದು ಕಬ್ಬಿನ ಗದ್ದೆ ಕೊಯ್ಲು ಮಾಡಿ ಲಾರಿಗೆ ತುಂಬುತ್ತಿದ್ದ ರೈತರನ್ನು; ಅವರು ಸಂಕೇತಿ ರೈತರೇ ಆಗಿದ್ದು ಮಾತ್ರವಲ್ಲ, ಅವರ ಗೃಹಿಣಿ ರಮಾಮಣಿಯವರೇ ಗದ್ದೆಯಿಂದ ಬಂದು ನಮಗೆ ವಕ್ತೃಗಳ ಪರಿಚಯ ಮಾಡಿಸಿದ್ದು ಒಂದು ಕಾಕತಾಳೀಯ.



ಗಾಡಿಗೊಂದು ನೆರಳು : ಉರುವಲಿನ ಗುಡ್ಡೆ : ಶಿಥಿಲವಾದ ಮನೆ : ಹಿರಿಗನಹಳ್ಳಿ

ಎಚ್.ಎನ್. ಮಂಜುನಾಥಯ್ಯ

ಹೂಡಿದ್ದ 'ಆರು' ಬಿಟ್ಟು ಬಂದು ನನಗಾಗಿ ಮಾಹಿತಿ ನೀಡಿದ ಮೊದಲ ವಕ್ತೃ ಶ್ರೀ ಹೆಚ್.ಎನ್.ಮಂಜುನಾಥಯ್ಯ. ಹೇಮಾವತಿ ಅಣೆಕಟ್ಟೆಯ ಹಿನ್ನೀರಿನಿಂದ ಮುಳುಗಡೆಯಾದ ಊರು ಇದು. ಜನವಸತಿ ಬೋರೆಯ ಮೇಲಿದ್ದುದು ಈಗಂತೂ ಉಳಿದಿದೆ. ಜಮಿನು: ೪೦ ಎಕರೆ ಇದ್ದ ಅಡಕೆ ತೋಟ ಈಗ ೧೨ ಎಕರೆಗೆ ಇಳಿದಿದೆ; ಗದ್ದೆ ೫೦ ಎಕರೆಯಿಂದ ೧೦ಕ್ಕೆ ಇಳಿದಿದೆ; ಹೊಲ ೫೦-೬೦ ಎಕರೆಯಷ್ಟು ಮಾತ್ರ ಉಳಿದಿದೆ.

ಈ ಊರು ಇಲ್ಲಿ ಬೆಳೆದದ್ದು ಹೇಗೆ ಹೇಳಿ ಮಂಜುನಾಥಯ್ಯನವರೆ

ತೋಟದ ಆಗ್ರ ಊರಿನ ಪೂರ್ವಕ್ಕೆ ಇದೆ. ಈ ಜನ ಮುದ್ದನಹಳ್ಳಿಯಲ್ಲಿ ಗಡ್ಡೆರೋಗವಾಗಿ ಹಿರಿಗನಹಳ್ಳಿಯ ಮೇಲೂರಿಗೆ ಬಂದರು, ಪ್ಲೇಗಿನಿಂದಾಗಿ ೧೯೪೪ರಲ್ಲಿ ಒಳ ಊರಿಗೆ ಬಂದರು. ಕಟ್ಟಾಯದಿಂದ ಮುದ್ದನಹಳ್ಳಿಗೆ ಬಂದದ್ದು ಅರಣ್ಯಪ್ರದೇಶದ ಆಯಕಟ್ಟಿನ ಜಾಗದ ಆಸೆಗೆ. ನೇರ್ಲಿಗೆ ಬಿಟ್ಟು ಕಟ್ಟಾಯಕ್ಕೆ ಬಂದದ್ದು ತನುವಾದ ನೆಲೆಯ ಹುಡುಕಾಟದ ಕಾರಣದಿಂದ. ಅದು ಸಂಕೇತಿಗಳ ಬದುಕಿನ ಹೋರಾಟ. ಹಿರಿಗನಹಳ್ಳಿಯ ತೋಟಕ್ಕಾಗಿ ಕೆರೆ ನಿರ್ಮಿಸಿದ್ದು ಕರ್ತೃತ್ವಶೀಲತೆ.

ವ್ಯವಸಾಯ ಹೇಗೆ ಸಾಗಿದೆ?

ಇಲ್ಲಿ ಈಗಲೂ ತೋಟದಲ್ಲಿ ಸಾಂಪ್ರದಾಯಿಕ ಬೆಳೆಯೇ - ಅಡಿಕೆ, ತೆಂಗು, ಬಾಳೆ - ಅಪರೂಪಕ್ಕೆ ವೀಳೆ - ಇನ್ನೂ ಅಪರೂಪಕ್ಕೆ ಕೊಂಚ ಏಲಕ್ಕಿ, ಕಾಫಿ.

ಮಳೆ, ಶೀತದಿಂದ ಗಡ್ಡೆರೋಗಪೀಡಿತವಾಗಿದ್ದ ಇಲ್ಲೂ ಈಗ ತೋಟಗಳಲ್ಲೂ ತೆರೆದ ಬಾವಿಗಳಿಲ್ಲ, ಬೋರ್‌ವೆಲ್ ಬಂದಿದೆ. ಐದು ವರ್ಷದ ನಂತರ ಈ ವರ್ಷ ಕೆರೆ ತುಂಬಿದೆ. ಒಬ್ಬೊಬ್ಬರೇ ಬೋರ್‌ವೆಲ್‌ಗಾಗಿ ಲಕ್ಷಗಟ್ಟಲೆ ಸುರಿದಿದ್ದಾರೆ. ೧೫೦ ಅಡಿ ಆಳದಲ್ಲಿ ನೀರು ಸಿಕ್ಕಿದೆ. ನೀರೇ ಸಿಗದೆ ಕಣ್ಣೀರು ತರಿಸಿದ ಸಂದರ್ಭಗಳೂ ಉಂಟು. ಕುಡಿಯುವ ನೀರಿಗೂ ಬೋರ್‌ವೆಲ್ ನೆರವಿಗೆ ಬಂದಿದೆ. ಗದ್ದೆಯಲ್ಲಿ ಭತ್ತ ಬೆಳೆಯುವುದೂ ನೀರಿದ್ದಾಗ ಮಾತ್ರ. ಬೋರ್‌ವೆಲ್‌ನಲ್ಲಿ ನೀರು ಬತ್ತಿದರೆ ಹೊಲಗದ್ದೆಗಳಲ್ಲಿ ಕಬ್ಬು, ಜೋಳ, ರಾಗಿ, ಆಲೂಗಡ್ಡೆ, ತೋಟ ಉಳಿಸಿಕೊಳ್ಳುವುದೇ ಕಷ್ಟದ ಕೆಲಸವಾಗಿದೆ - ಎಂಬ ಈಗಿನ ಮಾತು ೨೦೦ ವರ್ಷಗಳ ಅಂತರದಲ್ಲಿ ಆದ ಬದಲಾವಣೆಯ ಸೂಚನೆ.

ಬರ ಮತ್ತು ಶೀತ ಎರಡು ಸಂದರ್ಭದಲ್ಲೂ ಅಡಕೆಗೆ ಅಣಬೆರೋಗ; ಜತೆಗೆ ಹಿಡ್ಲಮುಂಡಿ ರೋಗ.

ಇಲ್ಲಿ ಅಡಕೆ ತುಡಿಕೆಯ ಪದ್ಧತಿ ಇಲ್ಲ. ಗುತ್ತಿಗೆ ಕೊಡುವುದೇ ರೂಢಿ. ಎಕರೆಗೆ ೨೫-೩೦ ಕ್ವಿಂಟಾಲ್ ಇಳವರಿ ಇದೆ. ಕಬ್ಬು ೪೦ ಕಿ.ಮೀ. ದೂರದ ಶ್ರೀನಿವಾಸಪುರದ ಕಾರ್ಖಾನೆಗೆ ಹೋಗುತ್ತದೆ.

ಸಂಕೇತಿಗಳು ಎಷ್ಟು ಒಕ್ಕಲು ಇದ್ದೀರಿ?

ಹಿಂದೆ ೧೬ ಒಕ್ಕಲು ಇದ್ದುದು ಈಗ ಸಂಕೇತಿಗಳ ಒಂಬತ್ತು ಒಕ್ಕಲು ಮಾತ್ರ ಇದೆ. ಸತ್ತವರು, ಮತ್ತು ನೌಕರಿಗಾಗಿ ಊರು ಬಿಟ್ಟವರಿಂದಾಗಿ ಈಗ ಇಲ್ಲಿನ ಸಂಕೇತಿಗಳ ಸಂಖ್ಯೆ ೩೦ರ ಒಳಗಿದೆ. ರಾಮೋತ್ಸವದ ವೇಳೆ ಇನ್ನೂ ೩೦ ಜನ ಆಗುತ್ತಾರೆ. ಇಲ್ಲಿನವರಲ್ಲಿ ನೇರಲಿಗೆ ಭಾರದ್ವಾಜಿಗಳೇ ಹೆಚ್ಚು; ಹಿಂದೆ ಆಯಾಸ್ಯರ ನಾಲ್ಕು ಮನೆಗಳಿದ್ದವು; ವತ್ಸರೂ ಅಷ್ಟೇ ಸಂಖ್ಯೆಯಲ್ಲಿದ್ದರು. ಕಡು ಬಡವರಾಗಲಿ ಅತಿ ಶ್ರೀಮಂತರಾಗಲಿ ಇಲ್ಲಿಲ್ಲ; 'ಎಲ್ಲರದೂ ಅನ್ನ ಬಟ್ಟೆಗೆ ನೇರ' ಅನ್ನುವ ಸ್ಥಿತಿ. ಸಂಕೇತಿಗಳನ್ನು ಬಿಟ್ಟರೆ ಒಕ್ಕಲಿಗರ ಒಂಬತ್ತು ಕುಟುಂಬ ಇಲ್ಲಿದೆ. ಸಂಬಂಧ ಸೌಹಾರ್ದಯುತವಾಗಿದೆ.

ಉಪಕಸುಬುಗಳು?

ದೊನ್ನೆ ಕಟ್ಟುವುದು, ಹಗ್ಗ ಹೊಸೆಯುವುದು, ಜನಿವಾರ ಮಾಡುವುದು ಅವರ ಉಪ ಕಸಬುಗಳು. ವಾರಕ್ಕೆ ಒಂದೂವರೆ ಸಾವಿರ ಮುತ್ತುಗದ ಎಲೆ ಹಚ್ಚುತ್ತಿದ್ದ ಕಾಲವೂ ಇತ್ತು. ಇದು ಇಸ್ಪಿಟ್ ಮುಕ್ತ ಊರು ಎಂಬುದಕ್ಕೂ ಈ ಸಂಗತಿಗಳಿಗೂ ಸಂಬಂಧವಿರಬಹುದು. ಇಲ್ಲಿಂದಲೂ ಎಂಜಿನಿಯರುಗಳು ಅನೇಕರು ಬಂದಿದ್ದಾರೆ. ಉಳಿದ ಮಕ್ಕಳೂ ಪದವೀಧರರಾಗಿದ್ದಾರೆ.

೧೦-೧೫-೨೦ ರಾಸುಗಳಿದ್ದ ಜಾಗದಲ್ಲಿ ಈಗ ಒಂದು ಜತೆ ಎತ್ತು ನಾಲ್ಕು ಹಸು ಕಟ್ಟಿಕೊಂಡವರೇ ಹೆಚ್ಚು. ಪ್ರತಿ ಮನೆಯವರೂ ಸ್ವಂತ *ಉಳುಮೆ ಮಾಡಿಕೊಳ್ಳುತ್ತಾರೆ.* ಟ್ರ್ಯಾಕ್ಟರ್‌ನಿಂದ ಉಳುಮೆ ಮಾಡುವುದಕ್ಕಿಂತ ನೇಗಿಲಿನಿಂದ ಉಳುವುದೇ ಶ್ರಮದ ದೃಷ್ಟಿಯಿಂದ ಹಿತಕರ ಎನ್ನುತ್ತಾರೆ ಇವರು.

ಸಾಂಸ್ಕೃತಿಕ ಮುಖ?

ಈ ಊರಿನಲ್ಲಿ ಪೂರ್ಣ ವೇದಶಾಸ್ತ್ರಗಳನ್ನು ಅಭ್ಯಸಿಸಿದವರು ಈಗ ಇಲ್ಲ. ಆದರೆ ಎಲ್ಲ ಮನೆಗಳಲ್ಲೂ ನಿತ್ಯ ದೇವರ ಪೂಜೆ ಮಾಡುವಷ್ಟು ಅನುಷ್ಠಾನವಿದೆ. 'ಮೈಮುರಿದು ದುಡಿದು ಬಂದ ಮೇಲೆ ಮಲಗಿದರೆ ಸಾಕು ಎನಿಸಿರುತ್ತದೆ' ಎಂಬ ಹಲುಬುವಿಕೆಯಲ್ಲಿ ಅರ್ಥವಿದೆ. ಆದರೆ ಹಾಗೆ ದುಡಿದೂ ವೇದಶಾಸ್ತ್ರ ಕಲಿತವರ ಪರಂಪರೆ ಈ ಸಮುದಾಯದಲ್ಲಿದೆ. ನರಸಿಂಹಾವಧಾನಿಗಳೂ, ಅನಂತಪದ್ಮನಾಭಯ್ಯನವರೂ ಈ ಊರಿನ ಗತಿಸಿದ ವೈದಿಕರು. ಅವರಿಗೆ ಜ್ಯೌತಿಷವೂ ತಿಳಿದಿತ್ತು. ಕೆಲ ನಾಟಿ ಔಷಧಿ ತಿಳಿದವರು ಈಗಲೂ ಇದ್ದಾರೆ. ಶ್ರೀ ರಂಗನಾಥಸ್ವಾಮಿಯ ದೇವಸ್ಥಾನ ಬೆಟ್ಟದ ಮೇಲಿದೆ. ಊರೊಳಗೆ ರಾಮಮಂದಿರವಿದೆ. ಪ್ರತಿ ಶನಿವಾರ ಅಲ್ಲಿ ಭಜನೆ ನಡೆಯುತ್ತದೆ. ಸಮಾರಂಭಗಳೂ ಅಲ್ಲಿ ನಡೆಯುತ್ತವೆ.

ನಿಮ್ಮ ಮನೆಗಳ ಮರಗೆಲಸ ಚೆನ್ನಾಗಿದೆ

ಎಲ್ಲ ಸಂಕೇತಿಗಳೂ ಇರುವುದು ಒಂದು ಪುಟ್ಟ ಬೀದಿಯಲ್ಲಿ. *ಎಲ್ಲ ಮನೆಗಳೂ ಸ್ವಂತ ದುಡಿಮೆಯಿಂದ ಕಟ್ಟಿದಂಥವು.* ಇಲ್ಲಿದ್ದ ಮೇಷ್ಟರೊಬ್ಬರು *ಮರಗೆಲಸದಲ್ಲೂ* ಪರಿಶ್ರಮ ಹೊಂದಿದ್ದರು. ಅವರ ನೈಪುಣ್ಯಕ್ಕೆ ಈ ಮನೆಗಳ ಮರಗೆಲಸ ಸಾಕ್ಷಿಯಾಗಿದೆ. ಮಾತ್ರವಲ್ಲ, ಪ್ರತಿ ಮನೆಯವರೂ ತಮ್ಮ ಮನೆ *ಬಾವಿಯನ್ನು ತಾವೇ ತೋಡಿಕೊಂಡಿದ್ದರು.* ಅವುಗಳ ಪೈಕಿ ಈಗ ಉಳಿದಿರುವುದು ಒಂದು ಮಾತ್ರ. ಹೀಗೆ ಬಾವಿ ತೋಡುವಾಗ ಒಂದು ಬಾವಿ ೬೦ ಅಡಿ ಆಳಕ್ಕೆ ಹೋಗಿತ್ತು. ಇಲ್ಲಿನದು ರಂಗೋಲೆ ಕಲ್ಲಿನ ನೆಲ. ೬೦ ಅಡಿಯೂ ಅಂಥದೇ ಕಲ್ಲಿತ್ತು. ೬೦ ಅಡಿ ಅಗೆದ ಮೇಲೆ ಅಲ್ಲೊಂದು ಗೂಡಲ್ಲಿ ಕಪ್ಪೆ ಜೀವಿಸುತ್ತಿತ್ತಂತೆ. ಅದು ಊರಿನವರಿಗೆ ಇಂದೂ ವಿಸ್ಮಯದ ವಿಷಯವಾಗಿದೆ. ಸಂಪ್ರದಾಯದ ಹಾಡುಗಳಲ್ಲಿ ಪ್ರವೀಣೆಯರಾಗಿದ್ದ ಸೀತಮ್ಮ, ಶೇಷಮ್ಮನವರನ್ನು ಇಲ್ಲಿನವರು ಮರೆತಿಲ್ಲ.

ಈಗ ಸಂಕೇತಿಗಳ ಒಂಬತ್ತು ಒಕ್ಕಲು ಮಾತ್ರ ಇದೆ ಎಂದಿರಿ.

ಸಾಮಾನ್ಯವಾಗಿ ಎಲ್ಲ ಕಡೆ ನಡೆಯುತ್ತಿರುವಂತೆಯೇ ಇಲ್ಲಿಯೂ ಓದಿದವರು ವ್ಯವಸಾಯವನ್ನು ಪ್ರೀತಿಸುವುದಿಲ್ಲ, ಅದಕ್ಕಾಗಿ ಹಳ್ಳಿಗೆ ಹಿಂದಿರುಗಬಯಸುವುದಿಲ್ಲ. ಹಾಗಾಗಿ ಇನ್ನೊಂದು ೨೦-೩೦ ವರ್ಷಕ್ಕೆ ಊರು ಖಾಲಿ ಆಗುತ್ತದೆಂಬುದು ಎಲ್ಲ ಮನೆಯವರ ಸಮಾನ ತೀರ್ಮಾನವಾಗಿದೆ.



ಜೋಳ ತುಂಬುತ್ತಿರುವ ರೈತ ದಂಪತಿ : ಹಿರಿಗನಹಳ್ಳಿ

ಹೆಚ್.ಎಸ್. ಮಂಜುನಾಥ (೪೯) ಅವರ ವಂಶವೃಕ್ಷ

ನರಸಿಂಹಾವಧಾನಿ + ತಿಮ್ಮಮ್ಮ
(ಕೃಷಿ+ವೇದ)

ಅಯ್ಯು
ಶೈಲಜ
ಅನಂತಮೂರ್ತಿ

ನಂಜಪ್ಪ + ರಾಮಲಕ್ಷ್ಮಿ
(ಕೃಷಿ+ ಮಂತ್ರ)

ಮಂಜುನಾಥ+ರಾಜೇಶ್ವರಿ
ಕೃಷಿ+ಪೌರೋಹಿತ್ಯ ಮರಿತಮ್ಮನಹಳ್ಳಿ
ನಟರಾಜ್ ನಾಗಶ್ರೀ

ಶ್ರೀನಿವಾಸ+ಲಲಿತ
ಸ್ಮಿತಾ ಲಕ್ಷ್ಮೀನಾರಾಯಣ ಸುಬ್ರಹ್ಮಣ್ಯ

ಅನಂತಪದ್ಮನಾಭಯ್ಯ
(ಕೃಷಿ+ವೈದಿಕ)

ವೆಂಕಟೇಶಮೂರ್ತಿ-ರಮಾಮಣಿ ಅವರ ವಂಶವೃಕ್ಷ

ವೆಂಕಟರಮಣಯ್ಯ
(ಕೃಷಿ)

ಭೋಜಪ್ಪ+ಸೀತಮ್ಮ
(ಕೃಷಿ) (ಹಾಡುಗಾರ್ತಿ)

ಎಚ್.ಬಿ.ವೆಂಕಟೇಶಮೂರ್ತಿ+ರಮಾಮಣಿ
(ಅಗ್ರಹಾರ)

ಶ್ರೀನಾಥ ಮಂಜುನಾಥ ಗೀತ



ಹಳ್ಳಿಯ ಮನೆಯ ಮುಂದಿನ ದೃಶ್ಯ
ಈಗ ತುಸು ಬದಲಾಗಿದೆ
ಹಿರಿಗನಹಳ್ಳಿ

ಬಣ್ಣದ ಚಿತ್ರಗಳು

ಕಬ್ಬು ಕಟಾವು ಮಾಡುತ್ತಿದ್ದ ಜಾಗದಿಂದ ಬಂದು ವಕ್ತೃಗಳಿಗೆ ಪರಿಚಯಿಸಿದವರು ಶ್ರೀಮತಿ ರಮಾಮಣಿ ಅವರು. ಅವರ ಮಗಳು ಗೀತಾ ಅವರು ಬಣ್ಣದಲ್ಲಿ ಬಿಡಿಸಿದ ಚಿತ್ರಗಳೂ ಅವರ (ಹೊಸ) ಮನೆಯ ಅಂಗಳವನ್ನು ಅಲಂಕರಿಸಿದ್ದವು.

ಅಂಧ ರೈತನ ಸಾಹಸ

ಅಲ್ಲೇ ಕುಳಿತು ಮಂಜುನಾಥ ಅವರು ತಿಳಿಸಿದ ಸಂಗತಿ ಬೆರಗು ಹುಟ್ಟಿಸುವಂಥದು. ಅವರ ಸೋದರ ಅನಂತ ಅವರು ಅಂಧರು. ಊರಿನಲ್ಲಿ ಸ್ವತಂತ್ರವಾಗಿ ಓಡಾಡುತ್ತಾರೆ, ಗದ್ದೆ ಕುಯ್ಲು ಮಾಡುತ್ತಾರೆ, ಮಾತ್ರವಲ್ಲ ಮರಕ್ಕೆ ಹತ್ತಿ ಕಾಯಿ ಕೀಳುತ್ತಾರೆ. ಮಾತ್ರವಲ್ಲ ಬೆರಳಿನಿಂದ ಮಿಡಿದು ಕಾಯಿ ಬಲಿತಿದೆಯೇ ಎಂದು ಪರೀಕ್ಷಿಸಬಲ್ಲರು ಕೂಡ. ಅವರು ಈಗ ಊರಿಗೆ ಹೋಗಿದ್ದರಿಂದ ಅವರ ಛಾಯಾಚಿತ್ರ ತೆಗೆಯಲಾಗದೇ ಹೋಯಿತು.

ಕುದುರೆನಿಪುಣ ನಾಗಪ್ಪ

೯೬ ವರ್ಷದ ನರಸಿಂಹಯ್ಯನವರ ಅಜ್ಜ ನಾಗಪ್ಪನವರು ಸುತ್ತಣ ಎಲ್ಲ ಊರುಗಳಿಗೂ ಯಜಮಾನನಂತಿದ್ದವರು; ಕುದುರೆಗಳನ್ನೂ ಸಾಕಿದ್ದರು, ಅವುಗಳ ಲಕ್ಷಣವನ್ನು ಚೆನ್ನಾಗಿ ಅರಿತಿದ್ದರು. ಡೆಪ್ಯುಟಿ ಕಮಿಷನರ್ ಮೊದಲಾದ ಅಧಿಕಾರಿಗಳು ಕುದುರೆ ಆರಿಸಲು ಇವರ ನೆರವು ಪಡೆಯುತ್ತಿದ್ದರಂತೆ.

ನಾಗಪ್ಪನವರ ವಂಶವೃಕ್ಷ

ಕೇಶವ
|
ನಾಗಪ್ಪ + ಮಹಾಲಕ್ಷ್ಮಿ
|
ಸುಬ್ಬರಾಯ + ವೆಂಕಟಲಕ್ಷ್ಮಿ
|
ನರಸಿಂಹಯ್ಯ + ಸುಂದರಮ್ಮ

ಪರೋಪಕಾರಿ ಸುಬ್ಬರಾಯರು

ನರಸಿಂಹಯ್ಯನವರ ತಂದೆ ಸುಬ್ಬರಾಯರು ಸು.೧೫೦ ವರ್ಷಗಳ ಹಿಂದೆ ಕಟ್ಟಿಸಿದ *ಕಲ್ಯಾಣಿ* ಇಂದಿಗೂ ನೀರು ತುಂಬಿಕೊಂಡಿದೆ, ಕಲ್ಲುಹಾಸುಗಳು ಜೀವಂತ ಸಾಕ್ಷಿಗಳಾಗಿವೆ. ಪಕ್ಕದಲ್ಲಿ *ಅರಳಿಮರ* ಬೃಹದಾಕಾರವಾಗಿ ಈಗಲೂ ಕಂಗೊಳಿಸುತ್ತಿದೆ. ಊರಿನಿಂದ ಕಲ್ಯಾಣಿಯವರೆಗೆ ನಡೆದು ಹೋಗಲು *ಕಲ್ಲು ಹಾಸಿ ರಸ್ತೆಯನ್ನೂ* ಅವರು ನಿರ್ಮಿಸಿದ್ದರು. ಬ್ರಾಹ್ಮಣರು ಬಟ್ಟೆ ಒಗೆದು ಸ್ನಾನ ಮಾಡಿ ಜಪಾನುಷ್ಠಾನ ಮಾಡಲು ಸುಬ್ಬರಾಯರು ಆ ಏರ್ಪಾಟು ಮಾಡಿದ್ದರಂತೆ.



ಬತ್ತ ಹರಡಿದ ಅಂಗಳ : ಹಿರಿಗನಹಳ್ಳಿ

ನರಸಿಂಹಯ್ಯನವರ ಮಕ್ಕಳಲ್ಲಿ ಒಬ್ಬರಾದ ಹೆಚ್.ಎನ್. ನಾಗರಾಜ (೬೩) ಅವರಿಗೆ ಆ ಬಗೆಗೆ ಅತೀವ ಹೆಮ್ಮೆ.

ಸಂತುಷ್ಟಿ

ಹಿರಿಗನಹಳ್ಳಿಯ ಈ ಎಲ್ಲ ಕಷ್ಟಜೀವಿಗಳು ಮಧ್ಯಮವರ್ಗದ ಜೀವನ ಸಾಗಿಸುತ್ತಿದ್ದಾರೆ. ಆದರೆ ಅವರ *ಸಂತುಷ್ಟಿಯನ್ನು* ಕಂಡವರಿಗೆ 'ಇದಕ್ಕಿಂತ ಶ್ರೀಮಂತಿಕೆ ಬೇಕೆ' ಎನಿಸುತ್ತದೆ. ಆ ಸಂತುಷ್ಟಿಯ ಶ್ರೀಮಂತಿಕೆ ಪಟ್ಟಣಗಳಲ್ಲಿ ಮರೀಚಿಕೆಯಾಗಿ ಎಲ್ಲರನ್ನೂ ಕಾಡುತ್ತಿದೆ.

ಊ) ಹಾನಗಲ್

ಅಂತರ್ಜಲ ಪತ್ತೆ ಮಾಡುವ ಲವಕುಮಾರ

ವ್ಯವಸಾಯಗಾರನ ಮುಂದಿನ ಸವಾಲುಗಳು ಇಂಥ ಅರಿವನ್ನು ಹುಟ್ಟಿಸುತ್ತವೆ.

ಹಾನಗಲ್ಲಿನ ಶ್ರೀ ಸೂರ್ಯನಾರಾಯಣ ಅವರ ಮಗ ಲವಕುಮಾರ ಈಗ ಅಂತರ್ಜಲ ಪತ್ತೆ ಮಾಡುವ ನಿಪುಣ. ತಿಮ್ಮನಹಳ್ಳಿಯಲ್ಲಿ ಒಬ್ಬಾತ ಇಂಥದೇ ಚಳಕ ಮಾಡುವಾತನಿಂದ ಮೊದಲು ಪ್ರೇರಣೆ ದೊರಕಿತ್ತು. ಅನಂತರ ಸ್ವತಃ ತನ್ನ ಅಣ್ಣ ಎಚ್.ಎಸ್. ಪ್ರಭಾಕರ್ ಮಲ್ಲಾಡಿಹಳ್ಳಿಯಿಂದ ಬೇಸಗೆ ರಜಕ್ಕೆಂದು ಬಂದಾಗ ಅವರೊಡಗೂಡಿ ಪ್ರಯೋಗ ನಡೆಸಿದರು. ತೆಂಗಿನಕಾಯಿ ಅಂಗೈ ಮೇಲೆ ಇಟ್ಟು ಚಲಿಸುತ್ತಿದ್ದರೆ ಅಂತರ್ಜಲ ಇದ್ದ ಎಡೆ *ಕಾಯಿ ಜುಟ್ಟಿನ ಕಡೆ ಮೇಲೇಳುತ್ತದೆ.* ಲವಕುಮಾರ ಆ ಪ್ರಯೋಗದಲ್ಲಿ ಯಶಸ್ಸು ಕಂಡರು.

ತೆಂಗಿನಕಾಯಿನಿಂದ ಪ್ರಾರಂಭವಾಗಿ ಈ ಪರೀಕ್ಷೆ ಮತ್ತೂ ಕೆಲವು ರೀತಿಗೆ ವಿಸ್ತರಿಸಿತು. ಬೇವಿನಕಡ್ಡಿ, ನೀರು ತುಂಬಿದ ಬಿಂದಿಗೆ, ದಾರದಿಂದ ಇಳಿಬಿಟ್ಟು ಹಿಡಿದ ವಾಚು - ಇವುಗಳಲ್ಲೆಲ್ಲ ಪ್ರಯತ್ನ ಮಾಡಿದರು. ನೀರು ತುಂಬಿದ ಬಿಂದಿಗೆ ಕೂಡ ಅಂಗೈಗೆ ಭಾರವಲ್ಲ. ನೀರು ಇದ್ದ ಕಡೆಯಂತೂ ದಡ ದಡ ಎಂದು ಅದು ಕಂಪಿಸತೊಡಗುತ್ತದೆ. ವಾಚು ನೀರಿದ್ದೆಡೆ, ಪ್ರದಕ್ಷಿಣಾಕಾರವಾಗಿ ಸುತ್ತ ತೊಡಗುತ್ತದೆ. ತೆಂಗಿನಕಾಯನ್ನು ಹಾಗೆ ದಾರದಿಂದ ಇಳಿಬಿಟ್ಟರಂತೂ ಎಷ್ಟು ಇಂಚು ನೀರು ಭೂಮಿಯ ತಳಕ್ಕಿದೆಯೋ ಅಷ್ಟು ತೂಕ ತೂಗುತ್ತದೆ. ಇವೆಲ್ಲ, ಹಿಡಿದವನನ್ನು *ನೀರಿರುವ ಕಡೆಗೆ ಎಳೆದೊಯ್ಯುತ್ತದೆ.* ಎಷ್ಟು ಆಳದಲ್ಲಿ ನೀರಿದೆ ಎಂಬುದೂ ತಿಳಿಯುತ್ತದೆ.

ಕಾರ್ಯಾಚರಣೆಗೆ ದೈವಬಲ ಉಂಟು. ಮೊದಲು *ಹಾನಗಲ್ಲಮ್ಮನ ಹೆಸರಲ್ಲಿ ಪೂಜೆ* ನಡೆಸುತ್ತಾರೆ. ಮಾತ್ರವಲ್ಲ, ಇಡೀ ವರ್ಷ ಅಮ್ಮನ ಪೂಜೆಗೆ ಬೇಕಾದ ಬತ್ತಿ ಎಣ್ಣೆ ವೆಚ್ಚವನ್ನೆಲ್ಲ ತಾವೇ ಭರಿಸುತ್ತಾರೆ. ಅವರಿಗೆ ಕೆಲವು ಗ್ರಾಹಕರು ರೂ.೧೦೦-೨೦೦-೫೦೦ ಹೀಗೆ ಕೊಡುತ್ತಾರೆ. ಕೊಡದೆ ಇರುವವರೂ ಉಂಟು.

ಕಳೆದ ಎರಡು ವರ್ಷದಲ್ಲಿ ಲವಕುಮಾರ *ನೂರಾರು ಬಾವಿಗೆ* ಅಂತರ್ಜಲ ಪತ್ತೆ ಮಾಡಿದ್ದಾರೆ. ಹಾಗೆ ತೆಗೆಸಿದ ೧೫೦ ಬಾವಿಯಲ್ಲಿ ೨೫ ವಿಫಲವಾಗಿದೆ. ಅದಕ್ಕೂ ಹೊಣೆ ಗ್ರಾಹಕರೇ ಎಂಬುದು ಲವಕುಮಾರರ ವಿವರಣೆ. "ಆಳ ಹೆಚ್ಚಾಯಿತೆಂದೋ, ಬಂಡೆ ಸಿಕ್ಕಿತೆಂದೋ ಅರ್ಧಕ್ಕೇ ಕೆಲಸ ನಿಲ್ಲಿಸಿದರೆ ನಾವೇನು ಮಾಡಕ್ಕಾಗುತ್ತೆ?" ಎನ್ನುತ್ತಾರೆ ಅವರು.

"ತಟ್ಟೆ ಮೇಲೆ ತೆಂಗಿನಕಾಯಿ ಇಟ್ಟುಕೊಂಡು ಹೊರಟರೆ ತೀರಿತು. ಅದರ ಮೇಲೆ ಮನುಷ್ಯನೇ ಕೂತರೂ ಅದು ಗರಗರ ತಿರುಗುತ್ತದೆ. ನೀರು ಮೇಲೇ ಇದ್ದರೆ ಅವನ್ನ ಕೂರಕ್ಕೇ ಬಿಡಲ್ಲ, ತಿರುಗಿಸಿ ಎಸೆಯುತ್ತೆ. ನೀರು ಆಳದಲ್ಲಿದ್ದರೆ ಮಾತ್ರ ಸ್ವಲ್ಪ ನಿಧಾನವಾಗಿ ತಿರುಗುತ್ತೆ" ಎನ್ನುವಾಗ ಅವರ *ಆತ್ಮವಿಶ್ವಾಸ* ಕಾಣುತ್ತದೆ.

ಹತ್ತಿರದ ಹಾನಗಲ್ಲು, ಅಗ್ರಹಾರ, ಬಸವಾಪಟ್ಟಣ ಮಾತ್ರವಲ್ಲ, ಕೊಡ್ಲಿಪೇಟೆ, ಕೋಣನೂರು, ರಾಮನಾಥಪುರ ಹೀಗೆ ಹಲವು ಊರುಗಳಲ್ಲಿ ಅವರು ಅಂತರ್ಜಲ ಪತ್ತೆ ಮಾಡಿಕೊಟ್ಟಿದ್ದಾರೆ. ಕೈನಲ್ಲಿ *ಜಲರೇಖೆ* ಇದ್ದರೆ ಮಾತ್ರ ಈ ಪ್ರಯೋಗಗಳು ಯಶಸ್ವಿಯಾಗುತ್ತವೆ ಎನ್ನುವುದು ಅವರು ಕೊಡುವ ವಿವರಣೆ. ಅರೆಬರೆ ವಿಶ್ವಾಸ, ಸಂಶಯಗ್ರಸ್ತ ಪ್ರಯತ್ನ - ಇವುಗಳಿಂದ ಕರ್ತವ್ಯದಲ್ಲಿ ಸೋತು ನೀರು ಪಡೆಯುವಲ್ಲಿ ವಿಫಲರಾದವರ *ಅಪಪ್ರಚಾರ* ತಮ್ಮ ಸೇವೆಗೆ ಇರುವ ಒಂದು ಅಡ್ಡಿ ಎಂಬುದು ಅವರ ಅಳಲು. ಆದರೇನು? ನಂಬಿ ಫಲ ಕಂಡವರು ಬಹುಸಂಖ್ಯಾತರು. ಹೊಸೂರಿನಲ್ಲಿ ಕೇವಲ ೪೦ ಅಡಿಯ ಕೆಳಗೆ ಆರು ಇಂಚು ನೀರು ದೊರೆತ ಸಂದರ್ಭ ಅವರ *ಹೆಮ್ಮೆಯ ಸಾಧನೆ;* ಅವರ ಕಾಯಕದ ಸಾರ್ಥಕ್ಯದ ಸಂಕೇತ ಕೂಡ.

೩೮) ಐಚನಹಳ್ಳಿ

ಐಚನಹಳ್ಳಿ ಹೊಳೆನರಸೀಪುರದಿಂದ ದಕ್ಷಿಣಕ್ಕೆ ಐದು ಕಿಮೀ ದೂರದಲ್ಲಿದೆ. ಐಚನಹಳ್ಳಿಯಿಂದ ಚಾಹಳ್ಳಿಗೆ ಮೂರು ಕಿಮೀ ದೂರ. ಐಚನಹಳ್ಳಿಯ ವ್ಯವಸಾಯ ಮಳೆಯಾಧಾರಿತವಾದದ್ದು. ಪ್ರಕೃತಿ ವಿಕೋಪದಿಂದ ಆಗಾಗ ನೀರಿಗೆ ತೊಂದರೆ ಆಗುತ್ತಲೇ ಇರುತ್ತದೆ. ಕಳೆದ ಆರು ವರ್ಷದಿಂದ ಮಳೆ ಬಂದಿಲ್ಲ-ಕೆರೆ ತುಂಬಿಲ್ಲ. ಇಲ್ಲಿಂದ ೧೦-೧೫ಕಿಮೀ ಪರಿಧಿಯಲ್ಲಿ ಯಾವ ಕೆರೆಯೂ ತುಂಬಿಲ್ಲ. ಹಾಗಾಗಿ ಇಲ್ಲಿಯ ರೈತರ ಜೀವನ ಕಷ್ಟದಲ್ಲಿದೆ. ಐಚನಹಳ್ಳಿಯ ಜನಸಂಖ್ಯೆ ೧೨೫೦. ಸಂಕೇತಿಗಳ ೧೦ ಮನೆ ಇದೆ. ದಲಿತರು, ಕುರುಬರು, ಒಕ್ಕಲಿಗರು, ಲಿಂಗಾಯಿತರು ಇದ್ದಾರೆ.

೦.೧) ನರಸಿಂಹಮೂರ್ತಿ

ಐಚನಹಳ್ಳಿಗೆ ಪ್ರವೇಶಿಸುತ್ತಲೇ ಎದುರಾದವರು ನರಸಿಂಹಮೂರ್ತಿಯವರು. ಮೊದಲು ತಮ್ಮ ಪರಿಚಯ ಮಾಡಿಕೊಂಡರು.

ನನ್ನ ತಂದೆ ಸುಬ್ಬರಾಯರು (ಗುಂಡಪ್ಪ). ತಂದೆಯ ತಂದೆ ನರಸಿಂಹಯ್ಯನವರು ಬಸವಾಪಟ್ಟಣದಿಂದ ಐಚನಹಳ್ಳಿಗೆ ಬಂದರು. ಅವರು ಕಾಲುವೆ ಮನೆ ಕೇಶವಾವಧಾನಿಗಳ ಮನೆತನಕ್ಕೆ ಸೇರಿದವರು. ಅವರು ವ್ಯವಸಾಯಗಾರರಾಗಿದ್ದರು. ಬಡವರಾಗಿದ್ದರು. ಐಚನಹಳ್ಳಿಯ ಚನ್ನಪ್ಪಯ್ಯನವರ ತಂಗಿಯವರನ್ನು ಅವರಿಗೆ ಕೊಟ್ಟಿತ್ತು. ಬಡವರಾದ್ದರಿಂದ ಅವರು ಐಚನಹಳ್ಳಿಗೇ ಬಂದು ಮಾವನವರ ಆಶ್ರಯದಲ್ಲಿದ್ದರು. ಮಾವನವರಿಂದ ಸ್ವಲ್ಪ ಜಮೀನೂ ಅವರಿಗೆ ಸಿಕ್ಕಿತ್ತು. ಅವರಿಗೆ ಮೂವರು ಮಕ್ಕಳು. ನಮ್ಮ ತಂದೆಯವರ ಕಾಲದಲ್ಲಿ ಆರ್ಥಿಕವಾಗಿ ಸ್ವಲ್ಪ ಸುಧಾರಣೆ ಕಂಡಿತು. ವ್ಯವಸಾಯದ ಜೊತೆಗೆ ಅವರು ಅಡಿಕೆ ತುಡಿಕೆ ಇತ್ಯಾದಿ ಬೇರೆ ಕೆಲವು ವ್ಯವಹಾರ ಗಳನ್ನು ಇಟ್ಟುಕೊಂಡಿದ್ದರಿಂದ ಇದು ಸಾಧ್ಯ ವಾಗಿದ್ದಿತು. ನಮ್ಮ ತಾಯಿ ಬರಗೂರಿನವರು.



ಸಂಕೇತಿಬೀದಿ:ಐಚನಹಳ್ಳಿ

ಅಂಗಡಿ ಇಟ್ಟಿದ್ದೀರಿ?

ನನಗೆ ಒಬ್ಬನೇ ಮಗ; BBM ಓದಿದಾನೆ. ಬೇರೆ ಕೆಲವು ಕೋರ್ಸುಗಳೂ ಅವನಿಗೆ ಆಗಿವೆ. ಮೈಸೂರು ಬೆಂಗಳೂರುಗಳಲ್ಲಿ ನೌಕರಿಯಲ್ಲೂ ಇದ್ದ. ಆದರೆ *ವ್ಯವಸಾಯದ ಬದುಕೇ ಉತ್ತ*ಮ ಎನಿಸಿದ್ದರಿಂದ ಹಳ್ಳಿಗೆ ಬಂದ. ವ್ಯವಸಾಯದ ಜೊತೆಗೆ, ತನ್ನ ಪದವಿಯ ಆಧಾರದ ಮೇಲೆ Bankನ ಸಾಲ ಪಡೆದು *ಅಂಗಡಿ ಇಟ್ಟ. ನೆಮ್ಮದಿಯಾಗಿದ್ದಾನೆ.* ಮಳೆ ಚೆನ್ನಾಗಿ ಆದದ್ದೇ ಆದರೆ ನಮಗೆ ಚಿಂತೆ ಇರುವುದೇ ಇಲ್ಲ. ಸಾಮಾನ್ಯವಾಗಿ *ಹೆಣ್ಣುಮಕ್ಕಳಿಗೆ ಪಟ್ಟಣದ ಆಸೆ* ಇರುವುದು ಕಂಡುಬರುತ್ತದೆ. ಆದರೆ ನನ್ನ ಸೊಸೆ ಕೂಡ ಹಳ್ಳಿಯ ಜೀವನದಲ್ಲಿ ನೆಮ್ಮದಿ ಕಾಣುತ್ತಿದ್ದಾಳೆ.

ವ್ಯವಸಾಯ?

ನಮಗೆ ಒಂದು ಎಕರೆ ತೋಟ ಇದೆ. ಅಡಿಕೆ, ಬಾಳೆ, ತೆಂಗು ಚೆನ್ನಾಗಿದೆ. ಹಂಬೂ ಇದೆ. ಬಾಳೆಗೆ ೧೫-೨೦ ವರ್ಷದಿಂದ ರೋಗ ಬಂದಿದೆ. ಇನ್ನೂ ಹೋಗಿಲ್ಲ. ತೋಟಕ್ಕೆ ಸಂಬಂಧಿಸಿದ ಸಮಸ್ತ ಕೆಲಸವನ್ನು ನಾನು ನನ್ನ ಮಗ ಪ್ರೀತಿಯಿಂದ ಸ್ವತಃ ಮಾಡುತ್ತೇವೆ. ಮಗನು *ಬಾಲ್ಯದಿಂದಲೂ ನನ್ನ ಜೊತೆ ದುಡಿಯುತ್ತಿದ್ದುದರಿಂದ* ಅವನಿಗೆ ವ್ಯವಸಾಯದಲ್ಲಿ ಅನುಭವವಿದೆ.



ನರಸಿಂಹಮೂರ್ತಿಯವರು ಇತರರೊಂದಿಗೆ ಬಸ್ಸಿಗಾಗಿ ಕಾಯುತ್ತಿರುವ ಒಂದು ಭಂಗಿ:ಐಚನಹಳ್ಳಿ

ಎಲ್ಲ ಸಂಕೇತಿಗಳಿಗೂ ಜಮೀನಿದೆಯೆ?

ಈ ಊರಿನ ೧೧ ಸಂಕೇತಿ ಮನೆಯವರಿಗೂ ತೋಟವಿದೆ. ಎಲ್ಲರೂ ಸ್ವತಂತ್ರವಾಗಿಯೇ ದುಡಿಯುತ್ತಿದ್ದಾರೆ. ಯಾರಿಗೂ ಊಟ, ಬಟ್ಟೆಗೆ ತೊಂದರೆ ಇಲ್ಲ. ಅನೇಕರಿಗೆ ಖುಷ್ಕಿ ಜಮೀನಿದೆ. ತೋಟದಲ್ಲಿ ಹೊಸ ಬೆಳೆಗಳನ್ನು ಸೇರಿಸಲು ಯಾರೂ ಆಸಕ್ತಿ ತೋರಿಸಿಲ್ಲ. ಏಕೆಂದರೆ ಹಾಗೆ ಮಾಡಿದರೆ ಯಾವ ಬೆಳೆಯೂ ಸರಿಯಾಗಿ ಬರುವುದಿಲ್ಲ.

ಚನ್ನಪ್ಪಯ್ಯನವರ ಹೆಸರು ಕೇಳಿದ್ದೇನೆ

ನಮ್ಮೂರಿನ ಚನ್ನಪ್ಪಯ್ಯನವರು ಚೆನ್ನಾಗಿ ಬಾಳಿದವರು. ಅವರದು ಕೌಂಡಿನ್ಯ ಗೋತ್ರ. ಅವರಿಗೆ ಎಲ್ಲದರಲ್ಲೂ ಬಹು ಹುಮ್ಮಸ್ಸು, ಚಾಕಚಕ್ಯತೆ ಇತ್ತು. ಬಲಿಷ್ಠರಾಗಿದ್ದರು. ಲೌಕಿಕ ಜಾಣ್ಮೆಯೂ ಇತ್ತು. ಕೆಲಸ ಮಾಡುವುದರಲ್ಲೂ ಬಹಳ ಗಟ್ಟಿಗರು-ಊಟದಲ್ಲೂ ಭೋಗಿ.

ನಿಮ್ಮ ಅಜ್ಜನವರ ಹೆಸರೂ ನರಸಿಂಹ?

ನಮ್ಮ ಮನೆದೇವರು ಕೌಶಿಕದ ನರಸಿಂಹ. ಆ ದೇವರು ಶೆಂಕೋಟ್ಟೈನಿಂದ ಕರೆತಂದುದು. ನಮ್ಮ ಮನೆತನದಲ್ಲಿ ಪರಂಪರೆಯಾಗಿ ಆ ಹೆಸರು ಬಂದಿದೆ.

ಇನ್ನು ಮೇಲೂ ಎಲ್ಲರ ಮನೆಯಲ್ಲೂ ವ್ಯವಸಾಯ ಮುಂದುವರಿಯುತ್ತದೆಯೆ?

ಪ್ರಾಯಶಃ ಈ ಊರಿನಲ್ಲಿ ಬ್ರಾಹ್ಮಣ್ಯ ಪ್ರಾರಂಭವಾಗಿ ೨೦೦ ವರ್ಷಗಳಾಗಿವೆ. ನಾನು ಕಂಡ ಹಾಗೆ ಈ ಊರಿನಲ್ಲಿ ಸಂಕೇತಿಗಳ ೧೭ ಮನೆ ಇತ್ತು. ೧೨೫ ಜನ ಇದ್ದರು. ಈಗ ಕೇವಲ ೫೦ ಜನ ಇದ್ದೇವೆ. ಅನೇಕರು ಓದಿ, ನೌಕರಿಗಾಗಿ ಪಟ್ಟಣ ಸೇರಿದ್ದಾರೆ. ಹಿಂದೆ, ತೆಂಗಿನ ಮೊಟ್ಟೆಯಿಂದ ಕದಬೆ ಮಾಡುತ್ತಿದ್ದರು-ಹಗ್ಗ ಹೊಸೆಯುತ್ತಿದ್ದರು. *ಹಿಂದೆ ಸಂಪಾದನೆ ಎಂದರೆ ಕಷ್ಟಪಟ್ಟು ದುಡಿಯುವುದು ಎಂದೇ ಆಗಿತ್ತು. ಈಗಿನ ಕಾಲಧರ್ಮ ಎಂದರೆ ಸುಲಭವಾಗಿ ಸಂಪಾದನೆ ಮಾಡುವುದು.* ಈಗಿನ ಪರಿಸ್ಥಿತಿಯಲ್ಲಿ ಮೌನ ಮತ್ತು ಸಮಾಧಾನದಿಂದಿರುವುದೇ ನಮಗೆ ಶ್ರೇಯಸ್ಸಿನ ದಾರಿ ಎಂದು ನಾನು ತಿಳಿದಿದ್ದೇನೆ. ನಮ್ಮ ಹಿಂದಿನವರು ಹಾಕಿಕೊಟ್ಟ ದಾರಿಯಲ್ಲಿ ಸಾಗಿದರೆ ನಮಗೆ ಯಶಸ್ಸಿದೆ. ನಮ್ಮ ತಂದೆ ಸೌಮ್ಯ ಜೀವಿಯಾಗಿದ್ದರು. ತಾವಾಯಿತು ತಮ್ಮ ಕೆಲಸವಾಯಿತು. ಇತರ ಹವ್ಯಾಸಗಳಿಗೆ ಹೋಗುತ್ತಿರಲಿಲ್ಲ.

೦.೨) ಕಾವೇರಿ

ನರಸಿಂಹಮೂರ್ತಿಯವರ ಸೊಸೆ ಕಾವೇರಿ. ಆಕೆ ಬೀರೂರಿನ ಬಿ.ಎಸ್. ಶಿವರಾಮಶಾಸ್ತ್ರಿಗಳ ಮಗಳು. ಅವರೇ ಅಂಗಡಿ ನೋಡಿಕೊಳ್ಳುತ್ತಿದ್ದರು.

'ಹಳ್ಳಿಗೆ ಸೇರಿದ್ದಕ್ಕೆ ಬೇಸರವಿಲ್ಲವೆ?' ಎಂದರೆ ಕಾವೇರಿ ಹೇಳುವುದು ಹೀಗೆ :

ನಮ್ಮ ತಂದೆಯವರು ಬೀರೂರಿನವರು. ಅವರಿಗೂ ತೋಟವಿದೆ. ಹಿಂದೆಲ್ಲಾ ಅವರೇ ಕೆಲಸ ಮಾಡಿ ತೋಟ ಮಾಡುತ್ತಿದ್ದರು. ಈಗ ವಯಸ್ಸಾಗಿದೆ. ನನಗೆ ಮದುವೆ ಆಗಿ ಎಂಟು ವರ್ಷ ಆಗಿದೆ. ನನಗೆ ಹಳ್ಳಿಯ ಮತ್ತು ವ್ಯವಸಾಯದ ಅನುಭವವಿದೆ. ಹಾಗಾಗಿ ನನ್ನ ಪತಿ



ತಮ್ಮ ಅಂಗಡಿಯ ಮುಂದೆ ನಿಂತ ಕಾವೇರಿ : ಐಚನಹಳ್ಳಿ


(ಓದಿದ್ದರೂ) ಹಳ್ಳಿಗೆ ಬಂದು ವ್ಯವಸಾಯದಲ್ಲಿ ತೊಡಗಿಕೊಂಡಿರುವುದರಿಂದ ಬೇಸರವೇನಿಲ್ಲ, ನೆಮ್ಮದಿಯಾಗಿದ್ದೇನೆ. ನನಗೆ ಅಂಗಡಿ ನೋಡಿಕೊಂಡ ಅನುಭವ ಏನೂ ಇರಲಿಲ್ಲ. ಜೀವನಕ್ಕೆ ಪೂರಕವಾಗುತ್ತದೆಂದು ಈಗ ಅಂಗಡಿ ಇಟ್ಟುಕೊಂಡಿದ್ದೇನೆ. ಇದನ್ನೇನೂ ನಾನು ಶುರು ಮಾಡಲಿಲ್ಲ, ನನ್ನ ಮಾವನವರೇ ಇಟ್ಟಿದ್ದ ಅಂಗಡಿಯನ್ನು ನಾನು ರೂಢಿಸಿದ್ದೇನೆ, ಅಷ್ಟೆ. ನನ್ನ ಯಜಮಾನರ ಹೆಸರಲ್ಲಿ ಅಂಗಡಿಗಾಗಿ ಸಾಲ ಪಡೆದಿದ್ದೇವೆ. ನನಗೂ ಪಿಯುಸಿ ಆಗಿದೆ. ಸ್ವಯಂ ಉದ್ಯೋಗ ನಡೆಸುವ ಬಗ್ಗೆ ವಿಧ್ಯುಕ್ತ ತರಬೇತಿಯನ್ನೂ ಪಡೆದಿದ್ದೇನೆ. ಈಗ ಹಳ್ಳಿಗೆ ತಕ್ಕಂತೆ ವ್ಯಾಪಾರ ನಡೆಯುತ್ತಿದೆ. ಸಿಟಿಯೂ ಹತ್ತಿರ ಇದೆ. Urgent ಆಗಿ ಸಾಮಾನು ಬೇಕಾದಾಗ ಜನ ಇಲ್ಲಿಗೆ ಬರುತ್ತಾರೆ. ಟೈಲರಿಂಗ್ ಕೂಡ ಮಾಡುತ್ತೇನೆ. ಅಂಗಡಿಗೆ ಸಾಮಾನು ತರುವುದನ್ನೆಲ್ಲಾ ಯಜಮಾನರೇ ಮಾಡುತ್ತಾರೆ. ಈ ಊರಲ್ಲಿ ಮೂರು ಅಂಗಡಿಗಳಿವೆ. ನಮ್ಮ ಅಂಗಡೀಲಿ ಎಲ್ಲಾ ಸಿಗುತ್ತೆ. *ಅಡಿಕೆ ಕಾಲದಲ್ಲಿ ಸುಲಿಯುವ ಕೆಲಸವನ್ನೂ* ನಾನು ಮಾಡುತ್ತೇನೆ. ಬೇಯಿಸುವುದು, ಒಣಗಿಸುವುದು-ಎಲ್ಲದರಲ್ಲೂ ತೊಡಗಿಕೊಳ್ಳುತ್ತೇನೆ. ಸಮಯ ಬಂದರೆ ಊಟ ತಿಂಡಿ ಕೊಟ್ಟು ಬರಲು *ತೋಟಕ್ಕೂ ಹೋಗುತ್ತೇನೆ.* ಸಂತೋಷದಿಂದಿದ್ದೇನೆ.

೧.೩) ಶಂಕರ

ತಂದೆಯವರಿಗೆ ವಯಸ್ಸಾದ್ದರಿಂದ ಜಮೀನು ನೋಡಿಕೊಳ್ಳಲೆಂದು P.U.C. ವಿದ್ಯಾಭ್ಯಾಸವನ್ನು ಮೊಟಕುಗೊಳಿಸಿ ಹಳ್ಳಿ ಸೇರಿದರು. ಅವರು ಹೇಳುವಂತೆ, *ಬ್ರಾಹ್ಮಣರು ಎಂದರೆ ತೋಟ; ತೋಟ ಎಂದರೆ ಬ್ರಾಹ್ಮಣರು.* ಮೊದಲು ವೀಳೆಯದೆಲೆಯನ್ನು ಚೆನ್ನಾಗಿ ಬೆಳೆದಿದ್ದ ಇವರು ಮಳೆಯಿಲ್ಲದೆ ಹಂಬು ಒಣಗಿದ ಮೇಲೆ ಈ ವಿಷಯದಲ್ಲಿ ಕೊಂಚ ನಿರಾಶರಾಗಿದ್ದಾರೆ. ಗೊಬ್ಬರ ಹಾಕುವುದು, ಹೊರಗಡೆಯಿಂದ ಒಳ್ಳೆಯ ಮಣ್ಣನ್ನು ತಂದು ತೋಟಕ್ಕೆ ಹೊಸ ಮಣ್ಣು ಸೇರಿಸುವುದು, ಗುಣಿ ತೆಗೆಯುವುದು; ಬತ್ತ ರಾಗಿ, ಜೋಳ, ಎಳ್ಳು ಬೆಳೆಯುವುದು. ಹೀಗೆ ಅವರು ಕೃಷಿಯಲ್ಲಿ ನಿರತರಾಗಿದ್ದಾರೆ. ಕೆಲವೊಮ್ಮೆ ಬೆಳೆ, ಮಳೆಯಿಂದ ಹಾಳಾಗುವುದು, ಕೆಲವೊಮ್ಮೆ ಮಳೆ ಇಲ್ಲದೇ ಹಾಳಾಗುವುದು ಎಂದು ಹೇಳುವಾಗ ಕೃಷಿಕರ ಬಗ್ಗೆ ಕನಿಕರ ಮೂಡುತ್ತೆ. ಇಷ್ಟರ ನಡುವೆಯೂ *ವ್ಯವಸಾಯದ ಕಾರಣದಿಂದ ಬ್ರಾಹ್ಮಣರ ಕರ್ಮಾನುಷ್ಠಾನಗಳಿಗೆ ತೊಂದರೆ ಆಗುತ್ತದೆ ಎಂಬುದನ್ನು ಅವರು ಒಪ್ಪುವುದಿಲ್ಲ.* ಕರ್ಮದಲ್ಲಿ ಶ್ರದ್ಧೆ ಇದ್ದರೆ, ಅವಿರತ ದುಡಿಮೆಯ



ಶಂಕರ ಅವರ ಮನೆ : ಐಚನಹಳ್ಳಿ



ಶಂಕರ ಅವರು ಮನೆಯ ಹಿಂದೆ ಮಾಡಿಕೊಂಡಿರುವ ತಿಪ್ಪೆ : ಐಚನಹಳ್ಳಿ

ನಡುವೆಯೂ ಕಾಲಾವಕಾಶ ಆಗಿಯೇ ಆಗುತ್ತದೆ ಎಂದು ಅವರು ಹೇಳುತ್ತಾರೆ. ಕರ್ಮದಲ್ಲಿ ಶ್ರದ್ಧೆಯೇ ಇಲ್ಲದಿದ್ದರೆ ಯಾವ ಕೆಲಸ ಮಾಡದವನೂ ಅವುಗಳನ್ನು ಮಾಡಲಾರ ಎಂಬ ಅವರ ಮಾತು ಗಮನಾರ್ಹ. ಅದಕ್ಕೆ ಅವರು ತಮ್ಮ ಓರಗೆಯ *ರಂಗನಾಥ ಎಂಬುವವರ ಉದಾಹರಣೆ ಕೊಡುತ್ತಾರೆ.* "ರಂಗನಾಥ ಅವರು ಗದ್ದೆಯ ಕೆಲಸ ಮಾಡುತ್ತಾರೆ, ತೋಟದ ಕೆಲಸ, ಹೊಲದ ಕೆಲಸ ಮಾಡುತ್ತಾರೆ. ಜೊತೆಗೆ ಎತ್ತುಗಾಡಿ ಇಟ್ಟುಕೊಂಡಿದ್ದಾರೆ ಬಾಡಿಗೆಗೆ ಗಾಡಿ ಹೊಡೆಯುತ್ತಾರೆ. ಇದರ ಜೊತೆಗೆ ಪೌರೋಹಿತ್ಯವನ್ನೂ ಮಾಡಿಸುತ್ತಾರೆ. ಇಷ್ಟೆಲ್ಲದರ ನಡುವೆ ಆಹ್ನಿಕವನ್ನೂ ಬಿಟ್ಟಿಲ್ಲ. ಈ ಸುತ್ತಣ ಯಾವ ಹಳ್ಳಿಯಲ್ಲೂ *ಇವರಷ್ಟು ದುಡಿಯುವ ವ್ಯಕ್ತಿಯನ್ನು ನಾನು ನೋಡಿಲ್ಲ*" ಎನ್ನುತ್ತಾರೆ.

ಶಂಕರ ಅವರು ಬೆಳಿಗ್ಗೆ ಐದಕ್ಕೆ ಎದ್ದು ತೋಟಕ್ಕೆ ಹೋಗಿ ಸುತ್ತು ಹಾಕಿಕೊಂಡು ಬಂದು ಸ್ನಾನ ಸಂಧ್ಯಾವಂದನೆ ಮುಗಿಸಿ ಉಪಾಹಾರ ಮಾಡಿಕೊಂಡು ಮತ್ತೆ ತೋಟಕ್ಕೆ ಹೋಗುತ್ತಾರೆ. ಆಗಾಗ ನೆಂಟರಿಷ್ಟರ ಮನೆಗೆ ಸಮಾರಂಭಗಳಿಗೂ ಹೋಗುವುದುಂಟು - 'ನಾವು ಅವರ ಮನೆಗೆ ಹೋದರೆ ನಾಳೆ ಅವರೂ ನಮ್ಮ ಮನೆಗೆ ಬರುತ್ತಾರೆ-ಇಲ್ಲದಿದ್ದರೆ ಬರುವುದಿಲ್ಲ' - ಎಂಬ ಮಾತಿನಲ್ಲಿ *ಸಹಕಾರ ಜೀವನದ ಸೂಚನೆ ಇದೆ. ದನಕರು* ಗಳನ್ನು ಕಟ್ಟಿಕೊಂಡಿದ್ದಾರೆ. ಜನಬಲ ಕಡಿಮೆಯಾದ್ದರಿಂದ ತಮ್ಮ ಎತ್ತು ಗಾಡಿಗಳನ್ನು ಮಾರಿದ್ದಾರೆ. ಹರಟೆ, ಜೂಜಿನ ಹವ್ಯಾಸ ಅವರಿಗಿಲ್ಲ.

ಅವರ ಹೆಂಡತಿ ಸೋಮನಹಳ್ಳಿಯವರು. ಅವರೂ ವ್ಯವಸಾಯದ ಹಿನ್ನೆಲೆಯವರು. 'ಒಂದು ಕಡೆ ಮಳೆ ಕಡಿಮೆಯಾಗಿ, ಇನ್ನೊಂದು ಕಡೆ, ಹೆಣ್ಣು ಮಕ್ಕಳು ಪಟ್ಟಣವಾಸದ ವ್ಯಾಮೋಹಕ್ಕೆ ಬಿದ್ದಿರುವುದರಿಂದ ಸಂಕೇತಿಗಳ *ವ್ಯವಸಾಯದ ನಂಟು ಕಡಿಮೆಯಾಗುತ್ತಿದೆ* ಎಂಬುದು ಅವರ ಅಳಲು. ಸಂಕೇತಿಗಳು ಬೇಗ ಈ ಪ್ರವೃತ್ತಿಯನ್ನು ತಿದ್ದಿಕೊಳ್ಳಬೇಕು ಎಂದು ಆಶಿಸುತ್ತಾರೆ. ಈ ಪ್ರವೃತ್ತಿ ಕೇವಲ ಬ್ರಾಹ್ಮಣರಲ್ಲಿಯೇ ಕಾಣುತ್ತಿದೆ ಎಂಬುದು ಅವರು ಗಮನಿಸಿರುವ ಅಂಶ.

ಈಗ ಎಲ್ಲರೂ ಕಣಜ ಕಟ್ಟಿಕೊಳ್ಳುತ್ತಿದ್ದಾರೆ. ನಮ್ಮ ಮೂರು ಎಕರೆ ಗದ್ದೆಯಿಂದ ಚೆನ್ನಾಗಿ ಬತ್ತ ಆಗುತ್ತದೆ. ಎರಡು-ಮೂರು ಪೆಟ್ಟೆ ಕಟ್ಟಿ ಆ ಬತ್ತ ಸಂಗ್ರಹಿಸಿ ಇಡುತ್ತಿದ್ದೆವು. ಮನೆಯಲ್ಲಿ ಎಂಟು-ಹತ್ತು ಜನ ಒಟ್ಟು ಕುಟುಂಬದಲ್ಲಿ ಇದ್ದರು. ಅವರಿಗಾಗಿ ವರ್ಷಕ್ಕಾಗುವಷ್ಟು ಧಾನ್ಯ ಸಂಗ್ರಹ ಮಾಡಲೇಬೇಕಾಗಿತ್ತು. ಆದರೆ ಪೆಟ್ಟೆಗಳು ಮನೆ ತುಂಬ ಇರುತ್ತಿದ್ದುದರಿಂದ ಅನಾನುಕೂಲವಾಗಿತ್ತು. ಹಾಗಾಗಿ ಕಣಜ ಮಾಡಿಕೊಂಡೆವು. ಜಳ್ಳು, ಈಚಲು ಚಾಪೆ, ಗೋಣಿಚೀಲಗಳನ್ನು ಒಂದರ ಮೇಲೊಂದರಂತೆ ನೆಲಕ್ಕೆ ಹರಡಿ, ಅದರ ಮೇಲೆ ಚೆನ್ನಾಗಿ ಒಣಗಿದ ಬತ್ತ ತುಂಬಿದರೆ ಅದಕ್ಕೆ



ಸೋದರಗೃಹದ ಮುಂದೆ ಶಂಕರ : ಐಚನಹಳ್ಳಿ

ಮುಗ್ಗಲು ಹತ್ತುವುದಿಲ್ಲ. ಮೇಲೆ ಮುಚ್ಚುವುದರಿಂದ ಹೂಜಿಯೂ ಇರುವುದಿಲ್ಲ. ಅದೇ ಪೆಟ್ಟೆಯಲ್ಲಾದರೆ ಸಿಂಪಲ್ಲಾಗಿ ಗೋಣಿಚೀಲ ಹರಡಿ ಅದರ ಮೇಲೆ ಬತ್ತ ತುಂಬಿದರೂ ತೇವ ಏರುವುದಿಲ್ಲ. ಏಕೆಂದರೆ ಪೆಟ್ಟೆಯಲ್ಲಿ ಹಿಡಿಸುವ ಪದಾರ್ಥವೇ ಕಡಮೆ. ಮೇಲಿಂದ ಇಳಿಯುವಂತೆಯೇ ಕಣಜ ಕಟ್ಟಿಕೊಂಡಿದ್ದೇವೆ.

ಹೆಣ್ಣುಮಕ್ಕಳ ಸಹಕಾರ?

ನಮ್ಮ ಮನೆಯಲ್ಲಿ ಈಗಲೂ ಬೀಸುವ ಕಲ್ಲು ಬಳಸುತ್ತಿದ್ದೇವೆ. ಮನೆಯ ಹೆಂಗಸರ ಪೂರ್ಣ ಸಹಕಾರ ಇದೆ. ಆಳು ಕಾಳುಗಳು ಬಂದ ಸಂದರ್ಭಗಳಲ್ಲಿ ಹೊತ್ತುಹೊತ್ತಿಗೆ ಊಟ ತಿಂಡಿಯನ್ನೂ ಮಾಡಿಕೊಡುತ್ತಾರೆ. ಜಮೀನಿಗೂ ತಾವೇ ತಂದು ಕೊಡುತ್ತಾರೆ.

ಸೋಮನಹಳ್ಳಿಯ ವ್ಯವಸಾಯಸ್ಥರ ಮನೆಯಿಂದ ಹೆಣ್ಣು ತಂದದ್ದರಿಂದ ಅನುಕೂಲವಾಯಿತು?

ಸೋಮನಹಳ್ಳಿಯಲ್ಲಿ ಕಳೆದ ೧೭ ವರ್ಷದಿಂದ ನೀರಿನ ಆಸರೆ ಚೆನ್ನಾಗಿದೆ. ಹಾಗಾಗಿ ಅವರು ಧೈರ್ಯವಾಗಿ ಮುನ್ನುಗ್ಗಿ ವ್ಯವಸಾಯ ಮಾಡಬಹುದು. ಮಳೆಯನ್ನೇ ನಂಬಿರುವ ನಾವು ಹಾಗೆ ಮಾಡಿದ್ದಾದರೆ ನಷ್ಟ ಅನುಭವಿಸಬೇಕಾಗುತ್ತದೆ. ಆರು ವರ್ಷದಿಂದ ಮಳೆ ಇಲ್ಲದೆ, ನಾವು ತೋಟಕ್ಕೆ ಚೆಲ್ಲಿರುವ ಹಣ ವಿಪರೀತ. ಅದನ್ನು ನಾವು ವಾಪಸ್ಸು ತೊಗೊಳ್ಳೋದು ಯಾವತ್ತೋ? ಈ ಮಟ್ಟದಲ್ಲಿ ನಾವಿದೇವೆ. ಆದ್ದರಿಂದ ಇಲ್ಲಿಗೆ ಅಲ್ಲಿ ಉತ್ತಮ ಅಂತ ಧಾರಾಳವಾಗಿ ಹೇಳಬಹುದು.

ಈಗ ಎಲ್ಲರಿಗೂ ಪಟ್ಟಣದ ಆಕರ್ಷಣೆ.

ಪಟ್ಟಣ ಹೇಗೆ ಅಂದರೆ, ಜೇಬಿನ ತುಂಬ *ದುಡ್ಡು ಬರುತ್ತಿದ್ದರೆ ಪಟ್ಟಣ.* ನಮ್ಮಂಥವರು ಬರೀ ಬೇಸಾಯ ತಿಳಿದವರು-ಅಲ್ಲಿ ಏಗಲಾರೆವು. ಆರೋಗ್ಯದ ಮಾತೇ ನೀವು ಹೇಳೋದಾದರೆ ಹಳ್ಳಿಯ ವಾತಾವರಣ cityನಲ್ಲಿ ಸಿಗಲ್ಲ. ಇಲ್ಲಿ-ಹಳ್ಳೀಲಿ-ಒಂದು ಹೊತ್ತಿಗೆ ಇಲ್ಲ ಅಂದರೂ ಅಕ್ಕಪಕ್ಕದಲ್ಲಿ ತೊಗೊಂಡು ಜೀವನ ಮಾಡಬಹುದು. Cityಲಿ ದುಡ್ಡಿದ್ದರೆ ಸರಿ.... Totally...

ನಮ್ಮೂರಲ್ಲಿ ಅಡಿಕೆ ತುಡಿಕೆ... ಹಿಂದೆ ಪೂರಾ ಮಾಡುತ್ತಿದ್ದವರೆಲ್ಲಾ ನಮ್ಮವರೇ. ಇಲ್ಲಿ 'ಶ್ರೀಮಂತರು' ಯಾರೂ ಇಲ್ಲ. ಊರು ಬಿಟ್ಟು ಹೋಗದಂತೆ ನಾವೆಲ್ಲಾ ಕಾಲ ಹಾಕುತ್ತಿದ್ದೇವೆ.

ಅಡಿಕೆಕೊಯ್ಲು ಮಾಡುವವರು ನಿಮ್ಮಲ್ಲಿಯೂ ಇದ್ದಾರೆಯೆ?

ನಮ್ಮೂರ *ರಂಗನ ಮುಂದೆ ಅಡಿಕೆ ಕೊಯ್ಲು ಮಾಡುವವರು ಯಾರೂ ಇಲ್ಲ*. ಅವರೇ ಇಲ್ಲಿ ೧೦-೧೨ ಮಂದಿಗೆ ಆ ವಿದ್ಯೆ ಹೇಳಿಕೊಟ್ಟಿದ್ದಾರೆ. ರಂಗ ಮರ ಹತ್ತಿ ಕೊಯ್ಲು ಮಾಡುತ್ತಿದ್ದರೆ ಆ ಕಡೆ ಅಡಿಕೆ ಆರಿಸುವವರ ಮೇಲೆ ನಿಗಾ, ಈಕಡೆ ಯಾರಾದರೂ ಕದ್ದು ಸಾಗಿಸುತ್ತಾರೆಯೇ ಅಂತಾ ನಿಗಾ... ಹೀಗೆ ಹಲವು ಕಡೆ ದೃಷ್ಟಿ ಇಟ್ಟು ಕೆಲಸ ಮಾಡುತ್ತಾರೆ. ನಮ್ಮ ತಂದೆಯವರೂ ಅಡಿಕೆ ಕೊಯ್ಲು ಮಾಡುವ ವಿದ್ಯೆಯನ್ನು ಅನೇಕರಿಗೆ ಕಲಿಸಿದ್ದಾರೆ. ಹೀಗೆ ಕೊಯ್ಲು ಮಾಡುವವರು ಘಂಟೆಗಟ್ಟಲೆ ಮರದಿಂದ ಮರಕ್ಕೆ ಜಿಗಿದು ಕೊಯ್ಲು ಮಾಡುತ್ತಾರೆ. ಆ ಕೆಲಸದಲ್ಲಿ ನಮ್ಮ *ತಂದೆ expert.* ಊಟದಲ್ಲೂ ಅಷ್ಟೆ. ಏನೋ ಒಂದು ಲೆಕ್ಕದಲ್ಲಿ ಊಟ ಮಾಡಿರ್‍ತಾರೆ. ಅಕಸ್ಮಾತ್ ಇನ್ನೊಮ್ಮೆ ಹಟಕ್ಕೆ ಬಿದ್ದರೆ, ಅದಕ್ಕೂ ಹೆದರುತ್ತಿರಲಿಲ್ಲ. ಕೆಲಸವೂ ಅಷ್ಟೆ, ಊಟವೂ ಅಷ್ಟೆ. ಹಟ ಕಟ್ಟಿದೋರು ಕೊಟ್ಟೇ ಹೋಗಬೇಕಾಗೋದು'.

೩೫. ಎಲೆಚಾಗಹಳ್ಳಿ

೦.೧) ಶೈಲ ನಾಗರಾಜ್

(ಕೇಶವಮೂರ್ತಿಯವರು ಪೂರ್ವಪರಂಪರೆಯನ್ನು ಕಾಯ್ದುಕೊಂಡ ಮಹಾಕೃಷಿಕ. ಅಪರಾಹ್ನ ೨ ಗಂಟೆಯಾದರೂ ಅವರು ತೋಟದಿಂದ ಇನ್ನೂ ಬಂದಿರಲಿಲ್ಲ. ಅವರು ಬರುವವರೆಗೆ ಅವರ ಮಗಳು ಶೈಲ ಮಾತನಾಡಿದರು.)

ಶೈಲ ಅವರೆ, ಈ ಊರಲ್ಲಿ ವ್ಯವಸಾಯ ಹೇಗೆ ನಡೆಯುತ್ತಿದೆ? ನೋಡಲು ಬಂದೆ.

ತಂದೆ, ಅಜ್ಜ ಎಲ್ಲರೂ ವ್ಯವಸಾಯಗಾರರೇ. ಅವರೆಲ್ಲ ಹೊಲ, ಗದ್ದೆ, ತೋಟದ ವ್ಯವಸಾಯ ನೆಚ್ಚಿಕೊಂಡವರು. ಅಡಿಕೆ, ಬಾಳೆ, ತೆಂಗು, ವೀಳೆ ತೋಟದ ಬೆಳೆಗಳು. ಹಿಂದೆ 'ಹಂಬು' ತುಂಬಾ ಇತ್ತು. ಈಗ ಕಡಮೆಯಾಗಿದೆ. ಈಗ ಕಬ್ಬು, ಶುಂಠಿ ಆದಾಯದ ಬೆಳೆಗಳಾಗಿವೆ. ನಮ್ಮ ತಂದೆಗೆ ಈಗ ೬೭ ವರ್ಷ. ಈಗಲೂ ಗುದ್ದಲಿ ಹಿಡಿದು ಕೆಲಸ ಮಾಡುತ್ತಾರೆ. ಬಾಳೆ ಗುಂಡಿ ತೆಗೆಯೋದು, ಮರ ಹತ್ತುವುದು ಎಲ್ಲಾ ಮಾಡುತ್ತಾರೆ. ತೆಂಗಿನಮರ ಕೂಡ ಅವರೇ ಹತ್ತುತ್ತಾರೆ. ನಮ್ಮ ತಂದೆಗೆ ಇನ್ನೂ ಏಳು ವರ್ಷವಾಗಿದ್ದಾಗಲೇ ಅಜ್ಜ ಸತ್ತರು. ಹಾಗಾಗಿ ಅವರ ದುಡಿಮೆಯ ರೀತಿಯ ವಿವರಗಳು ನಮಗೆ ತಿಳಿದಿಲ್ಲ.



ಸರಸ್ವತಿ ಕೇಶವಮೂರ್ತಿ : ಎಲೆಚಾಗಹಳ್ಳಿ

ಹಾಡು ಕೇಳುತ್ತಿದೆ!

ನಮ್ಮ ತಾಯಿಯ ತಾಯಿ ಸಂಪ್ರದಾಯದ ಹಾಡುಗಳನ್ನು ತುಂಬಾ ಹೇಳುತ್ತಿದ್ದರು; ತಾಯಿಯವರು ಅಷ್ಟು ಅಭ್ಯಾಸ ಇಟ್ಟುಕೊಂಡಿಲ್ಲ.. ನಮ್ಮ ತಂದೆಯ ತಾಯಿಯವರಿಗೆ (ಸುಬ್ಬಲಕ್ಷ್ಮಿ) ೮೫ ವರ್ಷ; ಅವರು ಈಗಲೂ ಚೆನ್ನಾಗಿ ಹಾಡುತ್ತಾರೆ. ಈಗ ಅವರು ಹುಬ್ಬಳ್ಳಿಯಲ್ಲಿರುವ ಮಗಳ ಮನೆಗೆ ಹೋಗಿದ್ದಾರೆ.

ನೀವು - ಅಂದರೆ ಹೆಂಗಸರು - ವ್ಯವಸಾಯದಲ್ಲಿ ಪಾಲ್ಗೊಳ್ಳುತ್ತೀರಾ?

ಈಗ-ಶುಂಠಿ, ಆಲೂಗೆಡ್ಡೆ, ಚೆಂಡುಹೂವು, ಕುಂಬಳ, ಜೋಳ, ರಾಗಿ(ಕಮ್ಮಿ), ಕಬ್ಬು ಇತ್ಯಾದಿ ಬೆಳೆ ತೆಗೆಯುತ್ತಿದ್ದೇವೆ. ಹೆಂಗಸರು ದಿನ *ಎಮ್ಮೆ ನೋಡಿಕೊಳ್ಳುತ್ತೇವೆ; ಹುಲ್ಲೂ ಕೊಯ್ದು ತರುತ್ತೇವೆ.* ವ್ಯವಸಾಯದ ದೊಡ್ಡ ಕೆಲಸವನ್ನು ಹೆಂಗಸರು ಮಾಡುವುದಿಲ್ಲ. ಆವಶ್ಯಕತೆ ಬಂದರೆ ಹಿಂಜರಿಯುವುದೂ ಇಲ್ಲ. 'ದನಕರುಗಳ ಬಗ್ಗೆ' ಅಂದರೆ ನಿತ್ಯ ಕೊಟ್ಟಿಗೆ ಗುಡಿಸಿ ತೊಳೆಯೋದು, ಹುಲ್ಲು ಹಾಕೋದು, ಹಾಲು ಕರೆಯೋದು, ಹಂಡೆ ನೀರು ಕಾಯಿಸುವುದು-ಇವೆಲ್ಲಾ ನಾವೇ ಮಾಡುತ್ತೇವೆ. ಯಾವ ಆಳು ಕಾಳೂ ನಾವು ಇಟ್ಟುಕೊಂಡಿಲ್ಲ.

ಹಳ್ಳಿಯ ಬದುಕು ಕಷ್ಟ ಎನ್ನುತ್ತಾರೆ ಈಗಿನ ಹೆಣ್ಣುಮಕ್ಕಳು !

ಊರಲ್ಲಿ ನಲ್ಲಿ ನೀರು, ಮಿಲ್ಲು, ಪೋಸ್ಟ್ ಆಫೀಸು, ಬ್ಯಾಂಕು, ಬಸ್ಸು, ಸ್ಕೂಲು ಎಲ್ಲಾ ಇದೆ. ಮನೇಲಿ ಮಿಕ್ಸಿ, ಗ್ಯಾಸು ಇದೆ. ಪಟ್ಟಣದ ಎಲ್ಲ ಸೌಕರ್ಯವೂ ಇಲ್ಲಿ ಇದೆ. ಕುತ್ತುವುದು ಬೀಸುವುದು ಈಗ ಏನೂ ಇಲ್ಲ.

ನನ್ನ ಯಜಮಾನರು (ನಾಗರಾಜ್ ಅಂತ) B.A., ಪದವೀಧರರು. ಈ ಊರಲ್ಲೇ ಇದ್ದಾರೆ. ಅವರು ಮೊದಲು ಬೆಂಗಳೂರಲ್ಲಿ ಖಾಸಗಿ ಸಂಸ್ಥೆಯಲ್ಲಿ ನೌಕರಿಯಲ್ಲಿದ್ದರು. ಅಲ್ಲಿ ದುಡಿಯುವಷ್ಟನ್ನು ನಮ್ಮ ಜಮೀನನಲ್ಲೇ ದುಡಿದರೆ ಎಷ್ಟೋ ಮೇಲು ಅಂತ ಊರಿಗೆ ಬಂದರು.

ಇಲ್ಲಿ ತಾತ್ಕಾಲಿಕವಾಗಿ ಪೋಸ್ಟ್ ಮಾಸ್ತರಾಗಿಯೂ ಕೆಲಸ ಮಾಡುತ್ತಿದ್ದಾರೆ. ಇಲ್ಲಿ ನಮ್ಮ ತಂದೆಯವರ ಮನೆಯ support ನಮಗಿದೆ.

ಅಲ್ಲಿ ಪಟ್ಟಣಕ್ಕೆ ಹೋಗುವ ತನಕ ಅದರ ಮೇಲಿನ ಮೋಹ ಇರುತ್ತೆ. ಅಲ್ಲಿನ ಮಾಲಿನ್ಯ, ಜೀವನದ ರೀತಿ ನೋಡಿದ ಮೇಲೆ ಹಳ್ಳಿಯೇ ಹಿತ ಅನ್ನಿಸುತ್ತೆ. ಇವತ್ತಿಗೂ ನನಗೆ ಹಾಗೇ ಅನ್ನಿಸುತ್ತೆ. ಅಲ್ಲಿನ ಯಾಂತ್ರಿಕ ಜೀವನ ನನಗೆ ಹಿಡಿಸುವುದಿಲ್ಲ. ಈಗ ಯಾರೂ ಹಳ್ಳಿಯಲ್ಲಿರಲು ಇಷ್ಟಪಡುತ್ತಿಲ್ಲ ಎನ್ನುವುದೂ ನಿಜವೇ. ಅದರಿಂದಲೇ ನನ್ನ ಇಬ್ಬರು ಮಕ್ಕಳನ್ನೂ ನಿತ್ಯ ನರಸೀಪುರಕ್ಕೆ ಕಳಿಸಿ ಓದಿಸುತ್ತಿದ್ದೇನೆ. ಅವರಿಗೆ Education ಆಗಬೇಕು; ಅವರ ಭವಿಷ್ಯಾನ ಅವರು ರೂಪಿಸಿಕೋಬೇಕು; ನಮ್ಮ ಹಾಗಾಗಬಾರದು ಅನ್ನುವುದು ಉದ್ದೇಶ. ನಾನೇನೋ ಹಳ್ಳೀನ ಇಷ್ಟಪಟ್ಟೆ. ಮಕ್ಕಳೂ ಹಾಗೇ ಇರುತ್ತಾರೆ ಅಂತ ಹೇಗೆ ಹೇಳೋದು? ಆದ್ದರಿಂದ ಓದಿಸುತ್ತಿದ್ದೇನೆ.

"ಹಳ್ಳೀಲಿ ೨೪ ಘಂಟೆಯೂ ದುಡಿಮೆ ಮಾಡುತ್ತಲೇ ಇರಬೇಕು. ಸರಿಯಾಗಿ ಕರಂಟು ಇರೋಲ್ಲ. ಪಟ್ಟಣಕ್ಕೆ ಸೇರಿದರೆ ಕುರ್ಚಿ ಮೇಲೆ ಕೂತು ಸುಖವಾಗಿ ಕೆಲಸ ಮಾಡುತ್ತಾರೆ. ನಮ್ಮ ಮಕ್ಕಳು ಚೆನ್ನಾಗಿರುತ್ತಾರೆ" ಅನ್ನುವ ಕನಸು ಹಳ್ಳಿಗರದು. ಇಲ್ಲಿ ಶ್ರೀಮಂತರಾಗಿ ಸುಖವಾಗಿರುವವರೂ city ಜೀವನಾನ ಇಷ್ಟಪಡುತ್ತಾರೆ.

ಹಳ್ಳಿಯಲ್ಲಿ ಸ್ವಂತವಾಗಿ ದುಡಿದರೆ ಚೆನ್ನಾಗಿರಬಹುದು. ಸ್ವಲ್ಪವೇ ಜಮೀನಿರುವವರಿಗೆ ಅದು ಸಾಧ್ಯ. ಹೆಚ್ಚು ಜಮೀನಿರೋರು ಬೇರೆಯವರನ್ನು ಆಶ್ರಯಿಸಲೇ ಬೇಕು; ಅದಕ್ಕೆ ಕೂಲಿ ಕೊಡಬೇಕು; ಗಿಟ್ಟಲ್ಲ.

ನಿಮ್ಮ ದಿನಚರಿ?

ಮುತ್ತುಗದ ಎಲೆ ಹಚ್ಚುತ್ತೇವೆ, ತೋಟಕ್ಕೆ ಹೋಗಿ ಬರುತ್ತೇವೆ, ದನಕರು ನೋಡಿಕೋತ್ತೇವೆ; ಸ್ತ್ರೀ ಶಕ್ತಿ ಸಂಘ, ಸ್ವಸಹಾಯ ಸಂಘ... ಇವುಗಳಲ್ಲಿ ಭಾಗವಹಿಸುತ್ತೇವೆ. (ತಂದೆಯವರು ದೊನ್ನೆ ಕೂಡ ಕಟ್ಟುತ್ತಾರೆ) ನಿತ್ಯ ಲಲಿತಾ ಸಹಸ್ರನಾಮ, ಸೌಂದರ್ಯಲಹರಿ, ಆನಂದಲಹರಿ... ಇವನ್ನೆಲ್ಲ ಪಾರಾಯಣ ಮಾಡುತ್ತೇವೆ.

ನಿಮ್ಮ ಊರಿನ ಸಂಕೇತಿ ಬೀದಿ *ಖಾಲಿಖಾಲಿಯಾಗಿ* ಕಾಣುತ್ತಿದೆ!

ಹಿಂದೆ ಈ ಊರಿನಲ್ಲಿ ಸಂಕೇತಿಗಳ ಮನೆಗಳು ಬಹಳ ಇದ್ದವು. ಐದು ವರ್ಷದಿಂದೀಚೆಗೆ ನಾಲ್ಕು ಮನೆ ಮಾತ್ರ ಇವೆ.

ನಿಮ್ಮ ತಂದೆಯವರ ಕೃಷಿಯ ಬಗ್ಗೆ ಕೇಳಿದ್ದೇನೆ.

ನಮ್ಮ ತಂದೆ ಬಾಲ್ಯದಿಂದಲೂ ಕಷ್ಟದಲ್ಲೇ ಬಂದವರು. ಏಳು ವರ್ಷವಾಗಿದ್ದಾಗಲೇ ತಮ್ಮ ತಂದೆಯನ್ನು ಕಳೆದುಕೊಂಡರು. ಆಗಿನಿಂದಲೂ ಕೂಲಿ ನಾಲಿ ಮಾಡಿ ತಂಗಿಯ ಮದುವೆ ತಮ್ಮ 'ಜುಟ್ಟು', ಉಪನಯನ ಎಲ್ಲವನ್ನೂ ನಿರ್ವಹಿಸಿದರು. ಬೇರೆ ಜನಗಳ ಮನೇಲೆಲ್ಲಾ ಕೆಲಸ ಮಾಡಿದವರು ಅವರು. ಅಡಿಕೆ ಕೊಯ್ಲಿನಲ್ಲಿ ನಿಪುಣರು. ಐದು-ಆರು ಬಾರಿ ಮರದಿಂದ ಬಿದ್ದು ಪೆಟ್ಟೂ ಮಾಡಿಕೊಂಡಿದ್ದಾರೆ. ಈಗ ದೇಹ ಗೂಡಾಗಿದೆ. ಆದರೂ ದುಡಿಮೆ ನಿಂತಿಲ್ಲ.



ಸಂಕೇತಿ ಬೀದಿ: ಚಾಹಳ್ಳಿಯ

ಅಜ್ಜನ ಕಾಲದ ಜಮೀನು ತುಸುವೇ ಇತ್ತು. ತಂದೆ ಅದನ್ನು *ಚೆನ್ನಾಗಿ ರೂಢಿಸಿದರು.* ನಾಲ್ಕು ಜನ ಹೆಣ್ಣು ಮಕ್ಕಳಿಗೂ ಇಬ್ಬರು ಗಂಡು ಮಕ್ಕಳಿಗೂ ಮದುವೆ ಮಾಡಿದ್ದಾರೆ. ಕಷ್ಟಜೀವಿ. *ಬಿ.ಪಿ., ಸಕ್ಕರೆ ಕಾಯಿಲೆ ಇಂಥ ಯಾವುದೂ ಅವರಿಗಿಲ್ಲ.* ಮಧ್ಯಾಹ್ನ ಮೂರು ಘಂಟೆಗೆ ಒಂದು ಊಟ, ರಾತ್ರಿ ಒಂದು ಊಟ- ಇಷ್ಟೇ ಅವರದು. ತಿಂಡಿ ಇಲ್ಲ. ದುಡಿಯೋದರಿಂದಲೇ ಅವರಿಗೆ ಆರೋಗ್ಯ.

ಬೇರೆಯವರು ಅವರ ಹಾಗೆ ಮರದಿಂದ ಬಿದ್ದಿದ್ದರೆ ಒಂದೊಂದು ಪ್ರಕರಣದಲ್ಲೂ ಉಳಿಯುತ್ತಲೇ ಇರಲಿಲ್ಲ. ಒಂದು ಸಾರಿ *ದಂತಪಂಕ್ತಿಯೇ ಪೂರ್ತಿ ಉದುರಿಹೋಗಿತ್ತು*. (ಹೊಗೆಸೊಪ್ಪು ವಿಪರೀತ ಜಗಿಯುತ್ತಿದ್ದವರು ಅವರು. ಹಲ್ಲು ಉದುರಿದ ಮೇಲೆ ಅದೂ ನಿಂತಿತು) ಉಪ್ಪಿನಕಾಯಿ ಮಾವಿನಕಾಯಿ ಕೊಯ್ಯಲು ಮರ ಹತ್ತಿದ್ದಾಗ *ಗೂಟ ಹೊಟ್ಟೆಗೆ ಚುಚ್ಚಿತ್ತು*; ಏನೂ ಉಳಿದಿರಲಿಲ್ಲ. ಒಮ್ಮೆ *ಉರಿ ಮಂಡಲ* ಹಾವು ಕಚ್ಚಿ ಎರಡು ವರ್ಷ (ಉಳಿಯಲು) ಸಾಹಸ ಮಾಡಬೇಕಾಯಿತು. ಕೊನೆಗೂ ಪೂರ್ತಿ ವಾಸಿ ಆಗಿದ್ದು ನಾಟಿ ಔಷಧಿಯಲ್ಲಿ. ಅವರಿಗೆ ತುಂಬಾ ಸಹನೆ. ಈಗಿನ ಕಾಲದಲ್ಲಿ ತಂದೆ ತಾಯಿಗಳು ಮಕ್ಕಳಿಗೆ insurance ಮಾಡಿಸುತ್ತಾರೆ. ನಮ್ಮ ತಂದೆ ಒಂದೊಂದು *ಮಗಳು ಹುಟ್ಟಿದಾಗಲೂ* ಒಂದು ಎಕರೆ-ಎರಡು ಎಕರೆ ಜಮೀನು ಕೊಳ್ಳುತ್ತಿದ್ದರು. ಮದುವೆ ಮಾಡಬೇಕಾದಾಗ ಅದನ್ನೇ ಮಾರುತ್ತಿದ್ದರು. ನಾಲ್ಕು ಹೆಣ್ಣುಮಕ್ಕಳ ವಿಷಯದಲ್ಲೂ ಹೀಗೇ ಮಾಡಿದರು. ಈಗಲೂ ನಾಲ್ಕು-ಐದು ಎಕರೆ ತೋಟ ಇದೆ. ೨೦೦-೩೦೦ ತೇಗದ ಸಸಿ ಎಬ್ಬಿಸಿದ್ದಾರೆ. ಇಬ್ಬರು ಗಂಡು ಮಕ್ಕಳೂ ಬೆಂಗಳೂರಿನಲ್ಲಿ ನೌಕರಿಯಲ್ಲಿದ್ದಾರೆ. ಅವರಿಗೆ ಜಮೀನು ಕಳೆಯಲು ಇಷ್ಟ ಇಲ್ಲ. ಜಮೀನು ಇರಬೇಕು ಅನ್ನೋದೇ ಅವರ ಆಸೆ.

೦.೨) ಮಹಾಕೃಷಿಕ ಕೇಶವಮೂರ್ತಿ (೬೭)

"ಹಿಂದಿನವರನ್ನು ಅನುಸರಿಸುವವರು ಇವತ್ತು ಯಾರಿದಾರೆ? ಈಗ ಬೀಟ್‌ರೂಟು, ಕ್ಯಾರೆಟ್ಟು ಇಂಥವನ್ನು ತಿನ್ನಲು ಒದ್ದಾಡುತ್ತಾರೆಯೇ ಹೊರತು ತೋಟದ ತರಕಾರಿ ತಿನ್ನಲು ಯಾರೂ ಇಷ್ಟಪಡೋದಿಲ್ಲ. ಕೆಸವು, ಸುಂಡೇಕಾಯಿ, ಬಾಳೇಕಾಯಿ, ಬಾಳೇ ದಿಂಡು ಇವೆಲ್ಲಾ ಮನುಷ್ಯನಿಗೆ ಎಷ್ಟು ಆರೋಗ್ಯ ಕೊಡುವಂಥವು ಎಂದರೆ ಅಷ್ಟು ಆರೋಗ್ಯ ಕೊಡುವಂಥವು. ಇವೆಲ್ಲಾ ತುಂಬಾ ಒಳ್ಳೇ ತರಕಾರಿಗಳು. ಇವನ್ನು ಇವತ್ತಿನವರು ನೆಗ್ಲೆಕ್ಟ್ ಮಾಡುತ್ತಿದ್ದಾರೆ. ತಿಥಿ ಆದಿಗಳಲ್ಲೆಲ್ಲಾ ಹಿಂದೆ ಮಾಡುತ್ತಿದ್ದುದು ಈ ತರಕಾರಿಗಳನ್ನೇ; ಹಿಂದೆ ಬೇರೆ ತರಕಾರಿಗಳನ್ನು ತಂದು ಹಾಕುತ್ತಿರಲಿಲ್ಲ. ಈಗ ಎಲ್ಲಾದನ್ನೂ ಆಧುನಿಕವಾಗಿ ಪ್ರಾರಂಭಿಸಿಕೊಂಡಿದ್ದಾರೆ, ಮಾಡುತ್ತಾರೆ ಅಷ್ಟೆ. ನಮ್ಮದೇ ತೋಟದಲ್ಲಿ ಬೆಳೆದು ನಿಂತಿರುವ ಸೊಪ್ಪು ತಂದು ಅಡುಗೆ ಮಾಡಿಕೊಂಡು ಊಟ ಮಾಡಿ ನೋಡಿ, ಎಷ್ಟು ರುಚಿಯಾಗಿರುತ್ತದೆ ತಿಳಿಯುತ್ತೆ. ಅದೇ ಪೇಟೇಲಿ ತಂದದ್ದರಲ್ಲಿ ಏನು ಅಂದರೆ ಏನೂ ಇರುವುದಿಲ್ಲ. ನೀವು ತೋಟದ ಕಡೆಗೆ ಬಂದಿದ್ದರೆ ಆ ಸೊಪ್ಪು ತೋರಿಸುತ್ತಿದ್ದೆ, ಎಷ್ಟು ಚೆನ್ನಾಗಿರುತ್ತೆ ಅಂತ. ಅಷ್ಟು ಒಳ್ಳೇ ಸೊಪ್ಪುಗಳು ಇಲ್ಲಾ...!" ಎನ್ನುತ್ತಾರೆ ಚಾಹಳ್ಳಿಯ ವೃದ್ಧರೈತ ಶ್ರೀ ಕೇಶವಮೂರ್ತಿಗಳು.



ವೃದ್ಧರೈತ ಕೇಶವಮೂರ್ತಿ : ಎಲೆಚಾಗಹಳ್ಳಿ

ಕೇಶವಮೂರ್ತಿಗಳ ತಂದೆ ರಾಮಸ್ವಾಮಯ್ಯನವರು; ಅವರು ಓದಿದ್ದು ನಾಲ್ಕನೆ ತರಗತಿಯವರೆಗೆ, ಅವರ ತಂದೆ ಕೇಶವಯ್ಯನವರು. ಅವರೆಲ್ಲರಿಗೂ ಜಮೀನು ಕಡಮೆ ಇತ್ತು. ಅರ್ಧ ಮುಕ್ಕಾಲು ಎಕರೆಯೇ ಇದ್ದದ್ದು. ಕೇಶವಮೂರ್ತಿಗಳಿಗೆ ತಮ್ಮ ತಂದೆಯಿಂದ ಸಿಕ್ಕಿದ್ದು ಅರ್ಧ ಎಕರೆ ತೋಟ ಮಾತ್ರ. ಈ ಜವಾಬ್ದಾರಿ ಬಂದಾಗ ಅವರಿಗೆ ಬರೀ ಹನ್ನೆರಡು ವರ್ಷ ವಯಸ್ಸು. ಆದರೆ ತಾಯಿ ಮತ್ತು ತಂಗಿಯನ್ನು ಸಾಕುವ ಜವಾಬ್ದಾರಿಯೂ ಜೊತೆಗೇ ಬಂದಿತ್ತು. ಅವತ್ತಿನಿಂದ ಜಮೀನು ರೂಢಿಸಿ ತಂಗಿಯ ವಿವಾಹ ನೆರವೇರಿಸಿ ೧೪ನೆ ವರ್ಷಕ್ಕೆ ತಮ್ಮ ಮುಂಜಿಯನ್ನು ಕೂಡ ತಾವೇ ನೆರವೇರಿಸಿಕೊಂಡರು. ಬಸವಾಪಟ್ಟಣದ ಖ್ಯಾತ ಪುರೋಹಿತರಾದ ವೇ||ಬ್ರ||ಶ್ರೀ ಮುತ್ತಣ್ಣ ವಾದ್ಯಾರ್ ಅವರೇ ಬಂದು ಉಪನಯನ ನಡೆಸಿಕೊಟ್ಟರೆಂಬುದನ್ನು ಅವರೀಗ ಹೆಮ್ಮೆಯಿಂದ ನೆನೆಯುತ್ತಾರೆ. ವಿವಾಹವೂ ಹಾಗೇ. 'ಅವತ್ತಿನಿಂದ ಇವತ್ತಿನವರೆಗೂ ನಮ್ಮದು

ಕಾರ್ಪಣ್ಯವೇನೇ. ಜಮೀನಿನಲ್ಲಿ ದುಡಿಮೆ ಮಾಡುತ್ತಲೇ ನಡುವೆ, ಅಡಿಕೆ ಗುತ್ತಿಗೆ ಮಾಡುವುದನ್ನೂ ಪ್ರಾರಂಭಿಸಿದೆ' ಎನ್ನುತ್ತಾರೆ ಅವರು.

ವಿವಾಹ

ಅವರ ವಿವಾಹವಾದದ್ದು ೧೯೬೪ರಲ್ಲಿ. ಆಗ ಅವರಿಗೆ ೨೭-೨೮ ವರ್ಷ. ಓದಿದ್ದು ಲೋಯರ್ ಸೆಕೆಂಡರಿವರೆಗೆ. ಅವರ ತಾಯಿಯೇನೂ ಶಾಲೆಯಲ್ಲಿ ಓದಿದವರಲ್ಲ, ಹಾಡುಗಳನ್ನೂ ಹೆಚ್ಚಾಗಿ ಕಲಿತಿರಲಿಲ್ಲ. ಅದಕ್ಕೂ ಆಗಿನ ಆರ್ಥಿಕ ಸ್ಥಿತಿಯೇ ಕಾರಣ. ಅವರೂ ಅವರ ಅತ್ತೆ ಎಂದರೆ ಕೇಶವಮೂರ್ತಿಯವರ ಅಜ್ಜಿಯವರೂ ತೋಟಕ್ಕೆ ಹೋಗಿ ವೀಳೆ ಹಂಬುಗಳಿಗೂ ಅಡಿಕೆ ಪಾತಿಗಳಿಗೂ 'ತೂಕ' ಹಾಕಿ ಬರುತ್ತಿದ್ದರು.

ಹೆಸರುಗಳು

ಕೇಶವಮೂರ್ತಿಯವರ ಅಜ್ಜನ ತಂದೆಯವರ ಹೆಸರೂ ರಾಮಸ್ವಾಮಯ್ಯ. ಅವರ ವಂಶದ ಹೆಸರು ಬರುತ್ತಿರುವುದೇ ಹಾಗೆ: 'ರಾಮಸ್ವಾಮಿ-ಕೇಶವಯ್ಯ'. ಕೇಶವಮೂರ್ತಿಗಳು ಮಾತ್ರ ತಮ್ಮ ಒಬ್ಬ ಮಗನಿಗೆ 'ಕೇಶವರಾಮ' ಎಂದು ಹೆಸರಿಟ್ಟಿದ್ದಾರೆ. ಇನ್ನೊಬ್ಬ ಮಗ 'ಸುಬ್ರಹ್ಮಣ್ಯ'. 'ಹೀಗೆ, ನಮ್ಮ ದೇವರ ಹೆಸರನ್ನು ಇಡುವುದು ರೂಢಿ. ಒಂದು ಹಾಗೆ, ಒಂದು ಹೀಗೆ ಇಟ್ಟುಕೊಂಡು ಬರುವುದು!' ಎಂದು ಉದ್ಗರಿಸುತ್ತಾರೆ ಕೇಶವಮೂರ್ತಿಯವರು.

ಅರ್ಧ ಎಕರೆಯಿಂದ ಪ್ರಾರಂಭ

ತಮ್ಮ ೧೨ನೆಯ ವಯಸ್ಸಿನಲ್ಲಿ ಕೇಶವಮೂರ್ತಿಯವರಿಗೆ ಬಂದ ಅರ್ಧ ಎಕರೆ ತೋಟದಲ್ಲಿ ಕೊಂಚ ಹಂಬು ಇತ್ತು. ಅದಕ್ಕೆ ಅಂಥಾ ವ್ಯವಸಾಯವೇನೂ ಆಗಿರಲಿಲ್ಲ. ೭-೮ ಮಣ ಅಡಿಕೆ ಆಗುತ್ತಿತ್ತು. ವೀಳೆ ಮತ್ತು ಬಾಳೆಕಾಯಿಯಲ್ಲೇ ಜೀವನ ನಡೆಯಬೇಕಾಗಿತ್ತು. ಅದನ್ನೇ ಸುಧಾರಿಸಿದರು.

ಕೂಲಿಗೆ ಎಲೆಕೊಯ್ಲು

ಇಷ್ಟರಲ್ಲಿ ಜೀವನ ಸಾಗಿಸುವುದು ಕಷ್ಟವಾಗಿತ್ತು. ಹಾಗಾಗಿ ಬೇರೆಯವರ ತೋಟದ ಹಂಬನ್ನು ಗುತ್ತಿಗೆಗೆ ಹಿಡಿಯುತ್ತಿದ್ದರು. ಬೆಳಗ್ಗೆಯಿಂದ ಸಂಜೆಯವರೆಗೆ ಎಲೆ ಕೊಯ್ದು ಕೊಟ್ಟರೆ ಅವರಿಗೆ ಸಿಗುತ್ತಿದ್ದದ್ದು ಕೇವಲ ಎಂಟಾಣೆ. ಆ ಕೂಲಿಯಲ್ಲೇ ಜೀವನ ನಿರ್ವಹಿಸುತ್ತಿದ್ದರು. ಕಾಲಕ್ರಮದಲ್ಲಿ ಬೇರೆಯವರೂ ಗುತ್ತಿಗೆ ಕೊಡಲು ಮುಂದೆ ಬಂದುದರಿಂದ ಅವರ ಆದಾಯ ಒಂದು ರೂಪಾಯಿಗೆ ಹೆಚ್ಚಿತು. ಆಮೇಲೆ ಮೂರು, ನಾಲ್ಕು ಜನರ ಗುತ್ತಿಗೆ-ಹೀಗೆ ಮುಂದುವರಿಯಿತು. ಎರಡು ರೂಪಾಯಿ ಕೂಲಿ ದಕ್ಕಿತು. ಆ ಯೌವನದಲ್ಲಿ, ಇನ್ನೂ ಎಲೆ ಕುಯ್ಯಬಹುದೆಂಬ ಉತ್ಸಾಹ ಉಳಿದಿರುತ್ತಿತ್ತು. ಹೀಗೆ ಒಂದು ದಿನಕ್ಕೆ ಮೂರು-ನಾಲ್ಕು ಪಿಂಡಿ ಎಲೆ ಕುಯ್ದುಕೊಟ್ಟವರು ಅವರು.

ಉಪಾಯದ ಜೀವನ

ಅವರಿಗೆ ಹೀಗೆ ವಾರಕ್ಕೆ ೧೪ರೂ. ಕೂಲಿ ಸಿಗುತ್ತಿತ್ತು. ಸಂತೆ ಸಾಮಾನು ತರಲು ಅವರಿಗೆ ಬೇಕಾಗುತ್ತಿದ್ದುದು ನಾಲ್ಕು ರೂಪಾಯಿ ಮಾತ್ರ. ಅದರಲ್ಲೇ ಅಕ್ಕಿ, ಬೇಳೆ ಮೊದಲಾದ ವಾರದ ಲವಾಜಮೆ ಕೊಂಡು, ತಿಂಡಿ ತಿಂದು, ನಾಕಾಣೆ-ಎಂಟಾಣೆ ಉಳಿಸಿಕೊಂಡು ಮನೆ ಸೇರುತ್ತಿದ್ದರು.

ಒಂದು ರೂಪಾಯಿಗೆ ನಾಲ್ಕು ಸೇರು ಹೆಸರುಕಾಳು ಬರುತ್ತಿದ್ದ ಕಾಲದಲ್ಲಿ ಅವರು ಎರಡು ಸೇರು ಕೊಳ್ಳುತ್ತಿದ್ದರು. ಅದನ್ನು ಉಸಲಿ (ಹುಷಳಿ) ಮಾಡಿದರೆ ಅವರ ಬೆಳಗಿನ ತಿಂಡಿ ಮುಗಿಯುತ್ತಿತ್ತು. ಆ ಎರಡು ಸೇರು ಕಾಳು ವಾರಕ್ಕೆ ಎಟಗುತ್ತಿತ್ತು. ಅಗ್ಗವಾಗಿ ಸಿಗುತ್ತದೆಂಬುದೊಂದೇ ಅದನ್ನು ಕೊಳ್ಳಲು ಇರುತ್ತಿದ್ದ ಕಾರಣ. ಜೀವನ ನಿರ್ವಹಣೆಯ ಭಾಗವಾಗಿತ್ತು ಅದು. ಐದು ತೊಲ ಕಾಫಿ ಪುಡಿ ತಂದರೆ ಮನೆಗೆ ಒಂದು ವಾರಕ್ಕಾಗುತ್ತಿತ್ತು. ಬೆಳಗ್ಗೆ ಒಮ್ಮೆ ಮಾತ್ರ ಕಾಫಿ ಕುಡಿಯುತ್ತಿದ್ದರು.

ಹೆಚ್ಚಿದ ಬೇಸಾಯ

ಆಮೇಲೆ, ನಾಕೈದು ಮಣ ಆಗುತ್ತಿದ್ದ ಅಡಕೆ ೨೦ ಮಣಕ್ಕೇರುವಂತೆ ಬೇಸಾಯ ಮಾಡಿದರು. ಅದಕ್ಕಾಗಿ ಅವರು ಪ್ರತಿ ವರ್ಷವೂ ಹೊಸ ಸಸಿಗಳನ್ನು ಏಳಿಸುತ್ತಾ ಬಂದರು. ಇದ್ದ ಖಾಲಿ ಜಾಗ, ಸತ್ತಮರಗಳಿಗೆ ಬದಲಿ ಸಸಿ-ಹೀಗೆ ಆ ವ್ಯವಸಾಯ ಸಾಗಿತು. ಇಳುವರಿ ೨೫ ಮಣಕ್ಕೂ ಏರಿತು. ಗೊಬ್ಬರ, ಹೊಸಮಣ್ಣು ತಲೆಯ ಮೇಲೆ ಹೊತ್ತು ತೋಟಕ್ಕೆ ಹರವಿದ್ದರ ಫಲ ಅದು. ತೋಟದಲ್ಲೇ ಇದ್ದ ಬುಗಗಳನ್ನೂ ಕಡಿದು ಹರವಿದರು. ಒಂದು ಹೇರು ಎಲೆ ಆಗುತ್ತಿದ್ದ ಜಾಗದಲ್ಲಿ ಹತ್ತು ಹೇರು ಬಂತು. ಒಂದಕ್ಕೊಂದಕ್ಕೆ ಕಾಸು ಸೇರಿ ಜೀವನ ಸುಧಾರಿಸಿತು.

ಬಾಳೆಯೂ ವೃದ್ಧಿಸಿತು. ಹೊಳೆನರಸೀಪುರ, ಚನ್ನರಾಯಪಟ್ಟಣದ ಸಂತೆಗಳಿಗೆ ಮಾಲು ಹೊತ್ತು ನಡೆಯುತ್ತಿದ್ದರು. ಕೆಲಕಾಲ ಕಳೆದ ಮೇಲೆ ಸೈಕಲ್ ಕೊಂಡರು. ಹಿಂದಕ್ಕೆ ಒಂದು ಪಿಂಡಿ ಎಲೆ ಕಟ್ಟಿಕೊಂಡು, ತಲೆಯ ಮೇಲೊಂದು ಇಟ್ಟುಕೊಂಡು ಹತ್ತಾರು ಮೈಲುಗಳನ್ನು ಕ್ರಮಿಸತೊಡಗಿದರು. ಸಂತೆ ಮಾರಾಟದ ರೀತಿ ಅದು.

ಅಡಿಕೆ ತುಡಿಕೆ

ಆಮೇಲೆ ವ್ಯಾಪಾರಕ್ಕೂ ಪ್ರಾರಂಭಿಸಿದರು. ೨೦-೨೨ ವರ್ಷದ ಯುವಕನಿಗೆ ವಿಷಯಜ್ಞಾನವೂ ಹೆಚ್ಚಿತು. ೨೦-೨೫ ಮಣ ಅಡಿಕೆಯನ್ನು ಗುತ್ತಿಗೆ ಹಿಡಿದು ರೇಖೆ ಮಾಡತೊಡಗಿದರು. ಅವರು ಮಾಡುತ್ತಿದ್ದುದು 'ಚೂರು' ಮಾತ್ರ. ಚೆನ್ನರಾಯಪಟ್ಟಣದಿಂದ ಜನ ಬಂದು ಮನೆಯ ಹತ್ತಿರವೇ ಮಾಲನ್ನು ಕೊಂಡುಹೋಗುತ್ತಿದ್ದರು. ಹಾಗೆ ಬಂದ ಹಣದಿಂದಲೇ ಇನ್ನೊಂದು ತೋಟವನ್ನು ಗುತ್ತಿಗೆ ಹಿಡಿಯುತ್ತಿದ್ದರು. ಹೀಗೆ ಸುಧಾರಿಸಿಕೊಂಡು ದೂರದ ಚಿಲ್ಕುಂದ, ಪಿರಿಯಾಪಟ್ಟಣದಂಥ ಊರುಗಳ ತೋಟಗಳನ್ನೂ ಗುತ್ತಿಗೆ ಹಿಡಿಯತೊಡಗಿದರು. ಮಾಲನ್ನು ಬಿಕರಿ ಮಾಡಲು ಸಿರ್ಸಿ, ಸಾಗರದ ಮಂಡಿಗಳಿಗೆ ಕಳಿಸಲು ಪ್ರಾರಂಭಿಸಿದರು.



ಸರಸ್ವತಿ ಕೇಶವಮೂರ್ತಿ : ಎಲೆಚಾಗಹಳ್ಳಿ

ಅದಕ್ಕಾಗೇ ಎರಡು ಗಾಡಿ ಇಟ್ಟುಕೊಂಡಿದ್ದರು ಅವರು. ಚಾಹಳ್ಳಿಯಲ್ಲಿ ಅಡಿಕೆ ಎಡಿಯುವ ಜನ ಇಲ್ಲದ್ದರಿಂದ ಸಂಕೇತಿಗಳು ಹೆಚ್ಚಾಗಿರುವ ಸೋಮನಹಳ್ಳಿ (೧೦ ಕಿಮೀ), ಕುಪ್ಪಹಳ್ಳಿ (೩೦ ಕಿಮೀ), ಪೂರಿಪಲ್ಯ (ಒಂದು ಹಳ್ಳಿ), ಹೊಳೆನರಸೀಪುರಕ್ಕೆ ಅಡಿಕೆ ಹೇರಿ ಅಲ್ಲಿಂದ ಎಡಿಸಿಕೊಂಡು ಬರುತ್ತಿದ್ದರು. ಅಲ್ಲಲ್ಲಿ ಗುತ್ತಿಗೆ ಮಾಡಿದ ಮಾಲಿನ ಹೊರೆಯೂ ಕಡಮೆಯಾಗುತ್ತಿತ್ತು. ಉಳಿದಂತೆ ರೇಖೆ ಮಾಡುವ ಕೆಲಸವನ್ನು ಚಾಹಳ್ಳಿಯಲ್ಲೇ ಮಾಡುತ್ತಿದ್ದರು. ಆಗ ಚಾಹಳ್ಳಿಯಲ್ಲಿದ್ದ ಸಂಕೇತಿ ಮನೆಗಳ ಸಂಖ್ಯೆ ೧೨, ಜನರ ಸಂಖ್ಯೆ ೮೫. ಒಂದು ದಿನಕ್ಕೆ ೬೦-೭೦ ಡಬ್ಬ ಅಡಿಕೆ ಸಿದ್ಧವಾಗುತ್ತಿತ್ತು. ಚಾಹಳ್ಳಿಯ ತಮ್ಮ ತೋಟದ ಬಳಿ ಅದಕ್ಕಾಗಿಯೇ ಕಟ್ಟಿದ ಮನೆಯಲ್ಲಿ ನಾಲ್ಕು ಹಂಡೆ ಹೂಳಿಸಿ ಅಡಿಕೆ ಬೇಯಿಸುತ್ತಿದ್ದರು. ಅದಕ್ಕಾಗಿಯೇ ಮೂರು ಎಕರೆ ಮಾಳವನ್ನು ಅಲ್ಲಿ ಬಿಟ್ಟುಕೊಂಡಿದ್ದರು.

ಅಡಿಕೆಗೆ ಹಾಕುವ ಬಣ್ಣವನ್ನು ಚಕ್ಕೆಗಳಿಂದ ತಯಾರಿಸಿಕೊಳ್ಳುತ್ತಿದ್ದರು. ನೇರಳೆ, ಬುಗರಿ, ಎಲೆ ಅಡಿಕೆ ಇಡಿದ ಪುಡಿ, ಸುಣ್ಣ ಇತ್ಯಾದಿ ಸೇರಿಸಿ ಕುದಿಸಿ ಇಟ್ಟುಕೊಳ್ಳುವುದು; ಅಡಿಕೆ ಬೆಂದ ಮೇಲೆ ಈ ಬಣ್ಣವನ್ನು ಅದಕ್ಕೆ ಸೇರಿಸಿ ಕುದಿಸುವುದು; ಬೆಲ್ಲ, ಎಣ್ಣೆ ಕೂಡ ಸೇರಿಸುವುದು-ಇದು ಕ್ರಮ. ಹೀಗೆ ಮಾಡಿ ಒಂದು ವಾರಕ್ಕೆ ೮೦ ರಿಂದ ೧೦೦ ಮೂಟೆ ಅಡಿಕೆ ಸಿದ್ಧಮಾಡುತ್ತಿದ್ದರು. ಇದಲ್ಲದೆ ಗೋಟನ್ನೂ ಒಣಗಿಸಿ ಸಿದ್ಧಮಾಡುತ್ತಿದ್ದರು.

ಕೃತಾರ್ಥತೆ

ಮನೆಯಲ್ಲಿ ಜನ ಕಡಮೆ ಇದ್ದರು, ಆದರೆ ೨೫-೩೦ ಜನ ಕೆಲಸಗಾರರಿಗೆಲ್ಲಾ ಅಡುಗೆ ಮಾಡುತ್ತಿದ್ದರು. ೫೦ ಕೆ.ಜಿ. ರವೆ ತಂದರೆ ಮೂರು ದಿನಕ್ಕೆ ಮುಗಿಯುತ್ತಿತ್ತು. "ಈಗಿನ ಜನ ಆಗಿನ ರೀತಿ ಕೆಲಸ ಮಾಡುತ್ತಿಲ್ಲ. ಆಗ ಯಾರೂ ಗೊಣಗದೆ ನಿಯತ್ತಿನಿಂದ ಕೆಲಸ ಮಾಡುತ್ತಿದ್ದರು. ನಮ್ಮ ಕೆಲಸಕ್ಕಾಗಿ ಬಂದ ಆಳುಕಾಳುಗಳಿಗೂ ಮದುವೆ ಮಾಡಿ ಮನೆ ಕಟ್ಟಿಸಿ ನೆಲೆ ನಿಲ್ಲಿಸಿದ್ದೇನೆ. ನಮಗಾಗಿ ದುಡಿದವರಿಗೆ

ಅನ್ಯಾಯವಾಗಬಾರದೆಂಬುದಷ್ಟೇ ಉದ್ದೇಶ. ಹರಿಜನರು, ಲಿಂಗಾಯಿತರು, ಒಕ್ಕಲಿಗರು ಕೂಡ ನಾವು ನೆಮ್ಮದಿಯಾಗಿ ನೆಲೆಗೊಳಿಸಿದ ಕುಟುಂಬಗಳಲ್ಲಿ ಸೇರಿದ್ದಾರೆ" ಎನ್ನುವಾಗ ಆ ದಂಪತಿಗಳ ಮುಖ ಕೃತಾರ್ಥತೆಯಿಂದ ಅರಳುತ್ತದೆ. ಕೇಶವಮೂರ್ತಿಗಳ ಪತ್ನಿಯ ಅಣ್ಣಂದಿರೂ ಅದಕ್ಕಾಗಿಯೇ ಬಂದು ಗೋಟಿನ ಕಣ ತಿಂಗಳುಗಟ್ಟಲೆ ಕಾದದ್ದುಂಟು. ಅವರಿಗೂ ಉಚಿತ ನೆರವು ದೊರೆತಿದೆ. ಸೋಮನಹಳ್ಳಿ ಮೊದಲಾದ ಹಳ್ಳಿಗಳಿಂದ ಬಂದ ಸಂಕೇತಿ ಯುವಕರೂ ಅನೇಕರು ಹೀಗೆ ದುಡಿದು ಪ್ರತಿಫಲ ಪಡೆದಿದ್ದಾರೆ.

ಆಘಾತವಾದಾಗ ಹೊಸ ಸಾಹಸ

ಈ ವಹಿವಾಟು ಒಂದೂವರೆ ದಶಕದ ಕಾಲ ಹೀಗೆ ಅವ್ಯಾಹತವಾಗಿ ನಡೆಯಿತು. ಆದರೆ ಬೆಲೆ ಕುಸಿತದಿಂದಾಗಿ ಸತತವಾಗಿ ಎರಡು ವರ್ಷ ಎರಡೆರಡು ಲಕ್ಷ ರುಪಾಯಿ ನಷ್ಟ ಅನುಭವಿಸಬೇಕಾಗಿ ಬಂತು. ಆಗಿನ ರೂಪಾಯಿ ಮೌಲ್ಯದ ಲೆಕ್ಕದಂತೆ ಅದೊಂದು ದೊಡ್ಡ ಆಘಾತ. ತೋಟವನ್ನೇ ಮಾರಬೇಕಾದ ಪರಿಸ್ಥಿತಿ. ಆಗ ವಹಿವಾಟನ್ನು ಕಡಿಮೆ ಮಾಡಿ ಹೊಗೆಸೊಪ್ಪು ಬೆಳೆದರು. ಅಡಿಕೆಯಲ್ಲಾದ ಸಾಲವನ್ನೆಲ್ಲಾ ಅದರಲ್ಲಿ ಬಂದ ಲಾಭದಲ್ಲಿ ತೀರಿಸಿದರು. ೧೯೭೫ರಿಂದ ೮೭ರವರೆಗೂ ಇದು ನಡೆಯಿತು. ಆ ಸುತ್ತಿಗೆ *ತಂಬಾಕು ಬೆಳೆದ ಮೊದಲಿಗರು* ಅವರು. ಇಂಥ ಹೊಸ ಸಾಹಸಗಳನ್ನೇ ಅವರು ಮಾಡುತ್ತಿದ್ದುದು.

ಅವರು ಆ ಸಂದರ್ಭದಲ್ಲಿ ಹೇಳಿದ ಒಂದು ಮಾತು ಇದು: "ನಿಮ್ಮೂರಿನ (ಬಸವಾಪಟ್ಟಣ) ವೇ||ಬ್ರ||ಶ್ರೀ ಮುತ್ತಣ್ಣ ವಾದ್ಯಾರು ನಮ್ಮ ಅಜ್ಜಿಯ ಕರ್ಮಾಂತರ ಮಾಡಿಸಲು ಬಂದಿದ್ದರು. ಹೊಗೆಸೊಪ್ಪು ಮುರಿಯಲು ಬಂದಿದ್ದ ದಿನಗಳು ಅವು. ಕಳೆ ಕೀಳಿಸುತ್ತಿದ್ದೆವು. ವಾದ್ಯಾರು ಏರಿಯ ಮೇಲೆ ಬರುತ್ತಿದ್ದವರು 'ಯಾರದು ಈ ಹೊಲ?' ಎಂದು ಕೇಳಿದರು. ಅಲ್ಲೇ ಇದ್ದ ನಮ್ಮ ಚಿಕ್ಕಪ್ಪ 'ಇದು ನಮ್ಮ ಮೂರ್ತಿಯದೇನೆ!' ಎಂದರು. ವಾದ್ಯಾರು ಆಗ 'ಇದು ಹೊಗೆ ಗಿಡಾನೋ ಹೊಗೆ ಮರಾನೋ?' ಎಂದು ಉದ್ಗರಿಸಿದರು. ಅದೇನು ಏಳು ಅಡಿ ಬೆಳೆದಿತ್ತು, (ಕೈ ತೋರಿಸಿ) ಇಷ್ಟು ದಪ್ಪ ಇರೋದು ಬೊಡ್ಡೆ!"

* **ಅದು ಹೇಗೆ ವ್ಯವಸಾಯ ಮಾಡಿದಿರಿ ಹಾಗೆ?**

\- ಅದು ಮೊದಲ ವರ್ಷದ ಬೆಳೆ. ಕಂಪನಿಯವರು ಹೇಳಿದ ಹಾಗೇ ಮಾಡುತ್ತಿದ್ದೆ ನಾನು. ಒಡನಾಟಿ ಮಾಡಿ ಸಸಿಯನ್ನು ಹಾಕಿ ಎಂದು ಹೇಳಿದರು. ಒಂದು ಪಟ ಮಾಡಿ ೧೦ ಸಸಿ ಹಾಕಿದರೆ ಇನ್ನೊಂದು ಪಟ ಮಾಡಿ ಸಿದ್ಧಮಾಡಿಕೊಂಡಿರೋದು. ಇದರಿಂದ ಕಿತ್ತು ಅದಕ್ಕೆ ನೆಟ್ಟುಕೊಳ್ಳುವುದು. ಅದಕ್ಕೆ ನೀರು ಹಾಕಿ ಅಲ್ಲಿ ನಿಲ್ಲಿಸಬೇಕು. ಆಮೇಲೆ ನಾಟಿ ಮಾಡಿದರೆ ಒಂದೇ ಒಂದು ಸಸಿಯೂ ಹೋಗಲ್ಲ. ಏಕೆಂದರೆ ದಿಂಡು ಗಟ್ಟಿಯಾಗಿಬಿಟ್ಟಿರುತ್ತದೆ. ಎಲ್ಲಾದನ್ನೂ ನಾನು ಹಾಗೇ ಮಾಡಿದೆ.

* **ಓಹೋ! ಮರವೇ ಆಗಿ ಹೋಯಿತು!**

\- ಓ! ಹಾಗೇ ಬಂತು! ೫೦೦೦ ಕೆ.ಜಿ! ಡಬ್ಬಲ್ ಬ್ಯಾರನ್ನಲ್ಲಿ ೫೦೦೦ ಕೆ.ಜಿ. ಸೊಪ್ಪು ಬೇಯಿಸಿದ್ದೆ. ಫೀಲ್ಡ್ ಡೇ ಗೀಲ್ಡ್ ಡೇನೆಲ್ಲಾ ಮಾಡಿಹೋದರು ಅವರೂವೆ! ಅವತ್ತು ನಮ್ಮ ಮನೇಲಿ ಒಂದು ಇನ್ನೂರು ಜನರಿಗೆ ಊಟ! ಗಿಡಾನೆಲ್ಲಾ ನೋಡಿ ಫೋಟೋನೆಲ್ಲಾ ತೊಗೊಂಡು ಹೋಗಿದ್ದರು ಅವರೂವೆ! ಹಾಗೇ ಬೆಳೆದಿದ್ದೆ. ಆ ಕಾಲವೆಲ್ಲಾ ಮುಗೀತು. ಇನ್ನು ಅದನ್ನೆಲ್ಲಾ ಮಾಡಕ್ಕೆ ಆಗೋದಿಲ್ಲ.

* **ಅದರಲ್ಲೇ ಸಾಲವೆಲ್ಲಾ ತೀರಿಸಿದಿರಿ!**

\- ಹೌದು. ಎಲ್ಲಾ ಸಾಲಾ ತೀರಿಸಿದೆ. ಆಗ ಈ ರೇಟು ಇದ್ದಿದ್ದರೆ ಕುಬೇರನಾಗಿಬಿಡುತ್ತಿದ್ದೆ. ಆಗ ತುಂಬಾ ಕಮ್ಮಿ ರೇಟು ಇತ್ತು-ಎಂಟೂಕಾಲು ರೂಪಾಯಿ!

* **ಈಗ?**

\- ಈಗಲೆ? ಅರುವತ್ತು ರೂಪಾಯಿ! ಅದನ್ನೂ ಬಿಟ್ಟೆ.

* **ಅಷ್ಟು ಚೆನ್ನಾಗಿ ನಡೀತಿದ್ದದ್ದನ್ನು ಯಾಕೆ ಬಿಟ್ರಿ?**

\- ಆಳು ಸಿಗೋದು ಕಮ್ಮಿಯಾಯಿತು, ಕೂಲಿ ಜಾಸ್ತಿಯಾಯಿತು, ಗೊಬ್ಬರದ ರೇಟೂ ಹೆಚ್ಚಾಯಿತು, ಸೌದೆ ಸಿಗೋದೂ ಕಮ್ಮಿಯಾಯಿತು. 'ಅಣ್ಣಾ, ನಿನ್ನ ಕೈಲಿ ಇನ್ನು ಸೌದೆ ಒಡೆಯಕ್ಕಾಗಲ್ಲ' ಅಂತ ನನ್ನ ಮಗ ಬ್ಯಾರನ್ನನ್ನೇ ಮುರಿದುಹೋದ.

* **ನೀವೇ ಸೌದೆ ಒಡೀತಿದ್ರ?**

- ಅಯ್ಯೋ! ಎರಡು ಬ್ಯಾರನ್ನಿಗೂ ನಾನೇ ಒಡೀತಿದ್ದೆ.

* **ಪೂರ್ತಿ? ಅಹಾಂ! ಲಾರಿಗಟ್ಟಲೆ ಆಯಿತಲ್ಲ!**

- ಒಡೆದು ಹಾಕ್ತಿದ್ದೆ! ರಾತ್ರಿಯೆಲ್ಲಾ ನಂಗೆ ಇನ್ನೇನೂ ಕೆಲಸವೇ ಇಲ್ಲ! ಲಾಟೀನು ಕಟ್ಟಿಕೊಳ್ಳೋದು, ಚಮಟಿಗೆ, ಆಪು ಇಟ್ಟುಕೊಳ್ಳೋದು, ಒಡಿಯೋದು! ಒಲೆಗಳನ್ನೂ ಒಂದು ಕಡೆ ಉರಿಸೋದು, ಇನ್ನೊಂದು ಕಡೆ ಸೌದೇನೂ ಒಡೆಯೋದು! ಹುಣಿಸೇ ಸೌದೇನೂ ಸೀಳಿ ಹಾಕೋದೇನೆ! 'ಅಣ್ಣಾ, ನಿಂಗಾಗಲ್ಲಾ, ಸತ್ತುಹೋಗ್ತೀಯಾ ಹೀಗೆ ಕೆಲಸ ಮಾಡಿದರೆ' ಅಂತ ಮಗ, ನಾನು ಹೊಳೆನರಸೀಪುರಕ್ಕೆ ಹೋಗಿರೋವಾಗ ಬ್ಯಾರನ್ ಮುರಿದುಹಾಕಿ ಹೊರಟುಹೋದ, ಬೆಂಗಳೂರಿಗೆ (ತನ್ನ ನೌಕರಿಗೆ) ಹಾಗಾಗಿ ಬಿಡಬೇಕಾಯಿತು ನಾನು. ಇಲ್ಲದೇ ಇದ್ದರೆ ಬಿಡುತ್ತಿರಲಿಲ್ಲ!

* **ಹೊಸ ಬೆಳೆ ಏನೇನು ಮಾಡಿದಿರಿ?**

- ಹೊಸಬೆಳೆ... ತೋಟದಲ್ಲಿ ಇನ್ನು ಯಾವ ಹೊಸ ಬೆಳೇನೂ ಮಾಡಲಿಲ್ಲ. ಏನೆಂದರೆ ಬೇರೆ ಬೇರೆ ಜಾತಿ ಬಾಳೆ ಹಾಕ್ತೀನಿ. ಹೊಲದಲ್ಲಿ ಆಲೂಗಡ್ಡೆ, ಮೆಣಸಿಗೆ... ಈಗಲೂ ಕಬ್ಬು ಇದೆ. ಎಲ್ಲಾ ಬೆಳೇನೂ ಬೆಳೆದಾಯಿತು! ಆಲೇನೂ ಇಟ್ಟೆ. ಬೆಲ್ಲಾನೂ ಮಾಡಿಸಿದೆ. ಸಾವಿರಾರು ಮೂಟೆ ಬೆಲ್ಲ ತಯಾರಿಸಿದ್ದಾಗಿದೆ. ಈ ಮನೆಯೆಲ್ಲಾ ಬೆಲ್ಲದಲ್ಲೇ ತುಂಬಿಹೋಗಿದ್ದ ಕಾಲವೂ ಒಂದಿತ್ತು!

* **ದುಡ್ಡು ಬರೋದೆ?**

- ಬರೋದು. ಆದರೂ ಖರ್ಚಿಗೆ ತಕ್ಕಷ್ಟು ಬರುತ್ತಿರಲಿಲ್ಲ. ಪ್ರತಿಫಲ ಸಿಕ್ಕುತ್ತಿರಲಿಲ್ಲ.

* **ತರಕಾರೀನೂ ಬೆಳೆದಿರಾ?**

- ಬದನೆ, ಟೊಮೆಟೊ... ಎಲ್ಲಾ ಬೆಳೆದೆ. ಈಗ ನಾಲ್ಕನೇ ವರ್ಷದಲ್ಲಿ ಟೊಮೆಟೋ ಬೆಳೆದೆ. ಎರಡು ಕುಳಿ ಹಾಕಿದ್ದೆ. ತುಂಬಾ ಚೆನ್ನಾಗಿ ಬಂತು ಬೆಳೆ. ಬೆಲೆ ನಾಲ್ಕು-ಐದು ರೂಪಾಯಿ ಇತ್ತು ಕೆಜಿಗೆ. ಮಾರ್ಕೆಟ್ಟಿಗೆ ತೊಗೊಂಡು ಹೋದೆವು. ನಾಕಾಣೆಗೆ ಕೇಜಿ ಕೇಳೋರೂ ಗತಿ ಇಲ್ಲದೇ ಹೋಯಿತು. ಮೂರುವಾರ ಕುಯ್ಯಿಸಿದೆ. ಮೂಟೆಗೆ ನಾಲ್ಕು ರೂಪಾಯಿ ಐದು ರೂಪಾಯಿಗೆ ಕೇಳೋಕೆ ಶುರು ಮಾಡಿದರು. ಕೇಳಿದಷ್ಟಕ್ಕೆ ಕೊಟ್ಟುಬಂದೆ. ಹೀಗೆ ಹೊತ್ತುಕೊಂಡು ಹೋಗಿ ೭೦೦ ರೂಪಾಯಿ ಕೈಯಿಂದ ಹೋಯಿತು. ಮಾರನೇ ದಿನ ಹೊಲದ ಹತ್ತಿರಕ್ಕೇ ಕೊಳ್ಳುವವರು ಬಂದರು. 'ಕೊಡಲ್ಲ' ಅಂತ ಹೇಳಿ ಕಳಿಸಿದೆ. ಊರಿನವರಿಗೇ 'ಕುಯ್‌ಕೊಂಡು ಊಟ ಮಾಡಿ' ಅಂದೆ. ಸಂತೋಷವಾಗಿ ತೊಗೊಂಡು ಹೋದರು. ಹೀಗೆ ಒಂದೊಂದು ಬೆಳೆ ಮಾಡಿದರೆ... ಬರುತ್ತೇ ಅನ್ನುವ ಆಸೆಗೆ ಮಾಡ್ತೀವಿ ಹೊಸ ಹೊಸ ಬೆಳೇನೆಲ್ಲಾ ಮಾಡಿದ್ದೆಲ್ಲಾ ಇಂಥಾ ಆಸೆಯಿಂದಲೇ. ಇದರಲ್ಲಾರೂ ಬರುತ್ತೇನೋ ಇದರಲ್ಲಾರೂ ಬರುತ್ತೇನೋ ಅನ್ನುವ ಆಸೆಗೆ ಮಾಡಕ್ಕೆ ಹೋಗೋದು. ಈ ಸಾರಿ ಮನೆಯೋರೆಲ್ಲಾ ಚೆಂಡು ಹೂ ಹಾಕೋಣ ಅಂದರು. ಹಾಕೋದು ಅಂತ ಹಾಕಿಸಿದೀನಿ.

* **ಹೇಗೆ ಅದರ ವ್ಯವಸಾಯ?**

- ವ್ಯವಸಾಯ ಏನೂ ಹೆಚ್ಚು ಕಷ್ಟವಿಲ್ಲ. ಪಟ ಮಾಡಿ ಹಾಕಿಕೊಳ್ಳೋದು-ಹೊಗೆಸೊಪ್ಪಿನ ಮಡೀಥರವೇ. ನೀರು ಹಾಕೋದು. ೨೦ ದಿನದ ತನಕ ಬೆಳೆಸಿದರೆ ಆಯಿತು. ಮೂರೇ ದಿನಕ್ಕೆ ಜೆರ್ಮಿನೇಷನ್ ಆಗಿಬಿಡುತ್ತೆ, ಗಿಡವೇ ಮೇಲಕ್ಕೆ ಬರುತ್ತೆ, ೧೮ ದಿನಕ್ಕೆ ನಾಟಿ ಮಾಡಬೇಕು. ನಾನು ಹಾಗೇ ಮಾಡಿದ್ದೀನಿ. ಈಗಾಗಲೇ ಗಿಡ ಮುಕ್ಕಾಲು ಅಡಿ ಎತ್ತರ ಬೆಳೆದಿದೆ. ನೆನ್ನೆ ಮಣ್ಣು ಕೊಡಿಸಿದೀನಿ. ನಾಳೆ ಗೊಬ್ಬರ ಕೊಡಿಸ್ತೀನಿ. ಇನ್ನೊಂದು ಸಾರಿ ಮಣ್ಣು ಕೊಡಿಸಿದರೆ ಆಯಿತು. ಆಮೇಲೆ ಕುಡಿ ಮುರಿಸಬೇಕು. ಆಗ ಗಿಡ ಒಡೆಯುತ್ತೆ. ಈವರೀಗೆ ಎರಡು ಸಾರಿ ಗೊಬ್ಬರ ಕೊಡಿಸಿದೀನಿ, ಇನ್ನೊಂದು ಸಾರಿ ಕೊಡಬೇಕು. ಸೀಮೆಗೊಬ್ಬರ ತುಸು ಹಾಕಬೇಕು, ಜಾಸ್ತಿ ಏನಿಲ್ಲ. ಅದೇನೂ ಹೆಚ್ಚು ಕಷ್ಟದ ಬೆಳೆಯಲ್ಲ. ಒಂದು ಕೇಜೀಗೆ ಎರಡು ರೂಪಾಯಿ ಮೂವತ್ತು ಪೈಸದಲ್ಲಿ ಅವರೇ ತೊಗೋತಾರೆ. ಕಂಪನಿಯೋರೇ ಇದಾರೆ. ನಾವು ಕುಯ್ಸಿ ಹಾಕಿದರೆ ಆಯಿತು, ತುಂಬಿಕೊಂಡು ಹೋಗ್ತಾರೆ, ತೂಕಾ ಮಾಡಿ. ಇದು ಈ ವರ್ಷ ಮಾಡಿರೋ ಹೊಸ ಬೆಳೆ.

* **ನಿಮ್ಮ ವಯಸ್ಸು?**

\- ೬೭ ವರ್ಷ.

* **ಈ ವಯಸ್ಸಲ್ಲೂ ಹೊಸ ಬೆಳೆ ಮಾಡೋ ಉತ್ಸಾಹ ಇದೆ ನಿಮಗೆ?**

\- ಹೌದು. ಪ್ರತಿವರ್ಷ ರಸಬಾಳೆ ಹಾಕ್ತೀನಿ. ಅಡಿಕೆ ನರ್ಸರಿ ಮಾಡ್ತೀನಿ. ಎಲ್ಲಾದನ್ನೂ ಮಾಡಬೇಕು ಅನ್ನೋ ಚಪಲ! ಎಲ್ಲಾ ಮರಾನೂ ಹತ್ತುತೀನಿ ಈಗಲೂ! ಹಿಂದೆ ಅಡಿಕೆ ಕುಯ್ಲೂ ಮಾಡ್ತಿದ್ದೆ. ಈಗ ಅದನ್ನ ನಿಲ್ಲಿಸಿದೀನಿ. ತೆಂಗಿನಮರ ಹತ್ತೋದು ಇನ್ನೂ ಇಟ್ಟುಕೊಂಡಿದೀನಿ! ಹಿಂದೆ ದಿನಕ್ಕೆ ಹೆಚ್ಚು ಕಮ್ಮಿ ನೂರು ಮೂಟೆ ಅಡಿಕೆ ಕೆಡುವುತ್ತಿದ್ದೆ ನಾನು! ಬೆಳಗ್ಗೆ ಮರ ಹತ್ತಿದರೆ ಮರದಿಂದ ಮರಕ್ಕೆ ಹಾರುತಿರೋದೇನೆ; ಸಾಯಂಕಾಲದ ತನಕ ಇಳೀದೇ ಇರೋದೂ ಉಂಟು! ಬೆಳಿಗ್ಗೆ ಏನಾದರೂ ಹೊಟ್ಟೆಗೆ ಮಾಡಿಕೊಂಡು ಹೋಗಿಬಿಟ್ಟರೆ ಇನ್ನು ರಾತ್ರಿಯೇ ಬರುತ್ತಿದ್ದುದು ಮನೆಗೆ. ಮಧ್ಯದಲ್ಲಿ ಎಳನೀರೇ ನಮಗೆ ಆಧಾರ. ಅಡಕೆ ಹೀಗೆ ಕೆಡವಿದ ಮೇಲೆ ನಾನೇ ಮೂಟೇನೂ ಹೊತ್ತಿದೀನಿ. ಕುಯ್ಲೂ ಮಾಡಿ, ಮೂಟೇನೂ ಹೊತ್ತು, ಗಾಡೀಗೆ ತುಂಬಿಕೊಂಡು ಬಂದಿದೀನಿ. ಈಗಲೂ ಸೀಗೇಮೆಳೆ, ಹುಣಿಸೇಮರ ಎಲ್ಲಾ ಹತ್ತಿ ಫಸಲು ಕೀಳೋದು ನಾನೇ. ಅವನ್ನೆಲ್ಲಾ ರೂಢಿಸೋದೂ ನಾವೇ ಮನೆಯವರು. ಈಗ ಅದನ್ನೆಲ್ಲಾ ತೊಗೊಂಡು ನಾಳೆ ಬೆಂಗಳೂರಿಗೆ ಹೊರಟಿದೀನಿ- ನೆಂಟರಿಷ್ಟರೆಲ್ಲಾ ಕೇಳ್ತಾರೆ... ಅವರಿಗೆ ಕೊಟ್ಟು ಬರಕ್ಕೆ. ನಮ್ಮ ಸೀಗೆಪುಡಿ ಇದೆಯಲ್ಲಾ, ಒಂದು ಸಾರಿ ತಿಕ್ಕಿದರೆ ಆಯಿತು, ಇನ್ನು ಎಣ್ಣೆ ಇರಲ್ಲ. ಅಂಥ ಚೊಕ್ಕವಾದ ಪುಡಿ ಇದು. ಎಂಥಾ ಕಾಯಿ ಜಿಡ್ಡು ತೆಗೆಯುತ್ತೆ ಅನ್ನೋದನ್ನ ನೋಡಿ ಆರಿಸಿಯೇ ನಾನು ರೇಖೆ ಮಾಡೋದು.

* **ಇನ್ನೂ ಸೀಗೇಮೆಳೆಗಳು ಇಲ್ಲೆಲ್ಲಾ ಇವೆಯೆ?**

\- ಇವೆ. ಬೇಕಾದಷ್ಟಿವೆ. ಹೀಗೆ ಬೇಕಾದಷ್ಟು ಮಾಡಿದರೂ ನಮ್ಮ ಆಸ್ತಿ ಅಂದರೆ ದುಡಿಮೆ ಒಂದೇ. ಹೇಳಿಲ್ಲವೆ, 'ಸುಖಂ ಸ್ವಪ್ನೇऽಪಿ ದುರ್ಲಭಮ್' ಅಂತ!

* **ಆದರೆ ಇದೆಲ್ಲದರಿಂದ ನಿಮ್ಮ ಆರೋಗ್ಯ ಚೆನ್ನಾಗಿದೆ.**

\- ನನಗೆ ಆರೋಗ್ಯದಲ್ಲಿ ಯಾವ ತೊಂದರೆಯೂ ಇಲ್ಲ. ನಾವು ಬೆಳಗಿನಿಂದ ರಾತ್ರಿವರೆಗೆ ಮೂರು ಸಾರಿ ಆಹಾರ ಸೇವನೆ ಮಾಡ್ತೀವಿ. ಆ ಅನ್ನವನ್ನಾದರೂ ನಾವು ಕಷ್ಟಪಟ್ಟು ದುಡಿದು ಸಂಪಾದನೆ ಮಾಡಿಕೊಳ್ಳದ ಮೇಲೆ ನಾವು ಹುಟ್ಟಿದ್ದು ವ್ಯರ್ಥ. ಭೂಮೀಗೂ ಭಾರ. ಅಲ್ಲವೆ? ಆ ಭಾವನೆ ನನ್ನ ಮನಸ್ಸಿನಲ್ಲಿ ಅವತ್ತಿನಿಂದಲೂ ಇದೆ, ಇವತ್ತೂ ಹೋಗಿಲ್ಲ. ದುಡಿದೇ ತಿನ್ನಬೇಕು. ಇಷ್ಟಾಯಿತಲ್ಲ, ಬೆಳಗ್ಗೆಹೋದವನು ಈಗ ಮಧ್ಯಾಹ್ನ ಮನೆಗೆ ಬಂದಿದೀನಿ. ಊಟ ಮಾಡಿ ಮತ್ತೆ ಹೋಗಿ ಎರಡು ಘಂಟೆಯಾದರೂ ಕೆಲಸ ಮಾಡಿದಲ್ಲದೆ ನನ್ನ ಮನಸ್ಸಿಗೆ ಸಮಾಧಾನವಾಗೋಲ್ಲ. ಎರಡು ದಿನ ಕೆಲಸ ಮಾಡೋದು ಬಿಟ್ಟುಬಿಟ್ಟರೆ ನನಗೆ ಹುಷಾರು ತಪ್ಪುತ್ತೆ. ಕೆಲಸ ಮಾಡಿಕೊಂಡಿದ್ದರೆ ಪರವಾಗಿಲ್ಲ, ಕೆಲಸ ಬಿಟ್ಟರೇ ನನಗೆ ಕೈಕಾಲೆಲ್ಲ ನೋವು, ಏನೇನೋ ಆಗಕ್ಕೆ ಶುರುವಾಗುತ್ತೆ. ಕೆಲಸ ಮಾಡುತ್ತಿದ್ದರೆ ನನಗೆ ಏನೂ ಆಗೋಲ್ಲ. ನೆಮ್ಮದಿಯಾಗಿರುತ್ತೆ. ಏನಂದರೆ ದುಡಿದು ಬಂದು ಮಲಗಿದರೆ ಚೆನ್ನಾಗಿ ನಿದ್ರೆ ಬರುತ್ತೆ. ಮಧ್ಯಾಹ್ನವೂ ಅಷ್ಟೆ ಒಂದು ಘಂಟೆ ಮಲಗಿಯೇ ಮತ್ತೆ ತೋಟಕ್ಕೆ ಹೋಗೋದು. ಬೆಳಿಗ್ಗೆ ಹೋದರೆ, ಇವತ್ತು ಇಷ್ಟು ಕೆಲಸ ಮಾಡಬೇಕು, ಈ ಜಾಗದವರೆಗೆ ಅಗೆದೇ ಹೋಗಬೇಕು, ಈ ಕಳೆ ತೆಗೆದೇ ಹೋಗಬೇಕು



ತಮ್ಮ ಕುಟುಂಬವರ್ಗದೊಂದಿಗೆ ಕೇಶವಮೂರ್ತಿ :ಎಲೆಚಾಗಹಳ್ಳಿ

ಅಂತ ಮನಸ್ಸಲ್ಲಿ ಮಾಡಿಕೊಳ್ತೀನಿ. ಅದನ್ನು ಮಾಡದೇ ಬಿಟ್ಟುಬರಲ್ಲ. ಈಗ... ನೀವು ಬಂದಾಗ... ಇನ್ನು ಎರಡು ಗೆಡ್ಡೆದಾಯ ಅಗೆಯೋದು ಉಳಿದಿತ್ತು. ಅಷ್ಟು ಮಾಡಿ ಬರ್ತೀನಿ ನಡಿಯಪ್ಪ ಅಂತ ಹುಡುಗನ ಕೈಲಿ ಹೇಳಿ ಕಳಿಸಿದೆ. ಅಷ್ಟು ಮಾಡಿ ಮುಗಿಸಿ ಬಂದೆ. ಅಷ್ಟು ಹೊತ್ತಿಗೆ ಹತ್ತು ಗೆಡ್ಡೆದಾಯ ಅಗೆದು ಮುಗಿಸಿದ್ದೆ. ಇನ್ನೂ ಎರಡು ಗೆಡ್ಡೆದಾಯ ಅಗೆಯಲು ಅದಾಗಲೇ ನಿರ್ಧಾರ ಮಾಡಿಕೊಂಡು ಬಿಟ್ಟಿದ್ದೆ. ಬಿಟ್ಟು ಬರಲು ಮನಸ್ಸಾಗಲಿಲ್ಲ.



ಕೇಶವಮೂರ್ತಿ ದಂಪತಿ ತಮ್ಮ ಮನೆಯ ಮುಂದಿನ 'ಸಣ್ಣಪ್ಪ ಮೇಷ್ಟರ ಮಂದಳ'ದಲ್ಲಿ :ಎಲೆಚಾಗಹಳ್ಳಿ

* **ನಿಮ್ಮ ದಿನಚರಿ ಹೇಗೆ?**

\- ಬೆಳಗ್ಗೆ ಎದ್ದು ಒಂದು ಲೋಟ ಕಾಫಿ ಕುಡೀತೀನಿ, ಇನ್ನೇನೂ ಇಲ್ಲ. ತೋಟಕ್ಕೆ ಹೋಗ್ತೀನಿ. ತೋಟಕ್ಕೆ ಹೋದ ಮೇಲೆ ತೋಟದಲ್ಲಿ ನಮ್ಮ ಕೆಲಸ-ಸೆತ್ತೆ ಕೀಳುವ ಕೆಲಸ ಇತ್ತೇ? ಸತ್ತೇ ಕೀಳುವ ಕೆಲಸ; ಅಗೆಯುವ ಕೆಲಸ ಇತ್ತೆ? ಅಗತೆ ಮಾಡೋದು; ಕಲ್ಲು ಆರಿಸಿ ಹಾಕೊ ಕೆಲಸ ಇತ್ತೆ? ಅದು-ಯಾವ ಕೆಲಸ ಇತ್ತೋ ಅದನ್ನು ಹನ್ನೆರಡೂವರೆ ಯಿಂದ ಒಂದು ಘಂಟೆಯವರೇಗೆ ಪೂರ್ತಿ ಮಾಡಿಕೊಂಡಿ ರೋದು. ಮನೆಗೆ ಬಂದು ಸ್ನಾನ, ಸಂಧ್ಯಾವಂದನೆ ಮಾಡಿ, ದೇವತಾರ್ಚನೆ ಮಾಡಿಕೊಂಡು ಭೋಜನ ಮಾಡಿ... ಒಂದು ಘಂಟೆ ರೆಸ್ಟು. ಆಮೇಲೆ ಮತ್ತೆ ಹೋದರೆ ಸಾಯಂಕಾಲ ಏಳು ಘಂಟೆಯವರೆಗೂ ಕೆಲಸ ಮಾಡಿ ಕೊಂಡೇ ಇರೋದು. ಬಂದ ಮೇಲೂ ಅಷ್ಟೇನೆ, ಕೈಕಾಲು ತೊಳಕೊಂಡು ಸಂಧ್ಯಾವಂದನೆ ಮಾಡಿ ಒಂಭತ್ತರವರೆಗೂ ಕಾಲ ಹಾಕಿ ಮಲಗೋದು. ಹೀಗೇ, ಯಾವುದಾದರೂ ಹಲಸೋ ಮತ್ತೊಂದೋ ಹಣ್ಣು ಬಿಟ್ಟಿದ್ದರೆ ಕುಯ್ದುಕೊಳ್ಳುವುದು, ನಿಂಬೆ ಮೆಳೆಗಳ ತಳದಲ್ಲಿ ಉದುರಿರೋ ಹಣ್ಣು ಆರಿಸಿಕೊಳ್ಳೋದು, ಪೂಜೆಗೆ ಹೂ ಬಿಡಿಸಿಕೊಳ್ಳೋದು. ಒಂದು ಇನ್ನೂರು ಗಿಡ ತೇಗ ಏಳಿಸಿದೀನಿ. ಅದರಲ್ಲೆಲ್ಲಾ ಕವಟಲು ಬಂದಿರುತ್ತೆ. ಅದನ್ನೆಲ್ಲಾ ಕಟ್ ಮಾಡಬೇಕು. ಎಲ್ಲಾ ಮಾಡಿಕೊಂಡೇ ಇರಬೇಕು. ತೋಟದಲ್ಲಿ... ಭೂಮೀಗೇ... ಮುಗಿಯಿತು ಕೆಲಸ ಅನ್ನೋದಿಲ್ಲ. ಯಾರೇ ಆಗಲಿ ಜಮೀನನ್ನು ನಾಲ್ಕು ಮೂಲೇನೂ ದಿನಕ್ಕೆ ಎರಡೋ ನಾಲ್ಕೋ ಸರ್ತಿ ನೋಡುತ್ತಿದ್ದರೆ ಆ ಭೂಮಿ ನಮಗೆ ಹೇಳುತ್ತೆ 'ಆ ಕೆಲಸ ಮಾಡು, ಈ ಕೆಲಸ ಮಾಡು' ಅಂತ. ಭೂಮೀನ ನಾಕು ಸರಿ ಆದರೂ ಬಳಸಬೇಕು. ನಮಗೇ ಒಂದು ಥರ ಶಾಕ್ ಆದ ಹಾಗೆ ಆಗುತ್ತೆ. ಈ ಜಾಗಕ್ಕೆ ನಾನೇಕೆ ಏನೂ ಮಾಡಲಿಲ್ಲ, ಈ ಜಾಗಕ್ಕೆ ಕೆಲಸ ಪೂರ್ತಿ ಆಗಿಲ್ಲ, ಈ ಜಾಗಕ್ಕೆ ಮಾಡಬೇಕು, ಈ ಜಾಗಕ್ಕೆ ಆಗಿದೆ, ಈ ಜಾಗಕ್ಕೆ ಬೇಡ, ಈ ಮರಕ್ಕೆ ಗೊಬ್ಬರ ಕಮ್ಮಿ ಹಾಕಿದೀನಿ. ಈ ಮರ ವೀಕ್ ಆಗಕ್ಕೆ ಕಾರಣವೇನು-ಅಂತ ಎಲ್ಲಾ ಹೇಳುತ್ತೆ. ನಮ್ಮ ಮನಸ್ಸಿಗೆ ಅರ್ಥವಾಗುತ್ತೆ. ಅದು... ಅವಕ್ಕೆ ಬಾಯಿಲ್ಲ. ಆದರೆ ಅರ್ಥಾನ ತೋರಿಸ್ತಾ ಇರುತ್ವೆ. ಆಳುಗಳಿಗೆ ಹೇಳಿದರೆ ಬೇಕಾಬಿಟ್ಟಿ ಆಗುತ್ತೆ ಕೆಲಸ. ಆದ್ದರಿಂದ ಆದಷ್ಟೂ ಸ್ವಂತವಾಗೇ ಮಾಡಿಕೊಳ್ಳೋದು. ನಮ್ಮ ಕೆಲಸ ಸಾಧ್ಯವಾದಷ್ಟು ಅಚ್ಚುಕಟ್ಟಾಗಬೇಕು. ಹೇಸಿಗೆ ಆಗಬಾರದು, ಅಷ್ಟೆ. ಸ್ವಂತವಾಗಿ ನಾವು ಒಂದು ಹೊತ್ತು ಮಾಡೋ ಕೆಲಸಾನ ಆಳುಗಳು ಸಂಜೇವರೀಗೂ ಮಾಡ್ತಾರೆ.

* **ಹಸುಕರುಗಳನ್ನು ಸಾಕಿದೀರಿ?**

\- ಹೌದು. ಎಮ್ಮೆ, ಹಸುಗಳು ಎಲ್ಲಾನೂ ಸಾಕ್ತೀವಿ. ಈಗ ಹಸು ಇಲ್ಲ, ಎಮ್ಮೆಗಳಿವೆ. ಮನೇಗೆ ಕರಾವು ಆಗುತ್ತೆ. ಗೋಬರ್‌ಗ್ಯಾಸ್ ಮಾಡಿಸಿದೀನಿ. ಅದಕ್ಕೆ ಸಗಣಿಗೆ ರಾಸು ಬೇಕು. ಒಂದು ಮಕ್ಕರಿ ಸಗಣಿ ೨೫ ಕೆಜಿ. ಬರುತ್ತೆ. ಅದನ್ನು ಹಾಕಿ ಕದರಿಬಿಟ್ಟರೆ, ನಮ್ಮ ಮನೆಗೆ ನಾಕು ಜನ ಐದು ಜನದ ಅಡುಗೆ ಮಾಡಬಹುದು.

* **ಅಡಿಕೆ ಪಟ್ಟೆ ಏನು ಮಾಡ್ತೀರಿ?**

- ಸುಲಿದು ರೆಡಿ ಮಾಡಿ ಇಟ್ಟಿರ್‍ತೀನಿ, ಆ ಫ್ಯಾಕ್ಟರಿಯೋರು ಬರ್‍ತಾರೆ-ಕೇರಳಾಪುರದೋರಾಗಲಿ, ರಾಮನಾಥಪುರದೋರಾಗಲಿ-ಬಂದು ತಗೊಂಡು ಹೋಗ್ತಾರೆ. ನೂರಕ್ಕೆ ನಲವತ್ತುರೂಪಾಯಿ, ಮೂವತ್ತೈದು ರೂಪಾಯಿ ಹೀಗೆ ಬರುತ್ತೆ. ಅದೂ ಏನು ಕಮ್ಮಿ ಇಲ್ಲ. ೧೦೦೦ ಪಟ್ಟೆ ಎಂದರೆ ೪೦೦ ರೂಪಾಯಿ ದುಡ್ಡು ಸಿಗುತ್ತೆ. ಈಗ... ನಮ್ಮನೇಲಿ ಐದಾರು ಸಾವಿರ ಪಟ್ಟೆ ಇದೆ. ಹಣ ಸಿಗಲ್ವೆ? ವೇಸ್ಟ್ ಮಾಡಿದರೆ ಕರಗಿ ಹೋಗುತ್ತೆ. ಅದನ್ನು ತಂದು ಕ್ಲೀನಾಗಿ ಹೀಗೆ ಜೋಡಿಸಿಟ್ಟರೆ ಅದಕ್ಕೆ ಬೆಲೆ ಸಿಗುತ್ತೆ.

ಈಗ ಆ ದೊನ್ನೆ: ತರಗಲ್ಲಿ ಮಾಡೋದು. ಅದನ್ನೂ ರೆಡಿ ಮಾಡ್ತೀನಿ ನಾನು. ಅವತ್ತು ಲಕ್ಷಾಂತರ ರೂಪಾಯಿನ ವಹಿವಾಟು ನಡೆಸ್ತಿದ್ದಾಗಲೂ ಈ ಸಣ್ಣವನ್ನೂ ಕೈಬಿಟ್ಟಿರಲಿಲ್ಲ. ಲಕ್ಷ ರೂಪಾಯಿನ ಅಡಿಕೆ ಮಾಡುವಾಗಲೂ ಸಂದೀಲಿ ಇದನ್ನೂ ಮಾಡ್ತಿದ್ದೆ, ಇವತ್ತೂ ಮಾಡ್ತೀನಿ. ಇವನ್ನೆಲ್ಲಾ ಮನೆಯವರೆಲ್ಲಾ ಮಾಡ್ತೀವಿ. ದಿನಕ್ಕೆ ೧೫೦ ಪಟ್ಟೆ ಬೀಳುತ್ತೆ. ಅವತ್ತವತ್ತೇ ಬಿಡಿಸ್ತೀವಿ. ಅದನ್ನು ಬಿಡಿಸಿದ ನಾರೂ ಕಟ್ಟಿಗೆ ೫೦ ಪೈಸೆ ೭೫ ಪೈಸೆ ಹಾಗೆ ಹೋಗುತ್ತೆ. ಅದನ್ನು ಒಲೆಗೆ ಹಾಕಲು ಬಳಸ್ತಾರೆ. ಒಂದು ಗೊದಮಟ್ಟೆ ಒಂದು ರೂಪಾಯಿಗೆ ಹೋಗುತ್ತೆ. ತೋಟದಲ್ಲಿ ಅದನ್ನೆಲ್ಲಾ ಒಂದು ಕಡೆ ಜೋಡಿಸಿಟ್ಟಿರ್‍ತೀನಿ. ಲಾರಿ ತಂದು ತುಂಬಿಕೊಂಡು ಹೋಗ್ತಾರೆ. ಆಳುಗಳನ್ನೇ ಬಿಟ್ಟರೆ ತೋಟ ಬಳಸಿ ದಿನಕ್ಕೆಲ್ಲಾ ಹತ್ತು ಗೊದಮಟ್ಟೆ ಎಳೆಯಲ್ಲ. ನೂರು ಮೊಟ್ಟೆ ಸಿಕ್ಕಿದರೆ ನೂರು ರೂಪಾಯಿ ಬಂದ ಹಾಗೆ. ಸೋಗೇಗೆ ಐವತ್ತು ಪೈಸೆ. ಜೀವನಕ್ಕೆ ದಾರಿ! ಏನೂ ಇಲ್ಲದ ಹಾಗೆ ಜೀವನ ಮಾಡಿದರೆ ಸಾಕು.

* **ಅತಿಥಿ ಸತ್ಕಾರದ ವಿಷಯ ಹೇಳ್ತಾ ಇದ್ದಿರಿ ಆಗ**

- ನಮ್ಮವರಲ್ಲಿ ಏನೂ ಅಂದರೆ, ಅವತ್ತು ಆಗುಂತಕರು ಯಾರೂ ಇಲ್ಲದೇ ಹೋದರೆ ಅವರಿಗೆ ಸಂಕಟ. ಭೋಜನ ಮಾಡಿಸಬೇಕು ಅನ್ನುವ ಆಸೆ ಜಾಸ್ತಿ. ಸ್ನಾನ ಮಾಡಿ ಜಪ, ಆಹ್ನೀಕ, ದೇವತಾರ್ಚನೆ ಮಾಡಿಬಿಟ್ಟರೆ ಆಚೆಗೆ ಬರೋದು. ಬೀದಿಬಾಗಿಲಿಗೆ ಹೋಗಿ ನಿಂತು ಎಲ್ಲಾ ಕಡೆಯೂ ನೋಡೋದು. ಯಾರಾದರೂ ಅತಿಥಿಗಳು ಬರುತ್ತಿದ್ದಾರೆ ಅಂದರೆ ಹೋಗಿ ಅವರನ್ನು ಕರೆದುಕೊಂಡು ಬಂದು 'ನಮ್ಮ ಮನೇಲಿ ಭೋಜನ ಮಾಡಿ ತೀರಬೇಕು ನೀವು' ಅಂತ ಹೇಳಿ ಭೋಜನ ಮಾಡಿಸೋದು. ಅವರಿಗೆ ಊಟ ಮಾಡಿಸಿ ಕಳಿಸಿಕೊಟ್ಟಲ್ಲದೆ ಮನೆಯವರು ತಾವು ಊಟ ಮಾಡುತ್ತಿರಲಿಲ್ಲ. ಹಿಂದೆ ಹಾಗೆಲ್ಲಾ ಮಾಡುತ್ತಿದ್ದರು. ಈಗ ನಮಗೆ ಅದು ಲಭ್ಯವೇ ಆಗಲ್ಲ. ಯಾವತ್ತೋ ಹೀಗೆ ಅಚಾನಕ್ಕಾಗಿ ಯಾರಾದರೂ ಸಿಕ್ಕಿದರೆ ಜೊತೇಲಿ ಊಟಕ್ಕೆ ಕೂರಿಸಿಕೊಳ್ಳೋದು, ಇಲ್ಲದಿದ್ದರೆ ಇಲ್ಲವೇ ಇಲ್ಲ. ಆ ಬಡಿಸುವ ಯೋಗವನ್ನೂ ನಾವು ಕೇಳಿಕೊಂಡು ಬಂದಿಲ್ಲ. ಒಂದೆರಡು ದಶಕಗಳ ಹಿಂದೆ ಕೂಡ ಅತಿಥಿ ಸತ್ಕಾರ ಯೋಗ ದೊರೆಯುತ್ತಿತ್ತು. ಪಂಕ್ತಿಯಲ್ಲಿ ಅನೇಕರು ಇರುತ್ತಿದ್ದರು. ಈಗ ಇಲ್ಲ. ಇನ್ನೊಬ್ಬರನ್ನು ತೃಪ್ತಿಪಡಿಸಲು ಬೇರೆ ಯಾವುದರಿಂದಲೂ ಸಾಧ್ಯವಿಲ್ಲ. 'ಸಾಕಪ್ಪ, ನನಗಿನ್ನು ಬೇಡ' ಎಂದು ಹೇಳಿಸುವ ಶಕ್ತಿ ಇರೋದು ಊಟಕ್ಕೆ ಮಾತ್ರ. ಹಿಂದೆ ಇದಕ್ಕೇ ಪ್ರಾಮುಖ್ಯ. -ನಾಲ್ಕು ಜನರಿಗೆ ಅನ್ನದಾನ ಮಾಡಬೇಕು, ಒಳ್ಳೆಯವರು ಎಂದು ಹೆಸರು ತೊಗೋಬೇಕು-ಇಂಥದು. ನಾಕು ಜನಕ್ಕೆ ಅನ್ನ ಹಾಕಿದ್ದರಿಂದ ಒಳ್ಳೆಯದಾಗುತ್ತೆ ಎನ್ನುವುದು ಭಾವ. ಮದುವೆ ಶೋಭನ ಮಾಡುತ್ತಿದ್ದದ್ದು ಯಾಕೆ ಅಂತ? ಅನ್ನದಾನ ಮಾಡಬೇಕು ಅಂತ. ವಿಶೇಷವಾಗಿ ಮಕ್ಕಳಿಗೆ ಶ್ರೇಯಸ್ಸಾಗಬೇಕಾದರೆ ಎಷ್ಟು ಜನಕ್ಕೆ ಅನ್ನದಾನ ಮಾಡಿದರೂ 'ಸಾಕಾಯಿತು' ಅಂತ ಹೇಳುವುದಕ್ಕಾಗುವುದಿಲ್ಲ ಅದು. ಅನ್ನದಾನದಲ್ಲಿ ವಿಶೇಷ ಏನು ಅಂತ



ಖ್ಯಾತ ವಿದ್ವಾಂಸ ಚಾ.ಕೇ. ಶಾಸ್ತ್ರಿಗಳ ಮನೆ:ಎಲೆಚಾಗಹಳ್ಳಿ

ಅಂದರೆ ತೃಪ್ತಿ ಮನುಷ್ಯನಿಗೆ.

* **ವಿದ್ವಾಂಸರೂ ಮಣ್ಣುಮುಟ್ಟಿ ಕೆಲಸ ಮಾಡುವ ಸಂಕೇತಿಗಳ ರೀತಿ ವಿಶಿಷ್ಟವಾದುದು ಎಂಬುದು ಎಲ್ಲರಿಗೂ ತಿಳಿದ ವಿಚಾರ. ನಿಮ್ಮೂರಲ್ಲೂ ಅಂಥ ನಿದರ್ಶನವಿದೆಯೆ?**

- ವೇ||ಬ್ರ||ಶ್ರೀ ಚಾ.ಕೇ.ಶಾಸ್ತ್ರಿಗಳು ಮೈಸೂರು ಮಹಾರಾಜಾ ಸಂಸ್ಕೃತ ಪಾಠಶಾಲೆಯಲ್ಲಿ ಪ್ರಾಧ್ಯಾಪಕರಾಗಿದ್ದವರು, ಮಹಾವಿದ್ವಾಂಸರು. ನಿವೃತ್ತರಾಗಿ ಊರಿಗೆ ಬಂದ ಮೇಲೂ ಅವರು ತೋಟದ ಕೆಲಸ ಮಾಡುತ್ತಿದ್ದರು. ತೋಟವನ್ನೆಲ್ಲಾ ಅವರೇ ಅಗೆಯೋರು. ನಿವೃತ್ತರಾದ ಮೇಲೂ ಹತ್ತಾರು ವರ್ಷ ಹಾಗೆ ದುಡಿದರು. ನಾವು ತರುಣರೂ ಇಬ್ಬರು ಮಾಡಲು ಸಾಧ್ಯವಿಲ್ಲದಷ್ಟು ಕೆಲಸವನ್ನು ಅವರೊಬ್ಬರೇ ಆ ವಯಸ್ಸಲ್ಲಿ ಮಾಡುತ್ತಿದ್ದರು. ಆಳುತನವೇ ಹಾಗಿತ್ತು. ನಮ್ಮನ್ನು ನಾಕು ಜನ ಹಾಕಬೇಕು. ಅಂಥ ಆಕೃತಿ ಅವರದ್ದು.

ವ್ಯವಸಾಯದಲ್ಲಿ ಒಂದು, ಮೊದಲಿಂದಲೂ ಅನುಭವ ಇದ್ದರೆ ಆ ಕೆಲಸವೇ ಹೊರತು ಸುಮ್ಮನೆ ಅಗೆದುಬಿಟ್ಟರೆ ಆಗಲ್ಲ. ಅನುಭವ ಇದ್ದು ಕೆಲಸ ಮಾಡಿದರೆ ಒಳ್ಳೆಯ ವ್ಯವಸಾಯವಾಗುತ್ತೆ. ಇಲ್ಲದಿದ್ದರೆ ಬರೀ ಶ್ರಮ; ವ್ಯವಸಾಯ ಹಿತವಾಗಲ್ಲ.

ತೋಟದಲ್ಲಿ ಕಲ್ಲು ಇಡಿದು ೩೦ ಅಡಿ ಆಳದ ಭಾವಿ ತೆಗೆದಿದ್ದರು ಕೇಶವಶಾಸ್ತ್ರಿಗಳು. ತಾವೇ ಕಲ್ಲು ಮಣ್ಣನ್ನು ಮೇಲಕ್ಕೆ ಎತ್ತಿ ಹಾಕಿದ್ದರು ಕೂಡ. ಅವರಿಗೆ ಅದೊಂದು ಲೆಕ್ಕವೇ ಆಗಿರಲಿಲ್ಲ.

ಎ) ಮರಿತಮ್ಮನಹಳ್ಳಿ

[ಸಂಕೇತಿಗಳ ಬೇಸಾಯದ ಬದುಕಿನ ಜರ್ಬನ್ನು (ಈಗಲೂ) ಕಾಣಬಹುದಾದ ಕೆಲವೇ ಊರುಗಳಲ್ಲಿ ಮರಿತಮ್ಮನಹಳ್ಳಿ ಒಂದು. ಹಳ್ಳಿಯ ಬೇರನ್ನು ಕಳಚಿಕೊಂಡು ಪಟ್ಟಣದಲ್ಲಿ ಭ್ರಮನಿರಸನವಾಗಿ ಅತಂತ್ರರಾಗುವ ಮೊದಲೇ ಎಚ್ಚೆತ್ತುಕೊಂಡವರು ಈ ಗ್ರಾಮದವರು. ಇವರೆಲ್ಲರಿಗೆ ವ್ಯವಸಾಯದ ಲಾಲಸೆಯು ಸಹಜವಾಗಿ ಉಳಿದಿದೆ.]

೧.೧) ಪ್ರಭಾಕರ

ಚಾಹಳ್ಳಿಯಿಂದ ಮರಿತಮ್ಮನಹಳ್ಳಿಗೆ ಬರುವಾಗ ಮೊದಲು ಸಿಕ್ಕಿದ್ದೇ ಪ್ರಭಾಕರ ಅವರ ತೋಟ. ವಾಚಾಳಿ. ಪೂರ್ವಪರಿಚಿತರು ಬೇರೆ.

'ಮರಿತಮ್ಮನ ಹಳ್ಳಿಯಲ್ಲಿ ವ್ಯವಸಾಯ ಹೇಗೆ ನಡೆಯುತ್ತಿದೆ ನೋಡೋಣವೆಂದು ಬಂದೆ' ಎಂದದ್ದೇ ತಡ, ಮಾತಾಡತೊಡಗಿದರು.



ಸಂಕೇತಿಬೀದಿ : ಮರಿತಮ್ಮನಹಳ್ಳಿ

ನನಗೆ ಮೂರು ಎಕರೆ ಜಮೀನಿದೆ. ಸೋನೆ ಮಳೆ ಶುರು ಆದಾಗ ಆಲೂಗೆಡ್ಡೆ, ಅಕ್ಟೋಬರ್ ಮೊದಲ ವಾರದಲ್ಲಿ ರಾಗಿ ಅಥವಾ ಹಲ್‌ಜೋಳ ಬೆಳೀತೀವಿ. ಪಿಯುಸಿ ಓದಿದ ಮೇಲೆ ಆರ್ಥಿಕ ಪರಿಸ್ಥಿತಿ ಚೆನ್ನಾಗಿರಲಿಲ್ಲ, ವ್ಯವಸಾಯದ ಕಡೆಗೇ ಒಲವು ಕೂಡ ಇತ್ತು, ಹಾಗಾಗಿ ಹಳ್ಳಿಗೆ ಬಂದೆ. ತಂದೆ ಅನಂತರಾಮಯ್ಯನವರು ವ್ಯವಸಾಯ ಮಾಡಿ ಜೀವಿಸುತ್ತಿದ್ದರು. ದೊಡ್ಡಪ್ಪ ನಾರಣಪ್ಪ ನವರಿಗೆ ಜ್ಯೋತಿಷ್ಯ ತಿಳಿದಿತ್ತು. ಚಿಕ್ಕಪ್ಪ ಒಬ್ಬರು



ನಳಿನಿ-ಪ್ರಭಾಕರ ದಂಪತಿ ತಮ್ಮ ಮನೆಯ ಮುಂದೆ

೧೯೩೮-೩೯ ರಲ್ಲಿ ಇಂಟರ್‌ಮೀಡಿಯಟ್‌ನಲ್ಲಿ ರ್‍ಯಾಂಕ್ ಪಡೆದು ಇಂಜಿನಿಯರಿಂಗ್ ಓದಿದ್ದರು. ಅಜ್ಜ ಮೇಧಾವಿ ರಾಮಣ್ಣನವರು. ಮೂಗಿನ ಮೇಲೆ ಭ್ರೂಮಧ್ಯದಲ್ಲಿ ಮಚ್ಚೆ ಇದ್ದುದರಿಂದ ಅವರಿಗೆ ಆ ಹೆಸರು ಬಂದಿತ್ತು. ನಮ್ಮ ಮನೆತನದಲ್ಲಿ ಅನೇಕರಿಗೆ ಹಾಗೆ ಆ ಜಾಗದಲ್ಲೇ ಮಚ್ಚೆ ಇದೆ. ಅಜ್ಜ ತುಂಬ ಬಡವರು. ಜನರೊಡನೆ ತುಂಬ ನಮ್ರತೆಯಿಂದಿದ್ದರು. ಅಡುಗೆ ಕಾಯಕ ಅವರದು. ಅವರು ಮೃತರಾಗಿ ೫೦ ವರ್ಷ ಕಳೆದಿದೆ. ಅವರು ತುಂಬಾ ಸಾಲ-ಸೋಲ ಮಾಡಿದ್ದರು. ಆದರೆ ಮುಂದೆ ನಮ್ಮ ಚಿಕ್ಕಪ್ಪ ತಮ್ಮ ತಂದೆ ಮೇಧಾವಿ ರಾಮಣ್ಣನವರ ಹೆಸರಿನಲ್ಲಿ ಬೇಕಾದಷ್ಟು ದಾನಧರ್ಮ ಮಾಡಿದ್ದಾರೆ.

ಅಡಿಕೆ ಎಡೆಯುವುದರಲ್ಲಿ ನಮ್ಮ ಮನೆತನದ ಗಂಡಸರು ಹೆಂಗಸರು ಎಲ್ಲಾ ನಿಪುಣರು. ಎಲ್ಲರಿಗಿಂತ ಹೆಚ್ಚು ಎಡೆಯಬಲ್ಲವರೆಂದು ನಮ್ಮೂರಲ್ಲಿ ಜಂಗ್ ಹಾಕಿಸಿಕೊಂಡಿದ್ದವರು ನಮ್ಮ ಮನೆಯವರೇ.

ನಮ್ಮ ಚಿಕ್ಕಪ್ಪ ಎಂ.ಆರ್.ನಂಜುಂಡಯ್ಯನವರು ಸಂಕೇತಿ ಮಂಡಲಿಯಲ್ಲೇ ಗಣ್ಯರು. ಬಡವರ ವಿದ್ಯಾಭ್ಯಾಸದ ಬಗ್ಗೆ ಅವರಿಗೆ ತುಂಬ ಕಾಳಜಿ ಇತ್ತು. ಹಾಸನದ Hostel ೧೯೭೧ರಲ್ಲಿ ಪ್ರಾರಂಭವಾಗಲು ಅವರೇ ಪ್ರೇರಕರು. ಅವರು ಓದಿದ್ದೂ ಬಡತನದಲ್ಲೇ.

ಇಲ್ಲಿ ನೀರಿನ ಆಸರೆ ಹೇಗಿದೆ ಹೇಳಿ ಪ್ರಭಾಕರ್

೧೬ ಎಕರೆಯ ಒಂದು ಆಗ್ರ, ಇನ್ನೊಂದು ಮೂರೂವರೆ ಎಕರೆ 'ಸಾಹುಕಾರರ ಆಗ್ರ', ಇನ್ನೊಂದು ನಾಲ್ಕು ಎಕರೆ ಕೂಡ 'ಸಾಹುಕಾರರ ಆಗ್ರ'ವೇ. ಹಿಂದೆ ಕಾಶಿಯಲ್ಲಿದ್ದ ಒಬ್ಬರು ಬಂದು ಇಲ್ಲಿ ಒಂದು ಕೆರೆ ಕಟ್ಟಿಸಿದ್ದರು. ಆ ಕೆರೆಯ ನೀರು ಕಾವೇರಿ ತೀರ್ಥಕ್ಕಿಂತ ರುಚಿಯಾಗಿತ್ತು. ಇನ್ನೊಂದು ಹೊಡಕೆ ಕಟ್ಟೆ, ಇನ್ನೊಂದು ದೊಡ್ಡ ಕೆರೆ. ಇದಕ್ಕೆಲ್ಲ ಮಳೆ ನೀರೇ ಆಧಾರ. ದೊಡ್ಡ ಕೆರೆಗೆ ಈಗ ಗೊರೂರಿನ ಕಾಲುವೆ ನೀರು ಸೇರುತ್ತದೆ. ಹಾಗಾಗಿ ಅದು ಯಾವಾಗಲೂ ತುಂಬಿರುತ್ತದೆ. ೪೦ ವರ್ಷದ ಹಿಂದೆ ಮಳೆ ಚೆನ್ನಾಗಿತ್ತು. ಆಗ 'ಬಿತ್ತನೆ' ಹೆಚ್ಚು. ರಾಗಿಯನ್ನು ಸುಮ್ಮನೆ ಎರಚಿ ಹರತೆ ಹೊಡೆದರಾಯಿತು. ಸುಮ್ಮನೆ ಧೂಳಿಗೆ ಬಿತ್ತ ಎರಚಿ ಬೆಳೆದ ರಾಗಿ ತೆನೆ ಇಷ್ಟಿಷ್ಟು ದಪ್ಪ ಇರುತ್ತಿತ್ತು. ಈಶಾನ್ಯದಲ್ಲಿ ಮಿಂಚಿದರೆ ಸಾಕು, ಕೆರೆ ತುಂಬುತ್ತಿದ್ದುದನ್ನು ನನ್ನ ಬಾಲ್ಯದಲ್ಲಿ ಬಹಳ ಸರಿ ನಾನು ನೋಡಿದ್ದೇನೆ. ಅಂಥ ಮಳೆಗಾಲ ಈಗ ಇಲ್ಲ. ಹಿಂದೆ ನಾವೇ 'ಬಲಗುಪ್ಪ' ಹಾಕಿದ್ದ ಐದು -ಆರು ಗಾಡಿ ಹುಲ್ಲು ಮಳೆಯಲ್ಲಿ ನೆಂದು ತೇಲಿ ಕೆರೆ ಪಾಲಾಗಿದ್ದನ್ನು ನಾನೇ ಅನುಭವಿಸಿದ್ದೇನೆ.



ತೆಂಗಿನತೋಟದ ಒಳಗೆ ಜೋಳದ ಬೆಳೆ:ಪ್ರಭಾಕರ:ಮರಿತಮ್ಮನಹಳ್ಳಿ

ಹಾಸನಜಿಲ್ಲೆಯಲ್ಲಿ *ಮೊದಲು ಬೋರು* ತೆಗೆಸಿದ್ದೇ

ನಮ್ಮೂರಲ್ಲಿ. ಅದಕ್ಕೆ ವಿದ್ಯುತ್ ಸಂಪರ್ಕ ಕಲ್ಪಿಸಿದ್ದೂ ಸಾಹಸವೇ. ಆಗಲೇ ಅದಕ್ಕೆ ಒಂದು ಲಕ್ಷ ರೂ. ಬಿದ್ದಿತ್ತು. ನಮ್ಮೂರಲ್ಲಿ ಬಹುಪಾಲು ಭಾವಿಗಳಲ್ಲಿ ೧೫೦-೨೦೦ ಅಡಿಯೊಳಗೆ ಬೇಕಾದಷ್ಟು ನೀರು ಬರುತ್ತಿದೆ. ನಮ್ಮೂರಲ್ಲಿರುವ ಸಂಕೇತಿಗಳ ೧೯ ಮನೆಯವರೂ ವ್ಯವಸಾಯದಲ್ಲೇ ಜೀವಿಸುತ್ತಿದ್ದೇವೆ.

ಅಡಕೆ ತುಡಿಕೆ?

ಅಡಿಕೆ ಬೆಲೆ ಇಳಿದದ್ದು, ತೆಂಗಿಗೆ ನುಸಿರೋಗ ಬಂದದ್ದು ನಮ್ಮನ್ನು ಕಂಗೆಡಿಸಿವೆ. ಒಂದು ಕ್ವಿಂಟಾಲ್ ಅಡಿಕೆಯನ್ನು ೧೮ ಸಾವಿರಕ್ಕೆ ಕೊಟ್ಟದ್ದುಂಟು, ಇವತ್ತು ಬೆಲೆ ೪೦೦೦ ಇದೆ. ಒಂದು ಲಕ್ಷ ಅಡಿಕೆ ರೇಖೆ ಮಾಡಲು-ಕುಯ್ಲು, ಬಡಿಸೋದು, ಬೇಯಿಸುವುದು, ಒಣಗಿಸುವುದು-ಇದಕೆಲ್ಲಾ ೩೦೦೦ ರೂಪಾಯಿ ಖರ್ಚು ಬೀಳುತ್ತೆ. ನಮ್ಮೂರಲ್ಲಿ ಎಲ್ಲರೂ ಸ್ವಂತ ರೇಖೆ ಮಾಡುತ್ತಿದ್ದರು. ಡಿಸೆಂಬರ್‌ನಲ್ಲಿ ರೇಖೆ ಮಾಡಿದ ಅಡಿಕೆ ಮಾರಲು May ಬರಬೇಕು. ಆರ್ಥಿಕ ಒತ್ತಡ ಇದ್ದೇ ಇರುತ್ತದೆ. ಹಾಗಾಗಿ ಕಡಿಮೆ ಬೆಲೆಗೆ ಎಲ್ಲರೂ ಮಾರಿಕೊಳ್ಳುತ್ತಾರೆ.

ಇಲ್ಲಿ ಈಗಲೂ ವೀಳೆ ಚೆನ್ನಾಗಿದೆಯೆ?

ನಮ್ಮ ತಂದೆ ಬೆಳಗಾಗುವ ಹೊತ್ತಿಗೆ ೩೦೦ ತೂಕ ನೀರು ಹಾಕಿ ಬರೋರು. ಅವರು ಬೆಳಿಗ್ಗೆ ನಾಲ್ಕು ಘಂಟೆಗೇ ಹೋಗೋರು. ಆಗ ದನಕರು ಭಾರಿ. ಬೋರೇಲಿ ಮೇಯಿಸುತ್ತಿದ್ದೆವು. ಪ್ರತಿ ಮನೆಯಲ್ಲೂ ೩೦-೪೦ ಗಾಡಿ ಗೊಬ್ಬರ ಆಗೋದು. ಆಗ ವೀಳೆ, ಅಡಿಕೆ ಎರಡೇ ಬ್ರಾಹ್ಮಣರು ಬೆಳೆಯುತ್ತಿದ್ದುದು. ಆಗ ಅಡಕೆಗಿಂತ ಹೆಚ್ಚು ಪ್ರಾಶಸ್ತ್ಯ ವೀಳೆಗೆ ಕೊಡುತ್ತಿದ್ದರು. ನಮ್ಮ ತೋಟದಲ್ಲೂ ೪೦ ಹೇರು ಎಲೆ ಆಗುತ್ತಿತ್ತಂತೆ. ಅಂದರೆ ೪೦೦೦೦ ವೀಳೆ. ೧೦೦ ಮಣ ಅಡಿಕೆ ಆಗುತ್ತಿತ್ತು. ಒಂದು ಮಣಕ್ಕೆ ನಾಲ್ಕು ಆಣೆ. ಎಲೆ ತೊಗೊಂಡು ಹೋಗಿ ಹಾಸನ, ಹೊಳೆನರಸೀಪುರ ದಲ್ಲಿ ಮಾರಿ ಅಕ್ಕಿ ತರೋರು. ಮಣ್ಣಿನ ಗಡಿಗೆ ಅದು ಒಡೆಯುತ್ತಿದ್ದುದೂ ಬಹಳ. ಆಳದ ಬಾವಿ ಯಿಂದ ಎತ್ತಿಕೊಂಡು ಬಂದು 'ತೂಕ' (ನೀರು) ಹಾಕುತ್ತಿದ್ದರು. ೨೦ ವರ್ಷದಿಂದೀಚೆಗೆ ಮೋಟಾರ್ ಇಟ್ಟುಕೊಂಡು ಪೈಪ್‌ನಲ್ಲಿ ನೀರು ಬಿಡುವುದು ರೂಢಿಗೆ ಬಂದಿದೆ. ಆದರೆ ಈಗಿನ ಜನಕ್ಕೆ ಅದೇ ಕಷ್ಟವಾಗಿದೆ. ಆಗ ರಾಗಿ ಮುದ್ದೆ ಇಲ್ಲದೆ ತುತ್ತೇ ಎತ್ತುತ್ತಿರಲಿಲ್ಲ. ರಾಗಿಯಲ್ಲಿ ಅಷ್ಟರಮಟ್ಟಿನ ಶಕ್ತಿ ಇದೆ ಎಂಬುದು ಅವರಿಗೆ ತಿಳಿದಿತ್ತು. ಈಗ ಊಟ ಮಾಡುವುದು ಸಣ್ಣಕ್ಕಿ ಅನ್ನ; ಆದರೆ ರೋಗ ಜಾಸ್ತಿ. ತೋಟದಲ್ಲಿ ಅಡಿಕೆ ಮರದ ನೆರಳಲ್ಲಿ ಕೆಸವು ಬೆಳೆದಿರುತ್ತಿತ್ತು. ಕೆಸವು, ಪಾರಿವಾಣದ ಹೂವು, ಹೊನಗೊನೆ ಸೊಪ್ಪು, ಪರಂಗಿಕಾಯಿ, ಇತ್ಯಾದಿ ತರಕಾರಿ ಬಳಸುತ್ತಿದ್ದರು.

ಬೇರೆ ಯಾವ ಬೆಳೆ ಬೆಳೆಯುತ್ತಿದ್ದೀರಿ?

ಅಡಿಕೆ, ವೀಳೆ ಈಗಲೂ ಇದ್ದೇ ಇದೆ. ಐದು ವರ್ಷದಿಂದೀಚೆಗೆ ತೆಂಗಿನಮರ ಹೆಚ್ಚಾಗಿ ಏಳಿಸಿದರು. ತೆಂಗಿನಮರದ ಎಲ್ಲವೂ ಬಳಕೆಗೆ ಬರುವಂಥದ್ದೇ. ಮಟ್ಟೆ, ಎಳನೀರು, ತೆಂಗು ಎಲ್ಲಾ ಹಣ ತರುವಂಥವೇ. ಅಲ್ಲದೆ ಅದಕ್ಕೆ ತುಸು ಮೇಲುಮಣ್ಣು ಹಾಕಿ ಉತ್ತುಕೊಂಡಿದ್ದರೆ ಸಾಕು. ಹಾಗಾಗಿ ತೆಂಗಿನಮರ ಏಳಿಸಲು ಪ್ರಾರಂಭಿಸಿದರು. ಹಾಗೇ ಹೊಲದಲ್ಲಿ ರಾಗಿ, ಜೋಳ ಇದ್ದೇ ಇದೆ. ಅರಿಶಿನ, ಶುಂಠಿ ನಾಲ್ಕೈದು ವರ್ಷದಿಂದೀಚೆಗೆ; ಆಲೂಗೆಡ್ಡೆ ೧೦-೧೨ ವರ್ಷದಿಂದೀಚೆಗೆ ಶುರುವಾಗಿದೆ. ಮೂರು ತಿಂಗಳಲ್ಲಿ ಆಲೂಗೆಡ್ಡೆ ದುಡ್ಡು ಬರುತ್ತೆ. ಶುಂಠಿ ಬೆಳೆಯಲು ಖರ್ಚು ಹೆಚ್ಚು. ಒಂದು ಲಕ್ಷ ರೂಪಾಯಿನ ಬೆಳೆ



ಸೊಂಪಾಗಿ ಬೆಳೆದ ಹುಲ್ಲು : ಮರಿತಮ್ಮನಹಳ್ಳಿ

ತೆಗೆಯಲು ೨೫ ಸಾವಿರ ರೂ. ವೆಚ್ಚ ಬೀಳುತ್ತೆ. ನಿಜವಾಗಿ ಔಷಧಿ ಹೊಡೆಯುವುದಕ್ಕೇ ವಿಪರೀತ ಖರ್ಚಾಗುತ್ತದೆ. ಕೋಸೂ ಹಾಗೆಯೇ. ಅದಕ್ಕಂತೂ ರೋಗ ತಗಲಿದ ೨೪ ಘಂಟೆ ಒಳಗೆ ಔಷಧಿ ಹೊಡೆದರೆ ಬೆಳೆ ಕೈಗೆ ಬರುತ್ತೆ. ಇನ್ನೂ ೨೪ ಘಂಟೆ ತಡ ಮಾಡಿದರೆ ಅರ್ಧವೂ ಸಿಗುವುದಿಲ್ಲ. ಶುಂಠಿ ಬೀಜಕ್ಕೂ ವಿಪರೀತ ಬೆಲೆ. ೬೦ ಕೇಜಿಯ ಒಂದು ಚೀಲಕ್ಕೆ ೧೭೦೦ ರಿಂದ ೨೦೦೦ ರುಪಾಯಿ ಬೆಲೆ ಇದೆ. ಅದು ಒಂದು ಎಕರೆಗೆ ೧೨ ಚೀಲ ಬೇಕು. ಮೇಲುಮಣ್ಣು ಎರಡು-ಮೂರು ಸಲ ಹಾಕಬೇಕು. ಅರಿಶಿನ ಬರೋದೂ ೧೧ ತಿಂಗಳಿಗೆ. ಆದರೆ ಅದು ನೆಳಲಲ್ಲಿ ಬರುತ್ತೆ. ಶುಂಠಿಗೆ ಬಿಸಿಲು ಬೇಕು. ಶಿವಮೊಗ್ಗ ಮತ್ತೂರು ಕಡೆ ಮೆಣಸು ಬೆಳೆಯುತ್ತಿದ್ದಾರಂತೆ. ವೆನಿಲಾಗೆ world market ಇದೆ. ಆದರೆ ಕಳ್ಳತನದ ಹೆದರಿಕೆ ವಿಪರೀತ. ನಮ್ಮೂರಲ್ಲಿ ಅದಕ್ಕೆ ಯಾರೂ ಪ್ರವೇಶ ಮಾಡಿಲ್ಲ. ಅದೂ ಒಂದು ಸಸಿಗೆ ೧೮ ರೂಪಾಯಿ; ಒಂದು ಸರಿ ಹಾಕಿದರೆ ೪೦೦-೫೦೦ ಸಸಿ ಒಟ್ಟಿಗೆ ಹಾಕಬೇಕು. ೧೦೦ ಸಸೀಗೇ ಆಗುತ್ತಲ್ಲಾ ಸ್ವಾಮಿ ೧೮೦೦ ರೂಪಾಯಿ? ಅಲ್ಲವೆ? ಕಾಫಿ ಇಲ್ಲಿ ಆಗಲ್ಲ. ಆಲೂಗೆಡ್ಡೆಗೆ ಪ್ರಪ್ರಥಮ ಸ್ಥಾನ.

ಓಹೋ! ಅದರ ಬಗ್ಗೆ ಹೇಳಿ.

ಈ ಸಾರಿ ಆಲೂಗೆಡ್ಡೆ ಬೀಜದಲ್ಲಿ ಎರಡು ಥರ ಬೀಜ ಬೆರಕೆ ಮಾಡಿಬಿಟ್ಟಿದಾರೆ. ಆ ಜಾತಿಗಳು ಗೊತ್ತಾಗಕ್ಕೆ ಮೊಳಕೆ ಬರಬೇಕು. ಆಲೂಗೆಡ್ಡೆ ತಂದು ಇಟ್ಟು ೧೦-೧೨ ದಿನ ಕಳೆದರೆ ಸುಕ್ಕುತ್ತೆ. ಆಗ Germination pointಲಿ germination ಹೊರಡುತ್ತೆ. ಆಗ ಮೊಳಕೇಲಿ colour variation ಆಗುತ್ತೆ. ಆಗ ನಾವೇ ಅದನ್ನು ಬೇರೆ ಬೇರೆ ಮಾಡಿಕೊಳ್ಳುತ್ತೇವೆ. ಅದರಲ್ಲಿ ಒಂದು variety ೭೫ ದಿವಸಕ್ಕೆ ಇನ್ನೊಂದು ೯೦ ದಿವಸಕ್ಕೆ ಕುಯ್ಲಿಗೆ ಬರುತ್ತೆ. ಹಾಗಾಗಿ ಅವನ್ನು ಬೇರೆ ಬೇರೆ ಹೊಲಕ್ಕೇ ಹಾಕಬೇಕು.

ಮೆಣಸಿನಕಾಯಿ ಭಾರಿ ಬೆಳೆದಿದೆ!

ನಮ್ಮೂರಲ್ಲಿ ಮೆಣಸಿನಕಾಯಿ ಬೆಳೀತೀವಿ. ಅದಕ್ಕೆ ಮುಖ್ಯವಾಗಿ ಮನೆಯವರು ಯಾವಾಗಲೂ ಕೆಲಸಕ್ಕೆ ನಿಂತಿರಬೇಕು. 'ನೀನು ಬಾ ತಾನು ಬಾ' ಅಂತ ಕೂತರೆ ಅದು ಆಗಲ್ಲ. (ಮೊದಲು ನಮ್ಮೂರ ಪಕ್ಕದ ಅಗ್ರಹಾರದಲ್ಲಿ ವಿಪರೀತ ಮೆಣಸಿನಕಾಯಿ ಬೆಳೀತಿದ್ದರು.) ಸಾಮಾನ್ಯವಾಗಿ ಬೇಸಗೆಯಲ್ಲೇ ಅದನ್ನು ಬೆಳೆಯೋದು.

ಈ ಹುಲ್ಲಿನ ಬಗ್ಗೆ ಹೇಳಿ

ನೀರು ಬಿಟ್ಟುಕೊಂಡಿದ್ದರೆ ಬೆಳೆ ಒಣಗಲ್ಲ. ಕುಯ್ಲು ಆದ ಮೇಲೆ ಉಳಿದ ಕೂಳೆಗೆ ನೇಗಿಲು ಬಿಟ್ಟು ನೀರು ಹರಿಸಿದರೆ ಸೊಂಪಾಗಿ ಬೆಳೆಯುತ್ತೆ. ಒಂದು ಸಲ ಹಾಕಿದರೆ ಐದು ವರ್ಷ ಬೆಳೆದುಕೊಂಡೇ ಇರುತ್ತೆ. ೩೬೫ ದಿನವೂ ಈ ಹುಲ್ಲು ನಮಗೆ ಲಭ್ಯ. ಸೀಮೆ ಹಸುಗಳಿಗೆ ೨೪ ಘಂಟೆಯೂ ಅದು ಬೇಕೇ ಬೇಕು. ಒಣಹುಲ್ಲು ಹಾಕೋದಕ್ಕೂ ಹಸಿರು ಹುಲ್ಲು ಹಾಕೋದಕ್ಕೂ ತುಂಬಾ ವ್ಯತ್ಯಾಸವಿದೆ. ಹಸಿರು ಹುಲ್ಲಲ್ಲಿ ಹೆಚ್ಚು ಹಾಲು ಬರುತ್ತೆ. ಒಣಹುಲ್ಲು ಹಾಕಿದರೆ ಹಾಲು ಕಮ್ಮಿ, ಆದರೆ Fat ಅಂಶ ಹೆಚ್ಚಿರುತ್ತೆ, ಅಷ್ಟೆ.

ಹೊಸ ಪ್ರಯೋಗ ಏನು ಮಾಡಿದ್ದೀರಿ?

ನಾನು ೧೯೯೭ರಿಂದ ಈಚೆಗೆ ಸುಮಾರು ಎರಡರಿಂದ ಎರಡೂವರೆ ಲಕ್ಷ ಕೇವಲ ಜಮೀನಿಗಾಗಿ ಖರ್ಚು ಮಾಡಿದೀನಿ-ಬೋರು, ಮೇಲುಮಣ್ಣು ಹೀಗೆ. ಡ್ರಿಪ್ ಇರಿಗೇಷನ್‌ನಿಂದ ತೆಂಗಿನ ಬುಡದಲ್ಲಿ ಶೀತಾಂಶ ಕಾಪಾಡಲು ಅನುಕೂಲ. ಆಗ ಗಿಡಾನೂ ಚೆನ್ನಾಗುತ್ತೆ ಯೀಲ್ಡೂ ಚೆನ್ನಾಗುತ್ತೆ.

೦.೨) ಎಂ.ಎಸ್.ರವಿ ಎಂ.ಎ.,

ಮೈಸೂರು ಮಾನಸಗಂಗೋತ್ರಿಯಲ್ಲಿ ಕನ್ನಡ ವಿಷಯದಲ್ಲಿ ಎಂ.ಎ., ಪದವಿ ಪಡೆದಿರುವ ಶ್ರೀ ರವಿ ಮರಿತಮ್ಮನಹಳ್ಳಿಯ ನಿಪುಣ ಬೇಸಾಯಗಾರ. ಮೂವತ್ತೇಳು ವರ್ಷ ವಯಸ್ಸಿನ ರವಿ ಎಂ.ಎ. ಪದವಿ ಪಡೆದುದು ಎಂಟು ವರ್ಷಗಳ ಹಿಂದೆ. ಸ್ನಾತಕೋತ್ತರ ಪದವೀಧರರಾದ ಮೇಲೆ ರವಿ ಅನೇಕ ಕಾಲೇಜುಗಳಲ್ಲಿ ಅಂಶಕಾಲಿಕ ಉಪನ್ಯಾಸಕರಾಗಿ ಅನುಭವ ಪಡೆದರು. ಆದರೆ ಉದ್ಯೋಗವು ಖಾಯಂಗೊಳ್ಳುವ ಲಕ್ಷಣವಿಲ್ಲದ್ದರಿಂದ ಅದನ್ನು ಕೈಬಿಟ್ಟರು. ವಯಸ್ಸೂ ಮೀರಿ, ಅಭಿರುಚಿಯೂ ಹಾಳಾದ ಮೇಲೆ ಹಳ್ಳಿಗೆ ಹಿಂದಿರುಗುವುದಕ್ಕಿಂತ, ಸಾರ್ಥಕವಾಗಿ

ಬೇಸಾಯದ ಬದುಕಿಗೆ ಒಗ್ಗಿಕೊಳ್ಳಬಯಸಿದರು. ಹಳ್ಳಿಗೆ ಹಿಂದಿರುಗುವ ಸರಿಯಾದ ನಿರ್ಧಾರ ಮಾಡಿದರು. ಅಂಶಕಾಲಿಕ ಉಪನ್ಯಾಸಕರಿಗೆ ಕೊಡುವ ಎಂಟು ಘಂಟೆ ಕೆಲಸವನ್ನೂ ಇಬ್ಬರು ಮೂವರಿಗೆ ಹಂಚಿಕೊಡುತ್ತಾರೆಂದರೆ ಅಲ್ಲಿನ ದುಃಸ್ಥಿತಿಯನ್ನು ಕಲ್ಪಿಸಿಕೊಳ್ಳಬಹುದು. ಶೋಷಣೆಗೆ ಒಳಗಾಗುವ ದೌರ್ಬಲ್ಯವಿದ್ದರೆ ಸರ್ಕಾರವೂ ಶೋಷಣೆ ಮಾಡೀತೆಂಬುದನ್ನು ಅರಿತರು. *ನೇಗಿಲಯೋಗಿ*ಯಾದರು, ತಮ್ಮ *ಪಾರಂಪರಿಕ ಬೇಸಾಯಕ್ಕೆ ಹೊಸ ಚೈತನ್ಯ* ಕೊಟ್ಟರು. ಸಹಜವಾಗಿಯೇ ಅವರು ಬಂದು ಸೇರಿದ್ದು ತಮ್ಮ ಕುಲಕಸುಬಿನ ಕ್ಷೇತ್ರಕ್ಕೆ, ಹಾಗಾಗಿ ಅವರಿಗೆ ಅದರಲ್ಲಿ ಆಳವಾಗಿ ಬೇರೂರಿದ್ದ *ಪ್ರೀತಿ* ಇತ್ತು. ಶಾಲೆ ಕಾಲೇಜುಗಳಲ್ಲಿ ಓದುತ್ತಿದ್ದ ದಿನಗಳಲ್ಲಿಯೂ ಹಳ್ಳಿಗೆ ಬಂದಾಗ ಬೇಸಾಯದಲ್ಲಿ ತಲ್ಲೀನರಾಗಿಬಿಡುತ್ತಿದ್ದ ಸಂಸ್ಕಾರವಿದ್ದವರು ಅವರು.

ಅವರು ಊರಿಗೆ ಬರುವ ಮೊದಲು ಅವರ ಜಮೀನಿನ ಅನೇಕ ತುಂಡುಗಳು ಎಕ್ಕ, ಕಾರೆ, ಕಳ್ಳಿ ಗುತ್ತಿಗಳಿಂದ ತುಂಬಿದ್ದವು. ಮೊದಲ ಎರಡು ವರ್ಷ ಆ ಗುತ್ತಿಗಳನ್ನು ಕೀಳುವುದೇ ಆಯಿತು. ಅವರಿಗೆ ಇದ್ದ ಎಂಟು ಎಕರೆಯಲ್ಲಿ ಆವರೆಗೆ ಬೆಳೆ ಬೆಳೆಯಲು ಬಳಸಿಕೊಳ್ಳುತ್ತಿದ್ದುದು ಕೇವಲ ಎರಡು ಎಕರೆಗಳನ್ನು.

ಜಮೀನನ್ನು ಹಸನು ಮಾಡಿಕೊಂಡು, ನೀರಿನ ವ್ಯವಸ್ಥೆಯನ್ನು ಮಾಡಿಕೊಂಡು ವಾಣಿಜ್ಯ ಬೆಳೆ ಬೆಳೆಯುವ ಸಾಹಸ ಮಾಡಿದರು ರವಿ ಅವರು. ಆಲೂಗೆಡ್ಡೆಯೇ ಅವರು ಬೆಳೆಯುವ ಮುಖ್ಯ ವಾಣಿಜ್ಯ ಬೆಳೆ. ಎರಡು ಎಕರೆಯಲ್ಲಿರುವ ಹಳೆಯ ತೋಟದ ವ್ಯವಸಾಯವೂ ಹಾಗೆಯೇ ಮುಂದುವರಿದಿದೆ. ಗದ್ದೆಯಲ್ಲಿ ಬತ್ತ ಬೆಳೆಯುತ್ತಾರೆ.

ಆವರೆಗೆ ಅಲ್ಲಿನವರಿಗೆ ತಿಳಿಯದಿದ್ದ ವಿಚಾರವೆಂದರೆ ಆ ಭೂಮಿ ಆಲೂಗೆಡ್ಡೆ ಬೆಳೆಗೆ ಹೆಚ್ಚು ಹೊಂದುತ್ತವೆಂಬುದು. ವಿಶೇಷವಾಗಿ ರವಿ ಅವರ ಜಮೀನು ಆಲೂಗೆಡ್ಡೆಗೆ ಹೆಚ್ಚು ಹೊಂದಿಕೊಂಡಿರುವುದು ಇನ್ನೊಂದು ಉತ್ತೇಜಕ ಅಂಶವಾಯಿತು. ಆಲೂಗೆಡ್ಡೆ ಬೆಳೆಯುವ ಕ್ರಮವನ್ನು ಅವರು ವಿವರಿಸಿದ್ದು ಹೀಗೆ:

ಉಳುಮೆ

ಮಳೆ ಬರುವ ಮೂರು ತಿಂಗಳು ಮೊದಲೇ ಉತ್ತುಕೊಂಡು, ಹೊಸಮಣ್ಣು ಹಾಕಿರಬೇಕು. ಗೋಡು ಹರಡಬೇಕು. ಎರಡು ತಿಂಗಳು ಬಿಸಿಲಲ್ಲಿ ಚೆನ್ನಾಗಿ ಅದು ಒಣಗಬೇಕು. ಮಳೆ ಬಂದ ತಕ್ಷಣ ಉಳಕೆ ಶುರು ಮಾಡ್ತೀವಿ. ಎಷ್ಟು ಚೆನ್ನಾಗಿ mixup ಮಾಡಿದರೆ ಮುಂದಿನ ಬೆಳೆಗೆ ಅಷ್ಟು ಒಳ್ಳೆಯದು. ಮೇಲಿನ ಮಣ್ಣು ಒಳ ಮಣ್ಣಿಗೆ ಚೆನ್ನಾಗಿ ಬೆರೆಯಬೇಕು. ಅನಂತರ ಐದು-ಆರು ಉಕ್ಕೆ ಚೆನ್ನಾಗಿ ಹೊದಿಯುತ್ತೀವಿ. ಹೀಗೆ ಹದ ಮಾಡಿಕೊಂಡರೆ ಒಳಗೆ ಸೇರಿದ ಗೋಡಿನಲ್ಲಿ ತೇವಾಂಶ ಚೆನ್ನಾಗಿ ನಿಲ್ಲುತ್ತದೆ. ಮೇಲೆ ಒಣಗಿದ್ದರೂ ಒಳಗೆ ತೇವಾಂಶ ಇರುತ್ತೆ.

ವಾತಾವರಣವೇ ಮುಖ್ಯ

ವಾಸ್ತವವಾಗಿ ಆಲೂಗೆಡ್ಡೆಗೆ ಇರಬೇಕಾದ್ದು 'ವಾತಾವರಣ'. ಬೀಜ ಹಾಕುವಾಗ ಸುಮಾರಾಗಿದ್ದರೂ ಆಗುತ್ತೆ. ಆದರೆ ವಾತಾವರಣ cool ಆಗಿರಬೇಕು. ಮೋಡದ ವಾತಾವರಣ ಆಗಿರಬೇಕು. ಗಾಳಿ ಬೀಸಿಕೊಂಡಿರಬೇಕು. ಆಲೂಗೆಡ್ಡೆ ಹುಟ್ಟಿದರೆ (Germination) 60% ಬೆಳೆ ಕೈಗೆ ಬಂತು ಅಂತಲೇ ಲೆಕ್ಕ. ಜರ್ಮಿನೇಷನ್ನೇ ಮುಖ್ಯ ಆಲೂಗೆಡ್ಡೆ ವ್ಯವಸಾಯದಲ್ಲಿ. ತುಂಬಾ ಹೋಗಿಬಿಡುತ್ತೆ.

ಬೀಜದ ಸಿದ್ಧತೆ

ಮನೇಲಿ ಮೊದಲೇ ಬೀಜ ಸಿದ್ಧ ಮಾಡಿ ಇಟ್ಟುಕೊಂಡಿರುತ್ತೇವೆ. ಅದು ೧೦-೧೨ ದಿನದಲ್ಲಿ ಮೊಳಕೆ ಬಂದು ಮೆದುವಾಗುತ್ತೆ. ಸರಿಯಾದ ವಾತಾವರಣ ನೋಡಿಕೊಂಡು ಬಿತ್ತನೆ ಮಾಡುತ್ತೇವೆ.

ಗಿಡದ ಬೆಳವಣಿಗೆ

ಹಾಕುವಾಗ Manure ಹಾಕಬೇಕು. ಇಲ್ಲಿ DIP Potash ಹಾಕುತ್ತೇವೆ. ಸಾಮಾನ್ಯವಾಗಿ ಎಲ್ಲಾ ೨೦ ದಿನದಲ್ಲಿ ಮೇಲಕ್ಕೆ ಬರುತ್ತೆ. ಆಲೂಗೆಡ್ಡೆಯಷ್ಟು Fast growth ಯಾವುದೂ ಇಲ್ಲ. ಅದು ಸುಮಾರು ೩೦-೩೫ ದಿನದಲ್ಲಿ, ಹರತೆ ವ್ಯವಸಾಯ ಸರಿಯಾಗಿ ಮಾಡಿರುವಾಗ, ಹೊಲವೇ ಮುಚ್ಚಿಕೊಳ್ಳುತ್ತೆ. ಆ ಮಟ್ಟದಲ್ಲಿ ಬೆಳೆದಿದೀವಿ. ಮೇಲುಮಳೆ (ತುಂತುರು) ಆಗುತ್ತಿದ್ದರೆ ತುಂಬಾ ಒಳ್ಳೆಯದು. ೨೦ ದಿನದ



ಶ್ರೀಮತಿ, ಎಂ.ಎಸ್.ರವಿ, ಎಂ.ಆರ್.ಕೇಶವಮೂರ್ತಿ, ಪುರೋಹಿತ ಕೇಶವಶರ್ಮ, ಪ್ರಭಾಕರ: ಮರಿತಮ್ಮನಹಳ್ಳಿ

ನಂತರ ದಿನಕ್ಕೆ ಎರಡೆರಡೆಲೆ-ಮೂರು ಮೂರು ಎಲೆ ಹುಟ್ಟುತ್ತೆ. ಭಾರೀ ಫಾಸ್ಟ್ growth. ಹಾಗೆ ಒಂದೂವರೆ ತಿಂಗಳತನಕ ಭಾರೀ ಫಾಸ್ಟಾಗಿ ಬೆಳೆಯುತ್ತೆ. ಆಮೇಲೆ ಸಾರಾನೆಲ್ಲಾ ಗೆಡ್ಡೆಗೆ ಕೊಡುತ್ತೆ. ೩೮-೪೮ ದಿನಗಳಲ್ಲಿ ಒಳಗೆ ಗೆಡ್ಡೆ ಪಲ್ಲಿ ಆಗಲು ಪ್ರಾರಂಭವಾಗುತ್ತೆ. ಆ ಟೈಮಲ್ಲಿ ನೀರಿನ ಹಸಿ ಚೆನ್ನಾಗಿರಬೇಕು. ಆಗ ಆಲೂಗೆಡ್ಡೆ ಆರೋಗ್ಯವಾಗಿರುವ ಹಾಗೆ ನೋಡಿಕೊಳ್ಳಬೇಕು. ರೋಗ ಬರುವ chance ೪೫-೬೫ ದಿನದ ನಡುವ ತುಂಬಾ ಇರುತ್ತೆ. ಆಗ ಔಷಧಿ spray ಮಾಡಬೇಕಾಗುತ್ತೆ. ಅನುಭವದಿಂದಲೇ ಯಾವಾಗ ಯಾವ ಔಷಧಿ ಅನ್ನೋದು ತಿಳಿಯುತ್ತೆ.

ಔಷಧದ ಬಳಕೆ

ಮೊದಮೊದಲು ಕೃಷಿತಜ್ಞರನ್ನು ಕೇಳುತ್ತಿದ್ದೆವು. ಈಗ ನಮಗೇ ಅನುಭವಕ್ಕೆ ಬಂದಿದೆ. ಅಲ್ಲದೆ ನಾವೆಲ್ಲಾ ಸ್ವತಃ spray ಮಾಡುತ್ತೇವೆ. ಬಾಯಿಗೆ ಬಟ್ಟೆ ಕಟ್ಟಿಕೊಂಡಿರುತ್ತೇವೆ. ಗಾಳಿ ಮುಖಕ್ಕೆ ಹೊಡೆಯಲ್ಲ. ಉದ್ದದ sprayer ಇಟ್ಟುಕೊಂಡು ದೂರದೂರಕ್ಕೆ spray ಮಾಡೋದರಿಂದ ಅಪಾಯ ಕಮ್ಮಿ. ಹಾಗಾಗಿ ನಮಗೆ ಯಾರಿಗೂ ಅಪಾಯ ಆಗಿಲ್ಲ.

ಮಾರುಕಟ್ಟೆ

ಮೂರು ವರ್ಷದಿಂದ 'ಶಕ್ತಿ' ಕಂಪನಿಯವರೇ ಕೊಳ್ಳುತ್ತಿದ್ದಾರೆ. ಅವರು ತಯಾರಿಸುವ chipsಗೆ International market ಇದೆ. ಅವರೇ ಬೀಜ ಕೊಡ್ತಾರೆ. ಅವರೇ ಬಂದು ಹೊಲದ ಹತ್ತಿರವೇ purchase ಮಾಡ್ತಾರೆ. ಅದು ನಮಗೆ ಅನುಕೂಲಕರವಾಗಿದೆ. ಒಳ್ಳೆ ಇಳವರಿಯೂ ಬಂದಿದೆ. Kgಗೆ ಐದಾರು ರೂ. ಕೊಡ್ತಾರೆ. ಏನು ಅಂದರೆ Quality ಚೆನ್ನಾಗಿರಬೇಕು. Condemn ಆಲೂಗೆಡ್ಡೆ ಬೆಳೆಯೋಹಾಗಿಲ್ಲ. ವ್ಯವಸ್ಥಿತವಾಗಿ ಎಲ್ಲಾ ವ್ಯವಸಾಯ ಕ್ರಮಾನೂ ಅನುಸರಿಸಿದರೇನೇ ಹಾಗೆ ಬೆಳೆಯೋದು. ಆಲೂಗೆಡ್ಡೆ quality ಕೆಟ್ಟರೆ rate down ಆಗುತ್ತೆ. ಮುಂದಿನ ಸಾರಿ ಬೀಜ ಕೊಡಲ್ಲ. ಚೆನ್ನಾಗಿ ಬೆಳೆಯೋರಿಗೆ ಅವರೂ attention ಕೊಡ್ತಾರೆ, ಗೊಬ್ಬರಾನೂ ಅವರೇ ತರಿಸಿಕೊಡ್ತಾರೆ. ಔಷಧೀನ ಕೂಡ.



ಪಟ್ಟಣದ ಯಾವ ಮನೆಗೆ ಕಮ್ಮಿ? : ಮರಿತಮ್ಮನಹಳ್ಳಿ

ನಮಗಿರೊ ಎಂಟು ಎಕರೇಲಿ ಬದುವಿಗೆ ಒಂದು ಎಕರೆ ಹೋದರೆ ಉಳಿದ ಏಳು ಎಕರೇನ complete ಆಗಿ ಬಳಸಿಕೊಂಡಿದೀವಿ.

ಹಸುಗಳ ಮೇವು

ಮಣ್ಣು ಕೊಚ್ಚಿ ಹೋಗುವುದನ್ನು ತಪ್ಪಿಸಲು ಬದು ಕಟ್ಟುತ್ತೇವೆ. ಹಸು ಮೇಯಲು ಆಗುತ್ತೆ, ಆದರೆ

ಅದರಿಂದ ಯಾವ maintain ಕೂಡ ಆಗಲ್ಲ. ಅದೆಲ್ಲಾ ಒಂದು ವಾರದ ಮೇವಾಗುತ್ತೆ ಅಷ್ಟೆ. ಒಂದು ಘಂಟೆ ಹಸುಗಳನ್ನು ಬಾಯಾಡಿಸುವುದು ಬಿಟ್ಟರೆ ಅದರಿಂದ ಏನೂ workout ಆಗಲ್ಲ. ಜೋಳ, ಒಣಹುಲ್ಲು ಮುಖ್ಯ. ಮೆಕ್ಕೆ ಜೋಳ ಒಂದು-ಒಂದೂಮುಕ್ಕಾಲು ತಿಂಗಳಿಗೆ ಕಟಾವಿಗೆ ಶುರು ಮಾಡಿಕೋಬಹುದು. ಈಗ ನಮ್ಮ ಬಳಿ ಕಮ್ಮಿ. ಒಂದು ಸಿಂಧಿ ಹಸು, ಎರಡು ನಾಡ ಹಸು, ಎರಡು ಎಮ್ಮೆ ಇವೆ-ಈಗ ಕಮ್ಮಿ. ಉಳಲು ಹಸುಗಳನ್ನೇ ಐದು-ಆರು ಇಟ್ಟುಕೊಂಡಿದ್ದೇವೆ.

ಉಕ್ಕೆ

ನಾವು ಉಳಲು ಎತ್ತು ನೇಗಿಲು ಬಳಸುತ್ತೇವೆ. Cultivator workout ಆಗಲ್ಲ. ಅದು Depth ಇರಲ್ಲ. ಪ್ರಾರಂಭದಲ್ಲಿ Tractorನಲ್ಲೇ MB-4 ಅಂತ ಇದೆ. ಹೊಡಿಸಿದ್ದೆವು. ಆಮೇಲೆ ನೇಗಿಲು. ಅದರಲ್ಲಿ ಗುಳ ತುಂಬ ಆಳಕ್ಕೆ ಹೋಗುತ್ತೆ, ನೆಲ ಪೊಳ್ಳಾಗುತ್ತೆ. ಪ್ರತಿ ವರ್ಷ Tractorನಲ್ಲಿ MB-4ನಲ್ಲಿ ಉಳಿಸಿದರೆ Expense ಜಾಸ್ತಿ ಆಗುತ್ತೆ. Cultivatorನಲ್ಲಿ ಒಂದು ಎಕರೇನ ಎರಡು ಸಾರಿ ಉಳುತ್ತಾರೆ. ಆದರೆ MB-4ಲಿ ಒಂದು ಎಕರೆ ಉಳಲು ಮೂರರಿಂದ ನಾಲ್ಕು ಘಂಟೆ ಬೇಕಾಗುತ್ತೆ. ಅದು minimum ಅರ್ಧದಿಂದ ಮುಕ್ಕಾಲು foot ಆಳಕ್ಕೆ ಹೋಗುತ್ತೆ. ಆದರೆ line cut ಮಾಡಕ್ಕೆ problem ಇದೆ. Cultivatorನಲ್ಲಿ ಸುಲಭ. ಆದರೆ ಅದು ಎರಡು-ಮೂರು ಇಂಚು ಆಳಕ್ಕೆ ಹೋಗುತ್ತೆ. ಆದ್ದರಿಂದ ಎತ್ತು ನೇಗಿಲು ಬಳಸುತ್ತೇವೆ.

ಹೊಸಮಣ್ಣು

ನಾವೇ ಉಳ್ತೀವಿ. ಕೆಲಸ ಹೆಚ್ಚಾದರೆ ಆಳೂ ಕರಕೊಳ್ತೀವಿ. ಎತ್ತು ಗಾಡಿ ಈಗ ಮಾರಿ ಬಿಟ್ಟಿದೀವಿ. JCB ಬಂದ ಮೇಲೆ ನಾಲ್ಕೈದು Tractor ಮಾಡಿಕೊಂಡು ಒಂದು ದಿನದಲ್ಲಿ ಕೆಲಸ ಮುಗಿಸಿಕೊಳ್ತೀವಿ. ನಾನೇ ಈ ಸಲ ಹೊಲಕ್ಕೆ ೨೫೦ Tractor ಹೇರಿಸಿದೆ-ಮಣ್ಣು. Within ನಾಕು-ಐದು ಘಂಟೇಲಿ ಆಗಿಹೋಯಿತು. ಎಂಟು-ಒಂಭತ್ತು Tractor ಬಂದಿತ್ತು. ಒಂದು Tractor ಅಂದರೆ ಮೂರು ಗಾಡಿ ಲೆಕ್ಕ. ನನಗೆ ಅದು ೭೦ ರೂ-೭೫ ರೂ. ಬಿತ್ತು ಒಂದು Tractorಗೆ. ಅಂದರೆ ಒಂದು ಗಾಡಿಗೆ ೨೫ ರೂ. ಬಿತ್ತು. ಗಾಡಿ ಆದರೆ ಅದಕ್ಕೆ ತುಂಬಕ್ಕೇ ೧೫ ರೂಪಾಯಿ ಕೇಳ್ತಾರೆ. ಎತ್ತು ಸಾಕಿ ಗಾಡಿ ಇಟ್ಟು ಮಾಡಕ್ಕಿಂತ ಇದೇ cheap ಆಯ್ತು. ನಮಗೆ ಜಮೀನು ಇರೋದು ಕಡಿಮೆ. ಆದ್ದರಿಂದ ಸ್ವಂತಕ್ಕೆ Tractor ತೊಗೊಂಡಿಲ್ಲ. ಕೊನೆಪಕ್ಷ ೧೫-೨೦ ಎಕರೆಯಾದರೂ ಇದ್ದರೆ Tractor ತೊಗೋಬಹುದು. ಬಾಡಿಗೆ ಹೋಗೋಣ ಅಂದರೆ ನಮ್ಮೂರಲ್ಲಿ ತುಂಬಾ Tractorಗಳಿವೆ. Already ಮೂರೋ ನಾಕೋ ಇವೆ.

ಓದೋದು, ಬರೆಯೋದು?

ನಾನು ಎಂ.ಎ.ನಲ್ಲಿ Optional ತೊಗೊಂಡಿದ್ದು Translation. ಊರಿಗೆ ಬಂದು ವ್ಯವಸಾಯಕ್ಕೆ ಇಳಿದ ಮೇಲೆ-ಯಾವಾಗಲೋ ಒಂದೊಂದು ಪುಸ್ತಕ ಓದೋದು ಬಿಟ್ಟರೆ-ಓದಿ ಬರೆಯಕ್ಕೆ attention ಕೊಡಕ್ಕಾಗಲ್ಲ. ಕೆಲಸ ಮಾಡಿ ಬಂದು ಸುಸ್ತಾಗಿರುತ್ತೆ, ಕಷ್ಟವಾಗುತ್ತೆ.

ಹೆಂಗಸರ ಸಹಕಾರ ಚೆನ್ನಾಗಿದೆಯೆ?

ನನಗೆ ಮದುವೆ ಆಗಿ ಐದು ವರ್ಷ ಆಯ್ತು, ಐಚಂಪಳ್ಳಿ ಹುಡುಗಿ. Cityಲಿ ೨೦೦೦ ಬರಲಿ ಕೊಡ್ತಾರೆ. ಈಗ ಹಳ್ಳೀಲಿ ೧೦೦೦೦ ಬಂದರೂ ಹೆಣ್ಣು ಕೊಡಲ್ಲ. ಏಕೆಂದರೆ *ಹೆಂಗಸರು ಯೋಚನೆ ಮಾಡುವ ರೀತಿಯೇ ಬೇರೆ*-ಎಷ್ಟೇ ಆದಾಯ ಬಂದರೂ ಹಳ್ಳಿಯ ಜೀವನ ಕಷ್ಟ ಎನ್ನುವ ಥರ. ಹಳ್ಳಿಗಳಲ್ಲಿ ಎಲ್ಲ ಅನುಕೂಲಗಳೂ ಇವೆ. ಮುಖ್ಯವಾಗಿ ಹೆಣ್ಣುಮಕ್ಕಳ Hostel ಆಯಿತು ನೋಡಿ. ಸಾಮಾನ್ಯವಾಗಿ ಎಲ್ಲ ಹೆಣ್ಣು ಮಕ್ಕಳೂ SSLCವರೆಗೆ ಹಳ್ಳೀಲಿ ಓದುತ್ತಿರುತ್ತಾರೆ. ಈಗ ಸಾಮಾನ್ಯವಾಗಿ ಎಲ್ಲ ಹೆಣ್ಣು ಮಕ್ಕಳೂ Hostel ಇರೋದರಿಂದ ಓದಲು ನಗರಕ್ಕೆ ಹೋಗುತ್ತಾರೆ. ಪದವೀಧರರಾಗುತ್ತಾರೆ. ಆ ವಾತಾವರಣದಲ್ಲಿ ಬೆಳೆದ ಮೇಲೆ ಪ್ರತಿ ಮಕ್ಕಳಿಗೂ - 'city ಚೆನ್ನಾಗಿರುತ್ತೆ, ಅಲ್ಲಿಗೆ ಸೇರಿಕೋಬೇಕು' ಅನ್ನೋ ಭಾವನೆ ಬರುತ್ತೆಯೇ ಹೊರತು ಯಾರಿಗೂ-ಹಳ್ಳೀಲೇ ಹುಟ್ಟಿರುವವರಿಗೂ -*ಹಳ್ಳೀಲಿ ಇರಬೇಕು ಅನ್ನೋ ಮನೋಭಾವ ಇಲ್ಲ*. ಅದೇ Major ನಮಗೆ ಆಗಿರೋದು. ಹಿಂದೆ ಹೆಣ್ಣು ಮಕ್ಕಳನ್ನು (ಓದಲು) ಹೊರಗಡೆಗೆ ಯಾರೂ ಕಳಿಸುತ್ತಿರಲಿಲ್ಲ. ಈಗ ಅನುಕೂಲ ಇದೆ. ಎಲ್ಲಾ ಹೋಗ್ತಾರೆ. ಆದ್ದರಿಂದ ಮುಂದೆ ವ್ಯವಸಾಯ ಕಷ್ಟ. ವಾಸ್ತವವಾಗಿ ಗಂಡು-ಹೆಣ್ಣು ಪ್ರಮಾಣ ನೋಡಿದರೆ ಹೆಣ್ಣು ಮಕ್ಕಳ ಸಂಖ್ಯೆ ಕಡಿಮೆಯಾಗುತ್ತಿದೆ. ತಂದೆತಾಯಿಗಳೂ ಸಣ್ಣ ಕೆಲಸವಾದರೂ ಸರಿ ಹೆಣ್ಣು ಮಕ್ಕಳನ್ನು *ಪಟ್ಟಣಕ್ಕೆ ಸೇರಿಸಿಬಿಡಬೇಕು* ಅನ್ನುವ ಮನೋಭಾವವನ್ನೇ ಹೊಂದಿದ್ದಾರೆ.

ಸಂಕೇತಿಗಳ ವ್ಯವಸಾಯದ ವೈಶಿಷ್ಟ್ಯದ ಬಗ್ಗೆ ಹೇಳಿ

ಸಂಕೇತಿಗಳ ವ್ಯವಸಾಯದ ವಿಶೇಷ ಅಂದರೆ-ಸಂಕೇತಿಗಳು *'ತೋಟ'ದಲ್ಲಿ ಎತ್ತಿದ ಕೈ.* ಹಿಂದೆಲ್ಲಾ ಬ್ರಾಹ್ಮಣರು 'ಹೊಲ' ಮಾಡುತ್ತಿರಲಿಲ್ಲ. ಈಗ ಈ generationನಲ್ಲೇ commercial crop ಎಲ್ಲಾ ನೋಡಿ *ಹೊಲದ ಕಡೆಗೆ ಹೆಚ್ಚು attract ಆಗ್ತಿರೋದು.* ತೋಟದ ಕೆಲಸದಲ್ಲಿ ಇವರು *ತುಂಬಾ experts.*

೦.೩) ಎಂ.ಆರ್. ಕೇಶವಮೂರ್ತಿ

(ಎಂ.ಆರ್. ಕೇಶವಮೂರ್ತಿಯವರಿಗೆ ತಮ್ಮ ದುಡಿಮೆಯ ಬಗೆಗೆ ಅತೀವ ಹೆಮ್ಮೆ. ಪಾರಂಪರಿಕವಾದ ದೈಹಿಕ ಶ್ರಮದ ಪ್ರತಿನಿಧಿ)

ನಿಮ್ಮ ಪೂರ್ವಿಕರ ವ್ಯವಸಾಯದ ಬಗ್ಗೆ ಹೇಳಿ ಕೇಶವಮೂರ್ತಿಯವರೆ

ತಂದೆ ರಾಮಸ್ವಾಮಯ್ಯನವರು ತೋಟದ ವ್ಯವಸಾಯ ಮಾಡುತ್ತಿದ್ದರು. ವೀಳೆ ಪೈರು ಚೆನ್ನಾಗಿ ಇಟ್ಟುಕೊಂಡಿದ್ದರು, ಅದನ್ನೇ ವ್ಯಾಪಾರ ಮಾಡುತ್ತಿದ್ದರು. ಸ್ವಂತವಾಗಿ ಕುಯ್ದು ೧೦ ಮೈಲು ದೂರದ ಸಂತೇಗೆ ಹೊತ್ತುಕೊಂಡು ಹೋಗೋರು. ಹೊಳೆನರಸೀಪುರ, ಹೆತ್ತಗೋಡ್ನಹಳ್ಳಿ, ಅರಕಲ ಗೂಡು ಇತ್ಯಾದಿ ಸಂತೆಗಳಿಗೆ ಹೋಗೋರು. ಆದಾಯ, ಸುಮಾರು. ಊಟಕ್ಕಿಲ್ಲದಷ್ಟು ಬಡತನ ಇರಲಿಲ್ಲ. ಇನ್ನೊಬ್ಬರನ್ನ ಕೇಳೋಹಾಗಿಲ್ಲ, ಒಬ್ಬರಿಗೆ ಕೊಡೊ ಹಾಗಿಲ್ಲ-ಹಾಗೆ; *ನೆಮ್ಮದಿಯಾದ ಜೀವನ.* ನಮ್ಮಪ್ಪನಿಗೆ ನಾವು ೧೪ ಮಕ್ಕಳು. ಎಲ್ಲರಿಗೂ ಆ ತೋಟದಲ್ಲೇ ಮದುವೆ ಮುಂಜಿ ಎಲ್ಲಾ ಮಾಡಿದರು. ಅವರಿಗೆ ತೋಟ ಗದ್ದೆ ಹೊಲ ಎಲ್ಲ ಸೇರಿ ಮೂವತ್ತಾರು ಎಕರೆ ಜಮೀನಿತ್ತು. ಈಗ ಹಿಸ್ಸೆ ಆಗಿ ಒಬ್ಬೊಬ್ಬರಿಗೆ ನಾಲ್ಕು ಎಕರೆ ಬಂದಿದೆ.



ಮರಿತಮ್ಮನಹಳ್ಳಿಯ ಹೊರವಲಯ

ನಮ್ಮ ಅಜ್ಜ ಸುಬ್ಬರಾಯರು. ಅವರು ಭಾರೀ ಜಮೀನುದಾರರು, ಸಾಹುಕಾರರು. ಅವರ ತಂದೆ ರಾಮಯ್ಯ, ಅವರೂ ಜಮೀನು ಮಾಡುತ್ತಿದ್ದರು. ಸುಬ್ಬರಾಯರು ವೇದಾಧ್ಯಯನ ಮಾಡಿದ್ದರು; ಅವರಿಗೆ ಐವರು ಮಕ್ಕಳು.

ನಿಮ್ಮ ದುಡಿಮೆ?

ನಾನು ಇಪ್ಪತ್ನಾಲ್ಕು ಘಂಟೆಯೂ ಕೆಲಸ ಮಾಡುತ್ತಿದ್ದೆ-ಇಪ್ಪತ್ನಾಲ್ಕ್ ಘಂಟ್ಯೂವೆ-ಹಾರೆ, ಗುದ್ಲಿ ಸವೆಸಿರೋನು ನಾನು. ಅಗತೆ, ಗುಣಿಕಟ್ಟೋದು, ನೀರು ಹುಯ್ಯೋದು, ಹಂಬು ತೆಕ್ಕೆ ಬಿಡೋದು, ಬಾಳೆ ಗುಂಡಿ ತೆಗಿಯೋದು-ಇನ್ನೇನೂ ಬೇರೆ ಕೆಲಸವೇ ಇಲ್ಲ-ಇದೇ. ಬಾಳೆ, ತೆಂಗಿನ ಗುದಿ ಹೊತ್ತುಕೊಂಡು ಹೋಗಿ ಸಂತೇಲಿ ಮಾರುವುದೇ ಬಿಡುವಿನ ಸಮಯ. ನೂರಕ್ಕೆ ಎಂಟಾಣೆ, ಹತ್ತಾಣೆ ಬೆಲೆ.

ಅಡಿಕೆ ಕೊಯ್ಲು ಮಾಡುವ ನಿಪುಣರ ಬಗ್ಗೆ ಹೇಳಿ

ನಮ್ಮ ಮಾವ ಬಸವಾಪಟ್ಟಣದ ನಾಗಣ್ಣನವರು. ಅವರು *ಅಡಿಕೆ ಕುಯ್ಲು*ನಲ್ಲಿ ನಿಪುಣರು. ಸುಣ್ಣದ ಬೊಟ್ಟು (ನೆಲದ ಮೇಲೆ) ಹಾಕಿದರೆ ಗೊನೇನ ಅಲ್ಲಿಗೇ ಕೆಡವೋರು.

ಸಂಕೇತಿಗಳಿಗೆ ತೋಟಾನೇ ಹೇಳಿದ್ದು ಎನ್ನುತ್ತಾರೆ?

ಸಂಕೇತಿಗಳೆಲ್ಲಾ *ತೋಟದ ವ್ಯವಸಾಯದಲ್ಲಿ ಹರೀಪರೇ.* ನಮ್ಮ ಭಾವ ಮೊಸಳೆ ಲಕ್ಷ್ಮೀನಾರಾಯಣ ತಲೇಮೇಲೆ ಪರಂಗಿಹಣ್ಣು ಹೊತ್ತು

ಆ ಕಾಲಕ್ಕೆ ನಲವತ್ತು ಸಾವಿರ ಸಂಪಾದನೆ ಮಾಡಿದ್ದರು.

ಇವರಿಗೆ ಬೆಳಕು ಹರಿಯತ್ಲು ಬಾಳೆ ಎಲೆ ಬೇಕು, ದರ್ಭೆ ಬೇಕು, ತುಳಸಿ ಬೇಕು, ದಿನಾ ದೇವರ ಪೂಜೆ ಮಾಡಬೇಕು-ಆದ್ದರಿಂದ ತೋಟಾನೇ ಮಾಡಿದರು. ಸ್ನಾನ ಸಂಧ್ಯಾವಂದನೇಗೂ ಇದರಲ್ಲಿ ಅಡ್ಡಿ ಇಲ್ಲ. ಈಗ ಹುಡುಗರು ಯಾಕೆ ಹೊಲದ ವ್ಯವಸಾಯಕ್ಕೆ ಇಳಿದರೂ ಅಂದರೆ, commercial cropನಲ್ಲಿ ಭಾರೀ ದುಡ್ಡು. ಇವತ್ತು ಅಡಿಕೆ ಸಸಿ ನೆಟ್ಟರೆ ಹತ್ತು ವರ್ಷಕ್ಕೆ ಅದು ಫಲಾ ಕೊಡೋದು. ಆಲೂಗೆಡ್ಡೇಲಿ, ಶುಂಠೀಲಿ ಮೂರು ತಿಂಗಳಿಗೆ ದುಡ್ಡು ತೊಗೋತಾರೆ. ಹಾಗಾಗಿ *ಈ ಕಡೆ ವ್ಯಾಮೋಹ ಹೆಚ್ಚಾಯ್ತು*. ತೋಟ ಚನ್ನಾಗಿಟ್ಟುಕೊಂಡಿದಾರೆ ಎಲ್ಲಾ. ಭಾರೀ ಚೆನ್ನಾಗಿದೆ ನಮ್ಮೂರ ತೋಟಗಳು. ಕೆಲಸಾ ಮಾಡ್ತಾರೆ. ಆಗ ಮೂರು ಕಾಸಿಗೆ ಕಟ್ಟು ವೀಳೆ. ಕೈಯಲ್ಲಿ ನಾಕಾಣೆ ಇದ್ದರೆ ಉಪ್ಪು, ಸೀಮೆಣ್ಣೆ ತೊಗೊಂಡು ಮನೇಗೆ ಬಂದುಬಿಡೋರು. ಈಗ ಬೆಳೇಲಿ ದುಡ್ಡು ಕಾಣ್ತಾರೆ, ಆಳುಗಳನ್ನೂ ಇಟ್ಟುಕೋತಾರೆ. ಗೋಡು ಹಾಕ್ಸೋದು, ಪೈಪ್‌ಲೈನ್ ಹಾಕ್ಸೋದು ಮಾಡ್ತಾರೆ. ಈ ಮೋಟಾರೆಲ್ಲಾ ೧೦-೧೨ ವರ್ಷದಿಂದೀಚೆಗೆ. ಹಿಂದೆ ಗುದ್ಲಿ ಜತೆಗೆ ಕುಂಭವೇ. *ನಂಗೀಗ ೭೫ ವರ್ಷ. ಇವತ್ತೂ ಹಾರೆ ಕೆಲಸಾ ಮಾಡ್ತೀನಿ. ಚಕ್ಲಿ ಕೋಡ್ಬಳೆ ಬಾರಿಸ್ತೀನಿ. ಹಲ್ಲಿಲ್ಲ; ಒಸಡಲ್ಲೇ ಆ ಶಕ್ತಿ ಇದೆ. ಈಗ ತಾನೇ ಎಲೆ ಅಡಿಕೆ ಹಾಕ್ಕೊಂಡು ಬಂದೆ ಮನೇಲಿ.*

ಆ ಬಗ್ಗೆ ನಿಮಗೆ ತುಂಬಾ ಸಮಾಧಾನ ಇರುವಹಾಗಿದೆ?

ಈಗ ಹಣ ಹೆಚ್ಚು. ಆಗ ಆಸೇಗೆ ಹೋಗ್ತಿರಲಿಲ್ಲ. ತೃಪ್ತಜೀವನ. ಆಟಾಟೋಪಕ್ಕೆ ಹೋಗ್ತಿರಲಿಲ್ಲ. ಮೋಸಾ ಅನ್ನೋದೇ ಇಲ್ಲ. ಹಿಂದೇನೂ ಅನ್ಯೋನ್ಯವಾಗಿದ್ದರು. ಆದರೆ ಕಠಿಣ ದುಡಿಮೆ ಇತ್ತು. ಸಾಮಾಜಿಕವಾಗಿ ಒಬ್ಬರ ಮನೇಗೆ ಹೋಗಿ ಕೂರೋ ವ್ಯವಧಾನ ಇರಲಿಲ್ಲ. ನಾಜೂಕಿರಲಿಲ್ಲ. ಈಗ ಈ ಸಾಮಾಜಿಕ ಒಡನಾಟ ಹೆಚ್ಚು.

ನಾನು ೧೯೪೮ರಲ್ಲಿ SSLC. ಮುಂದಕ್ಕೆ ಓದೋದು ಬೇಕಿರಲಿಲ್ಲ ನಮಗೆ. ಅಲ್ಲಿ ಬರೋ ಸಂಬಳ ಕಮ್ಮಿ. ಅಲ್ಲಿ ಯಾಕೆ ಹೋಗಬೇಕು? ಜಮೀನೇ ಮಾಡೋಣ. ನೆಮ್ಮದಿಯಾಗೇ ಇದೀವಿ; ಒಂದು ತೊಂದರೆ ಇಲ್ಲ. ಈಗ ಸರ್ಕಾರ ಬೇಕಾದಷ್ಟು ಸವಲತ್ತು ಕೊಟ್ಟಿದೆ: ರೋಡ್ ಮಾಡ್ಸಿದಾರೆ, ಬಸ್ ಬಿಟ್ಟಿದಾರೆ, ಕರೆಂಟಿದೆ; ನೆಮ್ಮದಿ. *ಪೇಟೇಲಿ 'ಸಾಯೋದಕ್ಕೆ' ಇದು ನಿರಾಳ.* ಪೇಟೇಗೆ ಹೋದರೆ ಅಲ್ಲಿ ಇರೋಕಾಗಲ್ಲ ನಮ್ಗೆ. ಬರೀ ಹೊಗೆ, ಧೂಳು. ನನಗೇನು? ಹಳ್ಳೀಲಿ *ಒಂದು ಮರದಡೀಲಿ ಮಲಕ್ಕೊಂಡರೂ ನಿರಾಳವಾಗಿ ನಿದ್ದೆ ಮಾಡ್ತೀನಿ.* ಅಲ್ಲಿದಿದ್ಯೆ? ಇಪ್ಪತ್ತೈದು ಮೈಲಿ ಹೋದ್ರೂ ಇಲ್ಲ. ಯಾರೂ ಪರಿಚಯವೂ ಇರೋಲ್ಲ. ನನ್ನ ಮಕ್ಕಳು ಇಬ್ಬರೂ ಓದಿ ಪೇಟೇಲಿ ಕೆಲಸದಲ್ಲಿದ್ದರು. ಅದು ಬೇಡಾಂತ ಇಲ್ಲೇ ಬಂದು ವ್ಯವಸಾಯ ಮಾಡ್ಕೊಂಡಿದಾರೆ. ನಮ್ಮ ಸೊಸೇರಲ್ಲಿ ಒಬ್ಬರು ಹೊಯ್ಸಳ ಕರ್ನಾಟಕರು, ಇನ್ನೊಬ್ಬರು ಹವ್ಯಕರು. ಬಹಳ ನಮ್ರತೆಯಾಗಿದಾರೆ. ಅವರ ಸೌಮ್ಯತೆ, ನಡೆ, ನುಡಿ ಎಲ್ಲಾ ಚೆನ್ನಾಗಿದೆ.

'ಮರಿ' ತಮ್ಮ...?

ಇದು 'ಮಲ'ತಮ್ಮನಹಳ್ಳಿ. ಹಿರಿ ಹೆಂಡ್ತಿ ಮಗ ಒಡ್ಡರ ಹಳ್ಳಿಯೋರು, ಕಿರಿಹೆಂಡ್ತಿ ಮಗ ಇಲ್ಲಿಯೋರು.



'ಹೀಗೆ ಹೋದರೆ ನಮ್ಮ ತೋಟ' : ಮರಿತಮ್ಮನಹಳ್ಳಿಯ ಉತ್ಸಾಹಿರೈತ ಎಂ.ಎಸ್.ರವಿ

೦.೪) ಶ್ರೀಮತಿ

(ಶ್ರೀಮತಿ ಅವರಿಗೆ ಹಳ್ಳಿ-ಪಟ್ಟಣ ಎರಡು ಜೀವನದ ಅನುಭವವೂ ಇದೆ. ಪಟ್ಟಣದ ಪರವಾದ ಭ್ರಮೆಯನ್ನು ಅವರು ಗೆದ್ದಿದ್ದಾರೆ. 'ಹಳ್ಳಿಯನ್ನು ತೊರೆದು ಪಟ್ಟಣ ಸೇರಿದವರಿಗೆ ಭ್ರಮನಿರಸನವಾಗುತ್ತದೆ, ಮತ್ತೆ ಹಳ್ಳಿಗೆ ಹಿಂದಿರುಗಲಾರದ ಅತಂತ್ರ ಸ್ಥಿತಿಯನ್ನು ತಲುಪಿಬಿಡುತ್ತಾರೆ' ಎನ್ನುವುದು ಅವರ ವಿವೇಕದ ಮಾತು.)

ನನ್ನದು ತೇಗನಹಳ್ಳಿ. ನನ್ನ ಯಜಮಾನರು ಬಿ.ಕಾಂ., ಓದಿದ ಮೇಲೆ ಊರಿಗೆ ಬಂದು ವ್ಯವಸಾಯದಲ್ಲಿ ತೊಡಗಿಕೊಂಡಿದ್ದಾರೆ. ನಮ್ಮೂರಿನಲ್ಲೂ ನಮ್ಮವರೆಲ್ಲಾ ವ್ಯವಸಾಯದಲ್ಲಿ ತೊಡಗಿಕೊಂಡಿರುವವರೇ. ಹಾಗಾಗಿ ನನಗೆ *ಇಷ್ಟವಾಗಿಯೇ ಹಳ್ಳಿಯಲ್ಲಿರುವ ಕೃಷಿಕರನ್ನು ವರಿಸಿದೆ.* ಸಾಮಾನ್ಯವಾಗಿ ಹೆಂಗಸರು-ಎಲ್ಲ ಕಡೆಯೂ-ವಿಶೇಷ ಸಂದರ್ಭಗಳಲ್ಲಿ ಜಮೀನಿನ ಮೇಲೆ ಹೋಗುವುದೇ ಹೊರತು, ಉಳಿದಂತೆ ಮನೆಯಲ್ಲಿಯೇ *ಪೂರಕವಾಗಿ ದುಡಿಯುವುದೇ ರೂಢಿ.* ನಾನೂ SSLC ಓದಿದ್ದೇನೆ. ತಕ್ಷಣ ವಿವಾಹವಾದ್ದರಿಂದ ಮುಂದಕ್ಕೆ ಓದಲಿಲ್ಲ. ಈಗೇನೂ ನನಗೆ *'ಹಳ್ಳಿಗೆ ಸೇರಿದೆನಲ್ಲಾ' ಎಂದು ಬೇಸರವಿಲ್ಲ,* ಪಟ್ಟಣಕ್ಕೆ ಸೇರಲು ಹಾತೊರೆಯುತ್ತಲೂ ಇಲ್ಲ. ಪಟ್ಟಣದ ಗಜಿಬಿಜಿ ಜೀವನ ನನಗೆ ಬೇಸರ ತರಿಸುತ್ತದೆ. ಸಿಟಿಯಲ್ಲಿ ೧೫-೨೦ ಸಾವಿರದ ಕೆಲಸ ಸಿಕ್ಕಿದರೆ ಪರವಾಗಿಲ್ಲ. ನಾನು ಓದಿದ್ದೆಲ್ಲಾ ಮೈಸೂರಿನಲ್ಲೇ. ಸಿಟಿಯ ಜೀವನದ ಅನುಭವವೂ ನನಗಿದೆ. ಅಲ್ಲಿನ ಜೀವನದ ವಿವರ ನನಗೆ ಗೊತ್ತಿದೆ. *ಇಲ್ಲಿ calm ಆಗಿರುತ್ತೆ;* ಸಿಟೀಲಿ ಎಲ್ಲಾದಕ್ಕೂ ರೇಟ್ ಜಾಸ್ತಿ; ಇಲ್ಲಿನ ಒಳ್ಳೆ ಗಾಳಿ ಅಲ್ಲಿಲ್ಲ, ಇಲ್ಲಿನ ನಿರಾಳ ಅಲ್ಲಿಲ್ಲ; ಅಲ್ಲಿ ಜನರು ಅಪರಿಚಿತರಾಗಿಯೇ ಉಳಿಯುತ್ತಾರೆ, ಯಾರಿಗೂ ಯಾರ ಬಗೆಗೆ ಯೋಚಿಸಲೂ ಸಮಯ ಇರುವುದಿಲ್ಲ. *ಹೆಣ್ಣುಮಕ್ಕಳು ಪಟ್ಟಣ ಸೇರಲು ಹಾತೊರೆಯುವ ಪ್ರವೃತ್ತಿಗೆ ಅರ್ಥವೇ ಇಲ್ಲ.* ಹಳ್ಳಿಯ ಜೀವನವೇ ಉತ್ತಮ. *ನನ್ನ ಹೆಣ್ಣುಮಕ್ಕಳನ್ನು -ಒಳ್ಳೆಯ ಕಡೆ ಬಂದರೆ-ಹಳ್ಳಿಗೇ ಕೊಡುತ್ತೇನೆ.* ಹೆಣ್ಣುಮಕ್ಕಳು ಮೈಸೂರಿನಲ್ಲಿ ಓದುತ್ತಿದ್ದಾರೆ, ಅವರು ಒಪ್ಪುತ್ತಾರೆಯೇ ಅನ್ನುವುದನ್ನು ಈಗಲೇ ಹೇಳಲಾರೆ. ನಾನು ನೋಡಿರುವಂತೆ ನೂರಕ್ಕೆ ತೊಂಭತ್ತು ಹೆಣ್ಣು ಮಕ್ಕಳು ಪಟ್ಟಣವನ್ನೇ ಬಯಸುತ್ತಾರೆ. ಅದಕ್ಕೆ ಪಟ್ಟಣದ 'ವೈಭವ'ಗಳ ಆಕರ್ಷಣೆ ಕಾರಣ. ಆದರೆ *ಅದೊಂದು ಭ್ರಮೆ.* ಅಲ್ಲಿ ಹೋಗಿ ನಾಕಾರು ವರ್ಷ ಕಳೆದ ಮೇಲೆ ಅವರಿಗೆ ಅದು ತಿಳಿಯುತ್ತೆ. ಆಗ ಅಲ್ಲಿಂದ ಹಳ್ಳಿಗೆ ಬರಲು ಆಗುವುದಿಲ್ಲ, ಅಲ್ಲೇ ಇರಲೂ ಕಷ್ಟವಾಗುತ್ತದೆ - ಅಂಥ *ಅತಂತ್ರ ಉಂಟಾಗುತ್ತದೆ.* ಇಲ್ಲೇ ಕೊರಟೀಕೆರೇಲಿ *ಒಬ್ಬರು ಇಂಜಿನಿಯರು-ವ್ಯವಸಾಯ ಮಾಡಿಕೊಂಡಿದ್ದಾರೆ.* ಪಟ್ಟಣದಲ್ಲಿ ದೊಡ್ಡ ನೌಕರಿಯಲ್ಲಿದ್ದವರು ಅವರು. ಹಳ್ಳಿಯ ಜೀವನವನ್ನು ಇಷ್ಟಪಟ್ಟೇ ಮರಳಿ ಹಳ್ಳಿಗೆ ಬಂದಿದ್ದಾರೆ.

ನನಗೆ ಸಂಗೀತ ಜೂನಿಯರ್ ಆಗಿದೆ; ಸಂಪ್ರದಾಯದ ಹಾಡು ಹೇಳುತ್ತೇನೆ, ಅವೆಲ್ಲಾ ನನ್ನ ಅಜ್ಜಿ ಹೇಳಿಕೊಟ್ಟದ್ದು. ಅಜ್ಜಿ ಈಗಲೂ ಇದಾರೆ (ಸಾವಿತ್ರಮ್ಮ); ತುಂಬಾ ಹೇಳುತ್ತಾರೆ. ನನಗೆ ಮದುವೆಯಾಗಿ ಹದಿನೇಳು ವರ್ಷ ಆಯಿತು; ನನ್ನೂರು *ತೇಗನಹಳ್ಳಿಗಿಂತ ಇಲ್ಲಿ ಮರಿತಮ್ಮನಹಳ್ಳಿಯಲ್ಲಿ ವ್ಯವಸಾಯ ಚೆನ್ನಾಗಿ ಮಾಡುತ್ತಾರೆ, ನಿರಾಳವಾಗಿದೀನಿ.*



ಮರಿತಮ್ಮನಹಳ್ಳಿಯ ತೋಟದ ಒಂದು ನೋಟ

೦.೫) ಪುರೋಹಿತ ಕೇಶವಶರ್ಮರು

(ಕೃಷಿ, ಪೌರೋಹಿತ್ಯ, ಪೋಸ್ಟ್ ಮಾಸ್ತರಿಕೆ ಎಲ್ಲವನ್ನೂ ನಿಭಾಯಿಸುತ್ತಿರುವ ಕೇಶವಶರ್ಮ ಲವಲವಿಕೆಯ ವ್ಯಕ್ತಿ, ಆಶಾವಾದಿ.)

ಕೇಶವಶರ್ಮರೆ, ಮರಿತಮ್ಮನಹಳ್ಳಿಯಲ್ಲಿ ವೇದವು ಲುಪ್ತವಾಗಿದೆಯೆಂದು ತಿಳಿದಿದ್ದೆ....

ನಾನೀಗ ಪೌರೋಹಿತ್ಯ ಮಾಡಿಸುತ್ತಿದ್ದೇನೆ. ಬಸವಾಪಟ್ಟಣದ ಸಂಗೀತ ವಿದ್ವಾಂಸ ಬಿ.ಎಸ್.ನರಸಿಂಹಯ್ಯನವರು ಅಲ್ಲಿಯೇ ಇದ್ದ ವೇ||ಬ್ರ||ಶ್ರೀ ಮುತ್ತಣ್ಣ ಬಾಧ್ಯಾರಿಂದ ಮಂತ್ರ ಕಲಿತರು. ಕಣ್ಣು ಕಾಣದಿದ್ದರೂ, ಮಂತ್ರ ಕಲಿಸಬೇಕೆಂಬ ಒಂದೇ ಆಸೆಯಿಂದ ಸತತವಾಗಿ ಎಂಟು ವರ್ಷ ನಮ್ಮ ಊರಿಗೆ ಸುತ್ತಿ ನನಗೆ ಮಂತ್ರ ಕಲಿಸಿದರು. ಇದು ಶಿಷ್ಯನ ಮನೆಗೇ ಗುರು ಬಂದು ಮಂತ್ರ ಕಲಿಸಿದ ಸಂದರ್ಭ. ಪ್ರತಿನಿತ್ಯ ಬಂದು ಹತ್ತು ಶಿಷ್ಯರಿಗೆ ಪಾಠ ಹೇಳಿಕೊಟ್ಟರು. ಹಠ ತೊಟ್ಟು ಈ ಸಾಧನೆ ಮಾಡಿದರು. ನಾನೂ ಈಗ ಒಂದಿಬ್ಬರಿಗೆ ಪಾಠ ಹೇಳಿಕೊಡುತ್ತಿದ್ದೇನೆ.

ಪೋಸ್ಟ್ ಮಾಸ್ತರಿಕೆಯಲ್ಲೂ ಭಲೇ ಎನಿಸಿಕೊಂಡಿದ್ದೀರಿ....

ಬ್ರ್ಯಾಂಚ್‌ಪೋಸ್ಟ್ ಮಾಸ್ಟರಾಗಿ ಇಪ್ಪತ್ತೆರಡು ವರ್ಷದಿಂದ ಕೆಲಸ ಮಾಡುತ್ತಿದ್ದೇನೆ (ಇಲಾಖೇತರ ನೌಕರ); ಬೆಳಗೆ ೧೦.೩೦ ರಿಂದ ೧.೩೦ರವರೆಗೆ ಕೆಲಸ. ಇಲಾಖೆಯ ವಿಶೇಷ ಅನುಮತಿ ಪಡೆದು ಇಲ್ಲಿನ ಎಲ್ಲ ಕೃಷಿಕರಿಂದ ಇಲ್ಲಿ ಎಸ್.ಬಿ. ಅಕೌಂಟ್ ತೆಗೆಸಿದ್ದೇನೆ. ಒಂದು ಲಕ್ಷ ರೂಪಾಯಿನ ವಹಿವಾಟಿಗೂ ಒಂದು ಪೈಸೆ ಕೂಡ ಕಮಿಷನ್ ತೊಗೊಳ್ಳಲ್ಲ. ಈ ಒಂದು-ಒಂದೂವರೆ ವರ್ಷದಲ್ಲೇ ೫೦ ಲಕ್ಷದ ವ್ಯವಹಾರ ನಡೆದಿದೆ ಇಲ್ಲಿ. Best Post Master in Hassan District ಅಂತ ಒಂದು ಪ್ರಶಸ್ತಿಯನ್ನೂ ಕೊಟ್ಟಿದಾರೆ. ಹಳ್ಳಿಗಳಲ್ಲಿ Telephone Bill ಕಟ್ಟುವ ಸೌಲಭ್ಯ ಇರುವುದಿಲ್ಲ, ನಾನು permission ತೊಗೊಂಡಿದ್ದೇನೆ. ಉಳಿದವರು ೨೫೦-೪೦೦ ರೂ. ಮೀರಿ ಇಟ್ಟುಕೊಳ್ಳುವಂತಿಲ್ಲ; ನನಗೆ ಎಷ್ಟು ಹಣ ಬೇಕಾದರೂ ಇಟ್ಟುಕೊಳ್ಳಲು ಅನುಮತಿಸಿದ್ದಾರೆ. ೩೦೦ RD ಮಾಡಿಸಿದ್ದೇನೆ. ಗ್ರಾಮೀಣ ಅಂಚೆ ಜೀವ ವಿಮೆ ಕೂಡ ಇಲ್ಲಿದೆ. ನಮ್ಮ ಇಲಾಖೆಯಲ್ಲಿ ಪ್ರಾಮಾಣಿಕತೆಯ ಪರಂಪರೆಯೇ ಇದೆ.

ಪಟ್ಟಣದ ಭ್ರಮೆಯನ್ನು ಗೆದ್ದವರ ಇನ್ನೊಂದು ಉದಾಹರಣೆ ನಿಮ್ಮದು.

ನಾನು ಓದಿರುವುದು B.Sc. ಬಳ್ಳಾರಿಯಲ್ಲಿ ನಾನು ಸಬ್‌ಇನ್ಸ್‌ಪೆಕ್ಟರ್ ಆಗಿ ಆಯ್ಕೆಯಾಗಿದ್ದೆ; ಆದರೆ ಅದಕ್ಕಾಗಿ ಒಂದೂವರೆ ಲಕ್ಷ ಲಂಚ ಕೇಳಿದರು. ಬಿ.ಎಸ್‌ಸಿ. ಫಸ್ಟ್‌ಕ್ಲಾಸ್‌ನಲ್ಲಿ ಪಾಸ್ ಮಾಡಿದ್ದೆ. ನಮ್ಮದು ಒಟ್ಟು ಕುಟುಂಬ. ಆ ಕೆಲಸ ಬೇಡ ಅಂತ ಬಿಟ್ಟೆ. ಬೆಂಗಳೂರಲ್ಲಿ ಬೇರೆ ಬೇರೆ ಕೆಲಸ ಮಾಡಿಕೊಂಡು ಕೆಲದಿನ ಇದ್ದೆ. *ಅದೆಲ್ಲಾ ಸುಮ್ಮನೆ ಜೀತ. ಪಟ್ಟಣದಲ್ಲಿದ್ದೇವೆ ಎಂಬ ಭ್ರಮೆಗೆ ಬಹಳ ಬೆಲೆ ತೆರುತ್ತಿದ್ದೆ.* ಸೀದಾ ಹಳ್ಳೀಗೆ ಬಂದೆ. ಆಗ ಅಡಿಕೇಲಿ ಬರುತ್ತಿದ್ದುದು ಬರೀ ೧೮೦ ರೂಪಾಯಿ - ೩೦ ವರ್ಷದ ಹಿಂದೆ. ಇಡೀ ಅಗ್ರದ ವೀಳೆಯನ್ನು ನಾವೇ ಚೇಣಿ ಮಾಡುತ್ತಿದ್ದೆವು. ೧೮ ಹಂತದ ಏಣಿ ಹತ್ತಿ ನಾವೇ ಅಣ್ಣತಮ್ಮಂದಿರು ಸೇರಿಕೊಂಡು ಕೊಯ್ದು ಮಾಡಿ ಹಾಕುತ್ತಿದ್ದೆವು. ಬೆಳಗ್ಗೆ ಆರು ಘಂಟೆಗೆ ಹೋದರೆ ಇಷ್ಟು ಹೊತ್ತಿಗೇ (ಸಂಜೆ ಏಳು ಘಂಟೆ) ನಾವು ಇಳಿಯುತ್ತಿದ್ದೆವು. ಊಟ ತಿಂಡಿ ಸಮಸ್ತವನ್ನೂ ಹೆಂಗಸರು ತೋಟಕ್ಕೇ ತರೋರು. ಒಬ್ಬೊಬ್ಬರೂ ೨೦೦ ಕಟ್ಟು ಎಲೆ ಕೊಯ್ಯುತ್ತಿದ್ದೆವು. *ನಮಗಾಗಿಯೇ special ಏಣಿ ಮಾಡಿಸಿಕೊಟ್ಟು ಬಿಟ್ಟಿದ್ದರು* ನಮ್ಮ ಮನೇಲಿ. ಮನೇಲಿ ಹೆಂಗಸರು ಎಲೆ ಜೋಡಿಸುತ್ತಿದ್ದರು. ಹಿರಿಯ ಗಂಡಸರು ಮಾರಿಕೊಂಡು ಬರೋರು. ಹೊಳೆನರಸೀಪುರ, ಹಾಸನ, ಚನ್ನರಾಯಪಟ್ಟಣಕ್ಕೆ ತೊಗೊಂಡು ಹೋಗೋರು. ಆಮೇಲೆ ಹೊಸ ತೋಟ ತೊಗೊಂಡೆವು. Improve ಮಾಡಿದೆವು. ವೀಳೆ



ಅಡಿಕೆ ತುಡಿಕೆಗೆ ಸಿದ್ಧ ಪಡಿಸಿದ ಚಾವಡಿ: ಕೇಶವಶರ್ಮ: ಮರಿತಮ್ಮನಹಳ್ಳಿ

ಅಡಿಕೆ ಚೆನ್ನಾಗಿದೆ. ಹೊಲದಲ್ಲಿ ಶುಂಠಿ ಆಲೂಗೆಡ್ಡೆ ಬೆಳೀತೀವಿ. ಆಧುನಿಕ ರೀತಿಯ ವ್ಯವಸಾಯವನ್ನು ಅಳವಡಿಸಿಕೊಂಡಿದೀವಿ. ಇಲ್ಲಿನ *೨೫ ಒಕ್ಕಲು (ಸಂಕೇತಿಗಳೂ) ಬೆವರು ಬಸಿದು ದುಡಿಯುವವರೇ; ಒಬ್ಬ ಸೋಮಾರಿಯೂ ಇಲ್ಲ.*

ನಿಮ್ಮ ಅಜ್ಜನವರ ಸಾಹಸವೂ ನನಗೆ ಗೊತ್ತು!

ನಮ್ಮ ಅಜ್ಜನ ಕಾಲದಲ್ಲಿ ನಾವು ವಾಸ ಇದ್ದದ್ದು ಬರಗೂರಿನಲ್ಲಿ; ತೋಟ ಇದ್ದದ್ದು ಮರಿತಮ್ಮನಹಳ್ಳಿಯಲ್ಲಿ. ಅಜ್ಜ ನಡೆದುಕೊಂಡು ಬಂದು ಇಲ್ಲಿ ಕೃಷಿ ಮಾಡಿ ರಾತ್ರಿ (ಹೊರೆ ಹೊತ್ತುಕೊಂಡು) ಬರಗೂರಿಗೆ ನಡೆದುಕೊಂಡು ಬರುತ್ತಿದ್ದರು-ಐದು ಮೈಲಿ. ಆಮೇಲೆ ಇಲ್ಲೇ ಮನೆ ಮಾಡಿ ಉಳಿದುಕೊಂಡರು.

ಈ ರೈತರ ಲವಲವಿಕೆ ನನಗೆ ಸಂತೋಷ ತಂದಿದೆ

ಇಲ್ಲಿ ಸೋಮಾರಿಕಟ್ಟೆ ಇಲ್ಲ, ಮೋಜು ಮೊದಲೇ ಇಲ್ಲ. ಷಟಲ್‌ಕಾಕ್, ಚೆಸ್, ಕೇರಂ ಆಡುತ್ತೇವೆ. ಸಂಘ ಮಾಡಿಕೊಂಡಿದೇವೆ. ಕ್ರಿಕೆಟ್ ಆಡುತ್ತೇವೆ. ಇಲ್ಲಿ ನೋಡಿ. ಇವರು ರವಿ: ಒಂದು ನಿಮಿಷಾನೂ ಮನೇಲಿ ಕೂರೋ ಪ್ರಶ್ನೆಯೇ ಇಲ್ಲ. *ಹೊತ್ತು ಸಾಕಾಗಲ್ಲ ಅನ್ನುವ ಹಾಗೇ ಇಲ್ಲಿ ಎಲ್ಲಾ ದುಡೀತಾರೆ.* ಇಲ್ಲದಿದ್ದರೆ ಇಷ್ಟು achieve ಮಾಡಕ್ಕೆ ಆಗ್ತಿರಲಿಲ್ಲ. ಆ ದೇವರೇ ನಮಗೆ ಆ ಶಕ್ತಿ ಕೊಟ್ಟಿದಾನೆ. ಎಲ್ಲರೂ ಅನ್ಯೋನ್ಯವಾಗಿದೀವಿ. ರಾಮೋತ್ಸವಕ್ಕೆ ಒಂದು ಲಕ್ಷ ಖರ್ಚು ಮಾಡುತ್ತೇವೆ. ಇವರು ನೋಡಿ - ಕನ್ನಡ ಎಂ.ಎ., ಮಾಡಿದಾರೆ. ಇಲ್ಲಿರೋ ೨೫ ಮನೇಲಿ, ೨೦ ಜನ ಗ್ರಾಜುಯೇಟುಗಳೇ. *ಈಗ ನಾವು 'ಶಾಪ'ಮುಕ್ತರು!* ನಮ್ಮೂರಲ್ಲಂತೂ *ಆಧುನಿಕ ಬೇಸಾಯ* ತುಂಬಾ ಚೆನ್ನಾಗಿ ನಡೀತಿದೆ. ಈಗ ಹೆಚ್ಚುಕಮ್ಮಿ ಆರು-ಏಳು ಲಕ್ಷ ರೂಪಾಯಿನ (ಆಲೂಗೆಡ್ಡೆ) ಬೀಜ ಬಂದಿದೆ ಊರಿಗೆ. ಶುಂಠಿಯೂ ಅಷ್ಟೆ. ಎಲ್ಲರೂ ಶುಂಠಿ ಹಾಕಿದಾರೆ. ಹಿಂದೆ ಭತ್ತ, ರಾಗಿ ಮಾತ್ರ ಬೆಳೀತಿದ್ದರು. ಆಗ ಎಲ್ಲರೂ ಅಲ್ಪತೃಪ್ತರು. ಇತ್ತೀಚೆಗೆ *ಜಿ.ಪುಟ್ಟಸ್ವಾಮಿಗೌಡರು* ಸಚಿವರಾಗಿದ್ದಾಗ ರಸ್ತೆ, ನೀರು ಅನುಕೂಲ ಮಾಡಿಸಿದರು. ಮುಖ್ಯವಾಗಿ ನಾಲೆ ನೀರು ಸಂಪರ್ಕ ಕಲ್ಪಿಸಿದರು-ಪುಣ್ಯಾತ್ಮ.

ಈ ಹಿರಿಯರ ಒಂದೇ ನಿದರ್ಶನ ಸಾಕು, ನಮ್ಮ ಅಭಿಮಾನಕ್ಕೆ!


ಇವರು ಎಂ.ಆರ್.ಕೇಶವಮೂರ್ತಿ ಅಂತ. ಅದೆಷ್ಟು ಗುದ್ದಲಿ ಹಾರೆ ಸವೆಸಿದಾರೋ. ಅವರು ಒಂದು ದಿನ ಮಾಡಿದ್ದನ್ನು ನಾವು ಎಂಟು ದಿನದಲ್ಲಿ ಮಾಡಕ್ಕಾಗಲ್ಲ. ಇವರಿಗೆ ೭೬ ವರ್ಷ. ೧೬ ವರ್ಷದ ಹುಡುಗನೂ ಇವರ ಮುಂದೆ ಕೆಲಸ ಮಾಡಲಾರ. ಇವತ್ತೂ ಗುದ್ಲಿ ಹಾರೆ ಹಿಡಿದು ಮೀಟಲು ಶುರು ಮಾಡಿದರೆ *ಯಾವ ಇತರೆಯವರಿಗೂ ಅವರ ಜೊತೆ ಕೆಲಸ ಮಾಡಕ್ಕಾಗಲ್ಲ*. ಅಂಥ ಸಾಮರ್ಥ್ಯ ಇರೋರು.



ಬೀಜದ ಆಲೂಗೆಡ್ಡೆ ತಂದ ಲಾರಿ:ಮುಗಿಬಿದ್ದ ರೈತರು: ಮರಿತಮ್ಮನಹಳ್ಳಿ

೦.೬) ಎಂ.ಎಸ್. ಫಣೀಶ

("ನೆಮ್ಮದಿ ಬೇಕು ಎನ್ನುವವರಿಗೆ ಇಲ್ಲೊಂದು ಜೀವಂತ ಮಾದರಿ ಇದೆ. ಬನ್ನಿ" ಎಂದು ಎಂ.ಆರ್. ಕೇಶವಮೂರ್ತಿಯವರು ಕರೆದುಕೊಂಡು ಹೋದರು. "ಸಂಕೇತಿಗಳ ಬೇಸಾಯದ ಬದುಕು ಈಗಲೂ ಪ್ರಸ್ತುತವೆ ಎಂದು ಹುಡುಕಿಕೊಂಡು ಹೊರಟಿದ್ದೇನೆ" ಎಂದೆ. 'ಹೇಳೋ ಮಗು' ಎಂದು ಕೇಶವಮೂರ್ತಿ ಅಬ್ಬರಿಸಿದರು. ಫಣೀಶ್ ಚುಟುಕಾಗಿ ಹೇಳಿ ಕೆಲಸಕ್ಕೆ ಹೊರಟರು.)



ಫಣೀಶ, ಎಂ.ಆರ್.ಕೇಶವಮೂರ್ತಿ : ಮರಿತಮ್ಮನಹಳ್ಳಿ

ಫಣೀಶ ಅಂತ ನನ್ನ ಹೆಸರು. ವಯಸ್ಸು ೩೮. ತಂದೆ ಎಂ.ಆರ್.ಶ್ರೀನಿವಾಸಮೂರ್ತಿ. ತಂದೆ ತೋಟದ ವ್ಯವಸಾಯ (ಮಾತ್ರ) ಮಾಡುತ್ತಿದ್ದರು. Commercial cropಗೆ ಕೈ ಹಾಕಿರಲಿಲ್ಲ. ನನಗೆ M.A., B.Ed., ಆಗಿದೆ. KAS ಮಾಡಿಕೊಂಡು ೧೧ ವರ್ಷದ ಹಿಂದೆ ಕೆಲಸಕ್ಕೆ ಸೇರಿದೆ. High School Head Master ಆಗಿದ್ದೆ. ಈಗ (BRO) *ಕ್ಷೇತ್ರ ಸಂಪನ್ಮೂಲಾಧಿಕಾರಿ* ಆಗಿದೇನೆ. *ಆದರೂ ಜಮೀನು ಬಿಟ್ಟಿಲ್ಲ.* ಅದನ್ನು ನಾನು ಲಾಭಕ್ಕಾಗಿ ಮಾಡುತ್ತಿಲ್ಲ. ಬೆಳೆಯಬೇಕು ಅಂತ ಬೆಳೀತಿದೀನಿ- ಹಳ್ಳೀಲಿರುವ ಕುಶಿ, ಜಮೀನಿನಲ್ಲಿ ಕೆಲಸ ಮಾಡುವ ಕುಶಿ, ಅಲ್ಲಿ ಸುತ್ತಾಡೋ ಕುಶಿ, ಹಳ್ಳಿಯಲ್ಲಿರೋ ಸಹಕಾರ, *ನೆಮ್ಮದಿ city*ನಲ್ಲಿ ಇಲ್ಲ-ಯಾವ ವಿಷಯ ತೊಗೊಂಡರೂ. ಇಲ್ಲಿ ಹಳ್ಳೀಲೇ ಮನೇನೂ ಕಟ್ಟಿಕೊಂಡಿದೀನಿ. ತೋಟಕ್ಕೆ ಹೋಗುವಾಗ ಮಂಕರೀಲಿ *ತೊಪ್ಪೆ ಎತ್ತಿ ಕೊಂಡು ಹೋಗುತ್ತೇನೆ.* ಬರುವಾಗಲೂ ಹಾಗೇ ಮಾಡುತ್ತೇನೆ. ಪಟ್ಟಣಗಳ ಜೀವನವನ್ನು ನೋಡಿದ ಮೇಲೂ ಇಷ್ಟಪಟ್ಟು ಹಳ್ಳಿಗೆ ಬಂದಿದೇನೆ. ಮೊದಲು ಹೆಂಡತಿ 'ಹಳ್ಳಿಗೆ ಹೋಗುವುದು ಬೇಡವೇ ಬೇಡ' ಎಂದು ಮುರಾಡ ಮಾಡಿದ್ದರು; ಈಗ *'ಇಲ್ಲಿಂದ ಬಿಡುವುದಿಲ್ಲ'* ಎನ್ನುತ್ತಾರೆ. ಹಸುಗಳನ್ನೂ (ಅವರ ಸಹಕಾರದಿಂದಲೇ) ಸಾಕಿದ್ದೇವೆ. ಬೇರೆಯವರ ಜಮೀನನ್ನೂ ಗುತ್ತಿಗೆಗೆ ಮಾಡಿಕೊಂಡಿದ್ದೇವೆ. ಸರಿಯಾಗಿ ಮಳೆ ಬಂದರೆ ಹಳ್ಳಿಯ ಜೀವನ *ಸ್ವರ್ಗವೇ* ಸರಿ.

೨೧. ಕರ್ನಾಟಕದ ನಗರಗಳು

(ಕ್ಷೇತ್ರಕಾರ್ಯ ಜುಲೈ-ಆಗಸ್ಟ್ ೨೦೦೩)

ಡಾ|| ಬಿ.ಎಸ್. ಪ್ರಣತಾರ್ತಿಹರನ್

(ನಗರಗಳನ್ನು ಸೇರಿದ್ದರೂ ಸಂಕೇತಿಗಳನ್ನು ಕೃಷಿಯ ವಾಸನೆ ಬೆನ್ನಟ್ಟಿದೆ. ಆದು ಹೊರಹೊಮ್ಮಿದ ರೀತಿಯು ಕಾಲಾನುಕ್ರಮದಲ್ಲಿ ಬದಲಾಗಿದೆ. ಡಾ|| ಹರನ್ ಈ ಭಾಗದಲ್ಲಿ ಈ ಅಂಶಗಳಿಗೆ ಗಮನ ಕೊಟ್ಟಿದ್ದಾರೆ. ಸಂಕೇತಿಗಳು ತಮ್ಮ ಕೃಷಿಪ್ರೀತಿಯನ್ನು ತಣಿಸಿಕೊಂಡ ವಿವಿಧ ಮಾರ್ಗಗಳ ಪರಿಚಯವು ಈ ಭಾಗದಲ್ಲಿದೆ.)

೦.೧) ದಲಿತಾಶ್ರಯ, ಮೈಸೂರು

(ಬಾಬು ಕೃಷಿಯಲ್ಲೇ ನೂತನ ಸಾಧ್ಯತೆಗಳ ಬಾಗಿಲು ತೆರೆದರು; ದಲಿತೋದ್ಧಾರದ ಫಲ ಕಂಡರು)

ಮುದ್ರಕರು

ಸಾಲಿಗ್ರಾಮ ಕೃಷ್ಣರಾವ್ ಲಕ್ಷ್ಮೀನಾರಾಯಣ (ಬಾಬು) ಅವರು ಮೈಸೂರಿನ ಪ್ರತಿಷ್ಠಿತ ಮುದ್ರಕರಲ್ಲೊಬ್ಬರು. ೧೯೭೦ರ ದಶಕದಲ್ಲಿ



ಎಸ್.ಕೆ.ಲಕ್ಷ್ಮೀನಾರಾಯಣ (ಬಾಬು) : ಮೈಸೂರು

ಲೆಟರ್‌ಪ್ರೆಸ್ ಇಟ್ಟು, ಆಫ್‌ಸೆಟ್ ಮುದ್ರಣವನ್ನು ಪ್ರಾರಂಭಿಸಿ ೧೯೮೭ರ ಹೊತ್ತಿಗೆ ಮೈಸೂರು ನಗರದ ಮೊದಲ ಡಿಟಿಪಿ ಮುದ್ರಕರಾಗಿ ಬೆಳೆದವರು. ಆದರೆ ಅವರ ಉಸಿರಿನ ಭಾಗವಾಗಿ *ಉದ್ದಕ್ಕೂ ಜತೆಗಿರುವುದು ಕೃಷಿ.*

ಸಾಲಿಗ್ರಾಮದಲ್ಲಿ ಪೂರ್ವಿಕರ ಬೇಸಾಯ

ಅವರ ತಂದೆಯ ಅಜ್ಜ ರಾಮಸ್ವಾಮಿಯವರೂ, ಅಜ್ಜಿ ಪಾರ್ವತಮ್ಮನವರೂ ವ್ಯವಸಾಯ ಮಾಡುತ್ತಾ ತೋಟದಲ್ಲಿ ದುಡಿಯುತ್ತಾ ಸಾಲಿಗ್ರಾಮದಲ್ಲಿ ನೆಮ್ಮದಿಯಾಗಿ ಬಾಳಿದ್ದು ೧೫೦ ವರ್ಷಗಳ ಹಿಂದೆ. ರಾಮಸ್ವಾಮಿಯವರ ಮಗ ಎಸ್.ನಾರಾಯಣರಾವ್ (+ ಲಕ್ಷ್ಮಮ್ಮ) ಮೈಸೂರಿನಲ್ಲಿ ವಕೀಲರಾಗಿ ಸೇವೆ ಸಲ್ಲಿಸುತ್ತಲೇ ಸಾಲಿಗ್ರಾಮದ ಜಮೀನಿನಲ್ಲಿ ವ್ಯವಸಾಯವನ್ನೂ ನಿರ್ವಹಿಸಿದರು. ನಾರಾಯಣರಾಯರ ಮಕ್ಕಳಲ್ಲಿ -ಸುಬ್ಬರಾವ್ ವಕೀಲರು; ಎಸ್.ರಾಮಸ್ವಾಮಿ ಸೂಪರಿಂಟೆಂಡಿಂಗ್ ಇಂಜಿನಿಯರಾಗಿದ್ದವರು, ಮೈಸೂರಿನ NIE ಸಂಸ್ಥೆಯ ಸ್ಥಾಪಕರು; ಎಸ್.ಎನ್.ಶ್ರೀಕಂಠಯ್ಯ ರೈಲ್ವೆ ನೌಕರರು. ಇವರೆಲ್ಲರೂ ತಮ್ಮ ನೌಕರಿಯ ಜತೆಗೆ ಜಮೀನನ್ನು ಉಳಿಸಿಕೊಂಡಿದ್ದರು. ನಾರಾಯಣರಾಯರ ಕೊನೆಯ ಮಗ ಎಸ್.ಎನ್.ಕೃಷ್ಣರಾವ್ ಮಾತ್ರ ಪೂರ್ಣವಾಗಿ ವ್ಯವಸಾಯದಲ್ಲೇ ತೊಡಗಿಕೊಂಡಿದ್ದರು.

ವ್ಯವಸಾಯದ ವಿಸ್ತರಣ

ಸಾಲಿಗ್ರಾಮದಲ್ಲಿರುತ್ತಿದ್ದ ಎಸ್.ಎನ್.ಕೃಷ್ಣರಾವ್ (+ ಕೆ.ಶಾರದಮ್ಮ) ಪೂರ್ವಿಕರ ಜಮೀನನ್ನು ರೂಢಿಸುವುದರ ಜತೆಗೆ ಕಡಕೊಳ, ಮಂಡಕಳ್ಳಿ, ನಂಜನಗೂಡು, ಅಕ್ಕಿಹೆಬ್ಬಾಳು - ಹೀಗೆ ಹಲವೆಡೆ *ಹೊಸ ಜಮೀನು ರೇಖೆ* ಮಾಡಿದರು. ಅವರು ದೆಹಲಿಯಲ್ಲಿ ತಮ್ಮ ವಿದ್ಯಾಭ್ಯಾಸ ಪೂರೈಸಿದ್ದರು. ಆ ವೇಳೆಯಲ್ಲಿ ಕರ್ನಾಟಕದ ಕಲಾವಿದರನ್ನು ದೆಹಲಿಗೆ ಕರೆಸಿಕೊಂಡು ಸಂಗೀತ ಕಚೇರಿಗಳನ್ನು ಏರ್ಪಡಿಸುತ್ತಿದ್ದರು. ಸ್ವತಃ ಕೊಳಲು ನುಡಿಸುತ್ತಿದ್ದರು. ಕೊನೆ ಕೊನೆಗೆ ಮೈಸೂರಿನಲ್ಲಿ ಬಟ್ಟೆ ಅಂಗಡಿಯನ್ನೂ, ಕಾಫೀ ಬೀಜದ ಅಂಗಡಿಯನ್ನೂ ಇಟ್ಟರು, '*ಜಮೀನ್ದಾರ*ರಾಗಿ ಉಳಿದರು. ಅವರ ಐವರು ಮಕ್ಕಳಲ್ಲಿ ಕೊನೆಯವರು 'ಬಾಬು'.

ಮತ್ತೆ ಜಮೀನಿಗೆ ಮೊರೆ

ಮೈಸೂರಿನ ಪ್ರತಿಷ್ಠಿತ ಶಾರದಾವಿಲಾಸಾ ಕಾಲೇಜಿನಲ್ಲಿ ಶಿಕ್ಷಣ ಪಡೆದ ಬಾಬು, ಎರಡನೆಯ ಆಲೋಚನೆ ಇಲ್ಲದೆ ಹಿಡಿದ ವೃತ್ತಿ ವ್ಯವಸಾಯ. ಆದರೆ ಅಕ್ಕಂದಿರ ವಿವಾಹಕ್ಕೆಂದು ಜಮೀನು ಕರಗಿದಾಗ ಅನಿವಾರ್ಯವಾಗಿ ಮುದ್ರಣಾಲಯ ಇಟ್ಟರು; ಗುಣಾತ್ಮಕ ಮುದ್ರಣಕ್ಕೆ ಹೆಸರಾದರು. ಆದರೆ ಕೊಂಚ ಕೈ ನಡೆಯತೊಡಗಿದಾಗ ತಡಮಾಡದೆ *೧೨ ಎಕರೆ ಜಮೀನು* ಕೊಂಡರು. ಕಬ್ಬು, ಬತ್ತ, ತೆಂಗು, ಬಾಳೆ ಬೆಳೆದರು; ಮೆಣಸಿನಕಾಯಿ, ನವಿಲುಕೋಸು ಮೊದಲಾಗಿ ತರಕಾರಿಗಳನ್ನೂ ಬೆಳೆದರು. ತೆಂಗಿಗೆ ಡ್ರಿಪ್ ಇರಿಗೇಷನ್ ಅಳವಡಿಸಿದರು. ಸಾಧ್ಯವಾದಷ್ಟೂ *ಸಾವಯವಕೃಷಿಗೆ* ಒತ್ತುಕೊಟ್ಟರು.



ಎಸ್.ಕೆ.ಲಕ್ಷ್ಮೀನಾರಾಯಣ (ಬಾಬು) ಅವರ ಗದ್ದೆ : ಮುನ್ನೆಲೆಯಲ್ಲಿ ಮನೆಯ ಮಕ್ಕಳು:ಮೈಸೂರು

ಕೃಷಿಯು ಮೇಟಿಗೆ ಅಂಟಿದ ಹೊಸ ಪ್ರಯೋಗಗಳು

ತಿಪಟೂರು ತಳಿಯ ತೆಂಗು; ಸುತ್ತ ಬೇಲಿಗೆ ತೇಗ;

ಅಲ್ಲೇ ಒಂದು ಬತ್ತದ ಕಣಜ, ದನಗಳು, ಪವರ್ ಟಿಲ್ಲರ್, ಜನರೇಟರ್. ಫಿಷರೀಸ್ ಕೂಡ ಪ್ರಾರಂಭಿಸಿದ್ದಾಯಿತು, ನಿತ್ಯ ಕೊಲ್ಲುವ ಕಾಯಕಕ್ಕೆ ಹೇಸಿ ನಿಲ್ಲಿಸಿದ್ದೂ ಆಯಿತು. ಬತ್ತ ಬೆಳೆದದ್ದು ತಮಗಾಗಿ ಮತ್ತು ತಮ್ಮ ನೌಕರರಿಗಾಗಿ ಮಾತ್ರ. ಈಗ ಕೊಂಡ ತಮ್ಮ ಇನ್ನೊಂದು ಜಮೀನಿನಲ್ಲಿ ಒಂದು ಅಕೆಡಮಿಕ್ ಸೆಂಟರ್ ಪ್ರಾರಂಭಿಸುವ ಆಲೋಚನೆ, ಅಲ್ಲೊಂದು *ಫಾರಂ ಹೌಸ್* ಕಟ್ಟುವ ಯೋಜನೆ. ಸಿಹಿಮೂತ್ರ ರೋಗಿಗಳಿಗೆ ವರದಾನವಾಗಿ *'ಸ್ಟೀವಿಯಾ'* ಬೆಳೆಸುವ ಸಿದ್ಧತೆ.

ದಲಿತೋದ್ಧಾರದ ಸಾಧನೆ

ಇದು ಬಾಬು ಅವರಿಗೆ ತಮ್ಮ ವೃತ್ತಿ ಮತ್ತು ಪಟ್ಟಣದ ಜಂಜಡದ *ಒತ್ತಡ ಕಳೆದುಕೊಳ್ಳುವ ಶಾಂತಿಯ* ತಾಣ; ಆರ್ಥಿಕ ಲಾಭದ್ದು ನಂತರದ ಗಣನೆ. ಮನೆಯವರೆಲ್ಲರದೂ ಅದೇ ಧೋರಣೆ. ಜತೆಗೆ *ಹಿಂದುಳಿದ ಜಾತಿ ವರ್ಗಗಳ ಅನೇಕ ಕುಟುಂಬಗಳಿಗೆ ಆಶ್ರಯ ನೀಡಿರುವ ತೃಪ್ತ.* ದನ ಕಾಯುತ್ತಿದ್ದ ಹುಡುಗರನ್ನು ಕರೆದು ಕಂಪ್ಯೂಟರ್ ಮತ್ತು ಮುದ್ರಣದ ತರಬೇತಿ ನೀಡಿದ ಸಾಹಸಿ. ಅಂಥ ಅನೇಕ ಹುಡುಗರಿಗೆ ಅತ್ಯಾಧುನಿಕ ಮುದ್ರಣ ಯಂತ್ರಗಳಲ್ಲಿ ತರಬೇತಿ ನೀಡಿದ್ದಾರೆ; ಜೆರಾಕ್ಸ್, ಫ್ಯಾಕ್ಸ್, ಡ್ರೈವಿಂಗ್ ಇತ್ಯಾದಿ ತರಬೇತಿ ಕೊಟ್ಟು ಅವರ *ಸಂಸಾರಗಳನ್ನು ನೆಲೆಗೊಳಿಸಿದ್ದಾರೆ.* ಅನೇಕ ಅಂಥ ಮಕ್ಕಳಿಗೆ ಊಟ ವಸತಿ ನೀಡಿ ಆಶ್ರಯಕೊಟ್ಟು ಓದಿಸುತ್ತಿದ್ದಾರೆ. *'ಇದು ನಾನು ಕೃಷಿಕನಾದ್ದರಿಂದ ಸಾಧ್ಯವಾಯಿತು'* ಎನ್ನುತ್ತಾರೆ, ಬಾಬು.

೦.೨) ಪುಟ್ಟಣ್ಣ ಶೂಟಿಂಗ್ ಮನೆ, ಬೆಂಗಳೂರು

(ಎಂ.ಡಿ. ಕೌಶಿಕ್ ಅವರು ಕಣಗಾಲ್ ಪುಟ್ಟಣ್ಣನವರ ಗರಡಿಯಲ್ಲಿ ಪಳಗಿ ಎತ್ತರಕ್ಕೆ ಬೆಳೆದರು; 'ಪುಟ್ಟಣ್ಣ ಶೂಟಿಂಗ್ ಮನೆ' ಕಟ್ಟಿ ಗುರುಗಳ ನಿತ್ಯಾರಾಧನೆಗೆ ನೆಲೆ ಕಲ್ಪಿಸಿದರು; ಇವೆರಡರ ನಡುವಿನ ಸಂಕಷ್ಟಕಾಲದಲ್ಲಿ ಕೃಷಿಯಿಂದಲೇ ಜೀವದಾನ ಪಡೆದರು ! ಪರಂಪರಾಗತವಾದ ಕೃಷಿಯ ಅಂಟು ಅವರನ್ನು ಕಾಪಾಡಿ ಗುರಿಮುಟ್ಟಿಸಿತು!)

ಪುಟ್ಟಣ್ಣನವರ ಗರಡಿ



ಮುರಳೀಧರ ಕೌಶಿಕ್(ಎಂ.ಡಿ.ಕೌಶಿಕ್) ಅವರ ಪುಟ್ಟಣ್ಣ ಶೂಟಿಂಗ್ ಮನೆ:ಬೆಂಗಳೂರು

ಪ್ರಖ್ಯಾತ ಚಲನಚಿತ್ರ ನಿರ್ದೇಶಕ ಕಣಗಾಲ್ ಪುಟ್ಟಣ್ಣನವರ ಹೆಸರಿನಲ್ಲಿರುವ ಫಿಲ್ಮ್ ಸ್ಟುಡಿಯೊ 'ಪುಟ್ಟಣ್ಣ ಶೂಟಿಂಗ್ ಮನೆ'. ಅದನ್ನು ನಿರ್ಮಿಸಿದವರು ಮುರಳೀಧರ (M.D.)ಕೌಶಿಕ್. 'ಮಾನಸ ಸರೋವರ' ಚಲನಚಿತ್ರವನ್ನು ಪುಟ್ಟಣ್ಣನವರು ನಿರ್ದೇಶಿಸುತ್ತಿದ್ದಾಗ ಸಹಾಯಕ ನಿರ್ದೇಶಕ ರಾಗಿ ಕೆಲಸ ಮಾಡಿದವರು ಎಂ.ಡಿ.ಕೌಶಿಕ್. ಹಾಗೆ ಮಾಡಿದ್ದು ಒಂದು ವರ್ಷ. ಆದರೆ ಅದರಿಂದ ಹತ್ತು ವರ್ಷ ಕೆಲಸ ಮಾಡಿದಷ್ಟು ತರಪೇತಿ ಸಿಕ್ಕಿತು ಎನ್ನುತ್ತಾರೆ ಅವರು. ಅವರಿಗೆ ತಮ್ಮ ಗುರು ಪುಟ್ಟಣ್ಣನವರ ಬಗೆಗೆ ಅಪಾರ ಗೌರವ, ಅಭಿಮಾನ. ಹಾಗೆಂದೇ ಅವರು ಕಟ್ಟಿದ ಸ್ಟುಡಿಯೋಗೆ ಪುಟ್ಟಣ್ಣ ನವರ ಹೆಸರು ಇಟ್ಟಿದ್ದಾರೆ. ಹಾಗೆಯೇ ಪುಟ್ಟಣ್ಣನವರಿಗೆ *ಸಂಕೇತಿಗಳ ಬಹುಮುಖ ಕಾರ್ಯಕ್ಷಮತೆಯ ಬಗೆಗೆ ಬಹಳ ಮೆಚ್ಚುಗೆ* ಇತ್ತು ಎಂಬುದನ್ನೂ ಸ್ಮರಿಸುತ್ತಾರೆ.

ಸ್ವತಂತ್ರ ನಿರ್ದೇಶನ

ಎಂ.ಡಿ.ಕೌಶಿಕ್ ಬಿ.ಕಾಂ., ಎಲ್.ಎಲ್.ಬಿ. ಅವರು ವಿವಾಹವಾದದ್ದು (೧೯೮೦) ಖ್ಯಾತ ಸಂಗೀತ ಕಲಾವಿದ ಡಾ.ಆರ್.ಕೆ.ರಾಮನಾಥನ್ ಅವರ ಮಗಳು ಉಷಾ ಅವರನ್ನು. ಶಾಲಾ ದಿನಗಳಿಂದಲೇ *ನಟನೆಯ ಹುಚ್ಚು* ಅಂಟಿಸಿಕೊಂಡಿದ್ದ ಕೌಶಿಕ್ ಪದವೀಧರರಾದ ಕೂಡಲೆ



ಎಂ.ಡಿ.ಕೌಶಿಕ್ ಜತೆಗೆ ಬಿ.ಎಸ್.ಪ್ರಣತಾರ್ತಿಹರನ್:ಪುಟ್ಟಣ್ಣ ಶೂಟಿಂಗ್ ಮನೆಯ ಎದುರು:ಬೆಂಗಳೂರು

ಚಲನಚಿತ್ರ ನಿರ್ದೇಶನಕ್ಕೆ ತೊಡಗಿದ್ದು ಸಹಜವೇ. ಪುಟ್ಟಣ್ಣನವರಂಥ ಮಹಾನ್ ನಿರ್ದೇಶಕರ ಗರಡಿಯಲ್ಲಿ ಪಳಗಿದ ಮೇಲೆ ಮುಖವಾಡ, ಮಹಾಯುದ್ಧ, ಪ್ರೇಮಕಾವ್ಯ... ಹೀಗೆ ಅವರ ಸ್ವತಂತ್ರ ನಿರ್ದೇಶನದ ಚಿತ್ರಗಳು ಬರತೊಡಗಿದವು. ತಾರಾ, ಮಾಧುರಿ, ಸುನಿಲ್ ಮೊದಲಾದ ನಟ ನಟಿಯರನ್ನೂ ಹಲವು ತಂತ್ರಜ್ಞರನ್ನೂ ಸಿನಿಮಾಗೆ ಪರಿಚಯಿಸಿದರು. ಅವರ 'ರಂಭೆ-ವೈಯಾರದ ಗೊಂಬೆ' ಹವಾಯ್‌ನಲ್ಲಿ ನಡೆದ *ಅಂತಾರಾಷ್ಟ್ರೀಯ ಚಲನಚಿತ್ರೋತ್ಸವಕ್ಕೆ ಆಯ್ಕೆ*ಯಾಯಿತು. ಅಮೆರಿಕದಲ್ಲಿ ತೆರೆ ಕಂಡ ಮೊದಲ ಕನ್ನಡ ಚಿತ್ರ ಎಂಬ ಗೌರವಕ್ಕೂ ಪಾತ್ರವಾಯಿತು. ಅಲ್ಲೇ 'ಅಕ್ಕ' ಚಿತ್ರೀಕರಿಸಿದರು. ಅಮೆರಿಕನ್ ಕನ್ನಡ ಕೂಟದವರಿಗಾಗಿ ಅಮೆರಿಕದ ಕನ್ನಡ ಸಂಘಗಳ ಬಗೆಗೆ ಒಂದು *ಸಾಕ್ಷ್ಯಚಿತ್ರ* ಸಿದ್ಧಪಡಿಸಿದರು. ಅದಾಗಿ ಒಂದು ವರ್ಷದ ನಂತರ ಮತ್ತೆ ಅಮೆರಿಕಕ್ಕೆ 'ಸೀಮಾ'ದ ಚಿತ್ರೀಕರಣಕ್ಕಾಗಿ ತೆರಳಿದರು. ಜೋಡಿ-ಗೋಪುರದಲ್ಲೇ ಚಿತ್ರೀಕರಣ ಮುಗಿಸಿ ಹೊರಬರುತ್ತಿದ್ದಂತೆಯೇ ಅಲ್ಲಿ ಭಯಂಕರ ವಿಪ್ಲವವೇ ಆಗಿತ್ತು, ತುಸು ಅಂತರದಲ್ಲೇ ಬದುಕಿ ಉಳಿದು ಬಂದಿದ್ದರು. ಸಿಂಗಪುರ, ಬ್ಯಾಂಕಾಕ್‌ಗಳಲ್ಲಿ ಯೂನಿಸೆಫ್‌ಗಾಗಿ ಒಂದು ಸಾಕ್ಷ್ಯಚಿತ್ರ ತೆಗೆದರು.

ನಟ, ಉಪನ್ಯಾಸಕ

ನಡುನಡುವೆ ನಟನೆಯಲ್ಲೂ ತೊಡಗಿಕೊಂಡ ಕೌಶಿಕ್ 'ಹೀಗೂ ಉಂಟೆ', 'ನಾವಿರೋದೇ ಹೀಗೆ', 'ಗೆಲುವಿನ ಹೆಜ್ಜೆ' *ಧಾರಾವಾಹಿ*ಗಳಲ್ಲಿ *ನಾಯಕನಟ*ರಾದರು. ವಿಷ್ಣುವರ್ಧನ್, ಅಂಬರೀಷ್, ಸುದೀಪ್, ರವಿಚಂದ್ರನ್ ಮೊದಲಾದವರೊಡನೆ *ಪೋಷಕನಟ*ರಾಗಿ ಅಭಿನಯಿಸಿದರು. ಆದರ್ಶ ಫಿಲ್ಮ್ ಇನ್‌ಸ್ಟಿಟ್ಯೂಟ್‌ನಲ್ಲಿ ೧೯೯೦ರಿಂದ ಮೂರು ವರ್ಷ *ಉಪನ್ಯಾಸಕ*ರಾಗಿಯೂ ಸೇವೆ ಸಲ್ಲಿಸಿದರು. ನಟನೆ, ನಿರ್ದೇಶನಗಳ ಕಾರ್ಯಭಾರ ಹೆಚ್ಚಾದಾಗ ಅದನ್ನು ಕೈಬಿಟ್ಟರು.



ಪುಟ್ಟಣ್ಣ ಶೂಟಿಂಗ್ ಮನೆ:ಉದ್ಯಾನದ ಸೇತು

ಪ್ರಶಸ್ತಿಗಳು

ಈವರೆಗೆ ೫೦ ಚಲನಚಿತ್ರಗಳಲ್ಲಿ ನಟಿಸಿರುವ ಎಂ.ಡಿ.ಕೌಶಿಕ್ ಐದಾರು ಧಾರಾವಾಹಿಗಳ ನಾಯಕನಟ, ಇಪ್ಪತ್ತು ಧಾರಾವಾಹಿಗಳ ನಿರ್ದೇಶಕ, ನೂರು ಸಾಕ್ಷ್ಯಚಿತ್ರಗಳ ನಿರ್ದೇಶಕ. ಅವರು ನಿರ್ದೇಶಿಸಿದ ಚಿತ್ರಗಳಿಗೆ *ರಾಷ್ಟ್ರಪ್ರಶಸ್ತಿಗಳೂ ರಾಜ್ಯಪ್ರಶಸ್ತಿ*ಗಳೂ ಬಂದಿವೆ; *ಪನೋರಮಾ* ಅವಾರ್ಡ್ ಬಂದಿದೆ. 'ಯುದ್ಧ ಮತ್ತು ಸ್ವಾತಂತ್ರ್ಯ', ರಾಜ್ಯ ಸರ್ಕಾರದಿಂದ 'ಅತ್ಯುತ್ತಮ ಮಕ್ಕಳ ಚಿತ್ರ' ಎಂದು ಪರಿಗಣಿತವಾಗಿದೆ; ಏಷಿಯನ್ ಅಂತಾರಾಷ್ಟ್ರೀಯ ಚಲನಚಿತ್ರೋತ್ಸವಕ್ಕೂ ಆಯ್ಕೆಯಾಗಿದೆ. ೨೦೦೫ರ ಜೂನ್



ಪುಟ್ಟಣ್ಣ ಶೂಟಿಂಗ್ ಮನೆ: ಇನ್ನೊಂದು ಪಾರ್ಶ್ವ

೨೫ರಿಂದ ಜರ್ಮನ್ ಪ್ರವಾಸ ಮಾಡಿದ್ದಾರೆ. ಮ್ಯಾಕ್ಸ್‌ಮೂಲರ್ ವಿ.ವಿ.ದ ಸಂಸ್ಕೃತ ಅಧ್ಯಯನದ ಬಗೆಗೆ ಸಾಕ್ಷ್ಯಚಿತ್ರ ತಯಾರಿಸುವ ಸಲುವಾಗಿ!

ಸಂಕಟ ಬಂದಾಗ ಕೃಷಿ ನೆನಪಾಯಿತು!

ಹೀಗೆ ಎತ್ತರೆತ್ತರಕ್ಕೆ ಬೆಳೆಯುತ್ತ ನಡೆದ ಕೌಶಿಕ್‌ಗೆ ಸಂಕಷ್ಟ ಎದುರಾದದ್ದು ಡಾ.ರಾಜ್ ಅವರನ್ನು ವೀರಪ್ಪನ್ ಸೆರೆ ಹಿಡಿದಾಗ. ಆ ಅವಧಿಯಲ್ಲಿ ಚಿತ್ರೋದ್ಯಮ ಮೂರು-ಮೂರು ತಿಂಗಳು ಸ್ಥಗಿತವಾಗುತ್ತಿತ್ತು. ಇಂಥ *ಅನಿಶ್ಚಿತತೆಗಳು ಸೃಜನಶೀಲರಿಗೂ ಪ್ರತಿಭಾವಂತರಿಗೂ ವರದಾನಗಳಾಗಿಯೇ ಬರುತ್ತವೆ.* ಸಂಪಾದನೆಗಾಗಿ ಮತ್ತಾವುದೇ ಪರ್ಯಾಯ ಮಾರ್ಗವನ್ನು ಹಿಡಿಯಬಹುದಾಗಿದ್ದ ಕೌಶಿಕರ ದೃಷ್ಟಿ ಹೊರಳಿದ್ದು ಮಾತ್ರ *ಕೃಷಿಯ* ಎಡೆಗೆ. ತರುಣ ತರುಣಿಯರಿಗಾಗಿ ನಡೆಯುತ್ತಿದ್ದ ಒಂದು ವಾರ ಅವಧಿಯ 'ವೈಟ್ ಅಪ್ ಟ್ರೈನಿಂಗ್' ಪಡೆದರು. *ಪರಂಪರಾನುಗತವಾದ ಕೃಷಿಯ* ಬಗೆಗಿನ ಅಂಟು ಇದ್ದೇ ಇತ್ತು. ಬೆಂಗಳೂರು ಹೊರವಲಯದಲ್ಲಿ ನಾಲ್ಕು ಎಕರೆ ಜಮೀನು ಪಡೆದರು. ಆ ಜಮೀನು ಒಂದು *ಬೆಂಗಾಡು,* ನೀರು ಸುತರಾಂ ಇರಲಿಲ್ಲ. ಎಲ್ಲರೂ ಆಡಿಕೊಳ್ಳುತ್ತಿದ್ದರು. ಆ ಬೋರೆಯನ್ನು ಬುಲ್‌ಡೋಜರ್ ಹೊಡೆಸಿ ಎಂಟು ಹಂತಗಳಾಗಿ ರೇಖೆ ಮಾಡಿದರು. ಕೊಳವೆ ಬಾವಿ ಹಾಕಿಸಿದರು. ಬಾಳೆ, ಸಪೋಟ, ಸೀಬೆ *ತೋಟ* ಮಾಡಿದರು; ತೆಂಗು, ದಾಳಿಂಬೆ, ನೆಲ್ಲಿ ನೆಡಿಸಿದರು. ತರಕಾರಿ ಬೆಳೆದರು; ಸುತ್ತ ಸಾವಿರ ತೇಗದ ಸಸಿ ನೆಡಿಸಿದರು. 'ಬೆಂಗಳೂರು ಜಿಲ್ಲೆಯಲ್ಲೇ *ಅತ್ಯುತ್ತಮ ತೇಗದ ಬೆಳವಣಿಗೆ'* ಎಂಬ ಪ್ರಶಂಸೆಗೆ ಪಾತ್ರವಾಗುವಂತೆ ಕೃಷಿ ಮಾಡಿದರು; ಕೇವಲ ಒಂದೂವರೆ ವರ್ಷದಲ್ಲಿ ತೇಗ *೨೫* ಅಡಿ ಬೆಳೆದಿತ್ತು. ತಮ್ಮ ಕೃಷಿ ಉತ್ಪನ್ನಗಳಿಗಾಗಿ ಸ್ಥಿರವಾದ ಮಾರುಕಟ್ಟೆಯನ್ನು ಕಂಡುಕೊಂಡರು.

ಪುಟ್ಟಣ್ಣ ಸ್ಟುಡಿಯೋ ತಲೆ ಎತ್ತಿತು

ತೋಟ ಸುಧಾರಿಸಿತು, ಫಲ ಕೊಟ್ಟಿತು, ಆರ್ಥಿಕ ಸುಸ್ಥಿತಿ ಬಂತು. ಆ ತೋಟದಲ್ಲೇ *'ಪುಟ್ಟಣ್ಣ ಸ್ಟುಡಿಯೋ'* ಕಟ್ಟಿದರು. ಗ್ರಾಮೀಣ ಜೀವನದ ಚಿತ್ರೀಕರಣಕ್ಕೆ ಸೂಕ್ತವಾಗುವಂತೆ ಅದನ್ನು ರೂಪಿಸಿದರು; ಮೈಸೂರು ವಲಯ, ಮಲೆನಾಡುವಲಯ ಎರಡರ ಗ್ರಾಮೀಣ ಚಿತ್ರೀಕರಣಕ್ಕೂ ಅದು ಸಜ್ಜಾಯಿತು. ಇಡೀ ಸ್ಟುಡಿಯೋದ ಒಂದೊಂದು ಅಂಗಕ್ಕೂ ಪುಟ್ಟಣ್ಣನವರ ಚಿತ್ರಗಳ ಹೆಸರೇ ಇಟ್ಟು *ಗುರುಗಳ ನಿತ್ಯ ಆರಾಧನೆಯ* ತೃಪ್ತಿಪಟ್ಟರು. ಕೃಷಿ ಮತ್ತು ಸ್ಟುಡಿಯೋ ಎರಡಕ್ಕಾಗಿ ಅವರು ತೊಡಗಿಸಿದ ಹಣದ ಲೆಕ್ಕವನ್ನು ಅವರು ಇಟ್ಟಿಲ್ಲ. 'ಅವೆರಡರಿಂದ ನಿರೀಕ್ಷೆಗಿಂತ ಹೆಚ್ಚು ಪ್ರತಿಫಲ



ಪುಟ್ಟಣ್ಣ ಶೂಟಿಂಗ್ ಮನೆಯ ಸುತ್ತಣ ಹಸಿರು:ಆರ್ಥಿಕತೆಗೂ ಉಸಿರು:ಬೆಂಗಳೂರು

ಬರುತ್ತಿದೆ' ಎನ್ನುವಾಗ ಅವರಲ್ಲಿ ಸಾರ್ಥಕ್ಯಭಾವ ಎದ್ದು ಕಾಣುತ್ತದೆ.

ಕೃಷಿಯ ತಮ್ಮ ಅನುಭವದ ಬಗೆಗೆ ಅವರು ಬರೆದಿಟ್ಟ ಒಂದು ಟಿಪ್ಪಣಿ ಇಲ್ಲಿದೆ:

ಕೃಷಿಕನಾಗಬೇಕೆ? ಇದೋ ಇಲ್ಲಿವೆ ಕೆಲವು ಅಮೂಲ್ಯ ಸಲಹೆಗಳು

* ಯಾವುದೇ ಭೂಮಿಖರೀದಿಗೆ ಮುನ್ನ ನಮಗೆ ಅದರ ಆವಶ್ಯಕತೆ ಇದೆಯೇ ಅಥವಾ ಅದೊಂದು Investmentವೆ ಎಂಬುದು ನಿರ್ಧಾರವಾಗಬೇಕು.

* ಅನುಭವಸ್ಥರ ಮಾತಿನ ಆಧಾರದಂತೆ ಹೆಚ್ಚುವರಿ ಹಣ ಇಲ್ಲದವರು, ಸಾಲ ಸೋಲ ಮಾಡಿ ಕೃಷಿ ಮಾಡುವುದಂತೂ ಸಮಸ್ಯೆಗೆ ಎಡೆ ಮಾಡಿಕೊಡುತ್ತದೆ. ಹಾಗಾಗಿ ಇದರ ನಿರ್ಧಾರ ಅತಿ ಮುಖ್ಯ. (ಶೋಕಿಗಾಗಿ ಕೃಷಿಕರಾಗಬಾರದು)

* ಜಮೀನಿನ ಪತ್ರಗಳು ಸರಿಇವೆಯೇ ಎಂಬುದು ಅತಿ ಮುಖ್ಯ. (Papers should be examined by proper technical people.) ನಂತರ ಜಮೀನಿನ ಹಳ್ಳ, ದಿಣ್ಣೆ, ಬೆಟ್ಟ, ಗುಡ್ಡ, ಬಂಡೆ ಮುಂತಾದ ಅಂಶಗಳು ನಮಗೆ ಒಪ್ಪಿಗೆಯಾಗಬೇಕು. ಖರಾಬು ಜಮೀನು ಎಲ್ಲಿದೆ, ಎಷ್ಟಿದೆ ಮೊದಲೇ ಕೇಳಿ ತಿಳಿಯಬೇಕು ಹಾಗೂ ಅದು ಫಾಣಿಯಲ್ಲಿ ನಮೂದಾಗಬೇಕು. ನಿಮ್ಮ ಹೆಸರಿಗೆ ರಿಜಿಸ್ಟರ್ ಆಗುವಾಗ ಮಾರುವವರ ಮಕ್ಕಳು, ಅಣ್ಣತಮ್ಮಂದಿರು ಹಾಗೂ ಮೊಮ್ಮಕ್ಕಳು ಹಾಜರಿರಬೇಕು. ಯಾವುದೇ ಕಾರಣಕ್ಕೂ SC-STಯವರ ಜಮೀನು ಖರೀದಿಸಬಾರದು. ಅದು ನ್ಯಾಯಾಲಯದಲ್ಲಿ ಅನೂರ್ಜಿತವಾಗುತ್ತದೆ.

* ಹತ್ತಿರದಲ್ಲಿ ಮುಖ್ಯರಸ್ತೆಗೆ ಸಂಪರ್ಕವಿದೆಯೇ ಇಲ್ಲವೇ ಹಾಗೂ ಅದು ನಕಾಶೆಯಲ್ಲಿದೆಯೇ? ಈ ಅಂಶಗಳು ಸ್ಪಷ್ಟವಾಗಬೇಕು. ಅಕ್ಕಪಕ್ಕದ ಜಮೀನಿನ ಒಡೆಯರ, ಕೆಲಸಗಾರರ ನಡೆವಳಿಕೆಯನ್ನು ಸೂಕ್ಷ್ಮವಾಗಿ ಗಮನಿಸಿ ನಿಮಗದು ಒಪ್ಪಿಗೆಯಾಗಬೇಕು.

* ಜಮೀನಿನಲ್ಲಿ ವಿದ್ಯುತ್ ಸರಬರಾಜಿದ್ದರೆ ಒಳಿತು ಇಲ್ಲದಿದ್ದರೆ ಸಮೀಪದ pole ಎಲ್ಲಿದೆ? ಹಾಗೂ ಅಲ್ಲಿಂದ ಈ ಜಮೀನಿಗೆ ವಿದ್ಯುತ್ ತರಲು ಅಕ್ಕಪಕ್ಕದ ಜಮೀನಿನವರ ಆಕ್ಷೇಪಗಳಿವೆಯೇ ಎಂಬುದು ತಿಳಿದುಕೊಳ್ಳಬೇಕು. ಹಾಗೆಯೇ ದೂರವಾಣಿಯ ಬಗ್ಗೆಯೂ ಗಮನಿಸಬೇಕು.

* ಪೊಲೀಸ್ ಇಲಾಖೆಯ ಗೆಳೆಯರಿದ್ದರೆ ಯೂನಿಫಾರಂನಲ್ಲಿ ಒಂದೆರಡು ಬಾರಿ ಜಮೀನಿನ ಅಕ್ಕಪಕ್ಕದ ಮಂದಿಯ ಮುಂದೆ ಓಡಾಡಿಸಬೇಕು.

* ಮಣ್ಣಿನ ಗುಣ ತೋಟಕ್ಕೆ ಸೂಕ್ತವೇ ಹಾಗೂ ಬೋರ್ ತೆಗೆಸಲು ಜಾಗ ಪ್ರಶಸ್ತವೇ ಎಂಬುದೂ ಅತಿ ಮುಖ್ಯ. ಜಮೀನಿನ ಕನಿಷ್ಠ ಮೂರು ಜಾಗಗಳಲ್ಲಿ ಬೋರ್ point ಗುರುತು ಮಾಡಿಸಬೇಕು. ಮುಂದೆ ಒಂದು bore dry ಆದಾಗ ಮತ್ತೊಂದು ಅನುಕೂಲಕ್ಕೆ ಬರುತ್ತದೆ.

* ಜಮೀನಿನ ಯಾವ ಭಾಗದಲ್ಲಿ water tank ಇರಬೇಕೆಂಬುದು ಅತಿ ಮುಖ್ಯ. ಹಾಗೂ ಸ್ವರೂಪ, ಅಳತೆ ಎಲ್ಲವೂ ಸರಿಯಾಗಿ ನಿರ್ಧಾರವಾಗಬೇಕು.

* ಜಮೀನಿನ ಸುತ್ತ ಇರಬೇಕಾದ compound ರೀತಿ ಹೇಗಿರಬೇಕು? ಎಷ್ಟು line ಬೇಲಿ ಎಂಬುದನ್ನು ಮೊದಲೇ ನಿರ್ಧರಿಸಬೇಕು. ಮಳೆಯಿಂದ ಬರುವ ಹೆಚ್ಚುವರಿ ನೀರು ಜಮೀನಿನ ಯಾವ ಯಾವ ಭಾಗದಲ್ಲಿ ಹೇಗೆ ಹರಿಯುತ್ತದೆ ಹಾಗೂ ಅದು ಜಮೀನಿನಿಂದ ಹೊರ ಹೋಗುವ ಸ್ವರೂಪ ಎಲ್ಲಿ? ಹೇಗೆ? ಎಂಬುದರ ನಿರ್ಧಾರವಾದ ನಂತರ ಚರಂಡಿ ವ್ಯವಸ್ಥೆಯಾಗಬೇಕು.

* ನೀರಿನ ಪೂರೈಕೆಯ ಸ್ಥಿತಿ ತಿಳಿದ ನಂತರವೇ ಕೃಷಿಯೇ ಅಥವಾ ತೋಟಗಾರಿಕೆಯೆ ಎಂಬುದರ ನಿರ್ಧಾರವಾಗಬೇಕು.

* ಜಮೀನಿನ ಮಣ್ಣಿನ ಗುಣ ಮತ್ತು ಪರಿಸರಕ್ಕೆ ಯಾವ ಬೆಳೆ ಸೂಕ್ತ ಎಂಬ ನಿರ್ಧಾರ ಅತಿಮುಖ್ಯ.

* ಜಮೀನಿನ ನಡುವೆ ಅಥವಾ edgeನಲ್ಲಿ ರಸ್ತೆಯೇ? ಹಾಗೂ ಬದುಗಳ ನಿರ್ಮಾಣ ಎಷ್ಟು? ಹೇಗೆ? ಎಂಬುದು ನಿರ್ಧಾರವಾಗಬೇಕು. ವಾಸಿಸುವ ಮನೆ ಅಥವಾ watchman shed ಎಲ್ಲಿರಬೇಕೆಂಬುದು ಸೂಕ್ತವಾಗಿ ನಿರ್ಧಾರವಾಗಬೇಕು.

* Cultivationಗೆ ಮುನ್ನ ಸಾಧ್ಯವಾದಷ್ಟು ಜಮೀನನ್ನು spirit levelಗೆ ತರಬೇಕು.

* Water management ಹೇಗೆ ಪ್ರಾರಂಭವಾಗಿ ಹೇಗೆ end ಆಗಬೇಕೆಂಬ ಸರಿಯಾದ ಕಲ್ಪನೆ ಇರಬೇಕು. ನಂತರ ಬೋರ್ ಹಾಕಿಸಿ ನೀರು ಟ್ಯಾಂಕ್‌ನಲ್ಲಿ ಶೇಖರಿಸುವ ಹಂತ ತಲುಪಬೇಕು.

* ಜಮೀನಿನಲ್ಲಿ ಮಳೆ ನೀರು ಹರಿದು ಹೋಗುವ ಹಳ್ಳವಿದ್ದರೆ ಅದಕ್ಕೆ ಚೆಕ್ ಡ್ಯಾಮ್ ಕಟ್ಟಿಸಿದರೆ ವರ್ಷಪೂರ್ತಿ ನೀರಿನ ಪೂರೈಕೆಯಿರುತ್ತದೆ. ಆತುರಪಟ್ಟು ಸ್ವಂತ ಹಣದಿಂದ ನಿರ್ಮಿಸಬೇಡಿ. ಸರಕಾರದ ಯೋಜನೆಗಳಲ್ಲಿ ಹಣದ ಸಹಾಯವಿರುತ್ತದೆ. ಪರಿಶೀಲಿಸಿ ಆನಂತರ ಮುಂದುವರಿಯಿರಿ. (ನಾನು ದುಡುಕಿ ಸಿಗಬಹುದಾದ ಸರಕಾರಿ ಹಣದಿಂದ ವಂಚಿತನಾದೆ.)

* ಭವಿಷ್ಯಕ್ಕೂ ಅನುಕೂಲವಾಗುವಂತೆ ಗೊಬ್ಬರ ಹಾಗೂ ಮೆಕ್ಕೆ ಮಣ್ಣಿನ ಶೇಖರಣೆಗೆ ಹಲವಾರು ಜಾಗಗಳ ನಿರ್ಧಾರವಾಗಬೇಕು. ಹಾಗೂ ಅದು ಸುಲಲಿತವಾಗಿ ಜಮೀನಿನ ಎಲ್ಲ ಭಾಗಗಳಿಗೆ ಕಡಿಮೆ ಅವಧಿ ಮತ್ತು ಕನಿಷ್ಠ labourನಲ್ಲಿ ವಿತರಣೆಯಾಗುವಂತಿರಬೇಕು. ಇವುಗಳ ಖರೀದಿಗೆ ಮುನ್ನ ಅದರ ಗುಣಮಟ್ಟದ ಖಾತರಿಯಾಗಬೇಕು.

* ತೇಗ (ಟೀಕ್) ಹಾಗೂ ಇತರೆ commercial cropಗಳ ಜಾಗ ಹಾಗೂ ಸಂಖ್ಯೆಯ ನಿರ್ಧಾರದ ನಂತರವೇ ಗುಂಡಿ ತೋಡಿಸಬೇಕು.

* ಗುಂಡಿಗಳ ಆಳತೆ ಹಾಗೂ ಅಂತರ ಸರಿಯಾಗಿ ನಿರ್ಧಾರವಾಗಬೇಕು. ಯಾವ ಗಿಡಗಳು ಎಲ್ಲಿ ಎಷ್ಟು ಬರುತ್ತವೆ ಎಂಬುದು ಇದಕ್ಕೆ ಮುಂಚಿತವಾಗಿಯೇ ನಿರ್ಧಾರವಾಗಬೇಕು.

* ಗುಂಡಿ ತೋಡುವ ಮುನ್ನ ಜಮೀನನ್ನು ಎರಡು ಡೈರಕ್ಷನ್‌ಗಳಲ್ಲಿ ಉಳುಮೆ ಮಾಡಿಸಬೇಕು. ಜಮೀನಿನ ಒಳಕ್ಕೆ ಟ್ರ್ಯಾಕ್ಟರ್ ಅಥವಾ ಎತ್ತು ನೇಗಿಲು ಹೋಗಲು ಸರಿಯಾದ plan ಮಾಡಿರಬೇಕು.

* ಒಟ್ಟಾರೆ ಗುಂಡಿಗಳಿಗೆ ಬೇಕಾದ ಗೊಬ್ಬರ ಹಾಗೂ ಕೆಬ್ಬೆ ಮಣ್ಣನ್ನು ಆವಶ್ಯಕತೆಗಿಂತ ಸ್ವಲ್ಪ ಅಧಿಕವಾಗಿ ಸಂಗ್ರಹಿಸಿದ ನಂತರವೇ ಗುಂಡಿಗಳ ನಿರ್ಮಾಣವಾಗಬೇಕು. ಹಾಗೂ ತತ್‌ಕ್ಷಣವೇ Furdon ಅಥವಾ ಇತರೆ ಹುಳು ನಿವಾರಕ ಔಷಧಿ ಪುಡಿ ತುಂಬಿ ನಂತರ ಮತ್ತೊಂದು ತಂಡ ಗುಂಡಿಯನ್ನು ಗೊಬ್ಬರ ಮತ್ತು ಮಣ್ಣಿನಿಂದ ಮುಚ್ಚುವ ಕ್ರಿಯೆಯನ್ನು ಮುಗಿಸಬೇಕು. ಗುಂಡಿ ಬಹಳ ದಿನ ಖಾಲಿ ಬಿಟ್ಟರೆ ಮಳೆ ಬಂದು ಮತ್ತೆ ಮಣ್ಣು ಕಲ್ಲು ಸೇರುವ ಸಾಧ್ಯತೆ ಇದೆ. ತದನಂತರ double work ಆಗುತ್ತದೆ.

* ಗೊಬ್ಬರ, ಮಣ್ಣು ತುಂಬಿದ ಗುಂಡಿಗಳು ಸಿದ್ಧವಾಗುವವರೆಗೆ ಸಸಿಗಳನ್ನು ತರಬಾರದು. ಸಸಿಗಳನ್ನು ತಂದ ನಂತರ ಆದಷ್ಟು ಬೇಗ ಸಸಿನೆಟ್ಟು ನೀರು ಹಾಯಿಸುವ ಕ್ರಿಯೆ ಪ್ರಾರಂಭಿಸಬೇಕು.

* ಜಮೀನು ಖರೀದಿಸುವ ಮುನ್ನ ಪರಿಚಯದ ಅಥವಾ ಅಪರಿಚಿತರ ಇತರೆ ಜಮೀನು ಅಥವಾ Farm houseಗಳಿಗೆ ಹೋಗಿ ಮುಂದೆ ಬರಬಹುದಾದ ಸಮಸ್ಯೆಗಳ ಬಗ್ಗೆ ಪ್ರಶ್ನೋತ್ತರ ಕಾರ್ಯಕ್ರಮ ನಡೆಸಬೇಕು.

* Last but not least, ಕೃಷಿಯೊಂದನ್ನೇ ನಂಬಿ ಜೀವನ ನಡೆಸುವುದು ಅಷ್ಟು ಸೂಕ್ತವಲ್ಲ. ಪರ್ಯಾಯ ಸಂಪಾದನೆ ಅತಿಮುಖ್ಯ.

೦.೩) ಹಿತ್ತಲ ತೋಟ,ಮೈಸೂರು

(ಸಂಕೇತಿಗಳ ಹಿತ್ತಲ ತೋಟಗಳು ಅವರು ನಗರವಾಸಕ್ಕೆ ಹೊಂದಿಕೊಳ್ಳುತ್ತಿರುವ ವಿವಿಧ ಮಜಲುಗಳಿಗೆ ಹೊಂದಿಕೊಂಡು ಬದಲಾವಣೆ ಕಂಡಿವೆ.)



ಸುಂದರವಾದ ಮನೆಯ ಆವರಣದಲ್ಲಿ ತಲೆ ಎತ್ತಿದ ತೆಂಗು, ಕಂಗು

ಮನೆಯ ಹಿಂದೆ

ತಮಿಳುನಾಡಿನ 'ಹಿತ್ತಲತೋಟ'ದ ಸಂಪ್ರದಾಯ ಕರ್ನಾಟಕದಲ್ಲಿಯೂ ಮುಂದುವರಿದಿದೆ. ಅಲ್ಲೂ ತೆಂಗು, ಅಡಿಕೆ, ವೀಳೆ, ಬಾಳೆ, ಸೀಬೆ, ಪರಂಗಿ, ಮಾವು, ಕರಿಬೇವು, ಹಲಸು, ದಾಳಿಂಬೆ, ಹೂವಿನಗಿಡಗಳು, ತರಕಾರಿ ಗಿಡಗಳು ಇರುತ್ತವೆ. ತಿಪ್ಪೆ ಮತ್ತು ಹುಲ್ಲಿನಮೆದೆ ಅದರ ಹೆಚ್ಚಿನ ಅಂಶ; ಜತೆಗೆ ಸೇದುವ ಬಾವಿ. ಈ ಹಿತ್ತಲ ತೋಟದಲ್ಲೂ ಗಂಡಸರು ದುಡಿಯುತ್ತಾರೆ. ಆದರೆ ಇಲ್ಲಿ *ಹೆಂಗಸರ ಕಾಣಿಕೆ ಹೆಚ್ಚಿನದು.* ಹಳ್ಳಿಗಳಲ್ಲಿ ಈ ಹಿತ್ತಲತೋಟ ಸಾಮಾನ್ಯವಾಗಿ *ಮನೆಯ ಹಿಂದೆ* ಇರುತ್ತದೆ; ಸಾಕಷ್ಟು ವಿಶಾಲವಾಗಿಯೂ ಇರುತ್ತದೆ. ಅಲ್ಲಿ ದನ ಕಟ್ಟುವುದು, ಬೆರಣಿ ತಟ್ಟುವುದು, ಸೌದೆ ಜೋಡಿಸುವುದು ಇತ್ಯಾದಿಗಳಿಗೂ ಜಾಗವಾಗುತ್ತದೆ.

ಮನೆಯ ಮುಂದೆ

ಪಟ್ಟಣಗಳಲ್ಲಿ ಮನೆಯ *ಮುಂದೆ ಒಂದು ಪುಟ್ಟ ಕೈತೋಟವಿರುವುದು ವಾಡಿಕೆ.* ಅದರಲ್ಲಿ ಹೂವಿನ ಗಿಡಗಳು, ಅಲಂಕಾರದ ಬಳ್ಳಿ ಗಿಡ ಮರಗಳು ಇರುವುದು ಸಾಮಾನ್ಯವಾದ ಸಾರ್ವತ್ರಿಕ ರೀತಿ. ಸಂಕೇತಿಗಳು ಪಟ್ಟಣಗಳಲ್ಲೂ ಈ ಕೈ ತೋಟವನ್ನು ಇಟ್ಟುಕೊಂಡಿರುವ ರೀತಿ ಹಳ್ಳಿಯ ಹಿತ್ತಲ ತೋಟದ ರೀತಿಗಿಂತ ಭಿನ್ನವಾದುದಲ್ಲ. ಅವರ ಕೈತೋಟದ ವಿಶಿಷ್ಟತೆಯನ್ನು ಸ್ಪಷ್ಟಪಡಿಸಲು ಕೊಡವರ ಹೋಲಿಕೆ ನೀಡಬಹುದು. ಕೊಡವರು ಮಲೆನಾಡಿನಲ್ಲಿರುವವರು, ಕಾಡಿನ ನಡುವೆ ವಾಸಿಸುವವರು, ವಿಶಾಲವಾದ ಕಾಫಿ ತೋಟ ಮಾಡಿರುವಂಥವರು. ಆದರೆ ನಗರಗಳಲ್ಲಿನ ಅವರ ಮನೆಯ ಕೈತೋಟ ಒಂದು ಸುಂದರ ಉಪವನವಾಗಿರುತ್ತದೆ. ಕೊಡಗಿನಲ್ಲಿಯೇ ಇರುವ ಅವರ ಮನೆಯ ಮುಂದೆಯೂ ಇಂಥದೇ ಉಪವನ ಇರುವುದೇ ಅವರ ರೀತಿ. ಆದರೆ ಸಂಕೇತಿಗಳು ನಗರಗಳ ತಮ್ಮ ಕೈತೋಟ ದಲ್ಲೂ ಅಡಿಕೆ, ವೀಳೆ, ತೆಂಗು, ಕರಿಬೇವು, ದಾಳಿಂಬೆ... ಹೀಗೆ ಗಿಡಗಳನ್ನು ಬೆಳೆಸುತ್ತಾರೆ. ಅವೇನೂ *ಆಧುನಿಕ ರೀತಿಯ ಒಪ್ಪ ಓರಣಕ್ಕೆ ಹೊಂದಿಕೊಳ್ಳುವುದಿಲ್ಲ.*



ಸೊಂಪಾಗಿ ಬೆಳೆಸಿದ ಹಂಬು:ರಾಮಚಂದ್ರಯ್ಯ, ಮೈಸೂರು



ಪುಟ್ಟ ಮನೆಯ ಕಿರಿದಾದ ಓಣಿಯನ್ನು ಆಕ್ರಮಿಸಿದ ತೆಂಗು, ಕಂಗು



ಮುಗಿಲೆತ್ತರ ಬೆಳೆದ ಅಡಿಕೆ ಮರಗಳು



ತಮ್ಮ ಮನೆಯ ಮುಂದೆ ನಿಂತ ರಾಮಚಂದ್ರಯ್ಯನವರು : ಮೈಸೂರು : ಕಿರು ಅಡಿಕೆ ತೋಟ, ಹಂಬು

ಬೆಳೆಯುವ ತುಡಿತ, ಹಂಚುವ ಆಸೆ

ಉದಾಹರಣೆಗೆ ಮೈಸೂರಿನಲ್ಲಿ ನೆಲೆಸಿರುವ ಹಳ್ಳಿಮೈಸೂರು ಮೂಲದ ಅಧ್ಯಾಪಕ ರಾಮಚಂದ್ರಯ್ಯ ನವರ ಮನೆಯ ನಿವೇಶನದ ಅಳತೆ ೪೦' x ೫೦'. ಅದರಲ್ಲಿ ಆರೂವರೆ ಚದುರದಲ್ಲಿ ಮನೆ ಕಟ್ಟಿಕೊಂಡಿದ್ದಾರೆ. ಉಳಿದಂತೆ *ನಾಲ್ಕು ತೆಂಗು ಇಪ್ಪತ್ತು ಅಡಿಕೆ ಗಿಡ* ಬೆಳೆಸಿದ್ದಾರೆ. ಅಷ್ಟಕ್ಕೂ *ಹಂಬು* ಕಟ್ಟಿದ್ದಾರೆ. ಆದರೆ ಯಾವುದನ್ನೂ ಮಾರುವ ಸಂಪ್ರದಾಯವಿಲ್ಲ. ಮನೆಗಾಗಿ ಮಿಕ್ಕ ಫಸಲನ್ನು *ದೇವಸ್ಥಾನ*ಗಳಿಗೋ ಕೆಲಸದವರಿಗೋ ವಿತರಿಸುತ್ತಾರೆ. ಮೈಸೂರಿನಲ್ಲಿಯೇ ಮನೆಕಟ್ಟಿ ವಾಸಿಸಿದ ಚಿಲಕುಂದ ಮೂಲದ ಪ್ರಾಧ್ಯಾಪಕ ಚಿ.ನ.ಕೇಶವಮೂರ್ತಿ ಅವರು ತಮ್ಮ ಮನೆಯ ಸುತ್ತ ಬಿಟ್ಟಿದ್ದ ಮೂರು ಅಡಿ ಜಾಗದಲ್ಲಿಯೇ ಒಂದು ಅಡಿಕೆ-ವೀಳೆ-ಬಾಳೆ-ತೆಂಗಿನ ತೋಟ ಬೆಳೆಸಿದ್ದರು.



ಖ್ಯಾತ ಪುರೋಹಿತ ವೇ||ಬ್ರ||ಶ್ರೀ ವೆಂಕಟಕೃಷ್ಣಾವಧಾನಿಗಳ ಮನೆ:ಬೆಂಗಳೂರು

ಸಾಂಕೇತಿಕತೆಯ ಮಜಲು

ಇದು ಮೊದಲ ತಲೆಮಾರಿನ ಹಳೆಯ ವಲಸಿಗರ ರೀತಿಯಾದರೆ, ಅನಂತರದ ಪೀಳಿಗೆಯವರು ಮನೆಯ ಮುಂದೆ ಕೊನೆಯಪಕ್ಷ ಒಂದೆರಡು ಅಡಿಕೆ ಸಸಿ ನೆಡುವುದರ ಮೂಲಕ ತಮ್ಮ ಅಡಿಕೆ ಕೃಷಿಯ ಪರಂಪರೆಯನ್ನು *ಸಾಂಕೇತಿಕವಾಗಿ* ಉಳಿಸಿಕೊಂಡರು. ಇತ್ತೀಚಿನ ದಿನಗಳಲ್ಲಿ ಸೊಗಸಾದ ಅತ್ಯಾಧುನಿಕ ಉಪವನಗಳನ್ನು ನಿರ್ಮಿಸಿಕೊಂಡವರ ನಿದರ್ಶನಗಳು ಹೆಚ್ಚುತ್ತಿವೆ.



ಖ್ಯಾತ ಗಮಕಿ ಬಿ.ಎಸ್.ಎಸ್.ಕೌಶಿಕ್ ತಮ್ಮ ಮಗಳ ಮನೆಯ ಮುಂದೆ:ಹಾಸನ

೦.೪) ಆರೋಗ್ಯವನ, ಬೆಂಗಳೂರು

(ನಗರಕೃಷಿಯ ಹಲವು ಆಯಾಮಗಳಲ್ಲಿ ಏಕಸೂತ್ರದಂತೆ ಕಾಣುವುದು ಜನಪರ ಕಾಳಜಿ, ಲೋಕಸಮ್ಮುಖತೆ. ತನ್ನ ಇಡೀ ಜೀವಿತವನ್ನು ಸಾರ್ವಜನಿಕ ಆರೋಗ್ಯಕೇಂದ್ರದ ನಿರ್ಮಾಣಕ್ಕಾಗಿ ಸವೆಸಿದ ಸಮಾಜಸೇವಕಿಯೊಬ್ಬರ ಕಥೆ ಇಲ್ಲಿದೆ.)

ಆಗ ಅದೊಂದು ಕಗ್ಗಾಡು

'ದೇವರಗುಡ್ಡ' ಎಂಬುದು ಬೆಂಗಳೂರು ನಗರದಲ್ಲಿದೆ. ಅದು ಈಗಿನ ಪದ್ಮನಾಭನಗರದ ನಡುವೆ ಇದೆ. ಅದರ ವಿಸ್ತೀರ್ಣ ಒಂದೂವರೆ ಎಕರೆ. ಅದು ಬಂಡೆಗಳಿಂದ ತುಂಬಿತ್ತು, ಹಳ್ಳಗಳೂ ಅದರಲ್ಲಿದ್ದುವು; ಅದರ ಏರುಪೇರಿನ ಮೇಲ್ಮೈ ಕಾರೆಗುತ್ತಿಗಳಿಂದ ಕೂಡಿತ್ತು. ಒಟ್ಟಿನಲ್ಲಿ ೨೨ ವರ್ಷಗಳ ಹಿಂದೆ ಅದೊಂದು *ಕಗ್ಗಾಡು*. ಯಾರೂ ಆ ಕಡೆ ಸುಳಿಯುತ್ತಿರಲಿಲ್ಲ. ಅನಾಥ ಹೆಣಗಳೋ ಕೊಲೆಯಾದ ಹೆಣಗಳೋ ಬೀಳುವ ಜಾಗವೂ ಅದಾಗಿತ್ತು. ಪದ್ಮನಾಭನಗರ ಎಂಬುದು ಆಗ ಇನ್ನೂ ರೂಪುಗೊಂಡಿರಲಿಲ್ಲ.



ದೇವರಗುಡ್ಡ: ಶ್ರೀ ಲಕ್ಷ್ಮೀಕಾಂತಸ್ವಾಮಿ ದೇವಾಲಯ:ಬೆಂಗಳೂರು

ಗುಡ್ಡದಲ್ಲೊಂದು ದೇವಾಲಯ

ಅಂಥ ಗುಡ್ಡದ ಹತ್ತಿರ ೧೯೮೦ರಲ್ಲಿ ಮನೆ ಕಟ್ಟಿಕೊಂಡು ಒಂದು ಸಂಸಾರ ನೆಲೆಗೊಂಡಿತು. ಅದರ ಯಜಮಾನರು ನಿವೃತ್ತ ಕನ್ನಡ ಪಂಡಿತರಾದ ಲಕ್ಷ್ಮೀಕಾಂತಯ್ಯನವರು. ಅವರ ಮನೆ ದೇವರು ದೇವನೂರಿನ ಶ್ರೀಲಕ್ಷ್ಮೀಕಾಂತ. ಲಕ್ಷ್ಮೀಕಾಂತಯ್ಯನವರು ಮಹಾ ಧಾರ್ಮಿಕರು, ಎರಡು ಬಾರಿ ಲಕ್ಷ ಗಾಯತ್ರಿ ಜಪ ಮಾಡಿ ಹೋಮ ಮಾಡಿದವರು. ಆ ನಿವೃತ್ತ ಪ್ರಾಥಮಿಕ ಶಾಲಾ ಅಧ್ಯಾಪಕರಿಗೆ ಆ ಗುಡ್ಡದಲ್ಲೊಂದು ದೇವಾಲಯವನ್ನೇಕೆ ನಿರ್ಮಿಸಬಾರದು ಎನಿಸಿತು. ಕೇವಲ ಎರಡು ವರ್ಷಗಳಲ್ಲಿ, ಅಂದರೆ ೧೯೮೩ರಲ್ಲಿ ಅಲ್ಲಿ *ಶ್ರೀಲಕ್ಷ್ಮೀಕಾಂತಸ್ವಾಮಿಯ ದೇವಾಲಯವನ್ನು* ಕಟ್ಟಿ ತಮ್ಮ ಜೀವನದ ಆಸೆಯನ್ನು ಪೂರೈಸಿಕೊಂಡರು.



ದೇವಸ್ಥಾನದ ಸುತ್ತ ಶ್ರೀ ಲಕ್ಷ್ಮೀಕಾಂತ ಆರೋಗ್ಯವನ: ಡಾ.ಎಂ.ಎಲ್.ಲಲಿತಮ್ಮನವರ ಸಾಧನೆ: ದೇವರಗುಡ್ಡ:ಬೆಂಗಳೂರು

ಹೂತೋಟದ ನಿರ್ಮಾಣ

ಲಕ್ಷ್ಮೀಕಾಂತಯ್ಯನವರು ಹಾಸನ ಜಿಲ್ಲೆಯ 'ಮೊಸಳೆ' ಗ್ರಾಮದವರು. ಅವರು ಅಲ್ಲೊಂದು *ಅಡಿಕೆ ತೋಟವನ್ನು* ರೂಢಿಸಿದ್ದರು. ಬೆಂಗಳೂರಿಗೆ ಬಂದರೂ ಆ ಕೃಷಿಯ ವಾಸನೆ ಹೋಗಿರಲಿಲ್ಲ. ದೇವಾಲಯದ ಸುತ್ತ ಇದ್ದ ಕಲ್ಲು ಮುಳ್ಳುಗಳನ್ನು ತೆಗೆದು ಸ್ವಚ್ಛ ಮಾಡುವುದೇನೂ ಸಾಧಾರಣ ಕೆಲಸವಾಗಿರಲಿಲ್ಲ. ಆ ವೃದ್ಧರು ಏಕಾಕಿಯಾಗಿ ಅದನ್ನು ಮಾಡಿದರು. ಆಗ ಆ ಬಡಾವಣೆಯಲ್ಲಿ ಎಲ್ಲೋ ದೂರದೂರದಲ್ಲಿ ಒಂದೊಂದು ಮನೆ



ಅಶ್ವತ್ಥ ಕಟ್ಟೆಯು ಆರೋಗ್ಯವನದ ಭಾಗವೂ ಹೌದು:ಬೆಂಗಳೂರು

ಏಳತೊಡಗಿತ್ತು. ಇವರ ಮನೆಯೂ ದೇವಸ್ಥಾನದಿಂದ ಸುಮಾರು ಒಂದು ಫರ್ಲಾಂಗು ದೂರದಲ್ಲಿತ್ತು. ದೇವಸ್ಥಾನದ ಸುತ್ತ ವೃದ್ಧ ಲಕ್ಷ್ಮೀಕಾಂತಯ್ಯನವರು ಸ್ವಚ್ಛ ಮಾಡಿ *ಗಿಡಗಳನ್ನು ನೆಟ್ಟರು.* ಅವರ ಪತ್ನಿ ವೃದ್ಧೆ ಸುಬ್ಬಲಕ್ಷ್ಮಮ್ಮನವರು ಮನೆಯಿಂದ ನೀರು ಹೊತ್ತು ತಂದು ಗಿಡಗಳಿಗೆ ಹಾಕಿ ಅವನ್ನು ಉಳಿಸಿ ಬೆಳೆಸಿದರು.

ಆರೋಗ್ಯವನದ ಕನಸು

ಲಕ್ಷ್ಮೀಕಾಂತಯ್ಯನವರೂ ಸುಬ್ಬಲಕ್ಷ್ಮಮ್ಮನವರೂ ದೇವಸ್ಥಾನಕ್ಕೆ ಬೇಕಾದ ಹೂವು ಬೆಳೆದಿದ್ದರು, ಅಲ್ಲೊಂದು ಪುಟ್ಟ ತೋಟ ಬೆಳೆಸಿದ್ದರು. ಆದರೆ ಇಡೀ ಒಂದೂವರೆ ಎಕರೆಯ ಅಷ್ಟಾವಕ್ರ ಗುಡ್ಡವನ್ನು ಸುಂದರವಾದ ಆರೋಗ್ಯವನವನ್ನಾಗಿ ಪರಿವರ್ತಿಸಿದರೆ ಹೇಗೆ ಎನಿಸಿತು ಅವರ ಮಗಳು ಡಾ.ಲಲಿತಮ್ಮನವರಿಗೆ. ಅವರು ಒಬ್ಬ ಬಹುಮುಖ ಪ್ರತಿಭೆಯ ಸಾಧನಾ ಜೀವಿ. ಅವರಿಗೆ *ತಾವು ರೂಪಿಸಬೇಕಾದ ವನದ ಬಗೆಗೆ ತಮ್ಮ ವೇ ಆದ ಭವ್ಯ ಕನಸುಗಳಿದ್ದವು.* ಅಂತಾರಾಷ್ಟ್ರೀಯ ಪರಿಸರ ವಿಜ್ಞಾನಿ ಡಾ.ಎಲ್ಲಪ್ಪ ರೆಡ್ಡಿ ಅವರ ಸಲಹೆಯನ್ನೂ ಪಡೆದರು. ಅವರ ನೆರವಿನೊಂದಿಗೆ ಉದ್ಯಾನವನದ ನೀಲ ನಕ್ಷೆಯನ್ನು ಸಿದ್ಧಪಡಿಸಿದರು.

ವನ ಸಮುಚ್ಚಯದಲ್ಲಿ ಆರೋಗ್ಯ ಮತ್ತು ಧರ್ಮ

ಎಂಟು-ಹತ್ತು ಅಡಿ ಆಳದವರೆಗೆ ಬೇರು ಬಿಟ್ಟ ಕಾರೆಮುಳ್ಳಿನ ಕಾಡನ್ನು ಮೂಲೋತ್ಪಾಟನೆ ಮಾಡಿದರು. ಆ ಗಿಡದ ಬೇರುಗಳು ಕೊರಡಿನಂತಿದ್ದುವೆಂದರೆ ಅದಕ್ಕಾಗಿ ಪಟ್ಟ ಪರಿಪಾಟಲನ್ನು ಊಹಿಸಬಹುದು. ಸುತ್ತಣ ನೆಲದ ಮಟ್ಟದಿಂದ ಗುಡ್ಡವನ್ನು ಪ್ರತ್ಯೇಕಿಸಿ ಐದು ಅಡಿಗೆ ಈಡು ಕಟ್ಟಿಸಿದರು. *೩೦೦೦ ಲಾರಿ ಮಣ್ಣು* ಹೇರಿಸಿ ಅದರಲ್ಲಿದ್ದ ಹಳ್ಳಗಳನ್ನು ಮುಚ್ಚಿದರು. *ಇಡೀ ಗುಡ್ಡವನ್ನೇ ಮೂರು-ಐದು ಅಡಿ ಎತ್ತರಿಸಿದಂತಾಗಿತ್ತು.* ೧೫ ಅಡಿ ಎತ್ತರಕ್ಕೆ ಮತ್ತೊಂದು *ಈಡು* ಕಟ್ಟಿಸಿದರು. ಗುಡ್ಡದ ಸುತ್ತ ಬೇಲಿ ಎಬ್ಬಿಸಿದರು. ಒಳಗೆ *ಕದಂಬವನ, ವಿಷ್ಣು ಪಂಚಾಯತನವನ* (ಶ್ವೇತ ಅಶ್ವತ್ಥವನ), *ವಾಸವನ, ಬಿಲ್ವವನ, ಪುಷ್ಪವನ, ಮೂಲಿಕಾವನ, ಪವಿತ್ರ ಪಂಚವಟಿ*-ಹೀಗೆ ವಿವಿಧ ವನಗಳನ್ನು ರೂಪಿಸಿ ಪ್ರತ್ಯೇಕವಾಗಿ ಬೇಲಿ ಕಟ್ಟಿಸಿದರು. ಸಂಪಿಗೆ, ಅಶ್ವತ್ಥ, ಅಶೋಕ, ಆಲ, ಗೋಣಿ, ಶಾಲ್ಮಲಿ, ಸುರಹೊನ್ನೆ, ಸುರಗಿ, ಔದುಂಬರ, ಶಮಿ, ಚಂಪಕ, ಖದಿರ ಮೊದಲಾದ ನೂರಾರು ಜಾತಿಯ ಗಿಡಗಳನ್ನು ನೆಟ್ಟರು; ಸಾವಿರಾರು ಗಿಡಗಳ ಉದ್ಯಾನ ನಿರ್ಮಿಸಿದರು. *ಆರೋಗ್ಯ ಮತ್ತು ಧಾರ್ಮಿಕತೆಗೆ ಪೂರಕವಾಗುವ ಗಿಡಗಳು* ಎಷ್ಟೇ ಅಪರೂಪದವಾದರೂ, ದುಬಾರಿಯವಾದರೂ ತಂದು ನೆಟ್ಟರು. *ನೇಪಾಳ, ಕಲ್ಕತ್ತ, ಊಟಿ*-ಹೀಗೆ ಇಡೀ ಭಾರತದ ನಾನಾ ಭಾಗಗಳಿಂದ ವಿಶಿಷ್ಟ ಗಿಡಗಳನ್ನು ತಂದರು.



ಪಂಚವಟಿಯಾಗಿ ಬೆಳೆಯಿತು ಆರೋಗ್ಯವನ : ಬೆಂಗಳೂರು

ಗುಡ್ಡದಿಂದ ನೀರು ಜಾರಿ ಹೋಗದಂತೆ ಹಂತಗಳಲ್ಲಿ ಹತ್ತಾರು *ಇಂಗು ಕಾಲುವೆ*ಗಳನ್ನು ಆಯಕಟ್ಟಿನ ಜಾಗಗಳಲ್ಲಿ ತೋಡಿಸಿದರು.



ದುಬಾರಿಯಾದ ಅಪರೂಪದ ಗಿಡಮೂಲಿಕೆಗಳಿಗೂ ಆಶ್ರಯ ನೀಡಿತು
ಆರೋಗ್ಯವನ:ಬೆಂಗಳೂರು

ಆರೋಗ್ಯಕ್ಕೆ ನಾಲ್ಕು ಆಯಾಮ

ಎಲ್ಲಿ ತಿರುಗಾಡಿದರೂ ಔಷಧಯುಕ್ತ ಗಿಡಮೂಲಿಕೆ ಗಳು; ಸುವಾಸನೆಯ ಸಸ್ಯಗಳು; ಸುಂದರ ಪುಷ್ಪ ಪತ್ರೆಗಳು ಕಂಗೊಳಿಸುವಂತೆ ಮಾಡಿದರು. ಈಗ ಬೆಳೆದಿರುವ ಪದ್ಮನಾಭನಗರದ ನಾಗರಿಕರು ನಿಯತವಾಗಿ *ವಾಯುವಿಹಾರ* ಮಾಡಲು ಅನುಕೂಲವಾಯಿತು. ಅದಕ್ಕಾಗಿ *ಸಂಚಲನ ಪಥ* ನಿರ್ಮಿಸಿದರು. ದಾರಿಯಲ್ಲಿನ ಕಲ್ಲುಹಾಸುಗಳು *ಅಕ್ಯುಪ್ರೆಷರ್* ಉಂಟು ಮಾಡಿ ಆ ಮೂಲಕ ಫಿಸಿಯೋಥೆರಪಿ ಆಗುವಂತೆ ಮಾಡಿದರು. ಆ ಉದ್ಯಾನ ಒಂದು *ಸಮುದಾಯ ಆರೋಗ್ಯ ಕೇಂದ್ರ*ವಾಯಿತು. ರೋಗನಿರೋಧಕ ಶಕ್ತಿ ಹೆಚ್ಚುವ ಪರಿಸರ ಉಂಟಾ ಯಿತು. World Health Organisationನ ನಾಲ್ಕು ಆಯಾಮದ ಆರೋಗ್ಯ ಕಾರ್ಯಕ್ರಮಗಳ ತಾಣ ಅದಾಯಿತು: *ದೈಹಿಕ ಮತ್ತು ಮಾನಸಿಕ* ಆರೋಗ್ಯಕ್ಕೆ ತೋಟ; *ಸಾಮಾಜಿಕ* ಆರೋಗ್ಯಕ್ಕೆ ಸಾಂಸ್ಕೃತಿಕ ಕಾರ್ಯಕ್ರಮ; *ಆಧ್ಯಾತ್ಮಿಕತೆಗೆ* ದೈವಸನ್ನಿಧಿ. ಎಲ್ಲೂ ಸಿಮೆಂಟು ಬಳಸದೆ ರೂಪಿಸಿದ ವನವು ನೈಸರ್ಗಿಕ ಪರಿಸರವನ್ನು ಕಾಪಾಡಿಕೊಂಡು ಮೇಲೆದ್ದಿತು.



ಸುವಾಸನೆಯ ಔಷಧಿ ಸಸ್ಯಗಳ ನಡುವೆ ವಾಯುವಿಹಾರಕ್ಕೂ ಅನುಕೂಲ :
ಆರೋಗ್ಯವನ : ಬೆಂಗಳೂರು

ದೃಢ ತಪಸ್ಸು

ಇದೆಲ್ಲಾ ಒಂದು ದಿನದ ಸಾಧನೆಯಲ್ಲ, ಒಂದು *ಜೀವಿತದ ತಪಸ್ಸು*. ಇದು ಕೇವಲ ಹವ್ಯಾಸಕ್ಕಾಗಿ ಮಾಡಿದ ಕೆಲಸವಲ್ಲ, ರಾಷ್ಟ್ರಕ್ಕೆ ಅರ್ಪಣೆ ಮಾಡಲೆಂದು ಮಾಡಿದ ಹಲವು ದಶಕಗಳ ಯೋಜನೆ. ಇದಕ್ಕಾಗಿ ಆದ ವೆಚ್ಚ ಹದಿನೈದು ಲಕ್ಷಕ್ಕೂ ಹೆಚ್ಚು; ಅದನ್ನು ಭರಿಸಿದವರು ಒಬ್ಬರೇ ವ್ಯಕ್ತಿ- ಡಾ.ಲಲಿತಮ್ಮನವರು. ಇದು ತ್ಯಾಗ, ಇದು ಸೇವೆ, ಇಲ್ಲಿರುವುದು ಸಾಮಾಜಿಕಪ್ರಜ್ಞೆ, ಶ್ರಮ, ಕಷ್ಟ, ನಷ್ಟ; ಆದರೆ ಉದ್ದಕ್ಕೂ ದನಗಳನ್ನು ತಡೆದು ಗಿಡಗಳನ್ನು ಕಾಪಾಡುವುದು ಅತ್ತ ಇರಲಿ, ರಾಜಕೀಯ ಒತ್ತಡ ಮತ್ತು ದುಷ್ಟರ ಉಪಟಳಗಳ ವಿರುದ್ಧ ಹೋರಾಡುತ್ತಲೇ ಸಮುದಾಯದ ಸ್ವಾಸ್ಥ್ಯಕ್ಕಾಗಿ ಡಾ.ಲಲಿತಮ್ಮ ಈ *ಆರೋಗ್ಯ ವನ*ವನ್ನು ನಿರ್ಮಾಣ ಮಾಡಿದ್ದಾರೆ.



ಔಷಧಯುಕ್ತ ಬೇಲಿ : ದೇವರಗುಡ್ಡ : ಬೆಂಗಳೂರು



ಐಹಿಕ ಆಧ್ಯಾತ್ಮಿಕದ ಸಂಗಮ :
ದೇವರಗುಡ್ಡ : ಬೆಂಗಳೂರು



ಭಕ್ತರಿಗೆ ದೈಹಿಕ ಮಾನಸಿಕ ಆರಾಮತಾಣ :
ದೇವರಗುಡ್ಡ, ಬೆಂಗಳೂರು



ಅಧ್ಯಯನಾಸಕ್ತರಿಗೂ ಕುತೂಹಲದ ತಾಣ
ದೇವರಗುಡ್ಡ, ಬೆಂಗಳೂರು

೧.೫) ಅಲಂಕಾರದ ಉದ್ಯಾನ, ಬೆಂಗಳೂರು

(ನಗರಗಳನ್ನು ಸೇರಿದವರ ಕೈತೋಟದ ಕಲ್ಪನೆಯ ವಿಕಾಸವೂ ಸಂಕೇತಿಗಳ ಚಲನಶೀಲತೆಗೆ ನಿದರ್ಶನವಾಗಿದೆ. ಈ ಕ್ಷೇತ್ರದಲ್ಲಿ ಅತ್ಯಾಧುನಿಕತೆಯ ಬೆನ್ನು ಹತ್ತಿದವರ ಪ್ರತಿನಿಧಿ ಶ್ರೀ ಎನ್. ಸುಬ್ಬರಾವ್)



ಎನ್.ಸುಬ್ಬರಾವ್ ಅವರ ಮನೆಯ ಮುಂದಣ ದೃಶ್ಯ:ಬೆಂಗಳೂರು

ಆಧುನಿಕ ಪರಿಕಲ್ಪನೆಯ ವಿಕಾಸ

ಹಳ್ಳಿಗಳಲ್ಲಿ ಜೀವನೋಪಾಯಕ್ಕಾಗಿ ಗಿಡಗಳನ್ನು ಬೆಳೆಸಿ ತೋಟ ಮಾಡಿದ ಸಂಕೇತಿಗಳು ಹಿತ್ತಲಿನಲ್ಲೂ ಅಂಥದೊಂದು ತೋಟ ಮಾಡಿ *ಉಪಜೀವನಕ್ಕೆ* ದಾರಿ ಮಾಡಿಕೊಂಡರು. ಪಟ್ಟಣ ಸೇರಿದ ಮೊದಮೊದಲ ತಲೆಮಾರಿನವರು ತಮ್ಮ ಮನೆಯ ಸುತ್ತ ಅಂಥದೇ ಸಸ್ಯಸಮೂಹ ಬೆಳೆಸಿಕೊಂಡರು. ಜೀವನೋಪಾಯಕ್ಕಾಗಿ ಅದನ್ನೇ ನಂಬಬೇಕಾಗಿಲ್ಲದವರೂ ಉಪವನವನ್ನು ಮಾಡಲಿಲ್ಲ, ಬದಲಿಗೆ ಅನೂಚಾನವಾದ ತೋಟಗಾರಿಕೆಯನ್ನು ಅಲ್ಪಪ್ರಮಾಣದಲ್ಲಾದರೂ ಮುಂದುವರಿಸಿ ತಮ್ಮ *ಪಾರಂಪರಿಕತೆಯ ಅಭಿಮಾನವನ್ನು* ಕಾಪಾಡಿಕೊಂಡರು. ಅನಂತರ ಬಂದ ಪೀಳಿಗೆಯವರು ಮನೆಯ ಮುಂದೆ ಒಂದೆರಡು ಅಡಿಕೆ ಗಿಡಗಳನ್ನು ಬೆಳೆಸಿ ಅದರಲ್ಲಿ *ಧನ್ಯತೆ* ಕಂಡರು. *ಕುಂಡಗಳೂ ಜಾಗ ಮಾಡಿಕೊಂಡವು.* ಸಂಕೇತಿಗಳು ಭಾರತದ ನಾನಾ ನಗರಗಳಲ್ಲಿ ಹರಡಿಕೊಂಡರು, ಜಗತ್ತನ್ನೆಲ್ಲ ಸುತ್ತಿಕೊಂಡು ಬಂದರು, ಆರ್ಥಿಕವಾಗಿಯೂ ಅನೇಕರು ಸುಸ್ಥಿಗೆ ಬಂದರು, ಜತೆಗೆ ಕೈವನದ *ಆಧುನಿಕ ಪರಿಕಲ್ಪನೆಗಳನ್ನು* ಮೈಗೂಡಿಸಿಕೊಂಡರು, ಸುಂದರ ಉಪವನಗಳನ್ನು ನಿರ್ಮಿಸಿಕೊಂಡರು.

ಲತೆವನೆಯ ಸುತ್ತ ಸಸ್ಯಕಾಶಿ

ಹೀಗೆ ಮನೆಯ ಸುತ್ತ ಸುಂದರ ಉದ್ಯಾನವನ್ನು ನಿರ್ಮಿಸಿಕೊಂಡ *ಪೀಳಿಗೆಯ ಪ್ರತಿನಿಧಿಯಾಗಿ* ಬೆಂಗಳೂರಿನ ಶ್ರೀ ಎನ್.ಸುಬ್ಬರಾವ್ ಅವರನ್ನು ಸಂದರ್ಶಿಸಲಾಯಿತು.'ಮೈಸೂರು ಮನೆ' ನಾರಾಯಣರಾವ್ ಅವರ ಮಗ ಎನ್.ಸುಬ್ಬರಾವ್ ದೇಶದ ಹಲವೆಡೆ ಉನ್ನತ ಹುದ್ದೆಗಳನ್ನಲಂಕರಿಸಿ ನೌಕರಿ ಮಾಡಿದವರು. ಅವರ ಮಗ ಎಸ್.ನಾರಾಯಣರಾವ್ (+ ಸಿಂಧು) ಅಮೆರಿಕದಲ್ಲಿದ್ದಾರೆ. ಮಗಳು ಡಾ.ಭಾವನಾ (+ ರವಿಕುಮಾರ್) ಆಸ್ಟ್ರೇಲಿಯದಲ್ಲಿದ್ದರು. ಈಗ ಯು.ಎಸ್.ಎ. ನಲ್ಲಿದ್ದಾರೆ. ಸುಬ್ಬರಾವ್ ಅವರಿಗೆ ದೊರೆತ ಈ



ತಮ್ಮ ನೆಚ್ಚಿನ ಕೈತೋಟದಲ್ಲಿ ನಿಂತ ಎನ್.ಸುಬ್ಬರಾವ್ : ಬೆಂಗಳೂರು



ಮನೆಯ ಮೇಲಿಂದ ನೋಡಿ ಮುದಗೊಳ್ಳುವ ಚಿಣ್ಣ : ಕೈವನ : ಬೆಂಗಳೂರು

ವಿಸ್ತೃತ ಪರಿವೇಷದ ಫಲವಾಗಿ ಕನಸೊಡೆದು ನನಸಾಗಿ ಮೂಡಿದ್ದು ಅವರು ಕಟ್ಟಿರುವ ಮನೆ. ಹೊರಗೆ ಕಲ್ಲು ಮತ್ತು ಒಳ ಪದರಕ್ಕೆ ಸ್ಯಾಂಡ್‌ವಿಚ್ ಲಗತ್ತಿಸಿ ಕಟ್ಟಿದ ಗೋಡೆ; ಆರ್ಚ್ ರೂಫ್; ಕಾಂಪೌಂಡಿಗೂ ಆರ್ಚು; ಸುತ್ತಲೂ *ತೋಟಕ್ಕಾಗಿಯೇ ಬಿಟ್ಟುಕೊಂಡ ೧೪೦೦ ಚದರಡಿಯ ಖಾಲಿ ಜಾಗ* - ಇದು ಅವರ ಮನೆಯ ಸ್ವರೂಪ. ಈ ಖಾಲಿ ಜಾಗದಲ್ಲಿ ಬೆಳೆಸಿದ ಉದ್ಯಾನದ ನಡುವೆ ಮಾಲಿಗಾಗಿಯೇ ಕಟ್ಟಿದ ಒಂದು ಪುಟ್ಟ ಮನೆ ಇದೆ. ಅದನ್ನು ಕಲ್ಲಿನಲ್ಲಿಯೇ ಕಟ್ಟಿದೆ. ಕಲ್ಲೊತ್ತು ಗಿಡವನ್ನು ಅದಕ್ಕೆ ಹಬ್ಬಿಸಲಾಗಿದೆ. ಅದು ಎಷ್ಟು ಸುಂದರವಾಗಿ, ಸಮಾನವಾಗಿ ಗೋಡೆಯನ್ನು ಆವರಿಸಿದೆ ಎಂದರೆ ಅದೊಂದು *ಲತೆವಸೆಯೇ* ಆಗಿದೆ. ಆ ಉದ್ಯಾನದಲ್ಲಿ ಮೆಕ್ಸಿಕನ್ ಲಾನ್, ಅಮೆರಿಕದ ಕಿತ್ತಲೆ, ಊಟಿಯ ವಿವಿಧ ವರ್ಣದ ಹೂಗಿಡಗಳು, ಎಲ್ಲ ಬಗೆಯ ಮಲ್ಲಿಗೆ, ೧೮ ಜಾತಿಯ ದಾಸವಾಳ... ಹೀಗೆ *ಸಸ್ಯವೈವಿಧ್ಯವೇ* ಇದೆ. ಅಲ್ಲಿರುವ ಒಂದು ಹೂವಿನ ಗಿಡಕ್ಕಾಗಿಯೇ ಅವರು ಕೊಟ್ಟಿದ್ದು ೩೦೦೦ ರೂಪಾಯಿ ಎಂದರೆ *ಗಿಡದ ಬಗೆಗಿನ ಅವರ ಹುಚ್ಚು* ಎಂಥದು ಎಂದು ಅರ್ಥವಾಗಬಹುದು. ಕಾಂಪೌಂಡಿನ ಮೇಲೆಯೇ ಗಿಡಗಳನ್ನು ಬೆಳೆಸಲು ಮಾಡಿಕೊಂಡಿರುವ ವ್ಯವಸ್ಥೆ, ಮ್ಯಾಗ್ನೋಲಿಯಾ ಸೈಕರ್ ಫೈಕಸ್‌ಗಳ ಸೊಂಪು, ಕಾಂಪೌಂಡಿನ ಆಚೆ ಕೂಡ ನಗರದ ಸೌಂದರ್ಯವನ್ನು ಹೆಚ್ಚಿಸುವಂತೆ ಬೆಳೆಸಿದ ಎಲ್ಲೋ ಡ್ಯುರಾಂಟಾ... ಇವುಗಳ *ವೈವಿಧ್ಯಪೂರ್ಣ ಸೊಬಗು* ಎಂಥವರೂ ನಿಂತು ನೋಡುವಂತೆ ಮಾಡುತ್ತದೆ.

ಬೆಳೆದ ಕನಸು-ನನಸು

ಮನೆಯ ಸುತ್ತ ಬೆಳೆಸಿರುವ ಈ ಗಿಡಬಳ್ಳಿಗಳು ಧೂಳನ್ನು ತಡೆದಿವೆ, ಮನೆಯನ್ನು ತಂಪಾಗಿ ಇಟ್ಟಿವೆ, ಆಮ್ಲಜನಕದ ಊಟೆಗಳಾಗಿವೆ. ಇನ್ನೂ *ದೊಡ್ಡ ತೋಟವನ್ನು ಬೆಳೆಸುವ ಕನಸನ್ನು ಸಾಕಾರಮಾಡಿಕೊಳ್ಳಲೆಂದೇ* ಪ್ರತಿಷ್ಠಿತ ಕರಿಷ್ಮಾ ಹಿಲ್ಸ್ ಬಡಾವಣೆಯಲ್ಲಿ ದೊಡ್ಡದೊಂದು ನಿವೇಶನವನ್ನು ಕೊಂಡಿದ್ದಾರೆ ಶ್ರೀ ಎನ್.ಸುಬ್ಬರಾವ್. ಈಗ ಮನೆಯನ್ನೂ ಕಟ್ಟಿದ್ದಾರೆ.



ಆಧುನಿಕ ಪರಿಕಲ್ಪನೆಯ ಕೈವನ : ಎನ್.ಸುಬ್ಬರಾವ್ : ಬೆಂಗಳೂರು



ಅಪರೂಪದ ಗಿಡಗಳಿಗೆ ತಾಣ ಈ ಕೈವನ : ಎನ್.ಸುಬ್ಬರಾವ್ : ಬೆಂಗಳೂರು



ಮಾಲಿಗಾಗಿ ನಿರ್ಮಿಸಿದ ಎಲೆಮನೆಯ ಪಕ್ಕದಲ್ಲಿ ಎನ್.ಸುಬ್ಬರಾವ್ : ಬೆಂಗಳೂರು

೨೨. ತಂತ್ರ-ವಿಜ್ಞಾನ ವಾಹಿನಿ

ಕೆಲವು ತಾಂತ್ರಿಕ, ವೈಜ್ಞಾನಿಕ ಲೇಖನಗಳು ಲೇ-ಕನ್ನಡಿಗರು

ನಾಲ್ಕನೆಯ ಅಕ್ಕ ವಿಶ್ವಕನ್ನಡ ಸಮ್ಮೇಳನ: ೨೦೦೬, ಪ್ರಮು.೨೦೦೬ ಸಂ: ಡಾ.ಎಂ.ಎಸ್.ನಟರಾಜ

ಜೈವಿಕ ಅಥವಾ ಸಾಂಪ್ರದಾಯಿಕ ಕೃಷಿ: ಒಂದು ಇನ್ನೊಂದಕ್ಕಿಂತ ಉತ್ತಮವೆ?

ಕೃಷ್ಣ ಸುಬ್ಬರಾವ್ (ಕನ್ನಡಕ್ಕೆ: ರವಿ ಕೃಷ್ಣ ರೆಡ್ಡಿ)

(ಈಗ ಭಾರತದಲ್ಲಿಯೂ ಪ್ರಜ್ಞಾವಂತರನ್ನು ಆಕರ್ಷಿಸಿರುವುದು ಜೈವಿಕ ಆಹಾರ. ಜೈವಿಕ ಆಹಾರದ ಸಾಧಕ ಬಾಧಕಗಳನ್ನು ಕುರಿತು ಶ್ರೇಷ್ಠ ಕೃಷಿವಿಜ್ಞಾನಿಯೊಬ್ಬರು ಏನು ಹೇಳುತ್ತಾರೆ ಎಂಬ ಕುತೂಹಲವನ್ನು ತಣಿಸುವುದಕ್ಕಾಗಿ ಈ ಲೇಖನವನ್ನು ಕೊಟ್ಟಿದೆ. ಲೇಖಕರಾದ ಕೃಷ್ಣ ಸುಬ್ಬರಾವ್ ಮೂಲತಃ ಮೈಸೂರು ಜಿಲ್ಲೆಯ ಪಿರಿಯಾಪಟ್ಟಣದವರು. ಈಗ ಕ್ಯಾಲಿಫೋರ್ನಿಯಾದಲ್ಲಿ ನೆಲೆಸಿದ್ದಾರೆ; ಅಲ್ಲಿನ ಸಂಕೇತಿ ಕೂಟವಾದ 'ಪಶ್ಚಿಮವಾಹಿನಿ'ಯ ಸದಸ್ಯರಾಗಿದ್ದಾರೆ.)

ಕಳೆದ ೧೦ ವರ್ಷಗಳಲ್ಲಿ ನಾವೆಲ್ಲರೂ ಅಮೇರಿಕದ ದಿನಸಿ ಅಂಗಡಿಗಳಲ್ಲಿ ಸಮಯಕ್ಕೆ ತಕ್ಕ ಹಾಗೆ ಅನೇಕ ಬದಲಾವಣೆಗಳನ್ನು ಗಮನಿಸಿದ್ದೇವೆ. ಈ ಲೆಕ್ಕವಿಲ್ಲದಷ್ಟು ಬದಲಾವಣೆಗಳಲ್ಲಿ ಎಲ್ಲಕ್ಕಿಂತ ಹೆಚ್ಚು ಗಮನ ಸೆಳೆದದ್ದು ಯಾವುದೆಂದರೆ "ಜೈವಿಕ ಆಹಾರ" (organic food) ಎಂದು ವಿಶೇಷವಾಗಿ ವಿಭಾಗಿಸಲ್ಪಟ್ಟ ಫುಡ್ ಶೆಲ್ಫುಗಳು. ಜೈವಿಕ ಆಹಾರ ಎಂದರೆ ನಿಜವಾಗಲೂ ಏನು, ಅದು ಇತರ ಸಾಂಪ್ರದಾಯಿಕ ಆಹಾರಗಳಿಗಿಂತ ಹೇಗೆ ಭಿನ್ನ, ಕೆಲವು ಉತ್ಪಾದಕರು ಮತ್ತು ಗ್ರಾಹಕರು ಹೇಳುವಂತೆ ಹೆಚ್ಚು ಪೌಷ್ಟಿಕಾಂಶಗಳನ್ನು ಹೊಂದಿರುವ ಉತ್ತಮವಾದ ಆಹಾರವೇ, ಮತ್ತು ಸಾಮಾನ್ಯವಾಗಿ ಅದಕ್ಕೆ ನೀಡಬೇಕಾದ ತುಟ್ಟಿ ಬೆಲೆಗೆ ಅದು ನಿಜವಾಗಲೂ ಯೋಗ್ಯವೇ ಎಂದೆಲ್ಲ ನಾವು ಯೋಚಿಸಿರಬಹುದು. ಜೈವಿಕ ಮತ್ತು ಸಾಂಪ್ರದಾಯಿಕ ಆಹಾರಗಳ ನಡುವಿನ ತಾಂತ್ರಿಕ ವಿವರಗಳಿಗೆ ಹೋಗದೆ, ಲಭ್ಯವಿರುವ ಸಂಶೋಧನೆಗಳ ಆಧಾರದ ಮೇಲೆ ಈ ಕೆಲವು ಪ್ರಶ್ನೆಗಳಿಗೆ ಉತ್ತರಿಸಲು ಯತ್ನಿಸುತ್ತೇನೆ.

ಪಾಶ್ಚಾತ್ಯ ಸಮಾಜದಲ್ಲಿ ಈ ಮುಂಚೆ ಯಾವುದು ಕೇವಲ health food ಅಂಗಡಿಗಳಿಗೆ, ರೈತಮಾರುಕಟ್ಟೆಗಳಿಗೆ, ಅಥವ ಸಹಕಾರಿ ಆಹಾರ ಸಂಸ್ಥೆಗಳಿಗೆ ಮೀಸಲಾಗಿತ್ತೋ ಅದು ಈಗ ಮುಖ್ಯವಾಹಿನಿಗೆ ಬಂದಿದೆ. ಸಂಯುಕ್ತ ಸಂಸ್ಥಾನಗಳ ಕೃಷಿ ಇಲಾಖೆಯ (USDA) ಪ್ರಕಾರ, ವಾರ್ಷಿಕ ೧೦ ಶತಕೋಟಿ ಡಾಲರ್‌ಗಳಷ್ಟಿರುವ ಜೈವಿಕ ಆಹಾರ ಮಾರಾಟದಲ್ಲಿ, ಅರ್ಧಕ್ಕೂ ಹೆಚ್ಚನ್ನು ಸಾಂಪ್ರದಾಯಿಕ ಸೂಪರ್‌ಮಾರ್ಕೆಟ್‌ಗಳಲ್ಲಿ ಕೊಳ್ಳಲಾಗಿದೆ. ಕಳೆದ ಹತ್ತು ವರ್ಷಗಳಲ್ಲಿ ವಾರ್ಷಿಕ ೨೦% ಹೆಚ್ಚುವರಿ ಅಭಿವೃದ್ಧಿ ಕಂಡ ಈ ಜೈವಿಕ ಆಹಾರದ ಗೀಳಿಗೆ ಪಾಶ್ಚಾತ್ಯ ಪ್ರಪಂಚ ಏಕಿಷ್ಟು ತರಾತುರಿಯಲ್ಲಿ ಎಚ್ಚರಗೊಂಡಿತು? ಈ ಅಂಕಿ-ಅಂಶಗಳು ಜೈವಿಕ ಆಹಾರ ಪದ್ಧತಿ ಮುಂದಕ್ಕೂ ಇರುತ್ತದೆ ಎನ್ನುವುದನ್ನು ತೋರಿಸುತ್ತದಷ್ಟೆ. ಅಷ್ಟೇ ಅಲ್ಲದೆ, ಈ ಗೀಳು ಕೇವಲ "ತಿಂಗಳ ರುಚಿ" ತರಹದ ತಾತ್ಕಾಲಿಕ ಸಂಗತಿಯಾಗಲಿ, ಅಥವ ಖಯಾಲಿ ಆಗಲಿ ಅಲ್ಲ ಎನ್ನುವುದನ್ನೂ ತೋರಿಸುತ್ತದೆ. ಆದರೆ ಇದಕ್ಕೆಲ್ಲ ವಿರುದ್ಧವಾಗಿ ಎಂಬಂತೆ, ಅಭಿವೃದ್ಧಿಶೀಲ ದೇಶಗಳಲ್ಲಿನ ಬಹುಪಾಲು ಆಹಾರೋತ್ಪಾದನೆ ಜೈವಿಕವಾದದ್ದು. ಆದಾಗ್ಯೂ, ಆ ಭಾಗಗಳಲ್ಲಿ, ಜೈವಿಕ ಆಹಾರದ ವಿಪುಲ ಮಾರುಕಟ್ಟೆಯ ಸಾಮರ್ಥ್ಯದ ಬಗ್ಗೆಯಾಗಲಿ ಅದರ ಉಪಯೋಗಗಳ ಬಗ್ಗೆಯಾಗಲಿ ಅಷ್ಟೊಂದು ತಿಳುವಳಿಕೆಯಿಲ್ಲ. ವಿರೋಧಾಭಾಸವಾಗಿ ಅಭಿವೃದ್ಧಿಶೀಲ ದೇಶಗಳಲ್ಲಿನ ಆಹಾರ ಉತ್ಪಾದನೆ ಸಾಮಾನ್ಯವಾಗಿ ಕಮ್ಮಿ ದಕ್ಷತೆಯುಳ್ಳದ್ದು ಎಂದು ಪರಿಗಣಿಸಲಾಗಿದ್ದು, ಅಲ್ಲಿಯ ರೈತರು ಹೆಚ್ಚು ದಕ್ಷರಾಗಲು ಪಾಶ್ಚಾತ್ಯರ ವಾಣಿಜ್ಯ ಕೃಷಿಯನ್ನು ಮೇಲ್ಪಂಕ್ತಿಯಾಗಿ ಅನುಸರಿಸಲು ಯತ್ನಿಸುತ್ತಿದ್ದಾರೆ.

ಜೈವಿಕ ಆಹಾರವನ್ನು ಪ್ರಯೋಗಾಧಾರಿತ ಮಾಪನಗಳಿಂದ ವಿವರಿಸುವುದು ಅಷ್ಟೇನೂ ಸುಲಭವಲ್ಲ. ಕಳೆದ ೫೦ ವರ್ಷಗಳಲ್ಲಿನ ಬಹುಪಾಲು ಕೃಷಿ ಸಂಶೋಧನೆಗಳು ಹೆಚ್ಚು ರಾಸಾಯನಿಕ ಗೊಬ್ಬರಗಳನ್ನು ಬಳಸಿ ಬೆಳೆಸುವ ಕೃಷಿಯ ಬಗ್ಗೆ ಮತ್ತು ಆಧುನಿಕ ಆಹಾರ ಸಂಸ್ಕರಣೆಯ ಬಗ್ಗೆ ಕೇಂದ್ರೀಕೃತವಾದ ಒಂದೇ ಕಾರಣಕ್ಕಾಗಿ, ಸಾಂಪ್ರದಾಯಿಕ ಕೃಷಿಯಲ್ಲಿ ಸುಲಭವಾಗಿ ಗೋಚರವಾಗದ ಹಾನಿಕಾರಕ ಪರಿಣಾಮಗಳ

ಬಗ್ಗೆ ಬಹಳ ಕಮ್ಮಿ ಸಂಶೋಧನೆಗಳು ನಡೆದಿವೆ. ಜೈವಿಕ ಆಹಾರದ ಆರಂಭದ ಗ್ರಾಹಕರು ಅದನ್ನು ರಾಸಾಯನಿಕ ರಹಿತವಾಗಿರುವುದಕ್ಕಾಗಿ, ತಾಜಾ ಇರುವುದಕ್ಕಾಗಿ, ಅಥವ ಕನಿಷ್ಠ ಪ್ರಮಾಣದಲ್ಲಿ ಸಂಸ್ಕರಿತವಾಗಿರುವುದಕ್ಕಾಗಿ ಕೊಳ್ಳುತ್ತಿದ್ದಾರೆ. ಮೊದಲಿಗೆಲ್ಲ ಜೈವಿಕ ಆಹಾರ ಎಂದರೆ ತಾಜಾ ಆದ ತರಕಾರಿಗಳು ಮಾತ್ರ ಆಗಿದ್ದರೂ ಕಾಲಕ್ರಮೇಣ ಹಣ್ಣು, ಮಾಂಸ, ಮತ್ತಿತರ ರೀತಿಯ ಆಹಾರಗಳನ್ನೂ ಒಳಗೊಂಡಿತು. ಜೈವಿಕ ಆಹಾರಕ್ಕೆ ಅನೇಕ ತರಹದ ವಿವರಣೆಗಳಿವೆ. ಅದರ ಬಗ್ಗೆ ದೇಶಗಳ ನಡುವಿನ ಅಳತೆಗೋಲುಗಳಲ್ಲಿ ಚೂರುಪಾರು ಏರುಪೇರಿದ್ದರೂ, "ಜೈವಿಕ ಆಹಾರ" ಎಂದರೆ, ಯಾವ ಆಹಾರ ಕೃತಕ ಗೊಬ್ಬರಗಳಿಲ್ಲದೆ, ರಾಸಾಯನಿಕ ಕೀಟನಾಶಕಗಳನ್ನು ಬಳಸಿರದೆ, ಹಾರ್ಮೋನ್ ಮತ್ತು ಆಂಟಿಬಯಾಟಿಕ್ಸ್‌ನಂತಹ ವೃದ್ಧಿ-ಉತ್ತೇಜನಕಾರಕಗಳನ್ನು ಬಳಸದೆ ಉತ್ಪಾದಿಸಿದ ಆಹಾರ ಎಂದು. ಜೈವಿಕ ಆಹಾರವನ್ನಾಗಿ ಬೆಳೆಸಿದ ಪ್ರಾಣಿಗಳಿಗೆ ರೋಗನಿರೋಧಕ ವ್ಯಾಕ್ಸಿನ್‌ಗಳನ್ನು ಬಳಸಬಹುದಾದರೂ ಪಶುಔಷಧಗಳನ್ನು ರೋಗನಿವಾರಣೆಯಂತಹ ಅನಿವಾರ್ಯ ಸಂದರ್ಭಗಳಲ್ಲಿ ಬಿಟ್ಟರೆ ಮಿಕ್ಕೆಲ್ಲ ಸಮಯದಲ್ಲಿ ಬಳಸುವ ಹಾಗಿಲ್ಲ. ಹಾಗೇನಾದರೂ ಬಳಸಿದಲ್ಲಿ ಅಂತಹ ಮಾಂಸವನ್ನು ಬಳಕೆಯಿಂದ ಅಥವ ಆಹಾರ ಪ್ರಮಾಣೀಕರಣದಿಂದ ಹಿಂತೆಗೆದುಕೊಳ್ಳಬೇಕಾಗುತ್ತದೆ. ಹಾನಿಕಾರಕ ಸೂಕ್ಷ್ಮಜೀವಿಗಳ ಸಾಧ್ಯತೆಯನ್ನು ತಪ್ಪಿಸಲು ಜೈವಿಕ ಉತ್ಪಾದನೆಯಲ್ಲಿ ಗೊಬ್ಬರದ ತಾಜಾ ಮಿಶ್ರಣದ ಅವಶ್ಯಕತೆ ಸಹ ಇರುತ್ತದೆ. ಪ್ರಾಣಿಗಳನ್ನು ಸ್ವತಂತ್ರವಾದ ವಾತಾವರಣದಲ್ಲಿ (ಪಂಜರ, ಗೂಡು ಅಥವ ಕೊಟ್ಟಿಗೆಯಲ್ಲಿ ಕೂಡಿ ಹಾಕದೆ) ಬೆಳೆಸಲಾಗುತ್ತದೆ ಮತ್ತು ಅವಕ್ಕೆ ಕೊಡುವ ಆಹಾರ ಸೂಕ್ತವಾದ ಜೈವಿಕ ಗುಣಮಟ್ಟದ್ದಾಗಿರುತ್ತದೆ. ಉದಾಹರಣೆಗೆ, ಮಾರ್ಪಡಿಸಿದ ಪಶು ಪ್ರೋಟೀನ್ ಅನ್ನು (ಬ್ರಿಟನ್‌ನಲ್ಲಿನ ಹುಚ್ಚು-ಹಸು ರೋಗಕ್ಕೆ ಕಾರಣ ಎಂದು ನಂಬಲಾದ) ಆಹಾರವಾಗಿ ಬಳಸುವುದು ಸಾಮಾನ್ಯವಾಗಿ ನಿಷಿದ್ಧ. ಹಾನಿಕಾರಕ ಬ್ಯಾಕ್ಟೀರಿಯಾಗಳನ್ನು ಕೊಲ್ಲಲು ಪ್ರಖರ ಬೆಳಕನ್ನು ಪ್ರಯೋಗಿಸುವುದಾಗಲಿ, ವರ್ಣತಂತು ಮಾರ್ಪಡಿಸಲಾದ ಬೆಳೆ ಅಥವ ಪ್ರಾಣಿಗಳ ಬಳಕೆಯಾಗಲಿ ನಿಷಿದ್ಧ. ಜೈವಿಕ ಆಹಾರದ ಉತ್ಪಾದನೆಯಲ್ಲಿ ಬಳಸಬಹುದಾದ ಸಾಮಗ್ರಿಗಳು ಮತ್ತು ವಿಧಾನಗಳು ಸಂಕೀರ್ಣವಾದವುವಾಗಿದ್ದು ಪಶುಸಂಗೋಪನೆಯ ನಿರ್ದಿಷ್ಟ ಮಾಪನಗಳನ್ನೂ, ಮಂಜೂರಾದ ಸಂಸ್ಕರಣಾ ವಿಧಾನಗಳನ್ನೂ ಒಳಗೊಂಡಿದೆ.

ಸಾಮಾನ್ಯವಾಗಿ ಸಾಂಪ್ರದಾಯಿಕ ಆಹಾರಕ್ಕಿಂತ ಜೈವಿಕ ಆಹಾರ ಹೆಚ್ಚು ತುಟ್ಟಿ - ಏಕೆ?

ಜೈವಿಕ ಅಥವ ಸಾವಯವ ಕೃಷಿಯಲ್ಲಿ ಉತ್ಪಾದನಾ ಇಳುವರಿ ಸಾಮಾನ್ಯವಾಗಿ ಕಮ್ಮಿ, ಆದರೆ ಯಾವಾಗಲೂ ಅಲ್ಲ. ಏಕೆಂದರೆ, ಸಾವಯವ ಕೃಷಿಯಲ್ಲಿ ರಾಸಾಯನಿಕ ಗೊಬ್ಬರ, ಕೀಟನಾಶಕ, ಮತ್ತಿತರ ಹೆಚ್ಚು ಬೆಲೆಯ ಹೂಡುವಳಿಗಳ ಬಳಕೆ ಇರುವುದಿಲ್ಲ. ಇವುಗಳ ನಿರ್ಬಳಕೆ ಸಹಜವಾಗಿ ಹೆಚ್ಚು ಮಾನವಶ್ರಮವನ್ನು ಬಯಸುತ್ತದೆ. ಜೈವಿಕ ಕೃಷಿ ಹೊಲಗಳು ಸಾಂಪ್ರದಾಯಿಕ ಕೃಷಿ ಹೊಲಗಳಿಗಿಂತ ಗಾತ್ರದಲ್ಲಿ ಚಿಕ್ಕವಿದ್ದು ತತ್ಪರಿಣಾಮವಾಗಿ ಆರ್ಥಿಕವಾಗಿ ಗಾತ್ರದಿಂದ ಬರುವ ಲಾಭಗಳನ್ನು ಕಳೆದುಕೊಳ್ಳುತ್ತವೆ. ಆದರೆ, ಬಂಡವಾಳ ಹೂಡುವಳಿ ಕಮ್ಮಿಯಿರುವ ಕಾರಣ ಜೈವಿಕ ಕೃಷಿ ವಲಯದ ಲಾಭಾಂಶ ಹೆಚ್ಚು. ಇಷ್ಟೇ ಅಲ್ಲದೆ, ಕಮ್ಮಿ ಬೆಲೆಯ ಆದರೆ ಶುದ್ಧವಾದ ಸಾಂಪ್ರದಾಯಿಕ ಆಹಾರದ ರೂಢಿಯಾಗಿಸಿಕೊಂಡ ಗ್ರಾಹಕರು ಜೈವಿಕ ಆಹಾರ ಹೆಚ್ಚು ರುಚಿಕರ, ಹೆಚ್ಚು ಪೋಷಕಾಂಶಗಳನ್ನು ಹೊಂದಿದೆ ಮತ್ತು ಸಾಂಪ್ರದಾಯಿಕ ಆಹಾರಕ್ಕಿಂತ ಸುರಕ್ಷಿತವಾದದ್ದು ಎಂಬ ನಂಬಿಕೆಯಲ್ಲಿ ಸ್ವಲ್ಪ ಹೆಚ್ಚು ಬೆಲೆಯನ್ನು ಕೊಡಲು ಸಿದ್ಧರಾಗಿರುತ್ತಾರೆ. ಅಂತಿಮವಾಗಿ, ಗ್ರಾಹಕರ ಒಂದು ಗುಂಪು ಜೈವಿಕ ಆಹಾರದ ಉತ್ಪಾದನೆ ಪರಿಸರಕ್ಕೆ ಮತ್ತು ಅದರ ಉತ್ಪಾದಕರಿಗೆ ಕಡಿಮೆ ಹಾನಿಕಾರಕ ಎಂದು ಅತಿಶ್ರದ್ಧೆಯಿಂದ ನಂಬುತ್ತಾರೆ. ಈ ನಂಬಿಕೆಗಳು ಜೈವಿಕ ಆಹಾರ ಉದ್ಯಮದ ಬೆಳವಣಿಗೆಗೆ ಪೋಷಕವಾಗಿವೆ ಮತ್ತು ಅದರ ಗ್ರಾಹಕರು ಸ್ವಇಚ್ಛೆಯಿಂದ ಹೆಚ್ಚು ಬೆಲೆ ತೆರುವಂತೆ ಮಾಡಿವೆ. ಆದರೂ, ಸಾಂಪ್ರದಾಯಿಕ ಉತ್ಪಾದನೆಗೆ ಅನುಗುಣವಾಗಿ ಜೈವಿಕ ಆಹಾರ ಉತ್ಪಾದನೆಯ ಅನುಪಾತ ಹೆಚ್ಚಾದಂತೆ, ಹೆಚ್ಚು ಬೆಲೆ ಕೊಡಲು ಸಿದ್ಧರಾಗಿರುವ ಗ್ರಾಹಕರ ಮನಸ್ಥಿತಿ ಹಾಗೆಯೇ ಉಳಿಯುತ್ತದೆಯೆ ಎನ್ನುವುದನ್ನು ಕಾದು ನೋಡಬೇಕು.

ಜೈವಿಕ ಆಹಾರ ಸಾಂಪ್ರದಾಯಿಕ ಆಹಾರಕ್ಕಿಂತ ಹೆಚ್ಚು ಪೌಷ್ಟಿಕವಾದದ್ದೆ?

ಕೆಲವೊಂದು ಗ್ರಾಹಕ ಸಮೀಕ್ಷೆಗಳು ಜೈವಿಕ ಆಹಾರದ ಪರವಾಗಿ ಹೆಚ್ಚು ಸ್ಥಿರವಾದ ಅಭಿಪ್ರಾಯಗಳನ್ನು ಬಯಲುಮಾಡಿದ್ದರೂ ಸಂಶೋಧನೆಗಳು ಅಂತಹ ನಿರ್ದಿಷ್ಟವಾದ ಭಿನ್ನತೆಗಳೇನನ್ನೂ ಹೊರಹಾಕಿಲ್ಲ. ಆದರೂ, ಕೆಲವು ಅಧ್ಯಯನಗಳು ಜೈವಿಕ ಆಹಾರ ಹೆಚ್ಚಿನ ಪ್ರಮಾಣದ ವಿಟಮಿನ್-ಸಿ, ಕಬ್ಬಿಣಾಂಶ, ಮತ್ತು ಮ್ಯಾಗ್ನೇಸಿಯಮ್‌ಗಳನ್ನು ಮತ್ತು ಕಮ್ಮಿ ಪ್ರಮಾಣದ ಹಾನಿಕಾರಕ ನೈಟ್ರೇಟ್‌ಗಳನ್ನು ಹೊಂದಿರುವುದನ್ನು ತೋರಿಸಿವೆ. ಜೈವಿಕ ಉತ್ಪಾದನೆಗಳು ಕಮ್ಮಿ ನೀರಿನ ಪ್ರಮಾಣ ಹೊಂದಿದ್ದು, ಪರಿಣಾಮವಾಗಿ ಸಾಂಪ್ರದಾಯಿಕ ಉತ್ಪಾದನೆಗಿಂತ ಹೆಚ್ಚು ಖನಿಜಾಂಶ ಹೊಂದಿರುವ ಸಾಧ್ಯತೆಗಳಿವೆ. ನಮ್ಮ ಆರೋಗ್ಯ ಮತ್ತು ಶಕ್ತಿಯ ಪೋಷಣೆಗೆ ಅತ್ಯವಶ್ಯವಾದ ಆ್ಯಂಟಿ-ಆಕ್ಸಿಡಂಟ್ಸ್ ಜೈವಿಕ

ಆಹಾರದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಕಂಡುಬಂದಿದೆ. ಇದಕ್ಕೆ ಜೈವಿಕ ತಂತ್ರಗಳಿಂದ ಬೆಳೆಸಲ್ಪಟ್ಟ ಸಸ್ಯಗಳು ಕೀಟಗಳಿಂದ ತಮ್ಮನ್ನು ರಕ್ಷಿಸಿಕೊಳ್ಳಲು ನೈಸರ್ಗಿಕವಾಗಿ ಉತ್ಪಾದಿಸುವ ಆ್ಯಂಟಿ-ಆಕ್ಸಿಡಂಟ್ಸ್‌ಗಳೇ ಕಾರಣ ಇರಬಹುದು. ಇನ್ನೂ ಹೊರಬರುತ್ತಿರುವ ಮಾಹಿತಿಗಳು ಜೈವಿಕ ಆಹಾರದಲ್ಲಿ ಕೆಲವು ಪೌಷ್ಟಿಕಾಂಶಗಳು ಹೆಚ್ಚಿನ ಮಟ್ಟದಲ್ಲಿರುವುದನ್ನು ತೋರಿಸುತ್ತಿದ್ದರೂ ಅದರಿಂದ ಮನುಷ್ಯನ ಆರೋಗ್ಯ ವೃದ್ಧಿಯಾಗುತ್ತದೆ ಎನ್ನುವುದು ಇನ್ನೂ ಸಾಬೀತಾಗಿಲ್ಲ. ಬಹಳಷ್ಟು ಪೌಷ್ಟಿಕಾಂಶದ ಸಲಹೆಗಾರರು, ನಮ್ಮ ದೇಹಕ್ಕೆ ಬೇಕಾದ ಪೌಷ್ಟಿಕಾಂಶಗಳಿಗಾಗಿ, ಅದು ಜೈವಿಕವಾಗಲಿ ಬೇರೆಯದೇ ಆಗಲಿ, ಸಮಪ್ರಮಾಣದ ಆಹಾರ ಸೇವನೆಯನ್ನು ಸೂಚಿಸುತ್ತಾರೆ. ಎಲ್ಲಿಯವರೆಗೆ ಜೈವಿಕ ಮತ್ತು ಸಾಂಪ್ರದಾಯಿಕ ಆಹಾರದ ಪರಿಣಾಮಗಳನ್ನು ಹೋಲಿಸುವ ದೀರ್ಘಾವಧಿಯ, ವೈಜ್ಞಾನಿಕ ಅಧ್ಯಯನಗಳು ಲಭ್ಯವಿರುವುದಿಲ್ಲವೊ ಅಲ್ಲಿಯವರೆಗೆ ಜೈವಿಕ ಆಹಾರ ಸಾಂಪ್ರದಾಯಿಕ ಆಹಾರಕ್ಕಿಂತ ಉತ್ತಮವಾದದ್ದೆ ಎಂಬ ಪ್ರಶ್ನೆಗೆ ಸಮರ್ಪಕವಾಗಿ ಉತ್ತರ ಕೊಡಲು ಅಸಾಧ್ಯ. ಪ್ರಪಂಚದ ಸುತ್ತಲಿನ ಕೆಲವು ಪ್ರಯೋಗಾಲಯಗಳಲ್ಲಿ ಚಾಲ್ತಿಯಲ್ಲಿರುವ ಸಂಶೋಧನೆಗಳು ಕಾಲಕ್ರಮೇಣ ಈ ಪ್ರಶ್ನೆಗೆ ಉತ್ತರ ನೀಡಿಯಾವು.

ಜೈವಿಕ ಆಹಾರ ಸಾಂಪ್ರದಾಯಿಕ ಆಹಾರಕ್ಕಿಂತ ಹೆಚ್ಚು ರುಚಿಕರವೆ?

ವಿಶ್ವಸಂಸ್ಥೆಗೆ ಸೇರಿದ ಆಹಾರ ಮತ್ತು ಕೃಷಿ ಸಂಸ್ಥೆಯ (FAO) ಇತ್ತೀಚಿನ ವರದಿಯೊಂದು ಜೈವಿಕವಾಗಿ ಉತ್ಪಾದಿಸಿದ ಕೆಲವು ಆಹಾರಗಳು, ಉದಾಹರಣೆಗೆ, ಸೇಬು ಹೆಚ್ಚು ದೃಢವಾಗಿಯೂ, ಟೊಮ್ಯಾಟೋ ಹೆಚ್ಚು ಸಿಹಿಯುಳ್ಳದ್ದಾಗಿಯೂ, ಮತ್ತು ಕ್ಯಾರೆಟ್ ಕ್ಯಾರೆಟ್‌ನಂತೆಯೇ ರುಚಿಸುವುದಾಗಿಯೂ ವರದಿ ಮಾಡಿದೆ. ಈ ಸಮೀಕ್ಷೆ ಬಳಕೆದಾರರ ವೈಯಕ್ತಿಕ ಅಂಕಿ ಅಂಶಗಳನ್ನು ಅವಲಂಬಿಸಿದೆ. ಆದರೆ ಜೈವಿಕ ಆಹಾರದಲ್ಲಿ ಕಂಡುಬಂತು ಎಂದು ಹೇಳಲಾದ ಹೆಚ್ಚಿನ ದೃಢತೆ, ಸಿಹಿ ಮತ್ತು ಗಜ್ಜರಿತನದ ಮೂಲ ಏನೆಂದು ಸಾಬೀತಾಗಿಲ್ಲ. ಡೇವಿಸ್‌ನಲ್ಲಿಯ ಕ್ಯಾಲಿಫೋರ್ನಿಯ ವಿಶ್ವವಿದ್ಯಾನಿಲಯ ಕೈಗೊಂಡ ಜೈವಿಕ ಆಹಾರ ಮತ್ತು ಸಾಂಪ್ರದಾಯಿಕ ಆಹಾರಗಳ ನಡುವಿನ ವ್ಯತ್ಯಾಸಗಳ ಕೂಲಂಕಷ ಅಧ್ಯಯನ ಯಾವುದೇ ಗಣನೀಯ ಅಂಶವನ್ನು ಹೊರಗೆಡಹುವುದರಲ್ಲಿ ವಿಫಲವಾಗಿದೆ. ಜೈವಿಕ ಆಹಾರದ ಎಲೆಗಳಲ್ಲಿನ ಹೆಚ್ಚಿನ ಮಟ್ಟದ ಆ್ಯಂಟಿ-ಆಕ್ಸಿಡಂಟ್ಸ್ ಅವನ್ನು ಹೆಚ್ಚು ಕಹಿ ಮಾಡಬಹುದಾದರೂ, ಬೇರೆ ರುಚಿ ಮೂಲದ ಅಂಶಗಳು ಆ ಕಹಿಯನ್ನು ಮುಚ್ಚಿ ಹಾಕಿದವೆ ಎನ್ನುವುದನ್ನು ನಿರ್ಧರಿಸುವುದು ಕಷ್ಟ ಸಾಧ್ಯ.

ಜೈವಿಕ ಆಹಾರ ಸಾಂಪ್ರದಾಯಿಕ ಆಹಾರಕ್ಕಿಂತ ಹೆಚ್ಚು ಸುರಕ್ಷಿತವೆ?

FAO ವರದಿಯಲ್ಲಿ ವಿವರಿಸಲಾದ ಪ್ರಕಾರ, ಆಹಾರದಲ್ಲಿ ರಾಸಾಯನಿಕಗಳ ಕಲಬೆರಕೆಯ ಕಾರಣ ಉಂಟಾಗುವ ಅನಾರೋಗ್ಯದ ಸಾಧ್ಯತೆ ೧% ಕ್ಕಿಂತ ಕಡಿಮೆ. ಈ ಕಮ್ಮಿ ಪ್ರಮಾಣವನ್ನು ಸಹ ಕೊಯ್ಲು ಆದ ನಂತರ ಸುರಕ್ಷಿತವಾಗಿ ನಿರ್ವಹಣೆ ಮಾಡುವುದರಿಂದ ಮತ್ತು ಬಳಸುವುದಕ್ಕಿಂತ ಮುಂಚೆ ಚೆನ್ನಾಗಿ ನೀರಿನಲ್ಲಿ ತೊಳೆಯುವುದರಿಂದ ಇನ್ನೂ ಕಮ್ಮಿ ಮಾಡಬಹುದು. ಈ ದೃಷ್ಟಿಯಲ್ಲಿ ಸಾಂಪ್ರದಾಯಿಕ ಆಹಾರ ದೋಷರಹಿತ ಸುರಕ್ಷತೆಯನ್ನು ಸಾಧಿಸಿದೆ. ಆದಾಗ್ಯೂ, ಸಾಂಪ್ರದಾಯಿಕ ಮಾಂಸ ಉತ್ಪಾದನೆಯಲ್ಲಿ ಆ್ಯಂಟಿಬಯಾಟಿಕ್ಸ್‌ಗಳ ಅಸಮರ್ಪಕ ಬಳಕೆ, ಅನುದ್ದೇಶಪೂರ್ವಕವಾಗಿ, ಮನುಷ್ಯ ದೇಹದ ರೋಗಾಣು ಬ್ಯಾಕ್ಟೀರಿಯಾಗಳಲ್ಲಿ ನಿರೋಧಕ ಶಕ್ತಿ ಹೆಚ್ಚಾಗುವಂತೆ ಮಾಡುವ ಸಾಧ್ಯತೆಗಳಿವೆ. ಈ ಕಾರಣದಿಂದಾಗಿ ಯೂರೋಪಿಯನ್ ಒಕ್ಕೂಟ ೨೦೦೬ರ ನಂತರ ತನ್ನ ಸದಸ್ಯ ರಾಷ್ಟ್ರಗಳು ತಮ್ಮ ಕೃಷಿ ವಲಯದಲ್ಲಿ ವೃದ್ಧಿ-ಉತ್ತೇಜನಕಾರಿ ಆ್ಯಂಟಿಬಯಾಟಿಕ್ಸ್ ಅನ್ನು ಬಳಸುವ ಹಾಗಿಲ್ಲ ಎಂದು ಕಾನೂನು ರೂಪಿಸಿದೆ. ಜೈವಿಕ ಆಹಾರ ಕಮ್ಮಿ ಪ್ರಮಾಣದಲ್ಲಿ ಕೀಟನಾಶಕ, ಕಳೆನಾಶಕ ಮತ್ತು ಸೂಕ್ಷ್ಮಜೀವಿನಾಶಕಗಳಂತಹ ರಾಸಾಯನಿಕ ತ್ಯಾಜ್ಯಗಳನ್ನು ಹೊಂದಿದ್ದರೂ, ಅವು ಮಣ್ಣಿನಲ್ಲಿ ಉಳಿದಿರುವ ರಾಸಾಯನಿಕಗಳು ಮತ್ತು ಪರಿಸರದ ಮತ್ತು ಅತಿಸೂಕ್ಷ್ಮಜೀವಿಗಳ ಕಲಬೆರಕೆಯಿಂದ ತಪ್ಪಿಸಿಕೊಳ್ಳುವುದಿಲ್ಲ ಎನ್ನುವುದನ್ನು ಗಮನಿಸುವುದು ಬಹಳ ಮುಖ್ಯ.

ಜೈವಿಕ/ಸಾವಯವ ಕೃಷಿ ಪರಿಸರ ಸಂರಕ್ಷಣೆಯನ್ನು ವೃದ್ಧಿಸುತ್ತದೆಯೆ ಮತ್ತು ಅದು ದೀರ್ಘಕಾಲಿಕವಾದದ್ದೆ?

ಕಡಿಮೆಯಾಗುತ್ತಿರುವ ಮಣ್ಣಿನ ಫಲವತ್ತತೆ ಮತ್ತು ಮಣ್ಣಿನಲ್ಲಿ ಹೆಚ್ಚಾಗುತ್ತಿರುವ ಲವಣಾಂಶಗಳಿಂದಾಗಿ ಸದ್ಯದ ಸಾಂಪ್ರದಾಯಿಕ ಕೃಷಿ ದೀರ್ಘಾಯಸ್ಸು ಹೊಂದಿಲ್ಲ ಎಂದು ಪರಿಸರ ತಜ್ಞರು ಬಹಳ ದಿನಗಳಿಂದಲೂ ಎಚ್ಚರಿಕೆ ಕೊಡುತ್ತಾ ಬಂದಿದ್ದಾರೆ. ಜೊತೆಗೆ ಜಗತ್ತಿನ ಜನಸಂಖ್ಯೆ ವಾರ್ಷಿಕ ಸರಿಸುಮಾರು ೮ ಕೋಟಿ ಹೆಚ್ಚಾಗುತ್ತಿದೆ. ಇಷ್ಟು ಅಗಾಧ ಜನಸಂಖ್ಯೆಗೆ ಆಹಾರ ಒದಗಿಸಲು ಮಣ್ಣಿನ ಫಲವತ್ತತೆಯನ್ನು

ಕಾಪಾಡಿಕೊಳ್ಳುವುದು ಬಹಳ ಆವಶ್ಯಕವಾಗುತ್ತದೆ. ಬದಲಿ-ಬೆಳೆ, ಉಳುವುದು, ಸಾವಯವ ಅಂಶಗಳ ಹೆಚ್ಚುವರಿ ಮಾಡುವುದು, ಕಟ್ಟುನಿಟ್ಟಿನ ಮಾಲಿನ್ಯ ನಿಯಂತ್ರಣ, ಸ್ಥಳೀಯ ಕೃಷಿಯನ್ನು ಅಲ್ಲಿನ ಪರಿಸರಕ್ಕೆ ತಕ್ಕ ಹಾಗೆ ಹೊಂದಿಸುವಂತಹ ಪದ್ಧತಿಗಳನ್ನು ರೂಢಿಸಿಕೊಳ್ಳುವುದು, ಇವೆಲ್ಲ ಉತ್ತಮ ಕೃಷಿ ವ್ಯವಸ್ಥೆಯ ನಿರ್ವಹಣೆಗೆ ಮೂಲಗಳು. ಇವುಗಳನ್ನು ಪಾಲಿಸುವುದರಿಂದಾಗಿಯೆ ಜೈವಿಕ ಕೃಷಿ ವಿಭಿನ್ನ ಎಂದಲ್ಲದಿದ್ದರೂ, ತಾವು ಅನುಸರಿಸಬೇಕಾದ ಕಾರ್ಯೋಪಾಯಗಳ ಬಗೆಗೆ ಸಾವಯವ ಕೃಷಿಕರು ಹೆಚ್ಚು ಕಟ್ಟುನಿಟ್ಟಾಗಿರುತ್ತಾರೆ. ಇವು ಸಹಜವಾಗಿ ಗುಣಮಟ್ಟದ ಫಲಿತಾಂಶಗಳನ್ನು ಖಾತರಿಯಾಗಿ ನೀಡುತ್ತವೆ. ಜೊತೆಗೆ, ಸಾಂಪ್ರದಾಯಿಕ ಕೃಷಿಯಲ್ಲಿ ಬಳಸುವ ಕೀಟನಾಶಕಗಳು ಅನುದ್ದೇಶಪೂರ್ವಕವಾಗಿ ಕೆಲವು ಸಸ್ಯಗಳನ್ನು, ಪ್ರಾಣಿಗಳನ್ನು ಮತ್ತು ಕೀಟಗಳನ್ನು ನಾಶ ಮಾಡಿ ಜೀವವೈವಿಧ್ಯವನ್ನು ಕಮ್ಮಿ ಮಾಡುತ್ತವೆ ಹಾಗೂ ರಾಸಾಯನಿಕಗಳ ಕೀಟ ನಿರೋಧಕತೆಯನ್ನು ಸಹ ಕಡಿಮೆ ಮಾಡುತ್ತವೆ. ೨೦೦೪ರಲ್ಲಿ *New Scientist*ನಲ್ಲಿ ಪ್ರಕಟವಾದ ವರದಿಯೊಂದು "ಜೈವಿಕ ಕೃಷಿ ಪದ್ಧತಿ ಆಹಾರ ಸರಪಳಿಯ ಪ್ರತಿ ಹಂತದಲ್ಲೂ-ಅತಿ ಸೂಕ್ಷ್ಮಜೀವಿಗಳಿಂದ ಹಿಡಿದು ಸಸ್ತನಿ ಪ್ರಾಣಿಗಳವರೆಗೂ, ಜೀವವೈವಿಧ್ಯವನ್ನು ವೃದ್ಧಿಸುತ್ತದೆ. ಇದು ಸಾಂಪ್ರದಾಯಿಕ ಮತ್ತು ಜೈವಿಕ ಕೃಷಿಯನ್ನು ಹೋಲಿಸಿ ಜಗತ್ತಿನೆಲ್ಲೆಡೆಯ ಅಧ್ಯಯನದ ಮೇಲೆ ಇಲ್ಲಿಯವರೆಗೂ ನಡೆಸಿರುವ ಅತಿ ದೊಡ್ಡ ಅವಲೋಕನದ ಅಂತಿಮ ಅಭಿಪ್ರಾಯ" ಎಂದು ಹೇಳುತ್ತದೆ. ಜೈವಿಕ ಕೃಷಿಯ ಲಾಭಗಳು ಮತ್ತು ಸುರಕ್ಷೆಯ ಹೆಚ್ಚುಗಾರಿಕೆಗಳನ್ನು ತಳ್ಳಿಹಾಕಲಾಗದಿದ್ದರೂ, ಈ ಕಮ್ಮಿ ಹೂಡುವಳಿಯ ಕೃಷಿಯಿಂದ ದಿನೇದಿನೇ ಬೆಳೆಯುತ್ತಿರುವ ಜಗತ್ತಿನ ಜನಸಂಖ್ಯೆಗೆ ಉಣಿಸಲು ಸಾಧ್ಯವೆ ಎನ್ನುವುದನ್ನು ಕಾದು ನೋಡಬೇಕು.

ಭವಿಷ್ಯದಲ್ಲಿ ಸಾವಯವ ಕೃಷಿ ಸಾಂಪ್ರದಾಯಿಕ ಕೃಷಿಯ ಸ್ಥಾನಪಲ್ಲಟ ಮಾಡಬಲ್ಲದೆ?

ಸಾವಯವ ಕೃಷಿ ಸಾಂಪ್ರದಾಯಿಕ ಕೃಷಿಯನ್ನು ಸಂಪೂರ್ಣವಾಗಿ ಬದಲಿ ಮಾಡುತ್ತದೆ ಎಂದು ಹೇಳುವುದು ಅಸಾಧ್ಯ. ಹೆಚ್ಚು ಹೂಡುವಳಿಯಿಲ್ಲದ, ಕೇವಲ ಭೂಗ್ರಹದ ಮಣ್ಣಿನ ಫಲವತ್ತತೆಯ ಮೇಲೆ ಆಧಾರಿತವಾದ ಕೃಷಿ ಉತ್ಪಾದನೆ ಪ್ರಪಂಚದ ೬೦೦ ಕೋಟಿ ಜನಸಂಖ್ಯೆಯ ೬೦%ರಷ್ಟಕ್ಕೆ ಮಾತ್ರ ಉಣಿಸಬಲ್ಲದು ಎಂದು ಅಂದಾಜು ಮಾಡಲಾಗಿದೆ. ಅಂದಾಜು ಮಾಡಲಾದ ಪ್ರಕಾರ, ೨೦೫೦ಕ್ಕೆ ಭೂಮಿಯ ಜನಸಂಖ್ಯೆ ೯೦೦ ಕೋಟಿ ಮುಟ್ಟಲಿದ್ದು, ಹೆಚ್ಚು ಹೂಡುವಳಿಯ ಸಾಂಪ್ರದಾಯಿಕ ಕೃಷಿ, ಜೈವಿಕತಂತ್ರಜ್ಞಾನ, ಮತ್ತು ಇನ್ನೂ ಅಭಿವೃದ್ಧಿಯಾಗಿಲ್ಲದ ಸಂಶೋಧನೆಗಳ ಮೇಲಿನ ನಮ್ಮ ಅವಲಂಬನೆ ಹೆಚ್ಚುತ್ತಾ ಹೋಗುತ್ತದೆ. ಜೈವಿಕ ಕೃಷಿಯ ಪ್ರತಿಪಾದಕರು ಈಗಿನ ಕೃಷಿ ಉತ್ಪಾದನೆಯ ಸಮಂಜಸವಾದ ವಿತರಣೆಯ ಜೊತೆಗೆ ಕಮ್ಮಿಯಾದ ಆಹಾರ ಸೇವನೆಯೂ ಸೇರಿದರೆ, ಸದ್ಯದ ಮತ್ತು ಭವಿಷ್ಯದ ಏರುತ್ತಿರುವ ಜನಸಂಖ್ಯೆಯ ಆಹಾರ ಬೇಡಿಕೆಗಳನ್ನು ಸುಲಭವಾಗಿ ಈಡೇರಿಸಬಹುದು ಎಂದು ವಾದಿಸುತ್ತಾರೆ. ಉತ್ಪಾದಕ ರಾಷ್ಟ್ರಗಳಿಂದ ಗ್ರಾಹಕ ರಾಷ್ಟ್ರಗಳಿಗೆ ಸಾರಿಗೆ ಮುಖಾಂತರ ಮಾಡಬೇಕಾದ ಈ ಆಹಾರ ವಿತರಣೆ ಹೆಚ್ಚಿನ ಇಂಧನದ ದುಬಾರಿಗೆ ದಾರಿ ಮಾಡಿಕೊಟ್ಟು, ಪರೋಕ್ಷವಾಗಿ ಇನ್ನಷ್ಟು ಪರಿಸರದ ಮಾಲಿನ್ಯಕ್ಕೆ ಎಡೆಮಾಡುತ್ತದೆ. ಇದು ಜೈವಿಕ ಕೃಷಿಯ ಮೂಲ ಕಾರಣಕ್ಕೆ ಪೆಟ್ಟು ಕೊಡುತ್ತದೆ. ಬದಲಿಗೆ, ಕಾಲಕ್ರಮೇಣ ಜೈವಿಕ ಮತ್ತು ಸಾಂಪ್ರದಾಯಿಕ ಕೃಷಿಗಳ ಉತ್ತಮ ಗುಣಗಳನ್ನು ತೆಗೆದುಕೊಂಡು, ಪರಿಸರದ ಮೇಲೆ ಮಿತವಾದ ಪರಿಣಾಮ ಬೀರಿ, ಹೆಚ್ಚಿನ ಆಹಾರ ಉತ್ಪಾದನೆಯನ್ನು ಪಡೆಯಬಹುದಾದ ರೀತಿಯಲ್ಲಿ ಇವುಗಳನ್ನು ಸಂಯೋಜಿಸಿ, ಸಂದರ್ಭಕ್ಕೆ ಅನುಗುಣವಾಗಿ ಒಂದು ವ್ಯವಸ್ಥೆ ಹೊಸ ವ್ಯವಸ್ಥೆಗಳನ್ನು ಬಳಸಿಕೊಳ್ಳುವುದಾದರೆ ಇದರಿಂದ ಒಳ್ಳೆಯದೇ ಆದೀತು.

೨೩. ಜಾಗತಿಕ ಕೃಷಿವಿಜ್ಞಾನಿ ಡಾ|| ಕೃಷ್ಣ ಸುಬ್ಬರಾವ್

ಅಮೆರಿಕ ಸಂಯುಕ್ತ ಸಂಸ್ಥಾನಗಳು

[ಅಮೆರಿಕದಲ್ಲಿ NASA (ನಾರ್ತ್ ಅಮೆರಿಕನ್ ಸಂಕೇತಿ ಅಸೋಸಿಯೇಷನ್) ಎಂಬ ಸಂಘವಿದೆ. ಸಂಕೇತಿ ಕೃಷಿ ಸಂಪುಟದ ಸಂಬಂಧದಲ್ಲಿ ಆ ಸಂಘವನ್ನು ಸಂಪರ್ಕಿಸಲಾಯಿತು. 'ಅಮೆರಿಕದ ನೆಲದಲ್ಲಿ ಅಂಥದೇನನ್ನೂ ಕಾಣಲಾರಿರಿ ನೀವು' ಎಂಬ ಉತ್ತರ ಬಂತು. ಉತ್ತರದಲ್ಲಿ ವ್ಯಂಗ್ಯವೂ ಇತ್ತು. ಜಗತ್ತಿನ ಅತಿಶ್ರೇಷ್ಠ ಸಂಕೇತಿ ಕೃಷಿ ವಿಜ್ಞಾನಿಯೊಬ್ಬರು ನಮಗೆ ದೊರೆತುದು ಅಮೆರಿಕದ ನೆಲದಲ್ಲಿಯೇ. ಅದು ವ್ಯಂಗ್ಯಕ್ಕೇ ವ್ಯಂಗ್ಯವಾಗಿತ್ತು.]

ಸಂದರ್ಶನ: ಜನವರಿ, ೨೦೦೯ : ಡಾ.ಬಿ.ಎಸ್.ಪ್ರಣತಾರ್ತಿಹರನ್

(ಕರ್ನಾಟಕದ ಹಳ್ಳಿಯೊಂದರಲ್ಲಿ ಸಂಕೇತಿ ಕೃಷಿಕರ ನಡುವೆ ಹುಟ್ಟಿ ಬೆಳೆದವರು ಸುಬ್ಬರಾವ್. ಅವರೀಗ ಜಗತ್ತಿನ ಅತಿ ಮುಂದುವರಿದ ರಾಷ್ಟ್ರವೊಂದರ ಅತಿಶ್ರೇಷ್ಠ ವಿಶ್ವವಿದ್ಯಾಲಯದಲ್ಲಿನ ಅತಿಶ್ರೇಷ್ಠ ಕೃಷಿ ಸಂಶೋಧನ ಕೇಂದ್ರದಲ್ಲಿದ್ದಾರೆ. ಜಗತ್ತಿನ ಅತಿಶ್ರೇಷ್ಠ ಕೃಷಿ ವಿಜ್ಞಾನಿಗಳ ಸಾಲಿನಲ್ಲಿ ಪುರಸ್ಕೃತರಾಗಿದ್ದಾರೆ. ಡಾ|| ಹರನ್ ಅಮೆರಿಕದ ನೆಲದಲ್ಲಿಯೇ ಅವರನ್ನು ಸಂದರ್ಶಿಸಿಕೊಂಡು ಬಂದಿದ್ದಾರೆ.)

ಕ್ಯಾಲಿಫೋರ್ನಿಯಾ

ಸಿಸಿನಾ ಬೆಟ್ಟ ಇರುವುದು ಸಲಿನಾಸ್ ಪಟ್ಟಣದ ಬಳಿ. ಅದು ಅಮೆರಿಕಾ ಸಂಯುಕ್ತ ಸಂಸ್ಥಾನಗಳ ಕ್ಯಾಲಿಫೋರ್ನಿಯಾದ ಸಾನೋಸೆಯಿಂದ ೭೦ ಮೈಲು ದೂರದಲ್ಲಿದೆ.

ಶ್ರೇಷ್ಠ ಕೃಷಿವಿಜ್ಞಾನಿ

ಸಿಸಿನಾಗೆ ಹೋಗುವುದಕ್ಕೆ ಇದ್ದ ನನ್ನ ಆತುರಕ್ಕೆ ಬಲವಾದ ಕಾರಣವಿತ್ತು. ಡಾ.ಸುಬ್ಬರಾವ್ ಒಬ್ಬ *ಶ್ರೇಷ್ಠ ಕೃಷಿ ವಿಜ್ಞಾನಿಯಾದುದರಿಂದ* ಅವರನ್ನು ಸಂದರ್ಶಿಸಿಕೊಳ್ಳಬೇಕಾದ ತುರ್ತು ಬಿದ್ದಿತ್ತು. ಸಂಕೇತಿ ಅಧ್ಯಯನ ಮಾಲೆಯ ಎಂಟು-ಒಂಬತ್ತನೆಯ ಸಂಪುಟಗಳು 'ಸಂಕೇತಿ: ಕೃಷಿ' ಎಂಬ ಶೀರ್ಷಿಕೆಯಲ್ಲಿ ಸದ್ಯದಲ್ಲೇ ಮುದ್ರಣಕ್ಕೆ ಹೋಗುವುದರಲ್ಲಿದ್ದುವು. *ಅಮೆರಿಕದಲ್ಲಿ ಹೆಸರು ಮಾಡಿರುವ ಸಂಕೇತಿನಾಡಿನ ವಿಜ್ಞಾನಿಯನ್ನು* ಮರೆತು ಮುಂದೆ ಸಾಗುವಂತಿರಲಿಲ್ಲ. ಅವರ ಸಂದರ್ಶನವನ್ನು ಸೇರಿಸಿ ಗ್ರಂಥದ ಮೌಲ್ಯವನ್ನು ಹೆಚ್ಚಿಸುವ ಅವಕಾಶವು ತಾನಾಗಿಯೇ ಒದಗಿ ಬಂದ ಹಾಗಾಗಿತ್ತು.

ಬಾಲ್ಯದಲ್ಲಿ ಕಾಡಿದ ಬಡತನ

ಮೈಸೂರು ಜಿಲ್ಲೆ ಪಿರಿಯಾಪಟ್ಟಣದ ವಿಶಾಲಕ್ಷಮ್ಮನವರ ನಾಲ್ಕು ಮಕ್ಕಳಲ್ಲಿ ಹಿರಿಯರು ಶ್ರೀ ಸುಬ್ಬರಾವ್. ಸುಬ್ಬರಾವ್ ಅವರ ತಂದೆ ಎಂ.ಆರ್.ಕೃಷ್ಣಮೂರ್ತಿಯವರು ಸಂಸಾರವನ್ನು ತೊರೆದುಹೋದುದರಿಂದಾಗಿ ಆ ಕುಟುಂಬವು ಕಷ್ಟದ ದಿನಗಳನ್ನು ಎದುರಿಸಬೇಕಾಯಿತು. ತಾಯಿ ವಿಶಾಲಾಕ್ಷಮ್ಮನವರು ನರ್ಸಿಂಗ್ ತರಪೇತಿ ಪಡೆದು ನರ್ಸ್ ವೃತ್ತಿ ಮಾಡತೊಡಗಿದರು. ಸುಬ್ಬರಾವ್ ಅವರ ವಿದ್ಯಾಭ್ಯಾಸ ಮುಗಿದು ಉದ್ಯೋಗ ದೊರೆಯುವವರೆಗೆ ಬಡತನವು ಅವರನ್ನು ಕಾಡಿತು. ತಮ್ಮಂದಿರ ಮತ್ತು ತಂಗಿಯ ವಿದ್ಯಾಭ್ಯಾಸ ಮತ್ತು ವಿವಾಹವನ್ನು ಮುಗಿಸಲು ಸುಬ್ಬರಾವ್ ಕೈ ಜೋಡಿಸಿದಾಗ ಆ ಸಂಸಾರಕ್ಕೆ ಒಂದು ಭದ್ರ ನೆಲೆ ಸಿಕ್ಕಿದ ಹಾಗೆ ಆಗಿತ್ತು.

ಓದಿದ್ದು ಸಸ್ಯಶಾಸ್ತ್ರ

ಬಾಲ್ಯದಲ್ಲಿ ಸುಬ್ಬರಾವ್ ಅನುಭವಿಸಿದ ಕಷ್ಟಗಳು ಕಣ್ಣೀರು ತರಿಸುವಂಥವು. ಕೃಷ್ಣ ವಿ.ಸುಬ್ಬರಾವ್ (ಜ: ೭.೮.೧೯೫೪) ಓದಿದ್ದು ಸಸ್ಯಶಾಸ್ತ್ರವನ್ನು. ಆ ವಿಷಯದಲ್ಲಿ ಅವರಿಗೆ ೧೯೭೭ರಲ್ಲಿ ಎಂ.ಎಸ್‌ಸಿ. ಪದವಿ ದೊರೆಯಿತು. ಅವರು ಕಲಿತ ವಿಶೇಷ ವಿಷಯ Plant Pathology (ಸಸ್ಯರೋಗ ಶಾಸ್ತ್ರ). ಮೈಸೂರಿನ ಮಾನಸಗಂಗೋತ್ರಿಯ ವಿದ್ಯಾರ್ಥಿಯಾದ ಅವರು ಅಲ್ಲಿಯೇ ಪಿಎಚ್.ಡಿ.

ವಿದ್ಯಾರ್ಥಿಯಾಗಿಯೂ ನೋಂದಾಯಿಸಿಕೊಂಡರು. ಅವರು ಆಯ್ದುಕೊಂಡ ವಿಷಯವೂ ಸ್ವಾರಸ್ಯವಾದುದು. ಮೂರು ರೀತಿಯ *ಫಂಗಸ್‌ಗಳು* ಕ್ಷಯರೋಗಿಗಳನ್ನು ಕಾಡುವ ಸಾಧ್ಯತೆ ಇರುತ್ತದೆ. ಅವು ಮರಣಾಂತಕವಾದಂಥವು. ಅವನ್ನು ಪತ್ತೆ ಮಾಡುವುದು ಕಷ್ಟ. ಏಕೆಂದರೆ ಕ್ಷಯರೋಗದ ಲಕ್ಷಣಗಳೇ ಅವುಗಳಿಂದಾಗುವ ರೋಗಕ್ಕೂ ಇರುತ್ತವೆ. ಅವನ್ನು ಪತ್ತೆ ಮಾಡುವ ವಿಧಾನವನ್ನು ಪತ್ತೆ ಮಾಡುವುದು ಅವರು ಆಯ್ದುಕೊಂಡ ಸಂಶೋಧನೆಯ ವಿಷಯ. ಭಾರತದ ವಿಶೇಷ ಲಕ್ಷಣ ಅಲ್ಲೂ ಕೆಲಸ ಮಾಡಿತು. Council of Scientific and Industrial Research ಸಂಸ್ಥೆಯು ಈ ಸಂಶೋಧನೆಗಾಗಿ ಅನುಗ್ರಹಿಸಿದ್ದ ವಿದ್ಯಾರ್ಥಿ ವೇತನವನ್ನು ವಿಭಾಗದ ಮುಖ್ಯಸ್ಥರು ಕೊಡದೆ ಸತಾಯಿಸಿದರು. ಮಾರ್ಗದರ್ಶಕರು ಸಾರಿದ್ದ ಶೀತಲ ಸಮರದ ಫಲ ಅದು. ಸುಬ್ಬರಾವ್ ಜೀವ ಹಿಡಿದುಕೊಂಡದ್ದು ವಾರದ ಮನೆಗಳ ಊಟದಿಂದ. ಆದರೂ ಸಾಲ ಮಾಡಿ ಸಂಶೋಧನೆ ಮುಂದುವರಿಸಿದರು. ದೇವರ ದಯದಿಂದ ಹೈದರಾಬಾದಿನ *International Crop Research Institute for the Semi arid Tropics* ಸಂಸ್ಥೆಯಲ್ಲಿ ಕೆಲಸ ಸಿಕ್ಕಿದಾಗ ಸಂಶೋಧನ ಸಹಾಯಕರಾಗಿ ಅಲ್ಲಿಗೆ ಹೋದರು. ಅಲ್ಲಿ ಬರುತ್ತಿದ್ದ ಒಳ್ಳೆಯ ಸಂಬಳದಿಂದಾಗಿ ಮನೆಗೆ ಭದ್ರ ನೆಲೆಯಾಯಿತು. ಐದು ವರ್ಷ ಸೇವೆ ಸಲ್ಲಿಸುವ ಹೊತ್ತಿಗೆ ಅವರ ಪ್ರತಿಭೆಗೆ ಸಿಗಬೇಕಾದ ನ್ಯಾಯ ಸಂದಿತು. ಅಮೆರಿಕದ *ಲೂಸಿಯಾನಾ ಸ್ಟೇಟ್ ಯೂನಿವರ್ಸಿಟಿಯ*ಲ್ಲಿ ಪಿಎಚ್.ಡಿ. ಮಾಡಲು ವಿದ್ಯಾರ್ಥಿವೇತನ ದೊರಕಿತು. ಮೂರು ವರ್ಷದಲ್ಲಿ ಪಿಎಚ್.ಡಿ. ಮುಗಿಸಿ 'ಡಾಕ್ಟರ್' ಎನಿಸಿದರು. ೧೯೮೯ರಲ್ಲಿ ವೈದ್ಯೆ ಡಾ.ಮೀನಾ ಅವರನ್ನು ವಿವಾಹವಾದರು.

ಜಗತ್ತಿನ ಅತಿ ಶ್ರೇಷ್ಠ ಕೃಷಿ ಸಂಶೋಧನಾ ಕೇಂದ್ರದಲ್ಲಿ

ಪಿಎಚ್.ಡಿ. ನಂತರ ಡಾ.ಸುಬ್ಬರಾವ್ ಲೂಸಿಯಾನಾ ಸ್ಟೇಟ್ ಯೂನಿವರ್ಸಿಟಿಯಲ್ಲಿಯೇ ಪೋಸ್ಟ್ ಡಾಕ್ಟೋರಲ್ ಫೆಲೋ ಆಗಿ ಒಂದೂವರೆ ವರ್ಷ ಸಂಶೋಧನೆಯನ್ನು ಮುಂದುವರಿಸಿದರು. ಅಲ್ಲಿಂದ ಕ್ಯಾಲಿಫೋರ್ನಿಯಾಗೆ ಬಂದು ಯೂನಿವರ್ಸಿಟಿ ಆಫ್ ಕ್ಯಾಲಿಫೋರ್ನಿಯಾದ ಬರ್ಕ್ಲಿ ಕೇಂದ್ರದಲ್ಲಿ ಮತ್ತೆ ಒಂದೂವರೆ ವರ್ಷ ಪೋಸ್ಟ್ ಡಾಕ್ ಆಗಿ ಸಂಶೋಧನೆ ಮಾಡಿದರು. ಆ ವಿಶ್ವವಿದ್ಯಾಲಯವು ಜಗತ್ತಿನ *ಅತಿಶ್ರೇಷ್ಠ ಕೃಷಿ ಸಂಶೋಧನಾ ಕೇಂದ್ರ*. ಅದರ ಎರಡು ಅತಿಶ್ರೇಷ್ಠ ಕೃಷಿ ಸಂಶೋಧನಾ ಕೇಂದ್ರಗಳ ಪೈಕಿ ಡೇವಿಸ್ ಅಧ್ಯಯನ ಕೇಂದ್ರದಲ್ಲಿ ಅವರಿಗೆ ಸಹಾಯಕ ಪ್ರಾಧ್ಯಾಪಕರ ಕೆಲಸ ದೊರಕಿದ್ದು ೧೯೯೧ರಲ್ಲಿ. ಅಲ್ಲಿಯೇ ಅವರು ಸಹ-ಪ್ರಾಧ್ಯಾಪಕರಾದುದು ೧೯೯೬ರಲ್ಲಿ. ಪ್ರಾಧ್ಯಾಪಕರಾದುದು ೨೦೦೧ರಲ್ಲಿ. ಬೋಧನೆ ಮತ್ತು ಸಂಶೋಧನೆಯಲ್ಲಿ ತಮಗೆ ೧೨ ವರ್ಷದ ಅನುಭವ ದಕ್ಕಿದ ಮೇಲೆ ಅವರು ಇದೀಗ ಪೋಸ್ಟ್ ಡಾಕ್‌ಗಳಿಗೆ ಸಂಶೋಧನಾ ಮಾರ್ಗದರ್ಶಕರಾಗಿ ಕೆಲಸ ಮಾಡುತ್ತಿದ್ದಾರೆ.

ಅರ್ಹಾತಿ ಅರ್ಹ ಸಂಶೋಧಕ

ಕ್ಯಾಲಿಫೋರ್ನಿಯಾದ ರೈತರು ತಮ್ಮ ಬೆಳೆಗೆ ದೊರೆತ ಲಾಭದ ಒಂದು ಭಾಗವನ್ನು 'ಮಾರ್ಕೆಟಿಂಗ್ ಆರ್ಡರ್' ಎಂಬ ಸಂಶೋಧನಾ ನಿಧಿಗೆ ಸ್ವಯಂಪ್ರೇರಣೆಯಿಂದ ಕೊಡುತ್ತಾರೆ. ಕೇಂದ್ರ ಸರ್ಕಾರವೂ ಸಂಶೋಧನೆಗಾಗಿ ಹಣವನ್ನು ಬಿಡುಗಡೆ ಮಾಡುತ್ತದೆ. ತಮ್ಮ ಉದ್ದೇಶಿತ ಸಂಶೋಧನೆಯ ಯೋಜನೆಯನ್ನು ಸಂಶೋಧಕರು ಸರ್ಕಾರಕ್ಕೆ ಸಲ್ಲಿಸುತ್ತಾರೆ. ವಿಶೇಷ ಪರಿಣತರು ಅರ್ಹತೆಯ ಆಧಾರದ ಮೇಲೆ ಸಂಶೋಧನಾ ನಿಧಿಯನ್ನು ವಿತರಿಸುತ್ತಾರೆ. ಅದು ಕೆಲವೇ ಮಂದಿಗೆ ಮಾತ್ರ ದೊರೆಯುತ್ತದೆ. ಸುಬ್ಬರಾವ್ ಅದನ್ನು ಪಡೆಯುತ್ತಿರುವ ಅರ್ಹಾತಿ ಅರ್ಹರಲ್ಲಿ ಒಬ್ಬರು.

ಗೋಧಿ ಇಳುವರಿಯ ಸಂಶೋಧನೆ

ಕೃಷಿ ಕ್ಷೇತ್ರಕ್ಕೆ ಸುಬ್ಬರಾವ್ ಅವರ ಕಾಣಿಕೆಯನ್ನು ನೂರಾರು ನಿದರ್ಶನಗಳಿಂದ ವಿವರಿಸಬಹುದು. ಸ್ಥಳಾವಕಾಶದ ಕೊರತೆಯಿಂದಾಗಿ ಅವರ ಪಿಎಚ್.ಡಿ. ಸಂಶೋಧನೆಯನ್ನು ಸಂಕ್ಷೇಪವಾಗಿ ಪರಿಚಯಿಸಿ ಮುಗಿಸಬೇಕಾಗಿದೆ. *ಗೋಧಿ ಸಸಿಯ* ಮುಖ್ಯ ಕಾಂಡದ ಜತೆಗೆ ನಾಲ್ಕು-ಐದು ಉಪಕಾಂಡಗಳಿರುತ್ತವೆ. ಫಸಲು ಬರುವುದೆಲ್ಲ *ಮೇಲಿನ ನಾಲ್ಕು-ಐದು ಎಲೆಗಳಿಂದ.* ಆದರೆ ಅದು ಪ್ರಯೋಗದಿಂದ ಸಿದ್ಧವಾಗಿರಲಿಲ್ಲ. ಖಾಯಿಲೆ ಇದ್ದಾಗ ಆಗುವ ಇಳವರಿ ಎಷ್ಟು, ಇಲ್ಲದಾಗ ಆಗುವ ಇಳವರಿ ಎಷ್ಟು ಎಂಬುದೂ ತಿಳಿದಿರಲಿಲ್ಲ. ಸುಬ್ಬರಾವ್ ತಮ್ಮ ಸಂಶೋಧನೆಯ ಮೂಲಕ ಮೇಲಿನ ಕೇವಲ *ಎರಡು ಎಲೆಗಳಿಂದಲೇ* ಎಲ್ಲ ಫಸಲೂ ದೊರೆಯುತ್ತದೆ, ಅವೆರಡನ್ನು ಚೆನ್ನಾಗಿ ಸಂರಕ್ಷಿಸಿದರೆ ಸಾಕು ಎಂದು ಕಂಡುಹಿಡಿದರು. *ರಸ್ಟ್ ಖಾಯಿಲೆ* ಬಂದಾಗ ಫಸಲು ಕಡಮೆಯಾಗುತ್ತದೆ. ನಾಲ್ಕು-ಐದು ಎಲೆಗಳನ್ನು ಕಾಪಾಡಲು ತಗಲುವ ವೆಚ್ಚ ಹೆಚ್ಚು. ಕೇವಲ ಎರಡು ಎಲೆಗಳನ್ನು ನೋಡಿಕೊಳ್ಳುವ ವೆಚ್ಚ ಕಡಮೆ. ಅದರಿಂದಲೇ ಶೇ.೯೮ರಷ್ಟು ಫಸಲು ದೊರೆಯುತ್ತದೆ.

ರಾಸಾಯನಿಕಕ್ಕೆ ಪರ್ಯಾಯವಾಗಿ ಸಸ್ಯ

ಅವರ ಇನ್ನೊಂದು ಸಂಶೋಧನೆಯು ರಾಸಾಯನಿಕಗಳನ್ನು ಕಡಮೆ ಬಳಸಿ *ಖಾಯಿಲೆಯನ್ನು ಕಡಿಮೆ ಮಾಡುವುದು* ಮತ್ತು *ಇಳವರಿ* ಹೆಚ್ಚಿಸುವುದರ ವಿಷಯದ್ದಾಗಿತ್ತು. ಅದಕ್ಕಾಗಿ ನಾಲ್ಕು-ಐದು ಕ್ಷೇತ್ರಗಳನ್ನು ಆರಿಸಿಕೊಂಡು ಪ್ರಯೋಗ ಮಾಡಿದರು. *ಬ್ರಾಕಲಿ ಸಸ್ಯ*ದಲ್ಲಿ ಕ್ಯಾನ್ಸರ್ ನಿರೋಧಕ ಗುಣವಿದೆ. ಚೀನೀಯರೂ ಕೊರಿಯನರೂ *ಕೋಸು, ಹೂಕೋಸು* ಇತ್ಯಾದಿಗಳನ್ನು ಹೆಚ್ಚು ಬಳಸುತ್ತಾರೆ. ಅವರಲ್ಲಿ ಕ್ಯಾನ್ಸರ್ ಕಡಮೆ. ಹೀಗೆ ಔಷಧಿಯ ಗುಣವಿರುವ ಫಸಲನ್ನು ಕಟಾವು ಮಾಡಿ ಬಳಸಿ ಮಿಕ್ಕಿದ್ದನ್ನು ಮಣ್ಣಿಗೆ ಬೆರೆಸಿದರೆ ಕಾಯಿಲೆ ತರುವ *ಫಂಗಸ್* ಸಾಯುತ್ತದೆ. ಬೇರೆ ರಾಸಾಯನಿಕಗಳು ಬೇಕಿಲ್ಲ. ಆ ಸಸ್ಯದಲ್ಲಿರುವ ರಾಸಾಯನಿಕವೇ ಕ್ರಿಮಿನಾಶಕದಂತೆ ಕೆಲಸ ಮಾಡುತ್ತದೆ. ಹೀಗೆ *ಒಂದೇ ಸಸ್ಯದಲ್ಲಿ ಔಷಧಿಯೂ ಇದೆ, ಕ್ರಿಮಿನಾಶಕ ಗುಣವೂ ಇದೆ ಎಂಬುದನ್ನು ಅಮೆರಿಕದಲ್ಲಿ ಪತ್ತೆ ಮಾಡಿದವರು ನಮ್ಮ ಕನ್ನಡದ ಕೃಷ್ಣ ವಿ.ಸುಬ್ಬರಾವ್.*

ಇಲ್ಲಿನ ರೈತರೂ ಸುಶಿಕ್ಷಿತರು. ಅವರೂ ಪದವೀಧರರು. ವಿಜ್ಞಾನದ ಬೆಳವಣಿಗೆಯನ್ನು ತತ್‌ಕ್ಷಣ ಅಳವಡಿಸಿಕೊಳ್ಳುವ ಮನೋಭಾವದವರು. ವಿಜ್ಞಾನಿಗಳು ಮಾಡಿದ ಸಂಶೋಧನೆಯು ತಮಗೆ ಪ್ರಯೋಜಕವಾದುದು ಎನಿಸಿದರೆ ಅದನ್ನು ಪರೀಕ್ಷಿಸುತ್ತಾರೆ. ಅದು ಸರಿಯಾಗಿ ಕಂಡರೆ ತಮ್ಮ ಪರಂಪರೆಯನ್ನು ಬದಲಿಸಿ ಹೊಸತನ್ನು ಅಳವಡಿಸಿಕೊಳ್ಳುತ್ತಾರೆ.

ತುಂಡುಭೂಮಿ ಮತ್ತು ಒಂದೇ ಬೆಳೆಯ ಆಸರೆ ಆತ್ಮಹತ್ಯೆಗೆ ಕಾರಣ

ಅಮೆರಿಕ ಮತ್ತು ಇಂಡಿಯಾದ ರೈತರ ಸ್ಥಿತಿಗತಿಗಳ ಬಗೆಗೆ ಸುಬ್ಬರಾವ್ ಅವರ ಅಭಿಪ್ರಾಯ ಇದು. "ಇಂಡಿಯಾದ ರೈತರ ಜೀವನವು ಆ ಬೆಳೆಯ ಮೇಲೆಯೇ ಪೂರ್ಣವಾಗಿ ಅವಲಂಬಿತವಾಗಿರುತ್ತದೆ. ಬೆಳೆ ಆಗದಿದ್ದರೆ ಹಸಿವೇ ಗತಿ. *ತುಂಡು ಜಮೀನು*ಗಳ ಅವರ ಬೆಳೆಗೆ ಬೇಕಾದ ಗೊಬ್ಬರಕ್ಕಾಗಿ ಸಾಲ ಮಾಡುತ್ತಾರೆ. ಯಾವುದೇ ಕಾರಣದಿಂದ ತೊಂದರೆಯಾದರೂ ಬೆಳೆ ಬರುವುದಿಲ್ಲ, ಸಾಲವನ್ನೂ ತೀರಿಸಲಾಗುವುದಿಲ್ಲ. ಆಗ ಒತ್ತಡಕ್ಕೆ ಒಳಗಾಗಿ *ಆತ್ಮ ಹತ್ಯೆ*ಗೆ ಶರಣಾಗುತ್ತಾರೆ."

ವೈಜ್ಞಾನಿಕ ಬೆಂಬಲ

ಭಾರತದಲ್ಲಿ ಆಸ್ತಿ ವಿಭಾಗವಾಗುತ್ತ ಹೋಗಿ ಕೊನೆಗೆ ತುಂಡು ಭೂಮಿಗಳಲ್ಲೇ ವ್ಯವಸಾಯ ಮಾಡಬೇಕಾಗುತ್ತದೆ. ಅಂಥ ಸಣ್ಣ ಹಿಡುವಳಿಗಳಲ್ಲಿ *ಲಾಭದಾಯಕವಾಗಿ ಬೆಳೆ ತೆಗೆಯುವುದು ಸಾಧ್ಯ*ವಿಲ್ಲ. ಐದು-ಹತ್ತು ಎಕರೆ ಇರುವವನಿಗೂ ವೈಜ್ಞಾನಿಕ ಬೆಂಬಲವು ಭಾರತದಲ್ಲಿ ದೊರೆಯುವುದಿಲ್ಲ. ಜಾಣನಾಗಿ ಅವನು ಬೆಳೆದರೆ ಬದುಕಿಕೊಳ್ಳುತ್ತಾನೆ, ಇಲ್ಲದಿದ್ದರೆ ವಿಫಲನಾಗುತ್ತಾನೆ.

ಅಮೆರಿಕದ ವ್ಯವಸ್ಥಿತ ಕೃಷಿ

ಅಮೆರಿಕದ ರೈತನ ಭೂಮಿಯ ವಿಸ್ತೀರ್ಣ *ಎರಡು-ಮೂರು ಸಾವಿರ ಎಕರೆಯಷ್ಟು*. ಇಲ್ಲಿಯೂ ಹೆಚ್ಚು ಬೆಳೆ ಬಂದಾಗ ಬೆಲೆ ಕುಸಿಯುತ್ತದೆ. ಆದ್ದರಿಂದ ಸರ್ಕಾರವು ರೈತನು ತನ್ನ ಪೂರ್ಣ ಜಮೀನಿನಲ್ಲಿ ಸಾಗುವಳಿ ಮಾಡದಂತೆ ನೋಡಿಕೊಳ್ಳುತ್ತದೆ. ಉದಾಹರಣೆಗೆ ೨೦೦೦ ಎಕರೆ ಇರುವ ರೈತನು ೫೦೦ ಎಕರೆಯಲ್ಲಿ ಬೆಳೆ ತೆಗೆಯಬಹುದು. ಉಳಿದ ೧೫೦೦ ಎಕರೆಯಲ್ಲಿ ಬೆಳೆ ತೆಗೆದಿದ್ದರೆ ಅವನಿಗೆ ಬರುತ್ತಿದ್ದ ಲಾಭದ ಒಂದೂವರೆಪಟ್ಟು ಹಣವನ್ನು ಸರ್ಕಾರ ಅವನಿಗೆ ಕೊಡುತ್ತದೆ. ಆದರೂ ಬೆಲೆ ಕುಸಿತದ ಸಂದರ್ಭಗಳು ಇಲ್ಲದೇ ಹೋಗುವುದಿಲ್ಲ. *ಮೂರರಲ್ಲಿ ಒಂದು ವರ್ಷದಲ್ಲಾದರೂ ಅವನಿಗೆ ಒಳ್ಳೆಯ ಲಾಭ ಬಂದಿರುತ್ತದೆ.* ಅದರ ಬಲದಿಂದ ಅವನು ಸುಸ್ಥಿರನಾಗಿರಬಲ್ಲ. ४-೫ ವರ್ಷಗಳು ಬೆಳೆ ಹಾಳಾಗುವುದೋ ಬೆಲೆ ಕುಸಿಯುವುದೋ ಆದರೆ ಮಾತ್ರ ಅವನ ಜಮೀನನ್ನು ಸಾಲ ಕೊಟ್ಟ ಬ್ಯಾಂಕುಗಳು ಹರಾಜಿಗೆ ಇಡುತ್ತವೆ. ಅಂಥ ಸಂದರ್ಭಗಳು ಅಪರೂಪ. ಇಲ್ಲಿನವರು ವ್ಯವಸಾಯದ ಭೂಮಿಯನ್ನು ಸಾಮಾನ್ಯವಾಗಿ ಮಾರುವುದಿಲ್ಲ. ಆಸ್ತಿ ವಿಭಾಗವಾದರೂ *ಒಟ್ಟಾಗಿ ವ್ಯವಸಾಯ* ನಡೆಯುವಂತೆ ನೋಡಿಕೊಳ್ಳುತ್ತಾರೆ. ಗೊಬ್ಬರ ಬಹು ಅಗ್ಗ. ಕ್ರಿಮಿನಾಶಕಗಳನ್ನು ಬಳಸುವ *ತರಪೇತಿ* ಕಾರ್ಯಕ್ರಮಗಳು ಅಮೆರಿಕದಲ್ಲಿವೆ. *ಖಾಸಗಿ* ಸಲಹೆಗಾರರೂ ಇರುತ್ತಾರೆ. ಅವರು ಹಣ ಪಡೆದು ಆ ಕೆಲಸವನ್ನು ನಿರ್ವಹಿಸಿಕೊಡಲೂ ಸಿದ್ಧರಿರುತ್ತಾರೆ. ಅವರೂ ತರಪೇತಿ ಹೊಂದಿ *ಪರವಾನಗಿ* ಪಡೆದಿರುತ್ತಾರೆ. ಭಾರತದಲ್ಲಿ ಅಂಥ ತರಪೇತಿ ಯೋಜನೆ ಇಲ್ಲ. ರೈತರು ತಪ್ಪು ವಿಧಾನಗಳನ್ನನುಸರಿಸಿ ರೋಗಗಳಿಗೆ ತುತ್ತಾಗುತ್ತಾರೆ, ಸಾಯುತ್ತಾರೆ. ತರಕಾರಿಗಳನ್ನು ರಾಸಾಯನಿಕಗಳಲ್ಲಿ ಅದ್ದಿ ಹೊಳಪು ಬರಿಸಿ ಮಾರುವುದೂ ಭಾರತದಲ್ಲಿ ನಡೆಯುತ್ತದೆ. ಕ್ರಿಮಿನಾಶಕಗಳನ್ನು ಬಳಸಿದ ರೈತರ ಬೆಳೆಯನ್ನು ಅಮೆರಿಕದಲ್ಲಿ ಪರೀಕ್ಷೆಗೆ ಒಳಪಡಿಸುತ್ತಾರೆ. ಮಿತಿಮೀರಿದ ಪ್ರಮಾಣದಲ್ಲಿ ಬಳಸಿದ್ದರೆ *ಬೆಳೆಯನ್ನೇ ನಾಶ ಮಾಡುತ್ತಾರೆ.* ಕೊಯ್ಲಿಗೆ ೧೫ ದಿನ ಮೊದಲಷ್ಟೇ ಕ್ರಿಮಿನಾಶಕಗಳನ್ನು ಸ್ಪ್ರೇ ಮಾಡಬಹುದು.

ಹಾಗೆ ಮಾಡಿದ ಜಮೀನಿನ ನಾಲ್ಕು ಮೂಲೆಯಲ್ಲೂ *ಎಚ್ಚರಿಕೆಯ ಫಲಕ*ಗಳನ್ನು ಹಾಕಬೇಕಾದುದು ಕಡ್ಡಾಯ. ಅಮೆರಿಕದಲ್ಲೂ ಭಾರತದಲ್ಲೂ ಜಮೀನು ಹೊಂದಿದ ಸರ್ದಾರ್ಜಿಗಳಿದ್ದಾರೆ. ಅವರಿಂದಾಗಿ ಪಂಜಾಬು ಮತ್ತು ಹರಿಯಾಣದಲ್ಲಿ ಅಮೆರಿಕದ ಮಾದರಿಯನ್ನೇ ಅನುಸರಿಸುತ್ತಾರೆ. ಅಲ್ಲಿನವರಿಗೆ ಅಷ್ಟೇ ಜಾಗೃತಿ ಬಂದಿದೆ.

ಕೃಷಿ ಅಧಿಕಾರಿಗಳು

ಅಮೆರಿಕದ ವಿಶ್ವವಿದ್ಯಾಲಯಗಳು ಪ್ರತಿ ಕೌಂಟಿಯಲ್ಲೂ (ಜಿಲ್ಲೆಗಳು) ತಮ್ಮ ಸಂಶೋಧಕರನ್ನು ನೇಮಕ ಮಾಡುತ್ತವೆ. ಅವರಿಗೆ ಬೇಕಾದ ಸೌಲಭ್ಯಗಳನ್ನು ಕೌಂಟಿಗಳ ಆಡಳಿತ ಒದಗಿಸುತ್ತದೆ. ಸಂಶೋಧಕರು *ಆಯಾ ಪ್ರದೇಶದ ಕೃಷಿಯ ತೊಂದರೆಗಳನ್ನು ಪತ್ತೆ ಮಾಡಿ* ಸಂಶೋಧನೆಗಳನ್ನು ನಡೆಸುತ್ತಾರೆ. ಬೆಳೆಗಾರರಿಗೆ ಮಾಹಿತಿ ಕೊಡುತ್ತಾರೆ. ಅಮೆರಿಕದಲ್ಲಿ ಪ್ರತಿಯೊಂದು ಕ್ಷೇತ್ರದವರೂ ತಮ್ಮ ಜ್ಞಾನವನ್ನು *ನವೀಕರಿಸಿಕೊಳ್ಳುತ್ತಿರಬೇಕಾಗುತ್ತದೆ.* ವಿಚಾರ ಸಂಕಿರಣಗಳು, ಹೊಸ ಗ್ರಂಥಗಳ ಅಧ್ಯಯನ ವೈದ್ಯರಿಗೂ ಬೇಕು, ಬೆಳೆಗೆ ಔಷಧ ಹೊಡೆಯುವವರಿಗೂ ಬೇಕು. ಎರಡು ವರ್ಷಕ್ಕೊಮ್ಮೆ ಪರವಾನಗಿಯನ್ನು ನವೀಕರಿಸುವಾಗ ಇದನ್ನು ಗಮನಿಸಬೇಕಾಗುತ್ತದೆ. ಅರ್ಹರಲ್ಲದವರು ಪರವಾನಗಿ ಕಳೆದುಕೊಳ್ಳುತ್ತಾರೆ. ಭಾರತದಲ್ಲೂ ಪ್ರತಿ ತಾಲ್ಲೂಕಿನಲ್ಲೂ ಕೃಷಿ ಅಧಿಕಾರಿಗಳಿರುತ್ತಾರೆ, ನಿಯಮಗಳ ವ್ಯವಸ್ಥೆಯೂ ಇದೆ. ಆದರೆ *ಅಲ್ಲಿ ಯಾರಾದರೂ ಪದವಿ ಪಡೆದ ಮೇಲೆ ಪುಸ್ತಕ ಹಿಡಿಯುವರೆ?*

ಹೆಚ್ಚು ಇಳುವರಿಗೆ ಕಾರಣ

ಅಮೆರಿಕದಲ್ಲಿ ಕೊಯ್ಲಾದ ಫಸಲಿನ ಸಂರಕ್ಷಣೆಗೆ ವ್ಯವಸ್ಥೆ ಇದೆ. ಜಮೀನಿನಿಂದ ತಂದ ಫಸಲಿಗೆ ತಂಗಾಳಿಯನ್ನು ಹಾಯಿಸಿ ಶಾಖವನ್ನು ತೆಗೆಯುತ್ತಾರೆ. ಇದರಿಂದಾಗಿ ಅದರ *ತಾಜಾತನ* ಮೂರು ವಾರಗಳ ಕಾಲ ಹಾಗೆಯೇ ಉಳಿಯುತ್ತದೆ. ಇದರಿಂದಾಗಿ ಫಸಲನ್ನು ದೇಶದ ಮೂಲೆಯಿಂದ ಮೂಲೆಗೆ ತಾಜಾ ಆಗಿಯೇ ಸಾಗಿಸುವುದು ಸಾಧ್ಯವಾಗಿದೆ. ಪ್ರತಿ ರಾಜ್ಯವೂ ಎಲ್ಲ ಬೆಳೆಯನ್ನು ಬೆಳೆಯಬೇಕಾದ ಅಗತ್ಯ ಇದರಿಂದಾಗಿ ತಪ್ಪಿದೆ. ಆಯಾ ಜಾಗದ *ಮಣ್ಣಿನ ಗುಣಕ್ಕೆ ತಕ್ಕ ಬೆಳೆಯನ್ನಷ್ಟೇ ಬೆಳೆದು* ಹೆಚ್ಚು ಇಳುವರಿ ತೆಗೆಯುವುದು ಸಾಧ್ಯವಾಗಿದೆ.

ಫಸಲಿನ ಮೌಲ್ಯ

ಇದರ ಜತೆಗೆ ಫಸಲಿನ ಮೌಲ್ಯದ ಹೆಚ್ಚಳಕ್ಕೂ ಮಾರ್ಗಗಳನ್ನು ಕಂಡುಕೊಂಡಿದ್ದಾರೆ. ಉದಾಹರಣೆಗೆ ಮುಸುಕಿನ ಜೋಳ ಒಂದರಲ್ಲೇ ಹಲವಾರು ರೀತಿಯ ಆಹಾರ ಪದಾರ್ಥಗಳನ್ನು ತಯಾರಿಸಿ ಅದರ ಪ್ರಯೋಜನವನ್ನು ಹೆಚ್ಚಿಸಿದ್ದಾರೆ. ಇದರಿಂದ ಒಂದಕ್ಕೆ ನಾಲ್ಕರಷ್ಟು ಲಾಭವೂ ದೊರೆಯುತ್ತದೆ. ರೈತನಿಗೂ ಇದರಿಂದ ಲಾಭವಾಗಿದೆ.

ತಳಿಗಳ ಗುಣ

ಹಣ್ಣು ತರಕಾರಿಗಳ ಸಾಗಣೆಗೆ ಅನುಕೂಲವಾಗುವಂತೆ ತಳಿಗಳನ್ನು ಬೆಳೆಸುವ ಕ್ರಮ ಅಮೆರಿಕದಲ್ಲಿದೆ. ಉದಾಹರಣೆಗೆ ದೂರಕ್ಕೆ ಸಾಗಿಸುವ ಟೊಮೆಟೋದ ಸಿಪ್ಪೆ ಗಟ್ಟಿಯಾಗಿರುವಂತೆ ತಳಿಯನ್ನು ರೂಪಿಸುತ್ತಾರೆ. ಬೆಳೆಯ ಎಲ್ಲ ಹಂತಗಳಲ್ಲೂ ಅಮೆರಿಕದ ರೈತರು ಯಂತ್ರಗಳನ್ನು ಬಳಸುತ್ತಾರೆ.

ಇಂಡಿಯಾದಲ್ಲೂ ಸಜ್ಜೆ, ಗೋಧಿ ಮೊದಲಾದ ಧಾನ್ಯಗಳ ಒಳ್ಳೆಯ ತಳಿಗಳನ್ನು ರೂಪಿಸಿದ್ದಾರೆ. ಒಳ್ಳೆಯ ಟೊಮೆಟೊ ಬೀಜಗಳನ್ನು ಅಮೆರಿಕಕ್ಕೆ ಒದಗಿಸುವುದು ಭಾರತ ದೇಶ.

ಕ್ಯಾಲಿಫೋರ್ನಿಯಾದಲ್ಲಿ ಫಲವತ್ತಾದ ಭೂಮಿಯೂ ಇದೆ. ಉದಾಹರಣೆಗೆ ಇಲ್ಲಿನ ರೈತರು ೪೦,೦೦೦ ಹೆಕ್ಟೇರ್ ಭೂಮಿಯಲ್ಲಿ ಮೂರು ಬಿಲಿಯನ್ ಡಾಲರ್ ಮೌಲ್ಯದ ಲೆಟ್ಯೂಸ್ ಬೆಳೆಯುತ್ತಾರೆ.

ಸಂಕೇತಿಗಳಿಗೆ ಕರತಲಾಮಲಕ

ಸುಬ್ಬರಾವ್ ಪಿರಿಯಾಪಟ್ಟಣ, ಬಸವಾಪಟ್ಟಣ ಮೊದಲಾದ ಊರುಗಳಲ್ಲಿ *ಸಂಕೇತಿ ಸಮುದಾಯದವರು ಮಾಡುವ ಕೃಷಿಯನ್ನು ಹತ್ತಿರದಿಂದ* ಕಂಡಿದ್ದಾರೆ. ಸಂಕೇತಿಗಳ ಬೆಳೆಯ ರೀತಿಯನ್ನು ಅಮೆರಿಕದೊಂದಿಗೆ ಹೋಲಿಸುವುದು ಕಷ್ಟವೆನ್ನುತ್ತಾರೆ ಅವರು. ಏಕೆಂದರೆ ಅಮೆರಿಕದಲ್ಲಿ ತೆಂಗು, ಅಡಿಕೆ ಬೆಳೆಯುವುದಿಲ್ಲ. "ಆದರೂ *ವ್ಯವಸಾಯವನ್ನು ಸಂಕೇತಿ ಸಮುದಾಯವು ಕರತಲಾಮಲಕ ಮಾಡಿಕೊಂಡಿದೆ ಎಂಬುದರಲ್ಲಿ*

ಸಂಶಯವಿಲ್ಲ. ಎಂ.ಎನ್.ಶ್ರೀನಿವಾಸ್ ಅವರು *A Forgotten Village*ನಲ್ಲಿ ಸಂಕೇತಿ ಸಮುದಾಯದ ಉಲ್ಲೇಖ ಮಾಡಿರುವುದು ಯಥಾ ಯೋಗ್ಯವಾಗಿದೆ" ಎಂಬುದು ಅವರ ಮಾತು.

ನೀರು ಹಾಕಲು ಬಂದವನು ತೋಟವನ್ನೇ ಕೊಂಡ

ಅಮೆರಿಕದ ರೈತರ ಸಾಹಸದ *ಸ್ಫೂರ್ತಿದಾಯಕ ಕಥೆ*ಗಳನ್ನು ಸುಬ್ಬರಾವ್ ಮನತುಂಬಿ ಹೇಳುತ್ತಾರೆ. ಅವರು ಹಾಗೆ ಹೇಳುವ ನೂರಾರು ಸಾಕ್ಷ್ಯಗಳಲ್ಲಿ ಒಂದು *ದೀದಾರ್‌ಸಿಂಗ್ ಬೇನ್ಸ್‌ನ ಕಥೆ*ಯಾಗಿದೆ. ಆತ ಅಮೆರಿಕಕ್ಕೆ ಬಂದದ್ದು *ಪೀಚ್ ಗಿಡಗಳಿಗೆ ನೀರು ಹಾಕುವ ಕಾಯಕ* ಮಾಡುವುದಕ್ಕೆ. ಒಂದು ವಿಸ್ತಾರವಾದ ತೋಟದಲ್ಲಿ ಅವನ ಜತೆ ಇನ್ನೊಬ್ಬ ಮೆಕ್ಸಿಕೋದಾತನೂ ಈ ಕೆಲಸ ಮಾಡುತ್ತಿದ್ದ. ಮೆಕ್ಸಿಕನರು ಶ್ರಮಜೀವಿಗಳು. 'ಆ ಮೆಕ್ಸಿಕನನ ಕೆಲಸವನ್ನೂ ನಾನೇ ಮಾಡುತ್ತೇನೆ. ಅವನಿಗೆ ಕೊಡುವ ಕೂಲಿಯಲ್ಲಿ ನನಗೆ ಅರ್ಧ ಕೊಟ್ಟರೆ ಸಾಕು' ಎಂದು ದೀದಾರ್ ಸಿಂಗ್ ಒಂದು ದಿನ ತನ್ನ ಮಾಲೀಕನಿಗೆ ಹೇಳಿದ. ಅಲ್ಲಿಂದ ಮುಂದೆ ತೋಟದ ಕೆಲಸಕ್ಕೆ ಉಳಿದವನು ದೀದಾರ್‌ಸಿಂಗ್ ಒಬ್ಬನೇ. ಎಲ್ಲವನ್ನೂ ಅಚ್ಚುಕಟ್ಟಾಗಿ ಮಾಡಿದ, ಮೂರು ವರ್ಷದಲ್ಲಿ ಮಾಡಿದ ಸಂಪಾದನೆಯನ್ನು ಬಳಸಿ *ಆ ತೋಟವನ್ನು ತಾನೇ ಕೊಂಡುಬಿಟ್ಟ.* ಇಂದು ಅವನು *ಜಗತ್ತಿನ ಅತಿ ಹೆಚ್ಚು ಪೀಚ್ ಉತ್ಪಾದಕ.* ಅವನು ತನ್ನ ಒಂದು ತೋಟದಿಂದ ಇನ್ನೊಂದು ತೋಟಕ್ಕೆ ಓಡಾಡುವುದು ತನ್ನ ಖಾಸಗಿ ವಿಮಾನದಲ್ಲಿ. ಈಗ ಅವನು ಬಿಲಿಯನ್ ಡಾಲರುಗಳ ಸರದಾರ.

ದ್ರಾಕ್ಷಿಗಾಗಿ ದುಡಿದ, ಜಗತ್ತಿನ ದೊಡ್ಡ ಬೆಳೆಗಾರನಾದ

ಅವರು ಹೇಳಿದ ಇನ್ನೊಂದು ಪ್ರಸಂಗವೂ ಸರ್ದಾರ್ಜಿಗೆ ಸಂಬಂಧಿಸಿದ್ದೇ. ಆತನ ಹೆಸರು ಚರನ್‌ಜಿತ್‌ಸಿಂಗ್ ಬಾತ್. ಆತ ಬಂದದ್ದು *ದ್ರಾಕ್ಷಿ* ತೋಟದಲ್ಲಿ ಕೆಲಸ ಮಾಡುವುದಕ್ಕೆ. ಅವನೊಬ್ಬನೇ ಅಲ್ಲ ಬಂದದ್ದು. ಹಾಗೆ ಬಂದವರು ಒಟ್ಟು ಏಳು ಜನ ಸೋದರರು. ಒಂದೇ ವರ್ಷದಲ್ಲಿ ಸೋತು ಸುಣ್ಣವಾಗಿ ಮೂವರು ಭಾರತಕ್ಕೆ ಹಿಂದಿರುಗಿದರು. ಉಳಿದ ನಾಲ್ವರು ಕಷ್ಟಪಟ್ಟು ದುಡಿದು ಮೊದಲು ಐದು ಎಕರೆ ತೋಟ ಕೊಂಡರು. ಮತ್ತಷ್ಟು ಮತ್ತಷ್ಟು ದುಡಿದು, ಕೊಂಡು, ಇದೀಗ ಅವರು ರೂಢಿಸಿರುವುದು *೧೪೦೦ ಎಕರೆ ದ್ರಾಕ್ಷಿ ತೋಟವನ್ನು.* ಜಗತ್ತಿನ ಅತಿ ಹೆಚ್ಚು ಒಣದ್ರಾಕ್ಷಿ ಉತ್ಪಾದಕರು ಅವರು. ಅವರ ತೋಟದ ನಡುವೆ ಐದು ಎಕರೆ ವಿಸ್ತೀರ್ಣದಲ್ಲಿ ಅವರ ವಾಸದ ಮನೆ ಇದೆ. ಅದೊಂದು ವೈಭೋಗ. ಆ ಮಂದಳದ ರೇಖೆ ಮಾಡುವುದಕ್ಕೇ (landscape) ಆತ ಒಂದು ಮಿಲಿಯನ್ ಡಾಲರ್‌ನಷ್ಟು ಹಣವನ್ನು ವ್ಯಯಿಸಿದ್ದಾನೆ.

ಇಡೀ ಅಮೆರಿಕದಲ್ಲಿರುವ ಹೊಟೇಲುಗಳು ಮತ್ತು ಮೋಟೆಲುಗಳ ಪೈಕಿ ಶೇ.೩೩ರಷ್ಟು ಗುಜರಾತಿಗಳು ಮತ್ತು ಪಂಜಾಬಿಗಳದೇ ಆಗಿದೆ. ಭಾರತೀಯರು ಹೆಮ್ಮೆಪಡಬಹುದಾದ ವಿಷಯ ಅದು.

ಮೂರು ಗುಣ ಇರಲಿ

ಶ್ರದ್ಧೆ, *ಕಷ್ಟ ಬಂದರೂ ಮುಂದೆ ಬರಬೇಕೆಂಬ ಆಸೆ* ಮತ್ತು *ಆತ್ಮ ವಿಶ್ವಾಸ*-ಈ ಮೂರು ಗುಣಗಳಿದ್ದರೆ ಯಾರಾದರೂ ಎಲ್ಲಾದರೂ ಮುಂದೆ ಬರಬಹುದು ಎನ್ನುತ್ತಾರೆ ಸುಬ್ಬರಾವ್. ಅಮೆರಿಕದಲ್ಲಿ ಅದಕ್ಕೆ *ಪೂರಕವಾದ ವ್ಯವಸ್ಥೆ*ಯೊಂದನ್ನು ರೂಪಿಸಿದ್ದಾರೆ. ಇಲ್ಲಿ ಯಶಸ್ಸು ಹೊಂದುವವರ ಶೇಕಡಾವಾರು ಪ್ರಮಾಣ ಹೆಚ್ಚು. *ವ್ಯಕ್ತಿವಿಶೇಷಗಳಿಗೆ ಅಮೆರಿಕದಲ್ಲಿ ಎಡೆ ಇದೆ.* ಎಲ್ಲರೂ ಇರುವಂತೆ ಇರದೆ ತನ್ನದೇ ದಾರಿಯಲ್ಲಿ ನಡೆಯುವವನನ್ನು ಭಾರತದಲ್ಲಿ ಅವಹೇಳನ ಮಾಡುತ್ತಾರೆ. ಬಿಲ್‌ಗೇಟ್ ಒಬ್ಬ ಪದವೀಧರನೇ ಅಲ್ಲ, ಆದರೆ ೧೫ ವರ್ಷದಿಂದ ಜಗತ್ತಿನ ಅತಿ ಶ್ರೀಮಂತನಾಗಿ ಉಳಿದು ಬೆಳೆದು ಬಂದಿದ್ದಾನೆ.

ಐಡಿಯಾ ಇದ್ದು ಅದಕ್ಕೆ *ವೈಜ್ಞಾನಿಕ ಬೆಂಬಲ*ವನ್ನು ಕೂಡಿಸಬಲ್ಲೆವಾದರೆ ಯಶಸ್ಸು ಸಾಧ್ಯ. ಬಾರಕ್ ಒಬಾಮಾಗೆ ಐಡಿಯಾ ಇತ್ತು. ಅಮೆರಿಕದ ಅಧ್ಯಕ್ಷನಾಗುವ ಕಡೆಗೆ ಗುರಿ ಇಟ್ಟು ಸರ್ವಸ್ವವನ್ನೂ ಆ ದಿಕ್ಕಿನಲ್ಲಿ ಕೇಂದ್ರೀಕರಿಸಿದ.

ಭಾರತದ ಕರಾಳತೆ

ಇದನ್ನೆಲ್ಲ ಹೇಳುವಾಗಲೇ ಸುಬ್ಬರಾವ್ *ಭಾರತದ ಕರಾಳತೆ*ಯನ್ನು ನೆನೆಯುತ್ತಾರೆ. ಅವರು ಅಲ್ಲಿನ ತಹಸೀಲ್ದಾರ್ ಕಚೇರಿಯಲ್ಲಿ ಕೇಳಲು ಹೋಗಿದ್ದು ತಮ್ಮ ವಿವಾಹದ ಪ್ರಮಾಣಪತ್ರವನ್ನು, ಅಲ್ಲಿದ್ದ ತಹಸೀಲ್ದಾರನು ಅವರ ಸ್ನೇಹಿತ. ಆದರೆ ಆತ ಮುಖಕೊಟ್ಟು ಮಾತಾಡಲಿಲ್ಲ, ತಿರಸ್ಕಾರ ಮಾಡಿದ. ಸುಬ್ಬರಾಯರ ತಮ್ಮನು ಹೋಗಿ ವ್ಯವಹಾರ ಕುದುರಿಸಿದ ಮೇಲೆ ಒಳಗೆ ಕರೆದು ಕುರ್ಚಿ ಹಾಕಿಸಿದ! ಅವರ ಬಂಧುವೊಬ್ಬಾಕೆ ಪಿಎಚ್.ಡಿ ನಿಬಂಧವನ್ನು ಸಿದ್ಧಪಡಿಸಿ ಒಪ್ಪಿಸಿದರು. ಆಕೆಯ ಪತಿ ಒಬ್ಬ ಸಿವಿಲ್ ಇಂಜಿನಿಯರ್. 'ನಮ್ಮ ಮನೆಗೆ ನಿನ್ನ ಗಂಡ ಬರಲಿ,

ನನ್ನ *ಮನೆಯನ್ನು ದುರಸ್ತಿ ಮಾಡಿಸಿಕೊಡಲಿ. ಆಮೇಲೆ ನಿಬಂಧಕ್ಕೆ ಸಹಿ* ಹಾಕುತ್ತೇನೆ' ಎಂದು ಹೇಳಿದ ಆ ಮಾರ್ಗದರ್ಶಕ! ಭಾರತದಲ್ಲಿನ *ಜನಸಂಖ್ಯೆ* ಅಳತೆಗೆಟ್ಟು ಬೆಳೆಯುತ್ತಿದೆ. ಯಾವ ಪ್ರಗತಿಯಾದರೂ ಅದರ ಫಲವು ಎಲ್ಲರಿಗೂ ತಲುಪುವುದಿಲ್ಲ ಎಂಬುದು ಸುಬ್ಬರಾವ್ ಅವರ ಮತ್ತೊಂದು ಪೇಚಾಟ.

ವಿಶೇಷ ಸಂಗತಿಗಳು ಮನೆಗೆ ಸಂಬಂಧಿಸಿದಂತೆಯೂ ಇವೆ

ಸುಬ್ಬರಾವ್ ತಮ್ಮ ಮನೆಯ ಸುತ್ತ ಏಪ್ರಿಕಾಟ್, ಪೀಚ್, ಸೇಬು, ಮರಸೇಬು, ಅಂಜೂರ ಮೊದಲಾದ ಮರಗಳನ್ನು ಬೆಳೆಸಿದ್ದಾರೆ. ಬಗೆಬಗೆಯ ಹೂಗಿಡಗಳೂ ಬಳ್ಳಿಗಳೂ ಅವರ ತೋಟದ ಅಂದವನ್ನು ಹೆಚ್ಚಿಸಿವೆ. ಬೆಟ್ಟದ ಜಿಂಕೆಗಳು ಅವರ ಹಿತ್ತಲಿಗೂ ಬರುತ್ತಿರುತ್ತವೆ. ಗುಲಾಬಿ ಗಿಡಗಳಿಗೂ ಅವು ಬಾಯಿ ಹಾಕುತ್ತವೆ. ಅಂಥ ಗಿಡಗಳು ಇನ್ನು ಒಂದು ವರ್ಷ ತಲೆ ಎತ್ತುವಂತಿಲ್ಲ. ಅದರಿಂದಾಗಿ ಇದೀಗ ಹಿತ್ತಲಿಗೆ ರಕ್ಷಣೆ ಮಾಡಿಕೊಂಡಿದ್ದಾರೆ. *ಮರದ ತೊಗಟೆಯನ್ನು* ಹರಡಿ ನೆಲವನ್ನು ಮುಚ್ಚಿರುವುದರ ರಹಸ್ಯವನ್ನು ಅವರು ತಿಳಿಸಿಕೊಟ್ಟರು. ಮಣ್ಣನ್ನು ತೊಗಟೆಯಿಂದ ಮುಚ್ಚುವುದರಿಂದ ಅಲರ್ಜಿ ಆಗುವುದನ್ನು ತಪ್ಪಿಸಬಹುದು, ಅದು ಅಗ್ನಿನಿರೋಧಕವಾಗಿಯೂ ಕೆಲಸ ಮಾಡುತ್ತದೆ. ಅವರು ಆಗ ತಾನೆ ಕಟ್ಟಿಸುತ್ತಿದ್ದ ಬೇಲಿಯ *ತಳಹದಿಗೆ ನೀರು ಒಗೆಯದಂತೆ ಪ್ಲಾಸ್ಟಿಕ್ ಹಾಳೆಗಳಿಂದ ರಕ್ಷಣೆ* ಒದಗಿಸಿರುವುದೂ, ಅದನ್ನೂ ನಗರಸಭೆಯ ಪರೀಕ್ಷಕನು ಪ್ರತಿ ಹಂತದಲ್ಲೂ ಗಮನಿಸುವುದೂ ಭಾರತದಿಂದ ಬಂದ ನಮ್ಮಂಥವರಿಗೆ ವಿಶೇಷವೇ. ಹೊರಗೋಡೆಗಳ ತಳಮಟ್ಟದಲ್ಲಿರುವ ಗೂಡುಗಳು ಗಾಳಿ ಆಡುವುದಕ್ಕೆ. ಹಾಗಿಲ್ಲದಿದ್ದರೆ ಮರದ ಕಟ್ಟಣಕ್ಕೆ ತೇವ ಹತ್ತಿ ಫಂಗಸ್ ಬೆಳೆದು ಅಲರ್ಜಿ ಉಂಟಾಗುತ್ತದೆ. ಆದರೆ ಆ ಗೂಡು ಕಂಡರೆ ರೆಕೂನ್‌ಗಳು ನುಗ್ಗದೆ ಬಿಡುವುದಿಲ್ಲ. ಬೆಕ್ಕಿನ ಗಾತ್ರದ ಅವು ಹೆಗ್ಗಣಗಳಿಗಿಂತ ಹೆಚ್ಚು ದಾಂಧಲೆ ಮಾಡಲು ಶಕ್ತವಾದಂಥವು. ಅದಕ್ಕಾಗಿ ಗೂಡುಗಳಿಗೆ ಬಲವಾದ ಉಕ್ಕಿನ ಬಲೆಗಳ ರಕ್ಷಣೆಯನ್ನು ಒದಗಿಸಿದ್ದಾರೆ. *ಮೌಂಟನ್ ಲಯನ್‌ಗಳೂ ಇರುವ ಬೆಟ್ಟದಲ್ಲಿ ಅವರ ಮನೆ ಇದೆ* ಎಂಬುದೂ ನನಗೊಂದು ಸೋಜಿಗದ ವಿಷಯ. ಅವರ ಪಕ್ಕದ ಮನೆಯ ತಲೆಯ ಮೇಲೆ ಜೋಡಿಸಿರುವ ಸೋಲಾರ್ ಪ್ಯಾನಲ್‌ಗಳಿಂದ ಹುಟ್ಟುವ ವಿದ್ಯುತ್ತನ್ನು ಅವರು ವಿದ್ಯುತ್ ಕಂಪನಿಗಳಿಗೆ ಮಾರುತ್ತಾರೆ. ಅಂಥವೆಲ್ಲ ನಮಗೆ ವಿಶೇಷ ಸಂಗತಿಗಳೇ ಸರಿ.

ಮುದ್ದು ಸಂಸಾರ

ಡಾ.ಮೀನಾ ಅವರ ಬಾಲ್ಯವೂ ಬಡತನ ಮತ್ತು ಕಷ್ಟದಲ್ಲೇ ಕಳೆಯಿತು. *ಕಷ್ಟಗಳು ಪ್ರಗತಿಯ ಛಲವನ್ನು ಹುಟ್ಟಿಸುತ್ತವೆ* ಎನ್ನುವುದಕ್ಕೆ ಮೀನಾ-ಸುಬ್ಬರಾವ್ ಸಮಾನ ಸಾಕ್ಷಿಗಳು. ಅವರ ಮಗಳು ಚೈತ್ರ ಭರತನಾಟ್ಯವನ್ನು ಕಲಿಯುತ್ತಿದ್ದಾಳೆ, ಸ್ಪ್ಯಾನಿಷ್ ಭಾಷೆ ಅವಳಿಗೆ ಅಷ್ಟು ಚೆನ್ನಾಗಿ ಬಂದುದು ಅವಳನ್ನು ಶೈಶವದಲ್ಲಿ ನೋಡಿಕೊಂಡ ಸ್ಪ್ಯಾನಿಷ್ ಆಯಾಗಳಿಂದ. ಮಗ ಸುಶ್ರುತನಿಗೂ ಲಾಟಿನ್, ಗ್ರೀಕ್, ಸ್ಪ್ಯಾನಿಷ್ ಭಾಷೆಗಳೂ ಬರುತ್ತವೆ. ಪ್ರತಿಭಾವಂತನಾದ ಆತ ಮಾಧ್ಯಮಿಕ ಮತ್ತು ಪ್ರೌಢಶಾಲೆಗಳಲ್ಲಿ *ವಾಲೆಡಿಕ್ಟೋರಿಯನ್* ಆಗಿದ್ದಾತ. ಈಗ ಆತನ ಕಾಲೇಜು ಶಿಕ್ಷಣವೂ ಸಾನ್‌ಡಿಯಾಗೋದಲ್ಲಿ ನಡೆಯುತ್ತಿದೆ. ಇದು ಸುಬ್ಬರಾವ್ ಅವರ ಪುಟ್ಟ ಮುದ್ದು ಸಂಸಾರದ ಕಥೆ.

ಕೃಷಿಗೆ ಜಗತ್ತಿನ ಅತಿಶ್ರೇಷ್ಠ ಪ್ರಶಸ್ತಿ

ಮೊದಲೇ ಹೇಳಬೇಕಾಗಿದ್ದ ಹೆಮ್ಮೆಯ ವಿಷಯ ಇದು. ಅಮೆರಿಕನ್ ಫೈಟೋಪೆಥಲಾಜಿಕಲ್ ಸೊಸೈಟಿ ವರ್ಷಕ್ಕೊಂದು ಪ್ರತಿಷ್ಠಿತ ಪ್ರಶಸ್ತಿಯನ್ನು ವಿತರಿಸುತ್ತದೆ. ಸಸ್ಯರೋಗಕ್ಕೆ ಸಂಬಂಧಿಸಿದಂತೆ ಗಣನೀಯ ಸಂಶೋಧನೆ ಮಾಡಿದ ೬೦೦೦ ಪ್ರತಿಭಾವಂತ ವಿಜ್ಞಾನಿಗಳ ಪೈಕಿ ಅತಿ ಶ್ರೇಷ್ಠರೊಬ್ಬರು ಅದನ್ನು ಪಡೆಯುತ್ತಾರೆ. ಅಂಥ *ಪ್ರತಿಷ್ಠಿತ ಪ್ರಶಸ್ತಿ*ಯ ಗೌರವಕ್ಕೆ ಪಾತ್ರರಾಗಿರುವ ವಿಜ್ಞಾನಿ ಕನ್ನಡದ ಕೃಷ್ಣ ವಿ. ಸುಬ್ಬರಾವ್.

೨೪. ಸಂಶೋಧನೆಯ ರತ್ನಕರಂಡಕಗಳು

ಪ್ರ: ಸಮುದಾಯ ಅಧ್ಯಯನ ಕೇಂದ್ರ, ಮೈಸೂರು

ಅ) ಸಂಕೇತಿ: ಒಂದು ಅಧ್ಯಯನ

ಡಾ|| ಬಿ.ಎಸ್.ಪ್ರಣತಾರ್ತಿಹರನ್ ೨೦೦೩

(ಕರ್ನಾಟಕ, ತಮಿಳುನಾಡು ಮತ್ತು ಕೇರಳ ರಾಜ್ಯಗಳಲ್ಲಿರುವ ಎಲ್ಲ ಸಂಕೇತಿ ನೆಲೆಗಳನ್ನೂ ಸಂದರ್ಶಿಸಿ, ಎಲ್ಲ ಮುಖ್ಯ ವ್ಯಕ್ತಿಗಳನ್ನೂ ಕಂಡು ಪ್ರಧಾನವಾಗಿ ಕ್ಷೇತ್ರಕಾರ್ಯ ವಿಧಾನದಿಂದ ರಚಿಸಿದ ಸಂಪ್ರಬಂಧ 'ಸಂಕೇತಿ: ಒಂದು ಅಧ್ಯಯನ'. ಸಂಕೇತಿಗಳ ಕೃಷಿಗೆ ಸಂಬಂಧಿಸಿದಂತೆ ಈ ಅಧ್ಯಯನವು ಕಂಡುಕೊಂಡ ಸತ್ಯವನ್ನು ಇಲ್ಲಿ ಸಂಗ್ರಹಿಸಲಾಗಿದೆ. ಸಂಕೇತಿಗಳ ಸಮಗ್ರ ಬದುಕನ್ನು ಕೃಷಿಯು ಹೇಗೆ ಪ್ರಭಾವಿಸಿದೆ ಎಂಬುದನ್ನು ಇಲ್ಲಿ ಕಾಣಬಹುದು)

ಕರ್ನಾಟಕದಲ್ಲಿ ಮರುವಲಸೆಗಳು ಪು.61-62

ಕರ್ನಾಟಕದ ಸಂಕೇತಿಗಳ ಮರುವಲಸೆಗಳ ಹಲವು ಕಾರಣಗಳಲ್ಲಿ *ಬೇಸಾಯಸಂಬಂಧೀ ಕಾರಣಗಳೂ ಗಮನಾರ್ಹವಾದವು.* ವ್ಯವಸಾಯ ಕೇಂದ್ರಿತ ಬದುಕಿನ ಮರುವಲಸೆಯ ವಿವಿಧ ಸಂದರ್ಭಗಳು ಇವು:

1) ನೆಂಟಸ್ತಿಕೆಯ ಕಾರಣಕ್ಕೆ ಆಸ್ತಿ ಕೊಟ್ಟು ಕರೆಸಿಕೊಂಡುದು.

2) ಉತ್ತಮ ಜಮೀನಿನ ಅನ್ವೇಷಣೆ ಮಾಡಿಕೊಂಡು ಹೋದುದು.

3) ದರಖಾಸ್ತು ಜಮೀನು ದೊರೆತುದರಿಂದ ಹೋದುದು.

4) ಆಸ್ತಿ ಸಾಲದಾದಾಗ ಸುತ್ತಣ ಪ್ರದೇಶಗಳಿಗೆ ಹೋಗಿ ತೋಟಗಳನ್ನು ಬೆಳೆಸಿ ಮಕ್ಕಳನ್ನು ವಿವಿಧ ಎಡೆಗಳಲ್ಲಿ ನೆಲೆಗೊಳಿಸಿದುದು.

5) ಹೆಂಡತಿಯ ತವರಿನಲ್ಲಿ ಗಂಡು ಸಂತಾನವಿಲ್ಲದುದರಿಂದ ಉಸ್ತುವಾರಿಗೆ ಹೋದುದು.

6) ಮನೆವಾಳ್ತನಕ್ಕೆ ಇರಿಸಿಕೊಂಡುದು.

7) ತೋಟಕ್ಕೆ ಎಟ್ಟೆ ಬಂದುದು, ಕೆರೆ ಒಣಗಿದುದು, ಒದೆ ನೀರಿನಿಂದ ಬಾಗಾಯಿತು ಕರಗಿದುದು ಇತ್ಯಾದಿ.



ವ್ಯವಸಾಯಕ್ಕೆ ಹೊಂದಿಕೊಂಡ ಅಧ್ಯಾತ್ಮ

ಕರ್ನಾಟಕದ ನೆಲೆಗಳು ಪು.69-70

ಕೌಶಿಕ ಮತ್ತು ಬೆಟ್ಟದಪುರದ ಸಂದರ್ಭಗಳಲ್ಲಿಯೂ ವ್ಯಕ್ತವಾಗುವಂತೆ ಸಂಕೇತಿಗಳ ಅನೇಕ ಪ್ರಾಥಮಿಕ ನೆಲೆಗಳು ನದಿಗಳಿಂದ ಹತ್ತಾರು ಮೈಲು ದೂರ ಇದ್ದಂಥ'ವು. ಅವರ ಆದ್ಯತೆ, *ಕೆರೆಗಳನ್ನಾಶ್ರಯಿಸಿ ಮಾಡಬೇಕಾಗಿದ್ದ ವ್ಯವಸಾಯವೇ* ಆಗಿದ್ದುದರಿಂದ ಅದು ಅನಿವಾರ್ಯವಾಗಿತ್ತು. . . ಈ ಜನ, ಸೋಮನಹಳ್ಳಿಯಲ್ಲಿ ತೋಟದಲ್ಲಿ ಅಗತೆ ಮಾಡಿ ರಾತ್ರಿ ಬರಗೂರಿನ ಮನೆಗೆ ಹಿಂದಿರುಗುತ್ತಿದ್ದರು.

ಪು. 70

. . . ಕೌಶಿಕದ 'ಲಕ್ಷ ಮರದ ಅಗ್ರ', ಬೆಟ್ಟದಪುರದ ನಾಲ್ಕು ನೂರು ಎಕರೆಯ ಬಾಗಾಯಿತು ಪ್ರಸಿದ್ಧವಾದವು. ಕರ್ನಾಟಕದಲ್ಲಿ ಅವರು ನೆಲೆಸಿದ ಎಲ್ಲೆಡೆಗಳಲ್ಲಿ ಅಕ್ಷರಶಃ *ಸಹಸ್ರಾರು ಎಕರೆ ತೋಟಗಳನ್ನು ಬೆಳೆಸಿದ್ದಾರೆ.* ಸೋಮನಹಳ್ಳಿಯಿಂದ ವಲಸೆ ಹೊರಟವರು ದಾರಿಯುದ್ದಕ್ಕೂ ಈರುಳ್ಳಿಯನ್ನು ಊರಿ, ಬೇಗ ಚೆನ್ನಾಗಿ ಮೊಳೆತ ಜಾಗವನ್ನೇ (ಆನಂದೂರು) ಆರಿಸಿಕೊಂಡರೆಂಬುದರ ತಾಂತ್ರಿಕ ಮಹತ್ವ ಏನಾದರೂ ಇರಲಿ, ಅವರ *ಲಕ್ಷ್ಯ ವ್ಯವಸಾಯಾನುಕೂಲವೇ* ಆಗಿತ್ತೆಂಬುದು ಮುಖ್ಯವಾಗುತ್ತದೆ . . .

ಪು. 71

ಅವರಿಗೆ ದೊರೆತ ಎಲ್ಲ 'ವೃತ್ತಿ'ಗಳೂ *ಉಳುವವನಿಗೆ ಭೂಮಿ* ದೊರಕಿದ ಸಾರ್ಥಕ ನಿದರ್ಶನಗಳೇ . . .

ವ್ಯವಸಾಯ ಮತ್ತು ಅನುಷ್ಠಾನ ಅವರ ಜೀವನದ ಪ್ರಮುಖ ಅಂಗಗಳೆಂಬ ಸಂಗತಿಯ ಹಿನ್ನೆಲೆಯಲ್ಲಿ, ಅವರ ನೆಲೆಗಳೆಲ್ಲವೂ ಹಳ್ಳಿಗಳೇ ಆಗಿದ್ದುದನ್ನು ಗಮನಿಸಬಹುದು.

ಸಂಕೇತಿಗಳು ಕರ್ನಾಟಕದಲ್ಲಿ ನಿರ್ದಿಷ್ಟ ನೆಲೆಗಳನ್ನೇ ಆರಿಸಿಕೊಳ್ಳಲು ಇದ್ದ ಕಾರಣಗಳು ಪು. 71-72

1) *ಅಡಿಕೆ ಬೆಳೆಯಲು ಅತ್ಯುತ್ತಮ ಹವೆ* ಎಂದರೆ ಎರಡು ಸಾವಿರದ ನಾಲ್ಕು ನೂರು ಅಡಿ ಎತ್ತರದ ಘಟ್ಟದ ಸೆರಗು.

2) ಮಂಗಳೂರು (ಕರಾವಳಿ) ಅಡಿಕೆಯು ಗೋಟಿಗೆ ಯೋಗ್ಯವಾದರೆ, ಸಂಕೇತಿಗಳು ನೆಲಸಿದ ಈ ಪ್ರದೇಶಗಳಲ್ಲಿ ಬೆಳೆಯುವ ಅಡಿಕೆಯು *ಗೋಟು, ಬಟ್ಟಲು, ಚೂರು, ಚಾತರಗಳೆಲ್ಲಕ್ಕೂ ಸಾಧ್ಯ* (ತಿಪ್ಪೂರು ಅಡಿಕೆಯು ಕಳಿಗೆ, ಚಿಲಕುಂದದ ಅಡಿಕೆಯು ತೂಕಕ್ಕೆ ಹೆಚ್ಚು ಪ್ರಸಿದ್ಧ).

3) ಕರಾವಳಿಯಲ್ಲಿ ಮಳೆ ಹೆಚ್ಚಾದುದರಿಂದ ರೋಗ ಹೆಚ್ಚು. ಈ ಪ್ರದೇಶದಲ್ಲಿ ಅಲ್ಲಿನಂತೆ *ಕೊಳೆ ರೋಗ* ಇಲ್ಲ.

4) ಘಟ್ಟದ ಮೇಲೆ ಬಿಸಿಲು ಕಡಮೆ; ಮಳೆ, ಶೈತ್ಯ ಹೆಚ್ಚು. ಆದುದರಿಂದ ಫಸಲಿನ ಅವಧಿ ದೊಡ್ಡದು.

5) ಮಲೆನಾಡಿನಲ್ಲಿ ಅಡಿಕೆಯು ಶುದ್ಧ ಬೆಳೆಯಾದರೆ, ಈ ಪ್ರದೇಶದಲ್ಲಿ ಅದರ ಜೊತೆಗೆ ಹಂಬು, ಬಾಳೆ, ತೆಂಗು, ಮಾವು *ಪೋಷಕ ಬೆಳೆಗಳು.*

6) *'ತೇವ ಆರಬಾರದು, ನೀರು ನಿಲ್ಲಬಾರದು'* ಎಂಬ ಮೂಲಭೂತ ಅಗತ್ಯವನ್ನು ಇವರು ನೆಲೆಸಿದ ಪ್ರದೇಶವು ಸಮರ್ಥವಾಗಿ ಪೂರೈಸುತ್ತದೆ. ಆದುದರಿಂದಲೇ ಇಲ್ಲಿ ಇಳವರಿ ಹೆಚ್ಚು.

7) ಇಲ್ಲಿನ ಕಪ್ಪು ಜಿಗುಟು ಮಣ್ಣಿನ ಕೆರೆ ಬಯಲುಗಳು ಅಡಿಕೆ ತೋಟಗಳಿಗೆ ಅನುಕೂಲವಾಗಿದೆ. ಸಮನಾದ ಹರಹುಳ್ಳ (well distributed) ಮಳೆ; ಮೂಡಲ ಮತ್ತು ಪಡುವಲ ಸೋನೆಗಳೆರಡಕ್ಕೂ ಈಡಾಗುವುದು, ಹಾಸನ, ಚಿಕ್ಕಮಗಳೂರು, ಶಿವಮೊಗ್ಗ, ಮಡಿಕೇರಿಯ ಪಶ್ಚಿಮ ಭಾಗದ ಮುನ್ನೂರು ಅಂಗುಲ ಮಳೆಯು ಮಲೆನಾಡು ದೂರವಾದಂತೆಲ್ಲಾ ನಲವತ್ತು ಅಂಗುಲಗಳಿಂದ ಇಪ್ಪತ್ತೈದು ಅಂಗುಲಗಳಿಗೆ ಇಳಿಯುವುದು ಇವರಿಗೆ ಸಹಾಯಕವಾಗಿವೆ. *ಅತಿವೃಷ್ಟಿ, ಅನಾವೃಷ್ಟಿಗಳಿಂದ ಮುಕ್ತವಾದ ಭಾಗವೂ ಇದಾಗಿದೆ.*

   ಸಂಕೇತಿ ವಲಸಿಗರು ಪಂಚಲಿಂಗಕ್ಷೇತ್ರವಾದ ತಲಕಾಡಿನ ಬಳಿ ಉಳಿಯದೆ, ಪಶ್ಚಿಮ ಘಟ್ಟಗಳನ್ನೇರದೆ, ಮಲೆನಾಡಿನ ಸೆರಗಿನ ಕೆರೆಗಳ ಬಯಲುಗಳನ್ನಾಶ್ರಯಿಸಿದ್ದರ ಕಾರಣಗಳಲ್ಲಿ *ಹವಾಗುಣ ಭೂಗುಣಗಳು ಪ್ರಧಾನವಾಗಿ ತಮ್ಮ ಪ್ರಭಾವ ಬೀರಿವೆ* ಎಂಬುದು ಇದರಿಂದ ಸ್ಪಷ್ಟವಾಗುತ್ತದೆ.

ದಕ್ಷಿಣದ ನೆಲೆಗಳು ಪು.73

ದಕ್ಷಿಣದ ಸಂಕೇತಿಗಳ ಅಬಾಧಿತ ಪಾರಂಪರಿಕ ವ್ಯವಸ್ಥೆಯ ಕಾರಣದಿಂದಾಗಿಯೇ *ವೈದಿಕಕ್ಷೇತ್ರಗಳು ವ್ಯವಸಾಯಕ್ಕಿಂತ ಮೇಲುಗೈ ಪಡೆದವು* . . . ಅಂಥ ನೆಲೆಗಳು ಹಳ್ಳಿಗಳೇ ಆಗಿರಬೇಕೆಂಬ ಮಿತಿ ಅವರಿಗೆ ಎದುರಾಗಲಿಲ್ಲ.

ಪು.79

ಕರ್ನಾಟಕದಲ್ಲಿ ವ್ಯವಸಾಯಕ್ಕೆ ಮತ್ತು ದಕ್ಷಿಣದಲ್ಲಿ ದೇವಸ್ಥಾನಕ್ಕೆ ಬಿದ್ದ ಒತ್ತು, *ವ್ಯವಸಾಯ ಮತ್ತು ವೈದಿಕತೆಯ ಸಮನ್ವಯದ ಮಿತಿಯಲ್ಲಿಯೇ* ನಡೆದುದರಿಂದ, ಎರಡೂ ಪ್ರದೇಶಗಳ ಮಿತ-ಹರಹಿನ ಭೂ ಮತ್ತು ವಾಯುಗುಣ ಹಾಗೂ ಸುರಕ್ಷಿತತೆಯ ತೀವ್ರ ಸಾಮ್ಯವನ್ನು ಗುರುತಿಸಬಹುದಾಗಿದೆ . . .

ಕರ್ನಾಟಕ - ವಲಸೆಗಳ ಪ್ರೇರಣೆ ಪು.80

ಕರ್ನಾಟಕದಲ್ಲಿ ಸಂಕೇತಿಗಳ *ಮರುವಲಸೆಯು ವ್ಯವಸಾಯಪ್ರಧಾನವಾಗಿಯೇ ನಡೆಯಿತು* ಮತ್ತು ದೂರದೇಶದಿಂದ ಬಂದ ಈ ವೈದಿಕ ಕೃಷಿಕ ಸಮುದಾಯಕ್ಕೆ ಕಾಲಕ್ರಮದಲ್ಲಿ ಹೊಸ ಹೊಸ ಸಾಗುವಳಿ ಪ್ರದೇಶಗಳ ಅಗತ್ಯವೂ ಇತ್ತು ಎಂಬ ಅಂಶವು, ವೃತ್ತಿಗಳ ಸ್ವರೂಪದಲ್ಲಿಯೋ ಮತ್ಯಾವುದೋ ರೂಪದಲ್ಲಿಯೋ *ಜಮೀನು ದೊರೆತಾಗಲೆಲ್ಲಾ ಅಗತ್ಯಬಿದ್ದಲ್ಲಿ ಅವರು ಮತ್ತೆ ಮತ್ತೆ ವಲಸೆ* ಹೊರಟಿರುವ ಸಂಗತಿಯಿಂದ ಸ್ಪಷ್ಟವಾಗುತ್ತದೆ . . .



ಬೇಸಾಯದ ಮಡಿಲಲ್ಲಿಯೇ ಲವಲವಿಕೆಯ ಬದುಕು : ಕರ್ನಾಟಕ

ಪು.90

ನೀರಾವರಿ ಅನುಕೂಲಗಳಾದಂತೆ ಮಧ್ಯದೇಶದ ಅನೇಕ ಗ್ರಾಮಗಳಲ್ಲಿ ಸಂಕೇತಿಗಳು ವ್ಯಾಪಕವಾಗಿ ಚದುರಿರುವುದನ್ನು ಕಾಣಬಹುದು.

ಬೇಸಾಯ ಪು.94

. . . ಕರ್ನಾಟಕಕ್ಕೆ ವಲಸೆ ಬಂದ ಸಂಕೇತಿಗಳು, *ಗಾಢವಾಗಿ ಬೇಸಾಯವನ್ನು ಆಧರಿಸಿಯೇ* ತಮ್ಮ ಭಗ್ನಗೊಂಡ ಜೀವನಾಧಾರವನ್ನು ಮತ್ತೆ ರೂಪಿಸಿಕೊಂಡರು. 'ದಕ್ಷಿಣ'ದ ಸಂಕೇತಿಗಳಲ್ಲಿ ಪೌರೋಹಿತ್ಯ ಮತ್ತು ದೇವಸ್ಥಾನಗಳ ವೈದಿಕ ಸೇವೆಯು ಮೇಲುಗೈ ಪಡೆದು ಬೇಸಾಯವು ಪರೋಕ್ಷವಾಗುತ್ತ ಬಂತು. . .

ತೋಟಗಾರಿಕೆ ಪು.95

ಅವರ ಬೇಸಾಯದ ಮೂಲಸ್ವರೂಪವು (originality) *ಅತಿಶಯವಾಗಿರುವುದು ತೋಟಗಾರಿಕೆಯಲ್ಲಿ*.

1) ಇಲ್ಲಿ, ತಾವೇ ದುಡಿಯುತ್ತಾರೆ; ಪ್ರಾಣಿ ಹಿಂಸೆಗೆ ಅವಕಾಶವಿಲ್ಲ.

2) *ಸ್ವಂತ ಪರಿಶ್ರಮದಿಂದಲೇ* ಇದರ ನಿರ್ವಹಣೆ ಸಾಧ್ಯ; ಇತರರನ್ನು ಅವಲಂಬಿಸಬೇಕಾಗಿರುವುದಿಲ್ಲ.

3) ತೋಟದ ಕೃಷಿಯ 'ಕಾಲ'ದ ಬಗೆಗಿನ *ನಮ್ಯತೆ*(flexibility) ಅವರ ವೈದಿಕ ವೃತ್ತಿಗೆ ಹೊಂದುವ ಹಾಗೆ ನಿರ್ದಿಷ್ಟ ವೇಳೆಯ ಕ್ಷಿಪ್ರ ವ್ಯವಸಾಯವನ್ನು ನಿರೀಕ್ಷಿಸುವ ಹೊಲಗದ್ದೆಗಳ ಕೃಷಿ ಹೊಂದುವುದಿಲ್ಲ.

4) ತೋಟದ ನೆರಳು, ಶಾಂತಿ ಮತ್ತು ತಂಪಾದ ಹವೆಯು *ದುಡಿಯುತ್ತಲೇ ಅಧ್ಯಯನ ಮಾಡುವುದಕ್ಕೂ*, ಮನೆಯಲ್ಲಿ ಕಲಿಯುವುದಕ್ಕೆ ನಿಷೇಧವಿರುವ ಮಂತ್ರಭಾಗಗಳನ್ನು ಕಲಿಯುವುದಕ್ಕೂ, ಅನುಕೂಲವಾದುದು.

ಪು.95-96

. . . *ಅನೇಕ ವಿಧದ ಶೋಷಣೆಗಳಿಗೂ ಬಲಿಯಾಗುತ್ತಿದ್ದ ಸಂಕೇತಿ ರೈತನು* ಬಡತನ ಮತ್ತು ಸಾಲಸೋಲಗಳ ದಾಸನಾದುದು ಭಾರತದ ಇತರ ರೈತರಿಗೆ ಸಮಾನ ಸಂಗತಿಯೇ ಆಗಿದೆ. *ಶೋಷಣೆ* ಮಾಡುವ ಪುಂಡರ ಕಾಟವು ಮಿತಿಮೀರಿದಾಗ ಗೊದಮಟ್ಟೆಯಿಂದ ಬಡಿದು ತಮ್ಮ ಅಸ್ತಿತ್ವವನ್ನು ಉಳಿಸಿಕೊಳ್ಳುವ ಅನಿವಾರ್ಯಕ್ಕೆ ಒಳಗಾದ ಪ್ರಸಂಗಗಳಿವೆ. ಅದರಿಂದಾಗಿಯೇ *'ಗೊದಮಟ್ಟೆ ಸಂಕೇತಿ'* ಎಂಬ ವಿಶೇಷಣವು ಆಧುನಿಕ ದೃಷ್ಟಿಯಿಂದ *'ಜಾಗೃತಿ'*ಗಾಗಿ ದೊರೆತ ಪ್ರಶಸ್ತಿಯೂ ಆಗಿದೆ.

ಪು.96

ಕರ್ನಾಟಕದಲ್ಲಿ ಸಂಕೇತಿಗಳು ತಮ್ಮ ನೆಲೆಗಳನ್ನು ಆರಿಸಿಕೊಳ್ಳುವಾಗ ಇದ್ದ ಬಲವಾದ ಪ್ರೇರಣೆ ತೋಟಗಾರಿಕೆಗೆ ಅನುಕೂಲ ಸನ್ನಿವೇಶ ಎಂಬುದು ಮತ್ತು ಅವರು ನೆಲೆಸಿದ ಎಡೆಗಳಲ್ಲೆಲ್ಲಾ ಸಹಸ್ರಾರು ಎಕರೆ ತೋಟಗಳನ್ನು ಬೆಳೆಸಿದುದು, ಅವರ *ಪೂರ್ವಪರಂಪರೆಯ ಬಲದಿಂದಲೇ* . . . . ಕರ್ನಾಟಕದ ಸಂಕೇತಿ ರೈತನ ತೋಟದ ಪ್ರಧಾನ ಬೆಳೆ ಅಡಿಕೆ; ಮತ್ತು, ಆ ಕ್ಷೇತ್ರದಲ್ಲಿ ಅವನು *ನೈಪುಣ್ಯ* ಸಾಧಿಸಿರುವುದು ತೋಟಗಳ ರಚನೆಯಲ್ಲಿಯೂ ಕಾಣಿಸುತ್ತದೆ: ಹಳ್ಳ ಹಸಿ ಇರುವ ಎರೆ ನೆಲದ ಆಯ್ಕೆ; ನೀರು ಯಾವಾಗಲೂ ಇದ್ದು ತನುವಾಗಿಡುವ ಕೆರೆಗಳು; ಜೋವು ಹರಿಯುತ್ತಿರುವ ಪಿಳ್ಳೆಗಳು; ಹೊರ ಬೇಲಿಗಳ 'ಗಾಳಿ ಮರ'ಗಳ ರಕ್ಷಣೆ . . . ಇತ್ಯಾದಿ ಸಂಗತಿಗಳಲ್ಲಿ ಅವನ *ವಿಶೇಷವಾದ ಅನುಭವವು* ಹರಡಿಕೊಂಡಿದೆ.

ಪು.೯೮

ಪೌರೋಹಿತ್ಯ ಮತ್ತು ವೈದಿಕತೆಯ ಮೇಲೆ ಹೆಚ್ಚು ಒತ್ತು ಬಿದ್ದ ದಕ್ಷಿಣದ ಸಂಕೇತಿಯು (ಕಾಲ ಕಳೆದಂತೆ) ನೇರವಾಗಿ ದುಡಿಮೆಗೆ ತೊಡಗಿಕೊಳ್ಳುವ ಅಗತ್ಯ ಬೀಳದೆ, ತೋಟವು ಗೌಣವಾಗಿ ಗದ್ದೆಗಳು ಪರೋಕ್ಷ ಕೃಷಿಯ ಮಾಧ್ಯಮಗಳಾಗಿ ಮುಂದುವರಿದವು. ಆದರೆ *ವೈದಿಕತೆ ಮತ್ತು ಕೃಷಿಯ ಸಮನ್ವಯವು ಕರ್ನಾಟಕದ ಸಂಕೇತಿಗಳ ವೈಶಿಷ್ಟ್ಯವಾಯಿತು*. . . . ಸಂಕೇತಿಯು *ಪ್ರಗತಿಶೀಲ ರೈತ*ನಾಗಿರುವುದನ್ನು ಸಮರ್ಥಿಸುವ ಧಾರಾಳ ನಿದರ್ಶನಗಳಿವೆ. . .

ಪು.98-99

ತೋಟದ ವ್ಯವಸಾಯಕ್ಕೆ ಸಂಬಂಧಿಸಿದ *ಪಾರಿಭಾಷಿಕ ಪದಗಳು* ಕರ್ನಾಟಕದ ಸಂಕೇತಿಗಳಲ್ಲಿ (ತಮಿಳು) ಮೂಲರೂಪಗಳಲ್ಲಿ ಉಳಿದುಕೊಂಡಿವೆ . . . ಇಂಥ ಪದಗಳು ಮೂಲರೂಪದಲ್ಲಿ ಉಳಿದುದು ಅವುಗಳ ನಿತ್ಯ ಬಳಕೆಯ ಕಾರಣದಿಂದ. ಸಾಮಾನ್ಯವಾಗಿ ಎಲ್ಲ ಕುಟುಂಬಗಳೂ ಮೊದಲ ಆದ್ಯತೆಯಾಗಿ ತೋಟ ಹೊಂದಿರುತ್ತವೆ, ಅವರಲ್ಲಿ ಆ ಸಂಬಂಧದ ಉಪಕರಣಗಳೂ ಇರುತ್ತವೆ. ಗದ್ದೆ ಮತ್ತು (ದಕ್ಷಿಣದಲ್ಲಿ ವ್ಯಾಪಕವಾಗಿ ರೂಢಿಯಲ್ಲಿಲ್ಲದ) ಹೊಲಗಳನ್ನು ಹೊಂದುವುದು ವ್ಯಕ್ತಿಯ ಶಕ್ತಿ, ಆಸಕ್ತಿಗೆ ಅನುಗುಣವಾಗಿ ಆಗುವ ವಿಸ್ತರಣ. ಆ ಸಂಬಂಧದ ಪಾರಿಭಾಷಿಕ ಪದಗಳು ಹೆಚ್ಚಾಗಿ ಕನ್ನಡದಿಂದ ಸ್ವೀಕರಿಸಿದಂಥವು . . .

ಪು.99

ಕರ್ನಾಟಕದ ಎಲ್ಲ ಸಂಕೇತಿ ನೆಲೆಗಳ ಪಾರಂಪರಿಕ ತೋಟಗಳು *ಸಂಕೇತಿಗಳು ಬೆಳೆಸಿದವು*. ಬ್ರಾಹ್ಮಣೇತರರು ಹೊಲಗದ್ದೆಗಳಿಗೆ ಹೊಂದಿಕೊಂಡಿದ್ದಾರೆ. ತೋಟಗಾರಿಕೆಗೆ ಅನ್ಯಾವಲಂಬನೆ ಕಡಿಮೆಯಾದುದರಿಂದಲೂ ಅದರ ಮೂಲಭೂತ ಲಕ್ಷಣಗಳು ಪ್ರಭಾವದೂರವಾಗಿ ಮುಂದುವರಿದಿವೆ. ಆದರೆ ಹೊಲಗದ್ದೆಗಳ ವ್ಯವಸಾಯಗಳು ಹೆಚ್ಚಾಗಿ ಅನ್ಯರ ನೆರವಿನಿಂದ ನಡೆಯುವುದರಿಂದಾಗಿ ಅವುಗಳ ಸ್ವರೂಪವು ಸಾರ್ವತ್ರಿಕವಾದುದು. ಹೊಲಗದ್ದೆಗಳ ಬೇಸಾಯ ವಿಧಾನ, ಮಳೆಯನ್ನು ಕುರಿತ ನಂಬಿಕೆಗಳು ಮೊದಲಾದ ಎಲ್ಲ ವಿವರಗಳಲ್ಲಿಯೂ ಸಂಕೇತಿ ರೈತನು *ತನ್ನದೇ ಆದ ಪರಿಣತಿಯನ್ನು* ಬೆಳೆಸಿಕೊಂಡಿದ್ದರೂ, ಮೂಲಭೂತವಾಗಿ ಅವು ಸಾರ್ವತ್ರಿಕ ಸ್ವರೂಪದವು . . . *ಪ್ರಯೋಗಶೀಲನಾದ ಅವನು ಪ್ರಗತಿಶೀಲನೂ* ಆಗುತ್ತಿರುವುದನ್ನು ಈಗ ಎಲ್ಲೆಡೆ ಗುರುತಿಸಬಹುದು . . . ವ್ಯವಸಾಯಕ್ರಮ, ಬೆಳೆಗಳ ವೈವಿಧ್ಯದಲ್ಲಿ ಕಾಣುವ ಪ್ರಾದೇಶಿಕ ಭಿನ್ನತೆಯನ್ನು ಆಯಾ ಪ್ರದೇಶದ ಸಂಕೇತಿಗಳೂ ಮೈಗೂಡಿಸಿಕೊಂಡಿರುವುದು *ಸ್ವೀಕರಣವನ್ನು* ಸೂಚಿಸುವಂತೆಯೇ, ಅವರ *ಹೊಂದಿಕೊಳ್ಳುವ* (adaptability) ಗುಣಕ್ಕೂ ಸಾಕ್ಷಿಯಾಗಿದೆ . . .

ಪು.100

ಷಟ್ಕರ್ಮದ ಮಿತಿಯ ಜೀವನವಿಧಾನದಿಂದ ಹೊರಬಂದರೂ ಅದಕ್ಕೆ ವಿರೋಧವಲ್ಲದ ರೀತಿಯಲ್ಲಿ ವ್ಯವಸಾಯವನ್ನು ರೂಢಿಸಿಕೊಳ್ಳುವ ಕಾಳಜಿ, ಅವರ ಆದ್ಯತೆಯ ತೋಟಗಾರಿಕೆಯಲ್ಲಿ ವ್ಯಕ್ತವಾಗುತ್ತದೆ. ಆದರೆ ಕೃಷಿಯು ಹೊಲಗದ್ದೆಗಳಿಗೂ ವಿಸ್ತರಣೆಗೊಂಡುದು, ಧಾರ್ಮಿಕ ಜೀವನ ವಿಧಾನದಿಂದ ಆರ್ಥಿಕ ಕಾರಣಕ್ಕಾಗಿ ಮತ್ತಷ್ಟು ದೂರ ಸರಿದ ಪ್ರವೃತ್ತಿಯನ್ನೇ ಸೂಚಿಸುತ್ತದೆ. ಆತನು ಪ್ರಗತಿಶೀಲನಾದುದರಿಂದ ಪ್ರಾದೇಶಿಕ ತಾದಾತ್ಮ್ಯವನ್ನು ಸಾಧಿಸಿದುದು, ಕೃಷಿಕ್ಷೇತ್ರದ ವಿಸ್ತರಣೆಯಾದಂತೆ *ಧಾರ್ಮಿಕವಾಗಿಯೂ ಪರಪ್ರಭಾವಗಳಿಗೆ* (ಬ್ರಾಹ್ಮಣೇತರ ಪ್ರಭಾವಗಳಿಗೆ ಕೂಡ) ಮುಕ್ತವಾಗಿ ಒಳಗಾದುದು ಇನ್ನಿತರ ಲಕ್ಷಣಗಳು. ಸಂಕೇತಿಗಳು ಬೆಳೆಸಿದ ಸಹಸ್ರಾರು ಎಕರೆ ತೋಟಗಳು ತಮ್ಮಷ್ಟಕ್ಕೇ ಕರ್ನಾಟಕಕ್ಕೆ ನೀಡಿದ *ಕೊಡುಗೆ*ಗಳಾದಂತೆ, ತಮ್ಮ ನೆಲೆಗಳಲ್ಲಿ ಒಂದು *ಬೇಸಾಯದ ವಿಧಾನವನ್ನು ಚಾಲನೆಗೊಳಿಸಿದ ದೃಷ್ಟಿಯಿಂದಲೂ ಮಹತ್ವವಾದುವು.*

ಪಶುಪಾಲನೆ ಪು.100

. . . ಸಂಕೇತಿಗಳನ್ನು ಕೃಷಿಕರು ಎಂದು ಗುರುತಿಸಿರುವ ಎಡೆಗಳಲ್ಲೆಲ್ಲಾ, ಅವರ 'ಪಶುಪಾಲನೆ'ಯ ವೃತ್ತಿಯನ್ನೂ ಅದರಲ್ಲಿ ಅಂತರ್ಗತಗೊಳಿಸಲಾಗಿದೆ. ಏಕೆಂದರೆ ಕೃಷಿ ಮತ್ತು ಪಶುಪಾಲನೆ ಈವರೆಗಿನ ಜೀವನ ವಿಧಾನದಲ್ಲಿ *ಪರಸ್ಪರ ಪೂರಕ* ಮತ್ತು ಅಗತ್ಯವಾದವು. ಆದರೆ ಪಶುಪಾಲನೆ ಧಾರ್ಮಿಕ ಅಗತ್ಯವಾಗಿಯೂ ಇವರಲ್ಲಿ ಉಳಿದಿದೆ.

ಪು.101

ಪಶುಸಾಕಾಣಿಕೆ, ಔಷಧೋಪಚಾರ, ಸುಳಿ ಮೊದಲಾದ ಲಕ್ಷಣಗಳ ಪರಿಜ್ಞಾನ - ಇವೆಲ್ಲದರಲ್ಲಿ ಸಂಕೇತಿ ರೈತನಿಗಿರುವ ಪರಿಣತಿಯಲ್ಲಿ *ಸ್ಥಳೀಯ ರೈತರ ಪ್ರಭಾವವನ್ನೂ ಗುರುತಿಸಬಹುದು*. . . ಪಶುಪಾಲನೆಗೆ ಸಂಬಂಧಿಸಿದಂತೆ ಇರುವ ಪದಗಳು ತಮ್ಮ ಮೂಲಲಕ್ಷಣವನ್ನು ಇಂದಿಗೂ ಉಳಿಸಿಕೊಂಡಿರುವುದು, ಈ ವೃತ್ತಿಯು ಅವರಿಗೆ *ಅನೂಚಾನವಾಗಿ* ಬಂದಿರುವುದನ್ನೇ ಸಮರ್ಥಿಸುತ್ತದೆ.

'ಸಂಕೇತಿ-ಸಕಲಾತಿ' ಒಂದು ಪ್ರಶಸ್ತಿ **ಪು.102**

ಅಗತ್ಯವಾದ ಎಲ್ಲವನ್ನೂ ತಾನೇ ಬೆಳೆದುಕೊಳ್ಳುವ ಸಂಕೇತಿ ರೈತನು ಬೇಲಿ ನೆಡುವುದರಿಂದ ತೊಡಗಿ ಗೊಬ್ಬರ ಹಾಕುವುದು, ಸಸಿ ನೆಡುವುದು, ಕೊಯ್ಲು, ರೇಖೆ - ಹೀಗೆ ಸಮಸ್ತವನ್ನೂ ತಾನೇ ಮಾಡಿಕೊಳ್ಳುತ್ತಾನೆ, ಇಲ್ಲವೆ, ತನ್ನ ಬಂಧುಬಳಗದವರಲ್ಲಿ 'ಮುಯ್ಯಿ' ಆಧಾರದಿಂದ ಅದನ್ನು ನೆರವೇರಿಸಿಕೊಳ್ಳುತ್ತಾನೆ. ಅವನ ಹಿತ್ತಿಲು ಕೂಡ ಹೆಂಗಸರು, ಮಕ್ಕಳೇ ಬೆಳೆಸಿದ ಒಂದು ತೋಟವಾಗಿರುತ್ತದೆ. ಕೃಷಿಯನ್ನೇ ಆಧರಿಸಿ ಹಗ್ಗ ಹೊಸೆಯುವುದು, ದೊನ್ನೆ ಕಟ್ಟುವುದು, ನಶ್ಯ ಇಡಿಯುವುದು, ಜನಿವಾರ ಹೊಸೆಯುವುದು, ಕದಬೆ ಬಳಸಿ ಹಾಸಿಗೆಯನ್ನೂ, ರಾಗಿ ಒಡ್ಡಿನಲ್ಲಿ ದಿಂಬನ್ನೂ ಮಾಡಿಕೊಳ್ಳುವುದು, ಹರಳು, ಎಳ್ಳಿನಿಂದ ಎಣ್ಣೆ ಊತುಕೊಳ್ಳುವುದು, ಎಲೆ ಹಚ್ಚುವುದು ಮೊದಲಾದ ಆನುಷಂಗಿಕ ಕಸಬುಗಳನ್ನೂ ಅವನು ರೂಢಿಸಿಕೊಂಡಿದ್ದಾನೆ. ಇವಲ್ಲದೆ ನೇಗಿಲು, ಮೇಣಿ, ಶಾವಿಗೆ ಒರಳು, ಪೀಠೋಪಕರಣಗಳು, ಗಾಡಿ ಹೂಡುವುದು, ತೇರು ಮಾಡುವುದು ಮೊದಲಾದ ಮರಗೆಲಸಗಳು; ಗೇರು, ಪೆಟ್ಟೆ, ಗೂಡೆ ಮೊದಲಾದ ಕುಶಲ ಕೆಲಸಗಳು; ಬಾವಿ ತೋಡುವುದು, ಮನೆ ಕಟ್ಟುವುದು, ಕುಲುಮೆ ಮೊದಲಾದ ವೃತ್ತಿಪರ ಕೆಲಸಗಳು - ಇಂಥ ವಿವಿಧ ರಂಗಗಳಿಗೆ ಸೇರಿದ ಕಸಬುಗಳನ್ನು ತಾನೇ ಮಾಡಿಕೊಳ್ಳುವುದು, ತನ್ನ ಆರ್ಥಿಕ ಮಿತಿಯ *ಕಾರಣದಿಂದ ಅವನಿಗೆ ಅನಿವಾರ್ಯವಾಗಿತ್ತು*. ಅಡ್ಡೆ ನೀರು ಹೊತ್ತು ಪರಿಚಾರಿಕೆ ಮಾಡುವುದರಿಂದ ತೊಡಗಿ ದಿವಾನ್ ಪದವಿಯ ನಿರ್ವಹಣೆಯವರೆಗೆ *ವೈವಿಧ್ಯಪೂರ್ಣ ಕಸಬುಗಳಲ್ಲಿ* ತೊಡಗಿಕೊಂಡ ವೈಶಿಷ್ಟ್ಯ ಅವರದಾಗಿದೆ. ಹೀಗೆ ತನ್ನ ಜಾತಿಗೆ ಸಂಬಂಧವಿಲ್ಲದ ಎಲ್ಲವನ್ನೂ ತನ್ನ ಅಳವಿಗೆ ತಂದುಕೊಳ್ಳುವ ಅವನ ಪ್ರವೃತ್ತಿಯಿಂದಾಗಿ 'ಸಂಕೇತಿ ಸಕಲಾತಿ' ಎಂಬುದು ಗಾದೆ ರೂಪದ *ಪ್ರಶಸ್ತಿಯಾಯಿತು*. ತನ್ನ ಅಗತ್ಯಕ್ಕೆ ತಕ್ಕಂತೆ ಉಪಕರಣಗಳನ್ನು ಸಿದ್ಧಪಡಿಸಿಕೊಳ್ಳುವ ಸಂಕೇತಿ ರೈತನ *ಕರ್ತೃತ್ವ ಶಕ್ತಿ, ಜಾಣ್ಮೆ, ಸೃಜನಶೀಲ ಗುಣಕ್ಕೆ* ಹಲವು ಪ್ರಾತ್ಯಕ್ಷಿಕೆಗಳಿವೆ.

ಪು.104

ಸೇನಾಧಿಪತಿಗಳು, ಯೋಧರು, ದಿವಾನರು, ವೈದ್ಯರು, ಜ್ಯೋತಿಷಿಗಳು, ಶಾನುಭೋಗ ಮೊದಲಾದ ವೃತ್ತಿಗಳಲ್ಲಿ ತೊಡಗಿಕೊಂಡಾಗಲೂ *ವೈದಿಕತೆ ಮತ್ತು ವ್ಯವಸಾಯಕೇಂದ್ರಿತ ಸರಳ ಜೀವನಕ್ಕೆ* ಒಗ್ಗಿಕೊಂಡಿದ್ದ ಸಂಕೇತಿಗಳು ೨೦ನೆಯ ಶತಮಾನದ ಪ್ರಾರಂಭದಿಂದ ನೌಕರಿಗಳನ್ನು ಪಡೆದು ನಗರೀಕರಣಕ್ಕೊಳಗಾಗಿ *ಕೃಷಿಯ ಪ್ರೀತಿಯ ನಂಟನ್ನು ಕಳೆದುಕೊಳ್ಳತೊಡಗಿದುದು ಕಾಣಿಸುತ್ತದೆ*.

. . . ಕರ್ನಾಟಕ ಮತ್ತು ದಕ್ಷಿಣದ ಸಂಕೇತಿಗಳ ಜೀವನದ ಒತ್ತು ಪ್ರಧಾನವಾಗಿ ಕ್ರಮವಾಗಿ ಕೃಷಿ ಮತ್ತು ದೇವಸ್ಥಾನ ಸೇವೆಯೇ ಆದರೂ, ಆಧುನಿಕಪೂರ್ವ ಜೀವನದ ಆರ್ಥಿಕ ತಳಮಳವು ಸಮಾನವಾದುದು. ಈಗ ಆಯಾ ಕ್ಷೇತ್ರಗಳ ಪಾರಂಪರಿಕತೆ ಕೈಬಿಟ್ಟು ಹೋದುದು ಮತ್ತು ನೌಕರಿಗಳ ಖಾತರಿ ಇಲ್ಲದ ಸನ್ನಿವೇಶದಲ್ಲಿ, ಆ ತಳಮಳವೇ ಬೇರೊಂದು ರೀತಿಯಲ್ಲಿ ಮುಂದುವರಿದಿದೆ. ನಗರಜೀವನದ ವೈವಿಧ್ಯಪೂರ್ಣ ಅವಕಾಶಗಳ ನಡುವೆ, ತಮ್ಮ *ಭವಿಷ್ಯವನ್ನು ಹುಡುಕಿಕೊಳ್ಳುವ ಆತಂಕವು* ಅವರ ಆರ್ಥಿಕ ತಳಮಳದ ಪರಿಹಾರದ ಒಂದು ಮುಖವಾಗಿ ಈಗ ಕಾಣಿಸಿಕೊಳ್ಳುತ್ತಿದೆ.

ಪು.128

ದೇವಸ್ಥಾನದ ಮುಂದಿನ ಒಂದು ರಸ್ತೆ ಇಲ್ಲವೆ ದೇವಸ್ಥಾನವನ್ನು ಒಂದು ಮಗ್ಗುಲಿಗೆ ಬಿಟ್ಟುಕೊಂಡ ಚೌಕಾಕಾರದ ರಸ್ತೆಗಳ ವ್ಯವಸ್ಥೆಯನ್ನು ಕರ್ನಾಟಕ ಮತ್ತು ತಮಿಳುನಾಡಿನ ಸಂಕೇತಿಗಳ ಪಾರಂಪರಿಕ ನೆಲೆಗಳಲ್ಲಿ *ಸಮಾನವಾಗಿ* ಕಾಣಬಹುದು.

ಮನೆಯ ಭಾಗಗಳು ಪು.133

ತಮ್ಮ ರಕ್ಷಣೆ, *ದನಕರುಗಳಿಗೆ ಜಾಗ,* ಪೂಜೆ, ಅಡುಗೆ, *ಕೃಷಿಸಾಧನಕ್ಕೆ* ಜಾಗ ಇವು ಪ್ರತಿ ಮನೆಯ ಕನಿಷ್ಠ ಆವಶ್ಯಕತೆಗಳು

ಸಾಂಪ್ರದಾಯಿಕ ಬದುಕಿನ ಮನೆಯೊಂದರ ಪರಿಕರಗಳ ಚಿತ್ರ ಇದು: ಪು.136-137

1) ಕಂಬ ನೆಟ್ಟು ಅಡಿಕೆ ದಬ್ಬೆಗಳನ್ನೇ ಹರಡಿ ಮಾಡಿಕೊಂಡ ಬಡುಗಳು.
2) ಅಂಥದೊಂದು ಕಂಬವೇ ಕಡಗೋಲಾಗಿರುವುದು.
3) ಹಾಲು ಮೊಸರು ತೂಗುಬಿದ್ದ ಹಗ್ಗದ 'ಹುರಿ'ಗಳು.
4) ಮಣ್ಣಿನಿಂದ ಮಾಡಿಕೊಂಡ ವಿವಿಧ ರೀತಿಯ ಒಲೆಗಳು.
5) ಉರುವಲಿಗೆ ಬಳಸುವ ಅಡಿಕೆಪಟ್ಟೆಯ ನಾರು, ಬಾಳೆನಾರು, ಸೋಗೆ, ಗೊದಮಟ್ಟೆಗಳು, ಹೊಗೆಹತ್ತಿ ಕಪ್ಪು ತಿರುಗಿದ ಗೋಡೆ, ಚಾವಣಿ.
6) ವಿಭೂತಿ ತುಂಬಿದ ನೇತುಬಿದ್ದ ಸೋರೆ ಬುರುಡೆ, ಬಿದಿರಿನ ಅಂಡೆ.
7) ಧಾನ್ಯಗಳನ್ನು ಕಟ್ಟಿದ *ನೊಜೆ ಹುಲ್ಲಿನ ಮೂಡೆ*ಗಳು, ಗುಡಾಣ, ಪೆಟ್ಟೆ, ಓಡೆ.
8) ದಿನನಿತ್ಯದ ಬಳಕೆಯ ಮಣ್ಣುಕಲ್ಲಿನ ಗುಂಬಗಳು; ಕಲ್ಲಿನ ಪಾತ್ರೆಗಳು.
9) ಚಾವಣಿಗೆ ತೂಗುಬಿದ್ದ ಮಡಿಕೊಡಿಗಳು.
10) ಏತ, ಒಡೆಯುವ ಕಲ್ಲು, ಬೀಸುವ ಕಲ್ಲು, ಒರಳು, ಬಕ್ರ, ಶಿರಾವೆಗಳು, ಇತ್ಯಾದಿ.

ಇವುಗಳಿಂದ ಕೂಡಿದ ಕೃಷಿಕನ ಮನೆಯು ಆಧುನಿಕ ಮಾನದಂಡದಿಂದ ಸಹ್ಯವಾದುದಲ್ಲ. . . . ಓರಣ ಇಲ್ಲವೆ ಸುಖ ಸೌಲಭ್ಯಗಳಿಗಿಂತ *ಜೀವನ ನಿರ್ವಹಣೆಯ ಹೋರಾಟ*ದಲ್ಲಿ ಮಗ್ನವಾದ ಬದುಕಿನ ಚಿತ್ರವನ್ನೇ ಇದು ಕೊಡುತ್ತದೆ. ಹಳ್ಳಿಯ ಕೃಷಿಕನಲ್ಲಿ ಸೌಂದರ್ಯಪ್ರಜ್ಞೆ, ಅಚ್ಚುಕಟ್ಟು ಇರಲಿಲ್ಲವೆನ್ನುವುದಕ್ಕಿಂತಲೂ, ಲಭ್ಯ ಸೌಲಭ್ಯಗಳು ಮತ್ತು ಕಾರ್ಯಸಾಧ್ಯತೆಯ ಮಿತಿಯಲ್ಲಿತ್ತು ಎನ್ನುವುದು ಯುಕ್ತವಾಗುತ್ತದೆ.

. . . *ಸಂಕೇತಿಗಳ ವಸತಿಗಳ*ಸನ್ನಿವೇಶವು ರಕ್ಷಣೆ, ಶುಚಿ ಮತ್ತು *ಕೃಷಿ* ಹಾಗೂ ಧಾರ್ಮಿಕ ಜೀವನದ ಸಾಧ್ಯತೆಯನ್ನು ದೃಷ್ಟಿಯಲ್ಲಿಟ್ಟುಕೊಂಡಿದೆ. *ಮನೆಗಳ ರಚನೆ*ಗಳೂ ಈ ಮೂಲಭೂತ ಅಂಶಗಳಿಗೆ ಚ್ಯುತಿ ಇಲ್ಲದಂತೆ ಕಾಲಕಾಲದ ಅಗತ್ಯ ಮತ್ತು ಸೌಲಭ್ಯಗಳನ್ನನುಸರಿಸಿ ಸುಧಾರಣೆಗೊಂಡಿವೆ.

ವಾರಾತುರುವೆ ಪು.187

. . . ಇದು ಹಸುಗಳನ್ನು ಕರೆಯುವ ಹಾಡು. ಅದು ಮುಂದುವರಿದು, ಕೊಟ್ಟಿಗೆಯ ತುಂಬ *ಪಶುಸಂಪತ್ತು ತುಂಬಲಿ* ಎಂಬ ಧ್ವನಿಯುಕ್ತ ಮಾತಾಗುತ್ತದೆ. ಪಶುಗಳು ಮುಖ್ಯ ಸಂಪತ್ತಾಗಿದ್ದ ಕಾಲದ ಈ ಆಶಯದ ಮೌಲ್ಯವು ದೊಡ್ಡದು. ಗೋಸೇವೆಯ ಫಲವಾಗಿ ಅದನ್ನನುಸರಿಸಿ ಮಕ್ಕಳು, ಕಣಜದ ತುಂಬ ಬತ್ತ ಅಡಿಕೆ ಫಲಿಸುತ್ತವೆ ಎಂಬುದೂ ಗೋಸೇವೆಯ ಪ್ರಾಮುಖ್ಯವನ್ನು ತಿಳಿಸುವಂತೆಯೇ *ಕೃಷಿಕೇಂದ್ರಿತ* ಬದುಕಿನ ಚಿಂತನೆಯ ಲಹರಿಗೂ ಕನ್ನಡಿಯಾಗಿದೆ . . .

ಆ) ಸಂಕೇತಿ: ಶತಮಾನದ ಪತ್ರಗಳು (೧೮೯೧-೨೦೦೩)

ಸಂ: ಡಾ. ಬಿ.ಎಸ್.ಪ್ರಣತಾರ್ತಿಹರನ್, ೨೦೦೪

(ಸಂಕೇತಿ ಸಮುದಾಯವು ೨೦ನೆಯ ಶತಮಾನದಲ್ಲಿ ಬರೆದುಕೊಂಡ ಖಾಸಗಿ ಪತ್ರಗಳ ಸಂಗ್ರಹವೇ 'ಸಂಕೇತಿ: ಶತಮಾನದ ಪತ್ರಗಳು' ಎಂಬ ಸಂಪುಟ. ಕೃಷಿಗೆ ಸಂಬಂಧಿಸಿದಂತೆ ಸಂಕೇತಿ ಸಮುದಾಯದ ಅಂತರಂಗವನ್ನು ತೆರೆದಿಡುವ ಪತ್ರಭಾಗಗಳು ಇಲ್ಲಿವೆ.)

"ಸಾವಿರದಾ ಒಂದು ಪತ್ರಗಳ ಕಥೆ" ಶೀರ್ಷಿಕೆಯೂ ಪ್ರಚೋದಾತ್ಮಕವಾಗಿದೆ. *"ಮಣ್ಣಿನ ಜತೆ ಓಡಾಟ, ಗಿಡದ ಜತೆ ಉಸಿರಾಟ"* ಎಂಬ ಘೋಷಣೆ ತಮ್ಮ "ಸಂಕೇತಿ ಕೃಷಿ" ಬೃಹತ್ ಹೊತ್ತಿಗೆಯ ಸಂಕೇತ ಎಂದು ನಾನು ಭಾವಿಸಿ ಅದನ್ನು ಆಸ್ವಾದಿಸಲು ತುದಿಗಾಲಲ್ಲಿ ನಿಂತಿದ್ದೇನೆ. ಹಲವಾರು ವರ್ಷಗಳು ಅವರ ಕೃಷಿಯ ಒಡನಾಟದಲ್ಲಿ ಇದ್ದ ನನಗೆ ಆ ಕುರಿತು ಅಪಾರ ಗೌರವ, ಆದರ ಅಭಿಮಾನವಿದೆ. ಆ ವಿಚಾರದಲ್ಲಿ ಅವರುಗಳಿಗೆ ಇರುವ ಮಮತೆ, ಪ್ರೀತಿ, ಕೃಷಿ ಹಣ ಗಳಿಸುವ ಕಾರ್ಖಾನೆಯಲ್ಲ *ನೆಮ್ಮದಿಯ, ನಿರ್ಲಿಪ್ತತೆಯ, ತೃಪ್ತಿಯ* ತಪೋಭೂಮಿ ಎನ್ನುವ ಅವರುಗಳ ಭಾವನೆಗಳಿಗೆ ಇದೋ ನನ್ನ ಸಾಷ್ಟಾಂಗ ನಮಸ್ಕಾರಗಳು.

ಡಾ|| ಕೆ. ಕೃಷ್ಣಮೂರ್ತಿ
ಸಹಾಯಕ ನಿರ್ದೇಶಕರು RDES, ಉಪನಿರ್ದೇಶಕರವರ ಕಛೇರಿ
ಪಶುಸಂಗೋಪನೆ ಮತ್ತು ಪಶುವೈದ್ಯಕೀಯ ಸೇವೆ, ಹಾಸನ

ಪತ್ರ ೮೨

೨೯.೭.೧೯೨೬

. . . ಈಗ ಬರುವುದಕ್ಕೆ ನನ್ನ *ಸ್ವಂತಗದ್ದೆಗಳು* ನಾಟಿಯಾಗಿ ೧೫ ದಿವ್ಸಗಳಾಯ್ತು. ಒಂದು ತಾಕು ೩ ಎಕ್ರೆ ಗದ್ದೆಯನ್ನು *ಗುತ್ತಿಗೆಗೆ* ಮಾಡಿಕೊಂಡಿರುತ್ತೇನೆ. ಅವು ಇನ್ನೂ ನಾಟಿಯಾಗಿಲ್ಲ. ಹೋದ ವರುಷ ಶ್ರಮಪಟ್ಟು ೪-೫ ಸಾವಿರ *ಕಬ್ಬು, ವಾರ ಸಾಗುವಳಿಗೆ* ನೆಟ್ಟಿದೇವು. ಅದೂ ಬೆಳೆ ಚೆನ್ನಾಗಿದೆ. ಈಗ ಆ ಗದ್ದೆ ನಾಟಿ ಆದ ಮೇಲೆ ಇನ್ನು ೨೦ ದಿವ್ಸಗಳೊಳಗಾಗಿ ಆ ವಾರಾಂತ್ಯ ಒಂದು ಸಲ ಖಂಡಿತ ಬರುತ್ತೇನೆ . . .

ಪತ್ರ ೧೪೨

೧೪.೩.೩೦

. . . ಆದರೆ ಇದುವರೆಗೂ ನನ್ನ ದುರಾದೃಷ್ಟಕ್ಕೆ ಅಡಿಕೆಗೆ ಧಾರಣೆ ಇಲ್ಲವೆಂದು ಒಂದಕ್ಕೇ ಕೊರಗುತ್ತಿದ್ದೆನು . . . ನಾನು ಬಂದು ನೋಡುವಲ್ಲಿ ಪಾಕೆಟ್ಟು ನಾನು ಇಟ್ಟಂತೆ ಇರಲಿಲ್ಲ . . . ನಾನು *ಹೊಟ್ಟೆಗೆ ಅನ್ನವಿಲ್ಲದೆ ಕಣ್ಣಿಗೆ ನಿದ್ದೆಯಿಲ್ಲದೆ ಬಿಸಿಲಿನಲ್ಲಿ ಒಣಗಿ ದುಡಿದು* ಗಿಣಿಯನ್ನು ಸಾಕಿ ಬೆಕ್ಕಿಗೆ ಕೊಟ್ಟಂತೆ ಕೊಟ್ಟುಬಿಟ್ಟೆನು . . .

ಪತ್ರ ೧೮೯

೭.೫.೩೫

. . . ಪುನಃ ನಾನು ಬೆಂಗಳೂರಿಗೆ ಹೋಗಬೇಕಾದ ಪ್ರಕೃತವು ೯೯% ಭಾಗ ಮನ್ನಾ ಮಾಡಲ್ಪಟ್ಟು ಇಲ್ಲಿ ಖಾಯಂ ಆಗಿ *ಸುಲಕಸುಬಾದ ವ್ಯವಸಾಯವನ್ನೇ* ಅವಲಂಬಿಸಿರುತ್ತೇನೆ . . .



ಮಹಾವಿದ್ವಾಂಸರೂ ಹಳ್ಳಿಗಳಲ್ಲೇ ಉಳಿದು ವ್ಯವಸಾಯವನ್ನವಲಂಬಿಸಿದ ಪರಂಪರೆಯ ಪ್ರತಿನಿಧಿ ಲಿಂಗದಹಳ್ಳಿ ನರಸಿಂಹಮೂರ್ತಿಶಾಸ್ತ್ರಿಯವರು

ಪತ್ರ ೨೭೩

೧೭.೭.೩೬

. . . ಈ ಸಲ ಗದ್ದೆಯೇನೂ ಬಿತ್ತಿಲ್ಲ. ತೋಟಗಳಲ್ಲಿ *ಬದುಕುವ ಸಂಭವವಿಲ್ಲ.* ಮಾಡುವದೇನಿದೆ?. . . .

ಪತ್ರ ೧

೨೬.೯.೩೬

. . . ಈ ಪ್ರಾಂತ್ಯದಲ್ಲಿ *ಸಂಕೇತಿಗಳ ಜೀವನಾಧಾರಕ್ಕೆ ಆಧಾರವಾಗಿರುವ ತೋಟಕ್ಕೆ* ತಟಾಕಗಳೆಲ್ಲವೂ ಮೇಘರಾಜನ ಅಧೀನದಲ್ಲಿರಲಾರದೆ ಭಾಸ್ಕರ ಭಗವಾನನ ಆಡಳಿತಕ್ಕೆ ಸೇರಿ ಎಲ್ಲವೂ ಸಂಕುಚಿತಗಳಾಗಿರುತ್ತವೆ. ಆದರೆ ಜಗದೊಡೆಯನ ಆಧಿಪತ್ಯದಲ್ಲಿ ಮೇಲ್ಕಂಡ ಜಲಾಶಯಗಳೆಲ್ಲವೂ ಪುನಃ ತಮ್ಮೊಡೆಯನ ಆಳ್ವಿಕೆಗೇ ಒಳಪಟ್ಟು ವಿಶಾಖಾ ಮಳೆಯೊಳಗಾದರೂ ವಿಶಾಲವಾಗಿ ವಿರಾಜಿಸುತ್ತವೆಂದು ಒಣ ನಂಬಿಕೆ ಇರುತ್ತದೆ . . .

ಪತ್ರ ೧೮೪

೨. ೧೧.೪೨

. . . ಈಗ ಇಲ್ಲಿ ಎರಡು ದಿನಗಳಿಂದ ಮಳೆ ಬರುತ್ತಾ ಇದೆ. ನೆನ್ನೆ ಸಂತೆಯಲ್ಲಿ ರಾಗಿ ಪಲ್ಲ ೧೦ ರೂ, ೯ ರೂನಲ್ಲಿ ಮಾರಾಟವಾಯಿತು. ಇಲ್ಲಿಯ ಅಡಕೆ ಚಿಲ್ಲರೆ ಬಿಕರಿ ಪಾವು ೪ ಆಣೆ ಅಂದರೆ ಮಣ ೨೦ ರೂ ಆಗಿತ್ತು. ಅಕ್ಕಿ ರೂ.ಗೆ ೫ ಸೇರು ಐದೂವರೆ ಸೇರು ಆಗಿದೆ. ಈ ಸಾರಿ *ಚೇಣಿ ಮಾಡಿದವರಿಗೂ ಅಡಕೆಯುಳ್ಳವರಿಗೂ ಸುವರ್ಣವೃಷ್ಟಿ . . .*

ಪತ್ರ ೪೯

೮.೨.೪೩

. . . ಹಾಗೆ ಅವರು ಕಳುಹಿಸುವುದಿಲ್ಲವೆಂದರೆ ನೀನು ಭೇರ್ಯಕ್ಕೆ ಸೀದಾ ಬಸ್ಸಿನಲ್ಲಿ ಬಂದರೆ ನಾನು ಅಲ್ಲಿಗೇ *ಗಾಡಿ ಕಳುಹಿಸುತ್ತೇನೆ. . .*

ಪತ್ರ ೯೦

೧೫.೧೨.೪೫

. . . ಇಲ್ಲಿ ಕೆಲವು ಕಡೆ ೮ ಆಣೆ ಪೈರು ೪ ಆಣೆ ಪೈರು *ಛಂದೋಭಂಗವಾಗಿ ಬೆಳೆಯಾಗಿದೆ.* ಹುರುಳಿ ಬೆಳೆಗೂ ಮಳೆ ಅಗತ್ಯವಿದೆ. ಪೈರು ಹಿತವಿಲ್ಲ. ಅಲ್ಲಿ ಮಳೆ ಬೆಳೆ ಹೇಗಿದೆ. ನಾಲೆ ಬಯಲಿನಲ್ಲಿ ಪೈರು ಹೇಗಿದೆ. ತೋಟದಲ್ಲಿ ನಿಮ್ಮ ಶ್ರಮದ ಫಲ ಎಷ್ಟರಮಟ್ಟಿಗೆ ಇರುತ್ತದೆ



ಇಂಥ ನಗು ಚಿಮ್ಮಬಹುದಾದರೆ ಹಳ್ಳಿಯಾದರೇನು?

. . . ಈ ಸಾರಿಯೂ ಅಡಕೆ ಚೇಣಿ ಮಾಡಿರುತ್ತಾರೆಯೆ ಹೇಗೆ? . . .

ಪತ್ರ ೯೩

೧೬.೧೦.೫೧

. . . ಅವರಿಗೆ ತಾವೇ *ಸ್ವತಃ ರೇಖೆ ಮಾಡಬೇಕೆಂದು* ಇಷ್ಟ. ಎಷ್ಟು ನಷ್ಟವಾದರೂ ತಮ್ಮ ಹೆಂಡತಿ, ಹೆಂಡತಿ ಅಕ್ಕ ರೇಖೆ ಮಾಡಿಬಿಟ್ಟು ೧೦-೦-೦ ಗೋಟು ಅಡಿಕೆ ಎಡೆಯುವುದು ಪ್ರಾಪ್ತವಾದರೆ ಮುಂದೆ ದರ ಇಳಿದು ಎಷ್ಟು ನಷ್ಟವಾದರೂ ಇದೇ ಹೆಚ್ಚೆಂದು ಅವರ ಭಾವನೆ . . .

ಪತ್ರ ೩೦

೨೪.೧೨.೫೨

. . . ಹಾಸನಕ್ಕೂ ನನಗೂ ಇದ್ದ ಯಾವುದೋ ಒಂದು ನಿಕಟ ಸಂಬಂಧ ಕಡಿದುಬಿದ್ದಂತಾಗಿದೆ. ನಾನು ನೊಂದ ವೇಳೆಗಳಲ್ಲಿ, ಸಂತೋಷದಿಂದ ಇದ್ದಾಗಲೂ ನನ್ನೊಡನೆ ಸ್ವಲ್ಪವೂ ಹಿಂಜರಿಯದೆ *ಸುಖ ದುಃಖಗಳಲ್ಲಿ ಸಮನಾಗಿ ಭಾಗಿಯಾಗುತ್ತಿದ್ದ ಪ್ರಕೃತಿಮಾತೆಯನ್ನು* ನೆನೆಸಿಕೊಂಡಾಗಲಂತೂ ಬಹಳ ವ್ಯಸನವಾಗುತ್ತದೆ . . .

ಪತ್ರ ೧೫೨

೨೬.೭.೫೭

. . . ಇತ್ತೀಚೆಗೆ ಊರ ಕಡೆ ೨-೩ ವೇಳೆ ದರೋಡೆಗಳು ನಡೆದವು. ೨-೩ ಸಾವಿರ *ಮಾವಿನಕಾಯನ್ನು ಹೊತ್ತುಕೊಂಡು ಹೋದರು.* ಹಿತ್ತಲಲ್ಲಿದ್ದ ಹುಲ್ಲೂ ಈಗ ಹೊತ್ತುಕ್ಕೊಂಡು ಹೋಗಿರುತ್ತಾರೆ . . .

ಪತ್ರ ೧೯೬

೧೬.೮.೭೧

. . . ಈ ವರ್ಷ ಮಳೆಯಿಲ್ಲದೆ *ಕೆರೆ ತುಂಬಿಲ್ಲ.* ಗದ್ದೆ ಹಾಳು ಬಿದ್ದಿತು.



ಪ್ರಕೃತಿಮಾತೆಯನ್ನರಸಿಕೊಂಡು : ಬಸವಾನಿ

ಪತ್ರ ೪

೩೧.೭.೭೮

. . . ಈ ವರ್ಷ ಇನ್ನೊಂದು ಹರ್ಷದ ಸಂಗತಿಯೆಂದರೆ ವಿಪರೀತದ ಮಳೆಯಿಂದಾಗಿ ನಮ್ಮ ಕೆರೆಗೆ ನೀರು ಬಂದಿದೆ. ಆದ್ದರಿಂದ ಈ ವರ್ಷದ ತರೀಫಸಲು ಮಾಡಲು ಉಪಕ್ರಮ ಮಾಡಿದ್ದೇವೆ. ಆದ್ದರಿಂದ *ಕೆಲ್ಸ ಕಾರ್ಯಗಳ ಒತ್ತಡ* ವಿಪರೀತವಾಗಿದೆ . . .

. . . ಗದ್ದೇಗೆಲ್ಲಾ ನೀರಾಗಿದೆ. ಈಗೀಗ ಅಗೆ ಹಾಕಿದ್ದೇವೆ. *ಹಕ್ಕಿ ಕಾಯಬೇಕು. ಗದ್ದೆ ತೆವರು ತೆಗೀಬೇಕು.* ಕೂಲಿ ಯಾರೂ ಸಿಕ್ಕಿಲ್ಲ. ಎಷ್ಟು ಮಾಡಿದರೂ ಮುಗಿಯೋಲ್ಲಾ . . .

ಪತ್ರ ೭೨

೧೨.೯.೮೫

. . . ಸತ್ಕುಲ ಪ್ರಸೂತದಲ್ಲಿ ಜನಿಸಿ ಇರತಕ್ಕಂಥಾ ವಧುವಿದ್ದರೆ ತಿಳ್ಸಿ . . . ನನ್ನ ಮಗನಿಗೆ ೩೪ ವಯಸ್ಸು. ಎಂ.ಎ., ಬ್ಯಾಂಕಿನಲ್ಲಿದ್ದು ಈಗ ಊರಲ್ಲಿ *ವೇದಭಾಗಕ್ಕೆ ನಿಂತು ತೋಟ*ಗಳನ್ನು ನೋಡಿಕೊಂಡಿರುತ್ತಾನೆ . . .



ತಾಯಿಗಿದ್ದರೆ ಇಂಥ ಹೆಮ್ಮೆ ಮುಂದುವರಿಯುತ್ತದೆ ಬೇಸಾಯದ ಬಂಧ

ಪತ್ರ ೨೯೪

೬.೮.೧೯೯೫

. . . ಅಣ್ಣ ನಿಮ್ಮ ಎದೆನೋವು ಹೇಗಿದೆ. ಹೋಯಿತೆ? ನೀವು *ಮರವನ್ನು ಹತ್ತಬೇಡಿ*, ಹಾಗೂ ಸರಿಯಾದ ಸಮಯಕ್ಕೆ ತೋಟದಿಂದ ಬಂದು ತಿಂಡಿ ಊಟವನ್ನು ಮಾಡಿ ಆರೋಗ್ಯವನ್ನು ಚೆನ್ನಾಗಿ ನೋಡಿಕೊಳ್ಳಿ. ಅಣ್ಣ ಆಲೂಗಡ್ಡೆ ಹೇಗಿದೆ . . .

ಪತ್ರ ೩೧೫

೨೬.೯.೧೯೯೬

. . . ಬೆಳಿಗ್ಗೆಯಿಂದ ಸಾಯಂಕಾಲದವರೆಗೂ ಒಬ್ಬರು ಇವನಿಗೆ ಕಾವಲು ಇರಬೇಕು. *ಎಳೆಯ ಕರುವೇ ಇವನ ಜೊತೆಗಾರ.* ಇವನು ಅದನ್ನು ಹೊಡೆಯಲಿ ಹಾಗೂ ಅದರ ಮೇಲೆ ಕುಳಿತುಕೊಳ್ಳಲಿ ಏನೂ ಮಾಡುವುದಿಲ್ಲ. ಒಟ್ಟಿನಲ್ಲಿ ಆರೋಗ್ಯವಾಗಿದ್ದಾನೆ . . .

ಪತ್ರ ೩.೨೭

೨೦.೩.೧೯೯೭

. . . ಇಂಥಾ ಮಳೆಯನ್ನು ಕಂಡು ೧೫-೨೦ ವರ್ಷಗಳೇ ಆಗಿತ್ತು. ಹಾಗೆಯೇ ಸಿಡಿಲು ಮತ್ತು ಘಾಳಿ. ಸುಮಾರು ೧೫-೨೦ ಸಿಡಿಲು ಬಿದ್ದಿದೆ. ಸುಮಾರು ಒಟ್ಟು ಆಗ್ರದಲ್ಲಿ *೭೦೦ ಅಡಿಕೆ ಮರ ಮುರಿದಿರಬಹುದು . . .*

೯. ಸಂಕೇತಿ: ಅಭಿನಂದನ

ಸಂ: ಪೂಮಗಾಮೆ ಗೋಪಿ :೨೦೦೫

೦.೧) ಪ್ರವಚನ ಚಕ್ರವರ್ತಿ ವೇ||ಬ್ರ||ಶ್ರೀ ಲಕ್ಷ್ಮೀಕೇಶವಶಾಸ್ತ್ರಿ

ಆವಿರ್ಭೂತಮಪಾಂ ಮಧ್ಯೇ ಪಾರಿಜಾತಮಿವಾಪರಮ್

ಸಹ್ಯಾದ್ರಿಯ ವಿಸ್ತಾರದ ಮಧ್ಯೆ ಚಿಮ್ಮಿ ಕಳಸ, ಕಾಂಡ್ಯ, ಶೃಂಗೇರಿ, ತೀರ್ಥಹಳ್ಳಿ ಮೊದಲಾದೆಡೆಗಳನ್ನು ತೀರ್ಥಗೊಳಿಸಿ ಮತ್ತೂರು ಹೊಸಹಳ್ಳಿ ಎಂಬ ಅಕ್ಕ-ತಂಗಿ ಗ್ರಾಮಗಳ ಎಡಬಲದಲ್ಲಿ ತುಂಗೆಯು ಉತ್ತುಂಗೆಯಾಗಿ ಪ್ರವಹಿಸುತ್ತ ಮುಂದಿನ ಕೂಡಲಿ ಕ್ಷೇತ್ರದಲ್ಲಿ ತಂಗಿಯಾದ ಭದ್ರೆಯೊಂದಿಗೆ ಕೂಡಿದ್ದಾಳೆ. ಈ ತುಂಗೆಯ ತಡಿಯಲ್ಲಿನ ಮತ್ತೂರು-ಹೊಸಹಳ್ಳಿ ಗ್ರಾಮಗಳು, ವೇದವಿದ್ಯಾಸಂಪನ್ನರಾದ, ಶಿವಪೂಜಾನುಷ್ಠಾನತತ್ಪರರಾದ, ಸಾತ್ತ್ವಿಕ ಬ್ರಾಹ್ಮಣರ ತಾಣ. ಆರ್ಯ ಸಂಸ್ಕೃತಿ, ಸನಾತನ ಧರ್ಮಾಚಾರಗಳ ತೌರೂರಾದ ಈ ಅವಳಿ ಗ್ರಾಮಗಳ ದಿವಿಬುವಿ ಸದಾ ವೇದನಾದದ ಉದ್ಘೋಷದಿಂದ ಮೊರೆಯುತ್ತಿತ್ತು. ಅನೇಕ ಯಜ್ಞಯಾಗಗಳ ಹೋಮಧೂಮದಿಂದ ವಿನೀತವಾದ ವಾತಾವರಣ ತಪೋವನದ ನೆನಪನ್ನು ತರುತ್ತಿತ್ತು. ವೇದಶಾಸ್ತ್ರಗಳ ಪಠನ ಪಾಠನ, ದೇವತಾರಾಧನೆಯ ಗಂಟೆ ಶಂಖಗಳ ನಿರ್ಘೋಷಗಳಿಂದ ಇದರ ದಿಶದಿಶೆಗಳೂ ಪ್ರಣವಸ್ವರವನ್ನು ಮೀಟುತ್ತಿದ್ದವು. ಇಲ್ಲಿಯ ಸಾತ್ತ್ವಿಕ ಜನರ ಜೀವನಕ್ಕೆ ಆಸರೆ ಅಡಕೆ ಮರಗಳ ತೋಪು. ಇಲ್ಲಿನ ಪರಿಶ್ರಮಪ್ರಿಯರಾದ ದೃಢಕಾಯ ದ್ವಿಜರ ಗುದ್ದಲಿ ಪಿಕಾಸಿ ಕೆಲಸದಿಂದ ಉದುರುತ್ತಿದ್ದ ಘರ್ಮಬಿಂದು, ಈ ಕೆಲಸದೊಂದಿಗೆ ಶಿಷ್ಯರಿಗೆ ಹೇಳಿಕೊಡುವ ವೇದಮಂತ್ರಗಳ ಪದಪಾಠದ ಉಗ್ಗಡಿಸುವ ಧ್ವನಿಗಳಿಗೆ ಮೂಕಸಾಕ್ಷಿಯಾಗಿ ಮುಗಿಲ ಕಡೆ ಮೈಚಾಚಿ ಬೆಳೆದು ನಿಂತ ಈ ಅಡಕೆ ಮರಗಳು - ಇಲ್ಲಿನ ಪೂರ್ವಜರ ಜಯಧ್ವಜಗಳಂತೆ ಹಸಿರುಚಪ್ಪರವನ್ನು ಹಾಸಿವೆ. ಪಟ್ಟಣ ಮತ್ತು ಆಧುನಿಕ ಆಕರ್ಷಣೆ-ವಿಕರ್ಷಣೆಗಳ ಮಾಯಾಜಾಲಕ್ಕೆ ದೂರವಾಗಿ, ಪಾಪ ಪುಣ್ಯಗಳಿಗಂಜುತ್ತ, ದಾನ, ಧರ್ಮ, ಅತಿಥಿಸತ್ಕಾರ ಮುಂತಾದ ಸದ್ಗೃಹಸ್ಥ ಧರ್ಮದಲ್ಲಿ ನಿರತರಾಗಿ ಇಲ್ಲಿಯ ಮುಗ್ಧಜನ ಅಲ್ಪತೃಪ್ತಿಯಿಂದ ಸಂತುಷ್ಟರು.

- ರಾ. ಗಣೇಶ ಶರ್ಮಾ

೦.೨) ನಿಗಮ ಕೌಮುದಿ: ವೇ||ಬ್ರ|| ಶ್ರೀ ನರಸಿಂಹಮೂರ್ತಿಶಾಸ್ತ್ರಿಯವರು

ನಮ್ಮ ಊರಿನಲ್ಲಿದ್ದ ಕೆಲವು ಗಣ್ಯವ್ಯಕ್ತಿಗಳ ಪ್ರಭಾವ ವೇ||ಬ್ರ|| ಶ್ರೀ ನರಸಿಂಹಮೂರ್ತಿಶಾಸ್ತ್ರಿಗಳ ಮೇಲೆ ಉಂಟಾದ್ದರಿಂದ ಅವರಿಗೆ ಇಷ್ಟೆಲ್ಲಾ ಸಾಧನೆ ಮಾಡಿ ಪ್ರಸಿದ್ಧಿ ಪಡೆಯಲು ಸಾಧ್ಯವಾಯಿತೆಂದು ಭಾವಿಸಿದ್ದೇನೆ. ಅವರ ಚಿಕ್ಕಪ್ಪನವರಾದ ಶ್ರೀ ಸುಬ್ಬರಾಯರು ಆ ಕಾಲದಲ್ಲೇ ಇಂಗ್ಲಿಷ್ ವಿದ್ಯಾಭ್ಯಾಸ ಮಾಡಿ ವಿದ್ಯಾವಂತರೆನಿಸಿಕೊಂಡವರು. ಇದ್ದ ಸರ್ಕಾರಿ ಕೆಲಸ ಬಿಟ್ಟು ನಮ್ಮ ಹಳ್ಳಿಗೆ ಎಂಟು ಮೈಲಿ

ದೂರದ ಕಾಡಿನ ಜಮೀನನ್ನು ಸಾಗುವಳಿ ಮಾಡಿ ಹಣ್ಣುಗಳನ್ನು ಬೆಳೆದು ಅದನ್ನೇ ಕೆಲವು ದಿನ ಆಹಾರವಾಗಿಸಿಕೊಂಡಿದ್ದರು. ಪಾಲಿಷ್ ಮಾಡಿದ ಅಕ್ಕಿ ಉಪಯೋಗಿಸುತ್ತಿರಲಿಲ್ಲ. ವಸ್ತ್ರದ ಉಪಯೋಗ ತುಂಬಾ ಕಡಿಮೆ ಇದ್ದಿತು. ರೀಡರ್ಸ್ ಡೈಜೆಸ್ಟ್ ಇತ್ಯಾದಿ ಸಂಚಿಕೆಗಳನ್ನು ತರಿಸಿ ಓದುತ್ತಿದ್ದರು.

- ಎಲ್.ವಿ. ಸೀತಾರಾಮ್

ಮೊದಲಬಾರಿಗೆ ಲಿಂಗದಹಳ್ಳಿಯ ಸಂಕೇತಿ ಬೀದಿಯಲ್ಲಿ ನಡೆದಾಗ ನನ್ನ ಸಂವೇದನೆ ವಿಶಿಷ್ಟವಾಗಿತ್ತು. ಅಪರಿಚಿತವಾದ ಹಳ್ಳಿಗೆ ಕ್ಷೇತ್ರಕಾರ್ಯಕ್ಕೆ ಹೋದವರಿಗೆಲ್ಲಾ ಕುತೂಹಲ ಮತ್ತು ತುಸು ಆತಂಕ(?) ಬೆರೆತ ಮನಃಸ್ಥಿತಿ ಇದ್ದೇ ಇರುತ್ತದೆ. ನನ್ನ ಆ ಅನುಭವಕ್ಕೆ ಇನ್ನೂ ಒಂದೆರಡು ಅಂಶಗಳು ಅಲ್ಲಿ ಸೇರಿದ್ದವು. ನನ್ನ ಬಾಲ್ಯದಲ್ಲಿ ಲಿಂಗದಹಳ್ಳಿಯ ಬಗೆಗೆ ಕಿವಿಗೆ ಬಿದ್ದಿದ್ದ ಹಿರಿಯರ ಮಾತುಗಳು ಉತ್ತೇಜಕವಾದುವಲ್ಲ. ಅಲ್ಲದೆ, ಪೇಟೆಯ ಬೀದಿಯಿಂದ ಪ್ರವೇಶಿಸಿದ್ದು ಒಂದು ಗಲ್ಲಿಗೆ. ಒಂದು ಗಾಡಿಯು ಸಲೀಸಾಗಿ ಪ್ರವೇಶಿಸಲಾಗದಂಥ ತಿರುವು ಸಿಕ್ಕಿತು. ನೂರಾರು ವರ್ಷ ಹಳತಾದ ಮನೆಗಳು, ಬೀಳಲು ಸಜ್ಜಾಗಿ ಓರಿಯಾದ ಗೋಡೆ, ನಾಡಹಂಚು, ಅಸ್ತವ್ಯಸ್ತ ಸಾಲು, ಬಾವಿ, ಅಲ್ಲಿ ಎಲ್ಲೋ ಮಂಡಿಯೂರಿ ಕುಳಿತ ವೃದ್ಧ ಒಂಟಿ ವಿಧವೆಯರು, ಅಲ್ಲೇ ಕಟ್ಟಿದ್ದ ದನಗಳು, ಗಾಡಿ; ಕಿರುದಾರಿಗೆ ಗುಂಡುಕಲ್ಲುಗಳ ಹಾಸು; ಅಚ್ಚ ರೈತಾಪಿ ಜನ. ಕೃಷ್ಣಾಪುರ, ಪೂಮಗಾಮೆ, ಮುದಲಾಪುರ ಜ್ಞಾಪಕ ಬಂತು. ಆದರೆ ಅವಕ್ಕಿಂತ ಲಿಂಗದಹಳ್ಳಿ ಹೀನ ಸ್ಥಿತಿಯಲ್ಲಿದೆಯೆ ಎನಿಸಿತು. ನನ್ನ ಊರಿನಿಂದ ತುಂಬ ದೂರದ ಊರಾದುದರಿಂದಲೂ ಹಾಗೆ ಅನಿಸಿರಬಹುದು.

- ಬಿ.ಎಸ್. ಪ್ರಣತಾರ್ತಿಹರನ್

ಕನೀಯಸ್ತನಯಾಪ್ರಾನ್ತೇ ಕ್ಷೇತ್ರಕಾಸಾರವರ್ತುಲೇ |
ವರ್ತತೇ ಲಿಂಗಪಲ್ಲೀತಿ ಸುಗ್ರಾಮೋ ಜನವಿಶ್ರುತಃ ||
ದ್ಯೋತತೇ ವಿಪ್ರವರ್ಯಾಣಾಂ ಕೃಷಿಕ್ಷೇತ್ರಾದಿಕಂ ಸದಾ |
ವಿಭ್ರಾಜನ್ತೇ ಗೃಹಾಣ್ಯತ್ರ ವೇದವಿದ್ಯಾವಿಶಾರದೈಃ

- ವಿದ್ವಾನ್ ಬಿ. ಲಕ್ಷ್ಮೀನಾರಾಯಣ

ಈ. ಸಂಕೇತಿ: ಇತಿವೃತ್ತಗಳು

ಸಂ: ಎನ್.ಎಸ್.ಶಾರದಾ ಪ್ರಸಾದ್ :೨೦೦೮

೦.೧)ಆಡಿದ ಹೊಲ, ಕಂಡ ವಿಚಾರ : ಪ್ರೊ. ಕೆ.ಎಸ್. ಕೃಷ್ಣಮೂರ್ತಿ (ಪ್ರಾಧ್ಯಾಪಕ, ಲೇಖಕ)

ಕೇರಳಾಪುರದ ತಮ್ಮಪ್ಪನವರು ಕಷ್ಟಜೀವಿ. ಹೊಸ ಊರಿಗೆ ಬಂದು ತನಗೆ ದೊರಕಿದ ಅಲ್ಪ ಜಮೀನಿನಲ್ಲಿ ಶ್ರಮವಹಿಸಿ ದುಡಿದು ಕ್ರಮೇಣ ಏಳಿಗೆಯನ್ನು ಹೊಂದಿದರು. ಸ್ವಲ್ಪಸ್ವಲ್ಪ ಗದ್ದೆ, ಹೊಲ, ತೋಟಗಳನ್ನು ಕೊಂಡುಕೊಂಡು ಚೆನ್ನಾಗಿ ಆಬಾದು ಮಾಡಿ ಉತ್ತಮ ವರಮಾನವನ್ನು ಪಡೆದರು. ಕೆಲಸ ಮಾಡದೆ ಕಾಲಕಳೆಯುವವರನ್ನು ಕಂಡರೆ ಅವರಿಗೆ ಕೋಪ. ಮೈಮುರಿದು ದುಡಿಯುವವರನ್ನು ಕಂಡರೆ ಮೆಚ್ಚುಗೆಯೇನೋ ಹೌದು. ಆದರೆ ಅದಕ್ಕಾಗಿ ಒಂದು ಬಿಡಿಗಾಸೂ ಹೆಚ್ಚಾಗಿ ಕೊಡುತ್ತಿರಲಿಲ್ಲ.

ಅದು ಅಡಕೆ ರೇಖೆಯ ಕಾಲ. ಅಡಕೆಯನ್ನು ರಾತ್ರಿ ಬೇಯಿಸಿದ್ದರು. ಬೆಳಿಗ್ಗೆ ಎದುರುಗಡೆ ಮೈದಾನದಲ್ಲಿ ಅದನ್ನು ಹರವಬೇಕು. ಆಗ ಏತಕ್ಕೋ ನಾನು ಅವರ ಮನೆಯ ಬಳಿ ಹೋದೆ. ತಮ್ಮಪ್ಪನವರು ತಲೆಗೆ ಒಂದು ಚೌಕವನ್ನು ಸುತ್ತಿ ಅಡಕೆಯನ್ನು ಕುಕ್ಕೆಗೆ ತುಂಬುತ್ತಿದ್ದರು. ನನ್ನನ್ನು ಕಂಡ ಅವರು, "ಶಾಮಜ್ಜಯ್ಯನ ಮಗನೇ, ಏನು ಮಾಡುತ್ತಿದ್ದೀಯೋ?" ಎಂದು ಕೇಳಿದರು. "ಏನೂ ಇಲ್ಲ"

ಎಂದೆ ನಾನು. "ಸರಿ, ಬಾ ಇಲ್ಲಿ" ಎಂದು ಹೇಳಿ ಒಂದೆರಡು ಗಂಟೆಗಳ ಕಾಲ ನನ್ನ ಕೈಯಿಂದ ಅಡಕೆ ತುಂಬಿದ ಕುಕ್ಕೆಯನ್ನು ಹೊರಿಸಿ, ಮೈದಾನದಲ್ಲಿ ಹರಡಿದ್ದ ಈಚಲು ಚಾಪೆಯ ಮೇಲೆ ಹಾಕಿಸಿದರು. ದೊಡ್ಡವರಿಗೆ ಪ್ರತಿ ಹೇಳಲಾರದೆ ಅವರು ಹೇಳಿದಂತೆ ಕೆಲಸ ಮಾಡಿದೆ. ಹೀಗೆ ಅವರು ಕಂಡವರಿಂದ ಕೆಲಸ ಮಾಡಿಸಿಕೊಂಡುಬಿಡುವರು. ತಾನು ಅವರಿಗೆ ಕೆಲಸ ಮಾಡುವುದನ್ನು ಕಲಿಸುತ್ತಿದ್ದೇನೆ ಎಂಬುದು ಅವರ ನಂಬಿಕೆ.

* * * * *

ಅಜ್ಜ ಕೃಷ್ಣಾವಧಾನಿಗಳ ಶಕ್ತಿ ಸಾಮರ್ಥ್ಯದ ಬಗ್ಗೆ ನಮ್ಮ ತಂದೆಯವರೂ ಊರಿನ ಹಿರಿಯರೂ ಒಂದು ಘಟನೆಯನ್ನು ಪ್ರಸ್ತಾಪಿಸಿ ಅವರ ಪ್ರಶಂಸೆಯನ್ನು ಮಾಡುತ್ತಿದ್ದರು, ಕೃಷ್ಣಾವಧಾನಿಗಳ ತೋಟವು ಕೇರಳಾಪುರದಿಂದ ಮೂರು ಮೈಲಿ ದೂರದ ಶೀಗುವಾಳು ಆಗ್ರದಲ್ಲಿ (ತೋಟಗಳ ಶ್ರೇಣಿಯನ್ನು 'ಆಗ್ರ' ಎನ್ನುವರು) ಇದ್ದಿತು. ಅಲ್ಲಿ ಕೇರಳಾಪುರದ ಇತರ ಕೆಲವು ಸಂಕೇತಿಗಳ ತೋಟಗಳೂ ಇದ್ದವು. ರಸ್ತೆಯ ಮೂಲಕ ಈ ತೋಟಗಳಿಗೆ ಮೂರು ಮೈಲಿ; ಒಳದಾರಿಯಲ್ಲಿ ಹೋದರೆ ಎರಡು ಮೈಲಿ ಆಗುತ್ತಿತ್ತು. ಶೀಗುವಾಳು ಗ್ರಾಮಕ್ಕೆ ಸಮೀಪವಾಗಿದ್ದುದರಿಂದ ಈ ತೋಟಗಳಿಗೆ 'ಶೀಗುವಾಳು ಆಗ್ರ' ಎಂದು ಕರೆಯುತ್ತಿದ್ದರು. ಬಾಲ್ಯದಲ್ಲಿ ಅನೇಕ ಬಾರಿ ನಾನು ಈ ತೋಟಗಳಿಗೆ ಹೋಗಿ ಎಳನೀರು ಕುಡಿದಿದ್ದೇನೆ.

ನಮ್ಮ ಅಜ್ಜನವರ ತೋಟ ಈಗ ನಮ್ಮವರ ವಶದಲ್ಲಿಲ್ಲ. ನಮ್ಮ ಅಜ್ಜ ಸತ್ತ ಅಲ್ಪಕಾಲದಲ್ಲಿಯೇ ತೋಟವನ್ನು ಮಾರಬೇಕಾಗಿ ಬಂದಿತು. ನಾನು ಇತ್ತೀಚೆಗೆ, ಶೀಗುವಾಳು ತೋಟಕ್ಕೆ ಹೋದಾಗ, "ಇದೇ ನಿನ್ನ ಅಜ್ಜ ಕೃಷ್ಣಾವಧಾನಿಗಳ ತೋಟವಾಗಿದ್ದುದು" ಎಂದು ತೋರಿಸಿದರು. ಅಜ್ಜನನ್ನು ನೋಡುವ ಸೌಭಾಗ್ಯವಿಲ್ಲದೆ ಇದ್ದರೂ ನನ್ನ ಅಜ್ಜ ಅವರ ಜೀವಿತ ಕಾಲದಲ್ಲಿ ವ್ಯವಸಾಯ ಮಾಡಿದ ತೋಟವನ್ನು ನೋಡುವ ಅದೃಷ್ಟ ದೊರಕಿತು ನನಗೆ. ಅವರು ನೆಟ್ಟು ನೀರುಣಿಸಿ ಗೊಬ್ಬರ ಹಾಕಿ ಬೆಳೆಸಿದ ತೆಂಗಿನ ಮರಗಳೂ, ಅಡಕೆ ಮರಗಳೂ ಅವರ ಪ್ರತಿನಿಧಿಗಳೇ ಎಂಬಂತೆ ಕಾಣಿಸಿದುವು. ಅವುಗಳೊಡನೆ ನನ್ನ ಮೌನಸಂವಾದ ನಡೆಯಿತು ಎಂದು ಹೇಳಿದರೆ ನೀವು ನಂಬುತ್ತೀರಾ ! ಅವರು ಹಾಕಿದ ವೀಳೆಯದೆಲೆ ಹಂಬು ಇದು ಇರಬಹುದು ಎಂದು ಒಂದೆರಡು ಚಿಗುರು ವೀಳೆಯದೆಲೆ ಕಿತ್ತು ಬಾಯಿಗೆ ಹಾಕಿಕೊಂಡು ಸವಿನೋಡಿದೆ.

ಅಜ್ಜನವರು ಬೆಳಗ್ಗೆ ಅಷ್ಟು ಹೊತ್ತಿಗೇ ಎದ್ದು ಕೇರಳಾಪುರದ ಮನೆಯಿಂದ ಹೊರಟು, ಕೈಯಲ್ಲಿ ಒಂದು ಕುಡುಗೋಲನ್ನು ಹಿಡಿದುಕೊಂಡು ತಲೆಗೆ ಲಪ್ಪಟ್ಟೆ ಸುತ್ತಿ ಶೀಗುವಾಳು ತೋಟಕ್ಕೆ ನಡೆದುಕೊಂಡು ಹೋಗುತ್ತಿದ್ದರು. ಈಗಿನವರಂತೆ ತಿಂಡಿ ಕಾಫಿ ಇತ್ಯಾದಿಗಳ ಪದ್ಧತಿ ಆಗ ಇರಲಿಲ್ಲ. ಏನಿದ್ದರೂ ಕೆಲಸ ಮುಗಿಸಿಕೊಂಡು ಬಂದು ಸ್ನಾನ, ಸಂಧ್ಯಾವಂದನೆ, ಜಪ ಮಾಡಿದ ಅನಂತರವೇ ಊಟ. ಕೃಷ್ಣಾವಧಾನಿಗಳು ತೋಟದಲ್ಲಿನ ಕೆಲಸಗಳನ್ನು ಮುಗಿಸಿ ಮಧ್ಯಾಹ್ನ ಹನ್ನೊಂದು ಹನ್ನೆರಡು ಗಂಟೆ ಹೊತ್ತಿಗೆ, ಮನೆಗೆ ಬೇಕಾದ ಸೋಗೆ, ಗೊದಮಟ್ಟೆ, ತೆಂಗಿನಕಾಯಿ, ಬಾಳೆಗೊನೆ ಕುಯ್ದಿದ್ದರೆ ಬಾಳೆಕಾಯಿ, ಪೂಜೆಗೆ ಹೂವು, ತುಳಸಿ ಎಲ್ಲವನ್ನೂ ಸಂಗ್ರಹಿಸಿಕೊಂಡು ದೊಡ್ಡ ಹೊರೆ ಮಾಡಿ, ಪಂಚೆ ಕಚ್ಚೆಯನ್ನು ಮೇಲೆತ್ತಿ ಕಟ್ಟಿಕೊಂಡು, ತಲೆಯ ಮೇಲೆ ಹೊರೆ ಹೊತ್ತುಕೊಂಡು ಮನೆಗೆ ಬರುತ್ತಿದ್ದರು. ಬಂದ ಮೇಲೆ ನದಿ ಸ್ನಾನ ಇತ್ಯಾದಿ.

ಶೀಗುವಾಳು ಒಂದು ಕುಗ್ರಾಮ. ಅಲ್ಲಿ ಕೆಲವು ಜನ ರೈತರು, ಒಕ್ಕಲಿಗರು ಗೌರವದಿಂದ ವ್ಯವಸಾಯ ಮಾಡಿಕೊಂಡು ಜೀವಿಸುತ್ತಿದ್ದರು. ಕೆಲವು ಪುಂಡರೂ ಇದ್ದರು. ಅವರಲ್ಲಿ ಕೆಲವರು ಆಗಾಗ್ಗೆ ಈ ಐನೋರ ತೋಟಗಳಿಗೆ ಬಂದು ತೆಂಗಿನಕಾಯಿ, ವೀಳೆಯದೆಲೆ, ಬಾಳೆಗೊನೆ ಕದಿಯುತ್ತಿದ್ದರು. ಇಪ್ಪತ್ತು ಇಪ್ಪತ್ತುನಾಲ್ಕು ಗಂಟೆ ಕಾವಲಿರುವುದಕ್ಕಾಗುತ್ತದೆಯೇ ! ತೋಟದಿಂದ ಮನೆ ತುಂಬ ದೂರ. ಇದು ಕಳ್ಳರಿಗೆ ವರವಾಗಿ ಪರಿಣಮಿಸಿತ್ತು. ಇದಕ್ಕೆ ಏನು ಮಾಡುವುದು ಎಂದು ಅಜ್ಜ ಚಿಂತಿಸುತ್ತಿದ್ದರು. 'ಕೋತಿಗಳು ಬಂದು ಹಾವಳಿ ಮಾಡಿದರೆ ಹೋಗುತ್ತವಲ್ಲ, ಹಾಗೆಯೇ ಅಂದುಕೊಂಡರಾಯಿತು. ಋಣ ತೀರಿಸಬೇಕಲ್ಲ' ಎಂದುಕೊಂಡು ಸುಮ್ಮನಾಗುತ್ತಿದ್ದರು.

ಹೀಗಿರುವಾಗ ಒಂದು ದಿವಸ ತೋಟದಿಂದ ಹೊರೆ ಹೊತ್ತುಕೊಂಡು ಬರುತ್ತಿದ್ದಾರೆ. ಸುಮಾರು ಕಾಲುದೂರ ಬಂದಿದ್ದಾರೆ. ಆಗ ಒಬ್ಬ ಆಳು ಓಡಿ ಬಂದು, "ಅಯ್ನೋರೇ, ಬಡ್ಡೀಮಕ್ಳು - ಅದೇ ಕಳ್ಳರು - ತೋಟಕ್ಕೆ ನುಗ್ಗಿ ತೆಂಗಿನಕಾಯಿ ಕೆಡವುತ್ತಿದ್ದಾರೆ" ಎಂದು ಹೇಳಿದ. ಇವತ್ತು ಸಿಕ್ಕಿ ಬೀಳ್ತಾರೆ ಎಂದು ಹೇಳುತ್ತ ತಲೆ ಮೇಲೆ ಹೊರೆ ಇರುವ ಹಾಗೆಯೇ ಅಜ್ಜ ತೋಟದ ಕಡೆಗೆ ಧಾವಿಸಿದರು. ತೋಟದಲ್ಲಿ

ಮರದ ಮೇಲೆ ಹತ್ತಿ ಕಾಯಿ ಕೀಳುತ್ತಿದ್ದ ಕಳ್ಳರು "ಅಯ್ನೋರು ಬಂದುಬಿಟ್ರಲ್ರೋ" ಎಂದು ಕೂಗುತ್ತ ಕೆಳಗಿಳಿಯತೊಡಗಿದರು. ಕಳ್ಳರು ಕೆಳಗಿಳಿಯುವ ಹೊತ್ತಿಗೆ ಅಜ್ಜ ಮರದ ಹತ್ತಿರಕ್ಕೆ ಬಂದುಬಿಟ್ಟಿದ್ದರು. ಅನಾಮತ್ತು ಆ ಕಳ್ಳರನ್ನು ಕಂಕುಳಲ್ಲಿ ಅಮುಕಿ ಹಿಡಿದುಕೊಂಡು ಊರಕಡೆ ಧಾವಿಸಿದರು. ಕಳ್ಳರು ಅಜ್ಜನ ಹಿಡಿತದಲ್ಲಿ ವಿಲಿವಿಲಿ ಒದ್ದಾಡುತ್ತ "ಬುಟ್ಬುಬುಡಿ. ಇನ್ನು ತೋಟದತಾಕೆ ಬರಾಕಿಲ್ಲ" ಎಂದು ಅಂಗಲಾಚುತ್ತಿದ್ದರು. ಮೂರು ಜನ ಕಳ್ಳರನ್ನೂ ಕಂಕುಳಲ್ಲಿ ಇರುಕಿಕೊಂಡೇ ಕೇರಳಾಪುರಕ್ಕೆ ಬಂದು, ಕೇರಳಾಪುರದ ಪಟೇಲನ ಮನೆಯ ಮುಂದುಗಡೆ ಎತ್ತಿಹಾಕಿದರು. ಅನಂತರ ಪಟೇಲನನ್ನು ಕರೆದು, ಕಳ್ಳರನ್ನು ಅವನಿಗೆ ಒಪ್ಪಿಸಿದರು. ಪಟೇಲ ಕಳ್ಳರನ್ನು, "ಕಳ್ಳಮುಂಡೇ ಮಕ್ಳ! ಅಯ್ನೋರ ತೋಟದಲ್ಲಿ ಯಾಕೋ ಕದಿಯೋಕೆ ಹೋದ್ರಿ, ಇವತ್ತು ನಿಮ್ಮ ಪ್ರಾಣ ತೆಗೀದೆ ಕರಕಂಡು ಬಂದವ್ರೆ" ಎಂದು ಗದರಿಸಿದರು. ಕಳ್ಳರು, "ಇದೊಂದು ಸಲಕ್ಕೆ ಬುಟ್ಬುಬುಡಿ, ಇನ್ನುಮ್ಯಾಗೆ ಕಳ್ಳತನ ಮಾಡಾಕಿಲ್ಲ" ಎಂದು ಪಟೇಲರ ಕಾಲಿಗೆ ಬಿದ್ದರು. ಅಜ್ಜನವರು, "ಆ ಹುಳುಗಳನ್ನು ಬಿಟ್ಟುಬಿಡಿ, ಪಾಪ ಬದುಕಿಕೊಳ್ಳಲಿ" ಎಂದರು. ಬದುಕಿದೆಯಾ ಬಡಜೀವವೇ ಎಂದು ಅಲ್ಲಿಂದ ಕಳ್ಳರು ಕಂಬಿಕಿತ್ತರು.

೦.೨) ಮಾಗಿದ ಬದುಕು : ಆರ್.ವಿ. ಶ್ರೀನಿವಾಸಯ್ಯ (ಕವಿ, ಕೃಷಿಕ)

ನಾಣಿ ಅಜ್ಜ

ನನ್ನ ತಂದೆಯಕಡೆಯ ಅಜ್ಜನಿಂದ ಯಾವ ನೆರವೂ ಇರಲಿಲ್ಲ. ನಾಣಿ ಅಜ್ಜನೇ ನಮಗೆ ಕಾವಲು. ಒಬ್ಬ 'ಅಲ್ಲಿ' ಸಾಹೇಬರು ಎಂಬುವವರಿಂದ ನಮ್ಮ ತಂದೆ, ನಾಣಿ ಅಜ್ಜನ ಬೆಂಬಲದಿಂದ ನಾಲ್ಕು ಎಕರೆ ಕಾಡು ಜಮೀನನ್ನು ಕೊಂಡರು. ಅದರಲ್ಲಿ ಒಂದು ಭಾಗವನ್ನು ಬಾಗಾಯ್ತು ಮಾಡಿದರು. ಅದು ಸಂಕೇತಿಗಳ ಕುಲಕಸುಬು; ಅಲ್ಲೊಂದು ಅಡಕೆ ತೋಟ ಎಬ್ಬಿಸಿದರು. ಇನ್ನೊಂದು ಭಾಗದಲ್ಲಿ ತರಕಾರಿ ಬೆಳೆದರು; ಮಾರಿದರು; ಅದರಿಂದಲೇ ತಾತ್ಕಾಲಿಕವಾದ ಜೀವನ ಸಾಗುತ್ತಿತ್ತು. ಹೀಗೆ ತರಕಾರಿ ಬೆಳೆದು ಮಾರಿದ್ದು ಮಾತ್ರ ಪರಂಪರೆಗೆ ಹೊರತಾದ ಕಸುಬಾಗಿತ್ತು. ನನ್ನ ಪ್ರೀತಿಯ ನಾಣಿ ಅಜ್ಜನೇ ಮನೆಯ ಜಗುಲಿಯ ಮೇಲೆ ತರಕಾರಿಯನ್ನು ಇಟ್ಟುಕೊಂಡು ಮಾರುತ್ತಿದ್ದರು. ನಾನೂ ಅವರ ಜತೆಯಲ್ಲೇ ಕೂರುತ್ತಿದ್ದೆ. ನಾಣಿ ಅಜ್ಜನಿಗೆ ವಯಸ್ಸಾಗಿತ್ತು, ಕೊನೆಗೆ ಖಾಯಿಲೆ ಬಿದ್ದು ಸ್ವರ್ಗಸ್ಥರಾದರು. ಆಗ ನನಗೆ ಮೂರು ವರ್ಷ. ಅಂದಿನಿಂದ, ನಡೆದ ವಿಚಾರವೆಲ್ಲಾ ನನಗೆ ಚೆನ್ನಾಗಿ ನೆನಪಿದೆ.

* * * * *

ಕಾಲಕ್ರಮದಲ್ಲಿ ನಮ್ಮ ತಂದೆಯ ತಂದೆಯವರು ಹನ್ನೊಂದು ಗುಂಟೆ ತರೀ ಜಮೀನನ್ನು ನಮ್ಮ ತಂದೆಯವರಿಗೆ ಬಿಟ್ಟುಕೊಟ್ಟರು. ಆ ವೇಳೆಗೆ ನಮ್ಮ ತೋಟದಲ್ಲಿ ಅಡಕೆ, ತೆಂಗು ಮತ್ತಿತರ ವೃಕ್ಷಗಳು ಫಲಕೊಡಲಾರಂಭಿಸಿದ್ದವು. ಬೇರೆಯವರಿಗೆ ಅದು ಆಕರ್ಷಕವಾಗಿ ಕಾಣತೊಡಗಿತ್ತು. ಎಲ್ಲರೂ ಮೇಲೆಬಿದ್ದು ಖರೀದಿಗೆ ಕೇಳತೊಡಗಿದ್ದರು. ನಮ್ಮ ತಂದೆಯವರಿಗೂ, ತರೀ ಜಮೀನಿನ ಹತ್ತಿರವೇ ನಮ್ಮ ತೋಟ ಇದ್ದರೆ ಚೆನ್ನು ಎನಿಸಿತ್ತು. ಈ ನಮ್ಮ ತೋಟವನ್ನು ಖರೀದಿಗೆ ಕೊಟ್ಟು ನಾಲೆ ಕೆಳಗೆ ಅರ್ಧ ಎಕರೆ ತೋಟವನ್ನು ಖರೀದಿಸಿದರು. ಅದರಲ್ಲಿ ವೀಳೆದೆಲೆ ಪೈರು, ತೆಂಗು, ಅಡಕೆ, ಬಾಳೆ ಎಲ್ಲಾ ಇತ್ತು. ಜೀವಕ್ಕೆ ಸ್ವಲ್ಪ ಸಮಾಧಾನ ಆಯಿತು.

* * * * *

ನನಗೆ ಬಾಲ್ಯದಿಂದಲೂ ಗಣಪತಿಯ ವಿಗ್ರಹ ಮಾಡಿ ಅಭ್ಯಾಸವಾಗಿತ್ತು. ಆ ದಿನಗಳಲ್ಲಿ ಗಣಪತಿ ಹಬ್ಬಕ್ಕೆ ವಿಗ್ರಹಗಳನ್ನು ಕೊಂಡು ತರುವ ಅಭ್ಯಾಸವಿರಲಿಲ್ಲ. ಬಣ್ಣದ ಬಳಕೆಯಂತೂ ಇರಲೇಇಲ್ಲ. ನಾವೇ ಜೇಡಿಮಣ್ಣಿನಲ್ಲಿ ಮಾಡಿಕೊಳ್ಳುತ್ತಿದ್ದೆವು.

ಚಿಲ್ಕುಂದದಲ್ಲಿದ್ದಾಗ ಒಂದು ದಿನ ನಮ್ಮ ಭಾವ ತಿಮ್ಮಪ್ಪಯ್ಯನವರ ಜೊತೆ ಅವರ ತೋಟಕ್ಕೆ ಹೋದೆ. ಜೇಡಿಮಣ್ಣು ಹದ ಮಾಡಿಕೊಂಡೆ. ಒಂದು ಅಡಿ ಎತ್ತರದ ಮುದ್ದಾದ ವಿಗ್ರಹ ತಯಾರಿಸಿದೆ. ತಿಮ್ಮಪ್ಪಯ್ಯನವರೂ ಆ ಕಲೆಯನ್ನು ಕರಗತಮಾಡಿಕೊಂಡರು.

ಈ ನಡುವೆ ರುದ್ರಪಟ್ಟಣಕ್ಕೆ ಹೋಗುವಾಗ ನೂರು ಗುಣಿ ವೀಳೆದೆಲೆ ಹಂಬು ತೆಗೆದುಕೊಂಡು ಹೋಗಿದ್ದೆ. ಮಾರನೆಯ ದಿನವೇ

ಗುಣಿಗಳನ್ನು ಸಿದ್ಧಪಡಿಸಿ ಗಿಡನೆಟ್ಟು ನೀರು ಹಾಯಿಸಿದೆ. ಮಳೆಗಾಲವಾದ್ದರಿಂದ ಅಷ್ಟು ಕಷ್ಟವಾಗಲಿಲ್ಲ. ಬಾಳೆಗೊನೆಗಳೂ ಚೆನ್ನಾಗಿ ಬರುತ್ತಿದ್ದವು.

ಗಿಡಗಳಿಗೆ ನೀರು ಹಾಕಬೇಕಾದ ಕಾಲ ಬಂತು. ನೋಡೋಣ ಎಂದು ಒಂದೇ ಕೈಯಲ್ಲಿ ಹರವಿಯಲ್ಲಿ ನೀರು ತುಂಬಿ ತಂದು ಹುಯ್ಯತೊಡಗಿದೆ. ಕಾಲ ಕಳೆದಂತೆ, ಮುರಿದ ಕೈಯಲ್ಲೂ ನೀರು ಹಾಕಬಹುದು ಎಂಬ ಧೈರ್ಯ ಮೂಡಿತು.

* * * * *

ಆದರೆ ಆ ಸಂಭ್ರಮ ಬಹಳ ದಿನ ಉಳಿಯಲಿಲ್ಲ. ಅದು ೧೯೩೦ನೇ ಇಸವಿ. ಮಾವನವರ ಮನೆಯಲ್ಲಿ ಹತ್ತು ಹನ್ನೆರಡು ದನಗಳಿದ್ದವು. ಅವುಗಳನ್ನು ಕಾಯಲು ಆಳುಗಳಿಲ್ಲದೆ ಹೋಗಿದ್ದರು. ಮಾವನವರು ನನ್ನನ್ನು ಕರೆದು, "ಹೇಗಿದ್ದರೂ ನಿನ್ನ ಕೈಲಿ ಇನ್ನು ಏನು ಮಾಡಲೂ ಆಗುವುದಿಲ್ಲ. ನಮ್ಮ ಹೊಲ ಹತ್ತಿರವಾಗೂ ಇದೆ. ಅಲ್ಲೇ ದನ ಬಿಟ್ಟುಕೊಂಡು ಒಂದು ಕಡೆ ಕೂರು. ನಾಲ್ಕು ಗಂಟೆ ಹೊತ್ತಿಗೆ ಉಪಾಹಾರಕ್ಕೆ ಏನಾದರೂ ತಂದುಕೊಡುತ್ತೇವೆ. ಐದುಗಂಟೆಗೆ ಮನೆಗೆ ಬಾ" ಎಂದರು. ಅದೊಂದು ಖಾಯಂ ಕೆಲಸವಾಗಿ ನನಗೆ ನೇಮಕವಾಯಿತು. ದನ ಕಾಯುವುದು ಅಪಮಾನದ ಕೆಲಸವಲ್ಲ. ರುದ್ರಪಟ್ಟಣದಲ್ಲೂ ವ್ಯವಸಾಯವನ್ನು ಸ್ವತಃ ಮಾಡುತ್ತಿದ್ದೆ, ದನಗಳನ್ನೂ ಸಾಕುತ್ತಿದ್ದೆ. ಆದರೆ ಮನೆ ಅಳಿಯನಾದುದರಿಂದಲೋ ಏನೋ ಅಭಿಮಾನಭಂಗವಾದಂತೆನಿಸಿತು. ಗೌರಮ್ಮನವರಿಗೂ ನಾರಾಯಣಾವಧಾನಿಗಳಿಗೂ ಹೇಳಿ ಊರಿಗೆ ವಾಪಸು ಬಂದುಬಿಟ್ಟೆ. ಆಗ ನನಗೆ ಹತ್ತೊಂಬತ್ತೂವರೆ ವರ್ಷವಾಗಿತ್ತು.

* * * * *

ಇಂಥ ವೇಳೆ ಎಂ.ಎಸ್. ಹಿರಣ್ಣಯ್ಯ ಎಂಬುವವರು ರೈಲ್ವೆ ಅಸಿಸ್ಟೆಂಟ್ ಕಮಿಷನರ್ ಆಗಿದ್ದರು. ಅದಕ್ಕೂ ಹಿಂದೆ ಅವರು ಹಾಸನಜಿಲ್ಲೆಯ ಜಿಲ್ಲಾಧಿಕಾರಿಗಳಾಗಿದ್ದರು. ಆಗ National War Front ಎಂಬುದೊಂದು ಸಂಸ್ಥೆ ಇತ್ತು. ಅದಕ್ಕೆ ಉಪನ್ಯಾಸಕರ ಅಗತ್ಯವಿತ್ತು. ಯಾರೋ ನನ್ನ ಬಗೆಗೆ ಅವರಿಗೆ ಹೇಳಿದರು. ಆಗ ರೈತರನ್ನು ಶೋಷಣೆ ಮಾಡುವುದರ ವಿರುದ್ಧ ಒಂದು ಜಾಗೃತಿ ಆಂದೋಳನ ನಡೆಯುತ್ತಿತ್ತು. ಹಾಗೆ ಜಾಗೃತಿ ಉಪನ್ಯಾಸ ಮಾಡಲು ನನ್ನನ್ನು ನೇಮಿಸಿದರು. ನಾನು ಸ್ವತಃ ರೈತನಾದುದರಿಂದ ಅವರಿಗೆ ನಾನು ಈ ಕೆಲಸಕ್ಕೆ ಹೆಚ್ಚು ಸೂಕ್ತ ಎನಿಸಿತ್ತು. ಸಭೆಗಳಲ್ಲಿ ಸಹಸ್ರಾರು ಜನ ಸೇರಿರುತ್ತಿದ್ದರು. ಎಲ್ಲ ಇಲಾಖೆಗಳ ಮುಖ್ಯಸ್ಥರೂ ಅದರಲ್ಲಿ ಹಾಜರಿರುತ್ತಿದ್ದರು. ಇಡೀ ಜಿಲ್ಲೆಯ ನೂರಾರು ಹಳ್ಳಿಗಳಲ್ಲಿ ಇದು ನಡೆಯಿತು.

* * * * *

ಜಮೀನು ಆಬಾದು ಮಾಡಲೂ ಆಗ ನನಗೆ ಹುಮ್ಮಸ್ಸು. ಒಂದು ಎಕರೆಗೆ ಉದ್ದು, ಒಂದು ಎಕರೆಗೆ ಹೆಸರು, ಇನ್ನೊಂದು ಎಕರೆಗೆ ಹುರುಳಿ ಹಾಕಿದೆ. ಮಳೆಯೂ ಚೆನ್ನಾಗಿ ಆಯಿತು. ಬೆಳೆ ಚೆನ್ನಾಗಿ ಬಂತು, ಕಾಯಿ ಕಚ್ಚಿತು. ಕೀಳಿಸುವ ಹೊತ್ತಿಗೆ ಕಾಡಿನಲ್ಲಿದ್ದ ಇಲಿಗಳು ತಿಂದು ಮುಗಿಸಿದವು. ಸುತ್ತ ಕಾಡಿರುವಾಗ ಇಲಿಗಳನ್ನು ನಿಯಂತ್ರಿಸುವುದು ಸಾಧ್ಯವಿರಲಿಲ್ಲ.

* * * * *

೦.೩) ಜೀವನಗಾಥ : ಕೆ.ಎಸ್. ವೆಂಕಟರಾಮಯ್ಯ (ಕವಿ, ಅಧ್ಯಾಪಕ)

ನನಗೆ ಹೈಸ್ಕೂಲಿಗೆ ಬರುವವರೆಗೂ ಮನೆಯ ಸ್ಥಿತಿಯ ಅರಿವಾಗಿರಲಿಲ್ಲ. ಆಮೇಲೆ ನಮ್ಮ ಮನೆಯ ವಿಷಯಗಳು ಸ್ವಲ್ಪ ಸ್ವಲ್ಪವಾಗಿ ಅರಿವಾಗತೊಡಗಿದವು. ಬಡತನ ಅಂದರೆ ಹೇಳತೀರದು. ಇದ್ದ ಅಲ್ಪಸ್ವಲ್ಪ ಜಮೀನಿನಲ್ಲಿ ಬರುತ್ತಿದ್ದ ದವಸ ಐದಾರು ತಿಂಗಳಿಗಿಂತ ಹೆಚ್ಚು ಬರುತ್ತಿರಲಿಲ್ಲ. ಉಳಿದ ತಿಂಗಳುಗಳಲ್ಲಿ ಜೀವನ ಮಾಡುವುದು ಬಹಳ ಕಷ್ಟವಾಗಿತ್ತು. ಅದಕ್ಕೆ ಕಾಲಕಾಲಕ್ಕೆ ಮಳೆಯಾಗದಿರುವುದೂ ಒಂದು ಕಾರಣ.

* * * * *

ನಮಗೆ ಒಂದು ಎಕರೆ ಹೊಲ, ಒಂದೂವರೆ ಎಕರೆ ಗದ್ದೆಯೇನೋ ಇತ್ತು. ಆದರೆ ಕಾಲಕಾಲಕ್ಕೆ ಮಳೆಯಾಗದೇ ಬೆಳೆ ಸರಿಯಾಗಿ ಬರುತ್ತಿರಲಿಲ್ಲ. ನಮ್ಮ ಮನೆಯಲ್ಲಿ ಜೀವನ ಕಡುಬಡತನದಲ್ಲಿಯೇ ನಡೆಯಿತು. ಈ ಬಡತನದಲ್ಲಿಯೇ ನಮ್ಮ ತಂದೆಯವರು ಮೂರು ಮಕ್ಕಳಿಗೆ ಹೇಗೋ ಮದುವೆಯನ್ನೂ ಮಾಡಿದರು.

* * * * *

ಆಗಿನ ಕಾಲದಲ್ಲಿ ಹಳ್ಳಿಗಳಲ್ಲಿ ಸಂಕೇತಿಗಳ ಉದ್ಯೋಗವೆಂದರೆ ಅಡಕೆ ಮತ್ತು ಎಲೆಹಂಬಿನ ತೋಟದ ವ್ಯವಸಾಯ, ವಿದ್ಯಾಭ್ಯಾಸವೆಂದರೆ ವೇದಾಧ್ಯಯನ; ತೋಟದಲ್ಲಿ ಅಗತೆ, ಹಂಬಿಗೆ ನೀರು ಹಾಕುವುದು, ಸಂಧ್ಯಾಕಾಲದಲ್ಲಿ ವೇದಾಧ್ಯಯನ ಮತ್ತು ಅಧ್ಯಾಪನ. ಕೆಲವರು ತೋಟದಲ್ಲಿ ಕೆಲಸ ಮಾಡುತ್ತಿದ್ದಾಗಲೂ ತಮ್ಮ ಮಕ್ಕಳಿಗೆ ವೇದ ಪಾಠ ಹೇಳುತ್ತಿದ್ದರು. ನಮ್ಮ ಹಳ್ಳಿಯಲ್ಲಿ ಆಗಿನ ಕಾಲದಲ್ಲಿ ವೇದ ಹೇಳಿಕೊಡುವವರು ಯಾರೂ ಇರಲಿಲ್ಲ. ಆದುದರಿಂದ ನಮ್ಮ ತಂದೆಯವರಿಗಾಗಲೀ, ನಮ್ಮ ದೊಡ್ಡಪ್ಪ, ಚಿಕ್ಕಪ್ಪನವರಿಗಾಗಲೀ ವೇದ ಪಾಠ ಆಗಿರಲಿಲ್ಲ. ಆದರೆ ಸಂಧ್ಯಾವಂದನೆ ಮಂತ್ರ ಮತ್ತು ದೇವರಪೂಜೆ ಮಂತ್ರಗಳನ್ನು ಅವರು ಕಲಿತಿದ್ದರು. ಪ್ರತಿನಿತ್ಯ ಸಂಧ್ಯಾವಂದನೆ, ಹಬ್ಬ ಹರಿದಿನಗಳಲ್ಲಿ ದೇವರಪೂಜೆ ಮಾಡುವುದು ವಾಡಿಕೆಯಾಗಿತ್ತು.

ರಜಾ ದಿನಗಳಲ್ಲಿ ನಾನು ಊರಿಗೆ ಹೋದಾಗ ನಮ್ಮ ತಂದೆಯವರ ಜತೆಯಲ್ಲಿ ತೋಟಕ್ಕೆ ಹೋಗಿ ಅಗೆಯುವುದು, ಹಂಬಿಗೆ ನೀರು ಹಾಕುವುದು ಮೊದಲಾದ ಕೆಲಸಗಳಲ್ಲಿ ಅವರಿಗೆ ನೆರವಾಗುತ್ತಿದ್ದೆ. ಕೆಲವು ಸಲ ದನಗಳನ್ನು ಮೇಯಿಸಲೂ ಹೋಗುತ್ತಿದ್ದೆ.

೦.೪) ತೇನವಿನಾ : ವೇ||ಬ್ರ|| ಶ್ರೀ ರಾಮೇಶ್ವರಾವಧಾನೀ (ಅಧ್ಯಾಪಕ, ಪುರೋಹಿತ, ವಿದ್ವಾಂಸ)

ನಮ್ಮವರು ಕಷ್ಟಸಹಿಷ್ಣುಗಳು, ಎಲ್ಲರೂ ತೋಟಗಾರರು. ತೋಟಗಳಲ್ಲಿ ತಾವೇ ಕಷ್ಟಪಟ್ಟು ಕೆಲಸ ಮಾಡುತ್ತಿದ್ದರು. ಹಾಗೆಯೇ ಅಡಕೆ-ಬಾಳೆ ಮೊದಲಾದವನ್ನು ತಾವೇ ಸ್ವತಃ ಸಂತೆಗಳಿಗೆ ಹೊತ್ತುಕೊಂಡು ಹೋಗಿ ಮಾರಾಟಮಾಡಿ ಬರುತ್ತಿದ್ದರು. ಹೊಲಗದ್ದೆಗಳನ್ನು ಮಾತ್ರ ರೈತರಿಗೆ ವಾರಗುತ್ತಿಗೆಗಳಿಗೆ ಕೊಟ್ಟಿರುತ್ತಿದ್ದರು.

* * * * *

ಈಗ ವೇದಶಾಸ್ತ್ರಗಳನ್ನು ಕಲಿಯಲು ಬರುತ್ತಿರುವವರ ಸಂಖ್ಯೆ ಬಲು ಕಡಿಮೆ, ಸಂಕೇತಿಗಳಲ್ಲಿ ಇನ್ನೂ ಕಡಿಮೆ. ಮಂಗಳೂರು, ಉಡುಪಿ ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿ ಸ್ವಲ್ಪ ಮೇಲು. ಪೂರ್ಣವಾಗಿ ವ್ಯಾಸಂಗ ಮಾಡುವವರು ವಿರಳ. ಇತರ ವಿದ್ಯೆಗಳಿಂದ ಉದ್ಯೋಗವೂ ಹಣವೂ ದೊರೆಯುತ್ತಿದೆ. ಆದರೆ ಹಿಂದಿನಿಂದಲೂ ಬ್ರಾಹ್ಮಣರು ವಿದ್ಯೆಗಾಗಿ ವಿದ್ಯೆಯನ್ನು ಕಲಿಯುತ್ತಿದ್ದರು, ಹಣಕ್ಕಾಗಿ ಅಲ್ಲ. ಪರಂಪರೆಯನ್ನು ಉಳಿಸಿಕೊಂಡ ಸಂಕೇತಿಗಳಂತೂ ಇಂದಿಗೂ ತೋಟದಲ್ಲಿ ಸ್ವಂತ ದುಡಿಮೆ ಮಾಡಿ ಸಂಪಾದಿಸುತ್ತಾರೆ, ವಿದ್ಯೆಯನ್ನೂ ಜೀನವಾಧಾರವನ್ನೂ ತಳಕು ಹಾಕುವುದಿಲ್ಲ.

* * * * *

೦.೫) ತುಂಗೆಯ ಮಡಿಲಲ್ಲಿ: ವೇ||ಬ್ರ||ಶ್ರೀ ಮಾರ್ಕಂಡೇಯ ಅವಧಾನೀ

(ವೇದ ವಿದ್ವಾಂಸ, ಪುರೋಹಿತ, ಕೃಷಿಕ)

ಮಿತ್ರರ ಬಳಗದಲ್ಲಿ ಹೀಗಾದರೆ, ಅತ್ತ ಸಂಬಂಧದ ಬಳಗದಲ್ಲಿಯೂ ತಂದೆಯವರದು ವಿಶೇಷವಾದ ವರ್ಚಸ್ಸು. ತಂದೆಯ ಸೋದರತ್ತೆಯ ಮಗ ತರೀಕೆರೆ ಕೃಷ್ಣಶಾಸ್ತ್ರಿಗಳು (ಅವರೇ ನಮ್ಮನ್ನು ಅಧ್ಯಯನಕ್ಕೆಂದು ನಂಜನಗೂಡಿಗೆ ಬಿಟ್ಟು ಬಂದವರು) ಅವರಿಗೂ

- ತಂದೆಗೂ ಬಹಳ ಪ್ರೀತಿ, ಸ್ನೇಹ. ಇಬ್ಬರದೂ ಒಂದೇ ವಯಸ್ಸು. ಒಟ್ಟಿಗೆ ಅಧ್ಯಯನ ಮಾಡಿದವರು. ನಮ್ಮ ಊರಿನ ಬಳಿ ಇದ್ದ ಕೋಡೀಹಳ್ಳಿಯಲ್ಲಿ ಕೃಷ್ಣಶಾಸ್ತ್ರಿಗಳಿಗೆ ಜಮೀನು ಇದ್ದಿತು. ಅವರು ಅಲ್ಲಿ ಜಮೀನು ಮಾಡಿಕೊಂಡಿದ್ದರು. ಇತ್ತ ಊರಿನಲ್ಲಿದ್ದ ಅವರ ಜಮೀನನ್ನು ತಂದೆಯೇ ನೋಡಿಕೊಳ್ಳುತ್ತಿದ್ದರು. ಅವರ ತೋಟವನ್ನೂ ನಮ್ಮ ತಂದೆ ನಮ್ಮ ತೋಟದಂತೆಯೇ ಕಂಡು ಕೆಲಸ ಮಾಡಿಸುತ್ತಿದ್ದು, ಅವರಿಬ್ಬರ ನಡುವೆ ದುಡ್ಡುಕೊಟ್ಟು ತೆಗೆದುಕೊಳ್ಳುವುದು ಆಗಾಗ ನಡೆಯುತ್ತಲೇ ಇತ್ತು. ಒಟ್ಟಾರೆ ಸೇರಿಸಿದ ಹಣದಲ್ಲಿ ತೆಗೆದುಕೊಂಡ ದುಡ್ಡಿನ ಖರ್ಚಿನ ಲೆಕ್ಕವನ್ನು ಇಬ್ಬರೂ ಬರೆದಿಡುತ್ತಿದ್ದ ಕಾರಣ ಆ ಬಗ್ಗೆ ಎಂದೂ ಮನಸ್ತಾಪ ಬಂದದ್ದಿರಲಿಲ್ಲ. ಕೃಷ್ಣಶಾಸ್ತ್ರಿಗಳ ಮನೆವಾರ್ತೆಯ ಖರ್ಚಿನ ಲೆಕ್ಕವನ್ನು ತಂದೆಯೇ ಇಡುತ್ತಿದ್ದರು. ಆದರೆ ಎಲ್ಲವೂ ಬೇರೆಬೇರೆ.... ತಮ್ಮ ಸಂಸಾರ, ತೋಟ, ಗದ್ದೆಯ ಖರ್ಚು ಪ್ರತ್ಯೇಕ ; ಕೃಷ್ಣಶಾಸ್ತ್ರಿಗಳ ಸಂಸಾರ, ತೋಟದ ಖರ್ಚು ಪ್ರತ್ಯೇಕ. ಬಂದ ಆದಾಯ, ಆಗುತ್ತಿದ್ದ ಖರ್ಚುಗಳು ಇಬ್ಬರಿಗೂ ಚೆನ್ನಾಗಿ ತಿಳಿದಿರುತ್ತಿದ್ದವು. ಒಮ್ಮೆ ಕಾಗದ ಬರೆದಾಗ ಕೃಷ್ಣಶಾಸ್ತ್ರಿಗಳು ತಂದೆಗೆ, "ಈ ಸಾರಿ ಹೆಚ್ಚು ಖರ್ಚು ಮಾಡಬೇಡ, ಅಡಕೆಯ ಬೆಲೆ ಇಳಿಬಿದ್ದಿದೆ. ನಾವು ಏನು ಮಾಡಿದರೂ ಕೈಹತ್ತುವುದಿಲ್ಲ" ಎಂದು ಎಚ್ಚರಿಕೆ ಕೊಟ್ಟಿದ್ದರು. ತಂದೆ ಅದನ್ನು ಕೇಳುವವರಾಗಿರಲಿಲ್ಲ. "ಹಾಗೆಂದರೆ ಹೇಗೆ? ನಮಗೆ ಇರುವುದೇ ಅದೊಂದು ಆಧಾರ. ಅದಕ್ಕಾಗಿ ಖರ್ಚು ಬೇಡ ಎಂದರೆ ಹೇಗೆ? ಅಷ್ಟಾಗಿ ಮಾಡದಿದ್ದರೂ ಇರುವುದನ್ನಂತೂ ರೂಢಿಸಿಕೊಂಡು ಹೋಗಬೇಕಷ್ಟೇ" ಎಂದುಕೊಂಡು ಎಂದಿನಂತೆ ತಮ್ಮ ವ್ಯವಹಾರ ನಿರ್ವಹಿಸಿದರು. ನಿರೀಕ್ಷಿಸಿದಂತೆ ಹೆಚ್ಚಿನ ಹಣದ ಅಗತ್ಯವೂ ಬಿದ್ದಿತು. ಬೇರೆ ದಾರಿಕಾಣದೆ ತಂದೆ ಕೃಷ್ಣಶಾಸ್ತ್ರಿಗಳಿಗೆ ಪತ್ರ ಬರೆದರು. ಕೃಷ್ಣಶಾಸ್ತ್ರಿಗಳಿಗೆ ಆ ವೇಳೆಗಾಗಲೇ ಜಂಗ್ಲೀ ಮರಮುಟ್ಟುಗಳನ್ನು ಮಾರಿ ಸುಮಾರು ಸಾವಿರಾರು ರೂಪಾಯಿಗಳು ಕೈಗೆ ಬಂದಿದ್ದುದು ತಂದೆಗೆ ತಿಳಿದಿತ್ತಾದ್ದರಿಂದ ಅವರು ಅವರನ್ನೇ ಹಣ ಕೇಳಿದರು. ಅದಕ್ಕೆ ಕೃಷ್ಣಶಾಸ್ತ್ರಿಗಳು, "ಈಗಂತೂ ಆ ಹಣವನ್ನು ಕೊಡಲು ಸಾಧ್ಯವಿಲ್ಲ. ನನಗೇ ಯಾವುದೋ ಖರ್ಚಿಗೆ ಅದು ಬೇಕಾಗಿದೆ. ಮೊದಲೇ ಈ ಬಗ್ಗೆ ನಾನು ನಿನಗೆ ಎಚ್ಚರಿಕೆ ಕೊಟ್ಟಿದ್ದರೂ ನೀನು ನನ್ನ ಮಾತು ಕೇಳದೆ ಹೆಚ್ಚಿಗೆ ಖರ್ಚು ಮಾಡಿದ್ದೀಯೆ. ಈಗ ನನ್ನ ಕೈಗೆ ದುಡ್ಡು ಬಂದಿದೆ ಎಂದು ತಿಳಿದೇ ಕೇಳುತ್ತಲೂ ಇದ್ದೀಯೆ. ನಿನ್ನ ಕೈಲಿರುವ ದುಡ್ಡಿನಲ್ಲೇ ಹೇಗಾದರೂ ನಿರ್ವಹಿಸು" ಎಂದು ಉತ್ತರ ಬರೆದರು. ತಂದೆಯ ಬಳಿ ನಿಜಕ್ಕೂ ಹಣವಿರಲಿಲ್ಲ. ಕೃಷ್ಣಶಾಸ್ತ್ರಿಯವರೂ ಇಲ್ಲವೆಂದರೆ ಯಾರಲ್ಲಿಗೆ ಹೋಗುವುದು? ಕೊನೆಯ ಪ್ರಯತ್ನವಾಗಿ ಅವರು ಪ್ರಿಯಮಿತ್ರ ಮತ್ತು ಬಂಧುವಾಗಿದ್ದ ಕೃಷ್ಣಶಾಸ್ತ್ರಿಗಳಿಗೆ, ತಾವೇ ಮತ್ತೆ ಒಂದು ಕಾಗದ ಬರೆದರು. ಅದರಲ್ಲಿ ಒಂದು ಶ್ಲೋಕವನ್ನು ಬರೆದರು.

'ವನಾನಿ ದಹತೋ ವಹ್ನೇಃ ಸಖಾ ಭವತಿ ಮಾರುತಃ |
ಸ ಏವ ದೀಪನಾಶಾಯ ಕೃಶೇ ಕಸ್ಯಾಸ್ತಿ ಸೌಹೃದಮ್ ||

ಅದರ ಅರ್ಥ, 'ಬೆಂಕಿಯು ದೊಡ್ಡ ಕಾಡನ್ನು ಸುಡುವಾಗ ಗಾಳಿಯು ಅದಕ್ಕೆ ಬಹಳವಾಗಿ ಸಹಾಯ ಮಾಡುತ್ತದೆ. ಆಗ ಸ್ನೇಹಿತನಂತೆ ಉರಿಯನ್ನು ಹೆಚ್ಚಿಸುತ್ತದೆ. ಆದರೆ ಪುಟ್ಟ ದೀಪ ಉರಿಯುತ್ತಿದ್ದಾಗ ಅದೇ ಗಾಳಿ ಶತ್ರುವಿನಂತೆ ಬೀಸಿ ಬಂದು ಅದನ್ನು ಆರಿಸಿಬಿಡುತ್ತದೆ'. ಹಾಗೆಂದರೆ, 'ಈ ಲೋಕದ ನೀತಿಯೇ ಹಾಗೆ. ತುಂಬ ಸಿರಿವಂತರಿಗೆ ಸಹಾಯ ಮಾಡುವವರು ನೂರಾರು ಜನ. ಅದೇ ಬಡವರಾದರೆ ಅವರನ್ನು ಅದುಮಿಡುವವರೇ ಹೆಚ್ಚು, ತಲೆ ಎತ್ತಲು ಅವಕಾಶ ಕೊಡರು.' ಇದು ಇದರ ಅಂತರಾರ್ಥ. ತಂದೆಯವರ ಈ ಪತ್ರ ಓದಿ ನಕ್ಕ ಕೃಷ್ಣಶಾಸ್ತ್ರಿಗಳು, "ಪುಣ್ಯಾತ್ಮ, ನೀನು ಹೀಗೆ ಬರೆದೆಯಾ ನನಗೆ? ಇದೋ ಕಳುಹಿಸುತ್ತಿದ್ದೇನೆ. ಈ ಹಣವನ್ನು ನೀನು ಉಪಯೋಗಿಸಿಕೊಳ್ಳಬಹುದು" ಎಂದು ಉತ್ತರ ಬರೆದು ಹಣ ಕಳುಹಿಸಿದರು. ಇದೇ ತಂದೆಯವರು ಸಂಪಾದಿಸಿದ್ದ ಆಸ್ತಿ - ಎಲ್ಲರ ಪ್ರೀತಿ, ವಿಶ್ವಾಸ, ಗೌರವ. ಅದೇ ನಮಗೆ ತುಂಬ ಹೆಮ್ಮೆಯ ವಿಷಯ ಇಂದಿಗೂ !

ಉ. ಸಂಕೇತಿ ಆತ್ಮಕಥೆಗಳು

ಸಂ: ಸುಮನ ವಿಶ್ವನಾಥ್ :೨೦೦೮

ನನ್ನ ಬದುಕು: ಪ್ರೊ. ಆರ್.ಎನ್.ದೊರೆಸ್ವಾಮಿ (ಸಂಗೀತ ವಿದ್ವಾಂಸ, ಪ್ರಾಧ್ಯಾಪಕ, ವಾಗ್ಗೇಯಕಾರ)

ನಮ್ಮ ತಂದೆಯವರು ರುದ್ರಪಟ್ಟಣದ ಎಲ್ಲ ಆಸ್ತಿಪಾಸ್ತಿಗಳನ್ನೂ ಮಾರಿ, ಬಸವಾಪಟ್ಟಣದಲ್ಲೇ ಒಂದು ತೋಟವನ್ನು ಕೊಂಡುಕೊಂಡರು. ಅದರಲ್ಲಿ ನಂಜನಗೂಡಿನಿಂದ ಬಾಳೆಕಂದುಗಳನ್ನು ತರಿಸಿ ರಸಬಾಳೆ ಬೆಳೆಸಿದರು. ಮಾವಿನಹಣ್ಣು, ರಸಬಾಳೆ, ತೆಂಗಿನಕಾಯಿ ಇವುಗಳ ಫಸಲು ನಮಗೆ ಎರಡು-ಮೂರು ವರ್ಷ ತಕ್ಕಮಟ್ಟಿಗೆ ಲಭಿಸಿತು. ಇದರಿಂದ ಬರುವ ಆದಾಯಕ್ಕಿಂತ ನಾವು ತಿನ್ನುವುದು ಮತ್ತು ಬೇರೆಯವರಿಗೆ ಹಂಚುವುದು ಇಷ್ಟಕ್ಕೇ ಎಲ್ಲವೂ ಮುಗಿಯುತ್ತಿತ್ತು. ಫಸಲಿನ ಬಹುಪಾಲು ಕಳ್ಳಕಾಕರ ಪಾಲಾಗುತ್ತಿತ್ತು. ಅಂತೂ, ನಮ್ಮ ತಂದೆಯವರಿಗೆ ೧೯೩೦ರ ವೇಳೆಗೆ ಬೇರೆ ಊರಿಗೆ ವರ್ಗವಾಗುವುದರೊಳಗೆ ತೋಟ ಪಾಳು ಬಿದ್ದಿತ್ತು.

ನಮ್ಮ ತಂದೆಯವರದು ಒಂದು ರೀತಿಯ ಸಾಹಸಪ್ರವೃತ್ತಿ. ಅವರು ಜೀವನದಲ್ಲಿ ಯಾವ ಸವಾಲನ್ನು ಎದುರಿಸಲೂ ಅಂಜುತ್ತಿರಲಿಲ್ಲ. ಸಂಕೇತಿಗಳಿಗೆ ಸ್ವಭಾವಜನ್ಯವಾದ ತೋಟಗಾರಿಕೆಯಲ್ಲಿ ಅವರಿಗೆ ಮೊದಲಿನಿಂದಲೂ ಆಸಕ್ತಿ. ಆದರೆ ಅವರ ಯಾವ ಪ್ರಯತ್ನವೂ ಇದುವರೆಗೆ ಯಶಸ್ವಿಯಾಗಿರಲಿಲ್ಲ. ಆದರೂ, ಅವರು ಮತ್ತೆ ಮತ್ತೆ ಪ್ರಯತ್ನ ಮಾಡುವುದನ್ನು ಬಿಡಲಿಲ್ಲ. ಅವರು ಬಸವಾಪಟ್ಟಣದಲ್ಲಿ ಮಾಡಿದ್ದ ತೋಟವು ನೋಡಿಕೊಳ್ಳುವವರಿಲ್ಲದೇ ಹಾಳಾಗಿತ್ತು. ನಾವು ಎಸಳೂರುಪೇಟೆಗೆ ಬಂದ ಮೇಲೆ ಅದನ್ನು ಬಂದಷ್ಟು ಬೆಲೆಗೆ ಮಾರಿ, ಎಸಳೂರು ಪೇಟೆಯಲ್ಲಿ ಸುಮಾರು ಹತ್ತು ಎಕರೆ ಮರಗಾಡು, ಸುತ್ತ ಮೈದಾನ, ಎರಡು ಮೂರು ಎಕರೆ ಗದ್ದೆ ಇವುಗಳನ್ನೊಳಗೊಂಡ ಜಮೀನನ್ನು ಹರಾಜಿನಲ್ಲಿ ಕೇವಲ ಐದು ನೂರು ರೂಪಾಯಿಗಳಿಗೆ ಕೊಂಡುಕೊಂಡರು. ಅದನ್ನೆಲ್ಲಾ ಹಸನು ಮಾಡಿಸಿ ಐದಾರು ತಿಂಗಳಲ್ಲಿ ಅದರಲ್ಲಿ ಒಂದು ಸಾವಿರ ಏಲಕ್ಕಿ ಸಸಿಗಳನ್ನು ನೆಡಿಸಿ, ಅದನ್ನು ಏಲಕ್ಕಿ ತೋಟವನ್ನಾಗಿ ಮಾಡಿದರು. ಕಿತ್ತಳೆ, ಬಾಳೆ, ತೆಂಗು ಹಾಗೂ ಮಾವಿನ ಗಿಡಗಳನ್ನು ನೆಡಿಸಿದರು. ನಾವು ಕೊಳ್ಳುವಾಗಲೇ ತೋಟದಲ್ಲಿ ಇತರ ಮರಗಳ ಜತೆಗೆ ಒಳ್ಳೆಯ ಹಲಸಿನ ಮರಗಳೂ ಇದ್ದುವು. ಅಲ್ಲೇ ಒಂದು ಪುಟ್ಟ ಮನೆಯನ್ನೂ ಕಟ್ಟಿಸಿದರು. ಗದ್ದೆಯನ್ನೂ ಸಾಗುವಳಿ ಮಾಡಿಸಿದರು. ಈ ಎಲ್ಲ ಕೆಲಸಗಳಲ್ಲೂ ನಾನು ತಂದೆಯವರಿಗೆ ಬಲಭುಜವಾಗಿ ನಿಂತೆ. ತೋಟದ ವನಸಿರಿಯ ಸೊಬಗನ್ನು ಸವಿಯುತ್ತಾ ನನ್ನ ಮನಸ್ಸು ಹಕ್ಕಿಯಂತೆ ಹಾರಾಡಿತು. ನಾವು ಮನೆಯವರೆಲ್ಲಾ ಇಂತಹ ಸುಂದರ ತಾಣಕ್ಕೆ ಆಗಾಗ ಬಂದು ಸಂತೋಷದಿಂದ ವಿಹರಿಸುತ್ತಿದ್ದೆವು. ನಮ್ಮ ಗದ್ದೆಯ ಪಕ್ಕದಲ್ಲೇ ಒಂದು ಸಣ್ಣ ತೊರೆ ಹರಿಯುತ್ತಿತ್ತು. ಇದರಲ್ಲಿ ಸ್ನಾನ ಮಾಡುವುದೆಂದರೆ ನಮಗೆಲ್ಲಾ ಬಲು ಖುಷಿ. ನಮ್ಮ ತಮ್ಮ, ಅಕ್ಕ, ಭಾವ, ತಂದೆ, ತಾಯಿ ಎಲ್ಲರೂ ಸಂಭ್ರಮ, ಸಂತೋಷಗಳಿಂದ ಅಲ್ಲಿನ ಪ್ರಕೃತಿ ಸೌಂದರ್ಯವನ್ನು ಸವಿದು ತಣಿಯುತ್ತಿದ್ದೆವು.

ಮಲೆನಾಡಿನ ಸಿರಿಯನ್ನು ಕಂಡು ನಾನು ಮುಗ್ಧನಾಗಿದ್ದೆ. ಅಲ್ಲಿನ ಆ ಕಾಲದ ಮಳೆಗಾಲವಂತೂ ಈಗ ಊಹಿಸುವುದೂ ಸಾಧ್ಯವಿಲ್ಲ. ಜೂನ್ ಮೊದಲವಾರದಲ್ಲಿ ಠಾಕೋಠೀಕಾಗಿ ಪ್ರಾರಂಭವಾಗುತ್ತಿದ್ದ ಮಳೆಗಾಲ ಮೂರು ತಿಂಗಳು ಅವಿಚ್ಛಿನ್ನವಾಗಿ ನಡೆಯುತ್ತಿತ್ತು. ಸೂರ್ಯನ ದರ್ಶನವೇ ಇಲ್ಲದೇ ದಿನಗಳು, ವಾರಗಳು ಕಳೆಯುತ್ತಿದ್ದವು. ವರ್ಷದಲ್ಲಿ ಇನ್ನೂರೈವತ್ತು-ಮುನ್ನೂರು ಅಂಗುಲ ಮಳೆಯಾಗುತ್ತಿತ್ತು. ಅಂತಹ ಮಳೆಯಲ್ಲಿ ನಾನು ಮಲೆನಾಡಿನ ಬಿದುರಿನ ಗೊರಗನ್ನು ತಲೆಯಿಂದ ಕಾಲಿನವರೆಗೆ ಮುಚ್ಚುವಂತೆ ಹಾಕಿಕೊಂಡು ತೋಟದಲ್ಲೆಲ್ಲಾ ಓಡಾಡುತ್ತಿದ್ದೆ. ಆಗ ಇನ್ನೂ ಬಿಸಿರಕ್ತದ ಯುವಕನಾಗಿದ್ದ ನನಗೆ ಛಳಿ, ಗಾಳಿ, ಮಳೆ, ಬಿಸಿಲು ಇದು ಯಾವುದರ ಪರಿವೆಯೂ ಇರಲಿಲ್ಲ. ನಾವು ಹಾಕಿಸಿದ್ದ ಏಲಕ್ಕಿ ಗಿಡಗಳು ದಿನದಿನಕ್ಕೆ ದೊಡ್ಡದಾಗಿ ಬೆಳೆಯುತ್ತಿದ್ದವು. ಈ ಗಿಡಗಳಿಗೆ ಪರಮವೈರಿ ಎಂದರೆ ಕೋತಿಗಳು. ಇವು ಏಲಕ್ಕಿ ಗಿಡಗಳ ಕಾಂಡಗಳನ್ನೆಲ್ಲ ಸಿಗಿದು ಒಳಗಿನ ತಿರುಳನ್ನು ತಿನ್ನುತ್ತಿದ್ದವು.

ಈ ಕೋತಿಗಳ ದಾಳಿಯನ್ನು ತಪ್ಪಿಸಲು ಪ್ರತಿ ಎಸ್ಟೇಟಿನಲ್ಲಿಯೂ ಕೋವಿಧಾರಿಯಾದ ಒಬ್ಬ ಕಾವಲುಗಾರ ಹಗಲೆಲ್ಲಾ ಒಂದು ರೀತಿಯ ಕೂಗನ್ನು ಹಾಕುತ್ತಾ ವಿರುಧ್ವನಿಯಲ್ಲಿ ಅರಚುತ್ತಾ ಗಸ್ತು ತಿರುಗುವ ಏರ್ಪಾಡಿತ್ತು. ಕೋತಿಗಳು ಬಂದಾಗ ಬೆದರುಗುಂಡು ಹಾರಿಸಿ ಅವುಗಳನ್ನು ಓಡಿಸಬೇಕಾಗಿತ್ತು. ಕೆಲವರು ಒಂದೋ - ಎರಡೋ ಕೋತಿಗಳನ್ನು ಗುಂಡಿನಿಂದ ಸಾಯಿಸಿ ತೋಟದ ಹೊರವಲಯದಲ್ಲಿ

ಅವುಗಳನ್ನು ನೇತುಹಾಕುತ್ತಿದ್ದರು. ಇದನ್ನು ನೋಡಿ ಪ್ರಾಣಭಯದಿಂದ ಕೋತಿಗಳು ತೋಟದೊಳಗೆ ಬರಲು ಹೆದರುತ್ತವೆಂದು ಹೀಗೆ ಮಾಡುತ್ತಿದ್ದರು. ಆದರೆ ಕೋತಿಯನ್ನು ಸಾಯಿಸುವುದು ಮಹಾಪಾಪವೆಂದು ನಂಬಿರುವವರು ಈ ಕೆಲಸವನ್ನು ಮಾಡುತ್ತಿರಲಿಲ್ಲ. ನಮ್ಮ ತೋಟದಲ್ಲಿ ಗಸ್ತು ತಿರುಗಲು, ಕೋತಿಗಳನ್ನು ಓಡಿಸಲು ಆಳುಕಾಳುಗಳಿದ್ದರು. ಒಮ್ಮೊಮ್ಮೆ ನಾನು ಸಹ ಕೋವಿ ಹಿಡಿದು ಬೆದರುಗುಂಡು ಹಾರಿಸುತ್ತಾ ಎಲ್ಲೆಡೆ ಓಡಾಡುತ್ತಿದ್ದೆ.

ಏಲಕ್ಕಿ

ತೋಟದಲ್ಲಿ ಮನೆಗೆ ಬೇಕಾದ ತರಕಾರಿ, ಬಾಳೆಎಲೆ, ಬಾಳೆಹಣ್ಣು, ಬಾಳೆಕಾಯಿ, ನಿಂಬೆ, ಹೆರಳೆ, ಚಕೋತ, ಮಾದಲ, ಪಪ್ಪಾಯಿ, ಹಲಸು, ಮಾವು, ಕಿತ್ತಳೆ, ದಾಳಿಂಬೆ ಈ ಎಲ್ಲ ಹಣ್ಣುಗಳೂ ಸಿಗುತ್ತಿದ್ದವು. ಭತ್ತದ ಫಸಲೂ ಬರಲು ಪ್ರಾರಂಭವಾಯಿತು. ಏಲಕ್ಕಿ ಮೊದಲನೆಯ ಫಸಲನ್ನು ನಾನೇ ಸ್ವತಃ ರೇಖೆ ಮಾಡಿಸಿದೆ. ಪ್ರಥಮ ಫಸಲಲ್ಲೇ ನಮಗೆ ಇಪ್ಪತ್ತು ಮಣ ಏಲಕ್ಕಿ ಲಭಿಸಿದಾಗ ನಮ್ಮ ಸಂತೋಷಕ್ಕೆ ಎಲ್ಲೆಯೇ ಇರಲಿಲ್ಲ. ನಾನೇ ಖುದ್ದು ಈ ಮಾಲನ್ನು ಸಕಲೇಶಪುರದ ಮಾರುಕಟ್ಟೆಯಲ್ಲಿ ಮಾರಾಟ ಮಾಡಿ ಬಂದೆ. ಆಗಿನ ಬೆಲೆ ಮಣಕ್ಕೆ ಕೇವಲ ಮೂವತ್ತು ರೂಪಾಯಿ. ಒಟ್ಟು ಆರುನೂರು ರೂಗಳನ್ನು ತಂದೆಯವರ ಕೈಗೆ ತಂದುಕೊಟ್ಟಾಗ ಮನೆಯಲ್ಲೆಲ್ಲಾ ಸಂಭ್ರಮವೋ ಸಂಭ್ರಮ. ಇದು ಹೀಗೆಯೇ ಮುಂದುವರಿದಿದ್ದರೆ ಈಗ ನಾನು ಒಬ್ಬ ಏಲಕ್ಕಿ ಎಸ್ಟೇಟ್ ಮಾಲೀಕನಾಗಿರುತ್ತಿದ್ದೆ. ಶ್ರೀಮಂತಿಕೆಯೇನೋ ಲಭಿಸುತ್ತಿತ್ತು. ಆದರೆ, ಜೀವನದಲ್ಲಿ ಇದೊಂದೇ ಸಾಕೆ? ಆದರೂ, ದೈವನಿಯಾಮಕ ಎಂಬುದೊಂದಿದೆಯಲ್ಲ! ಅದೇ ನಮ್ಮನ್ನು ನಮ್ಮ ನಿಜವಾದ ಜೀವನದ ಗುರಿಯತ್ತ ಕೊಂಡೊಯ್ಯುವ ಶಕ್ತಿಯಾಗಿರುತ್ತದೆಯಲ್ಲವೇ?

ಈ ಮಧ್ಯೆ ನನ್ನ ತಂದೆಯವರಿಗೆ ಎಸಳೂರುಪೇಟೆಯಿಂದ ಮೂಗೂರಿಗೆ ವರ್ಗವಾಗಿತ್ತು. ಮೈಸೂರಿಗೆ ಹತ್ತಿರವಾಗಿದ್ದುದರಿಂದ ಮೂಗೂರಿನಿಂದ ವಾರಕ್ಕೊಮ್ಮೆ ಬಂದು ಹೋಗುತ್ತಿದ್ದರು. ಎಸಳೂರು ಪೇಟೆಯ ತೋಟದ ಮೇಲುಸ್ತುವಾರಿ ಜವಾಬ್ದಾರಿಯನ್ನು ಒಬ್ಬ ಮೇಸ್ತ್ರಿಗೆ ವಹಿಸಿ ಬಂದಿದ್ದರು. ಮುಂದಿನ ಒಂದೆರಡು ವರ್ಷಗಳಲ್ಲಿ ತೋಟ ಬರಡಾಗಿತ್ತು. ತಂದೆಯವರು ತೋಟವನ್ನು ಸುಸ್ಥಿತಿಯಲ್ಲಿದ್ದಾಗಲೇ ಮಾರಾಟ ಮಾಡಿದ್ದರೆ ಒಳ್ಳೆಯ ಬೆಲೆಯಾದರೂ ಬರುತ್ತಿತ್ತು. ಆದರೆ, ಈ ಆಸ್ತಿಯನ್ನಾದರೂ ಮಕ್ಕಳಿಗೆ ಉಳಿಸಿಕೊಡಬೇಕೆಂದು ಅವರು ಪ್ರಯತ್ನಿಸಿದರು. ಅವರಿಗೆ ಮೇಸ್ತ್ರಿ ಸಂಪೂರ್ಣವಾಗಿ ಕೈಕೊಟ್ಟಿದ್ದ. ತಂದೆಯವರ ಅದೃಷ್ಟ ಇಲ್ಲಿಯೂ ಅವರಿಗೆ ಒಲಿಯಲಿಲ್ಲ. ಕಡೆಗೆ ಹತಾಶರಾಗಿ ಕೇವಲ ಮೂರು ಸಾವಿರ ರೂಪಾಯಿ ಬೆಲೆಗೆ ತೋಟವನ್ನು ಮಾರಿದರು.

ಆಗಿನ ಕಾಲದ ಮೂರು ಸಾವಿರ ಕಡಿಮೆ ಹಣವೇನಲ್ಲ. ಮೈಸೂರು ನಗರದಲ್ಲಿ ಆಗಿನ ಬೆಲೆಗೆ ಎರಡು ಒಳ್ಳೆಯ ಮನೆಗಳನ್ನು ಕೊಳ್ಳಬಹುದಾಗಿತ್ತು. ಆದರೆ, ಅವರು ಮತ್ತೆ ತಿಳಿದೂ ತಿಳಿದೂ ತಮ್ಮ ಅದೃಷ್ಟ ಪರೀಕ್ಷೆಗೆ ಕೈ ಹಾಕಿದರು. ಎಮ್ಮೆಗಳನ್ನು ಕಟ್ಟಿ ಹಾಲಿನ ವ್ಯಾಪಾರ ಮಾಡಿದರೆ ಒಳ್ಳೆಯ ಲಾಭ ಬರುವುದಾಗಿ ಯಾರೋ ಅವರ ತಲೆ ಕೆಡಿಸಿದರು. ಎಲ್ಲರನ್ನೂ ನಂಬುವ ಸ್ವಭಾವದ ತಂದೆಯವರು ಅದನ್ನು ನಂಬಿ ಮೋಸಹೋದರು. ಇದ್ದ ಹಣವನ್ನೆಲ್ಲಾ ಖರ್ಚುಮಾಡಿ ಹತ್ತಿರದ ಹಳ್ಳಿಯಲ್ಲಿ ಏಳು-ಎಂಟು ಎಮ್ಮೆಗಳನ್ನು ಕೊಂಡರು. ಅಲ್ಲಿಯೇ ಒಬ್ಬ ರೈತನಿಗೆ ಎಲ್ಲವನ್ನೂ ವಹಿಸಿದರು. ಆದರೆ ಎಮ್ಮೆಗಳೆಲ್ಲಾ ಒಂದೊಂದಾಗಿ ಕಾರಲುರೋಗಕ್ಕೆ ತುತ್ತಾದವು. ಒಂದೇ ವರ್ಷದಲ್ಲಿ ಎಲ್ಲ ಎಮ್ಮೆಗಳೂ ಸತ್ತವು. ಮೂರು ಸಾವಿರ ರೂಪಾಯಿ ಹಣವನ್ನು ನೀರಿನಲ್ಲಿ ಹೋಮ ಮಾಡಿದಂತಾಗಿತ್ತು. ಈ ರೀತಿ ತಮ್ಮ ಕಟ್ಟಕಡೆಯ ಈ ಪ್ರಯತ್ನವೂ ವಿಫಲವಾಗಿ ತಂದೆಯವರ ಕೈ ಸಂಪೂರ್ಣ ಬರಿದಾಗಿತ್ತು. ಅನ್ಯಮಾರ್ಗವಿಲ್ಲದೇ ಕೈಕಟ್ಟಿ ಕುಳಿತರು. ಅವರು ಬಹಳ ಖಿನ್ನತೆಯಿಂದ ವಿಚಲಿತರಾಗಿ ಮಕ್ಕಳಿಗೆ ತಾವು ಏನೂ ಇಡಲಿಲ್ಲವಲ್ಲಾ ಎಂದು ಒಂದು ದಿನ ಬಹಳ ಪಶ್ಚಾತ್ತಾಪಪಟ್ಟರು. ಆದರೆ, ನನ್ನ ತಾಯಿಯವರು ಹೇಳುತ್ತಿದ್ದ ಮಾತನ್ನು ಯಾವಾಗಲೂ ಅವರು ಕೇಳುತ್ತಲೇ ಇರಲಿಲ್ಲ. ಹೀಗಾಗಿ, ತಾಯಿಯವರಿಗೆ ಈ ವಿದ್ಯಮಾನಗಳಿಂದ ಬಹಳ ನಿರಾಸೆಯೂ, ಬೇಸರವೂ ಆಗಿತ್ತು. ನಾನು ಮಾತ್ರ ಇದಾವುದನ್ನೂ ಮನಸ್ಸಿಗೆ ಹಚ್ಚಿಕೊಳ್ಳದೇ ನನ್ನ ಕರ್ತವ್ಯದಲ್ಲಿ ನಿರತನಾಗಿದ್ದೆ. ಸ್ವಪ್ರಯತ್ನದಿಂದ ಮುಂದೆ ಬರಬೇಕೆಂಬ ಛಲವೂ ನನ್ನಲ್ಲಿತ್ತು.

೮೩. ಸಂಕೇತಿ ಕೃಷಿಯ ವಿಭಿನ್ನ ನೆಲೆಗಳು

ಎಸ್. ಕೇಶವಮೂರ್ತಿ, ೨೦೧೦

(ಇಲ್ಲಿ ಸಂಗ್ರಹಿಸಿರುವ ಈ ಮಾತುಗಳಲ್ಲಿ ಸಂಕೇತಿಗಳ ಕೃಷಿಸಿದ್ಧಾಂತವಿದೆ, ಜೀವನದರ್ಶನವಿದೆ, ಅವರ ಅಂತರಂಗದರ್ಶನವೂ ಇದೆ. ಇವನ್ನು ಒಟ್ಟಾಗಿ ಅವಲೋಕಿಸುವುದರಿಂದ ಸಂಕೇತಿ ಬಾಳಿನ ವಿರಾಟ್‌ದರ್ಶನವಾಗುತ್ತದೆ.)

ವ್ಯವಸಾಯದಲ್ಲಿ ಸುಖವಿಲ್ಲ ಅಂತ ಈಗಿನವರು ಹೇಳ್ತಾರೆ. ಕಷ್ಟಪಟ್ಟು ಕೆಲಸ ಮಾಡ್ದೇ ಇರೋದ್ರಿಂದ ಸುಖವಿಲ್ಲ ಅಷ್ಟೆ. ದುಡಿದರೆ *ವ್ಯವಸಾಯ ಎಂದಿಗೂ ಆದಾಯವೇ.*

- ಸೀತಾರಾಮಯ್ಯ, *ಹಾನಗಲ್*

ಶ್ರದ್ಧೆಯಿಂದ ದುಡೀಬೇಕು. ಇದ್ದುದರಲ್ಲಿ ಜೀವಿಸಬೇಕು. ಯಾರಿಗೂ ಅನ್ಯಾಯ ಮಾಡಬಾರದು. ಇದು ನನ್ನ ತತ್ತ್ವ.

- ಎಚ್.ಎಸ್.ಸುಬ್ಬರಾಯ, *ಹಾನಗಲ್*

ಕೆಲಸಕ್ಕೇಂತ ಹೊರಗೆ ನಾನು ಹೊರಟುಹೋದ್ರೆ ಜಮೀನು ನೋಡೋರ್‍ಯಾರು? ತಮ್ಮನ ವಿದ್ಯಾಭ್ಯಾಸ, ತಂಗಿಯರ ಮದುವೆ ಯಾರು ಮಾಡೋರು? *ನನ್ನ ಸುಖ ನೋಡಿಕೊಂಡರಷ್ಟೆ ಸಾಕೆ?* ಅದಕ್ಕೇ ಕೆಲಸಕ್ಕೇಂತ ಹೊರಗೆ ಹೋಗಲಿಲ್ಲ.

-ಎಚ್.ಎಸ್.ಸುಬ್ಬರಾಯ, *ಹಾನಗಲ್*

ಎಲ್ಲರೊಳಗೊಂದಾಗಿ ಬದುಕುವುದೇ ನನ್ನ ಜೀವನಧರ್ಮ.

-ಎಚ್.ಕೆ.ರಾಮಚಂದ್ರಯ್ಯ, *ಹಳ್ಳಿಮೈಸೂರು*

ಭೂಮಿಯಲ್ಲಿ ಕಷ್ಟಪಡಬೇಕು, ಬೆವರು ಸುರಿಸಬೇಕು, ಅದರಿಂದಲೇ ಊಟ ಮಾಡಬೇಕು.

-ಎಚ್.ಎಸ್.ಅನಂತರಾಮಯ್ಯ, *ಹಳ್ಳಿಮೈಸೂರು*

ಭೂಮೀಲಿ ಮಾತ್ರ ಒಂದು ರೂಪಾಯಿ ಆದಾಯ ಬಂದ್ರೆ ಎರಡು ರೂಪಾಯಿ ಖರ್ಚು ಮಾಡುವ ಗುಣ ಇವತ್ತೂ ನನ್ನಲ್ಲಿದೆ. *ಭೂಮಿ ಮೇಲೆ ಅಷ್ಟು ಮೋಹ ಇದೆ.*

-ಎಸ್.ನಾಗರಾಜು, *ಹಳ್ಳಿಮೈಸೂರು*

ಈ ಊರಲ್ಲಿ, ವ್ಯವಸಾಯದ ಜತೆ, ಅಡುಗೆ ಕೆಲಸ ಮಾಡುವ ೩೦-೪೦ ಜನ ಇದಾರೆ. ನಾವು *ಸ್ವತಂತ್ರವಾಗಿ ಈ* ವೃತ್ತಿ ಮಾಡುತ್ತಿದ್ದೇವೆ.

- ಎಸ್.ನಾಗರಾಜು, *ಸೋಮನಹಳ್ಳಿ*

ನಮ್ಮ ಜೀವನದಲ್ಲಿ ಒಂದೊಂದು ದಿನವೂ ಕಣ್ಣೀರಿನಲ್ಲಿ ಕೈತೊಳೆದಿದ್ದೇವೆ. ಒಂದೊಂದು ದಿನ ತಿನ್ನಲು ಏನೂ ಇಲ್ಲದೆ *ಕಡಲೇಕಾಯಿ ತಿಂದು ಮಲಗಿದ್ದೇವೆ.* ಎಷ್ಟೋ ಬಾರಿ ಆತ್ಮಹತ್ಯೆ ಮಾಡಿಕೊಳ್ಳೋಣ ಅನ್ನೋ ಮಟ್ಟಕ್ಕೆ ಹೋಗಿದ್ದಿದೆ.

- ಎಸ್.ನಾಗರಾಜು, *ಸೋಮನಹಳ್ಳಿ*

ಹಿಂದೆ *ನಾನೇ ಅಡಿಕೆ ಮರ ಹತ್ತಿ ಕಾಯಿ ಕೆಡವುತ್ತಾ ಇದ್ದೆ.* ಈಗ ಆಗೋಲ್ಲ. ನಮ್ಮ ತಂದೇನೂ ಅಡಿಕೆ ಮರ ಹತ್ತೋರು. ಅವರೇ

ಸಣ್ಣಂದಿನಿಂದಲೂ ನನಗೂ ಅಭ್ಯಾಸ ಮಾಡಿಸಿದ್ದು. 'ನೀನೇ ಕಲಿತಿರಬೇಕಪ್ಪಾ, ಎಲ್ಲಾದಕ್ಕೂ ಇತರರನ್ನು ಆಶ್ರಯ ಮಾಡಬಾರದು' ಅಂತಿದ್ರು.

- ಎಸ್.ಆರ್.ಕೇಶವನಾರಾಯಣ, *ಸೋಮನಹಳ್ಳಿ*

ಒಂದು ಎಮ್ಮೆ ಇತ್ತು. ಅದನ್ನು ಮೇಯಿಸಿ, ಕಟ್ಟಿಹಾಕಿ ನಂತ್ರ ಎರಡು ಮೈಲಿ ಓಡಿ ಬಿದಿರಕ್ಕದಲ್ಲಿ ಶಾಲೆಗೆ ಹೋಗ್ತಿದ್ದೆ.

- ಎಸ್.ಕೆ.ಸುಬ್ಬರಾಯ, *ಸೋಮನಹಳ್ಳಿ*

ನಾನು ಊರಿಗೆ ಬಂದು ವ್ಯವಸಾಯ ಆರಂಭಿಸಿದಾಗ ಆಧುನಿಕ ವ್ಯವಸಾಯ ಪದ್ಧತಿ ಇರಲಿಲ್ಲ. *ಆಧುನಿಕ ಬೇಸಾಯ ಪದ್ಧತಿಯನ್ನು* ನಾನು ಆರಂಭಿಸಿದ ಮೇಲೆ, ಬೆಳೇನೂ ಹೆಚ್ಚಿಗೆ ಬಂತು, ಉತ್ಪತ್ತೀನೂ ಜಾಸ್ತಿ ಆಯ್ತು.

-ಎಸ್.ಎಸ್.ಸುಬ್ರಹ್ಮಣ್ಯ, *ಸೋಮನಹಳ್ಳಿ*

ನಮ್ಮ ತಂದೆ ದೇವಸ್ಥಾನದಲ್ಲಿ ಪೂಜೆ ಮಾಡೋರು. ನಮ್ಮ ಮನೇಲಿ ತುಂಬಾ ಕಷ್ಟಾನೇ ಇತ್ತು. ಊಟಕ್ಕೆ ತಿಂಡಿಗೆ ತೊಂದ್ರೆ ಇತ್ತು. *ಅಡಿಕೆ ಸುಲಿಯಲು ಹೋಗ್ತಿದ್ವಿ*. ಅದ್ರಿಂದ ಬಂದ ಕೂಲಿ ಹಣದಲ್ಲಿ ಅಕ್ಕಿ ತಂದು ಊಟ ಮಾಡ್ತಿದ್ವಿ.

- ಸುಬ್ಬಲಕ್ಷ್ಮಿ ಸುಬ್ರಹ್ಮಣ್ಯ, *ಸೋಮನಹಳ್ಳಿ*

ನಮ್ಮ *ಒಟ್ಟು ಕುಟುಂಬ ಹಲವು ರೀತಿಯಲ್ಲಿ ನೆರವು ನೀಡಿದೆ.* ಒಟ್ಟಾಗಿದ್ರೆ ಕೆಲಸದ ಹಂಚಿಕೆ ಇರುತ್ತೆ. ಬೇರೆ ಬೇರೆಯಾದ್ರೆ ಎಲ್ಲ ಕೆಲಸವನ್ನೂ ನಾವೇ ಮಾಡಬೇಕು. ಸಹೃದಯತೆ ಇದ್ದಾಗ ಮನೆ ವಾತಾವರಣ ಚೆನ್ನಾಗಿರುತ್ತೆ. ಇದೇ ಒಟ್ಟು ಕುಟುಂಬದ ರಹಸ್ಯ.

- ಎಸ್.ನಾಗೇಂದ್ರ, *ಸೋಮನಹಳ್ಳಿ*

ಐದಾರು ತಿಂಗಳ ಹಿಂದೆ ನನ್ನ ತಮ್ಮನ ಮದುವೆ ಆಯ್ತು. ಹೊರಗಡೆಯಿಂದ *ಇಸ್ಪೀಟು ಆಡುವವರನ್ನೇ invite ಮಾಡಿದ್ವಿ*. ಅದಕ್ಕೇ ಶಾಮಿಯಾನ ಹಾಕಿಸಿ, Generator ಕೂಡ ಇಟ್ಟಿದ್ವಿ. ಅಲ್ಲೇ ತಿಂಡಿ, ಊಟ, ಕಾಫಿ supply ಆಗಿತ್ತು.

- ಪ್ರಕಾಶ್, *ಸೋಮನಹಳ್ಳಿ*

ಪ್ರತಿಯೊಬ್ಬರೂ ಶ್ರಮವಹಿಸಿ ದುಡಿಯುತ್ತೇವೆ. ನಾವು ಶ್ರಮಪಡದೆ ವ್ಯವಸಾಯದಲ್ಲಿ ಆದಾಯ ನಿರೀಕ್ಷಿಸಿದ್ರೆ ಆಗೋಲ್ಲ. ವ್ಯವಸಾಯದಲ್ಲಿ *ಶ್ರಮಪಟ್ಟಷ್ಟೂ ಆದಾಯ ಇದೆ.* ಅತ್ಯುತ್ತಮ ಫಲ ಇದೆ. ಒಟ್ಟಿನಲ್ಲಿ ವ್ಯವಸಾಯ ಬದುಕಿಗೆ ಭದ್ರತೆ ನೀಡಿದೆ, ಬಾಳಿನಲ್ಲಿ ನೆಮ್ಮದಿ ಇದೆ.

- ಜಿ.ಆರ್.ನಾಗರಾಜ್, *ಗೆಜ್ಜಗನಹಳ್ಳಿ*

ವಿದ್ಯಾಭ್ಯಾಸಕ್ಕೆ ತೊಂದರೆ ಅನ್ನೋದು ಬಿಟ್ರೆ ನಮ್ಮ *ಹಳ್ಳಿ ಜೀವನ ತೊಂದರೆ ಇಲ್ಲದ್ದು*, ಹಳ್ಳಿ ಪಟ್ಟಣ ಇವೆರಡು ಜೀವನದಲ್ಲೂ ಅದರದ್ದೇ ಆದ ಅನುಕೂಲ ಹಾಗೂ ಅನನುಕೂಲ ಎರಡೂ ಇದೆ. ಆಯ್ಕೆ ನಮಗೆ ಬಿಟ್ಟಿದ್ದು.

- ಜಿ.ಕೆ. ರಂಗನಾಥಯ್ಯ, *ಗೆಜ್ಜಗನಹಳ್ಳಿ*

ಹಿಂದೆ ಇಲ್ಲಿ ಸಂಕೇತಿಗಳು ಸ್ವತಂತ್ರವಾಗಿ ಎಲ್ಲಾ ಕೆಲಸಾನೂ ಮಾಡೋರು. ಗಾಡಿ ಹೊಡೀತಿದ್ರು, ವ್ಯವಸಾಯ ಮಾಡ್ತಿದ್ರು, ಕೋಟೆ ಮಲ್ಲಪ್ಪನವರ ಮಕ್ಕಳು ಮರ ಕೆಲಸಾನೂ ಮಾಡ್ತಿದ್ರು. "ಕೇಣಿ" ಅನ್ನೋ ಹೆಸರು ನಮ್ಮ ಕುಟುಂಬಕ್ಕೆ ಹ್ಯಾಗೆ ಬಂದಿದೆ ಅಂದ್ರೆ ನಮ್ಮ ಪೂರ್ವಿಕರು ಚೇಣಿಯಲ್ಲಿ ಚಾಪೆ ಹೆಣೆಯೋರಂತೆ. ಹೀಗೆ ಇಲ್ಲಿದ್ದ *ಪ್ರತಿಯೊಬ್ಬರೂ ಒಂದೊಂದು ವೃತ್ತಿ ಮಾಡ್ತಿದ್ರು.*

- ಎಸ್.ವಿ.ನಾರಾಯಣಸ್ವಾಮಿ, *ಸಾಲಿಗ್ರಾಮ*

ನನಗೆ ೧೮ನೇ ವಯಸ್ಸಿನಲ್ಲಿ ಮದುವೆ ಆಯ್ತು, ನನ್ನ ಹೆಂಡತಿ ಎಲ್ಲಾ ಭಾಗದಲ್ಲೂ ಸಹಕರಿಸಿದ್ದ್ಳಾಳೆ. ನಾನು ಮನೇಲಿಲ್ಲದಾಗ ದನಾನೂ ಮೇಯಿಸ್ತಾಳೆ. ತೋಟದಲ್ಲಿ ನಾನು ಅಗೆತ ಹಾಗೂ ಗುದ್ದಲಿ ಕೆಲಸ ಮಾಡುವಾಗ *ಬುತ್ತಿಯನ್ನು ಅಲ್ಲೇ ತಂದಿದ್ದಾಳೆ.* ಅವಳಿಲ್ಲದಿದ್ರೆ ನಾನು ಇಷ್ಟೆಲ್ಲಾ ಮಾಡೋಕೆ ಆಗ್ತಿರಲಿಲ್ಲ.

- ಕೆ.ನಂಜುಂಡಯ್ಯ, *ಪೂಮಗಾಮೆ*

ನನ್ನ ತಾಯಿ ಮನೆ ಕೆಲಸ ಆದ ಮೇಲೆ ದೊನ್ನೆ ಕಟ್ಟೋರು, ಎಲೆ ಚುಚ್ಚೋರು. ಎಲೆ ಚುಚ್ಚಿ ಚುಚ್ಚಿ ಅವರಿಗೆ ಎರಡು ಕಣ್ಣೂ ಕಾಣದಂತಾಯ್ತು. ಈಗ ನನಗೆ ೬೩ ವರುಷ. ವ್ಯವಸಾಯ ಮಾಡಿದ್ರೆ ಮನೆ ಕಷ್ಟ ನಿವಾರಣೆ ಆಗಬಹುದು ಅಂತ ಈಗಲೂ ಗುದ್ದಲಿ ತೊಗೊಂಡು ಅಗೀತೀನಿ. ತೋಟದ ಕೆಲಸವೆಲ್ಲಾ ನಾನೇ ಮಾಡ್ತೀನಿ. ಹಣದ ಮುಗ್ಗಟ್ಟಿನಿಂದ ಬೋರ್‌ವೆಲ್ ಕೊರೆಸಲು ಆಗಿಲ್ಲ. ಅದಕ್ಕೇ *ಗಿಡಗಳು ಬೇಸಿಗೇಲಿ ಒಣಗುತ್ವೆ, ಮಳೆಗಾಲದಲ್ಲಿ ಚಿಗುರುತ್ವೆ. ಆವು ಚಿಗುರಿದಾಗ ನನ್ನ ಕನಸುಗಳೂ ಚಿರುಗುತ್ವೆ.*

-ಪಿ.ಎನ್.ಸುಬ್ಬರಾಯ, *ಪೂಮಗಾಮೆ*

ನಾನು ಮೂರು ವರುಷದವಳಿರಬೇಕಾದ್ರೆ ತಂದೆ ತೀರಿಕೊಂಡ್ರು. ತಾಯೀನೇ ಸ್ವಂತ ಜಮೀನಿನಲ್ಲಿ ದುಡಿಯೋರು, ಕಂಡೋರ ಮನೆ ಯಾತದಲ್ಲಿ ಭತ್ತಕುಟ್ಟಿ ಕೂಲಿ ಕೆಲಸಕ್ಕೆ ಹೋಗೋರು, ಗದ್ದೆನಾಟಿ ಮಾಡೋರು, ಪೈರು ಕುಯ್ಯೋರು, ಹೊರೆ ಹೊರೋರು, ಅಡಿಕೆ ಸುಲಿಯೋಕೂ ಹೋಗೋರು... ಗಂಡನ ಮನೆ ಹೊಕ್ಕಾಗ ಇಲ್ಲಿ ಕಷ್ಟ ಬೆಟ್ಟದಷ್ಟು ಇತ್ತು. *"ಹುಟ್ಟಿದ ಮನೆ ಶಿವರಾತ್ರಿ ಅಂದ್ರೆ, ಹೊಕ್ಕಮನೆ ಏಕಾದಶಿ"* ಅನ್ನೋ ಪರಿಸ್ಥಿತಿ ಇತ್ತು.

- ಎಂ.ಸಾವಿತ್ರಮ್ಮ, *ಪೂಮಗಾಮೆ*

ರೈತನಿಗೆ ಎತ್ತುಗಳು ಇರಲೇಬೇಕು. ಆದರೆ ಇವತ್ತು ಕೃಷ್ಣಾಪುರ ಬಳಸಿದ್ರೆ ೧೦೦ ಜತೆ ಎತ್ತಿಲ್ಲ. ಸಾವಿರಾರು ಎಕರೆ ಜಮೀನಿದೆ. ಬೇಸಾಯ ಆಗೋದು ಹ್ಯಾಗೆ? ಅದಕ್ಕೇ ನಾನು ಊರಿಗೆ ಬಂದು *ಬೇಸಾಯ ಆರಂಭಿಸಿದ ಲಾಗಾಯ್ತಿನಿಂದ ಎತ್ತುಗಳನ್ನು ಇಟ್ಟಿದೀನಿ.*

- ಕೆ.ನಾಗರಾಜ, *ಜೋಡಿಕೃಷ್ಣಾಪುರ*

ಇರೋದ್ರಲ್ಲಿ ತೃಪ್ತಿಪಟ್ಟು, ಇಲ್ಲದ್ದಕ್ಕೆ ಆಸೆಪಡದೆ, ಹಿಂದಕ್ಕೆ ನೋಡದೆ ಮುಂದಕ್ಕೆ ಯಾರು ಹೆಜ್ಜೆ ಹಾಕ್ತಾರೋ, ಅವರೇ ಮನುಷ್ಯರು.

- ಕೆ.ನಾಗರಾಜ, *ಜೋಡಿಕೃಷ್ಣಾಪುರ*

ನನ್ನ ತಂದೆ ಭಾರೀ ಆಳು. ತೋಟದಲ್ಲಿ ಒಮ್ಮೆ ಆಕಸ್ಮಿಕವಾಗಿ ಅಡಿಕೆ ಮರ ಕಡಿದುಬಿದ್ದಾಗ, ಅದಕ್ಕೆ ಹಬ್ಬಿರುವ ವೀಳ್ಯೇದೆಲೆ ಹಂಬು ಹಾಳಾಗುತ್ತೆ ಅಂತ *ಇಡೀ ಮರವನ್ನೇ ತಬ್ಬಿ ಹಿಡಿದ್ರಂತೆ.* ಕೌಶಿಕದ ಕೆರೆ ಹುಚ್ಚುಕೋಡಿ ಬಿದ್ದಾಗಲೂ ಧೈರ್ಯದಿಂದ ಈಜ್ತಾ ಇದ್ರಂತೆ. ಆದರೆ ಕೌಶಿಕದ ಜಾತ್ರೆಯ ಸಂದರ್ಭದಲ್ಲಿ ಅದೇ ಕೆರೆಯಲ್ಲಿ ಅವರ ಪರ್ಯವಸಾನ ಆಗಿದ್ದು ವಿಪರ್ಯಾಸ.

- ಕೆ.ಸುಬ್ಬರಾಯ, *ಕೌಶಿಕ*

ನಮ್ಮೆಜಮಾನರ ಮನೆಯಲ್ಲಿ ಒಟ್ಟು ಕುಟುಂಬ ಐದು ಜನ ಗಂಡು ಮಕ್ಕಳು ಹಾಗೂ ಐದು ಜನ ಹೆಣ್ಣು ಮಕ್ಕಳಿದ್ರು ನನ್ನ ಅತ್ತೆ ಮಾವನಿಗೆ. ನಾನೇ ಹಿರಿಯ ಸೊಸೆ. ನೀರಿಗೆ ಅವತ್ತು ಕಷ್ಟವಿತ್ತು. ಮನೆ ಬಳಕೆಗೆ ಸಂಪೂರ್ಣವಾಗಿ ನೀರನ್ನು ಹೊತ್ತು ತರಬೇಕಿತ್ತು. ನಮ್ಮೆಜಮಾನರ ತಮ್ಮಂದಿರು ಹಾಗೂ ತಂಗಿಯರ ಮದುವೆ ಹಾಗೂ ನಾದಿನಿಯರ ಬಾಣಂತನ *ಎಲ್ಲ ಜವಾಬ್ದಾರಿಯನ್ನೂ ನಿಭಾಯಿಸಿದ್ದೇನೆ.* ಇವತ್ತಿನ ಹುಡುಗಿಯರಾಗಿದ್ರೆ *ಖಂಡಿತ* ಓಡಿ ಹೋಗಿರೋರು.

- ಸುಲೋಚನ, *ಕೌಶಿಕ*

ಕಾರುಭತ್ತ ಹಾಗೂ ಪುಟ್ಟಭತ್ತ ಅನ್ನೋ ತಳೀನ ಹಿಂದೆ ಬೆಳೀತಿದ್ರು. ಇವುಗಳ ಬೆಳವಣಿಗೆ ಜಾಸ್ತಿ, ಇಳುವರಿ ಕಡಿಮೆ. ನಂತರ ಕೃಷಿ

ಇಲಾಖೆ ನೀಡಿದ ಥಾಯ್‌ಚುಂಗ್ ಅನ್ನುವ ಸುಧಾರಿತ ತಳಿಯನ್ನು ಆಧುನಿಕ ಕೃಷಿ ಪದ್ಧತಿಗಳನ್ನು ಅನುಸರಿಸಿ ಬೆಳೆದೆ. ಒಂದು ಗುಂಟೆಗೆ ಒಂದು ಕ್ವಿಂಟಾಲ್‌ನಂತೆ ಎಕರೆಗೆ ೪೦ ಕ್ವಿಂಟಾಲ್ ಭತ್ತ ಬೆಳೆದು *ಅತ್ಯುತ್ತಮ ಕೃಷಿಕ ಅನ್ನುವ ಪ್ರಶಸ್ತಿ ಪಡೆದೆ.*

- ಕೆ.ವಿ.ಸುಬ್ರಹ್ಮಣ್ಯ, *ಕೌಶಿಕ*

ಈಗ ಹಳ್ಳೀಲೂ Townನಲ್ಲಿ ಇರುವಂತೆ ಸಂಸಾರ ಮಾಡಬಹುದು. *ದಿಲ್ಲಿ ಸೌಲಭ್ಯ ಎಲ್ಲಾ ಹಳ್ಳೀಲಿದೆ.* ನನ್ನ ಪ್ರಕಾರ ಮುಂದಿನ ಪೀಳಿಗೆ ಹಳ್ಳಿಯನ್ನೇ ನಿಂತು ವ್ಯವಸಾಯ ಮುಂದುವರಿಸಿದ್ರೆ ಒಳ್ಳೆಯದು.

- ಪಿ.ಆರ್.ರಾಮಣ್ಣ, *ಪೂಮಗಾಮೆ*

ಅದರಲ್ಲೇ ಮುಳುಗಿ ಏಳುವಷ್ಟು ಪ್ರಯೋಗ ಮಾಡಿದೀನಿ. ವ್ಯವಸಾಯದ ಆದಾಯದಿಂದಲೇ ನನ್ನ ಇಬ್ಬರು ಗಂಡು, ಒಬ್ಬ ಹೆಣ್ಣು ಮಗಳಿಗೆ ವಿದ್ಯಾಭ್ಯಾಸ ಕೊಟ್ಟಿದ್ದೀನಿ. ಬೇರೆ ಕೆಲಸ ಅರಸೋದು ಯಾಕೆ, ನಾನು ಅಭಿವೃದ್ಧಿ ಮಾಡಿರುವ ವ್ಯವಸಾಯ ಮುಂದುವರಿಸಿ ಅಂತಮಕ್ಕಳಿಗೆ ಹೇಳ್ತೀನಿ. ನನ್ನ ಮಕ್ಕಳು ಕೃಷಿಕರಾಗಬೇಕು ಅನ್ನುವುದು ನನ್ನ ಆಸೆ.

- ಪಿ.ಎನ್.ಯೋಗಾನರಸಿಂಹ, *ಪೂಮಗಾಮೆ*

ನಾನು ೭೧ರಲ್ಲಿ ಊರಿಗೆ ಬಂದೆ. ಎರಡು ಜತೆ ಎತ್ತಿತ್ತು. *ಒಂದನ್ನು ನಮ್ಮ ತಂದೆ, ಮತ್ತೊಂದನ್ನು ನಾನು ಹಿಡಿದು, ಉಳುಮೆ ಮಾಡ್ತಿದ್ವಿ.* ಈ ಊರಿನಲ್ಲಿ ಮೊದಲು ಭತ್ತ ಬೆಳೆದದ್ದು ನಮ್ಮ ತಂದೆ. ಮೊದಲು ಆಲೂಗೆಡ್ಡೆ ಬೆಳೆದದ್ದೂ ಇವರೆ. ರಾತ್ರಿ ಆಲೂಗೆಡ್ಡೆ ಹೊಲ ಕಾಯಲು ಹೋಗುವಾಗ ೭೦ ವರುಷದ ತಂದೇನೂ ಜತೇಲಿ ಬರೋರು.

- ಎಂ.ಕೆ.ಚನ್ನಕೇಶವ, *ಮುದ್ದಾಪುರ*

ಮೊದಲಿನಿಂದಲೂ ಎತ್ತು ಗಾಡಿ ಅಂದ್ರೆ ಪ್ರಾಣ. ಸಣ್ಣಪುಟ್ಟ ಎತ್ತು ಕಟ್ಟಿಲ್ಲ ನಾನು. ಎತ್ತನ್ನು ಹೂಡಿ ಗಾಡಿ ಮೂಕಿ ಮೇಲೆ ಕುಳಿತರೆ ಅಲ್ಲೇ ಕುಳಿತಿರಬೇಕು. ಅಷ್ಟು ಮಜಬೂತಾಗಿರ್ತಿತ್ತು ಎತ್ತುಗಳು. ಗೊಬ್ರ ಹೇರ್ತಿದ್ದೆ, ಬಾಡಿಗೆಗೆ ಹೋಗುತ್ತಿದ್ದೆ, ಮೂಟೆ ಹೊರ್ತಿದ್ದೆ. ನೋಡಲು ಸಣ್ಣ ಆಳಾಗಿರಬಹುದು. ನಾನು *ಈಗಲೂ ಒಂದು ಪಲ್ಲದ ಚೀಲವನ್ನು ಆರಾಮವಾಗಿ ಹೊರಬಲ್ಲೆ.*

- ಎಂ.ಆರ್.ಚನ್ನಕೇಶವಯ್ಯ, *ಮುದ್ದಾಪುರ*

ನಮ್ಮ ಗೊಬ್ಬಳಿಮರದ ಎತ್ತುಗಾಡೀನ ನಾನೇ ರಿಪೇರಿ ಮಾಡ್ತೀನಿ. *ನನಗೆ ಮರದ ಕೆಲಸ ಎಲ್ಲಾ ಬರುತ್ತೆ.* ಈಗಲೂ ನೇಗಿಲು ಮಾಡ್ತೀನಿ. ನಾವು ವಾಸವಿರುವ ಮನೆಯನ್ನು ನಾನೇ ಸ್ವತಃ ಕಟ್ಟಿದ್ದು. ಮರಗೆಲಸ ಪೂರ್ತಾ ನಂದೇ.

- ಎಂ.ಎಸ್.ಶ್ರೀನಿವಾಸಮೂರ್ತಿ, *ಮುದ್ದಾಪುರ*

ನಾನು ವ್ಯವಸಾಯ ಬಿಟ್ಟರೆ ಬೇರೆ ವ್ಯವಹಾರ ಮಾಡಿಲ್ಲ. ನನ್ನ ಏಕೈಕ ವ್ಯವಹಾರ ವ್ಯವಸಾಯ. ಅದರ ಬಗ್ಗೆ ಒಲವು ಇದೆ. ಈ ಬಗ್ಗೆ ಬೇರೆಯವರು ಟೀಕೇನೂ ಮಾಡಿದ್ದಾರೆ. ನಾನು ಅದಕ್ಕೆ ಕಿವಿಗೊಟ್ಟಿಲ್ಲ. ಈಗಿನ ಕಾಲದಲ್ಲಿ ಓದಿ ವಿದ್ಯಾವಂತರಾದ್ರೆ ಬೆಲೆ, ವ್ಯವಸಾಯಸ್ಥನಿಗೆ ಅಷ್ಟುಗೌರವ ಇಲ್ಲ ಅನ್ನುವ ಭಾವನೆ ಕೆಲವರಲ್ಲಿದೆ. ಆದರೆ ಅದು ತಪ್ಪು. *ನನಗೆ ನನ್ನ ಕಸುಬಿನ ಬಗ್ಗೆ ಹೆಮ್ಮೆ ಇದೆ,* ಆತ್ಮ ಸಮ್ಮಾನ, ಸಂತೃಪ್ತಿ ಇದೆ.

- ಸಿ.ಎಲ್.ಲಕ್ಷ್ಮೀನಾರಾಯಣ, *ಚಿಕ್ಕಮೇನಹಳ್ಳಿ*

ನನ್ನ ತಂದೆ ಹೇಳೋರು, 'ಧರ್ಮದೃಷ್ಟಿಯಿಂದ ಕಷ್ಟಾರ್ಜಿತವಾಗಿ ಜೀವನ ನಡೆಸಬೇಕು. ಸ್ವಸಾಮರ್ಥ್ಯದಿಂದ ನಾವೇ ಕಷ್ಟಪಟ್ಟು ದುಡಿಯಬೇಕು. *ಇತರರ ಮೇಲೆ ಅವಲಂಬನೆ ಸಲ್ಲದು'* ಅಂತ. ನಾನೂ ಹಾಗೇ ಬದುಕಿರೋದು. ನನ್ನ ಬಾಲ್ಯದಲ್ಲಿ ತೋಟದಲ್ಲಿ ವೇದದ ಕೆಲವು ಭಾಗಗಳನ್ನು

ಕಲಿತಿದ್ದೇನೆ. ನನ್ನಿಂದ ಇತರರಿಗೆ ಅನುಕೂಲವಾಗುವಂತಿದ್ದರೆ ಅವರಿಗೆ ನೆರವಾಗುತ್ತೇನೆ. ಇತರರಿಗೆ ನೆರವು ನೀಡೋದ್ರಿಂದ ನಮ್ಮ ಆರೋಗ್ಯ ಸುಧಾರಿಸುತ್ತೆ.

- ಸಿ.ಎಸ್.ನಾಗಪ್ಪ, *ಚಿಕ್ಕಮೇನಹಳ್ಳಿ*

ವಿದ್ಯಾಭ್ಯಾಸಕ್ಕೇಂತ ಹೊರಗಡೆ ಹೋದ ಮಕ್ಕಳು ವಾಪಸ್ಸು ಹಳ್ಳಿಗೆ ಬಂದಿಲ್ಲ. ಇವತ್ತಿನ ಮಳೆ ಬೆಳೆ ಪರಿಸ್ಥಿತಿ, ರೈತರ ಪಾಡು ಇದನ್ನು ನೋಡಿ *ಅವರಿಗೆ ವ್ಯವಸಾಯದ ಬಗ್ಗೆ ಪ್ರೀತಿ ಹುಟ್ಟಲಿಲ್ಲ.* ಯಾಕಿಷ್ಟು ಕಷ್ಟಪಡಬೇಕು ಅನ್ನೋ ಭಾವನೇನೂ ಇರಬಹುದು. ಮುಂದೆ ನಮ್ಮ ತಲೆಗಳು ಉರುಳಿದ ಮೇಲೆ, ಹಿರಿಯರ ಆಸ್ತಿ ಜಮೀನು ಹಾಳಾಗುತ್ತಲ್ಲ ಅಂತ ಬಂದರೂ ಬರಬಹುದು.

- ಮಂಜುನಾಥಯ್ಯ, *ನಿಟ್ಟೂರು*

ತೆಂಗಿನಗಿಡ ಏಳಿಸಬೇಕು. ಅದಕ್ಕೆ ತಳಿಲು ತಂದು ಮೊಳಕೆ ಹಾಕಬೇಕು. ಸಸೀನ ತರೋಕೆ ಚೈತನ್ಯ ಇರಲಿಲ್ಲ. ಬಿತ್ತನೆಗೆ ತೆಂಗಿನಕಾಯಿ ತರೋದು ಹ್ಯಾಗೆ? ಒಳ್ಳೆಯ ಫಲವತ್ತಾಗಿರೋ ತೋಟಕ್ಕೆ ಹೋಗ್ತಿದ್ದೆ. 'ಅಯ್ಯಾ ಒಂದು ಹತ್ತು ತೆಂಗಿನಕಾಯಿ ಕೊಡಯ್ಯಾ' ಅಂತ ಮಾಲಿಕನನ್ನು ಕೇಳಿದ್ರೆ, ಪುಗಸಟ್ಟೆ ಕೊಡ್ತಾನಾ? 'ಸ್ವಾಮಿ ಹತ್ತು ದೊಡ್ಡ ಮರ ಇದೆ, ಕಾಯಿ ಕೆಡವಿಕೊಡಿ, ಮರಕ್ಕೆ ಒಂದು ತೆಂಗಿನಕಾಯಿ ಕೊಡ್ತೀನಿ' ಅನ್ನೋರು. ಹೀಗೆ ಅವರಿಗೆ ಮರಹತ್ತಿ ಕಾಯಿ ಕೆಡವಿಕೊಟ್ಟು, ಬಿತ್ತನೆ ತೆಂಗಿನಕಾಯಿ ತಂದು, ಒಂದು ತೆಂಗಿನಕಾಯನ್ನು ಮನೇಲಿ ಚಟ್ನಿ ಮಾಡಲು ಕೊಟ್ಟು ಉಳಿದ ಒಂಭತ್ತನ್ನು ಹಿತ್ತಲಲ್ಲಿ ಬಿತ್ತನೆ ಮಾಡುತ್ತಿದ್ದೆ. ಹೀಗೆ ಏಳಿಸಿದ್ದು ಈ ತೆಂಗಿನ ತೋಟ.

- ಕೆ.ಎಸ್.ನರಸಿಂಹಮೂರ್ತಿ, *ಜೋಡಿಕೃಷ್ಣಾಪುರ*

ಬೇಸಾಯ ಹೂಡಿಕೊಂಡು ಹೋಗಿರುವ ರೈತರಿಗೆ ಸಮಯಕ್ಕೆ ಸರಿಯಾಗಿ ತಿಂಡಿ ತಂದುಕೊಟ್ರೆ, ವ್ಯವಸಾಯದ ಅಭಿವೃದ್ಧಿಯಲ್ಲಿ ಹೆಂಡತಿಯದ್ದು ಅರ್ಧ ಪಾಲು. ಇಲ್ಲದಿದ್ರೆ ಒಂಭತ್ತು ಘಂಟೆಗೆ ಆರು ಬಿಟ್ಟು ಮನೆಗೆ ಬರಬೇಕಾಗುತ್ತೆ. ತಿಂಡಿ ತಿಂದು ಮತ್ತೆ ಹೋಗೋದಕ್ಕೆ ೧೨ ಘಂಟೆ ಆಗುತ್ತೆ. ಅಲ್ಲಿಗೆ ೯ ರಿಂದ ೧೨ ಘಂಟೆವರೆಗಿನ ಹೊಲದ ಕೆಲಸ ಹೆಂಡತಿ ಮಾಡಿದಂತೆ ತಾನೆ? ಹಾಗಾಗಿ ನನ್ನ ಹೆಂಡತಿಯದ್ದು ಅರ್ಧ ಪಾಲು.

- ಕೆ.ನಾಗರಾಜ, *ಜೋಡಿಕೃಷ್ಣಾಪುರ*

ನಾನು ನನ್ನ ೧೬ನೇ ವಯಸ್ಸಿನಲ್ಲಿ ಸ್ವತಃ ಎತ್ತು ಗಾಡಿ ತಂದು, ವ್ಯವಸಾಯ ಹಾಗೂ ಉಳುಮೆ ಮಾಡಿದೆ. ಹಿಂದೆ ಎಲ್ಲಾ ಕೆಲಸ ನಾವೇ ಮಾಡಬೇಕಿತ್ತು. ಈಗ ತಾಂತ್ರಿಕಯುಗ, ಕೆಲಸ ಹಗುರ ಮಾಡಲು ಯಂತ್ರಗಳಿವೆ.

- ಕೆ.ಶ್ರೀನಿವಾಸಮೂರ್ತಿ, *ಕೌಶಿಕ*

ತಂದೆ ಹೇಳೋರು, "ನೀನು ಮೊದಲು ಸ್ವಂತ ಕೆಲಸ ಮಾಡು. ತೋಟದಲ್ಲಿ ಸ್ವತಃ ದುಡಿ, ಇನ್ನೊಬ್ಬರ ಮೇಲೆ ಅವಲಂಬನೆ ಆಗಬೇಡ. ಆಳುಕಾಳುಗಳಿಲ್ಲದೆ ನನ್ನ ಕೆಲಸ ಆಗೋಲ್ಲ ಅನ್ನಬೇಡ. ಬೆಳಗ್ಗೆ ಐದೂವರೆಗೆ ತೋಟಕ್ಕೆ ಹೋಗು, ಒಂಭತ್ತಕ್ಕೆ ಮನೆಗೆ ಬಾ. ದಿನನಿತ್ಯದ ಪೂಜೆ ಮುಗಿಸಿ, ತಿಂಡಿ ತಿಂದು ಮತ್ತೆ ತೋಟಕ್ಕೆ ಹೋಗು..."

- ಕೆ.ಕೆ.ಪ್ರಸನ್ನ, *ಕೌಶಿಕ*

ಹಿಂದೆ ಸ್ವತಃ ಕೆಲಸ ಮಾಡ್ತಿದ್ವು. ನೆಮ್ಮದಿಯ ಜೀವನವಿತ್ತು. ಆಹಾರದಲ್ಲಿ ರುಚಿಸತ್ವ ಇರೋದು. ಅರ್ಧ ಪಾವು ಅಕ್ಕಿ ಊಟ ಮಾಡಿದ್ರೆ ಸಂತೃಪ್ತಿ ಸಿಕ್ಕೋದು. ಹೆಚ್ಚು ಖಾಯಿಲೆ ಕಸಾಲೆ ಇರಲಿಲ್ಲ. ನಮ್ಮೂರಿನ ೮೦೦ ಜನಕ್ಕೆ ಹುಡುಕಿದ್ರೆ ೨೦ ಜನ ರೋಗಿಗಳೂ ಸಿಕ್ತಿರಲಿಲ್ಲ. ಈಗ ಕೃಷಿ ಕೆಲಸಕ್ಕೆ ಯಂತ್ರಗಳು ಬಂದಿವೆ. ಮಣ್ಣಿಗೆ ರಾಸಾಯನಿಕ ಗೊಬ್ಬರಗಳು, ಆಹಾರದಲ್ಲಿ ರುಚಿಸತ್ವ ಇಲ್ಲ, ಬೆಂಡು. ಈಗ ನೂರಕ್ಕೆ ೩೦ ಜನ ರೋಗಿಗಳೇ. ನಾನು ಕಷ್ಟಪಟ್ಟು ಜೀವನ ಮಾಡಿರೋದ್ರಿಂದ ಯಾವ ರೋಗಾನೂ ಬಂದಿಲ್ಲ. ಕೂತಿರುವವನಿಗೆ ಬರುವ ರೋಗ ಕಷ್ಟಪಡುವವನಿಗೆ ಬರೋಲ್ಲ.

- ಗುಂಡೂರಾಮಯ್ಯ, *ಮೊಸಳೆ*

ನನ್ನ ಹೆಂಡತಿ ಮನೆ ಕೆಲಸ ಮುಗಿಸಿ ಮಧ್ಯಾಹ್ನ ತೋಟಕ್ಕೆ ಬರೋಳು. ಅಲ್ಲಿಯವರೆಗೂ ತೋಟಕ್ಕೆ ನೀರು ಹೊತ್ತು ನಮಗೆ ಸುಸ್ತಾಗಿರೋದು. ಆಮೇಲೆ ನನ್ನ ಹೆಂಡತಿ ನೀರು ಹೊರೋಳು. ವಿಳ್ಳೇದೆಲೇನ ಸೋಮವಾರ ಕುಯ್ದು ಮಂಗಳವಾರದ ಸಂತೆಗೆ, ಹಾಗೇ ಶುಕ್ರವಾರದ ಹೊಸಹಳ್ಳಿ ಸಂತೆಗೆ ಗುರುವಾರ ಕುಯ್ದು ಜೋಡಿಸಿಕೊಡೋಳು.

- ಎಂ.ಆರ್.ಸೂರ್ಯನಾರಾಯಣಪ್ಪ, *ಮೊಸಳೆ*

ಮಾತುಕತೆ ಮುಗಿದ ಮೇಲೆ ಅವರ ತೋಟಕ್ಕೆ ಬೆಳೀತು ನಮ್ಮ ಪಯಣ. ದಾರಿಯಲ್ಲಿ, ಅವರ ಕಣದಲ್ಲಿ ತಲೆಗೆ ಪೇಟ ಕಟ್ಟಿ ಹುರುಳಿ ತೂರುತ್ತಿದ್ದ ವ್ಯಕ್ತಿಯನ್ನು ಬಳಿಗೆ ಕರೆದರು. 'ಇವನು ನನ್ನ ದೊಡ್ಡ ಮಗ ಶ್ರೀರಾಮ್. ಹಾಸನದ Godrej ಕಂಪೆನಿ ಕಛೇರೀಲಿ manager ಅಂತ ಪರಿಚಯಿಸಿದ್ರು.'

- ಎನ್.ಕೇಶವಮೂರ್ತಿ, *ಮೈಸೂರು*

ನಮ್ಮೂರ ಸಂಕೇತಿಗಳಲ್ಲಿ ಒಗ್ಗಟ್ಟಿದೆ. ಭತ್ತದ ಗದ್ದೆ ಖಟಾವು ಹಾಗೂ ಬಡಿಯೋದು, ಬಣವೆ ಕಟ್ಟೋದಕ್ಕೆ ಪರಸ್ಪರ ಸಹಾಯ ಮಾಡ್ತೀವಿ.

- ಎಂ.ಎನ್. ಮಂಜುನಾಥಯ್ಯ, *ಮೊಸಳೆ*

ಓದುವ ಆಸೆಯಿದ್ರೂ ಜಮೀನು ಹೋಗುತ್ತಲ್ಲಾ ಅಂತ ವ್ಯವಸಾಯಕ್ಕೆ ಬಂದೆ. ನಮ್ಮ ಜಮೀನು ಅಂದ್ರೆ ಬರೀ ಬಗನಿ ಮರ ಹಾಗೂ ಗಜ್ಜುಗದ ಬೀಳು ಇದ್ದ ಕಾಡು. ಕೂಲಿ ಕೊಡೋಕೆ ಕೈಲಿ ಕಾಸಿರಲಿಲ್ಲ. ನಾನು ಒಬ್ಬನೇ ಕಡಿದು ಈ ತೋಟ ಮಾಡಿದೀನಿ. ಈ ತೋಟದ ಕೆಲಸ ಮಾಡುವಾಗ ಹಗಲು ಹೊತ್ತು ಸಾಲೋದಿಲ್ಲ ಅಂತ ಕೆಲಸ ಮಾಡಿದೀನಿ. ರಾತ್ರಿ ಹೊತ್ತೂ ಸಹ ತೋಟದಲ್ಲಿ ಅಗೆತ ಮಾಡಿ, ನೀರು ಬಿಟ್ಟಿದ್ದೀನಿ. ನನ್ನ ಶ್ರಮ ಇವತ್ತು ಫಲ ನೀಡ್ತಿದೆ.

- ಎಂ.ಎನ್.ಮಂಜುನಾಥಯ್ಯ, *ಮೊಸಳೆ*

ನಾನು ರಾಜಕೀಯದಲ್ಲೂ ಇದ್ದೆ. ಸ್ವಾತಂತ್ರ್ಯ ಬರುವುದಕ್ಕೆ ಮುಂಚೆ ೧೯೪೬ರಲ್ಲಿ ನಾನು, ಎಸ್.ಎಂ.ಲಿಂಗಪ್ಪ, ಶಂಕರೇಗೌಡ ಹಾಗೂ ಸಿದ್ದೇಗೌಡ ಅವರುಗಳನ್ನು ಸ್ವಾತಂತ್ರ್ಯ ಚಳವಳಿಯಲ್ಲಿ ಭಾಗವಹಿಸಿದ್ದಕ್ಕೆ ಗುಜರಾತ್ ಜೈಲಿಗೆ ಹಾಕಿದ್ರು.... ಸ್ವಾತಂತ್ರ್ಯ ಬಂದ ಮೇಲೆ ನಾನು ಸರಕಾರವು ಅದಕ್ಕಾಗಿ ಕೊಟ್ಟ ಮಾಸಾಶನವನ್ನು ತೆಗೆದುಕೊಳ್ಳಲಿಲ್ಲ.

- ಕೆ.ವಿ.ವೆಂಕಟರಮಣಯ್ಯ, *ಕುಪ್ಪಹಳ್ಳಿ*

ನನ್ನ ತಾಯಿ ಕಟ್ಟೆಪುರದವರು. ಚಿಕ್ಕಂದಿನಲ್ಲೇ ತಂದೆ ತೀರಿ ಹೋದ್ರು. ನನ್ನ ತಾಯಿ ಬಸವಾಪಟ್ಟಣಕ್ಕೆ ಬಂದ್ರು. ಅಲ್ಲಿ ಯಾತದಲ್ಲಿ ಭತ್ತಕುಟ್ಟಿ, ಅವಲಕ್ಕಿ ಮಾಡಿ, ಮೆಣಸಿನ ಪುಡಿ ಮಾಡಿಕೊಟ್ಟು ನಮ್ಮನ್ನು ಸಾಕಿದ್ರು.

- ರಾಜಮ್ಮ, *ಕುಪ್ಪಹಳ್ಳಿ*

ನೋಡಿ, ನಮ್ಮ ಯಜಮಾನ್ರು ರ್‍ಯಾಂಕ್ ಸ್ಟೂಡೆಂಟ್. ಅಂದಿನ ಕಾಲದಲ್ಲಿ ಕೆಲಸಕ್ಕೆ ಸೇರಿದ್ರೆ ಪರಿಸ್ಥಿತಿ ಬೇರೇನೇ ಇರೋದು. ಹಳ್ಳಿಯ ವಾತಾವರಣದಲ್ಲಿ ಬೆಳೆದ ನನ್ನ ಮಕ್ಕಳು ಎತ್ತು ಗಾಡಿ ಅಂತಾರೆ. ಆದರೆ ಅವರು ವಿದ್ಯಾಭ್ಯಾಸ ಮಾಡಿ ಉನ್ನತ ಪದವಿಗೇರಲಿ ಅನ್ನುವುದು ನನ್ನ ಆಸೆ.

- ಸತ್ಯವತಿ, *ಕುಪ್ಪಹಳ್ಳಿ*

ಹಳ್ಳಿಗಳಲ್ಲಿ ವ್ಯವಸಾಯ ಮಾಡ್ತಿರುವ ಸಂಕೇತಿಗಳ ಗಂಡು ಹುಡುಗರಿಗೆ, ಹಳ್ಳಿಗಳಲ್ಲಿರುವ ಸಂಕೇತಿಗಳೇ ಹೆಣ್ಣು ಕೊಡೋಲ್ಲ. ಹಳ್ಳಿಯಲ್ಲಿ ಹುಡುಗನ ಮನೆಯವರಿಗೆ ಇರುವ ಆಸ್ತಿಗೆ ಬೆಲೆ ಕೊಡೋಲ್ಲ. ಮೊದಲು ಕೆಲಸ, ನಂತರ ವ್ಯಾಪಾರ ಹಾಗೂ ಪಟ್ಟಣದಲ್ಲಿರುವವರನ್ನು ನೋಡ್ತಾರೆ. ನಮ್ಮ ಒಂದು ಎಕರೆ ಗದ್ದೆ ಹೋದ್ರೂ ಚಿಂತೆಯಿಲ್ಲ ಮಗಳನ್ನು ಪಟ್ಟಣಕ್ಕೆ ಕೊಡೋಣ, ಕೊನೆಗೆ ನಾವೂ ಪಟ್ಟಣ ಸೇರೋಣ

ಅಂತಾರೆ. ಸಂಕೇತಿಗಳು ಹಳ್ಳಿಗೆ ಹೆಣ್ಣು ಕೊಡದೇ ಇದ್ದುದರಿಂದ ಈಗ ಬೇರೆ ಕಡೆಯಿಂದ ಹೆಣ್ಣು ತರ್‍ತಾ ಇದಾರೆ.

- ಟಿ.ಎನ್.ಪ್ರಭುರಾವ್, *ತೇಗನಹಳ್ಳಿ*

ತಂದೆಯವರಿಗೆ ಹಾವು ಕಚ್ಚಿ ಒಂದು ಕಾಲು ಹೋಯಿತು. ಒಂದೇ ಕಾಲಿನಲ್ಲಿ ನನ್ನ ತಂದೆ ಕೃಷಿ ಮಾಡ್ತಿದ್ರು. ತೋಟ ಅಗೆತ ಮಾಡೋರು, ತೆಂಗಿನಮರ ಹತ್ತೋರು, ಬಾಳೆ ಕಂದು ಹಾಕೋರು, ಸಂತೇಲಿ ಕೂಲಿ ಮಾಡೋರು - ಹೀಗೆ ಮಾಡಿ ನಮ್ಮನ್ನು ಸಾಕಿದ್ರು.

- ಟಿ.ಆರ್.ಶಂಕರಯ್ಯ, *ತೇಗನಹಳ್ಳಿ*

ನಾನು ಹಾಲನ್ನು ಮಾರೋದಿಲ್ಲ. ಭೂತಾಳೆ ಎಲೆಯನ್ನು ತಂದು, ನೆನೆಹಾಕಿ ದಾರ ತೆಗೆದು, ದನಕಟ್ಟುವ ಹಗ್ಗ ಹಾಗೂ ಸೇದೋಹಗ್ಗ ಹೊಸೀತೀನಿ. ಒಂದು ದಿನಕ್ಕೆ ಒಂದು ಎಕರೆ ಜಮೀನು ಉಳುವ ಸಾಮರ್ಥ್ಯ ಇದೆ. ಇತರೇ ರೈತರನ್ನು ನೋಡಿ, ಕೇಳಿ ನಾನು ವ್ಯವಸಾಯ ಕಲಿತೆ. ಈಗ ಅವರೇ, 'ನಿಮ್ಮ ಸಮಾನ ನಾವು ವ್ಯವಸಾಯ ಮಾಡಲು ಸಾಧ್ಯವಿಲ್ಲ' ಅಂತಾರೆ. ಇತರೇ ರೈತರು ಬೆಳೆಯೋ ಭತ್ತಕ್ಕಿಂತ ನನ್ನ ಜಮೀನಿನಲ್ಲಿ ಯಾವಾಗಲೂ ಹತ್ತು ಚೀಲ ಜಾಸ್ತಿ ಭತ್ತದ ಇಳುವರಿ ಬರುತ್ತೆ.

- ಕೆ. ರಮೇಶ್ ಜೋಯಿಸ್, *ಹರಿಹರಪುರ*

ಅಗಲವಾಗಿ ಮಾಡೋ ಬದಲು ಆಳವಾಗಿ ಮಾಡು ಅನ್ನುವುದು ಅನುಭವದ ಮಾತು. ತುಂಬಾ ಜಮೀನು ಮಾಡಿ, ತುಂಬಾ ಬೆಳೆದು, ಯಾವುದಕ್ಕೂ ಸರಿಯಾದ ಗೊಬ್ಬರ ಕೊಡದೆ, ಕಡಿಮೆ ನಿಗಾ ಮಾಡಿ, ಕಡಿಮೆ ಆದಾಯ ಪಡೆಯೋದಕ್ಕಿಂತ ಕಡಿಮೆ ಜಮೀನು ಇಟ್ಟು, ಚೆನ್ನಾಗಿ ವ್ಯವಸಾಯ ಮಾಡಿ, ಹೆಚ್ಚಿನ ಉತ್ಪತ್ತಿ ಪಡೆದು, ಅದಾಯಗಳಿಸೋದು ಸಂಕೇತಿ ಕೃಷಿ.

- ಸಿ.ಎನ್.ರಾಮಣ್ಣ, *ಚೆಲ್ಲೂರು*

ಬೇರೆಯವರಿಗೆ ಅನುಕೂಲ ಮಾಡಬೇಕು. ದುಷ್ಟರ ಸಹವಾಸ ಮಾಡಬಾರದು. ಕೆಟ್ಟ ಯೋಚನೆ ಮಾಡಬಾರದು. ಊರಿಂದ ನನಗೇನಾಯ್ತು ಎನ್ನುವುದಕ್ಕಿಂತ, ನನ್ನಿಂದ ಊರಿಗೇನಾಗಿದೆ ಅಂತ ಆಲೋಚಿಸ್ತೀನಿ. ಇತರರಿಗೆ ಆರ್ಥಿಕ ನೆರವು ನೀಡಿದೀನಿ. ವ್ಯವಸಾಯದಲ್ಲಿ ತೃಪ್ತಿ ಇದೆ.

- ಸಿ.ಎನ್.ಗುರುನಾಥ್, *ಚೆಲ್ಲೂರು*

ನಮ್ಮ ತಂದೆಯವರ ಬಳಿ ನಾಲ್ಕು ಜತೆ ಎತ್ತು, ಇಪ್ಪತ್ತು ದನ, ಹತ್ತು ಎಮ್ಮೆ ಇತ್ತು. ಎರಡು ಗಾಡಿ ಇತ್ತು. ನಾನು ೧೨, ೧೩ರ ಹುಡುಗ ಆಗಿದ್ದಾಗ ತಂದೆಯವರ ಜತೆ ರಾಮನಾಥಪುರ ಜಾತ್ರೆಗೆ ಹೋಗ್ತಿದ್ದೆ. ವಾರಗಳ ಕಾಲ ಗಾಡಿ ಕೆಳಗೆ ಮಲಗ್ತಾ ಇದ್ವಿ. ಅಲ್ಲೇ ಅಡುಗೆ ಮಾಡ್ತಾ ಇದ್ವಿ. ಜಾತ್ರೆ ಖುಷಿ ನೀಡ್ತಿತ್ತು. ಎತ್ತುಗಳನ್ನು ಮಾರಿ ಎತ್ತುಗಳನ್ನು ತರ್‍ತಿದ್ವಿ.

-ಸಿ.ಕೆ.ಗುರುಮೂರ್ತಿ, *ಚೆಲ್ಲೂರು*

ರೇಷ್ಮೆ ನಂತರ ಕಾಕಡ ಹೂವಿನ ಬೇಸಾಯ ಆರಂಭಿಸಿದೆ. ಮೊದಲು ಬೆಟ್ಟದಪುರದಲ್ಲಿ ಹುಡುಕಿದೆ. ಗಿಡ ಸಿಗಲಿಲ್ಲ. ಬಸವಾಪಟ್ಟಣಕ್ಕೆ ಹೋದೆ. ಅಲ್ಲಿ ಒಬ್ಬ ರೈತ ಅಂದ, 'ಸ್ವಾಮಿ, ನಾವು ನಿಮಗೆ ಗಿಡ ಕೊಟ್ರೆ, ನೀವು ಮಾಲನ್ನು ಮಾರ್ಕೆಟ್‌ಗೆ ತರ್ತೀರಿ, ಬೆಲೆ ಇಳಿಯುತ್ತೆ' ಅಂತ. ಆಗ ನಾನು 'ಕಾಕಡ ಹೂವು ಬೆಳೀಬೇಕು ಅಂತ ತೀರ್ಮಾನ ಮಾಡಿದೀನಿ, ನೀನು ಕೊಡದಿದ್ರೆ ಬೇಡ, ಅದು ಅಂಡಮಾನ್‌ನಲ್ಲಿ ಇದ್ರೂ ನಾನು ಹುಡುಕಿ ತರ್ತೀನಿ' ಅಂದೆ... ಎರಡು ಎಕರೆಗೆ ೩೦೦ ಗುಣಿ ಹಾಕಿದೆ.

-ಸಿ.ಎನ್.ಸತ್ಯನಾರಾಯಣ, *ಚೆಲ್ಲೂರು*

ಹೃಯದಯಲ್ಲಿರುವ ಸ್ವಾಮಿಗೆ ಕೈ ಮುಗಿದ್ರೆ ಸಾಕು. ಕಾಶೀಯಾತ್ರೆ ಯಾಕೆ ಬೇಕು? ರಾಮನನ್ನು ಪೂಜೆ ಮಾಡುವುದಕ್ಕಿಂತ ಆತನ ಆದರ್ಶಗಳನ್ನು ಮೈಗೂಡಿಸಿಕೊಳ್ಳಬೇಕು. ಅದು ನಿಜವಾದ ಪೂಜೆ. ತೋಟದ ವ್ಯವಸಾಯವೇ ನನಗೆ ದೇವರು. ನಮ್ಮ ಹೃದಯ ಶುದ್ಧವಾಗಿದ್ರೆ ಸಾಕು, ಆ ಸ್ವಾಮಿಗೆ ಬೇರೆ ಪೂಜೆ ಬೇಕಿಲ್ಲ.

- ಸಿ.ಎನ್.ಸುಬ್ಬರಾಯ, *ಚೆಲ್ಲೂರು*

ಅಡಿಕೆ ಹಾಗೂ ಎಲೆ ಹಂಬಿನ ಕೆಲಸವನ್ನು, ೭೭ರ ನನ್ನ ಈ ವಯಸ್ಸಿನಲ್ಲೂ ಸ್ವತಃ ಮಾಡ್ತೀನಿ. ಆಳುಗಳಿಗೆ ಪ್ರೀತಿ ಇರೋಲ್ಲ. ಸ್ವಲ್ಪ ವ್ಯತ್ಯಾಸವಾದ್ರೂ ಹಂಬು ಉಳಿಯೋಲ್ಲ. ಪಟ್ಟಣದ ಜೀವನ ಯಾಂತ್ರಿಕ. ವ್ಯವಸಾಯದಲ್ಲಿ ವಿರಾಮ ಇರುತ್ತೆ. ವ್ಯಕ್ತಿಸ್ವಾತಂತ್ರ್ಯ ಇರುತ್ತೆ. ಪೇಟೇಲಿ ೫೦ ಸಾವಿರ ರೂಪಾಯಿ ಸಂಬಳ ಇದ್ರೂ ಅವರವರ ದಾರಿ ಅವರಿಗೆ. ಅಕ್ಕಪಕ್ಕದವರ ಕಷ್ಟಕ್ಕೂ ನಾವು ಆಗಬೇಕು.

- ಸಿ.ಎನ್.ಸುಬ್ಬರಾಯ, *ಚಿಲ್ಕುಂದ*

ನನ್ನ ತಂದೆ ಭಾರೀ ಆಳು. ನಡೆದ್ರೆ ಭೂಮಿ ನಡುಗುವಂತೆ ಇದ್ರು. ಬಹಳ ಕಷ್ಟಜೀವಿ. ಎಂಟು ಎಕರೆಯ ಅಡಿಕೆ ಪಟ್ಟೇನೆಲ್ಲಾ ಕಟ್ಟಿ ಹೊರೆ ಮಾಡೋರಂತೆ. ಅದನ್ನು ಮೂರು ಜನ ಆಳುಗಳು ಎತ್ತಿ ತಲೆ ಮೇಲೆ ಹೊರಿಸೋರಂತೆ. ಅದನ್ನು ಒಂದು ಮೈಲಿ ದೂರದ ಮನೆಗೆ ತಂದು, ಎಡೆದು, ಜೋಡಿಸಿಕೊಂಡು ನಂತರ ಗಿರಾಕಿಗಳಿಗೆ ಮಾರೋರು.

- ಪಿ.ಎಸ್.ವೆಂಕಟನಾರಾಯಣ, *ಪಿರಿಯಾಪಟ್ಟಣ*

ನನ್ನ ತಾಯೀನೂ ಅಷ್ಟೇ. ಕಣದಲ್ಲಿ ತೂರೋದು, ಒಕ್ಕಣೆ ಮಾಡೋದ್ರಿಂದ ಹಿಡಿದು, ನಾಟಿ ಹಾಕ್ತಾ ಇದ್ರು. ಮಕ್ಕಳಿಗೆ ವ್ಯವಸಾಯದಲ್ಲಿ ಪ್ರೀತಿ ಹುಟ್ಟಿಸಬೇಕು, ಆ ರೀತಿ ನಾವು ಮಾತನಾಡಬೇಕು. ಅವರ ಕೈಲಿ ಎಲೆ ಹಂಬು ಕಟ್ಟಿಸೋದು, ನೀರು ಗೊಬ್ಬರ ಹಾಕಿಸೋದು, ಗಿಡ ಕಟ್ಟಿಸೋದು ಮಾಡಬೇಕು. ಈ ರೀತಿಯ ಪ್ರಾಯೋಗಿಕ ತರಬೇತಿಯಿಂದ ಮಕ್ಕಳಿಗೆ ವ್ಯವಸಾಯದ ಮೇಲೆ ಪ್ರೀತಿ ಹುಟ್ಟುತ್ತೆ.

- ಸಿ.ಎನ್.ನರಸಿಂಹಮೂರ್ತಿ, *ಪಿರಿಯಾಪಟ್ಟಣ*

ನಾವು ಚಿಕ್ಕವರಿದ್ದಾಗ, ಮನೆಹಸು ಮತ್ತು ಎಮ್ಮೆಗೆ ಮೇವಿಗೋಸ್ಕರ ಹಸಿರು ಹುಲ್ಲನ್ನು ಕುಯ್ಯಲು ತಾತನ ಜತೆಗೆ ನಾವೂ ಹೋಗ್ತಾ ಇದ್ವಿ. ಹುಲ್ಲು ಕುಯ್ಯೋದ್ರಲ್ಲೂ ಪದ್ಧತಿ ಇದೆ ಅಂತ ಅವರು ತಿಳಿಸ್ತಾ ಇದ್ರು. Keep left, ಅಂತ ಒಂದು ಕಡೆಯಿಂದ ಎಡಗಡೆ ಹುಲ್ಲನ್ನು ಕುಯ್ತಾ ಬರೋರು. ಅದು ನೋಡೋದಕ್ಕೆ ಚೆನ್ನಾಗಿ ಕಾಣಬೇಕು. ಒಂದು ಕಡೆಯಿಂದ ಕುಯ್ದರೆ, ಇನ್ನೊಂದು ಕಡೆಯಿಂದ ಹುಲ್ಲು ಬಂದಿರುತ್ತೆ. ಹೀಗೆ guidance ಕೊಡೋರು.

ಒಂದು ದಿನ ನನ್ನ ತಾತ ಪಕ್ಕಕ್ಕೆ ಕರೆದು ಕೂರಿಸಿಕೊಂಡ್ರು. ನನ್ನದೊಂದು ಆಸೆ ಇದೆ ನಡೆಸಿಕೊಡ್ತೀಯಾ ಅಂದ್ರು... 'Atleast ನೀನಾದರೂ ನನ್ನ ಆಸೆ ನೆರವೇರಿಸಿ, ಎರಡು ಎಕರೆ ತೋಟ ಮಾಡಿದ್ರೆ, ನನ್ನ ಆತ್ಮಕ್ಕೆ ಶಾಂತಿ ಸಿಗುತ್ತೆ' ಅಂತ ಹೇಳಿ ನನ್ನಿಂದ ಮಾತು ತೊಗೊಂಡ್ರು. ಆವಾಗ ಅವರಿಗೆ ೯೮ ವರುಷ.

- ಡಾ.ಪಿ.ಎಸ್.ಸುಬ್ರಹ್ಮಣ್ಯ, *ಪಿರಿಯಾಪಟ್ಟಣ*

ಈ ಒಂಭತ್ತು ಎಕರೇಲಿ ತೆಂಗು, ಸಪೋಟ, ಮಾವು, ಬಾಳೆ, ಅಡಿಕೆ ಹಾಕಿದೀವಿ. ಅದರ ಜತೇಲಿ ತರಕಾರೀನೂ ಬೆಳೀತಾ ಇದೀವಿ. ಬದನೆ, ಮೆಣಸಿನಕಾಯಿ, ಟೊಮ್ಯಾಟೋ, ಅರಿಸಿನ ಬೆಳೀತಾ ಇದೀವಿ. ಈಗ ಈ ಬೆಳೆಗಳು ಪರವಾಗಿಲ್ಲ. ಹಿಂದೆ ತರಕಾರಿಗಳಲ್ಲಿ ಒಳ್ಳೆಯ ಜಾತಿಯ ತಳಿಗಳು ಇತ್ತಿಲ್ಲ. ಹಾಗಾಗಿ ಆದಾಯ ಇತ್ತಿಲ್ಲ. ಈಗ ಒಳ್ಳೆಯ ಜಾತಿಯ ಹೈಬ್ರಿಡ್ ತಳಿಗಳು ಬಂದಿವೆ. ಈಗ ತರಕಾರಿ ಬೇಸಾಯ ಪರವಾಗಿಲ್ಲ, ಆದಾಯ ಸಿಗುತ್ತೆ.

- ಎಂ.ಆರ್.ಜಗದೀಶ್‌ಕುಮಾರ್, *ಹುಣಸೂರು*

ಎಲ್ಲಿ ಸಂಕೇತಿಗಳು ಇದ್ದಾರೆ ಅಲ್ಲಿ ಒಂದು ತೋಟ ಇರಲೇಬೇಕು. ಬಾಗಾಯ್ತು ಕೃಷಿಯಲ್ಲಿ ಇವರು ಎತ್ತಿದ ಕೈ. ಪ್ರತಿಯೊಬ್ಬ ಸಂಕೇತಿಯೂ ಹೆಗಲ ಮೇಲೆ ಗುದ್ದಲಿ ಹಾಕಿಕೊಂಡು, ತೋಟ ಅಗೆತ ಮಾಡಲು ಹೋಗುತ್ತಿದ್ದ ದೃಶ್ಯ ಸಾಮಾನ್ಯವಾಗಿತ್ತು. ತಲೆ ಹಾಗೂ ಭುಜದ ಮೇಲೆ ತೆಂಗಿನ ಕಾಯಿಯನ್ನು ಹೊತ್ತು ತರೋರು. ತೋಟಗಳನ್ನು ಅವತ್ತು ಹೇಗಿತ್ತೋ ಹಾಗೇ ಇವತ್ತೂ ಉಳಿಸಿಕೊಂಡು ಬಂದಿದ್ದಾರೆ. ಬ್ರಾಹ್ಮಣರಲ್ಲಿ ಸಂಕೇತಿಗಳ ಜನಾಂಗ ವ್ಯವಸಾಯವನ್ನು ಶ್ರೇಷ್ಠವಾದ ವೃತ್ತಿ ಅಂತ ಭಾವಿಸಿಕೊಂಡು, ತಮ್ಮ ಶಕ್ತಿಯಿಂದ ದುಡಿದು, ಸ್ವಾವಲಂಬಿಗಳಾಗಿ ಬದುಕಿದ್ದು ನೋಡಿದ್ರೆ ಬಹಳ ಹೆಮ್ಮೆಯಾಗುತ್ತೆ. ಕೃಷಿ ವಿದ್ಯೆ ಸಂಕೇತಿಗಳಿಗೆ ರಕ್ತಗತವಾಗಿ ಬಂದಿದೆ.

- ಎಸ್.ಟಿ.ದಕ್ಷಿಣಾಮೂರ್ತಿ, ಸಂಶೋಧಕರು, *ಪಿರಿಯಾಪಟ್ಟಣ*

ನನ್ನ ಪೂರ್ವಿಕರು - ಕುಟುಂಬದ ಹಿರಿಯರಾದ ವೆಂಕಟನಾರಾಯಣಪ್ಪನವರು ಆಸ್ತಿ ಹಿಸ್ಸೆ ಮಾಡಲು ಕುಳಿತರು. ಸೊಸೆ ನಂಜಮ್ಮನವರನ್ನು ಕರೆದು ಕೇಳಿದ್ರಂತೆ, "ಒಡವೆ ವಸ್ತ್ರ ತೊಗೊಂಡು ತವರು ಮನೆಗೆ ಹೋಗ್ತಿಯೋ, ಅಥವಾ ನಿನಗೆ ತೋಟ ಗದ್ದೆಯ ಭಾಗ ಬೇಕೋ" ಅಂತ. ನಂಜಮ್ಮನವರು ದೃಢವಾಗಿ ನುಡಿದ್ರಂತೆ. "ನಾನು ಇಲ್ಲೇ ಇರ್ತೀನಿ, ನನಗೆ ಒಡವೆ ಚಿನ್ನ ಬೇಡ. ತೋಟ ಕೊಡಿ ಸಾಕು" ಅಂತ. ಅವರಿಗೂ ತೋಟದ ಭಾಗ ಬಂತು. ಕಷ್ಟಪಟ್ಟು ದುಡಿದು ಆಸ್ತಿಯನ್ನು ದುಪ್ಪಟ್ಟು ಮಾಡಿದ್ರಂತೆ.

- ಪಿ.ಎಸ್.ವೆಂಕಟನಾರಾಯಣ, *ಪಿರಿಯಾಪಟ್ಟಣ*

ನನ್ನ ಈವರೆಗಿನ ಕೃಷಿ ಬದುಕಿನಲ್ಲಿ ನಾನು ಕೂಲಿ ಕೊಟ್ಟಿರುವುದು ಅಪರೂಪ. ಸ್ವತಃ ಜಮೀನಿನಲ್ಲಿ ದುಡಿದಿದೀನಿ. ಪ್ರೀತಿಯಿಂದ ಬೇಸಾಯ ಮಾಡಿದೀನಿ. ಹೀಗಾಗಿ ದೇಹಕ್ಕೆ ಸೌಖ್ಯ ಇದೆ. ಆರೋಗ್ಯವಿದೆ. ಖಾಯಿಲೆ ಬಿದ್ದಿಲ್ಲ. ಅತಿಯಾದ ದುಡ್ಡಿನ ಆಸೆಯೂ ನನಗಿಲ್ಲ.

- ಬಿ.ಎಸ್.ಶ್ರೀಧರಮೂರ್ತಿ, *ಬೆಟ್ಟದಪುರ*

ನೋಡಿ, ಬೆಳಗಿನಿಂದ ಏನೂ ತಿಂದಿಲ್ಲ. ಈಗ ಘಂಟೆ ಹನ್ನೆರಡು. ಅವರಿಗೆ ಯಾವಾಗಲೂ ಕೆಲಸ, ಕೆಲಸ, ಕೆಲಸ. ಅದು ಮುಗಿಯುವವರೆಗೂ ಊಟ ತಿಂಡಿ ಬೇಡವೇ ಬೇಡ. ಈ ೬೮ರ ವಯಸ್ಸಲ್ಲೂ ಎಲ್ಲಾ ಕೆಲಸ ಮಾಡ್ತಾರೆ. ಆದ್ರೆ ಊಟ ತಿಂಡಿ ಬಗ್ಗೆ ಗಮನ ಇರೋಲ್ಲ. ನೀವಾದ್ರೂ ಹೇಳಿ.

- ಮನೋನ್ಮಣಿ, *ಬೆಟ್ಟದಪುರ*

ಹತ್ತು ರೂಪಾಯಿ ಕೊಟ್ಟು ಮಾವಿನಹಣ್ಣು ಖರೀದಿ ಮಾಡಿ ತಿನ್ನೋದಕ್ಕಿಂತ, ನಮ್ಮ ತೋಟದಲ್ಲಿ ಬೆಳೆದ ನೂರು ಮಾವಿನಹಣ್ಣು ನೋಡಿದ್ರೇ ಸಂತೋಷ.

- ಬಿ.ವಿ.ಸೂರ್ಯನಾರಾಯಣ, *ಬೆಟ್ಟದಪುರ*

ನಾಲ್ಕು ಜನರಿಗೆ ಸಹಾಯ ಮಾಡುವ ಹಾಗಿರಬೇಕು, ಇತರರಿಗೆ ಕೆಟ್ಟದ್ದನ್ನು ಮಾಡಬಾರದು, ಆದಷ್ಟೂ ಒಳ್ಳೆಯದನ್ನು ಮಾಡಬೇಕು ಅನ್ನುವುದು ನನ್ನ ತತ್ವ.

- ಬಿ.ಎಸ್.ಪ್ರಭಾಶಂಕರ, *ಬೆಟ್ಟದಪುರ*

ಪ್ರತಿಯೊಬ್ಬರೂ ಮನೇನಲ್ಲಿ ಕಸೂತಿ ಕೆಲಸ ಮಾಡೋರು. ಪ್ರತಿಯೊಬ್ಬರ ಮನೇಲೂ ಊಟದ ಎಲೆ ಕಟ್ಟೋರು, ದೊನ್ನೆ ಕಟ್ಟೋರು. ಖಾರದ ಪುಡಿ ಮಾಡೋದು, ಚಟ್ನಿ ಪುಡಿ, ಉಪ್ಪಿನಕಾಯಿ ಮಾಡೋದು, ಹೀಗೆ ಮಾಡಿ ಬಂದ ವರಮಾನದಿಂದ ಜೀವನ ಸಾಗಿಸ್ತಾ ಇದ್ರು.

- ಬಿ.ಎಸ್.ಅನಂತಕೃಷ್ಣಪ್ಪ, *ಬೆಟ್ಟದಪುರ*

ರೈತನಿಗೆ ವ್ಯವಸಾಯದಲ್ಲೂ ಸಮಸ್ಯೆ, ಮಾರುಕಟ್ಟೇಲೂ ಸಮಸ್ಯೆ. ನಾವು ವ್ಯವಸಾಯದಲ್ಲಿ ಸೋತಿದ್ದೇವೆ ಅನ್ನಿಸುತ್ತಿದೆ. ಆದಾಯ ಸಿಕ್ತಾ ಇಲ್ಲ. ಪಟ್ಟಣದಲ್ಲಿರುವ ನನ್ನ ತಮ್ಮಂದಿರು "ಇನ್ನೂ ಯಾಕೆ ಹಳ್ಳೀಲಿದೀಯಾ?" ಅಂತ ಕೇಳುತ್ತಿದ್ದಾರೆ. "ಉಳುವವನಿಗೇ ಭೂಮಿ" ಕಾಯಿದೆ ಬಂದು ಯಾವ ಬ್ರಾಹ್ಮಣರು ಹಳ್ಳಿಯನ್ನು ಬಿಟ್ಟು ಪಟ್ಟಣ ಸೇರಿದರೋ, ಹಳ್ಳಿಯ ಮನೆ ಮಠ ಕಳೆದುಕೊಂಡ್ರೋ, ಅವರು ಈಗ ಸ್ಥಿತಿವಂತರಾಗಿರುವಂತೆ, equip ಆಗಿರುವಂತೆ, ಹಳ್ಳಿಯಲ್ಲಿ ಉಳಿದ ನಾವುಗಳು ಇಲ್ಲ.

- ಕೇಶವಮೂರ್ತಿ, *ಹನಸೋಗೆ*

ಜನರ ನಾಡಿಮಿಡಿತದಲ್ಲೂ ಕೃಷಿ ಇದೆ. ನಿತ್ಯನಿರಂತರವಾದ ತುಂಗೆಯ ಹರಿವಿನಷ್ಟೇ ಸತ್ಯವಾಗಿ ಇಲ್ಲಿ ಕೃಷಿ ಮುಂದುವರಿಯುತ್ತೆ. ಬ್ರಾಹ್ಮಣ್ಯದ ಶ್ರೀಮಂತಿಕೆ, ಸಂಸ್ಕಾರದ ಸೊಗಡು, ಸಂಕೇತಿಗಳ ಸಂಘಟಿತ ಜೀವನ, ಮಕ್ಕಳಿಗೆ ಬಾಲ್ಯದಿಂದಲೇ ದೊರೆಯುವ ಪೂರಕ ಭಾರತೀಯ

ಶಿಕ್ಷಣ, ಹಿರಿಯರ ಆದರ್ಶದ ಜೀವನ ಎಲ್ಲವೂ ಕೃಷಿಯ ಉಳಿವಿಗೆ ಸಹಕಾರಿಯಾಗಿದೆ.

- ಎನ್.ಕೇಶವಮೂರ್ತಿ, *ಮೈಸೂರು*

ಮತ್ತೂರಿನಲ್ಲಿ ಸಂಕೇತಿ ಕೃಷಿ ಮುಂದುವರಿಯುತ್ತೆ. ಅದಕ್ಕೆ ಪೂರಕವಾಗಿ ನಾವು ಏನು ಮಾಡ್ತೀವಿ ಅಂದ್ರೆ, ಅವರು ಈ ಊರಲ್ಲೇ ಉಳೀಬೇಕು ಅಂತ ಅವರಿಗೆ ನಮ್ಮ ವೈದಿಕ ಪರಂಪರೆಗೆ ಅನುಗುಣವಾಗಿ ವೇದ ಹಾಗೂ ಸಂಸ್ಕೃತ ಅಭ್ಯಾಸ ಮಾಡಿಸ್ತೀವಿ. SSLC ಮುಗಿಸೋ ಹೊತ್ತಿಗೆ ಈ ಶಿಕ್ಷಣ ಸಹ ಮುಗಿದಿರುತ್ತೆ, ಕೃಷಿಯ ಬಗ್ಗೆ ಮೋಹ ಹುಟ್ಟಿರುತ್ತೆ.

ನಮ್ಮ ಅಜ್ಜಿ ಒಬ್ಬಂಟಿಯಾಗಿದ್ರು. ಹಾಗಾಗಿ ಬೆಂಗಳೂರು ಪಟ್ಟಣ ಸೇರಿದ್ರು. ಸಾಧಾರಣವಾಗಿ ನಮ್ಮ ಸಂಕೇತಿಗಳು ಹಾಗೂ ಇತರೇ ಬ್ರಾಹ್ಮಣರ ಮನೇಲಿ ಅಡುಗೆ ಕೆಲಸ, ಬಾಣಂತನ, ಚಟ್ನಿಪುಡಿ, ಅವಲಕ್ಕಿ ಮಾಡಿ ಮಕ್ಕಳನ್ನು ಸಾಕಿದ್ರು.

ನಮ್ಮ ತಾಯಿ ನಮ್ಮನ್ನೆಲ್ಲಾ ಸಾಕೋದಕ್ಕೆ ಬೆಂದಿದಾರೆ. ಮತ್ತೂರಿನಲ್ಲಿ ನೂರು ಮನೆ ಇದೆ. ನೂರು ಮನೆಯಲ್ಲೂ ಸಹ ಅವಲಕ್ಕಿ ಮಾಡೋರು, ಭಾವಿಯಿಂದ ನೀರು ಸೇದೋರು, ಪ್ರತಿ ಮನೆಗೂ ರಾತ್ರಿ ೧೨ ಘಂಟೆಯಿಂದಲೇ ಅಡಿಕೆ ಸುಲಿಯಲು ಹೋಗೋರು. ನಾನು ಒಂಭತ್ತು ತಿಂಗಳ ಗರ್ಭದಲ್ಲಿ ಇದ್ದಾಗಲೂ ಸಹ ನನ್ನ ತಾಯಿ ಅವಲಕ್ಕಿ ಕುಟ್ಟಿ ನನ್ನನ್ನು ಹಡೆದರಂತೆ.

ನಮ್ಮ ಅತ್ತೆ ಮಾವ ನಮಗಿಂತ ಹೆಚ್ಚಿನ ನೋವನ್ನು ಅನುಭವಿಸಿದ್ದಾರೆ. ದನಕ್ಕೆ ಅಂತ ತರ್ತಿದ್ದ ಅಕ್ಕಿ ತೌಡಿನ ಸಣ್ಣ ಕಾಳು ನುಚ್ಚನ್ನು ಶೇಖರಣೆ ಮಾಡಿ ಉಪ್ಪಿಟ್ಟು ಮಾಡಿ ತಿನ್ನುತ್ತಿದ್ದರಂತೆ. ಸೀಬೇಕಾಯಿ ತಿಂದು ದಿನ ಕಳೆದಿದಾರೆ. ಇಲ್ಲಿ ಬಿದ್ದ ಸಗಣಿಯನ್ನು ಆರಿಸಿ ನಾಲ್ಕಾಣೆ ಎಂಟಾಣೆಗೆ ಮಾರುತ್ತಿದ್ದರಂತೆ.

- ಎನ್.ಎಸ್.ಕೃಷ್ಣಮೂರ್ತಿ, *ಮತ್ತೂರು*

ಎತ್ತಿನಗಾಡಿ ಬಹಳ ಪ್ರಚಾರ ಇದ್ದ ಕಾಲದಲ್ಲಿ ನನ್ನ ಅಣ್ಣಂದಿರು ಟೈರ್‌ಗಾಡಿ ಮಾಡಿದ್ರು. ಆಗ ಆ ತರಹದ ಗಾಡಿ ಇರಲಿಲ್ಲ. ಟೈರ್ ಗಾಡಿಯ ಗಾಲಿ ನಡುವೆ ಬರುವ ಅಚ್ಚನ್ನು ಮಧ್ಯೆ ಡೊಂಕು ಮಾಡಿ ಎತ್ತರ ಬರುವ ಹಾಗೆ ಮಾಡಿದ್ರು. ಹಳೇ ಎತ್ತಿನಗಾಡಿ ಓಡಾಡೋ ದಾರೀಲಿ, ಚಕ್ರ ಹರಿಯೋ ಜಾಗದಲ್ಲಿ ಆಳ ಇರುತ್ತೆ. ಮಧ್ಯದ ಜಾಗ ಎತ್ತರ ಇರುತ್ತೆ. ಅಂತಹ ದಾರೀಲಿ ಟೈರ್ ಗಾಡಿಯು ಸುಲಭವಾಗಿ ಸಾಗಲು ನೆರವಾಗುವಂತೆ ಮಧ್ಯದಲ್ಲಿ ಎತ್ತರವಾದ ಡೊಂಕು ಇತ್ತು. ಚಕ್ರಕ್ಕೆ ಬೇರಿಂಗ್ ಇದ್ದುದರಿಂದ ಎತ್ತುಗಳಿಗೆ ಎಳೆಯಲು ಸರಾಗವಾಗಿತ್ತು. ಮಾಮೂಲಿ ಚಕ್ಕಡಿಯಲ್ಲಿ ಒಂದು ಟನ್ ಭಾರ ಎಳೆದ್ರೆ, ನಮ್ಮ ಟೈರ್ ಗಾಡೀಲಿ ಮೂರರಿಂದ ನಾಲ್ಕು ಟನ್ ಸುಲಭವಾಗಿ ಎಳೆಯಬಹುದಿತ್ತು.

ನನ್ನ ತಂದೆ ಅಡಿಕೆ ಕತ್ತರಿಸಲು ಒಂದು ಸರಳ ಸಾಧನ ಅವರೇ ಸಿದ್ಧಪಡಿಸಿದ್ರು.

ಹಿಂದೆ ಇಲ್ಲಿ ತೋಟಕ್ಕೆ ಮಣ್ಣು ಗೊಬ್ಬರ ಹಾಕ್ತಾ ಇರಲಿಲ್ಲ.

ನಾನು tractor ಕೆಲಸ ಆರಂಭಿಸಿದ ಮೇಲೆ ಇಡೀ ಮತ್ತೂರಿನ ಅಡಿಕೆ ತೋಟದ ಉತ್ಪತ್ತಿ ಒಂದಕ್ಕೆ ಎರಡರಷ್ಟು ಬೆಳೀತು.

ಹಿರಿಯರು "ಅಡಿಕೆ ಬೇಯಿಸಲು ಒಂದು ಸಾಧನ ಮಾಡು, ತುಂಬಾ ಸೌದೆಯ ಸಮಸ್ಯೆ ಇದೆ" ಅಂದ್ರು, ಎರಡು ಹಂಡೇನ ಒಂದೇ ಸಾಲಿನಲಿಟ್ಟು ಅಡಿಕೆ ಬೇಯಿಸುವ ಹಾಗೆ ವಿಧಾನ ರೂಪಿಸಿದೆ.

-ಎಂ.ಎನ್.ಗೋಪಾಲ ಅವಧಾನಿ, *ಮತ್ತೂರು*

ತೋಟದಲ್ಲಿ ಕೆಲಸ ಮಾಡುತ್ತಲೇ ವೇದಾಧ್ಯಯನ ಮಾಡುವುದು ಪದ್ಧತಿ. "ಮನುಷ್ಯನಿಗೆ ಅನ್ನ ಪ್ರಧಾನ. ಆ ದೃಷ್ಟಿಯಲ್ಲಿ ಅನ್ನಕ್ಕೋಸ್ಕರ ಕೆಲಸ ಮಾಡದೆ ಮನೇಲಿ ಕುಳಿತು ಅಧ್ಯಯನ ಮಾಡೋದು ಅನ್ನ ದ್ರೋಹ, ಸರಿಯಾಗೋಲ್ಲ. ಆದ್ದರಿಂದ ಹಗಲು ಹೊತ್ತು ಪೂರ್ತಿ ತೋಟದಲ್ಲೇ ಇರಬೇಕು" ಎನ್ನುತ್ತಿದ್ದರು ನಮ್ಮ ತಂದೆ. ಅಷ್ಟರಮಟ್ಟಿಗೆ ನಮ್ಮ ಜನಾಂಗದ ಜೀವನ ಪೂರ್ತಿ ತೋಟದಲ್ಲೇ ಇರ್ತಾ ಇತ್ತು. ಪ್ರತಿ ಗಿಡದ ಆಗು ಹೋಗುಗಳ ಪೂರ್ತಿ ಮಾಹಿತಿ ನಮ್ಮ ಬಳಿ ಇರುತ್ತೆ. ಹಾಗಾಗಿ ನಮ್ಮ ತೋಟದ ಒಡನಾಟ ತಾಯಿ ಜತೆಯ ಸಂಬಂಧ ಇದ್ದ ಹಾಗೆ. ಪ್ರತಿ ಗಿಡದ ಜತೆ ಭಾವನಾತ್ಮಕ ಸಂಬಂಧವಿರುತ್ತೆ. ಭೋಗದ ಆಸೆಯಿಂದ ಜನ ಇವತ್ತು ತೋಟ ಬಿಟ್ಟು ಪಟ್ಟಣ ಸೇರುತಾ ಇದಾರೆ. 'ನೀನು ದನ ಕಟ್ಟದಿದ್ರೆ ಬ್ರಾಹ್ಮಣನೇ ಅಲ್ಲ' ಅನ್ನೋರು ತಂದೆ. ಏಕೆಂದರೆ ಬ್ರಾಹ್ಮಣನ ಜೀವನದ, ಕೃಷಿ ಜೀವನದ ಅವಿಭಾಜ್ಯ

ಅಂಗ ಅದು. ವೇದ-ತೋಟ-ಹಸು ಇವುಗಳು ಸಂಕೇತಿಗಳ ಆಡುಂಬೊಲ.

-ವೇ.ಬ್ರ.ಶ್ರೀ ಅಶ್ವತ್ಥನಾರಾಯಣಾವಧಾನಿ, *ಮತ್ತೂರು*

ನಮ್ಮ ಮನೆಯಲ್ಲಿ ಹೆಣ್ಣು ಮಕ್ಕಳದೇ ಕೆಲಸ. ನಾನೂ ಸಹ ಗದ್ದೆಯಿಂದ ಹುಲ್ಲು ತರೂವೆ, ನಾಟಿ ಮಾಡೂವೆ, ಗದ್ದೆ ಕುಯಿಲು ಮಾಡ್ತಿದ್ದೆ, ಅಡಿಕೆ ಗೊನೆ ತೆಗೆದ್ರೆ ಉದುರು ಹೆರಕುತ್ತಿದ್ದೆ. ನನ್ನ ಅಜ್ಜಿ, ತಾಯಿ ಕೂಡ ಮಾಡ್ತಾ ಇದ್ರು. ಹಿಂದಿನಿಂದ ಕೆಲಸ ಮಾಡಿ ಬಂದ ರೂಢಿ. ಈಗ ವಯಸ್ಸಾಗಿದೆ. ಆಳುಕಾಳಿಗೆ ಈಗ ಕೆಲಸ ಹೇಳಿ ಅವರು ತಕ್ಷಣ ಆ ಕೆಲಸ ಮಾಡದಿದ್ರೆ ಮನಸ್ಸಿಗೆ ತುಂಬಾ ನೋವಾಗುತ್ತೆ. ಇಲ್ಲಿ ಉತ್ಪತ್ತಿ ಕಡಿಮೆ ಆದ್ರೂ ನೆಮ್ಮದಿ ಜಾಸ್ತಿ.

- ಬಿ.ಕೆ.ಕಸ್ತೂರಮ್ಮ, *ಬಸವಾನಿ*

ಆಧುನಿಕ ಬೇಸಾಯಕ್ರಮ, ರಸಗೊಬ್ಬರ, ಇವುಗಳಿಂದ ಸದ್ಯಕ್ಕೆ ಬೇಕಾದಷ್ಟು ಸಿಕ್ರೂ, ಆಮೇಲೆ ಉತ್ಪತ್ತಿ ಕಡಿಮೆಯಾಗುತ್ತೆ. ಆಧುನಿಕ ಗೊಬ್ಬರಗಳಿಗಿಂತ ನಮ್ಮ ಹಸಿರು ಸೊಪ್ಪು, ಹಟ್ಟಿಗೊಬ್ಬರವೇ ಶ್ರೇಷ್ಠವಾದದ್ದು. ಕೃಷಿ ಬದುಕಿನಲ್ಲಿ ಸಿಗುವ ಸಂತೃಪ್ತಿ ಬೇರೆಲ್ಲೂ ಸಿಗೋದಿಲ್ಲ. ಆದರೆ ಮನುಷ್ಯ ಅತಿಯಾಗಿ ಗಳಿಸಲು ಹೋಗಿ ತನ್ನ ನೆಮ್ಮದೀನ ತಾನೇ ಹಾಳುಮಾಡಿಕೊಳ್ಳುತ್ತಾನೆ.

ಹೆಣ್ಣು ಮಕ್ಕಳಿಗೆ ಆಸಕ್ತಿ ಇರದಿದ್ರೆ ಬೇಸಾಯ ಆಗೋಲ್ಲ. ಹೆಣ್ಣೂ ಅರ್ಧಭಾರ ವಹಿಸಿಕೊಂಡ್ರೆ ವ್ಯವಸಾಯ ಅಷ್ಟೆ. ಹಿಂದಿನ ಕಾಲದಲ್ಲಿ ಹೆಂಗಸರೂ ತೋಟಕ್ಕೆ ಹೋಗೋರು, ಗದ್ದೆ ಕುಯ್ಲಿಗೆ ಹೋಗೋರು, ಗಂಡಸಿಗೆ ಸರಿಸಮವಾಗಿ ದುಡಿಯೋರು.

-ಸಾವಿತ್ರಮ್ಮ, *ಬಸವಾನಿ*

ಒಂದು ದಿನ ಸುಖವಾಗಿ ಇರಬೇಕು ಅಂದ್ರೆ ಕುಡೀಬೇಕಂತೆ. ಎಂಟು ದಿನ ಸುಖವಾಗಿ ಇರಬೇಕು ಅಂದ್ರೆ ಮದುವೆ ಆಗಬೇಕಂತೆ, ಆದರೆ ವರುಷವೆಲ್ಲಾ ಸುಖವಾಗಿ ಇರಬೇಕು ಅಂದ್ರೆ ವ್ಯವಸಾಯ ಮಾಡಬೇಕಂತೆ... ನಾವು ಬೆಳೆದ ಮಾವಿನ ಹಣ್ಣನ್ನು ತಿಂದ್ರೆ... ಆ ಒಂದು ಕ್ಷಣ ಸ್ವರ್ಗಕ್ಕೆ ಹೋದ ಸಂತೋಷ ಸಿಗುತ್ತೆ.. ಈ ಸುಖ ಮತ್ಯಾವುದರಲ್ಲಿದೆ?

-ಬಿ.ಎಸ್. ಶಿವರಾಮಶಾಸ್ತ್ರಿ, *ಬೀರೂರು*

ಮಳೆ ಅಭಾವದ ದಿನಗಳು... ಉತ್ತಮ ಮಳೆಯಾಗಲು ಜಪಿಸಬೇಕಾದ ಸ್ತೋತ್ರವನ್ನು ಹಿಡಿದುಕೊಂಡೇ ಶಿವರಾಮಶಾಸ್ತ್ರಿಗಳು ಮನೆ ಪ್ರವೇಶಿಸಿದರು. 'ಈಗ ಎಲ್ಲ ಕಡೆಗೂ ತಿಳಿಸಬೇಕು. ಋತ್ವಿಕರು ಕುಳಿತು ಪಠಣ ಮಾಡುವ ವ್ಯವಸ್ಥೆಯೂ ಆಗಬೇಕು' ಅಂದ್ರು.

- ಎನ್.ಕೇಶವಮೂರ್ತಿ, *ಮೈಸೂರು*

ನಾವು ತೋಟದಲ್ಲಿ ಸಂಗೀತವಾಗಲಿ ಅಥವಾ ವೇದದ ಅಧ್ಯಯನವಾಗಲಿ ಮಾಡ್ತಾ ಇದ್ದರೆ ಒಳ್ಳೆ ಉತ್ಪತ್ತಿ ಬರುತ್ತೆ. ಇದು ನಿಜ. ಹ್ಯಾಗೇಂದ್ರೆ ಹಾಸನದ ಸೀಮೇಲಿ, ಎಷ್ಟೋ ಜನ ಬೇಕಾದಷ್ಟು ಎಲೆ ಹಂಬು ಮಾಡಿಕೊಂಡಿದ್ರು. ಅವರಿಗೆ ಕೈಯಲ್ಲಿ ಎರಡು ಕೊಡ ಇದ್ದು ಬಿಟ್ರೆ ಊಟ ಮಾಡಿದ್ದು ಬೇಡ, ತಿಂಡಿ ತಿಂದಿದ್ದೂ ಗೊತ್ತಿರಲಿಲ್ಲ, ಹಾಗೆ ದುಡೀತಾ, ವೇದಾಧ್ಯಯನ ಮಾಡ್ತಾ, ಶಿಷ್ಯರಿಗೂ ಹೇಳಿಕೊಟ್ಟು, ತೋಟದಲ್ಲಿ ಮಾಡ್ತಾ ಇದ್ರು, ಒಳ್ಳೆ ಬೆಳೆ ತೊಗೋತಾ ಇದ್ರು ಅನ್ನೋದು ಗೊತ್ತು. ಆದರೆ ಇಲ್ಲಿ ಯಾರೂ ಅದನ್ನು ಪರೀಕ್ಷಿಸಿಲ್ಲ.

- ಬಿ.ಎಸ್.ಶಿವರಾಮಶಾಸ್ತ್ರಿ, *ಬೀರೂರು*

ವ್ಯವಸಾಯದಲ್ಲಿ ನಾವು ಸ್ವತಃ ಕೆಲಸ ಮಾಡಿದ್ರೆ ನಮ್ಮ ಆರೋಗ್ಯವೂ ಚೆನ್ನಾಗಿರುತ್ತೆ, ಹಣವೂ ಉಳಿಯುತ್ತೆ. ನಾನು ಇವತ್ತಿಗೂ ತೋಟದಲ್ಲಿ ಎರಡಾಳಿನ ಕೆಲಸ ಮಾಡ್ತೀನಿ. ಆಳಿಗೆ ಕೊಟ್ರೆ ಹಣ ಖರ್ಚಾಗುತ್ತೆ. ಕೆಲಸ ಅಚ್ಚುಕಟ್ಟಾಗಿ ಆಗೋಲ್ಲ.

- ಸುಧಾಕರ ಜೋಯಿಸ್, *ಬೀರೂರು*

೧೯೯೮ರ ನವೆಂಬರ್ ೧ನೇ ತಾರೀಖು ನನಗೆ ಭತ್ತದ ಬೇಸಾಯದಲ್ಲಿ ರಾಜ್ಯಮಟ್ಟದ ಮೊದಲನೇ 'ಕೃಷಿ ಪಂಡಿತ' ಪ್ರಶಸ್ತಿ ಲಭಿಸಿತು. ಒಂದು ಎಕರೆಯಲ್ಲಿ ೪೫ ಕ್ವಿಂಟಾಲ್‌ಗಿಂತಲೂ ಸ್ವಲ್ಪ ಜಾಸ್ತೀನೇ ಭತ್ತದ ಇಳುವರಿ ಬಂದಿತ್ತು. ನಮ್ಮ ಇಡೀ ಊರಿಗೆ ಗ್ಲಿರಿಸೀಡಿಯಾ ಬೆಳೆದದ್ದು ನಾನೇ ಮೊದಲು.

- ಎಚ್.ವಿ.ಕೃಷ್ಣರಾವ್, *ಹೊಸಹಳ್ಳಿ*

ನಾವಿರೋದು ಕೆಲಸ ಮಾಡೋದಕ್ಕೆ. ಕರ್ಮ ಮಾಡೋದಕ್ಕೇ ನಾವು ಹುಟ್ಟಿರೋದು. ಮಕ್ಕಳು ಓದಬೇಕು... ಆದರೆ ಕೃಷಿ ಬಗ್ಗೆ ಸಣ್ಣ ಮಾತನಾಡಿದ್ರೆ ನನಗೆ ಬಹಳ ಸಿಟ್ಟು ಬರುತ್ತೆ. ಕೃಷಿ ಇದ್ದರೆ ತಾನೆ ಬದುಕು? ಕೃಷಿಯಂಥ ಒಳ್ಳೆಯ ಕೆಲಸ ಮತ್ತೊಂದಿಲ್ಲ.

- ವಿಜಯ ಕೃಷ್ಣಮೂರ್ತಿ, *ಹೊಸಹಳ್ಳಿ*

ರೈತನ ಮನೆ ಹೇಗಿರಬೇಕು ಅಂದರೆ ರೈತನಿಗೆ ಸಾಮಾನು ಇಟ್ಟುಕೊಳ್ಳೋದಕ್ಕೂ ಬೇಕು. ದನಕರುಗಳ ಕೊಟ್ಟಿಗೆ ಇರಬೇಕು. ಅವುಗಳಿಗೆ ಮೇವು ಇಡಲು ಸ್ಥಳ ಬೇಕು. ತೋಟದಲ್ಲಿ ಬೆಳೆದ ಪದಾರ್ಥಗಳನ್ನು ತಂದು ಶೇಖರಣೆ ಮಾಡಲು ಜಾಗ ಇರಬೇಕು.

- ಎಚ್.ರಾಮಣ್ಣ, *ಹೊಸಹಳ್ಳಿ*

ನಮ್ಮ ತಂದೆ ಹೋದ ಮೇಲೆ ತಾಯೀನೇ ಕಷ್ಟಪಟ್ಟು ತೋಟದ ಕೆಲಸ ಮಾಡೋರು. ಬೆಳಗ್ಗೆ ನಾಲ್ಕು ಘಂಟೆಗೆ ಎದ್ದು ರಾತ್ರಿ ೧೨ಕ್ಕೆ ಮಲಗ್ತಾ ಇದ್ರು. ಬೆಳಗ್ಗೆ ಮನೆಕೆಲಸ ಮಾಡಿ, ಅಡುಗೆ ಮಾಡಿ, ಮಕ್ಕಳ ಆರೈಕೆ ಮಾಡಿ, ಕುಡಿಯೋ ನೀರನ್ನು ಹೊಳೆಯಿಂದ ತರ್ತಿದ್ರು, ಸ್ನಾನಕ್ಕೆ ಭಾವಿಯಿಂದ ನೀರು ಸೇದೋರು. ಇದೆಲ್ಲಾ ಮುಗಿಸಿ ತೋಟಕ್ಕೆ ಹೋಗೋರು. ರಾತ್ರಿ ೯ ರಿಂದ ೧೨ರವರೆಗೆ ಅಡಿಕೆ ಸುಲಿಯೋರು, ಹಾಗೇ ಬೆಳಗ್ಗೆ ೪ ರಿಂದ ೬ರವರೆಗೆ ಅಡಿಕೆ ಸುಲಿಯೋರು. ಬೇರೆಯವರ ಮನೆಗೂ ಸುಲಿಯೋಕೆ ಹೋಗೋರು.

- ಕೆ. ಕೃಷ್ಣಸ್ವಾಮಿ, *ಹೊಸಹಳ್ಳಿ*

'ರಾಸಾಯನಿಕ ಗೊಬ್ಬರವನ್ನು ಅಡಿಕೆ ತೋಟದಲ್ಲಿ ಬಳಸಬಾರದು; ಮರ ತೆಳ್ಳಗಾಗುತ್ತೆ, ಸತ್ತ್ವ ಕಳೆದುಕೊಳ್ಳುತ್ತೆ. ನೂರು ವರುಷ ಬಾಳುವ ಮರ ಕೇವಲ ಇಪ್ಪತ್ತು ವರುಷದಲ್ಲಿ ನೆಲ ಸೇರುತ್ತೆ' ಅಂತಿದ್ರು ಹಿಂದೆ. ಆದರೆ ಈಗಿನ ನಮ್ಮ ಆಧುನಿಕ ವಿಜ್ಞಾನದ ಚಿಂತನೆ ಯಾವ ರೀತಿ ಇದೆ ಅಂದ್ರೆ, ನೂರು ವರುಷ ಬಾಳುವ ಮರ ಕೇವಲ ೨೦ ವರುಷದಲ್ಲೇ ನೂರು ವರುಷದ ಫಸಲು ಕೊಡುವುದಾದ್ರೆ ಅದು ಅಷ್ಟೇ ಬಾಳಲಿ, ಅದು ಹೋದ ಮೇಲೆ ಮತ್ತೊಂದನ್ನು ನೆಡೋಣ ಅಂತಿದೆ.

- ರಾಜಾರಾಮಮೂರ್ತಿ, *ಹೊಸಹಳ್ಳಿ*

ನನ್ನ ಮಗ ವ್ಯವಸಾಯಸ್ಥನೇ ಆಗಬೇಕು ಅಂತ ನನ್ನ ಬಲವಂತವೇನಿಲ್ಲ. ಅವನ ಕ್ಷೇತ್ರವನ್ನು ಅವನು ಆರಿಸಿಕೊಳ್ಳಬಹುದು. ನನ್ನ ತಂದೇನೂ ನನಗೆ ಇಂಥಾದ್ದನ್ನೇ ಮಾಡು ಅಂತ ಬಲವಂತ ಮಾಡಲಿಲ್ಲ. ಅಲ್ಲದೆ ಎಲ್ಲದಕ್ಕಿಂತ ಮುಖ್ಯವಾದದ್ದು ಜೀವನ ಮಾಡುವುದು. ಹೊಟ್ಟೆಪಾಡು ಬಹಳ ಮುಖ್ಯ ಹಾಗೂ ದೊಡ್ಡದು. ಅದಕ್ಕೋಸ್ಕರ ಕೆಲವು ಬದಲಾವಣೆ ಅಗತ್ಯ.

ಕಾಲಕ್ಕೆ, ಹವಾಗುಣಕ್ಕೆ, ಪರಿಸ್ಥಿತಿಗೆ ತಕ್ಕಂತೆ ಕೃಷಿ ಪದ್ಧತಿಗಳನ್ನು ಅಳವಡಿಸಿಕೊಳ್ಳುವುದರಲ್ಲಿ ನಾವು ಸಿದ್ಧಹಸ್ತರು ಅನ್ನಿಸುತ್ತೆ.

- ಎಲ್.ಎಸ್.ಮುರಳೀಧರ, ಗದ್ದೆಮನೆ, *ಹೊಸಹಳ್ಳಿ*

ನಮ್ಮ ಮುತ್ತಜ್ಜ ಚಿಕ್ಕ ವಯಸ್ಸಿನಲ್ಲೇ ಹೋಗಿದ್ರಿಂದ ನಮ್ಮ ಮುತ್ತಜ್ಜೀನೇ ಆಗ ವ್ಯವಸಾಯದ ಕೆಲಸ ಆರಂಭಿಸಿದ್ರಂತೆ. ಮರ ಹತ್ತೋದ್ರಿಂದ ಹಿಡಿದು, ಅಗೆಯೋದು, ಎಲೆಹಂಬಿಗೆ ಎರಡು ಕೈಯಲ್ಲೂ ಗಡಿಗೆ ಹಿಡಿದುಕೊಂಡು ನೀರು ಹಾಕೋದು; ತಮ್ಮ ಪುಟ್ಟ ಮಗುವನ್ನು ಬೆನ್ನಿಗೆ ಕಟ್ಟಿಕೊಂಡು ಕೆಲಸ ಮಾಡಿದ್ರಂತೆ.

ಮುಂದೆ... ನಮ್ಮ ತಂದೆ ನಾಲ್ಕು ಜನ ಕೆಲಸ ಮಾಡೋದನ್ನು ಒಬ್ಬರೇ ಮಾಡ್ತಿದ್ರು. ಅವರು ಆಳುಗಳಿಗೆ ಬೇರೆಯವರು ಕೊಡೋದಕ್ಕಿಂತ

ಜಾಸ್ತಿ ಕೂಲಿ ಕೊಡೋರು. ಅವರು ಆಳುಗಳಿಗೆ ಹೇಳೋರು, "ನೀವು ನನ್ನಷ್ಟು ಕೆಲಸ ಮಾಡಬೇಡಿ. ನಾನು ಮಾಡುವ ಕೆಲಸದಲ್ಲಿ ಅರ್ಧ ಕೆಲಸ ಮಾಡಿ ಸಾಕು" ಅನ್ನೋರು.

ನನಗೆ... ಒಂದು ಗಿಡ, ಒಂದು ಹಕ್ಕಿ ನೋಡಿದಾಗ ಅವರ್ಣನೀಯ ಆನಂದವಾಗುತ್ತೆ. ದೇವರ ರೂಪವೇನೋ ಅನ್ನಿಸುತ್ತೆ. ಕಾಫಿ ತೋಟದಲ್ಲಿ ಕಾಲಕಾಲಕ್ಕೆ ತಕ್ಕಹಾಗೆ ೩೬೫ ದಿನವೂ ಕೆಲಸ ನಡೀತಾನೇ ಇರುತ್ತೆ.

- ಭಾಗ್ಯಲಕ್ಷ್ಮಿ, *ಭಕ್ತರಹಳ್ಳಿ*

ನನಗೆ ದುಡ್ಡು ಮಾಡಬೇಕು, ಶೋಕಿ ಮಾಡಬೇಕು, ಊರೂರು ತಿರುಗಬೇಕು, ಒಳ್ಳೊಳ್ಳೆ ಬಟ್ಟೆ ಹಾಕಬೇಕು ಅಂತ ಅನ್ನಿಸಲೇ ಇಲ್ಲ. ನನಗೆ ಪ್ರೀತಿ ವಿಶ್ವಾಸ ಅಂದ್ರೆ ದನಕರು, ತೋಟಗದ್ದೆ ಹಾಗೂ ನನ್ನ ಮನೆ ಅಷ್ಟೆ.

ಎತ್ತಿನ ಬೇಸಾಯ ಮಾಡಿದೀನಿ. ಗಾಡಿ ಹೊಡೆದಿದೀನಿ. ರಾತ್ರಿ ಎಲ್ಲಾ ನಿದ್ದೆ ಬರ್ತಿರಲಿಲ್ಲ-ಯಾವಾಗ ಬೆಳಗ್ಗೆ ಆಗುತ್ತೋ, ಆರು ಹೊಡ್ತೀವೋ ಅಂತಿದ್ದೆ. ನನ್ನ ಜತೆ ತಂದೆಯವರು ಇದ್ದೇ ಇರ್ತಿದ್ರು. ಕಾಡಿಗೆ ಹೋಗಬೇಕು, ಕಟ್ಟಿಗೆ ತರಬೇಕು-ನೇಗಿಲು ಸಾಮಾನು ತರಬೇಕು ಇದೇ ಧ್ಯಾನ. ಆಳುಗಳ ಜತೇಲೂ ಕೆಲಸ ಮಾಡಿದೀನಿ. ನಾವು ಮಾಡದಿದ್ರೆ ಆಳುಗಳು ಮಾಡೋದಿಲ್ಲ ಅನ್ನುವುದು ನನ್ನ ನಂಬಿಕೆ.

-ಎಲ್.ಜಿ.ಪ್ರಕಾಶ್, *ಲಿಂಗದಹಳ್ಳಿ*

ನಾನು ಹೆಚ್ಚು ಕಮ್ಮಿ ಎಂಟು ವರುಷದ ಹುಡುಗ ಆಗಿದ್ದಾಗಿನಿಂದ ದನಕರು ಎಮ್ಮೆ ನೋಡಿಕೊಳ್ಳೋದು, ಹುಲ್ಲು ಕುಯ್ಯೋದು ಮಾಡ್ತಿದ್ದೆ. ಬಿ.ಎ. ಓದುವಾಗಲೂ ವ್ಯವಸಾಯದ ಕೆಲಸ ಮಾಡ್ತಿದ್ದೆ. ನಮ್ಮ ಮನೇಲಿ ೫೦ ದನ ಇತ್ತು, ೨೦ ಎಮ್ಮೆ ಇತ್ತು. ಹುಲ್ಲು ತರೋದು, ಎಮ್ಮೆ ಕಾಯೋದೇ ಜೀವನ ಅಂತ ನಾನು ಆ ಕಾಲದಲ್ಲಿ ತಿಳಿದಿದ್ದೆ. ನಮ್ಮ ಅಜ್ಜನ ಕಾಲದಲ್ಲಿ ೧೦೦ ದನ ಇತ್ತಂತೆ. ಮೇವು ಕಡಿಮೆ ಆದಂಗೆ ದನಗಳ ಸಂಖ್ಯೇನೂ ಕಡಿಮೆ ಆಗ್ತಾ ಬಂತು.

ಮೊದಲು ಹೊಗೆಸೊಪ್ಪು ಬೆಳೆದವರು, ಸೂರ್ಯಕಾಂತಿ ಬೆಳೆ ಈ ಊರಿಗೆ ಪರಿಚಯಿಸಿದವರು ಸಂಕೇತಿಗಳೆ. ಇಲ್ಲಿ ಸಾಕಷ್ಟು ಹೊಸ ಹೊಸ ಬೆಳೆಗಳನ್ನು ಬೆಳೆದ್ರು. ಆದರೆ ಪರಿಸ್ಥಿತಿ ಸರಿಹೋಗದೆ ನಮಗೆ ಅಡಿಕೆ ತೋಟ ಮಾತ್ರ ಸಾಕು, ಅದರಲ್ಲೇ ಬದುಕೋಣ ಅಂತ ತೀರ್ಮಾನಿಸಿದ್ರು. ಹಾಗಾಗಿ ಈಗ ದಿನಸಿ ಪೈರನ್ನು ಯಾರೂ ಮಾಡ್ತಿಲ್ಲ.

ಜೀವನದಲ್ಲಿ ಏನಾದ್ರೂ ಆಗಲಿ ಇನ್ನೊಬ್ಬನನ್ನು ಹೊಡೆದು ತಿನ್ನಬಾರದು. ನಮ್ಮ ಕೈಯಲ್ಲಿ ಎಷ್ಟು ಸಾಧ್ಯವೋ ಅಷ್ಟು ದುಡಿದು ತಿನ್ನಬೇಕು. ಅಷ್ಟನ್ನು ಮಾತ್ರ ಹೇಳ್ತೀನಿ. ಇದು ನಮ್ಮ ಸಂಕೇತಿಗಳಲ್ಲೇ ಬಂದಿದೆ. ಅದಕ್ಕೇ ಅವರು ಆರಕ್ಕೇರದೆ ಮೂರಕ್ಕಿಳಿಯದೆ ಇದಾರೆ. ಇದ್ದುದರಲ್ಲಿ ತೃಪ್ತರಾಗಿದಾರೆ.

- ಎಲ್.ಕೆ.ಗೋಪಾಲ್, *ಲಿಂಗದಹಳ್ಳಿ*

ಇತರೇ ಪಂಗಡದ ಜನಗಳಲ್ಲಿ ಮನೆಯವರೆಲ್ಲಾ ಒಟ್ಟಾಗಿ ಹೋಗಿ ಹೊಲ ಜಮೀನಿನಲ್ಲಿ ಸ್ವತಃ ದುಡೀತಾರೆ. ಪ್ರತಿಯೊಂದು ಕೆಲಸ ಅವರೇ ನೋಡಿಕೊಳ್ತಾರೆ. ಆದ್ರೆ ಬ್ರಾಹ್ಮಣರು ಈ ರೀತಿ ಮಾಡೋಲ್ಲ. ಎಲ್ಲವನ್ನೂ ಒಬ್ಬ ಮಾಡಬೇಕು...

- ಎಲ್.ಎಸ್.ಸುಧಾಕರ್, *ಲಿಂಗದಹಳ್ಳಿ*

ಸಂಕೇತಿ ಕೃಷಿಯ ಬಗ್ಗೆ, ಕೃಷಿಕರ ಬಗ್ಗೆ ಸರಿಯಾದ ಮಾಹಿತಿಯನ್ನು ಒದಗಿಸಬೇಕು, ಸಂಕೇತಿ ಬಾಂಧವರಿಗೆ ತಮ್ಮದೇ ಪಂಗಡದಲ್ಲಿ ಯಾವ ರೀತಿಯ ಕೃಷಿ ಸಾಧನೆ ಆಗ್ತಾ ಇದೆ ಅನ್ನುವುದನ್ನು ತಿಳಿಸಬೇಕು. ಅದಕ್ಕಾಗಿ ಸಂಕೇತಿ ಕೃಷಿಯ ಬಗ್ಗೆ ಪುಸ್ತಕವನ್ನು ಹೊರತರುವ ಕಾರ್ಯ ನಿಜಕ್ಕೂ ಅಭಿನಂದನಾರ್ಹ.

ಇವತ್ತು ಸಂಕೇತಿಗಳಲ್ಲಿ ಕೃಷಿಗಿಂತ ಕೃಷಿಯೇತರ ಚಟುವಟಿಕೆ ಮುಂದಿದೆ. ಬೇರೆ ಯಾವ ವಿಚಾರಗಳಲ್ಲೂ ತೊಡಗಿಸಿಕೊಳ್ಳಲು ಆಗದವರಿಗೆ ಕೃಷಿ ಒಂದು ವೃತ್ತಿ ಅನ್ನುವ ಮಟ್ಟಿಗೆ ಆಗಿದೆ.

ನಾವು ಸಂಕೇತಿಗಳು ಇದುವರೆಗೂ ಹಳೆಯ ರೀತಿಯ ಕೃಷಿ ಪದ್ಧತಿಯನ್ನೇ ಅನುಸರಿಸ್ತಾ ಇದೀವಿ. ನಾವು ಹತ್ತು ಕಡೆ ಹೋಗಿ ನೋಡಿದ್ರೆ ಅನುಕೂಲ. ಸಂಶೋಧನಾ ಕೇಂದ್ರಗಳಿಗೆ ಹೋಗಬೇಕು. ಆಗ ನಮ್ಮ ಸಣ್ಣ ಸಣ್ಣ ಹಿಡುವಳೀಲಿ ದುಪ್ಪಟ್ಟು ಇಳುವರಿ ಪಡೀಬಹುದು.

ಇಂದು ಏನಾಗಿದೆ ಅಂದ್ರೆ, ನಮ್ಮ ಸಂಕೇತಿಗಳಲ್ಲಿ ಕೃಷಿ ಚಟುವಟಿಕೆ ಒಂದನ್ನು ಬಿಟ್ಟು, ಇತರ ವ್ಯಾಪಾರದಲ್ಲಿ, ವೈದ್ಯವೃತ್ತಿಯಲ್ಲಿ, Software ಉದ್ಯಮದಲ್ಲಿ, ಎಲ್ಲಾ ಕ್ಷೇತ್ರದಲ್ಲೂ ಅತ್ಯಂತ ಮುಂದುವರಿದ ವಿಚಾರಗಳನ್ನು ಅಳವಡಿಸಿಕೊಂಡಿದಾರೆ. ಅತ್ಯಂತ ಯಶಸ್ವಿಯಾಗಿದ್ದಾರೆ. ಆದ್ರೆ ಕೃಷಿ ವಿಚಾರದಲ್ಲಿ ಮಾತ್ರ, ನಿದ್ರೆ ಮಾಡುತ್ತಿರುವ ಹಾಗೆ ನಟಿಸುತ್ತಿದ್ದಾರೆ. ನಾವು ಹತ್ತು ದಿಕ್ಕಿನಿಂದ ಬರುವ ವಿಚಾರಗಳನ್ನು ವಿಮರ್ಶೆ ಮಾಡಿ ಸ್ವೀಕರಿಸಬೇಕು.

- ಕೆ.ಕೆ.ವಿಶ್ವನಾಥ್, *ಮಡಿಕೇರಿ*

೧೯೭೫ರಲ್ಲಿ ನೀರಿಗೆ ಕ್ಷಾಮ ಬಂತು. ಏತ ಎತ್ತಿ ನೀರು ಹಾಕಲು ಭಾರೀ ಶ್ರಮ. Kerosine oil pump ಬಂದಿದೆ ಅಂತ ತಿಳೀತು. ೨೫೦೦ ರಿಂದ ೩೦೦೦ ಸಾವಿರ ರೂಪಾಯಿ ಆಗಬಹುದು, ಅದನ್ನು ತರೋಣ ಅಂತ ತಂದೆಗೆ ಹೇಳಿದೆ. ಕಬ್ಬಿಣದ ಹವ್ಯಾಸ ಒಳ್ಳೇದಲ್ಲ, ಹಣ ಹಾಕಿ ಕಳಕೋಬೇಡ ಅಂದ್ರು. ಹಟ ಮಾಡಿ ಬೆಂಗಳೂರಿನಿಂದ ತಂದೆ. ಆ ಮೆಶೀನ್ start ಮಾಡುವ ಮೊದಲು ಅದಕ್ಕೆ 4T ಗ್ರೇಡ್ oil ಹಾಕುವ ವಿಚಾರ ತಿಳಿದಿರಲಿಲ್ಲ. ಬೇಸಿಗೆ ಕಾಲ ಬೇರೆ. start ಆದ ತಕ್ಷಣ ನಿಂತುಹೋಗೋದು. ಅದೂ ಅಲ್ಲದೆ ಆ ಮೆಶೀನ್ ಆರಂಭವಾದ ಮೇಲೆ ಅದು ಮುಂದೆ ಹೋಗಿ ಹೋಗಿ ಬಾವಿಗೇ ಬೀಳುತ್ತೆ ಅಂತ ಹೆದರಿಸಿದ್ರು ಇಲ್ಲೆಲ್ಲಾ. ನನಗೂ ಭಯ ಆರಂಭವಾಯ್ತು. ಇಲ್ಲಿ ರಾಮ ಅಂತ ಒಬ್ಬ ಇದ್ದ. ಅವನಿಗೆ ಯಂತ್ರಗಳ ಮಾಹಿತಿ ಇತ್ತು. ಅವನೇ ನನಗೆ ಹೇಳಿದ 2T oil ಹಾಕಬೇಕು ಅಂತ. Oil ಹಾಕಿ pump ಆರಂಭಿಸಿದ್ವಿ ನೋಡಿ, ಎರಡು ಪೈಪ್‌ನಲ್ಲೂ ನೀರು ಬರಲು ಆರಂಭವಾಯ್ತು. ಆಗ ನನ್ನ ತಂದೆಗೆ ಹೇಳತೀರದಷ್ಟು ಸಂತೋಷ.

- ಎಸ್.ಸುಬ್ರಹ್ಮಣ್ಯ, *ಕೇರಳಾಪುರ*

ಸಂಕೇತಿ ಕೃಷಿ ಉಳೀಬೇಕಾದ್ರೆ ಮತ್ತೆ ಊರಲ್ಲಿ ವೇದಾಭ್ಯಾಸ ಆರಂಭವಾಗಬೇಕು. ಜನರಲ್ಲಿ ವ್ಯವಸಾಯದ ಬಗ್ಗೆ ಒಲವು ಮೂಡಬೇಕು. ನನ್ನ ಮಗನಿಗೆ ವ್ಯವಸಾಯಸ್ಥರ ಮನೆಯಿಂದಲೇ ಹೆಣ್ಣು ತಂದಿದೀನಿ. ಭೂಮಿ ಮೋಸ ಮಾಡೋಲ್ಲ. ಅಲ್ಲದೆ ವ್ಯವಸಾಯದಲ್ಲಿ ಭೂಮಿತಾಯಿ ಸೇವೆ ಮಾಡಿಕೊಂಡು ಇರೋವಾಗ ನಮಗೆ ಆತ್ಮಾನೂ ಶುದ್ಧವಾಗುತ್ತೆ. ಶರೀರವೂ ಗಟ್ಟಿಮುಟ್ಟಾಗಿರುತ್ತೆ. ಆರೋಗ್ಯವೂ ಚೆನ್ನಾಗಿರುತ್ತೆ. ಮತ್ತೊಬ್ಬರ ಹಂಗಿರೋಲ್ಲ. ಆದ್ದರಿಂದ ವ್ಯವಸಾಯವೇ ಸರ್ವಶ್ರೇಷ್ಠ. ಸಂಕೇತಿಗಳ ವ್ಯವಸಾಯದಲ್ಲಿ ರಕ್ತಗತವಾಗಿ ಬಂದಿರುವ ತಲ್ಲೀನತೆ ಇದೆ. "ಇದು ನಮ್ಮದಲ್ಲ, ಭೂಮಿತಾಯೀದು" ಅನ್ನುವ ಮನೋಭಾವನೆಯಿಂದ ನಾವು ವ್ಯವಸಾಯ ಮಾಡ್ತೀವಿ. ಆದರೆ ಇತರೇ ಜನ ಯಾವ ಬೆಳೆ ಮಾಡಿದ್ರೆ ನಮಗೆ ಲಾಭ ಜಾಸ್ತಿ ಅಂತ ಅರಸುತ್ತಾರೆ. ಆದ್ರೆ ಸಂಕೇತಿಗಳಿಗೆ ಲಾಭ ಅಲ್ಲ ಪ್ರಾಮುಖ್ಯ. ನಮ್ಮ ಜೀವನಕ್ಕೆ ಸಾಕಾಗುವಷ್ಟು ಬಂದರೆ ಸಾಕು ಅಂತ ನಾವು ಶ್ರದ್ಧೆಯಿಂದ ಕೆಲಸ ಮಾಡ್ತೀವಿ.

- ಕೆ. ರಾಮಚಂದ್ರ ಜೋಯಿಸ್, *ಕೇರಳಾಪುರ*

ನಮ್ಮ ಬಸವಾಪಟ್ಟಣದ ತಾತ ಕೃಷೀಲಿ ಮಹಾಪಂಡಿತರು. ಸ್ವಂತವಾಗಿ ಎಲೇನ ತೆಕ್ಕೆ ಬಿಡ್ತಿದ್ರು. ನೋಡೋದಕ್ಕೆ ವ್ಯಕ್ತಿ ಬಹಳ ಸಣ್ಣ, ತೆಳುವು, ಕುಳ್ಳು, ಕಪ್ಪು ಶರೀರ. ಏನಿವತ್ತೆಲ್ಲಾ ಅಮ್ಮಯ್ಯಾಂತ ಇದ್ರೆ ನಲವತ್ತರಿಂದ ನಲವತ್ತೈದು ಕೇಜಿ ಇರಬಹುದು. ಅವರು ಇಪ್ಪತ್ತು ಹಂತದ ಏಣೀನ ಚಕ್ಕಂತ ಎತ್ತಿ ಇಡೋರು. ಅಂತಹ ಅಸಾಧಾರಣವಾದ ಶಕ್ತಿ. ಆಹಾರಾನೂ ಕ್ಲುಪ್ತ.

ನನಗೂ ಅಷ್ಟೆ. ಭೂಮಿ ಬಿಡಬೇಕು ಅಂದ್ರೆ ಅಳುವಷ್ಟು ಸಂಕಟವಾಗುತ್ತೆ. ಜಮೀನಿನ ಮೇಲೆ ನನಗೆ ತುಂಬಾ ವ್ಯಾಮೋಹ.

-ಕೆ.ಆರ್.ಸೂರ್ಯನಾರಾಯಣಪ್ಪ, *ಕೇರಳಾಪುರ*

ನನ್ನ ಹೆಂಡತಿ ಬೆಂಗಳೂರಿನವಳು. ನನ್ನ ಹೆಂಡತಿ ಇಲ್ಲಿನ ಜೀವನಕ್ಕೆ ಒಗ್ಗಿಕೊಂಡು ನನಗೆ ಸಹಕಾರ ನೀಡುತ್ತಾ ಬಂದಿದಾಳೆ. ಕೆಲವೊಮ್ಮೆ ಗದ್ದೆಹತ್ರಾನೂ ಬರ್ತಾಳೆ. ನಾನಿಲ್ಲದಾಗ ತೋಟಾನೂ ನೋಡಿಕೊಂಡಿದಾಳೆ.

- ಎಸ್.ಮುರಳೀಧರ, *ಶೀಗವಾಳು*

ವ್ಯವಸಾಯದಲ್ಲಿ ಯಾವಾಗಲೂ ಹೊಸ ವಿಚಾರಗಳನ್ನು ಅಳವಡಿಸಲೂ... ಅನ್ವೇಷಣೆ ಮಾಡಲೂ ಬಹಳ ಮಾರ್ಗಗಳಿವೆ. ಅದನ್ನು ಮಾಡಲು ಹೆದರಬಾರದು. ಪ್ರಯತ್ನ ಮಾಡಿದ್ರೆ ಒಂದಲ್ಲಾ ಒಂದು ದಿನ ಯಶಸ್ಸು ಸಿಕ್ಕೇ ಸಿಗುತ್ತೆ. ಫಲಿತಾಂಶ ಉತ್ತಮವಾದದ್ದೇ ದೊರೆಯುತ್ತೆ. ಆದ್ರೆ ಯಾವುದೂ ತಕ್ಷಣ ದೊರೆಯುವುದಿಲ್ಲ. ಒಂದು ನಿರ್ದಿಷ್ಟವಾದ ಸಮಯ ಆದ ಬಳಿಕವೇ ಸಿಗೋದು. ಆದರೆ ಅಲ್ಲಿಯವರೆಗೆ ಕಾಯುವ ತಾಳ್ಮೆ ನಮ್ಮಲ್ಲಿ ಇರಬೇಕು ಅಷ್ಟೆ.

- ಎಂ.ಎಸ್.ರವೀಂದ್ರ, *ಆಲನ್‌ದಡಕ*

ವ್ಯವಸಾಯದಲ್ಲಿ ದುಡ್ಡು ಮುಖ್ಯವಲ್ಲ. ನನ್ನ ಮಗ ಉತ್ತಮವಾದ ಕೆಲಸಾನೇ ಬಿಟ್ಟು ಬಂದಿದಾನೆ. ಮನುಷ್ಯ ಒಂದು ಸ್ಟೇಜ್ ರೀಚ್ ಆದ ಮೇಲೆ ದುಡ್ಡು ಗೌಣ. ಮನಸ್ಸಿನ ತೃಪ್ತಿಗಾಗಿ ವ್ಯವಸಾಯ ಮಾಡ್ತಿದಾನೆ.

- ಎಂ.ಎಸ್.ಚಿಂತಾಮಣಿ, *ಬೆಂಗಳೂರು*

Agriculture teaches you patience. ಇಲ್ಲಿನ ಪ್ರಕೃತಿ, ಗಿಡ, ಮರ ಎಲ್ಲ ಎಷ್ಟು ದೊಡ್ಡದಾಗಿರುತ್ತೆ. ಆದರೆ ನಾವು ಅದರ ಮುಂದೆ ಎಷ್ಟು ಚಿಕ್ಕವರಾಗಿ ಕಾಣ್ತೀವಿ. ನಮ್ಮ ಅಹಂಕಾರ ನಿಜವಾಗಿಯೂ ಆಗ ಕಡಿಮೆಯಾಗುತ್ತೆ.

I will say it is the noble profession on the earth. There is no other profession equivalent to agriculture.

- ಎಂ.ಎಸ್.ರವೀಂದ್ರ, *ಆಲನ್‌ದಡಕ*

ನನ್ನ ತಂದೆ 'ನೀವು ಸರಿಯಾಗಿ ಓದಿಕೊಂಡು ಊರು ಖಾಲಿ ಮಾಡಿ' ಅಂತಾನೇ ಹೇಳೋರು. ಆದ್ರೆ ನಮ್ಮ ತಾತ, 'ನೋಡಯ್ಯ, ಏನಿದ್ರೂ ವ್ಯವಸಾಯ ಬಿಟ್ರೆ ಇಲ್ಲ. ಭೂಮಿತಾಯೀನೇ ನಮಗೆ ಕೊಡಬೇಕು. ಅವಳ ಜತೆ ಇದ್ರೇನೇ ನಮಗೆ ಒಳ್ಳೇದಾಗುತ್ತೆ. ಹಾಗಾಗಿ ನೀವು ಭೂಮಿ ತಾಯೀನ ನಂಬಿ ವ್ಯವಸಾಯ ಮಾಡಿ, ಬೇರೆಯದನ್ನು ನಂಬಬೇಡಿ' ಅನ್ನೋರು.

ಮಾನಸಿಕ ಆರೋಗ್ಯ, ದೈಹಿಕ ಆರೋಗ್ಯ ಸದಾ ಉತ್ತಮವಾಗಿರುತ್ತೆ ವ್ಯವಸಾಯ ಮಾಡೋರಿಗೆ.

ನಾನು ಗೆಜೆಟೆಡ್ ಆಫೀಸರ್ ಆಗಿದ್ದಾಗ ಹವಾನಿಯಂತ್ರಿತ ಕೊಠಡೀಲಿ ಕೂರ್‍ತಿದ್ದೆ. ದೈಹಿಕ ಶ್ರಮ ಇತ್ತಿಲ್ಲ. ಆದರೂ ಆರೋಗ್ಯ ಇರಲಿಲ್ಲ. ಈಗ ಬಿಸಿಲು, ಛಳಿ, ಮಳೇಲಿ ಇದ್ರೂ ಸಹ, ಆರೋಗ್ಯ ಉತ್ತಮವಾಗಿದೆ. ಇದು ವ್ಯವಸಾಯದ ವಿಷಯ.

- ಬಿ.ಸಿ. ಸತ್ಯನಾರಾಯಣ, *ಮೈಸೂರು*

ಊಟಿಗೆ ಹೋಗಿ ನೆಲೆಸಿದ್ದು ಮಗನ ವಿದ್ಯಾಭ್ಯಾಸಕ್ಕಾಗಿ. ಅಲ್ಲಿಯೇ ಮೂರು ಎಕರೆ ಜಮೀನು ಖರೀದಿ ಮಾಡಿದ್ವಿ. ಟೀ ಎಸ್ಟೇಟ್ ನಿರ್ವಹಣೆ ಮಾಡಲು ಆರಂಭಿಸಿದೆ. ಕೂನೂರಿನಲ್ಲಿ Tea Training ಅಂತ classes ಇದೆ. ಆ classಗೆ ಸೇರಿದೆ. ಆಮೇಲೆ ನಾನು ನನ್ನ ಸ್ವತಃ ನಿರ್ವಹಣೆಯಿಂದ ಎರಡು ವರುಷದಲ್ಲಿ ಮೂರು ಎಕರೇಲಿ ೬೦೦ ಕೇಜಿ ಬರ್‍ತಿದ್ದ ಇಳುವರೀನ ೨೪೦೦೦ ಕೇಜಿಗೆ ಏರಿಸಿದೆ.

ಮೈಸೂರಿನ ಲಿಂಗಾಂಬುಧಿ ಕೆರೆ ಹತ್ರ ಈಗ ಎರಡು ಎಕರೆ ಜಮೀನು ಖರೀದಿಸಿದೀನಿ. ಅಲ್ಲಿ Herbal farming ಮಾಡಬೇಕು ಅನ್ನುವ ಆಸೆ ಇದೆ.

ವ್ಯವಸಾಯ ಮಾಡಿದ್ರೆ full commitment ಇಟ್ಟು ಮಾಡಬೇಕು. ಅರ್ಧಂಬರ್ಧ ಮಾಡೋದ್ರಲ್ಲಿ ನನಗೆ ನಂಬಿಕೆ ಇಲ್ಲ.

ಒಣ ಭೂಮೀಲಿ ನೀರಿನ ಸಂರಕ್ಷಣೆ ಮೂಲಕ ಗಿಡಮರ ಬೆಳೆದು ಸಾಧನೆ ಮಾಡುವ ಆಸೆ ಇದೆ.

ಎರೆಹುಳು ಗೊಬ್ಬರ ತಯಾರಿಸುವ ಆಸೆ ಇದೆ. ಆದ್ರೆ ಊಟಿಯ ಛಳಿಗೆ ಎರೆಹುಳು ಅಷ್ಟಾಗಿ reproduce ಆಗ್ತಿಲ್ಲ. Experiment ಮಾಡಬೇಕು ಅಂದುಕೊಂಡಿದೇನೆ.

- ಕ್ಯಾಪ್ಟನ್ ಕೆ.ಕೆ.ವೆಂಕಟೇಶ್, *ಮೈಸೂರು*

ನಮ್ಮನ್ನು ಬೀಳ್ಕೊಡಲು gateವರೆಗೆ ಬಂದ ವೆಂಕಟೇಶ್‌ಹೊಸಬಗೆಯ ಕೃಷಿ ಉತ್ಪನ್ನಗಳನ್ನು ಇಲ್ಲಿ ಬೆಳೆದು ಹೊರದೇಶಕ್ಕೆ ರಫ್ತು ಮಾಡುವುದರ ಬಗ್ಗೆ ಮಾತನಾಡಿದ್ರು. ಅಂಗಾಂಶ ಕೃಷಿ ತಂತ್ರಜ್ಞಾನದ ಅಭಿವೃದ್ಧಿ ಬಗ್ಗೆ, ವಿದೇಶಿ ಕೃಷಿ ತಂತ್ರಜ್ಞಾನದ ಆಮದಿನ ಬಗ್ಗೆ ಮಾತನಾಡಿದ್ರು. ಸಮುದ್ರದ ಅಲೆಗಳು ಹೇಗೆ ನಿರಂತರವೋ ಹಾಗೇ ಕ್ಯಾಪ್ಟನ್ ವೆಂಕಟೇಶ್ ಅವರ ಕೃಷಿ ಚಿಂತನೆಗಳೂ ನಿರಂತರ ಅನ್ನಿಸಿತು.

- ಎನ್.ಕೇಶವಮೂರ್ತಿ, *ಮೈಸೂರು*

ಕೆ.ಎಸ್.ಚನ್ನಕೇಶವಯ್ಯನವರು ಮೈಸೂರು ಸಮೀಪದ ಬೆಳವಾಡೀಲಿ ಹತ್ತು ಗುಂಟೆ ಜಾಗ ಖರೀದಿ ಮಾಡಿ, ಅದರಲ್ಲಿ ಆರು ಗುಂಟೆ ಪ್ರದೇಶಾನ ತೋಟ ಮಾಡಿರೋದು ಅಂತ ತಿಳಿದಾಗ ಕೃಷಿ ಸಂಕೇತಿಗಳಲ್ಲಿ ರಕ್ತಗತವಾಗಿದೆ ಎಂಬುದಕ್ಕೆ ಇದು ನಿದರ್ಶನವೆ ಅನ್ನಿಸಿತು. ಕೃಷಿ ಗಂಧಗಾಳಿ ಇರದವರು ಮೈಸೂರಿನ extension ತರಹ ಇರುವ ಜಾಗದಲ್ಲಿ site ಮಾಡಬಹುದಿತ್ತು. ಮಾರಿ ಆದಾಯ ಗಳಿಸಬಹುದಿತ್ತು. ಆದರೆ ಹಾಗೆ ಮಾಡದೆ ಅಡಿಕೆ ತೋಟ ಎಬ್ಬಿಸಿದಾರೆ ಅಂದ್ರೆ ಅದು ಮೆಚ್ಚುವ ವಿಷಯ ಅಲ್ವೆ?

-ಎನ್.ಕೇಶವಮೂರ್ತಿ, *ಮೈಸೂರು*

ನಾವು ಸಂಕೇತಿಗಳು ಮೊದಲಿನಿಂದಲೂ ಅಡಿಕೆ ಕೃಷಿಯಲ್ಲಿ ಪರಿಣತರು. ಆದರೆ ಈಗ ಅಡಿಕೆ ಜತೆಗೆ ದೀರ್ಘ ಕಾಲದ ಹೂಡಿಕೆ ದೃಷ್ಟಿಯಿಂದ ಒಂದು ಅರ್ಧ ಎಕರೇಲಿ ಅಥವಾ ಬೇಲಿಯ ಸುತ್ತಾ ತೇಗವನ್ನೂ ಬೆಳೀಬೇಕು. ಅಡಿಕೇಗೆ ನೀಡುವ ಮುತುವರ್ಜೀನ ತೇಗಕ್ಕೆ ನೀಡಿದ್ರೆ ಮುಂದೆ ಭವಿಷ್ಯದಲ್ಲಿ ಒಳ್ಳೆಯದಾಗುತ್ತೆ. ಭದ್ರವಾದ ಠೇವಣಿ ರೀತೀಲಿ ನಮಗೆ ರಕ್ಷಣೆ ನೀಡುತ್ತೆ. ವ್ಯವಸಾಯದಲ್ಲಿ ವೈವಿಧ್ಯ ತರಲು ಔಷಧಿ ಗಿಡಗಳನ್ನು ಬೆಳೆದ್ರೆ ಮತ್ತೂ ಅನುಕೂಲ.

ನಮ್ಮ ಪರಿಸರವು ದುಡಿಯಲು ಪ್ರೇರೇಪಿಸುತ್ತಿತ್ತು.

ಈಗ ನಾನೂ ಬೆಂಗಳೂರಿನಲ್ಲಿ ಸಾಕಷ್ಟು ಹೆಸರು ಮಾಡಿದೀನಿ, ವೃತ್ತಿ ಇದೆ, ಹಣವೂ ಇದೆ. ಆದರೆ ನಮ್ಮ ಜಮೀನಿಗೆ ಬಂದು ಅರ್ಧಘಂಟೆ ಕಳೆಯುವುದರಲ್ಲಿ ಸಿಗುವ ಆನಂದ ಬೇರೆಲ್ಲೂ ಸಿಗೋಲ್ಲ. ಇಲ್ಲಿ ಸಿಗುವ ನೆಮ್ಮದಿ ಬೇರೆಲ್ಲೂ ಸಿಗೋಲ್ಲ.

ಕೃಷಿ ಉಳೀಬೇಕಾದ್ರೆ ಆದಾಯಕ್ಕಿಂತ ಆಸಕ್ತಿ ಮುಖ್ಯ.

- ಡಾ.ಬಿ.ಆರ್.ರಾಮಕೃಷ್ಣ, *ಬೆಂಗಳೂರು*

ಕೃಷಿ ರಕ್ತಗತವಾಗಿ ಬಂದಿರೋದ್ರಿಂದ, ನನ್ನ ಉದ್ಯಮ ಬೆಳೆಸಿದ ಮೇಲೆ, ಈಗ ತೋಟ ಬೆಳೆಸಲೇಬೇಕು ಅನ್ನುವ ಛಲದಿಂದ ತೋಟ ಮಾಡಿದೀನಿ.

ಎರೆಗೊಬ್ಬರ ಹಾಕಿದ್ರೆ ಬೆಳೆಗೆ ಯಾವುದೇ ಖಾಯಿಲೆ ಬರೋಲ್ಲ. ಬೆಳೆ Bumper crop. ಅದು ಬಹಳ ನಿಜ. ನನ್ನ ಪ್ರಾಯೋಗಿಕ ಅನುಭವ ಸಹ ಹೌದು.

ನಮ್ಮ ತೋಟಕ್ಕೆ ಹೋದ್ರೆ ನನ್ನ ಬ್ಯಾಟರಿ charge ಆಗುತ್ತೆ. ಬೆಳಗಿನಿಂದ ನೂರೆಂಟು ತಾಪತ್ರಯ ಅನುಭವಿಸಿ,ತೋಟಕ್ಕೆ ಹೋದ್ರೆ ಪ್ರಕೃತಿ ಒಳಗೆ ನಾವು ಎಲ್ಲ ಮರೀತೀವಿ. ಗಿಡ, ಹಣ್ಣು, ಹೂವು ನೋಡ್ತಾನೇ ಆಂತರಿಕ ಶಕ್ತಿ ಹೆಚ್ಚಾಗುತ್ತೆ. ನನಗೆ maximum ಖುಷಿ ಸಿಗೋದು ತೋಟದಲ್ಲಿ.

ಸಂಕೇತಿ ಕೃಷಿ ಉಳಿಯುತ್ತೆ. ಹಿಂದಿನವರು ಅಲ್ಪತೃಪ್ತರಾಗಿದ್ರು.

ತೋಟದ ಕಲ್ಪನೆ ಕೊಟ್ಟಿದ್ದೇ ಸಂಕೇತಿಗಳು. ಕೇವಲ ಹತ್ತುಗುಂಟೆ ಪ್ರದೇಶದಲ್ಲಿಯೇ ಒಂದು ಕುಟುಂಬ ಬದುಕಬಹುದು ಎಂಬ ಕಲ್ಪನೆ ನೀಡಿದ್ದು ಸಹ ಸಂಕೇತಿಗಳೇ.

- ಬಿ.ಎನ್.ವಿ. ಸುಬ್ರಹ್ಮಣ್ಯ, *ಬೆಂಗಳೂರು*

ನಮ್ಮ ಅಜ್ಜ ಡಾ.ಬಿ.ಕೆ.ನಾರಾಯಣರಾಯರಿಗೆ ತೋಟಗಾರಿಕೆ ಅಂದ್ರೆ ಬಹಳ ಇಷ್ಟ. ಅವರು ಮೈಸೂರು ಹಾರ್ಟಿಕಲ್ಚರಲ್ ಸೊಸೈಟಿಯ founder member. ನಾವು ಚಿಕ್ಕವರಿದ್ದಾಗ ಲಾಲ್‌ಬಾಗ್ ಹಾರ್ಟಿಕಲ್ಚರಲ್ ಸೊಸೈಟಿಗೆ ಹೋಗಿ, ಅಲ್ಲಿ ಎರಡು ತಿಂಗಳು ತರಬೇತಿ

ಸಹ ಪಡೆದಿದ್ರು. ನನ್ನ ತಾಯಿ ಒಳ್ಳೆಯ Garden ಮಾಡಿದ್ರು. ತೋಟಗಾರಿಕಾ ಪ್ರದರ್ಶನಗಳಲ್ಲಿ ಬಹುಮಾನಗಳನ್ನು ಬಹಳವಾಗಿ ಗೆದ್ದಿದ್ರು.

ನಾನು ಇಂಗ್ಲೆಂಡ್‌ಗೆ ಹೋಗಿದ್ದಾಗ, ಅಲ್ಲಿನ ತೋಟಗಳು, ಅಲ್ಲಿಯ ಬೇಸಾಯ ವಿಧಾನ ಎಲ್ಲ ನೋಡಿದ್ದೆ. ನಾವು ಇಲ್ಲಿ ವಾಪಸ್ಸು ಬಂದಾಗ site ಖರೀದಿಸಿ ಮನೆ ಕಟ್ಟುವುದಕ್ಕಿಂತ ತೋಟದ ಮನೇಲಿರೋಣ ಅಂತ ನನಗೂ ನನ್ನ ಹೆಂಡತಿಗೂ ಆಸೆ ಇದ್ದದ್ದು ಅದಕ್ಕಾಗಿ ನಾವು ಜಮೀನು ಖರೀದಿಸಿದ್ವಿ.

ಪ್ರತಿಯೊಂದನ್ನೂ scientific ಆಗಿ study ಮಾಡಿ, ಪುಸ್ತಕ ಓದಿ, forest officers ಜತೆ discuss ಮಾಡಿ, ಯಾವ ತರಹದ ಮರಗಿಡ ಹಾಕಬೇಕು, ತೋಟಕ್ಕೆ ಬರುವ ಗಾಳಿ ಹೊಡೆತವನ್ನು ತಡೆಯಲು ಗಾಳಿ ಬೇಲಿ ನಿರ್ಮಿಸೋದು ಹ್ಯಾಗೆ ಅಂತೆಲ್ಲಾ ತಿಳಿದು, Graphsheet ಇಟ್ಟುಕೊಂಡು, ಯಾವ್ಯಾವ ಗಿಡ ಎಲ್ಲಿ ಬರಬೇಕು ಅನ್ನೋದನ್ನು mark ಮಾಡಿ, ತೋಟ ಅಭಿವೃದ್ಧಿ ಮಾಡಿದೀವಿ. In fact ನಾನೇ ನಮ್ಮ ತೋಟದ ಮರಗಿಡಗಳಿಗೆ ಗೊಬ್ಬರ ನೀರು ಹಾಕಿದೀನಿ.

ಬೇರೆ ದೇಶಗಳ economy shaky ಆಗಿದ್ರೂ, ಭಾರತ ದೇಶದ economy ಕೃಷಿ ಆಧಾರಿತವಾಗಿದ್ರಿಂದ ಸುಸ್ಥಿರವಾಗಿದೆ.

ಗಿಡ ಹಾಕಿ ಅದನ್ನು ಬೆಳೆಯೋದು, ನೋಡೋದು, ಅದು ವೃದ್ಧಿಯಾಗೋದ್ರಿಂದ ಬರುವ ಸಂತೋಷ ಬೇರ‍್ಯಾವುದರಲ್ಲೂ ಸಿಗೋಲ್ಲ. ಮನಸ್ಸಿಗೆ ಬೇಸರವಾದಾಗ ತೋಟಕ್ಕೆ ಹೋಗಿ ಎರಡು ದಿನ ಇದ್ದು ಬಂದ್ರೆ, ಮನಸ್ಸು ತಿಳಿಯಾಗಿ Battery recharge ಆಗುತ್ತೆ.

- ಡಾ.ಕೆ.ರಾಮಚಂದ್ರಮೂರ್ತಿ, *ಬೆಂಗಳೂರು*

ಹಿಂದೆ ಹಳ್ಳಿಗಳಲ್ಲಿ Basic amenities ಇರ‍್ತಾ ಇರಲಿಲ್ಲ. ಮನೋರಂಜನೆಗೂ ಸಮಸ್ಯೆ ಇರ‍್ತಾ ಇತ್ತು. ಈಗ ಹಳ್ಳಿಗಳು ಚೆನ್ನಾಗಿವೆ. ನನ್ನ friend ಮಕ್ಕಳು, ನರಸಿಂಹರಾಜಪುರ, ಸುತ್ತಮುತ್ತ ದೊಡ್ಡ ದೊಡ್ಡ ತೋಟ ಮಾಡಿಕೊಂಡು ಸಂತೃಪ್ತರಾಗಿದಾರೆ.

ವ್ಯವಸಾಯ ನನಗೆ ಮನಃಶಾಂತಿ ನೀಡಿದೆ.

- ಭಾಗ್ಯಲಕ್ಷ್ಮಿ, *ಬೆಂಗಳೂರು*

ತೇಗನಹಳ್ಳಿಯ ನೀಲಕಂಠಯ್ಯ ಸುಬ್ಬರಾವ್ ಸಂಕೇತಿಗಳಲ್ಲಿ ಬಹಳ ಹೆಸರು ಮಾಡಿರುವ ವ್ಯಕ್ತಿ. ಮಹಾರಾಷ್ಟ್ರ ಹೈಬ್ರಿಡ್ ಸೀಡ್ಸ್ ಕಂಪನಿಯಲ್ಲಿ ರಾಷ್ಟ್ರೀಯ ಮಾರುಕಟ್ಟೆ ಅಧಿಕಾರಿಯಾಗಿರುವ ಇವರು ಖಾಸಗಿ ಬಿತ್ತನೆ ಬೀಜದ ಮಾರಾಟ ಕ್ಷೇತ್ರದಲ್ಲಿ ಬಹುದೊಡ್ಡ ಹೆಸರು. ಖಾಸಗಿ ಹೈಬ್ರಿಡ್ ಬಿತ್ತನೆ ಬೀಜಕ್ಕೆ, MAHYCO ಬಿತ್ತನೆ ಬೀಜದ ಸಂಸ್ಥೆಗೆ ಉನ್ನತ ಹೆಸರು ತಂದುಕೊಡುವುದರಲ್ಲಿ ಟಿ.ಎನ್.ಸುಬ್ಬರಾವ್ ಅವರ ಪಾತ್ರವನ್ನು ಬಣ್ಣಿಸಲು ಅಸಾಧ್ಯ. ಸುಬ್ಬರಾವ್ ಅವರ ಚಿಂತನೆಗಳಿಲ್ಲದೆ ಈ ಪುಸ್ತಕ ಅಪೂರ್ಣವಾಗಬಹುದೆಂಬುದು ನನ್ನ ದೃಢ ವಿಚಾರವಾಗಿತ್ತು. ಅವರು ಸಂಕೇತಿ ಕೃಷಿಯ ಮಿನುಗು ನಕ್ಷತ್ರ.

- ಎನ್.ಕೇಶವಮೂರ್ತಿ, *ಮೈಸೂರು*

ಮಳೆ ಪ್ರಮಾಣ ಸರಿಯಾಗಿ ಇದ್ದಿದ್ದರೆ, ಇವತ್ತಿನ ವೈಜ್ಞಾನಿಕ ಕೃಷಿ ಪದ್ಧತಿಗಳನ್ನು ಅಂದೇ ಅಳವಡಿಸಿದ್ರೆ, ಕೃಷಿ ಹಾಗೂ ತೋಟಗಾರಿಕಾ ಇಲಾಖೆಗಳು ಮಾಹಿತಿ ನೀಡಿದ್ರೆ, ನೀರು ಯಾವಾಗಲೂ ದೊರೆಯುವ ಹಾಗಿದ್ರೆ (ಸಂಕೇತಿ) ರೈತರು ಇನ್ನೂ ಮುಂದುವರಿಯುತ್ತಿದ್ದರೇನೋ. ನಾವು ಹೆಬ್ಬಾಳದಲ್ಲಿ Room ಮಾಡಿಕೊಂಡು ಓದ್ತಾ ಇದ್ವಿ. ಸಾಯಂಕಾಲದ ವೇಳೇಲಿ ನಾವು ಏನು ಮಾಡ್ತಿದ್ವಿ ಅಂದ್ರೆ, ಅಲ್ಲಿ ವ್ಯವಸಾಯ ಮಾಡ್ತಿದ್ದ ಬೇಕಾದಷ್ಟು ಜನ ರೈತರು ಇದ್ರು. ಅವರ ಹೊಲಕ್ಕೆ ಹೋಗೋದು, ಅವರು ಬೆಳೆದಿರುವ ಭತ್ತ, ರಾಗಿ, ತರಕಾರಿ ಬೆಳೆಗಳ ರೋಗ, ಕೀಟ ನಿಯಂತ್ರಣದ ಬಗ್ಗೆ, ಹಾಗೇ ಗೊಬ್ಬರ ಬಳಕೆಯ ಬಗ್ಗೆ, ಆಗಿನ್ನೂ ಕಾಲೇಜಿನಲ್ಲಿ ತಿಳಿದ ವಿಚಾರಗಳನ್ನು ರೈತರಿಗೆ ಹೇಳ್ತಿದ್ದು. ಆ ರೈತರೂ ನಮ್ಮನ್ನು ಎಷ್ಟು ಹಚ್ಚಿಕೊಂಡಿದ್ರು ಅಂದ್ರೆ ನಾವು ಯಾವತ್ತಾದರೂ ಸಾಯಂಕಾಲ ಹೋಗದೇ ಇದ್ರೆ ಅವರೇ ನಮ್ಮ ರೂಮಿನ ಹತ್ತಿರ ಹುಡುಕಿಕೊಂಡು ಬರ‍್ತಿದ್ರು. ಅವತ್ತೇ ನನಗೆ ಅನ್ನಿಸಿತ್ತು, ನಮ್ಮ ದೇಶದ ರೈತನಿಗೆ ಎಷ್ಟು ವಿಚಾರ ಬೇಕಿದೆ, ಬಹುಶಃ ನಾವು ಅವನಿಗೆ ಇನ್ನೂ ಹೆಚ್ಚಿನ ಅನುಕೂಲ ಮಾಡಿಕೊಟ್ರೆ, ರೈತನ ಪರಿಸ್ಥಿತಿ ಉತ್ತಮವಾಗಬಹುದು ಅಂತ ಮನಸ್ಸಿನಲ್ಲಿ ಅನ್ನಿಸ್ತಾ ಇತ್ತು.

ಹೈಬ್ರಿಡ್ ಕೋಸು ಬೀಜವನ್ನು ಹಾಸನ ಜಿಲ್ಲೆಯಲ್ಲಿ ವಿತರಿಸಿದಾಗಿನ ಒಂದು ಪ್ರಸಂಗ. ಜಾವಗಲ್ ಹತ್ರ ಒಬ್ಬ ೮೦ ವರುಷದ ರೈತನಿಗೆ ಒಂದು ಎಕರೆಗೆ ಕೊಟ್ವಿ. ಅವನಿಗೆ ಉತ್ತಮ ಬೆಳೆ ಬಂದು ಒಂದು ಲಕ್ಷ ರೂಪಾಯಿ ಆದಾಯ ಸಿಗ್ತು. ಆಗ ನನಗೆ ಅವರು ಹೇಳಿ ಕಳಿಸಿದ್ರು. ನಾನು ಅಲ್ಲಿಗೆ ಹೋದಾಗ ಆ ೮೦ ವರುಷದ ವೃದ್ಧ ಕೃಷಿಕ ಒಂದು ಪಂಚೇಲಿ ಒಂದು ಲಕ್ಷ ರೂಪಾಯಿ ಗಂಟನ್ನು ತಂದು ನನ್ನ ಮುಂದೆ ಹಿಡಿದು, "ಸ್ವಾಮಿ, ಇದು ನಿಮ್ಮ ದುಡ್ಡು" ಎಂದ. ಬಹುಶಃ ನಾನು ಒಬ್ಬ ರೈತನಿಗೆ ಒಂದು ಲಕ್ಷ ರೂಪಾಯಿ ನೋಡುವ ಅವಕಾಶ ಮಾಡಿಕೊಟ್ಟೆನಲ್ಲ ಅಂತ ನನಗೆ ಬಹಳ ಖುಷಿಯಾಯ್ತು. "ವ್ಯವಸಾಯದಲ್ಲಿ ಒಂದು ಲಕ್ಷ ರೂಪಾಯೀನ ಇಂಥ ಹಳ್ಳೀಲಿ ನಾನು ನೋಡಿದ್ದು ಇದೇ ಮೊದಲು. ದೇವರು ನಿಮ್ಮನ್ನು ಚೆನ್ನಾಗಿ ಇಟ್ಟಿರಲಿ. ನನ್ನಂಥ ನೂರಾರು ಜನ ರೈತರಿಗೆ ಇದೇ ರೀತಿ ನೀವು ಸಹಾಯ ಮಾಡಿ" ಅಂತ ಆ ರೈತ ಅಂದಿದ್ದು ಇವತ್ತಿಗೂ ನನಗೆ ನೆನಪಿದೆ. ನಮ್ಮ ಜೀವನದಲ್ಲಿ ನಿಜವಾದ ಮಾರ್ಪಾಡು ಯಾವಾಗ ಆಗುತ್ತೆ ಅಂದ್ರೆ ನಮ್ಮಿಂದ ಇತರರಿಗೆ ಯಾವಾಗಲಾದ್ರೂ ಅನುಕೂಲವಾದಾಗ. ಆಗ ನನಗೆ ಇನ್ನೂ ಛಲ ಬಂತು. ರೈತರಿಗೆ ಇನ್ನೂ ಹೆಚ್ಚು ಹೆಚ್ಚಿನ ತಂತ್ರಜ್ಞಾನ ಮುಟ್ಟಿಸಬೇಕು ಅಂತ ಸಂಕಲ್ಪ ಮಾಡಿದೆ.

ನನಗೆ ತಿಳಿದಿರುವ ಹಾಗೆ ಸಂಕೇತಿಗಳು ತೋಟಗಾರಿಕೆ ಬೆಳೆಗಳಲ್ಲಿ ಪರಿಣತರು. ಹಿಂದೆಲ್ಲಾ ಹಿಡುವಳಿ ಕಡಿಮೆ ಇದ್ದಿದ್ರಿಂದ, ಇರುವ ಅಲ್ಪ ಪ್ರದೇಶದಲ್ಲಿ, ಅಧಿಕ ಉತ್ಪತ್ತಿ ಪಡೆಯುವ ಕೃಷಿಯನ್ನು ಇವರು ಅನುಸರಿಸ್ತಾ ಇದ್ರು. ನನ್ನ ದೃಷ್ಟಿಯಲ್ಲಿ ಸಂಕೇತಿಗಳು ಶ್ರಮಜೀವಿಗಳು. ಅವರಿಗೆ ಒಂದು ತರದ ಛಲ. ಒಮ್ಮೆ ಮನಸ್ಸಿಗೆ ಇದು ಉತ್ತಮವಾದಂತಹ ಕೆಲಸ, ಇದರಿಂದ ನಾಲ್ಕು ಜನಕ್ಕೆ ಹಾಗೂ ತನ್ನ ಸಂಸಾರಕ್ಕೆ ಅನುಕೂಲ ಆಗುತ್ತೆ ಅಂತ ತಿಳಿದ್ರೆ ಅದನ್ನು ಮುಂದುವರಿಸಿಕೊಂಡು ಹೋಗ್ತಾರೆ. ಈಗ ಈ ತರಹ ನೂರಾರು ಯುವಕರು ಜಮೀನು ಖರೀದಿಸ್ತಾ ಇದಾರೆ. ಇವತ್ತಲ್ಲಾ ನಾಳೆ ಕೃಷಿಯೇ ನಮಗೆ ಆಧಾರ. ಅದು ನಶಿಸಬಾರದು, ಮುಂದುವರೆಸಬೇಕು ಎನ್ನುವ ಮನೋಭಾವ ಯುವಕರಲ್ಲಿ ಬೆಳೀತಿದೆ. ನಮ್ಮ ಕೃಷಿ ಪರಂಪರೆ ಮರೆತುಹೋಗಬಾರದು ಎಂಬ ಪ್ರಜ್ಞೆ ಅವರಲ್ಲಿದೆ. ಅದನ್ನು ಕಂಡಾಗ ಅನ್ನಿಸ್ತು, ಕೃಷಿ ಸಂಕೇತಿಗಳ ರಕ್ತದಲ್ಲಿ ರಕ್ತಗತವಾಗಿದೆ ಅಂತ. ಮುಂದಿನ ದಿನಗಳಲ್ಲಿ ನಮ್ಮ ಕೃಷಿ ಹೆಚ್ಚಿನದಾಗಿ ಅಭಿವೃದ್ಧಿಗೆ ಬರುತ್ತೆ ಅನ್ನುವುದು ನನ್ನ ಖಚಿತವಾದ ನಿಲುವು.

- ಟಿ.ಎನ್.ಸುಬ್ಬರಾವ್, *ಬೆಂಗಳೂರು*

ಬದುಕಿನ ಮಟ್ಟವನ್ನು 'ಹಣ' ಆಳಲು ಆರಂಭಿಸಿದಾಗ ಹಳ್ಳಿಯ ಬದುಕು ಛಿದ್ರವಾಗಿರಬಹುದು ಎಂದು ನನ್ನ ಅನಿಸಿಕೆ. ಯಾಕೆಂದರೆ ಹಿಂದಿನ ದಿನಗಳಲ್ಲಿ ಕೃಷಿಯ ಮೂಲ ಉದ್ದೇಶ ಹಣ ಸಂಪಾದನೆ ಆಗಿರಲಿಲ್ಲ. ಭೂಮಿಯಿಂದ ಬದುಕು ಕಟ್ಟುವ ಕಲೆ ಸಂಕೇತಿಗಳಿಗೆ ಕರಗತವಾಗಿತ್ತು. ಕೇವಲ ಹತ್ತು ಗುಂಟೆ ಜಮೀನಿನಲ್ಲಿ ಬದುಕುವ ವಿಶಿಷ್ಟ ಕೃಷಿ ಸಂಕೇತಿಗಳಲ್ಲಿತ್ತು. ಹಣ ಸಂಪಾದನೆ ಜೀವನದ ಒಂದು ಭಾಗವಾಗಿತ್ತೇ ಹೊರತು ಹಣವೇ ಜೀವನವಾಗಿರಲಿಲ್ಲ. ಬಹುಮಹಡಿ ಪದ್ಧತಿಯ ಬಾಗಾಯ್ತು... ಕೃಷಿಯಲ್ಲಿ ಸ್ವಲ್ಪ ಹಣ ಹಾಗೂ ಸಂಪೂರ್ಣ ನೆಮ್ಮದಿ ಗಳಿಸಲು ಹಿರಿಯ ಸಂಕೇತಿಗಳು ಕಂಡುಕೊಂಡ ಒಂದು ಮಾರ್ಗ ಅಷ್ಟೆ. ಭೂಮಿ, ಬದುಕನ್ನು ಪ್ರೀತಿಸುತ್ತಿದ್ದ ಅವರಿಗೆ ಹಳ್ಳಿ ಆಸರೆಯಾಗಿತ್ತು. ಗ್ರಾಮೀಣ ಬದುಕು ಸುಸ್ಥಿರವಾಗಿತ್ತು. ಬದುಕಲು ಹಣಬೇಕು ಎನ್ನುವ ಗ್ರಾಮೀಣ ಚಿಂತನೆ ಕುಸಿದು, ಹಣ ಮಾಡಲು ಬದುಕಬೇಕು ಎಂಬ ಪಟ್ಟಣದ ವ್ಯಾಪಾರೀ ಚಿಂತನೆ ಬಂದಾಗ ಬದುಕಿನ ಮೌಲ್ಯಗಳು ಬದಲಾದುವು.

ಪಟ್ಟಣಗಳ ಕೃಷಿ ಕೇವಲ ಹವ್ಯಾಸಿ ಕೃಷಿ ಅಷ್ಟೆ. ಅವರಿಗೆ ಜಮೀನಿನಿಂದ ಬದುಕಬೇಕಾದ ಅನಿವಾರ್ಯತೆ ಇಲ್ಲ. ಹಣ ನೀಡುವ ಉದ್ಯೋಗದ ಉದ್ವೇಗಗಳನ್ನು ಕಡಿಮೆ ಮಾಡಿಕೊಳ್ಳಲು ಒಂದು ತಾಣ ಬೇಕು ಅಷ್ಟೆ. ಅವರಿಗೆ ಅದನ್ನು ಈಗ ತೋಟ ನೀಡಿದೆ ಅಷ್ಟೆ. ಪಟ್ಟಣಿಗರ ಕೃಷಿ ಒಂದು ಕವಲುದಾರಿ ಅಷ್ಟೆ. ಅದೆಂದೂ ಮುಖ್ಯ ದಾರಿಯಾಗಲು ಸಾಧ್ಯವಿಲ್ಲ. ಇದು ಸಂಕೇತಿ ಕೃಷಿಯ ಮುಂದಿನ ಪರಿಭಾಷೆ ಬರೆಯುವಷ್ಟು ಶಕ್ತವಾಗಿಲ್ಲ. ವೈಯಕ್ತಿಕ ಚಿಂತನೆಗಳ ನೆಲೆಗಟ್ಟಿನಲ್ಲಿ ಮಾತ್ರ ನಿಂತಿರುವ ಈ ಕೃಷಿ ತುಂಬಾ ಕ್ಷಣಿಕ ಎಂದು ಖಚಿತವಾಗಿ ಹೇಳಬಹುದು. ವಿಸ್ತಾರವಾದ ತಳಹದಿಯಿರುವ ಗ್ರಾಮೀಣ ಕೃಷಿ ಬದುಕಿನ ಮುಂದೆ . . farm house ಸೂರ್ಯನ ಮುಂದಿನ ಹಣತೆಯಂತೆ.

ಕಾಲಮಾನಕ್ಕೆ ಕೃಷಿ ವಿಧಾನಗಳು ಬದಲಾದರೂ, ಕಡಿಮೆ ಜಮೀನಿನಲ್ಲೂ, ಕೃಷಿ ಮಾಡಿ ಬದುಕು ರೂಪಿಸುವ ವಿಶಿಷ್ಟವಾದ ಬಾಗಾಯ್ತಿನ ಕೃಷಿ ಪದ್ಧತಿ ಕೃಷಿ ಕ್ಷೇತ್ರಕ್ಕೆ ಸಂಕೇತಿಗಳ ಕೊಡುಗೆ ಎನ್ನಬಹುದು. ಕೃಷಿ ಸಂಕೇತಿಗಳ ಪಾಲಿಗೆ ಎಂದೂ ಹಣ ನೀಡುವ ವೃತ್ತಿಯಾಗಿರಲಿಲ್ಲ. ಅದು ಅವರ ಪಾಲಿಗೆ ಸಂಸ್ಕೃತಿಯಾಗಿತ್ತು. ಜೀವನದ ರೀತಿಯಾಗಿತ್ತು. ತಮಗೆ ಬೇಕಾದ್ದನ್ನೆಲ್ಲಾ ಒಂದು ತುಂಡು ಭೂಮಿಯಲ್ಲೇ ಬೆಳೆಯುವ ಚಿಂತನೆಯಿತ್ತು. ಬಾಗಾಯ್ತು ಅವರ ಪಾಲಿಗೆ ಒಂದು ಪಾಠಶಾಲೆ, ಕೃಷಿಗೆ ಈ ಭಾಷ್ಯ ನೀಡಿದ ಸಂಕೇತಿಗಳು ನಿಜಕ್ಕೂ ಅಭಿನಂದನಾರ್ಹರು.

ಹೊಸ ಕೃಷಿ ಚಿಂತನೆಗಳು ಹೊಳೆಯಂತೆ ಹರಿದು, ಹಳೆಯ ಬದುಕಿನ ಮೌಲ್ಯಗಳನ್ನು ಬುಡಮೇಲು ಮಾಡಿದರೂ, ಅಂದು, ಇಂದು, ಎಂದೆಂದಿಗೂ ಬದಲಾಗದ ಗಟ್ಟಿಯಾದ ಕೃಷಿ ಪರಂಪರೆಯನ್ನು ಹುಟ್ಟುಹಾಕಿದ್ದು ಸಂಕೇತಿಗಳ ಬಾಗಾಯ್ತಿನ ಕೃಷಿ ರೀತಿ, ನೀತಿಗಳು. ಇಂದು ಪ್ರಸ್ತುತವಾಗಿರುವ ಸುಸ್ಥಿರ ಕೃಷಿ ಬದುಕಿಗೆ, ಬಹಳ ಹಿಂದೆಯೇ ಅಡಿಪಾಯ ಹಾಕಿದ್ದು ಸಂಕೇತಿಗಳು. ಯಾವುದೇ ರೀತಿಯ ಆಧುನಿಕ ವಿಚಾರಗಳನ್ನು ಸಹ ಕೇಳದೆ, ನೋಡದೆ, ಕೇವಲ ತಮ್ಮ ಸಂಸ್ಕಾರದಿಂದ, ಸಂಸ್ಕೃತಿಯಿಂದ ತಮ್ಮ ಬಾಗಾಯ್ತಿನ ಮಣ್ಣನ್ನು ಸತ್ವಗೊಳಿಸಿ... ತಮ್ಮ ಬಾಳನ್ನು ಬಂಗಾರ ಮಾಡಿಕೊಂಡ ಹಿರಿಯ ಸಂಕೇತಿಗಳಿಗೆ ಗೌರವ ಸಲ್ಲಬೇಕು ತಾನೆ? ಸಾವಯವ ಕೃಷಿ ಪದ್ಧತಿ ಅನುಸರಿಸಿ, ಮಿಶ್ರ ಬೆಳೆ ಬೇಸಾಯದಿಂದ ಮಣ್ಣನ್ನು ಫಲವತ್ತುಗೊಳಿಸಿ, ವಿವಿಧ ಬೆಳೆಗಳನ್ನು ಒಂದೇ ಜಮೀನಿನಲ್ಲಿ ಉನ್ನತ ವಿಚಾರದಲ್ಲಿ ಬೆಳೆದು, ಸತ್ವಯುತ ಆಹಾರ ಸೇವಿಸಿ... ತಮ್ಮ ಆರೋಗ್ಯವನ್ನೂ ಸುಸ್ಥಿತಿಯಲ್ಲಿಟ್ಟುಕೊಂಡು ಬಲಭೀಮರಾಗಿ ಬಾಳಿದ ಹಿರಿಯರ ಬದುಕು ಅವಿಸ್ಮರಣೀಯವಲ್ಲವೆ? ಇಷ್ಟೆಲ್ಲಾ ವೈಶಿಷ್ಟ್ಯಗಳನ್ನು ಒಳಗೊಂಡ ಈ ಕೃಷಿ ಮುಂದಿನ ಪೀಳಿಗೆಗೂ ಉಳಿಯಲೇಬೇಕು ತಾನೆ?

ಒಮ್ಮೆ ಯೋಚಿಸಿದರೆ, ಭೂಮಿಯನ್ನೂ, ಪ್ರಕೃತಿಯನ್ನೂ, ಪರಿಸರವನ್ನೂ ಇದ್ದಹಾಗೆ ಬಿಟ್ಟು ತನ್ನ ಬದುಕಿಗೆ ಬೇಕಾದ್ದನ್ನು ಮಾತ್ರ ಪಡೆದು, ನಿಃಸ್ವಾರ್ಥವಾಗಿ ಜೀವಿಸುವ ಕಲೆ ಎಂದರೆ ಕೃಷಿ ಎನ್ನುವಂತಾಗಬೇಕು. ಹಿರಿಯ ಸಂಕೇತಿಗಳು ರೂಪಿಸಿದ ಕೃಷಿ ಪದ್ಧತಿ ಸಹಾ ಇಂತಹುದೇ ಉದಾತ್ತವಾದ ನೆಲೆಗಟ್ಟನ್ನು ಹೊಂದಿತ್ತು. ಮೊದಲು ಕಾಡಿನ ಪರಿಸರದಲ್ಲಿ ಕಾಡುಗಿಡ ಕಡಿದು ಕೃಷಿ ಮಾಡಿದ ಸಂಕೇತಿಗಳು, ಮತ್ತೆ ಕೃಷಿಯಲ್ಲಿ ಕಾಡು ಬೆಳೆದದ್ದು ಇದೇ ಅರ್ಥದಲ್ಲಿ. ಮತ್ತೆ ಬಾಗಾಯ್ತಿನ ಮೂಲಕ ಸಕಲ ಜೀವ ಜಂತುಗಳಿಗೆ, ಜೀವವೈವಿಧ್ಯಕ್ಕೆ ಆಶ್ರಯ ನೀಡಿದ್ದು ಸಹಾ ಇದೇ ಚಿಂತನೆಗಳಿಂದ. ನಿಸರ್ಗಕ್ಕೆ ಹತ್ತಿರವಾದ ರೀತಿಯಲ್ಲಿ ಬದುಕಿದ್ದೂ ಇದೇ ಕಾರಣಕ್ಕೆ. ಪ್ರಕೃತಿಯೇ ಶ್ರೇಷ್ಠ, ಮಾನವ ಕನಿಷ್ಠ ಎಂಬುವ ವಿಚಾರವನ್ನು ಕ್ಷಣಕ್ಷಣಕ್ಕೂ ಸಾರುವಂತೆ ಅಡಿಕೆ ಗಿಡಗಳನ್ನು ಮುಗಿಲೆತ್ತರಕ್ಕೆ ಬೆಳೆಸಿದ್ದು ಇದೇ ಕಾರಣಕ್ಕಿರಬಹುದೇನೋ.

ಗೊತ್ತಿರದ ಸ್ವರ್ಗಕ್ಕಿಂತ... ಗೊತ್ತಿರುವ ನರಕವನ್ನೇ ಭವಿಷ್ಯಕ್ಕೆ ಆಯ್ಕೆ ಮಾಡುವುದು ಒಳಿತು ಎಂಬ ಗಾದೆ ಮಾತಿದೆ. ಕೃಷಿಯ ಮಟ್ಟಿಗೂ ಇದು ಅನ್ವಯಿಸುತ್ತದೆ. ಇಂದಿನ ಯುವ ಪೀಳಿಗೆ ಗ್ರಾಮದ ಬದುಕನ್ನೂ ಕೃಷಿಯನ್ನೂ ಬಿಟ್ಟು ದೂರದೂರಿನಲ್ಲಿ ಏನನ್ನೋ ಮಾಡಲು ಹೋಗಿ ಮತ್ತೇನನ್ನೋ ಮಾಡಿ ಮುಂದೆ ಮರಳಿ ಮಣ್ಣಿಗೆ ಬರುವ ನಿರ್ಧಾರ ಮಾಡಿದ್ರೆ ಬದುಕಲು ನೆಲೆಯೆಲ್ಲಿ, ಕೃಷಿ ಮಾಡಲು ಮಣ್ಣೆಲ್ಲಿ?

- ಎನ್.ಕೇಶವಮೂರ್ತಿ, *ಮೈಸೂರು*

೫೩) ಸಂಕೇತಿ: ಬೇಸಾಯದ ಬದುಕು

ಸಂ: ವಿಜಯ್ ಅಂಗಡಿ, ಡಾ|| ಎಂ.ಎಸ್.ವಿಜಯಾ ಹರನ್, ೨೦೧೦

ನಮ್ಮದು ಇನ್ನೇನು ಕೆಲ್ಸ ಸ್ವಾಮಿ? ಮನೆ ಬಿಟ್ರೆ ತೋಟ, ತೋಟ ಬಿಟ್ರೆ ಮನೆ. ಆದ್ರೆ ನೋಡಿ ಇತ್ತೀಚೆಗೆ ಹುಣಿಸೆಮರದಿಂದ ಬಿದ್ದು ಪೆಟ್ಟಾಗಿ ಬೆಂಗಳೂರಿನ ಅಪೋಲೋ ಆಸ್ಪತ್ರೆ ಸೇರಿ ಗುಣವಾಗಿ ಬಂದೆ. ನಾನಿಲ್ಲದೆ ಹೋದ್ರೆ (ತೋಟದಲ್ಲಿ) ಏನೇನೋ ವ್ಯತ್ಯಾಸ ಆಗುತ್ತೆ.

- ಬಿ.ಕೆ. ರಾಮಚಂದ್ರ, *ಬಸವಾಪಟ್ಟಣ* **ಇ/ಮ ಹಾನಗಲ್ ಕೃಷ್ಣಮೂರ್ತಿ**

ನಾನು ಮತ್ತು ನನ್ನ ತಮ್ಮ ಒಂದೇ ದಿನದಲ್ಲಿ ಎರಡು ಎಕರೆ ವೀಳ್ಯೆ ತೋಟಕ್ಕೆ ಏತದಿಂದ ನೀರು ಕೊಡುತ್ತಿದ್ದೆವು. ಆಳುಗಳ ಮೇಲೆ ಅವಲಂಬನೆ ಆಗ್ತಿರಲಿಲ್ಲ.

- ಬಿ.ಕೆ.ರಾಮಚಂದ್ರ, *ಬಸವಾಪಟ್ಟಣ* **ಇ/ಮ ಅಡಿಕೆತುಡಿಕೆ ಕೃಷ್ಣಪ್ಪ**

ಹಿಂದೆ ಜನ ಜ್ಞಾನದಾಹಿಗಳಾಗಿದ್ದರು. ಈಗ ಹಣ ದಾಹ ಹೆಚ್ಚಾಗಿದೆ. ಇದರಿಂದಲೇ ನಾವು ನೆಮ್ಮದಿಯಾಗಿಲ್ಲ.
ಹೆಣ್ಣು ಮಕ್ಕಳಿಗೆ ಕಿರುವಯಸ್ಸಿನಲ್ಲಿ ಮದುವೆ ಮಾಡಿದ್ರೆ ಹೊಂದಾಣಿಕೆ ಚೆನ್ನಾಗಿ ಬರುತ್ತೆ.

- ಸರೋಜಮ್ಮ (ಭಾಗ್ಯಲಕ್ಷ್ಮಿ), *ಬಸವಾಪಟ್ಟಣ*

ನಾವು ಐವತ್ತು ವರ್ಷಗಳಿಂದ ಕೊಂಡ್ವಾಲು ಕುಡಿದೇ ಇಲ್ಲ. ಸಿಂಧಿ ಹಸೂನ ಸಾಕೇ ಇಲ್ಲ. ನಾಟಿ ಹಸುಗಳೇ ನಮಗೆ ಚೆನ್ನ, ಅವುಗಳ ಹಾಲೇ ನಮ್ಗೆ ಹಿತ. ಯಾವಾಗ್ಲೂ ನಮ್ಮಲ್ಲಿ ಕರಾವು ಇರುತ್ತೆ.

- ಸೀತಮ್ಮ, *ರಾಮನಾಥಪುರ*

ಸೀತಮ್ಮನವರು ಈ ಇಳಿವಯಸ್ಸಿನಲ್ಲೂ ಲವಲವಿಕೆಯಿಂದ ಜಮೀನು, ದನಕರು, ನಾಯಿ, ಬೆಕ್ಕುಗಳ ಬಗ್ಗೆ ಮಮತೆ ಗೌರವ ಇಟ್ಟುಕೊಂಡಿದ್ದಾರೆ. ಬೆಳಗ್ಗೆ ಎಂಟಕ್ಕೆ ಹೋಗಿ ಹತ್ತೂವರೆಗೆ ಬಂದವರು ತಾವೇ ಅಡುಗೆ ಮಾಡಿಕೊಂಡು, ಮನೆ ಕೆಲಸಗಳನ್ನು ಮುಗಿಸಿಕೊಂಡು ಸಂಜೆ ನಾಲ್ಕು ಗಂಟೆಗೆ ಹೋಗಿ ಐದೂವರೆಗೆ ವಾಪಸಾಗುತ್ತಾರೆ.

- ವಿಜಯ್ ಅಂಗಡಿ, *ಹಾಸನ*

ರಾಮನಾಥಪುರದಲ್ಲಿ ಶುದ್ಧ ಕೃಷಿ ಅನುಸರಿಸುತ್ತಿರುವ ಸಿ.ಕೃಷ್ಣ ಅವರು ಮೂರ್‍ನಾಲ್ಕು ವರ್ಷಗಳಿಂದ ಪರಿಚಯವಾಗಿದ್ದವರು. ತಾಂತ್ರಿಕ ಪದವಿ ಪಡೆದುಕೊಂಡು ಖಾಸಗಿ ಕಂಪನಿಗಳಲ್ಲಿ ಕೆಲಸ ಮಾಡಿ ಈಗ ಅರ್ಧ ಎಕರೆ ತೋಟವನ್ನು ಶುದ್ಧ ಕೃಷಿ ವಿಧಾನದಲ್ಲಿ ನೋಡಿಕೊಳ್ಳುತ್ತಿದ್ದಾರೆ.

- ವಿಜಯ್ ಅಂಗಡಿ, *ಹಾಸನ*

ಹೆಗಲ ಮೇಲೆ ಗೋಣಿ ಚೀಲ, ಬಲಗೈಯಲ್ಲೊಂದು ಬಿದಿರಿನ ಕೋಲು, ಎಡಗೈಯಲ್ಲೊಂದು ಸ್ಟೀಲ್ ಕ್ಯಾರಿಯರ್ ಇಟ್ಟುಕೊಂಡು ಸಾದಾ ಉಡುಪಿನಲ್ಲಿ ಹೊರಟ ವ್ಯಕ್ತಿಯೊಬ್ಬರನ್ನು ಕಂಡು 'ಇವರ್‍ಯಾರು?' ಎಂದೆ. ಶ್ರೀನಿವಾಸಮೂರ್ತಿ ಅವರು, 'ಇವರು ವೆಂಕಟೇಶಮೂರ್ತಿ, ವೈದಿಕರು. ಮೂರು ಹೆಣ್ಣು ಮಕ್ಕಳ ಮದುವೆಯನ್ನು ೧೮ ಗುಂಟೆ ತೋಟದಿಂದ ಮಾಡಿದಾರೆ. ಬಹಳ ಕಷ್ಟಜೀವಿ' ಎಂದರು.

- ವಿಜಯ್ ಅಂಗಡಿ, *ಹಾಸನ*

ಇದು ಹಣಕ್ಕಾಗಿ ಮಾಡುವ ಕಸುಬಲ್ಲ; ಮರದ ಮೇಲೆ ಪ್ರೀತಿ ಇದ್ದರೆ ಮಾತ್ರ ಮಾಡಬಹುದಾದ ಬಾಳು.

- ಬಿ.ಎಸ್.ನಾಗೇಂದ್ರ, *ಬಸವಾಪಟ್ಟಣ*

ವಿದ್ವಾನ್ ಸುಬ್ಬರಾಯಶಾಸ್ತ್ರಿಗಳ ಮನೆ ಮುಂದಿನ ಭಾವಿಯನ್ನು ಐದು ಅಡಿ ಇಳಿಸಿದೆ; ಆಮೇಲೆ ಶಾಶ್ವತ ಜಲಕಣ್ಣ ಬಂತು. ಆ ಮನೆಯ ಹಿಂದೆ ವೆಂಡರ್ ನರಸಿಂಹಯ್ಯನವರ ಭಾವಿಯನ್ನು ವಡ್ಡರು ಡೈನಮೈಟ್ ಸಿಡಿಸಿ ಬಗೆಯುತ್ತಿದ್ದರು. ನಾನು ಈ ಭಾವಿಯನ್ನು ಕೇವಲ ಸುತ್ತಿಗೆ ಚಾಣಾ ಬಳಸಿ ಇಡಿದು ಹಾಕಿದೆ.

-ಹಾನಗಲ್ ಕೃಷ್ಣಮೂರ್ತಿಗಳು, *ಬಸವಾಪಟ್ಟಣ*

ಆಳುಗಳನ್ನೇ ನಂಬಿದವನು ಕೃಷಿಕನಾಗಲಾರ...
ಅನೇಕ ಸಂಕೇತಿ ರೈತರು ಸ್ವಂತ ದುಡಿಯುವಾಗ ಜೊತೆಗೆ ಕೆಲಸ ಮಾಡಲು ಆಳುಗಳನ್ನು ಕರೆದರೆ ಅವರು ಬರುವುದಿಲ್ಲ. ಏಕೆಂದರೆ ಆ ಮಟ್ಟಕ್ಕೆ ಅವರು ದುಡಿಯಲಾರರು.

- ಬಿ.ಕೆ.ರಾಮಚಂದ್ರ, ವಹಿವಾಟುದಾರರು, *ಬಸವಾಪಟ್ಟಣ*

ಯಾವುದೇ ಧರ್ಮದ, ಜನಾಂಗದ ಸಂಸ್ಕೃತಿಯು ಜೀವಂತವಾಗಿರುವುದು ಹಳ್ಳಿಗಳಲ್ಲೇ ಅಲ್ಲವೇ? ಈಗಲೂ ಕೃಷಿಯನ್ನೇ ಜೀವಾಧಾರವಾಗಿಟ್ಟುಕೊಂಡು ಹಳ್ಳಿಗಳಲ್ಲೇ ನೆಲೆಸಿರುವ ನಮ್ಮ ಸಂಕೇತಿ ಬಂಧು-ಬಾಂಧವರಿಂದಲೇ ನಮ್ಮೀ ಜನಾಂಗದ ಭಾಷೆ, ಆಚಾರ, ವಿಚಾರಗಳಲ್ಲಿ ನಮ್ಮ ತನವು ಸುಮಾರು ೮೦೦ ವರ್ಷಗಳಿಂದಲೂ ಉಳಿದುಕೊಂಡು ಬಂದಿದೆ. ಇದಕ್ಕಾಗಿ ನಮ್ಮ 'ಸಂಕೇತಿ ಕೃಷಿಕ'ರಿಗೆ ನಾವು ಚಿರಋಣಿಯಾಗಿರಲೇಬೇಕು.

- ಪಿ.ಕೆ.ಶ್ರೀನಿವಾಸ, ಪೂಮಗಾಮೆ *(ಹಾಸನ)*

ಹಿರಿಗನಹಳ್ಳಿಯ ಅನಂತ ಅವರು ಅಂಧರು. ಊರಿನಲ್ಲಿ ಸ್ವತಂತ್ರವಾಗಿ ಓಡಾಡುತ್ತಾರೆ, ಗದ್ದೆ ಕುಯ್ಲು ಮಾಡುತ್ತಾರೆ, ಮಾತ್ರವಲ್ಲ ಮರಕ್ಕೆ ಹತ್ತಿ ಕಾಯಿ ಕೀಳುತ್ತಾರೆ.

* * * * *

ಹಿರಿಗನಹಳ್ಳಿಯ ಈ ಎಲ್ಲ ಕಷ್ಟಜೀವಿಗಳು ಮಧ್ಯಮವರ್ಗದ ಜೀವನ ಸಾಗಿಸುತ್ತಿದ್ದಾರೆ. ಆದರೆ ಅವರ ಸಂತುಷ್ಟಿಯನ್ನು ಕಂಡವರಿಗೆ 'ಇದಕ್ಕಿಂತ ಶ್ರೀಮಂತಿಕೆ ಬೇಕೆ' ಎನಿಸುತ್ತದೆ. ಆ ಸಂತುಷ್ಟಿಯ ಶ್ರೀಮಂತಿಕೆ ಪಟ್ಟಣಗಳಲ್ಲಿ ಮರಿಚಿಕೆಯಾಗಿ ಎಲ್ಲರನ್ನೂ ಕಾಡುತ್ತಿದೆ.

- ಬಸುಪ್ರ, *ಮೈಸೂರು*

ತೋಟಕ್ಕೆ ಸಂಬಂಧಿಸಿದ ಸಮಸ್ತ ಕೆಲಸವನ್ನೂ ನಾನು ನನ್ನ ಮಗ ಪ್ರೀತಿಯಿಂದ ಸ್ವತಃ ಮಾಡುತ್ತೇವೆ. ಮಗನು ಬಾಲ್ಯದಿದಂಲೂ ನನ್ನ ಜೊತೆ ದುಡಿಯುತ್ತಿದ್ದುದರಿಂದ ಅವನಿಗೆ ವ್ಯವಸಾಯದಲ್ಲಿ ಅನುಭವವಿದೆ... ಹಿಂದೆ ಸಂಪಾದನೆ ಎಂದರೆ ಕಷ್ಟಪಟ್ಟು ದುಡಿಯುವುದು ಎಂದೇ ಆಗಿತ್ತು. ಈಗಿನ ಕಾಲಧರ್ಮ ಎಂದರೆ ಸುಲಭವಾಗಿ ಸಂಪಾದನೆ ಮಾಡುವುದು.

- ನರಸಿಂಹಮೂರ್ತಿ, *ಐಚನಹಳ್ಳಿ*

ನನಗೆ ಹಳ್ಳಿ ಮತ್ತು ವ್ಯವಸಾಯದ ಅನುಭವವಿದೆ. ಅಂಗಡಿ ಇಟ್ಟುಕೊಂಡಿದ್ದೇನೆ. ಸ್ವಯಂ ಉದ್ಯೋಗ ನಡೆಸುವ ಬಗ್ಗೆ ವಿಧ್ಯುಕ್ತ ತರಬೇತಿಯನ್ನು ನಾನು ಪಡೆದುಕೊಂಡಿದ್ದೇನೆ. ಟೈಲರಿಂಗ್ ಕೂಡ ಮಾಡುತ್ತೇನೆ. ಅಡಿಕೆ ಕಾಲದಲ್ಲಿ ಸುಲಿಯುವ ಕೆಲಸನವನ್ನೂ ನಾನು ಮಾಡುತ್ತೇನೆ. ಬೇಯಿಸುವುದು, ಒಣಗಿಸುವುದು-ಎಲ್ಲದರಲ್ಲೂ ತೊಡಗಿಕೊಳ್ಳುತ್ತೇನೆ. ಸಮಯ ಬಂದರೆ ಊಟ ತಿಂಡಿ ಕೊಟ್ಟು ಬರಲು ತೋಟಕ್ಕೂ ಹೋಗುತ್ತೇನೆ. ಸಂತೋಷದಿಂದಿದ್ದೇನೆ.

- ಕಾವೇರಿ, *ಐಚನಹಳ್ಳಿ*

ವ್ಯವಸಾಯದ ಕಾರಣದಿಂದ ಬ್ರಾಹ್ಮಣರ ಕರ್ಮಾನುಷ್ಠಾನಗಳಿಗೆ ತೊಂದರೆ ಆಗುತ್ತದೆ ಎಂಬುದನ್ನು ಐಚನಹಳ್ಳಿಯ ಶಂಕರ ಅವರು ಒಪ್ಪುವುದಿಲ್ಲ. ಕರ್ಮದಲ್ಲಿ ಶ್ರದ್ಧೆ ಇದ್ದರೆ, ಅವಿರತ ದುಡಿಮೆಯ ನಡುವೆಯೂ ಕಾಲಾವಕಾಶ ಆಗಿಯೇ ಆಗುತ್ತದೆ ಎಂದು ಅವರು ಹೇಳುತ್ತಾರೆ. ಕರ್ಮದಲ್ಲಿ ಶ್ರದ್ಧೆಯೇ ಇಲ್ಲದಿದ್ದರೆ ಯಾವ ಕೆಲಸ ಮಾಡದವನೂ ಅವುಗಳನ್ನು ಮಾಡಲಾರ ಎಂಬ ಅವರ ಮಾತು ಗಮನಾರ್ಹ. ಅದಕ್ಕೆ ಅವರು ತಮ್ಮ ಓರಗೆಯ ರಂಗನಾಥ ಎಂಬುವವರ ಉದಾಹರಣೆ ಕೊಡುತ್ತಾರೆ. "ರಂಗನಾಥ ಅವರು ಗದ್ದೆಯ ಕೆಲಸ ಮಾಡುತ್ತಾರೆ. ತೋಟದ ಕೆಲಸ, ಹೊಲದ ಕೆಲಸ ಮಾಡುತ್ತಾರೆ. ಜೊತೆಗೆ ಎತ್ತು, ಗಾಡಿ ಇಟ್ಟುಕೊಂಡಿದ್ದಾರೆ, ಬಾಡಿಗೆಗೆ ಗಾಡಿ ಹೊಡೆಯುತ್ತಾರೆ. ಇದರ ಜೊತೆಗೆ ಪೌರೋಹಿತ್ಯವನ್ನೂ ಮಾಡಿಸುತ್ತಾರೆ. ಇಷ್ಟೆಲ್ಲದರ ನಡುವೆ ಆಹ್ನಿಕವನ್ನೂ ಬಿಟ್ಟಿಲ್ಲ. ಈ ಸುತ್ತಣ ಯಾವ ಹಳ್ಳಿಯಲ್ಲೂ ಇವರಷ್ಟು ದುಡಿಯುವ ವ್ಯಕ್ತಿಯನ್ನು ನಾನು ನೋಡಿಲ್ಲ" ಎನ್ನುತ್ತಾರೆ.

- ಬಸುಪ್ರ, *ಮೈಸೂರು*

ನಮ್ಮ ತಂದೆ ಕೇಶವಮೂರ್ತಿಯವರು ಹೇಗೆ ದುಡಿಯುತ್ತಾರೆಂದರೆ, ದುಡಿಯೋದರಿಂದಲೇ ಅವರಿಗೆ ಆರೋಗ್ಯ. ಬೇರೆಯವರು ಅವರ ಹಾಗೆ ಮರದಿಂದ ಬಿದ್ದಿದ್ದರೆ ಒಂದೊಂದು ಪ್ರಕರಣದಲ್ಲೂ ಉಳಿಯುತ್ತಲೇ ಇರಲಿಲ್ಲ. ಒಂದು ಸಾರಿ ದಂತಪಂಕ್ತಿಯೇ ಪೂರ್ತಿ ಉದುರಿಹೋಗಿತ್ತು, ಒಮ್ಮೆ ಉಪ್ಪಿನಕಾಯಿ ಮಾವಿನಕಾಯಿ ಕೊಯ್ಯಲು ಮರ ಹತ್ತಿದ್ದಾಗ ಗೂಟ ಹೊಟ್ಟೆಗೆ ಚುಚ್ಚಿತ್ತು, ಏನೂ ಉಳಿದಿರಲಿಲ್ಲ. ಒಮ್ಮೆ ಉರಿಮಂಡಲ ಹಾವು ಕಚ್ಚಿ ಎರಡು ವರ್ಷ ಸಾಹಸ ಮಾಡಬೇಕಾಯಿತು. ಕೊನೆಗೂ ಪೂರ್ತಿ ವಾಸಿ ಆಗಿದ್ದು ನಾಟಿ ಔಷಧಿಯಲ್ಲಿ.

- ಶೈಲ ನಾಗರಾಜ್, *ಚಾಹಳ್ಳಿ*

ಈಗಿನ ಜನ ಆಗಿನ ರೀತಿ ಕೆಲಸ ಮಾಡುತ್ತಿಲ್ಲ. ಆಗ ಯಾರೂ ಗೊಣಗದೆ ನಿಯತ್ತಿನಿಂದ ಕೆಲಸ ಮಾಡುತ್ತಿದ್ದರು. ನಮ್ಮ ಕೆಲಸಕ್ಕಾಗಿ ಬಂದ

ಆಳುಕಾಳುಗಳಿಗೂ ಮದುವೆ ಮಾಡಿ ಮನೆ ಕಟ್ಟಿಸಿ ನೆಲೆ ನಿಲ್ಲಿಸಿದ್ದೇನೆ. ನಮಗಾಗಿ ದುಡಿದವರಿಗೆ ಅನ್ಯಾಯವಾಗಬಾರದೆಂಬುದಷ್ಟೇ ಉದ್ದೇಶ.

- ಕೇಶವಮೂರ್ತಿ, *ಚಾಹಳ್ಳಿ*

ಬದನೆ, ಟೊಮೆಟೊ... ಎಲ್ಲಾ ಬೆಳೆದೆ, ಈಗ ನಾಲ್ಕನೇ ವರ್ಷದಲ್ಲಿ ಟೊಮೆಟೋ ಬೆಳೆದೆ. ಎರಡು ಕುಳಿ ಹಾಕಿದ್ದೆ. ತುಂಬಾ ಚೆನ್ನಾಗಿ ಬಂತು ಬೆಳೆ. ಬೆಲೆ ನಾಲ್ಕು-ಐದು ರೂಪಾಯಿ ಇತ್ತು ಕೆಜಿಗೆ. ಮಾರ್ಕೆಟ್ಟಿಗೆ ತೊಗೊಂಡು ಹೋದೆವು. ನಾಕಾಣೆಗೆ ಕೇಜಿ ಕೇಳೂರೂ ಗತಿ ಇಲ್ಲದೆ ಹೋಯಿತು. ಮೂರು ವಾರ ಕುಯ್ಯಿಸಿದೆ. ಮೂಟೆಗೆ ನಾಲ್ಕು ರೂಪಾಯಿ ಐದು ರೂಪಾಯಿಗೆ ಕೇಳೋಕೆ ಶುರು ಮಾಡಿದರು. ಕೇಳಿದಷ್ಟಕ್ಕೆ ಕೊಟ್ಟುಬಂದೆ. ಹೀಗೆ ಹೊತ್ತುಕೊಂಡು ಹೋಗಿ ೨೦೦ ರೂಪಾಯಿ ಕೈಯಿಂದ ಹೋಯಿತು. ಮಾರನೇ ದಿನ ಹೊಲದ ಹತ್ತಿರಕ್ಕೇ ಕೊಳ್ಳುವವರು ಬಂದರು. 'ಕೊಡಲ್ಲ' ಅಂತ ಹೇಳಿ ಕಳಿಸಿದೆ. ಊರವರಿಗೇ 'ಕುಯ್‌ಕೊಂಡು ಊಟ ಮಾಡಿ' ಅಂದೆ. ಸಂತೋಷವಾಗಿ ತೊಗೊಂಡು ಹೋದರು. ಹೀಗೆ ಒಂದೊಂದು ಬೆಳೆ ಮಾಡಿದರೆ... ಬರುತ್ತೇ ಅನ್ನುವ ಆಸೆಗೆ ಮಾಡ್ತೀವಿ. ಹೊಸ ಹೊಸ ಬೆಳೇನೆಲ್ಲಾ ಮಾಡಿದ್ದೆಲ್ಲಾ ಇಂಥಾ ಆಸೆಯಿಂದಲೇ.

- ಕೇಶವಮೂರ್ತಿ, *ಚಾಹಳ್ಳಿ*

ತೋಟದಲ್ಲಿ ಕಲ್ಲು ಇಡಿದು ೩೦ ಅಡಿ ಆಳದ ಭಾವಿ ತೆಗೆದಿದ್ದರು ಕೇಶವಶಾಸ್ತ್ರಿಗಳು. ತಾವೇ ಕಲ್ಲು ಮಣ್ಣನ್ನು ಮೇಲಕ್ಕೆ ಎತ್ತಿಹಾಕಿದ್ದರು ಕೂಡ. ಅವರಿಗೆ ಅದೊಂದು ಲೆಕ್ಕವೇ ಆಗಿರಲಿಲ್ಲ.

- ಕೇಶವಮೂರ್ತಿ, *ಚಾಹಳ್ಳಿ*

ಸಂಕೇತಿಗಳ ವ್ಯವಸಾಯದ ವಿಶೇಷ ಅಂದರೆ - ಸಂಕೇತಿಗಳು 'ತೋಟ'ದಲ್ಲಿ ಎತ್ತಿದ ಕೈ. ಹಿಂದೆಲ್ಲಾ ಬ್ರಾಹ್ಮಣರು 'ಹೊಲ' ಮಾಡುತ್ತಿರಲಿಲ್ಲ. ಈಗ ಈ generationನಲ್ಲೇ commercial crop ಎಲ್ಲಾ ಮಾಡಿ ಹೊಲದ ಕಡೆಗೆ ಹೆಚ್ಚು attract ಆಗ್ತಿರೋದು. ತೋಟದ ಕೆಲಸದಲ್ಲಿ ಇವರು ತುಂಬಾ experts.

- ರವಿ, *ಮರಿತಮ್ಮನಹಳ್ಳಿ*

ನಾನು ಇಪ್ಪತ್ನಾಲ್ಕು ಘಂಟೆಯೂ ಕೆಲಸ ಮಾಡುತ್ತಿದ್ದೆ-ಇಪ್ಪತ್ನಾಲ್ಕ್ ಘಂಟ್ಯೂವೆ- ಹಾರೆ, ಗುದ್ಲಿ ಸಮೆಸಿರೋನು ನಾನು. ಅಗತೆ, ಗುಣಿ ಕಟ್ಟೋದು, ನೀರು ಹುಯ್ಯೋದು, ಹಂಬು ತೆಕ್ಕೆ ಬಿಡೋದು, ಬಾಳೆ ಗುಂಡಿ ತೆಗೆಯೋದು-ಇನ್ನೇನೂ ಬೇರೆ ಕೆಲಸವೇ ಇಲ್ಲ-ಇದೇ. ಬಾಳೆ, ತೆಂಗಿನ ಗುದಿ ಹೊತ್ತುಕೊಂಡು ಹೋಗಿ ಸಂತೇಲಿ ಮಾರುವುದೇ ಬಿಡುವಿನ ಸಮಯ.... ನಂಗೀಗ ೭೫ ವರ್ಷ. ಇವತ್ತೂ ಹಾರೆ ಕೆಲಸ ಮಾಡ್ತೀನಿ. ಚಕ್ಲಿ, ಕೋಡ್ಬಳೆ ಬಾರಿಸ್ತೀನಿ. ಹಲ್ಲಿಲ್ಲ, ಒಸಡಲ್ಲೇ ಆ ಶಕ್ತಿ ಇದೆ. ಈಗ ತಾನೇ ಎಲೆ ಅಡಿಕೆ ಹಾಕ್ಕೊಂಡು ಬಂದೆ ಮನೇಲಿ... ಪೇಟೇಲಿ ಸಾಯೋದಕ್ಕೆ ಇದು ನಿರಾಳ. ಪೇಟೆಗೆ ಹೋದರೆ ಅಲ್ಲಿ ಇರೋಕಾಗಲ್ಲ ನಮ್ಗೆ. ಬರೀ ಹೊಗೆ, ಧೂಳು. ನನಗೇನು? ಹಳ್ಳೀಲಿ ಒಂದು ಮರದಡೀಲಿ ಮಲಕ್ಕೊಂಡರೂ ನಿರಾಳವಾಗಿ ನಿದ್ದೆ ಮಾಡ್ತೀನಿ. ಅಲ್ಲಿದಿದ್ಯೆ?...

- ಎಂ.ಆರ್.ಕೇಶವಮೂರ್ತಿ, *ಮರಿತಮ್ಮನಹಳ್ಳಿ*

ನಾನು ನೋಡಿರುವಂತೆ ನೂರಕ್ಕೆ ತೊಂಭತ್ತು ಹೆಣ್ಣು ಮಕ್ಕಳು ಪಟ್ಟಣವನ್ನೇ ಬಯಸುತ್ತಾರೆ. ಅದಕ್ಕೆ ಪಟ್ಟಣಗಳ 'ವೈಭವ'ಗಳ ಆಕರ್ಷಣೆ ಕಾರಣ. ಆದರೆ ಅದೊಂದು ಭ್ರಮೆ. ಅಲ್ಲಿ ಹೋಗಿ ನಾಕಾರು ವರ್ಷ ಕಳೆದ ಮೇಲೆ ಅವರಿಗೆ ಅದು ತಿಳಿಯುತ್ತೆ...

- ಶ್ರೀಮತಿ, *ಮರಿತಮ್ಮನಹಳ್ಳಿ*

ನಾನು ಓದಿರುವುದು B.Sc. ಬೆಂಗಳೂರಲ್ಲಿ ಬೇರೆ ಬೇರೆ ಕಲೆಸ ಮಾಡಿಕೊಂಡು ಕೆಲ ದಿನ ಇದ್ದೆ. ಅದೆಲ್ಲಾ ಸುಮ್ಮನೆ ಜೀತ. ಪಟ್ಟಣದಲ್ಲಿದ್ದೇನೆ ಎಂಬ ಭ್ರಮೆಗೆ ಬಹಳ ಬೆಲೆ ತೆರುತ್ತಿದ್ದೆ. ಸೀದಾ ಹಳ್ಳಿಗೆ ಬಂದೆ... ಇಲ್ಲಿನ ೨೫ ಒಕ್ಕಲು (ಸಂಕೇತಿಗಳೂ) ಬೆವರು ಬಸಿದು ದುಡಿಯುವವರೇ;

ಒಬ್ಬ ಸೋಮಾರಿಯೂ ಇಲ್ಲ. ಹೊತ್ತು ಸಾಕಾಗಲ್ಲ ಅನ್ನುವ ಹಾಗೇ ಎಲ್ಲಾ ದುಡೀತಾರೆ. ಇಲ್ಲದಿದ್ದರೆ ಇಷ್ಟು achieve ಮಾಡಕ್ಕೆ ಆಗ್ತಿರಲಿಲ್ಲ. ಇಲ್ಲಿರೋ ೨೫ ಮನೇಲಿ ೨೦ ಜನ ಗ್ರಾಜುಯೇಟುಗಳೇ.

- ಕೇಶವಶರ್ಮ, *ಮರಿತಮ್ಮನಹಳ್ಳಿ*

ಈಗ ಕ್ಷೇತ್ರ ಸಂಪನ್ಮೂಲಾಧಿಕಾರಿ ಆಗಿದೇನೆ. ಆದರೂ ಜಮೀನು ಬಿಟ್ಟಿಲ್ಲ. ಅದನ್ನು ನಾನು ಲಾಭಕ್ಕಾಗಿ ಮಾಡುತ್ತಿಲ್ಲ, ಬೆಳೆಯಬೇಕು ಅಂತ ಬೆಳೀತಿದೀನಿ. ಹಳ್ಳೀಲಿರುವ ಕುಶಿ, ಜಮೀನಿನಲ್ಲಿ ಕೆಲಸ ಮಾಡುವ ಕುಶಿ, ಅಲ್ಲಿ ಸುತ್ತಾಡೋ ಕುಶಿ, ಹಳ್ಳಿಯಲ್ಲಿರೋ ಸಹಕಾರ, ನಮ್ಮದಿ cityನಲ್ಲಿ ಇಲ್ಲ-ಯಾವ ವಿಷಯ ತೊಗೊಂಡರೂ. ತೋಟಕ್ಕೆ ಹೋಗುವಾಗ ಮಂಕರೀಲಿ ತೊಪ್ಪೆ ಎತ್ತಿಕೊಂಡು ಹೋಗುತ್ತೇನೆ, ಬರುವಾಗಲೂ ಹಾಗೇ ಮಾಡುತ್ತೇನೆ.

- ಫಣೀಶ, *ಮರಿತಮ್ಮನಹಳ್ಳಿ*

ಲಕ್ಷ್ಮೀನಾರಾಯಣ (ಬಾಬು) ಅವರು ಹಿಂದುಳಿದ ಜಾತಿ ವರ್ಗಗಳ ಅನೇಕ ಕುಟುಂಬಗಳಿಗೆ ಆಶ್ರಯ ನೀಡಿರುವ ತೃಪ್ತ. ದನ ಕಾಯುತ್ತಿದ್ದ ಹುಡುಗರನ್ನು ಕರೆದು ಕಂಪ್ಯೂಟರ್ ಮತ್ತು ಮುದ್ರಣದ ತರಬೇತಿ ನೀಡಿದ ಸಾಹಸಿ. ಅಂಥ ಅನೇಕ ಹುಡುಗರಿಗೆ ಅತ್ಯಾಧುನಿಕ ಮುದ್ರಣ ಯಂತ್ರಗಳಲ್ಲಿ ತರಬೇತಿ ನೀಡಿದ್ದಾರೆ. ಜೆರಾಕ್ಸ್, ಫ್ಯಾಕ್ಸ್, ಡ್ರೈವಿಂಗ್ ಇತ್ಯಾದಿ ತರಬೇತಿ ಕೊಟ್ಟು ಅವರ ಸಂಸಾರಗಳನ್ನು ನೆಲೆಗೊಳಿಸಿದ್ದಾರೆ. ಅನೇಕ ಅಂಥ ಮಕ್ಕಳಿಗೆ ಊಟ ವಸತಿ ನೀಡಿ ಆಶ್ರಯ ಕೊಟ್ಟು ಓದಿಸುತ್ತಿದ್ದಾರೆ. 'ಇದು ನಾನು ಕೃಷಿಕನಾದ್ದರಿಂದ ಸಾಧ್ಯವಾಯಿತು' ಎನ್ನುತ್ತಾರೆ ಅವರು.

* * * * *

ಪದ್ಮನಾಭನಗರದಲ್ಲಿ ತಾವೇ ಕಟ್ಟಿಸಿದ ದೇವಸ್ಥಾನದ ಸುತ್ತ ಇದ್ದ ಮುಳ್ಳುಕಾಡನ್ನು ಕಡಿದು ವೃದ್ಧ ಲಕ್ಷ್ಮೀಕಾಂತಯ್ಯನವರು ಒಂದು ಸುಂದರ ಕೈತೋಟವನ್ನು ನಿರ್ಮಿಸಿದರು. ಅವರ ಪತ್ನಿ ವೃದ್ಧೆ ಸುಬ್ಬಲಕ್ಷ್ಮಮ್ಮನವರು ದೂರದ ತಮ್ಮ ಮನೆಯಿಂದ ನೀರು ಹೊತ್ತು ತಂದು ಗಿಡಗಳಿಗೆ ಹಾಕಿ ಅವನ್ನು ಉಳಿಸಿ ಬೆಳೆಸಿದರು. ಅವರ ಮಗಳು ಅದೇ ಆವರಣದಲ್ಲಿ ವಿಶಾಲವಾದ ಆರೋಗ್ಯವನವನ್ನು ಏಕಾಕಿಯಾಗಿ ನಿರ್ಮಿಸಿದರು. ಅದೀಗ ಸಮುದಾಯದ ಆರೋಗ್ಯ ಕೇಂದ್ರವಾಗಿದೆ.

* * * * *

ಹಳ್ಳಿಗಳ ಹಿತ್ತಲತೋಟಗಳ ಮುಂದುವರಿಕೆಯಾಗಿ ನಗರದ ಮನೆಗಳ ಸುತ್ತಲೂ ಅಂಥವೇ ಕೈತೋಟಗಳು ಬಂದ ಕಾಲವು ಮೊದಲ ಹಂತದ ನಗರ ವಲಸಿಗರಲ್ಲಿ ಕಂಡಿತು. ಆ ಮುಂದಿನ ತಲೆಮಾರು ಪ್ರಾತಿನಿಧಿಕವಾಗಿ ಒಂದೆರಡು ಅಡಿಕೆ ಸಸಿಗಳನ್ನು ಬೆಳೆಸಿಕೊಂಡು ತಮ್ಮ ಕೈ ತೋಟಗಳನ್ನು ಆಧುನಿಕ ರೀತಿಗಳಲ್ಲಿ ಪರಿಷ್ಕರಿಸಿಕೊಳ್ಳತೊಡಗಿತು. ಮುಂದಿನ ದಿನಗಳಲ್ಲಿ ಸಂಕೇತಿಗಳು ಭಾರತದ ನಾನಾ ನಗರಗಳಲ್ಲಿ ಹರಡಿಕೊಂಡರು, ಜಗತ್ತನ್ನೆಲ್ಲ ಸುತ್ತಿಕೊಂಡು ಬಂದರು, ಆರ್ಥಿಕವಾಗಿಯೂ ಅನೇಕರು ಸುಸ್ಥಿಗೆ ಬಂದರು, ಜತೆಗೆ ಕೈವನದ ಆಧುನಿಕ ಪರಿಕಲ್ಪನೆಗಳನ್ನು ಮೈಗೂಡಿಸಿಕೊಂಡರು, ಸುಂದರ ಉಪವನಗಳನ್ನು ನಿರ್ಮಿಸಿಕೊಂಡರು.

* * * * *

ಅಮೆರಿಕನ್ ಫೈಟೋ ಪೆಥಲಾಜಿಕಲ್ ಸೊಸೈಟಿ ವರ್ಷಕ್ಕೊಂದು ಪ್ರತಿಷ್ಠಿತ ಪ್ರಶಸ್ತಿಯನ್ನು ವಿತರಿಸುತ್ತದೆ. ಸಸ್ಯರೋಗಕ್ಕೆ ಸಂಬಂಧಿಸಿದಂತೆ ಗಣನೀಯ ಂಸಂಶೋಧನೆ ಮಾಡಿದ ೬೦೦೦ ಪ್ರತಿಭಾವಂತ ವಿಜ್ಞಾನಿಗಳ ಪೈಕಿ ಅತಿ ಶ್ರೇಷ್ಠರೊಬ್ಬರು ಅದನ್ನು ಪಡೆಯುತ್ತಾರೆ. ಅಂಥ ಪ್ರತಿಷ್ಠಿತ ಪ್ರಶಸ್ತಿಯ ಗೌರವಕ್ಕೆ ಪಾತ್ರರಾಗಿರುವ ವಿಜ್ಞಾನಿ ಕನ್ನಡದ ಕೃಷ್ಣ ವಿ.ಸುಬ್ಬರಾವ್.

ಅಮೆರಿಕದ ಕೃಷಿ ಸಂಶೋಧನಾ ನಿಧಿಯನ್ನು ವಿಶೇಷ ಪರಿಣತರು ಅರ್ಹತೆಯ ಆಧಾರದ ಮೇಲೆ ವಿತರಿಸುತ್ತಾರೆ. ಅದು ಅರ್ಹರಲ್ಲಿ ಕೆಲವು ಮಂದಿಗೆ ಮಾತ್ರ ದೊರೆಯುತ್ತದೆ. ಸುಬ್ಬರಾವ್ ಅದನ್ನು ಪಡೆಯುತ್ತಿರುವ ಅರ್ಹರಲ್ಲಿ ಒಬ್ಬರು.

ಸುಬ್ಬರಾವ್ ಅಮೆರಿಕದ ತಮ್ಮ ಮನೆಯ ಸುತ್ತ ಒಂದು ಕೈತೋಟವನ್ನು ಬೆಳೆಸಿಕೊಂಡಿದ್ದಾರೆ. ಅದರಲ್ಲಿ ಏಪ್ರಿಕಾಟ್, ಪೀಚ್, ಸೇಬು, ಮರಸೇಬು, ಅಂಜೂರ ಮೊದಲಾದ ಮರಗಳನ್ನು ಬೆಳೆಸಿದ್ದಾರೆ.

ಸಂಕೇತಿಗಳ ಬೆಳೆಯ ರೀತಿಯನ್ನು ಅಮೆರಿಕದೊಂದಿಗೆ ಹೋಲಿಸುವುದು ಕಷ್ಟವೆನ್ನುತ್ತಾರೆ ಅವರು. ಏಕೆಂದರೆ ಅಮೆರಿಕದಲ್ಲಿ ತೆಂಗು ಅಡಿಕೆ ಬೆಳೆಯುವುದಿಲ್ಲ. "ಆದರೂ ವ್ಯವಸಾಯವನ್ನು ಸಂಕೇತಿ ಸಮುದಾಯವು ಕರತಲಾಮಲಕ ಮಾಡಿಕೊಂಡಿದೆ ಎಂಬುದರಲ್ಲಿ ಸಂಶಯವಿಲ್ಲ. ಎಂ.ಎನ್.ಶ್ರೀನಿವಾಸ್ ಅವರು *A Forgotten Village*ನಲ್ಲಿ ಸಂಕೇತಿ ಸಮುದಾಯದ ಉಲ್ಲೇಖ ಮಾಡಿರುವುದು ಯಥಾಯೋಗ್ಯವಾಗಿದೆ" ಎಂಬುದು ಅವರ ಮಾತು.

* * * * *

ಸಂಕೇತಿಗಳು ಬೆಳೆಸಿದ ಸಹಸ್ರಾರು ಎಕರೆ ತೋಟಗಳು ತಮ್ಮಷ್ಟಕ್ಕೇ ಕರ್ನಾಟಕಕ್ಕೆ ನೀಡಿದ ಕೊಡುಗೆಗಳಾದಂತೆ, ತಮ್ಮ ನೆಲೆಗಳಲ್ಲಿ ಒಂದು ಬೇಸಾಯದ ವಿಧಾನವನ್ನು ಚಾಲನೆಗೊಳಿಸಿದ ದೃಷ್ಟಿಯಿಂದಲೂ ಮಹತ್ವವಾದುವು.

- ಬಸುಪ್ರ, *ಮೈಸೂರು*

ಅನುಬಂಧ

ಅನುಬಂಧ - ೧

ಆಧಾರ ಕೃತಿಗಳು

1. *ಸಂಕೇತ ಸಂಪದ,* ಜೂನ್, 1999, ಪು. 24.
2. ***Life of Nacharamma:** History of Her Migration,* M. Keshavaiah, Sree Panchacharya Electric Press, Mysore, 1936.
3. *ಶ್ರೀನಾಚಾರಮ್ಮನ ಜೀವನಚರಿತ್ರೆ (ಆಕೆಯ ಪ್ರವಾಸ),* ಎಂ. ಕೇಶವಯ್ಯ, ಶ್ರೀನಿವಾಸ್ ಎಲೆಕ್ಟ್ರಿಕ್ ಪ್ರೆಸ್, ಮೈಸೂರು, 1938.
4. *ಪ್ರಶಸ್ತಿ ಪತ್ರ:* ರಾಜ್ಯೋತ್ಸವ ಪ್ರಶಸ್ತಿ: ಹೆಚ್.ವಿ. ಕೃಷ್ಣರಾವ್, 1969.
5. *ಕನ್ನಡ ಸಾಮ್ರಾಜ್ಯ* (ಕೈಪಿಡಿ-1), ಸರ್ದಾರ್ ಕೆ. ಬಸವರಾಜೇ ಅರಸ್, ಧಾತ್ರಿ ಪವರ್ ಪ್ರೆಸ್, ಚದುರಂಗ ಇಂಡಸ್ಟ್ರೀಸ್, ಮೈಸೂರು, 1972.
6. *ಸ್ಮರಣ ಸಂಚಿಕೆ:* ಬೆಟ್ಟದಪುರ ಸಂಕೇತಿ ಸಂಘ ವಿದ್ಯಾರ್ಥಿನಿಲಯ, ಪ್ರ: ಬೆಟ್ಟದಪುರ ಸಂಕೇತಿ ಸಂಘ (ರಿ.), ಮೈಸೂರು, 1979.
7. *ಸಂಕೇತಿ ಸೌರಭ,* ಸುವರ್ಣ ಮಹೋತ್ಸವ ಸ್ಮರಣ ಸಂಚಿಕೆ, (1944-1994), ಪ್ರ: ಕೌಶಿಕ ಸಂಕೇತಿ ಸಂಘ, ಜಯನಗರ, ಮೈಸೂರು, 1994.
8. *ಸಂಕೇತಿ ಸಂಪದ,* ಪ್ರೊ. ಕೆ.ಎಸ್. ಕೃಷ್ಣಮೂರ್ತಿ, ಸುಕೃತ, ನಂ. 31, 4ನೇ ಮುಖ್ಯ ರಸ್ತೆ, ಯಾದವಗಿರಿ, ಮೈಸೂರು-570 020, 1994.
9. ***ಕೌಶಿಕ,*** ಕಲ್ಯಾಣಮಂದಿರದ ಉದ್ಘಾಟನೆ ಸ್ಮರಣ ಸಂಪುಟ, 1995.
10. ***ಸಂತುಷ್ಟಿ:*** ಸಂ.: ಡಾ. ಬಿ.ಎಸ್. ಪ್ರಣತಾರ್ತಿಹರನ್, ಸಮುದಾಯ ಅಧ್ಯಯನ ಕೇಂದ್ರ, ಮೈಸೂರು, 1997.
11. *ನೆನಪು ಕೆದರಿದಾಗ* (ಯೋಧನೊಬ್ಬನ ಬದುಕಿನ ನೆನಪುಗಳು), ಮೇಜರ್ ಹೆಚ್.ಸಿ. ವೇಣುಗೋಪಾಲ್, ಕನ್ನಡ ಅನು: ಆರ್.ಎಲ್. ಅನಂತರಾಮಯ್ಯ, ಭಾರತೀ ಪ್ರಕಾಶನ, ಮೈಸೂರು, 1998.
12. *ಸಂಸಕ್ತ,* ಸುವರ್ಣ ಸ್ವಾತಂತ್ರ್ಯ ವಿಶೇಷ ಸಂಚಿಕೆ, ಸಂ. ಡಾ. ಪ್ರಣತಾರ್ತಿಹರನ್, ಸಮುದಾಯ ಅಧ್ಯಯನ ಕೇಂದ್ರ, ಮೈಸೂರು, 1998.
13. ***ಸಂವಾದ,*** ಇತರರು ಕಂಡ ಸಂಕೇತಿಗಳು, ಸಂ.: ಡಾ. ಪ್ರಣತಾರ್ತಿಹರನ್, ಸಮುದಾಯ ಅಧ್ಯಯನ ಕೇಂದ್ರ, ಮೈಸೂರು, 1998.
14. *ಸಂಕೇತ ಸಂಪದ, ಸಂಕೇತಿ ಸಂಗಮ:* ಸಂಪಾದಕ: ರಾಜಾರಾಮ ಮೂರ್ತಿ, ಹೊಸಹಳ್ಳಿ, ಶಿವಮೊಗ್ಗ ಜಿಲ್ಲೆ.
15. *ಕಥಾವಸ್ತುವಾಗಿ ಸಂಕೇತಿಗಳು:* ಸಂ.: ಡಾ. ಪ್ರಣತಾರ್ತಿಹರನ್, ಸಮುದಾಯ ಅಧ್ಯಯನ ಕೇಂದ್ರ, ಮೈಸೂರು, 2000.
16. *ಸಂಚರ:* ಬಿ.ಎಸ್. ಪ್ರಣತಾರ್ತಿಹರನ್, ಸಮುದಾಯ ಅಧ್ಯಯನ ಕೇಂದ್ರ, ಮೈಸೂರು, 2001.
17. *ತಂತ್ರವಿಜ್ಞಾನ ವಾಹಿನಿ* (ಕೆಲವು ತಾಂತ್ರಿಕ, ವೈಜ್ಞಾನಿಕ ಲೇಖನಗಳು), ಸಂ.: ಡಾ. ಎಂ.ಎಸ್. ನಟರಾಜ್, ಲೇ: ಕನ್ನಡಿಗರು, ನಾಲ್ಕನೆಯ ಅಕ್ಕ ವಿಶ್ವ ಕನ್ನಡ ಸಮ್ಮೇಳನ, 2006.
18. ***ಸಂಕೇತಿ ಅಧ್ಯಯನ ಮಾಲೆ:*** ಸಂ. 1, 2, 3, 5, 6, 8, 9 : ಪ್ರ.ಸಂ. ಡಾ. ಬಿ.ಎಸ್. ಪ್ರಣತಾರ್ತಿಹರನ್, ಸಮುದಾಯ ಅಧ್ಯಯನ ಕೇಂದ್ರ, ಮೈಸೂರು, 2003-2010.

ಅನುಬಂಧ – ೨
ಗ್ರಂಥದ ಬಗೆಗೆ

ಕೃಷಿ ಸಂಪುಟಗಳು

ವಿಶ್ವವಿದ್ಯಾನಿಲಯ ಸಂಜೆ ಕಾಲೇಜು
ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು

ಡಾ. ಕೆ. ಅನಂತರಾಮು
ಕನ್ನಡ ಪ್ರಾಧ್ಯಾಪಕರು (ನಿವೃತ್ತ)

ಸಂಕೇತಿ ಕೃಷಿಯ ವಿಭಿನ್ನ ನೆಲೆಗಳು

ಮಹೋನ್ನತ ಸಾಧನೆ

ಎನ್. ಕೇಶವಮೂರ್ತಿಯವರ 'ಸಂಕೇತಿ ಕೃಷಿಯ ವಿಭಿನ್ನ ನೆಲೆಗಳು' ಎಂಬುದು ಕನ್ನಡನಾಡಿನ ಕೃಷಿರಂಗಕ್ಕೆ ಸಮರ್ಪಿತವಾಗಿರುವ ಬೃಹದಾಕಾರದ ಗ್ರಂಥವಾಗಿದೆ. ಹಾಸನ, ಮೈಸೂರು, ಮಂಡ್ಯ, ಕೊಡಗು, ಚಿಕ್ಕಮಗಳೂರು, ಬೆಂಗಳೂರು, ಶಿವಮೊಗ್ಗ, ದಕ್ಷಿಣಕನ್ನಡ ಮೊದಲಾದ ಜಿಲ್ಲೆಗಳಲ್ಲಿ ನೆಲೆಯಾಗಿ, ಕೃಷಿಯಲ್ಲಿ ತೊಡಗಿರುವ ಸಂಕೇತಿಗಳ ಕೃಷಿಪದ್ಧತಿಯ ತಲಸ್ಪರ್ಶಿಯಾದ ಅಧ್ಯಯನ ಈ ಗ್ರಂಥದಲ್ಲಿದೆ. ಸಂಕೇತಿಗಳ ಕೃಷಿಪದ್ಧತಿಗೂ ಮಿಕ್ಕ ರೈತರ ಕೃಷಿಪದ್ಧತಿಗೂ ಅಲ್ಪಸ್ವಲ್ಪ ವ್ಯತ್ಯಾಸಗಳು ಕಂಡುಬಂದರೂ, ವಿಶಾಲವಾದ ನೆಲೆಯಲ್ಲಿ ಆ ವ್ಯತ್ಯಾಸಗಳು ಹೆಚ್ಚಿನ ಮಹತ್ವವನ್ನೇನೂ ತಳೆದಂತೆ ತೋರುವುದಿಲ್ಲ. ಹೀಗಾಗಿ ಈ ಕೃಷಿಸಂಪುಟವು ಕನ್ನಡನಾಡಿನ ಎಲ್ಲ ಕೃಷಿಕರಿಗೂ ಸರಿಸಮಾನವಾಗಿ ಪ್ರಿಯವಾಗುವ ಉದ್ಗ್ರಂಥವಾಗಿದೆ.

ಕೇಶವಮೂರ್ತಿಯವರು ಸಂಕೇತಿಗಳು ನೆಲೆಸಿರುವ – ಕೆಲವು ನಗರಗಳೂ ಸೇರಿದಂತೆ – ೩೩ ಪ್ರಮುಖ ಗ್ರಾಮಗಳಿಗೆ ಭೇಟಿಕೊಟ್ಟು ಆ ಹೊತ್ತಿಗೊದಗಿದ ೯೬ ಮಂದಿ ಪ್ರಮುಖ ಕೃಷಿಕರನ್ನು ಸಂದರ್ಶಿಸಿ, ಅವರೊಡನೆ ನಡೆಸಿದ ವಿಚಾರಮಂಥನದ ಫಲವಾಗಿ ಲಭ್ಯವಾಗಿರುವ ನವನೀತವನ್ನು ಓದುಗರಿಗೆ ಸಮರ್ಪಿಸಿದ್ದಾರೆ. ಅಡಿಕೆ, ವೀಳ್ಯದೆಲೆ, ತೆಂಗು, ಬಾಳೆಗಳು ಸಂಕೇತಿಗಳು ಹಿಂದಿನಿಂದಲೂ ರೂಢಿಸಿಕೊಂಡು ಬಂದ ತೋಟದ ಬೆಳೆಗಳಾಗಿವೆ. ಅದರಲ್ಲಿಯೂ ಅಡಿಕೆಕೃಷಿ ಅವರ ಜೀವದುಸಿರಾಗಿ ಸಾಗಿಬಂದಿದೆ. ಸಂಕೇತಿ ಶಿಶುವೊಂದು ಮಾತೃಗರ್ಭದಿಂದಲೇ ಅಡಿಕೆ ಸಸಿಯೊಂದನ್ನು ಕೈಲಿಹಿಡಿದು ಭೂಮಿಗಿಳಿಯುತ್ತದೆ – ಎಂದು ಈ ಕೃತಿಯಲ್ಲಿ ಯಾರೋ ಆಲಂಕಾರಿಕವಾಗಿ ಹೇಳಿದ್ದಾರೆ. ತೋಟವೇ ಪ್ರಮುಖ ಕೃಷಿರಂಗವಾದರೂ ಗದ್ದೆಯ ವ್ಯವಸಾಯಕ್ಕೂ ಹೊಲದ ವ್ಯವಸಾಯಕ್ಕೂ ಅವರು ತಮ್ಮನ್ನು ಪಳಗಿಸಿಕೊಂಡಿದ್ದಾರೆ. ಸಮಕಾಲೀನ ಅಗತ್ಯಗಳಿಗೆ ಓಗೊಟ್ಟು ತಂಬಾಕು, ಹತ್ತಿ, ಕಬ್ಬು, ಕಾಫಿ, ವೆನಿಲ್ಲಾ, ಸೂರ್ಯಕಾಂತಿ, ಅರಿಶಿನ, ಏಲಕ್ಕಿ, ಕಾಳುಮೆಣಸು, ಶುಂಠಿ ಮೊದಲಾದುವನ್ನೆಲ್ಲ ತಮ್ಮ ಕೃಷಿವಲಯಕ್ಕೆ ತಂದುಕೊಂಡಿದ್ದಾರೆ.

ಆರ್ಥಿಕವಾಗಿ ದಿನದಿನವೂ ಆಸರೆಯಾಗುವ ಬಿನೀಸು, ಕೋಸು, ಈರುಳ್ಳಿ, ಬೆಳ್ಳುಳ್ಳಿ, ಆಲೂಗೆಡ್ಡೆ, ಬದನೆ, ಹಸಿರು ಮೆಣಸಿನಕಾಯಿ, ಬೀಟ್‌ರೂಟ್, ಬೆಂಡೆ, ಹೀರೆ, ಕ್ಯಾರೆಟ್ಟು, ಟೊಮೇಟೋ, ನುಗ್ಗೆ, ನಿಂಬೆ ಮುಂತಾದ ತರಕಾರಿಗಳನ್ನೂ ಬೆಳೆದು ಮಾರುತ್ತಿದ್ದಾರೆ. ಹಣ್ಣುಗಳನ್ನು ಕೈಗೆತ್ತಿಕೊಂಡು ಮಾವು, ಪರಂಗಿ, ಹಲಸು, ಸಪೋಟಾ, ಚೆರ್ರಿ, ನೇರಳೆ, ಸೀಬೆ, ದ್ರಾಕ್ಷಿ, ಕಲ್ಲಂಗಡಿ ಮುಂತಾದುವುಗಳನ್ನೂ ಬೆಳೆದು ದಕ್ಕಿಸಿಕೊಂಡಿದ್ದಾರೆ. ಅವರು ಬೆಳೆದಿರುವ ರಸಪುರಿ, ತೋತಾಪುರಿ, ಬಾದಾಮಿ, ಆಮ್ರಪಾಲಿ, ರತ್ನಗಿರಿ, ಮಲಗೋವಾ ಮುಂತಾದ ವಿವಿಧ ಮಾವುಗಳ ಹೆಸರು ಕೇಳುವಾಗಲೇ ಬಾಯಲ್ಲಿ ನೀರೂರುತ್ತದೆ. ಗದ್ದೆಯಲ್ಲಿ ರಾಜಮುಡಿ, ರಾಜಭೋಗ, ರತ್ನಚೂಡಿ, ಅರಿಸಿಣಕೆಂಬೂತಿ, ಸಣ್ಣಕೆಂಬೂತಿ, ಹೊಟ್ಟೆಕೆಂಬೂತಿ, ಗೌರಿಸಣ್ಣ ಮುಂತಾದ ಜಾತಿಗಳನ್ನು ಬೆಳೆದು ಭತ್ತದ ಕೃಷಿಯಲ್ಲಿಯೂ ಗಟ್ಟಿಗರೆನಿಸಿದ್ದಾರೆ. ಆ ಬೆಳೆಗಾಗಿ ಕೃಷಿಪ್ರಶಸ್ತಿಯನ್ನೂ ಗೆದ್ದುಕೊಂಡಿದ್ದಾರೆ. ರಾಗಿ, ಹುರುಳಿ, ಎಳ್ಳು, ತಡಗುಣಿ, ಮ್ಯಂತ್ಯ, ಕೊತ್ತಂಬರಿ, ತೊಗರಿ, ಕಡಲೆ, ನೆಲಗಡಲೆ, ಅವರೆ, ಜೋಳ, ಮುಸುಕಿನ ಜೋಳ ಮೊದಲಾದ ಹೊಲದ ಬೆಳೆಗಳಲ್ಲೂ ಯಶಸ್ಸು ಗಳಿಸಿದ್ದಾರೆ. ಕೊಡಗಿಗೆ ಕಾಲಿಟ್ಟು ಎಸ್ಟೇಟುಗಳನ್ನು ಮಾಡಿ ಅಲ್ಲಿನ ಎಲ್ಲ ಬೆಳೆಗಳನ್ನೂ ಮಾಡಿ ಉತ್ತೀರ್ಣರಾಗಿದ್ದಾರೆ. ಊಟಿಗೆ ಲಗ್ಗೆಯಿಟ್ಟು ಟೀ ಬೆಳೆಯುವುದಕ್ಕೆ ಪ್ರಶಿಕ್ಷಣ ಪಡೆದು, ಟೀ ಎಸ್ಟೇಟು ಎಬ್ಬಿಸಿದ್ದಾರೆ. ಪುಷ್ಪಕೃಷಿಯಲ್ಲೂ ಅಲ್ಲಲ್ಲಿ ತಾವಿದ್ದೇವೆಂಬುದನ್ನು ತೋರಿಸಿಕೊಟ್ಟಿದ್ದಾರೆ. ಗಿಡಮೂಲಿಕೆಗಳನ್ನು ಬೆಳೆದು ವಿದೇಶಗಳಿಗೆ ರಫ್ತು ಮಾಡಿದ್ದಾರೆ. ನೋಡಿಯೇ ಬಿಡೋಣ ಎಂದು ಕೆಲವರು ಗೋಧಿಯನ್ನೂ ಬೆಳೆದಿದ್ದಾರೆ. ಕನ್ನಡನಾಡಿನಲ್ಲಿ ತೋಟ, ಗದ್ದೆ, ಹೊಲ ಎಂಬ ತ್ರಿವಿಧ ಬೇಸಾಯವೇನಿದೆಯೋ, ಅವುಗಳಲ್ಲಿ ಬೆಳೆಯಬಹುದಾದ ವಸ್ತುಗಳು

ಏನೇನಿವೆಯೋ - ಅವೆಲ್ಲವನ್ನೂ ಸಂಕೇತಿ ಕೃಷಿಕರು ಬೆಳೆದು ಜಯಭೇರಿ ಬಾರಿಸಿದ್ದಾರೆ. 'ಚಿಲ್ಕುಂದಕ್ಕೆ ಹೋಗಿ ನೋಡಿ, ಸಂಕೇತಿಗಳು ತೋಟದಲ್ಲಿ ಕಚ್ಚೆಬಿಗಿದು ಹೇಗೆ ದುಡಿಯುತ್ತಾರೆಂಬುದನ್ನು ತಿಳಿಯಿರಿ' ಎಂದು ಕನ್ನಡನಾಡಿನ ಮುಖ್ಯಮಂತ್ರಿಗಳಾಗಿದ್ದ ದೇವರಾಜ ಅರಸು ಅವರಿಂದಲೇ ಶಹಬಾಸುಗಿರಿ ಪಡೆದವರಾಗಿದ್ದಾರೆ ಸಂಕೇತಿಗಳು. ಮರಗಳನ್ನು ಬೆಳೆಸುವುದರಲ್ಲಿಯೂ ಮುಂದಾಗಿ ತೇಗದ ಮರಕ್ಕೆ ಪ್ರಾಶಸ್ತ್ಯ ನೀಡಿದ್ದಾರೆ. ಸರ್ವೆಮರ, ಸೌದೆಮರಗಳು, ಸಿಲ್ವರ್ ಗಿಡ, ಸಬಾಬುಲ್ ಎಲ್ಲವನ್ನೂ ಬೆಳೆಸಿದ್ದಾರೆ. ರೇಷ್ಮೆ ಬೇಸಾಯಕ್ಕೂ ಕೈಯಿಕ್ಕಿ ಅದು ಪ್ರಾಣಿ ಹಿಂಸೆಗೆ ದಾರಿಯಾಗುತ್ತದೆಯೆಂದು ನೊಂದು ಕೈಬಿಟ್ಟಿದ್ದಾರೆ.

ತ್ರಿವಿಧಕ್ಷೇತ್ರಗಳಲ್ಲಿ ಸಂಕೇತಿಗಳು ಒಂದೊಂದೂ ಬೆಳೆಯನ್ನು ಹೇಗೆ ಮೇಲೆ ತರುತ್ತಾರೆ, ಕಾಲಕಾಲಕ್ಕೆ ಅವರು ಮಾಡುವ ಆರೈಕೆಗಳೇನು, ರೋಗಗಳನ್ನು ತಡೆಗಟ್ಟಲು ಏನು ಕ್ರಮ ಕೈಗೊಳ್ಳುತ್ತಾರೆ, ಬೆಳೆ ಕೈಗೆ ಬಂದಾಗ ಅದನ್ನು ಸಂಸ್ಕರಿಸಿ ಮನೆದುಂಬಿಸಿಕೊಳ್ಳುವ ಬಗೆ ಹೇಗೆ, ಸಂಗ್ರಹಣೆಯ ವಿಧಾನಗಳೇನು, ಮಾರಾಟದ ಕ್ರಮವೇನು ಮುಂತಾದ ಎಲ್ಲ ವಿವರಗಳೂ ಇಲ್ಲಿ ದಾಖಲಾಗಿವೆ. ಹೊಸದಾಗಿ ತೋಟವೆಬ್ಬಿಸಬೇಕೆ, ಕೃಷಿ ಮಾಡದೆ ಪಾಳುಗೆಡವಿರುವ ತೋಟಗಳಿಗೆ ಪ್ರಾಣಪ್ರತಿಷ್ಠೆಯಾಗಬೇಕೆ, ಬಂಜರುಭೂಮಿಯನ್ನು ಸುಂದರಭೂಮಿಯಾಗಿಸಬೇಕೆ, ಬಗನಿಮರ ಗಜ್ಜುಗದಮೆಳೆಯ ನಿರುಪಯುಕ್ತ ಕಾಡನ್ನು ನಂದನವನವಾಗಿಸಬೇಕೆ, ಒಂದೇ ನೆಲದಲ್ಲಿ ವೈವಿಧ್ಯಮಯವಾದ ಬೆಳೆಗಳನ್ನು ರೂಢಿಸಬೇಕೆ, ಬರಗಾಲದಲ್ಲಿ ತೋಟಗಳು ಸಾಯದಂತೆ ಸಂರಕ್ಷಿಸಬೇಕೆ - ಅದೆಲ್ಲವನ್ನೂ ಸಂಕೇತಿಕೃಷಿಕರು ಮಾಡಿತೋರಿಸಿದ್ದಾರೆ.

ಈ ಎಲ್ಲ ವಿಚಾರಗಳನ್ನೂ ಕೇಶವಮೂರ್ತಿಯವರು ಸಂಕೇತಿಗಳ ಬಾಯಿಯಿಂದಲೇ ಧ್ವನಿಮುದ್ರಿಸಿಕೊಂಡು, ಅದನ್ನು ಕ್ರಮಬದ್ಧವಾಗಿ ಬರಹರೂಪಕ್ಕೆ ತಂದಿದ್ದಾರೆ. 'ಸಂಕೇತಿ' ಎಂಬ ನೆಪದಲ್ಲಿ ಅವರು ಈ ಗ್ರಂಥದ ಮೂಲಕ ಕನ್ನಡನಾಡಿನ ಕೃಷಿಜಗತ್ತಿನ ವಿಶ್ವರೂಪದರ್ಶನವನ್ನೇ ನಮಗೆ ಮಾಡಿಸಿದ್ದಾರೆ; ಕೃತಾರ್ಥರಾಗಿದ್ದಾರೆ. ಚನ್ನರಾಯಪಟ್ಟಣದವರಾದ ಕೇಶವಮೂರ್ತಿಗಳು ಬ್ರಾಹ್ಮಣರಲ್ಲಿ ಬಬ್ಬೂರುಕಮ್ಮೆ ಪಂಗಡದವರು, ಸಂಕೇತಿಗಳಲ್ಲ. ಕೃಷಿವಿಜ್ಞಾನದಲ್ಲಿ ಎಂ.ಎಸ್ಸಿ, ಪದವೀಧರರಾದ ಅವರು ಸಂಕೇತಿ ಕೃಷಿಯಲ್ಲಿ ಏನೋ ಒಂದಿಷ್ಟು ವೈಶಿಷ್ಟ್ಯವಿದೆಯೆಂಬುದನ್ನು ತೌಲನಿಕವಾಗಿ ಕಂಡುಕೊಂಡಿದ್ದಾರೆ. ಆಕಾಶವಾಣಿಯಲ್ಲಿರುವ ಅವರಿಗೆ ಅಲ್ಲಿಯೂ ಕೃಷಿತರಂಗಗಳದೇ ಸ್ಪಂದನ. ಹೀಗಾಗಿ ಅವರು ಕೈಗೊಂಡ ಕಾರ್ಯಕ್ಕೆ ಪೂರ್ಣಯಶಸ್ಸು ಲಭ್ಯವಾಗಿದೆ.

ಕೇಶವಮೂರ್ತಿಗಳು ಅಷ್ಟರಿಂದಲೇ ತೃಪ್ತರಾಗಿಲ್ಲ. ತಾವು ಕ್ಷೇತ್ರಕಾರ್ಯದಲ್ಲಿ ಮಾತನಾಡಿಸಿದ ಸಂಕೇತಿ ಕೃಷಿಕರ ವಂಶಾನುಚರಿತೆ, ಹಿಂದಿನವರು ಕೃಷಿಯಲ್ಲಿ ಅನುಭವಿಸಿದ ಕಷ್ಟಪರಂಪರೆಗಳು, ವರ್ತಮಾನದಲ್ಲಿ ಸಂಕೇತಿ ಕೃಷಿಕರಿಗೆ ಲಭ್ಯವಾಗಿರುವ ಸೌಲಭ್ಯಗಳು, ಕೃಷಿಯಲ್ಲಿ ಅವರ ಪ್ರಯೋಗಶೀಲತೆ, ಕೃಷಿಯ ಜನಪದೀಯ ಆಚರಣೆಗಳು, ಅವರ ಸಮಾಜಸೇವಾಕಾರ್ಯಗಳು, ಮನೋರಂಜನೆಯ ಆಶ್ರಯಗಳು, ವಿವಾಹಾದಿ ಸಾಂಸ್ಕೃತಿಕ ವೈಭವ, ವಿವಿಧ ಕ್ಷೇತ್ರಗಳಲ್ಲಿ ಅವರ ಪ್ರತಿಭಾವಿಲಾಸ, ಅವರ ಜೀವನಶೈಲಿ, ಅವರ ಉಪಕಸುಬುಗಳು, ಅವರ ಅತಿಥಿಸತ್ಕಾರಪ್ರಿಯತೆ, ಅವರು ಅಪ್ಪಿಕೊಂಡ ಜೀವನಮೌಲ್ಯಗಳು, ಅವರ ಕಾಣ್ಕೆಗಳು, ಕನಸುಗಳು, ನನಸುಗಳು, ಭವಿಷ್ಯದಲ್ಲಿ ಕೃಷಿಕರೆಂಬ ಪಟ್ಟ ಅವರಿಗೆ ಉಳಿಯುತ್ತದೆಯೇ ಮುಂತಾದುವನ್ನೆಲ್ಲ ಪ್ರಾಸಂಗಿಕವಾಗಿ ದಾಖಲಿಸಿದ್ದಾರೆ. ಭೂತವರ್ತಮಾನಭವಿಷ್ಯತ್ತುಗಳನ್ನೆಲ್ಲ ನವರಸಭರಿತವಾಗಿ ಕರತಲಾಮಲಕವಾಗಿಸಿದ್ದಾರೆ. ಈ ಮೂಲಕ ಈ ಗ್ರಂಥವು ಸಂಕೇತಿ ಬದುಕಿನ ವಿಶ್ವಕೋಶವಾಗಿ ಪರಿಣಮಿಸಿದೆ. ಬಿಡಿಬಿಡಿ ಸಂದರ್ಶನಗಳು ಅಷ್ಟರಲ್ಲೇ ಮುಗಿಯದೆ, 'ದರ್ಶನ'ಗಳಾಗಿ ಅನುರಣನಗೊಂಡಿವೆ. ಕೇಶವಮೂರ್ತಿಗಳು ಕೃಷಿಲೇಖನಗಳನ್ನು ಬರೆದಿರಬಹುದು, ಗ್ರಂಥಗಳನ್ನು ಸಂಪಾದಿಸಿ ಕೊಟ್ಟಿರಬಹುದು; ಆದರೆ ಈ ಉದ್ಗ್ರಂಥದ ಮೂಲಕ ಅವರು ಅಜರಾಮರ ಕೀರ್ತಿಗೆ ಪಾತ್ರರಾಗಿದ್ದಾರೆ.

ಸಂಕೇತಿ ಕೃಷಿಕರ ಹಿರಿಮೆಗರಿಮೆಗಳು

ಹಳೆಯ ಪೀಳಿಗೆಯ ಸಂಕೇತಿಗಳ ಹಿರಿಮೆಗರಿಮೆಮಹಿಮೆಗಳನ್ನೂ ಕೇಶವಮೂರ್ತಿಗಳು ಈ ಕೃತಿಯಲ್ಲಿ ಸೆರೆಹಿಡಿದಿದ್ದಾರೆ. ಹಳಬರು ಹೆಚ್ಚು ಸ್ವಾವಲಂಬಿಗಳಾಗಿದ್ದರು. ತಾವೇ ಗಟ್ಟಿಮುಟ್ಟಾದ ಮನೆಗಳನ್ನು ಕಟ್ಟಿಕೊಳ್ಳುತ್ತಿದ್ದರು. ಬಡಗಿ ಕೆಲಸವನ್ನೂ ಕೆಲವರು ತಾವೇ ಮಾಡುತ್ತ ಕಂಬಗಳಿಗೆ ಚಿತ್ತಾರ ಬಿಡಿಸುತ್ತಿದ್ದರು. ಕೆಲವು ಮನೆಗಳಂತೂ ನೂರಾರು ಜನ ಕುಳಿತು ಊಟಮಾಡಬಹುದಾದಷ್ಟು ದೇಶೋವಿಶಾಲವಾಗಿವೆ. ಹಂಚು ಕೈಯಾಡುವುದು, ಸೌದೆಸೀಳುವುದು, ಹಗ್ಗಹೊಸೆಯುವುದು, ಚಾಪೆಹೆಣೆಯುವುದು, ನೇಗಿಲು ಕೆತ್ತುವುದು, ಗೊಬ್ಬರತಯಾರಿಸುವುದು, ಬಾವಿತೋಡುವುದು ಮುಂತಾದ ಕೆಲಸಗಳನ್ನೆಲ್ಲ ಕೈಯಾರೆ ಮಾಡುತ್ತಿದ್ದರು. ಹುಣಿಸೆಮರದ ನೇಗಿಲಿನಲ್ಲಿ ಉತ್ತರೆ, ಉತ್ತರೆ ಮಳೆಯ ಸಿಡಿಲು ಬಡಿಯುತ್ತದೆಂದು ಆ ಮರವನ್ನು ಉಪಯೋಗಿಸುತ್ತಿರಲಿಲ್ಲ. ಕಲ್ಲುಹೊಡೆದೇ ಕಾಯಿಬೀಳಿಸುವ ಗುರಿಕಾರರಿದ್ದರು. ಅಡಕೆ ಕೀಳಲು ಮೊದಲ ಮರಕ್ಕೆ ಹತ್ತಿದರೆ, ಮರದಿಂದ ಮರಕ್ಕೆ ಆಂಜನೇಯಸ್ವಾಮಿಯಂತೆ ಅಲ್ಲಲ್ಲೇ ತಮ್ಮನ್ನು ವರ್ಗಾಯಿಸಿಕೊಳ್ಳುತ್ತ, ಕೊನೆಯ ಮರದಿಂದ ಇಳಿಯುವ ಚಾತುರ್ಯವನ್ನು ಮೆರೆಯುತ್ತಿದ್ದರು.

ಕೃಷಿಯ ಜೊತೆಗೇ ವೇದಾಧ್ಯಯನ ಸಂಪನ್ನರೂ ಆಗುತ್ತಿದ್ದರು. ಗುಣಿಹಾಕುತ್ತಲೇ, ಹಂಬುಕಟ್ಟುತ್ತಲೇ, ನೀರು ಹಾಯಿಸುತ್ತಲೇ ತಮ್ಮ ಶಿಷ್ಯರಿಗೆ, ಮಕ್ಕಳಿಗೆ ವೇದಾಧ್ಯಯನ ಮಾಡಿಸುವವರೂ ಇದ್ದರು. ಅಂತಹ ವೇದಬ್ರಹ್ಮರನ್ನು ಸಭೆಸಮಾರಂಭಗಳಾದಾಗ ವಿದ್ವತ್ತಾಂಬೂಲವನ್ನಿತ್ತು ಗೌರವಿಸುತ್ತಿದ್ದರು. ತೋಟಗಳಲ್ಲಿಯೇ ಸಂಗೀತವನ್ನು ಕಲಿಸುವವರೂ ಇದ್ದರು. ತಮ್ಮದೇ ಪಶುವಿಜ್ಞಾನವನ್ನು ಅವರು ರೂಢಿಸಿಕೊಂಡಿದ್ದರು. ದನಕರುಗಳಿಗೆ ತಗಲುತ್ತಿದ್ದ ರೋಗಗಳಿಗೆ ತಾವೇ ಔಷಧಿ ಮಾಡುತ್ತಿದ್ದರು. ಜಾತ್ರೆಗಳಿಗೆ ಹೋಗಿ ಎತ್ತುಹೋರಿಹಸುಗಳನ್ನು ಮಾರಾಟ ಮಾಡುತ್ತಿದ್ದರು, ಕೊಂಡುತರುತ್ತಲೂ ಇದ್ದರು. ಮುಖಲಕ್ಷಣ, ಕೊಂಬುಗಳು, ಹಲ್ಲುಗಳು, ಕಣ್ಣುಗಳು, ಮೈಬಣ್ಣ, ಕಾಲುಗಳು, ಗೊರಸುಗಳು, ಸುಳಿಗಳು - ಒಂದೊಂದೂ ಹೇಗಿರಬೇಕು ಎಂಬುದನ್ನೆಲ್ಲ ಹಸನಾಗಿ ಅರಿತುಕೊಂಡಿದ್ದರು. ರಾಜಸುಳಿ, ಹೀನಸುಳಿ, ಕೀಲುಸುಳಿ, ಕಾಗೆಸುಳಿ, ಬೇಡಿಸುಳಿ, ಪಾತಾಳಸುಳಿ, ಪರಸುಳಿ ಮುಂತಾದ ಸುಳಿಶಾಸ್ತ್ರವನ್ನು ಪೂರ್ಣವಾಗಿ ತಿಳಿದಿದ್ದರು. 'ಇಂಗುತೆಂಗು ಇದ್ದರೆ ಮಂಗಮ್ಮನೂ ಅಟ್ಟಾಳು' ಎಂಬ ಗಾದೆಯಂತೆ ನೀರು ಗೊಬ್ಬರವಿದ್ದರೆ ದಡ್ಡನೂ ಕೃಷಿ ಮಾಡಿಯಾನು ಎಂದು ಹೇಳುತ್ತ ಕೃಷಿಯಲ್ಲಿ ಲೀಲಾಜಾಲವಾಗಿ ತಮ್ಮನ್ನು ತೊಡಗಿಸಿಕೊಂಡಿದ್ದರು.

ಅರಮನೆಗಳ ಸಂಪರ್ಕವೂ ಅಂದಿನ ಕೃಷಿಕರಿಗಿತ್ತು. ವೇದಶಾಸ್ತ್ರಪಾರಂಗತರಾಗಿ, ಆಯುರ್ವೇದ ವೈದ್ಯರಾಗಿ, ಸಂಗೀತ ವಿದ್ವಾಂಸರಾಗಿ ಆಸ್ಥಾನಗಳನ್ನು ಅಲಂಕರಿಸುತ್ತಿದ್ದರು. ಆ ಗುಂಪಿನಲ್ಲಿ ಆಂಜನೇಯ ಆರಾಧಕರೂ, ದತ್ತೋಪಾಸಕರೂ ಇರುತ್ತಿದ್ದರು. ಮಹಾರಾಜರ ಎದುರೇ ಅರಮನೆ ಜಟ್ಟಿಗಳನ್ನು ಮಣ್ಣುಮುಕ್ಕಿಸಿದ ಸಂಕೇತಿಗಳು ಆಗಿಹೋಗಿದ್ದಾರೆ. ಆ ರಾಜಸಂಪರ್ಕದ ಕುರುಹಾಗಿ ಇಂದಿಗೂ ಕೆಲವರ ಮನೆಗಳಲ್ಲಿ ಖಡ್ಗಗಳು ಉಳಿದುಬಂದಿವೆ.

ಸುಖವು ಏಕಮುಖಿ ದುಃಖವು ಸಹಸ್ರಮುಖಿ

ನಮಗೆಲ್ಲ ಹುಟ್ಟಿಬರಲು ಒಂದೇ ಮಾರ್ಗ, ಸಾಯಲು ಸಾವಿರ ಮಾರ್ಗಗಳು. ಸುಖಕ್ಕೆ ಒಂದೇ ಮುಖ, ದುಃಖಕ್ಕೆ ಸಾವಿರ ಮುಖಗಳು. ಹಿಂದೆ ಸಂಕೇತಿ ಕೃಷಿಕರು ಗ್ರಾಮಜೀವನದಲ್ಲಿ ಅನಂತ ಕಷ್ಟಗಳನ್ನು ಅನುಭವಿಸುತ್ತಿದ್ದರು. ಸಂಸ್ಕೃತದಲ್ಲಿ ನೀರಿಗಿರುವ ಪರ್ಯಾಯಶಬ್ದಗಳಲ್ಲಿ ಜೀವನ ಎಂಬುದೂ ಒಂದು. ಆ 'ಜೀವನ'ಕ್ಕೆ ಕ್ಷಾಮವಾಗಿ ಪಡಬಾರದ ಪಾಡು ಪಡುತ್ತಿದ್ದರು. ಆರು ತಿಂಗಳು ನೀರಿಲ್ಲ, ಆರು ತಿಂಗಳು ಕೂಳಿಲ್ಲ ಎಂಬ ಪರಿಸ್ಥಿತಿ. ಬಾವಿಗಳು ಬತ್ತಿ ಹೋಗುತ್ತಿದ್ದುವು. ಹುಣ್ಣಿಮೆಯಲ್ಲಿ ತುಂಬಿದರೆ ಅಮಾವಾಸ್ಯೆಗೆ ಬರಿದಾಗುವ ತಟ್ಟೆಕೆರೆಗಳನ್ನು ನಂಬಿ ಬಾಳಬೇಕಾಗಿತ್ತು. ಕೆರೆಯಿಂದ ನೀರುಹೊತ್ತು ತೋಟವನ್ನು ಕಾಪಾಡಬೇಕು, ತೋಟದಿಂದ ನೀರು ಹೊತ್ತು ಮನೆಯನ್ನು ಕಾಪಾಡಬೇಕು. ಗೋಡುಗೊಬ್ಬರಗಳನ್ನು ತಲೆಯ ಮೇಲೆಯೇ ಹೊತ್ತು ತೋಟಕ್ಕೆ ಸಾಗಿಸುತ್ತಿದ್ದರು. ವೀಳ್ಯದೆಲೆಯೋ ಬಾಳೆಗೊನೆಯೋ ತಲೆಯಮೇಲೆ ಹೊತ್ತು, ಸಂತೆಗಳಿಗೆ ಹೋಗಿ, ಮಾರಾಟಮಾಡಿ ಬರುತ್ತಿದ್ದರು. ಕಳ್ಳರಕಾಟ ಹೆಚ್ಚಾದಾಗ ಹಗಲೂರಾತ್ರಿ ತೋಟ ಕಾಯುತ್ತಿದ್ದರು. ಬಿತ್ತನೆಗೆ ತೆಂಗು ಬೇಕಾದಾಗ ಮರವೇರಿ ಮಾಲೀಕನಿಗೆ ಕೆಡವಿಕೊಟ್ಟು, ಮರಕ್ಕೊಂದು ಕೂಲಿಕಾಯಿ ಪಡೆದು, ತೋಟ ಬೆಳೆಸುತ್ತಿದ್ದರು. ಸೈಕಲ್ಲುಗಳು ಸಿಕ್ಕಿದರಂತೂ ಪುಷ್ಪಕವಿಮಾನವೇ ಸಿಕ್ಕಿದಷ್ಟು ಹಿಗ್ಗುತ್ತಿದ್ದರು. ಅದರ ಮೇಲೆಯೇ ಹೊರೆಗಳನ್ನು ಏರಿಸಿ ವಿಲೇವಾರಿ ಮಾಡುತ್ತಿದ್ದರು. ತಮ್ಮ ಊರಿನಮೇಲೆ ದಿವಾನ್ ಪೂರ್ಣಯ್ಯನವರು ಕುದುರೆಯೇರಿ ಹೋಗುವಾಗ, ವಾರದ ಖರ್ಚಿಗೆ ನಾಲ್ಕುಕಾಸು ಸಿಗಲೆಂದು, ಹಳ್ಳಿಮೈಸೂರು ಸಂಕೇತಿಗಳು ಅವರನ್ನು ಕಾಡಿಬೇಡಿ, ವಾರದಸಂತೆ ಹಾಕಿಸಿಕೊಂಡದ್ದೇ ಅಂದಿನ ದೊಡ್ಡ ಸಾಧನೆಯಾಗಿತ್ತು. ವಿದ್ಯಾಭ್ಯಾಸಕ್ಕೆಂದು ನಗರಕ್ಕೆ ಹೋದ ಹುಡುಗರು ಭಿಕ್ಷಾನ್ನ, ವಾರಾನ್ನಗಳಲ್ಲಿ ಕಾಲತಳ್ಳುತ್ತಿದ್ದರು.

ಕಷ್ಟದ ದಿನಗಳಲ್ಲಿ ಅಕ್ಕಿತೌಡಿನ ಸಣ್ಣನುಚ್ಚುಗಳನ್ನು ಶೇಖರಿಸಿ ಉಪ್ಪಿಟ್ಟು ಮಾಡಿ ಕಾಲನೂಕುತ್ತಿದ್ದರು. ರಾತ್ರಿವೇಳೆಗಳಲ್ಲಿ ಇದ್ದಷ್ಟನ್ನೇ ಒಟ್ಟಿಗೆ ಕಲಸಿ, ಕೈತುತ್ತು ಹಂಚಿ, ಕೈತೊಳೆದುಕೊಳ್ಳುತ್ತಿದ್ದರು. ಕಡಲೇಕಾಯಿ, ಸೀಬೇಕಾಯಿಗಳಲ್ಲೇ ಕೆಲವು ರಾತ್ರಿಗಳು ಕಳೆಯುತ್ತಿದ್ದುವು. ಈ ಹೊತ್ತು ಸೋಮವಾರ, ಈ ಹೊತ್ತು ಏಕಾದಶಿ, ಈ ಹೊತ್ತು ಶನಿವಾರ ಎಂದು ಊಟವಿಲ್ಲದ ರಾತ್ರಿಗಳನ್ನು ವ್ರತಗಳಾಗಿ ಪರಿವರ್ತಿಸಿಕೊಳ್ಳುತ್ತಿದ್ದರು. ನೆಂಟರು ಬಂದರೆ 'ನಮಗೇ ತಿನ್ನಲು ಇಲ್ಲ, ಯಾಕಾದರೂ ಇವರು ಬಂದರಪ್ಪಾ' ಎಂದು ಪರಿತಪಿಸುತ್ತಿದ್ದರು.

ಮಹಿಳೆಯರಂತೂ ಗಾಣದೆತ್ತಿನಂತೆ ದುಡಿದರೂ ತೀರುತ್ತಿರಲಿಲ್ಲ. ಟಿಬೇಟಿಯನರಂತೆ ಮಕ್ಕಳನ್ನು ಬೆನ್ನಿಗೆ ಕಟ್ಟಿಕೊಂಡು ನೀರು ಹೊರುತ್ತಿದ್ದರು. ಭತ್ತ ಕುಟ್ಟಬೇಕು, ಅಕ್ಕಿ ರಾಗಿ ಬೀಸಬೇಕು, ಹಾಲುಕರೆಯಬೇಕು, ಮೊಸರು ಕಡೆಯಬೇಕು, ದನಕರುಗಳ ಯೋಗಕ್ಷೇಮ ನೋಡಿಕೊಳ್ಳಬೇಕು, ಅಡಿಗೆ ಕೆಲಸಗಳು ಸರಿಯೇ ಸರಿ. ಕೆಲವು ಹೆಣ್ಣುಮಕ್ಕಳಿಗಂತೂ 'ಹುಟ್ಟಿದಮನೆ ಶಿವರಾತ್ರಿ, ಹೊಕ್ಕಮನೆ ಏಕಾದಶಿ' ಎನ್ನುವಂತಾಗುತ್ತಿತ್ತು. ಮನೆಯಲ್ಲಿ ನಾಲ್ಕಾರು ಮಕ್ಕಳು. ಬದುಕನ್ನು ಸರಿದೂಗಿಸಲು ಉಳ್ಳವರ ಮನೆಗಳಿಗೆ ಹೋಗಿ ಭತ್ತ, ಅವಲಕ್ಕಿ, ಮೆಣಸಿನಪುಡಿ ಕುಟ್ಟಿಕೊಡುವುದು, ಅಡಿಕೆ ಸುಲಿಯುವುದು, ನೀರುಸೇದಿ ತುಂಬಿಸಿಕೊಡುವುದು, ಬಾಣಂತನ ಮಾಡುವುದು, ಮುತ್ತುಗದ ಎಲೆ ಹಚ್ಚುವುದು ಮುಂತಾದ ದುಡಿಮೆಯಿಂದ ಸಿಕ್ಕಿದಷ್ಟನ್ನು ಸಂಗ್ರಹಿಸಿಕೊಳ್ಳುತ್ತಿದ್ದರು. ಪುರುಷರು ತೋಟದಲ್ಲಿ ಕೂಲಿಕೆಲಸ ಮಾಡುವುದು, ದನಕರುಗಳನ್ನು ಮೇಯಿಸಿಕೊಡುವುದು, ಮರಹತ್ತಿ

ಕಾಯಿಕೀಳುವುದು ಮೊದಲಾದ ಕೆಲಸಗಳನ್ನು ಮಾಡುತ್ತಿದ್ದರು. ಕಣ್ಣೀರಿನಲ್ಲಿ ಕೈತೊಳೆಯುವ ದಿನಗಳು ತುಂಬಾ ಇರುತ್ತಿದ್ದುವು. 'ನಾವೇಕೆ ಬದುಕಿದ್ದೇವೆ, ಸತ್ತು ಹೋಗಬಾರದೇ' ಎನ್ನುವಂತಹ ದುರ್ಭರ ಸನ್ನಿವೇಶಗಳಿಗೆ ತಳ್ಳಲ್ಪಡುತ್ತಿದ್ದರು. ಗಂಡುಮಕ್ಕಳನ್ನು ಓದಿಸುವುದಕ್ಕೋ, ಹೆಣ್ಣುಮಕ್ಕಳನ್ನು ದಾಟಿಸುವುದಕ್ಕೋ ಚಿನ್ನಾಭರಣಗಳನ್ನೂ ಜಮೀನುಗಳನ್ನೂ ಮಾರಾಟಮಾಡಿ ಬರಿದಾಗುತ್ತಿದ್ದರು.

ಇಷ್ಟು ಕಷ್ಟಗಳೇ ಸಾಲದು ಎನ್ನುವಂತೆ ಆಗಾಗ ಪಂಜುಗಳ್ಳರು ರಾತ್ರಿಯಲ್ಲಿ ಮನೆಗಳಿಗೆ ನುಗ್ಗಿ, ಮುಖವನ್ನೇ ಸೀಯುತ್ತೇವೆಂದು ಅಂಜಿಸಿ, ಇದ್ದ ನಗನಾಣ್ಯಗಳನ್ನೆಲ್ಲ ಗೋರಿಕೊಂಡು ಹೋಗುತ್ತಿದ್ದರು. ಪ್ಲೇಗುಬಂದಾಗ ಮನೆಯನ್ನೇ ತೊರೆದು, ಊರಹೊರಗೆ ಗುಡಿಸಲು ಹಾಕಿಕೊಂಡು ಎರಡೆರಡು ತಿಂಗಳು ವನವಾಸ ಅನುಭವಿಸುತ್ತಿದ್ದರು. ಆಗಾಗ ಸಾಲಬಾಧೆಗೆ ಸಿಲುಕಿ ಕಂಗೆಡುತ್ತಿದ್ದರು. ಹಣ ತೀರಿಸುವುದರೊಳಗೇ ಸತ್ತುಹೋದರೆ 'ಮೊದಲು ಹಣತೀರಿಸಿ, ಆಮೇಲೆ ಹೆಣ ಎತ್ತಿ' ಎಂದು ಹೇಳಿಸಿಕೊಳ್ಳುವಂತಹ ಕ್ರೂರಸನ್ನಿವೇಶಗಳನ್ನು ಎದುರಿಸುತ್ತಿದ್ದರು. ಇನ್ನು ಭೂಮಿಕಾಣಿಯೇನೂ ಇಲ್ಲದ ಸಂಕೇತಿಗಳು ಅದೆಷ್ಟು ಕಷ್ಟಗಳನ್ನು ಅನುಭವಿಸುತ್ತಿದ್ದರೋ ಬಲ್ಲವರಾರು!

ಸಮಕಾಲೀನ ಸ್ಥಿತಿಗತಿಗಳು

ಹಿಂದಿನ ಕಾಲದ ಸಂಕೇತಿ ಕೃಷಿಕರು ಅನುಭವಿಸುತ್ತಿದ್ದ ಕಷ್ಟಗಳಲ್ಲಿ ಎಷ್ಟೋಪಾಲು ಈಗಿಲ್ಲ. ಎಲ್ಲ ದಿಕ್ಕುಗಳಲ್ಲೂ ಗ್ರಾಮಗಳು ಸುಧಾರಣೆಗೊಂಡಿವೆ. ಕೃಷಿಕ್ಷೇತ್ರದ ಹೊಸಹೊಸ ಆವಿಷ್ಕಾರಗಳಿಗೆ ಸಂಕೇತಿಗಳು ಸ್ಪಂದಿಸುತ್ತ ಅಭಿವೃದ್ಧಿಯ ಪಥದಲ್ಲಿ ಸಾಗುತ್ತಿದ್ದಾರೆ. ಎತ್ತುಗಾಡಿನೇಗಿಲುದನಕರುಗಳ ಜೊತೆಗೆ ಟ್ರಾಕ್ಟರ್, ಟಿಲ್ಲರ್‌ಗಳನ್ನು ತಾವೇ ಚಲಾಯಿಸುತ್ತ ಹೊಸಕೃಷಿಗೆ ಹಳಬರಾಗುತ್ತಿದ್ದಾರೆ. ಕೆಲವರು ಮೈಕ್ರೋಟ್ಯೂಬ್‌ಸಿಸ್ಟಂನಿಂದ ತೋಟಕ್ಕೆಲ್ಲ ಹನಿನೀರಾವರಿಪದ್ಧತಿಯನ್ನು ಜೋಡಿಸಿಕೊಂಡಿದ್ದಾರೆ. ಸುಧಾರಿತ ಟೈರ್‌ಗಾಡಿಗಳನ್ನು ತಾವೇ ನಿರ್ಮಿಸಿಕೊಂಡಿದ್ದಾರೆ. ಅಡಕೆ ಕತ್ತರಿಸಲು ಸರಳಸಾಧನವೊಂದನ್ನು ತಾವೇ ಕಂಡುಹಿಡಿದಿದ್ದಾರೆ. ಕೃಷಿವಿಜ್ಞಾನ ಪದವೀಧರರು, ಡಾಕ್ಟರೇಟ್ ಪದವೀಧರರು ಹಲವರಿದ್ದಾರೆ. ಯಾವ ಮಳೆಯಿಂದ ಕೃಷಿಭೂಮಿಯಮೇಲೆ ಯಾವ ಪರಿಣಾಮ, ಯಾವ ಕಾಲಕ್ಕೆ ಯಾವ ಬೆಳೆ, ಯಾವ ಆರೈಕೆ ಎಂಬ ಋತುಪರಿವರ್ತನೆಯ ಹಿನ್ನೆಲೆಯನ್ನೆಲ್ಲ ಚೆನ್ನಾಗಿ ಅರಿತು ಕಾರ್ಯೋನ್ಮುಖರಾಗುತ್ತಿದ್ದಾರೆ. ಪರಂಪರಾಗತವಾದ ತಮ್ಮ ಕೃಷಿಜ್ಞಾನಕ್ಕೆ, ಆಧುನಿಕ ಕೃಷಿವಿಜ್ಞಾನದ ಸದ್ವಿಚಾರಗಳನ್ನು ಕಸಿಮಾಡಿ ಪುರೋಭಿವೃದ್ಧಿಯನ್ನು ಸಾಧಿಸುತ್ತಿದ್ದಾರೆ. ಹೊಸಹೊಸ ವಾಣಿಜ್ಯ ಬೆಳೆಗಳು, ರಾಸಾಯನಿಕಗಳು, ಹೈಬ್ರಿಡ್ ತಳಿಗಳು, ವೃಕ್ಷಾಯುರ್ವೇದ ಮುಂತಾದ ಎಲ್ಲವನ್ನೂ ತಮ್ಮ ತೆಕ್ಕೆಗೆ ತೆಗೆದುಕೊಂಡಿದ್ದಾರೆ. ಅಡಿಕೆ ತೆಂಗು ಮುಂತಾದುವುಗಳ ನರ್ಸರಿ ಮಾಡುತ್ತ ಅದನ್ನೂ ತಮ್ಮ ಕೃಷಿಯ ಒಂದಂಗವಾಗಿಸಿಕೊಂಡಿದ್ದಾರೆ. ಮನೆಗಳಲ್ಲಿ ಬಳಸುತ್ತಿದ್ದ ಸೊಪ್ಪು, ಸುಂಡೇಕಾಯಿ, ಚಕ್ಕಲುಬಾಳೇಕಾಯಿ, ಪರಂಗಿಕಾಯಿ, ಕುಂಬಳಕಾಯಿ, ಕೆಸುವುಗಳ ಸರಳ ತರಕಾರಿಗಳನ್ನು ಹಾಯ್ದು ಮುಂದೆ ಬಂದಿದ್ದಾರೆ. ಕೊಳವೆಬಾವಿಗಳು ವರದಾನವಾಗಿವೆ.

ಸಂಕೇತಿಕೃಷಿಕರು ತಾವೇ ತೆಪ್ಪಗಳನ್ನು ಹುಟ್ಟುಹಾಕುತ್ತಾರೆ. ಕೋತಿಗಳ ಕಾಟ ಮಿತಿಮೀರಿದಾಗ ತಾವೇ ನಿರ್ಮಿಸಿದ ಬೋನುಗಳಿಗೆ ಬೀಳಿಸಿ, ಉಪವಾಸ ಕೆಡವಿ, ಮೆತ್ತಗಾದಾಗ ಕಾಡುಗಳಿಗೆ ಬಿಟ್ಟು ಬರುತ್ತಾರೆ. ಎರೆಹುಳುಗಳನ್ನು ಸಾಕುತ್ತಿದ್ದಾರೆ. ಗೋಶಾಲೆಗಳನ್ನು ವಿಸ್ತರಿಸಿಕೊಂಡು ಗೋಬರ್‌ಗ್ಯಾಸ್‌ಪ್ಲಾಂಟುಗಳನ್ನು ಹೂಡಿಕೊಂಡಿದ್ದಾರೆ. ಕೀಟನಿರ್ವಹಣಶಾಸ್ತ್ರವನ್ನೆಲ್ಲ ಕರತಲಾಮಲಕ ಮಾಡಿಕೊಂಡಿದ್ದಾರೆ. 'ಒಂಟೆತ್ತಿನ ಬೇಸಾಯ' ಎಂಬ ಹೊಸ ಬಗೆಯನ್ನು ಕಂಡುಕೊಂಡಿದ್ದಾರೆ. ಒಬ್ಬರ ತೋಟಕ್ಕೊಬ್ಬರು ಹೋಗಿ ದುಡಿದು ಬರುವ ಮುಯ್ಯಾಳು ಪದ್ಧತಿಯನ್ನು ಪುನರುಜ್ಜೀವನಗೊಳಿಸುತ್ತಿದ್ದಾರೆ. ಒಂದು ಬೆಳೆ ಒಮ್ಮೆ ಕೈಕೊಟ್ಟರೆ, ಅದೇ ಬೆಳೆ ಮತ್ತೊಮ್ಮೆ ಕೈಹಿಡಿಯುತ್ತದೆಂಬುದನ್ನು ಅನುಭವಿಸಿ ತಿಳಿದಿದ್ದಾರೆ. ಅನೇಕರು ವಿದೇಶಗಳನ್ನು ಸುತ್ತಿಬಂದಿದ್ದಾರೆ. ಗ್ರಾಮಗಳಲ್ಲಿ ಒಳ್ಳೊಳ್ಳೆಯ ಶಿಕ್ಷಣಸಂಸ್ಥೆಗಳನ್ನು ಕಟ್ಟುತ್ತಿದ್ದಾರೆ. ಸಾಮವೇದದ ಮಂತ್ರಗಳಿಗೆ, ಸಂಗೀತಕ್ಕೆ ಬೆಳೆಗಳು ಹುಲುಸುತ್ತವೆಂದು ಪರೀಕ್ಷೆಮಾಡಿ ತಿಳಿದಿದ್ದಾರೆ. ಹಳ್ಳಿಯಾದರೇನು, ಪಟ್ಟಣವಾದರೇನು, ಮನೆಗೆಲಸ ಮಾಡಿಕೊಂಡು ನಾವು ಸುಖವಾಗಿದ್ದೇವೆ ಎಂದು ಹೇಳುವ ಅನೇಕ ಹೆಣ್ಣುಮಕ್ಕಳಿದ್ದಾರೆ. ಕೆಲಸಗಳು ಹಂಚಿಕೆಯಾಗಿ ಹೆಚ್ಚು ಪ್ರಗತಿ ಸಾಧಿತವಾಗುತ್ತದೆಂದು ಕೂಡುಕುಟುಂಬಗಳನ್ನು ರಕ್ಷಿಸಿಕೊಳ್ಳುತ್ತಿದ್ದಾರೆ.

ಸಮಕಾಲೀನ ಕೃಷಿಕರ ಕೃಷಿಪ್ರೇಮವೂ ಅಸಾಮಾನ್ಯವಾದುದೇ ಆಗಿದೆ. 'ಸಗಣಿಮುಟ್ಟಿ ಅನ್ನತಿನ್ನು ಅಂದರೂ ತಿನ್ನುತ್ತೇನೆ, ವ್ಯವಸಾಯದ ಮಟ್ಟಿಗೆ ನನಗೆ ಬೇಸರವಿಲ್ಲ' ಎಂದು ಹೇಳಿದವರೂ ಇದ್ದಾರೆ. ಪರೀಕ್ಷೆಯಲ್ಲಿ ಪಾಸಾದರೆ ಮುಂದಕ್ಕೆ ಓದಲು ಒತ್ತಾಯಿಸುತ್ತಾರೆಂದು ಖಾಲಿ ಪೇಪರ್ ಕೊಟ್ಟು ಫೇಲಾಗಿ, ಕೃಷಿಯಲ್ಲಿ ಉತ್ತೀರ್ಣರಾದವರಿದ್ದಾರೆ. ಕಠಿಣವಾಗಿ ಶಿಕ್ಷಿಸಿದರೆಂದು ಮೇಷ್ಟರಿಗೇ ಕಲ್ಲುಹೊಡೆದು, ವಿದ್ಯಾಭ್ಯಾಸಕ್ಕೆ ಕಲ್ಲುಹಾಕಿಕೊಂಡು, ಕೃಷಿಗೆ ಮಣ್ಣುಹೊತ್ತವರಿದ್ದಾರೆ. ನಗರಗಳಲ್ಲಿರುವವರು ತಮ್ಮ ಹಳ್ಳಿಯಲ್ಲಿ ಕೃಷಿಯ ಅಭಿವೃದ್ಧಿಗಾಗಿ ದ್ರವ್ಯಬಲವನ್ನು ದೊರಕಿಸಿಕೊಡುತ್ತಿದ್ದಾರೆ. ರಜೆಯ ದಿನಗಳಲ್ಲಿ ತಾವೂ ಬಂದು ದುಡಿಯುತ್ತಿದ್ದಾರೆ. ವಿದ್ಯಾವಂತರಾಗಿದ್ದರೂ ಪರಾವಲಂಬನೆಯನ್ನೊಲ್ಲದೆ ಗ್ರಾಮದಲ್ಲೇ ನಿಂತು ಕೃಷಿಗೆ ಸಮರ್ಪಿಸಿಕೊಂಡವರೂ ಇದ್ದಾರೆ. ಕೃಷಿಭೂಮಿಯಿಲ್ಲದವರನ್ನು ಬರಮಾಡಿಕೊಂಡು, ಭೂಮಿಯನ್ನು ದೊರಕಿಸಿಕೊಟ್ಟು, ಅವರು ಕೃಷಿಯಲ್ಲಿ ನೆಲೆಯಾಗುವಂತೆ ಮಾಡಿದ್ದಾರೆ. ಹೊಸದಾಗಿ ಜಮೀನುಗಳನ್ನು ಕೊಂಡು ಕೃಷಿವಿಸ್ತರಣೆ ಮಾಡುತ್ತಿದ್ದಾರೆ.

ದನಕರುಗಳನ್ನು ತಮ್ಮ ಮನೆಯ ಬಳಗದಂತೆ ಸಾಕುತ್ತಿದ್ದಾರೆ. ಗಂಗೆ, ಗೌರಿ, ತುಂಗೆ, ಭದ್ರೆ ಎಂದು ಅವುಗಳಿಗೆ ಹೆಸರಿಟ್ಟು ಕರೆಯುವುದೆಂದರೆ ಅದೆಷ್ಟು ಪ್ರೀತಿಯೋ ! ಮುಪ್ಪು ಅಡರಿದಾಗ ಅವುಗಳನ್ನು ಕಟುಕರಿಗೊಪ್ಪಿಸದೆ, ಸಹಜಮರಣದವರೆಗೆ ಕಾಪಾಡುತ್ತಾರೆ. ಕೃಷಿಜೀವನದ ಬೆನಕನಪೂಜೆ, ಕಣದಪೂಜೆ, ಕೂಗೋಹಬ್ಬ, ಗೋಪೂಜೆ, ಕಣಬಡಿದಾಗ ಧಾನ್ಯದಾನ ಮುಂತಾದುವನ್ನೆಲ್ಲ ನೆರವೇರಿಸುತ್ತಿದ್ದಾರೆ.

ಕೃಷಿಜೀವನಕ್ಕೆ ಬೆಂಬಲ ದೊರಕಿಸಿಕೊಳ್ಳಲು ಸಂಕೇತಿಕೃಷಿಕರು, ತಮ್ಮ ಪರಿಸರದಲ್ಲಿಯೇ ಹಲವುಹತ್ತು ಉಪಕಸುಬುಗಳನ್ನು ಮಾಡುತ್ತಿದ್ದಾರೆ. ಪೌರೋಹಿತ್ಯ, ದೇವಾಲಯಗಳ ಅರ್ಚಕತನ, ಹಣದ ಲೇವಾದೇವಿ, ಚಿಲ್ಲರೆ ಅಂಗಡಿ, ಹಾಲಿನ ವ್ಯಾಪಾರ, ಬಾಡಿಗೆಗೆ ರಿಕ್ಷಾಗಾಡಿ, ಎತ್ತಿನಗಾಡಿ ಓಡಿಸುವುದು, ಅಡಿಗೆಕಂಟ್ರಾಕ್ಟ್, ರೈಸ್‌ಮಿಲ್, ಫ್ಲೋರ್‌ಮಿಲ್ ನಡೆಸುವುದು, ಮುತ್ತುಗದ ಎಲೆ ಹಚ್ಚುವುದು, ದೊನ್ನೆಕಟ್ಟುವುದು, ಅಡಿಕೆಪಟ್ಟೆಯಿಂದ ತಟ್ಟೆತಯಾರಿಸುವುದು, ಹೊಲಿಗೆ ಕೆಲಸ, ಅಡಿಕೆ ತೆಂಗು ಭತ್ತ ಮುಂತಾದುವನ್ನು ಕೊಂಡು ಮಾರಾಟ ಮಾಡುವುದು, ಸ್ಥಳೀಯ ಸೊಸೈಟಿಗಳನ್ನು ನಿರ್ವಹಿಸುವುದು, ನೂಲು ತೆಗೆದು ಜನಿವಾರ ಮಾಡುವುದು, ಊದುಬತ್ತಿ, ಅಡಕೆಪುಡಿ, ಮೇಣದಬತ್ತಿ ತಯಾರಿಸುವುದು, ಹಪ್ಪಳಸಂಡಿಗೆಉಪ್ಪಿನಕಾಯಿ ತಯಾರಿಕೆ ಮುಂತಾದ ಉಪಕಸುಬುಗಳಲ್ಲಿ ಯಶಸ್ಸನ್ನು ಕಾಣುತ್ತಿದ್ದಾರೆ, ದ್ರವ್ಯಮೂಲವಾದ ಕಷ್ಟಗಳಿಂದ ಬಿಡುಗಡೆಗೊಳ್ಳುತ್ತಿದ್ದಾರೆ.

ಮನುಷ್ಯದೇಹವನ್ನು ಹೊತ್ತುಬಂದಮೇಲೆ 'ಕಷ್ಟಗಳನ್ನು ಅನುಭವಿಸಲಾರೆ' ಎಂದು ಯಾರೂ ಹೇಳುವಂತಿಲ್ಲ. ಕಷ್ಟಗಳು ತಮ್ಮ ಮುಖವಾಡಗಳನ್ನು ಬದಲಾಯಿಸಿಕೊಂಡು ಬರುತ್ತವೆ ಎಂದಷ್ಟೇ ಹೇಳಬಹುದು.

ಕೇಶವಮೂರ್ತಿಗಳು ಸಂಕೇತಿಕೃಷಿಕರಿಂದ ಅನೇಕ ಮನಕರಗಿಸುವ, ಚಿರಸ್ಮರಣೀಯವಾದ ಘಟನೆಗಳನ್ನು ಹೇಳಿಸಿದ್ದಾರೆ. ಪಂಚಾಂಗದ ತಿಮ್ಮಾಭಟ್ಟರು ತಮ್ಮ ಜಪದ ಬಲದಿಂದ ಬರಗಾಲದಲ್ಲಿ ದೊರೆಗಳ ಮುಂದೆ ಕುಂಭದ್ರೋಣಮಳೆ ಸುರಿಯುವಂತೆ ಮಾಡಿದ್ದು; ಮತ್ತೂರಿನ ಸುಬ್ರಾಯಶಾಸ್ತ್ರಿಗಳು ಊರನ್ನು ಕೊಳ್ಳೆಹೊಡೆಯಲು ಬಂದ ದುಷ್ಟಧಾಂಡಿಗರನ್ನು ರುದ್ರಾವೇಶಭರಿತರಾಗಿ ಬಡಿದು ಹಿಮ್ಮೆಟ್ಟಿಸಿದ್ದು, ಊರವರು ಕದ್ದುತಂದ ಬಾಳೆಗೊನೆಗಳನ್ನು ಬಸವಣ್ಣದೇವರ ಮೊರೆಹೊಕ್ಕು ರಸಬಾಳೆಗೊನೆಗಳಾಗಿ ಪರಿವರ್ತಿಸಿ ಕಳ್ಳರೆಂಬ ಅಪವಾದದಿಂದ ಊರನ್ನು ಮುಕ್ತಗೊಳಿಸಿದ್ದು, ಸಾಲುಮರಗಳ ಸೊಪ್ಪನ್ನು ಕಡಿಕಡಿದು ಒಂಟೆಗಳಿಗೆ ತಿನ್ನಿಸುತ್ತ ದುರಹಂಕಾರದಿಂದ ಮೆರೆದು ಬರುತ್ತಿದ್ದ ಒಂಟೆಸರದಾರನ ತಂಡವನ್ನು ಒನಕೆಯಿಂದ ಬಡಿದೋಡಿಸಿದ್ದು, ಮನೆಯ ಹಿರಿಯರು ತೀರಿಹೋದಾಗ ದನಕರುಗಳು ಮೇವುಬಿಟ್ಟು ಕಣ್ಣೀರು ಹರಿಸುತ್ತ ನಿಂತುಕೊಂಡುದು, ಭೀಮಗಾತ್ರದ ಬದನೆಕಾಯಿ ಬೆಳೆದು ಮುಮ್ಮಡಿಕೃಷ್ಣರಾಜ ಒಡೆಯರಿಂದ ಶಾಲು ಹೊದಿಸಿಕೊಂಡದ್ದು, ಬೀರಬಲ್ಲನ ಮಡದಿಯನ್ನು ಅಕ್ಬರ್ ಮೋಹಿಸಿದ್ದು ಮುಂತಾದ ಅದೆಷ್ಟೋ ಸ್ವಾರಸ್ಯಗಳನ್ನು ಓದಿಯೇ ಆನಂದಪಡಬೇಕು. ಹೆಜ್ಜೇನುಹುಳುಗಳ ಕಡಿತಕ್ಕೆ ಸಿಕ್ಕಿ ತಲೆಯೆಲ್ಲ ಮುಳ್ಳಾಗಿ, ಮುಖವೆಲ್ಲ ಗಂಟಾಗಿ, ವರ್ಷವೆಲ್ಲ ಹಣ್ಣಾಗಿ ಮಲಗಿದ್ದನ್ನು ಮರೆಯಲಾದೀತೇ ! ಗಂಡುಮಗುವನ್ನು ಕಳೆದುಕೊಂಡಿದ್ದ ತನ್ನ ದಣಿಗೆ ಬೇಗನೆ ಇನ್ನೊಂದು ಗಂಡುಮಗುವಾಗಲೆಂದು ಪಳನಿಸ್ವಾಮಿ ಬನ್ನಾರಿಯಮ್ಮನಿಗೆ ಮುಡಿಕೊಡುತ್ತೇನೆಂದು ಹರಸಿಕೊಂಡದ್ದು, ಅದರಂತೆ ಆ ದೇವಿಯು ಕಣ್ಣುಬಿಟ್ಟು ಗಂಡನ್ನೇ ಕರುಣಿಸಿದ್ದು ಸಾಮಾನ್ಯ ಸಂಗತಿಯೆ !

ಮನೋರಂಜನೆಯ ಮಾರ್ಗಗಳು

ವ್ಯವಸಾಯದ ಏಕತಾನತೆಯಿಂದ ಬಿಡುಗಡೆಗೊಂಡು ಮನಸ್ಸನ್ನು ಹಗುರಗೊಳಿಸಿಕೊಳ್ಳಲು ಸಂಕೇತಿಕೃಷಿಕರು ಹಲವಾರು ಮಾರ್ಗಗಳನ್ನು ಕಂಡುಕೊಂಡಿದ್ದಾರೆ. ಚಟ ಎಂದು ನಾವು ಕರೆಯುವಂಥವೂ ಮನೋರಂಜನೆಯ ಸಾಧನಗಳೇ ಆಗಿವೆ. ಸಂಕೇತಿಗಳು ನಶ್ಯಪ್ರಿಯರು, ಜ್ಞಾನಚೂರ್ಣವೆಂದೇ ಅದು ಖ್ಯಾತಿ ಪಡೆದಿದೆ. ಹಿಂದಿನ ಕಾಲದಲ್ಲಿ ಹೆಣ್ಣುಕೊಡುವ ಮಾವನು ಅಳಿಯನಿಗೊಂದು ಬೆಳ್ಳಿನಶ್ಯದಡಬ್ಬಿಯನ್ನೇ ನಶ್ಯತುಂಬಿಸಿ ಉಡುಗೊರೆಯಾಗಿ ಕೊಡುತ್ತಿದ್ದನಂತೆ. ಮಹಾರಾಜರು ಪ್ರತ್ಯಕ್ಷರಾದರೂ ಅವರಿಂದ ಏನನ್ನೂ ಬಯಸದೆ 'ಒಂದು ಚಿಟಿಕಿ ನಶ್ಯ ಪ್ರಭುಗಳು ದಯಪಾಲಿಸೋಣವಾಗಲಿ' ಎಂದು ಕೇಳಿಕೊಂಡವರೂ ಇದ್ದಾರಂತೆ. ತಾಂಬೂಲಚರ್ವಣವೂ ಅವರಿಗೆ ಆನಂದದಾಯಕವೇ. 'ನಾವು ಬೆಳೆದ ವಸ್ತುವನ್ನು ನಾವೇ ತಿನ್ನದಿದ್ದರೆ ಹೇಗೆ' ಎಂದು ಅವರು ಪ್ರಶ್ನಿಸುತ್ತಾರೆ. ಸದಾಕಾಲ ಅದನ್ನು ದವಡೆಯಲ್ಲಿ ಊರಿಟ್ಟುಕೊಂಡು ಸುಖಿಸುವವರೂ ಇದ್ದಾರೆ; ಆಗ ಮಾತು ಮಿತವಾಗುತ್ತದೆ, ಕಾರ್ಯಚಿಂತನೆಗಳು ಅಮಿತವಾಗುತ್ತವೆ ಎಂದು ಹೇಳುವವರೂ ಇದ್ದಾರೆ. ನಶ್ಯತಾಂಬೂಲಗಳಂತೆಯೇ ಇಸ್ಪೀಟು ಆಟವೂ ಅವರಿಗೆ ಹಿಂದಿನಿಂದ ಅಂಟಿಕೊಂಡೇ ಬಂದಿದೆ. ಅದೊಂದು ಉಪವೃತ್ತಿಯೋ ಅನ್ನುವಹಾಗೆ ದ್ರವ್ಯಸಂಪಾದನೆ ಮಾಡಿಕೊಂಡವರೂ ಇದ್ದಾರೆ. 'ನಾನು ಮುಖವನ್ನೂ ತೊಳೆಯದೆ ಎರಡು ಮೂರುದಿನ ಆಡಿದ್ದೇನೆ. ಆಡಿಯಾಡಿಯೇ ಈವರೆಗೆ ಐದಾರುಲಕ್ಷ ಸಂಪಾದಿಸಿದ್ದೇನೆ. ಅದೃಷ್ಟ ಅನ್ನುವುದು ನನಗೆ ಇಸ್ಪೀಟಿನಲ್ಲಿಯೇ ಇರಬಹುದೇನೋ' ಎಂಬ ಮಾತುಗಳನ್ನು ಕೇಳಿದರೆ ಮೂಗಿನ ಮೇಲೆ ಬೆರಳೇರಿಸುವಂತಾಗುತ್ತದೆ.

ಸಂಕೇತಿಗಳಾರೂ ಅನಕ್ಷರಸ್ಥರಲ್ಲವಾದ್ದರಿಂದ ವಾಚನಾಭಿರುಚಿಯೂ ಅವರಿಗೆ ಸಹಾಯಕವಾಗಿದೆ. ಪಗಡೆ ಹಾಸುತ್ತಾರೆ, ಕೇರಂ ಆಡುತ್ತಾರೆ. ಹೊರಾಂಗಣ ಕ್ರೀಡೆಗಳಲ್ಲೂ ಪಾಲ್ಗೊಳ್ಳುತ್ತಾರೆ. ಬಾಲ್ಯದಲ್ಲಿ ಆಡಿದ್ದ ವಾಲಿಬಾಲ್ ಕ್ರೀಡೆಯನ್ನು ಮಧ್ಯವಯಸ್ಸಿನಲ್ಲಿ ಆಡಲು ಹೋಗಿ ಆಯತಪ್ಪಿಬಿದ್ದು ಕೈಮುರಿದುಕೊಂಡವರೂ ಇದ್ದಾರೆ. ಅವರ ಸಂಗೀತಾಭಿರುಚಿ ಜಗತ್ಪ್ರಸಿದ್ಧವಾಗಿದೆ. ಗಮಕವಾಚನ ವ್ಯಾಖ್ಯಾನಗಳಲ್ಲೂ ಅವರು ಎತ್ತಿದ ಕೈ. ಹರಿಕಥೆ ಮಾಡುತ್ತಾರೆ, ಪುರಾಣಪ್ರವಚನ ಮಾಡುತ್ತಾರೆ, ವೇದಾಂತ ಪ್ರವಚನ ಮಾಡುತ್ತಾರೆ. ನಾಟಕವೆಂದರೆ ಪಂಚಪ್ರಾಣ. ಸುಪ್ರಸಿದ್ಧ ನಾಟಕಕಂಪನಿಗಳಲ್ಲಿ ಅಭಿನಯಿಸುತ್ತಿದ್ದರಲ್ಲದೆ, ಸ್ವತಂತ್ರವಾಗಿ ನಾಟಕಕಂಪನಿಗಳನ್ನೇ ಕಟ್ಟಿ ಮೆರೆದವರೂ, ಮುರಿದವರೂ ಇದ್ದಾರೆ. ಈಗ ಗ್ರಾಮಗಳಲ್ಲಿ ತಾವೇ ಕಲಿತು ಅಭಿನಯಿಸುತ್ತಾರೆ.

ಭಕ್ತಿಮೂಲವಾದ ಮನೋರಂಜನೆಗಳೂ ಇವೆ. ಸಾಮಾನ್ಯವಾಗಿ ಎಲ್ಲ ಗ್ರಾಮಗಳಲ್ಲೂ ರಾಮಮಂದಿರಗಳನ್ನು ನಿರ್ಮಿಸಿಕೊಂಡಿದ್ದು ಅಲ್ಲಿ ನಡೆಯುವ ಭಜನೆ, ದೇವರನಾಮಗಳಲ್ಲಿ ಪಾಲ್ಗೊಳ್ಳುತ್ತಾರೆ. ರಾಮೋತ್ಸವದ ವೈಭವವನ್ನಂತೂ ಬಣ್ಣಿಸುವುದೇ ಬೇಡ. ವೈವಿಧ್ಯಮಯವಾದ ಸಾಂಸ್ಕೃತಿಕ ಕಾರ್ಯಕ್ರಮಗಳ ಸಹಿತವಾಗಿ, ಶಾಸ್ತ್ರೋಕ್ತವಾಗಿ ಅದನ್ನು ಆಚರಿಸುತ್ತಾರೆ. ಗ್ರಾಮಗಳನ್ನು ತೊರೆದು ನಗರಗಳನ್ನು ಸೇರಿರುವವರೂ ಊರ ಮೇಲಣ ಪ್ರೀತಿಯಿಂದ ಆ ಮಹೋತ್ಸವಕ್ಕೆ ಆಗಮಿಸಿ, ಪ್ರೋತ್ಸಾಹಿಸಿ, ಉಲ್ಲಾಸವನ್ನು ತುಂಬಿಕೊಂಡು ಮರಳುತ್ತಾರೆ. ಸ್ಥಳೀಯ ಗ್ರಾಮದೇವತೆಗಳ ಹಬ್ಬಜಾತ್ರೆಉತ್ಸವಗಳಲ್ಲೂ ಹಿಂದೆಬೀಳದೆ ಮುಂದೆ ನಿಲ್ಲುತ್ತಾರೆ. ಶರನ್ನವರಾತ್ರಿಯ ದಿನಗಳಂತೂ ಆಮೋದವನ್ನು ಉಕ್ಕಿಸುತ್ತವೆ. ಮನೆದೇವರ ಕ್ಷೇತ್ರಗಳಿಗೆ, ಕಾಶಿರಾಮೇಶ್ವರಾದಿ ತೀರ್ಥಗಳಿಗೆ, ಯಾತ್ರೆ ಹೋಗಿ ಬರುತ್ತಾರೆ. ಬಹುಪಾಲು ಸಂಕೇತಿಗಳ ತೀರ್ಥಕ್ಷೇತ್ರವಾದ ಕೌಶಿಕದ ಲಕ್ಷ್ಮೀಕೇಶವನ ವಾರ್ಷಿಕ ರಥೋತ್ಸವವು ಭಕ್ತರನ್ನು ವಿಶೇಷವಾಗಿ ತನ್ನೆಡೆಗೆ ಸೆಳೆದುಕೊಳ್ಳುತ್ತದೆ. ಯೋಗ, ಧ್ಯಾನ, ಪ್ರಾಣಾಯಾಮ, ವೇದಪಾರಾಯಣ ಮೊದಲಾದುವೆಲ್ಲವೂ ಅವರನ್ನು ಆನಂದದಲ್ಲಿರಿಸುವ ಸಾಧನಗಳೇ ಆಗಿವೆ.

ಹಾಸ್ಯಪ್ರಿಯತೆ ಅವರಿಗೆ ಹುಟ್ಟುಗುಣವಾಗಿದೆ. ನಗುನಗುತ್ತ ಬಾಳುವುದನ್ನು ಬಯಸುತ್ತಾರೆ. ಜೋಕರ್ ಎಂದೇ ಕರೆಸಿಕೊಳ್ಳುತ್ತಿದ್ದ ಶ್ರೀನಿವಾಸಯ್ಯ ಎಲ್ಲರನ್ನೂ ನಗಿಸುತ್ತಿದ್ದರಂತೆ. ಕೇಶವಮೂರ್ತಿಗಳು ಸೀರಿಯಸ್ಸಾಗಿ ಕೇಳಿರುವ ಕೆಲವು ಪ್ರಶ್ನೆಗಳಿಗೂ ಇಲ್ಲಿ ನಗೆಯುತ್ತರಗಳಿವೆ. 'ನೀವು ಓದದೆ ಹೋಗಿದ್ದರೆ ಏನಾಗಿರುತ್ತಿದ್ದಿರಿ?' 'ಓದದೆ ಇರುವವರ ಗುಂಪಿಗೆ ಸೇರಿದವನಾಗುತ್ತಿದ್ದೆ!' 'ನಿಮ್ಮನಂತರ ವ್ಯವಸಾಯ ಮುಂದುವರಿಯುತ್ತದೆಯೇ ಎಂಬ ಚಿಂತೆ ನಿಮಗಿಲ್ಲವೇ?' 'ನನ್ನನಂತರ ಅಂದರೆ ನಾನೇ ಇರುವುದಿಲ್ಲವಲ್ಲಾ, ಚಿಂತೆಯೆಲ್ಲಿ ಬಂತು !' ಎಂಬುದನ್ನು ಸವಿಯಬೇಕು. 'ನಾನು ಐ.ಎ.ಎಸ್. ಅಧಿಕಾರಿಯಾಗಬೇಕೆಂದು ಆಸೆ ಪಟ್ಟಿದ್ದೆ. ಆದರೆ ಬಿ.ಎಸ್ಸಿಗೇ ಊರಿಗೆ ಮರಳಿಬಿಟ್ಟೆ. ಜೀವನದಲ್ಲಿ ಹೆಚ್ಚು ಆಶೆ ಇಟ್ಟುಕೊಳ್ಳಬಾರದೆಂಬ ಬುದ್ಧನ ತತ್ವವನ್ನು ಅಳವಡಿಸಿಕೊಂಡುಬಿಟ್ಟೆ'; 'ಶುಕ್ರವಾರ ತಂದೆಶ್ರಾದ್ಧ, ರಜಾಕೊಡಿ' ಎಂದು ಕೇಳಿದರೆ 'ಶುಕ್ರವಾರ ರಜಾಕೊಡೋಕಾಗೋಲ್ಲ, ಭಾನುವಾರ ಮಾಡ್ಕೋಳಿ' ಎಂದು ಹೇಳುತ್ತಿದ್ದ ಕಾಲವೂ ಇತ್ತು. 'ನಾವು ವೆಂಕಟರಮಣನ ಒಕ್ಕಲು, ದುಡ್ಡು ಉಳಿಯುವುದಿಲ್ಲ. ಕೇಶವದೇವರ ಒಕ್ಕಲಾಗಿದ್ದರೆ ಉಳಿಸಬಹುದಿತ್ತೇನೋ' - ಎಂಬಿತ್ಯಾದಿ ಸಂಭಾಷಣೆಗಳೂ ರೋಚಕವಾಗಿವೆ.

ಸಂಕೇತಿಗಳ ಸಮಾಜಸೇವೆ

ಗ್ರಾಮಗಳಲ್ಲಿರಲಿ, ನಗರಗಳಲ್ಲಿರಲಿ, ಕೆಲವರು ಸಂಕೇತಿಗಳು ಸಮಾಜದ ಶ್ರೇಯಸ್ಸಿಗಾಗಿ ತಮ್ಮ ಕೈಲಾದ ಸೇವೆಯನ್ನು ಪ್ರತಿಫಲಾಪೇಕ್ಷೆಯಿಲ್ಲದೆ ಈಶ್ವರಾರ್ಪಣಬುದ್ಧಿಯಿಂದ ಸಲ್ಲಿಸುತ್ತಿದ್ದಾರೆ. ಅದುವೇ ಕರ್ಮಯೋಗ. ಸೇವಾಯೋಗ ಎಂದು ಕರೆದರೂ ಸರಿಯೆ. ಕೇಶವಮೂರ್ತಿಯವರು ತಮ್ಮ ಈ ಕೃತಿಯಲ್ಲಿ ನಮಗೆ ಹಲವು ಸೇವಾಯೋಗಿಗಳ ದರ್ಶನ ಮಾಡಿಸಿದ್ದಾರೆ. ನನ್ನ ಮನೆಯನ್ನೂ ನನ್ನ ಗ್ರಾಮವನ್ನೂ ನಾನು ಚೆನ್ನಾಗಿ ಕಟ್ಟಿದರೆ ಅದೇ ದೇಶಕಟ್ಟುವ ಮಾರ್ಗ ಎಂದು ಸಂಕೇತಿಗಳು ಭಾವಿಸಿದ್ದಾರೆ. ನಾವು ಸಂಘಟಿತರಾಗಿ ಸಮಾಜವನ್ನು ನಿರ್ಮಾಣ ಮಾಡಿದರೆ ದೇವತೆಗಳೇ ಬಂದು ಆಶೀರ್ವಾದ ಮಾಡುತ್ತಾರೆ ಎಂಬ ನಂಬಿಕೆ ಅವರಲ್ಲಿ ನೆಲೆಯೂರಿದೆ.

ಪರೋಪಕಾರಕ್ಕಾಗಿಯೇ ಈ ಶರೀರ ನಮಗೆ ಬಂದಿದೆ ಎಂದು ಹೇಳುವ ಚಿಕ್ಕಮೇನಹಳ್ಳಿ ನಾಗಪ್ಪನವರು, ಗ್ರಾಮಸ್ಥರ ಸಹಾಯಕರಾಗಿ ಸರ್ಕಾರಿ ಕಛೇರಿಗಳಿಗೆ, ಆಸ್ಪತ್ರೆಗಳಿಗೆ ಹೋಗುತ್ತಾರೆ. ಕೈಲಾದ ಆರ್ಥಿಕ ನೆರವು ನೀಡುತ್ತಾರೆ. ಕೆಲವರು ಬಡಬಗ್ಗರ ದ್ರವ್ಯವನ್ನು ತಮ್ಮ ಮನೆಯಲ್ಲಿ ಜೋಪಾನವಾಗಿಟ್ಟು, ಅವರು ಕೇಳಿದಾಗ ಕೊಟ್ಟು ಉಪಕರಿಸುತ್ತಾರೆ. ಸಾಲಿಗ್ರಾಮದ ನಾರಾಯಣಸ್ವಾಮಿಗಳು ಸಕಲಜಾತಿಯ ಮಕ್ಕಳನ್ನೂ ಮನೆಯಲ್ಲಿಟ್ಟುಕೊಂಡು ಅವರಿಗೆ ಉಚಿತವಾಗಿ ಪಾಠಹೇಳಿಕೊಡುತ್ತಾರೆ. ತಾವು ಕಲಿತ ಸಂಗೀತ, ಹಾರ್ಮೋನಿಯಂ, ಪಿಟೀಲು, ಮೃದಂಗ, ಗಮಕ ಮುಂತಾದ ವಿದ್ಯೆಗಳನ್ನು ಕೆಲವರು ಬಯಸಿ ಬಂದವರಿಗೆ ಉಚಿತವಾಗಿ ಧಾರೆಯೆರೆಯುತ್ತಿದ್ದಾರೆ. ಗ್ರಾಮಗಳು ಕ್ಷಾಮದ ದವಡೆಗೆ ಸಿಲುಕಿದಾಗ ಕೆಲವರು, ಸೊಸೈಟಿಗಳ ಹೊಣೆಗಾರಿಕೆಯನ್ನು ಹೊತ್ತು, ಸರ್ಕಾರವು ಕೊಡುವ ದವಸಧಾನ್ಯಾದಿಗಳನ್ನು ಪ್ರಾಮಾಣಿಕವಾಗಿ ವಿತರಣೆ ಮಾಡಿ, ಜನರನ್ನು ಹಸಿವಿನ ದವಡೆಯಿಂದ ಬಿಡಿಸಿದ್ದಾರೆ. ನಷ್ಟಕ್ಕೆ ಗುರಿಯಾಗಿ ನರಳುತ್ತಿದ್ದ ಹಲವು ಸೊಸೈಟಿಗಳನ್ನು ಪ್ರವರ್ಧಮಾನಕ್ಕೆ ತಂದು, ಲಕ್ಷಾಂತರ ರೂಪಾಯಿಗಳ ಬಂಡವಾಳವನ್ನು ರೂಢಿಸಿಕೊಟ್ಟಿದ್ದಾರೆ.

ಸಂಕೇತಿಗಳಲ್ಲಿ ಕೆಲವರು ನಾಟಿ ಔಷಧಿಗಳನ್ನು ಬಲ್ಲವರಾಗಿದ್ದು ಗೆಜ್ಜೆಮಂಡಲ, ಉರಿಮಂಡಲ, ಕೊಳಕುಮಂಡಲ, ಬಾವುಮಂಡಲ ಮುಂತಾದ ಹಾವುಗಳ ವಿಷದ ಉಸುರಿಗೆ ಚಿಕಿತ್ಸೆ ನೀಡುತ್ತಾರೆ. ಬಸುರಿಯರ ಹೊಟ್ಟೆನೋವು, ಮುಟ್ಟಾದಾಗ ಬರುವ ಹೊಟ್ಟೆನೋವು, ಬಿಳಿಸೆರಗು, ಮಕ್ಕಳ ಹಕ್ಕಿರೋಗ, ವಿಷಮಶೀತಜ್ವರ, ವಾಂತಿಭೇದಿ, ಕೈಮುಸ್ಕು, ವಿಷಬ, ಹುಚ್ಚುನಾಯಿ ಕಡಿತ, ಅರಿಶಿನಕಾಮಾಲೆ, ಹಲ್ಲುನೋವು ಮುಂತಾದ ಕಾಯಿಲೆಗಳನ್ನು ಹಸಿರು ಔಷಧಿಗಳಿಂದ ಉಚಿತವಾಗಿ ಗುಣಪಡಿಸುತ್ತಿದ್ದಾರೆ. 'ಅದು ಯಾವ ಗಿಡ, ಯಾವ ಮೂಲಿಕೆ' ಎಂದು ಕೇಳಿದರೆ ಅವರು ಸುಲಭದಲ್ಲಿ ಹೇಳುವುದಿಲ್ಲ. ಒಂದು ವೇಳೆ ಹೇಳಿದರೆ ಅವರು 'ಅಯ್ಯೋ ಇದೇನಾ, ಅಯ್ಯೋ ಇಷ್ಟೇನಾ' ಎಂದು ರಾಗವೆಳೆದರೆ ಔಷಧಿಯ ಮಹಿಮೆ ಮಂಕಾಗಿಬಿಡುತ್ತದೆಯೆಂದು ಅಂಜುತ್ತಾರೆ, ದುರುಪಯೋಗವೂ ಆಗಬಹುದು ಎಂದು ಅಳುಕುತ್ತಾರೆ. ಕೆಲವರಲ್ಲಿ ಸರ್ವರೋಗೋಪಯೋಗಿಯಾದ ಕುಪ್ಪಿಮಾತ್ರೆಗಳೂ ಇವೆ.

ಕೆಲವರು ರಾಜಕಾರಣದಲ್ಲಿದ್ದುಕೊಂಡು ಗ್ರಾಮಕ್ಕೆ ಅನುಕೂಲವಾಗುವಂತೆ ರಸ್ತೆ ನಿರ್ಮಾಣ, ಕುಡಿಯುವ ನೀರಿನ ವ್ಯವಸ್ಥೆ, ಸಮುದಾಯ ಭವನಗಳ ನಿರ್ಮಾಣ ಮುಂತಾದ ಸತ್ಕಾರ್ಯಗಳನ್ನು ಆಗುಮಾಡಿಕೊಟ್ಟಿದ್ದಾರೆ. ಪೂಮಗಾಮೆ ಸಂಕೇತಿಗಳು ತಾವೇ ಬೋರ್‌ಕೊರೆಸಿ, ಭೂಮಿಯೊಳಗೇ ಪೈಪು ಜೋಡಿಸಿ, ಸಾಮೂಹಿಕವಾಗಿ ತಮ್ಮ ಮನೆಗಳಿಗೆ ಸಿಹಿನೀರಿನ ವ್ಯವಸ್ಥೆ ಮಾಡಿಕೊಂಡಿರುವುದು ಅದ್ಭುತ ಸಾಧನೆಯಾಗಿದೆ. ಕೆಲವರು ದಾರಿನಡೆಯುವಾಗ ತಂಪಾಗಲೆಂದು ಸಾಲುಮರಗಳನ್ನು ನೆಟ್ಟು ನೀರೆರೆದಿದ್ದಾರೆ. ಗ್ರಾಮಗಳ ಪುರಾತನ ಶಿಥಿಲ ದೇವಾಲಯಗಳನ್ನು ಜೀರ್ಣೋದ್ಧಾರಗೊಳಿಸಿದ್ದಾರೆ. ತಮ್ಮ ಜಮೀನಿನಲ್ಲಿ ಸಿಕ್ಕಿದ ಶಿವಲಿಂಗಕ್ಕೆ ಸ್ವತಂತ್ರವಾದ ಗುಡಿಯನ್ನು ಕಟ್ಟಿಸಿ, ನಿತ್ಯಪೂಜೆಯ ವ್ಯವಸ್ಥೆ ಮಾಡಿದ್ದಾರೆ. ಕೆಲವರು ತಾವು ಕಲಿತ ವಿದ್ಯುತ್ ಉಪಕರಣಗಳ ರಿಪೇರಿಯೇ ಮುಂತಾದ ಕೈಕಸುಬುಗಳ ಮೂಲಕ ಸಾಮಾನ್ಯಜನರ ಸಮಯಕ್ಕೊದಗಿ ಬರುತ್ತಿದ್ದಾರೆ.

ಸ್ವಾತಂತ್ರ್ಯಸಂಗ್ರಾಮದಲ್ಲಿ ಹೋರಾಡಿ, ತರುವಾಯ ದೇಶಸೇವೆಗೇ ತಮ್ಮನ್ನು ತೆತ್ತುಕೊಂಡ ಬಸವಾನಿ ರಾಮಶರ್ಮರ ಸೇವಾಕಾರ್ಯಗಳನ್ನೂ, ಈಗ ಆ ಸೇವಾಕಾರ್ಯವನ್ನು ಮುನ್ನಡೆಸುತ್ತಿರುವ ಬಸವಾನಿ ಸಾವಿತ್ರಮ್ಮನವರನ್ನೂ ಓದುವಾಗ ಹೃದಯವು ತುಂಬಿಬರುತ್ತದೆ. ಬೆಂಗಳೂರಿನಲ್ಲಿ ಬಿ.ಆರ್. ರಾಮಕೃಷ್ಣರು ಕೊಳೆಗೇರಿಯ ಮಕ್ಕಳಿಗಾಗಿಯೇ ಶಾಲೆಗಳನ್ನು ತೆರೆದು, ಅವರಿಗೆ ಉಚಿತವಾಗಿ ಊಟ, ಪುಸ್ತಕ, ಸಮವಸ್ತ್ರಾದಿಗಳನ್ನು ಕೊಟ್ಟು ಅವರನ್ನು ವಿದ್ಯಾವಂತರನ್ನಾಗಿ ಮಾಡುತ್ತಿರುವುದನ್ನಾಗಲಿ; ಬೆಂಗಳೂರಿನಲ್ಲಿಯೇ ಬಿ.ಎನ್.ವಿ. ಸುಬ್ರಹ್ಮಣ್ಯ ಅವರು ವೇದ ಪಾಠಶಾಲೆ, ಹೆಣ್ಣುಮಕ್ಕಳ ನಿಲಯ ಮುಂತಾದುವನ್ನು ಸ್ಥಾಪಿಸಿ ಸಮಾಜಸೇವೆಯಲ್ಲಿ ತತ್ಪರರಾಗಿರುವುದನ್ನಾಗಲಿ ಕಂಡಾಗ ಇಂತಹ ಉದಾರಚರಿತರಿಂದಲೇ ಅಲ್ಲವೇ ಸಂಕೇತಿಸಮಾಜಕ್ಕೆ ಕೀರ್ತಿ ಬಂದಿರುವುದು ಎಂದು ಉದ್ಗರಿಸುವಂತಾಗುತ್ತದೆ. ಕೃಷಿವಿಜ್ಞಾನದಲ್ಲಿ ಡಾಕ್ಟರೇಟ್ ಪದವಿಗಳಿಸಿ, ಮಹಿಕೋ ಸಂಸ್ಥೆಯ ಉದ್ಯೋಗಿಯಾಗಿ ಆ ಸಂಸ್ಥೆಯನ್ನು ಮುಗಿಲೆತ್ತರಕ್ಕೇರಿಸಿದ ಟಿ.ಎನ್. ಸುಬ್ಬರಾವ್ ಅವರು ಕೃಷಿಕರ ಏಳಿಗೆಗಾಗಿ ಮಾಡಿರುವ ಸೇವೆಯಂತೂ ಪರಮಾದ್ಭುತವಾದುದು. ಕೃಷಿಪ್ರೇಮದಲ್ಲಿ ಅವರನ್ನು ಸರಿಗಟ್ಟಬಲ್ಲವರು ಮತ್ತೊಬ್ಬರಿಲ್ಲ. ನಿವೃತ್ತಿಯ ನಂತರ ಹೊಸದಾಗಿ ಕೃಷಿಯನ್ನು ಪ್ರಾರಂಭಿಸಿ ಮಾಡುತ್ತಿರುವ ಸಾಧನೆಯೂ ಅನುಕರಣೀಯ.

ಕೃಷಿಜೀವನಮೌಲ್ಯಗಳು

ಸಂಕೇತಿ ಕೃಷಿಕರು ಯಾವ ಜೀವನಮೌಲ್ಯಗಳನ್ನು ತಮ್ಮ ಬದುಕಿಗೆ ಅಳವಡಿಸಿಕೊಂಡಿದ್ದಾರೆ ಎಂಬುದನ್ನೆಲ್ಲ ಕೇಶವಮೂರ್ತಿಗಳು ಅವರ ಬಾಯಿಂದಲೇ ಹೇಳಿಸಿದ್ದಾರೆ. ಕೃಷಿಜೀವನದಲ್ಲಿ ಕುಳಿತು ಉಣ್ಣುವುದು ಸಾಧ್ಯವಿಲ್ಲ. ದುಡಿಮೆಯೇ ದೇವರೆಂದು ತಿಳಿಯಬೇಕು. ಮಾಡುವ ಕಾರ್ಯಗಳನ್ನೆಲ್ಲ ಚೆನ್ನಾಗಿಮಾಡಿ, ಕೊನೆಯಲ್ಲಿ ದೇವರಮೇಲೆ ಭಾರಹಾಕಬೇಕು. ಶ್ರಮಜೀವಿಗಳಿಗೆ ದೇವರು ಕರುಣೆದೋರುತ್ತಾನೆ. ಕೈಕೆಸರಾದರೆ ಬಾಯಿ ಮೊಸರು. ಪಾಲಿಗೆ ಬಂದದ್ದು ಪಂಚಾಮೃತವೆಂದು ಎಷ್ಟು ದೊರಕಿದರೆ ಅಷ್ಟರಿಂದ ತೃಪ್ತಿಪಟ್ಟುಕೊಳ್ಳಬೇಕು. ಹೆಚ್ಚು ಆದಾಯವೇನೂ ಬರಲಿಲ್ಲ, ಎಣ್ಣೆಬತ್ತಿಗೆ ನೇರವಾಯಿತು ಎಂಬಂತಾದರೂ ಧೃತಿಗೆಡಬಾರದು. ತೃಪ್ತಿಯಿಲ್ಲದಿದ್ದರೆ ಬದುಕೆಂಬುದೇ ಇಲ್ಲ. ನಮಗಿಂತ ಕೆಳಗಿನವರನ್ನು ನೋಡಿ 'ದೇವರು ನಮ್ಮನ್ನು ಚೆನ್ನಾಗಿಟ್ಟಿದ್ದಾನೆ' ಎಂದು ಸಮಾಧಾನಪಡಬೇಕು. ವೈದ್ಯರು ಮತ್ತು ಅಡಿಗೆಯವರು ಹಸ್ತಸಿದ್ಧಿ ಇರುವವರೆಗೆ ಮಾತ್ರ ಕೆಲಸಮಾಡಬೇಕು. ಕೃಷಿಕರು ಹೆಚ್ಚಿನ ಬೆಳೆಯ ಆಸೆಯಿಂದ ಭೂದೇವಿಯ ಮೇಲೆ ಅತಿಯಾದ ಒತ್ತಡ ಹೇರಬಾರದು. ನೆನ್ನೆಯನ್ನು ವೃಥಾ ನೆನೆಯಬಾರದು, ನಾಳೆಗೇಂತೆಂದು ಅಂಜಬಾರದು, ವರ್ತಮಾನವನ್ನು ಸಾರ್ಥಕವಾಗಿ ಬಳಸಿಕೊಳ್ಳಬೇಕು.

ಕೃಷಿಯೆಂದರೆ ಅದೊಂದು ತಪಸ್ಸು, ತೋಟವೇ ತಪೋಭೂಮಿ. ಚಿಕ್ಕದಾಗಿ ಪ್ರಾರಂಭಿಸಬೇಕು, ಆರಂಭದಲ್ಲೇ ದೊಡ್ಡದಾಗಿ ಹೂಡಿಕೊಳ್ಳಬಾರದು. ನಾಲ್ಕಾರು ಕಡೆ ಕಾಲಿಡಬಾರದು. ಮನೆಯೆಂಬುದು ರಾತ್ರಿಯ ತಂಗುದಾಣವಷ್ಟೇ; ಹಗಲೆಲ್ಲ ತೋಟಗದ್ದೆಗಳ ಕಾರ್ಯಗಳಲ್ಲೇ ಮುಳುಗಬೇಕು. ಹಿಮಾಲಯದಲ್ಲಿ ವೀರಸೈನಿಕರು ಹೇಗೆ ಸದಾ ಜಾಗೃತರಾಗಿರುತ್ತಾರೋ ಹಾಗೆಯೇ ಕೃಷಿಕರು ಯಾವಾಗಲೂ ಎಚ್ಚರವಾಗಿರಬೇಕು. ನಾಳೆ ಮಾಡಬಹುದಾದುದನ್ನು ಇಂದೇ ಮಾಡೋಣ ಎನ್ನುವ ಉತ್ಸಾಹವಿರಬೇಕು. ಸೋಮಾರಿತನ ಕೃಷಿಯ ಮೊದಲಶತ್ರು. ಸತತ ಪರಿಶ್ರಮವು

ನಮ್ಮನ್ನು ಮೇಲೆತ್ತುತ್ತದೆ. 'ಬೇರೆಯವರೇನು ಮಾಡುವುದು ಮಹಾ, ನಾನೂ ಮಾಡಿ ತೋರಿಸುತ್ತೇನೆ' ಎಂಬ ಹುಮ್ಮಸ್ಸಿರಬೇಕು. ನಮ್ಮ ಹವಾಮಾನ, ನೆಲದಗುಣಗಳಿಗೆ ಹೊಂದಿಕೆಯಾಗುವ ವ್ಯವಸಾಯಪದ್ಧತಿಯನ್ನು ಅನುಭವದಿಂದ ರೂಪಿಸಿಕೊಳ್ಳಬೇಕು; ಅಂಧಾನುಕರಣೆ ಸಲ್ಲದು.

ಸುಳ್ಳು ಹೇಳಬಾರದು. ನಮ್ಮ ವರ್ತನೆಯಿಂದ ಯಾರಿಗೂ ಅನ್ಯಾಯವಾಗದಂತೆ ಎಚ್ಚರವಹಿಸಬೇಕು. ತಂದೆತಾಯಿಗಳೇ ಸುಳ್ಳುಹೇಳುತ್ತ, ಮಕ್ಕಳನ್ನು 'ನೀನು ಸತ್ಯವಂತನಾಗು' ಎಂದು ಬೋಧಿಸಿದರೆ ಅದು ಫಲಕೊಡುವುದಿಲ್ಲ. ಹೆಣ್ಣುಮಕ್ಕಳು ಕೆಟ್ಟು ತವರುಮನೆ ಸೇರಬಾರದು. ಗ್ರಾಮಜೀವನದಲ್ಲಿ ಪರಸ್ಪರ ಪ್ರೀತಿಯೇ ಪ್ರಧಾನವಾದ ಬೆಸುಗೆ. ಶಾಂತಿಸಹಿಷ್ಣುತೆಗಳೇ ಇಲ್ಲಿನ ಜೀವನಮಂತ್ರ. ಪಟ್ಟಣಿಗರ 'ತಬ್ಬಲಿತನ'ಕ್ಕೆ ಇಲ್ಲಿ ಪುರಸ್ಕಾರವಿಲ್ಲ. ತಂದೆತಾಯಿಗಳ ವಿಷಯದಲ್ಲಿ ಮಕ್ಕಳು ಗೌರವತೋರಬೇಕು, ಕಡೆಗಣಿಸಿದರೆ ಅದು ಪತನಕ್ಕೆ ನಾಂದಿ. ದೊಡ್ಡವರ ಮಾತಿಗೆ, ಅವರ ಸಲಹೆಗೆ, ಅವರ ಅನುಭವಕ್ಕೆ ಬೆಲೆಕೊಡಬೇಕು. ಅವರ ಆಶೀರ್ವಾದಕ್ಕೆ ತಲೆಬಾಗಬೇಕು. ಯಾರಾದರೂ ನಮ್ಮಿಂದ ಏನನ್ನಾದರೂ ಅಪೇಕ್ಷೆಪಟ್ಟರೆ, ಅದನ್ನು ಉಪೇಕ್ಷೆಮಾಡದೆ ಅಷ್ಟೋ ಇಷ್ಟೋ ಕೊಡಬೇಕು. ಬೇಕು ಬೇಕು ಎಂಬ ಮನೋಭಾವನೆ ಆವರಿಸಿಬಿಟ್ಟರೆ ಒಂದು ಮನೆಯಲ್ಲ, ಹತ್ತುಮನೆ ಕಟ್ಟಿದರೂ ಸಾಕೆನಿಸುವುದಿಲ್ಲ, ಕೊನೆಗೆ ಅರಮನೆಯಾದರೂ ಅರೆಮನೆಯೆನಿಸಿಬಿಡುತ್ತದೆ. ಸಂತೋಷವೆಂಬುದು ಮನಗಳಲ್ಲಿರುತ್ತದೆ, ಮನೆಗಳಲ್ಲಿ ಅಲ್ಲ.

ಭೋಗಾಸಕ್ತಿ ಹೆಚ್ಚಾದರೆ ಅದರಿಂದ ಬ್ರಹ್ಮಶಕ್ತಿ, ಕ್ಷಾತ್ರಶಕ್ತಿ, ಅನ್ಯಾಯವನ್ನು ಪ್ರತಿಭಟಿಸುವ ಶಕ್ತಿ - ಎಲ್ಲವೂ ಉಡುಗಿಹೋಗುತ್ತವೆ. ದುಡಿಯದೆ ಉಂಡರೆ ಅದು ಅನ್ನದ್ರೋಹವೆನಿಸುತ್ತದೆ. ನಮ್ಮ ಕೃಷಿವೃತ್ತಿಯ ಹಿನ್ನೆಲೆಯಲ್ಲಿರುವ ಸಾಂಸ್ಕೃತಿಕ ಸಂಬಂಧವನ್ನು ಸ್ಮರಿಸುತ್ತಿರಬೇಕು. ಪರರ ಉಪಕಾರವನ್ನೂ ಸ್ಮರಿಸುತ್ತಿರಬೇಕು. ನಾನು ಬದುಕಿನಲ್ಲಿ ಎಷ್ಟೇ ಮೇಲೇರಿದರೂ ಈ ಹಿಂದೆ ಹೇಗಿದ್ದೆ ಎಂಬುದನ್ನು ಮರೆಯಬಾರದು, ಮರೆತರೆ ಮನುಷ್ಯತ್ವ ಉಳಿಯುವುದಿಲ್ಲ. ಇನ್ನೊಬ್ಬರ ಹೊಟ್ಟೆಯಮೇಲೆ ಹೊಡೆದು ತಾನು ಸಿರಿವಂತನಾಗಲು ಬಯಸಬಾರದು. 'ನಾನು ಕೊಡುವ ವಸ್ತುಗಳನ್ನು ನೀನು ಮಾರಾಟಮಾಡಿ ಬಾ, ಒಂದು ವೇಳೆ ನಿನಗೆ ನಷ್ಟವಾದರೆ ನನ್ನ ಲಾಭದಲ್ಲಿ ಬಿಟ್ಟುಕೊಡುತ್ತೇನೆ' ಎಂದು ಹೇಳುವ ಔದಾರ್ಯವಿರಬೇಕು. ನಮ್ಮ ಸಂಪರ್ಕಕ್ಕೆ ಬರುವವರನ್ನು ವಿರಸದಿಂದಲ್ಲ, ಸರಸದಿಂದ ಗೆಲ್ಲಬೇಕು. ಜಗಳಬವರಗಳು ನಾಲ್ಕುಜನರ ಮುಂದೆ ನಮ್ಮ ಮರ್ಯಾದೆಯನ್ನು ಕಸಿಯುತ್ತವೆ ಎಂಬುದನ್ನು ಮರೆಯಬಾರದು. ಮೋಸವಂಚನೆಗಳಾಗುವಾಗ ಕಣ್ಣಾರೆ ನೋಡಿಕೊಂಡು ಸುಮ್ಮನಿರದೆ ಶಾಂತಿಮಾರ್ಗದಲ್ಲಿ ಖಂಡಿಸಬೇಕು.

ಅಡಿಗೆಯ ಕೆಲಸವಾಗಲಿ, ಬಡಗಿಯ ಕೆಲಸವಾಗಲಿ ದುಶ್ಚಟಗಳಿಗೆ ಬಲಿಯಾಗದೆಯೂ ನಿರ್ವಹಣೆ ಮಾಡಬಹುದು ಎಂಬ ದೃಢವಾದ ನಿಶ್ಚಯವಿರಬೇಕು. ಪೌರೋಹಿತ್ಯವನ್ನು ಸಮಾಹಿತಚಿತ್ತರಾಗಿ, ಕರ್ಮಕ್ಕೆ ಕುಂದಾಗದಂತೆ ಮಾಡಿಸಬೇಕು. ಲೋಪವಾದರೆ ಪುರೋಹಿತನೇ ಆ ಪಾಪಗಳನ್ನು ಅನುಭವಿಸಬೇಕಾಗುತ್ತದೆ. ಬಡ್ಡಿಗೆ ದುಡ್ಡುಕೊಟ್ಟರೆ ಅದು ದುಡಿದುಕೊಡುವುದು ಮೊದಲಿಗೆ ಆಕರ್ಷಕವೆನಿಸಬಹುದು. ಆದರೆ ಕಾಲಾಂತರದಲ್ಲಿ ಅಸಲಿಗೇ ಮೋಸವಾಗಬಹುದು. ಆದರೆ ಕೃಷಿಯಲ್ಲಿ ಹಾಗಾಗುವುದಿಲ್ಲ. ನಾವು ಭೂಮಿಯಲ್ಲಿ ನೆಡುವ ಒಂದೇ ಒಂದು ತೆಂಗು ಕೊಡುವ ಫಲಕ್ಕೆ ಮಿತಿಯೆಂಬುದೇ ಇಲ್ಲ.

ಗೋಸೇವೆ, ಗೋದಾನ ಅತ್ಯಂತ ಶ್ರೇಷ್ಠ ವಿಚಾರಗಳು. 'ಗಾವೋ ವಿಶ್ವಸ್ಯ ಮಾತರಃ' ಎಂದು ಹೇಳಿದೆ. ಮೂವತ್ತುಮೂರು ಕೋಟಿ ದೇವತೆಗಳೂ ಗೋವಿನ ಶರೀರದಲ್ಲಿ ವಾಸಮಾಡುತ್ತಾರೆ. ಗೋವುಗಳು ಸಂಚರಿಸುವ ಭೂಮಿಯಲ್ಲಿ ವಾತಾವರಣವು ಪವಿತ್ರವಾಗಿರುತ್ತದೆ, ಗಿಡಮರಗಳು ಚೆನ್ನಾಗಿ ಹುಲುಸುತ್ತವೆ. ಮನುಷ್ಯನೇ ಹೊಟ್ಟೆಯ ಸಲುವಾಗಿ ಮಾಡಬಾರದ್ದನ್ನು ಮಾಡುವಾಗ, ಮೂಕಪ್ರಾಣಿಗಳು ಹೊಲಗದ್ದೆಗಳನ್ನು ಅಪ್ಪಿತಪ್ಪಿ ಮೇದುಬಿಟ್ಟರೆ, ಅವುಗಳನ್ನು ಹಿಂಡಿ ಹಿಂಸಿಸಬಾರದು. ನಮ್ಮದೇ ಸ್ವಲ್ಪ ಹೋದರೂ ಚಿಂತೆಯಿಲ್ಲ ಎಂಬ ಭಾವನೆಯಿರಬೇಕು. 'ಅಯ್ಯೋ ಹೋಯಿತಲ್ಲ' ಎಂದು ಕೊರಗಬಾರದು.

ಕೃಷಿಜೀವನಕ್ಕೊಂದು ವ್ಯವಸ್ಥಿತ ದಿನಚರಿಯಿರಬೇಕು. ಸ್ನಾನ, ಸಂಧ್ಯಾವಂದನೆ, ದೇವತಾರ್ಚನೆ, ನಿತ್ಯಕರ್ಮಗಳು, ಕೃಷಿಯ ಕಾರ್ಯಗಳು ಎಂಬಂತೆ ಶಿಸ್ತು ಇರಬೇಕು. ದೇವರಲ್ಲಿ ನಂಬಿಕೆಯಿರಬೇಕು. ಮನೆಗಳಲ್ಲಿ ದೇವಕಾರ್ಯಗಳನ್ನೂ ಪಿತೃಕಾರ್ಯಗಳನ್ನೂ ಮಾಡಬೇಕು. ದೇವರ ಉತ್ಸವಗಳಲ್ಲಿ ಪಾಲ್ಗೊಳ್ಳಬೇಕು. ದೇವರ ಕೃಪೆಗಾಗಿ ಹಂಬಲಿಸಬೇಕು.

ಹಿಂಸೆಯಿಲ್ಲದೆ ಜೀವನವೇ ಇಲ್ಲ. ಧಾನ್ಯಗಳಲ್ಲಿ, ತರಕಾರಿಗಳಲ್ಲಿ, ಸಸ್ಯಗಳಲ್ಲಿ ಜೀವವಿರುತ್ತದೆ. ಅವುಗಳನ್ನು ಕೊಂದುಹಾಕಿಯೇ ನಾವು ಜೀವನನಿರ್ವಹಣೆ ಮಾಡುತ್ತೇವೆ. ಅದು ಅಪರಿಹಾರ್ಯವಾದ ಹಿಂಸೆ. ಕೃಷಿಮಾಡುವುದೂ ಒಂದರ್ಥದಲ್ಲಿ ಹಿಂಸೆಯೇ. ಭೂಮಿಯಲ್ಲಿರುವ ಎಷ್ಟೋ ಜೀವರಾಶಿಗಳನ್ನು ಕೊಂದವರಾಗುತ್ತೇವೆ. ಆದರೆ ಯಾವ ಕೃಷಿಯಲ್ಲಿ ಪರಿಮಿತ ಪ್ರಮಾಣದಲ್ಲಿ ಹಿಂಸೆಯೋ ಅಂತಹ ತೋಟದ ಕೃಷಿಯನ್ನು ಆರಂಭದಲ್ಲಿ ಸಂಕೇತಿಗಳು ಆಯ್ದುಕೊಂಡಿದ್ದರು. ಭೂಮಿಯ ಮೇಲಿರುವ ವೃತ್ತಿಗಳಲ್ಲೆಲ್ಲ ಅದು ಪವಿತ್ರವಾದುದು ಎಂದು

ನಂಬಿಕೊಂಡಿದ್ದರು. 'ಹಲಾಂತಂ ಬ್ರಹ್ಮವರ್ಚಸಂ' - ನೇಗಿಲುಹಿಡಿದು ಉಳುಮೆಮಾಡಿದರೆ ಬ್ರಹ್ಮವರ್ಚಸ್ಸು ಇಳಿಮುಖವಾಗುತ್ತದೆ ಎಂಬ ಶಾಸ್ತ್ರವಾಕ್ಯದಂತೆ ಎತ್ತುಕಟ್ಟಿ ಉಳುವ ವ್ಯವಸಾಯಕ್ಕೆ ಹಿಂದೆ ಹೆಚ್ಚು ಗಮನ ಕೊಡಲಿಲ್ಲ. ಈಗ ಆ ಶಾಸ್ತ್ರವಾಕ್ಯಪರಿಪಾಲನೆ ಎಲ್ಲರಿಂದಲೂ ಸಾಧ್ಯವಾಗುತ್ತಿಲ್ಲ.

ಪರಿಪೂರ್ಣವಾದ ಬ್ರಾಹ್ಮಣಕುಟುಂಬಕ್ಕೆ ತೋಟವೊಂದು ಇರಲೇಬೇಕು. ತೋಟವಿದ್ದಮೇಲೆ ದನಕರುಗಳನ್ನು ಅವನು ಸಾಕಲೇಬೇಕು. ಆ ದನಕರುಗಳನ್ನು ಕುಟುಂಬದ ಸದಸ್ಯರನ್ನು ಹೇಗೋ ಹಾಗೆ, ಅಕ್ಕರೆಯಿಂದ ಕಾಪಾಡಬೇಕು. ತೋಟದ ಕೃಷಿಯೆಂದರೆ ಅದೇ ಸಂಸಾರದ ಪ್ರತೀಕ. ತೆಂಗಿನಮರವೆಂದರೆ ಯಜಮಾನ, ಎಲೆಯ ಹಂಬೆಂದರೆ ಯಜಮಾಂತಿ, ಅಡಕೆಯ ಮರಗಳೆಂದರೆ ದುಡಿಯುವ ಯುವಕರು, ಬಾಳೆಯಗಿಡಗಳೆಂದರೆ ಬಾಲೆಯರು, ಬಾಲಕರು. ಪರಿಪೂರ್ಣಜೀವನಕ್ಕೆ ಕೃಷಿಯೇ ಪರಮಾಪ್ತಮಾರ್ಗ. ಪ್ರತಿಯೊಂದು ಗಿಡಮರವೂ ಅವರಿಗೆ ದೇವರ ಸಮಾನ. ಅವುಗಳನ್ನು ನಾವೇ ಮಮತೆಯಿಂದ ಮುಟ್ಟಿ ಆರೈಕೆ ಮಾಡಿ ಸ್ನೇಹಸಂಬಂಧವನ್ನು ಏರ್ಪಡಿಸಿಕೊಳ್ಳಬೇಕು. ನಾವು ಕೈಯಾರೆ ಮಾಡದೆ ಆಳುಗಳ ಕೈಲೇ ಮಾಡಿಸಿದರೆ, ಆಯಾಗಳ ಕೈಲಿ ಮಕ್ಕಳನ್ನು ಬೆಳೆಸಿದಂತಾಗುತ್ತದೆ.

ವಿದ್ಯೆ, ಅನ್ನ, ಹಾಲು, ಔಷಧಗಳನ್ನು ಬ್ರಾಹ್ಮಣನು ಮಾರಾಟಮಾಡಬಾರದು ಎಂದು ಹೇಳಲಾಗಿದೆ. ಅಂತಹ ಮೌಲ್ಯಗಳ ಸಂರಕ್ಷಣೆ ಈಗ ಕಷ್ಟವಾಗಿದೆ. ಆ ಮೌಲ್ಯವನ್ನು ಸ್ಮರಿಸಿ ಕಾಲಿಟ್ಟರೂ ಎಷ್ಟೋ ಸುಧಾರಣೆಯಾಗುತ್ತದೆ.

ಸಂಕೇತಿಗಳು ಕೃಷಿಕರಾಗಿ ಉಳಿಯುತ್ತಾರೆಯೆ ?

ಸಂಕೇತಿ ಕೃಷಿಯು ಮುಂದಕ್ಕೂ ಉಳಿಯುತ್ತದೆಯೆ ಎಂಬ ಪ್ರಶ್ನೆ ಲೇಖಕರಾದ ಕೇಶವಮೂರ್ತಿಗಳನ್ನು ಗ್ರಂಥದುದ್ದಕ್ಕೂ ಕಾಡಿದೆ. ಅವರು ಸಂದರ್ಶಿಸಿದ ಸಂಕೇತಿಕೃಷಿಕರನ್ನೂ ಕಾಡಿದೆ. ಈ ಗ್ರಂಥವನ್ನೋದುವ ಎಲ್ಲರನ್ನೂ ಅದು ಕಾಡುತ್ತದೆ. ಆ ಪ್ರಶ್ನೆಗೆ ಖಚಿತವಾದ ಉತ್ತರಕೊಡಲು ಕಾಲಪುರುಷನಿಂದ ಮಾತ್ರವೇ ಸಾಧ್ಯ; ಏಕೆಂದರೆ ನಾವೆಲ್ಲ ಅಕಾಲಪುರುಷರು. ಬ್ರಾಹ್ಮಣರಲ್ಲಿ ಒಗ್ಗಟ್ಟು ಇಲ್ಲದಿರಲಿ ಎಂದು ಪರಶುರಾಮದೇವನೇ ಶಾಪಕೊಟ್ಟಿದ್ದಾನಂತೆ. ಅದೇನೇ ಇದ್ದರೂ ಬ್ರಾಹ್ಮಣರ ಸಂಘಜೀವನ ಮಾತ್ರ ಅಲ್ಲಲ್ಲಿ ದಿನದಿಂದ ದಿನಕ್ಕೆ ಕುಸಿದುಹೋಗುತ್ತಿದೆ.

ಭೋಗಜೀವನಕ್ಕೆ, ಕೈಕೆಸರು ಮಾಡಿಕೊಳ್ಳದ ಜೀವನಕ್ಕೆ, ಮಳೆಬರಲಿ ಬಿಡಲಿ - ಹರಿದುಬರುವ ಸಂಬಳದ ಜೀವನಕ್ಕೆ ಎಲ್ಲರೂ ಮರುಳಾಗುತ್ತಿದ್ದಾರೆ. ಹೀಗಾಗಿ ವ್ಯವಸಾಯವೆಂದರೆ ಅಲರ್ಜಿ. ಆಸೆಪಟ್ಟು ಕೃಷಿಯಲ್ಲಿ ತೊಡಗುವ ಯುವಕರಿಗೆ ಹಳ್ಳಿಗರೇ ಆದ ಗೃಹಸ್ಥರು ತಮ್ಮ ಹೆಣ್ಣುಮಕ್ಕಳನ್ನು ಅವರಿಗೆ ಮದುವೆಮಾಡಿಕೊಡಲು ಹಿಂದೇಟು ಹಾಕುತ್ತಿದ್ದಾರೆ. ಗ್ರಾಮುಗಳಿಗೆ ಹೆಣ್ಣು ಕೊಟ್ಟರೆ ಅಲ್ಲಿ ಹೆಚ್ಚು ಶ್ರಮಪಡಬೇಕಾಗುತ್ತದೆ, ಪಟ್ಟಣಗಳಲ್ಲಿ ಸುಖವಾಗಿರಲಿ ಎಂದು ಆ ತಂದೆತಾಯಿಗಳು ಭಾವಿಸುತ್ತಾರೆ. ಹೆಣ್ಣುಮಕ್ಕಳೂ ಹಾಗೆಯೇ ಭಾವಿಸುತ್ತಾರೆ. ಗ್ರಾಮದ ಯುವಕನಿಗಿಂತ ನಗರದ ಯುವಕನಿಗೆ ಕಡಿಮೆಯೇ ಆದಾಯ ಬರುತ್ತಿದೆ ಎಂಬ ಪರಿಸ್ಥಿತಿಯಿದ್ದರೂ, ನಗರದ ಯುವಕನನ್ನೇ ಆಯ್ಕೆಮಾಡಿಕೊಳ್ಳುತ್ತಾರೆ. ನಗರಜೀವನದಲ್ಲಿರುವ ಎಲ್ಲ ಸುಖಸೌಲಭ್ಯಗಳೂ ಗ್ರಾಮಜೀವನದಲ್ಲೂ ಇವೆಯಲ್ಲಾ ಎಂದರೂ ಅವರು ಅದರಿಂದ ಸಮಾಧಾನ ಹೊಂದಲಾರರು. ಈಗೀಗ ಹೆಣ್ಣುಸಂತತಿಯೂ ಕ್ಷೀಣಿಸಿಬಿಟ್ಟಿದೆ.

ನಗರಜೀವನದ ಸಂಬಳಗಾರ ಯುವಕನಿಗಿರುವ ಸಾಮಾಜಿಕ ಅಂತಸ್ತು ಗೌರವಗಳು ಗ್ರಾಮೀಣ ಸುಸಂಸ್ಕೃತ ಯುವಕನಿಗೂ ಇಲ್ಲ. ಈಗಾಗಲೇ ನಗರಗಳನ್ನು ಸೇರಿರುವ ಸಂಕೇತಿಗಳು 'ತೋಟತುಡಿಕೆಗಳನ್ನು ಮಾರಾಟ ಮಾಡಿ ಇಲ್ಲಿಗೇ ಬಂದುಬಿಡಿ' ಎಂದು ಕರೆನೀಡುತ್ತಿದ್ದಾರೆ. ಕೃಷಿಕರಾದ ತಂದೆ ತಾಯಿಗಳೇ 'ನೀನು ಹಳ್ಳಿಯಲ್ಲಿರುವುದು ಬೇಡ, ದಿಳ್ಳಿಯ ದಾರಿಯನ್ನೇ ಹಿಡಿ, ಕೃಷಿ ನಿನ್ನಿಂದಾಗದು, ನನಗೇ ಕೊನೆಯಾಗಲಿ' ಎಂದು ಹೇಳಿದರೆ, ಅದು ಮುಂದುವರಿಯುವುದಾದರೂ ಹೇಗೆ? ಅನಿಶ್ಚಿತವಾದ ಮಳೆಗಾಲ, ಕರೆಂಟಿನ ಕ್ಷಾಮ, ಮಾರುಕಟ್ಟೆ ಬಿದ್ದುಹೋಗುವುದು, ಬೆಳೆಗಾರರ ನಡುವೆ ಪೈಪೋಟಿ, ಕೆಲಸದಾಳುಗಳ ಸಮಸ್ಯೆ, ಅನ್ಯ ರೈತಾಪಿಗಳ ಕಿರುಕುಳ ಮತ್ತು ಅಸಹಕಾರ, ಕಳ್ಳಕಾಕರ ಕಾಟ ಈ ಮುಂತಾದುವು ಕೂಡ ಸಂಕೇತಿ ಕೃಷಿಕರನ್ನು ಧೃತಿಗೆಡಿಸಿವೆ. ಉಯ್ಯಾಲೆಯ ಮೇಲೆ ಕುಳಿತು ತೂಗಿಕೊಳ್ಳುವುದು ಸಂಕೇತಿಗಳಿಗೆ ಪ್ರಿಯವಾದ ವಿಷಯಗಳಲ್ಲೊಂದು. ಕೇಶವಮೂರ್ತಿಯವರು ಆ ತೂಗುಯ್ಯಾಲೆಯನ್ನು ಸಂಕೇತಿಕೃಷಿ ಉಳಿಯುತ್ತದೆಯೆ ಎಂಬುದಕ್ಕೆ ಸಂಕೇತವಾಗಿಸಿದ್ದಾರೆ.

'ಉಳುವವನಿಗೇ ಜಮೀನು' ಎಂಬ ಕಾಯ್ದೆ ಜಾರಿಗೆ ಬಂದಾಗ ಅನೇಕ ಸಂಕೇತಿಗಳು ತಮ್ಮ ಜಮೀನುಗಳನ್ನು ಕಳೆದುಕೊಂಡರು. ಅಷ್ಟುಹೊತ್ತಿಗಾಗಲೆ ಮೈಸೇರಿಕೊಂಡಿದ್ದ ಸೋಮಾರಿತನವೂ ಅದಕ್ಕೆ ಕಾರಣವಾಯಿತು ಎಂದು ಕೆಲವರು ಹೇಳಿದ್ದಾರೆ. ಕೃಷಿ ಉಳಿಯಬೇಕಾದರೆ ಏನಾಗಬೇಕು ಎಂಬುದಕ್ಕೆ ಸಂಕೇತಿಗಳೇ ಕೆಲವು ಸಲಹೆಗಳನ್ನೂ ಕೊಟ್ಟಿದ್ದಾರೆ. ಗ್ರಾಮಗಳಲ್ಲಿ ವೇದಾಧ್ಯಯನ ಪ್ರಾರಂಭವಾಗಬೇಕು, ಅದು ಪೌರೋಹಿತ್ಯವೆಂಬ ಉಪಕಸುಬಿಗೂ ದಾರಿದೀಪವಾಗಬಹುದು. ಅನಿವಾರ್ಯವಾಗಿ ಸಂಕೇತಿಗಳು ಮಾರುವ ಜಮೀನನ್ನು ಅವರಲ್ಲೇ ಸಿರಿವಂತರಾದವರು ಕೊಳ್ಳುವಂತಾಗಬೇಕು. ಕೈಗಾರಿಕೆ ನಡೆಸುವ ಹಾಗೆ ದೊಡ್ಡ ಹಿಡುವಳಿಗಳನ್ನು ಖರೀದಿಸಿ, ಯುವಕರನ್ನು ಸಂಘಟಿಸಿಕೊಂಡು, ಹೆಚ್ಚು

ಲಾಭದಾಯಕವಾಗುವಂತೆ ಮಾಡಬೇಕು ಎಂದು ಮುಂತಾಗಿ ಅವರು ಸೂಚಿಸಿದ್ದಾರೆ.

ಸಂಕೇತಿ ಕೃಷಿಯ ಆಶಾದಾಯಕ ದೃಷ್ಟಿಕೋನವೂ ಈ ಕೃತಿಯಲ್ಲಿ ನಿರೂಪಿತವಾಗಿದೆ. "ನಾವು ನಂಬಿರುವ ಜಮೀನೇ ನಮಗೆ ದೇವರು. ಮಕ್ಕಳು ಹೊರಗೆ ಇದ್ದುಕೊಂಡು ಕೆಲಸಮಾಡಿ ನಿವೃತ್ತಿಗೊಂಡು ಬರಲಿ, ಅಲ್ಲಿಯವರೆಗೆ ನಾವೇ ರಕ್ಷಿಸಿಕೊಂಡಿರುತ್ತೇವೆ. ಗೋಡೆಯಿದ್ದರೆ ಚಿತ್ತಾರ, ಭೂಮಿಯಿದ್ದರೆ ಬೇಸಾಯ, ಅದನ್ನು ನಾವು ಕಾಪಾಡಿಕೊಂಡಿರುತ್ತೇವೆ. ಭೂಮಿಯನ್ನು ಬಿಡಬೇಕೆಂದರೆ ನಮಗೆ ಅಳುವಷ್ಟು ಸಂಕಟವಾಗುತ್ತದೆ" ಎಂಬ ಮಾತುಗಳು ಸಂಕೇತಿಕೃಷಿಗೆ ಭವಿಷ್ಯವಿದೆಯೆನ್ನುವುದಕ್ಕೆ ಸೂಚಕಗಳಾಗಿವೆ. ಆಧುನಿಕ ವಿದ್ಯಾವಂತಿಕೆ ಮತ್ತು ತೋಟಗಾರಿಕೆ ಎಂಬುವು ಒಂದಕ್ಕೊಂದು ಸಂಗಮಿಸದ ದಿಕ್ಕುಗಳಂತೆ ತೋರುತ್ತಿವೆ. ತೋಟದಲ್ಲಿ ಆಸಕ್ತಿ ಹುಟ್ಟಲೆಂದು ಮಕ್ಕಳನ್ನು ವಿದ್ಯಾವಂತರನ್ನಾಗಿ ಮಾಡದಿರಲು ಸಾಧ್ಯವಿಲ್ಲ. ಇಷ್ಟವಾದವರು ಕೃಷಿಮಾಡಲಿ, ಕಷ್ಟವಾದವರು ನಗರಗಳ ಉದ್ಯೋಗಕ್ಕೆ ಹೋಗಲಿ ಎಂದು ಹೇಳಿದರೆ ಮಿತಸಂತಾನವು ಆ ದಿಕ್ಕಿನಲ್ಲಿ ದೊಡ್ಡ ಪೆಟ್ಟನ್ನೇ ಕೊಟ್ಟಿದೆ. ನಗರಜೀವನವು ಉಂಟುಮಾಡುವ ಪರಾವಲಂಬನೆ, ಯಾಂತ್ರಿಕ ಜೀವನ, ಆರೋಗ್ಯಹಾನಿ, ನೆಮ್ಮದಿಯ ನಾಶ, ಅನಾಥಪ್ರಜ್ಞೆ, ಮನುಷ್ಯತ್ವದ ನಾಶ ಮುಂತಾದುವುಗಳ ಅರಿವು ಯುವಪೀಳಿಗೆಗೆ ಆಗಬೇಕು, ದ್ರವ್ಯಸಂಪಾದನೆಯ ಹೊರತಾಗಿಯೂ ಅನುಭವಿಸಬೇಕಾದ ಆನಂದಮಯವಾದ ಋಷಿಜೀವನವೊಂದಿದೆ ಎಂಬ ತಿಳಿವಳಿಕೆ ಹುಟ್ಟಬೇಕು, ಕೃಷಿಯಲ್ಲದೆ ನಮ್ಮ ಜೀವನಕ್ಕೆ ಬೇರೆ ದಾರಿಯಿಲ್ಲ ಎಂಬ ಅನಿವಾರ್ಯತೆಯುಂಟಾಗಬೇಕು. ಆಗ ಮಾತ್ರ ಕೃಷಿಯ ಸುವರ್ಣದ್ವಾರಗಳು ತೆರೆದುಕೊಳ್ಳುತ್ತವೆಯೆಂದು ನಾನು ಭಾವಿಸುತ್ತೇನೆ. ಈ ದಿಕ್ಕಿನಲ್ಲಿ ನಮಗೆ ಮತ್ತೂರು, ಹೊಸಹಳ್ಳಿ ಗ್ರಾಮಗಳು ಮಾರ್ಗದರ್ಶಿಯಾಗಿವೆ. ಚಿಲ್ಕುಂದ, ಬಸವಾಪಟ್ಟಣ, ಅಗ್ರಹಾರ, ಸೋಮನಹಳ್ಳಿ, ಲಿಂಗದಹಳ್ಳಿ, ಕೇರಳಾಪುರ, ಹಾನಗಲ್ಲು, ಮುಂತಾದ ಗ್ರಾಮಗಳು ಆಶಾಕಿರಣಗಳಾಗಿವೆ. 'ಈ ಸಂಕೇತಿ ಕೃಷಿಯನ್ನು ಸಂರಕ್ಷಿಸಲು ಯುಗಪುರುಷನೊಬ್ಬನು ಹುಟ್ಟಿಬರಬಾರದೇ' ಎಂದು ಕೇಶವಮೂರ್ತಿಗಳು ಹಂಬಲಿಸಿರುವುದು ಎಷ್ಟು ಅರ್ಥಪೂರ್ಣವಾಗಿದೆ ! ಅವರು ಈ ಗ್ರಂಥದ ಉಪಸಂಹಾರದಲ್ಲಿ ಈ ಅಳಿವುಉಳಿವಿನ ಪ್ರಶ್ನೆಯನ್ನೇ ಕೈಗೆತ್ತಿಕೊಂಡು ಚಿಂತನಮಂಥನ ನಡೆಸಿರುವುದನ್ನು ತಪ್ಪದೆ ಎಲ್ಲರೂ ಓದಬೇಕಾಗಿದೆ. ಟಿ.ಎನ್. ಸುಬ್ಬರಾವ್, ಪ್ರಣತಾರ್ತಿಹರನ್ ಅವರ ಚಿಂತನೆಗಳೂ ಈ ಸನ್ನಿವೇಶಕ್ಕೆ ಮನನಯೋಗ್ಯವಾಗಿವೆ.

ಕೇಶವ-ಹರನ್ ಭಲೇ ಜೋಡಿ

ಕೃಷಿ ವಿಜ್ಞಾನಿಯಾಗಿ ಕೀರ್ತಿಗಳಿಸಿರುವ, ಕೃಷಿಕಾರ್ಯಗಳಲ್ಲೂ ಅನುಭವ ಪಡೆದಿರುವ ಕೇಶವಮೂರ್ತಿಗಳು ಮೂಡಿಸಿರುವ ಈ ಮಹಾಸಂಪುಟವು ಅವರ ಜ್ಞಾನವಿಜ್ಞಾನಗಳಿಗೆ ಕಿರೀಟವಿಟ್ಟಂತಾಗಿದೆ. ತಮ್ಮ ಪ್ರಶ್ನಾವಳಿಯನ್ನು ಸಂಕೇತಿ ಕೃಷಿಗಷ್ಟೇ ಮಿತಗೊಳಿಸಿಕೊಳ್ಳದೆ, ಅವರ ಅಪರಿಮಿತವಾದ ಬದುಕನ್ನೆಲ್ಲ ಸೆರೆಹಿಡಿಯುವಷ್ಟು ವೈಶಾಲ್ಯಕ್ಕೆ ಬೀಸಿದ್ದಾರೆ. ಸಂಕೇತಿಕೃಷಿಯ ಒಳಹೊರಗುಗಳು, ಸಂಕೇತಿಕೃಷಿಕರ ಜೀವನದ ಒಳಹೊರಗುಗಳು ಎಲ್ಲವೂ ಇಲ್ಲಿ ದಾಖಲಾಗಿವೆ. ಏನನ್ನು ಕೇಳಬೇಕು, ಹೇಗೆ ಕೇಳಬೇಕು ಎಂಬುದನ್ನೆಲ್ಲ ಮೊದಲೇ ಹದವಾಗಿ ನಿರ್ಧರಿಸಿಕೊಂಡು, ತಮ್ಮ ಕ್ಷೇತ್ರಕಾರ್ಯಕ್ಕೆ ಮೆರುಗು ಮೂಡಿಸಿಕೊಂಡಿದ್ದಾರೆ. ತಾವಾಯಿತು, ತಮ್ಮ ಕೆಲಸವಾಯಿತು ಎಂದು ನಿರ್ಲಿಪ್ತರಾಗಿ ಬಾಳುವ ಕೃಷಿಕರನ್ನು ಮಾತಿಗೆಳೆದು, ಅವರಿಂದ ನಮಗೆ ಬೇಕು ಬೇಕಾದುದನ್ನು ಹೆಕ್ಕಿಕೊಳ್ಳುವುದೇನೂ ಸುಲಭದ ಮಾತಲ್ಲ. ಕ್ಷೇತ್ರಕಾರ್ಯವೆಂದರೆ ಅದೊಂದು ಪ್ರತಿಭಾಪೂರ್ಣ ಅನ್ವೇಷಣೆ; ಅದರಲ್ಲಿ ಕೇಶವಮೂರ್ತಿಗಳು ಪರಿಪೂರ್ಣವಾದ ಯಶಸ್ಸು ಸಾಧಿಸಿದ್ದಾರೆ.

ಈ ಕೃತಿಯಲ್ಲಿ ಕೃಷಿಜಗತ್ತಿನ ಸಾರಸರ್ವಸ್ವವೂ ಅಡಕವಾಗಿದೆ. ಇಲ್ಲಿ ಗ್ರಾಮಚರಿತ್ರೆಯ ಪಕ್ಷಿನೋಟವಿದೆ, ಗ್ರಾಮ ಸಂಸ್ಕೃತಿಯ ಸಿಂಹಾವಲೋಕನವಿದೆ, ಗ್ರಾಮನಾಮಗಳ ಚರ್ಚೆಯಿದೆ. ಇಲ್ಲಿ ಜೀವನಚರಿತ್ರೆಯ ಹೂರಣವಿದೆ, ಆತ್ಮಕಥೆಯ ಅಂತರಂಗವಿದೆ. ಇಲ್ಲಿ ಲಲಿತ ಪ್ರಬಂಧದ, ಪ್ರವಾಸ ಕಥನದ ಸಂಘಟನೆಯಿದೆ, ನಾಟಕದಂತೆ ದೃಶ್ಯಾವಳಿಗಳ ಹೊಳಪಿದೆ. ಇದು ಕೇವಲ ಕೃಷಿಶಾಸ್ತ್ರವೂ ಅಲ್ಲ, ಕೇವಲ ಕಾವ್ಯವೂ ಅಲ್ಲ. ಶಾಸ್ತ್ರಕ್ಕೆ ಶಾಸ್ತ್ರವಾಗಿ ಕಾವ್ಯಕ್ಕೆ ಕಾವ್ಯವಾಗಿ, ಉತ್ತಮಗುಣಗಳನ್ನು ಏಕಕಾಲದಲ್ಲಿ ತನ್ನಲ್ಲಿ ಸಮಾವೇಶಗೊಳಿಸಿಕೊಂಡು ಬೆಳಗುತ್ತಿದೆ.

ಈ ಕೃತಿಯು ಕೃಷಿಕರಿಗೆ, ಕೃಷಿ ಪ್ರೇಮಿಗಳಿಗೆ, ಜಾನಪದ ವಿದ್ವಾಂಸರಿಗೆ, ಕೃಷಿಜಿಜ್ಞಾಸುಗಳಿಗೆ, ಕೃಷಿಪದಕೋಶ ನಿರ್ಮಾಪಕರಿಗೆ, ಕೃಷಿವಿಜ್ಞಾನದ ಕಾಲೇಜುವಿದ್ಯಾರ್ಥಿಗಳಿಗೆ, ಸಂಶೋಧಕರಿಗೆ, ಅಧ್ಯಾಪಕರಿಗೆ ಸರ್ವಸಮಾನವಾಗಿ ಪ್ರಿಯವಾಗುತ್ತದೆಯೆಂದು ನಾನು ಭಾವಿಸಿದ್ದೇನೆ. ಈ ಕೃತಿಯನ್ನು ಸಂಕೇತಿಗಳು ನಿತ್ಯಪಾರಾಯಣಮಾಡುತ್ತ, ನವರಾತ್ರಿ ಬಂದಾಗ ಪೀಠದ ಮೇಲಿಟ್ಟು ಪೂಜಿಸುವುದಕ್ಕೂ ತಕ್ಕುದಾಗಿದೆ. ಆಹಾ, ಇಂತಹ ಸಚಿತ್ರಸಂಪುಟ ಯಾರಿಗೆ ಬೇಡ !

ಈ ಸಂಪುಟದ ಪ್ರಧಾನಸಂಪಾದಕರಾದ ಪ್ರಣತಾರ್ತಿಹರನ್ ಅವರು ಬಸವಾಪಟ್ಟಣದವರು. ಕೃಷಿಕುಟುಂಬದಿಂದಲೇ ಮೇಲೆ ಬಂದವರು. ಕನ್ನಡ ಪ್ರಾಧ್ಯಾಪಕರಾಗಿ ಸೇವೆಸಲ್ಲಿಸಿ ಈಗ ನಿವೃತ್ತರಾಗಿದ್ದಾರೆ. ತಮ್ಮ ಬಾಲ್ಯದ ಹಾಗೂ ಯೌವನದ ದಿನಗಳಲ್ಲಿ ಅಗತೆ ಮಾಡುವುದು, ಕಳೆಕೀಳುವುದು, ನೀರುಹಾಯಿಸುವುದು, ಗಾಡಿಹೊಡೆಯುವುದು, ಗೊಬ್ಬರಹಾಕುವುದು, ತೋಟ ಕಾಯುವುದು, ಹಂಬು ಇಳುಕುವುದು, ಕಣ ಮಾಡುವುದು, ಭತ್ತ

ತೂರುವುದು ಮುಂತಾದ ಎಲ್ಲ ಕೃಷಿ ಚಟುವಟಿಕೆಗಳಲ್ಲೂ ನೇರವಾಗಿ ಪಾಲ್ಗೊಂಡಿದ್ದಾರೆ. ಸಂಕೇತಿಗಳು ಮಾಡುತ್ತಿರುವ ಕೃಷಿಕಾರ್ಯವು ಅಧ್ಯಯನಯೋಗ್ಯವಾದುದು ಎಂಬುದನ್ನು ಅವರು ತಮ್ಮ ಒಳಗಣ್ಣಿಂದ ಕಂಡುಕೊಂಡು ಕಾರ್ಯೋನ್ಮುಖರಾಗಿರುವುದು ಪ್ರತ್ಯೇಕವಾಗಿ ಮೆಚ್ಚತಕ್ಕ ಸಂಗತಿಯಾಗಿದೆ. ಆ ಮಹತ್ಕಾರ್ಯಕ್ಕೆ ಕೃಷಿವಿಜ್ಞಾನಿಯೇ ಆಗಿ ಪಳಗಿದವರಾದ, ಆಕಾಶವಾಣಿಯಲ್ಲಿ ಕೃಷಿಕಾರ್ಯಕ್ರಮಗಳನ್ನು ಸಂಯೋಜಿಸಿದವರಾದ ಕೇಶವಮೂರ್ತಿಗಳನ್ನು ನಿಯೋಜಿಸಿ, ತಮ್ಮ ಕನಸನ್ನು ನನಸಾಗಿಸಿಕೊಂಡಿದ್ದಾರೆ.

ಪ್ರಣತಾರ್ತಿಹರನ್ ಈವರೆಗೆ ಹಲವು ಸಂಕೇತಿ ಸಂಪುಟಗಳನ್ನು ಸಂಘಟಿಸಿರುವುದರಿಂದ, ಸಂಕೇತಿಗ್ರಾಮಗಳಲ್ಲಿ ಅವರು ಚಿರಪರಿಚಿತರಾಗಿದ್ದಾರೆ. ಕೇಶವಮೂರ್ತಿಯವರೊಡನೆ ತಾವೂ ಅನೇಕ ಗ್ರಾಮಗಳಿಗೆ ಭೇಟಿಕೊಟ್ಟು, ಕ್ಷೇತ್ರಕಾರ್ಯವು ಹೆಚ್ಚು ಪರಿಣಾಮಕಾರಿಯಾಗುವಂತೆ ಮಾಡಿದ್ದಾರೆ. ಪ್ರಣತಾರ್ತಿಹರನ್ ಅವರ ದೂರದೃಷ್ಟಿ, ಸಾಹಸಪ್ರಿಯತೆ, ವಿದ್ವತ್ತು, ಸಾಮಾಜಿಕ ಕಳಕಳಿ, ಲೋಕಹಿತದೃಷ್ಟಿಗಳೆಲ್ಲವೂ ಇಲ್ಲಿ ಸಂಗಮಿಸಿ ಸಾರ್ವಕಾಲಿಕ ಮಹತ್ವದ ಗ್ರಂಥರತ್ನವೊಂದಕ್ಕೆ ತಳಹದಿಯಾಗಿದೆಯೆಂಬುದನ್ನು ಮರೆಯದೆ ಹೇಳಬೇಕು. ಸಂಕೇತಿಗಳು ಮಾತ್ರವಲ್ಲ, ಇಡೀ ಕನ್ನಡನಾಡಿನ ಕೃಷಿಕಸಮಾಜವೇ ಇಂತಹ ಸದ್ಗ್ರಂಥಕ್ಕಾಗಿ ಪ್ರಣತಾರ್ತಿಹರನ್ ಅವರನ್ನು ಕೊಂಡಾಡಬೇಕಾಗಿದೆ. ಅವರ ಎಡೆಬಿಡದ ಪ್ರಯತ್ನಶೀಲತೆಯನ್ನೂ, ಕಾರ್ಯತನ್ಮಯತೆಯನ್ನೂ ಭಗೀರಥನಾದರೂ ಸರಿಯೆ 'ಜೈ ಹೋ' ಎಂದು ಘೋಷಿಸಬೇಕಾಗಿದೆ. ಕನ್ನಡನಾಡಿನ ಕೃಷಿಯ ಎಲ್ಲ ಮುಖಗಳನ್ನೂ, ಸಂಕೇತಿಗಳ ನೆಪದಲ್ಲಿ, ಸಾಕ್ಷಾತ್ಕಾರಗೊಳಿಸಿರುವ ಇಂತಹ ಬೇರೊಂದು ವಿಶಾಲಕಾಯ ಸಂಪುಟವನ್ನು ನಾನು ನೋಡಿಲ್ಲ. ಹೋರಿಗಳನ್ನು ನಮ್ಮ ಕೃಷಿಕರು ಜಾತ್ರೆಗಳಲ್ಲಿ ಜೋಡಿಹಾಕುತ್ತಾರಲ್ಲಾ, ಹಾಗೆ ಕೇಶವ-ಹರನ್ ಜೋಡಿಯು ಪರಮೇಶ್ವರನೇ ಈ ಸತ್ಕಾರ್ಯಕ್ಕೆ ಹಾಕಿದ ಜೋಡಿಯಾಗಿದೆ. ಈ ಜೋಡಿಯನ್ನು 'ಭಲೇ ಜೋಡಿ' ಎಂದೇ ಸಾರಿ ಹೇಳಬೇಕಾಗಿದೆ. ಕ್ಷೇತ್ರಕಾರ್ಯದಲ್ಲಿ ಕೇಶವಮೂರ್ತಿಯವರೊಡನೆ ಬಿ.ವಿ. ವೆಂಕಟನಾರಾಯಣರು ಹಲವು ಗ್ರಾಮಗಳಿಗೆ ಭೇಟಿಕೊಟ್ಟು ಸಹಕರಿಸಿರುವುದನ್ನೂ ಮರೆಯುವಂತಿಲ್ಲ.

ವಿಶ್ವವಿದ್ಯಾನಿಲಯ ಸಂಜೆ ಕಾಲೇಜು
ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು

ಡಾ|| ಕೆ. ಅನಂತರಾಮು
ಕನ್ನಡ ಪ್ರಾಧ್ಯಾಪಕರು (ನಿವೃತ್ತ)

ಸಂಕೇತಿ : ಬೇಸಾಯದ ಬದುಕು
ರತ್ನಕರಂಡಕ ಕೃಷಿಕಾಚಾರ

ಹಾಸನ ಜಿಲ್ಲೆಯು ಸಂಕೇತಿ ಕೃಷಿಕರ ಪ್ರಧಾನ ನೆಲೆಯಾಗಿದೆ. ವಿಜಯ್ ಅಂಗಡಿಯವರು ಆ ಜಿಲ್ಲೆಯ ಅಗ್ರಹಾರ, ಮಗ್ಗೆ, ನಿಲುವಾಗಿಲು, ನವಿಲೆ, ಮಾದಾಪುರ, ಮಲ್ಲರಾಜಪಟ್ಟಣ, ಬಸವಾಪಟ್ಟಣ, ರಾಮನಾಥಪುರ, ಸರಗೂರು, ಕಟ್ಟೇಪುರ, ರುದ್ರಪಟ್ಟಣ, ಆನಂದೂರು, ಕಟ್ಟೆಹೊಸಹಳ್ಳಿ, ಹಿರೇಹಳ್ಳಿಕೊಪ್ಪಲು, ಹಂದ್ರಾಳು, ಕಾರೇಬೋರೆಕಾವಲು, ಎಂಬೀಗ್ರಾಮಗಳಲ್ಲಿ ಸಂಚರಿಸಿ, ಸುಸಂಬದ್ಧವೂ ವೈಜ್ಞಾನಿಕವೂ ಆದ ಕ್ಷೇತ್ರಕಾರ್ಯದ ಮೂಲಕ ಆ ಕೃಷಿಕರ ಜೀವನಮಾರ್ಗವನ್ನೆಲ್ಲ ತಲಸ್ಪರ್ಶಿಯಾಗಿ ಅಧ್ಯಯನ ಮಾಡಿದ್ದಾರೆ. ಅದರ ಫಲಿತಾಂಶಗಳನ್ನೆಲ್ಲ ಈ ಸಂಪುಟದ 'ಸಂಕೇತಿ ಬೇಸಾಯದ ಬದುಕು : ಅವಲೋಕನ' ಎಂಬ ಮೊದಲ ಭಾಗದಲ್ಲಿ ಪರಿಷ್ಕಾರವಾಗಿ ದಾಖಲಿಸಿದ್ದಾರೆ. ಜಿಜ್ಞಾಸುಗಳಾದ ಕೃಷಿಕರಿಗೆ, ಕೃಷಿಪ್ರೇಮಿಗಳಿಗೆ, ಸಾಹಿತ್ಯಪ್ರೇಮಿಗಳಿಗೆ ಅದೊಂದು 'ಕೃಷಿರತ್ನಕರಂಡಕ'ವಾಗಿ ಪರಿಣಮಿಸಿದೆಯೆಂದರೆ ಅತಿಶಯೋಕ್ತಿಯಲ್ಲ.

ಸಂಕೇತಿ ಕೃಷಿಯ ಸರ್ವತೋಮುಖ ಚಿಂತನೆ

ವಿಜಯ್ ಅಂಗಡಿಯವರು ಸಂಕೇತಿ ಕೃಷಿಕರ ಜೀವನಮಾರ್ಗದ ಸಾರಸರ್ವಸ್ವವನ್ನೆಲ್ಲ 'ಅವಲೋಕನ'ದಲ್ಲಿ ಸಚಿತ್ರವಾಗಿ ಹಿಡಿದಿಟ್ಟಿದ್ದಾರೆ. ಅಲ್ಲಿನ ಸಂಕೇತಿಗಳು ಅಡಕೆ, ತೆಂಗು, ಬಾಳೆ, ಭತ್ತ, ತಂಬಾಕು, ಮುಸುಕಿನಜೋಳ, ಹತ್ತಿ, ನೆಲಗಡಲೆ, ಕಾಫಿ, ಶುಂಠಿ, ಕಾಳುಮೆಣಸು, ನಿಂಬೆ, ರಾಗಿ, ವೀಳ್ಯದೆಲೆ, ವೆನಿಲ್ಲಾ, ತರಕಾರಿಗಳು, ಹಣ್ಣುಗಳು ಮುಂತಾದುವನ್ನು ಬೆಳೆಯುತ್ತಾರೆ. ನೀರಿಗಾಗಿ ಕೆರೆಗಳಿಂದ ಉಪಯೋಗ ಪಡೆಯುತ್ತಾರೆ. ಇತ್ತೀಚೆಗೆ ಹಾರಂಗಿ ಅಣೆಕಟ್ಟು, ಗೊರೂರು ಅಣೆಕಟ್ಟುಗಳೂ ಅವರ ಉಪಕಾರಕ್ಕೆ ಒದಗಿಬಂದಿವೆ. ತೋಟಗಳಲ್ಲಿ ಈ ಹಿಂದೆ ತೋಡಿದ ಬಾವಿಗಳ ಜೊತೆಗೆ ಹೊಸದಾಗಿ ಕೊರೆದ ಬೋರ್‌ವೆಲ್‌ಗಳೂ ಇವೆ. ಗ್ರಾಮದೊಳಗೂ ಮನೆಬಳಕೆಗೆ ನಲ್ಲಿನೀರಲ್ಲದೆ, ರಾಟೆಬಾವಿಗಳನ್ನೂ ರಕ್ಷಿಸಿಕೊಂಡಿದ್ದಾರೆ.

ಎತ್ತಿನಗಾಡಿಗಳ ಜೊತೆಗೆ ಟ್ರ್ಯಾಕ್ಟರ್‌ಗಳನ್ನೂ, ಟಿಲ್ಲರ್‌ಗಳನ್ನೂ ಬಳಸುತ್ತಿದ್ದಾರೆ. ಎಮ್ಮೆಗಳನ್ನೂ, ಹಳ್ಳಿಕಾರು, ಸಿಂಧಿ ಮತ್ತು ನಾಟಿಹಸುಗಳನ್ನೂ ಸಾಕಿಕೊಂಡು ಹೈನುಗಾರಿಕೆಯಿಂದಲೂ ಸಬಲರಾಗುತ್ತಿದ್ದಾರೆ. ಸಾವಯವ ಗೊಬ್ಬರಗಳನ್ನು ತಯಾರಿಸಿಕೊಳ್ಳಲು ಪಶುಪಾಲನೆಯು ಆಸರೆಯಾಗಿದೆ. ಗೋಬರ್‌ಗ್ಯಾಸ್ ಪ್ಲಾಂಟುಗಳನ್ನೂ ಸೌರಶಕ್ತಿದೀಪಗಳನ್ನೂ ಅಳವಡಿಸಿಕೊಳ್ಳುತ್ತಿದ್ದಾರೆ. ಅವರು ಬೆಳೆಯುವ ಅಡಕೆಗೆ ಶಿವಮೊಗ್ಗ ಮತ್ತು ಸಾಗರ ಪ್ರಮುಖ ಮಾರಾಟ ಕೇಂದ್ರಗಳಾಗಿವೆ. ತಂಬಾಕನ್ನು ಹದಗೊಳಿಸಲು ಬ್ಯಾರನ್ ಕಟ್ಟಿಕೊಂಡಿದ್ದಾರೆ. ಅದರ ಮಾರಾಟಕ್ಕೆ ರಾಮನಾಥಪುರದಲ್ಲೊಂದು ಹರಾಜು ಮಾರುಕಟ್ಟೆಯಿದೆ. ಹಣ್ಣಿನ ತೋಟಗಳನ್ನು ಬೆಳೆಸಿ ಮೇಲೆ ಬಂದವರೂ ಇದ್ದಾರೆ.

ಸರಳ ಜೀವನ, ಸಹಜ ಜೀವನ

ಸಂಕೇತಿ ಕೃಷಿಕರು ಸರಳಜೀವನಕ್ಕೆ ಒಗ್ಗಿಕೊಂಡಿದ್ದಾರೆ. ಮಣ್ಣಿನ ಗೋಡೆಗಳಿಂದ ಕೂಡಿದ ನಾಡುಹಂಚಿನ ಮನೆಗಳು ಈಗಲೂ ಇವೆ. ತೊಟ್ಟಿಮನೆಗಳು ತಮ್ಮ ವಿಶಿಷ್ಟ ವಾಸ್ತುಶೈಲಿಯಿಂದ ನಗರವಾಸಿಗಳ ಗಮನವನ್ನು ಸೆಳೆಯುತ್ತವೆ. ತೋಟಕ್ಕೆ ಓಡಾಡಲು, ಅಲ್ಲಿಂದ ಹೊರೆಹೊತ್ತು ತರಲು, ಈಗಲೂ ಸೈಕಲ್ಲುಗಳನ್ನು ಬಳಸುತ್ತಾರೆ. ಸಮೀಪದ ಪಟ್ಟಣಗಳಿಗೆ ಹೋಗಿಬರಲು ಹೊಸಹೊಸ ದ್ವಿಚಕ್ರವಾಹನಗಳನ್ನಿಟ್ಟುಕೊಂಡಿದ್ದಾರೆ. ಶ್ರಮಜೀವನಕ್ಕೆ ತಮ್ಮನ್ನು ಒಗ್ಗಿಸಿಕೊಂಡಿದ್ದರೂ ಕೆಲಸದಾಳುಗಳ ಸಹಾಯವಿಲ್ಲದೆ ಬೇಸಾಯದ ಬದುಕು ನಡೆಯುವುದಿಲ್ಲ. ಪಶುಪಾಲನೆಗೆ ಗೋಪಾಲಕರನ್ನಿಟ್ಟುಕೊಂಡಿದ್ದಾರೆ. ಅಡಕೆಯ ಸುಗ್ಗಿಬಂದಾಗ ಹಬ್ಬದ ವಾತಾವರಣ ನಿರ್ಮಾಣವಾಗುತ್ತದೆ. ಎಡೆಯುವುದು, ಬೇಯಿಸುವುದು ಮುಂತಾದ ಸಂಸ್ಕರಣ ಕಾರ್ಯಗಳನ್ನು ಹುರುಪಿನಿಂದ ಮಾಡುತ್ತಾರೆ. ತೆಂಗನ್ನು ಹಾಗೆಯೇ ಮಾರುವುದೇ ಹೊರತು ಕೊಬ್ಬರಿಯಾಗಿಸುವುದು ಕಡಿಮೆ. ಸ್ತ್ರೀಯರಿಗೆ ಮೈತುಂಬ ಮನೆಗೆಲಸಗಳೇ ಸುತ್ತಿಕೊಳ್ಳುವುದರಿಂದ ಕೃಷಿಕಾರ್ಯಗಳಲ್ಲಿ ಅವರು ಪರೋಕ್ಷವಾಗಿ ಭಾಗವಹಿಸಬಲ್ಲರೇ ಹೊರತು, ತೋಟವನ್ನು ಹೊಕ್ಕು ದುಡಿಯಲಾರರು. ಊರಿಂದ ದೂರದೂರದಲ್ಲಿರುವ ತೋಟಗಳು, ಗೌರವದ ಪ್ರಶ್ನೆ, ಒರಟುಸ್ವಭಾವದ ಕೆಲಸಗಾರರು - ಮುಂತಾದವು ಸ್ತ್ರೀಯರ ಪ್ರತ್ಯಕ್ಷ ಪಾಲ್ಗೊಳ್ಳುವಿಕೆಗೆ ಅಡ್ಡಿಯಾಗಿವೆ. ಮನೆಯಲ್ಲಿಯೇ ಅವರು ವೀಳ್ಯದೆಲೆ ರೇಖೆಮಾಡಿ ಜೋಡಿಸುವುದು, ಅಡಕೆಪಟ್ಟೆ ಸುಲಿಯುವುದು, ಬಿದ್ದ ಅಡಕೆಗಳನ್ನು ಸುಲಿದು ಒಣಗಿಸುವುದು ಮುಂತಾದ ಕೆಲಸಗಳನ್ನು ನಿರ್ವಹಿಸುತ್ತಾರೆ. ಅತಿಥಿಸತ್ಕಾರದಲ್ಲಿ ಎಂದೂ ಅವರು ಹಿಂದೆಬಿದ್ದವರಲ್ಲ. ಬಳಪದಕಲ್ಲಿನ ಬಾನಿ, ಕಲ್ಲುಬಾಂಡಲಿ, ಕಲ್ಲುಮರಿಗೆ, ಗೇರುಕುಕ್ಕೆ, ಮರದ ಸೇರು ಬಳ್ಳಗಳು ಮುಂತಾದ ಸರಳಸಾಮಗ್ರಿಗಳಲ್ಲಿ ಕೆಲವು ಮಾತ್ರ ಈಗ ಬಳಕೆಯಾಗುತ್ತಿವೆ. ನಾಲ್ಕಾರುಬಾರಿ ಕಾಫಿ ಕುಡಿಯಬೇಕು, ಐದಾರುಬಾರಿ ತಾಂಬೂಲ ಚರ್ವಣವಾಗಬೇಕು, ಹತ್ತಾರುಬಾರಿ ನಶ್ಯವೇರಿಸಬೇಕು - ಅವೆಲ್ಲ ಅವರನ್ನು ಚುರುಕುಗೊಳಿಸುವ ಸರಳಸಾಧನಗಳು.

ಕೃಷಿಯಲ್ಲಿ ಪೂರ್ಣಪಂಡಿತರು

ಒಂದೊಂದೂ ಬೆಳೆಯ ಆರಂಭದ ಹಂತದಿಂದ ಹಿಡಿದು, ಅದರ ಸುಗ್ಗಿಮಾಡುವವರೆಗಿನ ಎಲ್ಲ ಹಂತಗಳ ಕೃಷಿ ಸ್ವರೂಪವನ್ನೂ ಸಂಕೇತಿ ಕೃಷಿಕರು ಕರತಲಾಮಲಕವಾಗಿಸಿಕೊಂಡಿದ್ದಾರೆ. ಅರಣ್ಯ ಇಲಾಖೆ, ತೋಟಗಾರಿಕೆ ಇಲಾಖೆ, ವ್ಯವಸಾಯ ಇಲಾಖೆ ಮುಂತಾದುವುಗಳೊಡನೆ ಸಂಪರ್ಕವಿರಿಸಿಕೊಂಡು, ಹೊಸಹೊಸ ವಿಚಾರಗಳು ಮೂಡಿಬಂದರೆ, ಅವುಗಳನ್ನು ತಮ್ಮ ಕೃಷಿಕಾರ್ಯಕ್ಕೆ ಜೋಡಿಸಿಕೊಳ್ಳುತ್ತಾರೆ. ಪರಂಪರೆಯಿಂದ ರೂಢಿಯಾಗಿ ಬಂದ ವ್ಯವಸಾಯ ಪದ್ಧತಿಯ ಸಾರಪೂರ್ಣವಾದ ವಿಚಾರಗಳನ್ನು ರಕ್ಷಿಸಿಕೊಂಡಿದ್ದಾರೆ. ಸರ್ಕಾರವು ನೀಡುವ ಸಾಲಸೌಲಭ್ಯಗಳನ್ನೂ, ಸಬ್ಸಿಡಿಯ ಸೌಕರ್ಯಗಳನ್ನೂ ಸದುಪಯೋಗಪಡಿಸಿಕೊಳ್ಳುತ್ತಿದ್ದಾರೆ. ರಾಸಾಯನಿಕ ಗೊಬ್ಬರಗಳ ದುಷ್ಪರಿಣಾಮಗಳ ಅರಿವಿದ್ದರೂ ಬೇರೆ ದಾರಿಯಿಲ್ಲದೆ ಸಾವಯವಗೊಬ್ಬರಗಳ ಜೊತೆಗೆ ಅವುಗಳನ್ನೂ ಮಿತವಾಗಿ ಬಳಸುತ್ತಿದ್ದಾರೆ. ವರ್ಷವರ್ಷವೂ ತೋಟಕ್ಕೆ ಹೊಸಮಣ್ಣನ್ನು ಹರಡಿಸಿ ಫಲವತ್ತತೆಯನ್ನು ಸಂರಕ್ಷಿಸಿಕೊಳ್ಳುತ್ತಿದ್ದಾರೆ. ತೋಟಗಳ ಅಂಚಿನಲ್ಲಿ ಹಲಸು, ಹುಣಿಸೆ, ನೇರಳೆ, ಮಾವು, ತೇಗ, ಹೊನ್ನೆ, ಬೇಲ, ಚಕ್ಕೋತ, ಹೇರಳೆ, ಸೀಬೆ, ಬಿದಿರು, ಅಕೇಶಿಯಾ, ಹಾಲುವಾಣ ಮುಂತಾದುವನ್ನು ನೆಟ್ಟು ಅಭಿವೃದ್ಧಿಯನ್ನು ಸಾಧಿಸುತ್ತಿದ್ದಾರೆ. ಭತ್ತದ ತಳಿಗಳಲ್ಲಿ ರಾಜಮುಡಿ, ರಾಜಭೋಗಗಳನ್ನು ಅವರು ಹೆಚ್ಚು ಇಷ್ಟಪಡುತ್ತಾರೆ. ಅವುಗಳಿಗೆ ರೋಗಬಾಧೆ, ಕೀಟಬಾಧೆಗಳು ಕಡಿಮೆ ಎಂಬುದೇ ಅದಕ್ಕೆ ಕಾರಣವಾಗಿದೆ. ಬಾಳೆಯಲ್ಲಂತೂ ದೇವಬಾಳೆ, ಮರಬಾಳೆ, ಪುಟ್ಟಬಾಳೆ, ಬೂದುಬಾಳೆ, ಚಂದ್ರಬಾಳೆ, ಆನೆಬಾಳೆ ಮುಂತಾದುವನ್ನೆಲ್ಲ ಅಳವಡಿಸಿಕೊಂಡಿದ್ದಾರೆ. ಬಾದಾಮಿ, ರಸಪುರಿ, ನೀಲಂ, ಮಲಗೋಬ, ಜೀರಿಗೆಮಿಡಿ ಮುಂತಾದ ಮಾವಿನ ಜಾತಿಗಳನ್ನು ಅವರು ಬೆಳೆಯುತ್ತಿದ್ದಾರೆ.

ಲೋಕದ ಬದುಕೇ ದುಃಖಾಲಯ

ದುಃಖಗಳು ಎಲ್ಲರನ್ನೂ ಕಾಡುತ್ತವೆ. ಅವು ತಮ್ಮ ಮುಖವಾಡಗಳನ್ನು ಮಾತ್ರವೇ ಬದಲಾಯಿಸಿಕೊಳ್ಳುತ್ತವೆ. ಕೃಷಿ ಜೀವನಕ್ಕೇ ಹೇಳಿಮಾಡಿಸಿದ ದುಃಖಗಳು ಅನೇಕವಾಗಿವೆ. ಅಡಕೆಗೆ ಅಣಬೆರೋಗ, ಬಾಳೆಗೆ ಕಟ್ಟೆರೋಗ, ತೆಂಗಿಗೆ ನುಸಿರೋಗ, ವೀಳ್ಯದೆಲೆಗೆ ಬೂದಿರೋಗ - ಒಂದೇ ಎರಡೇ! ಎಲ್ಲವನ್ನೂ ನಿಯಂತ್ರಿಸಿ ಫಸಲನ್ನು ಕೈವಶಪಡಿಸಿಕೊಳ್ಳುವ ಹೊತ್ತಿಗೆ ಕಣ್ಣುಗಳಲ್ಲಿ ರಕ್ತ ಹರಿದಿರುತ್ತದೆ. ಅಣಬೆರೋಗ ಬಂದ ಮರದ ಬಳಿ

ಉಪ್ಪುಸುರಿದು ಮುಚ್ಚಿದರೆ ರೋಗಾಣು ಹರಡುವುದಿಲ್ಲ, ಬುಡವನ್ನು ಜಜ್ಜಿ ಸೀಮೆಎಣ್ಣೆ ಸುರಿದರೆ ನಿಯಂತ್ರಣಕ್ಕೆ ಬರುತ್ತದೆ ಎಂಬ ಉಪಚಾರಗಳನ್ನು ಸ್ವಾನುಭವದಿಂದ ಸಾಧಿಸಿಕೊಂಡು ಬಂದಿದ್ದಾರೆ. ರಾಸಾಯನಿಕ ಗೊಬ್ಬರವನ್ನು ಒಮ್ಮೆ ಕೊಟ್ಟರೆ, ಸಸ್ಯಗಳಿಗೆ ಅದೇ ಅಭ್ಯಾಸವಾಗಿ, ಅದನ್ನೇ ಮುಂದುವರಿಸಬೇಕಾಗುತ್ತದೆಂದು ಅಂಜುತ್ತಾರೆ. ಭತ್ತಕ್ಕೆ ಹಕ್ಕಿಗಳ ಕಾಟವಿರುತ್ತದೆ, ಅಡಕೆಗೆ ಬಾವಲಿಗಳ ಕಾಟವಿರುತ್ತದೆ, ತೆಂಗಿಗೆ ಕೋತಿಗಳ ಕಾಟವಿರುತ್ತದೆ, ರಾಗಿಗೆ ನವಿಲುಗಳ ಕಾಟವಿರುತ್ತದೆ. ಕಾಡುಹಂದಿ, ಗುಳ್ಳೇನರಿಗಳೂ ಬೆಳೆಗಳನ್ನು ನಾಶಮಾಡುತ್ತವೆ. ಗುಳ್ಳೇನರಿಗಳು ಬೆಳೆಗಳನ್ನಲ್ಲದೆ ಹನಿ ನೀರಾವರಿ ಕೊಳವೆಗಳನ್ನು ಕಡಿದು ನಾಶಮಾಡುತ್ತವೆ. ಪರಮಾತ್ಮನು ಸೃಷ್ಟಿಸಿರುವ ಭೂತಕೋಟಿಗಳನ್ನು ಅವನೇ ಸಾಕಬೇಕಲ್ಲವೆ, ಅವುಗಳಿಗೂ ಪಾಲುಬೇಡವೇ ಎಂದು ಶಾಂತರಾಗುತ್ತಾರೆ. ಸೊಳ್ಳೆಗಳು ರಕ್ತಹೀರುತ್ತಿದ್ದರೂ 'ಅವುಗಳಿಗೆ ನಮ್ಮ ರಕ್ತದ ಋಣವಿದೆ' ಎಂದು ಸಮಾಧಾನಪಡಲು ದಾರಿಕಂಡುಕೊಳ್ಳುತ್ತಾರೆ. ಈಗ ಕೂಲಿಯಾಳುಗಳಲ್ಲಿ ಪ್ರಾಮಾಣಿಕತೆಯ ತೀವ್ರವಾದ ಕೊರತೆಯುಂಟಾಗಿದೆ. ತಾವು ಪಡೆದ ಕೂಲಿಗೆ ಸರಿದೂಗುವಷ್ಟು ದುಡಿದುಕೊಡಬೇಕೆಂಬ ಭಾವನೆ ಮರೆಯಾಗುತ್ತಿದೆ. ಸಗಣಿಗೊಬ್ಬರ ಎಂದು ಆಸೆಯಿಂದ ಕೊಂಡು ತರಿಸಿದರೆ, ಅದರಲ್ಲಿ ಕರೀಮಣ್ಣು ಬೆರೆಸಿರುವುದೇ ಹೆಚ್ಚು.

ಆಚಾರ ವಿಚಾರಗಳು

ಗೋವುಗಳನ್ನು ಅಕ್ಕರೆಯಿಂದ ಸಾಕುತ್ತಾರೆ. ವಾರಕ್ಕೊಮ್ಮೆ ಹಿತಕರವಾಗಿ ಸ್ನಾನ ಮಾಡಿಸುತ್ತಾರೆ. ಕರುಗಳು ನೊಂದಾವೆಂದು ಬಿಸಿನೀರನ್ನೇ ಎರೆಯುತ್ತಾರೆ. ಕಡಸುಗಳನ್ನು ಮಾತ್ರ ಉಳುಮೆಗೆ ಬಳಸುತ್ತಾರೆ. ಉಳಲು ಹಸುಗಳನ್ನು ಕಟ್ಟುವುದಿಲ್ಲ. ಕೆರೆಗಳ, ಗೋಮಾಳಗಳ ಒತ್ತುವರಿಯಾಗಿ ಪಶುಪಾಲನೆ ದುಸ್ತರವಾಗಿದೆ. ಬರೀ ಉಗುರಿನಲ್ಲಿ ಎಲೆ ಕೊಯ್ಯಬಾರದು, ಮುಟ್ಟಾದ ಹೆಂಗಸರು ತೋಟವನ್ನು ಪ್ರವೇಶಿಸಬಾರದು, ಪಾದರಕ್ಷೆ ಮೆಟ್ಟಿಕೊಂಡು ತೋಟದಲ್ಲಿ ಓಡಾಡಬಾರದು ಎಂಬ ಕಟ್ಟಳೆಗಳನ್ನೆಲ್ಲ ಪಾಲಿಸುತ್ತಾರೆ. ಗರ್ಭಪಾತಕ್ಕೆ ಈ ಹಿಂದೆ ಬಿದಿರಿನ ಕಳಲೆಯ ಪಲ್ಯವನ್ನು ಬಳಸುತ್ತಿದ್ದರು. ಕಣ್ಣಿಗೆ ಮುತ್ತಿಕೊಂಡು ಹಿಂಸೆಕೊಡುವ ಗುಂಗುರು ಎಂಬ ಕೀಟಗಳನ್ನು ನಿಯಂತ್ರಿಸಲು ಮನೆಯಲ್ಲಿ ಲೋಳೆಸರವನ್ನು ನೇತುಹಾಕುತ್ತಾರೆ. ದೇವಾಲಯಗಳನ್ನೂ ರಾಮಮಂದಿರಗಳನ್ನೂ ನಿರ್ಮಿಸಿಕೊಂಡು ಜಾತ್ರೆ, ಉತ್ಸವ, ಭಜನೆ, ಕೀರ್ತನೆಗಳಲ್ಲಿ ಪಾಲ್ಗೊಂಡು, ದೇವರ ಕೃಪೆಗೆ ಪಾತ್ರರಾಗುತ್ತಾರೆ. ವೇದಾಧ್ಯಯನ, ಗಮಕವಾಚನ, ಸಂಗೀತ, ನಾಟಕಾಭಿನಯ, ಪೌರೋಹಿತ್ಯ ಮುಂತಾದವು ಅವರ ಕೃಷಿಜೀವನವನ್ನು ವರ್ಣಮಯವಾಗಿಸುವ ಸಂಗತಿಗಳಾಗಿವೆ.

ಯುವಪೀಳಿಗೆಯ ಸುಖಾಭಿಲಾಷೆ

ಜವಾಬ್ದಾರಿಯಿಂದಲೂ ಮುತುವರ್ಜಿಯಿಂದಲೂ ಕೆಲಸ ಮಾಡಿದರೆ ಬೇಸಾಯದಲ್ಲಿ ಮರ್ಯಾದೆಯಿಂದ ಇರಬಹುದು. ಅಷ್ಟುಹೊರತು ಭೋಗಜೀವನ ಸಾಧ್ಯವಾಗುವುದಿಲ್ಲ ಎಂಬುದನ್ನು ಸಂಕೇತಿ ಕೃಷಿಕರು ಕಂಡುಕೊಂಡಿದ್ದಾರೆ. ಆದರೆ ಇತ್ತೀಚಿನ ಯುವಪೀಳಿಗೆಗೆ ಕಷ್ಟದ ದುಡಿಮೆ ಬೇಡವಾಗಿದೆ. ಬೆಳವಣಿಗೆಯ ಹಾದಿಯಲ್ಲಿ ಆರ್ಥಿಕ ತೊಂದರೆಗಳು ತನ್ಮೂಲಕವೇ ಎದುರಾಗುತ್ತಿವೆ. ಆಧುನಿಕತೆಯ ಸೋಗಿನಲ್ಲಿ ಗೌರವಕ್ಕಾಗಿ ನಾಜೂಕನ್ನು ಆಮಂತ್ರಿಸಿಕೊಳ್ಳುತ್ತಿದ್ದಾರೆ. ವಿದ್ಯೆಕಲಿತ ಜನ ಕೈಮುಟ್ಟಿ ಕೆಲಸಮಾಡುವುದಿಲ್ಲ. ವಿದ್ಯುಚ್ಛಕ್ತಿ ಮತ್ತು ರಸಗೊಬ್ಬರಗಳ ಪರಾವಲಂಬನೆ, ಕೂಲಿಕಾರರನ್ನು ಕುರಿಯುವ ಪರಾವಲಂಬನೆ, ಕೃಷಿಯ ಉತ್ಪನ್ನಗಳ ಮಾರಾಟದಲ್ಲಿ ಪರಾವಲಂಬನೆಗಳನ್ನು ಅವರು ಎದುರಿಸಿ ನಿಲ್ಲಲು ಸಮರ್ಥರಾಗಿಲ್ಲ. ದೂರದರ್ಶನದ ಧಾರಾವಾಹಿಗಳಿಗೆ ಯುವಕರೂ ಮಿಕ್ಕವರೂ ದಾಸರಾಗುತ್ತಿದ್ದಾರೆ. ದೇಹಶಕ್ತಿಯೂ ಕುಗ್ಗಿಹೋಗುತ್ತಿದೆ. ಹಿಂದೆ ಜನರಿಗೆ ಜ್ಞಾನದಾಹವಿತ್ತು, ಈಗ ಧನದಾಹ ಹೆಚ್ಚಾಗಿ ನೆಮ್ಮದಿ ಹಾಳಾಗಿದೆ.

– ಹೀಗೆ ವಿಜಯ್ ಅಂಗಡಿಯವರ ಸಮೀಕ್ಷೆಯು ಕೃಷಿವಿಚಾರಗಳ ಜೊತೆಗೆ ಸಂಕೇತಿಗಳ ಜೀವನಪದ್ಧತಿಯ ಹಲವು ಮುಖಗಳನ್ನು ಅನಾವರಣಗೊಳಿಸಿಕೊಟ್ಟಿದೆ.

ಕೃಷಿರಂಗದ ಕೃತಿರತ್ನ

ವಿಜಯ್ ಅಂಗಡಿಯವರ ಈ 'ಅವಲೋಕನ'ವು ಕನ್ನಡನಾಡಿನ ಕೃಷಿರಂಗಕ್ಕೆ ಸಮರ್ಪಿತವಾಗಿರುವ ಅತ್ಯಮೂಲ್ಯ ಕೃತಿರತ್ನವಾಗಿದೆ. ಅದು ಸಂಕೇತಿಗಳಿಗೆ ಮಾತ್ರವಲ್ಲದೆ, ಭೂಮಾತೆಯ ಮಕ್ಕಳಾಗಿ ದುಡಿಯುತ್ತಿರುವ ಎಲ್ಲ ರೈತರಿಗೂ ಕೈದೀವಿಗೆಯಾಗಿದೆ. ಕೃಷಿಯ ವಿಚಾರಗಳ ಜೊತೆಗೆ ಗ್ರಾಮಪರಿಚಯ, ಗ್ರಾಮದ ವೈಶಿಷ್ಟ್ಯಗಳು, ಅಲ್ಲಿನ ಸಮಕಾಲೀನ ಸ್ಥಿತಿಗತಿಗಳು, ಸ್ಥಿತ್ಯಂತರಗಳು, ಕೃಷಿಜೀವನದಲ್ಲಿ ಎದುರಾಗುತ್ತಿರುವ ಎಡರುತೊಡರುಗಳು, ಮಹಾನಗರಗಳು ಸುಖಜೀವನದ ಆಕರ್ಷಣೆಯನ್ನೊಡ್ಡಿ ಕೃಷಿಕರನ್ನು ತನ್ನತ್ತ ಸೆಳೆದುಕೊಂಡು, ಗ್ರಾಮೀಣ ಕೃಷಿಯನ್ನು ಮೂಲೆಗುಂಪು ಮಾಡುತ್ತಿರುವುದು ಮುಂತಾದ ವಿವರಗಳನ್ನೆಲ್ಲ ಹೃದ್ಯವಾಗಿ ನಿರೂಪಿಸಿದ್ದಾರೆ. "ಅಗ್ರಹಾರದ ಸಂಕೇತಿಗಳ ಕೃಷಿಬದುಕು ಈಗೀಗ ಬದಲಾಗುತ್ತಿದೆ. ಹೆಚ್ಚು ವ್ಯಾಸಂಗ ಮಾಡಿರುವವರು ಊರಲ್ಲಿ ಉಳಿಯುತ್ತಿಲ್ಲ. ನೌಕರಿ ಮತ್ತು ಉದ್ಯೋಗವನ್ನು ಅರಸಿಕೊಂಡು ಹೋಗುವುದು

ಸಹಜವಾಗಿದೆ. ಕೈಮುಟ್ಟಿ ಕೆಲಸಮಾಡುವ ಜನ ಕಮ್ಮಿಯಾಗುತ್ತಿದ್ದಾರೆ" ಎಂಬಂತಹ ಮಾತುಗಳು ಸ್ಥಿತ್ಯಂತರದ ದಿಕ್ಸೂಚಿಯಾಗಿವೆ. ಇದರ ನಡುವೆಯೂ ಕೃಷಿಗೆ ಪ್ರೀತಿಯಿಂದ ತಮ್ಮನ್ನು ಸಮರ್ಪಿಸಿಕೊಂಡಿರುವವರ ವಿವರಗಳೂ ಅಲ್ಲಿವೆ. "ಅಗ್ರಹಾರ ಗ್ರಾಮದ ಸಂಕೇತಿ ಜನಾಂಗದ ಕೃಷಿಕರು ಹೆಚ್ಚಾಗಿ ಅಡಿಕೆ ಮತ್ತು ಭತ್ತವನ್ನು ಬೆಳೆಯುತ್ತಿದ್ದಾರೆ. ಇಲ್ಲಿಯ ಕೇಶವಮೂರ್ತಿ, ಶಂಕರಮೂರ್ತಿ, ಶ್ರೀನಿವಾಸಮೂರ್ತಿ, ಸುಂದರೇಶ್ ಮತ್ತು ಚಂದ್ರಶೇಖರ್ ಎಂಬುವವರು ಆಸಕ್ತಿಯಿಂದ ತಮ್ಮನ್ನು ಬೇಸಾಯದಲ್ಲಿ ತೊಡಗಿಸಿಕೊಂಡಿದ್ದಾರೆ. ಎಲ್ಲರಿಗಿಂತ ಭಿನ್ನವಾಗಿ ಕೆ. ನಟೇಶ್ ಎಂಬುವವರು ಇಲ್ಲಿ ತೋಟಮಾಡಿದ್ದಾರೆ. ಅದರಲ್ಲೂ ಇವರ ಹಣ್ಣಿನ ತೋಟ ನಿಮ್ಮ ಗಮನ ಸೆಳೆಯಬಲ್ಲದು. ಕೃಷಿ ವಿಶ್ವವಿದ್ಯಾಲಯ, ತೋಟಗಾರಿಕೆ ಇಲಾಖೆ, ನರ್ಸರಿಗಳು - ಹೀಗೆ ಸಂಬಂಧಿಸಿದ ಸಂಘಸಂಸ್ಥೆಗಳನ್ನು ಸಂಪರ್ಕಿಸಿ ತಮ್ಮ ಜಮೀನಿನಲ್ಲಿ ಭಿನ್ನವಾದ ಬೆಳೆಗಳನ್ನು ಬೆಳೆದಿದ್ದಾರೆ" ಎಂಬಂತಹ ವಾಕ್ಯಗಳನ್ನು ಓದುವಾಗ ಮುದುಡಿದ ಮನಸ್ಸು ಅರಳುತ್ತದೆ.

ಪ್ರವಾಸಕಥನದ ಸ್ವಾರಸ್ಯ

ವಿಜಯ್ ಅಂಗಡಿಯವರು ತಮ್ಮ ವಿವಿಧ ಗ್ರಾಮಸಮೀಕ್ಷೆಗಳಿಗೆ - ನಿಲುವಾಗಿಲಿನಲ್ಲಿ ನಿರಂತರ ಕೃಷಿ, ಕಷ್ಟದಿಂದ ಕಾಸುಗಳಿಸಿದ ನವಿಲೆ ಕೇಶವಮೂರ್ತಿ, ಮಾದಾಪುರದಲ್ಲಿ ಮುಪ್ಪುಕಾಣದ ಬೇಸಾಯ, ಆನಂದೂರು ಕೃಷಿಯಲ್ಲಿ ಆನಂದವಿಲ್ಲ, ಕಟ್ಟೇಪುರದಲ್ಲಿ ಕಳೆಗುಂದುತ್ತಿರುವ ಬೇಸಾಯ, ಹಂದ್ರಾಳುಗ್ರಾಮದ ಆರುಜನ ಆರಂಭಸ್ಥರು ಎಂಬಂತೆ ಗಮನ ಸೆಳೆಯುವ ಶೀರ್ಷಿಕೆಗಳನ್ನು ಕೊಟ್ಟಿದ್ದಾರೆ. ಅವರ ಕನ್ನಡಶೈಲಿಯೂ ಮನಮೋಹಕವಾಗಿದೆ. ತುಂಬಿಹರಿಯುವ ಹೇಮಾವತಿಯಂತೆ ಅದು ನೆಮ್ಮದಿಯಿಂದ ಸಾಗುತ್ತದೆ. ಈ 'ಅವಲೋಕನ'ವು ಒಂದು ಪ್ರವಾಸಕಥನವಾಗಿಯೂ ಯಶಸ್ವಿಯಾಗುವಷ್ಟು ಸಾಹಿತ್ಯಗುಣದಿಂದ ತುಂಬಿ ತುಳುಕುತ್ತಿದೆ. "ಅದೊಂದು ವಿಶಾಲವಾದ ಓಣಿ. ಒಂದೇ ರೀತಿಯ ಮನೆಗಳು. ಚಾಪೆಮೇಲೆ ಅಡಿಕೆ ಹಾಕಿದ್ದ ವ್ಯಕ್ತಿಯ ಬಳಿಗೆ ಹೋಗಿ ಕುಶಲೋಪರಿ ಮಾತಾಡಿ ಪರಿಚಯಿಸಿಕೊಂಡೆವು. ಅಡಿಕೆ ಬೆಳೆಗಾರ ಸೀತಾರಾಂ ತಮ್ಮ ಮನೆಗೆ ಕರೆದೊಯ್ದು ಅಡಿಕೆ ಬೇಸಾಯದ ಅನುಭವಗಳನ್ನು ಹೇಳಿಕೊಂಡರು. ಇಲ್ಲೊಬ್ಬರು ಶ್ರೀನಿವಾಸ ಅನ್ನೋರು ಚೆನ್ನಾಗಿ ತೋಟ ಮಾಡ್ತಾರೆ ಎಂದು ಸೀತಾರಾಂ ಹೇಳಿದರು. ಸರಿ, ಲಕ್ಷ್ಮೀನಾರಾಯಣರು ತಿಂಡಿ ಸೇವಿಸಿಕೊಂಡು ಸಿದ್ಧರಾಗಿದ್ದರು. ಶ್ರೀನಿವಾಸರವರು ಜೊತೆ ಸೇರಿದರು. ದೊಡ್ಡಮಗ್ಗೆಯಿಂದ ಕೇವಲ ಎರಡು ಕಿ.ಮೀ. ದೂರದಲ್ಲಿರುವ ಅವರ ತೋಟಕ್ಕೆ ತಲಪಿದೆವು. ಹೋಗುವ ದಾರಿಯಲ್ಲಿ ಚಿಕ್ಕಮಗ್ಗೆ ಗ್ರಾಮ ಕಾಣಿಸಿತು" ಎಂಬಂತೆ ಅವರು ನೀಡಿರುವ ಪ್ರವಾಸಾನುಭವಗಳು ಉದ್ದಕ್ಕೂ ಅತ್ಯಂತ ಚೇತೋಹಾರಿಯೂ ವೈವಿಧ್ಯಮಯವೂ ಆಗಿವೆ.

ಆಕರ್ಷಕ ಶಬ್ದಚಿತ್ರಗಳು

"ಬಸವಾಪಟ್ಟಣದ ತೋಟಗಳಲ್ಲಿ ಹೇರಳ ಸಂಖ್ಯೆಯಲ್ಲಿ ಬಾವಲಿಗಳು ಮನೆಮಾಡಿಕೊಂಡಿವೆ. ಅತ್ತಿ, ಆಲ, ಕಾಫಿ ಮುಂತಾದ ಹಣ್ಣುಗಳನ್ನು ಅವು ತಿನ್ನುತ್ತವೆ. ಹಣ್ಣಾದ ಅಡಿಕೆ ಕಾಯಿಗಳನ್ನೂ ತಿಂದು ಚೀಪಿ ಬಿಸಾಡುವುದಿದೆ. ರಾಮಚಂದ್ರರ ತೋಟದಲ್ಲಿ ಗ್ಲಿರಿಸೀಡಿಯಾ ಗಿಡಗಳು ಗಟ್ಟಿಯಾಗಿ ಬೆಳೆದಿರುವುದನ್ನು ಕಂಡು 'ಇಲ್ಲಿ ಇವಕ್ಕೆ ಏನಂತಾರೆ, ಯಾವಾಗ ಇಲ್ಲಿಗೆ ಬಂದುವು' ಎಂದೆ. 'ಅಯ್ಯೋ! ಈ ಗೊಬ್ಬರದ ಗಿಡಗಳನ್ನು ಮೂವತ್ತು ವರ್ಷಗಳಿಂದ ಕಾಣ್ತಾ ಇದೀವಿ. ಇವನ್ನು ಗೊಬ್ಬರ ಮಾಡ್ಲಿಕ್ಕೆ, ಬೇಲಿಯ ಭದ್ರತೆಗೆ, ಮಣ್ಣಿನ ಕೊರೆತ ತಪ್ಪಿಸ್ಲಿಕ್ಕೆ ಬಳಸ್ತೀವಿ' ಎಂದು ರಾಮಚಂದ್ರ ಹೇಳಿದರು. 'ನಮ್ಮಲ್ಲಿ ರಸಪುರಿ ಮಾವು ಇದೆ. ಹಳೆಯ ಮರಗಳು. ಸ್ವಲ್ಪ ಬಾದಾಮಿ, ಮಲಗೋವ ಇವೆ. ಹಲಸಿನ ಮರಗಳೂ ಇವೆ. ಹಣ್ಣಿನ ರುಚಿಯೂ ಚೆನ್ನಾಗಿದೆ. ಹೊಂಗೆಯ ಮರಗಳೂ ತೋಟದ ಅಂಚಿನಲ್ಲಿವೆ. ನಾವು ತೋಟವನ್ನು ದೇವರಂತೆ ಕಾಣ್ತೇವಿ. ಚಪ್ಪಲಿಯನ್ನು ಹಾಕಿಕೊಂಡು ಒಳಗೆ ಹೋಗಲ್ಲ'" ಎಂಬಂತೆ ವಿಜಯ್ ಅಂಗಡಿಯವರು ಆಯಾ ಪರಿಸರದ ಶಬ್ದಚಿತ್ರಗಳನ್ನು ಕಣ್ಣಿಗೆ ಕಟ್ಟುವಂತೆ ಓದುಗರಿಗೆ ನೀಡಿದ್ದಾರೆ. ಪ್ರಶ್ನೋತ್ತರ ಶೈಲಿ ನಡುನಡುವೆ ಅಳವಟ್ಟಿರುವುದರಿಂದ ನಾಟಕೀಯಗುಣವೂ ಅನಾಯಾಸವಾಗಿ ಬೆರೆತುಹೋಗಿದೆ.

ಸ್ವಭಾವೋಕ್ತಿ ಅಲಂಕಾರದ ಸೊಗಸು

ಸ್ವಭಾವೋಕ್ತಿ ಎಂಬುದು ಕಾವ್ಯಗಳಲ್ಲಿ ಕಾಣಿಸಿಕೊಳ್ಳುವ ಅಲಂಕಾರಗಳಲ್ಲೊಂದು. ಕಂಡುದನ್ನು ಕಂಡಂತೆ ಹೇಳುವ, ಇದ್ದುದನ್ನು ಇದ್ದಂತೆ ಬಣ್ಣಿಸುವ ನಿರಾಡಂಬರ ನಿರೂಪಣೆಯೇ ಸ್ವಭಾವೋಕ್ತಿ ಅಲಂಕಾರ. 'ಇದ್ಯಾವ ಎಲೆ? ರುಚಿ ಹೇಗಿರುತ್ತೆ? ಅಡಿಕೆ ಇಟ್ಕೊಂಡಿದೀರಾ' ಎಂದು ಪ್ರಶ್ನಿಸಿದೆವು. 'ಇದೆ, ಬನ್ನಿ, ತಗೊಳ್ಳಿ. ಈ ಹಸೀ ಅಡಿಕೇನಾ ಹೆಚ್ಚು ತಿನ್ಬೇಡಿ, ತಲೆ ತಿರುಗಬಹುದು. ಈ ಎಲೆಗೆ ಸುಣ್ಣವಿದ್ದರೇನೇ ರುಚಿ' ಎಂದು ಹೇಳುತ್ತಿರುವಾಗಲೇ ಚಿಗುರೆಲೆಯನ್ನು ಕಿತ್ತದ್ದಾಗಿತ್ತು. 'ಸುಣ್ಣವಿಲ್ಲದಿದ್ರೂ ತೊಂದ್ರೆ ಇಲ್ಲ' ಎಂದು ಅವರಿಗೆ ತಿಳಿಸುತ್ತ ಅಡಿಕೆಯೊಂದಿಗೆ ಜಗಿಯಲು ಶುರು ಮಾಡಿದೆವು. ಜೊತೆಯಲ್ಲಿ ತಗೊಂಡು ಹೋಗಿದ್ದ ದಿನಪತ್ರಿಕೆಗಳನ್ನು ಹಾಸಿಕೊಂಡು ವಿಚಾರಗಳನ್ನು ಕಲೆಹಾಕುತ್ತಾ ಹೋದೆವು" ಎಂಬಲ್ಲಿ ಸ್ವಭಾವೋಕ್ತಿ ಅಲಂಕಾರದ ಸೊಬಗು ಮೆರೆದಾಡಿದೆ. ಈ ಬಗೆಯ ನಿರಾಭರಣ ಬಣ್ಣನೆಗಳಿಂದ ವಿಜಯ್ ಅಂಗಡಿಯವರು ಈ ಕೃತಿಯ ಗುಣಗೌರವಗಳನ್ನು ಹೆಚ್ಚು ಎತ್ತರಕ್ಕೇರಿಸಿದ್ದಾರೆ. "ಎಳೆಯ ಬಿಸಿಲು ಇದ್ದ ಆ ಸಂದರ್ಭದಲ್ಲಿ ಅಲ್ಲಿನ ಜನರ ಕೃಷಿಜೀವನವನ್ನು ಎಳೆಎಳೆಯಾಗಿ ಬಿಡಿಸಿ ತಿಳಿಯಲು ಅನುಕೂಲವಾಯಿತೇನೋ ಅನ್ನಿಸಿತು" ಎಂಬ ವಾಕ್ಯ ಎಷ್ಟು ಕಾವ್ಯಗುಣಭರಿತವಾಗಿದೆ ನೋಡಿ !

ಅನುಪಮ ವ್ಯಕ್ತಿಚಿತ್ರಗಳು

ವ್ಯಕ್ತಿವೈಶಿಷ್ಟ್ಯಗಳನ್ನು ಎತ್ತಿಹಿಡಿಯುವುದರಲ್ಲಿಯೂ ವಿಜಯ್ ಅಂಗಡಿಯವರು ನಿಷ್ಣಾತರಾಗಿದ್ದಾರೆ. ಅಗ್ರಹಾರದ ಕೆ. ನಟೇಶ, ಮಗ್ಗೆಯ ಲಕ್ಷ್ಮೀನಾರಾಯಣ, ಕೀರನಕಟ್ಟೆಯ ಕೇಶವಮೂರ್ತಿ, ಮಾದಾಪುರದ ಎಂ.ಕೆ. ಶೇಷಮೂರ್ತಿ, ಬಸವಾಪಟ್ಟಣದ ಸರೋಜಮ್ಮ ಮೊದಲಾದವರ ಸಾರವತ್ತಾದ ವ್ಯಕ್ತಿಚಿತ್ರಗಳನ್ನು ಹೃದಯಂಗಮವಾಗುವಂತೆ ಕಟ್ಟಿಕೊಟ್ಟಿದ್ದಾರೆ. ಅಲ್ಲೆಲ್ಲ ಲಲಿತಪ್ರಬಂಧವೆಂದು ಕರೆಯುವ ಗದ್ಯಗೀತೆಯ ಪರಿಮಳವನ್ನು ಅಂಗಡಿಯವರು ಪಸರಿಸಿದ್ದಾರೆ. "ಹಣದ ಆಸೆಗೆ ತಂಬಾಕನ್ನು ಹಾಕಿ ಅದನ್ನು ಹದಮಾಡಲು ದೇಶದ ಹಸಿರು ಸಂಪತ್ತು ಹೇಳತೀರದಷ್ಟು ನಾಶವಾಯ್ತು. ಎಂಟು ಹತ್ತು ವರ್ಷಗಳಲ್ಲಿ ಕಾಡೂ ಲೂಟಿಯಾಯಿತು. ಮರಗಳನ್ನು ಜನ ಬೋಳಿಸಿದರು. ತಂಬಾಕಿನಿಂದ ಹಣ ಬಂದಿರಬಹುದು, ಆದ್ರೆ ನಮ್ಮ ಮರಗಳೆಲ್ಲ ಸರ್ವನಾಶವಾದವಲ್ಲಾ, ಮುಂದೇ ಏನೇನು ಆಗುತ್ತೋ ತಿಳಿಯದು" ಎಂಬ ನಟೇಶರ ಮಾತಿನಲ್ಲಿರುವ ಪರಿಸರ ಸಂರಕ್ಷಣೆಯ ಕಾಳಜಿಯನ್ನು ಗಮನಿಸಬೇಕು. 'ಪುಟ್ಟಸಕ್ಕರೆ' ಲಕ್ಷ್ಮೀನಾರಾಯಣರಾಯರ ಕೃಷಿಪ್ರೇಮ ಅನನ್ಯವಾದುದು. ಅದರೊಟ್ಟಿಗೇ ಇರುವ ಸಮಾಜಸೇವಾಪ್ರೀತಿ ಕೂಡ ಕಡಿಮೆಯದೇನಲ್ಲ. ದೊಡ್ಡಮಗ್ಗೆಯಲ್ಲಿ ಪ್ರೌಢಶಾಲೆಯನ್ನು ಹುಟ್ಟುಹಾಕಿ ಬೆಳೆಸಿದ್ದಾರೆ. ಮಕ್ಕಳೆಲ್ಲ ಅಮೇರಿಕದಲ್ಲಿದ್ದಾರೆ. "ನಾನು ಕಷ್ಟಪಟ್ಟು ಈ ಜಮೀನನ್ನು ಉಳಿಸಿಕೊಂಡಿದೀನಿ. ಇನ್ನು ನನಗೆ ನೋಡೋ ಶಕ್ತಿ ಕಮ್ಮಿ ಆಯ್ತು. ಮಕ್ಕಳು ಇಲ್ಲಿಗೆ ಬಂದು ನೆಲೆಸುವ ಸಂದರ್ಭ ಕಾಣುತ್ತಿಲ್ಲ. ನಾನಾಗೇ ತೋಟ ಕೊಡಲಿಕ್ಕೆ ಹೋದರೆ ಬೆಲೆ ಬರೋಲ್ಲ. ಬೇರೆಯವರು ಆಸೆಪಟ್ಟಾಗ ಮಾತ್ರ ಮೌಲ್ಯ ಸಿಗುತ್ತೆ. ಒಳ್ಳೆ ಬೆಲೆ ಬಂದ್ರೆ ಕೊಡೋಣ ಅಂತ ನಿರ್ಧರಿಸಿದೀನಿ" ಎಂಬ ಅವರ ಮಾತುಗಳನ್ನು ಓದುವಾಗ 'ಅಯ್ಯೋ, ಹೋಯಿತಲ್ಲಾ ಸಂಕೇತಿ ಕೃಷಿ' ಎಂದು ಪರಿತಪಿಸುವಂತಾಗುತ್ತದೆ. ಅಮೇರಿಕೆಯನ್ನು ಸುತ್ತಿಬಂದಿರುವ 'ಪುಟ್ಟಸಕ್ಕರೆ'ಯವರು ಅಲ್ಲಿನ ವ್ಯವಸಾಯದ ಕೆಲವು ವೈಶಿಷ್ಟ್ಯಗಳನ್ನು ಗುರುತಿಸಿಕೊಟ್ಟಿದ್ದಾರೆ. ಅಲ್ಲಿನ ರೆಡ್‌ಇಂಡಿಯನ್ನರು ಬೇಸಾಯಕ್ಕೆ ಯಂತ್ರಗಳನ್ನಾಗಲಿ ವಿದ್ಯುತ್ತಿನ ಬಲವನ್ನಾಗಲಿ ಬಳಸದೆ, ಕುದುರೆಗಳನ್ನು ಕಟ್ಟಿ ಬೇಸಾಯ ಮಾಡುವುದು ಕುತೂಹಲಕಾರಿಯಾಗಿದೆ.

ಬೇಚರಾಕ್ ಗ್ರಾಮವಾಗಿದ್ದ ಕೀರನಕಟ್ಟೆಯನ್ನು ನಳನಳಿಸುವ ಗ್ರಾಮವನ್ನಾಗಿ ಪುನರುಜ್ಜೀವನಗೊಳಿಸಿದ ಕೇಶವಮೂರ್ತಿಯವರ ಸಾಹಸಪೂರ್ಣವಾದ ಕೃಷಿಪ್ರೇಮವನ್ನು ಎಷ್ಟು ಕೊಂಡಾಡಿದರೂ ಕಡಿಮೆಯೇ ಆಗುತ್ತದೆ. 'ನಿಷ್ಠೆಯುಳ್ಳ ಭಕ್ತ ನಟ್ಟಡವಿಯಲಿರ್ದಡೇನು, ಅದು ಪಟ್ಟಣವೆಂದೆನಿಸುವುದು' ಎಂಬ ವಚನಕಾರ ದೇವರದಾಸಿಮಯ್ಯನ ಮಾತು ಈ ಸಂದರ್ಭದಲ್ಲಿ ಸ್ಮರಣೆಗೆ ಬರುತ್ತದೆ. ಅದೀಗ ಹದಿನೈದು ಕೃಷಿಕುಟುಂಬಗಳ ಪುಟ್ಟ ಗ್ರಾಮವಾಗಿದೆ. ಏಳೂರಮ್ಮ ಗ್ರಾಮದೇವತೆ; ಅವಳ ಗುಡಿಯ ಜೀರ್ಣೋದ್ಧಾರ ಮಾಡಿದ್ದಾರೆ. ರಾಮಮಂದಿರವೂ ಇದೆ. ಅದ್ದೂರಿಯಾಗಿ ರಾಮೋತ್ಸವವನ್ನು ಜರುಗಿಸುತ್ತಾರೆ. ಕೃಷಿಯ ಜೊತೆಗೆ ಚಿತ್ರಕಲೆಯಲ್ಲಿಯೂ ಪ್ರಾವೀಣ್ಯ ಗಳಿಸಿರುವುದು ಮಾದಾಪುರದ ಎಂ.ಕೆ. ಶೇಷಮೂರ್ತಿಯವರ ಹಿರಿಮೆಗೆ ತಿಲಕವಿಟ್ಟಂತಾಗಿದೆ. ಅಷ್ಟೇ ಸಾಲದೆಂಬಂತೆ ಅವರು ಹೋಮಿಯೋಪತಿ ವೈದ್ಯರಾಗಿ ಅಲ್ಲಿಯೂ ಹಸ್ತಸಿದ್ಧಿಯಿದ್ದು, ಸಿರೋಸಿಸ್‌ನಂತಹ ಬದುಕನ್ನೇ ಭಾರವಾಗಿಸಿಬಿಡುವ ಕ್ರೂರವ್ಯಾಧಿಗಳನ್ನೆಲ್ಲ ಗುಣಪಡಿಸಿದ್ದಾರೆ. ಬಸವಾಪಟ್ಟಣದ ಸರೋಜಮ್ಮನವರಂತೂ ಧೀರ ಮಹಿಳೆ. ಎಪ್ಪತ್ತು ವರ್ಷ ದಾಟಿದ್ದಾರೆ. ಒಂಬತ್ತು ಜನ ಮಕ್ಕಳು, ಅವರೆಲ್ಲ ಬೇರೆ ಬೇರೆ ಊರುಗಳನ್ನು ಸೇರಿಬಿಟ್ಟಿದ್ದಾರೆ. ಯಜಮಾನರಾದ ಬಿ.ಎಸ್. ನಾಗಪ್ಪನವರೂ ಹಲವು ವರ್ಷಗಳ ಹಿಂದೆ ತೀರಿಹೋಗಿ ಅವರೀಗ ಏಕಾಂಗಿ. "ನನ್ನ ತಾತ ಹೆಣ್ಣುಮಕ್ಕಳನ್ನು ಶಾಲೆಗೆ ಕಳುಹಿಸಲಿಲ್ಲ. ನನ್ನ ತಾಯಿ ಮನೆಯಲ್ಲೇ ವಿದ್ಯಾಭ್ಯಾಸ ನೀಡಿದರು. ಕದ್ದು ಸಂಗೀತ ಕಲಿತೆ. ನಾನು ಬರೆಯುತ್ತೇನೆ. ರಾಮಾಯಣ, ಗುರುಚರಿತ್ರೆಗಳನ್ನು ಓದುತ್ತೇನೆ. ನನಗೆ ಒಂಭತ್ತು ವರ್ಷಕ್ಕೆ ಮದುವೆಯಾಯ್ತು, ನನ್ನ ಯಜಮಾನರ ಜೊತೆ ತುಂಬಾ ಅನ್ಯೋನ್ಯವಾಗಿ ಬದುಕಿದೆ. ಹೆಣ್ಣುಮಕ್ಕಳಿಗೆ ಕಿರಿವಯಸ್ಸಿನಲ್ಲಿ ಮದುವೆ ಮಾಡಿದರೆ ಹೊಂದಾಣಿಕೆ ಚೆನ್ನಾಗಿರುತ್ತದೆ. ಈಗಿನ ಕಾಲದಲ್ಲಿ ನೋಡಿ, ಬರೀ ಗಂಡಸರ ಹಣಕ್ಕೆ ಹೆಂಗಸರು ಬೆಲೆ ಕೊಡ್ತಾರೆ. ನನ್ನದು ಸ್ವಾವಲಂಬನೆಯ ಜೀವನ. ನಾನೇ ಕಸ ಹೊಡಕೊಳ್ತೀನಿ, ಬಟ್ಟೆ ಒಗೀತೀನಿ, ಬೇಸರವೇ ಇಲ್ಲ. ಕಷ್ಟ ಬಂದಾಗ ಕೊರಗಲಿಲ್ಲ, ಸುಖಬಂದಾಗ ಹಿಗ್ಗಲಿಲ್ಲ. ನನಗೆ ಎಷ್ಟು ದುಡ್ಡು ಬೇಕು, ಎಷ್ಟು ಆಹಾರ ಬೇಕು" ಎಂಬ ಅವರ ಮಾತುಗಳನ್ನು ಸದಾಕಾಲ ಮೆಲುಕುಹಾಕುತ್ತಿರಬೇಕು. ಭಗವದ್ಗೀತೆಯ ತತ್ವಗಳಲ್ಲಿ ಬಾಳುವುದು ಹೇಗೆ ಎಂಬುದನ್ನು ಅರಿಯಬೇಕಾದರೆ ಸರೋಜಮ್ಮನವರನ್ನೇ ನೆನೆಯಬೇಕು. ಹೀಗೆ ವಿಜಯ್ ಅಂಗಡಿಯವರು ಕೃಷಿಯ ಕ್ಷೇತ್ರಕಾರ್ಯದ ನೆಪದಲ್ಲಿ ಗ್ರಾಮೀಣವಲಯದ ಪ್ರತಿಭಾಮೂರ್ತಿಗಳನ್ನೂ ಸೇವಾಯೋಗಿಗಳನ್ನೂ ಮುಂಚೂಣಿಗೆ ತಂದು ನಿಲ್ಲಿಸಿದ್ದಾರೆ.

ಚಿರಕಾಲ ನಿಲ್ಲುವ ಕೃತಿ

ವಿಜಯ್ ಅಂಗಡಿಯವರ ಈ ಕೃತಿ ಅತ್ಯಂತ ಪ್ರಯೋಜನಕಾರಿಯಾಗಿ ಮೂಡಿಬಂದಿದೆ. ಚಿರಕಾಲ ಬಾಳುತ್ತ, ಕೃಷಿ ಜೀವನಕ್ಕೆ ಮಾರ್ಗದರ್ಶನ ನೀಡಬಲ್ಲ ಶಕ್ತಿಯನ್ನು ಅಂಗಡಿಯವರು ಅದಕ್ಕೆ ತುಂಬಿಸಿಕೊಟ್ಟಿದ್ದಾರೆ. ಜ್ಞಾನಸ್ಫೋಟವಾಗುತ್ತಿರುವ ಇಂದಿನ ಯುಗದಲ್ಲಿ ಭೌತಶಾಸ್ತ್ರ, ರಸಾಯನಶಾಸ್ತ್ರ, ಕಂಪ್ಯೂಟರ್‌ಶಾಸ್ತ್ರ, ಮುಂತಾದ ಕ್ಷೇತ್ರಗಳ ಜ್ಞಾನ ಬೇಗಬೇಗನೆ ಹಳತಾಗಿಬಿಡುತ್ತದೆ. ಆಗ ಆ ಕ್ಷೇತ್ರಕ್ಕೆ ಸಂಬಂಧಪಟ್ಟ

ಗ್ರಂಥಗಳೂ ಮನ್ನಣೆ ಕಳೆದುಕೊಂಡುಬಿಡುತ್ತವೆ. ಆದರೆ ಕೃಷಿರಂಗದಲ್ಲಿ ಅಂತಹ ಕ್ರಾಂತಿಕಾರಕ ಬದಲಾವಣೆಗಳಾಗುವುದು ಸದ್ಯದ ಪರಿಸ್ಥಿತಿಯಲ್ಲಿ ಸಾಧ್ಯವಿಲ್ಲವಾದ್ದರಿಂದ ಅಂಗಡಿಯವರ ಗ್ರಂಥ ಮುಂಬರುವ ದಶಕಗಳಲ್ಲಿಯೂ ಹೊಸಹೊಸದಾಗಿಯೇ ಕಂಗೊಳಿಸುತ್ತಿರುತ್ತದೆಂದು ಭಾವಿಸುತ್ತೇನೆ. ಕೃಷಿತಜ್ಞರಾದ ಅವರು ಸಂಕೇತಿ ಕೃಷಿಕರ ಬೇಸಾಯದ ವಿಧಿವಿಧಾನಗಳನ್ನು ಸಾಧುವೆಂದು ಸ್ವೀಕರಿಸಿದ್ದಾರೆ. ಈ ಮೂಲಕ ವೈಜ್ಞಾನಿಕ ದೃಷ್ಟಿಕೋನಕ್ಕೂ ಸಂಕೇತಿ ಬೇಸಾಯವು ಹೊಂದಿಕೊಳ್ಳುತ್ತದೆಂಬುದು ಪ್ರಮಾಣೀಕೃತವಾದಂತಾಗಿದೆ. ಕೆಲವು ಸಂದರ್ಭಗಳಲ್ಲಿ ಅಂಗಡಿಯವರು ಈಗಿನ ಸಂಕೇತಿ ಕೃಷಿ ಪದ್ಧತಿಯನ್ನು ಮತ್ತಷ್ಟು ಪರಿಣಾಮಕಾರಿಯಾಗಿಸುವ ಸಲಹೆಗಳನ್ನೂ ಆಧುನಿಕ ಕೃಷಿವಿಜ್ಞಾನದ ಹಿನ್ನೆಲೆಯಲ್ಲಿ ನೀಡಿ ಉಪಕರಿಸಿದ್ದಾರೆ. ಒಂದೊಂದು ತೋಟವನ್ನು ಸಮೀಕ್ಷೆ ಮಾಡಿದಾಗಲೂ ಅಲ್ಲಿನ ಲೋಪದೋಷಗಳನ್ನು ಪತ್ತೆಮಾಡಿ, ಅವುಗಳ ನಿವಾರಣೆಗೆ ಸೂಕ್ತವಾದ ಸಲಹೆಗಳನ್ನೂ ಅಲ್ಲಲ್ಲಿಯೇ ಪಟ್ಟಿಮಾಡಿಕೊಟ್ಟಿದ್ದಾರೆ.

ಪುನರುಕ್ತಿಯೂ ಅಲಂಕಾರವಾಗಿದೆ

ಕಾವ್ಯಗಳಲ್ಲಿ ಕೆಲವೆಡೆ ಹೇಳಿದ್ದನ್ನೇ ಹೇಳಿದರೂ ದೋಷವಿಲ್ಲವೆಂದು ಎತ್ತಿಹಿಡಿಯುವ ಕ್ರಮವಿದೆ. ಅಂತಹ ವರ್ಣನೆಯು 'ಪುನರುಕ್ತಿ' ಎಂಬ ಹೆಸರಿನ ಕಾವ್ಯಾಲಂಕಾರದ ಗುಂಪಿಗೆ ಸೇರಿಬಿಡುತ್ತದೆ. ಪ್ರಸ್ತುತ ಗ್ರಂಥದಲ್ಲಿಯೂ ಆ ಬಗೆಯ ಪುನರುಕ್ತಿಗಳಿವೆ. ಆದರೆ ಇಲ್ಲಿಯೂ ಆ ಪುನರುಕ್ತಿಗಳು ಒಂದರಂತೆ ಮತ್ತೊಂದಿಲ್ಲದೆ ವೈವಿಧ್ಯಮಯವಾಗಿದ್ದು ಕೃತಿಗೆ ಅಲಂಕಾರಗಳೇ ಆಗಿವೆ. ಇಂತಹ ಸತ್ಕೃತಿಯನ್ನು ಕನ್ನಡನಾಡಿಗೆ ನೀಡಿದ ಕೃಷಿರಂಗದ ವಿದ್ವನ್ಮಣಿಗಳಾದ ವಿಜಯ್ ಅಂಗಡಿಯವರ ಕೀರ್ತಿ ದಿಗಂತವಿಸ್ತಾರವಾಗಲೆಂದು ಆಸೆಪಡುತ್ತೇನೆ. ಕೃಷಿರಂಗದಲ್ಲಿ ಕ್ಷೇತ್ರಕಾರ್ಯ ಮಾಡಿದರೆ ವಿಜಯ್ ಅಂಗಡಿಯವರ ಹಾಗೆ ಮಾಡಬೇಕು; ಕೃಷಿರಂಗದಲ್ಲಿ ಕೃತಿರಚನೆ ಮಾಡಿದರೆ ವಿಜಯ್ ಅಂಗಡಿ ಅವರ ಹಾಗೆ ಮಾಡಬೇಕು ಎಂದು ಕೊಂಡಾಡುವಂತೆ ಒಂದು 'ಆದರ್ಶಮಾದರಿ'ಗೆ ಅವರು ಜನಕರಾಗಿದ್ದಾರೆಂದು ಹೇಳಿದರೆ ಅತಿಶಯೋಕ್ತಿಯಲ್ಲ.

ಪ್ರಣತಾರ್ತಿಹರನ್ ಅವರ ದಿಗ್ದರ್ಶನ

ಪ್ರಣತಾರ್ತಿಹರನ್ ಅವರು ಕೃಷಿಪ್ರೇಮಿ, ಸಾಹಿತ್ಯಪ್ರೇಮಿ, ಕಾಯಕಪ್ರೇಮಿ, ಎಲ್ಲಕ್ಕಿಂತ ಮಿಗಿಲಾಗಿ ನಾಡಪ್ರೇಮಿ. ಈವರೆಗೆ ಅವರು ತಮ್ಮ ಪ್ರಧಾನ ಸಂಪಾದಕತ್ವದಲ್ಲಿ ಬೃಹದಾಕಾರದ ಎಂಟು ಸಂಕೇತಿ ಸಂಪುಟಗಳನ್ನು ಲೋಕಾರ್ಪಣ ಮಾಡಿದ್ದಾರೆಂದರೆ ಹುಡುಗಾಟವಾಯಿತೆ ! ಅದಕ್ಕಾಗಿ ಅವರು ಅದೆಷ್ಟು ಅಲೆದಲೆದು ಅತ್ತಿಕಾಯಿ ತಿನ್ನಲಿಲ್ಲ, ಸೊರಸೊರಗಿ ಸೊಪ್ಪಾಗಲಿಲ್ಲ, ಕೊರಕೊರಗಿ ಕೋಳಿಯಾಗಲಿಲ್ಲ! ಅವರು ತಮ್ಮ ಜೀವಮಾನದ ದುಡಿಮೆಯನ್ನೆಲ್ಲ ಈ ಬೃಹತ್ ಸಂಪುಟಗಳನ್ನು ಬೆಳಕು ಕಾಣಿಸುವುದಕ್ಕೇ ಸಮರ್ಪಿಸಿಬಿಟ್ಟಿದ್ದಾರೆ. ಬದುಕಿಗೊಂದು ಗುರಿಯಿರಬೇಕಲ್ಲವೆ, ಸಾರ್ಥಕತೆ ಇರಬೇಕಲ್ಲವೆ? ಹರನ್ ಅವರು ತಾವು ಕಣ್ಣಿಟ್ಟ ಗುರಿಯನ್ನು ಸಾಹಸಪಟ್ಟು ತಲುಪಿದ್ದಾರೆ. ವಿಜಯ್ ಅಂಗಡಿ ಸಂಕೇತಿಗಳೇನಲ್ಲ. ಆದರೆ ಈ ಅಧ್ಯಯನಕ್ಕೆ, ಶೋಧನೆಗೆ ಅವರೇ ತಕ್ಕವರೆಂದು ಹರನ್ 'ಪ್ರತಿಭಾಶೋಧ' ನಡೆಸಿ, ಅಂಗಡಿಯವರಿಗೆ ಈ ಮಹತ್ಕಾರ್ಯವನ್ನು ಒಪ್ಪಿಸಿಕೊಟ್ಟಿದ್ದಾರೆ. ತಾವೂ ಅವರೊಡನೆ ಗ್ರಾಮಗಳಲ್ಲಿ ಸುತ್ತಾಡಿ ಕ್ಷೇತ್ರಕಾರ್ಯಕ್ಕೆ ಪ್ರಾಣಪ್ರತಿಷ್ಠೆ ನೆರವೇರಿಸಿ ಕೊಟ್ಟಿದ್ದಾರೆ. ಹರನ್ ಅವರು ಕ್ರಿಯಾಶೀಲರಾದ ಯಾರ ಮಗ್ಗುಲಲ್ಲಿ ನಿಂತರೂ 'ಭಲೇಜೋಡಿ'ಯಾಗಿಬಿಡುತ್ತಾರೆ. ಹಾಗೆಂದೇ ಇಲ್ಲಿ ವಿಜಯ್ ಅಂಗಡಿ ಮತ್ತು ಪ್ರಣತಾರ್ತಿಹರನ್ 'ಭಲೇಜೋಡಿ' ಎನಿಸಿದ್ದಾರೆ. ಅಂತಹ ಹರನ್ ಅವರಿಗೆ ಕನ್ನಡನಾಡವರೆಲ್ಲರ ಅಭಿನಂದನೆಗಳು ಸಲ್ಲಬೇಕಾಗಿದೆ.

ಸಂಕೇತಿ: ಬೇಸಾಯದ ಬದುಕು: ಅನೂಚಾನ

'ಸಂಕೇತಿ ಬೇಸಾಯದ ಬದುಕು' ಎಂಬೀ ಸಂಪುಟದ ಎರಡನೆಯ ಭಾಗವನ್ನು 'ಸಂಕೇತಿ: ಬೇಸಾಯದ ಬದುಕು: ಅನೂಚಾನ' ಎಂದು ಕರೆಯಲಾಗಿದೆ. ಪ್ರಣತಾರ್ತಿಹರನ್ ಅವರ ಮಡದಿ ಡಾ|| ವಿಜಯಾಹರನ್ ಅವರು ಈ ಭಾಗವನ್ನು ಸಂಕಲನ ಮಾಡಿಕೊಟ್ಟು ದೊಡ್ಡ ಉಪಕಾರವೆಸಗಿದ್ದಾರೆ. ಸಂಕೇತಿಗಳನ್ನು ಕುರಿತು ಇದುವರೆಗೆ ಪ್ರಕಟವಾಗಿರುವ ಸಾಹಿತ್ಯವನ್ನೆಲ್ಲ ಒಂದೆಡೆ ರಾಶಿಹಾಕಿಕೊಂಡು, ಅದನ್ನೆಲ್ಲ ಸಾವಧಾನವಾಗಿ, ಪರಿಪೂರ್ಣವಾಗಿ ಅಧ್ಯಯನ ಮಾಡಿ, ಅವುಗಳ ಹೃದಯಸ್ಥಾನಗಳನ್ನು ಪತ್ತೆಮಾಡಿ, ಅಷ್ಟಷ್ಟು ಭಾಗಗಳನ್ನು ಅರ್ಥಪೂರ್ಣವಾಗಿ ಉದ್ಧರಿಸಿಕೊಟ್ಟು, ಸಂಕೇತಿ ಕೃಷಿಜೀವನದ ಸಮಗ್ರ ಪರಿಕಲ್ಪನೆ ಓದುಗರ ಚಿತ್ತದಲ್ಲಿ ಮೂಡುವಂತೆ ಮಾಡಿದ್ದಾರೆ. ಈ ಗುಂಪಿನಲ್ಲಿ ಸಂಕೇತಿ ಸಮುದಾಯದ ನಿಯತಕಾಲಿಕೆಗಳಿಂದ ಆಯ್ದುಕೊಂಡ ವಿಚಾರಗಳಿವೆ; ವಿಭಿನ್ನ ಮುಹೂರ್ತಗಳಲ್ಲಿ ಸಂಕೇತಿಗಳು ಪ್ರಕಟಿಸಿರುವ ಸ್ಮರಣಸಂಚಿಕೆಗಳಿಂದ ಸಂಗ್ರಹಿಸಿಕೊಂಡ ಸಂಗತಿಗಳಿವೆ; ಪ್ರಣತಾರ್ತಿಹರನ್ ಅವರೇ ಹೊರತಂದಿರುವ ಸಂತುಷ್ಟಿ, ಸಂಸಕ್ತ, ಸಂವಾದ ಮೊದಲಾದ ಕೃತಿಗಳ ಕೆಲವು ಸಾರವತ್ತಾದ ನಿರೂಪಣೆಗಳಿವೆ. ಅವುಗಳಿಗೆಲ್ಲ ಕಿರೀಟವಿಟ್ಟಂತೆ 'ಸಂಕೇತಿ: ಒಂದು ಅಧ್ಯಯನ', 'ಸಂಕೇತಿ: ಶತಮಾನದ ಪತ್ರಗಳು', 'ಸಂಕೇತಿ: ಕೃಷಿಯ ವಿಭಿನ್ನ ನೆಲೆಗಳು' ಮೊದಲಾದ ಬೃಹತ್ ಸಂಪುಟಗಳ ಸಾರವತ್ತಾದ ಉದ್ಧರಣಗಳಿವೆ.

ಅಪ್ರಕಟಿತ ಬರೆಹಗಳು

ಪ್ರಕಟಿತ ಗ್ರಂಥಗಳಿಂದ ಆಯ್ದುಕೊಂಡ ಮುತ್ತುರತ್ನಗಳ ಪ್ರಪಂಚ ಒಂದು ಕಡೆಗಾದರೆ, ಇದೇ ವಿಭಾಗದಲ್ಲಿ ಈವರೆಗೆ ಬೆಳಕು ಕಾಣದಿದ್ದ ಹತ್ತಾರು ಅಮೂಲ್ಯ ಲೇಖನಗಳನ್ನು ವಿಜಯಾಹರನ್ ಅವರು ಹುಡುಕಾಡಿ ಸಂಗ್ರಹಿಸಿ, ಇಲ್ಲಿ ಸ್ಥಾನಕಲ್ಪಿಸಿಕೊಟ್ಟಿದ್ದಾರೆ. ಅವುಗಳೇ ಈ ವಿಭಾಗದಲ್ಲಿ ಹೆಚ್ಚಿನ ಸ್ಥಾನವನ್ನು ಆಕ್ರಮಿಸಿಕೊಂಡಿವೆ. ಡಾ|| ಬಿ.ವಿ. ಸುಧಾಮಣಿಯವರು ಇತಿಹಾಸ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಅವರು ಸ್ಕಾಟ್ಲೆಂಡಿನ ಎಡಿನ್‌ಬರೋ ವಿಶ್ವವಿದ್ಯಾನಿಲಯದ ಇತಿಹಾಸ ಸಮ್ಮೇಳನದಲ್ಲಿ ಭಾಗವಹಿಸಿ, "ಕೃಷಿಕರಾಗಿ ಸಂಕೇತಿ ಬ್ರಾಹ್ಮಣರು" ಸವೆಸಿದ ಮಾರ್ಗವನ್ನು ಕುರಿತು ವಿದ್ವತ್ಪೂರ್ಣವಾದ ಆಂಗ್ಲ ಪ್ರಬಂಧವೊಂದನ್ನು ಮಂಡಿಸಿ, ಜಯಶೀಲೆಯಾಗಿ ಬಂದಿದ್ದಾರೆ. ಆ ಪ್ರಬಂಧಕ್ಕಾಗಿ ಅವರು ಹತ್ತಾರು ಗ್ರಂಥಗಳನ್ನು ಅಧ್ಯಯನ ಮಾಡಿರುವುದಲ್ಲದೆ, ಕ್ಷೇತ್ರಕಾರ್ಯದ ಮೂಲಕವೂ ಶಕ್ತಿಸಂಚಯನ ಮಾಡಿಕೊಂಡಿದ್ದಾರೆ; ಟಿಪ್ಪಣಿಗಳನ್ನು ಬರೆದುಕೊಂಡಿದ್ದಾರೆ. ಆ ಟಿಪ್ಪಣಿ, ಆ ಲೇಖನ ಎಲ್ಲವೂ ಈ ಸಂಪುಟದಲ್ಲಿ ಮೊದಲಬಾರಿಗೆ ಸೇರ್ಪಡೆಗೊಂಡು ಅದರ ಮಹಿಮೆಗೆ ಕಣ್ಣುಮೂಡಿಸಿವೆ. ಅಂತೆಯೇ ಚಿಂತಕರೂ ವಿಮರ್ಶಕರೂ ಆದ ಪ್ರೊ. ಟಿ.ಎಸ್. ರಾಜಾಮಣಿ ಅವರು ಸಂಕೇತಿಗಳ ವ್ಯವಸಾಯದ ಬದುಕನ್ನು ಕುರಿತು ಬರೆದಿರುವ ವಿಸ್ತಾರವಾದ ಆಂಗ್ಲ ಲೇಖನವೊಂದು ಇಲ್ಲಿ ಮೊದಲಬಾರಿಗೆ ಬೆಳಕು ಕಂಡಿದೆ. ರಾಜಾಮಣಿಯವರು ಕೇರಳದ ಕೊಲ್ಲಂ ಎಂಬಲ್ಲಿಗೆ ಸೇರಿದವರು. ಅವರು ತಮಿಳುನಾಡಿನ ಸಂಕೇತಿಗಳನ್ನು ಮಾತ್ರವಲ್ಲದೆ ಮೈಸೂರು-ಬೆಂಗಳೂರುಗಳಲ್ಲಿಯೂ ನೆಲೆಸಿ, ಕನ್ನಡನಾಡಿನ ಸಂಕೇತಿಗಳನ್ನೂ ಹತ್ತಿರದಿಂದ ಅರಿತವರಾಗಿದ್ದಾರೆ. ಹೀಗಾಗಿ ಅವರ ಲೇಖನ ಹೆಚ್ಚು ಅರ್ಥಪೂರ್ಣವಾಗಿದೆ.

ಪ್ರಣತಾರ್ತಿಹರನ್ ಸುತ್ತಿಸುತ್ತಿ ಸುಣ್ಣವಾಗಿದ್ದಾರೆ

ಸಂಕೇತಿಗಳನ್ನು ಅಧ್ಯಯನ ಮಾಡುವ ಸಲುವಾಗಿ ತಮಿಳುನಾಡು ಮತ್ತು ಕರ್ನಾಟಕಗಳಲ್ಲಿ ಪ್ರಣತಾರ್ತಿಹರನ್ ಅವರಂತೆ ಕ್ಷೇತ್ರಕಾರ್ಯಕ್ಕೆಂದು ಸುತ್ತಿಸುತ್ತಿ ಸುಣ್ಣವಾದವರು ಬೇರೊಬ್ಬರಿಲ್ಲ. 'ಕಲ್ಲರಳಿ ಹೂವಾಗಿ | ಎಲ್ಲರಿಗು ಬೇಕಾಗಿ | ಮಲ್ಲಿಕಾರ್ಜುನನ ಶಿಖರಕ್ಕೆ ಬೆಳಕಾಗಿ' ಎಂದು ಸುಣ್ಣಕ್ಕೆ ಒಂದು ಒಗಟಿದೆ. ಪ್ರಣತಾರ್ತಿಹರನ್ ಎಂದರೆ ಹಾಗೆ, ಸುತ್ತಿಸುತ್ತಿ ಸುಣ್ಣವಾದರೂ ಸಂಕೇತಿಜನಾಂಗವೆಂಬ ಶಿಖರಕ್ಕೆ ಅವರು ಬೆಳಕಾಗಿದ್ದಾರೆ. ತಮಿಳುನಾಡಿನ ಎಲತ್ತೂರು, ಅಯ್‌ಕುಡಿ, ಶಾಂಬವರ್‌ವಡಹರೈ, ಕಡೆನಲ್ಲೂರುಕೃಷ್ಣಾಪುರಂ, ಶೆಂಕೋಟ್ಟೈ, ಎರಚ್ಚಕೊಳಂ, ದರ್ಶನಂಕೋಪ್ಪು, ತೆಂಕಾಸಿ, ಕೀಳ್‌ಪುಲಿಯೂರ್ - ಎಂಬೀ ಗ್ರಾಮುಗಳಲ್ಲಿ ಅವರು ನಡೆಸಿದ ಸಂದರ್ಶನದ ಸಾರಸಂಗತಿಗಳು ಇಲ್ಲಿ ಮೊದಲಬಾರಿಗೆ ಜೋಡಣೆಗೊಂಡಿವೆ. ಆಯಾ ಮನೆತನದ ವಿಚಾರಗಳ ಜೊತೆಗೆ, ಅವರ ಸಮಕಾಲೀನ ಸ್ಥಿತಿಗತಿಗಳ ಜೊತೆಗೆ, ಅವರ ಕೃಷಿಜೀವನದ ಸಂಗತಿಗಳ ಜೊತೆಗೆ ಅಲ್ಲಿ ಪ್ರವಾಸಕಥನದ ಸ್ವಾರಸ್ಯವೂ ಕೂಡಿಕೊಂಡಿರುವುದು ಚಿನ್ನದಲ್ಲಿ ಪರಿಮಳ ಬೆರೆತುಕೊಂಡಂತಾಗಿದೆ. ತಮಿಳುನಾಡು ಮಾತ್ರವಲ್ಲದೆ ಕರ್ನಾಟಕದ ಬಸವಾಪಟ್ಟಣ (ಅದು ಹರನ್ ಅವರ ಹುಟ್ಟೂರು), ಹಾಸನ, ಅಗ್ರಹಾರ, ಮಲ್ಲಾಪುರ, ಹಿರಿಗನಹಳ್ಳಿ, ಹಾನಗಲ್ಲು, ಐಚನಹಳ್ಳಿ, ಚಾಗಳ್ಳಿ, ಮರಿತಮ್ಮನಹಳ್ಳಿ, ಮೈಸೂರು, ಬೆಂಗಳೂರುಗಳಲ್ಲೂ ಕ್ಷೇತ್ರಕಾರ್ಯ ನಡೆಸಿ, ವಸ್ತುಸಂಗ್ರಹ ಮಾಡಿಕೊಂಡಿದ್ದಾರೆ. ಅವೆಲ್ಲವೂ ಇಲ್ಲಿ ಮೊದಲಬಾರಿಗೆ ಸೇರ್ಪಡೆಯಾಗಿವೆ. ಈ ಗ್ರಾಮಗಳಲ್ಲಿ ಸಂಕೇತಿ ಕೃಷಿವಿಚಾರಗಳಿಗೆಂದೇ ಕೇಶವಮೂರ್ತಿ, ವಿಜಯ್ ಅಂಗಡಿ ಅವರುಗಳೂ ಕ್ಷೇತ್ರಕಾರ್ಯ ನಡೆಸಿದ್ದಾರೆ. ಆದರೆ ಕ್ಷೇತ್ರಕಾರ್ಯವೆಂಬುದು ಎಷ್ಟು ಮೊಗೆದರೂ ತೀರದ ತವನಿಧಿ. ಕ್ಷೇತ್ರಕಾರ್ಯದಲ್ಲಿ ತೊಡಗಿದವರ ಮನೋಧರ್ಮ, ಅವರು ಭೇಟಿಯಾಗುವ ವ್ಯಕ್ತಿಗಳು, ಅವರು ಕೇಳುವ ಪ್ರಶ್ನೆಗಳು, ಕೇಳುವ ಸನ್ನಿವೇಶಗಳು ಮುಂತಾದ ಎಲ್ಲವೂ ಬೇರೆಬೇರೆಯಾಗಿಬಿಡುವುದರಿಂದ ಅವರಿಗೆ ಲಭಿಸುವ ಫಲಿತಾಂಶಗಳೂ ವೈವಿಧ್ಯಮಯವಾಗಿರುತ್ತವೆ. ಆ ಬಗೆಯ ತುಲನಾತ್ಮಕ ಅಧ್ಯಯನಕ್ಕೆ ಹರನ್ ಅವರ ಕ್ಷೇತ್ರಕಾರ್ಯದ ಸಂದರ್ಶನ ಬರಹಗಳು ಪ್ರೇರಣೆ ನೀಡುವುದರಲ್ಲಿ ಸಂಶಯವಿಲ್ಲ.

ಅಮೇರಿಕೆಗೆ ತಮ್ಮ ಮಡದಿಯೊಡನೆ ಮಗಳ ಮನೆಗೆ ಹೋದರೂ 'ಸದಾಶಿವನಿಗೆ ಅದೇ ಧ್ಯಾನ' ಎಂಬ ಗಾದೆಯಂತೆ ಪ್ರಣತಾರ್ತಿಹರನ್ ಅವರಿಗೆ ಕೃಷಿಯದೇ ಸ್ಮರಣೆ, ಕ್ಷೇತ್ರಕಾರ್ಯದ್ದೇ ಚಿಂತನೆ. ಅಲ್ಲಿ ಯಾರಾದರೂ ಕರ್ನಾಟಕದ ಸಂಕೇತಿಗಳು ಕೃಷಿರಂಗದಲ್ಲಿದ್ದಾರೆಯೇ ಎಂದು ಹುಡುಕಾಡಿ ಸಫಲರಾಗಿದ್ದಾರೆ. ಮೈಸೂರು ಜಿಲ್ಲೆಯ ಪಿರಿಯಾಪಟ್ಟಣ ಮೂಲದ ಸುಬ್ಬರಾವ್ ಅವರನ್ನು ಸಂಧಿಸಿ, ಅವರ ಸಾಧನೆಸಿದ್ಧಿಗಳನ್ನೆಲ್ಲ ದಾಖಲಿಸಿದ್ದಾರೆ. ಸುಬ್ಬರಾವ್ ಎಂದರೆ ಸಾಮಾನ್ಯರಲ್ಲ. ಅವರೊಬ್ಬ ಕೃಷಿವಿಜ್ಞಾನಿ, ತಮ್ಮ ಹೊಸಹೊಸ ಶೋಧನೆಗಳಿಗಾಗಿ ಅವರು ಜಗತ್ತಿನ ಅತ್ಯಂತ ಶ್ರೇಷ್ಠ ಕೃಷಿವಿಜ್ಞಾನಿಗಳಲ್ಲೊಬ್ಬರಾಗಿ ಪುರಸ್ಕಾರಕ್ಕೆ ಪಾತ್ರರಾಗಿದ್ದಾರೆ ಎಂದರೆ ಅಚ್ಚರಿಯಲ್ಲವೆ! ನಾಲ್ಕನೆಯ ಅಕ್ಕ ವಿಶ್ವಕನ್ನಡ ಸಮ್ಮೇಳನದಲ್ಲಿ ಜೈವಿಕ ಆಹಾರವನ್ನು ಕುರಿತಂತೆ ಸುಬ್ಬರಾವ್ ಮಂಡಿಸಿದ್ದ ಲೇಖನವೊಂದನ್ನು ಅನುವಾದ ಮಾಡಿಸಿ, ಅದನ್ನು ಅವರ ಸಂದರ್ಶನದ ಬೆನ್ನಿಗೇ ಜೋಡಿಸಿದ್ದಾರೆ. ರಾಸಾಯನಿಕ ಗೊಬ್ಬರಗಳನ್ನೂ ಕೀಟನಾಶಕಗಳನ್ನೂ ಬಳಸದೆ ಬೆಳೆದ ಆಹಾರಪದಾರ್ಥಗಳನ್ನು ಜೈವಿಕ ಆಹಾರ ಎನ್ನುತ್ತಾರೆ. ಸಾವಯವಕೃಷಿ ಎಂದು ಹೇಳಬಹುದಾದ ಆ ಜೈವಿಕ ಕೃಷಿಯ ಸಾಧಕಬಾಧಕಗಳ ನಿರೂಪಣೆ ಆ ಲೇಖನದಲ್ಲಿದ್ದು, ಅದು ನಮ್ಮ ಕೃಷಿಕರಿಗೂ ಅತ್ಯಂತ ಪ್ರಯೋಜನಕಾರಿಯಾಗಿದೆ.

ದೀದಾರ್‌ಸಿಂಗ್ ಮತ್ತು ಚರನ್‌ಜಿತ್‌ಸಿಂಗ್

ಅಮೆರಿಕೆಗೆ ಹೋದ ಕೆಲವು ಭಾರತೀಯರು ಅಲ್ಲಿ ಕೃಷಿಗೆ ತಮ್ಮನ್ನು ಸಮರ್ಪಿಸಿಕೊಂಡು 'ನ ಭೂತೋ ನ ಭವಿಷ್ಯತಿ' ಎಂಬಂತೆ ಮೇಲೇರಿದ ವೃತ್ತಾಂತಗಳ ಸುಬ್ಬರಾಯರ ನಿರೂಪಣೆ ಅತ್ಯಂತ ರೋಚಕವಾಗಿದೆ. ಪೀಚ್ ಎಂದು ಕರೆಯುವ ಒಂದು ಜಾತಿಯ ಹಣ್ಣಿನ ತೋಟಕ್ಕೆ ನೀರು ಹಾಕುವ ಕೂಲಿಕಾರನಾಗಿ ದೀದಾರ್‌ಸಿಂಗ್ ಕೆಲಸ ಮಾಡುತ್ತಿದ್ದ. ತನ್ನ ಯಜಮಾನ ಆ ತೋಟವನ್ನು ಮಾರಾಟಕ್ಕಿಟ್ಟಾಗ, ತಾನು ಗಳಿಸಿದ ಹಣದಿಂದ ಆ ತೋಟವನ್ನು ತಾನೇ ಕೊಂಡುಕೊಂಡನು. ತರುವಾಯದಲ್ಲಿ ದೂರದೂರದ ಊರುಗಳಲ್ಲಿ ಪೀಚ್‌ತೋಟಗಳನ್ನು ಕೊಂಡು ಬೆಳೆಸಿದ ಅವನು, ಮೇಲುಸ್ತುವಾರಿ ನೋಡಲು ಒಂದು ತೋಟದಿಂದ ಇನ್ನೊಂದು ತೋಟಕ್ಕೆ ತನ್ನದೇ ಆದ ವಿಮಾನದಲ್ಲಿ ಓಡಾಡುತ್ತಾನೆ; ಅವನು ಪ್ರಸ್ತುತದಲ್ಲಿ ಜಗತ್ತಿನ ಅತಿಹೆಚ್ಚು ಪೀಚ್ ಹಣ್ಣನ್ನು ಬೆಳೆಯುವ ರೈತರ ಅಗ್ರಪಂಕ್ತಿಯಲ್ಲಿದ್ದಾನೆ ಎಂದರೆ ನಂಬಲು ಸಾಧ್ಯವೆ ! ಅವನಂತೆಯೇ ಇನ್ನೊಬ್ಬ ಸಾಹಸಿ ಚರನ್‌ಜಿತ್‌ಸಿಂಗ್. ದ್ರಾಕ್ಷಿತೋಟದ ಕೂಲಿಕಾರನಾಗಿ ಹೋದವನು, ತಾನೇ ತೋಟಗಳನ್ನು ಖರೀದಿಸಿ, ಇಂದು ಜಗತ್ತಿನ ಅತಿಹೆಚ್ಚು ಒಣದ್ರಾಕ್ಷಿ ಉತ್ಪಾದಿಸುವವರ ಸಾಲಿನಲ್ಲಿ ಒಬ್ಬನಾಗಿದ್ದಾನೆ; ೧೪,೪೦೦ ಎಕರೆ ದ್ರಾಕ್ಷಿತೋಟಗಳ ಮಾಲೀಕನಾಗಿದ್ದಾನೆ ಎಂದರೆ ನಂಬಬಹುದೆ! ಅಮೆರಿಕ ಮತ್ತು ಭಾರತದ ನಡುವಣ ಕೃಷಿರಂಗದ ಅನೇಕ ಸ್ವಾರಸ್ಯಕರ ತೌಲನಿಕ ವಿಚಾರಗಳನ್ನು ಸುಬ್ಬರಾವ್ ಅವರಿಂದ ಕೇಳಿ ತಿಳಿದು, ಪ್ರಣತಾರ್ತಿಹರನ್ ಅವರು ಸಂಗ್ರಹಿಸಿರುವುದು ಅತ್ಯಮೂಲ್ಯವಾದ ದಾಖಲೀಕರಣವಾಗಿದೆ. ಹೀಗೆ ನಂಬಲಸಾಧ್ಯವಾದ ಅಚ್ಚರಿಗಳನ್ನು ಕನ್ನಡಿಗರಿಗೆ ದೊರಕಿಸಿಕೊಟ್ಟಿರುವ ಹರನ್ ಅವರನ್ನು ಎಷ್ಟೆಷ್ಟು ಅಭಿನಂದಿಸಿದರೂ ಸಾಕಾಗುವುದಿಲ್ಲ.

ಮತ್ತಷ್ಟು ಸಾಹಸಿ ಕೃಷಿಕರು

ಬಾಬು ಎಂದು ಪ್ರೀತಿಯಿಂದ ಕರೆಯುವ ಮೈಸೂರಿನ ಎಸ್.ಕೆ. ಲಕ್ಷ್ಮೀನಾರಾಯಣ ಅವರು ಮುದ್ರಣೋದ್ಯಮದಿಂದ ಕೃಷಿಗೆ ಹೊರಳಿಕೊಂಡ ಪ್ರಸಂಗ ಅತ್ಯಂತ ರೋಚಕವಾಗಿದೆ. ಹನ್ನೆರಡು ಎಕರೆ ಭೂಮಿಯನ್ನು ಕೊಂಡು, ಸಾವಯವ ಕೃಷಿಗೆ ಒತ್ತುಕೊಟ್ಟು, ತೆಂಗು, ಬಾಳೆ, ಕಬ್ಬು, ಬತ್ತ, ತರಕಾರಿಗಳು ಮುಂತಾದ ಬೇಕುಬೇಕಾದ್ದನ್ನು ಸಮೃದ್ಧವಾಗಿ ಬೆಳೆಯುತ್ತಿದ್ದಾರೆ. ಹಿಂದುಳಿದ ಜಾತಿವರ್ಗಗಳ ಮಕ್ಕಳ ಬಗ್ಗೆ ಕರುಣೆದೋರಿ ಅವರಿಗೆ ಕಂಪ್ಯೂಟರ್ ವಿದ್ಯೆ, ಮುದ್ರಣಕಾರ್ಯ, ಜೆರಾಕ್ಸ್‌ಕಾರ್ಯ, ವಾಹನಚಾಲನೆ ಮುಂದಾದುವುಗಳನ್ನು ಕಲಿಸಿಕೊಟ್ಟು, ಹಲವು ಹತ್ತು ಕುಟುಂಬಗಳನ್ನು ಸ್ವಾವಲಂಬಿಯಾಗುವಂತೆ ಮೇಲೆ ತಂದಿದ್ದಾರೆ. 'ನಾನು ಕೃಷಿಕನಾದುದರಿಂದ ಇದೆಲ್ಲ ಸಾಧ್ಯವಾಯಿತು' ಎಂಬ ಅವರ ಮಾತಿನಲ್ಲಿ ಕೃಷಿಯ ಅಂತಃ ಶಕ್ತಿಯು ವ್ಯಕ್ತವಾಗಿದೆ.

ನಮ್ಮ ನಾಡಿನ ಸುಪ್ರಸಿದ್ಧ ಗಮಕ ವಿದ್ವನ್ಮಣಿಗಳಾದ ಬಿ.ಎಸ್.ಎಸ್. ಕೌಶಿಕ್ ಅವರ ಸುಪುತ್ರ ಎಂ.ಡಿ. ಕೌಶಿಕ್ ಅವರು ಚಲನಚಿತ್ರ ನಿರ್ದೇಶಕರಾಗಿ, ಹಲವು ಧಾರಾವಾಹಿಗಳ ನಾಯಕನಟರಾಗಿ ಮೇಲೆ ಬಂದ ಸಂಗತಿ ಸಾಮಾನ್ಯವಾದುದಲ್ಲ. ಅವರ ನಿರ್ದೇಶನದ ಕೆಲವು ಚಿತ್ರಗಳು ರಾಜ್ಯಪ್ರಶಸ್ತಿ, ರಾಷ್ಟ್ರಪ್ರಶಸ್ತಿಗಳನ್ನು ಗೆದ್ದುಕೊಂಡಿವೆ. ಅವರು ಕೃಷಿಗೆ ಮನಸ್ಸುಕೊಟ್ಟು, ಬೆಂಗಳೂರು ಹೊರವಲಯದಲ್ಲಿ ನಾಲ್ಕು ಎಕರೆ ಬೆಂಗಾಡು ಭೂಮಿಯನ್ನು ಖರೀದಿಸಿ, ಅದನ್ನು ನಂದನವನವಾಗುವಂತೆ ಮಾಡಿದ್ದು ಪವಾಡಸದೃಶವಾದ ಘಟನೆಯಲ್ಲದೆ ಬೇರೆಯಲ್ಲ. ಅಷ್ಟಕ್ಕೇ ತೃಪ್ತರಾಗದೆ ಆ ತೋಟದಲ್ಲಿ ತಮ್ಮ ಚಿತ್ರರಂಗದ ಗುರುಗಳಾದ ಪುಟ್ಟಣ್ಣ ಕಣಗಾಲ್ ಅವರ ಹೆಸರಿನಲ್ಲಿ ಸ್ಟುಡಿಯೋ ನಿರ್ಮಿಸಿ ಕೀರ್ತಿಸಂಪನ್ನರಾಗಿದ್ದಾರೆ. ಕೃಷಿಯಲ್ಲಿ ಜಯವಂತರಾದುದೇ ಅವರು ಸ್ಟುಡಿಯೋ ನಿರ್ಮಿಸಿ ಯಶಸ್ವಿಯಾಗಲು ಕಾರಣವಾಯಿತೆಂದರೆ ಅದು ಅತಿಶಯೋಕ್ತಿಯಲ್ಲ. ಕೃಷಿಕರಾಗಬಯಸುವವರಿಗೆ ಅವರು ಕೊಟ್ಟಿರುವ ಒಂದಲ್ಲ, ಎರಡಲ್ಲ, ಇಪ್ಪತ್ತಮೂರು ಸಲಹೆಗಳನ್ನು ಹರನ್ ಅವರು ಅಚ್ಚುಕಟ್ಟಾಗಿ ದಾಖಲಿಸಿದ್ದಾರೆ. ಎನ್. ಸುಬ್ಬರಾವ್ ಎಂಬುವವರು ಬೆಂಗಳೂರಿನ ತಮ್ಮ ಮನೆಯನ್ನು ಲತಾಗೃಹವೆಂಬಂತೆ, ಸಸ್ಯೋದ್ಯಾನವೆಂಬಂತೆ ಅತ್ಯಾಧುನಿಕವಾಗಿ ಅಲಂಕರಿಸಿರುವುದು ಸಂಕೇತಿಗಳ ಕೃಷಿಪ್ರೇಮಕ್ಕೆ ಅತ್ಯಂತ ಶ್ರೇಷ್ಠವಾದ ಉದಾಹರಣೆಯಾಗಿದೆ.

ಮೂಲತಃ ಹಾಸನಜಿಲ್ಲೆಯ ಮೊಸಳೆ ಎಂಬ ಗ್ರಾಮದ ಲಕ್ಷ್ಮೀಕಾಂತಯ್ಯನವರು ಕಗ್ಗಾಡಾಗಿದ್ದ ಬೆಂಗಳೂರಿನ ಪದ್ಮನಾಭನಗರದ ಮಧ್ಯದ ದೇವರಗುಡ್ಡವನ್ನು ನಿಜವಾದ ಅರ್ಥದಲ್ಲಿಯೂ ದೇವರಗುಡ್ಡವನ್ನಾಗಿ ಪರಿವರ್ತಿಸಿದ ಕಥೆ ರೋಮಾಂಚಕಾರಿಯಾಗಿದೆ. ಕನ್ನಡಪಂಡಿತರಾಗಿದ್ದ ಅವರಿಗೆ ಚಿಕ್ಕಮಗಳೂರು ಜಿಲ್ಲೆಯ ಕಡೂರುತಾಲ್ಲೂಕಿನ ಲಕ್ಷ್ಮೀಕಾಂತಸ್ವಾಮಿ ಮನೆದೇವರಾಗಿದ್ದನು. ಒಂದೂವರೆ ಎಕರೆ ವಿಸ್ತೀರ್ಣದ ಆ ಕಲ್ಲುಮೊರಡಿಯನ್ನು ತಾವೇ ಹದಗೊಳಿಸಿ, ಅಲ್ಲಿ ಲಕ್ಷ್ಮೀಕಾಂತದೇವಾಲಯವೊಂದನ್ನು ಕಟ್ಟಿ, ಅದರ ಸುತ್ತ ಹೂದೋಟವೊಂದನ್ನು ಎಬ್ಬಿಸಿ ಕೃತಕೃತ್ಯರಾಗಿದ್ದಾರೆ. ಅವರ ಸುಪುತ್ರಿ ಡಾ. ಲಲಿತಮ್ಮ ಆ ಬೆಳವಣಿಗೆಯ ದಿಕ್ಕಿನಲ್ಲಿ ಇನ್ನಷ್ಟು ಮುಂದೆ ಸಾಗಿದ್ದಾರೆ. ಗುಡ್ಡವನ್ನೇ ಮತ್ತಷ್ಟು ವಿಸ್ತರಿಸಿ ಅಲ್ಲಿ 'ಆರೋಗ್ಯವನ'ವೊಂದನ್ನು ನಿರ್ಮಿಸಿರುವುದು ಭಗೀರಥ ಸಾಹಸಗಾಥೆಯಲ್ಲದೆ ಬೇರೆಯಲ್ಲ. ಕದಂಬವನ, ಬಿಲ್ವವನ, ಮೂಲಿಕಾವನ, ಅಶ್ವತ್ಥವನ, ಪಂಚವಟಿ ಮುಂತಾದುವನ್ನೆಲ್ಲ ಅಲ್ಲಿ ಬೆಳೆಸಿ, ಲಲಿತಮ್ಮನವರು ಜಗತ್ತಿನ ಗಮನವನ್ನೇ ಸೆಳೆದಿದ್ದಾರೆ.

ಹಳ್ಳಿಗಳಲ್ಲಿ ನೆಲೆಸಿರುವ ಸಂಕೇತಿಗಳು ಹಿತ್ತಿಲತೋಟಗಳನ್ನು ಬೆಳೆಸುವುದು ಹಿಂದಿನಿಂದಲೂ ನಡೆದುಬಂದಿದೆ. ಅದೇ ಸಂಕೇತಿಗಳು ನಗರಗಳಿಗೆ ಬಿದ್ದಮೇಲೆ, ಮುಂಬಾಗಿಲ ತೋಟಗಳನ್ನು ಬೆಳೆಸುವ ಕ್ರಮವನ್ನು ರೂಢಿಸಿಕೊಂಡಿದ್ದಾರೆ. ಹಳ್ಳಿಮೈಸೂರು ಮೂಲದ ರಾಮಚಂದ್ರಯ್ಯನವರು ಮೈಸೂರಿನಲ್ಲಿ ನೆಲೆನಿಂತು ತಮ್ಮ ಮನೆಯ ಮುಂದೆ ತೆಂಗು, ಅಡಕೆ, ವೀಳ್ಯದೆಲೆಗಳನ್ನು ಬೆಳೆಸಿ ಯಶಸ್ವಿಯಾಗಿದ್ದಾರೆ. ಹಾಸನ, ಬೆಂಗಳೂರುಗಳಲ್ಲೂ ಕೆಲವು ಸಂಕೇತಿಗಳು ಈ ಬಗೆಯ ಕೃಷಿಪ್ರೇಮವನ್ನು ಅನಾಯಾಸವಾಗಿ ಮೆರೆದಿದ್ದಾರೆ.

ಸಂಕೇತಿಗಳ ಪೂರ್ವೇತಿಹಾಸ

ಸಂಕೇತಿಗಳ ಪೂರ್ವೇತಿಹಾಸವನ್ನು ಗ್ರಂಥವಾಗಿ ಬರೆದವರಲ್ಲಿ ಎಂ. ಕೇಶವಯ್ಯನವರು ಮೊದಲಿಗರೆನಿಸಿದ್ದಾರೆ. *Life of Nacharamma: History of Her Migration* ಎಂಬ ಹೆಸರಿನಲ್ಲಿ ಆಂಗ್ಲದಲ್ಲೂ 'ಶ್ರೀನಾಚಾರಮ್ಮನ ಜೀವನ ಚರಿತ್ರೆ: ಆಕೆಯ ಪ್ರವಾಸ' ಎಂಬ ಹೆಸರಿನಲ್ಲಿ ಕನ್ನಡದಲ್ಲೂ ಅವರ ಕೃತಿಗಳಿವೆ. ವಿಜಯಾಹರನ್ ಅವರು ಆ ಕೃತಿಗಳಿಂದ ಸಂಕೇತಿಗಳ ವಲಸೆಗೆ, ಅವರ ಕೃಷಿಜೀವನಕ್ಕೆ ಸಂಬಂಧಿಸಿದ ಸಾರವತ್ತಾದ ವಾಕ್ಯಪುಂಜಗಳನ್ನು ಎತ್ತಿಕೊಟ್ಟಿದ್ದಾರೆ. ಸುಧಾಮಣಿಯವರ ಆಂಗ್ಲ ಲೇಖನದಲ್ಲಿಯೂ ಈ ಸಂಗತಿಗಳು ನಿರೂಪಿತವಾಗಿವೆ. ಕೆಲವು ಸಂದರ್ಶನಗಳಲ್ಲಿಯೂ ಸಂಕೇತಿಗಳ ಪೂರ್ವೇತಿಹಾಸದ ಸುಳುಹುಗಳಿವೆ.

ಕನ್ನಡ ನಾಡಿನ ಬ್ರಾಹ್ಮಣ ಸಮುದಾಯಗಳಲ್ಲೊಂದಾದ ಸಂಕೇತಿಗಳು ಸು. ೯೦೦ ವರ್ಷಗಳ ಹಿಂದೆ ತಮಿಳುನಾಡಿನಿಂದ ವಲಸೆ ಬಂದು ನೆಲೆಗೊಂಡವರಾಗಿದ್ದಾರೆ. ಅಲ್ಲಿ ಅವರು ಶೆಂಕೋಟ್ಟೈ, ಮಧುರೈ, ಕಂಚಿ ಮುಂತಾದ ಊರುಗಳಲ್ಲಿ ವಾಸವಾಗಿದ್ದರು. ಅವರು ಕನ್ನಡ ನಾಡಿಗೆ ಬಂದುದೇಕೆ ಎಂಬುದಕ್ಕೆ ಹೃದಯಸ್ಪರ್ಶಿಯಾದ ಐತಿಹ್ಯವೊಂದು ವ್ಯಾಪಕವಾಗಿ ಪ್ರಚಾರದಲ್ಲಿದೆ. ತಿರುನೆಲ್ವೇಲಿ ಜಿಲ್ಲೆಯ ಆಳ್ವಾರ್‌ಕುರುಚಿ ಎಂಬುದು ಅಂದಿನ ಕಾಲಕ್ಕೆ ಪ್ರಸಿದ್ಧವಾದೊಂದು ಬ್ರಾಹ್ಮಣ ಅಗ್ರಹಾರವಾಗಿತ್ತು. ಅಲ್ಲಿನ ಬ್ರಾಹ್ಮಣ ಸಮುದಾಯದಲ್ಲಿ ಆರ್ಯಶರ್ಮನೂ ಒಬ್ಬನಾಗಿದ್ದನು. ನಾಚಾರಮ್ಮ ಎಂಬ ಸಾಧ್ವಿಯು ಅವನ ಮಡದಿಯಾಗಿದ್ದಳು. ಆ ದಂಪತಿಗಳಿಗೆ ಒಬ್ಬನೇ ಮಗನಿದ್ದನು. ಆ ಕುಟುಂಬವು ಕ್ರೂರವಾದ ಬಡತನಕ್ಕೆ ತುತ್ತಾಗಿ ಸಂಕಟವನ್ನು ಅನುಭವಿಸುತ್ತಿತ್ತು. ಜ್ಯೋತಿಷ್ಮತಿ ಎಂಬ ತೈಲವನ್ನು ಸೇವಿಸಿದರೆ ಬುದ್ಧಿಬಲವು ಅತಿಶಯವಾಗಿ ತೋರಿಕೊಳ್ಳುತ್ತದೆ ಎಂಬ ವಿಚಾರ ಆ ದಂಪತಿಗಳಿಗೆ ತಿಳಿದಿತ್ತು. ಆ ಬುದ್ಧಿಶಕ್ತಿಯ ಆಸರೆಯಿಂದಲಾದರೂ ತಮ್ಮ ಸಂತತಿಯ ಬಡತನವನ್ನು ನೀಗಿಕೊಳ್ಳಬೇಕೆಂದು ಅವರು ನಿರ್ಧರಿಸಿದರು. ಬಲ್ಲವರನ್ನು ಮುಂದಿಟ್ಟುಕೊಂಡು ಜ್ಯೋತಿಷ್ಮತಿ ತೈಲವನ್ನು ಸಿದ್ಧಪಡಿಸಿದರು. ಹೋಮಹವನಾದಿಗಳನ್ನು ಮಾಡಿ, ಆ ತೈಲವನ್ನು ದೇವತೆಗಳಿಗೆ ನೈವೇದ್ಯಮಾಡಿ, ಬಳಿಕ ತಾವು ಸೇವಿಸಿದರು. ಆ ತೈಲವನ್ನು ಪಾನಮಾಡಿದ ಎಲ್ಲರೂ ಜ್ಞಾನಿಗಳಾಗುತ್ತಾರೆಂದು ನಿರೀಕ್ಷಿಸುವಂತಿರಲಿಲ್ಲ. ಪಾನಮಾಡಿದ ಮೂವರಲ್ಲಿ ಒಬ್ಬರು ಜ್ಞಾನಿಗಳಾಗುತ್ತಾರೆ, ಒಬ್ಬರು ಹುಚ್ಚರಾಗುತ್ತಾರೆ, ಒಬ್ಬರು ಸಾವನ್ನಪ್ಪುತ್ತಾರೆ ಎಂಬ ವಿಚಾರವೂ ಪ್ರಚಲಿತವಾಗಿತ್ತು. 'ನಾವು ಸತ್ತರೇನು, ಹುಚ್ಚರಾದರೇನು, ಜ್ಞಾನಿಯಾಗುವ ಪುಣ್ಯ ನಮ್ಮ ಮಗನಿಗೇ ಪ್ರಾಪ್ತವಾಗಲಿ' ಎಂದು ಅವರು ಧೈರ್ಯಮಾಡಿ ತೈಲವನ್ನು ಸ್ವೀಕರಿಸಿದ್ದರು. ಆದರೆ ಪರಮಾತ್ಮನ ಇಚ್ಛೆಯೇ ಬೇರೆಯಾಗಿತ್ತು. ಆ ತೈಲದ ಪ್ರಭಾವದಿಂದ ಕುಟುಂಬದ ಕಣ್ಣಾಗಿದ್ದ ಮಗನೇ ತೀರಿಹೋದನು. ಆರ್ಯಶರ್ಮನು ಹುಚ್ಚನಾಗಿ ಎತ್ತಲೋ ಓಡಿಹೋದನು. ನಾಚಾರಮ್ಮನಿಗೆ ಜ್ಞಾನಿಯಾಗುವ ಸರದಿ ಕೂಡಿಬಂದಿತು. ಆದರೆ ಅದಕ್ಕೂ ಮುನ್ನ ಆ ತೈಲವು ದೇಹಾದ್ಯಂತ ಅವಳಿಗೆ ಅಸಹನೀಯವಾದ ಉರಿಯನ್ನು ಉಂಟುಮಾಡಿತು. ಅದರ ಜೊತೆಗೆ ಪುತ್ರನ ಮರಣ, ಗಂಡನು ಹುಚ್ಚನಾಗಿ ಓಡಿಹೋದುದು, ಅವಳ ಸಂಕಟವನ್ನು ನೂರ್ಮಡಿಗೊಳಿಸಿದವು. ತಾನಿನ್ನು ಬದುಕಿ ಫಲವೇನು ಎಂದು ಅವಳು ಅಲ್ಲಿಯೇ ಇದ್ದ ಬಾವಿಗೆ ಮಗುಚಿಕೊಂಡಳು. ಎಲ್ಲವೂ ದೈವೇಚ್ಛೆಯಂತೆ ನಡೆಯುತ್ತಿರುವಾಗ ಸಾಯಲು ನಾವಾರು, ಬದುಕಲು ನಾವಾರು ! ಅಗ್ರಹಾರದ ಬ್ರಾಹ್ಮಣರು ಓಡಿಬಂದು ಅವಳನ್ನು ಬಾವಿಯಿಂದ ಮೇಲೆತ್ತಿ ತಂದರು.

ಬಾವಿಯಿಂದ ಮೇಲೆ ಬಂದನಂತರ ತೈಲದ ಪ್ರಭಾವವು ಶಾಂತವಾಗಿ ಉರಿಯು ಹತೋಟಿಗೆ ಬಂದಿತು. ಅವಳ ಮುಖವು ದಿವ್ಯಕಾಂತಿಯಿಂದ ದೇದೀಪ್ಯಮಾನವಾಯಿತು. ಅವಳ ಮನೋಧರ್ಮವೇ ಬದಲಾಗಿಹೋಯಿತು. ಅವಿದ್ಯಾವತಿಯಾಗಿದ್ದ ಅವಳಿಗೆ ಅಧ್ಯಯನಯೋಗ್ಯವಾದ ಅನೇಕ ಶಾಸ್ತ್ರಗಳು ಮುಖೋದ್ಗತವಾಗಿಬಿಟ್ಟುವು. ಅವಳ ತೇಜಸ್ಸನ್ನೂ ಪ್ರತಿಭೆಯನ್ನೂ ಕಂಡು ಅಗ್ರಹಾರದ ಬ್ರಾಹ್ಮಣರು ಅಪ್ರತಿಭರಾಗಿಬಿಟ್ಟರು. ಆಕೆಯ ವಿದ್ವತ್ತಿನ ಮುಂದೆ ತಾವೆಲ್ಲರೂ ತಲೆತಗ್ಗಿಸಬೇಕಾಗುತ್ತದೆ ಎಂಬ ಆತಂಕ ಅವರನ್ನು ಕಾಡತೊಡಗಿತು. 'ಯಾವ ವಿಚಾರದಲ್ಲಾದರೂ ಸರಿಯೆ, ನೀವು ನನ್ನೊಡನೆ ವಾದಮಾಡಬಹುದು' ಎಂದು ನಾಚಾರಮ್ಮ ಅಗ್ರಹಾರದ ವಿದ್ವಾಂಸರಿಗೆ ಆಹ್ವಾನ ನೀಡಿದಳು. 'ನಿನ್ನ ಮಗನ ಉತ್ತರ ಕ್ರಿಯಾದಿಗಳು ಪೂರ್ಣವಾಗಲಿ, ಆಮೇಲೆ ವಾದ ಮಾಡೋಣ' ಎಂದು ಹೇಗೋ ಅವರು ತಪ್ಪಿಸಿಕೊಂಡರು.

'ನಾಚಾರಮ್ಮನು ಈ ಅಗ್ರಹಾರದಲ್ಲಿದ್ದರೆ ತಮಗೆ ಉಳಿಗಾಲವಿಲ್ಲ, ಅವಳನ್ನು ಹೇಗಾದರೂ ಅವಮಾನಿಸಿ ಇಲ್ಲಿಂದ ಅಟ್ಟಿಬಿಡೋಣ' ಎಂದು ಆ ವಿದ್ವಾಂಸರು ಸಂಚೊಂದನ್ನು ರೂಪಿಸಿದರು. ಮಗನ ಉತ್ತರಕ್ರಿಯೆಯ ಅಂಗವಾದ ಬ್ರಾಹ್ಮಣ ಸಂತರ್ಪಣೆಯ ದಿನ ನಾಚಾರಮ್ಮನಿಗೊಂದು ಸೀರೆಯನ್ನು ಸಮರ್ಪಿಸಿ 'ಇದನ್ನು ನೀನು ಉಟ್ಟುಕೋ ತಾಯಿ, ಸಂತರ್ಪಣೆಯಲ್ಲಿ ನೀನೇ ತುಪ್ಪಬಡಿಸಬೇಕು' ಎಂದು ಉಪಾಯವಾಗಿ ಹೇಳಿದರು.

ಪ್ರತಿಭಾವಿಲಾಸದಲ್ಲಿಯೇ ಮುಳುಗಿದ್ದ ಅವಳಿಗೆ ವಿದ್ವಾಂಸರ ಸಂಚು ಗೋಚರಿಸಲಿಲ್ಲ. ತುಪ್ಪಬಡಿಸುವಾಗ ನಾಚಾರಮ್ಮನು ಉಟ್ಟಿದ್ದ ಸೀರೆ ಕಳಚಿಹೋಗಿ ಅಪಮಾನಕ್ಕೆ ತುತ್ತಾಗಿಬಿಟ್ಟಳು. ಒಡನೆಯೆ ಅದನ್ನು ವಿಶೇಷವಾದ ರೀತಿಯಲ್ಲಿ ಗಂಟುಬಿಗಿದು ಉಟ್ಟು, ಸರಿಪಡಿಸಿಕೊಂಡಳು. ಬಳಪದಕಲ್ಲಿನಪುಡಿ, ಕುಂಕುಮ ಮೊದಲಾದ ನುಣಪಾದ ದ್ರವ್ಯಗಳನ್ನು ಆ ಸೀರೆಗೆ ಲೇಪಿಸಿ ಒಣಗಿಸಿದ್ದರು. ಅದೇ ಕಾರಣವಾಗಿ ಅದು ಭದ್ರವಾಗಿ ನಿಲ್ಲದೆ ಜಾರಿತು. ವಿದ್ವಾಂಸರು ಮಾಡಿದ ಕುತಂತ್ರವೂ ಅವಳಿಗೆ ಅರ್ಥವಾಯಿತು. ಕ್ರೋಧಪರವಶಳಾದ ಅವಳು ಆ ಬ್ರಾಹ್ಮಣಸಮುದಾಯವನ್ನು ಉದ್ದೇಶಿಸಿ 'ನಿಮ್ಮನ್ನು ಅಲ್ಪಾಯುಷ್ಯ, ಸಂತಾನಹೀನತೆ, ದಾರಿದ್ರ್ಯ, ಜಗಳಗಂಟಿತನ ಮುಂತಾದ ಸಂಕಟಗಳು ಕಾಡಲಿ' ಎಂದು ಶಪಿಸಿಬಿಟ್ಟಳು. ಆ ಹೊತ್ತಿನಲ್ಲಿ ಅವಳುಟ್ಟ ಸೀರೆಯ ಶೈಲಿ 'ಗಂಡಿಸೀರೆ' ಎಂದು ಪ್ರಸಿದ್ಧವಾಯಿತು.

ಅವಳ ಶಾಪವಾಕ್ಯಗಳನ್ನು ಕೇಳಿ ಎಲ್ಲರೂ ಕಂಗಾಲಾಗಿಬಿಟ್ಟರು. ಸಾಕ್ಷಾತ್ ದುರ್ಗಾದೇವಿಯೇ ನಾಚಾರಮ್ಮನ ರೂಪದಲ್ಲಿ ತಮ್ಮ ಮುಂದೆ ನಿಂತಿದ್ದಾಳೆ ಎಂಬಂತೆ ಅವರಿಗೆ ಭಾಸವಾಯಿತು. 'ನಮ್ಮಿಂದ ಎಂತಹ ಘೋರ ಅಪರಾಧ ನಡೆದುಹೋಯಿತು' ಎಂದು ಅವರೆಲ್ಲರೂ ಪಶ್ಚಾತ್ತಾಪದಿಂದ ಬೆಂದುಹೋದರು. ಆಗಿಂದಾಗಲೇ ನಾಚಾರಮ್ಮನ ಪಾದಗಳಿಗೆ ಬಿದ್ದು 'ನೀನೇ ನಮಗೆ ತಾಯಿ, ನೀನೇ ನಮಗೆ ಗುರು, ನೀನೇ ನಮ್ಮ ಕುಲದೇವತೆ, ನಮ್ಮ ಅಪರಾಧವನ್ನು ಮನ್ನಿಸು, ನಮ್ಮನ್ನು ಕಾಪಾಡು' ಎಂದು ದೀನರಾಗಿ ಮೊರೆಯಿಟ್ಟರು. ನಾಚಾರಮ್ಮನು ಶಾಂತಳಾದಳು. ಅವಳ ಹೃದಯವೂ ಆ ಮೊರೆಯಿಂದ ಕರಗಿತು. ಆದರೆ ಏನೂ ಮಾಡುವಂತಿರಲಿಲ್ಲ. 'ನಾನೇನೂ ಮಾಡಲಾರೆ, ಶಾಪವಾಕ್ಯವು ಪರಮಾತ್ಮನ ಇಚ್ಛೆಯಂತೆ ಹೊರಬಿದ್ದಿದೆ. ಸುಂದರವಾದ ಈ ಗ್ರಾಮವು ಕೂಡ ಮುಂದೆ ನಾಶವಾಗುತ್ತದೆ. ನನಗೂ ಇಲ್ಲಿ ವಾಸಮಾಡಲು ಇಷ್ಟವಿಲ್ಲ. ಮನಬಂದತ್ತ ಹೊರಟುಹೋಗುತ್ತೇನೆ. ಇಷ್ಟವಿದ್ದವರು ನನ್ನನ್ನು ಹಿಂಬಾಲಿಸಿ ಬರಬಹುದು' ಎಂದು ಘೋಷಿಸಿ ನಡೆದೇಬಿಟ್ಟಳು. ಆಳ್ವಾರ್‌ಕುರುಚಿ ಮಾತ್ರವಲ್ಲದೆ ಶೆಂಕೋಟ್ಟೈ, ಮಧುರೆ, ಕಂಚಿ ಮುಂತಾದ ಊರುಗಳಿಂದಲೂ ಬಂದ ಸರಿಸುಮಾರು ಏಳುನೂರು ಬ್ರಾಹ್ಮಣ ಕುಟುಂಬಗಳು ಅವಳನ್ನು ಅನುಸರಿಸಿ ನಡೆದುವು. 'ನಾಚಾರಮ್ಮನಿದ್ದಲ್ಲಿ ನಮಗೆ ರಕ್ಷಣೆಯಿರುತ್ತದೆ' ಎಂದು ಆ ಜನರು ಭಾವಿಸಿದರು. ಊರು ಬಿಡಲಾರದೆ ಅದೆಷ್ಟೋ ಕುಟುಂಬಗಳು ಅಲ್ಲಿಯೇ ಉಳಿದುವು

ಕಾವೇರಿನದಿಯ ಹರಿವನ್ನೇ ಅನುಸರಿಸಿ ಶಿವನಸಮುದ್ರದ ಮಾರ್ಗವಾಗಿ ಕರ್ನಾಟಕವನ್ನು ಪ್ರವೇಶಿಸಿದ ಆ ಬ್ರಾಹ್ಮಣರಲ್ಲಿ ಕೆಲವರು ಮೈಸೂರು ಜಿಲ್ಲೆಯ ತಿರುಮಕೂಡಲು ನರಸೀಪುರದ ಕಾವೇರಿತೀರದ ಹೆಮ್ಮಿಗೆ ಎಂಬ ಗ್ರಾಮದಲ್ಲಿ ನೆಲೆಸಿದರು. ತರುವಾಯ ಅವರು ಶ್ರೀವೈಷ್ಣವರಾದರು. ಬಳಿಕ ಮುಂದೆ ಸಾಗುತ್ತ ಹಾಸನಜಿಲ್ಲೆಯ ಕೌಶಿಕ ಎಂಬ ಗ್ರಾಮದಲ್ಲಿ ದೊಡ್ಡ ಸಮುದಾಯವೊಂದು ನೆಲೆಗೊಂಡಿತು. ಸಂಕೇತಿಗಳು ಎಂದು ಕರೆಯಲ್ಪಡುತ್ತಿದ್ದ ಆ ಬ್ರಾಹ್ಮಣರೆಲ್ಲರೂ ಕಾಲಾಂತರದಲ್ಲಿ ಶಿವಮೊಗ್ಗಜಿಲ್ಲೆಯ ಮತ್ತೂರು, ಚಿಕ್ಕಮಗಳೂರುಜಿಲ್ಲೆಯ ಲಿಂಗದಹಳ್ಳಿ ಮೊದಲಾದ ಹಲವಾರು ಗ್ರಾಮಗಳತ್ತ ಪ್ರಯಾಣ ಮಾಡಿ ಅಲ್ಲಲ್ಲಿ ಚೆದುರಿನೆಲೆಸಿದರು. ಮತ್ತೆ ಹನ್ನೆರಡು ವರ್ಷಗಳ ತರುವಾಯ ಸುಮಾರು ಮುನ್ನೂರು ಕುಟುಂಬಗಳು ಶೆಂಕೋಟ್ಟೈ ಮುಂತಾದ ಪ್ರಾಂತಗಳಿಂದಲೇ ವಲಸೆಬಂದು ಮೈಸೂರು ಜಿಲ್ಲೆಯ ಬೆಟ್ಟದಪುರ ಎಂಬಲ್ಲಿ ತಳವೂರಿದರು. ಪ್ರಾಂತಭೇದದಿಂದಾಗಿ ಕೌಶಿಕಸಂಕೇತಿಗಳು, ಬೆಟ್ಟದಪುರದಸಂಕೇತಿಗಳು ಎಂದು ಅವರು ಎರಡು ಪಂಗಡವಾಗಿ ಬೆಳೆದರು. ಅವರಾಡುವ ಭಾಷೆ ತಮಿಳಿನ ಒಂದು ಉಪಭಾಷಾಸ್ವರೂಪವನ್ನು ತಾಳಿ ಅವರ ಸಂವಹನ ಮಾಧ್ಯಮವಾಯಿತು. ತಮ್ಮ ಮೂಲಸ್ಥಾನದಲ್ಲಿದ್ದಾಗ ವೇದಾಧ್ಯಯನ, ವೈದಿಕವೃತ್ತಿಗಳ ಜೊತೆಗೆ ಕೃಷಿಯನ್ನೂ ಅವಲಂಬಿಸಿದ್ದರು. ಕನ್ನಡನಾಡಿಗೆ ಬಂದ ಮೇಲೂ ಹೆಚ್ಚಿನ ಪ್ರಾಣಿಹಿಂಸೆಯಿಲ್ಲದ, ಅಡಕೆತೆಂಗುಬಾಳೆ ತೋಟಗಳ ಕೃಷಿಕಾರ್ಯವನ್ನು ವೇದಾಧ್ಯಯನದಜೊತೆಗೆ ಮೈಗೂಡಿಸಿಕೊಂಡರು. ವರ್ಣಾಶ್ರಮಧರ್ಮ ವ್ಯವಸ್ಥೆಯಲ್ಲಿ ಬೇಸಾಯವು ಬ್ರಾಹ್ಮಣನಿಗೆ ಹೇಳಿಲ್ಲ, ಅವರು ಎತ್ತುಗಳಿಗೆ ಹಿಂಸೆಯಾಗುವ ಉಳುವ ಕಾರ್ಯ ಮಾಡಬಾರದು; ಆದರೆ ಆಪತ್ಕಾಲದಲ್ಲಿ ಅನ್ಯವರ್ಣದ ಧರ್ಮವನ್ನು ಕೈಗೊಂಡರೂ ದೋಷವಿಲ್ಲ ಎಂದು ಧರ್ಮಶಾಸ್ತ್ರಗಳು ತಿಳಿಸಿಕೊಟ್ಟಿವೆ. ಹೀಗಾಗಿ ಸಂಕೇತಿಗಳು ಅಂದಿನ ಕಾಲಕ್ಕೆ ಉಳುವ ಕಾರ್ಯಕ್ಕೆ ಕೈಹಾಕದೆ ಮನುಷ್ಯರ ದುಡಿಮೆಯೇ ಪ್ರಧಾನವಾದ ತೋಟಗಾರಿಕೆಯನ್ನು ತಮ್ಮದಾಗಿಸಿಕೊಂಡರು. ಸಂಕೇತಿಗಳ ಮೊದಲ ವಲಸೆ ಕ್ರಿ.ಶ. ೧೦೭೫ರ ಸುಮಾರಿನಲ್ಲಿ ನಡೆದಿರಬಹುದೆಂದು ತಿಳಿಯಲಾಗಿದೆ.

ಸಂಕೇತಿ ವೈಶಿಷ್ಟ್ಯಗಳು

ಸಂಕೇತಿಗಳ ಕೃಷಿವೈಶಿಷ್ಟ್ಯಗಳನ್ನೂ ಜೀವನವೈಶಿಷ್ಟ್ಯಗಳನ್ನೂ ಸಾರಿ ಹೇಳುವ ಅನೇಕ ವಿಚಾರಗಳು ಇಲ್ಲಿ ಇಡಿಕಿರಿದು ತುಂಬಿವೆ. ಸಂಕೇತಿಗಳು ವ್ಯುತ್ಪನ್ನಮತಿಗಳು. ತೋಟಕ್ಕೆ ಹೋಗುವಾಗ ಗುರುಗಳು ವೇದಾಂತಪಾಠಗಳನ್ನು ನಿರೂಪಿಸುತ್ತಿದರೆ ಅವರ ಹಿಂದೆ ನಡೆದುಹೋಗುತ್ತಿದ್ದ ಶಿಷ್ಯರು ಕೇಳಿಯೇ ಕಲಿತು ತೃಪ್ತರಾಗಿಬಿಡುತ್ತಿದ್ದರು. ವೇದಪಾಠಗಳನ್ನು ಕೂಡ ತೋಟದ ಕೆಲಸಗಳಲ್ಲಿ ಮಗ್ನರಾಗಿದ್ದುಕೊಂಡೇ ಕಂಠಪಾಠಮಾಡಿಕೊಂಡುಬಿಡುತ್ತಿದ್ದರು. ಕೂಲಿಕೊಟ್ಟು ಕೆಲಸ ಮಾಡಿಸುವ ಕ್ರಮವಿರಲಿಲ್ಲ. ತಾವೇ ದುಡಿಯುವುದು, ಮುಯ್ಯಾಳು ಪದ್ಧತಿಯಿಂದ ನಿರ್ವಹಿಸುವುದು ಅಂದಿನ ಕ್ರಮವಾಯಿತು. ಮೋಡಗಳ ಸಂಚಾರ, ವಾಯುಸಂಚಾರ, ಸೂರ್ಯರಶ್ಮಿಗಳನ್ನು ನೋಡಿಯೇ ಮಳೆಯ ಬರುವಿಕೆಯನ್ನೂ

ಬರದಿರುವಿಕೆಯನ್ನೂ ಗೊತ್ತುಮಾಡಿಕೊಳ್ಳುತ್ತಿದ್ದರು. ವೇದಾಧ್ಯಯನವನ್ನೇ ಪ್ರಧಾನವಾಗಿಟ್ಟುಕೊಂಡು, ಜೀವನಯಾಪನೆಗೆ ಎಷ್ಟೋ ಅಷ್ಟಾಗುವಂತೆ ಮಾತ್ರವೇ ತೋಟದ ಕೃಷಿಯಲ್ಲಿ ನಂಬಿಕೊಂಡಿದ್ದರು. ರೋಗರುಜಿನಗಳಿಗೆ ತುತ್ತಾಗುವವರು ಹೆಚ್ಚು ಸಂಖ್ಯೆಯಲ್ಲಿರುತ್ತಿರಲಿಲ್ಲ. ಕಠಿಣವಾದ ದುಡಿಮೆ, ಶುದ್ಧವಾದ ಆಹಾರಸೇವನೆ ಅದಕ್ಕೆ ಕಾರಣಗಳಾಗಿದ್ದುವು. ಮೈಸೂರು ಮಹಾರಾಜರು 'ನೀವು ತೋಟದ ವ್ಯವಸಾಯವನ್ನೇ ಏಕೆ ಆರಿಸಿಕೊಂಡಿದ್ದೀರಿ?' ಎಂದು ಕೇಳಿದಕ್ಕೆ, 'ನೇಗಿಲಿಗೆ ಮೂಕ ಪ್ರಾಣಿಗಳನ್ನು ಕಟ್ಟಿ ಹಿಂಸೆಕೊಡುವುದು ಬ್ರಾಹ್ಮಣರಿಗೆ ಶಾಸ್ತ್ರನಿಷಿದ್ಧವಾದ್ದರಿಂದ ಸ್ವಂತ ದೇಹಪರಿಶ್ರಮದಿಂದ ನೆರವೇರುವ ತೋಟದ ಕೃಷಿಯನ್ನು ಕೈಗೊಂಡಿದ್ದೇವೆ, ಮಹಾಸ್ವಾಮಿ' ಎಂದು ಉತ್ತರಿಸಿದ್ದರು. ಕಪಿಗಳು ಅಡಕೆಕಾಯಿ ತಿನ್ನದಿದ್ದರೂ ಮರದಿಂದ ಕಿತ್ತು ಕೆಳಗೆ ಬಾಳೆಗಿಡದ ಎಲೆಯಮೇಲೆ ಬೀಳಿಸಿ, ಮೇಲೇಳುವ ಸದ್ದನ್ನು ಕೇಳಿ ಹಿಗ್ಗುತ್ತವೆಯಂತೆ ! ಅಷ್ಟಾದರೂ ಸಂಕೇತಿಗಳು ಅವುಗಳನ್ನು ಹಿಂಸಿಸದೆ, ಹಿಡಿಸಿ ಕಾಡಿಗೆ ಅಟ್ಟಿಬಿಡುತ್ತಿದ್ದರು. ಮದುವೆಮುಂಜಿಗಳಲ್ಲಿ ಸಮಸ್ತ ಸೇವಾಕಾರ್ಯಗಳನ್ನೂ ಪರಸ್ಪರ ಸಹಕಾರದಿಂದಲೇ ಪರಿಷ್ಕಾರವಾಗಿ ಮಾಡಿ ಮುಗಿಸುತ್ತಿದ್ದರು. ನಿಜವಾದ ಅರ್ಥದಲ್ಲಿ ಅದು ಸಹಕಾರಚಳವಳಿಯೇ ಆಗಿತ್ತು.

ಮೈಸೂರಿನ ಅನಾಥಾಲಯದ ಸಂಸ್ಥಾಪಕರಾದ ವೃದ್ಧಪಿತಾಮಹ ವೆಂಕಟಕೃಷ್ಣಯ್ಯನವರು "ಸಂಕೇತಿಗಳು ಕಷ್ಟಪಟ್ಟು ಕೆಲಸಮಾಡುವವರು, ಸತ್ಯವಂತರು, ಸಾತ್ವಿಕರು, ನಂಬಿಕೆಗೆ ಅರ್ಹರು, ತೃಪ್ತರು" ಎಂದು ಕೊಂಡಾಡುತ್ತಿದ್ದರು. ಕಾಲಹರಣವೆಂಬುದು ಅವರ ಜಾಯಮಾನಕ್ಕೆ ಒಗ್ಗುವಂಥದಾಗಿರಲಿಲ್ಲ. ವಿರಾಮದ ವೇಳೆಯಲ್ಲಿ ಸೊಗಸಾಗಿ ಜನಿವಾರಗಳನ್ನು ತಯಾರಿಸುತ್ತಿದ್ದರು. ಅತಿಥಿಸತ್ಕಾರದ ವೈಭವ ಅದೆಷ್ಟಿತ್ತೆಂದರೆ 'ಸಂಕೇತಿಗಳ ಮನೆಯ ಊಟ' ಎಂದರೆ ಅವರು ಬಡಿಸುವಷ್ಟು ತಿಂದು ಅರಗಿಸಿಕೊಳ್ಳುವುದು ಹೇಗಪ್ಪ ಎಂದು ಅಂಜುತ್ತಿದ್ದರು. ಇಂತಹ ಅನೇಕ ವೈಶಿಷ್ಟ್ಯಗಳು, ಕುತೂಹಲಕಾರಿ ಸಂಗತಿಗಳು ಈ ಸಂಪುಟದಲ್ಲಿ ತುಂಬಿ ಮೆರೆಯುತ್ತಿವೆ.

ಅಪೂರ್ವವಾದ ಓಜಸ್ಸು ತೇಜಸ್ಸುಗಳು

ವಿಜಯಾಹರನ್ ಅವರ ಈ ಅನೂಚಾನವು, ಸಂಕೇತಿ ಕೃಷಿಜೀವನದ ಸಮಗ್ರವಾದ 'ವಿವರಣಾತ್ಮಕ ವಸ್ತುಸೂಚಿ'ಯಾಗುವಂತೆ, 'ಸಂಕ್ಷಿಪ್ತ ವಿಶ್ವಕೋಶ'ವಾಗುವಂತೆ ರೂಪುತಳೆದಿದೆ ಎಂದು ಹೇಳಿದರೆ ತಪ್ಪಾಗುವುದಿಲ್ಲ. ಅದಕ್ಕಿರುವ ಆಯಾಮಗಳು ಬಹುಮುಖವಾಗಿವೆ. ಸಂಕೇತಿ ಸಮುದಾಯವನ್ನು ಕುರಿತು ಬಿಡಿಬಿಡಿಯಾದ ಕೃತಿಗಳನ್ನು ರಚಿಸಲು ಆಸೆ ಪಡುವವರಿಗಾಗಲಿ, ಸಂಶೋಧನಪ್ರಬಂಧಗಳನ್ನು ಮಂಡಿಸಲು ಹಂಬಲಿಸುವವರಿಗಾಗಲಿ, ವಿಪುಲವಾದ ಸಾಮಗ್ರಿಯಿದೆ ಎಂಬುದನ್ನು ಈ ಸಂಪುಟವು ಅವರಿಗೆ ಮನವರಿಕೆ ಮಾಡಿಕೊಡುತ್ತದೆ. ಇಲ್ಲಿರುವ ಸಂಕೀರ್ಣ ಸ್ವರೂಪದಲ್ಲಿಯೇ ಅದರ ಅಂತಃಶಕ್ತಿಯು ಅಡಗಿದೆಯೆಂಬುದನ್ನು ಮರೆಯುವಂತಿಲ್ಲ. ನಿಯತಕಾಲಿಕೆಗಳು, ಸ್ಮರಣಸಂಚಿಕೆಗಳು ಕಾಲಗರ್ಭದಲ್ಲಿ ಮರೆಯಾಗಿಬಿಡುತ್ತವೆ. ಆದರೆ ಅವುಗಳ ಹೆಸರುಗಳು ಅಳಿಯದಂತೆ ಮಾಡಿರುವ, ಅವುಗಳ ಸಾರವತ್ತಾದ ಸಂಗತಿಗಳು ದೀರ್ಘಕಾಲ ಉಳಿಯುವಂತೆ ಮಾಡಿರುವ, ವಿಜಯಾಹರನ್ ಅವರ ಕಳಕಳಿಯನ್ನು ವಿಶೇಷವಾಗಿ ಮೆಚ್ಚಿಕೊಳ್ಳಬೇಕಾಗಿದೆ. ಅವರು ತಮ್ಮ ಅಧ್ಯಯನಶೀಲತೆ, ಸಹೃದಯತೆ, ವಿಮರ್ಶನ ಪ್ರಜ್ಞೆ, ಉಚಿತಾನುಚಿತ ವಿವೇಕ ಮುಂತಾದುವೆಲ್ಲವನ್ನೂ ಜಾಗೃತವಾಗಿಟ್ಟುಕೊಂಡಿದ್ದು, ಈ ಸಂಪುಟಕ್ಕೆ ಅಪೂರ್ವವಾದ ಓಜಸ್ಸು ತೇಜಸ್ಸುಗಳನ್ನು ಆವಾಹನೆ ಮಾಡಿದ್ದಾರೆ.

ಮುಡಿಯುವ ಭೋಗಿಗಳು

ಆಕಾಶವಾಣಿಯ ನಿರ್ದೇಶಕರಾಗಿ ಸೇವೆಸಲ್ಲಿಸುತ್ತ ಡಾ|| ವಿಜಯಾಹರನ್ ಅವರು ಒಳ್ಳೆಯ ಹೆಸರು ಗಳಿಸಿದ್ದಾರೆ. ಕನ್ನಡಸಾಹಿತ್ಯರಂಗದಲ್ಲಿಯೂ ಹೆಚ್ಚಿನ ಸಾಧನೆ ಮಾಡಿದ್ದಾರೆ. ಕತೆಗಾರ ಆನಂದರನ್ನು ಕುರಿತು ಸಂಶೋಧನೆ ನಡೆಸಿ, ಡಾಕ್ಟರೇಟ್ ಪ್ರಶಸ್ತಿಯನ್ನು ಪಡೆದುಕೊಂಡಿದ್ದಾರೆ. ಆ ಸಂಶೋಧನ ಪ್ರಬಂಧವನ್ನು ಪ್ರಕಟಿಸಿಯೂ ಇದ್ದಾರೆ. ತರುವಾಯದಲ್ಲಿ 'ಆಲೋಕ' ಎಂಬ ಹೆಸರಿನಲ್ಲಿ ಸಾಹಿತ್ಯವಿಮರ್ಶೆಗೆ ಸಂಬಂಧಿಸಿದ ಲೇಖನಗಳ ಸಂಕಲನವೊಂದನ್ನು ಹೊರತಂದಿದ್ದಾರೆ. 'ಕಟ್ಟಿಯುಮೇನೋ ಮಾಲೆಗಾರನ ಪೊಸಬಾಸಿಗಂ ಮುಡಿವ ಭೋಗಿಗಳಿಲ್ಲದೆ ಬಾಡಿಪೋಗದೇ' ಎಂಬ ಜನ್ನಕವಿಯ ಮಾತನ್ನಿಲ್ಲಿ ನೆನೆಯಬೇಕು. ಸಂಕೇತಿ ಸಾಹಿತ್ಯೋದ್ಯಾನದಿಂದ ವಿಜಯಾಹರನ್ ಅವರು ಪರಿಮಳಪೂರ್ಣವಾದ ಕುಸುಮಗಳನ್ನೇ ಆಯ್ದು ಸುಂದರವಾದ ಮಾಲೆಯೊಂದನ್ನು ಪೋಣಿಸಿಕೊಟ್ಟಿದ್ದಾರೆ. ಅವೆಲ್ಲ ಅನೂಚಾನ ಕುಸುಮಗಳು; ತತ್ಫಲವಾದ ಮಾಲೆಯೂ ಅನೂಚಾನವಾದುದು. ಅನೂಚಾನವಾದುದಕ್ಕೆ ಎಂದಿಗೂ ಅಳಿವಿಲ್ಲ, ಬಾಡುವ ಭಯವಿಲ್ಲ. ಅದು ಮಂದಾರ, ಸಂತಾನಕದಂತೆ ಎಂದಿಗೂ ಬಾಡದ ದೇವಲೋಕದ ಕುಸುಮ. ಸಹೃದಯರು ಅದನ್ನು ಅನೂಚಾನವಾಗಿ ಮುಡಿಯುತ್ತ ಮಾಲೆಗಾರ್ತಿ ವಿಜಯಾಹರನ್ ಅವರ ಕೌಶಲವನ್ನು ನಿರಂತರವಾಗಿ ಪ್ರಶಂಸಿಸುತ್ತಲೇ ಇರುತ್ತಾರೆ. ಹಿಂದಿನಿಂದಲೂ ಪರಂಪರೆಯಾಗಿ ನಡೆದುಬಂದ ವಿಚಾರವು ಅನೂಚಾನವೆನಿಸುತ್ತದೆ. ಅಂತಹ ಪರಂಪರೆಗೆ ಸೋಲುಂಟೆ ! ಈ ಸತ್ಕಾರ್ಯವನ್ನು ನೆರವೇರಿಸಿ ಕೊಟ್ಟಿರುವ ವಿಜಯಾ ಹರನ್ ಅವರಿಗೆ ಕನ್ನಡಿಗರೆಲ್ಲರ ಪರವಾಗಿ ವಿಶೇಷವಾದ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಅವರ ಮಹತ್ಕಾರ್ಯಕ್ಕೆ ಬೆನ್ನೆಲುಬಾಗಿ ನಿಂತ ಅವರ ಪತಿ ಡಾ|| ಪ್ರಣತಾರ್ತಿಹರನ್ ಅವರನ್ನು

ಮೆಚ್ಚಿಕೊಳ್ಳಬೇಕಾಗಿದೆ. 'ಸತಿಪತಿಗಳೊಂದಾದ ಭಕ್ತಿ ಹಿತವಾಗಿಪ್ಪುದು ಶಿವಂಗೆ' ಎಂಬ ದೇವರದಾಸಿಮಯ್ಯನ ವಚನವನ್ನು ನೆನೆಯುತ್ತ, ಆ 'ಭಲೇಜೋಡಿ'ಗೆ ಮತ್ತೆ ಮತ್ತೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

ತಾಪತ್ರಯಕ್ಕೆ ತುತ್ತಾಗಬಾರದು

ವೇದಶಾಸ್ತ್ರಪುರಾಣಗಳನ್ನು ಅಧ್ಯಯನ ಮಾಡಿದ್ದಾಯಿತು. ಕೃಷಿ ಮಾಡಿದ್ದಾಯಿತು. ಆಧುನಿಕ ವಿದ್ಯೆಗಳಿಗೆ ತೆರೆದುಕೊಂಡದ್ದಾಯಿತು. ಜೀವನೋಪಾಯವನ್ನು ಅರಸಿ ದೇಶವಿದೇಶಗಳಲ್ಲೆಲ್ಲ ಹರಡಿಕೊಂಡದ್ದಾಯಿತು. ಏನಾದರೇನು, 'ಎಲ್ಲಾರು ಮಾಡುವುದು ಹೊಟ್ಟೆಗಾಗಿ, ಗೇಣು ಬಟ್ಟೆಗಾಗಿ' ಎಂದು ಕನಕದಾಸರು ಹಾಡಿಲ್ಲವೇ! ಮಹಾರಾಜನಾಗಿ ಸಿಂಹಾಸನದ ಮೇಲೆ ಮಂಡಿಸುವುದು, ಸನ್ಯಾಸಿಯಾಗಿ ಕಾವಿ ಸ್ವೀಕರಿಸುವುದು ಎಲ್ಲವೂ ಹೊಟ್ಟೆಗಾಗಿ ಗೇಣುಬಟ್ಟೆಗಾಗಿ ಎಂದು ಅವರು ಹೇಳುವಾಗ ಮೈ ಜುಂ ಎನ್ನುತ್ತದೆ. ಹೊಟ್ಟೆಬಟ್ಟೆಗಳಿಗಾಗಿ ಸಂಕೇತಿಗಳು ಪಟ್ಟಪಾಡು ಪರಮ ಪುರುಷಾರ್ಥವೆನಿಸಿದ ಮೋಕ್ಷಸಾಧನೆಯಲ್ಲಿ ಮುಕ್ತಾಯವಾಗಬೇಕಲ್ಲವೆ? ಈ ಸಂಸಾರಪ್ರವಾಹವನ್ನು ಈ ಜನ್ಮದಲ್ಲಿಯೇ ದಾಟಿಬಿಡಬೇಕು. ಮತ್ತೆಮತ್ತೆ ಈಜಿಗೆ ಬೀಳುವ, ದಾಟಲಾಗದೆ ಗೋಳಾಡುವ ತಾಪತ್ರಯಕ್ಕೆ ತುತ್ತಾಗಬಾರದು. ಮುಕ್ತಿಯ ಕರೆಗೆ ಓಗೊಡದೆ ಮೈಮರೆಯಬಾರದು. ಈ ಸಂಪುಟದ ಆರಂಭದಲ್ಲಿರುವ ಮತ್ತೂರು ನಂದ ಅವರ 'ನನ್ನ ಊರು' ಎಂಬ ಕವಿತೆಯ ನಾಲ್ಕು ಪಾದಗಳನ್ನು ಇಲ್ಲಿ ಬರೆದು ವಿರಮಿಸುತ್ತೇನೆ:

ಮೌನದಲಿ ಹರಿದಿರುವ ಪುಟ್ಟೊಂದು ನದಿಯಿಹುದು
ಕನಸಿನೂರಿಗೆ ದೋಣಿ ಇಲ್ಲಿಂದಲೇ |
ಇದು ಕಡೆಯ ದಾಟಂತೆ ಮತ್ತೆ ಇತ್ತಿಲ್ಲಂತೆ
ಕರೆ ಬಂತು ಇದೊ ನೇರ ಅಲ್ಲಿಂದಲೇ ||

ದೇಶೀಯ ವಿದ್ಯಾಶಾಲೆ ಕಾಲೇಜು
ಶಿವಮೊಗ್ಗ

ಪ್ರೊ. ಎಲ್.ಎಮ್.ಎಲ್. ಶಾಸ್ತ್ರೀ
ಕನ್ನಡ ಪ್ರಾಧ್ಯಾಪಕರು (ನಿವೃತ್ತ)

ಸಂಕೇತಿ ಕೃಷಿಯ ವಿಭಿನ್ನ ನೆಲೆಗಳು

ಸಂಕೇತಿ ಕೃಷಿ ಕುರಿತ ಎರಡು ಸಂಪುಟಗಳು ಹೊರಬರುತ್ತಿವೆ ಎಂಬ ವಿಚಾರ ತಿಳಿದಾಗ ನನಗೆ ತುಂಬಾ ಕುತೂಹಲಮೂಡಲಿಲ್ಲ. ಏನು ಮಹಾ ನಮಗೆ ತಿಳಿಯದ ಹೆಚ್ಚಿನ ವಿಚಾರ ಸಿಕ್ಕೀತು ಎಂಬ ಭಾವವಿತ್ತು. ಆದರೆ ಈಗ ಈ ಸಂಪುಟ ನೋಡಿದ ಮೇಲೆ ಇದು ನಿಜವಾಗಿಯೂ ಅದ್ಭುತ ಎನಿಸಿದೆ. ಎಲ್ಲ ಜನಾಂಗದ ರೈತಾಪಿ ಜನಗಳೂ ಓದಲೇಬೇಕಾದ ಕೃತಿಯಾಗಿದೆ. ರೈತರಿಗೆ ಮಾರ್ಗದರ್ಶಕ ಕೃತಿಯೂ ಆಗಿದೆ. ಸಂಕೇತಿ ಲೇಬಲ್ ತೆಗೆದು ಲೋಕಸಾಧಾರಣಗೊಳಿಸಿ ಕರ್ನಾಟಕದ ಯಾವುದಾದರೂ ವಿಶ್ವವಿದ್ಯಾಲಯವು ಬೃಹತ್ಪ್ರಮಾಣದಲ್ಲಿ ಪ್ರಕಟಿಸುವಂತಾಗಲೆಂದು ಆಶಿಸುತ್ತೇನೆ.

ವ್ಯಕ್ತಿಗಳ ಸಂದರ್ಶನ, ಅನುಭವಗಳ ದಾಖಲಾತಿ ತುಂಬಾ ಕಷ್ಟಸಾಧ್ಯವಾದ ಕೆಲಸ. ಅದೂ ನೂರಾರು ಊರುಗಳಿಗೆ ಹೋಗಿ ವಿಷಯ ಸಂಗ್ರಹಿಸುವ ಕಾರ್ಯವು ಒಂದೆರಡು ತಿಂಗಳುಗಳಲ್ಲಿ ಆಗುವ ಕೆಲಸವೂ ಅಲ್ಲ. ಅದೂ ಸ್ವಾರ್ಥರಹಿತವಾದ ಕೆಲಸ. ಇದಕ್ಕೆ ಕಮಿಟ್‌ಮೆಂಟ್ ಬೇಕು. ಇಂಥ ಕೆಲಸ ಪರಿಪೂರ್ಣವಾಗಿ ಇಲ್ಲಿ ಸಾಧ್ಯವಾಗಿದೆ. ಮೊದಲ ಪುಟದಲ್ಲಿ ಹಾಕಿಕೊಂಡ "ಈ ಕಲೆ ಹೇಗೆ ಅವರಿಗೆ ಬಂತು? ಕೃಷಿಯಲ್ಲಿ ಹೊಸದೇನಾದ್ರೂ ಇದೆಯೇ? ಕ್ಷಾತ್ರತೇಜದ ಆಜಾನುಬಾಹುತ್ವ ಮುಂದಿನ ಪೀಳಿಗೆಗೆ ನಶಿಸಿದ್ದು ಹೇಗೆ" ಇತ್ಯಾದಿ ಪ್ರಶ್ನೆಗಳಿಗೆ ಮುಂದಿನ ಪುಟಗಳಲ್ಲಿ ಸೂಕ್ತ ಉತ್ತರ ದೊರೆತಿದೆ. ತಾಂತ್ರಿಕತೆಗಿಂತ 'ಕೃಷಿಯು ಬದುಕಿಗೆ ಅಂಗ' ಎಂಬ ಹಿನ್ನೆಲೆಯಲ್ಲಿ ಸಂದರ್ಶನ ನಡೆದಿದೆ. ಇದು ಸರಿಯಾಗಿದೆ. ತಾಂತ್ರಿಕತೆಯ ಹಿನ್ನೆಲೆಯಲ್ಲಿ ದಾಖಲಾತಿ ಆಗಬೇಕಾದರೆ ಅಗ್ರಿಕಲ್ಚರಲ್ ಕಾಲೇಜಿನ ಪ್ರಾಧ್ಯಾಪಕರನ್ನು ಸಂದರ್ಶಿಸಿದರೆ ಸಾಕಲ್ಲವೆ? ಬದುಕಿಗೆ ಅಂಗ ಎಂಬ ಹಿನ್ನೆಲೆಯಲ್ಲಿ ಸಂದರ್ಶನವಾಗಿರುವುದರಿಂದ ನಮ್ಮ ಜನಾಂಗದ ಅಧ್ಯಯನಕ್ಕೆ ಪೂರಕವಾಗಿದೆ.

ಪ್ರಧಾನವಾಗಿ ಐದಂಶಗಳನ್ನು ನಾವಿಲ್ಲಿ ಗಮನಿಸಬಹುದು: ೧. ಸಂಕೇತಿಗಳ ಕೃಷಿ, ೨. ಗ್ರಾಮೀಣ ಸಂಕೇತಿ ಜನಾಂಗದ ಬದುಕು, ೩. ಸಂಕೇತಿ ಜನಾಂಗದ ಶಕ್ತಿ-ಸಾಮರ್ಥ್ಯ, ನಿಷ್ಠೆ, ೪. ಕೃಷಿಯಲ್ಲಿ ಪ್ರಯೋಗಶೀಲತೆ-ಹೊಸತನ, ೫. ಆದರ್ಶ. ಜೊತೆಗೆ ನಾನು ನಿಮ್ಮ ಗಮನ ಸೆಳೆಯುವ ಅಂಶಗಳು: ಕೃಷಿಕರ ಅನುಭವಗಳು, ಮೆಲುಕು ಹಾಕುವಂಥ ಘಟನೆಗಳು, ವಿಶಿಷ್ಟ ಹಳ್ಳಿಗಳು, ಸಂಕೇತಿತನ, ಸಂಗೀತ/ವೇದ. ಕೃಷಿ, ಆದರ್ಶ ಮತ್ತು ಸ್ವ-ಅನುಭವಗಳನ್ನು ಕುರಿತು ದಾಖಲಾದ ಕೆಲವು ಮಾತುಗಳ ಕಡೆ ನಿಮ್ಮ ಗಮನ ತರಲಾಶಿಸುತ್ತೇನೆ.

'ಕೃಷಿಯ ಚಿತ್ರಗಳು' ಅಂತ ಈ ಪುಸ್ತಕ ನೋಡಲು ತೆಗೆದೆ. ಪ್ರಧಾನವಾಗಿ ನಾನು ಕಂಡದ್ದು ಕೃಷಿಕರ ಚಿತ್ರಗಳು. ಈ ಹೊತ್ತಿಗೆಗೆ 'ಕೃಷಿ ಕಥಾಕೋಶ' ಅಂತ ಹೆಸರಿಡಬಹುದಿತ್ತು. ಅಷ್ಟು ಬದುಕಿನ ಕಥೆಗಳು ಇಲ್ಲಿವೆ. ಒಳಹೊಕ್ಕಾಗ ಕಾಣಿಸಿದ್ದು ಇಡೀ ಸಂಕೇತಿ ಸಮುದಾಯದ ಹಾಗೂ ಸಂಕೇತಿಗಳ ಗ್ರಾಮೀಣ ಬದುಕಿನ ರೋಚಕ ವಿವರಗಳು. ಸಂಕೇತಿ ಜನಾಂಗವೇ ನನ್ನ ಕುಟುಂಬ ಎಂಬ ಭಾವದಿಂದ ಓದಿದರೆ ಸಂಕೇತಿಗಳ ಹಿರಿಯರ ಹಿರಿತನದ ಪರಿಚಯದಿಂದ ರೋಮಾಂಚನವಾಗದೆ ಇರದು. ಸಂಕೇತಿ ಬದುಕನ್ನು ಅಂಗೈ ಹಿಡಿಯಲ್ಲಿ ಅಡಗಿಸಿಕೊಟ್ಟಿರುವ ಸಮುದಾಯ ಅಧ್ಯಯನ ಕೇಂದ್ರದವರಿಗೆ ಎಷ್ಟು ವಂದನೆ ಸಲ್ಲಿಸಿದರೂ ಕಡಿಮೆಯೇ.

ಇಲ್ಲಿನ ಅಧ್ಯಯನ ಒಂದು ಗಾಬರಿಯ ಅಂಶವನ್ನು ಸೂಚಿಸುತ್ತಿದೆ. ಅದು 'ಸಂಕೇತಿ ಗ್ರಾಮಗಳು ಮಾಯವಾಗುವ ದಿನಗಳು ಹತ್ತಿರ ಬರುತ್ತಿವೆ' ಎಂಬುದು. ಉದಾಹರಣೆಗೆ: ಹಾನಗಲ್ಲಿನಲ್ಲಿ ೬೦ ಕುಟುಂಬಗಳಿದ್ದುದು ೧೬ಕ್ಕೆ ಬಂದಿದೆ. ಕೌಶಿಕದಲ್ಲಿ ೭೦೦ ಕುಟುಂಬಗಳಿದ್ದುದು ೧೬ಕ್ಕೆ ಬಂದಿದೆ. ತೇಗನಹಳ್ಳಿ: ೧೦>೬; ಬೆಟ್ಟದಪುರ: ೭೫>೭; ಹಳ್ಳಿ ಮೈಸೂರು: ೪೫>೮; ಜೋಡಿ ಕೃಷ್ಣಾಪುರ : ೩೩>(೩+೩)=೬; ದೊಡ್ಡಹನಸೋಗೆ : ೬೦>೨; ಬಸವಾನಿ: ೨೦>೨; ಬೆಟ್ಟದಪುರದಲ್ಲಿ ೩೦೦ ಇದ್ದದ್ದು ೭೦ ಆಗಿ ಈಗ ಬೆರಳೆಣಿಕೆಯಷ್ಟು ಮಾತ್ರ. [ಮತ್ತೂರಿನಲ್ಲಿ ಮಾತ್ರ ಏರಿಕೆಯಾಗಿದೆ. ಹೊರಗಡೆ ಕೆಲಸದಲ್ಲಿರುವವರು ಕೂಡ ವಿ.ಆರ್.ಎಸ್. ಪಡೆದು ಮತ್ತೂರಿಗೆ ಹಿಂತಿರುಗಲು ಆಶಿಸುತ್ತಿದ್ದಾರೆ ! ೪೦ ಕುಟುಂಬಗಳಿದ್ದುದು ಎಂಬತ್ತಾಗಿದೆ.]

ಎಲ್ಲ ಸಂಕೇತಿಗಳು ಈ ಪುಸ್ತಕ ಪೂರ್ತ ಓದಬೇಕು. ಎಲ್ಲ ಮನೆಗಳಲ್ಲಿ ಈ ಪುಸ್ತಕ ಇರಲೇಬೇಕು. (ಯೋಗ್ಯತೆ ಇರುವವರು ಸದಸ್ಯರಾಗಿ ಪುಸ್ತಕ ಸಂಗ್ರಹಿಸಬೇಕು.) ಇಡೀ ಕೃತಿಯಲ್ಲಿ ತಿಲಕಪ್ರಾಯವೂ ಭೂಷಣವೂ ಆದ ಭಾಗ ಶ್ರೀ ಅಶ್ವತ್ಥನಾರಾಯಣ ಅವಧಾನಿಗಳೊಡನೆ ನಡೆಸಿದ ಸಂಭಾಷಣೆ. ಸಾಮಾಜಿಕ ಹಾಗೂ ಧಾರ್ಮಿಕ ಸಂಗತಿಗಳು ಸಂಕ್ಷಿಪ್ತವೂ ಮೇಲ್ಮಟ್ಟದ್ದಾಗಿಯೂ ಇವೆ. ನನಗೆ ಹೆಚ್ಚು ಖುಷಿಕೊಟ್ಟ ಸಂವಾದ (ಬದುಕಿನ ಅನುಭವಗಳ ಚಿತ್ರ) ಕ್ಯಾಪ್ಟನ್ ವೆಂಕಟೇಶ್ ಮತ್ತು ವೀಣಾರೊಂದಿಗೆ ಮತ್ತು ಗಮನಾರ್ಹವಾದ ಮೂರನೆಯ ಸಂವಾದ ಬಿ.ಎನ್.ವಿ. ಅವರೊಡನೆ. ಅಲ್ಲದೆ ಓದಲೇಬೇಕಾದ ಭಾಗ - ಈ ಕೃತಿಗೆ ಪೂರಕವಾಗಿರುವ ಉಪಸಂಹಾರದ ಪುಟಗಳು.

ಸಂಕೇತಿ ಜನಾಂಗದ ವಿಶಿಷ್ಟ ಹಳ್ಳಿಗಳೊಂದೆರಡನ್ನು ಮೊದಲಿಗೆ ಸ್ಮರಿಸುತ್ತೇನೆ. ಮೊದಲಿಗೆ ಹಳ್ಳಿಮೈಸೂರು, ನಂತರ ಸಾಲಿಗ್ರಾಮ, ಮೂರನೆಯದು ಮತ್ತೂರು. ನನಗೆ ಹೆಚ್ಚು ಖುಷಿಕೊಟ್ಟ ಸ್ಮರಣೀಯ ವ್ಯಕ್ತಿಗಳು ಕ್ಯಾಪ್ಟನ್ ವೆಂಕಟೇಶ್ ಮತ್ತು ಅವರ ಪತ್ನಿ ವೀಣಾ ಹಾಗೂ ಬೆಂಗಳೂರಿನ ಡಾ. ರಾಮಕೃಷ್ಣ.

ಭೂಮಿ ಹಸನುಮಾಡಿ, ನೀರಿಗಾಗಿ ಭಾವಿತೋಡಿ, ನೀರು ಹೊತ್ತು ಹಾಕಿ, ಏತ ಹೊಡೆದು, ತೋಟ ಬೆಳೆಸಿ, ಹಂಬು ಹಾಕಿ, ಸಾಕಿ, ಮಾರಿ - ಇತ್ಯಾದಿ ಕಷ್ಟದ ಬದುಕು ಎಲ್ಲರದಾದ್ದರಿಂದ ಓದುತ್ತ ಓದುತ್ತ ಇದೆಲ್ಲ ಏನು ಮಹಾ ಸಾಧಾರಣ ಸಂಗತಿ ಅನ್ನಿಸುತ್ತೆ. ಇಡೀ ಸಂಕೇತಿ ಜನಾಂಗದ ಸರ್ವೇಸಾಧಾರಣ ಅನುಭವಗಳಿವು. ಆದರೆ ಅನುಭವಿಸಿದವರಿಗೆ ಗೊತ್ತು ಅದರ ಕಷ್ಟ. ಸರಿಯಾಗಿ ಅನ್ನಾಹಾರವಿಲ್ಲದ, ಗೋಳಿನ, ಕಷ್ಟದ, ಬಡತನದ ಬದುಕಿನ ಹಿನ್ನೆಲೆಯ ಗಟ್ಟಿತನ ವಿಸ್ಮಯಕರವಾದದ್ದು. ಅಂದು ದೈಹಿಕ ಶ್ರಮ ಜಾಸ್ತಿ ಇತ್ತು. ಪ್ರತಿಫಲ ಕಡಿಮೆ ಇತ್ತು. ಇಂದು ಬಾಗಾಯ್ತು ಪ್ರಮಾಣ ಜಾಸ್ತಿ. Drip Irrigation ಹಾಗೂ ಕೃತಕ ಗೊಬ್ಬರಗಳ ಬಳಕೆಯುಂಟು. ಇಳುವರಿ ಹೆಚ್ಚು. ಆದಾಯ ಪ್ರಮಾಣ (ಬೆಳೆ) ಜಾಸ್ತಿ. ಜೊತೆಗೆ Commercial cropಗಳೂ ಉಂಟು.

ವ್ಯವಸಾಯ ಯಾವದಡ್ಡನೂ ಮಾಡಬಹುದಾದ ಕೆಲಸ ಎಂದು ಬೀರೂರಿನ ಶಿವರಾಮಶಾಸ್ತ್ರಿ ಹೇಳುತ್ತಾರೆ. ಅದು ಸರಿಯಲ್ಲ. ಅವರನ್ನು ನಾನು ೬೦ ವರ್ಷದಿಂದ ಬಲ್ಲೆ. ವಿದ್ಯಾವಂತರು, ಚಿಂತನೆಯುಳ್ಳವರು, ಶ್ರಮಜೀವಿ, ಕಮಿಟ್‌ಮೆಂಟ್ ಇರುವ ವ್ಯಕ್ತಿ, ಬದುಕನ್ನೇ ದ್ವಿತೀಯವನ್ನಾಗಿ ತಿಳಿದವರು, ಕಡುಬಡತನ ಕಂಡವರು. ಇಂದು ಅವರ ಮಕ್ಕಳು ಶ್ರೀಮಂತ ಪುತ್ರರು ! Inherited ಆಗಿರುವ ಅವರ ಸತ್ವ ಅವರಿಗಿರಿವಿಲ್ಲ, ಅಷ್ಟೆ.

ಕೃಷ್ಣಸ್ವಾಮಿ ಶಿವಮೊಗ್ಗೆಯ ಡಿ.ವಿ.ಎಸ್. ಶಾಲೆಯಲ್ಲಿ ಅಧ್ಯಾಪಕರಾಗಿದ್ದರು. ಎಂಟು ಕಿ.ಮೀ. ದೂರದ ಹೊಸಹಳ್ಳಿಯಲ್ಲಿ ಮನೆಮಾಡಿ ಓಡಾಡಿಕೊಂಡಿದ್ದೇ ಕೃಷಿ ಮಾಡಿದವರು. ಸಂಬಳ ಸಾಲದೆಂದು ಈ ಜಮೀನಿನ ಕೆಲಸ. ತೋಟ ಬೆಳೆಸಿ ಬಡತನವನ್ನು ಪೂರ್ಣ ನೀಗಿಕೊಂಡ

ಸಾಹಸಿ, ಮತ್ತೂರು ಹೊಸಹಳ್ಳಿಗಳ ನಡುವೆ ಸಂಪರ್ಕ ಸೇತುವೆಯೊಂದನ್ನು ಕಟ್ಟಿಸಿದ ಪುಣ್ಯಜೀವಿ. ಶ್ರಮ, ನಿಷ್ಠೆ ಇದ್ದರೆ ಏನೂ ಸಾಧಿಸಬಹುದೆಂದು ತೋರಿಸಿದ ಸಾಧಕ. ಇಂಥ ವ್ಯಕ್ತಿತ್ವಕ್ಕೆ ಅಪವಾದಗಳೂ ಈ ಊರಲ್ಲುಂಟು. ಸಂಕೇತಿಗಳು ದೈಹಿಕ ಶ್ರಮಕ್ಕೆ ಸಂಕೇತಗಳಲ್ಲ ಎಂಬ ರಾಜಾರಾಮಮೂರ್ತಿಯವರ ಮಾತು ಬದಲಾದ ಇಂದಿನ ಜನಾಂಗದ ಮನೋಭಾವವನ್ನು ಕುರಿತದ್ದೆನ್ನಬಹುದಷ್ಟೆ.

ಕೃಷಿಯಲ್ಲಿ ಸಂಕೇತಿ ಕೃಷಿ ಅಂತ ಪ್ರತ್ಯೇಕ ಮಾಡಲು ಬರುವುದಿಲ್ಲ. ಆದರೆ ಸಂಕೇತಿಗಳ ಕೃಷಿ ಅಂತ ಬೇರೆಮಾಡಲು ಬರುತ್ತದೆ. ಯಾಕೆಂದರೆ ಅವರು ಏನು ಮಾಡಿದರೂ ಒಂದು ವಿಶಿಷ್ಟತೆ ಇದ್ದೇ ಇರುತ್ತೆ. ಅದ್ಭುತ ಇರುತ್ತೆ. ಅಂಥ ಕೆಲವು ಸಾಹಸಗಳನ್ನು ಮೆಲುಕು ಹಾಕುತ್ತೇನೆ. ವೇದವಿದ್ವಾಂಸರಾದ ಎಲ್.ವಿ. ಕೃಷ್ಣಮೂರ್ತಿಗಳು ಲಿಂಗದಹಳ್ಳಿಯಿಂದ ಹೊಸಹಳ್ಳಿಗೆ ಬಂದು ಕಾಡು ಕಡಿದು ಗದ್ದೆ ಮಾಡಿದ್ದು, ಲಿಂಗದಹಳ್ಳಿಯ ಸುಬ್ಬರಾಯರು ಕೆಮ್ಮಣ್ಣುಗುಂಡಿ ಸಮೀಪ ಕಾಡು ಕಡಿದು ಹಣ್ಣಿನ ತೋಟ ಮಾಡಿದ್ದು ಸಾಹಸಗಾಥೆ. ಹೊಸದಾಗಿ ಕಾಫಿ ತೋಟ ಮಾಡುವುದು ಬಹಳ ಕಷ್ಟದ ಕೆಲಸ. ಮಡಕೇರಿಯ ಕೆ.ಕೆ. ವಿಶ್ವನಾಥ್ ಹಾಗೆ ತೋಟ ಮಾಡಿದ್ದಲ್ಲದೆ ಜೊತೆಗೆ ನಾಲ್ಕಾರು ಎಸ್ಟೇಟ್‌ಗಳ ಮೇಲ್ವಿಚಾರಣೆಯನ್ನೂ ಮಾಡಿದ್ದಾರೆ. ಅಲ್ಲದೆ ಹೆಚ್ಚು ಸಂಖ್ಯೆಯಲ್ಲಿ ಹೂವಿನ ಬೆಳೆ ಬೆಳೆದಿದ್ದಾರೆ.

* * * * *

ಮೈಸೂರಿನ ಕ್ಯಾಪ್ಟನ್ ಕೆ.ಕೆ. ವೆಂಕಟೇಶ ಅವರು ನಿರಂತರ ಸಮುದ್ರಯಾನ ಮಾಡುತ್ತ ೬೮ ದೇಶಗಳ ದರ್ಶನಮಾಡಿರುವುದು, ಹಾಗೂ ಹತ್ತಾರು ವಿದೇಶಿ ಭಾಷೆ ಕಲಿತಿರುವುದು, ವೀಣಾ ವೆಂಕಟೇಶ್ ಪತಿಯ ಎಂಟು ತಿಂಗಳ ಅನುಪಸ್ಥಿತಿಯಲ್ಲಿ ತೋಟದ ನಿರ್ವಹಣೆ ಮಾಡಿದ್ದಲ್ಲದೆ ೬೦೦ ಕೆ.ಜಿ. ಟೀ ಬರ್ತಿದ್ದನ್ನ ೨೪,೦೦೦ ಕೆ.ಜಿ. ಬರುವಂತೆ ಅಭಿವೃದ್ಧಿಮಾಡಿದ್ದು ಅಸಾಧಾರಣ ಸಂಗತಿ. ಮೂರು ಮಿಲಿಯ ಟನ್ ಟೀ ಕಲಬೆರಕೆ ಅಂತ ರಷ್ಯಾದಿಂದ ವಾಪಸ್‌ಬಂದದ್ದು. ಇದರಿಂದ ಭಾರತದ ಟೀ ಬೆಳೆಗಾರರ ಸರ್ವನಾಶವಾಯಿತಂತೆ. ಬೆಂಗಳೂರಿನ ಡಾ. ಬಿ.ಆರ್. ರಾಮಕೃಷ್ಣ ಅವರು ೩/೪ ಎಕರೆ ಜಮೀನು ಕೊಂಡು ತೇಗದ ತೋಟ ಬೆಳೆಸಿ ಬೆಂಗಳೂರಿನಲ್ಲಿದ್ದೇ ನಿರ್ವಹಿಸಿದ್ದು ಸಾಹಸ. ಫಲ ೨೦ ವರ್ಷಕ್ಕೆ. ಖರ್ಚು ಪ್ರತಿ ವರ್ಷ ೩೬೦೦೦/-. ನಿರೀಕ್ಷೆ ೨೦,೦೦೦ ಘನ ಅಡಿ ಮರ x ೨೦೦೦ = ಒಟ್ಟು ಲಾಭ ೪ ಕೋಟಿ. ಆರ್.ಡಿ. ಮಾಡಿದರೆ ಬರಬಹುದಾದ ಹಣ ೧೨ ಲಕ್ಷ ಮಾತ್ರ. ಅವರು ಬೆಂಗಳೂರಿನಲ್ಲಿ ಔಷಧಿ ಸಸ್ಯಗಳಿಗಾಗಿ ಚಿಕ್ಕ ತೋಟ ಮಾಡಿದ್ದಾರೆ. - ೮೦೦ ನುಗ್ಗೆ, ಚೆರ್ರಿ, ಮಾವು, ನೇರಳೆ, ಚಕ್ಕೋತ, ಮೂಸಂಬಿ, ಹೇರಳೆಕಾಯಿ, ಸೀಬೆ, ದಾಳಿಂಬೆ, ಗೋಡಂಬಿ, ಅಂಜೂರ ಹಾಗೂ ಬಾಳೆಗಿಡಗಳು ! ಮೊಸಳೆಯ ಎಂ.ಎನ್. ಶ್ರೀನಿವಾಸಮೂರ್ತಿ ಅವರು ಬೋರೇಲಿ ಜಮೀನು ಮಾಡಿದ್ದು, ೨೦ ಹಸು ಸಾಕಿದ್ದು outstanding merit ಅನ್ನಿಸುತ್ತೆ. ಹನಸೋಗೆಯ ರಾಮಸ್ವಾಮಿಯವರನ್ನು ಬದನೆಕಾಯಿ ವಂಶಸ್ಥರು ಎಂದು ಕರೆಯುತ್ತಾರೆ. ಇದು ಹೆಮ್ಮೆಯ ಸಂಗತಿ. ಬದನೆಕಾಯಿ ಗಾತ್ರ ನೋಡಿ [ಅಡ್ಡೆಗೆ ಎರಡು ಮಾತ್ರ] ವಿಸ್ಮಿತರಾದ ಕೃಷ್ಣರಾಜ ಒಡೆಯರು ತಾವೇ ಅವರ ತೋಟಕ್ಕೆ ಬಂದು ಇವರಜ್ಜ ಚಿಕ್ಕರಾಮಸ್ವಾಮಯ್ಯನವರಿಗೆ ಶಾಲು ಹೊದಿಸಿ ಸನ್ಮಾನಿಸಿದರಂತೆ ! ಕೆರೆ ಕೆಳಗಿನ ೨೨ ಎಕರೆ ಜಮೀನು ದಾನಕೊಟ್ಟರಂತೆ. ಮತ್ತೂರಿನ ಕೆ.ಕೆ. ಸುಬ್ರಾಯ ಶಾಸ್ತ್ರಿ ಬರಿಗೈಲಿ ಈ ಊರಿಗೆ ಬಂದವರು. ಈಗ ಸಾಕಷ್ಟಿದೆ. ಬೇರೆಯವರಿಗಾಗಿ ೬೦ ಎಕರೆ ತೋಟ ಎಬ್ಬಿಸಿಕೊಟ್ಟಿದ್ದಾರಂತೆ !

ಗಮನಾರ್ಹ ಸಂಗತಿಗಳು ಮತ್ತು ವೈಜ್ಞಾನಿಕ ಬೇಸಾಯ: ಹೊಸಹಳ್ಳಿಯ ಎಲ್.ವಿ. ಸುಬ್ರಹ್ಮಣ್ಯ ಅವರು PWDನಲ್ಲಿ ಎಗ್ಸಿಕ್ಯೂಟಿವ್ ಇಂಜನಿಯರ್ ಆಗಿದ್ದು ಲಂಚದ ರಾಜಕೀಯಕ್ಕೆ ಬೇಸತ್ತು VRS ತಗೊಂಡು ಗದ್ದೆ ಮಾಡಿದವರು. ಈಗ ಮಗ ಮುರಳೀಧರ ನೋಡಿಕೊಳ್ಳುತ್ತಿದ್ದಾರೆ. ೧) ಹಳ್ಳಿಗರ ನೀರಾವರಿ ತೊಂದರೆ ನಿವಾರಣೆಗೆ ಕೋರ್ಟ್‌ನ ಸಹಾಯ ಪಡೆದವರು. ೨) ತೆಂಗಿನ ಮರಕ್ಕೆ ರೈನೋಸಿರಸ್ ದುಂಬಿಯ ಹತೋಟಿಗಾಗಿ ತೋಟಕ್ಕೆ ಟ್ಯೂಬ್‌ಲೈಟ್ ಹಾಕಿಸಿದವರು. ೩) ಒಂದು ಸಾರಿ ಗೊಬ್ಬರಕೊಡುವ ರೂಢಿ. ಅದನ್ನೇ ಸ್ಪ್ಲಿಟ್ ಮಾಡಿ ಎರಡು ಸಾರಿ ಕೊಡುವರು. ೪) ಗದ್ದೆಯಲ್ಲಿ ಸೋದರರ ಮೂರು ಮನೆಗಳಿರುವುದರಿಂದ ದರೋಡೆಕಾರರಿಂದ ರಕ್ಷಣೆಗಾಗಿ ಮೂರೂ ಮನೆಗೆ ಕಾಲಿಂಗ್ ವ್ಯವಸ್ಥೆ ಮಾಡಿರುವುದು. ಉತ್ತಮ ದರ್ಜೆಯ ಬಂದೂಕ ಸಹ ಇದೆ. ೫) ಓಪನ್ ಭಾವಿಗೆ ಹ್ಯಾಂಡ್‌ಪಂಪ್. ಇದರಿಂದ ಕೊಟ್ಟಿಗೆಗೆ ಮನೆಗೆ ಹಸುಗಳಿಗೆ ಪೈಪ್ ಮೂಲಕ ನೀರಿನ ವ್ಯವಸ್ಥೆ.

ಮತ್ತೂರಿನ ಗೋಪಾಲ ಅವಧಾನಿಯವರ ಸಾಹಸ ಗಮನಿಸಿ, ತಮ್ಮ ಟೈರ್ ಗಾಡಿಯ ಅಚ್ಚನ್ನು ಮಧ್ಯದಲ್ಲಿ ಡೊಂಕು ಮಾಡಿ ಸ್ವಲ್ಪ ಎತ್ತರವಾಗುವಂತೆ ಮಾಡಿಕೊಂಡಿದ್ದಾರೆ. ಜೊತೆಗೆ ಬೋರಿಂಗ್ ವ್ಯವಸ್ಥೆ ಇದ್ದುದರಿಂದ ಬೇರೆಯವರದಕ್ಕಿಂತ ನಾಲ್ಕುಪಟ್ಟು ಹೆಚ್ಚು ಭಾರ ಎಳೆಯಲು ಸಾಧ್ಯವಾಗಿದೆ. ಇವರಂತು ಇಂಜನಿಯರ್. ಆದರೆ ಇವರ ತಂದೆ ಇಂಜನಿಯರಿಂಗ್ ಮೈಂಡ್ ಇದ್ದವರಂತೆ. ಅಡಿಕೆ ಸುಲಿಯಲು ಯಂತ್ರ ಕಂಡುಹಿಡಿಯಲು ಯತ್ನಿಸಿ ವಿಫಲರಾದರು. ಆದರೆ ಹೋಳುಮಾಡುವ ಸಾಧನ ಕಂಡುಹಿಡಿದರು. ತುಂಬಾ ಒಳ್ಳೆಯದಾಯಿತು ಎಂದು ಸ್ಮರಿಸುತ್ತಾರೆ ಎಮ್.ಎನ್.ಗೋಪಾಲ ಅವಧಾನಿ. ಅವರು ಮೊದಲಿಗೆ ಟ್ರಾಕ್ಟರ್ ತಂದ ಮೇಲೆ ಇಡೀ ಊರಿನ ಉತ್ಪನ್ನ ಒಂದಕ್ಕೆರಡಾಯಿತಂತೆ. ಅಡಿಕೆ ಬೇಯಿಸುವ ಹಂಡೆ-ಒಲೆಯನ್ನು ರೂಪಿಸಿದ್ದಾರೆ, ಇದರಿಂದ ಬೇಯುವ ಕಾಲ ೨/೩ರಷ್ಟು ಕಡಿಮೆಯಾಗಿದೆ !

ಮಂಡಕ್ಕಿಯನ್ನು ಕಡಲೆ ಹೊಲದಲ್ಲಿ ಚೆಲ್ಲಿದರೆ ಅದರ ಆಸೆಗೆ ಬಂದ ಹಕ್ಕಿಗಳು ಕೀಟವನ್ನೂ ತಿಂದು ಕಡಲೆಗೆ ರಕ್ಷಣೆ ಕೊಡುತ್ತವೆ ಎನ್ನುತ್ತಾರೆ ಲಿಂಗದಹಳ್ಳಿಯ ನಾಗರಾಜ್ ಅವರು.

ಸಂಕೇತಿತನದ ಕೆಲ ಗೌರವದ ಸಂಗತಿಗಳನ್ನು ಮೆಲುಕುತ್ತೇನೆ. ಹಿಂದಿನ ತಲೆಮಾರಿನವರ ಕ್ಷಾತ್ರತೇಜ ಈಗೆಲ್ಲಿ? ಇದರ ಸಂಕೇತವಾಗಿ ಗೆಜ್ಜಗನಹಳ್ಳಿಯ ಮನೆಯಲ್ಲಿ ಕತ್ತಿ ಪಿತ್ರಾರ್ಜಿತವಾಗಿ ಬಂದಿದೆ. ಲಿಂಗದಹಳ್ಳಿಯ ನನ್ನ ತಾಯಿ ಮನೆಯಲ್ಲಿ ನಾಲ್ಕು ಕತ್ತಿಗಳು ಹಿಂದಿನಿಂದ ಬಂದಿದ್ದು ನವರಾತ್ರಿಯಲ್ಲಿ ಇತ್ತೀಚಿನವರೆಗೂ ಆಯುಧಪೂಜೆ ನಡೆಯುತ್ತಿತ್ತು.

ಕುಪ್ಪಹಳ್ಳಿಯ ವೆಂಕಟರಮಣಯ್ಯ ಸ್ಮರಿಸುತ್ತಾರೆ. ೫೦ ಸಾಲುಮರಗಳನ್ನು ನೆಡಿಸಿದ್ದು ಇಲ್ಲಿ ಮಾತ್ರ ! ಹಾಗೆಯೇ ನಾವು ಸ್ಮರಿಸಬೇಕಾದ ಇನ್ನೊಂದು ಹೆಸರು ೨೫೦-೩೦೦ ಸಾಲುಮರ ಬೆಳೆಸಿದ ಕೆ.ಆರ್. ನಗರದ ಶೀಗವಾಳು ಶಿವರಾಮಯ್ಯ ಅವರು. ಇವರ ಸಾಧನೆ ಸಾಲುಮರದ ತಿಮ್ಮಕ್ಕನದಕ್ಕಿಂತ ಕಡಿಮೆಯಾದ್ದಲ್ಲ.

* * * * *

ವ್ಯವಸಾಯದ ಜೊತೆ ವೇದಾಭ್ಯಾಸ ನಮ್ಮ ಕಾಲದ ರೂಢಿ ಎಂದು ಸ್ಮರಿಸುತ್ತಾರೆ ಬೆಟ್ಟದಪುರದ ೮೧ರ ವೃದ್ಧ ಕೃಷ್ಣಾವಧಾನಿಗಳು. ಇಲ್ಲಿನ ಪ್ರಭಾಶಂಕರ ಅವರೂ ಈ ಮಾತನ್ನು ಸ್ಮರಿಸುತ್ತಾರೆ. "ಒಟ್ಟಾಗಿ ತೋಟದಲ್ಲಿ ವೇದ ಕಲಿಯುತ್ತಿದ್ದೆವು ಮತ್ತು ಸಂಜೆಯಲ್ಲಿ ದೇವಾಲಯದಲ್ಲಿ ಕೂಡ ಒಟ್ಟಾಗಿ ಸಂಗೀತ ಕಲಿಯುತ್ತಿದ್ದೆವು." ವೇದ, ಸಂಸ್ಕೃತ ಮತ್ತು ಕೃಷಿಯ ಬಗೆಗೆ ಚಿಕ್ಕ ವಯಸ್ಸಿನಿಂದ ಆಸಕ್ತಿ ಬೆಳೆಸುತ್ತೇವೆ, ಕಲಿಸುತ್ತೇವೆ ಎನ್ನುತ್ತಾರೆ ಮತ್ತೂರಿನ ಎನ್.ಕೆ. ಚನ್ನಕೇಶವಯ್ಯ.

ನಮ್ಮ ಮೂಲ ಕಸುಬು ಕೃಷಿ, ಪೂರಕ ಕಲಿಕೆ ವೇದ ಮತ್ತು ಸಂಗೀತ. ಈ ಮೂರು ಸಂಕೇತಿಗಳ ಲಾಂಛನ ಎನ್ನುತ್ತಾರೆ - ಮತ್ತೂರಿನ ಅಶ್ವತ್ಥ ಅವಧಾನಿ. ಕೃಷಿ ಅಂದರೆ ತೋಟ ಮಾತ್ರ. ಉಳುಮೆ ಬ್ರಾಹ್ಮಣನಿಗೆ ನಿಷಿದ್ಧ ಎಂದೂ ಅವರು ಹೇಳುತ್ತಾರೆ. ವ್ಯವಸಾಯದ ಏಕತಾನತೆಯ ಬೇಸರ ಕಳೆಯಲು ಮಂತ್ರ ಕಲೀತೇನೆ, ಮೃದಂಗ ಬಾರಿಸುತ್ತೇನೆ. ಸ್ವಲ್ಪ ಪರಿಶ್ರಮವೂ ಇದೆ ಎನ್ನುತ್ತಾರೆ ಲಿಂಗದಹಳ್ಳಿಯ ಎಲ್.ಕೆ. ಗೋಪಾಲ ಅವರು.

* * * * *

ಎಲ್ಲ ಸಂಕೇತಿ ಕುಟುಂಬಗಳೂ ಒಂದಲ್ಲ ಒಂದು ಆದರ್ಶಕ್ಕೆ ಬದ್ಧವಾಗಿರುವುದು ಕಾಣುತ್ತದೆ. ಆ ಆದರ್ಶ ಭಿನ್ನವಾದರೂ ಶ್ರೇಷ್ಠತಮ ಬದುಕಿಗೆ ಪೂರಕವಾದುವೇ. ಇದನ್ನು ಕಾಣುವಾಗ ಹೆಮ್ಮೆ ಎನಿಸುತ್ತದೆ. ಬಡತನ, ಸಿರಿತನ ಎಂಬುದು ಗೌಣ. ನಾವು ದೇವರು ಮೆಚ್ಚುವಂತೆ ಬದುಕಿದ್ದೇವೆ/ ಬದುಕುತ್ತಿದ್ದೇವೆ ಎಂಬ ಸಂಗತಿ ಪೂರ್ಣ ತೃಪ್ತಿಕೊಡುವಂಥದಾಗಿದೆ. ಇದನ್ನು ಓದುವಾಗ ಸಂಕೇತಿಗಳ ಹಿರಿಮೆಯು ಈ ಆನುವಂಶಿಕ ಆದರ್ಶದ ಹಿರಿತನದಿಂದಾಗಿರಬಹುದೆನಿಸುತ್ತದೆ. ನೋಡಿ:

'ಅಡಿಕೆ ಬೇಯಿಸಲು ತಂದೆ ಒಲೆಮುಂದೆ ಕೂರ್ತಾರೇಂತ ಅಡಿಕೆ ಬೇಯಿಸುವುದನ್ನೇ ಬಿಟ್ಟುಬಿಟ್ಟೆ' ಎನ್ನುತ್ತಾರೆ ಹಾನಗಲ್ ಸೀತಾರಾಮಯ್ಯ. 'ತಂದೆತಾಯಿಯರೇ ನನಗೆ ದೇವರು. ಬೇರೆ ದೇವಸ್ಥಾನಕ್ಕೆ ನಾನು ಹೋಗೋಲ್ಲ' ಎನ್ನುತ್ತಾರೆ ಮತ್ತೂರಿನ ಎನ್.ಕೆ. ಚನ್ನಕೇಶವ. ಅವರ ಪಿತೃಪ್ರೇಮ ಅನ್ಯಾದೃಶ.

ಹಾನಗಲ್‌ನ ಈ ಹಿರಿಯರನ್ನು ನೋಡಿ. ಇದ್ದುದರಲ್ಲಿ ಜೀವಿಸಬೇಕು ಎನ್ನುವ ಸುಬ್ಬರಾಯರು; ನೆನಪು ಕಹಿ, ಅದು ನನಗೆ ಬೇಡ, ನಾನು ನಾಳೆಯದಕ್ಕೆ ಇಷ್ಟಪಡ್ತೀನಿ, ಕಳೆದದ್ದಕ್ಕೆ ಕೊರಗುವುದಿಲ್ಲ ಎನ್ನುವ ಹೆಚ್.ಎನ್. ಶಂಕರ್; ತಾಳ್ಮೆ ನನ್ನ ಆದರ್ಶ, ಕಷ್ಟ ಬಂದಾಗ ಕುಗ್ಗಲಿಲ್ಲ - ಎನ್ನುವ ಹೆಚ್.ಎನ್. ಸುಬ್ಬರಾಯರು.

ಹಳ್ಳಿಮೈಸೂರಿನ ಹೆಚ್.ಕೆ. ರಾಮಚಂದ್ರಯ್ಯ ಅವರು 'ಹೆಚ್ಚಿಗೆ ಆಸೆ ಇಟ್ಟುಕೊಂಡಿದ್ದರಿಂದ ತೀರ ಕೆಳಕ್ಕೆ ಬಂದೆ. ಈಗ ಆಸೆ ಇಟ್ಟುಕೊಳ್ಳಬಾರದೆಂಬ ಬುದ್ಧನ ತತ್ತ್ವ ಅಳವಡಿಸಿಕೊಂಡೆ.' 'ಎಲ್ಲರೊಳಗೊಂದಾಗಿ ಬದುಕಬೇಕೆಂಬುದೇ ನನ್ನ ಆದರ್ಶ' ಎಂದರೆ, 'ನನಗಿಂತ ಕೆಳಗಿರುವವರನ್ನು ನೋಡಿ ದೇವರು ನನ್ನನ್ನು ಚೆನ್ನಾಗಿಟ್ಟಿದ್ದಾನೆ ಅಂದುಕೊಳ್ಳುತ್ತೇನೆ' ಎನ್ನುತ್ತಾರೆ ಮುದ್ದಾಪುರದ ಎಮ್.ಎಸ್. ಕೇಶವಮೂರ್ತಿ.

ಸೋಮನಹಳ್ಳಿಯ ಸುಬ್ರಹ್ಮಣ್ಯ ಅವರು 'ತೋಟದಲ್ಲಾಗಲಿ, ಊರಲ್ಲಾಗಲಿ ಕಳ್ಳತನ ಸಾಧ್ಯವೇ ಇಲ್ಲ. ಇದಕ್ಕೆ ಕಾರಣ ನಮ್ಮ ಒಗ್ಗಟ್ಟು. ಏನು ಬೇಕಾದರೂ ಹೊರಗೆ ಬಿಸಾಕಿ ಹೋಗಿ, ಅದು ಅಲ್ಲೇ ಬಿದ್ದಿರುತ್ತೆ' ಅನ್ನುತ್ತಾರೆ. ನಾಗೇಂದ್ರ ಅವರು, 'ವಿಶ್ವಾಸದಿಂದ ಜನರನ್ನು ಗೆಲ್ಲಬೇಕು,

ವಿರಸದಿಂದಲ್ಲ' ಎನ್ನುತ್ತಾರೆ. ಸಾಲಿಗ್ರಾಮದ ನಾರಾಯಣಸ್ವಾಮಿಯವರು, 'ನಾನು ಯಾರೊಡನೆಯೂ ಜಗಳ ಆಡಿಲ್ಲ. ಯಾರ ಸಹಾಯಾನೂ ಪಡೆದಿಲ್ಲ. ಇನ್ನೊಬ್ಬರ ವಿಚಾರದಲ್ಲಿ ಮೂಗು ತೂರಿಸಿಲ್ಲ' - ಎನ್ನುತ್ತಾರೆ. ಎಂಥ ಸುಸಂಸ್ಕೃತ ನಡವಳಿ !

ಮುದ್ದಾಪುರದ ಎಂ.ಆರ್. ಚನ್ನಕೇಶವಯ್ಯ - 'ವ್ಯವಸಾಯ ಅಂದರೆ ಹುಚ್ಚು ನನಗೆ' ಎನ್ನುತ್ತಾರೆ. 'ಕಷ್ಟಪಡದೆ ಊಟ ಸಾಧ್ಯವಿಲ್ಲ. ಅದಕ್ಕೇ ಇಂದಿಗೂ ಹೊಲದಲ್ಲಿ ಊಟ ಮಾಡ್ತೇನೆ' ಎನ್ನುತ್ತಾರೆ ಹಳ್ಳಿಮೈಸೂರಿನ ಹೆಚ್.ಎನ್. ಅನಂತರಾಮಯ್ಯ. ಹಾಗೆಯೇ ಮುದ್ದಾಪುರದ ಎಮ್.ಎಸ್. ಶ್ರೀನಿವಾಸಮೂರ್ತಿ 'ಕಷ್ಟಪಟ್ಟರೆ ಫಲವುಂಟು ಎಂಬ ಹಿರಿಯರ ಗಾದೆ ನನ್ನ ಮಟ್ಟಿಗೆ ನಿಜವಾಗಿದೆ' ಎನ್ನುತ್ತಾರೆ.

ನನ್ನ ಬದುಕು ಇಂದು ಶ್ರೀಮಂತವಾಗಿರಲು ಕಾರಣ 'ಸೋಮಾರಿತನವಿಲ್ಲದ ದುಡಿಮೆ' - ಎಂದು ತಮ್ಮ ಬದುಕಿನ ರಹಸ್ಯವನ್ನು ಹಂಚಿಕೊಂಡಿದ್ದಾರೆ ಮತ್ತೂರಿನ ಎನ್.ಕೆ. ಚೆನ್ನಕೇಶವ. ಹಾಗೆಯೇ ೭೦ ವಸಂತಗಳನ್ನು ಕ್ರಿಯಾಶೀಲರಾಗಿಯೇ ಬದುಕಿದ ಹೊಸಹಳ್ಳಿಯ ಕೃಷ್ಣರಾವ್ ಹೇಳುತ್ತಾರೆ : "ಕೆಲಸಮಾಡದಿದ್ದರೆ ಕೀಳು ಎಂಬ ಭಾವ ಬರ್ತಿತ್ತು". ಪರೋಪಕಾರಾರ್ಥಂ ಇದಂ ಶರೀರಂ ಎಂಬುದು ಚಿಕ್ಕಮೇನಹಳ್ಳಿಯ ನಾಗಪ್ಪ, ಬೆಟ್ಟದಪುರದ ಅನಂತಕೃಷ್ಣಪ್ಪ, ಹೊಸಹಳ್ಳಿಯ ಶ್ರೀಕಂಠ ಅವರ ಧ್ಯೇಯ. ಮತ್ತೂರಿನ ಕೃಷಿಕ ಇಂಜನಿಯರ್ ಎಮ್.ಎನ್. ಗೋಪಾಲ ಅವಧಾನಿ ಹೇಳುತ್ತಾರೆ : "ಜೀವನದುದ್ದಕ್ಕೆ ನಾವು ಪಾಲಿಸಿಕೊಂಡು ಬಂದ ತತ್ತ್ವ ಒಂದೇ: ದಾನ ಧರ್ಮ ಮಾಡಬೇಕು ಎಂಬುದು. ಅದನ್ನು ಬಿಡದೆ ಐದೂ ಸೋದರರೂ ಪಾಲಿಸಿಕೊಂಡು ಬಂದಿದ್ದೇವೆ." ಸ್ನೇಹವನ ಎಂಬ ಹಣ್ಣಿನ ತೋಟವನ್ನು ದಾನಕ್ಕಾಗಿಯೇ ಬೆಳೆಸಿದ್ದಾರೆ ! "ಉಪಕಾರ ಮಾಡಬೇಕು. ಒಂದಾಗಿ ಕಾಣಬೇಕು, ಭೇದಭಾವ ಎಣಿಸಬಾರದು." ಎಂಬುದು ಲಿಂಗದಹಳ್ಳಿಯ ಎಲ್. ನಾಗರಾಜ ಅವರ ಆದರ್ಶ. ವಿರಾಮಕಾಲದಲ್ಲಿ ಎಲೆಕ್ಟ್ರಿಶಿಯನ್ ಕೆಲಸ ಮಾಡ್ತಾರೆ. ಆದರೆ ಯಾರಿಂದಲೂ ಹಣ ತಗೋಳೋಲ್ಲವಂತೆ. ಸಮಾಜಕ್ಕೆ ನಾವೇನನ್ನಾದರೂ ಕೊಡಬೇಕು ಎನ್ನುವ ಬಿ.ಎನ್.ವಿ. ಸುಬ್ರಹ್ಮಣ್ಯ ನಾವು ಕಂಡಂತೆ ಕೊಡುಗೈ ದಾನಿಗಳು.

ಜೋಡಿ ಕೃಷ್ಣಾಪುರದ ಕೆ.ಎಸ್. ನರಸಿಂಹಮೂರ್ತಿ ಅವರು 'ದೂರತಃ ಪರ್ವತೋ ರಮ್ಯಃ; ಇದ್ದುದರಲ್ಲಿ ಹೆಚ್ಚು ದುಡೀಬೇಕು, ಸಂತೋಷವಾಗಿರಬೇಕು', ಎಂದರೆ ಅಲ್ಲಿಯ ಕೆ. ನಾಗರಾಜ ಹೇಳುತ್ತಾರೆ 'ಇಲ್ಲದ್ದಕ್ಕೆ ಆಸೆಪಡದೆ, ಹಿಂದಕ್ಕೆ ನೋಡದೆ ಮುಂದೆ ಹೆಜ್ಜೆ ಹಾಕೋಣ'. 'ನುಡಿದಂತೆ ನಡೆದಿದ್ದೇನೆ ಎಂಬ ತೃಪ್ತಿ ಇದೆ' - ಮೊಸಳೆಯ ಗುಂಡೂರಾಮಯ್ಯ ಅವರಿಗೆ.

ಕುಪ್ಪಹಳ್ಳಿಯ ವೆಂಕಟರಮಣಯ್ಯ ಹೇಳುತ್ತಾರೆ. 'ನಾನು ಸ್ವಾತಂತ್ರ್ಯ ಹೋರಾಟಗಾರರ ಮಾಸಾಶನ ತಗೊಳ್ಳಲಿಲ್ಲ. ರಾಜಕೀಯವನ್ನು ಸ್ವಂತಕ್ಕೆ ಬಳಸಲಿಲ್ಲ.' ಕರ್ನಾಟಕದಲ್ಲಿ ಇಂಥ ಇನ್ನೊಬ್ಬರು ಸಿಗಬಹುದೆ? ಅನುಮಾನ. 'ಇತರರ ಜೊತೆ ಜಗಳಕಾಯಲ್ಲ' ಅನ್ನುತ್ತಾರೆ ಹರಿಹರಪುರ ರಮೇಶ್ ಜೋಯಿಸ್; ಹಾಗೆಯೆ 'ಯಾರಿಗೂ ದ್ರೋಹ ಮಾಡಿಲ್ಲ' ಅನ್ನುತ್ತಾರೆ ಚಿಲುಕುಂದದ ರಾಮಣ್ಣ, 'ಅನ್ಯಾಯವನ್ನು ಖಂಡಿಸುವುದು ನನ್ನ ಗುಣ' ಎನ್ನುತ್ತಾರೆ ಚಿಲುಕುಂದದ ಗುರುಮೂರ್ತಿ ಅವರು. ನ್ಯಾಯದ ವಿಷಯದಲ್ಲಿ ವಿಶೇಷ ಒಲವು. ಯಾರು (ಹೊರಗಿನವರಾದರೂ) ತಪ್ಪು ಮಾಡಿದರೂ ಸಹಿಸುತ್ತಿರಲಿಲ್ಲ. ತಿದ್ದಲು ಹೋಗುವರು, ನಿಷ್ಠುರ ಆಗುವರು.

'ಹೃದಯದಲ್ಲಿರುವ ಸ್ವಾಮಿಗೆ ಕೈ ಮುಗಿದರೆ ಸಾಕು, ಕಾಶಿ ಏಕೆ ಬೇಕು? ವ್ಯವಸಾಯವೇ ಪೂಜೆ, ಮನಸ್ಸು ಶುದ್ಧವಾಗಿರಬೇಕು. ಬೇರೆ ಪೂಜೆ ಬೇಡ' ಎಂಬುದು ಚಿಲ್ಕುಂದದ ಸಿ.ಎನ್. ಸುಬ್ಬರಾಯ ಅವರ ಮಾತು. 'ಹಾಸಿಗೆ ಇದ್ದಷ್ಟು ಕಾಲು ಚಾಚಿ ವ್ಯರ್ಥ ಕಾಲ ಹರಣ ಮಾಡದೆ ಬದುಕನ್ನು ರೂಢಿಸಿದ್ದೇವೆ' ಎನ್ನುತ್ತಾರೆ ಪಿರಿಯಾಪಟ್ಟಣದ ಪಿ.ಎಸ್. ಶ್ರೀನಿವಾಸಮೂರ್ತಿ. 'ವಿರಸ ಬರಬಾರದೂಂತ ಬೇರೆ ಮನೇಲಿದೇವೆ. ಆದರೆ ನಮ್ಮ ಸ್ನೇಹ ಬಾಂಧವ್ಯ ಕಂಡು ಊರೇ ಬೆರಗಾಗಿದೆ' ಎನ್ನುತ್ತಾರೆ ಮತ್ತೂರಿನ ಎನ್.ಕೆ. ಚನ್ನಕೇಶವ ಅವರು. 'ಸುಳ್ಳು ನನಗೆ ಆಗೋದಿಲ್ಲ. ಸತ್ಯವೇ ನಮ್ಮನ್ನು ಕಾಪಾಡಿದ್ದು' ಎಂದು ತುಂಬುಹೃದಯದಿಂದ ನುಡಿದಿದ್ದಾರೆ ಹೊಸಹಳ್ಳಿ ಕೃಷ್ಣರಾವ್.

'ಸತ್ಯವನ್ನು ಹೇಳಬೇಕು. ಯಾರಿಗೂ ಮೋಸಮಾಡಬಾರದು' ಎಂಬ ಮಾತು ಭಕ್ತರಹಳ್ಳಿಯ ಭಾಗ್ಯಲಕ್ಷ್ಮಿ ಅವರದು ಕೂಡ. 'ಮನಸ್ಸಿಗೆ ಬಂದ ತಕ್ಷಣ ಮಾಡಬೇಕು. ನಾಳೆ ಎಂಬುದು ಸರಿಯಲ್ಲ' ಎನ್ನುತ್ತಾರೆ ಹೊಸಹಳ್ಳಿಯ ಕೆ. ಕೃಷ್ಣಸ್ವಾಮಿ. ಭಕ್ತರಹಳ್ಳಿಯ ಡಾ. ಕೆ.ಪಿ. ರಘುನಾಥ್ ಅವರ ನುಡಿ, 'I have lived like a king, and die like a king'. 'ಇಡೀ ಸಂಕೇತಿ ಜನಾಂಗಕ್ಕಿರುವ ಆದರ್ಶವೇ ನನ್ನದೂ. ಕಂಡವರ ಗಂಟು ಹೊಡಕೊಂಡು ತಿನ್ನಬೇಡ ಎಂಬುದು. ಆರಕ್ಕೇರದೆ ಮೂರಕ್ಕಿಳಿಯದ ಬದುಕು ನನಗೆ ಸಾಕು' ಎನ್ನುತ್ತಾರೆ ಲಿಂಗದಹಳ್ಳಿಯ ಎಲ್.ಕೆ. ಗೋಪಾಲ.

* * * * *

ಕೃಷಿಯ ಅನುಭವಗಳು ರೋಚಕವಾಗಿವೆ. ಸ್ಮರಿಸಬಹುದಾದ, ಕೃಷಿಗೆ ಸಂಬಂಧಿಸಿದಂತೆ ಸಂಕೇತಿಗಳ ಮಾತುಗಳನ್ನು ಕೆಲವನ್ನಿಲ್ಲಿ ಸಂಗ್ರಹಿಸಿದ್ದೇನೆ.

ತತ್ರ ವಿಪ್ರೈಃ ನವಾಸ್ತವ್ಯಂ ನಾಸ್ತಿ ಯತ್ರ ಚತುಷ್ಟಯಮ್
ಋಣದಾತಾ ಚ ವೈದ್ಯಶ್ಚ ಶ್ರೋತ್ರಿಯಶ್ಚ ನದೀಜಲಮ್||

ಸಾಲವನ್ನು ಹಿಂದಿರುಗಿಸುವವನು, ವೈದ್ಯ, ಶ್ರೋತ್ರಿಯ ಮತ್ತು ನದೀಜಲ ಈ ನಾಲ್ಕೂ ಇರದ ಕಡೆ ಬ್ರಾಹ್ಮಣರು ವಾಸಮಾಡಬಾರದು.

ಕೇರಳಾಪುರದ ರಾಮಚಂದ್ರ ಜೋಯಿಸರು ಹೇಳಿದ ಈ ಶ್ಲೋಕ ಸಂಕೇತಿ ಕೃಷಿಕರಿಗೆ ಶೇ. ೧೦೦ ಅನ್ವಯಿಸುತ್ತದೆ.

ಹಳ್ಳಿ ಮೈಸೂರಿನ ಇ.ಎಸ್. ನಾಗರಾಜು ಅವರು ಬೆಳಿಗ್ಗೆ ಆರಕ್ಕೆ ತೋಟಕ್ಕೆ ಹೋದರೆ ಸಂಜೆಯವರೆಗೂ ಅಲ್ಲಿರುತ್ತಾರೆ. ಮಧ್ಯೆ ತಿಂಡಿಗಾಗಿ ಒಮ್ಮೆ ಮನೆಗೆ ಬಂದು ಹೋಗುತ್ತಾರೆ. ಸ್ವಂತವಾಗಿ ನರ್ಸರಿ ಮಾಡಿದ್ದಾರೆ. ವರ್ಷಕ್ಕೆ ೫೦೦೦ ಅಡಿಕೆ ಸಸಿ, ೨೦೦೦ ತೆಂಗಿನ ಸಸಿ ಮಾರ್ತಾರೆ ! ಹೀಗೆ ಕ್ರಿಯಾಶೀಲರಾಗಿರುವವರು ಅಪರೂಪ, ಅಲ್ಲವೆ? 'ವ್ಯವಸಾಯದ ಜೊತೆಗೆ ಅಡಿಕೆ/ಅಡಿಕೆ ಪುಡಿ ವ್ಯಾಪಾರ, ಮೇಣದ ಬತ್ತಿ ವ್ಯಾಪಾರ ಎಲ್ಲ ಮಾಡಿ ಆಯಿತು. ಈಗ ಶಿವಾಂತ ಪೌರೋಹಿತ್ಯದಲ್ಲಿ ಬದುಕುತ್ತಿದ್ದೇನೆ' ಎನ್ನುತ್ತಾರೆ ಸೋಮನಹಳ್ಳಿಯ ರಾಮನಾಥ ಶರ್ಮ ! ಇಲ್ಲಿಯ ಎಸ್.ಎಸ್. ಸುಬ್ರಹ್ಮಣ್ಯ ಅವರ ಅನುಭವವೂ ಗಮನಾರ್ಹ: 'ವ್ಯವಸಾಯದ ಜೊತೆಗೆ ಏನಾದರೂ ಒಂದು ಉಪವೃತ್ತಿ ಇದ್ದೇ ಇರಬೇಕು'. ಅವರು ಹೇಳುತ್ತಾರೆ: 'ತೋಟದಲ್ಲಾಗಲಿ, ಮನೆಯಲ್ಲಾಗಲಿ ಕಳ್ಳತನ ಸಾಧ್ಯವೇ ಇಲ್ಲ. ಏನಾದರೂ ಹೊರಗೆ ಬಿಸಾಕಿ ಹೋಗಿ. ಅದು ಅಲ್ಲೇ ಬಿದ್ದಿರುತ್ತೆ. ಇದಕ್ಕೆ ಕಾರಣ ನಮ್ಮ ಒಗ್ಗಟ್ಟು.' ಊರಲ್ಲಿ ಹಾಸಿ ಹೊದೆಯುವಷ್ಟು ಬಡತನ ಇದ್ದರೂ ಈ ಮೌಲ್ಯವನ್ನುಳಿಸಿಕೊಂಡಿರುವುದು ನಿಜಕ್ಕೂ ಶ್ಲಾಘನೀಯ.

ಪೂಮಗಾಮೆಯ ರಾಮಣ್ಣ ಅವರ ಅನುಭವ ನೋಡಿ - 'ಜಮೀನು ಜಾಸ್ತಿ ಇದ್ದರೆ ಖರ್ಚು ಜಾಸ್ತಿ. ಆದಾಯ ಕಡಿಮೆ. ಆದರೂ ವ್ಯವಸಾಯ ತೃಪ್ತಿ ತಂದಿದೆ. ದಿಲ್ಲಿ ಸೌಲಭ್ಯ ಹಳ್ಳಿಯಲ್ಲಿ ಕಂಡಿದ್ದೇವೆ' ಅಂತಾನೇ ಹೇಳುತ್ತಾರೆ. ಅವರ ಸಾಹಸ ಗಮನಿಸಿ. ವಿದ್ಯುತ್ ಸಮಸ್ಯೆ ನಿವಾರಣೆಗಾಗಿ ಸಿಮೆಂಟ್ ತೊಟ್ಟಿ ನಿರ್ಮಿಸಿ (೪೦ x ೨೦ x ೮ LBH) ತೋಟದಿಂದ ಗದ್ದೆವರೆಗೂ ಪೈಪ್ ಹೂಳಿಸಿದ್ದಾರೆ. ಇಂಥ ಸಾಹಸ ಸಂಕೇತಿತನದಿಂದ ಮಾತ್ರ ಮಾಡುವಂಥದು. ಇನ್ನೊಂದು ಉದಾಹರಣೆ ಲಿಂಗದಹಳ್ಳಿಯ ವಸಂತಕುಮಾರ್, ಜಯರಾಮ ಅವರುಗಳು ತಮ್ಮ ತೋಟದಿಂದ ಮನೆವರೆಗೆ ಮೈನ್ ರೋಡ್ ದಾಟಿ ಸುಮಾರು ಎರಡು ಕಿ.ಮೀ. ಪೈಪ್ ಜೋಡಿಸಿಕೊಂಡಿದ್ದಾರೆ !

ಕುಪ್ಪಳ್ಳಿಯ ಕೆ.ವಿ. ಕೃಷ್ಣಮೂರ್ತಿಯವರ ಅನುಭವ ಗಮನಿಸಿ - "ಕೊಟ್ಟಿಗೆಗೆ ಕಾಂಕ್ರೀಟ್ ಹಾಕಿಸಿಲ್ಲ. ಅರ್ಧ ಅಡಿ ಮಣ್ಣು ಹರಡ್ತೀನಿ. ಅದು ಗೊಬ್ಬರ ಆಗುತ್ತೆ. ೧೫ ದಿನಕ್ಕೆ ಬದಲಾಯಿಸುತ್ತೇನೆ." ಮಲೆನಾಡಿನ ಬಸವಾನಿ ಇತ್ಯಾದಿ ಊರುಗಳಲ್ಲಿ ಮಣ್ಣಿನ ಬದಲು ಅರ್ಧ ಅಡಿ (ಮರದ) ಹಸಿ ಎಲೆ ಹರಡುತ್ತಾರೆ. ದಿನಾ ಬದಲಾಯಿಸುತ್ತಾರೆ. ಹಸೂಗೂ ಖುಷಿ. ಅವರಿಗೂ ಹತ್ತುಪಟ್ಟು ಗೊಬ್ಬರ ! ಹರಿಹರಪುರದಲ್ಲಿ ಇರುವುದು ರಮೇಶ್ ಜೋಯಿಸ್ ಅವರ ಒಂದೇ ಸಂಕೇತಿ ಕುಟುಂಬ. ಅವರು ೫೦ ವರ್ಷದ ಹಿಂದೆ ವಿಠಲಾಪುರದಿಂದ ಇಲ್ಲಿ ಬಂದು ನೆಲಸಿದವರು. ದೇವಾಲಯದ ೩೪ ಗುಂಟೆ ಜಮೀನು ಜೀವನಾಧಾರ. ಜೊತೆಗೆ ಜ್ಯೋತಿಷ್ಯ. ಸ್ವಂತಕ್ಕೆ ತೋಟ ಮಾಡಿದ್ದಾರೆ. ಅನುಕೂಲವಾಗಿದ್ದಾರೆ. 'ನನ್ನಲ್ಲಿ ವ್ಯವಸಾಯಕ್ಕೆ ಸಂಬಂಧಪಟ್ಟ A to Z ಉಪಕರಣಗಳಿವೆ. ಯಾರನ್ನೂ ಏನನ್ನೂ ಬೇಡಬೇಕಿಲ್ಲ' ಎನ್ನುತ್ತಾರೆ ಜೋಯಿಸರು.ಆ ಊರಿನ ಸಂಕೇತಿಕೃಷಿಯ ಕೊನೆಯಕೊಂಡಿ ಹರವೆ ನರಸಿಂಹಯ್ಯ ಅವರಿಗೆ ೮೬ರ ಪ್ರಾಯ. ಅವರೂ ಕೊನೆಯದಾಗಿ ಊರು ಬಿಡಲು ಎಲ್ಲ ವ್ಯವಸ್ಥೆ ಮಾಡಿಕೊಂಡಿದ್ದಾರೆ. ಇಲ್ಲಿರುವಷ್ಟು ದಿನ ನಾಲ್ಕು ಜನಕ್ಕೆ ಉಪಕಾರಿಯಾಗಿ ಬದುಕಿದ ತೃಪ್ತಿ ಇದೆ ಎಂಬ ಸಂತಸ ಅವರಿಗಿದೆ.

"ಚಿಲ್ಕುಂದದ ಬ್ರಾಹ್ಮಣರು ಕಚ್ಚೆ ಹಾಕಿ ಸ್ವತಃ ತೋಟದಲ್ಲಿ ದುಡಿಯುತ್ತಾರೆ" - ಎಂದು ಮಾಜಿ ಮುಖ್ಯಮಂತ್ರಿ ದೇವರಾಜ ಅರಸು ಉದ್ಗಾರವೆತ್ತಿದ್ದರು. ೫೨ ಸಂಕೇತಿ ಮನೆಗಳ ಈ ಗ್ರಾಮ ಸಂಕೇತಿಗಳ ಸ್ವರ್ಗ ! ಇಲ್ಲಿನ ಕೇಶವಮೂರ್ತಿಗಳ ಪ್ರಕಾರ 'ಮತ್ತೂರಿನವರು ಲ್ಯಾಂಡ್ ಲಾರ್ಡ್ಸ್, ನಾವು ಲ್ಯಾಂಡ್ ಹೋಲ್ಡರ್ಸ್. ಯಾಕಂದ್ರೆ ನಮ್ಮಲ್ಲಿ ಎರಡು ಎಕರೆ ಮೀರಿ ಯಾರಿಗೂ ಜಮೀನಿಲ್ಲ'. ಅವರ ಸಂಸಾರವೇ ತೋಟ. ಅಲ್ಲಿನ ಸಂಕೇತಿಗಳು ಬೆಳೆಯದ ಬೆಳೆಯಿಲ್ಲ. ಚಿಲ್ಕುಂದದ ರಾಮಣ್ಣನವರ ಉಪವೃತ್ತಿ ಊದುಬತ್ತಿ ವ್ಯಾಪಾರ. ಅವರ ತಮ್ಮ ಬೆಂಗಳೂರಿನಲ್ಲಿ ಪ್ಲಾಸ್ಟಿಕ್ ಇಂಡಸ್ಟ್ರಿ ದೊಡ್ಡ ಪ್ರಮಾಣದಲ್ಲಿ ನಡೆಸುತ್ತಾರೆ. ಚಿಲ್ಕುಂದದ ಕೇಶವಮೂರ್ತಿಯವರ ಮನೆಯಲ್ಲಿ ನಾಲ್ಕು ಜೊತೆ ಎತ್ತುಗಳು, ೨೦ ಹಸು, ೧೦ ಎಮ್ಮೆ, ಎರಡು ಗಾಡಿ ಇತ್ತಂತೆ. ಅವರ ಎರಡು ಹೋರಿ ಕರುವಿಗೆ ದೇವರಾಜ ಅರಸು ಅವರು ಚಿನ್ನದ ಹೊದಿಕೆಯಿದ್ದ ಗೌನ್ ಹೊದಿಸಿ ಸನ್ಮಾನಿಸಿದರಂತೆ ! 'ನಮ್ಮ ವ್ಯವಸಾಯದಲ್ಲಿ ನೀಟ್‌ನೆಸ್ ಇದೆ' ಎನ್ನುತ್ತಾರೆ ಇಲ್ಲಿಯ ಗುರುಮೂರ್ತಿ. 'ಸಂಕೇತಿಗಳಲ್ಲಿ ರೇಷ್ಮೆ ಮೊದಲಿಗೆ ಬೆಳೆದದ್ದು ನಾನೇ' ಎನ್ನುತ್ತಾರೆ ಚಿಲ್ಕುಂದದ ಸತ್ಯನಾರಾಯಣ. ಲಾಭ ಆಗಲಿಲ್ಲ. ನಂತರ ತರಕಾರಿ. ಅದೂ ಫೇಲ್. ನಂತರ ತಂಬಾಕು ಬೆಳೆದರು. ನಂತರ ಕಾಕಡ ಬೆಳೆ. ಅಲ್ಲೂ ನಷ್ಟ. ಕಡೆಗೆ ಉಳಿದದ್ದು ಅಡಿಕೆ ತೆಂಗು ಮಾತ್ರ. ಜೊತೆಗೆ ಅಡಿಕೆ ನರ್ಸರಿ ಇದೆ. ಇಷ್ಟಾದರೂ 'ವ್ಯವಸಾಯಗಾರನಾಗಿ ಹುಟ್ಟುವುದು ಶಾಪ' ಎಂದೇ ಹೇಳುವರು !

ಪಿರಿಯಾಪಟ್ಟಣದಲ್ಲಿ ೩೦ ಕುಟುಂಬ. 'ಹಿಂದೆ – ವೃತ್ತಿ: ವೈದ್ಯ, ಪ್ರವೃತ್ತಿ: ಕೃಷಿ: ಈಗ ಅದಲು ಬದಲು. ಲೈಫ್‌ನಲ್ಲಿ ಚಾರಮ್ ಇರೋದು

ರಿಸ್ಕ್‌ನಲ್ಲಿ' ಅನ್ನುತ್ತಾರೆ ಇಲ್ಲಿನ ಪಿ.ಎಸ್. ವೆಂಕಟರಾಮಯ್ಯ. ಉತ್ಪತ್ತಿ ನೋಡಿಕೊಂಡು, ರೇಷಿಯೋ ಹಾಕಿಕೊಂಡು, ಖರ್ಚುಮಾಡಬೇಕೆನ್ನುತ್ತಾರೆ ನರಸಿಂಹಮೂರ್ತಿ. 'ಅಡಿಕೆ ಒಂದು ಬೆಳೆಯಾದ್ರೆ ಎಲೆ ಹಂಬು ೧೦ ಬೆಳೆ' ಎನ್ನುತ್ತಾರೆ ಶ್ರೀನಿವಾಸಮೂರ್ತಿ. ಅವರು ಅಡಿಕೆಯನ್ನು ಅಂತಸ್ತಿನಲ್ಲಿ ಬೆಳೆಸಿದ್ದಾರೆ. ೧೦, ೨೫, ೪೦, ೬೦ ವರ್ಷದ ಗಿಡಗಳಿವೆ. ಇದರಿಂದ ಎಲ್ಲ ಗಿಡಗಳಿಗೂ ಗಾಳಿ ಬೆಳಕು ಚೆನ್ನಾಗಿ ಬರುತ್ತದೆ. ಇಲ್ಲಿನ ಡಾ. ಪಿ.ಎಸ್. ಸುಬ್ರಹ್ಮಣ್ಯ ಅವರು ಕೃಷಿಯನ್ನು ಉಪವೃತ್ತಿಯಾಗಿ ಹೊಂದಿದ್ದರೂ ತುಂಬಾ ವಿಶೇಷ ರೀತಿಯಲ್ಲಿಯೇ ನಡೆಸಿಕೊಂಡು ಬಂದಿದ್ದಾರೆ. ಉದಾಹರಣೆಗೆ: ನೆಲ ಸಮ ಮಾಡಿಸಲು ೬೦೦೦ ಟ್ರಾಕ್ಟರ್ ಲೋಡ್ ಮಣ್ಣು ಹೊಡೆಸಿದ್ದಾರೆ!

ಬೆಟ್ಟದಪುರದಲ್ಲಿ ಹಿಂದೆ ಇದ್ದ ಸಂಖ್ಯೆಯ ಶೇ. ೧೦ ಮಾತ್ರ ಸಂಕೇತಿಗಳಿದ್ದಾರೆ. 'ಈಗೆಲ್ಲ ಇತರಾದಿ ಹುಡುಗರ ಪಾಳ್ಯ. ಉಳಿದವರೂ ಪಟ್ಟಣ ಸೇರಬೇಕಾದ ಸ್ಥಿತಿ' ಎಂಬುದು ಕೃಷ್ಣಾವಧಾನಿಗಳ ಅಳಲು. 'ನಾನೆಂದೂ ತೋಟದ ಕೆಲಸಕ್ಕೆ ಕೂಲಿ ಕೊಡಲಿಲ್ಲ' ಎನ್ನುತ್ತಾರೆ ಬಿ.ಎಸ್. ಶ್ರೀಧರಮೂರ್ತಿ. ಆದ್ದರಿಂದಲೇ ಅವರ ದೇಹ ಇಷ್ಟು ದೃಢವಾಗಿದೆ. 'ಸಂತೋಷವಾಗಿದ್ದೇನೆ, ದೇವರು ಕೊಟ್ಟಿರುವುದು ಸಾಕು' ಎನ್ನುತ್ತಾರೆ. 'ಅಡಿಕೆಗಿಂತ ತಂಬಾಕು ಬೆಳೆ ವಾಸಿ, ಎರಡು ತಿಂಗಳ ಬೆಳೆ, ಮೂರು ಹದ ಮಳೆ ಸಾಕು' ಅಂತಾರೆ ಇಲ್ಲಿನ ಪ್ರಭಾಶಂಕರ್. ಅನಂತಕೃಷ್ಣ ಅವರ ಮಾತು ಕೇಳಿ: 'ಬಾಗಾಯ್ತು ನಮ್ಮ ಬದುಕಿನ ಅವಿಭಾಜ್ಯ ಅಂಗ. ಅದನ್ನು ಒಂದು ಸಂಸಾರಕ್ಕೆ ಹೋಲಿಸಬಹುದು:

> ಮನೆ ಯಜಮಾನನು: ಬನ್ನೀಂತ ಕರೆಯುವ ಎಳನೀರು ಹೊತ್ತ ತೆಂಗು;
> ದುಡಿಯೋ ಯುವಕರು ಅಡಿಕೆ ಮರದ ತರಹ;
> ಶುಚಿಯಾಗಿಟ್ಟುಕೊಳ್ಳುವ ಗೃಹಿಣಿ ಎಲೆ ಹಂಬು; ಮಕ್ಕಳು ಮರಿಗಳು ಬಾಳೆಗಿಡದಂತೆ.

ಕೃಷಿ ಹಿತಕರವೆ ? 'ಕಷ್ಟ ಅಂದುಕೊಂಡರೆ ಕಷ್ಟ; ಸುಖ ಅಂದುಕೊಂಡರೆ ಸುಖ' ಎನ್ನುತ್ತಾರೆ ಹಾನಗಲ್ ಸೀತಾರಾಮಯ್ಯ. ಅಂದರೆ ಅವರ ಅಭಿಪ್ರಾಯ - 'ಸುಲಭವಲ್ಲ, ಆದರೆ ನನಗೆ ಕಮಿಟ್‌ಮೆಂಟ್ ಇರುವುದರಿಂದ ಸುಖವಾಗಿಯೇ ಭಾವಿಸಿದ್ದೇನೆ, ಸ್ವೀಕರಿಸಿದ್ದೇನೆ !' ಮತ್ತೂರಿನ ಅಶ್ವತ್ಥ ಅವಧಾನಿಗಳ ಪ್ರಕಾರ ಗಿಡಗಳೊಡನೆ ನಮ್ಮ ಸಂಬಂಧ ಮಗು ತಾಯಿ ಸಂಬಂಧ ಇದ್ದಹಾಗೆ! (ಮಕ್ಕಳಂತೆ ಗಿಡಗಳನ್ನು ನೋಡಿಕೊಳ್ಳಬೇಕೆಂಬ ಮಾತು ಹೊಸಹಳ್ಳಿಯ ಕೃಷ್ಣಸ್ವಾಮಿ ಅವರದು) 'ಈ ಭಾವನಾತ್ಮಕ ಸಂಬಂಧ ಈಗ ಇಲ್ಲ. ಆಗ ವೇದಶಿಕ್ಷಣದಂತೆ ಕೃಷಿಶಿಕ್ಷಣ ಕೂಡ ತಂದೆಯವರಿಂದ ಸಿಗುತ್ತಿತ್ತು' ಎಂದೂ ಅವರು ಹೇಳುತ್ತಾರೆ. ಇಲ್ಲಿನ ಸುಬ್ರಾಯ ಅವಧಾನಿಯವರು ಒಬ್ಬ ವ್ಯಕ್ತಿ ಕೃಷಿಯಿಂದ ಎಷ್ಟು ಸಾಧನೆ ಮಾಡಬಹುದೆಂದು ತೋರಿಸಿಕೊಟ್ಟಿದ್ದಾರೆ. ತಮ್ಮ ಐದೂ ಮಕ್ಕಳಿಗೆ ಮನೆ ಕಟ್ಟಿಸಿ ಕೊಟ್ಟಿದ್ದಾರೆ. ವೇದಾಧ್ಯಯನ ಮಾಡಿಸಿದ್ದಾರೆ. ಅಡಿಕೆ ಕೆಡುವುವುದು, ಸುಲಿಯುವುದು, ಬೇಯಿಸುವುದು, ಹರವುವುದು, ಶುದ್ಧಿಮಾಡುವುದು ಇತ್ಯಾದಿ ತೋಟದ ಎಲ್ಲ ಕೆಲಸವನ್ನೂ ಸ್ವತಃ ಮಾಡುವುದನ್ನು ಕಲಿಸಿದ್ದಾರೆ. "ಏನು ಊಟ ಮಾಡ್ತೀವೋ ಅದಕ್ಕೆ ತಕ್ಕಷ್ಟು ದುಡಿಯಬೇಕು, ಇಲ್ಲವಾದರೆ ಅನ್ನದ್ರೋಹ" - ಎನ್ನುತ್ತಾರೆ.

ಬಸವಾನಿಯ ಕಸ್ತೂರಿಯವರು ಆದರ್ಶ ಕೃಷಿಕರು. ಮಲೆನಾಡಾದ್ದರಿಂದ ಹಸುವಿಗೆ ಬಿಸಿನೀರು ಕುಡಿಸುತ್ತಾರೆ. ಜೊತೆಗೆ ಪಾಲಿಷ್ ತೌಡು, ತರಕಾರಿ ಸಿಪ್ಪೆ, ಉಪ್ಪು, ಕಲಗಚ್ಚು ಸೇರಿಸುತ್ತಾರೆ. ಪತಿ-ಪತ್ನಿ ಇಬ್ಬರೂ ಸಮಸಮ ದುಡಿಯುತ್ತಾರೆ. (ಹೊಸಹಳ್ಳಿಯ ಶ್ರೀಕಂಠ ಅವರು ಕೂಡ ತಾವಿಬ್ಬರೂ ಸಮಸಮ ದುಡಿಯುತ್ತೇವೆ ಎಂದು ಹೇಳುತ್ತಾರೆ.) ಮೇಲುಸ್ತುವಾರಿ ಕಸ್ತೂರಿಯದೇ.

ಹೊಸಹಳ್ಳಿಯ ಕೃಷ್ಣರಾವ್ ಅವರು ಕೃಷಿಪಂಡಿತ ಬಿರುದು ಪಡೆದರು. ಅದು ಸಂಕೇತಿ ಕೃಷಿಗೆ ಸಂದ ಗೌರವ. ೪೦ ಎಕರೆಯಲ್ಲಿ ಕಬ್ಬು ಬೆಳೆದರು. ಈಗ ಎಲ್ಲವನ್ನೂ ತೋಟ ಮಾಡಿದ್ದಾರೆ. ಹಾಗೆಯೇ ಹೊಸಹಳ್ಳಿಯ ಕೃಷ್ಣಸ್ವಾಮಿ ಅವರಿಗೆ ಕೃಷಿಪ್ರಶಸ್ತಿ ಬಂತು. ಇವರು ಮೂಲತಃ ಶಾಲಾ ಅಧ್ಯಾಪಕರು !

* * * * *

ಕೃಷಿಕರು ಸ್ವಾನುಭವದ ಸಂಗತಿಗಳನ್ನು ನಮ್ಮೊಡನೆ ಹಂಚಿಕೊಂಡಿದ್ದಾರೆ. ಕೆಲವನ್ನಿಲ್ಲಿ ಸಂಗ್ರಹಿಸಿದ್ದೇನೆ. 'ತಿಂಡಿ ಹಾಕಿ ಹಾಲು ಕರೆದರೆ ಅಡಿಕೆ ವಿಳ್ಳೇದೆಲೆ ತೋಟ ಕೂಡ ಉಪಚಾರ ಮಾಡಿದಷ್ಟು ಫಲ ಕೊಡುತ್ತೆ' ಎನ್ನುತ್ತಾರೆ ಹಾನಗಲ್ಲಿನ ಸುಬ್ಬರಾಯರು. 'ಕಳ್ಳರಿಗೇ ತೋಟದಕೆಲಸ ವಹಿಸಿದೆ, ಅವರಿಗೂ ಹೊಟ್ಟೆಪಾಡು ಆಯಿತು, ಈಗ ಕಳ್ಳತನ ತನಗೆ ತಾನೇ ನಿಂತಿದೆ' ಎಂದಿದ್ದಾರೆ ಹಳ್ಳಿಮೈಸೂರಿನ ಇ.ಎಸ್. ನಾಗರಾಜು ಅವರು. ಕಲ್ಪನಾತೀತ ಪ್ರಯೋಗ ! 'ಬಡತನ ಕೆಟ್ಟದ್ದು. ಹೆಣ್ಣೂ ಕೊಡೋಲ್ಲ? ಹತ್ತು ಪೈಸೆಗಾಗಿ ತೆಂಗಿನ ಮರ ಹತ್ತುತ್ತಿದ್ದೆ' ಎನ್ನುವ, ಸೋಮನಹಳ್ಳಿಯ ಅಡಿಗೆ ಕೆಲಸದ ನಾಗರಾಜ್ ಹೇಳುತ್ತಾರೆ - 'ನನಗಿಂತ ಅವರು ಹೆಚ್ಚು ಬಡವರಾದ್ದರಿಂದ ನನಗೆ ಹೆಣ್ಣು ಕೊಟ್ಟರು !' ನೆನೆಸಿಕೊಳ್ಳುತ್ತಾರೆ - "ತುಂಬಾ ಕಷ್ಟ ಅನುಭವಿಸಿದ್ದೀವಿ. ಕಡ್ಲೆಕಾಯಿ ತಿಂದು ಮಲಗಿದ ದಿನ ಹಲವು. ಅದನ್ನು ಮರೆತಿಲ್ಲ. ಮರೆಯಲೂಬಾರದು. ಆಗ ಮಾತ್ರ ಮನುಷ್ಯತ್ವ ಉಳಿಯುತ್ತದೆ". ನಿಜಕ್ಕೂ ಈ ಕಲಿತ ಪಾಠ ಅಮೋಘ. ಇದೇ ಮಾತನ್ನು ಇಲ್ಲಿಯ ಕೇಶವನಾರಾಯಣ ಅವರು ಕೂಡ ಹೇಳುತ್ತಾರೆ. 'ತುಂಬಾ

ಕಷ್ಟ ಅನುಭವಿಸಿದ್ದೀವಿ, ನಿಜ. ನಾಲ್ವರ ಸಹಾಯಾನೂ ಪಡೆದಿದ್ದೀವಿ. ಈಗ, ಮೇಲೆ ಬಂದಾಗ ನಾಲ್ವರಿಗೆ ಕೊಡಬೇಕು, ಅದೇ ಜೀವನ.' ಇದೇ ಊರಿನ ಸುಬ್ಬರಾಯರು - 'ವ್ಯವಸಾಯದಿಂದ ನಮ್ಮ ಬದುಕು ಕಳೀತಿದ್ದದ್ದು ಬರೀ ಆರು ತಿಂಗಳು ಮಾತ್ರ. ಉಳಿದಂತೆ ಹೇಗೆ ಕಳೆದೆವೋ, ಬದುಕಿ ಉಳಿದೆವೋ ವಿಸ್ಮಯ' ಎಂದು ನೆನಪಿಸಿಕೊಳ್ಳುತ್ತಾರೆ. 'ಒಂದು ರೂಪಾಯಿ ಕೂಲಿಗೆ ವಿಳ್ಯೇದೆಲೆ ಕುಯ್ಯಲು ಹೋಗಿದ್ದೇನೆ. ಜನಿವಾರ ಹೊಸೆದು ನಾಲ್ಕಾರು ರೂಪಾಯಿ ಸಂಪಾದಿಸಿದ್ದೇನೆ. ಇಂದು ಹಣ ಇದೆ ಅಂತ ದುಂದು ಮಾಡುವವರನ್ನು ಕಂಡರೆ ನನಗಾಗುವುದಿಲ್ಲ' ಎನ್ನುತ್ತಾರೆ.

'ಸಹಕಾರತತ್ವದ ಹಿನ್ನೆಲೆಯಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಮಾಡಿಕೊಂಡಿದ್ದೇವೆ' ಎನ್ನುತ್ತಾರೆ ಪೂಮಗಾಮೆಯ ಯೋಗಾನರಸಿಂಹ. 'ವ್ಯವಸಾಯದಲ್ಲಿ ಮಾರ್ಗ ಬದಲಿಸುತ್ತ ಹೋಗಬಾರದು, ಮಾರ್ಗ ಬದಲಿಸುತ್ತ ಹೋದರೆ ಯಾವುದರಲ್ಲಿಯೂ ಮುಂದುವರೆಯಲು ಆಗದು' ಎನ್ನುವುದು ಗೆಜ್ಜಗನಹಳ್ಳಿಯ ಜಿ.ಆರ್. ನಾಗರಾಜ್ ಕಂಡುಕೊಂಡ ಅನುಭವ ! ಮಕ್ಕಳನ್ನು ಹೇಗೆ ಬೆಳೆಸಬೇಕೆಂಬ ಅನುಭವವನ್ನು ಹಂಚಿಕೊಂಡಿದ್ದಾರೆ ಮೊಸಳೆಯ ಎಮ್.ಎನ್. ಶ್ರೀನಿವಾಸಮೂರ್ತಿ: "ತುಂಬಾ ಬಿಗಿ ಮಾಡಿದರೆ ಹಾಳಾಗುತ್ತಾರೆ. ಕಟ್ಟಿಹಾಕಿದರೆ ದಾರಿ ತಪ್ಪುತ್ತಾರೆ. ಸ್ನೇಹಿತರಂತೆ ಕಂಡಾಗ ಮಾತ್ರ ಒಳ್ಳೆ ದಾರೀಲಿ ನಡೆಯುವಂತಾಗುವುದು ಸಾಧ್ಯ."

ಹತ್ತು ವರ್ಷಕಾಲ ಚಿಲ್ಕುಂದದ ಗ್ರಾಮ ಪಂಚಾಯ್ತಿ ಅಧ್ಯಕ್ಷರಾಗಿದ್ದ ಚನ್ನಕೇಶವಯ್ಯ ಅವರು ತಮ್ಮ ೩೦೦೦ ಚ.ಅ. ಜಾಗವನ್ನು ಗ್ರಾಮಪಂಚಾಯ್ತಿಗಾಗಿ ದಾನ ಮಾಡಿದರು. ಹಾಗೆಯೇ ಲಿಂಗದಹಳ್ಳಿಯ ಗ್ರಾಮಪಂಚಾಯ್ತಿ ಅಧ್ಯಕ್ಷರಾಗಿದ್ದ ವೆಂಕಟರಮಣಯ್ಯ ಅವರು ಗ್ರಾಮಪಂಚಾಯ್ತಿಗಾಗಿ ಒಂದು ಭವನವನ್ನೂ ಸುತ್ತ ಇದ್ದ ಮಾವಿನ ತೋಪನ್ನೂ ದಾನವಾಗಿ ನೀಡಿದರು. ಜಾಗ ಸಿಕ್ಕೊಡನೆ ತಿನ್ನುವುದನ್ನು ಅಭ್ಯಾಸ ಮಾಡಿಕೊಳ್ಳುವ ಇಂದಿನ ರಾಜಕಾರಣಿಗಳಿಗೆ ಹೋಲಿಸಿದರೆ ಸಂಕೇತಿಗಳ ಹಿರಿಮೆ ತಿಳಿಯಬಹುದು.

ಈಚಲಕುಂದ ಚಿಲಕುಂದ ಆಗಿದೆ ಎನ್ನುತ್ತಾರೆ ಸಿ.ವಿ. ಸೂರ್ಯನಾರಾಯಣ. ಚಿಲುಕ ಎಂದರೆ ಗಿಳಿ ಎಂದರ್ಥ. ಚಿಲ್ಕುಂದದ ಸಿ.ಎನ್. ಸುಬ್ಬರಾಯರ ಸ್ವಾನುಭವ ಕೇಳಿ - ೧೨ರ ಹುಡುಗ. ಮರ ಏರಿದ. ಅಲ್ಲಿಂದ ೧೮ ಅಡಿ ಆಳದ ಭಾವಿಗೆ ಬಿದ್ದ. ಬದುಕಿದ ! ಸೊಂಟ ಮುರಿದು ಮೂರು ತಿಂಗಳು ಅನುಭವಿಸಿದ. ೨೫ ಆದಾಗ ಇನ್ನೊಮ್ಮೆ ಮಾವಿನ ಮರದ ತುದಿರೆಂಬಿಯಿಂದ ಬಿದ್ದ, ಕೆಳಗೆ ಸಣ್ಣ ರೆಂಬೆ ರಕ್ಷಿಸಿತು. ಮೂರನೆಯ ಬಾರಿ ಹೊಸಮನೆ ಕಟ್ಟುವಾಗ ಕರೆಂಟ್ ಶಾಕ್ ಆಗಿ ಬಿದ್ದ. ಬದುಕುಳಿದ ! ಸಿ.ಎನ್. ಸುಬ್ಬರಾಯರು ಕೃಷಿಕಾರ್ಯದ ಬಗೆಗೆ ಬೇಸರದ ಮಾತಾಡುವುದಿಲ್ಲ. 'ವ್ಯಕ್ತಿಸ್ವಾತಂತ್ರ್ಯವಿರುತ್ತದೆ. ಯಾಂತ್ರಿಕತೆಯಿರುವುದಿಲ್ಲ. ವಿರಾಮ ಸಾಕಷ್ಟಿರುತ್ತದೆ. ನೆರೆಹೊರೆಯವರೊಡನೆ ಉತ್ತಮ ಬಾಂಧವ್ಯವಿರುತ್ತದೆ' ಎನ್ನುತ್ತಾರೆ. ಹುಣಸೂರಿನ ಏಕೈಕ ಸಂಕೇತಿ ರೈತ ಜಗದೀಶಕುಮಾರ ಕೂಡ ಇದೇ ರೀತಿ ಒಳ್ಳೆಯ ಭಾವ ವ್ಯಕ್ತಪಡಿಸಿದರು. 'ನಂಬಿದವರಿಗೆ ಈ ವೃತ್ತಿಯಲ್ಲಿ ಮೋಸವಿಲ್ಲ' ಎನ್ನುವರು. ತರಕಾರಿ ಕೃಷಿಯಲ್ಲಿ ವಿಶೇಷ ಸಾಧನೆ ಮಾಡಿದವರು ಅವರು. ಅಲ್ಲದೆ ತೆಂಗು, ಅಡಿಕೆ, ಮಾವು, ಸುಬಾಬುಲ್, ಬಾಳೆ, ತೇಗ, ಹಿಪ್ಪುನೇರಳೆ, ಸಪೋಟ, ಅರಿಶಿಣ, ಭತ್ತ ಕೂಡ ಬೆಳೆವವರು.

'ಸಂತೋಷವಾಗಿದ್ದೇನೆ, ದೇವರು ಕೊಟ್ಟಿರುವುದು ಸಾಕು' ಎನ್ನುತ್ತಾರೆ ಬೆಟ್ಟದಪುರದ ಶ್ರೀಧರಮೂರ್ತಿ. ಆದರೆ ಇಲ್ಲಿನ ಸೂರ್ಯನಾರಾಯಣರ ಅಭಿಪ್ರಾಯ ಇದಕ್ಕೆ ವಿರುದ್ಧ: 'ವ್ಯವಸಾಯದಲ್ಲಿ ಸುಖವಿಲ್ಲ. ಕಷ್ಟಪಟ್ಟರೂ ಫಲವಿಲ್ಲ. ನೆರೆಹೊರೆ ಸರಿಯಿಲ್ಲ. ಪಟ್ಟಣ ಸೇರುವ ಆಸೆ'.

ಮತ್ತೂರಿನ ಎನ್.ಕೆ. ಚನ್ನಕೇಶವ ಅವರು ಇಂದು ಚೆನ್ನಾಗಿದ್ದಾರೆ. ಆದರೆ ಒಂದು ಕಾಲದಲ್ಲಿ ತುಂಬ ಬಡತನ. ದಯನೀಯ ಸ್ಥಿತಿ ಅನುಭವಿಸಿದವರು. ಮನೆ ಕೆಲಸಕ್ಕೆ ಹೋಗುವ ತಮ್ಮ ಅತ್ತೆಮಾವನನ್ನು ಬ್ರಾಹ್ಮಣರ ಮನೆಯಲ್ಲಿಯೇ ಹಿಂದುಗಡೆ ಬಾಗಿಲಿನಿಂದ ಬಾ ಅನ್ನುತ್ತಿದ್ದರಂತೆ ! 'ಅವರು ನನಗೆ ಹೆಣ್ಣುಕೊಟ್ಟು, ಕಣ್ಣು ಕೊಟ್ಟರು. ಅದಕ್ಕೆ ಅವರಿಗೆ ಸಾಕಷ್ಟು ಸಹಾಯ ಮಾಡಿದ್ದೇನೆ, ಅವರ ಮಕ್ಕಳಿಗಾಗಿ ಭದ್ರಾವತೀಲಿ ಎರಡು ಮನೆ ಕಟ್ಟಿಸಿಕೊಟ್ಟಿದ್ದೀನಿ' ಎಂದು ಸಂತೃಪ್ತಿಯಿಂದ ನುಡಿಯುತ್ತಾರೆ. ಬಸವಾನಿಯ ಕಸ್ತೂರಿಯವರೂ ಈ ಮಾತು ಹೇಳಿದ್ದಾರೆ. 'ಬಡವರು ಅಂತ ನಿಕೃಷ್ಟ ಮಾಡುತ್ತಾರೆ. ನಾನು ಮನಸ್ಸಿಗೆ ತಗೋಳೋಲ್ಲ. ತಗೊಂಡರೆ ತಾನೆ ಕಸಿವಿಸಿ?'

ಕೃಷಿಯಲ್ಲಿ ಸಿಗುವ ಸಂತೋಷ ಅನ್ಯತ್ರ ಇಲ್ಲ ಎನ್ನುತ್ತಾರೆ ಬಸವಾನಿಯ ಸಾವಿತ್ರಮ್ಮ ರಾಮಶರ್ಮ. ಪತಿಯು ರಾಜಕೀಯ ಚಳವಳಿಗೆ ಅರ್ಪಿಸಿಕೊಂಡ ಕಾರಣ ಸುಮಾರು ೫೦ ವರ್ಷ ಇವರೇ ತೋಟದ ಆಡಳಿತವನ್ನು ವಿಶೇಷವಾಗಿ ನೋಡಿಕೊಂಡಿದ್ದಾರೆ. ಸಾಲತೀರಿಸಲಿಲ್ಲ ಅಂತ ಒಮ್ಮೆ ೫೦ ಗಂಡಾಳು ತೋಟಕ್ಕೆ ನುಗ್ಗಿ ಮರ ಹತ್ತಲು ಹೊರಟಾಗ ಒಬ್ಬರೇ ಮಚ್ಚು ಹಿಡಿದು ಎದುರಿಸಿ, ಅಬ್ಬರಿಸಿ ಹಿಮ್ಮೆಟ್ಟಿಸಿದ್ದಾರೆ ! ತಾವೂ ಸ್ವಾತಂತ್ರ್ಯ ಚಳವಳಿಯ ಜೊತೆಗೆ ಸಮಾಜಸೇವೆ ಮಾಡುತ್ತ ಬಂದಿದ್ದಾರೆ. ಒಂದು ಉದಾಹರಣೆ: ಇವರು ಕಟ್ಟಿದ ಅಬಲಾಶ್ರಮದ ಹುಡುಗಿಯೊಬ್ಬಳು (ಹೆಸರು ಸರೋಜ) ಆಗಿನ ಮಂತ್ರಿ ದಾಸಪ್ಪ ಅವರ ಸೊಸೆಯಾದರು ! ಅವರು ನಡೆಸಿದ ಮಾತೃಮಂದಿರ 'ಋಷ್ಯಾಶ್ರಮದಂತಿದೆ' ಎಂದು ಆಗಿನ ಮುಖ್ಯಮಂತ್ರಿ ಕೆಂಗಲ್ ಹನುಮಂತಯ್ಯ ಶ್ಲಾಘಿಸಿದರಂತೆ.

ಯಾರೇ ಆಗಲಿ ಸ್ವಂತ ವಿಷಯ ಹೇಳುವಾಗ ಬೇರೆಯವರಿಗೆ ಗೊತ್ತಿಲ್ಲದ ಸಣ್ಣ, ಸೂಕ್ಷ್ಮ ಸಂಗತಿಗಳೂ ದಾಖಲಾಗಲು ಸಾಧ್ಯ. ಅವರು ಮಾತ್ರ ಹೇಳಲು ಸಾಧ್ಯವಾದ ವಿಷಯಗಳು, ಈ ಹೊಳವು ಮೇಲಿನ ಎಲ್ಲ ಪುಟಗಳಲ್ಲಿವೆ. ತಮ್ಮ ಬಗ್ಗೆ ಹೇಳುವಾಗ ಸ್ವಲ್ಪ ಹಿಗ್ಗಿಸಬಹುದು ಎಂಬ ಅನುಮಾನವು ಕೆಲವರಿಗೆ ಬರಬಹುದು. ಎಲ್ಲರೂ ಗಾಂಧಿಗಳಲ್ಲವಷ್ಟೆ, ಆದರೆ ಹೇಳಿದ್ದು ನಿರಂತರ ಬೇರೆಯವರ ಕಣ್ಣಿಗೆ ಬೀಳುತ್ತಿರುವುದರಿಂದ ಸುಳ್ಳು ಹೇಳಿ ದಕ್ಕಿಸಿಕೊಳ್ಳುವುದೂ ಸಾಧ್ಯವಿಲ್ಲ. ಅಲ್ಲವೆ? ಒಟ್ಟಾರೆ ಇಲ್ಲಿನ ಅಧ್ಯಯನ ಸಾರ್ಥಕವಾಗಿದೆ, ಫಲಪ್ರದವಾಗಿದೆ.

ದೇಶೀಯ ವಿದ್ಯಾಶಾಲೆ ಕಾಲೇಜು
ಶಿವಮೊಗ್ಗ

ಪ್ರೊ. ಎಲ್.ಎಮ್.ಎಲ್. ಶಾಸ್ತ್ರೀ
ಕನ್ನಡ ಪ್ರಾಧ್ಯಾಪಕರು (ನಿವೃತ್ತ)

ಸಂಕೇತಿ: ಬೇಸಾಯದ ಬದುಕು

ಘನ ಉದ್ದೇಶವೊಂದನ್ನಿಟ್ಟುಕೊಂಡು ಬಹು ಕಷ್ಟದಿಂದ ರಚಿಸಿದ ಕೃತಿಯಿದು. ಪ್ರತಿಯೊಂದು ಕುಟುಂಬವನ್ನೂ ನಾಲ್ಕಾರು ಘಂಟೆ ಮಾತನಾಡಿಸುತ್ತ ೧೩ ತಿಂಗಳ ಕಾಲ ನಿರಂತರ ಪರಿಶ್ರಮದಿಂದ ಮೂಡಿಬಂದದ್ದು ಈ ಸಂಪುಟ. ಆದ್ದರಿಂದ ಇದರ ಬೆಲೆ ಕಟ್ಟಲು ಸಾಧ್ಯವಿಲ್ಲ. ಇಂದು ಸಂಕೇತಿಗಳು ಎಲ್ಲ ರಂಗದಲ್ಲಿದ್ದಾರೆ. ಆದರೆ ನೂರಾರು ವರ್ಷಗಳ ಹಿಂದೆ ಎಲ್ಲಿಂದಲೋ ಬಂದು ಕರ್ಣಾಟಕದಲ್ಲಿ ಬೇರುಬಿಟ್ಟು, ಅವರು ನೆಲೆ ಕಂಡುಕೊಂಡದ್ದು ಕೃಷಿಯಿಂದ. ಆದ್ದರಿಂದ ಸಂಕೇತಿ ಸಮುದಾಯದ ಅಧ್ಯಯನವೆಂದರೆ ಒಂದರ್ಥದಲ್ಲಿ ಅದು ಕೃಷಿಯ ಅಧ್ಯಯನ !

ಸಮುದಾಯ ಅಧ್ಯಯನ ಕೇಂದ್ರದವರು ತುಂಬಾ ವ್ಯವಸ್ಥಿತವಾದ ರೀತಿಯಲ್ಲಿ ಈ ಅಧ್ಯಯನ ನಡೆಸಿದ್ದಾರೆ. ಕ್ಷೇತ್ರಕಾರ್ಯ, ಮಾಹಿತಿ ಸಂಗ್ರಹ, ಮಾಹಿತಿ ವಿಶ್ಲೇಷಣೆಯು ತುಂಬಾ ವೈಜ್ಞಾನಿಕವಾಗಿದೆ. ಅಧ್ಯಯನ ಕಾರ್ಯವು ನ್ಯೂನತೆಯಿಲ್ಲದೆ ಪೂರ್ಣಪ್ರಮಾಣದಲ್ಲಿ ಶುದ್ಧವಾಗಿದೆ. "ಬೇಸಾಯದ ಬದುಕು" ಎಂಬಲ್ಲಿ ವಿಜಯ್ ಅಂಗಡಿಯವರು ಸಂಕೇತಿಗಳ ಬೇಸಾಯವನ್ನು ಮತ್ತು ಬದುಕನ್ನು ಎರಡೂ ಮುಖಗಳನ್ನು ಚಿತ್ರಿಸಿದ್ದಾರೆ. ಕೃತಿಯ ಉದ್ದಕ್ಕೂ ಕೃಷಿಯ ಬಗೆಗೆ ಸಲಹೆ ಸೂಚನೆಗಳಿದ್ದು ಯಾವುದೇ ರೈತರಿಗೆ ಒಳ್ಳೆಯ ಮಾರ್ಗದರ್ಶನವನ್ನು ನೀಡಿದೆ. ವಿಜಯ್ ಅಂಗಡಿಯವರ ಕಾರ್ಯವು ಸ್ತುತ್ಯವಾಗಿದೆ. ಎರಡೂ ಕೃಷಿ ಸಂಚಿಕೆಗಳ ಗಮನಾರ್ಹ ಸಂಗತಿಗಳನ್ನು ಸಂಕ್ಷಿಪ್ತವಾಗಿ ಈ ಸಂಚಿಕೆಯ ಕಡೆಯಲ್ಲಿ ಕೊಟ್ಟಿದೆ. ಆದರೂ ಅಂಗಡಿಯವರು ನೀಡಿದ ವಿವರಗಳಿಂದ ಕೃತಿಯ ಮಹತ್ವವನ್ನು ಗುರ್ತಿಸಲು ಸಾಧ್ಯವಾಗುವಂತೆ ಒಂದೆರಡು ಚಿತ್ರಗಳನ್ನು ನೆನಪಿಸಿಕೊಳ್ಳುತ್ತೇನೆ.

ಮಧ್ಯಮ, ಕೆಳಮಧ್ಯಮ ವರ್ಗದ ಗ್ರಾಮೀಣ ಸಂಕೇತಿ ಕುಟುಂಬಗಳನ್ನು ಪ್ರಾತಿನಿಧಿಕವಾಗಿ ಅಗ್ರಹಾರದ ಚಿತ್ರದಲ್ಲಿ ಗಮನಿಸಿ: "ಸುಮಾರು ೫೦ ಸಂಕೇತಿ ಮನೆಗಳು. ಎಲ್ಲರೂ ಕೃಷಿಕರು. ಹೆಂಚಿನ ಮನೆಗಳು ಹೆಚ್ಚು. ೨೦೦ ವರ್ಷ ಮೀರಿದ ಮಣ್ಣಿನ ಮನೆಗಳಲ್ಲಿ ವಾಸಮಾಡುತ್ತಿರುವ ಕುಟುಂಬಗಳಿವೆ. ನೀರಿಗಾಗಿ ಸುಮಾರು ೩೦ ತೆರೆದ ಭಾವಿಗಳು. ಅಂದಾಜು ೩೦ ಅಡಿ ಆಳ" ಇತ್ಯಾದಿ. ಅಗ್ರಹಾರದ ನಟೇಶ ಅವರ ದಿನಚರಿ : (ಇದು ಸಂಕೇತಿ ಕೃಷಿಕರೆಲ್ಲರ ಕ್ರಿಯಾಶೀಲತೆಯ ಸಹಜ ಪ್ರಾತಿನಿಧಿಕ ಉದಾಹರಣೆಯೇ ಹೊರತು ವೈಯಕ್ತಿಕ ಅಪರೂಪದ್ದಲ್ಲ.) : 1) '೧೬ನೇ ವಯಸ್ಸಿನಿಂದ ಕೃಷಿಕ. ಮುಂಜಾನೆ ೨.೩೦ಕ್ಕೆ ಏಳುವುದು. ಬೆಳದಿಂಗಳ ಬೆಳಕಿನಲ್ಲಿ ಗಿಡಗಳಿಗೆ ಅಡ್ಡೆಯಲ್ಲಿ ನೀರು ಹುಯ್ಯುವುದು. ಬಿಸಿಲು ಬರುವವರೆಗೂ ಈ ಕಾರ್ಯ' ! 2) 'ಒಂದು ಸಾರಿ ಅರಕಲಗೂಡಿಗೆ ಬದನೆಕಾಯಿ ಮಾರಲು ತಗೊಂಡು ಹೋಗಿದ್ದೆ. ಒಂದು ಚೀಲಕ್ಕೆ ಎರಡೂವರೆ ರೂ. ಬೆಲೆ ಕಟ್ಟಿದರು. ಬೇಸತ್ತು ಅಲ್ಲೇ ಬಿಸಾಕಿ ಬಂದೆ. ಇದಕ್ಕೆ ಪರ್ಯಾಯವನ್ನು ಯೋಚಿಸಿದೆ. ಆಗ ಹೊಳೆದದ್ದು ತೆಂಗು ಬೆಳೆ.'

ಮಗ್ಗೆಯ ಲಕ್ಷ್ಮೀನಾರಾಯಣ ಅವರು ವಿಶಿಷ್ಟ ವ್ಯಕ್ತಿ. ವ್ಯವಸಾಯದಷ್ಟೇ ಇತರ ಸಾಮಾಜಿಕ ಕೆಲಸಗಳಲ್ಲೂ ಆಸಕ್ತಿ. ದೊಡ್ಡಮಗ್ಗೆಯಲ್ಲಿ ಹೈಸ್ಕೂಲು ಸ್ಥಾಪಿಸಿದ್ದಾರೆ. ಮೂರು ಕೊಠಡಿಗಳನ್ನು ಕಟ್ಟಿಸಿಕೊಟ್ಟಿದ್ದಾರೆ. ೨,೫೦೦/- ರೂ ಬಡ್ಡಿ ಬರುವಂತೆ ಠೇವಣಿಯಿಟ್ಟು ವಿದ್ಯಾದಾನಕ್ಕೆ ಶಾಶ್ವತ ವ್ಯವಸ್ಥೆ ಮಾಡಿದ್ದಾರೆ. ಬಸವಾಪಟ್ಟಣದ ರಾಮಚಂದ್ರ ಅವರ ಮಾತು: 'ನಾವು ಚಪ್ಪಲಿ ಹಾಕಿಕೊಂಡು ತೋಟಕ್ಕೆ ಹೋಗುವುದಿಲ್ಲ. ತೋಟವನ್ನು ದೇವರಂತೆ ಕಾಣುತ್ತೇವೆ' ಎಂಬ ಮಾತನ್ನು ನೆನೆದರೇ ರೋಮಾಂಚನ. ದಿಟ್ಟ ಮಹಿಳೆ ಬಸವಾಪಟ್ಟಣದ ಸರೋಜಮ್ಮ ಅವರಿಗೆ ಈಗ ೭೧ ವರ್ಷ. ಮಕ್ಕಳು ಜೊತೆಯಲ್ಲಿಲ್ಲ. ಆದರೆ ಸುಖಿ ! ಕಷ್ಟ ಬಂದಾಗ ಕೊರಗಲಿಲ್ಲ, ಸುಖ ಬಂದಾಗ ಹಿಗ್ಗಲಿಲ್ಲ ! ಎಂದೂ ಯಾರಿಗೂ ಅವಲಂಬನೆಯಾಗದೆ ಬದುಕುತ್ತಿರುವ ಹಿರಿಯ ಜೀವ. ಇವರನ್ನು ಕಂಡಾಗ ಇಷ್ಟೇ ವಯಸ್ಸಿನ ರಾಮನಾಥಪುರದ ಸೀತಮ್ಮ ಅವರೂ ನೆನಪಿಗೆ ಬರುತ್ತಾರೆ. ಮಕ್ಕಳಿಲ್ಲದ

ಅವರು ಸಮಾಜವನ್ನೇ ಮಕ್ಕಳಂತೆ ಕಂಡುಕೊಂಡು ಬಂದವರು ! ದತ್ತು ತಗೊಳ್ಳಬೇಕೆಂದು ಎಂದೂ ಯೋಚಿಸಿದವರಲ್ಲ. ಒಂಬತ್ತು ಎಕರೆ ಜಮೀನನ್ನು (ನಾಲ್ಕು ಎಕರೆ ಅಡಿಕೆ ತೋಟ) ತಾವೇ ನಿರ್ವಹಿಸುತ್ತಾರೆ.

ಐಚನಹಳ್ಳಿಯ ಕಾವೇರಿ ಬೀರೂರಿನವರು. ಹಳ್ಳಿಗೆ ಬಂದದ್ದಕ್ಕೆ ಬೇಸರವಿಲ್ಲ. ಜೀವನಕ್ಕೆ ಪೂರಕವಾಗಲೆಂದು ಒಂದು ಅಂಗಡಿಯನ್ನೂ ಇಟ್ಟುಕೊಂಡಿದ್ದಾರೆ. ಸ್ವಯಂ ಉದ್ಯೋಗ ತರಬೇತಿಯನ್ನೂ ಪಡೆದಿದ್ದಾರೆ. ಅಡಿಕೆ ಸುಲಿಯುವ, ಬೇಯಿಸುವ, ಒಣಗಿಸುವ ಕೆಲಸಗಳಲ್ಲೂ ಭಾಗಿ. ಸಂತೋಷವಾಗಿದ್ದೇನೆ ಎಂದು ತುಂಬು ಹೃದಯದಿಂದ ಹೇಳುತ್ತಾರೆ. ಚಾಹಳ್ಳಿಯ ಕೇಶವಮೂರ್ತಿ ಟಿಪಿಕಲ್ ಕಷ್ಟಸಹಿಷ್ಣು ಸಂಕೇತಿ: ೧೨ನೇ ವಯಸ್ಸಿನಲ್ಲಿ ಕೃಷಿ ಆರಂಭಿಸಿದರು. ಇದ್ದದ್ದು ಅರ್ಧ ಎಕರೆ ತೋಟ. ಎಲೆ ಕೊಯ್ದು ದಿನಾ ಎಂಟಾಣೆ ಕೂಲಿ ಪಡೆದು ಜೀವನ ನಿರ್ವಹಣೆ! (ಈಗ ಸ್ಥಿತಿವಂತರು)

ಚಲನಚಿತ್ರ ನಿರ್ದೇಶಕ, ನಟ ಎಂ.ಡಿ. ಕೌಶಿಕ್ ಅವರ ಸಂದರ್ಶನ ಕೃತಿಯ ಘನತೆಯನ್ನು ಹೆಚ್ಚಿಸಿದೆ ಮತ್ತು ಸಂಕೇತಿ ಓದುಗರ ಪಾಲಿಗೆ ಅಭಿಮಾನದ ಸಂಗತಿಯಾಗಿದೆ.

ಡಾ. ಎಂ.ಎಸ್. ವಿಜಯಾ ಹರನ್ ಅವರು ನಿತ್ಯ ಮೆಲಕು ಹಾಕಬೇಕಾದ ಮರೆಯಬಾರದ ಸಂಗತಿಗಳನ್ನು ಹತ್ತಾರು ಕಡೆಗಳಿಂದ ಸಂಗ್ರಹಿಸಿ ಕೊಟ್ಟಿದ್ದಾರೆ. ಇದು ಸಂಚಿಕೆಯ ಗುಣವನ್ನು ಹೆಚ್ಚಿಸಿದೆ. ಉದಾಹರಣೆಗೆ, ಹತ್ತು ವರ್ಷದ ಹಿಂದಿನ ಸಂಕೇತಿ ಸಂಗಮದ ಸಂಚಿಕೆಯೊಂದರಿಂದ ಮತ್ತೂರು ನಂದ ಅವರ ಕವನದ ಸಾಲುಗಳು -

'ಯಾವಲ್ಲಿ ಹಳತುಗಳು ಹೊಸತರೊಳು ಸಂಗಮಿಸಿ
ಬದುಕನನುಗೊಳಿಸಿಹುದೊ ಆ ಪುಟ್ಟ ಊರು:
ಕಪಟವರಿಯದ ಸಾಧು ಸಭ್ಯ ಜನಗಳ ಸೀಮೆ
ನಗರವಾಸನೆಯಿದ್ದೂ ಇರದ ಊರು'.

ಹೀಗೆಯೇ ನಾಚಾರಮ್ಮನನ್ನು ಕುರಿತ ವರದಿಗಳ ಸಂಗ್ರಹ, ೬೯ರಲ್ಲಿ ಕೃಷ್ಣರಾವ್ ಅವರಿಗೆ ರಾಜ್ಯೋತ್ಸವ ಪ್ರಶಸ್ತಿ ಬಂದ ಸಂದರ್ಭದ ಮಾತುಗಳು, ಚಿಲ್ಕುಂದದ ಚಿತ್ರ ನೀಡುವ ಕೈಪಿಡಿ, ಬೇಸಾಯದ ಬದುಕು - ಅವಲೋಕನ / ಅವರವರ ಮಾತಿನಲಿ; ಬೆಟ್ಟದಪುರ ಹಾಗೂ ಕೌಶಿಕ ಸಂಕೇತಿ ಸಂಘಗಳ ಸ್ಮರಣ ಸಂಚಿಕೆಗಳು, ಸಂಕೇತಿ ಸಂಗಮದ ಹತ್ತಾರು ವರ್ಷಗಳಷ್ಟು ಹಳೆಯ ಲೇಖನಗಳು ಸ್ಮರಣೀಯವಾಗಿವೆ. ಕೆ. ರಾಘವೇಂದ್ರರಾಯರ ೧೯೫೫ರ ನೆನಪಿನ ಚಿತ್ರ: 'ಸಂಕೇತಿಗಳಿಗೆ ಪುಷ್ಕಳ ಭೋಜನ, ತಾಂಬೂಲ ಚರ್ವಣ, ಪಗಡೆಯ ವ್ಯಾಮೋಹ. ಇಸ್ಪೀಟು (೨೮ರ ಆಟ ಅಥವಾ ಜಾಕಿ ಆಟ), ಪಾಕಕೌಶಲ್ಯ, ಸಂಸ್ಕೃತ ವಿದ್ವತ್ತು, ಜೊತೆಗೆ ಲಲಿತಕಲೆಗಳಲ್ಲಿ ವಿಶೇಷವಾಗಿ ಶಾಸ್ತ್ರೀಯ ಸಂಗೀತದಲ್ಲಿ ಅವರಿಗೆ ಪ್ರಾವೀಣ್ಯ.'

ಪರಿಸರಪ್ರೇಮ ಕುರಿತ ರಾಮದಾಸ್, ಬಸವಾನಿ ಅವರ ಲೇಖನ (*ಸಂಕೇತ ಸಂಪದ* ೧೯೯೮) ನಿತ್ಯನೂತನವಾಗಿದೆ. ಡಾ|| ಬಿ.ವಿ. ಸುಧಾಮಣಿ ಅವರ ಟಿಪ್ಪಣಿಗಳು, ಲೇಖನಗಳ ಭಾಗವು ಮನನೀಯವಾಗಿದೆ. ಕೇರಳ ತಮಿಳುನಾಡುಗಳಲ್ಲಿ ಸಂಚರಿಸಿ ಅಲ್ಲಿನ ಸಂಕೇತಿಗಳ ಕೃಷಿಯ ಬಗೆಗೆ ಮಾಹಿತಿ ನೀಡಿರುವುದು ಮೌಲಿಕವಾಗಿದೆ. ಇದಕ್ಕಾಗಿ ಡಾ. ಸುಧಾಮಣಿ ಮತ್ತು ಡಾ. ಹರನ್ ಅವರಿಗೆ ಎಷ್ಟು ಕೃತಜ್ಞತೆ ಹೇಳಿದರೂ ಕಡಿಮೆಯೇ.

ಕೇರಳದುದ್ದಕ್ಕೂ ಕರ್ಣಾಟಕದ ಸಂಕೇತಿ ನೆಲೆಯ ಪರಿಸರವನ್ನೇ ಕಾಣುತ್ತಾರೆ ಹರನ್. ಕನ್ಯಾಕುಮಾರಿ ಜಿಲ್ಲೆಯ ತಕ್ಕಲೈನಲ್ಲಿ, ಪಕ್ಕದ ಪುಲಿಯೂರ್ ಕುರುಚಿಯಲ್ಲಿ ಸಂಕೇತಿಗಳಿದ್ದಾರೆ. ತಿರುವನಂತಪುರಂ, ಕೊಲ್ಲಂ, ಶೆಂಕೋಟ್ಟೈ ಭಾಗಗಳೇ ಸಂಕೇತಿಗಳ ತರುವಾಯದ ನೆಲೆಗಳು. ಶೆಂಕೋಟ್ಟೈನ ರಿವರ್‌ಸ್ಟ್ರೀಟ್ ತುಂಬ ಸಂಕೇತಿಗಳೇ ಇದ್ದರಂತೆ. ಬಡತನವೇ ಕಾರಣವಾಗಿ ನೆಲೆಯನ್ನರಸುತ್ತ ತೆರಳಿದವರು. ಮೊದಲಿಗೆ ವಲಸೆಯಾದದ್ದು ಶುಚೀಂದ್ರಂ, ನಾಗರಕೋಯಿಲ್, ತ್ರಿವೇಂದ್ರಂ, ಕನ್ಯಾಕುಮಾರಿಯೆಡೆಗೆ. ಕಡೇನಲ್ಲೂರು ಕೃಷ್ಣಾಪುರಂನಲ್ಲಿ ಇತ್ತೀಚಿನವರೆಗೂ ಸಂಕೇತಿಗಳಿದ್ದರಂತೆ. ಪೆರುಮಾಳ್ ದೇವಾಲಯದ ಚಿತ್ರ ನೋಡುವಾಗ ರೋಮಾಂಚನವಾಗುತ್ತದೆ. ಶೆಂಕೋಟ್ಟೈನಲ್ಲಿ ಈಗಲೂ ಹತ್ತು ಸಂಕೇತಿ ಕುಟುಂಬಗಳಿವೆ. ಅದರ ಪೂರ್ಣ ವಿವರ, ಚಿತ್ರಗಳ ಸಹಿತ ಹರನ್ ನೀಡಿದ್ದಾರೆ. ಎರಚ್ಚಕೊಳಂನ ೨೦ ಬ್ರಾಹ್ಮಣರ ಮನೆಗಳಲ್ಲಿ ಅರ್ಧದಷ್ಟು ಈಗಲೂ ಸಂಕೇತಿಗಳದೇ. ನಾಗರಕೋಯಿಲ್ ಬಳಿಯ ವಡೀಶ್ವರಂನಲ್ಲಿ ಪೂರಾ ಸಂಕೇತಿಗಳೇ ಇದ್ದರಂತೆ. ಕಾಂಚಿ ಶಂಕರಮಠದಲ್ಲಿ ಈಗಲೂ ಹಲವು ಸಂಕೇತಿ ವಿದ್ವಾಂಸರು ಸೇವೆಸಲ್ಲಿಸುತ್ತಿದ್ದಾರೆ. ಇಲ್ಲಿನ ಸಂಕೇತಿಗಳಿಗೆ ಶಾಸ್ತ್ರೀಯ ಸಂಗೀತ ತಿಳಿದಿತ್ತು. ಭಜನೆಮಾಡುವ ಹವ್ಯಾಸವಿತ್ತು. ಮನೆಗಳಲ್ಲಿ ಸಂಪ್ರದಾಯದ ಹಾಡನ್ನು ಹೇಳುವವರಿದ್ದರು ಎಂಬ ಮಾತುಗಳೆಲ್ಲ ಕರ್ಣಾಟಕದ ಸಂಕೇತಿಗಳನ್ನೇ ನೆನಪಿಸುತ್ತವೆ. ಕೀಳ್ ಪುಲಿಯೂರ್, ಕಾಲಡೈಕುರಿಚ್ಚಿಯಲ್ಲಿ ಸಂಕೇತಿಗಳಿದ್ದಾರೆ. ಕಾಲಡೈಕುರಿಚ್ಚಿಯ ಕಾಲುವೆಯೊಂದನ್ನು ತೆಗೆದವನು (ಕನ್ನಾಡಿಯಾನ್ ಕಾಲವಾಯ್) ಕನ್ನಡನಾಡಿನಿಂದ ಹೋದವನೆಂಬ ಪ್ರತೀತಿಯಿದೆ !

ಕರ್ನಾಟಕ ಕೃಷಿ ಪರಂಪರೆಯ ಸಂವಾದಿ ವ್ಯಕ್ತಿಯನ್ನು ದಕ್ಷಿಣದಲ್ಲಿ ಕಂಡಿದ್ದಾರೆ ಹರನ್. ಅವರೇ 'ಕೀಳ್‌ಪುಲಿಯೂರ್ ಶಿವರಾಮನ್' '೬೦೦ ವರ್ಷಗಳ ಅಗಲಿಕೆಯ ನಂತರದ ಭೇಟಿಯ ವಿಸ್ಮಯ' ಎಂದು ಹರನ್ ಅವರು ಬೆರಗಿನಲ್ಲಿ ನುಡಿದಿದ್ದಾರೆ. ತಮಿಳುನಾಡಿನಲ್ಲಿ ಒಟ್ಟು ೩೦೦ ಕುಟುಂಬಗಳಿದ್ದು ಚದುರಿಹೋಗಿದ್ದಾರೆ ಎನ್ನುತ್ತಾರೆ ಶಿವರಾಮನ್. "ನಮ್ಮ ಬೇರು ಹಳ್ಳಿಗಳಲ್ಲಿವೆ. ಮೂಲತಃ ನಾವು ಕೀಳ್‌ಕಾಡಿನವರು. ಅದು ಸಂಕೇತಿಗಳ ಪಾರಂಪರಿಕ ನೆಲೆ. ನಮಗಲ್ಲಿ ೬೦೦ ಎಕರೆ ಜಮೀನಿದ್ದು ಸ್ವಾತಂತ್ರ್ಯ ಹೋರಾಟಕಾಲಕ್ಕೆ ಸಮರ್ಪಿಸಿದೆವು. ಈಗ ಆ ಸಂಬಂಧವಿಲ್ಲ" ಎಂದೂ ಅವರು ಹೇಳಿದ್ದಾರೆ. ಇಡೀ ಸಂದರ್ಶನ ಈ ರೀತಿಯ ಮಹತ್ವವನ್ನು ಹೆಚ್ಚಿಸಿದೆ. 'Sharp nose with complexion. Special feature of a Sanketi' ಎಂಬ ಅವರ ಮಾತು ಸರಿ ! (ಪೂಮಗಾಮೆ ಜನರ ವಿಷಯದಲ್ಲಿ ನೂರಕ್ಕೆ ನೂರರಷ್ಟು ಸರಿ.) ಆಂಡಿ ವಾದ್ಯಾರರ ಬಗೆಗೆ ಅವರ ಮಾತು ಗಮನಾರ್ಹ: "ಸಂಕೇತಿ ಪುರೋಹಿತರ ಆತ್ಮವಿಶ್ವಾಸ ಬಹಳ ದೊಡ್ಡದು. ಆಂಡಿ ವಾದ್ಯಾರರನ್ನೇ ನೋಡಿ. He was an authority. ಶೃಂಗೇರಿ, ಕಂಚಿ ಸ್ವಾಮಿಗಳು ಅವರ ಮನೇಗೆ ಬರೋರು. ಯಾವ ಪ್ರಶ್ನೆಗೂ ಸ್ಥಳದಲ್ಲೇ ಪರಿಹಾರ ಕೊಡುತ್ತಿದ್ದರು. Scholar performer ಎರಡೂ ಆಗಿ ಅವರು ಗಟ್ಟಿಗರಾಗಿದ್ದರು." ತಿರುನೆಲ್‌ವೇಲಿಯ ಟಿ.ಎಸ್. ರಾಜಾಮಣಿಯವರ ಆತ್ಮಕಥೆ ಬಹಳಷ್ಟು ಅಲ್ಲಿನ ವಿಷಯಗಳನ್ನು ನಮಗೆ ತಿಳಿಸುತ್ತದೆ. ಒಟ್ಟಿನಲ್ಲಿ ಸಂಪುಟವು ಸಂಗ್ರಹಯೋಗ್ಯ ಕೃತಿಯಾಗಿದೆ.

ಕಮಿಷನರೇಟ್ ಆಫ್ ಕೊಲಿಜಿಯೇಟ್ ಎಜುಕೇಷನ್ **ಪ್ರೊ. ಕೆ.ಎಸ್. ನರಸಿಂಗರಾವ್**
ಬೆಂಗಳೂರು ಕನ್ನಡ ಪ್ರಾಧ್ಯಾಪಕರು (ನಿವೃತ್ತ)

ಸಂಕೇತಿ: ಬೇಸಾಯದ ಬದುಕು

'ಭಾರತ ಹಳ್ಳಿಗಳ ದೇಶ' - ಎಂದು ಹೇಳುವ ಮಾತು ಇಂದಿಗೂ ಪ್ರಚಲಿತವಿದೆ. ಹಳ್ಳಿ ಎಂದೊಡನೆ ಬೇಸಾಯ, ಅದರ ರೂವಾರಿಗಳಾದ ಮಣ್ಣಿನಮಕ್ಕಳು, ಅವರ ದೈಹಿಕಶ್ರಮವನ್ನವಲಂಬಿಸಿದ ದುಡಿಮೆ, ಬೆಳೆಯುವ ಬೆಳೆಗಳು, ಆದಾಯ-ನಷ್ಟ - ಮುಂತಾದ ವಿಚಾರಗಳು ಮನಸ್ಸಿನಲ್ಲಿ ಸುಳಿದುಹೋಗುತ್ತವೆ. 'ಕೃಷಿಯ ಬದುಕೇ ಬದುಕು' - ಎಂದು ತೃಪ್ತಿಯಿಂದ ಹೇಳುವಂತೆ 'ಬೇಸಾಯ ನೀ ಸಾಯ' ಎಂದು ಬೇಸತ್ತು ಹೇಳುವ ಮಾತುಗಳೂ ಸಾಂದರ್ಭಿಕವಾಗಿ ಭಾರತದ ಪಾರಂಪರಿಕ ಕೃಷಿಯ ಸಾಧ್ಯಾಸಾಧ್ಯತೆಗಳನ್ನು, ಸರಳತೆ-ಜಟಿಲತೆಗಳನ್ನು ಮನಗಾಣಿಸುತ್ತವೆ. ದೇಶದ ಆರ್ಥಿಕಸ್ಥಿತಿಗತಿಯ ನಿರ್ಣಾಯಕಮಾನದಂಡಗಳಲ್ಲಿ ಒಂದಾದ, ಅತ್ಯಂತ ಪ್ರಮುಖವಾದ ಕೃಷಿಕ್ಷೇತ್ರದ ಬಗ್ಗೆ ಆಡಳಿತಗಾರರ, ಸಂಶೋಧಕರ, ರೈತಾಪಿವರ್ಗದ, ಜನಸಮಷ್ಟಿಯ ವಿಚಾರಧಾರೆ ಜಾಗತೀಕರಣದ ಈ ದಿನಗಳಲ್ಲಿ ಅಗತ್ಯವಾಗಿದ್ದು, ಎಲ್ಲ ಹಂತದ ಕೃಷಿ ಸುಧಾರಣೆಗಳ ಚಿಂತನ-ಮಂಥನ ನಡೆದು ಒಕ್ಕಲುಮಕ್ಕಳ, ಕೃಷಿಗಾರರ ಸಾಮಾಜಿಕ-ಆರ್ಥಿಕ ಸ್ಥಿತಿಗತಿ ಉತ್ತಮಗೊಳ್ಳಬೇಕಾಗಿದೆ. ಸರ್ಕಾರಗಳ ವಾರ್ಷಿಕ ಮುಂಗಡಪತ್ರಗಳಲ್ಲಿ ವ್ಯವಸಾಯಸ್ಥರ ಬೇಸಾಯದ ಅಭ್ಯುದಯಕ್ಕೆ ಕೋಟಿಗಟ್ಟಲೆ ಧನವಿನಿಯೋಗ ಮಾಡುವ ಘೋಷಣೆಗಳು ಹಾಗೇ ಉಳಿಯದೆ ತ್ವರಿತಗತಿಯಲ್ಲಿ ಕಾರ್ಯಗತವಾಗಬೇಕಿದೆ. ಕೃಷಿಕಾರರ ಕಷ್ಟ-ನಷ್ಟಗಳು ಸಮಾಜಕ್ಕೆ ತಿಳಿಯದ ಸಂಗತಿಯಲ್ಲ. ಕೃಷಿಭೂಮಿಯ ಫಲವತ್ತತೆಯಿಂದ ಆರಂಭಗೊಂಡು ನೀರಿನ ಆಸರೆ, ಬಿತ್ತನೆ ಬೀಜ, ಗೊಬ್ಬರ, ಕೀಟ ಹಾಗೂ ಕಳ್ಳರ ಕಾಟ, ಇಳವರಿ, ಮಧ್ಯವರ್ತಿಗಳು, ಬೆಲೆಕುಸಿತ, ಪೂರೈಕೆ, ಮುಂತಾದ ಸಮಸ್ಯೆಗಳಿಂದ ನಲುಗಿರುವ ರೈತರ ಪಾಡು ಸರ್ಕಾರ-ಜನತೆಗೆ ಸ್ಪಷ್ಟವಾಗಿ ತಿಳಿದಿದ್ದರೂ ಯಾವುದೋ 'ಅಸಹಾಯಕ ಪರಿಸ್ಥಿತಿ'ಯಲ್ಲಿ ಕೃಷಿಕನಿದ್ದಾನೆ. ಅಂತೆಯೇ ಕೃಷಿಯಲ್ಲಿ ಇರಬಹುದಾದ ಧನ್ಯತೆಯ, ಆನಂದದ ಇನ್ನೊಂದು ಮುಖ - ಭೂಮಿಯನ್ನು ತಾಯಿಯೆಂದು ಗೌರವಿಸಿ, ಉತ್ತು ಬಿತ್ತು ಬೆಳೆದು, ನಷ್ಟದಿಂದ ಕೆಲವೊಮ್ಮೆ ನೊಂದರೂ ನುಂಗಿಕೊಂಡು, ಅದರಲ್ಲೇ ಕಾಯಕನಿಷ್ಠೆ ಮೆರೆದು ಬಾಳುವ ನೇಗಿಲಯೋಗಿಯ ಹಾಡಿನ ಭವ್ಯಚಿತ್ರವೂ ಇದೆ. ಇಂಥ ಬೇಸಾಯಗಾರರ ಪಾಡು-ಹಾಡಿನ ಅನುಭವಚಿತ್ರಣ ಅವರ ಮಾತುಗಳಲ್ಲೇ ದಾಖಲಿಸುವುದು ಮುಂದಿನ ಪೀಳಿಗೆಗೆ, ಸಮಾಜಕ್ಕೆ ಅತ್ಯುಪಯುಕ್ತ ಕಾರ್ಯವಾಗಿದೆ. ಕೃಷಿಯಲ್ಲಿ ತೊಡಗಿದ ಎಲ್ಲ ಜನ-ಜನಾಂಗಗಳ ಕೃಷಿಜೀವನದ ಅನುಭವಗಳು ನಿವೇದನೆಯ, ಮಾತಿನ ಮೂರ್ತರೂಪ ತಳೆದು ಸಾಹಿತ್ಯವಾಗಿ ದೊರೆತಲ್ಲಿ ನಮ್ಮದೇಶದ ಗ್ರಾಮೀಣಭಾಗದ ಸಮಾಜಶಾಸ್ತ್ರೀಯ ಅಧ್ಯಯನಕ್ಕೆ ಪೂರಕವಾಗುವುದರಲ್ಲಿ ಸಂಶಯವಿಲ್ಲ. ಕೃಷಿಕರು ಬಹುಮಟ್ಟಿಗೆ ಜನಸಾಮಾನ್ಯರು. ಧರ್ಮ, ಜಾತಿಯ ಭೇದವಿಲ್ಲದೆ ಹಳ್ಳಿಗಳಲ್ಲಿ ಕೃಷಿಯನ್ನು ಜೀವನಾಧಾರ ವೃತ್ತಿಯನ್ನಾಗಿಸಿ ಜೀವಿಸುತ್ತಿರುವ ಅನ್ನದಾತರ ಅನಿಸಿಕೆಗಳೇನು ಎಂಬುದನ್ನು ಆಧುನಿಕ ಸಮಾಜ ಗಮನಿಸಬೇಕಾಗಿದೆ. ಈ ಸಂಬಂಧ ಆಗಾಗ ಪತ್ರಿಕೆಗಳಲ್ಲಿ, ದೂರದರ್ಶನ ಮುಂತಾದ ಮಾಧ್ಯಮಗಳಲ್ಲಿ ವರದಿ, ಲೇಖನ, ಸಂದರ್ಶನ, ದೃಶ್ಯಾವಳಿಗಳು ಬಿತ್ತರವಾಗುತ್ತಿರುತ್ತವೆ.

ಇದರೊಡನೆ ಕೃಷಿಕರ ಸಂದರ್ಶನ, ಪರಾಮರ್ಶನಗಳು ಪುಸ್ತಕರೂಪದಲ್ಲಿ ಬಂದಲ್ಲಿ ಓದಿಗೆ ಅನುಕೂಲವಾಗಿ ಸಾಹಿತ್ಯಲೋಕದಲ್ಲಿ ಶಾಶ್ವತದಾಖಲೆಯಾಗಿ ಉಳಿಯುತ್ತವೆ. ಈ ನಿಟ್ಟಿನಲ್ಲಿ ಬ್ರಾಹ್ಮಣವರ್ಗದ 'ಸಂಕೇತಿ ಬೇಸಾಯದ ಬದುಕು' - ಕೃತಿ ಶ್ರೀ ವಿಜಯ್ ಅಂಗಡಿ ಹಾಗೂ ಡಾ. ಎಂ.ಎಸ್. ವಿಜಯಾ ಹರನ್‌ರವರ ಪರಿಶ್ರಮದ ಫಲವಾಗಿ ರೂಪುಗೊಂಡಿದ್ದು, ಔಚಿತ್ಯಪೂರ್ಣವಾಗಿದೆ.

'ಸಂಕೇತಿ: ಬೇಸಾಯದ ಬದುಕು' - ಕೃತಿಯಲ್ಲಿ ಒಳಶೀರ್ಷಿಕೆಗಳು ಎರಡುಮುಖಗಳ ಸ್ವರೂಪ ಹೊಂದಿವೆ. ಹಾಸನದ ಆಕಾಶವಾಣಿ ಕೃಷಿರಂಗ ವಿಭಾಗದ ಶ್ರೀ ವಿಜಯ್ ಅಂಗಡಿಯವರು ಸಂಕೇತಿಕೃಷಿಕರೊಡನೆ ನಡೆಸಿದ ಸಂದರ್ಶನ ಸುಮಾರು ಒಂದುನೂರು ಪುಟಗಳಿದ್ದು ಈ ಭಾಗಕ್ಕೆ 'ಅವಲೋಕನ' ಎಂಬ ಹೆಸರು ಅನ್ವರ್ಥವಾಗಿದೆ. ಅನಂತರದಲ್ಲಿ ಡಾ. ಎಂ.ಎಸ್. ವಿಜಯಾ ಹರನ್‌ರವರು ವಿವಿಧಕಾಲಗಳಲ್ಲಿ ವಿವಿಧಲೇಖಕರು, ವಿದ್ವಾಂಸರು ಬರೆದಿರುವ, ಪತ್ರಿಕೆಗಳಲ್ಲಿ ಪ್ರಕಟಿಸಿರುವ ಸಂಕೇತಿ ಜೀವನ, ಕೃಷಿಗೆ ಸಂಬಂಧಿಸಿದ ಲೇಖನಗಳನ್ನು, ವಿಚಾರಗಳನ್ನು ಸಂಕಲಿಸಿದ್ದು 'ಅನೂಚಾನ' ಎಂಬ ಶೀರ್ಷಿಕೆಯಿಂದ ಸವಿಸ್ತಾರದಿಂದ ಕೂಡಿ ಗಮನ ಸೆಳೆಯುವಂತಿದೆ. ತಮಿಳುನಾಡು, ಕರ್ನಾಟಕದ ಬ್ರಾಹ್ಮಣರಲ್ಲಿ ಸಂಕೇತಿಗಳು ನಡೆದುಬಂದ ದಾರಿಯ ಬಗ್ಗೆ, ಸಂಕೇತಿ ಸಮುದಾಯದ ವ್ಯವಸಾಯವಿಧಾನಗಳ ಬಗ್ಗೆ - ಐತಿಹಾಸಿಕ, ಸಾಮಾಜಿಕ, ಸಾಂಸ್ಕೃತಿಕ ಆಯಾಮಗಳ ಹಿನ್ನೆಲೆಯಲ್ಲಿ ಸಂದರ್ಶನ, ಸಂಶೋಧನ, ಪ್ರಕಟಣ ಕಾರ್ಯಗಳಲ್ಲಿ ತಮ್ಮೆಲ್ಲ ಆಸಕ್ತಿಗಳನ್ನು ತೊಡಗಿಸಿಕೊಂಡಿರುವ ಡಾ. ಪ್ರಣತಾರ್ತಿಹರನ್ ಹಾಗೂ ಮೈಸೂರು ಆಕಾಶವಾಣಿ ಕೇಂದ್ರದ ನಿರ್ದೇಶಕರೂ ಡಾ. ಹರನ್ ಅವರ ಶ್ರೀಮತಿಯವರೂ ಆದ ಡಾ. ಎಂ.ಎಸ್. ವಿಜಯಾ ಹರನ್‌ರವರ ಪ್ರೇರಣೆ, ಸಹಕಾರ ಕಾರಣವಾಗಿ ಪ್ರಸ್ತುತ ಕೃತಿ ಪ್ರಕಟಗೊಂಡಿದೆ. "ಸಂಕೇತಿ ಬಳಗದ ಕೃಷಿಯ ಈ ಅಪರೂಪದ ಗ್ರಂಥವು ಜೋಪಾನವಾಗಿ ಸಂಗ್ರಹಿಸಿ ಆಗಾಗ್ಗೆ ಬಳಸಲು ಯೋಗ್ಯವಾಗಿದೆ ಎಂಬುದು ನನ್ನ ಭಾವನೆ" - ಎಂಬ ಲೇಖಕರ ಮಾತು ಗಮನಾರ್ಹ. ಕೃತಿಯ ಮೊದಲಭಾಗ 12-10-2002 ರಿಂದ 15-11-2003ರ ನಡುವೆ ನಡೆಸಿರುವ ಕ್ಷೇತ್ರಕಾರ್ಯವಾಗಿದ್ದು 2010ರಲ್ಲಿ ಪ್ರಕಟಗೊಳ್ಳುತ್ತಿದೆ. ಈ ಅವಧಿಯಲ್ಲಿ ವ್ಯವಸಾಯಸ್ಥ ಸಂಕೇತಿಕುಟುಂಬಗಳ ಜೀವನಚಿತ್ರ ಸ್ಥಿತ್ಯಂತರಗಳನ್ನು ಕಂಡಿರಬಹುದಾದರೂ ವ್ಯವಸಾಯಕ್ಕೆ ಸಂಬಂಧಿಸಿದಂತೆ ಪ್ರಸ್ತುತವೆನ್ನಬಹುದಾದ, ಇಂದು ಮುಂದಿನ ಪೀಳಿಗೆಯವರೂ ಗುರುತಿಸಿಕೊಳ್ಳಬಹುದಾದ ವಿಚಾರಗಳು, ಸಂಗತಿಗಳು ಕೃತಿಯ ಗೌರವವನ್ನು ಹೆಚ್ಚಿಸುತ್ತವೆ. ಒಂದು ಕಾಲದ ಒಂದು ಜನಾಂಗದ ಕೃಷಿಯ ಪ್ರಾದೇಶಿಕ ಆವರಣ ದಾಖಲಾಗಿ ಅಧ್ಯಯನಯೋಗ್ಯವಾಗುವುದೇ ಇಲ್ಲಿಯ ಪ್ರಯೋಜನ. ಕಾವ್ಯಪ್ರಕಾಶಕಾರ ಮಮ್ಮಟ ಕಾವ್ಯ ಪ್ರಯೋಜನಗಳಲ್ಲಿ ಒಂದಾಗಿ 'ವ್ಯವಹಾರವಿದೇ' ಕಾವ್ಯದಿಂದ ವ್ಯವಹಾರಜ್ಞಾನ ಉಂಟಾಗುತ್ತದೆ ಎಂದಿದ್ದಾನೆ. ಅಂತೆಯೇ ಕೃಷಿಕರು ಕೃಷಿಸಂಬಂಧದ ಗ್ರಂಥಗಳನ್ನು ಓದಿದಲ್ಲಿ ವ್ಯವಸಾಯದ ಬಗೆಗೆ ವ್ಯವಹರಿಸುವ ಅರಿವು ಜಾಗೃತವಾಗದೆ ಇರುವುದಿಲ್ಲ. ಲೇಖಕರ 'ಆಗಾಗ್ಗೆ ಬಳಸಲು ಯೋಗ್ಯವಾಗಿದೆ' - ಎಂಬ ಮಾತಿನ ಅರ್ಥ ಇದೇ ಆಗಿದೆ.

'ಅವಲೋಕನ' ವಿಭಾಗದಲ್ಲಿ ಹಾಸನಜಿಲ್ಲೆಯ ಅಗ್ರಹಾರ, ಮಗ್ಗೆ, ನವಿಲೆ, ಮಾದಾಪುರ, ಬಸವಾಪಟ್ಟಣ, ರುದ್ರಪಟ್ಟಣ ಮುಂತಾದ ಸುಮಾರು ಹದಿನೈದು ಗ್ರಾಮಪ್ರದೇಶಗಳಲ್ಲಿ ಕೃಷಿಬದುಕು ನಡೆಸುತ್ತಿರುವ ಸಂಕೇತಿಕುಟುಂಬಗಳನ್ನು ಸಂದರ್ಶಿಸಿ ಅವರ ಅನಿಸಿಕೆಗಳನ್ನು ಇದ್ದಂತೆ ಸಂಗ್ರಹಿಸಿಕೊಡುವ ಪ್ರಾಮಾಣಿಕ ಪ್ರಯತ್ನವಿದೆ. ಅನೇಕ ಕಡೆ ಸಂದರ್ಶನದ ದಿನಾಂಕ, ಸಂದರ್ಶಿಸಿದವರ ವಿಳಾಸ, ದೂರವಾಣಿ ಸಂಖ್ಯೆ ಒದಗಿಸಿರುವುದು ಸಮುಚಿತವಾಗಿದೆ. ಪ್ರತಿಗ್ರಾಮದ ಬೇಸಾಯಗಾರರ ಸಂದರ್ಶನವಿವರ ನೀಡುವ ಮೊದಲು ಒಟ್ಟಾರೆಯಾಗಿ ಆ ಗ್ರಾಮದ ಕೃಷಿಯ ಅನುಕೂಲ-ಅನಾನುಕೂಲಗಳ ಬಗ್ಗೆ ವಿಶೇಷಗಳೇನಾದರೂ ಇದ್ದಲ್ಲಿ ಅದರ ಬಗ್ಗೆ ಆದಷ್ಟು ಸಂಗ್ರಹವಾಗಿ ಮಾಹಿತಿ ನೀಡಲಾಗಿದ್ದು ಸಂದರ್ಶನಕ್ಕೆ ಒಳ್ಳೆಯ ಪೀಠಿಕೆಯನ್ನೊದಗಿಸಿದೆ. ಮಾದಾಪುರದಲ್ಲಿ 'ಅಡಿಕೆಯು ಇಲ್ಲಿ ಪ್ರಮುಖವಾದ ಬೆಳೆಯಾದರೂ ಬತ್ತ, ತಂಬಾಕು ಮತ್ತು ಶುಂಠಿಯನ್ನು ಕೈಬಿಟ್ಟಿಲ್ಲ. ಆಸಕ್ತಿ ಇಲ್ಲಿ ಕುಂದಿಲ್ಲ. ಶೇಷಮೂರ್ತಿಯವರ ಬದುಕು ಮಾದರಿ ಅನ್ನಿಸುತ್ತದೆ' - ಎಂಬ ಟಿಪ್ಪಣಿ ಸಂದರ್ಶನದ ಸಾರಸಂಗ್ರಹದಂತಿದೆ. ಓದುಗರನ್ನು ಓದಿಗೆ ಹಚ್ಚಲೂ ಸಹಾಯಕವಾಗಿದೆ. ಸಂದರ್ಶನದ ಕಡೆಯಲ್ಲಿ 'ನನಗನಿಸಿದ್ದು ಹೀಗೆ...', 'ನಾನು ಕಂಡದ್ದು, ಗಮನಿಸಿದ್ದು', 'ಮುಗಿಸುವ ಮುನ್ನ' - ಮುಂತಾಗಿ ಸಲಹಾರೂಪವಾಗಿ ಕೆಲವು ಅಭಿಪ್ರಾಯಗಳನ್ನು ಕೊಟ್ಟಿರುವುದು ಒಂದು ವಿನೂತನ ತಂತ್ರವಾಗಿ ರೈತ-ಓದುಗರಿಗೆ ತುಂಬಾ ಉಪಯುಕ್ತವಾಗಿದೆ. ನಿದರ್ಶನಕ್ಕೆ - ಅಗ್ರಹಾರದ ನಟೇಶರ ಗಮನ ಸೆಳೆದ ಹಣ್ಣಿನ ತೋಟ, ತಂಬಾಕು ಬೆಳೆಯ ವಿಧಾನಗಳನ್ನು ಗಮನಿಸಿ. 'ಹಣ್ಣಿನ ತೋಟದ ಅಂಚಿನಲ್ಲಿ ಗಿಡಮರಗಳು ಒತ್ತೊತ್ತಾಗಿ ಬೆಳೆಯುತ್ತಿವೆ. ಬಿಸಿಲು, ನೀರು, ಪೋಷಕಾಂಶಗಳು ಸರಿಯಾಗಿ ಸಿಗದೆ ಯಾವೂ ಸರಿಯಾಗಿ ಬರುವುದಿಲ್ಲ. ಅಗತ್ಯವಾದವುಗಳನ್ನು ಉಳಿಸಿಕೊಂಡು ಉಳಿದವುಗಳನ್ನು ಸ್ಥಳಾಂತರಿಸುವುದು ಇಲ್ಲವೇ ತೆಗೆದು ಹಾಕುವುದು ಸೂಕ್ತವಾದುದು'; 'ಮಳೆ ನೀರನ್ನು ಜಮೀನಿನಲ್ಲಿ ನಿಲ್ಲಿಸಿ ಇಂಗಿಸುವ ಕ್ರಮಗಳನ್ನು ಕೈಗೊಳ್ಳುವುದು ಇಂದಿನ ದಿನಗಳಲ್ಲಿ ಅಗತ್ಯವೆನಿಸುತ್ತದೆ' - ಎಂಬ ಸಲಹೆಗಳು ಅರ್ಥಪೂರ್ಣವಾಗಿವೆ. ಇದೇ ರೀತಿ ತೆಂಗಿಗೆ ಸಂಬಂಧಿಸಿದಂತೆ, ಸರಗೂರು ಕೃಷಿಕರ ಆಸಕ್ತಿಯ ಬಗ್ಗೆ, ಬಸವಾಪಟ್ಟಣದ ಬೇಸಾಯಸ್ಥರ ಬದಲಾದ ಜೀವನಕ್ರಮಗಳ ಬಗ್ಗೆ ಲೇಖಕರ ಪರಿಶೀಲನಾತ್ಮಕ ದೃಷ್ಟಿ ಬರವಣಿಗೆಗೆ ಒಂದು ಸೊಗಸನ್ನು ತಂದಿರುವುದಲ್ಲದೆ, ಮಾಹಿತಿಯ ನಿಟ್ಟಿನಿಂದ ಮೌಲಿಕವಾಗಿದೆ. ಸ್ವತಃ ಕೃಷಿ ಪದವೀಧರರಾಗಿ, ಆಳವಾಗಿ ಕೃಷಿಲೋಕವನ್ನು ಅಧ್ಯಯನ ಮಾಡಿರುವ ಶ್ರೀ ವಿಜಯ್ ಅಂಗಡಿಯವರು ಸಂಕೇತಿಜನಾಂಗದ ಕೃಷಿಯ ಒಲವುನಿಲವುಗಳನ್ನು, ಕಷ್ಟಕಾರ್ಪಣ್ಯಗಳನ್ನು, ಆರ್ಥಿಕಸ್ಥಿತಿಯನ್ನು ಸೂಕ್ಷ್ಮವಾಗಿ ಕಂಡು ರೈತಸಮಸ್ಯೆಗಳಿಗೆ ಸೂಕ್ತಪರಿಹಾರೋಪಾಯಗಳನ್ನು ನೀಡಿದ್ದಾರೆ. ಹೊರಜಗತ್ತಿಗೆ ತೆರೆದುಕೊಳ್ಳದ ಸಂಕೇತಿಬೇಸಾಯದ, ಆಧುನಿಕತೆಯ

ಪರಿಣಾಮಗಳಿಗೆ ಒಳಗಾದ ಕುಟುಂಬಗಳ ಚಿತ್ರಣ ನಿಷ್ಠುರವಾದ ಮಾತುಗಳಲ್ಲಿ ಹೊರಹೊಮ್ಮಿದೆ. ಸಂಕೇತಿ ಸಾಂಸ್ಕೃತಿಕನೆಲೆ, ಬತ್ತ, ಶುಂಠಿ, ತೆಂಗು, ವಿಳ್ಳೇದೆಲೆ ಮುಂತಾದ ಬೆಳೆಗಳಿಗೆ ಹೆಸರಾದ ರುದ್ರಪಟ್ಟಣವು ಇಂದು ಎಷ್ಟು ಬದಲಾಗಿದೆ ಎಂಬುದನ್ನು - 'ರುದ್ರರ ಕೊರತೆ — ವೃತ್ತಿಯೇ ಒಗರು', 'ನಶಿಸಿದ ಇಲ್ಲಿಯ ತೊಟ್ಟಿಮನೆ, ಕುಗ್ಗಿದ ಸಂಕೇತಿಗಳ ಜನಸಂಖ್ಯೆ, ವಿದ್ಯಾವಂತರಾಗಿ ನೌಕರಿ ಸೇರಿದವರಲ್ಲಿ ಕೃಷಿ ಬಗೆಗಿನ ನಿರಾಸಕ್ತಿ - ಇವೆಲ್ಲಾ ರುದ್ರಪಟ್ಟಣದಲ್ಲಿ ಕಾಣುತ್ತಿರುವ ಸಂಗತಿಗಳು' - ಎಂಬ ಮೊದಲ ಮಾತುಗಳಲ್ಲಿ ಸಂದರ್ಶನದ ಹೂರಣವನ್ನೇ ಒದಗಿಸಿ ನಿರೂಪಿಸಲಾಗಿದೆ.

ಸಂಕೇತಿಕೃಷಿಯಲ್ಲಿ ಅಡಿಕೆಬೆಳೆಗೆ ಬಹಳ ಪ್ರಾಶಸ್ತ್ಯ. ಅಡಿಕೆಯ ನಾಟಿ, ಪೋಷಣೆ, ರೋಗ, ತುಡಿಕೆ ಮಾಡುವುದಕ್ಕೆ ಸಂಬಂಧಿಸಿದಂತೆ, ಇಳುವರಿ, ಮಾರಾಟ, ಹಿಂದಿನ, ಇಂದಿನ ಅಡಿಕೆ ವ್ಯಾಪಾರ, ಅಡಿಕೆ ತುಡಿಕೆ ಮಾಡುವ ಸರಗೂರಿನ ರೈತರ ಕ್ರಮ - ಇವು ವ್ಯವಸಾಯದ ಯಥಾರ್ಥ ವರದಿಯಾಗಿದ್ದು ನಿಷ್ಕೃಷ್ಟತೆಯಿಂದ ಕೂಡಿವೆ. ಬತ್ತದ ತಳಿ, ಬೆಳೆಯ ಬಗ್ಗೆ, ಬತ್ತದ ಕಣದ ಬಗ್ಗೆ ಸಂಗ್ರಹವಾಗಿ ಮಾಹಿತಿಯಿದೆ. ಮಲ್ಲರಾಜಪಟ್ಟಣದಲ್ಲಿ ವಿಳ್ಳೇದೆಲೆ ಸೊಬಗು - ಉಳಿವೇ ನಲಿವಾಗಿರುವುದರ ವಿವರ ಹೃದ್ಯವಾಗಿದೆ. ಅಡಿಕೆ ತೋಟದಲ್ಲಿ ವಿಳ್ಳೇದೆಲೆ ಬೆಳೆಯುವ, ಇಳಿಸುವ ವಿಧಾನ, ಪಿಂಡಿ ಕಟ್ಟುವ, ಮಾರಾಟದ ಕ್ರಮ, ಪ್ರಶ್ನೋತ್ತರ ರೂಪದಲ್ಲಿದ್ದು ಬೇಸಾಯಸ್ಥರ ಆಚಾರ, ನಂಬಿಕೆಗಳನ್ನು ಮನಗಾಣಿಸುವಂತಿದೆ ('ಸೋನೆ ಇದ್ದಾಗ ಎಲೆ ಕೊಯ್ಯೊದಿಲ್ಲ, ಹಂಬಿಗೆ ಹಾನಿ ಆಗಬಹುದೆಂಬ ನಂಬಿಕೆ ಇದೆ.' 'ಬರೀ ಉಗುರಿನಲ್ಲಿ ಎಲೇನ ಕೊಯ್ಯಬಾರದು..... ಚಪ್ಪಲಿ ಹಾಕಿಕೊಂಡು ತೋಟಕ್ಕೆ ಪ್ರವೇಶ ಮಾಡೋದಿಲ್ಲ') ವಿಳ್ಳೇದೆಲೆ ವ್ಯಾಪಾರದಲ್ಲಿ ಒಳ್ಳೆಯ ಲಾಭವಿರುವ ಸಂಗತಿ, ಇಬ್ಬರು ಕೃಷಿಕರಿಂದ ಲಭ್ಯವಿದ್ದು, 'ಅಡಿಕೆ ಬೆಳೆ ಮಂಕಾದ ಮೇಲೆ ವಿಳ್ಳೇದೆಲೆಗೆ ಪ್ರಾಮುಖ್ಯ ಬಂತು', 'ಹಿಂದೆ ಜನ ಜ್ಞಾನದಾಹಿಗಳಾಗಿದ್ದರು. ಈಗ ಹಣದಾಹ ಹೆಚ್ಚಾಗಿದೆ. ಇದರಿಂದಲೇ ನಾವು ನೆಮ್ಮದಿಯಾಗಿಲ್ಲ' ಎಂಬ ಅವರ ಅನಿಸಿಕೆಗಳು ಇಂದಿನ ವಸ್ತುಸ್ಥಿತಿಗೆ ಕನ್ನಡಿಯಾಗಿವೆ. ಇದೇ ರೀತಿ ತಂಬಾಕು, ಬಾಳೆ, ತೆಂಗು, ತೇಗ ಮುಂತಾದ ಬೆಳೆಗಳ ಪ್ರಸ್ತಾಪ ಪ್ರಾಸಂಗಿಕವಾಗಿ ಆಗಿದೆ. ಎರೆಹುಳು ಗೊಬ್ಬರ ಮಾಡಿ ರಾಸಾಯನಿಕಗಳನ್ನು ಬಳಸದೆ ಬೆಳೆ ಮಾಡುವ ರೈತರು, ಕುರಿಗೊಬ್ಬರದ ಲಭ್ಯತೆ, ಸರಗೂರಿನ ಕೃಷಿಕರ ಪರಿಸರ ಪ್ರಿಯ ಶುದ್ಧ ಕೃಷಿವಿಧಾನ, ಅಡಿಕೆಯಲ್ಲಿ ಕಿತ್ತಳೆ, ಮೂಸಂಬಿ, ನಿಂಬೆ ಮುಂತಾದ ಬೆಳೆ ಬೆಳೆವ ಬಹು ಮಹಡಿ ಬೆಳೆ ಪದ್ಧತಿ, ಹಿಂದಿನಕಾಲದ ಅಳತೆಗಳಾದ ಬಳ್ಳ, ಖಂಡಗ, ಹೇರು, ಸೇರು - ಇವುಗಳ ವಿವರ ವಿಶೇಷ ಮಾಹಿತಿ ಎನ್ನಬಹುದು. ಮೂಲ ಕಸುಬಾದ ಕೃಷಿಯನ್ನು ಸಂಕೇತಿ ಸಮುದಾಯ ಕೈಬಿಟ್ಟು ಜೀವನದ ಬೇರೆ ದಾರಿಗಳನ್ನು ಕಂಡುಕೊಳ್ಳಲು ಮುಂದಾಗಿರುವ ಕಾರಣಗಳು ಆಗಾಗ ಸಂದರ್ಶನಗಳಲ್ಲಿ ವ್ಯಕ್ತವಾಗಿದ್ದು ಇದು ಎಲ್ಲ ಕೃಷಿ ಅವಲಂಬಿತ ಜನಾಂಗಗಳಲ್ಲೂ ಇಂದು ಸರ್ವೇಸಾಮಾನ್ಯವಾಗಿದೆ. ಕೃಷಿಯ ಪರ್ಯಾಯ ಮಾರ್ಗಗಳಿಗೆ ಇನ್ನೂ ಪೂರ್ಣ ತೆರೆದುಕೊಳ್ಳದೆ, ಪಾರಂಪರಿಕ ವಿಧಾನಗಳಲ್ಲೇ ಸಾಗುತ್ತಿರುವ ಕೆಲವು ಕೃಷಿಕರ ಅನುಭವದ ಮಾತುಗಳು ಓದುಗರನ್ನು ತಟ್ಟುತ್ತವೆ: 'ಕೈಮುಟ್ಟಿ ಶ್ರದ್ಧೆಯಿಂದ ದುಡಿದಷ್ಟೂ ಏಳ್ಗೆ ಖಚಿತ', 'ತಂಬಾಕು ಅವಲಂಬನೆಯ ಕೃಷಿ : ಅವಲಂಬನೆಯನ್ನು ಸಂಕೇತಿಗಳು ಇಷ್ಟಪಡಲ್ಲ', 'ನಾವು ತೋಟವನ್ನು ದೇವರಂತೆ ಕಾಣ್ತೇವಿ, ಚಪ್ಪಲಿಯನ್ನು ಹಾಕಿಕೊಂಡು ಒಳಗೆ ಹೋಗಲ್ಲ'. ಸಂದರ್ಶನದುದ್ದಕ್ಕೂ ಪೂರಕವಾಗಿ ಕೊಟ್ಟಿರುವ ಭಾವಚಿತ್ರಗಳು ಅರ್ಥಪೂರ್ಣವಾಗಿವೆ. ಕೆಲವು ಕೃಷಿಕರ ಸಂಗ್ರಹ ವಿವರವಿದ್ದ ಸಂದರ್ಶನಕ್ರಮ ಅನುಸರಿಸದಿರುವುದು ಬಹುಶಃ ಕಾಲಾವಕಾಶವಾಗದ ಕಾರಣವಿರಬಹುದು. ಕೃಷಿ ಸಂಶೋಧನಾ ಪ್ರತಿಷ್ಠಾನದಲ್ಲಿ ಕಾರ್ಪೋರೇಟ್ ಸಲಹೆಗಾರರಾದ ಶ್ರೀ ರಮೇಶ್ ಹರವೆ ಅವರ ಸಂದರ್ಶನ ವಿಸ್ತೃತವಾಗಿ ಒದಗಿಸಿದ್ದರೆ ರೈತರಿಗೆ ಬಹಳ ಪ್ರಯೋಜನವಾಗುತ್ತಿತ್ತು. ಒಟ್ಟಿನಲ್ಲಿ ಶ್ರೀ ವಿಜಯ್ ಅಂಗಡಿಯವರ ಈ ಕ್ಷೇತ್ರಕಾರ್ಯ ರೈತರಿಗೆ, ಸಂಶೋಧಕರಿಗೆ, ಓದುಗರೆಲ್ಲರಿಗೆ ಉಪಯುಕ್ತವಾಗಿದ್ದು ಹಾಸನಜಿಲ್ಲೆಯ ಸಂಕೇತಿಕೃಷಿಯ ಸ್ವರೂಪವನ್ನು ಯಥಾಸ್ಥಿತಿ ಮನಗಾಣಿಸುವಂತಿದ್ದು ಸಾರ್ಥಕ ಬರಹವಾಗಿದೆ.

ಗ್ರಂಥದ ಮುಂದಿನಭಾಗ 'ಅನೂಚಾನ' ಪ್ರತ್ಯೇಕವಾದ ತನ್ನದೇ ಆದ ಸಾಹಿತ್ಯಸ್ವರೂಪವನ್ನು ಹೊಂದಿದ್ದು ಮಾಹಿತಿಭರಿತವಾಗಿದೆ. ರೈತರ ಸಂದರ್ಶನಗಳು, ಸ್ಮರಣಸಂಚಿಕೆಗಳ ಉದ್ಧೃತ ಬರಹಗಳು, ಕವನಗಳು, ಮೈಸೂರು ಜನಗಣತಿ ವರದಿ, ಸಂಕೇತಿಬದುಕನ್ನು ಕುರಿತಾದ ವಿಮರ್ಶೆ, ಸಮೀಕ್ಷೆಗಳು, ಸಂಶೋಧನಾ ಕಡತಗಳ ಉದ್ಧರಣಗಳು, ದೇಶ-ವಿದೇಶಗಳ ಸಂಕೇತಿ ಸಮುದಾಯದ ಉಲ್ಲೇಖಗಳು ಮುಂತಾಗಿ ವೈವಿಧ್ಯಮಯವಾದ ಬರಹಗಳಿಂದ ಕೂಡಿದ್ದು ಆಕರ್ಷಕವಾಗಿದೆ. ಕನ್ನಡಸಾಹಿತ್ಯದಲ್ಲಿ ಬೆಳೆಯೇನೋ ಸಾಕಷ್ಟಿದೆ; ಆದರೆ ಕೊಯ್ಯುವವರು ಕಡಿಮೆ - ಎಂದು ನಮ್ಮ ಹಿರಿಯ ಸಾಹಿತಿಯೊಬ್ಬರು ಉದ್ಗರಿಸಿದಂತೆ - ಸಂಕೇತಿ ಬದುಕು ಮತ್ತು ಕೃಷಿಯ ಬಗ್ಗೆ ಹಿಂದಿನಿಂದಲೂ ಸಾಕಷ್ಟು ಸಂವಾದಗಳು, ವಿಚಾರಗಳು, ಬರಹಗಳಿದ್ದರೂ ಎಲ್ಲವೂ ಎಲ್ಲರಿಗೂ ತಲುಪುವ ಮಾರ್ಗೋಪಾಯಗಳು ಕಡಿಮೆ. ಈ ನಿಟ್ಟಿನಿಂದ 'ಸಂಕಲನ' - 'ಸಂವಹನ' ಅತ್ಯಂತ ಮುಖ್ಯವಾಗುತ್ತದೆ. ಇದೊಂದು ಸಾಹಸದ, ಸಾಧನಾಕಾರ್ಯ. ಸಂಕಲನಕಾರನ ಉತ್ಸಾಹ, ಆಸಕ್ತಿ, ಶ್ರಮ, ವ್ಯಾಪಕವಾದ ಅಧ್ಯಯನಶೀಲತೆಯಿಂದ ಮಾತ್ರ ಇಂಥ ಜನೋಪಯೋಗಿ ಕಾರ್ಯಗಳು ಸಾಧ್ಯ. ಇದು ಬಣ್ಣಬಣ್ಣದ ಮಣಿಗಳನ್ನು ಆಯ್ದು ಒಂದು ಕ್ರಮದಲ್ಲಿ ದಾರದಲ್ಲಿ ಪೋಣಿಸಿ ಅದಕ್ಕೆ ಸುಂದರವಾದ ಹಾರದ ಸೊಬಗನ್ನು ತಂದುಕೊಡುವ ಕಲೆಯಂತೆ. ಡಾ. ಎಂ.ಎಸ್. ವಿಜಯಾ ಹರನ್‌ರವರು ಸಂಕೇತಿ ಕೃಷಿ, ಬದುಕಿನ ಸಾಹಿತ್ಯದ ಸಂಪಾದನಾ ಕಾರ್ಯವನ್ನು ವ್ಯವಸ್ಥಿತವಾಗಿ ಕೈಗೊಂಡು ಯಶಸ್ವಿಯಾಗಿದ್ದಾರೆ. ಯಾವುದು ಪರಂಪರೆಯನ್ನು ಎಡೆಬಿಡದೆ ಅನುಸರಿಸುವುದೋ, ಅಭ್ಯಾಸ, ಅಧ್ಯಯನದಲ್ಲಿ ಅತೀತವಾದ ಆಸಕ್ತಿಯುಳ್ಳದ್ದೋ ಅದು 'ಅನೂಚಾನ'. ಸಂಕೇತಿ ಜೀವನ ಪರಂಪರೆಯ ಅನೇಕ

ಸಮೃದ್ಧ ವರ್ಣಚಿತ್ರಗಳಿಂದ ಕೂಡಿರುವ ಈ ಗ್ರಂಥಭಾಗಕ್ಕೆ 'ಅನೂಚಾನ' - ಎಂದು ಹೆಸರಿಸಿರುವುದು ಒಪ್ಪುವಂತಿದೆ.

ತಮಿಳುನಾಡಿನಿಂದ ಕರ್ನಾಟಕಕ್ಕೆ ವಲಸೆ ಬಂದ ನಾಚಾರಮ್ಮನ ಜೀವನ ಚರಿತ್ರೆಯ (ಶ್ರೀ ಎಂ. ಕೇಶವಯ್ಯ, 1938) ಮೊದಲ ಲೇಖನ ಸಂಕ್ಷಿಪ್ತವಾಗಿದ್ದರೂ ಮೊದಲಿನಿಂದಲೂ ಭೂವ್ಯವಸಾಯ ಹಾಗೂ ವೇದಶಾಸ್ತ್ರಗಳ ಅಭ್ಯಾಸದ ಜ್ಞಾನದಾಹ ಸಂಕೇತಿವರ್ಗಕ್ಕೆ ಕರಗತವಾಗಿತ್ತು ಎಂಬುದನ್ನು ಸಾರಿ ಹೇಳುತ್ತದೆ. ಟಿಪ್ಪುಸುಲ್ತಾನನಿಂದ ಜಹಗಿರಿ ಪಡೆದು, ಕೃಷ್ಣರಾಜ ಒಡೆಯರ ಆಳ್ವಿಕೆಯ ಅವಧಿಯಲ್ಲಿ ಕಾರಂಜಿಕೆರೆ ನಿರ್ಮಾಣ, ಅನಂತರದಲ್ಲಿ ಮೈಸೂರಿನಲ್ಲಿ 'ಅಂಚೆ ಅಮೃತ ಮಹಲ್ ಭಕ್ಷಿ'ಯಾಗಿ ನೇಮಕಗೊಂಡು ಹಲವಾರು ಸಮಾಜ ಸೇವಾಕಾರ್ಯಗಳನ್ನು ಮಾಡಿರುವ ತಿಪ್ಪಯ್ಯ ಅವರನ್ನು 'ಅಂಚೆ ತಿಪ್ಪಯ್ಯ' ಎಂದೇ ಕರೆಯುವುದುಂಟು. ಇವರ ವ್ಯಕ್ತಿಚಿತ್ರ ಸಂಗ್ರಹವಾದರೂ ಅವರ ಸಾಧನೆಯನ್ನು ಎತ್ತಿತೋರಿಸುವಂತಿದೆ. "ಮಳೆ ನಮ್ಮಲ್ಲಿ ಬೀಳದೆ ಮುಂದೆ ಹೋದಾಗ 'ಹಂಗಾಮಿ ಆಯ್ತು' ಎನ್ನುತ್ತೇವೆ." 'ಅಡಿಕೆಮರಕ್ಕೆ ತೂಕ (ನೀರು)' ಹಾಕುವ ವ್ಯಾಯಾಮ ಒಂದೇ ಸಾಕು. ಅದು ಸೂರ್ಯನಮಸ್ಕಾರ ಮಾಡಿದ್ದಕ್ಕೆ ಸಮ. ಸರ್ವಾಂಗಕ್ಕೂ ಅದು ಒಳ್ಳೆಯದು. 'ತೆಂಗು ತೇಲಿಸಿ ನೆಡು, ಅಡಕೆ ಆಳಕ್ಕೆ ನೆಡು, ಬಾಳೆ ಬಗದು ನೆಡು' ಮುಂತಾದ ಸ್ವಂತಪರಿಶ್ರಮದ ವ್ಯವಸಾಯಸ್ಥರ ಸ್ವಾನುಭವಾಮೃತ 'ಅವರವರ ಮಾತಿನಲಿ' ಭಾಗದಲ್ಲಿ ಕಾಣಬಹುದು. ಸಂಕೇತಿಗಳ ಅತಿಥಿ ಸತ್ಕಾರ, ಅಡುಗೆ, ಊಟ, ಹೆಂಗಸರು ಬಡಿಸುವ ವೈಖರಿ, ಜನಿವಾರ ಮಾಡುವುದು, ಗರಡಿ ಸಾಧನೆ ಇನ್ನಿತರ ಸಂಕೇತಿ ಹವ್ಯಾಸಗಳ ಬಗ್ಗೆ, ವ್ಯವಸಾಯ ವೃತ್ತಿಯ ಧ್ಯೇಯದ ಬಗ್ಗೆ, ಸಂಘಜೀವನದ ಬಗ್ಗೆ ಮೆಚ್ಚುವ ಮಾತುಗಳಿವೆ. 'ವ್ಯವಸಾಯಕ್ಕೆ ಪ್ರಾಣಿಗಳನ್ನು ಉಪಯೋಗಿಸದೆ, ಕೈಕಾಲುಗಳನ್ನು ಬಳಸಿ ಸ್ವಂತಪರಿಶ್ರಮದಿಂದ ಬಾಳಬೇಕು ಎಂಬುದು ಸಂಕೇತಿಗಳ ಧ್ಯೇಯವಾಗಿತ್ತು. ಸ್ವಾವಲಂಬನೆ ಇವರ ಜೀವನದ ಗುರಿ.' 'ಸಂಕೇತಿಗಳ ಸಾಂಘಿಕಜೀವನದ ಸಾರ ಒಗ್ಗಟ್ಟು, ಪರಸ್ಪರ ಸಹಕಾರ ಇವುಗಳೇ ಆಗಿದ್ದವು'. ಪ್ರೊ. ಕೆ.ಎಸ್. ಕೃಷ್ಣಮೂರ್ತಿ ಅವರ 'ಸಂಕೇತಿ ಸಂಪದ' (1994) ಗ್ರಂಥದಿಂದ ತೆಗೆದ ಭಾಗ ಸಂಕೇತಿ 'ಗುರುಶಿಷ್ಯ ಪರಂಪರೆ' - ಗುರು ಹೇಳುವ ವೇದಮಂತ್ರವನ್ನು ಶಿಷ್ಯರು ಆಲಿಸುತ್ತಾ, ಹೇಳುತ್ತಾ, ಕಲಿಯುತ್ತಾ ಸಾಗುವ ರೀತಿ 'ಕಿವಿಗಳಿಗೆ ಇಂಪು, ಮೆದುಳಿಗೆ ತಂಪು. ಪ್ರಕೃತಿಯ ಮಡಿಲಲ್ಲಿ ವೇದೋಪಾಸನೆ, ಇದುವೆ ನಾದೋಪಾಸನೆ' - ಎಂಬ ಮಾತುಗಳಲ್ಲಿ ಆ ಪರಂಪರೆಯ ಚಿತ್ರ ಮೂಡುವಂತಿದೆ.

ಡಾ. ಬಿ.ಎಸ್. ಪ್ರಣತಾರ್ತಿಹರನ್ ಸಂಪಾದನೆಯ 'ಸಂತುಷ್ಟಿ'ಯಲ್ಲಿನ ಶ್ರೀ ಆರ್.ಎಲ್. ಅನಂತರಾಮಯ್ಯನವರ ರುದ್ರಪಟ್ಟಣದ ಮಧುರ ನೆನಪುಗಳು ಅತ್ಯಂತ ಸಹಜವಾಗಿ ಓದುಗರಿಗೆ ಮುದವೀಯುವಂತಿವೆ. 'ಸಂಸಕ್ತ' ಸಂಚಿಕೆಯ "ಹೋರಾಟಗಾರನ ನೆನಪುಗಳು" - ಭಾಗದಲ್ಲಿ ದೇಶಕ್ಕಾಗಿ ಸಂಪತ್ತು, ಜಮೀನು ವಿಲೇವಾರಿಯಾದ ಕಥನದಲ್ಲಿ ನಿಜಕ್ಕೂ ಸಾಧಕನೊಬ್ಬನ ಬದುಕು ಮನಕರಗಿಸುವಂತಿದೆ. ಬಾಗಾಯ್ತು ಕೃಷಿನಿರ್ವಹಣೆ, ತಮಿಳುನಾಡು, ಕರ್ನಾಟಕದ ಸಂಕೇತಿಗಳಲ್ಲಿ ವಲಸೆಯಿಂದುಂಟಾದ ಭಿನ್ನತೆ - ಇವು ಆ ಜನಾಂಗದ ವಿಕಾಸ ನಿರೂಪಿಸುತ್ತಿವೆ. ಬೆಟ್ಟದಪುರದಲ್ಲಿ ಶಾಸ್ತ್ರಿಯವರು ತಮ್ಮ ತೋಟಕ್ಕೆ ಸೇರಿದಂತೆ ಒತ್ತುವರಿ ಮಾಡಿದ್ದಾರೆ ಎಂಬ ಸರ್ವೆ ಇಲಾಖೆಯ ಆಪಾದನೆಗೆ ಸಂಬಂಧಿಸಿದಂತೆ ಮಾಸ್ತಿಯವರ 'ಒಂದು ತಕರಾರ್ ತಖ್ತೆ' ಒಂದು ಸಣ್ಣ ಕಥೆಯೇ ಆಗಿ ಶಾಸ್ತ್ರಿಯವರ ಪ್ರಾಮಾಣಿಕತೆಯನ್ನು ಚಿತ್ರಿಸುತ್ತದೆ. ಸಂಸ್ಕೃತಗ್ರಾಮ ಮತ್ತೂರಿನ ಸಂಕೇತಿಗಳ ಸಂಸ್ಕೃತಭಾಷೆಯ ಬಳಕೆಯ ವೈಶಿಷ್ಟ್ಯ, ಪ್ರಜಾವಾಣಿ ಭೂಬಾಣದಲ್ಲಿ ಬಂದಿರುವ ಪತ್ರಿಕೆ ಸಮಾಚಾರ, ಸಂಕೇತಿ ಭಾಷೆಯಲ್ಲಿನ ಸಂಗ್ರಹಬರಹಗಳು ಮನ ಸೆಳೆಯುವಂತಿವೆ. ಸಂಕೇತಿ ಜನಾಂಗದ ಸುಸಂಸ್ಕೃತಿ ಇಂಥ ಚಿತ್ರಣಗಳಲ್ಲಿ ಮೂಡಿದೆ. 'ಪ್ರಕೃತಿ ಮತ್ತು ನಾನು' - ಲೇಖನದಲ್ಲಿ ಕಾವ್ಯಮಯ ಗದ್ಯದ ಭಾವಚಿತ್ರಣವಿದೆ. ಡಾ|| ಬಿ.ವಿ. ಸುಧಾಮಣಿಯವರು ನಡೆಸಿರುವ ಓರ್ವ ವಯೋವೃದ್ಧರ ಕೃಷಿಯ ಅನುಭವದ ಸಂದರ್ಶನ, ಅಂತರ್ರಾಷ್ಟ್ರೀಯ ಸಮ್ಮೇಳನದ ಅನುಭವ, 'ಸಂಕೇತಿ' ಶಬ್ದದ ನಿಷ್ಪತ್ತಿಯ ವಿಚಾರಗಳು ಗಮನಾರ್ಹವಾಗಿವೆ. ಜಟ್ಟಿಯ ಕೈಯಲ್ಲೂ ಸೋಲಿಸಲಾಗದ ಅಪ್ಪಾಜಿಭಟ್ಟನ ಆಳ್ತನ (ಕಥಾವಸ್ತುವಾಗಿ ಸಂಕೇತಿಗಳು) ಸಂಕೇತಿಗಳ ಸಾಹಸಪ್ರವೃತ್ತಿಗೆ ಸಾಕ್ಷಿಯಾಗಿದೆ.

ಕರ್ನಾಟಕ ಹೊರತಾಗಿ ತಮಿಳುನಾಡು, ಕೇರಳದ ದಕ್ಷಿಣಭಾರತದ ಕೆಲ ಗ್ರಾಮಪ್ರದೇಶಗಳಲ್ಲಿ ಡಾ. ಬಿ.ಎಸ್. ಪ್ರಣತಾರ್ತಿಹರನ್‌ರವರು ನಡೆಸಿರುವ ಸಂಕೇತಿ ಜನಾಂಗದ ಕೃಷಿಯ ಕ್ಷೇತ್ರಕಾರ್ಯವರದಿ ಈ ಗ್ರಂಥದ ಬೆಲೆಯುಳ್ಳ ಒಂದು ವಿಶೇಷ ಸಂಕಲನ ಎನ್ನಬಹುದು. ಆಧುನಿಕತೆ ಕಾರಣವಾಗಿ ಗ್ರಾಮಜೀವನ ತೊರೆದು ನಗರ ಸೇರಿರುವ ಸಂಕೇತಿ ಕುಟುಂಬಗಳ ನಿದರ್ಶನಗಳು ಈ ಸಂದರ್ಶನಗಳಲ್ಲಿ ದೊರೆಯುತ್ತವೆ. ಎಲತ್ತೂರು, ಅಯ್‌ಕುಡಿ, ಶಾಂಬವರ್ ವಡಹರೈ, ಶೆಂಕೊಟ್ಟೈ ಮುಂತಾದ ಪ್ರದೇಶಗಳ ಕೃಷಿಕರ ಐತಿಹಾಸಿಕ ಜೀವನವಿವರ ಕೆಲವರ ವಂಶವೃಕ್ಷದೊಡನೆ ನೀಡಲಾಗಿದೆ. ಕಾಲಡಿಯಿಂದ ಸಂಕೇತಿ ನೆಲೆಯನ್ನು ಗುರುತಿಸಿ, ಘಟ್ಟದ ಕೆಳಗೆ ಸಂಕೇತಿ ಬದುಕಿನ ವಿಸ್ತಾರವಿರುವುದಾದರೂ ಅದರ ಬೇರುಗಳು ಘಟ್ಟಗಳಲ್ಲಿತ್ತು ಎಂಬ ವಿಚಾರದೊಡನೆ ಬ್ರಾಹ್ಮಣರಲ್ಲಿ ಸಂಕೇತಿ ಚಹರೆಯ ಬಗ್ಗೆ ಮತ್ತು ಅಮಿಶ್ರಿತ ಸಂಕೇತಿ ಮನೆತನಗಳ ಲಕ್ಷಣದ ಬಗ್ಗೆ ಅಧ್ಯಯನಯೋಗ್ಯ ಸಂಗತಿಗಳನ್ನು ಪ್ರಸ್ತಾಪಿಸಲಾಗಿದೆ. ಸಂದರ್ಶನವೊಂದರಲ್ಲಿ ಪಟ್ಟಿಮಾಡಿರುವ ಸಂಕೇತಿಗಳ ಸ್ವಭಾವ ಅಂಥ ಬದುಕನ್ನು ಬಾಳಿದ ಎಷ್ಟೋ ಕುಟುಂಬಗಳ, ವ್ಯಕ್ತಿಗಳ ಆತ್ಮಕತೆಗಳನ್ನು ನೆನಪಿಸುವಂತಿದೆ. ನಗರೀಕರಣದಿಂದ ಸಂಕೇತಿಗಳು ಗ್ರಾಮಜೀವನಕ್ಕೆ ವಿಮುಖವಾದರೂ, ಹಿಂದಿನ ಸುಸಂಸ್ಕೃತ ಪರಂಪರೆ ಮರೆಯಾಗುತ್ತಿದ್ದು ಇದರಿಂದ ಬೇಸರವಾಗಬಹುದಾದರೂ ಸಂಕ್ರಮಣಾವಸ್ಥೆ ಅನಿವಾರ್ಯವಾದುದರಿಂದ ವಸ್ತುಸ್ಥಿತಿಯನ್ನು ಒಪ್ಪಿ ಮುಂದೆ ಸಾಗಬೇಕಾಗುತ್ತದೆ. ಎಂತಲೇ ಡಾ. ಹರನ್‌ರವರು - "ಸಂಕೇತಿಗಳ ಮೂಲದ್ರವ್ಯವಿರುವುದು ಈ

ಚಲನಶೀಲತೆಯಲ್ಲಿ. ವಿಕಾಸಕ್ಕೆ ಮುಖಮಾಡಿದ ಗತಿಶೀಲತೆಯಲ್ಲಿ. ಇದು ಬ್ರಾಹ್ಮಣರಿಗೆ ವಿಶಿಷ್ಟವಾದ ಸಾಮಾನ್ಯ ಗುಣ. ತೀವ್ರವಾಗಿ ತೊಡಗಿಸಿಕೊಂಡಂತೆ ಕಾಣುವಾಗಲೇ ಈ ಜಂಗಮತೆಯನ್ನು ಲೀಲಾಜಾಲವಾದ ಜೀವನವಿಧಾನವಾಗಿ ಮಾಡಿಕೊಳ್ಳುವುದರಲ್ಲಿ ಸಂಕೇತಿಗಳ ವಿಶಿಷ್ಟತೆ ಇದೆ" ಎಂದು ಪರಾಮರ್ಶಿಸಿದ್ದಾರೆ. ಮುಂದೆ ಬಸವಾಪಟ್ಟಣದ ಕೆಲ ವ್ಯವಸಾಯಗಾರರ ಅನಿಸಿಕೆಗಳಿದ್ದು ಅದರಲ್ಲಿ ಅಡಿಕೆ ತುಡಿಕೆಯ ಬಗ್ಗೆ ನುರಿತ ಉದ್ಯಮಿಯೊಬ್ಬರ ನಿರೂಪಣೆಯಿದ್ದು ಅಡಿಕೆ ಸಂಸ್ಕರಣ ವಿಧಾನ, ವ್ಯಾಪಾರ ವ್ಯವಹಾರದ ರೀತಿ ನೀತಿಗಳ ಅತ್ಯುಪಯುಕ್ತ ಉಚಿತ ಮಾಹಿತಿ ಆಗಿದೆ. ಹಾಸನಜಿಲ್ಲೆಯ ಸಂದರ್ಶನಗಳಲ್ಲದೆ ಕರ್ನಾಟಕದ ಇತರ ನಗರಗಳಲ್ಲಿನ ಕೃಷಿಕರ ಸಂದರ್ಶನಗಳೂ ಈ ಸಂಕಲನದಲ್ಲಿವೆ. 'ನಗರಗಳ ಕೈ ತೋಟಗಳು' - ಶೀರ್ಷಿಕೆಯಲ್ಲಿ 'ಪುಟ್ಟಣ್ಣ ಶೂಟಿಂಗ್ ಮನೆ' - ಭಾವಚಿತ್ರಗಳೊಡನೆ ಪುಟ್ಟಣ್ಣನವರ ಶಿಷ್ಯರೊಬ್ಬರ ಗುರುಭಕ್ತಿ, ಸಾಧನೆಗೆ ದ್ಯೋತಕವಾಗಿದೆ. ಕೃಷಿಕನಾಗುವವನಿಗೆ ನೀಡಿರುವ ಅಮೂಲ್ಯ ಸಲಹೆಗಳಂತೂ ಕೃಷಿಕರು ಬರೆದಿಟ್ಟುಕೊಳ್ಳಬೇಕಾದದ್ದು. 'ಹಿತ್ತಲತೋಟ', 'ಆರೋಗ್ಯವನ'ಗಳ ಪರಿಚಯ ಮೌಲಿಕವಾದದ್ದು. ಔಷಧಯುಕ್ತ ಗಿಡಮೂಲಿಕೆಗಳು, ಪರಿಮಳ ಪತ್ರಪುಷ್ಪಗಳಿಂದ ಕೂಡಿರುವ ಬೆಂಗಳೂರಿನ ದೇವರಗುಡ್ಡ ಆರೋಗ್ಯವನ "ಒಂದು ದಿನದ ಸಾಧನೆಯಲ್ಲ; ಒಂದು ಜೀವಿತದ ತಪಸ್ಸು. ಇದು ಕೇವಲ ಹವ್ಯಾಸಕ್ಕಾಗಿ ಮಾಡಿದ ಕೆಲಸವಲ್ಲ, ರಾಷ್ಟ್ರಕ್ಕೆ ಅರ್ಪಣೆ ಮಾಡಲೆಂದು ಮಾಡಿದ ಹಲವು ದಶಕಗಳ ಯೋಜನೆ" - ಎಂಬ ಮಾತಿನಲ್ಲಿ ದೇಶಭಕ್ತಿ, ಸೇವಾದೃಷ್ಟಿ, ಸಾಮಾಜಿಕ ಪ್ರಜ್ಞೆ ಅಡಗಿದೆ.

ಹೊರದೇಶದಲ್ಲಿ ಅಮೆರಿಕಾ ಸಂಯುಕ್ತ ಸಂಸ್ಥಾನದಲ್ಲಿ ಡಾ. ಹರನ್‌ರವರು ನಡೆಸಿರುವ ಸಂದರ್ಶನವೂ ಗ್ರಂಥದ ಕಡೆಯಲ್ಲಿದ್ದು ಡಾ. ಕೃಷ್ಣ ಸುಬ್ಬರಾವ್‌ರವರ ಸಂಕ್ಷಿಪ್ತವಾದ ಜೀವನ ಚಿತ್ರ ಕೊಟ್ಟು ಕೃಷಿಕ್ಷೇತ್ರಕ್ಕೆ ಶ್ರೀಯುತರ ಕೊಡುಗೆಯನ್ನು ಹಲವು ನಿದರ್ಶನಗಳಿಂದ ವಿವರಿಸಿದ್ದಾರೆ. ಗೋಧಿಸಸಿಗೆ ಖಾಯಿಲೆಯಿದ್ದಾಗ, ಇಲ್ಲದಿದ್ದಾಗ ಇಳುವರಿ ಹೇಗೆಂಬುದನ್ನೂ ಎರಡು ಎಲೆಗಳಿಂದಲೇ ಎಲ್ಲ ಫಸಲು ಹೇಗೆ ಪಡೆಯಬಹುದೆಂಬುದನ್ನೂ ಸಂಶೋಧಿಸಿರುವುದು, ಒಂದೇ ಸಸ್ಯದಲ್ಲಿ ಔಷಧಿಯೂ ಇದೆ ಮತ್ತು ಕ್ರಿಮಿನಾಶಕ ಗುಣವೂ ಇದೆ ಎಂಬ ಸಂಶೋಧನೆಯನ್ನು ಅಮೆರಿಕಾದಲ್ಲಿ ಕನ್ನಡದವರೊಬ್ಬರು ಮಾಡಿರುವುದು ಹೆಮ್ಮೆಯ ಸಂಗತಿಯಾಗಿದೆ. ಅದೇ ಕೃಷಿಸಂಶೋಧಕರ ಲೇಖನದ ಅನುವಾದಿತ ಲೇಖನ 'ಜೈವಿಕ ಅಥವಾ ಸಾಂಪ್ರದಾಯಿಕ ಕೃಷಿ: ಒಂದು ಇನ್ನೊಂದಕ್ಕಿಂತ ಉತ್ತಮವೆ?' - ಒಂದು ವೈಚಾರಿಕ ಲೇಖನವಾಗಿದ್ದು ಕೇವಲ ಬೇಸಾಯಗಾರರಿಗೆ ಮಾತ್ರವಲ್ಲದೆ ಎಲ್ಲರಿಗೂ ಬೆಳೆಯ, ಆರೋಗ್ಯದ ಬಗ್ಗೆ ಮಾರ್ಗದರ್ಶನ ತೋರುವ ಬರವಣಿಗೆಯಾಗಿದೆ. ಡಾ. ಹರನ್ ಸಂಪಾದನೆಯ 'ಸಂಕೇತಿ: ಶತಮಾನದ ಪತ್ರಗಳು' ಹಾಗೂ 'ಸಂಕೇತಿ : ಒಂದು ಅಧ್ಯಯನ' ಗ್ರಂಥಗಳಿಂದ ಅನೇಕ ಉದ್ಧೃತಭಾಗಗಳಿವೆ. ಕಡೆಯಲ್ಲಿ 'ಸಂಕೇತಿ ಕೃಷಿಯ ವಿಭಿನ್ನ ನೆಲೆಗಳು' - ಗ್ರಂಥದಿಂದ ಬಹಳಷ್ಟು ಕೃಷಿಕರಾಡಿದ ಮಾತುಗಳು ಸಂಗ್ರಹಿತವಾಗಿವೆ.

ಸಂಕೇತಿ ಬದುಕಿನ, ವ್ಯವಸಾಯದ ವಿವಿಧ ಕಾಲದ, ನಾನಾ ಆಯಾಮಗಳು ಈ ಸಂಕಲನದ ಸಂದರ್ಶನ, ಲೇಖನ, ಪರಿಚಯ, ಕವನಗಳಲ್ಲಿ ಹುದುಗಿವೆ. ಇಂಥ ಸಂಕಲನಗಳ ಆಶಯ, ಉದ್ದೇಶಗಳಾದರೂ ಬ್ರಾಹ್ಮಣವರ್ಗದ ಸಂಕೇತಿಜನಾಂಗದ ಸಾಮಾಜಿಕ, ಸಾಂಸ್ಕೃತಿಕ ನೆಲೆಬೆಲೆಗಳನ್ನು ಗೊತ್ತುಪಡಿಸುವುದಾಗಿದೆ. 'ಅನೂಚಾನ'ದ ಸಂಕಲನಗಳಲ್ಲಿ ವಸ್ತುವೈವಿಧ್ಯತೆಯಿದ್ದು ಡಾ. ಎಂ.ಎಸ್. ವಿಜಯಾ ಹರನ್‌ರವರು ಸಹೃದಯ ಓದುಗರಿಗೆ ಸೂಕ್ತ ಭಾವಚಿತ್ರಗಳನ್ನೊಳಗೊಂಡ ಒಂದು ಸುಂದರಕೃತಿಯನ್ನು ಒದಗಿಸಿದ್ದಾರೆ. 'ಸಂಕೇತಿ: ಬೇಸಾಯದ ಬದುಕು' - ಗ್ರಂಥದ ಇದೊಂದು ಸಾಮಾನ್ಯಅವಲೋಕನವಷ್ಟೆ. ವಿವರಗಳಿಗೆ, ವಿಚಾರಕ್ಕೆ ವಾಚಕರು ಕೃತಿಯನ್ನೇ ಓದಬೇಕು.

ವಿಶ್ವವಿದ್ಯಾನಿಲಯ ಸಂಜೆ ಕಾಲೇಜು
ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು

ಡಾ|| ಬಿ. ಚನ್ನಕೇಶವ
ಸಂಸ್ಕೃತ ಪ್ರಾಧ್ಯಾಪಕರು (ನಿವೃತ್ತ)

ಸಂಕೇತಿ ಕೃಷಿಯ ವಿಭಿನ್ನನೆಲೆಗಳು

ವಿದ್ವಾನೇವ ವಿಜಾನಾತಿ ವಿದ್ವಜ್ಜನಪರಿಶ್ರಮಮ್ |
ನ ಹಿ ವಂಧ್ಯಾ ವಿಜಾನಾತಿ ಗುರ್ವೀಂ ಪ್ರಸವವೇದನಾಮ್ || *ಕುವಲಯಾನಂದ*

ವಿದ್ವಜ್ಜನರ ಪರಿಶ್ರಮವನ್ನು ವಿದ್ವಾಂಸನು ಮಾತ್ರ ತಿಳಿಯಬಲ್ಲನು. ಹೆರಿಗೆಯ ತೀವ್ರವಾದ ವೇದನೆಯು ಬಂಜೆಗೆ ತಿಳಿಯುವುದಿಲ್ಲ.

ಸ್ವಾತಂತ್ರ್ಯಪೂರ್ವಭಾರತದಲ್ಲಿ ಸಾಮಾನ್ಯವಾಗಿ ಬ್ರಾಹ್ಮಣರು ಕೃಷಿಯಿಂದಲೋ, ಪಾರಂಪರಿಕವಾಗಿ ತಾವು ಕಲಿತಿರುವ ವಿದ್ಯೆಗಳಿಂದಲೋ ಇಲ್ಲಾ

ಬಹುವಿರಳವಾಗಿ ದೊರೆಯುತ್ತಿದ್ದ ಅರಮನೆಯ ನೌಕರಿಯಿಂದಲೋ ಜೀವನ ಸಾಗಿಸುತ್ತಿದ್ದರು. ಬ್ರಾಹ್ಮಣರ ಒಂದು ಉಪಪಂಗಡವಾದ ಸಂಕೇತಿ ಜನಾಂಗಕ್ಕೆ ಪ್ರಾಚೀನಕಾಲದಿಂದಲೂ ವ್ಯವಸಾಯವೇ ಮುಖ್ಯ ಕಸುಬು. ಇಲ್ಲಿ ಸಂಕೇತಿಗಳಿಗೆ ಸಂಬಂಧಿಸಿದಂತೆ ವ್ಯವಸಾಯವೆಂದರೆ ಪ್ರಧಾನವಾಗಿ ಅಡಿಕೆ, ತೆಂಗು, ಬಾಳೆ, ವಿಳ್ಳೇದೆಲೆ ಮತ್ತು ಭತ್ತ ಇವುಗಳನ್ನು ಬೆಳೆಯುವುದು. ಹೀಗೆ ಬೆಳೆದ ಈ ಬೆಳೆಗಳ ಜೊತೆಜೊತೆಗೇ ಕೆಲವರು ಸಹಜವಾಗಿ ಅವುಗಳ ಕ್ರಯವಿಕ್ರಯವ್ಯವಹಾರವನ್ನೂ ರೂಢಿಸಿಕೊಂಡರು. ಎಲ್ಲೋ ಅಲ್ಲೊಬ್ಬರು ಇಲ್ಲೊಬ್ಬರು ವಿರಳವಾಗಿ ತಮ್ಮ ಕುಲಕ್ರಮಾಗತವಿದ್ಯೆಗಳಾದ ವೇದ, ವೈದ್ಯ, ಜ್ಯೋತಿಷ, ಸಂಗೀತ ಮುಂತಾದವನ್ನು ಕೃಷಿಯ ಜೊತೆಯಲ್ಲಿ, ಕೆಲವೊಮ್ಮೆ ವಿವಿಕ್ತವಾಗಿಯೂ, ವೃತ್ತಿಯನ್ನಾಗಿ ಮಾಡಿಕೊಂಡಿದ್ದರು. ನಮ್ಮ ಜ್ಞಾನ ತಲಪಬಹುದಾದಷ್ಟು ಪ್ರಾಚೀನಕಾಲದಿಂದಲೂ ಕೃಷಿ ಮತ್ತು ಅದನ್ನೇ ಆಧರಿಸಿದ ಕೆಲವು ಉಪಕಸುಬುಗಳು ಸಂಕೇತಿ ಜನಾಂಗದ ಪ್ರಧಾನವಾದ ಜೀವನೋಪಾಯಗಳಾಗಿದ್ದವೆಂಬುದರಲ್ಲಿ ಸ್ವಲ್ಪವೂ ಸಂಶಯವಿಲ್ಲ. ಪಶುಪಾಲನೆ ಮತ್ತು ವ್ಯವಸಾಯ ಆರ್ಯರ ಮುಖ್ಯ ಕಸುಬುಗಳಾಗಿದ್ದವೆಂಬುದನ್ನು ಸ್ಮರಿಸಿಕೊಂಡರೆ ಈ ಮಾತು ಸ್ಪಷ್ಟವಾಗುತ್ತದೆ. ಹೀಗೆ ಹಿಂದಿನಿಂದಲೂ ಕೃಷಿಯ ಸುತ್ತಮುತ್ತ ಬೆಳೆದು ಬಂದ ಸಂಕೇತಿಗಳ ಜೀವನಕ್ರಮದಲ್ಲಿ ಸ್ವಾತಂತ್ರ್ಯೋತ್ತರಕಾಲದಲ್ಲಿ ಒಮ್ಮಿಂದೊಮ್ಮೆಗೇ ಕಂಡುಕೇಳರಿಯದಷ್ಟು, ಬೆಚ್ಚಿಬೀಳಿಸುವಷ್ಟು ಬದಲಾವಣೆಗಳಾಗುವುದನ್ನು ಕಾಣುತ್ತೇವೆ. ಇದಕ್ಕೆ ಕಾರಣಗಳು ಹಲವಾರು ಇದ್ದರೂ ಮುಖ್ಯವಾಗಿ ಆಂಗ್ಲರಿಂದ ಪ್ರಾರಂಭವಾದ ಆಧುನಿಕ ವಿದ್ಯಾಪದ್ಧತಿ, ಅದರಿಂದ ದೊರೆಯುವ ನಾನಾ ಬಗೆಯ ವೃತ್ತಿಗಳು ಮತ್ತು ಸುಖಸೌಲಭ್ಯಗಳು, ಇವುಗಳ ಪರಿಣಾಮದಿಂದ ಮುರಿದುಬಿದ್ದ ಅವಿಭಕ್ತಕುಟುಂಬಪದ್ಧತಿ ಇವು ಕಾರಣಗಳೆಂಬುದು ಎಲ್ಲರಿಗೂ ತಿಳಿದ ವಿಚಾರವೇ ಆಗಿದೆ. ಸ್ವಾತಂತ್ರ್ಯಪೂರ್ವದ ಒಂದೆರಡು ದಶಕಗಳಿಂದೀಚೆಗೆ ಹುಟ್ಟಿ ಬೆಳೆದ ಸಂಕೇತಿಗಳಲ್ಲಿ ಬಹುಪಾಲು ಜನ ಇಂದು ದೇಶವಿದೇಶಗಳ ನಗರಗಳಲ್ಲಿ ಒಳ್ಳೆಯ ನೌಕರಿಗಳನ್ನು ಹಿಡಿದು ಜೀವನ ಸಾಗಿಸುತ್ತಿರುವುದರಿಂದ ಅವರಿಗೆ ತಮ್ಮ ಪೂರ್ವಿಕರ ನೆಲೆಗಳೊಡನೆ ಸಂಪರ್ಕ ತಪ್ಪಿಹೋಗಿ ಹಳ್ಳಿಗಳಲ್ಲಿ ವಾಸಿಸುತ್ತಿದ್ದ ಸಂಕೇತಿಗಳ ಬದುಕು ಹೇಗೆ ಕೃಷಿಯೊಡನೆ ಹಾಸುಕೊಕ್ಕಾಗಿ ಬೆರೆತುಕೊಂಡಿದ್ದಿತು ಎಂಬುದರ ಕಲ್ಪನೆಯೂ ಇಲ್ಲವಾಗಿದೆ. ಹೀಗೇ ವರ್ಷಗಳು ಉರುಳುತ್ತಾ ಹೋದಂತೆ ವ್ಯವಸಾಯಕ್ಕೂ ಸಂಕೇತಿ ಜನಾಂಗಕ್ಕೂ ಇದ್ದಂತಹ ಅವಿನಾಭಾವಸಂಬಂಧದ ಚಿತ್ರ ಮತ್ತಷ್ಟು ಮಸುಕಾಗುತ್ತಾ ಹೋಗಿ ಕೊನೆಗೊಂದು ದಿನ ಸಂಪೂರ್ಣವಾಗಿ ಕ್ಷೀಣಿಸಿಬಿಡುವ ಅಪಾಯ ನಮ್ಮ ಕಣ್ಮುಂದಿದೆ. ಇದನ್ನು ಗಮನಿಸಿದ ಸನ್ಮಿತ್ರ ಶ್ರೀ ಹರನ್ ಅವರು ಸಂಕೇತಿಗಳ ಕೃಷಿಕಜೀವನವನ್ನು ಅದರ ಸಮಸ್ತ ಆಯಾಮಗಳೊಡನೆ ತುರ್ತಾಗಿ ದಾಖಲಿಸಬೇಕಾದ ಅಗತ್ಯವನ್ನು ಮನಗಂಡು ಕಾರ್ಯಪ್ರವೃತ್ತರಾದುದರ ಫಲವಾಗಿಯೇ 'ಸಂಕೇತಿಕೃಷಿಯ ವಿಭಿನ್ನನೆಲೆಗಳು' ಎಂಬ ೪೫೨ ಪುಟಗಳ ಈ ಬೃಹದ್ಗ್ರಂಥ ಸಂಕೇತಿ ಅಧ್ಯಯನ ಮಾಲೆಯ ಎಂಟನೇ ಸಂಪುಟದ ರೂಪದಲ್ಲಿ ಬೆಳಕು ಕಾಣುತ್ತಿರುವುದು. ಇಂತಹ ಒಂದು ಅದ್ಭುತಗ್ರಂಥದ ರಚನೆಗೆ ಹರನ್ ಪ್ರೇರಕಶಕ್ತಿಯಾದರೆ ಮೈಸೂರು ಆಕಾಶವಾಣಿಕೇಂದ್ರದಲ್ಲಿ ಕೃಷಿತಜ್ಞರಾಗಿರುವ ಶ್ರೀ ಎನ್. ಕೇಶವಮೂರ್ತಿ ಅವರು ಕಾರಕಶಕ್ತಿಯಾಗಿದ್ದಾರೆ.

ಕೇಶವಮೂರ್ತಿಯವರು ಈ ಗ್ರಂಥರಚನೆಯಲ್ಲಿ ಒಂದು ವಿಶಿಷ್ಟವಾದ ಕ್ರಮವನ್ನು ಅನುಸರಿಸುತ್ತಾರೆ. ಇದು ಸಂಕೇತಿಗಳ ಕೃಷಿಮಾತ್ರದ ಅಧ್ಯಯನವಾಗದೇ ಕೃಷಿಯೊಡನೆ ಸಮರಸವಾಗಿ ಬೆರೆತಿರುವ ಅವರ ಜೀವನದ ಅಧ್ಯಯನವೂ ಆಗಬೇಕೆಂಬುದು ಅವರ ಆಶಯವಾಗಿದೆ. ಅದಕ್ಕಾಗಿ ಅವರು ಒಂದು ಚೌಕಟ್ಟನ್ನು ಹಾಕಿಕ್ಕೊಂಡು ಆ ಚೌಕಟ್ಟಿನೊಳಗೆ ಸಂಕೇತಿಕೃಷಿಯ ಮತ್ತು ಅವರ ಸಮಗ್ರ ಜೀವನಕ್ರಮದ ಚಿತ್ರವನ್ನು ಕಟ್ಟಿಕೊಡಲು ಪ್ರಯತ್ನಿಸಿದ್ದಾರೆ. ಈ ಕಾರ್ಯವನ್ನು ಸಾಧ್ಯವಾದಷ್ಟು ಪರಿಪೂರ್ಣವನ್ನಾಗಿ ಮಾಡಬೇಕೆಂಬ ಸತ್ಸಂಕಲ್ಪದಿಂದ ಕಾರ್ಯಪ್ರವೃತ್ತರಾಗುವ ಅವರು ಸುಮಾರು ಎರಡು ವರ್ಷಗಳ ಕಾಲ ಊರೂರು ಸುತ್ತಿ ಕ್ಷೇತ್ರಕಾರ್ಯವನ್ನು (Field Survey) ನಡೆಸಿ ಸಂಕೇತಿವ್ಯವಸಾಯಗಾರರನ್ನು ಸಂದರ್ಶಿಸಿ ಪ್ರಶ್ನಾವಳಿಯಮೂಲಕ ಪ್ರತ್ಯಕ್ಷಮಾಹಿತಿಯನ್ನು ಸಂಗ್ರಹಿಸಿದ್ದಾರೆ. ಈ ರೀತಿ ಮಾಹಿತಿ ಸಂಗ್ರಹಕ್ಕಾಗಿ ಕೇಶವಮೂರ್ತಿ ಆರು ಜಿಲ್ಲೆಗಳಲ್ಲಿ ಹರಡಿರುವ ೩೩ ಗ್ರಾಮಗಳಿಗೆ ಭೇಟಿಕೊಟ್ಟು, ಸುಮಾರು ೯೬ ಜನ ಸಂಕೇತಿಕೃಷಿಕರೊಡನೆ ಖುದ್ದಾಗಿ ಸಂದರ್ಶನ ನಡೆಸಿದ್ದಾರೆ. ಅವರು ಭೇಟಿಕೊಟ್ಟಿರುವ ಸ್ಥಳಗಳಲ್ಲಿ ಚಿಕಮೇನಹಳ್ಳಿ, ಮುದ್ದಾಪುರ, ಕೃಷ್ಣಾಪುರ, ಹರವೆ, ಶೀಗವಾಳು, ಗೆಜಗನಹಳ್ಳಿ, ನಿಟ್ಟೂರು, ಹರಿಹರಪುರದಂತಹ ಕೇವಲ ಒಂದೆರಡು ಕುಟುಂಬಗಳಿರುವ ಸಣ್ಣ ಸಣ್ಣ ಹಳ್ಳಿಗಳೂ; ಅಂಡೆಕುಳಿ, ಗದ್ದೆಮನೆ, ಭಕ್ತರಹಳ್ಳಿ, ಆಲಂದಡಕದಂತಹ ಸಂಕೇತಿಗಳಿಗೆ ಹೆಚ್ಚು ಪರಿಚಿತವಲ್ಲದ ಹಳ್ಳಿಗಳೂ; ಮೈಸೂರು, ಬೆಂಗಳೂರು, ಮಡಕೇರಿಯಂತಹ ನಗರಗಳೂ ಸೇರಿವೆ. ಅವರು ಸಂದರ್ಶಿಸಿರುವವರಲ್ಲಿ ವೈದ್ಯರಿದ್ದಾರೆ, ಎಂಜನಿಯರುಗಳಿದ್ದಾರೆ, ಕೃಷಿವಿಜ್ಞಾನಿಗಳಿದ್ದಾರೆ, ವಿವಿಧ ಪದವಿಗಳನ್ನು ಪಡೆದಿರುವ ಅನೇಕ ಪದವೀಧರರಿದ್ದಾರೆ. ಆಧುನಿಕ ವಿದ್ಯಾಭ್ಯಾಸದಿಂದ ದೊರೆಯಬಹುದಾದ ನೌಕರಿಯನ್ನು ಪಡೆದು ಸುಖವಾಗಿ ಜೀವನ ಸಾಗಿಸುವ ಸಾಧ್ಯತೆಯಿದ್ದರೂ ಅದನ್ನು ತುಚ್ಛೀಕರಿಸಿ ಸ್ವತಂತ್ರಬದುಕನ್ನು ಕಟ್ಟಿಕೊಳ್ಳಬೇಕೆಂಬ ಹಂಬಲದಿಂದ ಹಳ್ಳಿಗಳಿಗೆ ಹಿಂದಿರುಗಿರುವ ವಿದ್ಯಾವಂತಕೃಷಿಕರನ್ನು ಕಂಡು, ಅವರ ಬಗ್ಗೆ ಓದಿ ಹೆಮ್ಮೆಯಿಂದ ಮನಸ್ಸು ತುಂಬಿಬರುತ್ತದೆ. ಇಂದಿಗೂ ಹಳ್ಳಿಗಳಲ್ಲಿ ವಾಸಿಸುತ್ತಿರುವ ಸಂಕೇತಿಗಳಿಗೆ ವ್ಯವಸಾಯವು ಜೀವನಾಧಾರವಾಗಿದ್ದರೆ ಮೈಸೂರು ಬೆಂಗಳೂರುಗಳಂತಹ ನಗರಗಳಲ್ಲಿ ವಾಸವಾಗಿರುವ ಕೆಲವು ಸಂಕೇತಿಗಳಿಗೆ ವ್ಯವಸಾಯವು ಅದು ನೀಡುವ ಸಂತೋಷಕ್ಕಾಗಿರುವ ಮತ್ತು ಅದರೊಡನಿರುವ ಒಂದು ರೀತಿಯ ಭಾವನಾತ್ಮಕ ಸಂಬಂಧವನ್ನು ಜತನದಿಂದ ಜೋಪಾನವಾಗಿ ಕಾಪಾಡಿಕೊಳ್ಳಲು ಅನುಕೂಲವಾಗಿರುವ ಒಂದು ಹವ್ಯಾಸವಾಗಿದೆ. ಇಂದು ಅನೇಕ ವಿದ್ಯಾವಂತಕೃಷಿಕರು ವಿಜ್ಞಾನವು ಒದಗಿಸುವ ಹೊಸಹೊಸ ಸಾಧನಸಲಕರಣೆಗಳನ್ನು ಉಪಯೋಗಿಸಿಕೊಂಡು ಕೃಷಿಯಲ್ಲಿ ಹೊಸಹೊಸ

ಪ್ರಯೋಗಗಳನ್ನು ಮಾಡಲು ಮತ್ತು ಪರಂಪರಾಗತ ಬೆಳೆಗಳಿಗಿಂತ ಭಿನ್ನವಾಗಿ ವಾಣಿಜ್ಯಪ್ರಧಾನ ಬೆಳೆಗಳನ್ನು ಬೆಳೆಯಲು ಮುಂದಾಗುತ್ತಿರುವುದು ಮೆಚ್ಚಿ ಪ್ರೋತ್ಸಾಹಿಸಬೇಕಾದ ವಿಷಯವಾಗಿದೆ.

ಕೃಷಿತಜ್ಞರಾದ ಎನ್. ಕೇಶವಮೂರ್ತಿಯವರು ಸಂಕೇತಿ ಪಂಗಡದಿಂದ ಹೊರಗಿನವರಾಗಿರುವುದರಿಂದ ಅವರಿಗೆ ವಿಷಯವನ್ನು ಸುಲಭವಾಗಿ ನಿರಾಸಕ್ತಮನಸ್ಸಿನಿಂದ ನೋಡಲು, ಪರಾಮರ್ಶಿಸಿ ಗುಣದೋಷಗಳನ್ನು ಎತ್ತಿ ತೋರಿಸಲು ಸಾಧ್ಯವಾಗಿದೆ. ಅವರು ನಡೆಸಿರುವ ೯೬ ಸಂದರ್ಶನಗಳೂ ಸುಂದರವಾದ ೯೬ ವ್ಯಕ್ತಿಚಿತ್ರಗಳಾಗಿ ರೂಪಿತವಾಗಿವೆ. ಇಡೀ ಗ್ರಂಥವು ಒಂದೇ ವಿಷಯಕ್ಕೆ ಸಂಬಂಧಿಸಿದ್ದು ಸಂದರ್ಶನಗಳೂ ಸಾಮಾನ್ಯವಾಗಿ ಒಂದೇ ರೀತಿ ಇರುವುದರಿಂದ ಅನಿವಾರ್ಯವಾಗಿ ಒಂದು ರೀತಿಯ ಏಕತಾನತೆ ಕಂಡುಬಂದರೂ ಅವರು ತಮ್ಮ ವಿಶಿಷ್ಟವಾದ ಶೈಲಿಯಿಂದ ಮತ್ತು ವಿಭಿನ್ನವಾದ ಪ್ರಶ್ನೆಗಳ ಮೂಲಕ ಇದನ್ನು ಕಮ್ಮಿಮಾಡಲು ಪ್ರಯತ್ನಿಸಿದ್ದಾರೆ. ಉಪಸಂಹಾರದಲ್ಲಿ ಸಂಕೇತಿಗಳ ವ್ಯವಸಾಯ ಮತ್ತು ವೇದಾಧ್ಯಯನ-ಅಧ್ಯಾಪನಗಳು ಹೇಗೆ ಜೊತೆಜೊತೆಯಲ್ಲಿ ಬೆಳೆದು ಬಂದವು ಎಂಬುದನ್ನು ತಿಳಿಸುತ್ತಾ - 'ನಿರ್ಜನಪ್ರದೇಶದ ಭೀತಿಯನ್ನು ಹೊಡೆದೋಡಿಸಲು' ...... 'ಜೋರಾಗಿ ಮಂತ್ರಗಳನ್ನು ಪಠಿಸಿದರೆ ಭೀತಿ ದೂರಾಗಬಹುದು' ..... ಹಾಗೆ ಆರಂಭವಾಗಿರಬಹುದು ತೋಟದಲ್ಲಿ ವೇದವಿದ್ಯಾಕಲಿಕೆ - ಎಂದು ಅವರು ವ್ಯಕ್ತಪಡಿಸಿರುವ ಅಭಿಪ್ರಾಯ ಸಮ್ಮತವಲ್ಲ. ದಿನಕ್ಕೆ ಸರಾಸರಿ ೧೨-೧೪ ಗಂಟೆಗಳಂತೆ ಸುಮಾರು ೧೨ ವರ್ಷಗಳ ಕಾಲ ನಿರಂತರವಾಗಿ ಕಲಿಯಬೇಕಾದುದು ವೇದವಿದ್ಯೆ. ಆದ್ದರಿಂದ ಸಂಕೇತಿಗಳಿಗೆ ಗತ್ಯಂತರವಿಲ್ಲದೆ ಅನಿವಾರ್ಯವಾಗಿ ಕೃಷಿ ಮತ್ತು ವೇದಕಲಿಕೆ ಎರಡನ್ನೂ ಏಕಕಾಲದಲ್ಲಿ ಒಟ್ಟಿಗೇ ಮಾಡಬೇಕಿತ್ತೇ ಹೊರತು ಅದಕ್ಕೆ ಕೇಶವಮೂರ್ತಿ ವ್ಯಕ್ತಪಡಿಸಿರುವ ಅಭಿಪ್ರಾಯ ಕಾರಣವಲ್ಲ. ಉದ್ದಕ್ಕೂ ಪ್ರಕೃತಿಯ ಮಡಿಲಲ್ಲೇ ಬದುಕನ್ನು ರೂಪಿಸಿಕೊಂಡ ಮತ್ತು ಕಲಿತ ವೇದಗಳ ರಕ್ಷಣೆಯಲ್ಲಿ ನಿರ್ಭಯವಾಗಿದ್ದ ಸಂಕೇತಿಗಳು ಎಂದೂ ಯಾವುದಕ್ಕೂ ಭಯಪಟ್ಟವರಲ್ಲ ಎಂದು ಹೇಳಿದರೆ ಅದನ್ನು ಯಾರೂ ಅಹಂಕಾರದ ಮಾತಾಗಿ ಭಾವಿಸಬಾರದು.

ಕೇಶವಮೂರ್ತಿಗಳು ಈ ಗ್ರಂಥರಚನೆಗಾಗಿ ಪಟ್ಟಿರುವ ಶ್ರಮ ಅಗಾಧವಾದುದು, ಅಚ್ಚರಿಮೂಡಿಸುವಂತಹುದು ಮಾತ್ರವಲ್ಲ ಸಾರ್ಥಕವಾದುದೂ ಆಗಿದೆ. ಸಂಗ್ರಹಿಸಿದ ಅಪಾರವಾದ ಮಾಹಿತಿಯನ್ನು ಬರಹರೂಪದಲ್ಲಿ ನಮ್ಮ ಮುಂದೆ ಇಟ್ಟಿರುವ ಪರಿ ಬಹಳ ಮನೋಜ್ಞವಾಗಿದೆ. ಅವರ ಭಾಷೆ ಸರಳವೂ, ಸುಂದರವೂ ಮತ್ತು ಸುಲಭಗ್ರಾಹ್ಯವೂ ಆಗಿದೆ. ಅವರ ಈ ಗ್ರಂಥ ಸತ್ತ್ವ, ಮಹತ್ತ್ವ ಮತ್ತು ಬೃಹತ್ತ್ವಗಳಲ್ಲಿ ಪಿಎಚ್.ಡಿ. ಪದವಿಗಾಗಿ ಸಲ್ಲಿಸುವ ಮಹಾಪ್ರಬಂಧಕ್ಕೆ ಸರಿಸಮಾನವಾಗಿದೆ. ನನ್ನ ಜ್ಞಾನದ ಪರಿಮಿತಿಯಲ್ಲಿ ಹೇಳುವುದಾದರೆ ಇದು ಸಂಕೇತಿಕೃಷಿಗೆ ಸಂಬಂಧಪಟ್ಟಂತೆ ಪ್ರಪ್ರಥಮ ಮತ್ತು ಏಕಮಾತ್ರ ಗ್ರಂಥವಾಗಿದೆ. ಇಂತಹ ಈ ಗ್ರಂಥ ಬಹುಮೌಲಿಕವಾದುದು ಮತ್ತು ನಾಲ್ಕು ಕಾಲ ಉಳಿಯುವಂತಹುದು ಎಂಬುದರಲ್ಲಿ ಸಂದೇಹವಿಲ್ಲ. ಕೇಶವಮೂರ್ತಿಯವರ ಧನ್ಯತೆಯನ್ನು, ಕೃತಕೃತ್ಯತೆಯನ್ನು ಮನಸಾ ಪ್ರಶಂಸಿಸುತ್ತಿರುವ ಈ ಸಮಯದಲ್ಲಿ ನನಗೆ ಭಾಸನ ಒಂದು ಸೂಕ್ತಿ ನೆನಪಿಗೆ ಬರುತ್ತಿದೆ -

> ಕಾಷ್ಠಾದಗ್ನಿರ್ಜಾಯತೇ ಮಥ್ಯಮಾನಾತ್
> ಭೂಮಿಸ್ತೋಯಂ ಖನ್ಯಮಾನಾ ದದಾತಿ |
> ಸೋತ್ಸಾಹಾನಾಂ ನಾಸ್ತ್ಯಸಾಧ್ಯಂ ನರಾಣಾಮ್
> ಮಾರ್ಗಾರಬ್ಧಾಃ ಸರ್ವಯತ್ನಾಃ ಫಲಂತಿ || *ಪ್ರತಿಜ್ಞಾಯೌಗಂಧರಾಯಣ*

ಕಡೆದರೆ (ಉಜ್ಜಿದರೆ) ಮರದ ತುಂಡುಗಳಿಂದ (ಅರಣಿಯಿಂದ) ಬೆಂಕಿ ಹುಟ್ಟುತ್ತದೆ. ತೋಡಿದರೆ ಭೂಮಿಯು (ಬಾವಿ) ನೀರನ್ನು ಕೊಡುತ್ತದೆ. ಉತ್ಸಾಹಿಗಳಾದ ಮನುಷ್ಯರಿಗೆ ಅಸಾಧ್ಯವೆಂಬುದಿಲ್ಲ. ಸರಿಯಾದ ರೀತಿಯಲ್ಲಿ ಮಾಡಿದ ಎಲ್ಲ ಕೆಲಸಗಳೂ ಫಲಿಸುತ್ತವೆ.

ಕೇಶವಮೂರ್ತಿ ಸಂಕೇತಿಕೃಷಿಗೆ ಸಂಬಂಧಿಸಿದಂತೆ ಹೇಳಿರುವ ವಿಷಯ ಬಹಳ ಮತ್ತು ಸರ್ವತೋಮುಖ. ಅವರು ಹೇಳದೇ ಬಿಟ್ಟಿರುವುದು ಅತ್ಯಲ್ಪ. ಆದ್ದರಿಂದ ಅವರು ಹೇಳಿರುವುದನ್ನೇ ಮತ್ತೆ ಹೇಳದೇ ಅವರ ಗಮನಕ್ಕೆ ಬಾರದಿರುವ ಒಂದೆರಡು ವಿಷಯಗಳ ಬಗ್ಗೆ ಇಲ್ಲಿ ಹೇಳುವುದು ಉಚಿತವಾಗಿ ಕಾಣುತ್ತದೆ. ಸಂಕೇತಿಗಳ ಅಡಿಕೆತೋಟಗಳಲ್ಲಿ ಅಡಿಕೆ ಮರಗಳಿಗೆ ಸಾಮಾನ್ಯವಾಗಿ ವೀಳ್ಯದೆಲೆಯ (ವಿಳ್ಳೇದೆಲೆ, ವೆತ್ತಲ) ಹಂಬನ್ನು ಹಬ್ಬಿಸಲಾಗುತ್ತದೆ. ಈ ಹಂಬು ಸುಮಾರು ೧೫-೨೦ ಹಂತದವರೆಗೆ ಅಂದರೆ ೨೫-೩೦ ಅಡಿ ಎತ್ತರದವರೆಗೆ ಹಬ್ಬಿಕೊಂಡು ನಾಲ್ಕು ದಿಕ್ಕುಗಳಿಗೂ ಕೈಲೊಡೆದು ಹುಲುಸಾಗಿ ಹರಡುತ್ತದೆ. ಈ ಹಂಬುಗಳಿಂದ ವರ್ಷಕ್ಕೆರಡು ಸಲ ಎಲೆಗಳನ್ನು ಕುಯ್ಯಲು (ಒಡಗುಯ್ಲು, ಮರಗುಯ್ಲು) ಮತ್ತು ವರ್ಷಕ್ಕೊಮ್ಮೆ ಹಂಬನ್ನು ಕೆಳಕ್ಕಿಳಿಸಿ ಗುಂಡಿಗಳಲ್ಲಿ ಚಕ್ರಾಕಾರವಾಗಿ ನೆಲಕ್ಕೆ ಸೇರಿಸಲು (ಹಂಬನ್ನು ತೆಕ್ಕೆಬಿಡಲು) ೧೮-೨೦ ಹಂತಗಳ (ಮೆಟ್ಟಿಲುಗಳ) ದೊಡ್ಡದೊಡ್ಡ ಬಿದಿರಿನ ಏಣಿಗಳನ್ನು ಉಪಯೋಗಿಸಲಾಗುತ್ತದೆ. ಈ ಏಣಿಗಳನ್ನು ಅಡಿಕೆ ಮರಗಳಿಗೆ ಒರಗಿಸಿ ನಿಲ್ಲಿಸದೆ (ಹಾಗೆ ಮಾಡಿದರೆ ಹಂಬು ಹಾಳಾಗುತ್ತದೆ) ಏಣಿಯ ಮೇಲ್ಗಡೆಯಿಂದ ಮೂರನೆಯ ಅಥವಾ ನಾಲ್ಕನೆಯ ಹಂತಕ್ಕೆ ವೆಜ್ಜ (ರಂಧ್ರ) ತೆಗೆದು ಸೇರಿಸಿದ ಎರಡು ದೊಡ್ಡ ಬಿದಿರಿನ

ಕಾಲುಗಳ ಆಧಾರದಿಂದ ಮರದ ಸಮೀಪದಲ್ಲಿ ನಿಲ್ಲಿಸಲಾಗುತ್ತದೆ. ಹೀಗೆ ನಿಲ್ಲಿಸಿದ ಏಣಿಯ ಮೇಲೆ ಹತ್ತಿ ಕೆಳಗಿನ ಹಂತದಲ್ಲಿ ಒಂದು ಕಾಲನ್ನು ಮತ್ತು ಅದರ ಮೇಲಿನ ಹಂತದಲ್ಲಿ ಒಂದು ಕಾಲನ್ನು ಊರಿ ಅಥವಾ ಮೇಲಿನ ಹಂತವನ್ನು ದಾಟಿ ಕೆಳಗಿನ ಹಂತದ ಮೇಲೆ ಕಾಲನ್ನು ಊರಿ ಎರಡೂ ಕೈಗಳನ್ನು ಸ್ವತಂತ್ರಗೊಳಿಸಿಕೊಂಡು ಕೆಲಸಮಾಡುವುದನ್ನು ನೋಡುವುದೇ ಒಂದು ರೋಮಾಂಚಕ ಅನುಭವ. ಎಷ್ಟೋ ಸಮಯ ಸಹಾಯಕ್ಕೆ ಬೇರೊಬ್ಬರಿಲ್ಲದೇ ಒಬ್ಬರೇ ಏಣಿಯ ಕಾಲುಗಳನ್ನು ಒಂದಾದ ಮೇಲೊಂದರಂತೆ ಪರ್ಯಾಯವಾಗಿ ಸರಿದೂಗಿಸಿಕೊಂಡು (Balance) ನೂಕಿಕೊಂಡು ಏಣಿಯನ್ನು ಮರದಿಂದ ಮರಕ್ಕೆ ಎತ್ತಿಡುವ ಕೆಲಸದಲ್ಲಿ ಸ್ವಲ್ಪ ವ್ಯತ್ಯಾಸವಾದರೂ ೨೫-೩೦ ಅಡಿಯ ದೊಡ್ಡಏಣಿ ಎರಡೂ ಕಾಲುಗಳೊಡನೆ ನೆಲಕ್ಕೆ ಧೊಪ್ಪೆಂದು ಬಿದ್ದುಬಿಡುತ್ತದೆ. ಹೀಗೆ ನಿಲ್ಲಿಸಿದ ಏಣಿಯ ಮೇಲೆ ಹತ್ತಿ ಹಂಬುಕಟ್ಟುವುದು, ತೆಂಗಿನಗರಿಯ ಬುಟ್ಟಿಯಲ್ಲಿ ಎಲೆಯನ್ನು ಕುಯ್ದು ತುಂಬಿಸಿಕೊಳ್ಳುವುದು ಸುಲಭಸಾಧ್ಯ ಕೆಲಸವಲ್ಲ. ಎತ್ತರಕ್ಕೆ ಬೆಳೆದ ಹಂಬುಗಳನ್ನು ತೆಕ್ಕೆಬಿಡಲು ಒಮ್ಮೊಮ್ಮೆ ದೊಡ್ಡ ಹಗ್ಗ ಮತ್ತು ರಾಟೆಗಳನ್ನು ಉಪಯೋಗಿಸಬೇಕಾಗುತ್ತದೆ. ಸಂಕೇತಿಕೃಷಿಯ ಮತ್ತೊಂತು ವೈಶಿಷ್ಟ್ಯವೆಂದರೆ ಅಡಿಕೆಯ ಕುಯ್ಲು. ಅಡಿಕೆಗೊನೆಗಳನ್ನು ಹದನೋಡಿ ಕುಯ್ಯುವುದು ನಿಜಕ್ಕೂ ಬಹು ಕಷ್ಟವಾದ ಮತ್ತು ಅಷ್ಟೇ ಅಪಾಯಕಾರಿಯಾದ ಕೆಲಸ. ಸಂಕೇತಿಗಳು ಅಡಿಕೆಯನ್ನು ಕುಯ್ಯಲು ಬೇರೆಯವರಂತೆ ಮರದ ತೆಂಡೆಯವರೆಗೂ ಹೋಗಿ ಗೊನೆಗಳನ್ನು ಕುಯ್ದು ಹಗ್ಗದ ಮೂಲಕ ಇಳಿಸುವುದಿಲ್ಲ. ಸಾಮಾನ್ಯವಾಗಿ ಎಲ್ಲರ ತೋಟಗಳಲ್ಲಿ ವಿಳ್ಳೇದೆಲೆ ಹಂಬು ಇರುವುದರಿಂದ ಅವುಗಳಿಗೆ ಹಾನಿಯಾಗದಂತೆ ಅಡಿಕೆಯನ್ನು ಕೆಡಹಬೇಕಾಗುತ್ತದೆ. ಇದಕ್ಕಾಗಿ ಸಂಕೇತಿ ಗೊನೆಕಾರರು ತುದಿಗೆ ಹರಿತವಾದ ಕತ್ತಿಯನ್ನು ಬಿಗಿದುಕಟ್ಟಿರುವ ೧೫-೨೦ ಅಡಿಗಳ ದೊಡ್ಡ ಬಿದಿರಿನ ಜಲ್ಲೆಯನ್ನು ಉಪಯೋಗಿಸುತ್ತಾರೆ. ಐವತ್ತು ಅರುವತ್ತು ಅಡಿ ಎತ್ತರಕ್ಕೆ ಬೆಳೆದ ಅಡಿಕೆಮರಗಳ ಮುಕ್ಕಾಲುಭಾಗ ಕಾಲಿಗೆ ಗುದಿ ಹಾಕಿಕ್ಕೊಂಡು ಹತ್ತಿ ಜಲ್ಲೆಯ ಕತ್ತಿಯಿಂದ ಗೊನೆಯನ್ನು ಹಿಡಿದು ಮರವನ್ನು ತೊಯ್ದಾಡಿಸಿ ಮರಗಳ ಮಧ್ಯದಲ್ಲಿ ಬೀಳುವಂತೆ ಕಚಕ್ಕನೆ ಕುಯ್ದು ಹಂಬಿಗೆ ಸ್ವಲ್ಪವೂ ನೋವಾಗದಂತೆ ಕೆಳಕ್ಕೆ ಬೀಳಿಸುತ್ತಾರೆ. ಪಕ್ಕದ ಮರದಿಂದ ಗೊನೆ ಎಟುಕದಾದಾಗ ಒಮ್ಮೊಮ್ಮೆ ಅದೇ ಮರದಲ್ಲಿದ್ದುಕೊಂಡೇ ತಮಗಾಗಲೀ ಹಂಬಿಗಾಗಲೀ ಪೆಟ್ಟಾಗದಂತೆ ಗೊನೆಯನ್ನು ಕುಯ್ದು ಬೀಳಿಸುವ ಕೌಶಲ ಅದ್ಭುತವಾದದ್ದು. ಹೀಗೆ ಒಂದು ಮರದ ಅಡಿಕೆ ಕುಯ್ದಮೇಲೆ ಮರದಿಂದ ಕೆಳಕ್ಕಿಳಿಯದೇ ಜಲ್ಲೆಯಿಂದ ಪಕ್ಕದ ಮರವನ್ನು ಎಳೆದುಕೊಂಡು ಜಲ್ಲೆಸಮೇತ ಅದಕ್ಕೆ ಜಿಗಿಯುವುದು ನಯನಮನೋಹರವಾದ ದೃಶ್ಯವಾಗಿರುತ್ತದೆ. ಬೆಳಿಗ್ಗೆ ೭.೩೦ ರಿಂದ ೮.೦೦ ಗಂಟೆಗೆ ಮೊದಲ ಮರ ಹತ್ತಿದರೆ ಆ ತೋಟದ ಸುಮಾರು ೩೦೦-೩೫೦ ಮರಗಳ ಅಡಿಕೆ ಕಿತ್ತ ಬಳಿಕವೇ ಮರದಿಂದ ಕೆಳಕ್ಕೆ ಇಳಿಯುವುದು. ಹೀಗೆ ಗೊನೆಕಾರರು ಅಡಿಕೆಮರಗಳ ಮೇಲೆ ತೋರಿಸುವ ಹನುಮದ್ವಿಲಾಸವನ್ನು ನೋಡಿ ನೋಡಿ ಕೆಳಗೆ ಭೂಮಿಯಮೇಲೆ ನಿಂತವರಿಗೆ ಕತ್ತು ನೋಯುತ್ತದೆಯೇ ಹೊರತು ಮರಗಳನ್ನು ಬಿಗಿಹಿಡಿದಪ್ಪುವ ಗೊನೆಕಾರರ ಕಾಲುಗಳಿಗಾಗಲೀ, ದೈತ್ಯಾಕಾರದ ಜಲ್ಲೆಯನ್ನು ಒಂದೇ ಸಮನೆ ಹಿಡಿದು ಕೆಲಸಮಾಡುವ ಅವರ ಕೈಗಳಿಗಾಗಲೀ ನೋವೆಂಬುದು ಇರುವುದಿಲ್ಲ. ನೆಲದಮೇಲೆ ನಿಂತುಕೊಂಡೇ ಜಲ್ಲೆಯನ್ನು ಹಿಡಿದು ಒಂದೆರಡು ಮರಗಳಿಂದ ಗೊನೆಗಳನ್ನು ಕುಯ್ಯಲಾಗದ ನಮ್ಮ ಶಕ್ತಿಗೆ ಹೋಲಿಸಿಕೊಂಡರೆ ಆ ಗೊನೆಕಾರರ ಅದ್ಭುತಶಕ್ತಿಯ ಅರಿವಾಗುತ್ತದೆ.

ಕೇಶವಮೂರ್ತಿಯವರು ಗ್ರಂಥದಲ್ಲಿ ಸಾಕಷ್ಟು ಭಾವಚಿತ್ರಗಳನ್ನು ಕೊಟ್ಟು ಇದರ ಉಪಯುಕ್ತತೆಯನ್ನು ಹೆಚ್ಚಿಸಿದ್ದಾರೆ. ಸಂಕೇತಿಪುರುಷರು ತೋಟ, ಗದ್ದೆಗಳಲ್ಲಿ ಉಪಯೋಗಿಸುವ ಹಾರೆ, ಗುದ್ದಲಿ, ಕೊಡಲಿ, ಮಚ್ಚು, ಗುದಿ, ದಸಿ, ಕೊಕ್ಕೆ, ತಿಕ್ಕಡಿ, ಕಾಲೇಣಿ, ಬಾನಿ ಮುಂತಾದ ಉಪಕರಣಗಳ ಮತ್ತು ಸ್ತ್ರೀಯರು ಮನೆಗಳಲ್ಲಿ ಸಾಮಾನ್ಯವಾಗಿ ಉಪಯೋಗಿಸುವ, ಏತ, ಬೀಸುಕಲ್ಲು, ಹಗ್ಗ, ಒನಕೆ, ಕತ್ತಿ, ತುರೀಮಣೆ, ಕೈಹಾರೆ, ಮಸತಟ್ಟೆ ಮುಂತಾದ ಉಪಕರಣಗಳ ಭಾವಚಿತ್ರಗಳನ್ನು ಕೊಡಬಹುದಿತ್ತೆನ್ನಿಸುತ್ತದೆ. ಕೃಷಿಗೆ ಸಂಬಂಧಿಸಿದಂತೆ ಸಂಕೇತಿಭಾಷೆಯಲ್ಲಿ ಬಳಕೆಯಲ್ಲಿರುವ ಶಬ್ದಗಳ ಒಂದು ಕೋಶವನ್ನು ಸೇರಿಸಿದ್ದರೆ ಈ ಗ್ರಂಥದ ಉಪಯುಕ್ತತೆ ನಿಶ್ಚಿತವಾಗಿ ಹೆಚ್ಚುತ್ತಿತ್ತು.

ಅಪೂರ್ವರೀತಿಯ ಇಂತಹ ಒಂದು ಗ್ರಂಥರಚನೆಗೆ ಪ್ರೇರಕಶಕ್ತಿಯಾಗಿ ನಿಂತು 'ಸಂಕೇತಿ ಅಧ್ಯಯನ ಮಾಲೆ'ಯಲ್ಲಿ ಹೊರತರುತ್ತಿರುವ ಮಿತ್ರ ಹರನ್ ನಿಜಕ್ಕೂ ಸಂಕೇತಿಗಳ ಕೃತಜ್ಞತೆಗೆ ಪಾತ್ರರಾಗಿದ್ದಾರೆ. ಭಗೀರಥಪ್ರಯತ್ನದೊಡನೆ ಕಾರ್ಯಪ್ರವೃತ್ತರಾಗಿರುವ ಶ್ರೀ ಹರನ್ ಅವರಿಗೆ ಸಂಕೇತಿಗಳ ನೈತಿಕ ಮತ್ತು ಆರ್ಥಿಕ ಬೆಂಬಲ ದೊರೆಯಲಿ. ಅವರ ಮೇಲೆ ಸದಾ ಶ್ರೀ ಲಕ್ಷ್ಮೀಕೇಶವನ ಅನುಗ್ರಹವಿರಲಿ ಎಂದು ಆಶಿಸುತ್ತೇನೆ.

ಗುಣಾನಾಂ ವಾ ವಿಶಾಲಾನಾಂ ಸತ್ಕಾರಾಣಾಂ ಚ ನಿತ್ಯಶಃ |
ಕರ್ತಾರಸ್ಸುಲಭಾ ಲೋಕೇ ವಿಜ್ಞಾತಾರಸ್ತು ದುರ್ಲಭಾಃ || – *ಸ್ವಪ್ನವಾಸವದತ್ತ*

ಲೋಕದಲ್ಲಿ ಉದಾತ್ತವಾದ ಗುಣಗಳಿಂದ ಕೂಡಿದವರನ್ನು ಸುಲಭವಾಗಿ ಕಾಣಬಹುದು. ಒಳ್ಳೆಯ ಸತ್ಕಾರಗಳನ್ನು ಮಾಡುವವರನ್ನೂ ಕಾಣಬಹುದು. ಆದರೆ ಗುಣಗಳನ್ನೂ ಸತ್ಕಾರಗಳನ್ನೂ ಅರಿಯುವವರು ದುರ್ಲಭ.

ಕಮಿಷನರೇಟ್ ಆಫ್ ಕೊಲಿಜಿಯೇಟ್ ಎಜುಕೇಷನ್
ಬೆಂಗಳೂರು

ಪ್ರೊ. ಜಿ. ಅಶ್ವತ್ಥನಾರಾಯಣ
ಕನ್ನಡ ಪ್ರಾಧ್ಯಾಪಕರು (ನಿವೃತ್ತ)

ಸಂಕೇತಿ ಕೃಷಿಯ ವಿಭಿನ್ನ ನೆಲೆಗಳು
ಕ್ಷೇತ್ರಕಾರ್ಯ ಸಾಹಿತ್ಯದಲ್ಲಿ ಮೈಲಿಗಲ್ಲಿನ ಕೃತಿ

ನಮ್ಮಲ್ಲಿ ಸಾಹಿತ್ಯ ನಿರ್ಮಾಣ ಎರಡು ಬಗೆಯದು - ಒಂದು ಗ್ರಂಥಾಭ್ಯಾಸಬಲದಿಂದ ನಿರ್ಮಿಸಿದ್ದು; ಇನ್ನೊಂದು ಸ್ವಾನುಭವ ಮತ್ತು ಸ್ವಯಂಪ್ರೇರಣೆಯಿಂದ ರಚಿಸಿದ್ದು. ಮೂರನೆಯ ರೀತಿಯ ಸಾಹಿತ್ಯ ನಿರ್ಮಾಣ, ಸಂಶೋಧನ ಸಾಹಿತ್ಯ ಅಸ್ತಿತ್ವಕ್ಕೆ ಬಂದಾಗ ಬಂದಿದ್ದು - ಕ್ಷೇತ್ರಕಾರ್ಯದಿಂದ ಮೂಡಿಸಿದ ಸತ್ಯದರ್ಶನದ ಸಾಹಿತ್ಯ. ಇದರಲ್ಲಿ ಗ್ರಂಥಾಭ್ಯಾಸ ಗೌಣ, ಸ್ವಾನುಭವ ಮುಖ್ಯ. ಆದರೆ ಅಭಿವ್ಯಕ್ತಿ ಸ್ವಾನುಭವದ ವ್ಯಕ್ತಿಯದಲ್ಲ, ಸಮೀಕ್ಷಕನದು. ವ್ಯಕ್ತಿ ಬದಲಾದರೆ ಅಭಿವ್ಯಕ್ತಿ ಬದಲಾಗದೆ? ಆಗುತ್ತದೆ. ಆದರೆ ಇಲ್ಲಿ ಧ್ವನಿಮುದ್ರಣ, ಚಿತ್ರಮುದ್ರಣ, ವಿದ್ಯುನ್ಮಾನಮಾಧ್ಯಮಗಳ ನೆರವನ್ನು ಪಡೆದು ಸ್ವಾನುಭವದ ವ್ಯಕ್ತಿಯ ಕಥನವೇ ಆತನ ಮಾತುಗಳಲ್ಲೇ ನಮ್ಮ ಕಣ್ಣ ಮುಂದೆ ಬಂದು ನಿಲ್ಲುವಂತೆ ಮಾಡಿರುವುದು ಈ ಗ್ರಂಥದ ವೈಶಿಷ್ಟ್ಯಗಳಲ್ಲಿ ಒಂದು. ಈ ಗ್ರಂಥ ಸಂದರ್ಶನ ಸಾಹಿತ್ಯ; ಕ್ಷೇತ್ರಕಾರ್ಯ ಸಾಹಿತ್ಯ; ವ್ಯಕ್ತಿ ಚಿತ್ರ ಸಾಹಿತ್ಯ; ಕೃಷಿ ಸಾಹಿತ್ಯ; ಉಪಪಂಗಡ ಸಾಹಿತ್ಯ; ಸಮಕಾಲೀನ ಸಮಾಜದ ಒಂದು ವರ್ಗದ ಅಂತರಂಗ ಪ್ರತಿಫಲನ ಸಾಹಿತ್ಯ; ಪ್ರಶ್ನೋತ್ತರ ಸಾಹಿತ್ಯ; ಆತ್ಮಕಥನ ಸಾಹಿತ್ಯ ಇತ್ಯಾದಿ ಎಲ್ಲವನ್ನೂ ಒಳಗೊಂಡ ವಿಶಿಷ್ಟ ವಿನೂತನ ಕೃತಿ.

ಕ್ಷೇತ್ರಕಾರ್ಯ ಕನ್ನಡಕ್ಕೆ ಹೊಸದೇನಲ್ಲ. ಈಗಾಗಲೇ ಕ್ಷೇತ್ರಕಾರ್ಯವಿಧಾನ ಕುರಿತು, ಹಾಗೆಯೇ ಕ್ಷೇತ್ರಕಾರ್ಯದಿಂದ ಸಂಶೋಧನೆ ನಡೆಸಿದ ಫಲಿತದ ಗ್ರಂಥಗಳು ಬಂದಿವೆ. ಐತಿಹಾಸಿಕ ಸ್ಥಳಗಳ, ಕವಿ ಜನ್ಮಸ್ಥಳಗಳ, ವ್ಯಕ್ತಿ ಸಂದರ್ಶನದ, ಜನಗಳಲ್ಲಿ ಪ್ರಚಲಿತವಿರುವ ಜಾನಪದ ಸಾಹಿತ್ಯದ ಸಂಗ್ರಹಕ್ಕೆ ಕ್ಷೇತ್ರಕಾರ್ಯಗಳು ನಡೆದಿವೆ. ಆದರೆ ಬ್ರಾಹ್ಮಣ ಸಮುದಾಯವನ್ನೇ ಗುರಿಯಾಗಿಟ್ಟುಕೊಂಡು ಅದರಲ್ಲೂ ವ್ಯವಸಾಯವನ್ನೇ ವೃತ್ತಿಮಾಡಿಕೊಂಡು ಅದೇ ಕಾಲದಲ್ಲಿ ಕಲೆ ಸಾಹಿತ್ಯ ಸಾಂಸ್ಕೃತಿಕ ಆಚಾರ ವಿಚಾರಗಳಲ್ಲಿ ತಮ್ಮದೇ ಆದ ವೈಶಿಷ್ಟ್ಯ ಹೊಂದಿರುವ ಸಂಕೇತಿ ಸಮುದಾಯವನ್ನು ಕುರಿತು ಅಧ್ಯಯನ ನಡೆಸಿರುವ ಈ ಗ್ರಂಥ ಯಾವ ಪಿಎಚ್.ಡಿ. ಗ್ರಂಥಕ್ಕಾಗಲಿ, ಡಿ.ಲಿಟ್. ಗ್ರಂಥಕ್ಕಾಗಲಿ, ಸಂಶೋಧನ ಗ್ರಂಥಕ್ಕಾಗಲಿ ಕಡಿಮೆಯಲ್ಲ. ನಿಜ ಹೇಳಬೇಕೆಂದರೆ ಈ ಬಗೆಯ ಇನ್ನೊಂದು ಗ್ರಂಥ ಕಾಣಬೇಕಾದರೆ ಹವ್ಯಕ ಸಮಾಜದವರ ಅಧ್ಯಯನ ಗ್ರಂಥ ಹೊರಬರಬೇಕು. ಅವರೂ ಸಂಕೇತಿಗಳಂತೆ ಕೃಷಿವೃತ್ತಿದ್ವಿಜರು. ಜೈನ ಧರ್ಮದಲ್ಲಿ ಪುಣ್ಯಗಳ ಬಗ್ಗೆ ಮಾತೊಂದಿದೆ. ಕೃತ ಪುಣ್ಯ, ಕಾರಿತ ಪುಣ್ಯ, ಅನುಮೋದನ ಪುಣ್ಯ ಎಂದು ಮೂರು ಬಗೆ ಕರ್ಮಗಳಿವೆ. ಒಳ್ಳೆಯ ಕೆಲಸವನ್ನು ತಾನೇ ಮಾಡುವುದು ಕೃತ ಪುಣ್ಯ; ಒಳ್ಳೆಯ ಕೆಲಸ ಮಾಡಲು ನೆರವಾಗುವುದು ಕಾರಿತ ಪುಣ್ಯ; ಇತರರು ಮಾಡಿದ ಒಳ್ಳೆಯ ಕೆಲಸಗಳನ್ನು ಪ್ರೋತ್ಸಾಹಿಸುವುದು ಅನುಮೋದನ ಪುಣ್ಯ. ಮಿತ್ರರಾದ ಪ್ರಣತಾರ್ತಿಹರನ್ ಈ ಮೂರೂ ಬಗೆಯ ಪುಣ್ಯಶಾಲಿಗಳು. ದಕ್ಷ ಅರ್ಹ ಅನುಭವಿ ಕೃಷಿ ಅಧಿಕಾರಿಗಳಾದ ಎನ್. ಕೇಶವಮೂರ್ತಿ ಅವರನ್ನು ಒಲಿಸಿ ಒತ್ತಾಯಿಸಿ ಜತೆಗೂಡಿ ಈ ಕೃತಿ ಬರುವಂತೆ ಮಾಡಿದ್ದಾರೆ. ಇದು ನಿಜಕ್ಕೂ ಸಾಹಸ. ಟಿ.ಎಸ್. ವೆಂಕಣ್ಣಯ್ಯನವರನ್ನು ಯಾರೋ ಕೇಳಿದರಂತೆ, "ನೀವು ನಿಮ್ಮ ಶಿಷ್ಯ ಕುವೆಂಪು ಅವರು ಮಹಾಕಾವ್ಯ ಬರೆಯುವಂತೆ ಮಾಡಿದಿರಲ್ಲ. ನೀವೇ ಏಕೆ ಬರೆಯಬಾರದಿತ್ತು?" ಅದಕ್ಕೆ ಅವರು ಕೊಟ್ಟ ಉತ್ತರ, "ಕನ್ನಡ ಸಾಹಿತ್ಯ ನಂದನದಲ್ಲಿ ನಾನೇ ಒಂದು ಮರವಾಗುವುದಕ್ಕಿಂತ ನೂರಾರು ಕಲ್ಪವೃಕ್ಷಗಳನ್ನು ಬೆಳೆಸುವ ತೋಟದ ಮಾಲಿ ಆಗುವುದು ನನ್ನ ಆಸೆ" ಎಂದರಂತೆ. ಹಾಗೇ ಹರನ್ ಸಂಕೇತಿ ನಂದನದಲ್ಲಿ ನೂರಾರು ಸಾಹಿತ್ಯ ವೃಕ್ಷಗಳನ್ನು ನೆಟ್ಟು ಬೆಳೆಸುವ ಮಾಲಿ ಆಗಿದ್ದಾರೆ. ಅವರ ಕೃಷಿಯ ಸಾರ್ಥಕತೆಗೆ ಈ ಗ್ರಂಥ ಕೇಶವಮೂರ್ತಿಗಳ ಪರಿಶ್ರಮ ಪಾಂಡಿತ್ಯದ ಫಲ ಸಾಕ್ಷಿ ಆಗಿದೆ.

ಕರ್ನಾಟಕದ ೩೩ ಹಳ್ಳಿಗಳಲ್ಲಿರುವ ೯೬ ರೈತರನ್ನು ಸಂದರ್ಶಿಸಿ, ಅವರ ಜೀವನ ಸಾಧನೆಗಳನ್ನು ಕಣ್ಣಾರೆ ಕಂಡು ಸಂದರ್ಶನದ ಪ್ರಶ್ನೋತ್ತರಗಳ ಮೂಲಕ ಅವರ ಅಂತರಂಗ ಅರಿತು, ಅವರೇ ಹೇಳಿದ ಮಾತುಗಳ ಮೂಲಕ ವ್ಯಕ್ತಿಚಿತ್ರಣದ ಜತೆಗೆ ಸಂಕೇತಿ ಜನರ ಕೃಷಿರಂಗ ಇಂದು ಏನಾಗಿದೆ, ಏಕೆ ಹೀಗಾಗಿದೆ ಎಂಬ ಸತ್ಯ ಕಥನವನ್ನು ನಮ್ಮ ಮುಂದಿಟ್ಟಿದ್ದಾರೆ. ಐತಿಹಾಸಿಕ ದಾಖಲೆ ಆಗುವ ರೀತಿಯಲ್ಲಿ ಕೃಷಿಕರ ಚಿತ್ರಗಳನ್ನು ಕೊಡಲಾಗಿದೆ. ಪರಂಪರಾಗತವಾಗಿ ಕುಟುಂಬ ವೃತ್ತಿಯನ್ನು ಮಕ್ಕಳು ಅನುಸರಿಸುವ ಸನ್ನಿವೇಶ ಹೋಗಿ ಕಾಲಪರಿಸ್ಥಿತಿ ಬದಲಾವಣೆ ಆದಾಗ, ಮಕ್ಕಳು ಬೇರೆ ವೃತ್ತಿ ಹಿಡಿದಾಗ, ಕುಟುಂಬಪರಿಸ್ಥಿತಿಗಳು ವಂಶವೃತ್ತಿಗಳು ಏನಾಗಿವೆ ಎಂಬುದರ ಚಿತ್ರಣ ಇಲ್ಲಿದೆ. ಸಮಾಜಶಾಸ್ತ್ರೀಯ ಅಧ್ಯಯನಕ್ಕೆ ಅಭೂತಪೂರ್ವ ಸಾಮಗ್ರಿ ಇಲ್ಲಿಯ ಬರಹಗಳಲ್ಲಿದೆ. ಸಾಮಾನ್ಯವಾಗಿ ರೈತವರ್ಗ ಎಂದಾಗ ನಮ್ಮ ದೇಶದಲ್ಲಿ ಶ್ರಮಿಕವರ್ಗ ಮತ್ತು ಅನಕ್ಷರಸ್ಥವರ್ಗ. ಆದರೆ ಸಂಕೇತಿ ಸಮುದಾಯದಲ್ಲಿ ಎಲ್ಲರೂ ಅಕ್ಷರಸ್ಥ ವರ್ಗ ಮತ್ತು ಸಾಮಾಜಿಕವಾಗಿ ಸಾಕಷ್ಟು ಮಾನ್ಯತೆ ಪಡೆದವರ್ಗ. ಇಂಥ ಸಮುದಾಯ ರೈತವರ್ಗವಾಗಿರುವಾಗ ಅವರ ರೈತಸಮಸ್ಯೆಗಳು, ಜೀವನವಿಧಾನ, ಸಂಸ್ಕೃತಿ ಎಲ್ಲವೂ ವಿಭಿನ್ನವಾದವು. ಹೀಗಾಗಿ ನಮ್ಮ

ದೇಶದಲ್ಲಿ ರೈತವರ್ಗದ ಬಗ್ಗೆ, ಸಮಸ್ಯೆಗಳ ಬಗ್ಗೆ ಚಿಂತಿಸುವಾಗ, ಅವರನ್ನು ಕುರಿತು ಭಿನ್ನವಾಗಿ ಚಿಂತಿಸಬೇಕಾಗುತ್ತದೆ. ಆಗಲೇ ರೈತಸಮುದಾಯದ ನಿಜಚಿತ್ರಣ ಸಿಗಲು ಸಾಧ್ಯ. ಈ ದೃಷ್ಟಿಯಲ್ಲಿ ಈ ಗ್ರಂಥ ಕನ್ನಡಕ್ಕೆ ವಿನೂತನ ಕೊಡುಗೆ. ಇದನ್ನು ಕನ್ನಡಕ್ಕೆ ಕೊಟ್ಟ ಲೇಖಕರು, ಪ್ರಕಾಶಕರಿಗೆ ಸರ್ಕಾರ, ಸಮಾಜ ಕೃತಜ್ಞರಾಗಬೇಕಾಗಿದೆ. ಎಲ್ಲಾ ಸಮಾಜಶಾಸ್ತ್ರಾಭ್ಯಾಸಿಗಳೂ ರೈತವರ್ಗದವರೂ ಸಾಮಾಜಿಕ ಕಳಕಳಿಯ ಧುರೀಣರೂ ಕನ್ನಡ ಸಾಹಿತ್ಯಾಸಕ್ತರೂ ಓದಲೇಬೇಕಾದ ಗ್ರಂಥ ಇದಾಗಿದೆ.

- ಶ್ರೀ ಎಸ್.ಎಲ್.ಸೋಮಶೇಖರ್

ಕನ್ನಡ ಪಂಡಿತ್, ಎಂ.ಎ., ನಿವೃತ್ತ ಶಿಕ್ಷಕರು, ಮೈಸೂರು

ವೇದಗಳ ಕಾಲದಲ್ಲಿ 'ಬ್ರಾಹ್ಮಣೋ ಬಹುಜನಪ್ರಿಯಃ' ಎನಿಸಿಕೊಂಡಿದ್ದರು. ಕಲಿಯುಗದಲ್ಲಿ 'ಬ್ರಾಹ್ಮಣೋ ಭೋಜನಪ್ರಿಯಃ' ಎನ್ನುವ ಹಂತಕ್ಕೆ ಕೆಲವರು ಬಂದು ತಲುಪಿದರು. ಸಂಕೇತಿಗಳ ಅಧ್ಯಯನದ ಅಷ್ಟಸಂಪುಟಗಳನ್ನು ಅವಲೋಕಿಸಿದಾಗ ಬಹುಶಃ 'ಸಂಕೇತಿ ಬ್ರಾಹ್ಮಣಃ ಬಾಗಾಯ್ತು ಕೃಷಿಪ್ರಿಯಃ' ಅಂದುಕೊಂಡರೆ ತಪ್ಪಾಗಲಾರದು ಅಲ್ಲವೇ?

ಕಮಿಷನರೇಟ್ ಆಫ್ ಕೊಲಿಜಿಯೇಟ್ ಎಜುಕೇಷನ್	**ಡಾ|| ಬಿ.ಎಸ್. ನರಹರಿ**
ಬೆಂಗಳೂರು	ಭೌತಶಾಸ್ತ್ರ ಪ್ರಾಧ್ಯಾಪಕರು (ನಿವೃತ್ತ)

ಸಂಕೇತಿ ಕೃಷಿಯ ವಿಭಿನ್ನ ನೆಲೆಗಳು
ಇದು ಸಂಕೇತಿ ಗದ್ಯಮಹಾಕಾವ್ಯ

ಒಂದೆಡೆ ವೈದಿಕತೆ, ಇನ್ನೊಂದೆಡೆ ಕಠಿಣ ದೈಹಿಕ ದುಡಿಮೆ; ಒಂದೆಡೆ ಬೌದ್ಧಿಕತೆ, ಇನ್ನೊಂದೆಡೆ ಹೃದಯವಂತಿಕೆ; ಒಂದೆಡೆ ಉನ್ನತ ಆಧ್ಯಾತ್ಮಿಕತೆ, ಇನ್ನೊಂದೆಡೆ ಲೌಕಿಕದ ಸರಳತೆ - ಇದು ಸಂಕೇತಿ ಸಮುದಾಯದ ಬದುಕಿನ ಪಾಕ. ವೇದಾಧ್ಯಯನ, ಶಾಸ್ತ್ರಾಧ್ಯಯನ ಮತ್ತು ಬಾಗಾಯ್ತು ಕೃಷಿ - ಇವುಗಳು ಪರಿಣಾಮಿಸಿದ ಸಮರಸ ಅದು. ಜತೆಗೆ ಸಂಗೀತವು ತಾನಾಗಿಯೇ ಹುಟ್ಟಿ ನಾದಬ್ರಹ್ಮದ ಆರಾಧನೆ ಇನ್ನೊಂದು ಮಗ್ಗುಲಿನಿಂದ ನಡೆದಿದೆ. ಪಾರಂಪರಿಕ ಸಂಕೇತಿ ಬದುಕು ಎಂದರೆ ಈ ಎಲ್ಲದರ ಸಮುಚ್ಚಯವು ಕಟ್ಟಿದ ಶಿಖರದಲ್ಲಿ ಆತ್ಮಾರಾಮರಾಗಿರುವುದು. ಅದರಾಚೆಗಿನ ಎಲ್ಲವೂ ದಾಹವಡಗಿಸದ ಪರದಾಟ. 'ಸಂಕೇತಿ ಕೃಷಿಯ ವಿಭಿನ್ನ ನೆಲೆಗಳು', 'ಸಂಕೇತಿ ಬೇಸಾಯದ ಬದುಕು' ಎಂಬ ಎರಡೂ ಸಂಪುಟಗಳೂ ಸಂಕೇತಿ ಕೃಷಿಯ ಸಂಸ್ಮರಣ ಗ್ರಂಥಗಳಾಗಿ ಉಳಿದುಬಿಡುವ ಕ್ಷಿಪ್ರ ಸ್ಥಿತ್ಯಂತರವು ಸಂಕೇತಿ ಸಮುದಾಯದ ಬದುಕಿನಲ್ಲಿ ಆಗುತ್ತಿದೆ. ಹಾಗಿದ್ದೂ ಒಂದು ಆದರ್ಶ ಜೀವನಕ್ಕೆ 'ಮಾದರಿ'ಯನ್ನು ಈ ಸಂಪುಟಗಳು ಕಾಪಿಟ್ಟಿವೆ. ಶ್ರೀ ಎನ್. ಕೇಶವಮೂರ್ತಿಯವರ 'ಸಂಕೇತಿ ಕೃಷಿಯ ವಿಭಿನ್ನ ನೆಲೆಗಳು' ಎಂಬುದು ಪಕ್ಕಾ ಸಂಶೋಧನ ಕೃತಿ ಎಂಬುದು ನಿಜ. ಆದರೆ ಅದು ಅಷ್ಟೇ ಆಗಿ ಉಳಿದಿಲ್ಲ. ಅದೊಂದು ಗದ್ಯ-ಮಹಾಕಾವ್ಯವೇ ಆಗಿ ಅರಳಿಕೊಂಡಿದೆ. ಶ್ರೀ ಎನ್. ಕೇಶವಮೂರ್ತಿ ಕೇವಲ ಒಬ್ಬ ಕೃಷಿತಜ್ಞನಾಗಿದ್ದರೆ ಅದು ಈ ಎತ್ತರಕ್ಕೆ ಏರುತ್ತಿರಲಿಲ್ಲವೆನಿಸುತ್ತದೆ. ಅವರ ವ್ಯಕ್ತಿತ್ವದಲ್ಲಿ ತಪಸ್ಸು, ಸಹೃದಯತೆ, ಮುಕ್ತಮನ, ಕುತೂಹಲ, ವಿನಯಶೀಲತೆ, ಕಠಿಣ ಪರಿಶ್ರಮ, ಚಿಂತನೆ, ಸ್ಪಷ್ಟ ನಿಲುವು, ಲೇಖನ ಕಲೆ ಎಲ್ಲವೂ ಇವೆ. ಅವುಗಳ ಜತೆಗೆ ದ್ರಷ್ಟಾರನೊಬ್ಬನ ಒಳನೋಟವೂ ಇದೆ. ಹಾಗೆಂದೇ ಇದೊಂದು ಮಹಾಕಾವ್ಯದ ಶ್ರೇಷ್ಠತೆಯನ್ನು ಹೊಂದಿದೆ. ಖಂಡಿತವಾಗಿಯೂ 'ಸಂಕೇತಿ ಬೇಸಾಯದ ಬದುಕು' ಇದರ ಪ್ರಭಾವಳಿಯನ್ನು ಹಿಗ್ಗಲಿಸಿದೆ. ಹಾಗಾಗಿ ಶ್ರೀ ವಿಜಯ್ ಅಂಗಡಿ ಮತ್ತು ಡಾ|| ಎಂ.ಎಸ್. ವಿಜಯಾ ಹರನ್ ಅವರೂ ಅಭಿನಂದನಾರ್ಹರಾಗಿದ್ದಾರೆ.

ಮೂರು ತಲೆಮಾರಿನ ಚಿತ್ರಣ

ಡಾ|| ಸಿ.ಎಸ್. ರಾಮಚಂದ್ರ
ಮೈಸೂರು
ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು
ಭಾಷಾವಿಜ್ಞಾನ ಅಧ್ಯಯನ ವಿಭಾಗ
ಮಾನಸ ಗಂಗೋತ್ರಿ, ಮೈಸೂರು

ಇದೊಂದು ಪ್ರವಾಸಕಥನದಂತೆ ಕಾಣುವ ಸಂಶೋಧನಾ ಕೃತಿ. ಈಗಿನ ತಮಿಳುನಾಡು-ಕೇರಳದ ಗಡಿಭಾಗದಲ್ಲಿ, ಮುಖ್ಯವಾಗಿ ಶೆಂಕೋಟ್ಟೈ ಪ್ರಾಂತದಲ್ಲಿ ನೆಲೆಸಿದ್ದ ಸಂಕೇತಿಗಳು ಅಡಿಕೆ ಬೇಸಾಯವನ್ನು ಪ್ರಧಾನವಾಗಿ ನಿರ್ವಹಿಸುತ್ತಿದ್ದ ಕೃಷಿಕರು. ೮೦೦ ವರ್ಷಗಳ ಹಿಂದೆ ಅಲ್ಲಿಂದ ಬಹುಪಾಲು ಸಂಕೇತಿಗಳು (ಈಗಿನ) ಕರ್ನಾಟಕಕ್ಕೆ ವಲಸೆ ಬಂದರು. ಇಲ್ಲಿಯೂ ಅವರು ಮಾಡಿದ್ದು ಪ್ರಧಾನವಾಗಿ ತೋಟಗಾರಿಕೆಯನ್ನೇ. ಅವರಿಗೆ ಕಾಯಕವೇ ಕೈಲಾಸ. ಅದರ ಜತೆಗೆ ಅವರ ಕೌಟುಂಬಿಕ, ಸಾಮಾಜಿಕ ಬದುಕು, ಅನನ್ಯತೆ ಇಲ್ಲಿ ಚಿತ್ರಿತವಾಗಿದೆ. ಬದುಕಿನ ಸವಾಲುಗಳನ್ನು ಎದೆಗುಂದದೆ ಸ್ವೀಕರಿಸಿದವರು ಇವರು. ಕಾಲಕ್ರಮದಲ್ಲಿ ತರಿ, ಖುಷ್ಕಿ ಬೇಸಾಯವನ್ನೂ, ಅಳವಡಿಸಿಕೊಂಡಿದ್ದಾರೆ, ಇತರ ವಾಣಿಜ್ಯ ಬೆಳೆ ಬೆಳೆದಿದ್ದಾರೆ, ಆಧುನಿಕ ಜ್ಞಾನವನ್ನು ಅದಕ್ಕಾಗಿ ಬಳಸಿಕೊಂಡಿದ್ದಾರೆ. ಆಶ್ರಯ ನೀಡಿದ ಕರ್ನಾಟಕದ ಜನರೂ ಪ್ರಭುಗಳೂ ಆಶ್ಚರ್ಯಪಡುವಂತೆ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ್ದಾರೆ. ಪಶುಪಾಲನೆ ಮತ್ತು ಅಡಕೆ ವಹಿವಾಟು ಅವರ ಬದುಕಿಗೆ ಹೊಂದಿಕೊಂಡ ಪೂರಕ ಕ್ಷೇತ್ರಗಳು. ಬಹು ಹಿಂದಿನಿಂದಲೂ ಸಾವಯವ ಕೃಷಿಯನ್ನು ಅಳವಡಿಸಿಕೊಂಡಿದ್ದಾರೆ. ಎಲೆ, ಕಳೆ, ಬಾಳೆ, ತರಗು, ಸೋಗೆ ಇತ್ಯಾದಿ ವಸ್ತುಗಳನ್ನು ಗೊಬ್ಬರಕ್ಕೆ ಬಳಸಿದ್ದಾರೆ, ಉರವಲಾಗಿಸಿಕೊಂಡಿದ್ದಾರೆ; ಅಡಕೆಪಟ್ಟೆ, ಬಾಳೆಚೆಲ್ಲು, ಬಾಳೆನಾರು, ತೆಂಗಿನ ಜುಂಗು ಇವನ್ನು ಗೃಹಕೈಗಾರಿಕೆಯ ವಸ್ತುಗಳಾಗಿಸಿಕೊಂಡಿದ್ದಾರೆ. ಮುತ್ತುಗದ ಎಲೆ, ದೊನ್ನೆ ತಯಾರಿಕೆ, ಹಗ್ಗ ಸಿದ್ಧಪಡಿಸುವುದು, ಹುಣಸೆಹಣ್ಣು ರೇಖೆ ಮಾಡುವುದು ಅವರ ಗೃಹ ಕೈಗಾರಿಕೆಯ ಕೆಲ ನಿದರ್ಶನಗಳು. ಅಡುಗೆ ಮಾಡುವುದರಲ್ಲಿ ಅವರ ವಿಶೇಷವಿದೆ. ಸಾರು, ಮಜ್ಜಿಗೆಹುಳಿ, ಆಂಬೊಡೆ, ಜಿಲೇಬಿ, ಉದ್ದಿನ ಕಡುಬು, ಒತ್ತು ಶಾವಿಗೆ, ಎರಿಯಪ್ಪ ಅವರ ವಿಶಿಷ್ಟ ತಯಾರಿಗಳು. ಜನಿವಾರ ತಯಾರಿ, ನಾಟಿ ಔಷಧಿ, ಅಡಕೆ ಎಡೆಯುವುದು, ತುಡಿಕೆ ನಿರ್ವಹಣೆ ಅವರ ಇನ್ನಿತರ ಪರಿಣತ ಕ್ಷೇತ್ರಗಳು. ಗೃಹಕೃತ್ಯವಿರಲಿ, ವ್ಯವಸಾಯವಿರಲಿ ಪುರುಷರಿಗೆ ಸಮಾನವಾಗಿ ದುಡಿದವರು ಸಂಕೇತಿ ಸ್ತ್ರೀಯರು. ಪರಿಶ್ರಮ ಮತ್ತು ಬಡತನದಲ್ಲೂ ನೆಮ್ಮದಿ ಕಂಡವರು. ಸಂಗೀತ, ಕಲಾಕುಸುರಿ ಕೆಲಸ, ಪೋಷಾಕು ತಯಾರಿಕೆ ಇತ್ಯಾದಿ ನಾಜೂಕು ಕೆಲಸಗಳಿರಲಿ; ಅತಿಥಿ ಸತ್ಕಾರವಿರಲಿ; ದನ ಮೇಯಿಸುವುದು, ನೀರು ಹೊರುವುದು ಇಂಥ ಏನೇ ಇದ್ದರೂ ಸ್ತ್ರೀಯರು ಮುಂದು. ಮುಖ್ಯವಾಗಿ ಇಲ್ಲಿ ಎರಡು-ಮೂರು ತಲೆಮಾರಿನ ಜೀನವಚಿತ್ರಣವೇ ಇದೆ.

VIBRANT INDIA

ಡಾ|| ಬಿ. ಚನ್ನಕೇಶವ
ಸಂಸ್ಕೃತ ಪ್ರಾಧ್ಯಾಪಕರು (ವಿಶ್ರಾಂತ)
ವಿಶ್ವವಿದ್ಯಾನಿಲಯ ಸಂಜೆ ಕಾಲೇಜು
ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು

ವಿದ್ವತ್ತ್ವಂಚ ನೃಪತ್ವಂಚ ನೈವ ತುಲ್ಯಂ ಕದಾಚನ |
ಸ್ವದೇಶೇ ಪೂಜ್ಯತೇ ರಾಜಾ ವಿದ್ವಾನ್ಸರ್ವತ್ರ ಪೂಜ್ಯತೇ || ಸುಭಾಷಿತಾವಲೀ

ವಿದ್ವತ್ತು ಮತ್ತು ನೃಪತ್ವ (ಪ್ರಭುತ್ವ) ಇವೆರಡೂ ಸಮಾನವಾದುವುಗಳಲ್ಲ. ರಾಜನು ತನ್ನ ರಾಜ್ಯದಲ್ಲಿ ಪೂಜಿತನಾದರೆ ವಿದ್ವಾಂಸನು ಎಲ್ಲೆಡೆಯೂ ಪೂಜಿತನಾಗುತ್ತಾನೆ.

ಇಪ್ಪತ್ತನೆಯ ಶತಮಾನದಲ್ಲಿ ನಮ್ಮ ನಾಡು ಕಂಡ ಅತಿಶ್ರೇಷ್ಠ ಸಂಸ್ಕೃತ ವಿದ್ವಾಂಸರಲ್ಲಿ ಪುಣ್ಯಶ್ಲೋಕರಾದ ರುದ್ರಪಟ್ಟಣ ಶಾಮಾಶಾಸ್ತ್ರಿಗಳು ಅಗ್ರಗಣ್ಯರು ಹಾಗೂ ಅಗ್ರಮಾನ್ಯರು. ಸಂಸ್ಕೃತಮೂಲವಾದ ಭಾರತೀಯವಿದ್ಯೆಗಳಲ್ಲಿ ಅವರಿಗಿದ್ದ ಪಾಂಡಿತ್ಯ ಅಗಾಧವಾದುದೂ

ಅಪರಿಮಿತವಾದುದೂ ಆಗಿದ್ದಿತು. ಇಂತಹ ಒಬ್ಬ ಬಹುಶ್ರುತಪಂಡಿತರು ನಾಲ್ಕಾರು ದಶಕಗಳ ಕಾಲ ಬರೆದಂತಹ ನೂರಾರು ವಿದ್ವಲ್ಲೇಖನಗಳು, ಸಂಶೋಧನ ಪ್ರಬಂಧಗಳು ಪ್ರಪಂಚದ ಮೂಲೆಮೂಲೆಗಳಿಂದ ಪ್ರಕಟಗೊಳ್ಳುತ್ತಿದ್ದ ವಿದ್ವತ್ಪತ್ರಿಕೆಗಳಲ್ಲಿ, ನಿಯತಕಾಲಿಕಗಳಲ್ಲಿ, ಸಂಶೋಧನ ಸಂಚಿಕೆಗಳಲ್ಲಿ, ಅಭಿನಂದನ-ಸಂಸ್ಮರಣ ಗ್ರಂಥಗಳಲ್ಲಿ, ಸಮ್ಮೇಲನಗಳ ವರದಿಗಳಲ್ಲಿ ಕಾಲದಿಂದ ಕಾಲಕ್ಕೆ ಬೆಳಕು ಕಂಡಿವೆ. ಹೀಗೆ ನಾನಾ ಕಡೆ ಚದುರಿಹೋಗಿದ್ದ ಅವರ ಅತ್ಯಮೂಲ್ಯ ಲೇಖನಗಳನ್ನು ಏಕತ್ರ ಸಂಗ್ರಹಿಸಿ, ಪರಿಷ್ಕರಿಸಿ, ವಿಷಯಾನುಸಾರ ಜೋಡಿಸಿ ಗ್ರಂಥರೂಪದಲ್ಲಿ ಪ್ರಕಟಿಸುವುದು ಬಹುಶ್ರಮಸಾಧ್ಯವಾದ ಒಂದು ಅಸಾಧಾರಣಕಾರ್ಯವೇ ಸರಿ. ಪ್ರಕೃತ ನಮ್ಮ ಮುಂದಿರುವ 'ವೈಬ್ರಂಟ್ ಇಂಡಿಯಾ' ಇಂತಹ ಒಂದು ಅಸಾಧಾರಣವಾದ, ಬಹು ಪರಿಶ್ರಮದಿಂದ ಸಂಪಾದಿಸಿ ಕೊಟ್ಟಿರುವ ಶಾಮಾಶಾಸ್ತ್ರಿಗಳ ಲೇಖನಗಳ ಸಂಗ್ರಹ ರೂಪದ ಒಂದು ಸಂಸ್ಮರಣ ಗ್ರಂಥ. ಶಾಮಾಶಾಸ್ತ್ರಿಗಳು ಪ್ರಪ್ರಥಮವಾಗಿ ಬೆಳಕಿಗೆ ತಂದ ಕೌಟಿಲ್ಯನ ಮೇರುಕೃತಿ 'ಅರ್ಥಶಾಸ್ತ್ರ'ಕ್ಕೆ ನೂರು ವರ್ಷಗಳು ತುಂಬಿದ ಸವಿನೆನಪಿಗಾಗಿ ಈ ಗ್ರಂಥವನ್ನು ಸಮುದಾಯ ಅಧ್ಯಯನ ಕೇಂದ್ರದಿಂದ ಹೊರತರಲಾಗಿದೆ. ವಿದ್ಯಾಕ್ಷೇತ್ರದಲ್ಲಿ ಪುರಾತನ ಭಾರತೀಯರು ಮಾಡಿರುವ, ಎಂದೆಂದಿಗೂ ಕುಂದದ, ಮಾಸದ, ಅವಿನಾಶಿ ಸಾಧನೆಯನ್ನು 'ವೈಬ್ರಂಟ್ ಇಂಡಿಯಾ' ನಾಮಧೇಯವು ಸಮರ್ಥವಾಗಿ ಸೂಚಿಸುತ್ತದೆ. ವೇದಯುಗದ ಋಷಿಮುನಿಗಳಿಂದ ಪ್ರಾರಂಭವಾಗಿ ಮಧ್ಯಯುಗದ ವ್ಯಾಸ-ವಾಲ್ಮೀಕಿ-ಕಾಳಿದಾಸಾದಿಗಳಿಂದ ಸಮೃದ್ಧವಾಗಿ ಆಧುನಿಕಯುಗದ ಶಾಮಾಶಾಸ್ತ್ರಿಗಳಂತಹ ದಿಗ್ಗಜ ಪಂಡಿತರಿಂದ ಜೀವಂತವಾಗಿ ಸ್ಪಂದನಶೀಲವಾಗಿರುವ ಪರಂಪರೆಯನ್ನು ಈ ನುಡಿಗಟ್ಟು ರಮಣೀಯವಾಗಿ ಧ್ವನಿಸುತ್ತದೆ. ಜಗತ್ತಿನಲ್ಲಿ ಇಂದು ಇಂಡಿಯಾದೇಶವು ವೈಬ್ರಂಟ್ ಆಗಿ ಕಂಗೊಳಿಸುತ್ತಿದ್ದರೆ ಅದಕ್ಕೆ ಬಹುಮಟ್ಟಿಗೆ ಶಾಮಾಶಾಸ್ತ್ರಿಗಳಂಥ ಪುಣ್ಯಾತ್ಮರಾದ ಮೇಧಾವಿಗಳೇ ಕಾರಣವೆಂದರೆ ಅತ್ಯುಕ್ತಿಯಾಗಲೀ, ಅಲೀಕೋಕ್ತಿಯಾಗಲೀ ಆಗುವುದಿಲ್ಲ. 'ವೈಬ್ರಂಟ್ ಇಂಡಿಯಾ' ನುಡಿಯು ಬೇರೆಡೆ ಅಂದರೆ ಜನಸಾಮಾನ್ಯರ ಸಂದರ್ಭದಲ್ಲಿ ಭಾರತದ ಆರ್ಥಿಕ ಸಂಪತ್ತು, ಭೌತಿಕ ಅಭಿವೃದ್ಧಿಗಳನ್ನು ಸೂಚಿಸಿದರೆ ಇಲ್ಲಿ ಅಂದರೆ ಸಾರಸ್ವತರ ಸಂದರ್ಭದಲ್ಲಿ ನಮ್ಮ ಸಾಂಸ್ಕೃತಿಕ ಮತ್ತು ಸಾಹಿತ್ಯಿಕ ಸಮೃದ್ಧಿಗೆ ಸೂಚಕವಾಗಿದೆ.

ಪೀಠಿಕೆ, ಅನುಬಂಧ ಮುಂತಾದವು ಸೇರಿ ಸುಮಾರು 530 ಪುಟಗಳಷ್ಟು ದೀರ್ಘವಾಗಿ ಹರಡಿರುವ ಈ ಗ್ರಂಥದಲ್ಲಿ ಶಾಮಾಶಾಸ್ತ್ರಿಗಳ 46 ಲೇಖನಗಳನ್ನು ಸಂಗ್ರಹಿಸಿಕೊಡಲಾಗಿದೆ. ಶಾಸ್ತ್ರಿಗಳ ಲೇಖನಗಳಲ್ಲಿ ಕಂಡುಬರುವ ವಿಷಯವೈವಿಧ್ಯ, ಹರಹು; ವಿಷಯಗಳನ್ನು ಅವರು ಆಧಾರಸಹಿತವಾಗಿ ಪ್ರತಿಪಾದಿಸಿ ವಿಮರ್ಶೆಗೆ ಒಳಪಡಿಸುವ ಪರಿ ಮನೋಜ್ಞವಾಗಿವೆ. ಗ್ರಂಥದಲ್ಲಿ ಕೊಟ್ಟಿರುವ ಲೇಖನಗಳು ಮುಖ್ಯವಾಗಿ ಈ ಮುಂದಿನ ವಿಷಯಗಳಿಗೆ ಸಂಬಂಧಿಸಿವೆ - ವೇದಗಳು ಮತ್ತು ವೇದಾಂಗಗಳು (ವೇದಾಂಗಗಳಲ್ಲಿ ಪ್ರಧಾನವಾಗಿ ಕಂಡುಬರುವುದು ಜ್ಯೋತಿಷ ಮತ್ತು ವ್ಯಾಕರಣ), ಸ್ಮೃತಿಗಳು, ಜೈನ-ಬೌದ್ಧ ಪುರಾಣ ಮತ್ತು ದರ್ಶನಗಳು, ಸಂಸ್ಕೃತ ಸಾಹಿತ್ಯ, ಲಿಪಿ ಮತ್ತು ಭಾಷೆ, ಅದ್ವೈತ ದರ್ಶನ, ಪ್ರಾಚೀನ ಇತಿಹಾಸ ಮತ್ತು ಸಂಸ್ಕೃತಿ, ಶಾಸನಗಳು, ಮತ್ತು ಅರ್ಥಶಾಸ್ತ್ರ. ಲೇಖನಗಳನ್ನು ವಿಷಯಾನುಕ್ರಮವಾಗಿ ಹೀಗೆ ಪಟ್ಟಿ ಮಾಡಬಹುದು:

1.	ಪ್ರಾಚೀನ ಭಾರತದ ಆಡಳಿತಪದ್ಧತಿ ಮತ್ತು ಸಾಮಾಜಿಕ ಸ್ಥಿತಿಗತಿಗಳು	- 7
2.	ಕವಿ-ಕಾವ್ಯಗಳು, ಶಾಸ್ತ್ರಗ್ರಂಥಗಳು; ಇವುಗಳ ಕಾಲ-ದೇಶ-ಕರ್ತೃ ಇತ್ಯಾದಿ	- 8
3.	ಭಾರತೀಯದರ್ಶನಗಳಿಗೆ ಸಂಬಂಧಿಸಿದವು	- 4
4.	ವೇದ-ವೇದಾಂಗ, ವಿಶೇಷವಾಗಿ ಜ್ಯೋತಿಷ	- 12
5.	ಭಾರತದ ಇತಿಹಾಸ, ಸಂಸ್ಕೃತಿ ಇತ್ಯಾದಿ	- 6
6.	ಸೂರ್ಯಪ್ರಜ್ಞಪ್ತಿ (ಜೈನ ಜ್ಯೋತಿಷ ಗ್ರಂಥ)	- 6
7.	ವಿವೇಕಸಾರ (ಅದ್ವೈತವೇದಾಂತ, ಶಂಕರಾನಂದ)	- 3
	ಒಟ್ಟು	- 46

ಶಾಮಾಶಾಸ್ತ್ರಿಗಳು ಬರೆದ ಲೇಖನಗಳಲ್ಲಿ ಬಹಳಷ್ಟು ಪೂನಾ ಓರಿಯಂಟಲಿಸ್ಟ್ (Poona Orientalist) ಮತ್ತು ಮಿಥಿಕ್ ಸೊಸೈಟಿ ಜರ್ನಲ್ (Mythic Society Journal)ಗಳಲ್ಲಿ ಪ್ರಕಟವಾಗಿವೆ. ಇವುಗಳಲ್ಲದೆ ಮತ್ತೆ ಕೆಲವು ಬಾಂಬೆ, ಅಲಹಾಬಾದ್, ಕಲ್ಕತ್ತ ನಗರಗಳ ಪ್ರಾಚ್ಯವಿದ್ಯಾಸಂಶೋಧನಾಲಯಗಳು, ರಾಯಲ್ ಏಷಿಯಾಟಿಕ್ ಸಂಸ್ಥೆಗಳು, ಮೈಸೂರು ವಿಶ್ವವಿದ್ಯಾನಿಲಯ, ಇಂಡಿಯನ್ ಆ್ಯಂಟಿಕ್ವೇರಿ, ಪ್ರಾಚ್ಯವಿದ್ಯಾಸಮ್ಮೇಲನಗಳ ವರದಿಗಳು ಮುಂತಾದವುಗಳ ಮೂಲಕವೂ ಬೆಳಕು ಕಂಡಿವೆ. ಶಾಮಾಶಾಸ್ತ್ರಿಗಳು ಜೀವಿಸಿದ್ದ ಕಾಲ ಭಾರತದ ವಿದ್ವತ್ ಕ್ಷೇತ್ರದಲ್ಲಿ ಅನೇಕ ವಿದ್ವನ್ಮಣಿಗಳು, ಪ್ರಕಾಂಡಪಂಡಿತರು, ಮಹಾ ಸಂಶೋಧಕರು ಜೀವಿಸಿದ್ದಂತಹ ಸುವರ್ಣಯುಗವಾಗಿದ್ದಿತು.

ಮಹಾಮಹೋಪಾಧ್ಯಾಯರಾದ ಕುಪ್ಪುಸ್ವಾಮಿಶಾಸ್ತ್ರಿಗಳು, ಗಂಗಾನಾಥ ಝಾ ಮತ್ತು ಪಿ.ವಿ. ಕಾಣೆಯವರು; ಮಹಾವಿದ್ವಾಂಸರಾಗಿದ್ದ ಆರ್.ಕೆ. ಮುಖರ್ಜಿ, ಡಿ.ಆರ್. ಭಂಡಾರ್ಕರ್, ಕೆ.ಬಿ. ಪಾಠಕ್ ಮತ್ತು ಆಶುತೋಷ ಮುಖರ್ಜಿ; ಭಾರತೀಯ ಪ್ರಾಚೀನ ವಿದ್ಯೆಗಳಲ್ಲಿ ಅಪಾರ ಸಾಧನೆಯನ್ನು ಮಾಡಿ ಅಮೂಲ್ಯ ಸೇವೆಯನ್ನು ಸಲ್ಲಿಸಿರುವ ಪಾಶ್ಚಾತ್ಯ ಸಂಶೋಧಕರಾದ ವಿನ್ಸೆಂಟ್ ಸ್ಮಿತ್, ಫ್ಲೀಟ್, ಎಫ್.ಡಬ್ಲ್ಯು.ಥಾಮಸ್, ಎಲ್.ಡಿ. ಬಾರ್ನೆಟ್, ಸ್ಟೆನ್‌ಕೊನೊ, ಎ.ಬಿ. ಕೀತ್, ಎ.ಎ. ಮ್ಯಾಕ್ಡೋನೆಲ್, ಜೆ. ಜಾಲಿ ಮುಂತಾದವರು ಶಾಸ್ತ್ರಿಗಳ ಪರಿಚಿತವರ್ಗದಲ್ಲೋ, ಆಪ್ತವಲಯದಲ್ಲೋ ಇದ್ದವರಾಗಿದ್ದರು. ಇವರಲ್ಲಿ ಅನೇಕ ಪಂಡಿತರೊಡನೆ ಶಾಸ್ತ್ರಿಗಳಿಗೆ ಪತ್ರಸಂಪರ್ಕವೂ ಇದ್ದಿತು. ಮೇಲ್ಕಾಣಿಸಿರುವ ಮಹಾವಿದ್ವಾಂಸರ ಗೌರವಾರ್ಥ ಅಥವಾ ಸ್ಮರಣಾರ್ಥ ಕಾಲದಿಂದ ಕಾಲಕ್ಕೆ ಹೊರತರುತ್ತಿದ್ದಂತಹ 'ಅಭಿನಂದನ' ಮತ್ತು 'ಸಂಸ್ಮರಣ' ಗ್ರಂಥಗಳಲ್ಲಿ ಪ್ರಕಟವಾಗಿರುವ ಶಾಸ್ತ್ರಿಗಳ ಲೇಖನಗಳು ಆ ಗ್ರಂಥಗಳ ಶೋಭೆಯನ್ನೂ ಮೌಲ್ಯವನ್ನೂ ಹೆಚ್ಚಿಸಿವೆ.

'ವೈಬ್ರಂಟ್ ಇಂಡಿಯಾ'ದಲ್ಲಿರುವ ಲೇಖನಗಳು ಒಬ್ಬ ಶ್ರೇಷ್ಠ ವಿದ್ವಾಂಸರು ವಿದ್ವಾಂಸವಾಚಕರಿಗಾಗಿ ಬರೆದವುಗಳಾಗಿರುವುದರಿಂದ ಸಹಜವಾಗಿಯೇ ಅವುಗಳ ವ್ಯಾಪ್ತಿ ಸೀಮಿತವಾಗಿದೆ. ಶಾಸ್ತ್ರಿಗಳು ಲೇಖನಗಳಲ್ಲಿ ಪ್ರತಿಪಾದಿಸಿರುವ ವಿಷಯಗಳಲ್ಲಿ ತತ್ಪೂರ್ವ ಸಾಕಷ್ಟು ಜ್ಞಾನವಿಲ್ಲದವರಿಗೆ ಅವು ಸುಲಭಗ್ರಾಹ್ಯವಲ್ಲ. ಶಾಸ್ತ್ರಗಳು ಹೇಳುವ 'ಅನುಬಂಧ ಚತುಷ್ಟಯ'ಗಳಲ್ಲೊಂದಾದ 'ಅಧಿಕಾರಿ' (ಪ್ರತಿಪಾದ್ಯವಿಷಯವನ್ನು ಅಧ್ಯಯನ ಮಾಡಲು ಯೋಗ್ಯತೆ ಉಳ್ಳವನು)ಗಳಿಗೆ ಮಾತ್ರ ಇವು ಮಹಾಪ್ರಬೋಧಕಗಳಾಗಿವೆ. ಹೀಗಂದಮಾತ್ರಕ್ಕೆ ಈ ಗ್ರಂಥದ ಮಹತ್ತ್ವವನ್ನು ಕುಗ್ಗಿಸಿದಂತೇನೂ ಆಗುವುದಿಲ್ಲ. ಏಕೆಂದರೆ ಈ ಜಾತಿಗೆ ಸೇರಿದ ಇಂತಹ ಎಲ್ಲ ಗ್ರಂಥಗಳ ಪರಿಸ್ಥಿತಿಯೂ ಇಷ್ಟೇ ಅಲ್ಲವೇ? ಈ ಗ್ರಂಥದಲ್ಲಿ ಕಂಡುಬರುವ ಶಾಸ್ತ್ರಿಗಳ ಲೇಖನಗಳೆಲ್ಲವೂ ಉತ್ಕೃಷ್ಟಕೋಟಿಗೆ ಸೇರಿವೆ. ಅದ್ವೈತವೇದಾಂತಕ್ಕೆ ಸಂಬಂಧಿಸಿದ ಅವರ ಲೇಖನಗಳು ವಿಶೇಷವಾಗಿ ಗಮನ ಸೆಳೆಯುತ್ತವೆ. ಜ್ಯೋತಿಷಕ್ಕೆ ಸಂಬಂಧಿಸಿದ ಲೇಖನಗಳು ಮಾತ್ರ ಅತ್ಯಂತ ದುರ್ಗಮವಾಗಿವೆ. ವೇದಸಂಬಂಧಿ ಸಂಶೋಧನೆಗೆ ಜ್ಯೋತಿಷವನ್ನು ಉಪಯೋಗಿಸಿಕೊಳ್ಳುವುದರಲ್ಲಿ ಶಾಸ್ತ್ರಿಗಳು ತಿಲಕರು ಮತ್ತು ಅರವಿಂದರ ಸಾಲಿಗೆ ಸೇರುತ್ತಾರೆ.

ಇಷ್ಟೆಲ್ಲ ಸಾಧನೆಗೈದ ಶಾಮಾಶಾಸ್ತ್ರಿಗಳನ್ನು ಪ್ರಪಂಚದ ನಾನಾಕಡೆಗಳಿಂದ ಪ್ರಶಸ್ತಿಪುರಸ್ಕಾರಗಳು ಹುಡುಕಿಕೊಂಡು ಬಂದದ್ದರಲ್ಲಿ ಆಶ್ಚರ್ಯವೇನಿಲ್ಲ. ದೇಶವಿದೇಶಗಳ ವಿಶ್ವವಿದ್ಯಾನಿಲಯಗಳು, ಸರ್ಕಾರಗಳು, ಸಂಘಸಂಸ್ಥೆಗಳು, ಸಂಶೋಧನ ಕೇಂದ್ರಗಳು ಸ್ವಪ್ರೇರಣೆಯಿಂದ ನಾಮುಂದು ತಾಮುಂದು ಎಂದು ಇವರನ್ನು ಸಮ್ಮಾನಿಸಿವೆ. ಮಹಾತ್ಮಾಗಾಂಧಿ, ರವೀಂದ್ರನಾಥ ಠಾಗೂರ್, ನಾಲ್ವಡಿ ಕೃಷ್ಣರಾಜ ಒಡೆಯರು, ರಾಧಾಕೃಷ್ಣನ್, ಬ್ರಜೇಂದ್ರನಾಥ ಸೀಲ್, ಆಶುತೋಷ ಮುಖರ್ಜಿ, ಎಫ್.ಡಬ್ಲ್ಯು. ಥಾಮಸ್, ವಿನ್ಸೆಂಟ್ ಸ್ಮಿತ್, ಎ.ಬಿ. ಕೀತ್, ಜೆ. ಜಾಲಿ, ಎಲ್.ಡಿ. ಬಾರ್ನೆಟ್ ಮುಂತಾದ ಮಹಾಗಣ್ಯರೂ, ವಿದ್ವಾಂಸರೂ ಇವರನ್ನು ಮುಕ್ತಕಂಠದಿಂದ ಪ್ರಶಂಸಿಸಿದ್ದಾರೆ. ಇವರಿಗೆ ಸಂದ ಪ್ರಶಸ್ತಿಗಳಲ್ಲಿ ಮೈಸೂರು ಮಹಾರಾಜರಾದ ನಾಲ್ವಡಿ ಕೃಷ್ಣರಾಜ ಒಡೆಯರು ನೀಡಿದ 'ಅರ್ಥಶಾಸ್ತ್ರವಿಶಾರದ', ವಾರಾಣಸಿಯ 'ಭಾರತಧರ್ಮಮಹಾಮಂಡಲಿ'ಯಿಂದ ಪ್ರಾಪ್ತವಾದ 'ವಿದ್ಯಾಲಂಕಾರ' ಮತ್ತು 'ಪಂಡಿತರಾಜ' ಪ್ರಶಸ್ತಿಗಳು ಬಹುಮುಖ್ಯವಾದುವು. ಇವುಗಳಿಗೆ ಕಲಶವಿಟ್ಟಂತೆ ಸ್ವತಃ ಬ್ರಿಟನ್ನಿನ ಮಹಾರಾಣಿಯವರು ಭಾರತಸರ್ಕಾರದ ಮೂಲಕ ದಯಪಾಲಿಸಿದ 'ಮಹಾಮಹೋಪಾಧ್ಯಾಯ' ಪ್ರಶಸ್ತಿ. ಇಂದಿನ ದಿನಗಳಲ್ಲಿ ಗೊತ್ತುಗುರಿ ಇಲ್ಲದೆ ನಾಯಿಕೊಡೆಗಳಂತೆ ಹುಟ್ಟಿಕೊಳ್ಳುವ ಸಂಘಸಂಸ್ಥೆಗಳಿಂದ ಹಣಕೊಟ್ಟು ಅಥವಾ ಮತ್ತಾವುದಾದರೂ ಉಪಕಾರದ ಹಂಗಿನಿಂದ ಪಡೆಯಬಹುದಾದ ಮಹೋಪಾಧ್ಯಾಯ, ಡಾಕ್ಟರ್, ರತ್ನ, ಭೂಷಣ ಮುಂತಾದ ಪ್ರಶಸ್ತಿಗಳಂತಲ್ಲದೆ ಮೇಲ್ಕಾಣಿಸಿರುವ ಪ್ರಶಸ್ತಿಗಳಿಗೆ ತಮ್ಮದೇ ಆದ ಘನತೆಗೌರವಗಳಿದ್ದವು. ಸ್ವಾತಂತ್ರ್ಯಪೂರ್ವ ಭಾರತದಲ್ಲಿ ನೀಡಲಾಗುತ್ತಿದ್ದ 'ಮಹಾಮಹೋಪಾಧ್ಯಾಯ' ಬಿರುದನ್ನು ಪಡೆದ ವಿರಳಾತಿವಿರಳ ಭಾಗ್ಯವಂತ ಪಂಡಿತರ ಪೈಕಿ (ಹಳೆಯ ಮೈಸೂರು ಪ್ರಾಂತದಲ್ಲಿ ಹೆಚ್ಚೆಂದರೆ ೨-೩ ಜನರಿದ್ದಿರಬಹುದು). ಶಾಮಾಶಾಸ್ತ್ರಿಯವರೂ ಒಬ್ಬರು. ಸಂಕೇತಿಗಳಲ್ಲಿ ಪ್ರಪ್ರಥಮರು, ಅದ್ವಿತೀಯರು. ಶಾಮಾಶಾಸ್ತ್ರಿಯವರು ಪ್ರಪ್ರಥಮವಾಗಿ ಕೌಟಿಲ್ಯನ ಅರ್ಥಶಾಸ್ತ್ರವನ್ನು ಮೈಸೂರಿನ ಓರಿಯಂಟಲ್ ಲೈಬ್ರರಿಯ ಮೂಲಕ ಪ್ರಕಟಿಸಿದ ಮೇಲೆ ವಿದೇಶಗಳಲ್ಲಿ ಮೈಸೂರುನಗರ ಮತ್ತು ಮೈಸೂರು ಮಹಾರಾಜರನ್ನು ಶಾಮಾಶಾಸ್ತ್ರಿಗಳ ಹೆಸರಿನಿಂದ ಗುರುತಿಸಲಾಗುತ್ತಿತ್ತೆಂದರೆ ಒಬ್ಬ ಪಂಡಿತನಿಗೆ ಇದಕ್ಕಿಂತ ಹೆಚ್ಚಿನ ಪ್ರಶಸ್ತಿ ಮತ್ತಾವುದಿದ್ದೀತು? ಅರ್ಥಶಾಸ್ತ್ರದ ಪ್ರಕಟಣೆಯು ಶಾಸ್ತ್ರಗಳಿಗೆ ಅಭೂತಪೂರ್ವವಾದ, ದಿಗಂತವಿಶ್ರಾಂತವಾದ ಕೀರ್ತಿಯನ್ನು ತಂದು ಕೊಟ್ಟಿತು.

ಈ ಗ್ರಂಥದ ಸಂಪಾದಕರಲ್ಲೊಬ್ಬರಾದ, ಸಮಕಾಲೀನ ಕನ್ನಡ ವಿದ್ವಾಂಸರಲ್ಲಿ ಅಗ್ರಪಂಕ್ತಿಯಲ್ಲಿ ಪರಿಗಣಿಸಲ್ಪಡುವವರಾದ, ಡಾ|| ಟಿ.ವಿ. ವೆಂಕಟಾಚಲಶಾಸ್ತ್ರಿಗಳು ಈ ಗ್ರಂಥಕ್ಕೆ ೩೦ ಪುಟಗಳಷ್ಟು ದೀರ್ಘವಾದ ಒಂದು ಪೀಠಿಕೆಯನ್ನು ಬರೆದು ಇದರ ಉಪಾದೇಯತೆಯನ್ನು ಹೆಚ್ಚಿಸಿದ್ದಾರೆ. ಈ ಪೀಠಿಕೆಯಲ್ಲಿ ಶಾಮಾಶಾಸ್ತ್ರಿಗಳ ಜೀವನಚರಿತ್ರೆ, ಅವರು ಸಂಪಾದಿಸಿ ಓರಿಯಂಟಲ್ ಲೈಬ್ರರಿಯಿಂದ ಪ್ರಕಟಿಸಿದ ಸಂಸ್ಕೃತ ಮತ್ತು ಕನ್ನಡ ಗ್ರಂಥಗಳು; ಶಾಸನ ಮತ್ತು ಲಿಪಿತಜ್ಞರಾಗಿ ಅವರು ಮಾಡಿದ ಕೆಲಸಗಳು; ಅವರು ಹೊರತಂದ ವಾರ್ಷಿಕ ವರದಿಗಳು; ಅವರಿಗೆ ಸಂದ ಸಮ್ಮಾನಗಳು ಮತ್ತು ಪ್ರಶಸ್ತಿಪುರಸ್ಕಾರಗಳು ಮುಂತಾದ ಹಲವು ಹತ್ತು ವಿಷಯಗಳನ್ನು ತಿಳಿಸಿಕೊಡಲಾಗಿದೆ.

'ಸಮುದಾಯ ಅಧ್ಯಯನ ಕೇಂದ್ರ'ದ 'ಸಂಕೇತಿ ಅಧ್ಯಯನ ಮಾಲೆ'ಯಲ್ಲಿ ಪ್ರಕಟವಾಗಿರುವ ಈ ಗ್ರಂಥವು ಸಂಕೇತಿ ಜನಾಂಗದ ಅಧ್ಯಯನಕ್ಕೆ ಸಂಬಂಧಪಟ್ಟುದಲ್ಲ ಎಂಬ ಆಕ್ಷೇಪವು ಸಹಜವಾಗಿಯೇ ಕೆಲವು ವಿದ್ವಾಂಸರಿಂದ ವ್ಯಕ್ತವಾಗಿದೆ. ನಿಜ, ಈ ಗ್ರಂಥವು ಸಮಷ್ಟಿರೂಪದಲ್ಲಿ ಸಂಕೇತಿಗಳಿಗೆ ಸಂಬಂಧಿಸಿಲ್ಲ. ಆದರೆ ವ್ಯಷ್ಟಿರೂಪದಲ್ಲಿ ಒಬ್ಬ ಮಹಾನ್ ಸಂಕೇತಿ ಪಂಡಿತರಿಗೆ ಸಂಬಂಧಿಸಿರುವುದರಿಂದ ಯಾವ ರೀತಿಯ ಅನೌಚಿತ್ಯವಾಗಲೀ ಅಧ್ಯಯನ ಕೇಂದ್ರದ ಧ್ಯೇಯಾದರ್ಶಗಳಿಗೆ *ಯಾವ ರೀತಿಯ* ನ್ಯೂನತೆಯಾಗಲೀ ಉಂಟಾಗುವುದಿಲ್ಲ.

'ವೈಬ್ರಂಟ್ ಇಂಡಿಯಾ' ಗ್ರಂಥವನ್ನು ಬಹಳ ಅಚ್ಚುಕಟ್ಟಾಗಿ ಸಿದ್ಧಪಡಿಸಲಾಗಿದ್ದು ಜಾಗತಿಕ ಸ್ತರದ ಗುಣಮಟ್ಟವನ್ನು ಹೊಂದಿದೆ. ನಿಶ್ಚಿತವಾಗಿಯೂ ಇದು ಪಂಡಿತರ ಮನೆಯನ್ನು ಅಲಂಕರಿಸಲು ಯೋಗ್ಯವಾಗಿದೆ. ಕೊನೆಯಲ್ಲಿ ಒಂದು ಪದಸೂಚಿ (Word Index)ಯನ್ನು ಕೊಟ್ಟು ಇದರ ಉಪಯುಕ್ತತೆಯನ್ನು ಮತ್ತಷ್ಟು ಹೆಚ್ಚಿಸಬಹುದಾಗಿತ್ತು. ಮಿತ್ರ ಹರನ್ ಇಲ್ಲಿಯವರೆಗೆ ಸಂಕೇತಿ ಅಧ್ಯಯನ ಮಾಲೆಯಲ್ಲಿ ಪ್ರಕಟಿಸಿರುವ ಗ್ರಂಥಗಳಲ್ಲಿ ಇದು ಸರ್ವಶ್ರೇಷ್ಠವಾಗಿದೆ.

ಇಲ್ಲಿಯವರೆಗೆ ಶಾಮಾಶಾಸ್ತ್ರಿಗಳ ಬಗ್ಗೆ ಹೊರಜಗತ್ತಿಗೆ ತಿಳಿದಿದ್ದಕ್ಕಿಂತ ತಿಳಿಯದಿದ್ದುದೇ ಅಧಿಕವಾಗಿತ್ತು. ಪೂಜ್ಯ ಶ್ರೀ ವೆಂಕಟಾಚಲಶಾಸ್ತ್ರಿಗಳು ಮತ್ತು ಮಿತ್ರ ಹರನ್ ಈ ಒಂದು ಕೊರತೆಯನ್ನು ನೀಗಿ ವಿದ್ವಜ್ಜನರ ಕೃತಜ್ಞತೆಗೆ ಪಾತ್ರರಾಗಿದ್ದಾರೆ. ಇಂತಹ ಒಂದು ಅದ್ಭುತವಾದ ಅಸಾಧಾರಣವಾದ ಗ್ರಂಥವನ್ನು ವಿದ್ವಜ್ಜನರ, ವಿದ್ವತ್‌ಪ್ರಿಯರ ಕೈಗಿತ್ತ ಕೀರ್ತಿ, ಧನ್ಯತೆ ಅವರದಾಗಿದೆ. ಭಗವಂತನು ಇವರ ಮೂಲಕ ಇಂತಹ ಇನ್ನೂ ಅನೇಕ ಸತ್ಕಾರ್ಯಗಳನ್ನು ಮಾಡಿಸಲಿ ಎಂದು ಆಶಿಸುತ್ತಾ ವಿರಮಿಸುತ್ತೇನೆ.

ಸಂಕೇತಿ: ಇತಿವೃತ್ತಗಳು

ಕೆ. ರಾಘುವೇಂದ್ರರಾವ್, ಮೈಸೂರು

'ಮಾಗಿದ ಬದುಕು' ಓದುತ್ತಿದ್ದರೆ ಯಾವುದೋ ಅಪರಿಚಿತ ಕಾಲಸನ್ನಿವೇಶದಲ್ಲಿ ಓಡಾಡಿದ ಅನುಭವವಾಗುತ್ತದೆ. ಅದೊಂದು ವಿಶಿಷ್ಟ ಅನುಭವ. ಸಕಾರಾತ್ಮಕವಾದ ಬದುಕು ಅದು. ಪೂರ್ತಿಯಾಗಿಯೂ ಸಕಾರಾತ್ಮಕವಾದುದು. 'ಸಂಕೇತಿ ಸಂಪದ'ದಲ್ಲಿ ಕೆ.ಎಸ್. ಕೃಷ್ಣಮೂರ್ತಿಯವರು ಸಂಕೇತಿ ಬದುಕಿನ ಯಥಾವತ್ ಚಿತ್ರಣವನ್ನು ಸಮರ್ಥವಾಗಿ ಕೊಟ್ಟಿದ್ದಾರೆ. ಅವರು ಚಿತ್ರಿಸಿರುವ ಆ ಬದುಕಿನ ವಿವರಗಳು ಈಗ ಬಹುಪಾಲು ನಶಿಸಿಹೋಗಿರಬಹುದು. ನಗರೀಕರಣದ ಪರಿಣಾಮ ಮಾತ್ರವಲ್ಲ, ಆಧುನಿಕತೆಯ ಪರಿಣಾಮವೂ ಅದು ಹೌದು. ಪಗಡೆ ಮತ್ತು ನಶ್ಯದ ಬಗೆಗೆ ಅವರು ಒಂದೊಂದು ಪರಿಚ್ಛೇದ ರಚಿಸಿದ್ದರೆ ಆ ಬದುಕಿನ ಚಿತ್ರಣ ಪೂರ್ಣಗೊಳ್ಳುತ್ತಿತ್ತು.

ಸಂಕೇತಿ ಅಧ್ಯಯನ ಮಾಲೆ

ಪ್ರೊ. ವೈ.ಎನ್. ಶ್ರೀನಿವಾಸ್, ಮೈಸೂರು

ನಿಮ್ಮನ್ನು ತ್ರಿವಿಕ್ರಮ ಎನ್ನಬಹುದು; ಹಿಡಿದ ಕೆಲಸವನ್ನು ಬಿಡದೆ ಸಾಧಿಸುತ್ತಿದ್ದೀರಿ. Fantastic work....... Hats off to you.

ವಿದ್ವಾನ್ ಡಾ|| ಟಿ.ವಿ. ಸತ್ಯನಾರಾಯಣ, ಮೈಸೂರು

ಯಾರೂ ಮಾಡಿಲ್ಲದ ಸಾಹಸ ಮಾಡುತ್ತಿದ್ದೀರಿ. ಈ ಸಂಬಂಧದ ನಿರಂತರ ತಪಸ್ಸು ಸಾಧಾರಣವಾದುದಲ್ಲ. ಸಮಾಜದಲ್ಲಿ ಇದಕ್ಕೆ ಒದಗುವ ವಿಘ್ನಗಳು, ಉಪವಿಘ್ನಗಳು, ಸರಣಿವಿಘ್ನಗಳನ್ನು ನಿಭಾಯಿಸುವುದಂತೂ ಇನ್ನೂ ಕಷ್ಟಸಾಧ್ಯವಾದ ಕೆಲಸ.

ಗೋಪಾಲಕೃಷ್ಣ, ಖ್ಯಾತ ಪ್ರಕಾಶಕರು, ಗೀತಾ ಬುಕ್ ಹೌಸ್, ಮೈಸೂರು

ನಿಮ್ಮದು ಕಠಿಣವ್ರತ. ಪುಸ್ತಕಪ್ರಕಾಶಕನಾಗಿ ಇದನ್ನು ಹೇಳುತ್ತಿದ್ದೇನೆ. ಹೇಗೂ ಸುಖವನ್ನು ಬಿಟ್ಟಿದ್ದೀರಿ, ವ್ರತವನ್ನು ಪೂರ್ಣಗೊಳಿಸಿ. ನಮ್ಮ ದೇಶದಲ್ಲಿ ಸಂಸ್ಥೆಗಳೂ ತಂಡಗಳೂ ಗುಣಾತ್ಮಕವಾಗಿಯೂ ಅಚ್ಚುಕಟ್ಟಾಗಿಯೂ ಕ್ಷಿಪ್ರವಾಗಿಯೂ ಪ್ರಾಮಾಣಿಕವಾಗಿಯೂ ಯೋಜನೆಗಳನ್ನು

ಪೂರ್ಣಗೊಳಿಸುವುದು ತೀರಾ ಅಪರೂಪದ ಸಂಗತಿ. ಯಾವ ಸಿದ್ಧನಿಧಿಯೂ ಇಲ್ಲದೆ ನೀವು ಏಕಾಕಿಯಾಗಿ ಇದನ್ನು ನಿಭಾಯಿಸುತ್ತಿರುವ ರೀತಿ ನಮಗೆ ಹೊಸತು.

ರಾಮಶೇಷ, ಮಾದಾಪುರ

ಸಂಕೇತಿ ಅಧ್ಯಯನ ಮಾಲೆಯು ಐತಿಹಾಸಿಕ ಕೆಲಸ. ಅದರ ಸ್ವರೂಪವು ಅಮೂರ್ತವಾದುದು, ಆದರೆ ದೂರಗಾಮಿಯಾದ ಸಾರ್ಥಕವೂ ಶಾಶ್ವತವೂ ಆದ ಪರಿಣಾಮ ಬೀರುವಂಥದು.

ಪಿ. ರಘುಚಂದ್ರ ಭಟ್, ಹಾಸನ

ಈ ಸಂಪುಟಗಳ ಮೂಲಕ ನೀವು ತಲೆಮಾರುಗಳ ನಡುವೆ ಸೇತುವೆಯನ್ನು ನಿರ್ಮಿಸಿದ್ದೀರಿ.

ಕೆ. ರಾಘುವೇಂದ್ರರಾವ್, ಮೈಸೂರು

ಎಲ್ಲ ಸಮುದಾಯಗಳ ಜೀವನವಿಧಾನ ಮತ್ತು ಸ್ವರೂಪವೂ ಈಗ ತೀವ್ರವಾಗಿ ಬದಲಾಗುತ್ತಿದೆ. ನೀವು ಒಂದು 'ಮಾದರಿ'ಯ ನೆನಪನ್ನು ಉಳಿಸುತ್ತಿದ್ದೀರಿ.

ಡಾ|| ಟಿ.ವಿ. ವೆಂಕಟಾಚಲ ಶಾಸ್ತ್ರೀ, ಮೈಸೂರು

ಎಷ್ಟೇ ಸಣ್ಣದೆನಿಸುವ ಮಾಹಿತಿಯಾದರೂ ದಾಖಲಾಗಬೇಕು. ಇಲ್ಲದಿದ್ದರೆ ನಮ್ಮ ಮೌಖಿಕ ಇತಿಹಾಸಕ್ಕೆ (Oral History) ನಷ್ಟವಾಗುತ್ತದೆ. ಎಷ್ಟೋ ಹೊಸ ಸಂಗತಿಗಳೂ ಆಂತರಿಕ ವಿಷಯಗಳೂ ರಹಸ್ಯಗಳೂ ನಮಗೆ ತಿಳಿಯುವುದು ಈ ಮೌಖಿಕ ಇತಿಹಾಸದಿಂದಲೇ. ಕಳೆದ ಶತಮಾನದಲ್ಲಿ ಕೆಲವರು ಮುಂದಾಲೋಚಿಸಿ ಬರೆದ ಕೆಲವು ಪುಸ್ತಕಗಳಿಂದ ನಮಗೆ ಅಮೂಲ್ಯ ಸಂಗತಿಗಳು ತಿಳಿಯುತ್ತಿವೆ. You have established yourself as a good worker... ಇತರ ಸಮುದಾಯದವರು ನಾಚಿಕೊಳ್ಳುವ ಹಾಗೆ (ನಿಮ್ಮ ಸಮುದಾಯದ ಬಗೆಗೆ ಅಧ್ಯಯನ ನಡೆಸಿ) ಪುಸ್ತಕಗಳನ್ನು ತರುತ್ತಿದ್ದೀರಿ....... ಅದು ನಿಮ್ಮ ರಕ್ತದಲ್ಲೇ ಇದೆ.

ಹೆಚ್.ಕೆ. ನಾಗಲಕ್ಷ್ಮಿ, ಮೈಸೂರು

ಇದು ಶಾಶ್ವತವಾದ ಕೆಲಸ. ಮುಂದೆ ನಮ್ಮ ಮೊಮ್ಮಕ್ಕಳೂ ಮರಿಮಕ್ಕಳೂ ಓದಿ 'ನಮ್ಮ ಸಂಕೇತಿಗಳು ಹಾಗಿದ್ದರಾ?' ಎಂದು ಬೆರಗುಪಡುವಂತೆ ವಿಸ್ತಾರವಾಗಿಯೂ ಅಚ್ಚುಕಟ್ಟಾಗಿಯೂ ಮಾಹಿತಿಯನ್ನು ಕ್ರೋಢೀಕರಿಸುತ್ತಿದ್ದೀರಿ. ಇದು ಶ್ಲಾಘ್ಯ.

ಸಂಸ್ಕೃತಿ ಸುಬ್ರಹ್ಮಣ್ಯ, ಮೈಸೂರು

'ಸಂಕೇತಿ' ಎಂಬ ಹೆಸರಿನಲ್ಲಿ ಬರುತ್ತಿದ್ದ ಪುಸ್ತಕಗಳನ್ನು ಕಂಡು 'ಇದೇನು, ಹೀಗೆ ಜಾತಿಗಳ ಬಗೆಗೆ ಬರೆಯುವುದು?' ಎಂದು ಮೂಗುಮುರಿಯುತ್ತಿದ್ದೆ. ಪುಸ್ತಕಗಳನ್ನು ಓದಿದಮೇಲೆ ತಿಳಿಯಿತು, ಇದು ಸಂಸ್ಕೃತಿಯ ಗಂಭೀರ ಅಧ್ಯಯನವೆಂದು. ಭಾರತದ ಎಲ್ಲ ಜಾತಿಗಳೂ ಒಂದೊಂದು ಸಂಸ್ಕೃತಿ ಘಟಕಗಳು, ಅವನ್ನೆಲ್ಲ ಅಧ್ಯಯನ ಮಾಡಬೇಕಾದ ಅಗತ್ಯ ಇದೆ ಅನಿಸಿತು. ನಿಮ್ಮ ಕೆಲಸ ಒಂದು ಸಾಹಸ. ವೃತ್ತಿಪರ ಪ್ರಕಾಶಕರಿಗಿಂತ ಹೆಚ್ಚು ಗುಣಾತ್ಮಕವಾಗಿ ಪುಸ್ತಕ ತಂದಿದ್ದೀರಿ.

ಪ್ರೊ. ಎ.ವಿ. ನರಸಿಂಹಮೂರ್ತಿ, ಮೈಸೂರು

ಇದು ಒಂದು ಸಂಸ್ಥೆ ಮಾಡಬಹುದಾದ ಕೆಲಸ.

ವಿ.ಟಿ. ದೊರೆಸ್ವಾಮಿ, ಶಿಕ್ಷಣತಜ್ಞರು, ಮೈಸೂರು

It is an amazing presentation. It took me off my feet. Margaret Meed ಎಂಬುವವಳು *Growing in Samoa* ಎಂಬ ಒಳ್ಳೆಯ ಪುಸ್ತಕ ಬರೆದಿದ್ದಾಳೆ. ಹಾಗೆ ಒಂದೊಂದು ಬುಡಕಟ್ಟುಗಳನ್ನು ಅಧ್ಯಯನ ಮಾಡಿದ ಪುಸ್ತಕಗಳೂ ಅಂಥ ಲೇಖನಗಳೂ ಬರುತ್ತಿರುತ್ತವೆ. ಆದರೆ ಆಂಥ್ರಪಲಾಜಿಕಲ್ ಅಧ್ಯಯನ ವಲಯದಲ್ಲಿ ಜಗತ್ತಿನ ಎಲ್ಲೂ ಯಾವುದೇ ಒಂದು ಜಾತಿಯ ಬಗ್ಗೆ ಇಷ್ಟು ವ್ಯಾಪಕವಾಗಿಯೂ ಆಳವಾಗಿಯೂ ಮಾಡಿರುವ ಅಧ್ಯಯನ ನನ್ನ ಗಮನಕ್ಕೆ ಬಂದಿಲ್ಲ. ಸುಸಂಸ್ಕೃತವೂ ಮುಂದುವರಿದುದೂ ಆದ ಒಂದು ಸಮುದಾಯದ ಬಗ್ಗೆ ಅದರ ಮೂಲದಿಂದ ತೊಡಗಿ ಸದ್ಯದವರೆಗಿನ ಅಪಾರ ಮಾಹಿತಿಯನ್ನು ನೀವು ಅಚ್ಚುಕಟ್ಟಾಗಿ ಕಲೆಹಾಕಿದ್ದೀರಿ. Hats off to you.

ಶಿಕಾರಿಪುರ ಹರಿಹರೇಶ್ವರ

ನಿಮ್ಮ ಕಲ್ಪನೆ ಮತ್ತು ಕ್ರತುಶಕ್ತಿ ತುಂಬಾ ದೊಡ್ಡದು. ಆದ್ದರಿಂದಲೇ ಈ ಮಾದರಿಯನ್ನು ಅನುಕರಿಸುತ್ತಿರುವ ಯಾರೂ ನಿಮ್ಮ ಮಟ್ಟದ ಸಾಧನೆ ಮಾಡಲು ಸಾಧ್ಯವಾಗಿಲ್ಲ.

ಕೆ.ಎಸ್. ಶ್ರೀಹರಿ, ಬೆಂಗಳೂರು

ನಿಮ್ಮ ಇಚ್ಛಾಶಕ್ತಿ ಮತ್ತು ಕ್ರತುಶಕ್ತಿಯಿಂದ ಮಾತ್ರವೇ ಇಂಥ ದೊಡ್ಡ ಕೆಲಸ ಮಾಡುವುದು ಸಾಧ್ಯವಾಗಿದೆ. ಬದುಕನ್ನು ಅರ್ಥಮಾಡಿಕೊಳ್ಳಲು ಆಸಕ್ತರಾದ ನನ್ನಂಥವರಿಗೆ ಈ ಗ್ರಂಥಗಳು ರಸದೌತಣವಾಗಿ ದೊರೆಯುವಂತಾಗಿದೆ.

ನಾಡೋಜ ದೇಜಗೌ, ಮೈಸೂರು

ಸಂಕೇತಿಗಳು ಗಟ್ಟಿಗರು; ಯಾವ ಕೆಲಸವನ್ನೂ ಹಠಹಿಡಿದು ಸಾಧಿಸುವ ಸ್ವಭಾವದವರು.

ಎಸ್.ಎಸ್. ಶಾರದಾ ಪ್ರಸಾದ್, ಮೈಸೂರು

ಹತ್ತು ಕಟ್ಟುವ ಕಡೆ ಒಂದು ಮುತ್ತು ಕಟ್ಟು
ಎಂದರೆ
ಹರನ್
ಒಂದು ಮುತ್ತು ಕಟ್ಟುವ ಕಡೆ ಹತ್ತನೂ ಕಟ್ಟುತೇನೆ
ಎಂದು
ಹತ್ತು ಸಂಪುಟಗಳ ಈ ಕಟ್ಟನು ಕಟ್ಟಿದರು
ದಶಾವತಾರದ ಪರಿಕಲ್ಪನೆಗೆ, ವಿಕಾಸಕೆ
ರೂಪು ನೀಡಿದರು

ಅನುಬಂಧ - ೩

ಸಾಮಾಜಿಕಪ್ರಜ್ಞೆಗೆ ನಮಸ್ಕಾರ

ಜ್ಯೋತಿ ಬೆಳಗುವ ಶ್ರೀ ಬಿ.ಎನ್.ವಿ. ಸುಬ್ರಹ್ಮಣ್ಯ – ಶ್ರೀಮತಿ ಬಿ.ವಿ. ಸೀತಾ

ಸಮಾಜಸೇವಾ ವ್ರತಿ, ಧರ್ಮಸಂರಕ್ಷಕ, ವಿಪ್ರಭಾಸ್ಕರ ಶ್ರೀ ಬೆಟ್ಟದಪುರ ನಾರಾಯಣಸ್ವಾಮಿ ವೆಂಕಟಸುಬ್ರಹ್ಮಣ್ಯ (ಜ. ೧೫-೧೦-೧೯೪೨) ಅವರದು ಜ್ಯೋತಿ ಬೆಳಗುವ ಜೀವನ. ಶ್ರೀ ಜ್ಯೋತಿ ಸಾಂಸ್ಕೃತಿಕ ಪ್ರತಿಷ್ಠಾನ, ಶ್ರೀ ಜ್ಯೋತಿ ಕೇಂದ್ರೀಯ ವಿದ್ಯಾಲಯ, ಶ್ರೀ ಜ್ಯೋತಿ ಚಾರಿಟಬಲ್ ಟ್ರಸ್ಟ್, ಶ್ರೀ ಮಲ್ಲಿಕಾರ್ಜುನ ವೇದ-ಸಂಸ್ಕೃತ ಪಾಠಶಾಲಾ, ವೈದಿಕ ಧರ್ಮಸಹಾಯ ಸಭಾ ಟ್ರಸ್ಟ್ .... ಬಿ.ಎನ್.ವಿ. ಅವರು ಸಮಾಜಸೇವೆಗೆಂದೇ ಸ್ಥಾಪಿಸಿ ಪೋಷಿಸುತ್ತಿರುವ ಸಂಸ್ಥೆಗಳ ಪಟ್ಟಿ ಹೀಗೆ ಬೆಳೆಯುತ್ತದೆ. ಅದರ ಜತೆಗೆ ಅಬಲಾಶ್ರಮ, ಸರ್.ಎಂ. ವಿಶ್ವೇಶ್ವರಯ್ಯ ಕೋ-ಆಪರೇಟಿವ್ ಬ್ಯಾಂಕ್, ನ್ಯಾಷನಲ್ ಎಜುಕೇಷನ್ ಟ್ರಸ್ಟ್, ಶ್ರೀ ಸುರಸರಸ್ವತೀ ಸಭಾ, ಶೃಂಗೇರಿ, ಸಮುದಾಯ ಅಧ್ಯಯನ ಕೇಂದ್ರ, ಮೈಸೂರು - ಹೀಗೆ ಅನೇಕ ಸಂಘ-ಸಂಸ್ಥೆಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡು ನಿಃಸ್ವಾರ್ಥ ಸೇವೆ ಸಲ್ಲಿಸುತ್ತಿದ್ದಾರೆ. ಅವರ ಅಮೃತಸ್ಪರ್ಶದಿಂದ ಜೀವ ಪಡೆದ, ಮುನ್ನಡೆದ, ಮಿಂಚಿ ಮೆರೆದ ವ್ಯಕ್ತಿಗಳಿಗೆ, ಕುಟುಂಬಗಳಿಗೆ, ಸಂಘ-ಸಂಸ್ಥೆಗಳಿಗೆ ಲೆಕ್ಕವಿಲ್ಲ. ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಅಧ್ಯಕ್ಷರಾಗಿ ಐದನೆಯ ಬಾರಿ ಸರ್ವಾನುಮತದಿಂದ ಪ್ರತಿಷ್ಠಾಪನೆಗೊಂಡ ಗೌರವ ಅವರದು. ಸಾರ್ವತ್ರಿಕ ಸಮಾಜಕ್ಕೆ ಅವರು ಸಲ್ಲಿಸಿದ ಸೇವೆ ಅದಕ್ಕಿಂತ ದೊಡ್ಡದು. ಅದಕ್ಕಾಗಿ ರಾಜ್ಯೋತ್ಸವ ಪ್ರಶಸ್ತಿ (೧೯೯೧), ರಾಜೀವಗಾಂಧಿ ಪ್ರಶಸ್ತಿ (೧೯೯೫) ಅವರನ್ನು ಅಲಂಕರಿಸಿವೆ. ಅವೆಲ್ಲಕ್ಕಿಂತ ಹೆಚ್ಚಾಗಿ ಸಮಗ್ರ ಸಮಾಜದ ಪ್ರೀತಿಯ, ಗೌರವದ, ಆತ್ಮೀಯತೆಯ, ಆರಾಧ್ಯಮೂರ್ತಿ ಅವರಾಗಿದ್ದಾರೆ; ಆದರೆ ಎಲೆಮರೆಯಲ್ಲಿ ಉಳಿಯುವುದರಲ್ಲಿ ತೃಪ್ತರಾಗಿದ್ದಾರೆ.

ಬಿ.ಎನ್.ವಿ. ಪುಟಗೊಂಡದ್ದು ಬಡತನದ ಮೂಸೆಯಲ್ಲಿ. ತಂದೆ ನಾರಾಯಣಸ್ವಾಮಿ ಅವರು ಸ್ವರ್ಗಸ್ಥರಾದಾಗ ಬಿ.ಎನ್.ವಿ. ಹದಿನೆಂಟು ತಿಂಗಳ ಮಗು. ಆಗ ಅವರ ಮನೆಗೆ ದಿಕ್ಕಾದವರು ತಾಯಿ ಕಾವೇರಮ್ಮನವರ ತಾಯಿ ಪುಟ್ಟಕ್ಕಯ್ಯಮ್ಮ. ಆಕೆಯೇ ವೃದ್ಧೆ, ವಿಧವೆ, ಬಡವಿಯಾದರೂ ಮಂದಿಯ ಮನೆಯಲ್ಲಿ ಅಡುಗೆ ಕೆಲಸ ಮಾಡಿ ಐದು ಜನರ ಸಂಸಾರ ಪೋಷಿಸಿದರು. ಬೆಟ್ಟದಪುರದ ಶ್ಯಾನುಭೋಗರ ಧೀಮಂತ ಮನೆತನಕ್ಕೆ ಸಾಲಿಗ್ರಾಮ, ಕೃಷ್ಣರಾಜನಗರದಲ್ಲಿ ಹೀಗೆ ಅನಾಥ ಮುದುಕಿಯೊಬ್ಬಳ ಮಡಿಲು ಆಸರೆಯಾಯಿತು; ಬಿ.ಎನ್.ವಿ. ಕಣ್ಣುಬಿಡುವಾಗಲೇ ಬಡತನದ ಬೇಗೆಯ ಅನುಭವ ಪಡೆದರು, ಅಜ್ಜಿಯ ಛಲ ಮತ್ತು ಸೇವೆಯ ಸಂಜೀವಿನೀಮಂತ್ರದ ಉಪದೇಶ ಪಡೆದರು. ಮುಂದೆ ಮಡಿಕೇರಿಯಲ್ಲಿ ಅಕ್ಕನ ಆಶ್ರಯದಲ್ಲಿ ಡ್ರಾಫ್ಟ್ಸ್‌ಮನ್ ತರಪೇತಿ (೧೯೬೦-೬೧), ಬೆಂಗಳೂರಿನ ಕೈಗಾರಿಕೆಗಳಲ್ಲಿ ೧೦ ವರ್ಷ ಅನುಭವ, ಬೆಂಗಳೂರಿನ ಸರಕಾರಿ ಸಂಸ್ಕೃತ ಪಾಠಶಾಲೆಯ ಪ್ರಾಚಾರ್ಯ ವಿದ್ವಾನ್ ಹರವೆ ಮಲ್ಲಿಕಾರ್ಜುನಶಾಸ್ತ್ರಿಗಳ ಏಕಮಾತ್ರ ಪುತ್ರಿ ಸೀತಾ ಅವರೊಂದಿಗೆ ವಿವಾಹ (೧೯೬೮), ಬೆಳಕಾಗಿ ಬಂದ ಮಗಳು ಜ್ಯೋತಿಯ ಜನನ (೨೫-೬-೧೯೭೧); ಜೀವನದ ಮಹಾ ತಿರುವು.

ಅದು ಮೆಕ್ಯಾನಿಕಲ್ ಇಂಜಿನಿಯರ್ ಬಿ.ಎನ್.ವಿ.ಗೆ ಆತ್ಮವಿಶ್ವಾಸ ತುಂಬಿದ ವರ್ಷ (೧೯೭೧). ಜ್ಯೋತಿ ಗ್ರೂಪ್ ಆಫ್ ಇಂಡಸ್ಟ್ರೀಸ್ ಸ್ಥಾಪನೆ, ಶ್ರೀಮಂತಿಕೆ, ರಾಜ್ಯ ಮತ್ತು ರಾಷ್ಟ್ರಮಟ್ಟದ ಉತ್ತಮ ಸ್ಟೈಯಿನ್‌ಲೆಸ್ ಸ್ಟೀಲ್ ಕೈಗಾರಿಕಾ ಉಪಕರಣಗಳ ತಯಾರಕರು ಎಂಬ ಬಿರುದಾವಳಿ. ಅದೃಷ್ಟದೇವತೆಯಾಗಿ ಬಂದಿದ್ದ ಮಗಳು ಜ್ಯೋತಿ ಬದುಕಿನ ಮೌಲ್ಯಗಳನ್ನು ತುಂಬಿ ಅನಂತ ಜ್ಯೋತಿಯಾದಾಗ (೨೮-೧೦-೮೬) ತತ್ತರಿಸಿದ ಸಂಸಾರದ ದೋಣಿ; ಜ್ಯೋತಿಯದೇ ಸ್ಫೂರ್ತಿ; ಸಮಾಜಸೇವಾದೀಕ್ಷೆ; ಶೈಕ್ಷಣಿಕ ಸೇವೆ-ಸಾಮಾಜಿಕಸೇವೆ-ಧಾರ್ಮಿಕಸೇವೆ; ಬೆಳಕಿನ ಹಲವು ಹೆಬ್ಬಾಗಿಲುಗಳ ಅನಾವರಣ.

ಸಾಂಸ್ಕೃತಿಕ ಪುನರುತ್ಥಾನ, ವೈದಿಕ ಪರಂಪರೆಯ ಜಾಗೃತಿ: ಧಾರ್ಮಿಕ ಗ್ರಂಥಗಳ ಪ್ರಕಾಶನ, ವೇದಕ್ಕಾಗಿ ಗುರುಕುಲ, ಅಧ್ಯಯನಾಸಕ್ತರಿಗೆ ಆಶ್ರಯ, ವೇದಶಾಸ್ತ್ರ ವಿದ್ವಾಂಸರಿಗೆ ಸಮ್ಮಾನ, ವಿದ್ವತ್‌ಗೋಷ್ಠಿ, ವೇದಪಾರಾಯಣ ಪದ್ಧತಿಯ ಪುನರುಜ್ಜೀವನ, ಕೃಷ್ಣ ಯಜುರ್ವೇದ ಕನ್ನಡ ಪ್ರಕಾಶನ, ವೇದದರ್ಶನ ಸಮಾರಂಭ, ವ್ಯಾಸವಂದನಾ. ಸಂಗೀತ, ನೃತ್ಯಕ್ಕೆ ಪ್ರೋತ್ಸಾಹ: ಗಾಯನ ಸಮಾಜ ಹಾಗೂ ಕರ್ನಾಟಕ ಗಾನಕಲಾ ಪರಿಷತ್ ಮೂಲಕ ವಿದ್ವಾಂಸರಿಗೆ ಸಮ್ಮಾನ, ನಿಧಿಸಮರ್ಪಣೆ, ಸಮ್ಮೇಳನಾಧ್ಯಕ್ಷರಿಗೆ ಹತ್ತು ಸಹಸ್ರ ರೂಪಾಯಿಗಳ ನಿಧಿಯೊಂದಿಗೆ ಜ್ಯೋತಿ ಮೆಮೋರಿಯಲ್ ಅವಾರ್ಡ್, ಕಲಾಸಂಸ್ಥೆಗಳ ಪೋಷಣೆ, ಡಿ. ಸುಬ್ರಾಮಯ್ಯ ಫೈನ್ ಆರ್ಟ್ಸ್ ಟ್ರಸ್ಟ್‌ನ ಅಧ್ಯಕ್ಷತೆ. ಅನಾಥಸೇವೆ: ಆರ್ಥಿಕವಾಗಿ ಹಿಂದುಳಿದ ಎಲ್ಲ

ಜಾತಿಗಳವರಿಗೆ ಉಚಿತ ವಿದ್ಯಾಭ್ಯಾಸ, ವಿವಾಹ, ಚಿಕಿತ್ಸೆ, ಶುಭಕಾರ್ಯಗಳು; ಅಲಕ್ಷಿತರಿಗೆ ಮಾಸಿಕ ೧೦೦ ರೂ. ಪಿಂಚಣಿ; ಅಬಲಾಶ್ರಮದ ಅನಾಥ ಹೆಣ್ಣುಮಕ್ಕಳ ಪುನರ್ವಸತಿ ಅಭಿಯಾನದಲ್ಲಿ ಸಹಯೋಗ. ಶಿಕ್ಷಣ: ಅತ್ಯಂತ ಕಡಿಮೆ ವೆಚ್ಚದಲ್ಲಿ ಉತ್ತಮ ಗುಣಮಟ್ಟದ ವಿದ್ಯಾದಾನ, ಎಲ್.ಕೆ.ಜಿ.ಯಿಂದ ಪದವಿಪೂರ್ವ ಹಂತದವರೆಗೆ ೨೦೦೦ ಮಕ್ಕಳ ಯೋಗಕ್ಷೇಮ, 'ಶಾಲಾ ಮಕ್ಕಳು ತಮ್ಮ ಮಕ್ಕಳಂತೆ, ಸಿಬ್ಬಂದಿ ತಮ್ಮ ಪರಿವಾರದಂತೆ' ಎಂಬ ಕೀರ್ತಿ; ಎಲ್ಲರಿಗೆ ಉಚಿತ ಪ್ರವಾಸ, ಉಚಿತ ವೈದ್ಯಕೀಯ ತಪಾಸಣೆ, ಉಚಿತ ವಿಶೇಷ ಬೋಧನಾತರಗತಿಗಳು; ಹಿಂದುಳಿದ ಮಕ್ಕಳಿಗೆ ಕಲಿಸಿ ಸತತವಾಗಿ ಶೇ. ೧೦೦ ಫಲಿತಾಂಶ. ಸಾಮಾಜಿಕ ಕಾಳಜಿ: ಗಣರಾಜ್ಯೋತ್ಸವ: ಅನಾಥಾಶ್ರಮ ಮತ್ತು ಕೊಳೆಗೇರಿ ಮಕ್ಕಳಿಗಾಗಿಯೇ ಆಹ್ವಾನ, ಆಟ, ಊಟ, ಬಹುಮಾನ, ವಸ್ತ್ರದಾನ; ಸಮತಾಭಾವದ ಅನುಷ್ಠಾನ. ಸಮಾಜ ಸಂಘಟನೆ: ರಾಜ್ಯಮಟ್ಟದ ಬ್ರಾಹ್ಮಣರ ಸಮ್ಮೇಳನ, ಬಡವರಿಗಾಗಿ ನಿಧಿ ಸ್ಥಾಪನೆ, ಹಣಕಾಸು ಸುಧಾರಣೆ, ಸದಸ್ಯ ಬಲ ಹೆಚ್ಚಳ; ಬೆಟ್ಟದಪುರ ಸಂಕೇತಿ ಸಂಘದ ಬಲವರ್ಧನೆ. ಜಾತ್ಯತೀತ ನೆಲೆಯಲ್ಲಿ ಸಾರ್ವತ್ರಿಕ ಸೇವೆ ಮಾಡುತ್ತಲೇ ಜಾತಿ ಸಂಘಟನೆಯು ಜಾತೀಯವಾಗದಂತೆ ಸಮನ್ವಯ; ಜಾತಿ ಜನರ ವಿಕಾಸವು ದೇಶವಿಕಾಸಕ್ಕೆ ಪೂರಕವಾಗಲೆಂಬ ಆಶಯ. ಒಟ್ಟಾಗಿ ಶೃಂಗೇರಿಯ ಶ್ರೀಸುರಸರಸ್ವತೀ ಸಭಾದ ಕಾರ್ಯದರ್ಶಿ ಡಾ. ಬಿ.ಎಸ್. ರಾಮಕೃಷ್ಣರಾವ್ ಅವರ ಸಾರಭೂತವಾಣಿ ಇದು, "...ಅವರು ಅಪಾರವಾಗಿ ದಾನ ಮಾಡಿದ್ದಾರೆ, ದಾನ ಮಾಡಿದ್ದರ ಬಗ್ಗೆ ಮೌನ ವಹಿಸಿದ್ದಾರೆ. ಸಂಕ್ಷೇಪವಾಗಿ ಹೇಳಬೇಕಾದರೆ - ಆಗರ್ಭ ಶ್ರೀಮಂತರಲ್ಲದ ಶ್ರೀಸಾಮಾನ್ಯರೊಬ್ಬರು, ತಾವು ನಂಬಿದ ತತ್ತ್ವಕ್ಕಾಗಿ, ಆದರ್ಶಗಳಿಗಾಗಿ, ಬೆವರು ಸುರಿಸಿ ದುಡಿದ ಹಣವನ್ನು ಈ ಪ್ರಮಾಣದಲ್ಲಿ ಸಾರ್ವಜನಿಕರಿಗೆಂದು ಸದ್ವಿನಿಯೋಗ ಮಾಡಿರುವ, ಮಾಡುತ್ತಿರುವ ಇನ್ನೊಂದು ಜ್ವಲಂತ ಉದಾಹರಣೆಯನ್ನು ನಾನು ಸಾಕ್ಷಾತ್ಕರಿಸಿಕೊಂಡಿಲ್ಲ."

ಸಾಮರ್ಥ್ಯ, ಸಹಾಯ, ಸೇವೆಗೆ ಪರ್ಯಾಯ ಹೆಸರು ಬಿ.ಎನ್.ವಿ. 'ಸಮಾಜದಿಂದ ಪಡೆದುಕೊಂಡ ಲಾಭದಲ್ಲಿ ಕಿಂಚಿತ್ತಾದರೂ ಸಮಾಜಕ್ಕೆ ಮರಳಿಸುವುದು' ಎಂಬುದು ಅವರ ಘೋಷವಾಕ್ಯ. ಅವರಂತೂ ಸರ್ವಸ್ವವನ್ನೂ ಸಮಾಜಕ್ಕಾಗಿ ಸಮರ್ಪಿಸಿದ್ದಾರೆ. ಅದು ಸದ್ದುಗದ್ದಲವಿಲ್ಲದ ಅವರ ಭಗವಂತನ ಪೂಜೆ. ಸರಳಜೀವನ, ಸ್ನೇಹಪರತೆ, ಸಜ್ಜನಿಕೆ, ನಿಷ್ಠಾವಂತ ದುಡಿಮೆ ಅವರ ರೀತಿ; ನಗುಮೊಗದ ಇರವು, ಹೃದಯ ಶ್ರೀಮಂತಿಕೆ, ನಿರಾಡಂಬರ ಅವರ ಗುಣ; 'ಕ್ರಿಯಾಸಿದ್ಧಿಸ್ಸತ್ತ್ವೇ ಭವತಿ ಮಹತಾಂ ನೋಪಕರಣೇ' ಎಂಬ ಕವಿವಾಣಿಯ ಅಭಿವ್ಯಕ್ತಿ ಅವರು. ಪ್ರೊ. ಎಚ್.ಎಸ್.ಲಕ್ಷ್ಮೀನಾರಾಯಣಭಟ್ಟ ಅವರು ಹೇಳುವಂತೆ, 'ಕರ್ಮಯೋಗಿಯ ರೀತಿ ಸೇವೆಗೈಯುತ್ತ ಧರ್ಮಮಾರ್ಗದಿ ನಡೆವ ಕೃತಕೃತ್ಯರಿವರು'. ಬಿ.ಎನ್.ವಿ. ಅವರಿಂದ ಸಮಾಜದ ದೀನದಲಿತರ, ವಿದ್ಯಾರ್ಥಿಗಳ, ಅನಾರೋಗ್ಯ ಪೀಡಿತರ, ಅಶಕ್ತರ ಕಲ್ಯಾಣಕಾರ್ಯ ನಡೆಯುತ್ತಿದೆ. ನಿಜ. ಅದು ಸಾಧ್ಯವಾಗಿರುವುದು ಅವರ ಪಕ್ಕದಲ್ಲಿ 'ಎಲ್ಲ ಮಕ್ಕಳ ಮಾತೆ ಪ್ರಿಯ ಮಡದಿ ಸೀತಾ' ಇರುವುದರಿಂದ. ಉದಾಹರಣೆಗೆ ವೇದಪಾಠಶಾಲೆಯ ಎಲ್ಲ ಮೂವತ್ತು ಮಕ್ಕಳ ಊಟ ತಿಂಡಿ ತಯಾರಿಸಿ ನಿರ್ವಹಿಸುವವರು ಅವರು, ಅವರ ಖಾಯಿಲೆ ಕಸಾಲೆಗೆ ಚಿಕಿತ್ಸೆ ನೋಡಿಕೊಳ್ಳುವವರು ಅವರು, ಒಬ್ಬೊಬ್ಬರ ಹುಟ್ಟುಹಬ್ಬಕ್ಕೂ ಸಿಹಿ ಉಣಿಸಿ ಉಡುಗೊರೆ ನೀಡುವವರು ಅವರು... ಅದೊಂದು ತಪಸ್ಸು. ಬಿ.ಎನ್.ವಿ. ಅವರ ಎಲ್ಲ ಸಾಧನೆಗಳ ಹಿಂದಿನ ಕನಸು, ಜತೆಗಿನ ಸ್ಫೂರ್ತಿ, ಮುನ್ನಡೆಯ ಸ್ಪಂದನಶಕ್ತಿ ಅವರು, "ಜೀವವಿರುವವರೆಗೂ ಸಮಾಜಸೇವಾಕಾರ್ಯ ಮುಂದುವರಿಸುತ್ತೇವೆ" ಎಂಬ ಬಿ.ಎನ್.ವಿ. ಅವರ ವಾಕ್ಕಿನ ಅಂತಃಶಕ್ತಿ ಸೀತಾ ಅವರು.

ಬಿ.ಎನ್.ವಿ. ಅವರ ಷಷ್ಟ್ಯಬ್ದಪೂರ್ತಿ ಸಂಬಂಧದ ಅಭಿನಂದನೆಗಾಗಿ ಸಹಸ್ರ ಸಹಸ್ರ ಸಂಖ್ಯೆಯಲ್ಲಿ ಸಾಮಾನ್ಯರಿಂದ ಹಿಡಿದು ಅತಿಗಣ್ಯರವರೆಗೆ ಸೇರಿದ್ದ ಸುಂದರವಾದ ಬೃಹತ್ ಸಮಾವೇಶದಲ್ಲಿ (೧-೧೨-೨೦೦೨) ನಡೆದದ್ದು ಇದು: ಬಿ.ಎನ್.ವಿ. ದಂಪತಿಗೆ ಹಾರ ಅರ್ಪಿಸಿ ಶುಭ ಹೇಳಲು ಇಡೀ ಸಭೆ - ಇಡೀ ಸಹಸ್ರಾರು ಅಭಿಮಾನಿಗಳು - ಸಾಲುಗಟ್ಟಿ ನಿಂತರು. ಹಾಗೆ ನಿಂತ ಹಿಂದೂ, ಕ್ರಿಶ್ಚಿಯನ್, ಮುಸಲ್ಮಾನ ಬಂಧುಗಳ ನಡುವೆ ಖ್ಯಾತನಟ ಶಿವರಾಂ ಕೂಡ ಇದ್ದರು. ಅವರು ಪುಳಕಗೊಂಡಿದ್ದರು. ಕೊನೆಯಲ್ಲಿ ವೇದಿಕೆಯಿಂದ ತಮ್ಮ ಸಂತಸ ಹಂಚಿಕೊಂಡರು, "ಇಂಥ ಸಭೆಯನ್ನು .... ಹೀಗೆ ಇಡೀ ಸಭೆಗೆ ಸಭೆಯೇ ಸಾಲುಗಟ್ಟಿ ನಿಂತು ಹಾರ ತುರಾಯಿ ಸಮರ್ಪಿಸಿ ಶುಭ ಹೇಳಲು ಹಾತೊರೆದುದನ್ನು ನನ್ನ ಜೀವನದಲ್ಲಿ ಕಂಡಿರಲಿಲ್ಲ...". ಅದು ನಿಜ. ಬಿ.ಎನ್.ವಿ. ದಂಪತಿ ಬದುಕಿರುವುದೇ ಹಾಗೆ. ಏಕೆಂದರೆ, ಅವರ ಬಾಳನ್ನು ಜ್ಯೋತಿ ಬೆಳಗುತ್ತಿದೆ.

ಶ್ರೀ ಬಿ.ಎನ್.ವಿ ಸುಬ್ರಹ್ಮಣ್ಯ ಅವರ ಅರುವತ್ತನೆಯ ಹುಟ್ಟುಹಬ್ಬ ನಡೆದುದು ೧-೧೨-೨೦೦೨ರಂದು. ಆದರೆ ಅದು ಅವರ ಸಾಧನಾಪರ್ವದ ಮತ್ತೊಂದು ಮಜಲಿಗೆ ಇಟ್ಟ ದೊಡ್ಡ ಹೆಜ್ಜೆಯಾಗಿತ್ತು, ವಿಶ್ರಾಂತಿಜೀವನದ ಮಾತಾಗಿರಲಿಲ್ಲ. ೨೦೦೩ರಲ್ಲಿ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಕಚೇರಿಯು ಸ್ವಂತ ಕಟ್ಟಡ 'ಗಾಯತ್ರಿ ಭವನ'ಕ್ಕೆ ಸ್ಥಳಾಂತರಗೊಂಡಿತು. ಮಹಾಸಭೆಯ ಅಧ್ಯಕ್ಷರಾಗಿದ್ದ ಬಿ.ಎನ್.ವಿ. ಅವರ ಕನಸು ನನಸಾದ ಹೊತ್ತು ಅದು. ಸಮಾಜಜಾಗೃತಿಗಾಗಿ ಅವರು ನಾನಾ ಮಾರ್ಗಗಳನ್ನು ಕಂಡುಕೊಂಡರು. ಅದರ ಫಲವಾಗಿ ೨೦೦೪ರಲ್ಲಿ ಕರ್ನಾಟಕ ರಾಜ್ಯದಾದ್ಯಂತ 'ಗಾಯತ್ರೀ ಶೋಭಾಯಾತ್ರೆ' ನಡೆಯಿತು. ಅದೇ ವರ್ಷದ ಡಿಸೆಂಬರ್ ೨೬, ೨೭ ಮತ್ತು ೨೮ಕ್ಕೆ ಬೆಂಗಳೂರಿನಲ್ಲಿ ರಾಜ್ಯಮಟ್ಟದ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಎಂಟನೇ ಮಹಾಮೇಳ ನಡೆಸಲಾಯಿತು. ಅದೇ ಸಂದರ್ಭದಲ್ಲಿ ಮಹಿಳಾ ನೌಕರರಿಗಾಗಿ ವಸತಿ

ಕೇಂದ್ರವೊಂದನ್ನು ನಿರ್ಮಿಸಲು ಸಂಕಲ್ಪಿಸಲಾಯಿತು; ಆ ಹೊತ್ತು ೧,೨೦,೦೦,೦೦೦ ರೂಪಾಯಿಗಳ ಕ್ರೋಡೀಕರಣವಾಯಿತು, ನಿವೇಶನಕ್ಕಾಗಿ ಅರ್ಜಿ ಸಲ್ಲಿಸಲಾಯಿತು. ೨೦೦೫ರಲ್ಲಿ ಹೊಸ ಅಧ್ಯಕ್ಷರ ಆಯ್ಕೆಗೆ ಬಿ.ಎನ್.ವಿ. ದಾರಿ ಮಾಡಿಕೊಟ್ಟರು. ೨೦೦೪ರಲ್ಲಿಯೇ ಆದ ಮತ್ತೊಂದು ಸಾಧನೆಯೆಂದರೆ 'ಬೆಟ್ಟದಪುರದ ದಿಟ್ಟರು' ಎಂಬ ಕನ್ನಡ ಧಾರಾವಾಹಿಯ ನಿರ್ಮಾಣ. ಜ್ಯೋತಿಕ್ರಿಯೇಷನ್ಸ್ ಲಾಂಛನದಡಿಯಲ್ಲಿ ತಯಾರಾದ ಈ ಧಾರಾವಾಹಿಯು 'ಚಂದನ' ವಾಹಿನಿಯಲ್ಲಿ ಪ್ರಸಾರಗೊಂಡಿತು. ಅದೇ ವರ್ಷವೇ ೫೦ ವಿದ್ಯಾರ್ಥಿನಿಯರಿಗೆ ಅವಕಾಶ ಕಲ್ಪಿಸುವ ಜ್ಯೋತಿ ವಿದ್ಯಾರ್ಥಿನಿ ನಿಲಯವನ್ನು ನಿರ್ಮಿಸಲಾಯಿತು. ಅದನ್ನು ಆಗಿನ ಮಾನ್ಯ ಮುಖ್ಯಮಂತ್ರಿ ಶ್ರೀ ಧರ್ಮಸಿಂಗ್ ಉದ್ಘಾಟಿಸಿದರು. ೨೦೦೫ರಲ್ಲಿ ಜ್ಯೋತಿ ಅಕ್ವಾಟಿಕ್ ಸೆಂಟರ್‌ನ ನಿರ್ಮಾಣವಾಯಿತು. ಅದರ ಉದ್ಘಾಟನೆಯನ್ನು ಕರ್ನಾಟಕ ಸ್ವಿಮಿಂಗ್ ಫೆಡರೇಶನ್‌ನ ಅಧ್ಯಕ್ಷರೂ ಬೆಂಗಳೂರಿನ ಅಮೃತ್ ಡಿಸ್ಟಲರೀಸ್‌ನ ವ್ಯವಸ್ಥಾಪಕ ನಿರ್ದೇಶಕರೂ ಆದ ಆರ್. ನೀಲಕಂಠರಾವ್ ಜಗದಾಳೆ ಮತ್ತು ಆಗಿನ ಶಿಕ್ಷಣ ಸಚಿವ ಮಾನ್ಯ ರಾಮಲಿಂಗಾರೆಡ್ಡಿ ಉದ್ಘಾಟಿಸಿದರು. ಜ್ಯೋತಿ ಸಾಂಸ್ಕೃತಿಕ ಪ್ರತಿಷ್ಠಾನವು ಪ್ರತಿವರ್ಷ 'ವ್ಯಾಸಜ್ಯೋತಿ' ಪ್ರಶಸ್ತಿ ಪ್ರದಾನ ಮಾಡಿ ವಿವಿಧಕ್ಷೇತ್ರಗಳ ಪಂಡಿತರನ್ನು ಗೌರವಿಸುವ ಪರಿಪಾಠವನ್ನಿಟ್ಟುಕೊಂಡಿದೆ. ಕ್ರಿ.ಶ. ೨೦೦೦ದಿಂದ ೨೦೧೦ರವರೆಗೆ ಈ ಪ್ರಶಸ್ತಿಗೆ ಪಾತ್ರರಾದ ಮಹಾವಿದ್ವಾಂಸರಲ್ಲಿ ವೇ||ಬ್ರ|| ಶ್ರೀಗಳಾದ ರಾಮೇಶ್ವರಾವಧಾನಿ (ಬೆಂಗಳೂರು), ರಾಮಾನುಜಮ್ ತಾತಾಚಾರ್ಯ (ಮೇಲುಕೋಟೆ), ಬಿದರಹಳ್ಳಿ ಶ್ರೀನಿವಾಸಾಚಾರ್ಯ (ಬಿದರಹಳ್ಳಿ), ನರಸಿಂಹಮೂರ್ತಿ (ಲಿಂಗದಹಳ್ಳಿ), ರಾಮಚಂದ್ರಶಾಸ್ತ್ರಿ ಸೂರಿ (ಹೊನ್ನಾವರ), ಮಾರ್ಕಂಡೇಯ ಅವಧಾನಿ (ಮತ್ತೂರು), ಮಹಾಮಹೋಪಾಧ್ಯಾಯ ರಂಗನಾಥಶರ್ಮಾ (ಬೆಂಗಳೂರು), ಬಿ. ಗಣೇಶಭಟ್ಟ (ಶೃಂಗೇರಿ), ಗಮಕ ವಿದ್ವಾಂಸ ಎಚ್.ಕೆ. ಕೇಶವಮೂರ್ತಿ (ಹೊಸಹಳ್ಳಿ), ಸೇರಿದ್ದಾರೆ. ಜ್ಯೋತಿ ಸಾಂಸ್ಕೃತಿಕ ಪ್ರತಿಷ್ಠಾನದ ಮಹಾಸಾಧನೆಯೆಂದರೆ ಅದು ಈವರೆಗೆ ಪ್ರಕಾಶಪಡಿಸಿರುವ ಯಜುರ್ವೇದದ ಎಂಟು ಸಂಪುಟಗಳು. ಅದೊಂದು ಅಸಾಧಾರಣ ಸಾಹಸ. ಬೆಂಗಳೂರಿನ ಗಾಯನ ಸಮಾಜವು ಬಿ.ಎನ್.ವಿ. ಅವರನ್ನು ೨೦೦೯ನೇ ಸಾಲಿನಲ್ಲಿ ನಾಮಕರಣ ವಿಶ್ವಸ್ತರನ್ನಾಗಿ ಆಹ್ವಾನಿಸಿ ಗೌರವಿಸಿತು. ೨೦೧೦ರಲ್ಲಿ ಬಿ.ಎನ್.ವಿ. ಸಮಾಜಕ್ಕೆ ವೃದ್ಧಾಶ್ರಮವೊಂದನ್ನು ಸಮರ್ಪಿಸಿದ್ದಾರೆ. ಜ್ಯೋತಿ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಎಂಬ ಮಹಾ ವಿದ್ಯಾಲಯವೊಂದರ ಕನಸು ಕಂಡಿರುವ ಬಿ.ಎನ್.ವಿ. ಅದಕ್ಕಾಗಿ ೨೦೧೦ರಲ್ಲಿ ಪ್ರಯತ್ನಗಳನ್ನಾರಂಭಿಸಿದ್ದಾರೆ. ೨೦೧೧-೧೨ರಿಂದ ಅದು ಕಾರ್ಯಾರಂಭಗೊಳ್ಳುವ ಯೋಜನೆ ಸಿದ್ಧವಾಗಿದೆ. ಈ ಮೂಲಕ ಬಿ.ಎನ್.ವಿ. ಸಾರ್ಥಕ ಬದುಕಿನ ಮಾದರಿಯೊಂದನ್ನು ನಮ್ಮ ಮುಂದಿಟ್ಟಿದ್ದಾರೆ. ಅವರ ಬದುಕೇ ಸಮಾಜಸೇವೆಗಾಗಿ ಮೀಸಲಾಗಿರುವುದನ್ನು ಈ ಎಲ್ಲ ಸಾಧನೆಗಳೂ ನಿದರ್ಶಿಸುತ್ತವೆ. ಇಷ್ಟಾಗಿ ಬಿ.ಎನ್.ವಿ. ವನಸುಮದಂತೆ ಇದ್ದು, ತಮ್ಮ ಸಾಧನೆಗಳ ಪ್ರಯೋಜನವು ದೇಶದಾದ್ಯಂತ ಪಸರಿಸಲಿ ಎಂದು ಆಶಿಸುತ್ತಾರೆ. ಅದು ಅವರ ಯಶಸ್ಸಿನ ಗುಟ್ಟು.

ಶ್ರೀಮತಿ ಎಲ್.ಎಚ್. ವಿಶಾಲಾಕ್ಷಿ – ಶ್ರೀ ಎಲ್.ವಿ. ಹಿರಿಯಣ್ಣ

ಚಿಕ್ಕಮಗಳೂರು ಜಿಲ್ಲೆಯ ಲಿಂಗದಹಳ್ಳಿಯಲ್ಲಿ ಜನಿಸಿ ಬಯಲುಸೀಮೆಯ ದೃಢನಿಶ್ಚಯವನ್ನೂ ಮಲೆನಾಡಿನ ತೀರ್ಥಹಳ್ಳಿ ತಾಲ್ಲೂಕಿನ ಬಸವಾನಿಯ ಬೆಡಗಿಯನ್ನು ಇಷ್ಟಪಟ್ಟು ಮದುವೆಯಾಗಿ ಮಾರ್ದವತೆಯನ್ನೂ ಬೆಳೆಸಿಕೊಂಡ ಶ್ರೀ ಹಿರಿಯಣ್ಣ ಮತ್ತು ಅವರ ಪತ್ನಿ ಶ್ರೀಮತಿ ವಿಶಾಲಾಕ್ಷಿಯವರದ್ದು ಹೆಚ್ಚು ಕಡಿಮೆ ಆರು ದಶಕಗಳ ಅನುರೂಪದ ದಾಂಪತ್ಯ. ಇದೀಗ ೮೫ನೇ ವಸಂತವನ್ನು ಕಾಣಲು ಎದುರುನೋಡುತ್ತಿರುವ ಹಿರಿಯಣ್ಣನವರು ಮತ್ತು ೭೫ನೇ ವಸಂತದ ಆಗಮನದ ನಿರೀಕ್ಷೆಯಲ್ಲಿರುವ ವಿಶಾಲಾಕ್ಷಿಯವರು ಸಂಕೇತಿ ಸಮಾಜದ ಹಿರಿಯ ಪೀಳಿಗೆ.

ಮೂವತ್ತರ ದಶಕದಲ್ಲಿ ಹೇರಳವಾಗಿದ್ದ ಸಂಕೇತಿ ಸಮಾಜದ ಬಡತನವನ್ನೂ, ಕಠಿಣ ಬದುಕನ್ನೂ ಅಂತರ್ಗತ ಮಾಡಿಕೊಂಡೇ ಬೆಳೆದ ಈ ಎರಡೂ ಚೇತನಗಳು ನೋವಿನಲ್ಲಿಯೂ ನಗುತ್ತಾ ಬದುಕಲು ಕಲಿತವರು. ಐವತ್ತರ ದಶಕದಲ್ಲಿಯೇ ಅಣ್ಣ ಲಿಂಗದಹಳ್ಳಿ ಸುಬ್ಬರಾಯರ ಸಹಾಯದಲ್ಲಿ ಎಲೆಕ್ಟ್ರಿಕಲ್ ಡಿಪ್ಲೊಮ ಪದವಿ ಪಡೆದ ಹಿರಿಯಣ್ಣ ನಿರುದ್ಯೋಗದಿಂದ ದೈಹಿಕವಾಗಿ, ಮಾನಸಿಕವಾಗಿ ಬಳಲಿದರೂ ಛಲಬಿಡದೆ ದೂರದ ಖರನ್‌ಪುರ-ಕಲ್ಕತ್ತಾದಲ್ಲಿ ರೈಲ್ವೆಯಲ್ಲಿ ಕೆಲಸ ಗಿಟ್ಟಿಸಿಕೊಂಡವರು. ಬೀರೂರಿನಿಂದ ಖರನ್‌ಪುರಕ್ಕೆ ಅಣ್ಣನ ಶರ್ಟನ್ನೂ ಪ್ಯಾಂಟನ್ನೂ ತೊಟ್ಟು ಹೋದ ಹಿರಿಯಣ್ಣ ಮೊದಲ ತಿಂಗಳ ಸಂಬಳ ಬರುವವರೆಗೂ ರೈಲುನಿಲ್ದಾಣದಲ್ಲಿ ನೀರು ಕುಡಿಯುತ್ತಾ, ಪ್ಲಾಟ್‌ಫಾರ್ಮ್ ಬೆಂಚಿನಲ್ಲಿ ಮಲಗಿ ಬದುಕಿದವರು.

ದೊರಕಿದ ನೌಕರಿಯನ್ನು ಜತನದಿಂದ ರಕ್ಷಿಸಿಕೊಂಡರೂ ತನ್ನ ನಿಷ್ಠೆ, ಪ್ರಾಮಾಣಿಕತೆಯಿಂದ ನಿಷ್ಠುರರಾಗಿದ್ದರಿಂದ ಉನ್ನತ ಹುದ್ದೆಗಳನ್ನು ತಪ್ಪಿಸಿಕೊಂಡವರು. ಯೌವನದಲ್ಲಿ ತನ್ನ ಕಾರ್ಯಕ್ಷಮತೆಗೆ ಬಹುಮಾನಗಳನ್ನು ಗಳಿಸಿದರೂ, ಪ್ರಮೋಶನ್‌ಗಳನ್ನು ಗಳಿಸಲಾರದೇ ಹೋದರು.

ಏನೇ ಆದರೂ ಮೌಲ್ಯಗಳೊಂದಿಗೆ ರಾಜಿ ಮಾಡಿಕೊಳ್ಳದ ಹಿರಿಯಣ್ಣ ೧೯೭೪ರ ಪ್ರಖ್ಯಾತ ರೈಲ್ವೆ ಚಳವಳಿಯಲ್ಲಿ ಸರಕಾರದ ಬೆಂಬಲಕ್ಕೆ ನಿಂತವರು. ತನ್ನ ಬದಲಿಲ್ಲದ ನಿಲುವಿಗಾಗಿ, ಕಮ್ಯುನಿಷ್ಟರಿಂದಲೂ ಲಾಲ್‌ಸಲಾಮ್ ಪಡೆದವರು. ಇವರ ಜೀವನದುದ್ದಕ್ಕೂ ನೆರಳಿನಂತೆ ಹಿಂಬಾಲಿಸಿದ ವಿಶಾಲಾಕ್ಷಿಯವರು ಹಿರಿಯಣ್ಣನವರ ಕಠಿಣ ಬದುಕನ್ನು ದೂರುದುಮ್ಮಾನಗಳಿಲ್ಲದೇ ನಗುತ್ತಾ ಸ್ವೀಕರಿಸಿದವರು.

ಸ್ವತಃ ತನ್ನಲ್ಲಿದ್ದ ಕೌಶಲಗಳನ್ನು ದಾಂಪತ್ಯ ಜೀವನದಲ್ಲಿ ಬಿಡುವಿಲ್ಲದ ಸಮಯದಲ್ಲಿಯೂ ವೃದ್ಧಿಸಿಕೊಳ್ಳುತ್ತಾ ನಡೆದ ವಿಶಾಲಾಕ್ಷಿಯವರು ಸಿದ್ಧ ಉಡುಪು ತಯಾರಿ, ಸ್ವೆಟರ್ ತಯಾರಿ, ಭಜನೆ ಮುಂತಾದವುಗಳಲ್ಲಿಯೇ ಮನರಂಜನೆ ಕಂಡವರು. ವಿವಾಹಪೂರ್ವ ತುಂಬಿದ ಮನೆಯಲ್ಲಿ ಬೆಳೆದ ವಿಶಾಲಾಕ್ಷಿ ದೂರದೂರಿಗೆ ಗಂಡನನ್ನು ಹಿಂಬಾಲಿಸಿ ಹೋದರೂ ಭಾಷೆ, ಜಾತಿ, ಅಂತಸ್ತನ್ನು ಮೀರಿ ಗೆಳತಿಯರನ್ನು ಗಳಿಸಿ ಸಿಹಿಯನ್ನೇ ಹಂಚಿದವರು.

ಹಿರಿಯಣ್ಣ ದಂಪತಿಗಳು ಉಚಿತ ರೈಲಿನ ಸೌಲಭ್ಯ ಪಡೆದು ದೇಶವನ್ನೆಲ್ಲ ಹಲವಾರು ಬಾರಿ ಸುತ್ತಿದವರು. ಹೋದಲ್ಲೆಲ್ಲ ಸ್ವತಃ ಅಡುಗೆ ಮಾಡಿಕೊಂಡು ಮಿತವ್ಯಯದ ಬದುಕನ್ನು ಸಾಧಿಸಿದವರು. ಬಡವರಾದರೂ ಉಳಿತಾಯ ಮಾಡಲು ಸಾಧ್ಯ ಎಂದು ತೋರಿಸಿದವರು. ನಿವೃತ್ತಿಯವರೆಗೂ ಹಿರಿಯಣ್ಣನವರಿಗೆ ಸೈಕಲ್ ಸಾಥ್ ನೀಡಿದರೆ, ವಿಶಾಲಾಕ್ಷಿಯವರಿಗೆ ಉಷಾ ಹೊಲಿಗೆ ಯಂತ್ರ ಸಾಥ್ ನೀಡುತ್ತಿತ್ತು. ಸರಳ ಅಭ್ಯಾಸ, ಶ್ರೀಮಂತ ಯೋಚನೆಗಳಿಂದ ಬದುಕುತ್ತಿರುವ ಈರ್ವರೂ ದೈವಭಕ್ತರು, ಆಚಾರವಂತರು. ಎರಡು ಹೊತ್ತು ಸಂಧ್ಯಾವಂದನೆ, ಲಲಿತಾ ಸಹಸ್ರನಾಮ, ವಿಷ್ಣು ಸಹಸ್ರನಾಮ ಇವರು ವಾಸಿಸುತ್ತಿರುವಲ್ಲೆಲ್ಲ ಪ್ರತಿಧ್ವನಿಸುತ್ತಿವೆ.

ಹಿರಿಯಣ್ಣ ವಿಶಾಲಾಕ್ಷಿ ದಂಪತಿಗಳಿಗೆ ಇಬ್ಬರು ಹೆಣ್ಣು, ಇಬ್ಬರು ಗಂಡು ಮಕ್ಕಳು. ಎಲ್ಲರಿಗೂ ತಮ್ಮ ಸೀಮಿತ ಸಾಮರ್ಥ್ಯದಲ್ಲಿಯೂ ಉತ್ತಮ ಶಿಕ್ಷಣ ನೀಡಿದರು. ಇದರಿಂದಾಗಿ, ಇದೀಗ ಮಕ್ಕಳೆಲ್ಲರೂ ವೃತ್ತಿಪರರು. ಈ ಮಕ್ಕಳೆಲ್ಲರೂ ಮದುವೆಯಾಗಿದ್ದು, ತಮ್ಮ ಸಂಗಾತಿಗಳೊಂದಿಗೆ ಬದುಕಿನಲ್ಲಿ ನೆಲೆಕಾಣಲು ತಂದೆತಾಯಂದಿರ ಬದುಕನ್ನೇ ಆದರ್ಶವಾಗಿರಿಸಿಕೊಂಡಿರುವ ಶ್ರಮಜೀವಿಗಳು.

ಹಿರಿಯಣ್ಣ ವಿಶಾಲಾಕ್ಷಿ ದಂಪತಿಗಳಿಗೆ ಎಂಟು ಮೊಮ್ಮಕ್ಕಳು. ಪರಂಪರೆಯಂತೆ ಪದವಿ ಮುಗಿಸಿದ ದೊಡ್ಡವರಿಬ್ಬರೂ ಹುಡುಗಿಯರಾದರೂ ಸ್ವತಂತ್ರ ಬದುಕನ್ನು ಕಟ್ಟಿಕೊಳ್ಳುವಲ್ಲಿ ನಿರತರಾಗಿದ್ದಾರೆ. ಉಳಿದವರೆಲ್ಲ ವಿದ್ಯಾರ್ಥಿ ದೆಸೆಯಲ್ಲಿ. ಕೊನೆಯ ಮೊಮ್ಮಗನ ಮೊದಲ ಹುಟ್ಟುಹಬ್ಬದ ತಯಾರಿ ಇದೀಗ ನಡೆಯುತ್ತಿದೆ.

ಆಡಂಬರವಿಲ್ಲದ, ನಿಗರ್ವಿ ಬದುಕು ಬಾಳಿದ ಹಿರಿಯಣ್ಣ ವಿಶಾಲಾಕ್ಷಿ ದಂಪತಿಗಳು ಸಾಹಿತ್ಯಾಸಕ್ತರು. ಭಾರತೀಯ ವಿದ್ಯಾಭವನ್ ಪ್ರಕಟಣೆ "ಭವನ್ಸ್ ಜರ್ನಲ್" ಹಿರಿಯಣ್ಣನವರಿಗೆ ಪ್ರಿಯವಾದರೆ, ತೆಲುಗು ಕನ್ನಡ ಪತ್ರಿಕೆಗಳು, ಕಾದಂಬರಿಗಳು ವಿಶಾಲಾಕ್ಷಿಯವರಿಗೆ ಪ್ರಿಯ.

ಎಲ್ಲರಿಗೂ ಒಳಿತನ್ನೇ ಬಯಸುವ, ಸ್ಪಷ್ಟ ನುಡಿ, ನೇರ ಆಚರಣೆಯ ಈ ಸಂಕೇತಿ ದಂಪತಿಗಳು ಶತಾಯುಷಿಗಳಾಗಲಿ ಎಂಬುದೇ ನಮ್ಮೆಲ್ಲರ ಹಾರೈಕೆ.

ಶ್ರೀಮತಿ ರಾಜೇಶ್ವರಿ – ಶ್ರೀ ಎಚ್.ಆರ್. ಕೇಶವಮೂರ್ತಿ

ಪ್ರಥಮ ಕುಮಾರವ್ಯಾಸ ಪ್ರಶಸ್ತಿಗೆ ಪಾತ್ರರಾಗಿ (೨೦೦೯) ಆ ಪ್ರಶಸ್ತಿಗೆ ಒಂದು ಅಂತಸ್ತು ಕಲ್ಪಿಸಿಕೊಟ್ಟಿರುವ ಶ್ರೀ ಎಚ್.ಆರ್. ಕೇಶವಮೂರ್ತಿ ಒಬ್ಬ ವರಗಮಕಿ. 'ಗಮಕಗಂಧರ್ವ', 'ಗಮಕಸಿಂಧು', 'ಗಮಕ ಕಲಾಕೋಕಿಲ', 'ಗಮಕ ರತ್ನಾಕರ' ಮೊದಲಾದವು ಅವರಿಗೆ ರಸಿಕರು ಕೊಟ್ಟ ಸಾರ್ಥಕ ಬಿರುದುಗಳು; ಒಂದೊಂದೂ ಅವರ ಕಲೆಯ ಔನ್ನತ್ಯವನ್ನು ಸಾರಲು ಹೊರಟ ವಿಭಿನ್ನ ಪ್ರಯತ್ನಗಳು. ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, ಕರ್ನಾಟಕ ಕಲಾಶ್ರೀ ಪ್ರಶಸ್ತಿ ಅವರ ಕೊರಳನ್ನು ಅದಾಗಲೇ ಅಲಂಕರಿಸಿವೆ. ೨೦೦೭ರಲ್ಲಿ ಬಾಗಲಕೋಟೆಯಲ್ಲಿ ನಡೆದ ಏಳನೇ ಅಖಿಲಕರ್ನಾಟಕ ಗಮಕಕಲಾ ಸಮ್ಮೇಳನದ ಅಧ್ಯಕ್ಷಪೀಠವನ್ನು ಕೂಡ ಅಲಂಕರಿಸಿದವರು ಅವರು.

ಶಿವಮೊಗ್ಗ ಜಿಲ್ಲೆಯ ಹೊಸಹಳ್ಳಿ ಎಂಬ ಗ್ರಾಮದಲ್ಲಿ ಶ್ರೀ ರಾಮಾವಧಾನಿ ಹಾಗೂ ಶ್ರೀಮತಿ ಲಕ್ಷ್ಮೀದೇವಮ್ಮ ದಂಪತಿಗೆ ಹುಟ್ಟಿದವರು

ಸುಬ್ರಾಯಶಾಸ್ತ್ರಿ, ರಾಮಾಶಾಸ್ತ್ರಿ, ಎಚ್.ಆರ್. ಕೇಶವಮೂರ್ತಿ (೧೯೩೪ರ ಫೆಬ್ರವರಿ ೨೨), ಕೃಷ್ಣಮೂರ್ತಿ, ಚಿಂತಾಮಣಿ, ಭವಾನಿ ಹಾಗೂ ಸೀತೆ. ಅದೊಂದು ಮಧ್ಯಮವರ್ಗದ ಕುಟುಂಬ. ವ್ಯವಸಾಯವೇ ಅವರ ಪ್ರಧಾನವೃತ್ತಿ. ಶ್ರೀ ರಾಮಾವಧಾನಿಗಳು ವೇದ ಮತ್ತು ಸಂಸ್ಕೃತ ಪಂಡಿತರು. ಪುರಾಣ ಪ್ರವಚನ ಮಾಡುವುದು ಅವರ ಹವ್ಯಾಸ; ಸಂಗೀತದ ಮೇಲೆ ವಿಶೇಷ ಪ್ರೀತಿ.

ಎಚ್.ಆರ್. ಕೇಶವಮೂರ್ತಿ ಓದಿದ್ದು ಇಂಟರ್‌ವರೆಗೆ. ವ್ಯವಸಾಯದ ಕರೆ ಅವರ ಆಧುನಿಕಶಿಕ್ಷಣವನ್ನು ಇಂಟರ್‌ಗೇ ಮೊಟಕುಗೊಳಿಸಿತ್ತು. ವಿವಾಹವಾದಾಗ ಅವರಿಗೆ ೧೬ ವರ್ಷ. ಅದೇ ಊರಿನ ಶ್ರೀ ನಂಜುಂಡಾವಧಾನಿಗಳ ಮಗಳು ಶ್ರೀಮತಿ ರಾಜೇಶ್ವರಿ ಅವರನ್ನೇ ಎಚ್.ಆರ್. ಕೇಶವಮೂರ್ತಿ ವರಿಸಿದ್ದು. ಆಗ ರಾಜೇಶ್ವರಿಗೆ ೧೪ ವರ್ಷ.

ಆ ಊರಿನಲ್ಲಿ ಗಮಕ ಪರಿಸರ ಮೊದಲಿನಿಂದಲೂ ಇತ್ತು. ಶ್ರೀ ರಾಮಾಶಾಸ್ತ್ರಿ, ಶ್ರೀ ರಾಮಸ್ವಾಮಿಶಾಸ್ತ್ರಿಗಳ ಕಾವ್ಯವಾಚನ, ಶ್ರೀ ಲಕ್ಷ್ಮೀಕೇಶವಶಾಸ್ತ್ರಿಗಳ ವ್ಯಾಖ್ಯಾನ ಬಾಲಕ ಎಚ್.ಆರ್. ಕೇಶವಮೂರ್ತಿಯವರ ಕಿವಿಗಳ ಮೇಲೆ ಬೀಳುತ್ತಿತ್ತು. ಅವರ ತಾಯಿ ಕೂಡ ಸಂಗೀತದಲ್ಲಿ ವಿಶೇಷ ಆಸಕ್ತಿ ಹೊಂದಿದ್ದವರೇ. ಶಾಲೆಯಲ್ಲಿ ಗಮಕವಾಚನ ಮಾಡಿದ ಎಚ್.ಆರ್. ಕೇಶವಮೂರ್ತಿಗೆ ಗುರುಗಳ ಮತ್ತು ಗಣ್ಯ ಅತಿಥಿಗಳ ಪ್ರೋತ್ಸಾಹ ದೊರೆಯಿತು. ವೇ||ಬ್ರ||ಶ್ರೀ ಚಿದಂಬರ ಜೋಯಿಸರು ತಮ್ಮ ಪದ್ಯಗಳನ್ನು ಆ ಬಾಲಕನಿಂದ ಹಾಡಿಸಿ ಉತ್ತೇಜಿಸಿದರು. ಆ ಹೊತ್ತಿಗೆ ಮಂಡ್ಯಜಿಲ್ಲೆಯ ಕುಪ್ಪಳ್ಳಿಯವರಾದ ಶ್ರೀ ವೆಂಕಟೇಶಯ್ಯ ಎಂಬ ಹಿರಿಯ ಗಮಕಿಯೊಬ್ಬರು ಆ ಊರಿಗೆ ಬಂದು ನೆಲೆ ನಿಂತರು. ನಾಟಕದಲ್ಲಿ ಅಭಿನಯಿಸಿ, ಹಾಡಿ, ಕಂಪನಿಯನ್ನು ಕಟ್ಟಿ ನುರಿತಿದ್ದವರು ಅವರು. ಅವರು ಆ ಊರಲ್ಲಿ ಗಮಕ ತರಗತಿಗಳನ್ನು ನಡೆಸಿದರು. ಎಚ್.ಆರ್. ಕೇಶವಮೂರ್ತಿಯವರು ಕೂಡ ಅವರಲ್ಲಿ ಎರಡು ವರ್ಷ ಕಲಿತು, ಪರೀಕ್ಷೆಗಳನ್ನೂ ಮಾಡಿಕೊಂಡರು; ವೆಂಕಟೇಶಯ್ಯನವರ ಪಟ್ಟಶಿಷ್ಯ ಎನಿಸಿದರು. ಒಳ್ಳೆಯ ಶಾರೀರವಿದ್ದ ವೆಂಕಟೇಶಯ್ಯ 'ಸ್ಫೂರ್ತಿದಾಯಕ' ಶಿಕ್ಷಕರಾಗಿದ್ದವರು.

ಎಚ್.ಆರ್. ಕೇಶವಮೂರ್ತಿಯವರಿಗೆ ಗಮಕದ ಗುಂಗು ಹತ್ತಿತು. ಶಾಸ್ತ್ರೀಯ ಸಂಗೀತ ಕಛೇರಿಗಳನ್ನು ಕೇಳಿದಷ್ಟರಿಂದಲೇ ಎಂಬತ್ತು ರಾಗಗಳನ್ನು ಅಧೀನಪಡಿಸಿಕೊಂಡರು. ಗಮಕಕ್ಕೆ ಅವನ್ನು ಪ್ರಯೋಗಿಸಿದರು. ರಾಮಾಶಾಸ್ತ್ರಿ ಮತ್ತು ಲಕ್ಷ್ಮೀಕೇಶವಶಾಸ್ತ್ರಿಗಳ ಜೊತೆ ಗಮಕ ಕಛೇರಿಗಳಿಗೆ ಹೋಗಿ ಪಳಗಿದರು; ಆತ್ಮವಿಶ್ವಾಸ ಬಲಿಯಿತು. ೨೦ನೆಯ ವಯಸ್ಸಿನಿಂದ ತಾವೇ ಕಾರ್ಯಕ್ರಮಗಳನ್ನು ನಡೆಸಿಕೊಡತೊಡಗಿದರು. ಮಾರ್ಕಂಡೇಯ ಅವಧಾನಿ, ಮತ್ತೂರು ಕೃಷ್ಣಮೂರ್ತಿ ಮೊದಲಾದ ಪ್ರತಿಭಾವಂತರ ಜತೆ ಕಾವ್ಯವಾಚನ ಮಾಡುವಷ್ಟು ಬೆಳೆದರು. ಗಮಕ ತರಗತಿಗಳನ್ನು ನಡೆಸಿ ತಾವೂ ಶಿಷ್ಯರನ್ನು ತಯಾರು ಮಾಡಿದರು.

ಕುಮಾರವ್ಯಾಸಭಾರತ, ಜೈಮಿನಿಭಾರತ, ತೊರವೆ ರಾಮಾಯಣ, ನಳಚರಿತ್ರೆ, ಹರಿಶ್ಚಂದ್ರಕಾವ್ಯ, ರಾಮಾಯಣದರ್ಶನಂ - ಈ ಕನ್ನಡಕಾವ್ಯಗಳನ್ನೆಲ್ಲ ಎಚ್.ಆರ್. ಕೇಶವಮೂರ್ತಿಯವರು ಅನೇಕ ಬಾರಿ ವಾಚಿಸಿದ್ದಾರೆ. ಪಂಪಭಾರತ, ರನ್ನನ ಗದಾಯುದ್ಧವನ್ನು ಕೂಡ ಅಪರೂಪವಾಗಿ ವಾಚಿಸಿದ್ದಾರೆ. ಸಂಸ್ಕೃತದ ವಾಲ್ಮೀಕಿರಾಮಾಯಣ ಮತ್ತು ವ್ಯಾಸಭಾರತವನ್ನು ಅನೇಕಸಾರಿ ಓದಿದ್ದಾರೆ. ಆಕಾಶವಾಣಿ ಕಾರ್ಯಕ್ರಮಗಳಲ್ಲಿ ರಗಳೆಗಳನ್ನೂ ಪ್ರಸ್ತುತಪಡಿಸಿದ್ದಾರೆ. ಅಷ್ಟರ ನಡುವೆ ಅವರ ಅಚ್ಚುಮೆಚ್ಚಿನ ಕಾವ್ಯವು ಕುಮಾರವ್ಯಾಸಭಾರತವೇ ಆಗಿದೆ. ಸಂಪೂರ್ಣ ಕುಮಾರವ್ಯಾಸಭಾರತದ ಧ್ವನಿಮುದ್ರಿಕೆಗಳನ್ನು ಹಲವು ಬಾರಿ ಹೊರತಂದಿದ್ದಾರೆ. ಹೊಸಹಳ್ಳಿಯಲ್ಲಿ ನಡೆಯುವ ಭಜನೆ ಕಾರ್ಯಕ್ರಮಗಳ ಮುಂದಾಳೂ ಅವರಾಗಿದ್ದಾರೆ. ಇದೀಗ ಅವರಿಗೆ ೭೬ ವರ್ಷ; ಅರ್ಧಶತಮಾನಕ್ಕೂ ಹೆಚ್ಚು ಕಾಲ ಅವರು ಗಮಕಸೇವೆ ಮಾಡಿದ್ದಾರೆ, ಈಗಲೂ ಮುಂದುವರಿಸಿದ್ದಾರೆ. ಆದರೂ ಇಂದೂ ಅವರೊಬ್ಬ ವಿನಯದ ಮೂರ್ತಿ; ಸರಳ, ಸಜ್ಜನ.

ಸಂಗೀತ ಮತ್ತು ಸಾಹಿತ್ಯ ಎರಡರಲ್ಲೂ ಸಾಧನೆ ಮಾಡಿದವರು ಎಚ್.ಆರ್. ಕೇಶವಮೂರ್ತಿಯವರು. ಮಾತ್ರವಲ್ಲ, ಅವೆರಡನ್ನೂ ಹಿತವಾಗಿ ಹೇಗೆ ಬೆರೆಸಬೇಕೆಂಬ ಕಲೆಯನ್ನು ತಿಳಿದವರು. ತಮಗೆ ಬಂದ ಪ್ರಶಸ್ತಿಗಳೆಲ್ಲ 'ದೈವಕೃಪೆ', 'ಹಿರಿಯರ ಆಶೀರ್ವಾದ', 'ಅಭಿಮಾನಿಗಳ ಹಾರೈಕೆ' ಎಂದೇ ವರ್ಣಿಸುವವರು. ಎಲೆಮರೆಯ ಕಾಯಾಗಿ ಉಳಿದು ಗಮಕತಪಸ್ಸು ಮಾಡುವುದರಲ್ಲಷ್ಟೇ ಆಸಕ್ತರು. ಉದಯ ಟಿವಿಯ ಗಮಕತಾರೆ, ಹೊಸಹಳ್ಳಿಯ ಗಮಕಕಲಾ ಪರಿಷತ್ತನ್ನು ೩೨ ವರ್ಷಗಳ ಹಿಂದೆ ಸ್ಥಾಪಿಸಿ ಇಂದಿನವರೆಗೂ ಅಧ್ಯಕ್ಷರಾಗಿದ್ದು ಅದನ್ನು ನಿರಂತರ ಅರ್ಥಪೂರ್ಣ ಚಟುವಟಿಕೆಗಳ ಕೇಂದ್ರವಾಗಿಸಿದವರು. ಗಮಕದ ಏಕೈಕ ಮಾಸಪತ್ರಿಕೆ 'ಗಮಕಸಂಪದ'ದ ಪ್ರಕಾಶಕರು. ಗಮಕಭವನದ ಹಿಂದಿನ ದೈತ್ಯಶಕ್ತಿ. ಪತ್ನಿ ರಾಜೇಶ್ವರಿ ಮತ್ತು ತಮ್ಮ ಕುಟುಂಬದ ಎಲ್ಲರ ಸಹಕಾರದಿಂದಲೇ ತಾವು ಇಷ್ಟು ಎತ್ತರದ ಸಾಧನೆ ಮಾಡಲು ಸಾಧ್ಯವಾದುದನ್ನು ಅವರು ಕೃತಜ್ಞತೆಯಿಂದ ನೆನೆಯುತ್ತಾರೆ.

ಶ್ರೀಮತಿ ರಾಜಲಕ್ಷ್ಮೀ – ಪದ್ಮಶ್ರೀ ಡಾ|| ಮತ್ತೂರು ಕೃಷ್ಣಮೂರ್ತಿ

ಶ್ರೀಮತಿ ನಂಜಮ್ಮ ಮತ್ತು ಶ್ರೀ ಎಂ. ರಾಮಕೃಷ್ಣಯ್ಯ ದಂಪತಿಗೆ ಜನಿಸಿದ ಶ್ರೀ ಮತ್ತೂರು ಕೃಷ್ಣಮೂರ್ತಿ (ಜ. ೮-೮-೧೯೨೯) ಖ್ಯಾತ ಕಲಾವಿದ, ಸಂಘಟನಕಾರ, ಕನಸುಗಾರ, ಸಾಧಕ. ಭಾರತೀಯ ಸಾಂಸ್ಕೃತಿಕ ಕ್ಷೇತ್ರದ ಮಹಾಸಾಧನೆಗಾಗಿ ಭಾರತ ಸರ್ಕಾರವು ಅವರಿಗೆ 'ಪದ್ಮಶ್ರೀ' ಪ್ರಶಸ್ತಿಯನ್ನು ಪ್ರದಾನಮಾಡಿದೆ. ಕುವೆಂಪು ವಿಶ್ವವಿದ್ಯಾಲಯವು ಡಿ.ಲಿಟ್. ಪದವಿಯನ್ನು ಕೊಟ್ಟು ಗೌರವಿಸಿದೆ. ಲಂಡನ್ ಕೇಂದ್ರದ ಭಾರತೀಯ ವಿದ್ಯಾಭವನದ ರೂವಾರಿ ಎಂದೇ ಮತ್ತೂರ್‌ಜಿ ಖ್ಯಾತರು. ಅಲ್ಲಿಂದ ಭಾರತಕ್ಕೆ ಮರಳಿದ ಮೇಲೂ ಅವರು ಎಡೆಬಿಡದೆ ದುಡಿದು ಬೆಂಗಳೂರು ಕೇಂದ್ರಕ್ಕೆ ಕಾಯಕಲ್ಪ ನೀಡಿದ್ದಾರೆ. ಕರ್ನಾಟಕದ ಪ್ರತಿಜಿಲ್ಲೆಯಲ್ಲೂ ಭಾರತೀಯ ವಿದ್ಯಾಭವನದ ಶಾಖೆಯನ್ನು ತೆರೆಯಬೇಕೆಂಬ ಕನಸು ಹೊತ್ತು ಮೈಸೂರು, ಶಿವಮೊಗ್ಗ ಮೊದಲಾದ ಕೇಂದ್ರಗಳನ್ನು ಸಾಕಾರಗೊಳಿಸಿದ್ದಾರೆ. ನಿಜವಾಗಿ ಕರ್ನಾಟಕದಲ್ಲಿ ಭಾರತೀಯ ವಿದ್ಯಾಭವನಕ್ಕೆ ಸಂಚಲನವನ್ನುಂಟು ಮಾಡಿದ ಧೀರ ಅವರು. ಪತ್ರಕರ್ತ, ವ್ಯಾಖ್ಯಾನಕಾರ, ಉಪನ್ಯಾಸಕಾರರಾದ ಮತ್ತೂರ್‌ಜಿ ಸಂಯುಕ್ತ ಕರ್ನಾಟಕ, ಆಕಾಶವಾಣಿಯಲ್ಲಿ ಸೇವೆ ಸಲ್ಲಿಸಿದ್ದಾರೆ. 'ವ್ಯಾಖ್ಯಾನಭಾಸ್ಕರ' ಎಂಬ ಪ್ರಶಸ್ತಿಗೆ ಪಾತ್ರರಾಗಿದ್ದಾರೆ. ಸದ್ಯ ಭಾರತೀಯ ವಿದ್ಯಾಭವನದ ಬೆಂಗಳೂರು ಕೇಂದ್ರದ ಕಾರ್ಯನಿರ್ವಾಹಕ ನಿರ್ದೇಶಕರಾಗಿರುವ ಮತ್ತೂರ್‌ಜಿ ವೇದ, ಸಂಸ್ಕೃತವನ್ನು ಅಧ್ಯಯನ ಮಾಡಿ ಪೌರೋಹಿತ್ಯ ನಡೆಸಿದ್ದಾರೆ, ರಂಗಕಲಾವಿದರಾಗಿ ಮಿಂಚಿದ್ದಾರೆ, ಕನ್ನಡ-ತಮಿಳು-ಹಿಂದಿ-ಇಂಗ್ಲಿಷ್ ಭಾಷಣಗಳ ದಿಢೀರ್ ಅನುವಾದಕಾರರಾಗಿ ಖ್ಯಾತರಾಗಿದ್ದಾರೆ, ಅವೇ ಭಾಷೆಗಳ ಕೃತಿಗಳನ್ನು ಪರಸ್ಪರ ಅನುವಾದ ಮಾಡಿ ಸಾಹಿತ್ಯಸೇವೆ ಸಲ್ಲಿಸಿದ್ದಾರೆ. ಗಾಂಧಿ ಶತಮಾನೋತ್ಸವ ವರ್ಷ ಅವರು ಶ್ರೀ ಚಿದಂಬರ ಜೋಯಿಸರೊಡಗೂಡಿ ಕರ್ನಾಟಕದಾದ್ಯಂತ ಮಾಡಿದ ಕಾವ್ಯವಾಚನ-ವ್ಯಾಖ್ಯಾನ ಕಾರ್ಯಕ್ರಮಗಳು ಐತಿಹಾಸಿಕ ಪ್ರಾಮುಖ್ಯದವು. ಭಾರತೀಯ ವಿದ್ಯಾಭವನದ ಗಾಂಧಿ ಸಾಹಿತ್ಯಮಾಲೆ, ಇತಿಹಾಸ ಸಂಪುಟ ಮಾಲೆ ಮೊದಲಾದವು ಅವರ ಕಾಣ್ಕೆಯ ಫಲಗಳು. ಇಡೀ ಕುಮಾರವ್ಯಾಸಭಾರತದ ಆಡಿಯೊ ವೀಡಿಯೊ ಕ್ಯಾಸೆಟ್ ಯೋಜನೆ ಅಂಥ ಇನ್ನೊಂದು ಸಾಹಸ. ಉದಯ ಟಿವಿಯ ಜನಪ್ರಿಯ ಪ್ರಸಾರಕರು. ಬಿಬಿಸಿ ಪ್ರಸಾರದ ಹೆಮ್ಮೆಯ ಸಾಧನೆ ಬೇರೆ. ಕನ್ನಡ ಮತ್ತು ಇಂಗ್ಲಿಷ್ ಭಾಷೆಯಲ್ಲಿ ೩೨ ಕೃತಿಗಳನ್ನು ತಂದಿದ್ದಾರೆ. ಜಗತ್ತಿನ ಹಲವು ಪ್ರತಿಷ್ಠಿತ ಸಂಸ್ಥೆಗಳ ಸದಸ್ಯತ್ವಕ್ಕೂ, ಪ್ರಶಸ್ತಿಗಳಿಗೂ ಭಾಜನರು. ಚಿಂತಕ, ಹಸನ್ಮುಖಿ, ಜನಗಳ ಪ್ರೀತಿಯ 'ಮತ್ತೂರ್‌ಜಿ'. ಅವರ ಪೂರ್ವಿಕರು ಹಾಸನ ಜಿಲ್ಲೆಯ ಮುದ್ದಾಪುರದವರು, ತಮ್ಮ ವಿದ್ವತ್ತಿಗಾಗಿ ವಿಜಯನಗರದ ಅರಸರಿಂದ ಮಾನ್ಯರಾದವರು.

ಶ್ರೀಮತಿ ಎಂ.ಆರ್. ಪ್ರಭಾವತಿ – ಶ್ರೀ ಎಂ.ಕೆ. ಚೆನ್ನಕೇಶವ

ಹಾಸನಜಿಲ್ಲೆಯಲ್ಲಿ ಹಾಸನ ನಗರದ ಪಕ್ಕದಲ್ಲೇ ಇರುವ ಪುಟ್ಟಹಳ್ಳಿ ಮುದ್ದಾಪುರ. ಹಾಸನದ ಬಸ್ ನಿಲ್ದಾಣದಿಂದ ಅದಿರುವುದು ೧೧ ಕಿ.ಮೀ. ಉತ್ತರಕ್ಕೆ. ಅಲ್ಲಿನ ನಿತುಂದಿಲರ ಇತಿಹಾಸ ಉಜ್ವಲವಾದುದು. ಮೂವರು ಅಣ್ಣತಮ್ಮಂದಿರಿದ್ದ ಒಂದು ಕುಟುಂಬ ಅಲ್ಲಿತ್ತು. ಮೂವರೂ ವೇದಶಾಸ್ತ್ರಗಳಲ್ಲಿ ಪ್ರಕಾಂಡ ಪಂಡಿತರು, ಜ್ಯೋತಿಷದಲ್ಲಿ ನಿಪುಣರು. ಹಿರಿಯ ಅಣ್ಣನು ವಿಜಯನಗರದ ಅರಸರಿಂದ ಮರ್ಯಾದಿತರಾಗಿ ಜೋಡಿಗ್ರಾಮವನ್ನು ಪಡೆದರು. ಹಾಗೆ ಅವರಿಗೆ ಮೊದಲು ದೊರೆತದ್ದು 'ಮುದ್ದಾಪುರ' ಎನಿಸಿತು. ಅವರ ತಮ್ಮಂದಿರೂ ಅದೇ ಅರಸರಿಂದ ಮರ್ಯಾದಿತರಾಗಿ ಕೃಷ್ಣಾಪುರ ಮತ್ತು ಪೂಮಗಾಮೆ ಗ್ರಾಮಗಳನ್ನು 'ಜೋಡಿ'ಯಾಗಿ ಪಡೆದರು. ಹಿರಿಯವರು ಮತ್ತೆ ಮರ್ಯಾದಿತರಾಗಿ ಹಂದನಹಾಳು ಗ್ರಾಮವನ್ನು 'ಜೋಡಿ'ಯಾಗಿ ಪಡೆದರು. ಈ ಹಿರಿಯರ ವಂಶದಲ್ಲಿ ಬಂದವರು ಪೂಜ್ಯರಾದ ಮತ್ತೂರು ಕೃಷ್ಣಮೂರ್ತಿಯವರು. ಅವರ ಸೋದರ ಕುಟುಂಬದಲ್ಲಿ ಬಂದವರು ಜೋಡಿದಾರ್ ಸೀತಾರಾಮಯ್ಯನವರು. ಅವರಾದರೂ ಬಹು ಅನುಷ್ಠಾನಪರರಾಗಿದ್ದವರು, ದೇವೀ ಉಪಾಸಕರು. ಅವರ ಹಿರಿಯ ಪುತ್ರ ಶ್ರೀ ಕೇಶವಮೂರ್ತಿ (ಅಯ್ಯ); ಕೇಶವಮೂರ್ತಿಯವರ ಪುತ್ರ ಶ್ರೀ ಎಂ.ಕೆ. ಚೆನ್ನಕೇಶವ. ಶಿವಮೊಗ್ಗ ಹೊಸಹಳ್ಳಿಯ ಶ್ರೀಮತಿ ಸಾವಿತ್ರಮ್ಮನವರು ಶ್ರೀ ಎಂ.ಕೆ. ಚೆನ್ನಕೇಶವ ಅವರ ತಾಯಿ. ಮನೆಗೆ ಹಿರಿಯರಿಂದ ಬಂದ ನೂರಾರು ಎಕರೆ ಜಮೀನನ್ನೂ ನೂರಾರು ರಾಸುಗಳನ್ನೂ ಲಾಲಸೆಯಿಂದ ಕಾಪಾಡಿಕೊಂಡು ಬಂದ ಮನೆ. ಕೃಷಿ ಮತ್ತು ಪಶುಪಾಲನೆಯ ಮೇಲಿನ ಮಮತೆ ಎಷ್ಟು ಅತಿಶಯವಾಗಿತ್ತೆಂದರೆ ಚೆನ್ನಕೇಶವ ಅವರು ಪಿ.ಯು.ಸಿ. ಮುಗಿಸಿದ ಮೇಲೆ ಮತ್ತೆ ಹೆಚ್ಚಿನ ಶಿಕ್ಷಣದ ಬಗೆಗೆ ಯೋಚಿಸಲಿಲ್ಲ. ತಂದೆಯವರ ಕಾಲದವರೆಗೆ ಬಂದ ಸಾಂಪ್ರದಾಯಿಕ ಬೆಳೆಗಳ ಜತೆಗೆ ಹೊಸ ಆರ್ಥಿಕ ಬೆಳೆಗಳನ್ನು ಬೆಳೆದರು, ಪ್ರಯೋಗಶೀಲರಾದರು, ಪ್ರಗತಿಶೀಲ ರೈತ ಎನಿಸಿದರು. ಅವರ ಪತ್ನಿ ಶ್ರೀಮತಿ ಎಂ.ಆರ್. ಪ್ರಭಾವತಿ ಅವರು ಮೊಸಳೆ ಎಂಬ ಗ್ರಾಮದ ಶ್ರೀ ರಾಮಸ್ವಾಮಯ್ಯ (+ ಶ್ರೀಮತಿ ನಾಗಲಕ್ಷ್ಮಮ್ಮ) ಅವರ ಮಗಳು. ರಾಮಸ್ವಾಮಯ್ಯನವರು ಶಾಲಾ ಅಧ್ಯಾಪಕರಾಗಿ ಅರಸೀಕೆರೆ, ಜಾವಗಲ್ ಮೊದಲಾದ ಕಡೆ ಸೇವೆ ಸಲ್ಲಿಸಿದರು. ೧೯೮೫ರಲ್ಲಿ ಶ್ರೀಮತಿ ಪ್ರಭಾವತಿ ಶ್ರೀ ಎಂ.ಕೆ. ಚೆನ್ನಕೇಶವ ಅವರನ್ನು ವರಿಸಿದರು. ಮಕ್ಕಳು: ಶ್ರೀ ಎಂ.ಸಿ. ಕೇಶವನಾರಾಯಣ, ಎಂ.ಸಿ.ಎ.,

(೨೬), ಬೆಂಗಳೂರಿನ ಥೀರಮ್ಸ್ ಬಹುರಾಷ್ಟ್ರೀಯ ಕಂಪನಿಯಲ್ಲಿ ಸಾಫ್ಟ್‌ವೇರ್ ಇಂಜಿನಿಯರ್, ಸದ್ಯ ಆಸ್ಟ್ರೇಲಿಯಾಕ್ಕೆ ವೃತ್ತಿಯಾನದಲ್ಲಿದ್ದಾರೆ; ಚಿ|| ಎಂ.ಸಿ. ಪೂರ್ಣಿಮಾ (೨೦) ಬಿ.ಕಾಂ. ವಿದ್ಯಾರ್ಥಿನಿ.

ಶ್ರೀಮತಿ ನಾಗರತ್ನಮ್ಮ – ಶ್ರೀ ಎಚ್.ಎಸ್. ರಾಮಕೃಷ್ಣಯ್ಯ

ಹಾಸನ ಜಿಲ್ಲೆಯ ಅರಕಲಗೂಡು ತಾಲ್ಲೂಕಿನ ಪುಟ್ಟ ಗ್ರಾಮ ಹಾನಗಲ್. ಅಲ್ಲಿರುವವರೆಲ್ಲ ಭಾರದ್ವಾಜ ಗೋತ್ರದವರು. ಎಲ್ಲರೂ ಅಣ್ಣತಮ್ಮಂದಿರು, ಅವರ ಮಕ್ಕಳು, ಮರಿಮಕ್ಕಳು. ಎಲ್ಲರೂ ಕೃಷಿಕರು. ಅವರ ನಡುವೆ ಶ್ರೀ ಸೂರ್ಯನಾರಾಯಣಪ್ಪ (+ನಾಗಲಕ್ಷ್ಮಮ್ಮ, ಪಿರಿಯಾಪಟ್ಟಣ) ಅವರದೂ ಒಂದು ಗಣ್ಯ ಕುಟುಂಬ. ಅವರ ಏಳು ಗಂಡುಮಕ್ಕಳಲ್ಲಿ ನಾಲ್ವರು ವ್ಯವಸಾಯವನ್ನು ಮುಂದುವರಿಸಿದರು; ಮೂವರು ಆಧುನಿಕ ಶಿಕ್ಷಣದಲ್ಲಿ ಮೇಲೇರಿ ನಗರಗಳನ್ನು ಸೇರಿ ವಿವಿಧ ವೃತ್ತಿಗಳನ್ನು ಹಿಡಿದರು, ಒಬ್ಬರು ಸ್ವಂತ ಉದ್ಯಮದಲ್ಲಿ ಮೇಲೆ ಬಂದರು.

ಶ್ರೀ ಸೂರ್ಯನಾರಾಯಣಪ್ಪನವರ ಎರಡನೆಯ ಮಗ ಶ್ರೀ ರಾಮಕೃಷ್ಣಯ್ಯನವರು ಕೃಷಿಯ ಜತೆಗೆ ಅಡಿಕೆತುಡಿಕೆಯನ್ನೂ ನಡೆಸುತ್ತ ಬಂದಿದ್ದಾರೆ. ಅಡಿಕೆ ವಹಿವಾಟಿನಲ್ಲಿ ಸಂಕೇತಿ ಸಮುದಾಯದಲ್ಲಿ ಅವರದು ಮುಖ್ಯ ಹೆಸರು. ಅವರ ಪತ್ನಿ ಶ್ರೀಮತಿ ನಾಗರತ್ನಮ್ಮನವರು ಮೈಸೂರು ಜಿಲ್ಲೆಯ ಚಿಲ್ಕುಂದ ಗ್ರಾಮದ ಶ್ರೀ ನಾಗಪ್ಪಯ್ಯ-ಶ್ರೀಮತಿ ಗೌರಮ್ಮ ದಂಪತಿಯ ಮಗಳು. ಅವರದೂ ಕೃಷಿಯ ಹಿನ್ನೆಲೆಯೇ.

ಶ್ರೀ ರಾಮಕೃಷ್ಣಯ್ಯನವರ ಮೊದಲ ಮಗ ಶ್ರೀ ನಾಗರಾಜ (೩೯). ಅವರು ಫಾರ್ಮಸಿ ವಿದ್ಯೆ ಕಲಿತು ಮೈಸೂರು ಜಿಲ್ಲೆಯ ಬೆಟ್ಟದಪುರ ಗ್ರಾಮದಲ್ಲಿ 'ವಿನಾಯಕ ಮೆಡಿಕಲ್ಸ್' ಎಂಬ ಹೆಸರಿನಲ್ಲಿ ಔಷಧಿಗಳ ವಹಿವಾಟು ನಡೆಸುತ್ತಿದ್ದಾರೆ. ಅವರ ಪತ್ನಿ ಶ್ರೀಮತಿ ನಂದಿನಿ ಹಾಸನಜಿಲ್ಲೆಯ ಮೊಸಳೆ ಗ್ರಾಮದ ಶ್ರೀ ರಾಮಚಂದ್ರರಾವ್ ಅವರ ಮಗಳು. ಎರಡನೆಯ ಮಗ ಶ್ರೀ ರವಿಕುಮಾರ್ ಅವರು ಬಿ.ಇ. ಪದವಿ ಪಡೆದು ಬೆಂಗಳೂರಿನಲ್ಲಿ EBASC, Marketing.ನಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ; ಅವರ ಪತ್ನಿ ಶ್ರೀಮತಿ ಸೌಮ್ಯ ಚಿಕ್ಕಮಗಳೂರು ಜಿಲ್ಲೆಯ ಲಿಂಗದಹಳ್ಳಿಯವರು. ಮಗಳು ಶ್ರೀಮತಿ ಭಾಗ್ಯಜ್ಯೋತಿ. ಬಿ.ಎ., ಪದವೀಧರೆಯಾದ ಆಕೆ ವಿವಾಹವಾದದ್ದು ಹಾಸನ ಜಿಲ್ಲೆ ಅಗ್ರಹಾರ ಗ್ರಾಮದ ಶ್ರೀ ಕಿರಣ್ ಅವರನ್ನು. ಕಿರಣ್ ಸಾಫ್ಟ್‌ವೇರ್ ಇಂಜಿನಿಯರಾಗಿ ಸೇವೆ ಸಲ್ಲಿಸುತ್ತಿದ್ದಾರೆ.

ಭಾರದ್ವಾಜ ಗೋತ್ರ, ಯಜುರ್ವೇದ, ಆಪಸ್ತಂಬ ಸೂತ್ರ ಪರಂಪರೆಯ ರಾಮಕೃಷ್ಣಯ್ಯ ಅವರ ಮನೆಯವರಿಗೆ ಮನೆದೇವರು ಹಾಸನಜಿಲ್ಲೆ ರಾಮನಾಥಪುರದ ಶ್ರೀ ಸುಬ್ರಹ್ಮಣ್ಯೇಶ್ವರ.

ಶ್ರೀ ನಾಗರಾಜ್ (+ನಂದಿನಿ) ಅವರಿಗೆ ಇಬ್ಬರು ಪುಟ್ಟ ಮಕ್ಕಳು: ಚಿ|| ಶರಣ್ ಭಾರದ್ವಾಜ್ (೮ನೆಯ ತರಗತಿ), ಚಿ|| ತರುಣ್ ಭಾರದ್ವಾಜ್ (ಯು.ಕೆ.ಜಿ.).

ಶ್ರೀಮತಿ ಎಚ್.ಕೆ. ಜಯಲಕ್ಷ್ಮಮ್ಮ – ಶ್ರೀ ಎಂ.ಎಸ್. ಕೇಶವಮೂರ್ತಿ

ಮೈಸೂರಿನ ಅರಸರಾದ ಮುಮ್ಮಡಿ ಕೃಷ್ಣರಾಜ ಒಡೆಯರ ಕಾಲ. ಅವರ ಆಸ್ಥಾನದಲ್ಲಿ ಸಂಕೇತಿ ದಿವಾನರೊಬ್ಬರಿದ್ದರು. ಅವರ ಹೆಸರು ಭಕ್ಷಿ ತಿಪ್ಪಯ್ಯ. ತಿಪ್ಪಯ್ಯನವರು ಹಾಸನ ಜಿಲ್ಲೆಯಲ್ಲಿ ಒಂದು ಸಂಕೇತಿ ಅಗ್ರಹಾರವನ್ನು ರೂಪಿಸಿದರು; ಅದು ಕಾವೇರಿ ನದಿಯ ತೀರದಲ್ಲಿದೆ; ಕಾವೇರಿಗೆ ಒಂದು ಅಣೆಕಟ್ಟೆಯನ್ನೂ ಕಟ್ಟಿಸಿದರು; ಅದು ಈಗ 'ಕಟ್ಟೇಪುರ' ಎಂಬ ಹೆಸರಿನಿಂದಲೇ ಪ್ರಸಿದ್ಧವಾಗಿ ಉಳಿದಿದೆ. ಆ ಅಗ್ರಹಾರಕ್ಕೆ ತಿಪ್ಪಯ್ಯನವರು ಯಾರನ್ನೆಲ್ಲ ಆಹ್ವಾನಿಸಿ ನೆಲೆಗೊಳಿಸಿದರೋ ಅವರೆಲ್ಲರೂ ಮಹಾ ವೈದಿಕರು, ವಿದ್ವಾಂಸರು, ಅನುಷ್ಠಾನಪರರು. ಹಾಸನ ಜಿಲ್ಲೆಯ ಪೂಮಗಾಮೆ ಎಂಬ ಗ್ರಾಮದಲ್ಲಿಯೂ ಯಜ್ಞಯಾಗಗಳನ್ನು ನೆರವೇರಿಸಿದ ಒಂದು ಪರಮವೈದಿಕ ಕುಟುಂಬವಿತ್ತು. 'ದೀಕ್ಷಿತರ ವಠಾರದವರು' ಎಂದೇ ಅವರು ಖ್ಯಾತರಾಗಿದ್ದರು. ತಿಪ್ಪಯ್ಯನವರು ಅವರನ್ನೂ ಕಟ್ಟೇಪುರಕ್ಕೆ ಆಹ್ವಾನಿಸಿ ನೆಲೆಗೊಳಿಸಿದರು. ತಿಪ್ಪಯ್ಯನವರು ಕಟ್ಟೇಪುರದಲ್ಲಿ ಕಟ್ಟಿಸಿದ್ದ

ದೇವಸ್ಥಾನದಲ್ಲಿ ಪೂಜೆಗೆ ನಿಂತವರು ಈ 'ದೀಕ್ಷಿತರ ವಠಾರ'ದವರೇ. ಈ ಮನೆತನದಲ್ಲಿ ಕಾಲಕ್ರಮದಲ್ಲಿ ವೇ||ಬ್ರ||ಶ್ರೀ ಸುಬ್ರಹ್ಮಣ್ಯಾವಧಾನಿ, ಅವರ ಮಗ ವೇ||ಬ್ರ|| ಶ್ರೀ ರಾಮಸ್ವಾಮಿಶಾಸ್ತ್ರಿ (+ ಚನ್ನಮ್ಮ) ಖ್ಯಾತರಾದರು. ರಾಮಸ್ವಾಮಿಶಾಸ್ತ್ರಿಗಳ ಮಗ ವೇ||ಬ್ರ|| ಶ್ರೀ ಸುಬ್ರಹ್ಮಣ್ಯಾವಧಾನಿಗಳ (+ ಗಂಗಮ್ಮ) ಕಾಲದಲ್ಲಿ ಆ ಮನೆತನದವರು ಪಕ್ಕದ ಮಾದಾಪುರ ಗ್ರಾಮಕ್ಕೆ ಬಂದು ನೆಲೆಸಿದರು. ಅವರ ಮಗ ಶ್ರೀ ಸುಬ್ಬರಾಯರು (+ ನಾಗಲಕ್ಷ್ಮಿ). ಶ್ರೀ ಸುಬ್ಬರಾಯರಿಗೆ ಏಳು ಮಕ್ಕಳು. ಅವರಲ್ಲಿ ವೇದಾಧ್ಯಯನ ಮಾಡಿದವರು, ಕೇವಲ ವ್ಯವಸಾಯದಲ್ಲಿ ನಿಂತವರು ಇರುವಂತೆಯೇ ಇಂಜಿನಿಯರಾದವರು, ಪಿಎಚ್.ಡಿ. ಪದವಿ ಪಡೆದವರು, ಹೊರ ಊರಿಗೂ ನಾಡಿಗೂ ಉದ್ಯೋಗದ ಮೇಲೆ ಹೋದವರೂ ಇದ್ದಾರೆ. ಹೀಗೆ ವ್ಯವಸಾಯವನ್ನೇ ನಂಬಿ ತಮ್ಮ ಗ್ರಾಮದಲ್ಲೇ ಉಳಿದವರ ಪೈಕಿ ಶ್ರೀ ಎಂ.ಎಸ್. ಕೇಶವಮೂರ್ತಿ ಅವರೂ ಒಬ್ಬರು.

ಶ್ರೀ ಎಂ.ಎಸ್. ಕೇಶವಮೂರ್ತಿಯವರದು ಸಾಹಸಪ್ರವೃತ್ತಿ, ಧಾರ್ಮಿಕ ಮನೋಭಾವ. ಮಾದಾಪುರ ಮತ್ತು ರಾಮನಾಥಪುರದ ದಾರಿಯಲ್ಲಿ ಒಂದು ಕೆರೆ ಇತ್ತು; ಅದಕ್ಕೆ 'ಕೀರನ ಕಟ್ಟೆ' ಎಂದು ಹೆಸರು. ಹಿಂದೆ ಅದರ ಸಮೀಪದಲ್ಲಿ ಒಂದು ಊರಿತ್ತು. ಅದರ ಹೆಸರು 'ನವಿಲೆ'. ನವಿಲೆಯು ಹಿಂದೆ ದೊಡ್ಡ ಹಳ್ಳಿಯಾಗೇ ಇತ್ತು. ರಾಮನಾಥಪುರದ ಶ್ರೀಸುಬ್ರಹ್ಮಣ್ಯೇಶ್ವರ ದೇವರಿಗೆ ಆ ಗ್ರಾಮವನ್ನು ಪಾಳೆಯಗಾರರು ದತ್ತಿಯಾಗಿ ಕೊಟ್ಟಿದ್ದರು. ಆದರೆ ಕಾಲಕ್ರಮದಲ್ಲಿ ಪ್ಲೇಗು ಮೊದಲಾದ ಕಾರಣದಿಂದ ಊರು ನಾಶವಾಗಿಹೋಯಿತು. ಅಲ್ಲೆಲ್ಲ ನೊಜೆಹಡ್ಲು ಬೆಳೆದಿತ್ತು. ಕೇಶವಮೂರ್ತಿಯವರಿಗೆ, ಅದರ ಹತ್ತಿರ ಒಂದು ತೋಟವನ್ನೇಕೆ ಬೆಳೆಸಬಾರದು ಎನಿಸಿತು. ಜಮೀನು ಕೊಂಡರು, ತೋಟವನ್ನು ಎಬ್ಬಿಸಿದರು; ಆದರೆ ಎಟ್ಟೆ ಬಂದು ತೋಟವೆಲ್ಲ ನಿರ್ನಾಮವಾಗಿ ಹೋಯಿತು. ಅಲ್ಲಿ ಅವರು ತೆಗೆಸಿದ್ದ ಬಾವಿಯೂ ಒಣಗಿತು. ಆ ಕಗ್ಗಾಡಿನ ಮಧ್ಯೆ ಇದ್ದುದು ಕೇಶವಮೂರ್ತಿಯವರ ಒಂದೇ ಮನೆ. ಆದರೂ ಜಗ್ಗಲಿಲ್ಲ. ಹೊಲದ ಬೆಳೆಯನ್ನೇ ತೆಗೆದು ಹತ್ತು ವರ್ಷ ಏಗಿದರು. ಆ ಮೇಲೆ ಹಾರಂಗಿ ನಾಲೆ ಬಂತು. ಕೇಶವಮೂರ್ತಿಯವರು ಮತ್ತೆ ತೋಟ ಬೆಳೆಸಿದರು, ಅನೇಕ ಕುಟುಂಬಗಳಿಗೆ ಆಶ್ರಯವಿತ್ತರು; 'ನವಿಲೆ' ಮತ್ತೆ ಜೀವ ಪಡೆಯಿತು; ಮಾದಾಪುರದ ಎಂ.ಎಸ್. ಕೇಶವಮೂರ್ತಿಯವರು 'ನವಿಲೆ ಕೇಶವಮೂರ್ತಿ' ಎಂದೇ ಖ್ಯಾತರಾದರು. ಈಗ ಅವರು ರೂಢಿಸಿರುವ ೧೦ ಎಕರೆ ಅಡಿಕೆ ತೋಟ, ೧೦ ಎಕರೆ ಗದ್ದೆ, ೧೫ ಎಕರೆ ತೆಂಗಿನ ತೋಟ ನಂದನವನವಾಗಿ ಕಂಗೊಳಿಸುತ್ತಿದೆ.

ಸಂಕೇತಿಗಳ ಸೋಮನಹಳ್ಳಿ ಮತ್ತು ಬಸವಾಪಟ್ಟಣ ಎಂಬ ಗ್ರಾಮಗಳಲ್ಲಿ ಬಾಲ್ಯವಿದ್ಯಾಭ್ಯಾಸ ಮುಗಿಸಿದ ಕೇಶವಮೂರ್ತಿಯವರು ಶಿಕ್ಷಣವನ್ನು ಮುಂದುವರಿಸಲಿಲ್ಲ. ಆದರೆ ನೇಗಿಲಯೋಗಿಯಾಗಿ ಅವರು ಕೈಗೊಂಡ ಸಮಾಜಸೇವೆಯು ಆದರ್ಶಪ್ರಾಯವಾದುದು.

1. ನವಿಲೆಯ ಪಕ್ಕದಲ್ಲಿಯೇ ಒಂದು ದೇವರ ಗುಡಿ ಇತ್ತು. ಗುಡಿ ಎಂದರೆ ಚಪ್ಪಡಿ ಹೊದಿಸಿದ ಗೂಡು. ಗ್ರಾಮದೇವತೆ ಏಳೂರಮ್ಮನ ಗುಡಿ ಅದು. ಏಳು ಊರಿನ ಮಧ್ಯೆ ಅದು ಇತ್ತು. ಆ ಜಾಗದಲ್ಲಿ ಸೊಗಸಾದ ದೊಡ್ಡ ದೇವಾಲಯವನ್ನೇ ಕೇಶವಮೂರ್ತಿ ನಿರ್ಮಿಸಿದರು, ಹೊಸ ವಿಗ್ರಹವನ್ನು ವಿಧ್ಯುಕ್ತವಾಗಿ ಪ್ರತಿಷ್ಠಾಪನೆ ಮಾಡಿದರು. ಚಂಡೀಹೋಮ ಸಹಿತವಾಗಿ ಮೂರು ದಿನ ಕಲಾಪಗಳನ್ನು ನಡೆಸಿದರು. ತಾವೇ ನಿತ್ಯಪೂಜೆ ನೆರವೇರಿಸತೊಡಗಿದರು. ಕಾಯಕವೇ ಪೂಜೆ ಎಂದು ತಿಳಿದು ಕೃಷಿಕನಾಗಿ ನಿಂತ ಅವರು ಮನಃಶಾಂತಿಗಾಗಿ ಏಳೂರಿನವರಿಗೂ ಒಂದು ನೆಲೆಯನ್ನು ಕಲ್ಪಿಸಿದರು. ಆ ಪುಟ್ಟ ಊರಿನ ಹೆಂಗೆಳೆಯರು ಸೇರಿ ಅಲ್ಲಿ ಸಹಸ್ರನಾಮಾರ್ಚನೆ ಮಾಡುತ್ತಾರೆ. ನವರಾತ್ರಿಯಲ್ಲಿ ವಿಶೇಷ ಪೂಜೆ; ದುರ್ಗಾಷ್ಟಮಿಯ ದಿನ ಲಲಿತಾಹೋಮ, ಸಂತರ್ಪಣೆ, ಎಲ್ಲವೂ ಕೇಶವಮೂರ್ತಿಯವರ ಸೇವೆ.

2. ರಾಮನಾಥಪುರದಲ್ಲಿ ಕಟ್ಟಿರುವ ಸಮುದಾಯಭವನ ಪ್ರಾರಂಭಮಾಡಿರುವವರಲ್ಲಿ ಅವರೂ ಒಬ್ಬರು. ಕಳೆದ ೨೦ ವರ್ಷಗಳಿಂದ ಉಪಾಧ್ಯಕ್ಷರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಕಟ್ಟಡ ಏಳುವ ಮೊದಲು ಚಪ್ಪರ ನಿರ್ಮಿಸಿ ಭಕ್ತಾದಿಗಳ ಸೇವೆಗೆ ಟೊಂಕಕಟ್ಟಿ ನಿಲ್ಲುತ್ತಿದ್ದವರು ಅವರು.

3. 'ಧರ್ಮೋಪನಯನ' ಎಂಬುದು ಆಧುನಿಕ ಪರಿಸರದ ಒಂದು ಒಳ್ಳೆಯ ಆದರ್ಶ. ರಾಮನಾಥಪುರದಲ್ಲಿ ಅನೇಕ ವರ್ಷಗಳಿಂದ 'ಧರ್ಮೋಪನಯನ' ನಡೆಸಿ ಅನೇಕ ಬಡ ವಟುಗಳ ಪಾಲಿಗೆ ಕಾಮಧೇನು ಆಗಿದ್ದಾರೆ.

4. ಹುಚ್ಚುನಾಯಿ ಕಡಿತಕ್ಕೆ ಅವರು ಕೊಡುವ ಔಷಧಿ ಬಹಳ ಸರಳವಾದದ್ದು. 'ಹಸಿರು' ತಗೊಳ್ಳುವುದು ಒಮ್ಮೆ; 'ಪಥ್ಯ' ಇರಬೇಕಾದುದು ನಾಲ್ಕು ದಿನ. ಕಳೆದ ೧೫ ವರ್ಷಗಳಿಂದ ಅವರ ಈ ಸೇವೆ ನಡೆಯುತ್ತಿದೆ. ಸರಗೂರಿನ ವೇ||ಬ್ರ|| ಶ್ರೀ ಅಪ್ಪಣ್ಣಶಾಸ್ತ್ರಿಗಳಿಂದ ಉಪದೇಶಪಡೆದು ಅವರು ಈ ಕೈಂಕರ್ಯವನ್ನು ಮುಂದುವರಿಸಿದ್ದಾರೆ.

5. ರಾಮನಾಥಪುರದ ಶ್ರೀ ರಾಮೇಶ್ವರ ದೇವಸ್ಥಾನದಲ್ಲಿ ಹದಿನೈದು ವರ್ಷ ಪಾರುಪತ್ಯಗಾರರಾಗಿ ಸೇವೆ ಸಲ್ಲಿಸಿದ್ದಾರೆ.

6. ಹಿರಿಯ ತಲೆಮಾರಿನ ವಿದ್ವಾಂಸರು ರಚಿಸಿದ್ದು 'ಶ್ರೀ ರಾಮನಾಥಪುರದ ಕ್ಷೇತ್ರಮಹಿಮೆ' ಎಂಬ ಕಿರುಹೊತ್ತಗೆ. ಅದು ಬಹಳ ವರ್ಷಗಳಿಂದ ಲಭ್ಯವಿರಲಿಲ್ಲ. ಅಳಿದುಳಿದ ಪ್ರತಿಗಳೂ ಶಿಥಿಲವಾಗಿದ್ದವು. ಅದರ ಎರಡು ಸಾವಿರ ಪ್ರತಿಗಳನ್ನು ಮುದ್ರಿಸಿ ಆಸಕ್ತರಿಗೆ ಉಚಿತವಾಗಿ ಹಂಚಿ ದಾನಚಿಂತಾಮಣಿ ಅತ್ತಿಮಬ್ಬೆಯ ಉತ್ತಮಪಂಕ್ತಿಯಲ್ಲಿ ಜಾಗ ಪಡೆದಿದ್ದಾರೆ ನವಿಲೆ ಕೇಶವಮೂರ್ತಿ.

ಈ ಪಟ್ಟಿ ಹೀಗೆಯೇ ಮುಂದುವರಿಯುತ್ತದೆ. ಮುಖ್ಯವಾಗಿ ಗಮನಿಸಬೇಕಾದುದು ಕೇಶವಮೂರ್ತಿಯವರ ಸಾಹಸ, ಧಾರ್ಮಿಕ ಪ್ರವೃತ್ತಿ ಮತ್ತು ಸಮಾಜಸೇವಾಸಕ್ತಿಯನ್ನು. ಅವರ ತಂದೆಯವರು ವೈದಿಕರು, ಪುರೋಹಿತರು, ಕೃಷಿಕ; ನಾಟಿ ಔಷಧಿಯನ್ನು ಮಾಡುತ್ತಿದ್ದರು. ಅವರ ತಾಯಿಯವರು ಹಾಡುಹಸೆಯಲ್ಲಿ ಪ್ರವೀಣೆಯಾಗಿದ್ದರು. ರಾಮನಾಥಪುರದ ಶ್ರೀ ಸುಬ್ರಹ್ಮಣ್ಯೇಶ್ವರನೇ ಅವರ ಮನೆದೇವರು. ನವಿಲೆಕೇಶವಮೂರ್ತಿಯವರ ಧರ್ಮಪತ್ನಿ ಶ್ರೀಮತಿ ಜಯಲಕ್ಷ್ಮಿಯವರು. ಮೈಸೂರು ಜಿಲ್ಲೆಯ ಸಾಲಿಗ್ರಾಮ ಮತ್ತು ಹಾಸನಜಿಲ್ಲೆಯ ರಾಮನಾಥಪುರದಲ್ಲಿ ಈಶ್ವರ ದೇವಸ್ಥಾನದಲ್ಲಿ ಪೂಜೆ ನೆರವೇರಿಸುತ್ತಿದ್ದ ವೇ|| ಬ್ರ|| ಶ್ರೀ ಕೇಶವಶಾಸ್ತ್ರಿಯವರು (+ ಶ್ರೀಮತಿ ನಾಗಲಕ್ಷ್ಮಿ) ಜಯಲಕ್ಷ್ಮಿಯವರ ತಂದೆ; ಸಂಸ್ಕೃತ ವಿದ್ವಾಂಸರು. ಶ್ರೀಮತಿ ಜಯಲಕ್ಷ್ಮಿಯವರು ಕ್ರಿ.ಶ. ೨೦೦೨ರಲ್ಲಿ ತಮ್ಮ ಐವತ್ತನೆಯ ವಯಸ್ಸಿನಲ್ಲಿ ವಿಧಿವಶರಾದರು. ಇತ್ತೀಚೆಗೆ ಕಾಶೀಯಾತ್ರೆ ಮುಗಿಸಿಕೊಂಡು ಬಂದ ಶ್ರೀ ಕೇಶವಮೂರ್ತಿಯವರಿಗೆ ತಾವು ಜೀವನದಲ್ಲಿ ನೆರವೇರಿಸಬೇಕಾಗಿದ್ದ ಬಹುದೊಡ್ಡ ಕರ್ತವ್ಯವನ್ನು ನಿರ್ವಹಿಸಿದ ಸಮಾಧಾನ. ಅವರೀಗ ೭೬ ವರ್ಷದ ಯುವಕರು. ಅವರ ಮೂವರು ಮಕ್ಕಳೂ - ಶಂಕರ್ (+ ಶೈಲಜ), ದತ್ತಾತ್ರಿ, ಎಂ.ಎಸ್‌ಸಿ., (+ ಗೀತಾ), ಶಶಿಧರ (+ ಸಾವಿತ್ರಿ) - ನವಿಲೆಯಲ್ಲಿ ವ್ಯವಸಾಯದ ಬದುಕು ಸಾಗಿಸುತ್ತಿದ್ದಾರೆ. ದತ್ತಾತ್ರಿ ಅವರು ಕಾಲೇಜಿನಲ್ಲಿ ಉಪನ್ಯಾಸಕರೂ ಹೌದು. ಮಗಳು ನಾಗಜ್ಯೋತಿಯನ್ನು ವರಿಸಿರುವ ಕಟ್ಟೇಪುರ ನಾಗರಾಜ ಅವರೂ ಕೃಷಿಕ. ಇನ್ನೊಬ್ಬ ಮಗಳು ಮೀನಾಕ್ಷಿಯ ಪತಿ ಮನೋಹರ ಕೂಡ ಕಾಲೇಜಿನಲ್ಲಿ ಉಪನ್ಯಾಸಕ; ಆದರೆ ನೆಲೆಸಿರುವುದು ನವಿಲೆಯಲ್ಲಿ. ಇವೆಲ್ಲ ತೋರುವುದು ಕೇಶವಮೂರ್ತಿಯವರ ಹಳ್ಳಿಯ ಪ್ರೀತಿ ಮತ್ತು ಕೃಷಿಪ್ರೀತಿಯನ್ನು. ಹಳ್ಳಿಯ ಜೀವನ ಮತ್ತು ಕೃಷಿಯ ಕಾಯಕವು ಬೌದ್ಧಿಕ ಮತ್ತು ಭೌತಿಕ ಆರೋಗ್ಯಕ್ಕೆ ಬಹು ಉತ್ತಮ ಎಂದು ಅರ್ಥಮಾಡಿಕೊಂಡವರು ಹಲವರಿದ್ದಾರು. ಹೀಗೆ ಅದನ್ನೊಂದು ಅನುಷ್ಠಾನತತ್ತ್ವವಾಗಿ ಮಾಡಿಕೊಳ್ಳುವುದು ನವಿಲೆ ಕೇಶವಮೂರ್ತಿಯವರಂಥ ಕೆಲವರಿಗೆ ಮಾತ್ರ ಸಾಧ್ಯ.

ಶ್ರೀಮತಿ ಪ್ರೇಮಲತಾ – ಶ್ರೀ ಎಂ.ಆರ್. ರಾಮಶೇಷ

ಶ್ರೀ ಎಂ.ಆರ್. ರಾಮಶೇಷ (ಜ. ೧೯೫೦) ಅವರು ಹಾಸನಜಿಲ್ಲೆ, ಅರಕಲಗೂಡು ತಾಲ್ಲೂಕು, ಮಾದಾಪುರ ಗ್ರಾಮದ ಸಜ್ಜನ ವಹಿವಾಟುದಾರ. ಅವರು ಹುಟ್ಟಿದ್ದು ಮಾದಾಪುರದಲ್ಲಿ, ವಿದ್ಯಾಭ್ಯಾಸ ಮಾಡಿದ್ದು ಬಸವಾಪಟ್ಟಣ ಮತ್ತು ಕೊಣನೂರಿನಲ್ಲಿ. ಮನೆಯಲ್ಲಿ ಬಡತನ, ಕಷ್ಟಕಾರ್ಪಣ್ಯ; ಮನೆಯ ನಿರ್ವಹಣೆಯ ಹೊಣೆ; ವಿದ್ಯಾಭ್ಯಾಸವನ್ನು ಪಿ.ಯು.ಸಿ.ಗೇ ನಿಲ್ಲಿಸಿ ಊರಿಗೆ ಬಂದು ಕೃಷಿಕಾರ್ಯದಲ್ಲಿ ತೊಡಗಿಕೊಂಡರು, ತೋಟಗಾರಿಕೆ ಅವರ ಪ್ರೀತಿಯ ಕಸುಬಾಯಿತು.

ಕಟ್ಟೇಪುರ ಗ್ರಾಮವು ಭಕ್ಷಿ ತಿಪ್ಪಯ್ಯನವರಿಂದ ರೂಪಿತವಾದ ಅಗ್ರಹಾರ. ತಿಪ್ಪಯ್ಯನವರು ಸಂಕೇತಿ ಸಮುದಾಯದ ಅತಿಶ್ರೇಷ್ಠ ಶಾಸ್ತ್ರವೇತ್ತರನ್ನು ಅಲ್ಲಿಗೆ ಆಹ್ವಾನಿಸಿ ನೆಲೆಗೊಳಿಸಿದರು. ಇದು ನಡೆದದ್ದು ಸುಮಾರು ೨೦೦ ವರ್ಷಗಳ ಹಿಂದೆ. ಅದಾಗಿ ೧೦೦ ವರ್ಷವಾಗುವಾಗ, ಅಂದರೆ ೧೯ನೆಯ ಶತಮಾನದ ಕೊನೆಯಲ್ಲಿ ಪ್ಲೇಗುಮಾರಿಯಿಂದ ಪಾರಾಗಲು ಕೆಲವರು ಊರುಬಿಟ್ಟು ತೋಟದಲ್ಲಿ ಮನೆಮಾಡಿಕೊಂಡರು. ಅಲ್ಲಿಂದ ಕಟ್ಟೇಪುರಕ್ಕೆ ಮರಳಲಿಲ್ಲ. ಬದಲಿಗೆ ಪಕ್ಕದಲ್ಲಿಯೇ ಊರುಕಟ್ಟಿ ನೆಲೆಗೊಂಡರು. ಅದೇ ಮಾದಾಪುರ.

ಎಂ.ಆರ್. ರಾಮಶೇಷ ಅವರ ತಂದೆಯ ತಂದೆ ವೇ|| ಬ್ರ|| ಶ್ರೀ ಕಟ್ಟೇಪುರ ರಾಮಸ್ವಾಮಿಶಾಸ್ತ್ರಿಯವರು (+ಲಕ್ಷ್ಮೀದೇವಮ್ಮ). ಅವರ ಹೆಸರಿನ ಜತೆಗೆ 'ಕಟ್ಟೇಪುರ'ದ ಗುರುತು ಉಳಿದಿರುವುದನ್ನು ಗಮನಿಸಬಹುದು. ಅವರು ವೇದಶಾಸ್ತ್ರ ಪಾರಂಗತರು; ಜತೆಗೆ ಕೃಷಿಕರು. ಅವರ ಮಗ ಕೇಶವಯ್ಯನವರು [+ ನಾಚಾರಮ್ಮ (ಪುಟ್ಟಮ್ಮ)]. ನಾಚಾರಮ್ಮ ಎಂಬ ಹೆಸರು ಸಂಕೇತಿಗಳ ಅನೇಕ ವಂಶವೃಕ್ಷಗಳಲ್ಲಿ ಕಾಣುತ್ತದೆ; ಇದೂ ಒಂದು ನಿದರ್ಶನ. ಕೇಶವಯ್ಯನವರ ಮಗ ರಾಮಸ್ವಾಮಯ್ಯನವರು (ಚಿನ್ನಪ್ಪ) (+ಗಂಗಮ್ಮ). ವಂಶದಲ್ಲಿ ಕ್ರಮಕ್ರಮವಾಗಿ ಪಾಂಡಿತ್ಯ ಕಡಿಮೆಯಾಗುತ್ತ ಬಂದರೂ ನಿತ್ಯಾನುಷ್ಠಾನವು ಸಾಂಗವಾಗಿಯೇ ಇತ್ತು. ಸ್ತ್ರೀಯರು ಹಾಡುಹಸೆಯಲ್ಲಿ ಎಂದಿನಂತೆಯೇ ಮುಂದುವರಿದರು. ಈ ವಂಶದ ಆಧುನಿಕ ಕಾಲದ ಪ್ರತಿನಿಧಿ ಎಂ.ಆರ್. ರಾಮಶೇಷ ಅವರು.

ಶ್ರೀ ರಾಮಸ್ವಾಮಯ್ಯನವರಿಗೆ ಹತ್ತು ಮಕ್ಕಳು; ಐದು ಹೆಣ್ಣು, ಐದು ಗಂಡು; ರಾಮಶೇಷ ಏಳನೆಯವರು. ವ್ಯವಸಾಯ ಮಾಡುತ್ತ ಹಳ್ಳಿಯಲ್ಲಿ ಉಳಿದವರೇ ಹೆಚ್ಚು; ಕೆಲವರು ಉದ್ಯೋಗದ ಮೇಲೆ ಪಟ್ಟಣಕ್ಕೆ ಹೋದರು.

ರಾಮಶೇಷ ಅವರು ಅನ್ಯ ಊರುಗಳಲ್ಲಿದ್ದು ವಾರಾನ್ನ ಮಾಡಿಕೊಂಡು ಓದಿದವರು, ಕಷ್ಟ ಸುಖ ತಿಳಿದವರು. 'ಆಗ ಎಂಟು ಆಣೆಗೂ ಮುಕ್ಕುತ್ತಿತ್ತು' ಎನ್ನುತ್ತಾರೆ ಅವರು. ಪಿ.ಯು.ಸಿ. ಮುಗಿಸಿ ಊರಿಗೆ ಮರಳುವುದು ಅನಿವಾರ್ಯವಾಗಿತ್ತು. ಆಗ ಇದ್ದುದು ಒಟ್ಟು ಕುಟುಂಬ. ತೋಟದ ಅಡಿಕೆ ಬಟ್ಟೆಗೆ, ಗದ್ದೆಯ ಭತ್ತ ಊಟಕ್ಕೆ; ಅಷ್ಟೆ. ಜತೆಗೆ ೧೯೭೦ರಲ್ಲಿ ರಾಮಶೇಷ ಒಂದು ಸಣ್ಣ ಅಂಗಡಿ ಇಟ್ಟರು. ಒಡಹುಟ್ಟಿದವರ ಶಿಕ್ಷಣ, ವಿವಾಹ, ಮನೆ ನಿರ್ಮಾಣ; ಮನೆಯಲ್ಲಾದ ಸಾವು - ಎಲ್ಲವನ್ನೂ ನಿಭಾಯಿಸಿದರು. ಅದು ಅವರ ಛಾತಿಯ ಭಾಗವಾಗಿತ್ತು. ಸಾಲ ಮಾಡುವುದೂ ಅನಿವಾರ್ಯವೇ ಆಗಿತ್ತು. ಆದರೂ ಕುಟುಂಬವನ್ನು ಸ್ಥಿರಗೊಳಿಸಿದರು, ಮುನ್ನಡೆಸಿದರು. ೧೯೮೨ರ ಹೊತ್ತಿಗೆ ಕುಟುಂಬ ಒಂದು ಸ್ಥಿರತೆಗೆ ಬಂತು; ಸಾಲ ಮಾತ್ರ ವಿಪರೀತವಾಗಿತ್ತು. ಆ ಹಂತದಲ್ಲಿ ಮನೆ ಪಾಲಾಯಿತು; ರಾಮಶೇಷ ಅವರ ಪಾಲಿಗೆ ಬಂದವರು ಅವರ ಪೂಜ್ಯ ತಂದೆಯವರು, ಜತೆಗೆ ಸಾಲದ ಹೊರೆ; ಆಸ್ತಿನಾಸ್ತಿ. ಆದರೆ 'ತಂದೆಯವರ ಆಶೀರ್ವಾದದ ಫಲವಾಗಿಯೇ ಅಂಗಡಿ ಮುಂದಕ್ಕೆ ಬಂತು'; ಸಾಲ ತೀರಿಸಿದರು; ಗಾಡಿ, ಎತ್ತು ಕೊಂಡರು, ವ್ಯಾನ್ ಬಂತು. ಸ್ನೇಹಿತರ ಬೆಂಬಲವೂ ಅವರ ನೆರವಿಗೆ ಇತ್ತು. ಸಜ್ಜನಿಕೆ ಮತ್ತು ಪರಿಶ್ರಮದಿಂದ ಮುಂದೆ ಬಂದರು.

ರಾಮಶೇಷ ಅವರದು ಉನ್ನತವಾದ ಸಾಮಾಜಿಕ ಪ್ರಜ್ಞೆ, ದೇಶಪ್ರೇಮ. ಬ್ರಹ್ಮಚಾರಿಯಾಗಿ ಉಳಿದು ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಕಾರ್ಯದಲ್ಲಿ ತೊಡಗಿಕೊಳ್ಳಬೇಕೆಂಬುದು ಅವರಿಗಿದ್ದ ಹೆಬ್ಬಯಕೆ. ಆದರೆ ತಂದೆಯವರು ವೃದ್ಧರು. ಅವರ ಆರೈಕೆ ಮಾಡುವ ಜವಾಬ್ದಾರಿಯಿಂದ ನುಣುಚಿಕೊಳ್ಳಲಿಲ್ಲ. ವಿವಾಹವಾದರು. ಅವರ ಕೈಹಿಡಿದ ಶ್ರೀಮತಿ ಪ್ರೇಮಲತಾ ಹೊಳೆನರಸೀಪುರದ ಶ್ರೀಕಂಠಯ್ಯ (+ ಸಾವಿತ್ರಮ್ಮ)ನವರ ಮಗಳು. ಅವರು ನಡೆಸುತ್ತಿದ್ದುದು ಮುದ್ರಣಾಲಯ. ಶ್ರೀಮತಿ ಪ್ರೇಮಲತಾ ಎಸ್.ಎಸ್.ಎಲ್.ಸಿ. ವರೆಗೆ ಓದಿದ್ದರು, ಮುದ್ರಣಾಲಯದ ಕೆಲಸ ನಿರ್ವಹಿಸುತ್ತಿದ್ದರು, ಲೋಕೋಪಯೋಗಿ ಇಲಾಖೆಯಲ್ಲಿ ನೌಕರಿಯಲ್ಲೂ ಇದ್ದರು. ಲೋಕಾನುಭವವಿತ್ತು; ಕಷ್ಟಕಾರ್ಪಣ್ಯಗಳ ಪರಿಚಯವಿತ್ತು. ರಾಮಶೇಷ ಅವರನ್ನು ವಿವಾಹವಾದ ಮೇಲೆ ನೌಕರಿ ತೊರೆದು ಹಳ್ಳಿಗೆ (ಮಾದಾಪುರ) ಬಂದರು, ಕೃಷಿ ಮತ್ತು ಅಂಗಡಿ ವಹಿವಾಟಿಗೆ ಸಹಕರಿಸಿದರು. ರಾಮಶೇಷ ಅವರು ತೋಟಗಾರಿಕೆಯಲ್ಲದೆ ಜೋಳ, ರಾಗಿ, ಟೊಮೆಟೊ, ಮೆಣಸಿನಕಾಯಿ, ಗೆಣಸು ಬೆಳೆದು ಯಶಸ್ಸು ಕಂಡವರು; ಅಡಕೆ ತೋಟದಲ್ಲಿ ಮರದಿಂದ ಮರಕ್ಕೆ ಹಾರಿ ಕೊಯ್ಲು ಮಾಡಿದವರು. ಆಗ ಅವರಿಗೆ ಸಿಗುತ್ತಿದ್ದುದು ದಿನಕ್ಕೆ ಇಪ್ಪತ್ತು ರೂಪಾಯಿ ಕೂಲಿ. ಈಗಲೂ ತಾವೇ ಗಾಡಿ ಹೊಡೆಯುತ್ತಾರೆ, ವ್ಯಾನ್ ಚಾಲಿಸುತ್ತಾರೆ. ಅಂಥ ಕಸುಬುದಾರನ ಪತ್ನಿಯಾಗಿ ಬಂದ ಪ್ರೇಮಲತಾ, ಗೃಹಕೃತ್ಯವನ್ನು ಅಚ್ಚುಕಟ್ಟಾಗಿ ನಿಭಾಯಿಸಿದರು, ಮಾವನವರ ಸೇವೆ ಮಾಡಿದರು, ಅವರನ್ನು ಹತ್ತು ವರ್ಷ ಜೋಪಾನ ಮಾಡಿದರು. ಮುಗ್ಧರೂ ಸಜ್ಜನರೂ ಆದ ರಾಮಸ್ವಾಮಯ್ಯನವರು ಮಗ ಮತ್ತು ಸೊಸೆಯ ಒಳಿತನ್ನೇ ಹಾರೈಸುತ್ತ ಜೀವ ಸವೆಸಿದರು.

ತಮಗೆ ನ್ಯಾಯವಾಗಿ ಸಲ್ಲಬೇಕಾದ ಜಮೀನು ಒಂದಲ್ಲ ಒಂದು ದಿನ ದಕ್ಕುತ್ತದೆಂದು ಕಳೆದ ೩೦ ವರ್ಷಗಳಿಂದ ತಾಳ್ಮೆಯಿಂದ ಕಾಯುತ್ತಿರುವ ರಾಮಶೇಷ ಅವರಿಗೆ ಹಳ್ಳಿಯ ಮೇಲೆ ಅಪಾರ ಅಭಿಮಾನ, ಕೃಷಿಯಲ್ಲಿ ವಿಶೇಷ ಪ್ರೀತಿ. ನಿತುಂದಿಲ ಗೋತ್ರ, ಯಜುರ್ವೇದ, ಆಪಸ್ತಂಬ ಸೂತ್ರದ ರಾಮಶೇಷ ಅವರಿಗೆ ರಾಮನಾಥಪುರದ ಶ್ರೀಸುಬ್ರಹ್ಮಣ್ಯೇಶ್ವರಸ್ವಾಮಿಯು ಮನೆ ದೇವರು. ಕಷ್ಟಗಳ ನಡುವೆಯೂ ಜೀವನವನ್ನು ಸಕಾರಾತ್ಮಕವಾಗಿ ಕಾಣುತ್ತಿರುವ ರಾಮಶೇಷ ಅವರು ಹೃದಯಶ್ರೀಮಂತರು. ರಾಮಶೇಷ-ಪ್ರೇಮಲತಾ ದಂಪತಿಯ ಏಕಮಾತ್ರ ಪುತ್ರ ಶ್ರೀ ಎಂ.ಆರ್. ನಾಗೇಶ್ (೨೮), ಕಂಪ್ಯೂಟರ್ ವಿಜ್ಞಾನವನ್ನು ಕಲಿತು ಟಾಟಾ ಕಂಪನಿಯಲ್ಲಿ ಸಾಫ್ಟ್‌ವೇರ್ ಇಂಜನಿಯರಾಗಿ ಸೇವೆ ಸಲ್ಲಿಸುತ್ತಿದ್ದಾರೆ; ಬೆಂಗಳೂರಿನಲ್ಲಿ ನೆಲೆಸಿದ್ದಾರೆ. ಇಲ್ಲದ ಕಷ್ಟಗಳ ಮುಖವಾಡ ಹಾಕಿಕೊಂಡು ಶ್ಮಶಾನಗಳಂತೆ ತಿರುಗಾಡುವುದು ಕೆಲವರ ಜಾಯಮಾನ; ಅಂಥವರ ನಡುವೆ ಬದುಕನ್ನು ಅದು ಬಂದಂತೆ ಸ್ವೀಕರಿಸಿ ಸಮಾಜಕ್ಕೆ ಸಂತೋಷವನ್ನೇ ಹಂಚುವ ಶ್ರೀ ರಾಮಶೇಷ ಸಾಧಾರಣ ಉಡುಪಿನಲ್ಲಿ ಅಡಗಿರುವ ಒಬ್ಬ ತತ್ತ್ವಜ್ಞಾನಿಯಾಗಿದ್ದಾರೆ.

ಶ್ರೀಮತಿ ವಾಣಿ – ಶ್ರೀ ಎಂ.ಸಿ. ಶಂಕರಶಾಸ್ತ್ರಿ

ಖ್ಯಾತ ಗಮಕಿಗಳಾದ ಶ್ರೀಮತಿ ಮೀನಾಕ್ಷಮ್ಮ-ವೇ||ಬ್ರ|| ಶ್ರೀ ಚನ್ನಕೇಶವ ಶಾಸ್ತ್ರಿಗಳ ಕೊನೆಯ ಮಗ ಶ್ರೀ ಶಂಕರಶಾಸ್ತ್ರಿ. ಮೀನಾಕ್ಷಮ್ಮನವರು ತರೀಕೆರೆ ತಾಲ್ಲೂಕು ಲಿಂಗದಹಳ್ಳಿಯವರು, ಚನ್ನಕೇಶವಶಾಸ್ತ್ರಿಗಳು ಶಿವಮೊಗ್ಗೆಯ ಪಕ್ಕದ ಮತ್ತೂರು ಗ್ರಾಮದವರು. ಗಣಕ ವಿಜ್ಞಾನದಲ್ಲಿ

(Computer Science) ಸ್ನಾತಕೋತ್ತರ ಪದವೀಧರರಾದ ಶಂಕರಶಾಸ್ತ್ರಿಯವರು ಮುಂದೆ ಅಮೆರಿಕೆಯ PERDUE ವಿಶ್ವವಿದ್ಯಾಲಯದಲ್ಲಿ ಉನ್ನತಶಿಕ್ಷಣ ಪಡೆದರು. ತರುವಾಯ ಅಲ್ಲಿಯೇ MICROSOFTನಲ್ಲಿ ಕೆಲಸಕ್ಕೆ ಸೇರಿದರು. ಅಲ್ಲಿ ಹತ್ತು ವರ್ಷ ಕೆಲಸ ಮಾಡಿ ಭಾರತಕ್ಕೆ ಬಂದು ಹೈದರಾಬಾದ್‌ನಲ್ಲಿ ಮೂರು-ನಾಲ್ಕು ವರ್ಷ ಕೆಲಸ ಮಾಡಿದರು. ಈಗ ಬೆಂಗಳೂರಿನಲ್ಲಿ Microsoft ಸಂಸ್ಥೆಯಲ್ಲಿ ಅತ್ಯಂತ ಉನ್ನತ ಹುದ್ದೆಯಲ್ಲಿದ್ದಾರೆ (ನಂ. ೧೭). 'ಸಾಫ್ಟ್‌ವೇರ್ ಆರ್ಕಿಟೆಕ್ಟ್' ಆದ ಅವರ ಪತ್ನಿಯವರು ಶ್ರೀಮತಿ ವಾಣಿಶಾಸ್ತ್ರಿ. ಆಕೆಯೂ ಗಣಕ ವಿಜ್ಞಾನದ ಪದವೀಧರರು; ಶಾಸ್ತ್ರೀಯ ಸಂಗೀತ ಮತ್ತು ಗಮಕದಲ್ಲಿ ಅಭಿರುಚಿ ಇರುವಂಥವರು. ಬೆಂಗಳೂರಿನಲ್ಲಿ ವಾಸವಾಗಿರುವ ಹಾನಗಲ್ ಶ್ರೀನಿವಾಸರಾವ್ ಮತ್ತು ಮತ್ತೂರು ನಾಗರತ್ನ ದಂಪತಿಯ ಎರಡನೆಯ ಮಗಳು ವಾಣಿ. ವಾಣಿ-ಶಂಕರಶಾಸ್ತ್ರಿ ದಂಪತಿಗೆ ಇಬ್ಬರು ಹೆಣ್ಣುಮಕ್ಕಳು: ಕು|| ಸುರಭಿ, ಕು|| ಶಾಂಭವಿ; ಇಬ್ಬರೂ ಶಾಲೆಗಳಲ್ಲಿ ಓದುತ್ತಿದ್ದಾರೆ. ಶ್ರೀ ಶಂಕರಶಾಸ್ತ್ರಿ ಕೊಡುಗೈದಾನಿ, ಗುಪ್ತದಾನ ಮಾಡಿರುವುದೇ ಹೆಚ್ಚು.

ಶ್ರೀಮತಿ ಗೌರಮ್ಮ – ಶ್ರೀ ಸಿ.ಕೆ. ನಾಗಪ್ಪಯ್ಯ

ಚಿಲ್ಕುಂದವು ಮೈಸೂರು ಜಿಲ್ಲೆಯ ಹುಣಸೂರು ಮತ್ತು ಪಿರಿಯಾಪಟ್ಟಣ ಎಂಬ ಊರುಗಳ ನಡುವೆ ಇರುವ ಒಂದು ಹಳ್ಳಿ. ಸಂಕೇತಿ ಸಮುದಾಯಕ್ಕೆ ಸೇರಿದ ಸುಮಾರು ಐವತ್ತು ಸಂಸಾರಗಳು ಇಲ್ಲಿವೆ. ಎಲ್ಲರೂ ಕೈಮುಟ್ಟಿ ದುಡಿದು ವ್ಯವಸಾಯ ಮಾಡುತ್ತಾರೆ. ವಿಶೇಷವಾಗಿ ತೋಟಗಾರಿಕೆಗೆ ಹೆಸರುವಾಸಿಯಾಗಿದ್ದಾರೆ. ಅವರ ಕಾಯಕಶ್ರದ್ಧೆಯು ಪ್ರಖ್ಯಾತವಾದುದು. ಕರ್ನಾಟಕದ ಮುಖ್ಯಮಂತ್ರಿಯಾಗಿದ್ದ ಶ್ರೀ ಡಿ. ದೇವರಾಜಅರಸು ಅವರು ಚಿಲ್ಕುಂದದ ಪಕ್ಕದ ಹಳ್ಳಿಯವರು, ಪ್ರತ್ಯಕ್ಷವಾಗಿ ಸಂಕೇತಿ ಕೃಷಿಕರ ದುಡಿಮೆಯ ರೀತಿಯನ್ನು ಕಂಡವರು; ಅವರು ಸಂಕೇತಿ ಕೃಷಿಕರ ಕಾಯಕಪ್ರೀತಿಯನ್ನು ಹಲವಾರು ಸಂದರ್ಭಗಳಲ್ಲಿ ಮುಕ್ತಕಂಠದಿಂದ ತುಂಬಿದ ಸಭೆಗಳಲ್ಲಿ ಕೊಂಡಾಡಿದ್ದರು.

ಚಿಲ್ಕುಂದ ಗ್ರಾಮದಲ್ಲಿ ಶ್ರೀನಿವಾಸ ಮತ್ತು ವೆಂಕಟಲಕ್ಷ್ಮಮ್ಮ ಎಂಬ ದಂಪತಿಗಳಿದ್ದರು. ಶ್ರೀನಿವಾಸ ಅವರು ಪೌರೋಹಿತ್ಯ ಮಾಡಿಸುತ್ತಿದ್ದರು. ಸಂಕೇತಿಗಳ ವಿಶೇಷವೆಂದರೆ ಪುರೋಹಿತರಾದವರೂ ಸ್ವತಃ ವ್ಯವಸಾಯಗಾರರಾಗಿರುತ್ತಿದ್ದುದು. ಶ್ರೀನಿವಾಸ ಅವರಿಗೂ ಸಂಪಾದನೆಯ ಮೂಲವು ವ್ಯವಸಾಯವೇ ಆಗಿತ್ತು; ಪೌರೋಹಿತ್ಯವನ್ನು ಅವರು ಧರ್ಮಾರ್ಥವಾಗಿ ನಡೆಸುತ್ತಿದ್ದರು. ಶ್ರೀನಿವಾಸ ಅವರ ಮಗ 'ಓಣಿ' ಕೇಶವರಾಯರು. ಓಣಿ ಮನೆಯವರಾಗಿದ್ದರಿಂದ ಅವರ ಹೆಸರಿಗೆ 'ಓಣಿ' ಸೇರಿತ್ತು. ಅವರ ಪತ್ನಿ ತಿಮ್ಮಕ್ಕಮ್ಮನವರು ಹಾಡು ಹಸೆಯಲ್ಲಿ ಪ್ರವೀಣೆಯಾಗಿದ್ದರು. ಅವರ ಮಗ ಸಿ.ಕೆ. ನಾಗಪ್ಪಯ್ಯ. ನಾಗಪ್ಪಯ್ಯನವರ ಕಾಲದಲ್ಲಿ ಮಾತ್ರ ಅವರು ಪೌರೋಹಿತ್ಯವನ್ನು ಮುಂದುವರಿಸಲಿಲ್ಲ. 'ಪೌರೋಹಿತ್ಯ ಮಾಡಿದರೆ ಏಳಿಗೆ ಆಗಲ್ಲ' ಎಂಬುದು ಅದಕ್ಕೆ ಅವರು ಕೊಟ್ಟ ಕಾರಣ. ಅವರ ಪೂರ್ವಿಕರು ಪ್ರಧಾನವಾಗಿ ತೋಟದ ವ್ಯವಸಾಯವನ್ನು ಮಾತ್ರ ಮಾಡುತ್ತಿದ್ದರು. ಅದರ ಜತೆಗೆ ಪೌರೋಹಿತ್ಯ ನಡೆಸುವುದರಿಂದ ತೋಟದ ವ್ಯವಸಾಯಕ್ಕೆ ಕುಂದು ಉಂಟಾಗುತ್ತಿರಲಿಲ್ಲ. ಆದರೆ ನಾಗಪ್ಪಯ್ಯನವರ ಕಾಲಕ್ಕೆ ತರಿ, ಖುಷ್ಕಿ ವ್ಯವಸಾಯದ ವ್ಯಾಪ್ತಿ ಹೆಚ್ಚಿತು. ಆ ಬಗೆಯ ವ್ಯವಸಾಯದ ನಡುವೆ ಪೌರೋಹಿತ್ಯವು ಅವರಿಗೆ ಭಾರವಾಗಿ ಕಂಡುದು ಸಹಜವೇ. ನಾಗಪ್ಪಯ್ಯನವರು ಅಡಿಕೆತುಡಿಕೆ ನಡೆಸಿದರು, ಅಡಿಕೆ ವ್ಯಾಪಾರ ಮಾಡಿದರು ಎಂಬುದನ್ನು ಗಮನಿಸಬೇಕು. ಅವರ ಪತ್ನಿ ಗೌರಮ್ಮನವರು ಅರಕಲಗೂಡು ತಾಲ್ಲೂಕು ದೊಡ್ಡಮಗ್ಗೆ ಗ್ರಾಮದ ವೆಂಕಟನಾರಣಪ್ಪ-ಭಾಗೀರಥಿ ಅವರ ಮಗಳು; ಅವರೂ ಕೃಷಿಕರು.

ನಾಗಪ್ಪಯ್ಯ-ಗೌರಮ್ಮ ದಂಪತಿಗೆ ಒಂಬತ್ತು ಮಕ್ಕಳು. ನಾಲ್ಕು ಹೆಣ್ಣು, ಐದು ಗಂಡು. ಎಲ್ಲ ಹೆಣ್ಣುಮಕ್ಕಳನ್ನೂ ಹಳ್ಳಿಗಳಿಗೇ ಕೊಟ್ಟಿದ್ದಾರೆ. ಅವೆಲ್ಲ ಕೃಷಿ ಕುಟುಂಬಗಳೇ. ಗಂಡುಮಕ್ಕಳೆಲ್ಲ ಆಧುನಿಕ ಶಿಕ್ಷಣ ಪಡೆದಿದ್ದಾರೆ; ಆದರೆ ಹಳ್ಳಿಯಲ್ಲೇ ನಿಂತು ಕೃಷಿ ಮಾಡುತ್ತಿದ್ದಾರೆ. ಅವರ ಪೈಕಿ ಸಿ.ಎನ್. ಕೇಶವಮೂರ್ತಿಯವರು ಪೋಸ್ಟ್‌ಮಾಸ್ತರ್ ಆಗಿದ್ದಾರೆ; ಕುಮಾರ ಅವರು ಕೃಷಿಯ ಜತೆಗೆ 'ಶ್ರೀ ಲಕ್ಷ್ಮೀಕೇಶವ ವಿದ್ಯಾಸಂಸ್ಥೆ'ಯನ್ನು ಕಟ್ಟಿ ನಡೆಸುತ್ತಿದ್ದಾರೆ.

ಶ್ರೀಮತಿ ಎಂ.ಎಸ್. ಶಶಿಕಲಾಮೂರ್ತಿ – ಶ್ರೀ ಸಿ.ಎನ್. ಕೇಶವಮೂರ್ತಿ : ಶ್ರೀ ಸಿ.ಎನ್. ಕೇಶವಮೂರ್ತಿ (೫೫) ಅವರು ಪಿ.ಯು.ಸಿ.ವರೆಗೆ ಪಕ್ಕದ ಹುಣಸೂರಿನಲ್ಲಿಯೇ ಕಲಿತರು; ವ್ಯವಸಾಯದ ಸೆಳೆತದಿಂದ ಬಿಡಿಸಿಕೊಳ್ಳಲಾಗಲಿಲ್ಲ. ತೋಟವನ್ನು ರೂಢಿಸಿದರು. ಅವರು ಈಗಲೂ ಪುಸ್ತಕಪ್ರಿಯ, ಗೀಳುಓದುಗ; ಸಂಗೀತಾಸಕ್ತ. ಅವರ ಪತ್ನಿ ಎಂ.ಎಸ್. ಶಶಿಕಲಾ ಅವರು ಕೂಡ ಗಮಕ, ಸಂಪ್ರದಾಯದ ಹಾಡು ಮತ್ತು ಶಾಸ್ತ್ರೀಯ ಸಂಗಿತದಲ್ಲಿ ಪರಿಶ್ರಮ ಇರುವಂಥವರು. ಶಿವಮೊಗ್ಗ ನಗರದ ಪಕ್ಕದ ಮತ್ತೂರು ಗ್ರಾಮದ ವೇ||ಬ್ರ|| ಶ್ರೀ ಎಂ.ಟಿ. ಶ್ರೀನಿವಾಸಾವಧಾನಿ + ಶ್ರೀಮತಿ ಸುಲೋಚನ (ಸೀತಾಲಕ್ಷ್ಮಿ) ಅವರ ಮಗಳು ಶಶಿಕಲಾ ಸಂಪ್ರದಾಯಶೀಲರು ಎಂಬುದು ಸಹಜವಾಗಿದೆ.

ಶಶಿಕಲಾ-ಕೇಶವಮೂರ್ತಿ ದಂಪತಿಗಳ ಮಗ ಸಿ.ಕೆ. ಪ್ರದೀಪಕುಮಾರ್ (೨೯). ಬಿ.ಎಸ್ಸಿ, ಎಂ.ಬಿ.ಎ., ಎಸ್.ಎ.ಪಿ., ಅವರು ಬಹುರಾಷ್ಟ್ರೀಯ ಕಂಪನಿಯಲ್ಲಿ ಸಾಫ್ಟ್‌ವೇರ್ ಇಂಜಿನಿಯರಾಗಿದ್ದಾರೆ. ಶಶಿಕಲಾ-ಕೇಶವಮೂರ್ತಿಯವರ ಮಗಳ ಹೆಸರು ಪ್ರತಿಭಾ. ಅವರ ಪತಿ ಶ್ರೀವತ್ಸ ಕೂಡ ಬಹುರಾಷ್ಟ್ರೀಯ ಕಂಪನಿಯೊಂದರಲ್ಲಿ ಸಾಫ್ಟ್‌ವೇರ್ ಇಂಜಿನಿಯರಾಗಿದ್ದಾರೆ; ಅವರು ಮತ್ತೂರಿನ ಪ್ರೊ. ಅನಂತಪದ್ಮನಾಭ (+ ವೈದೇಹಿ) ಅವರ ಮಗ.

ಶ್ರೀಮತಿ ಐ.ಎಸ್. ಶಕುಂತಲಾ – ಶ್ರೀ ಸಿ.ಎನ್. ನರಸಿಂಹಮೂರ್ತಿ : ಕೇಶವಮೂರ್ತಿಯವರ ತಮ್ಮ ಸಿ.ಎನ್. ನರಸಿಂಹಮೂರ್ತಿ (೫೬) ಕೂಡ ಹುಣಸೂರಿನಲ್ಲಿ ಪಿ.ಯು.ಸಿ.ವರೆಗೆ ಕಲಿತರು. ಹನ್ನೆರಡು ವರ್ಷ ಪರ ಊರುಗಳಲ್ಲಿ ಬೇಕರಿ ನಡೆಸುತ್ತಿದ್ದರು. ಆದರೆ ಚಿಲ್ಕುಂದದ ಮನೆಯಲ್ಲಿ ಕೃಷಿ ವಿಸ್ತಾರವಾದಾಗ ಅದನ್ನು ನಿರ್ವಹಿಸಲು ತಮ್ಮ ಹಳ್ಳಿಗೆ ಹಿಂದಿರುಗಿದರು. ಪಕ್ಕದ ಪಿರಿಯಾಪಟ್ಟಣದಲ್ಲಿ ಜಮೀನು ದೊರೆತಾಗ ಸಂಸಾರದೊಂದಿಗೆ ಅಲ್ಲಿಯೇ ನೆಲೆನಿಂತರು. ಕೃಷಿಯಲ್ಲಿ ನೆಮ್ಮದಿಕಂಡಿರುವ ಅವರು ಈಗ ವೃದ್ಧಾಪ್ಯದ ಹೊಸ್ತಿಲಲ್ಲಿ ಮೈಸೂರಿನಲ್ಲಿ ನೆಲೆಸಿ ಅಂಗಡಿ ತೆರೆಯುವ ಯೋಚನೆಯಲ್ಲಿದ್ದಾರೆ. ಹಾಸನಜಿಲ್ಲೆಯ ಹೊಳೆನರಸೀಪುರದ ಪಕ್ಕದ ಐಚನಹಳ್ಳಿಯ ಸುಬ್ಬರಾಯರ ಮಗಳು ಶಕುಂತಲ ಅವರನ್ನು ನರಸಿಂಹಮೂರ್ತಿ ವರಿಸಿದ್ದಾರೆ. ಸುಬ್ಬರಾಯರು ಕೂಡ ಕೃಷಿಕರು. ಶಕುಂತಲ-ನರಸಿಂಹಮೂರ್ತಿ ದಂಪತಿಗಳಿಗೆ ಮೂವರು ಮಕ್ಕಳು. ಮೊದಲ ಮಗಳು ದಿವ್ಯ (೨೬), ಬಿ.ಎ. ಕಲಿತದ್ದು ಪಿರಿಯಾಪಟ್ಟಣದ ಕಾಲೇಜಿನಲ್ಲಿ; ಅವರ ಪತಿ ಹೊಳೆನರಸೀಪುರ ತಾಲ್ಲೂಕು ಸೋಮನಹಳ್ಳಿ ಮೂಲದ ಫಣೀಶ್ ಈಗ ಕೆನರಾಬ್ಯಾಂಕ್ ಉದ್ಯೋಗಿ, ಬೆಂಗಳೂರಿನಲ್ಲಿ ನೆಲೆಸಿದ್ದಾರೆ; ಈ ದಂಪತಿಗಳ ಮಗು ಸ್ಕಂಧಶ್ರೀ (೪ ವರ್ಷ). ನರಸಿಂಹಮೂರ್ತಿಯವರ ಮಗ ವಿಶ್ವನಾಥ (೨೪), ಬಿ.ಕಾಂ ಮತ್ತು ಕಂಪ್ಯೂಟರ್ ವಿಜ್ಞಾನ ಕಲಿತು ಬೆಂಗಳೂರಿನಲ್ಲಿ ಉದ್ಯೋಗದಲ್ಲಿದ್ದಾರೆ. ನರಸಿಂಹಮೂರ್ತಿಯವರ ಎರಡನೆಯ ಮಗಳು ಭವ್ಯ (೨೧), ಬಿ.ಕಾಂ. ಕಲಿತದ್ದು ಪಿರಿಯಾಪಟ್ಟಣದಲ್ಲಿ; ಅವರ ಪತಿ ಕಿರಣ್ ಬಿ.ಕಾಂ ಮತ್ತು ಎಂ.ಬಿ.ಎ. ಕಲಿತು MYSYS ಕಂಪನಿಯಲ್ಲಿ ಸಾಫ್ಟ್‌ವೇರ್ ಇಂಜಿನಿಯರಾಗಿ ದುಡಿಯುತ್ತಿದ್ದಾರೆ. ಸಂಕೇತಿ ಭಾಷೆ ಮತ್ತು ವೈದಿಕತೆ ಉಳಿದು ಬೆಳೆಯಬೇಕೆಂಬ ತೀವ್ರ ಕಳಕಳಿ ಅವರದು.

ಶ್ರೀಮತಿ ಸಿ.ಎಸ್. ಶ್ರೀಲಕ್ಷ್ಮಿ – ಶ್ರೀ ಸಿ.ಎನ್. ಗುರುನಾಥ್ : ಸಿ.ಎನ್. ನರಸಿಂಹಮೂರ್ತಿಯವರ ತಮ್ಮ ಸಿ.ಎನ್. ಗುರುನಾಥ (೫೧) ಬಿ.ಕಾಂ. ಪದವೀಧರ. ಕೃಷಿ ಅವರ ಅಕ್ಕರೆಯ ಕಸುಬು. ಅಡಿಕೆ ವಹಿವಾಟಿನ ಸಾಹಸ ಅವರಿಗೆ ಪ್ರಿಯ. ಹಳ್ಳಿಯಲ್ಲಿದ್ದರೂ ಸುಂದರವೂ ಸುಸಜ್ಜಿತವೂ ಆದ ಮನೆಯನ್ನು ಕಟ್ಟಬಹುದು, ನೆಮ್ಮದಿಯಾಗಿ ಬಾಳಬಹುದು. ಹಳ್ಳಿಗಳಲ್ಲಿ ಈಗ ಅಂಥ ನಿದರ್ಶನಗಳು ಅನೇಕವಾಗಿವೆ. ಗುರುನಾಥ ಅವರದು ಆ ಪೈಕಿ ಒಂದು ಅದ್ಭುತ ನಿದರ್ಶನ. ಬೆಂಗಳೂರಿನಲ್ಲಿ ಶಾವ್ಯಾಲೇಸ್‌ನಲ್ಲಿ ಸೇಲ್ಸ್ ಡಿಪಾರ್ಟ್‌ಮೆಂಟ್‌ನಲ್ಲಿ ಐದು ವರ್ಷ ಯಶಸ್ವಿಯಾಗಿ ಸೇವೆ ಸಲ್ಲಿಸಿದವರು ಅವರು. ಆದರೆ ನಗರ ಜೀವನ, ಮತ್ತು ಮತ್ತೊಬ್ಬರ ಅಧೀನದಲ್ಲಿ ಮಾಡುವ ನೌಕರಿಯು ಹಳ್ಳಿಯ ತೋಟಗಾರಿಕೆಯ ಜೀವನದ ಮುಂದೆ ನೀರಸ ಎನಿಸಿತು ಅವರಿಗೆ. ಹಳ್ಳಿಗೆ ಬಂದರು, ಕೃಷಿಯನ್ನು ವಿಸ್ತರಿಸಿದರು, ಪ್ರಯೋಗಶೀಲರಾದರು; ಇತರ ಕೃಷಿಕರಲ್ಲಿ ಸ್ಫೂರ್ತಿ ತುಂಬಿದರು. ಸದಾ ನಗುಮುಖದಿಂದಿರುವುದು ಸಂತೃಪ್ತಿಯನ್ನು ಸೂಚಿಸುತ್ತದೆ. ಪ್ರಸನ್ನವದನವು ಕೇವಲ ಲಕ್ಷ್ಮೀಕಟಾಕ್ಷದಿಂದಲೇ ಬರುವುದಿಲ್ಲ, ಸಂಕೇತಿಗಳಿಗೆ ರಕ್ತಗತವಾದ ತತ್ತ್ವಜ್ಞಾನವು ಅವರ ನೆರವಿಗಿದೆ. ಅಭಿವೃದ್ಧಿಶೀಲರಾಗಿದ್ದಾರೆ. ಅವರ ಪತ್ನಿ ಸಿ.ಎಸ್. ಶ್ರೀಲಕ್ಷ್ಮಿ ಬಿ.ಎ. ಪದವೀಧರೆ; ಸಂಗೀತದಲ್ಲೂ ಪರಿಶ್ರಮ ಇರುವಾಕೆ. ಚಿಲ್ಕುಂದ ಗ್ರಾಮದವರೇ ಆದ ಸಿ.ಎನ್. ಸುಬ್ರಹ್ಮಣ್ಯ + ಸುವರ್ಣಲಕ್ಷ್ಮಿ ದಂಪತಿಗಳ ಮಗಳು ಶ್ರೀಲಕ್ಷ್ಮಿ. ಅವರೂ ಕೃಷಿಕರು; ಸುವರ್ಣಲಕ್ಷ್ಮಿ ಅವರೂ ಸಂಗೀತಪರಿಶ್ರಮ ಇರುವಂಥವರು. ಗುರುನಾಥ ಅವರು ಕೂಡ ಮಳವಳ್ಳಿಯಲ್ಲಿ ಒಂದು ವರ್ಷ ಬೇಕರಿ ನಡೆಸಿ ಅನುಭವ ಹೊಂದಿದ್ದಾರೆ. ಈಗ ಕೃಷಿಯಲ್ಲಿ ಅವರಿಗೆ ಇರುವ ನೆಮ್ಮದಿಗೆ ನಗರನೌಕರಿಗಳ ಅನುಭವದ ಹಿನ್ನೆಲೆಯೂ ಇದೆ. ಆದರೆ ಮಕ್ಕಳು ಕೃಷಿಯನ್ನು ಮುಂದುವರಿಸುವವರೇ ಎಂಬ ಬಗ್ಗೆ ಅವರು ಏನೂ ಹೇಳಲಾರರು. ಅವರ ಮಗ ಲಕ್ಷ್ಮೀಕೇಶವ (೨೧), ಎಂ.ಬಿ.ಬಿ.ಎಸ್. ಅಂತಿಮ ವರ್ಷದಲ್ಲಿ ಕಲಿಯುತ್ತಿದ್ದಾರೆ. ಜಾಹ್ನವಿ, ಭಾರ್ಗವಿ (೧೯) ಅವರ ಅವಳಿ ಹೆಣ್ಣುಮಕ್ಕಳು; ಇಬ್ಬರೂ ಮೈಸೂರಿನಲ್ಲಿ ಇಂಜಿನಿಯರಿಂಗ್ ವಿದ್ಯಾಭ್ಯಾಸ ಮಾಡುತ್ತಿದ್ದಾರೆ.

ನಾಗಪ್ಪಯ್ಯನವರ ಮನೆದೇವರು ಶ್ರೀಲಕ್ಷ್ಮೀಕೇಶವ. ಲೋಹಿತ ಕೌಶಿಕ ಗೋತ್ರದವರಾದ ಅವರದು ಯಜುರ್ವೇದ ಮತ್ತು ಆಪಸ್ತಂಬ ಸೂತ್ರ.

ಶ್ರೀಮತಿ ಕೆ.ಎನ್. ರೋಹಿಣಿ (ರುಕ್ಮಿಣಿ) – ಶ್ರೀ ಸಿ.ಎಸ್. ಸುಬ್ರಹ್ಮಣ್ಯ

ಮಂಡ್ಯಜಿಲ್ಲೆಯ ಕೆ.ಆರ್. ಪೇಟೆ ತಾಲ್ಲೂಕಿನ ಕುಪ್ಪಹಳ್ಳಿಯಲ್ಲಿ ಲಕ್ಷ್ಮೀದೇವಮ್ಮ-ಸುಬ್ರಹ್ಮಣ್ಯ ಎಂಬ ದಂಪತಿಗಳಿದ್ದರು. ಅವರದು ಕೃಷಿಜೀವನ. ಅವರಿಗೆ ಮೂವರು ಮಕ್ಕಳು. ಆದರೆ ಇದ್ದ ಆಸ್ತಿ ೧೦ ಗುಂಟೆ ಬಾಗಾಯ್ತು. ಜೀವನ ನಿರ್ವಹಣೆಗಾಗಿ ಇಬ್ಬರು ಮಕ್ಕಳು - ಕೆ. ನಾಗಪ್ಪಯ್ಯ, ಕೆ. ಅನಂತನಾರಾಯಣಪ್ಪ - ಮೈಸೂರು ಜಿಲ್ಲೆಯ ಚಿಲ್ಕುಂದಕ್ಕೆ ವಲಸೆ ಹೋದರು. ಅಲ್ಲಿ ಅವರು ಕೊಂಡದ್ದು ೧೦ ಎಕರೆ ಖುಷ್ಕಿ, ಎರಡು ಎಕರೆ ತರಿ, ಐದು ಎಕರೆ ಬಾಗಾಯ್ತನ್ನು. ಎಲ್ಲವೂ ಪಾಳುಬಿದ್ದಿದ್ದ ಜಮೀನು. ಆದರೆ ಅಣ್ಣತಮ್ಮಂದಿರಿಬ್ಬರೂ ಒಂದು ಕಾಸೂ ಕೂಲಿ ಕೊಡದೆ ಹಗಲಿರುಳೂ ದುಡಿದು ಜಮೀನು ರೂಢಿಸಿದರು. ನಾಗಪ್ಪಯ್ಯನವರು ಜ್ಯೋತಿಷ ಶಾಸ್ತ್ರದಲ್ಲಿ ಮಹಾಮೇಧಾವಿಯಾದರು. ಅನಂತನಾರಾಯಣಪ್ಪನವರಿಗೆ ಕೃಷಿಯದೇ ತಪಸ್ಸು. ಅವರು ವಿವಾಹವಾದದ್ದು ಹಾಸನಜಿಲ್ಲೆಯ ಕಟ್ಟೇಪುರದ ಅನಂತಲಕ್ಷ್ಮಮ್ಮನವರನ್ನು. ಅನಂತನಾರಾಯಣಪ್ಪನವರು ಕೃಷಿಯ ಜತೆಗೆ ಜನಿವಾರ ಮತ್ತು ದೊನ್ನೆಯನ್ನು ಸಿದ್ಧಪಡಿಸುತ್ತಿದ್ದರು. ಅವರ ಮಗನೇ ಸಿ.ಎನ್. ಸುಬ್ಬರಾಯ (ಅಪ್ಪಯ್ಯ ಮಾವಯ್ಯ). ಅವರಿಗೆ ಕೃಷಿಯೇ ಉಸಿರು. ಆದರೆ ಮಂತ್ರಗಳನ್ನು ಕಲಿತರು, ಖಂಜರಿ ವಾದ್ಯದಲ್ಲಿ ಪರಿಶ್ರಮ ಹೊಂದಿದರು. ಅವರ ಪತ್ನಿ ಪಾರ್ವತಮ್ಮನವರು; ಕುಪ್ಪಹಳ್ಳಿಯ ತಿಪ್ಪಯ್ಯಾವಧಾನಿ+ವೆಂಕಟಲಕ್ಷ್ಮಿ ದಂಪತಿಗಳ ಮಗಳು. ಅವರಿಗೀಗ ೮೨ ವರ್ಷ. ತಮ್ಮ ೪-೫ನೇ ವಯಸ್ಸಿನಿಂದಲೇ ತಮ್ಮ ತಂದೆಯ ತಾಯಿ ಸುಬ್ಬಲಕ್ಷ್ಮಿಯವರಿಂದ ಸಂಪ್ರದಾಯಗೀತೆಗಳನ್ನು ಕಲಿತರು; ಈಗಲೂ ಅಕ್ಷರಶಃ ಸಾವಿರ ಹಾಡು ಅವರ ನೆನಪಿನಲ್ಲಿದೆ. ಅವುಗಳಲ್ಲಿ ಅಪರೂಪದ 'ಅವರೆ' ಹಾಡು, 'ಮಾವಿನ ಕಾಯಿ' ಹಾಡು, 'ನವಿಲು' ಹಾಡು ಇತ್ಯಾದಿ ಸೇರಿವೆ.

ಪಾರ್ವತಮ್ಮ-ಸುಬ್ಬರಾಯ ದಂಪತಿಗಳ ಮಕ್ಕಳ ಪೈಕಿ ಚಿಲ್ಕುಂದದಲ್ಲಿಯೇ ಉಳಿದು ಅಕ್ಕರೆಯಿಂದ ವ್ಯವಸಾಯವನ್ನು ಮುಂದುವರಿಸಿರುವವರು ಶ್ರೀ ಸಿ.ಎಸ್. ಸುಬ್ರಹ್ಮಣ್ಯ (೪೨). ಹುಣಸೂರಿನಲ್ಲಿ ಓದಿ ಬಿ.ಎ. ಪದವೀಧರರಾಗಿದ್ದಾರೆ. ರಾಷ್ಟ್ರೀಯ ಸ್ವಯಂಸೇವಕ; ಮಿಲಿಟರಿ ಸೇರಲು ಆಸೆ ಹೊತ್ತಿದ್ದವರು. ಆದರೆ ಕೃಷಿ ಅವರನ್ನು ಹಿಡಿದಿಟ್ಟಿದೆ. ಅವರ ಪೂರ್ವಿಕರು ಹಾಸನಜಿಲ್ಲೆಯ ಮರಿತಮ್ಮನಹಳ್ಳಿಯವರು, ಅಲ್ಲಿಂದ ಮಂಡ್ಯಜಿಲ್ಲೆಯ ಕುಪ್ಪಹಳ್ಳಿಗೆ ಬಂದರು, ಅಲ್ಲಿಂದ ಮತ್ತೆ ಮೈಸೂರುಜಿಲ್ಲೆಯ ಚಿಲ್ಕುಂದಕ್ಕೆ ವಲಸೆ ನಡೆಯಿತು. ವೈದಿಕವೃತ್ತಿಯವರು ವಲಸೆ ಹೋಗುವುದು ಸಹಜ; ಬಾಗಾಯ್ತು ನಂಬಿದವರು ಇಷ್ಟು ವಿಧದಲ್ಲಿ ವಲಸೆ ಹೋಗುವುದು ಒಂದು ಬೆರಗು. ಭಾರದ್ವಾಜಗೋತ್ರದ ಈ ಮನೆತನದವರು ಯಜುರ್ವೇದ, ಆಪಸ್ತಂಬಸೂತ್ರಕ್ಕೆ ಸೇರಿದವರು; ರಾಮನಾಥಪುರದ ಸುಬ್ರಹ್ಮಣ್ಯಸ್ವಾಮಿ ಅವರ ಮನೆದೇವರು.

ಸಿ.ಎಸ್. ಸುಬ್ರಹ್ಮಣ್ಯ ಅವರ ಪತ್ನಿ ಕೆ.ಎನ್. ರೋಹಿಣಿ (ರುಕ್ಮಿಣಿ). ಆಕೆ ಬೆಂಗಳೂರಿನ ಬಿ.ಎಂ.ಎಸ್. ಕಾಲೇಜಿನಲ್ಲಿ ಓದಿ ಬಿ.ಎ. ಪದವಿ ಪಡೆದಿದ್ದಾರೆ. ಭಾವಗೀತೆ ಮತ್ತು ಶಾಸ್ತ್ರೀಯ ಸಂಗೀತದಲ್ಲಿ ಪರಿಶ್ರಮ ಹೊಂದಿದ್ದಾರೆ. ಕ್ರೀಡಾಪಟು ಕೂಡ. ಅವರು ಚಿಲ್ಕುಂದದಂಥ ಪುಟ್ಟ ಗ್ರಾಮವೊಂದರ ತರುಣ ಸುಬ್ರಹ್ಮಣ್ಯ ಅವರನ್ನು ವಿವಾಹವಾಗಿ ಹಳ್ಳಿಗೆ ಬಂದು ನೆಲೆಸಿದ್ದಾರೆ; ಕೃಷಿ ಕಾರ್ಯದಲ್ಲಿ ಪೂರ್ಣವಾಗಿ ಪ್ರೀತಿಯಿಂದ ತೊಡಗಿಕೊಂಡಿದ್ದಾರೆ; ಈ ಸಂದರ್ಶನಕ್ಕೆ ಹೋದುದು ಅಡಕೆ ಸುಗ್ಗಿಯ ಕಾಲದಲ್ಲಿ, ಆಕೆ ಅಡಿಕೆ ಎಡೆಯುತ್ತ ಕುಳಿತಿದ್ದರು. ವಿವಾಹ ಪ್ರಸ್ತಾಪವಾದಾಗ, ಸುಬ್ರಹ್ಮಣ್ಯ ಅವರ ತಂದೆ ಸುಬ್ಬರಾಯರು ಭಾವಿ ಸೊಸೆಯಾದ ರೋಹಿಣಿ ಅವರ ಗಮನವನ್ನು ಹಳ್ಳಿಯ ಕೃಷಿ ಜೀವನದ ಕಷ್ಟಗಳ ಕಡೆಗೆ ಸೆಳೆದರು. ರೋಹಿಣಿ ದೃಢಮನಸ್ಸಿನಿಂದ ಮತ್ತು ಪ್ರೀತಿಯಿಂದ ಹಳ್ಳಿಯ ಬದುಕನ್ನೂ ಕೃಷಿ ಕಾಯಕವನ್ನೂ ಆಯ್ದುಕೊಂಡರು. ಅವರ ತಂದೆ ಹಾಸನಜಿಲ್ಲೆಯ ಕೃಷ್ಣಾಪುರದ ನಾಗರಾಜ (+ಕಮಲಮ್ಮ) ಅವರು ಒಳ್ಳೆಯ ಕೃಷಿಕರು, ಪಶುಪಾಲಕರು. ಬೆಂಗಳೂರಿನಲ್ಲಿ ಓದಿದವರಾದರೂ ರೋಹಿಣಿ ಕೃಷಿಜೀವನವನ್ನು ಪ್ರೀತಿಸಿದ್ದರ ಹಿಂದೆ ಅವರ ತವರಿನ ಹಿನ್ನೆಲೆ ಕೆಲಸಮಾಡಿದೆ. ರೋಹಿಣಿ-ಸುಬ್ರಹ್ಮಣ್ಯ ದಂಪತಿಗೆ ಇಬ್ಬರು ಮಕ್ಕಳು: ಅಕ್ಷಯ ಕುಮಾರ (೧೫), ಸ್ಕಂದವಿ ಭಾರದ್ವಾಜ್ (೯).

ಈ ಮೊದಲು ಕೆಲ ತಿಂಗಳುಗಳ ಹಿಂದೆ ಸಮುದಾಯ ಅಧ್ಯಯನ ಕೇಂದ್ರದ ಪೋಷಕರಾಗುವಂತೆ ಪ್ರಾರ್ಥಿಸಲು ವಿಶ್ವಸ್ತ ಸಮಿತಿಯವರು ಚಿಲ್ಕುಂದಕ್ಕೆ ಹೋದಾಗ ಸುಬ್ರಹ್ಮಣ್ಯ ಅವರ ತಂದೆ ಸುಬ್ಬರಾಯರು ಮರಣಶಯ್ಯೆಯಲ್ಲಿದ್ದರು, ಸಹಜವಾಗಿಯೇ ಸುಬ್ಬರಾಯರ ಪತ್ನಿ ಪಾರ್ವತಮ್ಮನವರು ಕಂಗೆಟ್ಟಿದ್ದರು. ಸುಬ್ಬರಾಯರನ್ನು ಆಸ್ಪತ್ರೆಗಳಲ್ಲಿ ದಾಖಲಿಸಿ ವಿಪರೀತ ಖರ್ಚು ಮಾಡಿಕೊಂಡಿದ್ದರು 'ಇನ್ನು ಉಳಿಯುವ ಆಸೆ ಇಲ್ಲ' ಎಂದಾದ ಮೇಲೆ ಅವರನ್ನು ಮನೆಗೆ ಕರೆತಂದು ಮಲಗಿಸಿದ್ದರು. ಮನೆಯಲ್ಲಿ ಆತಂಕ ಮಡುಗಟ್ಟಿತ್ತು. ಇದೊಂದೂ ತಿಳಿಯದ ಸ್ಥಿತಿಯಲ್ಲಿ ವಿಶ್ವಸ್ತ ಸಮಿತಿಯವರು ಅವರ ಮನೆಗೆ ಹೋಗಿದ್ದರು. ಸಮುದಾಯ ಅಧ್ಯಯನ ಕೇಂದ್ರವು ಆ ಹೊತ್ತಿಗೆ ಪ್ರಕಟಿಸಿದ್ದ ಏಳು ಮಹಾಸಂಪುಟಗಳನ್ನು ನೋಡಿದ ಸುಬ್ರಹ್ಮಣ್ಯ ಬೆರಗುಪಟ್ಟರು, ಆಕರ್ಷಿತರಾದರು, ತಾವು ಸದಸ್ಯರಾಗುವುದಾಗಿ ತಾವಾಗಿಯೇ ಹೇಳಿದರು. ಅದಕ್ಕಾಗಿ ಅವರು ಹತ್ತು ಸಾವಿರ ರೂಪಾಯಿ ಕೊಡಬೇಕಾಗುವುದೆಂಬುದನ್ನು ಮತ್ತೆ ಅವರಿಗೆ ನೆನಪಿಸಲಾಯಿತು. ಆದರೂ ಚಿತ್ತವಿಕಾರವಿಲ್ಲದೆ 'ನಾನು ಸದಸ್ಯನಾಗುತ್ತೇನೆ, ನನಗೆ ಈ ಸಂಪುಟಗಳು ಬೇಕು' ಎಂದರು ಸುಬ್ರಹ್ಮಣ್ಯ. ವಿಶ್ವಸ್ತ ಸಮಿತಿಯವರಿಗೇ ಅಪರಾಧಪ್ರಜ್ಞೆ ಕಾಡುತ್ತಿತ್ತು. ಅವರನ್ನು

ಮನೆಯ ಹೊರಗೆ ಕರೆದೊಯ್ದರು. ಬೇರೆ ಬೇರೆ ಮೂರು ಅವಕಾಶ ಬಳಸಿಕೊಂಡು, "ನಿಮ್ಮ ಮನೆಯ ಪರಿಸ್ಥಿತಿ ಸರಿ ಇಲ್ಲ. ನೀವಾದರೋ ಕೇವಲ ಕೃಷಿಯಿಂದ ಬದುಕುತ್ತಿರುವವರು. ಕಳೆದ ಎಂಟು ವರ್ಷಗಳಿಂದ ಚಿಲ್ಕುಂದಕ್ಕೆ ಮಳೆಯಾಗಿಲ್ಲ, ತೋಟಗಳು ಒಣಗುತ್ತಿವೆ, ಅಡಕೆ ಬೆಲೆಯೂ ಕುಸಿದಿದೆ. ನೀವು ಸದಸ್ಯರಾಗುವುದು ಬೇಡ. ನಿಮಗೆ ಹೊರೆ ಮಾಡಲು ನಮ್ಮ ಮನಸ್ಸು ಒಪ್ಪುತ್ತಿಲ್ಲ" ಎಂದು ಹೇಳಿದರು. ಮೂರು ಬಾರಿಯೂ ಸುಬ್ರಹ್ಮಣ್ಯ ಅಚಲವಾಗಿಯೇ ಇದ್ದರು. ಕೊನೆಯ ಬಾರಿ ಹೇಳಿದಾಗ "ನಿಮಗೆ ನನ್ನ ವಿಷಯ ಗೊತ್ತಿಲ್ಲ. ನಾನು ರಾಷ್ಟ್ರೀಯ ಸ್ವಯಂ ಸೇವಕ. ನನಗೆ ಸಾಮಾಜಿಕ ಪ್ರಜ್ಞೆ ಇದೆ, ಪುಸ್ತಕ ಪ್ರೀತಿ ಇದೆ, ಸಮಷ್ಟಿಹಿತಕ್ಕಾಗಿ ಕೆಲಸ ಮಾಡಿ ಅಭ್ಯಾಸವಿದೆ, ಅದರ ಕಷ್ಟ ಗೊತ್ತಿದೆ. ನೀವು ಹೇಳಿದ ಕಷ್ಟಗಳೆಲ್ಲ ನನಗಿರುವುದು ನಿಜ. ಆ ಕಾರಣದಿಂದ ಹಣ ಕೊಡಲು ಕೆಲವು ತಿಂಗಳು ಅವಕಾಶ ಕೊಡಿ ಎಂದಷ್ಟೇ ನಿಮ್ಮನ್ನು ಕೇಳಿಕೊಳ್ಳುತ್ತೇನೆ. ನನಗೆ ಈ ಪುಸ್ತಕಗಳು ಬೇಕು. ಅದಷ್ಟು ಬೇಗ ಹಣ ಕಟ್ಟುತ್ತೇನೆ" ಎಂದು ಅಷ್ಟೇ ದೃಢವಾಗಿ ಹೇಳಿದರು. ಸಮುದಾಯ ಅಧ್ಯಯನ ಕೇಂದ್ರವು ಇದೀಗ ೧೦ ಮಹಾ ಸಂಪುಟಗಳನ್ನು ಹೊರತಂದಿದೆ. ಅದೆಲ್ಲ ಸಾಧ್ಯವಾಗಿರುವುದು ಸುಬ್ರಹ್ಮಣ್ಯ ಅವರಂಥ ಪ್ರಜ್ಞಾವಂತರಿಂದ. ಅಂಥ ೧೦೦ ಮಂದಿ ಪುಣ್ಯಾತ್ಮರು ಸದಸ್ಯರಾಗಿ ಈ ಕೆಲಸವನ್ನು ಆಗಮಾಡಿದ್ದಾರೆ.

ಶ್ರೀಮತಿ ಎಂ.ಎಸ್. ಪ್ರಭಾವತಿ – ಶ್ರೀ ಪಿ.ಎಸ್. ಶ್ರೀನಿವಾಸಮೂರ್ತಿ

ಮೈಸೂರು ಜಿಲ್ಲೆಯ ಪಿರಿಯಾಪಟ್ಟಣವು ಒಂದು ಐತಿಹಾಸಿಕ ಸ್ಥಳ; ಪಾಳೆಯಗಾರರೂ ಮಾಂಡಲಿಕರೂ ಆಳಿದ ಜಾಗ. ವ್ಯವಸಾಯಕ್ಕೂ ಪ್ರಶಸ್ತವಾದ ನೆಲೆ. ಸಂಕೇತಿಗಳು ಅಲ್ಲಿ ನೆಲೆಸಿ ವ್ಯವಸಾಯವನ್ನು ಮಾಡಿದರು, ಅರಮನೆಯಲ್ಲಿ ವೈದ್ಯಕೀಯ ಸೇವೆ ಮಾಡಿದರು, ಆಳುವವರಿಗೆ ಮಂತ್ರಿಗಳಾಗಿಯೂ ಸೇನಾಧಿಕಾರಿಗಳಾಗಿಯೂ ನೆರವಾದರು. ಆ ಸಂಬಂಧದ ಪಳೆಯುಳಿಕೆಗಳೂ ಇವೆ, ಐತಿಹ್ಯಗಳೂ ಇವೆ.

ಪಿರಿಯಾಪಟ್ಟಣದ ಪಂಡಿತ್ ರಂಗಪ್ಪ (+ಚಿಲ್ಕುಂದದ ಗೌರಮ್ಮ) ಅವರ ಮಗ ಪಿ.ಆರ್. ಸುಬ್ಬರಾವ್. ಅವರು 'ಮೀಸೆ ಅಪ್ಪಣ್ಣಯ್ಯ' ಎಂದೇ ಖ್ಯಾತರಾಗಿದ್ದರು. ಅವರು ಪಿರಿಯಾಪಟ್ಟಣದ ಮುನಿಸಿಪಾಲಿಟಿಯಲ್ಲಿ ಬಿಲ್ ಕಲೆಕ್ಟರ್ ಆಗಿ ಕೆಲಸ ಮಾಡಿದರು. ಸುಬ್ಬರಾವ್ ಅವರ ಪ್ರಾಯದ ದಿನಗಳು; ಅವರಿಗೆ ಕೆ.ಆರ್. ನಗರದಲ್ಲಿ ಗದ್ದೆ ಇತ್ತು. ಪಿರಿಯಾಪಟ್ಟಣದಿಂದ ನಡೆದುಕೊಂಡು ಹೋಗಿ ಗದ್ದೆಯಲ್ಲಿ ಕೆಲಸ ಮಾಡಿ ನಡೆದುಕೊಂಡೇ ಹಿಂದಿರುಗುತ್ತಿದ್ದರು. ೮೫ ವರ್ಷ ವಯಸ್ಸಾದಾಗಲೂ ಪಿರಿಯಾಪಟ್ಟಣದಿಂದ ಚಿಲ್ಕುಂದಕ್ಕೆ ನಡೆದುಕೊಂಡೇ ಹೋಗಿ ಬರುತ್ತಿದ್ದರು. ತಮ್ಮ ಮನೆತನದಲ್ಲಿ ಪರಂಪರೆಯಿಂದ ಬಂದ ವೈದ್ಯವನ್ನು ಇವರು ಮುಂದುವರಿಸಿದ್ದರು. ಇಕ್ಕುಮದ್ದು, ಹಾವಿನ ಉಸಿರು, ಬಾಣಂತಿಯರ ದೌರ್ಬಲ್ಯ ಇವಕ್ಕೆಲ್ಲ ಔಷಧ ಕೊಡುತ್ತಿದ್ದರು. ಎಷ್ಟೇ ಗಂಟಿದ್ದರೂ ಸೌದೆಯನ್ನು ಸೀಳುವುದರಲ್ಲಿ ನಿಪುಣರಾಗಿದ್ದರು; ಆಗದೆಂದು ಅವರು ಕೈಬಿಟ್ಟ ಕೊಂಟನ್ನು ಬೇರೆ ಯಾರಿಂದಲೂ ಸೀಳಲಾಗುತ್ತಿರಲಿಲ್ಲ. ಭಾಗೀರಥಮ್ಮನವರು ಸುಬ್ಬರಾಯರ ಪತ್ನಿ; ಅವರೂ ಚಿಲ್ಕುಂದದವರು.

ಭಾಗೀರಥಮ್ಮ-ಸುಬ್ಬರಾವ್ ದಂಪತಿಗಳ ಮಗ ಪಿ.ಎಸ್. ಶ್ರೀನಿವಾಸಮೂರ್ತಿ. ಆತ್ರೇಯಸಗೋತ್ರ, ಯಜುರ್ವೇದ, ಆಪಸ್ತಂಬಸೂತ್ರಕ್ಕೆ ಸೇರಿದವರು. ಓದಿದ್ದು ಮೆಕ್ಯಾನಿಕಲ್ ಇಂಜಿನಿಯರಿಂಗ್‌ನಲ್ಲಿ ಡಿಪ್ಲೊಮಾ, ಪ್ರೀತಿಯಿಂದ ಇಳಿದದ್ದು ವ್ಯವಸಾಯ ಮಾಡಲು. ಅವರ ಪತ್ನಿ ಎಂ.ಎಸ್. ಪ್ರಭಾವತಿ; ಅವರು ಹಾಸನ ಜಿಲ್ಲೆ ಮರಿತಮ್ಮನಹಳ್ಳಿಯ ಮಹಾಲಕ್ಷ್ಮಿ-ಎಂ.ಎಸ್. ಸುಬ್ಬರಾಯ ದಂಪತಿಗಳ ಮಗಳು. ಅವರದ್ದು ಭಾರದ್ವಾಜ ಗೋತ್ರ, ಯಜುರ್ವೇದ. ಪ್ರಭಾವತಿಯವರ ಅಜ್ಜ ಸಾಹುಕಾರ್ ಗುಂಡಪ್ಪನವರು ಒಳ್ಳೆಯ ಕೃಷಿಕ, ಬರಗಾಲ ಮತ್ತು ಮಹಾಯುದ್ಧ ಕಾಲದಲ್ಲಿ ತಾವು ಬೆಳೆದ ರಾಗಿಯನ್ನು ಬಡಬಗ್ಗರಿಗಾಗಿ ಸರ್ಕಾರಕ್ಕೆ ಕೊಟ್ಟ ಧಣಿ, ಒಳ್ಳೆಯ ವಾಗ್ಮಿ.

ಪಿ.ಎಸ್. ಶ್ರೀನಿವಾಸಮೂರ್ತಿ ಮಿತಭಾಷಿ, ಸರಳವಾದ ನಡವಳಿಕೆ ಉಳ್ಳವರು. ಅವರಿಗಿದ್ದುದು ಮುಕ್ಕಾಲು ಎಕರೆ ತೋಟ; ಜತೆಗೆ ಐದು ಎಕರೆ ಗದ್ದೆ. ಅದನ್ನು ಚೆನ್ನಾಗಿ ರೂಢಿಸಿದರು. ಪತ್ನಿ ಪ್ರಭಾವತಿಯವರು 'ಮನೆಗೆಲಸ ಮುಗಿದ ಮೇಲೆ ತೋಟಕ್ಕೆ ಹೋಗಿ ಕಳೆ ಕೀಳೋರು, ಗೊಬ್ಬರ ಹೇರೋರು.' ಅವರ ಇಬ್ಬರು ಮಕ್ಕಳೂ ಬಾಲ್ಯದ ವಿದ್ಯಾಭ್ಯಾಸ ಮುಗಿಸಿದ್ದು ಪಿರಿಯಾಪಟ್ಟಣದಲ್ಲಿಯೇ; ಈಗ ಅವರಲ್ಲಿ ಒಬ್ಬರು ಇಂಜಿನಿಯರ್, ಇನ್ನೊಬ್ಬರು ವೈದ್ಯರು.

ವೈದ್ಯರಾದ ಡಾ|| ಪಿ.ಎಸ್. ಸುಬ್ರಹ್ಮಣ್ಯ ಅವರು ಪಿರಿಯಾಪಟ್ಟಣದಲ್ಲಿಯೇ ನೆಲೆಸಿ ವೈದ್ಯಕೀಯ ಸೇವೆ ಮಾಡುತ್ತಿದ್ದಾರೆ. ಪತ್ನಿ ಬಿ.ಎಸ್. ಸ್ವರ್ಣ ಹಾಸನಜಿಲ್ಲೆ ಬಸವಾಪಟ್ಟಣದ ಸತ್ಯನಾರಾಯಣ-ಶ್ರೀಲಕ್ಷ್ಮಿ ದಂಪತಿಗಳ ಮಗಳು. ಸ್ವರ್ಣ ಅವರ ತವರಿನವರೂ ಖ್ಯಾತ ಕೃಷಿಕರು. ಸುಬ್ರಹ್ಮಣ್ಯ ಅವರೂ ಬಾಲ್ಯದಿಂದಲೂ ಕೃಷಿ ಮತ್ತು ಪಶುಪಾಲನೆಯಲ್ಲಿ ಪಳಗಿದವರು. ಹಸು ಎಮ್ಮೆಯನ್ನು ಕಾಯಲು ಅಟ್ಟಿಕೊಂಡು ಹೋಗುವುದು, ಹುಲ್ಲು

ಕುಯ್ಯುವುದು, ಗಿಡಗಳಿಗೆ ನೀರು ಹಾಕುವುದು ಈ ಕೆಲಸಗಳನ್ನು ಮಾಡುತ್ತಲೇ ಬೆಳೆದವರು. ಸುಬ್ರಹ್ಮಣ್ಯ ಅವರು ಎಂ.ಬಿ.ಬಿ.ಎಸ್. ಮುಗಿಸಿಕೊಂಡು ಊರಿಗೆ ಬಂದಾಗ ತಾತ ಸುಬ್ಬರಾವ್ ಅವರು ಮೊಮ್ಮಗನನ್ನು ಪಕ್ಕದಲ್ಲಿ ಕೂರಿಸಿಕೊಂಡು ತಮ್ಮದೊಂದು ಆಸೆ ತೋಡಿಕೊಂಡರು. "ನಂದೊಂದು ಆಸೆ ಇದೆ, ನಡೆಸಿಕೊಡ್ತೀಯಾ? ನಮ್ಮದೊಂದು ಪಿತ್ರಾರ್ಜಿತವಾದ ಆಸ್ತಿ ಇದೆ. ಬಡತನದ ಕಾರಣದಿಂದ ನಾನೂ ಅದನ್ನು ಆಬಾದು ಮಾಡಕ್ಕಾಗಲಿಲ್ಲ, ನಿನ್ನ ತಂದೆಗೂ ಆಗಲಿಲ್ಲ. ಕೊನೇ ಪಕ್ಷ ನೀನಾದರೂ ನನ್ನ ಆಸೆ ನೆರವೇರಿಸಿ ಅಲ್ಲಿ ಎರಡು ಎಕರೆ ತೋಟ ಮಾಡಿದ್ರೆ ನನ್ನ ಆತ್ಮಕ್ಕೆ ಶಾಂತಿ ಸಿಗುತ್ತೆ. ಮಾತು ಕೊಡ್ತೀಯಾ?" ಅದು ೯೮ ವರ್ಷದ ತಾತನ 'ಅಂತಿಮ ಆಸೆ.' ಮೊಮ್ಮಗ ಡಾ. ಸುಬ್ರಹ್ಮಣ್ಯ ಮಾತು ಕೊಟ್ಟರು. ಆ ಜಮೀನಿಗೆ ದಿನಕ್ಕೆ ೩೦೦ ಟ್ರ್ಯಾಕ್ಟರ್‌ನಂತೆ ಒಟ್ಟು ೬೦೦೦ ಟ್ರ್ಯಾಕ್ಟರ್ ಮಣ್ಣು ಹೇರಿಸಿದರು. ಅಡಿಕೆ, ಬಾಳೆ ನಾಟಿ ಮಾಡಿದರು, ತೆಂಗಿನ ಗಿಡ ಹಾಕಿದರು. ನಾಲ್ಕು ಎಕರೆ ತೋಟ ನಿಲ್ಲಿಸಿದರು, ೧೨ ಲಕ್ಷ ಖರ್ಚಾಯಿತು. ಈಗ ಆ ಆಸ್ತಿಯ ಬೆಲೆ ೫೦ ಲಕ್ಷ. ಮನೆಯಲ್ಲಿ ಎಲ್ಲರಿಗೂ ವ್ಯವಸಾಯದ ಬಗ್ಗೆಪ್ರೀತಿ ಇದೆ. ಬಡವರಿಗೂ ಹಳ್ಳಿಗರಿಗೂ ಉಚಿತ ಚಿಕಿತ್ಸೆ ನೀಡುವ ಕನಸೂ ಅವರಿಗಿದೆ. ಪತ್ನಿ ಸ್ವರ್ಣ ಕರ್ನಾಟಕ ಶಾಸ್ತ್ರೀಯ ಸಂಗೀತದಲ್ಲಿ ಪರಿಶ್ರಮ ಹೊದಿದ್ದಾರೆ. ಡಾ|| ಸುಬ್ರಹ್ಮಣ್ಯ ಹಾರ್ಮೋನಿಯಂ ನುಡಿಸುತ್ತಾರೆ. ಇಬ್ಬರು ಮುದ್ದಾದ ಮಕ್ಕಳಿದ್ದಾರೆ. ಸಂತೃಪ್ತಿಗೆ ಇನ್ನೇನು ಬೇಕು? ತಾತ ಪಿ.ಆರ್ ಸುಬ್ಬರಾವ್ ಅವರ ಆತ್ಮಕ್ಕೆ ಶಾಂತಿ ದೊರಕುವಂತೆ ಕೃಷಿಸಾಧನೆ ಮಾಡಿದ್ದಾರೆ ಡಾ|| ಸುಬ್ರಹ್ಮಣ್ಯ.

೧೩. ಶ್ರೀಮತಿ ಸಿ.ಎಸ್. ಮಂಜುಳ - ಶ್ರೀ ಬಿ.ವಿ. ನಾಗೇಶ್

ಶ್ರೀ ಬಿ.ವಿ. ನಾಗೇಶ್ ಅವರ ಪೂರ್ವಿಕರು ಬಸ್ತಿ ಹೊಸಕೋಟೆಗೆ ಸೇರಿದವರು. ಶ್ರೀನಿವಾಸಾವಧಾನಿ; ಅವರ ಮಗ ವೆಂಕಟರಾಮಾವಧಾನಿ; ಅವರ ಮಗ ನಂಜಪ್ಪಾವಧಾನಿ, ಎಲ್ಲರೂ ವೈದಿಕರೇ. ಕನ್ನಂಬಾಡಿ ಕಟ್ಟೆ ಕಟ್ಟಿದಾಗ ಶ್ರೀ ಕೃಷ್ಣರಾಜಸಾಗರದಲ್ಲಿ ಆ ಗ್ರಾಮವು ಮುಳುಗಿ ಹೋಯಿತು. ಆಗ ನಂಜಪ್ಪಾವಧಾನಿಗಳ ಮಗ ಶ್ರೀ ಸುಬ್ಬರಾಯಶರ್ಮ ಅವರು ಬೆಂಗಳೂರಿಗೆ ಬಂದು ನೆಲೆಸಿದರು. ಬಹಳ ಬಡತನವಿದ್ದ ಕಾಲ. ಆದರೂ ವಿದ್ಯಾಭ್ಯಾಸವನ್ನು ಮುಂದುವರಿಸಿದರು, ಅಧ್ಯಾಪಕರಾದರು. ಬಸವನಗುಡಿಯ ಮಾಧ್ಯಮಿಕ ಶಾಲೆಯ ಮುಖ್ಯೋಪಾಧ್ಯಾಯರಾಗಿ ಸೇವೆ ಸಲ್ಲಿಸಿ ನಿವೃತ್ತರಾದರು. ಜನರು ಅವರನ್ನು 'ಅಣ್ಣುಮೇಷ್ಟ್ರು' ಎಂದೇ ಪ್ರೀತಿಯಿಂದ ಕರೆಯುತ್ತಿದ್ದರು. ಕನ್ನಡ ಮತ್ತು ಸಂಸ್ಕೃತ ಭಾಷೆಗಳೆರಡರಲ್ಲೂ ಅವರಿಗೆ ಪಾಂಡಿತ್ಯವಿತ್ತು. ತಮ್ಮ ೮೦ನೆಯ ವಯಸ್ಸಿನಲ್ಲಿಯೂ ಅವರು ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಕಾದಂಬರಿ, ಭಾಸನ ನಾಟಕಗಳು, ಶಬ್ದಮಣಿದರ್ಪಣಂ, ಅಲ್ಲದೆ ಪಂಪ ಮತ್ತು ರನ್ನರ ಕಾವ್ಯಗಳನ್ನು ಸರಳವಾಗಿ ಬೋಧಿಸುತ್ತಿದ್ದರು. ವೇದ ಮತ್ತು ವೈದಿಕ ವ್ಯವಹಾರಗಳಲ್ಲೂ ಅವರ ಜ್ಞಾನವು ಉನ್ನತಮಟ್ಟದ್ದಾಗಿತ್ತು. ಸುಬ್ಬರಾಯಶರ್ಮರ ಪತ್ನಿ ಎಳ್ಳೇಶಪುರದ ಗೌರಮ್ಮನವರು; ಅವರಾದರೂ ಗಾದೆ ಮತ್ತು ಒಗಟುಗಳ ವಿಶ್ವಕೋಶವೇ ಆಗಿದ್ದರು. ಆಗೆಲ್ಲಾ ಇದ್ದುದು ಬಾಲ್ಯವಿವಾಹವೇ. ಗೌರಮ್ಮನವರು ಕಷ್ಟಸುಖಗಳಲ್ಲಿ ಪತಿಯೊಂದಿಗೆ ಸಮರಸದಿಂದ ಬಾಳಿದರು, ತಮ್ಮ ಐದು ಮಕ್ಕಳ ಜತೆಗೆ, ತಬ್ಬಲಿಗಳಾಗಿದ್ದ ತಮ್ಮ ಇಬ್ಬರು ತಮ್ಮಂದಿರನ್ನು (ವೈ. ನರಸಿಂಗರಾವ್ ಮತ್ತು ವೈ. ಕೃಷ್ಣಮೂರ್ತಿ) ಬೆಳೆಸಿ ಜೀವನಕ್ಕೊಂದು ದಾರಿ ಮಾಡಿದರು.

ಸುಬ್ಬರಾಯಶರ್ಮರ ಹಿರಿಯ ಪುತ್ರ ಶ್ರೀ ಎಚ್.ಎಸ್. ರಾಮನಾಥ. ಅವರು ಬಿ.ಎಸ್‌ಸಿ., ಬಿ.ಇ., ಮಾಡಿ ಕರ್ನಾಟಕ ವಿದ್ಯುಚ್ಛಕ್ತಿ ಮಂಡಲಿಯಲ್ಲಿ ದೀರ್ಘಕಾಲ ಸೇವೆ ಸಲ್ಲಿಸಿದರು, ಸೂಪರಿಂಟೆಂಡಿಂಗ್ ಇಂಜಿನಿಯರಾಗಿ ನಿವೃತ್ತರಾದರು. ಸುಬ್ಬರಾಯಶರ್ಮರ ಎರಡನೆಯ ಮಗನ ಹೆಸರು ಶ್ರೀ ವೆಂಕಟರಾಮು.

ವೆಂಕಟರಾಮು ಅವರು ಬಿ.ಎಂ.ಎಸ್. ಇಂಜಿನಿಯರಿಂಗ್ ಕಾಲೇಜಿನಲ್ಲಿ ಮೊದಲನೆಯ ತಂಡದ ವಿದ್ಯಾರ್ಥಿ; ಬಿ.ಇ. ಪದವಿ ಪಡೆದ ಮೇಲೆ ತಮಿಳುನಾಡಿನ ಲೋಕೋಪಯೋಗಿ ಇಲಾಖೆಯಲ್ಲಿ ನಾಲ್ಕು ದಶಕಗಳ ಕಾಲ ಸೇವೆ ಸಲ್ಲಿಸಿದರು; ಚೀಫ್ ಇಂಜಿನಿಯರಾಗಿ ನಿವೃತ್ತರಾದರು. ಅವರದು ಸರಳ ವ್ಯಕ್ತಿತ್ವ; ನಿಷ್ಠೆ ಮತ್ತು ಪ್ರಾಮಾಣಿಕತೆಗೆ ಹೆಸರಾದವರು. ನಿವೃತ್ತರಾಗಿ ಬೆಂಗಳೂರಿನಲ್ಲಿ ನೆಲೆಸಿದ ಮೇಲೆ ತಮ್ಮ ಸಂಸ್ಕೃತ ಜ್ಞಾನವನ್ನು ಬೆಳೆಸಿಕೊಂಡರು. ಕಳೆದ ೨೦ ವರ್ಷಗಳಿಂದ ತಮ್ಮ ದಿನಚರಿಯನ್ನು ಸಂಸ್ಕೃತದಲ್ಲೇ ಬರೆಯುತ್ತಿದ್ದಾರೆ ಎಂಬುದು ಒಂದು ವಿಶೇಷ. ಕನ್ನಡ ಮತ್ತು ಆಂಗ್ಲ ಭಾಷೆಯ ಅನೇಕ ಕಥೆಗಳನ್ನೂ, ಇತರ ಕೃತಿಗಳನ್ನೂ ಸಂಸ್ಕೃತಕ್ಕೆ ತರ್ಜುಮೆ ಮಾಡಿರುವುದು ಇನ್ನೊಂದು ವಿಶೇಷ.

ವೆಂಕಟರಾಮು ಅವರ ಪತ್ನಿಯವರ ಹೆಸರು ಶ್ರೀಮತಿ ನಿರ್ಮಲಾದೇವಿ; ಮೈಸೂರು ರೇಷ್ಮೆ ಕಾರ್ಖಾನೆಯ ನಿರ್ದೇಶಕರಾಗಿದ್ದ ಶ್ರೀ ಎ.ಪಿ. ರಾವ್ ಅವರ ಮಗಳು. ನಿರ್ಮಲಾದೇವಿಯವರ ಅಕ್ಕ ಡಾ. ಎಸ್.ಕೆ. ಸುಶೀಲಾಬಾಯಿ; ಅವರು ಸಮಾಜಸೇವೆಗೆ ಹೆಸರಾದ ಖ್ಯಾತ ವೈದ್ಯೆ.

ನಿರ್ಮಲಾದೇವಿಯವರು ಪತಿಯ ನಿಷ್ಠೆ ಮತ್ತು ಪ್ರಾಮಾಣಿಕತೆಗೆ ಪೂರಕವಾಗಿ ಸ್ಪಂದಿಸಿದರು. ಯಾವ ಎಡರುಗಳಿಗೂ ಕುಂದಲಿಲ್ಲ, ವರ್ಗವಾದ ಕಡೆಗೆಲ್ಲ ಪತಿಯನ್ನು ಹಿಂಬಾಲಿಸಿದರು; ಮಕ್ಕಳನ್ನು ಸುಸಂಸ್ಕೃತರನ್ನಾಗಿ ಮಾಡಿ ಬೆಳೆಸಿದರು. ಅವರ ಪೂಜಾಫಲ ಮತ್ತು ಆಶೀರ್ವಾದದ ಬಲದಿಂದಲೇ ತಾವೆಲ್ಲರೂ ಸುಖವಾಗಿರುವುದೆಂಬುದು ಅವರ ಮಕ್ಕಳ ಅಚಲ ವಿಶ್ವಾಸ.

ಶ್ರೀಮತಿ ನಿರ್ಮಲಾದೇವಿ-ಶ್ರೀ ವೆಂಕಟರಾಮು ದಂಪತಿಗೆ ನಾಲ್ವರು ಮಕ್ಕಳು. ಮೊದಲ ಮಗ ಉಮೇಶ್, ಕೆಮಿಕಲ್ ಇಂಜನಿಯರಿಂಗ್‌ನಲ್ಲಿ ಎಂ.ಟೆಕ್ ಪದವೀಧರರು; ಜಮ್ನಾಲಾಲ್ ಪ್ರಶಸ್ತಿ ವಿಜೇತರು; ಭಾರತದಲ್ಲಿ ಮೊಟ್ಟಮೊದಲ ಬಾರಿಗೆ Spirulina ಎಂಬ algae ಬೆಳಕಿಗೆ ಬರಲು ಕಾರಣರಾದವರು. ಮೂರನೆಯ ಮಗ ಶ್ರೀ ದಿನೇಶ್ Industrial Physics ವಿಷಯದಲ್ಲಿ ಐ.ಐ.ಟಿ.ಯಲ್ಲಿ ಎಂ.ಟೆಕ್. ಮಾಡಿ BARC ನಲ್ಲಿ ವಿಜ್ಞಾನಿಯಾಗಿದ್ದಾರೆ. ಮಗಳು ಶ್ರೀಮತಿ ವಸುಮತಿ ಬಿ.ಎಸ್.ಸಿ., ಎಂ.ಇಡಿ. ಮಾಡಿ ಶ್ರೀ ವಿಜಯಕುಮಾರ್ ಅವರನ್ನು ವರಿಸಿದ್ದಾರೆ. ವಿಜಯಕುಮಾರ್ ING ವೈಶ್ಯ ಬ್ಯಾಂಕಿನಲ್ಲಿ ಉತ್ತಮ ಹುದ್ದೆಯಲ್ಲಿದ್ದಾರೆ; ಅವರಾದರೂ ಅರ್ಥಶಾಸ್ತ್ರದಲ್ಲಿ ಸ್ನಾತಕೋತ್ತರ ಪದವೀಧರರು.

ಶ್ರೀಮತಿ ನಿರ್ಮಲಾದೇವಿ-ಶ್ರೀ ವೆಂಕಟರಾಮು ದಂಪತಿಯ ಎರಡನೆಯ ಮಗ ಶ್ರೀ ಬಿ.ವಿ. ನಾಗೇಶ್. ಅವರಿಗೆ ಮೊದಲಿನಿಂದರೂ ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಬಗೆಗೆ ಒಲವು; ಬಿ.ಎಸ್‌ಸಿ. ಪದವಿಯ ನಂತರ ಸ್ವಯಂಸೇವಕನಾಗಿ ಕೆಲ ವರ್ಷ ಸೇವೆ ಸಲ್ಲಿಸಿದರು. ತಮ್ಮ ಸೋದರಮಾವ ಶ್ರೀ ಲಂಬೋದರ ಅವರ ಪ್ರೇರಣೆ ಮತ್ತು ಸಹಾಯ ದೊರೆಯಿತು; Defence Quality Assurance Organizationನಲ್ಲಿ Chargeman ಆಗಿ ಸೇರಿದರು. ಅವರು ಕೆಲಸಕ್ಕೆ ಸೇರಿದ್ದು ಹೈದರಾಬಾದಿನಲ್ಲಿ. ಅಲ್ಲಿನ ಸದವಕಾಶಗಳನ್ನು ಬಳಸಿಕೊಂಡು Computer Programming ಕಲಿತರು, ಇಲಾಖೆಯಲ್ಲಿ ಸಾಕಷ್ಟು ಪ್ರೋಗ್ರಾಂ ಮಾಡಿದರು, ಮೇಲಧಿಕಾರಿಗಳ ಮೆಚ್ಚುಗೆಗೆ ಪಾತ್ರರಾದರು. ಜತೆಗೇ ಎಂ.ಎಸ್‌ಸಿ. (Computer Science)ಗೆ ಆಯ್ಕೆಯಾದರು. ಉತ್ತಮ ಮಟ್ಟದಲ್ಲಿ ಉತ್ತೀರ್ಣರೂ ಆದರು, ಮತ್ತೆ ಮೂರು ವರ್ಷ ಸೇವೆ ಸಲ್ಲಿಸಿದರು. ಈ ನಡುವೆ ಮೈಸೂರು ಜಿಲ್ಲೆ ಚಿಲ್ಕುಂದ ಗ್ರಾಮದ ಶ್ರೀ ಸುಬ್ಬರಾಯರ ಮಗಳು ಶ್ರೀಮತಿ ಮಂಜುಳ ಅವರನ್ನು ವರಿಸಿದರು. ಯು.ಪಿ.ಎಸ್.ಸಿ. ಮೂಲಕ, ಉನ್ನತ ಶ್ರೇಣಿಯಾದ (Group A Officer) Senior Scientific Officer ಆಗಿ ಆಯ್ಕೆಹೊಂದಿ ದಾಖಲೆ ನಿರ್ಮಿಸಿದರು. ದೆಹಲಿಗೆ ವರ್ಗವಾಯಿತು. Computer Centreನಲ್ಲಿ ಐದು ವರ್ಷ ಸೇವೆ ಸಲ್ಲಿಸಿದರು. ಇನ್ನೂ ಓದಬೇಕೆಂಬ ಉತ್ಸಾಹ ಪುಟಿಯಿತು. M.Tech (Modelling and Simulation) Courseಗೆ ಆಯ್ಕೆಯಾದರು. ಅದು ಪೂರ್ಣಗೊಂಡಮೇಲೆ ಮತ್ತೆ ಹೈದರಾಬಾದಿನಲ್ಲಿ Electronic Warfare Projectಗೆ ವರ್ಗವಾದರು. ಮೂರು ವರ್ಷಗಳಲ್ಲಿ Principal Scientific Officer ಆಗಿ ಪದೋನ್ನತಿ ದೊರೆಯಿತು, ಮತ್ತೆ ದೆಹಲಿಗೆ ವರ್ಗಗೊಂಡರು. Defence Institute of Quality Observerನಲ್ಲಿ Faculty ಆಗಿ ಆಯ್ಕೆಯಾದರು.

೨೦೦೨ರಲ್ಲಿ ಬೆಂಗಳೂರಿಗೆ ಬಂದರು. ಎರಡೂವರೆ ವರ್ಷಗಳ ನಂತರ ದೆಹಲಿಯಲ್ಲಿರುವ ಪ್ರಸಿದ್ಧ National Defence Collegeಗೆ ತರಪೇತಿಗಾಗಿ ಆಯ್ಕೆಯಾದರು. ಜಗತ್ತಿನ ೨೨ ರಾಷ್ಟ್ರಗಳಿಂದ ಬಂದಿದ್ದ ಮತ್ತು ಭಾರತದ ಉನ್ನತ IAS, IPS ಮತ್ತು Military ಅಧಿಕಾರಿಗಳೊಂದಿಗೆ ಸಂಪರ್ಕ ಉಂಟಾಯಿತು. ಅವರಲ್ಲಿ ಆಗಿನ ಭೂತಾನ್ ಮಹಾರಾಜರೂ ಸೇರಿದ್ದರು. ಆ ಒಂದು ವರ್ಷದ್ದು ಅವಿಸ್ಮರಣೀಯ ಅನುಭವ ಬಿ.ವಿ. ನಾಗೇಶ್‌ಗೆ.

ಹೀಗೆ ೨೫ ವರ್ಷ ಸೇವೆ ಸಲ್ಲಿಸಿದ ಬಿ.ವಿ. ನಾಗೇಶ್ ದೇಶವಿದೇಶಗಳ ಪರ್ಯಟನೆ ಮಾಡಿದರು. ವಿಪರೀತ ವರ್ಗಾವಣೆಗಳಿಂದಾಗಿ ಮಕ್ಕಳ ವಿದ್ಯಾಭ್ಯಾಸದಲ್ಲಿ ತೊಂದರೆಗಳು ಎದುರಾದವು. ಸ್ವಯಂನಿವೃತ್ತಿ ಪಡೆದು ಬೆಂಗಳೂರಿನಲ್ಲಿ ನೆಲೆಸಿದರು. ಕಳೆದ ಮೂರು ವರ್ಷಗಳಿಂದ ಅವರ ಸೇವೆ HP ಸಂಸ್ಥೆಗೆ ಸಲ್ಲುತ್ತಿದೆ.

Behind every man's success there is a woman ಎಂಬುದು ನಾಗೇಶ್ ವಿಷಯದಲ್ಲಿ ಹೆಚ್ಚು ಸತ್ಯ. ಅವರ ಎಲ್ಲ ಸಾಧನೆಗಳಿಗೂ ಪ್ರೇರಣೆ ಮತ್ತು ಪ್ರೋತ್ಸಾಹ ದೊರೆತುದು ಅವರ ಪತ್ನಿ ಶ್ರೀಮತಿ ಮಂಜುಳ ಅವರಿಂದ. ವರ್ಗಾವಣೆಗಳ ಜಂಜಾಟದ ನಡುವೆಯೂ ಸಂಸಾರವನ್ನು ಸುಸ್ಥಿರವಾಗಿ ನಡೆಸಿದ್ದು ಅವರು.

ಶ್ರೀಮತಿ ಮಂಜುಳ-ಶ್ರೀ ಬಿ.ವಿ. ನಾಗೇಶ್ ದಂಪತಿಗೆ ಇಬ್ಬರು ಹೆಣ್ಣುಮಕ್ಕಳು. ಮೊದಲ ಮಗಳು ಚಿ|| ವೈಷ್ಣವಿ (ಮಧು). ಮೆರಿಟ್‌ಸೀಟ್ ಪಡೆದು ಬಿ.ಇ. (Bio-tech) ಮಾಡಿ Nimhans ನಿಂದ M.Phil (Bio-Physics) ಮಾಡಿದ್ದಾಳೆ. ಎರಡನೆಯ ಮಗಳು ಚಿ|| ಸುಮೇಧ

ಪಿ.ಯು.ಸಿ. ಯಲ್ಲಿ ಉತ್ತಮ ಅಂಕ ಪಡೆದಿದ್ದಾಳೆ; ಈಗ ಬಿ.ಕಾಂ ವಿದ್ಯಾರ್ಥಿನಿ.

ಶ್ರೀ ನಾಗೇಶ್ ಅವರ ಕುಟುಂಬಕ್ಕೆ ಸಂಕೇತಿ ಸಮುದಾಯದ ಬಗೆಗಿನ ಪ್ರೀತಿ ಅಪಾರವಾದುದು. ಈ ಸಮುದಾಯಕ್ಕೆ ತಮ್ಮ ಸೇವೆ ಸಲ್ಲಿಸುವ ಹಂಬಲ ಅವರಿಗೆ.

ಶ್ರೀಮತಿ ಪ್ರಸನ್ನಲಕ್ಷ್ಮಿ – ವೇ॥ ಬ್ರ॥ ಶ್ರೀ ಭಾಸ್ಕರ ಅವಧಾನಿ

ಭಾನು ಪ್ರಕಾಶ: ಬಿ.ಕಾಂ. ಪದವೀಧರ. ಸಂಸ್ಕೃತ ಭಾಷೆಯಲ್ಲಿ ಮಾತನಾಡುವಷ್ಟು ಪ್ರಾವೀಣ್ಯವಿದೆ. ಒಳ್ಳೆ ವಾಗ್ಮಿ. ಹಿಂದೆ ಗಮಕ ವ್ಯಾಖ್ಯಾನ ಮಾಡುತ್ತಿದ್ದುದುಂಟು. ಈಗ ರಾಜಕಾರಣವೇ ಕಾರಣವಾಗಿ ವಿರಾಮವಿಲ್ಲ. ಸರಳ, ವಿನಯಶೀಲ, ಸಜ್ಜನ. ಜನಾನುರಾಗಿ. ಆದ್ದರಿಂದಲೇ ಬಿಜೆಪಿ ಜಿಲ್ಲಾಧ್ಯಕ್ಷರಾಗಿ ಪಕ್ಷ ಬೆಳೆಸಲು ಸಾಧ್ಯವಾಯಿತು. ಶಿವಮೊಗ್ಗ ತಾಲ್ಲೂಕು ಮತ್ತೂರು ಗ್ರಾಮದ ಸರ್ವತೋಮುಖ ಅಭಿವೃದ್ಧಿಗೆ ಕಾರಣಕರ್ತರು. ಬಿಜೆಪಿ ರಾಜ್ಯ ಉಪಾಧ್ಯಕ್ಷರು.

ತಂದೆ ಭಾಸ್ಕರ ಅವಧಾನಿಗಳು, ತಾಯಿ ಪ್ರಸನ್ನಲಕ್ಷ್ಮಿ. ಒಟ್ಟು ಕುಟುಂಬದ ಅಪರೂಪದ ಉದಾಹರಣೆ, ಇವರ ಮನೆ. ಮೂವರು ಸಹೋದರರು. ಕುಟುಂಬದ ಮೂರೂ ಮಕ್ಕಳು ಇಂಜನಿಯರುಗಳು. ಸುಖೀಸಂಸಾರ. ಇದಕ್ಕೆ ಪತ್ನಿ ಪ್ರಭಾವತಿಯವರ ಕೊಡುಗೆ ಸಾಮಾನ್ಯವಾದುದಲ್ಲ.

ಶ್ರೀಮತಿ ಸುಮಾ – ಡಾ॥ ಎಲ್.ಎಸ್. ರಾಮಚಂದ್ರ

ಡಾ॥ ಎಲ್.ಎಸ್. ರಾಮಚಂದ್ರ ಇವರ ತಂದೆ ಲಿಂಗದಹಳ್ಳಿಯ ಎಲ್.ವಿ. ಸುಬ್ರಹ್ಮಣ್ಯ ಮತ್ತು ತಾಯಿ ಮತ್ತೂರು ರಾಮಭದ್ರಶಾಸ್ತ್ರಿಗಳ ಮಗಳು ವಾಸಂತಿ. ಮದ್ರಾಸಿನ ಐಟಿಐನಲ್ಲಿ ಸಿವಿಲ್ ಇಂಜನಿಯರ್ ಪದವಿ ಮತ್ತು ಪಿಎಚ್.ಡಿ. ಮುಗಿಸಿ ಇಂಗ್ಲೆಂಡ್ ಮತ್ತು ಸ್ವಿಡ್ಜರ್ಲೆಂಡ್‌ಗಳಲ್ಲಿ ಸುಮಾರು ಐದು ವರ್ಷವಿದ್ದು ಈಗ ಖರಗ್‌ಪುರದ ಐಐಟಿನಲ್ಲಿ ಸು. ೧೩ ವರ್ಷಗಳಿಂದ ಪ್ರಾಧ್ಯಾಪಕರಾಗಿದ್ದಾರೆ. ಬಹು ದೊಡ್ಡ ಸೇತುವೆಗಳ ಕಂಪನ ಮತ್ತು ತತ್ಸಂಬಂಧದ ದೋಷ ನಿವಾರಣೆ ರಾಮಚಂದ್ರ ಅವರ ಪಿಎಚ್.ಡಿ. ವಿಷಯ. ಪತ್ನಿ ಸುಮಾ ಮತ್ತೂರಿನವರು. ಒಬ್ಬನೇ ಮಗ ಕೇಶವ ಬೆಂಗಳೂರಿನ ಪೆಸಿಟ್‌ನಲ್ಲಿ ಇಂಜನಿಯರಿಂಗ್ ವಿದ್ಯಾರ್ಥಿ.

ಶ್ರೀಮತಿ ಎ.ಆರ್. ಸುಕನ್ಯ – ಶ್ರೀ ಎಲ್.ವಿ. ವಸಂತಕುಮಾರ್

ಲಿಂಗದಹಳ್ಳಿಯ ಶ್ಯಾನುಭೋಗ ವೆಂಕಟರಮಣಯ್ಯ ಮತ್ತು ಸುಬ್ಬಮ್ಮ ದಂಪತಿಗಳ ಮಗ ವಸಂತಕುಮಾರ್ ಅವರಿಗೆ ಈಗ ೬೨ ವರ್ಷ ತುಂಬಿದೆ. ೧೯೫೮ರಲ್ಲಿ ಕಾಮರ್ಸ್ ಪದವಿ ಮುಗಿಸಿ ಊರು ಸೇರಿ ಪ್ರಯೋಗಶೀಲ ಕೃಷಿಕರಾದರು. ಅಪ್ಪನ ಕಾಲಕ್ಕೆ ನೂರಾರು ಎಕರೆ ಜಮೀನಿದ್ದದ್ದು ಈಗ ಸು. ೨೫ ಎಕರೆಯಷ್ಟಿದೆಯಷ್ಟೆ. ಇಂದಿನವರೆಗೂ ಆದರ್ಶ ಕೃಷಿಕರೆನಿಸಿ ದುಡಿಯುತ್ತಲೇ ಇದ್ದಾರೆ. ಪತ್ನಿ ಸುಕನ್ಯ ಅವರು ಬಸವಾನಿಯ ರಾಮದಾಸ್ ಮತ್ತು ಪದ್ಮ ಅವರ ಮಗಳು. ಸಂಗೀತ ವಿದುಷಿ. ಗಮಕ ಹವ್ಯಾಸಿ. ತಾಯಿ ಪದ್ಮ ಅವರು ಸಮಾಜಸೇವಾ ಕಾರ್ಯಕ್ಕಾಗಿ ಕೇಂದ್ರ ಸಮಾಜ ಕಲ್ಯಾಣ ಇಲಾಖೆಯಿಂದ ಪುರಸ್ಕೃತರಾಗಿದ್ದು ಪಡೆದ ಹಣವನ್ನೂ ತಾವು ಕಟ್ಟಿದ ಸೇವಾಶ್ರಮದ ಕಟ್ಟಡಕ್ಕೆ ದಾನಮಾಡಿದವರು.

ಶ್ರೀಮತಿ ಎಂ.ಸಿ. ಅನ್ನಪೂರ್ಣ – ಶ್ರೀ ಎಲ್.ಕೆ. ವಾಮನ

ಲಿಂಗದಹಳ್ಳಿಯ ವಿದ್ವಾನ್ ಕೃಷ್ಣಮೂರ್ತಿ ಮತ್ತು ಸುಶೀಲಮ್ಮ ಅವರ ಮಗ ವಾಮನ ಅವರು ಬಿ.ಎಸ್ಸಿ ಎಜಿ ಪದವೀಧರರಾಗಿದ್ದು ಬಾಗಲಕೋಟೆಯಲ್ಲಿ ತುಂಗಭದ್ರ ಗ್ರಾಮೀಣ ಬ್ಯಾಂಕಿನ ಸೀನಿಯರ್ ಮ್ಯಾನೇಜರ್ ಆಗಿ ಕೆಲಸ ಮಾಡುತ್ತಿದ್ದಾರೆ. ಪತ್ನಿ ಅನ್ನಪೂರ್ಣ ಅವರು ಮತ್ತೂರಿನ ಶ್ರೇಷ್ಠ ಗಮಕಿಗಳಾಗಿದ್ದ ಚನ್ನಕೇಶವ ಶಾಸ್ತ್ರಿ ಮತ್ತು ಮೀನಾಕ್ಷಮ್ಮ ಅವರ ಮಗಳು. ಹುಬ್ಬಳ್ಳಿಯಲ್ಲಿ ಕೆನರಾ ಬ್ಯಾಂಕಿನಲ್ಲಿ ಉದ್ಯೋಗಿ. ತಾಯಿಯಂತೆಯೇ ಸಂಗೀತ ವಿದುಷಿ. ದಂಪತಿಗಳಿಬ್ಬರಿಗೂ ಸಾಹಿತ್ಯವು ಹವ್ಯಾಸವಾಗಿದೆ.

ಶ್ರೀಮತಿ ಲಲಿತಮ್ಮ ಕೌಶಿಕ್ (೧೯೩೫-೨೦೦೬) – ಶ್ರೀ ಕೆ.ಎಸ್. ಕೌಶಿಕ್ (೧೯೨೩-೨೦೦೫)

ಜ್ಞಾನ ಭಗೀರಥ ಶ್ರೀ ಕೇಶವ ಸುಬ್ರಹ್ಮಣ್ಯ ಕೌಶಿಕ್ (ವಿಶ್ವಾಮಿತ್ರ) 'ಭಾರತ ದರ್ಶನ' ಪತ್ರಿಕೆಯ ಸಂಪಾದಕರೂ ಭಾರತದರ್ಶನ ಪ್ರಕಾಶನದ ಮುಖ್ಯಸ್ಥರೂ ಆಗಿದ್ದವರು. ಶ್ರೀಮನ್ಮಹಾಭಾರತ, ಶ್ರೀಮದ್ರಾಮಾಯಣ, ಶ್ರೀಮದ್ಭಾಗವತ ಮತ್ತು ಶ್ರೀ ಹರಿವಂಶವನ್ನು ೫೮ ಸಂಪುಟಗಳಲ್ಲಿ ಕನ್ನಡದಲ್ಲಿ ತಂದು ಸಹಸ್ರಾರು ಕನ್ನಡಿಗರಿಗೆ ಬಹು ಕಡಿಮೆ ಬೆಲೆಗೆ ಒದಗಿಸಿಕೊಟ್ಟು, ಭಾರತೀಯ ಸಂಸ್ಕೃತಿಯ ಪ್ರಚಾರಕ್ಕೆ ತಮ್ಮದೇ ಆದ ಕಾಣಿಕೆಯನ್ನಿತ್ತ ಧೀರ. ಮೈಸೂರು ಮತ್ತು ಬೆಂಗಳೂರಿನ ಶ್ರೀಮನ್ಮಹಾರಾಜಾ ಸಂಸ್ಕೃತ ಪಾಠಶಾಲೆಯಲ್ಲಿ ಅಧ್ಯಯನ ಮಾಡಿ ಸಂಸ್ಕೃತ ವಿದ್ವಾಂಸರಾಗಿ ಬೆಳೆದ ಕೌಶಿಕ್ ನೌಕರಿಗೆ ಸೇರಿದ್ದು ಬೆಂಗಳೂರು ಬಸವನಗುಡಿಯ ಸಹಕಾರ ಸಂಘದಲ್ಲಿ. ಮನೆದೇವರು ಮೇಲುಕೋಟೆಯ ಶ್ರೀ ಯೋಗಾನರಸಿಂಹಸ್ವಾಮಿಯ ಪ್ರೇರಣೆಯಂತೆ ನೌಕರಿಯನ್ನು ತೊರೆದು ೧೯೫೭ರಲ್ಲಿ ತಮ್ಮ ಪ್ರಕಾಶನಸಂಸ್ಥೆ ತೆರೆದರು. ಸಂಸ್ಕೃತದಿಂದ ಕನ್ನಡಕ್ಕೆ ಮಾಡಿದ ಅವರ ಅನುವಾದಗಳ ಬಗ್ಗೆ "ಈ ಶೈಲಿಯು ವಿನೂತನವೂ, ಮೋಹಕವೂ ಆಗಿದೆ. ಎಲ್ಲಿ ಮೂಲಶ್ಲೋಕಗಳ ಅಪೇಕ್ಷೆಯಿದೆಯೋ, ಅಲ್ಲಿ ಅವುಗಳನ್ನು ನೀಡಲಾಗಿದೆ; ಉಳಿದಂತೆ ಕನ್ನಡ ಗದ್ಯಾನುವಾದವು ಅಡೆತಡೆಯಿಲ್ಲದೆ ಸಾಗಿದೆ. ಇಂತಹ ಶೈಲಿಯು ವರ್ತಮಾನಕ್ಕೆ ಬಹಳವಾಗಿ ಬೇಕಿತ್ತು" ಎಂಬ ಪ್ರಶಂಸೆಗೆ ಪಾತ್ರರಾದರು. 'ಭಾರತದರ್ಶನ' ಮಾಸಪತ್ರಿಕೆ ಈ ವರೆಗೆ ೫೨ ವರ್ಷಗಳಷ್ಟು ಸುದೀರ್ಘ ಕಾಲ ಪ್ರಕಟವಾಗಿದೆ. ಹಾಸನಜಿಲ್ಲೆಯ ಕೌಶಿಕ ಎಂಬ ಗ್ರಾಮದಲ್ಲಿ ಜನಿಸಿದ ಕೌಶಿಕ್ ವಿವಾಹವಾದದ್ದು (೧೯೫೦), ೧೯೩೫ರಲ್ಲಿ ಕೌಶಿಕದ ಸಮೀಪದ ಮುದ್ದಾಪುರ ಎಂಬ ಗ್ರಾಮದಲ್ಲಿ ಜನಿಸಿದ ಶ್ರೀಮತಿ ಲಲಿತಮ್ಮನವರನ್ನು. "ಶ್ರೀಯುತ ಕೌಶಿಕರು ಮಂದಸ್ಮಿತ ಸ್ವಭಾವದವರು, ಆಕರ್ಷಕ ವ್ಯಕ್ತಿತ್ವವುಳ್ಳವರು, ಮಿತ ಹಾಗೂ ಮಧುರಭಾಷಿಗಳು, ಪ್ರಕಾಂಡ ಪಂಡಿತರು, ವೇದಾಧ್ಯಯನ ಸಂಪನ್ನರು, ಶ್ರೇಷ್ಠಮಟ್ಟದ ವಿಚಾರವಾದಿಗಳು ಹಾಗೂ ಲೇಖಕರೂ ಆಗಿದ್ದರು. ಎಲ್ಲಕ್ಕಿಂತ ಮಿಗಿಲಾಗಿ ತಮ್ಮ ಜೀವನದಲ್ಲಿ ಮಹತ್ತರ ಕಾರ್ಯವನ್ನು ಸಾಧಿಸಲೇಬೇಕೆಂಬ ಹಠವಾದಿಗಳೂ ಆಗಿದ್ದರು. ಮಾನವತೆಯ ಬಗೆಗೆ - ದೇಶದ ಬಗೆಗೆ, ಇವರ ಅಭಿಮಾನ ಪ್ರಶಂಸನೀಯವಾಗಿದ್ದಿತು," ಇದು ಕೌಶಿಕರನ್ನು ಹತ್ತಿರದಿಂದ ಕಂಡ ಪಂಡಿತರ ಸಾರ್ಥಕ ವರ್ಣನೆ. ಪ್ರಕಾಂಡ ಪಂಡಿತ ಶ್ರೀ ಎಸ್.ಕೆ. ರಾಮಚಂದ್ರರಾವ್ ಹೇಳಿದ್ದಾರೆ, "ಇದುವರೆಗೆ ಪ್ರಕಟವಾಗಿರುವ ಭಗವದ್ಗೀತೆಯ ವ್ಯಾಖ್ಯಾನಗಳಲ್ಲಿ ಭಾರತದರ್ಶನದ್ದು ವಿಶಿಷ್ಟ ರೀತಿಯದ್ದಾಗಿದೆ. ಇದರಲ್ಲಿ ಮಡಿವಂತಿಕೆ ಕಾಣಬರುವುದಿಲ್ಲ. ಕಾರಣವೇನೆಂದರೆ ಕೌಶಿಕರು ಗೀತೆಯ ಪ್ರತಿಯೊಂದು ಶ್ಲೋಕಕ್ಕೂ ಶಂಕರಭಾಷ್ಯ, ಮಾಧ್ವಭಾಷ್ಯ, ರಾಮಾನುಜಭಾಷ್ಯಗಳನ್ನು ಕೊಟ್ಟಿರುವುದೇ ಅಲ್ಲದೆ ತಿಲಕರು, ಗಾಂಧೀಜಿ, ಡಿವಿಜಿ, ಭಂಡಾರ್ಕರ್ ರಿಸರ್ಚ್ ಇನ್‌ಸ್ಟಿಟ್ಯೂಟ್ ಇವರುಗಳ ವ್ಯಾಖ್ಯಾನಗಳನ್ನೂ ನೀಡಿ ಓರ್ವ ಆದರ್ಶ ಲೇಖಕರೆನಿಸಿದ್ದಾರೆ."

ಶ್ರೀಮತಿ ನಾಗಮಣಿ – ಡಾ. ಮಹಾಬಲೇಶ್ವರ

ಹಾಸನ ತಾಲ್ಲೂಕು ಹಿರಗನಹಳ್ಳಿ ಗ್ರಾಮದ ಶ್ರೀ ರಾಮಸ್ವಾಮಿ ಮತ್ತು ಶ್ರೀಮತಿ ಭಾಗ್ಯಲಕ್ಷ್ಮಿ ಅವರ ಮಗ ಡಾ. ಮಹಾಬಲೇಶ್ವರ (೨೯-೦೯-೧೯೫೧). ಭಾಗ್ಯಲಕ್ಷ್ಮಿಯವರು ಶ್ರೀ ಪುಟ್ಟಶಾಮಾಶಾಸ್ತ್ರಿಗಳ ಮಗಳು; 'ಶೃಂಗೇರಿ ಶಾಸ್ತ್ರಿ'ಗಳೆಂದೇ ಖ್ಯಾತರಾಗಿದ್ದ ಪುಟ್ಟಶಾಮಾಶಾಸ್ತ್ರಿಗಳು ಶೃಂಗೇರಿಯಲ್ಲಿ ಅನೇಕ ವರ್ಷ ವಾಸವಾಗಿದ್ದರು; ಶೃಂಗೇರಿ, ಕೂಡಲಿ ಹಾಗೂ ದ್ವಾರಕಾಧೀಶರಿಗೆ ಸಂಪೂರ್ಣ ವೇದಾಂತಪಾಠ ಹೇಳಿಕೊಟ್ಟ ಕೀರ್ತಿ ಅವರದು. ಡಾ. ಮಹಾಬಲೇಶ್ವರ ಎಂ.ಎ., ಬಿ.ಇಡಿ., ಪಿಎಚ್.ಡಿ., ಭದ್ರಾವತಿಯ ಸರ್.ಎಂ.ವಿ. ಸರ್ಕಾರಿ ವಿಜ್ಞಾನ ಕಾಲೇಜಿನಲ್ಲಿ ೩೨ ವರ್ಷ ಸೇವೆ ಸಲ್ಲಿಸಿದ್ದಾರೆ; ಈಗ ಆಯ್ಕೆಶ್ರೇಣಿ ಉಪನ್ಯಾಸಕರಾಗಿದ್ದಾರೆ. 'ಆಪಸ್ತಂಬ ಧರ್ಮಸೂತ್ರ - ಸವಿಮರ್ಶ ಅಧ್ಯಯನ' ಎಂಬ ಸಂಪ್ರಬಂಧಕ್ಕಾಗಿ

ಅವರಿಗೆ ಮೈಸೂರು ವಿಶ್ವವಿದ್ಯಾನಿಲಯದಿಂದ ೧೯೯೨ರಲ್ಲಿ ಪಿಎಚ್.ಡಿ. ಪದವಿ ದೊರೆತಿದೆ. ಕುವೆಂಪು ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಸಂಸ್ಕೃತ ವಿಭಾಗದಲ್ಲಿ ಐದು ವರ್ಷ, ಅದೇ ವಿಶ್ವವಿದ್ಯಾನಿಲಯದಲ್ಲಿ ಬೋರ್ಡ್ ಆಫ್ ಸ್ಟಡೀಸ್ ಸದಸ್ಯ, ಪರೀಕ್ಷಾಮಂಡಳಿ ಸದಸ್ಯ, ಹರಿಹರದ ಎಸ್.ಜೆ.ವಿ.ಪಿ. ಸ್ವಾಯತ್ತ ಕಾಲೇಜು ಹಾಗೂ ಶಿವಮೊಗ್ಗೆಯ ಸಹ್ಯಾದ್ರಿ ಸ್ವಾಯತ್ತ ವಿಜ್ಞಾನ ಕಾಲೇಜಿನ ಬೋರ್ಡ್ ಆಫ್ ಸ್ಟಡೀಸ್ ಸದಸ್ಯರಾಗಿ ಸೇವೆ ಸಲ್ಲಿಸಿದ್ದಾರೆ. ನೂರಕ್ಕೂ ಹೆಚ್ಚು ಸಂಸ್ಕೃತ ಸಂಭಾಷಣಾ ಶಿಬಿರಗಳ ಚಾಲನೆ ಮಾಡಿದ್ದಾರೆ. ಸಂಶೋಧನೆ ಮತ್ತು ಪ್ರಕಟಿತ ಲೇಖನಗಳು (೬), ಸೆಮಿನಾರುಗಳು (೫), ಆಕಾಶವಾಣಿ ಮತ್ತು ದೂರದರ್ಶನ ಕಾರ್ಯಕ್ರಮಗಳು (೪), ಪುಸ್ತಕ ವಿಮರ್ಶೆ (೨), ಪ್ರಕಟಿತ ಪುಸ್ತಕ (೧) ಅವರ ಸಾಧನೆಗಳು. ಹೊಸಹಳ್ಳಿಯ ಶ್ರೇಷ್ಠ ವೇದಜ್ಞರಾದ ಕಾಶೀಮಾಯ ಎಂದೇ ಪ್ರಸಿದ್ಧರಾದ ವೇ||ಬ್ರ|| ಶ್ರೀ ಲಕ್ಷ್ಮೀರಮಣ ಅವಧಾನಿ (+ಶ್ರೀಮತಿ ಅನ್ನಪೂರ್ಣಮ್ಮ) ಅವರ ಮಗಳು ಶ್ರೀಮತಿ ನಾಗಮಣಿ ಅವರು ಮಹಾಬಲೇಶ್ವರರ ಪತ್ನಿ. ಆಕೆ ಸಂಸ್ಕೃತ ಎಂ.ಎ., ಮಾಡಿ ಹತ್ತು ವರ್ಷ ಕಾಲ ಪ್ರೌಢಶಾಲೆಯೊಂದರಲ್ಲಿ ಸಂಸ್ಕೃತವನ್ನು ಕಲಿಸಿದ್ದಾರೆ. ಮಕ್ಕಳು: ಡಾ. ಶರಶ್ಚಂದ್ರ ಭಾರದ್ವಾಜ್, ಎಂ.ಬಿ.ಬಿ.ಎಸ್., ಡಿ.ಎನ್.ಬಿ., ವಯಲಿನ್ ವಾದಕ ಕೂಡ (ಚನ್ನೈನ ಶಂಕರ ನೇತ್ರಾಲಯದಲ್ಲಿ ನೇತ್ರತಜ್ಞ); ಸುಶ್ರುತ ಭಾರದ್ವಾಜ್, ಎಂ.ಟೆಕ್. (ಬೆಂಗಳೂರಿನ ದಯಾನಂದ ಸಾಗರ ಕಾಲೇಜಿನಲ್ಲಿ ಉಪನ್ಯಾಸಕ).

ಶ್ರೀಮತಿ ಬಿ.ಎಸ್. ವಿಜಯಾ ಕೃಷ್ಣಮೂರ್ತಿ – ಪ್ರೊ. ಎಚ್.ಆರ್. ಕೃಷ್ಣಮೂರ್ತಿ

ಶ್ರೀಮತಿ ಲಕ್ಷ್ಮೀದೇವಮ್ಮ ಮತ್ತು ವೇ||ಬ್ರ|| ಶ್ರೀ ರಾಮಸ್ವಾಮಿ ಶಾಸ್ತ್ರಿಗಳ ಪುತ್ರ ಪ್ರೊ. ಎಚ್.ಆರ್. ಕೃಷ್ಣಮೂರ್ತಿ. ಈಗ ಶಿವಮೊಗ್ಗ ಸಮೀಪದ ಹೊಸಹಳ್ಳಿಯಲ್ಲಿ ವಾಸವಾಗಿದ್ದಾರೆ. ಪೂರ್ವಿಕರು ಇಲ್ಲಿಗೆ ಬಂದದ್ದು ಹಾಸನ ಜಿಲ್ಲೆಯ ಹಂದನಹಾಳು (ಪನ್ನವಾಳ್, ಹಂದನಾಳು) ಗ್ರಾಮದಿಂದ. ಇವರದು ನಿತುಂದಿಲಗೋತ್ರ, ಯಜುರ್ವೇದ, ಆಪಸ್ತಂಬಸೂತ್ರ. ಬೆಂಗಳೂರಿನ ಪ್ರತಿಷ್ಠಿತ ಆರ್.ವಿ. ಕಾಲೇಜ್ ಆಫ್ ಇಂಜಿನಿಯರಿಂಗ್‌ನಲ್ಲಿ ಮೆಕ್ಯಾನಿಕಲ್ ಇಂಜಿನಿಯರಿಂಗ್ ವಿಭಾಗದ ಪ್ರಾಧ್ಯಾಪಕ ಮತ್ತು ವಿಭಾಗ ಮುಖ್ಯರಾಗಿದ್ದವರು ಪ್ರೊ. ಎಚ್.ಆರ್. ಕೃಷ್ಣಮೂರ್ತಿ. ಬಿ.ಇ. (ಮೆಕ್ಯಾನಿಕಲ್), ಎಂ.ಇ. (ಮೆಷಿನ್ ಡಿಸೈನ್) (ಮೊದಲ ರ್‍ಯಾಂಕ್), ಎಂ.ಐ.ಇ., ಎಂ.ಐ.ಎಸ್.ಟಿ.ಇ. ವಿದ್ಯಾರ್ಹತೆ ಹೊಂದಿದ ಪ್ರೊ. ಕೃಷ್ಣಮೂರ್ತಿ ಆ ಸಂಸ್ಥೆಯ ಪ್ರಬುದ್ಧ ಪ್ರಾಧ್ಯಾಪಕರಲ್ಲೊಬ್ಬರಾಗಿದ್ದರು. ನಿವೃತ್ತಿಯ ನಂತರವೂ ಬೇಡಿಕೆಯಲ್ಲಿದ್ದರು. ಆದರೆ ಹಳ್ಳಿ ಮತ್ತು ಕೃಷಿಯ ಆಕರ್ಷಣೆ ಅವರನ್ನು ತಮ್ಮ ಊರು ಹೊಸಹಳ್ಳಿಗೆ ಕರೆತಂದಿತು. ಈಗ ಅವರು ಅಲ್ಲಿನ ಪ್ರಯೋಗಶೀಲ ಕೃಷಿಕ ಮಾತ್ರವಲ್ಲ, ಗ್ರಾಮಾಧ್ಯಕ್ಷ ಕೂಡ. ವೇ||ಬ್ರ|| ಶ್ರೀ ರಾಮಸ್ವಾಮಿಶಾಸ್ತ್ರಿಗಳು ವೇದ, ಸಂಸ್ಕೃತ, ಸಂಗೀತ, ಗಮಕವಿದ್ಯೆಯಲ್ಲಿ ಪರಿಣತರಾಗಿದ್ದರು; ಅವರ ಒಬ್ಬ ಮಗ ರಾಮಾಶಾಸ್ತ್ರಿಗಳು ಸಂಗೀತ ವಿದ್ವಾಂಸರು; ಇನ್ನೊಬ್ಬ ಮಗ ಗಮಕ ಗಂಧರ್ವ ಎಚ್.ಆರ್. ಕೇಶವಮೂರ್ತಿ ಅವರಿಗೆ ರಾಜ್ಯ ಪ್ರಶಸ್ತಿ ಮತ್ತು ಕುಮಾರವ್ಯಾಸಪ್ರಶಸ್ತಿ ಸಂದಿವೆ; ಇನ್ನೊಬ್ಬ ಮಗನಾದ ಪ್ರೊ. ಎಚ್.ಆರ್. ಕೃಷ್ಣಮೂರ್ತಿ ತಂತ್ರಜ್ಞಾನ ಕ್ಷೇತ್ರದಲ್ಲಿ ಹೆಸರು ಮಾಡಿದರು; ಹೀಗೆ ಇದು ವಿದ್ವಾಂಸರು ಮತ್ತು ಕಲಾವಿದರ ವಂಶವಾಗಿದೆ. ಪ್ರೊ. ಎಚ್.ಆರ್. ಕೃಷ್ಣಮೂರ್ತಿಯವರ ಧರ್ಮಪತ್ನಿ ಶ್ರೀಮತಿ ವಿಜಯಾ ಅವರು ಹಾಸನ ಜಿಲ್ಲೆ ಬಸವಾಪಟ್ಟಣ ಗ್ರಾಮದ ಮಹಾಕೃಷಿಕ ಶ್ರೀ ಬಿ.ಆರ್. ಸುಬ್ರಾಯಸ್ವಾಮಿ (+ ಶ್ರೀಮತಿ ಶಾರದಮ್ಮ) ಅವರ ಪುತ್ರಿ. ಅವರ ತವರಿನದು ಲೋಹಿತ ಕೌಶಿಕ ಗೋತ್ರ, ಯಜರ್ವೇದ. ವಿಜಯಾ ಅವರ ಮುತ್ತಜ್ಜ ತೀರಿಕೊಂಡಾಗ ಮುತ್ತಜ್ಜಿ ಎರಡು ತಿಂಗಳ ಗರ್ಭಿಣಿ. ಆಕೆ ಧೃತಿಗೆಡದೆ ಸ್ವತಃ ತೋಟವನ್ನು ಅಭಿವೃದ್ಧಿಪಡಿಸಿದರು, ಮಗನನ್ನು ಮುಂದೆ ತಂದರು; ತಂದೆ ಶ್ರೀ ಬಿ.ಆರ್. ಸುಬ್ರಾಯಸ್ವಾಮಿಗಳಾದರೋ ತಮ್ಮ ವಂಶಕ್ಕೆ ತಕ್ಕಂತೆ ಕಾಯಕವೇ ಕೈಲಾಸ ಎಂಬುದನ್ನು ತಮ್ಮ ಬದುಕಿನ ಘೋಷವಾಕ್ಯ ಮಾಡಿಕೊಂಡರು. ಒಬ್ಬ ಮಾದರಿಯಾದ ಸಂಕೇತಿ ಕೃಷಿಕರಾಗಿ ಇತ್ತೀಚಿನವರೆಗೂ ಬೆಳಗಿದರು. ಶ್ರೀಮತಿ ವಿಜಯಾ ಅವರ ತಮ್ಮ ಡಾ. ಬಿ.ಎಸ್. ನಾಗರಾಜರಾವ್ ಸದ್ಯ ಮೈಸೂರಿನಲ್ಲಿ ಡಿ.ಹೆಚ್.ಓ. ಆಗಿ ಸೇವೆ ಸಲ್ಲಿಸುತ್ತಿದ್ದಾರೆ. ಶ್ರೀಮತಿ ವಿಜಯಾ-ಪ್ರೊ. ಕೃಷ್ಣಮೂರ್ತಿ ಅವರ ಮಗ ಡಾ. ಮೋಹನ್ ನ್ಯೂಕ್ಲಿಯರ್ ಮೆಡಿಸಿನ್ ತಜ್ಞರು, ಸೊಸೆ ಡಾ. ರಮ್ಯಾ ಸೈಕಾಲಜಿ ತಜ್ಞರು; ಇಬ್ಬರೂ ಈಗ ಲಂಡನ್‌ನ ಪ್ರತಿಷ್ಠಿತ ಆಸ್ಪತ್ರೆಯಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ.

ಶ್ರೀಮತಿ ಕೆ. ಶಾಂತಾ – ಶ್ರೀ ಕೇಶವ

ಹೊಸಹಳ್ಳಿಯ ಶ್ರೀ ಸುಬ್ಬರಾಯಶಾಸ್ತ್ರಿ ಮತ್ತು ಶ್ರೀಮತಿ ಚನ್ನಮ್ಮ ದಂಪತಿಗಳ ಮಗ ಕೇಶವ ಅವರು (ಜ. ೨೦-೦೫-೧೯೫೧) ಪ್ರೌಢಶಾಲಾ ಶಿಕ್ಷಣವನ್ನು ಪಡೆದಿದ್ದು ಸೊರಬದಲ್ಲಿ, ಬಿ.ಎಸ್‌ಸಿ. ಪದವಿ ಪಡೆದದ್ದು ಶಿವಮೊಗ್ಗದ ದೇಶೀಯ ವಿದ್ಯಾಶಾಲೆ ಕಾಲೇಜಿನಿಂದ, ಎಂ.ಎಸ್‌ಸಿ.

(ಸ್ಟ್ಯಾಟಿಸ್ಟಿಕ್ಸ್) ಪದವಿಗಾಗಿ ಓದಿದ್ದು ಮೈಸೂರಿನಲ್ಲಿ. ವಿಶೇಷವೆಂದರೆ, ಎಂ.ಎಸ್‌ಸಿ. ಪದವಿ ಪಡೆಯುತ್ತಲೇ ಅವರು ತಮ್ಮ ವೃತ್ತಿಜೀವನವನ್ನು ಪ್ರಾರಂಭಿಸಿದ್ದು ಉಪನ್ಯಾಸಕರಾಗಿ, ಅದೂ ತಾವು ಓದಿದ ದೇಶೀಯ ವಿದ್ಯಾಶಾಲೆ ಕಾಲೇಜಿನಲ್ಲಿಯೇ. ಒಂದು ವರ್ಷ ಅಧ್ಯಾಪನವನ್ನು ಮಾಡಿ ಅಸಿಸ್ಟೆಂಟ್ ಸ್ಟ್ಯಾಟಿಸ್ಟಿಕಲ್ ಆಫೀಸರ್ ಆಗಿ ಬೆಂಗಳೂರು ಸೇರಿದರು. ಮಂಡ್ಯನಗರದಲ್ಲಿಯೂ ಕೊಂಚಕಾಲ ಸೇವೆ ಸಲ್ಲಿಸಿದ ಅವರು ಇದೀಗ ಪ್ಲ್ಯಾನ್ ಮಾನಿಟರಿಂಗ್ ಅಂಡ್ ಸ್ಟ್ಯಾಟಿಸ್ಟಿಕ್ಸ್ ಡಿಪಾರ್ಟ್‌ಮೆಂಟಿನಲ್ಲಿ ನಿರ್ದೇಶಕರಾಗಿ ಕಾರ್ಯ ನಿರ್ವಹಿಸುತ್ತ ಬೆಂಗಳೂರಿನಲ್ಲಿ ನೆಲೆಸಿದ್ದಾರೆ. ಪತ್ನಿ ಬ್ಯಾಗತವಳ್ಳಿಯ ಎನ್. ಕೃಷ್ಣಮೂರ್ತಿ ಮತ್ತು ಲಲಿತಮ್ಮ (ಸುಂಕ್ಲಾಪುರ) ದಂಪತಿಗಳ ಮಗಳು ಶಾಂತಾ. ಮಕ್ಕಳು : ಅಶ್ವಿನಿ, ಬಿ.ಇ., (+ಡಾ. ವಿನೋದ್), ಎರಡನೆಯ ಮಗಳು ಅಖಿಲ ಕಾನೂನು ಪದವೀಧರೆ.

ಲೇಖಕರು

ಶ್ರೀ ವಿಜಯ್ ಅಂಗಡಿ

ಮೂಲತಃ ಬಳ್ಳಾರಿ ಜಿಲ್ಲೆಯವರಾದ ಶ್ರೀ ವಿಜಯ್ ಅಂಗಡಿ (ಜ: ೨೨-೭-೧೯೬೫) ಒಬ್ಬ ಕೃಷಿತಜ್ಞ, ಪರಿಸರಪ್ರಿಯ, ಕೃಷಿಬರಹಗಾರ, ಪ್ರಯೋಗಶೀಲ ಧೀರ, ಮುಕ್ತಮನದ ರೈತಬಂಧು.

ಸದ್ಯ ಆಕಾಶವಾಣಿಯ ಹಾಸನ ಕೇಂದ್ರದಲ್ಲಿ ಪ್ರಸಾರ ನಿರ್ವಾಹಕರಾಗಿ ಸೇವೆ ಸಲ್ಲಿಸುತ್ತಿರುವ ವಿಜಯ್ ಅಂಗಡಿ ಕೃಷಿ ವಿಭಾಗದ ಮೂಲಕ ಶ್ರೋತೃವರ್ಗವನ್ನು ಗಣನೀಯವಾಗಿ ವರ್ಧಿಸಿದ ಸಾಹಸಿ.

ವಿಜಯ್ ಅಂಗಡಿ ಹುಟ್ಟಿದ್ದು ಬಳ್ಳಾರಿ ಜಿಲ್ಲೆಯ ಕೂಡ್ಲಿಗಿ ತಾಲ್ಲೂಕು ಎಂ.ಬಿ. ಅಯ್ಯನಹಳ್ಳಿಯ ಬಡ ರೈತ ಕುಟುಂಬದಲ್ಲಿ. ತಾತ ಜವಳಿ ಅಂಗಡಿ ಇಟ್ಟಿದ್ದರಿಂದ 'ವಿಜಯ್' ಜೊತೆಗೆ 'ಅಂಗಡಿ'ಯೂ ಹೆಸರಾಗಿ ಸೇರಿ 'ವಿಜಯ್ ಅಂಗಡಿ' ಆದರು. ತಂದೆ ಶ್ರೀ ಅಂಗಡಿ ತಾಳ್ಕೇರಪ್ಪ ಮತ್ತು ತಾಯಿ ಶ್ರೀಮತಿ ತಿಪ್ಪಮ್ಮ ನೇಗಿಲಯೋಗಿಗಳು; ಬಡವರು, ಆದರೆ ಮರ್ಯಾದೆಯಿಂದ ಬಾಳಿದವರು. ಅವರ ಹತ್ತು ಮಕ್ಕಳಲ್ಲಿ ವಿಜಯ್ ಅಂಗಡಿ ಏಳನೆಯವರು. ಮಿತ ಆಸೆ, ಸರಳತೆ, ಶ್ರಮದ ದುಡಿಮೆಗೆ ಹೆಸರಾದವರು ತಾಳ್ಕೇರಪ್ಪ; ಇದ್ದಷ್ಟರಲ್ಲಿಯೇ ನೆಮ್ಮದಿಕಂಡ ಅವರು ಮಕ್ಕಳನ್ನು ಸನ್ಮಾರ್ಗದಲ್ಲಿ ಬೆಳೆಸಿದರು. ನಿತ್ಯವೂ ಕೃಷಿಕಾಯಕ ಮಾಡಿ ಐದು ಕಿಲೋಮೀಟರ್ ನಡೆದು ತಮ್ಮ ಪ್ರಾಥಮಿಕ ಶಿಕ್ಷಣವನ್ನು ಪೂರೈಸಿದವರು ವಿಜಯ್ ಅಂಗಡಿ. ಹಳ್ಳಿಯ ಶಾಲೆ, ಕನ್ನಡ ಮಾಧ್ಯಮ. ಪ್ರೌಢಶಾಲಾ ಅಧ್ಯಾಪಕರಾದ ಶ್ರೀ ಎಚ್.ಎಸ್. ಶೇಷಗಿರಿರಾವ್-ಶ್ರೀಮತಿ ಕೃಷ್ಣಕುಮಾರಿ ದಂಪತಿಯ ಆಶ್ರಯ, ಪ್ರೋತ್ಸಾಹ; ಮೂಡಿದ ಆತ್ಮವಿಶ್ವಾಸ, ಛಲ. ಪಿಯುಸಿಯಲ್ಲಿ ವಿಜ್ಞಾನ ಕಲಿಕೆ, ಪ್ರಥಮ ದರ್ಜೆಯ ಶ್ರೇಯಸ್ಸು. ತಾಂತ್ರಿಕ, ವೈದ್ಯಕೀಯ ಶಿಕ್ಷಣಕ್ಕೆ ಅವಕಾಶವಿದ್ದರೂ ಕೃಷಿ ಅಧ್ಯಯನದ ಆಯ್ಕೆ, ಬಡತನದ ಬೇಗೆಯನ್ನೆದುರಿಸಲು ಡಾ|| ಎ.ಎಸ್. ಹಾದಿಮನಿ, ಶ್ರೀ ಸುರೇಶ್ ರೆಡ್ಡಿಯಂಥ ಉದಾರಿಗಳ ಆಸರೆ. ಬುದ್ಧಿವಂತ ಬಾಲಕನಿಗೆ ಎಲ್ಲ ಗುರುಗಳ ಉತ್ತೇಜನ. ಶೈಕ್ಷಣಿಕ, ಸಾಂಸ್ಕೃತಿಕ, ಕ್ರೀಡಾ ಮತ್ತು ಸಾಹಿತ್ಯ ವಿಭಾಗಗಳಲ್ಲಿ ಎಲ್ಲರಿಗಿಂತ ವಿಶೇಷವಾಗಿ ಕಂಡದ್ದರಿಂದ ರಾಯಚೂರಿನ ಕೃಷಿ ಮಹಾವಿದ್ಯಾಲಯದಿಂದ 'ಅತ್ಯುತ್ತಮ ವಿದ್ಯಾರ್ಥಿ' ಎಂಬ ಪುರಸ್ಕಾರ. ಧಾರವಾಡದಲ್ಲಿ ಎಂ.ಎಸ್ಸಿ (ಕೃಷಿ) ಅಧ್ಯಯನ (೧೯೮೮-೯೦). ತೋಟಗಾರಿಕೆಯಲ್ಲಿ ವಿಶೇಷ ಆಸಕ್ತಿ, ಡಾ. ಎನ್.ಸಿ. ಹುಲಮನಿ ಅವರ ಮಾರ್ಗದರ್ಶನ. ದ್ರಾಕ್ಷಿ ಬೆಳೆಯ ವಿಶೇಷ ಅಧ್ಯಯನ. ಉದ್ದಕ್ಕೂ ಶ್ರೇಷ್ಠ ಶ್ರೇಯಾಂಕ. ಪತ್ರಿಕೋದ್ಯಮದಲ್ಲಿ ಡಿಪ್ಲೊಮಾ. ಬಡತನ ಅವರನ್ನು ಕ್ರಿಯಾಶೀಲಗೊಳಿಸಿತು. ಸಾಮಾಜಿಕ ಋಣದ ಪ್ರಜ್ಞೆ ಕಾಡಿತು. ಈ ಕಾರಣಗಳು ಅವರನ್ನು ಅವಿರತವಾಗಿ ಮುನ್ನಡೆಸಿದವು.

೧೯೮೮ರಲ್ಲಿ ವಿದ್ಯಾರ್ಥಿದೆಸೆಯಲ್ಲೇ ನಾಡಿನ ವಿವಿಧ ಪತ್ರಿಕೆಗಳಿಗೆ ಲೇಖನ ಬರೆಯತೊಡಗಿದ ವಿಜಯ್ ಅಂಗಡಿ ಈವರೆಗೆ ಎರಡೂವರೆ ಸಾವಿರಕ್ಕೂ ಹೆಚ್ಚು ಲೇಖನಗಳನ್ನು ಪ್ರಕಟಿಸಿದ್ದಾರೆ, ೩೬ಕ್ಕೂ ಹೆಚ್ಚು ಕೃಷಿ ಪುಸ್ತಕಗಳನ್ನು ಪ್ರಕಟಿಸಿದ್ದಾರೆ. ನಿರಂತರ ಅಧ್ಯಯನಶೀಲರಾದ ಅವರು ಎರಡು ಸಾವಿರಕ್ಕೂ ಹೆಚ್ಚಿನ ಕೃಷಿಗ್ರಂಥಗಳ ಖಾಸಗಿ ಭಂಡಾರವನ್ನು ಹೊಂದಿದ್ದಾರೆ. ಒಂಬತ್ತು ಪುಸ್ತಕಗಳನ್ನು ಸಂಪಾದಿಸಿದ್ದಾರೆ, ಇಂಗ್ಲಿಷಿನಿಂದ ಕನ್ನಡಕ್ಕೆ ಪುಸ್ತಕ ಅನುವಾದಿಸಿದ್ದಾರೆ. ಅವರ ಶೈಲಿ ಸರಳ. ಜನಸಾಮಾನ್ಯರಿಗೆ ಅರ್ಥವಾಗದ ಬರಹ ವ್ಯರ್ಥವೆಂಬುದು ಅವರ ಅಭಿಮತ.

ತಮ್ಮ ಸಾಧನೆಗಳ ಆಧಾರದಿಂದಲೇ ಆಕಾಶವಾಣಿಗೆ ಆಯ್ಕೆಯಾದ ಅಂಗಡಿ ತಮ್ಮ ವೃತ್ತಿಜೀವನವನ್ನು ಹಾಸನ ಕೇಂದ್ರದಲ್ಲಿ ಆರಂಭಿಸಿದರು

(೧೯-೧೧-೧೯೯೧). ತಮ್ಮ ಓದಿನ ಜ್ಞಾನದ ಜತೆಗೆ ಸ್ವತಃ ಬೇಸಾಯ ಮಾಡಿ ಅನುಭವವನ್ನು ಶ್ರೀಮಂತಗೊಳಿಸಿಕೊಂಡೇ ರೈತರಿಗೆ ಉಪಯುಕ್ತವಾಗುವಂತೆ ಕಾರ್ಯಕ್ರಮಗಳನ್ನು ನೀಡುತ್ತ ಹೋದರು. ೧೯೯೬ರಲ್ಲಿ 'ಪರಿಸರಪ್ರಿಯ ಕೃಷಿಕರ ಸಂಘಟನೆ'ಯನ್ನು ಹುಟ್ಟುಹಾಕಿದರು. ತಾವು 'ವಿಜಯಣ್ಣ'ನಾಗಿ, ತಮ್ಮ ಸಹೋದ್ಯೋಗಿ ಮಿತ್ರ ಶ್ರೀ ಎನ್. ಕೇಶವಮೂರ್ತಿಯವರು 'ಜಯಣ್ಣ'ನಾಗಿ ಕೃಷಿಕರ ಕಾರ್ಯಕ್ರಮಗಳಿಗೆ ಹೊಸ ರೂಪು ಕೊಟ್ಟರು. ಕೇಳುಗರ ಸಂಖ್ಯೆ ಗಣನೀಯವಾಗಿ ಹೆಚ್ಚಿತು. ರೈತರ ಕೃಷಿ ವಿಧಾನದಲ್ಲಿ ಅಗಾಧ ಸುಧಾರಣೆ ಕಂಡಿತು. ಈ ಕುರಿತೇ ಬೆಂಗಳೂರು ಕೇಂದ್ರದ ಸಹಯೋಗದಿಂದ ಸಂಶೋಧನೆ ನಡೆಸಿದರು. ಈ ಸಂಶೋಧನಾ ವರದಿಗೆ ಅಖಿಲಭಾರತ ಆಕಾಶವಾಣಿ ವಾರ್ಷಿಕ ಸ್ಪರ್ಧೆಯಲ್ಲಿ ಎರಡನೆಯ ಪುರಸ್ಕಾರ ದೊರೆಯಿತು. ಆಕಾಶವಾಣಿಗೆ ಪ್ರಾಯೋಜಿತ ಕಾರ್ಯಕ್ರಮಗಳಿಗೆ ಸಂಪನ್ಮೂಲವನ್ನು ಕ್ರೋಡೀಕರಿಸುವುದರಲ್ಲೂ ಕೃಷಿಕರ ವಿಭಾಗವು ಎಲ್ಲರಿಗಿಂತ ಮುಂದಾಯಿತು. ಹಾಸನದಲ್ಲಿ ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತಿನ ಘಟಕವನ್ನು ಸ್ಥಾಪಿಸಿದರು. ರೈತರ ಕಲ್ಯಾಣ ಕಾರ್ಯಕ್ರಮಗಳಿಗೆ ಗಮನಕೊಟ್ಟರು. ಈವರೆಗೆ ಅವರು ನಡೆಸಿರುವ ಪರಿಸರಪ್ರಿಯ ಕೃಷಿಕರ ಸಮಾರಂಭಗಳು ೧೯. ಅವುಗಳ ಅಂಗವಾಗಿ ಅನುಭವಿ ರೈತರ ಉಪನ್ಯಾಸಗಳು ನಡೆದವು. ಪ್ರಾತ್ಯಕ್ಷಿಕೆಗಾಗಿ ಕೃಷಿ ಪ್ರವಾಸಗಳನ್ನು ಆಯೋಜಿಸಿದರು. ತೋಟಗಳಲ್ಲಿ ಉಳುಮೆ ನಿಲ್ಲಿಸಿದ್ದು, ರಾಸಾಯನಿಕ ಗೊಬ್ಬರ ಮತ್ತು ವಿಷಗಳ ಬಳಕೆಯನ್ನು ಗರಿಷ್ಠವಾಗಿ ತಗ್ಗಿಸಿದ್ದು, ಸಾವಯವ ಗೊಬ್ಬರ ತಯಾರಿಸಿಕೊಂಡಿದ್ದು ಇವರ ಸಾಧನೆ. ಮಣ್ಣಿಗೆ ಹೊದಿಕೆ, ಮಿಶ್ರಬೆಳೆ ಬೇಸಾಯ, ಕೃಷಿ ತ್ಯಾಜ್ಯಗಳ ಮರು ಬಳಕೆ, ನೆಲ-ಜಲ ಸಂರಕ್ಷಣೆ - ಇಂಥ ಉಪಯುಕ್ತ ವಿಚಾರಗಳನ್ನು ರೈತರು ಅಳವಡಿಸಿಕೊಂಡರು, ಲಾಭ ಪಡೆದರು. ಸಂಘಟನೆಗೆ ಶಾಶ್ವತ ನೆಲೆಯನ್ನು ಕಲ್ಪಿಸಲು ವಿಜಯ್ ಅಂಗಡಿ 'ಪುಣ್ಯಭೂಮಿ' ಎಂಬ ಸಂಸ್ಥೆಯನ್ನು ಹುಟ್ಟುಹಾಕಿದರು (೪-೪-೦೪). ಅದು ರೈತ ಚಟುವಟಿಕೆಗಳ ಪ್ರಯೋಗವೇದಿಕೆಯಾಯಿತು. ಆಕಾಶವಾಣಿಯ ಆಯಾ ಸಾಲುಗಳಲ್ಲಿ ಹಾಸನ ಕೇಂದ್ರದ ಸಹಾಯಕ ನಿರ್ದೇಶಕರಾಗಿದ್ದ ಶ್ರೀಮತಿ ಎಸ್.ವಿ. ಪದ್ಮ ಮತ್ತು ನಿರ್ದೇಶಕರಾಗಿದ್ದ ಡಾ|| ವಿಜಯಾ ಹರನ್ ಅವರ ಮಾರ್ಗದರ್ಶನ, ಸಹಕಾರ ಮತ್ತು ಪ್ರೋತ್ಸಾಹ ಇವರಿಗೆ ಪೂರಕವಾಗಿ ಕೂಡಿಬಂತೆಂಬುದು ವಿಜಯ್ ಅಂಗಡಿಯವರ ಕೃತಜ್ಞತಾಪೂರ್ವಕ ನೆನಕೆ.

ರೈತರು, ಸಮಾಜ ಮತ್ತು ದೇಶದ ನೆಮ್ಮದಿಗೆ ಪೂರಕವಾದ ಉಪಕ್ರಮಗಳಿಂದಾಗಿಯೂ ವಿಜಯ್ ಅಂಗಡಿ ಗಮನಾರ್ಹರು. ಅವರು ಸಾಬೂನಿನ ಬದಲು ಬಳಸುವುದು ಹುತ್ತದ ಮಣ್ಣು, ಮುಖಕ್ಷೌರಕ್ಕೆ ಕ್ರೀಮಿನ ಬದಲು ಬಳಸುವುದು ಲೋಳೆಸರದ ರಸ, ಹಲ್ಲುಜ್ಜಲು ಬಳಸುವುದು ಕೆನೆಮಣ್ಣು ಮತ್ತು ಬೆರಳು, ಹಲ್ಲು ಮತ್ತು ಸಮಗ್ರ ಆರೋಗ್ಯಕ್ಕೆ ಕಂಡುಕೊಂಡ ಉಪಾಯ ಹಿತಮಿತನಿಯತ ತಾಂಬೂಲ ಸೇವನೆ, ರೋಗ ಹರಡದಂತೆ ಜಾಗ್ರತೆ ವಹಿಸಲು ಹಿಡಿದದ್ದು ಸ್ವಯಂ ಆಯುಷ್ಕರ್ಮ, ಚರ್ಮಸಂಸ್ಕರಣೆಯಿಂದ ಪರಿಸರಕ್ಕೆ ಆಗುವ ಹಾನಿ ತಪ್ಪಿಸಲು ರೂಢಿಮಾಡಿಕೊಂಡಿದ್ದು ಚಪ್ಪಲಿ ಇಲ್ಲದ ನಡಿಗೆ. ಅವರಿಗೆ ಕೃಷಿ ಪ್ರವಾಸವೇ ತೀರ್ಥಯಾತ್ರೆ, ಕೃಷಿಕರ ನೆಮ್ಮದಿ ಸಾಧನೆಯೇ ದೇವರಪೂಜೆ. ಪರಿಸರ ರಕ್ಷಣೆಗಾಗಿ ಪೆಟ್ರೋಲ್‌ಗಾಡಿಯ ಬಳಕೆ ತಗ್ಗಿಸಿ ಹೆಚ್ಚಾಗಿ ಓಡಾಡುವುದು ಸೈಕಲ್‌ನಲ್ಲಿ. ಮಳೆ ಕೊಯ್ಲು, ತಣ್ಣೀರು ಸ್ನಾನ ಪರಾವಲಂಬನೆ ತಪ್ಪಿಸುವ ಇತರ ಕ್ರಮಗಳು. ಗುಂಡುಸೂಜಿಯ ಬದಲು ಬಳಸುವುದು ಮುಳ್ಳುಗಳನ್ನು. ತಾರಸಿ ತೋಟದ ಮಾಲೀಕನಾಗಿ ಈ ಎಲ್ಲ ಕ್ರಮಗಳ ಹಿಂದೆ ಸರಳತೆ, ಸ್ವದೇಶೀ ನೀತಿ, ಪರಿಸರ ಕಾಳಜಿ, ವಿದೇಶಿ ವಿನಿಮಯದ ಉಳಿತಾಯ, ಆರೋಗ್ಯಪರತೆ, ಮೊದಲಾದ ತತ್ವಗಳಿವೆ. ಜಗತ್ತಿನ ಆಧುನೀಕರಣದ ಹೆಸರಿನ ಹುಚ್ಚು ಪ್ರವಾಹದ ವಿರುದ್ಧ ಈಜುವ ಸಾಹಸ ಅವರದು. ಸದಾ ಸಂಶೋಧನೆಯಲ್ಲಿ ತೊಡಗಿಸಿಕೊಳ್ಳುವುದು ಅವರ ಗುಣ. 'ನಿಸರ್ಗವೇ ಪ್ರತಿಯೊಂದನ್ನೂ ನಿಯಂತ್ರಿಸುತ್ತದೆ. ನಮ್ಮ ಉಳಿವಿಗಾಗಿ ನಾವು ಅತಿಕ್ರಮಿಸಲು ಯತ್ನಿಸಿದರೆ ಅನಾಹುತ ಖಂಡಿತ, ಪರಿಸರ ಸಂರಕ್ಷಣೆಯಲ್ಲಿ ನಾವೇನು ಮಾಡುತ್ತಿದ್ದೇವೆ ಎಂಬುದನ್ನು ಪ್ರತಿಯೊಬ್ಬರೂ ಯೋಚಿಸಬೇಕು' ಎಂಬುದು ಅವರ ಆಗ್ರಹದ ಕರೆ.

ಶುದ್ಧ ಅಭ್ಯಾಸಗಳುಳ್ಳ ವಿಜಯ್ ಅಂಗಡಿಯವರಿಗೆ ಹಳೆಯ ಮತ್ತು ಮಲಿನವಾದ ನಾಣ್ಯ ಮತ್ತು ನೋಟುಗಳನ್ನು ಸಂಗ್ರಹಿಸುವ, ಅಂಚೆ ಚೀಟಿಗಳನ್ನು ಸಂಗ್ರಹಿಸುವ, ಹೊಸ ಅಡುಗೆಗಳನ್ನು ಮಾಡುವ ಹವ್ಯಾಸವಿದೆ. ಕೃಷಿ ನಿದರ್ಶನದ ೨೫೦ಕ್ಕೂ ಹೆಚ್ಚು ಧ್ವನಿಸುರುಳಿಗಳು ಅವರ ಬಳಿ ಇವೆ. ೨೫೦೦ಕ್ಕೂ ಹೆಚ್ಚು ಕೃಷಿ ಛಾಯಾಚಿತ್ರಗಳಿವೆ. ಸಂಶೋಧನ ಸಾಮಗ್ರಿಗಳನ್ನು ಅಚ್ಚುಕಟ್ಟಾಗಿ ನಿರ್ವಹಿಸಿರುವುದು ಅವರ ಹೆಗ್ಗಳಿಕೆ. ಅವರ ಧರ್ಮಪತ್ನಿ ಶ್ರೀಮತಿ ಕೆ.ಎಂ. ಮಂಜುಳಾ. ವಿಜಯ್ ಅಂಗಡಿಯವರ ಸಾಧನೆಗಳ ಹಿಂದೆ ಅವರ ತ್ಯಾಗವೂ ಸೇರಿದೆ. ಚಿ|| ಅಪೂರ್ವ, ಚಿ|| ಅಮೂಲ್ಯ ಅವರ ಮುದ್ದುಮಕ್ಕಳು.

ವಿಜಯ್ ಅಂಗಡಿ ಭಾಗವಹಿಸಿರುವ ಕಾರ್ಯಾಗಾರಗಳು, ನಡೆಸಿಕೊಟ್ಟಿರುವ ಉಪನ್ಯಾಸ, ಪ್ರಾತ್ಯಕ್ಷಿಕೆ, ಕಮ್ಮಟಗಳು, ತಾವು ಸದಸ್ಯರಾಗಿರುವ ಪ್ರತಿಷ್ಠಿತ ಸಂಸ್ಥೆಗಳಲ್ಲಿ ಅವರು ತೊಡಗಿಕೊಂಡಿರುವ ರೀತಿ ಅಸಾಧಾರಣ.

ತಮ್ಮ ವೈವಿಧ್ಯಪೂರ್ಣವೂ, ನಿರಂತರವೂ, ಶ್ರದ್ಧಾಪೂರ್ಣವೂ ಆದ ಸಾಧನೆಗಳಿಗೆ ಹತ್ತಾರು ಪ್ರಶಸ್ತಿ, ಪುರಸ್ಕಾರಗಳನ್ನು ವಿಜಯ್ ಅಂಗಡಿಯವರು

ಸಹಜವಾಗಿಯೇ ಪಡೆದಿದ್ದಾರೆ. ಶಾಲಾಕಾಲೇಜುಗಳ ಸಾಂಸ್ಕೃತಿಕ, ಕ್ರೀಡಾಸ್ಪರ್ಧೆಗಳಿಗೂ, ವೃತ್ತಿ ಜೀವನದ ಕೃಷಿ ಸಾಧನೆಗಳಿಗೂ ಅವು ಸಂದಿವೆ. ರಾಷ್ಟ್ರೀಯ ಸೇವಾ ಯೋಜನೆಯ 'ಅತ್ಯುತ್ತಮ ಶಿಬಿರಾರ್ಥಿ' ಪ್ರಶಂಸೆ (೧೯೮೮) ಎರಡೂ ಸಾರಿ ರಾಜ್ಯಮಟ್ಟದ ಪ್ರಶಸ್ತಿ(೧೯೮೯-೯೦, ೯೦-೯೧); ಸುಸ್ಥಿರ ಕೃಷಿಯನ್ನು ಹಾಸನಜಿಲ್ಲೆಯಲ್ಲಿ ಜನಪ್ರಿಯಗೊಳಿಸುತ್ತಿರುವುದಕ್ಕೆ ಗುಜರಾತ್‌ನ 'ಸೃಷ್ಟಿಸಮ್ಮಾನ್' ಪುರಸ್ಕಾರ (೨೦೦೩); ಕರ್ನಾಟಕ ರಾಜ್ಯ ಮಟ್ಟದ ಸಮಾಜರತ್ನಪ್ರಶಸ್ತಿ (೨೦೦೫); ರಾಜ್ಯಮಟ್ಟದ ಸುವರ್ಣಕರ್ನಾಟಕರತ್ನ ಪ್ರಶಸ್ತಿ (೨೦೦೬); ಕರ್ನಾಟಕ ರಾಜ್ಯ ಪರಿಸರ ಪ್ರಶಸ್ತಿ (೨೦೦೭); ಕೃಷಿರತ್ನ ಪ್ರಶಸ್ತಿ (೨೦೦೮); ಬಾನುಲಿ ಹಸಿರುಸಿರಿ ಪ್ರಶಸ್ತಿ (೨೦೦೯) - ಹೀಗೆ ಈ ಪಟ್ಟಿ ಮುಂದುವರಿಯುತ್ತದೆ.

ಹಾಸನಜಿಲ್ಲೆಯ ರೈತರ ಪರವಾಗಿ ತಿರುಪತಿಹಳ್ಳಿ ಶ್ರೀ ಶಿವಶಂಕರಪ್ಪ ಅವರು ಶ್ರೀ ವಿಜಯ್ ಅಂಗಡಿಯವರನ್ನೂ ಅವರ ಸಾಧನೆಗಳನ್ನೂ ಕುರಿತೇ ಬರೆದಿರುವ ಹೊತ್ತಗೆಯ ಹೆಸರು 'ಪ್ರಕೃತಿಪ್ರಿಯ'; ಚೊಕ್ಕವಾದ ಬರವಣಿಗೆಯಿಂದ ಕೂಡಿದ ಅಚ್ಚುಕಟ್ಟಾದ ನಿರೂಪಣೆಯ ಪುಸ್ತಕ. 'ಪರಿಸರ ಕಾಳಜಿಯ ಮಾದರಿ ಬದುಕಿನ ಡಾ|| ವಿಜಯ್ ಅಂಗಡಿ ಅವರನ್ನು ಕುರಿತ ಬರಹ' ಎಂಬುದು ಲೇಖಕರು ತಮ್ಮ ಹೊತ್ತಗೆಯ ಶೀರ್ಷಿಕೆಗೆ ಕೊಟ್ಟ ವಿವರಣೆ. ಅದನ್ನು ವಿಜಯ್ ಅಂಗಡಿ ಅವರ ಸಾಧನೆಗಳಿಗಾಗಿ ರೈತರು ಸೇರಿ ಅರ್ಪಿಸಿದ ಸಂಭಾವನಾ ಗ್ರಂಥ ಎಂದು ಭಾವಿಸಬಹುದು. ಜನರ ಪ್ರೀತಿಗೆ ಪಾತ್ರರಾಗುವುದೂ ಒಂದು ಪ್ರಶಸ್ತಿಯೇ ಸರಿ.

ಡಾ|| ಎಂ.ಎಸ್. ವಿಜಯಾ ಹರನ್

ಸದ್ಯ ಆಕಾಶವಾಣಿಯ ಮೈಸೂರು ಕೇಂದ್ರದ ನಿಲಯನಿರ್ದೇಶಕಿಯಾಗಿ ಸೇವೆ ಸಲ್ಲಿಸುತ್ತಿರುವ ಶ್ರೀಮತಿ ಎಂ.ಎಸ್. ವಿಜಯಾ ಅವರು ಐಬಿಪಿಎಸ್ (Indian Broadcasting Programme Service): ಇದು ಭಾರತ ಸರ್ಕಾರದ ಕೇಂದ್ರಪ್ರಸಾರ ಮಂತ್ರಾಲಯದವರು, ಭಾರತೀಯ ಪ್ರಸಾರ ಕಾರ್ಯಕ್ರಮ ಸೇವೆ ಎಂದರೆ 'ಪ್ರಸಾರಭಾರತಿಯ ಉನ್ನತ ಶ್ರೇಣಿಯ ಅಧಿಕಾರಿ' ಎಂದು ಗುರುತಿಸಿ ನೀಡುವ ಗೌರವವಾಗಿದೆ. ಮೂಲತಃ ಕೋಲಾರಜಿಲ್ಲೆಯವರು. ಕೋಲಾರ ಚಿನ್ನದಗಣಿಯ ಸಮೀಪದ 'ಮಷಿಕಂ' ಎಂಬುದು ಅವರ ಪೂರ್ವಿಕರ ಊರು. ಅವರದು ಶಾನುಭೋಗರ ಮನೆತನ. ಅವರ ತಂದೆ ಶ್ರೀ ಎಂ.ವಿ. ಶ್ರೀನಿವಾಸಮೂರ್ತಿಯವರು ಶಾನುಭೋಗರಾಗಿದ್ದು ಶಾಲಾ ಅಧ್ಯಾಪಕರಾಗಿ ಸೇವೆಗೆ ಸೇರಿ ಸ್ಕೂಲ್ ಇನ್‌ಸ್ಪೆಕ್ಟರ್ ಆಗಿ ನಿವೃತ್ತಿಗೊಂಡರು. ಅವರು ರಂಗನಾಟಕಗಳಲ್ಲಿ ಭಾಗವಹಿಸುತ್ತಿದ್ದವರು, ರಂಗಗೀತೆಗಳನ್ನು ಚೆನ್ನಾಗಿ ಹಾಡುತ್ತಿದ್ದವರು. ನಿವೃತ್ತರಾದ ಮೇಲೂ ಬಹುವರ್ಷಗಳವರೆಗೆ ಉಪಾಧ್ಯಾಯರಾಗಿಯೂ ಕಲಾವಿದರಾಗಿಯೂ ಕಾರ್ಯನಿರತರಾಗಿದ್ದರು. ವಿಜಯಾ ಅವರ ತಾಯಿ ಶ್ರೀಮತಿ ನರಸಮ್ಮನವರು ಕ್ಯಾತಮಾರನಹಳ್ಳಿ ಶಾನುಭೋಗರಾಗಿದ್ದ ಶ್ರೀ ಪುಟ್ಟನರಸಯ್ಯನವರ ಮಗಳು. ಪುಟ್ಟನರಸಯ್ಯನವರು ಸಮಾಜ ಹಿತವನ್ನು ಸಾಧಿಸಿ ಜನಾನುರಾಗಿಯಾಗಿದ್ದು ಶತಾಯುಷಿಯಾಗಿ ಜೀವಿಸಿದ್ದರು. ಶ್ರೀಮತಿ ನರಸಮ್ಮನವರು ಸಂಪ್ರದಾಯಸ್ಥೆ, ಜಾಣಗೃಹಿಣಿ. ಅವರೂ ಸಂಪ್ರದಾಯಗೀತೆಗಳನ್ನು ಹಾಡುತ್ತಿದ್ದರು, ನಾಟಕಗಳಲ್ಲಿ ಆಸಕ್ತರಾಗಿದ್ದರು, ಕಥೆ ಹೇಳುವ ಕಲೆಯನ್ನು ರಕ್ತಗತಮಾಡಿಕೊಂಡಿದ್ದರು. ಎಂ.ಎಸ್. ವಿಜಯಾ ಅವರ ತಂದೆಯ ತಾಯಿ ಹೆಜ್ಜೆಗೊಂದು ಹಾಡು ಹೇಳುತಿದ್ದ, ಸಂಪ್ರದಾಯಗೀತೆಗಳ ಖಣಿ; ವಿಶೇಷ ರಂಗೋಲಿಗಳನ್ನು ಹಾಕುವುದರಲ್ಲಿ ನಿಪುಣೆ; ಜನಪದ ಕಥೆ, ಗಾದೆಗಳನ್ನು ಹೇಳುವುದರಲ್ಲಿ ಸಿದ್ಧಹಸ್ತರು. ಸಂಗೀತ ಕಲಾನಿಧಿ ಮೈಸೂರು ವಾಸುದೇವಾಚಾರ್ಯರು ಅವರ ಸೋದರಮಾವ; ಅವರ ತಂದೆ ಶ್ರೀಮುಷ್ಣಂ ಪದ್ಮನಾಭರಾಯರು ರಾಜಗುರುಗಳು; ಸಂಸ್ಕೃತ, ತರ್ಕ, ಮೀಸಾಂಸಾ ಶಾಸ್ತ್ರಗಳನ್ನು ಪಾಠ ಹೇಳಿದವರು.

ಸಹಜವಾಗಿಯೇ ಜನಪದ ಗೀತೆಗಳು, ಶಾಸ್ತ್ರೀಯ ಸಂಗೀತ, ನಾಟಕಗಳು, ಗಮಕ ಸಂಗೀತ ಇವುಗಳಲ್ಲಿ ಆಸಕ್ತಿ ಬೆಳೆಸಿಕೊಂಡು ಪರಿಶ್ರಮ ಪಡೆದವರು ಎಂ.ಎಸ್. ವಿಜಯಾ. ಬೆಂಗಳೂರಿನಲ್ಲಿ ಓದಿ ಬೆಂಗಳೂರು ವಿಶ್ವವಿದ್ಯಾನಿಲಯದಿಂದ ಬಿ.ಎ. ಆನರ್ಸ್ ಕನ್ನಡ (೧೯೭೧) ಮತ್ತು ಎಂ.ಎ. (ಕನ್ನಡ) (೧೯೭೩) ಪದವಿಗಳನ್ನು ಪಡೆದುಕೊಂಡ ಅವರು ಖ್ಯಾತರಾದ ಪ್ರೊ. ಎಂ.ವಿ. ಸೀತಾರಾಮಯ್ಯ, ರಂ.ಶ್ರೀ ಮುಗಳಿ, ಜಿ.ಎಸ್. ಶಿವರುದ್ರಪ್ಪ, ಚಿದಾನಂದಮೂರ್ತಿ, ಹಂಪನಾ, ಎನ್.ಎಸ್. ಲಕ್ಷ್ಮೀನಾರಾಯಣ ಭಟ್ಟ ಮೊದಲಾದ ಪಂಡಿತಶಿಕ್ಷಕರ ಶಿಷ್ಯೆ, ಮೈಸೂರು ಆಕಾಶವಾಣಿಯಲ್ಲಿ ಸೇವೆಸಲ್ಲಿಸುತ್ತಿರುವಾಗಲೇ ಡಾಕ್ಟರೇಟ್ ಪದವಿಗಾಗಿ ಅಧ್ಯಯನ ಮಾಡಿದರು. ಖ್ಯಾತ ವಿದ್ವಾಂಸ ಮತ್ತು ಅಂಕಣಕಾರ ಡಾ. ಹಾಮಾನಾ ಅವರೇ ಮಾರ್ಗದರ್ಶಕರು. 'ಆನಂದರ ಬದುಕು ಬರಹ - ಒಂದು ಅಧ್ಯಯನ' ಎಂಬುದು ಅವರ ಸಂಪ್ರಬಂಧದ ವಿಷಯ. ಆ ವಿಷಯಕ್ಕಾಗಿ ಮೈಸೂರು ವಿಶ್ವವಿದ್ಯಾನಿಲಯವು ೧೯೯೮ರಲ್ಲಿ ಡಾಕ್ಟರೇಟ್ ಪದವಿ ನೀಡಿತು. ಮೈಸೂರಿನ ಪ್ರಸಿದ್ಧ ಕಾವ್ಯಾಲಯ ಪ್ರಕಾಶನದವರು ಅದನ್ನು ಪ್ರಕಟಿಸಿದ್ದಾರೆ. 'ಆಲೋಕ' ಎಂಬುದು ಅವರ ಸಾಹಿತ್ಯಿಕ ವಿಮರ್ಶಾ ಲೇಖನಗಳ ಸಂಗ್ರಹ. ಮೈಸೂರಿನ ಸಂವಹನ ಪ್ರಕಾಶನದವರು

ಅದನ್ನು ಪ್ರಕಟಿಸಿದ್ದಾರೆ. ಅನೇಕ ನಿಯತಕಾಲಿಕಗಳಲ್ಲಿ ಅವರ ಲೇಖನಗಳು ಪ್ರಕಟವಾಗುತ್ತಿರುತ್ತವೆ. ರಾಷ್ಟ್ರಮಟ್ಟದ ಬಾನುಲಿ ಸೆಮಿನಾರುಗಳಲ್ಲಿ ಭಾಗವಹಿಸಿ ಪ್ರಬಂಧಗಳನ್ನು ಮಂಡಿಸಿದ ಅನುಭವ ಅವರಿಗಿದೆ. ಮೈಸೂರು ಆಕಾಶವಾಣಿಯ ಅಮೃತಮಹೋತ್ಸವದ ಸಂದರ್ಭದಲ್ಲಿ ಎಂ.ಎಸ್. ವಿಜಯಾ ಅವರ ಸಂಪಾದಕತ್ವದಲ್ಲಿ ಬಂದ ಸ್ಮರಣ ಸಂಚಿಕೆಯು ಅಂಥ ಸಂಚಿಕೆಗಳ ಇತಿಹಾಸದಲ್ಲಿಯೇ ಅಪೂರ್ವವಾದುದೆಂಬ ಕೊಂಡಾಟಕ್ಕೆ ಪಾತ್ರವಾಗಿದೆ. ಮಾಧ್ಯಮಕ್ಷೇತ್ರದಲ್ಲಿ ಅದೊಂದು ಆಕರಗ್ರಂಥವೇ ಆಗಿದೆ. ಅವರ ಆಡಳಿತ, ಪ್ರಸಾರಸೇವೆ, ಸಾಹಿತ್ಯಾಸಕ್ತಿಯನ್ನು ಗುರುತಿಸಿ ಕರ್ನಾಟಕ ಲೇಖಕಿಯರ ಸಂಘವೂ ಸೇರಿ ಅನೇಕ ಸಂಘಸಂಸ್ಥೆಗಳು ಸನ್ಮಾನಿಸಿ ಗೌರವಿಸಿವೆ.

೨೦-೭-೧೯೫೨ರಲ್ಲಿ ಕೋಲಾರ ಚಿನ್ನದಗಣಿಯಲ್ಲಿ (ಕೆಜಿಎಫ್) ಜನಿಸಿದ ಎಂ.ಎಸ್. ವಿಜಯ ಆಕಾಶವಾಣಿಯಲ್ಲಿ ೩೫ ವರ್ಷಗಳಿಂದ ಸೇವೆ ಸಲ್ಲಿಸುತ್ತಿದ್ದಾರೆ. ಉದ್ಘೋಷಕಿ, ಕಾರ್ಯಕ್ರಮ ನಿರ್ವಹಣಾಧಿಕಾರಿ, ಸಹಾಯಕ ನಿರ್ದೇಶಕಿ ಹೀಗೆ ನಾನಾ ಹುದ್ದೆಗಳನ್ನಲಂಕರಿಸಿ ಕಳೆದ ಹತ್ತು ವರ್ಷಗಳಿಂದ ನಿರ್ದೇಶಕಿಯಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಮೈಸೂರು, ಬೆಂಗಳೂರು, ಮಂಗಳೂರು, ಭದ್ರಾವತಿ, ಗುಲ್ಬರ್ಗಾ, ಹಾಸನ ಬಾನುಲಿಕೇಂದ್ರಗಳಲ್ಲಿ ಸೇವೆಸಲ್ಲಿಸಿದ ವಿಸ್ತಾರವಾದ ಅನುಭವ ಅವರಿಗಿದೆ. ಗ್ರಾಮೀಣ ಆರ್ಥಿಕತೆ, ಗ್ರಾಮ್ಯಭಾಷೆಗಳು, ಸಾಂಸ್ಕೃತಿಕ ವೈವಿಧ್ಯ ಮತ್ತು ಸ್ಥಳೀಯ ಇತಿಹಾಸದ ತೃಣಮೂಲ ಅರಿವು ಲಭ್ಯವಾಗಿದೆ. ಬಾನುಲಿ ಭಾಷಣ, ರೂಪಕ, ನಾಟಕಗಳನ್ನು ರಚಿಸಿ, ಸಿದ್ಧಪಡಿಸಿ, ಪ್ರಸ್ತುತಪಡಿಸಿದ್ದಾರೆ. ಸ್ಥಳೀಯ, ಪ್ರಾಂತೀಯ ಮತ್ತು ರಾಷ್ಟ್ರೀಯ ನಾಟಕಗಳನ್ನು ನಿರ್ದೇಶಿಸಿ ನಿರ್ಮಾಣ ಮಾಡಿದ್ದಾರೆ. ಸ್ವತಃ 'ಎ' ಗ್ರೇಡ್ ನಾಟಕ ಕಲಾವಿದೆ. ಗಾದೆಗಳನ್ನಾಧರಿಸಿ ಅವರು ರಚಿಸಿ ಪ್ರಸ್ತುತಪಡಿಸುತ್ತಿರುವ 'ಗಾದೆಗದ್ದುಗೆ' ಎಂಬ ಕಿರುನಾಟಕ ಸರಣಿಯೂ, ಗ್ರಾಮೀಣ ಶಿಕ್ಷಣಕ್ಕಾಗಿ ಅವರು ಪ್ರಸ್ತುತಪಡಿಸುತ್ತಿರುವ 'ಹಟ್ಟಿಹರಟೆ'ಯೂ ವರ್ಷಗಳಿಂದ ನಿಯತವಾಗಿ ಪ್ರಕಟವಾಗುತ್ತಿವೆ; ಅವರಿಗೆ ಅಪಾರ ಜನಮನ್ನಣೆ ತಂದುಕೊಟ್ಟಿವೆ. ಮಂಡ್ಯ, ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಯ ಅಸಂಖ್ಯಾತ ಕೇಳುಗರಿಗೆ, ರೈತಬಂಧುಗಳಿಗೆ ಸಮಗ್ರ ಗ್ರಾಮೀಣ ಅಭಿವೃದ್ಧಿಗಾಗಿ ವಿಶೇಷ ಕಾರ್ಯಕ್ರಮಗಳ ಪ್ರಸಾರವನ್ನೂ ತರಬೇತಿಯನ್ನೂ ಆಯೋಜಿಸಿದ್ದಾರೆ. ಪ್ರಸಾರಕ್ಷೇತ್ರದಲ್ಲಿ ಇದೊಂದು ಮಹತ್ವದ ಹೆಜ್ಜೆ. ಮೈಸೂರು ಬಾನುಲಿ ಕೇಂದ್ರದ ಪ್ರಸಾರಾವಧಿಯನ್ನು ಹೆಚ್ಚಿಸಿದ್ದು ಅವರ ಆಡಳಿತಸಾಧನೆಯ ಮೈಲಿಗಲ್ಲುಗಳಲ್ಲೊಂದು. ಇದೀಗ ಈ ಕೇಂದ್ರದಲ್ಲಿ ಬೆಳಿಗ್ಗೆ ೬ ರಿಂದ ರಾತ್ರಿ ೧೧.೦೫ರವರೆಗೆ ನಿರಂತರ ಪ್ರಸಾರ ನಡೆಯುತ್ತಿದೆ.

ವಿಜಯಾ ಅವರ ಪತಿ ಡಾ|| ಬಿ.ಎಸ್. ಪ್ರಣತಾರ್ತಿಹರನ್ ಕಮಿಷನರೇಟ್ ಆಫ್ ಕೊಲಿಜಿಯೇಟ್ ಎಜುಕೇಷನ್ ಸೇವೆಯಲ್ಲಿದ್ದು ಕನ್ನಡ ಪ್ರಾಧ್ಯಾಪಕರಾಗಿ ನಿವೃತ್ತರಾಗಿದ್ದಾರೆ. ಭಾರತದ ಸಾಂಸ್ಕೃತಿಕ ಅಧ್ಯಯನಕ್ಕಾಗಿ ಮೈಸೂರಿನಲ್ಲಿರುವ ಸಮುದಾಯ ಅಧ್ಯಯನ ಕೇಂದ್ರದ ಸ್ಥಾಪಕ ನಿರ್ದೇಶಕರು. ಅನೇಕ ಕೃತಿಗಳನ್ನು ಬರೆದು, ಸಂಪಾದಿಸಿ, ಪ್ರಕಟಿಸಿದ್ದಾರೆ. ಮಗಳು ಇಂ|| ಶರ್ವಾಣಿ ಹರನ್ ಎಸ್.ಎಸ್.ಎಲ್.ಸಿ. ರ್‍ಯಾಂಕ್ ವಿಜೇತೆ, ಚಿತ್ರಕಲೆಯಲ್ಲಿಯೂ ಸಾಹಿತ್ಯದಲ್ಲೂ ಆಸಕ್ತೆ. ಹಾಸನದ ಮಲ್ನಾಡ್ ಕಾಲೇಜ್ ಆಫ್ ಇಂಜಿನಿಯರಿಂಗ್ ಸಂಸ್ಥೆಯ ವಿದ್ಯಾರ್ಥಿನಿ; ಉದ್ದಕ್ಕೂ ಡಿಸ್ಟಿಂಕ್ಷನ್‌ನಲ್ಲಿ ತೇರ್ಗಡೆ ಹೊಂದಿ ಖ್ಯಾತ ಇನ್‌ಫೋಸಿಸ್ ಸಂಸ್ಥೆಯಲ್ಲಿ ಸಾಫ್ಟ್‌ವೇರ್ ಇಂಜಿನಿಯರಾಗಿ ಸೇವೆ ಸಲ್ಲಿಸಿದ್ದಾರೆ. ಪೂಜ್ಯ ಡಿ.ವಿ.ಜಿ. ಅವರ 'ಮಂಕುತಿಮ್ಮನ ಕಗ್ಗ'ವನ್ನು ಇಂಗ್ಲಿಷ್‌ಗೆ ಅನುವಾದಿಸಿದ ಖ್ಯಾತಿ ಅವರದು; ಸೇವೆಗೆ ಸೇರಿದ ತರುಣದಲ್ಲೇ ಇನ್‌ಫೋಸಿಸ್ ಸಂಸ್ಥೆಯ ಬುಲೆಟಿನ್ ಬೋರ್ಡ್‌ನ ಗೌರವದ ದಾಖಲೆ ಕೂಡ. ಶರ್ವಾಣಿ ಅವರ ಪತಿ ಇಂ|| ಭಾನುಪ್ರಕಾಶ್ ಅಮೆರಿಕದ ಸಾನ್ಹೋಸೆಯಲ್ಲಿ ಜೂನಿಪರ್ ನೆಟ್‌ವರ್ಕ್ ಸಂಸ್ಥೆಯಲ್ಲಿ ಹಾರ್ಡ್‌ವೇರ್ ಇಂಜಿನಿಯರ್; ಪ್ರತಿಭಾವಂತನೆಂದು ಸಂಸ್ಥೆ ಉತ್ತೇಜಿಸಿದೆ. ಚಿ|| ಶರ್ವಾಣಿ ಪತಿ ಭಾನುಪ್ರಕಾಶ್ ಅವರೊಂದಿಗೆ ಈಗ ಕ್ಯಾಲಿಫೋರ್ನಿಯಾದಲ್ಲಿ ನೆಲೆಸಿದ್ದಾರೆ. ಶ್ರೀಮತಿ ಶರ್ವಾಣಿ - ಶ್ರೀ ಭಾನುಪ್ರಕಾಶ್ ದಂಪತಿಯ ಮಗಳು ಚಿ|| ಆರ್ಯಾ ಪ್ರಕಾಶ್ (೨). ಸಂಸಾರವನ್ನು ಜಾಗರೂಕತೆಯಿಂದ ನಿರ್ವಹಿಸಿಕೊಂಡು, ಯಶಸ್ವಿಯಾಗಿ ಸಾರ್ವಜನಿಕ ಸೇವೆಯನ್ನೂ ನಡೆಸಿಕೊಂಡು ಹೋಗುತ್ತಿರುವ ಪ್ರತಿಭಾವಂತ ಮಹಿಳೆಯರ ಸಾಲಿನಲ್ಲಿ ಡಾ|| ಎಂ.ಎಸ್. ವಿಜಯಾ ಹರನ್ ಸೇರಿದ್ದಾರೆ.

ಸಮುದಾಯ ಅಧ್ಯಯನ ಕೇಂದ್ರ

ಆಚಾರ್ಯರು

ಲಿಂಗದಹಳ್ಳಿಯ ಅವಧೂತ ವೇ||ಬ್ರ|| ಶ್ರೀ ನರಸಿಂಹಮೂರ್ತಿಶಾಸ್ತ್ರಿಗಳು

ನಿಕಟಪೂರ್ವ ಗೌರವಾಧ್ಯಕ್ಷರು

ಡಾ|| ಟಿ.ವಿ. ವೆಂಕಟಾಚಲಶಾಸ್ತ್ರೀ, ಮೈಸೂರು

ಪೋಷಕರ ವಿವರ

ಸಂಪುಟಾಧ್ಯಕ್ಷರು

ಶ್ರೀಮತಿ ಕೆ.ಕೆ. ವಿಜಯಲಕ್ಷ್ಮಿ - ಡಾ. ಆರ್.ಎಸ್. ಚಂದ್ರಶೇಖರಮೂರ್ತಿ, ಯು.ಎಸ್.ಎ.

ಶ್ರೀಮತಿ ರೋಸಿಲಿ - ಡಾ. ಆರ್.ಎಸ್.ಎಸ್. ಕೃಷ್ಣಮೂರ್ತಿ, ಯು.ಕೆ.

ಶ್ರೀಮತಿ ರಾಜಲಕ್ಷ್ಮೀ - ಪದ್ಮಶ್ರೀ ಡಾ|| ಮತ್ತೂರು ಕೃಷ್ಣಮೂರ್ತಿ, ಬೆಂಗಳೂರು

ಶ್ರೀಮತಿ ಬಿ.ವಿ. ಸೀತಾ - ಶ್ರೀ ಬಿ.ಎನ್.ವಿ. ಸುಬ್ರಹ್ಮಣ್ಯ, ಬೆಂಗಳೂರು

ಶ್ರೀಮತಿ ಪುಟ್ಟಮ್ಮ - ರುದ್ರಪಟ್ಣ ಶ್ರೀ ವೆಂಕಟರಮಣಯ್ಯ

[ಪರವಾಗಿ: ಶ್ರೀಮತಿ ನಾಗರತ್ನ (ಪಾಪು) - ಶ್ರೀ ಆರ್.ವಿ. ಕೃಷ್ಣಮೂರ್ತಿ

ಶ್ರೀಮತಿ ಸಬಿತಾ - ಬ್ರಿಗೇಡಿಯರ್ (ನಿ.) ಶ್ರೀ ಆರ್.ವಿ. ಸೀತಾರಾಮಯ್ಯ,

ಶ್ರೀಮತಿ ಸಾವಿತ್ರಮ್ಮ - ಶ್ರೀ ಎಚ್.ಎಸ್. ಅನಂತರಾಮು]

ಡಾ|| ಎಂ.ಎಸ್. ವಿಜಯಾ ಹರನ್ - ಡಾ|| ಬಿ.ಎಸ್. ಪ್ರಣತಾರ್ತಿಹರನ್, ಮೈಸೂರು

[ಇವರ ಪರವಾಗಿ: ಶ್ರೀಮತಿ ಎಂ.ಎಸ್. ಪಾರ್ವತಮ್ಮ - ವ್ಯಾಕರಣ ವಿದ್ವಾನ್ ಶ್ರೀ ಬಿ.ಎಸ್. ಸುಬ್ಬರಾಯ ಶಾಸ್ತ್ರೀ, ಬಸವಾಪಟ್ಟಣ]

ಸಂಪುಟ ಉಪಾಧ್ಯಕ್ಷರು

ಭಾರತೀಯ ವಿದ್ಯಾಭವನ ಶಾಖೆಯ ಅಭಿಮಾನಿಗಳು, ಲಂಡನ್

ಶ್ರೀಮತಿ ಸುಂದರಮಣಿ - ಶ್ರೀ ನಟೇಶ್ ಮಗ್ಗೆ, ಯು.ಎಸ್.ಎ.

ಡಾ|| ಸುಪ್ರಿಯಾ - ಡಾ|| ಎಸ್. ಶ್ರೀಧರ್, ಯು.ಎಸ್.ಎ.

ಶ್ರೀಮತಿ ವಿನಯ - ಡಾ|| ಜಯ್ ಕೆ. ರಂಗಪ್ಪ, ಯು.ಎಸ್.ಎ.

ಮಹಾದಾನಿಗಳು

ಶ್ರೀಮತಿ ಶಾರದಾಬಾಯಿ - ಶ್ರೀ ಹರಿ ಆಚಾರ್ಯ, ಮಂಡ್ಯ

ಶ್ರೀಮತಿ ಆರ್.ಎಸ್. ಸಾವಿತ್ರಿ - ಶ್ರೀ ಬಿ.ವಿ. ವೆಂಕಟನಾರಾಯಣ, ಮೈಸೂರು

ಶ್ರೀಮತಿ ಭಾಗ್ಯಲಕ್ಷ್ಮಿ - ಶ್ರೀ ಸುಬ್ಬರಾವ್ ಲಕ್ಷ್ಮೀಕೇಶವ, ಬೆಂಗಳೂರು

ಶ್ರೀಮತಿ ಎಲ್.ಹೆಚ್. ವಿಶಾಲಾಕ್ಷಿ - ಶ್ರೀ ಎಲ್.ವಿ. ಹಿರಿಯಣ್ಣ,

[ಇಂದ: ಶ್ರೀಮತಿ ನಳಿನಿ - ಶ್ರೀ ಡಾ. ಎಲ್ಎಚ್. ಮಂಜುನಾಥ, ಧರ್ಮಸ್ಥಳ]

ಶ್ರೀಮತಿ ರಾಜೇಶ್ವರಿ - ಶ್ರೀ ಎಚ್.ಆರ್. ಕೇಶವಮೂರ್ತಿ, ಹೊಸಹಳ್ಳಿ

ಮಹಾಪೋಷಕರು

ಶ್ರೀಮತಿ ಕಮಲಮ್ಮ - ಶ್ರೀ ಕೆ. ನಾಗರಾಜ್, ಬೆಂಗಳೂರು
ಶ್ರೀಮತಿ ಜಯಲಕ್ಷ್ಮೀ - ಶ್ರೀ ಕೆ. ಸುಬ್ಬರಾಯನ್, ಬೆಂಗಳೂರು
ಶ್ರೀಮತಿ ಸಾವಿತ್ರಮ್ಮ - ಶ್ರೀ ವೈ.ಎನ್. ನರಸಿಂಗರಾವ್, ಮೈಸೂರು
ಶ್ರೀಮತಿ ಎಂ.ವಿ. ವೆಂಕಟಲಕ್ಷ್ಮಿ - ಶ್ರೀ ಎಂ.ಎಸ್. ರಾಮರಾವ್, ಮೈಸೂರು
ಶ್ರೀಮತಿ ಲಕ್ಷ್ಮಿ - ಶ್ರೀ ಎಚ್.ಕೆ. ವೆಂಕಟರಾಮಯ್ಯ, ಮೈಸೂರು
ಶ್ರೀಮತಿ ಎಚ್.ಕೆ. ಜಯಲಕ್ಷ್ಮಮ್ಮ - ಶ್ರೀ ಎಂ.ಎಸ್. ಕೇಶವಮೂರ್ತಿ, ನವಿಲೆ
ಶ್ರೀಮತಿ ಎಚ್.ಎಸ್. ಸಾವಿತ್ರಿ - ಶ್ರೀ ಎಂ.ಆರ್. ನರಸಿಂಹಮೂರ್ತಿ, ಬೆಂಗಳೂರು
ಶ್ರೀಮತಿ ಸ್ವರ್ಣಾ - ಶ್ರೀ ಹರಿಪ್ರಸಾದ್, ಬೆಂಗಳೂರು
ಶ್ರೀಮತಿ ಗೌರಮ್ಮ - ಶ್ರೀ ಸಿ.ಕೆ. ನಾಗಪ್ಪಯ್ಯ
(ಇಂದ: ಶ್ರೀಮತಿ ಎಂ.ಎಸ್. ಶಶಿಕಲಾಮೂರ್ತಿ - ಶ್ರೀ ಸಿ.ಎನ್. ಕೇಶವಮೂರ್ತಿ,
ಶ್ರೀಮತಿ ಸಿ.ಎಸ್. ಶ್ರೀಲಕ್ಷ್ಮೀ - ಶ್ರೀ ಸಿ.ಎನ್. ಗುರುನಾಥ, ಚಿಲ್ಕುಂದ)
ಶ್ರೀಮತಿ ನಾಗರತ್ನಮ್ಮ - ಶ್ರೀ ಎಚ್.ಎಸ್. ರಾಮಕೃಷ್ಣಯ್ಯ, ಹಾನಗಲ್
(ಇಂದ: ಶ್ರೀಮತಿ ಎಂ.ಆರ್. ನಂದಿನಿ - ಶ್ರೀ ಎಚ್.ಆರ್. ನಾಗರಾಜ್, ಬೆಟ್ಟದಪುರ)
ಶ್ರೀಮತಿ ಕೆ.ಎನ್. ರೋಹಿಣಿ - ಶ್ರೀ ಸಿ.ಎಸ್. ಸುಬ್ರಹ್ಮಣ್ಯ, ಚಿಲ್ಕುಂದ
ಶ್ರೀಮತಿ ಎಂ.ಎಸ್. ಪ್ರಭಾವತಿ - ಶ್ರೀ ಪಿ.ಎಸ್. ಶ್ರೀನಿವಾಸಮೂರ್ತಿ, ಪಿರಿಯಾಪಟ್ಟಣ
ಶ್ರೀಮತಿ ಎಚ್.ಎನ್. ಅನಸೂಯಮ್ಮ - ಶ್ರೀ ವೈ.ಎನ್. ಸತ್ಯನಾರಾಯಣ, ಹಾಸನ
ಶ್ರೀಮತಿ ಎಂ.ಎಸ್. ರುಕ್ಮಿಣಿ - ಶ್ರೀ ಎಚ್.ಆರ್. ಸೂರ್ಯನಾರಾಯಣ, ಮೈಸೂರು
ಶ್ರೀಮತಿ ಪಂಕಜ - ಪ್ರೊ. ಕೆ.ಎಸ್. ಕೃಷ್ಣಮೂರ್ತಿ, ಬೆಂಗಳೂರು
ಶ್ರೀಮತಿ ನಿರಂಜನಿ - ಶ್ರೀ ಕೆ.ಎಸ್. ಬಾಲಚಂದ್ರ, ಮೈಸೂರು
ಶ್ರೀಮತಿ ಆರ್. ಶಾರದಮ್ಮ - ಶ್ರೀ ರು.ಗೋ. ರಾಮಸ್ವಾಮಿ, ಮೈಸೂರು
ಶ್ರೀಮತಿ ಎಚ್.ಎಸ್. ಸೌದಾಮಿನಿ - ಶ್ರೀ ಆರ್.ವಿ. ಅಶ್ವತ್ಥನಾರಾಯಣ, ಮೈಸೂರು
ಶ್ರೀಮತಿ ಕುಮುದ ಎನ್. ಪ್ರಸಾದ್ - ಶ್ರೀ ಬಿ.ಎಸ್. ನಾಗೇಂದ್ರ ಪ್ರಸಾದ್, ಬೆಂಗಳೂರು
ಶ್ರೀಮತಿ ಎಸ್. ನಾಗಲಕ್ಷ್ಮಿ - ಶ್ರೀ ಬಿ.ವಿ. ಸುಬ್ಬರಾಮಯ್ಯ, ಬಸವಾಪಟ್ಟಣ
(ಪರವಾಗಿ: ಶ್ರೀಮತಿ ಉಷಾ ನಾರಾಯಣ್ - ಶ್ರೀ ಬಿ.ಎಸ್. ಲಕ್ಷ್ಮೀನಾರಾಯಣ)
ಶ್ರೀಮತಿ ಸುಮನ್ ಸುಬ್ರಹ್ಮಣ್ಯ - ಶ್ರೀ ಬಿ.ಎಸ್. ಸುಬ್ರಹ್ಮಣ್ಯ (ಫಣೀಶ್), ಬಳ್ಳಾರಿ
ಶ್ರೀಮತಿ ಬಿ.ಎಸ್. ನಾಗರತ್ನ - ಶ್ರೀ ಎ.ವಿ. ಶಂಕರಮೂರ್ತಿ, ಅಗ್ರಹಾರ
ಶ್ರೀಮತಿ ಎಂ.ಆರ್. ಅನಂತಲಕ್ಷ್ಮಿ - ಶ್ರೀ ಎಲ್.ಎಮ್.ಎಲ್. ಶಾಸ್ತ್ರಿ, ಶಿವಮೊಗ್ಗ
ಶ್ರೀಮತಿ ವಾಣಿ - ಶ್ರೀ ಎಂ.ಸಿ. ಶಂಕರಶಾಸ್ತ್ರಿ, ಬೆಂಗಳೂರು
ಶ್ರೀಮತಿ ರಾಧಾ - ಶ್ರೀ ಎಂ.ಆರ್. ರವಿಕುಮಾರ್, ಯು.ಎಸ್.ಎ.
ಶ್ರೀಮತಿ ಶರ್ವಾಣಿ ಹರನ್ - ಶ್ರೀ ಭಾನುಪ್ರಕಾಶ್, ಯು.ಎಸ್.ಎ.
ಶ್ರೀಮತಿ ನಾಗವೇಣಿ - ವೇ||ಬ್ರ|| ಶ್ರೀ ಮಾರ್ಕಂಡೇಯ ಅವಧಾನಿ, ಮತ್ತೂರು
ಶ್ರೀಮತಿ ವಿನೋದಾ - ಶ್ರೀ ಎಂ.ಎಸ್. ಶ್ರೀನಿವಾಸ, ಮೈಸೂರು
ಶ್ರೀಮತಿ ನಾಗಲಕ್ಷ್ಮಮ್ಮ - ಹನ್ನಾಳ್ ಶ್ರೀ ನಾರಣಪ್ಪ ವೆಂಕಟಸುಬ್ಬಯ್ಯ
(ಇವರ ಪರವಾಗಿ ಶ್ರೀ ವಿ. ಮುಕುಂದಕುಮಾರ ಇ/ಮ ಶ್ರೀಮತಿ ಆರ್.ಎಸ್. ಸಾವಿತ್ರಿ - ಶ್ರೀ ಬಿ.ವಿ. ವೆಂಕಟನಾರಾಯಣ, ಮೈಸೂರು)

ಶ್ರೀಮತಿ ಡಾ|| ಮೀರಾಮೂರ್ತಿ - ಶ್ರೀ ಕೆ.ಆರ್. ರಾಮಕೃಷ್ಣ, ಮೈಸೂರು
ಶ್ರೀಮತಿ ಸಿ.ಎಸ್. ಮಂಜುಳ - ಶ್ರೀ ಬಿ.ವಿ. ನಾಗೇಶ್, ಬೆಂಗಳೂರು
ಶ್ರೀಮತಿ ತಾರಾ ಗೋವಿಂದರಾಜು - ಶ್ರೀ ಗೋವಿಂದರಾಜು, ರುದ್ರಪಟ್ನ
ಶ್ರೀಮತಿ ಕೆ. ಶಾಂತಾ - ಶ್ರೀ ಕೇಶವ, ಬೆಂಗಳೂರು
ಶ್ರೀಮತಿ ಪ್ರೇಮಲತಾ - ಶ್ರೀ ಎಂ.ಆರ್. ರಾಮಶೇಷ, ಮಾದಾಪುರ
ಶ್ರೀಮತಿ ಎಂ.ಆರ್. ಪ್ರಭಾವತಿ - ಶ್ರೀ ಎಂ.ಕೆ. ಚೆನ್ನಕೇಶವ, ಮುದ್ದಾಪುರ

ಪೋಷಕರು

ಶ್ರೀಮತಿ ಶಾಂತಾ - ಶ್ರೀ ಕೆ. ಲಕ್ಷ್ಮಣರಾವ್, ಮೈಸೂರು
ಶ್ರೀಮತಿ ಲಕ್ಷ್ಮೀಕಿರಣ - ಶ್ರೀ ಜಿ. ಆನಂದಕುಮಾರ್, ಮೈಸೂರು
ಶ್ರೀಮತಿ ಕೆ.ಎನ್. ಸುಶೀಲಮ್ಮ - ಶ್ರೀ ಆರ್.ಎಸ್. ವಾಸುದೇವಮೂರ್ತಿ, ಮೈಸೂರು
ಶ್ರೀಮತಿ ಎಂ. ಗಾಯತ್ರಿ - ಶ್ರೀ ದೇವರಾಜು, ಮಂಡ್ಯ
ಶ್ರೀಮತಿ ಲಲಿತಮ್ಮ - ಶ್ರೀ ಎಚ್.ಕೆ. ಸುಬ್ಬಣ್ಣ, ಹಾಸನ
ಶ್ರೀಮತಿ ಎಂ.ಎನ್. ರಾಜಲಕ್ಷ್ಮಿ - ಶ್ರೀ ಎನ್. ಕೃಷ್ಣಮೂರ್ತಿ, ಹಾಸನ
ಶ್ರೀಮತಿ ಸುಬ್ಬಲಕ್ಷ್ಮಿ - ಶ್ರೀ ಎಚ್. ರಾಮನಾಥನ್, ಹಾಸನ
ಡಾ. ಎಸ್.ಕೆ. ಸುಶೀಲಾಬಾಯಿ - ಶ್ರೀ ಎಸ್. ಕೃಷ್ಣಮೂರ್ತಿ, ಹಾಸನ
ಶ್ರೀ ಆರ್. ಪ್ರಕಾಶ್ ಇ/ಮ ರು.ಗೋ. ರಾಮಸ್ವಾಮಿ, ಮೈಸೂರು
ಶ್ರೀಮತಿ ಪ್ರಫುಲ್ಲ - ಶ್ರೀ ಕೆ.ಎಸ್. ಕೃಷ್ಣಮೂರ್ತಿ, ಬೆಂಗಳೂರು
ಶ್ರೀಮತಿ ಜಯಶ್ರೀ - ಡಾ|| ಬಿ. ಚನ್ನಕೇಶವ, ಮೈಸೂರು
ಶ್ರೀಮತಿ ಸರಸ್ವತಿ ರಾವ್ - ಮೈಸೂರುಮನೆ ಶ್ರೀ ಎನ್. ಸುಬ್ಬರಾವ್, ಬೆಂಗಳೂರು
ಶ್ರೀಮತಿ ಸುಕನ್ಯಾ - ಶ್ರೀ ಲಕ್ಷ್ಮೀಶ, ಹಾಸನ
ಶ್ರೀಮತಿ ಭಾಗ್ಯ - ಶ್ರೀ ಸೂರ್ಯನಾರಾಯಣ, ಹಾಸನ
ಶ್ರೀಮತಿ ಸತ್ಯವತಿ - ಶ್ರೀ ಹರವೆ ಕೇಶವಮೂರ್ತಿ, ಮೈಸೂರು
ಡಾ|| ಆರ್. ಇಂದಿರಾ - ಶ್ರೀ ಎಸ್.ಕೆ. ಲಕ್ಷ್ಮೀನಾರಾಯಣ (ಬಾಬು), ಮೈಸೂರು
ಶ್ರೀಮತಿ ಕೆ.ಎಸ್. ನಾಗಮ್ಮ - ಶ್ರೀ ಬಿ.ಕೆ. ವಿಶ್ವನಾಥರಾವ್, ಬೆಂಗಳೂರು
ಶ್ರೀಮತಿ ಸರಳ - ಶ್ರೀ ಬಿ.ಕೆ. ರಾಮಚಂದ್ರ, ಬಸವಾಪಟ್ಟಣ
ಶ್ರೀಮತಿ ವಾಣಿ - ಪ್ರೊ. ಎಂ.ಎನ್. ಚಂದ್ರಶೇಖರ್, ಬೆಂಗಳೂರು
ಶ್ರೀಮತಿ ಎಸ್. ಮೀರಾ - ಶ್ರೀ ಶ್ರೀಧರ್, ಯು.ಎಸ್.ಎ.
ಶ್ರೀಮತಿ ಸುಬ್ಬಲಕ್ಷ್ಮಿ - ಶ್ರೀ ಕೆ.ವಿ. ನಾಗರಾಜ್, ಮೈಸೂರು
ಶ್ರೀಮತಿ ಸಂಪತ್‌ಲಕ್ಷ್ಮಿ - ಶ್ರೀ ಸಿ.ಆರ್. ನಾಗರಾಜ್, ಮೈಸೂರು
ಶ್ರೀಮತಿ ವೀಣಾ ಎನ್. - ಶ್ರೀ ನಾರಾಯಣ ಸುಬ್ಬರಾವ್, ಯು.ಎಸ್.ಎ.
ಶ್ರೀಮತಿ ಪೂರ್ಣಿಮಾ - ಶ್ರೀ ಐ.ಎನ್. ವೆಂಕಟಸುಬ್ಬರಾವ್, ಐಚನಹಳ್ಳಿ
ಶ್ರೀಮತಿ ಎಚ್.ಎಂ. ಜಯಶ್ರೀ ಶಾಸ್ತ್ರಿ - ಶ್ರೀ ಹನಸೋಗೆ ಎಸ್. ಶಾಸ್ತ್ರಿ. ಯು.ಎಸ್.ಎ.
ಶ್ರೀಮತಿ ವಾಸಂತಿ - ಶ್ರೀ ಜಿ. ಮಯೂರಸಿಂಹ, ಯು.ಎಸ್.ಎ.
ಶ್ರೀಮತಿ ಗೀತಾ - ಶ್ರೀ ಕೆ.ವಿ. ನಟೇಶ್, ಚನ್ನರಾಯಪಟ್ಟಣ

ಟಿ.ಬಿ.ಎಸ್. ವಠಾರ ಟ್ರಸ್ಟ್ (ರಿ.), ಬಸವಾಪಟ್ಟಣ
ಶ್ರೀಮತಿ ಐ.ವಿ. ರಮಾಮಣಿ - ಶ್ರೀ ಕೆ.ಎಸ್. ನಾಗರಾಜ, ಪಿರಿಯಾಪಟ್ಟಣ
ಶ್ರೀಮತಿ ಎನ್. ಜಯಲಕ್ಷ್ಮಿ - ಶ್ರೀ ಪಿ.ಎನ್. ನರಸಿಂಹಮೂರ್ತಿ, ಹಾಸನ
ಶ್ರೀಮತಿ ಮೀರಾ - ಶ್ರೀ ಎಚ್.ಕೆ. ಸುಬ್ಬರಾಮಯ್ಯ, ಬೆಂಗಳೂರು
ಶ್ರೀಮತಿ ಪಿ.ಕೆ. ವಸಂತಲಕ್ಷ್ಮಿ - ಶ್ರೀ ಬಿ.ಎನ್. ರಘುನಾಥ, ಹಾಸನ
ಶ್ರೀಮತಿ ಎಚ್.ಕೆ. ನಾಗಲಕ್ಷ್ಮಿ, ಮೈಸೂರು
ಶ್ರೀಮತಿ ಸಾವಿತ್ರಮ್ಮಜ್ಜಿ, ಶ್ರೀಮತಿ ಆರ್.ಎಸ್. ಗಾಯತ್ರಮ್ಮ, ಹಾಸನ
ಶ್ರೀಮತಿ ಎನ್.ಎಸ್. ಸರಸ್ವತಿ - ಶ್ರೀ ಎಂ. ನಾಗರಾಜ್, ಮೈಸೂರು
ಶ್ರೀಮತಿ ಅನ್ನಪೂರ್ಣ - ಶ್ರೀ ಎಚ್.ಎಸ್. ಗೋಪಾಲ್, ಹೊಸಹಳ್ಳಿ
ಶ್ರೀಮತಿ ಜಯಂತಿ - ಡಾ|| ಸಿ.ಎಸ್. ರಾಮಚಂದ್ರ, ಮೈಸೂರು
ಶ್ರೀಮತಿ ಭಾಗ್ಯಲಕ್ಷ್ಮಿ - ಶ್ರೀ ಎಸ್.ಎನ್. ನಾರಾಯಣ, ಬೆಂಗಳೂರು
ಶ್ರೀಮತಿ ಲಕ್ಷ್ಮಿ - ಶ್ರೀ ಎಚ್.ಕೆ. ಸತ್ಯನಾರಾಯಣ, ಮೈಸೂರು
ಶ್ರೀಮತಿ ಎಸ್.ಆರ್. ನಾಗರತ್ನಮ್ಮ - ಶ್ರೀ ಸಾ.ನಾ. ಶ್ರೀಕಂಠಯ್ಯ, ಮೈಸೂರು
ಡಾ. ಜಯಶ್ರೀ ಎಚ್. ಬೆಂಗೇರಿ - ಡಾ. ಎ.ಎಸ್. ಚಂದ್ರಶೇಖರ್, ಮೈಸೂರು
ಭಾರತ ದರ್ಶನ (ಇವರ ಪರವಾಗಿ: ಶ್ರೀಮತಿ ಲಲಿತಮ್ಮ ಕೌಶಿಕ್ - ಶ್ರೀ ಕೆ.ಎಸ್. ಕೌಶಿಕ್)
ಶ್ರೀಮತಿ ಎಲ್. ಮಾನಸ - ಶ್ರೀ ಪಿ.ಎನ್. ಫಣೀಶ್, ಬೆಂಗಳೂರು
ಶ್ರೀಮತಿ ಬಿ.ಎಸ್. ವಿಜಯಾ ಕೃಷ್ಣಮೂರ್ತಿ - ಪ್ರೊ. ಎಚ್.ಆರ್. ಕೃಷ್ಣಮೂರ್ತಿ, ಹೊಸಹಳ್ಳಿ
ಶ್ರೀಮತಿ ಎಂ.ಸಿ. ಅನ್ನಪೂರ್ಣ - ಶ್ರೀ ಎಲ್.ಕೆ. ವಾಮನ, ಹುಬ್ಬಿ
ಶ್ರೀಮತಿ ಎ.ಆರ್. ಸುಕನ್ಯ - ಶ್ರೀ ಎಲ್.ವಿ. ವಸಂತಕುಮಾರ, ಲಿಂಗದಹಳ್ಳಿ
ಶ್ರೀಮತಿ ನಾಗಮಣಿ - ಡಾ|| ಮಹಾಬಲೇಶ್ವರ, ಹೊಸಹಳ್ಳಿ
ಶ್ರೀಮತಿ ಸುಮಾ - ಶ್ರೀ ಎಲ್.ಎಸ್. ರಾಮಚಂದ್ರ, ಖರಗ್‌ಪುರ
ಶ್ರೀಮತಿ ಪ್ರಭಾವತಿ - ಶ್ರೀ ಭಾನುಪ್ರಕಾಶ್, ಮತ್ತೂರು
(ಪರವಾಗಿ: ಶ್ರೀಮತಿ ಪ್ರಸನ್ನಲಕ್ಷ್ಮಿ - ವೇ||ಬ್ರ|| ಶ್ರೀ ಭಾಸ್ಕರ ಅವಧಾನಿ, ಮತ್ತೂರು)
ಶ್ರೀಮತಿ ಐ.ಎಸ್. ಶಕುಂತಲಾ - ಶ್ರೀ ಸಿ.ಎನ್. ನರಸಿಂಹಮೂರ್ತಿ, ಪಿರಿಯಾಪಟ್ಟಣ

ದಾನಿಗಳು

ಶ್ರೀಮತಿ ಪ್ರಭಾಮೂರ್ತಿ - ಶ್ರೀ ಬಿ.ಕೆ. ಕೇಶವಮೂರ್ತಿ, ಮೈಸೂರು
ಶ್ರೀಮತಿ ಸರೋಜ - ಶ್ರೀ ಎಚ್.ಆರ್. ಹಿರಿಯಣ್ಣ, ಮೈಸೂರು
ಶ್ರೀಮತಿ ಸುಬ್ಬಲಕ್ಷ್ಮಿ - ಶ್ರೀ ನಾಗೇಶ್, ಬೆಂಗಳೂರು
ಶ್ರೀಮತಿ ಕೆ.ಎಸ್. ಲೀಲಾವತಿ - ಶ್ರೀ ಕೆ.ಎಸ್. ಶಾಮಣ್ಣ, ಮೈಸೂರು
ಶ್ರೀಮತಿ ಪಾರ್ವತಿ - ಶ್ರೀ ಪಿ.ಆರ್. ಹರಿಹರನ್, ಮೈಸೂರು
ಶ್ರೀಮತಿ ರಾಧಾ - ಶ್ರೀ ಆರ್.ಎಸ್. ಅನಂತನಾರಾಯಣ, ಬೆಂಗಳೂರು
ಶ್ರೀಮತಿ ಶಶಿಕಲಾ - ಶ್ರೀ ವೆಂಕಟೇಶಮೂರ್ತಿ, ಮೈಸೂರು
ಶ್ರೀಮತಿ ಲೀಲಾವತಿ - ಶ್ರೀ ಜಿ.ಕೆ. ನರಸಿಂಹಮೂರ್ತಿ, ಮಂಡ್ಯ
ಶ್ರೀಮತಿ ಸುಧಾ - ಶ್ರೀ ಎ.ಎಸ್. ಅರುಣಕುಮಾರ್, ಮಂಡ್ಯ
ಶ್ರೀಮತಿ ಲಲಿತಮ್ಮ - ಶ್ರೀ ಕೇಶವಮೂರ್ತಿ, ಕೊಣನೂರು

ಆದ್ಯರು

ಶ್ರೀನಾಚಾರಮ್ಮ ನವಶತಮಾನೋತ್ಸವ ಪುಸ್ತಕಮಾಲೆ

ಪ್ರಕಟಣ ಸಮಿತಿ (ಸ್ಥಾಪನೆ: ೨೪-೯-೧೯೯೪)

ವೇ॥ಬ್ರ॥ ಶ್ರೀ ಬಸವಾನಿ ರಾಮಶರ್ಮಾ, ಬಸವಾನಿ

ಪ್ರೊ. ಎಲ್.ಎಂ.ಎಲ್. ಶಾಸ್ತ್ರಿ, ಶಿವಮೊಗ್ಗ

ಪ್ರೊ. ಕೆ.ಎಸ್. ಕೃಷ್ಣಮೂರ್ತಿ, ಮೈಸೂರು

ಶ್ರೀ ಕೆ. ನಾಗರಾಜ್, ಬೆಂಗಳೂರು

ಕ್ಯಾಪ್ಟನ್ (ನಿ.) ಎಚ್.ಸಿ. ಕೃಷ್ಣಪ್ರಸಾದ್, ಮೈಸೂರು

ಶ್ರೀ ಎಚ್.ಎನ್. ಕೇಶವನ್, ಬೆಂಗಳೂರು

ಶ್ರೀ ವೈ.ಎಸ್. ಪ್ರಭಾಕರ, ಮೈಸೂರು

ಪ್ರೊ. ಆರ್.ಎನ್. ಪದ್ಮನಾಭ, ಮೈಸೂರು

ಡಾ॥ ಎಚ್.ಕೆ. ರಾಮನಾಥ, ಮೈಸೂರು

ಡಾ॥ ಆರ್.ಎನ್. ವಿಜಯಲಕ್ಷ್ಮಿ, ಮೈಸೂರು

ಡಾ॥ ಲೀಲಾ ಪ್ರಕಾಶ್, ಮೈಸೂರು

ಡಾ॥ ಆರ್.ಎನ್. ಶ್ರೀಲತ, ಮೈಸೂರು

ಡಾ॥ ಸಿ.ಎಸ್. ರಾಮಚಂದ್ರ, ಮೈಸೂರು

ಡಾ॥ ಬಿ.ಎಸ್. ಪ್ರಣತಾರ್ತಿಹರನ್, ಮೈಸೂರು

ಸಮುದಾಯ ಅಧ್ಯಯನ ಕೇಂದ್ರ

ಗೌರವಾಧ್ಯಕ್ಷರು

ಬಿ.ಎನ್.ವಿ. ಸುಬ್ರಹ್ಮಣ್ಯ

ಅಧ್ಯಕ್ಷರು

ಆರ್.ವಿ. ಶ್ರೀನಿವಾಸಯ್ಯ

ಸಂಯೋಜಕರು

ನಾಗರತ್ನ (ಪಾಪು)
ಆರ್.ವಿ. ಕೃಷ್ಣಮೂರ್ತಿ
ಬ್ರಿ. (ನಿ.) ಆರ್.ವಿ. ಸೀತಾರಾಮ್

ಕಾರ್ಯದರ್ಶಿ

ಡಾ|| ಬಿ.ಎಸ್. ಪ್ರಣತಾರ್ತಿಹರನ್

ಖಜಾಂಚಿ

ಬಿ.ವಿ.ವೆಂಕಟನಾರಾಯಣ

ಪುಸ್ತಕ ಸಲಹಾ ಸಮಿತಿ

ಪ್ರೊ. ಎ.ವಿ. ನರಸಿಂಹಮೂರ್ತಿ
ಪ್ರೊ. ಜಿ. ಅಶ್ವತ್ಥನಾರಾಯಣ
ಡಾ. ಎಂ.ಎಲ್. ಲಲಿತಮ್ಮ
ಎನ್.ಎಸ್. ಶಾರದಾ ಪ್ರಸಾದ್
ವಿದ್ವಾನ್ ಡಾ|| ಟಿ.ವಿ. ಸತ್ಯನಾರಾಯಣ
ವಿದ್ವಾನ್ ಎಚ್.ವಿ. ನಾಗರಾಜರಾವ್
ವಿದ್ವಾನ್ ಆನಂದತೀರ್ಥ ನಾಗಸಂಪಿಗೆ
ಡಾ|| ಮೀರಾಮೂರ್ತಿ
ಡಾ|| ಕೆ. ಅನಂತರಾಮು
ಕೆ. ರಾಘವೇಂದ್ರರಾವ್

ಸಂಚಾಲನ ಸಮಿತಿ

ಎಚ್.ಎನ್. ರಘುನಾಥ್
ಎಸ್.ಕೆ. ಲಕ್ಷ್ಮೀನಾರಾಯಣ (ಬಾಬು)
ಆರ್.ಎಸ್. ಅನಂತನಾರಾಯಣ
ಡಾ. ಎ.ಎಸ್. ಚಂದ್ರಶೇಖರ್
ಎಂ.ಕೆ. ವಿಜಯಲಕ್ಷ್ಮಿ
ಡಾ|| ಬಿ.ವಿ. ಸುಧಾಮಣಿ
ಡಾ|| ವಿಜಯಾ ಹರನ್
ಬಿ.ವಿ. ಸುಂದರೇಶನ್
ಎಸ್. ನಾಗೇಶ್ (ಪೂಮಗಾಮೆ ಗೋಪಿ)

ಸಾಧ್ವೀಮಣಿಯಾದ ಶ್ರೀನಾಚಾರಮ್ಮನ ನೇತೃತ್ವದಲ್ಲಿ ಸಂಕೇತಿಸಮುದಾಯದ ಮಹಾವಲಸೆ ಶಾಪತ್ತೂರಿನಿಂದ ಕರ್ನಾಟಕಕ್ಕೆ ನಡೆದುದು ೯೦೦ ವರ್ಷಗಳ ಹಿಂದೆ. ಅದರ ನೆನಪಿಗಾಗಿ ಶ್ರೀನಾಚಾರಮ್ಮ ನವಶತಮಾನೋತ್ಸವ ನಡೆಯುತ್ತಿದೆ. ಸಂಕೇತಿಸಮುದಾಯದ ಬಗೆಗೆ ಈವರೆಗೆ ಲಭ್ಯವಾಗಿರುವ ಅಪಾರ ಮಾಹಿತಿಯನ್ನು ಈ ಸಂದರ್ಭದಲ್ಲಿ ಪ್ರಕಟಿಸಲಾಗುತ್ತಿದೆ. ಈ ಸಂಪುಟ ಸರಣಿಯು ಸಂಶೋಧನೆ, ದಾಖಲೀಕರಣ, ಕ್ರೋಡೀಕರಣದ ಸ್ವರೂಪದ್ದಾಗಿದೆ. ಈ ಸರಣಿಯನ್ನು 'ಸಂಕೇತಿ ಅಧ್ಯಯನ' ಎಂದು ಕರೆಯಲಾಗಿದೆ. ಒಂದು ಪುಟ್ಟ ಸಮುದಾಯದ ದೀರ್ಘಕಾಲೀನ ತುಡಿತಗಳನ್ನು ಮಾಧ್ಯಮವಾಗಿ ಮಾಡಿಕೊಂಡು ವಿಶ್ವಪಥವನ್ನು ಹುಡುಕಿಕೊಳ್ಳುವ ಸಾಧನವಾಗಿ ಈ ಸಂಪುಟಸರಣಿ ಪ್ರಕಾಶಗೊಳ್ಳುತ್ತಿದೆ.

ಗ್ರಾಮೀಣ ಪ್ರದೇಶಗಳಲ್ಲಿ ಬಾಗಾಯಿತುಬೇಸಾಯ ಮಾಡುತ್ತ ವೈದಿಕಜೀವನ ನಡೆಸುತ್ತ ಇರುವ ಸಂಕೇತಿಯು ಆದರ್ಶ ಸಂಕೇತಿ ಎನಿಸುತ್ತಾನೆ. ಅವನು ಅಲ್ಪತೃಪ್ತ. ಅದ್ವೈತದ ಅಧ್ಯಾತ್ಮಾನುಭವದಲ್ಲಿ ಕೃಷಿಸಹಜ ಗುಣದಿಂದಲೂ ಶಾಸ್ತ್ರಾಧ್ಯಯನದ ಬಲದಿಂದಲೂ ವೈದಿಕಾನುಷ್ಠಾನಗಳಿಂದಲೂ ಅವನು ನಿರಂತರವಾಗಿ ವಿಹರಿಸುತ್ತಿರುತ್ತಾನೆ. ಪಾರಮಾರ್ಥಿಕವಾದ ಪರಮಶ್ರೀಮಂತಿಕೆಯ ಅನುಭವದಲ್ಲಿ ಅವನಿರುತ್ತಾನೆ.ಇದೀಗ ಓದುಗರ ಕೈಲಿರುವುದು ಶ್ರೀ ವಿಜಯ್‌ಅಂಗಡಿ ಮತ್ತು ಡಾ॥ಎಂ.ಎಸ್.ವಿಜಯಾ ಹರನ್‌ಅವರು ಸಿದ್ಧಪಡಿಸಿಕೊಟ್ಟಿರುವ 'ಸಂಕೇತಿ: ಬೇಸಾಯದ ಬದುಕು'. ಇದು ಈ ಮಾಲೆಯ ಒಂಬತ್ತನೆಯ ಸಂಪುಟವಾಗಿ ಬಂದಿದೆ.

ನಾವು ಸದ್ಯಕ್ಕೆ ಈ ಸಮುದಾಯದ ಬಾಗಾಯಿತು ಸಂಸ್ಕೃತಿಯ ಸಾರ್ಥಕ್ಯದ ದೃಷ್ಟಿಯಿಂದ ಸಹೃದಯಿಗಳ ಈ ಮಾತುಗಳನ್ನು ಪರಿಭಾವಿಸಬೇಕು: "...ಹಲವಾರು ವರ್ಷಗಳು ಅವರ ಕೃಷಿಯ ಒಡನಾಟದಲ್ಲಿ ಇದ್ದ ನನಗೆ ಆ ಕುರಿತು ಅಪಾರ ಗೌರವ, ಆದರ, ಅಭಿಮಾನವಿದೆ. ಆ ವಿಚಾರದಲ್ಲಿ ಅವರುಗಳಿಗೆ ಇರುವ ಮಮತೆ, ಪ್ರೀತಿ, ಕೃಷಿ ಹಣ ಗಳಿಸುವ ಕಾರ್ಖಾನೆಯಲ್ಲ; ನೆಮ್ಮದಿಯ, ನಿರ್ಲಿಪ್ತತೆಯ, ತೃಪ್ತಿಯ ತಪೋಭೂಮಿ ಎನ್ನುವ ಅವರುಗಳ ಭಾವನೆಗಳಿಗೆ ಇದೋ ನನ್ನ ಸಾಷ್ಟಾಂಗ ನಮಸ್ಕಾರಗಳು."

ಡಾ॥ ಬಿ.ಎಸ್. ಪ್ರಣತಾರ್ತಿಹರನ್
ಪ್ರಧಾನ ಸಂಪಾದಕ

ಸಮುದಾಯ ಅಧ್ಯಯನ ಕೇಂದ್ರ
ಮೈಸೂರು